




ಕುವೆಂಪು ಶ್ರೀರಾಮಾಯಣ ದರ್ಶನಂ

ವಚನ ದೀಪಿಕೆ

ಡಾ. ಜಿ. ಕೃಷ್ಣಪ್ಪ

ಕುವೆಂಪು ಶ್ರೀರಾಮಾಯಣ ದರ್ಶನಂ

ವಚನ ದೀಪಿಕೆ

ಡಾ. ಜಿ. ಕೃಷ್ಣಪ್ಪ

ಪ್ರಕಾಶಕರು

ಅನ್ನಪೂರ್ಣ ಪಬ್ಲಿಷಿಂಗ್ ಹೌಸ್

೧೭೬, ೧೨ನೇ ಕ್ರಾಸ್, ಮಾಗಡಿ ಮುಖ್ಯರಸ್ತೆ

ಅಗ್ರಹಾರ ದಾಸರಹಳ್ಳಿ, ಬೆಂಗಳೂರು-೫೬೦೦೭೯

Sri Ramayana Darshanam
Vachana Deepike
A beam of light on Sri Ramayana Darshanam in prose

by
Dr. G. Krishnappa
22, Sri Gurudatta Nilaya,
1st Corss, Netajinagara
Mattikere, Bengaluru - 560 054
Mobile: 9972109209

First Impression : 2021

Pages : xviii + 750 = 768

Paper Used : 80 GSM NS Maplitho

ISBN : 978-81-954043-5-3

Price : Rs. 800/-

Cover Page : B.S. Shwetha

Inner Pages Line Art : Google Images

Published by
Annapoorna Publishing House
176, 12th Main, Agrahara Dasarahalli
Magadi Main Road, Bangalore-560079.
E-mail: apgroups2012@gmail.com

ಸ್ವಾನ್ ಪ್ರಿಂಟರ್ಸ್
svanprint@gmail.com
☎ 080-26742233

ಅರ್ಪಣೆ

ಆಚಾರ್ಯ **ಪ್ರೊ. ಮಲ್ಲೇಪುರಂ ಜಿ ವೆಂಕಟೇಶ**
ಶಾಸ್ತ್ರ ಚೂಡಾಮಣಿ, ವಿಶ್ರಾಂತ ಕುಲಪತಿಗಳು,
ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ
ಮತ್ತು
ಅವರ ಧರ್ಮಪತ್ನಿ **ಶ್ರೀಮತಿ ಭವಾನಿ ವೆಂಕಟೇಶ**
ಅವರಿಗೆ

ಲೇಖಕರ ನುಡಿ

ಶ್ರೀ ಕುವೆಂಪು ಅವರ 'ಶ್ರೀ ರಾಮಾಯಣ ದರ್ಶನಂ' ಕಾವ್ಯವನ್ನು ಕುರಿತು ದ. ರಾ. ಬೇಂದ್ರೆಯವರು 'ಅಖಂಡ ಧ್ಯಾನ ಪರಿಪಾಕವು ಎಂಥ ಫಲಶ್ರೀಯನ್ನು ತರಬಲ್ಲದು ಎಂಬುದಕ್ಕೆ ಉದಾಹರಣೆ ಈ ಮಹಾಕಾವ್ಯ. ಕುವೆಂಪುವನ್ನೇ ವಿರಚಿಸಿತಂತೆ ಈ ಕಾವ್ಯ ತಪ' ಎಂದು ತಿಳಿಸಿದ್ದಾರೆ. ಅಂತಹ ಈ ಯುಗದ ಈ ಮಹಾಕಾವ್ಯವನ್ನು ಕುವೆಂಪು ಅವರು ವಿಶ್ವವಾಣಿಗೆ ಮುಡಿಯ ಮಣಿಯಾಗಿಸಿ ಅದರ ಆಂತರ್ಯದ ಸತ್ಯಕಥನವನ್ನು ಹೀಗೆ ಸ್ಪಷ್ಟಪಡಿಸಿದ್ದಾರೆ.

ಬಹಿರ್ಘಟನೆಯಂ ಪ್ರತಿಕೃತಿಸುವಾ ಲೌಕಿಕ
ಚರಿತ್ರೆಯಲ್ತಿದು, ಅಲೌಕಿಕ ನಿತ್ಯಸತ್ಯಂಗಳಂ
ಪ್ರತಿಮಿಸುವ ಸತ್ಯಸ್ಯ ಸತ್ಯ ಕಥನಂ ಕಣಾ,
ಶ್ರೀ ಕುವೆಂಪುವ ಸೃಜಿಸಿದೀ ಮಹಾಛಂದಸಿನ
ಮೇರುಕೃತಿ, ಮೇಣ್ ಜಗದ್ಭವ್ಯರಾಮಾಯಣಂ!
(ಶ್ರೀ ವೆಂಕಣ್ಣಯ್ಯನವರಿಗೆ ಸಾಲು ೨೩-೨೭)

ಕುವೆಂಪು ಅವರು ಆದಿಕವಿ ವಾಲ್ಮೀಕಿಯ ರಾಮಾಯಣವನ್ನು ಮರುಸೃಷ್ಟಿಸಿದ್ದಾರೆ. ಅವರು 'ನನ್ನ ವಾಲ್ಮೀಕಿ 'ತೇಜಸ್ವಿ, ತರುಣ, ತಪೋವಲ್ಕಲವಸ್ತ್ರ ಶೋಭಿ'. ಅವನು ಗಡ್ಡ ಬಿಟ್ಟ ಮುದುಕನಲ್ಲ! 'ಶ್ರೀರಾಮಾಯಣ ದರ್ಶನ'ದಲ್ಲಿ ಕೊಲೆ, ಹಿಂಸೆ ಮುಂತಾದುವಕ್ಕೆ ಸ್ಥಾನವಿಲ್ಲ. ಆರಂಭದ ಆ ಘಟನೆಯೆ ಅದಕ್ಕೆ ಪ್ರತಿಮೆಯಾಗಿದೆ. ಸರ್ವೋದಯವೆ ಅದರ ಹೃದಯತತ್ತ್ವ' ಎಂದು ತಮ್ಮ ಕಾವ್ಯದ ಆತ್ಮವನ್ನು ದರ್ಶಿಸಿದ್ದಾರೆ.

ಅವರು 'ಶ್ರೀ ರಾಮಾಯಣ ದರ್ಶನದಲ್ಲಿ ಹೇಳಿರುವುದೆಲ್ಲ hard truth, nothing but truth; ಸತ್ಯಸ್ಯ ಸತ್ಯ! ನನ್ನ ಇತರ ಯಾವ ಕೃತಿಗಳಲ್ಲಿ ಏನು

ಹೇಳಿದ್ದೇನೆಯೊ ಏನು ಬಿಟ್ಟಿದ್ದೇನೆಯೋ ತಿಳಿಯದು. ಆದರೆ ಈ ಕೃತಿಯಲ್ಲಿ ಹೇಳಿರುವುದು ಮಾತ್ರ ಸತ್ಯಸ್ಯ ಸತ್ಯ!... ಈ ಕೃತಿಯಲ್ಲಿರುವುದು ಕೇವಲ ಒಬ್ಬ ವ್ಯಕ್ತಿಯ, ಒಂದು ಕಾಲದ ಒಂದು ದೇಶದ ಅನುಭವವಲ್ಲ! ಇಡೀ ಈ ಶತ ಶತಮಾನಗಳ ಅನುಭವದ ಸಾರಸರ್ವಸ್ವ ಅದರಲ್ಲಿದೆ.' ಎಂದು ಸತ್ಯವನ್ನು ದರ್ಶಿಸಿದ್ದಾರೆ.

ಕುವೆಂಪು ಅವರು ರಾಮಾಯಣದ ದುಷ್ಟ ಪಾತ್ರಗಳಾದ ಮಂಥರೆ, ಕೈಕೆ, ವಾಲಿ, ಚಂದ್ರನಖಿ, ಮಾರೀಚ, ರಾವಣ ಮುಂತಾದವುಗಳಿಗೆ ಮನೋವೈಜ್ಞಾನಿಕ ಹಿನ್ನೆಲೆಯಲ್ಲಿ ಪಶ್ಚಾತ್ತಾಪಗೊಂಡು ಆತ್ಮಶೋಧಕ್ಕೊಳಗಾಗುವಂತೆ ಮಾಡಿದ್ದಾರೆ. ಅದರಿಂದ ಅವು ಹೊಸ ಶೋಭೆ, ಹೊಸ ಲಕ್ಷಣಗಳಿಂದ ಸಹೃದಯನಿಗೆ ಆಪ್ತವಾಗುತ್ತವೆ. ಅವುಗಳ ವ್ಯಕ್ತಿತ್ವ ಮಾನವೀಯ ನೆಲೆಯಲ್ಲಿ ಉದಾತ್ತವಾಗಿ 'ಪಾಪಿಗುದ್ಧಾರ ಮಿಹುದೌ ಸೃಷ್ಟಿಯ ಮಹದ್ ವ್ಯೂಹ ರಚನೆಯೊಳ್' ಎಂಬುದಕ್ಕೆ ಸಾಕ್ಷಿಯಾಗಿವೆ.

ಈ ಮಹಾಕಾವ್ಯವು ನಾಲ್ಕು ಸಂಪುಟಗಳಾದ ಅಯೋಧ್ಯಾ ಸಂಪುಟ, ಕಿಷ್ಕಿಂಧಾ ಸಂಪುಟ, ಲಂಕಾ ಸಂಪುಟ ಮತ್ತು ಶ್ರೀ ಸಂಪುಟವನ್ನು ಹೊಂದಿದೆ, ಕುವೆಂಪು ಅವರು ಆ ವಿಂಗಡಣೆಯನ್ನು ಉಪನಿಷತ್ತು, ಗೀತೆ, ಪುರಾಣಗಳು ಮತ್ತು ಅರವಿಂದರ ತಾತ್ತ್ವಿಕ ಚಿಂತನೆಯನ್ನು ಆಧರಿಸಿ ಮಾಡಿದ್ದಾರೆ. ಅವರು 'ಹೇ ಗುರುವೇ, ಮನೋಮಯ ಪ್ರಾಣಮಯ ಅನ್ನಮಯ ಎಂಬ ಪ್ರತಿಮೆಗಳು ಕ್ರಮವಾಗಿ ಮಾನವತೆ, ವಾನರತೆ, ದೈತ್ಯತೆಗಳನ್ನು ದಾಟುತ್ತವೆ. ಹಾಗೆ ಅಯೋಧ್ಯಾ ಸಂಪುಟ, ಕಿಷ್ಕಿಂಧಾ ಸಂಪುಟ ಮತ್ತು ಲಂಕಾ ಸಂಪುಟಗಳನ್ನು ದಾಟಿ ವಿಜ್ಞಾನಮಯ ದೃಷ್ಟಿ ಎಂಬ ಪೂರ್ಣ ಆನಂದಮಯಕ್ಕೆ ಏರುವಂತೆ ಶ್ರೀಸಂಪುಟವನ್ನು ರಚಿಸಲು ಅನುಗ್ರಹಿಸು.' ಎಂದು ಪ್ರಾರ್ಥಿಸಿದ್ದಾರೆ.

ಕರ್ನಾಟಕದಲ್ಲಿ ೨೦ನೇ ಶತಮಾನದಲ್ಲಿ ಸಾಂಸ್ಕೃತಿಕ, ಬೌದ್ಧಿಕ, ಸಾಮಾಜಿಕ ಕ್ರಾಂತಿಯನ್ನು ಸಾಹಿತ್ಯದ ಮುಖಾಂತರ ತರಲು ಪ್ರಯತ್ನಿಸಿ ಯಶಸ್ವಿಯಾದವರು ಕುವೆಂಪು. ಕಳೆದ ಶತಮಾನ ವೈಜ್ಞಾನಿಕ ಸಂಶೋಧನೆಗಳ, ವೈಚಾರಿಕ ಜಾಗೃತಿಯ ಕಾಲಘಟ್ಟ. ಆಗ ಶ್ರೀ ರಾಮಕೃಷ್ಣ ಪರಮಹಂಸ ವಿವೇಕಾನಂದರ ವೇದಾಂತ, ಯೋಗಿ ಅರವಿಂದರ ಅಧ್ಯಾತ್ಮಾನುಭವ ಶಾಂತವಾಗಿ ಪ್ರವಹಿಸುತ್ತಿತ್ತು. ಮಹಾತ್ಮಗಾಂಧಿಯವರ ಸ್ವಾತಂತ್ರ್ಯ ಸಂಗ್ರಾಮ ಚಳುವಳಿಯಲ್ಲಿ ಸತ್ಯ, ಶಾಂತಿ, ಅಹಿಂಸೆ ಉಸಿರಾಡುತ್ತಿತ್ತು. ರಾಷ್ಟ್ರೀಯ ಭಾವನೆ, ಸರ್ವೋದಯ ಚಿಂತನೆ ಜನಮನದಲ್ಲಿ

ಹರಿದಾಡುತ್ತಿತ್ತು. ಪ್ರಪಂಚದಲ್ಲಿ ಎರಡು ಮಹಾಯುದ್ಧಗಳು ತಮ್ಮ ಕರಾಳಛಾಯೆ ವ್ಯಾಪಿಸಿದ್ದವು. ಆ ಸಂದರ್ಭದಲ್ಲಿ ಮಹಾಛಂದಸ್ಸಿನಲ್ಲಿ ಮೇರುಕೃತಿ 'ಶ್ರೀ ರಾಮಾಯಣ ದರ್ಶನಂ' ರೂಪುಗೊಂಡಿತು. ಅದು ಆ ಕಾಲದ ಎಲ್ಲ ಗುಣಲಕ್ಷಣಗಳ ಒಳಿತನ್ನು ಸ್ವೀಕರಿಸಿ ಅರಳಿತು.

ಶ್ರೀರಾಮಚಂದ್ರ ಭಾರತದ ಗಾಳಿ, ಬೆಳಕು, ನೀರಿನಲ್ಲಿ ಒಂದಾಗಿ ಜನಮಾನಸದ ಭಾಗವಾಗಿ ಹೋಗಿರುವ ಆದರ್ಶ ಮಹಾ ಪುರುಷ. ಆ ನಿತ್ಯ ರಾಮಾಯಣದ ರಾಮನಿಗೆ ನಡೆಯುವ ಪಟ್ಟಾಭಿಷೇಕೋತ್ಸವ ಈ ಕಾವ್ಯದ ಕೊನೆ ಸಂಚಿಕೆ 'ಅಭಿಷೇಕ ವಿರಾಡ್ ದರ್ಶನಂ' ನಲ್ಲಿ ಪ್ರಕೃತಿ ಸಹಜ ಆನಂದವಾಗಿ ವರ್ಣಿತವಾಗಿದೆ.

'ರಾಮನಾಮದ ಮಹಿಮೆ
ರಾಮಂಗೆ ಮಿಗಿಲೆಂಬವೋಲ್ ರಾಮಾವತಾರಕಿಂ
ಗುರುತರಂ ತಾನೈಸೆ ರಾಮಾಯಣಾವತಾರಂ! (೪.೧೩-೨೨೯-೩೩೧)

* * *

'ಶ್ರೀ ರಾಮಾಯಣ ದರ್ಶನಂ' ಮಹಾಕಾವ್ಯವನ್ನು ಸಹೃದಯರಿಗೆ ಸರಳ ಗದ್ಯದಲ್ಲಿ 'ಶ್ರೀ ರಾಮಾಯಣ ದರ್ಶನಂ ವಚನ ಚಂದ್ರಿಕೆ' ದೇ. ಜವರೇಗೌಡ(೧೯೫೪), 'ಕುವೆಂಪು ಅವರ ಶ್ರೀ ರಾಮಾಯಣ ದರ್ಶನಂ ಗದ್ಯಾನುವಾದ' ನಿ. ರಾಜಶೇಖರ(೧೯೮೭), 'ಶ್ರೀ ರಾಮಾಯಣ ಸಂದರ್ಶನಂ' ಟಿ. ಭೀಮಯ್ಯ ಮಾರೇನಹಳ್ಳಿ(೨೦೦೮) ಕೃತಿಗಳು ಪ್ರಕಟವಾಗಿವೆ.

ಕುವೆಂಪು ಅವರು ತಮ್ಮ ಮಹಾಕಾವ್ಯವನ್ನು ಕುರಿತು 'ಎಷ್ಟು ಉಪಮಾನ, ಎಷ್ಟು ಹೊಸ ಶಬ್ದಗಳು, ಹೊಸ ಭಾವಗಳು' ಎಂದು ತಾವೇ ಆಶ್ಚರ್ಯ ವ್ಯಕ್ತಪಡಿಸಿದ್ದಾರೆ, ಮಹಾಕಾವ್ಯದಲ್ಲಿಯ ಪ್ರತಿಮೆಗಳು ರೂಪಕಗಳು ಉಪಮೆಗಳು ಮಹೋಪಮೆಗಳನ್ನು ಮೂಲಭಾವಕ್ಕೆ ಲೋಪವಾಗದಂತೆ ಕಾವ್ಯಾಲಂಕಾರದ ಸೊಬಗು ಗದ್ಯದಲ್ಲಿ ಕನ್ನಡಿಸುವಂತೆ ನಾನೂ ಏತಕ್ಕೆ ಪ್ರಯತ್ನಿಸಬಾರದು ಎಂಬ ಇಚ್ಛೆಯುಂಟಾಯಿತು. ಅದರ ಫಲವಾಗಿ 'ಕುವೆಂಪು ಅವರ ಶ್ರೀ ರಾಮಾಯಣ ದರ್ಶನಂ ವಚನ ದೀಪಿಕೆ'ಯನ್ನು ರಚಿಸಿದೆನು. ಸತತ ಮೂರು ವರ್ಷಗಳ ಅಧ್ಯಯನದಲ್ಲಿ ನಾಡಿನ ಸಹೃದಯ ಸಾಹಿತಿಗಳ ಮಾರ್ಗದರ್ಶನ ಪಡೆದೆನು. ಆ ಮಹನೀಯರು ಪ್ರೊ॥ ಮಲ್ಲೇಪುರಂ ಜಿ. ವೆಂಕಟೇಶ, ಪ್ರೊ॥ ಬೈರಮಂಗಲ ರಾಮೇಗೌಡ, ಡಾ. ವಿ. ಚಂದ್ರಶೇಖರ ನಂಗಲಿ, ಡಾ. ಕೆ. ಎಸ್. ನರಸಿಂಗರಾವ್, ಡಾ. ಸಿ. ಪಿ. ನಾಗರಾಜ, ಡಾ. ಟಿ. ಎನ್. ವಾಸುದೇವ ಮೂರ್ತಿ ಅವರಿಗೆ ನನ್ನ ಕೃತಜ್ಞತೆಗಳು.

'ಶ್ರೀ ರಾಮಾಯಣ ದರ್ಶನಂ' ಮಹಾಕಾವ್ಯವನ್ನು ವಚನ ದೀಪಿಕೆಯಾಗಿ ರಚಿಸಲು ಅನುಮತಿ ನೀಡಿ ಪ್ರೋತ್ಸಾಹಿಸುತ್ತಿರುವ ಶ್ರೀಮತಿ ತಾರಿಣಿ ಚಿದಾನಂದಗೌಡ ಅವರಿಗೆ ನನ್ನ ಅನಂತ ನಮನಗಳು.

ಕುವೆಂಪು ಅವರು ಕನ್ನಡ ಭಾಷಾ ಪರಂಪರೆಯಲ್ಲಿರುವ ಸಂಸ್ಕೃತ, ಹಳೆಗನ್ನಡ, ನಡುಗನ್ನಡ, ಜನಪದರ ಆಡುನುಡಿಗಳನ್ನು ಸೂಕ್ಷ್ಮವಾಗಿ ಅಧ್ಯಯನ ಮಾಡಿದ್ದಾರೆ. ಅವು ಜೀವಂತವಾಗಿ ಕಾವ್ಯದಲ್ಲಿ ಮಿಡಿಯುವಂತೆ ಸಮರ್ಥವಾಗಿ ಪ್ರಯೋಗಿಸಿದ್ದಾರೆ. ಅದು ಅವರ ಅಪಾರ ಭಾಷಾವಿದ್ವತ್ತಿಗೆ ಸಾಕ್ಷಿ. ಅವರು ಜನಗಳಿಂದ ದೂರವಾಗಿ ನಶಿಸಿ ಹೋಗಬಹುದಾದ ಕನ್ನಡ ಭಾಷಾ ಸಂಸ್ಕೃತಿಯು ಈ ಕಾವ್ಯದಲ್ಲಿ ಜೀವಂತವಾಗಿ ಉಸಿರಾಡುವಂತೆ ಮಾಡಿದ್ದಾರೆ; ಅಮೃತತ್ವವನ್ನು ನೀಡಿದ್ದಾರೆ. ನೂರಾರು ಹೊಸ ಕನ್ನಡ ಪದಗಳನ್ನು ಸೃಷ್ಟಿಸಿದ್ದಾರೆ. ಆ ಪದಗಳ ಅರ್ಥ ತಿಳಿಯದಿದ್ದರೆ ಕನ್ನಡದ ಅಪ್ರತಿಮ ಭಾಷಾ ಕೌಶಲ್ಯ ಅರಿವಾಗುವುದಿಲ್ಲ. ಕಾವ್ಯದ ಆಂತರ್ಯ ಹೊಳೆಯುವುದಿಲ್ಲ. ಕಾವ್ಯದ ರಸಾನುಭವ ದೊರೆಯುವುದಿಲ್ಲ. ಆದಕಾರಣ 'ಶ್ರೀ ರಾಮಾಯಣ ದರ್ಶನಂ ನಿಘಂಟು'ವನ್ನು ಸಹೃದಯರಿಗೆ ನೀಡಿರುವೆನು.

ನಾಡಿನ ಎಲ್ಲ ಹಿರಿ ಕಿರಿಯ ಸಾಹಿತಿಗಳ ಪ್ರೋತ್ಸಾಹ ಚೇತನರಾಗಿರುವವರು ಆಚಾರ್ಯ ಪ್ರೊ॥ ಮಲ್ಲೇಪುರಂ ಜಿ. ವೆಂಕಟೇಶ. ಅವರು ಹತ್ತಾರು ವರ್ಷಗಳಿಂದ ನನ್ನನ್ನು ಪ್ರೀತಿಯಿಂದ ಕಂಡು ಮಾರ್ಗದರ್ಶನ ಮಾಡುತ್ತಿರುವ ಘನವಿದ್ವಾಂಸರು. ಶಾಸ್ತ್ರಚೂಡಾಮಣಿ ಪ್ರೊ॥ ಮಲ್ಲೇಪುರಂ ಜಿ. ವೆಂಕಟೇಶ ಅವರಿಗೆ ಮತ್ತು ಅವರ ಧರ್ಮಪತ್ನಿ ಶ್ರೀಮತಿ ಭವಾನಿ ವೆಂಕಟೇಶ ಅವರಿಗೆ ಈ ಕೃತಿಯನ್ನು ಅರ್ಪಿಸಿದ್ದೇನೆ. ಇದನ್ನವರು ಪ್ರೀತಿಯಿಂದ ಸ್ವೀಕರಿಸಬೇಕೆಂದು ಪ್ರಾರ್ಥಿಸುತ್ತೇನೆ.

ನನ್ನ ಸಾಹಿತ್ಯ ಅಧ್ಯಯನಕ್ಕೆ ತುಂಬು ಪ್ರೋತ್ಸಾಹ ನೀಡುತ್ತಿರುವ ಗುರು ಡಾ. ಕೆ. ಅನಂತರಾಮು, ಶ್ರೀ ಎಂ. ನರಸಿಂಹ, ಶ್ರೀ ಕೆ. ಎನ್. ಶಾಂತಕುಮಾರ್, ಜಸ್ಟೀಸ್ ಎ. ಜೆ. ಸದಾಶಿವ, ಶ್ರೀ ಪದ್ಮರಾಜ ದಂಡಾವತಿ, ಶ್ರೀ ಮಧುಬಿಲ್ಲಿನ ಕೋಟೆ, ಶ್ರೀ ಬಿ. ಎಂ. ಹನೀಫ್, ಶ್ರೀ ಚ. ಹ. ರಘುನಾಥ, ಶ್ರೀ ಪ್ರವೀಣ ಕುಲಕರ್ಣಿ, ಶ್ರೀ ರಾಜು ಮಳವಳ್ಳಿ, ಡಾ. ಸಿ. ನಾಗಣ್ಣ, ಶ್ರೀ ಎಚ್. ಎಲ್. ನಾಗರಾಜ ಅಸಿಸ್ಟೆಂಟ್ ಕಮೀಷನರ್, ಪ್ರೊ॥ ಶಿವರಾಮಯ್ಯ, ಕವಯಿತ್ರಿ ಜ. ನಾ. ತೇಜಶ್ರೀ, ಪ್ರೊ॥ ಕೆ. ಎಸ್. ಭಗವಾನ್, ಪ್ರೊ॥ ಬಿ. ಜಯಪ್ರಕಾಶಗೌಡ, ಶ್ರೀ ಯು. ಎನ್. ಸಂಗನಾಳಮಠ, ಶ್ರೀ ದೇವು ಪತ್ತಾರ್, ಶ್ರೀ ವೆಂಕಟೇಶ ಮಾನು, ಡಾ॥ ಸತ್ಯಮಂಗಲ ಮಹದೇವ, ಶ್ರೀ ಡಿ. ಎಚ್. ಪುಟ್ಟರಾಮು, ಶ್ರೀ ಬಿ. ಎಸ್. ಜಯಪ್ರಕಾಶ

ನಾರಾಯಣ, ಶ್ರೀ. ಬಿ. ಎಚ್. ವಿಶ್ವನಾಥ, ಶ್ರೀ. ನಾ. ಸು. ನಾಗೇಶ್, ಶ್ರೀ ಮಹಮದ್ ಕಲೀಂ ಉಲ್ಲ, ಶ್ರೀ ಸಮಿ ಉಲ್ಲಾಖಾನ್, ಶ್ರೀ ಶ್ರ. ದೇ ಪಾರ್ಶ್ವನಾಥ, ಶ್ರೀ ನಂ. ನಂಜಪ್ಪ ಮುಂತಾದವರಿಗೆ ಮತ್ತು ನಮ್ಮ ದ. ರಾ. ಬೇಂದ್ರೆ ಕಾವ್ಯಕೂಟದ ಎಲ್ಲ ಸದಸ್ಯರಿಗೆ ನನ್ನ ನಮನಗಳು.

ಡಾ. ರವಿಶಂಕರ ಎ. ಕೆ ಅವರು ಹಲವಾರು ತಿಂಗಳುಗಳಿಂದ ನನ್ನ ಹಸ್ತಪ್ರತಿಯನ್ನು ತೆಗೆದುಕೊಂಡು ಹೋಗಿ ಅಚ್ಚುಕಟ್ಟಾಗಿ ಡಿ. ಟಿ. ಪಿ ಮಾಡಿದ್ದಾರೆ. ಇದು ತನ್ನ ಸ್ವಂತ ಕೆಲಸ ಎಂಬಂತೆ ಮುತುವರ್ಜಿ ವಹಿಸಿದ್ದಾರೆ. ಅವರ ವಿಶ್ವಾಸ ಪೂರ್ಣ ನಡೆಗೆ ಪ್ರೀತಿಯ ಹಾರೈಕೆಗಳು.

ನನ್ನ ಸಾಹಿತ್ಯ ಅಧ್ಯಯನಕ್ಕೆ ತುಂಬು ಉತ್ತೇಜನ ನೀಡುತ್ತಿರುವ ಪತ್ನಿ, ಮಕ್ಕಳು, ಅಳಿಯಂದಿರು ಮತ್ತು ಸೊಸೆಯನ್ನು ನೆನೆಯುವುದು, ಪ್ರೀತಿಯ ಮೊಮ್ಮಕ್ಕಳಾದ ಚಿ॥ ಎಂ. ಉಜ್ವಲ್, ಚಿ॥ ಜೆ. ಸುಜನ, ಕು॥ ಜೆ. ಸುಗ್ಗಿ, ಚಿ॥ ಬಿ. ಎಸ್. ಸಂವಿತ್ ಕೃಷ್ಣ ಅವರ ಮುಗ್ಧ ಆನಂದಕ್ಕೆ ನಲಿಯುವುದು ನನ್ನ ಕುಟುಂಬ ಸಾಹಿತ್ಯ ಪೋಷಕ ವಾತಾವರಣದ ಆಹ್ಲಾದ.

ಈ ಕೃತಿಯನ್ನು ಪ್ರಕಾಶಿಸುತ್ತಿರುವ ಅನ್ನಪೂರ್ಣ ಪಬ್ಲಿಷಿಂಗ್ ಹೌಸ್‌ನ ಶ್ರೀ...... ಅವರಿಗೆ, ಮುದ್ರಿಸಿರುವ...... ಪ್ರಿಂಟಿಂಗ್ ಪ್ರೆಸ್‌ನ ಮಾಲೀಕರಾದ ಶ್ರೀ...... ಅವರಿಗೆ ಮತ್ತು ಅವರ ಸಿಬ್ಬಂದಿ ವರ್ಗಕ್ಕೆ ನನ್ನ ವಂದನೆಗಳು.

ಈ ಯುಗದ ಮಹಾಕಾವ್ಯ 'ಶ್ರೀ ರಾಮಾಯಣ ದರ್ಶನಂ' ನ ಚಿಂತನೆ, ಕನ್ನಡ ಭಾಷಾ ಸೌಂದರ್ಯ, ಪ್ರಕೃತಿಯ ಸೊಬಗು, ಅಧ್ಯಾತ್ಮಾನುಭವದಲ್ಲಿ ಸತ್ಯಮುಖಿಯಾದ ಚೇತನಗಳ ಒಡನಾಟ ಒಂದು ರಸಾನಂದ. ಅದು ಜೀವನ ಸಾರ್ಥಕ್ಯದ ಕಾವ್ಯಾನುಭವ. ನನ್ನ ಈ 'ಕುವೆಂಪು ಅವರ ಶ್ರೀ ರಾಮಾಯಣ ದರ್ಶನಂ ವಚನ ದೀಪಿಕೆ' ಆ ರಸಲಹರಿಗೆ ಓದುಗರನ್ನು ಕೊಂಡೊಯ್ದರೆ ಅದು ಮಹಾಕವಿ ಕುವೆಂಪು ಅವರ ಕೃಪೆ. ಈ ಕೃತಿಯನ್ನು ಕನ್ನಡ ಸಾಹಿತ್ಯ ರಸಿಕರು ಮತ್ತು ವಿದ್ವನ್ಮಣಿಗಳು ಪ್ರೀತಿಯಿಂದ ಸ್ವೀಕರಿಸಿ, ಓದಿ ಆಶೀರ್ವದಿಸಬೇಕೆಂದು ಪ್ರಾರ್ಥಿಸುತ್ತೇನೆ.

ಬೆಂಗಳೂರು **ಡಾ. ಜಿ. ಕೃಷ್ಣಪ್ಪ**

೧೮-೩-೨೦೨೧

ಅನುಕ್ರಮಣಿಕೆ

ಲಂಕಾ ಸಂಪುಟಂ

ಶ್ರೀ ಸಂಪುಟಂ

ಶ್ರೀ ವೆಂಕಣ್ಣಯ್ಯನವರಿಗೆ

ಓ ಪ್ರಿಯ ಗುರುವೆ, ತಮ್ಮ ಪವಿತ್ರವಾದ ಪಾದಗಳಿಗೆ ಒಪ್ಪಿಸಲು ಈ ಬೃಹದ್‌ಗಾನವನ್ನು ಮುಗಿಸಿ ತಂದಿದ್ದೇನೆ. ಶಿಷ್ಯನ ಮೇಲೆ ನಿಮ್ಮ ಆಶೀರ್ವಾದ ಬಲದ ಕರುಣದೃಷ್ಟಿ ಹರಿಸಿರಿ. ಈ ಕಾವ್ಯವನ್ನು ಕೇಳುವ ಕೃಪೆಮಾಡಿ ನನ್ನನ್ನು ಕೃತಕೃತ್ಯನೂ ಧನ್ಯನೂ ಆಗುವಂತೆ ಮಾಡಿ. ಅಂದೊಮ್ಮೆ ನೀವು 'ಉದಯರವಿ'ಗೆ ಬಂದು ಈ ಕಾವ್ಯವನ್ನು ಕೇಳಲು ಆಶಿಸಿದಿರಿ. ಆಗ ಕೆಲವು ಭಾಗಗಳನ್ನು ಓದಿ ಮೆಚ್ಚಿಗೆ ಪಡೆದೆ. ಅಷ್ಟರಲ್ಲಿ ಸಂಜೆಯಾಯಿತು. 'ಮತ್ತೊಮ್ಮೆ ಬರುತ್ತೇನೆ. ದಿನವೆಲ್ಲವೂ ಓದುವೆಯಂತೆ, ಆಗ ಕೇಳುತ್ತೇನೆ. ರಾಮಾಯಣವು ವಿರಾಮಾಯಣವಲ್ಲವೆ?' ಎಂದು ಹೇಳಿ ಮನೆಗೆ ಹೋದಿರಿ. ಮನೆಗೆ ಹೋದದ್ದು ನಿಜ. ನಿಜದಮನೆಗೆ ಹೋದಿರಿ !

ಇದೊ, ಇಂದು ಆ ಮಹಾಗಾನವನ್ನು ಮುಗಿಸಿ ತಂದಿರುವೆ. ಇದು ಹಿಂದೆ ವಾಲ್ಮೀಕಿ ಹೇಳಿದ ಕಥೆಯಾದರೂ, ಕನ್ನಡದಲ್ಲಿ ಬೇರೆ ಕಥೆ ಎನ್ನುವಂತೆ ಬೇರೆ ಮೈಯಾಂತಂತೆ (ಮೈಯನ್ನು ಪಡೆದಂತೆ) ಅಂದರೆ ಪುನರ್ಜನ್ಮ ಪಡೆದಿದೆ. ನಿಮ್ಮ ಕೃಪೆಯಿಂದ ಹಾಗೆ ಮೂಡಿದ ಈ ಕಾವ್ಯವನ್ನು ವಿಶ್ವವಾಣಿಯ ಮುಡಿಯ ಮಾಣಿಕ್ಯವನ್ನಾಗಿ ಮಾಡಿದ್ದೇನೆ.

ನೀವು ಹಿಂದಿನ ಮಹಾಕವಿಗಳೆಲ್ಲರೂ ನೆರೆದಿರುವ ಸ್ವರ್ಗದ ಸಭೆಗೆ ಮಹಾಧ್ಯಕ್ಷರಲ್ಲವೆ? ಆ ಸಭೆಗೆ ನನ್ನನ್ನು ಪರಿಚಯಿಸಿ. ಕಿರಿಯವನಾದ ನಾನು ಹಿರಿಯರಿಗಾಗಿ ಹಾಡುತ್ತೇನೆ. ನೀವು ಕೇಳುವುದೇ ನನಗೆ ಆಶೀರ್ವಾದ.

ಗುರುಗಳು ಕೃಪೆತೋರಿ ಶಿಷ್ಯನ ಕೃತಿಯ ಕೀರ್ತಿಯನ್ನು ಆ ದಿವ್ಯ ಕವಿಸಭೆಗೆ ಹೇಳುತ್ತಿದ್ದಾರೆ. ಗುರುವಾಣಿಯನ್ನು ಕೇಳಿ.

"ಇದು ನಡೆದ ಘಟನೆಗಳನ್ನು ಪ್ರತಿಕೃತಿಸುವ ಲೌಕಿಕ ಚರಿತ್ರೆಯಲ್ಲ. ಅಲೌಕಿಕ ನಿತ್ಯಸತ್ಯಗಳನ್ನು ಪ್ರತಿಮೆಗಳ ಮೂಲಕ ತಿಳಿಸುವ ಸತ್ಯಸ್ಯ ಸತ್ಯ ಕಥನ. ಇದು

ಕುವೆಂಪುವಿನಿಂದ ರಚಿತವಾದ ಕುವೆಂಪುವನ್ನು ರೂಪಿಸಿದ ಮಹಾಛಂದಸ್ಸಿನ ಮೇರು ಕೃತಿ, ಜಗದ್‌ಭವ್ಯ ರಾಮಾಯಣ.

ನಿತ್ಯ ರಾಮಾಯಣದ ಹೇ ದಿವ್ಯ ಚೇತನಗಳಿರಾ, ಈ ಪುಣ್ಯ ಕೃತಿಯ ರಸಕೋಶದಲ್ಲಿ ಆವಿರ್ಭವಿಸಿ, ಅವತರಿಸಿ ಬನ್ನಿ. ಆಶೀರ್ವಾದವನ್ನು ತನ್ನಿ. ಓ ಚೇತನಗಳಿರಾ, ವಾಗರ್ಥರಥವನ್ನು ಏರಿ, ಭಾವದಗ್ನಿಯ ಮಾರ್ಗವನ್ನು ಹಿಡಿದು ಬನ್ನಿ. ಸಚ್ಚಿದಾನಂದ ಪೂಜೆಯನ್ನು ಸಹೃದಯ ಹೃದಯಭಕ್ತಿ ನೈವೇದ್ಯವನ್ನು ಸ್ವೀಕರಿಸಿ, ಓದುವವರಿಗೂ, ಕೇಳುವವರಿಗೂ ಒಲಿದು ಚಿತ್ಕಾಂತಿಯನ್ನು ನೀಡಲು ಬನ್ನಿ.

ನಿತ್ಯ ಶಕ್ತಿಗಳಾದ ನೀವು ಕಥೆಯ ಲೀಲೆಯನ್ನು ಮೆಚ್ಚಿ ನಮ್ಮ ಮನೋಮಯಕ್ಕೆ ರಸರೂಪದಿಂದ ಇಳಿಯುತ್ತ, ಪ್ರಾಣಮಯದಲ್ಲಿ ಚಲಿಸುತ್ತ, ಅನ್ನಮಯದಲ್ಲಿ ಅವತರಿಸುವಂತೆ; ಶ್ರೀರಾಮನು ಆ ಲೋಕದಿಂದ ಅವತರಿಸಿ ಬಂದು ಈ ಲೋಕದಲ್ಲಿ ಜನಿಸಿದ ಭೂಜಾತೆ ಸೀತೆಯನ್ನು ವರಿಸುವ ನೆಪದಿಂದ ಮೃಚ್ಛಕ್ತಿಯನ್ನು ಮರ್ದಿಸುತ್ತ (ನಾಶಗೊಳಿಸಿ), ಚಿಚ್ಛಕ್ತಿಯನ್ನು ವರ್ಧಿಸುವಂತೆ ಬನ್ನಿ.

ರಾವಣ ಅವಿದ್ಯೆ ಎಂಬ ಈ ಮರ್ತ್ಯಪ್ರಜ್ಞೆ ತಾನು ತನ್ನ ತಮದಿಂದ ಮುಕ್ತವಾಗುವುದು ದಿಟ. ಮಣ್ಣಿನ ಮುದ್ದೆಯಾದ ಪಾರ್ಥಿವ (ಮೃತ್ಕಲಾ ಪ್ರತಿಮೆ) ಶರೀರದಲ್ಲಿ ಚಿತ್ಕಲಾ ಪ್ರಾಣವು – ಪರಮಾತ್ಮನ ಚೈತನ್ಯಾಂಶವು – ಪ್ರತಿಷ್ಠಿತವಾಗುವಂತೆ; ಅದು ನಿಮ್ಮ ದೀಪ್ಯ ದೈವೀ ಪ್ರಜ್ಞೆಯ ಅಮೃತಗೋಪುರಕ್ಕೆ ಏರುವಂತೆ ಮಾಡಲು ಅವತರಿಸಿ ಬನ್ನಿ."

❑

ಅಯೋಧ್ಯಾ ಸಂಪುಟಂ



~~~~~~~~~~~~~~~~~~~~~~ ಸಂಚಿಕೆ – ೧ ~~~~~~~~~~~~~~~~~~~~~~

ಕವಿಕ್ರತು ದರ್ಶನಂ

ಶ್ರೀರಾಮನ ಕಥೆಯನ್ನು ಮಹರ್ಷಿ ನಾರದರ ವೀಣೆಯಿಂದ ಕೇಳಿ, ತಾವರೆಯ ಕಣ್ಣುಗಳಲ್ಲಿ ಆನಂದಾಶ್ರುಗಳು ಹೊಮ್ಮುವಂತೆ ಸಹೃದಯ ವಾಲ್ಮೀಕಿ ರೋಮಾಂಚಿತನಾದನು. ನಾರುಮಡಿಯಿಂದ ಶೋಭಾಯಮಾನನಾದ ತೇಜಸ್ವಿ, ತರುಣ ಆತ್ಮಸುಖಿಯಾದ ಅವನು ತಮಸಾನದಿ ತೀರದ ಕಡೆ ನಡೆದನು. ಬೆಳಗಿನ ಎಳೆಯ ಬಿಸಿಲು ಮುಂಬಿಸಿಲು. ಅದು ಹೊನ್ನಿನ ಬಣ್ಣದಲ್ಲಿ ಮಿಂದು ವಿಸ್ತಾರವಾದ ಅರಣ್ಯ ಪರ್ವತ ಶ್ರೇಣಿ ನಗುನಗುತ್ತಿರಲು, ಆ ವಿಶಾಲ ಅಡವಿಯಲ್ಲಿ ಚೈತ್ರ ಋತುವಿನ ಪಕ್ಷಿಗಳ ಇಂಚರವನ್ನು ಆಲಿಸುತ್ತ ಬಂದನು. ತೆಳುಗಾಳಿಗೆ ಮೆಲ್ಲನೆ ಮೃದುವಾಗಿ ನಿರಿನಿರಿಯಾಗಿ
~~~~~~~~~~~~~~~~~~~~~~

ಕಂಪಿಸುವ, ಪುಲಕಗೊಂಡು ಕನ್ನಡಿಯಂತೆ ಪ್ರಕಾಶಿಸುವ ಸ್ಫಟಿಕ ನಿರ್ಮಲ ನದಿಯಲ್ಲಿ ಸ್ನಾನಮಾಡಲು ಅಪೇಕ್ಷಿಪಟ್ಟನು. ಮೆಟ್ಟಿಲುಗಳನ್ನು ಇಳಿದು ದಿಣ್ಣೆ ಮರಳನ್ನು ದಾಟಿದನು. ಹೊಳೆಯ ನೀರಿನ(ಜೀವನ) ಅಂಚಿಗೆ ಅಡಿಗಳನ್ನು ಸೋಂಕಿಸಿದನು. ಆಗ ರತಿಸುಖದ ಚೆಲುವಾದ ನಿಸ್ವನ ಕೇಳಿ ಬಂದಿತು.

ಅದು ಗಗನ ವೀಣಾ ತಂತಿಯನ್ನು ಮಿಡಿದಂತಿರಲು ಮಹರ್ಷಿ ಹರ್ಷಚಿತ್ತನಾದನು. ಕವಿ ಪುಂಗವನು ಆಗಸದತ್ತ ಕಣ್ಣು ಹೊರಳಿಸಿದನು. ಕ್ರೌಂಚ ದಂಪತಿಗಳ ಮಿಥುನವನ್ನು ಕಂಡು ಮನಸ್ಸು ನಲಿಯಿತು. ನೋಡುತ್ತಿರಲು, ತಕ್ಷಣ ಗಾಳಿಹಾದಿಯಲ್ಲಿ ಆಡುತ್ತಿದ್ದ ಪಕ್ಷಿಗಳಲ್ಲಿ ಗಂಡು ಕೊಂಚೆ ಚೀರುತ್ತ ದೊಪ್ಪನೆ ನೆಲಕ್ಕೆ ಬಿದ್ದು ಹೊರಳಾಡಿತು. ಅದರ ಎದೆಗೆ ಚುಚ್ಚಿದ ಬಾಣದಿಂದ ರಕ್ತ ಜೀರ್ಕೊಳವಿಯಂತೆ ಹೊಮ್ಮಿ ಬರುತ್ತಿತ್ತು. ಪೊದೆಯಲ್ಲಿ ಅಡಗಿದ್ದ ಕಪ್ಪುದೇಹದ ಬೇಡನು ಅವಸರದಿಂದ ಚಿಮ್ಮಿ ಬಂದು ಅದನ್ನು ಮಾಂಸದ ಆಸೆಯಿಂದ ಹಿಡಿದುಕೊಂಡನು. ಬಿಸಿನೆತ್ತರಿನಲ್ಲಿ ನೆನೆದು, ಹೊಳೆಯ ಮರಳ ಹುಡಿಯಲ್ಲಿ ಹೊರಳಾಡುತ್ತ, ಬೇಡನ ಕೈಗೆ ಸಿಕ್ಕಿದ ತನ್ನ ಇನಿಯ ಯಜಮಾನನ್ನು ಕಂಡು ಹೆಣ್ಣು ಕೊಂಚೆಯು ಚಕ್ರಗತಿಯಲ್ಲಿ ಸುತ್ತು ಹಾಕಿ ಗಿರಿವನದ ಚಿತ್-ಚೇತನವೇ ಚೀತ್ಕರಿಸುವಂತೆ ಚೀರಿತು.

ಮುನಿಯ ಕರುಳು ಕರಗಿತು. ಅವನ ಪೂರ್ವ ಜೀವನದ ನೆನಪು ಮನಸ್ಸಿಗೆ ಮಿಂಚಿನಂತೆ ಹೊಳೆದು ಹೃದಯದಲ್ಲಿ ವೇದನೆಯ ಕಾರ್ಮೋಡ ನುಗ್ಗಿ ಬಂದಿತು. ಕಂಬನಿ ಹೊಮ್ಮಿತು. ಋಷಿ ತಳಮಳಗೊಂಡು ಸಂತಾಪದಿಂದ ಮರುಗಿದನು.

ಮಾಣ್, ನಿಷಾದನೆ, ಮಾಣ್ !

ಸಂಸ್ಕೃತಿಯ ಪರಿಣಾಮವಾದ ಬಾಳಿನ ಗರ್ಭದಲ್ಲಿ ಕರುಣೆ ಬೇನೆಗುದಿಗೊಳಗಾಗಿ ಚೆಲುವಾದ ವಾಗ್-ವೈಖರಿಯ ಛಂದಃ ಶರೀರವನ್ನು ಹೊಂದಿ ಮಹಾಕಾವ್ಯ ಶಿಶುವಾಗಿ ಅವತರಿಸುತ್ತದಲ್ಲವೆ? ಎಂದು ಆಲೋಚಿಸಿದನು. ಕೊಂಚೆಯನ್ನು ಕೊಂದ ಬೇಡರವನ ನಡೆಗೆ ತಳಮಳಗೊಂಡು, ಪರಿತಪಿಸುತ್ತ ಹೇಳಿದನು:

'ಮಾಣ್, ನಿಷಾದನೆ, ಮಾಣ್! (ಬೇಡ, ಬೇಡನೆ, ಬೇಡ !) ಕೊಲೆ ಸಾಕು ಮಾಡೊ, ನಿಲ್ಲಿಸು! ಸುಖದ ಸಂಗೀತದಲ್ಲಿ ಆಗಸ, ಬನದ ತೊರೆ, ಮಲೆಯ ಭುವನ ಕವನವು ನಲಿದಾಡುತ್ತಿರುವಾಗ-ವಿಷಾದದ ಶ್ರುತಿ ಹಿಡಿದು ಏಕೆ ಕೆಡಿಸುವೆ? ಒಂದು ಕಾಲದಲ್ಲಿ ನಾನು, ನಿನ್ನ ಹಾಗೆ ಕೊಲೆಯ ಕಲೆಯಲ್ಲಿ ಪರಿಣತನಾಗಿ ಗರ್ವದಿಂದಿದ್ದೆನು. ನಾರದ ಮಹಾ ಋಷಿಯ ದಯೆಯಿಂದ ಕರುಣೆಯನ್ನು ಕಲಿತೆನು !'

ಎಂದು ತನ್ನ ಆತ್ಮಕಥೆಯ ಆತ್ಮತತ್ತ್ವವನ್ನು ತಿಳಿಸುತ್ತ, ಕೃಪಾಭಾವದಲ್ಲಿ ಬೇಡರವನಿಗೆ ಅಹಿಂಸಾರುಚಿಯನ್ನುಣಿಸಿದನು. ಅವನ ಮನಸ್ಸು ಕರಗುವಂತೆ ಬೋಧೆ ಮಾಡಿದನು.

ಕೊಂಚೆ ಹಕ್ಕಿಯ ಮೈಯ ಬಾಣವನ್ನು ಬಿಡಿಸಿದನು. ಸಂಜೀವನ ಜಲದಿಂದ ಪ್ರಾಣವನ್ನು ಬರಿಸಿದನು.

ಹೆಣ್ಣು ಹಕ್ಕಿಯು ಒಡಲ ಉರಿಯನ್ನು ಇಲ್ಲವಾಗಿಸಿದ ವಾಲ್ಮೀಕಿಯು ತಮಸಾನದಿಯಿಂದ ತನ್ನ ಪರ್ಣಕುಟಿಗೆ ಹಿಂದಿರುಗಿ ಧ್ಯಾನದಲ್ಲಿ ಮುಳುಗಿದ್ದನು. ಆಗ ಅವನ ಒಳಗಣ್ಣುಗಳಿಗೆ ನವನವೋನ್ಮೇಷ ಶಾಲಿನಿಯಾದ ಚಿರಂತನ ಪ್ರತಿಭಾಯುಕ್ತವಾದ ಕಾವ್ಯ ದಿವ್ಯ ಪ್ರಜ್ಞೆ ಮಿಂಚಿತು. ಮನದ ಕಣ್ಣಿಗೆ ದರ್ಶನವು, ನಾಲಗೆಗೆ ವರ್ಣನೆಯು ಹೊಮ್ಮಿಬಂದವು. ಸಮಗ್ರ ರಾಮಾಯಣವನ್ನೆ ಹಿಡಿದಿಟ್ಟಿರುವೆನು ಎಂದು ಅಲ್ಲ. ಆಗಿರುವ ವಿಷಯಗಳನ್ನು ಕನ್ನಡಿಯಲ್ಲಿ ಪ್ರತಿಬಿಂಬಿಸುವಂತೆ, ಮುನ್ನುಡಿಯನ್ನು ಹೇಳುವಂತೆ ಕಂಡ ರಾಮಾಯಣವನ್ನು ಕಂಡಂತೆ, ಲೋಕವೆಲ್ಲವು ತೃಪ್ತಿಪಡುವಂತೆ ಹಾಡಿದನು.

ಕವಿ ಕೃತಿಯುಮಾ ಬ್ರಹ್ಮ ಕೃತಿಯಂತೆ ಋತಚಿದ್ ವಿಲಾಸಂ

ಅನಾದಿಕವಿ ಪರಮ ಪುರುಷೋತ್ತಮನಾದ ಸರ್ವೇಶ್ವರನು ತನ್ನ ಲೀಲಾಲೋಕಗಳನ್ನು ಸೃಷ್ಟಿಸುವ ಸಲುವಾಗಿ ಬೇರೆ ಬೇರೆಯ ವಿಶ್ವಕವಿಗಳನ್ನು ಬ್ರಹ್ಮರನ್ನು ನಿರ್ಮಿಸಿದ್ದಾನೆ. ಹಾಗೆಯೆ ನಮ್ಮ ಚತುರ್ಮುಖನಾದ ಜಗತ್ ಕರ್ತೃವು ತನ್ನ ಲೀಲೆಯ ಕಾವ್ಯಲೋಕದ ಬೃಹತ್ ಕೃತಿಗಳನ್ನು ರಚಿಸಲು ಈ ಪೃಥ್ವಿಯಲ್ಲಿ ಕವೀಂದ್ರರನ್ನು ಸೃಷ್ಟಿಸಿದ್ದಾನೆ.

ಕವಿದೃಷ್ಟಿಗೆ ಬ್ರಹ್ಮಸೃಷ್ಟಿಯಲ್ಲಿ ಇಹ–ಪರವೆಂಬ ಭೇದವಿಲ್ಲ. ಇಹವೆಂಬುದು ಅಥವಾ ಲೌಕಿಕವೆಂಬುದು ಅಸಲಿಗೆ ಪರದ, ಅವ್ಯಕ್ತದ, ಪರಮತತ್ವದ, ಅಧ್ಯಾತ್ಮದ ಛಾಯೆಯಾಗಿದೆ. ಸಚ್ಚಿದಾನಂದ ಎಂಬುದು ಯಾವುದೋ ಪಾರಲೌಕಿಕ ಅನುಭವವಲ್ಲ. ಅದು ಬ್ರಹ್ಮಕೃತಿಯೊಳಗೇ (ಲೋಕದೊಳಗೇ) ವ್ಯಕ್ತಗೊಳ್ಳುತ್ತದೆ. ಅದೇ ಬಗೆಯಲ್ಲಿ ಬ್ರಹ್ಮಸೃಷ್ಟಿಯಂತೆಯೇ ಕವಿಸೃಷ್ಟಿ ಕೂಡ. ಕವಿಕರ್ಮವಾದ ಕಾವ್ಯಸತ್ತೆಯೊಳಗೆ (ಕಾವ್ಯಲೋಕದೊಳಗೆ) ಆತ್ಮರಸದ ಸತ್ಯವೂ ಪ್ರಕಟಗೊಳ್ಳುತ್ತದೆ. ಕವಿ ಅಥವಾ ರಸಋಷಿ ಪ್ರತಿಮಾ ವಿಧಾನದಿಂದ ಅನಿರ್ವಚನ ಬೋಧ್ಯವನ್ನು(ಅಂದರೆ ಜ್ಞಾನವನ್ನು), ಈ ಪೃಥ್ವೀತತ್ವದೊಳಗೆ ಹುದುಗಿರುವ ನುಡಿಯಲಾಗದ ವಿಷಯವನ್ನು ಸಹ ಸಂವೇದ್ಯವಾಗಿಸುತ್ತಾನೆ. ಆ ಮರ್ತ್ಯಪೃಥ್ವಿತತ್ವವು ಪ್ರತಿಭೆಯಿಂದಷ್ಟೇ ಸಂವೇದನೆಗೆ ನಿಲುಕುತ್ತದೆ.

ಉಪನಿಷತ್ತುಗಳ ಪ್ರಕಾರ ಬ್ರಹ್ಮಸತ್ತೆ(ಬ್ರಹ್ಮಾಂಡ) ನಮ್ಮ ಕಣ್ಣೆದುರಿನ ಲೋಕವಾಗಿದೆ. ಇನ್ನು ಅದಕ್ಕಿಂತಲೂ ಮಿಗಿಲಿನದ್ದಾದ ಪರಬ್ರಹ್ಮ ಸತ್ತೆ(ಪಿಂಡಾಂಡ) ನಮ್ಮ ಹೃದಯದೊಳಗೆ ನೆಲೆಸಿದೆ. ಈ ಹೃದಯದ ಕಣ್ಣಿಗೆ ಗೋಚರಿಸುವ ಬ್ರಹ್ಮಸತ್ತೆಯನ್ನು, ಅಂದರೆ ಕಣ್ಣೆದುರಿನ ಲೋಕವನ್ನು ಯಾರಾದರೂ ಮಿಥ್ಯೆ ಎನ್ನುವರೆ? ಹಾಗೆ ಮಿಥ್ಯೆ ಎಂದು ಕರೆದರೆ ಅದು

ಪೂರ್ಣಸತ್ಯ ಎನಿಸುವುದೆ? ಅದು ಖಂಡಿತವಾಗಿ ಮಿಥ್ಯೆಯಲ್ಲ, ಪೂರ್ಣಸತ್ಯವಲ್ಲ. ಇಂತಹ ಮಾತನ್ನು ಯೋಗ ವಿಜ್ಞಾನ ಒಪ್ಪುವುದಿಲ್ಲ. ಅದು ಪೂರ್ಣ; ಇದು ಪೂರ್ಣ; ಪೂರ್ಣದಿಂದ ಬಂದುದು ಈ ಪೂರ್ಣ. ಕವಿಯ ಪ್ರಕಾರ ಪೂರ್ಣವೆಂಬುದು ಒಂದು ಏಕರೂಪದ ತತ್ವವಲ್ಲ. ಅದು ಸತ್ಯದ ಆವಿಷ್ಕಾರದ ನಾನಾ ವಿನ್ಯಾಸಗಳ ಸಮಗ್ರರೂಪವಾಗಿದೆ.

ಕವಿಯ ಪ್ರಕಾರ ಲೋಕವೂ ಮಿಥ್ಯೆಯಲ್ಲ. ಕಾವ್ಯಲೋಕವೂ ಮಿಥ್ಯೆಯಲ್ಲ. ಅನ್ಯ ಸತ್ಯದ ಪ್ರಮಾಣವನ್ನು ಬಳಸಿ ಕಾವ್ಯಸತ್ಯವನ್ನು ಶೋಧಿಸಲು ಹೊರಟರೆ ಅದು ಮಿಥ್ಯೆಯಾಗುತ್ತದೆ. ಒಂದು ಸರಳ ಉದಾಹರಣೆಯೊಂದಿಗೆ ಹೇಳುವುದಾದರೆ ಗಣಿತದ ಭಾಷೆಯಲ್ಲಿ ಕಾವ್ಯವನ್ನು ಅಥವಾ ಕಾವ್ಯದ ಭಾಷೆಯಲ್ಲಿ ಗಣಿತವನ್ನು ಅರ್ಥಮಾಡಿಕೊಳ್ಳಲಾಗದು.

ಕವಿ ಕೃತಿಯೂ ಸಹ ಆ ಬ್ರಹ್ಮನ ಕೃತಿಯ ಸ್ವರೂಪದ್ದೇ ಆಗಿದೆ. ಋತ(ಚಂಚಲವಾದ ಈ ಲೋಕವನ್ನು ಆಳುತ್ತಿರುವ ನಿಶ್ಚಲ ನಿಯಮ ಸತ್ಯ ಧರ್ಮಗಳ) ಚಿದ್ವಿಲಾಸವಾಗಿದೆ. ಕಾವ್ಯಲೋಕವೂ ಪ್ರಕೃತಿಲೋಕದ ಹಾಗೆಯೇ ಬಹುತ್ವ ಇರುವಂಥದ್ದು. ಅದು ಕಲ್ಪನೆಯಲ್ಲ, ಭ್ರಮೆಯಲ್ಲ; ಪ್ರಕೃತಿ ಲೋಕದಷ್ಟೇ ಬೆಳಕಿನಿಂದ ಕೂಡಿದುದು. ನಿಜವಾದ ಸೂರ್ಯನ ಬೆಳಕಿನ ರಸಲೋಕದ ಕಿರಣವಾಗಿದೆ.

ನಾವು ಜನ್ಮ ತಳೆದು ಈ ಭೂಮಿಯ ಮೇಲೆ ಹುಟ್ಟಿ ಬ್ರಹ್ಮನ ಈ ಲೋಕದ ವಿಭವಗಳನ್ನು ಅನುಭವಿಸುವ ಹಾಗೆ, ಉಣ್ಣುವ ಹಾಗೆ, ಕಾಣುವ ಹಾಗೆ ಕಾವ್ಯ ಪ್ರತಿಭೆಯೊಳಗೂ ಕವಿಯಾದವನು ಜನ್ಮ ತಳೆಯಬೇಕಾಗುತ್ತದೆ. ಕಾವ್ಯಲೋಕದ ಭೂಮಿಯ ಮೇಲೆ ಹುಟ್ಟಬೇಕಾಗುತ್ತದೆ. ಕಾವ್ಯ ಲೋಕದ ವಿಕಲ್ಪಗಳನ್ನು ಅನುಭವಿಸಬೇಕಾಗುತ್ತದೆ. ಕಾವ್ಯಲೋಕದೊಳಗೆ ಹೊಕ್ಕು ಅದನ್ನು ಯಥಾರ್ಥವಾಗಿ ಕಾಣಬೇಕಾಗುತ್ತದೆ. ಏಕೆಂದರೆ ಕುವೆಂಪು ಪ್ರಕಾರ ಕಾವ್ಯಸೃಷ್ಟಿ ಅಸಲಿಗೆ ಬ್ರಹ್ಮಹೃದಯದಲ್ಲಿ ಜನಿಸಿದ ಲೋಕವೇ ಆಗಿದೆ. ಅದು ಕವಿ ತನ್ನ ಕಲ್ಪನೆಯೊಳಗೆ ಮೂಡಿಸಿಕೊಂಡುದಲ್ಲ, ಬ್ರಹ್ಮ ತನ್ನ ಸೃಷ್ಟಿಯನ್ನು ಭಾಷೆಯಲ್ಲಿ ಮರುಸೃಷ್ಟಿ ಮಾಡುವ ಅವಕಾಶವನ್ನು ಕವಿಗೆ ನೀಡುತ್ತಾನೆ ಅಷ್ಟೇ. ಹೀಗೆ ಬ್ರಹ್ಮ ಸೃಷ್ಟಿಯನ್ನು ಯಥಾರ್ಥವಾಗಿ ಅರಿಯಲು ಕಾವ್ಯಪ್ರತಿಭೆ ಕವಿಗೆ ಹೊಸಕಣ್ಣುಗಳನ್ನು ದಯಪಾಲಿಸುತ್ತದೆ (ಕೃತಿ ನೇತ್ರ ಪಥದಿಂ). ಆ ಕಾವ್ಯದ ಕಣ್ಣು ಕಾಣಿಸುವ ಹಾದಿ ಹಿಡಿದು ಕವಿಯ ಮನಸ್ಸು ಲೋಕದ ಋತಕಲ್ಪನೆಯ ಸ್ವರೂಪವನ್ನು, ಭಾವಗಮ್ಯವಾದ ನಿತ್ಯಸತ್ಯವನ್ನು ಕಾಣುತ್ತಾನೆ.

ಕುವೆಂಪು ಅವರು ತನ್ನ ಪಯಣದ ದಾರಿ ಮತ್ತು ಗುರಿಯನ್ನು ಹೀಗೆ ಹೇಳುತ್ತಿದ್ದಾರೆ: ನಾನು ವಾಗ್ದೇವಿಯ ಅಮೃತ ವಾರಿಧಿಯಲ್ಲಿ ರಾಮನ ಹೆಸರಿನ ನಾವೆಯನ್ನು ಏರುತ್ತಿದ್ದೇನೆ. ರಾಮನ ಕಥೆಯ ಜೇನಿನ ಹೊಳೆಯ ಪಥ ಹಿಡಿದು, ಮಹಾ ಛಂದಸ್ಸಿನ ತರಂಗ

ವಿನ್ಯಾಸದಲ್ಲಿ ಸಾಗಿ ಗುರುಕೃಪೆಯಿಂದ ರಾಮಕಥೆ ಎಂಬ ಈ ಲೌಕಿಕ ನಾವೆ ಹಿಡಿದು ಅಲೌಕಿಕ ಋತಚಿದ್ ರಸಾಬ್ಧಿಯನ್ನು ಸೇರುವ ಕ್ರತುವನ್ನು ಅಂದರೆ 'ನಾನು ಈ ಕೆಲಸವನ್ನು ಮಾಡುತ್ತೇನೆ ಎಂಬ ಇಚ್ಛಾಶಕ್ತಿ'ಯನ್ನು, ಸಂಕಲ್ಪವನ್ನು ಹೊಂದಿದ್ದೇನೆ.

ಗೂಡಿನಲ್ಲಿ ಹುಟ್ಟಿ ಬೆಳೆದು, ಕಾಡಿನಲ್ಲಿ ಹಾರಾಡಿದ ಗರುಡ ಮರಿಯು ಗರಿ ಬಲಿತ ಮೇಲೆ ಸಣ್ಣ ಪುಟ್ಟ ಪ್ರದೇಶಗಳನ್ನು ಸಂಚರಿಸಿ ತೃಪ್ತಿ ಪಡೆಯುತ್ತದೆಯೆ? ಇಲ್ಲ. ಅದು ಆಗಸದ ವಿಶಾಲ ವಿಸ್ತೀರ್ಣವನ್ನು ಬಯಸಿ ಆಕಾಶ ಪರ್ಯಟನವನ್ನು ಕೈಗೊಳ್ಳುತ್ತದೆ. ಕಿರುಮೀನಿಗೆ ಕೆರೆ, ಕೊಳ, ಹೊಳೆ ಸಾಕಾಗುವುದು. ಆದರೆ ತಿಮಿಂಗಿಲದ ಜಲಕ್ರೀಡೆಗೆ ವಿಸ್ತಾರವೂ ವಿಶಾಲವೂ ಆದ ಸಮುದ್ರವೇ ಬೇಕು. ನಿನ್ನ ರಾಮಾಯಣವು ಆಗಸ, ಸಾಗರಗಳಿಗೆ ಸಮನಾದುದು. ಓ ವಾಲ್ಮೀಕಿ ಗುರುವೆ, ರಸಋಷಿಯೆ ಅದನ್ನು ದಾಟಲು ನನಗೆ ಗರುಡನ ವಜ್ರಶಕ್ತಿಯನ್ನು ದಯಪಾಲಿಸು.

ಕಲೆಯನಲ್ಲದೆ ಶಿಲ್ಪಿ ಶಿಲೆಯನೇಂ ಸೃಷ್ಟಿಪನೆ?

ಶಿಲ್ಪಿಯು ಕಲೆಯನಲ್ಲದೆ ಶಿಲೆಯನ್ನು ಸೃಷ್ಟಿಸುತ್ತಾನೆಯೆ? ಶರೀರ ನಿನ್ನದಾದರೂ ಚೈತನ್ಯ ನನ್ನದು ಎಂಬಂತೆ, ಕಥೆ ನಿನ್ನದಾದರೂ ನೀನೆ ಆಶೀರ್ವದಿಸಿ ನನ್ನ ಮಾತಿಗೆ ಬೋಧನೆಯನ್ನು ನೀಡಿರುವೆ. ಹೀಗಿದ್ದರೂ ಈ ಕೃತಿಯು–ನನ್ನ ದರ್ಶನವು ಆಕಾರ ಪಡೆದ ಅಮರ ಕಾವ್ಯ ಕೃತಿಯಲ್ಲವೆ? ವಿಗ್ರಹಕ್ಕೆ ದೇವತ್ವವನ್ನು ಆಹ್ವಾನಿಸುವಂತೆ ಹಳೆಯ ಪಂಜರಕ್ಕೆ ಪ್ರಾಣ ಚೈತನ್ಯದ ನವಪಕ್ಷಿಯನ್ನು ಭಕ್ತಿಯಿಂದ ಆಹ್ವಾನಿಸುತ್ತೇನೆ.

ಕವಿಗುರುವೆ, ನನಗೆ ವಾಙ್ಮಂತ್ರಶಕ್ತಿಯನ್ನು ನೀಡು. ತೆರೆತೆರೆಯನ್ನು ಏರಿ, ರಸವನ್ನು ಹೀರಿ ಸಾವಧಾನವಾಗಿ ಲಕ್ಷ್ಯವಹಿಸಿ ಸಾಗುತ್ತೇನೆ. ಗುರಿಯು ಹೇಗಿದೆಯೊ ಹಾಗೆಯೆ ದಾರಿಯು ಸುಂದರವಾದುದು ಎಂದು ತಿಳಿದಿರುವೆನು. ಪಂಚವಟಿಯಲ್ಲಿ ಸೂರ್ಯೋದಯದ ಶಾದ್ವಲದ ಹಸುರುಗರುಕೆಯಲ್ಲಿ ತೃಣ ಸುಂದರಿಯ ಮೂಗುತಿಯ ಮುತ್ತು ಹನಿಯಂತೆ ಮಿರುಮಿರುಗಿ ಮೆರೆಯುವ ಹಿಮಬಿಂದುವು–ರಾಮನ ಕಿರೀಟದ ಆ ರತ್ನಮಣಿಯಂತೆಯೇ ರಮಣೀಯವಾದುದು.

ರಸಯಾತ್ರೆಯನ್ನು ಕೈಕೊಂಡಿರುವೆನು. ತಂದೆ, ಬಾರಯ್ಯ, ಕೈಹಿಡಿದು ನಡಸು, ದೇವಕವಿಯೆ, ಇಗೊ, ನಿನ್ನ ಪಾದಗಳಿಗೆ ನಮಿಸುತ್ತೇನೆ. ನನ್ನನ್ನು ಮೆಲ್ಲಗೆ, ಮೃದುವಾಗಿ ವಿದ್ಯುತ್ ವಿಮಾನದಲ್ಲಿ ಇರಿಸು. ಸರಸ್ವತಿಯನ್ನು ನನ್ನ ಆತ್ಮಜಿಹ್ವೆಗೆ ಬರಿಸು. ಕೃಪೆತೋರು; ಒಲಿದು ಎತ್ತು; ಆಶೀರ್ವದಿಸು.

ಕೃಪೆಗೆಯ್, ತಾಯೆ, ಪುಟ್ಟನಂ, ಕನ್ನಡದ ಪೊಸಸುಗ್ಗಿ ಬನದ ಈ ಪರಪುಟ್ಟನಂ

ಓ ವೀಣಾ ಪಾಣಿಯೆ ಬಾಳು! ಓ ಬ್ರಹ್ಮನ ರಾಣಿಯೆ ಬಾಳು! ಓ ಭಾವಗಂಗಾವೇಣಿ ತಾಯಿಯೇ ಗಾನಗೈ, ಹೇಳು. ನಂದನವನದಲ್ಲಿ ತುಂಬಿ ಓಂಕಾರಗೈಯ್ಯುತ್ತ, ಆ

ವನವನ್ನೆಲ್ಲ ಆವರಿಸಿ ಮೊರೆಯುವಂತೆ, ಕರ್ನಾಟಕದ ಜನರ ಕರ್ಣ ವೀಣೆಯನ್ನು ತುಂಬು. ನಿನ್ನ ವಾಣಿಗೆ ಅದು ವಿಕಂಪಿಸಿ, ಝೇಂಕರಿಸಿ, ರಸದ ನವನೀತವು ಅವರ ಹೃದಯದಲ್ಲಿ ಮಥಿಸುವಂತೆ ಹಾಡು.

ಮದ್ದಿಗೆ ಕಿಡಿ ತಗುಲಿದರೆ ಜ್ಯೋತಿ ಹೊಮ್ಮುವಂತೆ, ನಿನ್ನ ಉಸಿರು ತೀಡಿದರೆ ಜಡವೆ ಶುದ್ಧಜ್ಞಾನದಿಂದ ಕೂಡಿದ ಚಿನ್ಮಯವಾಗಿ ಚಿಮ್ಮುತ್ತದೆ. ರಾಮನ ಪಾದವು ಸೋಂಕಿದ ತಕ್ಷಣ ಕಲ್ಲು ಅತಿ ಚೆಲುವಾದ ಹೆಣ್ಣಾಗಿ ಸಂಭವಿಸಿದಂತೆ, ನಿನ್ನ ಚೈತನ್ಯಮಯ ಮೈಸ್ಪರ್ಶವು ಲೋಕದ ಮನವನ್ನು ಮೋಹದಿಂದ ಅಪ್ಪಿ ಸೆಳೆಯುತ್ತದೆ; ಕೆಸರಿನಿಂದ ಕಲಾ ಕಮಲ ಕಂಗೊಳಿಸುತ್ತದೆ. ನಿನ್ನ ಕೈ ಹಿಂಡಿದರೆ–ಕಬ್ಬಿಣದಿಂದಲೂ ಕಬ್ಬಿನರಸ ಹೊರ ಸೂಸುತ್ತದೆ. ಮಂತ್ರಮಯಿಯಾದ ನೀನು ಬಡಿಯಲು–ಮುತ್ತು ಚಿಪ್ಪೊಡೆದು ಬರುವಂತೆ, ಬಂಡೆಯು ತನ್ನೊಳಗಿನ ನೀರಿನ ಬುಗ್ಗೆಯನ್ನು ಹೊಮ್ಮಿ ಚಿಮ್ಮಿಸುತ್ತದೆ.

ಕಲಾ ಲಕ್ಷ್ಮಿಯೆ ಹೇಳು, ರಸಚಿತ್ ತಪೋಬಲಕ್ಕೆ ಎಲ್ಲೆಯುಂಟೆ? ತಾಯಿಯೆ, ಕನ್ನಡದ ಹೊಸಸುಗ್ಗಿ ಬನದ ಪರಪುಟ್ಟ(ಕೋಗಿಲೆ)ನಾದ ಪುಟ್ಟ(ಪುಟ್ಟಪ್ಪ)ನ ಮೇಲೆ ಕೃಪೆ ತೋರು.

ಹೋಮರ್, ವರ್ಜಿಲ್, ಡಾಂಟೆ, ಮಿಲ್ಟನ್ನರಿಗೆ, ನಾರಣಪ್ಪ ಮತ್ತು ಪಂಪನಿಗೆ, ಋಷಿವ್ಯಾಸ, ಭಾಸ, ಭವಭೂತಿ, ಮತ್ತು ಕಾಳಿದಾಸರಿಗೆ, ನರಹರಿ, ತುಲಸಿದಾಸ ಮತ್ತು ಕೃತ್ತಿವಾಸರಿಗೆ, ನನ್ನಯ್ಯ, ಫಿರ್ದೂಸಿ, ಕಂಬ, ಅರವಿಂದರಿಗೆ ನಮಸ್ಕರಿಸುತ್ತೇನೆ. ಹಳಬರಿಗೆ, ಹೊಸಬರಿಗೆ ಹಿರಿಯರಿಗೆ ಕಿರಿಯರಿಗೆ ಕಾಲದೇಶದ ನುಡಿಯ ಜಾತಿಯ ವಿಭೇದವನ್ನು ಗಣಿಸದೆ ಜಗತ್ತಿನ ಈ ಕಲಾಚಾರ್ಯರಿಗೆಲ್ಲ–ಜ್ಯೋತಿಯಿರುವೆಡೆಯಲ್ಲಿ ಭಗವದ್ ವಿಭೂತಿಯನ್ನು ದರ್ಶಿಸುತ್ತ ತಲೆಬಾಗಿ ಮಣಿದು ನಾನು ಕೈ ಜೋಡಿಸಿ ವಂದಿಸುತ್ತೇನೆ.

ಲೋಕಗುರು ಕೃಪೆಯಿರಲಿ; ಲೋಕಕವಿ ಕೃಪೆ ಬರಲಿ; ಲೋಕ ಹೃದಯದ ಬಯಕೆಯ ಆಶೀರ್ವಾದವು ಬಂದು ಸೇರಲಿ. ತಲೆಬಾಗಿರಲಿ, ಕೈಮುಗಿದಿರಲಿ, ಬಾಳು ಮಡಿಯಾಗಿರಲಿ, ರಸತಪಸ್ಸೆಗೆ ಜಯವಾಗಲಿ. ಚಿರಶಾಂತಿ ದೊರೆಯಲಿ. ಸಿರಿಗನ್ನಡಂ ಗೆಲ್ಗೆ !

ಸಮದರ್ಶಿ ದಶರಥ ಅಯೋಧ್ಯಾ ದೊರೆ

ಸರಯೂ ನದಿಯ ತೀರದಲ್ಲಿ ಕೋಸಲ ದೇಶವು ಧನಧಾನ್ಯ, ಜನಗಳಿಂದ ತುಂಬಿತ್ತು. ಆ ನಾಡಿನ ಮಧ್ಯೆ ರಾಜಧಾನಿ ಅಯೋಧ್ಯೆಯು–ಇಂದ್ರಿಯ ಸುಖದ ನಡುವೆ ರಮಿಸುವ ಆತ್ಮಾನಂದದಂತೆ ಶೋಭಿಸುತ್ತಿತ್ತು. ತುಂಬು ಹುಣ್ಣಿಮೆಯ ಚಂದ್ರನ ಬೆಳದಿಂಗಳಿನ ಅಮೃತ ವೃಷ್ಟಿಯಂತೆ ಅದರ ಯಶಸ್ಸು ಮೂರುಲೋಕಗಳಲ್ಲಿ ಹರಡಿತ್ತು. ರವಿವಂಶದ ಅರಸರಿಗೆ ಕಿರೀಟವಿಡುವಂತೆ ಮನು ಇಪ್ಪತ್ತು ಯೋಜನದ(ನಾಲ್ಕು ಮಡಿಯೈದು) ಆ ಮಹಾ ಸಾಕೇತನಗರಿಯನ್ನು ರಚಿಸಿದ್ದನು.

ಆ ಪಟ್ಟಣವು ಸಂಪತ್ತಿಗೆ, ಕಲೆಗೆ, ವೀರಕ್ಕೆ ತವರೂರು ಎನಿಸಿತ್ತು. ಅದರ ಹೆದ್ದಾರಿಯಲ್ಲಿ ಸಾಲುಮರಗಳಿದ್ದು ಅವು ಪ್ರತಿದಿನ ಹೂವಿನ ಉದುರಿನ ಮಳೆಗರೆಯುತ್ತಿದ್ದವು. ಅಲ್ಲಿಯ ಗೃಹಗಳು ಸುಂದರ ಸುಸಂಸ್ಕೃತ ಲತಾಂಗಿಯರ ಸಿರಿಗೈಯ ಹೊನ್ನಿನ ಕೊಡದ ಪನ್ನೀರಿನ ಸಿಂಪಡಣೆಯಿಂದ, ತಳಿರು ತೋರಣದಿಂದ, ಕರ್ಪೂರದ ಕಮ್ಮನೆಯ ರಂಗವಲ್ಲಿಯ ಲಲಿತ ಕಲೆಯಿಂದ ಕೂಡಿ; ತಮ್ಮ ಕೊರಳ ಇಂಚರದಿಂದ ಪಕ್ಷಿಗಳನ್ನು ಅಣಕಿಸುವ ನಲ್ಮೆಯ ಮಕ್ಕಳಿಂದ ಶೋಭಿಸುತ್ತಿದ್ದವು. ಅದು ನಿತ್ಯ ಸಂತಸದ ನೆಲೆಮನೆಯಾಗಿದ್ದು ಸ್ವರ್ಗದ ಊರನ್ನೇ ಸೂರೆಗೊಂಡಂತೆ ಮೆರೆಯುತ್ತಿದ್ದಿತು. ಅದಕ್ಕೆ ದಶರಥ ಚಕ್ರವರ್ತಿಯಾಗಿದ್ದು, ಸ್ವರ್ಗದ ದೊರೆ ಇಂದ್ರನಂತಿದ್ದನು.

ಅವನು ಇಕ್ಷ್ವಾಕು, ರಘು, ದಿಲೀಪರ ವಂಶ ಸಮುದ್ರದಲ್ಲಿಯ ಅಮೃತದಂತಿದ್ದನು. ರಾಜರ್ಷಿಯೂ, ದೀರ್ಘದರ್ಶಿಯೂ, ಸಮದರ್ಶಿಯೂ ಆದ ಅವನು ಜನ್ಮ ಕುಲ ಧನ ಜಾತಿ ವರ್ಣ ಪ್ರಭೇದವನ್ನು ಗಣಿಸುತ್ತಿರಲಿಲ್ಲ. ಪ್ರಜೆಗಳ ಮನದ ಹೃದಯದ ಧರ್ಮಕರ್ಮಗಳನ್ನು ಪರಿಗಣಿಸಿ ಮನ್ನಣೆ ಮಾಡುತ್ತಿದ್ದನು. ನೀಚ ಉಚ್ಚ ಎಂಬ ಭಿನ್ನತೆಯನ್ನು, ಸ್ಪರ್ಧೆ ವೈರಗಳನ್ನು ತೊಡೆದು ಹಾಕಿದ್ದನು. ಸಮಬುದ್ಧಿಯಿಂದ, ದರ್ಪದಿಂದ ತನ್ನ ರಾಜ್ಯವನ್ನು ಸರ್ವ ಪ್ರಜಾಮತಕ್ಕೆ ತಾನು ಪ್ರತಿನಿಧಿಯೆಂಬಂತೆ; ಅವರ ಹಿತಕ್ಕೆ ಹೊಣೆ ಎಂಬ ಅರಿವಿನಲ್ಲಿ–ಜ್ಞಾನಿಗಳು ಇಷ್ಟಪಟ್ಟ ಸಮದರ್ಶನವನ್ನು ಒಪ್ಪಿ ರಾಜ್ಯವಾಳುತ್ತಿದ್ದನು.

ಮಕ್ಕಳಂ ಪಡೆದ ಪಕ್ಕಿಯ ಸಿರಿತನಂ ಚಕ್ರವರ್ತಿಗೆ ತನ್ನ ಬಡತನವನಾಡಿ ಮೂದಲಿಸಿತೆನೆ

ದಶರಥನಿಗೆ ಸಿರಿತನವೆಷ್ಟಿದ್ದರೂ, ತಲೆಗೂದಲು ನವಿರ ಬೆಳ್ಳಿಗೆರೆಗಳಿಂದ ನೆರೆತರೂ, ದೇವಿ ಕೌಸಲ್ಯೆಯನ್ನು, ಸಾಧ್ವಿ ಸುಮಿತ್ರೆಯನ್ನು ಚೆಲುವೇ ಮೂರ್ತಿವೆತ್ತಂತಿದ್ದ ಕೈಕೆಯನ್ನು ವಿವಾಹವಾಗಿ ಕಾಮ ಪ್ರೇಮದಿಂದಿದ್ದರೂ ವಂಶಾಭಿವೃದ್ಧಿಯ ಮಕ್ಕಳಾಗಿರಲಿಲ್ಲ. ಅವನು ಒಮ್ಮೆ ತನ್ನ ಅರಮನೆಯ ಸಂಪದ್ಭರಿತ ತೋಟದಲ್ಲಿ ತಿರುಗಾಡುತ್ತಿರಲು ಒಂದು ತಾಯಿ ಗುಬ್ಬಚ್ಚಿ ಬಾಯಿತೆಗೆದ ಮರಿಗೆ ಗುಟುಕು ಕೊಡುತ್ತಿದ್ದುದನ್ನು ನೋಡಿದನು. ಅಲ್ಲಿಯೇ ಕಣ್ಣು ನೆಟ್ಟಿತು. ಕಾಲು ನೆಟ್ಟಿತು. ಮರಗಟ್ಟಿ ನಿಂತನು. ಮಕ್ಕಳನ್ನು ಪಡೆದ ಹಕ್ಕಿಯ ಸಿರಿತನವು ಚಕ್ರವರ್ತಿಗೆ ತನ್ನ ಬಡತನವನ್ನು ಮೂದಲಿಸಿದಂತಾಯಿತು. ಆ ವಿಹಂಗಮ ಸುಖವನ್ನು ನೋಡಿ ಕೋಸಲೇಶ್ವರನು ಕರುಬಿ ಕುದಿದನು.

ದೇವತೆಗಳ ಅಪೇಕ್ಷೆಯೊ? ಋತದ ಇಚ್ಛೆಯೊ? ವಿಧಿಯೊ? ಅಂತೂ ಗುಬ್ಬಚ್ಚಿಯಾದರೇನು? ವಿಭೂತಿಯನ್ನು ಭೂಮಿಗೆ ಕರೆಯುವ ಆಸೆಯನ್ನು ದೊರೆಯ ಹೃದಯದಲ್ಲಿ ಕೆರಳಿಸಿತು! ಊರ್ಧ್ವಲೋಕದ ದೇವಶಕ್ತಿಗಳು ಸಂಚು ಹೂಡಿದ್ದಾರೆಂಬಂತೆ ಅವರ ಇಚ್ಛೆಯು ಮುದುಕನ ಎದೆಯಲ್ಲಿ ಮಕ್ಕಳ ಆಸೆಯಾಗಿ ಪ್ರವೇಶಿಸಿತು.

ಉದ್ಯಾನದಿಂದ ನೇರ ಮನೆಗೆ ಹೋದನು. ಪುತ್ರ ಸಂತಾನದ ಉತ್ಕಟವಾದ ಅಪೇಕ್ಷೆಯ ಚಿಂತೆಯಿಂದ ಗುರುಗಳಾದ ವಾಮದೇವ, ವಸಿಷ್ಠರನ್ನು ಸಚಿವರಾದ ಮಂತ್ರಿಪಾಲ, ಸುಮಂತ್ರರನ್ನು ಕರೆಸಿದನು. ತನ್ನ ಬಾಳ ಬಯಕೆಯನ್ನು ಈ ರೀತಿ ಹೇಳಿದನು:

'ಗುರುಗಳೇ ಕೇಳಿ, ನನ್ನೆದೆಯ ಸಿರಿಯ ಹೊನ್ನಿನ ಕಳಸದಲ್ಲಿ ಬಿರುಕೊಡೆದು ಜೀವಾಮೃತವು ಸೋರುತ್ತಿದೆ. ಬಾಳಿನ ದೀಪವು ತಾನು ಆರುವ ಮೊದಲು ಇನ್ನೊಂದು ಬತ್ತಿಯ ಕುಡಿಗೆ ದೀಪವನ್ನು ಅಂಕುರಿಸಿ ಹೊತ್ತಿಸಿ ಹೋಗಬೇಕಲ್ಲವೇ? ನಾನು ಹಾಗೆ ಮಾಡದೆ ಹೋದರೆ ಜಗದ್ವಿಖ್ಯಾತ ಸೂರ್ಯನ ವಂಶಕ್ಕೆ(ನೇಸರ್ಬಳಿ) ಕತ್ತಲೆಯನ್ನು ತುಂಬಿ ಹೋದಂತಲ್ಲವೇ? ಮಕ್ಕಳನ್ನು ಕಾಣದ ಈ ಕಣ್ಣು ಮನಸ್ಸಿನ ಬೇಗುದಿಯಿಂದ ಸೀದು ಕುರುಡಾಯಿತು. ನನ್ನ ಮನಸ್ಸಿನ ಮಾವಿನ ಮರಕ್ಕೆ ಕುಗ್ಗಿದ ಸ್ಥಿತಿಯ ಅಸಹಾಯಕತೆಯ ಪರಾವಲಂಬಿ ಸಸ್ಯ ಹಬ್ಬಿ ಹಿಡಿದುಕೊಂಡಿದೆ. ಮಾಮರ ಸೊಗಯಿಸುತ್ತಿಲ್ಲ. ನನಗೆ ಕೆಂದಳಿರು ಹೊಂದುತ್ತಿಲ್ಲ. ಅದು ಹಸುಳೆಯ ವಿಲಾಸದಿಂದ ಶಿಶು ವಿಲಾಸವನ್ನು ನೆನಪಿಗೆ ಬಿಡದಂತೆ ತಂದು–ಕಡೆಗೋಲು ಇಟ್ಟು ಕಡೆದಂತೆ ಕದಡುತ್ತಿದೆ.

'ನನಗೆ ಇಂದು ಯಾವುದೇ ಚೆಲುವು ಅಂದವಾಗಿ ಕಾಣುತ್ತಿಲ್ಲ. ನನಗೆ ಹಗಲು ಇರುಳು, ರವಿ ಶಶಿಗಳ ಉದಯಾಸ್ತಗಳು, ಕಾಮನ ಬಿಲ್ಲುಗಳು ಸರ್ವಸೌಂದರ್ಯ ಅಮೃತವು ಮಕ್ಕಳಿಲ್ಲದ ದೊರೆಗೆ ನೀರಸವಾಗಿ ನಿರ್ಜೀವದಂತಿವೆ. ಈ ನೃಪಸಂಪದವು ಶವದ ಶೃಂಗಾರದಂತಿದೆ. ಕುರುಡನು ಕನ್ನಡಿಗೆ ಒಡೆಯನಾದ ಮಾತ್ರಕ್ಕೆ ಕಾಣಲು ಸಾಧ್ಯವೆ? ಓ ವಂದ್ಯರಿರ, ಬಾಳಿಗೆ ಕಣ್ಣಿನಂತಿರುವ ಕಂದರನ್ನು ಪಡೆಯುವ ದೇವಮಾರ್ಗವನ್ನು ನನಗೆ ತಿಳಿಸಿ. ನನ್ನ ಎದೆಯ ಬೆಂಕಿಯನ್ನು ಆರಿಸಿ ಸುಗ್ಗಿಯನ್ನು ತನ್ನಿ'.

ತೀವ್ರ ದುಃಖದ ಹೊರೆಹೊತ್ತ ದೊರೆಯ ಮೊರೆಯನ್ನು ಆಲಿಸುತ್ತ ಗುರು ವಸಿಷ್ಠನು ಪುತ್ರಕಾಮೇಷ್ಠಿಯಿಂದ ಪುತ್ರ ಸಂತಾನವಾಗುವುದೆಂದು ಭರವಸೆ ನೀಡಿ ಸಂತೈಸಿದನು. ಅಲ್ಲಿಂದ ಯಜ್ಞಶಾಲೆಗೆ ನಡೆದನು. ಅದನ್ನು ಕೇಳಿ ತಿಳಿದ ವಿಚಾರಮತಿ ಗುರುವರ ಜಾಬಾಲಿ ಋಷಿವರೇಣ್ಯನು ರಾಜನ ಬಳಿಗೆ ಬಂದು ಹೀಗೆ ಹೇಳಿದನು:

'ರಘುಕುಲ ಆಕಾಶದ ಚಂದ್ರಮನೆ, ಕುಲ ಪುರೋಹಿತರು ಹೇಳಿದ ಯಜ್ಞವನ್ನು ಕೈಕೊಂಡು ಪುತ್ರರತ್ನರನ್ನು ಪಡೆಯುವೆ ಎಂಬುದು ದಿಟ. ಆದರೂ ನನ್ನದೊಂದು ಕಾಣ್ಕೆಯನ್ನು ಕೇಳು. ಪೂರ್ವಪದ್ಧತಿಯನ್ನು ಅನುಸರಿಸಿ ಮಾಡುವ ದಿಗ್ವಿಜಯ ಅಶ್ವಮೇಧ ಮೊದಲಾದುವನ್ನು ಬಿಡು. ಹಿಂಸಾಕ್ರೌರ್ಯವಿಲ್ಲದಿರುವ ಪ್ರೇಮದಿಂದ ವ್ರತಧಾರಿಯಾಗಿ ದೇವತೆಗಳನ್ನು ಪೂಜಿಸಿದರೆ ಜಗತ್ತನ್ನು ಆಳುವ ಋತ ಮೆಚ್ಚುತ್ತದೆ.

'ರಾಜನೇ ಕೇಳು, ನೆಲದಲ್ಲಿ, ಬಾನಿನಲ್ಲಿ, ಕಡಲು ಕಾಡುಗಳಲ್ಲಿ, ಪಕ್ಷಿ ಪ್ರಾಣಿ, ಹುಲ್ಲುಗಳಲ್ಲಿ, ಆರ್ಯರಲ್ಲಿ ಮತ್ತು ಅನಾರ್ಯರಲ್ಲಿ ಇಡೀ ವಿಶ್ವವನ್ನು ಎಲ್ಲಾ ಕಡೆಯೂ ತುಂಬಿದ ಅಂತರ್ಯಾಮಿ ಚೇತನ ಪ್ರೇಮಾತ್ಮವಾಗಿದೆ. ಆದುದರಿಂದ ಹಿಂಸೆಯಿಂದ ಪ್ರೇಮಮೂರ್ತಿಗಳಾದ ಸಂತಾನ ಹುಟ್ಟುವುದಿಲ್ಲ.

'ರಾಜೇಂದ್ರನೇ ಕೇಳು, ಪ್ರೇಮಸಾಕ್ಷಾತ್ಕಾರವಾಗಿರುವ ಋಷ್ಯಶೃಂಗ ಮುಂತಾದ ಮುನಿಗಳನ್ನು ಆಹ್ವಾನ ನೀಡಿ ಬರಹೇಳು. ಮಖಶಾಲೆಯನ್ನು ರಚಿಸು. ಯಜ್ಞಕುಂಡವನ್ನು ನಿರ್ಮಿಸು. ನೀನು ಸಾತ್ವಿಕ ವಿಧಾನದಿಂದ ವಿಶ್ವಶಕ್ತಿ ಸ್ವರೂಪಿ ಅಗ್ನಿಯನ್ನು ಭಜಿಸು. ಪ್ರಜೆಗಳನ್ನು ಬಡವರನ್ನು ಅವರ ಮನಸ್ಸು ತೃಪ್ತಿಯಾಗುವವರೆಗೂ ಸತ್ಕರಿಸು. ಅವರು ತೃಪ್ತಿಯಿಂದ 'ದೊರೆಗೊಳ್ಳಿತಕ್ಕೆ!' ಎಂದು ಆಶೀರ್ವದಿಸಲು ಅದೇ ದೇವರ ಆಶೀರ್ವಾದಕ್ಕೆ ಸಮನಾಗುತ್ತದೆ. ನೆಲದ ಜನರ ವಿಜ್ಞಾಪನೆಯು ಜಿಪುಣ ವಿಧಿಯನ್ನು ಹಿಂಡಿ ಎಳೆತಂದು ನಿನಗೆ ಮಕ್ಕಳನ್ನು ನೀಡುತ್ತದೆ. ಜನಮನದ ಶಕ್ತಿ ಮತ್ತು ಅಭೀಪ್ಸೆಯೆ ಮಹಾತ್ಮರನ್ನು ನಮ್ಮ ಈ ಭೂಮಿಗೆ ಎಳೆದು ತರುತ್ತದೆ.'

ಜನಮನಮೆ ಯುಗಶಕ್ತಿಯಲ್ತೆ?

ಋಷಿಯು ಹೇಳಿದ ವೇದವಾಕ್ಯವನ್ನು ಕೇಳಿ ದಶರಥನು ರೋಮಾಂಚನಗೊಂಡನು. ಕಣ್ಣಿನಲ್ಲಿ ಆನಂದಾಶ್ರುಗಳು ಹೊಮ್ಮಿದವು. ಕಾಲಿಗೆ ನಮಸ್ಕರಿಸಿದನು. ಸಾತ್ವಿಕ ವಿಧಾನದಿಂದ ಯಜ್ಞವನ್ನು ನಡೆಸಲು ಸಂತೋಷದಿಂದ ಒಪ್ಪಿದನು. ಆ ಜ್ಞಾನಿಯನ್ನು ಬೀಳ್ಕೊಟ್ಟನು.

ಸರಯೂ ನದಿಯ ಹಸಿರು ದಡದ ಮೇಲೆ ಯಜ್ಞಶಾಲೆಯನ್ನು ರಚಿಸಿದನು. ಅದು ಚೈತ್ರಮಾಸದ ಕೃಷಿಯ ಫಲವಾದ ಹೂ ಚಿಗುರು ಬಳ್ಳಿಗಳಿಂದ ಶೋಭಿತವಾದ ಗಂಧಸೂಸುವ ನಂದನವನದ ನೆಲೆಯ ಸಿರಿಯಂತೆ ರಮಣೀಯವಾಗಿತ್ತು. ಗಗನ ವಿಜ್ಞಾನಿಯು ದೂರದರ್ಶಕ ಯಂತ್ರದಲ್ಲಿ ಕಣ್ಣಿಟ್ಟು ರಾತ್ರಿ ಆಕಾಶದ ಕಡೆಗೆ ನೋಡುವಾಗ ಅತಿದೂರದಲ್ಲಿ ಕಾಣುವ ಒಂದು ತಾರಾಗರ್ಭದಂತೆ-ಯಜ್ಞಕುಂಡದ ಮಧ್ಯದಲ್ಲಿ ದೇದೀಪ್ಯಮಾನವಾಗಿರುವ ಕೆಂಡದ ಉರಿ ಕಂಡಿತು.

ಮಲೆನಾಡಿನಲ್ಲಿ ಮೊದಲ ಮುಂಗಾರು ಮಳೆ ಬೀಳಲು, ಮರುದಿನ ನೆನದ ಕಂಪಿನ ನೆಲದಿಂದ ಉಕ್ಕೆದ್ದು ಸಾಲುಗೊಂಡು ಲಕ್ಷ ಲಕ್ಷ ಕಟ್ಟಿರುವೆಗಳು ಹರಿದು ಬಂದು ಜೇನಿರುವ ಹುತ್ತವನ್ನು ಮುತ್ತುವುವು. ಅದೇ ರೀತಿ ನಾನಾ ದೇಶದ ಜನ ವಿಪುಲ ಸಂಖ್ಯೆಯಲ್ಲಿ ಯಜ್ಞರಂಗಕ್ಕೆ ಬಂದು ಸೇರಿದರು. ಸಾಕೇತ ನಗರಿಯು ಕುದಿಗೊಂಡ ಕಡಲಿನಂತಾಯಿತು. ಜನರು ಭೋಜನ ಮತ್ತು ದಾನದಕ್ಷಿಣೆಯ ಭಾರಕ್ಕೆ-ತೃಪ್ತಿಯೇ ತಣಿದು ತೇಗಿದಂತೆ ಸಂತೋಷಪಟ್ಟರು. ಬಡತನವೆ ಸಂಪತ್ತಾಯಿತೊ ಎಂಬಂತೆ ಹೊನ್ನ ಹೊರೆಯಿಂದ ದಾರಿದ್ರ್ಯದ ಬೆನ್ನುಬಾಗಿತು.

ದೊರೆಯ ಇಚ್ಛೆಯು ನೆರವೇರಿ ಕ್ಷೇಮ ಉಂಟಾಗಲಿ ಎಂಬ ಜನರ ಹೃದಯದ ಹರಕೆಯು ಯಜ್ಞಶಾಲೆಯಿಂದ ಏಳುವ ಹೋಮ ಧೂಮದಂತೆ ಆಕಾಶವನ್ನೆಲ್ಲ ವ್ಯಾಪಿಸಿತು. ಅತಿ ತೀವ್ರ ಆಕಾಂಕ್ಷೆ ತಾನು ಹಿಡಿದು ಜಗ್ಗಿ ಸೆಳೆಯಲು ಸಗ್ಗವೆ ಮಣಿದು – ಭೂಮಿಯನ್ನು ತೃಪ್ತಿಪಡಿಸದೆ ಇರುವುದೆ? ಬಹುಜನರ ಹಿರಿದಾದ ಬಯಕೆ ಕಲ್ಪವೃಕ್ಷದ ಕೊಂಬೆಯನ್ನೆ ಹಿಡಿದು ಸೆಳೆಯಲು ಅದು ಭೂಮಿಗೆ ಫಲದ ಅಮೃತವನ್ನು ಮಳೆಗರೆಯದಿರುತ್ತದೆಯೆ? ಜನಮನವೆ ಯುಗಶಕ್ತಿಯಲ್ಲವೆ?

ಸೃಷ್ಟಿಯ ಸಮಷ್ಟಿ ಶಕ್ತಿಯು ವ್ಯಷ್ಟಿ ರೂಪದಿಂದ ಇಳಿದು ಬರುತ್ತದೆ. ಆ ಶಕ್ತಿಯನ್ನು ನಾವು ಅವತಾರವೆಂದು ಪೂಜಿಸುವೆವು ಅಲ್ಲವೆ?

ದಶರಥ ಮಹಾರಾಜನು ಖಡ್ಗಧಾರಾವ್ರತವನ್ನು ಕೈಗೊಂಡನು. ತನ್ನಂತೆ ನಾರುಮಡಿಯುಟ್ಟು ನೋಂಪಿಗೆ ನಿಂತ ಪತ್ನಿಯರ ಜೊತೆಗೂಡಿ ಪುತ್ರಕಾಮೇಷ್ಟಿ ಯಾಗವನ್ನು ಮಾಡಿದನು. ಋಕ್ ಸಾಮಯಜುರ್ವೇದಗಳಿಂದ ಓಂಕಾರ ಸ್ವಾಹಾದಿ ಮಂತ್ರ ಘೋಷಗಳೊಡನೆ ಯಜ್ಞಕೊಂಡವನ್ನು ಋತ್ವಿಜರ ಗುಂಪು ಆವರಿಸಿತ್ತು. ಅವರೊಡನೆ ಅವನು ಆತ್ಮಭಕ್ತಿಯಿಂದ ಚಿತ್ ತಪಸ್ ಶಕ್ತಿಯನ್ನು ಬಯಸಿ ಹವಿಸ್ಸನ್ನು ಅರ್ಪಿಸುತ್ತಿದ್ದನು.

ಮನದಂತೆ ಸುತರು ಎಂಬ ಜಾಣ್ನುಡಿಯನ್ನು ತಿಳಿದ ರಾಜನು ಅಲ್ಪತೆಯ ಭಾವಗಳನ್ನು ಪೂರ್ಣವಾಗಿ ತೊರೆದನು. ಗಗನ ಪೃಥ್ವಿ ಸಮುದ್ರ ಪರ್ವತಾರಣ್ಯ ವಿಸ್ತಾರದ ಗಾಂಭೀರ್ಯನಾದನು. ತನ್ನಂತಹ ಗುಣಹೃದಯರಾದ ಪುತ್ರರಿಗಾಗಿ ಆಸೆಪಡುತ್ತ– ಅದನ್ನು ಭಾವಿಸಿ ರೂಪಿಸಿಕೊಂಡು ಧ್ಯಾನಶೀಲನಾದನು. ನೃಪನ ಭಾವ ಮಹಿಮಹಿಮಾ ಜ್ಯೋತಿಯು ಪಟ್ಟಮಹಿಷಿಯರ ಎದೆಯಲ್ಲಿ ಮಿಂಚಿನಂತೆ ಸಂಚರಿಸಿತು. ಪ್ರೀತಿಯ ಬೆಸುಗೆಯಿಂದ ದ್ವೈತವು ಅದ್ವೈತವಾಗುವುದು ಒಂದು ಅಚ್ಚರಿಯೇ? ಮೈಗಳು ಎಷ್ಟಾದರೇನು ಒಲಿದವರಿಗೆ ಅದು ಒಂದೇ ಮನವಲ್ಲವೆ?

ಗರಿ ಹಗುರ ನೊರೆ ಮುಗಿಲಿನ ಆಗಸದಲ್ಲಿ ಪೂರ್ಣಚಂದ್ರನು ಸುಖ ಸಂತೋಷದಿಂದ ತೇಲುತ್ತ, ಸರಯೂ ನದಿಯ ವಕ್ಷಸ್ಥಲದ ಮನೋಹರ ನೀರುಗನ್ನಡಿಯಲ್ಲಿ ಹಾಲು ಹೊಯ್ದಂತೆ ಬೆಳುದಿಂಗಳನ್ನು ಹರಡಿ ಕಂಗೊಳಿಸುತ್ತಿದ್ದನು. ಆ ಬೆಳ್ದಿಂಗಳನ್ನು ಸವಿದು ತೇನೆಹಕ್ಕಿ ಉನ್ಮಾದದಿಂದ ಹಾರಾಡಿ ಆಕಾಶವನ್ನು ಮೀಟುತ್ತಿತ್ತು. ಪೃಥ್ವಿಯು ನಿಶ್ಯಬ್ದತಾ ನಿದ್ದೆಯಲ್ಲಿ ಆಳುತ್ತ ಮೌನವಾಗಿತ್ತು. ಸಂತಾನಾಪೇಕ್ಷಿಯಾದ ದೊರೆಯು ಆ ಹುಣ್ಣಿಮೆ ರಾತ್ರಿಯಲ್ಲಿ ಹೋಮಕುಂಡದ ಬಳಿ ಪೂಜೆಯಲ್ಲಿ ಪುತ್ರ ಸಂತಾನದ ಬಗ್ಗೆ ಬಯಕೆಯನ್ನು ಹೊಂದಿ 'ಪುತ್ರಾಭಿವಾಂಛೆಯ ಸಮಾಧಿ'ಯಲ್ಲಿದ್ದನು. ಆಗ ಅಗ್ನಿಕುಂಡದಲ್ಲಿ ಕೆಂಡದುರಿ ಕೆರಳಿ ನೂರುಪಟ್ಟು ಹೆಚ್ಚಾಯಿತು. ಕಗ್ಗತ್ತಲೆಯ

ಕಲ್ಲುಗರ್ಭವನ್ನು ಸೀಳಿ ಕೋಟಿ ಮಿಂಚುಗಳು ಒಮ್ಮೆಲೆ ಮಿಂಚಿದುವು ಎನ್ನುವಂತೆ ಪ್ರಭೆ ಹೊಮ್ಮಿ ಅತಿ ಪ್ರಕಾಶದಿಂದ ಕಣ್ಣು ಕುಕ್ಕಿತು.

ಸಂಯಮಿಗಳು ಸಹ ಬೆಚ್ಚಿ ದೃಷ್ಟಿಯಿಟ್ಟು ನೋಡುತ್ತಿರಲು ಅಗ್ನಿ ಸರ್ಪವು ಕ್ರಿಯಾಸಕ್ತಿಯಿಂದ ಸಂಭ್ರಮದಲ್ಲಿ ಹಾವಿನ ನಾಲಗೆಯಂತೆ ಬೀಳುತ್ತಿರುವ ಆಹುತಿಗಳನ್ನು ನುಂಗಿ ನೊಣೆಯಿತು. (ಯಾಗದ ಹವಿಸ್ಸನ್ನು ದೇವತೆಗಳಿಗೆ ಮುಟ್ಟಿಸುವವನು ವಹ್ನಿ)

ಸಿಮಿಸಿಮಿಸಿ, ಭಟಭಟಿಸಿ, ಧಗಧಗಿಸುತ ನೆಗೆದು ಮೇಲಕ್ಕೆ ಏಳುವ ರಕ್ತಾಗ್ನಿ ತಾಂಡವ ಜ್ವಾಲಾಜಲದ ಮಧ್ಯೆ – ಝುಗಝುಗಿಸಿ, ಕೆಂಡದುರಿ ಮೈಯ ಮಿಂಚಿನ ದಿವ್ಯ ಕಾಂತಿಯಲ್ಲಿ ಓರ್ವನು ಅವತರಿಸಿದನು. ಅವನ ಮುಖಮಂಡಲವು ಪೂರ್ವದಿಕ್ಕಿನ ಗಗನದ ಸೀಮೆಯಲ್ಲಿ ಕುಂಕುಮದ ತೀರ್ಥದಲ್ಲಿ ಮಿಂದು ಏಳುವ ಫಾಲ್ಗುಣ ಪ್ರಭಾತ ರವಿಯಂತೆ ಪ್ರಕಾಶಿಸುತ್ತಿತ್ತು. ಅವನ ತಲೆಯನ್ನು ಕೆಂಪು ಕೂದಲಿನ ರಾಶಿಯು – ಕೆಂಪು ಜ್ವಾಲೆಯ ಕುದುರೆಯ ರಶ್ಮಿ ಕೇಸರಗಳೆಂಬಂತೆ ಆವರಿಸಿತ್ತು.

ಕೆಂಗಿಡಿಗಳಿಂದ ತುಂಬಿದ ಆಗಸದಂತಿರುವ ಹೋಮಧೂಮವನ್ನು ನೀಲ ರೇಷ್ಮೆ ವಸ್ತ್ರದಂತೆ ಧರಿಸಿದ್ದ ಅವನು ನಕ್ಷತ್ರಮಯ ರಾತ್ರಿಯನ್ನು ಧರಿಸಿ ಸೂರ್ಯನೆ ಶೋಭಿಸುವಂತೆ ಇದ್ದನು. ಮಂಗಳದ ಅಮರ ಮೂರ್ತಿಯು ಯಾಜಕರ ಕಣ್ಣಿನ ಮುಂದೆ ರಾರಾಜಿಸಿದನು. ಅವನ ಕೈಯಲ್ಲಿ ಪುಟವಿಟ್ಟ ಚಿನ್ನ(ತಪ್ತ ಜಾಂಬೂನದ)ದ ದೀಪ್ತಿಯನ್ನು ಅಣಕವಾಡುವಂತೆ ಹೊಳೆಹೊಳೆಯುವ ಚಿನ್ನದ ಪಾತ್ರೆಯಲ್ಲಿ ಸುಪಾಯಸ ರಸವು – ಕೋದಂಡ ಚಂದ್ರನಲ್ಲಿ ಬಂಗಾರದ ಬೆಳುದಿಂಗಳ ಜಲ ಹೊಳೆಯುವಂತೆ ತಳತಳ ನಲಿದು ಕುಣಿಯುತ್ತಿರಲು ತೋಳುನೀಡಿ ಆಶೀರ್ವದಿಸಿದನು. ಸಭಾ ನಿಶ್ಯಬ್ದತೆಯನ್ನು ಮಥಿಸುತ್ತ ಆಳವಾದ ಗಂಭೀರ ಭೇರಿಯ ಶಬ್ದದಂತೆ ಅವನ ಮಾತು ಹೊಮ್ಮಿತು.

'ರಾಜೇಂದ್ರನೇ, ನಾನು ಸೃಷ್ಟಿಯ ಶಕ್ತಿ ದೂತನು. ಸತ್ಯ ಸ್ವರೂಪನು, ಪೂಜ್ಯನೂ ಆದ ಪರಮಾತ್ಮನ ಲೀಲೆಗೆ ನಾನು ಯಜ್ಞಪುರುಷ. ಕಾಮಧೇನುವಿನ ಕೊಡಕೆಚ್ಚಲಿನಿಂದ ಹಾಲು ಕರೆದು ಮಾಡಿದ ಪಾಯಸವಿದು. ಇದನ್ನು ಕುಡಿದರೆ ಮರುಭೂಮಿಯು ನಗುವ ನಂದನವನವಾಗುವುದು. ನಿನ್ನ ಈ ವ್ರತಕ್ಕೆ ಧರ್ಮದ ವಿಶ್ವಶಕ್ತಿಯು ಮೆಚ್ಚಿದೆ. ನಿನ್ನ ಸತಿಯರಿಗೆ ಹಂಚು. ಇದು ವಿಧಿಲೀಲೆಯನ್ನು ಗೆಲ್ಲುತ್ತದೆ.'

ಆ ನುಡಿಗಳನ್ನು ಕೇಳಿ ಸಂತಸದ ಕಡಲಿನಲ್ಲಿ ತೇಲಿ ಹೋದ ದೊರೆಯು ಎದ್ದು ಅಗ್ನಿಯಲ್ಲಿಗೆ ಹೋಗಿ ಕೈಮುಗಿದು, 'ಪೂಜ್ಯನೇ, ನಿನಗೆ ಸುಖಾಗಮನವನ್ನು ಬಯಸುತ್ತೇನೆ. ನಿನ್ನಾಜ್ಞೆಯಂತೆ ನಡೆಯುತ್ತೇನೆ.' ಎಂದು ಹೇಳಿ ಬೊಗಸೆಯೊಡ್ಡಿ ದಿವ್ಯ ಪಾತ್ರೆಯನ್ನು ವಿನಯದಿಂದ ತೆಗೆದುಕೊಂಡು ಪ್ರದಕ್ಷಿಣೆ ಹಾಕಿ ನಮಸ್ಕರಿಸಿದನು. ಕೂಡಲೆ ದೇವ ತೇಜಃಪುಂಜ ಯಜ್ಞಮೂರ್ತಿಯು ಅಗ್ನಿಯ ಮೈಯ ಜ್ವಾಲೆಯಲ್ಲಿ ಅಡಗಿಕೊಂಡಂತೆ

ಮರೆಯಾಯಿತು. ಅದು ಕವಿಶೈಲದ ಎತ್ತರ ಪ್ರದೇಶ ಸಂಜೆಗಿರಿ ನೆತ್ತಿಯಲ್ಲಿ ಕವಿಯು ಕುಳಿತು ನೋಡುತ್ತಿರಲು – ದೂರದ ಅಲೆಯಂತೆ ಸಂಚರಿಸುವ ದಿಗಂತದಲ್ಲಿ ಚೈತ್ರರವಿಯು ಮುಗಿಲ ನೆತ್ತರು ಕೆಂಪಿನಲ್ಲಿ ಮುಳುಗಿ ಹೋದಂತಿತ್ತು!

ನಿರ್ಮಲ ಶರದ್ರುತುವಿನ ಚಂದ್ರನ ಕಿರಣಗಳಿಂದ ಆಗಸವು ಉಲ್ಲಾಸಗೊಳುವಂತೆ ದಶರಥನ ಮನಸ್ಸು ಉಬ್ಬಿತು. ಅವನು ಅಂತಃಪುರಕ್ಕೆ ನಡೆದು ಕೌಸಲ್ಯೆಯನ್ನು ಕುರಿತು ಹೀಗೆ ಹೇಳಿದನು:

'ರಾಣಿ, ಈ ಮಾವಿನ ಮರಕ್ಕೆ ಕುಸುಮಸುಖ ಒದಗಿದೆ. ಮಧುಫಲವನ್ನು ಸವಿಯುವ ಸಂತೋಷವಿಲ್ಲಿದೆ. ಯಜ್ಞಮೂರ್ತಿ ಕರುಣಿಸಿ ನೀಡಿದ ಪಾಯಸವನ್ನು ತೆಗೆದುಕೊ. ನೀನು ಮತ್ತು ನಿನ್ನ ತಂಗಿಯರು ಕುಲದ ಮತ್ತು ಕ್ರಮದ ಮಾರ್ಯಾದೆಗಳು ಒಪ್ಪುವಂತೆ ಇದನ್ನು ಹಂಚಿಕೊಳ್ಳಿ'

ದಶರಥ ಸತಿಯರಿಂತು ತುಂಬು ಬಸಿರಿಂದೆಸೆಯೆ ನಲಿದತ್ತಯೋಧ್ಯೆ

ಚಂದ್ರನು ಪೂರ್ಣವಾಗಿ ವೃದ್ಧಿ ಹೊಂದಿದಂತೆ ನವಮಾಸಗಳು ತುಂಬಿ ಬರಲು– ಶ್ರೀರಾಮಚಂದ್ರನೆಂಬ ಪ್ರೀತಿಯ ಹೊರೆಹೊತ್ತು, ಬಿಳಿ ತೆರೆಯ ಮುಗಿಲ ಹತ್ತಿಯ ತೆಳುವಾದ ಮಡಿಯನ್ನು ಉಟ್ಟ ಪೂರ್ಣಿಮಾ ರಜನಿಯಂತೆ ಗಂಭೀರ ಸೌಂದರ್ಯದಿಂದ ಕೌಸಲ್ಯೆ ಶೋಭಿಸುತ್ತಿದ್ದಳು. ಬೆಳುದಿಂಗಳನ್ನು ಸೇವಿಸಿ ಜೀವಿಸುವುದೆಂದು ಭಾವಿಸಲಾದ ಚಕೋರ ಪಕ್ಷಿಯ ಎದೆಯು ಅಲೆ ಅಲೆಯಾಗಿ ಓಲಾಡುವಂತೆ ಅರಸನ ಮನಸ್ಸು ಸಂತೋಷದಿಂದ ಹಿಗ್ಗಿತು.

ಅವಳಿ ನಕ್ಷತ್ರಗಳು ಒಂದೇ ಚುಕ್ಕಿಯ ರೀತಿ ತೋರುವಂತೆ ಸುಮಿತ್ರಾದೇವಿ ಉಲ್ಲಾಸದಿಂದ ಕಂಗೊಳಿಸಿದಳು. ಕೈಕೆಯು ತಾನು ರಾಜಖಡ್ಗವನ್ನು ಹೊಂದಿ ಮುತ್ತು ಕೆತ್ತನೆಯಿಂದ ಮಿರುಗುವ ಚಿನ್ನದ ಒರೆಯಂತಿದ್ದು, ಪಕ್ಷಿಯ ಕಣ್ಣಿನಂತೆ ಮಿಂಚಿದಳು. ಅವಳ ಸುಂದರ ಶರೀರವೆಂಬ ಕಣ್ಣಿಗಣ್ಣಿನಲ್ಲಿ ಸಿಕ್ಕದೊರೆಗೆ ಅಲ್ಲೋಲ ಕಲ್ಲೋಲವಾಯಿತು. ಆ ಹೊನ್ನಿನ ಬಳ್ಳಿಯು ಸ್ತ್ರೀಲಂಪಟನನ್ನು ಜೇನಿನ ಉರುಳುಕೊಳ್ಳಿಯಂತೆ ಬಿಗಿದು ಎಳೆಯಿತು!

ದಶರಥನ ಸತಿಯರು ಈ ರೀತಿ ತುಂಬು ಬಸುರಿಯರಾಗಿರಲು ಅಯೋಧ್ಯೆ ನಲಿಯಿತು. ಪೃಥ್ವಿ ನಲಿಯಿತು. ನೀರಿನ ಮೋಡವು ಹೊಸ ಮಳೆಯನ್ನು ಸುರಿಸಿ ಬೇಸಗೆಯ ಬೇಗೆಯನ್ನು ತಣಿಸಿತು. ಗಾಳಿಯು ತಂಪಾಗಿ ಬೀಸಿತು. ತೊರೆಗಳು ನೆರೆಯೇರಿ ತುಂಬಿ ತುಳುಕಿದುವು. ಸರಯೂ ನದಿಗೆ ದೂರದ ಹಿಮಗಿರಿಯಿಂದ ಒಂದೇಸಮನೆ ಕ್ರೌಂಚ, ಸಾರಸ, ಹಂಸ, ಕಾರಂಡಗಳು ನವವರ್ಷದ ಹರ್ಷದುನ್ಮಾದದ ಕಲನಾದದಿಂದ ಬಂದವು. ಅಡವಿಯಲ್ಲಿ ಚಿಗುರು ಹೊರಹೊಮ್ಮಿತು. ಕಾಡಿನ ಒಳಗೆ

ಹೂಗಳು ಅರಳಲು ಅಲ್ಲಿ ಭ್ರಮರಗಳು ಸಂಭ್ರಮದಿಂದ ಝೇಂಕರಿಸಿದವು. ಭೂಮಿತಾಯಿ ರೋಮಾಂಚನಗೊಂಡು ಸಂತೋಷವು ಹಚ್ಚನೆ ಹಸುರು ಗರುಕೆಯಂತೆ ಹೊಮ್ಮಿತು. ಕೋಗಿಲೆಯ ಇಂಪಾದ ಧ್ವನಿಯು ರಾಮನ ಆಗಮನ ವಾರ್ತೆಯನ್ನು ಜಗಕ್ಕೆ ಘೋಷಿಸಿತು!

ಅಂತಹ ಭುವನ ಸಂಭ್ರಮದಲ್ಲಿ ಕೌಸಲ್ಯೆಯ ಎದೆಗೆ ಹಾಲುಕ್ಕಿ ಬಂದಿತು. ಅವಳು ಕನಸಿನಲ್ಲಿ ಹಾಲಿನ ಸಾಗರವನ್ನು ಕಂಡು ಸಂತೋಷಪಟ್ಟಳು. ಆ ಹಾಲಿನ ತೆರೆಗಳ ಮೇಲೆ ಒಂದು ಹಸುಳೆ ಬಾಲಚಂದ್ರನಂತೆ ತೇಲುತ್ತ ಮುಗುಳು ನಗೆಯ ಮಿಂಚಿನಲ್ಲಿ ದಡಕ್ಕೆ ಬಂದಿತು. ಕೌಸಲ್ಯೆ ಕೈ ಚಾಚಿ ಕರೆಯಲು, ಚೆಂದುಟಿಯ ಶಿಶು ಮೊಗ್ಗು ಅರಳುವಂತೆ ಬಂದು ತೊಡೆಯೇರಿತು. ಸುಧಾ ಸುಖಕ್ಕಾಗಿ ಚಿಗುರು ಬೆರಳುಗಳಿಂದ ಎದೆಯನ್ನು ಅಪ್ಪಿತು.

ಲಕ್ಷ ನಕ್ಷತ್ರಮಯ ಅಂತರಿಕ್ಷದ ಎದೆಯ ಕ್ಷೀರ ಸಾಗರದಿಂದ ಕಿಶೋರ ಶಶಿ ಬರುವಂತೆ; ಪ್ರತಿಭಾ ಬಳ್ಳಿ ಮಿಂಚಿನ ಹೊಳಪಿನ ಸ್ಫೂರ್ತಿಯಿಂದ ಕವಿಯ ಮನಸ್ಸಿನಲ್ಲಿ ಮಹಾಕಾವ್ಯ ಉದ್ಭವಿಸುವಂತೆ –ಮಾರನೆಯ ದಿನ ಚೈತ್ರ ನವಮಿಯ ಶುಭ ಮುಹೂರ್ತದಲ್ಲಿ ಹಿರಿಯರಾಣಿಯು ಸ್ಥಿರಸುಖವು ಹೆಚ್ಚುವಂತೆ ಚೆಲುವಾದ ಹಸುಳೆಯನ್ನು ಹೆತ್ತಳು. ಶ್ರೀರಾಮನ ಅನಂತರ ಕೈಕೆಯ ಹೊಟ್ಟೆಯಿಂದ ಭರತನು ಹುಟ್ಟಿದನು. ಮಗಧರಾಜನ ಮಗಳು ಸುಮಿತ್ರೆಯು ಲಕ್ಷ್ಮಣ, ಶತ್ರುಘ್ನರೆಂಬ ಅವಳಿ ಮಕ್ಕಳನ್ನು ಹೆತ್ತಳು.

ಆ ಮಂಗಳ ಮಹೋತ್ಸವಕ್ಕೆ ಭೂಮಿ ನಲಿಯಿತು. ನಿಶ್ಯಬ್ದ ರಾತ್ರಿಯ ನಭವನ್ನು ಅಶರೀರ ಗಂಧರ್ವ ಗಾನವು ತುಂಬಿತು. ಅಪ್ಸರೆಯರು ಹೂಮಳೆ ಸುರಿಸುತ್ತ ನಲಿನಲಿದು ನರ್ತಿಸಿದರು. ಅವರ ಹಾರ, ಕಡಗ, ಡಾಬು, ಕಾಲಂದುಗೆಯ ನಾದಕ್ಕೆ ಅಯೋಧ್ಯೆಯ ಜನರು ಕಿವಿಗೊಟ್ಟು ಬೆರಗಾದರು. ಸಾಕೇತದ ಪುರಜನರು ಬೀದಿ ಬೀದಿಗಳಲ್ಲಿ ಒಟ್ಟುಗೂಡಿ ಸಂಗೀತ, ನಾಟ್ಯ, ವಾದ್ಯ ಕಲೆಗಳಿಂದ ದೇವತೆಗಳನ್ನು ಸ್ತೋತ್ರ ಮಾಡುತ್ತ ರಾಜನನ್ನು ಕೊಂಡಾಡಿದರು.

ಸೂರ್ಯೋದಯವಾಗಲು ಪುರೋಹಿತರು ಪದ್ಧತಿಯಂತೆ ನಾಮಕರಣ ಮಾಡಿದರು. ಶುಭವನ್ನು ಹಾರೈಸಿ ಜಾತಕವನ್ನು ಬರೆದರು. ಜಗತ್ತಿಗೆ ಒಳ್ಳೆಯದನ್ನು ಮಾಡಿ ಜಗದ್ವಿಖ್ಯಾತರಾಗಿ, ಕೀರ್ತಿ ಮತ್ತು ಸಚ್ಚಾರಿತ್ರ್ಯದಿಂದ ಶೋಭಿಸುವರೆಂದು ಭವಿಷ್ಯಫಲ ನುಡಿದರು.

ಮಿತಿಯಾದ ನಗೆಯ, ಪುಟ್ಟ ಶರೀರದ ಹಸುಳೆ ಶ್ರೀರಾಮಚಂದ್ರನು ಬೆಳ್ಪಕ್ಕ(ಶುಕ್ಲಪಕ್ಷ)ದಲ್ಲಿ ಚಂದ್ರನು ದಿನದಿಂದ ದಿನಕ್ಕೆ ವೃದ್ಧಿ ಹೊಂದುತ್ತಾ ಬೆಳಕು ಹೆಚ್ಚಾಗುವಂತೆ ತಾಯಿಯ ತೊಡೆಯಲ್ಲಿ ಬೆಳೆದನು. ಅವನು ತಾಯಿಯ ಎದೆಯಲ್ಲಿ ಮತ್ತು ನೋಡುವವರ ಕಣ್ಣುಗಳಲ್ಲಿ ತುಂಬಿಬಂದನು.

ಕೌಸಲ್ಯೆ ತನ್ನಾತ್ಮವನೆ ಸುತನ ಸೌಂದರ್ಯ ಸುಧೆಯಲ್ಲಿ ಕರಗಿಸಿದಳದ್ದಿ ಸಕ್ಕರೆಯವೋಲ್

ಕೌಸಲ್ಯೆಯು ತನ್ನ ಆತ್ಮವನ್ನೆ ಮಗನ ಸೌಂದರ್ಯಾಮೃತದಲ್ಲಿ ಸಕ್ಕರೆಯಂತೆ ಅದ್ದಿ ಕರಗಿಸಿದಳು. ಅವಳ ಮನಸ್ಸಿನಿಂದ ಇತರ ಜಗವೆಲ್ಲ ಜಾರಿ ಹೋಗಿ, ಮಗನೆ ಮೂರು ಜಗವಾದನು! ಅವನ ಶುಶ್ರೂಷೆಯೆ ಸಕಲ ಸಾಧನವಾಗಿ ಪ್ರೇಮವೆ ಸಮಸ್ತ ಪೂಜೆಯಾಯಿತು. ಸರ್ವ ಇಂದ್ರಿಯಗಳಿಗೆ ಶಿಶು ಒಂದೆ ಮುದ್ದಿನ ವಿಷಯವಾಯಿತು. ಉಳಿದುದೆಲ್ಲವೂ ಅವಳ ಪ್ರಜ್ಞೆಯಿಂದ ಜಾರಿ ಲಯ ಹೊಂದಿ ಮಾಯವಾಯಿತು.

ಕೌಸಲ್ಯೆಯು ಮುದ್ದಿನ ಮುದ್ದೆಯಂತೆ ಮೈತುಂಬಿಕೊಂಡಿದ್ದ, ಎಳೆಗೆಂಪು ಚಿಗುರಿನಂತೆ ಮೃದುವಾಗಿದ್ದ, ನೀಲಿಯ ಬಣ್ಣದ ತಾವರೆಯ ತನುವಿನ ಕುಲದೀಪ ಚಂದ್ರನನ್ನು – ಬಳ್ಳಿಯು ತನ್ನ ಎಲೆ ಬೆರಳುಗಳಿಂದ ಮೊಗ್ಗನ್ನು ಬಿಡದೆ ಅಪ್ಪಿಕೊಂಡು ಲಲ್ಲೆಗರೆಯುವಂತೆ ಆಲಂಗಿಸಿಕೊಂಡಳು. ಮುದ್ದಿಸುತ್ತ ತಲೆಯನ್ನು ಮೂಸಿ ಕೆನ್ನೆಗೆ ತನ್ನ ಕೂದಲುಗಳನ್ನು ಒತ್ತಿ ಸುಖಿಸಿದಳು. ಬೆಣ್ಣೆ ನುಣ್ಣನೆಯ ತೋಳುಗಳನ್ನು ತನ್ನ ಮೃದುವಾದ ಬಾಹುಗಳಿಂದ ಮುಟ್ಟಿ, ಆ ಸೋಂಕಿಗೆ ತಾಯಿ ಆನಂದಪಟ್ಟಳು.

ರಾಮಚಂದ್ರನ ತಾಯಿಯು –ತಿಳಿಗೊಳದ ತಾವರೆಯ ಆಕರ್ಷಣೆಗೆ ಒಳಗಾದ ತುಂಬಿಗಳಂತೆ ಚಲಿಸುವ ಅವನ ಕಣ್ಣುಗಳಿಗೆ ಸುರುಳಿಯುಂಗುರ ಕೂದಲುಗಳು ಮುತ್ತಿ ಬರಲು ನೋಡಿ ನಲಿಯುವಳು. ತೋರಿಸಿ ವಿಜೃಂಭಿಸುವಳು. ರೋಮಾಂಚನ ಸುಖದಲ್ಲಿ ಮೈ ಮರೆಯುವಳು. ಮಗನ ಕಣ್ಣುಗಳನ್ನು ನೋಡಿದಾಗ ಬಾನನ್ನು ನೋಡಿದಂತಾಗಲು; ತೊದಲು ನುಡಿಗಳನ್ನು ಕೇಳಿದಾಗ ಸಮುದ್ರದ ಶಬ್ದ ಆಲಿಸಿದಂತಾಗಲು ತಾಯಿಯು ಬೆಚ್ಚಿ ನಿಟ್ಟುಸಿರಿಡುವಳು. ಒಮ್ಮೊಮ್ಮೆ ಇದ್ದಕ್ಕಿದ್ದಂತೆ ಆ ಹೂ ಹಗುರ ಶಿಶುವು ಗಿರಿಭಾರವಾಗಲು ಮೇಲಕ್ಕೆ ಎತ್ತಲಾರದೆ ತಾಯಿ ಕಷ್ಟಪಟ್ಟಳು. ಮಗನ ಅಭ್ಯುದಯದ ಬಗ್ಗೆ ಶಂಕೆಯುಂಟಾಗಿ ಕಳವಳಗೊಂಡಳು. ಮತ್ತೊಮ್ಮೆ ಪಚ್ಚೆಯ ತೊಟ್ಟಿಲಿನ ಕನ್ನಡಿಯಲ್ಲಿ ತನ್ನ ಮಗನ ಬದಲು ಮಹಾಮೂರ್ತಿ ಕಾಣಿಸಲು–ದುಷ್ಟಗ್ರಹದ ಕುಚೇಷ್ಟೆಯೆಂದು ಭಯಪಟ್ಟು ಕೂಗಿಕೊಂಡಳು. ಕುಲಪುರೋಹಿತ ವಸಿಷ್ಠರಿಗೆ ಹೇಳಿ ಕಳುಹಿಸಿದಳು. ಬ್ರಹ್ಮರ್ಷಿ ಗುರುಗಳು ಬಂದು ತಾಯಿಗೆ ಹೀಗೆ ಸಮಾಧಾನ ಹೇಳಿದರು:

'ಮಗಳೆ ಭೀತಿಯನ್ನು ಬಿಡು. ನಿನ್ನ ಮಗನು ಅಸಾಮಾನ್ಯ. ನಾನು ನಿನ್ನೆ ಧ್ಯಾನದಲ್ಲಿದ್ದು ಕಂಡದ್ದನ್ನು ಹೇಳುವೆನು, ಕೇಳಿಸಿಕೊ. ಅಮರಲೋಕವು ಮೇಲೆ ಸಂಭ್ರಮದಿಂದ ತುಂಬಿತ್ತು. ಮಿಂಚಿನ ಅಂಚಿನಂತೆ ಶಕ್ತಿದೇವತಾ ಸಮೂಹದ ಪಾದಚಿಹ್ನೆಗಳು ನಕ್ಷತ್ರಗಳಂತೆ ಹೊಳೆಯುತ್ತ ಪೃಥ್ವಿಯ ಕಡೆಗೆ ಧಾವಿಸುತ್ತಿದ್ದುದನ್ನು ಕಂಡೆನು. ನನ್ನ ಆತ್ಮವು ಅವರನ್ನೆ ಹಿಂಬಾಲಿಸುತ್ತ ಬರುತ್ತಿರಲು ಅವರು ಅಯೋಧ್ಯೆಯನ್ನು ಪ್ರವೇಶಿಸಿದರು.

'ನಾನು ಶಿಶುರೂಪ ಧರಿಸಿದ ಜ್ಯೋತಿಶ್ಶರೀರಿಯು ನಿನ್ನ ತೊಡೆಯಲ್ಲಿ ಮಲಗಿರುವುದನ್ನು ನೋಡಿದೆನು. ದೇವತೆಗಳೆಲ್ಲರು ದಿವ್ಯ ಪುಷ್ಪಗಳನ್ನು ಎರಚಿದರು.

ಅವನನ್ನು ದೇವಲೋಕದ ನದಿಯ ಸುಧೆಯ ತೀರ್ಥದಿಂದ ಮೀಯಿಸಿದರು. ಸುರರು ಹಾಡಿ ಘೋಷಿಸಿದರು: ನಾವು ಧನ್ಯರು! ನೀನು ಧನ್ಯ! ಈ ರವಿಕುಲವು ಧನ್ಯ!'

ಗುರು ವಸಿಷ್ಠರ ಮಾತುಗಳನ್ನು ಕೇಳಿ ಅವರ ಪಾದಗಳಿಗೆ ನಮಸ್ಕರಿಸಿದಳು. ಸತ್ಕರಿಸಿ ಕಳುಹಿಸಿದಳು. ಅವಳು ಮಗು ರಾಮನು ನಗುವಂತೆ ಮತ್ತೆ ಮತ್ತೆ ಮುದ್ದಾಡಿದಳು. ರಾಮನು ಸ್ವಲ್ಪ ಮೊಳೆತ ಹಾಲು ಹಲ್ಲುಗಳ ಸಾಲಿಂದ ಪ್ರಕಾಶಿಸುವ ಬಾಯಿ ಹೊಂದಿ, ಜೊಲ್ಲು ಸುರಿಸುತ್ತ, ತುಟಿತೆರೆದು ಕಿವಿಗೆ ಸೊಗಯಿಸುವ ತೊದಲುನುಡಿ ಆಡುತ್ತಿದ್ದನು. ದಾದಿಯರ ಕರೆಗೆ ಹೊಂಗೆಜ್ಜೆ ಕಿಂಕಿಣಿ ದನಿಗೈದು ಕುಣಿಸುತ್ತ ಅಂಬೆಗಾಲಿಡುತ್ತಿದ್ದನು. ಕೈ ಕೊಡಲು ಹಿಡಿದು ಎದ್ದು, ತಿಪ್ಪ ತಿಪ್ಪ ಹೆಜ್ಜೆಯಿಟ್ಟು, ಪರಾಕ್ರಮದಿಂದ ಹೆಜ್ಜೆಯೂರಿ ನಡೆವ ಸಾಹಸಕ್ಕೆ ಸಂತೋಷಗೊಳ್ಳುತ್ತಿದ್ದನು. ಅವರು ಕೈ ಬಿಟ್ಟ ತಕ್ಷಣ ನೆಲಹಿಡಿಯುತ್ತಿದ್ದನು. ಒಂದು ಗೊಂಚಲಿನಲ್ಲಿ ನಾಲ್ಕು ಹೂಗಳು ಅರಳುವಂತೆ ಬಾಲಲೀಲೆಗಳಿಂದ ರಾಮನೊಡಗೂಡಿ ಮೂವರು ತಮ್ಮಂದಿರು ಬೆಳೆದರು. ತಮ್ಮ ತಮ್ಮ ತಾಯಿಯರ ಪ್ರೀತಿಯ ತೊಟ್ಟಿಲಲ್ಲಿ ಕಂಗೊಳಿಸಿದರು.

ತಿರೆಗರಸನಾದರೇನೊಂದು ಕೂಸಿನ ಬಯಕೆ ಬಡತನವನೊಡರಿಸಿತಲಾ !

ಹೀಗಿರಲು ಒಂದು ಹುಣ್ಣಿಮೆಯ ರಾತ್ರಿ ಅರಮನೆಯ ಉದ್ಯಾನದ ಕಪ್ಪು ಮಿಶ್ರವಾದ ಕಡು ಹಸುರು ಹುಲ್ಲಿನ(ಶಾದ್ವಲ) ವೇದಿಕೆಯಲ್ಲಿ ರಾಣಿಯರು ತಮ್ಮ ಮಕ್ಕಳ ಜೊತೆಗೂಡಿ ವಿವಿಧ ಹರ್ಷ ನುಡಿಗಳ ಸವಿಯಲ್ಲಿ ವಿಹರಿಸುತ್ತಿದ್ದರು. ಆಗ ಶಿಶು ರಾಮನು ಆಕಾಶದಲ್ಲಿರುವ ಪೂರ್ಣಚಂದ್ರನನ್ನು ನೋಡಿದನು. ಅದರ ಮೋಹಕ್ಕೆ ಒಳಗಾದನು. ಅದನ್ನು ಪಡೆಯಲು ಹಲುಬಿ ಹಂಬಲಿಸಿ ಕೌಸಲ್ಯೆಯನ್ನು ಕಾಡಿದನು. ನಭದ ಚಂದ್ರ ನರರ ಧರಣಿಗೆ ಬರುವುದಿಲ್ಲ ಎಂದು ತಾಯಿ ಪರಪರಿಯಾಗಿ ಸಂತೈಸಿ ಹೇಳಿದಳು. ಆದರೆ ಮಗು ರಾಮನು ಹಠಹಿಡಿದು ಕಿರುತೋಳುಗಳನ್ನು ಉದ್ದಮಾಡಿ ರವಿತಾರೆಗಳೇ ಸೋಲುವಂತೆ ಬಾನಿಗೆ ಕೈನೀಡಿ, ಕಣ್ಣು ಕೆಂಪಾಗುವಂತೆ ಅತ್ತನು.

ವಜ್ರ ಮಾಣಿಕ್ಯ ಮುಂತಾದ ಬೆಲೆಬಾಳುವ ಮಣಿಗಳಿಂದ ಚಿನ್ನದಲ್ಲಿ ಮಾಡಿದ ಒಡವೆಗಳನ್ನು; ಬಣ್ಣ ಬಣ್ಣದ ಹಣ್ಣುಗಳನ್ನು; ಭಕ್ಷಭೋಜ್ಯಗಳನ್ನು ಕೊಡಲು ಅವುಗಳನ್ನು ನೂಕಿದನು. ಅಮ್ಮನ ಬೆದರಿಕೆಯನ್ನು ಪಕ್ಕಕ್ಕೆ ಸರಿಸಿ, ಕೇಳುವವರ ಎದೆ ನಿಟ್ಟುಸಿರುಡುವಂತೆ ಚಂದ್ರನಿಗಾಗಿ ಗೋಗರೆದನು. ಆ ರೋದನಕ್ಕೆ ಬೆಚ್ಚಿ, ಮನಕರಗಿದ ತಂದೆ ದಶರಥನು ಕೋಪಗೊಂಡು ಆ ಸ್ಥಳಕ್ಕೆ ಬಂದನು. ಅಲ್ಲಿಂದ ದಾದಿಯರು ತಮಗೇನು ಗತಿ ಕಾದಿದೆಯೊ ಎಂದು ಬೆದರಿ ಸರಿದರು. ಮಗನ ಉಲ್ಬಣ ಸ್ಥಿತಿಗೆ ತಾಯಿ ಕೌಸಲ್ಯೆ ತೀಕ್ಷ್ಣವಾಗಿ ಕಾತರಳಾದಳು. ಏನು ಮಾಡಲೆಂದು ತಿಳಿಯದೆ ಕಂಗೆಟ್ಟಳು. 'ಓ ನನ್ನ ಕಣ್ಮಣಿಯೆ, ಕಂದಯ್ಯ, ದಮ್ಮಯ್ಯ ಸುಮ್ಮನಿರೊ ಕೈ ಮುಗಿಯುತ್ತೇನೆ. ಅಳಬೇಡಪ್ಪೊ' ಎಂದು ಕಂಬನಿದುಂಬಿ ಮುದ್ದಾಡಿದಳು. ಮನಸ್ಸು ಮುನಿಯಲು 'ರವಿ ವಂಶದವನೆಂಬ

ಅಸೂಯೆಯಿಂದ, ನೀನು ತಿಳಿಯದ ಎಳೆ ಹಸುಳೆಯನ್ನು ಪೀಡಿಸುತ್ತಿರುವೆ' ಎಂದು ಚಂದ್ರನನ್ನು ಬೈದಳು.

ಅವಳು ಕಂಬನಿ ಮಿಡಿಯುತ್ತ ದಶರಥನಿಗೆ ಎಲ್ಲವನ್ನು ಹೇಳಿದಳು. ಅದನ್ನು ಕೇಳುತ್ತ ದೊರೆಯ ಕೋಪ ದೂರ ಸರಿದು ಚಿಂತೆ ಆವರಿಸಿತು. ಮಗನ ಆಸೆಯು ತನ್ನ ಶಕ್ತಿ ಮೀರಿದ್ದು, ಕೈಗೂಡಿಸಲು ಅಸಾಧ್ಯವಾದುದು ಎಂದು ಮರುಗಿದನು. 'ಶಿವ ಶಿವಾ ! ಭೂಮಂಡಲಕ್ಕೆ ಅರಸನಾದರೇನು? ಒಂದು ಕೂಸಿನ ಬಯಕೆ ತೀರಿಸಲಾರದಷ್ಟು ಬಡವಾಯಿತಲ್ಲ!' ಎಂದು ಕೌಸಲ್ಯೆಯಿಂದ ರಾಮನನ್ನು ಕರೆದು ಎತ್ತಿಕೊಂಡನು. ಜಿಂಕೆಗಳ ಕಡೆಗೆ ಹೋಗಿ ತೋರಿಸಿದನು. ನೈದಿಲೆ ಕೊಳದ ಹಂಸಗಳು ಈಜುವ ಕಡೆಗೆ ಹೋದನು. ಅಲ್ಲಿಂದ ಬೆಳ್ದಿಂಗಳಲ್ಲಿ ಕಣ್ಣು ಕಣ್ಣಿನ ಗರಿಯ ಕೆದರಿ ಕುಣಿಯುವ ನವಿಲುಗಳ ಬಳಿಗೆ ಕರೆದೊಯ್ದನು. ಅಲ್ಲಿಂದ ರತ್ನಗಳಿಂದ ಮಾಡಿದ ಕೃತಕ ಪಕ್ಷಿ ಸಂಕುಲವನ್ನು, ಬಂಗಾರದಿಂದ ಅಲಂಕೃತವಾದ ಲತಾಭವನವನ್ನು ಹೊಕ್ಕು ತೋರಿಸಿದರೂ ಶಿಶುರೋದನವು ಹೆಚ್ಚಾಯಿತೆ ಹೊರತು ಕಡಿಮೆಯಾಗಲಿಲ್ಲ.

ರಾಜನು ಮುಂದೇನು ಮಾಡಬೇಕೆಂದು ತಿಳಿಯದೆ ಮಂತ್ರಿ ಸುಮಂತ್ರನನ್ನು ಕರೆಸಿದನು. ಆತನು ಬಾಲಕನ ಆಕಾಂಕ್ಷೆಗೆ ಅಚ್ಚರಿಗೊಂಡು ಸುಮ್ಮನಿದ್ದನು. ಆಗ ಅಲ್ಲಿಗೆ ಬೆಪ್ಪಾಗಿ ಕಾಣುವ ಮುದುಕಿಯೊಬ್ಬಳು ಮಗು ಭರತನನ್ನು ಕಂಕುಳಲ್ಲಿರಿಸಿಕೊಂಡು ಬಂದಳು. ಕೈಕೆಯನ್ನು ಹೊರತುಪಡಿಸಿ ಅಲ್ಲಿದ್ದ ರಾಣಿವಾಸದವರು ಅವಳನ್ನು ಕಂಡ ತಕ್ಷಣ ಅಮಂಗಳವನ್ನು ಈಕ್ಷಿಸಿದಂತೆ ಮುಖ ತಿರುಗಿಸಿದರು. ಅವರು ದೂರ ಸರಿವ ವರ್ತನೆಗೆ ಕಾರಣವಾದ ಆ ಮುದುಕಿ ಹೀಗಿದ್ದಳು:

ಅವಳ ವಿಕಾರ ಶರೀರವು ಬಿಲ್ಲಿನಂತೆ ಬಾಗಿತ್ತು. ಮೈಯನ್ನು ತೊನ್ನಿನ ಬಿಳಿಯ ಕಲೆ ಆವರಿಸಿತ್ತು. ಗೂನು ಬೆನ್ನು ಗೂಳಿಯ ಡುಬ್ಬದಂತಿತ್ತು. ಬತ್ತಿ ಹೋದ ಚರ್ಮ ನಿರಿನಿರಿಯಾಗಿತ್ತು. ಹಲ್ಲುದುರಿ ಬೋಡಾದ ಬೊಚ್ಚು ಬಾಯಿ, ಕುಳಿಬಿದ್ದ ಕೆನ್ನೆಗಳ, ದೃಷ್ಟಿ ಮಂದವಾದ ಕಣ್ಣಡೊಗರಿನ, ಕಬ್ಬಿಣದಂಥ ಬಿರುಸಾದ ಮುಖಹೊಂದಿದ್ದಳು. ಅವಳು ಕೂದಲು ಉದುರಿ ಬೋಳಾದ ಹುಬ್ಬಿನ ವಿಕಾರದ, ಬೆಳ್ವಕ್ಕಿಯ ಪುಕ್ಕವೆಂಬಂತೆ ತಲೆಯನ್ನು ಮುತ್ತಿಕೆದರಿದ ಬೆಳ್ಳನೆಯ ನವಿರ ಅಸ್ಥಿಪಂಜರದಂತಿದ್ದಳು.

ಮಡಿಲಿಂದೊಂದು ಮುಕುರಮಂ ಪೊರದೆಗೆದು ನೀಡಿದಳ್

ತನ್ನನ್ನು ತಾಯಿಯಂತೆ ಸಾಕಿ ಸಲಹಿದ, ಈಗ ಭದ್ರವಾಗಿ ಹೆಜ್ಜೆ ಊರಿ ನಡೆಯಲಾಗದ ಆ ಮಂಥರೆಯ ಬಳಿಗೆ ಕೈಕೆ ಹೋದಳು. ಎಲ್ಲರೂ ನೋಡುತ್ತಿರಲು ಆ ವೃದ್ಧೆಯ ಮಾತನ್ನು ಆಲಿಸಲು ಕೈಕೆ ಬಾಗಿದಳು. ಆಗ ಅವಳ ಕಿವಿಯಲ್ಲಿ ಏನೋ ಹೇಳಿ, ಆ ಹಿರಿಜೀವ ತನ್ನ ಮಡಿಲಿನಿಂದ ಒಂದು ಕನ್ನಡಿಯನ್ನು ತೆಗೆದು ನೀಡಿತು. ಕೈಕೆ

ನಗುನಗುತ್ತ ಹೋಗಿ ದೊರೆಯ ತೋಳುಗಳಲ್ಲಿ ಅಳುತ್ತಿದ್ದ ರಾಮನಿಗೆ ಅದನ್ನು ತೋರಿಸಿದಳು. ಕನ್ನಡಿಯಲ್ಲಿ ಬಾನಿನ ಚಂದ್ರ ಹೊಳೆದು ಕಂಡಿತು. ಅದನ್ನು ಮಗು ಮುಟ್ಟಿತು. ತಾನು ಹಿಡಿದೆ ಎಂದು ಕುಣಿಕುಣಿದು ನಲಿಯಿತು. ಅಲ್ಲಿದ್ದವರೆಲ್ಲರೂ ದಿಗ್ಭ್ರಮೆಗೊಂಡರು!

ಸಂತಸಗೊಂಡ ಮುದಿಗೂನಿ ದಾಸಿಯು ರಾಮನನ್ನು ಮುದ್ದಿಸಲು ಬಯಸಿ ಕೈ ಚಾಚಿದಳು. ಆಗ ಕೌಸಲ್ಯೆ 'ಕಂದನಿಗೆ ಅಮಂಗಳವಾಗುತ್ತದೆ ಮುಟ್ಟಬೇಡ' ಎಂದು ಹೇಳಿದಳು. ಮಂಥರೆಯ ಮೈತ್ರಿ ಶಿಥಿಲವಾಗಿ ಚೂರು ಚೂರಾಗುವಂತೆ ತಡೆದಳು.

ಮಂಥರೆಯ ಪ್ರೀತಿ ಮುರಿಯಿತು. ಅವಮಾನವಾಯಿತು. ಭರತನನ್ನು ಅಪ್ಪಿಕೊಂಡು ಅಲ್ಲಿ ನಿಲ್ಲದೆ ಹೊರಟು ಹೋದಳು. ಆ ಕೋಪದ ಉರಿಯ ಹೊಗೆಯಲ್ಲಿ ಆಕೆಗೆ ತಾನು ಕೇಳಿದ ಅನಾಥ ಶಿಶುವಿನ ಘಟನೆ ನೆನಪಾಯಿತು. ಕಣ್ಣು, ಮೈ, ಮನಸ್ಸು ಮಂಜಾಯಿತು.

ಕೂರ್ಗೆಲಸದಿಂ ಪಿಂತಿರುಗುತಿರ್ದ ಪಾರ್ಥಿವನೊಳುದಿಸಿತು ಕರುಣೆ, ಕಟ್ಟಲಿಹ ಕಬ್ಬಕ್ಕೆ ಮೊದಲ್ ಗುದ್ದಲಿಯ ಪೂಜೆಪೋಲ್.

ಒಂದು ದಿನ ಕೈಕೆಯ ತಂದೆ ಕೇಕಯ ರಾಜನು ಬೇಟೆಯಾಡಿ ಆಯಾಸದಿಂದ ಸಂಜೆ ಹಿಂದಿರುಗುತ್ತಿದ್ದನು. ಆಗ ಆ ಕಾಡಿನಲ್ಲಿ ಕಾಡೇ ಗೋಳಿಡುವಂತೆ ಒಂದು ಮಗು ಅಳುತ್ತಿತ್ತು. ಕಟ್ಟಲಿರುವ ಕಾವ್ಯಕ್ಕೆ ಮೊದಲ ಗುದ್ದಲಿ ಪೂಜೆ ಮಾಡುವಂತೆ– ಕ್ರೂರವಾದ ಕೆಲಸದಿಂದ ಹಿಂತಿರುಗುತ್ತಿದ್ದ ರಾಜನಲ್ಲಿ ಕರುಣೆ ಉದಿಸಿತು. ಹೋಗಿ ನೋಡುತ್ತಾನೆ ಒಂದು ದಸ್ಯು ಶಿಶು ಮುಳ್ಳು ಮಣ್ಣು ತರಗೆಲೆಯಿಡಿದ ನೆಲದ ಮೇಲೆ, ಇರುವೆ ಮುತ್ತಿ ಅರಚುತ್ತಿದೆ. ಅಯ್ಯೋ, ಅದು ವಿಕೃತಿ ವಕ್ರತೆ ರೂಪುಗೊಂಡಂತಿದೆ! ಹೆತ್ತವರ ಸುಳಿವಿಲ್ಲದ ಆ ಹೆಣ್ಣು ಮಗುವನ್ನು ಕರುಣಾಳು ದೊರೆ ಹಿಡಿದು ಎತ್ತಿಕೊಂಡನು. ಕಟ್ಟಿರುವೆಗಳನ್ನು ಜಾಡಿಸಿದನು. ಕೂಸನ್ನು ಸಮಾಧಾನ ಪಡಿಸಿದನು. ತಂದೆಯ ಪ್ರೀತಿ ವಾತ್ಸಲ್ಯವನ್ನು ಹರಿಸಿದನು. ಗೂಬೆಯ ಅಪಶಕುನದ ವಿಕಾರ ಶಬ್ದವನ್ನು ಏರಿ ಕಾಡುಗತ್ತಲೆ ಕವಿಯುತ್ತಿರಲು, ದಾರಿಯಲ್ಲಿ ಹೋಗುವ ಮಾರಿಯನ್ನು ಮನೆಗೆ ತರುವಂತೆ ಅವಳನ್ನು ಊರಿಗೆ ತಂದನು. ಅದು ಮುಂದಿನ ಮಹಾ ದುಃಖದ ಕಾಡ್ಗಿಚ್ಚಿಗೆ – ತನ್ನ ಕಿರುಗುಡುಗಿನಿಂದ ಹೊಮ್ಮುವ ಒಂದೆ ಕಿಡಿಯು ಮುನ್ನುಡಿಯಿಡುವ ವಿಧಿ ವಿಲಾಸದಂತಿತ್ತು!

ಆ ಮಗು ಕುಳ್ಳಾಗಿ, ಗೂನಾಗಿ, ಕರ್ರಗೆ ಜನರ ಕಣ್ಣಿಗೆ ಹೇಸಿನಾಕೃತಿಯಾಗಿ ಬೆಳೆಯಿತು. ಕೇಕೆಯ ರಾಜನು ಆ ಮಗುವನ್ನು ಚೆನ್ನಾಗಿ ನೋಡಿಕೊಳ್ಳಿ ಎಂದು ಕಟ್ಟಾಜ್ಞೆ ವಿಧಿಸಿದ್ದನು. ಆದರೂ ಅವನ ಆಜ್ಞೆಯನ್ನು ಕಡೆಗಣಿಸಿ ಕಂಡಕಂಡವರೆಲ್ಲರೂ ಆ ಮ್ಲೇಚ್ಛ ಕುಳ್ಳನೆಯ ತಂದೆ ತಾಯಿಯಿಲ್ಲದ ಪರದೇಶಿ ಕನ್ನೆಯನ್ನು ಚೀಃ ಎಂದು, ತೊಲಗೆಂದು, ಥೂ! ಎಂದು, ನಾಯಿಮರಿಗೂ ಕಡೆಯಾಗಿ ಕಂಡು ನಡೆದುಕೊಂಡರು.

ಮನುಜರ ಪ್ರೀತಿಯ ತುಸುಸವಿಯನ್ನೂ ಕಾಣದೆ ಮೃಗದ ರೀತಿ ಬೆಳದು ಮಿದುಳು ವಿಕಾಸವಾಗದೆ ಜಡವಾಗಿ ಸೋಮಾರಿಯಂತಾಯಿತು. ಅವಳನ್ನು ಜರೆದು, ಬಯ್ದು ಅವಳ ಮುಖಕ್ಕೆ ಮಸಿ ಬಳಿಯುವಂತೆ ಮಂಥರೆ ಎಂದು ಹೆಸರಿಸಿದರು. ಆ ಜನರ ಮನದ ವಿಕೃತಿಯ ಕನ್ನಡಿಯ ಪ್ರತಿಬಿಂಬವೆಂಬಂತೆ ಅವಳ ಮೈ ವಿಡಂಬನೆಗೆ ಒಳಗಾಗುವಂತೆ ಬೆಳೆಯಿತು.

ಕಾಲದ ಹೊಳೆ ಹರಿದು ಸಾಗಿತು. ನಿಂದೆಯಲ್ಲಿ ಬೆಳೆದ ಕುಬ್ಜೆಯು ದೊಡ್ಡವಳಾದಳು. ಕೇಕೆಯ ರಾಜ ಸತಿಗೆ ಕೈಕೆ ಪುತ್ರಿ ಹುಟ್ಟಿದಳು. ತಾನು ಕನಿಕರಿಸಿ ತಂದ ಮಂಥರೆಗೆ ಅರಮನೆಯಲ್ಲಿ ಯಾರಿಂದಲೂ ಕರುಣೆ ಪ್ರೀತಿ ದೊರಕದ್ದನ್ನು ಕಂಡು ರಾಜ ಲೋಕದ ಜನರ ವರ್ತನೆಗೆ ಅಚ್ಚರಿಗೊಂಡನು. ಅವಳ ಒಂಟಿತನ ಅವನ ಮರುಕದ ಮನವನ್ನು ಸದಾ ಕಾಡುತ್ತಿತ್ತು. ಆ ಭೀಷಣ ಏಕಾಂತತೆಯನ್ನು ದೂರವಾಗಿಸಲು ಅವಳನ್ನು ತನ್ನ ಮುದ್ದು ಮಗುವನ್ನು ಆಡಿಸುವ ಕೆಲಸಕ್ಕೆ ನೇಮಿಸಿದನು.

ಮೆರೆದಳು ಕೈಕೆ ಮಂಥರೆಯ ತೊಡೆಯಲ್ಲಿ, ಕಾಳಾಹಿ ಭೋಗದಲಿ ಹೊಳೆವ ಹೆಡೆಮಣಿಯಂತೆ

ಅದು ಮಂಥರೆಯ ಮರಳುಗಾಡಿನ ಬಾಳಿಗೆ ಮಳೆ ಹೋಯ್ದಂತಾಯಿತು. ಅವಳು ಅದುವರೆಗು ಒಂಟಿತನದಿಂದ ಬಿಗಿಹಿಡಿದು ಬಾಡಿದಂತಿದ್ದ ಶಿಶಿರಕಾಲ ಕಳೆದು ಚೈತ್ರನಾಗಮನವಾಗಿತ್ತು. ಅವಳ ಬಾಳಿನ ರಾತ್ರಿಯಲ್ಲಿ ಶಶಿ ಉದಯಿಸಿದಂತಾಯಿತು. ಅವಳ ಮೃತ್ಯುವಿಗೆ ಅಮೃತ ಸೇಚನೆಯಾಯಿತು. ರಾಜಕುವರಿ ಕೈಕೆಯ ಪ್ರೇಮ ಸೌಂದರ್ಯ ಮಹಿಮೆಯಿಂದ ಅವಳ ಒಂಟಿತನದ ಶುಷ್ಕ ಶೂನ್ಯತೆಯಲ್ಲಿ ಪ್ರೀತಿ ಸಂಚರಿಸಿತು. ಬದುಕು ಮಧುರವಾಗಿ ಸಾರ್ಥಕವಾಯಿತು. ರೂಪ ವಿಹೀನೆಯಾದ ಅವಳು ರೂಪವೇ ಮೈವೆತ್ತ ಕೂಸನ್ನು ಮುದ್ದುಮಾಡಿ ತೂಗಾಡಿದಳು. ಹಾಲಿನಲ್ಲಿ ಇದ್ದಲಿನ ಚೂರು ತೇಲುವಂತೆ ಅದರ ಚೆಲುವಿನಲ್ಲಿ ತೊನೆದಾಡಿದಳು. ಕಾಳಸರ್ಪದ ಹೆಡೆಯಲ್ಲಿ ಹೊಳೆಯುವ ಮಣಿಯಂತೆ ಮಂಥರೆಯ ತೊಡೆಯಲ್ಲಿ ಕೈಕೆ ಮೆರೆದಳು.

ಚಿಕ್ಕಮಕ್ಕಿ ಕಲ್ಲಿನ ಆಂತರ್ಯದಲ್ಲಿ ಅಗ್ನಿ ಗುಪ್ತವಾಗಿರುವಂತೆ – ಬಾಹ್ಯ ವಿಕೃತಿಯ ಮಧ್ಯೆ ಮಂಥರೆಯ ಹೃದಯದಲ್ಲಿ ಸುಪ್ತವಾಗಿದ್ದ ಚೆಲುವು ಒಲವುಗಳ ಚಿಲುಮೆ ಒಮ್ಮೆಲೇ ಕಣ್ದೆರೆಯಿತು. ದಡಕ್ಕನೆ ಮುತ್ತಿನ ಹಾರ ಹರಿದು ಚೆಲ್ಲಾಡಿ ಫಳಫಳಿಸುವಂತೆ ಅವಳ ಆನಂದ ಚಿಮ್ಮಿ ಹರಿಯಿತು. ಅವಳ ಜೀವಿತಕ್ಕೆ ರಾಜಪುತ್ರಿಯೆ ಸರ್ವಸುಖವಾದಳು. ಜೊತೆಗೆ ಕೈಕೆಯ ಅನ್ಯೋನ್ಯ ಸಂಯೋಗದಲ್ಲಿ ತನ್ನನ್ನು ತಾನೇ ಮರೆತಳು! ಮಂಥರೆ ಈ ರೀತಿ ಬದುಕುತ್ತಿರಲು ಅಚ್ಚರಿಯೆಂಬಂತೆ ಅವಳ ಬಾಲ್ಯ, ಕೌಮಾರ್ಯ, ಯೌವನಗಳು ಕಳೆದು ಹೋದವು. ಕೂದಲು ನರೆಯಿತು. ದೇಹಕ್ಕೆ ಸುಕ್ಕಡರಿತು. ಹೊರ ಮೈಯ ವಿಕೃತಿ ಹೆಚ್ಚುತ್ತಿದ್ದಂತೆ ಅವಳಿಗೆ ಕೈಕೆಯ ಮೇಲಿನ ಮಮತೆ ನೂರ್ಮಡಿಯಾಯಿತು.

ಕೈಕೆಯು ನರ ತಿರಸ್ಕೃತೆ ವಿಕೃತೆ ಮಂಥರಾ ದಾಸಿಯನ್ನು ಶೈಶವ ಕೃತಜ್ಞತಾ ಪ್ರೇಮದಿಂದ ಪ್ರೀತಿಸುತ್ತಿದ್ದಳು. ಅವಳು ಮನ್ಮಥನ ಹೊಸ ಕಾಂತಿಯ ಹೊಳೆಹೊಳೆವ ಪುಷ್ಪದಂತೆ ಯೌವನ ಭರಿತಳಾದಳು. ಅವಳ ಲೋಕ ಮೋಹಕ ಸೊಬಗಿನ ಸುಳಿಗೆ ದಶರಥ ಸಿಕ್ಕಿಕೊಂಡನು. ಅವಳನ್ನು ಮದುವೆಯಾದನು. ಆಗ ಅವಳ ನೆರಳಿನಂತೆ ದಾಸಿ ಮಂಥರೆಯು ಕೋಸಲಕ್ಕೆ ಬಂದಳು. ರವಿವಂಶದ ಅರಸರ ಊರಾದರೂನು ಕುರೂಪತೆಗೆ ಮನ್ನಣೆ ದೊರೆಯಲಿಲ್ಲ. ಮುದಿಗೂನಿಗೆ ಸಂತೋಷ ಮೊಲದ ಕೋಡಾಯಿತು.

ಅಲ್ಲಿಯ ಜನ ಶನಿಯೆಂದು ಶಪಿಸಿದರು. ಮೊಸಳೆಯನ್ನು ಕಂಡಂತೆ ಹುಬ್ಬುಗಂಟಿಕ್ಕಿ ದೂರ ಸರಿದರು. ಅವಳ ಗಾಳಿ ಸೋಕಿದರೆ ಮೈಲಿಗೆಯಾಗುವದೆಂದು ಹತ್ತಿರಕ್ಕೆ ಸೇರಿಸದಾದರು. ಈಶ್ವರಾರಾಧನೆಗೆ ಹತ್ತಿರ ಬಿಟ್ಟುಕೊಳ್ಳುತ್ತಿರಲಿಲ್ಲ. ದಾಸಿಯರು ಕಿರಿಯ ರಾಣಿಯ ಆಜ್ಞೆಗೆ ಕಿವುಡಾಗಿ ನಿರ್ಲಕ್ಷಿಸುತ್ತಿದ್ದರು. ಊಟಕ್ಕೆ ಇಡುವ ಹೊತ್ತಿನಲ್ಲಿ ಹೊರಕ್ಕೆ ನೂಕುತ್ತಿದ್ದರು.

ಕೌಸಲ್ಯೆ ಸುಮಿತ್ರೆಯರು ಗೂನಿ ಮಂಥರೆಯನ್ನು ಅನಿಷ್ಟೆ ಎಂದು ಹೆದರಿ ಅಸಹ್ಯಪಡುತ್ತಿದ್ದರು. ಅವಳ ಜೊತೆಗಿದ್ದ ಕೈಕೆಯನ್ನು ಹತ್ತಿರ ಸೇರಿಸುತ್ತಿರಲಿಲ್ಲ. ಒಡತಿಯ ಒಳಿತಿಗಾಗಿ ಜೀವನವನ್ನೆ ಸಮರ್ಪಿಸಿದ ಆ ಕುಬ್ಜೆ ಕಮ್ಮಾರನ ಅಡಿಗಲ್ಲಿನಂತೆ ಎಲ್ಲ ಅವಮಾನದ ಹೊಡೆತವನ್ನು ಸಹಿಸಿಕೊಂಡಳು.

ಕೈಕೆಗೆ ಭರತ ಹುಟ್ಟಿದ ಮೇಲೆ ಮಂಥರೆಗೆ ಮೂರನೆಯ ಕಣ್ಣು ಮೂಡಿದಂತಾಯಿತು. ಅಂದಿನಿಂದ ಅವಳ ಬಾಳಿನಲ್ಲಿ ಹೊಸ ಪ್ರೀತಿಯ ಚೆಂದಳಿರು ಚಿಗುರಿತು. ಜಿಪುಣ ಬಡವನು ಚಿನ್ನವನ್ನು ಅಪ್ಪಿಕೊಳ್ಳುವಂತೆ ಆ ಕಂದನನ್ನು ಅಪ್ಪಿಕೊಂಡಳು. ಹಡೆದ ತಾಯಿಯೆ ನಾಚುವಂತೆ ಶಿಶು ಭರತನನ್ನು ಹಗಲಿರುಳು ಸಲಹಿದಳು. ಆಕೆಯ ಮೋಹ ಸರೋವರದಲ್ಲಿ ಭರತನು ತಾವರೆಯಾಗಿ ಬೆಳೆದನು.

ಗುರು ವಸಿಷ್ಠನ ಕೈಯೊಳಾಳ್ವ ಪಾರ್ಥಿವ ಜನಕೆ ತಗುವ ವಿದ್ಯಾಭ್ಯಾಸದಂಕುರಕ್ಕಗೆ ಯಾಯ್ತು.

ಉಳಿದ ಮಕ್ಕಳಾದ ಶ್ರೀರಾಮ, ಲಕ್ಷ್ಮಣ, ಶತ್ರುಘ್ನರು ಅವರ ತಾಯಿಯರು ಮತ್ತು ದಾಸಿಯರ ಅಕ್ಕರೆಯಲ್ಲಿ ಕಲ್ಪವೃಕ್ಷ, ಐರಾವತಗಳಂತೆ ಬೆಳೆದರು. ನಾಲ್ವರು ಆಳುವ ರಾಜಕುಮಾರರಿಗೆ ಶೈಶವ ಕಳೆದು ಬಾಲ್ಯ ಮೈದೋರಲು ಗುರುವಸಿಷ್ಠರ ಕೈಯಲ್ಲಿ ಸೂಕ್ತ ವಿದ್ಯಾಭ್ಯಾಸದ ಮೊಳಕೆ ಅಂಕುರವಾಯಿತು. ಹುಲಿಯ ಮರಿ ಬೇಟೆಯನ್ನು ಕಲಿಯುವಂತೆ; ಪರ್ವತಶಿರದಲ್ಲಿ ಹುಟ್ಟಿದ ತೊರೆ ಸಮುದ್ರಾಭಿಮುಖವಾಗಿ ಹರಿಯುವುದನ್ನು ತಿಳಿಯುವಂತೆ; ಶ್ರೇಷ್ಠ ಶಿಲ್ಪಿಯು ಬಂಡೆಯನ್ನು ಕೊರೆದು ಭುವನ

ಸುಂದರ ಕಲಾಕೃತಿಯನ್ನು ಸೃಷ್ಟಿಸುವಂತೆ; ಕೋಸಲ ದೇಶದ ಜನರು ಸುಖವಾಗಿರುವಂತೆ ಅವರು ಬಿಲ್ಲು ವಿದ್ಯೆಯನ್ನು, ವೇದವನ್ನು ಮತ್ತು ನೀತಿನಯ ವಿನಯ ನಿಯಮಗಳನ್ನು ಕಲಿತರು.

ದೇಹ ಮನಸ್ಸು ಜ್ಞಾನ ಗುಣ ವೀರ್ಯ ಧೈರ್ಯಗಳಲ್ಲಿ ಸಹ್ಯಾದ್ರಿ ಶೃಂಗ ಸಮೂಹದಂತೆ ನಿಮಿರಿ ಏಳುತ್ತ ಮೈತ್ರಿಯಿಂದ ಒಬ್ಬರು ಇನ್ನೊಬ್ಬರ ಜೊತೆಗೆ ಸ್ಪರ್ಧಿಸಿ-ನಾಲ್ವರು ದಶರಥನ ನಾಲ್ಕು ತೋಳುಗಳಂತೆ ಬೆಳೆದರು. ಶ್ರೀರಾಮಚಂದ್ರನು ಕ್ಷಮೆ, ಸತ್ತ್ವ, ಶಾಂತಗಾಂಭೀರ್ಯ, ಮಂಗಳರೂಪ, ಶರೀರ ಕಾಂತಿಯಲ್ಲಿ ಅಂಬರ ವಿಸ್ತಾರವಾದ ಪ್ರದೇಶವೇ ಮೂರ್ತಿರೂಪ ಪಡೆದಂತೆ ಶೋಭಿಸುತ್ತಿದ್ದನು.

ಹಿರಿಯಣ್ಣನೊಡನೆ ಸದಾ ಬೆನ್ನುಬಿಡದೆ ಇದ್ದ ಲಕ್ಷ್ಮಣದೇವನು ರಾಗ ಅನುರಾಗದಲ್ಲಿ, ವೇಗದಲ್ಲಿ, ರಭಸದಲ್ಲಿ, ಹೃದಯ ವೈಶಾಲ್ಯದಲ್ಲಿ, ರಾಮನ ಒಲ್ಮೆಯಲ್ಲಿ-ಮಳೆಗಾಲದ ಪ್ರವಾಹದಲ್ಲಿ ತುಂಬಿ ಹರಿವ ಮಹಾನದಿಯಂತೆ ಧೀರ ಶೈಲಿಯಲ್ಲಿದ್ದನು.

ಸೌಂದರ್ಯಶ್ರೀ ದೇವತೆಯ ಪಟ್ಟದ ಕುಮಾರನಂತೆ, ಕೈಕೆಯ ಸೊಬಗನ್ನೆಲ್ಲ ಕಡೆದು ಸಾರವಾಗಿ ಹೊಮ್ಮಿಬಂದ ಬೆಣ್ಣೆಗೆ ಕಾಮನಬಿಲ್ಲಿನ ವರ್ಣ ತೇಜಸ್ಸು ಒದಗಿದ ಕಲಾಕೃತಿಯಂತೆ ಭರತ ಮಹಾತ್ಮನು ದಿವ್ಯ ತೇಜಸ್ಸಿನಿಂದ ಪ್ರಕಾಶಿಸುತ್ತಿದ್ದನು. ಅವನು ತ್ಯಾಗಬುದ್ಧಿ, ನಿರ್ವೇಗ, ತಪ, ಸಂಯಮದ ಸೌಂದರ್ಯದಲ್ಲಿ; ನಿರಸೂಯೆ, ರಸಕಾವ್ಯ ಸತ್ಕಲಾಭ್ಯಾಸದ ಅಧ್ಯಾತ್ಮ ಪ್ರೀತಿಯಲ್ಲಿ ಬಾಲಋಷಿಯಂತೆ ರಾಮನ ಗೌರವಕ್ಕೆ ಪಾತ್ರನಾಗಿದ್ದನು.

ನರರನ್ಯರಿಲ್ಲಾಯಿತ್ತು ಮಂಥರೆಯ ಲೋಕಕ್ಕೆ, ಕೈಕೆ ಭರತರ್ ವಿನಾ.

ಕೋಸಲದಲ್ಲಿ ಗೂನಿ ಮಂಥರೆಗಿಂತ ಅತಿ ತಿರಸ್ಕೃತಳಾಗಲಿ, ಸಂತೃಪ್ತ ಸುಖಿಯಾಗಲಿ ಮತ್ತೊಬ್ಬರಿರಲಿಲ್ಲ. ಭರತ ಅಭ್ಯುದಯ ಚಂದ್ರೋದಯಕ್ಕೆ ಅವಳ ಎದೆ ಉಬ್ಬಿತು. ಹಾಳು ಕೊರಕಲು ಬಂಡೆಯಂತೆ ವಕ್ರವಾಗಿರುವ, ಒರಟು ದಡದಂತೆ ಇದ್ದ ಅವಳ ಮೈಯನ್ನು ಉಬ್ಬುಬ್ಬಿ ಮೇಲಕ್ಕೆದ್ದ(ಉಚ್ಛ್ವಸಿತ) ಹರ್ಷದಲೆಗಳ ಸಮೂಹವು ಅಪ್ಪಳಿಸಿ ಮುಚ್ಚಿದವು. ಮಂಥರೆಯ ಲೋಕದಲ್ಲಿ ಕೈಕೆ ಭರತನನ್ನು ಹೊರೆತುಪಡಿಸಿ ಬೇರೆ ಯಾವ ನರರೂ ಇರಲಿಲ್ಲ. ದಶರಥ, ಕೋಸಲ, ಅಯೋಧ್ಯೆಗಳು ಕೈಕೆ ಭರತರಿಗಾಗಿ; ಸೂರ್ಯ, ಚಂದ್ರ, ತಾರೆಗಳು ಕೈಕೆ ಭರತರಿಗಾಗಿ; ಈ ಪೃಥ್ವಿ ಭರತನ ಆಳ್ವಿಕೆಗಾಗಿ! ಎಂದು ಅವಳ ಮಮತೆಯ ಸುಳಿಯಲ್ಲಿ ಸುತ್ತುತ್ತಿದ್ದವು. ಆ ಸುಳಿಯಲ್ಲಿ ಸಿಕ್ಕಿದ ಮಹಾ ತ್ರೇತಾಯುಗವು ಸುಂಟರಗಾಳಿಯ ಧೂಳಿನಲ್ಲಿ ಸಿಕ್ಕ ತರಗೆಲೆಯಂತೆ ತಿರುಗದೆ ಇರುತ್ತದೆಯೆ?

❑



~~~~~~~~~~~~~~~~~~~~~~ ಸಂಚಿಕೆ – ೨ ~~~~~~~~~~~~~~~~~~~~~~

ಶಿಲಾತಪಸ್ವಿನಿ

ರಾಮ ಲಕ್ಷ್ಮಣ ಭರತ ಶತ್ರುಘ್ನರ ಜೀವನದಲ್ಲಿ ಕಾಲನದಿಯು ಅವರ ಮೈಸಿರಿಗೆ ಹದಿನಾರು ವಸಂತ ತರಂಗಗಳನ್ನು ಒತ್ತಿ ಹರಿಯಿತು. ಆ ಓಜಸ್ವಿಗಳ ದೇಹವು ಯೌವನರಸದ ವೈಶಿಷ್ಟ್ಯ, ವಿದ್ಯೆಯಾಳದ ಗಾಂಭೀರ್ಯದಿಂದ ಶೋಭಿಸುತ್ತಿತ್ತು. ನೆಲವನ್ನು ಉತ್ತು, ಬಿತ್ತಿ, ಹರಗಿದ ಒಕ್ಕಲಿಗನು ಎಡೆಬಿಡದೆ ಸುರಿಸುವ ಮಳೆಯನ್ನು ನೆನೆಯುವಂತೆ ದಶರಥ ದೊರೆಯು ಮಕ್ಕಳ ಮದುವೆಯನ್ನು ನೆನೆದನು. ನೀರಿನ ಘನರಾಶಿಯು ಆಶಾದಿಗಂತದಲ್ಲಿ ಮಳೆಯ ಆಶೀರ್ವಾದ ವರ್ಚಸ್ಸಿನಿಂದ ವರ್ಧಿಸಿತು ಎಂಬಂತೆ – ದಶರಥನ ಪುತ್ರರನ್ನು ಆಶೀರ್ವದಿಸಲು ಚಂಡತೇಜಸ್ವಿಯಾದ ವಿಶ್ವಾಮಿತ್ರಮುನಿಶ್ರೇಷ್ಠನು
~~~~~~~~~~~~~~~~~~~~~~

ಓಲಗಕ್ಕೆ ಬಂದನು. ರಾಜನು ಕುಲಪುರೋಹಿತರಿಂದ ಋಷಿಗೆ ಅರ್ಘ್ಯವನ್ನು ಕೊಡಿಸಿದನು. ಪದ್ಧತಿಯಂತೆ ಪಾದಗಳಿಗೆ ನಮಸ್ಕರಿಸಿದನು. ಆಗ ಕುಶಿಕೋದ್ಭವನು,

ಕರಿಯ ಕೊಲ್ಲುವ ಹರಿಗೆ ಮರಿಯೆಂಬ ಶಂಕೆ ತಾನೇಕೆ ?

'ನೃಪಸಿಂಹನೆ ಕೇಳು. ನಾನು ಸಿದ್ಧಿಸಾಧನೆಗಾಗಿ ಒಂದು ಯಾಗವನ್ನು ಕೈಕೊಂಡಿದ್ದೇನೆ. ಅದನ್ನು ತಾಟಕಿಯ ಮಕ್ಕಳಾದ ಸುಬಾಹು ಮಾರೀಚರು ಮಾಂಸರಕ್ತಗಳನ್ನು ಸುರಿದು ಕೆಡಿಸಿ ಕಾಡುತ್ತಿದ್ದಾರೆ. ಅದರ ರಕ್ಷಣೆಗಾಗಿ ನನ್ನೊಡನೆ ನಿನ್ನ ಜ್ಯೇಷ್ಠಪುತ್ರನಾದ ಚಂಡಿಕೆಯ ಕಲಿರಾಮನನ್ನು ಕಳುಹಿಸು.

'ಕಾಕುತ್ಸ್ಥನಾದ ದಶರಥನೇ, ಆನೆಯನ್ನು ಕೊಲ್ಲುವ ಸಿಂಹಕ್ಕೆ ತಾನು ಮರಿಯೆಂಬ ಶಂಕೆ ಏಕೆ? ಪಾಪಕರ್ಮದ ಕಾರಣ ಯಮಪಾಶದಿಂದ ಮೊದಲೇ ಬಿಗಿಯಲ್ಪಟ್ಟ ರಾಕ್ಷಸರನ್ನು ತೇಜಸ್ವಿ ರಾಮನು ತನ್ನ ಮಹಾಶಕ್ತಿಯಿಂದ ಮತ್ತು ನನ್ನ ಗುಪ್ತ ದೈವಿಕ ಬಲದ ಮಹಿಮೆಯಿಂದ ಸಂಹರಿಸುತ್ತಾನೆ. ಧರ್ಮಲಾಭ ಕಾರಣದಿಂದ ಯಶೋದೀಪ್ತಿಯಿಂದ ಬೆಳಗುತ್ತಾನೆ. ನನ್ನ ಈ ಮಾತನ್ನು ವರವೆಂದು ನಂಬು. ನೀನು ಶಾಶ್ವತ ಕೀರ್ತಿಯನ್ನು ಪಡೆಯುವೆ. ಗುರು ವಸಿಷ್ಠಾದಿಗಳೊಡನೆ ಆಲೋಚಿಸಿ ತಿಳಿದುಕೊ. ಹತ್ತುದಿನಗಳು ಕಳೆದ ಮರುಹಗಲೆ, ಸಾಕೇತ ಜನರ ಮನವು ಹರ್ಷಿಸುವಂತೆ ನಿನ್ನ ಮಗ ರಾಜೀವ ಲೋಚನನು ಕಲ್ಯಾಣ ಸಮೃದ್ಧಿಯಿಂದ ಹಿಂದಿರುಗಿ ಬರುತ್ತಾನೆ.' ಎಂದು ಹೇಳಿದನು.

ಕುಶಿಕತನಯನ ತೀಕ್ಷ್ಣವಾದ ಮಾತುಗಳನ್ನು ಕೇಳಿದ ದಶರಥನಿಗೆ – ಹಣ್ಣಿಗೆ ಆಶಿಸಿದ ಕಣ್ಣಿಗೆ ಹುಳಿಸಿಡಿದಂತಾಯಿತು; ಜೇನನ್ನು ಅಪೇಕ್ಷಿಸಿದ ನಾಲಗೆ ಕಹಿ ನೆಕ್ಕಿದಂತಾಯಿತು; ಸುಶ್ರಾವ್ಯವಾದುದನ್ನು ಕೇಳಲು ಹಾತೊರೆದ ಕಿವಿಗೆ ಕಾಯಿಸಿ ಕರಗಿಸಿದ ಕಬ್ಬಿಣವನ್ನು ಹೊಯ್ದಂತಾಯಿತು. ಆಗ ಅವನು,

'ಮಹಾ ಮುನಿಯೆ, ಕೃಪೆ ತೋರು! ಕಗ್ಗಲ್ಲ ಬಂಡೆಯನ್ನು ಮೊಗ್ಗಿನಿಂದ ಇರಿಯುತ್ತಾರೆಯೆ? ಬಾಳೆಯ ಎಳೆಯ ಕಂದಿನಿಂದ ಸಿಡಿಲನ್ನು ತಡೆಯಲು ಆಗುವುದೆ? ಮುದ್ದಿನ ಕುಮಾರ, ಯುದ್ಧಾನುಭವವಿಲ್ಲದ ಮುಗ್ಧರಾಮನಿಂದ–ಕ್ರೂರಿಗಳು ಪಾಪಿಗಳು ವಜ್ರದೇಹಿಗಳು ರಣಪಂಡಿತರು ಆದ ರಾಕ್ಷಸರನ್ನು ಗೆಲ್ಲಲು ಸಾಧ್ಯವೆ? ನನ್ನನ್ನು ಕ್ಷಮಿಸು. ತಿಳಿಯದ ಎಳೆ ಹಸುಳೆಯು ನಿಷ್ಕಾರಣವಾಗಿ ವಧೆಯಾಗುತ್ತದೆ. ಶಿಶುವೇತಕ್ಕೆ? ಯಜ್ಞವು ನಿರ್ವಿಘ್ನವಾಗುವಂತೆ ಮಾಡಲು, ನಾನೇ ಮಹಾಸೈನ್ಯದೊಡನೆ ಬರುತ್ತೇನೆ.

'ಮುನೀಶ್ವರನೆ ಹೇಳು, ಆ ದಾನವರು ಯಾರು? ಅವರ ಹೆಸರೇನು? ಅವರಲ್ಲಿ ಸೈನ್ಯವೆಷ್ಟಿದೆ?'

‘ಲಂಕಾ ಕನಕಲಕ್ಷ್ಮಿಯನ್ನು ವಿಷ್ಣುವಿನಂತೆ ಆಳುವ ವೀರನು, ಬಲಿಷ್ಠನು, ಮಹಾದೈತ್ಯನು ದೂರದ ದಕ್ಷಿಣದಲ್ಲಿದ್ದಾನೆ. ಅವನು ನರ ಸುರ ಕಿನ್ನರರೆಲ್ಲರ ಕಿವಿಗೆ ಭಯಂಕರವಾದ ರಾವಣನೆಂಬ ಹೆಸರನ್ನು ಹೊಂದಿದ್ದಾನೆ. ಪೌಲಸ್ತ್ಯ ವಂಶಜನಾದ ಅವನು ದ್ರಾವಿಡ ತಪಸ್ಸಿನಿಂದ ಶಿವನನ್ನು ಮೆಚ್ಚಿಸಿ ವರಗಳನ್ನು ಪಡೆದಿದ್ದಾನೆ ಎಂದು ಹೇಳುವರು. ಆ ದೈತ್ಯನಿಗೆ ಮಾರೀಚ ಮೊದಲಾದ ದುಷ್ಟಕ್ರೂರ ರಾಕ್ಷಸರು ನಂಟರಾಗಿದ್ದಾರೆ. ಆರ್ಯರಾದ ನಮಗೆ ಅವರು ಸರ್ಪದಂತಹ ವೈರಿಗಳು.’

ಹೀಗೆ ಋಷಿ ಹೇಳಿ ಮುಗಿಸುವ ಮೊದಲೆ ವಸುದಾಧಿಪನು

‘ಶಿವಶಿವಾ, ಆ ಕಥೆಯನ್ನು ಸಾಕುಮಾಡಿ ಗುರುವೆ. ನಾನು ಅದೆಲ್ಲವನ್ನು ಕೇಳಿ ತಿಳಿದಿದ್ದೇನೆ. ಯಮನ ದವಡೆಯೊಳಗೆ ಕೈಯಿಕ್ಕಿ ಕೋರೆಹಲ್ಲನ್ನು ಕೀಳುವ ಪರಾಕ್ರಮಿಯ ಎದುರು ಮುದ್ದು ಮಗುವಿರಲಿ, ನಾನೆ ನಿಲ್ಲಲಾರೆನು. ರಾವಣನ ಸುದ್ದಿ ಕೇಳಿದರೆ ಯಕ್ಷ ಕಿನ್ನರ ದೇವಗಂಧರ್ವ ಎದೆಗಳು ಬೆಚ್ಚಿ ಹೆದರುವವು.

‘ಧರ್ಮಜ್ಞನೆ, ಶಿಶುವಾದ ರಾಮನು ಏನು ಮಾಡಲು ಸಾಧ್ಯ ಹೇಳು. ಸಮರದಲ್ಲಿ ಯಮಸದೃಶರಾದ ಮಾರೀಚ ಮುಂತಾದ ಸಹೋದರರು ಸುಂದೋಪಸುಂದರೆಂಬು ವವರಿಗೆ ಮಕ್ಕಳು! ತಪೋಧನನೇ, ನಿಜವಾಗಿ ರಾಮನನ್ನು ಕಳುಹಿಸಲಾರೆ, ಕ್ಷಮಿಸು.’

ಮಕ್ಕಳ ಮೇಲಿನ ಅಕ್ಕರೆಯಿಂದ ತೊದಲು ತೊದಲುತ್ತ, ಅಕ್ಷರಗಳನ್ನು ಹೊಮ್ಮಿಸಿ ಕೈ ಮುಗಿದು ಕಣ್ಣೀರು ಕರೆಯುವವನನ್ನು ನೋಡಿ ಗುರು ವಸಿಷ್ಠನು,

‘ಇಕ್ಷ್ವಾಕು ಕುಲಧರ್ಮ ಮೂರ್ತಿಯೇ, ಇದು ಋಷಿಯ ಕೃಪಾಶೀರ್ವಾದ ! ನಿಶ್ಯಂಕೆಯಿಂದ ರಾಮನನ್ನು ಕಳುಹಿಸು. ಈ ಕೌಶಿಕನು ಈಶ್ವರನಿಗೆ ಸಮಾನನಾದವನು. ಪ್ರಳಯಾಗ್ನಿ ಚಕ್ರಕೇಂದ್ರದಲ್ಲಿರುವ ಅಮೃತದಂತೆ ನಿನ್ನ ಕಂದನು ಈತನ ರಕ್ಷೆಯಲ್ಲಿ ಸದಾ ಸುರಕ್ಷಿತನಾಗಿರುತ್ತಾನೆ.

‘ಸಕಲ ಮಂತ್ರಾಸ್ತ್ರಗಳನ್ನು ಬಲ್ಲ ರಣಕಲಾ ಪಂಡಿತನು ತಾನೆ ಗುರುವಾಗುತ್ತೇನೆ ಎಂದು ಹೇಳುವಾಗ ರಾಮಚಂದ್ರನು ಧನ್ಯನಲ್ಲವೇ? ತಪೋಬಲನಾದ ವಿಶ್ವಾಮಿತ್ರನಿಗೆ ರಾಕ್ಷಸರನ್ನು ನಿಗ್ರಹಿಸಲು ಸಾಧ್ಯವಿದ್ದರೂ–ನಿನ್ನ ಮಕ್ಕಳ ಅಭ್ಯುದಯಕ್ಕಾಗಿ ಇಂದು ಸಾಕೇತಪುರಿಗೆ ಸಹಾಯವನ್ನು ಕೇಳುವ ನೆಪದಿಂದ ಬಂದಿದ್ದಾನೆ’ ಎಂದು ಹೇಳಿದನು.

ಆ ಆಪ್ತ ವಾಕ್ಯಗಳನ್ನು ಕೇಳಿ ದೊರೆಯು ಸಂತೃಪ್ತನಾದನು. ದೂತರನ್ನು ಕಳುಹಿಸಿ ರಾಮಲಕ್ಷ್ಮಣರನ್ನು ಕರೆಸಿದನು. ಶಂಖ ದುಂದುಭಿ ಮಂಗಳ ಘೋಷಗಳು ಮೊಳಗುತ್ತಿರಲು ಗುರುಹಿರಿಯರೆಲ್ಲರು ಆಶೀರ್ವದಿಸಿ, ಶಿರವನ್ನು ಆಘ್ರಾಣಿಸಿ, ಹೂ ಎರಚಿ, ಹಿತನುಡಿ ಹೇಳಿದರು. ದಶರಥನು ಸುಂದರ ಶರೀರರು ಧನುರ್ಧರರು ಆದ ಇಬ್ಬರು ಮಕ್ಕಳನ್ನು ಯತಿಯೊಡನೆ ಬೀಳ್ಕೊಟ್ಟನು.

ಸವಿಗೊರಳ ನೇಹದಿಂ ನೀಡಿದನು ಕುಶಿಕತನಯಂ ರಾಮಚಂದ್ರಂಗೆ, ಮಂಗಳಸ್ನಾತಂಗೆ, ಮಂತ್ರ ಸದ್ವಿದ್ಯೆಯಂ

ಆ ಮೂವರು ಸಂತೋಷದಿಂದ ನಡೆನಡೆದು ಮುಂದುವರಿಯುತ್ತ ಒಂದೂವರೆ ಯೋಜನವನ್ನು ಕ್ರಮಿಸಿ, ಸರಯೂ ನದಿಯ ದಕ್ಷಿಣ ದಡವನ್ನು ಸೇರಿದರು. ಮಂಗಳಸ್ನಾನ ಮಾಡಿದ ರಾಮಚಂದ್ರನಿಗೆ ವಿಶ್ವಾಮಿತ್ರನು ಇಂಪಾದ ಸವಿನುಡಿಯ ಸ್ನೇಹದಿಂದ ಮಂತ್ರ ಸದ್ವಿದ್ಯೆಯನ್ನು ಬೋಧಿಸಿದನು.

ರಾಮಲಕ್ಷ್ಮಣರು ನದಿಯ ದಡದ ಹುಲ್ಲು ಹಾಸಿನ ಮೇಲೆ ಮಲಗಿದರು. ಜಲದ ಜೋಗುಳದ ಜೊತೆಗೆ ಋಷಿನುಡಿಯನ್ನು ಆಲಿಸಿದರು. ನಕ್ಷತ್ರಮಯ ವಿಪುಲಗಗನದ ಇರುಳನ್ನು ಸುಸ್ವಪ್ನಮಯ ನಿದ್ರೆಯಲ್ಲಿ ಕಳೆದರು.

ಪೂರ್ವದಿಕ್ಕಿನ ಸ್ತ್ರೀ ಕಣ್ತೆರೆದ ಒಳಗಿನ ಬೆಳಕೊ, ಕನಕ ಮೇರುಪರ್ವತವನ್ನು ಏರಿ ಬರುವ ತೇರನ್ನು ಎಳೆಯುತ್ತಿರುವ ಸೂರ್ಯನ ಕುದುರೆಗಳ ಖುರಪುಟದಿಂದ ಎದ್ದ ಹೊಂದೂಳಿಯೊ, ಕತ್ತಲೆಯನ್ನು ಅಟ್ಟಿ ಬರುವ ಸೂರ್ಯನ ಬಾಣದಿಂದ ಗಾಯಗೊಂಡಿರುವ ಇರುಳು ಕಾರಿದ ನೆತ್ತರು ಸೋರುವ ಸೋನೆ ತುಂತುರು ಮಳೆಯೊ ಹೇಳು ಎನ್ನುವಂತೆ – ಮರುದಿನ ಮೂಡಲಿನಲ್ಲಿ ಬೆಳಗಾಯಿತು. ತಕ್ಷಣ ವನದೇಶವನ್ನು ಲಕ್ಷಪಕ್ಷಿಗಳ ಇಂಚರ ತುಂಬಿತು. ಸರಯೂ ನದಿಯ ಎದೆಯು ಓಕುಳಿಯ ಕಾಂತಿಯಿಂದ ರಂಜಿಸಿತು. ಋಷಿಯೊಡನೆ ರಾಮಲಕ್ಷ್ಮಣರು ಶೀತಲ ಸುಂದರ, ಸುಖದ ನೀರಿನಲ್ಲಿ ಮಿಂದರು. ಕುಮಾರರಿಗೆ ಕಾಡಿನ ಸೊಗದ ಸಮ್ಮುಖದಲ್ಲಿ ತಮ್ಮ ಅರಮನೆಯ ಸಿರಿಯೆ ಬಡವಾಯಿತು! ಬಂಡೆಯಿಂದ ನೀರಿಗೆ ದುಮುಕಿದರು. ಒಬ್ಬರು ಇನ್ನೊಬ್ಬರ ಮುಖಕ್ಕೆ ನೀರೆರಚಿದರು. ಸ್ಪರ್ಧೆಯಿಂದ ಈಜಿದರು.

'ಗುರುದೇವ, ನಿಮ್ಮ ಕರುಣೆಯಿಂದ ನಮಗೆ ಈ ವನಸುಖ ಲಭಿಸಿತು. ಆ ನಾಗರಿಕ ಜೀವನ ಈ ವನ್ಯ ಸಂಸ್ಕೃತಿಯ ಮುಂದೆ ಬಡತನದ್ದಲ್ಲವೆ?' ಎಂದು ಕೇಳಿದ ರಾಮನನ್ನು ಕುರಿತು ಮಹರ್ಷಿ ಮಂತ್ರದಂತೆ ಹೀಗೆ ಉಚ್ಚರಿಸಿದನು:

'ಹೇ ವತ್ಸನೆ, ನಿಜ ಹೇಳಿದೆ. ಗಿರಿವನ ಪ್ರೀತಿಯು ದೈವ ಕೃಪೆಯಿಂದ ಲಭಿಸುತ್ತದೆ. ಭವ್ಯ ಸೌಂದರ್ಯಶೀಲದ ವನಶಾಂತಿಯಲ್ಲಿ ಜಗದೀಶ್ವರ ಮಹಿಮೆ ಅನುಭವ ವೇದ್ಯವಾಗುತ್ತದೆ. ಉಪನಿಷತ್ತಿನ ಮಹಾ ಮಂತ್ರಾನುಭವಗಳು ಹೃದಯಸ್ಪರ್ಶಿಯಾಗುತ್ತವೆ. ಚಿತ್ತಕ್ಕೆ ಸಮಾಧಿಯನ್ನು ನೀಡಿ ಹರಿದಿರುವ, ವಿಸ್ತರಿಸಿದ, ಹಸಿರಾದ ಕಾಡಿನ ಪರ್ವತ ಶ್ರೇಣಿಯು– ಶಿವನಂತೆ ಹಬ್ಬಿದೆ ನೋಡು. ಅದು ಧ್ಯಾನಶೀಲರಾದವರಿಗಾಗಿ ಆನಂದ ರೋಮಾಂಚನವನ್ನುಂಟುಮಾಡುತ್ತಿದೆ.

'ಅಗೋ ನೋಡು, ಗಗನಪಟದಲ್ಲಿ ದೇವರೆ ಹೆಸರು ಬರೆದ ಮುದ್ರೆಯಂತೆ ಬಣ್ಣದ ಮುಗಿಲು ತೇಲುತ್ತಿದೆ. ನಮ್ಮ ಆತ್ಮವನ್ನು ಕಲೋಪಾಸನೆಗೆ ಕರೆಯುತ್ತಿದೆ. ರಘುರಾಮನೇ ಕೇಳು, ಸೃಷ್ಟಿ ಸೌಂದರ್ಯವನ್ನು ಪ್ರೀತಿಸುವುದೆ ಸೃಷ್ಟಿಕರ್ತನನ್ನು ಪೂಜಿಸಿದಂತೆ. ರಸ ಜೀವನಕ್ಕಿಂತ ಮಿಗಿಲಾದ ತಪಸ್ಸುಯಿದೆಯೆ? ರಸಸಿದ್ಧಿಗಿಂತ ಉತ್ತಮವಾದ ಸಿದ್ಧಿ ಇದೆಯೆ? ಸೃಷ್ಟಿಯು ರಸದಿಂದ ಹೊಮ್ಮಿದೆ. ರಸದಲ್ಲಿ ಬಾಳುತ್ತಿದೆ. ರಸದೆಡೆಗೆ ತಾನು ಹರಿಯುತ್ತಿದೆ. ಕೊನೆಗೆ ರಸದಲ್ಲಿ ಐಕ್ಯವಾಗುತ್ತದೆ. ರಸ ಸಾಧನೆಯನ್ನು ಮಾಡದಿರುವುದೆ ಮೃತ್ಯು. ರಸವು ಆನಂದರೂಪವಾದದ್ದು. ಅಮೃತವಾದದ್ದು.!'

ಅದನ್ನು ಕೇಳಿದ ಬಾಲಕರ ಆತ್ಮವು ಭಾವನೋಜ್ವಲವಾಯಿತು. ರವಿಗೆ ಅರ್ಘ್ಯವನ್ನು ಎತ್ತಿದರು. ಗಾಯತ್ರಿ ಮಂತ್ರವನ್ನು ಅಡವಿ ಝೇಂಕರಿಸುವಂತೆ ಘೋಷಿಸಿದರು.

ತಾಟಕಾವನಂ ತಾನಿದು ಕಣಾ!

ಅಲ್ಲಿಂದ ಮುಂದುವರಿದು ಕಾಮಾಶ್ರಮವನ್ನು ಪ್ರವೇಶಿದರು. ಅಲ್ಲಿ ಋಷಿಗಳ ಆತಿಥ್ಯವನ್ನು ಸ್ವೀಕರಿಸಿದರು. ಮುನಿಗಳಿಂದ ಮನೋಹರ ಕಥೆಗಳನ್ನು ಕೇಳುತ್ತ ರಾತ್ರಿಯನ್ನು ಕಳೆದರು. ಮುಂಬೆಳಗಿನಲ್ಲಿ ಎದ್ದು ನಡೆದು ಗಂಗಾತೀರವನ್ನು ಸೇರಿದರು. ದೋಣಿಯಿಂದ ದಾಟಿ ಮಹಾ ಭೀಷಣ ಭಯಂಕರ ದಟ್ಟ ಘೋರಾರಣ್ಯವನ್ನು ಹೊಕ್ಕರು. ಕಾಡನ್ನು ಪ್ರವೇಶಿಸುತ್ತಿದ್ದಂತೆ ತರುಣ ಲಕ್ಷ್ಮಣನ ಎದೆ ನಡುಗಿತು. ವಿಶ್ವಾಮಿತ್ರರನ್ನು ಹೀಗೆ ಕೇಳಿದನು:

'ಗುರುವೆ, ಜೀರುಂಡೆಗಳು ಮೌನಶಿಲೆಯನ್ನು ಧ್ವನಿಯ ಗರಗಸದಿಂದ ಕೊಯ್ಯುವಂತೆ ಚೀರುತ್ತಿವೆ. ಕರ್ಣ ಕರ್ಕಶವಾಗಿದೆ. ಶಕುನದ ಹಕ್ಕಿಗಳು ದುಶ್ಯಕುನವನ್ನು ಕೂಗುತ್ತಿವೆ. ಕಾಡಿನ ಈ ಕತ್ತಲೆಯೊ ಕಾನನ ರಾಕ್ಷಸಿಯ ಕರಿಮುಖ ಕೋಪದಿಂದ ಸಿಂಡರಿಸಿದಂತೆ; ನಿಶ್ಯಬ್ದ ಕ್ರೌರ್ಯದಿಂದ ನೋಡುವವರನ್ನು ಅಣಕಿಸುವಂತೆ ದಿಟ್ಟಿಸುತ್ತಿದೆ. ಗುರುವೆ ಹೇಳು, ಯಾವುದು ಈ ಕಾಡು, ಹೆಸರೇನು?'

'ಇದು ತಾಟಕಾವನ! ತಾಟಕಿಯು ಸುಂದನ ಹೆಂಡತಿ, ಮಾರೀಚನ ತಾಯಿ. ಅವಳು ಋಷಿಯ ಶಾಪದಿಂದ ಜಕ್ಕಿಣಿಯಾಗಿ ಹುಟ್ಟಿದ್ದಾಳೆ. ತಾಟಕಿಯೆಂಬ ಘೋರರಾಕ್ಷಸ ರೂಪದಿಂದ ಮಹಾರಣ್ಯವನ್ನು ಅಲೆದಾಡುತ್ತ ಕಾಡುತ್ತಿದ್ದಾಳೆ.' ಎಂದು ಗುರುಗಳು ನುಡಿಯುತ್ತಿದ್ದಂತೆ–ಗಿರಿ ಅಡವಿ ಚೀತ್ಕರಿಸುವಂತೆ ಒಂದು ಚೀತ್ಕಾರ ಕೇಳಿಸಿತು. ಅವರು ಮಾತು ಮುಂದುವರಿಸಿ 'ಅವಳೆ ತಾಟಕೆ! ಅದೋ ಬರುತ್ತಿದ್ದಾಳೆ. ಹೆದೆಗೆ ಬಾಣವನ್ನು ಹೂಡಿ ನಿಲ್ಲಿ' ಎಂದು ಆಜ್ಞಾಪಿಸಿದರು. ಬಾಲಕರು ಬತ್ತಳಿಕೆಯಿಂದ ಬಾಣವನ್ನು ಹೊರತೆಗೆದು ಸಿಂಜಿನಿಗೆ ಹೂಡಿದರು. ಜೋಡಿ ಕಣ್ಣುಗಳಂತೆ ನಿಂತರು. ಭೂಕಂಪ ಕಾಲದಲ್ಲಿ ಪರ್ವತದ ಔನ್ನತ್ಯ ಶಿಖರದಿಂದ ಕಣಿವೆ ಕಿಬ್ಬಿಗೆ ಉರುಳಿ ಬೀಳುವ ದೊಡ್ಡ ಬಂಡೆಯು ತಪ್ಪಲಿನ ಗಿಡಮರಗಳನ್ನು ನುಚ್ಚು ನುರಿಮಾಡಿ ನುಗ್ಗಿ ಬರುವಂತೆ ತಾಟಕಿ

ಮಹಾಘೋಷದಿಂದ ಬಂದಳು. ಕಿಡಿಯಿಡುವ ರೋಷದ ಕೋರೆದಾಡೆಗಳ ರಾಕ್ಷಸಿ ಭಯಂಕರೆಯು ಗುಡುಗು ಸಿಡಿಲುಗಳ ಅಬ್ಬರದ ಮುಂಗಾರು ಮಳೆಯಂತೆ ಮುಡಿಗೆದರಿದ್ದಳು. ಕೊರಳೆತ್ತಿ ಮೊಳಗಿದಳು. ಕಣ್‌ಸುಳಿಸಿ ಮಿಂಚಿದಳು. ದಿಕ್ಕು ದಿಕ್ಕಿಗೆ ಬಿರುಗಾಳಿಯಂತೆ ಬೀಸಿದಳು. ದಿಗಂತಕ್ಕೆ ವ್ಯಾಪಿಸುವಂತೆ ಧೂಳನ್ನು ಕವಿಸಿದಳು. ಮಾಯಾಮಯಿಯಾದ ಕಪಟಯುದ್ಧ ಪ್ರವೀಣೆಯು ಆಲಿಕಲ್ಲುಗಳ ಮಳೆಗರೆದಳು.

ರಾಮಲಕ್ಷ್ಮಣರು ಅಸ್ತ್ರಗಳನ್ನು ದಿಕ್ಕುದಿಕ್ಕಿಗೆ ತೂರಿದರು. ಅವುಗಳ ಘಾತಕ್ಕೆ ರಾಕ್ಷಸಿಯ ದೊಡ್ಡ ಶರೀರದಿಂದ ರಕ್ತವು ಹೊಳೆ ಹೊಳೆಯಾಗಿ ಮಳೆಗರಿದು ಹರಿಯಿತು. ಕಪ್ಪುಮೋಡವು ಬೀಳುವಂತೆ ನೆಲಕ್ಕೆ ಬಿದ್ದಳು. ರಾಕ್ಷಸಿಯ ರೂಪಧರಿಸಿ ಬಂದ ಬಿರುಮಳೆ ಹೊಯ್ದು ಹೊಳವಾದಂತಾಯಿತು. ರಾಮಲಕ್ಷ್ಮಣ ಋಷಿಗಳಾತ್ಮ ಲೋಕತ್ರಯದ ಹೊರ ಒಳಗೆ ತಿಳಿಯಾಯ್ತು.

ಋಷಿಯಭೀಷ್ಟಂ ಸಿದ್ಧಿಯಪ್ಪಂತೆ ದಿನಂ ಮೂರರೊಳ್ ಮುಗಿದುದಯ್ ಮಖಂ

ಆ ರಾತ್ರಿಯನ್ನು ತಾಟಕಾವನದಲ್ಲಿ ಕಳೆದು, ಮರುದಿನ ಕೌಶಿಕ ತಪೋವನಕ್ಕೆ ನಡೆದರು. ಮುನಿಯ ನಿಕೇತನವು ನಿತ್ಯ ಅಚ್ಚ ಹಸುರಿನ ಬನದಿಂದ ಕಂಗೊಳಿಸುವ ಮಲೆಯ ತೋಳಿನ ತೆಕ್ಕೆಯಲ್ಲಿತ್ತು. ನೀಲಿ ಆಗಸವನ್ನು ಎದೆಯಲ್ಲಿ ರನ್ನಗನ್ನಡಿಯಂತೆ ತೊಟ್ಟ ವನದೇವತೆಯ ಕಣ್ಣಿನಂತೆ ಮೆರೆಯುವ ವಿಸ್ತಾರವಾದ ಸ್ಫಟಿಕ ನಿರ್ಮಲ ಸರೋವರದ ಸುಂದರ ತೀರದಲ್ಲಿ ಶೋಭಿಸುತ್ತಿತ್ತು.

ತಪೋಧನರು ಮನೆಗೆ ಬಂದ ಸಂಕಟ ನಿವಾರಕರನ್ನು ನೋಡಿದರು. ಮಂಗಳದ್ವಯ ದಶರಥಕುಮಾರರನ್ನು ಮುದ್ದಿಸಿದರು, ಉಪಚರಿಸಿದರು. ಮಾರನೆ ದಿನ ಕುಶಿಕತನಯನು ಯಜ್ಞದಲ್ಲಿ ತೊಡಗಿದನು. ದುಷ್ಟ ಶಿಕ್ಷಣ ದೀಕ್ಷಿತರಾದ ರಾಮಲಕ್ಷ್ಮಣರ ಬಿಲ್ಲಿನ ಠೇಂಕಾರದಲ್ಲಿ ಹೊಮ್ಮಿದ ಆತ್ಮಶಕ್ತಿ ಮಂತ್ರ ಬಾಣದ ಆಘಾತಕ್ಕೆ ಸುಬಾಹು ಅಳಿದನು. ಮಾರೀಚನು ಗಾಯಗೊಂಡನು. ಶರೀರ ಉರುಳಿ ಬೀಳಲು ಎದ್ದು, ಪ್ರಾಣ ಓಡುವಂತೆ ಪಲಾಯನ ಮಾಡಿದನು. ಋಷಿಯು ಬಯಸಿದ ಫಲ ಸಿದ್ಧಿಸುವಂತೆ ಯಜ್ಞವು ಮೂರುದಿನಗಳಲ್ಲಿ ಮುಗಿಯಿತು.

ಅಷ್ಟರಲ್ಲಿ ಜನಕ ಮಹಾರಾಜನ ಮಹಾಯಾಗದ ಸುಕೃತ ವಾರ್ತೆಯು ಮಿಥಿಳೆಯಿಂದ ಮುನಿಗಳ ಆಶ್ರಮಕ್ಕೆ ಬಂದಿತು. ಮುನಿಪುಂಗವನು ಅಲ್ಲಿಗೆ ವಿಧಿನಿಯಮದಂತೆ ರಾಮಲಕ್ಷ್ಮಣರೊಡನೆ ಹೊರಟನು. ದಾರಿಯಲ್ಲಿ ಜನಕರಾಜನಿಗೆ ದೈವಕೃಪೆಯಿಂದ ಲಭಿಸಿರುವ ಹರಧನುಸ್ಸಿನ ಕಥಾಚರಿತವನ್ನು ಹೇಳಿದನು. ಅದನ್ನು ಕೇಳಿದ ರಾಮನಿಗೆ ಶಿವಶಕ್ತಿ ಸಂಚರಿಸಿದಂತೆ ಮೈ ಪುಲಕಗೊಂಡಿತು. ತನ್ನ ಹೃದಯೇಶ್ವರಿಯನ್ನು ಇತರ ಕ್ಷುದ್ರ ಮನುಷ್ಯರಿಂದ ಕಾಪಾಡುವ ಆ ಧನುಸ್ಸು ಹರಕೃಪಾರೂಪಿ ಮಾತ್ರವಷ್ಟೆ ಅಲ್ಲ, ದಿಟವಾಗಿ ಶಿವೇಚ್ಛಾಪ್ರಾಣಾಲಿಯೆ ಎಂದುಕೊಂಡನು.

ಅವರು ಕಣಿವೆಗಳನ್ನು ಇಳಿದು ಬೆಟ್ಟಗಳನ್ನು ಏರಿ ಬರುತ್ತಿದ್ದರು. ಗೌತಮನ ವಾಙ್ಞಹಿಮೆಯೋ, ಅಹಲ್ಯೆಯ ತಪೋಬಲವೋ ಏನೆಂದು ಹೇಳಲಾಗದು–ವಿಶ್ವಾಮಿತ್ರನಿಗೆ ಕಾಡಿನ ನೇರವಲ್ಲದ ಮಾರ್ಗದಲ್ಲಿ ಪರಿಚಿತವಾದ ದಾರಿ ಹಠಾತ್ತನೆ ತಪ್ಪಿಹೋಯಿತು. ನಕ್ಷತ್ರಗಣವೇ ತೋರುಬೆರಳಾಗಿರಲು, ದಿಕ್ಕನ್ನು ಅರಿತು ಕಣ್ಣಿನ ಊಹೆಯ ಮೇಲೆ ಕತ್ತಲೆಯಲ್ಲಿ ನಡೆದರು. ರಾತ್ರಿ ಪೂರೈಸಿತು. ಉಷೆಯು ಮೂಡಲದಲ್ಲಿ ಕಣ್ತೆರೆದಳು.

ಪ್ರಯಾಣಿಕರಿಗೆ ಒಂದು ಋಷಿವನ ಸದೃಶವಾದ ಕಾಡು ಗೋಚರಿಸಿತು. ಅವರು ಅದನ್ನು ಹೊಕ್ಕರು. ಅದು ದುಃಖಗರ್ಭಿತ ಮೌನವನ್ನು ಹೊಂದಿದ ಮಹಾಶಕುನದಂತಿತ್ತು. ಅದನ್ನು ಏನೆಂದು ವರ್ಣಿಸುವುದು. ಹಕ್ಕಿಗಳು ಹಾಡುತ್ತಿಲ್ಲ. ಪ್ರಾಣಿಗಳು ನಲಿದಾಡುತ್ತಿಲ್ಲ. ಗಾಳಿ ಸಂಚರಿಸುತ್ತಿಲ್ಲ. ಮರಗೊಂಬುಗಳಲ್ಲಿ ಹೂಗಳು ಸುವಾಸನೆ ಬೀರುತ್ತಿಲ್ಲ. ಎಲೆ, ಹುಲ್ಲಿನ ಎಸಳು ಚಲಿಸುತ್ತಿಲ್ಲ. ಆ ಬನದಲ್ಲಿ ಯಾವ ದುಃಖವೊ ಕೊನೆಗಾಣದಂತಹ ದಿನವನ್ನು ನಿರೀಕ್ಷಿಸುತ್ತ ಮೂಕವಾಗಿರುವಂತಿತ್ತು. ಅದು ಪಥಿಕರಿಗೆ ನಿಶ್ಶಬ್ದವನ್ನು ಬರೆದಂತೆ, ನಿಶ್ಚಲವನ್ನು ಕೊರೆದಂತೆ, ನಿಶ್ಶಬ್ದತಾ ಕುಂಭಕ ಸ್ಥಿತಿಯ ಯತಿಯ ನಾದದಂತೆ ಕಂಡಿತು. ರಾಮಾಯಣದಲ್ಲಿ ಅತಿ ಮನೋಸತ್ಯದ ಸಂಘಟನೆ ಸಂಭವಿಸಲಿರುವ ಸ್ಥಾನ ಅದೆಂದು ಅವರು ತಿಳಿಯುವರೆ?

ಶಿಲಾ ತಪಸ್ವಿ ಅಹಲ್ಯೆ

ಗೌತಮ ಮಹಾಮುನಿಯ ಶಾಪದಿಂದ ಅಹಲ್ಯೆಯು ಶತಮಾನಗಳ ಕಾಲದಿಂದ ನಿಷ್ಠುರ ಶಿಲಾತಪಸ್ವಿನಿಯಾಗಿ ಜಡರೂಪದಿಂದಿದ್ದಳು. ಕನಿಕರದ ಕಣ್ಣಿಗೆ ಬಾಹಿರಳಾಗಿದ್ದಳು. ಜಗದ ನಿರ್ದಾಕ್ಷಿಣ್ಯ ವಿಸ್ಮೃತಿಗೆ ತುತ್ತಾಗಿದ್ದಳು. ವಜ್ರಮೌನದ, ಜಡತೆ ತುಂಬಿದ ನಿದ್ದೆಯಿಂದ ಎಚ್ಚರಗೊಳ್ಳುವ ಬಯಕೆಯಿಂದ ಒರಗಿದ್ದಳು. ಅಂತಹ ಸುಕ್ಷೇತ್ರವನ್ನು ಪ್ರವೇಶಿಸಿದುದೆ ತಡ ರಾಮನ ಆತ್ಮವು ನಿಷ್ಕಾರಣವಾದ ದುಃಖದಿಂದ ಮರುಗಿ ಕರಗಿತು. ಕಣ್ಣುಗಳಿಂದ ನೀರು ಹರಿಯಿತು. ತಾಯಿ ಕೌಸಲ್ಯೆಯು ಗೋಳಿಡುತ್ತ ತನ್ನ ಹೆಸರನ್ನು ಹಿಡಿದು ಕರೆಯುವಂತೆ ಕಲ್ಲುಗಳಿಂದ, ಹುಲ್ಲುಗಳಿಂದ, ಮರಮರದ ಹೃದಯದಿಂದ ಮೂಡಿದ ಸಂಕಟವು ರಾಮನೊಬ್ಬನಿಗೆ ಕೇಳಿಸಿತು! ತಣ್ಣನೆಯ ಗಾಳಿ ಬೀಸಲು ಚಿಗುರಿನ ತುದಿಯೊಳಗಿದ್ದು ಸಿಂಪಡಿಸುವ ಹಿಮವು ತರತರನೆ ಕಂಪಿಸುವ ರೀತಿಯಲ್ಲಿ ಅವನ ಮೈ ಶುದ್ಧಜ್ಞಾನಮಯವಾದ ಚಿನ್ಮಯ ಆವೇಶದಿಂದ ಸ್ಪಂದಿಸಿತು. ಕೈ ಸಮೇತ ಬಿಲ್ಲು ನಡುಗಿತು. ಬೆನ್ನ ಮೇಲಿನ ಬತ್ತಳಿಕೆ ಕುಣಿಯಿತು. ಗಾಳಿಗೆ ಒನದಾಡುವ ಬಳ್ಳಿ ಜೋಲುವಂತೆ ತಲೆಯ ಮೇಲಿನ ಚಂಡಿಕೆ ಆಡಿತು. ನಿಟ್ಟುಸಿರಿನಿಂದ ಎದೆ ಮೇಲುಸಿರುಬಿಟ್ಟಿತು. ಮುಖದಿಂದ ತೇಜಸ್ಸು ಹೊರ ಚಿಮ್ಮಿತು!

ನೋಡುತ್ತಿರಲು ರಘುನಂದನನು ಬಾಹ್ಯಸಂಜ್ಞಾಶೂನ್ಯನೆನ್ನುವಂತೆ ಭಾವ ಸಮಾಧಿಯಿಂದ ಮಧುಮತ್ತನಂತೆ ನರ್ತಿಸತೊಡಗಿದನು. ಆಗ ಆದ ಅದ್ಭುತಗಳನ್ನು ಏನೆಂದು ಹೇಳುವುದು.

ತಕ್ಷಣ ಸ್ತಬ್ಧವಾಗಿದ್ದ ಗಿರಿವನ ಧರಣಿಗಳು ಚೈತ್ರಲಕ್ಷ್ಮಿಯ ಸ್ಪರ್ಶವಾದಂತೆ ಜೀವೋತ್ಕರ್ಷವನ್ನು ಹೊಂದಿದುವು. ಪುಣ್ಯ ಪವನನು ಗಿರಿಮರಗಳ ನಾಳನಾಳಗಳಲ್ಲಿ ಶಕ್ತಿ ಸಂಚರಿಸುವಂತೆ ಬೀಸಿದನು. ಆಗ ಕೊಂಬೆಕೊಂಬೆಗಳಲ್ಲಿ ಹೂವು ಮತ್ತು ಚಿಗುರು ರಾಶಿರಾಶಿಯಾಗಿ ತುಂಬಿ ಬಂದವು.

ವಸಂತ ಪ್ರಭುವಿನ ಸಗ್ಗದ ಓಲಗಸಾಲೆ ಸಜ್ಜುಗೊಂಡಂತೆ ನವ ಸುಂದರ ಹೊಳೆಹೊಳೆವ ಕುಸುಮ ಸಮೂಹ ಎಲ್ಲೆಲ್ಲು ಕಂಗೊಳಿಸಿದವು. ಕಾಜಾಣಗಳು ಉಲಿದವು. ನವಿಲುಗಳು ನಲಿದವು. ಗಿಳಿಗಳು ಹಾಡಿದವು. ಪಕ್ಷಿಯಿಂಚರದೊಡನೆ ಸಂಗಮಗೊಂಡು ತುಂಬಿಗಳು ತುಂಬಿ ಮೊರೆಯುತ್ತ ಓಂಕಾರವನ್ನು ಝೇಂಕರಿಸಿದವು. ಚಿನ್ನ ಚುಕ್ಕೆಯ ಚಿಗರೆಗಳು ಚೆಲುವಾಗಿ ಸುಳಿಸುಳಿದುವು. ಅನ್ನಮಯ ಜಗವು ಪ್ರಾಣಮಯವಾಯ್ತು. ತಟ್ಟನೆ ಮನೋಮಯವನ್ನು ಹೊಂದಿ, ವಿಜ್ಞಾನಮಯವನ್ನು ಹೊಕ್ಕು, ಆನಂದಮಯಕ್ಕೆ ಧುಮುಕಿತು. ಕೋಶಕೋಶಗಳನ್ನು ಮೀಂಟಿ ನೆಗೆನೆಗೆದು ಮೀರಿ ದಾಟಿತು.

ನೋಡುವವರಿಗೆ ಅಲೌಕಿಕ ಅನುಭೂತಿ ಉಂಟಾಯಿತು. ನೋಡುತ್ತಿದ್ದ ಹಾಗೆ ನೃತ್ಯಶೀಲ ರಾಮನು ಸಾವಕಾಶವಾಗಿ ಮುಂದೆ ಚಲಿಸಿದನು. ಇತರರು ಮಂತ್ರಬಲದಿಂದ ಬದ್ಧರಾದಂತೆ ಹಿಂಬಾಲಿಸಿದರು. ಬಾನಿನಿಂದ ಇಳಿದ ಗಂಧರ್ವ ಮಧುರ ಗಾಯನವು ಅಶರೀರ ಲಕ್ಷ ವೀಣಾತಂತಿಯ ಮಿಡಿದು ಮೇಳಗೈದಂತೆ, ಚೈತ್ರ ಸೌಂದರ್ಯದ ಜೊತೆಗೂಡಿತು.

ಮುಂದೆ ಕಾಡಿಗೆ ಎದುರಾಗಿ ಬಿದಿರು ಮೆಳೆಯ ವನ ತಾಯಿಯ ವಕ್ಷದಲ್ಲಿ ಸುತ್ತಲೂ ಗೆದ್ದಲಿನ ಹುತ್ತ ಆವರಿಸಿದ್ದ, ಪಾಚಿ ಹಬ್ಬಿಕೊಂಡಿದ್ದ ಕಲ್ಲುಬಂಡೆಯೊಂದು ಗೋಚರಿಸಿತು. ಪತಿಯ ಶಾಪವು ಸತಿಯ ರಕ್ಷೆಗೆ ತಾನೇ ರೂಪವನ್ನು ತಾಳಿದೆಯೋ ಎಂಬಂತೆ ಕಪ್ಪು ಹಳದಿ ಪಟ್ಟೆಯ ಹೆಬ್ಬುಲಿಯೊಂದು ಶಿಲೆಯ ಮೇಲೊರಗಿ ಕಿಚ್ಚುಗಣ್ಣಿಂದ ನಿತ್ಯವೂ ಕಾಯುತ್ತಿತ್ತು. ಅದು ಬರುವವರನ್ನು ಕಂಡ ತಕ್ಷಣ ತನ್ನ ಸ್ಥಾನದಿಂದ ಎದ್ದು ಮಿಂಚುತ್ತ ಕಣ್ಮರೆಯಾಯಿತು.

ಋಷಿಯ ಕೃಪಾವಚನದಂತೆ ರಾಮನು ಬಂಡೆಯನ್ನು ಏರಿ ನರ್ತಿಸತೊಡಗಿದನು. ಚರಣ ಚುಂಬನದಿಂದ ಕಲ್ಲೇ ತಾನು ಬೆಣ್ಣೆಯಾಯ್ತೊ ಎಂಬಂತಾಯಿತು. ಪ್ರೇಮ ಸಾಮೀಪ್ಯದಿಂದ, ಸಾನಿಧ್ಯದಿಂದ ಮತ್ತು ಸಂಪರ್ಕದಿಂದ ತಲ್ಲಣಗೊಳ್ಳುವ ಅಬಲೆಯ ರೀತಿ ಬಂಡೆ ಮೆಲ್ಲನೆ ಕಂಪಿಸಿತು.

ಪೆತ್ತ ತಾಯಂ ಮತ್ತೆ ತಾನೆ ಪಡೆದಂತಾಗೆ ನಮಿಸಿದನೊ ರಘುಜನುಂ ಗೌತಮಸತಿಯ ಪದಕೆ

ಅಲ್ಲಿ ನೆರೆದವರೆಲ್ಲ ದಿಗ್ಭ್ರಮೆಗೊಂಡು ನೋಡುತ್ತಿರಲು ಸೂರ್ಯನ ತಾಪಕ್ಕೆ ಕರ್ಪೂರದ ಶಿಲೆಯ ಹಾಗೆ ಆ ಕಪ್ಪುಬಂಡೆ ದ್ರವಿಸಿತು. ದಿವ್ಯ ಮಾಯಾಶಿಲ್ಪಿಯು

ಕಲ್ಪನಾದೇವಿಯನ್ನು ಕಲ್ಲು ಸೆರೆಯಿಂದ ಬಿಡಿಸಿ ರಚಿಸಿದನೊ ಎಂಬಂತೆ ರಘುರಾಮನ ಅಡಿದಾವರೆಗೆ ಹಣೆ ಮಣಿದು ಓರ್ವ ತಪಸ್ವಿನೀ ಮೂರ್ತಿಯು ನಿಂತಳು. ಅವಳು ಹಾಲು ಬಿಳಿಯ ನಾರುಮಡಿಯ, ಕಪ್ಪಾದ ಕೂದಲಿನ ಮುಡಿಯ ವ್ರತದಿಂದ ಹೊಳೆವ ಮುಖದ, ಚೆಲುವಾದ ಮಾಂಗಲ್ಯದಿಂದ ಕೂಡಿದ್ದಳು. ಹೆತ್ತತಾಯಿಯನ್ನು ಮತ್ತೆ ತಾನು ಪಡೆದಂತೆ; ಮಹಾಕವಿಯು ತನ್ನ ಕಾವ್ಯಕ್ಕೆ ತಾನೆ ಮಣಿಯುವಂತೆ ಗೌತಮ ಸತಿಯ ಪಾದಗಳಿಗೆ ನಮಿಸಿದನು.

ಇಂದ್ರನು ಕೆಡಿಸಿ ಹಾಳು ಮಾಡಿದುದಕ್ಕೆ ಹೆದರಿ, ಪತಿಯ ಶಾಪಕ್ಕೆ ಸಿಲುಕಿ ಕಲ್ಲಾದ ಅಹಲ್ಯೆಯನ್ನು ಶ್ರೀರಾಮನು ತನ್ನ ಶ್ರೀಪಾದದ ಸ್ಪರ್ಶದಿಂದ ಮರಳಿ ಹೆಣ್ಣು ಮಾಡಿದನು. ಆಗ ದೇವತೆಗಳು ಉಘೇ ಎಂದು ಹೇಳಿ, ಅವನ ತಲೆಯ ಮೇಲೆ ಹೂವಿನ ಮಳೆ ಕರೆದರು. ದೇವ ದುಂದುಭಿ ವಾದ್ಯಗಳು ಮೊಳಗಿದುವು. ಕಲ್ಲಾದರೇನು? ಜಡಕ್ಕೆ ತೀವ್ರ ತಪದಿಂದ ಚೇತನ ಸಿದ್ಧಿಸುವುದಿಲ್ಲವೆ? ಕಲ್ಲಾದ ಹೆಣ್ಣಿನ ಸಂಕಲ್ಪವು ಕೌಶಿಕನಿಗೆ ದಾರಿ ತಪ್ಪಿಸಿ ಶ್ರೀರಾಮನ ಚರಣವನ್ನು ಸೆಳೆಯದೆ ಇರುತ್ತದೆಯೆ?

ಮುನಿಜನರು ರಾಮಪಾದ ಮಹಿಮೆಯನ್ನು ಹರಸಿ ಕೊಂಡಾಡುತ್ತಿದ್ದರು. ಅಹಲ್ಯೆಯ ತಪಸ್ಸನ್ನು ಗೌರವಿಸಿ ಗೌತಮನು ಅಲ್ಲಿಗೆ ಶಿವನು ಬಂದಂತೆ ಬಂದನು. ತಕ್ಷಣವೆ ಹಾಳಾಗಿ ಹೋಗಿದ್ದ ಆ ಬನವು ಪ್ರಾಣಮಯ ಪಾವನ ಆಶ್ರಮವಾಯಿತು. ನದಿಯು ನೊರೆಯ ಮುತ್ತನ್ನು ಚೆಲ್ಲಿ ಮೊರೆಯುತ್ತ ಹರಿಯಿತು. ವನಧರಣಿಯು ಹೂ ತುಂಬಿ ತೆಳುಗಾಳಿಗೆ ಒಲೆದಾಡುತ್ತ ತಲೆದೂಗಿತು. ಹರಿಣನ ಬಳಿಗೆ ಪ್ರೀತಿಯಿಂದ ಹರಿಣಿ ಹೋಯಿತು. ಮುಖವನ್ನು ನೆಕ್ಕಿ, ಮೈನೆಕ್ಕಿ ಸಂತೋಷಪಟ್ಟಿತು.

ತಪೋಧನನು ಪದತಲಕ್ಕೆ ಮುಡಿಯಿಟ್ಟ ಸಹಧರ್ಮಿಣಿಯನ್ನು ಎತ್ತಿದನು. ಅವಳ ಕಣ್ಣೀರನ್ನು ಒರಸುತ್ತ, ತಾನು ಅಶ್ರುಧಾರೆ ಹರಿಸಿದನು. ರಾಮನ ಆನಂದಕ್ಕೆ ಪಾರವಿಲ್ಲದಂತಾಯಿತು. ಗೌತಮನು ಅಪ್ಪಿಕೊಂಡಾಗ–ಭಕ್ತಿಯ ಅಪ್ಪುಗೆಗೆ ಭಗವಂತನಂತೆ ಶ್ರೀರಾಮನು ಮೈಮರೆತನು. ಅವರು ಆ ರಾತ್ರಿಯನ್ನು ಗೌತಮಾಶ್ರಮದಲ್ಲಿ ಕಳೆದು ಮುಂದೆ ಮಿಥಿಲೆಗೆ ನಡೆದರು. ನಾನಾ ಕಥೆಗಳನ್ನು ಕೇಳುತ್ತ ದಾರಿ ನಡೆವ ಆಯಾಸವನ್ನು ನೀಗಿಕೊಂಡರು. ಬ್ರಹ್ಮರ್ಷಿಯ ವಚನ ತತ್ತ್ವಾಮೃತವನ್ನು ಸವಿದರು. ಪ್ರಕೃತಿ ಸೌಂದರ್ಯದ ಹರ್ಷಾನಂದದ ಸವಿಯನ್ನು ಅನುಭವಿಸುತ್ತ ಮುಂದೆ ಬಂದರು. ಆಗ ಅವರಿಗೆ ಸಂಪತ್ತಿನಿಂದ ಶ್ರೀಯುತ ಕುಬೇರನ ಅಲಕಾವತಿಯಂತೆ ಬೀಗಿ ಶೋಭಿಸುತ್ತಿದ್ದ ವಿದೇಹದ ರಾಜಧಾನಿ ಕಂಡಿತು. ರಾಮನ ಮೈಯು ಚಿತ್ತದ ಎಚ್ಚರಕ್ಕೆ– ತಿಳಿಯದ ಹಿತದಿಂದ ಪುಳಕಗೊಂಡಿತು. ಅವರು ಮುತ್ತು ರತ್ನಕ್ಕಾಗಿ ಸಮುದ್ರದ ಒಳಹೋಗುವವರಂತೆ ಮಹಾ ಮಿಥಿಳೆಯನ್ನು ಪ್ರವೇಶಿಸಿದರು.

ಜನಕರಾಜನ ಯಾಗದ ಸಂಭ್ರಮಕ್ಕೆ ದೇಶ ವಿದೇಶಗಳಿಂದ ಜನಕಿಕ್ಕಿರಿದು ಸೇರಿದ್ದರು. ಕೌಶಿಕನೊಡನೆ ಪಟ್ಟಣದ ಬೀದಿಯಲ್ಲಿ ರಾಮಲಕ್ಷ್ಮಣರು ಸಾಗುತ್ತಿರಲು, ಜನರು ಬಾಲಕರ ಭವ್ಯವಾದ ಸ್ವರೂಪಕ್ಕೆ ಕಣ್ ಮನ ಸೋತು ಎವೆಯಿಕ್ಕದೆ ನಿಂತು ನೋಡಿದರು. ದೊರೆಯ ಆಳುಗಳು ಬಂದು ಹೊಳೆಯುವ ಅತಿಥಿಗಳಿಗೆ ನಮಸ್ಕರಿಸಿದರು. ಯಾಗ ಶಾಲೆಯ ಹತ್ತಿರದ ಚಿಗುರ ಚಪ್ಪರದಲ್ಲಿ ನಿರ್ಮಿಸಿದ ಬಿಡಾರಕ್ಕೆ ಅವರನ್ನು ಪ್ರವೇಶಗೊಳಿಸಿದರು.

ಮಹರ್ಷಿ ವಿಶ್ವಾಮಿತ್ರನ ಆಗಮನ ವಾರ್ತೆಯನ್ನು ರಾಜರ್ಷಿ ಜನಕಮಹಾರಾಜನಿಗೆ ತಿಳಿಸಲು ನಡೆದರು. ಕೇಳಿದೊಡನೆ ಆತನು ಬಂದನು. ಪರ್ಣಕುಟಿಯನ್ನು ಹೊಕ್ಕನು. ಚಂದ್ರಸೂರ್ಯರ ಜೊತೆಗೂಡಿ ಗಗನವು ಇರುವಂತೆ–ರಾಮಲಕ್ಷ್ಮಣರೊಡನಿದ್ದ ಕೌಶಿಕನಿಗೆ ನಮಸ್ಕರಿಸಿದನು. 'ನಾನು ಧನ್ಯನಾದೆನು. ಈ ಮಿಥಿಲೆ ಪಾವನವಾಯಿತು.' ಎಂದು ಮುನಿಗಳೊಡನೆ ಸಂಭಾಷಿಸುತ್ತಿದ್ದನು. ಆಗ ನೃಪನ ಕಣ್ಣ ದುಂಬಿಯು ರಾಮರೂಪದ ಸುಂದರ ಅರಳುಮೊಗ್ಗಿನ ಮುಗುಳು ಆಕರ್ಷಣೆಗೆ ಸಿಲುಕಿತು. ಕುಶಿಕತನಯನು ಅದನ್ನು ಕಂಡು ನಸುನಕ್ಕನು. ಜನಕರಾಜನ ಕಿವಿಗೆ ಜೇನು ಹೊಯ್ಯುವಂತೆ ಹೀಗೆ ಹೇಳಿದನು:

ಮಹಿಮೆ ಮಹಿಮೆಯ ಕಣ್ಗೆ ಮರೆಯಹುದೆ, ರಾಜರ್ಷಿ?

'ರಾಜರ್ಷಿಯೇ, ಮಹಿಮೆಯ ಕಣ್ಣಿಗೆ ಮಹಿಮೆಯು ಮರೆಯಾಗುತ್ತದೆಯೆ? ಸಮಾನರಲ್ಲಿ ನಿನ್ನ ಚಿತ್ತವು ನೆಲೆಗೊಂಡಿದೆ. ಇವರು ರಾಮಲಕ್ಷ್ಮಣರು. ದಶರಥನ ಮಕ್ಕಳು' ಎಂದು ಮೊದಲಾಗಿ ಅವರ ಶ್ರೇಷ್ಠ ಹಿರಿಮೆಯನ್ನು ಹೇಳಿ, ಮತ್ತೆ ಮಾತು ಮುಂದುವರಿಸಿ, 'ನೃಪಶ್ರೇಷ್ಠನೇ, ಹರನ ಕೋದಂಡವನ್ನು ತೋರಿಸುವ ನೆವದಿಂದ ಇವರನ್ನು ಇಲ್ಲಿಗೆ ಕರೆದುಕೊಂಡು ಬಂದಿರುವೆನು. ಆ ಶಿವಚಾಪವನ್ನು ತೋರಿಸು. ಕಣ್ಣಿಗೆ ತೃಪ್ತಿಯಾಗುವವರೆಗೆ ನೋಡಲಿ. ಕೋಸಲಕ್ಕೆ ಬೇಗ ಹಿಂದಿರುಗಬೇಕಾಗಿದೆ. ಇವರ ತಂದೆ ತಾಯಿಗಳು ಕಾತುರದಿಂದ ಕಾಯುತ್ತಿದ್ದಾರೆ. ಹತ್ತು ರಾತ್ರಿಗಳ ಅವಧಿಗೆ ಒಪ್ಪಿಕೊಂಡು ಇವರನ್ನು ನನ್ನ ಯಜ್ಞ ಮಂಗಳಕ್ಕಾಗಿ ಕರೆತಂದೆನು'.

ಎಂದು ಹೇಳಿದ ಮುನಿವರನ ನುಡಿಯನ್ನು ರಾಜನು ಕೇಳಿದನು. ಜೊತೆಗೆ ತನ್ನನ್ನು ತುಂಬಿದ ಸುಖರಸದ ಹೃದಯದಾನಂದವನ್ನು ಹೇಳಲು ಆಶಿಸಿದನು. ಅದರ ಇಂಗಿತವನ್ನು ಅರಿತ ಕೌಶಿಕನು ಕುವರರಿಗೆ – ಹತ್ತಿರದಲ್ಲಿಯೆ ಕಂಗೊಳಿಸುತ್ತ ನಗುವ ಹೂದೋಟವನ್ನು ತೋರಿಸಿ, ಅಲ್ಲಿಗೆ ಹೋಗಲು ಸಂಜ್ಞೆ ಮಾಡಿದನು. ರಾಮ ಲಕ್ಷ್ಮಣರು ಕಿವಿಮರೆಯಾಗಲು ರಾಜನು ತನ್ನ ಮನದ ಭಾವವನ್ನು ಹೀಗೆ ವ್ಯಕ್ತಪಡಿಸಿದನು.

'ಮುನಿವರೇಣ್ಯನೇ, ನೀನು ಬಂದದ್ದು ನನಗೆ ಕತ್ತಲೆಯಲ್ಲಿ ತೊಳಲುತ್ತಿದ್ದವನಿಗೆ ಚಂದ್ರನು ಬಂದು ದೀವಿಗೆ ಹಿಡಿದಂತಾಯಿತು. ರಾಮನನ್ನು ಕಂಡು ನನಗೆ ಅದೇನಾಯಿತೆಂದು ಹೇಳಲಾರೆ. ಬಾಡಿದ ಒಂದು ಆಶೆ ಪುನಃ ಅರಳಿದೆ. ನಾನು ಒಮ್ಮೆ

ಯಜ್ಞವನ್ನು ಕೈಗೊಳ್ಳುವ ಕಾರಣದಿಂದ ನೆಲವನ್ನು ಉಳುತ್ತಿದ್ದೆನು. ಆಗ ಕುಳದ ನೇಗಿಲ ಗೆರೆಯ ಬೈತಲೆಯ ಸಾಲಿನಲ್ಲಿ ರತ್ನದ ತೊಟ್ಟಿಲಲ್ಲಿ ಇದ್ದ ಶಿಶುರತ್ನ ದೊರೆಯಿತು. ಆ ಹೆಣ್ಣು ಕೂಸನ್ನು ಮಗಳೆಂದು ತಿಳಿದು, ಸೀತೆ ಎಂಬ ಹೆಸರನ್ನು ಪ್ರೀತಿಯಿಂದ ಇಟ್ಟು ಸಾಕಿದೆನು. ಕುವರಿಯು ರತಿ-ಮನ್ಮಥರ ಮಾತೆಯೆನ್ನುವಂತೆ, ಮನ್ಮಥನಂತಹ ರಾಜಕುಮಾರರ ಕಣ್ಣು ಮೀನುಗಳನ್ನು ಸೆಳೆಯುವ ಸರೋವರದ ಸುಂದರ ಕಮಲದಂತೆ ಬೆಳೆದಳು.

'ಒಬ್ಬರಿಗೊಬ್ಬರು ಪಣತೊಟ್ಟು, ಪ್ರತಿಜ್ಞೆಮಾಡಿ, ಮತ್ಸರಪಟ್ಟುಕೊಂಡು ಧರಾಪುತ್ರಿಯನ್ನು ಕೈಹಿಡಿಯಲು ಬೇಡಿ ಬಂದರು. ಬಲವಾದ ಸೈನ್ಯ ಸಮೇತ ಬಂದರು. ನಾನು ಏನು ಮಾಡುವುದೆಂದು ಹೊಳೆಯದೆ ಶಿವನನ್ನು ಆರಾಧಿಸುತ್ತಿದ್ದೆನು. ಆಗ ಒಂದು ಅಶರೀರವಾಣಿಯು – ಶಿವನ ಬಿಲ್ಲನ್ನು ಎತ್ತಿ, ಬಿಲ್ಲಿನ ತುದಿಗೆ ಹುರಿ ಕಟ್ಟಿ, ಬಾಣವನ್ನು ಹೂಡಿ ಕಿವಿಯವರೆಗೆ ಸೆಳೆದು ಬಿಡುವ ವೀರನಿಗೆ ಚೆಲುವೆಯನ್ನು ಧಾರೆಯೆರೆ– ಎಂದು ಹೇಳಿತು.

'ಬಂದ ಅರಸರಿಗೆ ದೇವವಾಣಿಯನ್ನು ತಿಳಿಸಿದೆನು. ಅಯೋನಿಜಾ ಕನ್ಯೆಯನ್ನು ವೀರಶುಲ್ಕವಾಗಿ ನೀಡುವುದಾಗಿ ಸಾರಿದೆನು. ಗುರುವೆ, ವಜ್ರದ ಉಕ್ಕಿನ, ಮೇರುಭಾರದ ಆ ರುದ್ರಕೋದಂಡವನ್ನು ಓರ್ವ ವೀರನನ್ನು ಹೊರೆತುಪಡಿಸಿ ಅಲುಗಾಡಿಸಿದ ಸಾಹಸಿಗರನ್ನು ನಾನು ಇದುವರೆಗೆ ಕಂಡಿಲ್ಲ. ಲಂಕಾಪುರವನ್ನು ಆಳುವ ದಶಶಿರ ಎನ್ನುವ ಬಿರುದನ್ನು ಹೊಂದಿದ ರಾವಣನು ಪಣವನ್ನು ಕೇಳಿದನು. ಮಿದುಳನ್ನು ಮಾರುಗೊಟ್ಟು, ಸೀತೆಯನ್ನು ಗೆದ್ದು ಕರೆದೊಯ್ಯುವ ಸುರೆ ಕುಡಿದ ಭಾವಕ್ಕೆ ಒಳಗಾಗಿ ಪುಷ್ಪಕವಿಮಾನದಲ್ಲಿ ಬಂದನು. ಆ ಬೃಹತ್ತಾದ ರಾಕ್ಷಸ ಮೂರ್ತಿಯನ್ನು ಕಂಡು ಸೀತೆ ಗೋಳಿಟ್ಟಳು. ಮಹಾದೇವನನ್ನು ಕೋಮಲೆಗಾಗಿ ಪ್ರಾರ್ಥಿಸುತ್ತ ಅಖಿಲ ಮಿಥಿಲೆಯು ಗೋಳಿಟ್ಟಿತು.

'ಗುರುವೆ, ನೋಡಿ. ಪರಶಿವನ ಕೃಪೆ ಪರ್ವತದಂತಹ ಕಪ್ಪುಬಣ್ಣದ ದೈತ್ಯನು ದಿಗ್ಗಜದ ರೀತಿ ನೆಲನಡುಗುವಂತೆ ಜಗ್ಗಜಗ್ಗನೆ ನಡೆದುಬಂದನು. ಕೈ ಮೊದಲು ಮಾಡಿ ಹರಧನುವನ್ನು ಬೇಗನೆ ಎತ್ತಿದನು. ಜಗವು ಗದ್ಗದಿಸಿತು. ಬಿಲ್ಲಿನ ತುದಿಗೆ ಹೆದೆ ಕಟ್ಟುವಾಗ, ಸೀತೆಯ ಸುಕೃತದಿಂದ ಚಾಪಭಾರಕ್ಕೆ ಅವನ ಕೈ ತತ್ತರಿಸಿತು. ಶರೀರ ಬೆವರಿತು. ಚಿತ್ತ ಪಲ್ಲಟವಾಯಿತು. ಕೈಲಾಸವನ್ನು ಹಿಡಿದು ಅಲ್ಲಾಡಿಸಿದ ರಾಕ್ಷಸನು ಪರ್ವತಾಗ್ರವು ಪ್ರಳಯದಶನಿಗೆ ಮುರಿದು ಬೀಳುವಂತೆ ಕುಸಿದು ಬಿದ್ದನು. ಲಂಕೇಶ್ವರನು ತನ್ನ ಬಿಂಕವು ಭಂಗಗೊಳ್ಳಲು ಅತಿಯಾಗಿ ಕೋಪಗೊಂಡು ಹಿಂದಿರುಗಿದನು. ಮತ್ತೆ ತಪದಿಂದ ಬಲವನ್ನು ಪಡೆದು ಬರುವೆನೆಂದು ತೀವ್ರ ಪ್ರತಿಜ್ಞೆಯನ್ನು ರೋಷದಿಂದ ಕೂಗಿ ಹೇಳಿದನು.

'ಗುರುವೆ ಕೇಳು, ದಶಾನನನು ಅತಿ ದೃಢಮನಸ್ಕನು. ಇನ್ನೊಮ್ಮೆ ಆ ರಕ್ಕಸ ಬರುವ ಮೊದಲೆ ಮನುಜ ವೀರನಿಗೆ ನನ್ನ ಕುವರಿಯನ್ನು ಕೊಡುವ ಕಾತರ ಮನಸ್ಸಿನಿಂದ ಸಂಕಟ ಪಡುತ್ತಿದ್ದೇನೆ.'

ಕಾಲ ಪುರುಷಂ ರೋಮ ಹರ್ಷಿತನಾಗುವಂತೆ ಮೈಥಿಲಿ ನಿಂದು ನೋಡಿದಳ್

ಆ ಕಡೆ ಹೂವಿನ ತೋಟದಲ್ಲಿ ಮನ್ಮಥನೊಡಗೂಡಿ ವಸಂತನು ವಿಧಿವಿಲಾಸಕ್ಕೆ ಕಿಂಕರನಾಗಿ ಸೇವೆ ಸಲ್ಲಿಸಲು ತೊಡಗಿದನು. ಹೆಣ್ಣು ಗಂಡುಗಳಲ್ಲಿ ಪರಸ್ಪರ ಉಂಟಾಗುವ ಮೋಹವನ್ನು ಹೊತ್ತಿಸುವ ಸಂಪದ್ಭರಿತ ಬಣ್ಣಗಳಿಂದ, ಗಂಧಗಳಿಂದ ಮಿರುಮಿರುಗಿ ಮೆರೆಯುವಂತೆ, ಕರೆಯುವಂತೆ, ತರತರದ ಹೂ ಎಲೆಗಳನ್ನು ಶೃಂಗರಿಸಿದನು. ಅಲ್ಲಿಗೆ ಸೀತೆಯು ತಂಗಿಯರಾದ ಊರ್ಮಿಳೆ, ಮಾಂಡವಿ, ಶ್ರುತಕೀರ್ತಿಯರ ಜೊತೆಗೂಡಿ–ಗಿಳಿಹಿಂಡನ್ನು ಅಣಕಿಸುವಂತೆ, ಬಣ್ಣದ ಎಲೆಗಳು ಹೂಗಳು ನಾಚುವಂತೆ ಬಂದಳು. ಅವಳು ಮಲ್ಲಿಗೆ ಪೊದೆಯ ಮರೆಯಲ್ಲಿ ನಿಂತು–ಕೊಳದ ತಿಳಿನೀರಿಗೆ ಕಲ್ಲೆಸೆಯುವ ಆಟದಲ್ಲಿ ಲಕ್ಷ್ಮಣನ ಪಕ್ಕದಲ್ಲಿದ್ದ ರಾಮನ ಮೋಹಕ ಮೂರ್ತಿಯನ್ನು ನೋಡಿದಳು. ಅವಳು ನೋಡಿದ ರೀತಿ ಕಾಲಪುರುಷನೇ ರೋಮಾಂಚಿತನಾದಂತಿತ್ತು.

ಅವಳ ಮುಖವು ಬೆಟ್ಟದಾವರೆಗೆ ಅರುಣೋದಯವಾದಂತೆ ಓಕುಳಿಯ ಬಣ್ಣವನ್ನು ಮನಸ್ಸಿನ ಅನುರಾಗದ ಪ್ರತಿಬಿಂಬದಂತೆ ತಳೆಯಿತು. ತಾನು ನಿತ್ಯವೂ ಕನಸಿನಲ್ಲಿ ಕಾಣುತ್ತಿದ್ದ ನೀಲದೇಹನನ್ನು ಆಶ್ಚರ್ಯದಿಂದ ನೋಡಿದಳು. ಹೆಸರು ಗೊತ್ತಿಲ್ಲದ ಅಜ್ಞಾತನಲ್ಲಿ ರೂಪಸಾಗರದಿಂದ ಎದ್ದ ಸೂರ್ಯ ಮನ್ಮಥನಂತಹ ರಮಣೀಯನಲ್ಲಿ ಕಣ್ಣು ನಾಟಿತು.

ಜನಕನ ಸ್ವಂತ ಕುಮಾರಿಯರು ಕಾರಣವನ್ನು ತಿಳಿಯಲು ಪ್ರಯತ್ನಿಸಿದಾಗ ಸೀತೆಯು ನಿಟ್ಟುಸಿರು ಬಿಟ್ಟಳು. ತೀವ್ರ ಆಯಾಸದಿಂದ ಅಲ್ಲಿ ನಿಲ್ಲಲಾರದೆ ಅರಮನೆಗೆ ಹಿಂತಿರುಗಿದಳು. ಊರ್ಮಿಳ ಕಣ್ಣು ಒರಸಿದಳು. ಅಕ್ಕನನ್ನು ಅಕ್ಕರೆಯಿಂದ ತಬ್ಬಿ 'ಹೇಳಕ್ಕ ಹೇಳು. ದುಗುಡ ಏತಕ್ಕೆ' ಎಂದು ಕೇಳಿದಳು. ಆಗ ವೈದೇಹಿಯು ತನ್ನ ಅಂತರಂಗ ಭಾವವನ್ನು ಹೀಗೆ ವ್ಯಕ್ತಪಡಿಸಿದಳು.

'ತಂಗಿಯೆ, ನಾನು ನಿನಗೆ ಇದುವರೆಗೆ ಒಂದು ಅಂತರಂಗದ ವಿಷಯವನ್ನು ಹೇಳಿರಲಿಲ್ಲ. ಈಗ ಕೇಳು. ನನಗೆ ಅರ್ಥವಾಗದ ಒಂದು ಅನುಭವವು ತಾನು ನಿತ್ಯವೂ ಬಂದು ನನ್ನ ಒಳಸೇರುತ್ತಿದೆ. ಗಗನ ಮಂಡಲವೆ ಬಂದು ನನ್ನ ಮೈಯನ್ನು ಅಪ್ಪುತ್ತ ಎದೆಯೊಳಗೆ ಸೇರುವಂತೆ, ಕಡಲು ಉಕ್ಕಿ ಮೇರೆ ಮೀರಿ ಹರಿಯುತ್ತ ಮುಳಗಿಸಲು ನಾನೇ ಕಡಲ ಒಡತಿಯೆಂಬಂತೆ ಆಗುತ್ತಿದೆ. ತೊರೆ ಬನ ಭೂಮಿ ಬಾನು ಗಿರಿಪಂಕ್ತಿ ಹಗಲು ಇರುಳು ಚಿಕ್ಕಿ ಚಂದ್ರಮ ಸೂರ್ಯ ಎಲ್ಲವೂ ನನ್ನ ಶರೀರವೇ ಆಗಿ ನಾನೇ ತ್ರಿಭುವನ ಲಕ್ಷ್ಮಿಯೆಂಬಂತೆ ಆಗುತ್ತಿದೆ. ಇದಕ್ಕೆ ನಾನು ಮೊದ ಮೊದಲು ಬೆದರಿದೆ.

ಹೇಳೋಣವೆಂದು ಪ್ರಯತ್ನಪಟ್ಟರೆ ತೊದಲುತ್ತಿತ್ತು. ನನ್ನ ಅನುಭವವು ಮೂಗಿ ಕಂಡ ಅದ್ಭುತದಂತಾಯಿತು.

'ಲಂಕೆಯ ಅಧಿಪತಿ ದಶಾನನನು ನಮ್ಮ ತಂದೆಯ ಬಳಿಗೆ ಹರಚಾಪವನ್ನು ಮುರಿಯಲು ಬಂದ. ಆ ದುರ್ದಿನದ ರಾತ್ರಿ ನಾನು ಶಶಿಮೌಳಿಯನ್ನು ಕಣ್ಣೀರಿನ ಅಭಿಷೇಕದಿಂದ ಧ್ಯಾನಿಸುತ್ತಿದ್ದೆ. ಆಗ ಮತ್ತೊಮ್ಮೆ ನನಗಾದ ಅನುಭವವನ್ನು ಏನೆಂದು ಹೇಳಲಿ. ಆ ಭೂಮಿ ಕಡಲು ಚುಕ್ಕಿ ಬಾನುಗಳೆಲ್ಲ ಒಂದಾಗಿ ನನ್ನ ಮೈಯನ್ನು ಸೇರಿದಂತಾಯಿತು. ಪ್ರಜ್ಞೆ ನಿದ್ರಿಸಿರಲು ಪ್ರಜ್ಞಾರಹಿತಳಂತಾದ ನನಗೆ ಒಂದು ಕಣಸಾಯಿತು. ಆ ದರ್ಶನದಲ್ಲಿ ಸರ್ವಲೋಕ ರಮಣೀಯ ನೀಲಮೇಘಶ್ಯಾಮ ಮೂರ್ತಿ ಕಾಣಿಸಿಕೊಂಡಿತು. ಆ ರಾತ್ರಿಯಿಂದ ಪ್ರತಿದಿನವು ಸ್ವಪ್ನದಲ್ಲಿ ಆ ಮೂರ್ತಿ ಗೋಚರಿಸುತ್ತಿದೆ. ಆ ರೂಪವನ್ನು ಇಂದು ನಮ್ಮ ಹೂದೋಟದಲ್ಲಿ ಕೊಳದ ದಡದಲ್ಲಿ ನಿಂತ ಗಗನ ಸದೃಶವಾದ ನೀಲ ಕಾಂತಿಯ ತರುಣಮೂರ್ತಿಯಲ್ಲಿ ಗುರುತಿಸಿದೆನು'.

ಮಿಥಿಳೇಂದ್ರನ ಧರಣಿ ಸಂಭೂತೆ ಸೀತೆಯು ಊರ್ಮಿಳೆಯೊಡನೆ ಮಾತಾಡಿ ಮುಗಿಸುವಷ್ಟರಲ್ಲಿ ಕೆಳದಿಯರು ಓಡೋಡಿ ಬಂದರು. ಇಂಪಿನ ವಾರ್ತೆಯನ್ನು ಹೇಳಿದರು:

'ಅಕ್ಕ, ನೀನು ಅಲ್ಲಿ ಕಂಡವನಿಗೆ ರಾಮ ಎಂಬ ಹೆಸರು ಇರುವುದಂತೆ !'
'ರವಿಕುಲದ ಅರಸದೇವ ದಶರಥನ ಪುತ್ರನಂತೆ'.
'ಬಿಲ್ಲು ಮುರಿಯಲು ನಿನಗೆ ಅವನು ಪತಿಯಾಗುವನಂತೆ'.
'ಬಲ ಪರೀಕ್ಷೆಗೆ ನಾಳೆದಿನ ನಿಗಧಿಯಂತೆ'
'ಏಳಕ್ಕ! ಬಾರಕ್ಕ, ಬಿಲ್ಲ ಮುರಿಯುವಂತೆ ಪಾರ್ವತಿಯನ್ನು ಆರಾಧಿಸೋಣ!'
'ಶಿವನ ಸೋಲಾಗುವುದು ದಿಟ'.

ಅವರ ನುಡಿಕೇಳಿ ಸೀತೆಯು ಮನಸ್ಸಿನಲ್ಲಿ ಹೀಗೆ ಹೇಳಿಕೊಂಡಳು:

'ಹರನ ಬಿಲ್ಲಂತೆ! ಸುಮ್ಮನಿರು, ನಾನು ಒಲಿದ ನಲ್ಲನಿಗೆ ಪರೀಕ್ಷೆ ಏಕೆ? ಜಗದೇಕ ವೀರನಿಗೆ ಪದ್ಧತಿಯ ನಿರರ್ಥಕವಾದ ತೊಡರು ಮೆಡರು ಏಕೆ? ಆ ರುದ್ರ ಚಾಪವು ತುಂಡಾಗಿ ಮುರಿಯಲಿ!'

ಅವಳು ಆ ಧನುಸ್ಸು ಅಂದಿನವರೆಗೆ ಬೇರೆ ಅಪ್ರಯೋಜಕ ರಾಜರಿಂದ ಮತ್ತು ಲಂಕೇಶನಿಂದ ದಶರಥ ಪುತ್ರನಿಗಾಗಿ ಕಾಯ್ದಿತ್ತು ಎಂಬುದನ್ನು ಮರೆತುಬಿಟ್ಟಳು.

ಹೃತ್ ಪದ್ಮದಿಂದೆ ಭೂಜಾತೆ ಗಿರಿಜೇಶನಂ ಪೂಜಿಸಿದಳಾ ರಾತ್ರಿ, ನಿದ್ದೆ ನೈವೇದ್ಯಮಂ ನೀಡಿ.

ಹಿಂದೆ ರಾವಣನು ಬಂದಾಗ ಆ ತರುಣಿ 'ಓ ಧನುವೆ ಕಾಲಿಗೆ ಎರಗಿ ಕೈ ಮುಗಿಯುವೆ, ಬಾಲೆಯನ್ನು ಕಾಪಾಡು. ಮುರಿಯದಿರು; ಬಾಗದಿರು; ಸುರಮೇರು

ಪರ್ವತದಷ್ಟು ಭಾರದಿಂದ ದೈತ್ಯನು ಎತ್ತಲಾಗದ ರೀತಿಯಲ್ಲಿ ಭಾರಗೊಂಡು ಅಬಲೆಯನ್ನು ಕಾಪಾಡು'. ಎಂದು ಬೇಡಿಕೊಂಡಿದ್ದಳು. ಅವಳು ಇಂದು 'ಓ ಧನುವೆ, ಹಗುರಾಗು ಗರಿಯಂತೆ; ಬಾಗು ಬಳ್ಳಿಯ ರೀತಿ; ರಾಮನಿಗೆ ಮುರಿದು ಬೀಳು!' ಎಂದು ಬಗೆಬಗೆಯಾಗಿ ಪ್ರಾರ್ಥಿಸಿಕೊಂಡಳು. ನಿಂದಾಸ್ತುತಿಗಳೆಲ್ಲವೂ ಸಮಯವರ್ತಿಗಳಲ್ಲವೆ?

ರಾಮನ ಬಲಕ್ಕೆ ತನ್ನ ಪ್ರೇಮದ ಬಲವನ್ನು ನೀಡಲೆಂದು ಸೀತೆಯು ವ್ರತಧಾರಿಯಾದಳು. ಆ ರಾತ್ರಿ ತನ್ನ ಹೃದಯ ಕಮಲದಿಂದ ಗಿರಿಜೇಶನನ್ನು ಪೂಜಿಸಿ, ನಿದ್ರೆಯ ನೈವೇದ್ಯವನ್ನು ನೀಡಿದಳು.

ಪೂರ್ವದಿಕ್ಕಿನಲ್ಲಿ ಮುಂಬೆಳಗು ಪಲ್ಲವಿಸಿತು. ಯಜ್ಞಶಾಲೆಯಲ್ಲಿ ಜನರು ನೆರೆದರು. ತನ್ನ ಸುತನ ಏಳಿಗೆಗಾಗಿ ತಾನು ಕಾರಣವಾಗುವ ಸಾಹಸವನ್ನು ನೋಡುವ ವಾತ್ಸಲ್ಯದ ಉದ್ವೇಗದಿಂದ ಅರುಣಮುಖಿಯಾಗಿ ಸೂರ್ಯನು ಮೂಡಲ ಬೆಟ್ಟದ ಮುಡಿಯ ಕೋಡಿನಲ್ಲಿ ಮೈದೋರಿದನು.

ಭೀಮ ಭಯಂಕರವಾದ ಧನುಸ್ಸನ್ನು ಬಹುಮಂದಿ ಬಲಶಾಲಿಗಳು ತಿಣುಕುತ್ತ ತಂದಿಟ್ಟರು. ಎಳೆಯ ಸೂರ್ಯನ ಕಿರಣದ ಅರುಣ ತಾಪದಿಂದ ಅದರ ಭೀಮ ಭೀಷಣತೆ ಪ್ರಕಾಶಿಸಿತು.

ಗುಂಪುಗೂಡಿದ್ದ ಮಹಿಳಾ ಜನದ ಮಧ್ಯೆ ತರುಣಿಯರೊಡನೆ ಸೀತೆಯು – ಚಿತ್ತದ ಉದ್ವೇಗ ಶೂಲದ ಮೇಲೆಯೆಂಬಂತೆ ಕುಳಿತಿದ್ದಳು. ತನ್ನ ಮನದನ್ನ ರಾಘವನ ವಿಜಯ ವಿಷಯದಲ್ಲಿ ಶಂಕೆ ಭರವಸೆಗಳ ಉಯ್ಯಾಲೆಯಲ್ಲಿ ತೂಗುತ್ತಿದ್ದ ಅವಳಿಗೆ ಎದೆ ಬಲವಾಗಿ ನಡುಗಿತು. ನೋಡುತ್ತಿರಲು ಕೌಶಿಕನ ಪಕ್ಕದಿಂದ ಯಜ್ಞಧೂಮ ಮುಖದಿಂದ ಬೆಂಕಿಯ ಜ್ವಾಲೆ ಏಳುವಂತೆ ರಘುರಾಮನು ಎದ್ದನು.

ನಯನಾಭಿರಾಮನನ್ನು ಕಂಡೊಡನೆ ಘೇ ಉಘೇ ಎಂದು ಹೇಳುತ್ತ ಜನ ಕೈ ಚಪ್ಪಾಳೆ ತಟ್ಟಿದರು. ಮರಗಳು ದಟ್ಟವಾಗಿ ಬೆಳೆದು ಕಾಡಾದ ಎರಡು ದಡಗಳ ನಡುವೆ ತುಂಬು ಹೊಳೆಯು ಮುಂದುವರಿಯುವಂತೆ; ರಾಮನು ಮನೋಹರ ಗಾಂಭೀರ್ಯದಲ್ಲಿ ಹರಧನುಸ್ಸಿನ ಕಡೆಗೆ ನಡೆದನು. ಆ ಸೌಮ್ಯನನ್ನು ಕಂಡು ಮುದುಕರ ಮನಸ್ಸು ಮರುಗಿತು. ತಾಯಂದಿರ ಎದೆ ಕರಗಿತು. ಶಿವನ ಕೋದಂಡದ ಬಳಿಗೆ ಸಾಗುವ ಲಲಿತರಾಮನ ಬಾಲಮೂರ್ತಿಯನ್ನು ನೋಡಿ ಲಲನೆಯರು ಸೊಬಗನ್ನು ಆಲಂಗಿಸುವಂತೆ; ಅಶುಭವನ್ನು ಪರಿಹರಿಸುವಂತೆ ಕಣ್ಣುಗಳಿಂದ ಅಪ್ಪಿಕೊಂಡರು. 'ಹಾ ಧನುವೆಲ್ಲಿ? ಶಿಶುವೆಲ್ಲಿ ? ಸಿಡಿಲೆತ್ತ? ಹೂವೆತ್ತ? ಭಯಂಕರವಾದ ಸರ್ಪವನ್ನು ಜಿಂಕೆಯ ಶಿಶು ಕೊಂಬಿನಿಂದ ತಿವಿದು ಕೊಲ್ಲಲು ಸಾಧ್ಯವೆ? ಗೆಲ್ಲಲಾಗುತ್ತದೆಯೆ? ಬದುಕುವುದೆ? ಹಾ' ಎಂದು ಹೇಳುತ್ತ ಅವರ ಹೆಂಗರುಳು ಕುದಿಯಿತು.

ನೆರೆದಿದ್ದ ಸಭೆಯ ಜನರು ಭೈರವ ಮುಹೂರ್ತವನ್ನು ಸರ್ವ ಇಂದ್ರಿಯಗಳಿಂದ, ಚಿತ್ತದಿಂದ, ಆತ್ಮದಿಂದ ಸಮೀಕ್ಷೆಮಾಡಿ ನಿಶ್ಯಬ್ದತೆಯ ಕಡಲಿನಲ್ಲಿ ಮುಳುಗಿ ಕೆತ್ತಿ ಬರೆದ ಬಣ್ಣದ ಚಿತ್ರದಂತಿದ್ದರು. ಶಾಂತಿ ಸ್ಥೈರ್ಯ ಧೈರ್ಯನಿಧಿಯಾದ ಶ್ರೀರಾಮನು ಆ ಧನುಸ್ಸಿನ ಬಳಿ ನಿಂತನು. ತನ್ನ ಶಕ್ತಿ ಸಾಮರ್ಥ್ಯವನ್ನು ಅದರ ಶಕ್ತಿಗೆ ತೂಗಿ ನೋಡುವಂತೆ; ಧನುಸ್ಸಿನ ಮಹಾಗಾತ್ರವನ್ನು ಅಡಿಯಿಂದ ಮುಡಿಯವರೆಗೆ ದೃಷ್ಟಿಸಿದನು.

ಮುಖದಲ್ಲಿ ಕಿರುನಗೆಯ ಹೂ ಸುಳಿಯೊಂದು ಅರಳಿತು. ತಿರುಗಿ ನೆರೆದ ಸಭೆಯನ್ನು ನೋಡಿ ಒಮ್ಮೆ ಕೈ ಮುಗಿದನು. ಗುರುಜನಕ್ಕೆ ಮನಸ್ಸಿನಲ್ಲಿಯೇ ಮಣಿದು ಇನ್ನೊಮ್ಮೆ ಕೈಮುಗಿದನು. ಶಂಕರನ ಚರಣ ಪಂಕಜಗಳಿಗೆ ಮನಸ್ಸಿನಲ್ಲಿಯೇ ಪೂಜೆಯನ್ನು ಸಲ್ಲಿಸಿದನು. ತನ್ನ ಕಣ್ಣಪಕ್ಷಿಯನ್ನು, ಪೀತಾಂಬರವನ್ನು ಉಟ್ಟ ಲತಾಂಗಿಯರ ಮಧ್ಯೆ ತರತರದ ಚಿನ್ನದ ಒಡವೆಗಳ ಕಾಂತಿಯನ್ನು ಹೊರ ಚೆಲ್ಲುತ್ತಿದ್ದ–ಹಸುರು ಕಾಡಿನಲ್ಲಿ ಅಶೋಕ ಪುಷ್ಪದಂತೆ ಹೊಳೆಯುತ್ತಿದ್ದ ತನ್ನ ಮೀನಾಕ್ಷಿಯ ಕಡೆ ಅಟ್ಟಿದನು. ಮೈಥಿಲಿಯನ್ನು ನಿಧಾನವಾಗಿ ಕೋಮಲ ಕುಡಿನೋಟದಿಂದ ಈಕ್ಷಿಸಿದನು. ಅನಂತರ ಬಿಲ್ಲಿನ ಕಡೆಗೆ ತಿರುಗಿದನು. ಅದಕ್ಕೆ ಬಾಗಿ, ಹಣೆ ಚಾಚಿ ನಮಸ್ಕರಿಸಿ ಪ್ರಾಣಮಯನಾಗಿ ಎದ್ದು ನಿಂತನು.

ಹೇಳುವುದೇನು? ರವಿಕುಲದವನು ನಮಸ್ಕರಿಸಿ ಏಳುತ್ತಿರಲು–ಜಾನಕಿಯ ಕಣ್ಣಿಗೆ ಕೋದಂಡದಿಂದ ಮೂಡಿ ಮೈದೋರಿದ ಶಿವಮೂರ್ತಿ ಹಠಾತ್ತನೆ ಕಂಡಿತು! ಕಂದು ಬಣ್ಣದ ಜಡೆ ಮುಡಿಯಲ್ಲಿ ಚಂದ್ರನನ್ನು ಗಂಗೆಯನ್ನು ಧರಿಸಿದ ತ್ರಿನೇತ್ರನು ವಿಭೂತಿ ಶೋಭಿತ ದೇಹದಲ್ಲಿ ಆನೆಯ ಚರ್ಮದ ಉಡುಪಿನಿಂದಿದ್ದನು. ಅವನು ಭಯಂಕರ ತ್ರಿಶೂಲಧಾರಿಯಾಗಿದ್ದು ಕೈಎತ್ತಿ ಇಕ್ಷ್ವಾಕು ಕುಲ ಸಂಜಾತ ಶ್ರೀರಾಮನನ್ನು ಹರಿಸಿದನು. ಮಳೆಗಾಲದ ಮಿಂಚುಮೋಡದಲ್ಲಿ ಅಡಗುವಂತೆ ಧನುಸ್ಸಿನ ಮಧ್ಯದಲ್ಲಿ ಒಮ್ಮೆಗೇ ಅಡಗಿ ಮರೆಯಾದನು!

ಕರ್ಬು ಮುರಿವಂತೆ ಮುರಿದುದಾ ಹರನ ಧನು ತಾಂ ಸಿಡಿಲ ಸದ್ದೊದರಿ

ಐರಾವತವು ತನ್ನ ಒಡೆಯ ಇಂದ್ರನನ್ನು ಹೊತ್ತು ದಿಕ್ಪಾಲಕ ಪುರಗಳಿಗೆ, ವೈಕುಂಠಕ್ಕೆ, ಕೈಲಾಸಕ್ಕೆ, ಸತ್ಯಲೋಕಕ್ಕೆ ಹೋಗಿ ಅಲ್ಲಿಂದ ಹಿಂತಿರುಗಿ ಅಮರಾವತಿಗೆ ಬಂದಿತು. ಸುರವಾದ್ಯಗಳ ಧ್ವನಿಗೆ ಹೆಮ್ಮೆಯಿಂದ ಬೀಗಿತು. ಇಂದ್ರನನ್ನು ಬೀಳ್ಕೊಡುತ್ತ ವರುಣನು ಸ್ವಹಸ್ತದಿಂದ ತನ್ನ ಮೇಲೆ ಕೈಯಾಡಿಸಲಿಲ್ಲವೆ? ಅಗ್ನಿಯು ತನ್ನ ಅಂಗಳದ ಮಾವಿನ ಮರದ ಕೆಂಪಾದ ಚಿಗುರಿನ ಗೊಂಚಲನ್ನು ನೀಡಿದನಲ್ಲವೆ? ಕುಬೇರನು ನನ್ನ ಸೊಂಡಿಲುಗಳನ್ನು ನೀವಿ ಸ್ಪರ್ಶಸುಖದಿಂದ ಹಿಗ್ಗಿದನಲ್ಲವೆ? ಮಹೇಶ್ವರನು ಬೆಳ್ಳಿ ಬೆಟ್ಟದ ಮಗ್ಗುಲಿನ ಎಳೆ ಹುಲ್ಲನ್ನು ಕಿತ್ತು ಕೊಟ್ಟು, ರತ್ನ ಖಚಿತವಾದ ಉದ್ದನೆಯ ದಂತಗಳೆರಡನ್ನು ಬಣ್ಣಿಸಿದನಲ್ಲವೆ? ಎಂದುಕೊಂಡು ಅದು ಬೇರೆ ಬೇರೆಯ ಲೋಕದ

ಆಹಾರವನ್ನು ಸವಿದ ತೃಪ್ತಿಗೆ ಮನಸ್ಸು ಮೇಲಾಗಿ ತನಗೆ ಸರಿಸಮನಾದವರು ಯಾರು ಎಂಬ ಭಾವಕ್ಕೊಳಗಾಯಿತು.

ಅದು ಸಗ್ಗದೊಡೆಯನನ್ನು ಶಚಿದೇವಿಯ ಅರಮನೆಯ ಪಚ್ಚೆಯ ಬಾಗಿಲಬಳಿ ಇಳಿಸಿತು. ಚಿನ್ನದ ಸಂಕೋಲೆಯಿಂದ ಬಿಡುಗಡೆಗೊಂಡಿತು. ಸ್ವೇಚ್ಛೆಯಿಂದ ನಡೆದುಬಂದು ರತ್ನಧೂಳಿಯ ಮಳಲ ದಡದಲ್ಲಿ ಹರಿಯುವ ದೇವ ಗಂಗಾನದಿಯ ಹಾಲಿನ ತೀರ್ಥದಲ್ಲಿ ಸುಧೆಯ ತೆರೆ ದಡಕ್ಕೆ ಅಪ್ಪಳಿಸಿ ಮೊರೆಯುವಂತೆ ದುಮ್ಮಿಕ್ಕಿತು. ಹಾಲುಗಲ್ಲಿನ ಹೆಬ್ಬಂಡೆಯಿರುವ ಹಾಲಿನ ಹೊಳೆಯಲ್ಲಿ ಮೀಯಿತು. ನಂದನವನದ ಕಲ್ಪವೃಕ್ಷದ ಬಳಿಗೆ ಬಂದು ಕ್ರೀಡಾವಿನೋದದಿಂದ ಮೈ ತಿಕ್ಕಿತು. ಆಗ ಆ ದೈತ್ಯಾಕೃತಿಯ ಶಾಖೋಪಶಾಖೆಗಳಿಂದ ಕೂಡಿ ವಿಸ್ತಾರವಾದ ಬೃಹತ್ ದೇವತರು ಎಡಬಲಕ್ಕೆ ತೊನೆದಾಡಿತು. ದೇವಲೋಕದ ಪಕ್ಷಿಸಮೂಹವು ಇಂದ್ರನ ಆನೆಯ ಘೀಂಕಾರಕ್ಕೆ ಬೆಚ್ಚಿ ಗಾಬರಿಗೊಂಡವು. ಹೆಬ್ಬಳ್ಳಿಯು ಹೆಮ್ಮರದ ಮೈಗೆ ವಿಶಾಲವಾಗಿ ಹಬ್ಬಿಕೊಂಡಂತೆ, ಕಲ್ಪವೃಕ್ಷದ ಗಾತ್ರವನ್ನು ತನ್ನ ಹತ್ತು ಸೊಂಡಿಲುಗಳಿಂದ ಸುತ್ತಿತು. ಹಾಲಿನ ಬುರುಗಿನ ಬಿಳಿಯ ಅಮರ ಆನೆಯು ಸಂತೋಷದಿಂದ ಮೈಮರೆತು, ಮರವು ಬಳ್ಳಿಯಾಗಿ ಬಳುಕುವಂತೆ ಜಗ್ಗಿಸೆಳೆಯಿತು!

ರಘುಕುಲ ಆಕಾಶ ರತ್ನ ಶ್ರೀರಾಮಚಂದ್ರನು ಬಿಳಿ ಆನೆಯ ಸೊಂಡಲಿನಂತಹ ನೀಳ ತೋಳುಗಳಿಂದ ಕಲ್ಪವೃಕ್ಷ ಸಮಾನವಾದ ಧನುಸ್ಸನ್ನು ಸೀತಾಫಲದ ಬಯಕೆಯಿಂದ ಹಿಡಿದನು. ಬಿಲ್ಲು ಬಳ್ಳಿಯಂತೆ ಬಾಗಿತು. ಹೆದೆ ಏರಿಸಿದನು. ಬಾಣವನ್ನು ಹೂಡಿ ಕಿವಿಯವರೆಗೂ ಸೆಳೆದನು. ಹರಧನುಸ್ಸು ಸಿಡಿಲ ಸದ್ದೊದರಿ ಕಬ್ಬು ಮುರಿಯುವಂತೆ ಮುರಿಯಿತು. ಜಾನಕಿಯ ಸುಖದ ಕಣ್ಣುಗಳಿಂದ ಕಬ್ಬಿನ ರಸಧಾರೆ ಸೋರಿತು. ಅಲ್ಲಿ ನೆರೆದಿದ್ದ ಜನ ಸಾಗರವು ಹರ್ಷದ ಅಲೆಗಳು ಮೇಲೆ ಬೀಳುವಂತೆ 'ಘೆ' ಎಂಬ ಶಬ್ದಾನಂದವನ್ನು ಘೋಷಿಸಿತು. ತರತರದ ಪರಿಮಳದ, ವಿವಿಧ ವರ್ಣದ ಮಳೆಯ ಶೈಲಿಯಲ್ಲಿ ಹೂ ಮಳೆಯು ಬಿಡದೆ ಆಲಿಕಲ್ಲಿನಂತೆ ಸುರಿಯಿತು! ಜನಕ ಮಹಾರಾಜನಿಗೆ ಆನಂದದ ಕಣ್ಣೀರು ಹರಿಯಿತು. ತುಂಬಿ ತುಳುಕುವ ಮಧುರ ಸುಖದಿಂದ ಋಷಿಯ ಪಾದಗಳಿಗೆ ಕೃತಜ್ಞತಾ ಭಾರದಿಂದ ಬಾಗಿ ಮಣಿದನು. ಜೇನುಗೂಡನ್ನು ತೊರೆದ ಹೆಜ್ಜೇನ ಹುಳುಹಿಂಡು ದಟ್ಟವಾಗಿ ಮೊರೆಯುವಂತೆ ಜನ ಸಂದಣಿಯಿತ್ತು. ಜನಕರಾಜನು ಅವರ ನಡುವೆ ನಡೆದು ತನ್ನ ಇಷ್ಟದೇವತೆಯುನ್ನು ಆಲಂಗಿಸುವಂತೆ ರಘುಕುಲೋದ್ದೀಪನನ್ನು ಅಪ್ಪಿಕೊಂಡನು.

ರಾಮಂಗೆ ಮಾಲೆಸೂಡಿದಳೊ ಸೀತಾಕನ್ಯೆ

ಅಪ್ಸರಲ್ಲಿ ಸಂಭ್ರಮದಿಂದ ಕೂಡಿದ ಸಖಿಯರ ನಡುವೆ ಸೀತೆಯು ತಾನು ಕೈಗಳಲ್ಲಿ ವಿಜಯಮಾಲೆ ಹಿಡಿದು ಬಂದಳು. ಅವಳು ಮೋಹಿನಿಯೊ, ತ್ರಿಭುವನರತಿಯೊ,

ವೈಯಾರ ಸುಂದರಿಯೊ ಎಂಬಂತೆ; ಹಿಮ ಪರ್ವತದ ಶಿವನ ಶಿರದ ಮಾನಸ ಸರೋವರದಲ್ಲಿ ಹುಟ್ಟಿ, ವನದೇವಿಯರ ಸೇವೆಯನ್ನು ಪಡೆದು, ಮುಂದುವರಿದು ಸಾಗರವನ್ನು ಅಪ್ಪುವ ತವಕದಿಂದ ಹರಿಯುವ ಗಂಗಾದೇವಿಯ ಪ್ರವಾಹವೊ ಎಂಬಂತೆ ರಾಮ ಮನ್ಮಥನ ಸಮುದ್ರದಡಕ್ಕೆ ಹರಿದು ಬಂದಳು. ವಿವಿಧ ವಾದ್ಯಗಳ ಶ್ರುತಿಯ ಬಾಂಧವ್ಯದಲ್ಲಿ ಸುಖರಸದ ಮಧುರ ಮಂಗಳಗೀತೆ ಹೊಮ್ಮುತ್ತಿರಲು ಸೀತಾಕನ್ಯೆಯು ಶ್ರೀರಾಮಚಂದ್ರನಿಗೆ ಮಾಲೆಯನ್ನು ತೊಡಿಸಿದಳು. ಅದು ಭೂದೇವಿಯು ಸಮುದ್ರನಿಗೆ ಬೆಳ್ಳಿ ತೆರೆಗಳನ್ನು ಪೋಣಿಸಿ ಹೂದಂಡೆಯನ್ನಾಗಿಸಿ ಆಗಸ ತೊರೆಯ ಹಾರವನ್ನು ಹಾಕಿದಂತಿತ್ತು!

ವಿಶ್ವಾಮಿತ್ರ ಮುನಿವರ್ಯನು ಒಪ್ಪಿಗೆ ಸೂಚಿಸಲು ಮಿಥಿಳೇಂದ್ರನ ಆಜ್ಞೆಯಂತೆ ಆಳುಗಳು ಸಾಕೇತಪುರಿಗೆ ಹೊರಟರು. ಮೂರು ಹಗಲು ಮೂರು ರಾತ್ರಿ ನಿಲ್ಲದೆ ಪ್ರಯಾಣ ಮಾಡಿದರು. ಸುತರ ಆಗಮ ಚಿಂತೆ ಆವರಿಸಿದ್ದ ದಶರಥನಿಗೆ ಶುಭದ ವಾರ್ತೆಯನ್ನು ವಿಜ್ಞಾಪಿಸಿಕೊಂಡರು. ಅಯೋಧ್ಯೆಯು ಸಂತೋಷದಿಂದ ಕಡಲು ಉಕ್ಕಿದಂತೆ ಉಕ್ಕಿತು. ಕೌಸಲ್ಯೆಯ ಮಗನ ಅಭ್ಯುದಯದ ಸಂತಸಕ್ಕೆ ಮೇರೆ ಇಲ್ಲದಂತಾಯಿತು. ಮನಸ್ಸಿನಲ್ಲಿ ಪ್ರೀತಿ, ಸಂಭ್ರಮವು ಹೆಚ್ಚಾಗಲು ಮಗನ ಮಂಗಳಮೂರ್ತಿಯ ಪಕ್ಕದಲ್ಲಿ ಚೆಲುವಿನ ಒಲವಿನ ಸೊಸೆಯ ಗುಣಶೀಲರೂಪವನ್ನು ನೆನೆದಳು!

ದಶರಥನು ಸೈನ್ಯ ಸಮೇತನಾಗಿ ಪರಿವಾರದೊಡನೆ, ಮಕ್ಕಳು ಮಹಾರಾಣಿಯರೊಡನೆ, ಗುರು ಮಂತ್ರಿ ಬಂಧು–ಬಾಂಧವ್ಯ ಮುಖ್ಯ ಪೌರರೊಡನೆ ಹೊರಟನು. ಅವನು ನಾಲ್ಕು ದಿನಗಳಲ್ಲಿ ಸೂರ್ಯನು ಮುಳುಗುವಷ್ಟರಲ್ಲಿ ಮಿಥಿಳೆಯನ್ನು ತಲುಪಿದನು. ಬೀಗರನ್ನು ಘನತೆಯಿಂದ ಬರಮಾಡಿಕೊಂಡು ಮಿಥಿಳೆ ಸಂಭ್ರಮಿಸಿತು.

ಇಕ್ಷ್ವಾಕು ಎಂಬ ಸೂರ್ಯವಂಶದ ಚಕ್ರವರ್ತಿಯ ಮಗ ನಿಮಿ. ಅವನು ವಿದೇಹ ದೇಶದ ರಾಜ. ಅವನ ವಂಶ ನಿಮಿ. ಆ ವಂಶಜರ ಜೊತೆಗೆ ಮದುವೆ ಸಂಬಂಧವು ರವಿಕುಲದವರ ಹಣೆಗೆ ತಿಲಕವಿಟ್ಟಂತಾಯಿತು ಎಂಬಂತೆ ಸೀತಾರಾಮರಿಗೆ ವಿವಾಹ ಸಂಭವಿಸಿತು. ಭೂಮಿ ನಲಿಯಿತು. ದೇಶ ದೇಶದ ಜನರು ಕಲ್ಲುಸಕ್ಕರೆಗೆ ಜೇನು ಬೆರೆತಂತೆ ಸಂಭ್ರಮಕೆ ಸಂಭ್ರಮವೆ ಸಂಘಟಿಸಿತು ಎಂದು ಸಂತೋಷಪಟ್ಟರು.

ಜನಕ ಮಹಾರಾಜನ ಹೃದಯದ ಆಶಯಕ್ಕೆ ಮನಸ್ಸುಕೊಟ್ಟು ಲಕ್ಷ್ಮಣನು ದುಂಬಿಯು ಸುಗ್ಗಿಮೊಗ್ಗನ್ನು ಅಪ್ಪುವಂತೆ ಊರ್ಮಿಳೆಯನ್ನು ಒಪ್ಪಿಕೊಂಡನು. ಶತ್ರುಘ್ನನಿಗೆ ಶ್ರುತಕೀರ್ತಿ ಪ್ರೀತಿಯ ಹೆಂಡತಿಯಾದಳು. ಕೈಕೆಯು ತನ್ನ ಸುಂದರ ಮಗ ಭರತನಿಗೆ ಮಾಂಡವಿಯನ್ನು ಪಡೆದಳು. ಶುಭ ಮಂಗಳ ಕಾರ್ಯದಲ್ಲಿ ಏಳು ಹಗಲು, ಏಳು ರಾತ್ರಿಗಳು ಸುರಲೋಕವನ್ನು ಸೂರೆಗೊಳ್ಳುವಂತೆ ಸತ್ಕಾರ ನಡೆಯಿತು. ಅನಂತರ ಮಿಥಿಳೆಯಿಂದ ಸಾಕೇತಪುರಕ್ಕೆ ಮದುವೆಯ ದಿಬ್ಬಣದ ಮೆರವಣಿಗೆ ನಡೆಯಿತು.

ಈರ್ವರು ಮಹಾರಾಜರ ಸಿರಿ ಒಂದುಗೂಡಿರಲು ಆ ಮರುದಿಬ್ಬಣದ ಮೆರವಣಿಗೆಯ ಜಾತ್ರೆಯು-ಶಿವನ ಸಖ ಕುಬೇರ ಮತ್ತು ಇಂದ್ರರು ಕೈ ಜೋಡಿಸಿಕೊಂಡು ಅಮರಾವತಿಯಿಂದ ಅಲಕಾನಗರಕ್ಕೆ ನಡೆಯುವಂತಿತ್ತು. ಜನಕ ಮಹಾರಾಜನು ನೀಡಿದ ರೇಷ್ಮೆ ವಸ್ತ್ರ ತೇರು ಆನೆ ರತ್ನಕಂಬಳಿ ಗೋವು ಕಾಲಾಳು ಮುತ್ತು ಹವಳ ಸೇವಕರನ್ನೊಳಗೊಂಡ ತರತರಹದ ಸಿರಿಯನ್ನು ಬಳುವಳಿಯಾಗಿ ಅವರು ಪಡೆದರು. ಅನಂತರ ಮರಳಿ ಮಿಥಿಳಾಪುರಿಗೆ ಬೀಳ್ಕೊಟ್ಟರು.

ರಾಮಂಗೆ ತಾಂ ಮೆಚ್ಚುಗೊಟ್ಟನು ವಿಷ್ಣುಚಾಪಮಂ ಜಮದಗ್ನಿಸೂನು

ರಾಜಮಾರ್ಗವನ್ನು ಹಿಡಿದು ಮಂಗಳವರೆಯ ನಾದಕ್ಕೆ ಮದುವೆಯ ದೊಡ್ಡ ಮೆರವಣಿಗೆ ಸಾಗುತ್ತಿತ್ತು. ಅದಕ್ಕೆ ತಕ್ಷಣ ವಿನಾಶ ಸೂಚಕ ವಸ್ತುಗಳ ಸಮೂಹ ಕಂಡಿತು. ಶಕುನದ ಹಕ್ಕಿಗಳು ದುಶ್ಯಕುನವನ್ನು ಚೀರಿದುವು. ಜನಗಳಿಗೆ ಕಣ್ಣು ಕಂಪಿಸಿತು. ಕುದುರೆಗಳು ಅಳುವ ರೀತಿಯಲ್ಲಿ ಕೆನೆದವು. ದಶರಥನು ಬೆದರುತ್ತಿರಲು ಬಿರುಸಾಗಿ ಗಾಳಿ ಬೀಸತೊಡಗಿತು. ಭೂಮಿ ಅದುರಿತು. ಲಕ್ಷಗಟ್ಟಲೆ ಹಣ್ಣುಹಿಡಿದ ಮರಗಳು ಭೂಮಿಗೆ ಉರುಳಿದವು. ಕಪ್ಪಾದ ಮೋಡ ರಾಹುವು ರವಿಯನ್ನು ನುಂಗಿತು. ಕತ್ತಲೆಯ ಕಾಡಿಗೆಯ ಮೆತ್ತಿನಿಂದ ನಾಲ್ಕು ದಿಕ್ಕುಗಳು ಕಾಣದಾದವು. ಸಿಡಿಲು ಮಿಂಚುಗಳ ದಟ್ಟವಾದ ಕಪ್ಪುಧೂಳಿಯು ವಿಶ್ವವನ್ನು ವ್ಯಾಪಿಸಿಕೊಂಡು ರೋಷ ಭೀಷಣವಾಯಿತು. ಸೇನೆಯು ಸಮ್ಮೋಹ ಭಸ್ಮ ಎರಚಿದಂತೆ ಮೂರ್ಛೆಗೊಳಗಾಯಿತು.

ದಶರಥ ದೊರೆಯ ಕಣ್ಣಿಗೆ ಅದ್ಭುತವಾದುದೊಂದು ಕಂಡಿತು. ಕತ್ತಲೆಗೆ ಕಾಯ ಮೂಡಿದಂತೆ ಭೃಗುವಂಶಿ ಜಮದಗ್ನಿ ತನಯನ ಭೈರವಮೂರ್ತಿ ಮುಂದೆ ಮೂಡಿತು. ನೋಡಿದವರ ಬದುಕು ಆತಂಕಕ್ಕೊಳಗಾಯಿತು. ಅವನ ಜಡೆಗಟ್ಟಿದ ಕೂದಲಿನ ಬೊಂತೆಯು ಪ್ರಳಯಾಗ್ನಿಯಲ್ಲಿ ಮುಳುಗಿ ಹದಗೊಂಡು ಕಾಲಸರ್ಪ ಸಂಕುಲವು ಜೋಲುವಂತೆ ಜೋಲುತ್ತಿದ್ದವು. ಹೆಗಲಿನಲ್ಲಿ ಕೆಂಗೊಡಲಿಯು ಭಯಂಕರತೆಯನ್ನುಂಟು ಮಾಡುತ್ತಿತ್ತು. ಕೈಗಳಲ್ಲಿ ವಿಷ್ಣು ಕೋದಂಡವು ಬಾಣಗಳೊಡನೆ ಕಣ್ಣಿಗೆ ಇರಿಯುವಂತೆ ಮಿಂಚುತ್ತಿದ್ದವು.

ಇಡೀ ಸೈನ್ಯವು ಬೆಚ್ಚಿತು. ಆಗ ಶ್ರೀರಾಮನೊಬ್ಬನೇ ತನ್ನ ಕಲ್ಯಾಣ ತೇರಿನಿಂದ ಇಳಿದನು. ಶರತ್ಕಾಲದ ಪ್ರಸನ್ನತೆಯಂತೆ ಉಗ್ರ ಪರಶುರಾಮನ ಕಡೆಗೆ ನಡೆದನು. ಗಾಳಿ ಕುಂದಿತು. ತಕ್ಷಣ ಮೋಡ ಹರಿದುಹೋಯಿತು. ಪರುಶುರಾಮನ ಮುಖದಲ್ಲಿ ಮುಗುಳುನಗೆ ಅರಳಿತು! ಲೋಕದಲ್ಲಿ ಶಿಶುತನ ಸರಳತೆ ಶಾಂತಿ ಸೌಂದರ್ಯಗಳಿಗೆ ಸೋಲದವರುಂಟೆ ಎಂಬಂತೆ ರಾಮನನ್ನು ಮೆಚ್ಚಿದನು. ಅವನಿಗೆ ವಿಷ್ಣು ಚಾಪವನ್ನು ನೀಡಿದನು. ಲೋಕವು ನಿನ್ನಿಂದ ಯಾವಾಗಲೂ ನಿರ್ವಿಘ್ನವಾಗಿರಲಿ ಎಂದು ಹರಸಿದನು.

ಸುಡಲೆಂದು ಕಿಡಿ ತಾನು ಬರಲು, ಹಿಡಿದರೆ ಅದೇ ಮಾಣಿಕ್ಯವಾಗಿ ಬಡತನವು ಹೋಗುವಂತೆ; ಪರಶುರಾಮನು ಆಶೀರ್ವದಿಸಿ ಹೋದನು.

ದಶರಥನು ಹಿರಿಯ ಮಗನನ್ನು ತಬ್ಬಿಕೊಂಡು ತಲೆಯನ್ನು ಮೂಸಿದನು. ಮನ ಸಂತೋಷದಿಂದ ಕಂಬನಿದುಂಬಿತು. ಒಸಗೆಯು ಮುಂದೆ ಸಾಕೇತಪುರಕ್ಕೆ ನಡೆಯಿತು. ಅಲ್ಲಿ ಪನ್ನೀರಿನ ದ್ರವದಿಂದ ತಂಪಾಗಿದ್ದ ನೆಲವು ಮಧುರ ಕಂಪಿನ ಗಾಳಿ ಸೂಸುತ್ತಿತ್ತು. ಬೀದಿಗಳು ಹಸಿರು ತೋರಣಗಳಿಂದ ಸಿಂಗಾರಗೊಂಡಿದ್ದವು. ಎಲ್ಲೆಲ್ಲಿಯೂ ಜನರು ಕಿಕ್ಕಿರಿದು ನೆರೆದಿದ್ದರು. ಚಂದ್ರೋದಯ ಸಮಯದಲ್ಲಿ ನದಿಯು ಸಮುದ್ರವನ್ನು ಆಲಂಗಿಸುವಂತೆ ಅವರು ಮಂಗಳವಾದ್ಯ ಮತ್ತು ಸುಸ್ವರಗಳ ಸಮೇತ ವಧೂವರರನ್ನು ಪ್ರೀತಿಗೌರವಗಳಿಂದ ಸ್ವಾಗತಿಸುತ್ತ ಎದುರುಗೊಂಡರು.

❑



~~~~~~~~~~~~~~~~~~~~~~ ಸಂಚಿಕೆ – ೩ ~~~~~~~~~~~~~~~~~~~~~~

ಮಮತೆಯ ಸುಳಿ ಮಂಥರೆ

ಬದುಕಿನಲ್ಲಿ ಹೆಣ್ಣು ಪ್ರೀತಿಸಿದ ಗಂಡನಿರಲು, ಗಂಡು ಪ್ರೀತಿಸಿದ ಹೆಂಡತಿಯಿರಲು ಅಂಥ ಸಿರಿಬಾಳಿಗೆ, ಸಿಂಗಾರ ಸೊಗಸಿಗೆ ಸಮಾನವಾದುದು ಬೇರೆ ಇದೆಯೆ? ಓ ಲಲಿತೆ, ಮದನ ಮೋಹನರತಿಯೆ, ನಿನ್ನ ಆದಿ ತಾರುಣ್ಯಕಾಲದ ಆರಂಭವನ್ನು ಹೊಸತು ಎಂದು, ಹೊಸ ಪ್ರೀತಿಯ ಆಟಕ್ಕೆ ಉಚಿತವೆಂದು – ನೀನು ಮದನನ ತುಟಿಗೆ ಮುತ್ತನ್ನು ಒತ್ತಿದೆ. ಆ ಇಂಪೇ ತಾನು ಯಾವಾಗಲೂ ಮರಮರಳಿ ಹೂವಿನಂತೆ ಅರಳುತ್ತ ಸಕಲ ನವದಂಪತಿಗಳಿಗೆ ಶಾಶ್ವತ ಸೊಗಸನ್ನು ನೀಡುತ್ತದಲ್ಲವೆ?
~~~~~~~~~~~~~~~~~~~~~~

ಶ್ರೀರಾಮಪ್ರೇಮದೊಳೆ ಕಂಡಳ್ ಜನಕಜಾತೆ ಜೀವನದ ಪರಮ ಪುರುಷಾರ್ಥಮಂ

ತೇನೆಹಕ್ಕಿಯು ಬೆಳುದಿಂಗಳಿಗೆ ಒಲಿಯುವಂತೆ ಸೀತಾಕಾಂತೆಯು ತನ್ನ ರಮಣನ ಆನಂದಕ್ಕೆ ತನ್ನ ಎಲ್ಲವನ್ನೂ ನಲಿಯುತ್ತ ನೈವೇದ್ಯವಾಗಿ ನೀಡಿದಳು, ತನ್ನತನವನ್ನು ಶೂನ್ಯವಾಗಿಸಿಕೊಂಡಳು. ತಾನು ಒಲಿದವನಿಗೆ, ಪ್ರಾಣೇಶ್ವರನಿಗೆ, ಇಷ್ಟಮೂರ್ತಿಯ ಆದರ್ಶಕ್ಕೆ ಪ್ರಾಣಾರ್ಪಣೆಯನ್ನು ಮಾಡುವ ಸೊಗಸಿಗಿಂತ ಮಿಗಿಲಾದ ಸೊಗಸು ತಾನಿರುವುದೆ? ಹೋಗು! ಸ್ವರ್ಗಕ್ಕೇನು ಬೇರೆ ಕೋಡಿದೆ? ಜನಕಜಾತೆಯು ಶ್ರೀರಾಮನ ಪ್ರೇಮದಲ್ಲಿ ಜೀವನದ ಪರಮ ಪುರುಷಾರ್ಥವನ್ನು ಮತ್ತು ಅಖಿಲ ಸೃಷ್ಟಿಲೀಲಾ ಮಹೋದ್ದೇಶವನ್ನು ಕಂಡಳು. ಇನಿಯನ ಚೆಲುವಿನೊಡನೆ ಕೂಡದ ಹೆಣ್ಣಿಗೆ ಪ್ರಕೃತಿ ಸೌಂದರ್ಯವು ವ್ಯರ್ಥ!

ಸೂರ್ಯೋದಯದಲ್ಲಿ ತನ್ನ ಇನಿಯನ ಮುಖಸರೋವರ ಜಲದಲ್ಲಿ ತಾವರೆ ಅರುಳುತ್ತಿದೆಯಲ್ಲವೆ? ಆ ತಾವರೆ ಎಸಳ ನಡುವೆ ಮೀನುಗಳು ಚಲಿಸುತ್ತಿವೆಯಲ್ಲವೆ? ಕರಿದುಂಬಿಗಳ ಹಿಂಡು ಝೇಂಕಾರ ಮಾಡದೆ ತವಕಿಸುತ್ತಿವೆಯಲ್ಲವೆ? ತ್ರಿಭುವನ ಸೌಂದರ್ಯಕ್ಕೆ ಆ ಮುಖವೆ ಕನ್ನಡಿಯಲ್ಲವೆ? ಎಂಬ ಭಾವನೆಯಲ್ಲಿ ವೈದೇಹಿಯಿದ್ದಳು. ರಾಮಚಂದ್ರನು ಪತ್ನಿಯ ಜೀವ ದೀವಿಗೆಗೆ ತೈಲವು ಕಾಂತಿಯು ತಾನಾಗಿ, ತಾಯಿತಂದೆಗೆ ಬಾಳಿನ ದೋಣಿಯಾಗಿ ರಸ ಪ್ರವಾಹದಲ್ಲಿ ತೇಲುತ್ತಿದ್ದನು. ಭೂಜಾತೆಯು ಚೆಲುವು ಹೂವಿನ ಮಕರಂದ ತುಂಬಿದ ಬಟ್ಟಲಂತಿದ್ದಳು. ಅವಳನ್ನು ತುಟಿಯಿಂದ ಆತ್ಮತೃಪ್ತಿಯಾಗುವವರೆಗೂ ಹೀರಿದನು. ಶೃಂಗಾರಸಾರ ಸಂಪೂರ್ಣೆಯನ್ನು ಕಣ್ಣು ಮಿಟುಕಿಸದೆ ನೋಡಿದನು.

ಹಿತಕರವೂ ಸೌಮ್ಯವೂ ಆದ ದಂತ ಕಾಂತಿಯ ಸುಂದರ ಶರೀರದ ಕಾಂತೆಯು, ಸುಗಂಧಭರಿತ ಬಿಸಿನೀರಿನಲ್ಲಿ ಮಿಂದು ಕೆಂಪೇರಿದಳು. ಬಾನಿನ ಬಣ್ಣದ ತಿಳಿಯ ನೀಲಿಯ ಶುಭ್ರವಾದ ಸೀರೆಯನ್ನು ನಿರಿಹಿಡಿದು ಉಟ್ಟಳು. ಹೊರ ಆಚ್ಛಾದನೆಯ ಎಲ್ಲೆಯನ್ನು ದಾಟಿ ಮುಡಿ ಸೋರುವಂತೆ, ಕಡು ಕಪ್ಪಾದ ತುರುಬನ್ನು ಬಿಚ್ಚಿ ಹರಡಿ ತೂಗಾಡುತ್ತ ಶೋಭಿಸುತ್ತಿದ್ದಳು. ಅವಳನ್ನು ಕಣ್ಣುರೆಪ್ಪೆ ಬಡಿಯದೆ ನೋಡುತ್ತ ಸೌಂದರ್ಯ ಸುಖದ ಸಮಾಧಿ ಪಡೆದವನಂತಾದನು!

ಅವಳನ್ನು ನೋಡಿ ಕಣ್ತುಂಬಿ ನಲಿದನು. ದನಿಯನ್ನು ಕೇಳಿ ಸವಿಗೊಂಡನು. ಪುಳಕಗೊಳ್ಳುವ ಎದೆಯ ಸ್ಪರ್ಶಕ್ಕೆ ಮೈಮರೆತನು. ಒಡವೆಗಳಾದ ಹೊನ್ನಿನ ಕಾಲ್ಗೆಜ್ಜೆ, ಕಾಲು ಕಡಗ, ಬಳೆಯ ಕಿಣಿ ಕಿಣಿ ದನಿಯನ್ನು ಮತ್ತೆ ಮತ್ತೆ ಆಲಿಸಿದನು. ಆ ನಾದವನ್ನು ಅಪೇಕ್ಷಿಸುತ್ತ, ಚಾತಕ ಪಕ್ಷಿಯು ಮಳೆಗೆ ಹಾರುವಂತೆ ಹಾರಿದನು.

ಆ ರಾಮನು ಧರಣಿಜೆಯ ಪುಣ್ಯಾತ್ಮವನ್ನು ಪ್ರೀತಿಸಿದಂತೆ, ಅವಳ ಸುಂದರ ಶರೀರವನ್ನು ಪ್ರೀತಿಸಿದನು. ಹಾಗಿದ್ದರೆ ಹೇಳಿ, ರಸದ ದೃಷ್ಟಿಯು ದೇಹ ಆತ್ಮ ಭೇದವನ್ನು

ಮಿಥ್ಯೆಗೊಳಿಸದೆ? ಶರೀರಕ್ಕೆ ಎರಡು ಕಣ್ಣುಗಳಿರುವ ರೀತಿಯಲ್ಲಿ ದ್ವೈತವೆಂಬುದು ಸೀತಾರಾಮರೊಳಗೆ ಅದ್ವೈತಿ ತಾನಾಗಿತ್ತು! ಕಣ್ಣುಗಳು ಎರಡಾದರೇನು ದೃಷ್ಟಿ ಒಂದೇ ಅಲ್ಲವೆ? ಮೈಗಳು ಎರಡಾದರೇನು ಒಲಿದವರಿಗೆ ಬಾಳು ಒಂದೇ ಅಲ್ಲವೆ?

ಭೋಂಕನೆಯೆ ಮಂಥರೆಯ ಮಮತೆಯ ಸುಳಿಗೆ ಸಿಲ್ಕಿ ರಸದೋಡಮಳ್ದುದಯ್

ಸೀತಾರಾಮರು ಹೀಗೆ ಸೊಗದ ಹಾಲುಜೇನಿನಲ್ಲಿ ತೇಲುತ್ತ ಬಾಳಿನ ದೋಣಿಯಲ್ಲಿದ್ದರು. ಆ ರಸದೋಡು ತಟ್ಟನೆ ಮಂಥರೆಯ ಮಮತೆಯ ಸುಳಿಗೆ ಸಿಕ್ಕಿ ನೆನೆದು ಮುಳುಗಿ ಹೋಯಿತು. ಸುಖನೌಕೆ ಮುಳುಗಲು, ಅದನ್ನು ಮುಳುಗಿಸಿದ ಸುಳಿಯೆ ಸುಂಟರಗಾಳಿಯಾಗಿ ಸುಖಿಗಳಾದ ಜಾನಕಿ ಮತ್ತು ರಘುರಾಮರನ್ನು ತಿರ್ರನೆ ತಿರುಗಿಸಿ ಬಾನಿಗೆ ಬೀಸಿತು. ಕಡೆಯದೆಯೆ ಬೆಣ್ಣೆ ಹೊಮ್ಮುತ್ತದೆಯೆ? ಆ ತ್ರೇತಾ ಸಮುದ್ರವನ್ನು ಮಂಥರೆಯ ವಾಸುಕಿ ಮಹಾಮಮತೆಯು ಕೈಕೆ ಎಂಬ ಮಂದರ ಪರ್ವತದಿಂದ ಕಡೆಯದಿದ್ದರೆ ಮಹಾರತ್ನಗಳು ಮೂಡುತ್ತಿದ್ದುವೆ ಹೇಳು?

ಒಂದು ರಾತ್ರಿ ನಕ್ಷತ್ರಗಳು ತುಂಬಿದ ಆಕಾಶದಲ್ಲಿ ಕೂದಲುಗಳಿಂದ ಕೂಡಿ ದೀರ್ಘಬಾಲವನ್ನು ಹೊಂದಿದ ಮಹತ್ತಾದ ತೇಜಃಪುಂಜ ಉಲ್ಕೆಯನ್ನು ಅಯೋಧ್ಯೆಯ ಜನ ನೋಡಿದರು. ವಿಸ್ಮಯ, ಭಯ, ಆಶ್ಚರ್ಯಗಳಿಂದ ಹೆದರಿದರು. ಅದು ಅಮಾವಾಸ್ಯೆಯ ಆಗಸದ ಕಪ್ಪು ಬಣ್ಣದ ಮಣಿಯ ನೆಲಗಟ್ಟಿನಲ್ಲಿ ಕೆದರಿದ ಹೂಗಳನ್ನು ಗುಡಿಸಲೆಂದು ರಾತ್ರಿಯ ಹೆಣ್ಣು ಕೈನಲ್ಲಿ ಹಿಡಿದ ಉದ್ದವಾಗಿ ಇಳಿಬಿದ್ದ ಕೆಂಗೆಂಡದ ಉರಿಯ ಪೊರಕೆಯೊ; ಹೊತ್ತು ಇಳಿಯಲು, ಕತ್ತಲೆಯ ದಾರಿಯಲ್ಲಿ ನಡೆಯಲು ಅನಂತ ಯಾಂತ್ರಿಕನಾದ ಕಾಲಪುರುಷನು ಕೈಯಲ್ಲಿ ಹಿಡಿದ ಪಂಜೊ ಹೇಳು ಎಂಬಂತೆ ರಕ್ತದ ಉರಿಕೂದಲನ್ನು ಬೀಸಿ ಪ್ರಕಾಶಿಸುತ್ತಿತ್ತು. ಆ ಭೀಷ್ಮಭೀಷಣ ಧೂಮಕೇತುವಿಗೆ ಜನ ಬೆಚ್ಚಿದರು. ಕೋಸಲಕ್ಕೆ ಕೇಡುಂಟಾಗುವುದು ಎಂದು ನರಳಿದರು.

ದೊರೆ ದಶರಥನು ಆ ಭಯಂಕರ ಗಗನ ಶಕುನವನ್ನು ನೋಡಿದನು. ಅದು ತನ್ನ ಕೊನೆಯ ದೈವಸಂಕಲ್ಪದ ಲಿಖಿತ ಎಂದು ತಿಳಿದನು. ಹಿರಿಯನಾದ ರಾಮನಿಗೆ ಪಟ್ಟವನ್ನು ಕಟ್ಟಿ ತಾನು ಪಾರಲೌಕಿಕದ ಕಡೆಗೆ ತನ್ನ ಆತ್ಮವನ್ನು ತಿರುಗಿಸಲು ಇಚ್ಛೆಸಿದನು. ಸಚಿವರನ್ನು, ಗುರುಗಳನ್ನು, ಪ್ರಜೆಗಳನ್ನು ಕರೆದು ತನ್ನ ಇಷ್ಟವನ್ನು ಈ ರೀತಿ ತಿಳಿಸಿದನು:

ರಾಮನಲ್ಲದೆ ಬೇರೆ ನನ್ನೀ ಕಿರೀಟಮಂ ಧರಿಸುವ ಸಮರ್ಥರಂ ಕಾಣೆನಾಂ

'ಕೋಸಲ ಹಿತ ಕ್ಷೇಮ ಚಿಂತಕರೆ, ಹೋದರಾತ್ರಿ ಆಕಾಶದಲ್ಲಿ ನಕ್ಷತ್ರ ಲೇಖನಿಯ ದಿವ್ಯಾಗ್ನಿ ಲಿಖಿತ ವಿಧಿ ಬರಹವನ್ನು ಓದಿದೆನು. ನೈಸರ್ಗಿಕವಾದ ಘಟನೆಗಳಿಗೆ ಪ್ರಕೃತಿ ಕಾರಣವಾದಂತೆ ದೇವ ಕಾರಣ ಇರುವುದೆಂದು ಗುರುವು ನನಗೆ ಕಲಿಸಿದ್ದಾನೆ. ರವಿಕುಲನೃಪರ ಸಾಮ್ರಾಜ್ಯಭಾರವನ್ನು ಬೇರೆಯವರು ತಲೆಯಲ್ಲಿ ಧರಿಸುವಂತೆ ಮಾಡಿ,

ವಿಶ್ರಾಂತಿಗೆ ತೆರಳುವ ಅಪೇಕ್ಷೆ ಹೊಂದಿರುವುದನ್ನು ನಿಮಗೆ ಹೇಳುತ್ತಿರುವೆನು. ನೀವು ಇದನ್ನು ತಾಳ್ಮೆಯಿಂದ, ಮನಃಪ್ರೀತಿಯಿಂದ ಕೇಳಿರಿ. ತನ್ನ ಮಗನನ್ನು ತಾನೆ ಹೊಗಳಿದರೆ– ತಂದೆಗೆ ಪ್ರೀತಿ ಎಂದು ಹೇಳುವವರು. ಆದರೂ ಗುಣಕ್ಕೆ ಮತ್ಸರವೇಕೆ?

'ಶ್ರೀರಾಮನು ಆಹ್ಲಾದರೂಪಿ. ಔದಾರ್ಯನಿಧಿ. ನಿರಸೂಯನಾಗಿ ಎಲ್ಲರ ಪ್ರೀತಿಪಾತ್ರನಾದವನು. ಕಲಿ. ಮತ್ಸರವಿಲ್ಲದವನು. ಅತ್ಯಂತ ಶಾಂತಿಯ ಗಣಿ. ಪ್ರಿಯಭಾಷಿ. ಹಿತಸಖ. ಮಿತಮಾರ್ಗಿ. ಧೀರವಶಿ. ನಗುಮೊಗದ ಸಂಯಮಿ. ಕೃತಜ್ಞತಾಮೂರ್ತಿ. ಪಂಡಿತ. ಶ್ರುತಿವಿದ; ಸುವಿಚಾರಿ, ನಿತ್ಯ ಪ್ರಜಾಪ್ರೇಮಿ! ಸುಸ್ಥಿರ; ಸಂಬುದ್ಧ; ಪ್ರಜ್ಞಾ ಮಹೇಶ್ವರ! ಶಸ್ತ್ರಾಸ್ತ್ರ ವಿದ್ಯಾಪ್ರವೀಣ, ರಣಪಂಡಿತ. ನವನವೋನ್ಮೇಷಿತವೂ, ಚಿರನೂತನವೂ ಆದ ರಸದರ್ಶನಾಸ್ವಾದವನ್ನು ಮಾಡುವ ಸಹಜಕವಿ. ಶ್ರುತಿಶಾಸ್ತ್ರ ಕಾವ್ಯ ರಸ ಋಷಿ; ಯೋಗಿ.

'ಕೇಳಿರಿ, ಆ ರಾಮನಲ್ಲದೆ ನನ್ನ ಈ ಕಿರೀಟವನ್ನು ಧರಿಸುವ ಬೇರೆ ಯಾವ ಸಮರ್ಥರನ್ನು ನಾನು ಕಾಣೆನು. ಹಿರಿಯವನ ಹೆಗಲ ಮೇಲೆ ಈ ಭೂಮಿಯ ಹೊರೆಯನ್ನು ಇಳಿಸಿ, ತಪದಿಂದಿದ್ದು ನಮ್ಮ ಕುಲದ ಮರ್ಯಾದೆಯನ್ನು ಕಾಪಾಡುತ್ತೇನೆ'.

ಮಳೆ ಮೋಡವನ್ನು ಕಾಣುವ ನವಿಲುಗಳಂತೆ ಆ ಸಭೆಯು ಸಂಭ್ರಮದಿಂದ ಸಭಾಸ್ಥಾನ ಮಂಟಪವು ಕಂಪಿಸುವಂತೆ ಕೇಕೆ ಹಾಕಿತು. ಸರ್ವರೂ ಒಮ್ಮನದಿಂದ ಜಯಘೋಷಮಾಡುತ್ತಿದ್ದರು. ರಾಜನು ಭಿನ್ನಮತವಿಲ್ಲದ ಸಕಲ ಪುರಜನರ ಗೌರವಾರ್ಥವಾಗಿ ಕೈಮುಗಿದು ಅಭಿವಂದಿಸಿದನು. ವಸಿಷ್ಠಾದಿ ಗುರುಗಳನ್ನುದ್ದೇಶಿಸಿ ಅಭಿಷೇಕದ ಉತ್ಸವಕ್ಕೆ ರಾಜಾರ್ಹವಾದ ರೀತಿ ಸಕಲ ಸಿದ್ಧತೆ ಮಾಡಿಕೊಳ್ಳಲು ಹೇಳಿದನು.

ಚೈತ್ರಮಾಸವು ಶುಭೋತ್ಪತ್ತಿಯ ಬಿಳುಪಾದ ಹಾರವನ್ನು ಹಿಡಿದು ಪಟ್ಟಾಭಿಷೇಕಕ್ಕೆ ಬಂದಿತು! ಹೊನ್ನು ಬೆಳ್ಳಿ ಧನಧಾನ್ಯ ಮುತ್ತು ರತ್ನದ ರಾಸಿಗಳು; ಬೆಳ್ಳನೆಯ ಹೂವಿನ ದಂಡೆ ಬಿಳಿಕೊಡೆ ಹೂಜೇನು ಪಟ್ಟೆ ವಸ್ತ್ರಗಳು; ಹೊನ್ನಿನ ಕೊಂಬಿನಿಂದ ಶೋಭಿಸುವ ಗೋವು ಗೂಳಿಗಳು; ಬಿಳಿ ಚವರೀಮೃಗದ ಕೂದಲು ಹುಲಿದೊಗಲುಗಳು; ಹಾಲು ಮೊಸರು, ಗಂಗೆ ನೀರು, ಕಡಲನೀರು; ಗಂಧಪುಷ್ಪ ಮುಂತಾದ ಮಂಗಳ ಸಾಮಗ್ರಿಗಳು; ನಾನಾ ಸುಖದ ಶುಭದ ಸಂಪದದ ಸಾರವು ಕೋಸಲ ರಾಜಧಾನಿಯನ್ನು ತುಂಬುವಂತೆ ಒದಗಿ ಬಂದಿತು.

ಮಾರನೆಯದಿನ ಹೊನ್ನಿನ ಕಿರಣಗಳ ಚಾಮರವನ್ನು ಬೀಸಿ ರವಿಯು ಮೂಡಣ ಬೆಟ್ಟವನ್ನು ಏರಿ ಬರುವಷ್ಟರಲ್ಲಿ ನಗರವು ಹಸುರು ತೋರಣಗಳಿಂದ ರಾರಾಜಿಸಿತು. ಅದು ಹೂಮಳೆಯ ಚೆಲುವಿನಿಂದ, ಕಂಪಿನಿಂದ ಕೂಡಿದ ತಣ್ಣೀರಿನಿಂದ ನೆನೆದ ಸುವಾಸನೆಯ ನೆಲಗಳಿಂದ, ಪಟ್ಟಾಭಿಷೇಕಕ್ಕೆ ನಿರ್ಮಿಸಿದ ವಿಸ್ತಾರವಾದ ಕಲ್ಯಾಣಮಂಟಪ ತಾನೆಂಬಂತಿತ್ತು.

ಮಥಿಸಿದುದು ದಶಶಿರನ ವಿಧಿ ಮಂಥರೆಯ ಮನದಿ

ಜಗತ್ತನ್ನು ಒಂದು ವಿರಾಟ್ಮನವು ನೇಯ್ದು ಆಳುತ್ತಿದೆ. ಅದು ಸೂಕ್ಷ್ಮಾತಿಸೂಕ್ಷ್ಮ ತಂತ್ರದಿಂದ ಬಿಗಿದು ಕಟ್ಟಿಯೂ ಜೀವಿಗಳಿಗೆ ಇಚ್ಛೆಯ ಸ್ವಾತಂತ್ರ್ಯಭಾವವನ್ನು ನೀಡಿದೆ. ಮಂಥರೆ ಸೀತೆ ರಾಮರಾವಣರೆಲ್ಲರೂ ಸೂತ್ರಗೊಂಬೆಗಳಲ್ಲವೆ ಆ ವಿಧಿಯ ಹಸ್ತದಲ್ಲಿ ? ದಶಶಿರನ ವಿಧಿಯು ಆ ರಾತ್ರಿ ಮಂಥರೆಯ ಕನಸಿನಲ್ಲಿ ಹೊಮ್ಮಿ, ಅವಳ ಮನಸ್ಸಿನಲ್ಲಿ ತನ್ನ ತಂತ್ರದ ಕೃತಿಯನ್ನು ಮಥಿಸಿತು.

ಮುದುಕಿಯಾದ ಕೈಕೆಯು ಭರತನ ಕೈಹಿಡಿದು ಮರುಭೂಮಿಯಲ್ಲಿ ವಿಧವೆಯಂತೆ ಅಲೆಯುತ್ತಿದ್ದಳು. ಕುಬ್ಜೆ ಮಂಥರೆ ಕರೆದರೂ ಕಿವಿಗೊಡದೆ ಕಿರಿರಾಣಿಯು ಮುಂದು ಮುಂದೆ ಸಾಗುತ್ತಿದ್ದಳು. ಆಗ ಸಂಜೆಗತ್ತಲೆ ಇಳಿದು ಅವರಿಬ್ಬರನ್ನು ನುಂಗಿತು. ಗೂನಿಯು ತೊಳ ತೊಳಲಾಡಿದಳು. ಬಾಯಾರಿ ದಿಕ್ಕು ದಿಕ್ಕಿಗೆ ಬಾಯ್ಬಿಟ್ಟು ಧೀರ್ಘವಾಗಿ ಒರಲಿದಳು. ದೊಡ್ಡಕೂಗಿನಲ್ಲಿ ಆಕ್ರಂದಿಸುತ್ತ ರಾಮನನ್ನು ಕೂಗಿ, ಮರಳುಗಾವಲಿಯ ಇಳೆಗೆ ಕುಸಿದು ಬಿದ್ದಳು. ಮಂಥರೆಯ ಒಡಲು ಕ್ರೂರ ದುಃಸ್ವಪ್ನ ಜೇಡನ ಪೀಡನೆಗೆ ಸಿಕ್ಕಿ ಬಲೆಗೆ ಬಿದ್ದ ಹುಳುವಿನಂತೆ ನಡು ನಡುಗುತ ಒದ್ದಾಡಿತು. ಅಸ್ತವ್ಯಸ್ತವಾದ ಹಾಸಿಗೆಯಿಂದ ಧಿಗಿಲ್ಲೆಂದು ಎದ್ದು ಕುಳಿತಳು. ಅವಳಿಗೆ ಭಯಗ್ರಹ ಬಡಿದಿತ್ತು. ಸ್ವಪ್ನವು ತನಗೆ ಯಾವ ಕೇಡನ್ನು ಮಾಡಿತೊ ಎಂದು ಚಿಂತಿಸುತ್ತಿರಲು ನಲಿವ ಮಂಗಳವಾದ್ಯ ಸಂಭ್ರಮವು ಕಿವಿಗೆ ಕೇಳಿಸಿತು.

ದಾಸಿಯು ಆಶ್ಚರ್ಯದಿಂದ ಹೊರಹೊರಟಳು. ರಾಜಬೀದಿಯಲ್ಲಿ ಬೆರಗಾಗಿ ನಡೆದುಬಂದಳು. ಬರಬರುತ್ತ ನಗರ ಶೃಂಗಾರವನ್ನು ನೋಡಿದಳು. ನಲಿದು ಉಲಿವ ಪುರಜನರ ಉತ್ಸಾಹ ಕಂಡಳು. ಇಲ್ಲಿ ನೀರಿನ ಸಿಂಪಡಣೆ, ಅಲ್ಲಿ ರಂಗೋಲಿ. ಅಲ್ಲಿ ಕರ್ಪೂರದ ಸಾರಣೆಯ ಕಂಪು. ನೋಡಿದ ಕಡೆಯೆಲ್ಲ ಬಾವುಟಗಳ ತೋರಣ. ಅಲ್ಲಿ ಯೋಧರು ಉದ್ದವಾದ ಕತ್ತಿಹಿಡಿದು ಸಜ್ಜಾಗಿ ನಿಂತಿದ್ದಾರೆ. ಬೆಣ್ಣೆಯಂತಹ ಸುಣ್ಣವನ್ನು ಬಳಿದ ದೇಗುಲಗಳನ್ನು ನೋಡಲು ಅವು ಮನೋಹರವಾಗಿ ಬಾನಿಗೆ ತಲೆ ನಿಮಿರಿ ನಿಂತಿವೆ! ಜೊತೆಗೆ ಕುದುರೆ, ತೇರು, ಆನೆಗಳು ಚಿನ್ನದ ರೇಕಿನ ಕೆಲಸದ ಕಾಂತಿಯಿಂದ ಮಿಂಚುತ್ತ ಸಾಲಾಗಿ ನಡೆದಿವೆ.

ಮಂಥರೆಯು ವಿವಿಧ ನೋಟಗಳನ್ನು ನೋಡುತ್ತ ಮುನ್ನುಗ್ಗಿ ಹೋಗುತ್ತ ಏನೆಂದು ವಿಚಾರಿಸಿದಳು. ಅವರೆಲ್ಲ ಅವಳ ವಿಕಾರವನ್ನು ಕಂಡು ಕೋಪಿಸಿಕೊಂಡು ರೇಗುತ್ತ, ಕಣ್ಣಿನಿಂದಲೇ ನಿಂದಿಸುತ್ತ ಮುಂದಕ್ಕೆ ನಡೆದರು. ಅವಳು ಸಾವಕಾಶವಾಗಿ ಸಂಭ್ರಮವು ತುಳು ತುಳುಕುತ್ತಿದ್ದ ಕಲ್ಯಾಣ ಮಂಟಪಕ್ಕೆ ನಡೆದಳು. ರಾಮನ ದಾದಿಯು ತಾವರೆಯ ಹೂ ಕೊಳದ ಜಲಪಕ್ಷಿ ಕುಲದಂತೆ ಕಲಕಲ ನಿನಾದದಿಂದ ಮಾತಾಡುತ್ತಿದ್ದ ಚೆಲುವಾದ

ಹೆಣ್ಣುಗಳೆಡೆಗೆ ಕಣ್ಣು ಹೂಗಳನ್ನು ಅರಳಿಸಿ ನಗುತ್ತಿದ್ದಳು. ಅವಳನ್ನು ಮಂಥರೆಯು ಮಂಗಳಕಾರ್ಯವೇನೆಂದು ಕೇಳಿದಳು.

ಕಹಿಸತ್ಯ, ರಾಮಪಟ್ಟಾಭಿಷೇಕ ಸತ್ಯ ತಿಳಿಯಲು ಮಂಥರೆ ಹೃದಯವೊಡೆದಂತೆ ತತ್ತರಿಸಿದಳು. ತಕ್ಷಣ ಕೈಕೆಯ ಅರಮನೆಗೆ ಓಡಿದಳು. ಆಯಾಸಗೊಂಡು ಏದುತ್ತ ಉದ್ವೇಗದಿಂದ ಚೀರಿದಳು.

'ಓ ಕೈಕೆ, ಮತಿಗೇಡಿ, ನಿರ್ಭಾಗ್ಯೆ, ಇನ್ನೂ ಏನೀ ನಿದ್ದೆ ನಿನಗೆ? ಮೇಲೇಳ್, ಏಳು. ನಿನ್ನ ಸಿರಿಗುಡಿಯ ಗೋಪುರ ಉರುಳಿ ಬಿದ್ದಿದೆ! ಹೊಂಗನಸು ಹುಡಿಯಾಗಿದೆ! ನಿನ್ನ ಬಹುದಿನದ ಬಯಕೆ ಬಯಲಾಗಿದೆ! ನೀನು ಕೆಟ್ಟೆ! ನಾನು ಕೆಟ್ಟೆ! ಹಾ ಭರತ ಎಲ್ಲಿರುವೆ? ಇಂದು ಎಲ್ಲಿರುವೆ ! ಬೇಗ ಬಾ!'

ಆ ರೀತಿ ಗೋಳಿಡುತ ಕಿರಿರಾಣಿಯ ಬಳಿ ಹೋಗುವ ಮೊದಲೆ ಬಡಿಗೆಯಿಂದ ಬಡಿಸಿಕೊಂಡವಳಂತೆ ಹೊಸ್ತಿಲ ಮೇಲೆ ದೊಪ್ಪನೆ ಕುಸಿದು ಬಿದ್ದಳು. ಭರತನ ತಾಯಿಯಂತಿದ್ದ ಆ ವೃದ್ಧೆಗೆ ಕೈಕೆ ಉಪಚರಿಸಿದಳು. ಮಂಥರೆಯು ಕಣ್ತೆರೆದು ಎಚ್ಚರಗೊಂಡು ಕನಿಕರದ ನೋಟವನ್ನು ಬೀರುತ್ತ ರಾಣಿಯನ್ನು ಬಿಗಿದಪ್ಪಿ ಬಿಕ್ಕಿಬಿಕ್ಕಿ ಅತ್ತಳು!

ಕೈಕೆಯು 'ಏನಾಯಿತು ಹೇಳವ್ವ, ಹೇಳು' ಎಂದು ಕೇಳಲು; 'ಭರತ, ಭರತ' ಎಂದು ತೊದಲಿ ಮುದುಕಿ ಸುಮ್ಮನಿದ್ದಳು. ಮಗನಿಗೆ ಏನಾಯಿತೋ, ಅಳಿದನೋ ಉಳಿದನೋ ಎಂಬ ಶಂಕೆಯಿಂದ ದಶರಥನ ರಾಣಿ ಅಳತೊಡಗಿದಳು. ಆಗ ಗೂನಿ ಹೀಗೆ ಹೇಳಿದಳು:

'ಕೈಕೆ, ನಿನ್ನ ಸೌಂದರ್ಯದಂತೆ ನಿನ್ನ ಸಂಪತ್ತು ಬೇಸಿಗೆಯ ಹೊಳೆಯಾಯಿತು. ಮಕರಂದವನ್ನು ಹೀರಿದ ಮೇಲೆ ದುಂಬಿಗೆ ಹೂವಿನ ಗೊಡವೆಯೇಕೆ? ದಶರಥನಿಗೆ ನೀನು ಹಾಗೆ ಆಗಿರುವೆ. ಮಗಳೆ, ಒಂದು ಕೆಟ್ಟ ಸುದ್ದಿಯನ್ನು ಹೇಳುವೆನು. ಧೈರ್ಯವಿದ್ದರೆ ಕೇಳು'.

'ಬೆಳ್ಳಂಬೆಳಗ್ಗೆ ಧೈರ್ಯದ ಮಾತೇಕೆ? ಅದೇನು ಹೇಳುವೆ ಹೇಳು'.

'ಅಯ್ಯೊ, ವಂಚಕರಸಂಚಿನಿಂದ ನಮ್ಮ ಭರತನಿಗೆ ಈ ನೆಲ ಕೈ ತಪ್ಪಿತು. ನಾವಿಬ್ಬರಿದ್ದು ಏನು ಪ್ರಯೋಜನ? ಮುಗ್ಧೆ ಹೇಳು, ವಿಪತ್ತು ಸಮೀಪಿಸಿರುವಾಗಲೂ ಸುಮ್ಮನೆ ಕುಳಿತಿರುವುದು ಬುದ್ಧಿವಂತರ ಲಕ್ಷಣವೆ? ನಿನಗೆ ಗೊತ್ತಿಲ್ಲದಂತೆಯೆ ನಿನ್ನ ಕುತ್ತಿಗೆಯನ್ನು ಕೊಯ್ಯುವ ಕತ್ತಿಯನ್ನು ಮಸೆದಿದ್ದಾರೆ! ನಿನ್ನ ದುಃಖವೆ ನನ್ನ ದುಃಖ. ನಿನ್ನ ಸುಖವೇ ನನ್ನ ಸುಖ. ನನಗೆ ಬೇರೆ ಏನಿದೆ ಹೇಳಕ್ಕ?'

'ಉದ್ವೇಗಕ್ಕೊಳಗಾಗಬೇಡ. ಏನಾಯಿತೆಂದು ಹೇಳು'.

'ಅಲ್ಪಮತಿಯಾದ ನೀನು ದಶರಥನ ಪ್ರೇಮದಂಥ ಭಾಗ್ಯ ಬೇರಿಲ್ಲ ಎಂದು ತಿಳಿದಿರುವೆ! ಕ್ಷತ್ರಿಯ ಕುಲವು ಕ್ರೌರ್ಯದಲ್ಲಿ ರಾಕ್ಷಸಕುಲವನ್ನು ಮೀರಿಸುತ್ತದೆ. ದಶರಥನು ಆ ಕುಲವರೇಣ್ಯ! ಸವಿನುಡಿಯ ಮಧುಪಾನದಿಂದ ಆತನಿಗೆ ನೀನು ಮರುಳಾಗಿ ಹೋದೆ. ನಿಜ ಪ್ರೇಮ ಕೌಸಲ್ಯೆಗಾಯಿತು. ಹುಸಿಪ್ರೇಮ ನಿನಗಾಯಿತು.'

'ನನಗೇನೂ ಅಂತಹ ನಷ್ಟವಾಗಿಲ್ಲ. ಅದೇನಾಯಿತು ಹೇಳು'.

ಕಿವಿಗೊಟ್ಟು ಕೇಳು. ಉಪಾಯದಿಂದ ಭರತನನ್ನು ನಿನ್ನ ತವರಿಗೆ ಕಳುಹಿಸಿಕೊಟ್ಟು, ಅವರು ನಾಳೆ ರಾಮನಿಗೆ ಪಟ್ಟ ಕಟ್ಟುವರಂತೆ! ಆ ರಾಮನನ್ನು ತೊಡೆಯ ಮೇಲಿಟ್ಟುಕೊಂಡು ಪ್ರೀತಿಯಿಂದ ಪಾಲಿಸಿದೆ. ಹಾವಿಗೆ ಹಾಲು ಎರೆದೆ! ಮೊಟ್ಟೆಯಲ್ಲಿದ್ದಾಗಲೇ ಅದನ್ನು ಸಾಯಿಸಬೇಕಿತ್ತು. ಆ ಹಗೆ ಹಾವು ಹೆಡೆಯೆತ್ತಿ ಸಾಕಿದವರನ್ನು ಕೊಲ್ಲುವುದು ಖಂಡಿತ. ಕಿರಿಯಳಾದ ನಿನಗೆ ಇದು ಗೊತ್ತಾಗುವುದಿಲ್ಲ'.

ಅದನ್ನು ಕೇಳಿದ ಕೈಕೆಯ ಮುಖವು ಚಂದ್ರನನ್ನು ಕಂಡು ನೈದಿಲೆ ಅರಳುವಂತೆ ಅರಳಿತು. ಕೊರಳ ಸರವನ್ನು ಮಂಥರೆಗೆ ನೀಡುತ್ತ ಹೇಳಿದಳು:

'ಶುಭದ ವಾರ್ತೆಯನ್ನು ತಂದುದಕ್ಕೆ ಇಗೋ, ತೆಗೆದುಕೊ ಬಹುಮಾನ. ರಾಮನೇನು, ಭರತೇನು ಇಬ್ಬರೂ ನನ್ನ ಮಕ್ಕಳೆ !'

ಆ ಹಾರವನ್ನು ಹಿಡಿದು ಅಪ್ಪಳಿಸಿ ನೆಲಕ್ಕೆ ಎಸೆದ ಕುಬ್ಜೆ ಮಂಥರೆಯು, ರಾಣಿಗೆ ಮಾತಾಡಲು ಅವಕಾಶ ಕೊಡದೆ ಹೀಗೆ ನುಡಿದಳು:

'ಮೂರ್ಖಳೆ, ಸಾಕು ನಿಲ್ಲಿಸು ನಿನ್ನ ಮಾತು. ನಿನ್ನ ಬುದ್ಧಿಗೆ ಏನಾಗಿದೆ? ಬಹುಕಾಲ ಅರಮನೆಯ ಸುಖ ಅನುಭವಿಸಿ ನಿನ್ನ ಬುದ್ಧಿ ಕೆಟ್ಟಿದೆಯೆ? ಹೆತ್ತಮಗುವನ್ನೆ ತಿನ್ನುವ ರಕ್ಕಸಿಯಂತೆ ಮಾತನಾಡುತ್ತಿರುವೆ. ನಿನ್ನ ಕಂದನಿಗೆ ನೀನೆ ಮೃತ್ಯುವಾದೆ! ರಾಮಾಭಿಷೇಕವೂ ನಿನಗೆ ಪ್ರಿಯವೆ? ಸವತಿ ಮಗನಿಗಿಂತ ವೈರಿ ಈ ಲೋಕದಲ್ಲಿ ಬೇರೆ ಇರುವರೆ? ಕೌಸಲ್ಯೆಗಿಂತ ನೀನೇನು ಕಡಿಮೆ? ರಾಮನಿಗಿಂತ ಭರತ ಯಾವುದರಲ್ಲಿ ಕಡಿಮೆ? ಜನ್ಮ ಕ್ರಮದಿಂದ ನೋಡಿದರೂ ನಾಲ್ವರಲ್ಲಿ ಭರತನೇ ದಿಟವಾಗಿ ಜ್ಯೇಷ್ಠ. ಮುಗ್ಧಳಾದ ನಿನಗೆ ಹೇಳುತ್ತೇನೆ ಕೇಳು. ನೀನು ಹೆರಿಗೆ ಬೇನೆಯಲ್ಲಿದ್ದೆ. ನನಗೆಲ್ಲವೂ ಗೊತ್ತು. ದೊರೆ, ಮಂತ್ರಿ, ಕುಲಪುರೋಹಿತರೆಲ್ಲರೂ ಪ್ರೀತಿಯ ಪಕ್ಷಪಾತದಿಂದ ಕೌಸಲ್ಯೆಯ ಮಗನನ್ನು ಹಿರಿಯನನ್ನಾಗಿ ಮಾಡಿದರು. ಸೊನ್ನೆಯೇ ನಿನಗೆ ಬಳುವಳಿಯಾಯ್ತು.' ಎಂದು ಹೇಳಿ ಸುಧಾರಿಸಿಕೊಳ್ಳುತ್ತ, ಮಾತು ಮುಂದುವರಿಸಿದಳು.

'ರಾಮನ ಆಳ್ವಿಕೆಯಲ್ಲಿ ನೀನು ಕೌಸಲ್ಯೆಯ ಕಾಲ್ದೆಸೆಯ ಧೂಳಾಗುತ್ತೀಯೆ. ನೀನು ಈ ಅರಮನೆಗೆ ಬಂದ ಹೊಸತರಲ್ಲಿ ಕೌಸಲ್ಯೆ ಮಾತ್ಸರ್ಯದಿಂದ ಕೊಟ್ಟ ಕಾಟವನ್ನು

ಮರೆತೆಯಾ ? ನಿನ್ನಂತೆ ಎಲ್ಲರೂ ಸಾತ್ವಿಕ ಮೂರ್ತಿಗಳೆಂದು ತಿಳಿದು ನೀನು ಕೆಡುವೆ. ನೀನು ಬೇಗ ಎಚ್ಚರಗೊಳ್ಳದಿದ್ದರೆ ಹುಡಿಯಾಗಿ, ಹಾಳಾಗಿ ಗತಿಗೆಡುವೆ. ಬೆಪ್ಪೆ ಒಳಸಂಚು ನಡೆದು ಹೋದಮೇಲೆ, ಕಾಲ ಮಿಂಚಿದ ಮೇಲೆ ಕೊರಗಬೇಡ.'

ಎಂದು ತಿಳಿಸಿ, ಉರಿವ ಬೆಂಕಿಗೆ ತುಪ್ಪವನ್ನು ಸುರಿದಂತೆ ತನ್ನ ಕನಸನ್ನು ಹೇಳಿದಳು. ಕೈಕೆ ಎಲ್ಲವನ್ನೂ ಕೇಳುತ್ತ ಕೆನ್ನೆಗೈಯಾಗಿ, ಕಂಬನಿದುಂಬಿ, ಕಣ್ಮುಚ್ಚದೆಯೆ ಎದುರು ಗೋಡೆ ನೋಡುತ್ತ ಮೌನವಾಗಿದ್ದಳು. ಮಾವನ ಮನೆಯಲ್ಲಿ ದೂರದಲ್ಲಿದ್ದ ಮಗನನ್ನು ನೆನೆಸಿಕೊಂಡಳು. ಅದು ಗರಗಸದಂತೆ ಕೊಯ್ಯತೊಡಗಿತು. ಮಂಥರೆಯ ನುಡಿಯನ್ನು ಮೆಲುಕಾಡಿದಳು. ಹೃದಯ ಒಡೆದಂತಾಯಿತು. ದುಃಖ ಇಮ್ಮಡಿಸಿತು. ಕೊರಳು ಕಟ್ಟಿತು. ಮಾತು ಹೊಮ್ಮಲಿಲ್ಲ. ಆ ಗೂನಿಯೆ ಮತ್ತೆ ಮಾತಾಡಿದಳು.

'ಅಮ್ಮ ಕೈಕೆ, ಶತ್ರುಘ್ನನು ಇಲ್ಲಿದ್ದರೆ ಪಟ್ಟಕ್ಕೆ ಅಡ್ಡಿಮಾಡುವನೆಂದು ಅವನನ್ನು ಭರತನೊಡನೆ ಕಳುಹಿಸಿದ್ದಾರೆ. ಹೆಮ್ಮರಕ್ಕೆ ಹಬ್ಬಿದ ಮುಳ್ಳುಬಳ್ಳಿ ಆ ಮರವನ್ನು ಕಡಿಯದಂತೆ ತಡೆಯುತ್ತದೆ. ಹಾಗೆ ಕೌಸಲ್ಯೆಯ ಮಗನಿಗೆ ಲಕ್ಷ್ಮಣ ರಕ್ಷಕನಾಗಿದ್ದಾನೆ.

'ಭರತನನ್ನು ರಾಮನಿಗೆ ದಾಸನನ್ನಾಗಿ ಮಾಡಬೇಡ. ದಯೆ ತೋರಿ ಕಾಡಿಗಾದರೂ ಕಳುಹಿಸು. ನಾನು ಅವನೊಡನೆ ಹೋಗಿ ಶುಶ್ರೂಷೆ ಮಾಡುತ್ತೇನೆ. ಇದು ನಾನು ನಿನ್ನಲ್ಲಿ ಕೇಳಿಕೊಳ್ಳುವ ಭಿಕ್ಷೆ'.

ಎಂದು ಹೇಳಿ ಮಂಥರೆ ಹೊರಡಲು ಎದ್ದು ನಿಂತಳು. ಕೈಕೆ ಅವಳನ್ನು – ಮುಳುಗುವಾತನು ಪ್ರಾಣರಕ್ಷಣೆಗಾಗಿ ಮೊಸಳೆಯನ್ನು ತಬ್ಬುವಂತೆ – ಬಿಗಿದಪ್ಪಿದಳು. ಆಗ ಉತ್ಸಾಹ ಮರುಕಳಿಸಿದಂತೆ ಮಂಥರೆ ಹೇಳಿದಳು:

ಮೇಲೇಳು, ಬರಿ ಅಳುವಿನಿಂದ ಏನೂ ಆಗುವುದಿಲ್ಲ. ಕಾರ್ಯ ಸಾಹಸಿಯಾಗು! ವೀರಸತಿಯಾದ ನೀನು ಮರೆತರೂ ನಾನು ನೆನಪಿಸುವೆ. ಮಗಳೆ, ನೀನು ನನಗೆ ಹೇಳಿದ್ದ ರಹಸ್ಯವನ್ನು ನೆನಪು ಮಾಡಿಕೊ. ದಶರಥನು ನಿನ್ನ ಚೆಲುವಿಗೆ ಸೋತು, ಸೌಂದರ್ಯದಾಸನಾಗಿ ಮದುವೆಯಾಗುವಂತೆ ಮೊದಲು ನಿನಗಿತ್ತ ಭಾಷೆಯನ್ನು ನೆನಪು ಮಾಡಿಕೊ'.

ಸಂಪತ್ತನ್ನೆಲ್ಲ ದುರ್ವ್ಯಸನಗಳಲ್ಲಿ ಕಳೆದು ಅತಿ ದರಿದ್ರನಾಗಿ ತೊಳಸಿ, ಭಿಕ್ಷೆಬೇಡಿ ಹಸಿವಿನಿಂದ ಹೊಟ್ಟೆಗಿಲ್ಲದೆ ಬಳಲಿ ನಿದ್ರಿಸುವವನಿಗೆ ಒಂದು ಕನಸು ಬೀಳುತ್ತದೆ. ಅದರಲ್ಲಿ ಯಕ್ಷನು ಬಂದು ಬಾ ಎಂದು ಕರೆದುಕೊಂಡು ಹೋಗುತ್ತಾನೆ. ಒಂದುಕಡೆ ಕೊಪ್ಪರಿಗೆ ತುಂಬ ತುಂಬಿ ತುಳುಕುವ, ತಳತಳನೆ ಹೊಳೆಯುವ ಚಿನ್ನದ ರಾಶಿಯನ್ನು ತೋರಿಸುತ್ತಾನೆ. ಅವನು ಸಂತೋಷದಿಂದ ಎಚ್ಚೆತ್ತು ನಿಧಿಯ ಸ್ಥಳಕ್ಕಾಗಿ ಹುಡುಕುತ್ತ ಹೋಗುವನು. ಹುಡುಕುತ್ತಿದ್ದರೆ ವಾಸ್ತವವಾಗಿ ಸ್ವರ್ಣನಿಧಿರಾಶಿ ಕಣ್ಣಿಗೆ ಬೀಳುತ್ತದೆ. ಆ ಬಡವನಂತೆ ಕೈಕೆ ಹಿಗ್ಗಿದಳು. ವಕ್ರಗಾತ್ರೆಯನ್ನು ತಬ್ಬಿ ನುಡಿದಳು:

'ಓ ನನ್ನ ಭಾಗ್ಯ ದೇವತೆಯೆ, ಕಣ್ಣುಕಾಣಿಸದ ನನಗೆ ದಾರಿ ತೋರಿಸಿದೆ. ನೀನು ನನ್ನನ್ನು ಮರಳಿ ಹಡೆದ ತಾಯಿ. ಈ ಪರದೇಸಿಯನ್ನು ನೀನು ಕೈಬಿಟ್ಟರೆ ಇನ್ನಾರು ಗತಿ? ಇದುವರೆಗೆ ನಾನು ಕಣ್ಣಿದ್ದು ಕುರುಡಿಯಾಗಿದ್ದೆ. ನೋಡು, ನನ್ನ ಕಡೆಗೆ ನೋಡು. ನೀನು ಇಂದು ನನಗೆ ಸುಂದರರೂಪಿಣಿಯಾಗಿ ಕಾಣುತ್ತಿರುವೆ. ಲೋಕದಲ್ಲಿ ಹೊರಮೈಯನ್ನಷ್ಟೆ ನೋಡುತ್ತ ಸೊಬಗನ್ನು ಕಾಣುವವರು ಬರಿಯ ಬೆಪ್ಪರಲ್ಲವೆ? ನಿಜವಾದ ಸೌಂದರ್ಯ ಆತ್ಮಕ್ಕೆ ಸೇರಿದುದು. ಗೂನಿಯಾಗಿದ್ದರೂ ನಿನಗಿಂತ ಸುಂದರಿಯರು ಇರುವರೆ? ಗಂಧದ ಕೊರಡು ಡೊಂಕಾದರೆ ಗಂಧಕ್ಕೆ ಕೊರತೆಯೆ?'

ಸರ್ವಸೌಂದರ್ಯನಿಧಿಯಾದ ಕೈಕೆ ಕುರೂಪತಾಮುದ್ರೆಯನ್ನು ಮುದ್ದಾಡಿದಳು. ಮೀನುಗಾರನು ಮೀನು ಕಚ್ಚಿತೆಂದು ಗೊತ್ತಾಗಲು ಗಾಳದ ನೆಣವನ್ನು ಒಂದಿನಿತು ಸಡಿಲ ಬಿಡುವಂತೆ –ಕುಬ್ಜೆ ಮತ್ತೆ ನುಡಿದಳು:

'ಚಂದ್ರವದನೆಯೆ, ನಿರ್ಣಯಕ್ಕೆ ಬರುವ ಮೊದಲು ಮತ್ತೊಮ್ಮೆ ಆಲೋಚಿಸು, ದುಡುಕಬೇಡ. ತಲೆಕೆಟ್ಟ ಗೂನಿಯಾದ ನನ್ನ ಮಾತಿಗೆ ಕಟ್ಟುಬಿದ್ದು, ತರುವಾಯ ದೂರಬೇಡ. ನಿನ್ನ ಮತ್ತು ಭರತನ ಮೇಲಿನ ಮಮತೆ ಮತ್ತು ಪ್ರೀತಿಯಿಂದ ಹೀಗೆ ಹೇಳುತ್ತಿರುವೆನೇ ಹೊರೆತು ರಾಮನ ಮೇಲಿನ ದ್ವೇಷದಿಂದಲ್ಲ. ರಾಮ ಚೆನ್ನಾಗಿರಲಿ!

'ಚೆನ್ನಾಗಿ ಕೇಳಿಸಿಕೊ, ರಾಮನು ಕೋಸಲದಲ್ಲಿರುವವರೆಗೆ ಭರತನಿಗೆ ಈ ನೆಲ ಸಿಗುವುದಿಲ್ಲ. ಚಕ್ರಾಧಿಪತ್ಯವನ್ನು ದಶರಥನಿಂದ ಪಡೆದು ಭರತನಿಗೆ ಕೊಟ್ಟರೂ, ರಾಮನ ಪಕ್ಷದವರು ಸಂಚುಮಾಡಿ ಬಾಲರ್ಷಿ ಭರತನನ್ನು ಹಳ್ಳಕ್ಕೆ ಕೆಡವುತ್ತಾರೆ. ಆದುದರಿಂದ ಕೌಸಲ್ಯೆಯ ಮಗನಿಗೆ ಹದಿನಾಲ್ಕು ವರ್ಷ ಅರಣ್ಯಯಾತ್ರೆ ಮತ್ತು ನಿನ್ನ ಮಗನಿಗೆ ರಾಜ್ಯ ಪದವಿ ಒಟ್ಟಿಗೆ ದೊರೆಯುವಂತೆ ಪ್ರಯತ್ನಿಸಬೇಕು. ಅಗೋ ವಾದ್ಯಗಳ ಮಂಗಳರವವನ್ನು ಕೇಳು!'

ಗಾಳವನ್ನು ಸಡಿಲಿಸಿದಷ್ಟು ಕೊಂಡಿಯೊಳಗಿನ ಎರೆಯನ್ನು ನುಂಗಲು ಮೀನು ಹವಣಿಸುವಂತೆ ಕೈಕೆಯು ಮುದಿದಾಸಿಯನ್ನು ಬಿಗಿದಪ್ಪಿಕೊಂಡು ಹೀಗೆ ಕೇಳಿದಳು:

'ಕೆಳದಿಯೆ, ನಾನು ಇದುವರೆಗೆ ನಿನ್ನ ಮಹಿಮೆಯನ್ನು ತಿಳಿಯದ ಮೂರ್ಖಳಾಗಿದ್ದೆ. ಈಗ ನೀನೆ ಮುಂದಿನ ದಾರಿಯನ್ನು ತೋರಿಸು'.

'ಮರುಳೆ, ಸೌಂದರ್ಯದಿಂದ ಸಮಸ್ತಲೋಕವನ್ನು ಗೆಲ್ಲಬಹುದು. ಅದರ ಎದುರು ಕೋಸಲವು ಒಂದು ತೃಣವಲ್ಲವೆ? ಏಳು, ತಡಮಾಡಬೇಡ! ತೊರೆ ಇಳಿದ ಮೇಲೆ ಸೇತುವೆ ಕಟ್ಟಿ ಪ್ರಯೋಜನವೇನು? ಕೋಪಗೃಹವನ್ನು ಸೇರು. ನಿನ್ನ ಇಷ್ಟ ನೆರವೇರುವವರೆಗೆ ಹೊರಗೆ ಬರಬೇಡ'. ಎಂದು ಹೇಳಿ ಗೂನಿಯು ಆ ಕಡೆಗೆ ಹೋದಳು.

ದೀಕ್ಷೆಯಂ ಕೈಕೊಂಡು ಹಠಮೂರ್ತಿಯಾಗೀಕೆ ಪೊಕ್ಕಳಾ ಕೋಪಗೃಹಮಂ

ಕೈಕೇಯಿ ಹಠಮೂರ್ತಿಯಾಗಿ ದೀಕ್ಷೆಯನ್ನು ತೆಗೆದುಕೊಂಡು ಕೋಪಗೃಹವನ್ನು ಹೊಕ್ಕಳು. ಮೈ ಒಡವೆಗಳನ್ನು ಬಿಚ್ಚಿ ದಿಕ್ಕು ದಿಕ್ಕಿಗೆ ಎಸೆದಳು. ಮುಡಿಕೆದರಿ ಬೀಸಿದಳು. ಕರ್ಮಠ ರಾಜಯೋಗದ ಹಠಯೋಗಿಯು ಸಿದ್ಧಿಪಡೆಯಲು ಸಾಧನೆಗೆ ನಿಲ್ಲುವಂತೆ ದಶರಥಪ್ರಿಯ ರಾಣಿಯು ದಿಂಡುರುಳಿದಳು.

ರವಿಕುಲ ನರೇಂದ್ರ ಚಂದ್ರ ದಶರಥನು ಮಗ ರಾಮಚಂದ್ರನಿಗೆ ಹಿತವನ್ನು ಹೇಳಿ ಕಳುಹಿಸಿದನು. ಅನಂತರ ಕೈಕೆಗೆ ಮದುವೆಯಾಗುವಾಗ ಗೋಪ್ಯವಾಗಿ ಹೇಳಿದ್ದ ಮಾತಿನ ಕೊಡುಗೆಯ ನೆನಪಿನಿಂದ ಆತಂಕಕ್ಕೆ ಒಳಗಾದನು. ತನ್ನ ಕಿರುಹೆಂಡತಿಯ ಮನಸ್ಸನ್ನು ಹೇಗಾದರೂ ಮಾಡಿ ತನ್ನಾಸೆಯ ಕಡೆಗೆ ಸೆಳೆಯಲು ಅವಳೆಡೆಗೆ ಹೋದನು. ತನ್ನ ಶೃಂಗಾರ ಜಾಲದಲ್ಲಿ ಆ ಮೀನಾಕ್ಷಿಯನ್ನು ಹಿಡಿಯುವ ಬುದ್ಧಿಯ ರಸದ ದೋಣಿಯಲ್ಲಿ ತೇಲಿ ಹೋದನು. ಕೈಕೆಯ ಅಂತಃಪುರವು ಹತ್ತಿರ ಬರಲು ದೊರೆಯ ಮನಸ್ಸು ರತಿಸದೃಶ ರೂಪಸಿಯ ಸೌಂದರ್ಯವನ್ನು ನೆನೆದು ನಲಿಯಿತು. ರಾಜನು ಅವಳ ಸುರದೇಹದ ಮದ್ಯಸಮ್ಮೋಹ ಜ್ವಾಲೆಗೆ ಕೆರಳುವಂತೆ, ಮನ್ಮಥನು ಬೀಸಣಿಗೆಯಿಂದ ಬೀಸಿದನೋ ಎಂಬಂತೆ –ರಾಣಿಯ ಅಂತಃಪುರವನ್ನು ಸುತ್ತಿ ನಳನಳಿಸಿದ್ದ ಉದ್ಯಾನವನದಲ್ಲಿ ಗಿಳಿ, ನವಿಲು, ಕ್ರೌಂಚ, ಕೋಗಿಲೆ, ಹಂಸ ಮುಂತಾದ ಬಗೆಬಗೆಯ ಪಕ್ಷಿಗಳು ಏಕಕಾಲದಲ್ಲಿ ಉಲಿಯತೊಡಗಿದವು.

ವೃಕ್ಷಗಳು ಮತ್ತು ಬಳ್ಳಿಗಳು ಚಿಗುರು ಹೂಬಿಟ್ಟು ಭೋಗರಾಗದ ಕುಡಿಯು ಹಬ್ಬಿದಂತಿತ್ತು. ವೇಣು ವೀಣಾವಾದನಗಳ ಇಂಪು ಕಿವಿಗೆ ಅಮೃತವನ್ನು ಸೂಸುತ್ತಿರಲು, ನರಪತಿಯ ಬುದ್ಧಿಗೆ ಚೆಲುವು ಚೆಂಗಳ್ಳು(ಕೆಂಪು ಬಣ್ಣದ ಮದ್ಯ)ವಿನಂತಾಯಿತು. ಕೂಟದ ಇಚ್ಛೆಯಿಂದ ರತಿಯ ಬಳಿಗೆ ನಡೆಯುವ ಮೀನಕೇತನ ಮನ್ಮಥನಂತೆ ಅವನು ಕಾಮ ಚೇತನನಾಗಿ ಪತ್ನಿಯ ಶಯ್ಯಾಗೃಹಕ್ಕೆ ನಡೆದನು. ರತ್ನ ಮಂಚದ ಮೇಲೆ ಸುಂದರಳಾದ ವಲ್ಲಭೆಯನ್ನು ಕಾಣದೆ ಅಸ್ತವ್ಯಸ್ತಗೊಂಡ ಇಂದ್ರಿಯಗಳ ಅವನು ಶೂನ್ಯ ಭಾವಕ್ಕೆ ಒಳಗಾದನು. ಕೋಪ ಅಸಮಾಧಾನಗಳಿಂದ ಬೀಗಿಕೊಂಡನು. ಬಾಳೆಲ್ಲ ದುಡಿದು ಹೊಟ್ಟೆಬಟ್ಟೆ ಕಟ್ಟಿ ಕೂಡಿಟ್ಟು ರಕ್ಷಿಸಿಕೊಂಡು ಬಂದಿದ್ದ ಪೆಟ್ಟಿಗೆಯ ಹೊನ್ನು ಕಳುವಾದುದನ್ನು ಕಂಡ ಕೃಪಣನಂತಾದನು.

ಪ್ರೀತಿಯ ಆತುರದಿಂದ ದ್ವಾರಪಾಲಕನನ್ನು ಕೇಳಿದನು: 'ಹೇಳು, ದೇವಿ ಎಲ್ಲಿರುವಳು?' ಅವನು ನಡುನಡುಗುತ್ತ ಹಿಂಜರಿದು, ನೆಲವನ್ನು ನೋಡುತ್ತ, ಕೈಮುಗಿಯುತ್ತ ಕಠೋರ ವಿಷಯ ಹೇಳಿದನು. ಅದನ್ನು ಕೇಳಿ, ಸೀಸವನ್ನು ಕರಗಿಸಿ ಕಿವಿಗೆ ಹೊಯ್ದಂತಾಯಿತು. ಹೆದರಿ ನಿಟ್ಟುಸಿರುಬಿಟ್ಟನು. ನರೆತ ಕೂದಲಿನ ಅರಸನು

ಪರಾಧೀನನಾದಂತೆ ತತ್ತರಿಸಿದನು. ಕನಸಿನಲ್ಲಿ ಕಂಡ ಹುಲಿಯ ಆರ್ಭಟೆಯನ್ನು ಎಚ್ಚರದಲ್ಲಿ ಆಲಿಸುವವನಂತೆ ಕೋಪಗೃಹವನ್ನು ಹೊಕ್ಕನು.

ಕೆದರಿದ ಆಭರಣಗಳೆ ತಾರೆಗಳೊ, ಕಪ್ಪು ಸೀರೆಯೆ ಗಗನದ ನೀಲಿಯೊ, ಚೆಲ್ಲಿದ ಕೂದಲರಾಶಿಯೆ ಕತ್ತಲೆಯ ಮೊತ್ತವೊ ಎಂಬಂತೆ–ಗ್ರಹಣ ರಾತ್ರಿಯ ರೀತಿಯಲ್ಲಿ ನೆಲದ ಮೇಲೆ ಬಿದ್ದಿದ್ದ ಹೆಂಡತಿಯ ಬಳಿಗೆ–ಬಾಡಿದ ಮುಖಚಂದ್ರ ನರೇಂದ್ರನು ಓಡಿದನು. ವ್ಯಾಧನ ವಿಷಪೂರಿತ ಬಾಣಕ್ಕೆ ಹೆಣ್ಣಾನೆ ಉರುಳಿಬೀಳಲು, ಗಂಡಾನೆಯು ಸೊಂಡಿಲಿನಿಂದ ಅಪ್ಪಿ ಪ್ರೀತಿಯ ಉಪಚಾರವನ್ನು ಮಾಡುತ್ತದೆ. ಹಾಗೆ ಅವಳನ್ನು ತೋಳುಗಳಿಂದ ಅಪ್ಪಿ, ಪ್ರೀತಿಸಿ, ಮುದ್ದಿಸುತ್ತ ಜೇನ್ನುಡಿಗಳನ್ನು ಆಡಿದನು:

'ಕಲ್ಯಾಣ ಚೇತಸಿಯೆ, ಹೇಳು. ಪ್ರೇಮಪಕ್ಷಿಯ ಹೇಮಪಂಜರವೇ ದುಃಖವಿದೇನು? ಜೀವಿತೇಶ್ವರಿಯೆ ನನ್ನಲ್ಲಿ ಮುನಿಸೆ? ಹೇಮ ದೇಹದವಳೆ, ಹುಡಿಹತ್ತಿ ಹೊರಳುತ್ತಿರುವ ನಿನ್ನನ್ನು ನೋಡಿ ಕಣ್ಣುಗಳು ಸೀಯುತ್ತಿವೆ. ಸಿಡಿಲು ಹೊಡೆದ ಬಾಳೆಯ ರೀತಿ ಹೃದಯ ಬೇಯುತ್ತಿದೆ. ಸುಂದರ ಸೌಖ್ಯನೆಲೆಯಾದ ಕಾಂತೆಯೆ ಇದನ್ನು ಸಹಿಸಲಾರೆನು. ಯಾರು ನಿಂದಿಸಿದರು? ಅವಮಾನವಾಯಿತೆ? ನಿನ್ನ ಶರೀರ ನಂದನವು ಕಾಯಿಲೆಗೆ ಎಡೆಗೊಟ್ಟಿತೆ?

'ಕೊಲೆಯೆ? ಕೊಲ್ಲಿಸುವೆನು! ತಡಮಾಡಿ ಕೊಲೆಮಾಡಬೇಕೆ? ಹಾಗೆ ಮಾಡುವೆನು! ದೇವಿ ನಿನ್ನ ಅಪೇಕ್ಷೆಯನ್ನು ಹೇಳು. ನ್ಯಾಯ–ಅನ್ಯಾಯ, ಧರ್ಮ–ಅಧರ್ಮ ಒಂದನ್ನೂ ಕೇಳದೆ, ಪರಿಗಣಿಸದೆ, ನಿನ್ನಿಷ್ಟದಂತೆ ನಡೆಯುತ್ತೇನೆ. ಮಂಗಳೆ, ಈ ಕರಾರನ್ನು ಕೇಳು. ಪ್ರಾಣವನ್ನು ಪಣ ಒಡ್ಡಿದ್ದೇನೆ. ನೀನು ಬಯಸಿದುದು ನಿರ್ವಿಘ್ನವಾಗಿ ಸಿದ್ಧಿಸುವುದು, ಏಳು! ಕೇಳು!'

ಧರಾಧೀಶನು ಈ ರೀತಿ ಮನ್ಮಥನ ಹೂವಿನ ಅಲಗಿನ ಹೊಡೆತದಿಂದ ಮೈಮರೆತು, ಕಾಮನಿಗೆ ಸಿಲುಕಿ – ರಾಮನನ್ನು ತೊರೆವೆನು, ತನ್ನ ಹಾದಿಗೆ ಬರುವನೆಂಬುದನ್ನು ಕಾಣುತ್ತ ಕೈಕೆಯು – ತುದಿಯ ಬೆರಳಿನಿಂದ ಕಂಬನಿ ಒರೆಸಿಕೊಳ್ಳುತ್ತ ನುಡಿಯ ತೊಡಗಿದಳು. ಅವಳ ತೆರೆದ ತೊಂಡೆಯ ಹಣ್ಣಿನಂತೆ ಕೆಂಪಾಗಿರುವ ತುಟಿಯು, ರಾಜನ ಬುದ್ಧಿಯೆಂಬ ಗಜಗತಿಗೆ ಸತಿಯು ಅಗೆಯುವ ಬಾವಿಯಂತಹ ಹಳ್ಳದ (ಖೆಡ್ಡ) ಕಾವಿ ಮಣ್ಣಾಗಿತ್ತು.

'ಜೀವೇಶನೆ ಕಾಯಿಲೆ ಅಲ್ಲ. ನೃಪತಿಯೆ ನೀನೆ ಇರಲು, ನನಗೆ ಬೇರೆ ಸಂಪತ್ತೇಕೆ ಬೇಕು. ನನ್ನ ಮನಸ್ಸು ನಿಂದೆ ಅಪಮಾನಗಳಿಂದ ಬೆಂದಿಲ್ಲ. ಮನದನ್ನ, ಕೇಳಿದುದನ್ನು ಕೊಡುವೆನೆಂದು ಚುಂಬನ ರಹಸ್ಯಮುದ್ರೆಯನ್ನೊತ್ತಿ ಆಣೆಯಿಟ್ಟು ಆಡಿದರೆ ನನ್ನ ಮನಸ್ಸಿನಲ್ಲಿರುವುದನ್ನು ನಿನಗೆ ಹೇಳದೆ ಇರುವೆನೆ?'

ಪ್ರಾಣಮಂ ಪತ್ತುವಿಟ್ಟಾದೊಡಂ ನಿನ್ನಿಷ್ಟಮಂ ಸಲಿಪೆನೆಂದಾಣೆಯಿಟ್ಟಾಡಿದೆನ್

'ಏಕೆ ಪೀಡಿಸುವೆ? ನನಗೆ ಮೂರುಲೋಕಗಳಲ್ಲಿ ನಿನಗಿಂತಲೂ ಮಿಗಿಲಾದ ಪ್ರಿಯರು ಯಾರಿದ್ದಾರೆ ಹೇಳು? ಪ್ರಾಣವನ್ನು ಒತ್ತೆಯಿಟ್ಟಾದರೂ ನಿನ್ನ ಇಷ್ಟವನ್ನು ನೆರವೇರಿಸುವೆನು ಎಂದು ಆಣೆಯಿಟ್ಟು ಹೇಳುತ್ತೇನೆ. ಮತ್ತಿದೇನು? ಕುಸುಮಕೋಮಲೆಯೆ, ಪುರುಷರಲ್ಲಿ ನನಗೆ ರಾಮನು ಹೇಗೊ ಹಾಗೆ ಹೆಣ್ಣುಗಳಲ್ಲಿ ನೀನು ನನಗೆ ಪ್ರಿಯತಮಳು. ಹೇಳು ಬಯಕೆ ಏನೆಂದು. ಮುದ್ದು ಮಗು ನನ್ನ ರಘುರಾಮನ ಆಣೆ. ನಿನ್ನ ಆಶೆಯು ಕಲ್ಪತರು ಮೂಲವನ್ನು ಸೇರಿತು ಎಂದು ತಿಳಿ!'

ದೀಹಕ್ಕೆ ಎರಗಿದ ಹಕ್ಕಿಯು ಬಲೆಯೊಳಗೆ ಬಿದ್ದುದನ್ನು ಕಾಣುವ ಬೇಡನಂತೆ, ಲತಾಂಗಿಯು ಉಲ್ಲಸಿತಳಾಗಿ ದಶರಥನ ಪ್ರಾಣಕ್ಕೆ ಘೋರವಾದ ವಿಷವನ್ನು ಬಡಿಸಿದಳು.

'ಪ್ರಾಣೇಶನೇ, ನಾನಿಂದು ಧನ್ಯೆ! ನಿನ್ನ ಈ ಲೋಕಕಲ್ಯಾಣಕರ ಮಾತನ್ನು ಕೇಳಿ ದೇವತೆಗಳು ಹೋದ ಸ್ವರ್ಗ ಮರಳಿ ಪಡೆದಂತೆ ನಲಿಯುತ್ತಿದ್ದಾರೆ. ಮೊದಲು ಅಂದು ನೀನು ಹೇಳಿದ ಪ್ರಣಯ ಪ್ರಸಂಗವನ್ನು ಇಂದು ನೆನಪು ಮಾಡಿ ಕೊಡುತ್ತೇನೆ. ನನಗೆ ಆ ಎರಡು ವರಗಳನ್ನು ನೀಡಬೇಕು. ರಾಮಪಟ್ಟಾಭಿಷೇಕಕ್ಕೆ ಮಾಡಿರುವ ಸಿದ್ಧತೆಯಲ್ಲಿಯೇ ಭರತನಿಗೆ ಪಟ್ಟಕಟ್ಟಬೇಕು. ಈ ರಾಜ್ಯವು ಶತ್ರುರಹಿತವಾಗುವುದಕ್ಕೋಸ್ಕರ ಕೌಸಲ್ಯೆಯ ಮಗನನ್ನು ಹದಿನಾಲ್ಕು ವರ್ಷಗಳು ಕಾಡಿಗೆ ಕಳುಹಿಸಬೇಕು! ಅವನು ನಾರುಬಟ್ಟೆಯುಟ್ಟು ಕೃಷ್ಣಮೃಗ ಚರ್ಮಧರಿಸಿ, ಜಟೆಯನ್ನು ಬಿಟ್ಟು ಈ ಬಾಳಿನಿಂದ ದೂರ ಅರಣ್ಯದಲ್ಲಿರಬೇಕು !'

ಮನ್ಮಥನ ಸದನವೆನ್ನುವಂತೆ ಮೋಹವನ್ನುಂಟುಮಾಡುತ್ತಿದ್ದವಳ ವದನವನ್ನು ಗಾಬರಿಗೊಂಡು ಹೆದರಿ ನೋಡುತ್ತಿರಲು ರಾಜನಿಗೆ ದೃಷ್ಟಿಮಂದವಾಯಿತು. ಮನಸ್ಸು ಕದಡಿತು. ಸಿಡಿಲಿನ ಹೊಡೆತಕ್ಕೆ ಉರುಳುವ ಮರದಂತೆ ಅರಸನು ನೆಲಕ್ಕೆ ಉರುಳಿ ಬಿದ್ದನು. ಸತಿಯ ಶೈತ್ಯೋಪಚಾರಕ್ಕೆ ಮತ್ತೆ ಚೇತರಿಸಿಕೊಂಡನು. ತನ್ನ ಕಣ್ಣನ್ನು ತಾನೇ ನಂಬದೆ ಬೆಪ್ಪು ಆವರಿಸಿದಂತೆ ಬೆರಗಿನಿಂದ ತನ್ನೆದುರು ಇರುವವಳನ್ನು ನಟ್ಟ ನೋಟದಿಂದ ನೋಡುತ್ತ ಬಾಯಿ ತೆರೆದನು.

'ತೆಗೆ, ತೆಗೆ, ಸುಳ್ಳಾಡಬೇಡ! ಪುಣ್ಯರೂಪದಿಂದ ಪಾಪವೇನಾದರೂ ಹುಟ್ಟುತ್ತದೆಯೆ? ಕೈಕೆಯಿಂದ ಮಂಥರೆಯ ವಿಕೃತರೂಪ ಹೊಮ್ಮುತ್ತದೆಯೆ? ನಿಜವಾಗಿ ನನ್ನ ಚಿತ್ತ ಭ್ರಾಂತಿಗೊಳಗಾಗಿದೆ.!'

ಎಂದು ಹೇಳುತ್ತ, ದುಃಸ್ವಪ್ನದಿಂದ ಮೆಲ್ಲನೆ ಓಡಿಹೋಗುವಂತೆ, ತಡೆಯಲಾರದೆ ತತ್ತರಿಸಿ ಎದ್ದನು. ತೂಗುತ್ತ, ಬಾಗುತ್ತ, ತಪ್ಪು ಹೆಜ್ಜೆಗಳನ್ನಿಡುತ್ತ ಗೋಡೆಯನ್ನು ದೊಣ್ಣೆಯಂತೆ ಆಧರಿಸಿ ನಡೆಯುತ್ತ ಕೋಪಗೃಹದಿಂದ ಹೇಗೋ ಹೊರಗೆ ಬಂದನು. ಹಾವಾಡಿಗ ಬರೆದ ಮಂಡಲದ ತಡೆಯೊಳಗೆ ಮಂತ್ರಶಕ್ತಿಗೆ ಸಿಕ್ಕಿ ಬುಸುಗುಡುವ ನಾಗರಾಜನಂತೆ

ಧರಣಿಪತಿ ದಶರಥನು ಕುಸಿದು ಕುಳಿತನು.

ಕಾರಿದ ವಿಷವನ್ನು ತಾನೆ ಮರಳಿ ಹೀರಲು ಬಯಸಿ ಬಳಿ ಬರುವ ನೀಲ ಸಾಗಿನಿಯಂತೆ ತನ್ನ ಹತ್ತಿರಕ್ಕೆ ಪರಿತಪಿಸಿ ಬರುತ್ತಿದ್ದ ಭರತನ ತಾಯಿಯನ್ನು ಕೋಪಗೊಂಡ ರಾಜನು– ಮುನಿಶಾಪಮಹಿಮೆಯಿಂದೆಂಬಂತೆ ನೂಕಿದನು.

ನನ್ನ ಹೃತ್ ಪಿಂಡಮಂ ಪಿಂಡಿ ನೆತ್ತರ್ ಕುಡಿಯಲೆಳಸಿದೆ : ನಿಶಾಚರಿಯೆ ನೀಂ ದಿಟಂ!

'ಕುಲಘಾತಿನಿಯೆ, ಪಾಪಿಯೆ, ನಡೆ, ತೊಲಗು! ಮಣಿಹಾರವೆಂದು ಕಂಠಕ್ಕೆ ಮಾಲೆಯಾಗಿ ಧರಿಸಿಕೊಂಡೆನು. ರವಿಕುಲದ ಮೈಗೆ ಅದು ಹಾವಾಗಿ ಹೆಡೆಯೆತ್ತಿ ಕಚ್ಚಿ ವಿಷವೂಡಿತು. ಈ ಕುಲಕ್ಕೆ ವಿಷವನ್ನು ಎರೆವ ಮತಿಯ ದುರ್ಬುದ್ಧಿಯನ್ನು ನಿನಗೆ ಯಾರು ಹೇಳಿದರು? ನನ್ನ ಎದೆ ಗುಂಡಿಗೆಯನ್ನು ಹಿಂಡಿ ರಕ್ತವನ್ನು ಕುಡಿಯಲು ಆಶಿಸಿದೆ; ನೀನು ನಿಜವಾಗಿ ರಾಕ್ಷಸಿ!

'ನನಗೆ ಯಾವಾಗಲೂ ರಾಮನನ್ನು ನೋಡದೆ ಮನಸ್ಸು ಸಮಾಧಾನಗೊಳ್ಳುವುದಿಲ್ಲ. ಕೈಕೆಯೆ ಕೇಳು, ನೀನು ಕಾಡಿಗೆ ಅಟ್ಟುತ್ತಿರುವುದು ರಾಮನನ್ನು ಅಲ್ಲ, ನಿನ್ನ ಮಾಂಗಲ್ಯವನ್ನು. ರಾಮ ಭರತರಲ್ಲಿ ಭೇದವನ್ನೆಣಿಸಬೇಡ. ರಾಮನ ಚಂದ್ರೋದಯಕ್ಕೆ ಭರತನ ಆನಂದ ಸಾಗರವು ಅತಿ ಉಲ್ಲಾಸಗೊಳ್ಳದೆ? ದುರ್ಬೋಧೆಗೊಳಗಾಗಿ ನೀನು ಕುಲಗೇಡಿಯಾಗಬೇಡ. ನಿನ್ನ ಮೈ ಹೇಗೋ ಹಾಗೆ ನಿನ್ನ ಮನಸ್ಸು ಚೆಲುವಿನಿಂದ ಕೂಡಿರಲಿ. ಮುತ್ತುಸಿಪ್ಪಿನೊಳಗೆ ಮುತ್ತುಗಳಿದ್ದರೆ ಪ್ರಕೃತಿ; ಹಾವಿನ ಮರಿಗಳಿದ್ದರೆ ವಿಕೃತಿ! ಇದುವರೆಗೆ ನಿನ್ನಲ್ಲಿ ವಿರೂಪವನ್ನು ಕಂಡಿರಲಿಲ್ಲ. ನಿನಗೆ ಇಂದು ಒಮ್ಮಿಂದೊಮ್ಮೆಗೆ ಈ ವಿಕಾರ ಚಿತ್ತ ಏಕಾಯಿತು?

'ಇಂದೀವರಾಕ್ಷಿಯೇ(ಕನ್ನೈದಿಲೆಯಂತೆ ಕಣ್ಣುಳ್ಳವಳು), ಇಂದು ನಿನಗೆ ಒಮ್ಮಿಂದೊಮ್ಮೆಗೆ ಮನಸ್ಸು ಹೀಗೇಕೆ ವಿಕೃತವಾಯಿತು?'

ಎಂದು ಕೋಪದಿಂದ ಪ್ರಶ್ನಿಸಿದನು. ಮೆಲ್ಲನೆ ಸಾವಕಾಶವಾಗಿ ಇಳಿದಿಳಿದು, ಹೃದಯ ತಾಪದಿಂದ ದೀನಮನಸ್ಸಿನವನಾಗಿ ದುಸ್ಥಿತಿಯನ್ನು ತಲುಪಿದನು. ಅದನ್ನು ನೋಡಿ ಕೇಕಯ ಎಂಬ ಒಳ್ಳೆಯ ಕುಲದಲ್ಲಿ ಹುಟ್ಟಿದ ಅವಳು ಎದೆ ಕರಗಿ ಚಿಂತೆಗೆ ಒಳಗಾದಳು. ತನ್ನ ಕೇಳುವಿಕೆಗೆ ತಾನೇ ಬೆದರಿದಳು. ಕೊರಳ ನರಗಳು ಬಿಗಿಯಲು, ಮೈ ನಡುಗಲು ಕೈ ಮುಗಿದು ಗದ್ಗದಿಸಿದಳು.

'ರಾಜೇಂದ್ರ ನನಗೆ ನಿನ್ನ ವಾಗ್ದಾನಗಳು ಬೇಡ, ಹಿಂತೆಗೆದುಕೊ. ನಿನಗೆ ಈ ರೀತಿ ನೋವನ್ನುಂಟುಮಾಡಿ ನಾನು ಮತ್ತು ನನ್ನ ತವರಿನಲ್ಲಿರುವ ಮಗನು ಸುಖವಾಗಿರುತ್ತೇವೆಯೆ? ಮರೆತು ಇನ್ನೆಂದೂ ನಿನ್ನ ವರದಾನವನ್ನು ನೆನೆಯುವುದಿಲ್ಲ.

ನನ್ನ ಬಯಕೆಯನ್ನು ಹೇಳುವುದೆ ತಡ-ಕಲ್ಪತರುವನ್ನು ಕೇಳಿದಂತೆ ಕೈಗೂಡುತ್ತದೆ ಎಂದು ನನಗೆ ಒಲಿದು, ರಾಮನ ಮೇಲೆ ಆಣೆಯಿಟ್ಟೆ. ಅದಕ್ಕೆ ಕೇಳಿದನಲ್ಲದೆ, ಅಮಂಗಳಕ್ಕಾಗಿ ವ್ರತವಾಗಿಸಲಿಲ್ಲ!'

ಕಬಂಧನ ಮೊರೆಯೊ? ಶಬರಿಯ ಕರೆಯೊ? ರಾಮನ ಆತ್ಮಾಭಿಲಾಷೆಯೊ? ಪಾತ್ರಗಳ ಅಂತರಾಳದಲ್ಲಿ ತನ್ನ ಸೂತ್ರಗಳನ್ನು ನಡೆಯಿಸುವ ಅಂತರ್ಯಾಮಿಶಕ್ತಿಯ ವಿಲಾಸವೊ? ಕೈಕೆ ಆಡಿದ ಮಾತು ಭೂಮಿಪನ ಮನಸ್ಸಿಗೆ ಮೂದಲಿಕೆಯಂತಾಯಿತು! ಕೋಪ ಜ್ವಾಲೆ ಪ್ರೋಜ್ವಲಿಸಿತು. ಪ್ರಾಣಾಗ್ನಿ ಪರ್ವತ ಜ್ವಾಲಾಮುಖಿಯ ಮುಖದ ಲಾವಾರಸವು ಹೊಳೆಯಾಗಿ ಹೊರಸೂಸುವಂತೆ ರೋಷಭೀಷಣನಾಗಿ ಕಠೋರ ನುಡಿಯನ್ನು ಹೊರಹಾಕಿದನು.

ಕೈಕೆ, ನಿನ್ನಂನೇಯ್ದನಾ ಪುಲಿ ದರಿಗಳೆರಡುಮಂ ಕೂಡಿಸಿ ವಿಧಾತಂ!

'ಪಾಪಿಯೆ, ಅವನತಿಯಿಂದ ಅಧೋಗತಿಗೆ ನನ್ನನ್ನು ನೂಕಲು ಪ್ರಯತ್ನಿಸುವೆ. ನಾನು ನಿನ್ನ ಕೈಯಿಡಿದು, ಕೊಲ್ಲಲು ಬರುವ ಉರುಳು ಪಾಶವನ್ನು ಹೊನ್ನೆಂದು ಕೊರಳಿಗೆ ಶೃಂಗರಿಸಿಕೊಳ್ಳುವ ದಡ್ಡನಂತಾದೆನು. ವರಗಳನ್ನು ನೀಡಿದರೆ ಆ ರಾಮನನ್ನು ಕಾಡಿಗೆ ಅಟ್ಟಿ ರಾಜ್ಯವನ್ನು ಬೇಡಿದೆ! ಮತ್ತೆ ಈಗ ಅವುಗಳು ಬೇಡವೆಂಬುವ ನೆಪದಿಂದ ವಚನಭ್ರಷ್ಟನನ್ನಾಗಿ ಮಾಡಿ, ರವಿಕುಲ ಯಶೋದೀಪ್ತಿಯು ನನ್ನಿಂದೆ ಮರೆಯಾಗುವಂತಹ ಉಪಾಯವನ್ನು ನೆನೆಯುತ್ತಿರುವೆ!

'ಕೈಕೆ, ಕೇಳು. ಬ್ರಹ್ಮನು ಹುಲಿ ಮತ್ತು ಕಂದರಗಳೆರಡನ್ನು ಕೂಡಿಸಿ ನಿನ್ನನ್ನು ಸೃಷ್ಟಿಸಿರುವನು! ನೀನು ಸರ್ವನಾಶಕಳು! ಹೆಣ್ಣಲ್ಲ; ಯಮನು ಒಡ್ಡಿದ ವಿನಾಶ ಪಾಶ! ಹಂಸ ಪಕ್ಷಿಯ ಗರಿಯ ನವಿರು ಹಾಸಿಗೆಯಲ್ಲಿ ಮಲಗುವಾತನನ್ನು ಕಲ್ಲು ಮುಳ್ಳಿಗೆ ಅಟ್ಟಲು ನೀನು ಅದು ಹೇಗೆ ಮನಸ್ಸು ಮಾಡಿದೆ? ಮುಪ್ಪುದೊರೆಯು ಚೆಲುವೆ ಕಿರಿ ಹೆಂಡತಿಗೆ ಮರುಳಾಗಿ ಕಂದನನ್ನು ಕಾಡಿಗೆ ಅಟ್ಟಿದನೆಂದು ಲೋಕವೆಲ್ಲವು ನಗದಿಹುದೆ ಹೇಳು. ನನ್ನ ಹೆಸರನ್ನು ನಿಂದನೆಯ ಗಾದೆಯಾಗಿಸಿದೆಯಲ್ಲ?'

ವಿಧಿಯು ಅವಿದ್ಯಾಮಾಯೆಯನ್ನು ಕರೆದು ಹೀಗೆ ಆಜ್ಞೆ ಮಾಡಿಸಿದನು: 'ವಿಭೂತಿ ಪುರುಷನು ಪ್ರತ್ಯಕ್ಷವಾಗುವ ಸಾಧನಾರ್ಥವಾಗಿ ಬೇಗನೆ ಕೈಕೆಯ ಆತ್ಮವನ್ನು ಹೊಕ್ಕು ವಿನ್ಯಾಸವನ್ನು ರಚಿಸು!' ಕೈಕೆಯು ರೂಪ ಲಾವಣ್ಯದಿಂದ ಚಿನ್ನದ ಕಠಾರಿಯಂತೆ ಮಿರಮಿರುಗಿ ನಿಂತಿದ್ದಳು. ಅವಳು ತಕ್ಷಣ ವಿಧಿಯ ಕೈ ಝಳಪಿಸುವ ಆಯುಧವಾದಳು. ಹುಬ್ಬುಗಂಟಿಕ್ಕಿದ ಕುಡಿನೋಟದಿಂದ ಮಿಂಚಿ,

'ಕೋಸಲೇಶ್ವರನೇ, ಲೇಸಾಯ್ತು! ಲೇಸಾಯ್ತು!' ಎಂದು ಸರ್ಪಿಣಿಯ ರೀತಿ ಎದೆಯ ತಿದಿಯೊತ್ತಿ ಮೂಗಿನ ಸೊಳ್ಳೆ ದೊಡ್ಡದಾಗಿಸಿಕೊಂಡು ಉಸಿರಾಡುತ್ತ ಹೇಳಿದಳು:

'ಒಳ್ಳಿತಾಯಿತು, ಒಳ್ಳಿತಾಯಿತು! ಕೋಸಲಾಧೀಶನೇ, ತಪ್ಪು ನಿನ್ನದಾಗಿರುವಾಗ ಸಾಮಾನ್ಯನಂತೆ, ಅನಾಗರಿಕನಂತೆ ನನ್ನನ್ನು ಏತಕ್ಕೆ ಈ ರೀತಿ ಬಯ್ದಾಡುತ್ತಿರುವೆ? ನೀನೆ ಮೆಚ್ಚಿ ಆ ವರಗಳನ್ನು ನನಗೆ ಕೊಟ್ಟೆ. ನೀನು ಒಪ್ಪಿ, ಕೇಳು ಎಂದುದರಿಂದ ನಾನು ಕೇಳಿದೆ. ನೀನು ಗೋಳಿಡುವುದನ್ನು ಕಂಡು ದುರ್ದಾನವನ್ನು ಬೇಡವೆಂದೆ. ವ್ಯರ್ಥವಾಗಿ ನನ್ನನ್ನೇತಕ್ಕೆ ಬಯ್ಯುವೆ? ಮಾವನ ಮನೆಗೆ ಕಳುಹಿಸುವ ನೆಪದಲ್ಲಿ ಕಂದನನ್ನು ನಾಡಿನಿಂದ ಹೊರಗೆ ಅಟ್ಟಿದೆ. ನೀನು ವಂಚಕರ ಉಪದೇಶದಿಂದ, ಅಶ್ಲೀಲದ ಆತುರದಿಂದ ಪಟ್ಟಮಹಿಷಿಯ ಮಗನಿಗೆ ಗುಟ್ಟಾಗಿ ಪಟ್ಟಕಟ್ಟುವ ಮೋಸವಿದ್ಯಾ ಪ್ರವೀಣನಾಗಿರುವೆ. ನೀನೇ ರವಿಕುಲ ಯಶೋದೀಪ್ತಿಯನ್ನು ಕಾಂತಿಹೀನವಾಗಿಸಿರುವೆ. ಅಬಲೆಯಾದ ನಾನು ಅದನ್ನು ಮರಳಿ ಬೆಳಗಿಸಲು ಸಾಧ್ಯವೇ? ಮಂಕಾಗಿರುವ ಆ ಯಶೋದೀಪ್ತಿಯನ್ನು ಮತ್ತೆ ಹೊತ್ತಿಸಿ, ಆರಿ ಹೋಗದಂತೆ ಕಾಪಾಡಲು ರಾಮನೊಬ್ಬನೇ ಶಕ್ತನಲ್ಲವೆ?'

ಸತಿಯ ನಾಲಗೆಯ ಮಸೆದ ಕತ್ತಿಯ ಅಂಚಿನ ಆಘಾತಕ್ಕೆ ಆ ಪೃಥ್ವೀಶ್ವರನು ಉತ್ತರಿಸದಾದನು. ಮತಿಶೂನ್ಯನಾಗಿ, ಚಲಿಸಲಾಗದ ಮಡಕೆಯ ಚೂರಿನಂತೆ ಮೂರ್ಛೆಗೊಳಗಾಗಿ ಕುಸಿದು ಬಿದ್ದನು.

ಅಷ್ಟರಲ್ಲಿ ಕುಬ್ಜೆ ಮಂಥರೆಯು ರಾಮನ ಬಳಿಗೆ ಓಡಿದಳು. ಪಟ್ಟಾಭಿಷೇಕ ಶುಭವಾರ್ತೆಯನ್ನು ಕೇಳಿದ ರಾಮನು ಸಂತೋಷದಿಂದ ತಾಯಿಯೊಡನೆ ದೇವಾದಿದೇವನ ಪೂಜೆಯಲ್ಲಿ ನಿರತನಾಗಿದ್ದನ್ನು ನೋಡಿದಳು. ಅಲ್ಲಿ ಅವಳು ಅವನ ಕಾಲನ್ನು ಹಿಡಿದು ರೋದಿಸಿದಳು. ಕರುಣೆಗಳ ಒಡೆಯ ರಾಮನು ಕನಿಕರಿಸಿ ಕೈ ಹಿಡಿದು ದುಃಖದ ಕಾರಣವನ್ನು ಕೇಳಿದನು. ಅವಳು ಸತ್ಯವನ್ನು ಅಸತ್ಯದಿಂದ ಬೇರ್ಪಡಿಸಲು ಸಾಧ್ಯವಾಗದಂತೆ ತೊದಲಿದಳು. ಅದನ್ನು ಕೇಳಿ ಕೌಸಲ್ಯೆ ಬೆಚ್ಚಿದಳು. ಸತ್ಯವನ್ನು ತಿಳಿದು ಬರುತ್ತೇನೆಂದು ತಾಯಿಗೆ ಸಮಾಧಾನ ಹೇಳಿದ ಅವನು ಕೈಕೆ ದಶರಥರಿದ್ದ ದುಃಸ್ಥಿತ ದುರಂತ ಸನ್ನಿಧಿಗೆ ಹೋದನು.

ರಾಮಚಂದ್ರನು ಮೂರ್ಛಿತನಾದ ಭೂಪತಿಯನ್ನು ಮೆಲ್ಲನೆ ಸಾವಕಾಶವಾಗಿ ಮೇಲಕ್ಕೆತ್ತಿದನು. ಕನಕ ಮಂಚಕ್ಕೆ ಒಯ್ದು ಮಲಗಿಸಿ ಬೀಸಣಿಗೆಯಿಂದ ಗಾಳಿ ಹಾಕಿದನು. ಗೂನಿಯು ಎರಡೂ ಕೈಗಳಿಂದ ಮುಖ ಮುಚ್ಚಿಕೊಂಡು ಅಳುತ್ತ ಕುಳಿತಿದ್ದ ಕೈಕೆಯನ್ನು ಸಂತೈಸತೊಡಗಿದಳು. ಪ್ರೀತಿಯಿಂದ ತನ್ನನ್ನು ಕಾರಣವೇನೆಂದು ವಿಚಾರಿಸಿದ ಕಂದನಿಗೆ ಕೈಕೆಯು ಏನೂ ಹೇಳಲಾರದೆ ಬರಿದೆ ಗದ್ಗದಿಸಿದಳು. ಗೂನಿಯ ಕಡೆಗೆ ನೋಡಿದಳು. ಅವಳು ನಡೆದುದನ್ನು ಹೇಳಿದಳು. ಅದನ್ನು ಕೇಳಿ ರಾಮನ ಮುಖದಲ್ಲಿ ನಗೆಯ ಚಂದ್ರನು ಮಿನುಗಿದನು. ಧೀರ ಮಂದಸ್ಮಿತ ವದನಾರವಿಂದದ ಆ ಕಾಂತಿಯು ದೇವತೆಗಳ ಮುಖದ ಕತ್ತಲೆಯನ್ನು ತಿವಿಯುವಂತಿತ್ತು. ದಿವ್ಯಗಂಗಾನದಿಗೆ ಪುಲಕದ ಅಲೆಯನ್ನು

ಉಂಟುಮಾಡುವಂತೆ ಮಧುರ ಮಾತಿನ ಮಕರಂದವನ್ನು ಭರತಮಾತೆಯ ಕಿವಿಗೆ ಹರಿಸಿದನು.

ಋಣಿಗಳೈಸಲೆ ತನೂಭವರ್ ತಮ್ಮ ತಂದೆಯ ಋಣಕೆ

'ತಾಯಿ ಇಷ್ಟು ಅಲ್ಪವಾದುದಕ್ಕೆ ಈ ಮಹಾ ದುಮ್ಮಾನವೇಕೆ? ನಿನ್ನಾಸೆ ಕೈಗೂಡಿರುವುದು. ರಘುಕುಲೇಶ್ವರ ನನ್ನ ಪಿತೃದೇವನ ಮಾತನ್ನು ಸಾಮಾನ್ಯವೆಂದು ತಿಳಿಯಬೇಡ. ತಮ್ಮ ತಂದೆಯ ಋಣಕ್ಕೆ ಸುತರು ಋಣಿಗಳು. ತಾಯಿ, ಕೇಳು. ನಾನು ಭರತ ಶತ್ರುಘ್ನ ಲಕ್ಷ್ಮಣರು ಕೂಡಿ ನಿನ್ನ ಬಯಕೆ ಕೈಗೂಡುವಂತೆ ಹೊಣೆಗಾರರಾಗುವೆವು. ತಂದೆಯು ನೀಡಿದ ವಾಗ್ದಾನವನ್ನು ಸಫಲವಾಗಿಸುವೆವು! ನೀನು ಕೇಳಿದ ವರವು ನಾನೇ ಬೇಡಿದುದಲ್ಲವೆ? ಕಾಡನ್ನು ಸುತ್ತಾಡಿ ಮುನಿವಸತಿಗಳಿರುವ ನೆಲೆಯನ್ನು ನೋಡಿ ಬರುತ್ತೇನೆ ಎಂಬ ನನ್ನ ಕೋರಿಕೆಗೆ ತಂದೆಯು ಬೆದರಿದ್ದನು. ನಾನು ಹಕ್ಕಿಗರಿಯಂತೆ ಹಾರಲು ಬಯಸಿದ್ದನ್ನು ತಡೆವ ಮೋಹದಿಂದ ನನಗೆ ಬೇಗ ಕಿರೀಟ ಭಾರದಿಂದ ಹರಸಲು ಪ್ರಯತ್ನಿಸಿದನು.

'ಅವನ ಮಾತಿನಲ್ಲಿ ಭರತನನ್ನು ವಂಚಿಸುವ ಬುದ್ಧಿ ಸ್ವಲ್ಪವೂ ಇಲ್ಲ ಎಂಬುದಕ್ಕೆ ನಾನೆ ಸಾಕ್ಷಿ. ನೀನು ದಿಟವಾಗಿ ತಾಯಿ; ನಿನ್ನಾಸೆಯು ನನ್ನ ಕಲ್ಯಾಣವನ್ನು ಸಾರುತ್ತಿದೆ. ಭರತನು ಆಳುತ್ತಾನೆ, ಬಾಳುತ್ತಾನೆ. ಕೋಸಲ ರಾಜ್ಯಭಾರವನ್ನು ಜಗತ್ತು ಮೆಚ್ಚುವಂತೆ ತಲೆಯಲ್ಲಿ ಹೊರುತ್ತಾನೆ! ವನವಾಸವೇನು ಸಾಹಸವೇ? ಗಿರಿವನಪ್ರಿಯನಾದ ನನಗೆ ಗಿರಿವನವಾಸವು ಕಲಾನಂದಕರವಲ್ಲವೆ? ನಾರುಮಡಿ ಮತ್ತು ಜಟೆಯು ಕಿರೀಟಕ್ಕಿಂತ ಕೀಳೆ? ಪಿತೃವಚನ ಪರಿಪಾಲನೆಯೆ ನನಗೆ ಧರ್ಮವು, ಪ್ರಥಮಾದ್ಯತೆಯು, ಉತ್ತಮವು ಆಗಿದೆ.'

ಎಂದು ಹೇಳುತ್ತ, ನಿಧಾನವಾಗಿ ಕಣ್ಣು ತೆರೆದು ಎಚ್ಚರಗೊಳ್ಳುತ್ತಿದ್ದ ತಂದೆಗೆ ರಾಮನು ಸೇವೆ ಮಾಡುತ್ತಿದ್ದನು. ಆಗ ಗೂನಿಯು ಮತ್ತೆ ಹೀಗೆ ಮಾತು ತೆಗೆದಳು:

'ಏನಾದರೂ ಆಗಲಿ ಹೆತ್ತ ತಂದೆಯು ತನ್ನ ಮಗನಿಗೆ ಪಟ್ಟವನ್ನು ಬಿಟ್ಟು ಕಾಡಿಗೆ ಹೋಗುವ ಆಜ್ಞೆಯನ್ನು ಕೊಡುತ್ತಾನೆಯೆ? ತಂದೆಯ ಇಂಗಿತವನ್ನು ತಿಳಿದು ನಡೆಯುವುದೇ ನಿನಗೆ ಸರಿಯಾದ ಮಾರ್ಗ.'

ಮಂಥರೆಯ ಚಾಟಿಯ ಹೊಡೆತದಂತಹ ಕ್ರೂರನುಡಿ ಕೇಳಿ ದಶರಥನ ಪ್ರಾಣವು ಆಯಾಸಗೊಂಡಿತು. ಅದನ್ನು ಕಂಡು ರಾಜೀವಲೋಚನ ರಾಮನ ಕಣ್ಣುಗಳಲ್ಲಿ ನೀರು ತುಂಬಿತು.

'ತಾಳಿಕೊ ತಾಯಿ! ಮಗನ ಮೇಲಿನ ಪ್ರೀತಿಯಿಂದ ತಂದೆ ಬಾಯ್ಬಿಟ್ಟು ಹೇಳದಿದ್ದರೂ, ನಾನೇ ಅರಣ್ಯಕ್ಕೆ ಹೋಗುತ್ತೇನೆ. ಹದಿನಾಲ್ಕು ವರ್ಷದ ಅವಧಿ ಪೂರೈಸಿ ಬರುತ್ತೇನೆ.

ನಿಮ್ಮ ಅಪ್ಪಣೆಯನ್ನು ಪಾಲಿಸಲು; ನನ್ನ ತಂದೆಯ ಕಮಲಪಾದ ಸೇವೆಯನ್ನು ಮಾಡಿ ಆಶೀರ್ವಾದ ಪಡೆಯಲು ಸಿದ್ಧನಿದ್ದೇನೆ' ಎಂದು ಹೇಳಿದನು.

ತಾನು ಆಡಿದ ಒಳಿತಿನ ನುಡಿಗಳನ್ನು ಕೇಳಿ ಕಂಬನಿಯ ಧಾರೆಹರಿಸಿ ಗೋಳಿಡುತ್ತಿದ್ದ ಪಿತೃವಿನ ಪೂಜ್ಯಪಾದಗಳಿಗೆ ತನ್ನ ಆಗಸ ವಿಸ್ತಾರದ, ಪರ್ವತೋನ್ನತ ಹಣೆಯನ್ನು ಒತ್ತಿ ರಾಮಚಂದ್ರನು,

'ದುಃಖಿಸದಿರಯ್ಯ, ನಿನ್ನ ಪ್ರೀತಿಯ ಕೊಡೆಯ ನೆರಳಿರಲು, ಕಾಡಾದರೂ ತಾಯಿ ಕೌಸಲ್ಯೆಯ ಮಡಿಲಂತೆ ಯಾವಾಗಲೂ ತಂಪನ್ನು ನೀಡುತ್ತದೆ. ನಡೆಯುವುದೆಲ್ಲವೂ ಒಳ್ಳೆಯದಕ್ಕಾಗಿ ನಡೆಯುತ್ತದೆ. ಸರ್ವಶಕ್ತಿ ಜ್ಞಾನ ಮತ್ತು ಕಲ್ಯಾಣವು ಭಗವಂತನ ಕೃಪೆ. ಅದು ಜಗತ್ತಿನ ರಥವನ್ನು ಹಿಡಿದು ಎಳೆಯುವ ಶಕ್ತಿಶಾಲಿಯಾದ ಕುದುರೆಗಳ ಕಡಿವಾಣವನ್ನು ಹಿಡಿದಿದೆ.'

ಎಂದು ಹೇಳಿ ತಂದೆಗೆ ಪ್ರದಕ್ಷಿಣೆ ಬಂದನು. ಮತ್ತೆ ಕೈಕೆಗೆ ನಮಸ್ಕರಿಸಿ, ಮಂಗಳವು ಮನೆಯನ್ನು ಬಿಟ್ಟು ಹೋಗುವಂತೆ ಅಲ್ಲಿಂದ ಹೊರಟನು.

ಧುಮುಕಿತಯ್ ದಶರಥಮನಂ ಮತ್ತೆ ಮೂರ್ಛಾ ಶರಧಿತಲಕೆ

ದಶರಥನ ಮನಸ್ಸು ಮತ್ತೆ ಮೂರ್ಛಾ ಸಮುದ್ರತಲಕ್ಕೆ ಧುಮುಕಿತು.

ಹೊಳೆದಾಟಲು ದೋಣಿಯನ್ನು ಏರಿ ಹೋಗುವವನು ನಡು ನೀರಿಗೆ ಬಂದಾಗ ರಂಧ್ರದಿಂದ ನೀರು ಬುಗ್ಗೆಯಂತೆ ಒಳನುಗ್ಗಿ ಬರುತ್ತಿರುವುದನ್ನು ನೋಡುತ್ತಾನೆ. ತಕ್ಷಣ ದಿಗಿಲುಗೊಂಡು ಕೈ ಬೆರಳುಗಳಿಂದ ತಡೆಯಲು ತೊಡಗುತ್ತಾನೆ. ಸಾಹಸ ವ್ಯರ್ಥವಾಗಿ, ತೂತು ಇನ್ನಷ್ಟು ಹಿರಿದಾಗಿ, ಮೊದಲಿಗಿಂತಲೂ ಎರಡರಷ್ಟು ನೀರು ಒಳನುಗ್ಗುತ್ತದೆ! ಬಿಲದಿಂದ ಜಲವು ಚರ್ಮದ ದೋಣಿಯನ್ನು ಬಗ್ಗಬಗ್ಗನೆ ತುಂಬುತ್ತದೆ. ಆಗ ಆ ತೂತಿಗೆ ಬಟ್ಟೆಯನ್ನು ತುರುಕಿ ಛಿದ್ರವನ್ನು ಮುಚ್ಚಲು ಪ್ರಯತ್ನಿಸುತ್ತಾನೆ. ಆ ರಂಧ್ರವು ಇನ್ನೂ ಹೆಚ್ಚಾಗಿ ನೀರು ಮೊಳಕಾಲಿನವರೆಗೆ ಬರುತ್ತದೆ. ಹತಾಶೆಯಿಂದ ನೀರನ್ನು ತಡೆಯುವ ಕೆಲಸವನ್ನು ಬಿಟ್ಟು, ಬೊಗಸೆ ಕೈಗಳಿಂದ ಒಳನುಗ್ಗಿದಷ್ಟನ್ನು ಹೊರಕ್ಕೆ ಎಸೆಯಲು ವ್ಯರ್ಥಪ್ರಯತ್ನ ಮಾಡುತ್ತಾನೆ.

ನೀರು ನಾವೆಯನ್ನು ತುಂಬುತ್ತ ಅವನ ಎದೆಯತನಕ ಬರುತ್ತಿದ್ದಂತೆ ಬೆವರತೊಡಗುತ್ತಾನೆ. ಪುರುಷ ಪ್ರಯತ್ನವನ್ನು, ಬದುಕುವ ಆಸೆಯನ್ನು ಬಿಟ್ಟು, ದೇವರನ್ನು ಬೇಡಿಕೊಂಡು ಆಕಾಶಕ್ಕೆ ಕೈ ಮುಗಿಯುತ್ತಾನೆ. ದಡದ ಮರಗಳು ನಿಂತು ನೋಡುತ್ತಿರಲು ಹರಿಗೋಲಿನ ಸಮೇತ ಕಣ್ಣಿಗೆ ಮರೆಯಾಗುವಂತೆ ಮುಳುಗಿ ಹೋಗುತ್ತಾನೆ. ಆ ವಿಸ್ತೃತ ಜಲರಾಶಿಯು ಕೋಡಿಯಾಗಿ ಹರಿಯುತ್ತದೆ. ಹಾಗೆ ದಶರಥ ಮಹಾರಾಜನು ಮೂರ್ಛೆಯ ತಳಾತಳದಲ್ಲಿ ಮುಳುಗಿ ಹೋದನು!

❑



~~~~~~~~~~~~~~~~~~~~~~ ಸಂಚಿಕೆ – ೪ ~~~~~~~~~~~~~~~~~~~~~~

ಊರ್ಮಿಳಾ

ಪ್ರಳಯಕಾಲದಲ್ಲಿ ಸಮುದ್ರತಡಿಯಲ್ಲಿರುವ ವನದಲ್ಲಿ ಸಮುದ್ರದ ಅಲೆಯು ಮೀರಿ ಭೂಮಿಯನ್ನು ಆಕ್ರಮಿಸುವಂತೆ – ದುರ್ವಾರ್ತೆಯು ಸಕಲ ಸಾಕೇತ ಸಂಭ್ರಮದ ಸಿರಿಗೆ ಸಿಡಿಲಂತೆ ಬಡಿದು ಹರಡಿತು. ನಗರದ ಅಪಾರ ಜನ ದೊರೆಯ ಅರಮನೆಯ ಮುಂದೆ ಅಧಿಕಗೊಂಡ ಸಮುದ್ರದಂತೆ ಶಬ್ದಮಯವಾಗಿ ನೆರೆಯಿತು. ಅರಮನೆಯ ಜನ ಕಣ್ಣೀರ ಮಳೆಯಲ್ಲಿ ತೊಪ್ಪನೆ ತೋಯ್ದು ಹೋದರು. ಕ್ಷಣ ಪೂರ್ವದಲ್ಲಿ ಹರ್ಷದ ನೆಲೆಯಾಗಿ ನಲಿಯುತ್ತಿದ್ದ ಅಯೋಧ್ಯೆಯು ಶೋಕಸಾಗರವಾಯಿತು.
~~~~~~~~~~~~~~~~~~~~~~

ಹಾಗಾಯಿತು ಎಂದಾಗ – ಮನುಷ್ಯ ಮನದ ಉತ್ತರಮುಖಿಗೆ ವಿಧಿಯ ಚಿರತಾರೆ ಕಾಣುವುದು ಅಸಾಧ್ಯ !

ಕೌಸಲ್ಯೆಯು ತನ್ನ ಅರಮನೆಯೊಳಿದ್ದೆ, ಆಕಾಶದ ತುಂಬೆಲ್ಲ ಆವರಿಸಿದ್ದ ತುಮುಲ ಕಳಕಳ ಗೋಳಾಟದ ಕರುಳಿರಿಯುವ ಶಬ್ದವನ್ನು ಕೇಳಿದಳು. ಗಾಳಿಯ ಎಡೆಬಿಡದ ಹೊಡೆತಕ್ಕೆ ಅರಳಿಮರದ ಎಲೆ ಅದುರುವಂತೆ ತರತರನೆ ನಡುಗಿದಳು. ತಕ್ಷಣ ಆ ಗೋಳಿನ ಕಾರಣ ತಿಳಿಯಲು ಬಳಿಯಲ್ಲಿದ್ದ ದೂತಿಯನ್ನು ಕಳುಹಿಸಿದಳು. ಮನಸ್ಸಿನ ತಳಮಳವನ್ನು ತಾಳಲಾರದೆ ತಾನೇ ಚಾವಡಿಯ ಕಡೆಗೆ ನಡೆದಳು. ಕೋಪಗೊಂಡ ಲಕ್ಷ್ಮಣನೊಡನೆ ಬರುತ್ತಿದ್ದ ಪ್ರಶಾಂತ ಸಮುದ್ರ ಸಮನಾದ ಶ್ರೀರಾಮಚಂದ್ರನು ಆ ತಾಯಿಯ ದೃಷ್ಟಿಗೆ ಹಾಲನ್ನುಣಿಸುವಂತೆ ಕಂಡನು. ಬಳಿಬರಲು ತನ್ನ ಎರಡು ತೋಳುಗಳಿಂದ ಅಪ್ಪಿಕೊಂಡು ಅವನ ತಲೆಯನ್ನು ಮೂಸಿ ಮುದ್ದಾಡಿದಳು. ಮಗನು ಸುಮ್ಮನೆ ಇರುವುದನ್ನು ಕಂಡು ದುಗುಡಕ್ಕೊಳಗಾದಳು. ಊರ್ಮಿಳೆಯ ಗಂಡನನ್ನು ಏನೆಂದು ಕೇಳಲು, ಅವನು ಕಲ್ಲುಗುಂಡಿನಂತೆ ಮೂಕನಾಗಿದ್ದನು.

ಆ ಪುತ್ರ ವತ್ಸಲೆ ಬೆದರಿ ಅಳತೊಡಗಿದಳು. ರಾಜೀವಲೋಚನನು ತಾಯಿಯ ಬೆಚ್ಚನೆಯ ಕಣ್ಣೀರನ್ನು ತನ್ನ ಕೈದಾವರೆಯ ಕೋಮಲತೆಯಿಂದ ಒರಸಿದನು. ಮೆಲ್ಲನೆ ನಡೆದುದೆಲ್ಲವನ್ನು ವಿವರವಾಗಿ ಹೇಳಿದನು. ಸ್ವರ್ಗಧಾಮದ ಪುಣ್ಯವು ಮುಗಿಯಲು ಮರ್ತ್ಯಸೀಮೆಗೆ ಬೀಳುವ ಅಪ್ಸರೆಯಂತೆ ಕೌಸಲ್ಯೆಯು ಮೂರ್ಛೆಗೊಂಡು ಬಿದ್ದಳು. ಹೆತ್ತ ತಾಯಿ ಬೀಳಲು ಮೇಲಕ್ಕೆತ್ತಿ ಕುಳ್ಳಿರಿಸಿ, ಸತ್ಕರಿಸಿದನು. ಮೈ ತಿಳಿಯಲು ಅವಳು ಜೋರಾಗಿ ರಾಮಚಂದ್ರನನ್ನು ಪ್ರಶ್ನಿಸಿದಳು :

ಓ ವಿಧಿಯೇ, ನಿನ್ನ ಗರಗಸಕಿನಿತು ಕರುಳಿಲ್ಲ?

'ಮಗನೆ, ಕೈಕೆಯ ಮಗನಿಗೆ ರಾಜ್ಯ ಸಂಪತ್ತೆ? ನಿನಗೆ ಕಾಡೇ ಗತಿಯೆ? ನಾನು ಕೆಟ್ಟೆ, ನನ್ನನ್ನು ಎಲ್ಲರೂ ಕೈ ಬಿಟ್ಟರು. ಓ ಕಂದ ಲಕ್ಷ್ಮಣಾ ! ಬಾ ತಂದೆ. ನೀನಾದರೂ ಬಾಳಿಗೆ ಆಸರೆಯಾಗಿ ನನ್ನನ್ನು ಕಾಪಾಡು! ಹೋದ ಜನ್ಮದಲ್ಲಿ ನಾನು ಯಾರಿಗೆ ಕೇಡನ್ನು ಬಯಸಿದ್ದೆನೊ ? ದೇವ ಯಾವ ಸತ್ಪುರುಷನ ಮನ ನೋಯುವಂತೆ ನುಡಿದಿದ್ದೇನೊ? ಓ ವಿಧಿಯೆ, ನಿನ್ನ ಗರಗಸಕ್ಕೆ ಸ್ವಲ್ಪವೂ ಕನಿಕರವಿಲ್ಲವೆ? ಮಗನನ್ನು ಹೆತ್ತು ಪಡುವ ದುಃಖಕ್ಕಿಂತ ಬಂಜೆತನವೆ ಒಳಿತಲ್ಲವೆ? ಮಗನೆ! ಓ ಮಗನೆ !'

ಮುಂದಕ್ಕೆ ನುಡಿ ಹೊಮ್ಮದಿರಲು ಆ ತಾಯಿಯು ಮಗ ಕಾಕುತ್ಸ್ಥನ ಎದೆಗೆ ಹಣೆಯನ್ನು ಒರಗಿಸಿದಳು. ತುಸು ಹೊತ್ತಿನ ಅನಂತರ ಚೇತರಿಸಿಕೊಂಡು ತನ್ನ ಆತ್ಮದ ನೋವನ್ನು ಮತ್ತೆ ತೋಡಿಕೊಂಡಳು.

'ತನ್ನ ಉಸಿರನ್ನು ಕಾಡಿಗೆ ಕಳುಹಿಸುತ್ತ ಈ ಶರೀರವೆಂಬ ಮನೆಯಲ್ಲಿ ಹೇಗಿರಲು ಸಾಧ್ಯ? ತೊಡೆಯ ತೊಟ್ಟಿಲಲ್ಲಿಟ್ಟುಕೊಂಡು ಹಾಲುಣಿಸಿ, ಅಚ್ಚೊತ್ತಿದಂತೆ ಮುದ್ದಾಗಿಸಿ,

ತೂಗಿ ಜೋಗುಳ ಹಾಡಿ ಲಾಲಿಸಿದ ಪಾಲಿಸಿದ ನಿನ್ನ ಮೈಯನ್ನು ಹೇಗೆ ಕಾಡಿನ ರಾಕ್ಷಸಿಗೆ ತುತ್ತಾಗಿ ಕೊಡಲಿ ಹೇಳು? ಕರುಣೆಯನ್ನು ದೂರವಾಗಿಸಿಕೊಂಡು, ನಿನ್ನ ಪರದೇಶಿ ತಾಯಿಯನ್ನು ಚಿಂತಾನರಕ ಚಿತೆಯ ಪುತ್ರವಿರಹದ ಅಗ್ನಿಗೆ ತಳ್ಳದಿರೊ!

'ದಾಶರಥಿಯೇ, ಹೆತ್ತ ತಾಯಿಯನ್ನೆ ದಾಸಿಯಾಗಿಸಿ, ಧರ್ಮ ಬುತ್ತಿಯನ್ನು ಕಟ್ಟಿ ಕಾಡಿಗೆ ಹೊತ್ತೊಯ್ದು ಉಣ್ಣುವ ಬುದ್ಧಿಯನ್ನು ಬಿಡು. ಕಿರಿ ಹೆಂಡತಿಗೆ ಮಾರುಹೋದ ನಿನ್ನ ತಂದೆಯನ್ನು ತಿದ್ದು. ಕುಲದ ಬಾಳನ್ನು ಕೀರ್ತಿಯನ್ನು ಕಾಪಾಡು! ನೀನು ಕಾಡಿಗೆ ಹೋದರೆ – ಕರುವಿನ ಜೊತೆ ಹಸುವು ಹೋಗುವಂತೆ ನಾನೂ ಬರುತ್ತೇನೆ!'

ಹತ್ತಿರದಲ್ಲಿ ನಿಂತಿದ್ದ ಊರ್ಮಿಳೇಶನು ತನ್ನ ದೊಡ್ಡಮ್ಮನು ಹೇಳಿದುದನ್ನು ಸಮ್ಮತಿಸುವಂತೆ, ಅದುವರೆಗೂ ತಡೆದ ಕೋಪದ ತೀಕ್ಷ್ಣತೆಗೆ ಬೆಂಕಿಯಾದನೊ ಎಂಬಂತೆ ಹೀಗೆ ಹೇಳಿದನು :

'ತಾಯಿ, ಓರ್ವ ಲಂಪಟ ಮುದಿದೊರೆಯು ಬುದ್ಧಿಗೆಟ್ಟು ದಾಸನಾಗಿ ಉರುಳಿದರೆ, ಪೂಜ್ಯನಾದ ಈ ರಾಮಚಂದ್ರನು ರಾಜ್ಯವನ್ನು ತ್ಯಜಿಸಿ ಅರಣ್ಯವಾಸಿಯಾಗುವುದೇತಕ್ಕೆ? ತೆಗೆ ತೆಗೆ! ಅಧರ್ಮಿ ನೀಚ ದೊರೆಯನ್ನು ಪ್ರಜಾಶಕ್ತಿ ಸಂಹರಿಸುವಂತೆ ಲಜ್ಜೆಗೇಡಿ ತಂದೆಯು ಕೊಲೆಗೆ ಅರ್ಹನಲ್ಲವೆ? ಪಿತನಾದರೇನು? ಚಪಲಮತಿ ಗೌರವಾರ್ಹನೆ? ದಂಡನೆಗೆ ಅರ್ಹನು!

'ಅಗ್ರಜನೇ ಕೇಳು, ನಿನಗೆ ನಾನು ನೆರವಾಗುತ್ತೇನೆ. ನಿನ್ನೊಡನೆ ನಾನು ಬಿಲ್ಲು ಹಿಡಿದು ನಿಲ್ಲಲು ಸಾಕೇತ ಸಿಂಹಾಸನಕ್ಕೆ ಸೆಣಸಿ ನಿಲ್ಲುವವರು ಯಾರೆಂದು ನೋಡುತ್ತೇನೆ. ಇದು ಸಾತ್ವಿಕಕ್ಕೆ ಸಮಯವಲ್ಲ. ತಾಯಿಯೇ ಅಳಲನ್ನು ನಿಲ್ಲಿಸು. ಆ ರಾಮ ವನವಾಸವೆನ್ನುವುದು ಸಿಡಿದೊಡೆದ ದಶರಥನ ತಲೆಯ ದುಃಸ್ವಪ್ನ ಮಾತ್ರ !'

'ಸೌಮಿತ್ರಿಯೆ, ಹೆತ್ತ ಆ ಹೆಂಗರುಳು ನೋವಿನಿಂದ ದಿಕ್ಕು ತೋಚದಂತಾಗಿದೆ. ಆದರೆ ನಿನಗೇಕೆ ಈ ಮತಿಗೇಡಿತನ?'

ಎಂದು ರಾಮನು ಹೇಳಿ ತಮ್ಮನನ್ನು ತಡೆದು ಮಾತು ಮುಂದುವರಿಸಿದನು.

'ನೀನು ಮಹಾಪರಾಕ್ರಮಿ ಎಂಬುದು ನನಗೆ ತಿಳಿದಿದೆ. ವಿಕ್ರಮವು ನನ್ನಲ್ಲಿ ಕೊರೆಯಾಗಿದೆ ಎಂದು ತಿಳಿದೆಯೆ? ನನಗೆ ಗುರು ಕರುಣೆಯಿಂದ, ಕಲಿತ ಬಿಲ್ಲು ವಿದ್ಯೆಯಿಂದ ನರ ಸುರ ಅಸುರಲೋಕ ಪರ್ವತದ ಅಗ್ರಭಾಗದ ಮಧ್ಯದಲ್ಲಿ ಏನಾದರೂ ಅದನ್ನು ಎದುರಿಸಲು ಸಾಧ್ಯವಾಗದಿರುವುದು ಇದೆಯೆ ಹೇಳು?

'ನನಗೆ ಧರ್ಮವನ್ನು ಬಿಟ್ಟು ಬೇರೆ ಸಂಪತ್ತಿಲ್ಲ. ಧರ್ಮಸಹಿತವಾದ ಕಾಡು ನನಗೆ ಅರಮನೆ. ಧರ್ಮರಹಿತವಾದ ಈ ರತ್ನಮಯ ರಾಜಸೌಧವು ನನಗೆ ಸ್ಮಶಾನಕ್ಕಿಂತ ಹೆಚ್ಚು ಭೀಕರ. ಸೌಮಿತ್ರಿಯೆ, ಇನ್ನೊಂದನ್ನು ಹೇಳುತ್ತೇನೆ ಕೇಳು. ಕೋಪಗೊಳ್ಳದಿರು.

ಆಂತರ್ಯವನ್ನು ತಿಳಿಯದೆ ತಂದೆಯನ್ನು ವ್ಯರ್ಥವಾಗಿ ಬಯ್ಯುವರೆ? ಕೋಸಲದ ನೆಲದ ದೊರೆತನವು ನನಗೆ ದೊರೆಯದಿದ್ದರೆ ಕೇಡಾಯಿತೆಂದು ತಿಳಿಯಬೇಡ. ಒಳಿತನ್ನುಂಟು ಮಾಡುವ ವಿಧಿಗೆ ನಡೆಯಲು ಹಲವು ಪಥಗಳುಂಟು. ಇಂದಿನ ಇಷ್ಟವೆ ಮುಂದಿನ ಅಭ್ಯುದಯದ ಶಿಶುವಿಗೆ ತೊಟ್ಟಿಲಾಗದೆ? ಮುಂದಕ್ಕೆ ಕೀರ್ತಿ ಲಭಿಸುತ್ತದೆ. ನಾನು ಈ ಹೊತ್ತು ರಾಜ್ಯವನ್ನು ತೊರೆಯುವುದಕ್ಕೆ ನೂರರಷ್ಟು ಶಾಶ್ವತ ಸಿರಿಸಾಮ್ರಾಜ್ಯ ನನ್ನದಾಗುವುದು. ನನ್ನನ್ನು ನಿತ್ಯವೂ ಕರೆಯುವ ಕನಸೊಂದನ್ನು ಹೇಳುತ್ತೇನೆ, ಕೇಳಿಸಿಕೊ :

'ನಾನು ಏನೆಂದು ತಿಳಿಯೆನು. ಕಡಲು ಕಾಡುಗಳು ತರತರದ ಪ್ರಾಣಿಗಳು, ಪರ್ವತ ಶಿಖರಗಳು ಗೋಚರಿಸುತ್ತಿವೆ. ದಿನದಿನವು ಗಿರಿ ಸಮಾನನಾದ ಮಹಾವಾನರ ಭವ್ಯ ವ್ಯಕ್ತಿಯೊಬ್ಬನು ಬೆಳೆಬೆಳೆಯುತ್ತಿದ್ದಾನೆ. ಅವನು ಆಕಾಶಚುಂಬಿ ಪರ್ವತ ಶಿಖರದಲ್ಲಿ ವಿಶಾಲ ಆಗಸ ಪಟಕ್ಕೆ ಎದುರಾಗಿ ನಿಂತು, ಕೈ ಬೀಸಿ ನನ್ನನ್ನು ದಕ್ಷಿಣಾಪಥಕ್ಕೆ ಕರೆಯುತ್ತಿದ್ದಾನೆ. ಅದರ ಅರ್ಥವನ್ನು ಮನಸ್ಸು ತಿಳಿಯುತ್ತಿಲ್ಲ; ಆತ್ಮವು ಆ ಕಡೆಗೆ ತುಡಿಯುತ್ತಿದೆ. ಆ ಕರೆಯ ಒಲ್ಮೆಯೆ ಇಲ್ಲಿ ನಮ್ಮ ಬಾಳನ್ನು ಕಡೆದು ತೆರೆ ತೆರೆಯೆಬ್ಬಿಸಿದೆ ಎನ್ನಲು, ದೈವವನ್ನು ಮೀರುವವರಾರು?'

ಎಂದು ಅಣ್ಣನು ಹೇಳಲು, ಅವನು ಮುಂದಕ್ಕೆ ಮಾತನಾಡಲು ಅವಕಾಶ ಕೊಡದೆ ಲಕ್ಷ್ಮಣನು–ಮದ್ದಾನೆ ಸೊಂಡಿಲನ್ನು ತೂಗಿ ಬೀಸುವ ರೀತಿಯಲ್ಲಿ ತನ್ನ ತೋಳನ್ನು ತೊನೆಯುತ್ತ ಹೇಳಿದನು:

'ಕನಸು ಮತ್ತು ದೈವದ ಈ ಭ್ರಾಂತಿಯನ್ನು ಸಾಕುಮಾಡು! ನೀನು ವೀರ ರಘುಕುಲದವನು. ವಿಧಿಯ ಹಣೆ ಬರಹವನ್ನು ಒರಸಿ ಮತ್ತೆ ಬರೆಯುವ ಕಲಿಯಾಗಿ ಹೀಗೆ ನುಡಿದರೆ ನಗೆಗೀಡಲ್ಲವೆ? ಆ ಸೋಲು ಹೇಡಿಗಳಿಗೆ ಉಚಿತವಾದುದು; ವೀರರಿಗೆ ತಕ್ಕನಾದುದಲ್ಲ. ಪುರುಷ ಪ್ರಯತ್ನವೆ ವಿಧಿಯ ಬಾಳುಸಿರು. ಶೌರ್ಯವಿರಲು ಕೃಪಣ ವಿಧಿಯು ಮುಕ್ತ ಹಸ್ತನಾಗಿ ನೀಡುವನು.

'ಕೈಕೆ ಮತ್ತು ದಶರಥರಿಬ್ಬರೂ ಸೇರಿ ನಡೆಸಿರುವ ಒಳ ಸಂಚಿನ ನರಕದಲ್ಲಿ ಧರ್ಮವೆಲ್ಲಿದೆ? ಮುಳ್ಳಿಗೆ ಮುಳ್ಳೇ ಮದ್ದು; ಬೇರೆ ಯಾವುದೇ ಔಷಧಿ ಇಲ್ಲ. ಆಜ್ಞೆಯನ್ನು ಕೊಡು ದುರ್ವಿಧಿಯನ್ನು ಅಡ್ಡಗಟ್ಟುತ್ತೇನೆ! ಮಾವುತನು ಅಂಕುಶದ ಮೊನೆಯಿಂದ ತಿವಿದು ಮದಿಸಿದ ಆನೆಯನ್ನು ತನ್ನಿಚ್ಛೆಯ ಮಾರ್ಗಕ್ಕೆ ಹೇಗೆ ತರುವನೊ ಹಾಗೆ ನಾನು ಇಂದು ದೈವವನ್ನು ಜುಟ್ಟುಹಿಡಿದು ಒಳ್ಳೆಯ ದಾರಿಗೆ ಎಳೆದು ತರುವೆನು ! ನೀನು ನೋಡುತ್ತಿರು!'

ಮರ್ತ್ಯದಾಳ್ ಬಿದಿಯೊಡನೆ ತಾಂ ನಡೆಯುವನ್ನೆಗಂ ಕಲಿ

ಲಕ್ಷ್ಮಣನ ನುಡಿ ಕೇಳಿ ರಾಮನು ಅವನ ಬಳಿಗೆ ಹೋದನು. ಹೆಗಲ ಮೇಲೆ ಕೈಯಿಟ್ಟು ಸೋದರನ ವಾದವನ್ನು ಒರಸುವಂತೆ ಆರ್ದ್ರಭಾವದಲ್ಲಿ ಅವನ ಕಣ್ಣೀರನ್ನು ಮೃದುವಾಗಿ ನೀವಿದನು. ಕಿರುನಗೆ ತುಟಿಯ ಕೊಂಕಿನಿಂದ ಹೀಗೆ ಹೇಳಿದನು:

'ತಮ್ಮನೆ, ದೈವವನ್ನು ಮುಂದಲೆ ಹಿಡಿದು ತರುವ ಪರಾಕ್ರಮ ಅಲ್ಲಿರಲಿ. ಮರ್ತ್ಯದ ವ್ಯಕ್ತಿಯು ವಿಧಿಯೊಡನೆ ತಾನು ನಡೆಯುವತನಕ ಕಲಿ. ಸೊಕ್ಕಿನಿಂದ ವಿಧಿಗೆ ಎದುರು ಬೀಳಲು ತಕ್ಷಣ ಅವನು ಅದರ ಬಂಡೆಯಂತಹ ಚಕ್ರದಡಿ ಬಲಿ. ತಮ್ಮ, ದುಡುಕದಿರು. ತಲೆ ಬಲವಾಗಿದೆಯೆಂದು ಬಂಡೆಗೆ ಡಿಕ್ಕಿ ಹೊಡೆಯಬೇಡ. ಪಿತನ ದೌರ್ಬಲ್ಯದಲ್ಲಿ ವಿಧಿಯ ವ್ಯವಸ್ಥೆಯನ್ನು ಕಾಣು. ನಿನ್ನ ಮಾತನ್ನು ಕೇಳಿ, ಬಂದ ಅಡ್ಡಿ ಆತಂಕಗಳನ್ನು ನಾನು ಗೆದ್ದು, ಸಿಂಹಾಸನವನ್ನು ಹತ್ತಿ ಕುಳಿತರೆ ಕೋಸಲಕ್ಕೆ ನೆಮ್ಮದಿಯೆ ಹೇಳು? ನಮ್ಮ ನಮ್ಮ ಅಂತಃಕಲಹದ ಅಗ್ನಿಯು ನಾಡೆಲ್ಲವನ್ನು ಸುಟ್ಟು ಉರಿಯುವಂತೆ ಮಾಡದಿರುತ್ತದೆಯೆ?

'ನಾನೊಬ್ಬನು ಕಾಡಿಗೆ ಹೋಗುವುದು ಒಳ್ಳೆಯದೊ? ಯುಗ ಯುಗಗಳಿಂದ ರವಿಕುಲದ ರಾಜರಿಗೆ ಮೆಚ್ಚಿನ ನೆಲೆವೀಡಾದ ಈ ನಾಡೆಲ್ಲವನ್ನು ನಾಶಮಾಡಿ ಕಾಡಾಗಿಸುವುದು ಒಳ್ಳೆಯದೊ? ನಾಡಿನ ಹಿರಿದಾದ ಕ್ಷೇಮಕ್ಕಾಗಿ ನಾನು ನನ್ನ ಅಲ್ಪಸುಖವನ್ನು ಆನಂದದಿಂದ ಬಲಿಕೊಡುವೆನು. ಸೋದರನೇ, ನೀನು ಅದಕ್ಕೆ ನನಗೆ ಸಹಾಯಕವಾಗಬೇಕು. ಕೋಪವನ್ನು ಬಿಡು.'

ಲಕ್ಷ್ಮಣನ ಕೋಪದಿಂದ ತಾಪಗೊಂಡ ಮುಖ ಕೆಂಪಾಗಿತ್ತು. ಅದು ಅಣ್ಣನ ಮಾತನ್ನು ಕೇಳಿ, ನಾಗಸ್ವರವನ್ನು ಕೇಳಿದ ನಾಗರನ ರೀತಿಯಲ್ಲಿ ನಿಧಾನವಾಗಿ ಹೆಡೆ ಮುಚ್ಚಿಕೊಂಡಿತು. ಜಾನಕಿ ಪತಿಯು ತಾಯಿ ಕೌಸಲ್ಯೆಯನ್ನು ಕುರಿತು,

'ತಾಯೆ, ನೀನು ಅಳದಿರು. ಹದಿನಾಲ್ಕು ವರ್ಷದ ವನವಾಸವನ್ನು ಕಿರಿದೆಂದು ಬೇಗನೆ ಮುಗಿಸಿ ಬರುತ್ತೇನೆ. ಸತಿಗೆ ತನ್ನ ಪತಿಯನ್ನು ತ್ಯಜಿಸಿ ಬಾಳುವುದು ಧರ್ಮವಲ್ಲ. ಮುಪ್ಪು ಆವರಿಸಿರುವ ನನ್ನ ತಂದೆಗೆ ಶುಶ್ರೂಷೆ ಬೇಕಾಗಿದೆ.

'ಅವ್ವ ಹೇಳು. ನಿನಗೆ ಬಾಲರ್ಷಿ ಭರತನ ಪ್ರೀತಿ, ನನ್ನ ಒಲ್ಮೆಗಿಂತೇನು ಕಡಿಮೆಯೆ? ನಾನು ಇಲ್ಲಿ ಇಲ್ಲದಿರುವಾಗ ಅದು ನೂರು ಪಟ್ಟಾಗಿ ನಳನಳಿಸಿ ಚಿಗುರಿ ನಿನ್ನನ್ನು ಮುದ್ದಿಸದಿರುತ್ತದೆಯೆ? ತಾಯೆ, ಹೋಗಿ ಬರುತ್ತೇನೆ ಆಶೀರ್ವದಿಸು. ದುಃಖಿಸದೆ ಹಾರೈಸು. ಸತ್ಯಕ್ಕೆ, ಧರ್ಮಕ್ಕೆ, ಪಿತೃವಾಕ್ಯ ಪರಿಪಾಲನೆಗೆ ಮತ್ತು ನಿನ್ನ ಈ ಕುಮಾರನ ಆತ್ಮೋದ್ಧಾರಕ್ಕಾಗಿ ಆಶೀರ್ವಚನ ಮಾಡು!

'ತಾಯಿ, ಹೋಗಿ ಬರುತ್ತೇನೆ ಹರಕೆಗೈ! ಕೈ ಮುಗಿದು, ಕಾಲ್ಮುಟ್ಟಿ, ನಿನ್ನ ಅಡಿ ತಾವರೆಗೆ ಮುಡಿ ಚಾಚಿ ಬೇಡಿಕೊಳ್ಳುತ್ತೇನೆ, ಆಶೀರ್ವದಿಸು!'

ಕೌಸಲ್ಯೆ ಮುದ್ದು ಮಗನನ್ನು ತೋಳುಗಳಿಂದ ಬಾಚಿ ತಬ್ಬಿಕೊಂಡಳು. ಆಲಿಸಿದ ಚರಾಚರವು ರೋಮಾಂಚನದ ಕಂಚುಕವನ್ನು ತೊಟ್ಟುಕೊಳ್ಳುವಂತೆ–ಕಣ್ಣೀರ ಧಾರೆಯನ್ನು ತಲೆಯ ಮೇಲೆ ಸಿಂಪಡಿಸಿ ಹೀಗೆ ಆಶೀರ್ವದಿಸಿದಳು.

ಜಯಮಕ್ಕೆ ಮಾತೃವೊಲ್ಮೆಯ ಮಹತ್ ಪ್ರಾರ್ಥನೆಗೆ!

'ವಿಧಿಯ ವಜ್ರೇಚ್ಛೆ ಜಯಿಸಲಿ! ಸತ್ಯಕ್ಕೆ ಸದಾ ಗೆಲುವಾಗಲಿ! ನನಗೆ ಜಗದೀಶನ ಕೃಪೆ ದಯೆತೋರಲಿ! ಎಲ್ಲ ದೇವರುಗಳಿಗೆ ಗೆಲುವಾಗಲಿ! ಮಾತೃ ಒಲ್ಮೆಯ ಮಹತ್ ಪ್ರಾರ್ಥನೆಗೆ ಜಯವಾಗಲಿ !

'ಓ ಧರ್ಮ ದೇವತೆಯೆ, ನನ್ನ ಈ ಮಗನನ್ನು ನಿನ್ನ ತೊಡೆಯ ತೊಟ್ಟಿಲೊಳಿಟ್ಟು ದಟ್ಟವಾದ ಅರಣ್ಯದ ಹುಲಿಯ ಬದಿಗೆ ಕಳುಹಿಸುತ್ತಿದ್ದೇನೆ. ಪರದೇಶಿಯನ್ನು ಪಾಲಿಸು! ತಬ್ಬಲಿಯಾದ ನನ್ನ ಕಂದ ರಾಮಚಂದ್ರನಿಗೆ ನೀನೆ ತಾಯಿ !

'ಮಗನೇ ನಡೆ! ನಾನು ನಿನ್ನನ್ನು ತಡೆಯಲು ಸಾಧ್ಯವೆ? ನದಿಯನ್ನು ಹೆತ್ತ ಪರ್ವತವು ಸಮುದ್ರಯಾತ್ರೆಗೆ ಹೊರಟ ಅದನ್ನು ತಡೆದರೆ, ತೀವ್ರ ಹಂಬಲದ ಅದು ಸಾಗುವುದನ್ನು ನಿಲ್ಲಿಸುತ್ತದೆಯೆ? ನಿನ್ನ ಹಿರಿದಾದ ಬಾಳಿಗೆ ತಾಯಿಯ ಪ್ರೀತಿ ಕಿರಿದಾದುದಲ್ಲವೆ! ಸಂಪದದ ಹೊಳೆಯನ್ನು ಹೊತ್ತ ಗಿರಿಶಿಖರಿಯು ಸಮುದ್ರಕ್ಕೆ ಮತ್ಸರಿಸುವುದೆ? ನಿನ್ನನ್ನು ಜಗಜ್ಜೀವನವು ಕೈ ಬೀಸಿ ಕರೆಯುತ್ತಿರಲು, ಅಬಲೆಯಾದ ತಾಯಿಯು ತಡೆಯಲು ಸಾಧ್ಯವೆ? ನಾನು ಹೆತ್ತಾಗಲೆ ಇದನ್ನು ಶಂಕಿಸಿದೆ!

'ಪಕ್ಷಿ ಶಿಶು ಮೊಟ್ಟೆಯನ್ನು ಒಡೆಯುತ್ತ ಹೇಗೆ ಗರಿಗೆದರುತ್ತ ಆಗಸದ ಸಾಹಸಕ್ಕೆ ಆಸೆಪಡುವುದೊ ಹಾಗೆ ಮನೆಯ ಒಲ್ಮೆ, ತಾಯಿಯ ಪ್ರೀತಿ, ನಾಡಿನ ನಲ್ಮೆಗಳನ್ನು ಬಿಟ್ಟು ಕಾಡಿಗೆ ಹೋಗುವ ನೆಪದಿಂದ ಇಂದು ಹಾರುತ್ತಿರುವೆ– ಬಿಂದು ಸಿಂಧುವನ್ನು ಸೇರುವಂತೆ ! ಹೋಗಯ್ಯ, ಹೋಗೊ! ಹದಿನಾಲ್ಕು ವರ್ಷದ ಅವಧಿ ಮುಗಿಸಿ ಹಿಂದಿರುಗಿ ಬಾ, ಬೇಗನೆ ಮರಳು!

'ಓ ನನ್ನ ಕಂದಯ್ಯನೇ, ನಿನಗೆ ಒಳ್ಳೆಯದಾಗಲಿ, ಗೆಲುವಾಗಲಿ! ನೀನು ಯಾವ ಧರ್ಮವನ್ನು ಗುರಿಯಾಗಿಟ್ಟುಕೊಂಡು ಹೊರಟಿರುವೆಯೊ ಆ ಧರ್ಮ ದೇವತೆಯೆ ನಿನಗೆ ರಕ್ಷೆಯಾಗಲಿ! ನೀನು ಪೂಜಿಸಿರುವ ದೇವಾನುದೇವತೆಗಳೆಲ್ಲರೂ ನಿನಗೆ ಕಾಪಿಡಲಿ! ಮಾತಾ ಪ್ರೀತಿ, ಪಿತೃಭಕ್ತಿ, ಜನರ ಒಲ್ಮೆಗಳು ಸದಾ ನಿನಗೆ ದಯೆಗರೆಯಲಿ. ನಿನಗೆ ಗಿರಿವನ, ಪಕ್ಷಿ, ನಾಗರೆಲ್ಲರೂ ಹಗಲಿರುಳು, ಬೈಗು ಬೆಳಗಿನ ಚಂದ್ರ ತಾರೆ, ಸಪ್ತರ್ಷಿ ಮಂಡಲ, ಶ್ರುತಿ ಸಮೂಹ, ದಿಕ್ಪಾಲಕರು, ದೇವದಾನವರೆಲ್ಲರೂ ರಕ್ಷಿಸಲಿ !

'ನನ್ನ ಮೊಲೆಹಾಲಿನ ಮೂರ್ತಿ, ರವಿಕುಲ ಲಲಾಮ ರಾಮಾಭಿರಾಮನನ್ನು ಕ್ರಿಮಿ ಕೀಟ ಕಪಿ ಚೇಳುಗಳು, ಹುಲಿ ಸಿಂಹ ಹಂದಿ ಕಾಡುಕೋಣ ಮುಂತಾದ ವಿಷಜಂತುಗಳು, ಕ್ರೂರಮೃಗಗಳು ಕಾಪಾಡಲಿ! ಜಲದೇವಿಯರೇ, ನನ್ನ ಮಗು ಸ್ನಾನಕ್ಕೆ ಇಳಿಯುವಾಗ ಮಕರ ನಕ್ರಗಳಿಂದ ರಕ್ಷಿಸಿರಿ! ಓ ಕಾಂತಾರ ದೇವಿಯರೇ, ಕಾಡಿನಲ್ಲಿ ಹುತ್ತದ ಬಳಿ, ಮರಗಳ ಕೆಳಗೆ ತಂಪುನೆರಳಿನಲ್ಲಿ ಮಲಗಿರುವಾಗ ಕಾಪಾಡಿರಿ!

'ಓ ಸಿಡಿಲು ಮಿಂಚು ಬಿರುಗಾಳಿಗಳೆ ಕೇಳಿ, ನಿಮಗೆ ತಾಯಿಯ ಒಲವಿನ ಆಣೆ. ಹಸುಳೆರಾಮನಿಗೆ ನಿಮ್ಮ ಕಾರಣದಿಂದ ಕೇಡುಂಟಾದರೆ–ಹೆತ್ತು ಹೊತ್ತು ಕಾಪಾಡಿದ ಹೃದಯದ ಉಗ್ರಶಾಪ ನಿಮಗಾಗುತ್ತದೆ.

'ಓ ವಿಧಿಯೆ, ಹೇ ಸರ್ವಲೋಕ ಪ್ರಭುವೇ, ನನ್ನ ಆತ್ಮದ ಒಲುಮೆಯ ರಾಮ ಮಂಗಲ ಕಾರಣನನ್ನು ನಿನ್ನ ಚರಣತಲಕ್ಕೆ ಅರ್ಪಿಸುತ್ತಿದ್ದೇನೆ, ಸ್ವೀಕರಿಸು !'

ಎಂದು ಹೇಳಿ ಮಗನನ್ನು ಆಶೀರ್ವದಿಸಿ ಪ್ರದಕ್ಷಿಣೆ ಬಂದಳು. ಮಗನನ್ನು ಪುನಃ ಪುನಃ ಮುದ್ದಿಸಿದಳು. ಹಾಗೆ ಮೈಮರೆತ ತಾಯಿಯ ಪಾದಗಳಿಗೆ ರಾಮಚಂದ್ರನು ಹಣೆಯಿಟ್ಟು ಒತ್ತಿ ನಮಸ್ಕರಿಸಿದನು. ತುಳುಕಿಬಂದ ಆದರದ ದುಃಖವನ್ನು ಪ್ರಕಟಪಡಿಸದೆ ಸಂಯಮಶಾಲಿಯಾಗಿ ಶೀಘ್ರದಲ್ಲಿ ಅಲ್ಲಿಂದ ಬೀಳ್ಕೊಟ್ಟನು. ಸೀತಾ ಕಾಂತೆಯ ಅಂತಃಪುರಕ್ಕೆ ನಡೆದನು!

ಸೀತೆಯು ಪ್ರಿಯನ ಪಟ್ಟಾಭಿಷೇಕೋತ್ಸವದ ಸಂಭ್ರಮಕ್ಕೆ ಹೂಕಟ್ಟಲು ಕಾಮನಬಿಲ್ಲಿನ ಬಳ್ಳಿಗಳನ್ನು ಬಿಡಿಸಿ ತಂದು, ವಿವಿಧ ಬಣ್ಣ ಸುವಾಸನೆಗಳಿಂದ ಶೋಭಿಸುತ್ತಿರುವ ಕುಸುಮರಾಶಿಗಳನ್ನು ಗುಂಪುಗೂಡಿಸಿ ಬಳಸುತ್ತಿದ್ದಳು. ಅವಳು ಅದರಲ್ಲಿ ತಾನೊಂದು ಗುರುತಿಸಲಾಗದ ಸುಮರಾಶಿಯೆಂಬಂತೆ ಶೋಭಿಸುತ್ತ ಸೀತಾಳಿದಂಡೆ ಹೂಮಾಲೆಯನ್ನು ಕಟ್ಟುತ್ತಿದ್ದಳು. ಆಗ ಸೇವಕರಿಲ್ಲದೆ ಒಬ್ಬನೇ ಬಂದ ಪ್ರಾಣೇಶನನ್ನು ಕಂಡು ಕಕ್ಕಾಬಿಕ್ಕಿಯಾದಳು. ಬರಿದಾಗಿ ಬಂದ ವಿಷಾದದ ಕಾರಣ ಕೇಳಿದಳು. ಆಗ ಸೂರ್ಯಕುಲ ಪುತ್ರನು ಜಾನಕಿಗೆ,

'ಪ್ರಿಯೆ, ನನಗೆ ವನವಾಸವು ಪ್ರಾಪ್ತವಾಗಿದೆ. ಧೀರ ರಾಜರ್ಷಿ ಸುತೆಯೆ ಬೆದರದಿರು. ಸದ್ವಂಶ ಸಂಜಾತೆ ಸೀತೆಯೆ, ನೀನು ಆಕ್ರೋಶಗೊಳ್ಳಬೇಡ. ಶಾಂತಿಯನ್ನು ಹೊಂದಿ ಧೈರ್ಯಗೆಡದೆ ಪತಿಗೆ ಸಹಾಯವಾಗಿ ಸತಿಧರ್ಮವನ್ನು ಪಾಲಿಸು. ನನ್ನ ಹೃದಯ ಧರ್ಮವನ್ನು ನಿನ್ನ ಹೃದಯ ಅನುಸರಿಸುವುದೇ ನಿನ್ನನ್ನು ಸಹಧರ್ಮಿಣಿಯಾಗಿಸುವುದು.'

ಎಂದು ಹೇಳಿ, ನಿಧಾನವಾಗಿ ಅವಳ ಮುಂಗುರುಳನ್ನು ನೀವುತ್ತ, ಕೆನ್ನೆಯನ್ನು ಸವರಿ ಸಂತೈಸಿದನು. ನಡೆದುದೆಲ್ಲವನ್ನು ಸಮಗ್ರವಾಗಿ ತಿಳಿಸಿದನು. ಅದನ್ನು ಕೇಳಿ ನಿಧಾನವಾಗಿ ಚಲಿಸುವ ಗಾಳಿಗೆ ಒಲೆದಾಡುವ ಚಿಗುರಿನಂತೆ ತುಟಿನಡುಗುತ್ತಿರಲು, ಭೂಮಿಯ ಮಗಳು ನಲ್ಲನ ಇನಿದಾದ ಕಣ್ಣುಗಳಿಗೆ ಜೇನಿಳಿವ ಕಂಗಳಿಂದ ಆಲಿಂಗನವನ್ನು ಮಾಡುತ್ತ ನುಡಿದಳು.

ಮೇಣೆಂದಿಗುಂ ಮನೆಯೆನಗೆ ರಮಣನೆರ್ದೆಯಲ್ಲದೆಯೆ ಮಾವನರಮನೆಯಲ್ತು.

'ನಲ್ಲ, ನಾನು ಒಲಿದು ಬಂದುದು ನಿನ್ನನ್ನಲ್ಲದೆ ಕೋಸಲ ನೆಲವನ್ನು ಅಲ್ಲ. ಮತ್ತು ಎಂದಿಗೂ ನನಗೆ ಮನೆ ರಮಣನ ಎದೆಯಲ್ಲದೆ, ಮಾವನ ಅರಮನೆಯಲ್ಲ.

ನೀನು ನನ್ನೊಡನೆ ಇದ್ದರೆ – ನಾಡಾದರೆ ಹೇಗೊ ಹಾಗೆ ಕಾಡಾದರೂ ಸುಖವೆ. ನಿನಗಾಗಿ ದುಃಖಿಸುವೆ. ನಿನ್ನ ನೋವು ನನಗೆ ದುಃಖವನ್ನುಂಟು ಮಾಡುವುದಲ್ಲದೆ ಬೇರೆ ಸಂಕಟದ ಸೋಂಕು ಎಲ್ಲಿಯದು?'

'ನಿಲ್ ನಿಲ್ಲು, ಮಂಗಳಾಂಗಿ ನಿಲ್ಲು. ರಾಮನಿಗೆ ವನವಾಸ, ಇನ್ನು ಉಳಿದವರಿಗೆ ಅಲ್ಲ.'

'ರಾಮನ ಅರ್ಧಾಂಗಿ ಸೀತೆಗೆ ಬೇರೆತನವಿಲ್ಲ. ಪತಿಯ ಸುಖದುಃಖದ ಅರ್ಧಪಾಲು ಸತಿಯದು.'

'ಜಾನಕಿಯೆ ಕೇಳು. ನೀನು ಅತ್ತೆ ಮಾವಂದಿರ ಸೇವೆ ಮಾಡುತ್ತ ಧರ್ಮವನ್ನು ಆಚರಿಸುತ್ತಿರುವುದೆ ಪರಮಕರ್ತವ್ಯ.'

'ಹೆಂಗಸಿಗೆ ಪತಿಸೇವೆಗಿಂತ ಮಿಗಿಲಾದ ಸೇವೆ ಇಲ್ಲ. ರಾಜರ್ಷಿ ತಂದೆ ಮತ್ತು ಗುರುಗಳು ಇದನ್ನು ಧರ್ಮವೆಂದು ನನಗೆ ಬೋಧಿಸಿದ್ದಾರೆ.'

'ಮೈಥಿಲಿ, ನೀನು ನನ್ನನ್ನು ಹಿಂಬಾಲಿಸಿ ಬಂದರೆ ನನ್ನ ಜೀವನವು ನಿನ್ನ ರಕ್ಷೆಯ ಭಾರದ ಉದ್ವೇಗದಿಂದ ಕಠಿನವಾಗುವುದು. ಸುಕುಮಾರಿಯೆ, ನೀನು ಅರಣ್ಯವಾಸದ ಭಯಂಕರತೆಯನ್ನು, ಘೋರವನ್ನು, ಕ್ಲಿಷ್ಟ ಕಷ್ಟಗಳನ್ನು ಮತ್ತು ನಷ್ಟವನ್ನು ತಿಳಿದಿಲ್ಲ.'

'ಅಂಜಿಕೆಯ ಸ್ತ್ರೀಯನ್ನು ಕೂಡಿ ಕಾಡಿನಲ್ಲಿ ಹೇಗೆ ಬಾಳುವುದೆಂದು ಶಂಕಿಸದಿರು. ಹೇಡಿಗಳು ಹಿಂಜರಿಯುತ್ತಾರೆ. ಆದರೆ ವೀರ ಪುರುಷೋತ್ತಮನೆ, ಶಸ್ತ್ರಾಸ್ತ್ರ ಮಂತ್ರ ವಿದ್ಯಾ ಪ್ರವೀಣನಾದವನೆ ಕೇಳು, ನಿನಗೆ ಒಲಿದ ಹೆಣ್ಣೊಬ್ಬಳನ್ನು ರಕ್ಷಿಸುವುದು ಆನೆಗೆ ಹುಲ್ಲುಕಡ್ಡಿಯ ಭಾರದಂತಲ್ಲವೆ? ನಿನ್ನ ಪಾದ ಪೂಜೆಯ ಸೇವೆಯನ್ನು ಪ್ರತಿದಿನ ಮಾಡುತ್ತ; ನಿನ್ನ ನೆರಳು ಹೇಗೆ ನಿನ್ನ ಅಡಿಗೆ ತೊಡಕಾಗದೆಯೆ ನಿನ್ನ ಜೊತೆ ಯಾವಾಗಲೂ ಬರುತ್ತದೆಯೊ ಹಾಗೆ ಬರುತ್ತೇನೆ.

'ಪ್ರಿಯನೆ, ಮಾವನ ಅರಮನೆಯ ಸೊಗದ ಮಾತಿರಲಿ, ನಿನ್ನನ್ನು ಹೊರತುಪಡಿಸಿದ ಅಮರರ ಸುಖಕ್ಕೆ ನಾನು ಜುಗುಪ್ಸೆಪಡುವೆ! ಹೆಣ್ಣೆಂದು ಹೆದರದಿರು; ನಿನ್ನ ಕಣ್ಣು ಮನದ ನಾಲಗೆಯಾಗಿ, ನಿನ್ನೆದೆಯ ಸಂಶಯವನ್ನು ನನಗೆ ಸೂಚಿಸುತ್ತಿದೆ. ಪತಿವ್ರತಾಧರ್ಮವನ್ನು ಕೈಕೊಂಡು; ರಾಜೋಪಭೋಗ ಸರ್ವಸ್ವದ ಬಗ್ಗೆ ಬೇಸರಗೊಂಡು; ನಿಯಮವಜ್ರದಲ್ಲಿ ಇಂದ್ರಿಯಗಳನ್ನು ದೃಢಮನದಿಂದ ಬಿಗಿದುಕೊಂಡು ನಿನ್ನ ಸೇವೆಯನ್ನು ಮಾಡುತ್ತೇನೆ! ನಿನಗೆ ಯಾವುದೇ ರೀತಿಯಲ್ಲಿ ತೊಂದರೆ ಕೊಡದೆ ಹಣ್ಣು ಹಂಪಲು ಗೆಡ್ಡೆಗೆಣಸುಗಳನ್ನು ತಿಂದು ಬದುಕುತ್ತೇನೆ. ನಿನ್ನೊಡನೆ ಬಾಳುವ, ನಿನ್ನೊಡನೆ ಅಲೆದಾಡುವ ಮತ್ತು ನಿನ್ನ ದನಿ ಕೇಳುವ ಸೌಭಾಗ್ಯವೊಂದೇ ನನಗೆ ಸಾಕು!'

‘ಕೋಮಲೆ, ಲತಾಂಗಿ, ಚಿಗುರಿನಂತೆ ಮೃದುವಾದ ಪಾದದವಳೆ, ನೀನು ಸರೋಜ ಪುಷ್ಪ ಶರೀರೆ ! ಕಲ್ಲು ಮುಳ್ಳುಗಳಿಂದ ಕೂಡಿದ ಕಾಡು ಕಣ್ಣಿಗೆ ದೂರಕ್ಕೆ ನುಣುಪಾಗಿ ಕಂಡರೂ, ಬಾಳ್ಗೆಳತಿಯೆ ಅದು ದಾರುಣವಾಗಿರುತ್ತದೆ. ಕಾನನವು ಕವಿಯ ವರ್ಣನೆಯಂತಿಲ್ಲ. ನಿನ್ನನ್ನು ರಕ್ಷಿಸಲಾರೆ ಎಂದು ಅಲ್ಲ; ನನ್ನ ಹಿತನುಡಿ ಹೇಳುವೆನು ಕೇಳು. ಮಹಾ ಅರಣ್ಯವು ಹುಲಿ, ಕರಡಿ, ಸಿಂಹ, ವಿಷದಹಾವುಗಳಿಂದ ಭಯಂಕರವಾದುದು. ಮೇಘಗಳಿಂದ ಆವರಿಸಿದ ಗಿರಿಯ ಶಿಖರದಿಂದ ಆರ್ಭಟಿಸಿ ದುಮ್ಮಿಕ್ಕುವ ನೀರಿನ ಝುರಿಯ ಆಘಾತದಿಂದ ಭಯಂಕರವಾದ ಜಲಪಾತಗಳ ಸಮೂಹಗಳ ಅರಣ್ಯವು ಭೀಕರವಾದುದು!

‘ಕಾಡಿನಲ್ಲಿ ಹಗಲಿನಲ್ಲಿಯೂ ಶಬ್ದಗಳು ಅತಿ ಕರ್ಕಶ ಭಯಂಕರ. ರಾತ್ರಿಯ ಘೋರ ಅಂಧಕಾರದಲ್ಲಿ ಮದ್ಯವನ್ನು ಸೇವಿಸಿ ಮೂರ್ಛೆಗೆ ಜಾರಿದ ಮೌನವು – ಅತಿ ನಿಷ್ಠುರ, ಕಠಿನ, ಭಯಾನಕ, ಹೃದಯಭಾರ ಮತ್ತು ಮಹಾಕ್ರೂರ.

‘ಅಂಗನೆ, ಬೇಸಗೆಯಂತೂ ಕಾಡುಕಿಚ್ಚು. ಮಳೆಗಾಲವು ಎಡೆಬಿಡದೆ ಹಿಡಿದು ಹೊಡೆಯುವ ಜಡಿಯ ಕರೆಕರೆಯ ಕಾಟದಿಂದ ಸಹಿಸಲಾಗದು. ಆ ಕೆಸರಿನಲ್ಲಿ ಮುಳ್ಳಿನಲ್ಲಿ ಹಳ್ಳಕೊಳ್ಳಗಳಲ್ಲಿ ಹಗಲೆಲ್ಲವೂ ದಾರಿಕಾಣದ ಕಾಡಿನಲ್ಲಿ ಸುತ್ತಿ ಬಳಲಿ ಬಂದಾಗ, ಮಲಗಲು ನೆಲೆಯೆಂದರೆ ನೆನೆದ ಕಲ್ಲು ಬಂಡೆಯ ಹಾಸಿಗೆ!

‘ಕೇಳು, ಷಡುರಸದ ಉಣಿಸಿಲ್ಲ ! ಕರುಳು ಕೊರೆಯುವಂತೆ ಶೈತ್ಯಕ್ಕೊಳಗಾದ ಹಣ್ಣು ಹಂಪಲು, ಗೆಡ್ಡೆ ಗೆಣಸೇ ತಿನ್ನಲು ಗತಿ ! ಲಲಿತೆ, ಹಾಸಲು ಬಟ್ಟೆಗಳೆಲ್ಲಿ? ಚಳಿಯು ಅಡಿಯಿಟ್ಟು ಬರುವಾಗ ಹೊದೆಯಲು ಉಡುಗೆಗಳೆಲ್ಲಿ ? ಕಿಂಚಿತ್ತು ಸುಖ ಸುಳಿಯದು. ರಾಜಪುತ್ರಿ, ಲತಾಂಗಿ ನಿನ್ನನ್ನು ಹೇಗೆ ಕರೆದುಕೊಂಡು ಹೋಗಲಿ ಹೇಳು?’

ಆ ವರ್ಣನೆಗಳನ್ನು ಕೇಳಿದ ಪತಿವ್ರತೆಯು ನಸುನಕ್ಕಳು. ದಾಶರಥಿಯು ವಾದದಲ್ಲಿ ನಿರಾಯುಧನಾಗಿ ಸೋಲೊಪ್ಪುವಂತೆ ಹೀಗೆ ಪ್ರತ್ಯುತ್ತರವನ್ನು ನೀಡಿದಳು.

‘ರಕ್ತವನ್ನು ಹೀರುವ ಜಿಗಣೆ ಮತ್ತು ಕರ್ಕಶದ ಕೂಗಿಡುವ ಜೀರುಂಡೆಗಳನ್ನು ಏತಕ್ಕೆ ಬಿಟ್ಟೆ ಹೇಳು? ನೀನು ಕರುಣಾಳು! ಅಧಿಕತರ ಮಾತುಗಳಿಗೆ ನಾನು ಬೆದರುವ ಮಗಳಲ್ಲ! ಹೃತ್ಕಮಲ ಕರುಣ ರವಿಯೆ ಕೇಳು. ನಿನ್ನ ವರ್ಣನೆಗಳನ್ನು ಕೇಳಿ ನನ್ನ ಮನಸ್ಸು ಕಾಡಿನ ರಸಾನಂದಕ್ಕಾಗಿ ಕಾತರಿಸುತ್ತಿದೆ !

‘ಮನದನ್ನನೆ, ನಿನ್ನನ್ನು ಕಂಡದಿನದಿಂದ ನನ್ನುಸಿರು ನಿನ್ನುಸಿರಿನಲ್ಲಿ ಒಂದಾಗಿದೆ. ಕೂಡಿರುವ ಎರಡು ಬಾಳಿನ ಬೆಸುಗೆ ಕೆಡಿಸಿ ನನ್ನ ಬದುಕನ್ನೇಕೆ ಬಲಿ ಕೊಡುವೆ? ಕರುಣಿಯೆ, ತಂದೆ ತಾಯಿಗಳನ್ನು ಅಗಲುತ್ತ ಎಲ್ಲವೂ ನೀನೆಂದು ಕೈಹಿಡಿದು ನಂಬಿದ ಈ ದೀನ ದುಃಖಿತೆಯನ್ನು ತೊರೆಯದಿರು.’

ಎಂದು ಕಣ್ಣೀರಿನ ನೈವೇದ್ಯದಿಂದ ಪ್ರಾರ್ಥಿಸಿದ ಭೂಜಾತೆ ಸೀತೆಯನ್ನು ಸಂತಯಿಸುತ್ತ ದಿನೇಶಕುಲಸಂಭವನು ಹೀಗೆ ನುಡಿದನು:

'ನಲ್ಲೆ ದುಗುಡವನ್ನು ಬಿಡು. ನೀನು ನನ್ನ ಉಸಿರಿನ ಉಸಿರು! ಉಸಿರನ್ನು ಬಿಟ್ಟು ಬದುಕುವೆನೆ ಹೇಳು? ಜನಕಜಾತೆಯೆ, ನನ್ನ ಜೀವವು ನಿನ್ನ ರೂಪದ ತಾವರೆಯ ನಿತ್ಯಲೋಕದಲ್ಲಿ ಭ್ರಮರನಂತೆ ವಿಹರಿಸುತ್ತಿದೆ. ಮಧು ಮಧುರವಾದ ಸೌಂದರ್ಯ ಮಕರಂದದ ಸುಧೆಯನ್ನು ಈಂಟಿ ಅಮೃತತ್ವವನ್ನು ಸವಿಯುತ್ತಿದೆ.

'ಎಲೆ ಕೋಮಲಾಂಗಿಯೆ, ನಿನ್ನನ್ನು ಹೊರತುಪಡಿಸಿ ಯಾವ ಸ್ವರ್ಗವು ನನಗೆ ರುಚಿಸದು. ನೀನು ನನ್ನ ಬಳಿ ಇದ್ದರೆ ವನವಾಸ ನರಕವು ಸ್ವರ್ಗ ಸಮಾನ. ಲೋಕ ಮೋಹಕ ನೇತ್ರೆಯೆ, ಬಿಸುಗಂಬನಿ ಸೂಸಿ ನನ್ನ ಆತ್ಮವನ್ನು ಬೇಯಿಸಬೇಡ. ನಿನ್ನಿಚ್ಛೆಯಂತೆಯೆ ಆಗಲಿ! ಕಾಡಿಗೆ ಹೋಗಲು ಅನುವಾಗು. ಕನಕಸುಂದರ ಶರೀರಳೆ, ನಮ್ಮಿಬ್ಬರ ಒಡವೆ, ಹಾಸುಗೆ, ಉಡುಗೆಗಳೆಲ್ಲವನ್ನು ದೀನರಿಗೆ, ನಿರಾಶ್ರಿತರಿಗೆ ಮತ್ತೆ ಪೂಜ್ಯರಿಗೆ ದಾನವಾಗಿ ನೀಡು,'

ಎಂದು ಹೇಳಿ, ಮೋಹದಿಂದ ಮುದ್ದಿಸಿ ಕಳುಹಿಸಿದನು. ಅವಳು ಹಿಗ್ಗಿ ಸಂತೋಷಗೊಂಡಳು. ತಮ್ಮಿಬ್ಬರ ಸಮಸ್ತವನ್ನು ಸಂಭ್ರಮದಿಂದ ಹಂಚಿದಳು. ಅದನ್ನು ಕೇಳಿದ ಲಕ್ಷ್ಮಣನು ಹಿರಿಯಣ್ಣನ ಬಳಿಗೆ ಬಂದನು. ಮರದ ಬುಡದಲ್ಲಿ ನೆರಳು ಬೀಳುವಂತೆ ಕಾಲ್ಗೆರಗಿದನು. ರಾಮನು ತನ್ನ ಜೊತೆ ಕಾಡಿಗೆ ಕರೆದುಕೊಂಡು ಹೋಗಲು ಒಡಂಬಡುವವರೆಗೂ ಮೇಲೇಳಲಿಲ್ಲ.

ಅರಮನೆಗೆ, ಪುರಕ್ಕೆ, ನಾಡಿಗೆ ರಾಮನೊಡನೆಯೆ ಸೀತೆ ಲಕ್ಷ್ಮಣರು ಅಡವಿ ಸೇರುವರೆನ್ನುವ ವಾರ್ತೆಯು ಹರಡಿತು. ಜನರ ದುಃಖದ ನದಿಯೆ ಒಂದಾಗಿ ತುಂಬು ಪ್ರವಾಹದಂತೆ ಹರಿಯಿತು.

ತುಡಿಸುತಿರೆ ರಘುಕುಲೇಶಂ ಸತಿಗೆ ನಾರುಡೆಗಳಂ

ರಾಮಚಂದ್ರನು ಮಡದಿ ಮತ್ತು ತಮ್ಮನನ್ನು ತನ್ನೊಡನೆ ಕಾಡಿಗೆ ಕರೆದುಕೊಂಡು ಹೋಗಲು ರಾಜಾಜ್ಞೆ ಪಡೆಯಲು ತಂದೆಯ ಬಳಿಗೆ ಬಂದನು. ಮಗನನ್ನು ಕಂಡ ತಕ್ಷಣ – ಸಂತಾಪದಿಂದ ಕದಡಿದ ಇಂದ್ರಿಯಗಳ, ಭೀತಿಯಿಂದ ಭ್ರಮೆಗೊಳಗಾದ, ನೀರಿಲ್ಲದ ಕೊಳದಂತೆ ಶೂನ್ಯ ಮನದವನಾದ, ದಟ್ಟವಾದ ಬೂದಿಯಿಂದ ಮುಚ್ಚಿಕೊಂಡಿರುವ ಬೆಂಕಿಯಂತೆ ತೇಜಗೆಟ್ಟ ಕೋಸಲ ಧರೆಯ ಮಹಾರಾಜನು – ಅಪ್ಪಿಕೊಳ್ಳಲು ಮೇಲೆದ್ದನು. ಆದರೆ ತೊನೆದು ಮೂರ್ಛೆಯಿಂದ ನೆಲಕ್ಕೆ ಕುಸಿದನು.

ಸೀತಾರಾಮಲಕ್ಷ್ಮಣರು ವೃದ್ಧನನ್ನು ಮಂಚಕ್ಕೆ ಎತ್ತಿ ಮಲಗಿಸಿ ಸಂತೈಸುತ್ತಿದ್ದರು. ಆಗ ಸ್ತ್ರೀಜನರ ಆಕ್ರಂದನ ಅವರ ಕಾಲು ಕಡಗದ ಶಬ್ದದೊಂದಿಗೆ ಬೆರೆತು ಹೆಚ್ಚಾಯಿತು.

ಅದು ಪುಷ್ಪ ಪ್ರಭಾತದಲ್ಲಿ ಕ್ರೌಂಚ ಪಕ್ಷಿಯ ಸಮೂಹವು ಎತ್ತರದ ಮುಗಿಲಿನಲ್ಲಿ ಸಾಲಾಗಿ ಸೇರಿ, ಒಟ್ಟಾಗಿ ದನಿಸಂತೆ ಮಾಡುವಂತಿತ್ತು !

ದೊರೆಯು ಪುನಃ ಮೈಮರವೆಯಿಂದ ಎಚ್ಚತ್ತನು. ಮಗನ ಬೇಡಿಕೆಗೆ, ಕಬ್ಬಿಣವು ಭಾರಕ್ಕೆ ಬಾಗುವಂತೆ ಕಷ್ಟದಿಂದ ಒಪ್ಪಿದನು. ಮಂತ್ರಿ ಸುಮಂತ್ರನನ್ನು ಕರೆದು ಹೀಗೆ ಆಜ್ಞಾಪಿಸಿದನು:

'ಚತುರಂಗ ಸೈನ್ಯವನ್ನು, ಪರಿವಾರವನ್ನು, ಧನಿಕ ವರ್ತಕರ ಸಮೂಹವನ್ನು, ಕಾಡಿನ ಪರಿಚಯವುಳ್ಳ ಬೇಡರ ಪಡೆಯನ್ನು, ಹದಿನಾಲ್ಕು ವರ್ಷಗಳಿಗೆ ಇಚ್ಛೆ ಪಡುವಷ್ಟು ಆಹಾರ ಭೋಗ ಸಾಮಗ್ರಿಯನ್ನು ಕಂದನೊಡನೆ ಕಳುಹಿಸು. ಅವನಿಗೆ ಕಾನನವು ಕೋಸಲಕ್ಕಿಂತ ಸುಖಮಯವಾಗುವಂತೆ ಮಾಡು.'

ಅದನ್ನು ಕೇಳಿ ಕುಬ್ಜೆಯು ಕೈಕೆಯ ಮುಖವನ್ನು ಇಂಗಿತದಿಂದ ನೋಡುತ್ತಿದ್ದಳು. ಅದನ್ನು ತಿಳಿದ ರಾಮನು ಮಂದಹಾಸದಿಂದ ಹೃದಯಗಳನ್ನು ಬೆಳಗುತ್ತ ಹೇಳಿದನು:

'ತಪದ ಸಾಧನೆಗಾಗಿ ಅರಣ್ಯಕ್ಕೆ ಹೋಗುತ್ತಿದ್ದೇವೆ. ಸೇನೆಯ ಸೇವೆ ಏತಕ್ಕೆ ಬೇಕು? ಧನಿಕ ವರ್ತಕರೇಕೆ? ಮತ್ತು ಬೇಡಪಡೆ ಏತಕ್ಕೆ? ಅದೆಲ್ಲವನ್ನು ಸೋದರ ಭರತನಿಗೆ ನೀಡು. ನಮಗೆ ನಾರುಮಡಿಯನ್ನು ಬಿಟ್ಟು ಇನ್ನಾವುದೂ ಬೇಡ. ಕೊಡುವುದಾದರೆ ಕಾಡಿನಲ್ಲಿ ಗೆಡ್ಡೆ ಗೆಣಸುಗಳನ್ನು ಅಗೆಯಲು ಒಂದು ಗುದ್ದಲಿ ಇರಲಿ. ಹಣ್ಣು ಹಂಪಲುಗಳನ್ನು ಆಯ್ದು ತುಂಬಲು ಒಂದು ಬುಟ್ಟಿಯನ್ನು ಕೊಡಿ.'

ಅದನ್ನು ಕೇಳಿ ಕಿಂಕರನ ಸೇವೆ ಸಲ್ಲಿಸುವಂತೆ ಕುಬ್ಜೆ ಮಂಥರೆಯು ಸಂಭ್ರಮದಿಂದ ನಾರುಬಟ್ಟೆಯನ್ನು ತಂದು ನೀಡಿದಳು. ಆಗ ಎಲ್ಲರೂ ಶಪಿಸುತ್ತಿದ್ದರು. ರಾಮನು ತಾನು ಉಟ್ಟಿದ್ದ ನಿರ್ಮಲವಾದ ವಸ್ತ್ರವನ್ನು ಕಳಚಿಟ್ಟು ನಾರುಬಟ್ಟೆಯನ್ನು ಉಟ್ಟನು. ಅದೇ ರೀತಿ ಲಕ್ಷ್ಮಣನು ಮಾಡಿದನು. ಮಿಥಿಳೇಂದ್ರನ ಮಗಳು ಹುಟ್ಟಿದ ದಿನದಿಂದ ಪಟ್ಟೆ ವಸ್ತ್ರಗಳನ್ನು ಬಿಟ್ಟು ಉಳಿದ ಬಟ್ಟೆಯನ್ನು ತೊಟ್ಟಿರಲಿಲ್ಲ. ಅವಳು ತಪದ ಘನತೆಯಿಂದ ಮುಂದೆ ನಿಂತಿದ್ದ ಇನಿಯನನ್ನು ನೋಡಿ ಕೆಂಪಾಗಿ ನಾರುಡೆಗಳನ್ನು ಎದೆಗೊತ್ತಿಕೊಂಡಳು. ತೊಡಲು ತಿಳಿಯದೆ ಸುಮ್ಮನಿದ್ದಳು.

'ಇತ್ತ ಕೊಡು' ಎಂದ ಪತಿಗೆ ಅದನ್ನು ನೀಡಿದಳು. 'ತನಗೆ ಉಡಲು ಗೊತ್ತಿಲ್ಲ. ಆದುದರಿಂದ ಕ್ಷಮಿಸಿ; ತೊಡಿಸಿ' ಎಂದು ಕಣ್ಣ ಸಂಜ್ಞೆಯಿಂದ ಬೇಡಿಕೊಂಡಳು. ರಘುಕುಲೇಶನು ನಾರುಡೆಗಳನ್ನು ಸತಿಗೆ ತೊಡಿಸುತ್ತಿರಲು ಅದನ್ನು ಕಂಡು ಕೌಸಲ್ಯೆಗೆ ದುಃಖ ಉಕ್ಕಿಬಂದಿತು. ತನ್ನ ಬೊಗಸೆ ಕೈಗಳಿಂದ ಮುಖವನ್ನು ಮುಚ್ಚಿಕೊಂಡು ಅತ್ತಳು. ವಿಕೃತವಾಗಿ ಮೈಗೆ ಮುಳ್ಳು ಬಂದಂತೆ ಮಂಥರೆಯು ದೂರದಲ್ಲಿ ನಿಂತು ಸಂಕಟವನ್ನು ಈಕ್ಷಿಸಿದಳು!

ಮರವಟ್ಟು ಬೀಳ್ದನಾ ಕೋಸಲೇಶಂ ನಟ್ಟ ನಡುವೀದಿವಟ್ಟೆಯಲಿ!

ರಾಜಧಾನಿಯ ಮೇಲೆ ಹೇಮಸುಂದರಿ ಸಂಧ್ಯೆಯು ಹೊಳೆಯುವ ಕುಂಕುಮದ ಓಕುಳಿಯನ್ನು ಎಂದಿನಂತೆ ತನ್ನ ಹೊನ್ನಿನ ಜೀರ್ಕೊಳವಿಯಿಂದ ಸಿಂಚನಗೈದಳು ಎಂಬಂತೆ, ಸಂಜೆ ಕೊಟ್ಟಿಗೆಗೆ ಬರುವ ದನಕರುಗಳ ಕಾಲಗೊರಸಿನಿಂದ ಕಂಗೊಳಿಸುತ್ತ ಏರಿದ ಗೋಧೂಳಿಯು ಹೊನ್ನ ಮಂಜಿನ ರೀತಿ ಹಬ್ಬುತ್ತ ರಂಜಿಸಿತು. ಬೇಸಾಯದ ಆಯಾಸದಿಂದ ಬಳಲಿ ಗುಡಿಸಲಿಗೆ ತನ್ನ ಆರಿನೆತ್ತುಗಳೊಡನೆ ಹಿಂತಿರುಗುತ್ತಿದ್ದ ಹೊಲದ ಒಕ್ಕಲಿಗನು, ಅದನ್ನು ಮೀರಿ ಅದಕ್ಕೆ ಎದುರಾಗಿ ಬಂದ ಬೇರೆ ಕೆಂದೂಳಿಯ ಪ್ರವಾಹವನ್ನು ಕಂಡು ಅಚ್ಚರಿಗೊಂಡನು. ತಲೆಯ ಮೇಲಿನ ಹುಲ್ಲಿನ ಹೊರೆಯನ್ನು ಇಳಿಸಿದನು. ಹೆದ್ದಾರಿಯ ಬಳಿ ತೇರಿನ ಗಾಲಿಗಳ ಕರ್ಕಶ ಶಬ್ದವನ್ನು ಮತ್ತು ಗೋಳಿಡುವ ಜನರ ಅಳಲನ್ನು ನಿಂತು ಕೇಳಿಸಿಕೊಂಡನು.

ನೋಡುತ್ತಿದ್ದರೆ, ತಟ್ಟನೆ ಕಣ್ಣಿಗೆ ಎದುರಾಗಿ ಸಾಕೇತ ಪಟ್ಟಣವೇ ನಡೆದು ಹೋಗುತ್ತಿದೆಯೊ ಎನ್ನುವಂತೆ ಹೆದ್ದಾರಿಯನ್ನು ತುಂಬಿ ತುಳುಕಿ, ಸೋಜಿಗದ ಮೆರವಣಿಗೆ ಬರುತ್ತಿತ್ತು. ಒಂದು ರಥವು ವೇಗವಾಗಿ ಓಡುತ್ತಿತ್ತು. ಅದನ್ನು ಹಿಂಬಾಲಿಸಿ ವಿವಿಧ ವರ್ಗದ ಜನ ಒಟ್ಟಾಗಿ ಸೇರಿ ಹುಚ್ಚುಹಿಡಿದಂತೆ ಧಾವಿಸುತ್ತಿದ್ದರು. ಕೆಲವರು ಎದೆಬಡಿದು ಕೂಗಿದರು. ಕೆಲವರು ಕೂದಲುಗಳನ್ನು ಕಿತ್ತುಕೊಂಡು ತಲೆಕೆದರಿ ಗೋಳಾಡಿದರು. ಇನ್ನು ಕೆಲವರು ತೊಟ್ಟ ಉಡುಗೆಯನ್ನು ಹರಿದು ತತ್ತರಿಸಿದರು. ಮತ್ತೆ ಕೆಲವರು ಹೊಟ್ಟೆ ಬಡಿದುಕೊಂಡರು. ಆಶ್ಚರ್ಯಗೊಂಡ ರೈತನು ವಿಸ್ಮಯ ಸಮಾಧಿಯಿಂದ ಎಚ್ಚರಗೊಳ್ಳುವಷ್ಟರಲ್ಲಿ ಚಿತ್ರಮಯ ಉನ್ಮಾದ ಉತ್ಸವವು ಮರೆಯಾಯ್ತು. ಪಟ್ಟಣದಿಂದ ಅತ್ತಸಾಗಿ ಹೊರಗಣ್ಣಿಗೆ ದೂರವಾಯ್ತು.

ಮಂತ್ರಿ ಸುಮಂತ್ರನು ರಥವನ್ನು ನಡೆಸುತ್ತಿರಲು, ರಾಮಚಂದ್ರನು ಸೀತೆ ಲಕ್ಷ್ಮಣರೊಡನೆ ತೇರಿನಲ್ಲಿ ಕಾಡಿಗೆ ಹೋಗುತ್ತಿದ್ದನು. ನೃಪ ದಶರಥ, ಪುರಜನ ಮತ್ತು ಅಂತಃಪುರದ ಸ್ತ್ರೀಯರು ಕಣ್ಣಿನ ವರ್ಷಧಾರೆ ಹರಿಸುತ್ತ ರೋದಿಸಿದರು. ಅದು ರಥದ ಚಕ್ರದ ಚೀತ್ಕಾರ ಮತ್ತು ಅಶ್ವಗಳ ಖುರಪುಟ ಧ್ವನಿಯನ್ನು ಹಾಗೂ ಧೂಳನ್ನು ಶಮನಗೊಳಿಸಿತ್ತು. ಹಿಂದಿರುಗುವಂತೆ ಅವರು ಬೇಡಿ ಕೈನೀಡಿ ಓಡಿದರು.

ಮುದಿ ಅರಸನು ವಾಯುವೇಗದಲ್ಲಿ ಓಡುತ್ತಿದ್ದ ರಥದ ವೇಗಕ್ಕೆ ಸಮನಾಗಿ ಸಾಗಲಾರದೆ ಗಟ್ಟಿಯಾದ ಸ್ವರದಲ್ಲಿ ಕರೆದು ಕೂಗಿದನು. ರಥದ ಮಾರ್ಗವನ್ನು ನೋಡುತ್ತ ನಿಂತಲ್ಲಿಯೆ ಕಡೆದಮೂರ್ತಿಯಂತೆ ನಿಂತುಬಿಟ್ಟನು. ನೆಟ್ಟಕಣ್ಣು ಬೀಳುವಂತೆ ದೃಷ್ಟಿಸಿ ನೋಡಿದನು. ಹಾ, ಧೂಳಿನ ಮಾರ್ಗವು ಕಣ್ಣಿಗೆ ಮರೆಯಾಯ್ತು! ಕೋಸಲೇಶನು ನಟ್ಟನಡು ಬೀದಿಯಲ್ಲಿ ಸ್ತಬ್ಧವಾಗಿ ಬಿದ್ದನು! ಅದನ್ನು ಕಂಡ ಕೂಡಲೆ ಕೌಸಲ್ಯೆ ಓಡಿ ಎತ್ತಿದಳು. ಆಗ ಕೈಕೆಯನ್ನು ನೋಡಿದ ರಾಜನು ಉರಿವ ಕೋಪದಲ್ಲಿ ಚೀರಿದನು:

'ಹತ್ತಿರ ಬರದಿರು, ಪಾಪಿ! ನನ್ನ ದೃಷ್ಟಿ ಪಥದಲ್ಲಿರಬೇಡ. ಸಾಯಿ! ನೀನು ಇನ್ನು ನನಗೆ ಸತಿಯಲ್ಲ. ನಾನು ನಿನಗೆ ಪತಿಯಲ್ಲ. ಇದೊ ನೀರೆಳ್ಳು ತರ್ಪಣ ಬಿಡುತ್ತಿದ್ದೇನೆ, ತೆಗೆದುಕೊ.' ಎಂದು ಮುಷ್ಟಿಯಿಂದ ನೆಲದ ಧೂಳನ್ನು ಎತ್ತಿ ಬೀಸಿದನು.

ದೊರೆಯು ಹೀಗೆ ಚಿತ್ತ ವೈಕಲ್ಯದಿಂದ, ದುಃಖ ಪಿಶಾಚಿಯಿಂದ ಹೊಡೆತ ತಿಂದವನಂತೆ, ಕೂದಲುಗಳನ್ನು ಮೈಯನ್ನು ಬಟ್ಟೆಯನ್ನು ಕಿತ್ತುಕೊಂಡನು. ಹಾದಿಯ ಭೂತದಂತೆ ನಡೆದನು. ಕೌಸಲ್ಯೆ ಸುಮಿತ್ರೆಯರು ಜೊತೆಗೂಡಿ ಸಾಹಸದಿಂದ ಅವನನ್ನು ರಾಜಮಂದಿರಕ್ಕೆ ತಂದರು. ಶೂನ್ಯವನ್ನು ದಿಟ್ಟಿಸಿ ಗೋಳಾಡುತ್ತಿದ್ದವನನ್ನು ಹಾಸಿಗೆಯ ಮೇಲೆ ಮಲಗಿಸಿದರು. ಹುಚ್ಚು ಹೆಚ್ಚಾದವನಂತೆ ಹೊರಳಿ ನರಳಿ ನಿಟ್ಟುಸಿರು ಬಿಟ್ಟನು. ರಾಮನನ್ನು ಕರೆದನು. ಕಂಡವರನೆಲ್ಲ ಜನಕಜಾವಲ್ಲಭ ಎಂದು ಭಾವಿಸಿ ತಬ್ಬಿಕೊಳ್ಳಲು ಮುಂದೆ ನುಗ್ಗಿ ಮಂಚದಿಂದ ಉರುಳಿದನು !

ಕೈಕೆಯನ್ನು ನಿಂದಿಸಿ, ಬಯಲನ್ನು ದೃಷ್ಟಿಸಿನೋಡಿ ಅವಳನ್ನು ಕಂಡವನಂತೆ ಥೂ ಎಂದು ಎಂಜಲನ್ನು ಉಗುಳಿದನು. ಅತಿ ಸನ್ನಿಯೇರಿದವನಂತೆ ವಿಕಲಮತಿ ದಶರಥನು ಅತಿಭಯಂಕರನಾದನು.

ಬಿರುಬೇಸಗೆಯ ಮಲೆನಾಡಿನ ಒಣಗಿದ ಕಾಡಿನಲ್ಲಿ ಅರಣ್ಯದ ಪ್ರಜ್ವಲಿಸುವ ಜ್ವಾಲೆ ಬೆಂಕಿಯ ಬೇಲಿಯಾಗಿ ಆವರಿಸಿ ಬರುತ್ತದೆ. ಅಂತಹ ಅಗ್ನಿಯ ಕೋಟೆಯ ನಡುವೆ ಸಿಕ್ಕಿಕೊಂಡ ಹಿಂಡು ತಪ್ಪಿದ ಒಂದು ಆನೆಯು ಮುಪ್ಪಿನಿಂದ ಓಡಲಾರದೆ ಘೀಂಕರಿಸುತ್ತ ಅರಚುತ್ತದೆ. ಅದನ್ನು ದಾವಾಗ್ನಿಯು ಸುತ್ತಿಮುತ್ತುತ್ತದೆ.

ಆ ಆನೆಯನ್ನು ತುತ್ತಾಗಿಸಿಕೊಳ್ಳುವ ಆತುರದಲ್ಲಿ ಕಾಡುಕಿಚ್ಚು ಸಾವಿನ ನೆತ್ತರ ನಾಲಗೆಯು ಸೇನೆಯಂತೆ ಧಾವಿಸಿ ಬರುತ್ತದೆ. ಆಗ ಆ ಗಂಭೀರ ದಿಗ್ಗಜವು ಗಾಂಭೀರ್ಯವನ್ನು ಬಿಟ್ಟು, ಕಂಪಿಸುವ ಚಂಚಲ ಚಿತ್ತದಿಂದ ದಿಕ್ಕು ದಿಕ್ಕಿಗೆ ಅಲೆದಾಡುತ್ತದೆ. ಹೊಗೆಯು ಕೆಟ್ಟ ಆಸೆಗತ್ತಲಿನಂತೆ ಆವರಿಸಲು ದಾರಿಕಾಣದಾಗುತ್ತದೆ.

ಭೀಕರವಾದ ಧೂಮ ಸಮೂಹವು ಅರೆಬಂಡೆಯಂತೆ ಉರುಳಿ ಮತ್ತೊಂದು ಸೊಕ್ಕಿದ ಆನೆಯಂತೆ ಮೇಲೆ ಹಾಯ್ದು ಬರುತ್ತದೆ. ಉದ್ಧಟತನದ ಮದವೇರಿದ ಆನೆಯ ಜೊತೆ ಮುದಿ ಆನೆ ಕಾದಾಡುತ್ತದೆ. ಪ್ರತಿಭಟಿಸಿ ಹೋರಾಡಿ ಸೋತು ಚೈತನ್ಯ ಕುಂದಿ ಬೀಳುತ್ತದೆ. ಆಗ ಹೊಗೆ ಆನೆಯಿಂದ ಹೊಮ್ಮುವ, ಮಿಂಚಿನಿಂದ ಮಾಡಿದ ಮೊನೆ ಈಟಿ ದಂತಗಳಂತೆ ಕೆಂಪಾದ ಉರಿಯ ಜ್ವಾಲಾ ಕಠಾರಿಗಳು ಮೈ ಚರ್ಮವನ್ನು ತಿವಿಯಲು ಮುದಿ ಆನೆಯು ಮೈ ಮರೆತು ಮಲಗುತ್ತದೆ.

ಹಾಗೆ ಸುತವಿರಹ ಸಂತಾಪದಿಂದ ದಹಿಸಿದ ದಶರಥ ಮಹಾರಾಜನು ಮೈ ಮರೆತನು !

ನಡೆದನು ರಾಮನಾ ಸ್ಯಂದನಂ ನಡಸೆ ಮಂತ್ರಿ, ವಂಚಿತರಪ್ಪವೋಲಯೋಧ್ಯಾ ಜನಂ

ರಾಮನು ಸಂಜೆಯಾಗುತ್ತಿರಲು ತನ್ನ ರಥವನ್ನು ಹಿಂಬಾಲಿಸಿ ಬರುತ್ತಿದ್ದ ಪೌರರನ್ನು ಹಿಂದಿರುಗಿ ಎಂದು ಕೇಳಿಕೊಂಡನು. ಅವರು ಅದಕ್ಕೆ ಮನಸ್ಸುಕೊಡದೆ ತೇರಿನ ಹಿಂದೆ ಸಾಗಿಬರುತ್ತಿದ್ದರು. ಆಗ ಅವರ ಹರಿಯುತ್ತಿರುವ ಆಸೆಗೆ ತಡೆಯಾದಂತೆ ತಮಸಾನದಿ ಹಾದಿಗೆ ಅಡ್ಡಬಂದಿತು. ರಾತ್ರಿಯ ಕತ್ತಲ ಮಸಿ ಹರಡಲು ನದಿಯ ತೀರದ ವನಶ್ರೇಣಿ ಮಂಕಾಯಿತು. ಆಗಸದಲ್ಲಿ ಕಿಕ್ಕಿರಿದ ನಕ್ಷತ್ರಗಳು ಮಿಣುಕು ಹುಳುಗಳ ಸಮೂಹದೊಡನೆ ಹೊಳೆಯ ಕನ್ನಡಿಯಲ್ಲಿ ಪ್ರತಿಬಿಂಬಿಸಿದವು. ಪೃಥ್ವಿಯು ನಿಶ್ಯಬ್ದ ಸಾಮ್ರಾಜ್ಯದ ಆಳ್ವಿಕೆಗೆ ಶರಣಾಗಲು ಆ ನದಿಯ ದಡದಲ್ಲಿ ಶ್ರೀರಾಮನು ಬೀಡುಬಿಟ್ಟನು.

ಬಾನಿನ ಮೂಡಲದಿಕ್ಕಿನ ಅಂಚಿನಲ್ಲಿ ಉಷೆ ಹೆಣ್ಣು ಕಣ್ಣು ತೆರೆಯುವ ಹೊತ್ತಿನಲ್ಲಿ ಮರಗಳ ಅಡಿಯಲ್ಲಿ ಮಲಗಿದ್ದ ದಣಿದ ಜನರು ನಿದ್ದೆಯ ಆಳದಲ್ಲಿ ಮುಳುಗಿಹೋಗಿದ್ದರು. ಮಂತ್ರಿಯು ರಥವನ್ನು ನಡೆಸಲು, ಅಯೋಧ್ಯಾ ಜನರು ವಂಚಿತರಾಗುವಂತೆ ರಾಮನು ಅದರಲ್ಲಿ ಹೊರಟು ಹೋದನು.

ಬನದ ಹೂಗಳು, ತಂಗಾಳಿ, ಹೂಬಿಸಿಲು ಹಕ್ಕಿಗಳ ಕಲರವ ರಮಣೀಯವಾಗಿ ತಮಸಾನದಿಯು ಮನೋಹರವಾಗುವಂತೆ ಮಾಡಿತು. ನಿದ್ದೆಯಿಂದ ಎದ್ದ ಜನ ರಾಮನನ್ನು ಕಾಣದಿರಲು, ಹಂಬಲಿಸಿ ಹುಡುಕಿದರು. ರೋದಿಸುತ್ತ, ಬತ್ತಿ ಹೋದ ಕಡಲಿನಂತೆ ಸಾಕೇತಪುರಿಗೆ ಹಿಂದಿರುಗಿದರು.

ನಾನಾವರ್ಣ ರಮಣೀಯ ದಿನದೇವಿಯು ಬಾಲಸೂರ್ಯನ ಕಳಶದೀಪವನ್ನು ಹಿಡಿದು ಹೊತ್ತರೆಯ ಹೊಸ್ತಿಲನ್ನು ದಾಟುತ್ತಿದ್ದಳು. ಆ ತೇರು ಅಯೋಧ್ಯೆ ನಾಡಿನ ಎಲ್ಲೆಯನ್ನು ಸೇರಿತು. ಸೀತೆಯ ಕಣ್ಣುಗಳಿಗೆ ಪ್ರಕೃತಿಸೊಬಗು ರಮ್ಯವಾಗಿರಲು ವನವಾಸದ ಮನಃಕ್ಲೇಶ ಮರೆಯಾಯಿತು. ಕಣ್ಣು ಹೋದತ್ತ ಕಡೆ ದೃಷ್ಟಿ ಹರಿಯುವ ತನಕ ಹಬ್ಬಿ ಹರಡಿರುವ ಹಸಿರುಗದ್ದೆ, ವಿಸ್ತಾರವಾದ ತೋಟದ ಸಿರಿ ಮನಸ್ಸನ್ನು ಸೆಳೆದು ಚೆಲುವಾಗಿಸಿತು.

ಜುಳುಜುಳನೆ ಹರಿಯುವ ಕಾಲುವೆಗಳ ಬದಿಯಲ್ಲಿ ಬೆಳೆದ ಹುಲ್ಲಿನ ನಡುವೆ ಮೊಳಕಾಲು ಮುಚ್ಚುವವರೆಗೂ ನಿಂತಿದ್ದ ಬೇಸಾಯಗಾರರು ಆಶ್ಚರ್ಯಗೊಂಡು ತಲೆಯೆತ್ತಿ ನೋಡಿದರು. ಹೇಮ ಆಚ್ಛಾದಿತ ರತ್ನ ಖಚಿತ ರಥವು ಬೆಳಗಿನ ನೇಸರನಿಗೆ ಪ್ರತಿಸೂರ್ಯ ಎಂಬಂತೆ ಹೊನ್ನಿನ ಕಿರಣಗಳನ್ನು ಹೊಮ್ಮಿಸಿ, ನೋಡುವ ಕಣ್ಣುಗಳಿಗೆ ಮಿಂಚಿನಂತೆ ಹೊಳೆದು ಹರಿದು ಹೋಯಿತು. ಕುದುರೆಗಳು ಅಯೋಧ್ಯೆಯ ಮಂಗಳವನ್ನು ಹೊತ್ತ ವೇದಶ್ರುತಿಗಳನ್ನು ಆಲಿಸುವ ದೂರವನ್ನು ಕ್ರಮಿಸಿ ಮೈ ಬೆವರಿ ಕಟುಬಾಯಿಯಿಂದ ಬೆಳ್ಳನೆಯ ನೊರೆ ಸೂಸುತ್ತ ತಮ್ಮ ನೆಳಲನ್ನು ತಾವೇ ತುಳಿದು ಮುಂದೆ ಓಡಿದವು. ದಕ್ಷಿಣ ದಿಕ್ಕಿಗೆ ತಿರುಗಿ ಗೋಮತಿ ನದಿಯನ್ನು ದಾಟಿದವು.

ಅವು ನವಿಲುಗಳ ಕೇಕಾಧ್ವನಿಯ, ಕ್ರೌಂಚ ಹಂಸ ಪಕ್ಷಿಗಳ ಉಲಿತದ ಸುಂದರ ಮರಗಳನ್ನು ಹಿಂದಿಕ್ಕಿ ಹೋದವು. ಮುಂದೆ ಪಾಚಿ ಲವಲೇಶವೂ ಇರದ ನಿರ್ಮಲ

ನೀರಿನ ದೇವಲೋಕದ ನದಿ, ತ್ರೇತಾಯುಗದ ಗಂಗೆ ಮೈದೋರಿದಳು. ವಿಷ್ಣುಪಾದಚ್ಯುತೆಯ, ಶಂಕರನ ಜಟಾಜೂಟದಿಂದ ಜಿನುಗಿದ, ನೀರಿನ ಶಬ್ದದ ನೊರೆನಗೆಯ, ಜಡೆಯಂತಹ ಪ್ರವಾಹದ, ತೆರೆತೆರೆಗಳ ನಡೆಯ ಆ ಸಮುದ್ರನ ರಾಣಿ ಒಮ್ಮೊಮ್ಮೆ ಗಂಭೀರ ಘೋಷದಿಂದಲೂ, ಒಮ್ಮೆ ಭೈರವರವದ ಸಪ್ಪಳದಿಂದಲೂ ಹರಿಯುತ್ತಿದ್ದಳು.

ತೀರದಲ್ಲಿ ನವ ಚಿಗುರುಗಳಿಂದ ಕೂಡಿ ಫಲಪುಷ್ಪಗಳನ್ನು ಹೊಂದಿದ ರಮ್ಯಪೊದೆ, ಮಂಗಳಮಾಲೆಯ ಜಹ್ನುವಿನ ಮಗಳಾದ ಗಂಗೆಯನ್ನು ದರ್ಶಿಸಿದೊಡನೆ ಅವರು ರಥದಿಂದ ಇಳಿದರು. ಆ ತಾಯಿಗೆ ನಮಸ್ಕರಿಸಿದರು. ಅದರ ಮಣ್ಣನ್ನು ಹಣೆಗೆ ತಿಲಕವಾಗಿಟ್ಟುಕೊಂಡರು! ಮಂತ್ರಿಯು ದಣಿದ ಅಶ್ವಗಳಿಗೆ ನೀರುಣಿಸಿದನು. ಮೈ ತಿಕ್ಕಿ ಸ್ನಾನ ಮಾಡಿಸಿ, ಮರದ ತಣ್ಣನೆಯ ನೆರಳಿನಲ್ಲಿ ಕಟ್ಟಿ ಹಸಿ ಹುಲ್ಲನ್ನು ಕುಯ್ದು ಹಾಕಿದನು. ಇಪ್ಪೆಮರದ ತಣ್ಣನೆಯ ನೆರಳಿನಲ್ಲಿ, ಹಚ್ಚನೆಯ ನೆಲದ ಮೇಲೆ ಸೀತೆಯ ಪಕ್ಕದಲ್ಲಿಯೆ ರಾಮನು ಮಲಗಿದನು.

ಗುಹಂ ಬಂದನಲ್ಲಿಗೆ ಮನೋಮುದದಿ ಪಿರಿಯತಿಥಿಯಂ ಸತ್ಕರಿಸೆ

ಆ ವಾರ್ತೆಯನ್ನು ಶೃಂಗಿಭೇರಪುರದ ಬೇಡರ ಅರಸ ಗುಹನು ಕೇಳಿದನು. ಹಿರಿಯ ಅತಿಥಿಗಳನ್ನು ಸತ್ಕರಿಸಲು ಮುದಗೊಂಡ ಮನಸ್ಸಿನಿಂದ ಅಲ್ಲಿಗೆ ಬಂದನು. ರಾಘವನ ಚರಣಗಳಿಗೆ ತಲೆಯಿಟ್ಟು ನಮಸ್ಕರಿಸಿದನು. ಕಾಣಿಕೆಯಾಗಿ ತರತರದ ಹಣ್ಣುಗಳನ್ನು, ಹೂವುಗಳನ್ನು, ಮಾಂಸಾನ್ನವನ್ನು ನೀಡಿದನು. ಎಲ್ಲರೂ ಅದನ್ನು ತಿಂದು ತಣಿದರು. ತೊರೆಯ ತೀರದ ತೊಡೆಯ ಮೇಲೆ ಮಲಗಿ ಆ ರಾತ್ರಿಯನ್ನು ಸುಖದ ನಿದ್ರೆಯಲ್ಲಿ ಕಳೆದರು.

ಕೋಗಿಲೆ, ಭರದ್ವಾಜ, ನವಿಲುಗಳ ಕೇಕಾಧ್ವನಿಗಳೊಡನೆ ಮಾರನೇ ದಿನ ಮುಖ ತೋರಿಸಿತು. ರಘುನಂದನನ ಇಚ್ಛೆಯಂತೆ ಜಾಹ್ನವಿಯನ್ನು ದಾಟಲು ಬೇಡರ ಒಡೆಯ ಗುಹನು ನಾವೆಯನ್ನು ತರಿಸಿದನು. ಅದನ್ನು ಹುಲಿ, ಚಿರತೆ, ಜಿಂಕೆಯ ಚರ್ಮಗಳಿಂದ ಹೊಲಿದು ತಯಾರಿಸಲಾಗಿತ್ತು. ಸೀತೆ ಮತ್ತು ಲಕ್ಷ್ಮಣರು ಅದನ್ನು ಹತ್ತಲು ರಾಮನು ನಿರ್ದೇಶಿಸಿದನು. ತಾನು ನಿಧಾನವಾಗಿ ಪ್ರಿಯ ಮಂತ್ರಿಯ ಬಳಿಗೆ ಹೋಗಿ ಮೈದಡವಿ ಸಂತೈಸಿದನು. ಸಾಕೇತಪುರಿಗೆ, ದಶರಥನ ಬಳಿಗೆ, ಕೌಸಲ್ಯೆ ಸುಮಿತ್ರೆ ಕೈಕೆ ಪುರಜನರ ಬಳಿಗೆ ತಮ್ಮ ಪ್ರೀತಿಯನ್ನು ಹೊತ್ತು ಸಾಗುವಂತೆ ಕೇಳಿಕೊಂಡನು.

ರಥದ ಕಸುವುಳ್ಳ ಕುದುರೆಗಳು ರಾಮನನ್ನು ನೋಡುತ್ತಿರಲು, ಪ್ರೀತಿ ಕರುಣೆಯಿಂದ ಹುಲ್ಲುಮೇವನ್ನು ತೆಗೆದುಕೊಂಡು ಅವುಗಳೆಡೆಗೆ ಹೋದನು. ಮೈ ಚಪ್ಪರಿಸಿ ಪ್ರೀತಿಯಿಂದ ನೇವರಿಸಿ ಮಾತಾಡಿದನು. ಅದನ್ನು ಅರಿತಂತೆ ಮೂಕಜಂತುಗಳು ತಲೆಯ ಕೇಸರ ಚವರಿಯನ್ನು ಬೀಸಿ ಕುಣಿದು ಕೆನೆದವು.

ಗುಹನು ಹುಟ್ಟುಹಾಕುತ್ತಿರಲು ದೋಣಿಯು ಸೀತೆ ಲಕ್ಷ್ಮಣ ರಾಮರನ್ನು ಹೊತ್ತ ಪುಣ್ಯಕ್ಕೆ, ಸಂಪದಕ್ಕೆ, ಹೆಮ್ಮೆಗೆ ಎಂಬಂತೆ ತೆರೆಗಳ ಮೇಲೆ ಕುಣಿ ಕುಣಿದು ತೇಲಿ ಸಾಗಿತು. ನೌಕೆಗೆ ಕಟ್ಟುವ ಹಾಯಿಪಟವು ಉತ್ಸಾಹದಿಂದ ಉಬ್ಬೇರಿದೆ ಎಂಬಂತೆ ಗಾಳಿಯ ಹೊಡೆತಕ್ಕೆ ಉಬ್ಬಿತು. ಮಂತ್ರಿಯು ದಡದಲ್ಲಿ ನಿಂತು ನೋಡುತ್ತಿರಲು ದೋಣಿಯು ಬರಬರುತ್ತ ಕಿರಿದಾಗಿ ಹೊಮ್ಮುತ್ತಿದ್ದ ಕಂಬನಿಯ ಮಬ್ಬಿನಲ್ಲಿ, ಕಡೆಗೆ ಕಣ್ಮರೆಯಾಯಿತು. ಸಚಿವೋತ್ತಮನು ಬಿಕ್ಕಿ ಬಿಕ್ಕಿ ಅಳುತ್ತಳುತ್ತ, ಮಸಣದಿಂದ ಮಸಣಕ್ಕೆ ನಡೆಯುವ ಭೂತದಂತೆ ತೇರೇರಿ ಅಯೋಧ್ಯೆಗೆ ಬಂದನು.

ಪೆಣ್ಣೆಂಬ ತಪಕೆ ನೀಂ ನಿರುಪಮಪ್ರತಿಮೆಯೌ !

ಅಯೋಧ್ಯಾನಗರಿಯ ಕಡಲು ಕಡೆದಾಗ ಹೊಮ್ಮಿದ ಕ್ರಾಂತಿದಿನದಂದು– ಮೌನದಿಂದ ಕೂಡಿದ ಧ್ಯಾನವಧು ಊರ್ಮಿಳಾದೇವಿಯೆ, ಸೌಮಿತ್ರಿಯ ಅರ್ಧಾಂಗಿಯೆ ನೀನೆಲ್ಲಿದ್ದೆ ಹೇಳು? ನಿನ್ನ ಎದೆಯ ಹೂವಿನ ನೋವು ಕಣ್ಣ ತಾವರೆಯ ಶತದಲದಿಂದ ತುಳುಕಿ ಬೀಳಲಿಲ್ಲವೆ?

ಪೆಣ್ತನದ ಪ್ರತಿರೂಪ ಊರ್ಮಿಳೆ. ಹೆಣ್ಣೆಂಬ ತಪಕ್ಕೆ ನೀನು ಉಪಮಾತೀತ ಪ್ರತಿಮೆ! ಪತಿಯೊಡನೆ ಇದ್ದು ಕಾಡಿನ ವೈವಿಧ್ಯವನ್ನು ಸವಿದು, ಲಂಕೆಯಲ್ಲಿದ್ದು ಪತಿವ್ರತೆಯ ಸಾಹಸದ ರಸಕ್ಕೆ ಬಾಳನ್ನು ಆಹುತಿಯಾಗಿಸಿದ, ದೇವ ಮಾನವ ಸಕಲ ಲೋಕದ ಹೊಗಳಿಕೆಗೆ ಒಳಗಾದವಳು ಸೀತೆ. ಅವಳ ತಪಕ್ಕಿಂತ ಮಿಗಿಲು ಹಾಗೂ ಪ್ರಸಿದ್ಧವಾದುದು ನಿನ್ನ ದೀರ್ಘ ಮೌನ ವ್ರತ. ನೀನು ಮೂಕಸತಿ, ಗೋಚರಾತೀತಳು!

ಕಲ್ಲಾಗಿಬಿದ್ದ ಅಹಲ್ಯೆಯ ಶಿಕ್ಷೆಗೆ ಅಚೇತನದ ರಕ್ಷೆಯಿತ್ತು. ನೀನು ಉಸಿರಾಡುತ್ತ ಅರೆ ಬಂಡೆಯಂತೆ ಹದಿನಾಲ್ಕು ವರ್ಷ ಆಶಂಕೆ, ನಿರೀಕ್ಷಣೆ, ಭೀತಿ, ಖಿನ್ನತೆ, ಹತಾಶೆಗಳೆಂಬ ಐದು ಉರಿಗಳ ನಡುವೆ ತಪಸ್ಸಿನಿಂದಿದ್ದೆ. ಅದನ್ನು ನೆನೆದರೆ, ಅದೇ ಮಹಾವ್ರತವಾಗುವುದು ಜೀವರಿಗೆ.

ಲಕ್ಷ್ಮಣನು ಅಣ್ಣನೊಡನೆ ಕಾಡಿಗೆ ಹೋಗುವಾಗ ನಿನ್ನ ಅನುಮತಿಯನ್ನು ಕೇಳಿದನೆ? ಅವನು ಭ್ರಾತೃ ಭಕ್ತಿಯ ಸಂಭ್ರಮದ ಹೆಚ್ಚುಗಾರಿಕೆಯಲ್ಲಿ ನಿನ್ನನ್ನು ಪ್ರೀತಿಯಿಂದ ಬೀಳ್ಕೊಡುವುದನ್ನು ಮರೆಯಲಿಲ್ಲ ಅಲ್ಲವೆ? ಸುಮಿತ್ರಾತ್ಮಜ ಎಂದೂ ಮರೆಯುವುದಿಲ್ಲ!

ಹೇಳು, ಕಾಡಿಗೆ ಹೋಗುವಾಗ ಏನನ್ನು ಹೇಳಿದ? ಸತಿ ಶಿರೋಮಣಿ ಊರ್ಮಿಳಾದೇವಿ ತನ್ನ ಪತಿ ಗುರುತಪಕ್ಕೆ ದೀಕ್ಷೆಯಿತ್ತುದನ್ನು, ಆ ಮಂತ್ರವನ್ನು ಹೇಗೆ ಹೇಳುತ್ತಾಳೆ? ಅವಳು ಪ್ರಾಣೇಶ ಲಕ್ಷ್ಮಣನು ರಾಮ ಸೀತೆಯರೊಡನೆ ಅಯೋಧ್ಯೆಯನ್ನು ಬಿಟ್ಟಂದು ಸರಯೂ ನದಿಯ ತೀರದಲ್ಲಿ ಪರ್ಣಕುಟಿಯನ್ನು ರಚಿಸಿದಳು. ಚಿರ ತಪಸ್ವಿನಿಯಾಗಿ ಚಿತ್ತಪೋ ಮಂಗಳದ ರಕ್ಷೆಯನ್ನು ಮೈಥಿಲಿಗೆ, ರಾಮನಿಗೆ ಮತ್ತು ತನ್ನಿನಿಯ ದೇವನಿಗೆ ಕಟ್ಟಿದಳು!

❑



~~~~~~~~~~~~~~~~~~~~~~ ಸಂಚಿಕೆ – ೫ ~~~~~~~~~~~~~~~~~~~~~~

ಭರತಮಾತೆ

ಪ್ರೇಯಸಿಯ ರೂಪ ಮೋಹಜ್ವಾಲೆಯಲ್ಲಿ ಕುದಿದು ಬೆಂದು, ಜೊತೆಗೆ ಪ್ರಿಯ ಪುತ್ರ ವಾತ್ಸಲ್ಯ ಮಧುವಿನಲ್ಲಿ ಮುಳುಗಿ ಮಿಂದ ದಶರಥ ಮಹಾರಾಜನ ಬುದ್ಧಿ ಭ್ರಮಣೆಯು ಅತಿ ಭಯಂಕರವಾಗಿ ಕ್ರೌರ್ಯಕ್ಕೆ ನೆಗೆದಿತು! ನಡುರಾತ್ರಿಯಲ್ಲಿ ಹಾಸಿಗೆಯಿಂದ ನೆಗೆದು ಎದ್ದನು. ಕೌಸಲ್ಯೆಯು ಕಣ್ಣು ಮುಚ್ಚದೆಯೆ ಕಾದು ಕುಳಿತಿದ್ದಳು. ಅವಳನ್ನು 'ಕೈಕೆ ಬಾ' ಎಂದು ಹೇಳಿ ತಬ್ಬಿಕೊಂಡು ತೊಡೆಯೇರಿಸಿಕೊಂಡನು. ಬಿಗಿದು ಅಪ್ಪಿ ಮುತ್ತಿಡುತ್ತ ನಗತೊಡಗಿದನು. ಇದ್ದಕ್ಕಿದ್ದಂತೆ ತೊಲಗು ತೊಲಗೆಂದು ಕಿರುಚಿಕೊಂಡು ದೂರಕ್ಕೆ ತಳ್ಳಿದನು.
~~~~~~~~~~~~~~~~~~~~~~

ರಾಮನನ್ನು ಕೂಗಿ ಗೋಳಾಡಿದನು. 'ಕೈಕೆಯನ್ನು ಕರೆ' ಎಂದು ಹೇಳಿದನು. ಅವಳು ಬರಲು, ತಟ್ಟೆಯನ್ನು ಮುಖದತ್ತ ಬೀಸಿ ಹೊಡೆದನು. ಬಯಲನ್ನು ಮಗನೆಂದು ಹಿಡಿದು, ರಾಮನ ಮುದ್ದು ಹೆಸರನ್ನು ಮೆಲ್ಲನೆ ಉಚ್ಚರಿಸಿ ಲಲ್ಲೆಗೈದು ಸಂತೈಸಿದನು. ಬೆಳಗಾಗಿ ನೇಸರನು ಬರಲು, ಗುರು ವಸಿಷ್ಠರಿಗೆ ಅದನ್ನು ನಂದಿಸಿ ಎಂದು ಆಜ್ಞೆಮಾಡಿ ಮೂದಲಿಸಿದನು. ಸುಮಂತ್ರನನ್ನು ಹೆಸರು ಹಿಡಿದು ಕೂಗಿದನು. ಹೇಳಿದರೂ ಬರಲಿಲ್ಲವೆಂದು, ಎಲ್ಲರನ್ನೂ ಬಾಯಿಗೆ ಬಂದಂತೆ ನೀಚವಾಕ್ಯಗಳಿಂದ ಶಪಿಸಿದನು.

ಬಯಲಿನ ಅಂಗಳದಲ್ಲಿ ಕಂದ ರಾಮನನ್ನು ಕಂಡಂತೆ ಕೈ ಚಾಚಿ ಕರೆದನು. ತಡೆದವರನ್ನು ಬಡಿದಿಕ್ಕಿದನು. ಮುನ್ನುಗ್ಗುತ್ತ ಓಡೋಡಿ ಕೆಳಭಾಗದಲ್ಲಿಯ ಆಳೆತ್ತರದ ನೆಲಗಟ್ಟಿಗೆ ಮೈ ಎಲುಬು ಕೀಲುಗಳು ಉಳುಕುವಂತೆ ದುಮುಕಿದನು. ಅಲ್ಲಿ ನೆರೆದಿದ್ದ ಹೆಣ್ಣುಗಂಡುಗಳ ಕೊರಲುಗಳಿಂದ ಒಮ್ಮೆಗೆ ಹಾಹಾ ಎಂಬ ಶಬ್ದ ಹೊರಹೊಮ್ಮಿತು.

ಅವರು ಮೇಲಕ್ಕೆ ಎತ್ತಿ, ಮಣ್ಣೊರಸಿ ತೈಲವನ್ನು ಬಳಿದರು. ನೆತ್ತರು ಹೊಮ್ಮುತ್ತಿರುವ ಗಾಯಗಳಿಗೆ ಮದ್ದನ್ನು ಸವರಿದರು. ವಸುಧೇಶನು ಮಾನಸ ಜ್ವರವೇರಿದ ಹುಚ್ಚು ಕಿಚ್ಚಿನ ಮೂರ್ಛೆಗೆ ಒಳಗಾದನು. ಆಗ ಹಂಸದ ಹೃದಯದ ಬಳಿಯ ಮೃದು ತುಪ್ಪಳದಿಂದ ಮಾಡಿದ ಸುಪ್ಪತ್ತಿಗೆಯ ಮೇಲೆ ಮಲಗಿಸಿದರು.

ರಾಮನನ್ನು ಗಂಗೆಯ ಬಳಿ ಬೀಳ್ಕೊಟ್ಟು ಬಂದ ಸುಮಂತ್ರನು ಶೋಚನೀಯ ಸ್ಥಿತಿಯ ರಾಜೇಂದ್ರನನ್ನು ಕಂಡನು. ಗೌರವದಿಂದ ಎರಡು ಕೈಗಳನ್ನು ಜೋಡಿಸಿ ನೆನೆದ ಕಣ್ಣುಗಳಿಂದ ನಿಂತನು. ಅವನನ್ನು ಗುರುತಿಸಲಾರದ ಆ ಪೃಥ್ವಿಪತಿಯು ಶವದ ಅಕ್ಷಿಗಳಂತೆ ಮಂಕುಗಣ್ಣಿನಿಂದ ನಿಶ್ಚಲವಾದ ನಿರ್ಜೀವದಂತೆ ನೋಡಿದನು. ಮಂತ್ರಿಯು ರಘುರಾಮನ ಸಂದೇಶವನ್ನು ಆಸೆಪಟ್ಟು ಹೇಳಲು, ಅದನ್ನು ಶಿಲಾಪ್ರತಿಮೆಯಂತೆ ಮೌನದಿಂದ ಕೇಳಿದನು. ಕೇಳುತ್ತಾ, ಆಲಿಸುತ್ತಾ ಶೋಕದ ಸಿಡಿಲ ಹೊಡೆತಕ್ಕೆ ಮಂಚದಿಂದ ಕೆಳಗೆ ಉರುಳಿದನು.

ಸ್ತ್ರೀ ಸಮೂಹವು 'ಹೋ' ಎಂದು ಧ್ವನಿಮಾಡಿ ಕಿರುಚಿಕೊಳ್ಳುತ್ತ, ರಾಜನ ತೋಳುಗಳೆರಡನ್ನು ಹಿಡಿದು ಮೇಲಕ್ಕೆ ಎತ್ತಿ ಪ್ರಲಾಪಿಸಿತು. ಆ ಗೋಳಿಗೆ ಇಡೀ ನಗರದ ಆಬಾಲ ವೃದ್ಧರಾದಿಯಾಗಿ ರೋದನ ಸಮುದ್ರವನ್ನು ಕಡೆದಿತು. ಕೌಸಲ್ಯೆ ಸುಮಿತ್ರೆಯರು ಅರಸನನ್ನು ಮೇಲೆತ್ತಿ ಮಲಗಿಸಿದರು. ಮೂರ್ಛೆಯನ್ನು ಶೈತ್ಯೋಪಚಾರದಿಂದ ನಿವಾರಿಸಿದರು.

ಗುರುಗಳಾದ ವಾಮದೇವ ವಸಿಷ್ಠಾದಿಗಳು ತಾವು ಆಡಿದುದಕ್ಕೆ ತಾವೇ ದುಃಖಿಸುತ್ತ ಸಮಾಧಾನ ಪಡಿಸಿದರು. ಗುರುವರೇಣ್ಯರ ನುಡಿಗೆ – ತಡೆಗೊಂಡ ಹೊಳೆಯು ಉಕ್ಕಿ ದಡಗಳನ್ನು ಮುಚ್ಚಿಕೊಳ್ಳುವ ಹಾಗೆ – ದೊರೆಯ ಎದೆಯ ದುಃಖದ ಬೆಂಕಿಯು

ಅವನ ಆತ್ಮವನ್ನು ಛಿದ್ರಛಿದ್ರವಾಗಿಸುವ ರಭಸದಿಂದ ನೂರ್ಮಡಿಯಾಗಿ ಉಕ್ಕಿತು. ಬಳಿಯಲ್ಲಿದ್ದವರನ್ನು ಬಡಿದು ಬಡಿದಟ್ಟಿದನು. ಕೈಗೆ ಯಾರೂ ಎಟಕದಿರಲು ಸಿಟ್ಟು ಸೀಕರಿಸಿ ಉರಿಯಲು – ನೋಡುವವರಿಗೆ ಭೀತಿ ಬಡಿಯುವಂತೆ ತನ್ನ ಕಣ್ಣನ್ನು ತಾನೇ ಕಿತ್ತುಕೊಂಡನು. ಅಮಮ!

ಅಃ! ಬೆಳಕೆ, ನೀಂ ಕಣ್‌ಕಿಡಲ್ ಕಣ್ದೆರೆವೆಯಲ್ತೆ?

ಕೈಕೆಯನ್ನು ಬೊಬ್ಬಿರಿದು ಕೂಗಿದನು. ಕೊಬ್ಬಿನ ರಕ್ತ ಸೋರುತ್ತಿದ್ದ ಕಣ್ಣನ್ನು ಅಂಗೈಯಲ್ಲಿ ಹಿಡಿದುಕೊಂಡು ಅವಳನ್ನು ಬೆಟ್ಟುಮಾಡಿ ತೋರಿಸುತ್ತ ಹೇಳಿದನು:

'ನಾನು ಕಂಗೊಳಿಸಲು ಕಾರಣವಾದ ಈ ಕಣ್ಣು ನನ್ನ ದೇಶ ಕೋಸಲದ ಪ್ರತೀಕ. ನೋಡು ಅಂಗೈನ ನೆಲ್ಲಿಕಾಯಿಯಂತೆ ಸ್ಪಷ್ಟವಾಗಿ ಕಾಣಿಸುತ್ತಿದೆ. ಪ್ರಿಯತಮಾ ಪಿಶಾಚಿನಿ ಕೈಕೆಯೆ, ಇದನ್ನು ತೆಗೆದುಕೊ. ನನ್ನ ಕುವರ ನಯನಾಭಿರಾಮನನ್ನು ನನಗೆ ಕೊಡು! ಕಣ್ಣಿಗೆ ತೃಪ್ತಿಯಾಗುವವರೆಗೂ ನೋಡಿ ಪ್ರಾಣಬಿಡುತ್ತೇನೆ. ರಾಣಿಯೆ, ಎಲ್ಲಕ್ಕೂ ಕಾರಣ ನಿನ್ನ ರೂಪು ಅಲ್ಲ, ಹಾಳಾದ ಈ ಕಣ್ಣುಗಳೇ ಕಾರಣ! ಈಗೆಲ್ಲಿ ಹೇಳು, ನಿನ್ನ ರೂಪ ಪಾಪ?

'ಓ ಅಂಧ ತಪಸ್ವಿಯೇ, ನಿನ್ನ ಮಗ ಶ್ರವಣಕುಮಾರನನ್ನು ನೀರು ಕುಡಿಯುವ ಪ್ರಾಣಿಯೆಂದು ಭಾವಿಸಿದೆ. ನನ್ನ ಶಬ್ದವೇಧೀ ಧನುರ್ವಿದ್ಯಾ ಪ್ರತಿಷ್ಠೆಯಿಂದ ಕೊಂದುಬಿಟ್ಟೆ. ಅದಕ್ಕೆ ವಿಧಿ ನನಗೆ ವಿಧಿಸಿದ ಈ ಶಾಪವನ್ನು ನೋಡು! ನೋಡು!

'ಇದೇನು ಶಾಂತಿ ನನ್ನ ಆತ್ಮವನ್ನು ತುಂಬುತ್ತಿದೆ. ಮತ್ತಿದೇನು ಕಾಂತಿ! ಅಃ ಬೆಳಕೆ ನೀನು ಕಣ್ಣು ಹಾಳಾದ ಮೇಲೆ ಕಣ್ಣು ತೆರೆವೆಯಲ್ಲವೆ? ಕುರುಡಿನ ಮಹಿಮೆ ಕುರುಡನಿಗೆ ಗೋಚರ! ಎಂತಹ ದಿವ್ಯದರ್ಶನ!

'ಓ ರಾಮ, ಇದಕ್ಕಾಗಿ ನೀನು ಅಡವಿಗೆ ಒಲಿದೆಯ? ಈಗ ನಾನು ಯಜ್ಞದ ಅಧಿದೇವತೆ ಇತ್ತ ಸಂದೇಶದ ಅರ್ಥವನ್ನು ತಿಳಿದೆನು! ನನ್ನ ಮಗನಾದುದಕ್ಕೆ, ನಿನಗಿದೊ ನಮಸ್ಕಾರ! ಧನ್ಯನಾದೆನು ದೇವ!'

ರಾಜನಿಗೆ ನೆರವನ್ನು ನೀಡಲು ಗೂನಿ ಮಂಥರೆಯೊಬ್ಬಳೇ ಓಡಿದಳು. ವಿಕೃತಿಗೆ ಯಾವ ಭೀಭತ್ಸ ಭೀತಿ? ವಿಕೃತಿಯ ಎದುರು ಪ್ರಕೃತಿಯ ಒಂದು ಚೆಲುವು ಬರುವಂತೆ, ಕೈಕೆಯ ಕುಬ್ಜೆಯು ತನ್ನೆಡೆಗೆ ಬರುವಷ್ಟರಲ್ಲಿ ದಶರಥನಿಗೆ ಮೃತ್ಯು ಬಂದಿತು. ದೊರೆ ಧರೆಗೆ ಉರುಳಿದನು!

ಕಂಪಿಸಿದೆ ತನು, ನೆನೆಯೆ ಕಂಡ ರಕ್ಕಸಗನಸದಂ.

ಆ ಕಡೆ ಆ ರಾತ್ರಿ ಕೇಕಯಪುರದ ಸೋದರಮಾವನ ಮನೆಯಲ್ಲಿ ಮನೋಹರ ಸುಖದ ನಿದ್ರಾರತಿಯ ತೋಳು ತೊಡೆಯ ತೆಕ್ಕೆಯ ಬೆಚ್ಚನೆ ಎದೆಯಲ್ಲಿ ಮಲಗಿದ್ದ ಭರತದೇವನು ದುಃಸ್ವಪ್ನ ಭೀತಿಯಿಂದ ಬೆಚ್ಚಿ ಭಯಪಡುತ್ತ ಎದ್ದು ನೋಡಿದನು.

ನಡುರಾತ್ರಿಯು ತಾರೆಯಿಂದೊಡಗೂಡಿ ನೀಲಿಬಣ್ಣವನ್ನು ಉಟ್ಟು ನಿಶ್ಯಬ್ದವಾಗಿ ನಿಂತಿತ್ತು. ಗಾಬರಿಗೊಂಡು ನೋಡುತ್ತಿದ್ದಂತೆ ಬಾನಿನ ಬಟ್ಟೆಯ ಮೇಲೆ ಒಂದು ನಕ್ಷತ್ರ ಪ್ರಜ್ವಲಿಸುತ್ತ ಉರಿದುರಿದು ಕತ್ತಲೆಯ ವಿಸ್ತಾರಕ್ಕೆ ಬೆಂಕಿಗೆರೆಯ ಚಿತ್ತಾರವನ್ನು ಮೆತ್ತಿ ಬರೆಯಿತು. ಅರಮನೆಯ ಕತ್ತಲಿನಲ್ಲಿ ಹುದುಗಿದ್ದ ವಸ್ತುಗಳಿಗೆ ನೆರಳನ್ನುಂಟುಮಾಡಿತು. ಹುಟ್ಟು ಸಾವುಗಳ ಪರಂಪರೆಯಂತೆ ಮುಳುಗಿ ಮರೆಯಾಯಿತು. ಅವನು ನಿಟ್ಟುಸಿರು ಬಿಡುತ್ತ ಶತ್ರುಘ್ನನನ್ನು ಕರೆದು ಎಚ್ಚರಿಸಿದನು. ತನಗೆ ಬಿದ್ದ ಕನಸನ್ನು ಹೀಗೆ ಹೇಳಿದನು:

'ಸೋದರನೇ, ಆಶ್ಚರ್ಯವನ್ನು ಏನೆಂದು ಹೇಳಲಿ. ಆ ರಾಕ್ಷಸ ಕನಸನ್ನು ನೆನೆದರೆ ಶರೀರ ನಡುಗುತ್ತದೆ. ನಾಲಗೆ ತೊದಲುತ್ತದೆ. ಬುದ್ಧಿ ಕ್ಷೋಭೆಗೊಳ್ಳುತ್ತದೆ. ಆ ಕಳವಳದಿಂದ ಆತ್ಮ ಕುದಿಯುತ್ತಿದೆ. ಅದು ಯಾವ ನಾಡೋ ಗೊತ್ತಿಲ್ಲ. ಸೂರ್ಯ ಇಳಿದಿದ್ದಾನೆ. ಕಪ್ಪು ಕವಿಯುತ್ತಿದೆ. ನಿರ್ಜನತೆ, ನಿಶ್ಚಲತೆ, ನೀರವತೆಗಳು ಮೈಗೊಂಡ ರೀತಿ ಸಂಜೆಯ ಅಂಬರಕ್ಕೆ ಎದುರಾಗಿ ದೊಡ್ಡ ಪರ್ವತ ಶಿಖರದಲ್ಲಿ ಬಂಡೆಯೊಂದು ದುಶ್ಯಕುನದಂತೆ ನಿಂತಿತ್ತು. ಪರದೇಶಿಯಾದ ನಾನೊಬ್ಬನೆ ಆ ಗಿರಿಯ ಕಣಿವೆಯಲ್ಲಿ ನಡೆಯುತ್ತಿದ್ದೆನು. ಆಗ ಏನೆಂದು ಹೇಳಲಿ, ಕಿವಿಗೆ ಒಂದು ಗೋಳಿನ ದೀರ್ಘವಾದ ಸ್ವರಬಂದು ವಿಪತ್ತೆಲ್ಲವನ್ನು ಒಟ್ಟುಗೂಡಿಸಿ, ಕಡಲು ಕಡೆದ ಅತಿಯಾದ ಶಬ್ದದಂತೆ ಆರ್ಭಟಿಸಿತು.

'ಬಿರುಗಾಳಿಗೆ ಅರಳಿ ಎಲೆ ನಡುಗುವಂತೆ ನಡುಗಿದ ನಾನು ಬಿಡದಂತೆ ನೋಡುತ್ತಿರಲು, ಬಾನಿನ ಗೋಡೆಗೆ ಎದುರಿನ ಕಲ್ಗೋಡಿನ ತುದಿಯಲ್ಲಿ ಗೋಳು ಮೈಯನ್ನು ಆವರಿಸುವಂತಹ ಒಂದು ಮನುಷ್ಯ ಆಕಾರ ಕಂಡಿತು. ಬಿಟ್ಟಕಣ್ಣು ಬಿಟ್ಟವನಂತೆ ನೋಡುತ್ತಿರಲು ಆ ಮಸಿಯ ಚಿತ್ತಾರದಲ್ಲಿ ತಲೆಗೆದರಿ, ಕೊಳೆಮೈಯಲ್ಲಿದ್ದ ತಂದೆಯನ್ನು ಗುರುತಿಸಿದೆನು. ಅವನು ಬೆಟ್ಟದ ತುದಿಯ ಕೋಡಿನಿಂದ ಹಾರಿ ಹೊಂಡದಲ್ಲಿದ್ದ ಹೇಸಿಗೆಯ ಮಡುವಿಗೆ ತಲೆಕೆಳಕಾಗಿ ಧುಮುಕಿದನು!

'ನೋಡುತ್ತಿದ್ದೆನೇ ಹೊರತು ಸಹಾಯ ಮಾಡಲಾರದೆ ಸ್ವಲ್ಪದೂರದ ದಡದಲ್ಲಿ ನಿಂತು ಅಳುತ್ತಿದ್ದೆನು. ಅವನು ದುರ್ಮಲದ ಕಡಲಿನಲ್ಲಿ ತೇಲಿದನು. ಕೇಳು, ಮತ್ತೆ ಅವನು ಬೊಗಸೆಗೈಯಲ್ಲಿ ತೈಲವನ್ನು ಕುಡಿಯುತ್ತಿರುವುದನ್ನು ಕಂಡೆನು. ಮುಳುಗುತ್ತ ಎಣ್ಣೆಯಲ್ಲಿ ಎಳ್ಳಿನ ಅನ್ನವನ್ನು ತಿಂದನು. ಕಡಲು ಒಣಗಿತು. ಚಂದ್ರನು ಆಗಸದಿಂದ ನೆಲಕ್ಕೆ ಉದುರಿದನು. ಕುರುಡು ಕತ್ತಲೆಯು ಎಲ್ಲ ಕಡೆ ಸುತ್ತುವರಿದು ಆವರಿಸಿತು.

'ಭೂಮಿ ಪಾತಾಳಕ್ಕೆ ಬೀಳುವಂತಾಯಿತು. ಪ್ರಲಯದ ಅಗ್ನಿ ಹೊತ್ತಿ ಲೋಕವನ್ನು ದಹಿಸುತ್ತಿತ್ತು. ತಂದೆಯು ಕಪ್ಪು ವಸ್ತ್ರವನ್ನು ತೊಟ್ಟು, ಕೆಂಪು ಬಣ್ಣದ ಪುಷ್ಪಮಾಲೆಯನ್ನು ಧರಿಸಿ, ಕೆಂಪಾದ ಗಂಧವನ್ನು ಹಚ್ಚಿಕೊಂಡು, ಕತ್ತೆಯ ಮೇಲೆ ಕಬ್ಬಿಣದ ಆಸನದಲ್ಲಿ ಕುಳಿತುಕೊಂಡು ಹಿಂದುಮುಂದಾಗಿ ದಕ್ಷಿಣ ಮುಖವಾಗಿ ಹೋಗುತ್ತಿದ್ದನು. ಅವನನ್ನು

ರಾಕ್ಷಸಿಯೊಬ್ಬಳು ಹಿಡಿದೆಳೆದು ಕಿಲಕಿಲನೆ ನಗುತ್ತಿದ್ದಳು. ಅವಳ ಕಪ್ಪು ಮುಖದಲ್ಲಿಯ ಬಿಳಿಯ ಹಲ್ಲುಗಳು ಕಿಸಿಯುವ ಭಯಂಕರತೆಗೆ ಬೆದರಿದೆನು. ಬಲವಾಗಿ ನಡುಗುತ್ತ, ಸ್ವಪ್ನವನ್ನು ಒಡೆಯುತ್ತ ನೆಗೆದು ಎದ್ದೆನು!'

ಆ ಸ್ವಪ್ನ ವೃತ್ತಾಂತವನ್ನು ಕೇಳುತ್ತ ಸೋದರನಿಗೆ ಗಂಟಲೊಣಗಿತು. ಸಂಕಟ ಸಂಶಯ ಆತಂಕಗಳ ಸೂಜಿಯ ಮೊನೆಯ ಮೇಲೆ ಇರುಳನ್ನು ಕಳೆದುದೆ ತಡ ಸೋದರಮಾವನಿಗೆ ಮನಸ್ಸಿನ ಚಿಂತನೆಯನ್ನು ಹೇಳಿದರು. ಅವರ ಯಾವ ಸಂತೈಕೆಗೂ ಹೃದಯ ಒಪ್ಪದಿರಲು ಭರತ ಶತ್ರುಘ್ನರು ಪರಿವಾರವನ್ನು ಹಿಂದೆ ಬಿಟ್ಟು ಕುದುರೆಗಳನ್ನು ಏರಿ ಅಯೋಧ್ಯಾಭಿಮುಖವಾಗಿ ಮಿಂಚಿನಂತೆ ಹೊರಟರು.

ಸುದಾಮಾ ನದಿಯನ್ನು ದಾಟಿ, ಏಲಾಧಾನ ಹಳ್ಳಿಯ ಬಳಿ ಹ್ಲಾದಿನೀ ನದಿಯನ್ನು ದಾಟಿದರು. ಹಲವಾರು ನದಿಗಳು, ಗಿರಿಗಳು, ಗ್ರಾಮನಗರಗಳು, ವನಗಳು, ಅರಣ್ಯಗಳನ್ನು ಹಿಂದಿಕ್ಕಿ ಏಳುಹಗಲು ಏಳುರಾತ್ರಿ ಕಳೆದರು. ದಿಗಂತದ ದೂರದಲ್ಲಿ ಅಯೋಧ್ಯಾಪುರದ ಮೇಘ ಚುಂಬಿತ ಸೌಧಗೋಪುರಗಳ ಸಾಲುಗಳು – ಪ್ರಭಾತ ಸುಂದರ ಅರುಣನ ಹೇಮಕಾಂತಿಯಲ್ಲಿ ಮಿರುಮಿರುಗಿ ಕರೆದು ಕಾಣುವ ತನಕ ಒಂದೇ ಸಮನೆ ಪ್ರಯಾಣಿಸಿದರು.

ಕಟಬಾಯಿ ನೊರೆ ಚೆಲ್ಲಿ, ಬೆವರಿಂದ ಕೂದಲು ಒಡಲಿಗೆ ಅಂಟಿ, ಮೈ ತೊಯ್ದು ತೊಟ್ಟಿಡಲು, ಹೊಟ್ಟೆ ನೆಲವನ್ನು ಉಜ್ಜುವಂತೆ ಕುದುರೆಗಳ ವೇಗ ಎದ್ದು ತೋರುತ್ತಿತ್ತು. ಮಣ್ಣಿನ ಹೊನಲು ಹರಿಯುವಂತೆ ಅಭಿಮುಖವಾಗಿ ಧಾವಿಸುವಾಗ ಕುದುರೆಗಳು ಮಿಂಚಿದವು. ಅವುಗಳ ಖುರಪುಟಧ್ವನಿ, ಕಿವಿಗೆ ಗಾಳಿ ನುಗ್ಗುವ ರಭಸ, ನಿರಂತರ ಉಚ್ಛ್ವಾಸದಿಂದ ತಿದಿಯೊತ್ತಿದಂತೆ ಏರುತ್ತಿದ್ದ ಪಕ್ಕೆಗಳ ಶಬ್ದ ಕಿರಿದಾಗುತ್ತಿರಲು ಭರತನು ಶತ್ರುಘ್ನನನ್ನು ಕುರಿತು ಹೀಗೆ ಹೇಳಿದನು:

ಶೂನ್ಯಮಾದಂತಿಹುದು ಪಿತೃದೇವ ಮಂದಿರಂ

'ಸೋದರನೆ, ಜಗತ್ತಿನ ನಯನವು ಅರಳಿದೆ. ಆದರೂ ಮನುನಗರಿಯು ನಿದ್ದೆಯೊಳಗಿರುವಂತೆ ಮೂಕವಾಗಿದೆ! ಹತ್ತಿರಕ್ಕೆ ಬಂದರೂ, ಜನದ ಕೋಲಾಹಲ, ಗೀತವಾದ್ಯ, ಮಧುನಾದ ಒಂದಿನಿತೂ ಕೇಳುತ್ತಿಲ್ಲ. ಈ ಕಡೆಗೆ ಎಂದಿನಂತೆ ಮೆಲ್ಲುಸಿರ್ಗಾಳಿ ತೀಡುತ್ತಿದ್ದರೂ ಪುರದ ಉದ್ಯಾನಗಳಲ್ಲಿ ಕೋಗಿಲೆ ಗಿಳಿಗಳ ಉಲಿತವಿಲ್ಲ. ಅಂಗರು ಚಂದನಗಳ ದೂಪಧೂಮದ ಸುವಾಸನೆಯು ಮೂಗಿಗೆ ಮಧುರ ಕಂಪನ್ನು ನೀಡುತ್ತಿಲ್ಲ. ಹೂಗಳು ಬಾಡಿ ಮುಖ ಜೋಲಿಸಿಕೊಂಡು ತೂಗುತ್ತಿವೆ. ಈ ಮಹಾನಗರಿಯು ನಿರ್ಜನ, ನಿಶ್ಚಲ, ನೀರವ, ನಿರ್ಜೀವ, ನಿಸ್ತೇಜವಾಗಿ ಹಾಳುಮನೆಯಂತೆ ತೋರುತ್ತಿದೆ.

'ಅಲ್ಲಿ ನೋಡು, ಪಿತೃದೇವನ ಮನೆಯ ವೈಜಯಂತಿ ಹೆಸರಿನ ಹೆಬ್ಬಾಗಿಲಿನ ಈಚೆ ಶೂನ್ಯ ಆವರಿಸಿದಂತಿದೆ. ಪೂಜ್ಯ ಪಿತೃದೇವತೆಗಳಿಗೆ ವಂದನೆಗಳನ್ನು ಸಲ್ಲಿಸಿ ಪುರದೊಳಕ್ಕೆ ಹೋಗೋಣ ಬಾ'.

ಎಂದು ಹೇಳುತ್ತ ಭರತನು ತಮ್ಮನೊಡಗೂಡಿ ಗುರುಭಕ್ತಿ ತುಳುಕುತ್ತಿರಲು, ದೇವ ನಿಲಯವನ್ನು ಪ್ರವೇಶಿಸಿದನು. ಅದನ್ನು ಹೊಕ್ಕಿದ ತಕ್ಷಣ ಆಶ್ಚರ್ಯವು ಬಡಿದಂತೆ ಆ ಈರ್ವರು ದೃಷ್ಟಿ ಕೀಲಿಸಿ ಮುಂದಕ್ಕೆ ಎವೆ ಆಡಿಸದಂತೆ, ಅಲುಗಾಡದೆ ನಿಂತರು. ವಿಗ್ರಹ ಗೃಹದಲ್ಲಿ ಯಶಸ್ಸು ಮಾತ್ರ ಉಳಿಸಿ ತೀರಿಹೋದ ರವಿಕುಲ ವಂಶದ ನೃಪಾಲರ ಪ್ರತಿಮೆಗಳೊಡನೆ ತುತ್ತತುದಿಮೂರ್ತಿ ತಾನಾಗಿ ದಶರಥನ ಪ್ರತಿಮೆ ಸ್ಪಷ್ಟವಾಗಿ ಕಾಣುತ್ತಿತ್ತು. ಸೋದರರು ಒಬ್ಬರ ಮುಖ ಒಬ್ಬರು ನೋಡಿದರು. ಮಾತು ಹೊರಹೊಮ್ಮದ ಭೀತಿ, ಸಂಶಯದಿಂದ ಬೆಂದ ಹೃದಯ ಸಂದಿಗ್ಧತೆಯಿಂದ ಮೌನಮುದ್ರೆಯಲ್ಲಿದ್ದರು.

ತಮ್ಮ ಎದೆಯಲ್ಲಿದ್ದ ಅಂಜಿಕೆಯ ಮೂಕತೆಗೆ ನುಡಿಯ ನಾಲಗೆಯನ್ನು ನೀಡಲು ಅವರಿಬ್ಬರು ಬೆದರಿದರು. ನಿಟ್ಟುಸಿರು ಬಿಡುತ್ತ ತಿರುಗಿದರು; ಕುದುರೆಗಳನ್ನು ಏರಿದರು; ಲಗಾಮು ರಿಕಾಪುಗಳ ಬಲದಿಂದ ವಾಯುವೇಗವನ್ನು ಮೀರಿ ಅತಿ ತವಕದಲ್ಲಿ ಪುರದ ಹೆಬ್ಬಾಗಿಲನ್ನು ಹೊಕ್ಕರು.

ಬೀದಿಗಳು ಗುಡಿಸದೆ ಇವೆ. ಹೆಣ ಬಾಯಿಬಿಟ್ಟಂತೆ ಬದುಕಿರುವ ಚಿಹ್ನೆಯನ್ನು ಬಿಟ್ಟು, ಮನೆಮನೆಯ ಬಾಗಿಲುಗಳು ಮುಚ್ಚದೆ ಇವೆ. ರಂಗೋಲಿಗಳ ಗುರುತಿಲ್ಲ; ಹೊಸತಳಿರು ತೋರಣದ ಸುಳಿವಿಲ್ಲ. ಗುಡಿಗಳಲ್ಲಿ ಗಂಟೆಯ ದನಿ ಕೇಳಿಸುತ್ತಿಲ್ಲ. ಪರಿಮಳ ದ್ರವ್ಯಗಳ ಕಂಪಿಲ್ಲ. ಜನರ ಚಲನೆಯಿಲ್ಲ. ಕುದಿವೆದೆಯ ಭರತ ಶತ್ರುಘ್ನರು ಹಾಳು ಹಂಪೆಯನ್ನು ಹೊಕ್ಕ ಕನ್ನಡಿಗರಂತಾದರು! ದುರ್ದಿನದ ಮಂಕು ಕವಿದಂತಿದ್ದ ಪಟ್ಟಣದ ಹೆದ್ದಾರಿಗಳಲ್ಲಿ ನಿಲ್ಲದೆ ಜೋರಾಗಿ ಓಡಿ ತಂದೆಯ ಅರಮನೆಯನ್ನು ಪ್ರವೇಶಿಸಿದರು. ಅಲ್ಲಿ ಕಟುವಿಕಾರ, ಉಗ್ರ ಭೀಕರ ಹಾಸ್ಯದೊಂದಿಗೆ ದುಷ್ಟವೆನುವಂತೆ ಶೂನ್ಯತಾ ವ್ಯಾಪ್ರ ಮುಖವು ಕಾಣಿಸುತ್ತಿತ್ತು.

ಭರತನು ಭೀತಿಯಿಂದ ಗಾಬರಿಗೊಂಡು ಶತ್ರುಘ್ನನನ್ನು ಅವನ ತಾಯಿಯ ಅರಮನೆಗೆ ಕಳುಹಿಸಿದನು. ತಕ್ಷಣ ತನ್ನ ಜನನಿ ಕೈಕೆಯ ರತ್ನಮಂದಿರಕ್ಕೆ ನಡೆದನು. ತಾಯಿಯು ನಿರ್ಜನೆ, ನಿರಾಭರಣೆ, ನಿಶ್ಚಲೆ, ಧ್ವನಿರಹಿತೆಯಾಗಿ ಹಾಳುಮನೆಯಂತೆ ಕಂಡಳು. ವ್ಯಥೆಯ ಕತ್ತಲಿನಿಂದ ಆವೃತ್ತಳಾದವಳನ್ನು ಬೆರಗಿನಿಂದ ನೋಡುತ್ತ ಕಂದನು ಬೆದರದೆ ಅಮ್ಮನ ಕಾಲಮೇಲೆ ಉರುಳಿದನು.

'ತಂದೆಯು ಎಲ್ಲಿದ್ದಾನೆ? ನಮ್ಮ ಪಟ್ಟಣಕ್ಕೆ ಯಾವ ಕೇಡು ಮುತ್ತಿಕೊಂಡಿದೆ? ಇಂದೇಕೆ ಅರಮನೆ ಸಿರಿಗೆಟ್ಟಂತೆ ಕಂದಿದೆ? ನಿನ್ನ ರೂಪು ಇಂದೇಕೆ ದುಶ್ಶಕುನವನ್ನು ಸಾರುತ್ತಿದೆ?' ಎಂದು ವಿಚಾರಿಸಿದನು.

ಕ್ಷೋಭೆಗೊಳಗಾದ ಮಗನನ್ನು ಕಂಡ ತಾಯಿಯು ನುಡಿಯಲಾರದವಳಂತೆ ಅಳುತ್ತಳುತ್ತ ಎತ್ತಿಕೊಂಡಳು. ಬಿಗಿಯಾಗಿ ಅಪ್ಪಿಕೊಂಡಳು. ಮುದ್ದಾಡಿದಳು. ಹುಚ್ಚು ಹೆಚ್ಚಾದವಳಂತೆ ನೋಡಿದಳು. ಆಶ್ಚರ್ಯದಿಂದ ಬಿಟ್ಟ ಕಣ್ಣು ಬಿಟ್ಟುಕೊಂಡು ಭರತನಿರಲು, ಗದ್ಗದಕಂಠೆಯಾದ ತಾಯಿ ಹೇಳಿದಳು:

'ಕ್ಷಮಿಸು ಮಗನೆ, ಪಾಪಿಯನ್ನು!'

'ತ್ಯಜಿಸು ತಾಯೆ, ಆತ್ಮನಿಂದೆಯನ್ನು ತ್ಯಜಿಸು. ನಿನ್ನ ಅಪ್ಪುಗೆಯನ್ನು ಪಡೆಯಲು ಪಾಪವು ಅಷ್ಟೊಂದು ಪುಣ್ಯಶಾಲಿಯೆ? ಮತ್ತು ನನಗೆ ಅದೇನು ಕಿರಿಯ ಸಹೋದರನೆ?'

'ದಿವಂಗತ ದಶರಥ ಕುಮಾರನೇ, ವನವಾಸಿ ರಘುರಾಮ ಹೃದಯಚಂದ್ರ ಚಕೋರನೇ, ಹೆತ್ತವಳೆಂದು ಈ ನೀಚಳನ್ನು ಏತಕ್ಕೆ ಹೊಗಳುವೆ? ಕೇಳು, ಬೇಡಿ ಕೇಡನ್ನು ಉಂಟುಮಾಡಿದೆ. ಕಂದನೇ ವರವು ನನ್ನ ಭಾಗಕ್ಕೆ ಶಾಪವಾಯಿತು. ಮುಂದುಗಾಣದೆ ತಂದೆಗೆ ಅಪಮೃತ್ಯುವನ್ನು ತಂದೆ! ಕೌಸಲ್ಯೆಯ ಕಂದನನ್ನು ಕಾಡಿಗೆ ಅಟ್ಟಿದೆ. ಕುಡಿಯಾದ ಕಂದನ ಕುತ್ತಿಗೆಗೆ ಭೂಮಿ ಹೊರೆಯ ಕಲ್ಲುಗುಂಡನ್ನು ಕಟ್ಟಿದೆ! ಪುತ್ರಾಭ್ಯುದಯ ಮೋಹದ ಕತ್ತಲು ವ್ಯಾಪಿಸಿಕೊಂಡಿದ್ದ ಲೋಭ ಪಿಶಾಚಿಯಾದ ನನಗೆ ಈ ಹಿರಿಯ ಬಲಿಯಾಗುತ್ತದೆಂದು ಮೊದಲೆ ತಿಳಿಯಲಾರದೆ ಹೋದೆ, ಹಾಳಾದೆ! ನಿನ್ನ ಬಾಳಿನ ಪಾಲಿಗೆ ವಿಷವಾದೆ! ರವಿಕುಲದ ಚಂದನಶ್ರೀವನಕ್ಕೆ ಕಾಡ್ಗಿಚ್ಚಾದೆ! ಕರುಣಿ ವತ್ಸನೇ, ಹಾ, ಲೋಕನಿಂದೆಯ ತೋರುಬೆರಳಿಗೆ ಜಿಗುಪ್ಸೆಗೆ ಒಳಗಾಗುವಷ್ಟು ಗುರಿಯಾದೆ!'

ಮಳೆಗಾಲದ ಮೊದಲ ಬಿರುಗಾಳಿಗೆ ಅತಿಶಯವಾಗಿ ಬೇರು ಅದುರಿ, ತಲೆತಿರುಗಿ ತೂಗಿ ತೊನೆಯುತ್ತಿರುವ ಬೆಟ್ಟ ಪ್ರದೇಶದ ದೊಡ್ಡದಾದ ಮರಕ್ಕೆ ಸಿಡಿಲು ಬಡಿದಂತೆ– ಆ ಪಿತೃ ಮರಣ ವಾರ್ತೆಗೆ ಅಣ್ಣನ ವನವಾಸದ ಸದ್ದು ಘರ್ಷಿಸಲು–ಭರತನ ಕರುಣಮಯ ಶರೀರವು ತಕ್ಷಣ ನೆಲಕ್ಕೆ ಹೆತ್ತ ತಾಯಿಯ ಒಡಲ ಅಡಿಗೆ ಉರುಳಿತು.

ತಣ್ಣಗಿರುವ ಗಾಳಿಗೆ ಕಂಪಿಸುವ ಎಲೆಯಂತೆ ಕೈಕೆಯು ನಡುನಡುಗಿದಳು. ಮಗನನ್ನು ಮೇಲಕ್ಕೆ ಎತ್ತಿ ಮೈಸೋಂಕುವಂತೆ ಕುಳ್ಳಿರಿಸಿಕೊಂಡು ಸಂತೈಸುತ್ತ ಹೇಳಿದಳು:

'ಸಾತ್ವಿಕ ಸರಳ ಜೀವಿಯಾದ ಮಗನೆ, ನೀನು ಹೇಗೆ ನನ್ನ ಈ ಹೃದಯವನ್ನು ತಿಳಿಯುವೆ? ತಾಯಿಯ ಪ್ರೀತಿಗೆ ಮಗನ ಮೇಲ್ಮೆಗಿಂತ ಬೇರೆ ಬಯಕೆ ಇದೆಯೆ? ನಿಸ್ವಾರ್ಥದ ಬಯಕೆಯನ್ನು ಹೊರತುಪಡಿಸಿದ ಕಣ್ಣನ್ನು ಧರ್ಮ ಹೊಂದಿದೆಯೆ? ಕೇಳು, ಕೌಸಲ್ಯೆಯ ಮಗನಿಗೆ ನೀನು ಇಲ್ಲದಿರುವಾಗ ಪಟ್ಟಕಟ್ಟಲು ಹೊಂಚಿ ಹವಣಿಸುತ್ತಿದ್ದುದನ್ನು ನಿನ್ನ ಪ್ರೀತಿಯ ದಾದಿ ಕೇಳಿ ಬಂದು ನನಗೆ ತಿಳಿಸಿದಳು. ನನ್ನನ್ನು ಹುರಿದುಂಬಿಸುತ್ತ ಮದುವೆ ಸಂದರ್ಭದಲ್ಲಿ ರಾಜೇಂದ್ರನು ಕೊಟ್ಟ ವರಗಳನ್ನು ಈಗ ಕೇಳಿ ಪಟ್ಟಾಭಿಷೇಕವನ್ನು ನಿಲ್ಲಿಸುವ ಒಂದು ಉಪಾಯ ಹೇಳಿದಳು. ನಿವಾರಣೆ

ಮಾಡಲಾಗದ, ತಿಳಿಯಲು ಅಶಕ್ಯವಾದ ದುರ್ವಿಧಿಯ ಲೀಲೆಯಿಂದ ಆ ಪ್ರಯತ್ನವು ನೀನು ದೂರದ ಊರಿಂದ ಬರುವುದರೊಳಗಾಗಿ ಹೀಗೆ ಆಗಿ ಹೋಯಿತು.

'ಕಂದ, ನಿನ್ನ ಹೃದಯವನ್ನು ತಿಳಿದವಳಾಗಿದ್ದರೂ ನನ್ನ ತಾಯ ಮಧುರ ವಾತ್ಸಲ್ಯದ ಕಠಿಣ ಕರ್ತವ್ಯವನ್ನು ನಾನು ಮಾಡದೆ ಹೇಗಿರಲಿ? ದೊರೆಯು ನನಗೆ ಕೊಟ್ಟ ವರಗಳಿಂದ ನಿನಗೆ ರಾಜ್ಯದ ಪಟ್ಟದ ಅಧಿಕಾರ ಇರುವುದನ್ನು ತೊರೆಯಲು, ನಿನಗಲ್ಲದೆ ನನಗೆ ಯಾವ ಪಾಲುದಾರಿಕೆ ಇದೆ?

'ಮಗುವೆ, ವಿಧಿ ನಡೆಸಿದ ಬಗೆಗೆ ದುಃಖಿಸಿದರೇನು? ರಾಮ ಲಕ್ಷ್ಮಣರ ಹೆಸರನ್ನೆ ಜಪಿಸುತ್ತ, ಮರೆತೂ ಕೈಕೆಯ ಕುವರನನ್ನು ನೆನೆಯದೆ, ಕಡೆಗೆ ಎಲ್ಲರೂ ಸಾಗುವ ಎಡೆಗೆ ಮುದಿ ಅರಸನು ಹೋದನು. ರಾಮನಾದರೋ ಪಿತನ ವಾಕ್ಯ ಪರಿಪಾಲನೆಗೆ ಹದಿನಾಲ್ಕು ವರ್ಷ ವನವಾಸಕ್ಕಾಗಿ ಕಾಡಿಗೆ ಹೋದನು. ಈ ರಾಜ್ಯ ರಾಜನಿಲ್ಲದಿರುವ ಸ್ಥಿತಿಗೆ ಒಳಗಾಯಿತು. ಈ ಕೋಸಲಕ್ಕೆ ಪ್ರಜಾಭ್ಯುದಯಾಕಾಂಕ್ಷಿಗಳಾಗಿ ನೀನಲ್ಲದೆ ಇನ್ನು ಯಾರು ಸುಜನಮೂರ್ತಿಗಳಿದ್ದಾರೆ ಹೇಳು?'

ಪಾಳ್ ಮಣ್ಣು ಈ ಕೀಳ್ ನೆಲದ ಸಿರಿ!

'ನಿಲ್ಲು! ನಿಲ್ಲು! ತಾಯೆ, ಹಾಲು ಊಡಿದ ಎದೆಯಲ್ಲಿಯೇ ವಿಷವನ್ನು ಉಗುಳಿ ಕೊಲೆ ಮಾಡದಿರು.'

ಎಂದು ಹೇಳುತ್ತ ತಾಯಿಯ ಬಳಿಯಿಂದ ದೂರಕ್ಕೆ ಸರಿದು ಮಾತು ಮುಂದುವರಿಸಿ 'ಹೆತ್ತ ದಿನವೆ ಕೊರಳನ್ನು ಮುರಿಯದೆ ನೀನು ಈ ಕಾಲ ಬರುವವರೆಗೂ ಏತಕ್ಕಾಗಿ ಕಾಯ್ದೆ? ಮಗನನ್ನು ಪಡೆದು ನಿನಗೆ ಬಂಜೆತನ ಪ್ರಾಪ್ತವಾಯ್ತಲ್ಲ; ಹೇಳು ಭರತಮಾತೆ? ರಘೂದ್ವಹನು ನಿನಗೆ ಅನ್ಯನೆ? ರಾಮನನ್ನು ದಶರಥ ಪ್ರಾಣನನ್ನು ಕಾಡಿಗೆ ನೂಕಿ ವೈಧವ್ಯದ ಪ್ರತಿಷ್ಠೆಯನ್ನು ನೀನು ಪಡೆದು, ಈ ಧರೆಗೆ ಮತ್ತು ಮಗನಿಗೆ ಅನಾಥತ್ವವನ್ನು ಉಂಟುಮಾಡಿದೆಯಲ್ಲವೆ?

'ಅಣ್ಣದೇವನು ಇಲ್ಲದ ಬದುಕು ನನಗೆ ಸಾವಿಗೆ ಸಮ; ಪಾಳ್ ಮಣ್ಣು ಈ ಕೀಳು ರಾಜ್ಯದ ಸಿರಿ! ತೀರಿಹೋದ ತಂದೆಯ ಉಸಿರನ್ನು ಎಂತೂ ಹಿಂದಕ್ಕೆ ಬರುವಂತೆ ಮಾಡುವುದು ಅಸಾಧ್ಯ. ಹಿರಿ ಅಣ್ಣನನ್ನು ಕಾಡಿನಿಂದ ಹಿಂತಿರುಗಿಸಿ ಕರೆದು ತರುತ್ತೇನೆ. ಬರಲು ಒಪ್ಪದಿದ್ದರೆ, ತಾಯಿಯ ಆತ್ಮದ ಹಿತದ ಹೊಣೆ ಮಗನದಾದುದರಿಂದ ರಾಮನ ಸೇವೆಯಲ್ಲಿದ್ದು ನೀನು ಮಾಡಿದ ಕೃತ್ಯವನ್ನು – ವಿಪಿನಾಶ್ರಮದ ತಪೋಜೀವನ ಸುಕೃತ ತೀರ್ಥದಲ್ಲಿ ನಿವಾರಿಸುತ್ತೇನೆ.'

ಎಂದು ಹೇಳುತ್ತ ಜುಗುಪ್ಸೆಯಿಂದ ಹೊರಡುವ ಮಗನ ಕಾಲಿಗೆ ತಾಯಿ ಬಂದು ಎರಗಿದಳು! ಕಾಲು ಹಿಡಿದು ಬಾಚಿ ತಬ್ಬಿಕೊಂಡು ಮೊಳಕಾಲೂರಿದಳು!

ದುಃಖದಿಂದ ಬಾಡಿದ ಮುಖದ, ಸುತನ ತಿರಸ್ಕಾರದ ಕಟು ಶೂಲದ ಆಘಾತದಿಂದ ರಾಣಿಯ ಎದೆ ಬಿರಿದಿತ್ತು. ಕಣ್ಣೀರಿನಿಂದ ಮಲಿನ ಕಪೋಲೆಯಾದವಳು ಮೊಗವೆತ್ತಿದಳು. ಮಗನ ಮುಖವನ್ನು ಕರುಣ ದೈನ್ಯದಿಂದ ನೋಡಿ ಗೋಳಾಡಿದಳು. ಬಿನ್ನಹಕ್ಕೆ ಬಾಯಿ ಬಂದಂತೆ ಹೇಳಿದಳು:

ಪಾಪಿಗುದ್ಧಾರಮಿಹುದೌ ಸೃಷ್ಟಿಯ ಮಹದ್‌ವ್ಯೂಹ ರಚನೆಯೊಳ್

'ಮಗನೇ, ಕೆಟ್ಟವಳಾದ ನನ್ನನ್ನು ಕೈ ಬಿಡದಿರು! ಜಗತ್ತೆ ಕೈ ಬಿಟ್ಟವಳನ್ನು! ನೂಕು ನರಕಕ್ಕೆ, ಸಹಿಸಿಕೊಂಡು ಕೇಡನ್ನು ಪರಿಹರಿಸಿಕೊಂಡು ಬರುತ್ತೇನೆ. ಆದರೆ ನನ್ನನ್ನು ಶೂನ್ಯತೆಗೆ ನೂಕದಿರು! ಹೊಲೆಗೆ ಹೊಲೆ ಮಡಿಯಲ್ಲ; ಕೊಲೆಗೆ ಕೊಲೆ ಸಮಾನವಾದುದಲ್ಲ; ನೋವು ನೋವಿನ ಸಾವು ಅಲ್ಲ! ನಾನು ಮಾಡಿದುದನ್ನು ನೀನೂ ಮಾಡಿದರೆ ತಪ್ಪು ತಪ್ಪಿನಿಂದ ಒಪ್ಪವಾಗುತ್ತದೆಯೆ?

'ಕಂದ, ಇದೊ ನೋಡು. ಕಾಲಿಡಿದು ಬೇಡುತ್ತಿರುವೆನು. ನಿನ್ನ ಜೊತೆಗೆ ಮಂಗಳದ ಮನೆಗೆ ನನ್ನನ್ನು ಕರೆದುಕೊಂಡು ಹೋಗೊ ಬರುತ್ತೇನೊ! ಮೂಕ ವಿನಯದಲ್ಲಿ ನೀನು ಹೇಳಿದಂತೆಯೆ ನೆರಳಿನಂತೆ ನಡೆಯುತ್ತೇನೊ! ಕೇಳು, ಕೈಕೆಗೆ ಇನ್ನು ಬಾಯಿಯಿಲ್ಲೊ! ಕಲ್ಲಾದ ಅಹಲ್ಯೆಯನ್ನು ನುಡಿಸಿದ ಆ ರಾಮನ ಪಾದದ ಸೋಂಕಿಗೂ ನನ್ನ ಕಲ್ಲುತನ ನಾಶವಾಗದು! ಕೈ ಬಿಡದೆ ನನ್ನನ್ನು ಕಾಪಾಡು!'

ಎಂದು ಹೇಳಿ ತನ್ನ ಪಾದಕ್ಕೆ ಮುಡಿಚಾಚಿ ಬಿದ್ದಿದ್ದ ತಾಯಿಯನ್ನು ನೋಡಿ ಭರತನ ಮನಸ್ಸು ಕರಗಿತು. ಕಣ್ಣೀರು ಹರಿಸುತ್ತ, ನಿಟ್ಟುಸಿರು ಬಿಟ್ಟು ಬಾಗಿ ಅಪ್ಪಿಕೊಂಡನು. ಭರತನ ಕ್ಷಮಾ ಕಲ್ಪತರುವಿನ ಮೃದುಬಾಹು ಶಾಖೆಯಿಂದ ತಾಯಿಯು ರಸವಶೆಯಾದಳು.

ಕೈಕೆಯೇ, ಯೋಚನೆಯ ಮೈಲಿಗೆಗೆ ಮರುಗುವ ಎದೆಯ ಕುದಿಬೇನೆಯಿಂದ ಮಡಿಯಾಗುವುದು. ನೀನು ಒಳಸೋರದಿರು–ಜರಿದು ಸೋರಬೇಡ; ಕೆಳಗೆ ಕುಸಿಯಬೇಡ. ಈ ನೆಲದ ಶ್ರೇಯಸ್ಸಿಗೆ ಆಶ್ರಯವಾದ ರಾಮಾನುಜನ ತಾಯಿಗೆ ಕೇಡುಂಟೆ ಹೇಳು? ಗಾಬರಿಗೊಳ್ಳದಿರು, ಭಯಪಡದಿರು.

ತಾಯಿಯೇ ಕೇಳು, ಸೃಷ್ಟಿಯ ಮಹದ್ ವ್ಯೂಹ ರಚನೆಯಲ್ಲಿ ಪಾಪಿಗೆ ಉದ್ಧಾರವಿದೆ. ಬೆರಳಿನಲ್ಲಿ ಹುಟ್ಟಿದ ಉಗುರಿನ ಹರಿತವಾದ ಮೊನೆಯಿಂದ ಮಿಡಿವ ಹಿಂಸೆಗೆ ತಂತಿಯು ತಾನು ವೀಣೆಯಿಂದ ಇಂಚರವನ್ನು ನೀಡುವಂತೆ ನೀನು ವೈಣಿಕ ವಿಧಿಯ ಕೈ ಉಗುರು ಆಗಿರುವೆ. ಅಲ್ಲಿ ಹೊಮ್ಮಿ ಬಂದುದರಿಂದ ಈ ರೀತಿ ಇಂಪಾಗಿದೆ ಮತ್ತು ರಾಮಾಯಣ ಬೃಹದ್ ಗೀತೆ ಭಗವದ್ ಸಾಗರವಾಗಿದೆ!

❑



~~~~~~~~~~~~~~~~~~~~~~~ ಸಂಚಿಕೆ – ೬ ~~~~~~~~~~~~~~~~~~~~~~~

ಅಗ್ನಿಯಾತ್ರೆ

ಓ ಕವಿಋಷಿ ವಾಲ್ಮೀಕಿಯೇ, ತಮಾಸಾನದಿಯ ನೀರಿನಲ್ಲಿ ಸ್ನಾನಮಾಡಿ ಹೊಸ ಹಾಲುಮಡಿಯ ನಾರುಬಟ್ಟೆಯನ್ನು ಉಟ್ಟುಕೊಂಡು, ಬೆಳಗಿನ ಸೂರ್ಯನ ಎಳೆಬಿಸಿಲಲ್ಲಿ ಹಕ್ಕಿಗಳ ಇಂಚರದ ಕಾಡಿನ ಹಾದಿಯಲ್ಲಿ ದಿನದಿನವೂ ಬಂದು ನನಗೆ ದರ್ಶನವನ್ನು ಕೊಡುವೆ. ಮುಡಿಮಣಿದು, ಮೊಳಕಾಲೂರಿ ಹೂಗಳನ್ನು ಬೊಗಸೆಗೈಯಿಂದ ನಿನ್ನ ಅಡಿಗುಡಿಗೆ ಸಮರ್ಪಿಸುವೆ. ಕವಿಗುರುವೆ, ನಿನ್ನ ಕಮಂಡಲುವಿನಿಂದ ರಸಮಂತ್ರ ತೀರ್ಥವನ್ನು ಸಿಂಪಡಿಸಿ ಕವಿಕುಮಾರನಾದ ಈ ಕುವೆಂಪುವಿನ ಮತಿಗೆ ಕೃಪೆತೋರು. ಕೃತಿಯನ್ನು ರಚಿಸುವ ಚಿತ್ತಕ್ಕೆ ಚಮತ್ಕಾರವನ್ನು ನೀಡು.
~~~~~~~~~~~~~~~~~~~~~~~

ಮನಸಿಗಲ್ಲದೆ ವಿಕೃತಿ ಬಾಹ್ಯ ಪ್ರಕೃತಿಗುಂಟೆ?

ಭರತನು ಬಂದುದನ್ನು ಕೇಳಿ ಮಂಥರೆಯ ಮನಸ್ಸು ನವಿಲಿನಂತೆ ಗರಿಗೆದರಿ ಹೆಮ್ಮೆಯಿಂದ ಹರ್ಷಗೊಂಡು ಕುಣಿಯಿತು. ತಾನು ಮಾಡಿದ ಉಪಾಯದಿಂದ ತನ್ನವನಿಗೆ ದೊರೆತನ ದೊರೆಯುತ್ತದೆಂಬ ಉತ್ಸಾಹಕ್ಕೆ ನೆರಿಗೆಗೆಟ್ಟ ಮುದಿ ಗೂಬೆಯ ಮುಖವು ಇನ್ನೂ ವಿಕಾರವಾಗಿ ಕಾಣತೊಡಗಿತು. ಅವಳು ಸಂಭ್ರಮ ಆತುರಗಳಿಂದ ತನ್ನ ಒಡತಿ ಕೈಕೆಯ ಅರಮನೆಗೆ ಬರುತ್ತಿದ್ದಳು.

ನಡೆದ ಘಟನೆಯನ್ನೆಲ್ಲ ತಿಳಿದು ಕೋಪಾಗ್ನಿ ರೂಪವಾಗಿದ್ದ ಶತ್ರುಘ್ನನನ್ನು ಅವಳು ದಾರಿಯಲ್ಲಿ ಕಂಡಳು. ದೂರದ ಕಾಡು ಕಿಚ್ಚನ್ನು ತೊಡೆಯೇರಲು ಆಹ್ವಾನಿಸುವ ತರಗುಲತೆಯಂತೆ ಅವನನ್ನು ಪ್ರಶ್ನಿಸಿದಳು.

'ಅಯ್ಯ, ಭರತನೆಲ್ಲಿ?'

ಕೋಪದ ಕಿಡಿಯನ್ನುಗುಳಿದಂತೆ ಶತ್ರುಘ್ನನು ಅವಳನ್ನೇ ಪ್ರಶ್ನಿಸಿದನು:

'ರಾಮನೆಲ್ಲಿ? ಲಕ್ಷ್ಮಣನೆಲ್ಲಿ? ದೇವಿ ಸೀತೆಯನ್ನು ಎಲ್ಲಿಗಟ್ಟಿದೆ ಹೇಳು? ನೀಚಳೆ, ತಂದೆಯನ್ನು ಏಕೆ ಕೊಂದೆ ಹೇಳು?,

ಕುಬ್ಜೆ ಮಂಥರೆ ತಲೆ ಎತ್ತಿ ಏನೋ ಹೇಳಲು ಪ್ರಯತ್ನಿಸುವಷ್ಟರಲ್ಲಿ ಮತ್ತೆ ಪ್ರಶ್ನೆ ಮಾಡಿದನು.

'ಹೇಳು, ಹೇಳು. ರವಿಕುಲದ ಸುಖವನ್ನೇಕೆ ತಿಂದೆ? ಮೃತ್ಯು ಸ್ವರೂಪಿಣಿ, ಓ ನಾಯಿ, ಭೂಕಂಪದಂತೆ ಮನು ನಗರಿಯನ್ನು ಮಣ್ಣುಗೂಡಿಸಿದೆ. ಪಾತಕಿ, ನಿನಗೂ ಅದೇ ಗತಿಯಾಗುವುದು ನೋಡು,'

ಎಂದು ಹೇಳಿ, ಅವಳ ಕೂದಲನ್ನು ಹಿಡಿದು ಕಲ್ನೆಲದ ಮೇಲೆ ಕುಕ್ಕಿದನು. ಮೈ ನೀರಾಗುವಂತೆ ಹೊಡೆದನು. ಗೂನು ಬಿರಿಯುವಂತೆ ಬಡಿದನು. ಅವಳ ಕರ್ಕಶ ಚೀತ್ಕಾರ ಮೌನಶಿಲೆಯಂತಿದ್ದ ಕೈಕೆಗೆ ಗರಗಸದಿಂದ ಸೀಳಿದಂತಾಯಿತು.

ಹೀನವಾದ ಯೋಚನೆಯನ್ನು ಬಿಟ್ಟು, ಒಳಿತನ್ನು ಅಂಗೀಕರಿಸಿದ ತಾಯಿಯನ್ನು ಭರತ ಸಮಾಧಾನ ಪಡಿಸಿದನು. ಅಲ್ಲಿಂದ ದೊಡ್ಡಮ್ಮ ಕೌಸಲ್ಯೆಯನ್ನು ಕಾಣುವ ಕಾತರದಿಂದ ಬರುತ್ತಿದ್ದನು. ಆಗ ತನ್ನ ಹೆಸರನ್ನು ಕೂಗಿ ಕರೆದು ಒರಲಿ ಚೀರಿಡುವ ಮಂಥರೆಯ ದೀರ್ಘಗೋಳಿನ ದನಿಗೆ ಎದೆ ಮರುಗಿತು. ಕರುಣಿ ಭರತನಿಗೆ ಕರುಳು ಇರಿದಂತಾಯಿತು. ಎದೆ ಕೊರೆಯಿತು. ಹೆತ್ತ ತಾಯಿಗಿಂತ ಎರಡರಷ್ಟು ಒಲ್ಮೆ ಹರಿಸಿ, ಕೂಸಿನಿಂದ ಕೌಮಾರ್ಯದವರೆಗೆ ತನ್ನನ್ನು ಪ್ರೀತಿಯ ತೊಟ್ಟಿಲಲ್ಲಿಟ್ಟುಕೊಂಡು ಜೋಗುಳದ ಉಲಿತದಿಂದ ತೂಗಿದವಳು. ಯಾವಾಗಲೂ ಸಾಕುತ್ತ, ಬೆಚ್ಚಗೆ ಸಲಹಿದವಳು. ಅವಳ ದೀರ್ಘ ಗೋಳ್ದನಿ ಕೇಳಿದುದೆ ತಡ ಇಂದು ಭರತನಿಗೆ ಕರುಳು ಇರಿದು ಎದೆ ಕೊರೆಯಿತು!

ಬೇಟೆನಾಯಿ ಹಿಡಿದಾಗ ಮರಿಯು ಅರಚಿಕೊಳ್ಳಲು ತಾಯಿ ಹಂದಿಯು ರೌದ್ರ ವೇಗದಿಂದ ಆರ್ಭಟಿಸಿ ನುಗ್ಗುವಂತೆ ಬಂದನು. ಗೂನಿಯನ್ನು ಬಡಿಯುವ ಶತ್ರುಘ್ನನನ್ನು ಕಂಡನು. ನೋಡಿದ ಕೂಡಲೆ ಸಿಟ್ಟಿಗೆದ್ದನು. ಆದರೆ ನೆನಪು ಮರುಕಳಿಸಿತು. ಗುರಿ ಬೇರೆಯಾಯಿತು. ಕಹಿಯನ್ನು ಉಂಡ ನಾಲಗೆಯಂತೆ ಕರುಣೆಯು ಕೋಪ ಅಸಮಾಧಾನಗಳಿಂದ ಬೀಗಿತು.

'ಅಯ್ಯೋ ದಮ್ಮಯ್ಯ, ಬಾರಣ್ಣಯ್ಯ, ರಕ್ಷಿಸೋ!' ಎಂದು ಹೇಳುತ್ತ, ತನ್ನನ್ನು ಆಶ್ರಯಿಸಿ ಓಡಿ ಕೈ ನೀಡಿ ಬರುತ್ತಿದ್ದಳು ಪ್ರೇಮ ರಾಹು. ಅವಳನ್ನು ತೊಲಗಿಸುತ್ತ, ಕಣ್ಣೀರು ಸುರಿಸುತ್ತ, ಗದ್ಗದಿಸುತ್ತ ಭರತ ಸೂರ್ಯನು ಹೇಳಿದನು:

'ತೊಲಗೆಲೆ ಕುರೂಪಿ. ಓ, ನನ್ನ ದೃಷ್ಟಿಪಥದಿಂದ ತೊಲಗು. ತೊಲಗಾಚೆ ಪಾಪಿ! ಹತ್ತಿರ ಬರಬೇಡ; ನಿಲ್ಲದಿರು! ಅಯ್ಯೋ ಈ ಪ್ರೀತಿಯ ಹುತ್ತದಲ್ಲಿಯೆ ಹಗೆಯ ನಂಜಿನ ಹಾವು ಹೆಡೆಯೆತ್ತಿ ಹೊರಹೊಮ್ಮಿ ಕಚ್ಚಿತು ಎಂಬುದನ್ನು ಹೇಗೆ ನಂಬುವುದು? ನಿನ್ನಲ್ಲಿ ಇಂದಿನವರೆಗೂ ವಿಕೃತಿಯನ್ನು ಕಂಡಿಲ್ಲ. ಆದರೆ ಇಂದು ಏಕೆ ಕುರೂಪತೆಯ ಪೈಶಾಚಿಕತೆ ಕರ್ಕಶವೆನ್ನುವಂತೆ ಹಲ್ಲು ಕಿರಿದು ನಿಂತಂತಿದೆ? ನಿಜ, ಮನಸ್ಸಿಗಲ್ಲದೆ ವಿಕೃತಿ ಬಾಹ್ಯ ಪ್ರಕೃತಿಗೆ ಉಂಟೆ?

'ಮಂಥರೆಯೆ, ಹೆತ್ತವಳನ್ನು ಬಯಸುವಂತೆ ಕಾಣಿಸುತ್ತ ಕೆಡುಕಿನಲ್ಲಿ ಮುಳುಗಿಸಿದ ತನ್ನ ಕಣ್ಣುಗಳನ್ನೆ ಕಿತ್ತೆಸೆಯುವವನಂತೆ, ನಾನು ನಿನ್ನನ್ನು ಎಂದೆಂದಿಗೂ ಬಿಸುಟಿದ್ದೇನೆ. ಜಲವನ್ನು ತಿರಸ್ಕರಿಸಿ ಹೊರಹೋದ ತಾವರೆಯ ಎದೆಗೆ ರವಿಯೆ ಅತಿಶಯವಾದ ವೈರಿ ಹೇಗೆ ಆಗುವನೊ ಹಾಗೆ – ರಾಮನನ್ನು ಬಿಸುಟ ಎದೆಗೆ ಭರತನು ಅಹಿತನು. ನಿಲ್ಲು, ಸೋದರನೆ ನಿಲ್ಲು. ಹೊಡೆಯದಿರು. ಹಿರಿಯಣ್ಣನು ಹೆಣ್ಣಿನ ಕೊಲೆಗೆ ಹಿಂಜರಿಯುವನು. ಅದರಿಂದಾಗಿ ಕೋಪವನ್ನು ಬಿಡು. ನಾಯಿಗೆ ಬಡಿದರೆ ಅದು ಕಚ್ಚಿದ ಗಾಯ ಗುಣವಾಗುವುದೇ? ದೊಡ್ಡಮ್ಮನ ಬಳಿಗೆ ಬಾ!'

ಎಂದು ತಮ್ಮನೊಡಗೂಡಿ ಹಿಂದಿರುಗಿ ನೋಡದೆ ಅಲ್ಲಿಂದ ನಡೆದು ಬಿಟ್ಟನು. ರವಿಯ ಆಕರ್ಷಣೆಯಿಲ್ಲವಾಗಲು ಭೌತ ನಿಯಮದಿಂದ ವಂಚಿತಳಾಗಿ ಮಾರ್ಗದ ನಿಟ್ಟೆ ಗುರಿ ತಪ್ಪಿ, ತತ್ತರಿಸಿ ನೀಲ ಶೂನ್ಯಕ್ಕೆ ಉರುಳುವ ಪೃಥ್ವಿಯಂತೆ ಮಂಥರೆಯು ಗುಂಡು ಬಡಿದಂತೆ ನೆಲಕ್ಕೆ ಉರುಳಿ ಬಿದ್ದಳು. ಭರತನ ಪ್ರೀತಿಯೊಂದೇ ಹಿರಿಯ ಆಸರೆಯಾಗಿ ನೆಮ್ಮಾಗಿದ್ದ ಕುಬ್ಜೆಯ ಆತ್ಮವು ಆಧಾರಗೆಟ್ಟು ಉರುಳಿತು. ಮತ್ತು ಪುಡಿಪುಡಿಯಾಯಿತು. ಭರತನ ಆಗ್ರಹ ಗ್ರಹದ ಘಾತಕ್ಕೆ ಉಲ್ಕೆಯಂತೆ ಉರಿದು ಬೂದಿಯಾಯಿತು !

ಮರುಗುವೆನ್ ನಿನಗೆ ಕವಿ ಸಹಜ ಕರುಣೆಯಿಂ

ಓ ಪತಿತೆ, ಓ ಕುಬ್ಜೆ, ಓ ಮಂಥರೆಯೆ, ನಿನಗೆ ಕವಿ ಸಹಜ ಕರುಣೆಯಿಂದ ಮರುಗುವೆನು. ಲೋಕಕ್ರೋಧದ ಮದಗಜಪಾದದ ತುಳಿತಕ್ಕೆ, ರೋಷದ ದಾವಾಗ್ನಿಗೆ ಆಹುತಿಯಾಗಿ ಬಿದ್ದ ನಿನ್ನ ಆ ಭಸ್ಮ ರಾಶಿಯನ್ನು ನನ್ನ ಕಣ್ಗಂಗೆಯು ತೊಳೆದು, ಕಾವ್ಯ ಮಹಿಮಾ ಸಮುದ್ರ ತೀರ್ಥಕ್ಕೆ ಹರಿಸುವುದು.

ಕಂಸನ ಅರಮನೆಗಾಗಿ ಪರಿಮಳ ದ್ರವ್ಯವನ್ನು ಹೊತ್ತು ಹೊರಟಿದ್ದ ಕುಬ್ಜೆಗೆ ದೇವಕಿಯ ಮಗನು ಸ್ಪರ್ಶಿಸಿದ್ದರಿಂದ ಸಿರಿ ಚೆಲುವು ಉಂಟಾಯಿತಂತೆ. ಕಾವ್ಯ ಕರುಣಾರಸದ ಲಹರಿಯ ಶ್ರೀ ಹರಿಯ ಸಿರಿಯ ಕಮಲದ ಕೈಗಳ ಚುಂಬನಕ್ಕೆ ನಿನ್ನ ಹೀನರೂಪ ನಾಶವಾಗಿ, ಮತ್ತೆ ಹೃದಯ ಸೌಂದರ್ಯವು ಪ್ರಕಾಶಿಸದಿರುತ್ತದೆಯೆ?

ತನ್ನ ಯಾವ ಪುರುಷಾರ್ಥಕ್ಕೆ, ಇನ್ನಾವ ಸಂಪತ್ತಿಗೆ ಮತ್ತು ಸುಖಕ್ಕೆ ಆ ಗೂನಿ ಉಪದೇಶವನ್ನು ಕೈಕೆಗೆ ನೀಡಿದಳು? ಹುಟ್ಟಿದಂದಿನಿಂದ ಇತರರ ಚೆಲುವಿನಲ್ಲಿಯೆ ತನ್ನ ಚೆಲುವನ್ನು ಕಂಡು ಒಲಿಯುತ್ತಿದ್ದಳು. ಬೇರೆಯವರ ಸೊಗದಲ್ಲಿಯೆ ತನ್ನ ಸೊಬಗನ್ನು ಕಂಡು ಉಂಡು ಇದ್ದ ದಾಸಿಯಾಗಿದ್ದಳು. ಅವಳು ನೆಚ್ಚಿನ ಒಡತಿಗೆ ಮತ್ತು ಮೆಚ್ಚಿನ ಆಕೆಯ ಶಿಶುವಿಗೆ ತೊತ್ತಿನ ಕೆಲಸ ಮಾಡುವ ಹೆಮ್ಮೆಗೆ ಒಳಿತನ್ನು ಮಾಡುವೆನೆಂದು ಆ ಕೆಲಸವನ್ನು ಕೈಕೊಂಡಳು. ಅವಳ ಆ ಪರಾರ್ಥತೆಯ ಶುದ್ಧಿಯಲ್ಲಿ ಸ್ವಾರ್ಥದೋಷವನ್ನು ಕಾಣುವಂತವರಾರು?

ಮೂದಲಿಸಲೆಳಸಿದರೆ ದುರುಳ ವಿಧಿ ಹಡೆದ ಕರುಳೇನ ಮಾಡುವುದಣ್ಣ?

ಮಾಂಡವಿಯ ಮನದನ್ನನು ಶ್ರುತಕೀರ್ತಿಯ ನಲ್ಲನೊಡನೆ ಅವನಿಜಾತೆಯ ಪತಿಯ ತಾಯಿಯನ್ನು ನೋಡಲು ಹೋದನು. ಮಾಗಿಯ ಚಳಿಗೆ ಎಲೆ ಉದುರಿ ಬರಿದಾಗಿ ಕುಡಿ ಮೊರಟಿ ಸೊರಗುವ ಬಳ್ಳಿಯಂತೆ ಕೌಸಲ್ಯೆ ಬಾಡಿದ್ದಳು. ಆ ಪತಿ ಪುತ್ರ ವಿಹೀನೆಯನ್ನು, ದುಃಖಾತಿದೀನೆಯನ್ನು ಅವಳ ಅಂತಃಪುರದ ಬರಿದಾದ ನೆಲದ ಮೇಲೆ ಕಂಡನು.

ಕೈಕೆಯ ಕುಮಾರನನ್ನು ಕಾಣುತ್ತ ಅವಳ ದು:ಖದ ಹೊಡೆತ ಮರುಕಳಿಸಿತು. ಅದನ್ನು ತಡೆಯಲಾರದೆ ಮೈ ಮರೆತು ಒರಗಿದಳು. ಭರತನು ಅವಳನ್ನು ಹಿಡಿದೆತ್ತಿ ಕುಳ್ಳಿರಿಸಿ ಶೈತ್ಯೋಪಚಾರ ಮಾಡಿದನು. ಕಾಲುಗಳೆರಡನ್ನು ತಬ್ಬಿ ಮುಡಿಯೊತ್ತಿ ನಮಸ್ಕರಿಸಿದನು. ಕಂಬನಿಯ ಧಾರೆ ಹರಿಸಿ ರಘುರಾಮನ ತಾಯಿಯ ಪುಣ್ಯಮಯ ಪಾದಗಳನ್ನು ತೊಳೆದನು.

ಕೌಸಲ್ಯೆಗೆ ಭರತನ ಲಲಾಟದ ಸಾತ್ವಿಕ ಸ್ಪರ್ಶನದಿಂದ ರಾಮನೇ ಮರಳಿ ಬಂದಂತೆ ಹಿತವಾಯಿತು. ಭೀಷಣ ನಿರಾಶ ಕತ್ತಲ ಮಧ್ಯೆ ಎದೆಯಲ್ಲಿ ನಿರ್ನಿಮಿತ್ತವಾಗಿ

ಧೈರ್ಯಜ್ಯೋತಿ ಬೆಳಗಿತು. ನಿಟ್ಟುಸಿರು ಬಿಡುತ್ತ ಪಾದಕ್ಕೆ ಹಣೆಚಾಚಿ ಉರುಳಿ ಬಿದ್ದಿದ್ದವನನ್ನು ಮೇಲಕ್ಕೆ ಎತ್ತಿಕೊಂಡಳು. ಬಿಕ್ಕಿ ಬಿಕ್ಕಿ ಅಳುತ್ತ ಹೇಳಿದಳು:

'ಬಾ ಕಂದ, ಹೇ ಸಾಧುಕುಮಾರ ಬಾ. ತಂದೆಯೆ, ಮುತ್ತಿದ ಈ ಕತ್ತಲಿನಲ್ಲಿ ದೀಪದ ಹಾಗೆ ಬಂದೆ. ನೀನು ಕಣ್ಣಿಲ್ಲದೆ ಕಕ್ಕಾವಿಕ್ಕಿಯಾದ ಕುರುಡನಿಗೆ ದಾರಿ ತೋರುವ ಊರು ಕೋಲಾಗಿ ಬಂದೆ. ಬಾ, ತಂದೆ ಬಾ! ನಾರುಬಟ್ಟೆಯನ್ನು ಧರಿಸಿ ಕಾಡಿಗೆ ಹೋದ ಕಂದನನ್ನು ನಿನ್ನಲ್ಲಿಯೇ ಕಂಡು, ಎದೆಯ ತಾಪವನ್ನು ಕಡಿಮೆ ಮಾಡಿಕೊಳ್ಳುವೆನು. ಪರಿತಪಿಸದಿರು, ನಾಚದಿರು. ತಪ್ಪು ತಾಯಿಯದಲ್ಲ. ದುರುಳ ವಿಧಿಯು ಹಂಗಿಸಲು ಯೋಚಿಸಿದರೆ–ಹಡೆದ ಕರುಳು ಏನು ಮಾಡುವುದಣ್ಣ? ಕೇಳು, ಮಗುವೆ. ನೀನು ಇಲ್ಲಿ ಇಲ್ಲದೆ ಇರುವ ಕೆಟ್ಟ ಮುಹೂರ್ತದಲ್ಲಿ ವಂಚನೆಗೆ ಎಲ್ಲರೂ ತುತ್ತಾದರು!'

ಎಂದು ಹೇಳುತ್ತ, ಆ ತಾಯ್ತನದ ಗಂಭೀರಮೂರ್ತಿ ಭರತನನ್ನು ಅಪ್ಪಿಕೊಂಡಳು. ಅವನ ಕೆನ್ನೆಯನ್ನು ಸವರಿ ಕಂಬನಿಯನ್ನು ಒರಸಿದಳು. ಸಮಾಧಾನ ಪಡಿಸಿದಳು. ಆಗ ಭರತನು,

'ದೇವಿ, ಕಾಡಿಗೆ ನಡೆದ ಅಣ್ಣನನ್ನು ಮತ್ತೆ ಹಿಂದಿರುಗಿ ಕರೆ ತರುವಂತೆ ಮಾಡುವ ಕಾರ್ಯದಲ್ಲಿ ಸಫಲನಾಗುವಂತೆ ಆಶೀರ್ವದಿಸು. ವಿಧಿ ವಂಚನೆಯ ಕೂಣಿಗೆ(ಮೀನು ಹಿಡಿಯುವ ಬುಟ್ಟಿ) ಇಳಿಯುವ ಮೀನಿನಂತೆ ಮಂಥರೆಯ ಮಾತಿನ ಅಗ್ನಿಯ ಮೋಹಕ್ಕೆ ಒಳಗಾಗಿ ದುಸ್ಥಿತಿಗೆ ಒಳಗಾದ ನನ್ನ ತಾಯಿಯನ್ನು ಕ್ಷಮಿಸು. ತಂಗಿಯನ್ನು ಕಾಪಾಡು.

'ರಾಮನಿಲ್ಲದ ಈ ನೆಲವು ನನಗೆ ಹಾಳು ಮಣ್ಣು ಅಲ್ಲವೆ? ಅಮ್ಮ, ತಂದೆಯನ್ನು ಕೊಂದು ಅಣ್ಣನನ್ನು ಕಾಡಿಗೆ ಅಟ್ಟಿಯೂ, ಹೆತ್ತ ತಾಯಿಯನ್ನು ಚಿರಪತಿತೆಯಾಗಿ ಮಾಡಿಯೂ ಧರೆಯನ್ನು ಆಳುವಷ್ಟು ಪತಿತ ನಾನಲ್ಲ. ಗುರುಕರುಣೆಯಿಂದ ನಿಮ್ಮಡಿಯ ಶುಭ ಆಕಾಂಕ್ಷಿಯಾದ ನಾನು ಸರ್ವರ ಮಂಗಲವನ್ನು ಬಯಸುವವನು ಮತ್ತು ಸತ್ಯಸುಂದರ ಶಿವಪ್ರೇಮಿ!'

ಎಂದು ಹೇಳುತ್ತ ತಂದೆಯನ್ನು ನೆನೆನೆನೆದು ಮೈಮರೆತು ಬಿದ್ದನು. ರಾಮರಾಮ ಎಂದು ಅಳುತ್ತಿದ್ದನು. ಅಮ್ಮನನ್ನು ಕ್ಷಮಿಸು ಎಂದು ಬೇಡಿಕೊಳ್ಳುತ್ತಿದ್ದನು. ಯಾರ ಸಂತೈಕೆಗೂ ತಗ್ಗದ ಅತಿ ಸಂತಾಪದಿಂದ ಅವನು ದುರ್ಬಲವಾಗುತ್ತಿದ್ದನು. ಆಗ ಗುರು ವಸಿಷ್ಠನ ವಾಣಿ ಬಂದು ಅವನನ್ನು ಎಚ್ಚರಿಸಿತು. ಆ ತಪೋಮೂರ್ತಿಯನ್ನು ಕಾಣುತ್ತ, ಕೇಸರಿಯ ಕಣ್ಣುಗಳಿಗೆ ಹೆದರಿ ಮುದುರಿಕೊಂಡು ಅಡಗುವ ಹುಲಿಯ ರೀತಿಯಲ್ಲಿ, ಅವನ ಮನಸ್ಸಿನ ರಣರಂಗದಿಂದ ಅಶಾಂತಿಯು ಬಾಗಿ, ಜಾರಿಹೋಯಿತು.

'ಧೀರಮತಿ ಪಾರ್ಥಿವಕುಮಾರನೆ, ಶೋಕವನ್ನು ತಡೆದುಕೊ. ಪಿತೃವಿಗೆ ಶವಸಂಸ್ಕಾರವನ್ನು ಮಾಡಿ ಆತನನ್ನು ಉತ್ತಮ ನೆಲೆಗೆ ಕಳುಹಿಸು. ನಿಯಂತ್ರಿಸಲು

ಅಶಕ್ಯವಾದ ಮತ್ತು ನಮ್ಮನ್ನು ಅಧೀನದಲ್ಲಿಟ್ಟುಕೊಳ್ಳುವ ವಿಧಿಯು ತಂದೊಡ್ಡಿದ ಈ ಮಹತ್ ತೊಂದರೆಯನ್ನು ಬುದ್ಧಿಯಿಂದ ಪರಿಹರಿಸಲು ಯತ್ನಿಸು. ಭಾವದಾವೇಶದಿಂದ ರೋದಿಸಿದರೆ ಫಲವೇನು? ಗೋಳಾಡುವುದರಿಂದ ಮಾತ್ರ ಮಂಗಳ ಸಿದ್ಧಿಸುವುದೆ?'

ಎಂದು ಶ್ರೇಷ್ಠವಾಗ್ಮಿಋಷಿಗುರು ವಸಿಷ್ಠನು ನುಡಿದನು. ಅದನ್ನು ಕೇಳಿದ ಭರತನು ಅವನ ಹಿಂದೆ ಮಂತ್ರದಂತೆ, ತಂದೆಗೆ ಲೌಕಿಕವನ್ನು ನಡೆಸಲು ಹೋದನು.

ಹಾ, ಜೀವನ ದುರಂತತೆಯೆ – ತಂದೆ ತಾಯಿಯರನ್ನು ಪ್ರೀತಿಯ ಮಕ್ಕಳನ್ನು ಪೂಜ್ಯರನ್ನು ಮತ್ತು ಎರ್ದೆಯೊಲಿದವರನ್ನು, ಹೃದಯಕ್ಕೆ ಆಪ್ತರಾದವರನ್ನು – ಕಳೇಬರವನ್ನಾಗಿ ಮಾಡಿ ತೋರಿಸುವ ನಿನ್ನ ನಿಷ್ಠುರತೆಯು ಸುಡಲಿ! ಪ್ರೀತಿಯನ್ನೆ ಭೀತಿಯಾಗಿಸುವ ಯಮಮುದ್ರೆಯಿಂದ ಉಬ್ಬಿದ ತಂದೆಯ ಮೈಯನ್ನು ಎಳ್ಳೆಣ್ಣೆಯ ಬಾನಿಯಿಂದ ತೆಗೆಯಲು ಅದನ್ನು ಕಂಡು ಭರತನ ಮನಸ್ಸು ಅಂಜಿತು. ಭಯದ ಮೂರ್ಛೆಯ ಮಿಂಚು ಮೈಯನ್ನು ಮುಟ್ಟಿ ಬಿಟ್ಟಂತೆ ತತ್ತರಿಸಿತು.

ತಂದೆಯ ಶರೀರವನ್ನು ನೋಡಿದ ತಕ್ಷಣ ಬಿಗಿದಪ್ಪಿಕೊಂಡನು. ಅವನ ಒಡಲಿನಲ್ಲಿ ಹುಟ್ಟಿ ಬಾಳಿನ ಜೇನು ಸವಿದವನು ಬಿಳಿಚಿಕೊಂಡ ಕಣ್ಣನ್ನು ನೋಡಿ ಗಾಬರಿಗೊಂಡನು. ಬದುಕೆ ಬಯಪಡಿಸಿದಂತಾಗಿ ಹೆದರಿಕೆಯಿಂದ ನಡುಗುತ್ತ ನಿಂತನು.

ಮೃತ್ಯು ತಾಂ ನಾಂದಿಯ್ಕೈಸಲೆ ಪೇಳ್ ಅಲೌಕಿಕಕೆ?

ಶೈಲ ಕಾನನದ ಮನೋಹರತೆಯನ್ನು ಸವಿಯುತ್ತ ಅಲೆಯುವ ದಟ್ಟವಾದ ಕಾಡಿನ ಪಕ್ಷಿಯು ತಕ್ಷಣ ತನ್ನ ಕಾಲ್ದೆಸೆಯೆ, ನೆಟ್ಟನೆ ಮುಂದೆ ಶೂನ್ಯತೆಯ ಪಾತಾಳದ ಆಳವು ಆಕಳಿಸಿ ಬಾಯಿ ತೆರೆದಂತಿದ್ದ ಕಿಬ್ಬಿದರಿಯನ್ನು ಕಾಣುತ್ತದೆ. ವಿಸ್ಮಯದ ಸಿಡಿಲು ಬಡಿದಂತೆ ಗಾಬರಿಗೊಂಡು ಧೈರ್ಯಗುಂದಿ ಕಣ್ಣು ಮತ್ತು ಕಾಲಿನ ಶಕ್ತಿ ಉಡುಗುತ್ತದೆ. ಅದು ಹಿಮ್ಮೆಟ್ಟಿ ಮರವಟ್ಟು ನಿಲ್ಲುತ್ತದೆ. ಹಾಗೆ ಭರತನು ತಂದೆಯ ಮೈಗೆ ಬದಲಾಗಿ ಜೀವಶೂನ್ಯ ಶವವನ್ನು ನೋಡುತ್ತ ನಿಂತನು!

ಬಾಳಿನ ಮೇಲೆ ಸಾವು ತೆರೆಯೆಳೆದಂತೆ ಆ ಕಣ್ಣುಗಳು ಮುಚ್ಚಿದ್ದುವು. ದೇವರಿಲ್ಲದ ಗುಡಿಯ ಬೀಳುಬಿದ್ದ ಜಾಗದಲ್ಲಿ ಬಾಗಿಲು ಇಕ್ಕಿದಂತೆ ಬಾಯಿಯು ವಿಕಟ ಮೌನದ ವಜ್ರ ಮುದ್ರೆಯಲ್ಲಿ ಬಿಗಿದಿತ್ತು. ಜಡವು ಜೀವವನ್ನು ಅಣಕಿಸುವಂತೆ ಸಾರ್ವಭೌಮಿಕ ಮಹಾ ಔದಾಸೀನ್ಯವು ಕ್ರೂರದರ್ಪದಲ್ಲಿ ಮೆರೆದು ನಿಶ್ಚಲವಾಗಿತ್ತು.

ಹಾ, ಭರತ ಕಂದನ ಎಳೆಕಣ್ಣುಗಳಿಗೆ ಹಿಂದೆ ತಂದೆ ದಶರಥನ ಮುದಿಯ ಮೈಯು ಪ್ರೀತಿಯ ತೊಟ್ಟಿಲಲ್ಲಿ ಸಂತೋಷ ನಂದನದ ಕಲ್ಪತರುವಿನಂತೆ ಜೋಲುವ ವಾತ್ಸಲ್ಯವಿತ್ತು. ಭಾವದ ಹೆಜ್ಜೇನಿನ ಹುಟ್ಟಿಯಂತೆ ಸುಖಮಯವಾಗಿತ್ತು. ಅದು ಇಂದು ಚಿತೆಯಲ್ಲಿ, ದುರಾಸೆಯ ನೆಲೆಯಲ್ಲಿ, ಬಾಳಿನ ಕನಸುಗಳಿಗೆಲ್ಲ ಕೊನೆಯ ಸುಡುಗಾಡಿನಂತೆ

ಕಾಣುತ್ತಿತ್ತು. ಹಾಗಾಗಿ ಬಾಲಋಷಿಯಾದ ಅವನು ಆ ಶವದಲ್ಲಿ ಪಿತೃದೇವನನ್ನು ಹುಡುಕುತ್ತಾನೆಯೆ?

ಚಕ್ರಾಧಿಪತ್ಯವು ಭೂಪತಿತ ಸ್ವರ್ಗವೆನ್ನುವಂತೆ; ತನ್ನ ತಾಯಿಯ ಲೋಭದಂತೆ ನಾಶವಾಗಿ ಉರುಳಿದ ಭೂಪತಿಯ ದೇಹವನ್ನು ಕಂಡನು. ಅವನ ಮನಸ್ಸಿನಲ್ಲಿ ದುಃಖದ ಆಮೆಯ ತಲೆ ಮುದುರಿಕೊಂಡಿತು. ಸಾವಿನ ನೋವು ದೃಢ ಮನೋನಿಶ್ಚಯದ ಆಮೆಯ ಚಿಪ್ಪಿನ ಕೋಟೆಯ ಶಿಲಾ ರಹಸ್ಯದಲ್ಲಿ ಹುದುಗಿತು. ಕಣ್ಣಿನ ಅಳಲಿಗಿಂತ ಕಿವಿಯ ಅಳಲು ಹಿರಿದಾದುದೊ? ಮತ್ತು ನೋವನ್ನು ಗೋಳೇ ತಿಂದು ಇಲ್ಲವಾಗಿಸಿದೆಯೊ?

ಆತ್ಮಯಾತ್ರೆಯ ಮಾಹಾಜ್ಯೋತಿಯ ಮಹದ್ದರ್ಶನವು ಲಭಿಸಿದ ಅವನಿಗೆ ದೇಹಯಾತ್ರೆಯ ದುರಂತವು ಮಹತ್ತರವಾದ ಆನಂದಕರ ರಹಸ್ಯವಾಗುವುದೇನೊ? ಮೃತ್ಯುವು ಈ ಐಹಿಕದ ನಾಟಕಕ್ಕೆ ಭರತವಾಕ್ಯವಾಗಿದ್ದರೂ ಅದು ಅಲೌಕಿಕಕ್ಕೆ ನಾಂದಿಯಲ್ಲವೆ?

ಯಜ್ಞ ಪುರೋಹಿತರು ಅಗ್ನಿಶಾಲೆಯಿಂದ ಅಗ್ನಿಯನ್ನು ತಂದರು. ತೈಲದಲ್ಲಿ ಚೆನ್ನಾಗಿ ನೆನೆದುದಕ್ಕೆ ಅರಸನ ಶರೀರವು ಹಳದಿ ಬಣ್ಣವಾಗಿತ್ತು. ಅದನ್ನು ಹೊನ್ನಿನ ಚಟ್ಟಕ್ಕೆ ಎತ್ತಿಟ್ಟರು. ಜನರು ಆಕ್ರಂದಿಸುತ್ತಿರಲು, ಸುಡುವ ನೆಲಕ್ಕೆ ಹೊತ್ತುಕೊಂಡು ಹೊಯ್ದರು. ಪಟ್ಟಣಿಗರು ದುಃಖಿಸುತ್ತ, ರಾಜಭಕ್ತಿ ಸೂಚಕವಾಗಿ, ಗೌರವದ ಸಂಕೇತವಾಗಿ ರತ್ನ ವಸ್ತ್ರಗಳನ್ನು ಮಣ್ಣಿಗೆ ಹೊನ್ನಿನ ಉಡುಗೆ ಒದಗುವಂತೆ ಚೆಲ್ಲಿದರು. ಸತ್ತ ಆನೆಯು ದೊಡ್ಡದಂತಗಳ ಸಂಪತ್ತನ್ನು ನೀಡುತ್ತದೆ. ಎಂಬಂತೆ, ಮಡಿದರೂ ಹಿರಿದಾದುದಕ್ಕೆ ಬೆಲೆಯ ಆಧಾರವಿರುತ್ತದೆ.

ಮುಂಗಾರು ಮಳೆಗೆ ಮೊದಲೇ ಮಲೆನಾಡಿನ ಹೆಗ್ಗಡೆಯ ಮನೆಯ ಕೋಟೆಯಲ್ಲಿ ಕಾಡನ್ನು ಕಡಿದು ಸೌದೆಯನ್ನು ತಂದು ಕೊಟ್ಟಿಗೆಯಲ್ಲಿ ಒಂದರಮೇಲೊಂದು ಪೇರಿಸಿ ಅಡಕಿದ ಕಟ್ಟಿಗೆಯ ರಚನೆ ಕಾಣುವಂತೆ ಮುಂದೆ ಗಂಧ ಚಿತೆಯು ರುದ್ರಭೂಮಿಯಲ್ಲಿ ಕಣ್ಣಿಗೆ ಭಯಂಕರವಾಗಿ ಶೋಭಿಸಿತು. ಋತ್ವಿಜರು ದೊರೆಯ ದೇಹವನ್ನು ಎತ್ತಿ ಚಿತೆಯ ಮೇಲಿಟ್ಟರು. ಪ್ರಾಜ್ಞಮತಿ ಭರತನು ಗುರುಗಳ ಸಂಜ್ಞೆಯನ್ನು ಕಣ್ಣಿನಲ್ಲಿ ತಿಳಿದು, ಅದಕ್ಕೆ ಉರಿಯಿಕ್ಕಿದನು.

ಹವಿಸ್ಸನ್ನು ಸೇವಿಸುವ ಅಗ್ನಿಯು ರಾಣಿಯರ ರೋದನಕ್ಕೆ ಮತ್ತು ಸಾಮಗಾನ ಲಯಕ್ಕೆ ಸ್ವರ್ಗಕ್ಕೆ ಏರುವ ಬೆಂಕಿ ತೇರಿನಂತೆ ಗಾಳಿವಟ್ಟೆಯಲ್ಲಿ ನಿಡಿದಾಗಿ ವ್ಯಾಪಿಸಿದನು. ದಶರಥನ ಕೀರ್ತಿಯಂತೆ ಭಸ್ಮದ ಬಿಳುಪಾದ ರಾಶಿಯು ಕಣ್ಣಿಗೆ ಶಾಂತಿಯನ್ನು, ತಂಪನ್ನು ಒತ್ತಿ ಉಳಿಯಿತು. ದುಃಖ ಮೊದಲಾದ ಆವೇಗ ಕಡಿಮೆಯಾಯಿತು. ರಾಶಿಮಾಡುವಿಕೆ ಮುಗಿಯಲು ಎಲ್ಲರೂ ಆ ಚಿತೆಗೆ ಪ್ರದಕ್ಷಿಣೆ ಬಂದರು. ದೀನವಾಗಿ ಪ್ರಲಾಪಿಸುತ್ತ

ಸರಯೂ ನದಿಯ ದಡದೆಡೆಗೆ ಸಾಗಿ ಹೋದರು. ಜಲತರ್ಪಣವನ್ನು ಮಾಡಿದರು. ಆ ಜನರು ಬಿಕ್ಕಿ ಬಿಕ್ಕಿ ಅಳುತ್ತ ಶಶಿಹೀನ ರಾತ್ರಿಗೆ ಸಮನಾದ ರಾಜಧಾನಿಯನ್ನು; ಖಾಲಿಯಾದುದನ್ನು ಪ್ರವೇಶಿಸುವ ಖಿನ್ನತೆಯ ಛಾಯೆಯಂತೆ ಹೊಕ್ಕರು.

ಪುಣ್ಯದನ್ವೇಷಣೆಗೆ ಪೋಪ ಪಾಪದ ತೆರದಿ ಪೊರಮಟ್ಟಳರಮನೆಯಿನಾ ಮುದುಕಿ

ಓ ಕುಬ್ಜೆ, ಮಂಥರೆಯೆ, ಓ ಪ್ರೇಮ ಭೈರವಿಯೆ, ಶತ್ರುಘ್ನನು ನೆಲಕ್ಕೆ ಕುಕ್ಕಿ ಅಪ್ಪಳಿಸುವಾಗ ಅಲ್ಲಿಗೆ ಬಂದ ಭರತನು ತಿರಸ್ಕರಿಸಿ ಬೈದು ಹೋದನು. ನೀನು ನೆಲಕ್ಕೆ ಉರುಳಿ ಮೈಮರೆತೆ. ಆಗ ಅಲ್ಲಿ ನೆರೆದ ಜನರು ಅಣಕದ ಈಟಿಯಿಂದ ನಿನ್ನನ್ನು ಇರಿದರಲ್ಲವೆ? ಹೇಳು, ನಿರ್ಭಾಗ್ಯೆ ಅನಂತರ ನೀನೇನಾದೆ? ಅಲ್ಲಿಂದ ನೀನು ಎತ್ತಹೋದೆ? ಭೂಮಿ ನುಂಗಿತೊ? ನೋವಿನ ಉರಿಯ ಹೊಡೆತದಿಂದ ಇಲ್ಲವಾಗಿ ಹೋದೆಯೊ? ನಿರಾಶೆ ನಿನ್ನನ್ನು ತಿಂದಿತೊ? ಗೂನಿ ಮಾಯೆಯೆ, ಮತ್ತೆ ಮಾಯವಾದೆಯೊ ಎಂಬುದನ್ನು ಹೇಳು?

ಪ್ರಜ್ಞೆ ಬಂದು ಕಣ್ಣು ತೆರೆಯಲು ನಿರ್ಜನದ ನೀರವದ ಶೂನ್ಯತೆಯು ಅವಳ ಮನಸ್ಸಿನ ಕೊರಳಿಗೆ ಸರ್ಪಪಾಶದಂತೆ ಕಂಡಿತು. ದೃಷ್ಟಿನೆಟ್ಟು ನೋಡಿದರೆ ಜನರ ಸುಳಿವಿಲ್ಲ. ಸೊಲ್ಲು ಸದ್ದು ಸ್ವಲ್ಪವೂ ಇಲ್ಲ. ಸದ್ದಿಲ್ಲದ ಅರಮನೆಯು ನಿಶ್ಯಬ್ದತೆಯ ಶವಕ್ಕೆ ಹೆಗ್ಗೋರಿಯಾಗಿ; ದುಶ್ಯಕುನದಂತಾಗಿ; ಹಾಸ್ಯ ಮತ್ತು ಮೂಕಾಸ್ಪದವಾಗಿ, ಉಗ್ರ ಕಠೋರ ವಿಕಟ ಭಂಗಿಯಿಂದ ನಿಂತಿತ್ತು!

ಆ ಗೂನಿಯು ನಿಶ್ಯಬ್ದತಾ ಶವದಂತೆ ಎದ್ದಳು. ಮುಯ್ಯಿಗೆ ಮುಯ್ಯಾಗಿ ಕೊಲೆಯಾದವನ ಮೈಯಿಂದ, ಹಸಿಯ ಗಾಯಗಳಿಂದ, ಬಿಸಿ ಆರಿದ ನೆತ್ತರು ಸೋರಿ, ಸಮಾಧಿಯಿಂದ ಏಳುವ ಪ್ರತಿಕಾರ ಪ್ರೇತದ ಭೀಷಣಾಕೃತಿಯಂತೆ – ನಿಟ್ಟುಸಿರು ಬಿಡುತ್ತ ಆ ಕುಬ್ಜೆ ಎದ್ದಳು. ದೃಢಮನದಿಂದ ಹೆಡೆಯೆತ್ತಿ ತನ್ನ ವಿಷವನ್ನು ತಾನೆ ಹೀರಲು ಅಪೇಕ್ಷಿಸುವ ಕಾಳ ಸರ್ಪಿಣಿಯಂತೆ ಎದ್ದಳು.

'ಹಾ, ತನ್ನ ಕೈಕೆಯ ಮಗುವಿಗೆ, ತನ್ನ ಜೀವಾನಂದ ಸಾಗರ ಚಂದ್ರನಿಗೆ, ಭರತದೇವನಿಗೆ ನೆಲದ ಸಿರಿ ದೊರಕಲಿ, ಸೊಗವಾಗಲಿ, ಮುಡಿಗೆ ಸೂರ್ಯವಂಶದ ಮುಕುಟ ಪ್ರಾಪ್ತವಾಗಲಿ ಎಂದು ರಾಮನನ್ನು ಕಾಡಿಗೆ ಅಟ್ಟಿದೆನಲ್ಲವೆ? ಮತ್ತೆ ರಾಮನನ್ನು ಮನೆಗೆ ಕರೆತಂದೆನಾದರೆ, ಕಂದ ಭರತನಿಗೆ ಸಂತೋಷವಾಗುತ್ತದೆ. ಕೈಕೆಗೆ ಸಂಭ್ರಮ, ಉತ್ಸಾಹ ಉಂಟಾಗುತ್ತದೆ. ಮತ್ತೆ ನನಗೆ ಮೊದಲಿನಂತೆ ಅವರ ಹಿಂದಿನ ಪ್ರೀತಿಯ ಬಂಡಿ ಔತಣ ಹಿಂದಿರುಗಿ ಒದಗುತ್ತದೆ.'

ಎಂದು ಆಲೋಚಿಸಿದಳು. ಸ್ಮಶಾಣದಲ್ಲಿ ದಹನ ದುಃಖದೊಳಿದ್ದ ಯಾರೂ ತಿಳಿಯದಂತೆ ಆ ಮುದುಕಿ ಪುಣ್ಯದ ಅನ್ವೇಷಣೆಗೆ ಹೋಗುವ ಪಾಪದ ರೀತಿಯಲ್ಲಿ ಅರಮನೆಯಿಂದ ತೆರಳಿದಳು.

ಸಾಲಾಗಿದ್ದ ಬೀದಿಗಳಲ್ಲಿ, ಸ್ಮಶಾಣಕ್ಕೆ ಸಂಭ್ರಮದಿಂದ ಸಾಗಿದ್ದ ಜನರು ಒಟ್ಟಾಗಿ ಸೇರಿ, ಗಡಿಬಿಡಿಯಿಂದ ಹಿಂದಿರುಗುತ್ತಿದ್ದರು. ಮಂಥರೆಯನ್ನು ನೋಡಿದ ಅವರು ಅವಳ ಕಡೆಗೆ ಕಲ್ಲು ಮಣ್ಣುಗಳನ್ನು ತೂರಿದರು, ಕೆಲವರು ಮುಖಕ್ಕೆ ಉಗುಳಿದರು. ಆ ಗೂನಿಯು ಗಾಯವನ್ನು, ಸುರಿದ ರಕ್ತವನ್ನು ಹರಿದ ಬಟ್ಟೆಗಳಿಂದ ಒರಸಿದಳು. ಕೋಸಲದಿಂದ ಹೊರದೂಡಿಸಿಕೊಂಡ ಆ ತೊನ್ನಿ, ಆ ಶಿಥಿಲವಾದ ಮೂಳೆ ಚರ್ಮಗಳ, ನೆರೆತ ನವಿರು ಕೂದಲುಗಳ ವೃದ್ಧೆ ಮಂದಿಯ ಅನ್ಯಾಯವನ್ನು ಗಣನೆಗೆ ತೆಗೆದುಕೊಳ್ಳದೆ ಸಂಧ್ಯೆಯೊಡಗೂಡಿ ಅಯೋಧ್ಯೆಯಿಂದ ತೊಲಗಿದಳು.

ಹಾ, ಜೀವನದಲ್ಲಿ ಎಷ್ಟೆಷ್ಟೊ ದ್ವೇಷ ನಿಷ್ಠುರ ವೈರ ಕಷ್ಟಗಳಿಗೆಲ್ಲವೂ ಆ ಪ್ರೇಮವೆ ಪಿತಾಮಹನಲ್ಲವೆ? ಅದು ಹೇಗೆಂದರೆ ಅಮೃತದ ಸುಖಕ್ಕೆ ಕಡಲನ್ನು ಕಡೆದ ಆ ದೇವ ದೈತ್ಯರಿಂದ ಆಗಿದ್ದು ವಿಷದ ಸೃಷ್ಟಿ ಅಲ್ಲವೆ? ಕುಬ್ಜೆಯು ತನ್ನ ಹೃದಯ ಕಮಲದಲ್ಲಿ ರಘುರಾಮಚಂದ್ರನನ್ನು ಇರಿಸಿಕೊಂಡು ಮುಂದುವರಿಯುತ್ತಿದ್ದಳು. ಆಗ ಬಾನಿನ ನೆತ್ತಿಯಿಂದ ಧಾತ್ರಿಗೆ ರಾತ್ರಿ ಅವತರಿಸಿತು. ಅದು ಮಂಥರೆಯ ಚಿತ್ತಕ್ಕೆ ಮರುಳುತನ ಉಂಟುಮಾಡಿ, ಕಣ್ಣಿಗೆ ಕುರುಡು ಮೆತ್ತಿತು.

ಬೆಳಗಿನಿಂದ ಏನೂ ತಿಂದಿಲ್ಲ. ನೀರಿನ ಹನಿಯನ್ನೂ ಕುಡಿದಿಲ್ಲ. ಏಟುಗಳನ್ನಲ್ಲದೆ ಬೇರೆ ತಿಂದಿಲ್ಲ. ಕಣ್ಣೀರನೊಂದನ್ನು ಬಿಟ್ಟು ಇನ್ನೇನನ್ನೂ ಕುಡಿದಿಲ್ಲ. ಹಸಿವಿನಿಂದ ಹೊಟ್ಟೆ ಬೆನ್ನಿಗಂಟಿದೆ. ಬಾಯಾರಿಕೆಯಿಂದ ಗಂಟಲು ಒಣಗಿದೆ. ತನಗಾದ ದುಃಸ್ಥಿತಿಯ, ದುಃಖ ಒದಗಿಸಿದ ಒಳಗಿನ ಬಳಲಿಕೆಯಿಂದ ಮೇರೆ ಮೀರಿದ ಉಸಿರ ದಣಿವಿಗೆ ಪ್ರಜ್ಞೆ ಜೋಂಪಿಸುತ್ತಿತ್ತು. ಹೆಜ್ಜೆಯಿಂದ ಹೆಜ್ಜೆಗೆ ಕಾಲು ಜೋಮು ಹಿಡಿದಂತಾಗುತ್ತಿತ್ತು. ಆದರೂ ತೊಟ್ಟ ವ್ರತದ ಬಲದ ಊರುಗೋಲನ್ನು ನಂಬಿ, ರಾಮನನ್ನು ಕರೆದು ಕೂಗುತ್ತ ಚಲಿಸುತ್ತಿದ್ದಳು. ಅದು ಪ್ರಶಾಂತವಾದ ರಾತ್ರಿಯ ನಿದ್ದೆಗೆ ಭಂಗ ತರಲಿಲ್ಲ. ದಣಿವಿನ ಉಸಿರಿಗೆ ದನಿ ಇರುವುದೆ? ಅವಳ ಕೂಗನ್ನು ಕಾಡು ಕಿವುಡಾಗಿ ಕೇಳಿತು.

ಮಂಥರೆಯ ಮೂರ್ತಿ ಹಾ ಸುಟ್ಟು ಸೀದುದೊ ಚಿಟ್ಟೆ ಸೀವಂತೆ!

'ಓ ನನ್ನ ಭರತನಣ್ಣಯ್ಯ! ಓ ರಾಮಯ್ಯ! ಹೇಳು, ಎಲ್ಲಿರುವೆಯಯ್ಯ? ದಮ್ಮಯ್ಯ! ಓ ನನ್ನ ಭರತನಣ್ಣಯ್ಯ! ಓ ರಾಮಯ್ಯ! ದಮ್ಮಯ್ಯ! ಹೇಳು, ಎಲ್ಲಿರುವೆಯಯ್ಯ?' ಎಂಬ ಕರುಣ ಧ್ವನಿಯ ನುಡಿ ಛಂದಸ್ಸಿಗೆಂಬಂತೆ ವಿಕೃತೆಯು ಚಲಿಸುತ್ತಿದ್ದಳು. ಆ ದನಿ ತಾರಾ ಸಹಸ್ರಾಕ್ಷಿಯಾದ ವ್ಯೋಮದೇವಿಯ ಮನಸ್ಸಿಗೆ ರೋಮಾಂಚನದ ಪಲ್ಲವಿಯನ್ನು ಉಂಟುಮಾಡುವಂತಿತ್ತು. ಅವಳಲ್ಲಿ ಉಂಟಾದ ಪರಿವರ್ತನೆಯ ಪುಣ್ಯ ಸಂಕ್ರಾಂತಿಯು ಈ ನೆಲದ ಲೋಕಕ್ಕೆ ತಿಳಿಯದಿದ್ದರೆ ಏನು, ಬಾನಿನ ಸ್ವರ್ಗ ಅರಿಯದಿರುವುದೆ?

ಅವಳು ಬಾಹ್ಯ ಪ್ರಜ್ಞಾಶಕ್ತಿ ಶೂನ್ಯತೆಯ ಅಂಚಿನ ಉಯ್ಯಾಲೆಯಲ್ಲಿ ತೂಗುತ್ತಿರಲು, ಕುಸಿದ ದೃಷ್ಟಿಯ ಗೂನುಗಣ್ಣಿಗೆ ದೂರದಲ್ಲಿ ಒಂದು ಜ್ಯೋತಿ ಕಾಣಿಸಿತು. ಅದು

ಮಂಥರೆಯ ಆತ್ಮಕ್ಕೆ ರಾಮನಂತೆಯೆ ಶೋಭಿಸುತ್ತಿತ್ತು. ಆಗ 'ಓ ಭರತನಣ್ಣಯ್ಯ, ಓ ನನ್ನ ರಾಮಯ್ಯ, ಬಾರಯ್ಯ, ದಮ್ಮಯ್ಯ!' ಎಂದು ಅವಳ ಎದೆಯ ನವಿಲು ಸಂಭ್ರಮದಿಂದ ಕೂಗು ಹಾಕಿ, ಗರಿಗೆದರಿ ಕುಣಿಯುತ್ತಿರಲು, ಹಾರಿ ಮುಂದಕ್ಕೆ ನುಗ್ಗಿದಳು. ಆಹಾ, ಕಾಡ್ಗಿಚ್ಚಿನಲ್ಲಿ ರಾಮನ ಸಾದೃಶ್ಯವನ್ನು ಕಂಡು ನಡೆದು ಓಡಿದಳು.

ಆ ದಾವಾಗ್ನಿಯು ಬೃಹತ್ತಾದ ಮತ್ತು ದಟ್ಟವಾದ ಸಂಪೂರ್ಣ ಅಂಧಕಾರದ ಮಧ್ಯೆ ಪ್ರವಹಿಸುವ ವಿದ್ಯುತ್ ಪ್ರವಾಹ ರಕ್ಕಸನಂತಿತ್ತು. ಅದು ತನ್ನ ಕೇಸರಿ ಬಣ್ಣದ ಸಮೃದ್ಧವಾದ ತಲೆಗೂದಲ ಕೇಶಪಾಶ ರಾಶಿ ರಾಶಿ ರಚನೆಯನ್ನು ದಿಕ್ಕು ದಿಕ್ಕಿಗೆ ಕೆದರುತ್ತಿತ್ತು. ಬೆಂಕಿಯ ಕಣ್ಣುಗಳಂತೆ ಸಿಡಿದು ಏಳುವ ಕೆಂಗಿಡಿಗಳಿಂದ ಬೃಹತ್ತಾದ ತಾರೆಯ ಕೆಂಡಧಾರೆಯನ್ನು ಸೂಸಿತು. ಶಿಖಿಬಕಾಸುರ ಬಾಹುಭೀಮರಂತೆ ಬೃಹತ್ತಾದ ಹಿಡಿಂಬರಂತ ಮರಗಳನ್ನು ಸುತ್ತು ತಿರುಗಿಸಿತು. ನಿರಿನಿರಿ ನಿಟಿಲೆಂದು ಮುರಿದು, ಅರೆದು, ಬೂದಿಯನ್ನು ಬುತ್ತಿಕೂಳಾಗಿಸಿಕೊಂಡು ಮುಕ್ಕಿತು.

ಕಾಡೆಲ್ಲವನ್ನು ನುಂಗಿನೊಣೆಯುತ್ತ, ನಾಡೆಲ್ಲವನ್ನು ನೆಕ್ಕುತ್ತ, ಪರ್ವತ ಜಗತ್ತನ್ನು ಬನದ ಸೊಗವಾದ ಪ್ರಾಣಿಪಕ್ಷಿಗಳನ್ನು ಪಾರಣೆಮಾಡಿತು. ಚೀರಿಸುತ್ತ ಕೊಲ್ಲುತ್ತ ಮೆಲ್ಲುತ್ತ ಪ್ರಳಯ ಸರ್ಪದ ಶರೀರವು – ತಾನು ಲಯ ಭೋಜನಕ್ಕೆ ನಿಡಿದಾಗಿ ಚಾಚಿದ ಶತಕೋಟಿ ಯೋಜನದ ಮಿಂಚಿನ ಮಹಾಜಿಹ್ವೆ ಎಂಬಂತೆ ನುಗ್ಗಿ ಮುಂದುವರಿಯಿತು. ಬೀಸಿ, ಮೇಲೆ ಹಾಯ್ದು ಬಂದು ಅಪ್ಪಳಿಸಿದ ಅಗ್ನಿಗೆ ಆ ಮಂಥರೆಯ ಮೂರ್ತಿಯು – ಅಯ್ಯೊ, ಚಿಟ್ಟೆ ಸೀದಂತೆ, ಸುಟ್ಟು ಸೀದು ಹೋಯಿತು!

ಒರಟುತನದ ವಿಕೃತಿಯ ಗಿಡ್ಡ ಮೈಯ್ಯಿಯ ಕೂರೂಪವನ್ನು ಹೊತ್ತ ಶ್ರೀಗಂಧದ ಕೊರಡಿನ ವಕ್ರತೆಗೆ ಅಗ್ನಿಯ ಲಗ್ನದಿಂದ ರೂಪ ಶೂನ್ಯತೆ ಲಭಿಸಿತು! ವಿಶ್ವದ ದೇಶ ದೇಶಗಳಲ್ಲಿ ದೇವಿ ಮಂಥರೆಯ ಅಂತರಾತ್ಮದ ದಯಾಲಕ್ಷ್ಮಿಯು ತನ್ನ ಕೀರ್ತಿಯ ಪುಣ್ಯದಿಂದ ಅಮೃತಮಯ ಸೌಂದರ್ಯವನ್ನು ತುಂಬದೆ ಇರುತ್ತಾಳೆಯೆ?

❑



~~~~~~~~~~~~~~~~~~~~~~ ಸಂಚಿಕೆ – ೭ ~~~~~~~~~~~~~~~~~~~~~~

ಚಿತ್ರಕೂಟಕೆ

ಕಬ್ಬಿಗಂ ಗಿರಿವನ ಪ್ರೇಮ ಸಾದೃಶ್ಯದಿಂ ಸಮರಸಂ ಸಮಹೃದಯಿ ರಾಮರಸಋಷಿಗೆ.

ಕವಿ ಕುವೆಂಪು ಅವರಿಗೆ ಗಿರಿವನಪ್ರಿಯ ರಾಮನನ್ನು ಕಾಡಿನಲ್ಲಿ ನೋಡಲು ಕೈಕೆ, ಭರತರಿಗಿಂತ ಎರಡರಷ್ಟು ಕಾತರತೆಯುಂಟಾಗಿದೆ. ಅದು ರಾಮನನ್ನು ಸಾಕೇತಪುರಿಗೆ ಕರೆತರಲು ಅಲ್ಲ; ಕಿರೀಟ ಧಾರಣೆಗಾಗಿ ಹಿಂದಿರುಗಿ ಬರುವಂತೆ ಮಾಡಲು ಅಲ್ಲ. ಅದು ಲಕ್ಷ್ಮಣನಂತೆ ರಾಮ ಸೀತೆಯ ಪುಣ್ಯ ಸಂಗಕ್ಕಾಗಿಯೂ, ಪರ್ವತ ಶೃಂಗಗಳಲ್ಲಿ, ವನರಂಗದಲ್ಲಿ ಅವರೊಡನೆ ತಿರುಗಾಡಲು ಉಂಟಾಗಿರುವ ಆಸಕ್ತಿ!
~~~~~~~~~~~~~~~~~~~~~~

ಕುವೆಂಪು ಹೀಗೆ ಹೇಳಿಕೊಂಡಿದ್ದಾರೆ: ಕವಿಯಾದ ನನಗೆ ಮಲೆಯನಾಡು ತಾಯಿಮನೆ. ಕಾಡು ದೇವರ ಬೀಡು. ಗಿರಿಯ ಮುಡಿ ಶಿವನ ಗುಡಿ. ನನ್ನ ಮೊದಲಿನ ಮನದನ್ನೆ ಬನದ ಹೆಣ್ಣು.

ಕವಿ ರಾಮಚಂದ್ರ ಮತ್ತು ಈ ಸೀತಾಕಲಾಕಾಂತೆ ನಿತ್ಯ ವನವಾಸಿಗಳಾಗಿರುವುದರಿಂದ – ಈ ಕವಿಯಾದ ನಾನು, ಗಿರಿವನ ಪ್ರೇಮದ ಸಾದೃಶ್ಯದಿಂದ ರಾಮರಸ ಋಷಿಗೆ ಸಮರಸನು, ಸಮಹೃದಯಿಯು ಆಗಿರುವೆನು. ಸೀತಾರಮಣನೊಡನೆ ವನದೇಶದ ಮಾಧುರ್ಯವನ್ನು ಸವಿಯುವೆನು. ಅವರೊಡನೆ ಸಂಚರಿಸುತ್ತ ಕಾನನದ ಪ್ರತಿಭಾಸ್ಫೂರ್ತಿಯನ್ನು ಪಾನಮಾಡುತ್ತ ನನ್ನನ್ನೇ ನಾನು ಮರೆಯುವೆನು. ಹೃದಯದ ನಾಲಗೆಗೆ ರಸದ ಮಧುತೃಪ್ತಿ ದೊರೆಯುವಂತೆ ಪ್ರಕೃತಿಯಾತ್ರೆಯನ್ನು ಕೈಗೊಳ್ಳುವೆನು. ಕಲೆಯ ವಧುವು ಪತಿಯಿರಲು ಸುಮಂಗಲಿ. ನನ್ನ ಕೃತಿ ಕನ್ಯೆಯು – ಪುಣ್ಯಾತ್ಮ ರಾಮನಿರಲು ಸೀತೆಯಂತೆ ಪೂಜ್ಯಳು, ಮಂಗಳಳು!

ರೆಕ್ಕೆಗೆ ರಥದ ಹಂಗೇಕೆ? ಕಲ್ಪನೆಗೆ ಪಥದ ಋಣವೇಕೆ? ಕಾವ್ಯಯಾತ್ರೆಗೆ ತೇರು ಕುದುರೆಗಳ ಸಹಾಯಬೇಕೆ? ಪ್ರತಿಭೆಯ ವಿಮಾನಯಾನಕ್ಕೆ ತಗ್ಗು ದಿಣ್ಣೆಗಳ ತಡೆ ಇರುವುದೆ? ದುರ್ದಮ್ಯ, ನಿಸ್ಸೀಮ, ವಿಶ್ವಸಂಚರ ಶಕ್ತಿಯುಕ್ತನಾದ ಕವಿ ಗರುಡನ ಮಹಾ ರೆಕ್ಕೆಗಳ ಅಲುಗಾಟಕ್ಕೆ ಪರಿವಾರದ, ಸಂಸಾರದ ಭಾರ ಬಂಧನವಿರುವುದೆ? ಭರತಾದಿಗಳಿಗೆ ರಥ ಪಥ ಕುದುರೆ ಆನೆಗಳ ನೆರವು ಇರಲಿ. ಅವುಗಳು ಕವಿ ವಿಹಂಗಮಕ್ಕೆ ಬೇಕಾಗಿಲ್ಲ. ಅವರು ಅನಂತರ ಬರಲಿ. ನಾನು ಮೊದಲೇ ಹೋಗಿರುತ್ತೇನೆ.

ವನ ಪ್ರದೇಶವು ರಮಣೀಯ ವೃಕ್ಷ ಸಂಕುಲ ನೆಲೆಯ ಶೋಭೆ ಹೊಂದಿದೆ. ಮನೋಹರವಾದ ಹೂ ಚಿಗುರುಗಳು ರಾರಾಜಿಸುವ ದಿವ್ಯ ಸೌಂದರ್ಯದಿಂದ, ಕೋಟಿ ಪಕ್ಷಿಗಳ ಕಲಕಲ ತುಮುಲ ಮಾಧುರ್ಯದಿಂದ ಕೂಡಿದೆ. ಪುಣ್ಯ ಗಣ್ಯ ಗಂಗಾನದಿಯು ಕಣಿವೆಗಳಲ್ಲಿ ಕ್ರೀಡಾ ಲೋಲುಪತೆಯಿಂದ ನೀಲ ಲೀಲಾಶೀಲ ಜಲದ ದೊಡ್ಡ ಅಲೆಗಳಿಂದ ನಲಿಯುತ್ತಿದೆ. ಶ್ರೀರಾಮನ ಪರ್ಣಶಾಲೆಯ ಪೂಜ್ಯ ಸನ್ನಿಧಿಯ ಸಂಗದಿಂದ ಮಹಿಮೆಯ ಸ್ಥಳವಾಗಿ ಚಿತ್ರಕೂಟಾದ್ರಿ ಶೋಭಿಸುತ್ತಿದೆ. ಮನೋಹರವಾಗಿ ಕಣ್ಣನ್ನು ಸೆಳೆಯುತ್ತಿದೆ.

ಮೇಘದಿಂದ ಆವರಿಸಿದ ಆ ಮಹಾ ಶೃಂಗವು ಶಿವಲಿಂಗದಂತೆ ಕಾಣುತ್ತಿದೆ. ಅದು ಕವಿಯ ಸರ್ವೇಂದ್ರಿಯಗಳಿಗೆ ಮತ್ತು ಆತ್ಮಕ್ಕೆ ಮಧುರ ಮಧುವಿನ ಆಕರದಂತೆ ಹಾಗು ರಸಾನುಭೂತಿಯನ್ನುಂಟು ಮಾಡುವ ನದಿಯಂತಿದೆ!

ದಾರಿಯೆಡೆ ರಾಮನೊಟ್ಟಿದ ತರಗೆಲೆಯು ಮೇಲೆ ಸೀತೆ ದೊಪ್ಪನೆ ಕುಳಿತ್ತುಸ್ಸೆನುತ್ತೊರಗಿದಳ್ ಮರಕೆ.

ಸೀತೆಯು ಗಂಗಾನದಿಯನ್ನು ದೋಣಿಯಲ್ಲಿ ದಾಟುತ್ತಿರುವಾಗ ಗಂಗೆಯನ್ನು ಹೀಗೆ ಪ್ರಾರ್ಥಿಸಿದಳು:

'ದೇವಿ ಗಂಗೆಯೆ, ಕೈ ಮುಗಿದು ಕೇಳಿಕೊಳ್ಳುತ್ತೇನೆ, ಕ್ಷೇಮದಿಂದ ಹಿಂದಿರುಗುವಂತೆ ಪ್ರೇಮದಿಂದ ಆಶೀರ್ವದಿಸು. ಓ ತಾಯಿಯೆ, ಕರುಣೆಯಿಂದ ನನ್ನ ಜೀವೇಶನನ್ನು ಕಾಪಾಡು. ಹಿಂತಿರುಗಿ ಬಂದ ಮೇಲೆ ನಿನಗೆ ಉತ್ತಮವು, ತೃಪ್ತಿಯನ್ನುಂಟು ಮಾಡುವಂತಹದು ಆದ ಸಹಸ್ರ ಪಾತ್ರೆಗಳ ಮದ್ಯ, ಮಾಂಸದಿಂದ ಕೂಡಿದ ಅನ್ನವನ್ನು ನೈವೇದ್ಯವಾಗಿ ನೀಡುತ್ತೇನೆ.

ಗಂಗಾನದಿಯನ್ನು ದಾಟಿ ದಕ್ಷಿಣದ ಮರಳಿನ ದಡದ ದಟ್ಟವಾದ ಕಾಡಿಗೆ ಬರಲು, ಅವರು ದೋಣಿಯಿಂದ ಇಳಿದರು. ಬೇಡರ ಒಡೆಯ ಗುಹನನ್ನು ಬೀಳ್ಕೊಟ್ಟರು. ಹಿಂದೆ ಸೋದರನಿದ್ದು, ನಡುವೆ ಸತಿ ಬರುತ್ತಿರಲು – ಇಳಾ ಪೃಥ್ವಿಯ ವಲ್ಲಭ, ಮೇಘಶ್ಯಾಮಲ ವಿಶಾಲದೇಹಿ, ಭೀಷಣ ಧನುಷ್ಪಾಣಿ ರಾಮಚಂದ್ರನು ಕೆಳಗಿನ ದಾರಿಯಲ್ಲಿ ತಾನು ಮುಂದಾಗಿ ನಡೆದನು.

ಮುಂದೆ ಹುಬ್ಬುಗಂಟಿಕ್ಕಿದಂತೆ ಗಿರಿಗುಹೆಗಳು ಸೊಕ್ಕಿನಿಂದಿದ್ದವು. ಆ ಮಹಾ ಅರಣ್ಯವು ಜನರಹಿತವಾಗಿ ಕರ್ಕಶವಾಗಿ ಭಯಂಕರವಾದುದಾಗಿತ್ತು. ಅದು ದಶರಥನ ಸೊಸೆಯ ಕಣ್ಣಿಗೆ ಎದೆಗೆ ವ್ಯಸನವನ್ನುಂಟು ಮಾಡಿತು. ಜನಕಸುತೆಯು ಸುತ್ತಲೂ ಬೆಚ್ಚಿ ನೋಡುತ್ತ ಮತ್ತೆ ಪತಿಯ ಬೆನ್ನಿನ ತುಂಬು ಬತ್ತಳಿಕೆಯನ್ನು ನೋಡಿ ಭಯವನ್ನು ದೂರಕ್ಕೆ ತಳ್ಳಿದಳು. ರಘೂದ್ವಹನ ಎದೆಯ ಹಣ್ಣಾಗಲಿರುವ ಒಂದು ಸಿರಿಹೊಂಗನಸು ಇಂದು ತನ್ನ ಇಷ್ಟದ ಆದರ್ಶವನ್ನು ಪೂಜಿಸಲು ಓಲೈಸಿ ಬೆಂಬಲಿಸುತ್ತಿದೆ ಎಂಬಂತೆ ಸಾಗಿದಳು.

ಲಕ್ಷ್ಮಣನ ಧರ್ಮವಾತ್ಸಲ್ಯವಾದ ತಾನು, ಅವನಿಗೆ ದಾರಿ ತೋರುತ್ತ ಮುಂದೆ ನಡೆಯುವಂತೆ ದಟ್ಟವಾದ ಕಾಡಿನ ಹಸುರು ನೆರಳಿನಲ್ಲಿ ಹೆಜ್ಜೆ ಹೆಜ್ಜೆಯನಿಡುತ್ತ ಸಾಗಿದಳು. ಅವಳು ನಡೆಯುತ್ತಿದ್ದ ರೀತಿಯು, ರಸಾವೇಶ ಇಳಿದ ಸಮಯದ ಕವಿಯ ರಚನೆಯ ಉದಾಸೀನದ ವೇಗದಲ್ಲಿತ್ತು.

ರಘುನಂದನನು ಸತಿಗೆ ದಾರಿನಡೆಯುವ ಬಳಲಿಕೆಯು ಅವಳ ಮನಸ್ಸನ್ನು ಪ್ರವೇಶಿಸದ ರೀತಿಯಲ್ಲಿ ಮರ, ಹೂ, ಪಕ್ಷಿ, ಮೃಗಗಳನ್ನು ನಾನಾ ವಿಚಿತ್ರಗಳನ್ನು ತೋರಿಸುತ್ತಿದ್ದನು. ಅವುಗಳನ್ನು ವರ್ಣಿಸುತ್ತ, ವಿವರಿಸುತ್ತ ನಡೆಯುತ್ತಿದ್ದನು. ಆಗ್ಗೆ ಹೊತ್ತು ಬಾನಿನ ನೆತ್ತಿಗೆ ಏರಿತು. ವಿದೇಹರಾಜನ ಕುಮಾರಿಯು ಬಿಸಿಲ ಝಳಕ್ಕೆ ಮೈ ಸುಕ್ಕಿದಂತಾಗಿ ದಣಿದು ನಿಟ್ಟುಸಿರುಬಿಟ್ಟಳು. ಕೆಂಪೇರಿದ ಮುಖದ ಸೌಂದರ್ಯವು ಹೆಚ್ಚುವಂತೆ ಹಣೆಯ ಮೇಲೆ ಬೆವರಹನಿ ಮೂಡಿತು. ಅವಳ ಬಿಳಿಯ ಶರೀರಕ್ಕೆ ಕಾಡಿನ ಕಣ್ಣಿನ ದೃಷ್ಟಿ ಸೋಂಕದ ರೀತಿಯಲ್ಲಿ ಅವಳ ಮುಂಗುರುಳು ನಾಂದು ಅಂಟಿಕೊಂಡಿತ್ತು. ಅದು ಅವಳಿಗೆ ಕರಿಮಸಿಯ ಚಿತ್ತಾರವನ್ನು ಮೆತ್ತಿ ಬರೆದಂತಿತ್ತು.

ಅದನ್ನು ನೋಡಿದ ರಾಮಚಂದ್ರನ ಮನಸ್ಸು ಕರಗಿ ಕಣ್ಣುಗಳಲ್ಲಿ ನೀರಾಗಿ ಹರಿಯಿತು. ಆ ಕರುಣ ದೃಶ್ಯವನ್ನು ನೋಡಿ ನಿರುಪಮ ಬಲಾನ್ವಿತ ಲಕ್ಷ್ಮಣನಿಗೆ ನಿರ್ಬಲತೆಯುಂಟಾಯಿತು. ಹಾದಿಯ ಪಕ್ಕದಲ್ಲಿ ರಾಮನು ಒಟ್ಟುಗೂಡಿಸಿದ ತರಗೆಲೆಯ ಮೇಲೆ ಸೀತೆಯು ದೊಪ್ಪನೆ ಉಸ್ಸೆಂದು ಕುಳಿತು ಮರಕ್ಕೆ ಒರಗಿಕೊಂಡಳು. ಆಯಾಸದಿಂದ ಎಚ್ಚರವು ಮೂರ್ಛೆಯೊಳಗೆ ಮುಳುಗಿತೊ ಎಂಬಂತೆ ಅವಳ ಕಣ್ಣುಗಳು ಮುಚ್ಚಿದವು.

ಕೆಚ್ಚೆದೆಯ ವೀರರಿಬ್ಬರು ಸ್ವಾಧೀನ ಕಳೆದುಕೊಂಡವರಂತೆ ಸ್ತಬ್ಧರಾದರು. ಬಿಟ್ಟಕಣ್ಣು ಬಿಟ್ಟ ಹಾಗೆ ತಣ್ಣನೆ ಜೋಮು ಹಿಡಿದಂತೆ ಕುಳಿತರು! ತರುಣಿಯು ಬಾಯಾರಿಕೆಯನ್ನು ಸನ್ನೆಯಿಂದ ಸೂಚಿಸುತ್ತ ನರಳಿದಳು. ತಕ್ಷಣ ಊರ್ಮಿಳಾಸ್ವಾಮಿಯು ಬೇಗನೆ ಓಡಿದನು. ಕಾಡನ್ನು ನುಗ್ಗಿ, ಕಣಿವೆ ಇಳಿದು ನೀರಿನ ಹರಿವು ಇರುವ ಕಡೆಗೆ ಸಾಗಿದನು.

ದಾಶರಥಿಯು ಚಿಗುರಿನ ಗೊಂಚಲನ್ನು ಬೀಸಣಿಕೆಯಾಗಿಸಿಕೊಂಡು ಮೆಲ್ಲನೆ ಗಾಳಿ ಬೀಸಿದನು. ತನ್ನ ಸುಂದರ ಸ್ತ್ರೀಯನ್ನು ಸವಿಮಾತಿನಿಂದ ಸಂತೈಸಿದನು. ಅಷ್ಟರಲ್ಲಿ ಎಲೆಯನ್ನು ದೊನ್ನೆಯಾಗಿಸಿ, ಅದರಲ್ಲಿ ಮೈದುನ ತಣ್ಣೀರನ್ನು ತಂದು ನೀಡಿದನು. ಸೀತೆಯು ಅದನ್ನು ಕುಡಿದು, ಶುಶ್ರೂಷೆಯಿಂದ ಸುಧಾರಿಸಿಕೊಂಡು ರಾಮನ ಎದೆಯಲ್ಲಿ ಸೊಗಸಿದಳು.

ಅನಂತರ ಆ ಮೂವರು ಅಲ್ಲಿಂದ ನಿಧಾನವಾಗಿ ನಡೆದರು. ಆಗ ಅವರಿಗೆ ಮುಂದೆ ವನರಮ್ಯ ಗಿರಿಪಂಕ್ತಿಯಿಂದ ಸುತ್ತುವರಿಯಲ್ಪಟ್ಟು ರವಿಯ ಉಜ್ವಲ ಬೆಳಕಿನಲ್ಲಿ ನೀರಿನ ಚಂಚಲತೆಯಿಂದ ಮಿಂಚುತ್ತ; ಕಮಲ ಸಮೂಹಗಳಿಂದ ಕಂಗೊಳಿಸುವ ಸರೋವರವು ಕಂಡಿತು. ಅಲ್ಲಿ ಕೈಕಾಲು ಮುಖಗಳನ್ನು ತೊಳೆದುಕೊಂಡರು. ಗುಹನು ಕೊಟ್ಟಿದ್ದ ಬುತ್ತಿಯನ್ನು ಉಂಡರು. ಸರೋವರ ತೀರದ, ಕರಿನೆರಳ ಹಿರಿಕೊಡೆ ಹಿಡಿದ ಹೆಮ್ಮರದ ಬುಡದಲ್ಲಿ, ಎಳಗರುಕೆಯ ಹಾಸಿನ ಮೇಲೆ, ಭೂಮಿತಾಯಿಯ ತಣ್ಣನೆಯ ಮಡಿಲಲ್ಲಿ ಆಯಾಸ ಪರಿಹರಿಸಿಕೊಳ್ಳಲು ಮಲಗಿದರು.

ತಾವರೆಯ ಹೂವಿನ ಎಸಳುಗಳನ್ನು ಕೆದರಿ ಆ ಹೊನ್ನಿನ ನಿರಿಗೆಯೊಳಗಿನ ಪರಿಮಳವನ್ನು ಸೂರೆಗೊಂಡು ದುಂಬಿಗಳು ಸರಸವಾಡಿದವು. ಅವು ನರುಗಂಪಿನ ಹೊರೆಹೊತ್ತು ಮಂದ ಮಂದವಾಗಿ ತೀಡುವ ಎಳೆಗಾಳಿಯ ಉಸಿರನ್ನು ಒಲ್ಮೆಯಿಂದ ಅವರತ್ತ ಬೀಸಿದವು. ಅವು ಹಿಂದು ಹಿಂಡಾಗಿ ಮಕರಂದವನ್ನು ಸವಿಯಲೆಂದು ತೇರುಗೊಂಡು ಹೂವಿನ ಸಂತೆಗೆ ನೆರೆದು ಮೊರೆದವು. ಅವುಗಳಲ್ಲಿ ನಸರಿ, ತುಡುಮೆ, ಹೆಜ್ಜೇನಿನ ನೊಣ ಮತ್ತು ಅಲರ್ವಕ್ಕಿ(ಹೂವಿನ ರಸವನ್ನು ಕುಡಿದು ಜೀವಿಸುವ ಹಕ್ಕಿ)ಗಳಿದ್ದವು. ಅವುಗಳು ಹಾಗೂ ಕ್ರೌಂಚಪಕ್ಷಿ ಹಂಸಪಕ್ಷಿಗಳು ಕಲರವಗೈದವು. ಆ ಸರೋವರ ಶ್ರೀಯು ತೆರೆಕೈಗಳಿಂದ ತೀರವನ್ನು ತಟ್ಟುತ್ತ ಜೋಗುಳವನ್ನು ಉಲಿದು

ಹಾಡಿತು; ಚಪ್ಪಾಳೆಯಿಕ್ಕಿತು. ಆ ಮೂವರು ಶ್ರೀಮಂತರನ್ನು ನಿದ್ದೆಯ ತೊಟ್ಟಿಲಲ್ಲಿಟ್ಟು ಮುದ್ದಾಡಿತು.

ಜೀರ್ದುಂಬಿಗಳು ಚೀರಿಡಲು ತೊಡಗಿದುವು. ಕಾಡನ್ನು ಒಮ್ಮೆಲೇ ನುಂಗಿದಂತೆ ಮಬ್ಬು ದಟ್ಟೈಸಿತು. ಹಗಲು ಸಂಜೆಯಾಯಿತು. ಕಾಳ ಸರ್ಪಿಣಿಯಂತೆ ಕಪ್ಪನೆಯ ಇರುಳು ಇಳಿಯಿತು. ಮರದಲೆಗಳ ಎಲೆಗೋಡೆಯ ನಡುನಡುವೆ ತಾರೆಗಳು ಮಿಣುಮಿಣುಕಿ ತೋರಿ ಮರೆಯಾದವು. ಅವು ಇನ್ನೊಮ್ಮೆ ಬೇರೊಂದು ಸ್ಥಳದಲ್ಲಿ ಮಿನುಗಿ, ಮಿಣುಮಿಣುಕಿ ಮತ್ತೆ ಮರೆಯಾಗಿ ಹೋದವು. ಚಿಕ್ಕಿಗಳನ್ನು ಅಣಕಿಸುವಂತೆ ಮಿಂಚುಹುಳುಗಳ ಸೇನೆ ಮೆರೆದು ಕತ್ತಲೆಗೆ ಮತ್ತು ನೋಡುವವರಿಗೆ ಕೋಟಿ ಕೋಟಿಯ ಕಿಡಿಯ ರೋಮಾಂಚನವನ್ನುಂಟು ಮಾಡಿದವು.

ಹಗಲ ಜಗತ್ತಿನ ಶಬ್ದವು ಇಲ್ಲವಾಯಿತು. ನಿಶ್ಯಬ್ದವು ಶವವಾಯಿತು. ಒಮ್ಮೊಮ್ಮೆ ನಿಶ್ಯಬ್ದದ ಕಗ್ಗಲ್ಲಿಗೆ ಉಳಿ ಏಟನ್ನು ಕೊಟ್ಟಂತೆ – 'ಗೂ' ಎಂದು ಗೂಬೆಯು ದೆವ್ವದನಿಯಲ್ಲಿ ಕೂಗಿತು. ಕ್ರೂರಮೃಗಗಳು ಊಳಿಡುತ್ತಿದ್ದವು. ಅದು ಸದ್ದು ಹದ್ದುಗಳು ಶಬ್ದವಿಲ್ಲದ ಸತ್ತರಾತ್ರಿಯ ಮೈಯ ಮಾಂಸವನ್ನು ಮುದ್ದೆ ಮುದ್ದೆಯಾಗಿ ಕಿತ್ತೆಳೆಯುವಂತಿತ್ತು.

ಅಣ್ಣ ರಾಮಚಂದ್ರನು ನಟ್ಟನಡುರಾತ್ರಿ ಸೌಮಿತ್ರಿಯನ್ನು ಕರೆದು ಹೇಳಿದನು:

'ತಮ್ಮ, ಈ ರಾತ್ರಿ ಕಳೆದು ಅಯೋಧ್ಯೆಗೆ ಹಿಂತಿರುಗು. ಊರ್ಮಿಳೆಯು ನಿನ್ನನ್ನೇ ನೆನೆದು ಗೋಳಿಡುತ್ತಿರುವಂತೆ ನಾನು ಕನಸುಕಂಡೆ.'

'ಅಣ್ಣ, ಕಾಂತೆ ಊರ್ಮಿಳೆ ತಪಸ್ವಿನಿ. ನಿನ್ನೊಡನೆ ಬರುವ ಮೊದಲು ಆಕೆಯ ಕೃಪೆಯನ್ನು ಪಡೆದು ಬಂದೆನು. ಆ ನಿಮಿತ್ತವಾಗಿ ನಿನಗೆ ಸ್ವಲ್ಪವೂ ಚಿಂತೆ ಬೇಡ.'

ಸುಮಿತ್ರಾತ್ಮಜನು ರಾಮನ ಅಭಿಪ್ರಾಯವನ್ನು ಅರಿತು ಶೋಕ ಗದ್ಗದನಾಗಿ ಅಣ್ಣನ ಪಾದವನ್ನು ಹಿಡಿದನು. ಮರುಮಾತಿಗೆ ಎಡೆಯಿಲ್ಲದಂತೆ ಒಂದು ಮಾರುತ್ತರದ ಬಡಿಗೆ ಬೀಳುವಂತೆ ನೆಲಕ್ಕೆ ದಿಂಡುರುಳಿ, ನುಡಿದನು:

'ನೀನಿಲ್ಲದಂತೆ ಅತ್ತಿಗೆಗೆ ಹೇಗೆ ಬಾಳು ಇಲ್ಲವೊ ಹಾಗೆಯೇ ನನ್ನ ಬಾಳು. ನಿನ್ನನ್ನು ಬಿಟ್ಟಂದು ನೀರು ತೊರೆದ ಮೀನಿನಂತೆ ಗಳಿಗೆಯಲ್ಲಿ ಇಲ್ಲವಾಗುತ್ತದೆ! ತಂದೆ ತಾಯಿಯರನ್ನು ನೋಡುವ ಮಾತಿರಲಿ, ನೀನು ಮುಂದೆ ಇರದಿದ್ದರೆ ನಾನು ಸ್ವರ್ಗವನ್ನು ಪ್ರವೇಶಿಸಲು ಇಚ್ಛಿಸುವುದಿಲ್ಲ!'

ನಾಳೆಯೆ ಬರ್ಪನತಿಥಿ ನಾರಾಯಣಂ, ಹಾರೀತ! ಧನ್ಯಮಾಯ್ತೆಮ್ಮಾಶ್ರಮಂ

ಆ ಪುಣ್ಯ ರಾತ್ರಿಯಲ್ಲಿ ಋಷಿ ಭರಧ್ವಾಜರು ಸಮಾಧಿಯೊಳಿದ್ದರು. ಅವರು ಸ್ವರ್ಗದ ಜ್ಯೋತಿಯೊಂದು ಪೃಥ್ವಿಗೆ ಅವತರಿಸಿ ಬಂದು, ತನ್ನ ಆಶ್ರಮವನ್ನು ಪ್ರವೇಶಿಸುತ್ತಿರುವುದನ್ನು ಕಂಡರು. ಶಿಷ್ಯ ಹಾರೀತನನ್ನು ಕರೆದು ಹೇಳಿದರು:

'ಹಾರೀತನೆ, ನಾಳೆಯೆ ಅತಿಥಿ ನಾರಾಯಣ ಬರುವನು. ನಮ್ಮ ಆಶ್ರಮವು ಧನ್ಯವಾಯಿತು. ನನ್ನ ತಪಕ್ಕೆ ಪುರುಷೋತ್ತಮನ ಆಗಮನದಿಂದ ಪರಮ ಪುರುಷಾರ್ಥ ಸಿದ್ಧಿಸಿತು. ನೀನು ಅವನ ಸುಸ್ವಾಗತಕ್ಕೆ ನಮ್ಮ ಈ ತಪೋವನವನ್ನು ಸಿದ್ಧಪಡಿಸು. ನಾಳೆ ಬೆಳಗಿನಿಂದ ಸಂಜೆಯ ತನಕ ಕಾಯ್ದು ಪೂಜ್ಯ ಹಿರಿಯ ಅತಿಥಿಯನ್ನು ಎದುರುಗೊಂಡು ಪೂಜಿಸಿ ಕರೆದು ತಾ.'

ಬೆಳಗಾಗಲು ಉಂಟಾದ ಆಶ್ರಮದ ಶಾಂತಿಯನ್ನು, ಭ್ರಾಂತಿರಹಿತ ಆನಂದಶೀಲ ಕಾನನ ಶಾಂತಿಯನ್ನು, ಆದರ್ಶ ಸಾಧನೆಯ ಹರ್ಷದ ಉಜ್ವಲ ಶಾಂತಿಯನ್ನು ಏನೆಂದು ವರ್ಣಿಸುವುದು? ಅದು ಚಿಂತೆಗೆ ಅತೀತವಾದ ಸೃಷ್ಟಿಯ ರಹಸ್ಯವನ್ನು ಚಿಂತಿಸುವ, ಸಿದ್ಧಾಂತಗೊಳಿಸಿಯೂ ಸಂದೇಹಗೊಂಡು ಅದನ್ನು ಮತ್ತೊಂದರಿಂದ ತಿದ್ದುವ, ಮತ್ತೆ ಮುರಿದು ಅದನ್ನೆ ಮತ್ತೊಂದರಿಂದ ತಿದ್ದುವ ಬುದ್ಧಿ ತತ್ತರಿಸುವವರೆಗೂ ಅರಿತುಕೊಂಡು ಮುಂದುವರಿಯುವ ಸಾಹಸದ ಮನಶ್ಯಾಂತಿ! ಅದು ಸೋತು ಗೆಲ್ಲುವ ಮತ್ತೆ ಗೆದ್ದು ಸೋಲುವ ಶಾಂತಿ; ಧ್ಯಾನ ಜಪಶಾಂತಿ.

ಹೇಮಧೂಮದ ಮತ್ತು ಸಾಮಗಾನದ ವೇದಘೋಷದ ಚಿರ ಪವಿತ್ರತಾ ಶಾಂತಿಯೆ, ಓ ಋಷ್ಯಾಶ್ರಮದ ಶಾಂತಿಯೆ ನಿನಗೆ ನಮೋ.

ಆ ಪರ್ಣಶಾಲೆಯಲ್ಲಿ ಹರಿಣ ಚರಣಗಳು ಮೆಟ್ಟಿ ತುಳಿಯಲ್ಪಟ್ಟ ಹಸಿರು ಹುಲ್ಲಿನ ಪಚ್ಚೆ ಸೊಂಪಿನ ವೇದಿಕೆಯನ್ನು ಏರಿ ಹೊನ್ನ ಚುಕ್ಕಿಯ ಜಿಂಕೆ ಮರಿಗಳು ಚಿಮ್ಮಿ ನೆಗೆಯುತ್ತಿವೆ. ಹಸುರು ಹೂ ಹಣ್ಣು ಕಾಯಿ ಹೊತ್ತ ಮರಗಳಲ್ಲಿ ನೂರಾರು ವಿವಿಧ ಪಕ್ಷಿಗಳು ಮನೋಹರವಾದ ಧ್ವನಿಯಿಂದ ವರ್ಣ ವರ್ಣ ಸ್ವರ್ಣಮಯ ರಂಗವಲ್ಲಿಯನ್ನು ಇಕ್ಕುತ್ತಿವೆ. ಅದು ಕಿವಿಗೆ ಪ್ರಾಪ್ತವಾದ ವಸಂತಮಾಸ; ಕರ್ಣಚೈತ್ರ!

ಕೊಡೆಗೆಚ್ಚಲಿನ ಆಕಳುಗಳು ನೆಳಲ ತಂಪಿನಲ್ಲಿ ಮೇಯುತ್ತಿವೆ. ಅಲ್ಲಿ ಇನ್ನೊಂದು ಮಲಗಿ ಮುದ್ದು ಕರುವನ್ನು ನೆಕ್ಕಿ ಜೊಲ್ಲ ಪ್ರೀತಿಯನ್ನು ಸೂಸಿ ಸಂತೋಷಪಡುತ್ತಿದೆ. ಗೂಳಿಯೊಂದು ಕೆಮ್ಮಣ್ಣು ಹುತ್ತವನ್ನು ಕೋಡಿನಿಂದ ತಿವಿದು ಆಡುತ್ತಿದೆ. ಅದರ ಮುಖಕ್ಕೆ ಮತ್ತು ಕೊಂಬುಗಳಿಗೆ ಓಕುಳಿರಂಗು ಮೆತ್ತಿಕೊಂಡಿದೆ. ಕೋತಿಗಳು ತರಿತರಿದು ನೆಲಕ್ಕೆ ಎಸೆಯುವ ಹಣ್ಣುಗಳನ್ನು ಮೊಲವಿಂಡು ಮೇಯುತ್ತಿವೆ. ಕಾಲುವೆಯ ಪಾತಿಯಲ್ಲಿ ಹರಿಯುವ ನೀರಿಗೆ ಕೊಕ್ಕಿಟ್ಟು ತಕ್ಷಣ ಬಾನಿಗೆ ಮೊಗವೆತ್ತುತ್ತ, ಮತ್ತೆ ಮತ್ತೆ ಅದೇ ರೀತಿ ನೀರು ಕುಡಿಯುವ ಆಸಕ್ತಿಯಿಂದ ನವಿಲುಗಳು ನಲಿಯುತ್ತಿವೆ. ಅವು ಹಾಗೆ ಕುಡಿಯುವಾಗ ಮೂರ್ತಿಗೊಂಡಂತೆ ನಿಂತಾಗ ಕಣ್ಣಿಗೆ ಸುಂದರವಾಗಿ ಕಾಣುತ್ತಿವೆ. ಅವು ನೀಳವಾದ ತೋಕೆಯ ಚವರಿಯಿಂದ ನೆಲದಲ್ಲಿ ಹತ್ತಿಹರಡಿಕೊಂಡಿರುವ ಹಸುರು ಮೆತ್ತೆಯನ್ನು ಗುಡಿಸುತ್ತಿವೆ.

ಅದೋ ಅಲ್ಲಿ, ಹರಿಣಿಯ ಕೊರಳನ್ನು ಹಿಡಿದು, ಸರಸಕ್ಕೆ ಜೋಲುತ್ತ ತಾಯಿ ಜಿಂಕೆಯಲ್ಲಿ ಪ್ರೀತಿಯಿಂದ ಹಾಲು ಉಕ್ಕುವಂತೆ ಕಾಡಿ ಪೀಡಿಸುವ ಮುನಿಬಾಲಕನಿದ್ದಾನೆ! ಇನ್ನೋರ್ವ ಮುನಿಕುಮಾರನು ಗಂಡು ಜಿಂಕೆಮರಿಯನ್ನು ಪುಟ್ಟ ತೋಳಿಂದ ಅಪ್ಪಿಸುತ್ತಿಕೊಂಡು – ಅದರ ತಾಯಿಯು ತನ್ನ ಮೈಯನ್ನು ಗಂಡು ಜಿಂಕೆಯ ಕೊಂಬುಗಳಿಂದ ತುರಿಸಿಕೊಳ್ಳುವಲ್ಲಿಗೆ ಹೋದನು. ಅಲ್ಲಿ ಮರಿಯ ಬಾಯಿಗೆ ತಾಯಿಯ ಕೆಚ್ಚಲನ್ನು ಕೊಟ್ಟು, ಹಾಲು ಕುಡಿಯುವ ಸುಖದ ಪುಣ್ಯಕ್ಕೆ ವ್ರತಧಾರಿಯಾದನು.

ಮುನಿಪತ್ನಿಯು ಗೋಮಯವನ್ನು ಬಳಿದು, ಉಳಿದುದನ್ನು ಕೈಯಲ್ಲಿಟ್ಟುಕೊಂಡು ಇಂಗುದೀ ವೃಕ್ಷದ ಮರದ ಬುಡಕ್ಕೆ ಎಸೆಯಲು ಬಂದಳು. ಅವಳು ಜಿಂಕೆಯ ಮರಿಗಳೊಡನೆ ಆಡುವ ಎಳೆ ಮಕ್ಕಳನ್ನು ಕಂಡು, ಪ್ರೀತಿ ಉಕ್ಕಿ ಬರಲು ನೋಡುತ್ತ ನಿಂತಳು!

ನಿನ್ನ ಸೌಂದರ್ಯ ಸಾನ್ನಿಧ್ಯಮಿರೆ, ಓ ಪ್ರಕೃತಿ, ಮಿಂಚಿದಪುದಿಂದ್ರಿಯಮತೀಂದ್ರಿಯಕೆ

ಆ ತಪೋವನದ ಅಂಚಿನೊಳಗೊಂದು ನದಿಯು ತೆರೆಯ ಉಗ್ರ ನಾಟ್ಯವಾಡುತ್ತ ದುಮುಕುತ್ತಿದೆ. ಅದು ತನ್ನ ನೊರೆ ಜಡೆಯನ್ನು ಎಂಟು ದಿಕ್ಕುಗಳಿಗೂ ಎಸೆದು ಬೀಸಾಡುತ್ತಿದೆ. ಅದರ ಡಮರುಗ ಘೋಷದ ಓಂ ಕೃತಿಯ ಮೊರೆತಕ್ಕೆ ಪರ್ವತಾರಣ್ಯವು ಪ್ರತಿನಾದವನ್ನು ಮಾಡುತ್ತಿದೆ. ಅದರ ಎರಡು ಪಕ್ಕಗಳಲ್ಲಿ ಒಂದನ್ನೊಂದು ಅಂಟಿಕೊಂಡಂತೆ ವೃಕ್ಷರಾಜಿಯು ಬೆಳೆದು ಮುಗಿಲಿನಲ್ಲಿ ಹಬ್ಬಿ ನಿಂತಿದೆ. ನೆಳಲ ಕತ್ತಲಿಂದ ಹಸಿಗೊಂಡ ಸೂರ್ಯತಾಪವು ಕಪ್ಪಾಗಿದೆ.

ಜಲವು ಆವೇಶದಿಂದ ಬಂಡೆಗಳ ಮೇಲೆ ಬೀಳುವ ಶಬ್ದದಿಂದ, ಹೊಮ್ಮುವ ನೊರೆಯಿಂದ ನಟರಾಜನು ನಾಟ್ಯವಾಡುವಂತೆ ನಟಿಸುವ ಬೆಟ್ಟದ ಹೊಳೆ ಶಿವರೂಪ ತಾಳಿದೆ. ಆ ಶಿವನೆ ನರರೂಪ ತಾಳಿದನೊ ಎಂಬಂತೆ ಅಲ್ಲಿ – ಬ್ರಹ್ಮದಲ್ಲಿ ದೃಢವಾಗಿ ಸೇರಿಕೊಂಡ ಓರ್ವ ತೇಜಸ್ವಿ ಋಷಿ ಧ್ಯಾನಸ್ಥನಾಗಿದ್ದಾನೆ.

ಆ ಗಿರಿ ಹೊಳೆಯ ನಾಭಿಯಿಂದ ಉದ್ಭವಿಸಿದಂತಿದ್ದ ಎದೆ ಶಿರದ ಅವನು ಈಶ್ವರ ಮಹಚ್ಛಾಯೆ ವಿಶ್ವೇಶಮಾಯೆಯಂತಿದ್ದಾನೆ. ಓ ಪ್ರಕೃತಿ ಮಾತೆಯೆ, ಈ ಸೃಷ್ಟಿಯು ನಿನ್ನ ಹಾಲು ಹಸುಳೆ. ತಾಯಿಯೆ ನಿನ್ನ ಸೌಂದರ್ಯ ಸಾನಿಧ್ಯವಿದ್ದರೆ, ಇಂದ್ರಿಯವು ಅತೀಂದ್ರಿಯಕ್ಕೆ ಮಿಂಚಿ ಹರಿಯುತ್ತದೆ. ಜಡಜಗವು ಅಂತರಾತ್ಮದ ಸಿರಿಗೆ ಹೊರಮುಖ ತಾನಾಗಿ ಪ್ರಕಟಗೊಳ್ಳುತ್ತದೆ. ಆ ರಸದ ಮಿಂಚಿನ ಮೀಹದ ಇಂಪಿನಲ್ಲಿ ಚಿತ್ತಚಂಚಲ ವಿಕೃತಿ ಲಯವಾಗುತ್ತದೆ. ಆಗ ದೊರೆಯುವ ತನ್ಮಯತೆಯ ಹೃದಯದ ಹಾಲು ಕಡಲಲ್ಲಿ ನಲಿದು, ಸಚ್ಚಿದಾನಂದ ಶಾಂತಿ ಶಶಿಯು ಮೈದೋರುತ್ತದೆ.

ಮಣ್ಣಿನಿಂದ ಸಿದ್ಧವಾದ ಈ ಶರೀರಭಾವ ಮಾಸಿಹೋಗಿ, ಮನದ ಚಿಂತನೆ ಚಿಗುರಿ ಶುದ್ಧಜ್ಞಾನಮಯನಾದ ಪರಮಾತ್ಮನನ್ನು ಧ್ಯಾನಿಸುವ ಕವಿಮನಸ್ಸು ಗಾಯಿತ್ರಿಯಲ್ಲಿ ಒಂದಾಗುತ್ತದೆ.

ಭೂಲೋಕ, ಭುವರ್ಲೋಕ, ಸ್ವರ್ಗಲೋಕ, ಮಹರ್ಲೋಕ, ಜನಲೋಕ, ತಪೋಲೋಕ ಮತ್ತು ಸತ್ಯಲೋಕವೆಂಬ ಏಳು ಊರ್ಧ್ವಲೋಕಗಳನ್ನು ತುಂಬಿ ತುಳುಕುತ್ತ ಆ ಬ್ರಹ್ಮ ಹೃದಯ ಮಧುವನ್ನು ಹೀರಿ ಸುಖಿಸುತ್ತದೆ. ಯೋಗಲಯ ನಿದ್ರಾಸಮಾಧಿಯನ್ನು ಹೊಂದುತ್ತದೆ !

ಹೇ ಪ್ರಕೃತಿ, ಅಲ್ಲಿ ಎಲ್ಲವೂ ಇದ್ದು, ಏನು ಇಲ್ಲದಂತಿರುವುದು. ಸರ್ವವೂ ಇದ್ದು, ಸರ್ವಶೂನ್ಯತಾಭಾವದ ಸಂಪೂರ್ಣತೆ ಹೊಂದಿರುವುದು. ತಾಯಿಯೆ ನಿನ್ನ ಕೃಪೆಯಿಲ್ಲದಿದ್ದರೆ ಅಂತರಾತ್ಮನಾದ ಪರಮಾತ್ಮನ ದರ್ಶನವೆಲ್ಲಿ ಸಾಧ್ಯ?

ಬ್ರಹ್ಮಚರ್ಯದ ಸಂಯಮದ ತಪಕ್ಕೆ ತಿಳಿಯಲು ಸಾಧ್ಯವಾದ ದಿವ್ಯದರ್ಶನದಿಂದ ಯೋಗಿ ಅವತರಿಸಿ, ವಿದ್ಯುದ್ವಿಮಾನದಲ್ಲಿ ಗಗನಾಂತರದಲ್ಲಿ ಸಂಚರಿಸಿ ಮೆಲ್ಲನೆ ಸಾವಕಾಶವಾಗಿ ಇಳಿಯುವಂತೆ ಋಷಿಯು ಕಣ್ಣೆವೆಗಳನ್ನು ತೆರೆದನು. ಅದು ಚೆಲುವಿನ ಇಳೆಗೆ ಚೆಲುವು ಇಮ್ಮಡಿಸಿದಂತಾಯಿತು!

ಕಾಂತಾರ ಕನ್ಯೆಗೆ ಯಾವುದೊ ದಿವ್ಯ ಯೌವನ ಮೈದೋರಿದಂತಾಯಿತು. ನದಿಯ ಮೊರೆತದಿಂದ ದೇವತಾ ಆಹ್ವಾನದ ಸುಖಾಗಮನ ಕವನಗೀತೆ ಹೊಮ್ಮಿತು. ಗಗನದಿಂದ ಗಾನ ಶಿವಗಂಗೆ ಧುಮ್ಮಿಕಿತು ಎಂಬ ರೀತಿ ಗುಂಪಾದ ಹಕ್ಕಿಗಳು ವೃಂದಛಂದದಿಂದ ಅತಿಶಯವಾಗಿ ಹಾಡಿದವು. ಜಿಂಕೆಗಳು ನರ್ತಿಸಿದುವು. ಆ ಋಷಿ ತಪಸ್ವಿಯು ತನ್ನ ಆತ್ಮರಸ ಸುಖಕ್ಕೆ ಲೋಕವೇ ರಸಶೀಲವಾಗುವುದೆಂದು ಮಂದಹಾಸದಿಂದ ನೋಡುತ್ತಿದ್ದನು. ಆ ಸುಖದಿಂದ ತೋಯ್ದ ಕಣ್ಣುಗಳಿಗೆ ಒಂದು ಅದ್ಭುತವು ಗೋಚರಿಸಿತು. ಆ ಕಾನನದಲ್ಲಿ ತನ್ನ ದೃಷ್ಟಿಪಥ ಹರಿವ ಸ್ವಲ್ಪ ದೂರದಲ್ಲಿ ತನ್ನ ಎದೆಯ ರಸಸುಖವೆ ಹೆಪ್ಪುಗೊಂಡು ಪುರುಷರೂಪ ಪಡೆದಂತೆ; ಇಷ್ಟ ದೇವತೆಯನ್ನು ನೆನೆದ ಧ್ಯಾನದಲ್ಲಿ ತಾನು ಕಂಡ ಕಾಣ್ಕೆಗೆ ಮನುಷ್ಯತೆ ಲಭಿಸಿತೊ ಎಂಬಂತೆ; ತಾನು ಸದಾ ಚಿಂತಿಸುತ್ತಿದ್ದ ಬ್ರಹ್ಮವಸ್ತುವು ಸುಕೃತದ ಸೆರೆಗೆ ಸಿಕ್ಕಿ ತನ್ನ ಕಡೆಗೆ ನಡೆದು ಬರುತ್ತಿದೆಯೊ ಎಂಬಂತೆ; ದೃಷ್ಟಿಯ ತೃಷೆಗೆ ಅಮೃತವನ್ನು ಕರೆಯುತ್ತ ಕಂಗೊಳಿಸಿತೊ ಎಂಬಂತೆ – ಸೀತಾ ಲಕ್ಷ್ಮಣರೊಡನೆ ರಘುರಾಮನ ನೀಲ ಮಂಗಳ ಮನೋಹರ ದೇವರೂಪ ಬಂದಿತು!

ಸಂಜೆಯಾಗುತ್ತಿದ್ದರೂ, ಪ್ರಾತಃಕಾಲವು ಕಾಣಿಸಿಕೊಳ್ಳುವಂತೆ ತಪೋವನವು ನಲಿಯಿತು. ಮುಚ್ಚಿ ಕೈ ಮುಗಿದಿದ್ದ ಕಮಲ ಪುಷ್ಪದ ಹೃದಯವು ತಕ್ಷಣ ವಿಕಾಸಗೊಂಡಿತು. ಮರದ ನೆರಳು ಮಾಯವಾಯಿತು. ಆತ್ಮಕಾಂತಿಗೆ, ಅಪ್ರಾಕೃತಕ್ಕೆ ಎಲ್ಲಿಯ ಛಾಯೆ! ಮಹಿಮೆಗೆ ಮಹಿಮೆ ಅನ್ಯವೆ?

ನಿನ್ನ ತೇಜಕೆ ಸಾಕ್ಷಿ ನಿನ್ನಕ್ಷಿ, ಕಮಲಾಕ್ಷ !

ಹಾರೀತನು ತಾನು ಹಾರೀತನೆಂದುಕೊಳ್ಳದೆ ಆ ತೇಜಸ್ವಿಯನ್ನು ಕಂಡೊಡನೆ ಗುರುತಿಸುತ್ತ ಮೇಲೆದ್ದು ಹೋದನು. ಕೈ ಮುಗಿದು ನಮಸ್ಕರಿಸಿದನು. ಸುಖಾಗಮನವನ್ನು ನುಡಿದನು:

'ಮಹಾಮಹಿಮನೆ, ಗುರು ಭರದ್ವಾಜನಿಗೆ ನಾನು ಶಿಷ್ಯ. ಹಿರಿಯ ಅತಿಥಿಯೋರ್ವನು ಈ ಸ್ಥಳಕ್ಕೆ ಬರುವನು. ಆತನನ್ನು ಸತ್ಕರಿಸು ಎಂದು ನನಗೆ ಆಜ್ಞೆಯಾಗಿದೆ.'

'ಗುರುವೆ, ನೀನು ನನಗೆ ಹಿರಿಯನು. ಆಶೀರ್ವದಿಸು. ದಾಸರಾದ ನಮ್ಮ ಪ್ರಣಾಮಗಳನ್ನು ಸ್ವೀಕರಿಸುವುದೇ ನಮಗೆ ಕೃಪೆ.'

ಎಂದು ಹೇಳುತ್ತ ರಾಮಚಂದ್ರನು, ಆ ಋಷಿಯು ಕಾಲಿಗೆ ಎರಗುವಷ್ಟರಲ್ಲಿ ಹಿಡಿದು ಅಪ್ಪಿಕೊಂಡನು. ಜಟಾಧಾರಿಯಾದ ಮುನಿಯು,

'ವಯಸ್ಸಿಗೇನು ಹಿರಿತನವೆ? ನಿನ್ನ ಆತ್ಮದ ಕಾಂತಿಯು ನಿನ್ನ ಹಿರಿಮೆಯನ್ನು ಸ್ತುತಿಸುತ್ತಿದೆ. ಕಮಲಾಕ್ಷನೆ, ನಿನ್ನ ತೇಜಕ್ಕೆ ನಿನ್ನ ಕಣ್ಣುಗಳೆ ಸಾಕ್ಷಿಯಾಗಿವೆ! ಗುರು ಭರದ್ವಾಜರ ಇಂದಿನ ನಡೆಯ ರೀತಿಯನ್ನು ನೋಡಿ ನನಗೆ ರೋಮಾಂಚನವಾಯಿತು. ಸ್ವಾಮಿಯೆ, ಅವರು ತಾನು ಇದುವರೆಗೂ ಸಾಧಿಸಿದ ಸಾಧನ ತಪದ ಫಲವೆ ಬರುತ್ತಿದೆಯೊ ಎಂಬಂತೆ ಆನಂದಾವೇಶದಿಂದ ತನ್ನನ್ನೆ ತಾನು ಮರೆತಿದ್ದಾರೆ. ಉಪವಾಸ ವ್ರತವನ್ನು ಕೈಕೊಂಡು ನಿನ್ನನ್ನೇ ನಿರೀಕ್ಷಿಸುತ್ತಿದ್ದಾರೆ. ಹಿರಿಯ ಅತಿಥಿಯೆ ಬನ್ನಿ!'

ಎಂದು ಹೇಳುತ್ತ ತನ್ನ ಎದೆಯ ದೇಗುಲಕ್ಕೆ ತನ್ನ ದೇವರನ್ನು ಒಯ್ಯುವ ಭಕ್ತನ ರೀತಿಯಲ್ಲಿ ಬಾಗಿ ನಡೆದನು. ಅವನೊಡನೆ ಮೂವರು ನಡೆದರು.

ಆಶ್ರಮಕ್ಕೆ ಆಶ್ರಮವೆ ಕಣ್ಣಾಯಿತು. ತಾಯಿ ಜಿಂಕೆಯು ಗರಿಕೆ ಮೇಯುತ್ತ, ಕಿವಿಯೆತ್ತಿ ಕಣ್ಣುಗಳನ್ನು ಅರಳಿಸಿ ನಿಂದಿತ್ತು. ಮರಿಜಿಂಕೆಯು ತಾಯಿಯ ಕೆಚ್ಚಲಿನ ಮೆತ್ತನೆಗೆ ಬೆಚ್ಚನೆ ಮುಖವೆತ್ತಿ, ಹಾಲನ್ನು ಸುರಿಸುತ್ತ ಅಮೃತದೂಟವನ್ನು ಮರೆತು, ಅಲುಗಾಡದೆ ಇತ್ತು. ಒಂದು ಗೂಳಿಯು ಹುತ್ತದ ಬುಡವನ್ನು ಮುಂಗಾಲುಗಳಿಂದ ಕೆದರಿ, ಅದರ ಶಿಖರವನ್ನು ಕೋಡುಗಳಿಂದ ಮುರಿದು ಕೋಡುಗಳ ಆಟದಲ್ಲಿ ತೊಡಗಿತ್ತು. ಗುಟುರು ಹಾಕಿ, ಮಲೆತು ಕೆಮ್ಮಣ್ಣು ಮೈಯಾಗಿ ಮೆರೆಯುತ್ತಿದ್ದ ಅದು ಆಶ್ಚರ್ಯಕರವಾಗಿ ಸುಮ್ಮನೆ ನಿಂತಿತ್ತು.

ಓರ್ವ ಬಾಲಕನು ಮರಿಜಿಂಕೆಯನ್ನು ಏರಲು ಒಂದಡಿ ನೆಗೆದು ಕಾಲನ್ನು ಅದರ ಬೆನ್ನಿಗಿಟ್ಟವನು, ನೋಟದಲ್ಲಿಯೆ ಚಿತ್ತ ಸಮರ್ಪಣವಾದಂತೆ ಚಿತ್ರಿತ ರೀತಿಯಲ್ಲಿ ನಿಂತಿದ್ದನು.

ಮುನಿ ತಿಲಕನ ಪರ್ಣಶಾಲೆಗೆ ಕೈಮುಗಿದು ಪ್ರವೇಶಿಸುವಾಗ ದಾಶರಥಿಗೆ – ಹಿಂದೊಮ್ಮೆ ಗೌತಮ ಸತಿಯ ಶಾಪಮೋಚನದ ಸಮಯದಲ್ಲಿ ಆದಂತೆ ಆವೇಶ ಉಂಟಾಯಿತು. ಸೀತೆ ಲಕ್ಷ್ಮಣರೊಡನೆ ನಾಗರಿಕ ಮಾನವರ ಮರ್ಯಾದೆಯಂತೆ ದೀರ್ಘದಂಡ ಪ್ರಣಾಮವನ್ನು ಮಾಡಿದನು.

ಭರದ್ವಾಜರು ವಿಸ್ಮೃತಿಯೋ, ಏನಿದು ಎಂದುಕೊಂಡರು. ಬಿಟ್ಟಕಣ್ಣು, ತೆರೆದ ಬಾಯಿಯಾಗಿ ಮೂಕನಂತೆ ಜಿನಾಸನದ ಮೇಲೆ ಕಡೆದಿಟ್ಟ ಪ್ರತಿಮೆಯಂತೆ ಕುಳಿತರು! ಭಾವವಶರಾಗಿ ನೆಟ್ಟ ಕಣ್ಣಾಲಿಯಲ್ಲಿ ರಾಮನ ನೀಲ ಶರೀರವನ್ನು ನೋಡಿದರು. ಭಕ್ತಿಯ ಕಣ್ಣೀರಿನ ಅಭಿಷೇಕದಿಂದ, ಮೌನಮಂತ್ರದ ಮಹಾ ಮಾನಸಿಕ ಪೂಜೆ ಮಾಡಿದರು. ಆ ತಪೋಜ್ವಲಿತ ತೇಜನನ್ನು ಕಂಡ ಲಕ್ಷ್ಮಣನು ತನ್ನ ಅಣ್ಣನನ್ನು ಕಣ್ಣರಳಿಸಿ ನೋಡಿದನು !

ಮುನಿವರ್ಯನು ಧ್ಯಾನಮಯ ಗಂಭೀರ ಭಂಗಿಯ ಭಾವದಿಂದ ಮೇಲೆದ್ದನು. ತರುಣ ರಾಮನನ್ನು ತನ್ನ ಆಶಯದಂತೆ ಕರೆದು ತಪದ ಕುಟಿಗೆ ಕರದೊಯ್ದನು. ಹಿಂಬದಿಯಿಂದ ಬಾಗಿಲನ್ನು ಮುಚ್ಚಿದನು. ಒಬ್ಬರು ಇನ್ನೊಬ್ಬರನ್ನು ಬೆರಗಾಗಿ ನೋಡುತ್ತಿದ್ದರು. ಸ್ವಲ್ಪ ಹೊತ್ತಿನ ನಂತರ ಪೂಜೆಮನೆಯಿಂದ ಸಾಮಾನ್ಯರಂತೆ ಇಬ್ಬರೂ ಹೊರಬಂದರು. ರಾಮನು ತನ್ನ ವೃತ್ತಾಂತವನ್ನು ಹೇಳುತ್ತಿರಲು, ಐದು ವರ್ಷದ ಬಾಲಕ ಪರದೇಶದಿಂದ ಮರಳಿದ ಅಣ್ಣನ ದನಿಗೆ ಕಿವಿಗೊಡುವಂತೆ ಯತೀಶ್ವರನು ರಾಮ ಕಥೆಯನ್ನು ಕೇಳುತ್ತಿದ್ದನು.

ಮಗಳೆ ಮನೆಸೇರ್ದಳೆನೆ ಮುನಿಯ ಸತಿ ನೆಲಮಗಳನುಪಚರಿಸಿದಳ್

ಮುನಿಯ ಸತಿಯು ಮಗಳೇ ಮನೆಗೆ ಬಂದಳು ಎಂಬಂತೆ ಸೀತೆಯನ್ನು ಉಪಚರಿಸಿದಳು. ಬಿಸಿನೀರಿನ ಸ್ನಾನಮಾಡಿಸಿ ನಾರುಮಡಿ ಉಡಿಸಿದಳು. ನೊರೆಹಾಲು, ಮಾಗಿದ ಹಣ್ಣುಗಳನ್ನು ನೀಡಿ ತೃಪ್ತಿ ಪಡಿಸಿದಳು. ಅತಿಯಾದ ಪ್ರೀತಿಯಿಂದ, ಹಣತೆಯ ಸೊಡರು ಹಿಡಿದು ಅಯೋನಿಜೆಯ ದೇವವಂದಿತ ರೂಪವನ್ನು ನೋಡಿದಳು! ಪರ್ಣ ಕುಟಿಯ ಮಕ್ಕಳಿಗೆ ಹೊಸ ಅಕ್ಕನೋರ್ವಳು ಸಿಕ್ಕಿದಂತಾಯಿತು. ತಾರತಮ್ಯ ವಿವೇಕಕ್ಕೆ ಎಡೆಗೊಡದೆ ಮಧ್ಯರಾತ್ರಿಯ ತನಕ ನಿದ್ದೆಯನ್ನು ಬಿಟ್ಟು ಎದ್ದೆದ್ದು ಹರಟಿದರು.

ಜನಕಜಾತೆಯು ಬರುವಾಗ ಆಯ್ದು ತಂದು ಮಡಿಲಿನಲ್ಲಿ ಇಟ್ಟುಕೊಂಡಿದ್ದ ಹಣ್ಣು ಹೂಗಳನ್ನು ಕೊಟ್ಟಳು. ಜಿಂಕೆಯ ಚರ್ಮದಿಂದ ನಿರ್ಮಿಸಲಾದ ತನ್ನ ಕೈ ಪೆಟ್ಟಿಗೆಯನ್ನು ತೆರೆದು ಅಯೋಧ್ಯೆಯ ಸಿರಿಗೆ ಕಿರಿದೊಂದು ಬೆಳಕಿಂಡಿ ಸೃಷ್ಟಿಸಿದಳು!

ತಪೋವನಕ್ಕೆ ದೂರದಿಂದ ಗಂಗೆ ಯಮುನೆಯರು ಉಲಿಯುವ ಪುಣ್ಯಘೋಷ, ಪ್ರಯಾಗ ಕ್ಷೇತ್ರದ ತೀರ್ಥೋದ್ಭವ ಕೇಳಿ ಬಂದಿತು. ಸೂರ್ಯವಂಶಜರು ನಿಶ್ಯಬ್ದವಾದ

ತಪೋವನದ ತೋಟ್ಟಿಲಲ್ಲಿ ದಿವ್ಯನದಿಗಳು ಕೂಡುವ ಮಹದ್ ಧ್ವನಿಯ ಜೋಗುಳವನ್ನು ಆಲಿಸುತ್ತ ನಿದ್ರಿಸಿದರು. ಮುನಿವರ್ಯನು ಮರುದಿನ ಮುಂಜಾನೆಯಲ್ಲಿ ಅವರನ್ನು ಕೂಡಲಿಯ ದರ್ಶನಕ್ಕೆ ಕರೆದೊಯ್ದನು. ರಾಮಲಕ್ಷ್ಮಣರು ಅದನ್ನು ಭಾವಪರವಶರಾಗಿ ಕಣ್ಣು ರೆಪ್ಪೆಯನ್ನು ಮಿಟುಕಿಸದೆ ನೋಡಿದರು. ನೋಡಿ, ಮಣಿದರು.

ಆ ಸಂಗಮವು ಕಡಲಿನಂತೆ ರುದ್ರ ರಮಣೀಯವಾಗಿ ಅಂತ್ಯವಿಲ್ಲದೆ ವ್ಯಾಪಿಸಿತ್ತು. ರಾಮಚಂದ್ರನಿಗೆ ಆ ನೀರಿನ ವಿಶಾಲತೆಯಿಂದ, ಭೋರ್ಗರೆಯುವ ಘೋಷದಿಂದ ನೊರೆ ತೆರೆಗಳ ಭೀಷ್ಮ ತಾಂಡವದ ಸಂಮೋಹದಿಂದ ತನ್ನ ಆತ್ಮದ ಅತಿದೂರದ ತೀರದಿಂದ ತೋಳುನೀಡಿ ಸನ್ನೆಗೈ ಬೀಸಿ ಕರೆದಂತಾಯಿತು. ಭರದ್ವಾಜ ಮುನಿಗಳು ರಾಮನನ್ನುದ್ದೇಶಿಸಿ ಹೇಳಿದರು:

'ಇದೇ ನೋಡು ದಿವ್ಯ ತೀರ್ಥ ಪ್ರಯಾಗ. ಇಲ್ಲಿ ನಮ್ಮೊಡನೆ ವನವಾಸವನ್ನು ಕಳೆ.'

'ಗುರುವರ್ಯರೆ, ಈ ಆಶ್ರಮವು ನಿರ್ಜನವಾಗಿ ರಮಣೀಯವಾಗಿದ್ದರೂ ಸಾಕೇತಪುರಿಗೆ ಸಮೀಪವಾಗಿದೆ. ನಾವಿರುವುದು ತಿಳಿದ ತಕ್ಷಣ ಗುಂಪಾಗಿ ಬರುವ ಪ್ರಜೆಗಳು, ಮಿತ್ರರು, ದರ್ಶನ ಕುತೂಹಲಿಗಳನ್ನು ತಡೆಯಲಾಗುವುದೆ? ಜನರಿಗೆ ದೂರವಾಗಿ, ಜನ ಪ್ರವೇಶಿಸಲಾಗದ ಮತ್ತು ನಮ್ಮ ಜೀವನಕ್ಕೆ ತೊಂದರೆ ಉಂಟಾಗದ, ಸುಖಯೋಗ್ಯೆ ಸೀತೆಯ ಸುಖಕ್ಕೆ ಅರ್ಹವಾದ ಮತ್ತೊಂದನ್ನು ತಾವು ಆಲೋಚಿಸಿ ತಿಳಿಸಿ. ತಾವು ವನಲೋಕ ಸಂಚಾರಿಗಳು!'

ಮುನಿಯು ತನ್ನ ನೆನಪಿನ ನಿಧಿಗೆ ಕೈ ಇಟ್ಟು ಹುಡುಕಿದನೊ? ವಿಧಿ ಮನಸ್ಸನ್ನು ಅರಸಿದನೊ? ತನ್ನ ಮುಂದಿದ್ದ ಹೂವೊಂದರಲ್ಲಿ ಕಣ್ಣು ನೆಟ್ಟು ಆಲೋಚಿಸಿದನು. ಅನಂತರ ತಲೆಯೆತ್ತಿ,

'ವತ್ಸನೇ, ಹಾಗಾದರೆ ಕೇಳು. ಇಲ್ಲಿಗೆ ಹತ್ತು ಹರದಾರಿ ದೂರದಲ್ಲಿ ಒಂದು ಪರ್ವತವಿದೆ. ಅದರ ಹೆಸರು ಚಿತ್ರಕೂಟ.'

ಎಂದು ಕೇಳುವವರ ಎದೆಗೆ ಸೊಗಸುವಂತೆ ರಸಾವೇಶದಿಂದ ಅದನ್ನು ಬಣ್ಣಿಸಿದನು. ಅದಕ್ಕೆ ಒಪ್ಪಿದ ರಾಮಚಂದ್ರನು ಚಿತ್ರಕೂಟಕ್ಕೆ ಪ್ರಯಾಣ ಬೆಳೆಸಲು ತೀರ್ಮಾನಿಸಿದನು. ಸೀತೆ ಲಕ್ಷ್ಮಣರೊಡನೆ ಆಶ್ರಮ ಸ್ನೇಹಮಯ ವಲಯವನ್ನು ಬಾಷ್ಪಲೋಚನನಾಗಿ ಬೀಳ್ಕೊಟ್ಟನು.

ಮುಂಬರಿದರಾ ಚಿತ್ರಕೂಟಕ್ಕೆ

ಋಷಿ ಹೇಳಿದಂತೆ ಅವರು ಸಂಗಮದ ಬಳಿ ಬಂದು ಸೇರಿದರು. ಅಲ್ಲಿಂದ ಸ್ವಲ್ಪ ಪಶ್ಚಿಮ ದಿಕ್ಕಿಗೆ ಯಮುನಾ ನದಿಯ ದಡದಲ್ಲಿ ರಚಿತವಾದ ಕೆಳಗಿನ ದಾರಿಯನ್ನು

ಹಿಡಿದು ನಡೆದರು. ಕಾಲಿಗೆ ಅಡ್ಡವಾಗಿ, ಕಣ್ಣಿಗೆ ಸುಂದರವಾಗಿ ಮುಂದೆ ಕಾಳಿಂದಿನದಿ ಕಾಣಿಸಿತು.

ಅವರು ಮುರಿದ ಹೆಮ್ಮರಗಳಿಂದ ಮರದ ತುಂಡುಗಳನ್ನು ತರಿದು ಹರಡಿದರು. ರಾಶಿಯಿಂದ ಒಣ ಬಿದಿರನ್ನು ಆಯ್ದು ಸಾಲಾಗಿಟ್ಟರು. ಮೈಥಿಲಿಯ ನೆರವನ್ನು ನಿರಾಕರಿಸದೆ, ಬೆತ್ತದ ಬಳ್ಳಿ ಮಿಣಿಗಳಿಂದ ಬಿಗಿದು ಹೆಣೆದು ಕಟ್ಟಿ ತೆಪ್ಪವನ್ನು ರಚಿಸಿದರು. ಲಕ್ಷ್ಮಣನು ಚಿಗುರೆಲೆಯನ್ನು ಒಟ್ಟುಗೂಡಿಸಿ ಮಣೆಯನ್ನು ಮಾಡಿದನು. ರಾಮಚಂದ್ರನು ಮುಖಕ್ಕೆ ನಾಚಿಕೆಯ ಕೆಂಪೇರುತ್ತಿದ್ದ ಸೀತೆಯನ್ನು ಹಿಡಿದೆತ್ತಿ ಕುಳ್ಳಿರಿಸಿದನು. ಆಗ ಅವನ ನೀಲವರ್ಣದ ಮುಖದಲ್ಲೂ ಲಜ್ಜಾ ಸಂಧ್ಯೆ ಉದಿಸಿದಳು. ಅವನು ವಸ್ತ್ರ ಭೂಷಣಗಳ ಬುಟ್ಟಿ, ಸಮಸ್ತವಸ್ತು, ಆಯುಧಗಳನ್ನು ತೆಪ್ಪದಲ್ಲಿ ಇರಿಸಿ ಅದರಲ್ಲಿ ಏರಿ ಕುಳಿತನು. ಲಕ್ಷ್ಮಣನು ತೆಪ್ಪವನ್ನು ದಡದ ನಿಲ್ ನೀರಿನಿಂದ ಹರಿನೀರಿಗೆ ಗಳುಗಳಿಂದ ನೂಕಿದನು.

ಬಿರುನಡೆಯ, ತೆರೆ ಉಡುಗೆಯ, ಹೊಸತೆಂಗಿನಕಾಯಿಯ ತುರಿಯ ಬಿಳಿಯ ಮುದ್ದೆಯ ನೊರೆಯ ಜಲಘೋಷ ಆವೇಶದ ಯಮ ಪ್ರವಾಹದಲ್ಲಿ ತೆಪ್ಪವು ಜಲತರಂಗದ ಕುದುರೆಗಳನ್ನು ಏರಿದಂತೆ ತೇಲಿತು; ಚಿಮ್ಮಿ ಓಡಿತು. ಸೀತೆಯ ಹೃದಯದಲ್ಲಿ ಒಂದು ರಮಣೀಯ ಭೀಷಣತೆ, ಸುಖಭೀತಿ ಉಂಟಾಯಿತು. ದಕ್ಷಿಣದ ದಡವನ್ನು ಮುಟ್ಟಲು, ಅವರು ತೆಪ್ಪದಿಂದ ಇಳಿದು ತಂಪಾದ ಶ್ಯಾಮಸುಂದರ ಯಮುನಾ ವನವನ್ನು ಪ್ರವೇಶಿಸಿದರು.

ಮೃಗಪಕ್ಷಿಗಳ, ಸುಮಸಮೂಹದ ವಿವಿಧ ಚೈತ್ರದ ಸೊಬಗನ್ನು ಸವಿಯುತ್ತ ಎರಡು ಹರದಾರಿ ನಡೆದರು. ಅಲ್ಲಿ ಶುಚಿಯಾಗಿದ್ದು, ತಿನ್ನಲು ಯೋಗ್ಯವಾದುದನ್ನು ಪಡೆದು, ಜಿಂಕೆಗಳನ್ನು ಬೇಟೆಯಾಡಿದರು. ನದಿಯ ದಡದ ಸಮತಲದ ಹಸಿರು ಹುಲ್ಲಿನ ಮೇಲೆ ಕುಳಿತು ಊಟಮಾಡಿದರು. ಆ ವನರಾತ್ರಿಯು ನಿಶ್ಯಬ್ದತೆಯ ತೊಟ್ಟಿಲಲ್ಲಿ ನದಿಯು ಮೊರೆಯುವ ಶಿಶುವನ್ನು ಇಟ್ಟು ತೂಗಿದಂತೆ ಆ ಮೂವರನ್ನು ನಿದ್ರಾ ಸಮಾಧಿಗೆ ತೂಗಿತು.

ಪಕ್ಷಿಗಳ ಮಂಗಲ ಸಮೂಹ ಕಂಠ ವೀಣಾವಾಣಿಯು ರಾಮನನ್ನು ಎಚ್ಚರಿಸಿತು. ಅವನು ಲಕ್ಷ್ಮಣನನ್ನು ಮತ್ತು ಸೀತೆಯನ್ನು ನಿದ್ದೆಯ ಜೊಂಪಿನಿಂದ ಏಳಿಸಿದನು. ಅವರು ತೊರೆಯ ಮಂಗಳ ಜಲದಲ್ಲಿ ಮುಖ ತೊಳೆದು ಚಿತ್ರಕೂಟಕ್ಕೆ ಮುನ್ನಡೆದರು.

ಅವರ ಮನಸ್ಸು ಚಿತ್ರಕೂಟವನ್ನು ಈ ರೀತಿ ಚಿತ್ರಿಸಿಕೊಳ್ಳುತ್ತಿತ್ತು: ಅಲ್ಲಿ ಬಿದಿರ ಮೆಳೆಯಲ್ಲಿ ಬಿದಿರಿನ ಕುಡಿಯಾದ ಕಳಲೆಯನ್ನು ಲರಿಲರಿಲ್ ಲರಿಲೆಂದು ಮುರಿಯುತ್ತಿರುವ ಆನೆಯಿದೆ; ಅದನ್ನು ನೆನೆ! ಮರವನ್ನು ಅಲುಗಾಡಿಸಿ, ಹಣ್ಣನ್ನು ಆಯ್ದುಕೊಂಡು, ಕಾಯಿಗಳನ್ನು ಕೆಡುಹುವ, ಕೊಂಬೆಯಿಂದ ಕೊಂಬೆಗೆ ಹಾರುವ

ಬಣ್ಣದ ಕಪಿಗಳ ಹಿಂಡುಯಿದೆ; ಅದನ್ನು ನೆನೆ! ಹೂ ಬಿಡುವ ಕಾಲವಾದ ವಸಂತಮಾಸ ಬರುವ ಸಂತೋಷದಿಂದ ವನದೇವಿಯು ದೀಪೋತ್ಸವವನ್ನು ಮಾಡುತ್ತಿರುವಳು ಎಂಬಂತೆ, ಮೊಗ್ಗುಗೊಳ್ಳಿಗಳಿಂದ ಪೊಂಜಿನ ಉರಿ ಹೂವಿನಿಂದ ರಂಜಿಸುವ ಮುತ್ತುಗದ ಮರಗಳಿವೆ; ಅದನ್ನು ನೆನೆ! ನೆತ್ತಿಯಿಂದ ಹರಿದು ಬಂದು ಕಣಿವೆಗೆ ಉರುಳುವ ಜಲಪಾತವು ಬೆಳ್ಳನೆಯ ಪಕ್ಷಿಯ ಕೊಕ್ಕಿನಂತೆ ನೀರಾಗಿ ಬೀಳುತ್ತಿವೆ; ಅದನ್ನು ಮೈರೋಮಾಂಚಕಗೊಂಡಂತೆ ನೆನೆ! ಅದೊ ಅಲ್ಲಿ, ಕಣ್ಣು ತುಂಬಿ ಕಾಣುತ್ತಿದೆ ಚಿತ್ರಕೂಟ! ಅದು ಶಿವನ ಸೊಗಸು ನೋಟ! ಕಾಡಿನ ಶಿವನ ಜಟಾಜೂಟ!

ಅವರ ಆರು ಕಣ್ಣುಗಳು ಒಂದಾಗಿ, ಅಗೋಚರವಾದಂತಹ ಆತ್ಮಾನಂದ ರಸವಾಗಿ ಆ ದೃಶ್ಯದೇವೇಂದ್ರನನ್ನು ಮೈ ಮರೆತು ಕಂಡರು; ಮೈಯೆಲ್ಲ ಕಣ್ಣಾಗಿ ನೋಡಿದರು. ಕಡಲಿನ ಬೃಹನ್ನೀಲಿಮೆಯ ವಿರಾಟ್ ರಂಗದಲ್ಲಿ ತೆರೆಯನಟ್ಟುವ ಅಲೆಯ ರೀತಿಯಲ್ಲಿ, ಗಿರಿಯನಟ್ಟುವ ಗಿರಿಪಂಕ್ತಿಗಳು ದೃಷ್ಟಿ ಹರಿಯುವವರೆಗೂ ಹಬ್ಬಿದ್ದವು ಮತ್ತು ಕಣ್ಣು ಅವುಗಳಲ್ಲಿ ಅಲೆದು ಸೋಲುವಂತಾದವು !

ಆ ದಿಟ್ಟ ಮಲೆಕಾಡು – ವಿಸ್ತಾರವಾಗಿ ಹರಡಿದ ಹಸುರು ರೋಮ ಸಮೂಹದ ಭೀಷಣ ಚರ್ಮ ಹೊದ್ದಂತಿದ್ದ ಅಪೂರ್ವ ಭೂ ಬೃಹತ್ ಪ್ರಾಣಿಯಂತಿತ್ತು. ಮಂದಾಕಿನಿಯ ಹಿರಿದಾದ ನೀರೋಟವು ಗಿರಿಗೆ ಡಾಬಿನಂತಾಗಿ ಕಂದರದ ಸೀಮೆಯನ್ನು ಸಿಂಗರಿಸಿತ್ತು. ಮಾಲ್ಯವತಿನದಿಯ ಕಿರಿದಾದ ನೀರಿನ ಓಟವು ಪರ್ವತದ ಶಿರದಲ್ಲಿ ಬೆಳ್ಳಿಯ ರೇಖೆಯಂತೆ ಇಳಿದು ಕಂಗೊಳಿಸಿತ್ತು. ಅದು ಸಂಜೆಯ ದಿವಸೇಶ್ವರ ಸೂರ್ಯನ ಕನಕಕಾಂತಿಯಲ್ಲಿ ಚಿನ್ನದ ಜನಿವಾರದಂತೆ ತಳತಳಿಸುತ್ತಿತ್ತು. ಆ ಶೈಲ ಭೈರವ ಋಷಿಯ ದರ್ಶನದಿಂದ ಆವೇಶಗೊಂಡ ಮೂವರು ಕೈಮುಗಿದು ಅಧ್ಯಾತ್ಮ ನೈವೇದ್ಯವನ್ನು ಅರ್ಪಿಸಿದರು!

❑



~~~~~~~~~~~~~~~~~~~~~~ ಸಂಚಿಕೆ – ೮ ~~~~~~~~~~~~~~~~~~~~~~

ಕುಣಿದಲುರಿಯ ಊರ್ವಶಿ!

ಕುವೆಂಪು ಅವರು ವಿದ್ಯಾದೇವತೆ ಸರಸ್ವತಿಯನ್ನು ಪ್ರಾರ್ಥಿಸುತ್ತ, 'ವಾಣಿ, ಓ ಪ್ರಾಣವೀಣಾ ಪಾಣಿ' ಎಂದು ಆ ತಾಯಿಯನ್ನು ತನ್ನ ಪ್ರಾಣ ವೀಣೆಯನ್ನು ಧರಿಸಿರುವವಳೆಂದು ಧ್ಯಾನಿಸಿ ಅವಳಲ್ಲಿ ಒಂದಾಗಿ ಹೋಗಿದ್ದಾರೆ. ಆ ಮಾತೆಯನ್ನು ಕವಿಯೆದೆಯ ರಸವಾಣಿಯೆಂದು ಕರೆದಿದ್ದಾರೆ.

ಓ ತಾಯಿಯೆ ನನ್ನ ಆತ್ಮತಂತಿಯನ್ನು ಮಿಡಿ. ನನ್ನ ಹೃದಯವನ್ನು ನುಡಿಸು. ತಾಯಿಯು ಕಂದನ ಕೈಹಿಡಿದು ನಡೆಸುವಂತೆ ಈ ನನ್ನ ಮಹಾಕಾವ್ಯವನ್ನು ನಡೆಸು
~~~~~~~~~~~~~~~~~~~~~~

ಎಂದು ಮತ್ತೆ ಮತ್ತೆ ನಿನ್ನ ಅಡಿಗೆ ಮುಡಿಚಾಚಿ ಬೇಡುತ್ತಿದ್ದೇನೆ. ಈ ನಿವೇದನೆಯನ್ನು ತಿಳಿಯದವರು ಅತಿಯೆಂದು ಆಡಿಕೊಳ್ಳಲಿ ಬಿಡು ತಾಯಿ! – ಎಂದು ಹೇಳಿದ್ದಾರೆ.

ತಾಯಿಯೆ ಮುಂದಿರುವ ಯಾತ್ರೆಯ ಮಹಾದೂರವನ್ನು ಬೃಹತ್ ಭಾರವನ್ನು, ಸಮುದ್ರದಂತಹ ವಿಸ್ತಾರವನ್ನು ನಾನು ಬಲ್ಲೆನು. ಹಸುಳೆಯು ಹೆಗ್ಗಾಡಿಗೆ ಅಳುಕುವಂತೆ ಈ ಶಿಶು ಹೃದಯವು ಹೆದರಿ ನಿನ್ನನ್ನು ಮತ್ತೆ ಮತ್ತೆ ಬೇಡುತ್ತಿದೆ. ಓ ತಾಯಿಯೆ ಯುದ್ಧದ ಸಾಹಸ ಕಥೆಯ ವರ್ಣನೆಗೆ ಬಡತನವೇ ಹೇಳು? ಅದು ಹೇರಳ! ದಿನದಿನದ ಸಾಧಾರಣದ ಶಾಂತ ಸರಳ ಜೀವಿತದ ವರ್ಣನೆ ದುರ್ಲಭ. ನಾನು ಅದನ್ನೆ ಕೈಕೊಂಡು ಮಾಡಲು ಪ್ರಯತ್ನಿಸುವೆನು. ಅದಕ್ಕೆ ನಿನ್ನ ಅಮೃತವರ ಹಸ್ತದ ಹರಕೆಯಿರಲಿ.

ದೇವಿ, ಓ ಶಾರದಾ! ಕೊಲೆಯ ಕಥೆ ಮನಸ್ಸನ್ನು ಸೆಳೆಯುವಂತೆ ರಾಮನ ಮನದ ಕಲೆಯ ಆ ಕಥೆಯು – ಅಲ್ಪವಾದ, ಶತ್ರುಮನದ ರುಚಿ ದೀನರನ್ನು ಆಕರ್ಷಿಸುವುದಿಲ್ಲ. ಓ ಸರಸ್ವತಿಯೆ, ನನ್ನ ಈ ಕೃತಿಯನ್ನು ಓದುವ ಆತ್ಮರ ಆ ದಾರಿದ್ರ್ಯವನ್ನು ಪರಿಹರಿಸು. ಓ ಸಹೃದಯ ಸರಸ ಲಕ್ಷ್ಮಿಯೇ, ಅಲ್ಲಿ ಅರಸಿಯಾಗಿ ನೆಲಸು!

ಮೌನವಾಂತುದು ನಗಂ ವಜ್ರರೋಮ ಮಹರ್ಷಿಯಾ ಧ್ಯಾನಗೌರವಕೆನಲ್

ಪಶ್ಚಿಮ ಶಿಖರದ ನೆರಳು ಮೆಲ್ಲಮೆಲ್ಲನೆ ಕಣಿವೆಯ ಆಳಕ್ಕೆ ಅಗಲಕ್ಕೆ ಇಳಿದು ತುಂಬಿತು. ರಾತ್ರಿಯ ಸೀರೆ ಅಂಚಿನ ಸೆರಗು ಅಡವಿಯನ್ನು, ಚಿತ್ರಕೂಟ ಪರ್ವತವನ್ನು ಮುಸುಗಿತು. ಹಕ್ಕಿಗಳು ಗೂಡಿಗೆ ಓಡಿದವು. ವಜ್ರರೋಮ ಮಹರ್ಷಿಯ ಜ್ಞಾನಗೌರವಕ್ಕೆ ಎನ್ನುವಂತೆ ಪರ್ವತವು ಮೌನವನ್ನು ಧರಿಸಿತು. ಯೋಗೀಂದ್ರನ ಹೊರ ನಯನೇಂದ್ರಿಯವು ಮುಚ್ಚಲು, ಅವನ ಆತ್ಮದ ಕೋಟ್ಯಾನುಕೋಟಿ ಕಣ್ಣುಗಳು ತೆರೆಯುವವು. ಹಾಗೆ ಹಗಲಿನ ಕಣ್ಣು ಮುಚ್ಚಲು ರಾತ್ರಿಯ ಕಣ್ಣು ಅರಳುವಂತೆ ನಕ್ಷತ್ರದ ಕಿಡಿಗಳು ಆಗಸಪಟದಲ್ಲಿ ಇಣುಕಿ ಮಿಣುಕಿ ಕಂಗೊಳಿಸಿದವು.

ವಜ್ರರೋಮನು ಶಿಷ್ಯರನ್ನು ಅವರವರ ಪರ್ಣಶಾಲೆಗೆ ಕಳುಹಿಸಿದನು. ತನ್ನ ಆಶ್ರಮದ ಮುಂದಿನ ಬಂಡೆಯನ್ನು ಏರಿ ಪದ್ಮಾಸನ ಹಾಕಿ ಕುಳಿತನು. ದೃಷ್ಟಿಪಥ ಹರಿಯುವ ತನಕ ಕಂದರದ ಕಾಂತಾರ ವಿಸ್ಮಯವನ್ನು ನೋಡುತ್ತಿದ್ದನು. ಹಾಗೆ ನೋಡುವಾಗ ಎದುರಿಗಿದ್ದ ಗಿರಿ ಶಿಖರದಲ್ಲಿ ಬಾನಿಗೆ ಎದುರಾಗಿ ಕೆತ್ತಿದಂತಿದ್ದ ಮೂರು ನರರೂಪಿ ಅಸ್ಪಷ್ಟ ಆಕೃತಿಗಳನ್ನು ಕಂಡನು. ಸಿಂಹಾಕೃತಿಯ ಅತಿ ಒರಟಾದ ಬೆಟ್ಟದಂತಹ ಭೀಮಕಾಯನಾದ ಕಠಿನ ಗಂಭೀರ ಯೋಗಿಯು ಕುತೂಹಲಗೊಂಡನು. ಆದರೂ ಆಶ್ಚರ್ಯಕ್ಕೆಡೆಗೊಡದೆ ಧ್ಯಾನದದ್ವೈತದ ಅನನ್ಯತೆಯಲ್ಲಿ ಲೀನವಾದನು!

ವಜ್ರರೋಮನ ಚಿತ್ತ ವಜ್ರದ ಮಹಿಮೆಗೆ ಹುಲಿಯೊಂದು ಭಯಪಡುತ್ತ, ವ್ರತಿಗೆ ಕಿಂಕರನ ಸೇವೆ ಮಾಡುವ ವ್ರತ ಕೈಕೊಂಡಿತು. ಅದು ಧ್ಯಾನಸ್ಥ ಮುನಿಯ ಪಕ್ಕದಲ್ಲಿ

ಬಂಡೆಯ ಮೇಲೆ ಇದ್ದಿತು. ಬೈಗುಗಪ್ಪು ಆವರಿಸುತ್ತಿದ್ದ ದೃಶ್ಯ ವಿಸ್ತೀರ್ಣವನ್ನು ನೋಡುತ್ತಿದ್ದಾಗ ಏನನ್ನೋ ಕಂಡಿತು! ಬೆಟ್ಟವು ನೂರು ಗುಹಾಧ್ವನಿಗಳನ್ನು ಪ್ರತಿ ಘರ್ಜಿಸುವಂತೆ, ಕುಳಿತ ಬಂಡೆ ಅದುರಿ ಕಂಪಿಸುವಂತೆ, ಕೇಳಿದವರ ಎದೆ ಹೆಪ್ಪುಗೊಳ್ಳುವಂತೆ ಆ ಅದ್ವೈತಿ ಸಿಂಹವು ತಾನು ದ್ವೈತಿಯಾದಂತೆ ಘರ್ಜಿಸಿತು!

ಕಣ್ಣು ತೆರೆದ ಮುನಿಯು ಕೈಯೆತ್ತಿ ತಟ್ಟಿ, ತಲೆಯನ್ನು ಸವರಿ ಸಮಾಧಾನ ಮಾಡಿದನು. ಆಗ ಆ ಪ್ರಾಣಿಯು ಕಂಠಘೋಷವನ್ನು ಕಣ್ಣಿನ ರೋಷದಿಂದ ತೋರಿಸುವಂತೆ ನೋಡುತ್ತಿತ್ತು. ಅತ್ತ ಕಣ್ಣಾದ ಋಷಿಗೆ ಶ್ರೀರಾಮ ಸೀತಾ ಲಕ್ಷ್ಮಣರ ಆಕೃತಿಯ ಧೀರಗಮನ ಕಂಡಿತು.

ಸುಪವಿತ್ರ ಪತ್ರವೇಶ್ಮಂ ಬೊಕ್ಕರಾತ್ಮಮಂ ಪುಗುವ ಪುಣ್ಯಂಗಳೋಲ್.

ಹುಲಿಯು ಹುಲಿಯನ್ನು ತಿಳಿಯುವಂತೆ, ಹುಲಿಯಂತೆ ಸಿದ್ಧನು ಪ್ರೀತಿಯ ಅತಿಥಿಗಳನ್ನು ಉಪಚರಿಸಿ, ರಾತ್ರಿ ಕಳೆದನು. ಲಕ್ಷ್ಮಣನು ಮಾರನೆಯ ದಿನ ತಪೋವನದ ಜನರ ತನುಮನ ಸಹಾಯದಿಂದ ಮಲೆಯ ಬಿರು ಮಳೆಗಾಳಿಗೆ ಮಲೆತು ಉಳಿಯುವಂತಹ ಪರ್ಣಶಾಲೆಯೊಂದನ್ನು ಕಟ್ಟಿದನು. ಅದು ಆ ಗಿರಿಯ ದರ್ಶನ ಸ್ಥಾನದಂತಿದ್ದು ಎತ್ತರದಲ್ಲಿತ್ತು. ಅದು ದೂರ ವಿಸ್ತಾರ ದೃಶ್ಯದ ಆಸ್ಥಾನದ ಅಧ್ಯಕ್ಷತಾ ಸ್ಥಾನ ತಾನೆನ್ನುವಂತೆ ಗಿರಿಭುಜಸ್ಥಾನದಲ್ಲಿತ್ತು.

ಆ ಜಿತೇಂದ್ರಿಯರು ಪರ್ಣಶಾಲೆಗೆ ಮರಬಳ್ಳಿಗಳ ಅಚ್ಚುಕಟ್ಟಾದ ಹೂ ತಳಿರು ತೋರಣ ಕಟ್ಟಿದರು. ದೇವರಿಗೆ, ಗೃಹದೇವತೆಗೆ, ಚಿತ್ರಕೂಟಗಿರಿದೇವನಿಗೆ, ಕಾಡಿನ ಅಧಿದೇವಿಯರಿಗೆ, ರವಿಗೆ, ಗಗನದ ಅಭಿಮಾನಿಗಳಿಗೆ, ಅಖಿಲ ಪಿತೃ ಋಷಿಗಳಿಗೆ, ವಾಸ್ತು ಕರ್ಮಾದಿ ಬಲಿ ಶಾಂತಿ ಕರ್ಮಗಳನ್ನು ಆಚರಿಸಿದರು. ಅನಂತರ ದೇವಸುಖ ಕಾರಣದ ಆ ಸುಪವಿತ್ರ ಎಲೆಮನೆಯನ್ನು ಆತ್ಮವನ್ನು ಪ್ರವೇಶಿಸುವ ಪುಣ್ಯಗಳಂತೆ ಒಳಹೊಕ್ಕರು.

ಅರಮನೆಯಲ್ಲಿ ಏನಿರುವುದೊ? ಅರಸುತನವು ಎದೆಯೊಳಿದ್ದರೆ ಕಾಡು ಅರಮನೆಗಿಂತ ಕೀಳೆ? ರಸವಿಲ್ಲದ ಬಾಳಿಗೆ ಅರಮನೆಯೇ ಮರುಭೂಮಿ. ಒಲಿದ ಹೆಣ್ಣು ಜೊತೆಯಲ್ಲಿರಲು ಮತ್ತು ಕಾಣುವ ಕಾವ್ಯ ದೃಷ್ಟಿ ಹೊಂದಿರಲು – ರಸಿಕನಿಗೆ ಅಡವಿಯು ಸ್ವರ್ಗಕ್ಕಿಂತ ಹೆಚ್ಚಾದ ಸೊಗಸು. ಕಣ್ಣು ಹೆಣ್ಣುಗಳೆರಡನ್ನು ಪಡೆದ ರಾಮನಿಗೆ ಎಲೆಮನೆಯೆ ಕಲೆಯ ಮನೆಯಾಯ್ತು; ವಿಪಿನಾಂಗಣವು ರಸ ತಪೋರಂಗಕ್ಕೆ ಸಮನಾಯಿತು.

ದಿನದಿನವು ಕಳೆದಂತೆ, ಮೊದಲು ಪರಕೀಯವು ಅಪರಿಚಿತವು ಆಗಿದ್ದ ಗಿರಿವನವು ಪರಿಚಯದಿಂದ ಸಲಿಗೆ ಹೊಂದಿ ಆತ್ಮೀಯ ಭಾವವನ್ನು ಹೊಂದಿತು. ಅಂದು ಕಲ್ಲಾಗಿದ್ದ

ಕಲ್ಲು ಈಗ ನೆನಪಿನ ನೆಲೆಯಾಯಿತು. ಹಿಂದೆ ಬರಿ ಮರವಾಗಿದ್ದುದು ಇಂದು ಅವರ ಬಾಳಿಗೊಂದು ಸಂಕೇತವಾಯಿತು. ಆ ಕಾಡಿಗೆ ಬಂದಾಗ ಬರಿ ಬಳ್ಳಿಯಾಗಿದ್ದುದು ಇಂದು ತಮ್ಮ ಎಲೆಮನೆಯ ಮುಂದಿನ ಅಂಗಣದ ಅಂಚಿನಲ್ಲಿ ತಮ್ಮ ಎದೆಬಾಳಿಗೆ ನಿತ್ಯ ಸಾಕ್ಷಿಯಾಗಿ ನಿಂತ ಧ್ವಜವಾಯಿತು. ಅಪ್ರಮುಖ ವಸ್ತುಗಳೆಲ್ಲವು ಅನುಭವದ ಘನ ಮಹಿಮೆಯಿಂದ ತಮ್ಮ ಅಲ್ಪತೆಯನ್ನು ಕಳೆದುಕೊಂಡವು. ಅವು ಭಾವದ ಆವರಣವನ್ನು ಪಡೆದವು. ಅವುಗಳ ಜಡವೇಶವು ಹಿಂಗಿ ಹೋಗಿ ಆವೇಶದಿಂದ ಆ ಒಂದೊಂದು ವಸ್ತುವೂ ತಮ್ಮ ಅಚೇತನ ಭಾವವನ್ನು ತೊರೆದು ಪ್ರಾಣಮಯವಾಗಿ ಮತ್ತು ಅರ್ಥಮಯವಾಗಿ ಅವರ ಸ್ಮೃತಿಕೋಶದ ಭಾಗವಾದವು.

ಕೌತುಕಂಬಟ್ಟನಿರ್ವರುಮದಕೆ ಪೆಸರಿಟ್ಟು ಕರೆಯ ತೊಡಗಿದರಂದಿನಿಂ 'ಕಲ್ದವಸಿ' ಎಂದು.

ಆ ಕಲ್ಲು ಬರಿಯ ಕಲ್ಲಾಗಿ ಯುಗಯುಗಗಳಿಂದ ಅಲ್ಲಿ ಬಿದ್ದಿತ್ತು. ಸೀತೆ ತಾನು ನೋಡುವುದಕ್ಕೆ ಮೊದಲು ಅದು ಕಲ್ಲಾಗದೆ ಬೇರೆ ಏನೂ ಆಗಿರಲಿಲ್ಲ. ಒಂದು ದಿನ ಪರ್ಣಶಾಲೆಯ ಮುಂದೆ ಪತಿಯೊಡನೆ ಮಾತನಾಡುತ್ತ; ಅಯ್ಯೊ ಸೋಜಿಗವನ್ನು ನೋಡಿದಳು! ಆ ಕಲ್ಲಿಗೆ ಅದೇನೊ ಆಕೃತಿ ಬಂದಂತೆ ತೋರಿತು. ಬೆರಗಾಗಿ ಇನಿಯ ರಾಮನಿಗೆ ತೋರಿಸಿದಳು. ಅವನು ಅದನ್ನು ಕಂಡು ಕುತೂಹಲಗೊಂಡನು. ಅವರಿಬ್ಬರು ಅದಕ್ಕೆ 'ಕಲ್ದವಸಿ' (ಶಿಲಾ ತಪಸ್ವಿ) ಎಂದು ಹೆಸರಿಟ್ಟರು. ಅಂದಿನಿಂದ ಹಾಗೆಯೆ ಕರೆಯ ತೊಡಗಿದರು.

ಮತ್ತೊಂದು ದಿನ ಸಂಜೆಯ ಕತ್ತಲು ಇಳಿಯುತ್ತಿರಲು ಮಬ್ಬಿನಲ್ಲಿ, ಕಲ್ಲನೆತ್ತಿಯಲ್ಲಿ ಯಾರನ್ನೊ ಕಂಡಳು. ದೀಪದ ಬೆಳಕಿನಲ್ಲಿ ಓದುತ್ತಿದ್ದ ಇನಿಯನನ್ನು ಕರೆದು ಹೆದರದೆ ತೋರಿಸಿದಳು. ರಾಮನು ಆಶ್ಚರ್ಯಗೊಂಡು ಅವರನ್ನು ಗುರುತಿಸುತ್ತ ನೋಡಿದನು. ತಕ್ಷಣ ದುಃಖದ ಮುಖಭಂಗಿಯಿಂದ ಕಣ್ಣೀರಿನೊಡನೆ ಎದೆ ನೊಂದವನಂತೆ ನಿಟ್ಟುಸಿರು ಬಿಟ್ಟನು. ಸೀತೆಗೆ ತಕ್ಷಣವೆ ಆ ಕಲ್ಲನೆತ್ತಿಯ ಮೂರ್ತಿ ಯಾರೆಂದು ತಿಳಿಯಿತು. ಊರ್ಮಿಳಾ ವಲ್ಲಭ ಲಕ್ಷ್ಮಣನು ಸೌದೆಯನ್ನು ಹೊತ್ತುತಂದು ಅಲ್ಲಿ ವಿಶ್ರಮಿಸುತ್ತಿದ್ದನು! ಪತ್ನಿಯನ್ನು ನೆನೆದು ಬೇಯುತ್ತಿರುವನೆ? ದೇವರನ್ನು ತನ್ನ ಸತಿಗಾಗಿ ಬೇಡುತ್ತಿರುವನೆ? ದಂಪತಿಗಳಿಬ್ಬರು ಕೃತಜ್ಞತಾಭಾರದಿಂದ ನಿಟ್ಟುಸಿರುಬಿಟ್ಟರು.

ಸೀತೆ ಮಾತನಾಡದಾದಳು. ಭಗವನ್ ಮೌನಿ ರಾಮನು ತಮ್ಮನನ್ನು ಮಾತನಾಡಿಸಲು ಅಲ್ಲಿಂದ 'ಕಲ್ದವಸಿ'ಯ ಕಡೆಗೆ ಹೋದನು. ಆ ಸಂಜೆಯಿಂದ ಆ ಬಂಡೆ 'ಕಲ್ದವಸಿ'ಯು ಊರ್ಮಿಳೆಗೆ ಮತ್ತು ಅವಳ ಸಂಯಮಕ್ಕೆ ಸಂಕೇತವಾಯಿತು. ಮತ್ತು ಈ ಸತಿಪತಿಗಳಿಗೆ ಎಚ್ಚರಿಕೆಯ ಗುರುವಾಯಿತು.

ಪರ್ಣಶಾಲೆಯ ಪೂರ್ವದ ಗವಾಕ್ಷದಿಂದ ನೀಲದೂರಕ್ಕೆ ಕೋಮಲವಾದುದು ಎನ್ನುವಂತೆ ತೋರುವ ಶಿಖರೇಶ್ವರ ಕಾಣುತ್ತಿತ್ತು. ಸೀತೆಯ ಮನಸ್ಸಿಗೆ, ರಾಮನ ಮನಸ್ಸಿಗೆ ಮತ್ತು ಲಕ್ಷ್ಮಣನ ಮನಸ್ಸಿಗೆ ಬೇರೆ ಬೇರೆ ಹಲವಾರು ರಹಸ್ಯ ಭಾವಲೋಕಗಳನ್ನು ಸೃಷ್ಟಿಸುತ್ತಿತ್ತು. ಅದರಿಂದ ಅವರವರ ದೃಷ್ಟಿಗೆ ಅದು ಬೇರೆ ಬೇರೆಯ ರಸಕ್ಕೆ ನಿಧಿಯಾಗಿ, ವಿಧಿಯ ಅಚಲ ಸಾನ್ನಿಧ್ಯವಾಗಿ ಶೋಭಿಸುತ್ತಿತ್ತು.

ಜನಕಜೆಯು ಅಡುಗೆ ಮಾಡುತ್ತಿರಲು ಆ ಕಡೆಯಿಂದ ಉದಯರವಿ ಎದ್ದನು! ಅಡುಗೆ ಮನೆಯ ಹೊಗೆಯ ನೀಲಿಗೆ, ಬಿಸಿಲು ಹಸುಳೆ ಬಾಲರವಿ ತನ್ನ ನಳಿದೋಳಿನ ಕೈಬೆರಳುಗಳ ಕೋಲು ಕೋಲನ್ನು ಬೀಸಿ ಆಡುತ್ತ ಬಂದನು. ಅವಳು ಪಾಕಕೆಲಸ ಬಿಟ್ಟು ಸೌಂದರ್ಯ ಉಕ್ಕುವ; ಕಣ್ಣಿಗೆ ಸಂತೋಷ ಉತ್ಸಾಹ ಉಂಟುಮಾಡುವ ಅದನ್ನು ಸವಿಯುತ್ತ ನಿಂತಳು!

ಮತ್ತೊಮ್ಮೆ ಬೆಣ್ಣೆ ಬಣ್ಣದ ನುಣ್ಣ ನುಣ್ಣನೆಯ ಮುಗಿಲು ಬಂದು ಬೆಟ್ಟ ನೆತ್ತಿಯನ್ನು ಅಪ್ಪಿತು. ಆ ಆಲಿಂಗನದ ಸುಖಕ್ಕೆ ಪರವಶಳಾಗಿ ನಿಶ್ಚಲವಾಗಿ ನಿಂತಳು. ಆ ತರುಣಿ ಗಗನದ ಎತ್ತರಕ್ಕೇರಿದ ಶಿಖರದ ಕಿರೀಟವನ್ನು ಕಂಡು, ಅದನ್ನು ತನ್ನ ತಂದೆ ಜನಕರಾಜನೆಂದು ಭಾವಿಸಿ ಇದ್ದಕ್ಕಿದ್ದಂತೆ ತಂದೆಯನ್ನು ನೋಡಿದಂತಾದಳು. ಆ ಭವ್ಯ ಮುದ್ರೆಯ ರಜತ ಕೇಶಾದ್ರಿ ದೇವನಿಗೆ ನಮಸ್ಕರಿಸಿದಳು.

ಮತ್ತೊಂದು ದಿನ ರಾತ್ರಿ ಧರಣಿ ಪುತ್ರಿಯು ಪತಿ ಮೈದುನರ ಜೊತೆಗೆ ಶಶಿಮೌಳಿ ಎಂಬ ಹತ್ತುವರ್ಷದ ಬಾಲಕನ ಕುರಿತು ವಿನೋದವಾಗಿ ಮಾತನಾಡಿದಳು. ಆ ಋಷಿಕುಮಾರನು ಲಲಿತ ರೂಪದ ಚಂಚಲಮನದ ವಿನೋದಶೀಲ. ಅವನು ಗೋವುಗಳನ್ನು ಮೇಯಿಸುತ್ತ ಬಂದು ನನ್ನೊಡನೆ ಹರಟಿದನು. ನಾನು ಕೊಟ್ಟ ಉಣಿಸನ್ನು ಪ್ರೀತಿಯಿಂದ ಉಂಡನು. ಬೇಡವೆಂದರೂ ಬಿಡದೆ ನನ್ನೊಡನೆ ಮುಸುರೆಯನ್ನು ತಿಕ್ಕಿದನು. ಮೈಮೋರೆ ಮಸಿಯಾಗಿಸಿಕೊಂಡು ಹೋದನು ಎಂದು ಸೀತೆ ಭಾವಪರವಶಳಾಗಿ ರಾಮಲಕ್ಷ್ಮಣರಿಗೆ ಹೇಳಿದಳು. ಜ್ಞಾನಿಯಾದ ಶ್ರೀರಾಮಚಂದ್ರನು, ವೀರಲಕ್ಷ್ಮಣನು ಆ ಅಲ್ಪವಿಚಾರವನ್ನು ಅತಿ ಉಲ್ಲಾಸದಿಂದ ಕೇಳಿದರು. ನಡುನಡುವೆ ಅಳ್ಳೆ ಬಿರಿಯುವಂತೆ ನಕ್ಕರು. ಆ ಮುದ್ದುಕತೆ ಮುಗಿಯುವ ಮೊದಲೇ ಕಿಟಕಿಯ ಆಚೆ ಕವಿದಿದ್ದ ಕಗ್ಗತ್ತಲಿನಲ್ಲಿ ಶಿಖರೇಶ್ವರನ ಶಿರದಲ್ಲಿ ಜ್ವಾಲೆ ಮನೋಹರವಾಗಿ ಕಂಡಿತು. ರಾತ್ರಿ ಆಕಾಶದ ಆ ತಾರಾ ಸಹಸ್ರಾಕ್ಷ ಇಂದ್ರನ ಓಲಗದಲ್ಲಿ ನರ್ತಿಸುವ ಉರಿಯ ಊರ್ವಶಿ ಎನ್ನುವಂತೆ ಕಾಡುಗಿಚ್ಚು ಮೊಳೆಯುತ್ತಿತ್ತು. ಆ ಚೆಲುವನ್ನು ಎಳೆಯ ಮಕ್ಕಳಂತೆ ಬಾಯಿತೆರೆದು, ದಿಗ್ಭ್ರಮೆಯನ್ನುಂಟು ಮಾಡುವ ಆಶ್ಚರ್ಯಕ್ಕೆ ಮನಸ್ಸು ಮಾರುಹೋದಂತೆ ದಿಟ್ಟಿಸಿದರು!

ಹೊರತೇನೊ ಹಾಸ್ಯರಸಮಖಿಲ ರಸನಿಧಿ ಚಂದ್ರ ಸದೃಶಂಗೆ?

ಅಖಿಲ ರಸನಿಧಿ ಚಂದ್ರನಂತಹ ರಾಮನಿಗೆ ಹಾಸ್ಯರಸ ಹೊರತಾದುದೆ? ಒಂದು ದಿನ ಸೂರ್ಯೋದಯದಲ್ಲಿ ತರುಣಿ ಸೀತೆಯು ಸುಂದರವೂ, ಮನೋಹರವೂ ಆದ ಸೂರ್ಯ ಕಿರಣಗಳ ಕಾಡಿನಿಂದ, ನಲಿಯುತ್ತ ಇಳಿದು ಬಂದಳು. ವೇಗಗಾಮಿನಿ ಜಲದ ಯೌವ್ವನದಿಂದ ಕೂಡಿದ ಮಾಲ್ಯವತಿ ನದಿಯಲ್ಲಿ ಋಷಿ ಸತಿಯರನ್ನು ಕಂಡಳು. ಅವರಿಗೆ ವಂದಿಸಿದಳು. ಮಾತನಾಡುತ್ತ ಸಂತೋಷದಿಂದ ಸ್ನಾನಮಾಡಿದಳು. ತೆಳುಬಿಳಿ ನಾರುಡೆಯ ಶುಭ್ರವಸ್ತ್ರವನ್ನು ಉಟ್ಟಳು. ಅರೆಬಿರಿದ ಹೂವಾಯಿತೊ ಹೇಳು ಎಂದು ಕಾಡು ಆಶ್ಚರ್ಯಕ್ಕೊಳಗಾಗಿರಲು ಅವಳು ತಮ್ಮ ಎಲೆಮನೆಗೆ ಮರಳಿ ಏರಿ ಬಂದಳು. ಅಡುಗೆಗೆ ತೊಡಗಿದಳು.

ಹಸಿ ಸೌದೆಯಿಂದ ಹೊಗೆಯಲ್ಲದೆ ಉರಿ ಕಾಣದಿರಲು, ಧರಣಿಸುತೆ ಅಸಹನೆಗೊಂಡಳು. ಕಟ್ಟಿಗೆಯಿಂದ ಒಲೆಯ ಮೋರೆಯನ್ನು ತಿವಿದಳು. ಕಣ್ಣೊರಸಿಕೊಂಡು, ಮೂಗೊರಸಿಕೊಂಡಳು. ಮುಖವೆಲ್ಲ ಮಸಿಯಾಯಿತು. ಸ್ನಾನಮಾಡಿ ಉಟ್ಟಿದ್ದ ಮಡಿ ಮಾಸಿತು. ಅವಳು ಖೇದಗೊಂಡು ಕೋಪಿಸಿಕೊಳ್ಳುತ್ತಿದ್ದಳು. ಆಗ ರಾಮನು ಆ ದಿನದ ಅಧ್ಯಯನವನ್ನು ವಜ್ರರೋಮಾಶ್ರಮದಲ್ಲಿ ಮುಗಿಸಿ ಬಂದನು. ಅರ್ಧಾಂಗಿಯು ಕಾಣದಿರಲು ಕೂಗಿ ಕರೆದನು. ಅವಳು ಹೊಗೆಯ ಹೊಟ್ಟೆಯಲ್ಲಿದ್ದು ಓಗೊಟ್ಟಳು. ಅವಳನ್ನು ತಮಾಷೆಮಾಡಲು ಹೇಳಿದನು:

'ಹಸಿದಿದ್ದೇನೆ. ನಾನು ಊಟ ಮಾಡಬೇಕಾಗಿದೆ.'

'ಹಸಿಸೌದೆಯಿಂದ ಅಡುಗೆ ಹೇಗೆ ಆಗುತ್ತದೆ? ಹೊಗೆಯನ್ನೇ ಉಣ್ಣಿರಿ.'

ಎಂದು ಅವಳು ಉತ್ತರಿಸಿದಳು. ರಾಮನು ಆಕೆಯ ಬಳಿ ಹೋಗಿ ಪ್ರೀತಿಯ ಮುಖವು ಮಸಿಯಿಡಿದು ಮುಸುಡಿಯ ಅವತಾರವಾಗಿದ್ದುದನ್ನು ನೋಡಿದನು. ನಗೆ ತಡೆಯಲಾರದೆಯೆ ಹೊರಗೆ ಬಂದು ಅಳ್ಳೆ ಬಿರಿಯುವಂತೆ ನಗತೊಡಗಿದನು. ಅಲ್ಲಿಗೆ ಬಂದ ಲಕ್ಷ್ಮಣನು ಅಣ್ಣನ ಆ ರೀತಿಗೆ ಬೆರಗಾದನು. ಆಗ ರಾಮನು,

'ನೋಡು, ನಡೆ ಒಳಗೆ. ಅತ್ತಿಗೆಗೆ ಬದಲು ಓರ್ವ ವಾನರಿಯ...' ಎಂದು ಅರ್ಧವಾಕ್ಯ ಹೇಳುತ್ತಲೆ ಗಹಗಹಿಸಿ ನಗುತ್ತಿದ್ದನು.

ಸುಮಿತ್ರಾತ್ಮಜನು ನಡೆದು ನೋಡಿದನು. ಅವನು ನಗಲಿಲ್ಲ! ನಗೆಗೆ ಮೀರಿತ್ತು ಆ ಧೂಮದೃಶ್ಯ! 'ಕ್ಷಮಿಸಿ ನನ್ನನ್ನು. ಹಸಿಸೌದೆಯನ್ನು ತಂದ ಅಪರಾಧಿಯನ್ನು' ಎಂದು ಹೇಳುತ್ತ ಪುಳ್ಳಿಯನ್ನು ತಂದು ಒಲೆಗೆ ಅಡಕಿದನು. ತನ್ನ ಸತಿ ಊರ್ಮಿಳೆಯನ್ನು ನೆನೆಯುತ್ತ ಊದಿದನು. ಅಗ್ನಿಯು ಧಗ್ಗನೆ ಬುಗ್ಗೆಯಂತೆ ಹೊಗೆಯ ಶರೀರದಿಂದ ಚಿಮ್ಮಿದನು. ಚಿಂತೆಯಿಂದ ಕದಡಿ ಹೋಗಿದ್ದ ಮೈಥಿಲಿಯ ಮುಖಪದ್ಮದಲ್ಲಿ ಸಂತೋಷಕಾಂತಿ ಚಿಮ್ಮಿತು!

ಭೂಮಾನುಭೂತಿಯಿಂ ಮೈಮರೆದನಾ ರಸಸಿದ್ಧಿ

ರಾಮ ಚಂದ್ರನು ಕೊಂದ ನಿಮಿತ್ತದಿಂದ ಹೆಸರು ಪಡೆದನೇ? ವೈರತನವೇ? ತೆಗೆ ತೆಗೆ! ಶ್ರೇಷ್ಠತೆಗೆ ಒಲುಮೆ ಚಿಹ್ನೆ. ಅವನು ಗೌರವಾರ್ಹನಾಗಿರುವುದು ರಾಕ್ಷಸನನ್ನು ಕೊಂದ ಕಾರಣದಿಂದಲ್ಲ. ತನ್ನ ಪತ್ನಿಯನ್ನು ಒಲಿದ ಕಾರಣದಿಂದ. ಕಾಳಗದ ರುಚಿಯ ಮೋಹಕ್ಕೆ ಮರುಳಾದ ಮನುಷ್ಯರು ರಾವಣನ ಕೊಲೆಗಾಗಿ ರಾಮನನ್ನು ಕೊಂಡಾಡಿದರೆ, ಕವಿಗೇಕೆ ಆ ಭ್ರಾಂತಿ? ಒಂದು ದಿನ ಗಂಗಾನದಿಯ ತಿಳಿ ನೀರಿನಲ್ಲಿ ಸ್ನಾನಮಾಡುತ್ತಿರಲು ತಾನು ಕಂಡ ದೃಶ್ಯ ಸೌಂದರ್ಯದಿಂದ ಆತ್ಮ ದರ್ಶನಕ್ಕೆ ಏರಿದ ರಸ ಸಮಾಧಿಗಾಗಿ ಅವನ ಪಾದಕಮಲಗಳಿಗೆ ನಮಸ್ಕರಿಸುತ್ತೇನೆ.

ರಮಣೀಯ ಪೂರ್ವಗಿರಿ ವನಸುಂದರಿಯ ರಮಣನೆನ್ನುವಂತೆ ಉದಯರವಿಯು ಕಾಣಿಸಿಕೊಂಡನು. ಗಿರಿವನಪ್ರಿಯರಾಮನು ಆ ಪ್ರಕೃತಿ ಪೂಜಾಸುಖ ರಸದ ಪ್ರೀತಿಗೆ ಒಳಗಾದನು. ತಾನೊಬ್ಬನೆಯೆ ಹೊಂಬಿಸಿಲ ಚುಂಬನದ ಹಸುರು ಕಾಡಿನ ನಡುವೆ ಪಿಕರಾಳ, ಕಾಜಾಣ, ಕಾಮಳ್ಳಿ, ಕೋಗಿಲೆ, ಗಿಳಿಗಳ ಕೊರಲಿನ ದನಿಯ ಜೇನನ್ನು ಸವಿಯುತ್ತ ಹೋದನು. ಮಂದಾಕಿನಿಯ ಸಿರಿಯ ಕಣ್ ಸೆಳೆಯುವ ನೋಟವನ್ನು ನೋಡಿದನು. ಆ ಶುಭಜಲದ ರಮ್ಯ ನದಿಯು ತಾಯಿ ಕೌಸಲ್ಯೆಯಂತೆ ಹರಿಯುತ್ತ ರಾಮನ ಮನಸ್ಸಿಗೆ ಶಿಶುತನವನ್ನುಂಟುಮಾಡಿತು. ಮಾತೃದರ್ಶನ ದೀಪ್ತ ಗೌರವದಿಂದ ಕೈ ಮುಗಿದನು. ಆ ಪೂಜ್ಯ ಮಂದಾಕಿನಿಯ ಮಳಲ ರಾಶಿಯ ತೊಡೆಯ ತೊಟ್ಟಿಲಿಗೆ ನಡೆದನು. ತಾಯಿಯ ಅಕ್ಕರೆಯ ಸಕ್ಕರೆಯೆ ರಾಶಿಗೊಂಡಂತೆ ಚಿತ್ರಮಯ ಬಿಳುಪಾದ ಮರಳರಾಶಿ ಎರಡೂ ಪಕ್ಕದಿಂದ ಮುತ್ತಿಟ್ಟಿತು.

ತೀರದಲ್ಲಿ ಫಲಪುಷ್ಪಗಳ ಭಾರವನ್ನು ಹೊತ್ತ ತರುಲತಾ ಸಮೂಹವು ಮಣಿಯಂತೆ(ಮುತ್ತು ರತ್ನ ವಜ್ರ) ಶುಭ್ರವಾದ ನದಿಯ ಎದೆಯ ಕನ್ನಡಿಯಲ್ಲಿ ಪ್ರತಿಫಲಿಸುವಂತೆ ಬಾಗಿದ್ದವು. ನದಿಯು ತೆರೆತೆರೆಯ ಕೈಗಳಿಂದ ತನ್ನ ಮನೋಹರ ಬಾಣದಂತಹ ಜಡೆಯನ್ನು ಬಾಚಿಕೊಂಡಂತೆ ಕಾಣುವುದನ್ನು ನೋಡಿ – ಹೂಗಳು ಮಳೆಯಂತೆ ಸುರಿದು ಸಿಂಗರಿಸುತ್ತಿದ್ದವು. ಆ ರಸಋಷಿ ರಘುರಾಮನಿಗೆ ಹಕ್ಕಿಗಳ ಇಂಚರದ ಉಲಿತವೆ ಕಾಲ್ಗೆಜ್ಜೆ ಕಿಂಕಿಣಿಯಂತಾಗಲು ನರ್ತಿಸುವ ತರುತಿಲೋತ್ತಮೆಯು ಚಿತ್ರಕೂಟದಲ್ಲಿ ಇಂದ್ರಲೋಕವನ್ನು ಸೃಷ್ಟಿಸಿದಳು. ಅವನು ಆ ಬೆಳಗಿನ ಸಂಪತ್ತನ್ನು ಸವಿಯುತ್ತ, ಮೈಯಲ್ಲಿ ಹರಿಯುವ ರಕ್ತವೆಲ್ಲವು ಮಿಂಚು ಹೊನಲಾಗಲು ಸ್ನಾನಕ್ಕಾಗಿ ನೀರಿಗೆ ಇಳಿದನು.

ಬಂಡೆ ಬಂಡೆಯ ನಡುವಿನ ಜಲ ನಿಂತು ನಿಂತು ನಿರಂತರವಾಗಿ ಸ್ವರಹೊಮ್ಮಿಸುವ ಶ್ರುತಿಗೆ, ಉಪನಿಷತ್ತಿನ ಶ್ರುತಿಯ ಮಂತ್ರಘೋಷವನ್ನು ಬೆರಸಿ ನೀರಿನಲ್ಲಿ ಆಡಿದನು. ಅದನ್ನು ನೋಡಿ ಪೃಥ್ವಿಯು ಪುಲಕಗೊಂಡು ನಲಿಯಿತು. ಹೀಗೆ ಸ್ನಾನ ಮಾಡುತ್ತಿರಲು


ಚೆಲುವಿನ ಚೆಲುಮೆ ಕಣ್ಣನ್ನು ಪ್ರವೇಶಿಸಿ ಪ್ರಾಪ್ತವಾಯಿತೊ ಎಂಬಂತೆ ಆಗಸದ ಅಂಚಿನಿಂದ ಒಂದು ಕಾಣ್ಕೆ ಗೋಚರಿಸಿತು :

ಬಾನಿನ ಮುಡಿಯ, ಹೊಳೆಯ ಅಡಿಯ, ಬೆಟ್ಟದಡವಿಯ ದಡದ ಚಿತ್ತ ಭಿತ್ತಿಯಿಂದ ಹೊಮ್ಮಿ ಸಾಲಾಗಿ, ನಿಧಾನವಾಗಿ ಹಾರುತ್ತ ಬಿಳುಪಿನ, ಬೆಣ್ಣೆನುಣ್ಣನೆಯ ಒಂದು ಚಿತ್ರಣವೆನ್ನುವ ಬೆಳ್ವಕ್ಕಿ ಪಂಕ್ತಿ ತೇಲಿ ಬಂದಿತು.

ಅದನ್ನು ದಾಶರಥಿಯು ರಸವಶನಾಗುತ್ತ ನೋಡಿದನು. ಹಾಗೆ ನೋಡುತ್ತ ಇರಲು ತಾನೆ ಹೊಳೆಯಾದಂತೆ, ತಾನೆ ಅಡವಿಯಾದಂತೆ, ತಾನೆ ಗಿರಿಯಾದಂತೆ, ತಾನೆ ಬಾನಾದಂತೆ, ತಾನೆ ಎಲ್ಲವೂ ಆದಂತೆ ಆಯಿತು. ಮತ್ತು ತನ್ನಲ್ಲಿ ಅಧ್ಯಾತ್ಮವಾದಂತೆ ಭೂಮಾನುಭೂತಿಯ ರಸಸಿದ್ಧಿಯಿಂದ ಮೈಮರೆತನು.

ಹೇಳು, ಆ ರಾಮನ ಅಧ್ಯಾತ್ಮ ಸಿದ್ಧಿಯು ಸಕಲ ಲೋಕಕ್ಕೆ ಸಾರುವ ಕಿರೀಟದಂತೆ ಉನ್ನತವಾದ ಭಗವತ್ ಸಾಕ್ಷಿಯಲ್ಲವೆ!

❑



~~~~~~~~~~~~~~~~~~~~~~~ ಸಂಚಿಕೆ – ೯ ~~~~~~~~~~~~~~~~~~~~~~~

ಪಾದುಕಾ ಕಿರೀಟಿ

"ಮೈಥಿಲಿಯೆ, ಇದೊ, ಗಿರೀಂದ್ರನ ಆಸ್ಥಾನದಂತೆ ಶೋಭಿಸುವ ಕಾನನಶ್ರೀಯನ್ನು ನೋಡು. ಪ್ರಾತಃಸಮಯವು ಸೂರ್ಯ ರಶ್ಮಿಯ ನೂಲುಗಳಿಂದ ಸಿದ್ಧಪಡಿಸಿದ ತೇಜಸ್ಸಿನ ವಸ್ತ್ರವನ್ನು ಹೊದ್ದು, ನೋಡುವವರಿಗೆ ಪ್ರೀತಿ ಸಂತೋಷವು ಉಂಟಾಗುವಂತೆ ಹಬ್ಬಿರುವುದನ್ನು ನೋಡು. ಭದ್ರೆಯೆ, ಅದೊ, ರೋಮಾಂಚನಗೊಳಿಸುವ ಮಂಜುಳವೂ ಮನೋಹರವೂ ಸಹೃದಯರಿಂದ ಸಂಪೂಜಿತವೂ ಆದ ವಿವಿಧ ಪಕ್ಷಿಗಳ ಗಡಿಬಿಡಿಯಿಂದ ಕೂಡಿದ ಉಲ್ಲಾಸದ ಕುಕಿಲನ್ನು ಆಲಿಸು !
~~~~~~~~~~~~~~~~~~~~~~~

'ನನ್ನ ಮನಸ್ಸು ಹೂವಾಗಿ, ತಳಿರಾಗಿ, ಬಿಳಿದಾಗಿ, ಕೆಂಪಾಗಿ, ಹಸುರಾಗಿ, ಹಳದಿ ನೀಲಿಗಳಾಗಿದೆ. ತನಗೆ ತಾನೆ ರಂಗು ರಂಗಿನಲ್ಲಿ ಅಲೆಯುವ ತರತರದ ಅಲೆಗಳಾಗಿ, ಗರಿ ಹಗುರವಾಗಿ ಎಲೆಗಳ ಹಸಿರು ವರ್ಣದ ಕಡಲ ವಿಸ್ತೀರ್ಣದಲ್ಲಿ ತೇಲುತ್ತಿದೆ. ಮನಸ್ಸು ಅಯೋಧ್ಯೆಯನ್ನು ಮರೆಯುತ್ತಿದೆ. ಹುಟ್ಟಿದ ಸ್ಥಳವನ್ನು ಬಿಟ್ಟ ದುಃಖವನ್ನು ಮರೆಯುತ್ತಿದೆ. ಹುಟ್ಟು ಗೆಳೆಯರನ್ನು ಅಗಲಿದ ಅಳಲ ಬೇಗೆಯನ್ನು ಮರೆಯುತ್ತಿದೆ.

'ಕಾಂತೆಯೆ, ನೀನು ಬಳಿಯಲ್ಲಿದ್ದರೂ–ಕಾಂತಾರವು ಚೆಲುವಿನಲ್ಲಿ ನಿನ್ನನ್ನು ಮೀರಿಸುತ್ತದೆ. ನಿಜವಾದುದಕ್ಕೆ ಮತ್ಸರವೇಕೆ? ಅದೊ ನೋಡು. ಎಳೆಯ ಬಿಸಿಲಿನಲ್ಲಿ ಮಲೆಯ ಮಂಡೆಯ ಬಂಡೆಯಾಗಿರುವ ರತ್ನಶಿಲೆಯು ಹೇಗೆ ಹೊಳೆಯುತ್ತಿದೆ ! ಜಲಪಾತವು ಸಿಂಹಘರ್ಜನೆಯನ್ನು ಅಡಗಿಸುವಂತೆ ಧುಮ್ಮಿಕ್ಕಿ ಘೋಷಿಸುತ್ತ ತನ್ನ ಕೇಸರಗಳನ್ನು ಕೆದರುತ್ತಿರುವುದನ್ನು ಆಲಿಸು. ರಮಣಿಯೆ ಬಾ, ಕಣಿವೆಗೆ ಇಳಿದು ಅದರಡಿಗೆ ಹೋಗಿ ಆ ಭೀಷ್ಮ ಸಂಮೋಹ ದೃಶ್ಯವನ್ನು ನೋಡೋಣ ಬಾ! ಭಯಂಕರ ಪ್ರಕೃತಿ ಸುಂದರಳಲ್ಲವೆ?'

ಮಹಿಮೆ ತಾಂ ಮಾಳ್ಪುದನಿತುಂ ಮಹತ್‌ಕಲೆಯಲ್ತೆ !

ತೇಜಸ್ವಿ ರಾಮಚಂದ್ರನು, ಶಶಿಯಂತಹ ಸುಂದರಮುಖದ ಲಾವಣ್ಯವತಿ ಸೀತಾಸತಿಗೆ ಮನೋಹರವಾದ ಪರ್ವತಗಳ ಅರಣ್ಯ ಸಂಪತ್ತನ್ನು ತೋರಿಸುತ್ತ ಬಂದನು. ಮುಂದೆ ಮಂದಾಕಿನಿಯ ಕಪ್ಪುಹೊಳೆ ಹೊಳೆಯುತ್ತಿತ್ತು. ಅದು ಕಣ್ಣಿನ ಕಪ್ಪು ಬಣ್ಣವೆ ನೀರಾಯಿತೊ, ಬಾನಿನ ನೀಲಿ ತೊರೆಯಾಯಿತೊ, ಗಿರಿವನದ ಶ್ಯಾಮಲತೆಯು ಸೋರಿ ಕಣಿವೆಯನ್ನು ಸೇರಿ ಜಲರೂಪಿನಿಂದ ಹರಿಯುತ್ತಿದೆಯೊ ಎಂಬಂತಿತ್ತು. ಗಿರಿವನಪ್ರಿಯನು ಅಲ್ಲಿಯ ದೃಶ್ಯ ಸೌಂದರ್ಯದಿಂದ ಉದ್ದೀಪನಗೊಂಡನು. ವೈಣಿಕನಾದವನು ಹಾಡು ನುಡಿಸುವ ಮೊದಲು ನಿಧಾನವಾಗಿ ವೀಣೆಯನ್ನು ಮಿಡಿಯುವನು. ಹಾಗೆ ಜನಕಜಾಪ್ರಿಯನು ನಲ್ಲೆಯ ಗಲ್ಲವನ್ನು ಮುಟ್ಟಿ ಮುದ್ದಾಡುತ್ತ ನುಡಿದನು:

'ನಾವು ಇಲ್ಲಿಗೆ ಬಂದು ಒಂದು ಜೇನ್ ತಿಂಗಳಾಯಿತು. ಚೆನ್ನೆ, ಮನದನ್ನೆಯೆ ಕೇಳು, ಒಂದು ತಿಂಗಳಾಗಿದ್ದರೂ ಈ ಮಂದಾಕಿನಿಯ ನೋಟದಿಂದ, ರಾಜಧಾನಿಯಲ್ಲಿ ಜತೆಗೂಡಿ ನಲಿದಾಡಿ ಬಾಳಿದಂತೆ ಇನ್ನೊಮ್ಮೆ ಬಾಳುವ ಆಸೆ ಮನಸ್ಸಿನಲ್ಲಿ ಉಂಟಾಗುತ್ತಿದೆ. ಒಲವು ಹತ್ತಿರವಿರಲು ಚೆಲುವು ಮೋಹವನ್ನು ಚಿಗುರಿಸುತ್ತದಲ್ಲವೆ? ನಿನ್ನಂತೆಯೇ ಈ ನದಿ ಚೆಲುವೆ. ನೀರ ಸೀರೆಯ ತೆರೆಯ ನಿರಿಗೆಯಿಂದ ಮೆರೆಯುವ ಈಕೆಯನ್ನು ಕಂಡು ಮಾವನ ಮುದ್ದುಮಗಳೆ ಮತ್ಸರಿಸಬೇಡ !'

'ಓ ನನ್ನ ಹೃದಯವೆ, ಮತ್ಸರವೇಕೆ ? ಹೊಳೆಯ ಕನ್ನಡಿಯಲ್ಲಿ ನಾನೇ ಪ್ರತಿಫಲಿಸುತ್ತಿರಲು, ಅದು ನಿನಗೆ ಭ್ರಮೆಯನ್ನುಂಟು ಮಾಡಿದೆ! ನನ್ನ ರಾಮಚಂದ್ರನು ಪ್ರಕೃತಿಲೋಕದಲ್ಲಿ ನನ್ನಲ್ಲದೆ ಅನ್ಯರನ್ನು ಕಾಣಬಲ್ಲನೆ?'

ಮಡದಿಯ ನುಡಿ ಕಿವಿಗೆ ಜೇನಾಗಲು, ರೋಮಾಂಚನಗೊಂಡ ರಘುರಾಮನು ರತೋತ್ಸವಕ್ಕೆ ಆವೇಶಗೊಂಡನು.

'ಚೆಲುವೆಯೆ, ನೋಡಲ್ಲಿ–ತೊರೆಯ ನಡುವಿನ ನಿನ್ನ ಮೈಬಣ್ಣದ ಮರಳರಾಶಿಯ ಎಡೆಯಲ್ಲಿ ಬೆಳ್ದಾವರೆಯ ಬಿಳುಪು, ಕನ್ನೈದಿಲೆಯ ಕಪ್ಪು, ಕೆಂದಾವರೆಯ ಕೆಂಪುಬಣ್ಣಗಳು ಹೂಮಾಲೆಯನ್ನು ಕಟ್ಟಿದಂತೆ ಆ ಹೂ ಹಾಸಿಗೆಯ ಮೇಲೆ ಕಂಗೊಳಿಸುತ್ತಿವೆ. ಅಲ್ಲಿ ನಿನ್ನ ಕುಚಗಳಂಥಹ ಚಕ್ರವಾಕ ಪಕ್ಷಿಗಳು ಹೇಗೆ ಕೊಕ್ಕು ಕೊಕ್ಕನ್ನು ಮುಟ್ಟಿ ಮುದ್ದಾಡಿ, ಮುದ್ದಿನ ಇಂಚರವನ್ನು ಹೊಮ್ಮಿಸಿ ಲಲ್ಲೆಯಿಂದ ಮಾತಾಡುತ್ತಿವೆ. ಅವು ತೋರುತ್ತಿವೆ, ಸಾರುತ್ತಿವೆ, ಬೀರುತ್ತಿವೆ ರತಿ ಕೇಳಿಯ ಆಸಕ್ತಿಯನ್ನು !

'ನಲ್ಲೆಯೆ ನಾಚಿಕೊಳ್ಳಬೇಡ. ನಿನ್ನ ನಾಚಿಕೆಯ ಅರ್ಥ ಏನೆಂದು ನಾನು ಬಲ್ಲೆ. ಬಾ ನೀರೆ, ನೀರಿಗಿಳಿದು ನೀರಾಟ ಆಡೋಣ. ನೋಡು ಅಲ್ಲಿ ಹಳದಿಗೆಂಪಿನ ಹೂವಿನ ಎಸಳು ಉದುರಿ ಹೊಳೆಯೇ ಓಕುಳಿ ಆಡಲು ಕರೆಯುತ್ತಿದೆ. ರಮಣಿಯೆ ಬಾ. ನಾವು ಅಲ್ಲಿಗೆ ಸೊಗಸಾದ ಸ್ನಾನದ ಆನಂದವನ್ನು ಸವಿಯಲು ಹೋಗೋಣ.'

ರಾಮ ಸೀತೆಯರು ನೀರಿಗೆ ಇಳಿದರು. ಪರ್ವತ ಅರಣ್ಯ ಪೃಥ್ವಿಯು ಆ ಸ್ನಾನ ದರ್ಶನಕ್ಕೆ ಕಣ್ಣಾದವು. ಮಹಿಮೆ ತಾನು ಮಾಡುವುದೆಲ್ಲವೂ ಮಹತ್ ಕಲೆಯಲ್ಲವೆ! ಮುಳುಗಿದರು. ಮೂಡಿದರು; ಸರಸಕ್ಕಾಗಿ ಕಾಡಿದರು; ಸುಖಗಣಿಯನ್ನು ತೋಡಿದರು. ಬಯಸಿ ಒಂದೇ ಸಮನೆ ನೋಡಿದರು; ಬೆನ್ನು ಅಟ್ಟುತ್ತ ಓಡಿದರು. ನೀರಾಟವಾಡಿದರು. ಹೃದಯ ಮಧುವನದಲ್ಲಿ ಸುಧೆ ಹರಿಯುವಂತೆ ಮಾಡಿದರು. ಸಂಯಮಿಗಳಾದ ಆ ದೇವ ದಂಪತಿಗಳು ಪ್ರೇಮಾನುರಾಗದ ಹಂಬಲು ತೊರೆದ ಮಾನಸ ಭೋಗಯೋಗಿಗಳು. ಅವರು ಬೆಟ್ಟದ ತಪ್ಪಲಿನ ಹೊಳೆಯ ತಣ್ಣನೆಯ ನೀರಿನಲ್ಲಿ ಮನ ತಣಿಯುವಂತೆ ಸ್ನಾನಮಾಡಿದರು!

ಘೋರಕಾನನದ ದೂರದಲ್ಲಿಯ ಗಿರಿಭುಜ ಎಲ್ಲೆಯಿಂದ ಲಕ್ಷ್ಮಣನು ಕರೆದನು. ಅವನ ಕೊರಳ ದನಿಯನ್ನು ಆಲಿಸಿದ ಅನಂತರ ಅವರು ನಡುಬಾನಿಗೆ ಹಗಲೇರಿರುವುದನ್ನು ನೋಡಿ ತಟ್ಟನೆ ಎಚ್ಚೆತ್ತರು. ನೀರಾಟದಲ್ಲಿ ತಲ್ಲೀನರಾಗಿದ್ದ ಅವರೀರ್ವರು ಬೇಗನೆ ದಡಕ್ಕೆ ಬಂದರು. ನಾರುಡೆಯನ್ನು ಉಟ್ಟರು. ತನುವಿನ ಆಯಾಸವನ್ನು ಲೆಕ್ಕಕ್ಕೆ ತೆಗೆದುಕೊಳ್ಳದೆ ಬೆಟ್ಟವನ್ನು ಏರಿದರು.

'ಮೈದುನನೆ, ನೆಳಲಿಗೇನ್ ನಡೆವವನ ತೊಂದರೆಯೆ ?'

'ಅಗೋ ತಮ್ಮನು ಮರಗಳ ಗುಂಪಿನ ಮಧ್ಯದ ಕಲ್ಲರೆಯ ಮೇಲೆ ಸಾಕಷ್ಟು ಹೊತ್ತಿನಿಂದ ಕಾಯುತ್ತಿದ್ದಾನೆ. ರುಚಿಕರವಾದ ಆಹಾರವನ್ನು ತಂದಿದ್ದಾನೆ. ಸಖಿಯೆ ಬೇಗ ಬಾ, ನಿನ್ನ ದೆಸೆಯಿಂದ ಇಷ್ಟು ತಡವಾಯಿತು !'

ಎಂದ ರಾಮಚಂದ್ರನ ಮಾತಿಗೆ ಸೀತೆಯು,

'ಆಃ ! ಜಾಣ ಮಾತಾಡಿದಿರಲ್ಲವೆ? ತಡವಾದುದಕ್ಕೆ ನಾನೇ ಕಾರಣವಾಗಿರುವೆ. ಸತ್ಯನಿಧಿಯೆ, ಆದರೂ ನನ್ನಿಂದಲೇ ತಡವಾಯಿತೆಂಬುದು ನಿಜವೆ, ಹೇಳು?

ಎಂದು ನುಡಿದು, ಓರೆನೋಟದಿಂದ ನೋಡಿದಳು. ಭೂಮಿಯ ಮಗಳ ಮಾತಿನ ತಾತ್ಪರ್ಯವನ್ನು ತಿಳಿಯುತ್ತ ಎಳೆನಗೆ ಸೂಸಿ ದಾಶರಥಿ

'ತರ್ಕ ಸಿಂಹಿಣಿಯೆ, ಈ ಜಾಣ್ಮೆ ಸಾಕು. ಬೇಗ ಬಾ'

ಎಂದು ಹೇಳಿ ಲಕ್ಷ್ಮಣನಿದ್ದೆಡೆಗೆ ಏರಿ ಹೋದನು. ಹಿಂದಿನಿಂದ ದೇವಿಯು ಬೆಟ್ಟವೇರಿ ಬರುತ್ತಿರುವುದನ್ನು ಕಂಡು ಸುಮಿತ್ರಾತ್ಮಜನು,

'ಅತ್ತಿಗೆಯನ್ನು ಏಕೆ ಈ ರೀತಿ ದಣಿಸುವಿರಿ? ಅಣ್ಣಯ್ಯ ಕಾಡು ಕೊರಕಲಿನಲ್ಲಿ ಏಕೆ ಅಲೆದಾಡಿಸುವಿರಿ?' ಎಂದನು. ಆಗ ಸೀತೆಯು,

'ಮೈದುನನೆ, ನೆಳಲಿಗೇನು ನಡೆವವನ ತೊಂದರೆಯೆ?' ಎಂದು ನುಡಿದಳು.

ಗಂಡನ ಕಡೆ ತಿರುಗಿ ಸಿಡುಕು ಮೋರೆಯಿಂದ ನೆಲ ಗುಡುಗಿದಂತೆ ನುಡಿದಳು,

'ಗಂಡು ಬರಿಹೊಟ್ಟೆ! ಕೂಳಿರುವ ಕಡೆಗೆ ಪ್ರಾಣ ಹೋದುದನ್ನು ಲೆಕ್ಕಿಸದೆ ನುಗ್ಗಿ ಹೋಗುವುದು. ಏನು ನಾಚಿಕೆಗೇಡೋ!'

'ಸೊಬಗಿನ ಅರಸಿಯೆ, ನೋಡಿಲ್ಲಿ' ಎಂದು ರಾಮನು ತೋರಿಸುತ್ತ, 'ನೋಡಿಲ್ಲಿ! ಮುನಿಸೆಲ್ಲವನ್ನು ಇಲ್ಲವಾಗಿಸುವ ರುಚಿಯಾದ ಹೊಸ ಜೇನು ದೊನ್ನೆಯಲ್ಲಿ ಹೊಳೆಯುತ್ತಿದೆ! ಇಗೊ ನೋಡು, ಹೊಸಹಾಲು, ಹೊಸಹಣ್ಣು, ಹೊಸಗೆಡ್ಡೆಗೆಣಸು! ಮೃದುವಾದ ಮಾಂಸವನ್ನು ಬೆರಸಿ ಮಾಡಿದ ಅನ್ನ ಕಮ್ಮಗೆ ಮೂಗನ್ನು ಒಲಿಸಿ, ಮನಸ್ಸನ್ನು ಭೋಜನಕ್ಕೆಳೆಯುತ್ತಿದೆ. ಮುಗ್ಧೆಯೆ ತೆಗೆದುಕೊ. ಮೊದಲು ಈ ಹಾಲನ್ನು ಕುಡಿ. ಅನಂತರ ಹೊಚ್ಚಹೊಸ ಹಣ್ಣುಗಳನ್ನು ತಿನ್ನಲು ಕೊಡುತ್ತೇನೆ..'

ಸೀತೆಯು ಭೋಂಕನೆ ಬೆದರಿ ನಿಂತಳು. ಕಡವೆಯ ಹಿಂಡೊಂದು ಕಣಿವೆಯಲ್ಲಿ ಸ್ವಲ್ಪದೂರದಲ್ಲಿ ಅತಿರಭಸದಿಂದ ಧಾವಿಸುತ್ತಿತ್ತು! ಅದನ್ನು ಹೆಚ್ಚು ಗಮನಿಸದೆ ಮತ್ತೆ ಉಣ್ಣುತ್ತಿರಲು, ಸ್ವಲ್ಪ ಹೊತ್ತಿನಲ್ಲಿಯೆ ಪುನಃ ಕಾಡುಹಂದಿಗಳ ತಂಡವು ಹೂಂಕರಿಸಿ ನುಗ್ಗಿತು! ಆಶ್ಚರ್ಯದಿಂದ ಸೋಜಿಗಕ್ಕೊಳಗಾಗಿ ನೋಡುವಷ್ಟರಲ್ಲಿ ಮತ್ತೊಂದು ಜಿಂಕೆಗಳ ಹಿಂಡು ಬೆದರಿ ಓಡಿ ಮರೆಯಾಯಿತು!

'ಬೇಟೆಗಾರರು ಅರಣ್ಯಕ್ಕೆ ನುಗ್ಗಿ ಪ್ರಾಣಿಗಳನ್ನು ಬೇಟೆಯಾಡಲು ಪೊದೆಗಳಿಂದ ಎಬ್ಬಿಸಿ ಹೊರಡಿಸಿದಾಗ(ಸೋವು) ಅವು ಕಾಡನ್ನು ತೊರೆದು ಓಡುವಂತೆ ಇಂದು ಹೀಗೇಕೆ ಪ್ರಾಣಿಗಳು ಪಲಾಯನ ಮಾಡುತ್ತಿವೆ?' ಎಂದು ರಾಮನು ಹೇಳಲು ಸೀತೆಯು,

'ಪ್ರಾಣೇಶ, ಅಲ್ಲಿ ನೋಡು ದೊಡ್ಡ ಆನೆಗಳ ಹಿಂಡು !' ಎಂದು ಭಯ ವ್ಯಕ್ತಪಡಿಸಿದಳು. ಅದನ್ನು ಕಂಡ ಲಕ್ಷ್ಮಣನು ಅಳುಕುತ್ತ ನುಡಿದನು:

'ಅಣ್ಣಯ್ಯ, ಅಗೋ ಪರ್ವತದ ತುದಿಯಿಂದ ಬಂಡೆಗಳು ಉರುಳುವಂತೆ ಧಾವಿಸುತ್ತಿವೆ! ದೇವಿಯರಿಗಾಗಿ ಪರ್ಣಕುಟಿಗೆ ಹೋಗೋಣ!'

ಮೂವರು ಬೇಗ ಬೇಗನೆ ಎಲೆಮನೆಯ ನೆಲೆಯೆಡೆಗೆ ನಡೆದರು. ಲಕ್ಷ್ಮಣನ ಕೈ ಧನುಸ್ಸು ಬಾಣಗಳನ್ನು ಬೇಗನೆ ಹಿಡಿಯಿತು. ನೋಡುವಷ್ಟರಲ್ಲಿ ಸಿಂಹ ಘರ್ಜನೆಯಿಂದ, ಹುಲಿಯ ಆರ್ಭಟ ಗಜದ ಘೀಂಕೃತಿಯಿಂದ, ಹಂದಿಗಳ ಘೋರ ಹೂಂಕಾರದಿಂದ ಅಡವಿ ನಡುಗಿತು. ಸಹೋದರನ ಕೋದಂಡದಿಂದ ಸಿಡಿದೆದ್ದ ಠಂಕಾರವನ್ನು ನಿಲ್ಲಿಸೆಂದು ರಘುರಾಮನು ಸನ್ನೆ ಮಾಡಿದನು. ಕಣ್ಣಾಲಿಗಳಿಂದ ನಿಟ್ಟಿಸಿ ಹೀಗೆ ಹೇಳಿದನು:

'ನೆಲ ನಡುಗೊ? ಬಾನ್ಗುಡುಗೊ? ಅದೊ ಕೇಳು, ಉಗ್ರಧ್ವನಿ ದೂರದ ಸಮುದ್ರ ಘೋಷವೆನ್ನುವಂತೆ ಮೊಳಗುತ್ತಿದೆ. ಮತ್ತೆ ಹೆಚ್ಚಿತೊ ಎನ್ನುವಂತೆ ಹುಯಿಲ ಅತಿಶಯ ಬಲದ ಭೈರವ ರವ ಸಮೀಪಕ್ಕೆ ಬರುತ್ತಿದೆ ! ಕಿರಾತ ದಸ್ಯುಗಳ ಘೋಷವೊ? ರಾಕ್ಷಸರ ದೈತ್ಯ ಕೋಲಾಹಲವೊ? ಏನೆಂಬುದು ತಿಳಿಯುತ್ತಿಲ್ಲ. ಅಲ್ಲಿನೋಡು, ಆ ಧೂಳಿಗಾಳಿ ಗಗನಕ್ಕೆ ಏರಿ ಹಬ್ಬುತ್ತಿದೆ. ಎರಡು ಬೆಟ್ಟಗಳ ನಡುವಿನ ಕಣಿವೆಯನ್ನು ಆವರಿಸಿ ತಬ್ಬುತ್ತಿದೆ. ಕಾರಣವೇನೆಂದು ತಿಳಿಯಲು, ಸೋದರನೆ ಎತ್ತರವಾದುದನ್ನು ಹತ್ತಿ ಏನೆಂದು ನೋಡು.'

ನೆಲದ ಸಿರಿ ತಾನ್ ಒಲುಮೆಗೋಸುಗವಲ್ತೆ ?

ಉದ್ವೇಗ ಮನಸ್ಥಿತಿಗೊಳಗಾದ ಉಜ್ವಲ ತೇಜಸ್ಸಿನ ಸೌಮಿತ್ರಿಯು ಕಡಿಮೆ ಎಲೆಗಳಿದ್ದು ಒಡಲೆಲ್ಲ ಹೂವಾದ ಸ್ವರ್ಗವನ್ನು ಚುಂಬಿಸುವ ಮರವನ್ನು ಹತ್ತಿದನು. ಅದರ ಎತ್ತರ ಶಿರದ ಗೋಪುರದಲ್ಲಿ ನಿಂತನು. ಪಕ್ಷಿರಾಜ ಗರುಡನ ತೀಕ್ಷ್ಣಕಣ್ಣಿನಂತೆ – ತನ್ನ ಕಣ್ಣಿನಿಂದ ದಿಕ್ಕುಗಳ ಪ್ರದೇಶವನ್ನು ನೋಡಿದನು. ನೋಡುತ್ತ ಪೂರ್ವದಿಂದ ಉತ್ತರಕ್ಕೆ ಮುಖ ತಿರುಗಿಸಲು ಕೆಚ್ಚೆದೆಯ ಕಲಿ ಬೆಚ್ಚಿದನು. ಅನಂತ ಅಮಿತ ಸೈನ್ಯದಿಂದ ಎದ್ದ ದೂಳಿನ ಪ್ರವಾಹವನ್ನು ಕಂಡನು. ನೆಟ್ಟ ದೃಷ್ಟಿಯನ್ನು ಹೊರಳಿಸದೆ ಕಂಗೆಟ್ಟು ಕೂಗಿ ಹೇಳಿದನು:

'ಅಣ್ಣನೇ, ಶೀಘ್ರವಾಗಿ ಬೆಂಕಿಯನ್ನು ಆರಿಸು ! ದೇವಿಯನ್ನು ಗುಹಾಂತರದಲ್ಲಿ ಬಚ್ಚಿಟ್ಟು ಬಾ. ಬೇಗ ಕವಚವನ್ನು ತೊಡು! ಬಿಲ್ಲನ್ನು ಹಿಡಿ! ಬತ್ತಳಿಕೆಯಿಂದ ಹರಿತವಾದ ಮೃತ್ಯುಬಾಣವನ್ನು ತೆಗಿ!'

'ಏನು? ಏನು?'

'ಏನೆಂಬ ಪ್ರಶ್ನೆಯೆ? ಕಾಲಾಳು, ದೊಡ್ಡಾನೆ, ತೇರು, ಕುದುರೆಯು ಮಾರಿಬೇನೆಯೊಡನೆ ಸೇನೆಯು ಬರುತ್ತಿದೆ. ಆಯುಧಗಳ ಕಾಂತಿಯು ವೈರಿ ಎಂಬುದನ್ನು ದಿಟವಾಗಿಸುತ್ತಿದೆ. ಅಗೊ, ರಾವುತರು, ಮಾವುತರು ಲಗ್ಗೆಹಾಕುವಂತೆ ನುಗ್ಗುತ್ತಿದ್ದಾರೆ. ಹಾ, ತಡೆ ತಡೆ. ಅದೇನು ಕೋವಿದಾರ ಧ್ವಜ! (ಕೋವಿದಾರ ಗಿಡದ ಚಿಹ್ನೆಯುಳ್ಳ ಪತಾಕೆ) ಆರ್ಯನೇ, ಸಂದೇಹವಿನಿತೂ ಇಲ್ಲ. ಅಗೋ, ಮಹೋನ್ನತವು ಭೀಮಕಾಯವು ಆದ ಮರಗಳೆಡೆಯಿಂದ ರವಿಕುಲದ ಕೇತನ ತೂಗಿ ಬರುತ್ತಿದೆ. ನಿತ್ಯ ಪರಿಚಿತವಾದ ಮಂಗಳವಾದ ಕೋವಿದಾರ ಧ್ವಜ!

'ಅಯ್ಯೊ, ಆರ್ಯನೆ ಕೇಡು ಬಂದಿತು! ಇದರ ಅರ್ಥವನ್ನು ಮತ್ತು ನಮ್ಮ ಅನರ್ಥವನ್ನು ತಿಳಿದೆನು. ಹಿಂದಣ ಅಪಕಾರಿ ಮತ್ತು ರಾಜ್ಯಕಾಮುಕೆ ಕೈಕಯಿಯ ಮಗ ದುಷ್ಟಮತಿ ಭರತ. ಅವನು ದುರುದ್ದೇಶದಿಂದ ತನ್ನ ರಾಜ್ಯವನ್ನು ಶತ್ರು ರಹಿತವಾಗಿಮಾಡುವುದಕ್ಕೋಸ್ಕರ ಬಂದಿದ್ದಾನೆ. ತಡಮಾಡಿದಷ್ಟು ನಮಗೆ ಕೇಡು. ಬೇಗ ಈ ಗಿರಿಯ ದುರ್ಗ ಪ್ರದೇಶವೊಂದನ್ನು ಸೇರಿ ನಾವು ಯುದ್ಧಕ್ಕೆ ಸಿದ್ಧರಾಗೋಣ... ಅವನನ್ನು ಅವನ ಸೇನೆಯನ್ನು – ಆನೆಗೆ ಸಿಕ್ಕಿ ಭಗ್ನವಾಗುವ ಮರದಂತೆ ಮಾಡೋಣ!'

ಎಂದು ಹೇಳುತ್ತ ಮರದಿಂದ ಇಳಿದು ಉಲ್ಕೆಯಂತೆ ನೆಲಕ್ಕೆ ಧುಮುಕಿದನು.

'ತಾಳ್ಮೆ, ವತ್ಸ ತಾಳ್ಮೆ. ದುಡುಕದಿರು. ಭರತದೇವನು ಪ್ರಾಜ್ಞ ಅವನಿಪತಿ ಎಂಬುದನ್ನು ಮರೆಯದಿರು. ನಾವು ಪ್ರಜೆಗಳೆಂಬುದನ್ನು ನೆನೆ. ಸತ್ಯಕ್ಕಾಗಿಯೇ ರಾಜ್ಯವನ್ನು ನೀಡಿರುವ ನಮಗೆ ಹಿಂಸೆ ಶೋಭಿಸುವುದಿಲ್ಲ. ಭರತನನ್ನು ಕೊಂದರೆ ಅಪವಾದ ಉಂಟಾಗುವುದಲ್ಲದೆ ಬೇರೆ ಫಲವುಂಟೇ? ನಿನ್ನ ಹಾಗೆಯೇ ಅವನು ನನಗೆ ಪ್ರಿಯ. ನೆಲದ ಸಿರಿಯಿರುವುದು ಪ್ರೀತಿಗೋಸ್ಕರವಲ್ಲವೆ? ಅದನ್ನು ಕೊಂದು ಸಂಪತ್ತಿಗೆ ಅರಸನಾದರೆ ಮರುಭೂಮಿಗೆ ಒಡೆಯನಾದಂತಲ್ಲವೆ? ಸಾಗರ, ಆಗಸ, ಪೃಥ್ವಿಯು ನನ್ನ ಪರಾಕ್ರಮಕ್ಕೆ ದುರ್ಬಲವೆ? ನನಗೆ ಪ್ರಾಣಕ್ಕಿಂತ ಪ್ರಿಯತರವಾದುದು ಧರ್ಮ.

'ನೀನು ಕ್ರೋಧ ಮೂರ್ಛಿತನಾಗಿ ಭ್ರಾತೃವತ್ಸಲ ಭರತನ ಬಗ್ಗೆ ದುರುದ್ದೇಶದ ಆರೋಪ ಮಾಡುತ್ತಿರುವೆ. ನಿನ್ನ ಬಗ್ಗೆ ಅವನು ಯಾವಾಗಲೂ ಅಹಿತವನ್ನು ನುಡಿದಿಲ್ಲ. ಧರ್ಮಶೀಲನನ್ನು ಏಕೆ ನಿಂದಿಸಬೇಕು? ನಮಗೆ ಈ ಧರೆಯನ್ನು ಒಪ್ಪಿಸಲು ಬಂದಿರುವನೇನೊ? ಹಾಗೂ ನಮ್ಮನ್ನು ಊರಿಗೆ ಹಿಂದಿರುಗಿಸಲು ತಂದೆಯನ್ನು ಕರೆತಂದಿರುವನೇನೊ? ಮತ್ತು ಅತ್ಯಂತ ಸುಖಸೇವಿತೆ ಮೈಥಿಲಿಯನ್ನು ಹೇಗೊ ಕಾನನ ಕ್ಲೇಶದಿಂದ ಬಿಡುಗಡೆಗೊಳಿಸಿ ಕರೆದೊಯ್ಯಲು ಬಂದಿರುವನೇನೊ?

'ನೋಡು, ಸೈನ್ಯದ ಮುಂಭಾಗದಲ್ಲಿ ನಮ್ಮ ತಂದೆಯನ್ನು ಒಲಿದ ಆನೆ ಶತ್ರುಂಜಯ ಹೇಗೆ ರಾಜಗಾಂಭೀರ್ಯದಿಂದ ಬರುತ್ತಿದೆ! ಸೌಮಿತ್ರಿ, ಏಕೊ ಏನೊ ಲೋಕಪೂಜಿತದೇವ ದಶರಥನ ಶ್ವೇತಚ್ಛತ್ರ ಕಾಣಿಸುತ್ತಿಲ್ಲ. ಮನಸ್ಸಿಗೆ ಏನೊ ಸಂಶಯ ಉಂಟಾಗುತ್ತಿದೆ...

'ಭದ್ರೆಯೆ, ಇಲ್ಲಿಂದಲೆ ಪಿತೃ ಪದಕಮಲಗಳಿಗೆ ಕೈ ಮುಗಿಯೋಣ. ವತ್ಸ ಲಕ್ಷ್ಮಣ, ಕಾರಣವೇನೆಂದು ತಿಳಿಯದೆ ಅಯ್ಯೊ, ಕಣ್ಣಿಗೆ ಹನಿ ತುಂಬುತ್ತಿದೆ, ಕಂಠಕ್ಕೆ ಶಿಶುವಿನ ಗದ್ಗದ ಉಂಟಾಗುತ್ತಿದೆ. ತಾಯಿ ತಂದೆಯರನ್ನು ಇನ್ನೊಮ್ಮೆ ಕಾಣುವೆನೆಂಬ ಉಲ್ಲಾಸವೇ ಅದಕ್ಕೆ ನಿಜಕಾರಣವಿರಬಹುದು!'

ಎಂದು ಹೇಳುತ್ತ ರಾಮನು ಮೌನಿಯಾದನು. ಲಕ್ಷ್ಮಣನು ಲಜ್ಜೆ ಮತ್ತು ವಿಷಾದವನ್ನು ತುಳಿದಿಕ್ಕುತ್ತ ಆ ಕಡೆಗೆ ಕಣ್ಣನ್ನು ಹರಿಸಿದನು. ಸೀತೆಯು ಪತಿಯ ಆತ್ಮದ ಅನುಕಂಪಕ್ಕೆ ಪ್ರತಿಕಂಪಿಸುವ ವೀಣೆಯ ಉಜ್ವಲ ತಂತಿಯಂತೆ ಪಕ್ಕದಲ್ಲಿ ನಿಂತಳು.

ದೊರೆ ಪಿರಿಯಂಗೆ ತಿರೆಯಿತ್ತು ಪೊರೆಯಿಳಿಸುವನ್ನೆಗಂ ಕುಸಿದು ಕುಗ್ಗಿದ ಬಾಳ್ಗೆ ಶಾಂತಿಯಿಲ್ಲೆನಗೆ

ದಶರಥಾತ್ಮಜನ ಮಹಾಶೋಕದ ಮುಂದಿನ ಕಥಾಲೋಕವನ್ನು ನನಗೆ ತೋರಿಸು. ಚಿತ್ರಕೂಟಕ್ಕೆ ಭರತನ ಆಗಮನ ವಾರ್ತೆಯನ್ನು, ರಾಮಚರಣ ಕ್ಷೇತ್ರ ಯಾತ್ರೆಯನ್ನು ನನಗೆ ಹೇಳು.

ಭ್ರಾತೃವತ್ಸಲನಾದ ಭರತದೇವನು ರಾಜ್ಯದ ಪಟ್ಟವನ್ನು ಒಲ್ಲದೆ, ರಾಮಚಂದ್ರನನ್ನು ಹಿಂದಿರುಗಿಸಿ ಪುರಕ್ಕೆ ಮರಳಿ ಕರೆತರಲು ಅರಣ್ಯಕ್ಕೆ ನಡೆಯುತ್ತಿರುವನು ಎಂಬ ಶುಭವಾರ್ತೆ ಅಯೋಧ್ಯಾ ನಗರಕ್ಕೆ ಹಬ್ಬಿತು. ಭರತನ ಹಿಂದೆ ಜನರು ನಾ ಮುಂದೆ ತಾ ಮುಂದೆ ಎಂದು ಸೈನ್ಯದಂತೆ ಒಟ್ಟುಗೂಡಿದರು. ಹೀಗೆ ಅಯೋಧ್ಯೆಯೇ ಚಲಿಸಿತು.

ಅವರು ದಟ್ಟ ಅಡವಿಯಲ್ಲಿ ಹಾದಿಯನ್ನು ಮಾಡಿಕೊಳ್ಳುತ್ತ, ಕೆರೆಕಟ್ಟೆಬಾವಿಯನ್ನು ತೋಡಿ ನೆಲವನ್ನು ಆರ್ದ್ರಗೊಳಿಸುತ್ತ, ಹಳ್ಳಕೊಳ್ಳಗಳಿಗೆ ಸೇತುವೆ ಕಟ್ಟುತ್ತ ದಾಟಿ ನಡೆದರು. ಕ್ರಮವಾಗಿ ಪ್ರಯಾಣ ಮಾಡುತ್ತ ಅಲ್ಲಲ್ಲಿ ಬೀಡುಬಿಟ್ಟು ರವಿಕುಲದ ನಾಗರಿಕತೆಯೆ ವಿಪಿನ ದೇಶವನ್ನು ಸಂಚಾರಗೈಯುತ್ತ ಆಕ್ರಮಿಸಿತು ಎಂಬಂತೆ ಅಯೋಧ್ಯೆ ಹರಿಯಿತು. ದುಃಖಿ ಭರತನನ್ನು ಹಿಂದಕ್ಕೆ ನೂಕಿ, ರಾಮಚಂದ್ರೋನ್ಮಾದದಿಂದ ಮುಂದಕ್ಕೆ ನಡೆಯಿತು!

ಗುಹನ ಜೊತೆಗೂಡಿ, ಜಾಹ್ನವಿಯನ್ನು ದಾಟಿ, ಋಷಿ ಭರದ್ವಾಜನಿಗೆ ಹಿರಿಯ ಅತಿಥಿಗಳಾಗಿ ನಿಂತರು. ಆನಂತರ ಜೊತೆಗೂಡಿ ಕಾಡಿನ ಹಾದಿ ತೋರುತ್ತ ಬಂದ ಅವರಿಂದ ಬೀಳ್ಕೊಂಡರು. ಹೀಗೆ ಭರತ ನಡೆದು ಬರುತ್ತಿರಲು ಚಿತ್ರಕೂಟವು ಅವನನ್ನು ಕರೆದು ಕಂಗೊಳಿಸಿತು. ನೀಲಮೇಘಶ್ಯಾಮ ರಘುರಾಮನ ಸಂಗದಿಂದ ಘೋರಕಾಡಿನ ರೋಮತನು ನೀಲಿಯೇ ತಾನಾಗಿ ನಿಂತಂತೆ ಇತ್ತು.

ದೊರೆಯ ಮನಸ್ಸನ್ನು ತಿಳಿದು ಜನಸೇನೆಯು, ಮಂತ್ರಾಜ್ಞೆಯಿಂದ ಮೊರೆಯುವ ಕಡಲು ಮೌನವಾಗುವಂತೆ ನಿಶ್ಯಬ್ದವಾಯಿತು. ಪೂಜ್ಯ ಸಾನ್ನಿಧ್ಯವಿರಲು ಚಂಚಲತೆಯು ಸುಸ್ಥಿರವಾಗುವುದೇನು ಅಚ್ಚರಿಯೆ? ಭರತನಿಗೆ ಭಾವ ವೈಭವದಿಂದ ಮಾತು

ತೊದಲಾಯಿತು. ಜೊತೆಗೆ ಒಡಲು ನಡುಗಿತು. ಜೊತೆಗೆ ಕೊರಳಿಗೆ ದೀನ ಗದ್ಗದತೆ ಉಂಟಾಯಿತು. ಎಲ್ಲರನ್ನು ನಿಲ್ಲಲು ಹೇಳಿ, ಬೇಡರ ಅರಸ ಗುಹ, ಶತ್ರುಘ್ನ ಮತ್ತು ಸುಮಂತ್ರರನ್ನು ಬರಲು ಹೇಳಿದನು.

ನಾರುಬಟ್ಟೆಯುಟ್ಟು, ಜಡೆಹೊತ್ತ ದೀನಮುಖಿ, ತಾರುಣ್ಯಕ್ಕೆ ಅಡಿಯಿಡುವ ಕೌಮಾರಮೂರ್ತಿ ಬಾಲಋಷಿ ಭರತನು ರಾಮಾಶ್ರಮದ ಕಾಡಿಗೆ, ಮಾತೃವಕ್ಷವನ್ನು ಹುಡುಕುತ್ತ ಮೊಲೆಗೂಸು ಏರುವಂತೆ ಹತ್ತಿದನು.

ಅವರು ನಡುಹಗಲ ಸುಡು ಬಿಸಿಲಿಗೆ ಗೋಡೆಯನ್ನು ಒಟ್ಟೈಸಿದ ನೆರಳಿನ ಪೊದರಿನಂತಿದ್ದ ಕಾಡಿನಲ್ಲಿ ನಡೆಯುತ್ತಿದ್ದರು. ಆಗ ಅಂಬರದ ಬಿಳಿ ಮುಗಿಲಿಗೆ ಎದುರಾಗಿ ಎದ್ದ ಹೊಗೆ ವಿನ್ಯಾಸದ ಅಗ್ನಿ ಧ್ವಜವು ಆ ಗಿರಿಯ ತಪ್ಪಲಿನ ಅಡವಿಯಿಂದ ಕಾಣಿಸಿತು. ಅದು ಬಯಕೆ ಬಾವುಟವೆತ್ತಿ ಕರೆಯುತ್ತಿದೆಯೊ? ಹಿರಿದಾದ ಪಿತೃಕೃಪೆ ಹಾರೈಸಲು ಕೈಬೀಸುತ್ತಿದೆಯೊ? ರಾಮನನ್ನು ಅರಸುತ್ತ ಬಂದು, ತನ್ನ ಒಡಲ ಉರಿಗೆ ಬೆಂದ ಆ ದೇವಿ ಮಂಥರೆಯ ಪುಣ್ಯಾಂತರಾತ್ಮ ಪ್ರಣಯ ಲಕ್ಷ್ಮಿಯು ಭರತನಿಗೆ ಕೌಸಲ್ಯೆಯ ಕುಮಾರನಿರುವ ಎಡೆಯನ್ನು ಹೊಗೆಯ ಬೆರಳಿಂದ ತೋರಿಸುವಳೊ ಎಂಬಂತೆ ಕಪ್ಪು ಬಟ್ಟೆಯ ಹೊಗೆಯ ಪತಾಕೆ ಕಂಡಿತು.

ನಲ್ಮೆ ಒಡಮೂಡಿ ಅವರು ಮುಂದುವರಿಯುತ್ತಿರಲು ಮುಂದೆ ಮಂದಾಕಿನಿಯ ತುಂಬು ನೀರಿನ ನದಿ ಕಂಡಿತು. ಆಳುಗಳು ಆ ಕಡೆ ದಡಕ್ಕೆ ಹೋಗಲು ಕಟ್ಟಿಗೆಯ ಸಹಾಯದಿಂದ ತೇಲುವ ತೆಪ್ಪವನ್ನು ಕಟ್ಟಿದರು. ಅದರಲ್ಲಿ ನಿಂತು ಭರತನು ಹೊಗೆಯ ಗೆರೆಯನ್ನು ನೋಡುತ್ತ ತನ್ನೊಳಗೆ ತಾನು ಹೀಗೆಂದುಕೊಂಡನು.

'ಯಾರ ಮುಖ ಕಮಲವನ್ನು ನೋಡಿ ಮಕರಂದವನ್ನು ಹೀರಿ ಜನರ ಕಣ್ಣುಗಳೆಂಬ ದುಂಬಿಗಳು ತೃಪ್ತಿಯನ್ನು ಹೊಂದಲಾರವೋ, ಅದನ್ನು ಆನಂದದಿಂದ ನೋಡುವವರೆಗೆ ನನಗೆ ಶಾಂತಿಯಿಲ್ಲ. ಯಾರ ಮಂಜುಳ ಮಧುರ ಕಂಠದ ವೀಣಾನಾದವನ್ನು ಸವಿಸವಿದು ಕಿವಿ ತಣಿಯುವುದಿಲ್ಲವೋ, ಅದನ್ನು ಆಲಿಸುವವರೆಗೆ ನನಗೆ ಶಾಂತಿಯಲ್ಲ. ಯಾರ ಪಾದದ ನೈದಿಲೆಯ ನೀಲ ಸಾನಿಧ್ಯದಲ್ಲಿ ತೇಂಕಾಡುವ ಸೊಗಸಿಗೆ ಉಳಿದ ಎಲ್ಲ ಸೊಗಸನ್ನು ಬಿಟ್ಟು ಬೀಸಾಡಿ ವಸುಂಧರಾನಂದನೆ ಬಂದಿರುವಳೋ, ಆ ಪಾದವನ್ನು ಹಿಡಿದು ಮುಡಿಯನ್ನು ಅದಕ್ಕೆ ಒತ್ತುವ ತನಕ ನನಗೆ ಶಾಂತಿಯಿಲ್ಲ. ಹಿರಿಯನಾದ ದೊರೆ ರಾಮಚಂದ್ರನಿಗೆ ಈ ರಾಜ್ಯವನ್ನು ನೀಡಿ, ಭಾರ ಇಳಿಸಿಕೊಳ್ಳುವವರೆಗೆ ನನ್ನ ಕುಸಿದು ಕುಗ್ಗಿದ ಬಾಳಿಗೆ ಶಾಂತಿಯಿಲ್ಲ.'

ಹೀಗೆ ಧೂಮ ಪ್ರತೀಕದಿಂದ ರಾಮನನ್ನು ಭಾವಿಸುತ್ತಿರಲು ತೆಪ್ಪವು ಶೈಲ ಚರಣತಲ ಸೀಮೆಯ ಆ ದಡವನ್ನು ಮುಟ್ಟಿತು. ಅವನು ರಾಮಚರಣ ಸ್ಪರ್ಶದಿಂದ ಪೂಜ್ಯವಾದ

ಆ ಮಣ್ಣನ್ನು ಮುಟ್ಟಿ ನಮಸ್ಕರಿಸಿದನು.. 'ಶತ್ರುಘ್ನ, ಇದೆ ಅವರ ನೆಲೆ ಎಂದೆನಿಸುವುದು. ಅದೊ, ಅಲ್ಲಿ ಮನುಜ ಸಂಚಾರ ಸೂಚಕ ಚಿಹ್ನೆ ಕಾಣಿಸುತ್ತಿದೆ. ಯಾರೊ ಚಳಿಗಾಲಕ್ಕಾಗಿ ಕಾಡು ಬೆರಣಿಯನ್ನು ರಾಶಿಯಾಗಿ ಇಟ್ಟಿದ್ದಾರೆ.' ಎಂದು ತಮ್ಮನಿಗೆ ತಿಳಿಸಿದನು.

ಆಗ ಕಾಡನ್ನು ತನ್ನ ಇನ್ನೊಂದು ಹಿರಿಯ ಮೈಯ್ಯಾಗಿ ತಿಳಿದ ಕರಿಮೈಯ್ಯ ಭೀಮಗಾತ್ರದ ಗುಹನು ತನ್ನ ಅನುಭವವನ್ನು ಹೀಗೆ ವ್ಯಕ್ತಪಡಿಸಿದನು :

'ನಿಜ ಅಯ್ಯ; ನಿಮ್ಮ ಊಹೆ ದಿಟ. ಒಂದೇತಕ್ಕೆ ನನ್ನ ಕಣ್ಣಿಗೆ ಕಾಣುವ ಎಷ್ಟೆಷ್ಟೋ ನರನ ಕೈಯ, ಕಾಲಿನ ಗುರುತುಗಳು ಇಲ್ಲಿವೆ. ನೋಡಿ, ಆ ಮುರಿದ ಕೊಂಬೆ(ಹರೆ)ಗಳು ಪೊದೆಪೊದೆಯ ಬಳಿಯ ಹಾದಿ ಗುರುತಾಗಿ ಸಾಲಾಗಿ ಬಿದ್ದಿವೆ. ನೋಡಿ, ಪಾದವನ್ನು ಊರಿದ ಗುರುತುಗಳನ್ನು ಆ ನೆನೆದಿರುವ ನೆಲದಲ್ಲಿ. ಅಲ್ಲಿಯೆ ಎತ್ತರವಾದ ಹುಲ್ಲುಗಳು ಎರಡೂ ಕಡೆಗೆ ಬಾಗಿವೆ. ಅಲ್ಲಿರುವ ಪಾದಚಿಹ್ನೆಗಳು ಮೃಗಗಳದು ಅಲ್ಲ...

'ನೋಡಿ, ಆ ಅಪ್ರಯೋಜಕವಾದ ಪೊದೆ. ಅದು ಸಹಜವಾಗಿ ಸತ್ತಿಲ್ಲ. ನಿನ್ನೆ ಅಥವಾ ಮೊನ್ನೆ ಯಾರೊ ಏಕೊ ಅದರ ಬುಡ ಕಡಿದಿದ್ದಾರೆ. ಓ, ಈಗ ಗೊತ್ತಾಯಿತು. ಪೊದೆಯ ಬುಡದಲ್ಲಿದ್ದ ನೂಲೆಯ ಗೆಣಸಿಗಾಗಿ ಬಳ್ಳಿಗಳನ್ನು ಅಗೆದು ಯಾರೊ ತೆಗೆದಿದ್ದಾರೆ. ಅದೊ, ಹತ್ತಿರದಲ್ಲಿಯೆ ಕೆಮ್ಮಣ್ಣು ರಾಶಿ ಬಿದ್ದಿದೆ! ನೋಡಿ, ಓ ಅಲ್ಲಿ – ಬಿದಿರು ಮೆಳೆಯ ಹತ್ತಿರ ಹುತ್ತಕ್ಕೆ ಒತ್ತಿ ನಿಂತಿದೆ ಸೌದೆಯ ಕಟ್ಟು. ನೋಡಿ ದಾರಿಯನ್ನು ಗುರುತು ಹಚ್ಚಲು ಕುಶದ ದರ್ಬೆಗಳನ್ನು ಅಲ್ಲಲ್ಲಿ ಕೊಂಬೆ ಕೊಂಬೆಗೆ ಕಣ್ಣಿನ ಗುರುತಿಗಾಗಿ ಕಟ್ಟಿದ್ದಾರೆ...

'ಇದೋ ಇಲ್ಲಿ ಹೂಕೊಯ್ದು ಹೋಗುವಾಗ ಉದುರಿದ ಹೂಗಳು. ಎರಡು ಮೂರಲ್ಲ ನಾಲ್ಕೈದಾರು ಚೆಲ್ಲಿ ಹೋಗಿದ್ದಾರೆ. ಈ ಕಡೆ, ಈ ಕಡೆಗೆ ಬನ್ನಿ. ಅತ್ತ ಕಾಡು ಮೃಗಗಳು ಓಡಾಡುವ ಜಾಡು(ಸರು), ಇನ್ನು ಆ ಕಡೆ ಆಳವಾದ ಕಂದರ(ದರಿ). ಇಲ್ಲಿ ನೋಡಿ, ಇದೇ ಹಾದಿ. ಹತ್ತಿರದಲ್ಲಿಯೆ ಆಶ್ರಮವಿದೆ! ಬೇಟೆ ನಾಯಿಯು ವಾಸನೆಯಿಂದಲೆ ಮಿಗದ ಇರುವ ಸ್ಥಳ(ಇರ್ಕೆ) ತಿಳಿಯುವಂತೆ ನಾನು ತಿಳಿದೆ! ಅದೊ ಅಲ್ಲಿ, ಆ ಎತ್ತರದಲ್ಲಿ ಯಾರೊ ಕಾಣಿಸಿದಂತಾಯಿತು ನನಗೆ! ಭ್ರಾಂತಿಯೇಕೆ? ಇನ್ನೆಲ್ಲಿಯ ಭ್ರಾಂತಿ? ಶಿವಶಿವಾ ಅಗೊ ಅಲ್ಲಿ, ಅಗೊ ದೇವ ರಾಮಚಂದ್ರ! ಅಲ್ಲಿ ಕಾಣಿಸುತ್ತಿಲ್ಲವೆ? ನೋಡಿ, ದೇವಿ ಸೀತಾಮಾತೆ! ಅದೊ ಅಲ್ಲೆ, ದೇವ ಸೌಮಿತ್ರಿ!'

ಭರತನು ಕಂಡನು; ನೋಡಿದನು. ಉನ್ಮಾದಕ್ಕೆ ಒಳಗಾದವನಂತೆ, ಬೆಟ್ಟ ತಲಕೆಳಗಾಗಿ ಉರುಳುವಂತೆ ಮುಂದಕ್ಕೆ ಓಡಿದನು. 'ಅಣ್ಣಯ್ಯಾ, ಓ...' ಎಂದು ಒಂದೇ ಸಮನೆ ಕೂಗುತ್ತ ಅವನ ಪಾದದ ಬಳಿಗೆ ಹೋಗುವ ಮೊದಲೇ, ಬೇರು ಒಣಗಿದ ತರುಣ ತರು ಬೀಳುವಂತೆ, ಸಡಿಲಗೊಂಡು ದೊಪ್ಪನೆ ನೆಲಕ್ಕೆ ಉರುಳಿದನು.

ಹಾ, ಪ್ರಿಯರ ಅಗಲುವಿಕೆಯ ನೋವಿಗೆ ಸಮನಾದುದು ಬೇರೆ ಉಂಟೆ? ಅದಕ್ಕೆ ಕಬ್ಬಿಣವು ಕರಗುತ್ತದೆ, ವಜ್ರವು ಹೂವಿನಂತೆ ಬಾಡುತ್ತದೆ. ಮಹಾ ಪರ್ವತವು ತಾನು ಶಿರಬಾಗಿ ಬಳ್ಳಿಯ ಕಾಲುಗಳಿಗೆ ನಮಸ್ಕರಿಸುತ್ತದೆ.

ಇಷ್ಟವಾದವರ ಅಗಲುವಿಕೆಗಿಂತ ಮಿಗಿಲಾದ ಸಂಕಟದ ಶಿಕ್ಷೆಯನ್ನು ನರಕ ಶಿಕ್ಷಾಚಾರ್ಯನಾದರೂ ಸೃಷ್ಟಿಸಬಲ್ಲನೆ? ನರ ಹೃದಯ ರಕ್ತ ಮಾಂಸವನ್ನು ತಿಂದು ತೇಗುವ ನಾಶ ಔತಣದ ನರಕಸಿಂಹಕ್ಕೆ ಇಷ್ಟ ವಿರಹಕ್ಕಿಂತ ಬೇರೆ ಕೋರೆ ಹಲ್ಲುಗಳೇಕೆ?

ಯುಗದ ಅಂತ್ಯಕಾಲದ ಭಾಸ್ಕರನಿಗೆ ಸಮನಾದ ಭರತನು ಕೃಶನಾಗಿ, ದೀನ ಕಳಾಹೀನ ಮುಖದವನಾಗಿ ದೂರದಿಂದಲೆ ಹಿರಿಯುನಿಗೆ, ಕಿರಿಯುರಿಗೆ ನಮಸ್ಕರಿಸಿದನೆಂಬಂತೆ ದಿಂಡುರುಳಿದನು. ಮಹಾ ಆಕಾಶ ಸಮನಾದ ಕನ್ನೈದಿಲೆ ದೇಹದ ರಾಮಚಂದ್ರನು ಅತಿ ಬೆವತ ನಾರು ಬಟ್ಟೆಯ ಜಟಾಧಾರಿಯನ್ನು ಕಷ್ಟದಿಂದ ಗುರುತಿಸಿದನು. ತಕ್ಷಣ ಓಡೋಡಿ ಬಂದು ಹಿಡಿದು ಎತ್ತಿದನು. ತಮ್ಮನನ್ನು ತನ್ನ ನಿಟ್ಟುಸುರಿನ ಎದೆಗೆ ಬಿಗಿದು ಅಪ್ಪಿಕೊಂಡನು. ತಲೆಯನ್ನು ಸವರಿ ಮುದ್ದಿಸಿ ಹಣೆಗೆ ಮುತ್ತನ್ನು ಒತ್ತಿದನು. ದುಃಖದಿಂದ ಗದ್ಗದಿಸಿ ಬಿಕ್ಕಳಿಸುತ್ತ ತನ್ನ ಕಣ್ಣ ಗಂಗೆಯು ತಮ್ಮನ ಕಣ್ಣಿನ ಜಮುನೆಯನ್ನು ಸಂಗಮಿಸುತ್ತಿರಲು,

'ತಮ್ಮನೆ ಇದೇನು? ತಂದೆ ಆರೋಗ್ಯವಾಗಿರುವರೆ? ರಾಜ್ಯಕ್ಕೇನಾದರು ಕಂಟಕವೆ? ತಾಯಂದಿರ ನೆಮ್ಮದಿಗೇನಾದರೂ ಕೇಡಾಗಿದೆಯೆ? ನಮ್ಮ ಕೋಸಲ ಜನಕ್ಕೆ ಏನಾದರೂ ತೊಂದರೆಯಾಯಿತೆ? ಈ ನಾರು ಬಟ್ಟೆ ಏಕೆ? ಜಟೆ ಏಕೆ? ಮುಖವೇಕೆ ಕಳೆಗುಂದಿದೆ? ಈ ಮೈಗೆ ಮಲಿನಮಯ ಕೃಶತೆ ಏಕೆ? ಅಯ್ಯೋ, ಈ ಜುಗುಪ್ಸೆಯುಂಟುಮಾಡುವ ಸಂಕಟ ನಡೆ ಏಕೆ? ಓ ಸೋದರನೆ, ನನ್ನ ಉಸಿರ ತಮ್ಮನೆ ಹೀಗೇಕಿರುವೆ ಹೇಳಯ್ಯ?'

ಎಂದು ಹೇಳುತ್ತ, ದುಃಖದಿಂದ ತಳಮಳಗೊಂಡು ಅವನನ್ನು ಅಪ್ಪಿಕೊಂಡನು.

ಅಣ್ಣನ ತೋಳಿನ ತೆಕ್ಕೆಯೇ ಭರತನಿಗೆ ತಾಯಿಯ ಮಡಿಲಾಯಿತು ಎಂಬಂತೆ, ಬಳಲಿದ ಶಿಶು ನೋವನ್ನು ಮರೆತು ನೆಮ್ಮದಿ ಪಡೆದು ನಿದ್ರಾಮುದ್ರೆಗೆ ಒಳಗಾದಂತೆ, ಜಾನಕಿರಮಣನ ಧೀರೋದಾತ್ತ ವಕ್ಷವಾರ್ಧಿಯ ನೀಲ ನಾವೆಯಲ್ಲಿ ಶಾಂತಿಯ ತುರೀಯಕ್ಕೊಳಗಾಗಿ ತೇಲಿದನು. ಮೈಮರೆತ ತಮ್ಮನನ್ನು ರಾಮನು ಸೀತೆ, ಸೌಮಿತ್ರಿ, ಶತ್ರುಘ್ನ, ಗುಹರ ನೆರವಿನೊಂದಿಗೆ ಕರುಣೆ ಹಾಗೂ ಪ್ರೀತಿಯಿಂದ ಮೇಲೆತ್ತುತ್ತ, ಎಲೆಮನೆಗೆ ನಡೆದನು.

ಶ್ರದ್ಧೆ ತಾಂ ಸಪ್ರಾಣವಾಗುವೊಲಮೃತ ತರ್ಪಣವಿತ್ತು ತೀರಕೇರ್ದನ್ ಸಹೋದರ ಸಹಿತ ತೇಜಸ್ವಿ

ದೇವತೆಗಳು ಮತ್ತು ಅಸುರರು ಮಂದರ ಪರ್ವತಕ್ಕೆ ವಾಸುಕಿಯನ್ನು ಕಟ್ಟಿ ಸಮುದ್ರ ಮಂಥನ ಮಾಡಲು, ಅದು ಮೊದಲೊಮ್ಮೆ ಉಕ್ಕಿತಂತೆ. ಈಗ ಜೀರ್ಣವಾದ ಭೂಮಿಯ ಉದರದ ಒಳಗಿನ ಪಲ್ಲಟದ ಪರಿಣಾಮದಿಂದ ರೋಷಾವೇಶಗೊಂಡು

ಬೋರ್ ಎಂದು ಕುದಿದು ಅಟ್ಲಾಂಟಿಕ್ ಸಮುದ್ರವು ಫೆಸಿಫಿಕ್ ಸಾಗರದ ಮೇಲೆ ನುಗ್ಗಿ ಹೊಡೆದು ಉಕ್ಕಿತು. ಆ ಎರಡು ಕಡಲುಗಳ ಒಡಲಿನ ಹೊಟ್ಟೆಯ ನೀರಿನ ಆಕ್ರಮಣಕ್ಕೆ ತಳಭಾಗವೇ ಮೇಲಾದಂತೆ ಪರ್ವತ ಸಮಾನ ಅಲೆಯ ಮಾಲೆಗಳ ಭಯಂಕರ ಸಮುದ್ರ ಹೊರಹೊಮ್ಮಿತು. ಅದಕ್ಕೆ ತಿಮಿಂಗಿಲಗಳು ತೃಣದ ಕಣವಾದವು ಎಂಬಂತೆ ಒಂದು ಅದ್ಭುತ ಸಸ್ಯಹೀನ ಪ್ರಾಣರಹಿತ ದ್ವೀಪಖಂಡವು ಗೋಚರಿಸಿತು.

ಸಮುದ್ರಾಂಬೆ ದ್ವೀಪದ ಹೆರಿಗೆಯ ವೇದನೆಯನ್ನು ನಿಧಾನವಾಗಿ ನಿಗ್ರಹಿಸಿಕೊಂಡು ತಾನು ಹೊಸದಾಗಿ ಹೆತ್ತ, ತಾಯಿ ಮಳಲಿನ ಬರಿನೆಲದ ಬತ್ತಲೆಯ ಬೇಸರದ ನಿರ್ಜೀವಿ ಸಿಸುದ್ವೀಪವನ್ನು ನೋಡುವಳು. ಅಲೆ ಅಳ್ಳೆಯು ತಿದಿಯೊತ್ತಿದಂತೆ ಏಳು ಬೀಳಾಗುತ್ತಿರಲು ನಿಟ್ಟುಸಿರು ಬಿಡುವಳು. ಮೋಹವಶೆಯಾದ ಅವಳು ನೊರೆಯ ಮೃದು ಚುಂಬನ ಉಚ್ಛ್ವಾಸದ ಅಲೆಗಳಿಂದ ಅಪ್ಪಿಕೊಂಡು ಮುದ್ದಾಡುವಳು. ತನ್ನ ಉಸಿರ ಚೇತನದಿಂದ ಆ ದ್ವೀಪವತ್ಸನ ದೇಹವನ್ನು ಎಚ್ಚರಿಸಲು ವ್ರತಸ್ಥಳಾಗುವಳು. ಹಲವಾರು ಸಂವತ್ಸರಗಳು ಆ ತಪೋದ್ವೀಪಕ್ಕೆ ತಮ್ಮ ಜೀವನ ತೈಲವನ್ನು ಧಾರೆಯಾಗಿ ನೀಡುತ್ತ ಕಾಲದಾಚೆಯ ನಿತ್ಯತೆಯ ನಿಧಿಗೆ, ಬ್ರಹ್ಮಸನ್ನಿಧಿಗೆ ಹರಿಯುವುವು.

ಹೀಗೆ ನೂರಾರು ಯುಗಗಳು ಉರುಳಲು ಕಡಲಮ್ಮನ ವ್ರತವು ಕೈಗೂಡುವುದು. ಆ ದ್ವೀಪದ ಒಡಲಿನ ಒಳಗೆ ಉಸಿರ ಮಿಂಚು ಸಂಚರಿಸುವುದು! ಅದೊ, ಹೊಮ್ಮಿದ ಆ ಸಸ್ಯ ಸಂಪತ್ತಿನ ಹಸುರು ತನ್ನ ಸೃಷ್ಟಿಗೆ ತಾನೆ ಬೆರಗಾಗಿ ಚಿಮ್ಮುತ್ತಿದೆ! ಆ ದ್ವೀಪ ಶರೀರವನ್ನು ಮುಚ್ಚಿ ಸಿಂಗರಿಸಿ ತುಂಬಿದ ಅಡವಿ ಕಳಕಳಿಸಿ ಹೊಳೆಯುತ್ತಿದೆ.

ಕಣ್ಣು ತೆರೆದರೇನಂತೆ, ಜೀವಕ್ಕೆ ಬಾಯಿ ಇನ್ನೂ ತೆರೆದಿಲ್ಲವೇಕೆ ಎಂದು ಕೇಳಲು ಉತ್ತರ: ಹಕ್ಕಿ ಮಿಗಗಳಿಗೆ ಹುಟ್ಟು ಮೂಡಿಲ್ಲವಾದುದರಿಂದ ಆ ದ್ವೀಪ ಮೂಕವಾದಂತಿದೆ.

ಭರತನು ಶಿಶಿರೋಪಚಾರಕ್ಕೆ, ಅಣ್ಣನ ಆಲಿಂಗನದ ನೀಲತೋಳುಗಳಲ್ಲಿ, ಒಂದು ನುಡಿ ಮೊಳೆಯದ ಎಳ ಹಸುಳೆಯಂತೆ ಕಣ್ಣು ತೆರೆದನು. ಪ್ರಶ್ನಿಸಲು ನುಡಿಯಲಾರದೆ ಅಳುವ ಪ್ರೀತಿಪಾತ್ರನಾದ ತಮ್ಮನ ಆ ಮೌನಮುಖದಲ್ಲಿ ದೈನ್ಯದಿಂದ ಛಾಯಾ ಮೃತ್ಯುವಿನ ನೆರಳು ಸುಳಿಯಿತು. ಅದನ್ನು ಕಂಡು ನಡುಗಿದ ರಾಮಚಂದ್ರನು ಶತ್ರುಘ್ನನನ್ನು ನೋಡಲು, ಅವನು ಮುಖವನ್ನು ಕೆಳಗಿಳಿಸಿಕೊಂಡನು. ಮಂತ್ರಿಯ ಕಡೆ ತಿರುಗಲು ಆತನು ಗದ್ಗದಿಸಿದನು. ಆಗ ರಾಮನ ಇಂಗಿತವನ್ನು ಅರಿತ ಗುಹನು ತುಟಿತೆರೆದನು. ಪಿತೃದೇವನ ಮರಣ, ಭರತನ ಸಂತಾಪವ್ರತ ಪ್ರತಿಜ್ಞೆಯ ಕಠೋರ ವಾರ್ತೆಯನ್ನು ಕಾಡುಮನುಷ್ಯನ ಸಹಜ ನುಡಿದಾರಿದ್ರ್ಯದಲ್ಲಿ ಭಾವಮಯ ರಚನೆಯ ಔದಾರ್ಯದಿಂದ ವ್ಯಕ್ತಪಡಿಸಿದನು.

ಧೀರ ರಾಮನ ಎದೆಗೆ ಧಿಗಿಲಾಯಿತು. ಅವನಿಜೆಗೆ ಕಣ್ಣು ಕತ್ತಲಾಯಿತು. ಅವನ ಮೈಚಳಿಗೆ ಶರೀರ ನಡುಗಿತು. ಕದಡಿದ ಮನಸ್ಸು ಸೆಕೆಗೆ ಬೆದರಿತು. ಆತ್ಮ ಅದುರಿತು. ಅವನು ನಿಟ್ಟುಸಿರು ಬಿಡುತ್ತ ಗುಹನ ತೋಳುಗಳಿಗೆ ಒರಗಿದನು.

ಬಂಡೆಯಿಂದ ಬನದ ತೊರೆಯು ಸೋರಿತು ಎಂಬಂತೆ ಮುಚ್ಚಿದ ಕಣ್ಣೆವೆಗಳಿಂದ ಕಣ್ಣೀರು ಸುರಿಯಿತು. ಅದು ಶೋಕದ ಸಿಂಧುಶುಕ್ತಿಯಿಂದ ನಿಶ್ಯಬ್ದತಾ ಮುತ್ತುಗಳು ಉಕ್ಕಿ ಸುರಿವಂತಿತ್ತು.

ರಾಮನು ಮೈ ಎಚ್ಚರಗೊಳ್ಳಲು ಸಹೋದರನಿಗೆ 'ತಂದೆ ಹೋದನೆ, ತಮ್ಮ ಸೌಮಿತ್ರಿ?' ಎಂದು ಪ್ರಶ್ನಿಸುತ್ತ ಮೈಥಿಲಿಯ ಮುಖನೋಡಿ ನಿಟ್ಟುಸಿರು ಬಿಟ್ಟು ಮತ್ತೆ ಪ್ರಜ್ಞಾಹೀನನಾದನು. ಶೋಕಾಗ್ನಿಯ ಉರಿಯ ಹೊಡೆತಕ್ಕೆ ಸಿಕ್ಕಿ ಸಿಡಿಮಿಡಿಗೊಳ್ಳುತ್ತಲಿದ್ದ ಅಣ್ಣನನ್ನು ಭರತನು ಅಪ್ಪಿ ಸಮಾಧಾನದಿಂದ ಮಾತಾಡಿದನು. ಹೇಳಿದ ಮಾತಿನ ಅರ್ಥಕ್ಕೆ ಅಲ್ಲ, ತಮ್ಮನ ಒಲುಮೆಯ ದನಿಯ ಸುಪ್ರೀತಿಗೆ ಅಣ್ಣರಾಮನ ಎದೆಯ ಕುದಿತ ಕಡಿಮೆಯಾಯಿತು.

'ಏಳು, ತಂದೆಗೆ ಎಳ್ಳು ನೀರನ್ನು ನೀಡಲು. ಅಣ್ಣ ದೇವನೆ ಏಳು!' ಎಂಬ ತಮ್ಮನ ಪ್ರೀತಿಯ ನುಡಿಗೆ ಮಂತ್ರದಿಂದ ಶಾಂತನಾದ ರೀತಿಯಲ್ಲಿ ಅಮೃತತತ್ವದ ಅರಿವಾದವನಂತೆ ಮೇಲೆದ್ದನು.

ರಘುರಾಮನನ್ನು ಮಂತ್ರಿ ಸುಮಂತ್ರನು ಕೈ ಹಿಡಿದು ಕರೆದೊಯ್ದು ಮಂದಾಕಿನಿಯ ಪುಣ್ಯತೀರ್ಥಕ್ಕೆ ಇಳಿಸಿದನು. ನದಿದೇವಿಯು ಸದಾ ಹಸಿರಾದ ಅರಣ್ಯಗಳ ಮಧ್ಯೆ ಮೊರೆತದಿಂದ ಮುದ್ದಿಸಿ, ತೆರೆಯಿಂದ ಸಂತೈಸಿ ಹರಿದಳು!

ಅವರು ಆ ನದಿಯ ಕೆಸರು ಇಲ್ಲದ ದಡದಲ್ಲಿ ಮಿಂದು ತಂದೆಗೆ ತರ್ಪಣವನ್ನು ನೀಡಿದರು. 'ಪಿತೃದೇವ, ಕುಸುಮ ಸುಂದರ ಸದಾ ರಮಣೀಯ, ಶೀತಲ ಸುಗಂಧಮಯ ಮಂದಾಕಿನಿಯ ದಿವ್ಯ ತೀರ್ಥವನ್ನು ಸ್ವೀಕರಿಸು. ಇದು ಪವಿತ್ರ ಜಲ. ನೃಪ ಶ್ರೇಷ್ಠನೆ, ಪಿತೃ ಲೋಕದಲ್ಲಿ ನೀನು ಅಮರನಾಗಿರು.'

ಶ್ರದ್ಧೆಯು ತಾನು ಜೀವಂತವಾಗುವಂತೆ ಸಹೋದರರ ಸಹಿತ ಅಮೃತ ತರ್ಪಣವನ್ನು ನೀಡಿದ ತೇಜಸ್ವಿರಾಮನು ದಡಕ್ಕೆ ಏರಿದನು. ದರ್ಬೆಯ ತಟ್ಟೆಯಲ್ಲಿ ಬೋರೆ, ಎಲಚಿ, ಅತ್ತಿಹಣ್ಣುಗಳ ಜೊತೆಗೆ ಇಂಗುದಿ ವೃಕ್ಷದ ಹಿಂಡಿಯನ್ನು ಪಿಂಡವಾಗಿ ನೀಡುತ್ತ ಹೇಳಿದನು:

'ತಂದೆಯೆ, ನಾವು ಏನು ಊಟಮಾಡುವುದಿದೆಯೊ ಅದು ನಮ್ಮ ಇಷ್ಟ ದೇವತೆಗೆ ನಿವೇದನೆ. ನಮ್ಮ ಉಣಿಸನ್ನೆ ನಿನಗೆ ಕೊಡುವೆವು. ಹೇ, ಪೂಜ್ಯ ಕೋಸಲಾಧೀಶನೆ, ಅಡವಿಯ ಬಡತನದ ಔತಣವನ್ನು ಸ್ವೀಕರಿಸು.'

ರಾಮ ಯತಿರೂಪಮಂ ನಿಡಿದು ನೋಡಿ ಕೈ ಮುಗಿದಳಲ್ಲಿ ಕಂಡವರೆಲ್ಲ ಬೆರಗು ಬಿಲ್ಲಾಗೆ.

ಆ ದುಃಖಿಗಳು ಅನಂತರ ಪರ್ಣಕುಟಿಯಿರುವ ರಮ್ಯವಾದ ಉನ್ನತ ಪರ್ವತಶ್ರೇಣಿಯೆಡೆಗೆ ನಡೆದರು. ಅಷ್ಟರಲ್ಲಿ ಗುರು ವಸಿಷ್ಠರ ಜೊತೆಗೂಡಿ ಪುರಜನರು, ಪರಿಜನರು, ಗುರುಜನರು, ಕೌಸಲ್ಯೆ ಸುಮಿತ್ರೆ ಮತ್ತು ಕೈಕೆ ಮೊದಲಾದ ಮಾತೆಯರು,

ಮಹಿಳೆಯರು ಅಲ್ಲಿಗೆ ಕಾಲ್ನಡಿಗೆಯಲ್ಲಿಯೇ ಬಂದರು. ರಾಮನನ್ನು ಕಂಡು ನಿಟ್ಟುಸಿರು ಬಿಡುತ್ತ, ಇನ್ನೊಂದು ಮಂದಾಕಿನಿಯೆ ಹರಿಯಿತು ಎಂಬಂತೆ ಗೋಳಿಟ್ಟರು.

ರಘುರಾಮ ಮತ್ತೊಮ್ಮೆ ಆ ಹೃದಯಗಳಿಂದ ಹೊಮ್ಮಿ ಹರಿದ ಕಣ್ಣ ಹೊಳೆಯಲ್ಲಿ ಮಿಂದನು. ಮಲಿನ ವಸನದ ಮಲಿನ ವದನದ ಕರುಣಾಮೂರ್ತಿಯು ದುಃಖಿಸುತ್ತ ಬೆಂದೆದೆಯ ತಾಯಿ ಕೌಸಲ್ಯೆಯ ಅಡಿಗೆ ಎರಗಿದನು. ಆ ತಾಯಿಯು ಅಳುತ್ತಳುತ್ತ ಹೋದ ಆಸೆ ಬರುವ ಆಸೆಯನ್ನು ತಬ್ಬುವಂತೆ ಕಂದನನ್ನು ತಬ್ಬಿ ಕೊಂಡಳು. ಸೌಮಿತ್ರಿ ಮತ್ತು ಸೀತೆಯರು ನಮಸ್ಕರಿಸಿದರು. ಹಿರಿಯ ತಾಯಿ ಅವರನ್ನು ಹರಸಿ, ಸೊಸೆಯನ್ನು ನೋಡಿ ಮುದ್ದಾಡಿ, ಅರಸು ಕುಮಾರಿಯ ಗತಿಗೆ ಗೋಳಿಟ್ಟಳು.

ರಾಮಚಂದ್ರನು ಸುಮಿತ್ರೆಗೆ ಅಭಿವಂದಿಸಿದನು. ದೂರದಲ್ಲಿ ತಲೆಬಾಗಿ ನಿಂತಿದ್ದ ಪಶ್ಚಾತ್ತಾಪ ಶೋಕಭಾರಳಾದ ಕೈಕೆಯನ್ನು ಹುಡುಕಿ ನೋಡಿದನು. ಭರತನ ತಾಯಿಯಾದ ಚಿಕ್ಕಮ್ಮನನ್ನು ಕಂಡ ತಕ್ಷಣ ಆ ಕರುಣಿ ಅವಳ ಬಳಿಗೆ ಹೋದನು. ಪಾಪಿಯನ್ನು ಬೆಂಬಿಡದೆ ಹಿಂಬಾಲಿಸಿ ಅಟ್ಟಿ ಹಿಡಿಯುವ ಕೃಪಾಕೇತುವಿನಂತೆ ಆ ತಾಯಿಯ ಪಾದಗಳನ್ನು ಮುಟ್ಟಿಹಿಡಿದನು. ಸ್ವರ್ಗದ ಸಿಡಿಲಿನ ಹೊಡೆತದ ರಭಸಕ್ಕೆ ಚಿಮ್ಮಿ ಸೀಳಿ ಉರುಳಿ ಬೀಳುವ ಮರದಂತೆ ಆ ನೃಪ ಕುಮಾರಿಯು ರಾಮನ ಪಾದಗಳಿಗೆ ಕುಸಿದು ಬಿದ್ದಳು.

ಭಗವಂತನ ಪ್ರೀತಿಯು ಭಕ್ತನ ಆತ್ಮವನ್ನು ಮೇಲೆತ್ತುವಂತೆ ರಾಮನು ಆಕೆಯನ್ನು ಹಿಡಿದೆತ್ತಿದನು. ದಿವ್ಯವಾದ ಆ ಪ್ರೇಮಹಸ್ತ ಸ್ಪರ್ಶಕ್ಕೆ ಆ ಕೈಕೆ ತಾನು ಏನು ಕಂಡಳೊ? ಶಾಂತಳಾದಳು! ಮಗನನ್ನು ಕಣ್ಣಿನ ಸನ್ನೆಯಿಂದ ಗುಟ್ಟಾಗಿ ಕರೆದು, ರಾಮನ ಯತಿರೂಪವನ್ನು ದೀರ್ಘವಾಗಿ ನೋಡಿದಳು. ಅದನ್ನು ನೋಡಿದವರೆಲ್ಲ ಆಶ್ಚರ್ಯ ಪಡುವಂತೆ ಕೈಮುಗಿದಳು.

ಭರತನು ತನ್ನ ಭಾವಾಭಿಲಾಷೆಯ ಸರೋವರದ ನೀರು ಕೋಡಿ ಹರಿಯುವಂತೆ ಆಡಿ ತೋಡಿಕೊಂಡದ್ದು, ಅವನು ತನ್ನ ತಾಯಿಯ ಮೌನವೀಣೆಯನ್ನು ಮಿಡಿದಂತಿತ್ತು. ಆ ದಾರುಣ ಕಥೆ ಮತ್ತು ಕಥನ ಕಲೆಯ ರಮ್ಯತೆಯನ್ನು ಆಲಿಸಿ ಕಾಡಿನಲ್ಲಿರುವ ತಪಸ್ವಿಗಳೆದೆ ಮರುಗಿತು ಮತ್ತು ನಲಿಯಿತು.

ಭ್ರಾತೃಭಕ್ತ ಭರತನು ಹೇಳುವ ವಚನವೇದಕ್ಕೆ ಋಷಿ ಸಮೂಹ ಮೌನವಿರಲು, ಜನ ಸಮೂಹ ಮೂಕವಾಗಿರಲು, ಗಗನ ನೀಲನಯನ ಸಾಕ್ಷಿಯಾಗಿತ್ತು. ಗಿರಿಶ್ರೇಣಿ ಕೇಳುತ್ತಿರಲು ವನಪಂಕ್ತಿ ಆಲಿಸಿ, ತ್ರಿಭುವನವು ನಲಿಯಿತು. ರಾಮನು ಲೋಕ ರೋಮಾಂಚಕರ ವಾಣಿಯಿಂದ ಸೃಷ್ಟಿಗೊಂಡ ಧರ್ಮದ ಆನಂದವನ್ನು ಆಲಿಸಿದನು! ತಾನು ಆಯೋಧ್ಯೆಯನ್ನು ಬಿಟ್ಟ ದಿನದಿಂದ ಪ್ರಾರಂಭಿಸಿ ಚಿತ್ರಕೂಟಕ್ಕೆ ಭರತನ ಆಗಮನದವರೆಗೆ ಕತೆ ಕೇಳಿ ಕಮಲಲೋಚನನು ದುಃಖಿತನಾದನು. ನಡುನಡುವೆ ನಿಟ್ಟುಸಿರುಬಿಟ್ಟನು.

ಮಾರುತ್ತರದ ಹನಿಮಳೆಗೆ ಜನರ ಮನಸ್ಸು ನಿರೀಕ್ಷಣಾ ಚಾತಕ ಪಕ್ಷಿಯಂತೆ ಆಸಕ್ತಿಯಿಂದ ತುದಿಗಾಲ ಮೇಲೆ ಕೊರಳೆತ್ತಿ ನಿಂತಿತು. ಮೌನಿ ರಾಮನ ಮನಸ್ಸು ಚಿಂತಾಸಮುದ್ರದ ತಳದಲ್ಲಿತ್ತು. ಪಿತೃವಾಕ್ಯ ಪರಿಪಾಲನಾ ಸಂಕೋಲೆಯಿಂದ, ಧರ್ಮದ ಆನೆಯನ್ನು ಕಟ್ಟುವ ಕಂಬಕ್ಕೆ ಕಟ್ಟುಗೊಂಡ ರಾಮನ ಧೈರ್ಯದ ಐರಾವತವು ಹೋರಾಡುತ್ತಿದ್ದಿತು. ಅದನ್ನು ಕಂಡು ವಸಿಷ್ಠನು, ಮಾವುತನು ಅಂಕುಶದಿಂದ ತಿವಿಯುವಂತೆ ಹೀಗೆ ಹೇಳಿದನು :

'ಸೂರ್ಯವಂಶದ ಕುವರನೆ, ನಿನ್ನ ನೈಜವಾದ ಧರ್ಮವನ್ನು, ಜನ್ಮದ ಉದ್ದೇಶವನ್ನು ನೆನೆ. ನಿನ್ನ ಉಳಿದ ವಯಸ್ಸಿನ ಪ್ರಯಾಣವನ್ನು ಕಾಡಿನಲ್ಲಿ ಅಲೆದು ಹಾಳುಮಾಡಿಕೊಳ್ಳುವೆಯೊ? ಅಥವಾ ಲೋಕದ ಉದ್ಧಾರಕ್ಕೆ ಮತ್ತು ಆತ್ಮ ಸಂಸ್ಕೃತಿಗೆ ನೈವೇದ್ಯವಾಗುವೆಯೊ? ನೆನೆ!'

ಆಚಾರ್ಯನ ಮಾತಿನ ಆಶಯವು ಶಿಷ್ಯನ ಆತ್ಮವನ್ನು ಹೊಕ್ಕಿತು. ಅವನಲ್ಲಿ ವಜ್ರ ಸುಸ್ಥಿರವಾದ ದೃಢತೆ ಮೂಡಿತು. ರಾವಣನ ಶತ್ರುವಾದ ಅವನ ಮನದ ಮದಕರಿಯು ಅಯೋಧ್ಯೆಯಿಂದ ದಕ್ಷಿಣದಲ್ಲಿರುವ ಲಂಕೆಯ ಹಣೆಯ ಬರಹದ ಕಾಲಕಪಿಯಾಗಿ ತಿರುಗಿತು! ಬಾಲಋಷಿ ಭರತನ ಮಾತುಗಳನ್ನು ತಾಯಂದಿರು, ಗುರುಗಳು, ಪ್ರಜೆಗಳು, ನೆರೆದಿದ್ದ ಋಷಿಗಳು ಕೇಳುತ್ತಿದ್ದರು. ಅನಂತರ ಸತ್ಯವನ್ನು ಸಾಕ್ಷಾತ್ಕರಿಸಿಕೊಂಡವನಾದ (ಋತದರ್ಶಿ) ರಾಮನು ಅಪ್ರತಿವಾದ ವೇದವನ್ನು ಸಮಹೃದಯದ ಅನುಭವಕ್ಕೆ ಸಿಗುವಂಥದನ್ನು ಹೀಗೆ ಪ್ರಕಟಪಡಿಸಿದನು :

ತಂದೆ ತೀರ್ದೊಡೇಂ ತೀರ್ದುದೆ ತಂದೆಯಾಜ್ಞೆ?

'ನಿಮ್ಮ ಕರುಣ ಶಿಶುವಾದ ನಾನು ಧನ್ಯ. ಪೂಜ್ಯರ ಆಶೀರ್ವಾದ ಹಸ್ತದ ಅಧೀನದಲ್ಲಿ ನಾನು ಸುಕ್ಷೇಮಿ; ಕಲಿಬಲಿ ನಿರಂತರ ಸುಖಿ ಮತ್ತು ಧರ್ಮ ಸಂಪ್ರೇಮಿ. ಪಿತೃದೇವನ ಆ ದೈನ್ಯವನ್ನು ದುಃಖವನ್ನು ಕೇಳಿದ ನನ್ನ ಮತಿಯು ಶೂನ್ಯವಾಗಿ ತತ್ತರಿಸಿತು. ತಾಯಿಯರ ಶೋಕಾಗ್ನಿಯನ್ನು ಮುಟ್ಟಿದ ಎದೆ ಬೇಯುತ್ತಿದೆ. ಆದರೂ ಪ್ರಜೆಗಳೆ, ನಿಮ್ಮ ಪ್ರೀತಿಗೆ ಆತ್ಮವು ಅಯೋಧ್ಯಾ ನಗರದ ಕಡೆಗೆ ತೇಲುತ್ತಿದೆ. ಎಲ್ಲಕ್ಕೂ ಹೆಚ್ಚಾಗಿ ಭರತ ಬಂಧು ಪ್ರೇಮ ಸರ್ಪವು ನನ್ನನ್ನು ಬಿಗಿದೊತ್ತಿ ಸುತ್ತಿ ನುಂಗುತ್ತಿದೆ. ಆದರೂ ಪಿತೃವಾಕ್ಯ ಪರಿಪಾಲನೆಗಾಗಿ ನಾನು ಹದಿನಾಲ್ಕು ವರ್ಷ ವನವಾಸಿ. ತಂದೆ ತೀರಿದರೇನು ತಂದೆಯ ಆಜ್ಞೆ ತೀರುತ್ತದೆಯೆ? ತಂದೆಗಿಂತ ಹಿರಿದಾದ ತಂದೆ ಮತ್ತು ಚಿರಂಜೀವಿಯಾದುದು ಧರ್ಮವಲ್ಲವೆ?

'ವಿಧಿಯ ನಿಯಮದ ಸಿಡಿಲಿನ ಘಾತಕ್ಕೆ ಸಿಲುಕಿ ತಂದೆಯು ನನ್ನನ್ನು ಅಡವಿಗೆ ನೊಂದು ಕಳುಹಿಸಿ ಬೆಂದು ಉರಿದು ಹೋದನಲ್ಲವೆ? ಜಿತೇಂದ್ರಿಯನಾದವನು ಆ ರೀತಿ ನಡೆದುಕೊಳ್ಳುವಂತೆ ವಿಧಿಮಾಡಿತು. ಕುಬ್ಜೆ ಮಂಥರೆಯು ಬರಿಯ ಹುಲು ನೆಪ.

ಲೋಕ ಕಲ್ಯಾಣನಿಧಿ ಮಾತೆ ಕೈಕೆಯ ಮನಸ್ಸಿನಲ್ಲಿ ವಕ್ರಬುದ್ಧಿಯ ಕುರೂಪ ಮೂಡುವುದೆ? ಆ ಸೌಂದರ್ಯದಿಂದ ವಿಕೃತಿ ಹೊಮ್ಮುತ್ತದೆಯೆ?

'ಚೆಲುವಿನ ಅಭಿಲಾಷೆ ತಾನು ಯಾವಾಗಲೂ ಚೆಲುವಿಗೆ ತಾಯಿಯಾಗುವುದು. ಧರ್ಮದೇವತಾ ಕ್ರೌರ್ಯಕ್ಕೆ ಕರುಣೆಯಲ್ಲದೆ ಬೇರೆ ಗುರಿಯಿರುವುದೆ? ಕಿರಿಯ ತಾಯಿಯು ವಿಧಿಯ ಹಸ್ತದ ಆಯುಧ ತಾನಾದಳು. ಕೀರ್ತಿಯನ್ನು ಮತ್ತು ಜನಪ್ರೀತಿಯನ್ನು ತೆತ್ತು ತಾನು ಧನ್ಯಳಾಗಿ ದೇವ ಸನ್ಮಾನ್ಯೆಯಾದಳು. ಕೊನೆಗೆ ಸತ್ಯವೇ ಮೆರೆಯುತ್ತದೆ !

'ತಂದೆ ಯಾವ ಕಾರ್ಯಕ್ಕಾಗಿ ಪ್ರಾಣವನ್ನು ಬಿಟ್ಟನೊ, ತಾಯಿ ತನ್ನ ಗೌರವವನ್ನೆಲ್ಲ ಕಿತ್ತು ಬಗೆದಳೊ ಅಂತಹ – ಆ ದೇವ ದೇವತೆಗಳ ವ್ಯೂಹ ಸಂಯೋಜನೆಗೆ ನನ್ನಿಂದ ಭಂಗವಾಗದು. ಸಹೋದರನೇ ಕೇಳು. ರಾಮನ ಈ ಪ್ರತಿಜ್ಞೆ ಮೇರು ಪರ್ವತದಂತೆ ಸದಾ ಸುಸ್ಥಿರ.'

ಗುಡಿಯ ಗೋಪುರದ ತುದಿಯ ಲೋಹದಿಂದ ಮಾಡಿದ ಹೆಗ್ಗಂಟೆ ಘೋಷಿಸಲು, ಆ ಭೀಮನಾದವು ವಾಯುಮಂಡಲದಲ್ಲಿ ಕಂಪನವನ್ನುಂಟುಮಾಡಿ ಆ ಭೂ ಪ್ರದೇಶಕ್ಕೆಲ್ಲ ಕೊಂಡೊಯ್ಯುತ್ತದೆ. ಅನಂತರ ನಿಧಾನವಾಗಿ ನಿಶ್ಯಬ್ದತೆಯಲ್ಲಿ ಲೀನವಾಗುತ್ತದೆ. ಆ ರೀತಿ ಸೀತಾನಾಥನ ಮಂದ್ರ ಗಂಭೀರ ಧೀರ ಮೇಘ ಧ್ವನಿಯು ನಿಂತಿತು. ಮಂದಾಕಿನಿಯ ಮೊರೆ ಕಣಿವೆಯಿಂದ ಏರಿ ಬರುತ್ತಿತ್ತು. ಆ ವನದ ನೀರವತೆ ಮತ್ತು ಜನಸಮೂಹದ ಮೌನವನ್ನು ಭರತನ ಅಳುವ ನಿಟ್ಟುಸಿರು ಮಾತ್ರ ಧ್ವನಿಗೊಳಿಸುತ್ತಿತ್ತು.

ಪೂಜ್ಯ ಪಾದುಕೆಗಳಂ ಪೂಜ್ಯಪಾದಂ ಗೆತ್ತು ಸಿಂಹಾಸನದೊಳಿಟ್ಟು ಪೂಜಿಸುವೆನಾಂ

'ಭರತೇಂದ್ರನೆ, ನಿನಗೆ ಜಾಬಾಲಿಯು ಮೊದಲೇ ಹೇಳಿರಲಿಲ್ಲವೆ? ರವಿಯನ್ನು ಮುಳುಗುವ ಪಶ್ಚಿಮ ದಿಕ್ಕಿನ ಪರ್ವತದಿಂದ ಮೂಡು ಎಂದು ಪೀಡಿಸುವಂತೆ ನೀನು ರಾಮಚಂದ್ರನನ್ನು ಕಾಡಿಸುತ್ತಿರುವೆ. ವಿಶ್ವಶಕ್ತಿ ಸ್ಫೂರ್ತಿಯಾದ ಈತನು ನಿಜದಲ್ಲಿ ವಿಶ್ವಶಕ್ತಿ. ಕಪ್ಪೆಚಿಪ್ಪು ಇಡೀ ಸಮುದ್ರವನ್ನು ಒಳಕೊಳ್ಳುವುದೇ? ಈ ರಾಮನ ಆತ್ಮದ ವಿರಾಟ್ ರೆಕ್ಕೆಗಳ ಅಲುಗಾಟಕ್ಕೆ ಕೋಸಲ ಆಕಾಶದ ವಿಸ್ತಾರ ಸಾಲದು. ಅದು ಅಲ್ಪ.

'ಭರತನೇ ಕೇಳು. ಅನಂತ ಆಕಾಶಯಾತ್ರಿ ರಾಮ ಇಚ್ಛಾ ಗರುಡನು. ಅನಂತವನ್ನು ಅಂತ್ಯವನ್ನುಳ್ಳ ಅಲ್ಪಕ್ಕೆ ಎಳೆಯುವ ಸಾಹಸ ಇನ್ನು ಸಾಕು. ಏಳು, ಶೋಕವನ್ನು ಬಿಡು. ನಾನು ಹೇಳಿದಂತೆ ಮಾಡು. ಅದರಿಂದ ಇನ್ನು ಮುಂದೆ ಲೋಕಕ್ಕೆ, ನಿನಗೆ, ಕೋಸಲಕ್ಕೆ ಒಳ್ಳೆಯದಾಗುತ್ತದೆ.'

ಎಂದು ಹೇಳುತ್ತ ಗುರು ವಸಿಷ್ಠನು ಹೇಗೊ ಕೈಕೆಯ ಕುಮಾರನನ್ನು ಸಂತೈಸಿದನು.

ಆನೆಯು ದಂತದಿಂದ ಇರಿದರೂ ಸೊಂಡಿಲಿನಿಂದ ಅಪ್ಪಿಕೊಂಡಿತು ಎಂಬಂತೆ ರಾಮನು ನುಡಿಯ ಮೊಳೆಹಲ್ಲಿನಿಂದ ಇರಿದರೂ ತಾವಿಬ್ಬರೂ ಒಂದೆಂದು ತೋರಿಸುವಂತೆ

ಮತ್ತು ಸಹೋದರನಿಗೆ ಗುರುವಾಕ್ಯದಲ್ಲಿ ಶ್ರದ್ಧೆಯುಂಟಾಗುವಂತೆ – ತೋಳುಗಳಿಂದ ತಬ್ಬಿಕೊಂಡನು. ಭರತನು ರಾಮ ಪಾದ ಸ್ಪರ್ಶದಿಂದ ಮಹಿಮಾನ್ವಿತವಾದ ದಿವ್ಯ ಪಾದುಕೆಗಳನ್ನು ದೇವನ ಅಡಿಯು ದೇವರಿಗೆ ಪಡಿ (ಸಮಾನವಾದುದು) ಎಂಬಂತೆ ತನ್ನ ತಲೆಯ ಮೇಲೆ ಇಟ್ಟುಕೊಂಡು ನುಡಿದನು:

'ದೇವತೆಗಳೆ, ಗಗನ ಗಿರಿ ನದಿ ವನ ಸ್ಥಳಗಳೆ, ಆಚಾರ್ಯರುಗಳೆ, ಧರ್ಮದೇವರುಗಳೆ, ಮಾತೃದೇವತೆಗಳೆ, ಪರಿಜನ ಪ್ರಜೆಗಳೆ ಆಲಿಸಿರಿ. ನಾನು ಈ ಪೂಜ್ಯ ಪಾದುಕೆಗಳನ್ನು ಪೂಜ್ಯಪಾದವೆಂದು ತಿಳಿದು ಸಿಂಹಾಸನದೊಳಿಟ್ಟು ಪೂಜಿಸುವೆನು. ಭ್ರಾತೃದೇವನಿಗೆ ಸಲ್ಲಿಸುವ ಸೇವೆಯೆಂದು ರಾಜ್ಯವನ್ನು ಹದಿನಾಲ್ಕು ವರ್ಷಗಳು ಪೂರ್ತಿ ಪಾಲಿಸುವೆನು. ಆ ಮಾರನೆಯ ದಿನ ನನಗೆ ಶ್ರೀರಾಮ ದರ್ಶನವು ದೊರೆಯದಿದ್ದರೆ, ಅಣ್ಣ ದೇವನನ್ನು ಆತ್ಮಲೋಕದಲ್ಲಿ ಸಂದರ್ಶಿಸಲು ಬೆಂಕಿಗೆ ಶರೀರವನ್ನು ಸಮರ್ಪಿಸುವೆನು. ಅಲ್ಲಿಯವರೆಗೆ ವ್ರತಿಯಂತೆ ಜಟಾವಲ್ಕಲಧಾರಿಯಾಗಿರುವೆನು. ಪ್ರತಿ ನಿತ್ಯವು ರಾಮಾಭ್ಯುದಯ ತಪೋಮಗ್ನನಾಗಿರುವ ನನಗೆ ನೀವು ಕರುಣಿಸಿ, ಆಶೀರ್ವದಿಸಿ !'

ಚಿತ್ರಕೂಟದಲ್ಲಿ ಅವನಿಜಾರಮಣನ ಸನ್ನಿಧಿಯಲ್ಲಿ ಆ ರಾತ್ರಿ ಶಾಂತಿಯನ್ನು ಪ್ರಕಾಶಿಸಿತು. ಹದಿನಾಲ್ಕು ವರ್ಷದ ವನವಾಸದ ಆ ದೀರ್ಘತರ ಯಾತ್ರೆಗೆ ಕೃಪೆಯ ಬುತ್ತಿಯನ್ನು ಕಟ್ಟೊವನೋ ಎಂಬಂತೆ ಕೈಕೆಯ ಪುತ್ರನು ರಾಮಸಂಗದ ಅಮೃತವೃಷ್ಟಿಯಲ್ಲಿ ತೊಯ್ದುಹೋದನು.

ಪ್ರಾಣಮಯ ಪೃಥ್ವಿಯ ನವಜೀವನ ವ್ರತಕ್ಕೆ ಜೀವ ನವೀನ ಚೇತನ ತೀರ್ಥವನ್ನು ಎರೆಯಲು, ಕುಂಕುಮ ಕನಕದ ನವ್ಯ ರತ್ನಕಾಂತಿಯಿಂದ ಮಿನುಗುವ ಚಿನ್ನದ ಕಲಶವನ್ನು ಕೈನಲ್ಲಿ ಹಿಡಿದು ಪೂರ್ವದ ಬೆಟ್ಟದ ಕೋಡನ್ನು ನಿಧಾನ ನಿಧಾನವಾಗಿ ಏರಿದಳೊ ಚಿರನೂತನ ಸೃಷ್ಟಿ ಲಕ್ಷ್ಮಿ ಎನ್ನುವಂತೆ ರತ್ನಮಯ ರವಿಯು ಕೋಟಿಕಿರಣ ಕಿರೀಟಿ ತಾನಾಗಿ ಹೊಳೆದನು. ಭರತೇಂದ್ರನು ಪೂಜ್ಯಪಾದನ ಪೂಜ್ಯ ಪಾದುಕಾ ಕಿರೀಟ ತೇಜದ ಸಮ್ರಾಜನಾಗಿ ಆ ಚಿತ್ರ ಶೈಲದಿಂದ ರಾಜ ನಗರಾಭಿಮುಖನಾಗಿ ಹೊರಟನು.

ಪ್ರತಿಯೊಬ್ಬರೂ ಪ್ರತಿಯೊಬ್ಬರನ್ನೂ ದುಃಖದ ಬೆಂಕಿಯಿಂದ ದಹಿಸಿ ನಿಟ್ಟುಸಿರಿನಿಂದ ಕೂಡಿದ ಕಣ್ಣೀರು ಸೂಸಿ ಬೀಳ್ಕೊಟ್ಟರು. ಸೌಮಿತ್ರಿ ಮತ್ತು ರಾಮಸೀತೆಯರೊಡನೆ ನಿಂತ ಮುನಿ ಸಂಕುಲವು ಬೆಟ್ಟದ ತುದಿಯನ್ನು ಹತ್ತಿತು. ಕಣ್ಣಿನ ದೃಷ್ಟಿ ಮುಟ್ಟುವವರೆಗೂ ದೃಷ್ಟಿಹರಿಸಿ, ಭರತನ ಸೈನ್ಯವು ಮಂದಾಕಿನಿಯ ಪ್ರವಾಹವನ್ನು ದಾಟುವವರೆಗೂ ನೋಡುತ್ತಿದ್ದಿತು. ಆ ಘೋಷವು ನಿಧಾನವಾಗಿ ನಿಂತುದನ್ನು ಆಲಿಸುತ್ತಿರಲು, ಸೈನ್ಯಧೂಳಿ ಪಥವು ಬೆಟ್ಟ ಸಾಲುಗಳ ನಡುವೆ ಕಣಿವೆಯ ಹಾದಿಯ ಕೊನೆಯ ದಿಕ್ಕಿನ ದೂರವನ್ನು ಮಬ್ಬಾಗಿಸಿ ಕಣ್ಣಿಗೆ ಮರೆಯಾಯಿತು.

ಭರತಾದಿಗಳು ಋಷ್ಯಾಶ್ರಮದ ಬಳಿಗೆ ಬಂದರು. ಗುರು ಭರದ್ವಾಜರ ಪಾದಗಳಿಗೆ ನಮಸ್ಕರಿಸಿ ನಡೆದುದನ್ನು ಅರಿಕೆ ಮಾಡಿಕೊಂಡು ಆಶೀರ್ವಾದವನ್ನು ಪಡೆದು ಮುಂದುವರಿದರು. ಯಮುನಾ ನದಿಯನ್ನು, ಅನಂತರ ಗಂಗಾನದಿಯನ್ನು ದಾಟಿ ಶೃಂಗಿಬೇರಪುರವನ್ನು ಹೊಕ್ಕರು. ಗುಹನ ಆತಿಥ್ಯವನ್ನು ಸ್ವೀಕರಿಸಿ ಬೀಳ್ಕೊಂಡು, ಕೌಸಲದ ಕಡೆಗೆ ಯಾತ್ರೆಯನ್ನು ಮುಂದುವರಿಸಿದರು.

ಹಾ! ಭಾಗ್ಯಹೀನ ದೀನ ಅಯೋಧ್ಯೆ, ರಾಮನ ವನವಾಸದಿಂದ ದಶರಥನ ನಿಧನದಿಂದ ಮತ್ತು ಭರತನ ಪರಿತ್ಯಾಗದಿಂದ ನಿನಗೆ ಅರಣ್ಯಗತಿಯಾಯಿತಲ್ಲಾ! ತತ್ತ್ವ, ವಿದ್ಯಾ, ಕಲಾ, ಸಂಗೀತ, ಸಾಹಿತ್ಯ ಸಕಲ ಸಂಸ್ಕೃತಿಯ ಶ್ರೇಷ್ಠರಿಲ್ಲದಿರೆ ಏನಿದ್ದರೇನು? ಅಂತಹ ಪಟ್ಟಣವು ಸ್ಮಶಾನದಂತೆ. ವಿಸ್ತಾರವಾದ ಬೀದಿಗಳ ಎರಡು ಕಡೆ ಮುಗಿಲನ್ನು ಮುಟ್ಟಿ ಸ್ಪರ್ಧೆಯೊಡನೆ ಮೆರೆಯುವ ಕಟ್ಟಡಗಳ ಸಾಲುಗಳಿದ್ದರೇನು? ರಾತ್ರಿಯನ್ನು ಹಗಲಂತೆ ಮಾಡಿ ಆಗಸದ ನಕ್ಷತ್ರಗಳನ್ನು ಹೀಯಾಳಿಸುತ್ತ ಕಿಕ್ಕಿರಿದು, ಕಣ್ಣಿಗೆ ಬೆರಗುಗೊಳಿಸಿ ಗೊಂಚಲಾಗಿ ಉರಿವ ವಿದ್ಯುದ್ದೀಪರಾಶಿ ಇದ್ದರೇನು? ಬಣ್ಣದ ಚಿಲುಮೆಗಳು ಕಣ್ಣಿಗೆ ಕಾಮನಬಿಲ್ಲುಗಳ ಲಲನೆಯ ಆಟವೆಂಬಂತೆ ಸಾಲುಗೊಂಡು, ವಿವಿಧಗತಿಯ ಕಲಾಕೃತಿಯಿಂದ ರಂಗುರಂಗಿನ ತೋಟರಂಗದಲ್ಲಿ ಮನಸೆಳೆದು ಮೋಹಕವಾಗಿ ಕುಣಿದರೆ ಏನು? ಪುರುಷಾರ್ಥದ ಶಾಶ್ವತದ ರಾಸಲೀಲಾ ಬೃಂದಾವನವು ಪ್ರಾಸ ಛಂದಸ್ಸುಗಳಿಂದ ಪೂರ್ಣವಾಗುತ್ತದೆಯೆ?

ಜನ ಮನೋಮಂದಿರದ ಸುಸ್ವಪ್ನ ಗೋಪುರದ ಕಲಶವು ಗಗನಚುಂಬಿಯಾಗದಿದ್ದರೆ, ಋಷಿ ಹೃದಯದ ಮಂಗಳ ಬೆಳಕು ಬಾಳಿನ ಅಂಧತೆಯನ್ನು ಅಳಿಸದಿದ್ದರೆ, ಕವಿಕೃತಿಯ ವರ್ಣಗಾನವು ಮಹನ್ ನಿತ್ಯತೆಯ ಸ್ವರ್ಣಸುಂದರ ಇಂದ್ರಿಯಾತೀತ ನಂದನದಲ್ಲಿ ನವರಸ ಅಪ್ಸರಿಯರು ನರ್ತನವನ್ನು ಮಾಡದಿದ್ದರೆ, ಹೇಳು, ಏನಿದ್ದರೇನು ಅನಾಗರಿಕತಾ ಸಂಪತ್ತು. ಅಂತಹ ಪಟ್ಟಣವು ಅಯೋಧ್ಯೆಯಾಗಿದ್ದರೂ ಅದು ಸ್ಮಶಾನ !

ಪೂಜ್ಯ ಪಾದುಕಾ ಚೇತನನಾದ ಭರತನು ಸುಡುಗಾಡನ್ನು ಪ್ರವೇಶಿಸುವನೇನು? ಹಾಳು ಆವರಿಸಿದ ಕೆಟ್ಟ ನೆನಪಿನ ನಿಧಿಯಾದ ಅಯೋಧ್ಯೆಗೆ ಬೆನ್ನನ್ನು ತಿರುಗಿಸಿದನು. ಹತ್ತಿರದ ನಂದಿಗ್ರಾಮಕ್ಕೆ ಬಂದನು. ಅಲ್ಲಿ ಪಾದುಕೆಗಳಿಗೆ ಪಟ್ಟಾಭಿಷೇಕವನ್ನು ಮಾಡಿ ಅವುಗಳನ್ನು ಪೂಜಿಸಿ ರಾಜ್ಯಭಾರವ್ರತವನ್ನು ಕೈಗೊಂಡನು. ಸದಾ ಶ್ರೀರಾಮ ಸುಕ್ಷೇಮ ಚಿಂತನಾ ಪ್ರಾರ್ಥನೆಗೆ ತನ್ನ ಆತ್ಮವನ್ನು ಮುಡುಪಾಗಿಟ್ಟನು.

❑



~~~~~~~~~~~~~~~~~~~~~~ ಸಂಚಿಕೆ – ೧೦ ~~~~~~~~~~~~~~~~~~~~~

ಅತ್ರಿಯಿಂದಗಸ್ತ್ಯಂಗೆ

ತ್ರೇತಾಯುಗದ ಕಾಡಿನ ಸಂಜೆಯು ಅತ್ರಿಮುನಿಯ ಆಶ್ರಮಕ್ಕೆ ರವಿಯ ಬಂಗಾರದ ತಟ್ಟೆಯಿಂದ ಓಕುಳಿಯನ್ನು ಎರಚಿತು. ಆಶ್ರಮದ ಎದುರಿಗೆ ಹತ್ತಿರದಲ್ಲಿರುವ ವೃಕ್ಷಗಳ ಎತ್ತರದ ಶಿಖರದಲ್ಲಿ ಪಕ್ಷಿಗಳು ಗಡಿಬಿಡಿಯಿಂದ ಕಲರವಗೈದು ಕೀರ್ತನೆಯನ್ನು ಮಾಡುತ್ತಿದ್ದವು. ಪವಿತ್ರ ಸತಿ ಅನಸೂಯೆಯು ಪ್ರಕೃತಿ ಗೌರಿಯ ಕಲಾಪೂಜೆಯನ್ನು ಮಾಡಿ ಧ್ಯಾನದ ಆನಂದಶಾಂತಿಯಲ್ಲಿದ್ದಳು.

ಆಗ 'ಮಹಾಮುನಿ ಸತಿಯೆ, ನಿನ್ನ ಮಕ್ಕಳಾದ ನಮಗೆ ಕೃಪೆತೋರು!' ಎಂಬ ದನಿ ಕೇಳಿ ಬಂದಿತು. ಆ ಕಡೆ ತಿರುಗಿದ ಮುದುಕಿ ಕಣ್ಣನ್ನು ಕಿರಿದುಮಾಡಿಕೊಂಡು
~~~~~~~~~~~~~~~~~~~~~~

ಗುರುತು ತಿಳಿಯಲು ಪ್ರಯತ್ನಿಸಿದಳು. ತಕ್ಷಣ 'ನಾನು ರಾಮ, ಇವಳು ನನ್ನ ಸತಿ ಸೀತೆ. ಈತ ನನ್ನ ಸಹೋದರ ಲಕ್ಷ್ಮಣ' ಎಂದು ಹೇಳುತ್ತ ರಾಮಚಂದ್ರನು ತನ್ನನ್ನು ತಾನು ಪರಿಚಯಿಸಿಕೊಂಡು ನಮಸ್ಕರಿಸಲು ಮುಂದುವರಿದನು. ಕಿರಿದಾಗಿಸಿದ ಕಣ್ಣುಗಳಿಂದ ಸೂಕ್ಷ್ಮವಾಗಿ ದಿಟ್ಟಿಸುತ್ತ ಅತ್ರಿಯ ಪತ್ನಿ ಸುಕ್ಕುಗಟ್ಟಿದ ಚರ್ಮದ ವೃದ್ಧೆ ಮೇಲೇಳತೊಡಗಿದಳು.

ಅವಳು ಹಿಂದೊಮ್ಮೆ ತನ್ನ ತಪೋಮಹಿಮೆಯಿಂದ ಬರಗಾಲವನ್ನು ತಡೆಗಟ್ಟಿ ಬತ್ತಿದ ಜಾಹ್ನವಿಗೆ ಜಲದ ಸಂಪೂರ್ಣತೆ ಉಂಟುಮಾಡಿದವಳು. ದೇವಕಾರ್ಯ ನಿಮಿತ್ತವಾಗಿ ಹತ್ತುರಾತ್ರಿಗಳನ್ನು ಒಂದು ಇರುಳು ಮಾಡಿದವಳು. ಅಂತಹ ಶ್ರೇಷ್ಠಳ ವ್ರತಕಾರ್ಯಗಳಿಂದ ಕಂಪಿಸುತ್ತಿರುವ ಬಿಳಿದಾದ ವೃದ್ಧದೇಹವನ್ನು ರಘುರಾಮನು ನಿಧಾನವಾಗಿ ಹಿಡಿದುಕೊಂಡು ಎತ್ತಿ ನಿಲ್ಲಿಸಿದನು. ಅವರು ನಮಸ್ಕರಿಸಲು ಅತ್ರಿ ಋಷಿ ಭಾರ್ಯೆಯು ಆನಂದದಿಂದ ಕಣ್ಣೀರುಹೊಮ್ಮಿಸುತ್ತ ಹರಸಿದಳು.

ಪೂಪೊಂದನಿತ್ತಳಾಕೆಗೆ ಮಾನಸಿಕ ಸೃಷ್ಟಿಯುಂ, ಆಶೀರ್ವದಿಸಿ ರಕ್ಷಾಕವಚವೀವಂತೆಪೋಲ್

'ಬಾ ಕಂದ, ರಘುರಾಮ ಆರ್ಯ; ಬಾ ಮಗಳೆ, ವೈದೇಹಿ; ಬಾರ, ಲಕ್ಷ್ಮಣದೇವ. ನಿಮ್ಮನ್ನು ಅತಿಥಿಗಳಾಗಿ ಪಡೆದ ನಮ್ಮ ಆಶ್ರಮದ ಬಾಳು ಇಂದು ಪಕ್ವವಾಯಿತು. ಅದೊ ನೋಡು, ಸಂಜೆಯು ನನ್ನಂತೆ ರಾಮನ ಅನುರಾಗದಿಂದ ಬೆಳಗುತ್ತ ಅಸ್ತಗಿರಿಯ ಪರ್ಣಶಾಲೆಯನ್ನು ಪ್ರವೇಶಿಸಲು ಪ್ರಯತ್ನಿಸುತ್ತಿದೆ! ಅಲ್ಲಿ ನೋಡು, ಮುಂದೆ ಬರುವ ಕತ್ತಲೆಯ ಮಬ್ಬಿನಲ್ಲಿ ಸ್ವಲ್ಪ ಎಲೆಗಳಿರುವ ಮರವು ನಿಮ್ಮ ನಿರೀಕ್ಷಣೆಯಲ್ಲಿ ಹೆಪ್ಪುಗಟ್ಟಿದಂತಿದೆ.

'ಆ ಬಂದರು ನೋಡಿ, ಸ್ನಾನದಿಂದ ಒದ್ದೆಯಾದ ತಪಸ್ವಿಗಳು. ಕಲಶಗಳನ್ನು ಕೈನಲ್ಲಿ ಒಂದಾಗಿಸಿಕೊಂಡ ತಪಸ್ವಿಗಳು ನದಿಯಿಂದ ತಮ್ಮ ತಮ್ಮ ಪರ್ಣಾಶಾಲೆಗಳಿಗೆ, ಆ ಪತಿದೇವನು ಬಂದ. ಆತನೇ ಮಹರ್ಷಿ ಭಗವಾನ್ ಅತ್ರಿ!'

ನಿರ್ವಿಕಲ್ಪ ಸಮಾಧಿಯೊಂದು ಅನಿರ್ವಚನೀಯ ಮೌನವನ್ನು ಎರಕಹೊಯ್ದ ಶಾಂತಿಯ ನಿಜಾಕೃತಿಯೊ ಎನ್ನುವಂತಿರುವ ಸನಾತನಯೋಗಿ ಅವನು. ಪ್ರತ್ಯಕ್ಷವಾಗಿ ಪ್ರಾಚೀನತೆಯ ಸಮಾನರೂಪನಾಗಿದ್ದರೂ ನವ್ಯಕಾಲತ್ರಯ ಜ್ಞಾನಿ ಅವನು. ಎಳೆಯರೆಲ್ಲರೂ ಅವನಿಗೆ ಮಣಿದರು. ಅವರೆಲ್ಲರನ್ನು 'ಓಂ ಶಾಂತಿ' ಮಂತ್ರದಿಂದ ಆಶೀರ್ವದಿಸಿದನು. ಪ್ರೀತಿಯಿಂದ ಅವರೊಡನೆ ಮಾತಾಡಿ ಪರ್ಣಕುಟಿಗೆ ಕರೆದುಕೊಂಡು ಹೋದನು.

ತಾನು ಭರತನನ್ನು ಬೀಳ್ಕೊಟ್ಟ ನಂತರ ಮುನಿಸಮೂಹವು ರಾವಣನ ಸಹೋದರ ಖರನ ಹಿಂಸೆಗೆ ಚಿತ್ರಕೂಟ ಪರ್ವತವನ್ನು ತ್ಯಜಿಸಿತು. ಆಗ ಆ ರಾಕ್ಷಸರನ್ನು ಕೊಂದು ಬಂದೆನು ಎಂಬ ಜುಗುಪ್ಸಾ ವಿಷಯಗಳನ್ನು ರಾಮನು ಅತ್ರಿಮಹರ್ಷಿಗೆ ತಿಳಿಸಿದನು.

ಅದನ್ನು ಕೇಳಿದ ಋಷಿಯು ತನ್ನ ಮಡದಿಯ ಮುಖವನ್ನು ನೋಡಿದನು. ಅವಳು ಸೀತೆಯನ್ನು ನೋಡಿ ಎದೆ ಕರಗಿ ನಿಟ್ಟುಸಿರು ಬಿಟ್ಟಳು.

'ಹಾ ವಿಧಿಯ ಕೃತಿ ಕೌಶಲಕ್ಕೆ ಮೇರೆ ಇದೆಯೆ?' ಎಂದು ತನಗೆ ತಾನು ಆಡಿಕೊಂಡ ಆ ಮುನಿಯು ಸೀತಾಪತಿಯ ಕಡೆಗೆ ತಿರುಗಿ ಪ್ರಕಟವಾಗಿ 'ಶಿಲ್ಪಿಯ ಚೂಪಾದ ಉಳಿಯ ಮೊನೆಯ ಕಠಿನ ಶಿಕ್ಷೆಗಲ್ಲದೆ ಕಲಾ ಪೂರ್ಣ ಮಹಾದೇವತಾ ವಿಗ್ರಹ ಹೊಮ್ಮುತ್ತದೆಯೆ?' ಎಂದು ಹೇಳುತ್ತ ಅನ್ಯ ವಿಷಯುವನ್ನು ಮಾತನಾಡತೊಡಗಿದನು. ದಂಡಕಾರಣ್ಯದ ಮತ್ತು ರಾಕ್ಷಸರ ಉಪದ್ರವದ ಕಷ್ಟಕಥೆಯನ್ನು ಹೇಳಿದನು. ಅದನ್ನು ಕೇಳಿದ ರಾಮನ ಮನಸ್ಸಿನಲ್ಲಿ ಸಾಹಸವು ಕುತೂಹಲಿಯಾಗಿ ಎದೆಯನ್ನು ಆವರಿಸಿತು. ಆಶ್ರಮದ ಶಾಂತ ಅಹಿಂಸೆಯ ಮೃದುತನದ ರಕ್ಷಣೆಗೆ ಮನಸ್ಸುಕೊಟ್ಟ ಲಕ್ಷ್ಮಣನಲ್ಲಿ ಕೆಚ್ಚಿನ ನಖ ಮೂಡಿದಂತಾಯಿತು. ಸೀತೆಯು ಪತಿಯ ಭೀಮಕಾಂತತೆಗೆ ಪುಲಕಗೊಂಡು ಕಂಪಿಸಿದಳು.

ಅದನ್ನು ನೋಡಿದ ಮುನಿಪತ್ನಿಯು ಅವಳನ್ನು ಬಿಗಿದು ಅಪ್ಪಿಕೊಂಡಳು. ಮುಂದೆ ಒದಗಿ ಬರುವ ಉಗ್ರಪರಿಸ್ಥಿತಿಗೆ ಇಂದೇ ಮಂತ್ರ ಕವಚವನ್ನು ತೊಡಿಸುವಂತೆ ಪತಿವ್ರತಾ ಪ್ರೇಮ ಮಹಿಮಾಶಕ್ತಿಯನ್ನು ಉಪದೇಶವಾಗಿ ಹೇಳಿದಳು. ಮಾನಸಿಕವಾಗಿ ಒಂದು ಹೂವನ್ನು ಸೃಷ್ಟಿಸಿ, ರಕ್ಷಾಕವಚದಂತೆ ಪ್ರೀತಿಯಿಂದ ನೀಡಿದಳು.

ಆ ಕಡೆ ಮುನಿಯಿಂದ ರಾಮಲಕ್ಷ್ಮಣರು ಮುಂದಿರುವ ನಿಬಿಡ ಮಹಾರಣ್ಯದ ಮಾರ್ಗಗಳನ್ನು, ಆಶ್ರಮ ಸ್ಥಳಗಳನ್ನು, ಅನಾರ್ಯರನ್ನು ಮತ್ತು ದಸ್ಯು, ಕಿರಾತರ ರಕ್ತಪಾನಪ್ರಿಯತೆಯನ್ನು ಕೇಳಿ ತಿಳಿದರು. ಈ ಕಡೆ ಅನಸೂಯೆಯು ಮಧುರಭಾಷಿಣಿ ಜನಕ ಕುಮಾರಿಯ ಮುಖದಿಂದ ಸ್ವಯಂವರದ ವಾರ್ತೆ, ವನವಾಸ ಕಾರಣವಾದ ಕಥೆಯನ್ನು ಜೊತೆಗೆ ಭರತನ ಭ್ರಾತೃಭಕ್ತಿಯ ತಪೋನಿಷ್ಠೆಯನ್ನು ಕೇಳಿ ತಿಳಿದಳು.

ಅಷ್ಟುಹೊತ್ತಿಗೆ ಸುವರ್ಣ ಆಗಸದಲ್ಲಿ ಚಂದ್ರನು ಪರ್ಣಕುಟಿಯ ಬೆಟ್ಟಮಲ್ಲಿಗೆಯ ಎಲೆಗಳ ಕಡೆಯಿಂದ ಬೆಳ್ಳಿಯ ಧಾರೆಯನ್ನು ಸುರಿಸುತ್ತ ಕಣ್ಣು ಮನಸ್ಸುಗಳಿಗೆ ಮಾಯೆಯನ್ನು ಬೀಸಿ ಬಂದನು. ಕಾಲವು ನುಂಗಿ ನೊಣೆದಿರಲು, ತನ್ನ ಎಳೆತನವನ್ನು ಮತ್ತೆ ಕಾಣುವ ಮೋಹಕ್ಕೆ ಮುಪ್ಪು ಕಾತರಿಸಿತು ಎಂಬಂತೆ ಅತ್ರಿ ಸತಿಯು ಸೀತೆಯನ್ನು ತನ್ನ ಕೈಗಳಿಂದ ವೇಷಭೂಷಣಗಳನ್ನು ತೊಡಿಸಿ ಸಿಂಗರಿಸಿದಳು. ಮನದಣಿಯೆ ನೋಡಿ, ಕೊಂಡಾಡಿದಳು. ಅನಂತರ ರಾಮಾಭಿರಾಮನೊಡನೆ ಮಲಗಲು ಕಳುಹಿಸಿದಳು.

ಅವರು ಅತ್ರಿ ಅನುಸೂಯರ ಪವಿತ್ರ ಸನ್ನಿಧಿಯಲ್ಲಿ ಆ ರಾತ್ರಿಯನ್ನು ಕಳೆದರು. ಮಾರನೆಯ ದಿನ ಉಷಾಮುಖದ ಕಿತ್ತಳೆಗೆಂಪು ಪ್ರತಿಬಿಂಬಿಸುವ ಹೊಳೆಯ ನೀರಿನಲ್ಲಿ ಮಿಂದರು. ಮುನಿಗಳೊಡನೆ ಅಗ್ನಿಕಾರ್ಯವನ್ನು ನಡೆಸಿದರು. ಆ ಕಂಪಿಡಿದ ಹೊಗೆಗಾಳಿಯಂತೆ ಎದ್ದು, ಮುನಿಗಳಿಂದ ಬೀಳ್ಕೊಂಡರು.

ಹಣ್ಣು ಹೂಗಳಿಗಾಗಿ ದಿನದಿನವು ನಡೆದಾಡುವ ಅರಣ್ಯವಾಸಿಗಳಿಂದ ಕಾಡುದಾರಿಯನ್ನು ತಿಳಿದರು. ಯೌವನವು ಮುಪ್ಪನ್ನು ಬೀಳ್ಕೊಳ್ಳುವಂತೆ ಮತ್ತು ಸಾಹಸವು ಶಾಂತಿಯನ್ನು ಅಗಲುವಂತೆ ರಾಮ ಸೀತೆ ಲಕ್ಷ್ಮಣರು ಮುನಿಗಳನ್ನು ಬಿಟ್ಟು ದುರ್ಗಮವಾದ ದಂಡಕಾರಣ್ಯವನ್ನು ಹೊಕ್ಕರು. ಅದು ಸೂರ್ಯನು ಕಾರ್ಮುಗಿಲ ಗುಹೆಯನ್ನು ಹೊಕ್ಕಂತಿತ್ತು.

ರೂಕ್ಷನಿಗೆ ಕಣ್ಗಳಲ್ಲದೆಯೆ ಬೇರೆ ಗುರಿ ಸಲ್ಲದಯ್.

ನಿಶ್ಯಬ್ದವು ವಿಸ್ತಾರವು ಆಗಿರುವ ದಂಡಕ ವನವು ಪುಲಕಗೊಂಡಿತು. ಲಂಕೆಯಲ್ಲಿ ನೆಲೆಸಿದ್ದ ರಾವಣನ ಹಣೆಯಲ್ಲಿಯ ವಿಧಿಯ ಮನಸ್ಸು ರೋಮಾಂಚನಗೊಂಡಿತು. ದಂಡಕಾರಣ್ಯದ ದೈತ್ಯತೆಯನ್ನು ನೋಡುತ್ತಿರಲು ಭೂಸುತೆಯ ಬಳ್ಳಿಯಂತಹ ಶರೀರ ಕಂಪಿಸಿತು. ಕಾಡಿನ ಭೀಷಣವಾದ ಹುಬ್ಬುಗಂಟಿಕ್ಕಿದಂತಹ ಪ್ರತಿಭಟನೆಯನ್ನು ಕಂಡು ಲಕ್ಷ್ಮಣನ ಕಣ್ಣು ಬೆದರಿ, ಧೈರ್ಯಭೀಮನಾದ ರಘುರಾಮನ ಕಡೆ ನೋಡಿದನು. ತೀಕ್ಷ್ಣವಾದ ಕಿರಣಗಳ ಸೂರ್ಯನಂತಹ ತೇಜಸ್ವಿಯಾದ ರಾಮನು ಕೋದಂಡಧರನಾಗಿ ಧೀರಗಮನದಲ್ಲಿ ನಡೆಯುತ್ತಿದ್ದನು. ಭಯಂಕರ ವಿಶಾಲ ಎದೆಯ ಅವನು ದೃಢತೆಯೇ ರೂಪು ಪಡೆದಂತಿದ್ದನು.

ದಂಡಕಾರಣ್ಯವು ಪಕ್ಷಿಗಳ ಕೂಗಿಲ್ಲದೆ ನೀರವವಾಗಿದೆ. ಜೀರುಂಡೆಯ ಘರ್ಘರ ಘೋರ ಕರ್ಕಶನಾದ ಮಾತ್ರ ಹೊಮ್ಮಿ ಬರುತ್ತಿದೆ. ಮರಗಳ ಬೃಹತ್ ಬಾಹುಗಳ ಕೃಷ್ಣನು ಬಿಸಿಲ ಕಂಸನ ಕೊರಳನ್ನು ಒತ್ತಿ ಗೋಣ್ಮುರಿಯಲು ಗತಿಸಿದ ಆ ಬಿಸಿಲ ಶವದ ಛಾಯೆ ಉರುಳಿತು ಎಂಬಂತೆ–ಹಬ್ಬಿದ ಕಾಡಿನ ಕುರುಡುಗೊಳಿಸುವ ಕತ್ತಲೆಯು ಭಯ ಭೈರವದಂತಿತ್ತು. ಅವರು ಅಂತಹ ಭಯಂಕರ ಅರಣ್ಯದ ಮಧ್ಯೆ ಹೋಗುತ್ತಿದ್ದರು. ಆಗ ಇದ್ದಕ್ಕಿದ್ದ ಹಾಗೆ ಸಿಡಿಲು ಹೊಡೆದಂತೆ ಒಂದು ಅದ್ಭುತವಾದ ಧ್ವನಿ ಎದ್ದಿತು. ಅದು ವನಗಿರಿ ಕಾಡು ಪರ್ವತ ಮತ್ತು ಭೂಮಿಯನ್ನು ನಡುಗಿಸಿತು. ಅದಕ್ಕೆ ಹೆದರಿದ ಅವನಿಜಾತೆಯು ಪತಿಯನ್ನು ಹಿಡಿದುಕೊಂಡಳು.

ಆ ಘೋರ ಶಬ್ದಕ್ಕೆ ಸಸ್ಯ ಸಂಪತ್ತಿನ ಬೇರು ಅಲುಗಾಡಿತು. ಕಾಡು ಅಸಮರ್ಥವಾದಂತೆ ಬಳಲಿ ಲಟಲಟ ಎಂದು ಶಬ್ದಮಾಡಿತು. ಗಾಳಿಯು ವೇಗವಾಗಿ ಮುಗಿಲಿನ ಕವಣೆಯ ಆಲಿ ಕಲ್ಮಳೆಯಂತೆ ಬೀಸಿ ಕಸುಗಾಯಿ, ಹಸಿಯೆಲೆಗಳನ್ನು ಉದುರಿಸಿ ನೆಲಕ್ಕೆ ಬಡಿಯಿತು.

ನೋಡುತ್ತಿರಲು ಗಿರಿಯ ಶಿಖರವೇ ನಡೆದು ಬರುವಂತೆ ದಂಡಕಾರಣ್ಯದ ವಿಪತ್ತು ದೇಹ ಪಡೆದಂತೆ – ದೊಡ್ಡದಾದ ಕಣ್ಣು, ದೊಡ್ಡ ಬಾಯಿಯ, ಭಾರೀ ಶರೀರದ ರಕ್ಕಸನ ಜುಗುಪ್ಸೆಗೊಳಿಸುವ ಭೀಮ ಭೀತಿ ಬಂದಿತು ! ಅವನು ಹತ್ತೆಂಟು ಸಿಂಹ, ಕಾಡುಕೋಣ, ಹೆಬ್ಬುಲಿ, ಜಿಂಕೆ, ಮದ್ದಾನೆಗಳ ಚರ್ಮದಿಂದ ಹೊಲಿದ

ಚಿತ್ರಮಯವಾದ ವಿಚಿತ್ರ ಬಟ್ಟೆಯ ಬಲೆಯನ್ನು ಉಟ್ಟ ದಟ್ಟವಾದ ಕಪ್ಪುಶರೀರದವನಾಗಿದ್ದನು. ಅವನು ತೆಂಗಿನಮರದ ರೀತಿಯ ಉದ್ದ ತೋಳುಗಳ ತುದಿಯಲ್ಲಿ ಅಡಕೆಯಂತಹ ಎತ್ತರದ ಶೂಲವನ್ನು ಎತ್ತಿ ಹಿಡಿದಿದ್ದನು. ಅದರ ತುದಿಗೆ ಎರಡು ದೊಡ್ಡ ಕೋರೆಹಂದಿಗಳನ್ನು ಚುಚ್ಚಿ ಪೋಣಿಸಿದ್ದನು. ಅವು ಬಿಸಿ ನೆತ್ತರನ್ನು ಬಸಿಯುತ್ತ ಕೂಗುತ್ತ ಒದ್ದಾಡುತ್ತಿದ್ದವು.

ತೂಗಿ ತೊನೆದಾಡುತ್ತಿದ್ದ ಭೀಕರ ಕೈಗಳಿಂದ ವಿರಾಧನು ಅತಿ ವಿಷಮ ವಿಷಮೃತ್ಯುವಿನಂತೆ ರಭಸದಿಂದ ಬಂದನು. ಸೀತೆಯನ್ನು ಬೇಗನೆ ಹಿಡಿದು ಎತ್ತಿ, ಸೀಗೆಯ ಮುಳ್ಳು ಮೊನೆಯಂತೆ ಹೊದೆ ಹೊದೆಯಾಗಿ ಕೆದರಿದ ಅವನ ಮುಳ್ಳು ತಲೆಯಲ್ಲಿಟ್ಟು ಕೊಂಡನು. ಹಾಗೆ ಮಾಡಿದ್ದು ಶಾಪಕ್ಕೆ ಗುರಿಯಾದ ಅವನು ಪಾಪನಾಶಿನಿಗೆ ಚೈತನ್ಯರೂಪಿಣಿಗೆ ಶಕ್ತಿಮಾತೆಗೆ ನಮಿಸುವಂತೆ ಇತ್ತು ! ಅವನು ಮತ್ತೆ ಹೀಗೆ ಅಬ್ಬರಿಸಿದನು:

'ಯೌವನದೊಡನೆ, ಜಟೆಯೊಡನೆ, ಕಪಟ ನಾರುಬಟ್ಟೆಯೊಡನೆ, ಸುಳ್ಳಿನೊಡನೆ, ಈ ಸುಂದರ ಸ್ತ್ರೀಯೊಡನೆ ನೀವು ಆಯಸ್ಸು ತೀರಿದವರಾಗಿ ನನಗೆ ಆಹಾರವಾಗಿ ಬಂದಿರುವಿರಿ! ಜವ್ವನಕ್ಕೆ ಜಟೆಯೇಕೆ? ನಾರುಡೆಗೆ ಈ ನಾರಿಯೇಕೆ? ಶರಚಾಪದ ವೀರರಿಗೆ ಈ ನಟನಾ ತಪಸ್ಸು ಏಕೆ? ಈ ಲಾವಣ್ಯವತಿಯಾದ ಉತ್ತಮ ಸ್ತ್ರೀ ನನಗೆ ಹೆಂಡತಿಯಾಗುತ್ತಾಳೆ! ಬಾಳುವ ಆಸೆ ನಿಮಗಿದ್ದರೆ ಓಡಿಹೋಗಿ ಬದುಕಿಕೊಳ್ಳಿ !'

ಹಾಗೆ ಹೇಳುತ್ತ ಶೂಲದಿಂದ ಗುರಿಯಿಡುತ್ತಿದ್ದನು. ಅದನ್ನು ಕಂಡು, ಮೂರ್ಛೆಹೋದ ಅತ್ತಿಗೆಯನ್ನು ನೋಡಿ ಕೋಪಗೊಂಡ ಸೌಮಿತ್ರಿಯು 'ಅಣ್ಣನೆ, ಆ ಕೈಕೆಯು ದೀರ್ಘದರ್ಶಿನಿ ಎಂಬುದು ನಿಜ' ಎಂದು ಆರ್ಭಟಿಸಿದನು. ರಭಸದಿಂದ ಆ ರಾಕ್ಷಸಾಕೃತಿಗೆ ಬಾಣ ಪ್ರಯೋಗ ಮಾಡಿದನು. ಚೂಪಾದ ಬಾಣಗಳ ಕೊರೆತದಿಂದ ಸ್ವಲ್ಪ ಘಾಸಿಯಾಗಲು ರಾಕ್ಷಸನು ಉರಿದೆದ್ದನು. ತಲೆಯಲ್ಲಿ ಧರಿಸಿದ್ದ ಧರಾತ್ಮಜೆಯನ್ನು ಇಳೆಗೆ ಇಳಿಸಿದನು. ಮರಣ ತರುವ ವಿಷಮಶೂಲ ಆಯುಧವನ್ನು ಎತ್ತಿಕೊಂಡನು. ಬೆಟ್ಟದಂತೆ ರಾಮಲಕ್ಷ್ಮಣರ ಕಡೆಗೆ ಯಮದೃಢಗಮನದಿಂದ ನುಗ್ಗಿದನು.

ಆಗ ರಾಮನು ಲಕ್ಷ್ಮಣನಿಗೆ 'ಈ ರಾಕ್ಷಸನ ಮೈ ಆಮೆಯ ಚಿಪ್ಪಿಗೆ ಸಮನಾದುದು. ಕ್ರೂರನಾದವನಿಗೆ ಕಣ್ಣುಗಳಲ್ಲದೆ ಬೇರೆ ಗುರಿ ಸರಿಯಾದುದಲ್ಲ' ಎಂದು ಹೇಳಿದನು. ಲಕ್ಷ್ಮಣನು ತಕ್ಷಣ ಗರಿಯ ವೇಗದ ರೆಕ್ಕೆಯ ಗರುಡ ಅಂಬನ್ನು ಎಸೆದು ವಿರಾಧನ ಕಣ್ಣುಗಳನ್ನು ಬಸಿದು ತೋಡಿ ಕುರುಡಾಗಿಸಿದನು. ರಾಕ್ಷಸನು ಕಣ್ಣು ಇಲ್ಲವಾಗಲು ಉರಿದೆದ್ದನು. ತೋಳುಗಳನ್ನು ಬೀಸಿ ಕಾಡನ್ನು ಗುಡಿಸಿ ಸೋಸಿದನು ! ತಡವಿ ಮೃತ್ಯುಮಯ ಮುಷ್ಟಿಯಲ್ಲಿ ಈರ್ವರನ್ನು ಬೇಗನೆ ಹಿಡಿದನು. ಹುಲಿಯು ಜಿಂಕೆಯನ್ನು ಕಚ್ಚಿ ಕೊಂಡೊಯ್ಯುವಂತೆ ಹೊತ್ತುಕೊಂಡು ಓಡಿದನು. ಸೀತಾಕಾಂತೆಯು ನೋಡಿ ನಡನಡ ನಡುಗಿ ಹಿಂಬಾಲಿಸಿ ಓಡಿದಳು.

'ಓ ವಿಧಿಯೆ ರಕ್ಷಿಸಯ್ಯ! ದಶರಥೇಂದ್ರನ ಪ್ರಿಯ ಕುಮಾರರನ್ನು ರಕ್ಷಿಸೋ ರಕ್ಷಿಸು! ಕೈ ಮುಗಿದು ಬೇಡುವೆನೊ, ರಾಕ್ಷಸೋತ್ತಮನೆ, ನನ್ನನ್ನಾದರೂ ನಿನಗೆ ನೀಡುತ್ತೇನೆ, ರಾಮಚಂದ್ರನನ್ನು ಬಿಡೊ. ಊರ್ಮಿಳಾ ಪ್ರಾಣೇಶನನ್ನು ಕಾಪಾಡಯ್ಯ' ಎಂದು ಕೂಗಿಕೊಂಡಳು.

ರಾಮನ ಖಡ್ಗಕ್ಕೆ ಮತ್ತು ಲಕ್ಷ್ಮಣನ ಕತ್ತಿಯ ಏಟಿಗೆ ರಾಕ್ಷಸನ ಎರಡು ಬಾಹುಗಳು ದೊಪ್ಪನೆ ಬಿದ್ದವು. ಜೊತೆಗೆ ಕಾಡು ಅರಚಿಕೊಂಡಂತೆ ದೈತ್ಯನ ಶರೀರ ಒಂದು ದೊಡ್ಡ ಗುಡ್ಡದಂತೆ ಬಿದ್ದಿತು. ಅರಣ್ಯದಲ್ಲಿ ಕೆಸರೆದ್ದು ರಕ್ತದ ಪ್ರವಾಹ ಹೆಪ್ಪುಗಟ್ಟಿತು. ಬೀಭತ್ಸದಿಂದಲೂ ಸೌಂದರ್ಯವು ಉದ್ಭವಿಸುವಂತೆ ಆ ಮೃತದೇಹದಿಂದ ಅಮೃತಮಯ ಗಂಧರ್ವನೊಬ್ಬನು ಹೊಮ್ಮಿಬಂದು ರಾಮನಿಗೆ ಹೇಳಿದನು:

'ಜಯ ಜಯ, ಹೇ ಮಹಾಪುರುಷ ! ನನ್ನನ್ನು ಕ್ಷಮಿಸು. ನಾನು ಕುಬೇರನ ಆಳು ತುಂಬುರ. ರಂಬೆಯ ಕಾರಣದಿಂದ ಈ ಶಾಪಕ್ಕೆ ಒಳಗಾದೆನು. ನನ್ನ ಶಾಪವನ್ನು ವಿಮೋಚನೆಗೊಳಿಸಿದಿರಿ. ನಿಮಗೆ ವಂದನೆ. ನನ್ನ ರೀತಿಯಂತೆ ಈ ದಂಡಕಾರಣ್ಯವು ಅಂಜಿಕೆಯುಳ್ಳ ವ್ಯಕ್ತಿಗೆ ಭಯಂಕರ; ರಸಿಕ ಧೀರರಿಗೆ ಕಲಾಶಂಕರ ! ಮುಂದುವರೆದು ಸಾಗಿದರೆ ಎರಡುಗಾವುದಗಳ ಆಚೆಯಲ್ಲಿ ಶರಭಂಗ ಋಷ್ಯಾಶ್ರಮವಿದೆ. ಇದೊ ನಮಸ್ಕರಿಸುತ್ತೇನೆ. ನಾನು ಹೋಗುತ್ತೇನೆ. ನಿಮಗೆ ಸೊಗವಾಗಲಿ, ಗೆಲುವಾಗಲಿ, ಕೊನೆಗೆ ಮಂಗಳವಾಗಲಿ !'

ಈ ರೀತಿ ಹೇಳಿ ಹರಸಿ ಗಂಧರ್ವನು ಅದೃಶ್ಯನಾದನು. ಅವನು ಸೂಚಿಸಿದ ಮಾರ್ಗಹಿಡಿದು ಬನದಿಂದ ಬನಕ್ಕೆ ಬೇಗ ನಡೆದರು. ಸಂಜೆ ಹೊತ್ತಿನ ಒಳಗೆ ಶರಭಂಗನ ಆಶ್ರಮದ ಕಡೆಗೆ ಬಂದರು. ರಾಕ್ಷಸರ ಹಿಂಸೆಗೆ ಸಿಕ್ಕಿ ಮರಣ ಮುಖನಾಗಿ, ಮಾತು ನಿಂತುಹೋಗಿ; ಚರ್ಮ ಅಸ್ಥಿಮಾತ್ರವಾಗಿದ್ದ ಕರುಣಕರ ಶರೀರದ ಶರಭಂಗನನ್ನು ಕಂಡು ರಾಮನ ಆತ್ಮ ಮರುಗಿತು. ಅವನ ಕೋಪವೆಂಬ ಬಡಬಾನಲವು(ಸಮುದ್ರದ ಬೆಂಕಿ) ಜ್ವಲಿಸಿ, ಅದು ತನ್ನ ಏಳು ಕೆನ್ನಾಲಿಗೆಗಳಿಂದ ರಕ್ಕಸರನ್ನು ಯಜ್ಞ ಕುಂಡಕ್ಕೆ ಅರ್ಪಿಸಲು ನಿರ್ಧರಿಸಿತು. ಅವನು ದುಷ್ಟದಾನವರ ದೂರ್ತತೆಯ ಕಥೆಯನ್ನು, ಆರ್ಯರ ಅತಿಕಷ್ಟದ ವ್ಯಥೆಯನ್ನು ಕೇಳಿದನು. ರಕ್ಷೆಯನ್ನು ಬೇಡಿದ ಯತಿಗಳಿಗೆ ಹೀಗೆ ಅಭಯವನ್ನು ನೀಡಿದನು:

ಭೀಮಕರ್ಮಿಗಳಾರ್ಯವೈರಿಗಳ್ ಅನಾತ್ಮರಂ ಋಷಿಕಂಟಕರ ನಿರಿವುದೆನ್ನಯ ಮನಂ

'ಪೂಜ್ಯರಿರಾ, ನಾನು ನನ್ನ ಸ್ವಂತ ಕೆಲಸಕ್ಕಾಗಿ ಬಂದಿರುವನೆಂದು ತಿಳಿಯದಿರಿ. ತಂದೆಯ ಆಜ್ಞೆ ಒಂದು ನೆಪ. ನಿಜವನ್ನು ಹೇಳುತ್ತೇನೆ ಆಲಿಸಿರಿ. ಭೀಕರ ವರ್ತನೆಯ ಆರ್ಯ ವೈರಿಗಳಾದ, ಆತ್ಮಜ್ಞಾನವಿಲ್ಲದ, ಋಷಿಕಂಟಕರನ್ನು ನಿಗ್ರಹಿಸಲು ನನ್ನ ಮನಸ್ಸು

ಉರಿಯುತ್ತಿದೆ. ಈ ಪೃಥ್ವಿಗೆ ನಿಜವಾದ ರಾಜರು ಸೂರ್ಯವಂಶೀಯರಲ್ಲವೆ? ಪ್ರಜೆಗಳನ್ನು ಪಾಲಿಸುವುದು ಅವರ ಕುಲಧರ್ಮವಾಗಿದೆ. ಹಾಗಾಗಿ ನಿಮ್ಮ ರಕ್ಷಣೆಗಾಗಿ ದುಷ್ಟರನ್ನು ಶಿಕ್ಷಿಸುವುದು ನನ್ನ ಅಮರ ಕರ್ತವ್ಯವಾಗಿದೆ.'

ಕೆಲವು ದಿನಗಳ ಅನಂತರ ತೀರಿಹೋದ ಶಾಂತಾತ್ಮ ಶರಭಂಗ ಋಷಿಗೆ ಅವರು ಅಪರಕರ್ಮಗಳನ್ನು ಮಾಡಿದರು. ಗಾಬರಿಗೊಂಡಿದ್ದ ಮುನಿಗಳಿಗೆ ಧೈರ್ಯವನ್ನು ಹೇಳಿದರು. ಅನಂತರ ಅಲ್ಲಿಂದ ಸುತೀಕ್ಷ್ಣನ ಋಷ್ಯಾಶ್ರಮಕ್ಕೆ ಹೊರಟರು. ಜೊತೆಜೊತೆಗೆ ಬಂದ ಋಷಿಮುನಿಗಳ ಒಡಗೂಡಿ ಅವರಿಂದ ಅರಣ್ಯದ ಕಾಡುಹಾದಿಯನ್ನು ತಿಳಿದು ನಡೆಯುತ್ತಿದ್ದರು. ಹಾಗೆ ಸಾಗುತ್ತಿರಲು ಮುಂದೆ ವಿಶಾಲವು ಅದ್ಭುತವು ಆದ ಒಂದು ಪರ್ವತ ಎದುರಾಯಿತು.

ವರ್ಷಕಾಲದ ಮೊದಲು ಬಾನಿನ ಎಲ್ಲೆಯಿಂದ ತುಸು ಕಾಣುತ್ತ, ಮೆಲ್ಲಮೆಲ್ಲನೆ ಭೀಮಗಾತ್ರಕ್ಕೆ ಉಬ್ಬಿ ಬೆಳೆದು ಗಗನ ಶಿಖರಕ್ಕೆ ಏರುವ ಮೇಘ ಗೋಪುರದಂತೆ ಅದು ನೀಲವು ಉನ್ನತವು ಆಗಿದ್ದ ಮಹಾಶೈಲವಾಗಿತ್ತು. ಅದರ ತಪ್ಪಲಿನಲ್ಲಿ ವೃಕ್ಷರಾಜಿಯು ಹಲವು ಹೂ ಹಣ್ಣುಗಳಿಂದ ತುಂಬಿತ್ತು. ಅಲ್ಲಿ ಅವರು ಏಕಾಂತವು, ಭಯಕಾರಿಯೂ ಆಗಿದ್ದ ಸುತೀಕ್ಷ್ಣನ ಆಶ್ರಮವನ್ನು ಕಂಡರು. ರಾಮಚಂದ್ರನು ಚಿತ್ರಕೂಟಕ್ಕೆ ಬಂದ ವಾರ್ತೆಯನ್ನು ಕೇಳಿದ ದಿನದಿಂದ ಅವನನ್ನು ಎದುರುನೋಡಲು ಕಾಯುತ್ತಿದ್ದ ಆ ಕೆಂಜೆಡೆಯ ಋಷಿ ತಪೋರುದ್ರನಿಗೆ ಅವರು ನಮಸ್ಕರಿಸಿದರು. ಆ ಋಷಿಗಳ ಸಂಗದ ಮಂಗಳದಲ್ಲಿ ಒಂದು ತಿಂಗಳು ಅಲ್ಲಿ ನಿಂತರು. ಕ್ರೂರ ಮೃಗಗಳ ಹುಟ್ಟಡಗಿಸಿದರು. ಸುತ್ತಲಿನ ಮಲೆಯ ಸೀಮೆಯನ್ನು ಮತ್ತು ಅಲ್ಲಲ್ಲಿ ಶೋಭೆಗೊಂಡು ಹಬ್ಬಿದ್ದ ತಪೋವನ ಸಮೂಹವನ್ನು, ಆರ್ಯ ಆಶ್ರಮಗಳನ್ನು ನೋಡುವ ಅಭಿಲಾಶೆಗೆ ಮುನಿಯ ಹರಕೆಯ ಆಶೀರ್ವಾದ ಪಡೆದರು. ಅಲ್ಲಿಂದ ಯಾತ್ರಿಕ ಮುನಿಗಣದ ಜೊತೆಗೆ ಹೊರಟರು.

ಮೊದಲ ಮಳೆ ಮೀಯಿಸಿದ ಮಲೆಯ ನಾಡಿನ ಸಿರಿಯ ಚೆಲುವನ್ನು ಸವಿಯಲು ಕಲೆಯ ವ್ರತಧಾರಿಯಾದ ಕವಿಯ ಕಣ್ಣಿನ ದೃಷ್ಟಿ ಅಲೆಯುತ್ತದೆ. ಹಾಗೆ ಅವರು ಆ ಪ್ರಕೃತಿ ಸೌಂದರ್ಯನನ್ನು ಅನುಭವಿಸಿ ಮುಂದೆ ಮುಂದೆ ಹೋಗುತ್ತಿರಲು ಏನೆಂದು ಹೇಳುವುದು? ಅವರ ಕಣ್ಣಿಗೆ ಔತಣವಾಯಿತು. ಹೂವಾಯಿತು; ಜೇನಾಯಿತು; ಪಕ್ಷಿಯಿಂಚರವಾಯಿತು; ಇನಿಯಳ ಅಪ್ಪುಗೆಯಾಯಿತು. ನೆಲವು ಪುಣ್ಯ ಜಲದಿಂದ ಪ್ರಸನ್ನವಾಯಿತು. ವನದೇವಿಯ ಓಲಗವೊ, ಜಲದೇವಿಯ ಆಲಯವೊ, ಸೌಂದರ್ಯಲಕ್ಷ್ಮಿ ಸದಾ ಕ್ರೀಡಿಸುವ ಉಯ್ಯಾಲೆಯೊ, ಕಾಮನಬಿಲ್ಲು ದಾರಿಯೊ, ಇಂದ್ರನ ಕ್ರೀಡಾಂಗಣವೊ, ರತಿ ಮದನರ ಓಕುಳಿಯಾಟದ ಶೃಂಗಾರ ಮಂಟಪವೊ, ಚಂದ್ರ ಚೈತ್ರದ ಮಂದಿರವೊ ಎಂಬಂತೆ ಆತ್ಮವನ್ನು ಅಪ್ಪುತ್ತ, ಆ ತೆರೆ ತೆರೆ ಅಲೆವ ಮಲೆಯ ಸೀಮೆಯ ಆ ಶೈಲ ಕಂದರ ವಿಪಿನವು ವೈಭವದಿಂದ ಶೋಭಿಸುತ್ತಿತ್ತು.

ಆ ಸೊಬಗಿಗೆ ಎದೆ ಉಕ್ಕಿ ಬಂದು ಸೀತೆಗೆ ಸ್ನೇಹಭಾವ ಉಂಟಾಯಿತು. ಸ್ವಾಮಿಯನ್ನು ಪ್ರೇಮದಿಂದ ನೋಡಿ ನಗೆಮುಗುಳು ವಿಕಸಿಸಿದಂತೆ ನಯದಿಂದ ನುಡಿದಳು :

ಕ್ಷಾತ್ರಕೇಂ ಕ್ರೌರ್ಯಂ ಕಿರೀಟಮೇ ?

'ಹೃದಯ ಪ್ರಿಯನೆ, ಮನಸ್ಸಿನ ಒಂದು ಶಂಕೆಯನ್ನು ತಿಳಿಸುತ್ತೇನೆ. ಬಾಲಭಾಷೆಯೆಂದು ಆದರದಿಂದ ಕೇಳಿ ನನ್ನ ಬಗ್ಗೆ ಕರುಣೆ ತೋರಿಸು. ನೀನು ಋಷಿಗಳಿಗೆ ಮಾತುಕೊಟ್ಟೆ, ರಾಕ್ಷಸವಧೆಗೆ ಪ್ರತಿಜ್ಞೆ ಕೈಗೊಂಡೆ. ವೈರದ ವ್ರತಧಾರಿಯಾದೆ. ಹೇ, ಸ್ನೇಹನಿಧಿ ! ಓರ್ವನು ಅನ್ಯಾಯಿಯಾದರೆ ಸರ್ವರಾಕ್ಷಸರು ಹೇಗೆ ಸಂಹಾರಕ್ಕೆ ಅರ್ಹರಾಗುವರು? ಕ್ಷಾತ್ರಕ್ಕೇನು ಕ್ರೌರ್ಯವೇ ಕಿರೀಟವೆ?'

'ಹೇ ನಸುನಗೆಯವಳೆ, ನೀನು ರಾಜಋಷಿ ಜನಕನ ಮಗಳು. ಹಾಗಾಗಿ ಆ ತಂದೆಯ ಪುತ್ರಿಗೆ ತಕ್ಕುದಾದುದನ್ನೆ ಹೇಳಿರುವೆ. ವಿಶ್ವಪ್ರೇಮ ಸಿದ್ಧನಿಂದ ಪಡೆದಿರುವ ಕರುಣೆಯನ್ನು ಹೇಳುತ್ತಿರುವೆ. ಸರಳೆಯೆ, ಅದು ಪೂಜ್ಯವಾದರೂ, ಆ ತತ್ವ ಪೂರ್ಣದರ್ಶನಕ್ಕೆ ಹೊಂದುವುದಿಲ್ಲ. ಸಾತ್ವಿಕ ವ್ರತಿಗಳಿಗೆ ಸಂಕಟವನ್ನುಂಟು ಮಾಡುವವರು ನನ್ನ ಬಾಣಕ್ಕೆ ಬಲಿಯಾಗುವರು.

'ಬಾಣವೊಂದು ಮಾತ್ರವೆ ಚುಚ್ಚಿಕೊಲ್ಲುವುದಾದರೂ ಅದಕ್ಕೆ ಬಿಲ್ಲು ಹೆದೆ ಕೊಪ್ಪು(ಬಿಲ್ಲಿನ ತುದಿ) ಕೈ ಮುಂತಾದವುಗಳು ಸಹಾಯವಾಗಿ ಕೊಲೆಗೆ ಹೊಣೆಯಾಗುತ್ತವೆ. ಹಾಗೆ ದುಷ್ಟ ಘಾತುಕನು ಒಬ್ಬ ರಕ್ಕಸನಾದರೇನು, ಅವನಿಗೆ ಬೆಂಬಲವಾಗಿ ಎಲ್ಲ ರಾಕ್ಷಸರು ಇರುವರಲ್ಲವೆ? ಮಾಡುವ ಕೆಲಸ ಏಕವ್ಯಕ್ತಿಯಿಂದಾಗಿದ್ದರೂ ಅದು ಮಾಡುವವನು ಇರುವ ಜನದ ಸಂಸ್ಕೃತಿಯ ಚಿಹ್ನೆಯಲ್ಲವೆ?

'ಆರ್ಯ ಸಂಸ್ಕೃತಿಯ ಒಳ್ಳೆಯ ಕಾರ್ಯವನ್ನು ಕಠಿನ ಕ್ರೂರ ರೀತಿಯಲ್ಲಿ ವಿರೋಧಿಸಿ ತಡೆಗಟ್ಟುವ ಈ ರಾಕ್ಷಸರ ಮೂರ್ಖತನವನ್ನು ಮುರಿಯಲು ನಾನು ಪ್ರತಿಜ್ಞೆ ಕೈಕೊಂಡೆನು. ಆ ನುಡಿಯ ಸಿಡಿಲನ್ನು ತಡೆಯುವವರು ಇದ್ದಾರೆಯೆ? ಮಿಥಿಳೇಂದ್ರನ ಪುತ್ರಿಯೆ, ನಾನು ಬತ್ತಳಿಕೆಯನ್ನು ಬಿಟ್ಟು ಕಮಂಡಲುವನ್ನು ಹಿಡಿದರೆ ಶರಭಂಗ ಋಷಿಗೆ ಆದ ಗತಿಯೇ ಎಲ್ಲಾ ಮುನಿಗಳಿಗೆ ಉಂಟಾಗುವುದು! ಶರಧಿಯನ್ನು ಡಾಬಾಗಿರುವ ಪೃಥ್ವಿಯ ಒಡೆಯ ಭರತೇಂದ್ರನು ಆರ್ಯರಕ್ಷಾವ್ರತನು. ನಾನು ಅವನ ಪ್ರತಿನಿಧಿ. ಹಾಗಾಗಿ ಋಷಿ ರಕ್ಷಣೆಯ ಕರ್ತವ್ಯ ನಮ್ಮದಾಗಿದೆ. ಈ ದಸ್ಯು ಸಂಹಾರವನ್ನು ಇಷ್ಟ ಮತ್ತು ನಿಷ್ಠೆ ಜೊತೆಗೊಂಡು ಹೇಳುತ್ತಿವೆ !'

ದಿನದಿನಕೆ ತಮ್ಮನೊತ್ತುವರಾರ್ಯರಾದೊಡಂ ದಸ್ಯುಗಳೆ ದಿಟಮಲ್ತೆ?

ಪತಿಯ ದೃಢವಾಣಿಯ ವಾದವನ್ನು ಕೇಳಿದ ಸತಿಯು ಅಂಜುತ್ತ ಹೀಗೆ ಹೇಳಿದಳು :

'ಮನದನ್ನನೆ, ನಿನ್ನ ದನಿ ಕೇಳಿ ನನ್ನ ನಾಲಗೆ ತೊದಲುತ್ತಿದೆ. ಪುಣ್ಯಾಶ್ರಮಗಳನ್ನು

ನೆಪವಾಗಿಟ್ಟುಕೊಂಡು ಅವರ ನೆಲವನ್ನು ಸುಲಿಯುತ್ತ ನಿಧಾನವಾಗಿ ತಮ್ಮ ವಸತಿಯಾಗಿಸಿಕೊಂಡು ದಿನದಿನಕ್ಕೆ ಅವರನ್ನು ಒತ್ತುವವರು ಆರ್ಯರಾದರೂ ದಿಟವಾಗಿ ದಸ್ಯುಗಳಲ್ಲವೆ?'

'ಕತ್ತಲೆಗೆ ರವಿ ದಸ್ಯು. ಜ್ಞಾನವು ಅಜ್ಞಾನಕ್ಕೆ ದಸ್ಯು. ಮಾಯೆಯನ್ನು ಅಳಿಸಿ ಮನುಜನ ಹೃದಯವನ್ನು ಆಕ್ರಮಿಸುವ ಆತ್ಮವನ್ನು ತನ್ನ ಕೃಪೆಗೆ ಕರೆದೊಯ್ಯುವ ಪರಮಾತ್ಮನು ದಸ್ಯು. ನಾನು ನಿನಗೆ ನೀನು ನನಗೆ ದಸ್ಯು. ಕೇಳು, ಅದರಂತೆಯೆ ದಂಡಕಾರಣ್ಯದ ದಕ್ಷಿಣ ಜನರ ನಯಕ್ಕೆ ಆರ್ಯರು ದಸ್ಯುಗಳು. ಹಿರಿತನಕ್ಕೆ ಮಣಿಯುವುದೇ ಕಿರಿಯ ಸಂಸ್ಕೃತಿಯ ಹಿರಿಮೆ. ಪುಣ್ಯವು ವಿಪತ್ತಿನ ರೀತಿಯಲ್ಲಿ ಒಮ್ಮೊಮ್ಮೆ ದೈತ್ಯನಂತೆ ಆತ್ಮವನ್ನು, ಜನತೆಯನ್ನು, ನಾಡಿನ ಊರುಗಳನ್ನು ಆಕ್ರಮಿಸುವುದು. ಹೇಳು, ಕೃಪಾಬಾಹು ಚಾಚಲು, ಅದರ ನೆರಳು ರಾಹುವಲ್ಲವೆ !'

ಎಂದು ಹೇಳಿದ ಪತಿದೇವನ ವಚನವನ್ನು ವೈದೇಹಿಯು ಮನಸ್ಸಿನಲ್ಲಿ ಮಥಿಸುತ್ತ ಮುಂದೆ ನಡೆದಳು. ಬೆಟ್ಟ ಕೆರೆ ಕಾಡು ಹೊಳೆ ಮೃಗಪಕ್ಷಿ ಹಂದಿ ಹುಲಿ ಮುಂತಾದ ತರತರದ ನೋಟವನ್ನು, ಬೆದರು ಜಿಂಕೆಯ ಓಟವನ್ನು ಕುತೂಹಲದ ಕೂಟವನ್ನು ಕಣ್ಣಿಗೆ ತೃಪ್ತಿಯಾಗದು ಎಂಬಂತೆ ಕಂಡು, ಬಣ್ಣಿಸಿ ಸವಿದು ಒಬ್ಬರಿಗೊಬ್ಬರು ತೋರಿಸುತ್ತ ಅವರು ನಡೆದರು.

ಹಾಗೆ ನಡೆದು ಸಾಗುವಾಗ, ಮನ್ಮಥನು ಪ್ರಿಯಳಾದ ರತಿಯೊಡನೆ ಈಜಾಡಲು ಆಸಕ್ತಿ ಹಿಗ್ಗಲಿಸಿತು ಎನ್ನುವಂತೆ – ಸಂಜೆ ಓಕುಳಿ ಚೆಲ್ಲಿದ ಸಲಿಲ ಸುಂದರ ನಾಲ್ಕು ಹರದಾರಿ ಅಳತೆಯ ಸರೋವರವನ್ನು ಕಣ್ಣೆದುರು ಕಂಡರು. ಏಕಾಂತತಾ ವೀಣಾವಾದಕ ಆಕಾಶ ವೀಣೆಯ ನಿಶ್ಯಬ್ದತಾ ತಂತಿಯನ್ನು ಮಿಡಿಯುವನೊ ಎಂಬಂತೆ ಅಲೆ ಅಲೆಯಾಗಿ ಸುಶ್ರುತಿಯ ವಾದ್ಯ ಸಂಗೀತದ ಮಧು ಮಧುರ ಘೋಷ ಕೇಳಿ ಬಂದಿತು.

'ನೋಡಿದರೆ, ಸುತ್ತಲ ಈ ಅರಣ್ಯ ಪ್ರದೇಶವು ಎತ್ತಲೂ ನಿರ್ಜನವಾಗಿದೆ. ಆದರೆ ಈ ವಾದ್ಯ ಸಂಗೀತದ ದನಿ ಎತ್ತಲಿಂದ ಬರುತ್ತಿರುವುದೋ? ಸೋಜಿಗವಾಗಿದೆ!' ಎಂದು ಎಲ್ಲರು ಕಿವಿ ಸವಿಯ ದನಿಗೆ ಮಾರುಹೋದರು. ಆಗ ಜೊತೆಗಿದ್ದ ಧರ್ಮಭೃತನೆಂಬ ಮುನಿಯು ಅದರ ಗೂಢವನ್ನು ಹೀಗೆ ತಿಳಿಸಿದನು :

'ಇಕ್ಷ್ವಾಕು ಕುಲಮಣಿಯೆ, ಇದು ಪಂಚಾಪ್ಸರ ಪುಷ್ಕರಿಣಿ. ಇದರ ಒಳಭಾಗದಲ್ಲಿ ಮಾಂಡಕರ್ಣಿ ಮಹಾಮುನಿಯ ಭೋಗ ಮಂದಿರವಿದೆ. ಅವನ ಉಗ್ರ ತಪಸ್ಯೆಗೆ ಭೀತರಾದ ದೇವತೆಗಳು ಐದು ಜನ ಮಿಂಚುದೇಹದ ಹೆಣ್ಣುಗಳನ್ನು ಕಳುಹಿಸಿದರು. ಅವರಿಗೆ ಆ ಯೋಗಿ ಭೋಗವಶನಾದ. ಈ ನಮಗೆ ಕಾಣುವ ಸರೋವರದ ನೀರಿನ ಮಧ್ಯೆ ಗೃಹವನ್ನು ರಚಿಸಿದ. ಯೋಗದಿಂದ ಚಿರಯುವಕನಾಗಿ ಪಂಚ ಅಪ್ಸರೆಯರನ್ನು

ಕೂಡಿ ಸುಖಿಸುತ್ತಿರುವನು. ಅಲ್ಲಿಂದ ಈ ವಾದ್ಯ ಸಂಗೀತದ ಮೇಳಗಾನ ಹೊಮ್ಮಿ ಬರುತ್ತಿದೆ.'

ತರಳೆಯತನಂ ಪಣ್ತು ತುಂಬಿದುದು ಮೈಗೆ ಮಹಿಳಾಮಹದ್ ಗೌರವಂ

ಸಂಜೆಯ ಬಾನು ಕಿತ್ತಲೆ ಬಣ್ಣವನ್ನು ಕಳೆದುಕೊಂಡಿತು. ಕತ್ತಲೆಯ ನೇರಿಳೆಹಣ್ಣಿನ ಕಪ್ಪು ಕಣ್ಣನ್ನು ಆವರಿಸಿ ಇಳೆಯನ್ನು ತಬ್ಬುತ್ತಿತ್ತು. ಆಗ ಅವರಿಗೆ ಒಂದು ಆರ್ಯವಸತಿ ಗೋಚರಿಸಿತು. ಇಂಗಳದ ಎಣ್ಣೆಯಿಂದ ಜೀವದಾನವನ್ನು ಪಡೆದ ವಲ್ಕಲದ ಬತ್ತಿಯು ಉರಿದು ಬೆಳಗುತ್ತಿದ್ದ ದೀಪದ ಬೆಳಕಿನಲ್ಲಿ ಅತಿಥಿಗಳಿಗೆ ಆದರದಿಂದ ಸತ್ಕಾರವಾಯಿತು. ಅಲ್ಲಿ ಒಂದು ತಿಂಗಳು ತಂಗಿದ್ದು ಮತ್ತೆ ಮುಂದಿನ ಆಶ್ರಮಕ್ಕೆ ಹೋದರು. ಅಲ್ಲಿ ಆರು ತಿಂಗಳುಗಳನ್ನು ಕಳೆದರು. ಪುನಃ ಮುಂದುವರಿದು ಇನ್ನೊಂದು ಆಶ್ರಮವನ್ನು ಪ್ರವೇಶಿಸಿದರು. ಹೀಗೆ ಒಂದೊಂದು ಸ್ಥಳದಲ್ಲಿ ಹಲವಾರು ತಿಂಗಳುಗಳನ್ನು ಕೆಲವೊಮ್ಮೆ ವರ್ಷಗಳನ್ನು ಕಳೆದರು. ಈ ರೀತಿ ಅವರು ಸಂಚರಿಸುತ್ತಿರುವಾಗ ಭೂಮಿಯು ಸೂರ್ಯನನ್ನು ಹತ್ತು ಸಲ ಸುತ್ತಿತು.(ಹತ್ತು ವರ್ಷಗಳಾಯಿತು) ಇಳೆಯ ಮಗಳಾದ ಸೀತೆಯು ಇನ ಕುಲಾತ್ಮಜ ರಾಮನ ಅಡಿಯ ಹೆಜ್ಜೆಯನುಸರಿಸಿ ನಡೆಯುತ್ತಿರಲು ಅವಳ ಬಾಲ್ಯವು ಹಣ್ಣಾಯಿತು. ಅವಳ ಮೈಗೆ ಮಹಿಳಾ ಮಹದ್ ಗೌರವ ತುಂಬಿತು.

ಪ್ರತಿದಿನ ನಡೆಯುತ್ತಿರಲು ಕಲ್ಲು ಮುಳ್ಳಿಡಿದ ಕಾಲು ದಾರಿಯು ಸವೆಸವೆದು ಮೃದುವಾಗುವುದು. ಹಾಗಿರಲು ಜನಕ ಕುಮಾರಿ ಸೀತೆಯು ಋಷಿ ಸಂಗದಿಂದ ತಪಸ್ವಿನಿಯಾಗುವುದು ಆಶ್ಚರ್ಯವೆ? ದಶರಥನ ಮಕ್ಕಳಿಗೆ ಆ ಹತ್ತು ವರ್ಷದ ಸಾಹಸ ರಸ ಯಾತ್ರೆಯು ವೀರ ಸುಂದರ ವಿವಿಧ ಭವಾನುಭವಗಳ ಅಕ್ಷಯಪಾತ್ರೆಯಾಯಿತು.

ಒಂದು ದಿನ ಸಂಜೆ ದಕ್ಷಿಣದ ಹಣೆಯ ಮೇಲೆ ಬೆಂಕಿಯ ಕಿಡಿಯಂತೆ ಶುಕ್ರಗ್ರಹವು ತಳತಳಿಸುತ್ತಿತ್ತು. ಕಾಡುಹಂದಿಯ ಬೇಟೆಯಿಂದ ದಣಿದು, ಬೆಟ್ಟದ ತುದಿಯಿಂದ ಅದರ ತಪ್ಪಲಿನ ಪರ್ಣಕುಟಿಗೆ ಅಣ್ಣ ರಾಮಚಂದ್ರನು ಬರುತ್ತಿದ್ದನು. ಅವನು ತನ್ನ ಮಡದಿಯು ಬೆಚ್ಚನೆಯ ನೀರನ್ನು ಹಿಡಿದು ಪತಿ ಸೇವೆಗೆ ತಯಾರಾಗಿ ಪರ್ಣಶಾಲೆಯ ಬಾಗಿಲಲ್ಲಿ ಕಾಯುತ್ತಿರುವುದನ್ನು ನೆನೆದನು. ಜೊತೆಯಲ್ಲಿದ್ದ ಊರ್ಮಿಳಾ ವಲ್ಲಭನ ಬೆವರಿದ ಮುಖ ಕಂಡು ಕನಿಕರಗೊಂಡು ನಿಟ್ಟುಸಿರುಬಿಟ್ಟನು. ಬೆವರಿನ ಮರೆಯಲ್ಲಿ ಒಂದು ಕಂಬನಿ ಹೊರಬರಲು ಸಮಯವನ್ನು ಕಾಯುತ್ತಿರಲು ತಮ್ಮನ ಕಡೆ ತಿರುಗಿ ಹೇಳಿದನು :

'ವನವಾಸದ ಅವಧಿ ಕೊನೆಗೊಳ್ಳುತ್ತಿದೆ. ಸೌಮಿತ್ರಿಯೆ ಮನೆಯನ್ನು ನೆನೆದು ಒಮ್ಮೊಮ್ಮೆ ಬಯಕೆ ಬಾಯಾರುತ್ತಿದೆ. ಸರಯೂ ನದಿಯ ನೀರನ್ನು ಸವಿಯುವ ಆಶೆಯ ಸೊಂಡಿಲು ಎಳೆದು ಚಾಚುತ್ತಿದೆ ! ಈ ಕಾಡು ಕೋಸಲಕ್ಕೆ ಕಿರಿದಲ್ಲದಿದ್ದರೂ ಮತ್ತು ಕೀಳಲ್ಲದಿದ್ದರೂ ತಾಯ್ನಾಡಿನ ಮತ್ತು ಧರೆಯ ಸಾಮ್ರಾಜ್ಯ ಅಗಲಿಕೆಯನ್ನು

ಮನಸ್ಸು ಅನುಭವಿಸುತ್ತಿದೆ. ಇನ್ನು ಎರಡು ವರ್ಷ ತೀರಿದ ನಂತರ ಅಯೋಧ್ಯೆಯನ್ನು ಸೇರುತ್ತೇವೆ. ಆ ಹೊತ್ತಿನವರೆಗೆ ಸತ್ಸಂಗವೆ ಮಂಗಳ ತಪ!'

ಅಣ್ಣನ ಕೊರಳ ವಿಷಾದವನ್ನು ತಣಿಸುತ್ತ ತಮ್ಮ ನುಡಿದನು:

'ನಾವು ಎಷ್ಟೊ ಋಷ್ಯಾಶ್ರಮಗಳಲ್ಲಿ ಸಂಚರಿಸಿದ್ದೇವೆ. ಎಷ್ಟೊ ಋಷಿಮುನಿಗಳನ್ನು ಕಂಡಿದ್ದೇವೆ. ಅದು ಚಿತ್ತಕ್ಕೆ ಎತ್ತರವಾಗಿ, ಎದೆಗೆ ವಿಸ್ತಾರವಾಗಿ ಆತ್ಮಕ್ಕೆ ಪ್ರಸನ್ನತೆಯನ್ನು ತಂದುಕೊಟ್ಟಿದೆ. ವಸಿಷ್ಠಗುರು ಮತ್ತು ವಿಶ್ವಾಮಿತ್ರ ದೇವರುಗಳು ನೀಡಿದ ವಿದ್ಯೆ ನಮಗೆ ಕಿರೀಟವಾಗಿದೆ. ಹೇ ಆರ್ಯನೆ, ನಿನ್ನ ಮತ್ತು ದೇವಿಯ ಸಂಗದಿಂದ ಕಾಡು ಪ್ರದೇಶವು ನನ್ನ ಆತ್ಮಕ್ಕೆ ಒಂದು ಅಮೃತ ಕೃಪೆಯಾಗಿದೆ.'

ಅಗಸ್ತ್ಯ : ಬಡಗಣಿಂ ತೆಂಕಣ್ಗೆ ಮೊತ್ತಮೊದಲೈತಂದ ಮುನಿಯಾರ್ಯ

'ಅನೇಕ ಆರ್ಯವಸತಿಗಳನ್ನು ನೋಡಿದ್ದರೂ ನಾವು ಇನ್ನೂ ಅಗಸ್ತ್ಯ ಋಷ್ಯಾಶ್ರಮವನ್ನು ಕಂಡಿಲ್ಲ. ಉತ್ತರದಿಂದ ದಕ್ಷಿಣದಿಕ್ಕಿಗೆ ಮೊದಲು ಬಂದ ಮುನಿ ಅವನು. ಅತಿ ದಕ್ಷಿಣದಲ್ಲಿ ಆ ದಿವ್ಯಾಶ್ರಮ ಇರುವುದಂತೆ. ನಾವು ನಾಳೆ ಇಲ್ಲಿಂದ ದಕ್ಷಿಣಕ್ಕೆ ಹೊರಡೋಣ. ಸೌಮಿತ್ರಿಯೆ, ಆ ಮುನಿಯ ಮಹಿಮೆಯನ್ನು ಕೊಂಡಾಡುವ ಕಥೆಯೊಂದನ್ನು ಹೇಳುತ್ತೇನೆ, ಕೇಳು !'

ಶುಕ್ರಗ್ರಹ ಬೆಳ್ಳಿ ಮುಳುಗಿತು; ಕತ್ತಲೆ ಮುಚ್ಚಿ ಮುಸುಗಿತು. ಬಾನಿನ ನೆಲದಲ್ಲಿ ನಕ್ಷತ್ರದ ಹೂಗಳು ವಿಕಸಿಸಿ ಮಿನುಗುತ್ತಿದ್ದವು. ಕಾಡುದಾರಿಯಲ್ಲಿ ಇಳಿಯುತ್ತ ರಾಮನು ಹೇಳುತ್ತಿರಲು, ಲಕ್ಷ್ಮಣನು ಕಿವಿ ನಿಮಿರಿಸಿಕೊಂಡು ಕೇಳಿದನು.

'ಮೊದಲಿಗೆ ಇಲ್ವಲ, ವಾತಾಪಿ ಹೆಸರಿನ ರಾಕ್ಷಸ ಸಹೋದರರು ಇದ್ದರು. ಅವರು ನೀತಿಯಿಂದ ರಾಕ್ಷಸರು; ಪ್ರೀತಿಯಿಂದ ಸೋದರರು. ಭೀಕರ ಕಾರ್ಯದವರಾದ ಅವರು ಮಾಯಾವಿಗಳು, ಕಾಮರೂಪಿಗಳು, ಇಲ್ವಲನು ಬ್ರಾಹ್ಮಣನ ವೇಷದಿಂದ ಶ್ರಾದ್ಧದ ನೆಪ ಹೇಳಿಕೊಂಡು ಆರ್ಯರನ್ನು ಪಿಂಡಕ್ಕೆ ಆಹ್ವಾನಿಸುವನು. ವಾತಾಪಿಯು ಟಗರಿನ ರೂಪವನ್ನು ಹೊಂದಿ ತಮ್ಮ ಮನೆಯ ಅಂಗಣದಲ್ಲಿ ಕಟ್ಟುಗೊಂಡವನಂತೆ ನಟಿಸಿ ಸೊಪ್ಪು ಮೇಯುತ್ತಿರುತ್ತಾನೆ. ಅತಿಥಿಗಳು ಹೋತದ ಗಾತ್ರವನ್ನು ಕಂಡು ಖುಷಿಪಡುತ್ತಾರೆ !

'ಶುದ್ಧ ಸಂಸ್ಕೃತವನ್ನು ಆಡುತ್ತ ಇಲ್ವಲನು ಮಂತ್ರಪೂರ್ವಕವಾಗಿ ಹೋತದ ಚರ್ಮವನ್ನು ಸುಲಿಯುತ್ತಾನೆ. ಅದರ ನರ, ಸ್ನಾಯು, ಮಾಂಸಗಳನ್ನು ಕುಯ್ಯುತ್ತಾನೆ. ಬಂದ ಅತಿಥಿಗಳು ಯಾವುದೇ ಸಂಶಯಕ್ಕೊಳಗಾಗದೆ ಪಿಂಡವನ್ನು ತೃಪ್ತಿಯಾಗುವಂತೆ ಉಣ್ಣುತ್ತಾರೆ. ಬೆಂದ ಬಾಡಿನ ಓಗರ ಅರಗಲೆಂದು ತೇಗುತ್ತಾರೆ. ಅಲ್ಲಿಯವರೆಗೆ ಸಂಸ್ಕೃತವನ್ನು ಆಡುತ್ತಿದ್ದ ಇಲ್ವಲನು ತಕ್ಷಣ ಪಿಶಾಚಿ ನುಡಿಯಿಂದ ದುರ್ಮಂತ್ರವನ್ನು ಚೀರಾಡುತ್ತ ತಮ್ಮನನ್ನು ಕೂಗಿ ಕರೆಯುತ್ತಾನೆ : 'ವಾತಾಪಿ ಹೊರಗೆ ಬಾ!'

‘ಅದನ್ನು ಕೇಳಿದ ತಕ್ಷಣ ಅತಿಥಿದೇವರುಗಳಿಗೆ ಹೊಟ್ಟೆ ಕಂಪಿಸುವುದು. ಟಗರಿನ ಗೊರಸೊ ಕೊಂಬೊ ತಿವಿದಂತಾಗಿ, ಕರುಳು ಅರಚಿದಂತೆ ಬ್ರಾಹ್ಮಣರು ಕುಣಿದಾಡುತ್ತಿರುತ್ತಾರೆ. ಆಗ ಇಲ್ವಲನು ‘ಹೊರಗೆ ಬಾ! ಬಾ ಹೊರಗೆ!’ ಎಂದು ಹೇಳುತ್ತ ವಾತಾಪಿಗೆ ಕೂಗಿ ಹೇಳುವನು. ಪಿಂಡ ಉಂಡವರಿಗೆ ಗುಳ್ಳೆ ಒಡೆಯುವಂತೆ ಹೊಟ್ಟೆ ಬಿರಿಯುತ್ತದೆ... ಅಃ... ಇಷ್ಟು ಸಾಕು ಸೌಮಿತ್ರಿ, ಪಾದವನ್ನು ಮುಳ್ಳು ಮುದ್ದಿಸಿದೆ! ಕೀಳಲು ಪ್ರಯತ್ನಿಸುತ್ತೇನೆ.’

ಕಥೆ ಕೇಳಿ ತಡೆಯಲಾರದೆ ನಗುತ್ತಿದ್ದ ಲಕ್ಷ್ಮಣನು ಅಣ್ಣನ ಪಾದಪದ್ಮವನ್ನು ಮುದ್ದಿಸಿದ್ದ ಮುಳ್ಳನ್ನು ಕೀಳಲು ನೆರವಾಗಿ, ಮುಗುಳ್ನಗುತ್ತ ಹೇಳಿದನು:

‘ಏನ್ ಕತ್ತಲೆಯೊ, ಕಣ್ಣಿಗೆ ಕಾಡಿಗೆಯನ್ನು ಒತ್ತುತ್ತಿದೆ !’

‘ಕೇಳಿಸಿಕೊ! ಹುಲಿಯ ನಿದ್ದೆಯಂತೆ ವನಮೌನವು ಎಷ್ಟು ಭೀಕರ! ಧೂರ್ತರು ಈರೀತಿ ಆರ್ಯರನ್ನು ಕೊಲ್ಲುತ್ತಿದ್ದರು. ಹಾಗೆಯೆ ಅಗಸ್ತ್ಯನನ್ನು ಕೊಲ್ಲಲು ಔತಣಕ್ಕೆ ಕರೆದರು. ಟಗರಿನ ರೀತಿಯ ತಮ್ಮನನ್ನು ಕಡಿದು ಬೇಯಿಸಿದ ಇಲ್ವಲನು ಮುನಿಗೆ ಬಡಿಸಿದನು. ಅಗ್ನಿಗೆ ಆಹುತಿಯಾಗಿ ನೀಡಿದ ತುಪ್ಪವನ್ನು ಮತ್ತೊಮ್ಮೆ ಪಡೆಯಲು ಆಶಿಸುವ ದಡ್ಡನಂತಾದವನು ರಾಕ್ಷಸ ಇಲ್ವಲ. ‘ಹೊರಗೆ ಬಾ, ವಾತಾಪಿ!’ ಎಂದು ಎಷ್ಟು ಕೂಗಿದರೂ ಅವನು ಬರಲಿಲ್ಲ. ‘ನನ್ನ ಜಠರಾಗ್ನಿಯು ಅವನನ್ನು ಜೀರ್ಣಿಸಿದೆ ! ನಿನ್ನ ಕರೆಗೆ ಇನ್ನೆಲ್ಲಿಂದ ಬರುತ್ತಾನೆ?’ ಎಂದು ಹೇಳುತ್ತ ಮುನಿಯು ನಕ್ಕನು. ಆಗ ಅವನನ್ನು ಸಾಯಿಸಲೆಂದು ಮೇಲೇರಿಬಂದ ರಕ್ಕಸನು ಋಷಿದೇವನ ತೇಜದಿಂದ ಉರಿದು ಬೂದಿಯಾದನು!’

ಆ ಮಾರನೆಯ ಹಗಲಿನಲ್ಲಿ ಅವರು ಅಲ್ಲಿಂದ ಹೊರಟರು. ದಾರಿಯಲ್ಲಿ ಅಗಸ್ತ್ಯನ ಸಹೋದರನ ಮನೋಹರವಾದ ಆಶ್ರಮವನ್ನು ಪ್ರವೇಶಿಸಿದರು. ಅವನಿಂದ ಮುಂದಿನ ಮಾರ್ಗವನ್ನು ತಿಳಿದು ದಟ್ಟವಾದ ದಕ್ಷಿಣಾರಣ್ಯಕ್ಕೆ ನುಗ್ಗಿದರು. ಹೋಗುತ್ತ ಹೋಗುತ್ತ ಆ ಕಾಡು ಸಾಂದ್ರವಾಗಿತ್ತು. ಬೆಟ್ಟವು ಕಡಿದಾಗಿ ಎತ್ತರವಾಗಿದ್ದು ಕಣಿವೆ ಉದ್ದವೂ, ಆಳವೂ ಆಗಿ ಅಧ್ಭುತವಾಗಿತ್ತು. ಭೀತಿಯಿಂದ ಹೊಳೆಯ ಮೊರೆತ ರಹಸ್ಯವಾಗಿತ್ತು. ಹಕ್ಕಿಗಳ ಸ್ವರದ ಇಂಪು ಹೆದರಿ ಹುದುಗಿತ್ತು. ಬನದ ಹೂಗಳು ತಮ್ಮ ಸರ್ವಸ್ವವನ್ನು ತ್ಯಜಿಸಿ ತಮ್ಮ ಕಂಪನ್ನು ಅಡಗಿಸುತ್ತ ಎಲೆಯ ಆಶ್ರಯದಲ್ಲಿ ಅವಿತುಕೊಂಡಿದ್ದವು. ಕಪ್ಪು ನೆರಳಿನ ಮೈಯ್ಯ ನಿಶ್ಯಬ್ದತೆಯ ನಿಟ್ಟುಸಿರ ಭೂತವು ಓಡಾಡಿತು! ಹಾಗೆ ಹೆದರಿಕೆಯನ್ನುಂಟು ಮಾಡುವ ಘೋರ ಭಯಂಕರ ಕಾಡನ್ನು ದಾಟಿ ಬಂದರು.

ನಾತಿದೂರಂ ಶ್ಲಾಘನೀಯಮಾ ಪಂಚವಟಿ

ಆ ಮುಂದಕ್ಕೆ ಅಗಸ್ತ್ಯನ ಆಶ್ರಮವು ಇದ್ದು ರಮ್ಯವಾಗಿತ್ತು. ಅದು ಬಾಳೆತೋಟಗಳಿಂದ, ತೆಂಗು ತೋಟಗಳಿಂದ ಹಾಗೂ ಅಡಕೆ, ಏಲಕ್ಕಿ ಕಬ್ಬಿನ

ತೋಟಗಳಿಂದ ಕೂಡಿತ್ತು. ಅದನ್ನು ನೋಡಿ ರಾಮ ಸೀತೆ ಲಕ್ಷ್ಮಣರ ಕಣ್ಣುಗಳು ಹಿಗ್ಗಿದವು.

ಸೀತಾನಾಥನಾಗಿರುವ ಅವತಾರ ಪುರುಷನನ್ನು ಕಂಡ ಕೂಡಲೆ ಅಗಸ್ತ್ಯಮುನಿಯು ಗುರುತಿಸಿದನು. ಗುರುವರನ ಸನ್ನಿಧಿಯಲ್ಲಿ ಕೆಲವು ಕಾಲ ಇದ್ದರು. ದಕ್ಷಿಣ ನಾಡಿನ ಸೊಬಗನ್ನು ಸವಿದರು. ಅನಂತರ ಅಲ್ಲಿಂದ ಮುಂದಕ್ಕೆ ಸಾಗಲು ಬಯಸಿ ಅಗಸ್ತ್ಯನನ್ನು – ಮುಂದಿನ ವನವಾಸದ ಅವಧಿಯನ್ನು ಕಳೆಯಲು ನೆಮ್ಮದಿಯ ಒಳ್ಳೆಯ ನೆಲೆಯನ್ನು ತಿಳಿಸಬೇಕೆಂದು ಕೇಳಿಕೊಂಡರು. ಋಷಿಯು ಸ್ವಲ್ಪ ಹೊತ್ತು ಚಿಂತನೆ ನಡೆಸಿದರು. ಅನಂತರ ಮುಖದಲ್ಲಿ ಕಿರುನಗೆ ಹೊಮ್ಮಿಸುತ್ತ ಹೀಗೆಂದು ಹೇಳಿದರು :

'ದಂಡಕಾರಣ್ಯದ ಈ ಕಂಟಕದ ಬೀಡಿನಲ್ಲಿ ಕ್ಷತ್ರಿಯ ಧನುರ್ಧಾರಿಯಾದ ನಿನಗೆ ನೆಮ್ಮದಿಯ ಮಾತೇಕೆ? ಮನಸ್ಸಿಗೆ ಸುಂದರವೆನಿಸುವ ಒಂದು ಸ್ಥಳವಿದೆ. ಅದು ಹತ್ತಿರದಲ್ಲಿಯೆ ಇರುವ ಮೆಚ್ಚುಗೆಯ ಪಂಚವಟಿ. ಅದು ಬಹುಮೃಗಗಳಿಂದ ಮನೋಹರವಾಗಿದ್ದು, ಹಲವು ಪಕ್ಷಿಗಳ ಮಂಜುಳ ಕಲರವದಿಂದ ಕೂಡಿದ್ದಾಗಿದೆ. ಅದು ನೀರಿನ ಮಧುರ ನಾದದ ಪುಣ್ಯ ಗೋದಾವರಿ ನದಿಯಿಂದ ಮಂಗಳಮಯವಾಗಿದೆ. ಅದರ ದಡದಲ್ಲಿ ಸದಾ ಹೂಗಳಿಂದ ಕೂಡಿದ ವನವು ಶೋಭಿಸುತ್ತಿದೆ. ಅದು ರಾಜಯೋಗ್ಯವು ಮತ್ತು ಋಷಿಯೋಗ್ಯವು ಆದ ಸ್ಥಳವಾಗಿದೆ. ರಘುನಂದನಾ, ಅದು ನಿಮ್ಮಿಂದ ಮಹತ್ ಕಥೆಗೆ ಕಾರಣವಾಗುವುದು ದಿಟ.

'ಪಂಚವಟಿಯು ಇಲ್ಲಿಗೆ ಎರಡು ಯೋಜನದಷ್ಟು ದೂರವಾಗಿದ್ದು ಸಮೀಪದಲ್ಲಿದೆ. ಅಗೋ, ಓ ಅಲ್ಲಿ ಕಾಣುತ್ತಿದೆಯಲ್ಲ ಅದು ಮಧೂಕವನ. ಅದನ್ನು ದಾಟಿ ಸಾಗಿದರೆ ಮುಂದೆ ಕಾಣುತ್ತದೆ ಆಲದ ಮರ. ಅದನ್ನು ಮೀರಿ ನಡೆಯುತ್ತ ಒಂದು ದಿಬ್ಬವನ್ನು ಏರಿದರೆ ಅಲ್ಲಿಂದ ಎತ್ತರದ ಕಾಡಿಡಿದ ಮಲೆಯನೆತ್ತಿ ಕಾಣುತ್ತದೆ. ಆ ಗಿರಿ ಚರಣದ ಸಮತಟ್ಟಾದ ಪ್ರದೇಶವೇ ಪಂಚವಟಿ !

'ದಾಶರಥಿ ನಿನ್ನ ಸಾಹಸವು ಸಾಗರದಂತಾಗಿ ವೃದ್ಧಿಸಲಿ. ನಾನು ಕೊಟ್ಟಿರುವ ಧರ್ನುಬಾಣಗಳನ್ನು ದಿವ್ಯ ಬತ್ತಳಿಕೆಯನ್ನು ಸಾರ್ಥಕ ಪಡಿಸಿಕೊ. ಸೌಮಿತ್ರಿಯೆ, ನಿನ್ನ ಅಣ್ಣದೇವನಿಗೆ ನೆರವಾಗು. ಮಗಳೆ ಸೀತಾದೇವಿ ನಿನ್ನ ದುಃಖವನ್ನು ಲೆಕ್ಕಿಸದೆ ಪತಿಗೆ ಹಿತಕಾರಿಯಾಗು, ಲೋಕಕ್ಕೆ ಮಂಗಳವನ್ನುಂಟುಮಾಡು. ರಾಕ್ಷಸರ ನಿಷ್ಠುರ ನೀಚಕುಲಕ್ಕೆ ಯಮಭಯಂಕರಿಯಾಗು !'

ಹೀಗೆ ಆಶೀರ್ವದಿಸುತ್ತಿರಲು ಮುನಿಗೆ ಕೊರಳ ಸೆರೆ ಕಂಠ ಬಿಗಿದು, ಗದ್ಗದವಾಯಿತು. ಕಂಬನಿ ಉಕ್ಕಿ ಹರಿದಿರಲು ಜನಕಜಾತೆಯನ್ನೇ ನೋಡುತ್ತ ಆ ಸೂರ್ಯ ವರ್ಚಸ್ವಿ ದುಃಖಿಸಿದನು! ಮೂವರೂ ಪೂಜ್ಯ ಋಷಿ ಪಾದಕ್ಕೆ ನಮಸ್ಕರಿಸಿದರು. ಪಂಚವಟಿಗೆ ಬೀಳ್ಕೊಂಡರು.

❑



~~~~~~~~~~~~~~~~~~~~~~ ಸಂಚಿಕೆ – ೧೧ ~~~~~~~~~~~~~~~~~~~~~~

ಪಂಚವಟಿಯ ಪರ್ಣಕುಟಿ

ವತ್ಸ, ನಾಂ ನಿನಗನ್ಯನಲ್ಲಯ್ಯ; ಪಿತೃಸಖಂ !

ಮಹಾವಿಪಿನದ ಬೃಹತ್ ಆಲದ ಮರದ ತುದಿಯಲ್ಲಿ ಜಟಾಯುವಿದ್ದನು. ಅವನು ಬಿಸಿಲು ನೆರಳಿನ ರಂಗವಲ್ಲಿಯಿಂದ ರಾರಾಜಿಸುವ ಹಸಿರು ಹುಲ್ಲಿನ ಪಚ್ಚೆಯ ಒಳ್ಳೆಯ ನೆಲದ ಮೇಲೆ – ಸೊಬಗಿನಿಂದ ಶೋಭಿಸುತ್ತ ಪಂಚವಟಿಯತ್ತ ಸಾಗುತ್ತಿರುವ ಮೂವರು ಮನುಜರನ್ನು ಕಂಡನು. ಆ ಬೃಹದ್ ಗಾತ್ರದ ಭೀಮ ವಿಕ್ರಮ ವಿಹಗೇಂದ್ರನನ್ನು ನೋಡಿದ ಅವರಿಗೆ, ರಾಕ್ಷಸರ ವಂಚನೆಯ ಭಯದಿಂದ ಸಂಶಯ ಉಂಟಾಯಿತು. 'ಹೇಳು ಪಕ್ಷಿ, ನೀನಾರು?' ಎಂದು ಕೇಳಲು, ಜಟಾಯುವು ಹೀಗೆ ಮಧುರವಾಕ್ಯಗಳನ್ನು ಆಡಿದನು.
~~~~~~~~~~~~~~~~~~~~~~

‘ವತ್ಸ, ನಾನು ನಿನಗೆ ಪರಕೀಯನಲ್ಲ, ನಿನ್ನ ತಂದೆಯ ಸ್ನೇಹಿತ! ನನ್ನ ಹಿರಿಯ ಅಣ್ಣ ಸಂಪಾತಿ. ನನ್ನ ಹೆಸರು ಜಟಾಯು. ಈ ದುರ್ಗ ಕಾನನವು ದುಷ್ಟ ರಾಕ್ಷಸರನ್ನು ಸೇವಿಸುವಂಥದು. ನೀನು ಅನುಮತಿಸಿದರೆ, ನಾನು ನಿನಗೆ ಸಹಾಯವನ್ನು ನೀಡುತ್ತೇನೆ.’

ಆ ಪ್ರಿಯ ವಾಕ್ಯಗಳನ್ನು ಕೇಳಿದ ತಕ್ಷಣ ಆ ಮೂವರಲ್ಲಿ ಸಂತೋಷ ಮೊಳೆಯಿತು. ಅವರು ದಶರಥ ಸ್ನೇಹಿತನಾದ ಆ ಗರುಡಪುತ್ರನಿಗೆ ನಮಸ್ಕರಿಸಿದರು. ಅನಂತರ ಅವನು ಆಕಾಶಮಾರ್ಗದ ಗೂಢಚಾರಿಯಾಗಿ ಕಾವಲಾಗಲು, ಅವರು ಪಂಚವಟಿಗೆ ಗೋದಾವರಿ ನದಿಯ ದಡದ ಕಡೆಗೆ ನಡೆದರು.

‘ಸೌಮಿತ್ರಿ, ಇದೊ ಮುಂದೆ ಆ ಅಗಸ್ತ್ಯನ ವರ್ಣನೆಯ ಮನೋಹರವನ ಕಣ್ಣನ್ನು ಸೆಳೆಯುತ್ತಿದೆ. ಚಿತ್ರಕೂಟದ ಸೊಬಗಿಗಿಂತ ಎರಡರಷ್ಟು ಸೊಬಗಿನಿಂದ ಕೂಡಿದೆಯಲ್ಲವೆ? ನಾವು ಹಿಂದೆ ಯಾವಾಗಲೂ ಪಡೆಯದ ಒಂದು ಸಂತೋಷ ಇಲ್ಲಿ ನಮಗಾಗಿ ಕಾಯ್ದಿದ್ದು ಸುಖಾಗಮನವನ್ನು ಬಯಸುತ್ತಿದೆ. ಅದೊ ನೋಡು, ಗಿರಿಯು ತರು ಚಾಮರ ಕೈಗಳ ತೋಳನ್ನು ಬೀಸಿ ಕರೆಯುತ್ತಿದೆ. ಇದೊ, ಈ ವಿಪಿನ ರಾಜೇಶ್ವರಿಯು ಹೂಮಳೆಯನ್ನು ಸೂಸಿ ಆಹ್ವಾನಿಸುತ್ತಿರುವಳು. ಚಂಚಲ ಸೆರಗಿನ ಅಲೆಯ ಗೋದಾವರಿಯು ತರಂಗ ಮಂಜುಳ ಧ್ವನಿಯ ವಾಣಿಯಿಂದ ನಮಗೆ ಸ್ವಾಗತವನ್ನು ಉಲಿಯುತ್ತಿದ್ದಾಳೆ!

‘ಅದೊ ಅಲ್ಲಿ, ಹೊಂಗೆಯ ಮರಗಳು ದಡವನ್ನು ಮುಚ್ಚಿ ಹಸುರನ್ನು ಮುಡಿದು ವೈಡೂರ್ಯವೇ ರಾಸಿಗೊಂಡಂತಿದೆ!’

‘ಆಃ ಅಲ್ಲಿ ಗರಿಗರಿ ಎಲೆಯ ಬಿದಿರಮೆಳೆಯ ಚಾಮರಕ್ಕೆ ಕನ್ನಡಿ ಹಿಡಿದ ರೀತಿಯಲ್ಲಿ ಪ್ರತಿಬಿಂಬ ಶೋಭಿಸುತ್ತಿದೆ.’

‘ಅದೊ ನವಿಲೊಂದು ಹೊಳೆಯ ನೀರಿಗೆ ಬಾಗಿದ ಕೊಂಬೆಯ ಮೇಲೆ ಕುಳಿತು ಹೇಗೆ ನೀರನ್ನು ಈಂಟುತ್ತಿದೆ!’

‘ಏನು ಎತ್ತರದ ವೃಕ್ಷಗಳಿವು! ಕಣ್ಣೆತ್ತಿ ನೋಡಿ ತಣಿಯಲಾರದೆ ಕೊರಳು ದಣಿಯುತ್ತಿದೆ !’

‘ನೋಡು ಈ ಹುತ್ತದ ಗೋಪುರವನ್ನು’

‘ಕೈಯ ಬಿಲ್ಲನ್ನು ಎತ್ತಿದರೂ ಅದರ ಕೊಪ್ಪಿಗೂ ಆ ಹುತ್ತದ ನೆತ್ತಿ ಎಟಕುತ್ತಿಲ್ಲ.’

‘ಅತ್ತ ನೋಡು ಆ ಕಡೆಗೆ, ಮಾಗಿದ ಹಣ್ಣು ಸೋರಿದ ರಸಕ್ಕೆ ಮಳೆಗರೆದು ನೆಲದಲ್ಲಿ ಕೆಸರೇಳುತ್ತಿದೆ.’

‘ಏನು ಅಮಂಗಳವೊ? ನನಗೆ ಕಾಲು ಜಾರುತ್ತಿದೆ’ ಎಂದು ಮೈಥಿಲಿ ತನ್ನೊಳಗೆ ತಾನು ಗೊಣಗಿಕೊಂಡಳು. ಆಗ ಹತ್ತಿರಕ್ಕೆ ಬಾರದೆ, ದೂರಕ್ಕೂ ಹೋಗದೆ ಒಂದು

ಜಿಂಕೆಯ ಮರಿ ಸುಳಿದಾಡುತ್ತಿರುವುದನ್ನು ಕಂಡಳು. ಪ್ರಕಟವಾಗಿ ಮನಃಪ್ರಿಯನಿಗೆ ಹೀಗೆ ಹೇಳಿದಳು :

'ಈ ತಾಣವು ಪರ್ಣಕುಟಿಗೆ ಒಳ್ಳೆಯ ಆಶ್ರಯವೆಂಬುದು ಸತ್ಯ. ಸಾಧುಮೃಗಗಳ ಈ ಸ್ಥಳ ತಾನು ಯಾವಾಗಲೂ ಸಾಧು !'

'ನಿನಗೆ ಕಾಲು ದಣಿದ ಸ್ಥಳವೆ ನಮಗೆ ಆಶ್ರಮವಾಗುವುದು !'

ಎಂದು ಅತ್ತಿಗೆಯನ್ನು ಅಪಹಾಸ್ಯ ಮಾಡಿದ ಅಣ್ಣನಿಗೆ ಲಕ್ಷ್ಮಣನು,

'ಜೀಯ, ನನ್ನನ್ನು ಕ್ಷಮಿಸು. ದೇವಿಯವರ ಆಲೋಚನೆಯಲ್ಲಿ ಸತ್ಯವಿದೆ. ಇದರ ನೋಟ ವಿಸ್ತಾರ, ಇದು ಎತ್ತರದ ಸ್ಥಳ. ವನರಮಣೀಯ, ಜಲ ರಮಣೀಯ, ಫಲಪುಷ್ಪ ವಿಪುಲ. ಜೊತೆಗೆ ಪೂರ್ಣ ಸುಕ್ಷೇಮ. ಬಹಳ ದೂರವು ಅಲ್ಲ, ಬಹಳ ಹತ್ತಿರವು ಅಲ್ಲದಂತೆ ಅಗೊ ಕಾಡಿನ ಜಿಂಕೆ ಮನಮೋಹಕವಾಗಿ ಸುಳಿದಾಡುತ್ತಿದೆ. ನಿನ್ನ ಮನಸ್ಸು ಒಪ್ಪಿದರೆ, ನಾನು ಇಲ್ಲಿ ಉತ್ತಮವಾದ ಒಂದು ಪರ್ಣಕುಟಿಯನ್ನು ಕಟ್ಟುತ್ತೇನೆ.'

'ನಿಮಗೆ ರುಚಿಸಿದುದೆ ನನಗೆ ಹಿತ. ಬನ್ನಿ, ನಾವೆಲ್ಲರೂ ಕೂಡಿ ಎಲೆಮನೆಯನ್ನು ಕಟ್ಟೋಣ.'

ಬನ್ನಿ ಕಂಬವನ್ನು ಹೂಡಿ, ಬಿದಿರುಗಳನ್ನು ತೊಲೆಮಾಡಿ ಹುಲ್ಲೆಲೆಗಳನ್ನು ಹೊದಿಸಿದರು. ಹೆಡಗೆವಳ್ಳಿ ಎಂಬ ಬಳ್ಳಿಯನ್ನು ಸೀಳಿ ಪಟ್ಟಿಯನ್ನು ಬಿಗಿದು ಕಟ್ಟಿದರು. ಹರಡಿಕೊಂಡಿರುವ ಬೆತ್ತವನ್ನು ಕಡಿದು ಸಿಗಿದು ತಟ್ಟಿಯನ್ನು ಹೆಣೆದರು. ಬೆಳಕಿಂಡಿಯನ್ನು ಬಿಟ್ಟು ತಡಿಕೆಗೋಡೆಯನ್ನು ಕಟ್ಟಿದರು. ಹುತ್ತದ ಮಣ್ಣನ್ನು ಮೆತ್ತಿದರು. ಕಣೆ ನೆಯ್ದ ಕೋಲುಗಳನ್ನು ಜೋಡಿಸಿ ಮಾಡಿದ ಬಾಗಿಲನ್ನು ಸ್ಥಿರವಾಗಿ ಬಿಗಿದರು. ಸುತ್ತಲೆಲ್ಲ ಮುಳ್ಳು ಒಡ್ಡುಗಳನ್ನು ಅಡಕಿದರು. ತಡೆಬಾಗಿಲುಗಳಿಗೆ ಉಣುಗೋಲುಗಳನ್ನು ಹೂಡಿದರು. ಹೀಗೆ ಅತಿಮೆಚ್ಚುಗೆಗೆ ಒಳಗಾಗಿರುವ ವನಭೋಗ್ಯವಾದ ಆಶ್ರಮವನ್ನು ನಿರ್ಮಿಸಿದರು.

ಹೆಚ್ಚಿದುದು ಮನೆನೆಹು; ಮೇಣಯೋಧ್ಯೆಯ ಕುರಿತ ಮಾತು ಮಿಗಿಲಾದುದು

ಪರ್ಣಶಾಲೆಗೆ ಸಮೀಪದಲ್ಲಿ ಕೆಳಗಡೆ ದೃಷ್ಟಿ ಸೀಮೆಗೆ ಕಾಣುವಂತೆ ನಿರಂತರವಾಗಿ ಯಾತ್ರೆಯನ್ನು ಕೈಗೊಂಡು ನದಿ ಗೋದಾವರಿ ಹರಿಯುತ್ತಿತ್ತು. ಅದೇ ರೀತಿ ಕಾಲನದಿ ಹರಿಯುತ್ತಿತ್ತು. ಬತ್ತಿ ಉರಿಯುತ್ತ ಎಣ್ಣೆ ತೀರಿದಂತೆ ಬತ್ತುವ ರೀತಿಯಲ್ಲಿ ವನವಾಸದ ಅವಧಿ ಹತ್ತಿರ ಬರುತ್ತಿತ್ತು. ಮನೆಯ ನೆನಪು ಹೆಚ್ಚಿತು; ಅಯೋಧ್ಯೆಯ ಕುರಿತು ಮಾತು ಹೆಚ್ಚಾಯಿತು. ಉತ್ತಮವಾದುದು ಏನನ್ನು ಕಂಡರೂ ಅದು ಉಪಮೆಯಂತೆ ಮತ್ತೊಂದು ಚಿತ್ರವನ್ನು ಮನಕ್ಕೆ ತರುತ್ತಿತ್ತು.

'ಗೋದಾವರಿಯ ನೀರು ರುಚಿಯಾಗಿ ನಿರ್ಮಲವಾದುದಲ್ಲವೆ?'

'ಸರಯೂ ಸಲಿಲದಂತೆ !'

'ಈ ತಾವರೆಯ ಹೂ ನೋಡು ಎಷ್ಟು ಚೆಲುವಾಗಿದೆ.'

'ನೀನು ಅಂದು ಗಂಗಾನದಿಗೆ ಮೀಯಲು ಹೋದಾಗ ತಂದ ಹೂವಿನಂತಿದೆ ಇದರ ಸೊಂಪು!'

'ಅದೊ ಕೇಳು, ಕ್ರೌಂಚಪಕ್ಷಿಗಳು ಉಲಿಯುತ್ತಿವೆ.'

'ಆಹಾ ! ನಮ್ಮ ಅರಮನೆಯ ತೋಟದಲ್ಲಿ ಕುಳಿತು ನಲಿಯುವಾಗ ಈ ತರಹದ ದನಿಹನಿಯ ವೃಷ್ಟಿಗೆ ಇದೇ ರೀತಿ ಕಿವಿ ತಣಿದವಲ್ಲವೆ?'

'ನೋಡು ಆ ಮರದ ಚಿಗುರ ಶೋಭೆ'

'ಅಯೋಧ್ಯಾಪುರದ ದ್ವಾರದ ಬಳಿಯಿರುವ ಮರವು ಈ ಶರದ್ ಸಮಯದಲ್ಲಿ ಹೀಗೆಯೆ ಶೋಭಿಸುತ್ತದಲ್ಲವೆ?'

ಹೀಗೆ ಪ್ರತೀಕಗೊಳ್ಳುತ್ತಿರುವಾಗ ಒಂದು ದಿನ ಹೊಳೆಯ ನುಣ್ಣನೆಯ ಮಳಲಿನ ದಿಣ್ಣೆಯ ಮೇಲೆ ಕುಳಿತು ಸೀತೆಯು ತನ್ನ ಪತಿ ಮತ್ತು ಮೈದುನರ ಜೊತೆ ಮಾತಾಡುತ್ತಿದ್ದಳು. ಅವಳು ಆಗಸದ ನೀಲಿಗೆ ಎದುರಾಗಿ ಬೂರುಗದ ಅರಳೆರಾಸಿ ಗುಂಪುಗೊಂಡ ರೀತಿಯಿರುವ ಶರತ್ಕಾಲದ ಮುಗಿಲ ಬೆಳ್ಳಿ ಮೋಡವನ್ನು ಕಂಡು ಅದನ್ನು ತೋರಿಸಿದಳು. ಆಗ ಲಕ್ಷ್ಮಣನು,

'ನಮ್ಮ ನಾಡಿನ ಹಸುರು ಹಬ್ಬಿದ ಬಯಲಿನ ಮೇಲೆ ಇದೇ ರೀತಿ ಬೆಳ್ಳಿ ಉಣ್ಣೆಯ ಕುರಿಗಳ ಹಿಂಡಿನ ರೊಪ್ಪವಿದೆ.' ಎಂದು ಹೇಳಲು ರಾಮನು,

'ಶರದೃತುವಿಗೆ ಅಗ್ನಿಕ್ರಿಯಾ ಚಿಹ್ನೆಯಿದು. ಶ್ಮಶಾನಭೂಮಿಯಲ್ಲಿ ಹೀಗೆಯೆ ಶ್ವೇತಭಸ್ಮ ಶರತ್ಕಾಲದ ಮೇಘವೇಷದಲ್ಲಿ ರಾಶಿಯಾಗಿ ಹಬ್ಬಿದೆ! ಇನ್ನೇನು ಇಂದೊ ನಾಳೆಯೊ ನೆಲಕ್ಕೆ ಮಂಜಾಗಿ ಬೀಳಲು ಹೇಮಂತ ಋತು ಪ್ರಾರಂಭವಾಗುತ್ತದೆ!'

ಎಂದು ಹೇಳುವಾಗಿನ ಅವನ ಮುಖ ಭೀಷ್ಮತೆಗೆ ಸೀತೆ ಬೆಚ್ಚಿದಳು. ಆಗ ಪತ್ನಿಯನ್ನು ಸಂತೈಸುತ್ತ ಮಾತು ಮುಂದುವರಿಸಿ ಹೇಳಿದನು: 'ತಂದೆಯನ್ನು ನೆನೆದಿದ್ದೆನು. ಹಾಗಾಗಿ ಆ ಉಪಮೆ!'

ಆ ಸಂಜೆಯ ಮುಗಿಲರಾಶಿಗೆ ಕೆಂಪು ಎರಚಿತು. ಮೌನ ಗೌರವದಿಂದ ನೋಡುತ್ತಿರಲು ಆ ಚಿತಾ ಪ್ರತಿಕೃತಿಯ ಚಿತ್ರವು ವಿಚಿತ್ರವಾಗಿ ಹಲವಾರು ಆಕೃತಿಗಳನ್ನು ತಾಳಿತು. ಕಪಿಯಾಯಿತು ಎನ್ನುವಷ್ಟರಲ್ಲಿ ಹುಲಿಯಾಯಿತು! ಹುಲಿ ಎನ್ನುತ್ತಿದ್ದರೆ ಕರಡಿಯಾಯಿತು. ನೋಡು ಕರಡಿ ಎಂಬುವಷ್ಟರಲ್ಲಿ ಅದು ಭೀಮರಾಕ್ಷಸವಾಯಿತು! ಕತ್ತಲೆಯ ಮಬ್ಬಿನಲ್ಲಿ ದುಶ್ಯಕುನ ಭೀಕರದ ಮೇಘ ದೈತ್ಯಾಕೃತಿಗೆ ಅವನಿಜಾತೆ ಕಂಪಿಸಿ

ಕಣ್ಣು ತಿರುಗಿಸಿದಳು. ಆಗ ಆಯುಷ್ಯವು ತನ್ನೆಡೆಗೆ ಇಳಿದು ಬರುವಂತೆ ಜಟಾಯು ಧೈರ್ಯಾಕೃತಿ ಬಂದಿತು. ಆಗಸದ ಸುತ್ತಾಟದಿಂದ ಇಳಿದ ಪಕ್ಷೀಂದ್ರನನ್ನು ಸ್ನೇಹದುತ್ಸಾಹದಿಂದ ಸ್ವಾಗತಿಸಿದರು. ಕುಶಲವನ್ನು ಕೇಳಿ ಸಂತೋಷದಿಂದ ಮಾತನಾಡಿಸಿದರು. ಎಲ್ಲರೂ ಉಲ್ಲಾಸಗೊಂಡು ಮೇಲೆದ್ದು ಎಲೆಮನೆಯತ್ತ ನಡೆದರು.

ಈ ಮರ್ಬಿನೊಳ್ ಬಟ್ಟೆಗೆಡುವುದೆ ದಿಟಂ ಪೊಳೆವೊನಲ್ಗುಂ! ಹು ಹು ಹು !

ದಿನದಿನಗಳು ಹತ್ತಿರವಾಗುತ್ತ ಒಂದುವಾರ ಕಳೆದಿತ್ತು. ವೈಥಿಲಿಯು ಸೂರ್ಯೋದಯಕ್ಕೆ ಮೊದಲು ಪನ್ನಗುಡಿಯ ಕೋಲಿನ ಬಾಗಿಲನ್ನು ತೆರೆದು ನೋಡಿದಳು. ಜಗತ್ತು ಶೂನ್ಯವಾದಂತ ದೃಶ್ಯವನ್ನು ಕಂಡಳು. ಮಲಗಿದ್ದ ಪತಿಯನ್ನು ಕೂಗಿ ಕರೆದಳು. ಬೇಗ ಎದ್ದು ಬಂದವನಿಗೆ ಒಡವೆ ಝಣ ಝಣ ಎಂದು ಝಣಸ್ಕರಿಸುತ್ತಿರಲು ಕೈ ಬೀಸಿ ತೋರಿಸಿದಳು. ಪ್ರಕೃತಿ ಪ್ರಿಯ ರಾಮನು ಹಿಮ ರಚಿಸಿರುವ, ಸೃಷ್ಟಿಯ ಅಭಾವವನ್ನೆ ಚಿತ್ರಿಸಿದಂತಹ ಮಂಜು ಕಲೆಯನ್ನು ನೋಡಿದನು. ಗಿಡವಿಲ್ಲ, ಮರವಿಲ್ಲ; ಮಲೆಯಿಲ್ಲ, ಕಾಡಿಲ್ಲ; ನೆಲವಿಲ್ಲ, ಬಾನಿಲ್ಲ; ಬಿಳಿಯ ಬಣ್ಣವನ್ನು ಹೊರತುಪಡಿಸಿ ನೋಟಕ್ಕೆ ಇನ್ನೊಂದಿಲ್ಲ. ಜಗತ್ತೆಲ್ಲವೂ ಜಗವೆಲ್ಲದರಲ್ಲಿಯೂ ಬೆಳ್ಪೊಂದೆ !

ಕಡಲನ್ನು ಕಡೆದಾಗ ಅದರ ಕೇಂದ್ರದಿಂದ ಹುಟ್ಟಿದ ಅಮೃತವು ಮಂಥನದ ರಭಸಕ್ಕೆ ಸಿಡಿದು ತುಂತುರು ತುಂತುರಾಗಿ, ನಾನಾ ದಿಕ್ಕಿಗೆ ಹರಡಿತು. ಅದು ಪರ್ವತದ, ಫಣಿಯ, ಅಸುರ ಅಮರರ ಆಕಾರದಿಂದ ತುಂತುರು ತುಂತುರಾಗಿ ಹಿಮದ ಹನಿಯೆಂಬಂತೆ ಇತ್ತು. ಆ ಶ್ವೇತ ಮಂಜು ಬೆಳ್ಳಿಯಿಂದಾದ ಧೂಳಿಯ ದಟ್ಟ ಶುಭ್ರ ಬಿಳಿಯನ್ನು ಎರಚಿ ಗಿರಿವನ ಮತ್ತು ಭುವನವನ್ನು ಮುಚ್ಚಿ ಮುಸುಕಿತು. ಮಂಜಿನ ವೃಷ್ಟಿಯು ತಾನೇ ಕಡಲಾಗಿ, ಮರಳೇ ಹೊಗೆಯಾಯಿತೊ, ನೊರೆಯೇ ಇಬ್ಬನಿಯಾಯಿತೊ ಎಂಬಂತೆ ಆವರಿಸಿತು. ಹತ್ತಿರದಲ್ಲಿ ಅವರು ಸದಾ ಬಳಸುತ್ತಿದ್ದ ಮುಳ್ಳಿನ ರಾಶಿ ಆ ಮಂಜಿನಲ್ಲಿ ಕಾಣಾದಾಗಲು, ಅವರ ಆಶ್ರಮವು ತೆಪ್ಪವಾಗಿ ತೇಲಿತು !

ಮತ್ತೆ ನೋಡ ನೋಡುತ್ತಿದ್ದಂತೆ ಕೊಡವಿದ ಅರಳೆ ನೆಲವನ್ನೆಲ್ಲ ಆವರಿಸಿ ವ್ಯಾಪಿಸುವಂತೆ ಅಪ್ಪಳಿಸುತ್ತ ಹರಿದಾಡಿದ ಹಿಮವು ಎಲೆಮನೆಯನ್ನು ತಬ್ಬಿಕೊಂಡಿತು. ಜೊತೆಗೆ ತೆರೆದ ಬಾಗಿಲಿನಿಂದ, ಬೆಳಕಿಂಡಿಯಿಂದ ಒಳಹೊಕ್ಕು ಮಡದಿಯೊಡನೆಯೆ ಪಹರೆಯಂತಿದ್ದ ದಿನಕರ ಕುಲದ ವೀರ ಕುಮಾರನನ್ನು ಲೆಕ್ಕಿಸದೆ ತುಂಬಿ ತೊಳಗಿತು!

ಆಗ ಸೀತೆಯು ಲಕ್ಷ್ಮಣನನ್ನು ನೆನೆದು ಹೇಳಿದಳು : 'ಹೊಳೆಗೆ ಹೋದ ಮೈದುನನು ಇನ್ನೂ ಬಂದಿಲ್ಲವಲ್ಲ!'

'ದಟ್ಟೈಸಿ, ಹಿಟ್ಟಿನಂತೆ ಇಳಿಯುತ್ತಿರುವ ಹಿಮದಲ್ಲಿ ದಾರಿತಪ್ಪಿದನೇನೊ? ಹಾಗೆಯೆ..'

'ಏನೊ ಸದ್ದಾಗುತ್ತಿದೆ, ಆಲಿಸಿರಿ'

ತಡೆಬೆಯಿರುವ ಕಡೆಗೆ ದೃಷ್ಟಿ ಹರಿಸಿ ಕಿವಿಗೊಟ್ಟಿರಲು, ಹತ್ತಿರಕ್ಕೆ ಬರುತ್ತಿರುವ ಮನುಷ್ಯಾಕೃತಿಯೊಂದು ಸುಳಿಯಿತು. ಅದು ಮಿದುಳು ಬಿಳಿಯ ಮಂಜು ಹೊಗೆಯಿಂದ ಮೂಡಿಬಂದಿತು ಎಂಬಂತ ಬಿಳಿಯ ಕನಸಿನಂತಿತ್ತು. ತೇವದಿಂದ ನಾರು ಬಟ್ಟೆ ನೆನೆದು, ತಲೆಗೂದಲು ಮೀಸೆಗಳಿಗೆ ಬೆಳ್ಳಿ ಧೂಳಿಗೆ ಸಮನಾದ ಹಿಮಕಣವು ಮೆತ್ತಿ ಮೈದುನನ ಶರೀರವು ಬೆಳ್ಳಗೆ ಕಾಣಿಸುತ್ತಿತ್ತು.

'ಏನು ಮಂಜಿದೊ ಕಾಣೆ ! ನನಗೂ ನಿತ್ಯ ಪರಿಚಿತವಾದ ಹಾದಿ ತಪ್ಪಿ ಗೋದಾವರಿಯನ್ನು ಹುಡುಕುತ್ತ ಸುತ್ತುವಂತಾಯಿತು ! ಕೊನೆಗೆ ಕ್ರೌಂಚಪಕ್ಷಿಗಳ ಉಲಿತ ಮತ್ತು ಹಂಸಗಳ ಧ್ವನಿ ಕೈಮರವನ್ನು ಆಲಿಸುತ್ತ ಕಾಲಿನ ಊಹೆಯಲ್ಲಿ ತೊರೆಯ ದಡಕ್ಕೆ ಹೋದೆನು! ಮರಳಿನ ಶೈತ್ಯದಿಂದಲೇ ನೀರಿನ ಶಿಶಿರತೆಯನ್ನು ಅನುಭವಿಸಿ ಚಳಿಗೆ ಸೆಡೆತು ಹೋಗಿ ಸ್ನಾನ ಮಾಡಲಿಲ್ಲ ! ಈ ಮಬ್ಬಿನಲ್ಲಿ ಹೊಳೆಯ ಹೊನಲಿಗೂ ದಾರಿ ತಪ್ಪುವುದು ನಿಜ ! ಹು ಹು ಹು!'

ಎಂದು ಮುದುರಿದ ಮೈಯ ಲಕ್ಷ್ಮಣನು ನಡುನಡುಗಿ ಒಲೆಯ ಕಡೆಗೆ ನಡೆದನು.

ಸ್ವಲ್ಪ ಸಮಯದ ಅನಂತರ ಹೊತ್ತು ಏರಿತು. ಪ್ರಾತಃಕಾಲ ಸೂರ್ಯನ ಕಿರಣಗಳು ಒಟ್ಟಾಗಿ ಸೇರಿ ಹಿಮದೊಂದಿಗೆ ಗುಂಪುಗಾಳಗವಾಯಿತು. ಮಂಜಿನ ಸೇನೆ ಸೋತು ಸಾಂದ್ರತೆ ಇಲ್ಲವಾಗಿ ಕ್ಷಯಿಸಿತು. ಬಿಡಿ ಬಿಡಿಯಾಗುತ್ತ ಒಳಸೋರಿತು. ಸರಸರನೆ ಗಿರಿಶಿಖರ ಸೀಮೆಯಿಂದ ಹಿಮ್ಮೆಟ್ಟಿ ಬೆಟ್ಟದ ತಪ್ಪಲಿಗೆ ಸರಿಯತೊಡಗಿತು.

ಮನೋಹರಾಸ್ಪಷ್ಟ ಕಾನನ ಭೂಮಿಯು ಬಿಳಿಯ ಅರಳೆಯಂತಹ ಅಮೃತಕೋಶದಿಂದ ಕೇಶ ಶರೀರದ ತಂತುವನ್ನು ಎಳೆದು ಕುಶಲದಿಂದ ನೇಯ್ದ ಅಮೃತ ರೇಷ್ಮೆವಸ್ತ್ರದಂತಹ ತೆರೆಯನ್ನು ಹೊದ್ದು ಶೋಭಿಸುತ್ತಿತ್ತು. ಇನಕುಲನು ಸೀತಾಸಮೇತನಾಗಿ ಆಶ್ರಮದಿಂದ ಹೊಳೆಯೆಡೆಗೆ ಹೊರಟನು. ಊರ್ಮಿಳೇಶನು ನೀರಿನ ಕಲಶವನ್ನು ಹಿಡಿದು ಅವರ ಜೊತೆ ಹೊರಟನು.

ಪಟ್ ಟಪಟ್ಟ್ ಎಂದು ಹಿಮದಿಂದ ನೆನೆದ ಎಲೆಯಿಂದ ಹಿಮಬಿಂದುಗಳು ದಪ್ಪ ಮಳೆ ಹನಿಯಂತೆ ಬಿದ್ದವು. ತೂರಿಬಂದ ಎಳೆಬಿಸಿಲು ಕೋಲು ಕೋಲಾಗಿ ಕಾಡಿನ ನಡುವೆ ಛಾಯೆ ಮಾಯೆಯನ್ನು ಸೃಷ್ಟಿಸಿ ಚೆಲುವಾಯಿತು. ಎತ್ತರವಾಗಿ ಬೆಳೆದ ಮರದ ನೆರಳು ನಸು ನೀಲಿಯಾಗಿ ಮಂಜಿನ ಮೈಗೆ ಚಿತ್ತಾರವನ್ನು ಕಡೆಯಿತು. ಅಲ್ಲಲ್ಲಿ ಮಳೆ ಬಿಲ್ಲುಗಳು ಮೂಡಿದುವು.

ಹೇಮಂತ ಋತುವಿನ ಕಲ್ಪಿತ ಪ್ರಕೃತಿ ಸೌಂದರ್ಯವು ಇಳಿದು ವಾಸ್ತವವಾಗುವ ಹಾಗೆ – ಹಸುರುಡೆಯನ್ನು ತೊಟ್ಟ ಕೋಮಲಾಂಗಿ ಭೂದೇವಿಯು ಹೊರಹೊರಟು ಮಾರ್ಗ ಮಧ್ಯದಲ್ಲಿ ಹೇಗೊ ನಿಂತಂತೆ, ಹಿಮವಸನೆಯಾಗಿ ಮನೋಹರಿಯಾಗಿದ್ದಳು.

ತೃಣಸುಂದರಿಯ ಮೂಗುತಿಯ ಮುತ್ತುಪನಿಯಂತೆ ಮಿರು ಮಿರುಗಿ ಮೆರೆವಾ ಹಿಮದ ಬಿಂದು !

'ನೋಡು, ಮೈಥಿಲಿ, ಅಲ್ಲಿ ! ಹನಿ ಆವರಿಸಿದ ಶಾದ್ವಲ (ಹಸಿರಾದ ಹುಲ್ಲು) ಶ್ಯಾಮ (ಕಪ್ಪು ಮಿಶ್ರವಾದ ಕಡು ಹಸುರು ಬಣ್ಣ) ವೇದಿಕೆಯಲ್ಲಿ ತೃಣ ಸುಂದರಿಯ ಮೂಗುತಿಯ ಮುತ್ತಿನಂತೆ ಹಿಮದ ಬಿಂದು ಶೋಭಿಸುತ್ತಿದೆ ! ನೋಡು, ಅದು ಹೇಗೆ ಬಣ್ಣದೆಣ್ಣೆಯ ಹಣತೆಯ ಸೊಡರಿನಂತೆ ಸಪ್ತರಾಗೋಜ್ವಲವಾಗಿದೆ ! ಆ ಹನಿಯ ಹೃದಯದ ಪುಟ್ಟ ಜ್ಯೋತಿಯಲ್ಲಿ ಸರ್ವಸೃಷ್ಟಿಯ ದೃಷ್ಟಿಯೂ ಸೆರೆಯಾಗಲು ಒಪ್ಪಿರುವಂತಿದೆ !

'ದೇವರ ಮುಖ ದರ್ಶನಕ್ಕೆ ಆ ಹನಿಯ ಕಿರುದರ್ಪಣ ಸಾಕಲ್ಲವೆ? ನಿಲ್ಲಿ, ಆ ಇಬ್ಬನಿಯ ಕಿಡಿಗುಡಿಯಲ್ಲಿ ಆರಾಧನೆ ಮಾಡಿ ಮುಂದುವರಿಯೋಣ!'

'ದೇವಿ, ಹೇಮಂತವು ನಿನಗೆ ಇಷ್ಟವಾದ ಋತುವಲ್ಲವೆ? ದೂರದಲ್ಲಿರುವ ಸೂರ್ಯನೇ ಚಂದ್ರ. ಅವನ ಬಿಸಿಲೆ ಬೆಳದಿಂಗಳು. ಮಧ್ಯಾಹ್ನವು ಸುಖಾಸ್ಪದವು, ಹಿತಕರವು, ಶೀತಲವು ಆಗಿದೆ. ಅಗ್ನಿ ಹಿತವಾಗಿದ್ದಾನೆ. ನೀರು ಮತ್ತು ನೆರಳು ಹಿತವೆನಿಸುತ್ತಿಲ್ಲ...'

'ಅಯೋಧ್ಯೆಯಲ್ಲಿ ಹಿಮದಿಂದ ತೊಯ್ದು ಹೊನ್ನಿನ ತೆನೆಯ ಮುಡಿ ಹೊರಗೆ ಬಾಗಿ ಗದ್ದೆಗಳು ಶೋಭಿಸುತ್ತವಲ್ಲವೆ?'

'ನೋಡಿ ಆ ಕಾಡಾನೆ ಜೊಂಡುಹುಲ್ಲಿಗೆ ಆಶಿಸಿ ಸೊಂಡಿಲನ್ನು ನಿಡಿದಾಗಿಸಿದೆ. ಮತ್ತೆ ತಕ್ಷಣ ಕೊರೆಯುವ ಹಿಮದ ಚಳಿಗೆ ಅಳುಕಿ ನಡುಗಿದ್ದ ಉಸಿರ ಬಿಸುಪನ್ನು ಬಯಸಿ ತನ್ನ ಬರಿಯಸೊಂಡಿಲನ್ನು ಬಾಯಿಗೆ ಹುಗಿಸಿಕೊಳ್ಳುತ್ತಿದೆ !'

'ವ್ರತಸ್ಥನಾದ ಭರತನು ಸರಯೂ ನದಿಯೊಳಗೆ ಸ್ನಾನವನ್ನು ಮಾಡಲು ಈ ಹೊತ್ತಿನ ಚಳಿಗೆ ಹೇಗೆ ಮನಸ್ಸು ಮಾಡುವನೊ?'

'ಜಿತೇಂದ್ರಿಯನಾದ ಅವನಿಗೆ ವ್ರತವು ಅಪ್ರಿಯವೆ?'

'ಧರ್ಮಜ್ಞನಾದ ಅವನು ಆ ಕೈಕಯೀ ಕ್ರೂರದರ್ಶಿನಿಯ ಗರ್ಭದಿಂದ ಹೇಗೆ ಜನಿಸಿದ ಎಂಬುದೊಂದು ಸೋಜಿಗ !'

'ಸೌಮಿತ್ರಿ, ತಾಯಿಯನ್ನು ನಿಂದಿಸಬೇಡ. ನುಡಿಯುವುದಾದರೆ ತಮ್ಮನ ಗುಣಗಳನ್ನು ಹೊಗಳು. ಈ ಪ್ರಕೃತಿ ಸೌಂದರ್ಯವು ನಿಂದಕರಾದ ನಮ್ಮನ್ನು ಕಂಡು ಅಸಹ್ಯಪಡುತ್ತದೆ. ಅದೊ ನೋಡು, ಮಲೆಯ ನೆತ್ತಿಯಿಂದ ಹಿಂಜರಿದ ಮಂಜು ಹೇಗೆ ಓಡುತ್ತಿದೆ ಆ ಹೊಳೆ ಹರಿಯುವ ಹೊನಲಿನ ಕಣಿವೆ ಹಾದಿಯಲ್ಲಿ ! ನೀರುಹಕ್ಕಿಗಳು ಮೂಡುವ

ನೇಸರನನ್ನು ಕೀರ್ತಿಸುತ್ತಿವೆ. ಬಿಸಿಯುಸಿರಿನ ಆವಿ ಮಬ್ಬಾಗಿಸಿದ ಕನ್ನಡಿಯಂತೆ ಆ ಸೂರ್ಯನ ಬಿಂಬ ಮಲಿನವಾಗಿ ಕಾಣುತ್ತಿದೆ.

'ಅಪುಷ್ಪವನ ಸಮೂಹ ತನ್ನನ್ನೆ ತಾನು ಇಲ್ಲವಾಗಿಸಿಕೊಳ್ಳುವ ಹಾಗೆ ಅಸ್ಫುಟವು ಸುಸ್ಥಿರವು ಆಗಿದೆ. ಅದೊ ನೋಡು, ಸೂರ್ಯನ ಕೀರ್ತಿಯನ್ನು ಪ್ರತಿಫಲಿಸಿ ನದಿಯ ನೀರು ಪಾದರಸದಂತೆ ಮಿನುಗುತ್ತಿದೆ.'

ಗುರಿ ಬಳಿಗೆ ಸಾರಿ ಬರೆ, ಪೆರ್ಚಿದಪುದೆರ್ದೆಯ ಕುದಿದಾಟಮುಂ

ಸ್ನಾನಮಾಡಿ ನಾರುಮಡಿಯುಟ್ಟು ಹಿಂದಿರುಗಿ ಬರುವಾಗ ಅಣ್ಣನು ಜಲಪೂರ್ಣ ಕಲಶವನ್ನು ಹೊತ್ತು ನಡೆದಿದ್ದ ತಮ್ಮನಿಗೆ ಹೀಗೆ ಹೇಳಿದನು :

'ತಮ್ಮನೆ, ನಾವು ಇಲ್ಲಿಂದ ಅನಂತರದಲ್ಲಿ ಹಿಂತಿರುಗಬೇಕಾಗಿದೆ. ಆ ಹೊತ್ತು ಹತ್ತಿರವಾಗುತ್ತಿದೆ. ನಾಳೆ ನಾಡಿದ್ದರ ಒಳಗೆ ಮಂಗಳ ಮುಹೂರ್ತವನ್ನು ನೋಡಿ ಹೊರಟರೆ, ಭರತನಿಗೆ ಆಣೆಯಾಡಿದಂತೆ ಆ ಅವಧಿಯ ಒಳಗೆ ಅಯೋಧ್ಯೆಯನ್ನು ತಲುಪುವೆವು. ಬಂದ ಮಾರ್ಗವನ್ನೆ ಹಿಡಿದು ಋಷಿವರ್ಯರನ್ನು ಕಂಡು ನಮಸ್ಕರಿಸಿ ಮಾತಾಡಿಸಿ ಮುಂದೆ ತೆರಳೋಣ.'

ದಾರಿಯಲ್ಲಿ ಸಾಗಿ ಬರುವಾಗ ಹೊಮ್ಮಿಬಂದ ಎಳೆ ಬಿಸಿಲು ಬಿದಿರು ಮೆಳೆಯ ಮೇಲೆ ಬಿದ್ದಿತು. ಆಗ ಅದರ ತುದಿಗಣೆಯಲ್ಲಿದ್ದ ಒಂದು ಕಾಮಳ್ಳಿಗಳ ಹಿಂಡು ಸಾಮೂಹಿಕ ಧ್ವನಿಗೈದು ಹಾರಿಹೋಯಿತು. ಆ ದನಿಯಿಂಪೆ ಹಿಮದಲ್ಲಿ ಹೆಪ್ಪುಗಟ್ಟುತ್ತ ಹನಿ ಹನಿಯ ಹಾಗೆ ಹೊಳೆವ ಮುತ್ತಿನ ಮಳೆಯನ್ನು ಸೂಸಿತು ಎಂಬಂತೆ ಗರಿಗರಿ ಎಲೆಯ ಹಿಮಮಣಿಗಳು ಸೀತೆಯ ತಲೆಯ ಮೇಲೆ ಉದುರಿದುವು.

'ದೇವಿಯರನ್ನು ಅಭಿನಂದಿಸುತ್ತಿರುವಳು ಅರಣ್ಯ ಸಖಿ !'

'ಅಲ್ಲಲ್ಲ, ತಂಗಿ ಊರ್ಮಿಳೆಯ ಕಣ್ಣೀರುಗಳು ಮುಂದೆ ಬರುವ ಸೊಗಸಿಗೆ ಉಕ್ಕಿ ಮುಂಚಿತವಾದ ಕಾಣಿಕೆಯಾಗಿ ಪ್ರಾಣೇಶ್ವರನ ಚರಣತಲಕ್ಕೆ ಅರ್ಪಿಸಿವೆ!'

'ಎಂತಹ ಜಾಣ ನುಡಿ !'

ಎಂದು ನುಡಿಯುತ್ತ ನಾಚಿದ ಲಕ್ಷ್ಮಣನು, ಮಾತು ಮುಂದುವರಿಸಿ 'ಅಣ್ಣಯ್ಯ ನಿಮ್ಮ ಪಟ್ಟಾಭಿಷೇಕಕ್ಕೆ ಇದೇ ರೀತಿಯ ಮುತ್ತಿನ ಮಳೆಗಳು ಸುರಿಯಲಿ ಎಂದು ಸರ್ವಮಂಗಳೆ ಜಗಜ್ಜನನಿ ಹರಸುತ್ತಿರುವಳು !'

'ತಾತ್ಪರ್ಯವನ್ನು ಹೇಳುವೆಯಾದರೂ ಏಕೊ ಮನಸ್ಸಿನಲ್ಲಿ ಕಳವಳ ಉಂಟಾಗುತ್ತಿದೆ. ಲೋಕದ ಅನುಭವ ಇಷ್ಟೆ: ಗುರಿಯು ಹತ್ತಿರ ಬರಲು, ಎದೆಯ ಕುದಿದಾಟ ಹೆಚ್ಚುತ್ತದೆ!'

ಮುಂದಕ್ಕೆ ಯಾರೂ ಏನೂ ಮಾತನಾಡಲಿಲ್ಲ. ತಮ್ಮ ತಮ್ಮ ಚಿಂತೆಯ ಭಾರವನ್ನು ಹೊತ್ತು ಮೌನದಿಂದ ನಿರ್ಜನ ಜನಸ್ಥಾನದ ಕುಟೀರವನ್ನು ಹೊಕ್ಕರು. ಮಧ್ಯಾಹ್ನದ

ಕೆಲಸ ಕಾರ್ಯಗಳನ್ನು ಮುಗಿಸಿದರು. ವನಮೂಲದ ಹಲವು ಹಣ್ಣುಗಳನ್ನು ತಿಂದರು. ಅನಂತರ ಎಲೆಮನೆಯ ಹೊರಗೆ ಸ್ವಲ್ಪ ಸಮತಟ್ಟಾದ ಸ್ಥಳದಲ್ಲಿ ವಿಶ್ರಮಿಸಿಕೊಳ್ಳುತ್ತಿದ್ದರು. ಆಗ ಜನಸ್ಥಾನದ ಸುತ್ತಲಿನ ತಪೋವನದಲ್ಲಿ ಅಲ್ಲಲ್ಲಿ ನೆಲಸಿದ್ದ ಋಷಿಮುನಿಗಳ ಒಂದು ಗುಂಪಿನವರು ಬಂದು ರಘುಕುಲನ ಬಳಿ ಹೀಗೆ ವಿನಂತಿಸಿದರು :

'ಶುಭದರ್ಶಿಯೆ, ನಿನಗೆ ಒಂದು ಅಶುಭವಾರ್ತೆಯನ್ನು ಹೊತ್ತು ತಂದಿದ್ದೇವೆ. ನೀನು ಇಲ್ಲಿ ನೆಲೆನಿಂತ ಪ್ರಾರಂಭದಿಂದ ಇಂದಿನವರೆಗೆ ನಮಗೆ ನೆಮ್ಮದಿಯ ಬಾಳು ಒದಗಿತು. ಮೊನ್ನೆಯ ಸಂಜೆ ಗೆಡ್ಡೆಗೆಣಸುಗಳನ್ನು ತರಲು ಹೋದ ನಮ್ಮವರನ್ನು ಯಾರೊ ಮಾಯಾವಿಗಳು, ಹೆಣ್ಣಿನ ವೇಷಾಂತರಿಗಳು ಬಲವಾಗಿ ಬಡಿದರಂತೆ! ರಕ್ಕಸರ ಒಂದು ಹಿರಿದಾದ ತಂಡ ಇತ್ತೀಚೆಗೆ ಈ ಕಡೆಗೆ ನುಗ್ಗುತ್ತಿರುವ ಶಂಕೆ ನಮಗುಂಟಾಗಿದೆ.

'ಪೃಥ್ವಿಪತಿಯೆ, ನೀನು ಹಿಂತಿರುಗಿ ಹೋಗುವುದಾದರೆ, ಕೆಲವು ದಿನಗಳು ಇಲ್ಲಿಯೇ ಉಳಿದು ನಿನ್ನ ಬಿಲ್ಲಿನ ಜೇವೊಡೆಯ ದನಿಯ ದುರ್ದಮ್ಯ ರಕ್ಷಣೆಯನ್ನು ನಮಗೆ ನೀಡಿ ತೆರಳಯ್ಯ !'

ರಾಮಚಂದ್ರನು ಬೆದರಿದ ಆ ಜಟಾಧಾರಿಗಳಿಗೆ ಅಭಯವಚನವನ್ನು ನೀಡಿ ಕಳುಹಿಸಿದನು. ತನ್ನ ಒಳಮನದ ಚಿಂತೆಯನ್ನು ತೋರ್ಪಡಿಸದೆ, ತಮ್ಮನನ್ನುದ್ದೇಶಿಸಿ,

'ಸೌಮಿತ್ರಿ, ಸುತ್ತಲಿನ ಅರಣ್ಯವನ್ನು ಸುತ್ತಿ ಬಾ... ಋಷಿ ಅಗಸ್ತ್ಯನು ಕೊಟ್ಟ ಬತ್ತಳಿಕೆ ನಿನ್ನ ಬೆನ್ನಿನಲ್ಲಿರಲಿ... ಶರಭಂಗಮುನಿ ನೀಡಿದ ಕೋದಂಡವನ್ನು ಹೊತ್ತು ನಡೆ... ಮತ್ತೆ ಪ್ರಾರಂಭವಾಗುವಂತೆ ಕಾಣಿಸುತ್ತಿದೆ ನಮ್ಮ ಕಾಡಿನ ಕಷ್ಟ !'

ಎಂದು ನಿಟ್ಟುಸಿರು ಬಿಡುತ್ತ ನುಡಿದನು. ಅಣ್ಣನ ಗಂಭೀರ ಮುಖಮುದ್ರೆಯನ್ನು ಕಂಡು ಲಕ್ಷ್ಮಣನು ಆಶ್ಚರ್ಯಕ್ಕೊಳಗಾದನು. ಅಣ್ಣನ ಆಜ್ಞೆಯಂತೆ ಬಿಲ್ಲನ್ನು ಹೊತ್ತು ನಡೆದನು.

ಕಾಡನ್ನು ಸುತ್ತಾಡಿದ ಆ ಗೂಢಚಾರನು ಬಳಲಿದನು. ಸಂಜೆಯ ತಂಪುಗಾಳಿಗೆ ಆಶಿಸಿ ಮಲೆ ತಲೆ ಕೋಡಿನ ಒಂದು ಬಂಡೆಯ ತುದಿಗೆ ಏರಿ ಕುಳಿತನು. ಹಾಗೆ ಅಲ್ಲಿ ವಿಶ್ರಮಿಸಿಕೊಳ್ಳುತ್ತಿದ್ದ ಆ ಊರ್ಮಿಳಾ ಪ್ರಿಯನು ಒಂದು ಅದ್ಭುತವನ್ನು ಅನುಭವಿಸಿ ಆಶ್ಚರ್ಯಕ್ಕೊಳಗಾದನು.

ಬಹುದೂರದಿಂದ ಬರುತ್ತಿದ್ದ ಗಾಯನವು ಕಿವಿಗೆ ಜೇನಿನ ಸೊದೆಯಾಗಿತ್ತು. ಮತ್ತೆ ಪುಷ್ಪಗಳಿಲ್ಲದ ಹೇಮಂತದ ವನಸಮೂಹದಲ್ಲಿ ಪರಿಮಳ ತುಂಬಿತು! ಹಾಗೆಯೆ ಅಚ್ಚರಿಯ ಕಾಮನಬಿಲ್ಲಿನ ವರ್ಣಜಾಲವು ಸಂಜೆಯ ಆಕಾಶವನ್ನು ಗಿರಿವನ ಪೃಥ್ವಿಯನ್ನು ಆವರಿಸಿತು! ಏನಿದೇನಿದು ಎಂದು ನೋಡುತ್ತಿರಲು, ದಕ್ಷಿಣ ದಿಕ್ಕಿನ ವಾಯುಮಾರ್ಗದಲ್ಲಿ ನಡೆಯುತ್ತಿರುವ ರಥವೊ ಎಂಬಂತೆ ಒಂದು ಬಣ್ಣ ಬಣ್ಣದ ಮುಗಿಲು, ಮಳೆಬಿಲ್ಲಿನ ತೇರಿನಂತೆ ನಿಧಾನವಾಗಿ ತೇಲುತ್ತ ಬಳಿಗೆ ಬಂದಿತು. ಮುಗಿಲ ತೇರು ಹತ್ತಿರ ಹತ್ತಿರಕ್ಕೆ

ಬರಲು ಆ ಹೊನಲ ಇಂಚರವು ಪ್ರವಾಹದಂತೆ ಉಕ್ಕಿ ಹರಿಯಿತು. ಕಂಪು ಹೆಚ್ಚಿತು; ಮಂಜು ಸಂಧ್ಯೆಯ ಕಾಂತಿಯು ಉಜ್ವಲವಾಯಿತು.

ನೋಡುತ್ತಿದ್ದಂತೆ ಗಂಧವನ್ನು, ಗಾನವನ್ನು ವೃಷ್ಟಿಗೈಯುತ್ತ ಆ ವರ್ಣಮಯ ಮೇಘವು ಜನಸ್ಥಾನದ ಆ ಕಾಡು ಕಣಿವೆಯಲ್ಲಿ ಇದ್ದ ಅವರ ಪರ್ಣಕುಟಿಯ ದಿಕ್ಕಿನಲ್ಲಿ ಇಳಿಯಿತು. ತುಂತುರು ಮಂಜುಹಬ್ಬಿ ತುಹಿನರ್ತು (ಹೇಮಂತ ಋತು)ವಿನ ಸಂಧ್ಯೆ ಮಬ್ಬಾಯಿತು. ಕಳವಳಗೊಂಡ ಲಕ್ಷ್ಮಣನು ಆ ಅಚಲ ಶಿಖರವನ್ನು ತ್ಯಜಿಸಿ ಬೇಗ ಬೇಗ ಇಳಿದನು.

ನೋಂಪಿಯ ಮುಡಿಗೆ ಪರಿಮಳದ ಪೂವಲ್ತೆ ಮೈತ್ರಿ !

ರಾಮ ಮತ್ತು ಸೀತೆ ಅದನ್ನು ಕುತೂಹಲದಿಂದ ನೋಡುತ್ತಿದ್ದರು. ಆಗ ಮಂಜಿನಂತೆ ಹರಡಿದ ಮುಗಿಲ ತೇರಿನಿಂದ ಒಂದು ಸುಂದರ ಸ್ತ್ರೀ ಮೂರ್ತಿ ಮೂಡಿಬಂದಿತು. ನಿಧಾನವಾಗಿ ನಿಂತು ನಯ ವಿನಯ ಒಯ್ಯಾರ ಸಂಸ್ಕೃತಿಗಳು ಒಂದಾಗಿ ಮೈಪಡೆದಂತೆ ಗಗನಗಾಮಿ ಸ್ತ್ರೀ ಬಂದಳು. ಅವಳು ಹೆಜ್ಜೆಗೆಜ್ಜೆಗಳ ಉಲಿತದಿಂದ ಬಿಂಕದ ನುಡಿಬಲೆಯನ್ನು ಹೀಗೆ ಬೀಸಿದಳು :

'ಕೋಸಲೇಶ್ವರ, ನಿನಗೆ ಸ್ವಾಗತ. ನಮ್ಮ ದಕ್ಷಿಣದ ಭೂಮಿಗೆ ನಮಗೆ ನೀನು ಅತಿಥಿ. ನಾನು ಚಂದ್ರನಖಿ; ಲಂಕೇಶ್ವರನ ಸಹೋದರಿ!'

ಸೀತೆ ಆ ಮಾತನ್ನು ಕೇಳಿ ಕಳವಳಗೊಂಡು ಪತಿಯ ಕಣ್ಣಭಾವವನ್ನು ಗಮನಿಸಿದಳು. ರಾವಣನ ಹೆಸರನ್ನು ಕೇಳಿದ ಮಾತ್ರದಿಂದ ತನ್ನ ಮನಸ್ಸಿಗೆ ಹೇಗೆ ಭಯಾನಕ ಭಾವ ಉಂಟಾಯಿತೋ ಅದೇ ರೀತಿ ತನ್ನ ರಮಣನ ಮುಖದಲ್ಲಿ ಮಾತ್ಸರ್ಯದ ಕಿಚ್ಚು ಹೊಗೆಯಾಡಿತು. ಅವನು ತುಟಿಯನ್ನು ಕೊಂಕಿಸುತ್ತ ನುಡಿಗತ್ತಿ ಬೀಸಿದನು :

'ರಾವಣನ ತಂಗಿ ಸುಖಾಗಮನವನ್ನು ಬಯಸಲು ತಡವಾಗಿ ಬಂದೆಯಲ್ಲ! ನಾವು ನಾಳೆಯೊ ನಾಡಿದ್ದೊ ನಿಮ್ಮ ಈ ಅಡವಿಯನ್ನು ಬಿಟ್ಟು ಹೊರಡುತ್ತಿದ್ದೇವೆ. ಅಯ್ಯೊ ಆತಿಥ್ಯವನ್ನು ಸವಿಯುವ ಭಾಗ್ಯ ನಮಗೆ ಇಲ್ಲವಾಯಿತಲ್ಲಾ!'

ಅದನ್ನು ಕೇಳಿ ದನುಜನ ತಂಗಿಯು ನಗುತ್ತ ಹೀಗೆ ಉತ್ತರಿಸಿದಳು :

'ನಂಟರ ಮನೆಗೆ ಹೋಗುವವರೆಗೂ ಹೊಣೆ ನಮ್ಮದು. ಹೋದನಂತರ ಅವರು ಔತಣವನ್ನು ನೀಡಿ ಬೀಳ್ಕೊಡುವವರೆಗೂ ನಾವು ಅವರ ಸೆರೆಯಲ್ಲಿದ್ದಂತೆ. ನಾವು ನೀಡುವ ವಿಶೇಷ ಭೋಜನವನ್ನು ಉಣ್ಣದೆ ನೀವು ಹೇಗೆ ಹಿಂದಿರುಗುವಿರಿ ? ಅದು ನಿಮಗೆ ತಕ್ಕನಾದುದಲ್ಲ; ನಮಗೆ ಅಪಕೀರ್ತಿಕರ !'

'ದಕ್ಷಿಣದವರ ಈ ಆತಿಥ್ಯ, ಬಲತ್ಕಾರದ ಸತ್ಕಾರ ವಿಚಿತ್ರವಾಗಿದೆ.'

'ನಿಜವಾದ ಪ್ರೀತಿ ಹಠವಾದಿ. ಔಪಚಾರಿಕವಲ್ಲ. ಕೇಳು, ಅದು ರಾಕ್ಷಸಕುಲದ ದೃಢನಿಶ್ಚಯ ಪ್ರೀತಿ. ಊಟದಲ್ಲಿ, ಕದನದಲ್ಲಿ ಹಾಗೆಯೆ ಪ್ರಣಯದಲ್ಲಿ ಬಲನಿಷ್ಠೆ ನಮ್ಮ ಸಲ್ಲಕ್ಷಣ! ಮಾಡುವುದನ್ನು ರಸಪೂರ್ಣವಾಗುವಂತೆ ಪ್ರೇಮಪೂರ್ವಕವಾಗಿ ಮಾಡುವುದು ನಮಗೆ ಪ್ರಿಯವಾದುದು! ಕೋಸಲೇಶ್ವರ, ನಮ್ಮ ಪ್ರೇಮವನ್ನು ತೃಪ್ತಿ ಹೊಂದುವ ತನಕ ಉಣ್ಣದೆ ನೀನು ಹಿಂದಿರುಗಿ ಹೋಗುವುದು ಅಸಾಧ್ಯ!'

'ರಾಜ್ಯದ ಎಲ್ಲ ಒಳಿತನ್ನು ತೊರೆದು, ವ್ರತಧಾರಿಗಳಾಗಿ ಕಾಡಿನಲ್ಲಿ ಅಲೆಯುವ ನಮಗೆ ವಿಶೇಷ ಭೋಜನವೇಕೆ? ಅರಸುಗಳ ಸೊಗಸು ಏಕೆ?'

'ಮೈತ್ರಿಯೇ ಕೊಡುಗೆಯಾಗುವುದಾದರೆ ಅದರಿಂದ ವ್ರತಕ್ಕೆ ಕೇಡೆ?'

'ಉಂಟೆ? ವ್ರತದ ಮುಡಿಗೆ ಮೈತ್ರಿಯು ಪರಿಮಳದ ಹೂವಲ್ಲವೆ! ಅದಕ್ಕಾಗಿಯೇ, ವೈರಿತನವನ್ನು ಅಳಿಸುತ್ತ ಅಕ್ಕರೆಯನ್ನು ಉಕ್ಕಿಸುವುದಕ್ಕಾಗಿ ನಾವು ದೊರೆತನವನ್ನು ತೊರೆದು ಇಲ್ಲಿಗೆ ಬಂದಿದ್ದೇವಲ್ಲವೆ!'

'ನಿನ್ನ ಹಾಗೆಯೆ ನಾನು ಅದನ್ನು ಹುಡುಕುತ್ತ ಇಂದು ನಿನ್ನ ಬಳಿಗೆ ಬಂದಿದ್ದೇನೆ. ಕೇಳು ಸರಸಿಯೆ, ನೀನು ಕರುಣಿ ಧರ್ಮಮತಿ ಮತ್ತು ದಾನರುಚಿ. ಉದಾರಿಯೆ, ನಾನು ನಾಥನಿಲ್ಲದ ತರುಣಿ. ನನ್ನ ಬಾಳು ಬರಿಯ ಹಾಳು. ನನ್ನ ಪತಿಯು ನನ್ನ ಅಣ್ಣನಿಂದ ತನ್ನ ಕಿರು ಹರೆಯದಲ್ಲಿ ಮಡಿದನು. ಅವರಿಬ್ಬರು ಪಾತಾಳ ಯುದ್ಧದಲ್ಲಿ ತೊಡಗಿದ್ದರು. ಕತ್ತಲೆಯ ಕುರುಡಿನಿಂದ ಒಬ್ಬರು ಇನ್ನೊಬ್ಬರನ್ನು ವೈರಿಗಳೆಂದು ತಿಳಿದು ಪೈಪೋಟಿಯಿಂದ ಕಾದಿದರು. ಮಹಾಶೂರ ರಾವಣನ ಕೈಯ ಆಯುಧಕ್ಕೆ ಬಲಿಯಾಗಿ ನನ್ನ ಗಂಡ ಸತ್ತು ಹೋದನು. ನಾನು ಅಂದಿನಿಂದ ಇದುವರೆಗೆ ಮಳೆಯ ನೀರು ಕಾಣದೆಯೆ ಬಂಜರಾದ ನೆಲದ ರೀತಿಯಲ್ಲಿ, ಏಕಾಂಗಿತನಕ್ಕೆ ಸತ್ತು ಬೇಸತ್ತು ಹೇಗೊ ಬದುಕುತ್ತಿದ್ದೇನೆ. ನನ್ನ ಎದೆಯ ನೀರಸದ ಭೂಮಿಗೆ ನೀನು ಮಳೆಯಾಗಿ ಕರೆಯಯ್ಯಾ, ಹೊಳೆಯಾಗಿ ಹರಿಯಯ್ಯ, ಹಚ್ಚನೆಯ ಹಸುರು ಪೈರಿನ ಬೆಳೆಯ ಸಿರಿಯಾಗಿ ಬಾರಯ್ಯ. ನೀನು ಯಾಚಿಸುವವರಿಗೆ ಕಲ್ಪತರುವಲ್ಲವೆ?'

ಎಂದು ಹೇಳುತ್ತ ಮಿಂಚಿನ ಅಂಚಿನ ಮೋಡದ ರೀತಿಯಲ್ಲಿ ಹತ್ತಿರಕ್ಕೆ ಬರುತ್ತಿರುವ ಮೇಘಾಂಗಿಯನ್ನು ಪರ್ವತವೆಂಬಂತೆ ತಡೆದು, 'ಅನಾರ್ಯೆ, ನೀನು ಬೇರೆಯವರ ಪತ್ನಿ ! ಕೇಳು, ರಾಕ್ಷಸ ವಿವಾಹ ಕ್ರಮವು ನಮಗೆ ಅಸಹ್ಯ!' ಎಂದು ರಾಮನು ಕಿರುನಗೆಯೊಡನೆ ಹೇಳಿ, ತನ್ನ ಅರಸಿ ಸೀತೆಯನ್ನು ನೋಡಿ, ಕಣ್ಣ ಇಂಗಿತ ತಿಳಿದಂತೆ ಪರಿಹಾಸ್ಯ ಮನದವನಾಗಿ ಚಂದ್ರನಖಿಯನ್ನು ಕುರಿತು ಮಾತು ಮುಂದುವರಿಸಿದನು :

'ನನಗೆ ಈ ಪತ್ನಿ ಇದ್ದಾಳೆ. ಪ್ರಿಯಳಾಗಿರುವುದು ದಿಟ ಮತ್ತು ಚೆಲುವಿಗೆ ಏನು ಕೊರತೆಯಿಲ್ಲ! ತುಂಬಿದ ಹೊಟ್ಟೆಗೆ ಅಮೃತಾನ್ನ ಸೇರುವುದಿಲ್ಲ.'

'ಒಪ್ಪಿದೆನು. ಈ ಸತಿಗೆ ಸರಿಸಮಾನರಾದವರನ್ನು ಕಂಡಿಲ್ಲ. ನನ್ನ ಅತ್ತಿಗೆಯ ರೂಪು ಇದಕ್ಕೆ ಸಾಟಿಯಾಗುತ್ತದೆ. ಆದರೂ ಗುಣಕ್ಕೆ ಮತ್ಸರವೇಕೆ ?

'ಸಿಹಿಗೆ ಹೇಗೆ ರುಚಿಯಿದೆಯೊ ಕಹಿಗೂ ಹಾಗೆ ಬೇರೆ ರುಚಿಯಿರುವುದಿಲ್ಲವೆ ? ಭೋಜನದ ರಸಿಕನಿಗೆ ಬೇರೆ ಬೇರೆಯ ರುಚಿಯ ರಸಗಳಲ್ಲಿ ಭೇದ ಭಾವವು ಏಕೆ? ನಿಮ್ಮ ಉತ್ತರದ ಪ್ರಣಯ ಸಾತ್ವಿಕ ರಸದ ಜೊತೆಗೆ ನಮ್ಮ ದಕ್ಷಿಣ ಪ್ರಣಯ ರಾಜಸವನ್ನು ಅನುಭವಿಸಿ ನೋಡಿದರೆ ರಾಜರಸಿಕತೆಗೆ ಕಳಂಕವೆ?'

ಎಂದು ನಗೆ ಕೊಂಕಿನಿಂದ ಹೇಳುತ್ತ ಚಂದ್ರ ನಖಿಯು ಹೂವಿನ ಆಕೃತಿ ಪಡೆದ ಹಾವಿನಂತೆ ನಿಂತು ಹೆಡೆನಲಿಯುತ್ತಿದ್ದಳು. ಆಗ ಮೈಥಿಲಿಯ ಮದನನು ಹುಬ್ಬುಗಂಟಿಕ್ಕಿ ಹೇಳಿದನು :

'ನಿಲ್ಲು. ಕೆಟ್ಟದ್ದನ್ನು ನುಡಿಯಬೇಡ. ಈ ಜಾರೆಯ ಜಾಣತನ ಸಾಕು. ಹೇ ವೇಶ್ಯೆಯೆ, ನೀನು ಪತಿವ್ರತಾತನದ ನಿರ್ಮಲಾನಂದವನ್ನು ಹೇಗೆ ತಾನೆ ತಿಳಿಯುವೆ? ಪತಿವ್ರತೆಗೆ ತನ್ನ ಇನಿಯನೊಬ್ಬನಲ್ಲಿಯೆ ಸರ್ವ ಮನುಜರ ಮತ್ತು ಸರ್ವಲೋಕದ ವೈವಿಧ್ಯವು ಕಾಣುವುದು. ಅದೇ ರೀತಿ ಪ್ರೇಮನಿಷ್ಠನಾದ ಪತಿಗೆ ತನ್ನ ಸತಿಯಲ್ಲಿಯೆ ಸರ್ವಲಲನೆಯರ ಸರ್ವ ಶೃಂಗಾರವು ಕಾಣಿಸುತ್ತದೆ. ಲಂಕೇಶ್ವರನ ತಂಗಿ ನೀನಾಗಿ, ಕ್ಷುದ್ರ ಬೆಲೆವೆಣ್ಣುಗಳು ನಾಚುವಂತಹ ಕೀಳು ನುಡಿಗಳನ್ನು ಆಡುವುದು ಸೋಜಿಗವಾಗಿದೆ !...

'ಇಲ್ಲಿ ಮರ್ಯಾದೆಯ ಹೆಣ್ಣು, ಜನಕ ರಾಜಋಷಿಯ ಕುಮಾರಿ ಇದ್ದಾಳೆ. ಇನ್ನು ಮಾತು ಸಾಕು. ಸಹೋದರ ಲಕ್ಷ್ಮಣನು ಬರುವಷ್ಟರಲ್ಲಿ ಇಲ್ಲಿರದೆ ಹೊರಡು. ಅವನು ಬಂದನೆಂದರೆ ನಿನಗೆ ತಕ್ಕನಾದ ಮದುವೆ ಮರ್ಯಾದೆಯಾಗುತ್ತದೆ !'

ಕೆತ್ತಿದುದು ಲಕ್ಷ್ಮಣನ ಕತ್ತಿ ಮಾಯಾವಿನಿಯ ಮೋರೆಯಂ, ಮೂಗರಿಯುವಂತೆ

ಲಕ್ಷಣನಿಗೆ ಸಂಜೆಯ ಮಬ್ಬಿನ ಮಂಜಿನಲ್ಲಿ ದೂರಕ್ಕೆ ಆ ಮೂರ್ತಿ ಕಾಣಿಸಿತು. ಅವನು ಬೇಗನೆ ಬಂದು ವಕ್ರ ಚಂದ್ರನಂತೆ ನಿಂತಿರುವ ಯುವತಿಯನ್ನು ಸಂಶಯಗೊಂಡು ಅಡಿಯಿಂದ ಮುಡಿಯವರೆಗೆ ದಿಟ್ಟಿಸಿ ನೋಡಿದನು.

ರಾಜಸಗುಣದ ಸರಿಸಮಾನಗೆಣೆಯ ತನಗೆ ದೊರೆತಂತೆ ಮತ್ತು ಸತಿಯಿಲ್ಲದವನಿಗೆ ರತಿಯಾಗುವ ಆಸೆಯಿಂದ ಮನಸ್ಸು ಮಿಂಚಿತೆಂಬಂತೆ ಚಂದ್ರನಖಿಯ ಶರೀರ ಪುಲಕಗೊಂಡಿತು.

ಹೆಣ್ಣಿನಿಂದ ಅಣ್ಣನ ಕಡೆಗೆ ಕಣ್ಣನ್ನು ತಿರುಗಿಸಿ ನೋಡಿದನು. ಆಗ ರಾಮನು ನಗು ನಗುತ್ತ ನಡೆದದ್ದನ್ನೆಲ್ಲಾ ವಿವರಿಸಿದನು. ಅದನ್ನು ಕೇಳಿ ಅವನಿಗೆ ಕಿಚ್ಚು ಉರಿದೆದ್ದು 'ತೊಲಗೆಲೆ ರಾಕ್ಷಸಿಯೆ !' ಎಂದು ತೋಳನ್ನು ಬಾಣಸಹಿತ ಬೀಸಿದನು. ಅಜಾಗರೂಕತೆಯಿಂದಾಗಿ ಅದು ರಕ್ಕಸಿಯ ಮುಖವನ್ನು ಕೆತ್ತಿತು. ರಕ್ತದೊಡನೆ ಕೋಪ

ಉಕ್ಕೇರಲು – ತಕ್ಷಣ ಚಂದ್ರ ನಖಿಯು ಶೂರ್ಪನಖಿಯಾದಳು; ಉಗ್ರ ಭೀಷಣಾಕೃತಿ ಹೊಮ್ಮಿತು. ಸೀತೆಯನ್ನು ಭೀತಿ ನಡುಗಿಸಿತು.

ಮೋಹದಿಂದ ಆಕೆಗೆ ಒದಗಿದ್ದ ಮೋಹನಾಕೃತಿಗೆ ವೈರ್ಯದಿಂದ ವಿಕಾರ ಆವರಿಸಿತು ಎಂಬಂತೆ ಸ್ವಚ್ಛಂದವರ್ತನೆಯ ರಾಕ್ಷಸಿಗೆ ಉಗುರುಗಳು ಮೊರದಂತೆ ಭಯಂಕರವಾದವು. ಕಾಮರೂಪಿ(ಇಷ್ಟ ಬಂದ ರೂಪವನ್ನು ಧರಿಸಬಲ್ಲ)ಯು ಭೀಮ ಭೀಕರ ಆಕಾರವನ್ನು ತಾಳಿದ್ದ ತಡ, ಲಕ್ಷ್ಮಣನ ಕತ್ತಿಯು ಮಾಯಾವಿಯ ಮೋರೆಯನ್ನು ಮೂಗು ಕತ್ತರಿಸುವಂತೆ ಕೆತ್ತಿತು. ಅವಳು ತಕ್ಷಣ ಕಾರ್ಮೋಡದ ವೇಷದಿಂದ ರೋಷಧ್ವನಿಯಲ್ಲಿ ಸಿಡಿಲ ಶಬ್ದದೊಂದಿಗೆ ಆಗಸಕ್ಕೆ ಸಿಡಿದಳು. ಆ ಶಬ್ದಕ್ಕೆ ನೆಲ ನಡುಗಿ, ಗಿರಿ ಗಹ್ವರಗಳು ಗುಡುಗಿದುವು.

ಅನಂತರ ನಿಧಾನವಾಗಿ ಪಂಚವಟಿಯ ನೆಲದಲ್ಲಿ ಹೇಮಂತ ರಾತ್ರಿಯ ಕಾಂತಿಯುತ ಶಾಂತಿ ತುಂಬಿತು. ಸೀತಾಕಾಂತನ ಅಂತರಂಗದಲ್ಲಿ ಮುಂದೆ ಸ್ವಲ್ಪ ದೂರದವರೆಗೂ ಒಂದು ಮನೋವ್ಯಾಕುಲತೆ ಆವರಿಸಿತು.

❑

ಕಿಷ್ಕಿಂಧಾ ಸಂಪುಟಂ



~~~~~~~~~~~~~~~~~~~~~~~ ಸಂಚಿಕೆ – ೧ ~~~~~~~~~~~~~~~~~~~~~~~

ಲಂಕೇಶನೊಲಿಸಿದನು ಮಾರೀಚನಂ

ಏಳು, ವೀಣೆಯೆ; ವಾಕ್ ಸುಂದರಿಯ ಕೈಯ ತ್ರೈಭುವನ ಸಮ್ಮೋಹಿನಿಯೆ, ಕವನ ಮನೋಹರಿಯೆ ಏಳು. ಮಂತ್ರಮಯ ಕಣ್ಣುಗಳಿಂದ ನೋಡುವ ನೀನು ಸರ್ವಕ್ಕೆ ಸಾಕ್ಷಿ. ನೀನು ನಿನ್ನ ನೂರು ತಂತಿಗಳ ಸಿರಿಕಂಠದಿಂದ ನಮಗಾಗಿ ಹಾಡು. ನಿನ್ನ ದರ್ಶನವು ನಮ್ಮ ದರ್ಶನ ತಾನಾಗುವಂತೆ ನಮ್ಮ ಎದೆಗೆ ಪ್ರತಿಭೆ ಪ್ರಜ್ವಲಿಸಲಿ!

ಹೇ ದೇವಿಯೆ, ನೀನು ಒಲಿದು ಕೃಪೆ ಮಾಡಿ ನಾರಣಪ್ಪ, ರನ್ನ, ಪಂಪ, ನಾಗವರ್ಮ, ರಾಘವಾಂಕ, ಲಕ್ಷ್ಮೀಶ, ವಾಲ್ಮೀಕಿ, ವ್ಯಾಸ, ಹೋಮರ್, ಮಿಲ್ಟನ್ ಮುಂತಾದ ಮಹಾಕವಿಗಳಿಗೆ ಮಿಂಚಿನಂತಹ ಪ್ರತಿಭೆ ನೀಡಿರುವೆ. ತಾಯಿಯೆ, ಅಂತಹ
~~~~~~~~~~~~~~~~~~~~~~~

ಪ್ರತಿಭೆ, ಕಲ್ಪನಾಶಕ್ತಿ, ಮಾತಿನಲ್ಲಿ ವ್ಯಕ್ತವಾಗುವ ಮಂತ್ರಮಯ ನುಡಿ, ಆಯುಸ್ಸು, ಆರೋಗ್ಯ, ಶಾಂತಿ, ಸೌಭಾಗ್ಯವನ್ನು ನಿನ್ನ ಈ ಕನ್ನಡ ಕಂದನಾದ ಸುರುಳಿಗುರುಳಿಂದ ಶೋಭಿಸುವ, ಆತ್ಮ ಸೌಂದರ್ಯವನ್ನು ಸಮರ್ಪಿಸಿ ಪೂಜಿಸುವ ಕವಿ ಕುವೆಂಪುವಿಗೆ ದಯಪಾಲಿಸು.

ಊರ್ಮಿಳೆಯ ಪತಿ ಲಕ್ಷ್ಮಣನ ಕೈಯ ಬಿಲ್ಲಿನ ಹೊಡೆತ ಮತ್ತು ಮುರಿದ ಪ್ರಣಯಾಸಕ್ತಿಯಿಂದ ಅಸುರ ಸ್ತ್ರೀ ಶೂರ್ಪನಖಿಯು ಕೆರಳಿದಳು. ಪ್ರತಿಕಾರಕ್ಕೆ ತೊಡಗಿದಳು. ಲಂಕೇಶನಿಗೆ ಗೊತ್ತಾಗುವ ಮೊದಲೇ, ಆ ಮೂವರು ಕೋಸಲಕ್ಕೆ ಹಿಂತಿರುಗಿ ಹೋಗಲು ಅವಕಾಶವಾಗದಂತೆ ತಡೆಯಲು, ನೆರವಿಗಾಗಿ ಜನಸ್ಥಾನದ ಆಸ್ಥಾನವನ್ನು ಪ್ರವೇಶಿಸಿದಳು.

ಸಹೋದರರು ಮತ್ತು ಸೇನಾಧಿಪತಿಗಳು ಆದ ಖರದೂಷಣರ ಚಿತ್ತದಲ್ಲಿ ಯುದ್ಧವನ್ನು ಕಡೆದಳು. ಅವರು ರಾಮಲಕ್ಷ್ಮಣರೊಡನೆ ಹೋರಾಡಿ ಸೈನ್ಯ ಸಮೇತ ನಾಶವಾದರು!

ಚಂದ್ರನಖಿಯ ಬಿಂಕಕ್ಕೆ ಬೆಂಕಿ ತಗುಲಿದಂತಾಯಿತು. ಆ ಲಂಕೇಶ್ವರನ ತಂಗಿ ಅತಿ ಉಗ್ರ ಕೋಪದ ಮನಸ್ಸಿನಿಂದ ಬಾನಿಗೆ ದಳ್ಳುರಿ ನೆಗೆದಂತೆ, ಅಣ್ಣನ ಬಳಿಗೆ ಧಾವಿಸಿದಳು!

ಏಳು ವೀಣೆಯೆ, ಹೇ ಅಮೃತ ಭಾಷಿಣಿಯೆ ಏಳು. ಕೇಳಿದವರು ರಸವಶರಾಗಿ ಕಲಾಪುಲಕದಿಂದ ಸಂಭ್ರಮಿಸುವಂತೆ ಮುಂದಿನ ಕಥಾ ಕಾವ್ಯವನ್ನು ಹೇಳು!

ನಿನಗೇತಕಾ ರಾಜಕಾರಣಂ, ಬರಿ ಗಂಡು ಹಗರಣಂ?

ತನ್ನ ಮನೋಹರಿ ಲಂಕೇಶ್ವರಿ, ಪತ್ನಿ ಮಂಡೋದರಿಯ ಮೈಯ ಮೋಹ ಸರೋವರದಲ್ಲಿ ಆಡಿ ದಡಕ್ಕೇರಿದ ಮದಗಜ ಸದೃಶನಾದ ರಾವಣನು ಮೀಸೆಗೈಯಾದನು. ಅವನು ಸವಿಯುತ್ತಿದ್ದ ತಾಂಬೂಲದ ಕೆಂಪು, ಹೃದಯರಾಗವನ್ನು ತುಟಿಗೆ ನೀಡಿದನೋ ಎಂಬಂತಿತ್ತು. ಕಿರು ನಗೆಯೊಡನೆ ನಲ್ಲೆಗೆ ಹೀಗೆ ಹೇಳಿದನು:

'ಪ್ರಿಯೆ, ನಾಳೆ ಮಹತ್ತರ ಕಾರ್ಯಕಾರಣದಿಂದಾಗಿ ದೂರ ಪ್ರಯಾಣವಿದೆ. ಅದು ದಿಟವಾಗಿಯೂ ಅನಿವಾರ್ಯವಾಗಿದೆ. ನಿನ್ನ ದಾಸಿಯರಿಗೆ ಮತ್ತು ಇತರ ರಾಣಿಯರಿಗೆ ಅದನ್ನು ತಿಳಿಸು. ಔತಣಕೂಟವನ್ನು, ಪುಷ್ಪಕ ವಿಮಾನದಲ್ಲಿ ವೇಲಾದ್ರಿ ಪರ್ವತ, ವನದ ತಪ್ಪಲಿನ ವಿಹಾರ ಯಾತ್ರೆಯನ್ನು ನನಗಾಗಿ ಮುಂದೂಡು. ನೆಟ್ಟನೆ ಬಂದೊದಗಿದ ಬರಿ ಗಂಡು ಹಗರಣವಾದ ಆ ರಾಜಕಾರಣ ನಿನಗೇತಕ್ಕೆ?'

ಸುಖ ಮುದ್ರಿತವಾಗಿದ್ದ ಪತಿಯ ಮುಖಕ್ಕೆ ವಿಕೃತಿಯು ತನ್ನ ನೆರಳನ್ನು ಹರಡಿದ್ದನ್ನು ಕಂಡು ಮಯನಂದನೆ ಕೇಳಿದಳು,

'ದೈತ್ಯೇಂದ್ರನೇ ಏನದು ರಾಜಕಾರಣ? ಕೃತಾರ್ಥನಾದವನೂ, ಜಗತ್ತನ್ನು ಜಯಿಸಿದವನೂ ಆದ ನಿನಗೆ ನಮ್ಮ ಔತಣಕೂಟಕ್ಕಿಂತ ಹೆಚ್ಚಿನದಾದ ಕಾರ್ಯ ಇನ್ನೂ

ಇದೆಯೆ? ಇಂದ್ರನ ಉದ್ಧಟತನವೆ? ಕುಬೇರನ ಅವಿನಯವೆ? ಯಮನ ಗರ್ವವೆ? ಮರ್ತ್ಯರಾಜರ ಅವಿಧೇಯತೆಯೆ?'

'ದೊಡ್ಡವರಿಗೆ ಹಿರಿಯ ಕೋಟಲೆ ಯಾವ ದೊಡ್ಡದು? ಅಲ್ಪರಾದವರ ಕಿರುಕುಳವೆ ದೊಡ್ಡದು! ಮೃಗರಾಜನಾದ ಸಿಂಹವು ಮದಗಜದ ದಂತವನ್ನು ಲೆಕ್ಕಿಸುತ್ತಾನೆಯೆ? ನೊರಜು-ನುಸಿಗಳ ಅಲ್ಪವಾದ ಕಿರಿಕಿರಿಗೆ ಬೇಸರಗೊಂಡು ಸಿಟ್ಟಾಗುತ್ತಾನಲ್ಲವೆ? ಆ ದಶರಥನ ಮಗ ರಾಮನೆಂಬುವನಿಂದ ನಮ್ಮ ಜನಸ್ಥಾನವು ನಿರ್ಜನವಾಯ್ತೆಂದು ಸುದ್ದಿ ಬಂದಿದೆ. ಕದನದಲ್ಲಿ ಯಮರೂಪಿನಂತವರೂ, ನಮ್ಮ ಕುಲಭೂಷಣರೂ ಆದ ಖರದೂಷಣ ಸಹೋದರರು ಅವರೊಡನೆ ಕಾದು ಮಡಿದಿರುವರು. ಅಲ್ಲದೆ ತಂಗಿ ಚಂದ್ರನಖಿಗೆ ಅವಮಾನವಾಗಿದೆ!

'ತಂಗಿಯನ್ನು ಒಡೆದು ಅವಮಾನಗೊಳಿಸಿದವನ ಪತ್ನಿಯನ್ನು-ಅದಕ್ಕೆ ಪ್ರತಿಫಲವಾಗಿ ಎದುರಿಸದೆ ಸುಮ್ಮನೆ ಬಿಡಲಾಗುವುದೆ? ರಾಕ್ಷಸ ವೈರವು, ಸಹೋದರರನ್ನು ಕೊಂದ ಆ ಮನುಜರನ್ನು ಕೊಂದು ಮುಗಿಸದೆ ಸುಮ್ಮನೆ ಬಿಡುತ್ತದೆಯೆ?

'ನಿನಗೆ ದಾಸಿಯಾಗಿ ಮತ್ತೋರ್ವಳನ್ನು ಆ ಜನಕಜಾತೆ; ಭೂದೇವಿ ಪುತ್ರಿ ಸೀತೆಯನ್ನು ತರುತ್ತೇನೆ! ಜೀವಿತೇಶ್ವರಿಯೆ ಆ ಸ್ವಯಂವರದ ಕಹಿಯಾದ ಕಥೆ ನೆನಪಿದೆಯೆ? ನಾನು ಮತ್ತೆ ಬಿಲ್ಲನ್ನು ಎತ್ತಿ ಅದರತುದಿಗೆ ಹಗ್ಗವನ್ನು ಕಟ್ಟುವೆನೆಂದು ಪ್ರತಿಜ್ಞೆ ಮಾಡಿ ಹಿಂತಿರುಗಿ ಬಂದೆ. ಉಗ್ರ ತಪಸ್ಸನ್ನು ಆಚರಿಸಿ ರುದ್ರನಿಂದ ಆ ಚಂದ್ರಚೂಡ ಕೋದಂಡವನ್ನು ತುಂಡು ಮಾಡುವ ಬಲವಾದ ವರಗಳನ್ನು ಪಡೆದೆ. ಆದರೆ, ಅದನ್ನು ವ್ಯರ್ಥವಾಗಿ ಪಡೆದಂತಾಯಿತು! ಮಿಥಿಳೆಗೆ ನಾನು ಹಿಂದಿರುಗಿ ಹೋಗುವಷ್ಟರಲ್ಲಿ ರಾಜರ್ಷಿಯ ಮಗಳನ್ನು ದಶರಥ ಕುಮಾರನಿಗೆ ಧಾರೆಯೆರೆದ ವಾರ್ತೆ ನನಗೆ ಬಂದಿತು!

'ಜನಕನು ಮಾಡಿದ ಆ ಕಾರ್ಯದಲ್ಲಿ ಸೋಜಿಗವಿಲ್ಲ! ಆರ್ಯರಾದವರಿಗೆ ನಮ್ಮ ಜೊತೆಗಿನ ಸಂಬಂಧ ಅಸಹ್ಯವಂತೆ! ನಾವು ರಾಕ್ಷಸರಂತೆ! ನಿನಗೆ ತಿಳಿಯದು, ಅವರು ನಮ್ಮವರನ್ನು ಹೇಗೆ ವರ್ಣಿಸಿರುವರೆಂದು! ದಶಶಿರ ಎನ್ನುವ ನನ್ನ ಬಿರುದನ್ನು ಹತ್ತು ತಲೆಯವನೆಂದು ಚಿತ್ರಿಸುತ್ತಾರೆ! ದಶರಥನನ್ನು ನಾವು ಹತ್ತು ರಥಗಳಲ್ಲಿ ಎರಡು ಕಾಲುಗಳನ್ನು ಹತ್ತು ಸಲ ಇಟ್ಟು ಚಲಿಸುವವನೆಂದು ವರ್ಣಿಸುತ್ತೇವೆಯೆ?

'ನಮ್ಮ ಹೆಣ್ಣು ಮಕ್ಕಳನ್ನು ಅವರು ಕೋರೆ, ಕೊಂಬುಗಳಿರುವಂತೆ ಬರೆಯುತ್ತಾರಂತೆ! ನಾವು ನರರನ್ನು ಕಡಿದು ಅವರ ಬಿಸಿ ರಕ್ತವನ್ನು ಕುಡಿದು ಬದುಕುವವರಂತೆ! ನಮ್ಮಲ್ಲಿ ಸಂಸ್ಕೃತಿಯು ಸ್ವಲ್ಪವೂ ಇಲ್ಲವಂತೆ. ರಾಕ್ಷಸ ಕುಲದ ನಾವು ನಿಜವಾಗಿ ರಾಕ್ಷಸರಂತೆ! ಸೂರ್ಯಕುಲದವರೆಲ್ಲ ಸೂರ್ಯನಂತೆ ದುಂಡೆಂದು, ಬಿಸಿಯೆಂದು ನಾವು ಹೇಳುತ್ತೇವೆಯೆ? ನಮ್ಮ ಮಾತು ಹಾಗಿರಲಿ; ವಾನರ ಧ್ವಜರೆಲ್ಲರು ದಿಟವಾಗಿ ಕೋತಿಗಳಂತೆ!

'ಅವರಿಗೆ ನಮ್ಮ ಸಂಸ್ಕೃತಿಯ ರುಚಿಯನ್ನು ತೋರಿಸುತ್ತೇನೆ! ನಾನು ಸೀತೆಯನ್ನು ಪಡೆಯಲು ತಪಸ್ಸು ಮಾಡಿ ಎಷ್ಟೋ ಶಕ್ತಿಗಳನ್ನು ಪಡೆದಿದ್ದೇನೆ. ಆ ಸಂಪತ್ತು ಸೀತೆಗಾಗಿಯೇ ವ್ಯಯವಾಗಲಿ!'

ಎಂದು ಮತ್ಸರದ ಕಿಚ್ಚು ಏಳಲು, ಕಿಚ್ಚು ನುಡಿಗಳನ್ನು ಹೇಳಿದ ಗಂಡನನ್ನು ನೋಡುತ್ತಾ ಸತಿ ಕಣ್ಣೀರು ಸುರಿಸಿ ನಿಟ್ಟುಸಿರು ಬಿಟ್ಟಳು. ಪತಿಯು ಮಾತನಾಡಿಸಿದರೂ, ತನ್ನ ಹೃದಯದ ದನಿಯನ್ನು ಹೇಳಲಾರದೆ ಅಲ್ಲಿಂದ ಮನೆಯ ದೇಗುಲಕ್ಕೆ ನಡೆದಳು!

'ಹೆಣ್ಣುತನಕ್ಕೆ ಸವತಿ ಮತ್ಸರ ಸಹಜ!' ಎಂದು ಹಿರಿಯ ಹೆಂಡತಿಯ ಮನದ ನೋವಿಗೆ ಅನ್ಯಾಯವಾಗಿ ಟೀಕೆ ಮಾಡಿದನು. ಅನಂತರ, ಆ ಲಂಕಾಧಿಪತಿಯು ಚಂದ್ರನಖಿ ಇದ್ದ ಏಕಾಂತ ಸ್ಥಳಕ್ಕೆ ನಡೆದನು. ಚುಗುಳವೆಂಬ ಹುಳು ತಿನ್ನಲು ಮುಖ ಕೆಟ್ಟು ಬಾಡಿದ ಹೂವಿನಂತಿದ್ದ ಅವಳನ್ನು ಕಂಡು ಅಣ್ಣನ ಎದೆ ಉರಿಯಿತು. ತನ್ನ ಅರಸುತನದ ಮೂಗು ಮುರಿದಂತಾಯಿತು. ನುಡಿ ಕಿಡಿಗಳನ್ನು ಉಗುಳುತ್ತ ಅವಳನ್ನು ಹೀಗೆ ಸಂತೈಸಿದನು:

'ಸೋದರಿಯೆ, ನಿನ್ನ ಈ ಮುಖ ಹುತ್ತವನ್ನು ಕೆತ್ತಿ ನನ್ನ ಚಿತ್ತ ಸರ್ಪವನ್ನು ಕೆರಳಿಸಿದವನು ಸತ್ತನೆಂದೇ ತಿಳಿ. ಹಾವನ್ನು ಸಿಗುಳಿ ಹೆಡೆ ಮಣಿಯನ್ನು ಪಡೆಯುವವನಂತೆ ಸೀತೆಯನ್ನು ಸುಲಿಯುತ್ತೇನೆ. ಅವಮಾನಕ್ಕೆ ಅವಮಾನವನ್ನೇ ಮುಯ್ಯಾಗಿಸುತ್ತೇನೆ. ಈ ಹೊಸತಾದ ನೋವಿನ ಗಾಳಿಗೆ ಹಳೆಯ ದುಃಖದ ಬೆಂಕಿ ದಳ್ಳುರಿಯಾಗುತ್ತಿದೆ. ತಂಗಿಯೆ, ನನ್ನ ಪ್ರಾಣದ ಕಾಡನ್ನು ದಹಿಸುತ್ತಿದೆ.'

ಅವಳು ರಾಮ-ಲಕ್ಷ್ಮಣರ ತಾರುಣ್ಯವನ್ನು ತನ್ನ ಪ್ರಣಯ ಕರುಣೆಗೆ ಆಶಿಸಿ ನೆನೆಯುತ್ತ ನುಡಿದಳು.

'ಕೈಯಿಂದ ಆಗುವುದಕ್ಕೆ ಶಸ್ತ್ರದ ಹಂಗು ಏಕೆ? ಶಕ್ತಿಯ ಶಂಕೆಗೆ ಒಳಗಾಗಿ, ಗೆಲ್ಲುವುದಕ್ಕೆ ಯುಕ್ತಿ ಇರಲು ಬಿಂಕದ ಕೆಚ್ಚು ಬರಿ ಸಾಹಸ. ನೀನು ಮಹಾಶೂರನಾಗಿದ್ದರೂ ಯಮ ಕುಬೇರ ದೇವೇಂದ್ರರನ್ನು ಆಜ್ಞಾಧಾರಕರನ್ನಾಗಿಸಿದ ಪರಾಕ್ರಮಿಯಾದರೂ- ದಾಶರಥಿಯನ್ನು ಕದನದಲ್ಲಿ ಸುಲಭನೆಂದು ತಿಳಿಯಬೇಡವೋ ಅಣ್ಣ! ನಾನು ಅವನ ಅಸ್ತ್ರ ಪ್ರಳಯದಿಂದ ದಶಸಹಸ್ರರಿಗೆ ಆದ ಗತಿಯನ್ನು ಕಂಡಿದ್ದೇನೆ! ಅವನು ಸಾಮಾನ್ಯ ಮನುಷ್ಯ ಅಲ್ಲ. ರಾಮನೊಬ್ಬನೆಯೇ ತಾನೊಂದು ಹಿರಿದಾದ ಸೈನ್ಯವಾಗಿರುವನು. ಅವನ ಜೊತೆಗೂಡಿ ಲಕ್ಷ್ಮಣನು ಬರಲು ಇನ್ನೇನು ಹೇಳಲು ಸಾಧ್ಯ. ಅವರು ಗೆಲ್ಲಲಾಗದವರೆಂಬುದು ಸತ್ಯ!

'ಹೆಣ್ಣು ಭಯಗೊಂಡರೆ ಗಂಡು ನಗುವುದು ಸಹಜವಾದರೂ ಅಣ್ಣಯ್ಯನೇ, ನನ್ನ ಮತ್ತು ನಮ್ಮ ಖರದೂಷಣರಿಗೆ ಆದ ಕೇಡಿಗೆ ಕೆರಳಿ ದುಡುಕದಿರೊ'

'ನೀನು ಹೆಣ್ಣಾಗಿದ್ದರೂ, ಬುದ್ಧಿಯಲ್ಲಿ ಧೈರ್ಯದಲ್ಲಿ ಗಂಡಿಗೆ ಸಮಾನಳು. ನಿನ್ನ ಆಲೋಚನಾ ಲೆಕ್ಕಾಚಾರ ನನಗೆ ತೂಕವಲ್ಲದ್ದು ಅಲ್ಲ. ನಾನು ಅದನ್ನು ಅರಿತೇ ನಿನ್ನನ್ನು ಅವರಿರುವಲ್ಲಿಗೆ ಅವರ ಶಕ್ತಿ ಸಾಮರ್ಥ್ಯ ತಿಳಿಯಲು ಕಳುಹಿಸಿದೆನು'.

ಕೈತವದೊಳವನಿಜಾತೆಯನೆಂತುಟಾದೊಡಂ ಕವರ್ತೆಗೊಳ್.

'ಅವನಿಜಾತೆಯನ್ನು ಕಪಟದಿಂದ ಹೇಗಾದರೂ ಅಪಹರಿಸು. ಆಗ ರಾಮನು ಬೇರು ಕೊಯ್ದ ಮರದಂತೆ ನಿಸ್ತೇಜನಾಗುತ್ತಾನೆ. ಶುಷ್ಕವಾದ ಆ ಮರ ದಹಿಸಲು ಸುಲಭಸಾಧ್ಯವಾಗುತ್ತದೆ. ನಿನಗೆ ಎರಡು ಕೆಲಸವು ಕೈಗೂಡುತ್ತದೆ. ಲಲನೆಯನ್ನು ಪಡೆಯುವೆ; ವೈರಿಯು ಹತನಾಗುತ್ತಾನೆ ..

'ಹೇ ದೈತ್ಯರಾಜೇಂದ್ರ, ನನ್ನ ಒಂದು ಪ್ರಾರ್ಥನೆಯನ್ನು ಕೇಳು. ನಿನಗೆ ಕೈಸೆರೆಯಾದರೆ ಆ ಇಬ್ಬರನ್ನೂ ನನಗೆ ಭಿಕ್ಷೆಯಾಗಿ ಕೊಡು. ನನ್ನ ಕಾಮೇಚ್ಛಾರತಿಯ ಹೊಟ್ಟೆ ತುಂಬಿ ತಣಿಯುವವರೆಗೆ ಆ ಧೂರ್ತರ ಪ್ರಾಣರಸವನ್ನು ಹೀರಿ, ತೃಪ್ತಿಗೆ ತರ್ಪಣ ಕೊಡುತ್ತೇನೆ.'

ರಾವಣನು ಭಗಿನಿಯ ಉಪದೇಶವನ್ನು ಆವೇಶದಿಂದ ಕೇಳಿದನು. ಅವನ ಕೋಪಕ್ಕೆ ಕಾಮದ ಹದ ಸೇರಿಕೊಂಡಿತು. ಕಣಿವೆಗೆ ಉರುಳುವ ಝುರಿಯ ಜಲಕ್ಕೆ ಕಾಲುವೆ ರಚಿಸಿದಂತೆ ಅವನ ಸಹಜ ಕಾಮದ ಕಪಿತ್ವಕ್ಕೆ ರಾಜಕಾರಣ ಸರ್ಪದ ತೊಗಲಿನ ಹಗ್ಗ ದೊರೆತಂತಾಯಿತು.

ಅವನು ಚಂದ್ರನಖಿಯಿಂದ ಕೇಳಿದ ವೈದೇಹಿ ವರ್ಣನೆಯ ಮೃತ್ಯು ಸಮಾನವಾದ ಬುತ್ತಿಯನ್ನು ಮನಸ್ಸಿಟ್ಟು ಮೇಯ್ದನು. ಅವನ ಕಾಮುಕತೆಯ ಪ್ರಾಣ ಪಶುತ್ವ ಅದನ್ನು ರತಿರೋಮಹರ್ಷದಿಂದ ಮೆಲುಕು ಹಾಕಿತು. ಅವಳು ತನುಮಧ್ಯಮೆ!, ವರಾರೋಹೆ!, ತಪ್ತಕಾಂಚನ ವರ್ಣೆ! ಪೀನಕುಚೆ! ಸುಶ್ರೋಣಿ! ಜಘನ ವಿಸ್ತೀರ್ಣೆ! ಮತ್ತು ಇಂದ್ರಿಯಗಳಿಗೆ ಇಂದ್ರಾಣಿ (ರತಿದೇವಿ)!

ಆ ಒಂದೊಂದು ಪದವನ್ನು ಸಚಿತ್ರವಾಗಿ ನೆನೆದು ಮೋಹ ಸುರೆ ಈಂಟಿದನು. ಕಲ್ಪನೆ ಕೆರಳಿದ ಆತ್ಮಕ್ಕೆ ಸಾಹಸೋನ್ಮಾದ ಮದಿಸುವಂತಾದನು.

ಏಕಾಂತದಲ್ಲಿ ಕುಳಿತು ಉತ್ಸಾಹಗೊಳ್ಳುತ್ತಾ ಅಪಹರಿಸುವ ಉಪಾಯವನ್ನು ಯೋಚಿಸಿದನು. ಹಿರಿಯ ಸಚಿವರು, ಹಿತ ವಂದಿಗರು, ತಮ್ಮಂದಿರು ತಿಳಿಯದಂತೆ ವಾಹನ ಶಾಲೆಗೆ ನಡೆದನು. ಕುಬೇರನಿಂದ ಗೆದ್ದು ತಂದಿದ್ದ ಕಾಮಗಮನ (ಇಚ್ಛೆಯಂತೆ ಚಲಿಸುವ) ವಿಮಾನವಾದ ಪುಷ್ಪಕ ಎಂಬ ಹೆಸರಿನ ಗಗನ ರಥವನ್ನು ಏರಿದನು.

ಆಕಾಶದಲ್ಲಿ ತರತರದ ಬಣ್ಣದ ಉರಿ ಮುಗಿಲುಗಳ ಶೃಂಗಾರದಲ್ಲಿ ಚೈತ್ರರವಿಯು ನಿಧಾನವಾಗಿ ತೆಪ್ಪವನ್ನು ಏರುವಂತೆ, ಗಿರಿ ಅರಣ್ಯ ಭವ್ಯ ಮಹಲುಗಳ ರಮಣೀಯ ಲಂಕೆಯಿಂದ ನಭದ ನೌಕೆ ಮೇಲಕ್ಕೆ ಏರಿತು. ಕೊರಳೆತ್ತಿ ನೋಡಿದ ನಗರದ ಜನರ

ಕಣ್ಣು ಮನಸ್ಸುಗಳಿಗೆ ಆ ಪುಷ್ಪಕವಿಮಾನವು ತೈಲವರ್ಣಗಳಿಂದ ರಚಿತವಾದ ಚಿತ್ರಗಳ ಕಲೆಯ ಮನೆ ಎಂಬಂತೆ ಆಗಸದಲ್ಲಿ ತೇಲುತ್ತ ಹೊಳೆಯುತ್ತಿತ್ತು. ಹೂವಿನಂತೆ ಕಣ್ಣು ಅರಳಿಸಿ ನೋಡುವವರಿಗೆ ಚಿನ್ನದಿಂದ ರಚಿತವಾಗಿ ರತ್ನ ಖಚಿತವಾದ ಅದು ಸೂರ್ಯಕಿರಣಗಳಂತೆ ಹೊಳೆಯುತ್ತಿತ್ತು.

ಆ ವಿಮಾನದ ಸುತ್ತಲೂ ಸಾಲುಸಾಲಾಗಿ ಮಾಲೆಯಂತಿರುವ ಚಿಕ್ಕ ಚಿಕ್ಕ ಮನೋಹರವಾದ ಗಂಟೆಗಳು ನಕ್ಷತ್ರಗಳಂತೆ ಕಾಣುತ್ತಿದ್ದವು. ಅವುಗಳು ನಾದಬಿಂದುವಿನ ವೃಷ್ಟಿಯ ಜೇನಿನ ಹನಿಗಳನ್ನು ಸೋರುವ ಚಿನ್ನದ ಬಿಂದುಗಳಂತಿದ್ದವು.

ಆ ಬಾನು ತೇರಿನ ಮೇಲಿದ್ದು ಅತ್ತ ಇತ್ತ ಒಲೆದಾಡುತ್ತಿದ್ದ ಬಾವುಟವು, ಮುಗಿಲ ಕೆನ್ನೆಯನ್ನು ಮುದ್ದಿಸುವ ವಾಯುವಿನ ಕೈಯಂತೆ ಕಾಣುತ್ತಿತ್ತು. ರಾಕ್ಷಸ ಕುಲನೆಲದ ಬಲದ ಚಂಡಿಕಾ ಚಿತ್ರ ಚಿಹ್ನೆಯು ಆ ಧ್ವಜದಲ್ಲಿತ್ತು.

ಪುಷ್ಪಕ ವಿಮಾನ ಚಲನೆಗೊಂಡು ಉಂಟು ಮಾಡಿದ ಗಾಳಿಗೆ ಅಶೋಕೋದ್ಯಾನದ ತರು ಕುಸುಮ ಧೂಳುಗಳೆಲ್ಲವೂ ಕೆದರಿ ಹೋದವು. ಚಕಿತಗೊಂಡ ಪಕ್ಷಿಗಳು ಚೀತ್ಕಾರವನ್ನು ಮಾಡುತ್ತಾ ಚೆದುರಿದವು. ಕಡಲ ದಡವನ್ನು ಆವರಿಸಿ ಲಂಕೆಗೆ ಅಂಚನ್ನು ಕಟ್ಟಿದಂತೆ ಬೆಳೆದ ತೋಟದಿಂದ ಅಡಕೆ, ತೆಂಗಿನ ಗರಿಯ ಮರ್ಮರ ಮನೋಹರ ಚಮತ್ಕಾರ ಮೂಡಿತು! ಬೆಟ್ಟದ ಅರಣ್ಯದಲ್ಲಿ ಅಟ್ಟಿಸಿಕೊಂಡು ಬೇಟೆಯಾಡುತ್ತಾ ಓಡುವ ಹುಲಿಯ ರೀತಿಯಲ್ಲಿ ಕಾಣುತ್ತಾ ಅಡಗಿ ಮತ್ತೆ ಕಾಣಿಸಿಕೊಳ್ಳುತ್ತ, ಮುಗಿಲ ನಡುನಡುವೆ ತೇಲುತ್ತ, ನಿಧಾನವಾಗಿ ದೂರಕ್ಕೆ ಹೋಗುತ್ತ, ಬಣ್ಣ ಬಣ್ಣದ ಗಾಳಿಯ ತೇರು ಲಂಕೆಯ ಜನಗಳಿಗೆ ಸೋಜಿಗದ ಶಂಖೆಯನ್ನುಂಟು ಮಾಡುತ್ತ ಮರೆಯಾಯಿತು.

ಕಂಡನಾ ಮಾರೀಚನಾಶ್ರಮಸ್ಥಾನಮಂ

ರಾವಣನಿಗೆ ಕಾಮಕ್ರೋಧಗಳ ವಿಷಯೇಂದ್ರಿಯವು ಸಂಕಟವನ್ನುಂಟು ಮಾಡುತ್ತಿರಲು, ಅಡವಿ ಬಾನು ಬಯಲಿನ ಸೊಬಗು ಮನ ಸೆಳೆಯುತ್ತದೆಯೆ? ರಾಕ್ಷಸ ರಾಜನು ಪ್ರಕೃತಿಯ ಭವ್ಯತೆಯನ್ನೇನೂ ನೋಡದೆ, ಕಂಗೆಟ್ಟವನಂತೆ ಹಾರಿದನು. ಮೇಘ ಮಾರ್ಗದಿಂದ ವಿಶಾಲ ನೀಲ ಸಾಗರವನ್ನು ದಾಟಿದನು. ತೀರದ ಕಾಡಿನ ವಿಪುಲ ವಿಸ್ತಾರ ಗಿರಿ ಶ್ರೇಣಿ ಕಾನನಾಚಲನಗಳನ್ನು ದಾಟಿ ಹೋಗಿ ಮಾರೀಚನ ಆಶ್ರಮವನ್ನು ಕಂಡನು. ಬಾಳೆ, ಏಲಕ್ಕಿ, ತೆಂಗು, ಅಡಕೆಗಳಿಂದ ಕತ್ತಲೆ ಕವಿದ ಬೆಟ್ಟದ ಮುಡಿಯಲ್ಲಿ ಅವನ ಎಲೆಮನೆ ಅಲಂಕಾರ ಪ್ರಾಯವಾಗಿತ್ತು. ಅಸಮಾನವೂ ದೊಡ್ಡದೂ ಆದ ಪುಷ್ಪಕ ವಿಮಾನವು ಪೃಥ್ವಿಯ ಮೇಲೆ ಇಳಿಯಿತು. ಆ ಇಂದ್ರ ವೈರಿಯು ಎಲೆಮನೆಯನ್ನು ಪ್ರವೇಶಿಸಿದನು.

ನಾನಾ ಬಣ್ಣದ ಕಿರಣಗಳ ಸೂರ್ಯನ ವಿವಿಧ ವರ್ಣಗಳ ಚೈತ್ರ ಸುಂದರ ಮಹಾಚಂದನ ಶ್ರೀಗಂಧದ ಕಾಡು ಉಜ್ವಲವಾಗಿ ಉರಿಯುವಂತೆ ಪ್ರಜ್ವಲಿಸುತ್ತಿರುವ

ದೈತ್ಯೇಂದ್ರನನ್ನು ತಾಟಕಾಸುತನು ನೋಡಿದನು. ಎದ್ದು ಹೋಗಿ ದೊರೆಯನ್ನು ಗೌರವಿಸುವ ಪದ್ಧತಿಯಂತೆ ಸುಖಾಗಮನವನ್ನು ನೀಡಿ ಉಪಚರಿಸುತ್ತ ಹೇಳಿದನು:

'ರಕ್ಕಸ ಕುಲಕ್ಕೆ ನೀನು ಶ್ರೇಷ್ಠನಾಗಿದ್ದರೂ, ನನ್ನ ಆಶ್ರಮಕ್ಕೆ ಬಂದಿದ್ದು ನನ್ನ ತಪಸ್ಸಿಗೆ ಇಂದು ಸಿದ್ಧಿ ದೊರೆತಂತಾಗಿದೆ!'

ಋಷಿಗಳಿಗೆ ಸಂಕಟವನ್ನುಂಟು ಮಾಡಲು ಕಂಕಣ ಕಟ್ಟಿ ಪ್ರತಿಜ್ಞೆ ಕೈಗೊಂಡಿದ್ದ ಆರ್ಯಶತ್ರು ಮಾರೀಚನ ಜಟಾವಲ್ಕಲದ ಮುನಿ ವೇಷವನ್ನು ನೋಡಿ, ಕಿರುನಗೆ ಹೊಮ್ಮಿಸುತ್ತ ರಾವಣನು ನುಡಿದನು:

'ಮಾವ, ನಿನ್ನನ್ನು ಮರೆಯಲು ಸಾಧ್ಯವೆ? ನಾನು ಯಾವಾಗಲೂ ನಿನಗೆ ಕೃತಜ್ಞನು. ಓ ಮಹಾಮತಿಯೆ, ಬಾಳುವವರಿಗೆ ಮತ್ತು ಆಳುವವರಿಗೆ ನಿನ್ನಂತಹವರು ಉಸಿರ ಉಸಿರಲ್ಲವೆ? ಕೇಳು, ದೊರೆಯ ಶಕ್ತಿಯ ಬಲದ ಜೊತೆಗೆ ಮಂತ್ರಿಯ ಜಾಣ್ಮೆಯ ಬೆಸುಗೆ ಇಲ್ಲದಿದ್ದರೆ ದೊರೆತನ ಗೆಲ್ಲಲು ಸಾಧ್ಯವೆ? ಹಿಂದೆ ಎಷ್ಟೆಷ್ಟೋ ಬಾರಿ ರಾಜಕಾರಣದಲ್ಲಿ, ರಣದಲ್ಲಿ ಮತ್ತು ಸ್ವಂತ ಸಂತೋಷ ಕಾರ್ಯಗಳಲ್ಲಿ ನೀನು ನನಗೆ ನೆರವಾದುದ್ದನ್ನು ನಾನು ಮರೆಯುವುದಿಲ್ಲ. ನಿನಗೂ ಅದೇ ರೀತಿ ನಾನು ನೆರವಾಗಿರುವೆನೆಂಬುದು ನನಗೆ ಹೆಮ್ಮೆ. ಕಷ್ಟದಲ್ಲಿ ನೀನು ಸವೆದು ಹೋದೆ. ಸಾಹಸಕ್ಕಾಗಿ ನೀನು ಬದುಕನ್ನೇ ಬಲಿಗೊಟ್ಟೆ. ವೀರನಾಗಿದ್ದರೂ ಬಳಲಿದೆ. ವಿಧಿಗೆ ಸೋತು ಯತಿ ವೃತ್ತಿಯನ್ನು ಹಿಡಿದೆ.

'ಮಾರೀಚ ಮುನಿವರ್ಯನೆ, ನಿನಗಾಗಿ ಮರುಗುತ್ತೇನೆ. ನಿನ್ನ ತಾಯಿಯನ್ನು ಕೊಲ್ಲಿಸಿದ ತಪಸ್ವಿ ಮತ್ತು ಕೊಂದ ಆ ಬಡ ಉತ್ತರದವನು ನಾಶವಾಗದೆ ಇನ್ನೂ ಇರುವರೆಂದರೆ, ನಮ್ಮ ದುರ್ವಿಧಿಗೆ ಎಲ್ಲೆ ಎಲ್ಲಿದೆ? ಜಟೆ ನಾರುಡುಗೆಯನ್ನು ಇಷ್ಟಪಡದವರು ಯಾರಾದರೂ ಇರುವರೆ ಹೇಳು?

'ನೀನು ಮುಯ್ಯಿಗೆ ಮುಯ್ಯಿ ತೀರಿಸಲಾಗದಿದ್ದರೆ, ನಾನಾದರೂ ತೀರಿಸಲು ನೀನು ಒಪ್ಪುವೆಯಾ? ಪ್ರೇತ ಲೋಕದಲ್ಲಿರುವ ನಿನ್ನ ತಾಯಿ ತಾಟಕೆಯು ತೃಪ್ತಳಾಗುವಂತೆ ನೀನು ನಡೆದುಕೊಳ್ಳುವೆಯಾ? ಕೇಳಿಸಿಕೋ, ಸಾತ್ವಿಕತೆ ಎಂಬುದು ಹೀನಬಲದ ಒಂದು ನಪುಂಸಕತೆ ಮತ್ತು ತಪಸ್ಸೆಂಬುದು ಹೆಂಬೇಡಿತನಕ್ಕೊಂದು ಬರಿ ನೆಪ!'

ಅಳಿಯನು ಹೇಳಿದುದನ್ನು ಕಣ್ಣು ಮುಚ್ಚಿ ತಲೆ ಬಾಗಿ ಕೇಳಿದನು. ವಂಚನೆಯ ಮಾತುಗಳ ಈಟಿ ಇರಿತವನ್ನು ತಾಳಲಾಗದೆ ತಾಳಿಕೊಂಡು ನಾಚಿ ನಿಟ್ಟುಸಿರು ಬಿಟ್ಟನು. ತಕ್ಷಣ ಕಲ್ಲಿನಂತಹ ಮೌನದಿಂದ ಎಲ್ಲವನ್ನು ನೆನಪಿಸಿಕೊಂಡನು. ರಾಮನಿಂದ ಕುರಿಯಂತೆ ಕತ್ತರಿಸಲ್ಪಟ್ಟು ಹತಳಾಗಿ, ಭೂಮಿಗೆ ಬಿದ್ದು ದಹನ ಸಂಸ್ಕಾರವಿಲ್ಲದೆ ಕಾಡಿನಲ್ಲಿ ಕೊಳೆತು ನಾರಿದ ತಾಯಿಯ ಆ ಹೆಣ ಕಣ್ಣಿಗೆ ಘೋರ ಚಿತ್ರವನ್ನು ಕಟ್ಟಿತು. ಹೇಳಲಾಗದೆ ಮೂಕವಾಗಿ ದುಃಖಪಡುತ್ತಿದ್ದ ರಾಕ್ಷಸನಿಂದ ಕಣ್ಣೀರು ಧಾರೆಯಾಗಿ ಹೊಮ್ಮಿತು!

ದಿಗ್ಗಜ ಬಲದವನಾದ, ಕೆಮ್ಮೀಸೆ ಹೊಂದಿದ ಹುಲಿಮುಖ ಉಗ್ರಗಾತ್ರದ ಮಾಯಾಸಮರ್ಥ ಮಾರೀಚ ದೈತ್ಯನು ಗೋಳಿಡುವುದನ್ನು ಕಂಡು ಲಂಕಾಧೀಶನು ಭೋಂಕನೆ ಮೇಲೆದ್ದನು. ಅವನನ್ನು ಅಪ್ಪಿಕೊಂಡು ಮತ್ತೆ ಮತ್ತೆ ಸಂತೈಸಿದನು. ಹುಲಿ ಹುಲಿಯ ಮುಖಕ್ಕೆ ಮುಖವಿಟ್ಟು ನೆಕ್ಕಿ ಮುದ್ದಾಡುವಂತೆ ಮಾರೀಚನ ಮನಸ್ಸನ್ನು ಸೂರೆ ಮಾಡುತ್ತ,

'ತ್ಯಜಿಸು, ಮಾವ ಅಧಿಕ ದುಃಖದ ವಿಲಾಪವನ್ನು ಬಿಟ್ಟು ಬಿಡು! ದಿಕ್ಕಿಲ್ಲದವನಂತೆ ದುಃಖಿಸುವೆ ಏಕೆ? ಲಂಕೆಗೆ ಲಂಕೆಯೇ ಉಕ್ಕೆದ್ದು ನಿನಗೆ ಸಹಾಯವನ್ನು ನೀಡಲು ತನ್ನ ತೋಳು ಚಾಚುತ್ತಿದೆ. ಇದೋ, ತೆಗೆದುಕೋ, ನಾನೇ ಆ ತೋಳು! ತಪೋ ಮಗ್ನನೆ, ನಿನಗೆ ಲೌಕಿಕರ ಸಂಕಟವಾರ್ತೆ ಹೇಗೆ ತಿಳಿಯುತ್ತದೆ?'

ಎಂದು ನಿಟ್ಟುಸಿರು ಬಿಡುತ್ತ ಎಲ್ಲವನ್ನೂ ಹೇಳಿದನು. ಚಂದ್ರನಖಿಯಿಂದ ಕೇಳಿದ ಪಂಚವಟಿ ಮತ್ತು ಜನಸ್ಥಾನದ ದಾರುಣ ಪರಾಜಯದ ಚಿತ್ತಕ್ಷೋಭೆಯನ್ನು ತಿಳಿಸಿದನು. ಅದನ್ನು ಕೇಳಿದ ಮಾರೀಚನ ಕಣ್ಣುಗಳಿಗೆ ಏನೋ ಭೀತಿಯ ಛಾಯೆ ಸುಳಿಯಿತು. ಮ್ಲಾನವದನನಾದನು. ಬಿಳಚಿಕೊಂಡು ಲಂಕೇಶನನ್ನು ನೋಡಿದನು. ಅದನ್ನು ಕಂಡು ಕ್ರೋಧಗೊಂಡು ಕಿಡಿಕಿಡಿಯಾಗಿ ರಾಕ್ಷಸೇಶ್ವರನು ಕೂಗಿದನು. ಆಗ ವ್ಯಾಘ್ರ ಘರ್ಜನೆಗೆ ಮಲೆ ನಡಗುವಂತೆ ಮಾರೀಚನ ಪರ್ಣಶಾಲೆ ನಡುಗಿತು.

'ತೆಗೆ ತೆಗೆ! ಅಧೈರ್ಯವನ್ನು ಬಿಡು! ಹೇ ಗಜೇಂದ್ರ ಬಲಶಾಲಿಯೆ, ವೀರಶ್ರೀಯ ಓಕುಳಿಯ ಮಂಗಳ ವೇದಿಕೆಯಿಂದ ಧುಮುಕಿ ಓಡದಿರು; ಹೆಂಬೇಡಿಯಾಗದಿರು; ಕುಲಗೇಡಿಯಾಗದಿರು; ಧೈರ್ಯ ಮರದ ಬೇರಿಗೆ ಬಿಸಿನೀರನ್ನು ಹುಯ್ಯದಿರು; ರಾಕ್ಷಸ ಕುಲದ ಬಲದ ಗಂಟಲನಾಳವನ್ನು ಕೊಯ್ಯದಿರು!'

ಎಂದು ಸಂತಾಪದಿಂದ ಹೇಳುತ್ತ ಬೆನ್ನಿಗೆ ಕೈಗಳನ್ನು ಕಟ್ಟಿಕೊಂಡನು. ಭೂಮಿಯ ಎದೆಯನ್ನು ಒದೆಯುವವನಂತೆ ಶತಪಥ ಅಲೆದಾಡಿದನು. ತಾಟಕೆಯ ಪುತ್ರನು ಲಂಕೇಶನ ಆವೇಶಕ್ಕೆ ಸ್ವಲ್ಪ ಹೆದರಿದನು. ಅನಂತರ ದೃಢವಾಣಿಯಿಂದ ಹೀಗೆ ಹೇಳಿದನು:

ಧರ್ಮದಿಂದಲೆ ಜಯಿಸವೇಳ್ಕುಮೆಂದಾನಿಂತು ತಪಕೆ ನೋಂತೆಂ

'ಮುಟ್ಟುದಿರುವವನಿಗೆ ಕೆಂಡವು ಮಾಣಿಕ್ಯದ ಕಿಡಿಯೆ! ರಾಮನ ಪರಾಕ್ರಮದ ರುಚಿ ಸವಿದ ನನಗೆ ನಿನ್ನ ನುಡಿ ಶೌರ್ಯ ಬರಿಯ ಸೊಕ್ಕಿನದಾಗಿ ತೋರುತ್ತಿದೆ. ನಾನು ಅವನನ್ನು ಬಾಲ್ಯದಿಂದಲೂ ಬಲ್ಲೆ. ಆ ದಾಶರಥಿಯ ಪರಾಕ್ರಮವನ್ನು ಮುರಿಯಲು ಪುರುಷ ಪ್ರಯತ್ನಗಳನ್ನೆಲ್ಲ ಮಾಡಿದ್ದೇನೆ. ನನ್ನ ಕೈಯ ಚಳಕದ ಬಲ, ಮೈಯ ಬಲ, ಬಿಲ್ಲಿನ ಬಲ, ಮಾಯೆಯ ಅತಿಬಲ ಯಾವುದೂ ಕೈಗೂಡಲಿಲ್ಲ. ಅಯ್ಯೋ, ನನ್ನ ತಾಯಿಯ ಕೊಲೆಗಡುಕನನ್ನು ಕೊಲ್ಲಲು ಪ್ರಯತ್ನಿಸಿ, ನಾನು ಕೊಲೆಯಾಗುವುದೊಂದನ್ನು ಬಿಟ್ಟು ಮತ್ತೆ ಎಲ್ಲ ಪಾಡನ್ನು ಪಟ್ಟಿದ್ದೇನೆ!

'ಖರ ವೈರಿ ಎಂದಿಗೂ ಸೋಲನು; ಅವನು ಗೆಲ್ಲಲು ಅಸಾಧ್ಯನಾಗಿರುವನು! ದೈವವು ರಾಮನ ಕಡೆಗಿದ್ದು ವೃದ್ಧಿಯಾಗುತ್ತದೆಂದು ತಿಳಿದೆ. ಬರಿಯ ಶಕ್ತಿ ಪ್ರಯೋಜನವಿಲ್ಲವೆಂದು ತಿಳಿದೆ. ಧರ್ಮದ ಉಕ್ಕಿನ ಕವಚವೇ ರಕ್ಷೆಯಾಗಿರುವವನನ್ನು ಧರ್ಮದಿಂದಲೇ ಜಯಿಸಲು ಸಾಧ್ಯವೆಂದು ನಾನು ಈ ರೀತಿ ತಪದ ವ್ರತಕ್ಕೆ ತೊಡಗಿದೆ...'

'ಎಲವೊ ಮಾರೀಚನೆ, ನೀನು ಉತ್ತರದವರ ಮರಳುತನಕ್ಕೆ ಮಂಕಾಗಿರುವೆ! ನರಮಾತ್ರನಾದವನನ್ನು ಪರಮ ದೈವವೆಂದು ಮೂರ್ಖರು ಆಡಿದರೆ, ಶಿವಶಿವಾ ಬೆಪ್ಪನಾದ ನೀನು ಅದನ್ನೇ ನಿಜವೆಂದು ನಂಬುವುದೆ? ಕೇಳು, ಆ ನಂಬಿಕೆಯೇ ನಿನ್ನ ನೂರಾನೆಗಳ ಶಕ್ತಿಯನ್ನು ಟೊಳ್ಳಾಗಿಸಿದೆ, ಒಂದು ಉಪಾಯವನ್ನು ಆಲೋಚಿಸಿ ಈ ಸ್ಥಳಕ್ಕೆ ಬಂದೆನು. ನಾವಿಬ್ಬರೂ ದುಃಖಿಗಳೆ; ತಾಯಿಯ ಕೊಲೆಯಿಂದ ನೀನು, ಒಡಹುಟ್ಟಿದವರ ಕೊಲೆಯಿಂದ ನಾನು. ತಂಗಿಗೆ ಆದ ಅಪಮಾನವು ನಮ್ಮ ಕುಲಕ್ಕೆ ನಾಚಿಕೆಗೇಡು.

'ಹೀಗೆ ದಕ್ಷಿಣದವರ ಗೌರವಕ್ಕೆ ಉತ್ತರದವರು ಎಸೆದಿರುವ ಪ್ರತಿಭಟನೆಗೆ ನಾವು ಸುಮ್ಮನಿದ್ದರೆ –ಉತ್ತರದವರ ಶೀಲಗುಣರಾಕ್ಷಸತ್ವಕ್ಕೆ ನಮ್ಮ ದಕ್ಷಿಣ ಸೂರೆಯಾಗಿ ಹೋಗುವುದು ನಿಜವಲ್ಲವೆ?

'ಮಾರೀಚನೆ, ನೀನು ದಂಡನೀತಿಯೊಂದನ್ನೇ ನಂಬಿ ಸೋತೆ. ವೈರಿಯನ್ನು ಶಕ್ತಿಗುಂದಿಸಲು ಬೇರೆ ತಂತ್ರಗಳೆಷ್ಟೋ ಇವೆ. ಸೀತೆಯನ್ನು ಹೊತ್ತುಕೊಂಡು ಹೋದರೆ ದಾಶರಥಿಯು ಮಾನಹಾನಿಗೆ ಹೃದಯ ದೀನನು ಮತ್ತು ಶಕ್ತಿಹೀನನು ಆಗಿ ನಿಸ್ತೇಜನಾಗುತ್ತಾನೆ. ಹಿರಿಯ ಆಲದ ಮರವು ನೀರಿಲ್ಲದೆ ಒಣಗಲು ಕ್ಷುಲ್ಲಕ ಗೆದ್ದಲಿಗೆ ಉಣಿಸಾಗುತ್ತದೆ ಎಂಬಂತೆ ರಾಮನ ವಿಕ್ರಮವು ನಮ್ಮ ಪರಾಕ್ರಮಕ್ಕೆ ಸಿಕ್ಕಿ ಜೊಳ್ಳಾಗುತ್ತದೆ.'

ಪಾವನ ಪತಿವ್ರತಾ ಹರಣಮದೆ, ಕೇಳ್, ನಿನ್ನ ಬಾಳ್ಗುರಿಯಿಕ್ಕುವುದು ಕಣಾ!

'ಇದನ್ನೇ ಏನು ನೀನು ಉಚಿತವೆಂದು ತಿಳಿದಿರುವುದು. ಪತಿವ್ರತೆಯ ಅಪಹರಣ, ನಿನ್ನ ಮತ್ತು ಸಕಲ ಲಂಕೆಯ ಮರಣದ ನೀತಿಯನ್ನು ನಿನಗೆ ಹೇಳಿದವರು ಯಾರೊ? ಚಂದ್ರಮೌಳಿಯನ್ನು ಕುರುಡು ಆಗಿಸಿ ಅನಂತರ ಅವನನ್ನು ಶ್ರಮವಿಲ್ಲದ ಹಾಗೆ ಗೆಲ್ಲುವೆನೆಂದು ಉರಿಯ ಹಣೆಕಣ್ಣಿಗೆ ಕೈಯಿಕ್ಕಿ ಎಳೆದು ಕೀಳುವ ದಡ್ಡನಂತೆ ಭಾವಿಸುತ್ತಿರುವೆ. ಓ ಕೈಕಸಿಯ ಕಂದನೇ, ಮುಂದೆ ಏನಾಗುತ್ತದೆಂದು ನೀನು ತಿಳಿಯದಿರುವೆ! ರಾಮನ ಪರಾಕ್ರಮವೇಕೆ ಬೇಕು? ಪಾವನ ಪತಿವ್ರತಾ ಹರಣವೇ ನಿನ್ನ ಬಾಳಿಗೆ ಉರಿಕೊಳ್ಳಿಯನ್ನಿಡುವುದೆಂದು ತಿಳಿ!'

ಮಾವನ ಆ ಮಾತಿಗೆ ದಶಗ್ರೀವನು ಕಿಲಕ್ಕನೆ ನಕ್ಕನು. ಕಾಡುಹಂದಿಯು ಹೂಂಕಾರ ಮಾತ್ರದಿಂದ ನಾಯಿಗಳನ್ನು ಅಟ್ಟುವಂತೆ ಮಾರೀಚನ ಹಿತವಚನಗಳನ್ನು ಸಿಗಿದು ಹಾಕಿದನು. ಸ್ವಲ್ಪ ಹೊತ್ತು ತಡೆದು ಮತ್ತೆ ಹೇಳಿದನು:

'ನಿನ್ನ ಹದಿಬದೆತನದ ಹಿರಿಮೆಯನ್ನು ಶಿಶುಮತಿಗಳಿಗೆ ಹೇಳಯ್ಯ! ನಿನ್ನ ಪತಿವ್ರತಾ ಸ್ತ್ರೀಯು ಕಟ್ಟುಕತೆಯೊಳಗಲ್ಲದೆ ಪೃಥ್ವಿಯಲ್ಲಿ ಎಲ್ಲಿರುವಳೆಂದು ಹೇಳು? ನನ್ನ ಪ್ರತಾಪಜ್ವಾಲೆಯು ಮೂರು ಲೋಕಗಳನ್ನು ದಹಿಸಿದೆ. ನನ್ನ ಸಾಹಸಕ್ಕೆ ಸರ್ವವನ್ನು ಶೋಧಿಸಿದೆ. ನಿನ್ನ ಈ ವರ್ಣನೆಯ ಶ್ರೇಷ್ಠಳನ್ನು ನಾನು ಇದುವರೆಗೆ ಎಲ್ಲಿಯೂ ಭೇಟಿಯಾಗಿಲ್ಲ. ಇನ್ನೂ ಆ ಬಯಕೆ ನನಗೆ ಹಿರಿ ಬಯಕೆ ಮಾತ್ರವಾಗಿ ಉಳಿದಿದೆ.

'ಅಯ್ಯೋ ಮಾವಯ್ಯ, ನನ್ನ ಆತ್ಮಚರಿತ್ರೆಯನ್ನು, ಮನದ ದುರಿತವನ್ನು ಹೇಳುತ್ತೇನೆ. ಕೇಳುವವನಾಗು. ಹುಟ್ಟುವಾಗಲೇ ನಾನು ರಕ್ತದೊಂದಿಗೆಯೇ ಹೆಣ್ಣಿನ ದೇಹದ ಬೇಟದ ಆಸೆಯನ್ನು ಹೊತ್ತು ಹುಟ್ಟಿದೆನು! ಜನ್ಮ ದೌರ್ಬಲ್ಯವನ್ನು ಜಯಿಸಲೆಂದು ನಾನು ಎಷ್ಟೆಷ್ಟೊ ನಿಯಮದ ಪಟ್ಟುಗಳಿಂದ ಆತ್ಮವನ್ನು ತಾಪಕ್ಕೆ ಒಳಗು ಮಾಡಿದೆನು. ಪಾತಿವ್ರತ್ಯವನ್ನು ನಂಬಿ, ಪತ್ನೀವ್ರತಕ್ಕೆ ಆಶಿಸಿ ಮುಗ್ಧ ಬುದ್ಧಿಯಲ್ಲಿ ತಾರುಣ್ಯವನ್ನು ಕಳೆದೆನು. ನಾನು ಬಯಸಿ ಮೋಹಿಸುವ ಮೊದಲೇ ಹೆಣ್ಣುತನವು ನನ್ನನ್ನು ಬಯಸಿತು. ಅಯ್ಯೋ, ಮೇಲ್ಬಿದ್ದು ಆತುರದಿಂದ ಹಂಬಲಿಸಿತು. ತತ್ತರಿಸುತ್ತ ಅಂಚಿನಲ್ಲಿ ದಣಿದು ಉಯ್ಯಾಲೆ ಆಡುತ್ತಿದ್ದ ನನ್ನ ಆತ್ಮವು ನೇರವಾಗಿ ಮನ್ಮಥ ರುಚಿಯ ರಸಾತಳಕ್ಕೆ ದುಮ್ಮಿಕ್ಕಿತು.

'ಕೇಳು, ಅಂದಿನಿಂದ ಹೆಣ್ಣುತನದ ಬಗ್ಗೆ ನನಗಿದ್ದ ಸುಂದರ ಪತಿವ್ರತಾಭಾವ ಶಿಥಿಲವಾಗಿ ಭೋಗ ಭಾವವೇ ಅಧಿಕವಾಯಿತು. ನಾನು ದಡಕ್ಕೆ ಏರಲು ಸಾಹಸದಿಂದ ಈಜುವುದನ್ನು ಬಿಡದಿದ್ದರೂ, ತೇಲಿ ಸೆಣಸುತ್ತ ಆ ಹುಚ್ಚು ಹೊಳೆಯ ಪ್ರವಾಹದಲ್ಲಿ ಕೊಚ್ಚಿ ಹೋದೆ!

'ರಾಕ್ಷಸೇಶ್ವರನ ಮೈಸಿರಿಗೆ, ಕುಬೇರನನ್ನು ಗೆದ್ದವನ ಸಂಪತ್ತಿಗೆ ದಿಕ್ಪಾಲಕರನ್ನು ಗೆದ್ದ ಕೀರ್ತಿಗೆ, ಅಖಿಲ ಭೂಮಂಡಲದ ರಾಜರನ್ನು ಗೆದ್ದು ವಶಪಡಿಸಿಕೊಂಡ ಯಶಸ್ಸಿನ ವೈಭವಕ್ಕೆ ಈ ರಾವಣನ ರಸಿಕತೆ ಸತ್ವ ವೀರ್ಯ ತೇಜ ಯೌವನಕ್ಕೆ ಮೆಚ್ಚಿ ವಶವಾಗದಿರುವ ಪವಿತ್ರಾಂಗಿಯೊಬ್ಬಳನ್ನೂ ಕಂಡಿಲ್ಲ!

'ಪತಿವ್ರತೆಯರೆಂದು ಹೆಸರು ಪಡೆದ ಹೆಣ್ಮಣಿಗಳನ್ನು ಪರೀಕ್ಷಿಸಿದೆನು. ಅವರು ಸುಲಭದಲ್ಲಿ ವಶವಾದರು. ಕೇಳು, ಕಡೆಗೆ ಹದಿಬದೆಯರು ಇರುವರೆಂಬ ನಂಬಿಕೆ ನನ್ನೆದೆಯಲ್ಲಿ ಸತ್ತು ಹೋಯಿತು!' ಎಂದು ಹೇಳುತ್ತ, ಶತಪಥ ತಿರುಗುತ್ತಿದ್ದ ಆ ದೈತ್ಯ ನೃಪನನ್ನು ತಾಟಕಾ ಪುತ್ರನು ಮೌನದಿಂದ ಬೆರಗಾಗಿ ನೋಡಿದನು. ಸ್ವಲ್ಪ ಹೊತ್ತಿನ ಅನಂತರ ರಾವಣನು ಉದ್ವೇಗಕ್ಕೊಳಗಾಗಿ ಮಾತು ಮುಂದುವರಿಸಿದನು.

'ಇಲ್ಲ, ಬಿಡು ಮಾರೀಚ, ಎಲ್ಲಿಯೂ ಆ ನನ್ನ ತಾಯಿ ಇಲ್ಲ! ಅಯ್ಯೋ, ನನ್ನ ನಾಲಗೆ ಸುಳ್ಳು ಹೇಳಲು ಹೇಸುತ್ತಿದೆ. ನನ್ನ ಪೂಜೆ ಹುಸಿಗೆ ಸಲ್ಲುವುದಿಲ್ಲ. ಪಾವನೆಯು ನನಗೆ ಕಾಣಿಸಿದಂದು ನಾನು ಧನ್ಯ; ಅವಳು ಧನ್ಯೆ!

'ಕೇಳು, ಒಮ್ಮೆ ಧನ್ಯನಾಗುವ ಪುಣ್ಯ ದೊರೆಯಿತೆಂದು ಇದ್ದೆನು. ನೋಡು, ಆ ಸ್ವಪ್ನವು ಒಡೆದು ಹೋಯಿತು. ಮತ್ತು, ಎದೆಗೆ ಪ್ರತಿನಿತ್ಯವೂ ಸೋರುವ ಒಂದು

ಹಿರಿದಾದ ಗಾಯವಾಯಿತು. ವೇದವತಿ ಹೆಸರಿನ ಋಷಿಪತ್ನಿಯ ಪುಣ್ಯಸತಿ ಒಬ್ಬಳಿದ್ದಳು. ಪಾತಿವ್ರತ್ಯದಲ್ಲಿ ಅವಳು ಮೂರು ಲೋಕದ ಕಣ್ಣಿಗೆ ಒಂದು ಆದರ್ಶ ಗುರಿಯ ನಕ್ಷತ್ರವಾಗಿದ್ದಳು. ಅಪರೂಪವಾದುದೆಂದೇ ತಿಳಿದು ಅತಿಯಾಗಿ ಕುದಿಗೊಂಡ ನನ್ನ ಅಪೇಕ್ಷೆ ಅವಳನ್ನು ಬಯಸಿತು. ಹೆಣ್ಣು ಹೆಚ್ಚು ಉತ್ತಮಳಾಗಿದ್ದಷ್ಟೂ ನನ್ನ ಎದೆಯ ಕಾವು ಅಧಿಕವಾಗುವುದು ನನ್ನ ಸಹಜ ಗುಣ.

'ಅಯ್ಯೋ, ಆ ದೌರ್ಭಾಗ್ಯೆಯು ಆತ್ಮಹತ್ಯೆಗೆ ಮನಸ್ಸು ಮಾಡಿ ಚಿತೆ ಏರಿದಳು. ನಾನು ಎಂದೂ ಬಲಾತ್ಕರಿಸೆನು ಎಂಬುದನ್ನು ತಿಳಿಯದೆಯೆ ಕೊಂದುಕೊಂಡಳು! ಕೇಳು, ನನ್ನ ಜೊತೆ ಬಾಳುಮಾಡಿ ವಶವಾಗದಿದ್ದರೂ ಅವಳ ಪಾದಕ್ಕೆ ನಮಸ್ಕಾರದ ನೈವೇದ್ಯವನ್ನು ಸಮರ್ಪಿಸುತ್ತಿರುವೆ. ಸುಲಭ ಶುಚಿಯಾದ ಅವಳು ಸಾವನ್ನು ಪಡೆದು ತಿರಸ್ಕೃತಳಾದಳು!

'ಮತ್ತೊಮ್ಮೆ ಹದಿಬದೆಯರ ಅರಸಿ ತಾನು ಎಂಬುವ ಇನ್ನೋರ್ವಳನ್ನು, ಅವಳ ಅರಸನನ್ನು ಸೋಲಿಸಿ ಸೆರೆಗೆ ನೂಕಿ ತಂದೆನು. ಅವಳು ಧಾನ್ಯಮಾಲಿನಿ ನನ್ನ ಮೆಚ್ಚಿನ ಉಪಪತ್ನಿ ಎಂಬುದನ್ನು ನೀನು ತಿಳಿದಿರುವೆ. ರಾವಣನ ಪ್ರಣಯಕ್ಕೆ ಸೋಲದ ಒಬ್ಬಳನ್ನಾದರೂ ಕಾಣುವೆ ಎಂದಿದ್ದರೆ, ಕಟ್ಟಕಡೆಗೆ ಅವಳೂ ನನಗೆ ಸೋತಳು. ಆಗ ನನ್ನಲ್ಲಿ ಇನ್ನೂ ಲವಲೇಶವಾಗಿ ಉಳಿದಿದ್ದ ಸ್ತ್ರೀಗೌರವ ನಿಶ್ಶೇಶವಾಗಿ ನಿರ್ನಾಮವಾಯಿತು. ನಿಜವಾಗಿಯೂ ಲಂಕೇಶ್ವರನ ಹಾಸಿಗೆಯನ್ನು ಹಳಿದು ಹೇಸುವ ಅಂಗನೆಯರು ನರ ಸುರ ಅಸುರರ ಲೋಕದಲ್ಲಿ ಇಲ್ಲ ಎಂಬುದನ್ನು ಕೇಳಿಸಿಕೊ ಮಾರೀಚ!

'ಅದಿರಲಿ, ರಾಮನನ್ನು ನಿಸ್ತೇಜನನ್ನಾಗಿ ಮಾಡಲು ಸೀತೆಯನ್ನು ತರುವೆನೆನ್ನುವುದು ರಾಜಕೀಯ; ಧರ್ಮದ ವಿಷಯವಲ್ಲ. ಇದಕ್ಕಾಗಿ ನೀನು ನನಗೆ ಸಹಾಯ ಮಾಡಬೇಕು. ಪ್ರಜೆಯ ಕರ್ತವ್ಯವನ್ನು ಬಿಟ್ಟು ಮೀರಿ ನಡೆಯದಿರು!. ಬೇಗ ಚಿನ್ನದ ಜಿಂಕೆಯ ರೂಪವನ್ನು ತಾಳು. ಜನಕ ಪುತ್ರಿಯ ಮುಂದೆ ಸುಳಿದಾಡು. ಅವಳ ಮನಸ್ಸನ್ನು ಸೆಳೆದು ಇನಿಯನನ್ನು ಹಿಡಿದು ಕೊಡಲು ಬೇಡುವಂತೆ ಮಾಡು. ದಾಶರಥಿಯು ಬೆನ್ನಟ್ಟಿ ಬರಲು ದೂರದೂರಕ್ಕೆ ಅವನನ್ನು ಸೆಳೆದು ಕೊಂಡೊಯ್ಯಿ. ದುಃಖಕ್ಕೆ ಈಡಾದ ಸೌಮಿತ್ರಿಯನ್ನು ದೀನ ರವದಿಂದ ಕೂಗು. ಬೆಚ್ಚಿದ ಅವನು ರಾಮನಿರುವ ಕಡೆಗೆ ಓಡಿ ಬರುವನು. ಆಗ ನಾನು ಸೀತೆಯನ್ನು ಕದ್ದೊಯ್ಯುತ್ತೇನೆ. ನನ್ನ ಈ ಕರ್ತವ್ಯವನ್ನು ವ್ಯರ್ಥವೆಂದು ತಿಳಿಯಬೇಡ. ನಿನಗೆ ಖರನ ರಾಜ್ಯವನ್ನು ಕೊಟ್ಟು ಅಭಿಷೇಕವನ್ನು ಮಾಡುತ್ತೇನೆ!'

ರಾಮನೊ ನೀನೊ ಸಂಹರಿಸಲೆನ್ನಾಯ್ಕೆ ರಾಮಬಾಣಂ !

'ಯಾವಾಗಲೂ ನಿನಗೆ ನಿನ್ನಾಸೆಯೇ ತಿಳಿಯುವ ಶಕ್ತಿ. ನಿನಗೆ ಇತರೆ ಕಾರ್ಯ ಸಾಧಿಸುವ ಯುಕ್ತಿಯೇ ಕಾಣದು. ನೀನು ಭ್ರಾಂತಿಯಿಂದ ಆತ್ಮವನ್ನು ವಂಚಿಸುತ್ತಿರುವೆ. ಕಾಮಾಸಕ್ತನು ಹೀಗೆ ತರ್ಕ ಶ್ರೇಷ್ಠನಾಗಿರುವುದು ಖಂಡಿತ. ಹಿತವಾದುದನ್ನು ಹೇಳುತ್ತೇನೆ

ಕೇಳು. ತಲೆ ಬಲಿತಿದೆಯೆಂದು ಬಂಡೆಗೆ ಬಡಿಯುವಂತೆ – ನೀನು ರಾಘವನ ಸತಿಯ ಶಾಪದ ಕಡೆಗೆ; ಆತಂಕ ಯಮ ಭಯಂಕರ ಕೋದಂಡರಾಮನ ಕೋಪ ಪಾಪಕೂಪದ ಕಡೆಗೆ ನುಗ್ಗುತ್ತಿರುವೆ.!

'ಎಲವೋ ಲಂಕೇಶ, ಲಂಕೆಯ ವಿನಾಶಕ್ಕೆ ಮೊದಲ ಕಿಡಿಯನ್ನು ಇಡಬೇಡ! ನನಗೆ ರಾಮಬಾಣಕ್ಕೆ ಸಿಕ್ಕಿ ಸಾಯಲು ಆಸೆಯಿಲ್ಲ. ನೀನು ಹೇಳಿದುದನ್ನು ಮಾಡಿ ರಾಕ್ಷಸ ವಂಶದ ಕೊಲೆಗೆ ಸಹಾಯಕನಾಗುವುದಿಲ್ಲ. ಇಲ್ಲಿಂದಲೇ ದೂರದಿಂದ ಪಟ್ಟಾಭಿಷೇಕಕ್ಕೆ ಕೈ ಮುಗಿಯುತ್ತೇನೆ. ದನುಜೇಂದ್ರನೇ, ನಾನು ತೃಪ್ತನಾಗಿದ್ದೇನೆ. ನನಗೆ ನಿನ್ನ ಕೃಪೆ ಬೇಡ'.

ಆ ನುಡಿ ಕೇಳಿ ರಾಕ್ಷಸೇಂದ್ರನಿಗೆ ಕೋಪಾಗ್ನಿಯ ತಾಪ ಜ್ವಾಲೆಯಿಂದ ಮುಖ ವಿಕೃತಿಗೊಂಡು ಭಯಂಕರವಾಯಿತು. ಸುಯ್, ಸುಯ್ ಎಂದು ನಿಟ್ಟುಸಿರು ಬಿಡುತ್ತ,

'ನಿನಗೆ ರಾಮನ ಬಾಣದಿಂದಾದರೂ ಬದುಕಿ ಬರುವ ದೂರದ ಆಸೆಯಿದೆ. ನಾನು ಹೇಳಿದ ಹಾಗೆ ಕಾರ್ಯವನ್ನು ನಿರ್ವಹಿಸದಿದ್ದರೆ ನೀನು ಬದುಕುವ ಆಸೆಯನ್ನು ಬಿಟ್ಟು ಬಿಡು!'

ಎಂದು ಹೇಳುತ್ತ ಮಾರೀಚನ ಉಸಿರೇ ಜಾರಿ ಹೊಮ್ಮಿದಂತೆ, ಉರಿದೆದ್ದು ಪರ್ಣಕುಟಿಯಿಂದ ಹೊರ ಹೋದನು. ಮಾರೀಚನು ಹೋದ ಉಸಿರನ್ನು ಮರಳಿ ಬರುವಂತೆ ಮಾಡಲು ಎದ್ದು ಓಡಿದನು. ಚಕ್ರವರ್ತಿಯನ್ನು ಕೈ ಹಿಡಿದು ಹೀಗೆ ಬೇಡಿಕೊಂಡನು :

'ಈ ಕೈಯನ್ನು ಕಾಲೆಂದು ತಿಳಿಯಯ್ಯ. ನಿನ್ನ ಆಜ್ಞೆಯನ್ನು ನಿರ್ವಹಿಸುತ್ತೇನೆ. ನನಗೆ ಹೇಗಿದ್ದರೂ ಸಾವು ದಿಟವಾಗಿದೆ. ರಾಮನೋ ನೀನೋ ಸಂಹರಿಸುವುದಾದರೆ, ನನ್ನ ಆಯ್ಕೆ ರಾಮಬಾಣವಾಗಿದೆ! ನೀನು ಹೇಳಿದಂತೆ ನಡೆದು ಕೊಳ್ಳುವುದೇ ನಿನಗೂ ಮತ್ತು ನನಗೂ ಉತ್ತಮ. ತಾಯಿಯನ್ನು ಕೊಂದವನಿಂದ ಸತ್ತರೆ ತಾಯಿಗೆ ಸೇವೆ ಸಲ್ಲಿಸಿದಂತಾಯಿತು. ಅಲ್ಲದೇ, ಅರಸನು ಹೇಳಿದ ಕಾರ್ಯ ನಿರ್ವಹಿಸಿ ಸತ್ತ ಕೀರ್ತಿ ಪಡೆದಂತಾಯಿತು. ನಿನ್ನಿಂದ ನನಗೆ ಮುಕ್ತಿ. ನನ್ನ ಸಾವು ನಿನ್ನ ಆತ್ಮದ ಉದ್ಧಾರಕ್ಕೆ ಮೊತ್ತ ಮೊದಲ ಯಜ್ಞ ಬಲಿಯಾಗಲಿ!'

ಅದನ್ನು ಕೇಳಿ ಲಂಕೇಶ್ವರನು ತನ್ನ ಪಾಪ–ಪುಣ್ಯರೂಪವಾದ ಕರ್ಮಬಂಧವು ಕ್ಷಯಿಸುವುದಕ್ಕೆ ಕಾರಣವಾದುದನ್ನು ಅಪ್ಪಿಕೊಳ್ಳುವಂತೆ, ಪರಮ ಮಾಯಾ ನಿಪುಣನು, ಕಾಮರೂಪಿಯು ಆದ ಮಾವ ಮಾರೀಚನನ್ನು ಅಪ್ಪಿಕೊಂಡು ಸಂತೋಷಪಟ್ಟನು. ಅವನನ್ನು ಮೃತ್ಯುರಥಕ್ಕೆ ಕರೆದೊಯ್ಯುವಂತೆ ಪುಷ್ಪಕ ವಿಮಾನಕ್ಕೆ ಕರೆದೊಯ್ದನು. ಪ್ರಾಣವು ಮೇಲೆ ಹಾರುವಂತೆ ಆ ವಿಮಾನವು ಶ್ರೀರಾಮನ ಆಶ್ರಮಕ್ಕೆ ಹಾರಿತು.

❑



~~~~~~~~~~~~~~~~~~~~~~ ಸಂಚಿಕೆ – ೨ ~~~~~~~~~~~~~~~~~~~~~~

ಓ. ಲಕ್ಷ್ಮಣಾ !

ಕಟ್ಟಿದಳು ಬುತ್ತಿಯಂ ಸೀತೆ

ಸೀತಾರಮಣಿಯು ಪಂಚವಟಿಗೆ ಬಂದು ಪರ್ಣಕುಟಿಯನ್ನು ಕಟ್ಟುವಾಗ ಒಂದು ಕಾಡಿನ ಬಳ್ಳಿಯನ್ನು ತಂದು ನಟ್ಟಿದ್ದಳು. ಅದನ್ನು ಕಡುಪ್ರೀತಿಯಿಂದ ಪೋಷಿಸಿ ನೋಡಿಕೊಳ್ಳುತ್ತಿದ್ದಳು. ಆ ಅಕ್ಕರೆಗೆ ಅದು ಉಬ್ಬಿ ಹಬ್ಬುತ್ತ ಎಲೆಮನೆಯನ್ನು ತಬ್ಬಿದಂತೆ ಎಲ್ಲ ಕಡೆಯಿಂದ ಮುತ್ತಿ ಮುತ್ತು ಒತ್ತಿತ್ತು. ಅದರಲ್ಲಿ ಅರಳಿದ ಹೂಗಳ ಹೊದರಿನ ಎದೆಯಲ್ಲಿ ಚುಕ್ಕಿಯಂತಹ ಹೂ ಹಕ್ಕಿ ಉಲಿಯ ತೊಡಗಿತು:
~~~~~~~~~~~~~~~~~~~~~~

'ಟುವ್ವಿ ಮಾಗಿಗೆ ಟುವ್ವಿ! ಟುವ್ವಿ ಸುಗ್ಗಿಗೆ ಟುವ್ವಿ!'

ಮಂಜು ಹಿಂಜರಿದಿತ್ತು. ಮಾಗಿಯ ಚಳಿಯ ಉಸಿರಿಗೆ ತಾನು ಇಲ್ಲವಾಗುವ ದುಃಖದಿಂದ ನಿಟ್ಟುಸಿರು ಬಿಡುತ್ತದೆಯೋ ಎಂಬಂತೆ ಬಿಸಿಲ ತಾಪ ಕಾಣಿಸಿಕೊಂಡಿತು. ವಸಂತನ ಆವಿರ್ಭಾವವು ಮರದ ಬೇರಿನಿಂದ ಕೊಂಬೆಗೆ ಏರಿತೋ ಎಂಬಂತೆ ಅದರ ಕೊನೆಗಳಲ್ಲಿ ಹೂಗಳು ಪಲ್ಲವಿಸಿದವು. ಗಗನ ನೀಲಿಮೆಯ ನುಣ್ಣನೆ ಜಗುಲಿಯಲ್ಲಿ ನೀರಿನಿಂದ ಕೂಡಿದ ಬೆಳ್ಳಿ ಉಣ್ಣೆಯ ಹಗುರ ಮುಗಿಲು ಗುಂಪುಗೂಡಿತ್ತು.

ಕೋಗಿಲೆಯ ಕೊರಳ ತೂರ್ಯವು ಮರುದನಿಯನ್ನು ಏರಿ ಅಡವಿಯ ನಿದ್ದೆಯನ್ನು ಎಚ್ಚರಿಸುತ್ತ ಅಲ್ಲಿಂದ ಇನ್ನೊಂದು ಅಡವಿಯ ತೊಟ್ಟಿಲ ಕಡೆಗೆ ಸಾಗಿತ್ತು. ಮರಗಬ್ಬದಿಂದ ತಾರುಣ್ಯದ ತಾಯಿಯ ತೊಡೆಗೆ ಇಳಿದ ಮೊಗ್ಗಿನ ಹಸುಳೆ ನಿದ್ದೆಯು ಹೂವಿನ ಬಿಳಿನಗೆ ಬೀರಿ ಕಣ್ಣು ತೆರೆಯಿತು. ಅದರ ಹೊಸ ಕಂಪು ದುಂಬಿಯ ಮೊರೆತವನ್ನು ಹತ್ತಿರಕ್ಕೆ ಕರೆಯಿತು. ಸಿಪಿಲೆ ಹಕ್ಕಿಯು ತನ್ನ ಉದ್ದವಾದ ತೋಕೆಯ ಗರಿ ಪುಕ್ಕಗಳನ್ನು ಕುಣಿ ಕುಣಿಸಿ ಸಿಳ್ಳೆ ಹಾಕಿತು. ಜಿಂಕೆಗಳಿಗೆ ನದಿಯಲ್ಲಿ ಮುಳುಗಿ ಏಳುವ ಸ್ನಾನ ಸುಖಕರವಾಯಿತು. ಮಾಗಿ ಹೋಗಿ ಹಕ್ಕಿ ಹೂಗಳ ಹಿಗ್ಗಿನ ಸುಗ್ಗಿ ಮೈದೋರಿತು.

ರಾಮ ಲಕ್ಷ್ಮಣ ಸೀತೆಯರು ಅಯೋಧ್ಯೆಗೆ ಹಿಂತಿರುಗಲು ನಿಶ್ಚಯಿಸಿದರು. ತಂಗಾಳಿಯು ಕಮ್ಮಗೆ ಕೇದಗೆಯ ಹೊಂದೂಳಿಯನ್ನು ದಿಕ್ಕು ದಿಕ್ಕಿಗೆ ಚೆಲ್ಲಿ ಬಿದಿರು ಮೆಳೆಯ ಗರಿ ಚವರಿಯನ್ನು ಬೀಸಿತು. ಪಿಕಳಾರ ಕಾಜಾಣ ಕಾಮಳ್ಳಿ ಗಿಳಿ ಗುಂಪುಗಳ ಕೊರಳು ಕೊಂಡಾಡಿತು. ಅವರು ಹಗಲಿನ ಒಡೆಯನ ಉದಯದೊಡನೆ ಎದ್ದು ಗೋದಾವರಿಯಲ್ಲಿ ಸ್ನಾನ ಮಾಡಿದರು. ವಂಶಾಧಿದೇವ ಅಪ್ರತಿಮ ಸೂರ್ಯದೇವನಿಗೆ ಅರ್ಘ್ಯವನ್ನು ಅರ್ಪಿಸಿದರು. ಪರಿಚಯದ ವನಸ್ಥಲಗಳನ್ನು, ಮರಲುದಿಣ್ಣೆಯನ್ನು, ಜಲಸ್ಥಳಗಳನ್ನು ಮತ್ತು ಪರ್ಣಶಾಲೆಗೆ ಬಂದ ತಪಸ್ವಿಗಳನ್ನು ಬೀಳ್ಕೊಂಡರು. ಪಕ್ಷಿ ಶ್ರೇಷ್ಠನಾದ ಜಟಾಯುಪುತ್ರನಿಗೆ ತಿಳಿಸಿದರು.

ಪಂಚವಟಿ ಅರಣ್ಯದಲ್ಲಿ ಸಂಗ್ರಹಿಸಿದ್ದ ಹಲ್ಲು, ಹಂದಿಯ ಕೋರೆ, ಆನೆಯದಂತ, ಉಗುರುಗಳು, ಚರ್ಮಗಳು, ಕಾಡಿನ ಜೀವ ವಿಶೇಷ ವಸ್ತುಗಳನ್ನು, ಮೂವರು ತಮತಮಗೆ ಬೇಕಾದುದನ್ನು ಆಸಕ್ತಿಯಿಂದ ಜೋಡಿಸಿ ಕಟ್ಟಿಕೊಂಡರು.

ಸೀತೆ ಬುತ್ತಿಯನ್ನು ಕಟ್ಟಿದಳು. ಅನಂತರ, ತಲೆಕೂದಲನ್ನು ಬಾಚಿ ಹೆರಳಿಕ್ಕಿಕೊಂಡಳು. ಹೂಮುಡಿಯುವ ಆಸೆಯಿಂದ ಹೂಬಿಸಿಲೆಂದು ಎಲೆಮನೆಯ ಮುಳ್ಳುಬೇಲಿಯನ್ನು ದಾಟಿದಳು. ಆಗ ಅಲ್ಲಿ ಬೇಲಿಯ ಮೇಲೆ ಹರಡಿದ್ದ ಒಂದು ಒದ್ದೆ ಮಡಿಯನ್ನು ನೋಡಿ ಸೌಮಿತ್ರಿಯನ್ನು ಕೂಗಿ ಹೇಳಿದಳು:

'ಈ ನಾರುಡೆ ಯಾರದು? ಹೋಗುವ ಹುರುಪಿನಲ್ಲಿ ಇದನ್ನು ಮರೆತಿರೇನು?'

ಹೊರಗೆ ತಲೆ ಇಣುಕಿ ನೋಡಿ, ಊರ್ಮಿಳೇಶನು ಉತ್ತರಿಸಿದನು:

'ಅಯ್ಯೋ ಹೇಗೆ ಮರೆಯುವೆನು? ಹರಿದಿದ್ದರೂ ಇದು ಮುನಿ ಕೊಟ್ಟಿದ್ದಲ್ಲವೆ? ಖರನನ್ನು ಕೊಲ್ಲುವಾಗ ಇದನ್ನೇ ಮೈಜೋಡು ಆಗಿಸಿಕೊಂಡಿದ್ದೆ. ಇದು ಶೂರ್ಪನಖಿಯಿಂದ ಪೊರೆದಿದೆ. ಇದನ್ನು ಬನದ ಬಾಳಿನ ಶುಚಿ ಕಾಣಿಕೆಯಾಗಿ ನನ್ನ ತಪಸ್ವಿನಿಗೆ ನೀಡುವೆನು. ಅತ್ತಿಗೆ ಒದ್ದೆ ಒಣಗಿದೆಯೆ?'

'ಏನು ಜಾಣನಯ್ಯ ನೀನು? ತಣ್ಣಗಿರುವ ಕಡೆ ಹರಡಿದರೆ ಬೇಗ ಒಣಗುತ್ತದೆಯೆ?

'ಆಗ ಅಲ್ಲಿ ಬಿಸಿಲಿತ್ತು.'

'ಇದೇನಯ್ಯ ಇಂದು ಆಕಾಶದ ನದಿಯಲ್ಲಿ ಎಂದಿಲ್ಲದ ಈ ಮೋಡ?'

ಎಂದು ಸೀತೆ ಕತ್ತೆತ್ತಿ ನೋಡಿದ ಕಡೆ ಲಕ್ಷ್ಮಣನು ನೋಡಿದನು. ಮುಗಿಲಿನಲ್ಲಿ ಎಲ್ಲಿಯೂ ಸುಳಿಯದೆ ಆಗಸದ ನೀಲಿ ಕಡಲಿನಲ್ಲಿ ಏಕಾಕಿ ಮೋಡವು ನೇರವಾಗಿ ಸೂರ್ಯನನ್ನು ಮುಚ್ಚಿ ನಿಂತಿದೆ. ಪಂಚವಟಿ ಧರೆಯೆಲ್ಲವನ್ನು ಅದರ ದುಶ್ಯಕುನ ಸೂಚಕ ಬೃಹಚ್ಛಾಯೆ ಆವರಿಸಿರುವಾಗ ರಾಕ್ಷಸನ ರಕ್ತದಿಂದ ನೆನೆದ ನಾರುಮಡಿಯನ್ನು ಆರಿಸಲು ಬಿಸಿಲಿನ ಝಳವೆಲ್ಲಿದೆ? ಎಂದುಕೊಂಡು ಲಕ್ಷ್ಮಣನು ಪರ್ಣಕುಟಿಯ ಒಳಗೆ ಹೋದನು. ಸೀತೆಯು ಅಲ್ಲಿಯೇ ಹೂ ಆರಿಸುತ್ತ ತಿರುಗಾಡುತ್ತಿದ್ದಳು. ಮೇಘದ ಮುಸುಕನ್ನು ಉಂಟು ಮಾಡಿದ ರಾವಣರಥವು ನಿಶ್ಚಲವಾಗಿ–ಕೆರೆಯ ಮೇಲುಗಡೆ ನಭದಿಂದ ಹಾರಿ ಮೀನಿಗೆ ಎರಗುವ ಮುನ್ನ ನಿಲ್ಲುವ ಜಲಚರ ಪಕ್ಷಿ (ಕುರರಿ) ಯಂತೆ ನಿಂತಿತು.

ರಾಮಸತಿಯಲಗೊರ್ಯ್ಯುತಿರ್ದದಡವಿಗಿಳಿದನಾ ಮಾರೀಚನುಪಮಾತೀತ ಕಾಮರೂಪಿ.

ಮೇಘರೂಪವನ್ನು ಹೊತ್ತು ನಿಂತಿದ್ದ ಪುಷ್ಪಕದ ಆ ನೆರಳೇ ಸೇತುವೆಯಾಗಲು, ಮಳೆಬಿಲ್ಲು ಶರೀರವಾಗಲು ಹೋಲಿಕೆಗೆ ಸಿಗದ ಕಾಮರೂಪಿ ಮಾರೀಚನು, ರಾಮಸತಿಯು ಹೂ ಕೊಯ್ಯುತ್ತಿದ್ದ ಅಡವಿಗೆ ಇಳಿದನು. ಆ ಅದ್ಭುತವನ್ನು ಏನೆಂದು ಹೇಳುವುದು?

ನೆರಳಿನಿಂದ ರಚಿತವಾದ ರಾತ್ರಿಯು ತಾನು ಚಂದ್ರೋದಯದಿಂದ ಪ್ರಕಾಶಮಾನವಾದಂತೆ ತಟ್ಟನೆ ವನಧಾತ್ರಿಯು ಕಿಡಿಗೊಂಡಿತು. ಆಶ್ಚರ್ಯಕ್ಕೊಳಗಾದ ಧರಾಸುತೆಯು ಕಣ್ಣರಳಿಸಿ ನೋಡುತ್ತಿದ್ದಳು. ಆಗ ಲೋಕ ಲಾವಣ್ಯವೇ ಆಕಾರ ಪಡೆಯಿತೋ ಎಂಬಂತೆ ಮರಗಳ ನಡುವೆ ಒಂದು ಜಿಂಕೆ ರೂಪದ ಕನಕ ಕಾಂತಿ ಸುಳಿದಾಡಿತು. ಅಮಾವಾಸ್ಯೆಯ ಕತ್ತಲನ್ನು ಬೆನ್ನಿಗೆ, ಬೆಳದಿಂಗಳನ್ನು ಹೊಟ್ಟೆಗೆ ಹೊದ್ದ ಚರ್ಮದಿಂದ ಕೂಡಿದ ಚಂದ್ರನ ಮನೆಯ ಜಿಂಕೆಯೇ ದಟ್ಟ ಕಾಡಿನಲ್ಲಿ ದಾರಿ ತಪ್ಪುತ್ತಾ ಅಲೆದು ಬರುತ್ತಿದ್ದಂತಿತ್ತು. ಧರಾತ್ಮಜೆಯ ಮುಖವೇ ತನ್ನ ವಾಸಸ್ಥಾನವೆಂದು ಆ ಜಿಂಕೆ

ತಿಳಿಯಿತು. ಅದು ಸಂಶಯದಿಂದ ಅವಳ ಹಿಂದೆ ಮುಂದೆ ಸುಳಿದಾಡಿ ಹೊಳೆದು ಓಲಾಡಿತು. ಕುರುಡುಗತ್ತಲೆಯ ಕಲ್ಲು ಮೈಗೆ ಕಿಡಿಕಿಡಿಯಾದ ಪುಳಕವನ್ನುಂಟು ಮಾಡುವ ಮಿಂಚು ಹುಳುಗಳಂತೆ ಅದರ ಚರ್ಮವನ್ನು ಹೊಳೆಯುವ ಕೋಟಿ ಕೋಟಿ ಬಂಗಾರದ ಬಿಂದುಗಳು ಸಿಂಗರಿಸಿದ್ದವು.

ಮಾಗಿಗೆ ಎಲೆಗಳು ಉದುರಿ ಬೋಳಾಗಿ ಬರಲುವೋದ ಬೂರುಗ ಮರವು ಕೋಡು ಕೋಡಿನಲ್ಲಿಯ ಕವಲುಗಳಿಂದ ಬೆಟ್ಟದ ತಲೆಗೆ ಕೊಂಬು ಮೂಡಿದ ರೀತಿ ಕಾಣುತ್ತದೆ. ಹಾಗೆ ಆ ಜಿಂಕೆಯ ಹೇಮರತ್ನ ಪ್ರಭೆಯ ಸುಂದರವಾದ ಎರಡು ಕೊಂಬುಗಳು ಎತ್ತರವಾಗಿ ಸೊಕ್ಕಿ – ಆ ಮರಕ್ಕೆ ಪ್ರತಿಸ್ಪರ್ಧಿಗಳು ತಾವು ಎಂಬಂತೆ ಬೀಗುತ್ತ ನಿಂತಿದ್ದವು.

ಅದು ಕಿವಿಗಳನ್ನು ಕುಣಿಸುತ್ತ, ಕಣ್ಣಿನ ಹೂಗಳನ್ನು ಮಿಂಚಿಸುತ್ತ, ಹೊಳೆಯುವ ಗೊರಸುಗಳೊಡನೆ ಮೊಳಕಾಲು ಕಣಕಾಲುಗಳನ್ನು ತೆಗೆತೆಗೆದಿಡುತ್ತ ನಲಿದು ನರ್ತಿಸುತ್ತಿತ್ತು. ಕೊರಳು ಕೊಂಕಿಸುತ್ತ ಅಕ್ಷಿ ಯಕ್ಷಿಣಿಯ ಬಿಂಕದ ಆಕರ್ಷಣೆಯಿಂದ ಕಾಡೆಲ್ಲವನ್ನು ಮೋಹಪರವಾಗಿಸುತ್ತ, ಜಿಂಕೆಯಂತೆ ವೇಷವನ್ನು ಹೊಂದಿದ ಮಾರೀಚನು ತನ್ನ ಪಾತ್ರವನ್ನು ಅಭಿನಯಿಸಿದನು. ನೋಡುತ್ತಿರುವ ಜಾನಕಿ ಮತ್ತು ಲಂಕೇಶ್ವರರಿಬ್ಬರ ನೇತ್ರಗಳನ್ನು ಸೂರೆಗೊಂಡನು.

ಬಂಗಾರ ಶರೀರದ ಶೃಂಗಿ ಜಿಂಕೆಯು ವಸಂತ ಕಾಂತಾರದ ಕ್ಷೇತ್ರವನ್ನು ಶೃಂಗಾರಗೊಳಿಸುತ್ತಿರಲು ಅದಕ್ಕೆ ದಶರಥನ ಸುತನ ಕೋಮಲಾಂಗಿ ಅಯ್ಯೊ ಬಲಿಯಾದಳೆ! ನೋಡುತ್ತಾ ನೋಡುತ್ತಾ ರಾವಣನ ಬಾಳಿನ ಲಕ್ಷ್ಯ ಮೈಥಿಲಿಯ ಬೈತಲೆಯ ಹಾದಿಯಲ್ಲಿ ಕಂಗೆಟ್ಟಂತಾಯಿತೆ!

ಅದು ಹತ್ತಿರಕ್ಕೆ ಬಂದಿತು. ಮತ್ತೆ ದೂರಕ್ಕೆ ಓಡಿತು. ಮೋರೆಯನ್ನು ನೆಲಕ್ಕೆ ಚಾಚಿ ಹಸುರನ್ನು ಒಮ್ಮೆ ಮೇಯಿತು. ಹಿಂದಿನ ಕಾಲುಗಳಿಂದ ನಿಂತು ಮುಂಗಾಲುಗಳಿಂದ ಏರಿ, ಕವಲೊಡೆದ ಕೊಂಬುಗಳಿಂದ ಬೆನ್ನಿನ ಎರಡು ಕಡೆಯ ಪಕ್ಕೆಗಳನ್ನು ತಿವಿದು ಉಜ್ಜಿಕೊಳ್ಳುವಾಗ ಚೆಲುವಾಗಿ ಕಾಣಿಸುತ್ತಿತ್ತು. ಅದು ಮತ್ತೆ ಮುಖವೆತ್ತಿ ಚೆನ್ನಾಲಗೆಯನ್ನು ಚಾಚಿ ಮರದ ನಳನಳಿಸುವ ಹೊಸ ಚಿಗುರನ್ನು ಮೇಯಿತು. ಕಾಮನ ಬಿಲ್ಲಿನಂತಹ ರಮಣೀಯವಾದ ಪುಟ್ಟ ಬಾಲವನ್ನು ಕುಣಿಸಿತು. ಅದನ್ನು ನೋಡುತ್ತಾ, ವಿಸ್ಮಯದಿಂದ ಚೆನ್ನಾಗಿ ಅರಳಿದ ರಾಮನ ಪತ್ನಿಯ ಸುಂದರ ಮುಖದಲ್ಲಿ ಮಾದಕ ನೋಟ ಹೊಮ್ಮಿತು.

ಸೀತೆಯಲ್ಲಿ ಪ್ರಲೋಭನೆಯನ್ನು ಹೆಚ್ಚಿಸುವ ಉದ್ದೇಶದಿಂದ ಅದು ಒಮ್ಮೆ ಕಕ್ಕೆ ಗೊಂಚಲಿನ ಅಡಿಯಲ್ಲಿ ಮೈ ನೆಕ್ಕಿಕೊಳ್ಳುತ್ತ ಕಾಣಿಸಿತು. ಇನ್ನೊಮ್ಮೆ ಕಣ್ಮರೆಯಾಗಿ ನೀರೆ ಸೀತೆಯ ಬಯಕೆ ಬಾಯಾರಿ ಕಳಕಳಿಸುವಂತೆ ಮಾಡಿತು. ಹೂಗಳ ಬಳ್ಳಿಯನ್ನು ಹೊಕ್ಕು ಅದು ಮತ್ತೆ ಮೂಡಿ ಬಂದಿತು ಎಂಬಂತೆ ಕಾಣಿಸಿಕೊಂಡಿತು. ಕೊಂಬುಗಳ

ತುದಿಗೆ ಉಗನಿಯ ಬಳ್ಳಿ ಮಾಲೆಯನ್ನು ಮುಡಿದು ಜೋಲಾಡಿತು. ಅದನ್ನು ಕಂಡು ರಸರುಚಿ ಶೀಲೆ, ಸೌಂದರ್ಯ ಲಾವಣ್ಯಲೋಲೆ ಬಾಲೆ ಮರುಳಾದಳು. ಶ್ರೇಷ್ಠ ಗಮಕಿಯ ವೇಣುಗಾನಕ್ಕೆ ಕಲಾ ರಮಣಿಯು ವರ್ಣಲಯ ರಾಗಮಯ, ನವರಸಾವೇಶದಿಂದ ತನ್ನ ಕಾವ್ಯ ವೇದಿಕೆಯನ್ನು ಏರಿ ನರ್ತಿಸುವಂತೆ ಚಿನ್ನದ ಜಿಂಕೆ ನಲಿದಾಡಿತು. ಅದರ ಮೋಹದ ಓಕುಳಿಯಲ್ಲಿ ಸೀತೆಯ ಮನಸ್ಸು ಮುಳುಗಿ ಹೋಯಿತು.

ಕಪಟವನ್ನು ತಿಳಿಯದ ಆ ದೇವಿ ಸಾಧು ಮೃಗವನ್ನು ಹಿಡಿಯಲು ಆಸೆಪಟ್ಟು ಮುಂದುವರಿಯಲು ಅದು ಅಲ್ಲಲ್ಲಿ ಆಡುತ್ತ ವಂಚಿಸಿತು. ನಿಧಾನ ಮಾಡಿದರೆ ನುಸುಳಿ ಓಡುವುದೆಂದು ಬೆದರಿ ಕಾಡು ಕಂಪಿಸುವಂತೆ ಕೂಗಿ ಕರೆದಳು: 'ಓ ಲಕ್ಷ್ಮಣಾ, ಓ ಬಾ! ಬಿಲ್ಲು ಬಾಣವನ್ನು ತೆಗೆದುಕೊಂಡು ಬಾ; ನೋಡು ಆ ಹುಲ್ಲೆಯನ್ನು ನೋಡು! ಹಿಡಿಯ ಬಾ! ಬಾ, ಬೇಗ, ಓ ಲಕ್ಷ್ಮಣಾ!' ಅದನ್ನು ಕೇಳಿ ಮೈಮೇಲೆ ಕುದಿ ನೀರು ಎರಚಿದಂತಾಗಲು ರಾಮಲಕ್ಷ್ಮಣರು ಶರಧನುಗಳನ್ನು ಸೆಳೆದುಕೊಂಡು ದುಡುಕುತ್ತ ಎದ್ದು ಬಿದ್ದು ಓಡಿ ಬಂದರು.

ದೇವತೆಗಳ ಧೀರ ಶರೀರದ ಸುರಚಾಪ ಸಮನಾದ ಆ ಧನುರ್ಧಾರಿ ವೈರಿಗಳನ್ನು ರಾಕ್ಷಸೇಂದ್ರನು ಕಂಡನು. ಬಲಾಢ್ಯ ಶಕ್ತಿಯುತ ಬಾಹುಗಳ ಬಲಶಾಲಿಯಾದ ಅವನಿಗೆ ಮೈ ಪುಲಕಿಸಿತು. ಮೆಚ್ಚಿದನು; ಬೆಚ್ಚಿದನು; ಕೋಪಜ್ವಾಲೆಯಿಂದ ತುಟಿ ಕಚ್ಚಿದನು. ತರತರದ ಭಾವ ಜಟಿಲತೆಯ ಜೇಡಜಾಲದ ಕುಟಿಲದಲ್ಲಿ ಜೀವಹುಳು ಸಿಲುಕಿದಂತಾದನು!

'ಎಲೆ ತಂಗಿ, ಚಂದ್ರನಖಿಯೆ ನೀನು ಹೇಳಿದುದು ನಿಜ' ಎಂದು ತನ್ನೊಳಗೆ ತಾನು ಹೇಳಿಕೊಳ್ಳುತ್ತ, ನೆಲದ ಕಡೆಯ ಮಾತಿನ ಔತಣಕ್ಕೆ ಕಿವಿಗೊಟ್ಟನು.

ತನ್ನ ಅತ್ತಿಗೆಯ ಕೋರಿಕೆಯನ್ನು ಕೇಳಿದ ಊರ್ಮಿಳೇಶನು ನಗುನಗುತ್ತಾ ಉತ್ತರಿಸಿದನು:

'ಅತ್ತಿಗೆ, ಈ ಕಾಡಿನ ಮೃಗದ ಕಾಂಚನದ ಮೋಸಕ್ಕೆ ಬಲಿಯಾಗುವರೆ? ಕೃತಕತೆಯನ್ನು ಕಾಣುತ್ತಿಲ್ಲವೆ? ಚಿನ್ನದಿಂದ ರಚಿತವಾಗಿ ರತ್ನಖಚಿತವಾದ ಈ ಜಿಂಕೆಯ ರೀತಿ ಎಲ್ಲಿಯಾದರೂ ಸಹಜ ಸೃಷ್ಟಿಯಲ್ಲಿ ಸಾಧ್ಯವೆ? ಸಂಧ್ಯಾಶಿಲ್ಪಿ ಬಾನಿನ ಪಟದಲ್ಲಿ ಕಲ್ಪಿಸುವ ಸುಂದರ ಮೋಡಗಳ ಕೃತಿಯ ಗಂಧರ್ವ ನಗರವೆನ್ನುವಂತೆ ಕ್ಷಣಕ್ಷಣಕ್ಕೆ ಸಂಚಲಿಸುವ ಬದಲಾಗುವ ಈ ಮೃಗವು ದಿಟವಾಗಿ ಮಾರೀಚನ ಮಾಯೆ. ಆ ಇಷ್ಟ ಬಂದ ರೂಪವನ್ನು ಧರಿಸಬಲ್ಲ ಕಾಮರೂಪಿ ವಂಚಕವೀರ ರಾಕ್ಷಸನ ಕೂಟಯಂತ್ರವಾದ ಬಲೆಗೆ ಸಿಲುಕಿ ಎಷ್ಟೋ ಜನ ಆರ್ಯರು ಬಲಿಯಾಗಿ ಹೋಗಿದ್ದಾರೆ.

'ಅದೋ ನೋಡಿ. ನಿಜವಾದ ಜಿಂಕೆಗಳ ಗುಂಪು ಅದರ ಬಳಿಗೆ ಹೋಗಲು ಹೇಗೆ ಅಂಜಿ ಹಿಂಜರಿದಿವೆ. ಅವು ಚತುರ ಮೂಗಾಳಿಗಳು. ಮೂಗಿನಿಂದ ವಾಸನೆಯನ್ನು ತಿಳಿದು ಅಲ್ಲಿ ಬೆಚ್ಚಿ ಬಿದ್ದು ಗಾಬರಿಯಾಗಿ ಸಾಲಾಗಿ ನಿಂತಿವೆ!'

ಮೈದುನನು ಹಾಗೆ ನುಡಿಯಲು ಅದಕ್ಕೆ ಬೇಸರ ಪಟ್ಟು ಕೊಂಡ ಸೀತೆ ಕಾಂತನ ಕಡೆಗೆ ತಿರುಗಿದಳು. ಮರುಗಿದಳು, ಕಾಡಿದಳು, ಬೇಡಿದಳು. ಮಾರುತ್ತರವನ್ನು ಇಚ್ಛಿಸದ ಅವಳು ಪತಿ ರಾಮಚಂದ್ರನ ಮನಸ್ಸು ತನ್ನ ಮನಸ್ಸನ್ನು ಅಪ್ಪುವಂತೆ ಪ್ರೀತಿ ಸಂಭ್ರಮಗಳಿಂದ ನೋಡಿದಳು.

ನೀನೆಚ್ಚರದಿ ಕಾಯುತಿರ್ ಜನಕಸುತೆಯಂ!

ಅವನು ಸಹೋದರರನ ಕಡೆ ತಿರುಗಿ ನೋಡುತ್ತ ಹೀಗೆ ಹೇಳಿದನು:

'ಸೌಮಿತ್ರಿ, ನಾವು ಇಂದೇ ಹೊರಡುತ್ತಿದ್ದೇವೆ. ದೇವಿಯ ಈ ಕೊನೆ ಬಯಕೆಯನ್ನು ನಾನು ಶೀಘ್ರದಲ್ಲಿ ಶ್ರಮವಿಲ್ಲದಂತೆ ತೀರಿಸುತ್ತೇನೆ. ಮುಗ್ಧೆಯ ಈ ಮುಗ್ಧ ಆಕಾಂಕ್ಷೆಗೆ ಭಯದ ವಿಘ್ನವೇತಕ್ಕೆ? ಅವಳಿಗೆ ನಗರದಲ್ಲಿ ಅದನ್ನು ತೋರಿಸಿ ಸಂತೋಷಗೊಳ್ಳುವ ಆಸೆಯಾಗಿದೆ. ನಮ್ಮಿಂದ ಅದಕ್ಕೇಕೆ ತಡೆ? ನೀನು ಹೇಳಿದಂತೆ ರಕ್ಕಸನೆ ಜಿಂಕೆಯ ರೂಪಿಯಾಗಿದ್ದರೆ ಅವನನ್ನು ಕೊಲ್ಲುವುದು ಕರ್ತವ್ಯವಲ್ಲವೆ? ಹಿಡಿಯುತ್ತೇನೆ. ಆಗದಿದ್ದರೆ ಕೊಂದು ತರುತ್ತೇನೆ. ನೀವು ಆಶ್ರಮಕ್ಕೆ ನಡೆಯಿರಿ. ನಾನು ಅಷ್ಟು ಹೊತ್ತಿನ ಒಳಗೆ ಶೀಘ್ರವಾಗಿ ಬರುತ್ತೇನೆ. ನೀನು ಎಚ್ಚರದಿಂದ ಜನಕಸುತೆಯನ್ನು ಕಾಯುತ್ತಿರು.'

ಸಿಡಿಲಾಳು ರಾಮಚಂದ್ರನು ಮಲ್ಲಗಚ್ಚೆಯನ್ನು ಕಟ್ಟಿದನು. ಧನುರ್ಬಾಣ ಧಾರಿಯಾದನು. ಸೊಂಟದಲ್ಲಿ ಖಡ್ಗವನ್ನು ಸಿಕ್ಕಿಸಿಕೊಂಡನು. ಮೃಗ ನೀಚ ದೈತ್ಯ ಮಾರೀಚನನ್ನು ಭೀಕರವಾಗಿ ಬೆನ್ನಟ್ಟಿದನು. ರಘುಕುಲ ಯಶಶ್ಚಂದ್ರ ಶೇಖರನು ಕಾಡಿನಲ್ಲಿ ಮರೆಯಾಗಲು ಮೈದುನನ ಮುಂದೆ ಮೈಥಿಲಿ ಎಲೆಮನೆಗೆ ನಡೆದಳು. ಅದನ್ನು ನೋಡಿ ರಾವಣನ ಶಂಕೆ ನಿಟ್ಟುಸಿರು ಬಿಟ್ಟಿತು.

ವೀರ ದಿಲೀಪ ಕುಲತಿಲಕನ ಬೇಟೆಯನ್ನು ಕವಿ ವರ್ಣಿಸಲು ಸಾಧ್ಯವೆ? ಬೇಟೆಗಾರನು ಮತ್ತು ಬೇಟೆಯ ಮೃಗವು ದಿಟವಾಗಿ ಮಹಾಸಮರ್ಥರಿರುವಾಗ ದೇವ ದೇವತೆಗಳಿಗೆ ಆ ಬೇಟೆ ಸಾಹಸ ನೋಟವಾಗದೆ? ರಾವಣನು ಆ ಮನೋಹರ ದೃಶ್ಯವನ್ನು ನೋಡದಿರುತ್ತಾನೆಯೆ? ಮೈ ರೋಮಾಂಚನಗೊಂಡು ನೋಡಿದನು!

ವೀರ ಬಿಲ್ಲುಗಾರ ರಾಮಚಂದ್ರನು ಹೊನ್ನಿನ ಹಿಡಿಯ ಖಡ್ಗವನ್ನು ಸೊಂಟಕ್ಕೆ ಸಿಕ್ಕಿಸಿಕೊಂಡನು. ಚೂಪಾದ ಬಾಣಗಳ ಬತ್ತಳಿಕೆಯನ್ನು ಬೆನ್ನಿನಲ್ಲಿ ಧರಿಸಿಕೊಂಡನು. ವೀರಧನುರ್ಧರನು ಸದೃಢ ಜಂಘೆಯ ನಡೆಯಿಂದ ದೊಡ್ಡ ಜಿಂಕೆಯ ಹಿಂದೆ ಕಾಡನ್ನು ಹೊಕ್ಕನು.

ಮೃಗವೇಷಿ ಮಾರೀಚನು ಆ ವನಪ್ರೇಮಿಯನ್ನು ಆಕರ್ಷಿಸುತ್ತ ಮುಂದೆ ಮುಂದಕ್ಕೆ ಸೆಳೆದೊಯ್ದನು. ಒಮ್ಮೆ ಇಲ್ಲಿ ಕಾಣಿಸಿಕೊಂಡದ್ದು ಮತ್ತೊಮ್ಮೆ ಅಲ್ಲಿ ಕಾಣಿಸಿಕೊಂಡಿತು. ಇಲ್ಲಿ ಮರೆಯಾಯಿತೆ ಎಂಬುವಷ್ಟರಲ್ಲಿ ಅಲ್ಲಿ ಹೊಳೆದು ತೋರಿತು. ಕಣ್ಣಿನ ಮುಂದೆಯೆ

ಪೊದೆಯನ್ನು ಹೊಕ್ಕು ನುಣುಚಿ ಕೊಂಡಿತು ಎಂದು ನೋಡುತ್ತಿದ್ದರೆ ಏನೋ ಬೆನ್ನಿನ ಕಡೆ ಸದ್ದು! ತಿರುಗಿ ನೋಡಿದರೆ ಅದೋ, ಅದು ಹಸುರ ಬಸಿರಿನಿಂದ ಹೊಮ್ಮಿ ಚಿಮ್ಮುತ್ತಿದೆ!

ಈ ಕಂಟಿಯ ಮರೆಯಲ್ಲಿ ಅಡಗಿ ಮರೆಯಾಯಿತು ಎಂದು ಎಚ್ಚರಿಕೆವಹಿಸಿ ಕುತೂಹಲದ ತವಕ ಚಿಂತೆಯಿಂದ ನಡೆನಡೆದನು. ಸುತ್ತಿ, ಹತ್ತಿರ ಬಂದಿತೆಂದು ಕಣ್ಣಿಟ್ಟು ಕೈನೀಡಿ ಹಿಡಿಯುವ ಚಾತುರ್ಯದಿಂದಿರಲು, ಚೆಂಗನೆಯೆ ಚಿಮ್ಮಿ ದಡದಡನೆ ಪೊದೆ ನಡುಗುವ ರೀತಿಯಲ್ಲಿ ನೆಲವನ್ನು ಒದ್ದು ನೆಗೆದೋಡಿತು. ಬೇಟೆಯನ್ನು ಬಿಡದೆ ಬೆನ್ನಟ್ಟಿದ ಅವನು ಬೆಚ್ಚಿ ನಿಟ್ಟುಸಿರು ಬಿಟ್ಟನು. ಆ ಜಿಂಕೆ ತಗ್ಗನ್ನು ಇಳಿಯಿತೆ? ಅದರ ಹಿಂದೆ ಅವನು ಇಳಿದನು. ಉಬ್ಬನ್ನು ಏರಿತೆ? ಜೊತೆಗೆ ಅವನು ಏರಿದನು! ಅಗಲವಾದ ಕಂದಕವನ್ನು ನೆಗೆಯಲು ಆ ಸೂರ್ಯವಂಶದವನು ಕುದುರೆಯ ರೀತಿ ಅದನ್ನು ನೆಗೆದನು !

ಬೆಟ್ಟದ ಗೋಡೆಯೊ ಎನ್ನುವಂತೆ ಕಡಿದಾಗಿ ಮೇಲೆದ್ದಿದ್ದ ಸಣ್ಣ ಮರಗಳ ಗುಂಪಿನಿಂದಾವೃತ್ತವಾಗಿ ಕಂಗೊಳಿಸುತ್ತಿದ್ದ ಕಾಡನ್ನು ನೋಡು, ಅದನ್ನು ಅದು ಹೇಗೆ ಏರುತ್ತಿದೆ! ಮುದುರುತ್ತಿದೆ, ಮೈಯನ್ನು ನೀಳವಾಗಿಸಿಕೊಳ್ಳುತ್ತಿದೆ. ಅದರ ಕೊಂಬುಗಳೆರಡು ಒಮ್ಮೆ ಎದ್ದಂತೆ ಮತ್ತೊಮ್ಮೆ ಬಿದ್ದಂತೆ ಕಾಣುತ್ತಿದೆ. ಅದನ್ನು ಬೆಂಬತ್ತಿ ಬರುವವನ ಕಣ್ಣಿಗೆ ಧೂಳಿಡುವಂತೆ ಅದರ ಗೊರಸಿನ ಆಘಾತದಿಂದ ಹೊಮ್ಮಿ ಹುಲ್ಲು ಮಣ್ಣುಗಳು ಸಿಡಿಯುತ್ತಿದ್ದವು. ಅದರ, ನಾಲಗೆಯಿಂದ ಜೊಲ್ಲು ಸರಿಯುತ್ತ ಅದರ ಪಕ್ಕೆಗಳ ಅಳ್ಳೆ ತಿದಿಯೊತ್ತಿದಂತೆ ಜೋಲೇಳುತ್ತಿದ್ದವು.

ಆ ಹಿಡಿಯುತ್ತೇನೆ, ಹಿಡಿದೆನು ಅದರ ಹಿಂಗಾಲನ್ನು ಎನ್ನುವಂತೆ ದಾಶರಥಿ ತೋಳು ನೀಡಿ ಹಿಡಿಯಲು ಪ್ರಯತ್ನಿಸುವಾಗ ಅದು ವ್ಯರ್ಥವಾಗಿ ಮುಷ್ಟಿ ಬರಿದಾಯಿತು! ಹೊನ್ನಿನ ಜಿಂಕೆಯು ಪೊಕ್ಕನೆ ಪಕ್ಕಕ್ಕೆ ಹೊರಳಿ ಹಿಂದಕ್ಕೆ ಸರಿದು ಕಾಡಿನ ಇಳಿಜಾರಿನೆಡೆಗೆ ಧಾವಿಸಿ, ಕಾಮನಬಿಲ್ಲಿನ ಜಲಪಾತಕ್ಕೆ ದುಮುಕಿತು. ಆಗ ರಾಘವನು ನೆನೆದ ನಾರುಡೆಯಲ್ಲಿ ನಿಂತು ಹಲ್ಲು ಕಚ್ಚಿ ನೋಡುತ್ತಿರಲು ಆ ಶೃಂಗಿ ಓಡಿತು.

ಮುಗಿಲಿನಲ್ಲಿ ಅಡಗಿ ತೋರಿ ಚಂದ್ರ ಓಡುವಂತೆ ದಟ್ಟ ಕಾಡಿನಲ್ಲಿ ಮೃಗ ಓಡುತ್ತಿರಲು ರಾಮನು ಹಿತವಾದುದನ್ನು ಚಿಂತಿಸಿದನು; ಹಿಡಿಯುವ ಹಂಬಲವನ್ನು ಬಿಟ್ಟನು. ಆ ರಾಕ್ಷಸಿ ಪ್ರಾಣಿಯು ಮುಕ್ತಿಯನ್ನು ಸೇರಿತು ಎಂಬಂತೆ ಬಿಲ್ಲನ್ನು ಎತ್ತಿ ಕೈಯಲ್ಲಿ ಹಿಡಿದನು. ಮುಂದೆ ಗೋದಾವರಿಯ ವಿಸ್ತಾರವಾದ ನೀರೋಟ ಅಡ್ಡಗಟ್ಟಿರುವುದನ್ನು ಕಂಡು ತಕ್ಷಣ ಬಿಲ್ಲನ್ನು ಕೆಳಗೆ ಇಳಿಸಿದನು.

ಮಾಯೆಯನೆಂತು ಸಂಹರಿಸದೆಯೆ ಪಿಡಿವುದಯ್ ಸನ್ನಿ?

'ನದಿಯನ್ನು ಆ ಜಂತು ಈಜಲೇ ಬೇಕಾಗಿದೆ. ಅದು ಆ ದಡಕ್ಕೆ ಸೇರುವ ಮೊದಲೇ ಹೇಗಾದರೂ ದಿಟವಾಗಿ ಹಿಡಿಯುತ್ತೇನೆ' ಎಂದುಕೊಂಡು ರವಿವಂಶಜನು ಮತ್ತೆ ಅದನ್ನು ಬೆಂಬತ್ತಿದನು. ನದಿಯ ನೀರು ಮೇಲೆದ್ದು ಚಿಮ್ಮುವಂತೆ ಜಿಂಕೆ ದುಡುಮ್ಮನೆ ದುಮುಕಿತು. ಅವನು ಅದರ ಹಿಂದೆಯೆ ನೀರು ರೋಮಾಂಚನಗೊಳ್ಳುವಂತೆ ಹೊಳೆಗೆ ದುಮುಕಿದನು. ಜಿಂಕೆಯು ಕೊಂಬೆ ಕೊಂಬೆಯ ಸೊಗಸಿನ ಕೋಡುಗಳ ಮುಖ ಮಾತ್ರ ತಾನಾಗಿ ತೇಲುತ್ತಾ ಮುಂದೆ ಮುಂದೆ ಸಾಗಿತು. ಸೀತಾಪ್ರಿಯನು ತಲೆಯೆತ್ತಿ ಕೈ ಬೀಸುತ್ತಾ ಅದರ ಹಿಂದೆ ಹೋದನು. ಹೊತ್ತ ಬಿಲ್ಲು ಬತ್ತಳಿಕೆ ಕತ್ತಿಗಳೊಂದನ್ನು ಗಮನಿಸದೆ ಆಕ್ರಮಣ ಬುದ್ಧಿಯೊಂದನ್ನೆ ಹೊಂದಿ, ನೀರಿನ ಎದೆಯನ್ನು ಬಿಡದೆ ಸೀಳಿ ಈಜುತ್ತ ಸಾಗಿದನು! ಸತ್ಯವು ಮಾಯೆಯನ್ನು ಸಂಹರಿಸದೆ ಹಿಡಿದೀತು ಹೇಗೆ?

ಅಯ್ಯೋ, ಆ ಚತುಷ್ಪಾದಿಯು ದಡವೇರಿತು. ಮತ್ತೆ ದಟ್ಟ ಅಡವಿಯ ಕಡೆಗೆ ನುಗ್ಗಿ ಓಡಿತು. ರಾಮನು ಮೈಗೆ ಅಂಟಿದ್ದ ಒದ್ದೆಯನ್ನು ಪೌರುಷ ರೋಷವೇಗದಿಂದ ಅಟ್ಟಿದನು. ಮಾರೀಚನನ್ನು ಅಟ್ಟಿಸಿಕೊಂಡು ಓಡಿದನು. ಅವರಿಬ್ಬರೂ ಪುಷ್ಪಕವು ಸೃಷ್ಟಿಸಿದ್ದ ಛಾಯಾವಲಯದ ಅಂಚನ್ನು ಮುಟ್ಟಿದರು. ಅದನ್ನು ದಾಟಿದುದೆ ತಡ ಸೂರ್ಯನ ಕಾಂತಿ ಅದರ ಮೇಲೆ ಸುರಿಯಿತು. ರಕ್ಕಸನು ಬೆಚ್ಚಿ ಒಳಸೋರಿದನು. ತಿರುಗಿ ಹಿಂದಕ್ಕೆ ಚಿಮ್ಮಿ ನೆಗೆದು ಕಪ್ಪು ನೆರಳ ಮರೆಗೆ ಆಶಿಸಿದನು. ಅಷ್ಟರಲ್ಲಿ ರವಿ ವಂಶಜನು ಕೈಗೆ ಕಣೆಯನ್ನು ಎಳೆದುಕೊಂಡು ಬಿಲ್ಲಿನ ಹೆದೆಗೆ ಹೂಡಿದನು.

ವ್ಯಾಕರಣ, ಛಂದಸ್ಸು, ಅಲಂಕಾರ ಸೂತ್ರಗಳಿಂದ ಕಾವ್ಯ ಕನ್ನಿಕೆಯನ್ನು ಸೃಷ್ಟಿಸುವ ದಡ್ಡತನವನ್ನು ಬಿಟ್ಟು, ಹೃದಯದ ಆವೇಶವನ್ನು ನೆಚ್ಚುವುದು ಮಹಾಕವಿಯ ಮಾರ್ಗ. ಅದರಂತೆ ರಾಮನು ಬಾಣವನ್ನು ಜಿಂಕೆಯ ಮೈಗೆ ಹೂಡಲು ಅದರ ಗೋಣು ಇರಿದು, ಅದು ಹಲವು ಉರುಳು ಉರುಳಿ ಬಿದ್ದಿತು! ಕವಿಯ ದರ್ಶನವು ಶಾಶ್ವತವಾದುದನ್ನು ತಿಳಿಯಲು ನಶ್ವರದ ಹೃದಯವನ್ನು ಭೇದಿಸುತ್ತದೆ. ಹಾಗೆ ಹರಿತವಾದ ಶರವು ಭೇದಿಸಲು ವಂಚಕನ ಪಶುಕಳೆಬರದಿಂದ ಕಳಚಿಕೊಂಡ ರಾಕ್ಷಸಾಕೃತಿಯು–ಮಿಥ್ಯೆ ಬಿರಿದಾಗ ಸತ್ಯವು ಪ್ರತ್ಯಕ್ಷವಾಗುವಂತೆ ಹೊರಹೊಮ್ಮಿತು.

ರಾಮಚಂದ್ರನು ಬೆದರಿದ ಕಣ್ಣುಗಳಿಂದ ನೋಡುತ್ತಿರಲು ಕಿವಿಯು ಬೆಚ್ಚುವಂತೆ 'ಓ ಲಕ್ಷ್ಮಣಾ! ಓ ಲಕ್ಷ್ಮಣಾ! ಓ ಲಕ್ಷ್ಮಣಾ, ಓ' ಎಂಬ ಮಹಾಧ್ವನಿಯು ಅಸುರನ ಉಸಿರಿನಿಂದ ಉಕ್ಕಿ ರೋದಿಸಿತು. ಅದು ಗಗನ ಗಿರಿವನ ಗುಹೆಗಳ ಮುಖಗಳಿಂದ ಪ್ರತಿಧ್ವನಿತವಾಯಿತು! ರಾಮನ ಎದೆಗೆ ಧಿಗಿಲುಂಟಾಯಿತು.

'ಓ! ಲಕ್ಷ್ಮಣಾ, ಲಕ್ಷ್ಮಣಾ, ಲಕ್ಷ್ಮಣಾ, ಓ' ಕೂಗನ್ನು ಆಲಿಸಿ ಪೃಥ್ವಿ ನಡುಗಿದಳು. ಆ ಮೊರೆಯನ್ನು ಕೇಳಿ ತರು ಶಿಲಾ ಗರ್ಭಗಳು ತಲ್ಲಣಗೊಂಡವು! ಆಶ್ಚರ್ಯಕ್ಕೊಳಗಾದ

ಪಕ್ಷಿಗಳು ತಮ್ಮ ಉಲಿತವನ್ನು ನಿಲ್ಲಿಸಿದವು. ಮಧ್ಯಾಹ್ನವು ವಿಸ್ಮಯಗೊಂಡು ಭ್ರೂಮುದ್ರಾ ಸ್ಥಿತಿಯಲ್ಲಿ ನಿಶ್ಯಬ್ದವಾಗಿ ಆಲಿಸಿತು. ಆ ತೆರೆ ತೆರೆಯ ನಡೆಯ ದನಿ ಕುದುರೆಯು ನೆಗೆ ನೆಗೆದೋಡಿ ಕೊನೆಗೆ ಎಲೆಮನೆಯನ್ನು ಮುಟ್ಟಿತು: 'ಓ ಲಕ್ಷ್ಮಣಾ ಲಕ್ಷ್ಮಣಾ ಲಕ್ಷ್ಮಣಾ ಓ !'

ಹಗಲು ಎಷ್ಟೇ ಹೆಚ್ಚಾದರೂ, ಹೊತ್ತೆಷ್ಟು ಮೀರಿದರೂ, ರಾಘವನು ಹಿಂತಿರುಗದಿರಲು ಜಾನಕಿಗೆ ಚಿಂತೆಯಾಗತೊಡಗಿತು. ನಾನಾ ದುರಂತವನ್ನು ನೆನೆದು ಮನಸ್ಸು ತನ್ನ ಇಚ್ಛೆಯನ್ನು ಮೀರಿ ದುಃಖಿಸಿತು. ತನ್ನ ಮನದ ಕುದಿತವನ್ನು ಮೈದುನನಿಗೆ ಹೇಳಲಾರದಾದಳು. ನಿಶ್ಶಂಕೆಯ ವೀರನಾದ ಅವನು ತನ್ನ ನುಡಿ ಕೇಳಿ ನಗುವನೆಂದು ನಾಚಿಕೊಂಡಳು. ಆದರೆ, ತನ್ನ ಎದೆಯ ಭೀತಿಯನ್ನು ಮರೆಸಲಾರದ ಅಂಜಿಕೆಯ ಕೋಮಲೆ ಅಬಲೆ ಸೀತೆಯು ನಿಂತಲ್ಲಿ ನಿಲಲಾರದೆ, ಹಿಂದು ಮುಂದಕ್ಕೆ, ಎಲೆಮನೆಯ ಹೊರಗೊಳಗೆ ಓಡಾಡತೊಡಗಿದಳು. ಒಣಗಿದ ತುಟಿಯನ್ನು ಮತ್ತೆ ಮತ್ತೆ ನಾಲಗೆಯ ನೀರಿನಿಂದ ಸವರಿಕೊಳ್ಳುತ್ತಿದ್ದಳು. ಪ್ರಯಾಣದ ಅವಸರದ ಕಾರಣ ಗಂಟುಕಟ್ಟುತ್ತಿದ್ದ ಲಕ್ಷ್ಮಣ ಅದನ್ನು ಕಂಡು,

'ಏತಕ್ಕೆ ಹೀಗೆ ತವಕಿಸುತ್ತಿರುವಿರಿ? ಆ ಜಿಂಕೆಯನ್ನು ಬಿಟ್ಟು ಬರುವನೆ? ಹಿಡಿದು ತರುತ್ತಾನೆ. ಅಲ್ಲದಿದ್ದರೆ, ಅದನ್ನು ಕೊಂದು ಚರ್ಮವನ್ನಾದರೂ ತರುತ್ತಾನೆ. ಅದನ್ನು ಹಿಡಿಯುವ ಸಾಹಸದಲ್ಲಿ ತೊಡಗಿದ್ದಾನೆಂದು ತೋರುತ್ತದೆ. ಅಣ್ಣನ ಬಾಣ ವೇಗಕ್ಕೆ ಕೊಂದು ತರುವುದಕ್ಕೆ ಇಷ್ಟು ಹೊತ್ತೇಕೆ?'

ಎಂದು ಹೇಳಿ ತನ್ನ ಗಂಟು ಕಟ್ಟುವ ಕೆಲಸವನ್ನು ಮುಂದುವರಿಸಿದನು. ಲಕ್ಷ್ಮಣನ ಆ ನುಡಿ ಕೇಳಿ ಧರಣಿಜಾತೆಯು ಮರುಮಾತಾಡದೆ ನಡೆದು ಪರ್ಣಕುಟಿಯ ಅಂಗಳದಲ್ಲಿ ನಿಂತಳು. ಇನಿಯನು ಕಾಡನ್ನು ಹೊಕ್ಕ ದಿಕ್ಕಿನ ವನಮಾರ್ಗವನ್ನು ನೋಡುತ್ತಾ ಕಳವಳಗೊಂಡಳು.

ಆ ಪರ್ಣಕುಟಿಯ ಕಣ್ಣು ಹರಿಯುವ ತನಕ ದಟ್ಟಕಾಡಿನ ಬೆಟ್ಟವು ದೂರ ದೂರದತನಕ ಅಲೆಅಲೆಯಾಗಿ ಹಬ್ಬಿತ್ತು. ಅದು ನೇಸರನಿಗೆ ಕಣ್ಣುಕಟ್ಟಿದಂತೆ ಮುಗಿಲಿನ ಎತ್ತರಕ್ಕೆ ನಿಂತಿತ್ತು. ಶ್ರೀ ರಾಮಭಾರ್ಯೆಯು ಆ ಮ್ಲಾನ ಮಧ್ಯಾಹ್ನದ ಮೌನ ಭಾರಕ್ಕೆ ಖಿನ್ನಮುಖಿಯಾಗಿ ಮೇಲುಸಿರು ಬಿಡುತ್ತಿದ್ದಳು. ಆಗ ನಿಶ್ಯಬ್ದತಾ ನಿದ್ರೆಯನ್ನು ಹರಿದು ಹೊಡೆದೆಬ್ಬಿಸುವಂತೆ 'ವೋ ವೋ' ಎಂಬ ಒಂದು ಸದ್ದು ಕಾಡೆ ಅರಚಿಕೊಂಡಂತೆ ಕೇಳಿಬಂದಿತು. 'ಓ ಲಕ್ಷ್ಮಣಾ! ಓ ಲಕ್ಷ್ಮಣಾ! ಓ ಲಕ್ಷ್ಮಣಾ! ಓ ಲಕ್ಷ್ಮಣಾ ಓ' ಎಂದು ಲೋಕದ ಶೋಕವನ್ನೆಲ್ಲ ಕರೆಯುವಂತೆ ಕಾಡಿನ ಬಹುದೂರದಿಂದ ಒಂದು ಅಳು ಅಲ್ಲಿ ತೇಲಿ ಬಂದಿತು!

ಸೀತೆಯು ಬೆಚ್ಚಿದಳು; ಬೆವರಿದಳು; ಹಲುಬಿದಳು; ಹಾರಿ ತತ್ತರಿಸುತ್ತ ಮೈದುನನ ಕಡೆಗೆ ಹೋಗುವಾಗ ಅವನು ಬಾಗಿಲಿನಿಂದ ಹೊರ ಹೋಗುತ್ತಿರುವುದನ್ನು ಕಂಡಳು.

ಅವನು ಸನ್ನೆಯಿಂದ ಸುಮ್ಮನಿರಲು ಹೇಳಿ ತಾನು ಕಿವಿಗೊಟ್ಟನು. ಇಬ್ಬರೂ ಲಕ್ಷ್ಮಣೋ ಲಕ್ಷ್ಮಣೋ ಎಂದು ಅಲೆದಲೆದು ಬರುತ್ತಿದ್ದ ನೀಳವಾದ ಗೋಳುದನಿಯನ್ನು ಕೇಳಿದರು. ಅದನ್ನು ಆಲಿಸಿದ ಲಕ್ಷ್ಮಣನ ಮುಖದಲ್ಲಿ ವಿಸ್ಮಯ ದೂರವಾಗಿ ಒಂದು ಮಂದಸ್ಮಿತ ಮೈದೋರಿತು. ಭೀತಿಯ ಮಂಕು ಬಡಿದ ಮುಖದ ಮೈಥಿಲಿಯು ಗದ್ಗದಿಸುತ್ತ ಹೀಗೆ ಹೇಳಿದಳು:

ಹಾ ಬೇರ್ಗ್ಗೊಯ್ವುದತ್ತಿಗೆಯ ಬಾಯ್ಗತ್ತಿ ಊರ್ಮಿಳಾ ಪ್ರಿಯನ ನಿಶ್ಚಲತೆಯಂ!

'ಅಯ್ಯಯ್ಯೊ ಕೆಟ್ಟೆನಯ್ಯಾ ಲಕ್ಷ್ಮಣಾ! ಕೇಡಾಯಿತೊ ಆರ್ಯನಿಗೆ! ಓಡು, ನಡೆ ಬೇಗ! ನೆರವಾಗು, ನಡೆ. ಹೋಗು. ಅಯ್ಯಯ್ಯೊ ರಾಘವನಿಗೇನಾಯಿತೊ ಕಾಣೆ!'

ಅತ್ತಿಗೆಯ ದುಸ್ಥಿತಿ ಕಂಡು ತುಸು ಮುನಿದು ಮೈದುನ ನುಡಿದ,

'ತಾಳ್ಮೆ, ತಾಯಿ ತಾಳ್ಮೆ. ರಕ್ಕಸನ ಅಸುರ ಮಾಯೆ ಕೂಗುತ್ತಿದೆ; ಅದು ಅಣ್ಣನ ದನಿ ಅಲ್ಲ. ಭ್ರಾಂತಿಯಿಂದ ಸಾಧಾರಣಳಾದ ಹೆಂಗಸಿನಂತೆ ನಡೆದುಕೊಳ್ಳಬೇಡಿ.'

'ಅಯ್ಯಯ್ಯೋ, ಅದೋ ಆಲಿಸು. ಅದು ದಿಟವಾಗಿ ನಿನ್ನ ಅಣ್ಣನ ದನಿಯೆ. ನಿನ್ನ ಹೆಸರನ್ನೇ ಹಿಡಿದು ಕೂಗುತ್ತಿರುವುದನ್ನು ಆಲಿಸು! ಕಿವುಡಾಗಿದೆಯೆ; ನಿನಗೆ ಮತಿ ಕೆಟ್ಟಿದೆಯೆ? ಓಡು, ನೆರವಾಗು, ನಡೆ, ಹೋಗು; ದಮ್ಮಯ್ಯ ಹೋಗು!'

'ಅಣ್ಣನ ಆಜ್ಞೆ, ನಿಮ್ಮ ಪಾದದ ರಕ್ಷಣೆಗೆ ನನ್ನನ್ನು ಇಲ್ಲಿ ಬಿಟ್ಟು ಹೋಗಿದ್ದಾನೆ. ಅದನ್ನು ಮೀರಿ ನಡೆಯಲು ಮನಸ್ಸುಬಾರದು'

'ನನ್ನ ಕರುಳು ಬೇಯುತ್ತಿದೆ. ಆತ್ಮ ಸೀಯುತ್ತಿದೆ. ಅಯ್ಯಯ್ಯೊ ದಮ್ಮಯ್ಯ, ಲಕ್ಷ್ಮಣಾ, ಕಾಲು ಹಿಡಿಯುತ್ತೇನೆ. ಓಡು ನಡೆ, ನನ್ನ ಪತಿಯನ್ನು, ಪ್ರಾಣ ಸರ್ವಸ್ವನನ್ನು, ಕೌಸಲ್ಯೆಯ ಕಂದನನ್ನು, ಕೋಸಲಾನಂದನನ್ನು, ನಿನ್ನ ಅಣ್ಣನನ್ನು ರಕ್ಷಿಸು!'

'ದೇವಿ, ರಾಮನು ಅಸಾಧಾರಣನು. ರಾಮನು ಅಕ್ಷಯ ಮಹಿಮ. ಅವನಿಗೆ ದೇವತೆಗಳು ಸರಿಸಾಟಿಯೆ ಹೇಳು? ಹಾಗಿರುವಾಗ, ದನುಜರು ಯಾವ ಸಾಟಿ? ತಮ್ಮ ನಿಧಿಯ ಬೆಲೆ ತಮಗೇ ತಿಳಿಯದವರಂತೆ ಆಡುವಿರಿ! ಈ ಕಳವಳ ಸಾಕು; ಆ ಶಂಕೆಯನ್ನು ಬಿಡಿ; ಅಕಾರಣವಾದ ಭೀತಿಯನ್ನು ಬಿಡಿ.'

ಎಂದು ಹೇಳುತ್ತಿರಲು ಮತ್ತೆ ಆ ದೀರ್ಘ ಧ್ವನಿ ಎದೆ ಸೀಳುವಂತೆ ಚೀರಿತು;

'ಓ ಲಕ್ಷ್ಮಣಾ! ಓ ಲಕ್ಷ್ಮಣಾ! ಓ ಲಕ್ಷ್ಮಣಾ ಓ!'

ಅದನ್ನು ಕೇಳಿದ ಲಕ್ಷ್ಮಣನೇ ಹೆದರಿದನೆಂದ ಮೇಲೆ ಸೀತೆಗಿನ್ನು ಗತಿಯುಂಟೆ? ಮತಿಯುಂಟೆ? ಹಾಯೆಂದು ಹೌಹಾರಿ ಮೈಮರೆತಳು. ಮೈಯ ನೆತ್ತರು ಹೆಪ್ಪುಗಟ್ಟಿತೋ ಎಂಬಂತೆ ಮರವಟ್ಟು ನಿಂತಳು. ಪುನಃ ಚೇತರಿಸಿಕೊಂಡು, ಕಣ್ಕೆರಳಿಸಿ ವಿಕಾರ ಮುಖದಿಂದ ಆವೇಶಕ್ಕೊಳಗಾದಳು. ಭೂತಿನಿಯಂತೆ ಸೌಮಿತ್ರಿಯನ್ನು ನೋಡುತ್ತ,

'ಭ್ರಾತೃ ಘಾತಕ ಪಾಪಿ, ಸಾಯಿ ನಡೆ. ಕಣ್ಣಿನ ದೃಷ್ಟಿಯಿಂದ ತೊಲಗು! ನೀನು ಸುಮಿತ್ರೆಯ ಹೊಟ್ಟೆಯಲ್ಲಿ ಹುಟ್ಟಿದ ಪಾತಕ! ಪೂರ್ವಜನ್ಮದ ಪಾಪದ ಕರ್ಮಪಾಕವು ಬರುವಂತೆ ಗೋಮುಖ ವ್ಯಾಘ್ರನಂತೆ ನಮ್ಮ ಜೊತೆಗೂಡಿ ಬಂದಿರುವೆ.'

ಎಂದು ಸೀತೆ ಹೇಳುತ್ತಿರಲು, ಮುಂದೆ ಮಾತನಾಡಲು ಅವಕಾಶಕೊಡದೆ ಸದೃಢ ಬುದ್ಧಿಯಿಂದ ರಾಮಾನುಜ,

'ರಾಜರ್ಷಿ ಜನಕ ಸುತೆಯೆ, ಈ ನಿಂದನೆ ಸಾಕು.' ಎಂದು ಹೇಳುತ್ತಾ, ದುರದುರನೆ ನೋಡಿದನು. ನಿಟ್ಟುಸಿರ ಹೊಡೆತದಿಂದ ಎದೆಯ ಅಳ್ಳೆ ಏದುತ್ತಿರಲು ಮತ್ತೆ ಮಾತು ಮುಂದುವರಿಸಿ ನುಡಿದನು: 'ನೀವು ಅಣ್ಣನನ್ನು ಪ್ರೀತಿಸುವ ಮೊದಲೆ ನಾನು ಅವನನ್ನು ಪ್ರೀತಿಸಿದೆ! ಈಗ ಕೆಟ್ಟ ನುಡಿಗಳಿಗೆ ಅವಕಾಶ ಕೊಟ್ಟರೆ ಅನಂತರ ನೀವೇ ಅದರ ನೋವನ್ನು ಅನುಭವಿಸುವಿರಿ.'

'ಎಲವೋ ಲಕ್ಷ್ಮಣಾ, ಎಳೆಯ ಮುಳ್ಳು ಚುಚ್ಚುವಾಗ ಅದು ನೋವಲ್ಲ, ಮೆಚ್ಚು. ಆ ಮುಳ್ಳು ಬೆಳೆದರೆ, ಅದರ ಕಚ್ಚುವಿಕೆ ಮುತ್ತಾಗುವುದೇ ಹೇಳು? ಅಯ್ಯೋ, ಎಳೆಯ ಕರು ಬೆಳೆದ ಮೇಲೆ ಅದರ ತಾಯಿಯನ್ನೆ ಬೆದೆಗೆ ಬಯಸುವುದು! ..ಮನದನ್ನ, ನಿನ್ನನ್ನು ನಾನೇ ಕೊಲ್ಲಿಸಿದೆನೆ? ಅಯ್ಯೋ, ನನ್ನೆದೆಯ ಮಾಂಗಲ್ಯವನ್ನು ನನ್ನ ಕೈಯೆ ಕಿತ್ತೆಸೆಯಿತಲ್ಲ!'

ಎಂದು ಹೇಳುತ್ತ ಬಾಯ್ಬಡಿದು ಕೊಳ್ಳುವವಳನ್ನು, ಮತಿವಿಕಲೆಯನ್ನು ಕಂಡು ಲಕ್ಷ್ಮಣನ ಬುದ್ಧಿ ತತ್ತರಿಸಿತು. ಅತ್ತಿಗೆಯ ಬಾಯಿ ಕತ್ತಿಯು ಊರ್ಮಿಳಾಪ್ರಿಯನ ನಿಶ್ಚಲತೆಯ ಬೇರನ್ನು ಕೊಯ್ದಿತು!

'ಹೆಣ್ತನದ ಕಲ್ಲುತನಕ್ಕೆ ಎಲ್ಲೆ ಮತ್ತು ಸಾಟಿ ಇದೆಯೆ? ಹೇ, ದೇವಿ, ಹೇ ಮಾತೆ, ನನ್ನನ್ನು ಕ್ಷಮಿಸು. ರಾಮನ ಆಜ್ಞೆಯನ್ನು ಮೀರಲಾರದೆ ಹೇಳಿದೆನಾದರೂ, ನಿಮ್ಮಾಣೆ! ಹೋಗಿ ಬೇಗ ಬರುತ್ತೇನೆ. ಎಲೆಮನೆಗೆ ನಡೆಯಿರಿ!'

ಎಂದು ಹೇಳುತ್ತ ಹಿಂದುಹಿಂದಕ್ಕೆ ನೋಡುತ್ತ ಓಡಿದನು. ಮೈದುನನ ಶರೀರವು ಕಾಡಿನಲ್ಲಿ ಮರೆಯಾಯಿತು. ತನ್ನ ಬಾಳಿನ ಅಡವಿ ಹಾದಿಯ ಶೂನ್ಯವನ್ನು ಈಕ್ಷಿಸುವವಳಂತೆ ಮುಳ್ಳು ಬೇಲಿಯ ತಡಬೆಯನ್ನು ಒರಗಿ ನಿಂತುಕೊಂಡಳು.

ಸೀತೆಯ ಚೆಲುವನೀಂಟೆ ತವಕಿಸಿತಸುರನಕ್ಷಿ ಪಕ್ಷಿ.

ಆಗಸದಲ್ಲಿರುವ ರಥದಲ್ಲಿ ಅವಿತುಕೊಂಡಿದ್ದ ರಥಿ ರಾವಣನು ಮನ್ಮಥ ಸತಿಯ ಸರಿಸಮಾನಳಾದ ದಶರಥ ಸುತನ ಸತಿ ಓರ್ವಳೆ ಇರುವುದನ್ನು ನೋಡಿದನು. ಚಾತಕ ಪಕ್ಷಿಯು ಮಳೆಗೆ ಕಾತರಿಸುವಂತೆ ಸೀತೆಯ ಚೆಲುವನ್ನು ಸವಿಯಲು ಅಸುರನ ಕಣ್ಣೆಂಬ ಪಕ್ಷಿಯು ತವಕಿಸುತ್ತಿತ್ತು. ವನದ ಇಳೆಗೆ ಇಳಿಯಲು ಹವಣಿಸಿದ ದೇವತೆಗಳ ವೈರಿ

ದಶಶಿರನಿಗೆ ಏನಾಯಿತೋ? ತಾನು ಎಂದೂ ಅನುಭವಿಸದ ಒಂದು ಏನೋ ಕಳವಳ ಅವನ ಆಂತರ್ಯದಲ್ಲಿ ಹೆಜ್ಜೆಯಿಟ್ಟಿತು. ಪ್ರಯತ್ನಪಟ್ಟು ಅದನ್ನು ತುಳಿದೊತ್ತಿದನು. ಒಂದು ಸುಂಟರಗಾಳಿಯಾಗಿ ತಿರ್‍ರನೆ ಸುಳಿದು ಸುತ್ತಿ ನೆಲಕ್ಕೆ ಇಳಿದನು.

ಅವನಿಜಾತೆಯು ತನ್ನ ದೃಷ್ಟಿಪಥದ ಕಾಡಿನಲ್ಲಿ ಇದ್ದಕ್ಕಿದ್ದಂತೆ ತರಗೆಲೆಯ ಸದ್ದು ಮಾಡಿ ಎದ್ದ ಗಾಳಿಯು ಸರ್ಪದಂತೆ ಸುತ್ತುಗಟ್ಟುತ್ತ ಮೇಲ್ಮುಖವಾಗಿ ಚಲಿಸಿದ್ದನ್ನು ನೋಡಿದಳು. ಆ ಗಾಳಿಯು ಭೂತ ನರ್ತನದಂತೆ ಆವರಿಸಿತು. ಇಲ್ಲಿ ಕುಣಿದು, ಅಲ್ಲಿ ನೆಗೆದು ಹಾರುತ್ತ, ಓಡುತ್ತ, ಆಡುತ್ತ ಒಮ್ಮೆ ನಿಂತು ಹೆಡೆಯೆತ್ತಿ ನಾಗರದ ರೀತಿ ಆಡಿತು. ಮತ್ತೊಮ್ಮೆ ನಡು ಬಳುಕಿಸಿ ನಟಿಯಂತೆ ಓಲಾಡಿತು. ಒಮ್ಮೆ ತುಂಬುರುಗೊಳ್ಳಿಯಂತೆ ಚಿಮ್ಮಿತು. ಮತ್ತೆ ಹಾಗೆಯೆ ಮೈಮೇಲೆ ಗ್ರಹ ಬಂದವನ ರೀತಿಯಲ್ಲಿ ರಿಂಗಣ ಕುಣಿದು ಹೊಮ್ಮಿ ಬಂದಿತು. ಸೀತೆಯ ಶರೀರದ ನಾಳನಾಳದಲ್ಲಿ ಹೆದರಿಕೆಯ ಚಳಿ ಹರಿಯುವಂತೆ ಆ ಗಾಳಿಯು ರಭಸದಿಂದ ಹತ್ತಿರಕ್ಕೆ ನುಗ್ಗಿ ಬಂದಿತು.

'ನನಗೆ ಏನು ದುರ್ದಿನವೋ!' ಎಂದುಕೊಳ್ಳುತ್ತ ಜನಕಸುತೆಯು ಎಲೆಮನೆಯ ಒಳ ಹೋಗಲು ಬಾಗಿಲಿನ ಕಡೆಗೆ ನಡೆದಳು. ಆಗ ಹೆಜ್ಜೆಯ ಸಪ್ಪಳ ಕೇಳಿದಂತಾಯಿತು. ತನ್ನವರೆ ಬಂದರೆಂಬ ಒಂದು ಅತಿಯಾದ ಸಂತೋಷದಿಂದ ಕೂಡಿದ ಧೈರ್ಯದಿಂದ ತಿರುಗಿದಳು. ಹಾ ಬೇರೊಬ್ಬನನ್ನು, ಸುಪವಿತ್ರ ವೇಷದ ಮುನಿವರ್ಯನನ್ನು ಕಂಡಳು!

ಜಟಾಧಾರಿಯನ್ನು, ಕಾವಿಯನ್ನು ಕಂಡ ಕೂಡಲೇ ಮನಸ್ಸಿಗೆ ನೆಮ್ಮದಿಯಾಗಲು ಚಂದ್ರಮುಖಿಯು ತನ್ನೆಡೆಗೆ ಬರುತ್ತಿರುವ ಸಂನ್ಯಾಸಿಯನ್ನು ನೋಡಿದಳು. ಅನಂತರ, ತಕ್ಷಣವೆ ಭಯ-ಸಂಶಯಗಳು ಅವಳ ಆತ್ಮವನ್ನು ಆವರಿಸಿದವು. ಅವನ ಗರ್ವಪೂರಿತ ನಡೆಯಲ್ಲಿ ಯತಿಯ ವಿನಯವಿಲ್ಲ. ಮುನಿಯ ನಿಲುವಿನ ಭಂಗಿಯು ನೃಪದರ್ಪ ಸಂಗದಿಂದ ಕೂಡಿದೆ, ಕೊಡೆ ಮತ್ತು ಕಮಂಡಲುಗಳು ಏಕೊ ಪರಿಚಿತ ಪದಾರ್ಥಗಳಂತಿಲ್ಲ. ಅಪರಿಚಿತನಾದ ಆ ಮುನಿ ಜನಸ್ಥಾನದವನು ಅಲ್ಲ! ನೋಡುತ್ತಿದ್ದಂತೆ ಅವನು ಉಣುಗೋಲುಗಳನ್ನು ಪಕ್ಕಕ್ಕೆ ಸರಿಸಿ ಬೇಲಿಯನ್ನು ದಾಟಿ ಹತ್ತಿರಕ್ಕೆ ಬಂದನು. ಓಂಕಾರದೊಡನೆ ಸ್ವಸ್ತಿ ವಾಚನ ಮಾಡಿದನು. ಮನದ ಬಾವಿಯನ್ನು ರೆಪ್ಪೆಹುಲ್ಲಿನಿಂದ ಅಡಕಿ ಮುಚ್ಚಿ ಬಕಧ್ಯಾನದಂತೆ ಹೊಂಚು ಹಾಕಿ ನಿಂತಲ್ಲಿ ನಿಂತನು.

ಸೀತೆಯು ಯತಿಗೆ ಉಚಿತವಲ್ಲದ ಕಂಪು ಏನಿದು? ಎಂದು ಸಂಶಯಭೀತಳಾಗಿ ಗಾಬರಿಗೊಂಡು ಸುತ್ತೆತ್ತಲು ನೋಡುತ್ತಿದ್ದಳು. ಆಗ ರಸಿಕ ರಾಕ್ಷಸನು ಕಣ್ಣು ತೆರೆದನು. ಆ ಪರವಧು ಪ್ರೇಮಿಯು ನೋಟದಿಂದಲೇ ಸೆಳೆಯುವಂತೆ, ಹೀರುವಂತೆ ಆ ಚೆಲುವೆಯನ್ನು ನೋಡಿದನು. ಲತಾಂಗಿಯು ಆ ಕಣ್ಣಿಗೆ ನಡನಡನೆ ನಡುಗಿದಳು. ನಿಶ್ಚಲಳಾಗಿ ನೆಲಕ್ಕೆ ನಾಟಿ ಹೋದಂತಾದಳು. ತಾನು ನೆಟ್ಟು ಪೋಷಿಸಿದ ಬಳ್ಳಿಯನ್ನು ಬಿಟ್ಟಿರದೆ ನಂಬಿ ಅಪ್ಪಿಕೊಂಡು ನಿಂತಳು.

ಭೀಕರವಾದ ಆ ದೈತ್ಯನ ದೃಷ್ಟಿಯ ಭೀತಿ ಬಡಿದಂತೆ ಗಾಳಿಯು ಬೆದರಿ ನಿಂತಿತು. ಗೋದಾವರಿಯ ಪ್ರವಾಹದ ನಡೆ ಹೆಪ್ಪಾಯಿತು. ಮರಬಳ್ಳಿಗಳು ಚಲನಾರಹಿತವಾದವು. ಪಕ್ಷಿಗಳ ಇಂಚರವು ಶಮನವಾದವು. ಪರ್ವತಾರಣ್ಯಗಳು ಸ್ತಬ್ಧವಾದವು. ಪ್ರಕೃತಿಯು ತಾನು ಜನಕಜೆಯ ಹೃದಯದ ಪ್ರಿಯೆ ಎನ್ನುವಂತೆ, ಪ್ರತಿರೂಪವೆನ್ನುವಂತೆ ನಿಶ್ಚೇಷ್ಟಿತವಾಯಿತು!

'ಭದ್ರೆ ನಿನ್ನ ಅಂಗಮುದ್ರೆಯು ಬೆದರಿದಂತಿದೆ. ನಿನ್ನ ಭಯ ನಿಷ್ಕಾರಣವಾದುದು. ಮಂಗಳಾಂಗಿ (ನವನೀತ ನವ ಕೋಮಲಾಂಗಿ ಎಂದು ಹೇಳಲು ನನ್ನ ಉಡುಪಿನದೆ ಒಂದು ತಡೆ!) ನಿನ್ನ ರೀತಿಯ ಮೋಹನ ಸುಂದರಿ ಹೀಗೆ ಈ ನಿರ್ಜನವಾದ ಕಾಡಿನಲ್ಲಿ ಒಬ್ಬಳೇ ಹೇಗೆ ಬದುಕುತ್ತಿರುವೆ? ನಿನಗೆ ರಕ್ಷೆಯಿಲ್ಲವೆ?...'

ಮೋಸವನ್ನು ತಿಳಿದ ಸುದತಿ ಸೀತೆಯು ಅಕಟಕಟ, ಕೆಟ್ಟೆನಲ್ಲ. ಇವನು ಯಾರೋ ಮಾಯಾವಿ ಯತಿ! ಕೆಟ್ಟದ್ದನ್ನು ಆಶಿಸಿ ಬಂದಿರುವುದು ನಿಜ. ಪತಿಯೊಡನೆ ಮೈದುನನು ಬರುವವರೆಗೂ ಈತನನ್ನು ನುಡಿಯ ನೆಪವೊಡ್ಡಿ ತಡೆಯುವುದೇ ನೀತಿ' ಎಂದು ಆಲೋಚಿಸಿದಳು, ನಗೆಗೂಡಿ ರಾವಣನ ಮನಕ್ಕೆ ಪ್ರೀತಿ ಉಕ್ಕಿ ಅನುರಾಗದ ಓಕುಳಿ ಎರಚುವಂತೆ ಮಾತನಾಡಿದಳು.

'ಯತಿವರ್ಯನೆ, ಸಂಕಟದ ಸಮಯಕ್ಕೆ ಬಂಧುವಂತೆ ಬಂದಿರುವೆ. ನಾನು ರಾಜರ್ಷಿ ಜನಕನ ಕುಮಾರಿ; ದಶರಥನಿಗೆ ಸೊಸೆ.' ಎಂದು ಹೀಗೆ ಮೊದಲಾಗಿ ತಾನು ಕಾಡಿಗೆ ಬಂದ ಕಥೆಯ ಸಮಸ್ತವನ್ನು ವಿವರವಾಗಿ ಹೇಳತೊಡಗಿದಳು. ಮೋಸವನ್ನು ತಿಳಿಯದ ಮುಗ್ಧ ಬಾಲೆಯು ಕಪಟಕ್ಕೆ ಉಚಿತವಲ್ಲದ ರೀತಿಯಲ್ಲಿ ನಡುನಡುವೆ, ಕ್ಷಣಕ್ಷಣಕ್ಕೆ ಕಣ್ಣು ಬೆದರಿ ಕಾಡುದಾರಿಯ ಹಾದಿ ನೋಡುತ್ತಿದ್ದಳು.

ಮುಗ್ಧೆಯ ಆ ತಂತ್ರವನ್ನು ತಿಳಿದ ವಂಚಕ ಲಂಕೇಶ್ವರನು ಮುಗುಳುನಗೆ ನಕ್ಕನು. ಕಾಲಹರಣ ಮಾಡುತ್ತಿರುವ ಚಂಚಲದ ಕುಡಿನೋಟದ ಕಣ್ಣಿನವಳನ್ನು ಕುರಿತು,

'ಚಿಗರಿಗಣ್ಣಿನವಳೆ, ನಿನ್ನನ್ನು ಇನ್ನು ವಂಚಿಸುವುದು ಉಚಿತವಲ್ಲ. ರಮಣಿ, ನಿನಗೂ ಈ ಗುಟ್ಟು ಸರಿಯಲ್ಲ. ನಾನು ಲಂಕಾಧಿಪತಿ; ದಶಗ್ರೀವ ಎಂಬ ಬಿರುದು ಹೊಂದಿರುವ ಪ್ರಸಿದ್ಧ ರಾವಣ. ದಶರಥ ಸುತನಿಗಿಂತ ಮೊದಲು ನಿನ್ನನ್ನು ಮೆಚ್ಚಿ ಬಂದವನು! ಬಿಲ್ಲು ಮುರಿಯುವ ಬಲ್ಮೆಯನ್ನು ಪಡೆದು ಬರುವಷ್ಟರಲ್ಲಿ ನಿನ್ನ ತಂದೆಯಿಂದ ವಂಚಿತನಾದೆ, ಹಾಗಿಲ್ಲದಿದ್ದರೆ ಜನಕಸುತೆಯೆ, ನೀನು ಇಂದು ನನ್ನ ಅರಸಿಯಾಗಿರುತ್ತಿದ್ದೆ. ಮೋಸದಿಂದ ರಾಮನು ಒಯ್ದಿರುವ ನನ್ನವಳನ್ನು ಮರಳಿ ನಾನು ಒಯ್ಯಲು ಬಂದಿದ್ದೇನೆ. ಸೀತೆಯೆ, ನಾನು ವೇಷದಿಂದಲೂ, ಆಂತರಿಕವಾದ ಅನುಭವದಿಂದಲೂ ಭಿಕ್ಷುಕನಾಗಿದ್ದೇನೆ. ಸುಂದರಿಯೆ ಕೃಪೆ ಮಾಡಿ ನನ್ನೊಡನೆ ಲಂಕೆಗೆ ಬಾ. ನೀನು ಮರುದಿನವೇ ರಾಮನನ್ನು ಮರೆಯುವೆ!'

ಎಂದು ಹೇಳಿದ ದಶಶಿರನು ಲೋಕವೈಭವವೆಲ್ಲ ಆಕಾರಗೊಂಡ ತನ್ನ ನಿಜರೂಪವನ್ನು ತೋರಿಸಿದನು. ಯುವತಿಯು ಅದನ್ನು ನೋಡಿ ಹೇಸಿ ಮುಖ ತಿರುಗಿಸಿದಳು. ಪೃಥ್ವಿಯ ಕುವರಿಗೆ ಭೀತಿ ಮರೆಯಾಗಿ ಕೋಪಜ್ವಾಲೆ ಉರಿದೇಳಲು ಹೇಳಿದಳು:

'ನಿಲ್ಲಿಸು, ನಿಶಾಚರ ಕುಲೇಶ್ವರನೆ ಆಡದಿರು ಅಸಹ್ಯವನ್ನು. ರಾಕ್ಷಸ ಕುಲಕುಠಾರನೆ ಅಧರ್ಮವನ್ನು ನುಡಿಯದಿರು. ನಾಯಿಯು ಐರಾವತವನ್ನು ಕಂಡು ಎದುರಿಸುವ ರೀತಿ ನೀನು ನನ್ನ ಮನದನ್ನನನ್ನು ನೋಡಿ ಹೊಟ್ಟೆಕಿಚ್ಚು ಪಡುತ್ತಿರುವೆ. ನರಿಯು ಸಿಂಹಿಣಿಯನ್ನು ಕಾಮಿಸಿದೆ. ಹದ್ದು ನವಿಲಿನ ಸಂಗ ಸುಖವನ್ನು ಅಪೇಕ್ಷಿಸಿದೆ. ಅಯ್ಯ, ಮನದನ್ನ ಹೊನ್ನು; ನೀನೊ ಕಬ್ಬಿಣ. ರಘೂದ್ವಹನು ಶ್ರೀಗಂಧದ ಲೇಪನಕ್ಕೆ ಸಮ; ನೀನೊ ಹೊಲೆ ಕೆಸರಿಗೆ ಸಮ!'

ತಿರಸ್ಕೃತಿಯ ಆಯುಧವನ್ನು ಹರಿತಗೊಳಿಸುತ್ತಿದ್ದರೂ, ನಡನಡನೆ ನಡಗುತ್ತಿದ್ದ ಹೆದರಿದ ಕಣ್ಣುಗಳ ಅಬಲೆಯು ಹುಬ್ಬುಗಂಟಿಕ್ಕಿದ್ದನ್ನು ಕೆಂಪುಗಣ್ಣಿನ ರಾಕ್ಷಸೇಂದ್ರನು ನೋಡಿದನು.

'ನಿಲ್ಲಿಸು, ಎಲೌ ಮುಗ್ಧೆ, ನಿನ್ನ ಉಪಮೆಗಳ ಪ್ರತಾಪವನ್ನು ಸಾಕು ಮಾಡು. ಹೇಳು, ಹೆಣ್ಣಿಗೆ ಬೈಗುಳವೇ ಸಾಹಸವಲ್ಲವೆ? ಪ್ರಣಯ ಪ್ರಸಂಗದಲ್ಲಿ ಕೊಂಕುನುಡಿಯು ಚುಂಬನಕ್ಕೆ ಸಮಾನ ಎಂದು ಹೇಳುವಾಗ, ಸುಂದರ ಸ್ತ್ರೀಯೆ ನಿನ್ನ ಕೊರಳಿನ ಸುಧೆಯ ವಿಷಕ್ಕೆ ನಾನು ಕೋಪಿಸಿಕೊಳ್ಳುವುದಿಲ್ಲ. 'ಒಲ್ಲೆ' ಎನ್ನುವುದು ನಲ್ಲೆಯೊಪ್ಪಿಗೆ. ಅದರಂತೆ ನಿನ್ನ ತುಟಿಯು ನಿಂದೆಯನ್ನು ನಟಿಸುತ್ತ ನಿನ್ನೆದೆಯಲ್ಲಿರುವುದನ್ನು ಹೇಳುತ್ತಿದೆ. ಯೌವನ ಲಾವಣ್ಯೆಯೆ, ಪ್ರಣಯಕ್ಕೆ ಬಲಾತ್ಕಾರವು ಒಮ್ಮೊಮ್ಮೆ ಇಷ್ಟ ಸತ್ಕಾರ ಎಂದು ಹೇಳುವರು. ನಾನು ಈ ದಿನ ಏನು ಮಾಡುತ್ತಿರುವೆನೊ, ಅದಕ್ಕಾಗಿ ಮುಂದೆ ನೀನು ನನ್ನನ್ನು ವಂದಿಸುವೆ. ಬಾ, ನನ್ನ ಲಂಕಾ ಲಕ್ಷ್ಮಿ ಬಾ.'

ಎಂದು ಪಾಪಕ್ಕೆ ಚುರುಕುಳ್ಳ ವಿನೋದ ಲೇಪವನ್ನು ಬಳಿಯುತ್ತ ಮಾಯಾವಿಯು ಕೈಗೆ ಕೈ ಸೇರಿಸಿ ಚಪ್ಪಾಳೆ ತಟ್ಟಿದನು.

ಹೇ ಹತಭಾಗ್ಯೆ, ಲಕ್ಷ್ಮಣ ಮಹಾಬಾಹು ರಕ್ಷೆಯಂ ನೂಂಕಿದಾ ನಿನಗೆ ಪೇಳೆಂತು ರಕ್ಷಣೆ.

ಆಗ ಆದ ಅದ್ಭುತವನ್ನು ಏನೆಂದು ಹೇಳುವುದು? ಕೈ ಕುಟ್ಟಿದುದೆ ತಡ ಒಂದು ಮಂಜಿನ ಮೋಡವು ಹುಟ್ಟಿ ಸುತ್ತಲೂ ದಟ್ಟೈಸಿತು. ಕೋಮಲೆಗೆ ತೇಲುಗಣ್ಣಾಯಿತು. ಏನೊಂದನ್ನು ಕಾಣದಂತಾಗಿ ಭಯಗೊಂಡು ದಿಗ್ಭ್ರಾಂತಳಾಗಿ ಪರ್ಣಶಾಲೆಯ ಬಳ್ಳಿ ಸೋದರಿಯನ್ನು ತಬ್ಬಿದಳು! ಹೇ ಹತಭಾಗ್ಯೆಯೆ, ಲಕ್ಷ್ಮಣನ ಬಾಹುರಕ್ಷೆಯನ್ನು ನೂಕಿದ

ನಿನಗೆ ಕೈಲಾಸವನ್ನು ಎತ್ತಿ ತೊನೆದಾಡಿದ ಬಾಹು, ರಾಹುವಿನಂತೆ ಎಳೆಯುತ್ತಿರಲು– ಬಳ್ಳಿ ತೋಳು ರಕ್ಷಣೆ ನೀಡಬಲ್ಲದೆ?

ಮಾಡನ್ನು ಅಪ್ಪಿಕೊಂಡಿದ್ದ ಬಳ್ಳಿಯ ಕೈಗಳು ಒಲ್ಮೆಯ ನಲ್ಮೆಯ ಅಪ್ಪುಗೆಯಿಂದ ಬಿಗಿಯಾದ ಹಿಡಿತದಿಂದ ಅಗಲುವಂತೆ ಪರಪರನೆ ಹರಿದವು. ಲತೆಯನ್ನು ಅಪ್ಪಿದ ಬಳ್ಳಿಯನ್ನು ಮದಿಸಿದ ಆನೆಯು ಸೊಂಡಿಲಿನಿಂದ ಎಳೆಯುವಂತೆ–ಹೂಬಳ್ಳಿಯ ಜೊತೆಗೂಡಿ ಮೋಹವನ್ನುಂಟು ಮಾಡುವವಳನ್ನು ಉನ್ಮತ್ತ ರಾವಣನು ಎಳೆದುಕೊಂಡು ಆಗಸಕ್ಕೆ ನೆಗೆದನು. ಬಳ್ಳಿಯು ಮುಳ್ಳು ಬೇಲಿಯತನಕ ಅಂಗಳದಲ್ಲೆಲ್ಲ ಬಿದ್ದಿತು!

ಸೀತೆಯು 'ಓ ಲಕ್ಷ್ಮಣಾ! ಓ ಲಕ್ಷ್ಮಣಾ! ಲಕ್ಷ್ಮಣಾ, ಲಕ್ಷ್ಮಣಾ ಓ' ಎಂದು ಹುಲಿ ಹಿಡಿದ ಹೆಣ್ಣು ಚಿಗರೆ ಒರಲುವಂತೆ ಒರಲಿದಳು. ಆ ಆಕ್ರಂದನವು ದೇವಿಯ ಕೊರಲ ಬುಗ್ಗೆಯಿಂದ ನೆತ್ತರಂತೆ ಚಿಮ್ಮಿ ಹೊಮ್ಮಿ ಉಕ್ಕಿ ಹರಿಯಿತು. ಅದನ್ನು ಲಂಕೇಶ್ವರನು ಲೆಕ್ಕಕ್ಕೆ ತೆಗೆದುಕೊಳ್ಳುವನೆ? ಝಗಝಗಿಸುವ ಕೆಂಡದ ಉರಿಯ ಚೆಲುವಿಗೆ ಮರುಳುಗೊಳ್ಳುತ್ತ ಅದನ್ನು ಪೇರಿಸಿ ಸೆರಗಿನಲ್ಲಿ ಇರುಕಿಕೊಂಡು, ಕದ್ದು ಓಡುವ ಹುಡುಗಿಯ ರೀತಿಯಲ್ಲಿ ಅವನು ಬಾನಿನ ತೇರನ್ನು ಏರಿ ಹಾರಿದನು. ಆಗ ಬಿಸಿಲು ಪಂಚವಟಿ ಧಾತ್ರಿಯನ್ನು, ಪರ್ಣಕುಟಿ ಶೂನ್ಯವನ್ನು, ಗೋದಾವರಿಯ ನೀರಿನ ವಿಶಾಲತೆಯನ್ನು ಮರಳಿ ಬೆಳಗಿತು.

ಮರಂ ಮುರಿದು, ಪಳು ನಡು ನಡುಗಿ, ಕಾಡುಗೋಳಾಗಿ ಬಿದ್ದನು ಜಟಾಯು

ಅರಣ್ಯ ದೇವತೆಯು ಸೀತೆಯ ಆಕ್ರಂದನವನ್ನು ಕೇಳಿದಳು. ದುಷ್ಟಕಾರ್ಯವನ್ನು ಕಂಡು ಮೂರ್ಛೆ ಹೋದಳು. ಹೆದರಿ ದಿಗ್ಭ್ರಮೆಯಾಗಿ ಅದ್ರಿ ದೇವನನ್ನು ಕೂಗಿದಳು. ಪರ್ವತೇಂದ್ರನು ಸಹ ವ್ಯಾಕುಲಗೊಂಡು ಬೊಬ್ಬೆಯಿಟ್ಟು ಅಬ್ಬರಿಸಿದನು. ಅಖಿಲ ಲೋಕಸಾಕ್ಷಿಯಾದ ಆಕಾಶವನ್ನು ಕೂಗಿ ಕರೆದನು. ಕಾಡು ಬೆಟ್ಟ ಬಾನೆಲ್ಲವು ಒಕ್ಕೊರಲಿನಿಂದ 'ಓ..ಲಕ್ಷ್ಮಣಾ ಲಕ್ಷ್ಮಣಾ ಲಕ್ಷ್ಮಣಾ ಓ.... ಓ.... ಓ' ಎಂದು ಕೂಗಿದವು.

ದೂರದ ಮರದ ಮಂಚದಲ್ಲಿ ಹಗಲು ನಿದ್ದೆಯಲ್ಲಿದ್ದ ಜಟಾಯುವು ತೂರ್ಯವಾದ್ಯಂತಹ ಆ ಪ್ರಕೃತಿ ರೋದನವನ್ನು ಕೇಳಿ ಎದ್ದನು. ಅವನು ಆಡಿಸಿದ ರೆಕ್ಕೆಗಳ ಧ್ವನಿಗೆ ಗಿರಿಗಹ್ವರಗಳು ಗುಡುಗಿದವು. ಅವನು ಚೀರಿದ ದನಿಗೆ ಪುಷ್ಪಕ ವಿಮಾನದ ಒಳಗೂ ಮಾರ್ದನಿಸಿತು. ಅವನು ಕುಳಿತ ಹೆಮ್ಮರವು ನಡುಗಿತು.

ಭೀಕರ ಕೊಕ್ಕಿನ ಭಯಂಕರ ಭಯವನ್ನುಂಟು ಮಾಡುವ ಮೊನಚಾದ ಉಗುರುಗಳ ವೀರ ಜಟಾಯುವು ರಾಕ್ಷಸನ ರಥವನ್ನು ಅಟ್ಟಿಸಿಕೊಂಡು ಹೋದನು! ಬಿರುಗಾಳಿಯ ಉರುಬು ವೇಗದಿಂದ ಬೆನ್ನಟ್ಟಿದನು. ಮುನ್ನುಗ್ಗಿ ಹೋಗುತ್ತಿದ್ದ ವಿಮಾನವನ್ನು ಒನಕೆಯಂತಹ ಪಾದಗಳ ಆಘಾತದಿಂದ ಅಪ್ಪಳಿಸಿದನು. ರಪ್ಪರಪ್ಪನೆ ಒಂದೆರಡು ಸಲ

ಒದೆ ಬೀಳಲು ಪುಷ್ಪಕ ವಿಮಾನವು ಒರಲಿತೊ ಎಂಬಂತೆ ಅದರ ಲಘುವಾದ ಗಂಟೆಗಳ ಸರವು ಘೈಲೆಂದು ಧ್ವನಿಗೈದವು. ಅದು ಎರಗಿದ ರಭಸಕ್ಕೆ ತೇರು ತತ್ತರಿಸಿ ಹೊಯ್ದಾಡಿತು. ಭೂಮಿಗೆ ಉರುಳಿತು ಎಂಬಂತೆ ಕೆಳಕೆಳಕ್ಕೆ ಬೀಳುತ್ತ ನಿಧಾನವಾಗಿ ಸೈರಿಸಿಕೊಂಡಿತು. ಮತ್ತೆ ರೊಯ್ಯನೆ ರಭಸದಲ್ಲಿ ಸರಳ ಕೌಶಲದಲ್ಲಿ ಗಗನ ಮಂಡಲಕ್ಕೆ ಏರಿತು.

ಪಾರಿವಾಳದ ಮೇಲೆ ಗಿಡುಗವು ಎರಗಲು ಅದರ ಹರಿದ ಪುಕ್ಕಗಳು ಉದುರುವಂತೆ ವಿಮಾನದಿಂದ ಅದನ್ನು ಅಲಂಕರಿಸಿದ್ದ ಕಲಾ ಜೋಡಣೆಗಳು ಕೆಟ್ಟು ಕೆದರಿ ಉದುರಿದವು! ಅದನ್ನು ನೋಡಿದ ಜನಕಾತ್ಮಜೆಗೆ ಪ್ರಾಣ ಮರಳಿ, ಹೃದಯ ಅರಳಿತು. ದೈತ್ಯೇಂದ್ರನಿಗೆ ಆಶ್ಚರ್ಯವಾಗಿ ಕೋಪಗೊಂಡು ಸೊಂಟದಲ್ಲಿ ಸಿಕ್ಕಿಸಿ ಕೊಂಡಿದ್ದ ಕತ್ತಿಯನ್ನು ಸೆಳೆದು ಬೀಸಿದನು! ಜಟಾಯುವು ಪಕ್ಕಕ್ಕೆ ಚಿಮ್ಮಿ ಸಿಡಿದು ಅದರಿಂದ ತಪ್ಪಿಸಿಕೊಂಡನು. ಪುನಃ ಉಗುರುಗಳಿಂದ ರಕ್ಕಸನ ತಲೆಯನ್ನು ಕುಕ್ಕಿದನು. ರತ್ನಖಚಿತವಾದ ಹೊಳೆಯುವ ಪುಲಸ್ತ್ಯನ ಕಿರೀಟದ ಮಣಿಗಳು ಕಿಡಿಗಳನ್ನು ಕಾರಿ ಸಿಡಿದು ಉರುಳಿದವು. ದಾನವನ ನೀಳ ಸುಂದರ ನೀಲ ದೇಹದಿಂದ ಕೆಂಪಾದ ರಕ್ತ ಹರಿಯಿತು.

ಗಿಡುಗವು ಕುಟುರವಕ್ಕಿಯನ್ನು ಬಿಡದೆ ಬೆನ್ನಟ್ಟುತ್ತ ಓಡಿಸಿ ಒದೆಯುವಂತೆ ಜಟಾಯು ಮತ್ತೆ ಅಪ್ಪಳಿಸಿದನು. ಆಗ ಅದರ ರೆಕ್ಕೆಗಳಿಂದ ಹೊಮ್ಮಿದ ಬಿರುಗಾಳಿಯ ಸುಳಿಗೆ ಸಿಕ್ಕಿ ಪುಷ್ಪಕವು ತಿರ್ರನೆ ಹುಚ್ಚು ಹಿಡಿದಂತೆ ತಿರುಗಿತು. ಅದರಿಂದ, ರಾವಣನ ತಲೆಗೆದರಿ, ತೊಟ್ಟ ತೊಡಿಗೆಗಳು ಉದುರಿ, ಉಟ್ಟ ಉಡುಗೆ ಹರಿಯಿತು. ಅವನು 'ಕ್ಷುಲ್ಲಕವೆಂದು ತಿಳಿದದ್ದು ಕಠಿನವಾಯಿತಲ್ಲ! ಹಾಳಾದ್ದು ಎಲ್ಲಿಯ ಹದ್ದು? ಒಂದೇ ಹೊಡೆತದಿಂದ ಕೊಲ್ಲುತ್ತೇನೆ.' ಎಂದು ಕೊಂಡು, ವಸ್ತ್ರವನ್ನು ಒದರಿ ರಾಮನ ಪತ್ನಿಯನ್ನು ಒಂದು ಕೈಯ್ಯಲ್ಲಿ ಭದ್ರವಾಗಿ ಹಿಡಿದುಕೊಂಡನು. ಘೋರ ವಿಷದ ವಜ್ರಾಯುಧವನ್ನು ತೆಗೆದುಕೊಂಡು ವಿಹಂಗಮ ಜಟಾಯುವಿನ ಮೇಲೆ ಎರಗಿದನು.

ಬೆದರಿದಳು ಸೀತೆ; ಚೀತ್ಕರಿಸಿದಳು ಭೀತೆ! 'ದೇವಿ ರಾಕ್ಷಸನಿಗೆ ರಕ್ಷೆಯಾದಳೇ? ಹಾ..!' ಎಂದು ಸಂಪಾತಿಯ ಸಹೋದರನು ಸಿಡಿಲಿನಂತಹ ಉಗುರು ಕೊಕ್ಕಿನ ಸಾವಿನ ಹಿಡಿತವನ್ನು ಸಡಿಲಿಸಿದನು. ಅಯ್ಯಯ್ಯೊ, ರಕ್ಕಸನ ಕತ್ತಿ ರೆಕ್ಕೆಯನ್ನು ಕತ್ತರಿಸಿತು!

ಕಣ್ಣು ಮುಚ್ಚಿ ಗೋಳಿಡುತ್ತಿದ್ದ ಜಾನಕಿಯು, ಮರ ಮುರಿದು ಕಾಡು ನಡು ನಡುಗಿ ಗೋಳಿಡುತ್ತಿರಲು, ಜಟಾಯುವು ರಾವಣನ ಆಯಸ್ಸು ಬೀಳುವಂತೆ ಬಿದ್ದ ಸದ್ದನ್ನು ಆಲಿಸಿದಳು!

ಶಿವ ಶಿವಾ ಸೂರೆವೋದೆವೊ ನಾಂ ನಿಶಾಚರರ ಕೈತವಕೆ!

ಈ ಕಡೆ ಪುಷ್ಪಕವು ಓಡಿತು. ಆ ಕಡೆ ಸೌಮಿತ್ರಿಯು ಜನಕನಾಥನನ್ನು ಹುಡುಕುತ್ತ ಕೂಗಿ ಕರೆಯುತ್ತ ಓಡಿದನು. ಹೊತ್ತೇರುತ್ತಿರಲು ಅತ್ತಿಗೆಯ ಕ್ಷೇಮದಿಂದ ಹಿಂತಿರುಗಲು

ಮನಸ್ಸಾದರೂ ಅಣ್ಣನನ್ನು ಕಾಣದೆ ಹಿಂದಿರುಗುವುದಕ್ಕೆ ಅಂಜುತ್ತ, ಬೆಟ್ಟದಿಂದ ಬೆಟ್ಟಕ್ಕೆ ಅಲೆದಾಡಿದನು. ನಿಂತು ನಿಂತು 'ಓ...ಲಕ್ಷ್ಮಣಾ ' ಎಂಬ ಕೊರಲ ದನಿ ಕೇಳಿದ ಸ್ಥಳವನ್ನು ಊಹೆಯಿಂದ ಗೊತ್ತು ಹಚ್ಚುತ್ತ ಮತ್ತೆ ಮುಂದೋಡಿದನು. ಶಂಖೆಯುಂಟಾಗಿ ನಿಂತು ಕರೆದನು. ಮನಸ್ಸಿನಲ್ಲಿ ಏನೋ ಮಹದ್ ಭೀತಿ ಸಂಚಲನಗೊಳ್ಳಲು, ದೃಢ ಶರೀರದ ಊರ್ಮಿಳೆಯ ಕಾಂತನು ನಡುಗಿದನು. ದುಃಖದಿಂದ ತನ್ನ ಹಣೆಯ ಬರೆಹವನ್ನು ಬೈಯ್ಯುವ ರೀತಿಯಲ್ಲಿ 'ಓ...ಲಕ್ಷ್ಮಣಾ!' ಎಂಬ ಹೆಸರಿನಿಂದ ತನ್ನನ್ನು ತಾನೇ ಶಪಿಸಿಕೊಂಡನು.

ಅಷ್ಟರಲ್ಲಿ ರಾಮಚಂದ್ರನು 'ತನ್ನ ದನಿಯಿಂದ ಸೌಮಿತ್ರಿಯನ್ನು ಕರೆದು ಅರಚುತ್ತ ಮಾರೀಚನು ಪ್ರಾಣಬಿಟ್ಟಿದ್ದಾನೆ. ಈಗ ನನ್ನ ದನಿ ಕೇಳಿದರೆ ಲಲನೆ ಲಕ್ಷ್ಮಣರು ರಾಕ್ಷಸ ಮಾಯೆಗೆ ಭಯಪಟ್ಟರೆ ಏನು ಗತಿ' ಎಂದುಕೊಂಡು ಆಗುವ ಕೇಡನ್ನು ನೆನೆದು ಕಳವಳಿಸಿದನು. ಕೇಡು ಸಂಭವಿಸುವ ಮೊದಲೇ ಪರ್ಣಶಾಲೆಗೆ ಹೋಗುವೆನೆಂದು, ದಣಿವಾದುದನ್ನು ಎಳ್ಳಷ್ಟೂ ಲೆಕ್ಕಿಸದೆ ಓಡೋಡಿ ಬರುತ್ತಿದ್ದನು. ಆಗ ತಮ್ಮನ ಕರೆಯನ್ನು ಆಲಿಸಿದನು.

'ಅಕ್ಕಟಾ ಕೇಡಾಯಿತಯ್ಯೋ! ಲಲನೆ ಸೆರೆ ಸಿಕ್ಕಿ ಹೋದಳೆ? ಮಹಾಚತುರ ಊರ್ಮಿಳೇಶನು ಮೋಸ ಹೋದನೆ?,' ಎಂದು ಕೊಂಡು ಬರುತ್ತಿದ್ದನು. ಆಗ ಪುನಃ ದುಶ್ಯಕುನದಂತೆ 'ಓ..ಲಕ್ಷ್ಮಣಾ' ಎಂದು ಕೇಳಿದುದನ್ನು ಏನೆಂದು ಹೇಳುವುದು! ಮತ್ತೆ ಇದೇನಿದು ಮಾಯೆ? ನೋಡುವೆ ಎಂದು ಓಡಿದನು. 'ಓ...ಲಕ್ಷ್ಮಣಾ' ಎಂದು ತಮ್ಮನನ್ನು ಕೂಗಿದನು. ಆ ದಟ್ಟವಾದ ಕಾಡಿನಲ್ಲಿ ಓಡೋಡಿ ಬರುತ್ತ ಅವನು ಓಗೊಟ್ಟನು. ಅವನನ್ನು ಕಂಡೊಡನೆ,

'ಓ... ಲಕ್ಷ್ಮಣಾ, ಕೇಡಾಯಿತಲ್ಲಾ! ದೇವಿಯೊಬ್ಬಳನ್ನೇ ಬಿಟ್ಟೇಕೆ ಬಂದೆ? ಕೊರಳನ್ನು ಕೊಯ್ದೆ! ಹಾ ಕೊಂದೆ, ನೀನು ಕೊಂದೆ! ಹಿಂತಿರುಗು, ಎಲೆಮನೆಗೆ ಬೇಗ ನಡೆ. 'ಶಿವ ಶಿವಾ, ನಾವು ಆ ರಾಕ್ಷಸರ ಕಪಟಕ್ಕೆ ಲೂಟಿಯಾಗಿ ಹೋದೆವು.' ಎಂದು ಹೇಳಿದನು. ಅವರು ಶೀಘ್ರದಲ್ಲಿ ಸಂಕ್ಷಿಪ್ತವಾಗಿ ತಂತಮ್ಮಲ್ಲಿ ನಡೆದುದನ್ನು ಮಾತಾಡಿ ಕೊಂಡರು. ಈರ್ವರೂ ಅತಿವೇಗದಲ್ಲಿ ಧಾವಿಸಿ ಪಂಚವಟಿಯ ಪರ್ಣಕುಟಿ ತಲುಪಿದರು.

'ಕೂಗಿದುದು ನೀನಲ್ಲವೆ?'

'ಆ ರಾಕ್ಷಸನು ಸತ್ತ'!

'ಅದು ನಿಶಾಚರ ಮಾಯೆ ಎಂದು ನಾನು ಎಷ್ಟೆಷ್ಟು ಹೇಳಿದರೂ ..'

'ಹಾಗೆ ಹೇಳಿ ನಿನ್ನನ್ನು ಅಟ್ಟಿದಳೆ'

'ಅಲ್ಲದಿದ್ದರೆ, ನಾನು ಹೀಗೆ ಬರುತ್ತಿದ್ದೆನೆ?'

‘ಏನೇ ಆದರೂ, ತಪ್ಪಿ ನಡೆದೆ. ಹೆಣ್ಣು ಹೇಳಿದುದಕ್ಕೆ ಕೋಪಿಸಿಕೊಂಡೆ; ನನ್ನ ಅಪ್ಪಣೆಯನ್ನು ಮೀರಿದೆ’

‘ಅಹುದು ಅಣ್ಣಯ್ಯ, ತಪ್ಪಾಯ್ತು, ಅತ್ತಿಗೆಯ ಮಾತಿನ ಮೊನಚು ಮನಸ್ಸನ್ನು ಕದಡಿತು.’

‘ಕೌಶಲ್ಯೆಯ ಆಶೀರ್ವಾದ ನಮಗಿರಲಿ! ಸತಿಗೆ ಕೇಡಾಗದಿರಲಿ!’

‘ಅಣ್ಣಾ, ಜಟಾಯುವಿರುವಾಗ ನಮ್ಮ ರಕ್ಷಣೆಗೆ ಯಾವ ಭೀತಿ?

‘ಸೌಮಿತ್ರಿ, ಆದರೂ ಏಕೋ ನಾನೆಂದೂ ಅನುಭವಿಸದ ಒಂದು ಅಳುಕು ಕರುಳನ್ನು ಕಿವುಚುತ್ತಿದೆ!’

‘ನನಗೂ ಅದೇ ರೀತಿಯ ಭಯ’

‘ಅದೇನು ಸದ್ದು ತಮ್ಮಾ?’

‘ದೂರದಲ್ಲಿ ಬಿರುಗಾಳಿ ಭೋರ್ಗರೆಯುತ್ತಿದೆ’

‘ಚೀತ್ಕಾರವಾಯಿತು ಅಲ್ಲವೆ?

‘ಅಲ್ಲಲ್ಲ. ಕೊಂಬೆ ಕೊಂಬೆಗೆ ಉಜ್ಜಿತು !’

‘ಯಾರೋ ಕರೆದಂತಾಯಿತು!’

‘ಮಂಗಟ್ಟೆ ಹಕ್ಕಿ ಕೂಗಿತು; ಬೇರೆ ಏನೂ ಅಲ್ಲವಯ್ಯ!’

“ಆಗ ಇರದ ತಾಪ ಈಗ ಹೇಗೆ ಏರುತ್ತಿದೆ?’

‘ಹಾಳು ದಿನ!’

‘ಊರಿಗೆ ಮರಳುವ ದಿನವೇ ಏನು ಕಷ್ಟ ಒದಗಿತು!’

‘ಆಶ್ರಮ ಹತ್ತಿರ ಬಂದಿತು’

‘ನನ್ನ ಎದೆಯ ಕಳವಳ ಹೆಚ್ಚುತ್ತಿದೆ!.. ..’

‘ಅದೊ ಅಲ್ಲಿ! ಪರ್ಣಕುಟಿ ಎಷ್ಟು ಶಾಂತವಾಗಿದೆ! ಆ ದುಃಸ್ವಪ್ನ ಸಾಕು. ನಿನ್ನ ಕಟ್ಟಾಜ್ಞೆಯನ್ನು ಇನ್ನೆಂದೂ ಉಲ್ಲಂಘಿಸುವುದಿಲ್ಲ! ಇದೇ ಮೊದಲು; ಇದೇ ಕೊನೆ!’

‘ದೇವಿ ಕಾಣಿಸುತ್ತಿಲ್ಲವಲ್ಲ!’

‘ಒಳಗಿರಲು ಹೇಳಿ ಬಂದೆನು’

‘ಅದೇಕೆ?...’

‘ಏನು?’

‘ನೋಡಲ್ಲಿ ಆ ಬಳ್ಳಿ!’

ರಾಘವನು ಆ ರೀತಿ ಭೀತಿಗೊಂಡ ಕಣ್ಣುಗಳಿಂದ ಹೇಳಲು ಲಕ್ಷ್ಮಣನು ಆ ಕಡೆ ನೋಡಲು ಹರಿದು ಬಿದ್ದ ಪರ್ಣಶಾಲೆಯ ಲತಾ ಸಹೋದರಿ ಕಾಣಿಸಿತು! ನುಗ್ಗುತ್ತ ಓಡಿದರು, ಕ್ಷೋಭೆಗೊಂಡು ತಡಬೆಯನ್ನು ದಾಟುತ್ತ, ಅಂಗಳದ ಉದ್ದಕ್ಕೆ ಬೇಲಿಯ ದಿಂಡುರುಳಿ, ಎಲೆ ಹರಿದು ಬೋಳಾಗಿ ಉದ್ದವಾಗಿ ಬಿದ್ದಿದ್ದ ಬಳ್ಳಿ ತೋಳಿನ ಭಯದ ಸಾಕ್ಷಿಯನ್ನು ಕಂಡರು.

ಬೆದರಿದನು ಲಕ್ಷ್ಮಣಂ ತನ್ನಣ್ಣನಾ ರುದ್ರ ದುಸ್ಥಿತಿಗೆ

ಹಸಿವು ಬಾಯಾರಿಕೆ ಬಳಲಿಕೆ ಚಿಂತೆಯಿಂದ ಮೊದಲೆ ತತ್ತರಿಸುತ್ತಿದ್ದ ಆ ಕ್ಷಾತ್ರ ವೀರನಿಗೆ ಎದೆ ಹಾರಿ ನೆತ್ತರು ಹೆಪ್ಪುಗಟ್ಟಿತು. ರಘುರಾಮನ ಧೈರ್ಯ ಕುಸಿಯಿತು! 'ಹಾ ಸೀತೆ! ಹಾ ಸೀತೆ! ಹಾ ಸೀತೆ!' ಎಂದು ಕರೆದು ನಿಟ್ಟುಸಿರು ಬಿಡುತ್ತ ಮೈ ಮರೆತು ಒಳಕ್ಕೆ ಓಡಿದನು. ಅತಿಯಾದ ಕಾತರದ ಅದು ಆ ಶೂನ್ಯದಿಂದ ಮಾರ್ದನಿಯಾಗಿ ಬಂದಿತಲ್ಲದೆ ದೇವಿ ಓಗೊಡಲಿಲ್ಲ. ಮೂಲೆ ಮೂಲೆಯನ್ನು ಹುಡುಕಿ, ಚಾಪೆ ಮಣೆಗಳನ್ನು ಎತ್ತಿ ಏನೊಂದೂ ಕಾಣದೆ, ತಿಳಿಯದೆ ಮರುಳಿನಿಂದ ಮೂರ್ಛೆ ಹೋದಂತಾಗಿ ನಿಂತುಕೊಂಡನು. ತನ್ನ ಅಣ್ಣನ ಆ ದುಸ್ಥಿತಿಗೆ ಬೆದರಿದ ಲಕ್ಷ್ಮಣನು 'ತಾಳ್ಮೆ, ತಾಳ್ಮೆ ಹೇ ಆರ್ಯ! ದೇವಿ ಗೋದಾವರಿಗೆ ..' ಎಂದು ಹೇಳುತ್ತಿರಲು 'ಗೋದಾವರಿಗೆ ದಿಟ! ಗೋದಾವರಿಗೆ ದಿಟ!' ಎಂದು ಕುಣಿ ಕುಣಿದು ಅಟ್ಟಹಾಸಗೈಯ್ದು ತಮ್ಮನು ಹೇಳಿದುದನ್ನು ಒಂದಿನಿತೂ ಗಮನಿಸದೆ ನದಿಯತ್ತ ಧಾವಿಸಿದನು.

ತಗ್ಗು ಉಬ್ಬಗಳನ್ನು ಎಡವಿ, ಮರಗಳನ್ನು ದಾಟಿ, ಬಳ್ಳಿ ಕಾಲಿಗೆ ಸಿಕ್ಕಿಕೊಂಡದ್ದನ್ನು ಲೆಕ್ಕಿಸದೆ ಸಾಗಿದನು. ಮುಳ್ಳು ನಾಟಿದ್ದರೂ ಕಿತ್ತೆಸೆಯದೆ ಆನಂದದ ಉನ್ಮಾದದಿಂದ ಆ ರಮಣೀಯ ಗೋದಾವರಿಯ ಮರಳ ದಂಡೆಗೆ ನಡೆದನು. 'ಓ ಸೀತೆ! ಓ ಸೀತೆ! ಓ ಸೀತೆ! ಓ ಸೀತೆ!' ಎಂದು ಕೂಗಿದನು. ರಾಮನ ಕೊರಳ ಕೂಗನ್ನು ಆಲಿಸುತ್ತ ಅವನಿಗೆ ನೆರವನ್ನು ನೀಡಲೆಂದು ವಿಶ್ವವೇ ಜನಕಜಾತೆಯ ಹೆಸರು ಹಿಡಿದು ಕರೆದಂತೆ ಮರದಿಂದ, ಗಿಡದಿಂದ ಲತೆಯಿಂದ, ನದಿಯಿಂದ, ಪರ್ವತಾರಣ್ಯಗಳಿಂದ, ಮರುದನಿ ಮೂಡಿದವು. ದಶ ದಶಕೋಟಿ ಕಂಠಗಳಿಂದ ದಿಕ್ಕು ದಿಕ್ಕುಗಳು ತಲ್ಲಣಿಸುವಂತೆ ಸೃಷ್ಟಿಯು ಅನುಕಂಪದಿಂದ 'ಓ ಸೀತೆ! ಓ ಸೀತೆ! ಓ ಸೀತೆ!' ಎಂದು ಕೂಗಿತು. ಅದು ದಶಕಂಠನಿಗೆ ಮೃತ್ಯು ಡಿಂಡಿಮ ಭೇರಿಯನ್ನು ಬಾರಿಸಿದಂತಿತ್ತು.

ರಾಮನು ಅದನ್ನು ಕಿವಿಗೊಟ್ಟು ಕೇಳಿ ಸತಿಯ ಮಾರುತ್ತರವೆಂದು ಮುದಗೊಂಡನು! ಅರಣ್ಯದ ಕಡೆಗೆ ನಡೆದು ಅಲ್ಲಿ ಇಲ್ಲಿ ಇಣುಕುತ್ತ ಹುಡುಕ ತೊಡಗಿದನು. ಅಲ್ಲೆಲ್ಲೂ ಕಾಣದಿರಲು ಸನ್ನೆಗಣ್ಣಿಂದ ತಮ್ಮನಿಗೆ ಹೇಳಿದನು:

'ಕಂಡೆಯಾ ಸೌಮಿತ್ರಿ, ಮೈಥಿಲಿಯ ಮಾಯೆಯನ್ನು? ಹುಸಿಯಲ್ಲ. ಅವಳು ಭೂಮಿಪುತ್ರಿ ದಿಟ! ತಾಯಿಯ ಮರೆಯಲ್ಲಿ ನಿಂತ ಮಗು, ಕಣ್ಣುಮುಚ್ಚಾಲೆ ಆಡುವ

ರೀತಿ ನಮ್ಮೊಡನೆ ವಿನೋದ ಮಾಡುತ್ತಿಲ್ಲವೆ? ಒಮ್ಮೆ ಬಂಡೆಯಲ್ಲಿ, ಇನ್ನೊಮ್ಮೆ ಕಾಡಿನಲ್ಲಿ, ಮತ್ತೊಮ್ಮೆ ತರುಗಳಲ್ಲಿ ಅಡಗಿಕೊಳ್ಳುತ್ತಾಳೆ. ಮತ್ತೆ ಒಮ್ಮೆ ಪಕ್ಷಿಗಳಲ್ಲಿ ಮೃಗಗಳಲ್ಲಿ, ಇನ್ನೊಮ್ಮೆ ಅಲೆಗಳಲ್ಲಿ ಅವಿತುಕೊಳ್ಳುತ್ತಾಳೆ. ಒಮ್ಮೆ ಅವಳು ಗೀಜುಗ ಪಕ್ಷಿ ಕೂಗಿದಂತಿದ್ದರೆ ಮತ್ತೊಮ್ಮೆ ಕೋಕಿಲಕಂಠ ಭಾಷಿಕಳಾಗಿದ್ದಾಳೆ. ಅದೋ ನೋಡು ಅಲ್ಲಿ ಉಲ್ಲಾಸಗೊಂಡ ವಾಯುವಿನಿಂದ ಹೂ ತುಂಬಿದ ಲತೆಗಳಲ್ಲಿ ರಾರಾಜಿಸುತಿದ್ದಾಳೆ. ಇದೋ ಇಲ್ಲಿ... ಕಣ್ಣೀರನ್ನು ಸುರಿಸುತ್ತಿರುವೆ ಏಕೆ? ಲಕ್ಷ್ಮಣಾ?'

ಎಂಬ ರಘುವರನ ಲಘುವರ್ತನೆ, ಉನ್ಮಾದವನ್ನು ನೋಡಿ ಗದ್ಗದಿಸುತ್ತ ಊರ್ಮಿಳೇಶನು 'ಇದೇನಣ್ಣಯ್ಯ ಮತಿ ವಿಕಲರಂತೆ ಆಡುತ್ತಿರುವೆ? ವಿಷಮ ಸಮಯದಲ್ಲಿ ನಿನ್ನ ಮೇರು ಸುಸ್ಥಿರತೆ ಸಮತೆಯನ್ನು ಕಳೆದುಕೊಂಡಿತೆ? ದೇವಿ ಎಲ್ಲಿರುವಳು, ಏನಾದಳು ಎಂಬುದನ್ನು ತಿಳಿಯುವುದನ್ನು ಬಿಟ್ಟು ಮನ್ಮಥನ ಭ್ರಾಂತಿಗೆ ಮಾರು ಹೋಗಿ ಕಾಲಹರಣ ಮಾಡುವುದು ಎಷ್ಟು ಉಚಿತವಾದುದು.'

ಎಂದು ಹೇಳಿದನು. ಅದನ್ನು ಕೇಳಿದ ರಾಮಚಂದ್ರನು ಎರಕಹೊಯ್ದ ವಿಗ್ರಹದಂತೆ ನಿಂತು ಹಿಂದಿನ ಜನ್ಮವನ್ನು ನೆನೆಯುವಂತೆ ಧ್ಯಾನಸ್ಥನಾದನು. ಮೌನದಿಂದ ಇದ್ದೂ ಇಲ್ಲದಂತೆ ಎತ್ತರ ಧ್ವನಿಯಲ್ಲಿ ಚೀರುತ್ತ ಹೇಳಿದನು:

'ಅಯ್ಯೋ, ಓ ಲಕ್ಷ್ಮಣಾ! ಏನು ಮಾಡಿದೆಯಯ್ಯ? ನನ್ನ ಸೀತೆಯನ್ನು ಅಯ್ಯೋ ಏನು ಮಾಡಿದೆಯಯ್ಯ? ಎಲ್ಲಿ ಬಚ್ಚಿಟ್ಟಿರುವೆ? ಹೇಳಯ್ಯ, ದಮ್ಮಯ್ಯ, ಓ ನನ್ನ ಲಕ್ಷ್ಮಣಾ! ನಿನ್ನ ಕೈಗೆ ಒಪ್ಪಿಸಿ, ನಿನ್ನ ರಕ್ಷೆಯಲ್ಲಿಟ್ಟು ಹೋದೆನು. ನನ್ನ ಮನದನ್ನೆ ಎಲ್ಲಿರುವಳು ಹೇಳೋ? ಕೋಮಲಾಂಗಿಯನ್ನು ಕೊಂದರೋ? ರಾಕ್ಷಸರು ತಿಂದರೋ? ಹಾ ಸೀತೆ! ಹಾ ಸೀತೆ! ನನ್ನನ್ನು ತೊರೆದು ಎಲ್ಲಿಗೆ ಹೋದೆ?'

ಎಂದು ಹೇಳುತ್ತ, ಮಗುವಿನಂತೆ ಅಳುತ್ತ ನೆಲದ ಮೇಲೆ ಬಿದ್ದನು. ಲಕ್ಷ್ಮಣನು ಅವನನ್ನು ಹಿಡಿದೆತ್ತಿ ಸಂತೈಸುತ್ತ ಕುಟೀರಕ್ಕೆ ಕರೆದುಕೊಂಡು ಹೋದನು.

ಸಾಕು ಬಿಡು, ಸೌಮಿತ್ರಿ, ಜಗಮನಿತುಮಾ ಕೈಕೆ! ಕೈತವಮದರ ಹೃದಯಂ!

ಶಿಶಿರೋಪಚಾರ ಮತ್ತು ಶುಶ್ರೂಷೆಯಿಂದ ಚೇತರಿಸಿಕೊಂಡ ಅವನಿಗೆ ಲಕ್ಷ್ಮಣನು ಹೇಳಿದನು:

'ಶಾಂತಿ, ಹೇ ಧೀರಮತಿ! ಕಾತರಿಸದಿರೊ, ದಾಶರಥಿ! ವಿಹಗೇಂದ್ರ ಜಟಾಯುವಿನಿಂದ ದೇವಿ ಎಲ್ಲಿರುವಳು, ಎಲ್ಲಿಗೆ ಹೋಗಿರುವಳು ಎಂಬುದನ್ನೆಲ್ಲವನ್ನು ತಿಳಿಯೋಣ. ಅನಂತರ ಮಾಡಬೇಕಾದ ಕೆಲಸವನ್ನು ನಿಶ್ಚಯಿಸೋಣ. ಬರಿದೆ ದುಃಖವನ್ನು ತೋಡಿಕೊಂಡರೆ ಫಲವೇನು?'

ತಮ್ಮನ ಒಳ್ಳೆಯ ಮಾತುಗಳನ್ನು ಕೇಳಿದ ಅಣ್ಣನಿಗೆ ಹೊಸ ನಂಬಿಕೆಯ ಉತ್ಸಾಹ ಉಂಟಾಯಿತು. ಅವನು ತಕ್ಷಣ ನೆಗೆದು ಎದ್ದು ಅಂಗಳಕ್ಕೆ ಧಾವಿಸಿದನು. ಕೆದರಿದ

ತಲೆಯಲ್ಲಿ ಮುಖವೆತ್ತಿ ಪಂಚವಟಿಯ ಬೆಟ್ಟಮಲ್ಲಿಗೆಯ ರಾಶಿಯ ಅಂಬಿನ ನೆತ್ತಿಯನ್ನು ನೋಡಿ ದಿಗ್ದಿಗಂತದಲ್ಲಿ ಮರುದನಿ ಮೊಳಗುವಂತೆ ಕೊರಳೆತ್ತಿ ಕೂಗಿದನು.

'ಜಟಾಯೂ! ಜಟಾಯೂ! ಓ ಜಟಾಯೂ!' ಉಸಿರು ಮೇಲುಸಿರಾಗುವಂತೆ ಪಕ್ಷಿರಾಜನನ್ನು ಕರೆದನು. ಅವನು ಎಲ್ಲಿಯೂ ಕಾಣಿಸಲಿಲ್ಲ. ಓಗೊಡಲಿಲ್ಲ. ಕೋದಂಡಪಾಣಿಯು ಯಮನಂತೆ ಕೆಂಡವಾಗಿ ಹೇಳಿದನು:

'ಲಕ್ಷ್ಮಣ ಈಗಲಾದರೂ ತಿಳಿಯಿತೆ? ಸತಿ ಇಲ್ಲವಾಗಲು ಆ ದುಷ್ಟ ಪಕ್ಷಿಯೇ ಕಾರಣ'

'ಅಯ್ಯೋ ಅಣ್ಣಯ್ಯ, ಎಂತಹ ಮಾತನಾಡುತ್ತಿರುವೆ?

'ಸಾಕು ಬಿಡು ಸೌಮಿತ್ರಿ, ಜಗವೆಲ್ಲವೂ ಆ ಕೈಕೆಯೆ! ಮೋಸವೆ ಅದರ ಹೃದಯ! ಹಸುವಿನ ಮುಖದ ಹುಲಿ ಆ ಖೂಳ. ಅವನ ಕುಲಕ್ಕೆ ತಕ್ಕನಾದುದನ್ನೆ ಆ ರಣಹದ್ದು ಮಾಡಿದೆ.

'ಅಯ್ಯೋ ಹಾ, ಆ ದುರುಳ ಹದ್ದಿಗೆ ಮರುಳು ಹೋದಳೆ ದಿಲೀಪ ಕುಲಸಂಭವನ ಸತಿ? ಆ ನೀಚನನ್ನು, ಮಾರೀಚನಿಗೆ ಮಿಗಿಲಾದ ಪಾಪಿಯನ್ನು ಕೊಲ್ಲುತ್ತೇನೆ. ಅವನನ್ನು ಯಮನ ಬಳಿಗೆ ಕಳುಹಿಸದಿದ್ದರೆ ನನ್ನ ಈ ಬಾಳು ಸುಡಲಿ.

'ಓ ಬಾರ ಲಕ್ಷ್ಮಣಾ. ಈ ಮಹತ್ತಾದ ಕಾಡನ್ನು ಎಲ್ಲ ಕಡೆಯೂ ಶೋಧಿಸುತ್ತೇನೆ. ಹದ್ದು ಕಂಡೊಡನೆ ಗಂಟಲನ್ನು ಮುರಿದು ಕಾಲು ತಿರುಚಿ, ಪುಕ್ಕ ತರಿದು, ಪಕ್ಕೆ ಬಗೆದು, ಮೂಳೆಯನ್ನು ನುರಿನುರಿಯಾಗಿಸಿ, ರಕ್ತವನ್ನು ಬಸಿದು ಕ್ರಿಮಿ-ಕೀಟಗಳಿಗೆ ಔತಣವಾಗಿಸುತ್ತೇನೆ.'

ಎಂದು ಕ್ರೋದಾಂಧನಾಗಿ ಹೇಳಿದನು. ಸೋದರನ ಭೀಷಣ ಮನಸ್ಥಿತಿಗೆ ಅಳುಕಿದ ಲಕ್ಷ್ಮಣನು ಮರು ಮಾತನಾಡದಾದನು. ಕೋಸಲದ ರಾಣಿಯನ್ನು ಹುಡುಕಲೆಂದು ಅಣ್ಣನ ಹಿಂದೆ ಹೊರಟನು.

ಇಳಿಯುವ ಹಗಲಿನ ಸುಡುಬಿಸಿಲಿನಲ್ಲಿ ನಿರ್ಮಾನುಷವಾದ ಕಾಡಿನಲ್ಲಿ ಇಬ್ಬರೂ ಸೀತೆಯನ್ನು ಕರೆ ಕರೆದರು. ಜೊತೆಗೆ, ಜಟಾಯುವನ್ನು ಹುಡುಕಿದರು. ಪರಿಚಿತವಾದ, ಪ್ರಖ್ಯಾತವಾದ, ಪ್ರಸಿದ್ಧವಾದ ಮತ್ತು ಅದುವರೆಗೆ ಕಂಡು ಕೇಳಿ ಅರಿಯದ ದೂರದ ಹತ್ತಿರದ ಸ್ಥಳಗಳಲ್ಲಿ ಹುಡುಕಿದರು. ಕುದಿವ ಎದೆಯಲ್ಲಿ ಅಲೆದು ತೊಳಲಾಡುತ್ತ ಹೂಗಳ ಹಣ್ಣುಗಳ ವನಸ್ಥಳಗಳಲ್ಲಿ ಹುಡುಕಿದರು.

ರಾಮನ ಶೋಕ ಅರಣ್ಯವನ್ನೆಲ್ಲ ವ್ಯಾಪಿಸಿತೊ ಮತ್ತು ರಾಮನ ಕೋಪವು ಜಟಾಯುವನ್ನು ಆವರಿಸಿತೊ ಎಂಬಂತೆ ಸೂರ್ಯನು ಇಳಿಯಲು, ಬೈಗಿನ ಕೆಂಪು ನೀರಿನ ಓಕುಳಿಯನ್ನು ಹರಡಿ ಚೆಲ್ಲಿತು!

ಅವರಿಬ್ಬರು ಬರುತ್ತ ಇರಲು ಸ್ವಲ್ಪ ದೂರದ ಬೆಟ್ಟದ ತಪ್ಪಲಿನಲ್ಲಿ ಎತ್ತರವಾಗಿರುವ ಸ್ಥಳದಲ್ಲಿ ವೈಡೂರ್ಯ ಸಮನಾದ ಶಾದ್ವಲದ ಮೇಲೆ – ವಜ್ರಗಳನ್ನು ಹರಡಿದ್ದಾರೆ ಎಂಬಂತಹುದನ್ನು ಕಂಡರು. ಅದು ಸೂರ್ಯನ ಮುಕುಟದ ಕಾಂತಿಯಲ್ಲಿ ಕುತೂಹಲವನ್ನುಂಟು ಮಾಡುತ್ತ ಕಿಡಿಕಿಡಿಯಂತೆ ಹೊಳೆಯುತ್ತಿತ್ತು. ಓಡಿದರು, ನೋಡಿದರು; ಜಟಾಯುವಿನ ನಖದ ಆಘಾತಕ್ಕೆ ಕೆದರಿ ಚೆಲ್ಲಿದ ರಾವಣನ ವಿಮಾನದ ಮಣಿಯ ಅಲಂಕೃತಿಯನ್ನು ಕಂಡರು. ಸೀತೆಯ ನೆಲೆಗೆ ಮೊದಲ ಸಾಕ್ಷಿ ನಿಜವಾಗಿಯೂ ಲಭಿಸಿತು ಎಂಬ ಊಹೆಯಿಂದ ನಂಬಿಕೆಯುಂಟಾಗಿ ಮತ್ತೆ ಮುಂದುವರಿದರು!

ಓಡಿದರು, ನೋಡಿದರು; ಜಟಾಯುವಿನ ಪಾದದ ಆಘಾತಕ್ಕೆ ಬಿದ್ದ ಪುಷ್ಪಕ ವಿಮಾನದ ಚಿಕ್ಕ ಚಿಕ್ಕ ಗಂಟೆಯ ಕುಚ್ಚುಗಳನ್ನು ಮತ್ತು ದೊಡ್ಡ ಆಕಾರದ ಒಂದು ಎರಡು ಮೂರು ನಾಲ್ಕು ಐದಾರು ಗರಿಗಳನ್ನು ಕಂಡರು!

'ಸೌಮಿತ್ರಿಯೆ, ಏನಿದು? ಸಾಹಸಿ ಜಟಾಯುವನ್ನು ಬಯ್ದುದು ಅನ್ಯಾಯವೆಂದು ತೋರುತ್ತಿದೆ!' ಎಂದು ರಾಮನು ಹೇಳುತ್ತಿರಲು ಮುಂದೆ ಸಾಗಿದ ಲಕ್ಷ್ಮಣನು ಚೀತ್ಕರಿಸಿದನು; 'ಅಯ್ಯೋ ಅಣ್ಣಯ್ಯ!'

ಓಡಿದರು, ನೋಡಿದರು; ಮಡುಗಟ್ಟಿ ನಿಂತ ರಕ್ತದ ಕೆಸರಿನಲ್ಲಿ ಮಿಂದ, ಕಡಿದ ರೆಕ್ಕೆಯ, ಹರಿದ ಪುಕ್ಕಗಳ, ಆಯುಸ್ಸು ಮುಗಿದ ಜಟಾಯುವನ್ನು ಕಂಡರು. ಆ ಘೋರ ದರ್ಶನದಿಂದ ರಾಮನಿಗೆ ಕೋಪವೆಲ್ಲವೂ ಪಶ್ಚಾತ್ತಾಪವಾಗಿ ಪರಿಣಮಿಸಿ ಕರುಳಿರಿಯಿತು.

ಮಲೆಯೆ ಬಾಯ್ಬಿಡಿದುಕೊಂಡು ಗೋಳಿಟ್ಟಿತೆನೆ ಸದ್ದೊದರಿ ಬಿದ್ದುದಾ ಪೆರ್ಮರಂ

ಸಹ್ಯಾದ್ರಿ ಶಿಖರ ವಿಸ್ತಾರವಾದ ಕಾಡಿನ ಮಧ್ಯೆ ಶತಮಾನಗಳೇ ಒಂದಾಗಿ ಮೈಗೊಂಡು ಮೂಡಿದಂತೆ ಒಂದು ಬೃಹತ್ ಮರವಿದೆ. ಅದು ದೊಡ್ಡದಾಗಿ ಭವ್ಯವಾಗಿ ಪರ್ವತ ಸಹೋದರನಂತೆ ಇದೆ. ಅದು ಆಕಾಶದಷ್ಟು ಎತ್ತರಕ್ಕೆ ಬೆಳೆದ ಭೈರವ ಬೃಹತ್ ವೃಕ್ಷವಾಗಿದೆ. ಆ ಭೂರುಹಕ್ಕೆ ಅರಣ್ಯ ಸತಿಯು ನಾಗರಿಕ ನಗರವು ಮಹಾಕವಿಯನ್ನು ಓಲೈಸಿ ಮನ್ನಣೆಯನ್ನು ನೀಡುವಂತೆ ಗೌರವಿಸುತ್ತಾಳೆ. ಆ ತರು ಶಿರದ ಅಮರ ನಂದನದಲ್ಲಿ ರವಿ ಚಂದ್ರರು ಉದಯಾಸ್ತ ಸಂಧ್ಯೆಗಳಲ್ಲಿ ಎಷ್ಟೋ ಸಲ ವಿಹರಿಸಿದ್ದಾರೆ. ಇಂದೂ ಬಂದು ಆಯಾಸಗೊಳ್ಳದೆ ವಿಹರಿಸುತ್ತಿದ್ದಾರೆ. ಎಷ್ಟೋ ಋತು ಚೈತ್ರರು ಬಂದು ಇಲ್ಲಿ ಗಿಳಿ ದುಂಬಿ ಕೋಗಿಲೆಗಳ ಇಂಚರದ ನೈವೇದ್ಯವನ್ನು ಅರ್ಪಿಸಿದ್ದಾರೆ. ಶತ ಋತು ಶ್ರಾವಣರು ಇಲ್ಲಿಗೆ ಬಂದು ಮಿಂಚು ದೀವಿಗೆ ಹಿಡಿದಿದ್ದಾರೆ. ಸಿಡಿಲ ತಮ್ಮಟೆ ಬಡಿದು, ಮೇಘ ಕುಂಭಗಳಿಂದ ಭೂರುಹ ನೃಪೇಂದ್ರನಿಗೆ ಅಭಿಷೇಕ ಮಾಡಿದ್ದಾರೆ. ಹೇಮಂತ ಶಿಶಿರರು ಶ್ವೇತ ಛತ್ರಿಯನ್ನು ಎತ್ತಿ, ಶ್ವೇತಾಂಬರವನ್ನು ಸುತ್ತಿ, ಶ್ವೇತ ಚಾಮರ ಬೀಸಿದ್ದಾರೆ. ಅವರು ಮಂಜಿನ ಇಬ್ಬನಿಯ ಮಣಿಯ ಶ್ವೇತ ಮುತ್ತುಗಳನ್ನು ಪೋಣಿಸಿ

ಮಾಡಿದ ತಾರಹಾರದಿಂದ ಸಿಂಗರಿಸಿ ತರು ಮಹಾರಾಜನಿಗೆ ಸೇವೆ ಸಲ್ಲಿಸಿದ್ದಾರೆ. ಪ್ರಕೃತಿ ದೇವಿಯು ಗ್ರೀಷ್ಮದ ತಾಪವನ್ನು ಕಳೆಯಲು ಕುಣಿಯುವ ಭೈರವ ಭುಜದಂಡ ಸಮನಾದ ಬಾಹುಶಾಖೆಯ ತಳಿರಿನ ಉಯ್ಯಾಲೆಯನ್ನು ಏರಿ ಮಂದ ಮಾರುತ ಭೋಗವನ್ನು ಆನಂದಿಸಿದ್ದಾಳೆ.

ಅದು ಹೀಗೆ ಸಹ್ಯ ಎಂಬ ಕುಲಗಿರಿಯ ರಸಋಷಿಯ ದೃಷ್ಟಿ ಸೃಷ್ಟಿಯೇ ಬೃಹತ್ತಾಗಿ ನಿಂತು ಆದ ಮಹದ್ ವೃಕ್ಷ. ಅದನ್ನು ದುರ್ಗದ ಅರಮನೆಯ ಒಡೆಯನು ನೇಮಿಸಿದ ಗಂಡುಗೊಡಲಿಯನ್ನು ಹೊತ್ತವರು ಕಡಿಯಲು ಪ್ರಾರಂಭಿಸುವರು. ವಸಂತ ರವಿ ಮೂಡುತ್ತಿರಲು ನೆತ್ತಿ ಕೊಂಬೆಯನ್ನು ಏರಿ ಕಾಜಾಣ ಉಲಿಯುತ್ತಿರಲು ಇದ್ದಕ್ಕಿದ್ದಂತೆ ಅಡವಿಯ ಮೌನ ಬೆಚ್ಚಿ ಬೀಳುವುದು! ಕೊಡಲಿಯ ಏಟುಗಳಿಗೆ ಕೋವಿಯ ಹೊಡೆತದಂತೆ ಮರುದನಿಗಳು ಏಳುವವು. ಕಾಡು ಹೋ ಹೋ ಎಂದು ಕೊಲೆಗೆ ಅಬ್ಬರಿಸುವಂತೆ ಪಕ್ಷಿ ಸಂಕುಲವು ಚೀತ್ಕರಿಸಿ ಹಾರುವುದು. ಆ ಸುಸ್ಥಿರ ಮರ ತಲೆಯನ್ನು ಒಂದಿಷ್ಟು ಅಲುಗಾಡಿಸದೆ ನಿಲ್ಲುವುದು.

ಅಧಿಕ ಬಲಯುತ ಬಹು ಸಂಖ್ಯೆಯ ಕೊಡಲಿ ಏಟಿಗೆ ತೊಗಟೆಯು ಪಕ್ಕಕ್ಕೆ ಸಿಡಿಯುವುದು. ಸುತ್ತಲು ದೂರಕ್ಕೆ ತೂರಿ ರಾಶಿ ರಾಶಿಯಾಗಿ ಬೀಳುವುದು. ಕೆಂಪು ಸೋನೆ ಸೋರುತ್ತಿರಲು ಕಡಿಯುವ ಬಡಗಿಗಳಿಗೆ ಹಾಲ್ಮಡ್ಡಿ ಸುಗಂಧದ ಹೊಗೆ ಧೂಪವಾಗಿ ಹಸಿಗಂಪು ಸುತ್ತಲೂ ಹರಡುವುದು. ಅವರು ಇನ್ನೂ ಹೆಚ್ಚು ಉತ್ಸಾಹದಲ್ಲಿ ಕಡಿಯುವರು. ತೊಗಲು ಸುಲಿದಾಗ ಬಾಡು ತೋರುವಂತೆ ಮಿದುಗೆಂಪು ಕಾಣಿಸಲು ಅದನ್ನು ಕಡಿಯುವರು. ಮೂಳೆ ಗೋಚರಿಸಿ ಅದು ಕಡುಗೆಂಚು ಉಗ್ರ ಕೊಡಲಿಯ ಬಾಯಿಗೆ ಕಲ್ಲಾಗುವುದು. ಒಂದು ಕೊಡಲಿ ಮೊಂಡಾಗಲು, ಬಿಡದೆ ಹೊಸ ಕೊಡಲಿ ತಂದು ಹೇಗಾದರೂ ಕಡಿಯುವರು.

ಮಧ್ಯಾಹ್ನದ ಬುತ್ತಿ ಊಟವನ್ನು ತಿಂದು, ಇನ್ನೊಮ್ಮೆ ಬಂದು ಕಡಿಯಲು ತೊಡಗುವರು. ಆಗ ಮರದ ನೆತ್ತಿ ಅದೋ, ನಡಗುತ್ತಿದೆಯಲ್ಲವೆ? ಹೌದು ನಿಜ! ಅಯ್ಯೋ, ಹಾ ಮುಪ್ಪುದಲೆಯಂತೆ ಕೊಡಲಿಯ ಹೊಡೆಯುವಿಕೆಗೆ ನೋಡು ಆ ವೃಕ್ಷದ ಬೃಹತ್ ಮಸ್ತಕ ಕಂಪಿಸುತ್ತಿದೆ! ಅದನ್ನು ಕಂಡು ಆಳುಗಳ ಗುಂಪು ಹಿಗ್ಗುತ್ತಿರಲು ಆ ಮಲೆಯ ಹೆಮ್ಮೆಯು, ಎಡಕ್ಕೆ ತೂಗಿತು; ಬಲಕ್ಕೆ ತೂಗಿತು; ಹಿಂದಕ್ಕೆ ತೊನೆಯಿತು: ಮತ್ತೆ ಮುಂದಕ್ಕೆ ತೊನೆಯಿತು!

ಅದೋ ಕೇಳಿತು ನಿರಿಲೆಂದು ಲರಿಲರಿ ಮುರಿವ ಸದ್ದು. ದೂರಕ್ಕೆ ಓಡಿದರು. ವನ ವೈಭವದ ಕಲಶ ಗೋಪುರವು ಕುಸಿದು ಮುರಿದು ಬೀಳುವ ವೈಭವ ಭಯಂಕರ ರಮಣೀಯ ದೃಶ್ಯವನ್ನು ನೋಡಿದರು. ಕೊಂಬೆಯನ್ನು ಅಲಂಕರಿಸಿ ಜೋಲುತ್ತಿದ್ದ ಹುಟ್ಟಿಯಿಂದ ಭೋರೆನ್ನುತ್ತ ಹೆಜ್ಜೇನುಗಳ ಹಿಂಡು ಎದ್ದವು! ಬೆಳ್ನನೆಯ ಹಲ್ಲೆಯಿಂದ ಚೆನ್ನ ಜೇನಿನ ಸವಿ ಸೋನೆ ಸುರಿಯಿತು.

ನೋಡು! ಅದೋ ಹತ್ತಿರದ ಮರವು ಮುರಿಯುತ್ತಿದೆ! ಬೆಟ್ಟವೇ ಬಾಯಿ ಬಡಿದುಕೊಂಡು ಗೋಳಿಟ್ಟಿತು ಎಂಬಂತೆ ಸದ್ದು ಮಾಡುತ್ತ ಆ ಹೆಮ್ಮರ ಬಿದ್ದಿತು: ಕಾಡು ಬಯಲಾದ ರೀತಿಯಲ್ಲಿ ಯುಗ ಯುಗದ ಅನಂತರ ನೆಲಕ್ಕೆ ಬೆಳಕು ಇಳಿದು ಆಗಸದ ಭೆಟ್ಟಿಯಾಯಿತು.

ಸಂಧ್ಯಾದೇವಿ ಎಂದಿನಂತೆ ಬಂದು ನೋಡಿದರೆ, ವಿಪಿನ ಸಾಮ್ರಾಜ್ಯದ ತರು ಚಕ್ರವರ್ತಿ ಎಲ್ಲಿರುವನು ಹೇಳು? ಅದೊ, ಅವನು ಯುದ್ಧ ಭೂಮಿಯಲ್ಲಿ ಸೋತ ಸೈನ್ಯವು ಹೊಡೆತದಿಂದ ಕುಸಿದು ಬಿದ್ದಂತೆ ಕತ್ತರಿಸಿದ ಅಂಗಾಂಗದಿಂದ ಉರುಳಿಬಿದ್ದಿದ್ದಾನೆ.

ಖರ ಸಂಹಾರಕನಾದ ರಾಮಚಂದ್ರನು–ಕಡಿದ ಹೆಮ್ಮರದ ರೀತಿಯ ಜಟಾಯು ಪಕ್ಷಿ ಶ್ರೇಷ್ಠನನ್ನು ಕಂಡನು. ತಂದೆಯ ವಯಸ್ಸಿನವನ ದಾರುಣ ಸ್ಥಿತಿಗೆ ಮರುಗಿದನು. ಅದರ ರಕ್ತಮಯ ಕುತ್ತಿಗೆಯನ್ನು ಎತ್ತಿ ತುಂಬು ತೋಳುಗಳ ಸ್ನೇಹದ ಕೈಗಳಿಂದ ಅಪ್ಪಿಕೊಂಡನು.

'ಪಕ್ಷಿಗಳ ಒಡೆಯನಿಗೆ ಏನಿದು, ನಿನಗೆ ಇದೆಂತಹ ಸ್ಥಿತಿ? ಪೂಜ್ಯನೇ, ನಿನಗೆ ಸೋಲು ಹೇಗಾಯಿತು? ಯಾವನಿಂದ ಈ ಘೋರ ಕೆಲಸವಾಯಿತು ಹೇಳು? ಏಕೆ? ನಿನ್ನ ಮಗಳೆಲ್ಲಿ? ರಘುಕುಲದ ಅರಸಿ ಎಲ್ಲಿ ಎಂದು ಹೇಳಯ್ಯ?

'ದಶರಥ ಮಿತ್ರನೇ, ರಾಮನ ಮಡದಿ ಎಲ್ಲಿ? ನನ್ನ ಮನದನ್ನೆ ಎತ್ತ ಹೋದಳೊ? ರಾಜರ್ಷಿ ಜನಕ ದೇವನ ಧರಾಕನ್ಯೆ ಎಲ್ಲಿ?'

ಎಂದು ಇಕ್ಷ್ವಾಕು ವಂಶಸ್ಥನು ರೋದಿಸುತ್ತ ಗೊಳಾಡುತ್ತ ದುಃಖಿಸುತ್ತ ಇದ್ದನು. ಅವನ ಸ್ಪರ್ಶಕ್ಕೆ ಶ್ಯೇನಿ ಪುತ್ರನಿಗೆ ನಿಧಾನವಾಗಿ ಪ್ರಜ್ಞೆ ಬಂದಿತು. ಎವೆ ತೆರೆದವು. ನಿಡಿದಾದ ಉಸಿರು ಉಂಟಾಯಿತು. ಬಾವಿಯ ಆಳದಲ್ಲಿ ನಿಂತು ನುಡಿಯುವವನ ದನಿಯಂತೆ ಅವನ ಕೊರಳ ಗುಹೆಯಿಂದ ಮಾತು ಹೊಮ್ಮಿತು. ಗದ್ಗದಿಸುತ್ತ ತಡೆ ತಡೆದು ಅಸ್ಪಷ್ಟವಾಗಿ ಹೇಳಿದನು; 'ದೇವಿಯನ್ನು ...ನೈ.. ಋು.. ತ್ಯ.. ಕುಬೇರನ ತಮ್ಮ'

ತಕ್ಷಣ ಮಾತು ನಿಂತಿತು. ಕುತ್ತಿಗೆಯಿಂದ ಮುದ್ದೆ ಮುದ್ದೆ ರಕ್ತ ಕಾರಿತು. ಅಯೋಧ್ಯೆಯ ಮೈಗೆ ಜಟಾಯು ಮರಣದ ನಿಂದೆಯು ಮೆತ್ತಿಕೊಂಡಿತೋ ಎಂಬಂತೆ, ಅಪ್ಪಿಕೊಂಡಿದ್ದ ರಾಮನಿಗೆ ಅದರ ಸ್ನೇಹ ರಕ್ತವು ಅಂಟಿಕೊಂಡಿತು.

'ಮುಂದೆ ಹೇಳಯ್ಯ; ನಿಲ್ಲಯ್ಯ, ಪಕ್ಷಿ ಶ್ರೇಷ್ಠ' ಎಂದು ರಾಮನು ಹೇಳುತ್ತಿರಲು, ಅದರ ಕೊರಳು ಜೋತು ಬಿದ್ದಿತು. ಕಣ್ಣಿನ ಪುಷ್ಪವು ಮುಚ್ಚಿತು. ದಶರಥನ ಸುತನ ಕೈಯಲ್ಲಿ ಸಂಪಾತಿಯ ಸಹೋದರನ ಪ್ರಾಣ ಹಾರಿ ಹೋಯಿತು.

ನರಳ್ವ ನೆರಳುಗಳಂತೆ ಮಸಣದಿಂ ಮರಳಿದರು

ಸಂಜೆಯ ಅಡವಿಯ ಕಿವಿಗೆ ರಾಮಲಕ್ಷ್ಮಣರು ಅಳುವ ದನಿ ಅತಿ ದಾರುಣವಾಗಿ ಬಂದು ಎರಗಿತು. ದಟ್ಟ ಅರಣ್ಯದ ಬೆಟ್ಟದಲ್ಲಿ ಸಂಧ್ಯೆಯು ಸಾಂದ್ರ ಸಾಯಂಕಾಲದಲ್ಲಿ

ಧ್ವನಿ ಗಂಭೀರತೆಯಿಂದ ಶೋಕಿಸಿತು. ಪಕ್ಷಿಗಳ ಚಕ್ರವರ್ತಿಯ ಕಳೇಬರದ ದಹನ ಸಂಸ್ಕಾರದ ಶವಧೂಮವನ್ನು ಕಂಡು ದಿನಲಕ್ಷ್ಮಿ ಬೆದರಿದಳು. ಪರ್ವತದಿಂದ ನೆಗೆದು ಸಮುದ್ರದ ಮೊರೆ ಹೊಕ್ಕಳು. ದಿನ ವನಿತೆಯು ಪಶ್ಚಿಮ ಕಡಲಿಗೆ ಧುಮ್ಮಿಕ್ಕಲು ಅದರ ತಳದಿಂದ ರತ್ನ ಸಮೂಹವು ನಭದ ಅಂಗಳಕ್ಕೆ ಚಿಮ್ಮಿದವು. ಆ ರತ್ನಗಳು ಮೇಲಿಂದ ಮೇಲೆ ಬೀಳುತ್ತಿರಲು ರಾತ್ರಿಯ ಕೂದಲಿನ ತುರುಬಿಗೆ ಅವು ಹೂವಿನ ನಕ್ಷತ್ರಗಳಂತೆ ಅಲ್ಲಲ್ಲಿ ಮಿನುಗುವ ಮಿಸುನಿ ತಾರೆಗಳಾಗಿ ತೋರಿದವು !

ಜನಕಜೆ ಇಲ್ಲದ ದೀನದುಃಖಿ ಅಣ್ಣ ತಮ್ಮಂದಿರು ಶೂನ್ಯರಾದರು! ನರಳುವ ನೆರಳುಗಳಂತೆ ಮಸಣದಿಂದ ಹೊರಟ ಅವರು ಪರ್ಣಶಾಲೆಯ ಶವ ಶೂನ್ಯದ ಮತ್ತೊಂದು ಮಸಣಕ್ಕೆ ಹಿಂತಿರುಗಿದರು.

ಇನ್ನೆಲ್ಲಿಯ ನಿದ್ರೆ? ರಾಮಭದ್ರನಿಗೆ ನಿದ್ರೆ ಸತ್ತು ಹೋಯಿತು. ಅಯ್ಯೋ ಆ ರಾತ್ರಿ ಮೈ ದೋರಿತು! ಹಾ, ಚಂದ್ರ ಸುಂದರ ದಿವ್ಯರಾತ್ರಿ! ದಟ್ಟ ಬೆಳುದಿಂಗಳು ಸೂರ್ಯ ವಂಶಜನ ಉನ್ಮಾದಕ್ಕೆ ಮದಿರೆಯನ್ನು ಹೊಯ್ದಿತು. ಪ್ರಿಯೆಯೊಡನೆ ಮಲಗಿದ ಹಾಸಿಗೆಯನ್ನು ತಬ್ಬಿಕೊಂಡು ಕುಳಿತು ಒಂದು ಜಾವವನ್ನು ಕಲ್ಲಿನಂತೆ ಮೌನವಾಗಿ ಕಳೆದನು. ಮಧ್ಯರಾತ್ರಿಯಲ್ಲಿ ಎದ್ದು ಓಡಿ 'ಸೀತೆ! ಓ ಲಕ್ಷ್ಮಣಾ, ಸೀತೆಯನ್ನು ನೋಡಲ್ಲಿ ನೋಡಲ್ಲಿ!' ಎಂದು ಕೂಗಿದನು. ಪೊದೆಯನ್ನು ತಬ್ಬಿಕೊಂಡ ಅಣ್ಣನನ್ನು ತಮ್ಮನು ಪ್ರಯಾಸದಿಂದ ಪರ್ಣಕುಟಿಗೆ ಎತ್ತಿ ತಂದನು.

ಮತ್ತೆ ದೂರದ ಕಾಡಿನಿಂದ ಹುಲಿಯ ಅಬ್ಬರವನ್ನು ಕೇಳಲು 'ಓ ಲಕ್ಷ್ಮಣಾ, ಅದೋ ಅಸುರ ಸತಿಯ ಕೊರಳನ್ನು ಮುರಿಯುತ್ತಿದ್ದಾನೆ! ಅಯ್ಯೋ, ಕೂಗುತ್ತಿದ್ದಾಳೆ! ಕೋಮಲೆ, ಹೆದರದಿರು ಬಂದೆ.' ಎಂದು ಹೇಳಿ ಬಿಲ್ಲನ್ನು ಹುಡುಕಿ ತೆಗೆದುಕೊಂಡನು. ಅವನನ್ನು ಲಕ್ಷ್ಮಣನು ಬಿಗಿಯಾಗಿ ಅಪ್ಪಿ, ಹಿಡಿದುಕೊಂಡು ಸಂತೈಸುತ್ತ ನಿಟ್ಟುಸಿರಿನೊಂದಿಗೆ ಅತ್ತನು.

ಪುನಃ ತಿಂಗಳ್ವಕ್ಕಿ ತೇನೆಯು ತನ್ನ ಗೆಣೆಯ ಹಕ್ಕಿಯನ್ನು ಕರೆದು ಕೂಗುತ್ತ ಬೆಳದಿಂಗಳ ಅಂಬರದಲ್ಲಿ ಅಲೆಯುವುದನ್ನು ಕಿವಿ ನಿಮಿರಿಸಿ ಕೇಳಿದನು. ' ಓ...ಲಕ್ಷ್ಮಣಾ, ದೇವಿ ನನ್ನನ್ನು ಕರೆಯುತ್ತಿರುವಳು! ಕಲ್ಲೆದೆಯವನಾಗಿ ಏಕೆ ಸುಮ್ಮನಿರುವೆ? ಓಡು ನಡೆ, ಓಡು ನಡೆ!' ಎಂದು ಹಣೆ ಬಡಿದುಕೊಂಡು ಉರುಳಿದನು. ಅಂತಹ ಅಗ್ರಜನಿಗೆ ಗಾಳಿ ಬೀಸುವ ಊರ್ಮಿಳೇಶನ ಮನದ ಭಾವಗಳನ್ನು ಬಣ್ಣಿಸಲು ಹಾ ಕವಿಯ ಕಲ್ಪನೆಗೆ ಬಾಯಿಯಿದೆಯೆ?

❑



~~~~~~~~~~~~~~~~~~~~~~ ಸಂಚಿಕೆ – ೩ ~~~~~~~~~~~~~~~~~~~~~~

ಶಬರಿಗಾದನು ಅತಿಥಿ ದಾಶರಥಿ

ತೊಲಗಿತು ಆ ಓ ಲಕ್ಷ್ಮಣಾ ದಿನ; ಕಳೆಯಿತು ಆ ಓ ಲಕ್ಷ್ಮಣಾ ರಾತ್ರಿ; ಮಾರನೇ ದಿನ ಆ ಓ ಲಕ್ಷ್ಮಣಾ ಸ್ಮೃತಿ ಭೂಮಿ ಪಂಚವಟಿಯನ್ನು ಬಿಟ್ಟರು. ಶಕುನದ ಹಕ್ಕಿಯ ವಾಣಿಯು ಶಕುನವಲ್ಲವೆ? ನೈಋತ್ಯ ದಿಕ್ಕನ್ನು ನೆಚ್ಚಿ ನಡೆದರು. ನಡೆಯುತ್ತ ಕಾಡು ನಿಬಿಡವಾಯಿತು. ಕಾಡುಗತ್ತಲೆ ಹೆಚ್ಚಿತು. ಜೀರುಂಡೆಯ ಕಂಠದ ಕರ್ಕಶ ಧ್ವನಿ ಕಟುವಾಗಿ ಕಿವಿ ಬೆದರಿ ಭಯವುಂಟಾಯಿತು. ಮಂಗಟ್ಟೆ ಹಕ್ಕಿಯ 'ಘೂ' ಧ್ವನಿಯ ವಿಕೃತಿಯು ಅಡವಿಯನ್ನು ಆವರಿಸಿತು. ಇದು ನಿರ್ಜನತೆಯಲ್ಲ; ನಿರಾಶೆಯ ಆಕಳಿಕೆ! ಇದು ಮೌನವಲ್ಲ; ಶಬ್ದದ ಶವ! ಎಂದು ರಾಮನಿಗೆ ಎನಿಸಿತು. ಅವನ ಅಂತಃಸ್ಥಿತಿಯ
~~~~~~~~~~~~~~~~~~~~~~

ಬಣಬಣವೆ ರಣರಣವೆನಿಸಿ ಅಲ್ಲಿ ಬಹಿರಂಗವಾದಂತಾಗಿ ಕುಸಿದು ಕುಳಿತನು. ಹತಾಶೆಯ ಮಂಕು ಬಡಿದಂತೆ ನುಡಿದನು.

'ಸೌಮಿತ್ರಿಯೆ, ನಾವು ಏತಕ್ಕೆ ಎಲ್ಲಿಗೆ ಹೀಗೆ ಹೋಗುತ್ತಿರುವೆವು?'

'ದೇವಿಯ ಅನ್ವೇಷಣೆಗೆ!'

'ಯಾರು ಅವಳು ಆ ದೇವಿ?' ಎಂದು ಹೇಳುತ್ತಾ ಕಣ್ಣಿನಲ್ಲಿಯೆ ನಗೆ ವ್ಯಕ್ತಪಡಿಸಿದನು.

ಆಗ ಲಕ್ಷ್ಮಣನು,

'ಬೇಡ, ಬೇಡ ಅಣ್ಣಯ್ಯ; ನಿನ್ನ ಅಚಲ ಧೈರ್ಯವನ್ನು ನಿರಾಶೆಗೆ ಔತಣವಾಗಿಸಬೇಡ. ಭರದ್ವಾಜ ಋಷ್ಯಾಶ್ರಮದ ದೃಶ್ಯವನ್ನು ನೆನಪು ಮಾಡಿಕೊ. ವಜ್ರರೋಮರ ಚಿತ್ರಕೂಟವನ್ನು, ಅತ್ರಿ ಅನಸೂಯೆ, ಅಗಸ್ತ್ಯ ಗುರುದೇವರನ್ನು ಜ್ಞಾಪಿಸಿಕೊ. ವಿಶ್ವಾಮಿತ್ರರಿಂದ ಪಡೆದ ಮಂತ್ರವನ್ನು ಮನಸ್ಸಿಗೆ ತಂದುಕೊ! ನಿನ್ನ ಮಹಿಮೆಯನ್ನು ನೀನೇ ಮರೆಯುವೆ ಏನು? ನಿನ್ನನ್ನು ನೀನು ನಿಂದಿಸಿಕೊಳ್ಳುವುದೇ ಆತ್ಮಹತ್ಯೆ ಮತ್ತು ಅದು ನಿನ್ನನ್ನು ಕೊಂದಂತೆ!

'ನಿನ್ನ ಮಹಿಮೆಯ ನೆನಪೆ ನನಗೆ ಈ ರೀತಿ ವಜ್ರ ಚೈತನ್ಯವನ್ನು ನೀಡಿ ಕಾಪಾಡುತ್ತಿದೆ. ಹೀಗಿರಲು ನೀನು ಕಳವಳಿಸುತ್ತ ನಿರಾಶೆಯ ಬೆಟ್ಟದ ಇಳಿಜಾರಿಗೆ ಉರುಳುವೆಯ? ನೀನು ಚಂದ್ರಚೂಡ ರುದ್ರನ ಕೋದಂಡವನ್ನು ಮುರಿದು ಮೈಥಿಲಿಯನ್ನು ವರಿಸಿದ, ಜಗದ ಏಕೈಕ ವೀರ. ನೀನು ವಿಶ್ವಕಲ್ಯಾಣಕ್ಕಾಗಿ ಅವತರಿಸಿದವನಲ್ಲವೆ?' ಎಂದು ಹೇಳಿದನು.

ತನ್ನಾ ನಿರಾಶೆಯೆ ತನಗೆ ಕಾಣಿಸಿತೆನಲ್ಕಾ ಕಬಂಧನಂ ಕಂಡೊಡನೆ ನಡುಗಿದುದು ತನು ತಪನಕುಲಗೆ.

ಅದನ್ನು ಕೇಳುತ್ತ ರಾಮನಲ್ಲಿ ಮಾನಸಿಕವಾದ ಒಂದು ಅದ್ಭುತ ಉಂಟಾಯಿತು. ಕಾಡೆಲ್ಲವನ್ನು ಮಂಜು ತುಂಬಿತು. ಆಕಾರ ಆಧಾರ ಯಾವುದೊಂದನ್ನೂ ಅರಿಯದ ಭೀತಿಯು ನೆರಳು ನೆರಳಾಗಿ ರಾಹುವಿನಂತೆ ಅಲೆದು ತಣ್ಣನೆಯ ಚಳಿಯನ್ನು ಬೀಸಿತು. ರಾಘವನು ನೋಡುತ್ತಿರಲು ಒಂದು ಬೆನ್ನುಮೂಳೆ ಇಲ್ಲದ ಕಶ್ಮಲ ಸರ್ಪವು ಮಂಜು ಮೈಗೊಂಡಂತೆ ಮೂಡಿತು. ವಿಕೃತ ಪ್ರಾಣಿಜನ್ಮವನ್ನು ಹೊಂದಿದ ಬರಿ ಹೊಟ್ಟೆಯ ಸರ್ಪಾಕಾರ ರಾಕ್ಷಸನು ಶೀತದ ಚರ್ಮದಿಂದ ಭೀಕರವಾಗಿದ್ದನು. ಅದಕ್ಕೆ ಕೈಯಿಲ್ಲ; ಕಾಲಿಲ್ಲ; ಬರಿ ಮೈಯೆ ಎಲ್ಲವಾಗಿತ್ತು! ಹೊಟ್ಟೆ ತಾನೇ ತಲೆಯಾಗಿತ್ತು! ಕಿವಿಗಳಿರುವ ಕಡೆಯಿಂದ ಯೋಜನದುದ್ದದ ಐದೈದು ಹರಿತ ಉಗುರುಗಳ, ದೀರ್ಘ ಬಾಹುಗಳೆರಡು ಕಾಲುಗಳೊ ತೋಳುಗಳೊ ಎಂಬಂತೆ ಚಾಚಿದ್ದವು!

ಹೊಟ್ಟೆ ತಲೆಯ ಮಧ್ಯೆ ಭೀತಿ ಭೂತಗಳೆರಡು ತೂತಿನ ಅವತಾರವನ್ನು ಪಡೆದವೊ ಎಂಬಂತೆ –ಹೆದರಿಕೆಯನ್ನುಂಟು ಮಾಡುವ ಮಹಾಗುಹೆಯಂತಹ ಬಾಯಿ, ಗವಿಯಂಥಹ

ಕಣ್ಣು ಇದ್ದವು! ಬಿಸಿಯನ್ನುಂಟು ಮಾಡುವ ರವಿಯ ಕುಲದವನಿಗೆ ಕಬಂಧನನ್ನು ಕಂಡೊಡನೆಯೆ ತನ್ನ ನಿರಾಶೆಯೇ ತನಗೆ ಕಾಣಿಸಿತೆಂಬಂತೆ ಶರೀರ ನಡುಗಿತು! ಬಲ ಉಡುಗಿತು, ಹೆಮ್ಮೆ ಹಿಮ್ಮೆಟ್ಟಿತು; ಪೌರುಷದ ದರ್ಪವು ಹೆಡೆ ಮುಚ್ಚಿಕೊಂಡು ಮುದುಡಿ ಹಿಂಸರಿಯಿತು. ಆ ಜಾನಕಿ ಜೀವಿತೇಶ್ವರನಿಗೆ ಪಲಾಯನದ ಕುದುರೆ ಏರಲು ಜೀವ ತವಕಿಸಿತು! ಓಡಲು ಪ್ರಯತ್ನಿಸಿದರೂ ಕಾಲು ಕೀಳಲಾರದೆ ಭಯದಿಂದ ಮೂರ್ಛೆ ಬಡಿದು ಉರುಳಿ ಬಿದ್ದನು.

ಮೌನ ಹಾಗೂ ದೃಢತೆಯಿಂದ ಆಹಾರವನ್ನು ಪಡೆಯುವ ರಾಹು ಛಾಯಾ ಸರ್ಪವು ತೆವಳುತ್ತ ಹೊಡೆಗಾಲಿಯ ತೇರಿನಂತೆ ಉರುಳಿ ಬಂದಿತು. ಅದು ಹೆಬ್ಬಂಡೆಯಂತೆ, ದುಶ್ಯಕುನ ಕೇತುವಿನಂತೆ ಬಂದಿತು. ನೈರಾಶ್ಯ ರಾಕ್ಷಸ ಕಬಂಧನು ನಿಧಾನ ನಿಧಾನವಾಗಿ ಮುಂದು ಮುಂದಕ್ಕೆ ಚಲಿಸಿದನು. ಮೊನೆ ಉಗುರ ಬೆರಳುಗಳ ಆ ತೋಳುಗಳಿಂದ ದಶರಥ ಪುತ್ರ ದೇವಗಾತ್ರ, ಕೌಸಲ್ಯೆಯ ಕಂದ ಕೋಮಲ ಶರೀರದವನನ್ನು ಆಕ್ರಮಿಸಿದನು.

'ಕೆಟ್ಟೆನೊ, ಲಕ್ಷ್ಮಣಾ! ರಾಕ್ಷಸನು ಹಿಡಿದ. ಕೈ ಎತ್ತಲಾಗದು. ಪ್ರಯತ್ನಿಸಿದರೂ ಕತ್ತಿ ಮೇಲೇಳುತ್ತಿಲ್ಲ. ಅಯ್ಯಯ್ಯೊ, ಕಾಲಿನಲ್ಲಿ ಬಲವಿಲ್ಲವಾಗಿ ಓಡಲು ಆಗದಿರುವೆ. ದೂರ ಹೋಗು, ದೂರ ಹೋಗು; ಹತ್ತಿರಕ್ಕೆ ಬಾರದಿರು. ಈ ರಾಕ್ಷಸನು ನಿನ್ನನ್ನು ಹಿಡಿಯುತ್ತಾನೆ. ನೀನಾದರೂ ಹೋಗಿ ಅಯೋಧ್ಯೆಯನ್ನು ಸೇರಯ್ಯ, ಭರತನನ್ನು ತಾಯಿಯನ್ನು ಸಂತೈಸು. ಇದೇ ನನಗೆ ಪ್ರಾಪ್ತವಾದ ಗತಿ. ಮೈಥಿಲಿಯಿಲ್ಲದ ನನಗೆ ಅಯೋಧ್ಯೆಯೇನು, ಮರಣವೇನು? ನನ್ನ ಬದುಕಿಗೆ ಸಾವು ದಿಟ!'

ಎಂದು ರಘುವರನು ಕೂಗಿಕೊಳ್ಳುತ್ತಿರಲು, ಊರ್ಮಿಳಾ ವಲ್ಲಭನು ಮೇಲೆ ಹಾಯ್ದು ಬಂದನು. ಖಡ್ಗದಿಂದ ಅಸುರನ ಬಾಹುವನ್ನು ಕಡಿಯ ತೊಡಗಿದನು. ತೋಳು ಕತ್ತರಿಸಿ, ಕಣ್ಣು ಹೊಟ್ಟೆಗಳನ್ನು ಇರಿದನು. ರಾಮನು ನೋಡುತ್ತಿರಲು ಒಡೆದ ದುಃಸ್ವಪ್ನದಂತೆ ಆ ರಾಕ್ಷಸನು ಮಾಯವಾದನು. ನಿರಾಶೆಯಿಂದ ಉದ್ಭವಿಸಿ ಕಾಣಿಸುವ ಆಶಾಕಿರಣದಂತೆ ಓರ್ವ ದೇವತೆಯು ಮೈದೋರಿದನು. ಅವನು ಶಬರಿಯು ಕಾಯುತ್ತಿದ್ದ ಆಶ್ರಮದ ದಿಗಂತದ ಕಡೆಗೆ ಕೈ ತೋರಿದನು.

ರಘುರಾಮನು ಬೆವರುತ್ತ ಕಣ್ಣು ತೆರೆದು ನೆಗೆದೆದ್ದನು. ಭಯ ಮೂರ್ಛೆಯಿಂದ ಮೈ ತಿಳಿದು, ತನ್ನ ಭಾವವನ್ನು ಹೀಗೆ ವ್ಯಕ್ತಪಡಿಸಿದನು;

'ಸೌಮಿತ್ರಿ ನಿನ್ನಿಂದ ಬದುಕಿದೆನು'

'ತಿಳಿದವನು ತನ್ನ ನೆರಳಿಗೆ ತಾನೇ ಹೆದರುವನೆ?'

'ತಿಳಿದವನು ತಿಳಿದ ಮೇಲಲ್ಲವೆ?'

'ಪೃಥ್ವಿಗೆ ತನ್ನ ನೆರಳ ರಾಹುವಲ್ಲದೆ ಬೇರೆ ಉಂಟೆ?'

'ಭೂಮಿ ಕಂಪಿಸಲು ಪರ್ವತವಾದರೂ ದೃಢತೆಯನ್ನು ಕಳೆದುಕೊಳ್ಳದಿರುತ್ತದೆಯೆ? ತಮ್ಮನೇ, ಹಾಗೆಯೆ ರಾಮ ಧೈರ್ಯವು ಆ ಭೂಮಿಸುತೆಗಾಗಿ ನಡುಗುತ್ತಿದೆ.

'ಕೇಳು, ನಿನ್ನನ್ನು ನಂಬಿದ್ದರೆ ಪರ್ವತವು ಸುಸ್ಥಿರವಾಗಿ ನಿಲ್ಲುತ್ತದೆ. ನಿನ್ನಿಂದ ರಾಕ್ಷಸನು ಸತ್ತ. ನಿನ್ನಿಂದ ನಿರಾಶೆಯನ್ನು ಕೊಂದೆ. ಕಬಂಧನನ್ನು ಗೆದ್ದೆ. ಹತಾಶೆ ಹತವಾಯಿತು! ಆಶೆಯ ಕಿರಣ ಕಾಣುತ್ತಿದೆ. ಸೌಮಿತ್ರಿ ಬಾ, ಇಲ್ಲಿಂದ ಹೊರಡೋಣ. ಮುಂದೆ ಬಹಳ ಕೆಲಸ ಕಾದಿದೆ!'

ಎಂದು ಹೇಳಿ ಅಪ್ಪಿಕೊಂಡ ಅಣ್ಣನನ್ನು ಲಕ್ಷ್ಮಣ ಆಲಂಗಿಸಿಕೊಂಡು ಸಂತೈಸಿದನು. ಅವರಿಬ್ಬರು ಮೂಡಿದ ಆಸೆಗಳ ಅವಳಿ ಜೋಡಿ ನಡೆಯುವಂತೆ ಅಲ್ಲಿಂದ ಮುಂದಕ್ಕೆ ಹೋದರು.

'ನೀನೆಂದಿಗೆ ಬರುವೆಯಯ್ಯ, ಓ ನನ್ನಯ್ಯ, ಕಂದಯ್ಯ, ರಾಮಚಂದ್ರಯ್ಯ?

ಆ ಬೆಳುದಿಂಗಳಿನ ರಾತ್ರಿಯಲ್ಲಿ ಮುಪ್ಪು ಯೌವನದ ಕನಸನ್ನು ಕಾಣುವ ರೀತಿಯಲ್ಲಿ ಮುದುಕಿ ಶಬರಿ ಒಂದು ಕನಸನ್ನು ಕಂಡಳು. ನಡುರಾತ್ರಿಯಲ್ಲಿ ಮುಗುಳು ನಗುತ್ತ ತಾನು ಮಲಗಿದ್ದ ಹುಲ್ಲು ಹಾಸಿಗೆಯ ಮೇಲೆ ಎದ್ದು ಕುಳಿತಳು. ಸ್ವಪ್ನ ದರ್ಶಿಸಿದ ಗಗನ ನೀಲವರ್ಣದ ಶ್ರೀರಾಮಮೂರ್ತಿಯನ್ನು ಪುನಃ ಮನದಲ್ಲಿ ಚಿತ್ರಿಸಿಕೊಂಡಳು. ವೃದ್ಧೆಗೆ ಎದೆ ತುಂಬಿ ತುಳುಕಿತು. ಹರ್ಷ ಉಕ್ಕುವ ಮುಖಕ್ಕೆ ಸುಕ್ಕು ಪದರದಂತೆ ಅಲೆ ಅಲೆಯಾಗಿ ಹಬ್ಬಿತು. ಸೆಣಬಿನಂತಹ ಪುಂಡಿನಾರಿನ ರೀತಿಯ ಬಿಳಿ ಕೂದಲು ನವಿರಾಗಿ ತಲೆದೂಗಿತು. ಆ ಸುಖ ಭಾವದಲ್ಲಿ ಹಲ್ಲಿಲ್ಲದ ಬೊಚ್ಚು ಬಾಯಿಯ, ಕಡು ಬಾಗಿದ ಬೆನ್ನಿನ ಹಣ್ಣು ಮುದುಕಿ ಶಬರಜ್ಜಿ ನಡುಗುತ್ತ ನಡೆದಳು. ಗುಡಿಸಲಿನ ಬಾಗಿಲನ್ನು ತೆರೆದು ನೋಡಿದಳು.

ಆ ಚಂದ್ರ ಸುಂದರ ರಾತ್ರಿಯು ವೃದ್ಧೆಯನ್ನು ಕಂಡು ಕನಿಕರದಿಂದ ಕರಗಿತು ಎಂಬಂತೆ ಶಶಿ ಬೆಳಕು ಚೆಲ್ಲಿದನು. ಶಬರಿಯ ಕುಟೀರದ ಸುತ್ತಲೆಲ್ಲ ವ್ಯಾಪಿಸಿರುವ ಹಸುರು ಹುಲ್ಲು ಅವಳ ತಲೆಯಂತೆ ಮೌನವಾಗಿ ಕಂಗೊಳಿಸಿತು. ಹಂಬಲಿಸುವ ದೃಷ್ಟಿ ಹರಿಸಿ ಆ ಹುಲ್ಲಿನ ಸೀಮಾತೀತ ವಿಸ್ತೀರ್ಣದಲ್ಲಿ ಮನಸ್ಸು ಲಯವಾಗಲು ನಿಟ್ಟುಸಿರು ಬಿಡುತ್ತ ಅವಳು ತನ್ನೊಳಗೆ ತಾನು ಹೀಗೆಂದು ಕೊಂಡಳು:

'ನೀನೆಂದಿಗೆ ಬರುವೆಯಯ್ಯ, ಓ ನನ್ನಯ್ಯ, ಕಂದಯ್ಯ, ರಾಮಚಂದ್ರಯ್ಯ? ಗುರುದೇವ ಮತಂಗ ಮುನಿಯ ಮಾತು ಹುಸಿಯಾಗುವುದೆ? ವತ್ಸನೆ, ನಿನಗಾಗಿ ಹತ್ತು ವರ್ಷಗಳಿಂದ ಕಾಯುತ್ತಿದ್ದೇನೆ. ನನ್ನ ಆಶ್ರಮ ಪಕ್ವ ಫಲಗಳನ್ನೆಲ್ಲ ಬಿತ್ತಿ ಬೆಳೆದು ಸಿದ್ಧ ಮಾಡಿಕೊಂಡು ಕಾಯುತ್ತಿದೆ. ಓ ನನ್ನ ಇಷ್ಟ ಮೂರ್ತಿಯೆ, ನೀನು ಬರುವುದಕ್ಕೆ ಮೊದಲೇ ಈ ಶರೀರವು ಎಲ್ಲಿ ಅಳಿಯುವುದೋ ಎಂದು ಮನಸ್ಸು ನೋಯುತ್ತಿದೆ. ಹಣ್ಣು ಹಣ್ಣಾದ ಈ ಮುಪ್ಪಿನ ಒಡಲು ಇನ್ನೆಷ್ಟು ತಾಳುತ್ತದೆ? ಬಾಳುತ್ತದೆ?

‘ಈ ದೇಹ ಮಾತ್ರ ಉಳಿದರೆ ಏನು ಬಂತು? ಕಣ್ಣು ಆಗಲೇ ಮಬ್ಬಾಗಿ ಮಂಜಾಗಿ ದೃಷ್ಟಿ ಹಿಂಜರಿಯುತ್ತಿದೆ! ಅಯ್ಯಯ್ಯೋ ಕಣ್ಣು ಹಾಳಾದ ಮೇಲೆ ನೀನು ಬಂದರೆ ನಾನು ನನ್ನ ಕಣ್ಣಿಗೆ ತೃಪ್ತಿಯಾಗುವವರೆಗೂ ಹೇಗೆ ನೋಡಲಿ? ಕೈಯಿಂದ ಮೈತಡವಿ ಸಂತೋಷ ಪಡುತ್ತೇನೆ. ಆದರೆ, ಕಣ್ಣಿನ ಈ ಬಾಯಾರಿಕೆಯನ್ನು ಹೇಗೆ ತಣಿಸಲು ಸಾಧ್ಯ ಹೇಳು?

‘ಬಾರ, ಓ ಕಂದಯ್ಯ, ಕಣ್ಣು ಕೆಡುವ ಮೊದಲೇ ಬಾರಯ್ಯ, ಈ ಬಾಳು ಕೆಡುವ ಮೊದಲೇ ನಿನ್ನ ಶಾಂತಿಯನ್ನು ನನ್ನ ಎದೆಗೆ ತಾರಯ್ಯ!’

ನಿಶೆಯ ನಿಶ್ಯಬ್ದತೆಗೆ ಭಂಗ ಬಾರದ ರೀತಿಯಲ್ಲಿ ತನ್ನೊಳಗೆ ತಾನು ಮಾತಾಡಿಕೊಳ್ಳುತ್ತ, ಬೇಡಿತಿ, ಮತಂಗ ಮುನಿ ಶ್ರೇಷ್ಠನ ಶಿಷ್ಯೆ, ಆ ಶಬರಜ್ಜಿಯು ಗುಡಿಸಿಲಿನ ಒಳಕ್ಕೆ ಹೋದಳು.

ಇರುಳು ಕಳೆದು ಉಷೆ ಮೂಡಿದಳು. ನಿಧಾನವಾಗಿ ಬೆಳಕಾಯಿತು. ದಟ್ಟವಾದ ಕೂದಲುಳ್ಳ ರೆಪ್ಪೆಯನ್ನು ಹೋಲುತ್ತಿದ್ದ ಬಿಲ್ಲಿನ ಎತ್ತರದ ಕರಡಹುಲ್ಲು ವಿಸ್ತಾರವಾದ ಬಯಲಿನಲ್ಲಿ ಹಿಮಬಿಂದುವಿನಿಂದ ತೂಗಿ ತೊನೆದಾಡುತ್ತಿದ್ದಿತು. ಅದು ಶಬರಿಯಂತೆ ರಾಮನ ಬರುವಿನ ನಿರೀಕ್ಷೆಯನ್ನು ಬಯಸಿ ಅವಳ ನಿಟ್ಟುಸಿರಿನ ಜೊತೆಯಲ್ಲಿಯೆ ನಿಟ್ಟುಸಿರು ಬಿಡುವಂತೆ ಕಂಡು ಬರುತ್ತಿತ್ತು.

ವೃದ್ಧೆಗೆ ಕಳವಳವೇನು? ತಲ್ಲಣವೇಕೆ? ಉಲ್ಲಾಸವೇಕೆ? ಎಲೆಮನೆಯ ಒಳಕ್ಕೆ ಹೋಗುತ್ತಾಳೆ. ತಕ್ಷಣ, ಹೊರ ಚಿಮ್ಮಿ ನಿಲ್ಲುತ್ತಾಳೆ. ಎಷ್ಟೋ ಕಾಲದಿಂದ ಬುವಿಯ ಬೈತಲೆಯಂತೆ ಬಯಲಿನ ನಡುವೆ ನೇರವಾಗಿ ಹರಿದು ಸವೆದ ಕಾಲು ಹಾದಿಯ ಕೆಳಗಿನ ದಾರಿಯನ್ನು ನೋಡುತ್ತಾಳೆ. ತನ್ನೊಳಗೆ ಗೊಣಗಿಕೊಳ್ಳುತ್ತಾಳೆ. ಮತ್ತೆ ಒಳ ಹೋಗಿ ತೆಂಗಿನ ಗರಿಯ ಪೊರಕೆಯನ್ನು ತಂದು ಮನೆ ಮುಂದೆ ಗೋವಿನ ಸಗಣಿ ಬಳಿದು ಸಾರಿಸಿದ ಜಗುಲಿಯ ಮೇಲಿನ ತರಗು ಸದೆ ಗುಡಿಸುತ್ತಾಳೆ. ಸೊಟ್ಟಗೈಯಾಗಿ ನಿಲ್ಲುತ್ತಾಳೆ. ದೂರ ವನದ ಕೊನೆಯವರೆಗೆ ಬೈತಲೆಯ ಗೆರೆಯಂತೆ ಬಟ್ಟ ಬಯಲ ಹಾದಿಯನ್ನು ನೇರವಾಗಿ ದೃಷ್ಟಿ ಹರಿಸಿ ನೋಡುತ್ತಾಳೆ.

ಶಬರಿಗೆ ಈ ರೀತಿ ನಿರೀಕ್ಷಣೆಯ ವ್ರತವಿರಲು, ಹೊತ್ತು ಏರಿ ಹಗಲಾಯಿತು. ಬಾನಿನ ಕಾವಲಿಯ ಮಧ್ಯೆ ಕಿರಣ ರವಿ ತಾನು ಬೆಳ್ಳಿ ಹನಿಯಾಗಿ ಬಿಸಿಲ ಕೆಂಪಾದ ಬೇಗೆಯನ್ನು ಹರಿಸಿದನು. ಮುದುಕಿಯ ಕಣ್ಣಿಗೆ ಆ ಹುಲ್ಲುಗಾವಲಿನ ನಡುವೆ ಯಾರೊ ಬರುವಂತೆ ಭ್ರಾಂತಿ ಉಂಟಾಯಿತು.

ಶಬರಿ ಡೊಂಕಾಗಿ ನಿಂತಳು! ಸೊಂಟದ ಮೇಲೆ ಒಂದು ಕೈ ಇಟ್ಟು, ಹಣೆಗೊಂದು ಕೈ ಎತ್ತಿ, ಹುಬ್ಬಿನ ಚರ್ಮಕ್ಕೆ ಸುಕ್ಕುಗಳ ಇನ್ನಷ್ಟು ತೆರೆಗಳು ಉಂಟಾಗುವಂತೆ ನೋಡಿದಳು.

ಕಣ್ಣು ಮೊಳೆಯನ್ನು ಕೀಲು ಮಾಡಿ ದೇಶದೇಹವನ್ನು ಜೊತೆಗೆ ತನ್ನ ಸಂದೇಹವನ್ನು ಕೊರೆದಳು; ತಿರುಗಿಸಿ ಮತ್ತೆ ಮತ್ತೆ ಕೊರೆದಳು! ಹಾ, ರಾಮಲಕ್ಷ್ಮಣರನ್ನು ಆ ದುಸ್ಥಿತಿಯ ವೇಷದಲ್ಲಿ ಶಬರಿ ಕಂಡು ಹಿಡಿಯಬಲ್ಲಳೆ?

ಭಕ್ತನು ನಿರೀಕ್ಷಿಸಿದ ರೂಪದಿಂದ ಭಗವಂತನು ಬರುತ್ತಾನೆಯೆ? ಸುಖದ ರೂಪದಲ್ಲಿ ಬರುವನೆಂದು ಆಶಿಸಿದರೆ ದುಃಖರೂಪದಲ್ಲಿ ಮೈದೋರುತ್ತಾನೆ. ಭಕ್ತನ ಎಲ್ಲವನ್ನೂ ಸುಲಿದು ಅವನ ಅಹಂಕಾರವನ್ನು ನೈವೇದ್ಯವಾಗಿಸಿಕೊಳ್ಳುತ್ತಾನೆ. ಅವನನ್ನು ದಿವ್ಯವಾದ ಶೂನ್ಯತೆಯಲ್ಲಿ ಅದ್ದಿ ಸಂಪೂರ್ಣ ಸಿದ್ಧಿ ಪಡೆಯುವಂತೆ ಮಾಡುತ್ತಾನೆ.

ರಾಮನು ಪೊದೆ ಪೊದೆಯಾಗಿ ಕೆದರಿದ ತಲೆ, ಕೊಳೆ ಬೆವರು ಮೆತ್ತಿಕೊಂಡ ಉಡುಗೆಯಿಂದಿದ್ದನು. ಅವನು ತೇಜಸ್ಸು ಮಾಸಿದ ಮುಖದ, ಖಿನ್ನತೆಯ ವಕ್ರತೆಯ ಉತ್ತಿದ ಹೊಲದಂತಿರುವ ಕೆನ್ನೆಯಲ್ಲಿ, ಪತ್ನಿಯ ವಿಯೋಗದ ಅಗ್ನಿಗೆ ಕಟ್ಟಿಗೆಯಾದ ಶರೀರದಿಂದ ಒರಟು ರೂಪದವನಾಗಿದ್ದನು. ಅವನನ್ನು ಮಂದ ದೃಷ್ಟಿಯ ಶಬರಿಯು ಬೇಡರವನೆಂದು ತಿಳಿದಳು ಎಂದ ಮೇಲೆ–ಮೈಥಿಲೀ ಪ್ರಿಯನ ದಾರುಣ ಸ್ಥಿತಿಗೆ ಇನ್ನು ಬೇರೆ ಸಾಕ್ಷಿ ಬೇಕೆ?

ಆ ಬಿಲ್ಲು ಹೊತ್ತು ಬಂದವರನ್ನು ತನ್ನ ಬೇಡ ನೆಂಟರೆಂದು ತಿಳಿದಳು. ಕೋಗಿಲೆಯ ಮರಿಯೆಂದು ಹಿಡಿದರೆ ಕಾಗೆಯ ಮರಿ ಕೂಗಿದಂತಾಯಿತೆಂದು ಮನದ ಉಲ್ಲಾಸ ಕುಗ್ಗಲು ಮುದುಕಿಯು ಆ ಬಂದ ಭೀಕರಾಕಾರರನ್ನು ನೋಡುತ್ತಿದ್ದಳು. ಆಗ ಲಕ್ಷ್ಮಣನು ಹೀಗೆ ಪ್ರಾರ್ಥಿಸಿದನು;

'ಅಜ್ಜಿ, ದಣಿದು ಬಂದಿದ್ದೇವೆ. ಬಿಸಿಲು ಸುಡುತ್ತಿದೆ. ಈ ಪರದೇಶಿ ಕಂದರಿಗೆ ಕರುಣೆಯನ್ನು ತೋರಿ ಗುಡಿಸಿಲಿನಲ್ಲಿ ತಂಗಲು ಅವಕಾಶ ಕೊಟ್ಟು ತಿನ್ನಲು ನೀಡಿ. ನಾವು ಚಿರಋಣಿಗಳಾಗಿರುತ್ತೇವೆ.'

'ಕಂಡವರಿಗೆಲ್ಲ, ಬರುವ ಬೇಡರಿಗೆಲ್ಲ ಉಣ್ಣಲು ನೀಡಿ, ವಸತಿ ಒದಗಿಸಿ, ಹಾಸಿಗೆ ಮೇಲೆ ಹಾಸುವ ಬಟ್ಟೆ ಕೊಡಲು ನಾನೇನು ಅಡುಗೂಳಜ್ಜಿ ಅಲ್ಲ ಕಣಯ್ಯ!' ಎಂದು ಶಬರಜ್ಜಿ ನಿಷ್ಠುರವಾಗಿ ಹೇಳಿದರೂ 'ಬಡವಳು ಇದ್ದುದನ್ನು ಕೊಡುತ್ತೇನೆ, ಬನ್ನಿ!' ಎನ್ನುತ್ತಾ ಒಳಕ್ಕೆ ನಡೆದಳು.

ಲಕ್ಷ್ಮಣನು ಅಣ್ಣನನ್ನು ನೋಡಿ ನಸು ನಕ್ಕನು. ಮುದುಕಿಯ ನಡೆಗೆ ಮನಸ್ಸು ಕರಗಿದವರಾದ ಅವರಿಬ್ಬರು ಪರ್ಣಶಾಲೆಯನ್ನು ಪ್ರವೇಶಿಸಿದರು.

ಶಬರಜ್ಜಿಯು ಉರಿ ಬಿಸಿಲ ಝಳದಿಂದ ಗುಡಿಸಲೊಳಗೆ ಬಂದ ಸ್ವಲ್ಪ ಹೊತ್ತಿನ ನಂತರ ಕಣ್ಣು ತಂಪಾಗಿ ಶಾಂತವಾದಳು. ಬಂದಿರುವ ಅತಿಥಿ ಮಕ್ಕಳನ್ನು ಸಂಶಯದಿಂದ ನೋಡುತ್ತ ಪ್ರಶ್ನಿಸಿದಳು:

'ನೀವು ಎಲ್ಲಿಂದ ಬಂದಿರುವಿರಯ್ಯ? ಕಂದರಿರ ನೀವು ಯಾರು? ನನ್ನ ಈ ಕಣ್ಣು ಮಬ್ಬು; ಮನದ ಭಾವ ಮಂಜು, ಏನೊಂದನ್ನು ತಿಳಿಯಲಾರೆ.'

'ಅಜ್ಜಿ, ಮನೆಯಿಲ್ಲ ಮಾರಿಲ್ಲ. ನಾವು ನೆಲೆಗೆಟ್ಟು ಕಾಡು ಬೀಡಾಗಿರುವವರು... ತಾಯಿ, ಇಲ್ಲಿ ಎಲ್ಲಾದರೂ ಸ್ನಾನ ಮಾಡಲು ಕೊಳಯಿರುವುದೆ?'

ಎಂದು ಊರ್ಮಿಳೇಶ್ವರನು ಉತ್ತರಿಸುತ್ತ ಕೇಳಲು, ಶಬರಿ ಆಶ್ಚರ್ಯ ಪಡುತ್ತ ಹೇಳಿದಳು:

'ಸ್ನಾನಕ್ಕೆ (ಬೇಡರಿಗೇಕೊ ಮಜ್ಜನ!) ಆ ಪೇರಲೆ ಮರದ ಅಡಿಯಲ್ಲಿ ಕೊಳವಿದೆ. ನಿಮ್ಮಂತೆ ಮನೆಗೆಟ್ಟು, ನೆಲೆಗೆಟ್ಟು ತೊಳಲಾಡುವವರು ಈ ನಾಡಿನಲ್ಲಿ ಎಷ್ಟು ಜನರಿರುವರೊ? ಏನು ಕೆಡುಗಾಲವೊ? ಒಬ್ಬನ ಪತ್ನಿಯನ್ನು ಇನ್ನೊಬ್ಬ ಬಯಸುವ ಧರ್ಮದ್ರೋಹಿಗಳು!'

ಅದನ್ನು ಕೇಳಿದ ದಾಶರಥಿಯು ಗಾಬರಿಗೊಂಡು ಜೋರು ದನಿಯಿಂದ ಪ್ರಶ್ನಿಸಿದನು; 'ಯಾರ ಸತಿಯ ಬಗ್ಗೆ ಯಾರು ವ್ಯಾಮೋಹಗೊಂಡರು ಅಜ್ಜಿ?'

ಅದಕ್ಕೆ ಅಜ್ಜಿಯು,

'ಹೋಗು ಮಗು, ಮಿಂದು ಬಾ. ಊಟ ಮಾಡಿದ ಮೇಲೆ ಕಥೆ ಹೇಳುತ್ತೇನೆ, ಆ ಹೊಲಸು ವಾರ್ತೆಯನ್ನು' ಎಂದು ಹೇಳಿದಳು.

ಈರ್ವರು ಸ್ನಾನಕ್ಕೆಂದು ಕೊಳಕ್ಕೆ ಹೋದರು. ಮುದುಕಿಯು ಕುತೂಹಲಕ್ಕಾಗಿ ಅವರ ಪೆಟಾರಿಯಂತಹ ಬುಟ್ಟಿಯನ್ನು ತೆಗೆದು ಮುಟ್ಟಿ ನೋಡಿದಳು. ಬಿಲ್ಲು, ಬತ್ತಳಿಕೆ, ನಾರು ಬಟ್ಟೆಗಳನ್ನು ನೋಡುತ್ತಾ ಒಂದು ವಸ್ತುವನ್ನು ನೋಡಿ ಆಶ್ಚರ್ಯಕ್ಕೊಳಗಾದಳು. ಆದರೂ, ಅವಳು ಕಲ್ಪಿಸಿಕೊಂಡಿದ್ದಂತೆ ರಾಮನನ್ನು – ಬಂದ ಕಿರಾತರ ಒರಟು ಆಕಾರದಲ್ಲಿ ಕಾಣಲಿಲ್ಲ.

'ಕಾಯುತಿಹೆನೀರ್ರೈದು ವತ್ಸರಗಳಿಂ, ಕಂದರಿರ, ರಾಮಲಕ್ಷ್ಮಣಸೀತೆಯರಿಗಾಗಿ

ಅಷ್ಟರಲ್ಲಿ ರಾಮ ಲಕ್ಷ್ಮಣರು ಮಿಂದು ಬಂದರು. ಕಪ್ಪಗಿದ್ದ ಚಿನ್ನವನ್ನು ಒರಟು ಜುಂಗಿನ ಗುಚ್ಛ (Brush)ದಿಂದ ಉಜ್ಜಿ ತೊಳೆದ ಹಾಗೆ ಅವರಿದ್ದರು. ಅದನ್ನು ಕಂಡು ಅಜ್ಜಿ ಸೂಜಿ ಮೊನೆಯ ಮೇಲೆ ನಿಂತಂತೆ ಕುತೂಹಲಗೊಂಡಳು. ಬೇಡರಿಗೆ ಇಂತಹ ತೇಜ ಪೌರುಷ ಎಲ್ಲಿಯದು ಮತ್ತು ಈ ನುಣುಪು ನುಡಿ, ನಯದ ನಡೆ ಹೇಗೆ ಸಾಧ್ಯ? ಇವರು ದೊರೆಯ ಮಕ್ಕಳೇ ಇರಬೇಕೆಂದು ಕೊಂಡಳು ಆ ಮತಂಗ ಮುನಿ ಶಿಷ್ಯೆ. (ಸೀತೆಯನ್ನು ಬಿಟ್ಟು ಬಂದ ಈತನು ರಾಮನಲ್ಲ ಎಂದು ತೀರ್ಮಾನಿಸಿದಳು)

ನಳನಳಿಸುವ ಸುಳಿ ತಳಿರಿನ ಕುಡಿ ಬಾಳೆಎಲೆಯನ್ನು ಹಾಸಿದಳು. ಜೊಂಡಿನಿಂದ ಮಾಡಿದ ಗೀಕು ಚಾಪೆಯ ಮಣೆಗಳನ್ನು ಕುಳಿತುಕೊಳ್ಳಲು ನೀಡಿದಳು. ಹಸಿರು

ದೊನ್ನೆಗಳಲ್ಲಿ ತಿಳಿ ನೀರನ್ನು, ಹೊಂಬಾಳೆಗಳಲ್ಲಿ ಕೆನೆ ಹಾಲನ್ನು, ಜೇನುತುಪ್ಪವನ್ನು ತಂದಿಟ್ಟಳು. ನೂಲೆ ಗೆಣಸು, ಬಾಳೆಹಣ್ಣುಗಳನ್ನು, ಅನಾನಸ್ ಚೂರುಗಳನ್ನು ಬಡಿಸಿದಳು. ಅನಂತರ, ಬಿಸಿಬಿಸಿಯಾದ ಹಸುರು ಅಕ್ಕಿಯ ಅನ್ನವನ್ನು, ಮೊಸರನ್ನು, ಬೆಲ್ಲ ಬೆಣ್ಣೆಯನ್ನು ಬಡಿಸಿದಳು. ಆ ರುಚಿಯಾದ ಭೋಜನಕ್ಕೆ ಸವಿ ನುಡಿ ಬೆರೆಸಿ, ಮುಗುಳು ನಗುತ್ತ ಹೀಗೆ ಹೇಳಿದಳು:

'ಯಾರ ಸಂಪತ್ತು ಯಾರಿಗೊ? ನಿಮ್ಮ ಸುಕೃತವನ್ನು ಯಾರಿಗೊ ಬಡಿಸಲು ಸಾಧ್ಯವೆ? ಮಕ್ಕಳಿರ ತೃಪ್ತಿಯಾಗಿ ಉಂಡು ತಣಿಯಿರಿ. ಬಂದ ಅತಿಥಿ ಯಾರಾದರೇನಂತೆ?'

'ಯಾರ ಸಂಪತ್ತು ಯಾರಿಗೆ ಹೇಳಜ್ಜಿ? ನಾವು ಉಣ್ಣುತ್ತಿದ್ದ ಪುಣ್ಯವು ಯಾರಿಗೆ ಮೀಸಲಾಗಿತ್ತು. ನಿನ್ನ ಬಯಕೆಯ ಆ ಅತಿಥಿ ಖಂಡಿತವಾಗಿಯೂ ಪುಣ್ಯವಂತನೆ!'

'ದಶರಥ ಕುಮಾರನಯ್ಯ!'

ಎಂಬ ಮಾತು ಕೇಳಿ ರಾಮಲಕ್ಷ್ಮಣರು ಒಬ್ಬರನ್ನೊಬ್ಬರು ದೃಷ್ಟಿಸುತ್ತ ಮುದುಕಿಯನ್ನು ನೋಡುತ್ತಿರಲು, ಅವಳು ಮಾತು ಮುಂದುವರಿಸಿ ಹೇಳಿದಳು:

'ಅವನು ಲಕ್ಷ್ಮಣನ ಅಣ್ಣ. ನೆಲದ ಹೆಣ್ಣುಮಗಳು ಸೀತೆಗೆ ಪತಿಯಯ್ಯ' ಎಂದು ಹೆಸರು ಹೇಳುವ ಹರುಷಕ್ಕೆ ದುಃಖ ಉಮ್ಮಳಿಸಿ ಬರಲು ಅಳುತ್ತ, 'ಕಂದರಿರ, ರಾಮಸೀತೆಯರಿಗಾಗಿ ಹತ್ತು ವರ್ಷಗಳಿಂದ ಪ್ರತಿ ದಿನ, ನಿಮಗೆ ಇಕ್ಕಿದ ಉಣಿಸನ್ನೆ ಅಣಿ ಮಾಡಿ ಕಾಯುತ್ತಿದ್ದೇನೆ. ಗುರುವಾಣಿ ಹುಸಿಯಾಗುತ್ತದೆಯೆ?' ಎಂದು ಹೇಳಿದ ಆ ಮಾತಂಗಿಯು ಪುನಃ ಮುನಿ ಮತಂಗನು ಹೇಳಿದ ರಾಮನ ಆಗಮನ ಪುಣ್ಯ ವಾರ್ತಾ ಭವಿಷ್ಯವನ್ನು ತಿಳಿಸಿದಳು. ಅನಂತರ ಕೇಳಿದಳು,

'ಕುಮಾರರಿರ, ನೀವು ಯಾರೋ ಉತ್ತರದವರಂತೆ ಕಾಣುತ್ತಿರುವಿರಿ, ರಾಮನು ಎಲ್ಲಿರುವನೆಂದು, ಎಂದಿಗೆ ಬರುವನೆಂದು ಕಂಡಿರುವಿರ? ಕೇಳಿರುವಿರ? ಬಾಳಿನ ಪಯಣವನ್ನು ಮುಗಿಸಿ ಹೋಗುವ ಮೊದಲು ಒಮ್ಮೆಯಾದರೂ ರಾಮನ ಸಿರಿಮುಖದ ದರ್ಶನ ನನಗೆ ದೊರೆಯದೆ ಇರುತ್ತದೆಯೆ? ಶಾಂತಿನಿಧಿಯಾದ ಆತನನ್ನು ಕಾಣುವುದೇ ಪರಮಶಾಂತಿ!'

ನೀರು ತುಂಬಿದ ಕಣ್ಣುಗಳಿಂದ ಅಜ್ಜಿಯ ಮಾತುಗಳನ್ನು ಆಲಿಸಿ ಗದ್ಗದಿತನಾಗಿ ರಾಮನು ಹೇಳಿದನು:

'ಶಾಂತಿನಿಧಿಯಾದ ಅವನು ಶಾಂತಿಯಿಲ್ಲದೆ ತೊಳಲುತ್ತಿರುವನಂತೆ? ತಾಯಿಯೆ, ಮನೆಗೆಟ್ಟು ದೊಡ್ಡ ಕಾಡೇ ಮನೆಯಾದವನನ್ನು ಶಾಂತಿ ನಿಧಿಯೆಂದು ಸುಮ್ಮನೆ ಏಕೆ ಬಣ್ಣಿಸುವೆ? ಅಜ್ಜಿ, ನಿನ್ನ ಪ್ರೀತಿಯ ಊಹೆಯಿಂದ ಸಾಮಾನ್ಯನನ್ನು ದೇವ ಮಾನ್ಯತೆಗೆ ಏರಿಸಿರುವೆ!'

'ತೆಗೆ ತೆಗೆ! ಮಹಾತ್ಮನನ್ನು ತೆಗಳಬೇಡ'

'ನಾನು ರಾಮನನ್ನು ಬಲ್ಲೆ!'

'ನಿನಗೆ ಅವನು ಗೊತ್ತಿಲ್ಲ!'

'ನಾನು ತಿಳಿದಿಲ್ಲವೆ? ನನ್ನನ್ನು ನಾನು ತಿಳಿಯೆ ಎಂದು ಹೇಳುತ್ತಿರುವೆ!'

ಶಬರಜ್ಜಿಯು ಆಶ್ಚರ್ಯದ ಆಘಾತಕ್ಕೆ ಒಳಗಾದಂತೆ ರಾಮನ ಕಣ್ಣಿನಲ್ಲಿ ಕಣ್ಣಿಟ್ಟು ನೋಡಿದಳು. ರಾಮನು ತಕ್ಷಣ ಮುಖವನ್ನು ಕೆಳಗೆ ಇಳಿಸಿ, ಕಣ್ಣು ಎತ್ತದೆ ಮತ್ತೆ ಊಟ ಮಾಡತೊಡಗಿದನು. ಮುಕ್ತಾಶ್ರುಗಳು ಕೈ ತುತ್ತಿಗೆ ಉದುರಿದುವೆ? ಕಾಣ್ಕೆಯೊ? ಕಲ್ಪನೆಯೊ? ಮುದುಕಿ ಮೌನಿಯಾದಳು. ತನಗೆ ತಿಳಿಯುದ ಅರ್ಥದಿಂದ ನಿರ್ಣಯಿಸುವುದು ಹೇಗೆ ಸಾಧ್ಯ?

'ದಮ್ಮಯ್ಯ, ಸಾಕಿನ್ನು, ಮರೆ ಮಾಡಬೇಡಯ್ಯ

ತೃಪ್ತಿಯಾಗಿ ಊಟ ಮಾಡಿದ ಅನಂತರ ಮಧ್ಯಾಹ್ನದ ವಿಶ್ರಾಂತಿಗಾಗಿ ದಣಿವಾರಿಸಿಕೊಳ್ಳಲು ಮಲಗಿದರು. ಬಿಳಿಯ ಮೈಯ ಲಕ್ಷ್ಮಣನು ಎಚ್ಚೆತ್ತು ಹೊರ ಹೋಗಿರಲು, ನೀಲಿ ಮೈಯವನು ಕನವರಿಸುತ್ತಿದ್ದನು:

'ಸೀತೆ, ಬಾ ಇಲ್ಲಿ; ಬಾ ಪ್ರಿಯೆ ಜನಕಜಾತೆ.'

ಗುಡಿಸಿಲಿನ ಒಳಗೆ ಅಲ್ಲಿಯೇ ಹತ್ತಿರದಲ್ಲಿ ಬೆಲ್ಲ ಮತ್ತು ಬೇಲದ ಹಣ್ಣುಗಳನ್ನು ಬೆರೆಸಿ, ಪಾನಕ ಮಾಡುತ್ತಿದ್ದ ಅಜ್ಜಿ ಓಡಿ ಬಂದಳು. ಹಾಸುಗೆಯ ಕಡೆ ಕಣ್ಣು ನೆಟ್ಟು, ಕನಸಿನಲ್ಲಿಯೆ ಮುಗುಳು ನಗುತ್ತಿದ್ದ ದೇವ ಶರೀರನನ್ನು ನೋಡಿದಳು. ನೋಡುತ್ತ ಮನದ ಆನಂದವನ್ನು ಅನುಭವಿಸಿದಳು. ಆ ಮಂದಸ್ಮಿತ ಮುಖಕಮಲದಲ್ಲಿ ತನ್ನ ಸೌಮ್ಯ ಶಾಂತನನ್ನು ಕಂಡು ತಿಳಿದಳು. ಆದರೆ, ಏನಿದು ಮತ್ತೆ? ನೋಡುತ್ತಿರಲು ಆ ಮುಖದಲ್ಲಿ ಸೌಮ್ಯತಾ ಲಕ್ಷಣ ಹಿಂಗಿತು! ನಿದ್ರೆಯನ್ನು ಅಶಾಂತಿ, ಗೊಂದಲ ಆವರಿಸಿತೆ? ವೈರದಿಂದ ಕ್ರೂರ ಕರ್ಕಶನಾಗಿ ಕೋಪದಿಂದ ಚೀರಾಡಿ ಕೂಗಲು ಶಬರಿ ಹೆದರಿ ಹಿಂದೆ ಸರಿದಳು. 'ನಿಲ್, ನಿಲ್, ರಾಕ್ಷಸಾಧಮನೆ ನಿಲ್ಲು! ನೀಚನೆ ನನ್ನ ಸೀತೆಯನ್ನು ಎಲ್ಲಿಗೆ ತೆಗೆದುಕೊಂಡು ಹೋಗುತ್ತಿರುವೆ ಎಂದು ಹೇಳು!'

ಹುಬ್ಬುಗಂಟಿಕ್ಕಿ, ಗಂಟಲಿನ ಸೆರೆ ಬಿಗಿಯಲು, ಅವುಡುಗಚ್ಚುತ್ತ ನಿದ್ದೆಯನ್ನು ಒದ್ದು, ಸ್ವಪ್ನವನ್ನು ಸೀಳಿ ಅಬ್ಬರಿಸುತ್ತ ಎದ್ದು ಕುಳಿತನು. ತನ್ನ ಸುತ್ತಲೂ ನೋಡಿ ದಿಗ್ಭ್ರಾಂತನಾದನು.

ಶಬರಜ್ಜಿಯು ಬೆದರದೆ ನೋಡುತ್ತಿರಲು ಮುಖವನ್ನು ಕೆಳಗೆ ಮಾಡಿಕೊಂಡು ನಾಚುತ್ತ ಮಾತನಾಡಿದನು:

‘ಅಜ್ಜಿ, ತಪ್ಪು ಮಾಡಿದೆ. ಕಂಡ ಕನಸನ್ನು ನನಸು ಎಂದುಕೊಂಡು ಸುಮ್ಮನೆ ನಿನ್ನನ್ನು ಅಂಜಿಸಿದೆ’

ಅಜ್ಜಿ ದೊಪ್ಪನೆ ಬಿದ್ದು ರಾಮನನ್ನು ಅಪ್ಪಿಕೊಂಡು ಹೇಳಿದಳು:

‘ದಮ್ಮಯ್ಯ, ಸಾಕಿನ್ನು,, ಮರೆಮಾಡಬೇಡಯ್ಯ, ಓ ನನ್ನ ಕಂದಯ್ಯ, ರಾಮಚಂದ್ರಯ್ಯ! ನನ್ನ ಮಗಳಿಗೆ ಏನಾಯ್ತಯ್ಯ? ಹೇಳು! ಸೀತೆ ಎಲ್ಲಿದ್ದಾಳೆ, ಕೇಡಾಯಿತೆ, ಏನಾಯಿತು ಅಯ್ಯಯ್ಯೊ, ನನ್ನ ಈ ಹಾಳು ಕಣ್ಣುಗಳು ಅರಿಯಲಾರದೆ ಹೋದುವಯ್ಯ! ಅಯ್ಯೊ, ನಾನಾಗಲೆಯೆ ನಿನ್ನ ತೆರೆದ ಪೆಟ್ಟಿಗೆಯಲ್ಲಿ ಒಂದು ಸೀರೆಯನ್ನು ಕಂಡೆನು. ಆದರೆ, ಈ ಮುಪ್ಪು-ಬೆಪ್ಪು ತಿಳಿಯುವುದು ಹೇಗಯ್ಯ?’

ತಾಯಿಯ ಅಪ್ಪುಗೆಯ ತೊಟ್ಟಿಲಲ್ಲಿ ಶಿಶುವಾಗುತ್ತ ರಾಮನು ಹೀಗೆ ಹೇಳಿದನು:

‘ನಾನು ನಿರ್ಭಾಗ್ಯನಾದ ರಾಮ! ಅಜ್ಜಿ, ಸೀತೆಯನ್ನು ಅಸುರನು ಎತ್ತಿಕೊಂಡು ಹೋದನು. ಅವಳನ್ನು ಹುಡುಕಲೆಂದು ಲಕ್ಷ್ಮಣನೊಡನೆ ಅಲೆಯುತ್ತ ತೊಳಲಾಡುತ್ತಿದ್ದೇನೆ!’

ಹಾಗೆ ನುಡಿದ ದುಃಖಿ ಸೀತಾಕಾಂತನು ಅಜ್ಜಿಯ ತೋಳುಗಳು ಅಪ್ಪಿದ ತೆಕ್ಕೆಯಲ್ಲಿ ದೈನ್ಯದಿಂದ ಬಿಕ್ಕಿ ಬಿಕ್ಕಿ ಅಳುತ್ತಿದ್ದನು.

ಕೇಳಿ, ಸಹೃದಯರೇ, ತಾಯಿಯ ಮಡಿಲಲ್ಲಿ ಯಾರಾದರೆ ಏನು, ಅವರು ಬರಿ ಶಿಶುಗಳಲ್ಲವೆ!

ಆರೈಕೆ ಮಾಡಿದಳೊ ತನ್ನಿಷ್ಟ ದೇವತಾ ಮೂರುತಿಗೆ ಆ ತಪಸ್ವಿನಿ ಶಬರಿ.

ದಾಶರಥಿಯು ತಾಳಲಾರದ ಶೋಕ ಭಾರದಿಂದ ಹಾಸಿಗೆಯಿಂದ ಏಳಲಾರದೆ ಹೋದನು. ಹೇಳುವುದೇನಿದೆ? ಶಬರಿಯ ಶುಶ್ರೂಷೆಯನ್ನು ಬೇಡುವ ಅತಿಥಿಯಾದನು. ಮನೋರೋಗಕ್ಕೆ ಪ್ರೇಮವೇ ಉತ್ತಮವಾದ ಔಷಧ. ಪ್ರಾಣದ ಗಾಯಕ್ಕೆ ಪ್ರೀತಿಯೇ ಪರಮ ಔಷಧ ಎನ್ನುವಂತೆ, ಪ್ರೀತಿ ಇಲ್ಲದೇ ಬೇರೆ ಔಷಧವು ಭ್ರಾಂತಿಯೆಂಬಂತೆ ಆ ತಪಸ್ವಿನಿ ಶಬರಿಯು ತನ್ನ ಇಷ್ಟದೇವತಾ ಮೂರ್ತಿಗೆ ಆರೈಕೆ ಮಾಡಿದಳು. ಮುದುಕಿಯು ಹಗಲು ಇರುಳುಯೆನ್ನದೆ, ಎಚ್ಚರ ನಿದ್ದೆಯೆನ್ನದೆ ನಿರಂತರವಾಗಿ ರಾಮಸೇವಾ ಸಾಧನೆಗೆ ತನ್ನ ಆಯಸ್ಸನ್ನು ಸವೆಸಿದಳು.

ಹಾಸಿಗೆಯ ಬಳಿಯೆ ಕುಳಿತು ರಾಮನ ಮೈಯನ್ನು ನೀವುತ್ತ, ಸವರುತ್ತ, ವನವಾಸದ ಕಥೆ ಎಲ್ಲವನ್ನು ಕೇಳುವಳು. ಜೊತೆಗೆ, ಅವನ ಮನೋವ್ಯಥೆಯೆಲ್ಲವನ್ನು ಧೈರ್ಯ ವಾಕ್ಯಗಳಿಂದ ಸಂತೈಸುವಳು. ಮತ್ತೆ ಕೇಳುವವನಿಗೆ ಕುತೂಹಲ ಉಂಟಾಗಿ ದುಃಖವನ್ನು ಶಮನಗೊಳಿಸುವಂತೆ ತನ್ನ ಬಾಳಿನ ಕತೆಯ ವಿವರವನ್ನು ಹೇಳುವಳು.

ರಾಮನ ವಿಚಿತ್ರ ಖಾಯಿಲೆಯು ಕಡಿಮೆಯಾಗದೆ ಹೋಯಿತು. ತೇಜಸ್ಸು ಮಾಸಿತು. ಭೀಮ ಶರೀರ ಕೃಶವಾಯಿತು. ದಿನದಿನಕ್ಕೆ ರಾವಣನ ರಾಜತಂತ್ರದ ಬಯಕೆ

ಕೈಗೂಡಿತು ಎಂಬಂತೆ ರಾಮನ ಮನದ ಕೆಚ್ಚು ಬಾಡಿತು. ಅವನ ಮುಖವು ಸೊರಗಿ ನಂಬಿಕೆ ಕುಸಿಯತೊಡಗಿತು. ಒಂದು ದಿನ ಅಮಾವಾಸ್ಯೆಯ ಕತ್ತಲ ರಾತ್ರಿಯಲ್ಲಿ ಲಕ್ಷ್ಮಣನು ಒಬ್ಬನೆಯೆ ಹೊರಗೆ ನಡೆದನು. ಒಂದು ಬಂಡೆಯ ಮೇಲೆ ಕುಳಿತು ನಿಟ್ಟುಸಿರು ಬಿಡುತ್ತ ಅಳುತ್ತ ಕುಳಿತನು. ಸಪ್ತರ್ಷಿ ಮಂಡಲವು ನಿಧಾನವಾಗಿ ಮೇಲೇಳುತ್ತಿರುವುದನ್ನು ನೋಡುತ್ತಿದ್ದನು. ಆಗ ಬೆನ್ನ ಹಿಂದೆ ಯಾರೋ ಬಂದಂತಾಯ್ತು! ಕತ್ತಲಲ್ಲಿ ಕಣ್ಣು ನೋಡಲಾಗದಿದ್ದರೂ ಶಬರಿ ಎಂದು ತಿಳಿದನು. ಅವಳು ಸಹ ಅವನ ಮೇಲೆ ಕೈಯಿಟ್ಟು ಹೇಳಿದಳು:

'ಕಂದ ಲಕ್ಷ್ಮಣ ಇದೇನು? ನೀನು ಹೀಗೇಕೆ ಹೇಳದೆ ಎದೆಗೆಟ್ಟು ಕೊರಗುತ್ತಿರುವೆ?'

ಆ ಸಾಂತ್ವನದ ನುಡಿಗೆ ಗದ್ಗದಿಸುತ್ತ ಸುಮಿತ್ರಾತ್ಮಜನು 'ಅಜ್ಜಿ, ಅತ್ತಿಗೆಗೆ ಅಂತಹ ಪಾಡಾಯಿತು. ಅಣ್ಣನಿಗೆ.. ಅಣ್ಣಂಗೆ... ಅಣ್ಣನುಂ..' ಎಂದು ಹೇಳಿ ರೋದಿಸಿದನು. ಅವನ ಕಂಬನಿಯನ್ನು ಒರೆಸುತ್ತ ಶಬರಜ್ಜಿಯು,

'ಸೌಮಿತ್ರಿ ಬಾ ಒಳಗೆ. ಬಿಡು ದುಃಖವನ್ನು. ನಿನ್ನ ಅಣ್ಣನ ಪ್ರಾಣಕ್ಕೆ ನಾನು ಹೊಣೆಗಾರ್ತಿ. ನನ್ನ ಗುರುಕೃಪೆಯಿಂದ ರಾಮನ ಕಾಯಿಲೆಯೆಲ್ಲವನ್ನು ಹೀರಿ ಬಿಸಾಡುವೆ, ನೋಡು ಬಾ!'

ಎಂದು ಹೇಳಿದಳು. ಅವರಿಬ್ಬರೂ ಆಶ್ರಮದ ಒಳಕ್ಕೆ ನಡೆದರು. ಬರಿ ಚರ್ಮ ಹೊತ್ತ ಎಲುಬು ಗೂಡಾಗಿ ರಾಮನು ಹಾಸಿಗೆಯ ಮೇಲೆ ಮಲಗಿದ್ದನು. ಮುದುಕಿಯು ತನ್ನ ಗುರುವನ್ನು ಧ್ಯಾನಿಸುತ್ತ ಆ ಮೂರ್ತಿಯನ್ನು ಪ್ರದಕ್ಷಿಣೆ ಮಾಡಿದಳು. ತನ್ನ ಮೋಕ್ಷಕ್ಕೆ ತನ್ನ ದೇವತೆಯನ್ನು ಪ್ರದಕ್ಷಿಣಾ ಪೂರ್ವಕವಾಗಿ ಪ್ರಾರ್ಥಿಸಿದಳು ಎಂಬಂತೆ ಮಂತ್ರವನ್ನು ಘೋಷಿಸಿದಳು. ರಾಮನ ಪಾದಗಳನ್ನು ಮುಟ್ಟಿ ಕೈ ಮುಗಿದು ಅಡ್ಡ ಬಿದ್ದಳು. ಲಕ್ಷ್ಮಣನ ಕಡೆಗೆ ತಿರುಗಿದಳು. ಬೆರಗಾಗಿ ನೋಡುತ್ತಿದ್ದ ಅವನಿಗೆ ನಗುತ್ತ ಹೇಳಿದಳು:

'ವತ್ಸ, ರಾಮನಿನ್ನು ಸುಕ್ಷೇಮನು! ನಿನ್ನ ದುಃಖವನ್ನು ಕಳೆದೆಸೆ!' ಮರುದಿನ ಬೆಳಗಾಗಲು ಏನೆಂದು ಹೇಳುವುದು? ರಾಮನು ಸದೃಢಕಾಯ ಆರೋಗ್ಯದಿಂದ ಎದ್ದನು. ಉಜ್ವಲವಾಗಿ ಹೊಳೆಯುವ ಕಣ್ಣುಗಳ ಸುಪ್ರಸನ್ನ ಮುಖದಿಂದ ಶೋಭಿಸುವ ಪವಿತ್ರ ಶರೀರದವನನ್ನು ಲಕ್ಷ್ಮಣ ಕಂಡನು. ಕೃತಜ್ಞತೆಯಿಂದ ಶಬರಿಯ ಚರಣಗಳಿಗೆ ಉರುಳಿ ಬಿದ್ದನು!

ನೀಂ ಪ್ರೀತಿ ಪರಿಚರ್ಯೆಗೆಯ್ಯುತಿರಲಾಂ ಶಾಂತಿಯಿಂ ಸೇರಿದಪೆನಧ್ಯಾತ್ಮಮಂ

ಆ ದಿನವೇ ಶಬರಿಯು ಹಾಸಿಗೆ ಹಿಡಿದಳು. ತನ್ನ ಶುಶ್ರೂಷೆಯಿಂದ ನಿದ್ದೆಗೆಟ್ಟು ದಣಿದು ಬೆಂಡಾದವಳನ್ನು ರಾಮನು ತನ್ನ ದುಃಖವನ್ನು ಮರೆತು ಉಪಚರಿಸಿದನು.

ಆಗ ಶಬರಜ್ಜಿಯು, 'ಮಗುವೆ, ನನಗಾಗಿ ಮರುಗಬೇಡ. ಹಸುರೆಲೆಗೆ ಉಪಚಾರಬೇಕು; ಹಣ್ಣೆಲೆಗೆ ಏಕೆ?' ಎಂದು ರಘುರಾಮನನ್ನು ಸಮಾಧಾನ ಪಡಿಸುತ್ತ ಮಾತು ಮುಂದುವರಿಸಿದಳು. 'ರಾಮಚಂದ್ರ, ನಾನು ಧನ್ಯೆ. ನೀನು ಪ್ರೀತಿಯಿಂದ ಶುಶ್ರೂಷೆ ಮಾಡುತ್ತಿರಲು ನಾನು ಶಾಂತಿಯಿಂದ ಅಧ್ಯಾತ್ಮವನ್ನು ಸೇರುತ್ತೇನೆ. ಇದಕ್ಕಿಂತ ಮಿಗಿಲಾದ ಪುಣ್ಯ ಬೇರೆ ಯಾವುದಿದೆ? ನಿನಗೆ ಮುಂದೆ ಮಾಡಬೇಕಾದ ಕಾರ್ಯಗಳು ಬೆಟ್ಟದಷ್ಟಿವೆ. ನಾನೊಂದು ಕನಸು ಕಂಡೆ, ಕೇಳು: ಕುಬೇರನ ಸಹೋದರನಾದ ದಶಕಂಠ ರಾವಣನ ಲಂಕೆಯ ಉದ್ಯಾನದಲ್ಲಿ ಸೀತೆ ಸೊರಗಿದ್ದಾಳೆ, ದುಃಖದಿಂದಿದ್ದಾಳೆ. ಕಂದ, ನಿನ್ನಂತೆ ಮನೆ ಮಡದಿಗೆಟ್ಟು ಸ್ನೇಹಿತರೊಡನೆ ಕಾಡುಪಾಲಾದ ಸುಗ್ರೀವನ ಬಗ್ಗೆ ನಾನು ಅಂದು ಹೇಳಿದ್ದೆನು.

'ನೋಡು, ಓ ಅಲ್ಲಿ, ದಿಗಂತದ ರೇಖೆಗೆ ಎದಿರು ಎದ್ದು ಕಾಣುವ ಋಷ್ಯಮೂಕ ಪರ್ವತವು ಎಷ್ಟು ಭವ್ಯವೂ ದಿವ್ಯವೂ ಆಗಿದೆ! ಅದರ ಮಗ್ಗುಲಲ್ಲಿ ಮತಂಗ ಮುನಿಯ ಕಾನನವಿದೆ. ಆ ಅಡವಿಯ ಅಂಚಿನಲ್ಲಿ ಪಂಪಾ ಸರೋವರ ರಾರಾಜಿಸುತ್ತಿದೆ. ತುಂಗಭದ್ರಾ ನದಿಯ ಮೇಲೆ ಹತ್ತಿರದಲ್ಲಿ ವಾನರ ರಾಜಧಾನಿ ಕಿಷ್ಕಿಂಧೆ ಇದೆ. ಅದನ್ನು ವಾಲಿಯು ಆಳುತ್ತಿದ್ದಾನೆ. ಅವನಿಂದ ಹೊರದೂಡಲ್ಪಟ್ಟ ನೆಲೆಗೆಟ್ಟವನು ಸುಗ್ರೀವ. ಅವನು ಗುರುಮತಂಗನು ವಾಲಿಗೆ ಕೊಟ್ಟಿರುವ ಶಾಪದಿಂದ-ವಾಲಿ ಪ್ರವೇಶ ಮಾಡಲಾಗದ ಋಷ್ಯಮೂಕದಲ್ಲಿ ಗುಹಾ ವಾಸಿಯಾಗಿದ್ದಾನೆ. ನೀನು ಹೋಗಿ ಅವನ ಸ್ನೇಹವನ್ನು ಪಡೆ. ದುಃಖಿಗೆ ದುಃಖಿ ನೆರವಾಗುವನು. ದೈವೇಚ್ಛೆ ಗೆಲ್ಲಲ್ಲಿ. ನಿನ್ನಿಚ್ಛೆಯು ಸಫಲವಾಗಲಿ.'

ಎಂದು ಹೇಳ ಹೇಳುತ್ತ ಶಬರಜ್ಜಿಯು ಹರ್ಷ ಮುಖಿಯಾದಳು. ಲಕ್ಷ್ಮಣ ರಾಮರನ್ನು ಸುಖಬಾಷ್ಪ ನೇತ್ರದಿಂದ ನೋಡನೋಡುತ್ತ ದೇವ ಸೀತಾನಾಥನ ದಿವ್ಯಾಶ್ರು ತೀರ್ಥಜಲದಲ್ಲಿ ಮಿಂದಳು. ಆ ಅಮರ ಸನ್ಮಾನ್ಯೆ ಪವಿತ್ರಳಾಗಿ ಧನ್ಯಭಾವದಲ್ಲಿ ಶಿವ ಕಲ್ಯಾಣ ಕಳೇಬರಳಾಗಿ ಕಣ್ಣು ಮುಚ್ಚಿದಳು.

❑



~~~~~~~~~~~~~~~~~~~~~~~ ಸಂಚಿಕೆ – ೪ ~~~~~~~~~~~~~~~~~~~~~~~

ಅತ್ತಲಾ ಕಿಷ್ಕಿಂಧೆಯೊಳ್

ವಾಲಿಯ ಸಹೋದರಂ ಸುಗ್ರೀವನಲ್ತೆ ಆ ಓಜೋನ್ವಿತಂ?

ಏಕಳುವೆ ತೇಜಸ್ವಿ? ಕಲ್ಪನೆಯ ರಂಕುಜಿಂಕೆಯನ್ನು ಏರಿ ನನ್ನೊಡನೆ ಬಾ. ಅದೋ ಅಲ್ಲಿ ಕಿಷ್ಕಿಂಧೆ ಗಿರಿವನ ಗುಹೆಯ ದ್ವಾರದ ಬಳಿ ಕಾಣುತ್ತಿರುವುದೇನು? ಓರ್ವ ಸಿಂಹ ಹೃದಯದ, ಗೂಳಿಯಂತಹ ಗಂಭೀರ ನಡೆಯ, ಆನೆಯಂತಹ ದೃಢ ಶರೀರಿ ನಿಂತಿದ್ದಾನೆ! ಅವನೊಬ್ಬನೆ ಶತಪಥ ಹಾಕುತ್ತ ಏಕೆ ಏಕಾಂಗಿಯಾಗಿದ್ದಾನೆ? ಬಾಹುದಂಡದಲ್ಲಿ ಗದಾದಂಡವನ್ನು ಏಕೆ ಹೊತ್ತಿದ್ದಾನೆ? ಹುಲ್ಲು ಮೀಸೆಯಂತೆ ಆವರಿಸಿರುವ ಗವಿಯ ಬಾಯಿಯನ್ನೆ ಏಕೆ ನೋಡುತ್ತಿದ್ದಾನೆ ಎಂಬುದನ್ನು ಹೇಳು.
~~~~~~~~~~~~~~~~~~~~~~~

ಅವನು ನಿಟ್ಟುಸಿರು ಬಿಡುತ್ತ ಏನನ್ನೋ ಆಲೋಚಿಸುತ್ತಿದ್ದಾನೆ. ಗದೆಯನ್ನು ಇಳಿಸಿ ಒಮ್ಮೆ ಪರ್ವತದ ಕಿಬ್ಬಿಯನ್ನು ಮತ್ತೊಮ್ಮೆ ಅದರ ನೆತ್ತಿಯನ್ನು ನೋಡದಂತೆಯೆ ನೋಡುತ್ತಿದ್ದಾನೆ. ಆ ಓಜೋನ್ವಿತನು ವಾಲಿಯ ತಮ್ಮ ವಾನರ ಕುಲದ ನರ ಶ್ರೇಷ್ಠ ಸುಗ್ರೀವನಂತೆ! ಅವನು ಗವಿಯ ಬಿಲಮುಖದಲ್ಲಿ ತಪಸ್ಸನ್ನೇನಾದರೂ ಮಾಡುತ್ತಿರುವನೆ? ನೂರು ದಿನಗಳು ಕಳೆದಿವೆ, ನೂರು ರಾತ್ರಿಗಳು ಕಳೆದಿವೆ. ದಿನರಾತ್ರಿ ರಾತ್ರಿದಿನ ಎಡೆಬಿಡದೆ ನಿರಂತರವಾಗಿ ಗುಹಾಮುಖದಲ್ಲಿ ವಾಲಿಯ ತಮ್ಮನು ಅದೇನು ತಿರುಗಾಡುತ್ತಲೇ ಇದ್ದಾನೆ?

ಜನರು ನಿದ್ರಾವಶರಾಗಿರುವಾಗ ಬೆಳುದಿಂಗಳು ಬಿಳಿದಾಗಿ ಬೆಳಗುತ್ತ ಕಾಂತಿಯುತ ಪೃಥ್ವಿಯನ್ನು ಅವುಚಿತು (ಕವಿಚಿತು). ಕಿಷ್ಕಿಂಧೆಯು ನಿಶ್ಯಬ್ದ ಸಮುದ್ರದ ಆಳಕ್ಕೆ ಮುಳುಗಿತು. ಇದಕ್ಕಿದ್ದಂತೆ ಮೌನವನ್ನು ಕಲಕಿತು. ಜನರ ಕಿವಿಯನ್ನು ಕಿವುಡಾಗಿಸಿ ಮನಸ್ಸಿಗೆ ಮಂಕು ಆವರಿಸಿತು. ಜನೇಂದ್ರ ವೈರಿನಾಶಕನಾದ ವಾಲಿಯು ತನ್ನ ಅರಮನೆಯನ್ನು ಬಿಟ್ಟು ಹೊರಬಂದನು. ತನ್ನ ತಂದೆಯನ್ನು ಕೊಂದಿದ್ದ ಹಿಂದಿನ ಹಗೆತನ ತೀರಿಸಿಕೊಳ್ಳಲು ಸೊಕ್ಕಿನಿಂದ ಗರ್ಜಿಸುತ್ತಿರುವ ಅಸುರನು ದುಂದುಭಿಯ ಮಗ ಮಾಯಾವಿ ಎಂದು ವಾಲಿ ತಿಳಿದನು.

ಯಮನಂತಹ ವಾಲಿಯು ಶಿಖರಸಮನಾದ ಬಂಡೆಯ ತಲೆಯ ಗದೆಯನ್ನು ಎತ್ತಿಕೊಂಡನು. ದುಂದುಭಿಯ ದುಷ್ಕೃತಿಯ ಫಲ ನೀನು ಎಂದು ಹೇಳುತ್ತ ಪ್ರತಿಯಾಗಿ ಅಟ್ಟಹಾಸವನ್ನು ಮಾಡುತ್ತ ಗರ್ಜಿಸಿ ಅವನನ್ನು ಬೆನ್ನಟ್ಟಿದನು. ಅಣ್ಣನಿಗೆ ಬೆನ್ನಿನ ಬಲವಾಗಿ ಸುಗ್ರೀವನು ಜೊತೆಗೆ ಹೋದನು. ಇಬ್ಬರನ್ನು ನೋಡಿದ ಮಾಯಾವಿಯು ಇವರನ್ನು ನನ್ನ ನೆಲೆಗೆ ಸೆಳೆದುಕೊಂಡು ಹೋಗಿ ನನ್ನವರ ಕೈಯಿಂದ ಈ ಮಹಾ ಕಪಿಧ್ವಜರನ್ನು ಕೊಲ್ಲಿಸುವೆನೆಂದು ಓಡಿದನು. ಅವನು ಬೆಳುದಿಂಗಳು ರಾತ್ರಿಯಲ್ಲಿ ನೆರಳು ಕಪ್ಪುಗತ್ತಲೆಯನ್ನು ಮೈಯಕಾಳಗತ್ತಲೆಯಿಂದ ಕುಗ್ಗಿಸುತ್ತ ಓಡಿದನು.

ರೋಷವಶನಾದ ಇಂದ್ರಕುಮಾರ ವಾಲಿಯು ಅವನನ್ನು ಬೆನ್ನಟ್ಟಿ ಹೋದನು. ಅಣ್ಣನಿಗೆ ಬೆಂಬಲವಾಗಿ ಸೂರ್ಯಪುತ್ರ ಸುಗ್ರೀವನು ನಡೆದನು. ಮಾಯಾವಿಯು ಓಡುತ್ತ ಹುಲ್ಲು ಮುಚ್ಚಿಕೊಂಡಿದ್ದ ಪೃಥ್ವಿಯ ಮಹಾಗುಹೆಯ ವಿಸ್ತಾರವನ್ನು ಹೊಕ್ಕು ಮರೆಯಾದನು.

'ಸುಗ್ರೀವನೆ, ಇಲ್ಲಿ ನಿಂತಿರು. ರಾಕ್ಷಸನನ್ನು ಕೊಂದು ಬರುವವರೆಗೂ ಈ ಬಿಲದ ಬಾಯಿಯ ಬಳಿಯಿದ್ದು ಕಾಯುತ್ತಿರು!' ಎಂದು ಆಜ್ಞೆಮಾಡಿ ಗುಹೆಯ ಬಾಯಿಯ ರಸಾತಲಕ್ಕೆ ನೆಗೆದನು. ನೂರುಹಗಲು, ನೂರು ಇರುಳುಗಳು ಉರುಳಿದವಾದರು ಅಯ್ಯೋ ಅಣ್ಣನನ್ನು ಕಾಣದೆ ಕಾತರಿಸುತ್ತ ಅದೋ ನೋಡಲ್ಲಿ ಸುಗ್ರೀವನು ಕಿಷ್ಕಿಂಧಾ ಗಿರಿವನ ಗುಹಾದ್ವಾರದೆಡೆಯಲ್ಲಿದ್ದಾನೆ!

ನೂರುದಿನಗಳು ಕಳೆದವು. ನೂರು ರಾತ್ರಿಗಳು ಗತಿಸಿದವು. ದೀರ್ಘವಾದ ದಶದಶ ದಿನಗಳು, ದೀರ್ಘದಶದಶ ರಾತ್ರಿಗಳು. ದಿನರಾತ್ರಿ ಮತ್ತು ರಾತ್ರಿದಿನ ಈ ರೀತಿ ನಿರಂತರವಾಗಿ ಗುಹೆಯ ಮುಖದಲ್ಲಿ ವಾಲಿಯ ತಮ್ಮನು ಕಾಯುತ್ತ, ತನ್ನ ಅಣ್ಣ ತೀರಿಹೋಗಿರಬೇಕೆಂದು ಸಂಶಯಕ್ಕೆ ಒಳಗಾದನು. ಅದನ್ನು ನಿಶ್ಚಯಗೊಳಿಸುವ ಹಾಗೆ ಗುಹೆಯ ಬಾಯಿಯು ರಕ್ತವನ್ನು ಕಾರಿತು! ನಿರಾಕಾರ ಊಹೆಗೆ ಕೈಕಾಲು ಉದಿಸುವಂತೆ ಭೂ ಗರ್ಭದಾಳದಿಂದ ಆರ್ಭಟ ಕೇಳಿ ಬಂದಿತು! ವಾಲಿ ಸತ್ತಿರುವನೆಂದು ತಿಳಿದು, ಹೆಣವನ್ನು ತಿನ್ನುವ ಭೂತಗಳು ನಾಶವಾಗಲೆಂದು ಗವಿಯ ಬಿಲದ ಬಾಯಿಗೆ ಗಿರಿಯ ಗುಂಡು ಹೆಬ್ಬಂಡೆಗಳನ್ನು ಇಡಿದು, ಜಡಿದು, ಬಲವಾಗಿ ಅಡಕಿ ಕಿಷ್ಕಿಂಧೆಗೆ ಹಿಂದಿರುಗಿದನು. ಅನಂತರ ಅವರ ಕಟ್ಟಳೆಯಂತೆ ಸುಗ್ರೀವನು ಕಪಿಧ್ವಜ ಕುಲಕ್ಕೆ ಮತ್ತು ರಾಜ್ಯಕ್ಕೆ ಒಡೆಯನಾದನು.

ಸುಗ್ರೀವನಂ ಮೇಣವನ ಕೆಳೆಯರಂ ನಾಡಿನಾಚೆಗೆ ನೂಂಕಿ ಬಲ್ಮೆಯಿಂದಟ್ಟಿದನ್.

ಆ ಕಡೆ ವೈರಿ ಭೈರವನಾದ ವಾಲಿಯು ಕದನದಲ್ಲಿ ಮಾಯಾವಿಯನ್ನು ಬಡಿದು ಸಾಯಿಸಿದನು. ಅನಂತರ ತನ್ನ ಗೆಲುವಿನ ಸಿರಿಯಲ್ಲಿ ತನ್ನ ತೋಳನ್ನು ಡಾಬನ್ನಾಗಿಸಿ ತಮ್ಮನನ್ನು ಹೊತ್ತೊಯ್ಯುವ ಚಿತ್ತದ ಉತ್ಸಾಹದಲ್ಲಿ ನೆಲದ ಕಡೆಗೆ ಬಂದನು. ಆದರೆ ಏನಾಯಿತು? ಸುತ್ತಲು ಎತ್ತೆತ್ತಲು ಕೆತ್ತಿದ ಕಗ್ಗತ್ತಲೆಗೆ ಕಣ್ಣು ಕಾಣದಾಯಿತು.

ವಾನರನು ಹಾದಿಗಾಣದೆ ಕೋಪಗೊಂಡು ಹುಡುಕಿದನು. ಬಿಲದ ಹಾದಿ ಕಾಣಿಸಲಿಲ್ಲ. ಮುನಿದು ಕೆಚ್ಚು ಕಿಚ್ಚುರಿದು ಕೆಂಡದಂತಾಗಿ ಸುಗ್ರೀವನನ್ನು ಗವಿಯದುರುವಂತೆ ಕೂಗಿದನು. ಅದನ್ನು ಗುಹೆಯ ಗಂಟಲು, ಏರುಧ್ವನಿಯಿಂದ ಮರುಧ್ವನಿಯಾಗಿ ಹೊಮ್ಮಿಸಿತು. ಸುಗ್ರೀವನ ಉತ್ತರವನ್ನು ಕೇಳದೆ ಮತ್ತೆ ಮತ್ತೆ ಕೂಗಿದನು. ಆ ಶಬ್ದ ರೌದ್ರಕ್ಕೆ ಗುಹೆಯ ಅಂಗುಳಿನ ಒಳಭಾಗ ತಾಲವ್ಯದಿಂದ ಭೀತಿ ಶಿಥಿಲವಾಗಿ ಉದುರಿತು ಎಂಬಂತೆ – ಮಣ್ಣಿನ ರೂಪು ಪಡೆದ ಅಕ್ಷರಗಳೆನ್ನುವಂತೆ ಕಲ್ಲುಮಣ್ಣು ಅಕ್ಷತೆಯನ್ನು ಅಣಕದಂತೆ ಅವನ ತಲೆಯ ಮೇಲೆ ಎರಚಿದವು!

ಮದಿಸಿದ ಆನೆ ಬಲದ ವಾಲಿಯು ಹಸ್ತದಿಂದ, ಮಸ್ತಕದಿಂದ ಪಾದಗದೆಯಿಂದ ತಳ್ಳಿದನು, ನೂಕಿದನು, ಕುಟ್ಟಿದನು, ಗುದ್ದಿದನು. ಬೈದು ಒದ್ದನು. ಕೋಪದಿಂದ ಕರೆದನು. ಉರಿದು ತಪಿಸಿ ಶಪಿಸಿದನು, ಕೊನೆಗೆ ತಾನು ಒಲಿದ ಪತಿವ್ರತೆ ಪತ್ನಿ ತಾರೆಯನ್ನು ನೆನೆದು ಕಣ್ಣೀರು ಹರಿಸಿದನು. ಅವಳನ್ನು ನೆನೆದುದೆ ತಡ ಅವನ ಧಮನಿ ಧಮನಿಯಲ್ಲಿ ಉಜ್ವಲವಾಗಿ ಮಿಂಚು ಸಂಚರಿಸಿತು! ಅತಿಬಲನಾದ ಕಪಿಕುಲನು ಚಿಮ್ಮಿ ಎದ್ದನು! ರುದ್ರ ಅಟ್ಟಹಾಸದಿಂದ ಕೂಗಿ ಗರ್ಜಿಸಿ ನುಗ್ಗಿತಳ್ಳಿದನು! ಶೀಶೆಯನ್ನು ಕಾಯಿಸಲು ತಟಿಲ್ಲೆಂದು ಮುಚ್ಚಳ ಸಿಡಿಯುವಂತೆ ಪ್ರಚಂಡ ವಾನರನ ಕಠಿಣವಾದ ಬಡಿತಕ್ಕೆ ಬಂಡೆಸಿಡಿಯಿತು! ಕಂಡಿ ಕಂಡಿತು! ಅದೋ ಆಕಾಶ ಕಾಣಿಸಿತು! ಹೊರಹೊಮ್ಮಿಬಂದನು

ವಾಲಿ! ಸುಗ್ರೀವನನ್ನು ಹುಡುಕಿ ಕಾಣದೆ ರಕ್ತ ಸೋರುವಂತೆ ತುಟಿಗಚ್ಚಿದನು. ಅವನ ಗರ್ಜನೆಗೆ ಗಿರಿನಡುಗಿ, ಪದಾಘಾತಕ್ಕೆ ಭೂಮಿ ಅದುರಿತು. ವಾಲಿಯು ಸಿಡಿಲಿನ ಉಲ್ಕೆಯಂತಾಗಿ ಅದೃಷ್ಟಹೀನ ಕಿಷ್ಕಿಂಧೆಯನ್ನು ಹೊಕ್ಕನು.

ತನ್ನ ರಾಣಿ ತಾರೆಯನ್ನು ಹುಡುಕಿದನು. ಅವಳು ತಪಸ್ಸಿನಲ್ಲಿ ನಿರತಳಾಗಿರುವುದನ್ನು ಕಂಡನು. ಮಗನಿಂದ ಸುಗ್ರೀವನು ರಾಜನಾಗಿರುವುದನ್ನು ತಿಳಿದನು. ತನ್ನವರನ್ನೆಲ್ಲ ಕರೆಸಿದನು. ಕೇಳುವವರ ಕರುಣೆ ಕಿಡಿಯಾಗಿ ಹೊಮ್ಮುವಂತೆ ತಾನು ಪಟ್ಟ ಪಾಡೆಲ್ಲವನ್ನು ಹೇಳಿದನು. ತಮ್ಮನನ್ನು ಸೋದರ ದ್ರೋಹಿ ಎಂದು ಸಾರಿದನು. ರಾಜ ವಿದ್ರೋಹದ ಅಪರಾಧವನ್ನು ಹೊರಿಸಿದನು. ರೋಷ ಪ್ರತೀಕಾರ ಛಲ ಬಲದಿಂದೊಡಗೂಡಿ ಸುಗ್ರೀವನ ಓಲಗಕ್ಕೆ ನಡೆದನು!

ಹರ್ಷವಿಸ್ಮಿತನಾದ ಸುಗ್ರೀವನು ವಾಲಿಯನ್ನು ಕಂಡ ತಕ್ಷಣ ಸಿಂಹಾಸನವನ್ನು ಒದ್ದು, ಅಲ್ಲಿಂದ ಎದ್ದುಬಂದು 'ಬಂದೆಯಾ' ಎಂದು ತೊದಲು ತೊದಲಾಡಿ ಪ್ರೀತಿಯಿಂದ ಅಪ್ಪಿಕೊಂಡನು. ವಾಲಿಯು ತಮ್ಮನನ್ನು ಪಕ್ಕಕ್ಕೆ ತಳ್ಳುತ್ತ ಹೇಳಿದನು:

'ನೀಚನೆ, ಕಪಟಿ, ಸೋದರ ದ್ರೋಹದಿಂದ ಅತಿಯಾದ ವಿಶ್ವಾಸಘಾತವೆಸಗಿ ಪತಿತನಾಗಿರುವ ಪಾಪಿಯೆ, ಮರಣವೆ ನಿನಗೆ ಶಿಕ್ಷೆ. ಆದರೆ ಕ್ಷಮೆ ಕೇಳಿದರೆ ದೇಶಚ್ಯುತಿಯೆ ಭಿಕ್ಷೆ!'

ಅಣ್ಣನ ನುಡಿ ಕೇಳಿದ ಸುಗ್ರೀವನು ನಿಜವನ್ನು ಹೇಳಲು ಪ್ರಯತ್ನಿಸುತ್ತಿರಲು, ವಾಲಿ ಮಾತು ಮುಂದುವರಿಸಿ 'ಎಲವೆಲವೊ ಈ ಕಪಟ ಕಥೆಯನ್ನು ಸಾಕುಮಾಡು. ಎಲ್ಲವನ್ನು ಕೇಳಿರುವೆ....' ಎಂದನು.

ಆಗ ರವಿಪುತ್ರ ಸುಗ್ರೀವನು ಸನ್ಮಿತ್ರನಾದ ಅಂಜನಾಪುತ್ರನನ್ನು ನೋಡಿದನು. ಕಾರ್ಯಪಟು, ಮಿತಭಾಷಿ, ವಾಕ್‌ಕೋವಿದನಾದ ಹನುಮಂತನು ವಾಲಿಯನ್ನು ಕುರಿತು,

'ಹೇ ಕಪಿವೀರ, ವೈರದಿಂದ ಧರ್ಮಸಾಧನೆಯಾಗುವುದಿಲ್ಲ. ಸೋದರನ ಮಾತುಗಳನ್ನು ನಂಬು. ನೀನು ಸತ್ತಿರುವೆಯೆಂಬ ಊಹೆಯಿಂದ ಕಲ್ಲುಮುಚ್ಚಿ ಬಂದಿರುವನೇ ಹೊರತು, ಬೇರೆ ಕಾರಣವೇನನ್ನು ನಾನು ಕಾಣೆ. ಸತ್ಯಕ್ಕೆ ಬಲವೇ ಸಾಕ್ಷಿ (ಯುದ್ಧವೆ ಸೂಕ್ತ) ಎನ್ನುವುದು ನಿನ್ನ ಅಭಿಪ್ರಾಯವಾದರೆ ಅದು ನನಗೆ ಒಪ್ಪಿಗೆ, ನೋಡೋಣ.' ಎಂದು ಹೇಳಿದನು. ಅದನ್ನು ಕೇಳಿದ ಸುಗ್ರೀವನು,

'ಸಮೀರ ಕುಮಾರನೆ, ಅದಾಗದು. ಭ್ರಾತೃ ಕಲಹವು ದೇಶನಾಶಕವಾದುದು ಅದು ನನಗೆ ಇಷ್ಟವಿಲ್ಲ!'

ಎಂದು ನುಡಿದನು. ಅದನ್ನು ಕೇಳಿ ಕ್ರೋಧದಿಂದ ಕುರುಡನಾದ ವಾಲಿಯು ಸುಗ್ರೀವನನ್ನು ಮತ್ತು ಅವನ ಗೆಳೆಯರನ್ನು ಬಲಪ್ರಯೋಗಿಸಿ ನಾಡಿನಿಂದ ಆಚೆಗೆ

ನೂಕಿದನು. ಸುಗ್ರೀವನ ಜೊತೆ ಹೋಗದಂತೆ ಅವನ ಪತ್ನಿ ರುಮೆಯನ್ನು ಸೆರೆಯಲ್ಲಿಟ್ಟನು. ಪ್ರತೀಕಾರ ಬುದ್ಧಿಗೆ ಎಲ್ಲೆ ಎಲ್ಲಿದೆ?

ಪುಣ್ಯರೇಖೆಯೇ ಕೊಂಕಿ ಪಾಪಚಕ್ರದ ವಕ್ರತಾ ಓಟ ಹುಟ್ಟಿದೆ. ಅಂದಮೇಲೆ ಇಂದೊ ನಾಳೆಯೋ ಎಂದೊ ಸತ್ಯ ಗೆಲ್ಲದಿರುತ್ತದೆಯೆ, ತನ್ನ ಮೊದಲಿನ ನೇರ ಸತ್ಯರೂಪವನ್ನು ಪಡೆಯದಿರುತ್ತದೆಯೆ?

ಕಡೆಗೋಡಿದನ್ ಋಷ್ಯಮೂಕಕೆ

ವಿರಹಿಯಾದ ಸುಗ್ರೀವನು ರಾಜ್ಯಚ್ಯುತನಾಗಿ ನೆಲವನ್ನು ಕಳೆದುಕೊಂಡರೂ ಪ್ರೀತಿಯನ್ನು ಬಿಡಲಾಗದೆ, ಹೇಗಾದರೂ ಪತ್ನಿ ರುಮೆಯನ್ನು ಕರೆದುಕೊಂಡು ಹೋಗಲು ಮಾಡಿದ ಸಾಹಸವು ವಿಫಲವಾಯಿತು. ಅಲ್ಲದೆ ಅವನು ಎಲ್ಲಿಯೂ ನಿಲ್ಲಲಾರದಂತೆ ವಾಲಿಯು ಬೇಟೆಯಾಡಿದನು. ಮತಂಗಮುನಿ ಶಾಪದಿಂದ ವಾಲಿ ಪ್ರವೇಶಿಸಲಾಗದ ಋಷ್ಯಮೂಕದ ಕಡೆಗೆ ಓಡಿದನು. ಆ ಶೈಲ ಶೃಂಗಕ್ಕೆ ಮಾತಂಗವನ ಡಾಬಿನಂತಿತ್ತು. ಆ ಮಲೆಯ ಮುಗಿಲು ಅಪ್ಪಿದ, ಅಡವಿ ಮುತ್ತಿದ ತಲೆಯ ಕೋಡಿನ ಬಂಡೆ ತಪಸ್ವಿಯಂತಿತ್ತು. ಅದರ ಜಡೆಮುಡಿಯಿಂದ ನೋಡಲು ಕಣ್ಣಿನ ದೃಷ್ಟಿಗೆ ಅನಂತತೆಯ ವಿಸ್ತಾರ ಕಾಣುತ್ತಿತ್ತು. ಸುತ್ತಲೂ ಮತಂಗವನ. ಆ ಕಡೆಗೆ ಪರ್ವತ ತರಂಗಗಳಿಂದ ಸೃಷಿಯಾದ ರಂಗದ ರಮ್ಯ ಕಂದರದಲ್ಲಿ ನದಿ ತುಂಗಭದ್ರೆಯು ಹರಿಯುತ್ತಿದ್ದಳು.

ಪರ್ವತದ ಬಾಹುಗಳ ಆಲಿಂಗನದಲ್ಲಿ ಹರಿಯುತ್ತಿರಲು, ತಡೆದು ತುಂಬುತ್ತ, ಉಬ್ಬಿ ಹಬ್ಬುತ್ತ ಗಿರೀಶನಿಗೆ ತಾನು ಹಡೆದ ಹಂಪೆಯ ಸರೋವರ ಸುಂದರಿಯನ್ನು ನೀಡಿದ್ದಳು. ಅನಂತರ ಆ ನದಿ ವನಿತೆಯು ನೃಪ ಸಮುದ್ರನನ್ನು ಸೇರಲು ಹರಿದು ಸಾಗುತ್ತಿದ್ದಳು. ಸಹ್ಯಾದ್ರಿಯ ಕಾನನ ಕ್ಲೇಶ ಯಾತ್ರೆಗೆ ದಣಿದ ತುಂಗಭದ್ರೆಯ ನೀರ ನಿದ್ರೆಗೆ ನಿಸರ್ಗವೇ ತಾನು ಮಾರ್ಗದಲ್ಲಿ ಧರ್ಮಶಾಲೆಯನ್ನು ನಿರ್ಮಾಣ ಮಾಡಿದ ವಿಶ್ರಾಂತಿ ನೆಲೆಯಂತೆ ಪಂಪಾಸರೋವರ ಶೋಭಿಸಿತು. ಆ ಸರೋವರದ ಸಲಿಲ ದರ್ಪಣ ದೀರ್ಘ ವಿಸ್ತಾರ ಸರ್ಪಶೈಲಿಯ ನಡೆಯು ಬೆಟ್ಟದ ಕಾಡಿನ ಕಣಿವೆ ತಪ್ಪಲಿನ ತುಂಬು ಕಣ್ಣು ಎನ್ನುವಂತೆ ನೋಡುವವರಿಗೆ ಕಂಡಿತು.


ಚಿಕ್ಕ ಚಿಕ್ಕ ಪ್ರವಾಹಗಳಾಗಿ ಕೊರಳು ಆಡಿಸಿದ ನದಿಯ ತೀರದಲ್ಲಿ ಕಾಡು ಅಲ್ಲಲ್ಲಿ ಮೊದ ಮೊದಲು ತೆಳುವಾಗಿ, ಅನಂತರ ದಟ್ಟವಾಗಿ, ಬರಬರುತ್ತ ಕಡಿದಾಗಿತ್ತು. ಅದು ತೆರೆತೆರೆಯಾಗಿ ಕೆಳಗಿಳಿದು ಮೇಲೇರಿ, ದುಮುಕಿ ನೆಗೆಯುತ್ತ ಹಾರಿ ಹೆಜ್ಜೆ ಹೆಜ್ಜೆಗೆ ರಭಸಗೊಂಡು ಆರ್ಭಟಿಸಿತು. ಅದು ವೈರಿಯ ಕೋಟೆಯತ್ತ ನುಗ್ಗಿ ಮುಂದುವರಿಯುವ ವೈರಿಯ ಸೇನೆಯಂತೆ ಇತ್ತು. ಬಂಡೆಯ ಸಮೂಹ ಗಜಸೇನೆ. ದಟ್ಟಮರಗಳ ಸಾಲು ರಥಸೇನೆ. ಕುರುಚಿಲು–ಗಿಡ ಗಂಟಿಗಳ ಕಾಡು ಕಾಲಾಳುಗಳಂತೆ ಹೆಗಲು ಹೆಗಲು

ಒಂದಾಗಿ ಹೆಣೆಗೊಂಡಿದ್ದವು. ಮುಗಿಲ ತುಂಡುಗಳು ಬೆಳ್ಗೊಡೆಗಳಂತಿದ್ದವು. ಸಿಡಿಮದ್ದಿನಿಂದ ಏಳುವ ಹೊಗೆಯೆಂಬಂತೆ ಇಲ್ಲಿ ಅಲ್ಲಿ ಕೊಳ್ಳವು ಪೂತ್ಕರಿಸುವ ಉಸಿರ ಆವಿಯಂತೆ ಉಣ್ಣೆ ಮಂಜಿತ್ತು!

ವಾನರ ಶೂರರು ಆ ದೃಶ್ಯಮಹಿಮೆಯ ತಪಶ್ಚರಣೆಯಿಂದ ದಿನದಿನಕ್ಕೆ ಹಿರಿಮೆಯ ಘನವಂತರಾದರು. ಅವರಲ್ಲಿ ವಾಯುದೇವನ ಮಗನಾಗಿ ಬ್ರಹ್ಮಚರ್ಯದಿಂದ ಸಹಜಯೋಗಿಯಾದ, ಅಂಜನಾದ್ರಿಯೇ ತವರುಮನೆಯಾದ ಆಂಜನೇಯನಿಗೆ ಸಿದ್ಧಿಗಳ ಅಲೌಕಿಕ ನಿಧಿ ಲಭಿಸಿತು. ಅವನು ಬಹಿರಂಗದಲ್ಲಿ ಸಾಮಾನ್ಯನಾಗಿ, ಅಂತರಂಗದಲ್ಲಿ ದೇವಮಾನ್ಯನಾಗಿದ್ದನು. ಆ ಮಲೆಯ ನೆತ್ತಿಯಲ್ಲಿ ಒಂದು ದಿನ ಸಂಜೆ ಹೊತ್ತಿನಲ್ಲಿ ಧ್ಯಾನನೇತ್ರಗಳನ್ನು ತೆರೆದು ತನ್ನ ಎದುರಾಗಿ ಕೆಳಗೆ ಹರಡಿದ್ದ ಚೇತೋಹಾರಿ ದೃಶ್ಯವನ್ನು ದರ್ಶಿಸುತ್ತಿದ್ದನು.

ಆಗ ಅಮೃತರಚಿತ ಪಕ್ಷಿ ಆಕೃತಿಯ ಉಲ್ಕೆಯಂತೆ ಬೆಳ್ಳಕ್ಕಿಯೊಂದು ಹಸುರಿಗೆ ಎದುರಾಗಿ ಹಾರಿ ಬಂದು ಇಳಿಯಿತು. ಮತ್ತೆ ಏರಿ ತೇಲುತ್ತ ಸುತ್ತುತ್ತ ನಿಧಾನವಾಗಿ ಸರೋವರಕ್ಕೆ ಇಳಿಯಿತು. ಪುನಃ ಆ ಪಕ್ಷಿಯು ಸಂಜೆ ಹೊನ್ನನ್ನು ಎರಚಿದ್ದ ನೀರು ಬಣ್ಣಗಳ ಮಧ್ಯೆ ಮರೆಯಾಯಿತು. ಅನಂತರ ಆ ಮರುತ್ಸುತನಿಗೆ ಮತ್ತೇನೊ ಕಂಡಿತು. ಅದು ದೂರದಲ್ಲಿ ಪಂಪಾ ಸರೋವರದ ತೀರದಲ್ಲಿ ಸಂಜೆ ಗತ್ತಲಿನ ಮಬ್ಬಿನಲ್ಲಿ ನಡೆದಾಡುವ ಮಾನವ ಆಕೃತಿಗಳೆಂಬಂತೆ ಮನಸ್ಸಿಗೆ ಶಂಕೆ ಮೂಡಿತು! ಅದೇನೆಂದು ತಿಳಿಯಲು ಪ್ರಯತ್ನಿಸುತ್ತಿರುವಂತೆ ಮಸಿ ಇರುಳು ಸೆರಗು ಬೀಸಿ ಭುವಿ ಬಾನುವನ್ನು ಮಂಕಾಗಿಸಿತು.

❑



~~~~~~~~~~~~~~~~~~~~~~~~ ಸಂಚಿಕೆ – ೫೫ ~~~~~~~~~~~~~~~~~~~~~~~~

ಪೂಣ್ದೆನಗ್ನಿಯೆ ಸಾಕ್ಷಿ !

ಸರೋವರ ಲಕ್ಷ್ಮಿಯು ಬಿಳಿಯ ನೈದಿಲೆ ಮುಖದಿಂದ ರಾತ್ರಿಯನ್ನು ಬೀಳ್ಕೊಟ್ಟಳು. ಕಮಲ ಕೋಮಲ ಮುಖದವಳಾಗಿ ಸಾವಕಾಶವಾಗಿ, ಸೊಗವನ್ನು ಬಯಸುತ್ತ ಉಷೆಯ ಕಡೆಗೆ ತಿರುಗಿದಳು. ಮೂಡು ಹೆಣ್ಣಿನ ನಿದ್ದೆಗಣ್ಣು ತನ್ನ ಇರುಳು ಎವೆಯ ಕಪ್ಪು ರೆಪ್ಪೆಯನ್ನು ಅರಳಿಸಲು–ಬಾನು ಮತ್ತು ಭುವಿಯ ಬೆಸುಗೆ ಹರಿಯಿತು ಎಂಬಂತೆ ಬಿರುಕು ತೋರುತ್ತ ಚೆಂಬಳದಿಯ ಹೊನಲು ಇಳಿಯಿತು. ಮತಂಗನ ಹೆಸರಿನ ಮಡುವಿನಲ್ಲಿ ನೀರು ಓಕುಳಿಯಾಯಿತು.
~~~~~~~~~~~~~~~~~~~~~~~~

ರಾಮಲಕ್ಷ್ಮಣರು ಕೊಡೆ ಹಿಡಿದಂತೆ ರೂಪುಗೊಂಡಿದ್ದ ಬಂಡೆಯ ಕೆಳಗಡೆ ಮರಳು ದಿಣ್ಣೆಯ ಮೇಲೆ ರಾತ್ರಿಯನ್ನು ಕಳೆದರು. ಅವರು ಪ್ರಕೃತಿ ರಚಿಸಿದ ಸಹಜ ಸ್ನಾನಘಟ್ಟವೆನ್ನುವಂತೆ ನೀರಿಗೆ ನಿಡುಚಾಚಿ ಮಲಗಿದ್ದ ಹಾಸು ಬಂಡೆಯ ತುದಿಗೆ ಹೋದರು. ಪ್ರಾತಃ ವಿಧಿಗಳನ್ನು ಪೂರೈಸಿದರು. ಗಗನ, ಬೆಟ್ಟ, ಕಾಡು ಸರೋವರಗಳು ಒಂದಾಗಿ ದೃಷ್ಟಿಪಥಕ್ಕೆ ಕಾಣುವಂತೆ ಋಷ್ಯಮೂಕದ ಕಡೆಗೆ ಮುಖ ತಿರುಗಿಸಿ ಕುಳಿತರು.

ವೈವಾಹ ಮಂಟಪ ಸ್ಮರಣೆಯಂ ಬಗೆಗೊಳಿಸುವೀ ಮನೋಹರ ಚಿತ್ರ ದೃಶ್ಯಂ

ಸಾವಕಾಶವಾಗಿ ದಿವಾಕರನು ಮೂರುಲೋಕಗಳ ಸೌಂದರ್ಯದ ಸುವರ್ಣ ಕಲಶವೆನ್ನುವಂತೆ ಪ್ರಕಟಗೊಂಡನು. ಮೇಲೇರಿ, ಕನಕಜಲ ಕಾಂತಿಯನ್ನು ಸಿಂಪಡಿಸಿ ಕಾನನದ ಹಸಿರು ಅಂಬರವು ಅರಿಶಿನದ ಬಣ್ಣದಿಂದೊಡಗೂಡಿ ಚಿನ್ನದಂತೆ ಬೆಳಗುವಂತೆ ಮಾಡಿದನು. ವನಪಕ್ಷಿ ಜಲಪಕ್ಷಿಗಳ ಕಂಠಗಳಿಂದ ಹೊಮ್ಮಿದ ಗಡಿಬಿಡಿಯ ನಾನಾಕಲರವಗಳು ಬುಗ್ಗೆಯಂತೆ ಹೊಮ್ಮಿ ಸರೋವರಕ್ಕೆ ಹರಿಯಿತೊ ಎಂಬಂತೆ ನೀರು ತಾನು ಬೇರೆ ಬೇರೆಯ ರಂಗಿನಿಂದ ಹಲವು ನೀರಾದವು.

ಇಲ್ಲಿ ಕಪ್ಪುನೀಲಿ ಬಿಳಿನೀಲಿಯಾಯ್ತು, ಅಲ್ಲಿ ಬಿಳಿನೀಲಿ ಹೂ ಹಳದಿಯಾಯಿತು. ಹೂಹಳದಿ ಹೊನ್ನಾಯಿತು ಇಲ್ಲಿ, ಹೊನ್ನಿನ ನಸುಕೆಂಪಾಯಿತು ಅಲ್ಲಿ. ಹಸುರು ಬಣ್ಣದ ರತ್ನ ಪಚ್ಚೆಯ ರಂಗು ಮೆಲ್ಲನೆ ಕಿಚ್ಚಾಯ್ತು. ಕಣ್ಣಿಟ್ಟು ನೋಡುತ್ತಿರಲು ಕಿಚ್ಚು ನಸು ಹಳದಿ ಬಣ್ಣದ ಹರಳು ಪುಷ್ಪರಾಗದ ಬಣ್ಣಕ್ಕೆ ಮರಳಿತು. ಅಗೊ ಇಲ್ಲಿ ಗೋಮೇದಿಕ; ನೋಡು ಅಲ್ಲಿ ವೈಡೂರ್ಯ ಮತ್ತು ಅಲ್ಲಿ ವಿದ್ರುಮ (ಕುಡಿ ಚಿಗುರಿನ ಬಣ್ಣದ ಹವಳ). ರವಿಶಿಲ್ಪಿಯು ಸಪ್ತವರ್ಣಗಳ ಕಿರಣದ ಉಳಿಯಿಂದ ಕವಿ ಕರ್ಮ ಕೌಶಲದಿಂದ ಪಂಪಾಸರೋವರದ ಬೃಹತ್ತಾದ ಏಕನೀಲದಿಂದ ಅನೇಕ ರತ್ನಗಳನ್ನು ಕಲ್ಪಿಸಿ ಕೆತ್ತಿದನೋ ಎಂಬಂತೆ ವಿವಿಧ ರಾಗದ ಬೆಳಕಿನ ಕಿರಣಗಳು ಕಂಗೊಳಿಸಿದವು. ಅವು ರಾಮನ ಹೃದಯಕ್ಕೆ ವಿರಹದ ಉರಿಯನ್ನು ಕೆರಳಿಸುವ ಕಾಮನಬಿಲ್ಲಿನ ಓಕುಳಿಯಂತಿದ್ದವು!

'ವತ್ಸ, ಲಕ್ಷ್ಮಣಾ, ವಿವಾಹ ಮಂಟಪದ ಸ್ಮರಣೆಯನ್ನು ಮನಸ್ಸಿಗೆ ತರುತ್ತಿರುವ ಮನೋಹರ ಚಿತ್ರದೃಶ್ಯವನ್ನು ನೋಡುತ್ತಿರುವ ನನಗೆ ಬಾಳಿನ ಉರಿ ನೂರ್ಮಡಿಯಾಗುತ್ತಿದೆ. ಮನೋಹರಿಯ ಚಿಂತೆಯು ಜ್ವಾಲೆಯಂತೆ ಮನಸ್ಸಿನ ನಾಳನಾಳಗಳಲ್ಲಿ ಹರಿದಾಡುತ್ತಿದೆ. ಅದೊ ದಡದಲ್ಲಿರುವ ಮರದ ಉಯ್ಯಾಲೆಯಿಂದ ಗಾಳಿಮಳೆಯು ಚಿನ್ನ ಹೂಗಳನ್ನು ಎರಚುತ್ತಿದೆ. ಬಂಡೆಯೂ, ಮರಳರಾಶಿಯೂ, ಶಿಖರ ಗೋಪುರದಂತೆ ನೀರಿನ ಮೇಲೆ ನೀಳವಾಗಿ ಮಲಗಿರುವ ಬೆಟ್ಟದ ಕರಿನೆರಳೂ, ಪುಷ್ಪಗಳ ರಂಗೋಲಿಯೂ ಚಿತ್ರಿಸಿದ ರತ್ನಕಂಬಳಿಯಂತೆ ಕಾಣುತ್ತಿದೆ.

ಅರಳಿನಿಂತ ನೀರಿನ ಹೂಗಳಲ್ಲಿ ಮಧುವನ್ನು ಹೀರುವ ದುಂಬಿಗಳ ಮೊರೆತ, ನೀರ್ವಕ್ಕಿಗಳ ಕೂಟದ ಇಂಚರವು ಹೊಂಚುಹಾಕಿ ನನ್ನನ್ನು ಅಣಕಿಸುತ್ತವೆಯಲ್ಲವೆ? ಆಃ ಆಲಿಸು, ಅದೊ ಆ ಕಣಿವೆಯಲ್ಲಿ ದುಮುಕುತ್ತಿರುವ ಬೆಟ್ಟದ ಹೊಳೆಯ ವನಜಲಪಾತದ ಮೊರೆತವನ್ನೂ ಮೀರಿಸಿ–ದಾತ್ಯೂಹ ಎಂಬ ಜಲಪಕ್ಷಿ ಕೂಗುತ್ತಿದೆ! ವಿರಹದ ಉಲಿತ! ಹೆಣ್ಣುಹಕ್ಕಿಯನ್ನು ಕರೆಯುತ್ತಿದೆ! ಹಾ, ಅಯ್ಯೊ, ನನ್ನನ್ನು ಮೂದಲಿಸುತ್ತಿದೆ! ಹಾ, ಸೌಮಿತ್ರಿ ಪಂಚವಟಿ ಪರ್ಣಶಾಲೆಯಲ್ಲಿ ಅಂದು ಈ ಉಲಿತವನ್ನು ಆಲಿಸಿದೊಡನೆ ಪತ್ನಿ ಸೀತೆಯು ಆ ಕೊರಳನ್ನು ಅನುಕರಿಸಿ ಕರೆಯುತ್ತಿದ್ದಳೋ ನಿನ್ನ ಈ ನಿರ್ಭಾಗ್ಯನನ್ನು...ತಮ್ಮ ಗತಿ ಶೂನ್ಯನಾದೆ! ಮತಿಶೂನ್ಯನಾದ ನನಗೆ ಸ್ಮೃತಿಯಲ್ಲದೆ ಬೇರೆ ಸತಿಯಿರುವಳೆ? ಹೇಳು, ಇರುವಳೆ?... ಇನ್ನು ನನಗೆ ಮರವೆಯೇ ಪರಮಾಶ್ರಯ, ಶಾಂತಿ, ಸದ್ಗತಿ, ಮಧುರ ಮೃತ್ಯು!'

ಲಕ್ಷ್ಮಣನು ಕ್ಷಣಕಾಲ ಸುಮ್ಮನಿದ್ದು ಅನಂತರ ಮಾತನಾಡುತ್ತ, 'ಅಜ್ಜಿ ಹೇಳಿದ ಆ ಪರ್ವತವು ಇದೇ ಎಂದು ತೋರುತ್ತದೆ. ಅಲ್ಲಿ ದೂರದಲ್ಲಿ ಎತ್ತರದ ಬಂಡೆಯು ಮೋಡದಿಂದ ಆವರಿಸಿ ಮಲೆತು ನಿಂತಿದೆ! ಪರ್ವತದ ಪಕ್ಷಿಯ ಕೊಕ್ಕು ಮುಗಿಲಿನ ನೀಲಾಕಾಶವನ್ನು ಕುಕ್ಕುತ್ತಿದೆ! ಮಲೆಯ ಗೂಳಿಯು ಕೊಬ್ಬಿ ಕೋಡಿನಿಂದ ಮೋಡದ ಡುಬ್ಬವನ್ನು ತಿವಿಯುತ್ತಿದೆ! ಗೂಳಿಯ ಗುಟುರುಗಳೆ ಗುಂಡು ಗುಂಡಾದಂತೆ ಹಿಂಡೆದ್ದು ಒಂದುಗೂಡಿ ಮತ್ತೆ ಛಲದಿಂದ ತಮ್ಮ ಮೊದಲಿನ ಎತ್ತರಕ್ಕೆ ಏರಲು ಲಗ್ಗೆ ಹಾಕುತ್ತಿವೆ! ಏನು ನಿಶ್ಚಲತೆ! ಎಂತಹ ಛಲ! ಏನು ಧೈರ್ಯ, ಏನು ಬಲ? ಈ ಗಿರಿಯಲ್ಲಿ ಖಂಡಿತವಾಗಿಯೂ ಛಲ ಬಲಾನ್ವಿತನು, ಮಹಾಧೈರ್ಯಯುತನು ಆದ ಸನ್ಮಿತ್ರನನ್ನು ಪಡೆಯುತ್ತೇವೆ!' ಎಂದು ಹೇಳಿದನು.

ಕಾಣದು ಕಣ್ಗೆ ಬಗೆಗೆ ಸುಳಿದಿದೆ ಬರವು ಬಾಳ್ಗೆಳೆಯನೊರ್ವನಾ!

ಆ ವ್ಯಂಗ್ಯ ಮಾತುಗಳಲ್ಲಿ ತನಗೆ ಧೈರ್ಯವನ್ನು ಹೇಳುವ ಇಂಗಿತವಿರುವುದನ್ನು ರಾಮಚಂದ್ರನು ತಿಳಿದನು. ತಮ್ಮನನ್ನು ನೋಡುತ್ತ ತುಸು ನಾಚಿಕೊಂಡು ಕಿರುನಗೆ ಬೀರಿದನು. ನಿಟ್ಟುಸಿರು ಬಿಟ್ಟು ಮತ್ತೆ ಬೆಟ್ಟದ ನೆತ್ತಿಯಂತೆ ತಲೆ ಎತ್ತಿ ಧ್ಯಾನಸ್ಥನಾದನು. ಸರೋವರದಿಂದ ಮರಳಿ ಆಸೆಯಂತೆ ಆವಿಯಾದ ಮಂಜು ತೆಳ್ಳನೆ ಹೊಗೆಯನ್ನು ಹೋಲುತ್ತ ಮೇಲೇರಿತು. ನೀರಿನ ಮೇಲೆ ಒರಗಿದ್ದ ಬಂಡೆಗೋಪುರದ ನೆರಳು ಆ ಆವಿಯ ಮೇಲೆ ನೀಲಿ ರಂಗೋಲಿಯಂತೆ ಚಿತ್ತಾರವನ್ನು ಕೆತ್ತಿ ಹರಡಿತು. ಅಲ್ಲಲ್ಲಿ ಮಂಜುಮೈಯ ರವಿಕಿರಣವು ಪ್ರೀತಿಯಿಂದ ಕಮಲ ಮೊದಲಾದ ಹೂವುಗಳ ಕೇಸರವನ್ನು ಹೊಂಬಣ್ಣಕ್ಕೆ ತಿರುಗಿಸಿತ್ತು. ಆ ನೋಟವನ್ನು ದೀರ್ಘಕಾಲ ನೋಡುತ್ತಿದ್ದ ಇನಕುಲನಿಗೆ ಮನದಲ್ಲಿ ಏನೋ ಒಂದು ಭಾವ ಸ್ಫುರಿಸಿತು!

‘ಯಾರಲ್ಲಿ? ನೋಡು ಸೌಮಿತ್ರಿ?’ ಎಂದು ಹೇಳುತ್ತ ತಕ್ಷಣ ಎದ್ದು ಬಂಡೆ ಬಂಡೆಗಳ ನಡುವೆ ನುಸುಳ ತೊಡಗಿದವನನ್ನು ಅನ್ವೇಷಿಸುವ ನೋಟದಿಂದ, ಯಾರನ್ನೊ ಹುಡುಕುವಂತೆ ನೋಡಿದನು.

‘ಎಲ್ಲಿ?’ ಎಂದು ಲಕ್ಷ್ಮಣ ಕೇಳಲು,

‘ಇಲ್ಲಿಯೋ, ಮತ್ತೆಲ್ಲಿಯೋ ನನಗೆ ತಿಳಿಯದು ವತ್ಸ! ಕಣ್ಣಿಗೆ ಕಾಣಿಸುತ್ತಿಲ್ಲ. ಆದರೆ ನನ್ನ ಬಾಳಿನ ಗೆಳೆಯನೊಬ್ಬನು ಬರುವನೆಂದು ಮನಸ್ಸಿಗೆ ಹೊಳೆಯುತ್ತಿದೆ.’ ಎಂದು ಹೇಳುತ್ತ ಸೀತಾನಾಥನು ತನ್ನ ಬೆಪ್ಪುತನಕ್ಕೆ ತಾನೇ ಬೆರಗಾಗಿ ಕಣ್ಣೀರು ಹರಿಸುತ್ತ, ನಿಟ್ಟುಸಿರುಬಿಟ್ಟು ಅನಾಥನಂತೆ ನಿಂತನು. ಹಾಗೆ ನಿಂತಿರುವಾಗ ಅವನ ದೃಷ್ಟಿ ಮುಂದಿದ್ದ ಬಂಡೆಯ ಮೇಲೆ ಸುಳಿಯಿತು. ಆ ಬೃಹತ್ತಾದ ದೊಡ್ಡ ಆನೆಯ ಮೈಯಂತಹ ಬಂಡೆಯನ್ನು ತದೇಕ ದೃಷ್ಟಿಯಿಂದ ನೋಡುತ್ತ ಇಂಗಿತವನ್ನು ಅರಿತಂತೆ ಸೌಮಿತ್ರಿಯನ್ನು ನೋಡಿ,

‘ಕಂಡೆ ಕಂಡೆನೊ ಕಂಡೆ! ಬಂಡೆಯ ರೀತಿಯಲ್ಲಿ ಹೀಗೆ ಶಿಲೆಯಲ್ಲಿ ಕಡೆದಂತೆ ಕಂಡ ಮಾತ್ರದಿಂದಲೆ ನನಗೆ ಕುರುಡೆ? ಏಳು, ಗೆಳೆಯನೆ, ಏಳು; ತಾಳು ನಿಜರೂಪವನ್ನು ತಾಳು. ಬಾಳ್ಬಂಡೆಯನ್ನು ಸೀಳಿ ಒಡೆದು ಚಿಲುಮೆಯುಕ್ಕುವಂತೆ ಮೂಡಿ ಕಣ್ಮುಂದೆ ನಿಲ್ಲು. ಈ ಕಲ್ಲುತನದ ವೇಷವನ್ನು ಕಿತ್ತೆಸೆದು ಬಾ!’

ಎಂದು ಮಾತು ಮುಗಿಸುವಷ್ಟರಲ್ಲಿ ಆ ಬಂಡೆ ಮಾತಾಡಿತು ಎಂಬ ರೀತಿ ಒಂದು ದನಿ ಕೇಳಿಸಿತು. ರಾಮಲಕ್ಷ್ಮಣರಿಬ್ಬರೂ ಆಶ್ಚರ್ಯದಿಂದ ಈಕ್ಷಿಸುತ್ತಿದ್ದರು. ಆಗ ಋಷ್ಯಮೂಕದ ಮಹತ್ತೆ ಆಕಾರ ತಳೆದು ಬಂದಂತೆ, ಬಾನಿನ ಪಟದಲ್ಲಿ ಕೊರೆದ ಚಿತ್ರದಂತೆ, ಕಾಡಿನಿಂದ ಆವೃತವಾದ ಒಂದು ಬಂಡೆಯ ನೆತ್ತಿಯನ್ನು ಏರಿ, ಬೃಹದ್ ಭವ್ಯ ವ್ಯಕ್ತಿಯೋರ್ವನು ಗೋಚರಿಸಿದನು. ಅದನ್ನು ಕಂಡ ರಾಮನಿಗೆ ತನ್ನ ಕಳೆದು ಹೋಗಿದ್ದ ಧೈರ್ಯವೇ ಮೈ ಪಡೆದು ಎದುರಿಗೆ ನಿಂತು ಧೀರವಾಣಿಯಲ್ಲಿ ಅರಿಕೆ ಮಾಡಿಕೊಂಡಂತಾಯಿತು. ಬೆಟ್ಟದ ಆ ವೀರನ ನುಡಿಯನ್ನು ಉತ್ಸಾಹದಿಂದ ಕಿವಿಗೊಟ್ಟು ಆಲಿಸಿದನು.

ನಿಮಗೆಮಗೆ ಕೆಳೆಯಕ್ಕೆ! ನಮ್ಮ ತೌರೀ ಮಲೆಗೆ ನಿಮಗಕ್ಕೆ ನಲ್ಬರಂ!

‘ಗೆಲುವಾಗಲಿ; ಸುಖವಾಗಲಿ, ನಿಮಗೆ ಮಂಗಳವಾಗಲಿ! ನಿಮಗೂ ನಮಗೂ ಸ್ನೇಹವಾಗಲಿ! ನಮ್ಮ ತವುರಾದ ಈ ಮಲೆಗೆ ನಿಮಗೆ ನಲ್ಮೆಯ ಸ್ವಾಗತ! ನಾನು ಸುಗ್ರೀವನ ಅನುಚರ ಹನುಮಂತ; ಮಾರುತನ ಮಗ ಆಂಜನೇಯ! ನರಶ್ರೇಷ್ಠನೂ, ಕಪಿಧ್ವಜರಾದ ವಾನರ ಕುಲಕ್ಕೆ ಚೇತನನೂ ಆದ ದೇವ ಸುಗ್ರೀವನು ನನ್ನನ್ನು ನಿಮ್ಮಲ್ಲಿಗೆ– ನಿಮಗೆ ಒಳಿತನ್ನು ಹೇಳಲು ಕಳುಹಿಸಿದ್ದಾನೆ. ನೀವು ಶಬರಿಯ ಆಶ್ರಮಕ್ಕೆ ಬಂದಿರುವುದನ್ನು

ನಾವು ನಮ್ಮ ಗೂಢಚಾರರಿಂದ ತಿಳಿದೆವು. ನಿಮ್ಮ ದುಃಖವನ್ನು ತಿಳಿದೆವು. ನಮ್ಮ ಮತ್ತು ನಿಮ್ಮ ದುಃಖವು ಒಂದೇ ರೀತಿಯದಾಗಿರುವುದರಿಂದ ನೀವು ನಮಗೆ, ನಾವು ನಿಮಗೆ ನೆಂಟರು! ರವಿಸುತನಾದ ನಮ್ಮ ಒಡೆಯನು ರವಿಕುಲದವರಾದ ನಿಮ್ಮ ಸ್ನೇಹವನ್ನು ಬಯಸಿ ನನ್ನನ್ನು ಕಳುಹಿಸಿದ್ದಾನೆ!'

ಆ ಮಲೆನಾಡಿನವನ ನುಡಿ ಸಂಸ್ಕೃತಿಗೆ ಮೈಯ್ಯ ಆಕೃತಿಗೆ, ಹರಿತ ಬುದ್ಧಿಗೆ, ಯೋಗನಯನದ ಕಾಂತಿಗೆ ರಾಘವನು ಮನಸೋತನು. ಹೂವಿಗೆ ಎರಗಿದ ದುಂಬಿ ಮಧುವನ್ನು ಸವಿಯುವ ಸೊಗಸಿಗೆ ತನ್ನ ಮೊರೆತವನ್ನು ಮರೆಯುವಂತೆ ರಾಮನು ಏನೊಂದನ್ನೂ ನುಡಿಯಲಾರದೆ, ಆ ಮನೋಜ್ಞ ವಾನರ ಮಹಾಪ್ರಾಜ್ಞನನ್ನು ನೋಡುತ್ತಿದ್ದನು!

ಅದೇ ರೀತಿ ಆಂಜನೇಯನು ಸಮುದ್ರದಂತೆ ಗಂಭೀರನು, ಆಕಾಶ ನೀಲಿ ಬಣ್ಣ ಶರೀರಿಯು ಮತ್ತು ಗಿರಿವನ ಪ್ರಿಯನು ಆದ ರಾಮಚಂದ್ರನನ್ನು ನೋಡುತ್ತಿದ್ದನು! ಪ್ರಸಿದ್ಧರಾದ ಇಬ್ಬರು ಕವಿಗಳು ಒಬ್ಬರು ಇನ್ನೊಬ್ಬರನ್ನು ಮೆಚ್ಚಿನೋಡುವ ರೀತಿಯಲ್ಲಿ– ರಾಮ ಮತ್ತು ಆಂಜನೇಯರು ದೃಷ್ಟಿಯಿಂದಲೇ ಒಬ್ಬರಿಗೊಬ್ಬರು ಅಪ್ಪುವಂತೆ ನೋಡುತ್ತಿದ್ದರು. ಲಕ್ಷ್ಮಣನು ಆಶ್ಚರ್ಯಚಕಿತನಾಗಿ ಅವರನ್ನು ನೋಡಿದನು!

ದೂರದ ಬೇರೆ ಬೇರೆ ಗಿರಿಗಳಲ್ಲಿ ಹುಟ್ಟಿ, ತಮ್ಮ ತಮ್ಮ ಬೇರೆ ಬೇರೆಯ ಹಾದಿ ಹಿಡಿದು ಎರಡು ನದಿಗಳು ಹರಿದು ಬರುತ್ತವೆ. ಅವು ತಮ್ಮ ಜೀವಿತದ ಮಧ್ಯಮಾರ್ಗದಲ್ಲಿ ಕೂಡಿ ಕಲೆಯುತ್ತವೆ. ಉತ್ತಮ ಜೀವನೋದ್ದೇಶದಿಂದ ಐಕ್ಯತಾ ಭಾವವನ್ನು ತಳೆದು ಆ ಹೊಳೆಗಳು ಒಂದಾಗಿ ಮುನ್ನಡೆಯುತ್ತವೆ. ಹಾಗೆ ಲಕ್ಷ್ಮಣ ಸಹಿತ ರಾಮನು ಆಂಜನೇಯನ ಜೊತೆಗೂಡಿ ಋಷ್ಯಮೂಕಪರ್ವತವನ್ನು ಏರಿ ಸುಗ್ರೀವನ ಕಡೆಗೆ ನಡೆದರು.

ಆಂಜನೇಯನು ಮಿತಭಾಷಿ, ವಾಕ್‌ಕೋವಿದ, ಬಿಲ್ಲು ದನಿಯ ಗಾಂಭೀರ್ಯದಿಂದ ಕೂಡಿದ ಬ್ರಹ್ಮಚಾರಿ ದೃಢಸ್ವಭಾವಿ ಮತ್ತು ಮಹಾ ಉದಾರಿ. ಅವನು ಶಾಂತವಾಗಿ ದಶರಥ ಪುತ್ರನಿಗೆ ಕಿಷ್ಕಿಂಧೆ ಋಷ್ಯಮೂಕ, ವಾಲಿ ಸುಗ್ರೀವ, ನೀಲ ನಳ ಜಾಂಬವಂತರ ಬಗ್ಗೆ ಹೇಳಿದನು. ವಾನರ ಕುಲದ ಕಥಾ ಮಹಿಮೆಯನ್ನು ಕೀರ್ತಿಯನ್ನು ಈಗ ಬಂದೊದಗಿರುವ ಅಪಕೀರ್ತಿಯನ್ನು ತಿಳಿಸಿದನು! ಅದನ್ನು ಕೇಳಿದ ರಾಘವನು,

'ಅನಿಲಸುತನೇ, ನೀನು ಬಣ್ಣಿಸಿದ ಸಮುದ್ರದಂತಹ ಬಲದ ಆ ಸೇನಾನಿಗಳ ಸ್ನೇಹವಿದ್ದರೂ....ವಾಲಿಯು ಪಾಪದಿಂದ ಕಲಿಯಾದನೆ?'

'ಪಾಪ ಹಾಗಿರಲಿ; ಅವನು ಶೂರನೆಂಬುದು ಸತ್ಯ! ವಾನರ ಕುಲದ ಹೆಮ್ಮೆಯಾದ ಅವನನ್ನು ನಾವೆಲ್ಲ ಆರಾಧಿಸುತ್ತಿದ್ದೆವು! ರವಿಸುತನಾದ ಸುಗ್ರೀವನು ಎಲ್ಲವನ್ನು ನಿಮಗೆ ತಿಳಿಸುವನು. ಲೋಕೈಕ ವೀರನಾದ ಆ ದಶಕಂಠ ರಾವಣನು ಇವನ ಬಳಿಗೆ ಬರಲು ಭಯ ಪಟ್ಟು ಬೆದರಿ ದೂರವಿದ್ದಾನೆ!'

'ದುಷ್ಟನಿಗೆ ದುಷ್ಟನೇ ಭಯ! ಶಿಷ್ಟ ಸಾತ್ವಿಕ ನಡೆಗೆ ಭ್ರಷ್ಟ ರಾಕ್ಷಸ ನೀತಿ ಹೆದರುವುದೆ? ಕಣ್ಣಿಗೆ ಕಣ್ಣು, ಹಲ್ಲಿಗೆ ಹಲ್ಲು; ನೀಚ ನಡೆಗೆ ದಂಡವೇ ಧರ್ಮವಲ್ಲವೇ?' ಎಂದು ರಾಮಚಂದ್ರನು ಹೇಳಿದನು. ಅವರು ಇಡುಕಿರುವ ಬಂಡೆಗಳ ನಡುವೆ ನಡೆದು ಏರಿದರು. ಕಾಡುಬೀಡಿನ ಬೆಟ್ಟದ ನೆತ್ತಿಯ ಗುಹೆಯ ಮುಖದ ನಿರ್ಜನ ಸ್ಥಳವನ್ನು ಸೇರಿದರು. ಆಂಜನೇಯನು 'ನಿಲ್ಲಿ' ಎಂದು ಹೇಳಿ, ತಕ್ಷಣ ಕಲ್ಲ ಹಿರಿಬಂಡೆಗಳನ್ನು ಹೊಕ್ಕು ಮರೆಯಾದನು. ಆಶ್ಚರ್ಯಕ್ಕೊಳಗಾದ ಸೌಮಿತ್ರಿಯು,

'ಏನು ನಿರ್ಜನ ಈ ವನ! ಇದು ಶಂಕೆಯನ್ನುಂಟು ಮಾಡುತ್ತಿದೆ ಅಣ್ಣ! ಇದು ವಾನರೇಶನ ವಾಸಸ್ಥಾನವಾದರೆ ಏತಕ್ಕೆ ಈ ರೀತಿ ಹಾಳು ಸುರಿಯುತ್ತಿದೆ?'

ಎಂದು ಮಾತು ಮುಗಿಸುವುದರಲ್ಲಿದ್ದನು. ಅಷ್ಟರಲ್ಲಿ ಸಮೀಪದಲ್ಲಿಯೆ ವನದ ನಿಶ್ಯಬ್ದವನ್ನು ಸೀಳುವಂತೆ ಒಂದು ದೀರ್ಘವಾದ ಸಿಳ್ಳು ಹೊಮ್ಮಿತು!

ರಾಮಲಕ್ಷ್ಮಣರು ಬೆಚ್ಚಿ ಸುತ್ತಲೂ ನೋಡುತ್ತಿರಲು ಶಿಲೆಯೇ ಹೆತ್ತಂತೆ ಒಂದೊಂದು ಬಂಡೆಯಿಂದಲೂ ವಾನರರು ಮೂಡಿದರು. ಒಂದು ಎರಡು ಹತ್ತು ನೂರು ಎಂದು ಲೆಕ್ಕದ ಭ್ರಮೆಯನ್ನು ಸೃಷ್ಟಿಸಿ ಕಾಣಿಸಿ ಕೊಂಡರು! ಅವರು ಬಿಳಿಹೂವು, ನವಿಲುಗರಿಯಿಂದ ರಚಿತವಾದ ತಲೆಯ ಉಡುಗೆಯಿಂದ, ಹುಲಿ ಚಿರತೆ ಜಿಂಕೆಯ ಚರ್ಮದ ಅಂಗಿಗಳಿಂದ ಶೃಂಗಾರಗೊಂಡು ನವಿರಾದ ಮೈಯಿಂದಿದ್ದರು. ಬಣ್ಣದ ನಾರುಗಳಿಂದ ನಿರ್ಮಿಸಿದ ವಸ್ತ್ರದಿಂದ ಶೋಭಿಸುವ ಮಲ್ಲಗಚ್ಚೆಯನ್ನು ಸೊಂಟಕ್ಕೆ ಸುತ್ತಿದ್ದ ಆ ಬೆಟ್ಟದ ಸಿಡಿಲಿನಂತಹ ವ್ಯಕ್ತಿಗಳನ್ನು ರಾಘವನು ನೋಡಿ ಮೆಚ್ಚಿಕೊಂಡನು. ಆಗ ಅವರ ಬಳಿಗೆ ಬಂದ ಆಂಜನೇಯನು,

'ಇಲ್ಲಿ ಕಾಣುತ್ತಿರುವರೆಲ್ಲರೂ ಸುಗ್ರೀವನ ಸೇವೆಯಲ್ಲಿರುವವರು. ಇದಕ್ಕೆ ನೂರರಷ್ಟು ಜನರು ಕಿಷ್ಕಿಂಧೆಯಲ್ಲಿರುವರು. ವಾಲಿಯು ಅವರೆಲ್ಲರನ್ನು ಭಯದ ಪಂಜರದ ವಜ್ರದಲ್ಲಿ ಬಂಧಿಸಿದ್ದಾನೆ. ವಾಲಿ ಬೇಲಿಯನ್ನು ಮುರಿದರೆ, ಆ ತೋಟವೆಲ್ಲವು ನಮ್ಮದು; ಜೊತೆಗೆ ನಿಮ್ಮದು ಎಂದು ತಿಳಿಯಿರಿ.'

ಎಂದು ಹೇಳುತ್ತ ಕೈಸನ್ನೆ ಮಾಡಿದನು. ತಕ್ಷಣ ಆ ಸೇನೆ ಮಾಯವಾದಂತೆ ಮರೆಯಾಯಿತು! ಆ ಮೂವರು ಮಾತ್ರ ಕಿಷ್ಕಿಂಧೆಯ ಗುಹೆಯನ್ನು ಪ್ರವೇಶಿಸಿದರು!

ರಘುಜ ಸೂನು, ಕೇಳ್, ನಿನಗೆ ನಾಂ, ನನಗೆ ನೀಂ! ಪೂಣ್ದೆನಗ್ನಿಯೆ ಸಾಕ್ಷಿ.

ಮಬ್ಬಿನಲ್ಲಿಯೆ ಸಾಗಿ ಸ್ವಲ್ಪದೂರ ನಡೆಯಲು ಅಲ್ಲಿ ಒಂದು ಒರಟಾದ ಗುಹಾಮಂದಿರ ಕಂಡಿತು. ಕಂಡಿಕಂಡಿಗಳಿಂದ ಬಿಸಿಲ ಕೋಲುಗಳು ಇಳಿದು ಅಲ್ಲಿ ಒಂದು ರಹಸ್ಯಮಯ ಕಾಂತಿ ಹರಡಿತ್ತು. ಅಲ್ಲಲ್ಲಿ ಮಲಗಿದಂತೆ, ಕುಳಿತಂತೆ, ನಿಂತಂತೆ ಕಲ್ಲುಬಂಡೆಗಳಿದ್ದವು. ಅವು ರೂಪಾಂತರಿಗಳಾಗಿ ಹೊಂಚುಹಾಕುವ ಮುಸುಕುಧಾರಿ ಕಾವಲಿನವರಂತೆ ನಾನಾ

ರಚನೆಯನ್ನು ಸೃಷ್ಟಿಸಿ ಕಣ್ಣಿಗೆ ಚಿತ್ರದಂತೆ ಕಂಡವು. ಗುಹೆಯ ಗೋಡೆಯ ಮೇಲೆ ಮೆರೆಯುತ್ತಿದ್ದ ಆಯುಧಗಳ ಸಾಲು–ಹಾವುಗಳಿಂದ ಭಯಂಕರವಾಗಿರುವ ಹುತ್ತವನ್ನು ಕೀಳಾಗಿಸಿದ್ದವು. ಅಂಗಳದ ನಡುವೆ ಒಂದು ಕೋಲಿನ ತುದಿಯಲ್ಲಿ ವಾನರರ ಕಪಿಪತಾಕೆ ಧೀರತನದಿಂದ ಹಾರಾಡುತ್ತಿತ್ತು.

ಸುಗ್ರೀವನು ಅಲ್ಲಿ ಮಿತ್ರರೊಡನೆ ಮಂತ್ರಾಲೋಚನೆಯಲ್ಲಿದ್ದನು. ಅವನು ಉತ್ಸಾಹದಿಂದ ಮೇಲೆದ್ದು ಅತಿಥಿಗಳಿಗೆ ಕೈ ಮುಗಿದನು. ಆದರದಿಂದ ಅವರ ಕೈ ಹಿಡಿದು ಚಿಗುರ ಗೊಂಚಲುಗಳಿಂದ ರಚಿತವಾದ ಮಣೆಯ ಬಳಿಗೆ ತುಂಬು ಗಾಂಭೀರ್ಯದಿಂದ ವಿನಯ ಪೂರ್ಣವಾಗಿ ಕರೆತಂದು ನುಡಿದನು:

'ದಾಶರಥಿಯೆ, ನಾನು ಧನ್ಯನಾದೆನು. ನಿನ್ನ ಸ್ನೇಹವನ್ನು ಪಡೆಯಲು ನನ್ನ ಬಾಳಿನ ಮಬ್ಬು ಕಳೆದು ಬೆಳಗಾದಂತಾಗಿದೆ. ನನಗೆ ಮತ್ತು ನನಗಾಗಿ ನೆಲೆಗೆಟ್ಟು ಅಲೆಯುವ ಮಿತ್ರರಾದ ನಳ ನೀಲ ಜಾಂಬವ ಹನುಮಂತರಿಗೆ ಆಪತ್ತು ತೊಲಗಿದೆ. ಆಂಜನೇಯನು ಹೇಳಿದ ವಾರ್ತೆಯಿಂದ ನಾನು ನಿಮ್ಮ ಸಮಸ್ತ ದುಃಖ ಕಥೆಯನ್ನು ತಿಳಿದೆನು. ನನ್ನ ನೆಚ್ಚಿನ ಮಂತ್ರಿಯು ನಿಮಗೆ ಈಗಾಗಲೆ ನನ್ನ ದುಃಖ ಮತ್ತು ಸೋಲನ್ನೆಲ್ಲ ತಿಳಿಸಿದ್ದಾನೆ. ಕಷ್ಟದಿಂದ ಮತ್ತು ಪ್ರಿಯಜನರ ನಷ್ಟದಿಂದ ನಾವಿಬ್ಬರು ಸಮಾನರಾಗಿದ್ದೇವೆ. ಇಲ್ಲಿ ಸೇರಿರುವ ಮತ್ತು ಇಲ್ಲಿರುವಷ್ಟು ಜನರಿಗೆ ದುಷ್ಟ ಸಂಹಾರವೇ ಸುವ್ರತವಾಗಿದೆ.

'ಅಯೋಧ್ಯೆಯು ಕಿಷ್ಕಿಂಧೆಗೆ ಸಹೋದರಿಯಾಗಲಿ! ರಾಘವನೇ ಕೇಳು. ಅಗ್ನಿಸಾಕ್ಷಿಯಾಗಿ ಪ್ರತಿಜ್ಞೆ ಮಾಡುತ್ತೇನೆ. ನಿನಗೆ ನಾನು, ನನಗೆ ನೀನು! ನಿನ್ನ ರಾಣಿಯನ್ನು ಹುಡುಕಿ ಕರ್ದೋಯ್ದವನನ್ನು ನಾಶ ಪಡಿಸಲು ನನ್ನ ಸರ್ವಸ್ವವನ್ನು ನಿನ್ನ ಸೇವೆಗೆ ವಿನಿಯೋಗಿಸುತ್ತೇನೆ.

'ಅಯ್ಯೊ, ನನ್ನ ಸರ್ವಸ್ವವೆಂಬುದು ಎಲ್ಲಿದೆ? ಚಿನ್ನವನ್ನು ಕೊಡುವೆ ಎಂಬ ಕಡುಬಡವನಂತೆ ಬರಿದೆ ಕೊಡುಗೆಯ ನುಡಿಯನ್ನು ನಾನು ಆಡುತ್ತಿದ್ದೇನೆ!'

ಎಂದು ಹೇಳಿ ಕಣ್ಣೀರು ಹರಿಸಿದ ಕಪಿಕುಲೇಂದ್ರನಿಗೆ ರಾಮಚಂದ್ರನು,

'ವಾನರೇಂದ್ರನೆ, ದುಃಖದ ವ್ಯಥೆ ಮತ್ತು ದೈನ್ಯದಿಂದ ದೂರವಾಗು. ಸಕಲ ಕಿಷ್ಕಿಂಧೆಯು ನಿನ್ನದೆಂದು ತಿಳಿ! ಪರಪತ್ನಿಯನ್ನು ಕೆಡಿಸಲು ಆಸೆಪಟ್ಟವನು ದಿಟವಾಗಿಯೂ ಸತ್ತನೆಂದೇ ತಿಳಿ! ಅಗ್ನಿಸಾಕ್ಷಿಯಾಗಿ ಪ್ರತಿಜ್ಞೆ ಮಾಡಿದ್ದೇನೆ!'

ಎಂದು ನುಡಿದನು. ಆ ತಕ್ಷಣವೆ ಇಬ್ಬರು ಕಾಮಿನಿಯರಿಗೆ ಮತ್ತು ಇಬ್ಬರು ಕಾಮಾಂಧರಿಗೆ ಎಡಗಣ್ಣು ಅದುರಿತು!

ರಾಮಲಕ್ಷ್ಮಣರು ದೊಣೆನೀರಿನಲ್ಲಿ ಸ್ನಾನ ಮಾಡಿದರು. ಹಣ್ಣು ಹಂಪಲು ಬೇರುಗೆಡ್ಡೆಗಳ ಔತಣವನ್ನು ಉಂಡರು. ಸ್ವಲ್ಪ ಕಾಲ ನಿದ್ರಿಸಿ ದಣಿದ ನಡುಹಗಲ

ಆಯಾಸವನ್ನು ಪರಿಹರಿಸಿಕೊಂಡರು. ಅನಂತರ ಸುಗ್ರೀವನು ಅತಿಥಿಗಳನ್ನು ಗಿರಿಧರೆಯ ವ್ಯೂಹವನ್ನು ತೋರಿಸಲು ಕರೆದುಕೊಂಡು ಹೋದನು. ಕಂದರದ ಆಳವನ್ನು, ಕಾಡಿನ ನಿಬಿಡತೆಯನ್ನು ಪರ್ವತದ ಔನ್ನತ್ಯವನ್ನು ತೋರಿಸಿದನು. ಕಡಿದಾದ ಬಂಡೆ ನಿಂತಿರುವ ರೀತಿಯ ದುರ್ಗವೆಲ್ಲವನ್ನು ವರ್ಣಿಸಿ ಹೇಳಿ ತೋರಿಸುತ್ತ ಕಿಷ್ಕಿಂಧೆ ಇರುವ ಕಡೆಗೆ ಕಣ್ಣು ಹರಿಸಿ ನಿಂತು ಬಿಟ್ಟನು. ಅದನ್ನು ಕಂಡು ಕುತೂಹಲಕಾರಿಯಾದ ರಘುನಂದನನ ಕಿವಿಯಲ್ಲಿ ಆಂಜನೇಯನು ಹೀಗೆ ಪಿಸುಗುಟ್ಟಿದನು.

'ಆ ಕಡೆಗೆ ಮಲೆಯ ತೋಳಿನ ತೆಕ್ಕೆಯಲ್ಲಿ ಪವಡಿಸಿದಂತೆ ಕಿಷ್ಕಿಂಧೆ ಇದೆ, ನೋಡು ಅದೇ ವಾಲಿಯು ರುಮೆಯನ್ನು ಸೆರೆಯಲ್ಲಿಟ್ಟಿರುವ ಗಿರಿಶಿಖರ! ತನ್ನ ಅರ್ಧಾಂಗಿಯು ಸವೆಯುತ್ತಿರುವ ಸ್ಥಳವನ್ನು ನೋಡಿ ನಮ್ಮ ದೊರೆಯು ಹೀಗೆ ನಿಟ್ಟುಸಿರು ಬಿಡುತ್ತ ನಿಂತಿದ್ದಾನೆ....'

ರಾಮನಿಗೆ ತನ್ನ ಪತ್ನಿಯ ನೆನಪು ಮರುಕಳಿಸಿದಂತಾಗಿ 'ಅಯ್ಯೊ, ಮರುತಾತ್ಮಜನೆ, ನನಗೆ ಆ ಪುಣ್ಯವೂ ಇಲ್ಲವಾಯ್ತಲ್ಲ!' ಎಂದು ಹೇಳಿದನು. ಅದನ್ನು ಕೇಳಿ ಮುದಿಯ ಜಾಂಬವನು,

'ದೇವ, ನೀನು ಹೀಗೇಕೆ ಮರುಗುತ್ತಿರುವೆ? ಸಂಪಾತಿಯ ಸಹೋದರನು ನಿನಗೆ ಹೇಳಿದ ಕುಬೇರನ ತಮ್ಮ ದಶಕಂಠ ಬಿರುದಿನವನು, ಆ ಲಂಕೇಶ ನಿಜ. ನಾನು ಅವನಿಗಿಂತ ಧೂರ್ತರಾದವರನ್ನು ಈ ಪೃಥ್ವಿಯಲ್ಲಿ ಕಾಣೆನು. ಕೇಳಿದಂತೆಯೂ ನನ್ನ ಅರಿವಿನಲ್ಲಿಲ್ಲ. ಒಂದು ಅಪೂರ್ವ ಘಟನೆ ನಡೆದು ಇನ್ನೂ ಒಂದು ತಿಂಗಳು ಆಗಿಲ್ಲ ಅದನ್ನು ಕೇಳು.

'ಒಂದು ಹಗಲು ನಮ್ಮ ವಾನರರು, ಭಲ್ಲೂಕ ವಂಶಜರು ಮತ್ತು ಕಪಿವಂಶಜರು ಅರಣ್ಯದಲ್ಲಿ ವ್ಯಾಯಾಮದ ಆಸಕ್ತಿಯಿಂದ ವಿಹರಿಸುತ್ತಿದ್ದರು. ಮೇಲೆ ಆಗಸದಲ್ಲಿ ರೋದಿಸುವ ದನಿ ಕೇಳಿದಂತಾಯಿತು. ಕ್ರೌಂಚಪಕ್ಷಿಗಳೆಂದು ಎಲ್ಲರು ತಲೆಯೆತ್ತಿ ನೋಡಲು ಒಂದು ವಿಮಾನ ಎತ್ತರದಲ್ಲಿ, ಹತ್ತಿ ಮೋಡಗಳಾಚೆ ವೇಗದಿಂದ ನುಸುಳಿ ಮರೆಯಾಯಿತು. ವಿಸ್ಮಯಕ್ಕೊಳಗಾಗಿ ಎಲ್ಲರೂ ನೋಡುತ್ತಿದ್ದರು. ಆಗ ಅವರ ಬೆರಗಿಗೆ ಬೆರಗನ್ನುಂಟು ಮಾಡುತ್ತ ಹೊನ್ನಿನ ಒಡವೆ ಭೂಮಿಗೆ ಬಿತ್ತು.'

ಎಂದು ಹೇಳಲು, ಉದ್ವೇಗದಿಂದ ನಿಟ್ಟುಸಿರು ಬಿಡುತ್ತ ದಾಶರಥಿಯು 'ನೋಡೋಣ. ಹಾಗೆ ಬಿದ್ದ ವಸ್ತುವೆಲ್ಲಿದೆ?' ಎಂದು ಪ್ರಶ್ನಿಸಲು ಜಾಂಬವಂತನು.

'ಬಿದ್ದ ವೇಗಕ್ಕೆ ಅದರ ಆಕಾರವು ನುಗ್ಗು ನುರಿಯಾಯಿತು. ನಿನಗೆ ಅದರ ವಿಶೇಷ ಅರಿವಾಗುವುದೆ?'

'ಅತಿಯಾದ ಬುದ್ಧಿ ಸಾಕು! ತೋರಿಸಯ್ಯ, ಬೇಗ ತೋರಿಸು!'

'ಆ ಒಡವೆಯು ಸುಗ್ರೀವನ ವಶದಲ್ಲಿದೆ.' ಎಂದು ಹೇಳಿದ ಜಾಂಬವಂತನು ಬೇಗನೆ ಆ ಚಿನ್ನದ ಒಡವೆಯನ್ನು ತರಿಸಿ ರಾಮನಿಗೆ ನೀಡಿದನು. ರಾಮನ ಕೈಯ ಕಂಪನದೊಡನೆ ಬಿಸಿಯ ನಿಟ್ಟುಸಿರು ಹೊಮ್ಮಿತು. ನಿಟ್ಟುಸಿರು ಕಣ್ಣೀರ ಕೋಡಿಯಾಯಿತು. ಕಂಬನಿಯಲ್ಲಿ ಮುಳುಗಿದ ಮನಸ್ಸು ಮೂರ್ಛಿತವಾಯಿತು. ಹನುಮಂತನ ಎದೆಯಲ್ಲಿ ಒರಗಿದ ರಾಮನ ಶರೀರವು ಸೀತಾ ವಿರಹದ ಉರಿಯ ಹೊಡೆತದಲ್ಲಿ ಸೊರಗಿ ಹೋಯಿತು. ಸ್ವಲ್ಪ ಹೊತ್ತಿನಲ್ಲಿ ಪ್ರಜ್ಞೆ ಮರಳಲು–ದುಃಖ ಹುತ್ತದಿಂದ ರೋಷಸರ್ಪವು ಉಕ್ಕೇಳುವ ರೀತಿಯಲ್ಲಿ ಅವನಿಜಾ ವಲ್ಲಭನು ಎದ್ದು ಹೇಳಿದನು:

'ಕಪಿಧ್ವಜ ಕುಲೇಂದ್ರ ಸುಗ್ರೀವನೆ ಕೇಳು. ನನ್ನ ಉಸಿರಾದ ಪತ್ನಿಯನ್ನು ರಾಕ್ಷಸ ಎಲ್ಲಿಗೆ ಕರೆದೊಯ್ದ? ಅವನ ನಾಡು ಯಾವುದು? ಬೀಡು ಎಲ್ಲಿ? ನೆಲೆಯಾವುದು? ತಡವೇಕೆ? ಚಿಂತಿಸುತ್ತ ಇನಿಯಳ ಗತಿಯನ್ನು ಹೇಗೆ ಸಹಿಸಿಕೊಳ್ಳಲಿ? ಆತನಿರುವ ಸ್ಥಳವನ್ನು ತೋರಿಸು. ಆ ನೀಚನಿಗೆ ಈಗಲೇ ಸಾವಿನ ಬಾಗಿಲನ್ನು ತೆರೆಯುತ್ತೇನೆ. ನುಗ್ಗಾದ ಹೊನ್ನಿನ ಒಡವೆಯೆ– ನೀನು ನನ್ನ ಸೀತಾ ಸ್ಥಿತಿಗೆ ಪ್ರತಿರೂಪವಲ್ಲವೆ?'

ಹೀಗೆ ಹಲವು ರೀತಿಯಲ್ಲಿ ವಿಲಾಪಿಸುತ್ತಿದ್ದ ಮಳೆ ಮುಗಿಲ ಮೈಬಣ್ಣದ ರಾಮನಿಗೆ ಸಮ ದುಃಖಿಯಾದ ಸುಗ್ರೀವನು ಈ ರೀತಿ ಹೇಳಿದನು.

ಬ್ರಹ್ಮ ವರಬಲಮಿರ್ಪುದೈ, ಮಾರಾಂತು ನಿಲ್ವ ವೈರಿಯ ಬಲದೊಳರ್ಧಮಂ, ಕಂಡೊಡನೆ, ಕೊಳ್ಗೆ ನಿನ್ನದಟೆಂದು.

'ಹೇ ಶತ್ರು ಮರ್ದನನೆ, ನೆನಪು ಎಂಬ ಸಾಣೆಕಲ್ಲಿನ ಮೇಲೆ ದುಃಖದ ಕತ್ತಿಯನ್ನು ಮಸೆಯಬೇಡ. ನೆನಪು ಹಿಂದಿದೆ, ಅಳುಕು ಮುಂದಿದೆ. ನಿನ್ನ ಸಂಕಟದ ಕತ್ತಿಗೆ ಎರಡು ಬಾಯಿಗಳಿವೆ. ತಾಳ್ಮೆಯ ಒರೆಯಲ್ಲಿ ಅದನ್ನು ಇಡು, ಅಲ್ಲದೆ ಸುಮ್ಮನೆ ಬೀಸಿದರೆ ನನ್ನ ಮತ್ತು ನಿನ್ನ ಹಾಗೂ ಇವರೆಲ್ಲರ ಬಾಳಿನ ಕೊರಳನ್ನು ಅದು ನಿಜವಾಗಿ ಕತ್ತರಿಸುತ್ತದೆ. ಅದು ಸೀತೆ ಮತ್ತು ರುಮೆ ಇಬ್ಬರಿಗೂ ಸರ್ವನಾಶದ ಫಲವಾಗುತ್ತದೆ. ನೀನು ಆರ್ಯ, ನಾನು ವಾನರ. ನನಗೆ ನಿನ್ನಂತೆಯೇ ಮನೆ ಮಡದಿ ವಂಚಿತ ಗತಿಯೊದಗಿದೆ.... ಧೈರ್ಯನಿಧಿಯಾದ ನೀನು ಎಲ್ಲರಿಗೂ ಆದರ್ಶ ಮತ್ತು ಮಾರ್ಗದರ್ಶಿಯಾಗಿರುವೆ.

'ದೋಣಿ ಒಡೆದರೆ ಹುಟ್ಟು ರಕ್ಷಿಸುತ್ತದೆಯೆ? ನಾನು ಹೇಳುವುದನ್ನು ತಾಳ್ಮೆಯಿಂದ ಕೇಳಿಸಿಕೊ. ಕದ್ದುಕೊಂಡು ಹೋಗಿರುವ ನೀಚನು ದಶಗ್ರೀವ ಎಂಬುದು ನಮ್ಮೆಲ್ಲರ ಊಹೆ. ನಾವು ದಕ್ಷಿಣ ಸಮುದ್ರದ ನಡುವಿನ ದ್ವೀಪನಾಡು ಲಂಕೆಯ ಬಗ್ಗೆ ಕೇಳಿ ತಿಳಿದಿದ್ದೇವೆ. ಆದರೆ, ದಾಶರಥಿಯೆ, ಆ ಅಸುರಪುರಿ ದುರ್ಗಮವಾದುದು. ಹುಡುಕುವುದಕ್ಕೆ ಶೂರರನ್ನು, ವನಸಂಚಾರ ಸಮರ್ಥ ಗೂಢಚಾರರನ್ನು ಕಳುಹಿಸುತ್ತೇನೆ. ನಮಗೆ ತಡೆಯಾಗಿರುವುದು ವಾಲಿಯೇ ಹೊರತು ರಾಕ್ಷಸೇಶ್ವರನಲ್ಲ. ವಾಲಿಯ ತಡೆಯನ್ನು ಇಲ್ಲವಾಗಿಸುವುದೇ ತಡ....'

ಎಂದು ಸುಗ್ರೀವ ನುಡಿಯುತ್ತಿರುವಂತೆ, ಮಧ್ಯದಲ್ಲಿ ತಡೆದು ಲಕ್ಷ್ಮಣನು,

'ನಾಳೆಯೇ ಕಿಷ್ಕಿಂಧೆಗೆ ಮುತ್ತಿಗೆ ಹಾಕೋಣ. ತಡವೇಕೆ' ಎಂದನು ಆಗ ಅವನಿಗೆ ಸುಗ್ರೀವನು,

'ದಶದಶಗ್ರೀವರು ಶತಕೋಟಿ ಬಲಶಾಲಿ ವಾಲಿಗೆ ಒಂದು ಸಣ್ಣ ಹುಲ್ಲುಕಡ್ಡಿಗೆ ಸಮಾನ! ಎದುರುನಿಂತು ಹೋರಾಡುವ ಸಮರನೀತಿಯಿಂದ ಅವನನ್ನು ಜಯಿಸಲು ಶತಮಾನಗಳೇ ಬೇಕಾಗಬಹುದು. ನಾವು ಹಿಂದೆ ಎಷ್ಟೋ ಸಲ ನಿಗ್ರಹಿಸಲಾಗದ ಅವನ ಪ್ರಚಂಡ ವಿಕ್ರಮವನ್ನು ಕಂಡಿದ್ದೇವೆ. 'ಎದುರು ನಿಂತು ಹೋರಾಡುವ ವೈರಿಯ ಬಲದಲ್ಲಿ ಅರ್ಧವು ಕಂಡೊಡನೆ ನಿನ್ನ ಪರಾಕ್ರಮವಾಗಿ ಹೋಗಲಿ' ಎಂಬ ಬ್ರಹ್ಮನ ವರಬಲ ವಾಲಿಗೆ ಇದೆ. ಇಂದ್ರನು ತನ್ನ ಕುಮಾರನಿಗೆ ವಜ್ರ ಕವಚವನ್ನು ರಕ್ಷೆಯಾಗಿ ಕರುಣಿಸಿದ್ದಾನೆ.

'ಹಿಂದೆ ಸಮುದ್ರ ಗಗನ ಗಿರಿಶ್ರೇಷ್ಠ ಹಿಮಪರ್ವತವನ್ನು ಕೆಣಕಿ ಕಾಳಗದಲ್ಲಿ ಸೋಲಿಸಿದ ದುಂದುಭಿ ಎಂಬ ಹೆಸರಿನ ರಾಕ್ಷಸನಿದ್ದನು. ಮಹಾಧೂರ್ತನಾದ ಅವನು ಬೃಹತ್ತಾದ ಮಹಿಷರೂಪವನ್ನು ಪಡೆದು ಗರ್ವದಿಂದ ಗರ್ಜಿಸುತ್ತ ವಾಲಿಯನ್ನು ಕದನಕ್ಕಾಗಿ ಕೆಣಕಿದನು. ಹೇಳುವುದೇನು? ಇವರೆಲ್ಲರೂ ಸಾಕ್ಷಿಯಾಗಿರುವರು. ಧಂ ಧಂ ಧಂ ಎನ್ನುವ ಭೇರಿ ದುಂದುಭಿ ಶಬ್ದಕ್ಕೆ ಗಿರಿವನ ಗುಹಾ ಕಿಷ್ಕಿಂಧೆ ನಡುಗಿತು. ಆ ಇಬ್ಬರು ಪರಾಕ್ರಮಿಗಳಲ್ಲಿ ಭಯಂಕರ ದ್ವಂದ್ವ ಯುದ್ಧ ನಡೆಯಿತು!

'ಆ ಭೀಮಾಕಾರದ ಕೋಣನ ಮೈಯ ರಾಕ್ಷಸನ ಶಿಖರ ಸಮವಾದಂತಹ ಎರಡು ಕೊಂಬುಗಳನ್ನು ವಾಲಿಯು ತನ್ನ ಎರಡು ಕೈಗಳಿಂದ ಇಡಿದು ಆಡಿಸಿದನು. ಹಿಡಿದು ಒತ್ತಿ ತಿರ್ರನೆ ತಿರುಗಿಸಿದನು. ನೆತ್ತರುಕಾರಿ ಗೋಣು ಮುರಿಯಲು ಮುಗಿಲ ಮೊಗಕ್ಕೆ ತೆಗೆದು ಒಗೆದನು. ಆ ರಾಕ್ಷಸ ಹೆಣವು ಮತಂಗವನವನ್ನು ದಾಟಿ ಯೋಜನ ದೂರದಲ್ಲಿ ಬಿದ್ದಿತು. ಬಿಸುಡಿದ ಶವದಿಂದ ಮುದ್ದೆ ಮುದ್ದೆ ನೆತ್ತರು ಮತಂಗ ಮುನಿಯ ಆಶ್ರಮದಲ್ಲಿ ಉದುರಿ ಬಿದ್ದಿತು. ಋಷಿ ಶಾಪಕೊಟ್ಟನು. ಆ ಶಾಪ ಭೀತಿಯಿಂದ ವಾಲಿಯು ಈ ಮತಂಗ ಮುನಿಯ ಆಶ್ರಮ ಪ್ರದೇಶಕ್ಕೆ ಬರುವುದಿಲ್ಲ. ಆದುದರಿಂದ ಇಲ್ಲಿ ನಮಗೆ ರಕ್ಷಣೆ ಇದೆ!

'ಅವನಿಗೆ ಭೀಮ ಬಲ ಒಂದೇ ಅಲ್ಲದೆ ಬಿಲ್ಲಿನ ಬಲ್ಮೆಯೂ ಸಿದ್ಧಿಸಿದೆ. ಅಲ್ಲಿ, ಪಂಪಾ ಸರಸ್ಸಿನ ತೀರದಲ್ಲಿ ಬೆಳೆದಿರುವ ಬೃಹತ್ತಾದ ತಾಲಮರಗಳು ಒಂದೊಂದು ಅವನ ಒಂದೊಂದು ಬಾಣದಿಂದ ಕತ್ತರಿಸಿ ಬೀಳುತ್ತವೆ! ಸಮ್ಮುಖವಾಗಿ ಅವನನ್ನು ಎದುರಿಸಿ ಹೋರಾಡುವ ಸಮರ ನೀತಿಯಿಂದ ಅವನನ್ನು ಜಯಿಸಲು ಶತಮಾನಗಳೇ ಬೇಕು ಎಂಬುದು ದಿಟ!'

ಕೆಟ್ಟಾಸೆಯ ನಿಟ್ಟುಸಿರನ್ನು ಎಳೆದ ಸುಗ್ರೀವನನ್ನು ನೋಡುತ್ತ ಸ್ವಲ್ಪ ಕೋಪಿಸಿಕೊಂಡ ಶ್ರೇಷ್ಠ ಧನುರ್ಧರ ರಾಮಚಂದ್ರನು,

'ವಾನರೇಂದ್ರ, ನೀನು ನಿನ್ನ ಅಣ್ಣನ ಪರಾಕ್ರಮವನ್ನು ಬಾಯ್ ತುಂಬಿ ಬಣ್ಣಿಸಿರುವೆ, ನೀನು ಖಂಡಿತ ಗುಣಗ್ರಾಹಿ! ಕಂಡ ಶಕ್ತಿ ಸಾಮರ್ಥ್ಯವನ್ನು ಕೊಂಡಾಡುವುದೇ ವೀರರಿಗೆ ಒಪ್ಪುವ ಉತ್ತಮ ಕಾರ್ಯ. ಹಾಗೆಯೇ ಕಾಣದುದನ್ನು ತೆಗಳುವುದು ಕೀಳಾದ ಕಾರ್ಯ. ನಮ್ಮ ಶಕ್ತಿ ಸಾಮರ್ಥ್ಯವನ್ನು ತಿಳಿಯದೆ ಮಾತನಾಡುತ್ತಿರುವೆ. ನಿನ್ನ ಹೃದಯದಲ್ಲಿ ಮೂಡಿರುವ ಸಂಶಯವು ನಿವಾರಣೆಯಾಗುವಂತೆ ನನ್ನ ಸಾಮರ್ಥ್ಯವನ್ನು ಮತ್ತು ಬಿಲ್ಲಿನ ಜಾಣ್ಮೆಯನ್ನು ತೋರಿಸುತ್ತೇನೆ.' ಎಂದು ಹೇಳಿದನು.

ಅದನ್ನು ಕೇಳಿ ನಾಚಿಕೆಯಿಂದ ಬಾಗಿದ ರವಿಪುತ್ರ ಸುಗ್ರೀವನು ಕೈ ಮುಗಿದು ಹೀಗೆ ನುಡಿದನು:

'ದೇವ, ನನ್ನನ್ನು ಕ್ಷಮಿಸು. ನಿನ್ನ ಕೀರ್ತಿಯನ್ನು ಕೇಳಿದ್ದೆನಾದರೂ ಮನಸ್ಸಿನ ಅಳುಕು ಹಾಗೆ ನುಡಿಸಿತು. ವಾಲಿಯಿಂದ ಎಷ್ಟೋ ಸಲ ಸೋತು ಮೈಮುರಿಸಿ ಕೊಂಡಿರುವೆ. ಆದುದರಿಂದ ಹುಸಿಬಲವನ್ನು ನಂಬಿಕೊಂಡು ಮೃತ್ಯುವಿಗೆ ಸಮನಾದ ವೀರನೊಡನೆ ಮತ್ತೊಮ್ಮೆ ಹೋರಾಡಲಾರೆ.'

'ನಾನು ಏನು ಮಾಡುವುದರಿಂದ ನಿನ್ನ ಸಂಶಯ ಪರಿಹಾರವಾಗುವುದೆಂದು ಹೇಳು?'

'ನೀನು ವಾಲಿಯನ್ನು ಮೀರಿಸುವಂತಹ ಮೈಯ ಸಾಮರ್ಥ್ಯ ಬಿಲ್ಲಿನ ಜಾಣ್ಮೆಯನ್ನು ತೋರಿಸಬೇಕು.'

'ತೋರಿಸುತ್ತೇನೆ ಏಳು. ಭಯಪಡದಿರು.'

ಎಂದು ಧಾವಿಸುವಂತೆ ಹೇಳಿದ ಮಿತ್ರ ವತ್ಸಲನು ಕೋದಂಡವನ್ನು ಹಿಡಿದು ಮೇಲೆದ್ದನು. ಅವನೊಡನೆ ಇತರರು ಮೇಲೆದ್ದರು. ಬೆಟ್ಟವನ್ನು ಇಳಿದು ಪಂಪಾಸರೋವರದ ತಾಲವನದ ಕಡೆಗೆ ನಡೆದರು. ಹಾಗೆ ಹೋಗುವಾಗ ದಾರಿಯಲ್ಲಿ ಮಾಂಸರಹಿತವಾದ ಅಸ್ಥಿಪಂಜರವಾಗಿ ಬೆಟ್ಟದಂತೆ ದುಂದುಭಿಯ ಶವ ಬಿದ್ದಿತ್ತು. ಭೀಕರವಾದ ಆ ಎಲುಬಿನ ಗೂಡನ್ನು ಕಂಡು ಸೌಮಿತ್ರಿಯು,

ಬಿನದದಿಂ ಕಾಣ್ ಇವರ ಸರಳ ಸೌಜನ್ಯಮಂ.

'ಇದೆ ಏನು ನೀನು ಹೇಳಿದ ನಿನ್ನ ಅಣ್ಣನು ಕೊಂದು ಬಿಸುಟಿರುವ ದುಂದುಭಿ? ನಾನು ರಾಮಚಂದ್ರನ ತಮ್ಮ!' ಎಂದು ಹೇಳುತ್ತ, ತನ್ನ ಅಣ್ಣನ ಪರಾಕ್ರಮವನ್ನು ಶಂಕಿಸಿದ ವಾನರನ ಕೀಳು ಭಾವವನ್ನು ಅವಹೇಳನ ಮಾಡುವಂತೆ ಲಕ್ಷ್ಮಣನು ಕೊಂಕುನುಡಿಯಿಂದ ಚುಚ್ಚಿದನು. ಕಿರುನಗುತ್ತ ಶ್ರಮವಿಲ್ಲದೆ ಬಿಲ್ಲಕೊಪ್ಪಿನಿಂದ ಗಿರಿಭಾರವಾದ

ಕಳೇಬರವನ್ನು ಚಿಮ್ಮಿದನು. ಕವಣೆಗಲ್ಲು ಎಸೆದಂತೆ ರೊಯ್ಯನೆ ಎದ್ದ ಆ ಹೆಣವು ಧೂಳಿ ಗಾಳಿಗಳೊಡನೆ ಸದ್ದು ಮಾಡುತ್ತ ಆಗಸವನ್ನು ತುಂಬಿತು ಮತ್ತು ತಿರ್ರನೆ ತಿರುಗಿ ಹತ್ತು ಯೋಜನದಾಚೆ ಬಿದ್ದಿತು!

ಅದನ್ನು ಕಂಡು ವಾನರರಿಗೆ ಆಶ್ಚರ್ಯವಾದರೂ, ಮೃದು ಹಾಸ್ಯಕ್ಕೆನ್ನುವಂತೆ ಸುಗ್ರೀವನು,

'ಅಯ್ಯಾ ತಿಳಿದುಕೊ. ವಾಲಿ ಬಿಸುಟಿದಾಗ ಆ ಶವ ಮಾಂಸದಿಂದ ಕೂಡಿ ರಕ್ತದಿಂದ ತೊಯ್ದಿತ್ತು!'

ಎಂದು ಹೇಳಲು ರಾಮನ ಜೊತೆಯಾಗಿ ನಳ ನೀಲ ಜಾಂಬವರು ನಗುತ್ತಿರಲು, ಹನುಮನು ಹಸನ್ಮುಖಿಯಾಗಿ ಹೇಳಿದನು:

'ಸುಮಿತ್ರಾತ್ಮಜನೆ, ನಮ್ಮ ವಾನರ ಬಲಕ್ಕೆ ಹೆಣದ ಹೊರೆ ದೊಡ್ಡದಲ್ಲ! ನೀನು ಮಾಡಿದ ಕೆಲಸವನ್ನು ನಮ್ಮ ಸೇನೆಯಲ್ಲಿ ಅತ್ಯಂತ ಕಿರಿಯರು ಮಾಡಬಲ್ಲರು!'

ಅದನ್ನು ಕೇಳಿ ಅತಿನಾಚಿಕೊಂಡು ಸ್ವಲ್ಪ ಕೋಪಗೊಂಡು ಕೆಂಪೇರಿದ ತಮ್ಮನ ಮುಖವನ್ನು ನೋಡುತ್ತ ರಾಘವನು ಹೇಳಿದನು:

'ಸೋದರನೆ, ಕಪಿವೀರರು ಅಸಾಮಾನ್ಯರು. ಇವರ ಸ್ನೇಹದಿಂದ ನಮಗೆ ಒಳ್ಳೆಯದಾಗುತ್ತದೆ. ಇವರ ಸರಳ ಸೌಜನ್ಯವನ್ನು ವಿನೋದದಿಂದ ಕಾಣುವಂತವನಾಗು?'

ಹಂಪೆಯ ಸರೋವರವು ಪೆಂಪಿನ ಓಕುಳಿಯಾಗುವಂತೆ ಸಂಜೆ ಕೆಂಪೆರಚಿತು. ಅದರ ತೀರದಲ್ಲಿ ತಡೆಯಿಲ್ಲದೆ ಬೆಳೆದ ದೈತ್ಯ ಗಾತ್ರದ ತಾಳಮರಗಳ ಸಮೂಹವಿತ್ತು. ಬೈಗು ಬಿಸಿಲನ್ನು ಹೊತ್ತ ಅದರ ನೆತ್ತಿಯ ನೆರಳು ಜಂಗಮದಂತೆ ಪಶ್ಚಿಮ ದಿಕ್ಕಿನತ್ತ ಯಾತ್ರೆ ನಡೆಸಿತ್ತು; ಹಾ ಭಂಗವಾದುದೆ ಯಾತ್ರೆ?

ಕತ್ತರಿಸಿದಂತೆ ಆ ತರುಚ್ಛಾಯೆ ಕುಗ್ಗಿ ಹಿಂಜರಿಯಿತು! ಮರದ ಮುಡಿಯ ಗೂಡು ಗೊತ್ತುಗಳಿಂದ ಹಾರಿದ ಪಕ್ಷಿಗಳ ಗುಂಪು ನಡೆದುದನ್ನು ಹೇಳುವುದನ್ನು ಕೇಳು.

ರಾಮನ ಬಿಲ್ಲಿನ ಹೆದೆಯಿಂದ ಮಳೆಗಾಲದ ಪ್ರಾರಂಭದ ಪ್ರಳಯದಂತಹ ಉಜ್ವಲಧ್ವನಿ ಹೊಮ್ಮಿದುದೇ ತಡ, ದೆಸೆದೆಸೆಯು ನಡುಗಿತು. ಬೆಟ್ಟ ಕಣಿವೆ ಕಾಡುಗಳು ಗುಡುಗಿದವು. ಕಿಷ್ಕಿಂಧೆಯು ತಲ್ಲಣಿಸಿತು. ಹಗಲಿನ ಉಲ್ಕೆಯಂತೆ ಮೃತ್ಯುವೇಗದಿಂದ ಬಂದ ಬಾಣವು ಒಂದೆರಡು ಮೂರು ನಾಲ್ಕೈದಾರು ಏಳೆಂದು ಸಾಲುಗೊಂಡಿದ್ದ ತಾಳವೃಕ್ಷ ಸಮೂಹವನ್ನು ಕರಡಹುಲ್ಲನ್ನು ಕುಡುಗೋಲು ಸವರುವಂತೆ ತುಂಡರಿಸಿತು! ಮುಂಡಗಳು ಕುಸಿದು ಬೀಳಲು ಎಲೆಗಳಿಂದ ಕೂಡಿ ತಾಳತರುಗಳ ಸಪ್ತರುಂಡಗಳು ಕತ್ತರಿಸಿ ಬಿದ್ದವು. ಅದನ್ನು ಕಂಡು ಕಪಿಕುಲ ಪುಂಗವನು ನಾಚಿಕೆ ಬೆರೆತ ಮುದ

ಭಾವದಲ್ಲಿ, 'ನಿನ್ನ ಪರಾಕ್ರಮವನ್ನು ನನ್ನ ಅಲ್ಪಬುದ್ಧಿ ಅನುಮಾನಿಸಿತು. ಹೇ ಸೂರ್ಯತೇಜಸ್ವಿಯೇ ನನ್ನನ್ನು ಕ್ಷಮಿಸು.'

ಎಂದು ಹೇಳಿ ಕೊರಳಸರ ನೆಲವನ್ನು ಮುಟ್ಟುವಷ್ಟು ಬಾಗಿ ಕೈ ಮುಗಿದು ನಮಸ್ಕರಿಸಿದನು.

ಹೊತ್ತು ಬೆಟ್ಟದ ನೆತ್ತಿಯಲ್ಲಿ ಮರೆಗೊಂಡು ಮುಳುಗಿತು. ಬಾನಿನ ತಲೆಯಲ್ಲಿ ನಕ್ಷತ್ರಗಳು ಅರಳಿದವು. ಹಾಡು ಹಕ್ಕಿಯ ಕೊರಳು ತಿಪ್ಪುಳಿನ ಗೂಡಿನಲ್ಲಿ ನಿದ್ದೆ ಮಾಡಿತು. ಹನುಮ ಜಾಂಬವ ನೀಲ ನಳ ರಾಮ ಸುಗ್ರೀವರ ಮಂತ್ರಾಲೋಚನೆಯ ರಹಸ್ಯವನ್ನು ತಿಳಿದು ಹೇಳುವ ವೈರಿ ವಾಲಿಯ ಬೇಹುಗಾರನಂತೆ ಬಂಡೆ ಮರ, ಮೆಳೆ ಗವಿಗಳೆಡೆಯಲ್ಲಿ ಗಾಳಿಯು ಹೊಂಚಿಹಾಕುತ್ತ, ಮೆಲ್ಲಮೆಲ್ಲನೆ ಸುಳಿದಾಡಿತು. ವಿಶ್ವಧರ್ಮ ಸಹಸ್ರಾಕ್ಷನೇ ಸಾಕ್ಷಿ ಎಂಬಂತೆ ಸ್ವರ್ಗ ಚುಂಬಿತ ಋಷ್ಯಮೂಕದ ಮೂಕರಾತ್ರಿ ವ್ಯಾಪಿಸಿತು!

❑



~~~~~~~~~~~~~~~~~~~~~~ ಸಂಚಿಕೆ – ೬ ~~~~~~~~~~~~~~~~~~~~~~

ನೀಂ ಸತ್ಯವ್ರತನೆ ದಿಟಂ!

ಮಂತ್ರಾಲೋಚನೆಯ ರಾತ್ರಿ ಕಳೆಯಿತು. ಉಷಾಕಾಂತಿಯು ಮೃದುವಾಗಿ ಮೆಲ್ಲನೆ ಎವೆ ತೆರೆಯಲು ಇಂದ್ರದಿಕ್ಕು ಪೂರ್ವದಲ್ಲಿ ಬೆಳಕಿನ ನೀರು ಉಕ್ಕಿತು. ಋಷ್ಯಮೂಕದ ಶಿಖರ ವೇದಿಕೆಯಲ್ಲಿದ್ದ ರಾಮಲಕ್ಷ್ಮಣರಿಗೆ ಆಗಸದ ತುದಿಯವರೆಗೆ ಅಪಾರವಾಗಿ ಹರಡಿ ವಿಸ್ತರಿಸಿದ ಬೆಟ್ಟಗಳ ಸಾಲು–ತೆರೆಯ ಮೇಲೆ ತೆರೆ ಏರಿ ಹರಡಿರುವ ಸಮುದ್ರವನ್ನು ಪ್ರತಿಬಿಂಬಿಸುವಂತೆ ಕಂಡಿತು. ಸಿಪಿಲೆ ಹಕ್ಕಿಯ ಸಿಳ್ಳಿನ ಇಂಚರವು ತಣ್ಣನೆ ಮಲೆಯ ಗಾಳಿಯಲ್ಲಿ ಅಲೆದಾಡಿತು!
~~~~~~~~~~~~~~~~~~~~~~

ಕೈಕೊಳೆ ಮಹತ್ಕಾರ್ಯಮಂ, ಮಾನವನ ಮಹಿಮೆ ಮೈದೋರ್ವುದೈ.

'ಸೌಮಿತ್ರಿಯೆ, ಹೊತ್ತುಹುಟ್ಟುವುದಕ್ಕೆ ಮೊದಲೆ ಇಲ್ಲಿರುವೆವೆಂದು ಹೇಳಿದವನು ಇನ್ನೂ ಏತಕ್ಕೆ ಬಂದಿಲ್ಲ? ಈ ವಾನರರು ಕಪಿಯ ಧ್ವಜ ಹೊಂದಿರುವವರು! ಕಪಿಬುದ್ಧಿಯೆಂಬುದು ಅತಿ ಚಂಚಲ! ರುಮೆಯ ವಲ್ಲಭ ಸುಗ್ರೀವನು ಮತ್ತೆ ಬೇರೊಂದನ್ನು ಏನಾದರು ಆಲೋಚಿಸಿದನೇನು?'

ಎಂದು ಕಿಷ್ಕಿಂಧೆಯತ್ತ ಕಣ್ಣಾಗಿ, ಬೇರು ಮಣೆಯಾಗಿ ಒಂದು ಮರದಡಿ ಕುಳಿತ ರಾಮಚಂದ್ರನು ಹೇಳಿದನು. ಅವನ ಹತ್ತಿರ ನಿಂತು ನೋಡುತ್ತಿದ್ದ ತಮ್ಮನು,

'ಹೇ ಆರ್ಯ, ಅನಾರ್ಯರಾದ ಇವರನ್ನು ನಂಬಿ ಆರ್ಯ ಕುಲದೇವಿ ಸೀತಾಮಾತೆಯನ್ನು ನಾವು ಎಂದು ತರುವೆವೊ ನನಗೆ ತಿಳಿಯುತ್ತಿಲ್ಲ! ಇದುವರೆಗೆ ಬೇರೆಯವರ ನೆರವನ್ನು ಅಪೇಕ್ಷಿಸದೆ ನಮ್ಮ ಸ್ವಂತ ಸಾಮರ್ಥ್ಯವನ್ನು ನಂಬಿ ಮುನ್ನಡೆದಿದ್ದೇವೆ. ಈಗ ನಮಗೇಕೆ ಈ ಕಪಿಧ್ವಜರ ಕಾಡುತನದ ಪರಾಕ್ರಮದ ಹಂಗು? ಇವರ ಮನೆಯನ್ನು ತಿದ್ದಿ ನಮ್ಮ ವೃದ್ಧಿಯನ್ನು ಸಾಧಿಸುವಷ್ಟರಲ್ಲಿ ಏನು ಗತಿಯಾಗುವುದೊ? ನಿಧಾನವಾಗಿ ಕೆಲಸ ಮಾಡುವ ಇವರ ಸಹವಾಸದಿಂದ ನಮ್ಮ ಕೆಲಸ ದಿಟವಾಗಿ ಕೆಡುತ್ತದೆ!'

ಎಂದು ಕಣ್ಣನ್ನು ಕೆಂಪಗೆ ಮಾಡಿಕೊಂಡು ಹೇಳಿದನು. ಅವನ ಆ ಕೋಪಗೊಂಡ ಮುಖವನ್ನು ಈಕ್ಷಿಸುತ್ತ ರಾಘವನು ಹೀಗೆ ಸಂತೈಸಿದನು:

'ಊರ್ಮಿಳೇಶನೆ, ತಾಳ್ಮೆ! ವಾನರರು ನೀನು ಹೇಳುವಷ್ಟು ಕೀಳಾದವರಲ್ಲ. ನಮ್ಮ ಶೌರ್ಯ ನೀನು ಊಹಿಸುವಷ್ಟು ಬಲವಾದುದಲ್ಲ. ನಮ್ಮ ಮುಂದಿರುವ ಕೆಲಸದ ಆಲೋಚನೆ ಕಿರಿದಾದುದಲ್ಲ. ರಾಕ್ಷಸನ ಪರಾಕ್ರಮವನ್ನು ಅಲ್ಪವೆಂದು ತಿಳಿಯಬೇಡ. ದೇವಿಯನ್ನು ಅನ್ವೇಷಣೆ ಮಾಡಿ ರಕ್ಷಿಸಿ ರಾಕ್ಷಸರನ್ನು ವಧಿಸುವ ಬಗ್ಗೆ ನನ್ನ ಮನಸ್ಸಿನ ಆತಂಕ ನಿನಗಿಂತ ದೊಡ್ಡದು.

'ಲಕ್ಷ್ಮಣ, ನೀನು ವೀರನಾದರೂ, ನಮಗೆ ಈ ಮಲೆನಾಡಿನವರ ಸಹಾಯ ಬೇಕು. ಸ್ನೇಹಿತರ ಒಲ್ಮೆಯನ್ನು ನಿರಾಕರಿಸುವುದು ಬರಿಯ ಬೆಪ್ಪುತನ. ಕಪಿಗಳಲ್ಲಿ ಪ್ರತಿಯೊಬ್ಬರೂ ಮಹಿಮಾವಂತರು. ಅದು ನಿನಗೆ ಮುಂದಕ್ಕೆ ಅರಿವಾಗುತ್ತದೆ. ಮಹತ್ಕಾರ್ಯವನ್ನು ಕೈಗೊಳ್ಳುವುದರಿಂದ ಮಾನವನ ಮಹಿಮೆ ಪ್ರಕಟಗೊಳ್ಳುತ್ತದೆ.... ರವಿಪುತ್ರ ಸುಗ್ರೀವ ಮತ್ತು ನಾನು ಮಿತ್ರರಾಗಿರುವೆವೆಂದು ಅಗ್ನಿಸಾಕ್ಷಿಯಾಗಿ ಪ್ರತಿಜ್ಞೆ ಮಾಡಿದ್ದೇವೆ. ಸೂರ್ಯಕುಲಕ್ಕೆ ಮಿತ್ರದ್ರೋಹ ಯೋಗ್ಯವಲ್ಲ.'

ಅಣ್ಣನ ಮಾತಿಗೆ ಲಕ್ಷ್ಮಣನು ಮೌನವಾಗಿ ಒಪ್ಪಿಗೆ ಸೂಚಿಸಿ, ರವಿ ಉದಯವನ್ನು ನಿಟ್ಟಿಸುತ್ತಿದ್ದನು. ಆಗ ಒಂದು ಅದ್ಭುತ ರಣ ಕಹಳೆ ಕೇಳಿ ಬಂದಿತು. ಅದಕ್ಕೆ ಬೆಳಗಿನ ಗಾಳಿ ತಲ್ಲಣಿಸಿ ಕಂಪಿಸುತ್ತಿರಲು ಸುಗ್ರೀವನು ಆಂಜನೇಯ ಮುಂತಾದವರ ಮುಂದೆ

ವಾನರ ಕುಲ ಪದ್ಧತಿಯಂತೆ ಭೈರವ ಭಯಂಕರ ವೇಷವನ್ನು ಧರಿಸಿ ಬಂದನು! ರಘುವಂಶಜರ ಕಣ್ಣಿಗೆ ಅದು ಭಯಾನ್ವಿತವಾಗಿ ಅಚ್ಚರಿಯನ್ನುಂಟು ಮಾಡಿದರೂ ಹಿತವಾಗಿ ಕಂಡಿತು. ಆ ವಿಚಿತ್ರ ಸ್ನೇಹಿತನು ರಕ್ತವರ್ಣಗಳನ್ನು ಹೊದೆದ ಸಂಧ್ಯಾಮೇಘವೋ, ಕೆಂಪಾದ ಜ್ವಾಲೆಗಳಿಂದಾದ ಧೂಮ ದೇಹಾಗ್ನಿಯೋ, ಕಾಡಿನ ಸುಂದರ ಚೈತ್ರಮಾಸದ ವಿಕಸಿತ ಪುಷ್ಪಗಳ ಮುತ್ತುಗದ ಮರವೋ, ಚಂದ್ರನಿಂದ ಕೂಡಿದ ಆಗಸ ರಾತ್ರಿಯೋ ಹೇಳು ಎಂಬ ರೀತಿ–ರಕ್ತ ವಸ್ತ್ರಗಳಿಂದ, ರಕ್ತ ವರ್ಣಗಳಿಂದ, ಕೆಂಬಣ್ಣದ ಹೂಗಳಿಂದ, ಕೆಂಬಕ್ಕಿಯ ಗರಿಗಳಿಂದ ಆಕಾಶದಲ್ಲಿ ತುಂಬಿದ ಮೋಡಗಳಂತಹ ರೋಮಗಳಿಂದ ಕೂಡಿದ ದೇಹವನ್ನು ಅಲಂಕರಿಸಿಕೊಂಡಿದ್ದನು. ಅವನು ಭೀಕರ ಆಯುಧವನ್ನು ಹಿಡಿದು, ಕಪಿಕೇತನವನ್ನು ತೂಗುತ್ತ ಬಂದನು. ದ್ವಂದ್ವ ಯುದ್ಧ ವಿಶಾರದನಾದ ಅವನು ಸಮರ ಸಜ್ಜಿತನಾಗಿದ್ದನು.

ಆ ಅಪರಿಮಿತ ಧೈರ್ಯಶಾಲಿ ಕಪೀಂದ್ರನನ್ನು ನೋಡುತ್ತಿದ್ದಂತೆ ರಾಮಲಕ್ಷ್ಮಣರ ಸಂಶಯ ತಲೆತಗ್ಗಿಸಿತು. ಆಶೆ ಉಸಿರಾಡಿತು. ಅವರ ಆತ್ಮದಲ್ಲಿ ನೆಚ್ಚು ಹೆಡೆಯೆತ್ತಿ ಕೆಚ್ಚಿನೊಡನೆ ಎಣೆಯಾಡಿತು.

ಸಿಸು ನೇಸರನ ಎಳೆಯ ಕಿರಣಗಳ ಚಾಮರವು ಹೊನ್ನೀರಿನಲ್ಲಿ ಅದ್ದಿದ ಕುಂಚದ ರೀತಿಯಲ್ಲಿ, ಸುವರ್ಣಕಾಂತಿಯನ್ನು ಕಾನನದ ಮೈಗೆ ಸಿಂಪಡಿಸುತ್ತಿತ್ತು. ಬನದ ಹಕ್ಕಿಗಳ ತರ ತರಹ ಸ್ವರ ಇಂಚರದ ಇಂಪು ಹೊನಲು ಕಿವಿಗೆ ಹರಿಯುತ್ತಿತ್ತು. ಅಂತಹ ರಮಣೀಯವಾದ ಆ ಅರಣ್ಯದ ಗಿರಿ ಶ್ರೇಣಿ ಕಾನನ ಪ್ರಿಯರಾದ ಸುಗ್ರೀವ ಮತ್ತು ರಾಮರನ್ನು ಹರಸುತ್ತಿತ್ತು. ಆಗ ಅವರು ಋಷ್ಯಶೃಂಗದಿಂದ–ಕಿಷ್ಕಿಂಧೆಯನ್ನು ಗುರಿಯಾಗಿಸಿಕೊಂಡು ನಡೆದರು. ಅವರು ಇಳಿದು ಏರುತ್ತ ವಾಲಿಯು ಪಾಲಿಸುತ್ತಿದ್ದ ದುರ್ಗಮಯ ನಗರವನ್ನು ಸುತ್ತಿ ಮುತ್ತಿ ದಟ್ಟವಾಗಿ ಹಬ್ಬಿದ್ದ ಗಹನವಾದ ಕಾಡನ್ನು ಸೇರಿದರು. ರಾಮಾದಿಗಳು ಕಾಡಿನ ಮರೆಯಲ್ಲಿ ಅಡಗಿ–ಹಣ್ಣಿನ ಮರದಲ್ಲಿ ಮರಸು ಕೂತವರಂತೆ ಮೌನವಾಗಿದ್ದು ಎಚ್ಚರವಾಗಿ ನಿಟ್ಟಿಸುತ್ತ ಕಾದು ಕಾತರಿಸುತ್ತಿದ್ದರು.

ಸುಗ್ರೀವನು ಒಬ್ಬನೆಯೆ ಮುಂದುವರಿದು ಹೋದನು. ಒಂದು ಎತ್ತರವಾದ ಬಂಡೆಯನ್ನು ಏರಿ, ನಿಮಿರಿ ನಿಂತುಕೊಂಡನು. ತಾನು ಒಲಿದ ಬೀಡೆಲ್ಲವನ್ನು ಕಣ್ಣಾಲಿಗಳಿಂದ ಆಲಿಂಗಿಸುವಂತೆ ಕಾಡೆಲ್ಲವನ್ನು ನೋಡಿದನು. ಆ ವನಪ್ರೇಮಿಯು ವಿರಹ ರೋಷದಿಂದ ನಿಟ್ಟುಸಿರು ಬಿಟ್ಟು ಹಲ್ಲುಮುಡಿಕಚ್ಚಿ ಅಚಲ ವೃಷಭವಾದ ಬೆಟ್ಟಕ್ಕೆ ಮಲೆತು ಮೂದಲಿಸಿ ಗುಟುರಿಕ್ಕುವಂತೆ ಗರ್ಜಿಸಿದನು. ಅದಕ್ಕೆ ಬೆಟ್ಟ ಪ್ರತಿಧ್ವನಿಸಿ ಅರೆಬಂಡೆಗಳು ಎಡಬಲಕ್ಕೆ ನಡುಗಾಡಿದವು. ಮರ ಸಮೂಹವು ತೊನೆದಾಡಿದವು. ಅಡವಿ ಹಕ್ಕಿಗಳು ಚೀರಿದವು. ಜಿಂಕೆ ಕಾಳ್ಕೋಣ ಹಂದಿ ಹೆಬ್ಬುಲಿ ಸಿಂಹ ಆನೆಗಳು ಗಾಬರಿಗೊಂಡವು. ಆ ಗರ್ಜನೆಯ ಸಿಡಿಲು ತೆರೆತೆರೆಯಾಗಿ ಉರುಳಿ ಹರಿದು ಶಾಂತವಾಯಿತು.

ನೋಡುವವರಿಗೆ ಆತಂಕವು ಹೆಚ್ಚಾಯಿತು. ಅರಣ್ಯದ ಮೌನವು ಮುಟ್ಟಿ ಹಿಡಿಯುವಂತಾಯಿತು. ಮರಗಳಲ್ಲಿ ಗಾಳಿ ಸುಳಿಯುವ ಸದ್ದು, ಹೂ ಹಕ್ಕಿಗಳು ಮಧು ಸೇವಿಸಿ ಉಲಿವ ಸದ್ದು, ಒಣಗಿದ ಕಡ್ಡಿಗಳು ಅಲುಗಿ ಮರಗೋಡಿನಿಂದ ಉರುಳಿ ನೆಲಕ್ಕೆ ಬೀಳುವ ಸದ್ದು, ಸಸ್ಯಗಳು ಉಸಿರಾಡುವ ಸದ್ದು, ಬೆಳೆಯುವ ಹುಲ್ಲು, ನಿದ್ರಿಸುವ ಕಲ್ಲುಗಳಿಂದ ಅರಣ್ಯದ ನಿಶ್ಯಬ್ದತೆ ಮುಟ್ಟಿ ಹಿಡಿಯುವಂತಾಯಿತು! ಮರದ ಹಸುರಿನ ಕಂಡಿ ಕಂಡಿಗಳಿಂದ ಬಿಸಿಲು ಇಣುಕಿ ನೆಲದ ಮೇಲೆ ಕಣ್ಣು ಕಣ್ಣಿನ ರಂಗವಲ್ಲಿಯ ವಿಲಾಸವನ್ನು ಚೆಲ್ಲಿ ಶಿಶುವಿನಂತೆ ಆಡಿತು.

ಸಿಂಹದೋಲಾರ್ಭಟಿಸಿ, ಪುಲಿಯವೋಲ್ ಚಿಮ್ಮಿದನ್ ಪಳುಗಬ್ಬದಿಂ!

ಹೀಗೆ ನೋಡುತ್ತ ನಿಶ್ಯಬ್ದವನ್ನು ಆಲಿಸುತ್ತಿರಲು ಬೆಟ್ಟ ಬಂಡೆಗಳು ಅದುರುವಂತೆ, ಮರದ ಕೊಂಬೆಗಳು ಅದುರುವಂತೆ, ಸಿಡಿಲ ತಮಟೆಯಂತೆ ಕಿವಿಯನ್ನು ಇರಿವ ಚಂಡೆ ಕೇಳಿಸಿತು! ಅದರ ಜೊತೆಗೆ ಚಂಡೆಯನ್ನು ಮೀರುವಂತೆ ವಾಲಿಯ ಆರ್ಭಟ ಕೇಳಿಸಿತು. ರಾಮನ ಎದೆ ಧಿಗಿಲೆಂದಿತ್ತು. ಸೌಮಿತ್ರಿಯು ಹನುಮನನ್ನು ನೋಡಿದನು. ನೀಲ ನಳ ಜಾಂಬವರ ಗುಂಪು ಮರದ ಮರೆ ಹೊಕ್ಕಂತೆ ಅಡಗಿಕೊಂಡರು.

ಅಲ್ಲಿ ಬೆಟ್ಟ ಗುಡುಗಿತ್ತು. ಅದೊ ಆಕಡೆ ಕಾಡು ನಡುಗಿತು! ಆ ಹೆಬ್ಬಲಸಿನ ಕಡೆಯಲ್ಲಿ ಕಾಕು ಕೇಳಿಸಿತಲ್ಲವೆ? ಇತ್ತ ನೋಡು, ಇತ್ತ ಆಲಿಸು ಆ ತರಗೆಲೆಯ ಸಪ್ಪಳ! ಅಲ್ಲಿ ನೋಡು ಮರದ ತಲೆ ಸೊಪ್ಪು ಮುರಿದು ಬೀಳುತ್ತಿದೆ! ಮತ್ತೆ ಅದೊ ಚಂಡೆಯ ದನಿ! ಅದೊ ಮಾರುತ್ತರವಾಗಿ ವೀರ ಅಟ್ಟಹಾಸ! ಅದೊ ಮತ್ತೆ ಗರ್ಜಿಸಿದನು ನಮ್ಮ ಸುಗ್ರೀವ! ಅದಕ್ಕೆ ಮತ್ತೆ ಅದೊ ಪ್ರತಿ ಗರ್ಜನೆ! ನಿಜ, ವಾಲಿಯೆ ನಿಜ! ಎಲ್ಲಿ? ನೋಡಲ್ಲಿ; ಓ ಅಲ್ಲಿ! ಅದೆ ವಾಲಿ.

ಕಾಡಿನ ಗರ್ಭದಿಂದ ಸಿಂಹದಂತೆ ಆರ್ಭಟಿಸಿ, ಹುಲಿಯಂತೆ ಚಿಮ್ಮಿದನು! ಚಿಮ್ಮಿ ರಣಾವೇಶಿ ರಣವೇಷಿಯಾದ ತಮ್ಮನನ್ನು ವಾಲಿ ನೋಡಿದನು! ಅವನ ಕಣ್ಣುಗಳು ಕೆಂಪಾದವು. ಮುಖ ರೌದ್ರವಾಯಿತು. ಕೊಂಕು ತುಟಿಯ ಮೇಲೆ ಮೀಸೆ ಕುಣಿಯಿತು. ಮತ್ತೊಮ್ಮೆ ಮಲೆ ನಡುಗುವಂತೆ ಅಬ್ಬರಿಸಿ, ಚಿಮ್ಮಿ ಸುಗ್ರೀವನ ಕಡೆಗೆ ನುಗ್ಗಿದನು! ಶರೀರದ ಕಾಂತಿಯಿಂದ, ವಸ್ತ್ರದಿಂದ, ವರ್ಣದಿಂದ ಮತ್ತು ಅಲಂಕಾರದಿಂದ ಏಕರೀತಿಯಲ್ಲಿರುವ ಸಮರ ಕಲಿಗಳಲ್ಲಿ ಸುಗ್ರೀವನು ಯಾರು, ವಾಲಿ ಯಾರು ಎಂದು ತಿಳಿಯಲು ಆಗದೆ ಬಿಲ್ಲು ಹೊತ್ತ ದಾಶರಥಿಗೆ ಭ್ರಮೆಯ ಮಂಕು ಆವರಿಸಿತು. ಭೀಷ್ಮ ಪ್ರತಿಜ್ಞೆಯನ್ನು ನೆನೆದು ಹಲ್ಲುಕಚ್ಚಿದನು. ನಾಚಿಕೆಯಿಂದ ಹುಬ್ಬುಗಂಟಿಕ್ಕಿದನು. ಎರಡು ಹೋರಿಗಳು ಹೋರಾಡುತ್ತಿರಲು ಅವುಗಳನ್ನು ಹೊಂಚು ಹಾಕಿ ದಿಟ್ಟಿಸುವ ಹುಲಿಯಂತೆ ದಿಗ್ಭ್ರಮೆಗೊಂಡು ನೋಡುತ್ತಿದ್ದನು!

ನುಗ್ಗಿ ಬರುತ್ತಿರುವ ಮಹಾಬಲಶಾಲಿ ವಾಲಿಯನ್ನು ಕಂಡು ರುಮಾ ಪ್ರಿಯನು ತಕ್ಷಣ ಪಕ್ಕಕ್ಕೆ ಸಿಡಿಯುತ್ತ ಅವನ ನೆತ್ತಿಯನ್ನು ಗುದ್ದಿದನು. ಕರಿಕಲ್ಲು ನುಚ್ಚು ನುರಿಯಾಗುವ ಆ ಹೊಡೆತಕ್ಕೆ ಮೆದುಳು ಕದಡಿಹೋದಂತೆ ಇಂದ್ರನ ಮಗನು ತತ್ತರಿಸಿಹೋದನು. ಪುನಃ ಚೇತರಿಸಿಕೊಂಡು ಹತ್ತಿರವಿದ್ದ ಒಂದು ಬಂಡೆಯನ್ನು ಎತ್ತಿಕೊಂಡನು. ಸಿಡಿರೋಷದಿಂದ ಅದನ್ನು ಫಿರಂಗಿ ಗುಂಡಿಡುವಂತೆ ಎಸೆದನು. ಸುಗ್ರೀವನು ಸತ್ತನು ಎಂಬಷ್ಟರಲ್ಲಿ; ಅವನು ಪಕ್ಕಕ್ಕೆ ನೆಗೆಯಲು ಗುರಿತಪ್ಪಿದ ಆ ಬಂಡೆ ಒಂದು ಮರದ ಗೂನ್ನಗಂಟಿನ ಒರಟು ಬುಡಕ್ಕೆ ಬಡಿಯಿತು. ಅದು ಬೇರು ಕಡಿದು, ಕೊಂಬೆ ಬರಲಾಗುವಂತೆ ಎಲೆಗಳು ಉದುರಿದವು. ಮರವು ಲರಿಲ್ ಲರಿಲ್ ಲರಿಲ್ಲೆಂದು ಕೆಳಕ್ಕೆ ಬಿದ್ದಿತು. ಸುಗ್ರೀವನು ಆ ವೃಕ್ಷವನ್ನೆ ಗದೆಯಾಗಿಸಿಕೊಂಡು ವಾಲಿಯನ್ನು ಅಪ್ಪಳಿಸುತ್ತಿದ್ದನು. ಅದನ್ನು ಕಪಿಮುಷ್ಟಿಯಿಂದ ಹಿಡಿದು ಜಗ್ಗಿ ಸೆಳೆಯುತ್ತ ವಾಲಿ ಹೇಳಿದನು;

'ಎಲವೊ ಸುಗ್ರೀವನೆ ಕೇಳು. ತಮ್ಮನೆಂಬ ಪ್ರೀತಿಗಾಗಿ, ನಿನ್ನ ಆ ಪತಿವ್ರತಾ ಸತಿಯ ಮುತ್ತೈದೆತನಕ್ಕಾಗಿ, ದೇವಿ ತಾರೆಯ ವಚನಕ್ಕಾಗಿ ನಾನು ಹುಸಿಕಾಳಗವನ್ನು ಮಾಡುತ್ತಿದ್ದೆನು. ಆದರೆ ನೀನು ಮಲೆತು ಕೊಬ್ಬಿದೆಯಲ್ಲಾ? ಹಗೆತನ ಬಾಡಿದ ನನ್ನ ಎದೆಯಲ್ಲಿ ಸ್ನೇಹವು ಮೂಡುತ್ತಿರುವಾಗಲೆ, ಯಾರೊ ಅಲ್ಪನಾದ ಉತ್ತರದ ಅರಸನ ಜೊತೆಗೂಡಿಕೊಂಡು ನನ್ನನ್ನು ಮತ್ತೆ ಕೆಣಕಿರುವೆ. ಮರುಳೇ, ಸಾಹಸದಿಂದ ವಾಲಿಯನ್ನು ಗೆದ್ದವರು ಉಂಟೆ? ರಾವಣನೆ ಹೆದರಿ ಮೈತ್ರಿಯನ್ನು ಆಶ್ರಯಿಸಿ ಬದುಕುತ್ತಿರುವನು ಎಂದ ಮೇಲೆ, ನನ್ನ ಕೋಪ ಪ್ರಳಯದ ಸರ್ಪ ವಿಷದಿಂದ ನಿನ್ನನ್ನು ಯಾರು ಕಾಪಾಡುವರು?'

ಎಂದು ಹೇಳಿ, ತಮ್ಮನ ಕೈಯ ಗದಾ ವೃಕ್ಷವನ್ನು ಕಸಿದು ಕೊಂಡು ಎಸೆದನು. ನೆಗೆದು ಅವನ ಮೇಲೆ ಏರಿಹೋದನು. ಆದಿಶೇಷನಂತಹ ಭುಜದಿಂದ ಮಂದರ ಪರ್ವತದಂತಹ ತಮ್ಮನ ಮೈಯನ್ನು ಬಿಗಿದು ಸುತ್ತಿ ನೆಲಕ್ಕೆ ಉರುಳಿಸಿದನು!

ನೆಲಕ್ಕೆ ಉರುಳಿದ ಅವರು ಪೊದೆಯ ಮರೆಯಲ್ಲಿ ಸೆಣಸಾಡುತ್ತಿರಲು ರಾಮಚಂದ್ರನು ಅವರನ್ನು ಕಾಣದೆ ಆತಂಕಕ್ಕೊಳಗಾದನು. ಆಗ ದಿಡ್ಡು ದಿಡ್ಡೆಂಬ ಕೈ ಗುದ್ದುಗಳ ಸದ್ದುಗಳು ಮತ್ತು ಅತಿಯಾದ ಆರ್ತನಾದ ಕೇಳಿಸಿತು. ಕೂಡಲೆ ಹಾ, ಓಡುತ್ತಿರುವ ರಾಮಮಿತ್ರನನ್ನು ಬೆನ್ನಟ್ಟಿದ ವಾಲಿ ಕಾಣಿಸಿದನು. ಮಿತ್ರನಾರು ಶತ್ರುಯಾರು ಎಂದು ತಿಳಿಯುವಷ್ಟರಲ್ಲಿ ಅವರಿಬ್ಬರು ದಟ್ಟಕಾಡಿನಲ್ಲಿ ಮರೆಯಾದರು.

ಕೋಳುವೋದೆನ್ ರೂಪಸಾದೃಶ್ಯದಿಂ, ಗೆತ್ತು ನಿನ್ನಣ್ಣನಂ ನಿನಗೆ.

ರಾಮನ ಬಾಣದ ಸಹಾಯವನ್ನು ನಂಬಿದ ಸುಗ್ರೀವನಿಗೆ ಅದು ಬಿಸಿಲುಗುದುರೆಯಾಗಲು ಧೈರ್ಯ ಕುಂದಿತು. ವಾಲಿ ಮುಷ್ಟಿಯ ವಜ್ರಘಾತಕ್ಕೆ ಮೈ

ಮುರಿಯಲು ನಂಬಿಕೆಯನ್ನು ಕಳೆದುಕೊಂಡನು. ರಕ್ತ ಸುರಿಯುತ್ತಿರಲು ಅವನು ಜರಿದು ಹಿಮ್ಮೆಟ್ಟಿ ಬೀಳುತ್ತ ಮತಂಗ ಅರಣ್ಯಕ್ಕೆ ರಕ್ಷಣೆಗಾಗಿ ಧಾವಿಸಿದನು. ವಾಲಿಯು ಋಷಿ ಶಾಪವನ್ನು ನೆನೆದು, 'ಬದುಕಿಕೊ ಹೋಗು' ಎಂದು ಕೋಪದಿಂದ ಹೇಳುತ್ತ ತನ್ನ ಕಿಷ್ಕಿಂಧೆಗೆ ಹಿಂದಿರುಗಿದನು.

ಈ ಕಡೆ ರಾಮಾದಿಗಳು ಹುಡುಕುತ್ತ ಬಂದು, ವೈರಿ ಮುಷ್ಟಿಯ ಪ್ರಹಾರದಿಂದ ಜರ್ಜರಿತ ದೇಹದವನು, ರಕ್ತದಿಂದ ತೋಯ್ದ ಅಂಗಾಂಗಗಳಿಂದ ಬಳಲಿದ ಸುಗ್ರೀವನನ್ನು ಕಂಡರು. ಆ ದೀನ ವಾನರನು ಕಣ್ಣೀರು ತುಂಬಿಕೊಂಡು, ನಾಚಿಕೆಯಿಂದ ಬಾಗಿ ನೆಲವನ್ನು ನೋಡುತ್ತಿದ್ದನು. ಸ್ನೇಹಿತನ ಕರುಣ ದುಸ್ಥಿತಿ ಕಂಡು ರಾಮಚಂದ್ರನು ಮರುಗಿದನು. ಆಗ ಸುಗ್ರೀವನು ಅವನನ್ನು ಹೀಗೆ ಪ್ರಶ್ನಿಸಿದನು.

'ಓ ಕರುಣಿಯೆ, ನೀನು ಹೀಗೇಕೆ ನನ್ನನ್ನು ನಂಬಿಸಿ ಕೊಂದೆ! ನೀನೇನಾದರೂ ವಾಲಿಯ ಬೇಹುಗಾರನೊ? ನನ್ನನ್ನು ಕೊಲ್ಲಿಸುವುದಕ್ಕಾಗಿ ಈ ರೀತಿ ಹುಸಿ ಆರ್ಯನೀತಿಯನ್ನು ಏಕೆ ಹೇಳಿದೆ? ವಾಲಿ ದುಸ್ಸಾಧ್ಯನೆಂದು ನಾನು ನಿನಗೆ ಮೊದಲೇ ಹೇಳಿರಲಿಲ್ಲವೆ?'

'ಕ್ಷಮಿಸು, ವಾನರೇಂದ್ರನೆ, ನನ್ನನ್ನು ಕ್ಷಮಿಸು. ನಿಮ್ಮಿಬ್ಬರ ರೂಪಸಾದೃಶ್ಯದಿಂದ ನಿನ್ನನ್ನು ನಿನ್ನ ಅಣ್ಣ ಎಂದು ತಿಳಿದು ನಾನು ಮೋಸ ಹೋದೆನು. ಮತ್ತೆ ಮೋಸ ಹೋಗುವುದಿಲ್ಲ. ಏಳು, ಮತ್ತೆ ಕಿಷ್ಕಿಂಧೆಯತ್ತ ನಡೆಯೋಣ. ಬೇಟೆಯಲ್ಲಿ ಸೋವಿನವರು ಹೇಗೆ ಪೊದೆಗೆ ನುಗ್ಗಿ ಅವುಗಳನ್ನು ಅವುಗಳ ಹಕ್ಕೆಯಿಂದ ಎಬ್ಬಿಸಿ ಹೊರಡಿಸುವರೊ ಹಾಗೆ ನೀನು ವಾಲಿಯನ್ನು ಅವನ ಕೋಟೆಯಿಂದ ಹೊರ ಹೊಮ್ಮುವಂತೆ ಮಾಡು. ಆಗ ನೀನು, ತಕ್ಷಣ ನನ್ನ ಬಾಣದ ಹೊಡೆತಕ್ಕೆ ರಕ್ತಕಾರಿ ಬಿದ್ದು ಸಾಯುವ ಗೃಹವೈರಿಯನ್ನು ಕಾಣುವೆ! ಈ ಹೂಗಳಿಂದ ತುಂಬಿದ ಬಳ್ಳಿಯು ನಿನ್ನ ಕುತ್ತಿಗೆಯಲ್ಲಿ ನಿನ್ನ ಗುರುತಾಗಿ ಇರಲಿ. ನೀನು ಇದನ್ನು ಜಯಮಾಲೆ ಎಂದೇ ತಿಳಿ.'

ಎಂದು ಹೇಳಿ ದಾಶರಥಿಯು ಹೂಗಳಿಂದ ತುಂಬಿದ ಬಳ್ಳಿಯನ್ನು ಅವನಿಗೆ ತೊಡಿಸಿದನು. ಆ ಕಾಡು ಬಳ್ಳಿಯು ಅವನ ಕೊರಳಿನಲ್ಲಿ–ಹಾಲುಗರಿಯ ಬೆಳ್ಳಕ್ಕಿಯು ಸಾಲುಗೊಂಡು ಮಾಲೆಗಟ್ಟಿರುವ ಸಂಜೆಯ ಮುಗಿಲಂತೆ ಕಂಗೊಳಿಸುತ್ತಿತ್ತು!

ಅನಂತರ ಕೇಳು. ಸುಗ್ರೀವನ ಉನ್ಮೀಲನಗೊಂಡ ಉತ್ಸಾಹ ಹೆಚ್ಚುತ್ತಿರಲು ಅವರು ಅವನೊಂದಿಗೆ ಕಿಷ್ಕಿಂಧೆಯತ್ತ ಹೊರಟರು.

ನೆರಪುವೆನ್, ತಾರೆ, ಸುಗ್ರೀವನಂ ತಂದಿಂದು ರುಮೆಗೊಸಗೆಯಂ

ಆ ಕಡೆಗೆ ವಾಲಿಯು ತಮ್ಮನನ್ನು ದ್ವಂದ್ವಯುದ್ಧದಲ್ಲಿ ಗೆದ್ದ ನಂತರ, ಅವನನ್ನು ಬೆನ್ನಟ್ಟಿ ಓಡಿಸಿದ ಸೊಕ್ಕಿನಿಂದ ಕಿಷ್ಕಿಂಧೆಯನ್ನು ಹೊಕ್ಕನು. ಕೊಡಗಿನ ಸೀರೆಯಲ್ಲಿ

ಶೃಂಗಾರಗೊಂಡ ತಾರೆಯು ಅವನ ಗಾಯಗಳಿಗೆ ಮದ್ದನ್ನು ಇಡುತ್ತ, ಬೀಸಣಿಗೆಯಿಂದ ಬೀಸಿದಳು. ತನ್ನ ಮೈಸೋಂಕಿನ ಅಮೃತದಿಂದ ಅವನ ಬಳಲಿಕೆಯನ್ನು ಆರಿಸುತ್ತ ಯುದ್ಧದ ಆಗುಹೋಗುಗಳನ್ನು ಕೇಳಿದಳು. ವಾಲಿಯು ಗೆದ್ದು ಬಂದಿದ್ದರೂ ಖಿನ್ನ ಮುಖಿಯಾಗಿ ಪ್ರಿಯಳಾದ ಸತಿ ಹದಿಬದೆಗೆ ಹೀಗೆ ಹೇಳಿದನು:

'ನೀನು ಹೇಳಿದ ರೀತಿ ರುಮೆಯ ಮುತ್ತೈದೆತನಕ್ಕೆ ಕೇಡಾಗದಂತೆ ಅವನನ್ನು ಬಡಿದು ಓಡಿಸಿ ಬಂದೆ.... ಮನಸ್ಸು ಏಕೊ ಪರಿತಪಿಸುತ್ತಿದೆ. ಕಾರಣವೇನೆಂದು ಅರಿಯೆ.... ಮತ್ತು ತಿಳಿದ ಕಾರಣದಿಂದ ಮನಸ್ಸು ನೋಯುತ್ತಿದೆಯೊ ಏನೊ ಗೊತ್ತಾಗುತ್ತಿಲ್ಲ. ನನ್ನನ್ನು ಗುಹೆಯಲ್ಲಿ ಮುಚ್ಚಿ, ತೊರೆದು ಬಂದನು ಎಂಬ ಆಕ್ರೋಶ ಉಲ್ಬಣಗೊಳ್ಳಲು ಅಂದು ನಾನು ಅವನ ವಿನಯದ ನುಡಿಗೆ ಕಿವುಡನಾದೆ. ಅವನನ್ನು ಹೆತ್ತಮ್ಮನ ಊರಿನಿಂದ ಅವನ ಸ್ನೇಹಿತರೊಡನೆ ಹೊರನೂಕಿದೆ. ರುಮಾದೇವಿಯನ್ನು ಸಿರಿಮನೆಯ ಸೆರೆಯಲ್ಲಿಟ್ಟು ನೋಯಿಸಿದೆ. ನನ್ನ ಹೆಸರಿಗೆ ಕಳಂಕ ಬರುತ್ತದೆಂಬುದನ್ನು ಕಡೆಗಣಿಸಿದೆ. ನಿನ್ನ ಹಿತನುಡಿಗಳನ್ನು ಕೇಳಲಿಲ್ಲ. ಮಾಡಿದ ಅನ್ಯಾಯದ ಕಾರ್ಯಗಳನ್ನು ತಿದ್ದಿಕೊಂಡು ತಮ್ಮನನ್ನು ತಾಯ್ನಾಡಿಗೆ ತರಲು ಒಮ್ಮೊಮ್ಮೆ ಮನಸ್ಸು ಬಯಸಿತು. ಆದರೆ ಹುಸಿ ವೀರತನದ ಒಣನಾಚಿಕೆ ಅದನ್ನು ತಡೆಯಿತು.

'ಜೊತೆಗೆ ಅವನು ಮರುಕವನ್ನು, ಕರುಣೆಯನ್ನು ಮೂಡಿಸುವ ಮಾರ್ಗವನ್ನು ಬಿಟ್ಟು ಮುಯ್ಯಿಗೆ ಮುಯ್ಯಾಗಿ ಕೋಪವನ್ನೇ ಕೆಣಕಿದ. ನನ್ನ ಎದೆಯ ರೋಷಸಾಗರದ ಬಡಬಾಗ್ನಿಯನ್ನು ಕೆದಕಿದ... ಈಗಲೂ ರಾಮನೆಂಬೊಬ್ಬನ ಸಹಾಯವನ್ನು ಪಡೆದು...ನಾನು ಇವನ ಎದೆಯ ಮೇಲೆ ಹತ್ತಿ ಗುದ್ದಿಕ್ಕುವಾಗ ಅವನನ್ನು ಕರೆದ. ಆದರೆ ಆ ವೀರನು ಎಲ್ಲೂ ಕಾಣಿಸಲಿಲ್ಲ...'

ಆ ಮಾತು ಮುಗಿಯುವಷ್ಟರಲ್ಲಿ ಕಿಷ್ಕಿಂಧೆ ನಡುಗುವಂತೆ ಒಂದು ಆರ್ಭಟ ಕೇಳಿಸಿತು! 'ಅದೊ ಮತ್ತೆ ಸುಗ್ರೀವ' ಎಂದು ಹಲ್ಲುಮುಡಿ ಕಚ್ಚಿದನು. ಆನೆಯ ಘೀಂಕಾರವನ್ನು ಆಲಿಸುವ ಮಲಗಿದ್ದ ಸಿಂಹದಂತಾದ ಆ ವಾಲಿಯು ಭಯವನ್ನುಂಟು ಮಾಡುವ ಕಂಗೆಣ್ಣಿನಿಂದ ಹುಬ್ಬುಗಂಟಿಕ್ಕಿ ನೆಗೆದನು. ತಡೆಯಲು ಬಂದ ತಾರೆಯ ಕೈಯನ್ನು ಪಕ್ಕಕ್ಕೆ ತಳ್ಳಿದನು. ಅವಳು ನೆಲದ ಮೇಲೆ ದಿಂಡುರುಳಿ, ಪತಿಯ ಕಾಲನ್ನು ಹಿಡಿದು ಕಂಬನಿಯ ಜೇನು ಇಳಿವ ತಾವರೆ ಚೆಲುವೆ ಹೀಗೆ ಬೇಡಿಕೊಂಡಳು.

'ತಡೆ, ಮನದನ್ನ ತಡೆ. ಛಲಕ್ಕಾಗಿ ಜೀವನದ ಶ್ರೇಯಸ್ಸನ್ನು ಬಲಿ ಕೊಡಬೇಡ. ನೀನು ಈಗ ನನ್ನೊಡನೆ ಹೇಳುತ್ತಿದ್ದ ವೀರ ಔದಾರ್ಯವನ್ನೆ ಹಿಡಿ! ಪತಿವ್ರತಾ ರಮಣಿ ಆ ರುಮಾದೇವಿಯನ್ನು ನೆನೆ. ಹೆತ್ತ ತಾಯಿತಂದೆಯನ್ನು ನೆನೆ. ಅದರ ಜೊತೆಗೆ ನಿಮ್ಮಿಬ್ಬರ ಎಳೆತನದ ಲೀಲೆಯನ್ನು, ತಾರುಣ್ಯದಲ್ಲಿ ತೂಗಾಡಿದ ಉಯ್ಯಾಲೆಯನ್ನು ನೆನೆ. ಹಿಂದೆ ನಿಮ್ಮಲ್ಲಿದ್ದ ಪ್ರೀತಿಯ ಸ್ವರ್ಗವನ್ನು ನೆನೆ.'

ತಾರೆಯು ಹಾಗೆ ಹೇಳುತ್ತಿರಲು ವಾಲಿಯು ಆ ವಚನ ಮಂತ್ರಕ್ಕೆ ಮುಗ್ಧನಾದನು; ಮನಸ್ಸಿಗೆ ಶಾಂತಿಯುಂಟಾಯಿತು. ತಮ್ಮನನ್ನು, ಅಣ್ಣ ಬಾ ಬಾರೆಂದು ಜೊಲ್ಲು ಸುರಿಸುತ್ತ ತೊದಲು ನುಡಿಯಲ್ಲಿ ಚೀರುತ್ತಿದ್ದ ಪುಟ್ಟ ಸುಗ್ರೀವನನ್ನು, ನೋಡುವವರ ಕಣ್ಮಣಿಯಾಗಿದ್ದ ಚಿಣ್ಣನನ್ನು ನೆನೆದನು. ತಾಯಿಯು 'ಕಂದ ಬಾ' ಎಂದು ಕರೆಯುತ್ತಿರಲು, ತಾನು ಪ್ರೀತಿಯಿಂದ ಕಾಣುವ ಕಂದ ಸುಗ್ರೀವನನ್ನು ಉಪ್ಪುಮೂಟೆಯಾಗಿ ಬೆನ್ನಿನಲ್ಲಿ ಹೊತ್ತು, 'ಉಪ್ಪು ಬೇಕೆ ಉಪ್ಪು?' ಎಂದು ಓಡಾಡುತ್ತ ಎಲ್ಲರನ್ನು ನಗಿಸಿದ ಆ ಚಿಕ್ಕಂದಿನ ಒಂದು ಸ್ಮೃತಿ ಚಿತ್ರ ಕಣ್ಮುಂದೆ ಸುಳಿಯಿತು. ಆಗ ಅವನ ರೋಷ ಅಳಿಯಲು ಶಾಂತನಾದನು. ವೈರವನ್ನು ಪಕ್ಕಕ್ಕೆ ಸರಿಸಿದಾಗ ಅವನ ಮನಸ್ಸಿನಲ್ಲಿ ಮೈತ್ರಿ ಸಂಚರಿಸಿತು.

'ತಾರೆಯೆ, ಸುಗ್ರೀವನನ್ನು ತಂದು ರುಮೆಗೆ ಉಡುಗೊರೆಯಾಗಿ ನೀಡುವುದನ್ನು ಇಂದು ಪೂರೈಸುತ್ತೇನೆ. ನಡೆ ನಿನ್ನ ತಂಗಿಯನ್ನು ಶೃಂಗರಿಸು. ಚಿಕ್ಕಂದು ನಾವು ಆಡಿದ ಉಪ್ಪಾಟವನ್ನು ಮತ್ತೆ ಇಂದು ತಮ್ಮನಿಗೆ ತೋರಿಸುತ್ತೇನೆ. ನೀನು ಬೇರೆ ಏನನ್ನೂ ಚಿಂತಿಸದಿರು. ನಾನು ಹೋಗಿ ಕಾಳಗದ ನೆಪದಲ್ಲಿ ರವಿಪುತ್ರನನ್ನು ಹೊತ್ತು ತರುತ್ತೇನೆ.'

ಎಂದು ಹೇಳಿದ ಬೃಹದ್ಬಲಶಾಲಿ ವಾಲಿಯು ಅತಿ ಉಲ್ಲಾಸದಿಂದ ಅಲ್ಲಿಂದ ಹೊರಟನು. ಕಿಷ್ಕಿಂಧೆಯ ಸೂರ್ಯನು ನಡುಹಗಲ ಹೊಸ್ತಿಲನ್ನು ದಾಟಲು, ತರುಗಳ ನೆರಳು ಪೂರ್ವದ ಬೆಟ್ಟಗಳ ಕಡೆಗೆ ಯಾತ್ರೆ ನಡೆಸಿತ್ತು. ಕೋಟೆಯ ಹೆಬ್ಬಾಗಿಲನ್ನು ದಾಟಿ, ಹೊರವಲಯದ ಕಾಡಿಗೆ ಬರುತ್ತಿದ್ದ ಇಂದ್ರಪುತ್ರನು ಕಾಡಿನ ಪುಷ್ಪಲತೆಯ ಹಾರವನ್ನು ಧರಿಸಿದ್ದ ಸುಗ್ರೀವನನ್ನು ಕಂಡನು.

ವೈರವು ವೈರಾಗ್ಯವಾಗಿ ಮಾರ್ಪಟ್ಟಿದ್ದ ಅಣ್ಣ ವಾಲಿಯ ಎದೆಯಲ್ಲಿ ಕರುಣೆ ಉಕ್ಕುತ್ತಿತ್ತು. ಅವನು ತಮ್ಮನನ್ನು ಅಪ್ಪಿಕೊಳ್ಳಲು ಮುನ್ನುಗ್ಗಿದನು. ಅಗ್ರಜನ ಹೃದಯ ಪರಿವರ್ತನೆಯನ್ನು ತಿಳಿಯದ ಸುಗ್ರೀವನು ಅರೆಬಂಡೆಗಳನ್ನು ಅವನತ್ತ ಎಸೆದನು. ವಾಲಿಯು ಅವುಗಳನ್ನು ಅಂಗೈಯ ದಾಂಡಿನಿಂದ ಚೆಂಡನ್ನು ಆಡಿಸುವಂತೆ ಪಕ್ಕಕ್ಕೆ ತಳ್ಳಿದನು. ಮಿಂಚುವೇಗದಿಂದ ಸುಗ್ರೀವನ ಹತ್ತಿರಕ್ಕೆ ಹೋದನು. ಹುಲಿಯನ್ನು ಭೇರುಂಡ ಎತ್ತುವಂತೆ ಕಪಿಮುಷ್ಟಿಯಿಂದ ಅವನನ್ನು ಎತ್ತಿಕೊಂಡು ದೇವಾಸುರರನ್ನು ಮೀರಿದ ದೈತ್ಯ ಬಲಶಾಲಿ ವಾಲಿಯು ಕಿಷ್ಕಿಂಧೆಯತ್ತ ಧಾವಿಸಿದನು.

ಕಣೆಯ ಬಟ್ಟೆಯನೆ ಕೈಕೊಂಡನೆಚ್ಚನ್ ಕಠೋರ ಶರಮೃತ್ಯುವಂ ವಾನರನ ಬೆನ್ಗೆ!

ತನ್ನ ಅಹಂಕಾರವನ್ನು ಸ್ವಂತ ಬಲವನ್ನು ಸ್ವಾರ್ಥವನ್ನು ನಂಬಿ ದೈವವನ್ನು ನಿರ್ಲಕ್ಷಿಸುತ್ತ, ದೈವೀಪರವಾದ ಶಕ್ತಿಯನ್ನು ಪ್ರತಿಭಟಿಸುವ ಛಲದಿಂದ ವಿರೋಧಿಸುವವನು ವಾಲಿ. ಅವನದು ಅಸುರ ಸಾಧನೆಯ ವೈರಭಾವವನ್ನು ಹೊಂದಿದ, ದೈವೀ ವಿಮುಖವಾದ ಲೌಕಿಕ ಪರಾಕ್ರಮ. ಅಂತಹವನನ್ನು ಶಿಕ್ಷಿಸುವ ರಾಮನ ಕೃಪಾ ಬಾಣಕ್ಕೆ ಬೆನ್ನು ಅಲ್ಲದೆ ಬೇರೆ ಗುರಿಯಿದೆಯೆ?

ಸನ್ಮಿತ್ರನನ್ನು ಹೊತ್ತುಕೊಂಡು ಹೋಗುವ ವಾಲಿಯನ್ನು ಕಂಡು ರಾಮನು 'ಹಾ ಕೈ ಮೀರಿತಲ್ಲ' ಎಂದು ದಿಗ್ಭ್ರಮೆಗೊಳಗಾಗಿ ಮುಂದಾಲೋಚನೆ ಮಾಡದಾದನು. ಬೇರೆ ದಾರಿಯನ್ನು ಕಾಣದೆ ಅಯ್ಯೋ, ರಘುಕುಲದ ಶುಭ್ರಕೀರ್ತಿಯ ರಾಮಚಂದ್ರನು ಬಾಣದ ಮಾರ್ಗವನ್ನು ಕೈಕೊಂಡನು. ಕಠೋರ ಶರಮೃತ್ಯುವಿನ ಬಾಣವನ್ನು ವಾಲಿಯ ಬೆನ್ನಿಗೆ ಬಿಟ್ಟನು! ಐರಾವತವು ಕಲ್ಪವೃಕ್ಷದ ಸಮೇತ ನೆಲಕ್ಕೆ ಬೀಳುವಂತೆ ವಾಲಿಯು ಬಿದ್ದನು!

ಬೇಟೆಗೆ ಉಪಯೋಗಿಸಲು ಪಳಗಿಸಿದ್ದು ದೀವದ ಹೋರಿ. ಅದನ್ನು ಬೇಟೆಗಾಗಿ ಕಟ್ಟಿ ಅನಂತರ ಮರದ ತುದಿಯ ಮಂಚಿಕೆಯ ಮೇಲೆ, ಆಹುತಿಯಾಗುವ ಪ್ರಾಣಿ (ಸೋವತ) ಬರುವುದನ್ನು ಕಾಯುತ್ತ ಕುಳಿತಿರುತ್ತಾರೆ. ಆಗ ಹಸಿದ ಹುಲಿ ಬರುತ್ತದೆ. ಅದು ಮುಂದೆ ತನಗೆ ಆಹಾರವಾಗಲು ಕೊಬ್ಬಿನಿಂತಿರುವ ಹೋರಿಯನ್ನು ಕಂಡು ಅದನ್ನು ಪಡೆಯುವ ಸಂಭ್ರಮದಿಂದ ಹೊಂಚಿ ಮುಂದುವರಿಯುತ್ತಿರುತ್ತದೆ. ಆಗ ಕೋವಿಯ ಈಡು ಸಿಡಿಯುತ್ತದೆ. ಗುಂಡು ಮರ್ಮಕ್ಕೆ ತಗುಲಲು, ಅದರ ಹೊಡೆತಕ್ಕೆ ಆ ಜೀವಿ ಮೈಮರೆತು ಉರುಳಿ ಬೀಳುತ್ತದೆ. ಆಗ ಬೇಟೆಗಾರನು ಮರಸಿನಿಂದ ಇಳಿದು ಬಂದು ತನ್ನ ಬೇಟೆಯನ್ನು ಸಂತೋಷದಿಂದ ನೋಡುತ್ತಾನೆ! ತನ್ನ ವೀರತನದ ಬೆನ್ನನ್ನು ತಾನೆ ಚಪ್ಪರಿಸಿಕೊಂಡು ಮೆಚ್ಚಿಕೊಳ್ಳುತ್ತಾನೆ!

ಹಾಗೆ ರಾಮಾದಿಗಳು ಬಿದ್ದ ಇಂದ್ರಪುತ್ರನ ಹತ್ತಿರಕ್ಕೆ ಓಡಿದರು. ಸುಗ್ರೀವನನ್ನು ಎತ್ತಿ ಉಫೇ ಎಂದು ಅಪ್ಪಿಕೊಂಡರು. ಆ ಸಂಭ್ರಮವು ತಗ್ಗಲು, ಶಕ್ತಿಗುಂದಿ ಕುಸಿದು ರಕ್ತವನ್ನು ಕಾರುತ್ತ ಅದರ ಕೆಸರಲ್ಲಿ ತಾನು ಆಳಿದ ಇಳೆಗೆ ಬಿದ್ದ ಇಂದ್ರನ ಮಗ ವಾಲಿಯನ್ನು ನೋಡಿದರು. ನೋಡುತ್ತ ನೋಡುತ್ತ ಅಲ್ಲಿದ್ದವರಿಗೆ ವಿಷಾದವುಂಟಾಯಿತು. ಹಿರಿದಾದುದು ಅಳಿದಾಗ ಹಗೆಯಾದರೇನು ಹಿರಿತನಕ್ಕೆ ನೋವಾಗದಿರುತ್ತದೆಯೆ?

ತಾನು ಆ ಹೊತ್ತಿನವರೆಗೆ ಯಾರ ಬಗ್ಗೆ ದೂರದಿಂದ ಕೇಳಿದ್ದನೊ ಮತ್ತು ದೂರದಿಂದಲ್ಲದೆ ಕಂಡಿರಲಿಲ್ಲವೊ ಆ ವೀರನ ಶರೀರದ ಬಳಿ ಸೀತಾಸ್ವಾಮಿ ನಿಂತನು. ತನ್ನ ಬಿಲ್ಲಿನ ಪರಿಣಿತಿಯನ್ನು ತನ್ನೊಳಗೆ ತಾನು ಬಯ್ದುಕೊಂಡು ನಿಟ್ಟುಸಿರು ಬಿಟ್ಟನು.

ತನ್ನವಸರದ ಮೋಹಕುರುವರನ ಬೇಳ್ವ ಕಣ್ಗೇಡಿ, ಹೆಂಬೇಡಿ ನೀಂ!

ತಣ್ಣನೆ ಬೀಸುತ್ತಿರುವ ಮಲೆಯ ಗಾಳಿಗೆ ವಾಲಿಯು, ಚೇತನ ಗವಾಕ್ಷವನ್ನು ತೆರೆದಂತೆ ಕಣ್ಣನ್ನು ಬಿಟ್ಟನು. ಸುತ್ತಲೂ ಸೇರಿದ್ದ ಎಲ್ಲರನ್ನು ಗುರುತಿಸುವವನಂತೆ ನೋಡುತ್ತ,

'ಏನು ಮಾಡಿದೆ ಸುಗ್ರೀವ! ಮುದ್ದಾಡಲೆಂದು ಬಂದ ಪ್ರೀತಿಯ ತೋಳುಗಳನ್ನು ಕತ್ತರಿಸಿದೆಯಲ್ಲ! ಆಃ ಬೆನ್ನಿಗೆ ಬಾಣವನ್ನು ಬಿಟ್ಟ ಆ ನಿನ್ನ ಶೂರ ರಾಮನನ್ನು, ಆ ವೀರನನ್ನು ನನಗೆ ತೋರಿಸು... ಎಲವೊ ವೀರ ವೇಷಿ ನೀನು ಯಾರೊ? ಬಿಲ್ಲು

ಹಿಡಿದಿರುವೆ; ನೀನೇ ರಾಮನೆಂಬುದು ಖಚಿತ! ವೀರ ಕ್ಷತ್ರಿಯರಾಜನಾಗಿಯೂ ಕೀಳುತನಕ್ಕೇಕೆ ಕೈಹಾಕಿದೆ! ಹೆತ್ತೂರಿನ ಕಡೆಗೆ ತಮ್ಮನನ್ನು ಹೊತ್ತುಕೊಂಡು ಹೋಗುವ ಅಣ್ಣನ ಬೆನ್ನಿಗೆ ಹೇಡಿಯಂತೆ ಬಾಣ ಬಿಟ್ಟೇಕೆ ಕೊಂದೆ!'

'ತಾರೆಯ ಬಾಳಿಗೆ, ಎದೆಮುಟ್ಟಿ ನಿನ್ನನ್ನು ಹೊಗಳುತ್ತಿದ್ದವಳ ಬಾಳಿಗೆ, ಹಾ ಕಿಚ್ಚಿಟ್ಟೆ! ನಿನ್ನ ವೀರತನಕ್ಕೆ ಧಿಕ್ಕಾರ! ನಿನ್ನ ಅರಸು ಕೀರ್ತಿಗೆ ಧಿಕ್ಕಾರ! ನೀನು ಹೇಡಿಯಂತೆ ಅವಿತುಕೊಂಡು ದೂರದಿಂದ ಉಗ್ರಬಾಣವನ್ನು ಬಿಟ್ಟು ಬದುಕಿದೆ! ಈ ಮೂರು ಲೋಕಗಳಲ್ಲಿ ವಾಲಿಯನ್ನು ಕೆದಕಿ ಬದುಕಿದವರು ಯಾರಿರುವರು!

'ತನಗೆ ಎದುರಾಗಿರುವ ಸಂದರ್ಭ ಮೋಹದ ಆಕಾಂಕ್ಷೆಗಾಗಿ ಶ್ರೇಷ್ಠನಾದವನನ್ನು ಬೇಟೆಯಾಡುವಂತಹ ಕುರುಡ ಹೆಂಬೇಡಿ ನೀನು! ಚಿಃ ಸುಡಲಿ ನಿನ್ನ ಈ ಹೊಲೆತನದ ಕೊಲೆಯ ಬಾಳನ್ನು!'

ಎಂದು ವಾಲಿಯು ಹೇಳಿದನು. ಆ ವೀರನ ಬೆನ್ನಿನಲ್ಲಿ ನಾಟಿಕೊಂಡಿದ್ದ ಬಾಣ, ಸುರಿಯುತ್ತಿರುವ ರಕ್ತ, ಸಾವಿನಕಡೆ ಮುಖಮಾಡಿದ ಉಸಿರ ನಡುಕುದನಿ ಎಲ್ಲವೂ ಅವನ ಕಡೆ ನಿಂತು ವಾದಿಸುತ್ತಿದ್ದವು; ರಾಮನನ್ನು ನಿಂದಿಸುತ್ತಿದ್ದವು. ಆಗ ರಾಮಚಂದ್ರನು ಗದ್ಗದಿಸುತ್ತ 'ಸುಗ್ರೀವನ ಅಗ್ರಜನೇ, ವಿಧಿಯ ವಿನ್ಯಾಸವನ್ನು ನಿಂದಿಸಿದರೆ ಏನು ಫಲ?' ಎಂದು ಪ್ರಶ್ನಿಸಿದನು.

ಅದನ್ನು ಕೇಳಿದ ವಾಲಿಯು ಕೊಂಕುನಗೆಯಿಂದ ಮರು ಪ್ರಶ್ನಿಸಿದನು: 'ನಿನ್ನ ಮಡದಿಯನ್ನು ಅಸುರನು ಒಯ್ದದ್ದು ವಿಧಿಲೀಲೆ! ಮತ್ತೆ, ನೀನೇಕೆ ಪರಿತಪಿಸುತ್ತಿರುವೆ?'

'ನನ್ನ ವಿಧಿ ನನಗೆ, ರಾಕ್ಷಸನ ವಿಧಿ ರಾಕ್ಷಸನಿಗೆ, ಕೇಳು, ನಿನ್ನಂತೆ ಪತಿವ್ರತೆಯರನ್ನು ಹಾಳುಮಾಡಿದ ಅಸುರನು ನಾಶವಾಗುವನು.'

'ಸುಳ್ಳು! ಸುಳ್ಳು! ಸುಳ್ಳು!' ಎಂದು ಆ ಮಹಾವಾನರನು ಕಿವಿ ಮುಚ್ಚಿಕೊಂಡು, ಮಾತು ಮುಂದುವರಿಸಿ ಹೇಳಿದನು: 'ನನಗೆ ರುಮೆ ಮಗಳು! ತಾರೆಯೇ ಅದಕ್ಕೆ ಸಾಕ್ಷಿ! ಹೇಡಿತನಕ್ಕೆ ಆ ಸುಳ್ಳು ನಿಂದನೆಯ ಬೆಸುಗೆ ಏತಕ್ಕೊ?'

'ಒಡಹುಟ್ಟಿದ ನಿರ್ದೋಷಿಯಾದ ತಮ್ಮನು ವಿನಯದಿಂದ ಬೇಡಿಕೊಂಡರೂ ಅವನನ್ನು, ಅವನ ಗೆಳೆಯರನ್ನು ತಾಯಿನಾಡಿನಿಂದ ಹೊರಕ್ಕೆ ಅಟ್ಟಿದೆಯಲ್ಲವೆ? ಆ ಕೇಡಿಗಾಗಿ ಈ ಶಿಕ್ಷೆ!'

'ದುಷ್ಟ ಶಿಕ್ಷಣೆಗೆ ತಡವಾಗಿ ಬಂದೆ! ನಾನೀಗ ಆ ಕೋಪಿಯೂ ಅಲ್ಲ, ಪಾಪಿಯೂ ಅಲ್ಲ. ನಾನು ಪ್ರೀತಿ ಪಶ್ಚಾತ್ತಾಪದಿಂದ, ಭ್ರಾತೃ ಮೈತ್ರಿಯಿಂದ ಶುದ್ಧನು, ನಿರ್ವೈರನು ಆಗಿರುವೆ... ಹೇಡಿತನದಿಂದ ಅವಿತುಕೊಂಡು ಕೊಂದೆ ಎಂದು ಹೇಳಿದೆನು; ನನಗೆ ಬೇರೆ ಹಗೆತನವಿಲ್ಲ.'

ವಾಲಿಯ ಮುಖದ ಸತ್ತ್ವದಿಂದ ಹೊಮ್ಮಿದ ಆ ನುಡಿಯ ಸತ್ಯವನ್ನು ಶಂಕಿಸದೆ ದಾಶರಥಿಯು ಸುಗ್ರೀವನ ಕಡೆಗೆ ತಿರುಗಿದನು. ಕಣ್ಣೀರಿನಿಂದ ಕಳೆಗುಂದಿದ ಮುಖದ ಅವನು ನೆಲವನ್ನು ದಿಟ್ಟಿಸುತ್ತ 'ಈತನ ಮನದ ಹೊಸಭಾವವು ನನಗೆ ತಿಳಿದಿರಲಿಲ್ಲ.' ಎಂದು ಹೇಳಿದನು. ಆಗ ಜಾಂಬವಂತನು,

'ನನಗೆ ತಿಳಿದಿದೆ, ಇಂದ್ರಪುತ್ರನ ನಾಲಗೆ ಎಂದಿಗೂ ಸುಳ್ಳನ್ನು ಹೇಳುವುದಿಲ್ಲ.'

ಎಂದು ನುಡಿದಾಗ ಮಾರುತಿಯು 'ಇಂದ್ರಪುತ್ರನು ವಕ್ರವಿಧಿಗೆ ಆಹುತಿಯಾದ' ಎಂದು ಹೇಳುತ್ತ ಬಾಗಿ ವಾಲಿಯನ್ನು ಎತ್ತಿ ಸಮತಲದ ಹುಲ್ಲಿನ ಹಾಸಿಗೆಯ ಮೇಲೆ ಮಲಗಿಸಿದನು. ಆಗ ಲಕ್ಷ್ಮಣನು ತನ್ನ ತೋಳನ್ನು ವಾಲಿಗೆ ತಲೆ ದಿಂಬಾಗಿಸಿದನು. ರಾಮಚಂದ್ರನು ಕಂಬನಿ ತುಂಬಿ ಗದ್ಗದಿಸುತ್ತ ಧನುರ್ಬಾಣ ಮತ್ತು ಬತ್ತಳಿಕೆಯನ್ನು ಪಕ್ಕಕ್ಕೆ ಎಸೆದು, ನೆಲಕ್ಕೆ ಕುಸಿದು ವಾಲಿಯ ಮೈಗೆ ಸೋಕುವಂತೆ ಕುಳಿತುಕೊಂಡು ಹೇಳಿದನು:

'ಮನ್ನಿಸೆನ್ನಂ, ಮಹಾವೀರ!

'ಮಹಾವೀರನೆ, ನನ್ನನು ಕ್ಷಮಿಸು! ಅಯ್ಯೊ, ಬ್ರಹ್ಮ ನೀಡಿದ್ದ ವರದ ಬಲೆಗೆ ಸಿಕ್ಕಿ ನಾನು ತಪ್ಪು ಮಾಡಿದೆ. ಆ ವರವೇ ನಿನಗೆ ಶಾಪವಾಯಿತು! ಆ ಮರದ ಮರೆಯಲ್ಲಿ ಅವಿತುಕೊಂಡೆ. ಮಾಡಿದ ತಪ್ಪನ್ನು ಒಪ್ಪಿಕೊಳ್ಳುವುದೇ ಲೌಕಿಕ ವೀರದ ಉತ್ತಮ ಲಕ್ಷಣ! ಅಯ್ಯೊ ಸೀತೆಯನ್ನು ಅಗಲಿ ಹಗಲಿರುಳು ಹೊಗೆಯಾಡುತ್ತಿದ್ದ ನನ್ನ ಮನಸ್ಸಿನ ಕನ್ನಡಿಗೆ ಮಂಕು ಕವಿದಿತ್ತು. ಕಪಿಕುಲ ಲಲಾಮನೆ, ಶೀಘ್ರವಾಗಿ ಕೆಲಸ ಸಾಧಿಸಬೇಕೆಂದು ಐಹಿಕದ ಕೀರ್ತಿಯನ್ನು ಧರ್ಮವನ್ನು ಮತ್ತು ನಿನ್ನನ್ನು ಆಹುತಿಗೊಟ್ಟೆ!'

ವಾನರೇಂದ್ರನು ಹತ್ತಿರ ಕುಳಿತು ರೋದಿಸುವ ರಾಮನನ್ನು ಕಣ್‌ನೆಟ್ಟು ನೋಡಿದನು. ಮೃತ್ಯು ಮುಖವಾದ ಜೀವಕ್ಕೆ ಸತ್ಯವು ಹತ್ತಿರವಾಗುತ್ತದೇನೊ ಎಂಬಂತೆ ನೋವಿನ ನಡುವೆ ನಗೆಯನ್ನು ಅರಳಿಸುತ್ತ ಹೀಗೆ ನುಡಿದನು:

'ನಿನ್ನ ಮಹಾತ್ಯಾಗವನ್ನು ಮತ್ತು ಧೈರ್ಯವನ್ನು ಕೇಳಿದ್ದೆ. ಅದನ್ನು ಇಂದು ಕಣ್ಣಾರೆ ಕಾಣುವ ಪುಣ್ಯ ಒದಗಿದೆ. ನೀನು ನಿಜವಾಗಿ ಸತ್ಯವ್ರತ. ಇಲ್ಲದಿದ್ದರೆ, ಸೋತು ಉರುಳಿದವರಿಗೆ ತಪ್ಪನ್ನು ಒಪ್ಪಿಕೊಳ್ಳುವವರು ಇರುವರೆ? ನನ್ನ ಹೃದಯದಲ್ಲಿಆದ ಪರಿವರ್ತನೆಯನ್ನು ನೀವು ತಿಳಿಯದೆ ಹೀಗಾಯಿತು. ತಪ್ಪು ನಿನ್ನದೊಬ್ಬನದೇ ಅಲ್ಲ.. ನೀನು ಹೇಳಿದ ರೀತಿ ವಿಧಿಯ ವಿನ್ಯಾಸವೇ ಬೇರೆಯಾಗಿರುವುದೊ ಏನೊ? ನನ್ನ ಸ್ನೇಹದಿಂದ ನಿನ್ನ ಮತ್ತು ಸುಗ್ರೀವನ ಬಯಕೆಯು ಒಮ್ಮೆಗೇ ಕೈಗೂಡುತ್ತಿತ್ತು.... ನೀವಿಬ್ಬರು ಬಳಲಿ ಸಾಧಿಸುವ ಕೆಲಸವನ್ನು ನಾನು ಒಂದು ಲೀಲೆಯಂತೆ ಸಾಧಿಸುತ್ತಿದ್ದೆನು.... ಆದರೆ ವಿಧಿಯ ರೀತಿ ಬೇರೆಯಾಗಿದೆ! ಕಳೆದು ಹೋದುದಕ್ಕೆ ಕೊರಗುವುದೇತಕೆ?'

ಎಂದು ಹೇಳುತ್ತ ಹೇಳುತ್ತ ಕಪಿಲೇಶನಿಗೆ ಉಬ್ಬಸವುಂಟಾಗಿ ಮೇಲುಸಿರು ಬರುವಂತಾಯಿತು. ಸುಗ್ರೀವನು ತನ್ನ ಅಣ್ಣನ ಅಡಿಗೆ ಹಣೆಚಾಚಿ ಅಳತೊಡಗಿದನು. ನಳನು ವನದ ಬೆಟ್ಟದ ಹೊಳೆಯ ನೀರನ್ನು ಬೊಗಸೆಯಲ್ಲಿ ತಂದು ವಾಲಿಯ ಬಾಯಿಗೆ ಹಿಡಿದು ಕುಡಿಸಿದನು. ಎಲೆಯಿಂದ ಗಾಳಿ ಬೀಸಿದನು.

ಮರುಗಿದ ಎದೆಯ ರಾಘವೇಂದ್ರನು ಬೆವರಾಡಿದ ಬಿಸಿಹಣೆಯಲ್ಲಿ ತೋಯ್ದು ಅಂಟಿದ ಕೂದಲನ್ನು ಮೆಲ್ಲನೆ ಸರಿಸಿ ಸಂತೈಸಿದನು.... ಮತ್ತೆ ಆ ವಾನರ ವೀರನು ಮೃದುವಾಗಿ ಕಣ್ದೆರೆದು ಶೂನ್ಯವನ್ನು ನೋಡುವಂತೆ ಕೇಳಿದನು:

'ತಾರೆ ಮತ್ತು ಅಂಗದರಿಗೆ ಈ ವಾರ್ತೆ ಮುಟ್ಟಿದೆಯೆ? ಕಣ್ ಬೆಳಕು ಆರುವ ಮೊದಲು ನನ್ನ ಬಾಳಿನ ಬೆಳಕನ್ನು ಈಕ್ಷಿಸುವ ಬಯಕೆ!'

ಆ ನುಡಿಗೆ ವಾಯುಪುತ್ರ ಆಂಜನೇಯನು 'ಆಗಲೆ ಸುದ್ದಿ ಹೋಗಿದೆ,' ಎಂದು ಉತ್ತರಿಸಲು, ಅವನ ಕಣ್ಣಿಗೆ ತನ್ನ ನೋಟವನ್ನು ಹೊಂದಿಸಿ ನೋಡುತ್ತ, 'ನೀನು ಆಂಜನೇಯನಲ್ಲವೆ?' ಎಂದು ಇಂದ್ರಪುತ್ರನು ಆಡಿದ ಕಣ್ಣ ಸಂದೇಹವನ್ನು ಕಂಡು,

'ಅಹುದು, ನಿಮ್ಮ ಅಪ್ಪಣೆ ಏನು ತಿಳಿಸಿರಿ' ಎಂದು ಕೇಳಲು, ವಾಲಿಯು ನುಡಿದನು:

'ಮಗು ಅಂಗದನ.... ಸುಗ್ರೀವನೆಲ್ಲಿ?'

ತಕ್ಷಣ 'ಇಲ್ಲಿರುವೆನು ಆರ್ಯ' ಎಂದು ಅಳುತ್ತಳುತ್ತ ಕಣ್ಣಿಗೆ ಎದುರಾದ ತಮ್ಮನನ್ನು ನಿರ್ವೈರ ದೃಷ್ಟಿಯಿಂದ ಪ್ರೀತಿಯುಕ್ಕುವ ರೀತಿಯಲ್ಲಿ ನೋಡುತ್ತ,

'ತಮ್ಮ, ದುಃಖವನ್ನು ಬಿಡು. ವಾನರ ಕುಲದ ಯಶಸ್ಸು ಈ ಭೂಮಂಡಲದಲ್ಲಿ ಹಬ್ಬಿ ತಬ್ಬುವ ರೀತಿಯಲ್ಲಿ ನೀನು ಈತನಿಗೆ ನೆರವಾಗು. ನಮ್ಮ ಅತಿಥಿ ಆರ್ಯನಿಗೆ.... ಏನಿದು ಧ್ವನಿ? ಸಗ್ಗದ ಇಂಚರವು ಇಳೆಗೆ ದುಮ್ಮಿಕ್ಕುತ್ತಿದೆ?'

'ಅಯ್ಯೊ, ಅಣ್ಣ ಆ ರೋದಿಸುವ ಕಿಷ್ಕಿಂಧೆ ಬಳಿಗೆ ಬರುತ್ತಿದೆ!'

'ಏನೆಂದೆ? ಅಹುದಹುದು ಬಳಿಬರುತ್ತಿದೆ ಸಂಧ್ಯೆ! ಮಲೆಯ ಮೇಲೆ ಎಷ್ಟು ಸುಂದರ ಸಂಧ್ಯೆ ಹಬ್ಬುತ್ತಿದೆ! ಅಃ ನನ್ನ ಕಿಷ್ಕಿಂಧೆ!.... ತಾಯಿ ತಂದೆಯರ ನಾಡೆ! ತಾಯಿನುಡಿಯ ಮಲೆಗುಡಿಯ ಬೆಟ್ಟದಡವಿಯ ಬೀಡೆ! ಹುಟ್ಟುವಾಗ ತಾಯಿಯ ಗರ್ಭ ನೀನಾದೆ. ಪುನಃ ಪ್ರೀತಿಯ ತೊಟ್ಟಿಲಾದೆ, ಜೋಗುಳವಾದೆ ಎಳೆಯನಿಗೆ, ತಾರುಣ್ಯಕ್ಕೆ ಉಯ್ಯಾಲೆಯಾದೆ. ಯೌವನಕ್ಕೆ ಹೆಣ್ಣಿನ ಒಲ್ಮೆಯಾದೆ. ಓ ತಾಯಿ, ಮುಪ್ಪಿಗೆ ಧರ್ಮದ ಆಶ್ರಯವಾಗಿ, ಕೊನೆಯಲ್ಲಿ ಶಾಂತಿಯ ಆಗರವಾಗುತ್ತಿದ್ದ ನಿನ್ನನ್ನು ತೊರೆಯುತ್ತಿರುವೆನು. ಕ್ಷಮಿಸು, ತಾಯಿ!

'ಸೊಬಗಿನ ನೆಲೆಗಳಾದ ನಿನ್ನ ಮಲೆತು ಉಕ್ಕಿ ತಲೆಯೆತ್ತಿ ಮುಗಿಲಿನಲ್ಲಿ ಅಲೆದಾಡುವ ಸಾಲು ಮಲೆಯ ಸಗ್ಗದೊಳಗೆ ಈ ವಾಲಿ ಇನ್ನು ಓಡಾಡುವುದಿಲ್ಲ. ಚೆಲುವು ಚಿಪ್ಪೊಡೆದಂತೆ

ಮುತ್ತುನೀರು ಬೆಳ್ಳನೆಹೊಳೆಯುವ ಜಲಪಾತದಲ್ಲಿ ಇನ್ನು ದುಮುಕಿ ಮೀಯಲಾಗದು ಈ ವಾಲಿಯ ಮೈ. ಈ ತೋಳುಗಳ ಆಟಕ್ಕೆ ಹಣ್ಣು ಹೊತ್ತ ನಿನ್ನ ಕಾಡಿನ ಹೆಮ್ಮರಗಳು ಇನ್ನು ಬಾಗಿ ತೂಗುವುದಿಲ್ಲ, ತೊನೆಯುವುದಿಲ್ಲ, ಮುರಿಯುವುದಿಲ್ಲ. ನಿನ್ನ ಅಗಲ ಆಗಸದ ಮೋಡಮಾಲೆಯ ಚಂದದ ಅಂದವನ್ನು ಈ ವಾಲಿಯ ಕಣ್ಣಾಲಿ ನೋಡುವುದಿಲ್ಲ!....

'ಸುಗ್ರೀವ ನಿನಗೆ ಈಜು ಕಲಿಸುವಾಗ ನೀನು ಪಂಪಾ ಸಾಗರದಲ್ಲಿ ಮುಳುಗಲು, ನಾನು ಮುಳುಗಿ ಮೇಲೆತ್ತಿದ ಆ ಪುಣ್ಯದ ಸೊಗಸು ನನಗೀಗ ಅರಿವಾಗುತ್ತಿದೆ! ಆಂಜನೇಯ, ಆ ಮರಕೋತಿ ಆಟವನ್ನು, ಚಿಣ್ಣಿಕೋಲಾಟವನ್ನು ಮರತೆಯೇನು? ಮರೆಯದಿರು. ಬಾಳಿನ ಅಂಚಿನಲ್ಲಿ ನಿಂತು ಈ ಸತ್ಯವನ್ನು ಹೇಳುತ್ತಿದ್ದೇನೆ; ಆ ಜಳ್ಳೆ ಗಟ್ಟಿ; ನಾವು ಗಟ್ಟಿಯೆಂದು ತಿಳಿದುದೆಲ್ಲ ಜಳ್ಳು, ಬರಿಜಳ್ಳು!... ಸಾವುಗಾಳಿ ತೂರಲು ಅದು ಅರಿವಾಗುತ್ತಿದೆ!'

ಸತಿ, ತಾರೆ, ಚಿತೆಯೇರಿದಳ್ ಪತಿಯಾತ್ಮಮಂ ಸೇರೆ, ಸದ್ಗತಿಗೆ ಸೈಪು ಜತೆವೋಪವೋಲ್.

ಎಂದು ಹೇಳಿ ವಾಲಿಯು ಕಣ್ಣು ಮುಚ್ಚುತ್ತಿರಲು, ತಾರೆಯು ಅಂಗದ ಕುಮಾರನೊಡನೆ ಅಲ್ಲಿಗೆ ಬಂದಳು. ಪತಿಅಳಿದ ಸತಿಯ ರೋದನ, ತಂದೆ ತೀರಿಹೋಗಿರುವ ಸುತನ ರೋದನ, ಆಳಿದ ಸ್ವಾಮಿ ಗತಿಸಿರಲು ಪರಿಜನರ ಹೃದಯವಿದ್ರಾವಕ ಶೋಕ, ಪ್ರಾಣಮಿತ್ರ ಸತ್ತಾಗ ಸ್ನೇಹದ ಅತಿದಾರುಣ ಸಂಕಟ, ಕೀರ್ತಿಪಡೆದ ಹಿರಿದಾದುದು ಯಾವುದೇ ಅಳಿಯಲು ದುಃಖಿಸುವ ಸಾಮಾನ್ಯ ಜನರ ಉದ್ವೇಗ – ಇವೆಲ್ಲ ಸಾವು ತಿಳಿದ ಲೋಕಕ್ಕೆ ಹೊಸತಾಗುತ್ತದೆಯೆ? ಆ ಗೋಳನ್ನು ಏನೆಂದು ವರ್ಣಿಸುವುದು? ಸಾಮಾನ್ಯವಾದುದನ್ನು ತಿಳಿಯಲು ಅಪ್ರಯೋಜಕ ವರ್ಣನೆ ಬೇಕೆ? ಸಾಮಾನ್ಯಕ್ಕಿಂತ ಮಿಗಿಲಾದ ರಸವಿದೆಯೆ?

ತಾರೆಯು ಮಗ ಅಂಗದನನ್ನು ರುಮೆಯ ಕೈಗೆ ಒಪ್ಪಿಸಿದಳು. ಕನಿಕರಗೊಂಡು ಮೈದುನನ ಮುಖ ನೋಡುತ್ತ ಕರುಣೆಯನ್ನು ಬೇಡಿದಳು. ಮುಂದಕ್ಕೆ ಒಳಿತು ಉಂಟಾಗುತ್ತದೆಂದು ಹರಸಿದಳು. ಇಂದು ಆಗಿರುವುದು ವಿಧಿವಿಲಾಸವೆಂದು ರಾಮನ ಮನಸ್ಸಿಗೆ ಶಾಂತಿಯುಂಟಾಗುವಂತೆ ಸಂತೈಸಿದಳು. ರಾಮನ ಮನದ ಮಹಿಮೆಯನ್ನು ಹೊಗಳಿ ಕೊಂಡಾಡಿದಳು. ರಾಕ್ಷಸನು ಹೊತ್ತೊಯ್ದ ರಾಮನ ಸತಿಯನ್ನು ನೆನೆದು ಮರುಗಿದಳು. ಬೇಗ ಆಕೆಯ ಸಹಾಯಕ್ಕೆ ಹೋಗಬೇಕೆಂದು ಅಲ್ಲಿರುವ ಎಲ್ಲರಿಗೂ ಹೇಳಿದಳು. ಪುನಃ ಪುತ್ರ ಅಂಗದನ ಮೈಯನ್ನು ಅಪ್ಪಿಕೊಂಡು ಅವನನ್ನು ರಾಮ ಸೇವೆಗೆ ಅರ್ಪಿಸಿದಳು. ತಂದೆಯ ಯಶಸ್ಸಿಗೆ ಕುಂದಾಗದಂತೆ ನಡೆದುಕೊಳ್ಳುವಂತೆ ತಿಳಿಸಿ, ಆಶೀರ್ವಾದ ಮಾಡಿದಳು.

ಎಲ್ಲರಿಂದ ಬೀಳ್ಕೊಂಡ ಸತಿ ತಾರೆಯು ಪತಿಯ ಆತ್ಮವನ್ನು ಸೇರಲು–ಪುಣ್ಯವು ಸದ್ಗತಿಯ ಜೊತೆ ಸೇರಿ ಹೋಗುವಂತೆ ಚಿತೆ ಏರಿದಳು. ಬಾಳಿನ ಕಹಿಯ ನೋವು ಸಾವುಗಳ ಉರಿಗೆ ಕಪ್ಪು ಕಳೆದುಕೊಳ್ಳಲು–ಬಿಳಿಯ ನೆನಪು ಹಿಂದೆ ಉಳಿಯುವಂತೆ– ಆ ದಂಪತಿಗಳ ಚಿತೆಯ ಬೂದಿಯು ಪ್ರಕಾಶಿಸುತ್ತಿತ್ತು.

❑



~~~~~~~~~~~~~~~~~~~~~~ ಸಂಚಿಕೆ – ೭ ~~~~~~~~~~~~~~~~~~~~~~

ಸಂಸ್ಕೃತಿ ಲಂಕಾ

ರಘುರಾಮನು ಇತ್ತ ಸುಗ್ರೀವನಿಗೆ ಕಿಷ್ಕಿಂಧೆಯನ್ನು ಕೊಟ್ಟನು. ವನವಾಸವ್ರತವನ್ನು ಬಿಡದೆ ಲಕ್ಷ್ಮಣನೊಡನೆ ಹತ್ತಿರದ ಮಾಲ್ಯವಂತ ಪರ್ವತದ ಗುಹಾಗ್ರೃದಲ್ಲಿದ್ದು, ಮಳೆಗಾಲ ಮುಗಿಯುವುದನ್ನು ಎದುರು ನೋಡುತ್ತಿದ್ದನು. ವಾಲಿಯ ಕೊಲೆಯ ಮೈಲಿಗೆಗೆ ತಪಸ್ಸನ್ನು ಕೈಗೊಳ್ಳುವಂತೆ ಸೀತಾ ವಿರಹ ಚಿಂತೆಯು ಅವನ ಆತ್ಮವನ್ನು ಧಗಿಸುತ್ತಿತ್ತು.

ಹತ್ತು ತಲೆಯ ಬಿರುದು ಪಡೆದವನು ಅತ್ತ ಮೂರ್ಛೆಹೋದ ಭೂಜಾತೆಯನ್ನು ಹೊತ್ತುಕೊಂಡು ಕಾಡು ಹೊಳೆ ಸಮುದ್ರದ ವಿಸ್ತಾರವನ್ನು ದಾಟಿದನು. ತ್ರಿಕೂಟಗಿರಿ ಶೃಂಗ ಶೃಂಗಾರದ ಆ ಕನಕ ಲಂಕಾ ಲಕ್ಷ್ಮಿಯ ತೊಡೆಯಂತೆ ಕಂಗೊಳಿಸುತ್ತಿದ್ದ ತನ್ನ
~~~~~~~~~~~~~~~~~~~~~~

ಸಿರಿಯ ಅರಮನೆಯಲ್ಲಿ ಮೃತ್ಯುವಿನ ನೆರಳಂತೆ ಇಳಿದನು. ಕಳ್ಳನು ನಿಧಿಯನ್ನು ಮುಚ್ಚಿಡುವಂತೆ, ಭಾಸ್ಕರಕುಲ ಪ್ರಾಣ ಹೃದಯೆ ಮೈಥಿಲಿಯನ್ನು ಗುಪ್ತಗೃಹದ ಮಧ್ಯೆ ಇಳಿಸಿದನು.

ಚಂದ್ರನಖಿಗೆ ಕರೆ ಕಳುಹಿಸಿದನು. ಅವಳಿಗೆ ಎಲ್ಲ ವಾರ್ತೆಯನ್ನು ತಿಳಿಸಿದನು. ಅವಳು ದಶಶಿರನ ಪ್ರಣಯ ಮಂತ್ರಾಲೋಚನೆಗೆ ಸಚಿವಳು. ಅಣ್ಣನ ಬೇಟೆಯ ವಸ್ತುವನ್ನು ಕಾಣುತ್ತ, ತನ್ನ ಪ್ರಣಯದ ಬೇಟೆಯು ಸಫಲವಾಗುವುದೆಂದು ಹಿಗ್ಗಿದಳು. ಪ್ರಣಯದಿಂದ ಹಂಬಲಿಸಿರುವ ಅವಳ ಮನದ ಮೂಸೆಯಲ್ಲಿ ನೂರು ಭಾವಗಳು ಒಮ್ಮೆಲೆ ಮಿಂಚುತ್ತಿದ್ದವು. ಅವಳು ಆ ಹೆಬ್ಬಯಕೆಯನ್ನು ಹೊರಗೆಡದಂತೆ ಹುದುಗಿಸಿ, ಹೃದಯದ ಆಕಾಂಕ್ಷೆಯನ್ನು,

'ಹೇ ದೈತ್ಯೇಂದ್ರನೇ, ನಿನಗೆ ಇಷ್ಟವಾದವಳನ್ನು ಕದ್ದು ತಂದಾಯಿತು. ಇನ್ನು ಅದನ್ನು ಗೆದ್ದು ನಿನಗೆ ಕೊಡುವ ಜಾಣ್ಮೆ ನನಗಿರಲಿ. ಹೆಣ್ಣಿನ ಮನಸ್ಸು ಹೆಣ್ಣಿಗೆ ತಾನೆ ತಿಳಿಯುವುದು?'

ಎಂದು ಹೇಳುತ್ತ ಚಂದ್ರನಖಿಯು ಅಲ್ಲಿ ಕುಯ್ದೆಸೆದ ಹೂವಿನಂತೆ ಗರಿಕೆಯ ಹಾಸುಗೆಯಲ್ಲಿ ಮೈಮರೆತು ಬಿದ್ದಿದ್ದ ಅವನಿ ಜಾತೆಯನ್ನು ನೋಡಿದಳು. ಮತ್ತೆ ಕಿರುನಗೆಯೊಡನೆ 'ಇದುವರೆಗೆ ನೀನುಗೆದ್ದ, ನಿನಗೆ ಒಲಿದ ಅತ್ತಿಗೆಯರಂತೆ ಅಲ್ಲ ಈ ಹೆಣ್ಣು! ನಿನ್ನ ಛಲಕ್ಕೆ ಇವಳ ಛಲ ಪ್ರತಿಭಟಿಸಲು ಆಗ ಯಾರು ಗೆಲ್ಲುವರೆಂದು ನಾನು ತಿಳಿಯಲಾರೆ! ನೋಡು, ಕೋಮಲೆಯ ಮುಖದಲ್ಲಿ ಮೂರ್ಛೆಯಲ್ಲಿಯೂ ಹೇಗೆ ದೃಢತೆ ಹಲ್ಲುಕಚ್ಚಿದಂತಿದೆ!'

ದಶಮುಖನು ತನ್ನ ಮನಸ್ಸಿನ ಅಳುಕನ್ನು ಒಂದಿಷ್ಟೂ ವ್ಯಕ್ತಪಡಿಸದೆಯೆ ಹೇಳಿದನು: 'ತಂಗಿಯೇ, ನೀನು ಹೇಳುವುದೇನು? ನಾನಾದರೊ ಗಂಡಾಗಿದ್ದು, ಹೆಣ್ಣುಗಳ ಎದೆಯ ಆಳವನ್ನು ಮುಳುಗಿ ಅದರ ನೆಲೆ ಅರಿತವನು. ಈ ಕಮಲಭವನ ಸೃಷ್ಟಿಯಲ್ಲಿ ಲಂಕೆಯ ಒಡೆಯನಿಗೆ ಸೋಲದ ಹೆಣ್ಣು ಇಲ್ಲ!...., ಆ ಅಭಿಪ್ರಾಯವೇನೇ ಆದರೂ ತನ್ನ ಪಾಡಿಗೆ ಇರಲಿ... ತಂಗಿಯೇ, ನನ್ನಿಚ್ಛೆ ಕೈಗೂಡುವಂತೆ ಎಲ್ಲ ರೀತಿಯಲ್ಲಿ ನೀನು ಮಾಡಲು, ನಿನ್ನ ಆಸೆಯು ಹುಸಿಹೋಗುವುದಿಲ್ಲ ಎಂಬುದನ್ನು ತಿಳಿ!'

ತಂಗಿಗೆ ರಾಮನ ಅರ್ಧಾಂಗಿಯನ್ನು ಒಪ್ಪಿಸಿ ರಾಕ್ಷಸನು ಅತ್ತ ನಡೆದನು. ಇತ್ತ ರಾಕ್ಷಸ ಪ್ರಣಯ ವಿದ್ಯಾಸಾರ ಸರ್ವಸ್ವೆಯಾದ ಚಂದ್ರನಖಿಯು ದಶರಥನ ಸೊಸೆಯನ್ನು ಮೃದುವಾದ ಹಂಸದ ತುಪ್ಪುಳಿನಿಂದ ಮಾಡಿದ ಹಾಸುಗೆಯ ಮೇಲೆ ಮಲಗಿಸಿದಳು. ದೈತ್ಯ ಸಂಸ್ಕೃತಿಯ ನಯ ಕಲಾ ಆಕರಗಳಾದ ಲಂಕಾ ಲತಾಂಗಿ ಲಾವಣ್ಯ ಮಣಿಗಳನ್ನು ಅಲ್ಲಿಗೆ ಕರೆಸಿದಳು. ಅವರು ರಮ್ಯ ಮಧುರ ನಾನಾ ನಾದ ಚತುರ ವೀಣಾ ಶ್ರುತಿಯ ಸುಂದರಿಯರಾಗಿದ್ದರು. ಏನೆಂದು ಹೇಳುವುದು? ಚಂದ್ರನಖಿಯು ಅಲ್ಲಿ ರೂಪ ಗಾನ

ಗಂಧಗಳಿಂದ ಒಡಗೂಡಿದ ರಸಲೋಕವನ್ನು ಸೃಷ್ಟಿಸಲು ಅಪ್ಪಣೆ ಮಾಡಿದಳು. ಹೇಳುವುದೇನು? ಸರ್ವ ಇಂದ್ರಿಯಗಳಲ್ಲಿ ಇಂದ್ರನ ನಂದನವು ಅರಳಿತು. ಅದು ಜಾನಕಿಯ ಸುತ್ತಲೂ ಮೋಹಿನಿಯ ಛಂದದಿಂದ ಭೋಗನಾಗನ ಭೋಗ ವಿನ್ಯಾಸದಿಂದ ನಾಟ್ಯವಾಡಿತು.

ಕನಸೆ ತಾಂ ನನಸಾದವೊಲ್ ಕಂಡುದವನಿಜಾತೆಯ ಕಣ್ಗೆ ರಾವಣನ ತಂಗೆಯೊಡ್ಡಿದ ಕಲೆಯ ಬಲೆಗಾಣ್ಕೆ.

ರಸವು ಪ್ರತಿಫಲಿಸದೆ ಇರಲು ಸಾಧ್ಯವೆ? ದುಃಖ ಮೂರ್ಛಿತಳಾದ ಸೀತೆ ನಿದ್ರೆಯಲ್ಲಿ ಒಂದು ಸುಖ ಸಂಭ್ರಮದ ಕನಸು ಕಂಡಳು. ವನವಾಸವನ್ನು ಮುಗಿಸಿ ಕೋಸಲಕ್ಕೆ ಹಿಂದಿರುಗಿದ್ದಾರೆ. ಅಯೋಧ್ಯೆಯಲ್ಲಿ ಜನರು ಸಂತೋಷಸಾಗರದ ತೆರೆಗಳಂತೆ ಕುಣಿದುಕ್ಕಿ ನೋಡಿ. ಜಯಗೀತೆಯನ್ನು ಹಾಡಿ ತೇಲಾಡುತ್ತಿದ್ದಾರೆ. ಬನವು ಹೂಗಳಿಂದ ತುಂಬಿ, ದುಂಬಿ ಪಕ್ಷಿಗಳ ಉಲಿತದಿಂದ ಮೊರೆಯುತ್ತಿದೆ. ಪರಿಮಳದ ಧೂಮದಿಂದ ಅನಿಲ ಮಂಡಳ ತುಂಬಿದೆ.

ಕೈಕೆ ಊರ್ಮಿಳೆ ಭರತ ಕೌಸಲ್ಯೆ ಮೊದಲಾದ ಬಂಧುಗಳ ಮುಖ ಮಂಡಲವು ಆನಂದಾಶ್ರುಗಳಿಂದ ತೊಯ್ದು ಹೋಗಿದೆ. ಏನು ಗಾನ, ಏನುಗಂಧ, ಏನುರೂಪ, ಆನಂದ. ಆದರೆ ಅಯ್ಯಯ್ಯೋ ರಾಮನು ಎಲ್ಲಿದ್ದಾನೆ? ಸೀತೆಯು ಗಾಬರಿಗೊಂಡು ಸುತ್ತ ನೋಡಿದಳು. ಯಾವ ಕಡೆಯೂ ರಾಮನು ಕಾಣಿಸಲಿಲ್ಲ. ಆಗ 'ಆತನನ್ನು ಕಾಡಿನಲ್ಲಿ ಬಿಟ್ಟು ಬಂದೆವಲ್ಲಾ, ಸೌಮಿತ್ರಿಯೆ ಕೇಡಾಯಿತು ಅಯ್ಯಯ್ಯೋ!' ಎಂದಳು. ಏಳಲು ಪ್ರಯತ್ನಿಸಿಯೂ ಏಳಲಾರದೆ ಬಿದ್ದು ಬಿಟ್ಟಳು. ಅಯ್ಯಯ್ಯೋ, ತಕ್ಷಣ ಸುಖದ ನಿದ್ರೆಯಿಂದ ಕಣ್ದೆರೆದು ಎದ್ದಳು! ರಾವಣನ ತಂಗಿಯು ಒಡ್ಡಿದ ಕಲೆಯ ಬಲೆಯನ್ನು ನೋಡುತ್ತಿದ್ದರೆ ಅವನಿಜಾತೆಯ ಕಣ್ಣಿಗೆ ಕನಸೆ ತಾನು ನನಸಾದಂತೆ ಕಂಡಿತು!

ಅಚ್ಚರಿಯ ನೋಟದಿಂದ ಆ ಮನೋಹರ ಗಾನ ವಿದ್ಯಾಧರಿಯರನ್ನು ನಿಟ್ಟಿಸಿದಳು. ದೃಷ್ಟಿಯು ಮೆಲ್ಲ ಮೆಲ್ಲನೆ ಒಬ್ಬರಿಂದ ಇನ್ನೊಬ್ಬರೆಡೆ ಹರಿಯಿತು. ಕದಡು ಭಾವ ತಿಳಿಯಾಗುತ್ತ ಅರಿವು ಮರಳಿತೊ ಏನೊ? ಅವಳ ಮುಖದಲ್ಲಿ ಶಂಕೆ ಸುಳಿದಾಡಿತು. ಅಲೆದಾಡುವ ಕಣ್ಣು ಚಂದ್ರನಖಿಯನ್ನು ಕಂಡ ತಕ್ಷಣ ಶಿಲಾಮಯವಾದಂತೆ ಅಚಲವಾಗಿ ನಿಂತಿತು. ಇವಳು ದಶಗ್ರೀವನ ಸೋದರಿ ಚಂದ್ರನಖಿಯಲ್ಲವೆ? ಗುರುತು ಸ್ಪಷ್ಟವಾದ ನಂತರ ನಡೆದುದೆಲ್ಲ ಮತ್ತೆ ನೆನಪಾಯಿತು. ದಶರಥನಸುತನ ಪತ್ನಿಯು ತಕ್ಷಣ ಚೀತ್ಕರಿಸಿ ದೊಪ್ಪನೆ ಭೂತಾಯಿಯ ತೊಡೆಯ ಮೇಲೆ ಕುಸಿದು ಬಿದ್ದಳು.

ಲಂಕಾಲತಾಂಗಿಯರು ವೀಣೆಗಳನ್ನು ಪಕ್ಕಕ್ಕಿಟ್ಟು ಬಂದು ರಾಘವಪ್ರಾಣೆಯ ಜೀವವೀಣೆಯನ್ನು ಎತ್ತಿದರು. ಚಂದ್ರನಖಿಯು ಚಂದ್ರಮುಖಿಯರ ಜೊತೆಗೂಡಿ

ಬೀಸಣಿಗೆಯಿಂದ ಬೀಸಿದಳು. ಕಂಪು ನೀರನ್ನು ಎರಚಿದಳು. ಮೈಯನ್ನು ತಡವಿ ಮುದ್ದಾಡಿ ತಂಪುನುಡಿಗಳ ವಿಶ್ವಾಸದಿಂದ ಹೀಗೆ ಸಮಾಧಾನ ಪಡಿಸಿದಳು:

'ಆರ್ಯೆ ಎದೆಗೆಡದಿರು. ನೀನು ಸಂಸ್ಕೃತಿಯ ಮಡಿಲಲ್ಲಿ ಇರುವುದರಿಂದ ಎಲ್ಲ ರೀತಿಯಲ್ಲಿ ಸುರಕ್ಷಿತಳು. ಅಣ್ಣನ ಅಚಾತುರ್ಯವನ್ನು ಕ್ಷಮಿಸು. ರಾಜಕೀಯವನ್ನು ಸಾಧಿಸುವ ಸಾಹಸದಿಂದ ಕ್ರಮತಪ್ಪಿ ಈ ರೀತಿ ನಿನ್ನಲ್ಲಿ ಅಪರಾಧವೆಸಗಿದನು. ಸನ್ಮಾನ್ಯೆಯೆ, ಮಾನಿನಿಯಾದ ನಿನ್ನ ಮಾನಕ್ಕೆ ಒಂದಿನಿತೂ ಕುಂದು ಆಗದ ರೀತಿ ನಾನು ಹೊಣೆ ಹೊರುವೆ. ಅಣ್ಣನು ಮಾಡಿರುವ ಈ ಅವಿವೇಕವನ್ನು ಹೇಗಾದರೂ ನಾನು ತಿದ್ದುತ್ತೇನೆ. ಹೇ ರಾಜೇಶ್ವರಿಯೆ, ನೀನು ತಾಳ್ಮೆಯಿಂದ ನಾನು ಹೇಳಿದಂತೆ ಮಾಡಬೇಕೆಂದು ಇದೊ ನಿನ್ನನ್ನು ಬೇಡಿಕೊಳ್ಳುತ್ತೇನೆ.'

ಸೀತೆಯು ಆ ಧ್ವನಿಗೆ, ಆ ನುಡಿಗೆ, ಆ ನಯಕ್ಕೆ, ಆ ನೀತಿಗೆ, ಆ ಪ್ರೀತಿಗೆ ಬೆರಗಾದಳು. ತಾನು ಕೇಳಿದ ರಾಕ್ಷಸ ರೀತಿ ಎಲ್ಲಿ; ಈ ನಯ ನುಡಿಯ ನೀತಿ ಎಲ್ಲಿ ಎಂದು ಆಶ್ಚರ್ಯಗೊಂಡಳು. ತಾನು ಕೇಳಿದ ರಾಕ್ಷಸ ಭೀಕರಾಕೃತಿಗಳೆಲ್ಲಿ; ಮತ್ತು ಈಗ ಕಾಣುತ್ತಿರುವ ಮನೋಹರ ಸುಂದರಾಕೃತಿಗಳೆಲ್ಲಿ? ಕ್ಷಿತಿಸುತೆ ಸೀತೆಯು ಹೃದಯದಲ್ಲಿ ಧೈರ್ಯವನ್ನು ತಂದುಕೊಂಡು,

'ಲಂಕಾಲಲಿತ ಬಾಲೆಯೆ, ವಿನಯ ಶೀಲೆಯಾದ ನೀನು ಬೇರೆಯವರ ಅಭಿಪ್ರಾಯವನ್ನು ಊಹಿಸಿ ತಿಳಿಯುವ ಇಂಗಿತಜ್ಞೆಯಾಗಿದ್ದರೆ ಕೇಳು. ಈ ನನ್ನನ್ನು ಬಳಸಿ ಸುತ್ತಇರುವ ಭೋಗಸರ್ಪ ವಿಲಾಸವನ್ನು ತೊಲಗಿಸು. ಪತಿಯಿಂದ ದೂರವಾಗಿರುವ ಆರ್ಯವನಿತೆಯರಿಗೆ ಈ ರೀತಿಯ ಸುಖಜೀವನ ಹೇಯವಾದುದು. ಪತಿಯ ಜೊತೆಗೆ ಬನದ ಬಾಳನ್ನು ವ್ರತವಾಗಿಸಿಕೊಂಡಿದ್ದೇನೆ. ಆದುದರಿಂದ ನನ್ನ ವ್ರತ ಮುಗಿಯುವವರೆಗೂ ನನಗೆ ಕಾಡೇ ಮನೆ, ನಾರು ಬಟ್ಟೆಯೇ ಉಡುಗೆ, ಬೇರು ಮತ್ತು ಕಾಡುಮರದ ಹಣ್ಣುಗಳೇ ನನ್ನ ಆಹಾರ.'

ಎಂದು ಹೇಳಿದಳು. ಅವಳು ನಡೆದುಕೊಳ್ಳುತ್ತಿದ್ದ ರೀತಿಯು, ತೊರೆಯಲ್ಲಿ ಮುಳುಗಿದವನು ಮೊಸಳೆಯಾದರೂ ಅದನ್ನು ಬೆಂಡೆಂದು ಭಾವಿಸಿ ಹಿಡಿದು ಬದುಕಲು ಪ್ರಯತ್ನಿಸುವವನಂತೆ ಇತ್ತು. ಆಗ ಅಸುರನ ಸಹೋದರಿ ಈ ರೀತಿ ಹೇಳಿದಳು:

'ಮಹಿಳೆಯೆ, ಪ್ರಭುವಾಜ್ಞೆಯನ್ನು ಮೀರಲಾರೆನು. ನೀನು ಚಕ್ರವರ್ತಿಯ ಮಗಳು. ನಿನಗೆ ಉಚಿತವಾದ ರೀತಿಯಲ್ಲಿ ಸತ್ಕರಿಸಲು ನಮಗೆ ಕಟ್ಟಾಜ್ಞೆಯಾಗಿದೆ. ನಿನ್ನ ಆಸೆಗೆ ಒಂದಿಷ್ಟು ಕೊರತೆಯಾಗದಂತೆ, ನಿನ್ನಿಷ್ಟದಂತೆ ನೆರವೇರಿಸಲು ನಮಗೆ ಆಜ್ಞೆಯಾಗಿದೆ. ನೀನು ರಾವಣನ ಔದಾರ್ಯದ ಹೃದಯವನ್ನು ತಿಳಿದಿಲ್ಲ. ನಿನ್ನ ಬಗ್ಗೆ ಅವನಿಗೆ ಬಹಳ ಗೌರವ. ನಿನಗಾಗಿ ತನ್ನ ಸರ್ವಸ್ವವನ್ನು ಬಲಿಕೊಡಲು ಸಿದ್ಧನಾಗಿರುವುದು ದಿಟ!'

'ರಾಕ್ಷಸ ಸುಶೀಲೆಯೆ ಸಾಕು, ಬಿಡು. ನನ್ನಿಷ್ಟದಂತೆ ನಡೆದುಕೊಂಡರೆ ನಾನು ಕೃತಜ್ಞೆಯಾಗಿರುತ್ತೇನೆ.'

ಎಂದು ಹೇಳಿದ ಸೀತೆಯು ಅನಂತರ ಮತ್ತೊಂದು ನುಡಿಯಾಡದೆ ಶಿಲಾಮೌನಿಯಾದಳು. ಚಂದ್ರನಖಿ ಹೇಳಿದುದಕ್ಕೆ ಅವಳು ಕಿವಿಗೊಡಲಿಲ್ಲ. ಕಿವುಡಾಗಿ, ಕುರುಡಾಗಿ, ಮರವಟ್ಟವಳಂತಾದಳು. ಹೊರಗನ್ನು ಮರೆತಳು. ತನ್ನ ಎದೆಯಪ್ರಿಯ ರಾಮಚಂದ್ರನಿಗೆ ಮರುಗಿ, ಅವನಿಗೆ ಒದಗಿದ ಅತಿ ಸಂಕಟದ ತೊಂದರೆಯನ್ನು ನೆನೆದಳು.

ಮುಮುಕ್ಷು ವೋಲಿರ್ದಳಾ ಆರ್ಯೆ, ಸೀತಾದೇವಿ.

ಭೂಸುತೆಯು ಹಗಲು ರಾತ್ರಿ ಎಂಬುದನ್ನು ತಿಳಿಯಲಾಗದ ಗುಪ್ತಗೃಹದಲ್ಲಿ ಭೂಮಿಯೆ ಹಾಸುಗೆಯಾಗಿ ಇದ್ದಳು. ಅವಳು ತನ್ನ ಜೀವಿತೇಶ್ವರನನ್ನು ನೆನೆದು, ಏನೂ ಆಹಾರವನ್ನು ಸೇವಿಸದೆ ನಿರಶನ ವ್ರತಿಯಾಗಿ ಏಳುದಿನಗಳನ್ನು ಕಳೆದಳು. ಅವಳು ಸ್ನಾನ ಮಾಡಲಿಲ್ಲ, ಬೇರೆ ಉಡುಗೆ ಉಡಲಿಲ್ಲ. ಪಂಚವಟಿಯಿಂದ ಅಯೋಧ್ಯೆಗೆ ಹಿಂದಿರುಗಲೆಂದು ನಾರು ಬಟ್ಟೆಯನ್ನು ಉಟ್ಟುಕೊಂಡಿದ್ದಳು. ಅದು ರಾಕ್ಷಸೇಂದ್ರನಿಂದ ಬಿಡಿಸಲು ಮನುಜೇಂದ್ರಚಂದ್ರ ಬರುವವರೆಗೂ ತನ್ನ ರಕ್ಷೆಗೆ ಕೋಟೆಯಾಗಿರಲೆಂದು ಬೇರೆ ನಾರುಮಡಿ ಉಡಲಿಲ್ಲ. ಮತ್ತು ಪ್ರಿಯನ ಸಾನ್ನಿಧ್ಯವನ್ನು ಪಡೆಯುವ ತನಕ ಪ್ರಿಯೆಗೆ ಮೈಲಿಗೆಯೆ ಮಡಿಯೆಂದು ಮೀಯಲಿಲ್ಲ. ಅವಳ ಬಾಚದ ಮುಡಿ ಜಟೆಯಾಯಿತು. ಹಾಗಾಗಿ ಮುಕ್ತಿಯನ್ನು ಅಪೇಕ್ಷಿಸುವ ಸಾಧಕಳಂತೆ ಆ ಆರ್ಯೆ ಸೀತಾದೇವಿ ದಿನಕರ ಕುಲನ ಹೃದಯ ಬಾರ್ಯೆ ಇದ್ದಳು.

ದೈತ್ಯೇಂದ್ರನು ಈ ವಾರ್ತೆಯನ್ನು ಕೇಳುತ್ತ ಎದೆಯಲ್ಲಿ ಕುದಿದನು. ನವರತ್ನ ಕಾಂಚನ ಖಚಿತ ಉಡುಪಿನ ವೈಭವದಿಂದ ಮನಸ್ಸಿನ ತಳಮಳವನ್ನು ಮರೆಸಿಕೊಂಡು ಸೀತೆಯಿದ್ದ ಎಡೆಗೆ ಬಂದನು. ಅವಳನ್ನು ಕಂಡೊಡನೆ ಮುಖಕ್ಕೆ ಖಿನ್ನತೆ ಮೂಡಿತು. ಕೆರಳಿ ತನ್ನ ತಂಗಿಯನ್ನು ನೋಡಿದನು. ಅನಂತರ ಜನಕಸುತೆಯೆಡೆಗೆ ತಿರುಗಿ ಹೇಳಿದನು:

'ದೇವಿ ನಿನ್ನ ಆರ್ಯಸಂಸ್ಕೃತಿಗೆ ಈ ದುಷ್ಟ ಆತ್ಮಹತ್ಯೆಯ ನಿರಶನ ವ್ರತ ಯೋಗ್ಯವಲ್ಲ. ಆಸೆಯನ್ನು ನೆರವೇರಿಸಲಾಗದಿದ್ದರೆ ಕೊಂದುಕೊಳ್ಳುವರೆ? ಹೇಳು, ಆತ್ಮಹತ್ಯೆಯಿಂದ ಮಾತ್ರ ಆಶೆ ನೆರವೇರಿದಂತೆ ಎಂದು ತಿಳಿಯುವರೆ? ನಿನ್ನಿಷ್ಟದಂತೆ ನಡೆದುಕೊಳ್ಳಬೇಕೆಂದು ಆಜ್ಞೆ ಮಾಡಿ ನಾನು ಹೋದೆನು. ಈ ಮಂದ ಮತಿಗಳು ಆ ಆಣತಿಯನ್ನು ಮೀರಿದರು.

'ಕ್ಷಮಿಸು. ನಿನಗೆ ಸೂಕ್ತವಾದ ಆಹಾರವನ್ನು ತೆಗೆದುಕೊ. ನಿನಗೆ ಒಪ್ಪುವ ಸ್ಥಳವನ್ನು ಹೊಕ್ಕು ಅದನ್ನು ವ್ರತಯೋಗ್ಯವಾಗಿ ಮಾಡಿಕೊ. ಕೇಳು, ಲಂಕೆಯನ್ನು ಮಹಾಸಮುದ್ರ ಆವರಿಸಿದೆ. ಅದನ್ನು ಯಾರೂ ಹಾರಿ ಬರಲಾರರು. ಅದರ ತೀರದಲ್ಲಿ ಎತ್ತರದ

ಮಲೆಯ ಕೋಡಿನಲ್ಲಿ ಅಶೋಕವನವಿದೆ. ನೀವು ಇದ್ದ ಆಶ್ರಮಕ್ಕಿಂತ ಎರಡರಷ್ಟು ಚೆಲುವಿನಿಂದ ಕೂಡಿದೆ. ಆ ಬನ ಚೆಲುವಾದುದು, ಬಾನು ಚೆಲುವಾದುದು, ನಿತ್ಯವೂ ಪ್ರಕಾಶಿಸುವ ವಿಸ್ತಾರ ಕಡಲ ಕಡುನೀಲಿಲಿಯು ಚೆಲುವಾದುದು! ಅಲ್ಲಿ ನಿನ್ನ ಆಸೆಯಂತೆ ಮತ್ತು ನನ್ನ ಆಜ್ಞೆಯಂತೆ ಒಂದು ಪರ್ಣಕುಟಿಯನ್ನು ನಿರ್ಮಿಸಲಾಗುವುದು...'

ರಾವಣನು ಹೀಗೆ ಮಾತಾಡುತ್ತ ನಾನಾ ತೀಕ್ಷ್ಣತರ ಗೊಂದಲಗಳ ಭಾವ ಘರ್ಷಣೆಗೆ ಒಳಗಾದನು. ತಂಗಿಗೆ ರಹಸ್ಯವಾದುದನ್ನು ತಿಳಿಸಿದನು. ಅಲ್ಲಿಂದ ಪೂಜ್ಯೆ ಮಯನಂದನೆ ಮಂಡೋದರಿಯ ಮಂದಿರಕ್ಕೆ ನಡೆದನು.

ಸಾಗಿಸಿದರವನಿಜೆಯನಾ ಕ್ಷಣಂ ಕಡಲ ದಡದೆತ್ತರದಶೋಕವನದೆಲೆವನೆಗೆ.

ಆ ಕ್ಷಣವೆ ಸೀತೆಯನ್ನು ಕಡಲದಡದ ಎತ್ತರದ ಅಶೋಕವನದ ಎಲೆಮನೆಗೆ ಸಾಗಿಸಿದರು. ಅಲ್ಲಿ ಸಾಗರದ ನೀರು ನೀಲಿ ಆಗಸದ ಸುರನೀಲಿ. ದೂರ ವಿಸ್ತೀರ್ಣದಲ್ಲಿ ಹರಿದು ಹಬ್ಬಿದ ವಿಶ್ರಾಂತ ಕಾನನದ ಎಲೆಗಳು ಹರಿದ್ವರ್ಣದ ಮೃದುಲ ನೀಲಿ. ಅದು ಅವಳ ಕಣ್ಣಾಲಿಗಳಿಗೆ ಇನಿಯ ರಾಮಚಂದ್ರನ ಶರೀರದ ವರ್ಣವನ್ನೇ ಹೋಲಿ ಶೋಭಿಸುತ್ತಿತ್ತು. ಅದು ಅಚ್ಚರಿಯೆಂಬಂತೆ ಸುಳಿದು ಮೈಥಿಲಿಯ ಆತ್ಮಕ್ಕೆ ಶಾಂತಿಯನ್ನುಂಟು ಮಾಡಿತು.

ಬನದ ಹಕ್ಕಿಯ ಇಂಚರದೊಡನೆ ತಣ್ಣನೆಯಗಾಳಿ ಸುಳಿದಾಡುತ್ತಿತ್ತು. ಅದರೊಡನೆ ಹೊಸ ಹಸಿರನ್ನು ಉಕ್ಕಿಸುತ್ತ ಹೊಮ್ಮಿದ ಗರುಕೆಯೊಡನೆ ಹೊಸನೆಚ್ಚು ಕೌಸಲ್ಯೆಯ ಸೊಸೆಗೆ ಮೂಡಿತು. ಯಾರಿಗೇ ಆಗಲಿ ಪರದೇಶದಲ್ಲಿ ಪರಿಚಿತರನ್ನು ಕಾಣಲು ಅಳಿದು ಹೋಗಿದ್ದ ಆಸೆ ತಾನು ಉಸಿರೆಳೆದು ಮರುಹುಟ್ಟು ಪಡೆದಂತಾಗದೆ?

ಅವಳು ಸ್ನಾನ ಮಾಡಲಿಲ್ಲ. ಉಟ್ಟಿರುವುದನ್ನು ಬಿಟ್ಟು ಬೇರೆ ಉಡಲಿಲ್ಲ. ಕೊಟ್ಟ ಹಣ್ಣು ಬೇರುಗಳನ್ನು ವಿಶ್ವ ದೇವತೆಗಳಿಗೆ ನೈವೇದ್ಯವನ್ನು ಮಾಡಿದಳು. ಪ್ರಾಣೇಶನ ಆಗಮನದ ಆಶೆಯಿಂದ, ಅವನು ಬರುವವರೆಗೂ ಪ್ರಾಣವನ್ನು ಧರಿಸಿರಬೇಕೆಂದು ಅದನ್ನು ಪ್ರಸಾದವಾಗಿ ಉಣ್ಣುತ್ತಿದ್ದಳು. ಆ ದೇವಿಯು ಸದಾ ರಾಮನ ಆಗಮನಕ್ಕೆ, ರಾವಣೋದ್ಧಾರಕ್ಕೆ ಮತ್ತು ಆತ್ಮ ಮಂಗಳಕ್ಕೆ ಪ್ರಾರ್ಥಿಸುತ್ತಿದ್ದಳು. ವೈರ ಹಿಂಸೆಯನ್ನು ತೊರೆಯಲು ಪ್ರಯತ್ನಿಸುವ ತಪದ ಸಾಧನೆಗೆ ಜಗದ ಕಲ್ಯಾಣದ ಸಫಲತೆಗೆ ಪ್ರಾರ್ಥನಾ ನಿರತಳಾದಳು.

ಹೇಳು, ಪ್ರಾರ್ಥನಾ ತೀವ್ರತೆಯ ಸಾತ್ವಿಕ ತಪಶ್ಶಕ್ತಿಯು ತಾನು ಸ್ವಯಂ ಕ್ರಿಯೆಯಾಗಿ ಸೃಷ್ಟಿಯನ್ನು ಪ್ರಚೋದಿಸದೆ? ಕಷ್ಟದ ಸಾಗರಕ್ಕೆ ಸೇತುವೆಯನ್ನು ಕಟ್ಟುವುದಿಲ್ಲವೆ? ಹಾಗೆಯೆ ಅದು ಇಂದಲ್ಲದಿದ್ದರೆ ನಾಳೆ ಪಾಪ ಬುದ್ಧಿಯ ಜೀವಿತನ ವಕ್ರರೇಖೆಯನ್ನು ಪುಣ್ಯದ ನೇರ ಮಾರ್ಗಕ್ಕೆ ತಿದ್ದದೆ ಉಳಿಯುವುದೆ?

ಸುಖದಂತೆ ದುಃಖಮುಂ ಋತಚಿತ್ ಕೃಪಾ ನೃಕೇಸರಿ ನಖಂ.

ಸುದ್ದಿ ಎಂಬ ಭೂತವು ಕಿವಿಯಿಂದ ಕಿವಿಗೆ ಸುಯ್ಗಾಳಿಯಾಗಿ ಸುಳಿಯಿತು. ತರತರದ ಭಾವನೆಗಳ ಉಸಿರಿನಿಂದ ಲಂಕಾ ಜನದ ಮನದ ಸಮುದ್ರವನ್ನು ಕಡೆಯಿತು. ಹಾಗೆ ಹೊರಟ ಆ ಭೂತವು ಮಯನಂದನೆಯ ದೇವಮಂದಿರಕ್ಕೆ ಬಂದಿತು. ಇಂದ್ರಜಿತ್ ಮಾತೆಯು ಆ ಭೀಕರಾಕಾರವನ್ನು ಕಂಡ ಕೂಡಲೆ ಎಚ್ಚರ ತಪ್ಪಿದಳು. ಇದುವರೆಗೆ ಮಾಡಿದ ದೇವ ಪೂಜಾವ್ರತ ತನಗೆ ಪೊಳ್ಳಾಯಿತು ಎಂದುಕೊಂಡಳು. ಆಗ ಬೂತು ಅವಳನ್ನು ಉದ್ದೇಶಿಸಿ,

'ತಾಯಿಯೆ ನನ್ನ ಈ ವಿಕೃತಾಂಗವನ್ನು ನೋಡಿ ಬೆಚ್ಚದಿರು. ಹಿತವೆಂಬುದು ಎಷ್ಟೋಬಾರಿ ಹೀಗೆ ನನ್ನಂತೆ ಅಪ್ರಿಯತೆಯ ಆಕೃತಿಪಡೆದು ಬರುತ್ತದೆ. ಈಶಕೃಪೆಗೆ ನಾನಾ ಮುಖವಿರುವುದು. ಸುಖದಂತೆ ದುಃಖವು ಸತ್ಯವಾದ ಜ್ಞಾನ (ಋತಚಿತ್) ಕೃಪೆಯೆಂಬ ನೃಸಿಂಹನ ಉಗುರು. ವಿಧಿಯ ಕರುಣೆಯು ನಿನ್ನ ಪತಿಯ ಅಭ್ಯುದಯಕ್ಕೆ ಏಣಿಯನ್ನು ಒಡ್ಡಿದೆ. ಸೀತಾಹರಣವೇ ಅದರ ಮೊದಲ ಮೆಟ್ಟಿಲು. ಶ್ರೀರಾಮನ ಅರ್ಧಾಂಗಿಯೊಡನೆ ನೀನು ಎದೆಬೆರೆತು ಪ್ರಾರ್ಥಿಸಿದರೆ ರಾವಣೋದ್ಧಾರದ ಸತ್ಫಲ ಕೈಗೂಡುತ್ತದೆ!'

ಎಂದು ಹೇಳಿತು, ಅನಂತರ ಅದು ಮಂಡೋದರಿಯ ಮನವನ್ನು ಆಕ್ರಮಿಸಿದ ಅತಿಚಿಂತೆಯಂತೆ ಮಾಯವಾಯಿತು.

ಸೀತೆಯನ್ನು ಕಾಣುವ ಕಾತುರತೆಯಿಂದ ಮಂಡೋದರಿಯು ಪೂಜೆಯಿಂದ ಏಳುತ್ತಿದ್ದಳು. ಆಗ ಅವಳ ಪತಿಯ ಮೂರ್ತಿ ಶಿವಮಂದಿರವನ್ನು ಹೊಕ್ಕಿತು. ಹೊಸ್ತಿಲನ್ನು ದಾಟಿ ನಿಂತು ಒಮ್ಮೆ ಕಣ್ಣಿನದೃಷ್ಟಿ ಹರಿಸಿದನು. ಅಲ್ಲಿಯ ಹೂ, ಹಣ್ಣು, ಪರಿಮಳ ದ್ರವ್ಯಗಳ ಭವ್ಯತೆಗೆ ಒಳಗಾದನು. ಮೌನದಿಂದ ಶಾಂತಿಯನ್ನು ಪಡೆದುಕೊಂಡನು.

ಈರ್ವರೂ ಪರಸ್ಪರರ ಉಸಿರಾಟವನ್ನು ಆಲಿಸಿದರು. ದೈತ್ಯೇಂದ್ರನ ಶಿರವು ನಿಧಾನವಾಗಿ ಬಾಗಿತು. ಮನ್ಮಥನ ಬಂಧಿಯು ಮನ್ಮಥಾರಿ ಶಿವನಿಗೆ ಕೈಮುಗಿದು ನಮಸ್ಕರಿಸಿದನು. ಉದ್ವೇಗವನ್ನು ತಡೆಯಲಾರದೆ ಕುಗ್ಗಿ ಕುಸಿದಂತಿದ್ದ ದೀನ ದುಃಖದ ಸತಿಯನ್ನು ಕಂಡು ಅವಳ ಬಳಿಗೆ ಹೋದನು. ಅವಳು ತಲೆ ಎತ್ತಲಿಲ್ಲ. ಅವಳ ತೊಟ್ಟಿಟ್ಟ ಕಂಬನಿಗೆ ನೆಲ ತೊಯ್ದಿತ್ತು. ಅದನ್ನು ಕಂಡು ರಾವಣನು ಹನಿಗಣ್ಣಾಗಿ ನಿಟ್ಟುಸಿರಿನಿಂದ ಪ್ರಶ್ನಿಸಿದನು:

'ದೇವಿ ನಿನಗೇನು ಕೊರತೆ? ಇಳಾರಮಣಿಯು ನಿನ್ನ ಬಿಸುಗಂಬನಿಯ ಸೋಂಕಿಗೆ ಬೆಂದು ಹೋಗುತ್ತಾಳೆ.'

ಓಲೆಭಾಗ್ಯವೇ ಕಂಪಿಸುವಂತೆ ಥರಥರನೆ ರಾಗ ಭಾವೋದ್ವಿಗ್ನೆಯಾದ ಮಂಡೋದರಿಯ ವಜ್ರದೋಲೆ ನಡುಗುತ್ತಿದ್ದಿತು. ಅವಳು ಹೇಳಿದಳು:

'ಜೀವೇಶನೆ ಸತಿಗೆ ಕೊರತೆಯೆ? ಪತಿ ಹೃದಯವನ್ನು ಪಡೆಯುವುದಲ್ಲದೆಯೆ ಬೇರೆ ಕೊರತೆ ಇದೆಯೆ?'

'ಒಳಿತಾದುದು ನಿನ್ನ ಸೋಜಿಗದ ಕೊರತೆ!'

'ತನ್ನ ಒಡಲಿನಲ್ಲಿ ಹುಟ್ಟಿದವಳ ಕಣ್ಣಿನ ಹನಿಗಿಡಿಗೆ ಬೆಂದ ತಾಯಿಯು ಮರವಟ್ಟಿದ್ದಾಳೆ. ನನ್ನ ಕಂಬನಿಯ ಬಿಸುಪನ್ನು ಅವಳು ಹೇಗೆ ತಿಳಿಯುತ್ತಾಳೆ?...'

'ನಾನು ಯಾವಾಗಲೂ ನಿನ್ನವನೆ.'

'ಅಯ್ಯೊ, ಆ ಪುಣ್ಯವೆಂದಿಗೊ!'

'ಮತ್ತೆ ಮತ್ತೆ ಅದೇ ಕೊರತೆ! ರಾಣಿಯೆ, ರವಿಯು ಸ್ಥಿರವಾಗಿದ್ದಾನೆ. ಗ್ರಹಗಳು ರವಿಯಸುತ್ತ ತಮ್ಮ ಕಕ್ಷೆಯಲ್ಲಿ ಸುತ್ತುತ್ತಿರುತ್ತವೆ. ರವಿಯಂತೆ ನಿಷ್ಠೆಯಿಂದ ಇರುವವನು ನಾನು. ರಾವಣನ ಪ್ರೀತಿ ಎಂಬುದು ಯಾವಾಗಲೂ ಸಂಪೂರ್ಣವಾದುದು. ಹಂಚಿಕೆಯಾಗಿರುವುದರಿಂದ ಅದಕ್ಕೆ ಸ್ವಲ್ಪವೂ ಅಪೂರ್ಣತೆಯ ಕೊರೆ ಇಲ್ಲ. ಕಳಂಕ ಸಲ್ಲದು.'

ಹದಿಬದೆಯ ಹೃದಯದುರಿ ಲಂಕೆಯಂ ದಹಿಸದೆ?

ಪತಿಯ ಆ ನುಡಿ ಕೇಳಿ ರಾಣಿ ಮಂಡೋದರಿಯು ಹಾವು ಹೆಡೆಯೆತ್ತುವಂತೆ ತಲೆ ಎತ್ತಿದಳು. ಅವನ ಕಣ್ಣಿಗೆ ಕಣ್ಣನ್ನು ಬೆಸೆದು ಇರಿದು ನೋಡುತ್ತ ನುಡಿದಳು:

'ಓ ಕುಶಾಗ್ರಮತಿಯೆ ಉಸಿರುಸಿರಿನಲ್ಲಿ ಬೆಸೆದು ಒಲಿದಎದೆಗಳನ್ನು ಕಿತ್ತೆಳೆದು ತಂದು ಹೀಗೆ ಯುಕ್ತಿಯನ್ನು ಹರಟುವರೆ? ಹದಿಬದೆಯ ಹೃದಯದಉರಿ ಲಂಕೆಯನ್ನು ದಹಿಸುವುದಿಲ್ಲವೆ? ಮೃತ್ಯು ದೇವತೆಯು ಕುಲಕ್ಷಯಕ್ಕೆ ಕೂಣಿ (ಮೀನು ಹಿಡಿಯುವ ಬುಟ್ಟಿ)ಯನ್ನು ಒಡ್ಡಿದೆ!...'

'ಮತ್ತೆ ಮತ್ತದೇ ಮಾತು! ಹದಿಬದೆಯ ಹೃದಯದಉರಿ! ಸುಳ್ಳು ಮನೆಗೆ ಸುಳ್ಳು ಗೋಡೆ!...'

'ಪ್ರಾಣೇಶ ದೈತ್ಯೇಂದ್ರನೇ, ಈ ರೀತಿಯ ರಾವಣನು ಮತ್ತೋರ್ವನಿದ್ದಿದ್ದರೆ ನಿನ್ನ ಈ ಮಯನಮಗಳು ಅಬಲೆಯು ನಿನಗೆ ಹದಿಬದೆಯರು ಇರುವುದನ್ನು, ಪತಿವ್ರತೆತನದ ಹಿರಿಮೆಯನ್ನು ತೋರಿಸುತ್ತಿದ್ದಳು.'

ಆ ದಿಟ್ಟ ನೋಟಕ್ಕೆ, ಆ ದನಿಯ ದಾರ್ಢ್ಯಕ್ಕೆ, ಆ ಧರ್ಮ ಧೈರ್ಯಕ್ಕೆ ದನುಜನ ಎದೆ ತುಸು ಅಳುಕಿ ಧಿಗಿಲೆಂದಿತು. ಶಿವನ ಸನ್ನಿಧಿ ಮಹಿಮೆ ಮಂಗಳವನ್ನು ಪ್ರಚೋದಿಸಿತು ಎನ್ನುವಂತೆ ರಾವಣನು,

'ದೇವಿ ಕರುಣಿಸು. ನಿನ್ನ ದಿಟ್ಟಿಸಿಡಿಲನ್ನು ಉಪಸಂಹರಿಸು. ರಾವಣನಿಗೆ ಜಗತ್ ಪಾಲಕನ, ದಿಕ್ ಪಾಲಕರ ಆಟೋಪದ ಆಕ್ರಮಣವು ಸಣ್ಣ ಹುಲ್ಲುಕಡ್ಡಿಗೆ ಸಮಾನ. ನಿನ್ನ ಒಲ್ಮೆಯು ಹುಬ್ಬುಗಂಟಿಕ್ಕಿದರೆ ನಾನು ಧೈರ್ಯಚ್ಯುತನು, ದೆಸೆಗೇಡಿಯು ಆಗಿ ಪರದೇಶಿಯಾಗುವೆ, ಹಾಗೆಯೆ ಶೂನ್ಯ ಚಿತ್ತನಾಗುವೆ! ನೀನು ನನಗೆ ಶಾಂತಿ, ಸತ್ತ್ವ ಮತ್ತು ಆತ್ಮ. ನೀನು ನನಗೆ ತುತ್ತ ತುದಿಯ ಆಸೆ ನೆಲೆ ನೆಚ್ಚು ಮತ್ತು ಸುಕೃತ. ದೇವರೇ ಹೇಸಿ ಬಿಟ್ಟೊಡೆ ನಾನು ಕೆಡುವುದಿಲ್ಲ. ಪ್ರೇಮಮಯಿ ನೀನು ತೊರೆಯಲು, ಅಯ್ಯೊ ನಾನು ಶೂನ್ಯ. ನೀನು ನನ್ನ ಈ ದೌರ್ಬಲ್ಯವನ್ನು ತಿಳಿದಿರುವೆ. ಲೋಕವನ್ನು ಜಯಿಸಿದ ನಾನು ನನ್ನ ಇಂದ್ರಿಯಗಳಿಗೆ, ಇತರರಂತೆ ದಾಸನೆಂಬುದನ್ನು ತಿಳಿದಿರುವೆ. ಆದರೂ ಕೇಳು, ನಿನ್ನ ಮುಂದೆ ಅಲ್ಲದೆ ಅನ್ಯರ ಮುಂದೆ ತಪ್ಪನ್ನು ಒಪ್ಪಿಕೊಂಡರೆ ದೊರೆತನಕ್ಕೆ ಕೀಳು. ಮತ್ತು ನನ್ನ ಹಿರಿಮೆಗೆ ಅವಹೇಳನ.

'ದೇವಿಯೆ, ನಿನ್ನ ಒಂದು ಪೆಂಪಿಗೆ ಅವಮಾನವೆಂದು ನಾನು ನನ್ನ ಆತ್ಮದ ಒಳತೋಟಿ ಮನಸ್ಸಿನ ಹೊಯ್ದಾಟವನ್ನು ಕೀಳು ಜನಗಳಿಂದ, ನಾಯಿಯಂತಹವರಿಂದ, ಇತರರಿಂದ ಅಡಗಿಸಿಟ್ಟಿರುವೆನು.

'ಓ ಪ್ರಿಯೆ ಹೇಳುವುದನ್ನು ಆಲಿಸು. ಸೀತೆಯನ್ನು ತಂದ ದಿನದಿಂದ ಮನಸ್ಸಿಗೆ ಕಳವಳ ಉಂಟಾಗಿದೆ. ಹೆದರಿಕೆ ಎಂಬುದನ್ನು ನಾನು ತಿಳಿಯೆ. ಆದರೂ ಮನಸ್ಸಿಗೆ ಏನೊ ಅಶಾಂತಿಯುಂಟಾಗಿದೆ. ಒಮ್ಮೊಮ್ಮೆ ಕೆರಳುತ್ತ ಇಂದ್ರಿಯ ದಾಹವು ಕಾತರಿಸುತ್ತಿದೆ. ಮತ್ತೆ ಒಮ್ಮೊಮ್ಮೆ ನೀನೊಂದು ತಪದ ಫಲ ಎಂಬಂತೆ ಬಿರಿಯೊತ್ತಿ, ಕಲ್ಯಾಣಮುಖಿಯಾಗಿ ಅಪೇಕ್ಷೆಯ ಮನ್ಮಥರಥದ ತೇರ್ಗಾಲಿಯನ್ನು ತಡೆಯುತ್ತಿದೆ.'

ಎಂದು ಹೇಳುತ್ತ ರಾವಣನು ಮುಂದಕ್ಕೆ ಏನು ಹೇಳಬೇಕೆಂದು ಹೇಳಲು ನುಡಿ ಹೊಮ್ಮದೆ–ಮೌನದಿಂದ ಬಾಗಿ ನಿಂತನು. ಅವನನ್ನು ಕರುಣೆಯಿಂದ, ಪ್ರೀತಿಯಿಂದ ಮತ್ತು ಪ್ರಾರ್ಥನಾಮಯ ನಯನದಿಂದ ನೋಡುತ್ತ ಮಯನ ಕುವರಿ ಕೇಳಿದಳು:

'ಜಾನಕಿಯೆಲ್ಲಿ? ನಾನು ಆಕೆಯನ್ನು ನೋಡಬೇಕು.' ಅದನ್ನು ಕೇಳಿ ಬೆಚ್ಚಿದಂತಾದ ಅಸುರನು ಹೇಳಿದನು:

'ಆಗದಾಗದು!'

'ಏಕೆ?'

ಎಂಬ ರಾಣಿಯ ಪ್ರಶ್ನೆಗೆ ಮಂದಸ್ಮಿತನಾಗಿ ಇಂದ್ರಜಿತು ಪಿತನು ನುಡಿದನು:

"ನಿನ್ನ ದರ್ಶನದಿಂದ ಜಾರಿಣಿಗೆ ಮಹಾಪತಿವ್ರತೆಯ ದೃಢತೆ ಉಂಟಾಗುವುದು. ಅಂದಮೇಲೆ ಸೀತೆಯ ಮಾತೇನು?'

'ಸತಿಯನ್ನು ಉಪಚರಿಸುವವರು ಯಾರು?'

'ಅದಕ್ಕೆ ತಂಗಿ ಇದ್ದಾಳೆ.

ರಾವಣನ ಆ ಮಾತು ಕೇಳಿ ಮಂಡೋದರಿಯ ಮುಖ ಗಂಟಿಕ್ಕಿತು. ನಿಟ್ಟುಸಿರು ಬಿಡುತ್ತ ಹೇಳಿದಳು:

'ಅದಕ್ಕೆ ಸೊಸೆಯನ್ನಾದರೂ ನೇಮಿಸಿದ್ದರೆ.'

'ಏನೇನ್, ತಾರಾಕ್ಷಿಯನ್ನೆ? ಮರತೆ ಏನು ಅವಳು ಇಂದ್ರಜಿತುವಿನ ಪತ್ನಿ.'

'ಸೀತೆಯು ಭೂಮಿತಾಯಿಯ ಮಗಳು, ರಾಮನ ಪತ್ನಿ.'

ಅಸುರನು ಅನಿಷ್ಟವನ್ನು ಕೇಳಿದ ರೀತಿ ಮನಸ್ಸು ಮುರಿದವನಾಗಿ ಕೋಪಗೊಂಡು ಹೇಳಿದನು:

'ನನ್ನಿಂದ ಕದ್ದೊಯ್ದುವಳನ್ನು ನಾನು ಗೆದ್ದು ಮರಳಿ ತಂದಿದ್ದೇನೆ.'

'ಹೆಣ್ಣಿಗೆ ಹೃದಯವೆಂಬುದು ಶರೀರವಲ್ಲ!'

'ತನುವಿನ ಅಂಶವೇ ಹೃದಯ! ಅದನ್ನು ಅನುಸರಿಸಿ ಇದು ಇಂದಲ್ಲದಿದ್ದರೆ ನಾಳೆ ಸೋಲುತ್ತದೆ!'

'ಕೇಳು, ಶಿವಕೃಪೆಯಿಂದ ಸೀತೆಯು ಆ ಭ್ರಾಂತಿಯನ್ನು ಸುಳ್ಳುಮಾಡುವಳು!'

'ನನ್ನಿಚ್ಛೆ ಸೋಲಲಿ. ಹದಿಬದೆಗೆಲ್ಲಲಿ. ನಿನ್ನಾಸೆಯು ನೆರವೇರಲಿ. ನಾನು ಅಭ್ಯುದಯಕ್ಕಾದರೂ ಸಹ ಬಲದಿಂದಲ್ಲದೆ ಸೋಲುವವನಲ್ಲ!'

ಹೀಗೆ ಹೇಳುತ್ತ ಧಾವಿಸಿ ಹೊರಹೋಗುವವನನ್ನು ರಾಣಿಯು ದೀನವಾಣಿಯಿಂದ ಕರೆದಳು. ಪ್ರಸಾದವನ್ನು ನೀಡಿ ಪತಿಗೆ ಕೈ ಮುಗಿದಳು. ಅದನ್ನು ಹಣೆಗೆ ಒತ್ತಿಕೊಳ್ಳುತ್ತ,

'ದೇವಿಯೆ, ನೀನು ಮಹಿಮಾನ್ವಿತಳು. ನಾನು ಅಲ್ಪ ನಿನ್ನ ಸದ್ಗುಣವು ಶಿಕ್ಷಿಸಲಿ ರಕ್ಷಿಸಲಿ ನಾನು ಧನ್ಯ! ದೇವರಿಗೆ ನಾನು ಕೈಮುಗಿಯಬೇಕೆಂದು ಆಸೆಯೇನು? ಎಲ್ಲರಿಂದಲೂ ಕೈಮುಗಿಸಿಕೊಳ್ಳುವವನಿಗೆ-ಓರ್ವನಾದರೂ ಕೈಮುಗಿಸಿಕೊಳ್ಳುವವ ನಿರುವುದು ಒಳ್ಳೆಯದು!'

ಎಂದು ಅರ್ಧ ಹಾಸ್ಯಮಯವಾಗಿ ನಟಿಸುತ್ತಿದ್ದರೂ, ಗಂಭೀರ ಮುಖಮುದ್ರೆಯಿಂದ ಚಂದ್ರಚೂಡನಿಗೆ ದಂಡದಂತೆ ದಿಂಡುಗಡೆದನು. ಜಗತ್ತನ್ನು ಜಯಿಸಿದ ದೈತ್ಯ ಚಕ್ರೇಶನು ಹಾಗೆ ಅಲ್ಲಿ ಸಾಷ್ಟಾಂಗದಿಂದ ನಮಸ್ಕರಿಸಿದ ದೃಶ್ಯವನ್ನು ಕಂಡು ಮಂಡೋದರಿಗೆ ಮನಶ್ಶಾಂತಿ ಚಿಗುರೊಡೆಯಿತು.

❑



~~~~~~~~~~~~~~~~~~~~~~ ಸಂಚಿಕೆ – ೮ ~~~~~~~~~~~~~~~~~~~~~~

ನಾನಕ್ಕನೆನ್ ನಿನಗೆ, ತಂಗೆ !

ಸಮುದ್ರದ ತರಂಗಗಳ ಪರಂಪರೆ, ಮೊರೆತದ ಪರಂಪರೆ, ಬೆಳ್ನೊರೆ ನೊರೆಯ ಪರಂಪರೆ ಅಲ್ಲಿ ಅರಳಿ ಉಲ್ಲಾಸಗೊಳ್ಳುತ್ತಿದ್ದವು. ಆ ಸಾಗರದ ನಾಗರನ ಭೋರ್ಗರೆಯುವ ಭೋಗ ಕುಲವು ದಡದ ಅಶೋಕವನದ ಬಾಗಿದ ಶಿಲೆಗಳನ್ನು ನಿರಂತರವಾಗಿ ಅಪ್ಪಳಿಸುತ್ತಿದ್ದವು. ಕಾಡಿನ ಕೋಡಿನ ಎತ್ತರದಲ್ಲಿದ್ದ ಹುಲ್ಲುಮನೆಯಲ್ಲಿ ದುಃಖಿತಳಾದ ಸೀತಾದೇವಿಯು ತರಂಗೋಲ್ಲಾಸವನ್ನು ನೋಡುತ್ತಿದ್ದಳು. ಮತ್ತು ಆ ಅಲೆಗಳ ಉಚ್ಛ್ವಾಸ ಘೋಷವನ್ನು ಕೇಳುತ್ತಿದ್ದಳು. ನೋಡುತ್ತಿರಲು ಕೇಳುತ್ತಿರಲು ಕಣ್ಣಿಗೆ ಮತ್ತು ಕಿವಿಗೆ ಭೇದವಿಲ್ಲವಾಗಿತ್ತು.
~~~~~~~~~~~~~~~~~~~~~~

ಆ ದೇವಿಯ ಆತ್ಮವು ಮೆಲ್ಲನೆಯೆ ತೆರೆಯಾಯಿತು; ಮೊರೆಯಾಯಿತು. ತಿರೆಯೆಲ್ಲ ತಾನಾಗಿ ತನ್ನತನವನ್ನೇ ಮೀರಿ ಅತೀಂದ್ರಿಯಕ್ಕೆ ನೆಗೆಯಿತು. ಎಚ್ಚರದ ಚಿಂತೆ ಕನಸಿನಲ್ಲಿ ಕಾಣುವಂತಾಯಿತು. ಅವಳಿಗೆ ಅತಿಶೋಕಮಯ ಗೇಯದ ಇಂಚರ ಕೇಳಿಸಿತು. ಆ ಪದಗಳನ್ನು ಕೇಳಿದಳು ಎಂದರೆ ಅದು ಇಂದ್ರಿಯಜ್ಞಾನಕ್ಕೆ ಔಪಚಾರಿಕವಾಗಿತ್ತು. ಅವಳು ಕಾಲ ದೇಶಗಳನ್ನು ಮೀರಿದ ಅನುಭವವನ್ನು, ವರ್ಣಿಸಲಾಗದ್ದನ್ನು ಕೇಳಿದಳೋ? ಕಂಡಳೋ? ಏನಾದರೇನು ರಾಮ ದುಃಖವನ್ನೆಲ್ಲವನ್ನು ತಾನು ಉಂಡಳು!

ಸೀತೆಯನ್ನು ಸುತ್ತುಗಟ್ಟಿ ಕಾಯುತ್ತಿದ್ದ ಲಂಕಾ ಲತಾಂಗಿಯರು ಅವಳು ಪ್ರಜ್ಞಾಶೂನ್ಯಳಂತಾದುದನ್ನು ಕಂಡು ಬೆಚ್ಚಿದರು. ದಿಕ್ಕು ತೋಚದಂತಾದರು. ಗಾಳಿಯನ್ನು ಬೀಸಿದರು. ನೀರೆರಚಿದರು. ಅಲುಗಾಡಿಸಿ ಕರೆದರು. ಕೊನೆಗೆ ಆ ಸಮಾಚಾರವನ್ನು ದೊರೆಗೆ ಮುಟ್ಟಿಸಿದರು.

ಬೆಳುದಿಂಗಳ ರಾತ್ರಿ ಕಳೆದು ಪೂರ್ವದಿಕ್ಕೆಂಬ ಸ್ತ್ರೀಯ ಮುಖಕ್ಕೆ ನಸುಗೆಂಪು ಅರಳುವಂತೆ, ಸೀತೆಯ ಮುಖದಲ್ಲಿ ಬಿಳುಪು ಅಳಿಯಿತು. ನಳನಳಿಸುವ ಚೆಂದಳಿರ ಸೊಂಪು ಉದಯಿಸಿತು. ಆ ಶೋಕಗೇಯವು ನಿಧಾನವಾಗಿ ಧೀರಗಾನವಾಗಿ ತಿರುಗಿತು. ರಾಗಗಳನ್ನು ವಿಸ್ತಾರಗೊಳಿಸುವ ಕ್ರಮತಾನ. ತಾನದ ಮೇಲೆ ತಾನ ಗರಿಗೆದರಿ ತಾನವು ಏರಿದಂತೆ, ಹರ್ಷಗಾನದ ಪಕ್ಷಿ ಬಾನೆತ್ತರಕ್ಕೆ ಹಾರಿತು. ಅರವಿಂದ ನೇತ್ರೆಯು ಕಣ್ಣು ತೆರೆದಳು. ಮುಂದೆ ಧಾನ್ಯಮಾಲಿನಿಯೊಡನೆ ನಿಂತಿದ್ದ ದಶಕಂಠನನ್ನು ಕಂಡಳು. ಬುದ್ಧಿ ಪೂರ್ವಕವಾಗಿಲ್ಲದೆ. ಅಭ್ಯಾಸಬಲವೆಂಬಂತೆ ಮುಖವನ್ನು ಕೆಳಗೆ ಮಾಡಿದಳು. ತನ್ನ ಅಡಿದಾವರೆಯವರೆಗೆ ಮುಡಿಚಾಚಿ ನೆಲದ ಮೇಲೆ ಒರಗಿದ್ದ ದಶಶಿರನ ನೆರಳನ್ನು ಕಂಡಳು!

ಮೈಥಿಲಿ, ಮುಹುರ್ಮುಹುರೆನ್ನ ದೈನ್ಯಮಂ ನಿನಗಾಂ ನಿವೇದಿಸುತ್ತಿಹೆನೆಂತೊ ಲೆಕ್ಕಿಸದೆ ನನ್ನ ಪೆಂಪಂ.

ದೊರೆಯ ಕಣ್ಣ ಸೂಚನೆಯನ್ನು ತಿಳಿದು ಸೀತೆಯ ಬಳಿಯಿದ್ದ ಹೆಂಗಸರ ಕಾವಲು ಪಡೆಯವರು ಅಲ್ಲಿಂದ ಮರಳಿದರು. ಧಾನ್ಯಮಾಲಿನಿಯು ಅಲ್ಲಿಂದ ತೆರಳಲು ತೊಡಗಿದಾಗ ರಾವಣನು ಅವಳನ್ನು ಇರಲು ಹೇಳಿದನು. ಜಾನಕಿಯ ಕಡೆ ತಿರುಗಿ ಹೀಗೆ ಹೇಳಿದನು:

'ದೇವಿ, ನಿನ್ನ ಇಚ್ಛೆಗೆ ಏನೂ ಕೊರತೆಯಿಲ್ಲದಂತೆ ನಿನ್ನ ದಾಸಿಯರು ನೀನು ಹೇಳಿದುದನ್ನು ಮಾಡುತ್ತಿರುವರಲ್ಲವೆ? ಈ ಹೊಸ ಜಾಗವು ನಿನಗೆ ಉತ್ತಮವಾಗಿದೆಯೆ? ವಾಯುವು ಬೀಸಣಿಗೆ ಬೀಸಿ ಸೇವಿಸುತ್ತಿರುವನೆ? ಸೂರ್ಯನು ನಿನ್ನ ಸಿರಿಮೈಗೆ ಎಳೆಬಿಸಿಲ ಕಾವು ನೀಡಿದನೆ? ವನದಾಸಿಯು ತರುಪತ್ರಗಳ ಛತ್ರಛಾಯೆಯನ್ನು ಕೊಡೆಯ

ನೆರಳಾಗಿಸಿ ಕರ್ತವ್ಯವನ್ನು ಪಾಲಿಸುತ್ತಿರುವಳೆ? ಈ ಸಾಮಂತ ನೃಪಸಾಗರನು ರಾಜಸೇವಾಸಕ್ತ ಮತ್ತು ನನ್ನ ಕೃಪೆಯ ಆಕಾಂಕ್ಷಿಯಾದ ಕಿಂಕರ. ಅವನು ನಿನಗೆ ತೆರೆಚವರಿಯನ್ನು ಬೀಸಿ ಗೌರವದ ಕಾಣ್ಕೆಯನ್ನು ಸಲ್ಲಿಸಿರುವನಲ್ಲವೆ?

'ಸೀತೆ, ಉತ್ತರಕ್ಕೆ ಮುಖಮಾಡಿ ಬಡವನನ್ನು ಬೇಡಿ ಏನನ್ನು ಪಡೆಯುವೆ? ಆ ಕುಬೇರನು ತನ್ನ ಸಂಪತ್ತನ್ನೆಲ್ಲ ಲಂಕೆಗೆ ಸೋತು ಅವನಿಗೆ ಬಡತನ ಉಂಟಾಗಿದೆ. ದಕ್ಷಿಣಕ್ಕೆ ಕಣ್ಣು ತಿರುಗಿಸುವುದೂ ಬೇಡವಾಗಿದೆ. ಲಂಕೆಯ ಅರಮನೆಯ ಶಿರದ ಗೋಪುರದ ಬಂಗಾರ ದೀಪ್ತಿಯು ತಾನು ಯಾವಾಗಲೂ ಯಮನಿಗೆ ಎಚ್ಚರಿಕೆಯ ಬೆರಳ ಭೀತಿಯಂತಾಗಿದೆ.

'ಮೈಥಿಲಿಯೆ, ನನ್ನ ಹಿರಿಮೆಯನ್ನು ಹೇಗೂ ಲೆಕ್ಕಿಸದೆ ಪುನಃ ಪುನಃ ನನ್ನ ದೈನ್ಯವನ್ನು ನಿನಗೆ ನಿವೇದಿಸುತ್ತಿರುವೆನು. ರಾಜನ ತಾಳ್ಮೆ ಮಿತವಾದುದಾದರೂ, ನಿನ್ನೊಲ್ಮೆಯ ಬೆಲೆಯನ್ನು ತಿಳಿದೆನು. ನಾನು ಹೃದಯದ ಕಾತರತೆಗೆ ತಾಳ್ಮೆಯನ್ನು ಕಡಿವಾಣವಾಗಿಸಿಕೊಂಡಿರುವೆನು. ನಿನ್ನ ಪ್ರೀತಿಯ ವರವನ್ನು ಪಡೆಯುವುದಕ್ಕಾಗಿ ನಾನು ತಪಸ್ವಿಯಾಗಿರುವೆನು.

'ಪಂಕಜೆಯೆ, ಒಪ್ಪಿಬರಲು ಪ್ರೀತಿಯು ಜೇನು; ಒಲ್ಲದಿದ್ದರೂ ಬಲಾತ್ಕಾರದಿಂದ ಎಳೆದುಕೊಂಡರೆ ಅದು ಕೆಸರು. ಸಾಧನೆಗೆ ಅಸಾಧ್ಯವಾದುದು ಇಲ್ಲ ಎಂದು ಹೇಳುವರು. ಉಪಾಸನೆ ಮಾಡಿದರೆ ಕಾಲಾಂತರದಲ್ಲಿ ಕಲ್ಲು ಸಹ ಈಶ್ವರನ ಕೃಪೆಯಾಗಿ ಪರಿಣಮಿಸುತ್ತದೆ ಎಂದು ಹೇಳುವರು. ಹಾಗಿರುವಾಗ ನಿನ್ನ ಕಲ್ಲೆದೆ ಕರಗಿ ಮೃದುವಾಗುವುದು ದಿಟ! ನೋಡು, ನನಗೆ ಈಕೆಯೆ ಸಾಕ್ಷಿಯಾಗಿದ್ದಾಳೆ! ಧಾನ್ಯಮಾಲಿನಿಯು ವ್ರತ ನಿರತನಾದ ನನಗೆ ಕಾಲಾಂತರದಲ್ಲಿ ಒಲಿದು, ನನ್ನಮೇಲೆ ಕೃಪೆ ತೋರಿದಳು. ಇದನ್ನು ನಿನಗೆ ಈಗಾಗಲೆ ತಂಗಿ ಚಂದ್ರನಖಿಯು ಹೇಳಿರುವಳಲ್ಲವೆ?'

ಅವನಿಜಾತೆಯು ಕೈಯಲ್ಲಿ ಹಿಡಿದ ಹುಲ್ಲು ಕಡ್ಡಿಯನ್ನು ರಾವಣನೆಂದು ತಿಳಿದಳು. ಮುಖ ಎತ್ತದೆಯೆ ಅವನನ್ನು ಸಂಬೋಧಿಸಿದಳು:

'ದಶಗ್ರೀವನೆ, ವಿಧಿಯ ಹೋಮದಲ್ಲಿ ಬಲಿಯಾಗಲು ಬಂದ ಪಶು ನೀನು. ತಾಯಿಯು ಕೆಡುಕ ಕಂದನಿಗೆ ಮರುಗುವಂತೆ ನಾನು ನಿನಗೆ ಮರುಗುತ್ತೇನೆ. ನನ್ನ ಕಲ್ಲೆದೆ ಕರಗುತ್ತ ಇದೊ ನಿನಗೆ ಮೃದುವಾಗುವುದು ನಿಜ! ನೀನು ಹೇಳಿದ ರೀತಿ ಸಾಧನೆಗೆ ಅಸಾಧ್ಯವಾದುದು ಯಾವುದೂ ಇಲ್ಲ ಎಂದು ಹೇಳುವರು. ಉಪಾಸಿಸಿದರೆ ಕಾಲಾಂತರದಲ್ಲಿ ಕಲ್ಲು ಸಹ ಈಶ್ವರನ ಕೃಪೆಯಾಗಿ ಪರಿಣಮಿಸುತ್ತದೆ. ಅದೇ ರೀತಿ ಕಬ್ಬಿಣಕ್ಕೆ ಸಮನಾದ ನಿನ್ನ ಕಲ್ಲೆದೆ ಕರಗಿ ಮೃದುವಾಗುವುದು ದಿಟ! ನಿನ್ನ ಆತ್ಮದ ಉದ್ಧಾರಕ್ಕೆ ನಾನು ಸದಾ ವ್ರತಧಾರಿಯಾಗಿದ್ದೇನೆ.'

ಸೀತೆಯು ಹಾಗೆ ಆವೇಶವು ಏರಿದಂತೆ ನುಡಿ ನುಡಿಯುವುದನ್ನು ಕೇಳಿ, ಧಾನ್ಯಮಾಲಿನಿಯಂತೆ ದಶಶಿರನು ಆಶ್ಚರ್ಯಪಟ್ಟನು. ಅನಂತರ ಗಂಭೀರ ವೈಖರಿಯಿಂದ ನಿಧಾನ ನಿಧಾನವಾಗಿ ದೇವಿಯು ಮುಖವನ್ನು ಎತ್ತಿದಳು! ಅಸುರನನ್ನು ನೇರವಾಗಿ ನೋಡಿದಳು. ಆ ನಿಂದಾ ದೃಷ್ಟಿಗೆ ಹೆದರಿದ ರಕ್ಕಸನಲ್ಲಿ ವ್ಯರ್ಥ ಆಸೆ ಕುಗ್ಗಿತು. ಆ ದಿಟ್ಟ ದೃಷ್ಟಿಯನ್ನು ಮೊತ್ತ ಮೊದಲಾಗಿ ಸಂಧಿಸಿದ ದೈತ್ಯೇಂದ್ರನು ಅವಳನ್ನು ಮೂಕ ವಿಸ್ಮಯನಾಗಿ ಈಕ್ಷಿಸುತ್ತಿದ್ದನು. ಆಗ ಮತ್ತೆ ವಸುಂಧರಾತ್ಮಜೆಯು ತನ್ನ ಮಾತನ್ನು ಮುಂದುವರಿಸುತ್ತ,

'ದಶಗ್ರೀವನೆ ನೀನು ಹಿರಿಯನಾಗಿರುವೆ. ಆ ಹಿರಿತನ ಕೆಡದ ಹಾಗೆ ಬಾಳು. ಧರ್ಮದಂಡವನ್ನು ಕೆಣಕಿ ಲಂಕೆಯನ್ನು ಹಾಳುಮಾಡಬೇಡ. ನಿನ್ನನ್ನು ಒಲಿದವರಿಗೆ ವ್ಯರ್ಥವಾಗಿ, ಅನ್ಯಾಯವಾಗಿ ವೈಧವ್ಯವನ್ನು ಉಂಟುಮಾಡಬೇಡ! ಅಯ್ಯೊ ಮರುಳೆ ಧರ್ಮರೋಷವನ್ನು ಸಾಗರವು ತಡೆಯುತ್ತದೆಯೆ? ಸಾಗರವೆ ಸೇತುವೆಯಾಗಿ ಮೃತ್ಯುರೂಪದ ಕೃಪಾಕೇತು ವಿಷದಂತೆ ನಿನ್ನನ್ನು ಅಟ್ಟಿಸಿಕೊಂಡು ಬರುವುದಿಲ್ಲವೆ?'

ಎಂದು ಹೇಳಿ ಮುಖವನ್ನು ಬಾಗಿಸಿದಳು. ಕಡಲ ಮೊರೆ, ಹಕ್ಕಿಗಳ ಇಂಚರ, ತರುಗಳ ಮರ್ಮರ ಕೇಳಿಸಿತು. ರಾವಣನು ಮೌನವಾಗಿ ಮುಖ ಹಿಂತಿರುಗಿಸಿಕೊಂಡು ಧಾನ್ಯಮಾಲಿನಿಯೊಡನೆ ತೆರಳಿದನು. ಚಿಂತೆಯಲ್ಲಿ ಮುಳುಗಿದವನ ಜೀವನದ ಕಡಲು ಅಂತರ್ ಮಥಿತವಾಯಿತು.

ನಾನಕ್ಕನೆನ್ ನಿನಗೆ, ತಂಗೆ, ವಯಸ್ಸಿನಿಂದಂತೆ ದುಕ್ಕದಿಂ!

ಆ ರಾತ್ರಿಯ ಬೆಳ್ದಿಂಗಳಿನಲ್ಲಿ ವಿಶ್ವನಿದ್ರೆಯಲ್ಲಿ ಒಂದು ಕನಸಿನಂತೆ ಪೃಥ್ವಿಯಿತ್ತು. ನಿಶ್ಯಬ್ದತೆಯ ರೆಕ್ಕೆ ಬಡಿತವೆಂಬಂತೆ ಕಡಲ ತೀರದ ತೆಂಗಿನ ಮರಗಳಲ್ಲಿ ಗರಿಗಳು ಮರ್ಮರನೆ ನರ್ತಿಸುತ್ತಿದ್ದವು. ಚಂದ್ರಸುಂದರ ವಿಶಾಲವಾದ ನೀಲಾಬ್ಧಿಯು ತಾನು ಆ ಸತಿಯ ಸಂಕಟಕ್ಕೆ ಅನುಕಂಪಿಸುವ ರೀತಿಯಲ್ಲಿ ನರಳಿ ಹೊರಳಿ ನಿಟ್ಟುಸಿರು ಬಿಡುತ್ತಿತ್ತು. ಆಗ ಸೀತೆಯ ಕಿವಿಗೆ ಒಂದು ಕನಕ ನೂಪುರದ ಕಿಂಕಿಣಿ ಕೇಳಿಸಿತು!

ಚಕಿತ ನೇತ್ರೆಯಾಗಿ ನೋಡುತ್ತಿರಲು ಆ ಅಮೃತ ರಾತ್ರಿಯೆ ಲಲನೆಯ ಆಕೃತಿ ಪಡೆದು ಬಂದಂತಿತ್ತು. ಹಾಲು ಬೆಳ್ಳನೆ ಸೀರೆ ಶೃಂಗರಿಸಿದ ಒಂದು ಮನುಷ್ಯರೂಪವು ನಡೆಯುವ ರೀತಿಯಿಂದಲೆ ಮನಸ್ಸಿಗೆ ಭಯ ಭಕ್ತಿಯನ್ನುಂಟು ಮಾಡುತ್ತಿತ್ತು. ಭೂಮಿದೇವಿಯೆ ತನ್ನ ಕುಮಾರಿಯನ್ನು ಸಂತೈಸಲು ಬರುತ್ತಿದ್ದಾಳೆ ಎಂಬಂತೆ ಓರ್ವಳು ಬಂದಳು!

ಹತ್ತಿರಕ್ಕೆ ಬಾರದೆಯೆ ದೂರದಲ್ಲಿಯೆ ನಿಂತಳು ಎಂಬಂತಿದ್ದು, ಕೈಗಳನ್ನು ಎತ್ತಿದಳೆ? ಇದೇನು ಸೋಜಿಗ? ತನಗೆ ಕೈ ಮುಗಿದಳು ಎಂಬಂತೆ ತೋರುತ್ತಿದೆ! ಸೀತೆಯು ಆಶ್ಚರ್ಯದಿಂದ ಕಣ್ಣಿಟ್ಟು ನೋಡುತ್ತ ನಿಟ್ಟುಸಿರು ಬಿಟ್ಟಳು. ಆ ಗಂಭೀರೆ, ಧೀರೆ,

ಧವಳಾಂಬರದ ಮಹಿಳೆಯು ವೀಣೆ ಮಿಡಿದಂತೆ ನಿಧಾನ ನಿಧಾನವಾಗಿ, ಅಸ್ಪಷ್ಟವಾಗಿ ಏನನ್ನೊ ಹೇಳುತ್ತ ರೋದಿಸಿದಳು!

ಹೀಗೆ ಏಳು ರಾತ್ರಿಗಳು ಆ ರೂಪು ಬಂದು ದೂರದಲ್ಲಿ ನಿಂತು ಅತ್ತಿತು. ನಮಸ್ಕರಿಸಿ ಅಸ್ಪಷ್ಟವಾದುದನ್ನು ಕಿರುಗುಟ್ಟುತ್ತ ಹಿಂತಿರುಗುತ್ತಿತ್ತು. ಹೀಗಿರಲು ಎಂಟನೆಯ ರಾತ್ರಿ ಇಳೆಗುವರಿ ಸೀತೆಯು ಕನಿಕರದಿಂದ ಕರಗಿದಳು. ಮೇಲೆದ್ದಳು. ಅವಳು ಇದ್ದ ಕಡೆಗೆ ನಡೆದಳು. ಮನಸ್ಸು ಬಿಚ್ಚಿ ಹೀಗೆ ನುಡಿದಳು:

'ತಂಗಿ, ನೀನು ಯಾರಮ್ಮ? ಏಳು ರಾತ್ರಿಗಳಿಂದ ನೋಡುತ್ತಿದ್ದೇನೆ. ಬಂದು ಗೋಳಾಡುತ್ತ ಯಾವುದೊ ಸಂಕಟವನ್ನು ಹೇಳುತ್ತಿರುವೆ. ಯಾರನ್ನೊ ಕರೆಯುತ್ತಿರುವೆ. ಯಾರನ್ನೊ ಬೇಡುತ್ತಿರುವೆ. ಯಾರಿಗೊ ಕೈ ಮುಗಿದು ರಕ್ಷಣೆಯನ್ನು ಪಡೆಯುವುದಕ್ಕಾಗಿ ವ್ರತ ಬದ್ಧಳಾದಂತೆ ಕಾಣುತ್ತಿರುವೆ.

'ನಾನು ಮೊದಲಿಗೆ ಇದು ರಾಕ್ಷಸನ ಮಾಯೆಯೆಂದು ಬೆದರಿದನು. ಕಡೆಗೆ ನಿನ್ನ ಕೊರಳ ದುಃಖದ ನೈಜತೆಯು ನನ್ನಲ್ಲಿ ಕರುಣೆಯನ್ನು ಕೆಣಕಿತು. ನನ್ನಂತೆ ನೀನೂ ಸಹ ರಾಕ್ಷಸನ ದುಷ್ಟತನ ಎಳೆದು ತಂದ ಹೆಣ್ಣೇಯಿರಬೇಕು! ಈ ಲಂಕೆಯೊಳಗೆ ನಮ್ಮಂತಹವರು ಇನ್ನೆಷ್ಟು ದುಃಖಿಗಳು ಇರುವರೊ?'

'ನಾನು ನಿನಗೆ ಅಕ್ಕನು. ತಂಗಿಯೆ, ವಯಸ್ಸಿನಿಂದಷ್ಟೆ ಅಲ್ಲ, ದುಃಖದಿಂದಲೂ! ನನ್ನ ರೀತಿಯ ಅತಿ ದುಃಖಿಯು ಲಂಕೆಯೊಳಗೆ ಮಾತ್ರವಲ್ಲ, ಸೃಷ್ಟಿಯಲ್ಲಿಯೇ ಇಲ್ಲ ಎಂದು ತಿಳಿ...'

'ದೇಶವನ್ನು ತ್ಯಜಿಸಿ, ವನವಾಸವನ್ನು ಆಯ್ಕೆಮಾಡಿಕೊಂಡು, ರಾಕ್ಷಸನ ಪಾಪಕ್ಕೆ ಬಲಿಯಾದ ದಶರಥನ ಸುತನ ಪತ್ನಿಗಿಂತ ಹೆಚ್ಚಿನ ದುಃಖಿ ನೀನು ಎಂದು ಹೇಳುವೆಯ?'

'ಹೌದು, ಸೀತೆಗಿಂತ ಅತಿದುಃಖಿ ನಾನು. ಎಷ್ಟೊ ಸೀತೆಯರ ದುಃಖವನ್ನು ಹೊತ್ತಿಸಿರುವವನಿಗೆ ನಾನು ಮಡದಿಯಾಗಿರುವೆನು.'

'ಮಂಡೋದರಿಯೆ ನೀನು?'

ಎಂದು ಹರ್ಷ ವಿಸ್ಮಯದಿಂದ ಪ್ರಶ್ನಿಸಿದ ಅವನಿಜಾತೆಗೆ ಆ ಮಹಿಳೆ ಉತ್ತರಿಸಿದಳು:

'ಆ ಹೆಸರಿನ ನಿರ್ಭಾಗ್ಯ ಹೆಣ್ಣು ನಾನಾಗಿರುವೆನು...'

'ಹೆಸರಿನ ಹೆಣ್ಣು ನಿಜ! ಪೂಜ್ಯೆಯೆ, ಈ ಮೊದಲು ನಿನ್ನ ನಿರ್ಮಲವಾದ ಯಶಸ್ಸನ್ನು ಕೇಳಿದ್ದೆನು. ಇಂದು ನೋಡಿ ಧನ್ಯಳಾದೆನು. ಹಿರಿಯಳಾದವಳಿಗೆ ನಮಸ್ಕರಿಸುತ್ತೇನೆ.'

'ಆರ್ಯೆ, ನಾನು ಅಸುರಿ. ನನಗೆ ನಮಸ್ಕರಿಸಬೇಡ.'

'ನೀನು ಅಸುರಿಯೆ? ನೀನು ಅಸುರಿ ಅಲ್ಲ; ದೇವತೆ. ಪತಿವ್ರತೆಯಾಗಿ ನಮಗೆಲ್ಲ ಆದರ್ಶಮಾತೆ. ನಾನು ನಿನಗೆ ನಮಸ್ಕರಿಸಲು ಶೀಘ್ರವಾಗಿ ನನಗೆ ಮಂಗಳ ಉಂಟಾಗುವುದೆಂದು ನಾನು ಬಲ್ಲೆನು...'

'ನಿನಗೆ ಆ ಮಂಗಳವು ಶೀಘ್ರವಾಗಿ ಒದಗಿ ಬರಲಿ! ನಿನ್ನ ಮಂಗಳವೇ ನನ್ನ ಮಂಗಳವು. ದೇವಿಯೆ, ನನ್ನಂತೆ ನೀನು ಆ ನನ್ನಪತಿಯ ಹೃದಯಕ್ಕೆ ಶುದ್ಧಿ ದೊರೆಯುವಂತೆ ಪ್ರಾರ್ಥಿಸು. ನಾನು ಅದನ್ನು ಬೇಡುವುದಕ್ಕಾಗಿ ಈ ಸ್ಥಳಕ್ಕೆ, ನಿನ್ನ ಸಾನ್ನಿಧ್ಯಕ್ಕೆ ಬರುತ್ತಿದ್ದೆನು...'

ಆ ನುಡಿ ಕೇಳಿ ಸೀತೆಯು ಮೌನಿಯಾದಳು. ತುಸು ಹೊತ್ತಿನ ಅನಂತರ ಮಯನಂದನೆ ಮತ್ತೆ ಹೀಗೆ ಮಾತು ಮುಂದುವರಿಸಿದಳು,

ಹದಿಬದೆತನಕೆ ಮೀರ್ವ ಸಾಧನೆಯಿಲ್ಲ

'ನಿನ್ನನ್ನು ಸಂಧಿಸಲು ನನಗೆ ಲಂಕೇಶನು ಅನುಮತಿಯನ್ನು ನೀಡಲಿಲ್ಲ. ಎಲೆ ಪುಣ್ಯಚರಿತಳೆ, ಅದರಿಂದಾಗಿ ನಾನು ಈ ಮೊದಲೇ ಬಂದು ನಿನ್ನ ದರ್ಶನದಿಂದ ಧನ್ಯೆಯಾಗದೆ ಹೋದೆನು. ಪ್ರಾರ್ಥನೆ ಸಫಲವಾಯಿತು. ನೀನೆ ದರ್ಶನವನ್ನು ನೀಡಿದೆ. ಮಾತನಾಡಿಸಿದೆ. ನಾನು ಕೃತಾರ್ಥಳಾದೆ....

'ತಂಗಿಯೆ, ಹದಿಬದೆತನಕ್ಕೆ ಮೀರಿದ ಸಾಧನೆಯಿಲ್ಲ. ಅಗ್ನಿಯು ಕೊಳೆಗೆ ತಗುಲಲು ಕೊಳೆಯು ಉರಿದು ಹೋಗುವುದು. ಅದೇ ರೀತಿ ನಿನ್ನ ವ್ರತದಿಂದ ನನ್ನ ಪತಿಯ ಹೃದಯದ ಪಾಪದ ಕೊಳೆ ನಾಶವಾಗುತ್ತದೆ. ಸನ್ಮತಿ ಉದಿಸಿ ಸರ್ವರಿಗೆ ಶಾಂತಿ ಸುಖ ಉಂಟಾಗಲಿ!...'

ಸೀತೆಗೆ ಸ್ವಪ್ನಾವಸ್ಥೆಯಿಂದ ಎಚ್ಚರವಾಗುವ ಮೊದಲೇ ಆ ಸ್ತ್ರೀ ಮೂರ್ತಿ ಮುಡಿಚಾಚಿ ಅವಳ ಪಾದವನ್ನು ಮುಟ್ಟಿದಳು. ಪಾದ ಧೂಳಿಯನ್ನು ಧರಿಸಿದಳು. ಬೆಳುದಿಂಗಳಿಂದ ದೇಹಪಡೆದ ಹೆಣ್ಣು ಮತ್ತೆ ಬೆಳುದಿಂಗಳಾಗುವಂತೆ ಅವಳು ಅಲ್ಲಿಂದ ತಕ್ಷಣವೇ ಸೀತೆಯ ಕಣ್ಣಳತೆಯನ್ನು ಮೀರಿ ನಡೆದಳು!

ಸೀತೆಯು ಅದು ನನಸಾಗಿದ್ದರೂ ಕನಸಿನಿಂದ ಎಚ್ಚೆತ್ತವಳಂತೆ ಬೆರಗಾಗಿ ಹಿಂದಕ್ಕೆ ಮರಳಿದಳು. ಗುರಿಯಲ್ಲಿ ಅಂತರವಿಲ್ಲದಿರಲು ತನ್ನ ವ್ರತಕ್ಕೆ ಬೇರೆಯವರ ವ್ರತವು ನೆರವಾಗುವುದೆಂದು ಅವಳು ಮೇರೆ ಮೀರಿದ ಆನಂದಕ್ಕೆ ಒಳಗಾದಳು. ತನ್ನ ದೇವತೆಗೆ ಪೂಜೆ ಸಲ್ಲಿಸಿ ನಮಸ್ಕರಿಸುವ ಅನ್ಯರನ್ನು ಕಂಡಾಗ ಭಕ್ತನಿಗೆ ಭಕ್ತಿ ಹುರಿಗೊಂಡು ಹೆಚ್ಚುವುದು. ಅದರಂತೆ ಮಂಡೋದರಿಯ ದೃಢತೆಯು ಮೈಥಿಲಿಯ ಚಿತ್ತಕ್ಕೆ ಉಕ್ಕಿನ ಸಾಣೆಯಾಯಿತು.

ಸೆರೆಮನೆಯೇ ಆತ್ಮಸಾಧನೆಗೊಂದು ಎಲೆಯ ಮನೆಯಾಯಿತು. ಪೌಲಸ್ತ್ಯಜನ ಲಂಕೆಯು ಮಂಡೋದರಿಯ ಲಂಕೆಯಾಯಿತು. ರಾವಣನ ಮೇಲಿದ್ದ ವೈರಭಾವವು


ಸುಲಭವಾಗಿ ಕರಗಿ ಹೋಯಿತು. ಅದು ಮಂಡೋದರಿಯ ಪತಿಯ ಮೇಲಿನ ಕರುಣೆಯಾಯಿತು. ಸೂರ್ಯನ ಬಿಸಿಲಿನ ಜೊತೆಗೆ ಕಾಲದ ಕಾವು ನೆರವಾಗಲು ಇದ್ದಿಲಿಗೆ ವಜ್ರತನ ಬರುತ್ತದೆ. ಹಾಗೆ ಸೀತೆ ಮಂಡೋದರಿಯರಿಬ್ಬರೂ ತಪಸ್ಸು ಮಾಡಲು ರಾವಣನ ಮನದ ಹೊನ್ನು ಕರಕರಗಿ ದೋಷವನ್ನು ಕಳೆದುಕೊಳ್ಳದೆ? ಪರಿಶುದ್ಧವಾಗದೆ? ಹೊಳೆಯದೆ? ಹೊಚ್ಚ ಹೊಸ ಹೊನ್ನಾಗಿ ತಳತಳಿಸದೆ?

ಪುಣ್ಯ ಪ್ರಸಾದಮಂ ಶಿರದೊಳಾಂತಳ್ ಮತ್ತೆ ವೈದೇಹಿ.

ಸೀತೆಯು ಅತ್ರಿಮುನಿಗಳಪತ್ನಿ ಅನಸೂಯೆಯನ್ನು ನೆನೆದಳು. ಹದಿಬದೆಯರ ಅಧಿದೇವಿಯಾದ ಆ ಪೂಜ್ಯಳು ತನಗೆ ರಕ್ಷೆ ಮತ್ತು ಆಶೀರ್ವಾದವಾಗಿ ನೀಡಿದ್ದ ದಿವ್ಯಸುಮವನ್ನು ಮುಡಿಯಿಂದ ತೆಗೆದು ನೋಡಿದಳು. ಅದನ್ನು ಹಿಗ್ಗಿನಿಂದ ಮತ್ತೆ ಮತ್ತೆ ನೋಡಿದಳು. ಸ್ನಾನ ಮಾಡದೆ, ಉಡದೆ, ಕೊಳೆಯ ಮೆದೆಯಾಗಿದ್ದ ತನ್ನ ಮೈಯಲ್ಲಿ ಅದೊಂದೇ ಹೂ ಹೊಚ್ಚ ಹೊಸತಾಗಿರುವುದನ್ನು ಕಂಡಳು. ಆಗ ರಾಮನಿಗೆ ತನಗೆ ಸತ್ಯಕ್ಕೆ ಶುಚಿಗೆ ಧರ್ಮಕ್ಕೆ ಸರ್ವರಿಗೆ ಮಂಗಳವು ದಿಟವೆಂದು ನಂಬಿದಳು. ಧೈರ್ಯಗೊಂಡಳು. ಸುಮರೂಪದ ಅನಸೂಯೆಯನ್ನು ಹಣೆಗೆ ಮುಟ್ಟಿಸಿಕೊಂಡು ನಮಿಸಿದಳು. ಪುಣ್ಯ ಪ್ರಸಾದವೆಂದು ಅದನ್ನು ಮತ್ತೆ ವೈದೇಹಿಯು ಶಿರದಲ್ಲಿ ಧರಿಸಿಕೊಂಡಳು.

ಸುಮರಕ್ಷೆಯು ವಜ್ರರಕ್ಷಣೆಯೆಂದು ತಿಳಿದಳು. ಧರಣೀದೇವಿಯ ಕನ್ಯೆಯು ಪ್ರತಿದಿನ ಪ್ರಾರ್ಥನಾ ತಪದಿಂದ ವಿಶ್ವಶಕ್ತಿಯ ಕೃಪೆಗೆ ಸೆರಗೊಡ್ಡಿ ಬೇಡುತ್ತಿದ್ದಳು. ಧರ್ಮವು ಅಟ್ಟಿದ ಬೇಹುಗಾರರೆಂಬಂತೆ ಮಳೆಯದಂಡು, ಮೋಡಗಳ ಗುಂಪು ಲಂಕಾ ಕನಕ ಕೋಟೆಯನ್ನು ಮುತ್ತಿತು. ಅದು ಮಳೆ ಸಿಡಿಲು ಮಿಂಚುಗಳ ಗಾಳಿ ಗುಡುಗಿನ ಘೋರ ಮುಂಗಾರ ಭೈರವನಾಗಿತ್ತು. ಅದು ಆಕಾಶದಲ್ಲಿ ಭೂಮಿಯಲ್ಲಿ ಕಾಡಿನಲ್ಲಿ ನಾಡಿನಲ್ಲಿ, ನೋಡುವವರ ಎದೆಯ ಒಡಲಿನಲ್ಲಿ, ಮೇರೆ ಮೀರಿದ ಕಡಲಿನಲ್ಲಿ ಧಿಮ್ಮೆಂದು ಧೀಂಕಿಟ್ಟು ಪಾದವನ್ನು ಎತ್ತಿ ಪಾದವನ್ನು ಇಟ್ಟು–ಲಂಕೆ ತಲ್ಲಣಿಸುವಂತೆ ಹುಚ್ಚು ಕುಣಿತ ಕುಣಿಯಿತು!

❑



~~~~~~~~~~~~~~~~~~~~~~ ಸಂಚಿಕೆ – ೯ ~~~~~~~~~~~~~~~~~~~~~~

ಸುಗ್ರೀವಾಜ್ಞೆ

ಎಲೆ ಉದುರಿ ಬರಲಾದ ಬೂರುಗದ ಮರದಲ್ಲಿ ಬಲಿತ ಕಾಯಿಯ ಓಡು ಒಡೆಯಿತು. ಅದು ಬಿಸಿಲ ಕಾವಿಗೆ ಸಿಡಿದು ಹೊಮ್ಮಿತು. ಚೆಲ್ಲಿ ಚಿಮ್ಮಿ ತನ್ನಲ್ಲಿದ್ದ ಬಿಳಿ ಅರಳೆಯನ್ನು ಚೆಲ್ಲಿತು. ಮಸಿ ಚೆಲ್ಲಿದಂತೆ ಕಾರ್ಗಿಚ್ಚು ಸುಟ್ಟು ಕಪ್ಪಾಗಿಸಿದ್ದ ನೆಲದ ಕಪ್ಪಿನಲ್ಲಿ ಶರತ್ಕಾಲದ ಮೋಡದ ಪ್ರೀತಿಯನ್ನು ಚಿತ್ರಿಸಿತು. ಚಿಟ್ಟೆ ಹಕ್ಕಿಯು ದಾಂಪತ್ಯ ಸುಖದಲ್ಲಿ ತೃಪ್ತಿಯನ್ನು ಪಡೆಯಿತು. ಬಸಿರ ವ್ರತದ ಸಿರಿಗೆ ಗೂಡು ಕಟ್ಟುವ ಅದು ಮೊಟ್ಟೆ ಮರಿಗಳಿಗೆ ಮೆತ್ತೆಯನ್ನಾಗಿಸಲು ಆ ಹತ್ತಿಯನ್ನು ಕೊಕ್ಕಿನಲ್ಲಿ ಆಯ್ದುಕೊಂಡೊಯ್ದಿತು.
~~~~~~~~~~~~~~~~~~~~~~

ಮುಳ್ಳು ಪೊದೆಯ ಬೆಮ್ಮಾರಲ ಮರವು ಕಾಯಿ ತುಂಬಿತ್ತು. ಅದು ಹಣ್ಣಾತನಕ್ಕೆ ತಿರುಗಲು ಹೊಸಮಳೆಯ ಆಶೀರ್ವಾದವನ್ನು ಅಪೇಕ್ಷಿಸುತ್ತಿತ್ತು. ಬೆಟ್ಟದ ತೊರೆಯು ಬಿಸಿಲ ಬೇಗೆಗೆ ಬತ್ತಿ, ಬೆನ್ನು ಹೊಟ್ಟೆಗೆ ಹತ್ತಿದಂತಾಗಿತ್ತು. ಅದು ಬರದ ಗರ ಬಡಿದು ಕಲ್ ಕೊರಕು ಅಸ್ಥಿಪಂಜರವಾಗಿ ಅಲ್ಲಲ್ಲಿ ತುಂಡು ತುಂಡಾಗಿ ಚಲನೆಯನ್ನು ಉಡುಗಿಸಿಕೊಂಡಿತ್ತು. ಕಾಡು ಗಿರಿ ಭೂಮಿಯು ಬೇಸಗೆಯ ಧಗೆಗೆ ಚಾತಕ ಪಕ್ಷಿಯಂತಾಗಿತ್ತು.

ರಾಮನು ಸೀತೆಗೆ ಹೇಗೋ ಹಾಗೆ ಮುಂಗಾರಿಗೆ ತಿರೆಯು ಬಾಯಾರುತ್ತಿತ್ತು. ಆಗ ಓ ಆ ದಿಗಂತದ ಎಡೆಯಲ್ಲಿ ಮಳೆಯನ್ನು ತರುವ ಪ್ರತಿಜ್ಞೆ ಹೊತ್ತ, ರವಿಯ ಸ್ನೇಹಿತ, ಶರಧಿ ಶಿಶುವಿನ ನೀಲಿಯ ಮೋಡದಟ್ಟಣೆ ವರದಂತೆ ಕಾಣಿಸಿತು.

ಕಾರ್ಗಾಳಿ ಬೀಸಿದುದು ಮಲೆಯ ಮಂಡೆಯ ಕಾಡುಗೂದಲಂ ಪಿಡಿದಲುಬಿ ತೂಗಿ.

ಅದು ಶಿವನ ಜಟೆಯಂತೆ ಶಿಖರದ ಆಕೃತಿಯಿಂದ ಮೂಡಿ, ಮೇಲ ಮೇಲಕ್ಕೆ ಏರಿ ಬೆಟ್ಟದಾಕಾರದಲ್ಲಿ ಬೆಳೆಯಿತು. ಕೂಡಲೆ ಕುಣಿವ ಕಾಳಿಯ ಕರಿಯ ಮುಡಿ ಬಿಚ್ಚಿ ಹರಡುವಂತೆ ಕೆದರಿ ಸಂಜೆಯ ಆಗಸವನ್ನು ಮುಸುಕಿ ಮುಚ್ಚಿತು. ಜೊತೆಗೆ ಕಾರ್ಗಾಳಿಯು ಮಲೆಯ ಮಂಡೆಯ ಕಾಡುಗೂದಲನ್ನು ಹಿಡಿದು ಅಲುಗಾಡಿಸಿ ತೂಗಿತು. ಹಳೆಮರಗಳು ಉರುಳಿ, ಮರಕ್ಕೆ ಮರ ಉಜ್ಜಿ ಕೊಂಬೆಗೆ ಕೊಂಬೆ ತೀಡಿತು. ಮೆಳೆಯಲ್ಲಿ ಬಿದಿರು ಕರ್ಕಶ ಶಬ್ದದಿಂದ ಕೀರಿಟ್ಟಿತು. ಕಾಡು ನೋವಿಗೆ ಒರಲಿತು.

ಸಿಡಿ ರೋಷದಿಂದ ಕಿಡಿಕಾರುವ ಮಸಿನವಿರಿನ ಹುಬ್ಬಿನ ಸಿಟ್ಟಿನ ರಾಕ್ಷಸಿಯು ಅಲೆಯುವಂತೆ ಮುಗಿಲಿನ ಅಂಚು ಮಿಂಚಿತು. ಕಾರ್ಗಲ್ ಮುಗಿಲ ಬಂಡೆಗಳ ಸಂಘರ್ಷಣೆ ಸಿಡಿಲು ಹೊಮ್ಮಿಸಿ ಗುಡುಗಿದುವು. ದಪ್ಪನಾದ ಹನಿಗಳು ಮತ್ತು ಆಲಿಕಲ್ಲುಗಳು ಕವಣೆಯಂತೆ ಬೀಸಿದುವು. ಬಿಸಿಲು ಉಡುಗಿ, ದೂಳು ಉಂಡೆಗಟ್ಟಿತು. ಮಣ್ಣು ತೊಯ್ದು ನೆಲದ ಕಂಪು ಪ್ರೀತಿಯಿಂದ ಕಮ್ಮನೆ ಸೊಗಸಿ ತೀಡಿತು. ಝಣತ್ಕಾರ ನೂಪುರದ ಸುಸ್ವರ ಮಾಧುರ್ಯದಿಂದ, ಕನಕ ಕಾಂತಿಯ ಜರತಾರಿಯ ತೆರೆಯನ್ನು ಹೊಂದಿ ನರ್ತಿಸುವ ಯೌವನ ಯವನಿಯ ಕೈಯ ಬಂಗಾರದ ಕಠಾರಿಯಂತೆ-ಭಯಂಕರ ಸೌಂದರ್ಯದ ಮುಂಗಾರಿನ ಆಗಮನವು ಮನೋಹರವಾಗಿತ್ತು.

ತೊರೆಗೆ ಬಡತನ ಹಿಂಗಿತು. ಪೃಥ್ವಿಯಲ್ಲಿ ನವಿರಾದ ಹಸುರು ಮೊಳೆಯಿತು. ಹಸುರುಗರಕೆಯ ಪಚ್ಚೆ ಹಾಸುಗೆಯಲ್ಲಿ ಹೊನ್ನ ಬಣ್ಣದ ಹೂವು ಉದುರಿತು. ಅದು ಪೀತಾಂಬರಕ್ಕೆ ಜರತಾರಿ ಹಾಕಿದಂತೆ ಕಂಗೊಳಿಸಿತು. ಬಂಡೆಗಲ್ಲಿನ ಬಿರುಕಿನಿಂದ ಆಸೆ ಕಣ್ಣು ತೆರೆಯುವಂತೆ ಸೊಂಪಾದ ಹುಲ್ಲು ತಲೆಯೆತ್ತಿತ್ತು. ಬೆಟ್ಟವು ಮಿಂದು ನಲಿಯಿತು. ಪ್ರಾಣಿಗಳು ಮೇದು ತಣಿದವು. ಹಕ್ಕಿಯ ಮರಿಗಳು ರೆಕ್ಕೆಯನ್ನು ಪಡೆದವು. ಹಾರಲು

ಸಹಾಯವಾಗುವ ಆ ರೆಕ್ಕೆಗಳನ್ನು ಹರಡಿ ಹಾಡಿ ಹಾರಾಡಿದವು; ಸೊಬಗಿನಿಂದ ಹಣ್ಣುಂಡು ಹಿಗ್ಗಿದವು.

ಮನೆಗೆ ಅತಿಥಿಯಾಗಿ ಬಂದವನು ತನ್ನ ಒಡೆತನವನ್ನು ಒಡ್ಡಿ ನಿಲ್ಲುವಂತೆ ಮಳೆ ಹಿಡಿಯಿತು. ದುರ್ದಿನವು ದ್ರವರೂಪಿಯಾಗಿ ಕರೆಕರೆಯಾಗಿ ಎಡಬಿಡದೆ ಸುರಿಯಿತು. ಸೂರ್ಯನ ದರ್ಶನ ದೂರವಾಯಿತು. ಹಗಲನ್ನು ಕಪ್ಪು ಮುಗಿಲ ಮಬ್ಬಿನ ಮಂಕು ಕವಿಯಿತು. ಕೀಟ ಕೋಟಿಯ ಕಂಠದಿಂದ ಹೊಮ್ಮಿದ ವಿಕೃತರವವು ರಾತ್ರಿಯ ಕರುಳನ್ನು ಇರಿಯಿತು. ಗರಿತೊಯ್ದು ಮೈಗಂಟಿಕೊಂಡುದರಿಂದ ಕಿರುಗಾತ್ರಗೊಂಡು ಮುದುರಿ, ಒದ್ದೆಯ ಮುದ್ದೆಯಾದ ಹಕ್ಕಿಯು ದೊಡ್ಡ ಕೊಂಬೆಯನ್ನು ಏರಿ ತೂಕಡಿಸಿತು.

ಒಂದು ಹೋರಿ ಜಿಂಕೆಯು ಆ ಮಳೆಯಲ್ಲಿ ಕಾಡು ಅಂಚಿನ ಹುಲ್ಲುಗಾವಲಿನಲ್ಲಿ ನಿಂತಿತ್ತು. ಅದರ ಕೂದಲುಗಳು ಪೂರ್ತಿ ತೊಯ್ದು ಚರ್ಮವೆಲ್ಲ ಕಪ್ಪು ಬಣ್ಣಕ್ಕೆ ತಿರುಗಿತ್ತು. ಹರೆಹರೆಯ ಕೊಂಬಿನ ಇಂಬಿನಿಂದ ಶೋಭಿಸುವ ಮುಖವನ್ನು ಅದು ಜಡಿಮಳೆಗೆ ರೋಸಿ ಕೆಳಗೆ ಮಾಡಿತ್ತು. ಕೆಸರು ಮುಚ್ಚಿದ ಖುರದ ಕಾಲುಗಳ ಅದು ಆ ಮಳೆಯನ್ನು ಪ್ರತಿಭಟಿಸುವಂತೆ ತನ್ನ ಹಿಂಡಿನೊಡನೆ ನಿಂತಿತ್ತು. ಕಟ್ಟಿರುವೆಗಳ ಹಿಂಸೆಯನ್ನು ತಾಳಲಾರದೆ ಮೊಲವು ಕಲ್ಲರೆಯನ್ನು ಏರಿತು. ಜಿಗಣೆ, ನುಸಿ, ಹನಿಗಳಿಗೆ ಹೆದರಿದ ಹುಲಿಯು ಕಾಡನ್ನು ಬಿಟ್ಟು ಬೆಟ್ಟದ ನೆತ್ತಿ ಹುಡುಕುತ್ತಾ ಸಂಚರಿಸಿತು. ಜೀರುಂಡೆಗಳ ಸೇನೆಯು ಜೀರೆನ್ನುವ ಕೀರ್ ದನಿಯಲ್ಲಿ ಚೀರ್ ಚೀರಿ ಹಗಲಿರುಳು ಗೊಳ್ಗರೆಯಿತು. ಬೇಸರದ ಏಕನಾದವನ್ನು ಓ ಬೇಸರಿಲ್ಲದೆಯೆ ನಿರಂತರವಾಗಿ ಬಾರಿಸುತ್ತ ಜಡಿಯ ಸೋನೆ ಬಡಿಯಿತು!

ಜ್ಯೇಷ್ಠ ಮಾಸವು ಕಳೆಯಿತು. ಆಷಾಢ ತೊಲಗಿತು. ಶ್ರಾವಣ ತೀರಿತು. ಶಿವ ಶಿವಾ ದೀರ್ಘವಾದ ಭಾದ್ರಪದವು ಹೇಗೊ ಕೊನೆಮುಟ್ಟಿತು! ದಾಶರಥಿಯು ತಾನು ಮಾಲ್ಯವತ್ ಪರ್ವತದ ಗುಹಾಶ್ರಮದಲ್ಲಿ ಕಷ್ಟದಿಂದ ಮಳೆಯ ಕಾಲವನ್ನು ನೂಕುತ್ತಿದ್ದನು. ಆ ಕಾಲವನ್ನು ಸತಿಯ ಚಿಂತೆಗೆ ಹೊಂದಾಣಿಕೆಯಾಗಿಸಿ ದೂಡುತ್ತಿದ್ದನು. ಅವನನ್ನು ಸಂಜೆ ಬೆಳಿಗ್ಗೆ ಹಾಗೂ ಹಗಲು ಇರುಳುಗಳಲ್ಲಿ ಅಗಲಿಕೆಯ ಬೆಂಕಿ ದಹಿಸಿತು. ಆ ವಿರಹವು ಇಂದ್ರಗೋಪವೆಂಬ ಕೆಂಪು ಬಣ್ಣದ ಹೊನ್ನೆ ಹುಳುಗಳಲ್ಲಿ ಮತ್ತು ಮಿಂಚು ಹುಳುಗಳಲ್ಲಿ ಪ್ರತಿಬಿಂಬಿಸಿತು.

ಹೆಪ್ಪುಗಟ್ಟಿದೆ ಕಪ್ಪು, ಕಲ್ಲಂತೆವೋಲ್.

ಅಣ್ಣ ತಮ್ಮಂದಿರು ರಾತ್ರಿಯ ಹೊತ್ತು ಗವಿಯಲ್ಲಿ ಮಲಗಿ, ನಿದ್ದೆ ಬಾರದಿರಲು ಮಾತಾಡುತ್ತ ತಮ್ಮ ಕಾರ್ಯಯೋಜನೆಯನ್ನು ಚರ್ಚಿಸುವರು. ಕಾರಿರುಳು ಕಪ್ಪು ಕಲ್ಲಂತೆ ಹೆಪ್ಪುಗಟ್ಟಿದೆ, ಹೊರಗೆ ಮಳೆ ಕರೆಕರೆಯ ಕರೆಯುತ್ತಿದೆ. ಕಪ್ಪೆ ಹುಳು ಹುಪ್ಪಡಿಗಳು

ತಮ್ಮ ಕೊರಳ ಸಾವಿರ ಹಲ್ಲಿನ ಗರಗಸದಿಂದ ಗರಗರನೆ ನಿಶಿಯ ನಿಶ್ಯಬ್ದತೆಯ ಚಿಪ್ಪನ್ನು ಕೊರೆಯುತ್ತಿವೆ. ಅದನ್ನು ಆಲಿಸಿದ ಕಿವಿ ಮೂರ್ಛೆ ಹೋಗುವಂತಾಗಿದೆ. ಆ ಸಮಯದಲ್ಲಿ ರಾಮಚಂದ್ರನು ತಮ್ಮನೊಡನೆ ಹೀಗೆ ಮಾತಾಡಿದನು.

'ಏನು ವೃಷ್ಟಿಯ ಘೋಷವಿದು, ಸೌಮಿತ್ರಿಯೆ ಕೇಳು! ಮಲೆ ಕಾಡು ನಾಡು ಬಾನು ಏಕಾಭಿಪ್ರಾಯದಿಂದ ಒಂದಾಗಿ ಗೋಳಾಡುತ್ತ ಬೊಬ್ಬಿರಿಯುವಂತೆ ತೋರುತ್ತಿದೆ. ಈ ಪ್ರಕೃತಿಯ ಅಬ್ಬರದ ಈ ಉಗ್ರತೆಯ ಮಧ್ಯೆ ನಾವು ಮನುಷ್ಯರು ಅತ್ಯಲ್ಪ ಕೃತಿಗಳಲ್ಲವೆ? ನಮ್ಮ ಅಹಂಕಾರದ ರೋಗಕ್ಕೆ ಈ ರೀತಿಯ ಬೃಹದ್ ಉಗ್ರತಾ ಸಾನ್ನಿಧ್ಯವೇ ದಿವ್ಯ ಔಷಧಿ ಎಂಬುದು ನನ್ನ ಅನುಭವ. ಇಲ್ಲಿ ಈ ಗರಡಿಯಲ್ಲಿ ಸಾಧನೆ ಮಾಡಿದವನಿಗೆ ಪರ್ವತ ಸದೃಶ ಸ್ಥಿರತೆ ದೊರೆಯುವುದು ಅಸಾಧ್ಯವೇನಲ್ಲ. ಅದಕ್ಕೆ ಸಾಕ್ಷಿಯಾಗಿ ಆಂಜನೇಯನಿರುವನು...!'

'ಒಬ್ಬನೇನು? ಅದಕ್ಕೆ ಈ ಕಪಿಧ್ವಜ ವಾನರ ಸಮೂಹವೆಲ್ಲವೂ ಸಾಕ್ಷಿಯಾಗಿದೆ. ದಿನದಿನವು ಇಲ್ಲಿಗೆ ಬಂದು ನಿನ್ನೊಡನೆ ಮಾತನಾಡುವವರನ್ನು ನೋಡುತ್ತಿದ್ದೇನೆ. ಅವರಲ್ಲಿ ಒಬ್ಬೊಬ್ಬರು ಮಹಾಮಹಿಮರಲ್ಲದೆ ಕೀಳುಗಳನ್ನು ಕಾಣೆ. ಅಣ್ಣಯ್ಯ, ವಾಲಿಯ ಮಗ ಅಂಗದನನ್ನು ಏನೆಂದು ಹೇಳಲಿ, ಅವನು ದಿಟವಾಗಿ ತಂದೆಯ ಮಗನೆ...ಆ ನೀಲನು ಅತಿ ಮೌನಿ. ಅವನ ಆಳವನ್ನು ನಾನು ತಿಳಿಯಲಾಗಿಲ್ಲ...'

'ಅವನ ಆತ್ಮವು ಕಣ್ಣಕಾಂತಿಯಿಂದ ಮಿಂಚುವುದು, ನಾಲಗೆಯಿಂದ ಅಲ್ಲ.'

'ನಿಜ, ಅವನು ಅಗ್ನಿಯ ಪುತ್ರನೇ ಸರಿ'

ಎಂದು ತಮ್ಮನು ಹೇಳಿದುದಕ್ಕೆ ಅವನಿಜಾಪ್ರಿಯನು ಪ್ರತಿ ಮಾತನಾಡಲಿಲ್ಲ. ಮಳೆಯ ಮೊರೆತ ಇಲ್ಲದಿದ್ದರೆ ಲಕ್ಷ್ಮಣನಿಗೆ ಅಣ್ಣನ ನಿಟ್ಟುಸಿರು ಕೇಳುತ್ತಿತ್ತು. ಮೌನವೆ ಎಲ್ಲವನ್ನು ಹೇಳಿತು. ಮಾತು ನಿಂತೊಡನೆ, ಮಳೆಯ ಕೂಗು ಉಕ್ಕಿ ಬಂದಂತಾಯಿತು. ಕತ್ತಲ ಸಾಂದ್ರತೆ ಹೆಚ್ಚಿದಂತಾಯಿತು. ಜೊತೆಗೆ ಊರ್ಮಿಳಾ ಪತಿಗೆ ಉಸಿರು ಕಟ್ಟಿದಂತಾಯಿತು. ತನ್ನ ಅಣ್ಣನ ಹೃದಯ ದುಃಖದ ಭಾರವನ್ನು ಭಾವಿಸಿಕೊಂಡು ಹೀಗೆ ಹೇಳಿದನು:

'ನನಗೆ ಅಪ್ಪಣೆಮಾಡು ಅಣ್ಣಯ್ಯ. ನಿನ್ನ ಆಜ್ಞೆಯನ್ನು ಸುಗ್ರೀವನಿಗೆ ತಿಳಿಸುತ್ತೇನೆ. ನಾಳೆ ಬೆಳಿಗ್ಗೆಯೆ ಅವನಲ್ಲಿಗೆ ಹೋಗುತ್ತೇನೆ. ಅತ್ತಿಗೆಯನ್ನು ಹುಡುಕಲು ಇನ್ನು ತಡವೇಕೆ?'

ಆ ನುಡಿ ಕೇಳಿ ಬಿಗಿದ ಕಂಠವನ್ನು ಸಂಯಮಕ್ಕೆ ಒಳಗುಮಾಡಿದ್ದರೂ, ರಾಮನದನಿ ನಡುಗುತ್ತ ಹೀಗೆ ಹೊಮ್ಮಿತು:

'ಸೌಮಿತ್ರಿಯೆ, ಆ ಸ್ನೇಹಿತನು ನನ್ನಿಂದಾಗಿಯೆ ತಡ ಮಾಡುತ್ತಿದ್ದಾನೆ. ಅವರು ಅಷ್ಟೂ ಜನ ನನಗಾಗಿ ಲಂಕೆಯ ಅನ್ವೇಷಣೆ ಮಾಡಲು ಅತಿಯಾದ ಆತುರದಿಂದಿದ್ದಾರೆ. ಭೂಮಿಯನ್ನೆಲ್ಲ ಕಾಡು ಆವರಿಸಿದೆ. ಅದರಂತೆ ಗಗನವು ಮೋಡಗಳಿಂದ ಸಾಂದ್ರವಾಗಿದ್ದು

ಸೃಷ್ಟಿಯು ಜಲಮಯವು, ಕೆಸರಿನಿಂದ ಕೂಡಿದ್ದು ಆಗಿದೆ. ಮಳೆಗಾಲ ಕಳೆದು, ಕಾರ್ತಿಕ ಮಾಸಕ್ಕೆ ಹೊರಡಿ ಎಂದು ವೀರರಿಗೆ ಹೇಳಿ, ನಾನೇ ತಡೆಗಟ್ಟಿದ್ದೇನೆ. ಅದೊ, ಅಶ್ವೀಜದ ಮಳೆ ತುದಿಗಾಲಲ್ಲಿ ಆಟೋಪದಿಂದ ಸುರಿಯುತ್ತಿರುವುದನ್ನು ಕೇಳು.'

ಅವರಿಬ್ಬರೂ ನುಗ್ಗುತ್ತಿದ್ದ ಅಶ್ವಯುಜ ವರ್ಷ ಅಶ್ವದಳದ ಹೇಷಾರವದ ಘೋಷವನ್ನು ಆಲಿಸಿದರು. ಘೋರ ಅಂಧಕಾರದ ಆ ಸಾಗರದಲ್ಲಿ ತೇಲಿ ಬರುವ ಹನಿಮಿಂಚಿನಂತೆ–ಒಂದು ಮಿಂಚುಹುಳು ನಿಧಾನ ನಿಧಾನವಾಗಿ ಆ ಕಗ್ಗತ್ತಲೆಯ ಗವಿಯನ್ನು ಹೊಕ್ಕಿತು. ಅದು ತೇಲುತ್ತ ಈಜುತ್ತ ಮೆಲ್ಲ ಮೆಲ್ಲನೆಯೆ ಹಾರಾಡುತ್ತ ಮಿಂಚಿನ ಹನಿಯನ್ನು ಚೆಲ್ಲಿ ಅಲ್ಲಲ್ಲಿ ನಲಿದಾಡಿತು. ರಾಮನು ಮಿಂಚಿನ ಹನಿಯನ್ನು ಸೋರಿಸುವ, ಮಿಂಚಿನ ಪ್ರಕಾಶವನ್ನು ಹೋಲುವ ಮಿಂಚುಹುಳವನ್ನು ಕಣ್ಣು ಸೋಲುವವರೆಗೆ ನೋಡಿದನು. ಅವನ ಕಣ್ಣಿಗೆ ಹನಿ ಮೂಡಿ ಕೆನ್ನೆ ನೆನೆಯಿತು. ಕೂಡಲೆ ಅವನ ಆತ್ಮಕ್ಕೆ ಶಾಂತಿ ತುಂಬಿ ಬಂದಿತು. ಆ ಸಾಮಾನ್ಯವಾದ ಅನಿರ್ವಚನೀಯ ಸೌಂದರ್ಯವನ್ನು ಮತ್ತೆ ಮತ್ತೆ ನೋಡಿದನು!

ಕುಳಿತಿದ್ದ ಮಳೆಗಾಲವು ತುದಿಗಾಲಿನಲ್ಲಿ ಎದ್ದು ನಿಂತಿತು. ದಾರದ ಎಳೆಯಂತೆ ಬೀಳುವ ಮಳೆಯ ಹನಿ ನೂಲ್ ಸೋನೆ. ಅಗೋ, ಅಂತಹ ಸೋನೆಯ ತೆರೆ ಸರಿಯಲು ಶೈಲ ಶ್ರೇಷ್ಠನು ಕಾಣಿಸುತ್ತಿದ್ದಾನೆ. ಹಸಿರು ವಸ್ತ್ರಧಾರಿಣಿಯಾದ ಕಾನನವಧು ಅವನ ಎದೆಗೆ ಒರಗಿ ರಮಿಸುತ್ತಿದ್ದಾಳೆ! ಕೆಂಪು ಬಣ್ಣದಿಂದ ಮುಕ್ತವಾದ ಮುತ್ತಿನ ಸರಗಳಂತೆ ಉದ್ದವಾಗಿ ಸೋರುವ ಮಲೆಯ ತೊರೆಯ ಜಲಪಾತಗಳು ಅಲ್ಲಲ್ಲಿ ಕಣ್ಣನ್ನು ಸೆಳೆಯುತ್ತಿವೆ. ಕೇದಗೆಗೆ ಮುಪ್ಪು ಆವರಿಸಿ, ಸೀತಾಳಿ ಹೂ ಬಿಡುವುದು ನಿಂತು ಹೋಗಿದೆ.

ಬಾನಿನ ಬಯಲಿನಲ್ಲಿದ್ದ ಮೋಡದ ಮೋರೆಯ ಕಪ್ಪು ಸರಿದು ಹೋಗಿದೆ. ಬಿಳಿಯ ನೆರಳು ಅಲ್ಲಲ್ಲಿ ಸುಳಿದಾಡುತ್ತಿದೆ. ನಿಸ್ತೇಜನಾಗಿದ್ದ ರವಿ ಘನ ವನಾಂತರವಾಸವನ್ನು ಮುಗಿಸಿ ಮರಳುತ್ತಿದ್ದಾನೆ. ಆಗ ಕಳೆದು ಹೋಗಿದ್ದ ಉಷ್ಣದ ಕಾವು –ಮುಖಕ್ಕೆ ಲಜ್ಜೆಯ ಬಿಳುಪೇರಿದ ಅಪರಿಚಿತಳಂತೆ ಮುಸುಕೆತ್ತಿ, ನಸುನಾಚಿ ಮೇಘಸಂಧಿಗಳಿಂದ ಇಣುಕುತ್ತಿದೆ.

ವಾರ್ಧಿಘೋಷ ಸ್ಪರ್ಧಿಯಾ ಸುಗ್ರೀವ ಡಿಂಡಿಮಾಜ್ಞೆ!

ಹಾಲು ತುಂಬಿ ತುಳುಕಿ ಗರುಕೆ ಪಚ್ಚೆಗೆ ಸೋರುವ, ಗೋವು ಹೊಸ ಬಿಸಿಲ ಸೋಂಕಿಗೆ ಮೈಕಾಯಿಸುತ್ತ ಗಿರಿಸಾಲಿನ ಹಚ್ಚನೆಯ ಹುಲ್ಲುಗಾವಲಿನಲ್ಲಿ ನಿಂತಿತ್ತು. ಕರುವು ಬಾಲವನ್ನು ಎತ್ತಿ ಕುಣಿದಾಡುತ್ತ ಓಡಿಬಂದು ತನ್ನ ಎಳೆ ಮುದ್ದು ಮೋರೆಯನ್ನು ತಾಯಿತನಕ್ಕೆ ಸಾಟಿಯಾದ ಮೆತ್ತನೆಯ ಕೆಚ್ಚಲಿಗೆ ಹಿಡಿದು ಜೊಲ್ಲು ಉಕ್ಕುತ್ತಿರಲು,

ಚಪ್ಪರಿಸಿ ಮೊಲೆಯನ್ನು ಉಂಡಿತು. ಗೋವು ಅದನ್ನು ಪ್ರೀತಿಯಿಂದ ನೆಕ್ಕಿತು. ಪಕ್ಷಿಗೀತವು– ಲೋಕದ ಕಿವಿಗೆ ದುರ್ದಿನವು ಕೊನೆಯಾಯಿತೆಂಬ ಮಂಗಳದ ವಾರ್ತೆಯ ಡಂಗುರವನ್ನು ಬಾರಿಸಿತು... ಮತ್ತೆ ಅದೇನು? ಪುನಃ ಅದೊ ಮತ್ತೊಂದು ಡಂಗುರ ಕೇಳಿಸಿತು!

ಬಡಿದ ಚಂಡೆಯ ಶಬ್ದದ ಸಿಡಿಲಿಗೆ ಕಂಪಿಸುತ್ತ ಗಿರಿ ಬಂಡೆಗಳು ಗುಡುಗಿದುವು. ಮದ್ದಳೆಯ ಸದ್ದಿಗೆ ದಿಗ್ಗಂದು ಬೆಚ್ಚಿ, ಧೀರ ಕಿಷ್ಕಿಂಧೆಯ ಮಲೆ ತಲೆತೂಗಿತು. ಸಿಂಹಸಮ ಭೇರಿರವವು ಆನೆಯನ್ನು ಹೆದರಿಸಿ ನಡುಗಿಸಿತು. ಕೇಳು, ಆ ಶಬ್ದವು ಅಡವಿಯಿಂದ ಅದ್ರಿಗೆ ಅದ್ರಿಯಿಂದ ಆಗಸಕ್ಕೆ ನೆಗೆಯಿತು. ಸೂರ್ಯನಿಗೆ ಸ್ಪರ್ಧಿ ತಾನಾಗಿ ಚಿಮ್ಮಿತು. ಅಲ್ಲಿಂದ ಧರೆಗೆ ಧುಮುಕಿತು. ಮತ್ತೆ ಗಗನ ಪ್ರದೇಶದ ಯಾತ್ರಿಯಾಗಿ ದಾಂಗುಡಿಯಿಟ್ಟಿತು. ಅದು ತಿರುತಿರುಗಿ ಗುಹಾಲೋಕಗಳನ್ನು ಹೊಕ್ಕಿತು. ಮತ್ತೆ ಮತ್ತೆ ಗಿರಿ ವಿಪಿನ ಕಂದರ ವಸುಂಧರಾ ವ್ಯೋಮಗಳನ್ನು ತಿರ್ರನೆ ತಿರು ತಿರುಗಿ ತಿರುಗಿತು. ಕಡಲ ಘೋಷಕ್ಕೆ ಪ್ರತಿಸ್ಪರ್ಧಿಯಾದ ಸುಗ್ರೀವನ ಡಿಂಡಿಮಾಜ್ಞೆಯು ಸಮುದ್ರದ ಸೀಮಾದಿಗಂತವನ್ನು ತಲುಪಿತು.

ರಾಮಲಕ್ಷ್ಮಣರು ಅತಿ ಆನಂದದಿಂದ ಉಬ್ಬಿಹೋಗಿ, ದೀರ್ಘವಾಗಿ ಉಸಿರಾಡುತ್ತ ಆ ಶಬ್ದವನ್ನು ಕೇಳಿದರು. ವ್ಯಥೆ ದೂರವಾಯಿತು. ಜಗತ್ತಿಗೆ ಸುಪ್ರಸನ್ನತೆ ಮೈದೋರಿತು. ಶರತ್ಕಾಲವು ಬಲವಾದ ವರ್ಷಋತುವನ್ನು ಗೆದ್ದು, ಅದರ ಸಿರಿಯನ್ನೆಲ್ಲ ಅಪಹರಿಸಿದ ರೀತಿಯಲ್ಲಿ ಮೆರೆಯಿತು. ದಾಶರಥಿಯು ಗಿರಿಶಿರದಲ್ಲಿ ನಿಂತು ಲಕ್ಷ್ಮಣನಿಗೆ ಹೀಗೆ ಹೇಳಿದನು:

'ಸೌಮಿತ್ರಿಯೆ, ನೋಡು. ವಾನರದಳವು ಕಾರ್ಯೋನ್ಮುಖವಾಗುತ್ತಿದೆ. ಅದೋ ಕೇಳು. ಧಳಂ ಧಳಂ ಎಂಬ ಭೇರಿ ರವ. ಭೂಮಿ ಕಂಪಿಸಿತು ಎಂಬ ರೀತಿಯಲ್ಲಿ ಗಿರಿಯ ಬಂಡೆ ಕಂಪಿಸುತ್ತಿದೆ. ಜಗತ್ ಪ್ರಾಣವು ಆ ನಾದಕ್ಕೆ ದಿಗ್ಭ್ರಮೆಗೊಂಡು ಬಲವಾಗಿ ನಡುಗಿತು ಎಂಬಂತೆ ವಾಯುಮಂಡಲವು ಅದುರಿದೆ.

'ಆನೆಗಳ ಗುಂಪನ್ನು ಹೋಲುವ ಮೋಡಗಳ ಸಾಲು ಮದವಳಿದ ಗಜದಂತೆ ಶಾಂತವೇಗಿಗಳಾಗಿ ತೇಲುತ್ತಿವೆ. ಮಳೆಗಾಳಿಯು ಹಿಂದಿನ ಮಹಾರಭಸವನ್ನು ತ್ಯಜಿಸಿ ಸೌಮ್ಯತೆಯನ್ನು ಪಡೆದಿವೆ. ನವಿಲು ಮಳೆಯ ಸ್ನೇಹ ಇಲ್ಲವಾದುದಕ್ಕೆ ಕಳೆಗೆಟ್ಟು ಮರದ ದೊಡ್ಡಕೊಂಬೆಯನ್ನು ಏರಿ ಧ್ಯಾನಿಸುತ್ತಿದೆ.

'ಹಳ್ಳದ ಹೊನಲು ನೀರಿಳಿದು ಕೃಶವಾಗಿ ಕೊರಕಲ ಒಡಲಿನ ದಡದ ವಕ್ರತೆಗೆ ನಾಚಿದ ರೀತಿ ಹರಿಯುತ್ತಿದೆ. ನೋಡು, ಅದು ಹೇಗೆ ಕೆಸರು ಆರಿದ ಮಳಲ ದಿಣ್ಣೆಯಲ್ಲಿ ಲಿಪಿ ಕೆತ್ತಿದಂತೆ ಮುದ್ರೆಯೊತ್ತಿರುವ ಹಕ್ಕಿಯ ಹೆಜ್ಜೆಯಿದೆ. ಅಗೊ, ಸುಂದರ ಶರೀರದ ಮೃಗಶಾಬಾಕ್ಷಿ (ಜಿಂಕೆಯ ಮರಿಯ ಕಣ್ಣುಗಳಂತೆ ಕಣ್ಣುಗಳುಳ್ಳವಳು) ಜನಕ

ಪುತ್ರಿಯ ಕೊರಳಿಂದ ಕಳಚಿಕೊಂಡು ಬಿದ್ದ ಮಾಲೆ ಎನ್ನುವ ರೀತಿ–ಅಂತರಿಕ್ಷದಲ್ಲಿ ಸುಂದರ ಸಾರಸ ಪಕ್ಷಿಗಳು ತೋರಣದಂತೆ ಹಾರುತ್ತಿವೆ. ಅದು ಅವಳ ಸ್ಮೃತಿಗೆ ಪ್ರತಿಕೃತಿಯಾಗಿದೆ.

'ಸೌಮಿತ್ರಿಯೆ, ನಿಜ, ವಾನರೇಂದ್ರ ಸುಗ್ರೀವನ ಆಜ್ಞಾ ಮಹಾಧ್ವನಿಗೆ ಲೋಕ ಹೃದಯವು ಚೇತರಿಸಿ ಚಿಮ್ಮುತ್ತಿದೆ. ಬಾಳಲಿ! ಬಾಳಲಿ ಮತ್ತು ಸುಗ್ರೀವ ಮಿತ್ರನು ಗೆಲ್ಲಲಿ!'

ಭೇರಿ ರವವು ಧಳಂ, ಧಳಂ, ಧಳಂ ಎಂದು ಬಂದಿತು. ಅದಕ್ಕೆ ಪೃಥ್ವಿಯು ತನ್ನ ಕನ್ಯಾ ಕ್ಷೇಮ ವಾರ್ತೆಯನ್ನು ಕೇಳಿದಂತೆ ಸ್ಪಂದಿಸಿತು.

ರಾಮಕಾರ್ಯಕೆ ದಂಡುನೆರೆದರ್ ಕಪಿಧ್ವಜರ್, ಲಕ್ಷೋಪಲಕ್ಷ ಕೋಟ್ಯನುಕೋಟಿ.

ಪರಮಗೌರವಮೂರ್ತಿ, ಸರ್ವೋಚ್ಚ ಸೇನಾನಿ, ವಾನರ ಪರಾಕ್ರಮ ಸಮುದ್ರನಾದ ನೀಲನಿಗೆ ರವಿಪುತ್ರ ಸುಗ್ರೀವನು ಆಜ್ಞಾಪಿಸಿದನು. ಅದರಂತೆ ತಲೆಯಲ್ಲಿ ಹೊತ್ತಿರುವ ಹೊಣೆಯ ಮೌಲ್ಯದ ತಮ್ಮ ಅರಸನ ಅಪ್ಪಣೆಯ ಮುಂದಾಳುಗಳು ಕಪಿಧ್ವಜ ಆಳುವ ನಾಡೊಡೆಯರಾದ ಸಾಮಂತ ರಾಜರಿಗೆ ಕಟ್ಟಾಜ್ಞೆಯನ್ನು ಸಾರುತ್ತ ಸಮುದ್ರದವರೆಗೆ ಸಾಗಿದರು. ಪೂರ್ವ ಪಶ್ಚಿಮ, ಉತ್ತರ ದಕ್ಷಿಣದಿಂದ ರಾಮಕಾರ್ಯಕ್ಕೆ ಲಕ್ಷೋಪಲಕ್ಷ ಕೋಟ್ಯನುಕೋಟಿ ಕಪಿಧ್ವಜ ಸೇನೆ ನೆರೆಯಿತು. ಕಿಕ್ಕಿರಿದು ತುಂಬಿದ ಆ ಸೇನೆಯು ಕಿಷ್ಕಿಂಧೆಯನ್ನು ಸುತ್ತಿ ಹರಡಿದ್ದ ಬೆಟ್ಟ ಕಂದರ ಪ್ರಾಂತ್ಯಗಳನ್ನು ಸಂಕ್ರಮಿಸಿ ತನ್ನ ಬಿಡಾರವನ್ನು ಬಿಟ್ಟಿತು.

ದಕ್ಷಿಣ ಅಟ್ಲಾಂಟಿಕ್‌ನ ಉತ್ತಮ ದ್ವೀಪ ಪಾಕ್‌ಲೆಂಡ್, ಅದು ವರ್ಷವೆಲ್ಲವೂ ಮಳೆಯಿಂದ ನೆನೆದ ಆ್ಯಡಂ ಶಿಖರದಿಂದ ಶೋಭಾಯಮಾನವಾಗಿದೆ. ನವೀನ ಭೂ ಅನ್ವೇಷಿ ನಾವಿಕನು ಅದರ ತೀರಕ್ಕೆ ಹೋಗುತ್ತಾನೆ. ಅವನ ನೌಕಾಧ್ವಜಸ್ತಂಭವನ್ನು ಏರಿ ಆಶ್ಚರ್ಯದಿಂದ ನೋಡುತ್ತಾನೆ. ಎಂಥಹ ದೃಶ್ಯ ಆ ಚಿತ್ರ! ಮಾನವರೊ? ಪಕ್ಷಿಗಳೊ? ದಂಡವೊ ತಂಡವೊ ಹಿಂಡೊ? ನಾವಿಕನು ಬೆರಗು ಬೆರೆತ ಭೀತಿಯಿಂದ ಮತ್ತೆ ಮತ್ತೆ ನೋಡುತ್ತಾನೆ. ಕಣ್ಣು ಸೋಲುವ ತನಕ, ದೃಷ್ಟಿ ಹರಿಯುವ ತನಕ ವೀಕ್ಷಿಸುತ್ತಾನೆ. ಆ ದ್ವೀಪ ವಿಸ್ತೀರ್ಣದ ತಗ್ಗು ಉಬ್ಬುಗಳೆಲ್ಲವನ್ನು ತುಂಬುತ್ತ, ದಶದಶ ಸಹಸ್ರ ಸಂಖ್ಯೆಯಲ್ಲಿ ಪೆಂಗುಯಿನ್ ಪಕ್ಷಿವೃಂದವಿದೆ. ಅದು ರಾಶಿ ರಾಶಿಯಾಗಿ ಶತಕೋಟಿಯಲ್ಲಿ ಸಾಂದ್ರವಾಗಿ ನಿರಂತರವಾಗಿ ಶೋಭಿಸುತ್ತಿದೆ. ಅದೇ ರೀತಿ ಅತ್ಯತಿ ಅಸಂಖ್ಯವಾನರ ಸೇನೆಗಳು ಕಿಷ್ಕಿಂಧೆಯನ್ನು ತುಂಬಿ ಸುತ್ತಿ ಕಿಕ್ಕಿರಿದಿದ್ದುವು.

ಸುಗ್ರೀವನು ಮಾಲ್ಯವತ್ ಪರ್ವತದ ಪ್ರಸ್ರವಣ ಶಿಖರಕ್ಕೆ ನೀಲ, ಆಂಜನೇಯ, ಜಾಂಬವ, ನಳ, ಅಂಗದರೊಡನೆ ಉತ್ಸಾಹದಿಂದ ಬಂದನು. ಅವನು ವಾನರ

ವಾದ್ಯವೃಂದದ ಜೊತೆಗೂಡಿ ನಡೆತಂದನು. ಶರದೃತುವಿನ ಆಗಮನಕ್ಕೆ ಹೇಗೆ ಮೋಡದ ಕಪ್ಪು ತೊಲಗುವುದೊ ಅದರಂತೆ ರಾಮನ ಮನದ ಸಂದೇಹಗಳೆಲ್ಲ ಇಲ್ಲವಾಗಿ ನಿಶ್ಶಂಕೆ ಮೂಡಿತು. ವಾನರೇಂದ್ರನ ಪ್ರಾರ್ಥನೆಯಂತೆ ದಶರಥ ಮಹಾರಾಜನ ಇಬ್ಬರು ಮಕ್ಕಳು ಮಹಾ ಸೈನ್ಯದ ಸಿದ್ಧತೆಯನ್ನು ವೀಕ್ಷಿಸಲು ಹೊರಟರು.

ಓ, ಏಳು ವಾಣಿಯ ಕೈಯ್ಯ ವೀಣೆಯೆ. ಕಿಷ್ಕಿಂಧೆಯಲ್ಲಿ ನೆರೆದಿರುವ ವಾನರ ಕುಲದ ವೀರರು ಯಾರು ಯಾರೆಂದು ಹೇಳು. ಅದನ್ನು ಹೇಳಲು ಸಮಯವಿಲ್ಲವೆಂಬುದು ನಿಜ. ದೇವಿಯ ಅನ್ವೇಷಣೆಗೆ ಮನಸ್ಸು ತವಕಿಸಿದೆ. ಅದನ್ನು ತಿಳಿದಿರುವೆನು. ಆದರೂ ನಮಗೆ ನಾಯಕ ಮಹಾಮುಖ್ಯರನ್ನು ತಿಳಿಸು!

ಹರ್ಷವಾತಾಹತಿಗೆ ವೀಚಿ ಸಂಕ್ಷೋಭಿಸಿತ್ತುರ್ಕುತೆ ಕಪಿಧ್ವಜಿನಿ.

ವಾನರೇಶ್ವರನು ಕೋಸಲೇಶ್ವರನೊಡನೆ, ಸೇನಾನಿ ಸಚಿವ ಸನ್ಮಿತ್ರರೊಡಗೂಡಿ ಸೇನಾ ವೀಕ್ಷಣೆಗೆ ಬರುವನೆಂಬ ವಾರ್ತೆಯು ದಳದಿಂದ ದಳಕ್ಕೆ ಡಂಗೂರದಂತೆ ಹರಡಿತು. ಕಪಿಧ್ವಜ ಸೇನೆಯಲ್ಲಿ ಹರ್ಷ ವಾತಾವರಣದ ಗಾಳಿಯಿಂದ ಎದ್ದ ಅಲೆಗಳು ಉಕ್ಕಿ ಹರಿದು ಅಲ್ಲೋಲಕಲ್ಲೋಲವನ್ನುಂಟು ಮಾಡಿದವು. ವನಚರರು ವಿವಿಧ ವೇಷ ವಿವಿಧ ವರ್ಣ ಅಲಂಕಾರಗಳ ಆಕೃತಿಗಳಿಂದ ಕೂಡಿದ್ದರು. ಅವರು ತಮ್ಮ ಹಿರಿಮೆಯನ್ನು ತೋರುವಂತಹ ಯೋಜನೆಯಿಂದೊಡಗೂಡಿ, ಪ್ರಮುಖರು ಬರುವಕಡೆ ದೃಷ್ಟಿ ಹರಿಸಿ ನಿಂತಿದ್ದರು.

ದಧಿಮುಖನು ದಶಕೋಟಿ ವಾನರ ಪಡೆಯ ನಾಯಕ, ಸುಗ್ರೀವ ಸುಪ್ರಿಯ. ಅವನ ದಳದಲ್ಲಿ ವಹ್ನಿ ಹೆಸರಿನವನು ಓರ್ವ ಸಾಮಾನ್ಯ ಸೈನಿಕ. ಅವನು ಹುಲಿಯ ತೊಗಲಿನ ಅಂಗಿಯಿಂದ ಗುಲುಗುಂಜಿ ಹಾರದಿಂದ ನವಿಲುಗರಿಯ ಮುಡಿಯಿಂದ ದಿಗ್ಗಜದ ಸ್ಮರಣೆಯನ್ನು ತರುವ ಬೃಹದಾಕೃತಿಯ ಧೀರತನುವಿನಿಂದ ಹೊಳೆಯುತ್ತಿದ್ದನು. ಅವನು ತನ್ನ ಬಳಿಯಿದ್ದ ಕುಳ್ಳ ಶರೀರದ ರಂಹ ಎಂಬ ಗೆಳೆಯನಿಗೆ 'ಅಕೊ ಅಲ್ಲಿ, ಆ ಬೆಟ್ಟದ ಪಕ್ಕದಲ್ಲಿ!' ಎಂದು ಅರ್ಧನುಡಿದು ಅತ್ತ ಕಣ್ಣು ಹರಿಸಿದನು. ಇತ್ತ ರಂಹನು ತನ್ನ ಕೊರಳನ್ನು ನಿಮಿರಿಸಿ ನೋಡಿದನು. ಏನೂ ಕಾಣದಿರಲು ಹಾತೊರೆದು ಮಿತ್ರನ ಭುಜವನ್ನು ಆಧರಿಸಿ ಮೆಟ್ಟುಗಾಲಿನ ತುದಿ ಬೆರಳುಗಳಲ್ಲಿ ನಿಂತು ಮೈ ಚಾಚಿ ನೋಡಿದನು. ಆಗಲೂ ಕಾಣದಿರಲು ತನ್ನ ಗಾತ್ರಕ್ಕೆ ತಾನೆ ಸಿಟ್ಟುಗೊಂಡು, ಜಿಗುಪ್ಸೆಯನ್ನು ಹೊಂದಿದನು. ಕುಪ್ಪಳಿಸಿ ನೆಗೆದು ಬಳಿಯ ಬಂಡೆಯ ನೆತ್ತಿಗೆ ಏರಿ ತೃಪ್ತಿಯಾಗುವಂತೆ ನೋಡಿದನು.

ನೇಸರನ ಎಳೆಯ ಕಿರಣ ಹೊನ್ನಿನ ಕುಂಚದಿಂದ ಬಿಸಿಲನ್ನು ಎರಚಿರಲು, ಬೆಟ್ಟದ ಪಕ್ಕದ ಗರುಕೆ ಹಸುರು ಹಾಸಿದ ಹುಲ್ಲುಗಾವಲಿನಲ್ಲಿ ನೀಳವಾದ ನೆರಳನ್ನುಂಟುಮಾಡಿ ಬರುತ್ತಿದ್ದವರನ್ನು ಕಂಡನು!

ರಣಕೊಳಲಿನ ಇಂಚರವು ಪಕ್ಷಿಗಳ ಗೀತವನ್ನು ಮುಳುಗಿಸಿತ್ತು. ಅದನ್ನು ಕೂಡಲೆ ಕೋಟಿ ಸೇನಾ ಕಂಠದ 'ಉಘೇ' ಎಂಬ ನಿರ್ಘೋಷವು ಮುಳುಗಿಸಿತ್ತು. ಅದೃಷ್ಟವನ್ನು ಸಾಮೂಹಿಕ ಆನಂದಮೂರ್ಛೆಯು ಮುಳುಗಿಸಿತ್ತು. ಬಂಡೆಯನ್ನು ಏರಿದ ಕುಬ್ಜ ರಂಹನಿಗೆ ದೀರ್ಘೋನ್ನತನಾದ ವಹ್ನಿ ಹೇಳಿದನು:

'ವಾನರೇಂದ್ರನ ಬಲಕ್ಕೆ ಬರುವಾತನೆ ಆ ಮಹಾಪುರುಷ!'

'ಆ ತೇಜಸ್ವಿಯು ಕಾಡಿಡಿದು ಹಳುಮುಚ್ಚಿದ ಅರಮನೆಯ ಸಿರಿಯಂತೆ ಕಾಣುತ್ತಿದ್ದಾನೆ. ಕೂದಲು ಬೆಳೆದ ಮುಖ; ನಾರುಡೆಯ ಮೈ; ಜಟಾಧಾರಿ.'

'ಸೀತಾನಾಥ; ಇಂದು ಅವನು ವ್ರತಧಾರಿಯಲ್ಲವೆ?'

'ನಾವು ಈತನಿಗಾಗಿ ಬಂದದ್ದು ಸಾರ್ಥಕವಾಯಿತು. ನಮ್ಮ ಬಾಳನ್ನು ಯಜ್ಞಕ್ಕೆ ಆಹುತಿಯಾಗಿಸುವುದೇ ಒಂದು ಪುಣ್ಯ ಕಾರ್ಯ!'

'ಹೌದಲ್ಲವೆ? ನೋಡು, ಪಕ್ಕದಲ್ಲಿರುವವನು ಆತನ ಸಹೋದರ ಲಕ್ಷ್ಮಣ. ಅವನ ನಿಲುವಿನ ಭಂಗಿಯನ್ನು ನೋಡು! ನಾವು ಇವರೊಡನೆ ಕಲೆತು ರಾಕ್ಷಸರೊಡನೆ ಯುದ್ಧಮಾಡುವುದು ಪೂರ್ವಜನ್ಮದ ಪುಣ್ಯವೇ ಸರಿ! ನಾವು ಧನ್ಯರು!'

ಇತ್ತ ಸೈನಿಕರು ಹೀಗೆ ಮಾತಾಡುತ್ತಿರಲು, ಅತ್ತ ಸುಗ್ರೀವನು ಧರಣಿಜಾನಾಥನಿಗೆ ಬೆಟ್ಟದ ಎತ್ತರದಿಂದ ಬೆರಳು ತೋರಿಸುತ್ತ ಹೀಗೆ ವಿವರಿಸಿದನು:

'ಹೇ ದಾಶರಥಿಯೆ, ನಿನ್ನ ಸೇವೆಗೆ ನೆರೆದಿರುವ ಕಪಿಧ್ವಜ ಸೈನ್ಯವನ್ನು ನೋಡು. ಅದು ಪರ್ವತದಂತೆ ಸುಸ್ಥಿರವಾಗಿದೆ. ರಣೋತ್ಸಾಹದಿಂದ ಸಂಭ್ರಮಗೊಂಡ ಉತ್ಸಾಹದಲ್ಲಿ ಅಲ್ಲೋಲ ಕಲ್ಲೋಲವಾಗಿದೆ. ಈ ವೀರರು ಒಬ್ಬೊಬ್ಬರೂ ಒಂದೊಂದು ಸೈನ್ಯದಂತಿದ್ದಾರೆ.'

ದಶರಥನ ಮಗನು ಅದನ್ನು ಕಣ್ತುಂಬಿ ನೋಡಿದನು. ಎದೆಹಿಗ್ಗಿ ನಿಟ್ಟುಸಿರು ಬಿಟ್ಟನು. ಹಾಗೂ ಆ ಮಿತ್ರ ಕಪಿಕೇತನನ ಶರೀರವನ್ನು ಆನಂದದ ಕಣ್ಣೀರನ್ನು ಸುರಿಸುತ್ತ ಬಿಗಿದಪ್ಪಿಕೊಂಡನು. ಸೀತಾಪತಿಯ ಕೈಯ ಸುಖಮೈತ್ರಿ ಸೋಂಕಲು ರವಿತನುಜನಿಗೆ ಮೈ ರೋಮಾಂಚನಗೊಂಡಿತು. ಜಿನುಗುತ್ತಿರುವ ಸುಖರಸದ ಕಣ್ಣೀರಿನೊಡನೆ ಸೈನ್ಯ ವಿವರವನ್ನು ಮುಂದುವರಿಸಿದನು.

ಹೇ ದೇವ, ನಿನ್ನವಸರಕೆ ನೆರೆದು ಪಾರುತಿಹರಾಜ್ಞೆಯಂ.

'ವಿಂಧ್ಯ, ಹಿಮಾಚಲ, ಕೈಲಾಸಪರ್ವತ, ಧವಳಗಿರಿ, ಧೂಮ್ರಗಿರಿ, ಮಹೇಂದ್ರಗಿರಿ, ಪೂರ್ವಪರ್ವತ ಮತ್ತು ಪಶ್ಚಿಮಗಿರಿ, ಮಲಯ ಮೇರು ಸಹ್ಯಾದ್ರಿ ಮೊದಲಾದ ನಾನಾ ಕಾಡು ಬೆಟ್ಟಗಳ ಕಪಿಧ್ವಜರು ಕೋಟಿ ಅಕ್ಷೌಹಿಣಿ ಸಂಖ್ಯೆಯಲ್ಲಿದ್ದಾರೆ. ಹೇ ದೇವ, ಇವರು ನಿನ್ನ ಅಗತ್ಯಕ್ಕಾಗಿ ನೆರೆದಿದ್ದಾರೆ. ನಿನ್ನ ಆಜ್ಞೆಯನ್ನು ನಿರೀಕ್ಷಿಸುತ್ತಿದ್ದಾರೆ.

‘ಓ ಅಲ್ಲಿ, ಪರ್ವತದ ನೆರಳು ಕೊಡೆಹಿಡಿದ ಒತ್ತಾಗಿಲ್ಲದ ಬಳ್ಳಿಮಾಡದ ಕಣಿವೆಯ ಅಂಗಣದಲ್ಲಿರುವವನು ದಶಕೋಟಿ ವಾನರ ಸೈನ್ಯದ ನಾಯಕ. ಅವನ ಹೆಸರು ಶತಬಲಿ. ಮಹಾವೀರನಾದ ಅವನು ನನಗೆ ಅತಿಹಿತವಾದ ಮಿತ್ರ. ಅವನ ಸೈನ್ಯವು ಕಾಮರೂಪಿಗಳಿಂದ, ಗಗನಗಾಮಿಗಳಿಂದ ಶ್ರೀಮಂತವಾಗಿದೆ.

‘ಅಲ್ಲಿ ನೋಡಿ, ಆ ಪರ್ವತದ ಶಿಖರ ಪಂಕ್ತಿಗಳನ್ನೆಲ್ಲ ಬಂಡೆಗಲ್ಲುಗಳನ್ನೆಲ್ಲ ಆಕ್ರಮಿಸಿ ನಿಂತಿರುವ ಸೈನ್ಯಕ್ಕೆ ಅಧಿಪತಿ ಸುಷೇಣ. ಅಣ್ಣನಿಗೆ ಮಾವ ಮತ್ತು ಅತ್ತಿಗೆಗೆ ತಂದೆ... ಆ ಕಡೆ ಸರಸ್ಸಿನ ತೀರವನ್ನು ಮುಚ್ಚಿ ನಿಂತಿರುವ ಒಂದು ದಳವನ್ನು ನೋಡು. ಅದುವೇ ರುಮೆಯ ತಂದೆಯಾದ ನನ್ನ ಮಾವನ ಸೈನ್ಯ. ಅವನಿಗೆ ಯೋಧಪತಿ ತಾರನೆಂಬ ಕೀರ್ತಿಯಿದೆ...ಅದೊ ಅಲ್ಲಿ ಕಾಣುವುದು ಕಾನನ. ಅಲ್ಲಿ ಹಸುರು ಬಣ್ಣವನ್ನು ಮೈಗೆ ಲೇಪಿಸಿಕೊಂಡು ಕಾಡಿನ ಸೋಗಿನಲ್ಲಿ ಕೇಸರಿ ಹೆಸರಿನ ಮಹಾವಾನರ ಸೇನೆಯಿದೆ.

‘ಅದೊ, ಈ ಕಡೆ ಮೋಡವನ್ನು ಇರಿದು ಮೆರೆಯುತ್ತಿದೆ ಬಾವುಟ. ಅದೇ ಗವಾಕ್ಷನ ಸೇನೆ... ಭಲ್ಲೂಕ ಕೇತನ ಹೊಂದಿರುವವನನ್ನು ನೋಡು. ಮಹಾಬಲಾಢ್ಯನಾದ ಅವನು ಧೂಮ್ರ!... ಶತಕೋಟಿ ಕಪಿನಾಯಕ ಗವಯ. ಅದೊ ಅವನ ಸೇನೆ ಬೆಟ್ಟಕ್ಕೆ ಮರೆಯಾಗಿ ನಿಂತಿರುವುದು... ಇವನು ಸಾಗರಸ್ಪರ್ಧಿ ವಲೀಮುಖ!

‘ಅದೊ ಭಲ್ಲೂಕ ಚಕ್ರೇಶ. ಅವನು ಪುರಾತನ ಕಾಲದ ಅದ್ಭುತನು, ಮಹಿಮಾನಿತ್ವನು ಆದ ಹಿರಿಯ ಜಾಂಬವಂತ. ಅವನ ಸೈನಿಕರಲ್ಲಿ ಕೆಲವರು ಗಜದ ಚರ್ಮದಿಂದ, ಸಿಂಹಚರ್ಮದಿಂದ ಶೋಭಾಯಮಾನರಾಗಿದ್ದಾರೆ. ಇನ್ನು ಕೆಲವರು ಹುಲಿಯ ತೊಗಲಿನಿಂದ ಭಯಂಕರರಾಗಿದ್ದಾರೆ!...’

‘ದೇವ, ಇನ್ನುಳಿದ ಸೈನ್ಯಗಳು ಇಲ್ಲಿಂದ ಕಾಣುವುದಿಲ್ಲ. ಬನ್ನಿ ಆ ನೆತ್ತಿಯ ಎತ್ತರಕ್ಕೆ. ಇದಕ್ಕಿಂತಲೂ ಅಧಿಕವಾದ ದೃಶ್ಯವನ್ನು ಕಾಣಿಸುತ್ತೇನೆ.. ನೀವು ಅಂಬುಧಿಯ ತೀರದ ಇಷ್ಟನ್ನು ಮಾತ್ರ ಕಂಡಿರುವಿರಿ. ಮುಂದೆ ಸಾಕ್ಷಾತ್ ಮಹಾಂಭೋಧಿ ಕಾಣಿಸುತ್ತದೆ!’

ಹೀಗೆಂದು ಹೇಳಿ ಭಾಸ್ಕರಸುತ ಸುಗ್ರೀವನು ಸೇನಾನಿ ನೀಲನಿಗೆ ಮಾರ್ಗವನ್ನು ತೋರಿಸುವಂತೆ ಆದೇಶಿಸಿದನು. ಅವರು ರಾಮನನ್ನು ಮತ್ತು ಸೌಮಿತ್ರಿಯನ್ನು ಕೂಡಿಕೊಂಡು ನಡೆಯುತ್ತ ಗಿರಿಯನ್ನು ಏರಿದರು. ಮೇಘಚುಂಬಿ ಶ್ರೇಷ್ಠಶಿಖರವು ರಾಮನ ಅಡಿದಾವರೆಗೆ ತನ್ನ ಹಣೆಯೊಡ್ಡಿ ತಲೆ ನಿಮಿರಿ ಹೆಮ್ಮೆಯ ಅಭಿಮಾನದಿಂದ ನಿಂತಿತ್ತು.

ಕವಿಯು ಕೊಡಗಿಗೆ ನಡೆದು ಕಾವೇರಿನದಿಯ ಮೂಲ ತಲಕಾವೇರಿಯಲ್ಲಿ ಮಿಂದು ಮಡಿಯಾಗುತ್ತಾನೆ. ಅನಂತರ ಬ್ರಹ್ಮಗಿರಿ ಶೃಂಗಕ್ಕೆ ಏರುವಾಗ ಅವನ ಮನಸ್ಸು ಆ ಎತ್ತರದ ಮತ್ತು ವಿಸ್ತಾರದ ನೋಟಕ್ಕೆ ಧುಮುಕಿ ತತ್ತರಿಸುತ್ತದೆ. ನಿದ್ದೆ ಮಾಡಿ

ಹಸಿದುಎದ್ದ ಪರ್ವತದ ತೆರೆದ ಬಾಯಿ ಪಾತಾಳದ ಆಕಳಿಕೆಗಳೊ, ಹಲ್ಲೊ ಅಥವಾ ಕಣಿವೆಯಾಳಗಳೊ, ಕಲ್ಲೊ? ಹಿರಿದಾದ ಕಡಲೊಂದು ಬತ್ತಿಹೋಗಲು ತಾಯಿ ತಿಮಿಂಗಲಗಳು ಅದರ ತಳದಲ್ಲಿ ತಮ್ಮ ಮರಿ ಮೊಮ್ಮರಿಗಳೊಡನೆ ಮಡಿದು ಬಿದ್ದುವೊ? ಅಥವಾ ಹೆಬ್ಬೆಟ್ಟ ಕಿಬ್ಬೆಟ್ಟ ಹೆಗ್ಗುಡ್ಡ ಕಿಗ್ಗುಡ್ಡ ಹೆಬ್ಬಂಡೆ ಕಿಬ್ಬಂಡೆಗಳ ತಂಡದ ರಹಸ್ಯವೊ?

ಪಾತಾಳವನ್ನು ಹೊಕ್ಕು ದಾರಿ ತಪ್ಪಿ ಅಲೆವ ಆಕಾಶದ ಹುಡಿಗಳೊ ಅಥವಾ ಆವಿ ಮುಗಿಲುಗಳೊ? ಪ್ರಳಯ ಕಾಲಕ್ಕೂ ಮೊದಲಿನ ವಿಸ್ತಾರವಾದ ಸಮುದ್ರದ ಪಾಚಿಯಿಂದ ಮುಚ್ಚಿಹೋದ ಪೆಡಂಭೂತದ ಚರ್ಮದ ಆಕೃತಿಯೊ? ಅಥವಾ ಮಲೆಯ ಮೈ ತುಂಬಿದ ಅರಣ್ಯ ವೈಭವವೊ? ಗಗನ ಗಜದ ಹೊಟ್ಟೆಯನ್ನು ತಿವಿಯುವ ಇಳೆಯೆಂಬ ಖಡ್ಗಮೃಗದ ಒಂಟೆಯ ಕೊರಳಂತೆ ಉದ್ದವಾದ ಕೋಡುಗಳೊ? ಅಥವಾ ಪರ್ವತದ ಶಿಖರಗಳೊ?

ಅದು ಕಣ್ಣಿನ ಎಲ್ಲೆಗೆ ಮೀರಿದ್ದು; ಮನಸ್ಸಿನ ಮಿತಿಗೆ ಮೀರಿದ್ದು. ಬ್ರಹ್ಮಗಿರಿ ಶೃಂಗಕ್ಕೆ ಏರಿದ ಕಬ್ಬಿಗನ ಮನಸ್ಸು, ಘೂತ್ಕರಿಸಿ ಸೆಳೆಯುವ ಬ್ರಹ್ಮನ ಸುಳಿಗೆ ಸಿಲುಕಿದಂತಾಯಿತು. ಆ ಎತ್ತರದ ಮತ್ತು ವಿಸ್ತಾರದ ನೋಟಕ್ಕೆ ಧುಮುಕಿ ತತ್ತರಿಸಿತು. ಶಿಖರ ಕಂದರಗಳು ಪರ್ವತಸೀಮೆಯನ್ನು ತುಂಬಿದ ಗಿರಿಅರಣ್ಯಗಳ ಸ್ಪರ್ಧಿಯಾದ ಕಪಿಸೈನ್ಯ ಸಮುದ್ರವನ್ನು ನೋಡುತ್ತ, ದಶರಥಸುತನ ಮನಸ್ಸು ಹಾಗೆಯೇ ತತ್ತರಿಸಿತು.

ಸಿಂಧುವಿನ ಮಹಿಮೆಯನ್ನು ಅಳೆಯಲು ಹನಿಯ ಎಣಿಕೆ ಏಕೆ ಹೇಳು? ಮಹತ್ತಾದ ಭೂಮಿ ಮಹತೋಮಹೀಯವನ್ನು ಅಳೆಯಲು ಅಲ್ಪ ಅಳತೆಪಟ್ಟಿಯ, ಗುರುತು ಮಾಡುವ ಬಣ್ಣದ ನೆರವು ಬೇಕೆ? ಓ ಕಲೆಯ ಲಲನೆಯ ಕೈಯ ವೀಣೆಯೆ, ನಿನ್ನ ಸಡಗರ ಸಾಕು ಬಿಡು! ಹೇಳು, ರಾಮನ ಮೌನಕ್ಕಿಂತಲೂ ಮಿಗಿಲಾದುದೆ ನಿನ್ನ ತಂತಿಯ ಧ್ವನಿ? ರಾಮಚಂದ್ರ ಮತ್ತು ಇತರರು ಬೆಟ್ಟದ ತಪ್ಪಲಿನಲ್ಲಿ ನದಿಯ ದಡದಲ್ಲಿ ಕಣಿವೆಯಲ್ಲಿ ಕೋಡಿನಲ್ಲಿ ತಿರುತಿರುಗಿ ಅಲ್ಲಿ ಬೀಡುಬಿಟ್ಟಿದ್ದ ಪಡೆಗಳನ್ನು ನೋಡಿದರು. ಅವರು ದಶಗ್ರೀವನ ಆಯಸ್ಸಿನ ರೇಖೆಯನ್ನು ಮೆಟ್ಟಿಕ್ಕುತ್ತ ಅಳೆಯುವಂತೆ ಐದು ಹಗಲು ಐದು ಇರುಳು ಅದನ್ನು ಅವಲೋಕಿಸಿದರು.

ಸುಗ್ರೀವನು ಆರನೆಯ ದಿನದ ಹಗಲು ಓಲಗಕ್ಕೆ ಮುಖ್ಯರನ್ನು ಕರೆದನು. ಸುಗ್ರೀವನ ಆಜ್ಞೆಯು ಖ್ಯಾತನಾಮರಾದ ವೀರರ ಹೆಸರು ಹಿಡಿದು ಕರೆದು ಹೀಗೆ ಆದೇಶಿಸಿತು:

ಪ್ರಾಣಮಂ ಪುಲ್ಗೆಣೆಸಿ, ಪುಡುಕಿ, ಕಡುಗೆಯ್ಮೆಯಂ ಸಾಧಿಸುವ ಕಡುಗಲಿಗಳೈತನ್ನಿ ಮೇಳಿಮ್.

'ಓ ವಾನರ ಕುಲದ ಕೆಚ್ಚೆದೆಯ ಕಲಿಗಳಿರ ಕೇಳಿ, ಕಿವಿಗೊಟ್ಟು ಕೇಳಿ. ನಮಗೆ ಲೋಕದಲ್ಲಿ ನಮ್ಮ ಕೀರ್ತಿಯನ್ನು ಶಾಶ್ವತವಾಗಿ ಸ್ಥಾಪಿಸುವ ಕಾಲವು ಇಂದು ಒದಗಿ

ಬಂದಿದೆ. ಪುಣ್ಯಾತ್ಮ ದಶರಥನ ಪುತ್ರನ ಪುಣ್ಯಪತ್ನಿಯನ್ನು ರಾವಣನು ಒಯ್ದಿದ್ದಾನೆ. ಅವನನ್ನು ನಿವಾರಿಸಿ ಮಾತೆ ಸೀತೆಯನ್ನು ನಮ್ಮ ಮಿತ್ರನಿಗೆ ದೊರಕಿಸುವುದು ನಮ್ಮ ಪುಣ್ಯ ಪ್ರತಿಜ್ಞೆ. ಅದಕ್ಕಾಗಿ ನಮಗೆ ಲಂಕೆ ಎಲ್ಲಿರುವುದೆಂದು ಮೊದಲು ತಿಳಿಯಬೇಕು. ದೇವಿಯು ಜೀವದಿಂದ ಇರುವಳೊ ಅಥವಾ ಪ್ರಾಣವನ್ನು ತ್ಯಜಿಸಿದಳೊ ಎಂಬುದು ನಮಗೆ ತಿಳಿಯಬೇಕು. ಮತ್ತು ಆ ಆರ್ಯವನಿತೆಯನ್ನು ಆ ದೈತ್ಯ ಚೋರನು ಎಲ್ಲಿ ಅವಿತಿಟ್ಟಿದ್ದಾನೆ ಎಂಬುದು ನಮಗೆ ಸ್ಪಷ್ಟವಾಗಿ ಗೊತ್ತಾಗಬೇಕು. ಆದುದರಿಂದ ನಮ್ಮ ಈ ಸಕಲ ಸೈನ್ಯವು ಹೊರಡುವುದಕ್ಕೆ ಮೊದಲೆ ಆ ಸುದ್ದಿಯನ್ನು ತರಲು ಗೂಢಚಾರದಳದವರನ್ನು ಕಳುಹಿಸಲು ನಿಶ್ಚಯಿಸಿದ್ದೇನೆ.

'ಪ್ರಾಣವನ್ನು ಹುಲ್ಲಾಗಿ ಪರಿಗಣಿಸಿ, ಹುಡುಕಿ, ವಿಶೇಷ ಕಾರ್ಯವನ್ನು ಸಾಧಿಸುವ ಪರಾಕ್ರಮಿಗಳು ಎದ್ದು ನಿಂತು ಮುಂದೆ ಬನ್ನಿ.'

ಆ ನುಡಿ ಕಿವಿಗೆ ಬಿದ್ದೊಡನೆ ಆ ಸಭೆಯಲ್ಲಿ ಕುಳಿತವರು ಯಾರನ್ನೂ ನಾನು ಕಾಣೆ. ಅವರೆಲ್ಲರೂ ತಕಪಕ ಕುಣಿಯುವ ತವಕದಿಂದ ನಾಮುಂದೆ ತಾಮುಂದೆ ಎಂದು ನೆಗೆದು ಎದ್ದರು. ಅದನ್ನು ಕಂಡು ಸುಗ್ರೀವ ವಾಣಿಯು ಹಿಗ್ಗುತ್ತ ಘೋಷಿಸಿತು:

'ವಾನರ ಕುಲದ ಕೀರ್ತಿಗಳೇ, ಇನ್ನು ಕುಳಿತುಕೊಳ್ಳಿ. ತಮ್ಮಂತಹ ವೀರರನ್ನು, ವೀರಸಿರಿತೋಳು ಪಡೆದ ನಿಮ್ಮಂತಹ ಯೋಧರನ್ನು ಪಡೆದ ನಾನು ಧನ್ಯ.'

ಅನಂತರ ಮೌನವಾರಿಧಿಯಂತೆ ವ್ಯಾಪಿಸಿಕೊಂಡಿದ್ದು ಕುತೂಹಲಿಗಳಾಗಿದ್ದ ಎಲ್ಲರನ್ನು ಕಣ್ಣುತುಂಬಿ ನೋಡಿದನು. ಪರ್ವತದಂತೆ ಮಹಾಕಾಯನಾದ ವಿನಿತನನ್ನು ಹತ್ತಿರಕ್ಕೆ ಕರೆದನು. ಮೇಘಗಂಬೀರ ಕಂಠನು, ಶ್ರೇಷ್ಠ ವೀರಯೋಧನು, ಕಪ್ಪು ಮೈಯವನು ಆದ ಆ ವಾನರನು ಎದ್ದು ಚಂದ್ರದ್ರೋಣ ಪರ್ವತದ ಶಿಖರದ ಛಾಯೆ ಚಲಿಸುವಂತೆ ಸಾಗಿ ಸುಗ್ರೀವನ ಬಳಿಗೆ ಹೋದನು. ಕಪಿಕುಲ ಧೈರ್ಯ ಹಿಮಾಚಲವೇ ಬಳಿಗೆ ನಡೆದು ಬಂದು ನಿಂತಂತೆ ಆ ವಿನಿತನಿದ್ದನು. ಕೇಳಿದ ಸಭೆಯ ಮೈರೋಮಾಂಚನ ಗೊಳ್ಳುವಂತೆ ರವಿಸುತನು ಅವನಿಗೆ ಆದೇಶವನ್ನು ನೀಡಿದನು:

'ಕಲಿಯೇ, ಸೈನ್ಯದೊಡನೆ ಹೊರಡು. ನಿನ್ನ ಉತ್ತರ ದಿಗ್‌ಭಿತ್ತಿಯಲ್ಲಿ ಕೀರ್ತಿಯ ಸುಂದರವಾದ ಲಿಖಿತವನ್ನು ಕೆತ್ತು. ಬೆಳಕು ಕತ್ತಲೆ ಸುಳಿಯುವ ಕಡೆಯಲ್ಲೆಲ್ಲ ಹುಡುಕು. ಹೊರಡು, ನಡೆ. ಒಂದು ತಿಂಗಳೊಳಗೆ ಫಲಿತಾಂಶವನ್ನು ತೆಗೆದುಕೊಂಡು ಬಾ. ಕ್ಷೇಮದಿಂದ ಮರಳಿ ಬಾ.'

ವಿನಿತನ ಶಿರವು ಕೂಡಲೆ ಬಾಗಿತು. ಆಣತಿಗೆ ಕೈ ಮುಗಿದನು. ಅವನ ವದನದ ಉದಯಾಚಲದಲ್ಲಿ ಗೌರವಶ್ರೀಯು ಮೂಡುತ್ತಿರಲು ಕೃಪೆಗೆ ಹಿಗ್ಗುತ್ತ, ನಗುತ್ತ ತನ್ನ ತಾಣಕ್ಕೆ ನಡೆದನು.

ಕಪಿನೃಪನ ಕಣ್ಣನ್ನು ಅರಿತು, ಗುಲುಗಂಜಿಗಳಿಂದ ಮಾಡಿದ ಆಭರಣದಿಂದ ಶೋಭಿಸುತ್ತಿರುವ ತೆಳುವಾದ ಎತ್ತರದ ಶತಬಲಿ ಮುಂದುವರಿದನು. ಆ ಗರಿ ಹಗುರದ ಗಗನ ಗಾಮಿನಿಗೆ ಹೀಗೆ ಆಜ್ಞೆ ಮಾಡಿದನು:

ನೇತಿಯುಂ ಸತ್ಯ ಸಾಕ್ಷಾತ್ಕಾರಕಿತಿಯಂತತುಲ ನೀತಿ.

'ಶೌರ್ಯನಿಧಿ ಧೈರ್ಯಾಬ್ಧಿಯೆ, ನಿನ್ನ ಯಶಸ್ಸಿನ ಅಮೃತವನ್ನು ಐರಾವತದ ಮೈಗೆ ಲೇಪಿಸಯ್ಯ. ನೀನು ಪೂರ್ವದಿಕ್ಕಿನ ಕಡೆನಡೆ. ದೇವಿ ಕಾಣಲಿ, ಕಾಣದಿರಲಿ ಇದನ್ನು ತಿಳಿದುಕೊ: ಹೀಗೆಯೆ ಎನ್ನುವ ಹಾಗೆ, ಹೀಗಲ್ಲವೆನ್ನುವುದು ಸತ್ಯಸಾಕ್ಷಾತ್ಕಾರಕ್ಕೆ ಒಂದು ಅಸಾಮಾನ್ಯವಾದ ನೀತಿ. ಒಂದು ತಿಂಗಳ ಅವಧಿ. ನಡೆ, ತೆರಳು. ಸುಖದಿಂದ ಹಿಂತಿರುಗಿ ಬಾ.'

ತಲೆಬಾಗಿ ಹೋದ ಶತಬಲಿಯು ವಿನತನ ಪಕ್ಕದಲ್ಲಿ ನಿಂತನು. ಅದು ದೊಡ್ಡಗಾತ್ರದ ಬಗನಿಮರದ ಪಕ್ಕದಲ್ಲಿ ತೆಳುವಾದ ಅಡಕೆಯ ಮರ ನಿಂತಂತಿತ್ತು.

ಮತ್ತೆ ಸುಗ್ರೀವನ ಕಣ್ಣು ಹೊಂಚಿ ಹಾರಿತು. ಅದೊ ಎರಗಿತು ಇಲ್ಲಿ ಎನ್ನಲು ಮತ್ತೆ ಹಾರಿತು. ಅಲ್ಲಿ ಎರಗಿತು ಎಂದರೆ ಮರಳಿ ಏರಿತು. ಕಡೆಗೆ ಇಳಿದುದು ಅಂಗದನ ತಾಯಿಯ ತಂದೆಯ ಪೂಜ್ಯ ಸನ್ನಿಧಿಗೆ. ತಪನಜ ಸುಗ್ರೀವನು ಮೇಲೆದ್ದು ಸುಷೇಣನ ಎದುರಿಗೆ ನಡೆದನು. ನಿಂತು ಕೈಮುಗಿದು ತನ್ನ ವಿನಯವನ್ನು ಅರಿಕೆ ಮಾಡಿಕೊಂಡನು. ಅವರ ಜೊತೆಗೆ ಇನ್ನೂ ಸಾವಿರದಸೇನೆಯನ್ನು ನೇಮಿಸಿದನು. ಪಶ್ಚಿಮದಿಕ್ಕಿಗೆ ನಡೆಯಿರಿ ಎಂದು ಓಲೈಸಿದನು. ಯುದ್ಧಸಿದ್ಧ, ಮಂತ್ರೌಷಧಿಯ ಮಹಾ ಪಂಡಿತನಿಗೆ ವೀಳೆಯವನ್ನು ನೀಡಿದನು.

ವಾಲಿಯ ಸೋದರನು ಉತ್ತರಕ್ಕೆ, ಪೂರ್ವಕ್ಕೆ, ಪಶ್ಚಿಮಕ್ಕೆ, ಪೂರ್ವಕ್ಕೆ ಮಹಾಶೂರರು ದೃಢಛಲದ ವೀರರನ್ನು ನೇಮಿಸಿದನು. ಅನಂತರ ಲಂಕೆಯಿರುವ ದಕ್ಷಿಣಕ್ಕೆ ಐವರು ಪ್ರಸಿದ್ಧ ಸಿಡಿಲಾಳುಗಳನ್ನು ಕರೆದನು.

ನೀಲ ತನುವಿನ ಅಗ್ನಿಯ ಮಗ ಮಹಾಸೇನಾನಿ ನೀಲನು ಉರಿ ಸುತ್ತಿದ ಇರುಳಿನಂತೆ ರಕ್ತಾಂಬರನಾಗಿ ಬಂದನು. ಅವನ ಪಕ್ಷಿಯ ಆಕೃತಿಯ ಶಿರೋಭೂಷಣವು ಕೆಂಡವನ್ನು ಉಗುಳುವ ಕಡುಕೆಂಪಾಗಿರುವ ಗರಿಗಳ ಸಮೂಹದಿಂದ ಪ್ರಜ್ವಲಿಸುತ್ತ ಪೂರ್ವ ಪರ್ವತದ ಹಣೆಯಲ್ಲಿ ಉದಿಸುವ ಬಾಲರವಿಯಂತಿತ್ತು. ಅವನ ಭುಜಪ್ರದೇಶವನ್ನು ಕುಂಕುಮದಂತೆ ಉಜ್ವಲ ವರ್ಣದಿಂದ ಉರಿಯುವ ಕೇಸರದ ಸಿಂಹದ ಚರ್ಮವು ಶೃಂಗರಿಸಿತ್ತು. ಕುಶಲ ಕೈಕೆಲಸದಿಂದ ರಚಿತವಾದ ಬೃಹತ್ತಾದ ದೇವದಾರು ವೃಕ್ಷದ ಗದೆಯು ಅವನ ಬಾಹುವಿನಲ್ಲಿ ದಂಡನಾಯಕ ಚಿಹ್ನವಾಗಿ ಜೊತೆಯಾಗಿತ್ತು. ಅದು ಭಾರವಮಾತ್ರದಿಂದಲೇ ಶ್ರಮರಹಿತವಾಗಿ ಮದ್ದಾನೆಯ ತಲೆಯನ್ನು ನುಚ್ಚುನೂರಾಗಿಸುವುದಾಗಿತ್ತು.

ನೀಲನ ಅನಂತರ ಬಂದವನು ಬ್ರಹ್ಮೋದ್ಭವ ಜಾಂಬವಂತ. ಅವನು ಮಿಂಚು ಕಪ್ಪಿನ ಕರಡಿಯ ತೊಗಲಿನಿಂದ ಶೋಭಿಸುವ ಮುಪ್ಪಿನ ಮೂರ್ತಿ. ನರೆ ಮೀಸೆಗಡ್ಡದಿಂದ ಪುರಾತನಕಾಲವನ್ನು ಪ್ರತಿಬಿಂಬಿಸುತ್ತಿದ್ದ ಅಪ್ರತಿಮನಾದ ಅವನು ವಜ್ರಮುಷ್ಟಿ ಯುದ್ಧಪಂಡಿತ. ಸಮುದ್ರದ ಬಳಿಗೆ ಬಂದ ನದಿಯಂತ ಗಂಭೀರ ರೂಪಿ. ಅವನು ಕೆಮ್ಮುಗಿಲ ಸಂಜೆಯ ಅಂಬರದಂತ ನೀಲನ ಪಕ್ಕದಲ್ಲಿ ಮಹಾಪರ್ವತದ ಆಕೃತಿಯ ಘನವನರಾತ್ರಿಯಂತೆ ನಿಂತನು.

ಅದೊ, ಜಾಂಬವನ ಅನಂತರ ವಾಯುಪುತ್ರ ಆಂಜನೇಯನು ಚಂದ್ರೋದಯದ ಛಂದದಿಂದ ಶಾಂತವಾಗಿ ಬಂದನು! ಅವನು ಚಿನ್ನದ ಬಣ್ಣದ ಹಳದಿಯಿಂದ ಹೊಳೆಯುವ ಅಂಗದ, ವಜ್ರಸಮದಂತೆ ಬಲಿಷ್ಠವಾದ ಶರೀರದ, ವನಲತೆಗಳಿಂದ ಶೋಭಿತ ಶಿರದವನಾಗಿದ್ದನು. ಹುಲಿ ಚರ್ಮದ ಹೇಮ ರೋಮದಿಂದ ಕೂಡಿದ ಕಪಿಚರ್ಮ ಕವಚಧಾರಿಯಾಗಿ, ಕೊಂಕಿದ ನೀಳಮೂಗಿನ ಆಕೃತಿಯು ವೈಖರಿಯವನಾಗಿದ್ದನು. ಆ ಮಂಗಳ ಮನೋಜ್ಞನನ್ನು ನೋಡಿ ಆ ಸಭೆಯು ಸಂತೋಷಗೊಂಡು ಜಯ ಕಂಠದಿಂದ ಘೋಷಿಸಿತು.

ಪೇಳ್, ಹನುಮಗಾರೆಣೆ? ಹನುಮಗಾರೆಣೆ! ನಮೋನಮಃ

ಅವನು ಗಗನಗಾಮಿಗಳಲ್ಲಿ ಅಗ್ರಗಾಮಿಯು, ಕಾಮರೂಪಿಗಳಲ್ಲಿ ಅಗ್ರಗಣ್ಯನು ಆಗಿದ್ದನು. ಅಖಿಲ ಲೋಕಪ್ರಾಣದ ಪುತ್ರನನ್ನು, ಪುಣ್ಯದಿಂದ ಬ್ರಹ್ಮಚರ್ಯದಿಂದ ದಿವ್ಯತೆ ಸಂಪಾದಿಸಿದ ದೇವತೇಜನನ್ನು, ಪೂಜ್ಯನನ್ನು ಕಂಡು ಆ ನೆರವಿಯು ನಮಸ್ಕರಿಸಿತು ಎಂದಾಗ ಹೇಳು, ಹನುಮನಿಗೆ ಯಾರು ಸಾಟಿ? ಹನುಮನಿಗೆ ಯಾರು ಸಾಟಿ? ನಮೋನಮಃ. ಹೇಳು ಹನುಮನಿಗೆ ಸಮಾನರುಂಟೆ?

ಮಾರುತಿಯ ಅನಂತರ ಬೆಳುದಿಂಗಳನ್ನು ಮೀರಿಸುವ ಬೆಳ್ಳನೆಯ ವಸ್ತ್ರ ಧರಿಸಿದ್ದ ಅದ್ಭುತ ವಾನರ ವೀರ ನಳ ಬಂದನು. ಯೌಗಿಕ ರಹಸ್ಯದಲ್ಲಿ ಅನುಪಮನಾದ ಅವನು ಅನಿಲನ ಪಕ್ಕದಲ್ಲಿ ನಿಂತನು. ಅವನ ಬಳಿಕ ಉದಯರವಿ ತಾನು ಫಾಲ್ಗುಣವನ್ನೇರಿ ಬರುವಂತೆ ಅಂಗದನು ಬಂದನು. ತರುಣ ದೇಹದ ಯುವ ರಾಜನನ್ನು ಕಂಡು ಗೋಷ್ಠಿಯು ಸುಗ್ರೀವನನ್ನು ಹೊಗಳಿ ಸಂತೋಷಪಟ್ಟಿತು. ಪಂಚಶಿಖರಗಳಂತೆ ಮೈದೋರಿದ ಅವರಿಗೆ ಕಪಿಕುಲಸ್ವಾಮಿಯು ವೀಳೆಯವನ್ನು ಕೊಡುತ್ತ ಹೀಗೆ ಹೇಳಿದನು:

'ಮಹಿಮಾನ್ವಿತರೆ, ವಾನರರ ಯಶಸ್ಸೆಂಬ ಕಾವ್ಯಕ್ಕೆ ಶುಭದ ನಾಂದಿಗಳಾಗಿ ಹೊರಡಿ. ವೀರರಿರ ನಿಮ್ಮಿಂದ ಕಿಷ್ಕಿಂಧೆಯು ಕೀರ್ತಿವಿಂಧ್ಯೆಯ ಮೇಲೆ ನಿಲ್ಲಲಿ. ಕಾಲನ ಹಣೆಗೆ ನಿಮ್ಮ ಹೆಸರಿನ ಅಕ್ಷರಗಳು ಶಿಲಾಲಿಪಿ ತಿಲಕವಾಗುವಂತೆ ದಕ್ಷಿಣವನ್ನು ಹುಡುಕಿ ಬನ್ನಿ. ಲಂಕೆಯನ್ನು ಹುಡುಕಿ ಬನ್ನಿ. ರಾಣಿ ಸೀತಾದೇವಿಯ ವಾರ್ತೆಯನ್ನು

ಸಂದೇಹಕ್ಕೆಡೆಯಾಗದಂತೆ ತನ್ನಿ. ಹೇ ಕಪಿಧ್ವಜ ಗೌರವ ಪ್ರಾಣ ಸೂತ್ರರಿರ, ರಾಮನ ಹೆಸರಿನೊಡನೆ ನಮ್ಮ ಹೆಸರನ್ನು ಬೆಸೆಯುವ ಪುಣ್ಯ ಸಾಧಿಸಲು ಇದೇ ಮುಹೂರ್ತ. ಈ ಅಮೃತವನ್ನು ಪಡೆದರೆ ಅದು ನಮಗೆ ದಾರಿಯ ಬುತ್ತಿಯಾಗುತ್ತದೆ. ಅಲ್ಲದಿದ್ದರೆ ಕೋಟಿ ಕೀಟಗಳೊಡನೆ ನಾವು ಒಂದಾಗುತ್ತೇವೆ. ಇದನ್ನು ಕಡೆಗಣಿಸಿದರೆ ಕೋಟಿ ಕೀಟಗಳ ಹಸಿವಿಗೆ ಉಣಿಸಾಗುತ್ತೇವೆ. ಈ ಜನುಮಕ್ಕೆ ಬೇರೆ ಫಲವನ್ನು ಕಾಣೆ!'

ಎಂದು ಗದ್ಗದಿತನಾಗಲು ಅವನ ಮಾತು ಒಂದು ಅರೆಕ್ಷಣ ನಿಂತಿತು. ಭಾವದ ಕರುಣರಸಕ್ಕೆ ಕೇಳಿದವರೆಲ್ಲರ ಕಣ್ಣು ಹನಿಗೂಡಿ ನೆನೆಯುವಂತೆ ಮತ್ತೆ ಸುಗ್ರೀವನ ವಾಣಿ ಮುಂದುವರಿಯಿತು.

'ನಿಮ್ಮೆಲ್ಲರಿಗೂ ಪ್ರತಿಸ್ಪರ್ಧಿಯಂತಿರುವ, ನಿಗ್ರಹಿಸಲು ಅಶಕ್ಯವಾದ, ಸಂಚರಿಸಲಾರದ ಘೋರ ಕಾಡು ಬೆಟ್ಟಗಳಿಂದ ಉಂಟಾಗುವ ಸಂಕಟವನ್ನು ನಾನು ತಿಳಿದಿದ್ದೇನೆ. ದೇವಿಯ ದುಃಖವನ್ನು ನೆನೆಯಲು, ಕೆಳೆಯನ ಅಳಲನ್ನು ನೆನೆಯಲು ನಮ್ಮ ಕಷ್ಟವು ಎಳ್ಳಿನಷ್ಟು, ಹುಲ್ಲಿನಷ್ಟು ಅಲ್ಲವು. ಬಂಧು ಮಿತ್ರರು ದುರವಸ್ಥೆಯಲ್ಲಿರುವಾಗ ನಮಗೆ ಕಷ್ಟವೆ ಇಷ್ಟವಾಗಿ, ಸುಖವೆ ಸಂಕಟವಾಗುತ್ತದೆ. ಸೀತೆಯನ್ನು ಕದ್ದೊಯ್ದ ರಾವಣನು ಪಾತಕನು, ಪ್ರೇಮಘಾತುಕನು. ರಾಮನ ರಾಣಿಯನ್ನು ಹುಡುಕಿ, ಹೋರಾಡಿ ಸೆರೆ ಬಿಡಿಸದಿದ್ದರೆ ನಾವು ಅವನಿಗಿಂತ ಮಿಗಿಲಾದ ಕೇಡಿಗರಾಗುವೆವು.

'ನೋಡಿ ಈ ಗಿರಿಪಂಕ್ತಿ ಸಾಕ್ಷಿಯಿದೆ. ನೋಡಿ ಆ ಸ್ವರ್ಗಾಕ್ಷಿ ಸೂರ್ಯದೇವ, ಶರದ್ ಅಂತರಿಕ್ಷ ಸಾಕ್ಷಿಯಿದೆ. ಓ ಪ್ಲವಂಗ ಕೇತನರಿರಾ, ನೀವು ಲೋಕ ಗೌರವ ಕಥಾ ಕೃತಿಗೆ ಸ್ಮೃತಿನಿಕೇತನರಾಗುವಂತೆ ಹೊರಡಿ! ನಿಮಗೆ ಸರ್ವ ಋಷಿಗುರುದೇವ ಕೃಪೆಯಿರಲಿ! ಗೆಲುವಾಗಲಿ!'

ಎಂದು ಹೇಳಿ ಕಪೀಶ್ವರನು ಭಾಷಣದಿಂದ ವಿರಮಿಸಿದನು. ಕೂಡಲೇ ವೀರಘೋಷವು ಆಕಾಶಕ್ಕೆ ನೆಗೆಯಿತು. ಮಹಾಧ್ವನಿಯನ್ನು ಅರಣ್ಯ ಪರ್ವತಗಳು ಪ್ರತಿಧ್ವನಿಸಿದವು. ಅನಿಲ ಮಂಡಲವು ಕಂಪಿಸಿ, ಅನುಕಂಪಿಸಿತು. ಜೊತೆಗೆ ಅಖಿಲ ಕಿಷ್ಕಿಂಧೆಯು ಆನಂದದಿಂದ ಪುಲಕಗೊಂಡಿತು. ಬೆಟ್ಟದ ಪಕ್ಕದ ಹಸುರಿನ ಓಲಗ ಚದುರಿತು. ಸೈನಿಕರು ಕರ್ತವ್ಯಭಾರದ ಕಡೆಗೆ ಗಮನ ಹರಿಸುತ್ತ ತಮ್ಮ ತಮ್ಮ ಪಾಳೆಯಕ್ಕೆ ತೆರಳಿದರು.

ರುಮಾಪ್ರಿಯನು ಯಮನನ್ನು ಮೀರಿಸುವ ಗಜ ಗವಾಕ್ಷ ಗವಯ ದ್ವಿವಿದ ಶರಗುಲ್ಮ ಸುಹೋತ್ರ ಶರಾರಿ ಋಷಭ ಗಂಧಮಾದನ ವಿಜಯ ಮುಂತಾದವರಿಗೆ ಕಪಿಶ್ರೇಷ್ಠ ಆಂಜನೇಯನ ಜೊತೆಗಿರಲು ಹೇಳಿದನು. ವಿರಾಟ್ ಪ್ರಾಜ್ಞನನ್ನು ಕುರಿತು ಹೀಗೆಂದನು:

'ಕಪಿಕುಲ ಮಹಾವೀರ, ಓ ಸಮೀರ ಕುಮಾರನೇ, ನೀನು ನಮ್ಮ ಕುಲದ ಕಣ್ಣು; ಬಲದ ಬಲ, ಛಲದ ಛಲ; ಮತ್ತೆ ಸಾಹಸದ ಅಚಲ ಧೈರ್ಯ. ಲಂಕೆಯು ದಕ್ಷಿಣ ದಿಕ್ಕಿನಲ್ಲಿದೆ ಎಂದು ನನ್ನ ಅಣ್ಣನಿಂದ ತಿಳಿದಿದ್ದೆ. ಆ ಕಾರಣದಿಂದ ಆ ದಿಕ್ಕೆ ರವಿಕುಲನ ಲಲನೆಯ ಅನ್ವೇಷಣೆಗೆ ಮುಖ್ಯ ಲಕ್ಷ್ಯವಾಗಿರಲಿ.

'ನೀನು ಜಗತ್ ಪ್ರಿಯನಾದ ವಾಯುಪುತ್ರ. ನೀನು ಪ್ರವೇಶಿಸಲಾರದ ಸ್ಥಳ ಯಾವುದೂ ಇಲ್ಲ. ಕಾಡಿನಲ್ಲಿ ಕಣಿವೆಯಲ್ಲಿ, ಪಳುವಿನಲ್ಲಿ ಹುಲ್ಲುಗಾವಲಿನಲ್ಲಿ, ಬಿಲಗಳಲ್ಲಿ ಗುಹೆಗಳಲ್ಲಿ, ಭೂಮಿಯಲ್ಲಿ ಆಕಾಶದಲ್ಲಿ, ನಾಗ ನರ ದೇವತೆ ಗಂಧರ್ವಲೋಕದಲ್ಲಿ ನಿನಗೆ ಪ್ರವೇಶಿಸಲಾರದ ಸ್ಥಳವೆಲ್ಲಿಯೂ ಇಲ್ಲ. ನೀನು ವಾಯುಪುತ್ರ. ದೇಶ ಕಾಲಾನುವೃತ್ತಿಯನ್ನು ನಯವಾಗಿ ತಿಳಿದ ವಿವೇಕಿ. ಮೂರು ಲೋಕಗಳಲ್ಲಿಯೂ ಬುದ್ಧಿಯಲ್ಲಿ, ಬಲದಲ್ಲಿ, ಪರಾಕ್ರಮದಲ್ಲಿ ನಿನಗೆ ಸರಿಸಮಾನರಾದ ಯಾರನ್ನೂ ನಾನು ಕಾಣೆ!

'ಬೇರಿಗೆ ಎರೆಯುವ ನೀರು ಕೊಂಬೆಕೊಂಬೆಯನ್ನು ಏರಿ ಮರವನ್ನು ಪೋಷಿಸುತ್ತದೆ. ಅದೇ ರೀತಿ ನಿನಗೆ ಎರೆದ ನನ್ನ ಈ ವಾಗ್ಧಾರೆ ಎಲ್ಲರ ಚೈತನ್ಯಕ್ಕೆ ಜೀವಸತ್ತ್ವವಾಗುತ್ತದೆ...ಮತ್ತು ನಮ್ಮಾತ್ಮ ಮಿತ್ರ ದಾಶರಥಿಯು ಇದೊ ನಿನಗೆ ಆದೇಶವನ್ನು ಜೊತೆಗೆ ಅಭಿಜ್ಞಾನವನ್ನು ನೀಡುವನು...'

'ಕೊಳ್ಳಿದಂ, ಪ್ರಿಯಸುಹೃತ್, ಈ ಅಂಗುಳೀಯಮಂ.'

ಕೈ ಮುಗಿದ ಪವನಸುತನ ಕೈಯನ್ನು ರಾಘವೇಂದ್ರನು ಉಕ್ಕುವ ಅಕ್ಕರೆಯಿಂದ ಹಿಡಿದನು. ದೃಷ್ಟಿ ದೃಷ್ಟಿಯನ್ನು ಅಪ್ಪಿಕೊಳ್ಳಲು, ಸ್ವಲ್ಪಹೊತ್ತು ಕಣ್ಣಿಗೆ ಕಣ್ಣಿಟ್ಟು ನೋಡಿದನು. ಹನಿಯು ಮೀಸೆಯ ತುಪ್ಪಳಕ್ಕೆ ಇಳಿಯಲು ಗದ್ಗದಿಸುತ್ತ ನುಡಿದನು:

'ಪ್ರಿಯ ಸುಹೃತ್ (ಮಿತ್ರ) ಇದನ್ನು ತೆಗೆದುಕೊ, ಈ ಉಂಗುರವನ್ನು. ದೇವಿಯು ಈ ಮುದ್ರೆಯನ್ನು ತಿಳಿದಿದ್ದಾಳೆ. ಈ ಹೆಸರಿನ ಉಂಗುರವನ್ನು ವಿಶೇಷವಾಗಿ ಮಾಡಬೇಕಾದುದು ಮತ್ತು ಇದನ್ನು ಅನುಕರಣೆ ಮಾಡಲು ಆಗುವುದಿಲ್ಲ.

'ಕೇಳು, ಜನಕಸುತೆಯು ಭಯ ಚಕಿತೆ. ನೀನು ಆಕೆಗೆ ಅಪರಿಚಿತನು. ಆ ಕಾರಣದಿಂದ ನಿನ್ನನ್ನು ನಂಬದಿದ್ದರೆ ಜ್ಞಾಪಕಕ್ಕೆ ತರುವ ವಸ್ತು (ಅಭಿಜ್ಞಾನ) ವಾದ ಇದನ್ನು ತೋರಿಸು... ಹೇ ಮಹಾಸತ್ತ್ವ, ನಿನಗೆ ಎಲ್ಲರೂ ಕೊಡುವ ಗೌರವದಿಂದ ನೀನು ಮಹಾಸತ್ತ್ವನೆಂಬ ರಹಸ್ಯವನ್ನು ನಾನು ತಿಳಿದೆನು. ನಿನ್ನಿಂದ ನನ್ನ ಕೆಲಸವು ಸಫಲವಾಗುವುದೆಂದು ಹೃದಯ ವೀಣೆಯು ನುಡಿಯುತ್ತಿದೆ.

'ಹೇ ಮಹತ್ಕಾರ್ಯಪಟುವೆ, ಇದೊ ನಿನ್ನನ್ನು ನಮಸ್ಕರಿಸಿ ಬೀಳ್ಕೊಡುವೆನು. ನಿನಗೆ ಮಂಗಳವಾಗಲಿ. ನಿನ್ನ ಮಾರ್ಗವು ಸುಗಮವಾಗಲಿ! ನನ್ನ ಸೌಭಾಗ್ಯವತಿಯು, ನೀನು ಇದನ್ನು ತೋರಿಸುವಾಗ ನಿನ್ನಲ್ಲಿ ಅಪನಂಬಿಕೆಯನ್ನು ಹೊಂದಿದರೆ ಅವಳು ಸೌಭಾಗ್ಯವತಿಯಲ್ಲ!...'

ಎಂದು ಹೇಳುವಾಗ್ಗೆ ಗಂಟಲು ಕಟ್ಟಿತು. ನಸು ನಡುಗುತ್ತಿದ್ದ ಕೈ, ಮುದ್ರೆಯುಂಗುರವನ್ನು ಆಂಜನೇಯನು ಒಡ್ಡಿದ ಬೊಗಸೆಗೆ ಇಳಿಸಿತು. ಆ ನಿಶಿತಮತಿ, ಮಿತಭಾಷಿ, ಯೋಗಿಗಳ ಯೋಗಿ ಪವನ ಪುತ್ರ ಬ್ರಹ್ಮಸಂಚಾರಿಯು 'ಧನ್ಯನಾಂ' ಎಂದು ಹೇಳಿದನಲ್ಲದೆ ಇನ್ನೊಂದು ನುಡಿಯಲಿಲ್ಲ. ಶ್ರೀ ಮುದ್ರೆಯನ್ನು ತನ್ನ ವಕ್ಷದ ವಜ್ರ ರಕ್ಷೆಯಲ್ಲಿಟ್ಟುಕೊಂಡನು. ತನ್ನನ್ನು ಅಪ್ಪಿದ ನೀಲದೇಹಿ ರಾಮಚಂದ್ರನನ್ನು ಬಿಗಿದಪ್ಪಿಕೊಂಡನು. ಪರ್ವತವು ಮಹಾಸಮುದ್ರವನ್ನು ಬೀಳ್ಕೊಡುವಂತೆ ರಾಮನು ಬೀಳ್ಕೊಟ್ಟನು. ಸುಗ್ರೀವನ ಆಜ್ಞಾ ಭಯಕ್ಕೆ ದಿಕ್ಕು ದಿಕ್ಕುಗಳ ದಿಗ್ಗಜಗಳು ಘೀಂಕರಿಸುವಂತೆ ಬೀಳ್ಕೊಟ್ಟನು!

❑



~~~~~~~~~~~~~~~~~~~~~~~ ಸಂಚಿಕೆ – ೧೦ ~~~~~~~~~~~~~~~~~~~~~~~

ಇರ್ದುದು ಮಹೇಂದ್ರಾಚಲಂ

ಓ ವೀಣೆಯೆ ಹೇಳು. ನಿನಗೆ ಕಲಾ ಲತಾಂಗಿಯ ಬೆರಳ ಚಿಗುರಿನ ಸೊಂಪು ಸಾಕಾಗುವುದೆ? ಪ್ರಳಯ ಭೈರವ ಡಮರು ರೌರವ ಆವೇಶವನ್ನು ಅಹ್ವಾನಿಸು! ವಿನತನು ಉತ್ತರದಲ್ಲಿ ಆರ್ಯನ ಅರಸಿಯನ್ನು ಎಲ್ಲಕಡೆಯೂ ಅರಸಿ ಹದಿನೈದು ದಿನಗಳಲ್ಲಿ ಹಿಂತಿರುಗಿ ಬಂದಿದ್ದಾನೆ. ಶತಬಲಿಯ ಅಪಾರ ಸೇನೆಯು ಪೂರ್ವದಿಕ್ಕನ್ನು ಅವನಿಜೆಗಾಗಿ ಸೋಸಿ, ರೋಸಿ ಹೋಗಿ ತಿಂಗಳು ತುಂಬಲು ಇನ್ನೂ ಎರಡು ದಿನಗಳಿರುವಾಗಲೇ ಹಿಂತಿರುಗಿದೆ. ಸುಷೇಣನು ತಿಂಗಳ ಅವಧಿಯ ಸಂಜೆ ಕೊನೆಗಾಣುವಷ್ಟರಲ್ಲಿ, ಕಳೆಗುಂದಿದ ಮುಖದವನಾಗಿ ಬಳಲಿ ಅಸಂತೋಷದಿಂದ ಹಿಂದಿರುಗಿದ್ದಾನೆ. ಅವನು ಪಶ್ಚಿಮ
~~~~~~~~~~~~~~~~~~~~~~~

ದಿಕ್ಕಿನಲ್ಲಿಯ ತನ್ನ ವ್ಯರ್ಥವಾದ ಫಲಿತಾಂಶವನ್ನು ತಿಳಿಸಲಿದ್ದಾನೆ.

ಇನ್ನೂ ಏತಕ್ಕೆ ದಕ್ಷಿಣ ದಿಕ್ಕಿನ ಸುದ್ದಿ ಬಂದಿಲ್ಲ? ತಿಂಗಳ ಅವಧಿ ಮುಗಿಯಿತು. ಕಾತರದಿಂದ ಮಾರನೆಯ ದಿನ ಕಳೆಯಿತು. ಮತ್ತೊಂದು ದಿನವು ನಿರೀಕ್ಷಣೆಯ ತೀಕ್ಷ್ಣತೆಗೆ ಬಲಿಯಾಯಿತು. ಅಕ್ಕರೆಗೆ ಅತಿಶಂಕೆಯಲ್ಲವೆ? ಸೂರ್ಯಸಂತತಿಯ ಮೂವರಿಗೆ ಭೀತಿ ಬಡಿಯಿತು. ನೀಲನು ಎಲ್ಲಿಗೆ ಹೋದ? ಅಂಜನಾಪ್ರಿಯಸುತನು ಏನಾದ? ಮುದಿ ಜಾಂಬವಂತನು ಮತಿಗೆಟ್ಟನೆ? ವಾಲಿಯ ಕುಮಾರ ಯುವರಾಜ ಅಂಗದನಿಗೆ ದಾರಿಯಲ್ಲಿ ಏನಾದರು ಅಡ್ಡವಾಯಿತೆ?

ಹೇಳು, ಆ ನಳನು ರಕ್ಕಸರ ಬಲಿಗೆ ಆಹುತಿಯಾದನೆ? ಓ, ಏಳು, ವೀಣೆಯೆ, ಗಾನಗೆಯ್, ನಿನಗಿನ್ನು ಕಲಾ ಕೋಮಲೆಯ ಕೈಯ ತಳಿರಿನ ಸ್ಪರ್ಶ ಸಾಕಾಗುವುದೆ? ತಾಂಡವ ಶಿವನ ಕೈಯ ಡಮರು ಆವೇಶವನ್ನು ಆಹ್ವಾನಿಸು! ಆಂಜನೇಯನ ಸಾಗರೋಲ್ಲಂಘನದ ಮಹಾ ಸಾಹಸ ಕಥಾಸಾಗರದ ಕಡೆಯುವಿಕೆಯನ್ನು ಸಾಗರೋಪಮವಾಗಿ ಹಾಡು!

ಇರ್ದುದು ಮಹೇಂದ್ರಾಚಲಂ, ದಕ್ಷಿಣಾಂಬುಧಿಗೆ ಬೇಹುಗಡಿಯಂ ಕಟ್ಟಿ

ಪರ್ವತಗಳ ಕುಲದ ಜಗಜಟ್ಟಿಯಾದ ಮಹೇಂದ್ರಾಚಲವು ದಕ್ಷಿಣ ಸಮುದ್ರಕ್ಕೆ ಗೂಢಚರ್ಯೆಯ ಗಡಿಯನ್ನು ಕಟ್ಟಿ, ಮುಡಿಯಿಂದ ಮುಗಿಲನ್ನು ಮುಟ್ಟಿ ಅಲ್ಲಿತ್ತು. ಮಲೆಯೆಂಬ ಕರುವು ತನ್ನ ಗೋಣನ್ನು ನೀಡಿ, ಮೋರೆಯನ್ನು ಚಾಚಿ, ಗಗನ ಗೋವಿನ ಮುಗಿಲ ಕೆಚ್ಚಲನ್ನು ಹೀರುವಂತೆ ಅದರ ಶಿಖರವು ಚೆಲುವಾಗಿತ್ತು. ಆ ಶಿಖರದ ತುದಿಯ ಕೋಡುಗಲ್ಲು ಲಂಕೆಯನ್ನು ಕೇಡುಗಣ್ಣಿನಿಂದ ನೋಡುವ ಮೃತ್ಯು ದುಶ್ಯಕುನ ರಣಹದ್ದಿನ ಕೊಕ್ಕಿನಂತೆ ಭೀಕರವಾಗಿತ್ತು. ಅದು ರಾವಣನ ಆಯಸ್ಸಿನ ಬರಹಕ್ಕೆ ವಿಧಿಯ ತೋರು ಬೆರಳಿನಂತಿತ್ತು. ಆಕಾಶದಲ್ಲಿ ಸಂಚರಿಸುವ ದೇವತೆಗಳು ಆ ಮುಂದಕ್ಕೆ ಚಾಚಿಕೊಂಡಿರುವ ಬಂಡೆಯಲ್ಲಿ ಯಾವಾಗಲೂ ಕುಳಿತಿದ್ದ ಶಿಖರಗಾತ್ರದ ಹದ್ದನ್ನು ನೋಡುತ್ತಿದ್ದರು. ಅವರು ಅದಕ್ಕೆ 'ಶಕುನಿ ಶಿಲೆ' ಎಂಬ ಅನ್ವರ್ಥ ನಾಮವನ್ನಿಟ್ಟಿದ್ದರು.

ಶ್ಯೇನಿ ಪುತ್ರನು, ಜಟಾಯುವಿನ ಅಣ್ಣನು ಆದ ಸಂಪಾತಿ ಅಲ್ಲಿ ಕುಳಿತು ಶಾಪದ ವಿಮೋಚನದ ದೀರ್ಘಹಾದಿಯನ್ನು ನೋಡುತಿದ್ದನು. ಬ್ರಹ್ಮನನ್ನು ಆ ಶುಭ ಮುಹೂರ್ತದ ಆಗಮನಕ್ಕಾಗಿ ಬೇಡುತ್ತಿದ್ದನು. ಜೀವ ಚೈತನ್ಯವು ಚಲಿಸಲಾಗದ, ಜಡತನದ ಬೇಸರದ ನೋವಿನಿಂದಾಗಿ ನಡುನಡುವೆ ಚೀರುತ್ತಿದ್ದನು. ಅದು ಗಿರಿ ಅರಣ್ಯದಲ್ಲಿ ಪ್ರತಿಧ್ವನಿಸಿ ಮೈಗೆ ಮುಳ್ಳೇರುವಂತೆ ಮಾಡುತ್ತಿತ್ತು. ಎಷ್ಟೊ ಪ್ರಾತಃಕಾಲಗಳು ಬಂದು, ಎಷ್ಟೊ ಸೂರ್ಯಾಸ್ತಗಳು ಹೋಗಿ, ರಾತ್ರಿಗಳೆಷ್ಟೊ ನಿಂತು, ಶತಮಾನವು ಕಳೆಯಿತು. ಆದರೂ ಅಯ್ಯೊ, ನಿರಾಶಾಗಾಡಾಂಧಕಾರವನ್ನೆಲ್ಲ ತೂರುವ ಕಿರಣ ಕಾಣಿಸಲಿಲ್ಲ.

ಸಮುದ್ರ ನೀಲಿಯು ತರಂಗ ಕೈಂಕರ್ಯವೆನ್ನುವಂತೆ ಗಿರಿರಾಜನ ಪಾದಗಳನ್ನು ತೀರ್ಥದಿಂದ ತೊಳೆಯುತ್ತ ಪ್ರತಿನಿತ್ಯವು ಓಲೈಸುತ್ತಿದೆ. ಪ್ರಾತಃಕಾಲದ ಪ್ರಥಮರಶ್ಮಿಯ ದಿನಶಿಶುವನ್ನು ಶಿಖರದ ತುದಿಯಲ್ಲಿರುವ ವಿರಳ ಕಾನನ ಮನೋಹರ ಮರಗಳ ಪಂಕ್ತಿಯು ತಮ್ಮ ನೆತ್ತಿಯ ಹಸಿರು ಚಿಗುರಿನ ತೊಟ್ಟಿಲಲ್ಲಿಟ್ಟು ತೂಗುತ್ತಿವೆ. ಆ ಶಿಶುವನ್ನು ನಿತ್ಯ ಆಗಸವು ಮುಟ್ಟಿ, ಮುತ್ತಿಟ್ಟು, ಮುಂಡಾಡಿ ಶಿರವನ್ನು ಆಘ್ರಾಣಿಸುತ್ತ ನೀಲಿಯಿಂದ ಆಶೀರ್ವದಿಸಿದೆ ಮತ್ತು ಅದ್ರಿದೇವನ ಕಿವಿಗೆ ನಾಗಲೋಕ ಅಶೋಕಮಂತ್ರವನ್ನು ಗುಟ್ಟಾಗಿ ಹೇಳುತ್ತಿದೆ.

ಆ ಗಿರಿ ಶಿರಾಶ್ರಮದಲ್ಲಿಯ ಶಿಲಾಗೋಷ್ಠಿಯು ಗರಡಿ ಮಲ್ಲರ ಮುಷ್ಟಿಯುದ್ಧದಂತಿದೆ! ಬಂಡೆ ಬಂಡೆಯನ್ನು ಎತ್ತಿ, ಬಂಡೆ ಬಂಡೆಯನ್ನು ಒತ್ತಿ, ಬಂಡೆ ಬಂಡೆಯ ತಲೆಯನ್ನು ಒಂದೊಂದು ಪ್ರತಿಭಟಿಸಿ ಹಾಯುತ್ತಿವೆ. ಅದು ಹಣೆ ಹಣೆಗೆ ಕೊಂಬು ಕೊಂಬಿಗೆ ತಲೆ ಹೆಣೆದು ಗೂಳಿ ಗೂಳಿಗೆ ಹಣಾಹಣಿಯಾಗುವಂತಿದೆ. ಅರೆಬಂಡೆಗಳು ಅಲ್ಲಲ್ಲಿ ಹಿಂಡುಗೊಂಡು ಎದ್ದಿವೆ. ಕಾಡಿನ ಏಕಾಂತವು ಅವತಾರವೆತ್ತಿದೆಯೊ, ಘನಗೊಂಡ ಮೌನವು ವಜ್ರನಿದ್ರೆಯಿಂದ ಎಚ್ಚರಗೊಳ್ಳುವುದಿಲ್ಲವೊ ಹೇಳು ಎಂಬಂತೆ ಬಂಡೆಗಳು ಅಲ್ಲಲ್ಲಿ ಬಿದ್ದಿವೆ. ಸಂಪಾತಿಯು ಆ ಬಂಡೆಗಳೊಡನೆ ತಾನು ಒಂದೆನ್ನುವಂತೆ ತಪಸ್ಸು ಮಾಡುತ್ತ ಕುಳಿತಿದ್ದನು. ಅವನು ಪುಷ್ಯ ಮಾಸ ಪ್ರಾರಂಭದ ಆ ಹೇಮಂತದ ಅಂತಿಮದ ಹಿಮಶೀತ ಮಂಜುಶ್ರೀಯು ಕಂಪಿಸುವಂತೆ ನೋವಿನಿಂದ ನರಳುವ ಕಂಠದಿಂದ ಚೀತ್ಕರಿಸಿದನು.

ಮಹೇಂದ್ರಪರ್ವತದ ತಪ್ಪಲಿನ ಹುಲ್ಲಿನ ನೆಲಗಟ್ಟಿನಲ್ಲಿ ಕೂಡಿದ್ದ ಕಪಿವೀರ ಸಮಿತಿಯು ತಮ್ಮ ಮಂತ್ರಾಲೋಚನೆಯಲ್ಲಿದ್ದದ್ದು ಅದನ್ನು ಕೇಳಿ ಆಶ್ಚರ್ಯಗೊಂಡಿತು. ಆ ಗೋಳಿನ ದನಿಯ ಕಾರಣವನ್ನು ತಿಳಿಯಲು ವ್ಯಾಘ್ರನಂತೆ ಉಗ್ರನಾದ ಶರಗುಲ್ಮನಿಗೆ ಸೈನ್ಯವನ್ನು ಕೊಟ್ಟು ಕಳುಹಿಸಿತು.

ಆಲಿಸಯ್, ಪೇಳ್ವೆನಾ, ಮಾನನಿಧಿ ವಾನರಿಗೊದಗಿದಾ ಸಾಹಸದ ಸಂಕಟದ ಕಥೆಯ ಗೋಳಾಟಮಂ

ಮೃಗಶಿರ ಮುಗಿಯಿತು. ಪುಷ್ಯವು ಮುಗಿಯುತ್ತ ಬರುತ್ತಿದೆ. ಅದೊ ಮಂಜು ಬಿಳಿಯಹಿಮದಿಂದ ಭಯಪಡಿಸಲು ಮುಖ ತೋರಿಸಲಿದೆ. ತಣ್ಣನೆಯ ಚಳಿಯ ಮಾಘ ಫಾಲ್ಗುಣಗಳಿಂದ ಸೇವಿಸಲ್ಪಡುವ ಶಿಶಿರೇಶ್ವರನು ಬಂದನು. ಕೊಟ್ಟಿದ್ದ ಅವಧಿ ಮುಗಿಯಿತು. ಮತ್ತು ಸುಗ್ರೀವಾಜ್ಞೆಯು ಉಲ್ಲಂಘನೆಯಾಯಿತು. ಹೊತ್ತಿರುವ ಪ್ರತಿಜ್ಞೆಗೆ ಭಂಗ ಬಂದಿತು. ರಾಮನ ಉತ್ತಮ ಮುಹೂರ್ತದ ಯುದ್ಧ ಸಿದ್ಧತೆಗೆ ವಿಘ್ನವಾಗಿದೆ. ಕಿಷ್ಕಿಂಧೆಯು ಆ ಕಡೆ ಚಣಚಣವು ಕಾಯುತ್ತ ಕುದಿಯುತ್ತಿದೆ!

ಹಾಗಿದ್ದರೂ ಕಪೀಶ್ವರನ ಸೈನ್ಯವು ಏಕೆ ಇಲ್ಲಿ ವಿಳಂಬಿಸುತ್ತಿದೆ? ಹನುಮ ನೀಲ ನಳ ಜಾಂಬವ ಅಂಗದ ಮುಂತಾದ ಮಹಾಶೂರರು ಆ ನಗ ಮಹೇಂದ್ರನ ಹೆಗಲ ವೇದಿಕೆಯಲ್ಲಿ ಏನು ಮಾಡುತ್ತಿದ್ದಾರೆ? ಮಾನವಧನರಾದ ವಾನರರಿಗೆ ಒದಗಿದ ಸಾಹಸದ ಸಂಕಟಕಥೆಯ ಗೋಳಾಟವನ್ನು ಹೇಳುವೆನು, ಆಲಿಸಯ್ಯ.

ಸೀತೆಯನ್ನು ಹುಡುಕಿದರು; ಅವನಿಜಾತೆಯನ್ನು ಅರಸಿದರು; ಅಸುರನು ಒಯ್ದ ರಾಮ ಸಂಪ್ರೀತೆಯನ್ನು ಹುಡುಕಿದರು. ಜಾನಕಿಯನ್ನು ಅರಸಿದರು; ಮೈಥಿಲಿಯನ್ನು ಹುಡುಕಿದರು; ಸುಗ್ರೀವ ಪ್ರಾಣಗೆಳೆಯನ ಅರ್ಧಾಂಗಿಯನ್ನು ಅನ್ವೇಷಣೆ ಮಾಡಿದರು. ಅರಣ್ಯವನ್ನು ಹುಡುಕಿದರು. ಅಚಲ ಸೀಮೆಯನ್ನು, ಬೆಟ್ಟ ನದಿಜಲಗಳನ್ನು, ಕೊಳಗಳ ಕುಲವಾದ ಕೆರೆ, ಹೊಂಡಗಳನ್ನು ಮತ್ತು ತೀರ ಕೆಳಗಿನ ತಟ್ಟತಳವನ್ನು ಹುಡುಕಿದರು. ಕಾಡಿನ ಗುಹೆಗಳನ್ನು ಮತ್ತು ಭಯವನ್ನುಂಟುಮಾಡುವ ಉಗ್ರವಾದ ಕತ್ತಲ ಭೀತಿಯ ಬಿಲಸ್ಥಳಗಳನ್ನು ಹುಡುಕಿದರು. ದೂರದಲ್ಲಿ, ಹತ್ತಿರದಲ್ಲಿ, ಗೂಢದಲ್ಲಿ, ಪ್ರಕಟದಲ್ಲಿ ಶೋಧಿಸಿದರು.

ಎಲ್ಲ ಮರಗಳಲ್ಲಿ ಪೊದೆಗಳಲ್ಲಿ, ಕಲ್ಲುಗಳಲ್ಲಿ ಹುಲ್ಲುಗಳಲ್ಲಿ, ಪಳುಬೆಳೆದ ಹಳ್ಳದಲ್ಲಿ ಜಡೆಗಟ್ಟಿದ ಕೊಳದಲ್ಲಿ, ಕೆಸರು ಉಸುಬು ಕೊರಕಲಿನ ಇಳಿಜಾರಿನಲ್ಲಿ ದುಮುದುಮನೆ ನೀರು ಬೀಳುವ ಅಬ್ಬಿಗಳಲ್ಲಿ ಸಂಶೋಧನಾ ಕೋವಿದರಾದ ಆ ವಾನರರು ಸೋವಿದರು! ಸೂರ್ಯನ ಕಿರಣಗಳ ಜೊತೆಗೂಡಿ, ಕಣ್ಣಿಗೆ ಕಾಡು ಬರಿದಾಗುವಂತೆ ತಡವಿದರು. ಅದೇ ರೀತಿ ಚಂದ್ರನ ಬೆಳದಿಂಗಳಿನಲ್ಲಿ ರಾತ್ರಿಯ ಗರ್ಭವನ್ನು, ಕೈಗೆ ಕತ್ತಲೆ ಬತ್ತಲಾಗುವಂತೆ ಶೋಧಿಸಿದರು.

ಆ ವಾನರರು ದಳದಳಗಳಾಗಿ ದೆಸೆದೆಸೆ ಹೊಕ್ಕು ಹೀಗೆ ಅವಧಿ ಕೊನೆ ಮುಟ್ಟುವ ತನಕ ಅರಸುತ್ತಿರಲು, ಹುಡುಕುತ್ತಿರಲು, ಸೋವುತ್ತಿರಲು, ಸೋಸುತ್ತಿರಲು ತಟ್ಟನೆ ಮಹೇಂದ್ರಾದ್ರಿಯು ಗೋಚರಿಸಿತು. ಅದು ದಕ್ಷಿಣ ದಿಕ್ಕಿನ ರಾತ್ರಿ ನಿರಾಶೆಯ ಯಮದೇಹ ಗೋಪುರವೆನ್ನುವಂತೆ ಗಂಟು ಹಾಕಿದ ಕಳೆಬರದ ನೀಲ ವೈಶಾಲ್ಯದಿಂದ ದೃಷ್ಟಿಗೆ ದಿಗಂತವನ್ನು ಕೂಡಿಸಿ ನಿಂತಿತ್ತು. ಕಪಿಕೇತನರ ಪೂರ್ಣ ಸೇನೆಯು ಸಂಕೇತವೆಂಬಂತೆ ಅದರ ತಪ್ಪಲನ್ನು ಸೇರಿತು. ಅದು ಹೊತ್ತು ಹೊತ್ತಿಗೆ ಉಣಿಸು ನಿದ್ದೆ, ಸ್ನಾನಗಳನ್ನು ಕಾಣದೆ ಅಲೆದಲೆದು ಸೋತಿತು. ಮಾಸಿದ ಮನದ, ಮಾಸಿದ ಮುಖದ, ಮಾಸಿದ ಉಡುಪಿನ, ಮಾಸಿದ ಆಸೆಯ ಸೈನಿಕರು ಅಲ್ಲಲ್ಲಿ ಮೈ ಚಾಚುತ್ತ ತೃಣತಲ್ಪದ ಗಿರಿಯ ತಣ್ಣನೆಯ ತೊಡೆಯ ಮಂಚದಲ್ಲಿ ವಿಶ್ರಮಿಸಿಕೊಂಡರು. ದಣಿವಾಗಲು, ಮನಸ್ಸು ತೃಪ್ತಿಯಾಗುವಂತೆ ಬೆಟ್ಟದ ಮೇಲಿರುವ ಸ್ವಾಭಾವಿಕ ಹೊಂಡವಾದ ದೊಣೆಯ ನೀರನ್ನು ಕುಡಿದರು. ಜಲಪಾತದ ನೀರಿನಲ್ಲಿ ಮಿಂದರು. ಕಿಬ್ಬಿಯನ್ನು ಬೆಳ್ಳಗಾಗಿಸಿರುವ ಅಬ್ಬಿಯಲ್ಲಿ ತಮ್ಮ ಉಡುಗೆಗಳನ್ನು ಒಗೆದರು.

ಹುತ್ತದ ಒಳಗಿದ್ದ ತುಡುವೆಜೇನನ್ನು, ಮರದ ಪೊಟರೆಯ ಬಿರುಕಿನಲ್ಲಿ ಕಟ್ಟಿದ ನಸರಿ ಜೇನುತುಪ್ಪವನ್ನು, ಬಂಡೆಯಿಂದ ಜೋಲುವ ಹೆಜ್ಜೇನುಗಳನ್ನು ಕಿತ್ತರು. ಒಪ್ಪ ಮಾಡಿದರು. ಅವರೆಲ್ಲ ಅದನ್ನು ಹಣ್ಣು ಹಂಪಲುಗಳೊಡನೆ ಬನದ ಔತಣವಾಗಿ ಉಂಡರು. ಪಾರಿವಾಳ ಪಕ್ಷಿಯು ಜಲಪಾತ ಶಿಲೆಯ ರಕ್ಷೆಯ, ಪ್ರವೇಶಿಸಲು ಅಶಕ್ಯವಾದ ಬಿಲದ ಒಳಗಡೆ ತರತರದ ಅಕ್ಕಿಯನ್ನು ಇಟ್ಟು ಕಣಜವನ್ನು ಕಟ್ಟಿತ್ತು. ಅವರು ಆ ಅಕ್ಕಿಯನ್ನು ದೋಚಿ, ಅನ್ನವನ್ನು ಮಾಡಿ ಹೊಟ್ಟೆ ತುಂಬ ಉಂಡರು.

ಅನಂತರ ವಾಲಿಯ ಕುಮಾರ ಅಂಗದನ ಅಧ್ಯಕ್ಷತೆಯಲ್ಲಿ ಸಭೆ ನೆರೆಯಿತು. ಸೇನಾ ಸಮಷ್ಟಿಯು ಕೈ ಮುಗಿಯಿತು. ಆ ಮುಖ್ಯಸ್ಥನಿಗೆ ಗುಡ್ಡದ ಒಂದು ಬಂಡೆಯು ಎತ್ತರದ ಅಗ್ರಾಸನವನ್ನು ಕೊಟ್ಟಿತು! ಸಚಿವ ಸಮಿತಿಗೆ ಗೌರವಕ್ಕೆ ತಕ್ಕಂತೆ ಎರಡು ಪಕ್ಕದಲ್ಲಿ ಕಲ್ಲಿನ ಜಗಲಿಗಳಿದ್ದವು! ಮಿಕ್ಕವರಿಗೆ ಅವರ ಹಕ್ಕು, ಕಲ್ಲೊ ಕೊಂಬೆಯೊ ಹುಲ್ಲೊ ನೆಲವೊ ಸಿಕ್ಕಿದಲ್ಲಾಯಿತು! ಪರಿಷತ್ತು ಕೂಡಿದಾಗ ಹಗಲಿನ ಸಂಜೆ ಸಮುದ್ರಕ್ಕೆ ಇಳಿದಿತ್ತು.

ಶೀತಲರಾತ್ರಿಯ ಚಂದ್ರನ ಮತ್ತು ನಕ್ಷತ್ರಗಳ ಆಳ್ವಿಕೆಗೆ ಬೆಳುದಿಂಗಳು ಮುನ್ನುಡಿಯಾಯಿತು. ಹೇಮಂತ ಶಿಶಿರಗಳ ನಡುವಣ ಚತುರ್ದಶಿಯ ಚಳಿ ಚಳಿ ಇರುಳಿನ ಹಿಮದ ಕಿರಣವು ಬೆಳುದಿಂಗಳಿನಲ್ಲಿ ತೊಯ್ದು ಒದ್ದೆಯಾಯಿತು. ಆ ರಾತ್ರಿಯನ್ನು ಅಪ್ಪಿದ ಪೃಥ್ವಿಯು ಹಿಮಕ್ಕೆ ನಡ ನಡ ನಡುಗಿತು! ನಂಜುಗೊರಲ ಶಿವನ ಹಣೆಯ ಕಣ್ಣಿಗೆ ಸಮನಾದ ವೀರ ಸಮೂಹವು ಮಂಜಿಗೆ ಅಂಜುವುದುಂಟೆ? ರಾತ್ರಿ ಕೊನೆಗೊಂಡು ಮೂಡಣದಲ್ಲಿ ಮಾರನೇ ಹಗಲು ಅರಳುವ ತನಕ ಸಭೆಯು ಸಾಗಿತು. ಅದು ಸೂರ್ಯನು ಮರಳುವ ತನಕ ಸಂಪಾತಿಯ ಚೀತ್ಕಾರವು ಕಿವಿಯನ್ನು ಇರಿಯುವ ತನಕ ನಡೆಯಿತು.

ಕಪಿಶ್ರೇಷ್ಠನೂ ವಾಲಿಯ ಪುತ್ರನೂ ಹೇಮಂತ ಚಂದ್ರನ ಬೆಳುದಿಂಗಳಿನಿಂದ ಪ್ರಕಾಶಿತ ಶರೀರದವನೂ ಆದ ಅಂಗದ ಕುಮಾರನಿಂದ ತರುಣವಾಣಿ ಹೊಮ್ಮಿತು. ಅದು ಕ್ರೂರ ಮೃಗಗಳು ಊಳಿಡುವುದನ್ನು ನಿಲ್ಲಿಸಿ; ಭಯವಿಸ್ಮಿತವಾದ ರಾತ್ರಿಯು ಚಕಿತಗೊಂಡು ಗೌರವ ಹಾಗೂ ಮೌನದಿಂದ ಆಲಿಸುವಂತಿತ್ತು:

ನನ್ನದಿದೊ ಬಿನ್ನಪಂ

'ಕಪಿಕುಲ ಬಲಿಷ್ಠರಿಗೆ, ವಾನರ ಶ್ರೇಷ್ಠರಿಗೆ, ರಾಜೇಂದ್ರ ಸುಗ್ರೀವನ ಆಜ್ಞೆಯನ್ನು ಶಿರದಲ್ಲಿ ಧರಿಸಿರುವವರಿಗೆ ಮತ್ತು ನನ್ನ ಸ್ನೇಹಿತರಿಗೆ ಇದು ನನ್ನ ವಿನಂತಿ. ಕಟುವಾರ್ತೆಯಾದರೂ ಕಹಿ ಗೋಚರವಾಗದಂತೆ ತೀಕ್ಷ್ಣವಲ್ಲದ ರೀತಿ ಹೇಳುತ್ತೇನೆ. ಹಗುರವೆಂದು ತಿಳಿಯದೆ ಕೇಳಬೇಕು. ದೊರೆಯಾಣೆಯನ್ನು ಹೊತ್ತು, ದಕ್ಷಿಣ

ಭೂಮಿಯನ್ನೆಲ್ಲ ಅಲೆದಾಡಿ, ರಾಮಪತ್ನಿಯನ್ನು ಹುಡುಕುತ್ತ ನೀವೆಲ್ಲ ಬಳಲಿದಿರಿ. ಹಸಿವು ನೀರಡಿಕೆಯನ್ನು ನೋವು ಸಾವನ್ನು ಕಂಡುಂಡು ದಣಿದು ರೋಸಿದಿರಿ. ಜೊತೆಗೆ ಎಲ್ಲಕ್ಕೂ ಮಿಗಿಲಾಗಿ ನಮ್ಮಲ್ಲಿ ಕೆಲವರು ಬಾಳ್ಗೆಳೆಯರು ತೀರಿಹೋದುದನ್ನು ನೋಡಿರುವಿರಿ ಎನ್ನುವ ಕಾಠಿಣ್ಯವನ್ನು ಹೇಳಲು ಬಲ ಸಾಲದೆ ನನ್ನ ನಾಲಗೆಯು ದುಃಖಿಸುತ್ತಿದೆ!'

ಆ ಸಂಕಟಕ್ಕೆ ರಾತ್ರಿಯ ನಿಶ್ಯಬ್ದತೆಗೆ ನಿಟ್ಟುಸಿರು ಹೊಮ್ಮಿದಂತೆ ಸಮಿತಿಯು ನಿಟ್ಟುಸಿರಿಟ್ಟಿತು. ಅದನ್ನು ಕೇಳುತ್ತ ವಾಲಿಯು ಸುತನು ಮಾತನ್ನು ಹೀಗೆ ಮುಂದುವರೆಸಿದನು.

'ವಾನರ ಬಲಿಷ್ಠರೇ! ಕಪಿಕುಲ ದೃಢಿಷ್ಠರೇ! ನಿತ್ಯ ಸದಾಚಾರಿಗಳೇ! ನಾವು ಯೋಧರೆಂಬುದನ್ನು ಮರೆಯದಿರಿ. ಓ ಯೋಗ ನಿಷ್ಠೆಯ ಬುದ್ಧಿವಂತರ ಸಂತತಿಗಳಿರ! ಸ್ನೇಹಿತ ಮಡಿಯಲು ಉಳಿದ ಸ್ನೇಹಿತರಿಗೆ ದುಃಖವಾಗುವುದು ಸಹಜ, ದಿಟ. ಯುದ್ಧದಲ್ಲಿ ಮರಣಿಸಿದವರ ಉತ್ತಮ ಕೆಲಸಗಳು ಸಫಲವಾಗುವಂತೆ ನಾವು ಮಾಡಿದರೆ ಅದೇ ಅವರಿಗೆ ಸುಧಾತರ್ಪಣ. ಅದು ಪಿತೃಲೋಕದಲ್ಲಿ ಅವರ ಆತ್ಮತೃಷೆಗೆ ತೃಪ್ತಿಯನ್ನು ನೀಡುವುದಲ್ಲವೆ? ಆ ಘನ ಅಮೃತಕ್ಕೆ ಅಪೌರುಷದ ಅಶ್ರುಜಲವನ್ನು ಮಿಶ್ರ ಮಾಡುವುದೆ? ಹಿಂದಿನ ದುಃಖ ಹಾಗಿರಲಿ, ಅದನ್ನು ಬಿಡಿ. ನಮಗೆ ಈಗ ಮುಂದಿರುವುದು ಮಂತ್ರಾಲೋಚನೆ.

'ರಾಜಾಜ್ಞೆ ಕೊಟ್ಟ ಅವಧಿ ಮುಗಿದಿದೆ ಮತ್ತು ಮೀರಿದೆ. ಸೀತಾಮಾತೆ ಇರುವ ನೆಲೆ ಕಾಣುತ್ತಿಲ್ಲ. ದಶಶಿರನ ಲಂಕೆಯೆಂಬುದು ಇದೆಯೊ ಇಲ್ಲವೊ ಎಂಬ ಸಂಶಯ ಉಂಟಾಗುತ್ತಿದೆ! ದಳದಳಗಳ ಅನುಭವಗಳನ್ನು ತಿಳಿದು, ಸೈನ್ಯದ ಮನಸ್ಸನ್ನು ಅರಿಯಬೇಕಾಗಿದೆ. ಮುಂದಿನ ಉದ್ದೇಶವನ್ನು, ನಾವು ಅನುಸರಿಸಬೇಕಾದ ಮಾರ್ಗವನ್ನು ನಿಶ್ಚಯಿಸಲೆಂದು ಇಂದು ಇಲ್ಲಿ ಸಭೆ, ಈ ವೀರಗೋಷ್ಠಿ ನೆರೆದಿದೆ.

'ನಾನು ನನ್ನ ದಳದ ಅನುಭವದ ಕಥೆಯನ್ನು ಹೇಳುತ್ತೇನೆ; ತಾಳ್ಮೆಯಿಂದ ಆಲಿಸಿರಿ. ಎಲ್ಲವನ್ನು ಮಿತಿಯಾಗಿ ಹೇಳುತ್ತೇನೆ. ತಾವೂ ಅದೇ ರೀತಿ ತಮ್ಮ ಕಥೆಯನ್ನು ಅತಿ ಕಲ್ಪನೆಯನ್ನು ಬಿಟ್ಟು ಹೇಳಬೇಕೆಂದು ವಿನಂತಿಸುತ್ತೇನೆ. ಇಂದು ಇಲ್ಲಿ ಕಥೆಗೆ ಗುರಿ ಕಥೆಯಲ್ಲ. ತಮ್ಮ ಬಲ ಪರಾಕ್ರಮಕ್ಕೆ ಇತರರ ಮೆಚ್ಚುಗೆ ಬೇಕೆಂಬ ವೀರರ ಸಹಜ ದೌರ್ಬಲ್ಯವನ್ನು ತ್ಯಜಿಸಿರಿ. ಸೀತೆಯ ಅನ್ವೇಷಣೆಗೆ ಬೇಕಾದಷ್ಟನ್ನು ಮಾತ್ರ ಎಲ್ಲರೂ ಹೇಳಿ.'

ಎಂದು ನುಡಿಯುತ್ತ ಅವನ ಮಾತು ನಿಂತಿತು. ಒಂದು ಸ್ವಲ್ಪ ಹೊತ್ತು ಏನು ಹೇಳಬೇಕೆನ್ನುವುದನ್ನು ಚಿಂತಿಸಿದನು. ಬೆಳುದಿಂಗಳ ನಿಶ್ಯಬ್ದತೆಗೆ ತಣ್ಣನೆಯ ಸೂಯ್ಗಾಳಿ

ಚವರಿ ಬೀಸಿತು. ಚಳಿದನಿಯ ಮರ್ಮರದಂತೆ ಹಿಮದ ಹನಿ ಮರಮರದ ಎಲೆಗಳಿಂದ ಪಟ್ಟ ಪಟ್ಟನೆ ಬಿದ್ದವು.

'ಅಂದಿಗೆ' ಎಂಬ ಅಂಗದನ ಕೊರಳ ನುಡಿ ಮತ್ತೆ ಇರುಳ ನಿದ್ದೆಯನ್ನು ಎಚ್ಚರಿಸಿತು. ಮಾತು ಮುಂದುವರೆಸುತ್ತ 'ಆ ಮುಂದೆ ಭೀಮ ಘೋರ ಕಾನನವು ಭೀಷಣವಾಗಿ ಎದುರಾಯಿತು. ಆ ಕಾಡನ್ನು ಹೊಕ್ಕು, ಪೊದರುಗಳನ್ನು ಹುಡುಕಿ ಸೋದಿಸಲು ಒಂದು ಎಲುಬುಗಳ ರಾಶಿ ಕಂಡಿತು. ಅದೇ ರಾವಣಪುರದ ದ್ವಾರಕ್ಕೆ ತೋರಣವೆಂದು ಸೇನೆಯು ಶಂಕಿಸಿತು. ನನ್ನ ಹೆಜ್ಜೆಯನ್ನು ಅನುಸರಿಸಿದ ಜಗಜಟ್ಟಿದಳವು ಮುಂದಕ್ಕೆ ನುಗ್ಗಿತು.

'ಕಡಲಿನ ಜಂತು ಭೂಮಿಗೆ ಹೇಗೆ ಬಂದಿತು? ಹತ್ತಿರದಲ್ಲಿಯೇ ಸಮುದ್ರವಿದೆ. ಆ ಲಂಕೆ ಕೈವಶವಾಯಿತು, ಸೀತೆ ಸಿಕ್ಕಿದಳು. ರಕ್ಕಸರ ಒಡೆಯನನ್ನು ಕೊಂದೆ ಕಿಷ್ಕಿಂಧೆಯನ್ನು ಪ್ರವೇಶಿಸುವೆವು. ಸುಗ್ರೀವಾಜ್ಞೆ ಗೆಲ್ಲಲಿ! ಎಂದು ಉಕ್ಕುವ ಉತ್ಸಾಹದಲ್ಲಿ ಸೇನೆ ನುಗ್ಗುತ್ತಿತ್ತು. ಆಗ ಓರ್ವ ಜಡೆಗಟ್ಟಿದ ಕೂದಲುಗಳ ಜಟಿಲಮುಖದವನು ಕಂಡನು.

'ಆ ವಿಕಾರಕ್ಕೆ ಹೇಸಿ ವೈರ ಉಕ್ಕಿತು. ರಾಕ್ಷಸನೆಂದು ಬಗೆದು ಅವನ ನೆತ್ತಿಯನ್ನು, ಸೀಳಿ ಹೋಗುವಂತೆ ಗುದ್ದಿದೆನು. ಅಯ್ಯೋ ಏನು ಅನ್ಯಾಯವಾಯಿತು! ಸಾಯುವ ಮೊದಲು ಆ ಋಷಿ ನಿಶಾಕರನು ತನ್ನ ಹೆಸರನ್ನು ಹೇಳಿದನು. ಅವನು ಪಕ್ಷಿವರೇಣ್ಯನಾದ ಸಂಪಾತಿಗೆ ಗುರುವಂತೆ! ಶಪಿಸಬೇಕೆಂದಿದ್ದ ಅವನು ನನ್ನ ಉದ್ದೇಶವನ್ನು ಮತ್ತು ನಾನು ಶಿರದಲ್ಲಿ ಹೊತ್ತಿರುವ ಅತಿಶಯವಾದ ಕಾರ್ಯದ ಮಹತ್ತ್ವವನ್ನು ತಿಳಿದನು. ಕೃಪೆತೋರಿ ಶಾಪವನ್ನು ಉಪಸಂಹರಿಸಿದನು. ಪಾದಕ್ಕೆ ಮುಡಿ ಚಾಚಿದ ನನ್ನನ್ನು ಕ್ಷಮಿಸಿದನು. ಆದರೂ ನನಗೆ ಮೊದಲಿನಂತೆ ಇನ್ನು ಮುಂದೆ ತಂದೆಯಂತಹ ಶಕ್ತಿ ಇರುವುದಿಲ್ಲ.

'ಆ ಮುನಿಯು ತನ್ನ ಶಿಷ್ಯನ ಶಾಪ ವಿಮೋಚನೆಗೆ ನಾವು ನೆರವಾಗಿ, ಅವನಿಂದ ರಾಮ ಕಾರ್ಯಕ್ಕೆ ಸಹಾಯವನ್ನು ಪಡೆಯಬೇಕೆಂದು ಹೇಳಿದನು. ಈ ಕವಿದ ಕತ್ತಲೆಯೊಳಗೆ ಅದು ನಮಗೆ ಕಿರಣವಾಗುವುದೆಂದು ನನ್ನ ಹಾರೈಕೆ ಸಂತೈಕೆ ಮತ್ತು ಹರಕೆಯಾಗಿದೆ!'

ಎಂದು ಹೇಳಿ ವಾಲಿಯ ಸುತನ ಕೊರಳ ತುತ್ತೂರಿ ನಿಂತಿತು. ಸಭೆಯು ಚಿಂತೆಗೊಳಗಾಗಿ ನಿಶ್ಯಬ್ದವಾಗಿ ನೋಡುತ್ತಿತ್ತು. ಆಗ ಓರ್ವನು ಮೇಲೆದ್ದನು. ಮಬ್ಬಿನಲ್ಲಿ ಅವನು ಯಾರೆಂದು ಸೇನೆ ತವಕಿಸುತ್ತಿತ್ತು. ಆಗ ಘಂಟೆಯಂತಹ ಕಂಠನಾದ ಹೊಮ್ಮಿತು. ತವಕ ತಗ್ಗಿತು. ವಿನೀತ ಭಾವದೊಡನೆ ಸಭೆಯಲ್ಲಿ ಸಂಭ್ರಮ ತುಂಬಿತು. ಶ್ರೀಮನ್ ಮಹಾಮೌನಿಯಾದ ಅಗ್ನಿಯ ಕುಮಾರ ಸೇನಾನಿ ನೀಲನು ಹೀಗೆ ಹೇಳಿದನು.

ಕೊನೆಗೆ ನಾಮುವನೋಡುವಟ್ಟೆಯನೆ ದಿಕ್‌ಸೂಚಿಗೆಯ್ಯುತ್ತೆ ಬಂದೆವಿಲ್ಲಿಗೆ ಮಹೇಂದ್ರಾಚಲಕೆ.

'ಯುವರಾಜನ ಭಾಷಣ ಮಧುವನ್ನು ಸವಿದು ಸಭೆ ತಣಿದಿರುವುದು. ಆ ವೀರವಾಣಿಯನ್ನು ಕೇಳಿ ಧೈರ್ಯಗೆಟ್ಟಿದ್ದ ಎದೆಗೆ ಕೆಚ್ಚು ಮರುಕಳಿಸಿದೆ. ಈ ಎರಡಕ್ಕೂ ಮಿಗಿಲಾದುದು ಯಾವುದೆಂದರೆ, ನಮ್ಮ ಶೋಧನೆಯ ಕಣ್ಣಿಗೆ ಗುರಿ ದೊರೆತಿರುವುದು. ಆ ಗುರಿಗೆ, ಆ ಕಣ್ಣಿಗೆ ತೋರು ಬೆರಳಿನಂತಹ ಮತ್ತೊಂದು ಅನುಭವವು ನಮಗಾಗಿದೆ. ನಿರಾಶೆಯಿಂದ ಪ್ರತಿಷ್ಠೆಯ ಕೊಂಬು ಮುರಿದು ಹೋಗಿದ್ದು, ಅದುವೆ ಸೋಲುತ್ತಿರುವ ಮನಸ್ಸಿನ ಬೆನ್ನಿಗೆ ಊರು ಗೋಲಾಯಿತೊ ಎಂಬಂತೆ–ಧೀರತನಕ್ಕೆ ಪ್ರತ್ಯಾಸೆಯ ಉಸಿರಾದಂತಹ ಒಂದು ಅನುಭವ ನಮಗಾಯಿತು. ಅದನ್ನು ಈಗ ಹೇಳುತ್ತೇನೆ.

'ನನ್ನ ಸೇನೆಯು ನಿಂತ ಕಡೆಯಲ್ಲೆಲ್ಲ ಕಾಡನ್ನು ಹುಡುಕಿ, ನಡೆ ನಡೆದು ಆಳವಾದ ಕಂದರಗಳನ್ನು ಸೋಸಿ, ಗಿಡಮರಗಳನ್ನು ಮೀಟಿ, ನದಿ ಹೊಳೆಗಳ ನೀರು ಕುಡಿದು, ಮರುಭೂಮಿಗಳನ್ನು ದಾಟಿ ದಾಳಿಯಿಟ್ಟು ನಡೆಯುತ್ತಿತ್ತು. ಆಗ ಹಠಾತ್ತಾಗಿ ಮುಂದೆ ಒಂದು ರಾಕ್ಷಸ ಗೂಢಚಾರರ ಗುಂಪು ಕಣ್ಣಿಗೆ ಕೂಣಿ ಮೀನಾಗಿ ಕಂಡಿತು. ಬೆಟ್ಟದಾಕಾರದ ಘೋರ ಕರ್ಮಿಗಳಾದ ಅವರು ಸಿಂಹವನ್ನು ಕಂಡ ಕಾಡುಕೋಣದ ಹಿಂಡಿನಂತೆ ಉದ್ಧಟತನದಿಂದ ನಮ್ಮ ಮೇಲೆ ದಾಳಿ ಮಾಡಿದರು. ರಾಹುವಿನ ನೆರಳೇ ಗುಂಪುಗೊಂಡಂತೆ, ಗೂನ್ಗಂಟುಗಂಟಾದ ಮರಗಳ ಬೃಹತ್ ಕಾಂಡಗಳಿಗೆ ಸಮನಾದ ಶಕ್ತಿಯುತವಾದ ತೋಳುಗಳನ್ನೆತ್ತಿ ಬಂದರು. ಸೈನ್ಯವು ಸೊಂಟದ ವಸ್ತ್ರಗಳನ್ನು ಬಿಗಿದುಕಟ್ಟಿ, ತೋಳು ತೊಡೆಗಳನ್ನು ಚಪ್ಪರಿಸುತ್ತ, ನೆಲನಡುಗುವಂತೆ ಕಾಲುಕುಟ್ಟಿ ಸಿಡಿಲಂತೆ ಎರಗಿತು. ವೈರಿಸೈನ್ಯವು ಸುಟ್ಟು ಸೀಕರಿಸಿ ಹೋಯಿತು. ಏನೆಂದು ಹೇಳಲಿ? ಅವರಲ್ಲಿ ಓರ್ವ ಮಹಾ ಮಾಯಾವಿ ಉಳಿದನು! ಕಾಣಿಸುತ್ತ ಮತ್ತೆ ಮರೆಯಾಗುತ್ತ ನಮ್ಮನ್ನು ಆಕರ್ಷಿಸಿ ಸೆಳೆದೊಯ್ಯಲು ನೆಟ್ಟನೆ ಓಟದಿಂದ ಈ ಕಡೆಗೆ ಒಂದೇಸಮನೆ ಓಡಿಬಂದನು. ನಮ್ಮವರು ಪ್ರತಿಮಾಯೆಯಿಂದ ಕಡೆಗೆ ಅವನನ್ನು ಹಿಡಿದರು.

'ಲಂಕೆಯನ್ನು ತೋರಿಸು! ದಶರಥ ಸುತನ ಪತ್ನಿಯನ್ನು ಬಚ್ಚಿಟ್ಟಿರುವ ಜಾಗವನ್ನು ತೋರಿಸು! ನೀಚ ರಾವಣನೆಲ್ಲಿ, ಬಾ, ತೋರಿಸು.' ಎಂದು ಹೇಳುತ್ತ ಗುದ್ದಿದರು. ಅವನ ಕಣ್ಣನ್ನು ಕಿತ್ತರು. ಆ ಕಲ್ಲು ಗುಂಡಿನವನ ಸ್ವಾಮಿನಿಷ್ಠೆಯನ್ನು ನಾನು ಏನೆಂದು ಹೇಳಲಿ? ನನಗೆ ಗೊತ್ತಿಲ್ಲ, ನಾನು ಕಾಣೆನು ಎಂದು ಹೇಳಿದನಲ್ಲದೆ ಬೇರೆ ನುಡಿಯನ್ನು ನಾಲಗೆಗೆ ತರಲಿಲ್ಲ! ನಮಗೆ ಏನೂ ಉತ್ತರಿಸದೆ, ಹೇಗೊ ಒಡಲನ್ನು ಉಳಿಸಿಕೊಂಡ ಅವನು ಕಡೆಗೆ ದಕ್ಷಿಣ ದಿಕ್ಕಿಗೆ ನಡೆದನು. ನಾವು ಅವನು ಓಡುವ ದಾರಿಯನ್ನೇ ದಿಕ್ಸೂಚಿಯಾಗಿಸಿಕೊಂಡು, ಕೊನೆಗೆ ಇಲ್ಲಿಗೆ ಮಹೇಂದ್ರಾಚಲಕ್ಕೆ ಬಂದೆವು. ಈ ಕಡೆ ಎಲ್ಲೊ ಲಂಕೆಯಿರುವುದು ನಿಜ. ನಮಗೆ ಸಂಶಯ ಬೇಡ.'

ಎಂದು ಹೇಳಿ ಒಂದೆರಡು ನಿಮಿಷ ಹಾಗೆಯೇ ಇದ್ದು ನಿಟ್ಟುಸಿರು ಬಿಡುತ್ತ ಮಾತನ್ನು ಮುಂದುವರಿಸಿದನು:

'ಕೊಟ್ಟಿದ್ದ ಅವಧಿಯನ್ನು ಮೀರಿದ್ದೇವೆ. ಹೊಣೆಯ ಹೊರೆಯನ್ನಾದರೂ ತೀರಿಸೋಣ. ತೀರಿಸಲಾಗದಿದ್ದರೆ ಹೇಗೊ ಕರ್ತವ್ಯವನ್ನು ನಿರ್ವಹಿಸುತ್ತ ನಾವು ತೀರಿಹೋಗುವುದೇ ವೀರನಿಗೆ ತಕ್ಕ ಗೌರವ!'

ಹೀಗೆ ಹೇಳುತ್ತ ಸೇನಾನಿ ಕುಳಿತ ಕೂಡಲೆ ಗಜನು ಎದ್ದನು. ಅವನು ಕುಳ್ಳನಾಗಿದ್ದರೂ ಗಜಗಾತ್ರದಿಂದ ಯಮನಂತೆ ಉಜ್ವಲನು. ಒರಟು ನಾಲಗೆಯ ನಿಷ್ಠುರನು. ಹಾಸ್ಯ ಕೋವಿದನು. ಅವನ ನರಿಮೊಗದ ನಗೆಯು ಕುಡುಗೋಲು ಕೊಂಕು ತುಟಿಯ ಎರಡೂ ಕಡೆ ಸುಳಿಯುತ್ತಿದ್ದುದನ್ನು ಇರುಳು ಬೆಳುದಿಂಗಳು ಮಾಯೆಯಿಂದ ಮರೆಸಿತ್ತು.

ನಿಶಾ ಸಭೆಯಲ್ಲಿ ನಿದ್ರೆಯಧ್ಯಕ್ಷತೆಗೆ ನಮಿಸದಿರ್ಕೆಳ್ಚರಂ

'ನಿಶಾಸಭೆಯಲ್ಲಿ ನಿದ್ರೆಯ ಅಧ್ಯಕ್ಷತೆಗೆ ಎಚ್ಚರವು ನಮಿಸದಿರಲಿ. ತಲೆಯಿಂದ ಹೊಮ್ಮಿದರೇನು? ಜಾಣ್ಮೆಯನ್ನು ಹೊಂದಿದ್ದರೇನು? ಬೆಪ್ಪುನುಡಿ ಬೆಪ್ಪೇ ಯಾವಾಗಲು. ಕೇಳಿಸಿಕೊಳ್ಳಿ, ನಮಗೂ ಒಬ್ಬ ಅವನ ದುರದೃಷ್ಟದಿಂದ ದೊರೆತನು. ಸಿಕ್ಕ ತಕ್ಷಣ 'ರಾಕ್ಷಸ' ಎಂದು ನಮ್ಮ ಕಪಿಕರ್ಕಶರು ಕಿರುಚಿಕೊಂಡರು. ಅವನು 'ಅಲ್ಲ' ಎಂದು ಅರಚಿದನು. ಕೇಳುವವರಾರು?

"ಹೇಳು ಎಲ್ಲಿ ಸೀತೆ? ಲಂಕೆಯನ್ನು ತೋರಿಸು!' ಎಂದು ಹೇಳುತ್ತ ಹೇಳುತ್ತ ಬಡಿದರು. ಅವನು ಅಯ್ಯಯ್ಯೊ ನನಗೆ ಗೊತ್ತಿಲ್ಲ! ದಮ್ಮಯ್ಯ ಬಿಟ್ಟುಬಿಡಿ!' ಎಂದು ಕೂಗಿಕೊಂಡನು. ಅವನ ಮನದ ಗುಟ್ಟನ್ನು ಹೊರಗೆಳೆವ ಮದ್ದೆಂದು ಕಳ್ಳುಬಳ್ಳಿಯನ್ನು ಹಿಂಡಿ ಮಾಡಿದ ರಸ ಮದಿರೆಯನ್ನು ಕುಡಿಸಿದರು. ಮದ್ದು ಹೊಟ್ಟೆಗೆ ಬಿದ್ದುದೆ ತಡ ಸತ್ಯ ಹೊರಗೆ ನೆಗೆಯಿತು! ಹುಚ್ಚು ಹೊಳೆಯಂತೆ ಹರಿಯಿತು: 'ನಾನು ಲಂಕೆಯನ್ನು ಬಲ್ಲೆನು.' ಎಂದು ಹೇಳಿದವನಿಗೆ ಇವರು 'ಎತ್ತಲಿದೆ?' ಎಂದು ಪ್ರಶ್ನಿಸಿದರು. ಅದಕ್ಕೆ ಅವನು 'ಇತ್ತಲಿದೆ! ಇತ್ತಲಿದೆ! ಇತ್ತಲಿದೆ!' ಎಂದು ಹೇಳುತ್ತ ಅತ್ತಿತ್ತ, ಎತ್ತೆತ್ತಲೊ ಒಮ್ಮೊಮ್ಮೆ ಕೈಯನ್ನು ಬೀಸಿ ಸತ್ತು ಹೋದನು.

'ಅವನ ಆ ಬೀಸಾಟವನ್ನೆ ಬೆರಳು ಮಾಡಿ ತೋರಿಸಿದ ಎಂದು ತಿಳಿದು ನಾವು ಇಲ್ಲಿಗೆ, ಮಹೇಂದ್ರಾಚಲಕ್ಕೆ ಬಂದೆವು! ನಿಮಗೆ ಸಂಶಯಬೇಡ! ಇತ್ತ ಎಲ್ಲೊ ಲಂಕೆಯಿರುವುದು ನಿಜ!'

ಎಂದು ಹೇಳಿದ ಗಜನ ಮಾತನ್ನು ಕೇಳಿ ಕೆಲವರು ನಕ್ಕರು. ಕೆಲವರು ನಗೆಯನ್ನು ತಡೆದುಕೊಂಡರು. ಕೆಲವರು ಕೋಪದಿಂದ ಸಿಡಿಮಿಡಿಗೊಂಡರು. ಮತ್ತೆ ಮಿಕ್ಕವರು ಏಕೊ ಏನೊ ಸಂದೇಹದಿಂದ ತಮ್ಮ ಅಕ್ಕ ಪಕ್ಕದವರನ್ನು ಗಮನಿಸಿದರು. ಮುಂದಕ್ಕೆ ಯಾವ ಮಾರ್ಗವನ್ನು ಅನುಸರಿಸಬೇಕೆಂದು ಗಂಭೀರವಾಗಿ ಚಿಂತಿಸತೊಡಗಿದರು.

ಕೂಡಿದ ಸಭೆ ಬೆರಗಾಗಿರಲು, ನೀಲನು ನಗುತ್ತ ಎದ್ದನು. ಗಜನ ಭುಜವನ್ನು ಚಪ್ಪರಿಸಿದನು! ಅನಂತರ ಹೇಳುವುದೇನು, ಎಷ್ಟೋ ಕಪಿವೀರರು ಒಬ್ಬೊಬ್ಬರಾಗಿ ಎದ್ದರು. ಕೆಲವರು ಸಂದರ್ಭಾನುಸಾರವಾಗಿ ಹೇಳಿದರು. ಕೆಲವರು ಅಗತ್ಯವಿಲ್ಲದ್ದನ್ನು ಹೇಳಿದರು. ನಂಬಿಕೆ ಉಂಟಾಗುವ ಸುದ್ದಿಯನ್ನು ಯಾರೊಬ್ಬರೂ ಹೇಳಲಿಲ್ಲ! ಭಾಷಣ ಧ್ವನಿಯೊ? ಮಾತಿನ ಆಶಯವೊ? ದನಿಯ ಹನಿ ಕೂಡುತ್ತ ಮೆಲ್ಲನೆ ಹಳ್ಳ ಹಿಡಿದು, ದುಮುಕಿ ಅಲ್ಲಿ ಕೊಚ್ಚಿಹೋಗಿತ್ತು. ಧೈರ್ಯದಿಂದ ನೆಚ್ಚಿನ ಉತ್ತರ ಮುಖಿಯನ್ನು ನೋಡದ ಹುಟ್ಟು ನುಚ್ಚುನುರಿಯಾಗಿ ಹೋಗಿತ್ತು.

ಕಪಿಕುಲಸಾಗರ ಚಂದ್ರ, ಚಂದ್ರಸುಂದರ, ಕವಿ, ಸುಂದರ ವಾಕ್‌ಕೋವಿದ ಕಾವ್ಯರಸಹೃದಯಿ, ವಾಗ್ಮಿ ಮತ್ತು ವೀಣಾವಾಣಿಯ ಹೊಳೆವಮುಖದ ಮಹಾವಾನರ ಮೈಂದನು ಆಶಾಪತಾಕೆಯಂತೆ ಮೇಲೆದ್ದನು. ಆವೇಶದ ಅಗ್ನಿ ದಳ್ಳುರಿಯಿತು. ಆ ಸಮಿತಿ ಮಂತ್ರಮುಗ್ಧವಾದಂತೆ ಆಲಿಸಿತು. ಕವಿಧ್ವನಿಗೆ ಕಾಲಮಿತಿ, ಸೋಲು ಇದೆಯೆ? ಪರಿಷತ್ತಿಗೆ ಗೊತ್ತಾಗದಂತೆ ಸಮಯನಿಷ್ಠೆಯನ್ನು ಮೀರಿದನು. ರಸಕ್ಷಣಕ್ಕೆ ಹರಿಯುತ್ತ ರಸಕ್ಷಣದ ಹೊತ್ತಿನ ಹೊಳೆ ತುಂಬಿಹರಿಯಲು ಕಥನವನ್ನು ಕಾವ್ಯಶೈಲಿಯಲ್ಲಿ ನಿರೂಪಿಸಿದನು. ಭಾವನಾತೀತವಾದುದಕ್ಕೆ, ಅಚಿಂತ್ಯಕ್ಕೆ, ರಸಕ್ಕೆ ಕಾಲಮಾನದ ಸೂತ್ರ ಸಂಕೋಲೆಯಿದೆಯೆ?

ಶುದ್ಧಿ ಮೇಣ್ ಶ್ರದ್ಧೆಯಿರೆ ತುದಿಗೆ ತಪ್ಪದು ಸಿದ್ಧಿ ಸಾಧನೆಗೆ.

'ಮಲೆಚೆಲುವಿನ ತಾಯ್ನೆಲ ಕಿಷ್ಕಿಂಧೆ ಹೆತ್ತಂತಹ ನಲ್ಮೆಯ ಮಕ್ಕಳನ್ನು ಅಪಕೀರ್ತಿ ಕೇತುವು ನುಂಗಲಿದೆ. ಕಿಷ್ಕಿಂಧೆ ತಾಯಿಯ ಪರ್ವತದ ಕೆಚ್ಚಲುಗಳಿಂದ ಅಮೃತ ಧೈರ್ಯವನ್ನು ಹೀರಿ ಬೆಳೆದ ಧೀರರಿಗೆ ಇಂದು ಹೇಡಿತನವು ಒತ್ತಿ ಹಿಡಿದುಕೊಳ್ಳಲಿರುವುದು ಸೋಜಿಗ, ಸಂಕಟಕರ!

'ಈ ಸಭೆಯಲ್ಲಿ ಯುವರಾಜನಾದ ಈ ವಾಲಿಸುತ ಅಂಗದ ಕುಮಾರ, ಅಖಿಲ ಲೋಕ ಪ್ರಾಣಸುತ ಆಂಜನೇಯ, ಅಗ್ನಿಪುತ್ರ ಲೋಕೈಕವೀರ ಮಹಾ ಸೇನಾನಿ ನೀಲ ಇದ್ದಾರೆ. ತನ್ನ ಒಂದು ಬಲದಿಂದ ತ್ರಿವಿಕ್ರಮನಿಗೆ ಸರಿಸಾಟಿಯಾದ ಪರಾಕ್ರಮ ಬಲಿಷ್ಠ ಜಾಂಬವಂತ ಮತ್ತು ಇತರ ಸಾಹಸ ಶ್ರೀಮಂತರು, ಸಮರ ಧೀಮಂತರು ತುಂಬಿದ ಈ ಸಭೆಯ ತೇಜಸ್ಸಿಗೆ ಎಂದಿಗೂ ಪರಾಜಯ ಬುದ್ಧಿಯು ಗೌರವ ತರುವುದಿಲ್ಲ. ಶುದ್ಧಿ ಮತ್ತು ಶ್ರದ್ಧೆಯಿರಲು ಸಾಧನೆಗೆ ಅಂತ್ಯದಲ್ಲಿ ಸಿದ್ಧಿ ತಪ್ಪುವುದಿಲ್ಲ. ನಾಸ್ತಿಕ ನಲ್ಲದವನ ಆತ್ಮನಿಷ್ಠೆಗೆ, ತನ್ನ ಇಷ್ಟದೇವತೆಯ ನೊಗವನ್ನು ಹೆಗಲಮೇಲೆ ಹೊತ್ತು ಕೊಂಡಿರುವಾಗಲೇ ಸತ್ತರೆ ಆ ಸಾವು ಉತ್ತಮಗತಿಯದು. ನಾನು ಕಿರಿಯನು. ಆ ಹಿರಿಮೆ ನನ್ನದಲ್ಲವಾಗಿದ್ದರೂ ವಿಜ್ಞಾಪಿಸುತ್ತೇನೆ. ಹಿರಿಮೆ ಹೊಂದಿರುವವನನ್ನು ಹಿಂಬಾಲಿಸುವ ಪುಣ್ಯ ನನ್ನದಾಗಿತ್ತು ಎಂಬುದೇ ನನ್ನ ಹೆಮ್ಮೆ.

'ಆದುದರಿಂದ ಕೇಳಿ. ನಮ್ಮದಳದ ಅನುಭವವೇ ಬೇರೆ ರೀತಿಯದಾಗಿದೆ. ನಮ್ಮ ನೆಚ್ಚು ಬೇರೆ ಬಗೆಯಾಗಿದೆ. ಆಂಜನೇಯನ ಪಡೆಯವರ ಕೆಚ್ಚು ಬೇರೆ ಪರಿಯಾಗಿದೆ. ನಮ್ಮ ಪಡೆ ಪಟ್ಟ ಕೋಟಲೆ ಕಿರಿದಲ್ಲ. ಆದರೆ ದುಃಖದ ಮೊನೆಯುಗುರ ಮೊಸಳೆಯಲ್ಲಿ ನಾನು ಕರುಣೆಯನ್ನೂ, ಕನಿಕರದ ಲವಲೇಶವನ್ನೂ ಕಾಣಲಿಲ್ಲ. ನಾವು ಅಡವಿಯಲ್ಲಿ ತೊಳಲಾಡಿದೆವು; ಮರಳುಗಾಡಿನಲ್ಲಿ ಅಲೆದೆವು. ನಾವು ಹಸಿವು ನೀರಡಿಕೆ ಚಳಿ ಸೆಖೆಯ ಬಾಧೆಯಿಂದ ನೊಂದೆವು. ನಾವು ಕರಡಿ ಹುಲಿ ಸಿಂಹ ವಿಷಕೀಟಗಳ ಹಿಂಸೆಯಿಂದ ನರಳಿ ಅಕ್ಷರಶಃ ಸತ್ತು ಹುಟ್ಟಿದೆವು!

'ಕ್ರೌಂಚಾದ್ರಿಯನ್ನು ದಾಟಿ ಹರದಾರಿ ದೂರ ಸಾಗಿದ್ದೆವು. ಆಗ ನಮ್ಮ ಚಿತ್ತದ ಸ್ಥಿತಿಯನ್ನು ಪ್ರತಿಬಂಬಿಸುತ್ತ ನಮ್ಮ ನಿರಾಶೆಯು ಮೂರ್ತಿಗೊಂಡು ಎದ್ದು ನಿಂತಿದೆಯೊ ಎನ್ನುವಂತೆ ಒಂದು ಮರಳಿನ ಸಮುದ್ರ ಹರಡಿಕೊಂಡಿತ್ತು. ಶಿವ ಶಿವಾ, ಆ ನೋಟವನ್ನು ನೆನೆದರೆ ಈಗಲೂ ಎದೆ ನಡುಗುತ್ತದೆ. ಆಗ ಆ ದೃಶ್ಯಕ್ಕೆ ನಮ್ಮವರು ಯಾರೂ ನಡುಗಲಿಲ್ಲ. ಸಾಹಸದ ಬೇಸತ್ತ ಕಣ್ಣಿಗೆ ಆ ಹೊಸತಾದ ನೋಟ ಸವಿಯಾಗಿತ್ತು.

'ನಿರಾಶೆಗೂ ಒಂದು ಅಂಚನ್ನು ನೇಯ್ದಿರುತ್ತದಲ್ಲವೆ ಎನ್ನುವಂತೆ, ಅದು ಮೊದ ಮೊದಲು ತನ್ನ ಚಿನ್ನದ ಎಳೆಗಳಿಂದ ಮನ ಮೋಹಿಸುತ್ತದೆ. ಅದರ ಮೋಹಕ್ಕೆ ಸಿಲುಕಿ ಮುಂದಕ್ಕೆ ನಡೆದರೆ ಅತಿಥಿಯನ್ನು ನರಕ ಕೇಂದ್ರಕ್ಕೆ ಕೊಂಡೊಯ್ಯುತ್ತದೆ. ಏನೆಂದು ಹೇಳಲಿ, ನಮಗೂ ಆ ಮರುಪೃಥ್ವಿಯು ಹಾಗೆಯೇ ಮೊದಲ ನೋಟಕ್ಕೆ ಮನೋಹರವಾಯಿತು. ಬಿಳಿ ಮಳಲಿನ ಎಣ್ಣೆ ನುಣುಪು ದೃಷ್ಟಿ ಹರಿಯುವವರೆಗೂ ಹಬ್ಬಿತ್ತು. ತೃಪ್ತಿಯಾಗುವವರೆಗೂ ತಬ್ಬಿ ಕಣ್ಣಿಗೆ ಮುತ್ತೊತ್ತಿತ್ತು. ಕಾಡುಹಾದಿಯ ನೆಲದ ಕಲ್ಲು ಮುಳ್ಳುಗಳ ಬಿರುಸಿನಲ್ಲಿ ಅಲೆದಾಡಿದ ಕಾಲು ಮೃದು ಮರಳಿನ ಕೋಮಲವಾದ ಕಮಲದ ತುಟಿಯ ಪ್ರೀತಿಯ ಸೋಂಕಿಗೆ ಪುಳಕಗೊಂಡಿತು. ಅದು ಅಂಗಾಲಿಗೆ ಮುತ್ತಿಟ್ಟಂತಾಯಿತು.

'ಆ ಮಳಲಿನ ಕಡಲು ತಗ್ಗು ಇಳಿದು ಉಬ್ಬು ಏರಿ ಅಲೆ ಅಲೆಯಾಗಿ ವ್ಯಾಪಿಸಿಕೊಂಡು ತನ್ನ ಅನಂತತೆಯಿಂದ ಅಂತರಿಕ್ಷದ ಜೊತೆ ಸ್ಪರ್ಧಿಸುತ್ತಿತ್ತು. ಶಿವನನ್ನು ಕೆಣಕಿದ ಅಸುರನ ಮೃತ್ಯು ದಿವ್ಯವಾಗುವಂತೆ, ಮರುಭೂಮಿ ಯಾದರೇನು ಅದು ಆಗಸಕ್ಕೆ ಏರಿದ್ದು ಭವ್ಯವಾಗಿತ್ತು! ಭೂಮಿಯ ಹಸುರಿನ ಐಶ್ವರ್ಯವನ್ನು ಹಿಂದಿಕ್ಕಿ, ಮುಂದು ಮುಂದಕ್ಕೆ ಸಾಗಲು ಕಿವಿಗೆ ಮಸಣದ ಮೌನವು ಏಕನಾದವಾಗಿ ಮೀಟಿತು.

ಸೆಕೆಯೆ, ನೀರಳ್ಕೆಯಂ ತಾಳಲಾರದೆ, ಪೀರ್ದುದೊಡಲಿನರವಟ್ಟಿಗೆಯ ಬೆಮರ ನೀರಂ!

'ಅದು ಜನರಹಿತ, ಜಲರಹಿತ, ನೀಲವರ್ಣ ರಹಿತವಾಗಿ ನಿರ್ಜೀವವಾಗಿತ್ತು. ಕಾಡಿಲ್ಲ; ಹಸುರಿಲ್ಲ; ಪ್ರಾಣಿ ಪಕ್ಷಿಗಳ ಸುಳಿವಿಲ್ಲ; ತಂಗಾಳಿಯಿಲ್ಲ; ತಿಳಿನೀರಿಲ್ಲ. ಇಂದ್ರಿಯಕ್ಕೆ

ಮನಕ್ಕೆ ಜೀವಕ್ಕೆ ಮಹಾಚಿತೆಯಾಯಿತು. ಅದು ಬಿಸಿಲುರಿಯ ಬೀಡಾಯಿತು, ಸೆಕೆಯ ಕಾವು ಆಯಿತು, ಕಾವಲಿಯ ಓಡು ಆಯಿತು. ದಗೆಯಿಂದಾದ ಬಾಯಾರಿಕೆಗೆ ಬಳಲಿದರು. ಝಳದ ರಭಸಕ್ಕೆ ಭೀಮಕಲಿಗಳು ಬೆಬ್ಬಳಿಸಿದರು. ಬಾಯಾರಿ ಗಂಟಲುಒಣಗಲು ಕೆಲವರ ನಾಲಗೆಗೆ ಮಾತು ಹೊಮ್ಮಿ ಬರಲಿಲ್ಲ. ಸುಡುವ ಮಳಲಿನಿಂದ ಅಷ್ಟೂ ಜನರ ಅಂಗಾಲಿನಲ್ಲಿ ಬೊಕ್ಕೆ ಉಬ್ಬಿದವು. ಕೆಲವರಿಗೆ ಹಸಿವಾಗಿ ನಡೆಯಲಾರದಾದರು. ಅವರಿಗೆ ಸೆಕೆ, ಬಾಯಾರಿಕೆ ತಾಳಲಾರದೆ ಶರೀರದ ಅರವಟ್ಟಿಗೆಯ ಬೆವರ ಹೀರಿದರು! ಸುಂಟರ ಗಾಳಿಗಳು ಸುತ್ತಿ, ಮರಳುಗಳನ್ನು ಕಡೆದು, ದೂಳಿನ ಬೆಟ್ಟವನ್ನು ರಚಿಸಿ ತಿರ್ರನೆ ತಿರುಗಿ ಮೇಲೆದ್ದು ಮರಳುಗಾಡಿನ ಪಿಶಾಚಿಗಳಂತೆ ರಿಂಗಣ ಕುಣಿದವು.

'ಕಣ್ಣಿಗೆ ಪುಡಿಯನ್ನು ತೂರಿ ದೃಷ್ಟಿಯನ್ನು ಕಟ್ಟಿ ಹಾಕಿದವು. ಮತ್ತೆ ಮೇಲಿಂದ ಎರಗಿ ಸೈನಿಕರನ್ನು ಹೂತು ಒತ್ತಿ ಮುಚ್ಚಿದವು. ದೂಳಿನ ಮೋಡವು ಹರಡಿದವು. ಉರಿವ ಸೂರ್ಯನನ್ನು ಮುಸುಕಿ ಕತ್ತಲೆಯುಂಟು ಮಾಡಿದವು. ಹುಚ್ಚು ಹಿಡಿದವರಂತೆ ಚೀತ್ಕರಿಸಿ ಊಳಿಟ್ಟವು. ಆ ಮರಳ ಪ್ರೇತ ನಾಟ್ಯ ಮಂಡಲವು ಸೋಜಿಗ ದನಿಗಳಿಂದ ಚಿತ್ರ ವಿಚಿತ್ರವಾಗಿ ನರ್ತಿಸಿತು!

'ಕಾಲ್ಗೆಟ್ಟು, ಕಂಗೆಟ್ಟು ಸೇನೆಯು ತತ್ತರಿಸುತ್ತ ಮುಂದುವರೆಯುತ್ತಿರಲು ಏನೆಂದು ಹೇಳಲಿ– ಮುಂದೆ ಮರಳು ದಿಕ್ಕುಗಳ ಪರಿಧಿಯನ್ನು ಸಿಂಗರಿಸಿದ ಮನೋಹರ ಪ್ರತಿ ಸರೋವರವು ಕಣ್ಣನ್ನು ಸೆಳೆಯಿತು. ಕಂಡ ತಕ್ಷಣ, ಗಂಟಲು ಒಣಗಿ ಬಾಯಾರಿದ್ದ ನಾವು ಮೃತರಿಗೆ ಅಮೃತದ ಕೃಪೆಯೇ ಕೈಸೇರಿತೆಂದು ಎದ್ದು ಬಿದ್ದು ಓಡಿದೆವು. ಬಯಕೆಯ ಬಿಸಿಲ್ಗುದುರೆಗಳನ್ನು ಏರಿ ನಿಡಿದಾದ ಕೊರಳ ನಿಟ್ಟೋಟದಿಂದ ಓಡಿದೆವು. ತಣ್ಣನೆಯ ನೋಟದಿಂದ ಅಲೆಗಳು ನಲಿದು ಕುಣಿದು ತರಂಗ ಮೊರೆತದ ಇಂಪಿನಿಂದ ಕರೆಯುವ ಉಲಿತ ಹೊಮ್ಮಿತು. ಸ್ಫಟಿಕದಂತ ತಿಳಿನೀರಿನಿಂದ ಕಂಗೊಳಿಸಿ ನಂಬಿಸುವ ಮರಳಿನ ಕೊಳ ಮರೀಚಿಕೆಯು ನಿರಾಶೆಯ ನಡುವೆ ದೂರದಾಶೆಯ ರೀತಿ ಕರೆಯಿತು.

'ಎಷ್ಟು ಓಡಿದರೇನು? ಓಡಿದಂತೆಲ್ಲ ಅದಕ್ಕೂ ನಮಗೂ ನಡುವೆಯಿದ್ದ ಅಂತರದ ದೂರವು ಕ್ಷೀಣಿಸದೆ ಅಚಲವಾಗಿ ನಿಂತಿತು. ಕುದಿವ ಸೆಕೆ, ಸುಡುಮಳಲು, ಬೇಯೆ ಬೇಯಿಸುವ ಬಿಸಿಲುಗಾಳಿ; ದಣಿವು, ದುಗುಡ, ಹಸಿವು, ನೀರಡಿಕೆ, ಆ ಬಯಲಭ್ರಾಂತಿಯನ್ನು ಬೆನ್ನಟ್ಟುತ್ತಿರಲು– ಅದು ಸಂಜೆಯ ಸೂರ್ಯನ ಬೆಳಕು ಬೀಳುವ ಹೊತ್ತಿನಲ್ಲಿ ಕಾಣದಾಯಿತು. ಅಯ್ಯೋ, ಆ ಗೋಳನ್ನು ಏನೆಂದು ಹೇಳಲಿ. ಸೇನೆಯು ಅತಿಯಾಗಿ ನರಳುತ್ತ, ಮರಳ ಮೇಲೆ ಹೊರಳಾಡಿತು....

'ಪವನಜ ಆಂಜನೇಯನ ಮಾತು ನಮ್ಮಲ್ಲಿ ಪುನಃ ಶಕ್ತಿ ಸಾಮರ್ಥ್ಯವನ್ನು ತುಂಬಿತು. ರಕ್ತದಂತಹ ಮುಗಿಲ ಕೊಲೆಯ ಕಲೆಯನ್ನು ಕೆತ್ತಿ, ರಕ್ತ ರವಿಯ ಶವವು ಮುಳುಗುತ್ತಿರಲು ಆ ಹಗಲು, ಬೆಳುದಿಂಗಳ ಇರುಳ ಸ್ಮಶಾನಕ್ಕೆ ಬಿದ್ದಿತು. ಆ ರಾತ್ರಿ,

ನಕ್ಷತ್ರಗಳಿಂದ ತುಂಬಿದ ಆ ರಾತ್ರಿ ಎಷ್ಟು ಭಯಂಕರವಾಗಿತ್ತು! ಕ್ರೂರ ತಾರಾ ಕಾಂತಿ ಕತ್ತಲೆಯನ್ನು ಉಜ್ಜಿ ಮಾರ್ಗ ತೋರುತ್ತಿರಲು, ನಾವು ಅಷ್ಟೊ ಜನ ನಡೆದೆವು. ಬೀಳುವವರೆಗೂ ನಡೆದು ಸಾಗುವ ಛಲದಿಂದ ಮುನ್ನಡೆದೆವು.

ಮೂಡಿತು ಮೃಕಂಡು ಋಷ್ಯಾಶ್ರಮಮಂ, ಮರುವನದ ಮಧ್ಯೆ!

'ದೈವಕೃಪೆ, ದೈವಕೃಪೆಯೆಂಬುದು ನಿಜ. ಆ ಮರಳು ಕಾಡಿನ ಮಧ್ಯೆ ಮೃಕಂಡು ಋಷ್ಯಾಶ್ರಮ ಗೋಚರಿಸಿತು. ಮಾಯೆಯೊ ನಿಜವೊ ನನಗೆ ಗೊತ್ತಿಲ್ಲ. ಮಗನು ತೀರಿ ಹೋಗಲು ಮುನಿಯ ಸಂಕಟದ ಎದುರಿಗೆ ಬೃಹತ್ ವನವು ಸುಟ್ಟು ಹೋಯಿತು, ಅಲ್ಲಿ ಮೃತ್ಯು ಮಂಚದ ಮರಳು ಹಾಸಿನಂತೆ ಸರ್ವಸಂಕಟವನ್ನುಂಟುಮಾಡುವ ಮಹಾಮರಳ ಪೃಥ್ವಿ ಮೂಡಿತು ಎಂದು ಹೇಳುವರು. ಆ ಆಶ್ರಮ ಕೃಪೆಯ ಮನೆಯನ್ನುವಂತೆ ನೀರು ನೆರಳು ಹಣ್ಣು ಹಂಪಲಿನ ತಣಿವಿಗೆ ಬೀಡಾಗಿ ಮರಳುಗಾಡಿನ ಮಧ್ಯೆ ಶೋಭಿಸುತ್ತಿದೆ. ಅಲ್ಲಿ ಮೃಕಂಡು ಮುನಿವರನು ತಪದಲ್ಲಿದ್ದಾನೆ. ಸ್ನಾನ ಮಾಡಿ ಉಂಡು ಮಲಗಿ ಜೀವ ಪಡೆದವು. ಮರುದಿನ ಹಗಲನ್ನು ಅಲ್ಲಿಯೇ ಕಳೆದೆವು.

'ರಾತ್ರಿಗೆ ಆ ಮುನಿಯು ಹೇಳಿದಂತೆ ನಕ್ಷತ್ರ ಮಾರ್ಗವನ್ನು ಅರಿಯುತ್ತ, ತೀಕ್ಷ್ಣವಾದ ಸೂರ್ಯನ ತಾಪದಲ್ಲಿ ಅಲೆದಾಡಿ ಸುಕ್ಕಾಗಿ ಹೋಗಿದ್ದ ನಾವು, ಯಾತ್ರೆಯನ್ನು ಮುಂದುವರಿಸಿದೆವು. ರಾತ್ರಿಯೆಲ್ಲ ನಡೆಯುತ್ತ ಬೆಳಕಾಗುವ ಹೊತ್ತಿಗೆ ಆ ಮರಣ ಸದೃಶವಾದ ಮರಳ ಪ್ರಾಂತ್ಯ ಕಳೆಯಿತು. ಮುಂದೆ ತಾಯಿಹರಕೆಯ ಹಸುರು ಮಲೆಯು ಆನಂದಾನುಭವವನ್ನುಂಟು ಮಾಡಿತು!

'ರಾತ್ರಿಯೆಲ್ಲ ಮರುಭೂಮಿಯಲ್ಲಿ ನಡೆದು ಬಂದ ಬಾಯಾರಿಕೆಗೆ ನೀರಿನ ನೆಲೆಯನ್ನು ಹುಡುಕುತ್ತಿದ್ದೆವು. ಆಗ ನಡೆದುದನ್ನು ಏನೆಂದು ಹೇಳಲಿ? ಭಯಂಕರ ತಿಮಿಂಗಲವು ಬಾಯಿತೆರೆದಂತಿದ್ದ ಗಿರಿ ಗುಹೆಯ ಆಳವಾದ ಮಹಾಬಿಲ ಭಯವನ್ನುಂಟು ಮಾಡಿತು. ಪೊದರು ಮರಗಳಿಂದ ನಿಬಿಡವಾಗಿದ್ದ ಅದರ ಬಳಿಗೆ ಅಚಲಗಿರಿಯಂಥ ಆಂಜನೇಯನು ಹೋದನು. ಅರಣ್ಯ ತಜ್ಞನಾದ ಅವನು ಅದನ್ನು ಪರೀಕ್ಷಿಸುತ್ತ, ತನಗೆ ಉಂಟಾದ ಶಂಕೆಯಿಂದ, ನೀರನ್ನು ಬಯಸುತ್ತಿದ್ದ ನಮ್ಮನ್ನು ಸಂಬೋಧಿಸಿ ನುಡಿದನು: 'ನನ್ನನ್ನು ಆಕರ್ಷಿಸಿರುವ ಸನ್ಮಿತ್ರ ಸುಗ್ರೀವನ ಆಜ್ಞೆಯನ್ನು ಮತ್ತು ಕರ್ತವ್ಯವನ್ನು ಹೊತ್ತ ಸಹಚರರೇ, ನಾವು ದಕ್ಷಿಣವನ್ನು ಎಷ್ಟೋ ಹುಡುಕಿ ಶೋಧಿಸಿದ್ದೇವೆ. ಮೈಥಿಲಿ ಇರುವ ಜಾಗ ತಿಳಿಯದಾಗಿದೆ. ಆ ಸತೀಚೋರ ರಾವಣನು ಎಲ್ಲಿ ಬಚ್ಚಿಟ್ಟಿರುವನೆಂದು ಹೇಳಲು ಅಸಾಧ್ಯವಾಗಿದೆ. ಈ ಗುಹೆಯು ಪಾತಾಳ ಕೂಪದಂತೆ ಕಾಣುತ್ತಿದೆ, ಲಂಕೆಗೆ, ನಿಶಾಚರಪುರಕ್ಕೆ ಈ ಗವಿಯೇ ಗುಪ್ತಮಾರ್ಗವಿರ ಬಹುದೆಂದು ನನಗೆ ಶಂಕೆಯಾಗಿದೆ. ಅದೊ ಅಲ್ಲಿ ಕಾಣಿಸುವ ಕಂಡಿಯ ಮುಖದಿಂದ ನೀರಿನಲ್ಲಿ ತೊಯ್ದ ಕ್ರೌಂಚಸಾರಸ ಪಕ್ಷಿಗಳ ಸಾಲು ಹೊರಬರುತ್ತಿವೆ. ತೊಯ್ದತೇವದ ಗರಿಗೆ ಹೂವಿನ ಹುಡಿಯ ಹಳದಿ

ಅಂಟಿಕೊಂಡು ಹೊನ್ನಿನ ಕುಸುರಿ ಕೆಲಸದ ಸೊಬಗಿನಿಂದ ಚಕ್ರವಾಕಪಕ್ಷಿಗಳ ಮಾಲೆ ಹೊರಗೆ ಬರುತ್ತಿವೆ. ಗವಿಯ ಬಾಯಿಯ ಮರಗಳು ನೀರನ್ನು ಹೀರಿಕೊಂಡು ಹೆಚ್ಚು ಹಸುರಿನಿಂದ ಸೊಗಸುತ್ತಿವೆ. ರಾಕ್ಷಸ ರಹಸ್ಯವನ್ನು ಕತ್ತಲ ಗೂಢ ಬಿಲವು ರಕ್ಷಿಸಿದೆ, ಬನ್ನಿ, ಒಳಗೆ ಪ್ರವೇಶಿಸಿ ಅವನಿಜಾತೆಯನ್ನು ಹುಡುಕೋಣ.'

ಹನುಮದೇವನ ಆವೇಶದ ಮಾತಿಗೆ ಉಬ್ಬಿ ಚಂದ್ರ ಸೂರ್ಯರಿಲ್ಲದ, ಏನೂ ಗೋಚರವಾಗದ ಅತಿಘೋರ ಕರಡಿಯ ಗವಿಯನ್ನು ಹೊಕ್ಕೆವು. ನೀರು ದುಮುಕುವ ದನಿ ಕೇಳುತ್ತ ಒಬ್ಬರು ಇನ್ನೊಬ್ಬರನ್ನು ಹಿಡಿದು, ಹೆಗಲನ್ನು ನಂಬಿಕೊಂಡು ನಡೆಯುತ್ತಿದ್ದೆವು. ಅಲ್ಲಿ ಕರಡಿ ಹುಲಿಗಳ ಕೂಗು ಅದರ ಜೊತೆಗೆ ಹಾವಿನ ಘೂತ್ಕಾರ ಕೇಳಿಸಿತು. ಮೆಲ್ಲನೆ ಮೃದುವಾಗಿ ಸಾಗುತ್ತಿರಲು ಆಶ್ಚರ್ಯಪಡುವಂತೆ ತಕ್ಷಣ ಕಣ್ಣಿನ ದೃಷ್ಟಿಗೆ ಒಂದು ಅದ್ಭುತ ಸುರಸುಂದರ ಕತ್ತಲು ರಹಿತ ವನ ಕಂಡಿತು! ಕತ್ತಲೆಯನ್ನು ಕಂಡುಂಡು ಕುರುಡು ಮೆತ್ತಿದ ನಮ್ಮ ಕಣ್ಣುಗಳಿಗೆ ಹೊನ್ನಿನ ಮರದ, ಬಂಗಾರಚಿಗುರ, ಚಿನ್ನದ ಹೂಗಳ ಮಿಂಚು ಮಿರುಗುವ ಬನವು ಬಂಗಾರ ರಚಿತವಾಗಿದ್ದಂತೆ ಗೋಚರವಾಯಿತು.

ಅಲ್ಲಿರ್ದುದಾ ಸ್ವಯಂಪ್ರಭೆಯ ದಿವ್ಯಾಶ್ರಮಂ

'ಅದೇ ನೋಡಿ, ಅಲ್ಲಿ ಸ್ವಯಂಪ್ರಭೆಯ ದಿವ್ಯಾಶ್ರಮವಿತ್ತು. ಜಿಂಕೆಯ ಚರ್ಮವನ್ನು ಧರಿಸಿದ್ದ ಆ ಶ್ರೇಷ್ಠ ತಪಸ್ವಿಯು ನಮ್ಮ ಕತೆಯನ್ನು ಮತ್ತು ವ್ಯಥೆಯನ್ನು ಕೇಳಿದಳು. ಜೊತೆಗೆ ತನ್ನ ಆತ್ಮಕಥೆಯನ್ನು ಹೇಳುತ್ತ ಹಣ್ಣು ಬೇರುಗಳ ಅಮೃತ ಉಣಿಸಿನಿಂದ ನಮ್ಮನ್ನು ತಣಿಸಿದಳು. ದಾನವರ ಶಿಲ್ಪಿ 'ಮಯ' ಎಂಬ ಮಹಾಮಾಯಾವಿ 'ಹೇಮೆ' ಎಂಬ ಅಪ್ಸರೆಯ ಸುಖಕ್ಕೆ ವೈಡೂರ್ಯ ಕನಕಮಯವಾದ ಗುಹಾ ವಿಶ್ರಾಂತಿಧಾಮವನ್ನು ರಚಿಸಿದನು. ಮಯನ ಮನಸ್ಸನ್ನು ಗೆದ್ದ ಆ ಸುಂದರ ಮುಖಿ ಸುರಲತಾಂಗಿಯು ತನ್ನ ಸಖಿ ಮೇರುಸಾವರ್ಣಿಯ ಮಗಳು ಧರ್ಮಚಾರಿಣಿ ಸ್ವಯಂಪ್ರಭೆಗೆ, ತಪಸ್ಸನ್ನು ಮಾಡಲು ಅದನ್ನು ಸ್ನೇಹದ ನೆನಪಿನ ಕೊಡುಗೆಯಾಗಿ ನೀಡಿದಳು.

'ಮಾನವರು ಅಲ್ಲಿಗೆ ಬಂದರೆ ಪ್ರಾಣಸಮೇತ ಹಿಂದಿರುಗದಿರಲಿ ಎಂಬ ವರವು ಆ ತಪಸ್ವಿನಿಗೆ ರಕ್ಷೆಯಂತಿದೆ. ಸುಕೃತಕಾರ್ಯದಿಂದ, ಗುರುಕೃಪೆಯಿಂದ ನಮ್ಮ ಸೈನ್ಯವು ಬದುಕಿಬಂದಿತು! ಆ ದೇವಿಯು ತನ್ನ ಮಹಿಮೆಯಿಂದ ಅಲ್ಲಿ ಕಣ್ಮುಚ್ಚಿ ನಿಂತ ನಮ್ಮನ್ನು ರೆಪ್ಪೆ ತೆರೆಯುವಷ್ಟರಲ್ಲಿ ಇಲ್ಲಿಗೆ, ಮಹೇಂದ್ರಾಚಲಕ್ಕೆ ತಂದಳು. ಮುಂದಕ್ಕೆ ನಮ್ಮ ಗುರಿ ಸಾಧಿತವಾಗುತ್ತದೆ ಎನ್ನುವುದಕ್ಕೆ ಇದಕ್ಕಿಂತ ಬೇರೆ ಸಾಕ್ಷಿ ಬೇಕೆ?'

'ನನ್ನನ್ನು ಈ ಮಹಾಸಭೆಯು ಕ್ಷಮಿಸಬೇಕು. ಸಕಾರಣವಾಗಿ ಸಮಯನಿಷ್ಠೆಯನ್ನು ಮೀರಿದೆನು. ನಿರಾಶೆ ತೊಲಗಲಿ. ಮನಸ್ಸು ಹೇಡಿತನವನ್ನು ಸಂಹರಿಸಲಿ. ನಿಂದನೆಯ ನೆಲೆಯಾದ ಸೋಲುವ ಮನಸ್ಸನ್ನು ಸಾಕುಮಾಡಿ ಉತ್ಸಾಹಕ್ಕೆ ಕೋಡು ಮೂಡಲಿ .

ನಿಮಗೆ ವಿಜಯ ಬುದ್ಧಿ ಬರಲಿ. ಕೆಟ್ಟ ರಾತ್ರಿ ಕೊನೆಯಾಗುವ ಮೊದಲು ಮಾಗಿಯ ಹಿಮದ ಸೋನೆ ಸುರಿಯುತ್ತ ಜಗತ್ತೆಲ್ಲವನ್ನು ಬಿಳಿಯ ಮಂಜಿನಿಂದ ಸುತ್ತುಗಟ್ಟಿದೆ. ಏಳು ಕುದುರೆಗಳನ್ನು ಏರಿ ಬರುವ ಸೂರ್ಯನು ತನ್ನ ಬಿಸಿಯ ತೇಜಸ್ಸಿನಿಂದ, ಬೆಳಕಿನಿಂದ ದಟ್ಟವಾಗಿ ಮುಚ್ಚಿರುವ ಸುಪ್ತಲೋಕವನ್ನು ಎಚ್ಚರಿಸುವನು. ಅದೇ ರೀತಿ ನಮ್ಮ ಎದೆಯ ಮುಸುಕು ಅಳಿದು, ಕೀರ್ತಿಕರ ಧೈರ್ಯ ಪೂರ್ವಾಚಲದ ಎತ್ತರದ ಸಿಂಹಾಸನದ ಉನ್ನತವಾದ ಗೌರವಕ್ಕೆ ಆಶಾಜ್ಯೋತಿ ಮೂಡಲಿ.'

ಆ ವಚನ ವಿದ್ಯುತ್ ಪ್ರಭಾಲಹರಿ ಕೇಳಿದವರ ಮೈಯಲ್ಲಿ ರೋಮ ರೋಮ ನಿಮಿರಿ ಪುಲಕವನ್ನು ವಶಪಡಿಸಿಕೊಳ್ಳುವಂತೆ ಮಿಂಚು ಹರಿಯಿತು. ಘೇ, ಉಘೇ ಘೋಷವು ಕಾಡಿನ ನಿಶ್ಯಬ್ದತೆಯನ್ನು ಕಡೆಯುತ್ತಿರಲು ಉದಾರ ಮೂರ್ತಿ ತಾರನು ಎದ್ದನು. ಕುಶಾಗ್ರಮತಿಯೂ, ಸಂವಾದ ಚತುರನೂ, ಮಧುರಭಾಷೆಯು ವಾದಮೇಧಾವಿಯು ಆದ ಅವನು ಹೀಗೆ ಹೇಳಿದನು:

'ಕೋಕಿಲದ ಸ್ವರ ಕೇಳಿದವರಿಗೆ ನವಿಲಿನ ಕೇಕಿ ಇಂಪಾಗುವುದೆ? ಮೈಂದನ ಇಂಗಿತವನ್ನು ತಿಳಿದು ಅನಂತರ ಹೇಳಲು ಪ್ರಯತ್ನಿಸುವವನು ಮೂರ್ಖನಲ್ಲದಿದ್ದರೂ ನಿಜವಾಗಿಯೂ ಸಾಹಸಿ. ಆದರೂ, ವಿವೇಕಿ ಗೃಹಸ್ಥನು ಔತಣದ ಜೊತೆಗೆ ಅನ್ನದ ನೆವದಲ್ಲಿ ಅತಿಥಿಗೆ ಒಳಿತಾಗುವ ಔಷಧಿಯನ್ನು ಬಡಿಸುವಂತೆ ನನ್ನ ಮನದ ಭಾವವನ್ನು ವ್ಯಕ್ತಪಡಿಸುವೆನು. ದೊರೆಯು ಕೊಟ್ಟ ಅವಧಿ ಮುಗಿದಿದೆ ಮತ್ತು ಮೀರಿದೆ. ಸೀತಾಮಾತೆ ಇರುವ ನೆಲೆ ಇನ್ನೂ ಸಿಕ್ಕಿಲ್ಲ. ಅದು ಗೊತ್ತಾಗುವುದಾದರೂ, ಆ ಸಂಭವ ದೂರವಿದೆ.

'ಅಲ್ಲಿ ಸುಗ್ರೀವ ರಾಮಲಕ್ಷ್ಮಣರು ತವಕ ಪಡುತ್ತಿರುವರೆಂಬುದನ್ನು ಮರೆಯದಿರಿ. ಶೀಘ್ರವಾಗಿ ಕಿಷ್ಕಿಂಧೆಗೆ ಹೋಗೋಣ. ಅಲ್ಲಿ ನಮ್ಮ ಅನುಭವಗಳನ್ನು ಹೇಳೋಣ. ಸರ್ವಕಪಿಸೇನೆಯೊಡನೆ ಈ ಕಡೆಗೆ ಬಂದು ದಾಳಿ ಮಾಡೋಣ. ನಿಧಾನಿಸಿದರೆ ನಮಗೂ, ನಮ್ಮನ್ನು ನಂಬಿದವರಿಗೂ ಕೆಲಸಕೆಡುತ್ತದೆ. ಸಾಹಸವು ಸ್ತುತ್ಯವಾದುದು. ವಿವೇಕವು ಅದಕ್ಕಿಂತಲೂ ಶ್ಲಾಘನೀಯವಾದುದು. ವಿವೇಕವು ಸಾರಥಿಯಾಗಿದ್ದರೆ ಸಾಹಸವು ವೀರರಥಿ. ಬುದ್ಧಿಯ ಕಡಿವಾಣವಿಲ್ಲದಿದ್ದರೆ ಸಾಹಸವು ಗತಿಗೆಟ್ಟ ಕುದುರೆಯಾಗುವುದು. ಈ ದೃಷ್ಟಿಯಿಂದ ನಮ್ಮ ಗುರಿ ಸಾಹಸವಲ್ಲ. ನಮ್ಮ ಕೀರ್ತಿಯೆ ಕೊನೆಯ ಗುರಿಯಲ್ಲ. ನಮ್ಮ ಗಮನದ ಬಾಣಕ್ಕೆ ಸೀತೆಯ ಒಳಿತೆ ಗುರಿಯ ಕಣ್ಣು. ಕೀರ್ತಿ ಎಂಬುದು ಗುರಿಯಲ್ಲವೆನ್ನುವುದನ್ನು ನೆನೆಯೋಣ. ಕೀರ್ತಿಯೆಂಬುದೇನು? ಪರರ ಮೆಚ್ಚುಗೆಯಲ್ಲವೆ? ತಮ್ಮೊಳಗೆ ತಮಗೆ ನೆಚ್ಚಿಕೆಯಿಲ್ಲದವರಿಗೆ ಹೆರರ ಮೆಚ್ಚಿಗೆಯ ಕೆಚ್ಚು ಇರಬೇಕಾದುದು ದಿಟ.

'ಮಂದಿಯ ಹೊಗಳಿಕೆಯನ್ನೆ ತನ್ನ ವೀರತನವೆಂದು ಮೆರೆಯುವ ಅಲ್ಪರನ್ನು ನಾನಿಲ್ಲಿ ಕಂಡಿಲ್ಲ. ದಣಿದ ದಳವನ್ನು ಹಿಂದಕ್ಕೆ ಕಳುಹಿಸೋಣ. ಹಿಂಜರಿವರೆಲ್ಲ ಹೇಡಿಗಳಲ್ಲ. ಹಿಂದೋಟದ ನೀತಿಯಿಂದ ಕೆಲವೊಮ್ಮೆ ಕೊನೆಗೆ ಜಯವಾಗುವುದು. ಕಿಷ್ಕಿಂಧೆಗೆ

ಹೋಗಿ, ನಮ್ಮ ದೊರೆಗೆ ಎಲ್ಲವನ್ನು ಹೇಳಿ ಮುಂದಿನ ಕಾರ್ಯಕ್ಕೆ ತೊಡಗುವುದೇ ನೀತಿಯಾಗಿದೆ.'

ಎಂದು ಹೇಳಿ ಅಪ್ರತಿಮ ವಾಕ್‌ಚುತುರನು, ಚುರುಕಾದ ನುಡಿಯ ಮಹಾಮೇಧಾವಿಯು ಆದ ತಾರನು ಕುಳಿತನು. ಅವನ ಮಾತು ಭಾವರಹಿತವಾಗಿ ಕಂಡರು, ಭಾವಮಯ ಬುದ್ಧಿ ಸಾಹಿತ್ಯವನ್ನು ಆಶಯವಾಗಿ ಬೋಧಿಸಿತು. ಮರಗಳಲ್ಲಿ ಅಲ್ಲಿ ಇಲ್ಲಿ ಬನದ ಹಕ್ಕಿಗಳು ಹಾಡತೊಡಗಿದವು. ಕೊರೆಚಳಿಯ ಮಾಗಿಯ ತಣ್ಣನೆಯಗಾಳಿ ತೀಡಿತು. ಮುಸುಕಿದ ಇಬ್ಬನಿಮಂಜಿನಲ್ಲಿ ಕೋಲುಕೋಲಾಗಿ ಹಸುಳೆ ನೇಸರಿನ ಕಿರಣಕಣೆಯ ಬೆಳಕು ನೆರಳಿನ, ಬಿಳಿಯ ನೀಲಿಯ ಕಲೆಯ ಬಲೆಯ ರಂಗೋಲಿ ತೂರಿಬಂದಿತು. ಮಂಜಿನ ಪಟದ ಮೇಲೆ ತರುಣ ಅರುಣದ ಬಿಸಿಲು ವಾನರ ಮಹಾಕೃತಿಗಳನ್ನು ದೀರ್ಘವೂ ಉನ್ನತವೂ ಎನ್ನುವ ಪರ್ವತದಂತಹ ನೆರಳನ್ನು ರಚಿಸಿತು.

ತಾರನ ವಾದದ ಸಾರಸತ್ತ್ವದಿಂದ ಆ ಸಭೆಯ ಬುದ್ಧಿ ಕವಲಾಗಿ, ಹಿಂಡೆದ್ದ ಜೇನುಗೂಡಿನಂತೆ ಗುಜುಗುಜು ಮಾತು ಮೊರೆಯಿತು. ಇದ್ದಕ್ಕಿದ್ದಂತೆ ಇದೇನು ಸದ್ದು? ನಿಂತು, ಸಭೆ ಆಲಿಸಿತು. ಆ ಮಹೇಂದ್ರಗಿರಿ ಶೃಂಗದಿಂದ ದುಮುಕುತ್ತ ಭೂಮಿಗೆ ಇಳಿದು ಬಂದ ಸಂಪಾತಿ ಚೀತ್ಕಾರ ಅವರ ಕಿವಿಗಳನ್ನು ಇರಿದಂತಾಯಿತು! ಸೇನಾನಿ ನೀಲನು ಅಂಗದ, ಜಾಂಬವಂತರೊಡನೆ ಮಂತ್ರಾಲೋಚಿಸಿದನು. ಅದರಂತೆ ವ್ಯಾಘ್ರೋಗ್ರ ವೀರನಾದ ಶರಗುಲ್ಮನನ್ನು ಕರೆದು ಹೀಗೆ ಆಜ್ಞಾಪಿಸಿದನು:

'ಹೋಗು ಎಚ್ಚರದಿಂದ ನಡೆದುಕೊ. ಕೂಗಿನ ನೆಲೆಯನ್ನು, ರಹಸ್ಯವನ್ನು ಎಚ್ಚರದಿಂದ ತಿಳಿದುಕೊ. ನಿನ್ನ ಆಯ್ಕೆಯ ವೀರಪಡೆಯನ್ನು ತೆಗೆದುಕೊಂಡು ಹೋಗು.'

ತಾನು ಆಯ್ದುಕೊಂಡ ವೀರರನ್ನು ಕೂಡಿಕೊಂಡು ಮಲ್ಲಕಾಳಗದ ಹುಲಿ ಹೊರಟನು. ಹಬ್ಬಿ ಆವರಿಸಿದ ಬಿಳಿ ಮಂಜಿನ ತೆರೆಯು ಕಣಿವೆಗೆ ಇಳಿದು ಅದನ್ನು ಮರೆಯಾಗಿಸಿತ್ತು. ಆದರೂ ಹಸುಳೆಬಿಸಿಲು ಹರಡಿದ್ದ ನಿರ್ಮಲ ಬೆಟ್ಟದ ಎತ್ತರಕ್ಕೆ, ಕೂಗು ಕೇಳಿದ ಕಡೆಗೆ ಹೋದರು. ಇಬ್ಬನಿ ಸೋನೆಯು ತೆಳ್ಳಗಾಗುವಂತೆ ಕುಟ್ಟಿ ಬೆಟ್ಟವೇರಿದರು. ಕಾಡಿನ ಸಾಂದ್ರತೆ ಕಡಿಮೆಯಾದಂತೆ ಸಂಚಾರ ಸುಲಭವಾಯಿತು.

ಸತ್ಯಗಿರಿ ಶಿಖರವನ್ನು ಸಮೀಪಿಸುತ್ತಿದ್ದಂತೆ ತರ್ಕಪಾಂಡಿತ್ಯದಿಂದ ಜನಿಸಿದ ಚಿತ್ತವನ್ನು ವಿಭ್ರಮೆಗೊಳಿಸುವ ಶಬ್ದಜಾಲ ಅರಣ್ಯವು, ವಾದದ ಅಸ್ಪಷ್ಟತೆಯ ಹಿಮವು ತೊಲಗಿ ಜ್ಯೋತಿ ಸಾಕ್ಷಾತ್ಕಾರವಾದಂತಾಯಿತು. ಏರುತ್ತ, ಏರಿದಂತೆಲ್ಲ ಕಾಡು ವಿರಳವಾಯಿತು. ಕಾಲು ಸೋತಿತು. ಕಡೆಗೆ ಮರಗಳು ಎರಡುಮೂರಾಗಿ ನಿಂತ ಅಡವಿಯನ್ನೆ ಮಂಜು ಅನುಸರಿಸುತ್ತಿತ್ತು. ಅಲ್ಲಿ ಸ್ಫಟಿಕ ಸರೋವರದಂತೆ ನಿರ್ಮಲವಾದ ವಾಯುವಲಯದಲ್ಲಿ ಅಂಬರವನ್ನು ಚುಂಬಿಸುತ್ತ ಮಹೇಂದ್ರ ಗಿರಿಯ ಶುಭಶಿಖರವು ಶೋಭಿಸುತ್ತಿತ್ತು.

ಆ ಕೂಟದಲ್ಲಿ ಅವರು ಬಂಡೆಗಳೊಡನೆ ಬಂಡೆಯೆಂಬಂತೆ ತಪಸ್ಸು ಮಾಡುತ್ತಿದ್ದ ಖಗವೃದ್ಧನನ್ನು ಕಂಡರು. ಆ ಶ್ರೇಷ್ಠ ಮಹಾ ಹದ್ದನ್ನು, ಸಮುದ್ರಸಖ, ಗಗನಮಿತ್ರ, ಕಾಡು ಭೂಮಿ ಪರ್ವತಗಳ ಸಂಗಾತಿ ಸಂಪಾತಿಯನ್ನು ನೋಡಿದರು! ಹರಿದ ತುಪ್ಪಳ ಶರೀರದ, ಹುಣ್ಣುಗಳ ಎದೆಯ, ನೋವಿನಿಂದ ಮತ್ತು ಆಹಾರ ಸಾಲದ ಕಾರಣದಿಂದ ಸುಕ್ಕಿ ಸೊರಗಿ ಅಸ್ಥಿಪಂಜರವಾಗಿದ್ದ ಕ್ಷಾಮ ಭೀಮನನ್ನು ನೋಡಿದರು. ತಕ್ಷಣ ಕಪಿಶೂರರು ಅರೆಗುಂಡುಗಳನ್ನು ಎತ್ತಿ ಹೊಡೆಯಲು ಹೋದಾಗ ಸಮರ್ಥ ಶರಗುಲ್ಮನು ಅವರ ಕೈ ತಡೆದನು. ಮುಂದಕ್ಕೆ ಹೋಗಿ ಆ ಮೌನಮೂರ್ತಿಯ ಮುಂದೆ ಹೀಗೆ ನುಡಿದನು:

'ಪಕ್ಷಿ ಬೃಹದ್ರೂಪಿಯೆ, ನಿನ್ನ ಪರಿಚಯವನ್ನು ಹೇಳು, ನಿಧಾನ ಮಾಡಿದರೆ ನಿನ್ನ ಪ್ರಾಣಕ್ಕೆ ಕೇಡುಂಟು ಮಾಡಲು ಅಗೊ, ಅಲ್ಲಿ ಮೃತ್ಯುವಿನ ಬೆರಳಿನಂತೆ ನಿಂತಿದ್ದಾರೆ. ಕಲ್ಲು ಹಿಡಿದು ಸಾಲಾಗಿ ನಿಂತಿರುವ ಅವರು ಕಿಷ್ಕಿಂಧೆಯನ್ನು ಆಳುವ ಮಹಾನೃಪತಿ ಸುಗ್ರೀವನ ಸೈನಿಕರು!'

ಚಳಿಗೆ ಪಕ್ಕಕ್ಕೆ ಒರಗಿಕೊಂಡು, ಮಾಗಿಯ ಎಳೆಬಿಸಿಲನ್ನು ಕಾಯಿಸುತ್ತಿದ್ದ ನರೆತ ಗರಿಯವನು ರೆಪ್ಪೆಯನ್ನು ಬಿಚ್ಚಿ ದೀರ್ಘಕಾಲ ನೋಡಿದನು. ಪರಿಚಯವನ್ನು ತಿಳಿದರೂ ಉದಾಸೀನತೆಯನ್ನು ನಟಿಸುತ್ತ ತೊದಲು ನುಡಿ ನುಡಿವ ಮಗುವನ್ನು ನೋಡಿ ನುಡಿವ ಅಜ್ಜನಂತೆ ಹೀಗೆ ಹೇಳಿದನು:

'ಮಕ್ಕಳಿರ ನಾನು ರೆಕ್ಕೆಗಳುಹೋದ ಮುದುಕ. ಬನ್ನಿ ನನ್ನನ್ನು ಎತ್ತಿಕುಳ್ಳಿರಿಸಿ. ಕುಳಿತ ಮೇಲೆ ನಿಮಗೆ ಬೇಕಾದ್ದನ್ನು ಹೇಳುತ್ತೇನೆ.'

ಒಬ್ಬನಲ್ಲ, ಇಬ್ಬರಲ್ಲ, ಸೇನೆಗೆ ಸೇನೆಯೆ ಸೇರಿ ಕೈಗೆ ಕೈ ಸಹಾಯ ಮಾಡಿದರೂ, ಪಕ್ಷಿಯನ್ನಿರಲಿ ಅರೆಯ ಬಂಡೆ ಮೇಲೆ ಒರಗಿದ್ದ ನೀಳವಾದ ಅದರ ನೆರಳನ್ನು ಅಲುಗಾಡಿಸಲಾಗಲಿಲ್ಲ! ತನಗೆ ತಾನೆ ಎಂಬಂತೆ ಸಂಪಾತಿ ಗೊಣಗಿಕೊಂಡನು: 'ಏನು ಮೃತ್ಯುಹಸ್ತದ ಬೆರಳುಗಳೊ ಕಾಣೆ! ಶಿಥಿಲವಾಗಿ, ಗರಿಬಿದ್ದು ಮುಪ್ಪಾದ ಮೈಯನ್ನು ಅಲುಗಿಸಲಾರದೆಯೆ ಬರಿದೆ ತಿಣುಕುತ್ತಿವೆ!'

ಹಾಗೆ ತನಗೆ ತಾನು ಅಂದುಕೊಂಡದ್ದನ್ನು ಕೇಳಿ ವಾನರರೆಲ್ಲರ ತಲೆಬಾಗಿತು. ಖಗಭೀಮನನ್ನು ಕುರಿತು ಶರಗುಲ್ಮನು ಗೌರವದಿಂದ ಹೀಗೆ ಹೇಳಿದನು:

'ಹೇ ಖಗ ಮಹಾತ್ಮ, ನಮ್ಮಿಂದ ಅಪರಾಧವಾಗಿದ್ದರೆ ಕ್ಷಮಿಸು. ಪಕ್ಷಿರೂಪವನ್ನು ಪಡೆದ ರಾಕ್ಷಸನು ಎಂಬ ಸಂಶಯದಿಂದ ಹಾಗೆ ವರ್ತಿಸಿದೆವು. ನೀನು ಯಾರೊ ಸುರಸಜ್ಜನನು, ಧರ್ಮಸತ್ವನು ಆಗಿರುವೆ. ಧ್ವನಿಯೆ ನಿನ್ನ ಹೃದಯವನ್ನು ಪ್ರಕಟಪಡಿಸುತ್ತಿದೆ. ನೀನು ವೀರನಾದರೂ ದುಃಖಿಯಾಗಿ ತೋರುತ್ತಿರುವೆ. ನಿನಗೆ ಈ ರೀತಿ

ಚಲನರಹಿತವಾಗಿರುವ ಕಷ್ಟವು ಏನು? ಆ ದುಃಖವು ನಮ್ಮಿಂದ ಪರಿಹಾರವಾಗುವದಿದ್ದರೆ, ನಾವು ಮಾಡಬೇಕಾದ ಕೆಲಸವನ್ನು ತಿಳಿಸು. ನೀನು ಯಾರು? ಇದೇಕೆ ಇಲ್ಲಿ ಸೇರಿಕೊಂಡಿರುವೆ? ನೀನು ಆಗ ಏತಕ್ಕಾಗಿ ಚೀತ್ಕರಿಸಿದೆ? ಆ ಗೋಳು ದನಿಯನ್ನು ಕೇಳಿ ಮಹಾಸೇನಾನಿ ನೀಲನು ನನಗೆ ಆಜ್ಞಾಪಿಸಿ ಇಲ್ಲಿಗೆ ಕಳುಹಿಸಿದನು. ನನ್ನನ್ನು ಶರಗುಲ್ಮ ಎಂದು ಕರೆಯುವರು. ನಾನು ಬಿಂದುಮಾತ್ರನು. ಸಭೆ ಸೇರಿರುವ ಅಲ್ಲಿ ಕಪಿಧ್ವಜರ ಸಿಂಧುವಿದೆ.'

'ವಾನರ ಮೂರ್ತಿ ಶರಗುಲ್ಮನೇ ಕೇಳು.' ಎಂದು ವಿಹಗೇಂದ್ರನ ಧ್ವನಿ ಮಂದ್ರ ಮೃದಂಗದಂತೆ ಮೊಳಗಿತು. 'ಸಂಪಾತಿಯಾದ ನಾನು ಶ್ಯೇನಿ ಪುತ್ರನು. ಜಟಾಯು ನನಗೆ ತಮ್ಮ. ನಮ್ರತೆಯ ಮಾತು ಹಾಗಿರಲಿ. ನಿಜವನ್ನು ಹೇಳುತ್ತೇನೆ ಕೇಳಿ. ನಮಗೆ ಸರಿಸಮಾನರಾದ ವೀರರನ್ನು ಹದಿನಾಲ್ಕು ಲೋಕಗಳಲ್ಲಿ ಕಂಡಿರಲಿಲ್ಲ! ಬಾನಾಡಿಯಾದ ನಾನು ಒಂದು ಸಲ ಬೇಟೆಯ ಆಕರ್ಷಣೆಗೆ ಒಳಗಾಗಿ ಸಾಗರದ ಅನಂತತೆಯ ಮೇಲೆ ದೂರ ಅಂತರಿಕ್ಷದಲ್ಲಿದ್ದೆನು. ಆಗ ಸಪ್ತಯೋಜನದ ಸಮುದ್ರ ಸರ್ಪವನ್ನು ನೋಡಿದೆನು. ವಜ್ರಮುಖದಿಂದ, ವಜ್ರನಖದಿಂದ ರಭಸವಾಗಿ ವಜ್ರಪಾತದ ವೇಗದಿಂದ ಎರಗಿದೆನು. ಕಡಲು ಕಡೆದಂತೆ ಅಲ್ಲೋಲ ಕಲ್ಲೋಲವಾಗುತ್ತಿರಲು ಆ ಕಡಲ ಹಾವನ್ನು ಥಟ್ಟನೆ ಹಿಡಿದು ಎತ್ತಿ ನಭೋಮಂಡಲಕ್ಕೆ ಹಾರಿದೆನು.

'ಏನೆಂದು ಹೇಳಲಿ? ಆ ಮಹಾಸರ್ಪವು ಬೆಟ್ಟದಂತಹ ತಿಮಿಂಗಲವನ್ನು ಕಚ್ಚಿಕೊಂಡಿತ್ತು. ಮಂದರ ಪರ್ವತದೊಡನೆ ವಾಸುಕಿಯನ್ನು ತೆಗೆದುಕೊಂಡು ಹೋಗುವ ರೀತಿ ತಿಮಿಂಗಲ ಸಹಿತವಾದ ಸರ್ಪವನ್ನು ಹಿಡಿದು ಆಕಾಶಗಾಮಿಯಾಗಿ ಹಿಮಗಿರಿಗೆ ಹಾರುತ್ತಿದ್ದೆನು. ಆ ಭಯಂಕರ ದೃಶ್ಯವು ರಾಕ್ಷಸಾಕಾರವಾಗಿ ಜಗದ್ ಭಯಂಕರವಾಗಿತ್ತು! ಪಾಪಮಯ ಕರ್ಮ ಸಂಸ್ಕಾರವನ್ನು ಹೊತ್ತ ಭಾರಕ್ಕೆ ಸಿಡಿದು ಮಿಡಿದು ಜನ್ಮ ಜನ್ಮಾಂತರಲ್ಲಿ ಬೇಯುವ ಜೀವನ ಶತಮಾನ ಸೂತ್ರದಂತೆ ಆ ಸರ್ಪವು ನನ್ನ ಪಾದದ ಪ್ರಖರ ಉಗುರಿನ ಕಾಲ ಮುಷ್ಟಿಯ ಮೃತ್ಯು ವೇದನೆಗೆ ಸಿಲುಕಿ ನುಲಿಯಿತು. ಆದರೂ ಅಯ್ಯೋ ಅದು ಕತ್ತಲ ಆತ್ಮದಂತೆ ತಿಮಿಂಗಲದ ಸಂಗವನ್ನು ತೊರೆಯಲಿಲ್ಲ.

'ಹಾರಿಬರುತ್ತ ಭೂಮಿ ಕಾಣಿಸಿತು. ತಿಮಿಂಗಲದ ಭಾರಕ್ಕೆ, ನನ್ನ ಉಗುರಿನ ಹಿಂಸೆಗೆ ಕೋಪಗೊಂಡ ಉದ್ದವಾದ ಹಾವು ಮೀನನ್ನು ಕಡಿಯಿತು. ಆಗ ಮೀನಿನಿಂದ ಕಾರುವ ರಕ್ತದ ಎಂಜಲು ಗಿರಿವನಗಳಿಗೆ, ಪುರಗಳಿಗೆ, ಪುಣ್ಯಾಶ್ರಮಕ್ಕೆ ಬಿದ್ದು, ಕೊಲೆಯ ಹೊಲೆಯಾಗುತ್ತದೆ ಎಂದು ಶಂಕಿಸಿ ಮೇಲೆ ಮೇಲಕ್ಕೆ ಏರಿದೆನು. ಹಾರಿದೆನು. ಮೇಘದಾಚೆಯ ವಾಯುಭುವನವನ್ನು ಸೇರಿದೆನು. ದುರ್ವಿಧಿಯನ್ನು ಏನೆಂದು ಹೇಳಲಿ? ಮೋಡದಾಚೆಯ ನನಗೆ ಪೃಥ್ವಿ ಮರೆಯಾಯಿತು!'

ಕೇಳುತ್ತಿದ್ದವರಲ್ಲಿ ಒಬ್ಬನು ತನ್ನ ಕಲ್ಪನೆ ಕೆತ್ತಿದ ಚಿತ್ರವನ್ನು ಸವಿದುಂಡು ಹೀಗೆ ಹೇಳಿದನು:

'ನೀನು ಅದೇ ರೀತಿ ಕಾಣದಾದೆ! ಆ ಸರ್ಪ ಮತ್ತು ಅದು ನುಂಗಿದ ತಿಮಿಂಗಲ ಆಗಸವನ್ನು ಸೇರಿದವು! ನೆನೆಯಲು ಎಂತಹ ಅದ್ಭುತ ದೈತ್ಯ ದೃಶ್ಯ! ಆಹಾ ಘೋರ ರಮಣೀಯ! ಅಹೋದ್ಭುತ!'

ನಿನ್ನಿಂದಾಗುವ ಮಹತ್ಕಾರ್ಯದಿಂ ಸಿದ್ಧಿಪುದು ನಿನಗುಮಂತೆಯೆ ನಿಖಿಲ ಲೋಕಕ್ಕೆ ಕೇಳ್ ಶೋಕಮೋಕ್ಷಂ.

ಹಿಂದಿನದನ್ನು ಪುನಃ ನೆನೆದು ಅನುಭವಿಸುತ್ತಿದ್ದ ಸಂಪಾತಿಯು, ತುಸು ಹೊತ್ತು ಸುಮ್ಮನಿದ್ದು ಮತ್ತೆ ಮಾತನ್ನು ಹೀಗೆ ಮುಂದುವರಿಸಿದನು:

'ಆ ಕಾಲ ಒಂದಿತ್ತು. ಅದು ಮತ್ತೆ ಬರುವುದೇ? ಬರಿದೆ ನೆನೆದರೆ ಏನಾಗುವುದು? ನನ್ನ ಪತನಕ್ಕೆ ಅದೇ ಕಾರಣವಾಯಿತು. ಅದನ್ನು ಹೇಳುವೆ ಕೇಳು: ಋಷಿಮನೋವೇಗದಿಂದ ಆಕಾಶವನ್ನು ಸೀಳುತ್ತ, ರೆಕ್ಕೆಬೀಸುತ್ತ ಮೋಡಗಳನ್ನು ದಿಕ್ಕುದೆಸೆಗೆ ಅಟ್ಟಿದೆನು. ತಿರಿಗಾಳಿ, ಸುಳಿಗಾಳಿ, ಬೋರ್ಗ್ಗಾಳಿ ಬಿರುಗಾಳಿಗಳನ್ನು ಎಬ್ಬಿಸುತ್ತ, ದಿಗಂತವನ್ನೆಲ್ಲ ವ್ಯಾಪಿಸಿದ್ದ ನೆರಳಿನ ಹಿಡಿಯ ಚವರಿಯಿಂದ ಭೂಗೋಲದ ಭೂಮಿ ವಿಸ್ತೀರ್ಣವನ್ನು ಗುಡಿಸುತ್ತಾ ಸಾಗುತ್ತಿದ್ದೆನು. ಆ ಗಾಳಿಯ ಮಾರ್ಗದಲ್ಲಿ ಮುಗ್ಗುರಿಸಿದಂತಾಯಿತು. ತಟ್ಟನೆ ನಭಕ್ಕೆ ಎಸೆದು ಎತ್ತಿ ಬೀಸಿ ನೂಕಿದ ಅನುಭವವಾಯಿತು. ಮತ್ತು ಕೂಡಲೆ ಭಾರವು ತೊಲಗಿ ಕಾಲಿಗೆ ಹಗುರವಾಯಿತು! ಆಶ್ಚರ್ಯಪಡುತ್ತ ಮೇಲಕ್ಕೆ ಏರುತ್ತಿರಲು ತಕ್ಕನೆ ನನ್ನ ಅರಿವಿಗೆ ಹೀಗೆ ಹೊಳೆಯಿತು.

'ಮೋಕ್ಷವೆಂಬ ಹುಲಿಯು ತಾನು ಭಗವಂತನ ಕೃಪೆಯೆಂಬ ಉಗುರಿನಂತೆ–ಯುಗಯುಗಗಳಲ್ಲಿ ಬೆನ್ನುಹತ್ತಿ ರೋಗ ಸಂಕಟಮರಣ ವೈರಾಗ್ಯದ ಕೋರೆಹಲ್ಲಿನ ತನ್ನ ಉಗ್ರದಯೆಯಿಂದ ಮುಕ್ತಿಯನ್ನು ಬಯಸುವ ಜೀವಾತ್ಮನ ಪಾಪಕರ್ಮವು ಕಳಚಿ ಬೀಳುವಂತೆ ಹಿಡಿದು ಅಲ್ಲಾಡಿಸುತ್ತದೆ. ಕೇಳು, ಹಾಗೆ ನನ್ನ ಉಗುರಿನ ನಂಜಿಗೆ ಪ್ರಾಣಬಿಟ್ಟ ಉಗ್ರಸರ್ಪದ ಬಾಯಿಯ ಹಲ್ಲಿನ ಹಿಡಿತ ಸಡಿಲಗೊಂಡು ತಿಮಿಂಗಲವು ಭೂಮಿಗೆ ಬಿದ್ದಿತು. ಅದರ ಜೊತೆಗೆ ನನ್ನ ಕೀರ್ತಿಯ ಉನ್ನತ ಗೋಪುರವು ಕಳಚಿಬಿತ್ತು! ಆ ಕ್ಷಣವೆ ತಿಮಿಂಗಲವಿಲ್ಲದೆ, ಸರ್ಪಸಹಿತವಾಗಿ, ಮುಂಚಿನ ಹಲವು ಯೋಜನ ದೂರಕ್ಕೆ ಹಿಂದಿರುಗಿದೆನು. ಆ ನೆಲದಲ್ಲಿ ನೇರವಾಗಿ ಇಳಿದೆನು.

'ಏನಾಗಿರುವುದೆಂದು ಹೇಳುವೆನು ಕೇಳು. ಅಲ್ಲಿ ಮುನೀಶ್ವರ ನಿಶಾಕರನ ಆಶ್ರಮವು ನುರಿನುಗ್ಗಿ ಜರ್ಜರಿತವಾಗಿತ್ತು! ಆಶ್ರಮದ ಎಲ್ಲ ತಪೋಜನರು ಮರಣ ಹೊಂದಿದ್ದರು. ಹೊರಗೆ ಹೋಗಿದ್ದ ಋಷಿ ಬದುಕಿಕೊಂಡಿದ್ದನು. ಹಿಂತಿರುಗಿದ ಆತನ ಕಾಲು ಹಿಡಿದು

ಬೇಡಿಕೊಳ್ಳುತ್ತ ನಡೆದುದನ್ನು ಬಿನ್ನವಿಸಿಕೊಂಡೆನು. ಆ ತ್ಯಾಗಿಯು ನಿಟ್ಟುಸಿರುಬಿಟ್ಟನು. ಸಾಕಷ್ಟು ಹೊತ್ತು ಧ್ಯಾನಿಸಿದ ಅನಂತರ ನನಗೆ ಹೀಗೆ ಹೇಳಿದನು: 'ನಾನು ಶಪಿಸುವುದಿಲ್ಲ... ನಿನ್ನಿಂದ ಜಗತ್ತಿಗೆ ಕ್ಷೇಮಕರವಾಗುವ ಹಿರಿದಾದ ಮಹತ್ಕಾರ್ಯವಾಗಲಿದೆ... ಅದು ಆಗುತ್ತದೆ. ಆದರೂ ನಿನ್ನ ಕರ್ಮಕ್ಕೆ ತಕ್ಕ ಶಿಕ್ಷಾ ಫಲವು ನಿನಗೆ ತಪ್ಪುವುದಿಲ್ಲ. ನಿನಗೆ ಒಂದು ಮಹಾರೋಗ ಉಂಟಾಗುತ್ತದೆ. ನಿನಗೆ ಆ ಸಂಕಟವೇ ಪಾಪ ಪರಿಹಾರಕ್ಕೆ ಸಾಧನವಾಗುತ್ತದೆ. ನಿನ್ನಿಂದ ಕೊನೆಗೆ ಆಗುವ ಮಹತ್ಕಾರ್ಯದಿಂದ ನಿನಗೂ ಮತ್ತು ಅಖಿಲ ಲೋಕಕ್ಕೂ ಶೋಕದಿಂದ ಮೋಕ್ಷ ಸಿದ್ಧಿಸುತ್ತದೆ.' ಅದನ್ನು ಕೇಳಿ ವಂದಿಸಿದೆನು. ಕರ್ಮದಿಂದ ಬಿಡುಗಡೆಗೊಳ್ಳಲು ಧರ್ಮ ಕೈಂಕರ್ಯವನ್ನು ಕೈಗೊಳ್ಳುವಂತೆ ನಾನು ಅಂದಿನಿಂದ ಆ ಗುರುವಿಗೆ ಶಿಷ್ಯನಾದೆನು.

'ಹೀಗಿರಲು ಒಮ್ಮೆ ನಾನು ಮತ್ತು ಸಹೋದರ ಜಟಾಯುವು ವಿನೋದಕ್ಕಾಗಿ ಗಗನ ಸಂಚಾರಿಗಳಾಗಿ ಮಹಾತಾಪದ ಸೂರ್ಯಪಥವನ್ನು ಹೊಕ್ಕೆವು. ಕ್ರೀಡೆಯ ಉನ್ಮಾದದಿಂದ ಮೇಲೆ ಮೇಲೆ ಮೇಲಕ್ಕೇರುತಿರಲು ಏರುತ್ತಿರಲು, ತಕ್ಷಣ ಸೋದರನ ರೆಕ್ಕೆ ಸೀಯುತ್ತಿರುವುದನ್ನು ಕಂಡೆನು. ಅಯ್ಯಯ್ಯೊ, ಹಾರಿ ನನ್ನ ಮೈಯ ಗರಿಗಳನ್ನು ಗೋಡೆಯಾಗಿ ಮರೆಹಿಡಿದೆನು! ತುಪ್ಪಳವೆಲ್ಲ ಸೀದು ನೆಲಕ್ಕೆ ಕಲ್ಲು ಉರುಳುವಂತೆ ಉರುಳಿದೆನು. ನೀವು ನೋಡುವ ಇಲ್ಲಿ ಕೊನೆಗೆ ಪರ್ವತವು ನಡುಗುವಂತೆ ಬಿದ್ದೆನು. ಮುನಿಯ ಮಾತನ್ನು ನಂಬಿ ಶತಶತಮಾನಗಳಿಂದ ಕಾದಿದ್ದೇನೆ. ಮಗ ವಜ್ರನು ನನಗೆ ಆಹಾರವನ್ನು ತಂದುಕೊಡುವನು. ಅದರಿಂದ, ಮುಂದೆ ಬದುಕು ಇರುವುದೆಂಬ ಆಸೆಯಿಂದ ಬದುಕಿದ್ದೇನೆ.

'ನನಗೆ ಉದ್ಧಾರದ ಹಸ್ತ ಛಾಯಾ ಚಿಹ್ನೆಯು ಹತ್ತಿರದಲ್ಲೆಲ್ಲಿಯೂ ಕಾಣುತ್ತಿಲ್ಲ. ಸುಟ್ಟು ಸುಣ್ಣವಾಗಿದ್ದೇನೆ. ಬೆಂದ ಮುಪ್ಪಿಂದ ಹೇಗೆ ಮತ್ತು ಯಾವ ಮಹತ್ಕಾರ್ಯವಾಗುವುದೊ? ಅಯ್ಯೊ, ಕೃಪೆಯ ಹಾರೈಕೆಯಿಂದ ಹೀಗೆ ಇನ್ನೆಷ್ಟು ಯುಗವು ಕಾಯಬೇಕಾಗುವುದೊ? ಶಿವಾ, ಗುರುಹೇಳಿದ ಶೋಕ ಮೋಕ್ಷವು ಬಲಹೀನನಾದ ನನ್ನಿಂದ ಲೋಕಕ್ಕೆ ಹೇಗೆ ಒದಗುವುದೊ? ಕೇಳು, ಅದರಿಂದ ನನಗೆ ಒದಗುವ ಶೋಕ ಮುಕ್ತಿಯು ಮೊಲದ ಕೋಡಿನ ಸದೃಶವಾಗಿದೆ!'

ಎಂದು ಹೇಳಿ ನರಳಿ, ಆ ಪಕ್ಷಿವೃದ್ಧ ಮತ್ತೊಮ್ಮೆ ಕರುಳಿರಿಯುವಂತೆ ಚೀತ್ಕರಿಸಿದನು. ಅವನಿಗೆ ಶರಗುಲ್ಮ ವಾನರನು ಈ ರೀತಿ ಸಂತೈಸಿದನು:

ಶ್ರದ್ಧೆ ತಾಂ ಸಾಣೆಯಿರೆ, ತಾಳ್ಮೆಯೆ ತಪಂ.

'ಹೇ ವಿಹಂಗಮ ತಪಸ್ವಿಯೆ, ನಿರಾಶೆಯನ್ನು ಬಿಡು. ದೈವ ಕೃಪೆಗೆ ಈ ಸಂಕಟವು ರೆಕ್ಕೆಯಾಗುತ್ತದೆ! ಶಂಕೆ ಏಕೆ? ಋಷಿವಾಣಿಯು ಸುಳ್ಳಾಗುವುದೇ? ಬಲಹೀನನಿಂದ ಯಾವ ಮಹತ್ಕಾರ್ಯ ಸಿದ್ಧಿಸುವುದೆಂದು ಸಂದೇಹ ಪಡುವೆಯೆ?

'ಶಿವಕೃಪೆಗೆ ಹುಲ್ಲೇ ಖಡ್ಗ; ಹನಿ ಕಡಲು; ಕಿಡಿ ಸಿಡಿಲು! ಶ್ರದ್ಧೆ ತಾನು ಸಾಣೆಯಾಗಿರಲು, ತಾಳ್ಮೆಯೆ ತಪ. ಧರ್ಮ ಶಕ್ತಿಯು ಪ್ರಾಪ್ತವಾಗಲು, ಕಾಯುವವನೇ ಕೆಲಸಮಾಡಿಕೊಡುವನು. ಶಿಲ್ಪಿಯು ಕೈಯಿಟ್ಟರೆ ಆ ಕಾಣುತ್ತಿರುವ ಕಾಡುಗಲ್ಲಿನಿಂದ ಕಲಾಪ್ರತಿಮೆ ಮೂಡುವುದಿಲ್ಲವೆ? ಈಶ್ವರ ಕೃಪಾಸಾಗರವು ನಿಶ್ಯಬ್ದವಾದುದು. ಮುಂದೆ ಬರುವುದನ್ನು ಅರಿಯಲಾರೆವು. ಅದೇ ರೀತಿ ಮಹತ್ತಾದ ಕೃತಿಯು ಮಹಾಮೌನಿ. ನೀನು ತಿಳಿಯುವಷ್ಟರಲ್ಲಿ ನಿನ್ನಿಂದ, ನೀನು ಯೋಚಿಸದ ಮಹದ್ ಘಟನೆ ನಡೆಯಬಹುದು.'

'ವತ್ಸ, ನಿನ್ನ ರೂಪು ಕಣ್ಣಿಗೆ ಒರಟಾದರೇನು? ನಿನ್ನ ಜಾಣ ಮಾತು ಕಿವಿಗಂತೂ ಮಂತ್ರ ಮಧುರವಾಗಿದೆ! ನನ್ನ ಈ ಸಂಕಟವಾರ್ತೆ ಸಾಕು. ನಿಮ್ಮ ಕಥೆಯನ್ನು ಹೇಳಿ, ಆಲಿಸುವೆ.'

ಸಂಪಾತಿಯ ಆ ಮಾತಿಗೆ ಶರಗುಲ್ಮನು ಶೀಘ್ರವಾಗಿ ಮತ್ತು ಸಂಕ್ಷೇಪವಾಗಿ ರಾಮನ ವನವಾಸಿ ವಾರ್ತೆ, ಸೀತಾಪಹರಣ, ಸುಗ್ರೀವ ಸ್ನೇಹ ದಾರಿಯಲ್ಲಿ ನಡೆದ ಕಥೆ ಹೇಳಿದನು. ನಿರರ್ಥಕತೆ ಮತ್ತು ವಾನರ ಪ್ರಮುಖರನ್ನು ರಾಹುಬಾಹುಗಳಿಂದ ಬಿಗಿದಿರುವ ನಿರಾಶ ರಾಕ್ಷಸ ಪಿಶಾಚಿಗಳ ವೃತ್ತಾಂತವನ್ನು ತಿಳಿಸಿದನು.

ಸಂಪಾತಿಯು ತನ್ನ ತಮ್ಮನ ಮರಣವನ್ನು ಕೇಳುತ್ತ ದುಃಖಿಸಿದನು. ಹೋದ ಸಮಯವನ್ನು ಕುಕ್ಕಿ, ಬರುವ ಸಮಯವನ್ನು ಹೊಕ್ಕಿ ಸೀಳುವಂತೆ – ಬಾಲ್ಯ ಚಿತ್ರ ಸ್ಮೃತಿಯ ಶೋಕದಿಂದ ರೋಷ ನೇತ್ರವಾಗಿ ದಕ್ಷಿಣ ದಿಕ್ಕನ್ನು ದಹಿಸುವಂತೆ ನೋಡಿದನು. ಖಡ್ಗದಂತಹ ಕೊಕ್ಕಿನಿಂದ ರಕ್ಕಸನ ತಲೆಯನ್ನು ಕುಕ್ಕಿ ಜಜ್ಜಿ ಪುಡಿಯಾಗಿಸುವಂತೆ ತನ್ನೊಳಗೆ ತಾನು ಧ್ವನಿಭಯಂಕರನಾಗಿ ಹೀಗೆ ಆರ್ಭಟಿಸಿದನು:

'ಎಲೆವೊ ನಿಶಾಚರ ದಶಗ್ರೀವನೇ, ಗುರುಕೃಪಾ ಮಹಿಮೆಯಿಂದ ಹುಣ್ಣು ಮಾದು, ಬಲಬಂದು ಮತ್ತೊಮ್ಮೆ ನನ್ನ ಮೈಗೆ ಗರಿ ಮೂಡಿದರೆ ನಿನ್ನ ರಕ್ಕಸ ಮೈಯ್ಯ ನೆತ್ತರಿಂದ ನನ್ನ ತಮ್ಮನ ಆತ್ಮಕ್ಕೆ ತನಿಯೆರೆಯುವೆ. ಕೇಳು, ಈ ಮಹಾವಾನರನೇ ಸಾಕ್ಷಿಯಾಗಿ ಈ ಪ್ರತಿಜ್ಞೆ ಮಾಡಿರುವೆ!'

ಎಂದು ಹೇಳಿ ಶರಗುಲ್ಮನಿರುವ ಕಡೆ ಮುಖತಿರುಗಿಸಿ, ಮತ್ತೆ ತನ್ನ ಮನಸ್ಸಿನ ಭಾವವನ್ನು ಹೀಗೆ ಹೊರಹಾಕಿದನು:

ನೂರು ಯೋಜನದಾಚೆ ತೆಂಕಣದೊಳಿರ್ಪುದಾ ರಾಕ್ಷಸ ಕನಕ ಲಂಕೆ

'ಮಹಾವಾನರನೆ, ದೇವಿಯನ್ನು ಕದ್ದು ಹೊತ್ತುಕೊಂಡು ಹೋದವನು ಆ ನೀಚನೇ ಹೌದು! ನಿಜ, ಈಗ ತಿಳಿದೆನು. ನಾನು ಕಂಡದ್ದು ಅವನದೇ ರಥ ಪುಷ್ಪಕ. ಇಲ್ಲಿ ಮಧ್ಯಾಹ್ನ ಒಬ್ಬನೇ ಕುಳಿತಿದ್ದೆನು. ಕಿವಿಗೆ ಆಕ್ರಂದನ ಬಿದ್ದ ತಕ್ಷಣ ಕತ್ತೆತ್ತಿ ನೋಡಲು

ಒಂದು ವಾಯುಪಥ ಯಾತ್ರಿಯಾದ ಗಗನ ರಥವನ್ನು ಕಂಡೆನು. ದಕ್ಷಿಣ ದಿಕ್ಕಿನಲ್ಲಿ ನೂರು ಯೋಜನದಾಚೆ ರಾಕ್ಷಸನ ಕನಕ ಲಂಕೆಯಿದೆ. ಆ ದ್ವೀಪದ ಕೋಟೆಗೆ ಸಮುದ್ರವೇ ಕಂದಕವಾಗಿದೆ. ಸೀತಾದೇವಿ...'

ಓ ಏನಿದು! ಹಾಗೆ ಹೇಳಿದ ಸಂಪಾತಿಯನ್ನು ವಾನರ ಸಮೂಹವು ಅಚ್ಚರಿಗೊಂಡು ಕಣ್ಣು ಅರಳಿಸಿ ಮರವಟ್ಟಂತೆ ಗಮನವಿಟ್ಟು ನೋಡುತ್ತಿದೆ. ಗೂಬೆ ನವಿಲಾದಂತೆ, ವಿಕೃತಿಯಿಂದ ಸಂಸ್ಕೃತಿಯ ಚೆಲುವು ಮೈದೋರಿದಂತೆ, ಮಳೆಯ ಕಾಮನ ಬಿಲ್ಲುಗಳೇ ಮೈಗೆ ಗರಿಯಾಗಿ ಬಂದಂತೆ ಬಣ್ಣ ಬಣ್ಣದ ತುಪ್ಪುಳವು ಮೊಳೆತು ವಿಹಗೇಂದ್ರನ ಅಂಗವನ್ನು ತುಂಬಿದವು!

ನೋಡ ನೋಡುತ್ತಿದ್ದಂತೆ ಸಂಪಾತಿಯು ಶರೀರ ಸೌಷ್ಠವ್ಯದಿಂದ ಸರ್ವಾಂಗ ಸುಂದರನಾಗಿ ಕಂಗೊಳಿಸಿದನು. ಚಿನ್ನದ ಎಣ್ಣೆಯಿಂದ ಬಣ್ಣ ಬಳಿದಂತೆ ರೆಕ್ಕೆ ಗರಿಗಳು ಪ್ರಕಾಶಿಸಿದವು. ಮರಕತದ ಶಾದ್ವಲವೆನ್ನುವಂತೆ ನುಣ್ಣನೆಯ ಹಸುರಿನಿಂದ ಅದರ ಕಂಠ ಪ್ರದೇಶವು ಶೋಭಿಸಿತು. ಕಾದು ಕೆಂಪೇರಿದ ಕಡುಕಠಿಣ ಉಕ್ಕಿನಂತೆ ಅದರ ವಜ್ರಕೊಕ್ಕು ದೇದಿಪ್ಯಮಾನವಾಗಿ ಹೊಳೆಯಿತು. ಅದರ ಮೊನೆಯ ಉಗುರು ಭಯಂಕರವಾಗಿ ಮಿಂಚು ಬೇರುಗಳ ಸಿಡಿಲ ಮರದಂತಾಗಿ, ಪಾದಗಳೆರಡು ರುದ್ರ ಈಶ್ವರನಂತಾದವು. ಖಗ ಕುಲಾಗ್ರಣಿ ದೇವತಾತ್ಮ, ಮಹಾತ್ಮ ಆ ಭವ್ಯ ಸಂಪಾತಿಯು ಶಶಿಬಾಲ್ಯ ಸಂಶೋಭಿ ಫಾಲಾಕ್ಷನಂತೆ ತಪೋಮಯ ತೇಜದಿಂದ ಪ್ರಕಾಶಿಸಿದನು!

ತನ್ನ ಆ ನವ್ಯತೆಗೆ ತಾನೇ ಆಶ್ಚರ್ಯಗೊಳ್ಳುತ್ತ ಹಿಗ್ಗಿ, ಭಕ್ತಿಗೆ ಕೃತಜ್ಞತೆಗೆ ಕಂಚುಗೊರಳನ್ನು ಹೀಗೆ ಅರ್ಪಿಸಿದನು:

'ಏನು ಪುಣ್ಯವಿದೊ? ಶಿವಕೃಪೆಯಿಂದ ಪರಮಾಣುವು ಪರ್ವತವಾಗುವುದು ನಿಜ! ಇದೇ ಮಹತ್ಕಾರ್ಯವಲ್ಲವೆ? ನಿಜ; ದೇವಿಯನ್ನು, ಶ್ರೀ ರಾಮನ ಪತ್ನಿಯನ್ನು ಹುಡುಕುತ್ತಿರುವ ಈ ನಿಮಗೆ ರಾಕ್ಷಸನು ಇರುವ ದಾರಿಯನ್ನು ತೋರಿಸಿದೆನು. ಇದೇ ನಿಜವಾಗಿ ಲೋಕ ಕಲ್ಯಾಣಕರ. ಶೋಕ ಮೋಕ್ಷದ ಪುಣ್ಯಕೃತಿಯಾಗಿದೆ ನನಗೆ! ಬನ್ನಿ, ಹೋಗೋಣ ಆ ಸಭೆಗೆ. ಹನುಮ, ಜಾಂಬವ, ನೀಲ, ವಾಲಿಸುತ ಅಂಗದನೇ ಮೊದಲಾದ ಮಹಾಮಿತ್ರರು ಇರುವಲ್ಲಿಗೆ ಹೋಗೋಣ!'

ಶರಗುಲ್ಮನನ್ನು ಕಳುಹಿಸಿದ ಕಪಿಗೋಷ್ಠಿಯು ಉದ್ವೇಗದಿಂದ ಕಾಯುತ್ತಿತ್ತು. ಮಂಜು ಕರಗಿದ ಮಾಗಿಯ ಎಳೆ ಬಿಸಿಲಲ್ಲಿ ಸಂಪಾತಿಯು ಹೊನ್ನು ಹವಳವೊ ಪಚ್ಚೆ ನೀಲಿಯೊ ಮತ್ತು ಹಳದಿಗಳೊ ಎಂಬ ಸಪ್ತ ವರ್ಣದಲ್ಲಿ ಕಾಮನಬಿಲ್ಲಿನಂತಹ ಗರಿಗಳ ಶರೀರದವನಾಗಿ ವಾನರ ಪ್ರಮುಖರೊಡಗೂಡಿ, ಮಿರುಮಿರುಗಿ ಬರುತ್ತಿದ್ದನು. ಆ ಗರಿ ಮೈಯವನನ್ನು ಕಂಡು ಮಂಗಳದ ಶಕುನವೆಂದು ಸಭೆ ಸಂತೋಷ ಪಟ್ಟಿತು. ಗಾಡಿಯ ಚಕ್ರದ ಅಂಚಿನಂತೆ ಸೇರಿದ್ದ ಸಭಾ ಚಕ್ರಕ್ಕೆ ಅತಿಥಿಯಾದ ಸಂಪಾತಿ

ಕೇಂದ್ರವಾದನು. ಆಗ ಜನರು ಸುತ್ತಲಿಂದ ಗುಂಪು ಗೂಡುತ್ತ ನುಗ್ಗಿ ಬರಲು ಅದು ದಟ್ಟವಾಯಿತು.

ಖಗಕುಲ ಕಿರೀಟಿಯು ಆದೇಶವನ್ನು ಕುತೂಹಲಕ್ಕೆ ಕೇಳಿದವರು ರೋಮಾಂಚನಗೊಂಡರು. ಅವನು ತಾನು ತಿಳಿದದ್ದನ್ನೆಲ್ಲ ಹೇಳಿದನು. ಗುರು ನಿಶಾಕರ ಮುನಿಯ ದುರ್ಮರಣ ವಾರ್ತೆಯನ್ನು ಕೇಳಿ ಅತ್ಯಂತ ಚಿಂತಾಕ್ರಾಂತನಾದನು. ಮುಂದೆ ರಾವಣನಿಗೆ ಎದುರಾಗಿ, ರಾಮನಿಗೆ ನೆರವಾಗಿ ನಿಲ್ಲುವೆನೆಂಬ ಆಶ್ವಾಸನೆಯನ್ನು ಘೋಷಿಸಿದನು. ಗುರುವಿಗೆ ತನ್ನ ತಮ್ಮನಿಗೆ ತಿಲತರ್ಪಣ ನೀಡಲು ಮತ್ತು ಬಹುದಿನಗಳ ಅನಂತರ ಬಂಧುವರ್ಗವನ್ನು ಕಾಣಲು ಅವರೆಲ್ಲರಿಗೂ ವಂದಿಸಿ ಬೀಳ್ಕೊಂಡನು. ಗರಿ ಮಿಂಚುತ್ತಿರಲು ರೆಕ್ಕೆಗಳನ್ನು ಕೆದರಿ ಅಂತರಿಕ್ಷಕ್ಕೆ ಹಾರಿದನು. ವಾನರ ಸೈನ್ಯವು ಅವನ ಕೀರ್ತಿಗೆ ಕೃತಜ್ಞತೆಗೆ ಹಿಗ್ಗಿ ಕೊರಳೆತ್ತಿ ಕೈ ಬೀಸಿ ಕೊಂಡಾಡುತ್ತ ಘೇ ಉಘೇ ಎಂದಿತು. ಆ ಧ್ವನಿಗೆ ಕಲ್ಲು ಭೂಮಿ ಮರಗಳಿಂದ ಆವೃತವಾದ ಬೆಟ್ಟವು ನೀರಿನಂತೆ ಅಲೆಗಳನ್ನುಂಟುಮಾಡಿ ಪ್ರತಿಧ್ವನಿಸಿದವು! ಜನರ ಅಂತರಂಗವನ್ನು, ವನದ ಸುಂದರ ಪ್ರದೇಶವನ್ನು ಸ್ತುತಿಸುವಂತೆ ನವೀನ ಆಶಾಕಾಂತಿ ಕಿರಣಗಳು ನರ್ತಿಸಿದವು. ಆಪತ್ತು ತೊಲಗಿತು. ಕಪಿಕೇತನರ ಚೇತನದ ಶರಧಿಸಂಪತ್ತು ಮಧ್ಯಾಹ್ನಕ್ಕೂ ಮೊದಲಿನ ಸಭೆಯಲ್ಲಿ ಮತ್ತೆ ಮಂತ್ರಾಲೋಚನೆಗಾಗಿ ನೆರೆಯಿತು. ಸಿಂಹವಿಕ್ರಮಿಗಳನ್ನುದ್ದೇಶಿಸಿ ಯುವರಾಜ ಅಂಗದನ ಅಧ್ಯಕ್ಷತೆಯ ಕಂಠೀರವವು ಹೀಗೆ ಘೋಷಿಸಿತು:

ತವಿದುದೆಮ್ಮಯ ಜನಕೆ ಕವಿದಿರ್ದ ಪಳಿಮುಗಿಲ್.

'ಪ್ಲವಂಗ ಲಾಂಛನ ಪತಾಕೆಯ ಪೂರ್ಣಿಮಾ ಚಂದ್ರರಿರ, ನಮಗೆ, ಯಶಸ್ಸಿಗೆ ಕವಿದಿದ್ದ ದೂಷಣೆಯ ಮುಗಿಲು ಸರಿಯಿತು. ಪುಣ್ಯವಶದಿಂದ ಸಂಪಾತಿಯ ಸಂದರ್ಶನವಾಯಿತು. ಆ ವಿಹಗೇಂದ್ರನ ಸಂದೇಶವನ್ನು ತಾವೆಲ್ಲ ಕೇಳಿರುವಿರಿ. ನೂರು ಯೋಜನದ ಆಚೆ ಲಂಕೆ ರಾಕ್ಷಸ ದ್ವೀಪವಿದೆ. ಅದಕ್ಕೆ ಡಾಬಿನಂತೆ ಸಮುದ್ರವಿದೆ. ದುಷ್ಟ ದಶಗ್ರೀವನು ಸೂರ್ಯಕುಲ ರಾಮಚಂದ್ರನ ಕಾಂತೆಯನ್ನು ಅಲ್ಲಿ ಬಚ್ಚಿಟ್ಟಿರುವನು.

'ಅದೋ ನೋಡಿ, ಶರಧಿಯು ಕರೆಯುತ್ತಿದೆ, ವಾನರ ಆ ಚಂದ್ರಾರ್ಕ ಕೀರ್ತಿಕರ ಸಾಹಸಕ್ಕೆ ವಿಧಿ ಸೃಷ್ಟಿಸಿರುವ ನೀರಿನ ಗರಡಿ! ಅದನ್ನು ಲಂಘಿಸುವವರು ಯಾರು? ತಮ್ಮ ಹೆಸರಿಗೆ ಲೋಕ ಪೂಜೆಯ ಮಂಗಳಾರತಿಯನ್ನು ಬೆಳ್ಗೊಡೆಯನ್ನಾಗಿಸಿಕೊಂಡು ಗೌರವ ಪಡೆಯುವವರು ಯಾರು ಹೇಳಿ, ಬನ್ನಿ. ನಾವೆಲ್ಲರು ಮರಳಿ ಕಿಷ್ಕಿಂಧೆಯನ್ನು ಹೊಕ್ಕು, ಹೆಂಡತಿ ಮಕ್ಕಳನ್ನು ನೆಂಟರಿಷ್ಟರನ್ನು ಕಾಣುವಂತೆ ಮಾಡುವ ಪುಣ್ಯಾತ್ಮರು ಯಾರಿರುವರು ಇಲ್ಲಿ, ಮೇಲೇಳಿ, ಬನ್ನಿ. ರಾಮನ ವಿರಹ ತಾಪವನ್ನು ದೇವಿ ಸೀತೆಯ ಹರ್ಷಬಾಷ್ಪದಿಂದ ನಂದಿಸುವ, ರಸ ಸುಂದರ ಕೃತಿ ರಚಿಸಿ – ಮಹಾ ಕಾವ್ಯದ ಜಗತ್ ಕವಿಯ ಪಟ್ಟ ಮಹಿಮೆಗೆ ಮುಡುಪಾಗುವವರು ಯಾರು ಹೇಳಿ, ಬನ್ನಿ.'

'ಓ, ಸುಗ್ರೀವಾಜ್ಞೆಯ ಕಿರೀಟಭಾರಕ್ಕೆ ಬಾಗಿ ನೆಲ ದಿಟ್ಟಿಸಿ ನೋಡುತ್ತ ಬಗ್ಗಿರುವಿರೇಕೆ? ದಾಟಲಾರದ ಸಮುದ್ರವನ್ನು ಲಂಘಿಸಲು ಬಾನಿನ ನೆಲಕ್ಕೆ ತಲೆಯೆತ್ತಿ ನಿಲ್ಲಿ, ಏಳಿ! ಈ ಮಹಾಸಭೆಯ ಸನ್ನಿಧಿಗೆ ಯಾರು ಎಷ್ಟು ದೂರ ಹಾರಲು ಸಮರ್ಥರು ಎಂಬುದನ್ನು ಹೇಳಿ.'

ಅಂಗದನ ಆ ನುಡಿಗಳನ್ನು ಕೇಳಿ ಯಾರೊಬ್ಬರೂ ಏನೊಂದನ್ನೂ ಹೇಳಲಿಲ್ಲ. ಅವರೆಲ್ಲ ಕೊರೆದು ಮೂಡಿಸಿದ ವಿಗ್ರಹಗಳಂತೆ ನಿಶ್ಚಲವಾಗಿದ್ದರು. ಒಂದು ಕ್ಷಣ ಎರಡಾಯಿತು! ಮತ್ತೆ ಮೂರನೆಯ ಕ್ಷಣವು ದೀರ್ಘಯುಗದಂತೆ ಆಯಾಸವನ್ನುಂಟು ಮಾಡಿತು. ಛೀಃ ಛೀಃ ಛೀಃ ಎಂದು ನಿಂದಿಸಿದ ಮೌನದ ಚಾವಟಿಯ ಏಟಿಗೆಂಬಂತೆ ಗೋಷ್ಠಿ ಗುಜು ಗುಜಿಸ ತೊಡಗಿತು. ದಿಗ್ಗಜ ಸಮಾನನಾದ ದ್ವಂದ್ವಯುದ್ಧ ಪರಾಕ್ರಮಿ ಗಜನು ಧಿಗ್ಗನೆ ಎದ್ದನು. ಆ ಸಭೆಯು ಆಗ ಮಾನರಕ್ಷಣೆಯಾಯಿತೆಂಬ ತೃಪ್ತಿಗೆ ನಿಟ್ಟುಸಿರು ಬಿಟ್ಟಿತು.

'ನಗದಿರಿ. ನನಗೆ ಲಂಘನ ಶಕ್ತಿ ಅಲ್ಪವಾದರೂ ಇಲ್ಲಿ ನೆರೆದಿರುವ ಹಿರಿಯರು ಮಾತನಾಡಲೆಂದು ಒಂದು ಪೀಠಿಕೆಯನ್ನು ಹೇಳುತ್ತೇನೆ. ನಾನು ಹತ್ತು ಯೋಜನದೂರ ದಾಟಲು ಶಕ್ತನಾಗಿದ್ದೇನೆ!'

ಎಂದು ಹೇಳಿ ಅವನು ಅನಿರೀಕ್ಷಿತವೆನ್ನುವಂತೆ ಕುಳಿತುಕೊಂಡನು. ಆ ಬಳಿಕ ಹಿಂದಿನಿಂದ ಒಬ್ಬ ವೀರನು ತಾನು ಹಾರುವ ಉದ್ದವನ್ನು ಹೇಳಲು ಮೇಲೆದ್ದನು. ಗವಯನು ಇಪ್ಪತ್ತು ಯೋಜನ ಎಂದು ಹೇಳಿದನು. ಗವಾಕ್ಷನು ನಲವತ್ತು ಎಂದು ತಿಳಿಸಿದನು. ಅದೇ ರೀತಿ ಗಂಧಮಾದನನು ಐವತ್ತು ಎಂದು ಹೇಳಲು, ಮೈಂದನು ಅರವತ್ತು ಎಂದನು. ಮುದುಕ ಜಾಂಬವನು ಎಂಬತ್ತು ಎಂದು ಹೇಳಿದನು. ಕಡೆಗೆ ವಾಲಿಸುತ ಅಂಗದನು ಹೀಗೆ ನುಡಿದನು:

'ಜಾಂಬವನ ಸಾಮರ್ಥ್ಯವನ್ನು ಮತ್ತು ವಿನಯವನ್ನು ಕೇಳಿದಿರಿ. ಅವನು ಹಿಂದೆ ಯೌವನದಲ್ಲಿದ್ದಾಗ, ನನ್ನ ತಂದೆಯೇ ನಾಚಿ ತಲೆದೂಗುವಂತೆ ಲಂಘಿಸುತ್ತಿದ್ದನೆಂಬುದನ್ನು ನಾನು ನನ್ನ ತಂದೆಯಿಂದ ಕೇಳಿದ್ದೆನು. ಸಮುದ್ರಗಳು ಕೆರೆಗೆ ಸಮನೆಂದು ನೆಗೆದ ಅವನು ಈ ಹೊತ್ತು ಮುಪ್ಪಿನಿಂದ ಕುಗ್ಗಿ ನುಡಿದುದನ್ನು ಕೇಳಿ, ನನ್ನ ತಾರುಣ್ಯ ಗರ್ವ ಹೆಡೆ ಎತ್ತಿದೆ.

'ನನಗೆ ನನ್ನ ತಂದೆಯು ನೀಡಿದ್ದ ಮಾಂತ್ರಿಕ ಶಕ್ತಿಯು ನಿಶಾಕರ ಮುನಿಯ ಹತ್ಯೆಯಿಂದ ತುಂಡಾಗಿ ಹೋಗಿದೆ. ಕೇಳಿ, ಆದರೂ ನನಗೆ ನೂರು ಯೋಜನದ ಶರಧಿಯನ್ನು ದಾಟಲು ಬಲವಿರುವುದು. ಹಿಂದಿರುಗಿ ಬರಲು ಬೇಕಾದ ಸತ್ತ್ವದ ಬಗ್ಗೆ ಸಂಶಯವಿದೆ.'

ಎಂದು ತಿಳಿಸಿದ ಕುಮಾರನ ನುಡಿಯನ್ನು ಜಾಂಬವನು ಎದ್ದು ತಡೆಯುತ್ತ ಹೇಳಿದನು:

'ವಾಲಿಸುತನೇ, ನಿನ್ನ ಸತ್ತ್ವದ ಶಕ್ತಿಯನ್ನು ನಾನು ಬಲ್ಲೆನು. ಸಾಗರವನ್ನು ದಾಟಿ ಹಿಂತಿರುಗಲು ನೀನು ಸಮರ್ಥನು ಎಂಬುದು ನಿಜ. ಶಂಕೆಯನ್ನು ವ್ಯಕ್ತಪಡಿಸಿದ್ದು ನೀನು ವಿನಯಕ್ಕೆ ನೀಡಿದ ಕಾಣಿಕೆಯಾಗಿದೆ! ಕೇಳು, ಆದರೂ ನೀನು ಹೋಗಲಾಗದು; ಅದು ವಿವೇಕವಲ್ಲ. ಸ್ವಾಮಿಯನ್ನು ಮುಂದೆ ಕಳುಹಿಸಿ, ಸೇವಕರು ಹಿಂದೆ ಉಳಿದರೆ, ಕೇಡುಂಟಾದರೆ ಕಾರ್ಯನಾಶವಾಗಿ ಸರ್ವನಾಶವಾಗುವುದು. ಅದು ನಿಜವಾಗಿ ಅಪಕೀರ್ತಿ. ಬೇರು ಇರುವ ಮರಕ್ಕೆ ಇಂದೊ ನಾಳೆಯೊ ಫಲ ಉಂಟಾಗುವುದು. ಬೇರು ಕಡಿದರೆ ಏನುಂಟು? ಚಿತೆಗೆ ಇಂಧನ! ನಿನ್ನನ್ನು ಕಳುಹಿಸಿದರೆ ನಮಗೆ ಅದೇ ಗತಿ ಯಾಗುವುದು.'

ವಾಲಿಯ ಮಗನು ಕೈ ಮುಗಿದು ಗೌರವವನ್ನು ತೋರಿಸುತ್ತ ವೃದ್ಧವೀರ ಜಾಂಬವಂತನಿಗೆ ಹೀಗೆ ಹೇಳಿದನು:

'ಪೂಜ್ಯನೇ, ಬೇರೆ ದಾರಿಯನ್ನು ನಾನು ಕಾಣೆನು. ಸುಖದಲ್ಲಿ ಯಾರು ಮುಖ್ಯ ಪಾತ್ರನೊ ಅವನೇ ಕಷ್ಟದೊಳಗೂ ಪ್ರಮುಖ ಭಾಗಿಯಾಗುವುದು ಯಾವಾಗಲೂ ವೀರನ ಲಕ್ಷಣ. ಸಾಹಸದಲ್ಲಿ ಗೌರವದಲ್ಲಿ ಅಗ್ರ ಗಣ್ಯನಾದವನಿಗೆ ಸಾಹಸದ ಅಗ್ರೇಸರತೆಯಲ್ಲಿ ಮೊದಲ ಪಾಳಿ. ನಾನು ಮುಂದಿದ್ದು ಬೇರೆ ವೀರರು ಯಾರೂ ಸಾಹಸಕ್ಕೆ ಪ್ರಯತ್ನಿಸದಿದ್ದರೆ ನನಗೆ ಪ್ರಾಯೋಪವೇಶವಲ್ಲದೆ ಬೇರೆ ಸದ್ಗತಿಯು ಕಾಣುತ್ತಿಲ್ಲ. ನೀನು ಹಿರಿಯಜ್ಜನಾಗಿದ್ದು ನಾನು ಮಾಡಬೇಕಾದ ಕರ್ತವ್ಯವನ್ನು ತಿಳಿಸು. ನಿನ್ನ ಒಳ್ಳೆಯ ಬುದ್ಧಿ ಮಾತು ನನಗೆ ರಾಮನ ಆಶೀರ್ವಾದ ಹಾಗೂ ಸುಗ್ರೀವಾಜ್ಞೆ!'

ಜಾಂಬವನು ಸ್ವಲ್ಪಹೊತ್ತು ಚಿಂತಿಸಿದ ಅನಂತರ, ಸುಮ್ಮನಿದ್ದ ನೀಲನ ಇಂಗಿತವನ್ನು ಅರಿತು, ನಳನ ಕಣ್ಣಸನ್ನೆ ತಿಳಿದು ವಾಲಿಯ ಪುತ್ರನನ್ನು ಹೀಗೆ ಸಂತೈಸಿದನು.

'ಇಲ್ಲಿ ಓರ್ವ ಲಂಘನ ಸಮರ್ಥನಿರುವುದನ್ನು ತೋರಿಸುತ್ತೇನೆ. ಬೇರೆಯವರಿಂದ ಉತ್ತೇಜನಗೊಳ್ಳದೆ ನಿಜ ಮಹಿಮೆಯು ತನ್ನನ್ನು ತಾನು ಅರಿಯದು. ನೋಡಲ್ಲಿ: ನಸು ದೂರದಲ್ಲಿ ಏಕಾಂಗಿಯಾಗಿ ಬಂಡೆಯ ಮೇಲೆ ದಿವ್ಯ ತೇಜಸ್ವಿ ವಾಯುಸುತ ಆಂಜನೇಯನು ಕಡಲ ಕಡೆಗೆ ಕಣ್ಣಾಗಿ, ಆ ಕಡಲನ್ನೇ ಕಣ್ಣಿನಿಂದ ಅಳೆಯುತ್ತ ಕುಳಿತಿದ್ದಾನೆ.'

ಆಂಜನೇಯನು ತನ್ನ ಕಲಿತನಕ್ಕೆ, ಜಲಕಲಿ ಸಮುದ್ರನ ವಿಸ್ತೀರ್ಣ ಶೌರ್ಯವನ್ನು ತೋಳ್ತೂಗಿ ನೋಡುವಂತೆ ಆ ಕಡೆ ಕಣ್ಣನ್ನು ಬೆಸೆಸಿದ್ದನು. ಜಾಂಬವಂತನು ಕಲ್ಲಾಗಿ ಪ್ರತಿಮೆಯಂತಿದ್ದವನ ಬಳಿಗೆ ಹೋದನು. ಶಿಲಾಶಿಲ್ಪಿಯು ಕಲಾಕೃತಿಗೆ ದೇವತೆಯನ್ನು ಆಹ್ವಾನಿಸಿ ಪ್ರಾಣಪ್ರತಿಷ್ಠೆ ಮಾಡುವ ಸಾಧಕನಂತೆ ಸದೃಢ ಬುದ್ಧಿ ಹಾಗೂ ಶ್ರದ್ಧೆಯಿಂದ ಪವನ ಪುತ್ರನನ್ನುದ್ದೇಶಿ ಆವೇಶ ಭರಿತನಾಗಿ ಹೀಗೆ ಹೇಳಿದನು:

'ಓ ಕಪಿಧ್ವಜ ದೇವತಾ ಕೀರ್ತಿಮೂರ್ತಿಯೆ, ಕಲ್ಲಿನಂತೇಕೆ ಕುಳಿತಿರುವೆ? ನಿನ್ನ ಭವನದ ಗೌರವ ಗೋಪುರದ ಅಮೃತ ಶುಭ್ರ ಕಲಶ ಪ್ರಕಾಶಕ್ಕೆ ಅಪಯಶಸ್ಸಿನ ಕಿಲುಬು ಹತ್ತಿದೆ. ಕಾರ್ಯಭಾರದಿಂದ ನಿನ್ನ ಗೆಳೆಯರು ಏದುಸಿರು ಬಿಡುತ್ತಿದ್ದಾರೆ! ನೀನು ವಾಯುಪುತ್ರ, ಜಗತ್ತಿನ ಪ್ರಾಣಸಂಭವ. ವಾಯುದೇವನ ವರದ ಕೃಪೆಯಿಂದ ಅಂಜನಾ ದೇವಿಯ ಪುತ್ರನಾಗಿ ಹುಟ್ಟಿರುವೆ. ನೀನು ಜನ್ಮತ: ಅಲೌಕಿಕ. ಅಭ್ಯಾಸದಿಂದ ಯೋಗಿ.

'ಹನುಮಂತ ದೇವನೇ, ತಪಸ್ಸಿನಿಂದ ಮತ್ತು ಬ್ರಹ್ಮಚರ್ಯದ ಮಹಿಮೆಯಿಂದ ಅಷ್ಟಸಿದ್ಧಿಗಳು ನಿನ್ನ ಕೈವಶವಾಗಿವೆ. ನೀನು ಧ್ಯಾನದಿಂದ ಇಚ್ಛಿಸಿದರೆ ಯಾವುದು ತಾನೆ ಸಾಧ್ಯವಾಗುವುದಿಲ್ಲ? ನಿನಗೆ ಮತ್ತು ನಿನ್ನಂಥವರಿಗೆ ಸೃಷ್ಟಿಯೆನ್ನುವುದು ದೃಷ್ಟಿಯ ಸೂತ್ರದಿಂದ ಜನಿಸುವುದು ಅಲ್ಲವೆ?

'ಯೋಗಫಲವನ್ನು ಲೌಕಿಕ ಉಪಯೋಗಕ್ಕೆ ಬಳಸಬಾರದೆಂಬ ನಿನ್ನ ನಿಷ್ಠೆ ನನಗೆ ತಿಳಿದಿದೆ. ಆದರೆ, ಹೇಳು. ನಮ್ಮೆಲ್ಲರ ಬಾಳಿಗೆ ಒಳಿತನ್ನು ತರುವ ಈ ಕಾರ್ಯ ಅಲ್ಪವಾದುದೆ? ಪ್ರೇಮವನ್ನು ಕಾಮದಿಂದ ಉದ್ಧರಿಸಿ ಬಾಳಿಗೆ ಬಾಳನ್ನು ಬೆಸೆಯುವುದಕ್ಕಾಗಿ, ಈ ಹಿರಿದಾದ ಕಡಲನ್ನು ದಾಟುವ ಪುಣ್ಯ ಯುಗಗಳಿಗೊಮ್ಮೆ ಮಾತ್ರ ದೊರೆಯುವುದು ದುರ್ಲಭವೆಂಬುದು ನಿಜ. ಯೋಗವನ್ನು ಧರ್ಮಸಾಧನೆಗೆ ವಿನಿಯೋಗಿಸಿದರೆ ಅದು ಮೈಲಿಗೆಯಾಗುತ್ತದೆಯೆ? ಧರ್ಮವೇ ದೇವರು ಎನ್ನುವುದು ಸರಿಯಾದ ವಿವೇಚನೆ.

'ಮಹಾಯೋಗಿಯೇ ಏಳು. ನಿಸ್ವಾರ್ಥಕಾರ್ಯಕ್ಕಾಗಿ ನಿನ್ನ ಸಿದ್ಧಿಯನ್ನು ಇಲ್ಲಿ ನೈವೇದ್ಯಮಾಡಿ, ಪರಮಸಿದ್ಧಿಯನ್ನು ಪಡೆ. ರಾಮನು ತನ್ನ ಮುದ್ರೆ ಉಂಗುರವನ್ನು ನಿನಗಲ್ಲದೆ ಬೇರೆಯವರಿಗೆ ಕೊಟ್ಟನೆ? 'ಮುದುಕನಾದ ನಾನು ನಿನ್ನ ಮುಖಸ್ತುತಿ ಮಾಡುತ್ತಿಲ್ಲ. ನಾನು ನನ್ನ ಬದುಕಿನಲ್ಲಿ ನಿನಗೆ ಸಮಾನರಾದವರನ್ನು ಕಂಡಿಲ್ಲ. ಈ ಸಮುದ್ರವನ್ನು ಹಾರು. ದೇವಿಯನ್ನು ಹುಡುಕಿ ಬಾ. ನಮಗೆ ಪುಣ್ಯವಾರ್ತೆಯನ್ನು, ಬಾಳನ್ನು ತಂದುಕೊಂಡು.'

ವಿರಾಡ್ ವೈಭವದ ಗೌರವದ ಯೌಗಿಕಶ್ರೀ

ಮರುತ್ಸುತನು ಅಂತರ್ಮುಖಿಯಾಗಿ ಜಾಂಬವಂತನ ಮಾತನ್ನು ಕೇಳಿದನು. ಮನಸ್ಸಿನಲ್ಲಿಯೆ ಸಾಗರೋಲ್ಲಂಘನಕ್ಕೆ ನಿಶ್ಚಯಿಸಿದನು. ಯೋಗಿಯಾದ ಅವನು ಪೂರಕ, ರೇಚಕ ಮತ್ತು ಕುಂಭಕಗಳ ಪ್ರಾಣ ಮೂಲದಿಂದ ಕುಂಡಲಿನಿಯನ್ನು ಎಚ್ಚರಿಸಿದನು. ಸುಷುಮ್ನೆಯಿಂದ ಸಹಸ್ರಾರಕ್ಕೇರಿದನು. ಅಲ್ಲಿ ಇಂದ್ರಿಯಗಳು ಗೌರವಿಸುವ ಜಡ ಜಗನ್ಮಾಯೆಯನ್ನು, ಭೌತಸೃಷ್ಟಿಯ ಮಹಾನಿಯಮಗಳನ್ನು ಮೀರಿದನು ಸಂಕಲ್ಪಚಿತ್‌ನಿಂದ ತಮ್ಮ ಧ್ವಜದಲ್ಲಿರುವ ಕುಲದ ಚಿಹ್ನೆ ಕಪಿಗಾತ್ರನಾದನು.

ವಾನರ ಸೈನ್ಯ ಆ ಗಾರುಡಿಯನ್ನು ನೋಡನೋಡುತ್ತಿದ್ದಂತೆ ವಾಯುಪುತ್ರನ ಶರೀರವು ಉಸಿರಿನ ದೀರ್ಘ ಏರು ಇಳುವಿನಿಂದ ಕಂಪಿಸಿತು. ರೋಮಾಂಚನಗೊಂಡಂತೆ ಮುಖ ತೇಜಸ್ಸಿನಿಂದ ತುಳುಕಿತು. ಹಿನ್ನೆಲೆಯಲ್ಲಿ ಫಾಲ್ಗುಣದ ಉದಯರವಿಯ ಸುವರ್ಣ ಕುಂಕುಮ ಕಾಂತಿಯ ಪ್ರಭಾವಳಿ ಸೃಷ್ಟಿಗೊಂಡಿತು. ನೀರು ವಿದ್ಯುತ್ತಿನ ಸಂಪರ್ಕದಿಂದ ಅನಿಲ ರೂಪವನ್ನು ಪಡೆಯುವಂತೆ ಆಂಜನೇಯನು ನರಾಕೃತಿಯನ್ನು ವಿಸರ್ಜಿಸಿ ನಿರಾಕಾರನಾದನು.

ಆಗ ಬೆಳಕಿನ ತುಂತುರೋ; ಚಂದ್ರ ನಕ್ಷತ್ರ ನೀಹಾರಿಕೆಗಳ ಧೂಳಿನಿಂದಾದ ಅಗ್ನಿ ಮಂಡಲವೋ; ಅಥವಾ (ಆಂಜನೇಯಾತ್ಮ ವೈಭವಶ್ರೀದ್ಯುತಿ) ಆಂಜನೇಯನ ಆತ್ಮ ವೈಭವದ ಮಂಗಳ ಕಾಂತಿಯೋ ಎಂಬಂತೆ ಹೊಳೆಹೊಳೆಯುತ್ತಿದ್ದ ಆ ಬೆಳಕು ಅಲಾತ ಚಕ್ರದಂತೆ ತಿರ್ರನೆ ತಿರುಗಿತು. ಅದನ್ನು ನೋಡುತ್ತಿದ್ದ ವಾನರರ ನಯನ ಶಕ್ತಿ ತಲ್ಲಣಗೊಂಡು ಮೂರ್ಛೆಹೋದಂತಾಯಿತು. ಸೃಷ್ಟಿಯ ಚರಾಚರದ ಕೋಟಿಕಂಠಗಳ ವಿಶ್ವ ವೀಣಾವಾದಕನ ಮಧುರ ಅವ್ಯಕ್ತ ಅಮರ ಓಂಕಾರ ಇಂಚರವು ಇಂಪಾಗಿ ಹೊಮ್ಮಿತು. ಅವರು ಅದನ್ನು ಕೇಳಿ ಆನಂದದಲ್ಲಿರುವಾಗ ಬೆಂಕಿ ತುಂತುರಿನ ಮುಗಿಲ ನಡುವೆ ವಾನರರ ಧ್ವಜ ಚಿಹ್ನೆ ಕಪಿಯ ಆಕಾರ ಥಳಥಳಿಸಿತು.

ಅದನ್ನು ಕಂಡು ಸಂಭ್ರಮಗೊಂಡ ವಾನರ ಸೈನ್ಯವು ಒಕ್ಕೊರಲಿನಿಂದ ಸ್ತುತಿಗೀತೆ ಹಾಡಿತು. ಓಂಕಾರ ಸಂಗಿ ಆ ಸಂಭ್ರಮಿತ ಕಪಿ ಸೈನಿಕರ, ಆ ಸ್ತೋತ್ರದ ಸಂತೋಷದಲ್ಲಿ ಕಾಡು ಬೆಟ್ಟ ಭುವಿಯು ತೇಲಿತು!

"ಜಯತು ಜಯತು ಹೇ
ಪವನ ಪಾವನ ಕಲಿ ಕುಮಾರ! ಜಯತು ಜಯ ಹೇ
ವಾನರ ಕುಲದ ಕೀರ್ತಿಯುದ್ಧಾರ! ಜಯತು ಹೇ
ಕಪಿಕೇತನರ ಮಹಾಚೈತನ್ಯ ಚೂತವನ
ಚೈತ್ರಾವತಾರ! ಉತ್ತಿಷ್ಠ, ಓಧುರಧೀರ,
ಜಗದೇಕವೀರ! ಉತ್ತಿಷ್ಠ, ಓ ಯೋಗಿವರ,
ಯೋಗಾವತಾರ! ಉತ್ತಿಷ್ಠ, ಓ ಉತ್ತಿಷ್ಠ,
ಸರ್ವಮಾನವ ಗರ್ವಮಾನ ಪಾರಾವಾರ!
ಪ್ರತಿಮೆಯಾಗಲಿ ನಿನ್ನ ಈ ಶರಧಿ ಲಂಘನಂ
ಮಾನವಾತ್ಮದ ಮಹತ್ಸಾಧನೆಗೆ! ನಿನ್ನ ಈ
ಸಾಹಸಂ ಸಾಕ್ಷಿಯಾಗಲಿ ಯೋಗ ಮಹಿಮೆಯ
ಉದಾತ್ತತೆಗೆ! ಬ್ರಹ್ಮ ಸಾಕ್ಷಾತ್ಕಾರದದ್ವೈತ

ಸಿದ್ಧಿಯಾ ಭೂಮಾನುಭೂತಿಗಾಗಲಿ ರಸದ
ಸಂಕೇತಮೀ ನಿನ್ನ ರುಂದ್ರರೂಪಂ! ನಮೋ,
ಬ್ರಹ್ಮಚಾರಿಯೆ! ನಮೋ, ವ್ಯೋಮ ಸಂಚಾರಿಯೆ,
ನಮೋ ನಮೋ! ಕಲಿ, ನಮೋ! ಗುರು, ನಮೋ! ಪುನರ್ನಮೋ,
ಮುಹುರ್ನಮೋ! ಓಂ ನಮೋ, ಹ್ರೀಂ ನಮೋ! ನಮೋ, ನಮೋ, ನಮೋ!"

ಈ ರೀತಿ ಸ್ತೋತ್ರ ಮಾಡುತ್ತ ಕೀರ್ತಿಸುತ್ತಿರಲು ಅಣು ಮೂರ್ತಿ ಆತ್ಮಾನಂದದಲ್ಲಿ ಹಿಗ್ಗುತ್ತ ವಿಕಾಸಗೊಂಡು ಬೃಹತ್ತಾಗಿ ಬೆಳೆಯಿತು. ಅಲಾತ ಚಕ್ರದಲ್ಲಿದ್ದ ಕಪಿಯ ಆಕೃತಿಯು ತನ್ನವರ ಅಕ್ಕರೆಯ ಹೊಗಳಿಕೆಗೆ ಉಕ್ಕಿ, ಸೊಕ್ಕಿ, ಉಬ್ಬಿ ಮುಗಿಲೆತ್ತರಕ್ಕೆ ಬೃಹನ್ ಮೂರ್ತಿಯಾಗಿ ಬೆಳೆಯಿತು. ಪರ್ವತಕ್ಕೆ ಅದರ ಶಿಖರವೇ ಪ್ರತಿಸ್ಪರ್ಧಿ ಎಂಬಂತಿತ್ತು. ಎತ್ತರದ ಮರಗಳೇ ಅದರ ಮೊಣಕಾಲಿನ ಎತ್ತರಕ್ಕೆ ಬಾರದೆ ಸೋತುಹೋಗಿ ಅಡಿಗಳಿಗೆ ಮುಡಿಯಿಡುವ ಕುರುಚಲು ಗಿಡದಂತೆ ಕಂಡವು ಎಂಬಂತೆ, ಅತೀಂದ್ರಿಯದ ಆಂಜನೇಯನ ಮಹಾದೈತ್ಯ ಭೀಕರ ಐಂದ್ರಜಾಲಿಕ ರುದ್ರರೂಪ ನಿಂತಿತು!

ಮಹೇಂದ್ರ ಪರ್ವತದಲ್ಲಿ ದಟ್ಟವಾಗಿ ಬೆಳೆದಿದ್ದ ಮರಗಳ ನೆರಳು ಆಂಜನೇಯನ ಬೃಹತ್‌ರೂಪವನ್ನು ಕಂಡು ಹೆದರಿತೆ? ಆ ಕಪ್ಪು ನೆರಳು ಮರದ ಬುಡಕ್ಕೆ ಹೋಗಿ ಸೇರಿಕೊಂಡಿತೆ? ಮಿಂಚಿನಂತೆ ಬೆಳಗುತ್ತಿದ್ದ ರೋಮಮಯವಾದ ಅವನ ವಜ್ರಕಾಯದ ಮೈಸಿರಿಗೆ ಆ ದಟ್ಟ ನೆರಳು ಕಪ್ಪುಗೆಟ್ಟು ಬೆದರಿ ಬೆಳ್ಳಗಾಯಿತೆ? ನೋಡು, ಈ ಕಾಂತಿಗೆ ಆ ಕಾಂತಿ ಕೀಳಾಯಿತೆನ್ನುವ ರೀತಿಯಲ್ಲಿ ದಿನೇಶ್ವರನಾದ ಸೂರ್ಯನು ಬಾನಿನ ಕಾವಲಿಯ ಕಿಡಿಯಾಗಿ ಪರಿತಪಿಸುತ್ತಿರುವನು.

ಮಧುರ ಭಯ ಕಳವಳದ ಮಧ್ಯಾಹ್ನದಲ್ಲಿ ಪಕ್ಷಿಗಳು ಕೂಜನವನ್ನು ನಿಲ್ಲಿಸಲು, ಗಿರಿಧರಿತ್ರಿಯು ಮೂರ್ಛೆಗೊಂಡಂತೆ ನಿಸ್ತಬ್ಧವಾಯಿತು! ಕಪಿರೂಪವಾದರೇನು ಕೈಲಾಸ ಶೈಲೇಂದ್ರನ ಭಯವನ್ನುಂಟು ಮಾಡುವ ಕಳೇಬರದ ಭೈರವನಂತೆ ಅದು ಮರ್ತ್ಯದ ಅಲ್ಪತೆಗೆ ಭವ್ಯವಾಗುವುದಿಲ್ಲವೆ? ಲಘುಚೇತನದ ಮನಸ್ಸುಗಳು ಎತ್ತರವಾದುದಕ್ಕೆ ಅತಿ ಹತ್ತಿರದಲ್ಲಿರಲು ಅದರ ಕಣಕಾಲಿನ ದರ್ಶನವೇ ಪರಮಗತಿ! ಹಾಗಾಗಿ ಮಾರುತಿಯ ಮುಖ ತೇಜಸ್ಸಿನ ದರ್ಶನಾಕಾಂಕ್ಷಿಗಳಾದ ಕಪಿಕುಲ ಸೈನ್ಯ ಸಮುದ್ರವು ದೂರದೂರಕ್ಕೆ ಸರಿಯಿತು. ಆ ಚಿರಂಜೀವಿ ವಾಯುಪುತ್ರನ ವಿರಾಟ್ ವೈಭವದ ಗೌರವದ ಯೌಗಿಕ ಶ್ರೀಯ ಅದ್ಭುತಕ್ಕೆ ಸೈನಿಕರೆಲ್ಲ ಕೈಮುಗಿದರು.

ರಾಮ ಸೀತೆಯರ ವಿರಹ ವಿಘ್ನ ಸಮುದ್ರಕ್ಕೆ ಪ್ರೇಮ ಸೇತುವೆ ಕಟ್ಟಲು ಹಾರಲಿರುವ ಆಂಜನೇಯನ ಶುಭದ ವಾಣಿಯು ಬೆಟ್ಟ ಗುಹೆಗಳು ಪ್ರತಿಧ್ವನಿಸುವಂತೆ, ಗರ್ಜಿಸುವ ಸಿಂಹಘೋಷ ಗಾಂಭೀರ್ಯದಿಂದ ಹೊಮ್ಮಿತು:

ಲಂಘಿಪೆನಲಘ್ಯಮಂ. ವಿಶ್ವದೊಳಸಾಧ್ಯಮೆನಗಿಲ್ಲಮಿನ್


'ಸಾಹಸ ಸಹೋದ್ಯೋಗಿಗಳಿರಾ. ವಾನರ ಅಮೂಲ್ಯ ಮಣಿಗಳಿರಾ, ಪೂಜ್ಯಕಪಿಧ್ವಜ ರಕ್ಷಕರಿರಾ, ಗೌರವ ಪ್ರಾಣರಿರಾ; ಪ್ರಾಣದಿಂದಲೂ, ರೂಪದಿಂದಲೂ, ದೃಢತೆಯಿಂದಲೂ, ಔನ್ನತ್ಯದಿಂದಲೂ ನಾನು ನಿಮ್ಮೆಲ್ಲರ ಆತ್ಮಾಭಿಲಾಷೆಯ ಪ್ರತಿಬಂಬವಾಗಿದ್ದೇನೆ. ನಿಮ್ಮೆಲ್ಲರ ಆಕಾಂಕ್ಷೆ ಮೂರ್ತಿಗೊಂಡು ನಾನಾಗಿದ್ದೇನೆ. ನಾನು ಧನ್ಯ.

'ನಾನು ಅಣು. ನಿಮ್ಮೆಲ್ಲರ ಇಚ್ಛೆ, ಕೆಚ್ಚಿನಿಂದ ಈ ಮಹಾಮಹಿಮಾನ್ವಿತವಾದ ಗೋಪುರ ಸಮನಾದ ಮೂರ್ತಿ ಉದಿಸಿದೆ. ನಿಮ್ಮ ಪ್ರಾರ್ಥನೆಯ ಸೃಷ್ಟಿ ನಾನು. ನಿಮ್ಮ ಸ್ತೋತ್ರ ನನ್ನನ್ನು ಸಂಪುಷ್ಪನನ್ನಾಗಿಸಿದೆ. ನಾನು ಸಮುದ್ರವನ್ನು ದಾಟಿ, ದೇವಿಯನ್ನು ಹುಡುಕಿ ಹಿಂತಿರುಗಿ ನಿಮ್ಮೆಡೆಗೆ ಬರುವವರೆಗೂ ನೀವು ನಿಮ್ಮ ಮಾನಸಿಕ ಶಕ್ತಿಯಿಂದ ನನ್ನನ್ನು ಕಾಯುತ್ತಿರಿ! ಮರೆಯಬೇಡಿ: ನಿಮ್ಮ ಆತ್ಮಯೋಗವೇ ನನಗೆ ಶಕ್ತಿ!

'ಆದರೂ ನನ್ನ ಮಹಿಮೆಯನ್ನು ಹೇಳುತ್ತೇನೆ ಕೇಳಿ. ನಿಮ್ಮ ಧೈರ್ಯಕ್ಕಾಗಿ ಹೇಳುತ್ತೇನೆ ಆಲಿಸಿ. ನಿಮ್ಮ ಆತ್ಮದೂತನಾದ ನನ್ನ ಸಾಮರ್ಥ್ಯವನ್ನು ಕೇಳಿದರೆ ನಿಮ್ಮ ಶ್ರದ್ಧೆ ಅಭಿವೃದ್ಧಿಯಾಗುತ್ತದೆ. ಸ್ನೇಹಿತರೇ, ಬಿಂಕದಿಂದ ಅಲ್ಲ, ಬುದ್ಧಿಯಿಂದ ಅರ್ಜಿಸಿದ ಹಿರಿಮೆ ಹೇಳುತ್ತಿದ್ದೇನೆ ಶಂಕೆಗೊಳಗಾಗದೆ ಕೇಳಿ.

'ನನ್ನ ಈ ಎತ್ತರಕ್ಕೆ ಕಾಣುತ್ತಿರುವ ಸಮುದ್ರವನ್ನು ಕಾಲುವೆ ಎಂದು ತಿಳಿದು ಶ್ರಮವಿಲ್ಲದೆ ಜಿಗಿಯುತ್ತೇನೆ. ದಾಟಲಾಗದ್ದನ್ನು ದಾಟುತ್ತೇನೆ ಈ ವಿಶ್ವದಲ್ಲಿ ನನಗೆ ಅಸಾಧ್ಯವಾದುದೇ ಇಲ್ಲ. ಮುಷ್ಟಿಯಲ್ಲಿ ಹಿಂಡಿದರೆ ಈ ಮಹೇಂದ್ರಾಚಲ ಪುಡಿಪುಡಿಯಾಗುತ್ತದೆ! ಕಡಲನ್ನು ಕದಡಿ ಹಿಮಗಿರಿಗೆ ಬೀಸಾಡಿ ಬಡಬಾಗ್ನಿಯನ್ನು ಹಿಡಿದು ಲಂಕೆಯನ್ನು ಸುಟ್ಟು ಬೂದಿಮಾಡುವ ಸಾಮರ್ಥ್ಯ ನನಗಿದೆ! ಕೈಬೀಸಿ ಬಾಲವೆಂಬ ಚಾಮರದಿಂದ ಆಕಾಶದ ನಕ್ಷತ್ರಗಳನ್ನು ಗುಡಿಸಿ ಪಾತಾಳಕ್ಕೆಸೆಯುವ ಸಾಮರ್ಥ್ಯ ನನಗೆ ಬಾಲಲೀಲೆ! ವರ್ಣನೆ ಏತಕ್ಕೆ? ಅಪರೋಕ್ಷವನ್ನು ನೀವೆ ಕಾಣುವಿರಿ!'

❑



~~~~~~~~~~~~~~~~~~~~~~~ ಸಂಚಿಕೆ – ೧೧ ~~~~~~~~~~~~~~~~~~~~~~~

ಸಾಗರೋಲ್ಲಂಘನಂ

ಕಾವ್ಯರಚನಾಯಾತ್ರೆಯನ್ನು ಆರಂಭಿಸುವ ಮೊದಲು ಕವಿಯು ಸ್ಫೂರ್ತಿಯ ಎತ್ತರಕ್ಕೇರುವನು. ಅದರಂತೆ ವಜ್ರತನು ಆಂಜನೇಯನು ಹಾರುವಿಕೆಯ ಆಘಾತವನ್ನು ತಡೆದುಕೊಳ್ಳಬಲ್ಲ ಮಹೇಂದ್ರಗಿರಿಯ ತಲೆಯಂತಿದ್ದ 'ಶಕುನಿಶಿಲೆ' ಏರಿದನು. ಜಂಗಮಪರ್ವತವು ಸ್ಥಾವರ ಪರ್ವತವನ್ನು ಹತ್ತುವಂತೆ ವಿರಾಡ್ರೂಪಿ ಆಂಜನೇಯನು ತಪ್ಪಲಿನಿಂದ ಪರ್ವತದ ಹಸುರು ಶಿಖರಕ್ಕೇರುತ್ತಿರುವ ಭೀಮದೃಶ್ಯ ಕಪಿಧ್ವಜರಿಗೆ ಕಣ್ಣು ಮಿಟುಕಿಸದ ಅಚ್ಚರಿಯ ಭವ್ಯನೋಟವಾಯಿತು!
~~~~~~~~~~~~~~~~~~~~~~~

ಹನುಮಂತನಿಗೆ ಹೆಗ್ಗಾಡು ಕುರುಚಲಿನ ಕಾಡಾಯಿತು! ಪರ್ವತದ ಹೆಬ್ಬಿಡು ಹೆದರಿ ಹದುಗುವ ರೀತಿ ಕುಗ್ಗಿ ಕುಬ್ಜವಾದಂತಾಯಿತು! ಮೊಳಕಾಲು ಆಳದ ಮಡುವಿನ ನಡುವೆ ಹಾಯುವ ದೊಡ್ಡ ಆನೆಯಂತೆ ಆ ಮಹಾಕಾಯನು ಕಾಡನ್ನು ತುಳಿಯುತ್ತಿದ್ದರೆ, ಹೆಮ್ಮರಗಳು ಕುರುಚಲಿನ ಒಣಗು ಕಡ್ಡಿಯಂತೆ ಮುರಿದು ಹೋದವು! ಅವನ ಅಪಾರ ಭಾರವಾದ ಹೆಜ್ಜೆಯ ಆಘಾತಕ್ಕೆ ಪರ್ವತವು ತನ್ನ ಒಡಲಿನ ಕೆಮ್ಮಣ್ಣಿನ ಓಕುಳಿ ನೀರನ್ನು ಕಾರಿತು! ಅದು ಹುಲಿಯ ಉಗುರು ಅಪ್ಪಳಿಸಿದಾಗ ಗೂಳಿಯ ಹಿಣಿಲಿಂದ ರಕ್ತ ಚಿಮ್ಮಿದಂತಿತ್ತು! ಭಯ ಮತ್ತು ಗಾಬರಿಗೊಳಗಾದ ಲಕ್ಷಾಂತರ ಪಕ್ಷಿಗಳ ಚೀರಾಟದ ಆ ಶೈಲವನ ಭೂಮಿಯು, ಕುಣಿವ ಹುಡುಗನ ಕೈಯ ಗಿಲಗಿಚ್ಚಿಯಂತಾಯಿತು! ಅಲ್ಲಿಯ ಜೀವ ಜಂತುಗಳು ಭೂಕಂಪನವೇ ಬೇಟೆಯ ವಿನೋದಕ್ಕೆ ಸೋವುತ್ತ ಬಂದಿದೆ ಎಂದು ಕಂಗೆಟ್ಟು ಕಾಲ್ಗೆಟ್ಟು ಭಯದಿಂದ ಕುದಿದವು!

ಅವನು ಕಾಲು ಮೀಟಲು ಕಲ್ಲಿಗೆ ಕಲ್ಲು ಬಡಿದು ಕಿಡಿ ಹೊಮ್ಮಿತು. ಆ ಕಿಡಿ ಬೂರುಗದ ಹತ್ತಿಗೆ ಹೊತ್ತಿಕೊಂಡಿತು. ಅದು ಬಗನಿಮರಕ್ಕೆ ಸುತ್ತಿದ್ದ ಬಿದಿರು ಮೆಳೆಗೆ ತಗುಲಿ ಕಾಡುಗಿಚ್ಚಾಗಿ ಹೊಗೆ ಮುಗಿಲ ನಡುನಡುವೆ ದಳ್ಳುರಿ ನಾಲಗೆಯನ್ನು ಝುಳ ಝುಳಪಿಸಿತು. ಗಾಯಗೊಂಡ ಮರದ ಮೈಯಿಂದ ಸೋರಿದ ಕಂಪಿನ ಅಂಟುಗಳ ಉರಿಯೇ ಹನುಮನ ಆವೇಶಕ್ಕೆ ಧೂಪವಿಕ್ಕಿದಂತಾಯಿತು.

ಅಂಜನೇಯನು ದೊಡ್ಡಬಳ್ಳಿಗಳನ್ನು ಕಿತ್ತು ತಲೆಗೆ ನುಲಿದುಕೊಂಡನು! ಮೈಗೆ ಕೇದಗೆಯ ಪೊದೆಗಳನ್ನು ಹೆಣೆದುಕೊಂಡನು! ಮತ್ತೆ ತರತರದ ಹೂ ಮರಗಳನ್ನು ಕಂಕುಳಲ್ಲಿ ಇರುಕಿಕೊಂಡನು! ಅವನೊಂದು ಕಾಡು ಆವರಿಸಿದ ಮಲೆನಾಡಿನಂತಾಗಿ ಬೆಟ್ಟದ ನೆತ್ತಿಯ ಬಯಲುಸೀಮೆಯನ್ನು ಹತ್ತಿದನು! ಹಾಗೆ ಏರುತ್ತಿರಲು ವಾಯುಜನ ಕಪಿಕಾಯವು ಕಂದರದ ಕಡೆಗೆ ಇಳಿಯಿತು. ಭಯ ಶಂಕೆಯುಂಟುಮಾಡುವ ಚಿದ್ ಘನಶರೀರ ಛಾಯೆಯು ಕ್ಷಣ ಕ್ಷಣಕ್ಕೂ ಉದ್ದವಾಯಿತು.

ಮಹೇಂದ್ರ ಪರ್ವತ ಮಧ್ಯದಲ್ಲಿದ್ದು, ಎಡಕ್ಕೆ ಲಂಕೆ ಬಲಕ್ಕೆ ಅಯೋಧ್ಯೆ ಇದ್ದವು. ಹನುಮಂತನ ಎಡಬಲ ಕಾಲುಗಳ ತುಳಿತವು–ತಕ್ಕಡಿಯನ್ನು ಒಮ್ಮೆ ದಕ್ಷಿಣಕ್ಕೆ ಮತ್ತೊಮ್ಮೆ ಉತ್ತರಕ್ಕೆ ತೂಗಿದಂತಾಗಿ ಬೃಹತ್ ಭೂಮಿ ಅಲ್ಲಾಡತೊಡಗಿತು! ಗಗನ ನೀಲವನ್ನು ಚುಂಬಿಸುವ ಮಹೇಂದ್ರಪರ್ವತ ಮಸ್ತಕದ ಶಕುನಿಶಿಲೆಗೆ ಏರಿನಿಂತ ವಿರಾಟ್‌ರೂಪದ ಆ ಆಂಜನೇಯನ ಭವ್ಯ ಚಿತ್ರವನ್ನು ಕಲ್ಪನೆಗೆ ಕೆಚ್ಚಿರಲು ಸೃಷ್ಟಿಸಿ ಕಾಣು! ರಸನಿಧಿಗೆ ದುಮುಕುವ ಆತ್ಮವು ತಾನು ರಸಸ್ವರೂಪವೇ ಆಗಿ, ಬ್ರಹ್ಮವೇ ನಾನಾಗಿದ್ದೇನೆ ಎಂಬ ಅನುಭಾವವನ್ನು ಧ್ಯಾನಿಸುತ್ತ ಬ್ರಹ್ಮಾಂಡವನ್ನು ತುಂಬುತ್ತದೆ.

ಶರಧಿ ದರ್ಶನ; ನಕ್ಷತ್ರ ರಾತ್ರಿಯಾಕಾಶ ದರ್ಶನ; ಸಮತಳವಲ್ಲದ ದಿಗಂತವನ್ನು ಚುಂಬಿಸುವ ಸೂರ್ಯೋದಯ ಸೂರ್ಯಾಸ್ತಗಳ ದರ್ಶನ; ಕೈಲಾಸ ಶಿಖರದ ಶಿವ

ಪಾರ್ವತಿಯರ ದರ್ಶನ; ವರ್ಷಭೈರವನ ಸಿಡಿಲು ಮಿಂಚಿನ ರುದ್ರನರ್ತನದ ಸಹ್ಯಾದ್ರಿ ದರ್ಶನ; ಬುದ್ಧನ ಮಹಾತ್ಯಾಗದ ತಪಸ್ಸಿದ್ಧಿ ದರ್ಶನ; ಯೇಸುವಿನ ಜನನ ಜೀವನ ಮರಣ ದರ್ಶನ; ಜನರ ದಿನದಿನದ ನಿತ್ಯ ಸಾಂಸಾರಿಕ ಜೀವನದ ಸತ್ಕೃತಿಯ ಕೀರ್ತಿ ಕಲುಷಿತವಾಗದ ಪುಣ್ಯ ದರ್ಶನ – ಮುಂತಾದ ಸರ್ವದರ್ಶನಗಳಿಂದ ಮೂಡುವ ರಸಾನುಭವಕ್ಕೆ ಸಮನಾದುದು ಹನುಮಂತನ ವಿರಾಡ್‌ರೂಪ ಸಂದರ್ಶನ!

ಅನಂತಾಕಾಶಸಂಗಿಯಾದ ಬ್ರಹ್ಮಚಾರಿ

ಅನಂತರ ಶತ್ರು ಭಯಂಕರನಾದ ಆಂಜನೇಯನು ಮನುಜ ಕಲ್ಪನೆ ತತ್ತರಿಸುವ ಎತ್ತರಕ್ಕೆ ತನ್ನ ಶರೀರದ ಆಕಾರವನ್ನು ಅತಿಶಯವಾಗಿ ವಿಸ್ತರಿಸಿಕೊಂಡನು. ಅನಂತತೆಯನ್ನು ಆಕ್ರಮಿಸಲು ಶಿಖರವೇ ಇಲ್ಲದಂತೆ ಬೆಳೆಯುವ ಗಿರಿಯ ಸಾಹಸದ ಗರ್ವಗೋಪುರ ಶಿಲ್ಪಕೃತಿಯಂತೆ ನಿಮಿರಿ ನೆಲ ಮತ್ತು ಬಾನನ್ನು ವ್ಯಾಪಿಸಿ ನಿಂತನು. ಅದನ್ನು ನೋಡಿ ಸೃಷ್ಟಿ ರೋಮಾಂಚನಗೊಂಡಿತು! ಕಡಲು ಉಘೇ ಎಂದು ಜಯ ಘೋಷ ಮಾಡಿ ಉಕ್ಕಿ ಮೊರೆಯಿತು! ತಾವು ತಿರುಗಾಡುವ ಪಾದದ ಗುರುತಿನ ನಕ್ಷತ್ರ ಮಾರ್ಗದಿಂದ ಲಂಘಿಸಲು ಅಸಾಧ್ಯವಾದ ಸಾಗರದ ದೂರವನ್ನು ಹಾರುವ ಛಲದಿಂದ ಉಕ್ಕಿ ಸೊಕ್ಕಿ ಹೊರಟಿದ್ದ ವೀರದೇಹಿ ವಾಯುಸುತನನ್ನು ನೋಡಲು–ದೇವತೆಗಳ ಗುಂಪು ಮುಗಿಲ ವೇಷವನ್ನು ಧರಿಸಿ ಅಲ್ಲಲ್ಲಿ ನಿಂತಿತು!

ಹಾರಲು ಸಮತಟ್ಟಾದ ಜಾಗವನ್ನು ರಚಿಸಲೆಂಬಂತೆ ಕಾಲುಗಳಿಂದ ಶಿಖರದ ಮರಗಳೇ ಕುರುಚಲಾದ ಅಡವಿಯನ್ನು ಒರಸಿದನು. ಆಗ ಕಲಕಲ್ಪಟ್ಟ ಮರಗಳು ಹೂಮಳೆ ಸುರಿಸಿದವು. ಮರದ ತಲೆಯು ಬರಿದಾಗಿ, ಪರ್ವತದ ನೆಲವು ಕುಸುಮಗಳಿಂದ ಶೋಭಿಸಿತು. ಕಾಡುಕಿಚ್ಚು ಸಾಹಸಿಯ ಆವೇಶಕ್ಕೆ ಎತ್ತಿದ ಆರತಿಯಾಯಿತು! ಮರಗಳ ಅಂಟಿನ ಕಂಪು ಧೂಪವಿಟ್ಟಿತು. ಖಗಮೃಗಗಳ ಚೀತ್ಕಾರವು ವೀರಪೂಜೆಗೆ ತೂರ್ಯವಾಯಿತು. ಮುಖದ ಸುತ್ತಲೂ ಮುತ್ತಿಕೊಂಡು ನೋಟಕ್ಕೆ ತಡೆಯಾಗಿದ್ದ ಬಾನಿನ ನೆತ್ತಿಯ ಮೋಡಗಳ ಸಮೂಹವನ್ನು ಎರಡು ಕೈಗಳಿಂದ ಅಮುಕಿದನು, ನೂಕಿದನು. ಮತ್ತೆ ಅವುಗಳನ್ನು ಭಯಂಕರ ವಾಯುವಿನ ಉಚ್ಛ್ವಾಸದಿಂದ ಉಫ್ ಎಂದು ಅತ್ತಲಿತ್ತ ಚದುರಿಸಿದನು.

ಮಹಿಮದ ಶಕ್ತಿಯಿಂದ ಮೇಘಮಂಡಲದವರೆಗೂ ಉಬ್ಬಿ ಬೆಳೆದ ಕಪಿ ಶ್ರೇಷ್ಠನು– ಅಪರಿಮಿತವಾದ ಲವಣ ಜಲ ನೀಲಿಮಯ ಸಮುದ್ರವನ್ನು ಲಂಘಿಸಲು ಗುರುಭಾರವನ್ನು ತೊರೆದನು. ಲಘಿಮಾ ಶಕ್ತಿಯಿಂದ ಗರಿಹಗುರವಾದನು. ಆ ಇಳಿದ ಹೊರೆಯಿಂದ ಭೂಮಿಯು ರೋಮಾಂಚನದಿಂದ ಪುಳಕಗೊಂಡಿತು. ಪೂರಕ ಮಾರ್ಗದಿಂದ ಪ್ರಾಣವನ್ನು ತುಂಬಿದನು. ಆಗಸವನ್ನೇ ತನ್ನ ಅಂತರಂಗದಲ್ಲಿಟ್ಟುಕೊಂಡ ಅವನು ಕುಂಭಕದಿಂದ ಅಂಬರವನ್ನು ಎಳೆದು ಹೀರುವಂತೆ ಬಂಧಿಸಿದನು.

ಅಡಕೆಯ ಮರದಂತೆ ಉದ್ದವಾಗಿದ್ದು ಐದು ಹೆಡೆಯ ಹಾವಿನಂತಿದ್ದ ನೀಳ ತೋಳುಗಳನ್ನು ಮೇಲೆತ್ತಿ ಚಾಚಿದನು. ಅಳತೆಮೀರಿ ಬೆಳೆದಿದ್ದ ಬಾಲವನ್ನು ಸುರುಳಿ ಬಿಚ್ಚಿ ಬೀಸಿದನು. ಅದು ವಿಶ್ವ ಶಿಲ್ಪಿಯು ಗಗನವನ್ನು ಅಳೆಯಲು ಬೀಸಿದ ಅಳತೆಪಟ್ಟಿಯಂತಿತ್ತು. ಆ ಭೌತಿಕ ನಿಯಮಗಳನ್ನು ಮೀರಿದ ಮುಂದಿನ ಘಟನೆಯನ್ನು ಹೇಗೆ ಹೇಳಲಿ?

ಧ್ವಜವನ್ನು ಹಿಡಿದ ಬೃಹತ್ ವಾನರ ಸೈನ್ಯ, ಸಂಭ್ರಮ ಆಶ್ಚರ್ಯ ಭಯ ಚಕಿತ ಚಿಹ್ನೆಗಳಂತಾಯಿತು. ಆ ಸೈನಿಕರು ತೆರೆದ ಬಾಯಿ, ತೆರೆದ ಕಣ್ಣುಗಳಿಂದ ಆಗಸಕ್ಕೆ ಮುಖಮಾಡಿ ಮರಗಟ್ಟಿದಂತಾದರು. ಹಾಗೆ ನೋಡುತ್ತಿರಲು ಆಂಜನೇಯನ ಪಾದಕ್ಕೂ ಮಲೆಯ ನೆತ್ತಿಗೂ ಇದ್ದ ಬೆಸುಗೆ ಬಿಚ್ಚಿತು! ಕ್ಷಣಮಾತ್ರದಲ್ಲಿ ಪರ್ವತವೇ ಕೆಳಗುರುಳಿದಂತಾಯಿತು! ಭೂಮಿಯ ಆಕರ್ಷಣಶಕ್ತಿ ಇಲ್ಲವಾಗಲು ಆಗಸಕ್ಕೆ ಸಿಡಿಯುವ ಪರ್ವತ ಶಿಖರದಂತೆ ವೈರಿ ಭಯಂಕರ ಆಂಜನೇಯನ ದೇಹಪರ್ವತವು ಮೇಲಕ್ಕೆ ಏರಿತು! ಕುಂಭಕವು ಸೃಷ್ಟಿಸಿದ ಶೂನ್ಯದಿಂದ ಯೋಗಿಯ ಆವೇಗದಿಂದ ಅವನನ್ನು ಹಿಂಬಾಲಿಸುವ ತಿರ್ರನೆ ತಿರುಗೆ ಸುಡುವ ಬೆಂಕಿ, ಭೋರಿಡುವ ಬಿರುಗಾಳಿ ಸೃಷ್ಟಿಯಾಯಿತು! ಹೋಗುವ ನೆಂಟರನ್ನು ಸ್ವಲ್ಪದೂರ ಕಳುಹಿಸಿ ಬರುವ ಮನೆಯವರಂತೆ, ಬಂಡೆ ಗಿಡಮರ ಬಳ್ಳಿಗಳು ತುಸು ದೂರ ಹಾರಿ ಕವಿಕಲ್ಪನೆಯ ಜೊತೆ ಏರಲಾರದ ವಿಮರ್ಶಕನ ದರ್ಶನರಹಿತ ಜಾಣ್ಮೆಯಂತೆ ಗಮನಗೆಟ್ಟು ಮತ್ತೆ ಸುಮುದ್ರಕ್ಕೆ ಉರುಳಿದವು. ಆದರೂ ಕೆಲವು ಅವನ ಗಮನ ವೇಗ ಮಹಿಮೆಗೆ ಸಿಲುಕಿ, ತಮ್ಮತನವನ್ನು ಅವನ ತನುವಿಗೆ ಅರ್ಪಿಸುತ್ತ, ರಾಮದೂತನ ಮೈಯನ್ನು ಅಪ್ಪುತ್ತ ಅಂಟುತ್ತ ನಭೋಯಾತ್ರಿಗಳಾದವು.

ಕವೀಶ್ವರರ ಆವೇಶವನ್ನು ಕೊಂಕುಬಿಂಕಗಳನ್ನು ಬಿಟ್ಟು ನಂಬುವ ರಸಾಸ್ವಾದಿ ಸಹೃದಯರ ವಿನಯದಂತೆ ಅವು ಜೊತೆಯಾದವು. ಹೂಬಿಟ್ಟ ಮರ ಬಳ್ಳಿಗಳಿಂದ ಅಲಂಕೃತವಾದ ಆಂಜನೇಯನ ರೂಪು ಬಾಣವೇಗದಿಂದ ಮೇಲಕ್ಕೆ ಏರಿತು. ನಭ ಸಮುದ್ರದಲ್ಲಿ ಅಲೆಯುವ ಬೃಹದ್ ದ್ವೀಪ ಖಂಡದಂತೆ ಅಖಚಿತವು, ಅಸ್ಪಷ್ಟವು, ಭೀಮರಮ್ಯವು, ದೈತ್ಯರಿಗೆ ಸಂಕಟಕರವು ಆಗಿತ್ತು. ನೋಡುವ ವಾನರ ಸುಜನರ ಹೃದಯ ಕಮಲಗಳನ್ನು ಸಂತೋಷ ಸಂಭ್ರಮಗಳಿಂದ ತುಂಬಿತು.

ಅವನು ನೋಡುವ ನೋಟದಲ್ಲಿ ಸಿಕ್ಕಿ, ಬರಬರುತ್ತ ಕಿರಿದಾಗಿ ತೋರಿ, ಮನುಷ್ಯನಾಗಿಯೇ, ಮೇಲೆ ಮೇಲಕ್ಕೆ ಏರಿದನು. ಹಕ್ಕಿ ರೂಪವನ್ನು ಪಡೆದು ದೂರ ದೂರಕ್ಕೆ ಹಾರಿ ನಕ್ಷತ್ರದಂತಾದನು. ಕೊನೆಗೆ ನೀಲ ಆಕಾಶ ಶರೀರನಾದನು ಎನ್ನುವಂತೆ ಕಾಣದಂತಾದನು. ಆಗ ಸುಗ್ರೀವನ ಸೈನ್ಯವು ದೃಷ್ಟಿಸೋತು ಹಿಮ್ಮೆಟ್ಟಿ ಕೌತುಕ ಸಮಾಧಿಯಿಂದ ಎಚ್ಚೆತ್ತಿತು. ಆ ಸೈನಿಕರು ಹೊಸ ಪರಿಚಯದವರಂತೆ ಒಬ್ಬರು ಇನ್ನೊಬ್ಬರನ್ನು ನೋಡತೊಡಗಿದರು!

ಮಹಿಮೆಯನ್ನು, ರಸವನ್ನು, ಪರಾತ್ಪರವನ್ನು ಅನುಭವಿಸಿದ ಆತ್ಮರು ಪುನರ್ಜನ್ಮವನ್ನು ಪಡೆಯುವರು. ಮಹತ್ ಕಾವ್ಯ ಪರಿಚಯವೊ? ಮಹಾರುದ್ರ ವೀಣಾ ಮಹದ್‌ಗಾನದ ಅನುಭವವೊ? ಮಹಾವಾನರನ ಸಮುದ್ರಲಂಘನವೊ? ಭೇದವೇನು? ರಸಸ್ನಾನದಲ್ಲಿ ಮಿಂದ ಚೇತನಕ್ಕೆ ಅದು ಪುನರ್ಜನ್ಮವೇ ಅಲ್ಲವೆ? ಅನಂತಾಕಾಶಸಂಗಿ, ಏಕಾಂಗಿ, ಭುವನ್ಯೆಕ ಸಂಚಾರಿ ಹನುಮಂತನು ತನ್ನ ಬ್ರಹ್ಮಚರ್ಯದ ವ್ರತವು ಸಾರ್ಥಕವೆನ್ನುವಂತೆ ವಿಶ್ವಾಕಾಶದಲ್ಲಿ ಹೋಗುತ್ತಿದ್ದನು. ತನ್ನ ಸುತ್ತಲು ಎತ್ತೆತ್ತಲೂ ಚಲಿಸದ ಆಕಾಶ ನೀಲಿ, ಕೆಳಗೆ ದೂರದ ಸಾಗರದಲ್ಲಿ ಚಂಚಲತೆಯಿಂದ ಚಲಿಸುವ ಮೃದುವಾದ ನೀಲಿ ಕಣ್ಣಿಗೆ ಸುಂದರವಾಗಿ ಕಂಡಿತು. ಅನಿಲಾತ್ಮಜನು ನಿರ್ವಿಕಲ್ಪ ಸಮಾಧಿಯಿಂದ ನಿರ್ಗುಣಾತ್ಮವನ್ನು ಸಾಧಿಸುವ ಅದ್ವೈತಿಯಂತೆ ಶೂನ್ಯವನ್ನು ಸೀಳುತ್ತ ಸಾಗಿದನು. ಹತ್ತಿಯ ರಾಶಿ ಮಲೆಯ ನೆತ್ತಿಯನ್ನು ಮುತ್ತುವಂತೆ ಅವನ ಭಾರಿಗಾತ್ರದ ಸೆಳೆತಕ್ಕೆ ಸಿಕ್ಕ ಹತ್ತಿರದ ಮುಗಿಲರಾಶಿ ಅವನ ಮುಂದಿನ ಮೈಗೆ ಮುತ್ತಿತೆನ್ನುವಂತೆ ಮೆತ್ತಿಕೊಂಡಿತು. ವಾಯು ತಾಟಸ್ಥ್ಯವನ್ನು ಬಿರುಗಾಳಿ ಗೊಳಿಸಿದ ಅವನ ವೇಗಕ್ಕೆ ದೂರದ ಮೋಡಗಳು–ತೋಳಕ್ಕೆ ಹೆದರಿದ ಕುರಿಮಂದೆಯಂತೆ ಚದುರಿ ಹೋದವು.

ಮುಂಗಾರಿನ ಮೊದಲಗಾಳಿ ಸಹ್ಯಾದ್ರಿಯ ಗಿರಿಗಳ ನಡುವಿನ ಕಣಿವೆ ಸಂಧಿಗಳಲ್ಲಿ ನುಗ್ಗಿ ಭೋರ್ಗರೆಯುವಂತೆ, ಘೋರಗಾಳಿಯು ಅವನ ತೋಳು ತೊಡೆಗಳ ಕಣಿವೆ ಇಕ್ಕಟ್ಟಿನಲ್ಲಿ ದಾಳಿಯಿಟ್ಟಿತು. ಅವನ ವೇಗವು ಸೃಷ್ಟಿಸಿದ ಝುಂಝಾವಾತದ ಆಘಾತವು–ವಿಕ್ಷುಬ್ಧ ಸಾಗರದ ನೊರೆಯಿಂದ ಕೂಡಿದ ನೀಲಿಮೆಯ ಭಯಂಕರ ವರ್ತುಲ ವಕ್ಷ ವಿಸ್ತಾರದಲ್ಲಿ ಅಲೆಗಳು ಉಕ್ಕಿ ತತ್ತರಿಸುತ್ತ ಅಲೆದಾಡುವಂತೆ ಮಾಡಿತು.

ಮಧ್ಯಾಹ್ನದ ಅನಂತರದ ಹಿಮಸಮಯದ ರವಿಯ ಕಿರಣಗಳು ರಂಜಿಸುತ್ತಿದ್ದವು. ಆಗ ಹನುಮಂತದೇವನ ವಿಶಾಲವಾದ ಯೋಜನದಷ್ಟು ದೀರ್ಘವಾದ ಬೃಹತ್ ಛಾಯೆಯು ಕಂಪಿಸುವ ಕಡಲಿನ ದೊಡ್ಡ ಅಲೆಗಳ ಮಾಲೆಗಳ ವಿಸ್ತೀರ್ಣವನ್ನು ಗುಡಿಸುತ್ತ, ತನ್ನ ಮಾತೃಕೆಯ ಮೃತ್ಯುವೇಗವನ್ನು ಅನುಸರಿಸಿ ಮುಂದಕ್ಕೆ ಸಾಗಿತು. ಉತ್ತರದವರ ಆಸೆಯು ದಕ್ಷಿಣಕ್ಕೆ ಎರಗುವ ಉಲ್ಕೆಯಂತೆ ಅವನ ಬಾಲದ ಉದ್ದವು ಲಂಕೆಗೆ ಆತಂಕದ ಶಂಕೆಯನ್ನುಂಟು ಮಾಡಿತು.

ಅವನು ಚಲಿಸಿದ ಕಡೆಯೆಲ್ಲ ಕಡಲಿನ ಅಳ್ಳೆ ಸೆಡೆತಂತಾಗಿ ನೀರಿನ ಕಣಿವೆಯಾಯಿತು. ತೆರೆಗಳು ಬೆಟ್ಟದಂತೆ ಮೇಲೆದ್ದವು. ಅಲೆ ಅಲೆಯನ್ನು ಅಪ್ಪಳಿಸಿ ಕಡೆದ ತುಂತುರು ಮಂಜು ಸಿಡಿದು ಮುಗಿಲಾಗಿ ಆಗಸದ ಕಡೆಗೆ ಸಾಗುವಂತೆ ಮೇಲೆದ್ದವು. ಹಾಗೆ ಎದ್ದ ಮುಗಿಲು ಕಾಮನಬಿಲ್ಲಿನ ವರ್ಣತಂತ್ರದಿಂದ ಇಂದ್ರಚಾಪದ ಮಂಜುರಾಗದಿಂದ ರಂಜಿಸಿತು. ಅದು ವಾಯುಪುತ್ರನ ರೋಮಾಂಗವನ್ನು ಯಶಸ್ಸಿನ ಪ್ರಭಾವಳಿಯಂತೆ ಶೃಂಗರಿಸಿತು. ಅದನ್ನು ದೇವತೆಗಳು ನೆಟ್ಟ ನೋಟದಿಂದ ನೋಡಿದರು ಎಂದಮೇಲೆ

ಆ ಮಹತ್ಕಾರ್ಯ ನಿಷ್ಠನಿಗೆ, ಆಂಜನೇಯನಿಗೆ ಅದೊಂದು ಹಿರಿಮೆಯೆ ಹೇಳು? ಅವರಿಗೆ ರಸಾಮೃತದ ದರ್ಶನವಾಯಿತಲ್ಲವೆ!

ನಭ ಸಾಗರಗಳ ಮಧ್ಯದ ಬೃಹದಂತರ ದೇಶ. ಮಾರುತಿಯು ಆ ಅಂತರವನ್ನು ಹಿಂಡುತ್ತ, ಕಾಲವನ್ನು ಹಿಸುಕಿ ಪುಡಿಮಾಡಿದನು. ಆ ಭೀಮ ರಮಣೀಯತೆಯ ನಭ ಸಾಗರವನ್ನು ಅಲ್ಲೋಲ ಕಲ್ಲೋಲವನ್ನಾಗಿ ಮಾಡಿ ಸಾಗುತ್ತಿದ್ದನು. ಆಗ ನಡುಕಡಲಿನಿಂದ ಗಿರಿರೂಪಿ ಮೈನಾಕನನ್ನು ನೋಡಿದನು. ಅವನನ್ನು ತನ್ನ ವಜ್ರದಂತಹ ಎದೆಯಿಂದ ಬಡಿದನು. ಅವನು ಮುಳು ಮುಳುಗಿ ತಿರ್ರನೆ ತಿರುಗಿ ಮರಳಿ ಮೇಲೆದ್ದನು. ಮುಖತೋರಿಸುತ್ತ ಕೈಮುಗಿದು ಹೀಗೆ ಆಹ್ವಾನ ನೀಡಿದನು:

'ಮಹಾಸತ್ವನೆ, ನನ್ನನ್ನು ಕ್ಷಮಿಸು. ನಾನು ಮೈನಾಕ. ಅಂದು ಇಂದ್ರನ ಕೋಪದ ಬಿರುಸಿನಿಂದ ನಿನ್ನ ತಂದೆ ನನ್ನನ್ನು ಕಾಪಾಡಿದನು. ನನ್ನ ಮೇಲೆ ಕೃಪೆ ತೋರಿ ನನ್ನ ಆತಿಥ್ಯವನ್ನು ಸ್ವೀಕರಿಸು. ದಣಿವಾರುವಂತೆ ಹಸಿವು ನೀರಡಿಕೆಯನ್ನು ಕಳೆದು ಮುಂದೆ ಸಾಗುವುದು ಒಳಿತು ಸ್ವಾಮಿ. ಗುರಿ ದೂರವಿದೆ. ದಾರಿಯೊ ಮಹಾಸಂಕಟಗಳಿಂದ ಕೂಡಿದೆ. ಸಮುದ್ರನಿಂದ ನಿನ್ನ ದೂತಕಾರ್ಯಭಾರವನ್ನು ತಿಳಿದೆನು. ಅವನ ಹಿತದ ನುಡಿಕೇಳಿ, ಹಿರಿಯ ಅತಿಥಿಯಾದ ನಿನ್ನನ್ನು ಆದರಿಸಲು ಬಂದಿದ್ದೇನೆ.'

ಮಾರುತಿಯು ಅವನ ಆಹ್ವಾನವನ್ನು ಗೌರವಿಸುತ್ತ, ಹಿಂದಿರುಗಿ ಬರುವಾಗ ಆತಿಥ್ಯವನ್ನು ಸ್ವೀಕರಿಸುವುದಾಗಿ ಸ್ನೇಹದ ಮಾತುಗಳನ್ನು ಆಡಿದನು. ಪಕ್ಷಿಗಾನದ, ಕಾನನ ಮಂಟಪದ, ಹೂ ತಳಿರು ತೋರಣದ, ಬೆಟ್ಟ ನದಿಗಳ ಕೊರಳ ಹಾರಧಾರಿಯಾದ ಶೈಲಬಂಧು ಮೈನಾಕನನ್ನು ಬೀಳ್ಕೊಂಡು ವ್ಯೋಮರಥಿಯು ಮುಂದುವರೆದನು. ಕರ್ತವ್ಯ ಕೋವಿದನು ಸಿಂಧುಪಥವನ್ನು ಹಿಡಿದು ಸ್ವಾಮಿಕಾರ್ಯ ಕುರಿತು ಸೇರಬೇಕಾದ ಸ್ಥಳದತ್ತ ಹೋದನು. ಅವನು ಸಾಗಿ ಬರುತ್ತಿರುವ ಮಾರ್ಗದಲ್ಲಿ ಸುರಸೆಯು ಕಡಲಿನಿಂದ ಎದ್ದು ಬಾಯ್ದೆರೆದು ಅಡ್ಡ ನಿಂತಳು. ಅವಳ ಶಾಪವನ್ನು ಹೋಗಲಾಡಿಸಿ ಆನಂದದಿಂದ ಆಕಾಶಮಾರ್ಗದಲ್ಲಿ ಹೊರಟನು.

ಕಡಲಕಾವಲುಗಾರಿ ಸಿಂಹಿಕೆ

ದಶಗ್ರೀವನ ಆಜ್ಞೆಯಿಂದ ನೇಮಿಸಲ್ಪಟ್ಟ ಕಡಲ ಕಾವಲುಗಾರ್ತಿ ಸಿಂಹಿಕೆ. ಅವಳು ದೂರದ ಆಕಾಶದಲ್ಲಿ ಚುಕ್ಕಿಯ ರೀತಿ ಇದ್ದ ಹನುಮನನ್ನು ನೋಡಿದಳು. ಅವಳು ಕಾಮರೂಪಿಣಿ, ಕಾಳಿ, ಛಾಯೆಯನ್ನು ಹಿಡಿಯಬಲ್ಲ ರಾಕ್ಷಸಿಯಾಗಿದ್ದಳು. ಅವಳು ದಿಕ್ಕಿಲ್ಲದ ದಿಕ್ಕಿನಿಂದ ಬೀಸುತ್ತಿದ್ದ ಅಕಾಲದ ಬಿರುಗಾಳಿಯ ಬಿರುಸಿನ ರಭಸಕ್ಕೆ ಕಡಲ ಒಡಲು ಕುದಿಯುತ್ತಿರುವುದನ್ನು ಕಡೆದಂತೆ ಮತ್ತು ಒಡೆದಂತೆ ಆಗಿರುವುದನ್ನು ಕಂಡಳು.

ಹುಡುಕು ನೋಟವನ್ನು ಹರಿಸಿ ಜಲದ ವಿಸ್ತೀರ್ಣವನ್ನು ಗುಡಿಸುತ್ತಿರಲು, ಹನುಮಂತನ ಶರೀರದ ದೀರ್ಘವಾದ ಬಹುಯೋಜನದ ಛಾಯೆಯ ಕರಿನೆರಳು

ಕಂಡಳು. ಅದು ನೊರೆನೀರನ್ನು ಕಪ್ಪು ಮಾಡಿ ಬರುತ್ತಿದ್ದ ಅದ್ಭುತವನ್ನು ಆ ನಿಶಾಚರಿ ನೋಡಿದಳು. ನೋಡಿದ ತಕ್ಷಣ ಆ ಆಗಸ ಸಂಚಾರಿಯ ಮೂಲದ ಕಡೆಗೆ ಕಣ್ಣು ಹರಿಸಿದಳು; ಹುಡುಕಿದಳು. ಆ ನೆರಳ ಹಗ್ಗವನ್ನು ಹಿಡಿದಳು. ಗಾಳಿಪಟದ ಸೂತ್ರವನ್ನು ಸೆಳೆಯುವಂತೆ ಸೇದಿ, ಅ ವ್ಯೋಮದೂರದ ಬೃಹತ್‌ದೇಹಿಯನ್ನು ಸೆಳೆದಳು!

ಆ ಕಡೆ ಆಂಜನೇಯನಿಗೆ ಬಾನನ್ನು ಎಡವಿ ಮುಗ್ಗರಿಸಿದಂತೆ, ಓಡುತ್ತಿರುವವನ ಕಾಲಿಗೆ ಉರುಳು ಕಣ್ಣಿಯ ಕುಣಿಕೆ ಎಸೆದು ಸೆಳೆದಂತಾಯಿತು. ತಕ್ಷಣ ತತ್ತರಿಸಿ ಗಾಳಿಯಂತೆ ಉರುಳುರುಳಿ, ತಿರಿತಿರಿಗಿ, ಹೊರಳಿ ಸುತ್ತಿ ತಲೆ ಕೆಳಗಾದನು. ಆ ರಾಕ್ಷಸಿಯ ಜರ್ಗು ಜರ್ಗಿಸಿದ ತಡೆಗೆ ನಡೆಗೆಡುತ್ತ ತಡವರಿಸಿದನು!

ರಾವಣನ ಕಿಂಕರಿಗೆ ಮತ್ತು ಸೀತಾನಾಥನ ದೂತನಿಗೆ ನಡೆದ ಆ ಭಯಂಕರ ಶಕ್ತಿ ಸ್ಪರ್ಧೆಯನ್ನು ಹೇಗೆ ಬಣ್ಣಿಸಲಿ? ಕಡಲಿನಲ್ಲಿ ಸಂಚರಿಸುವ ಹಡಗು ಪಡೆಯು ನೀರಿನ ಸುಳಿಗೆ ಸಿಕ್ಕಿ ತಿರ್ರನೆ ತಿರುಗುತ್ತಿದ್ದರೂ, ನಾವಿಕರ ಶಕ್ತಿ, ಧೈರ್ಯ ಮತ್ತು ಚಾತುರ್ಯದಿಂದ ಮುಳುಗಲು ಬಿಡದೆ ತಪ್ಪಿಸಿಕೊಳ್ಳುತ್ತ, ಮರಳಿ ಸುಳಿಯನ್ನು ಎದುರಿಸುತ್ತ ಹೋರಾಟದಲ್ಲಿ ತೊಡಗುವುದು. ಅದರಂತೆ ಆ ಭಯಂಕರ ಸಾಹಸಿ ಜಗತ್‌ಪ್ರಾಣಪುತ್ರನು, ತನ್ನ ವೇಗದಿಂದ ತಾನೇ ಉಪದ್ರವಕ್ಕೆ ಗುರಿಯಾಗುವೆನೆಂದು ಅದನ್ನು ತಡೆದನು. ನೀರಿಗೆರಗುವ ಮುನ್ನ ಕಣ್ಗುರಿಯಿಟ್ಟು ಆಕಾಶದಲ್ಲಿ ನಿಶ್ಚಲವಾಗಿ ನಿಲ್ಲುವ ನೀರುಹಕ್ಕಿ ಕುರರಿಯಂತೆ, ಮತ್ತೆ ಹೋರಾಡಲು ಸಂಭ್ರಮಿಸಿ ನಿಂತನು. ತನ್ನ ನಡೆತಡೆಗೆ ಕಾರಣವನ್ನು ತಿಳಿಯದೆ, ದೈವಿಕವೊ ರಾಕ್ಷಸವೊ, ಸಹಜವೊ ಅಸಹಜವೊ ಎನ್ನುತ್ತ ಬೆರಗಾದನು. ಶರಧಿ ಆಕಾಶಗಳನ್ನು ಸೂಕ್ಷ್ಮವಾಗಿ ವೀಕ್ಷಿಸಿದನು. ಆಗ ಸಿಂಹಿಕೆಯ ಪಾತಾಳ ಬಿಲ ಸದೃಶ ಭೂತಿನಿಯ ಬಾಯಿ ಕಂಡಿತು.

ಉಸಿರ ಸೂತ್ರವನ್ನು ಹಿಡಿದು ಪ್ರಾಣವನ್ನು ಎಳೆಯುವಂತೆ ಅಸುರಿಯು ನೆರಳನ್ನು ಅತ್ತ ಸೆಳೆದಳು. ಈ ಕಡೆ ವಾನರೋತ್ತಮನು ಸಿಂಹಿಕೆಯ ಹಲ್ಲುಗಳು ಅಲುಗಾಡುವಂತೆ ಒತ್ತಿ ಜಗ್ಗಿದನು! ಸಿಂಹಿಕಾ ಚಂಡಿಯು ಹಂದಿಯಂತೆ ಹೂಂಕರಿಸಿ ಔಡುಗಚ್ಚಿ ತನ್ನ ರಾಕ್ಷಸಾದ್ಭುತ ಶಕ್ತಿ ಸರ್ವಸ್ವದಿಂದ ಹನುಮನನ್ನು ಸೇದಿದಳು.

ತನ್ನ ದೈವಿಕಬಲ ಹೆಚ್ಚುವಂತೆ ಆತ್ಮಾನುಸಂಧಾನವನ್ನು ಮಾಡಿದ ಸಂಯಮಾಭ್ಯಾಸಿ ಸಾಧಕನು ತನ್ನ ಸರ್ವೇಂದ್ರಿಯಗಳನ್ನು ದಿವ್ಯಾತ್ಮನೆಡೆಗೆ ಒಯ್ಯಲು ಹೋರಾಡಿ ಹೆಣಗುತ್ತಾನೆ. ಹಾಗೆ ವೀರ ಮರುತಾತ್ಮಜನು ರಾಕ್ಷಸಾಕರ್ಷಣೆಯ ಸುಳಿಯಿಂದ ಹೊರಬರಲು ಪ್ರತಿಭಟಿಸುತ್ತ ಸಿಂಹಘರ್ಜನೆಯ ಘೀಂಕಾರದಿಂದ ಬಾನು ಕಡಲುಗಳು ಬೆದರುವಂತೆ ಪ್ರತಿಭಟಿಸುತ್ತ ಆರ್ಭಟಿಸಿದನು.

ಗಂಟಲಿನ ನರಗಳು ಉಬ್ಬುವಂತೆ ಜಗ್ಗಿ ಸೇದಿದನು. ಶರೀರದ ಸಂಧಿಸಂಧಿಯ ನರಗಳು ಹೆದೆ ಏರಿದ ಬಿಲ್ಲಿಗೆ ಕಟ್ಟಿದ ಹುರಿಯಂತೆ ಬಿಗಿದು ಠೇಂಕರಿಸಿದವು. ಅವನ

ವಜ್ರರೋಮ ಈಟಿ ಕೋಟಿಗಳಂತೆ ನಿಮಿರಿದವು. ನೇತ್ರ ವಿಸ್ತೀರ್ಣ ಮಂಡಲವು ಅರಳಲು ಮುಖದಲ್ಲಿ ರೌದ್ರತೆಯುಂಟಾಯಿತು. ಉಚ್ಛ್ವಾಸದಿಂದ ವಾಯುಜನ ಬೃಹತ್ ಎದೆಯು ವಿಸ್ತಾರವಾಗಿ ವ್ಯಾಪಿಸಲು ಆ ರಾಕ್ಷಸಿಯ ಭೂಭಾರದ ಶವಭಾರವನ್ನು ಕೆತ್ತಿ ಗಗನ ಪ್ರದೇಶಕ್ಕೆ ಎಸೆಯಲು ಪ್ರಯತ್ನಿಸಿದನು.

ಸಮುದ್ರ ತಳಪೀಠದಲ್ಲಿ ಆ ಭೂತಿನಿಯು ತನ್ನ ಅಪಾರ ಗಾತ್ರ ಶರೀರವನ್ನು ಅರ್ಧಯೋಜನ ಮಾತ್ರ ಏರುವಂತೆ ನಟಿಸಿದಳು. ಮತ್ತೆ ತಟ್ಟನೆ ಕೆಳಕ್ಕೆ ಎಳೆದು ಸಮುದ್ರಗರ್ಭವನ್ನು ಹೊಕ್ಕಳು. ಆಗ ಆಂಜನೇಯನು ಫಕ್ಕನೆ ಗುದ್ದಿ ಕೆಳಗೆ ಒದ್ದಂತಾಗಿ ಒಂದೈದಾರು ಯೋಜನಗಳ ದೂರಕ್ಕೆ ಬಿದ್ದನು. ಬುದ್ಧಿ ಮಂಕಾದಂತಾಯಿತು. ತನ್ನ ಇಂದ್ರಿಯಗಳನ್ನು ಗೆದ್ದೆನೆಂದು ಕ್ರಮವನ್ನು ಮೀರಿದ ಸಾಧಕನ ಅಧಃ ಪತನವು ಇಮ್ಮಡಿಸುವಂತೆ ಅವನಿಗಾಯಿತು.

ಸೂರ್ಯನ ಗಾತ್ರವನ್ನು ಕಂಡು ನಗುವ ಎರಡು ನಕ್ಷತ್ರಗಳು ಲೆಕ್ಕಕ್ಕೆ ಸಿಗದಷ್ಟು ಜ್ಯೋತಿರ್ವರ್ಷಗಳಷ್ಟು ದೂರದಲ್ಲಿ, ವಿಶ್ವಾಂತರಿಕ್ಷದಲ್ಲಿ ಯುಗ ಯುಗಾಂತರಗಳಿಗೊಮ್ಮೆ ಲಕ್ಷ ಯೋಜನದಷ್ಟು ಹತ್ತಿರಕ್ಕೆ ಬರುತ್ತವೆ. ಪರಸ್ಪರ ಗುರುತ್ವಾಕರ್ಷಣೆಗೆ ಒಳಗಾಗಿ ಒಂದಕ್ಕೊಂದು ಸಂಕರ್ಷಣಕ್ಕೆ ಒಳಗಾಗುತ್ತವೆ ಹೀಗೆ ಎರಡು ಬೃಹತ್ ತಾರೆಗಳು ಅಂತರಿಕ್ಷದಲ್ಲಿ ಢಿಕ್ಕಿ ಹೊಡೆದಾಗ ಅದರಿಂದ ಹೊಮ್ಮುವ ಪ್ರಳಯ ಜ್ವಾಲೆ ಸಾವಿರಾರು ಯೋಜನೆಗಳವರೆಗೆ ವ್ಯಾಪಿಸುತ್ತದೆ. ಆ ಬೃಹತ್ ತಾರೆಗಳು ಮೆಲ್ಲನೆ ಪ್ರಳಯ ಪ್ರೇಮದಿಂದ ಒಂದನ್ನೊಂದು ಸೆಳೆದು ಹತ್ತಿರಕ್ಕೆ ಬರುತ್ತವೆ. ಆಗ ಆ ಮಂಡಲ ದ್ವಯಗಳು ತಮ್ಮ ನಾಲಗೆಯನ್ನು ಚಾಚಿ ಇಡೀ ಆಕಾಶವನ್ನೇ ನೆಕ್ಕಲಾರಂಭಿಸಿವೆಯೋ ಎಂಬಂತೆ ಭಾಸವಾಗುತ್ತದೆ.

ಆ ರೀತಿ ಸಿಂಹಿಕೆ ಹನುಮಂತರಿಬ್ಬರೂ, ತಾವು ಒಬ್ಬೊಬ್ಬರನ್ನು ಸೆಳೆದು ಸೋಲಿಸುವ ಛಲದ ವೀರ್ಯದ ಗರ್ವದಿಂದ ಒಬ್ಬರು ಇನ್ನೊಬ್ಬರೊಂದಿಗೆ ಸೆಣಸಿದರು. ಬೆಸ್ತರವನ್ನು ಗಾಳದ ಎರೆಯನ್ನು ತಿಂದ ಬಾಳೆಮೀನನ್ನು ಒಮ್ಮೆ ಸಡಿಲಬಿಡುತ್ತ, ಒಮ್ಮೆ ಸೆಳೆಯುತ್ತ ಸೋಲಿಸುವ ರೀತಿಯಲ್ಲಿ, ತನ್ನನ್ನು ದಣಿಸಿನುಂಗುವ ಉಪಾಯದಿಂದ ರಕ್ಕಸಿ ಬಾಯಿತೆರೆದು ನರಕ ಕೂಪೋಪಮವಾಗಿ ಹತ್ತಿರ ಬರುತ್ತಿರುವುದನ್ನು ಸಮೀರಜನು ನೋಡಿದನು. ತನ್ನ ದೇಹದ ಗಾತ್ರವನ್ನು ಎರಡರಷ್ಟು ಹೆಚ್ಚಿಸಿಕೊಂಡನು. ಅಸುರಿಯ ಬಾಯಿಯು ಹನುಮನ ಗಾತ್ರಕ್ಕೆ ಇಮ್ಮಡಿಯಾಗಿ ಬೆಳೆದು ತೆರೆದುಕೊಂಡಿತು. ಮತ್ತೆ ಹನುಮ ಅದಕ್ಕೆ ಎರಡರಷ್ಟಾಗಿ ಬೆಳೆದನು. ಆಗ ಮತ್ತೆ ಅವನ ಶರೀರಕ್ಕೆ ತಕ್ಕಂತೆ ರಕ್ಕಸಿಯ ಬಾಯಿ ಬೆಳೆಯಿತು. ಹನುಮನು ತೃಪ್ತಿಯಾಗುವಂತೆ ಬೆಳೆದು ತುಂಬಿರಲು, ಸಿಂಹಿಕೆಯ ಬಾಯಿ ಲೋಭದಿಂದ ಹಿಗ್ಗಿ ಹಬ್ಬಿತು!

ಅನಂತವಾದ ಬ್ರಹ್ಮಾಂಡವನ್ನು ಮೀರಲು ಹಾಗೆ ಬೆಳೆಯುವುದಕ್ಕೆ ಕೊನೆಯುಂಟೆ ಹೇಳು? ಅದಕ್ಕೆ ಕೊನೆಯಿಲ್ಲ ಎಂದು ತಿಳಿದ ಹನುಮನು ತಕ್ಷಣ ಅಣುರೂಪ ತಾಳಿದನು. ಅವಳ ಹಲ್ಲುಗಳಿಗೆ ಸಿಕ್ಕದೆ, ಪಕ್ಕನೆ ಅವಳ ಹೊಟ್ಟೆಯನ್ನು ಹೊಕ್ಕನು. ಅಲ್ಲಿ ಬೆಳೆದು ಕರುಳನ್ನು ಸೀಳಿ ಕೊಂದನು. ಬಹಿರ್‌ಕ್ರಾಂತಿ ಸೋತರೇನು, ಅಂತಃಕ್ರಾಂತಿ ಕೊನೆಗೆ ಗೆಲ್ಲುತ್ತದೆ ಎಂಬಂತೆ ಅವಳನ್ನು ಹೋಳುಮಾಡಿ ಹೊರಬಂದನು!

ಮಿತ್ರವೇಶಿ ಪದ್ಮಲಂಕೆ

ಮಹಾನ್ ವಾನರನು ರಕ್ತದ ಕೆಂಪುನೀರು ಮತ್ತು ಸಂಜೆ ಸೂರ್ಯನ ಬೆಳಗುವ ಕೆಂಪಿನ ಓಕುಳಿಯಂತೆ ಕಾಣುತ್ತಿದ್ದ ಸಮುದ್ರದ ನೀರಿನಲ್ಲಿ ಮಿಂದು ಮೈ ತೊಳೆದುಕೊಂಡನು. ಮೈಲಿಗೆಯಿಂದ ಮುಕ್ತವಾದ ಮೈಯನ್ನು ಮೊದಲಿನಂತೆ ಅತಿಶಯವಾಗಿಸಿಕೊಂಡು ಅದ್ಭುತಾಕಾರ ಹೊಂದಿದನು. ದಕ್ಷಿಣ ದಿಗಂತದ ಕಡೆಗೆ ಚಲನದೃಷ್ಟಿ ಹರಿಸಿ ಮುಂದಕ್ಕೆ ನೆಗೆದನು. ಸೂರ್ಯನು ಅಸ್ತಾಂಬುಧಿಯಲ್ಲಿ ಮುಳುಗುವ ಮೊದಲೇ ತಾನು ದೈತ್ಯ ಲಂಕಾದ್ವೀಪದ ದಡವನ್ನು ಸೇರುವೆನು ಎನ್ನುವ ಗತ್ತಿನಿಂದ ಹೋಗುತ್ತಿದ್ದನು. ದಿನಪತಿ ಸೂರ್ಯನು ಆಗ ಬಾನ್ ಕಡಲ ಸೀಮೆಯ ಗೆರೆಯ ಪಶ್ಚಿಮದ ಅಂಚಿನಿಂದ ಓರೆ ಕಿರಣಗಳನ್ನು ಹರಿಸಿ ನೋಡುತ್ತಿದ್ದನು. ತನ್ನ ವಂಶಕ್ಕೆ ಮಂಗಳವನ್ನುಂಟು ಮಾಡುವವನಿಗೆ ಸಹಾಯ ಮಾಡುವಂತೆ, ಮೋಹದಿಂದ ನಿತ್ಯ ಕರ್ತವ್ಯದ ಆವೇಗವನ್ನು ಸ್ವಲ್ಪ ತಡೆದು ಸಾವಕಾಶವಾಗಿ ನಿಂತನು.

ಕಪೀಶ್ವರನು ಹಾರುತ್ತಿದ್ದ ಉತ್ತುಂಗದ ಎತ್ತರಕ್ಕೆ ಹೇಮಂತ ಋತುವಿನ ಸಂಧ್ಯೆಯ ಚಳಿಗಾಳಿ ಹೆಚ್ಚಿತು. ರಾತ್ರಿಯ ಮೊದಲ ಮೆಟ್ಟುಗಾಲ ತುದಿಬೆರಳಅಡಿಯ ಕಪ್ಪು ಭೂಮಿಯ ತಗ್ಗು ಪ್ರದೇಶಗಳಲ್ಲಿ ನಡೆಯ ತೊಡಗಿತ್ತು. ಕಿಡಿಯ ನಕ್ಷತ್ರಗಳು ಮುಖ ತೋರಿಸಲಾರದೆ ನಾಚಿ, ಸೂರ್ಯಾಸ್ತದ ಮುಹೂರ್ತಕ್ಕೆ ಕಾದಿದ್ದವು. ಹಗಲನ್ನು ಅಗಲುವ ಜಗತ್ತಿನ ಕತ್ತಲೆ ಬೆಳಕುಗಳ ಸಂಧಿಸಮಯವು ಮೌನದಿಂದ ಧ್ಯಾನಮಯವಾಗಿತ್ತು. ಆಗ ಸಮೀರಜನು ಒಂದು ಅನುಪಮ ಸಂಗೀತವನ್ನು ಕೇಳಿದನು. ಅವನಿಗೆ ಆ ಇಂಚರದ ಜೇನ್ ತೊರೆಯ ಲೀಲಾತರಂಗದ ಉಯ್ಯಾಲೆಯಲ್ಲಿ ಜೋಗುಳ ಹಾಡುತ್ತ ತೊಟ್ಟಿಲಲ್ಲಿಟ್ಟು ತನ್ನನ್ನು ತೂಗುತ್ತಿರುವಂತೆನಿಸಿತು. ಮನಸ್ಸು ಜೊಂಪಿಸಿತು. ಕನಸೊ ನನಸೊ ಎನ್ನುವಂತಹ ಆ ಗೇಯ ಸುಖಕ್ಕೆ ಕಣ್ಣೆವೆಗಳು ಅರ್ಧ ಮುಚ್ಚಿದವು.

ಕೆಳಗೆ ಕಡಲಿನ ಎದೆಯ ಮೇಲೆ ಒಂದು ಚಿನ್ನದ ಚೆಲುವಿನ ತಾವರೆಯ ದ್ವೀಪ ಕಂಡಿತು. ದೀಪದ ಉರಿಯ ಸಾವಿನ ಸೊಬಗಿಗೆ ಎರಗಿ ಸೀಯುವ ಪತಂಗದಂತೆ, ಆ ಮಹಾಮತಿಯು ಅಲ್ಪಮತಿಯಾಗಿ ನಿಧಾನವಾಗಿ ಇಳಿಯುತ್ತಿದ್ದನು. ಆಗ ಅವನಿಗೆ ಒಂದು ಆಕಾಶವಾಣಿ ಕೇಳಿಸಿತು.

'ಹೇ ಹನುಮಂತದೇವ ನಿನಗೇತಕ್ಕೆ ಈ ಮೋಹ, ಈ ತಮ, ಈ ನಿದ್ರೆ? ಈ ಪದ್ಮಲಂಕೆಯು ಬಲಕ್ಕೆ ಸೋಲದ ವೀರರನ್ನು ಕಲೆಯ ಬಲೆಯೊಡ್ಡಿ ಕೊಲ್ಲುವ ಕೃತ್ರಿಮ ಏರ್ಪಾಡು. ಕೇಳು, ಇಂದ್ರಿಯ ಸುಖಕ್ಕಾಗಿ ಇಂದ್ರನಂದನದಂತಿರುವ ಇದನ್ನು; ಪದ್ಮಲಂಕೆ ಎಂಬ ಹೆಸರಿನ ಕಪಟದ ನಿವಾಸವನ್ನು ಮಹಾ ಮಾಯಾವಿಯೂ ಮೇಧಾವಿಯೂ ಆದ ರಾವಣನ ಮಗ ಮೇಘನಾದನು ನಿರ್ಮಿಸಿದ್ದಾನೆ.

'ನೀನು ಯೋಗಿಯಾಗಿದ್ದರೂ ಭೋಗ ಸರ್ಪದ ಅಪ್ಪುಗೆಯಿಂದ ಬಿಡುಗಡೆ ಹೊಂದುವುದು ಕಷ್ಟಸಾಧ್ಯವಾದುದು! ಈ ಪದ್ಮಲಂಕೆಯನ್ನು ಪ್ರವೇಶಿಸಿ ಸುಗ್ರೀವನ ಕಾರ್ಯವನ್ನು ಹಾಳು ಮಾಡಬೇಡ. ಈ ಶತ್ರು ಸಿಂಹಿಕೆಗಿಂತಲೂ ಕಠಿನವಾದುದು, ಏಕೆಂದರೆ ಇದು ಮಿತ್ರವೇಷಿ. ತನ್ನ ದೌರ್ಬಲ್ಯದಿಂದ ತಾನು ಓಡಿ ಪಾರಾಗುವಂತೆ, ನೀನು ಇಲ್ಲಿರದೆ ಬೇಗನೆ ನಡೆ, ಓಡು. ಇಂದ್ರಿಯದ ಲೋಕದಲ್ಲಿ ಸಾಹಸದ ಸೋಗು ಒಮ್ಮೊಮ್ಮೆ ಆತ್ಮಪತನಕ್ಕೆ ನೆರವಾಗುತ್ತದೆ!'

ಎಂದು ಸೂರ್ಯನು ಗಗನವಾಣಿಯಲ್ಲಿ ಎಚ್ಚರಿಕೆಯಾಗಿ ನೀಡಿದ ಆಣತಿಗೆ ತಕ್ಷಣ ಮರುತಾತ್ಮಜನ ತಮಸ್ಸು ಕುಂದಿ, ನಿದ್ದೆಯಿಂದ ಎಚ್ಚರಗೊಂಡಂತೆ ಎದ್ದನು. ಪುಟನೆಗೆವ ಹೊಸ ಚೆಂಡಿನಂತೆ ಬಾನಿಗೆ ಚಿಮ್ಮಿದನು. ಮತ್ತೆ ಉತ್ಸಾಹಗೊಂಡು ಆ ಶೂನ್ಯವನ್ನು ವೇಗವಿಕ್ರಮದಿಂದ ಆಕ್ರಮಿಸಿ ಮುಂದುವರೆದನು.

ಅಷ್ಟರಲ್ಲಿ ಸಮುದ್ರವು ಪಶ್ಚಿಮದ ಅರಿಸಿನ ರೇಖೆಯ ಚಲಿಸಾಡುವ ಜಲದಿಂದ ಪ್ರಕಾಶಮಾನವಾಗಿ ಬೆಳಗಿತು. ಚಿನ್ನವು ಕರಗಿ ನೀರಿನ ಚಂಚಲತೆಯಿಂದ ಲೀಲಾಜಾಲವಾಗಿ ಚೆಲುವಾದಂತಾಯಿತು. ಮಿಂಚಿನ ತೆರೆಯ, ಕಾಂಚನ ಪೊರೆಯ ಸರ್ಪವು ಹರಿದಾಡುವಂತಾಯಿತು. ಅರ್ಧ ಮುಳುಗಿದ್ದ ಗುಂಡಾದ ರವಿಯ ವರ್ತುಲದ ಮೇಲ್ಭಾಗವು ಸರ್ಪದ ಶಿರೋಮಣಿಯಂತೆ ಹೊಳೆಯುತ್ತಿತ್ತು.

ಆಂಜನೇಯನು ರವಿಯೊಡನೆ ಸ್ಪರ್ಧಿಸುತ್ತ ಬೇಗ ಬೇಗನೆ ಸಾಗುತ್ತಿದ್ದನು. ಆ ಮಂಜು ಸಂಜೆಯ ದಕ್ಷಿಣ ದಿಕ್ಕಿನ ದೂರದಲ್ಲಿ ದಡ ಕಂಡಿತು. ಆ ದ್ವೀಪದಲ್ಲಿರುವ ದಟ್ಟವಾದ ಕಾಡಿನಿಂದೊಡಗೂಡಿದ ಬೆಟ್ಟದ ಸಾಲಿನ ನೀಲಮಣಿ ರೇಖೆಯು ಆಹ್ವಾನಿಸುವಂತೆ ಅದು ಸ್ವಲ್ಪ ಗೋಚರಿಸಿತು. ಮನದಲ್ಲಿ ಹರ್ಷೋಲ್ಲಾಸ ಉಕ್ಕಲು, ತಾನು ಸಮುದ್ರದಂತೆ ಉಕ್ಕಿ ಸೂರ್ಯದೇವನಿಗೆ ನಮಸ್ಕರಿಸುತ್ತ,

'ಸಲ್ಗೆ ಸುಗ್ರೀವಾಜ್ಞೆ! ಗೆಲ್ಗೆರಘು ರಾಮೇಚ್ಛೆ! ಮಾತೆ ಸೀತಾಮಾತೆ ಶುಭವಾರ್ತೆ ನನ್ನ ಮುಡಿಗೇರ್ಗೆ! ಕಪಿಕುಲ ಕೀರ್ತಿ ಚಿರಮಕ್ಕೆ!'

ಎಂದು ಅಟ್ಟಹಾಸದಿಂದ ಭೀಮಘೋಷವನ್ನು ಮಾಡಿ, ಮುಂದುವರೆಯುತ್ತಿರಲು ಕನಕ ಲಂಕೆ ಸಮೀಪಿಸಿತು!

ಆಂಜನೇಯನ ದೃಷ್ಟಿ ಕಂಡದ್ದನ್ನು ಅವನ ಚಿತ್ತ ಅನುಭವಿಸಿದುದನ್ನು ಯಾರುತಾನೆ ವರ್ಣಿಸಲು ಸಾಧ್ಯ? ಹಿಗ್ಗುತ್ತ, ಆಕಾಶದೆತ್ತರದಿಂದ ಲಂಕೆಯನ್ನು ನೋಡಿದನು. ಬೈಗುಗಪ್ಪು ಆವರಿಸಿದ್ದರೂ ಸಮುದ್ರದಿಂದ ಸುತ್ತುವರಿದ ದೈತ್ಯ ನೃಪನಗರಿ ಉಜ್ವಲವಾಗಿ ಕಾಣುತ್ತಿತ್ತು! ಕುಶಲತೆಯಿಂದ ರಚಿತವಾದ ವಿಸ್ತಾರವಾದ ದೀಪಕಂಬಗಳ ಸಾಲು ಆಕಾಶವೋ ಅಥವಾ ಅದರ ನೆರಳೋ ಎಂಬಂತೆ ಆ ಬೃಹನ್ನಗರಿ ಭ್ರಾಂತಿಯುಂಟು ಮಾಡುತ್ತಿತ್ತು! ಅದು ನಕ್ಷತ್ರಗಳು ಹಾಸು ಹೊಕ್ಕು ಕಿಕ್ಕಿರಿದಿರುವ ಕ್ಷೀರಪಥದಂತೆ ಮೇಧಾವಿಗೂ ಭ್ರಾಂತಿಯುಂಟಾಗುವಂತೆ ಕಾಣುತ್ತಿತ್ತು!

ಎದೆಯಲ್ಲಿ ರೋಷ ಮತ್ತು ಸಂತೋಷವೆರಡೂ ಮೂಡುತ್ತಿರಲು ಆಂಜನೇಯನು, ದಶಗ್ರೀವನ ಪಾಪ ವೈಭವದ ಮಧ್ಯೆ ಸೆರೆಸಿಕ್ಕಿದ ಸೀತೆಯ ಪುಣ್ಯಕಾಂತಿಯನ್ನು ನೆನೆದನು. ತನ್ನ ಆಗಮನದ ಶಂಕೆಯುಂಟಾಗಬಾರದೆಂದು ಬರಬರುತ್ತ ತನ್ನ ಗಾತ್ರವನ್ನು ಕಿರಿದು ಮಾಡಿಕೊಂಡು ಉಲ್ಕೆಯ ವೇಗದಿಂದ ಚಕ್ರಗತಿಯಲ್ಲಿ ಇಳಿದನು.

ದೇವಪಥದಿಂದ ರಾಕ್ಷಸರ ನೆಲಕ್ಕೆ ಸುರುಳಿ ಸುರುಳಿಯಾಗಿ ಇಳಿಯುತ್ತಿದ್ದಂತೆ ತಿಮಿರ ಸಾಂದ್ರತೆ ಹೆಚ್ಚಿತು. ದಶಶಿರನ ಪ್ರತಿಭಟನೆ ನೆಗೆದು ನುಗ್ಗಿತೊ ಎನ್ನುವಂತೆ ಮತ್ತು ಸೀತಾಮಾತೆಯ ಪ್ರಾರ್ಥನಾ ಆಶೀರ್ವಾದವು ಇದಿರುಗೊಳ್ಳಲು ಬಂದಿತೊ ಎನ್ನುವಂತೆ ಅವನಿಗೆ ಎದುರಾಗಿ ದ್ವೀಪಧಾತ್ರಿಯು ಎದ್ದು ಓಡಿಬಂದಿತು. ನೆಲದಿಂದ ಆಕಾಶಮುಖಿಯಾಗಿ ರಭಸದಿಂದ ಬೀಸಿದ ಸುಯ್ಗಾಳಿಯು ಅವನ ಮೈಗೆ ತಣ್ಣನೆ ಒತ್ತಿತು. ಕೆಳಕೆಳಕ್ಕೆ ಇಳಿದು ಭೂಮಿಯ ಸಮೀಪಕ್ಕೆ ಬರುತ್ತಿದ್ದಂತೆ ನೆಲದ ಉಸಿರ ಕಾವು ಹೆಚ್ಚಿತು. ವಾಯು ಮಂಡಲವು ಬರಬರುತ್ತ ಶಾಖಮಯವಾಯಿತು.

ನಕ್ಷತ್ರಗಳೇ ದಟ್ಟೈಸಿ ರಂಗೋಲಿಯನ್ನು ಇಟ್ಟ ರೀತಿಯಲ್ಲಿದ್ದ ಲಂಕಾನಗರದ ದೀಪ ಸಮೂಹವು ನಿಬಿಡತೆಯನ್ನು ಕಳೆದುಕೊಂಡು ವಿರಳತೆಯನ್ನು ಹೊಂದಿತು. ಬಾನೆತ್ತರದ ಆ ನಿಶ್ಯಬ್ದತೆ ಮಾಯವಾಗಿ ಮರ್ತ್ಯದ ನಾನಾ ವಿಧದ ಶಬ್ದ ಧ್ವನಿಯ ಗೋಷ್ಠಿಗಾನವು ಕಿವಿಗೆ ತಾಕಿದವು.

ಸಂಜೆಯ ಮಬ್ಬು ಕಪ್ಪಿನಲ್ಲಿ ಆ ಶಿಖರ ಮತ್ತು ಕಣಿವೆಯ ವೃಕ್ಷಗಳನ್ನು ತನ್ನ ಎದೆಯಲ್ಲಿ ಹೊತ್ತ ಪೃಥ್ವಿಯು ಹತ್ತಿರ ಹತ್ತಿರಕ್ಕೆ ಕುದುರೆ ಪಡೆಯ ವೇಗದಿಂದ ಮೇಲೇರಿ ಬರುತ್ತಿರಲು ಮಾರುತಿಯು ತನ್ನ ವೇಗವನ್ನು ತಗ್ಗಿಸಿಕೊಂಡನು. ಪಕ್ಷಿಯು ನೆಲಕ್ಕೆ ಇಳಿಯುವ ಮೊದಲು ಹೇಗೆ ತಾನು ಇಳಿಯ ಬೇಕಾಗಿರುವ ತಾಣವನ್ನು ಲೆಕ್ಕ ಹಾಕುವುದೊ ಹಾಗೆ ಅವನು ಜನರಹಿತವಾದ, ಶಿಖರದ ಎತ್ತರ ಪ್ರದೇಶವನ್ನು ಹುಡುಕಿದನು. ಸುರುಳಿ ಸುರುಳಿಯಾಗಿ ಅಲೆದು ಮೆಲ್ಲನೆ ಅತಿ ಎಚ್ಚರಿಕೆಯಿಂದ ಲಂಬ ಎಂಬ ಶಿಖರದ ಮೇಲೆ ನರರೂಪದಲ್ಲಿ ಇಳಿದನು.

ಕಣ್ಣಿಗೆ ಗೋಚರಿಸದಿದ್ದರೇನು? ಕೇದಗೆ ಹೂವಿನ ಕಂಪು ಮೂಗಿಗೆ ಬಡಿದು, ನೀರಿನ ನೆಲೆಗಳಿರುವುದನ್ನು ಸೂಚಿಸುತ್ತ ತಂಪುಗಾಳಿ ತೀಡಿತು. ಮುಂದೆ ಲಂಕಾತ್ರಿಕೂಟಾದ್ರಿಯ ದೀಪಮಾಲೆ ಶೋಭಿಸುವುದು ಕಂಡಿತು. ಸಮುದ್ರದ ಮರ್ಮರದ ಜೊತೆಗೆ ಪುರದ ಜನರ ಗಡಿಬಿಡಿಯ ಆಳ ಮರ್ಮರ ಶಬ್ದ ಕೇಳಿಸಿತು. ಶೂನ್ಯದಿಂದ ಇಳಿದ ವಾಯುಸುತನಿಗೆ ಪಂಚೇಂದ್ರಿಯಗಳು ಪುನರ್ಜನ್ಮ ಪಡೆದಂತೆ ಆ ಪೃಥ್ವಿ ಹೊಚ್ಚ ಹೊಸತಾಗಿ ಕಂಡಿತು. ಮುಖವೆತ್ತಿ ತನ್ನ ಯಾತ್ರೆಯ ಮಹಾಮಾರ್ಗವನ್ನು ನೋಡಿದನು. ತಾನು ಸಮೀಪದಲ್ಲಿರಲು ನಾಚಿ ಮರೆಯಾಗಿದ್ದ ನಕ್ಷತ್ರಗಳು ತಾನು ಕತ್ತಲೆಯಿಂದ ದೂರಕ್ಕೆ ಹೋಗಲು, ಕೆಚ್ಚುದಿಸಿದಂತೆ ಅಗಣಿತವಾಗಿ ಮೂಡಿ ಅಂಬರಕ್ಕೆ ಕಿಡಿ ಹಚ್ಚಿದಂತೆ ಕಿಕ್ಕಿರಿದಿದ್ದವು!

ಅವನು ವಿಶ್ರಮಿಸುತ್ತ ತನ್ನ ಮುಂದಿನ ಕಾರ್ಯ ಕುರಿತು ಚಿಂತಿಸುತ್ತಿದ್ದನು. ಆಗ ಆಶಾದಿಗಂತದಲ್ಲಿ ಶಾಂತಿಮಯ ದೇವರದಯದಂತೆ ವಿಜಯಲಕ್ಷ್ಮಿಯ ಕೈ ಆರತಿಯ ಜ್ಯೋತಿಯ ಓಕುಳಿಯಂತೆ ಚಂದ್ರೋದಯದ ಕೆಂದಾವರೆ ಕಾಂತಿಯು ಮೈದೋರಿತು!

❑



~~~~~~~~~~~~~~~~~~~~~~ ಸಂಚಿಕೆ – ೧೨ ~~~~~~~~~~~~~~~~~~~~~~

ದಶಶಿರ ಕನಕಲಕ್ಷ್ಮಿ

ಆಂಜನೇಯುನ ಆಗಮುನಕ್ಕೆ ಅಂಜಿದ ಲಂಕಾರಾತ್ರಿಯು ನಡುಗಿ ಬಿಳಿಚಿಕೊಂಡಿತೋ ಎನ್ನುವಂತೆ, ನಾಥನು ಬರುವನೆಂಬ ಲಜ್ಜೆಗೆ ತಣ್ಣನೆಯ ಇರುಳಿನ ಮುಖ ಬೆಳ್ಳಗಾಯಿತು. ನಿಶೆಯ ನೀಲಿಯ ನಯನ ನೈದಿಲೆಗಳನ್ನು ಅರಳಿಸಲು ಪೂರ್ವದಿಕ್ಕಿನ ಮುಗಿಲಿನಂಚಿಗೆ ಚಂದ್ರನ ತಣ್ಣನೆ ಕಾಂತಿಯ ಬೆಳ್ಳಿನೀರು ಹೊಮ್ಮಿತು. ನಿಶಾಕಾಂತನ ಆಗಮನದ ಗೌರವಕ್ಕೆಂಬಂತೆ ಕಿರುತಾರೆಗಳು ಮರೆಯಾದವು; ದೊಡ್ಡ ನಕ್ಷತ್ರಗಳು ಕಳೆಗುಂದಿ ವಿನಯದಿಂದ ದೂರ ಸರಿದು ನಿಂತವು.
~~~~~~~~~~~~~~~~~~~~~~

ಗಿಡ ಮರ ಬಂಡೆಗಳಿಗೆ ನೆರಳು ಮೂಡಿತು. ಅದರ ಜೊತೆಗೆ ಭೀಮವಿಕ್ರಮಿ, ಭಯಂಕರಶರೀರ ಭೀಮಚಿತ್ತದ, ಬೃಹತ್ತಾದ ಮರಸ್ಥಿರತೆಗೆ ಸಮನಾದ ವಾನರೋತ್ತಮನ ಭೀಷ್ಮ ದೀರ್ಘತೆಗೂ ನೆರಳು ಮೂಡಿತು. ಅಂಧಕಾರವು ಜಾಲಂದ್ರದಂತೆ ರಂಧ್ರರಂಧ್ರಗೊಂಡು ಜರ್ಜರಿತವಾದವು. ತಂಪಾದ ಮಂಜಿನಲ್ಲಿ ಹಾಲುಮಬ್ಬಿನಂತೆ ಕಾಣುವ ಪಾದರಸ ಬಿಂಬಿಯಾದ, ಶೈಲಕಾನನ ಶಿರವನ್ನು ಚುಂಬಿಸುವ ಶಿಶಿರ ಶಶಿಯು ತೆರೆಯನ್ನು ಸರಿಸುತ್ತ ಮೈದೋರಿದನು. ಹೊನ್ನ ಹೊಳಪಿಗೆ ಮಿಂಚುವ ಸಮುದ್ರತೆರೆಯ ಮೇಲೆ ಹಾಯುವ ಅಶ್ವದಳದಂತೆ ಚಂದ್ರನ ಕಾಂತಿಗೆ ಅಲೆಗಳು ನಲಿದು ನರ್ತಿಸಿ ಚಲಿಸಾಡಿದವು. ಶರಧಿತೀರವನ್ನು ಅಲಂಕರಿಸಿ ಮೂರು ಶಿಖರಗಳನ್ನು ಅಪ್ಪಿಕೊಂಡು ನಿಂತಿದ್ದ ಗಿರಿವನ ನಗರಿ ಲಂಕೆಯು ಬೆಳುದಿಂಗಳಿನಲ್ಲಿ ಮಿಂದು ಶೋಭಿಸುತ್ತಿತ್ತು. ಆ ತ್ರಿಕೂಟಾಚಲವು ದೈತ್ಯೇಂದ್ರ ದಶಶಿರನ ಕನಕಲಕ್ಷ್ಮಿಯ ಲೀಲಾಕ್ಷೇತ್ರವಾಗಿತ್ತು.

ಛೀ, ಭ್ರಾಂತಿ ನನಗಿದೇಂ? ದಿಟಮಿದೆ ಕನಕಲಂಕೆ

ಅಂಜನೇಯನು ಸಾಕಷ್ಟು ಹೊತ್ತು ನಿಂತು ವಿಹಂಗಮ ದೃಷ್ಟಿಯಲ್ಲಿ ತ್ರಿಕೂಟಾಚಲ ಲಂಕೆಯನ್ನು ಪೂರ್ಣವಾಗಿ ನೋಡಿದನು. ಇಂದ್ರಿಯ ಸುಖ ಸ್ವರ್ಗದಂತಿರುವ, ರಾಕ್ಷಸನ ಸಂಪತ್ತಿನ ಆಗರವಾಗಿರುವ ಅಭೇದ್ಯ ದುರ್ಗವನ್ನು ನೋಡುತ್ತ–ನಾಗರಿಕ ಪಟ್ಟಣದ ಪ್ರಥಮ ದರ್ಶನದಿಂದ ತನ್ನ ಗ್ರಾಮೀಣತೆಯನ್ನು ಅನುಭವಿಸುವ ಅಸಂಸ್ಕೃತನಂತೆ ನಿರಾಶೆಯಿಂದ ನಿಟ್ಟುಸಿರು ಬಿಟ್ಟನು! ಬೆರಗಾಗಿ ಖೇದಗೊಂಡು ಮನಸ್ಸಿನಲ್ಲಿ ಅಂದುಕೊಂಡನು,

'ಇದೇ ಕನಕ ಲಂಕೆಯೆ? ಇದೇ ದಶಗ್ರೀವ ಬಿರುದಿನ ಮಹಾರಾವಣನ ದೈತ್ಯಪುರಿಯೆ? ನನಗೇನೊ ಸಂದೇಹ! ತಾನು ಕೇಳಿದ್ದ ಬಣ್ಣನೆಗೂ, ಈಗ ಕಾಣುತ್ತಿರುವುದಕ್ಕೂ ಅಜಗಜಾಂತರ! ಆ ಒರಟುತನವೆಲ್ಲಿ? ನಾನು ಕಾಣುತ್ತಿರುವ ಕಲೆಯ ಕುಶಲತಾ ನಯವೆಲ್ಲಿ? ತಾನು ಕೇಳಿದ ರಾಕ್ಷಸರ ವಿಕೃತಿ ಎತ್ತ? ಕಂಗೊಳಿಸುತ್ತಿರುವ ನಾಗರಿಕ ಪ್ರಕೃತಿ ಎತ್ತ? ನಾನೇನಾದರೂ ತಪ್ಪಿ ಲಂಕೆಯನ್ನು ಬಿಟ್ಟು, ಬೇರೆ ದೇವತಾ ಭೂಮಿಯನ್ನೋ, ಅಮರಾವತಿಯನ್ನೋ, ಅಲಕೆಯನ್ನೋ, ಯಾವುದೋ ಗಂಧರ್ವರ ಅಥವಾ ಕಿನ್ನರರ ಲೋಕವನ್ನು ಪ್ರವೇಶಿಸಿರುವೆನೋ? ಛೀ ನನಗೆಂತಹ ಭ್ರಾಂತಿ? ಇದೇ ಕನಕಲಂಕೆ!

'ಇಂದ್ರಜಿತುವಿನ ತಂದೆಯಾದ ರಾವಣನಿಗಲ್ಲದೆ ಈ ವೈಭವ ಇನ್ನು ಯಾರಿಗೆ ಸಾಧ್ಯ! ಕುಬೇರನನ್ನು ಸೂರೆಮಾಡಿದವನಿಗೆ ಇದು ಬರಿಯ ಅಲ್ಪವಲ್ಲವೆ? ಪರಸತಿಗೆ ಆಸೆ ಪಡುವುದು ಈ ಸಿರಿಯ ಸೊಕ್ಕಿರುವವರಿಗೆ ಅಲ್ಲದೆ ಇತರರಿಗೆ ಸಲ್ಲದು. ಚೀ ಈ ವೈಭವ ಅಸಹ್ಯವಾದುದು! ಇದು ಹೊನ್ನಿನದಾದರೂ ಈ ನಗರಕ್ಕೆ ಹೊಗಳಿಕೆ ಸಲ್ಲದು!

ಲಂಕೆಯು ಮೊದಲು ದುರ್ಗಮವಾಗಿತ್ತು! ಇನ್ನು ಅಲ್ಲ! ಪೂಜ್ಯ ಸೀತಾದೇವಿ ಇರುವವರೆಗೂ ಇದು ನಮಗೆ ಸ್ವರ್ಗ! ದಾನವರ ದುರ್ಗವೋ? ದೇವತಾ ಸ್ವರ್ಗವೋ! ಏನಾದರೂ ಆಗಿರಲಿ! ಒಳಹೊಕ್ಕು ನೋಡುತ್ತೇನೆ!'

ಸಮೀರಾತ್ಮಜನು ಗಿರಿಯಿಂದ ಇಳಿದನು. ಬೇಟೆಯಾಡುವ ಸಿಂಹವು ರೋಷಗೊಂಡರೂ ಗರ್ಜಿಸದೆ, ದೃಢನಿಶ್ಚಯದ ಮೌನದಿಂದ ಕಾಡನ್ನು ಸೀಳುತ್ತ ಗಜಗಳ ಗುಂಪನ್ನು ಹುಡುಕುವಂತೆ ತಿಂಗಳ ಬೆಳಕಿನಲ್ಲಿ ಮುಳುಗಿದ್ದ ರಾಕ್ಷಸಾಕಾರದ ಮರಗಳ ಮಧ್ಯೆ ಕಾಡು ಪ್ರಾಣಿಗಳ ನಿದ್ದೆ ಕೆಡಿಸಿ ನುಗ್ಗಿ ನಡೆದನು. ಬೆಟ್ಟದ ದಾರಿ ಕಂದರಗಳನ್ನು ದಾಟಿ ನೆಗೆದು ಇಳಿದು ಹೋದನು. ಸಿಡಿಲೇ ಹುಬ್ಬುಗಂಟಿಕ್ಕಿದಂತಹ ದೊಡ್ಡ ಕೋಟೆಯ ಹೊರವಲಯವನ್ನು; ಆಗಸವನ್ನು ಮೀಟುವ ಕೊತ್ತಳಗಳನ್ನು ನೋಡಿದನು. ಆ ದೈತ್ಯಕೃತಿ ಕಂಡು ಮನಸ್ಸಿನಲ್ಲಿ 'ಇದನ್ನು ಹೇಗೆ ಪ್ರವೇಶಿಸುವುದು? ಸಾಮಾನ್ಯರೂಪದಿಂದ ಇದನ್ನು ನೆಗೆಯಲಾರೆ! ಪ್ರಕೃತಿ ಸಹಜ ಸ್ವಾಭಾವಿಕ ಪ್ರಯತ್ನ ಸೋತಮೇಲಲ್ಲವೆ ಅಪ್ರಾಕೃತಕ್ಕೆ ಆಹ್ವಾನವೀಯುವುದು! ರಾಮಸತಿಯ ಅನ್ವೇಷಣೆಯನ್ನು ರಾವಣನ ಹಾಗೆ ಕಳ್ಳತನದಿಂದ ಮಾಡಬಾರದು, ಅಪಮಾರ್ಗ ಅಪಥ್ಯ. ಬ್ರಹ್ಮಚರ್ಯಕ್ಕೆ ಕಳ್ಳಮಾರ್ಗ ಯೋಗ್ಯವಲ್ಲ! ಪುರದ ಹೆಬ್ಬಾಗಿಲು ಎಲ್ಲಿದೆಯೆಂದು ಕೋಟೆಯನ್ನು ಸುತ್ತಿ ನೋಡುತ್ತೇನೆ. ಕಂಡರಾಯಿತು; ಕಾಣದಿದ್ದರೆ, ಮುಂದಕ್ಕೆ ನಾನು ಕಾಣಬೇಕಾಗಿರುವುದನ್ನು ಕಾಣುತ್ತೇನೆ.'

ಎಂದುಕೊಳ್ಳುತ್ತ, ಹಾವಿನ ಚಲನೆಯಂತಹ ತಿರುವು ಮುರುವುಗಳಿಂದ, ಆಮೆಯ ಚಿಪ್ಪಿನಂತಹ ಭೇದಿಸಲಾಗದ ಕಟ್ಟಡದಿಂದ ಕೂಡಿದ ಆ ಕೋಟೆಯನ್ನು ಅನುಸರಿಸುತ್ತ ಮುಂದುವರಿದನು. ತಿಳಿವಿಗೆ ಬಾರದ ಚಾತುರ್ಯದ ಹೆಬ್ಬಾಗಿಲ ರಚನೆಯ ಆ ಯುಕ್ತಿಯನ್ನು ಭೇದಿಸಲು ಕೋಟೆಯ ಸುತ್ತ ಬಳಸಿ ಬಂದನು. ಹೊಂಚುಹಾಕಿ ತನ್ನ ಹುಡುಕುವ ಹುಟ್ಟುಗುಣವನ್ನು ಬಿಡದೆ ಮತ್ತೆಮತ್ತೆ ತನಗೆ ಉಂಟಾಗುವ ದಿವ್ಯ ಸಂಶಯದ ಛಾಯಾಶಕುನದ ಸೂಚನೆಯಂತೆ ಪ್ರಾಣಜನು ಬಹುದೂರ ಮುಂದುವರಿದನು.

ಮಿಥ್ಯೆಯು ತಾನು ತನ್ನ ಹುಸಿಸಾಹಸದ ಬಿಸಿಲುಗುದುರೆಯ ಬೇಟೆಯಿಂದ ಬೇಸತ್ತು, ಬಾಯಾರಿ, ನೀರಿನ ದಾಹದಿಂದ ಬಾಯಿಬಿಟ್ಟು ಕೂಗುತ್ತಿರುವಂತೆ ಮುಂದೆ ಲಂಕಾ ದ್ವಾರ ಕಾಣಿಸಿತು. ನೀತಿ ಪಂಡಿತನಾದ ಅವನು ಎಚ್ಚರಿಕೆಯಿಂದ ಅದರ ಬಳಿಗೆ ಹೋದನು. ದೂರದಲ್ಲಿ ನಗರದ ಕೋಲಾಹಲವು ಭೋರ್ಗರೆದು ಹೊಮ್ಮುತ್ತಿತ್ತು.

ರಾಕ್ಷಸಾಕೃತಿಯ ಶಿಲ್ಪಕೃತಿಯ ಬೃಹದ್‌ದ್ವಾರ.

ಸೂಕ್ಷ್ಮಮತಿಯಾದ ಮಾರುತಿಯು ಬೃಹತ್‌ದ್ವಾರದ ಶಿಲ್ಪಕೃತಿಯನ್ನು ಸಮೀಕ್ಷಿಸಿದನು. ಹಾವು ಬಾಯಿ ತೆರೆದಂತೆ ಕೋಟೆಯ ಬಾಯಿಯಿತ್ತು. ಅದು ಉಗ್ರ ಚಿತ್ರಗಳಿಂದ

ಕಲಾತ್ಮಕವಾಗಿತ್ತು. ಅದು ರಕ್ಷಣಾರಹಿತವಾಗಿ ನಿರ್ಜನವಾಗಿದ್ದು, ಮನಕ್ಕೆ ಕೃತ್ರಿಮದ ಲಕ್ಷಣವೆನಿಸಿತು. ನೋಡನೋಡುತ್ತಿದ್ದಂತೆ ಬೆಳುದಿಂಗಳು ನೋಟಕ್ಕೆ ಔತಣವನ್ನುಂಟು ಮಾಡುತ್ತ ಮರದ ನೆತ್ತಿಯಿಂದ ಮೇಲೇರಿತು. ಅದು ಲೋಕವನ್ನು ಶಿಶುವಾಗಿಸಿ ಮೋಹದ ಉಯ್ಯಾಲೆಯಲ್ಲಿ ತೂಗುವಂತೆ ಕಂಡು ಆಹ್ಲಾದಕರವಾಗಿತ್ತು. ಆ ಬೆಳಕಿನಲ್ಲಿ ವಜ್ರ ವೈಡೂರ್ಯಾದಿ ಬಹುವರ್ಣ, ಬಹುರತ್ನಗಳಿಂದ ಕೋಟೆಯ ಮುಖ ಝಗಝಗಿಸಿತು! ಅವನಿಗೆ ಕಣ್ಣು ಕೋರೈಸಿತು! ಮನಸ್ಸು ತಲ್ಲಣಿಸಿತು! ಬೆಚ್ಚಿ ನಿಮಿಷಮಾತ್ರಕ್ಕೆ ಕಣ್ಣೆವೆ ಮುಚ್ಚಿದವು. ಮರಗಳ ಕಪ್ಪುನೆರಳು ಬಿಳುಪಾಯಿತು. ಅದರ ಆಶ್ಚರ್ಯಕರ ಅದ್ಭುತಕ್ಕೆ ಮೆಚ್ಚಿ ಶ್ಲಾಘಿಸಿದನು! ಎಚ್ಚರದಿಂದ ಹೆಜ್ಜೆಯ ಮೇಲೆ ಹೆಜ್ಜೆಯಿಟ್ಟು ನಡೆದ ಅವನಿಗೆ ಬರಿಬಾಯಿ ತೆರೆದಂತೆ ಆ ಕೋಟೆಯ ಬಾಯಿ ಕಂಡಿತು! ಬಳಿನಿಂತು ಸುತ್ತಲೂ ನೋಡಿದನು. ಯಾರ ಸುಳಿವೂ ಕಾಣಲಿಲ್ಲ. ಆಗ ತನ್ನೊಳಗೆ ತಾನು,

'ಸೋಜಿಗವಾಗಿದೆ! ನಗರ ರಕ್ಷಾ ಮುಖವೇ ಅರಕ್ಷಿತವಾಗಿದೆ! ಈ ನಿರ್ಜನತೆ ನೂರು ಜನ ವೈರಿ ಸೈನಿಕರಿಗಿಂತ ಹೆಚ್ಚಿನದಾಗಿದೆ. ಶತ್ರುದೇಶದ ಈ ಅಸ್ಪಷ್ಟತೆ ಅತಿ ಭಯಂಕರವೂ ಅಪಾಯಕಾರಿಯೂ ಆಗಿದೆ! ರಾಕ್ಷಸ ಭೂಮಿ ಈ ಲಂಕೆ ಸುಲಭವಲ್ಲ.... ದಾಶರಥಿಗೆ ಒಳ್ಳೆಯದಾಗಲಿ.

'ಜನಕಪುತ್ರಿಯನ್ನು ಕಂಡು ಹಿಂತಿರುಗಿದರೂ ನಮ್ಮ ಕಾರ್ಯದ ಗೆಲುವನ್ನು ನಾನು ತಿಳಿಯದಾಗಿರುವೆ! ಆ ಮಹಾಸಾಗರದ ಕಂದಕವನ್ನು ನೆಗೆಯುವವರು ಎಷ್ಟು ಜನರಿದ್ದಾರೆ ನಮ್ಮ ಕಿಷ್ಕಿಂಧೆಯಲ್ಲಿ? ದುರ್ಗಮವಾದ ಈ ದೈತ್ಯ ಲಂಕೆಯನ್ನು ಭೇದಿಸುವ ಸಮರ್ಥರು ಎಷ್ಟು ಜನರಿರುವರು? ಅಗ್ನಿಪುತ್ರ ನೀಲ, ವಾಲಿಯಪುತ್ರ ಮಹಾತೇಜಶ್ಶಾಲಿ ಅಂಗದ ಮತ್ತು ವೈರಿಭಯಂಕರ ನೃಪಸುಗ್ರೀವ ಸಾಹಸಿಗಳು ಜೊತೆಗೆ ನಾನೊಬ್ಬ ಈ ನಾಲ್ಕು ಜನರನ್ನು ಬಿಟ್ಟು ಮಿಕ್ಕವರಿಗೆ ಈ ಮಹಾವಾರ್ಧಿಯನ್ನು ಲಂಘಿಸಲು ಅಸಾಧ್ಯ. ಅದು ಹಾಗಿರಲಿ ಕಡಲನ್ನು ಹೇಗಾದರೂ ದಾಟಿ ಬಂದರೂ, ರಾಕ್ಷಸ ವಿದ್ಯೆಯಿಂದ ನಿರ್ಮಿಸಿರುವ ಈ ಕೋಟೆಯನ್ನು ಹೇಗೆ ಪ್ರವೇಶಿಸುವುದು?

'ಒಳ್ಳೆಯ ಪ್ರಯತ್ನದಿಂದ ಸುಗ್ರೀವನಿಗೆ ಮತ್ತು ವಾನರೇಂದ್ರ, ಮಂತ್ರಸಮರ್ಥ ಸುಷೇಣನಿಗೆ, ಮಹಾ ಪ್ರತಿಭಾಶಾಲಿಯಾದ ಮೈಂದನಿಗೆ, ಋಕ್ಷ, ಕುಶಪರಿಗೆ ಮತ್ತು ಕೇತುಮಾಲನಿಗೆ ಅಸಾಧ್ಯವಾದುದಲ್ಲ. ಛೆ! ಏನನ್ನು ಹರಟುತ್ತಿರುವೆನು ನಾನು! ಮಹತ್ಕಾರ್ಯವೇ ಮಹಾಶಕ್ತಿಯನ್ನು ನೀಡಿ ವಾನರರೊಳಗೆ ಅಲ್ಪರೂ ಕಲ್ಪನೆ ಬೆದರುವಂತಹ ಮಹತ್ಕಾರ್ಯವನ್ನು ಮಾಡಲಾರರೆ? ರಾಮಸೀತೆಯರ ಉಸಿರಿನ ಬೆಂಕಿಯ ಕುಲುಮೆಯಲ್ಲಿ ಪುಡಿಯಾದ ತಾನು ಕಿಡಿಯಾಗಿ ಅಧರ್ಮದಿಂದ ಶಿಥಿಲವಾಗಿರುವ ಲಂಕೆಯನ್ನು ನಾಶಮಾಡುವುದಿಲ್ಲವೆ!'

ಎಂದುಕೊಂಡು ಆಂಜನೇಯನು ಹೆಜ್ಜೆ ಹೆಜ್ಜೆಗೆ ನಿಂತು, ಮೈಯೆಲ್ಲ ಕಣ್ಣಾಗಿ ಕಿವಿಯಾಗಿ ನೋಡುತ್ತ ಆಲಿಸುತ್ತ ಮುಂದುವರಿದನು. ದ್ವಾರದ ಹತ್ತಿರಕ್ಕೆ ಹೋಗಲು ಇದ್ದಕ್ಕಿದ್ದಂತೆ ಕಪಟಯಂತ್ರದಿಂದ ಸುಂಟರಗಾಳಿ ಹೊರಹೊಮ್ಮಿ ಬಲವಾಗಿ ಬೀಸಿತು. ಸಂಶಯ ಉಂಟಾದರೂ, ಕಣ್ಣಿಗೆ ಏನೂ ಅಪಾಯಕಾಣದಿರಲು ಬಾಗಿಲುವಾಡ ದಾಟಲು ಕಾಲಿಟ್ಟನು. ಅಯ್ಯೋ, ಕಾಲಿಟ್ಟುದೇ ತಡ ಕವಣೆಯಿಂದ ಕಲ್ಲು ಸಿಡಿಯುವಂತೆ ಅವನ ಭಾರಿದೇಹವು ಬಿಲ್ಲೆಸೆಯುವ ದೂರಕ್ಕೆ ಸಿಡಿಯಿತು. ಕಲ್ಲುಬಂಡೆಯನ್ನು ನುಚ್ಚಾಗಿಸುವ ಆ ಎಸೆತಕ್ಕೆ ಅವನು ಸ್ವಲ್ಪ ಆಶ್ಚರ್ಯಕ್ಕೊಳಗಾದನು. ನೆಗೆದು ನಿಂತು ತನ್ನ ವಕ್ಷಸ್ಥಳದಲ್ಲಿದ್ದ ಮುದ್ರೆಯುಂಗುರವನ್ನು ಮುಟ್ಟಿ ನೋಡಿಕೊಂಡನು.

'ದಶಕಂಠನಿಂದ ಪಾಲಿತವಾದ ಈ ಲಂಕೆ ನಿಜವಾಗಿಯೂ ರಾಕ್ಷಸರ ಭೂಮಿ. ಇಲ್ಲಿ ನನ್ನ ಸಾಧಾರಣತೆ ಉಪಯುಕ್ತವಾಗುವುದಿಲ್ಲ.' ಎಂದು ಔಡುಗಚ್ಚಿದನು. ದೃಢಚಿತ್ತದಿಂದ ಯೌಗಿಕ ಪರಾಕ್ರಮಕ್ಕೆ ತನ್ನ ಆತ್ಮಶಕ್ತಿಯನ್ನು ಆಹ್ವಾನಿಸಿಕೊಂಡು ವಜ್ರಶರೀರಿಯಾಗಿ ಮುಂದುವರಿದನು. ಮೇರುಗಿರಿ ಭಾರದಿಂದ ಪ್ರವೇಶಿಸಿದನು. ದ್ವಾರಯಂತ್ರದ ಶಕ್ತಿ ಉಡುಗಿತು. ಚಕ್ರದ ಹಲ್ಲುಗಳು ಮುರಿದು ಕೆದರಿ ಹೋಗಲು, ಅದು ತಿರುಗುವುದು ನಿಂತು ಕೆಟ್ಟುಹೋಯಿತು. ಹಾ! ಮತ್ತೆ ಏನದು ಮುಂದೆ ವಿಗ್ರಹ? ಮೊದಲು ಇಲ್ಲದೆ ಇದ್ದದ್ದು ತಕ್ಷಣವೇ ಆಕೃತಿಯಾಗಿ ಅವನ ಸಾಹಸಾಕೃತಿಗೆ ಕಾರಣವೆನ್ನುವಂತೆ ಪ್ರಕಟವಾಯಿತು.

ಜೊನ್ನವೆಳಗಿನಲ್ಲಿ ಲಂಕಾದೇವಿ.

ಬೆಳುದಿಂಗಳಿನಲ್ಲಿ ಪ್ರತಿಮಾ ಮೂರ್ತಿಯ ಚಿನ್ನದ ಉಡುಗೆಯ ಮೈ ರಾರಾಜಿಸಿತು. ಅವಳ ಮುಡಿಯಲ್ಲಿ ಉಜ್ವಲ ಕಿರೀಟ ಮಿರುಗಿತು. ಕಪ್ಪಾದ ಕೂದಲರಾಶಿ ಅವಳ ಹೆಗಲಿಂದಿಳಿದು ಸೊಗಸುತ್ತಿತ್ತು. ಮುಖದ ಗಂಭೀರ ದರ್ಪಕ್ಕೆ ದೇವತ್ವವನ್ನು ನೀಡಿದ ಕಣ್ಣುಗಳು ಮತ್ತು ಅಮರ ಕಾಂತಿಯು ವಿಗ್ರಹದ ಜೀವತ್ವವನ್ನು ಅಂಜನಾಸುತನಿಗೆ ಸಾರುತ್ತಿತ್ತು. ಬಹುಭುಜಗಳ ಆಯುಧಪಾಣಿ, ದಿವ್ಯರತ್ನಾಭರಣ ಪುಷ್ಪಹಾರಗಳಿಂದ ಅಲಂಕೃತಳಾದ ಅವಳು ಚಂದ್ರನಂತೆ ಬೆಳಗಿದ್ದು ಛಾಯಾರಹಿತಳಾಗಿದ್ದಳು. ಮನೋಹರಳೂ ಭಯಂಕರಳೂ ಆದ ಭಗವತಿಯಂತೆ ಭವ್ಯವಾದ ಉನ್ನತಾಕಾರದ ಅವಳನ್ನು ಜಗತ್ ಪ್ರಾಣಸುತನಾದ ಮಾರುತಿಯು ದಿಟ್ಟತನದಿಂದ ದಿಟ್ಟಿನೆಟ್ಟು ನೋಡಿದನು. ಆ ಮಹಿಳಾ ಮಹನ್ ಮೂರ್ತಿಯು ನಿಶೆಯ ನಿಶ್ಯಬ್ದತಾ ಗೌರವಕ್ಕೆ ಭಂಗಬರದಂತೆ ಆಂಜನೇಯನಿಗೆ ಹೇಳಿದಳು;

'ನಿಜ, ನೀನು ಮಹಾಸತ್ತ್ವನೆಂಬುದು ನಿಜ. ಈ ದ್ವಾರಯಂತ್ರವನ್ನು ಮುರಿದ ಪರಾಕ್ರಮಿಯನ್ನು ಇದುವರೆಗೆ ನೋಡಿರಲಿಲ್ಲ. ಆದರೂ ಕೇಳು, ರಾವಣನ ಪ್ರಜೆಗಳಲ್ಲದೆ

ಯಾರೂ ಲಂಕೆಯನ್ನು ಜೀವಸಹಿತ ಪ್ರವೇಶಿಸಲು ಸಾಧ್ಯವಿಲ್ಲ. ಅಪರಿಚಿತವೇಷಿಯೇ, ನೀನು ಯಾರು?'

ಆಂಜನೇಯನು ಅವಳ ಧ್ವನಿಯ ಗೌರವಕ್ಕೆ ಮಣಿದನು. ಆದರೆ ಮಾತಿನ ಅರ್ಥಕ್ಕೆ ಅವನ ಧೈರ್ಯ ಮರ್ಯಾದೆಯ ಕೆಚ್ಚು ಮಲೆತು ನಿಂತಿತು. ಹೀಗೆ ಮಾರ್ನುಡಿದನು.

'ರಾವಣನ ಪ್ರಜೆಯಲ್ಲದೆ ಇನ್ನೇನಾದರು ಆದೇನು!'

ಅವಳು ಮುನಿಸಿಕೊಂಡರೂ, ತೋರಗೊಡದೆ ಕೊಂಕು ನಗೆಯ ಬಿಂಕದ ಮಾತಿನ ಈಟಿಯಿಂದ ಅವನ ಜಾಣ್ಮೆ ಬಿಕ್ಕಳಿಸುವಂತೆ ಇರಿದು ಕೇಳಿದಳು:

'ಓಹೋ, ಹಾಗಾದರೆ ನೀನು ಹೆಸರಿಲ್ಲದ ಪರದೇಶಿಯೆ?'

ವಾಕ್ ಚಾತುರ್ಯದ ಅವನು ನಗೆಯಿಂದಲೇ ಅದನ್ನು ತಿರಸ್ಕರಿಸಿ, ಪ್ರತ್ಯುತ್ತರ ನೀಡಿದನು;

'ಇರಲಿ, ನಾನು ಯಾರು ಎಂಬುದಕ್ಕೆ ನಿನಗೆ ಇಷ್ಟರಲ್ಲೆ ಸಾಕ್ಷಿ ದೊರೆಯುತ್ತದೆ. ದಯವಿಟ್ಟು, ಮೊದಲು ಪರದೇಶಿಯಲ್ಲದ ನಿನ್ನ ಸುಪ್ರಸಿದ್ಧ ಹೆಸರನ್ನು ಹೇಳು. ಅದನ್ನು ನಾನು ಕೇಳಿ, ಪರದೇಶದಲ್ಲಿ ಹರಡುವೆ. ಅದರಿಂದ ನಿನ್ನ ಕೀರ್ತಿಯು ನನ್ನ ಕೀರ್ತಿಗೆ ಸಮನಾಗಿ ಪರದೇಶಿಯಾಗುತ್ತದೆ. ಆ ಕೀರ್ತಿಯೆ ನಿನ್ನ ದೈತ್ಯದಾಸ್ಯದ ದಾರಿದ್ರ್ಯವನ್ನು ನೀಗುತ್ತದೆ. ಅಮರ ದೈವತ್ವವನ್ನು ಒದಗಿಸುತ್ತದೆ.'

'ನೀನು ಕಪಿವೇಷದ ಕಾಡುಡುಗೆಯವನಾಗಿದ್ದರೂ, ಸೊಕ್ಕು ನುಡಿಯುತ್ತಿದ್ದೀಯೆ. ನೀನು ಯಾರೊಡನೆ ಮಾತನಾಡುತ್ತಿರುವೆ ಎಂಬುದನ್ನು ಮೊದಲು ತಿಳಿದುಕೊ. ನಾನು ದಶಶಿರ ಕನಕಲಕ್ಷ್ಮಿ, ಲಂಕಾದೇವಿ, ಲಂಕಿಣಿ. ನಾನೇ ಲಂಕೆಯೆಂದು ತಿಳಿ. ನನ್ನ ರಕ್ಷಣೆಯ ಈ ದುರ್ಗವನ್ನು ಪ್ರವೇಶಿಸುವುದಕ್ಕೂ ಮೊದಲೇ ನೀನು ಸ್ವರ್ಗದಲ್ಲಿರುತ್ತೀಯ!'

ದೂರ ಸಾಗರಕ್ಕೆ ಯಾತ್ರೆ ಹೊರಟ ನದಿಯು ಎದುರಾದ ಬೆಟ್ಟವನ್ನು ಕೊರೆಯುವ ಸಾಹಸಬಿಟ್ಟು, ಬಳಸಿಕೊಂಡು ಹೋಗುತ್ತದೆ. ಹಾಗೆ ತನ್ನ ಮುಂದಿದ್ದ ಮಹತ್ವದ ಬಲಧೀರೆ ದೇವತಾಕಾರದ ಲಂಕಿಣಿಯನ್ನು ಕೆರಳಿಸದೆ ತನ್ನ ಕಾರ್ಯವನ್ನು ಕೈಗೂಡಿಸಿಕೊಳ್ಳುವ ವಿವೇಕದಿಂದ ಪವನ ಸುತ ಹೀಗೆ ಪ್ರತ್ಯುತ್ತರ ನೀಡಿದನು.

'ಹೇ ಭದ್ರೆ, ಸುಮ್ಮನೆ ಏತಕ್ಕೆ ಕೋಪಿಸಿಕೊಳ್ಳುವೆ? ನೀನು ಹೇಳಿದಂತೆ ನಾನು ಪರದೇಶಿ, ಕಪಿವೇಷಿ, ಅನಾಗರಿಕ ವನಚರ. ಈ ಲಂಕೆ ಸರ್ವಕಲೆಯ ನೆಲೆ, ಸಂಪತ್ತಿನ ಸಾಗರ, ಭೋಗಕ್ಕೆ ತವರು ಎಂಬುದನ್ನು ಕೇಳಿ ನನ್ನ ಕಣ್ಣುಗಳ ಕುತೂಹಲವನ್ನು ತಣಿಸಲು ಬಂದಿರುವೆನು. ಅರಣ್ಯ ಸಂಚಾರಿಯು, ಗ್ರಾಮೀಣನು ಆದವನಾಗಿ ನಗರ ಶೋಭೆಯನ್ನು ಮನಸಾರೆ ನೋಡಿ ಹಿಂದಿರುಗುವವನನ್ನು ಕೊಲ್ಲುವುದು ಸಾಹಸವೆ?

ತಡೆಯುವುದು ಜಾಣತನವೆ? ನನ್ನಂತಹವರಿಂದ ಈ ದೈತ್ಯ ದುರ್ಗಕ್ಕೆ ಕೇಡಾಗುತ್ತದೆಯೆ? ದಶಶಿರನ ವೈಭವವನ್ನು ನೋಡುವ ಅವಕಾಶವನ್ನು ನೀಡು ಎಂದು ಪ್ರಾರ್ಥಿಸುವ ನನಗೆ ಕೃಪೆತೋರು.'

'ಎಲವೋ ವನಚರ, ಈ ನಿನ್ನ ಕಪಟ ಸೌಜನ್ಯ ಸಾಕು. ನಿನ್ನ ದನಿ, ನಿನ್ನ ಕಣ್ಣು, ನಿನ್ನ ಮುಖದ ವೀರ ತೇಜಸ್ಸು, ನಿನ್ನ ಸಿಂಹಸದೃಶ ಶರೀರ ಶೈಲಿ, ನಿನ್ನ ನಿಲುವಿನ ಭಂಗಿ – ಒಂದೊಂದು ನೀನು ಗ್ರಾಮೀಣನಲ್ಲ ಎಂಬುದಕ್ಕೆ ಪ್ರತಿಸಾಕ್ಷಿಯಾಗಿ ಘೋಷಿಸುತ್ತಿವೆ! ನೀನು ಕಪಟಿ, ಧೂರ್ತನ ಲಕ್ಷಣವಾದ ವಿನಯವನ್ನು ತೋರುತ್ತಿರುವೆ! ನೀನು ಬಂದ ದಾರಿ ಹಿಡಿದು ಹೋಗು. ನೀನು ಒಂದು ಹೆಜ್ಜೆ ಮುಂದಿಟ್ಟರೂ ಶವವಾಗಿ ಭೂಮಿಗೊರಗುವೆ.'

ಎಂದು ಆರ್ಭಟಿಸುತ್ತ ಬಹುಭುಜದ ದೇವಿಲಂಕೆಯು ತನ್ನ ಒಂದು ಹಸ್ತದಲ್ಲಿದ್ದ ಮಹಾತ್ರಿಶೂಲವನ್ನು ಎತ್ತಿ ಹನುಮನ ಎದೆಗೆ ದಿಗ್ಭ್ರಮೆಗೊಳ್ಳುವಂತೆ ಗುರಿಯಿಟ್ಟು ಬೀಸಿದಳು. ಅವನು ಚಕ್ಕನೆ ಹಿಂದಕ್ಕೆ ನೆಗೆದು ಪಾರಾದನು. ಅದನ್ನು ನೋಡಿ ಲಂಕಿಣಿಯು ವ್ಯಂಗ್ಯವಾಗಿ ನುಡಿದಳು:

'ನಿನ್ನಲ್ಲಿ ಕೆಚ್ಚಿಗಿಂತಲೂ ಮಿಗಿಲಾಗಿ ಎಚ್ಚರಿಕೆಯಿದೆ.'

'ಹೌದೌದು. ಸಂಸ್ಕೃತಿಯಿಲ್ಲದ ನಿನ್ನ ಈ ನಾಗರಿಕತೆಯ ಬರ್ಬರತೆಯಂತೆ!'

ಎಂದು ಹೇಳಿದ ಆಂಜನೇಯ ಕೆರಳಿ ಮುಂದುವರಿದನು. ಛಾಯಾಸಹಿತನಾದ ಪರ್ವತಾಕಾರದ ಆ ವೈರಿಯು ವಜ್ರ ಭ್ರುಕುಟಿ ದೃಷ್ಟಿಯಿಂದ, ವಜ್ರಮುಷ್ಟಿಯಿಂದ ಆಕ್ರಮಿಸುವುದನ್ನು ಕಂಡಳು.

ಧರ್ಮಶೂಲ ಡೊಂಕಾಗಿ ಮುರುಟಿತು

ಕಾಮರೂಪಿಣಿ ಲಂಕಿಣಿಯು ರೋಷಭೀಷಣೆಯಾಗಿ ಬಾಹುವಿನಲ್ಲಿದ್ದ ಮೃತ್ಯುಸಮನಾದ ಶೂಲವನ್ನು ಎತ್ತಿ ಎಸೆಯುವ ಮೊದಲೇ ವೀರ ಆಂಜನೇಯನು ಚಿಮ್ಮಿ ಎಗರಿ ಒಂದೇ ಕೈಯಲ್ಲಿ ಅದನ್ನು ತುಡುಕಿ ಹಿಡಿದನು. ಅದು ಕಾಡು ಕೋಣದ ತಿವಿಯುವ ಕೊಂಬನ್ನು ನಖದಿಂದ ಅಪ್ಪಳಿಸಿ ಗೋಣನ್ನು ಮುರಿಯುವ ಹುಲಿಯಂತಿತ್ತು. ದೈತ್ಯ ಲಂಕಾದೇವಿಯ ಕೈಯಲ್ಲಿಯ ಶೂಲವು ಅಲ್ಲಾಡದಂತಾಯಿತು! ನೂಕಿದಳು, ಸೆಳೆದಳು, ಕುತ್ತಿದಳು, ಕುಲುಕಿದಳು. ಅನಿಲಜನ ಕಪಿಮುಷ್ಟಿಯ ವಜ್ರ ಹಿಡಿತ ಮಿಡುಕಲು ಎಡೆಗೊಡಲಿಲ್ಲ! ಇನ್ನೊಂದು ಕೈಯನ್ನು ಎತ್ತಲೂ ಶಕ್ತಿ ಸಾಲದಂತಾಯಿತು. ರಾಕ್ಷಸಕುಲಕ್ಕೆ ಏನೊ ಕೇಡು ಬಂತೆಂದು ಶಂಕಿಸಿ ನಡುಗಿ ಒಳಸೋರಿದಳು.

ಅಷ್ಟರಲ್ಲಿ ಸಮೀರಜನ ವಜ್ರಮುಷ್ಟಿಯ ಉಗ್ರ ತಿರುಪಿಗೆ ಆ ಉಕ್ಕಿನ ಭೀಮಗಾತ್ರದ ಮಹಾಶೂಲವು ನಿಶ್ಶಬ್ದವಾಗಿ ಬಾಗಿತು, ಡೊಂಕಾಗಿ ಮುರುಟಿಕೊಂಡಿತು! ಆನೆಯ

ಸೊಂಡಿಲಿಗೆ ಕಳಲೆ ಮುರಿಯುವಂತೆ ಅದು ತುಂಡಾಗುತ್ತಿತ್ತೋ ಏನೊ? ಅಷ್ಟರಲ್ಲಿ ಲಂಕಿಣಿಯ ಸೊಕ್ಕು ಅಡಗಿ, ತೋಳುತಿರುಗಿಸಲು ಅಳುವ ಎಳೆಯ ಹುಡುಗಿಯಂತೆ ಕರೆದು ಒರಲಿದಳು.

'ನಿಲ್ಲು, ನಿಲ್ಲು ಮಹಾವೀರ. ತಪ್ಪು ಮಾಡಿದೆನು. ಸೋಲೊಪ್ಪಿಕೊಂಡಿರುವೆನು! ನಿನಗೆ ವಶಳಾಗಿರುವೆನು! ಮುಂದೆ ನಿನ್ನಂತಹವರಿಗೆ ಧರ್ಮಾನುಕೂಲವಾಗುವ ಈ ಶೂಲವನ್ನು ಮುರಿಯಬೇಡ!'

ಆ ಕೋರಿಕೆಗೆ ಮುಷ್ಟಿ ಸಡಿಲಿಸುತ್ತ ಆಂಜನೇಯನು ಮೃದುವಾಗಿ ಹೀಗೆ ನುಡಿದನು:

'ಭದ್ರೆ, ಹೆಣ್ಣಾದ ನಿನ್ನನ್ನು ನೋಯಿಸಿದೆ. ನನ್ನ ಒರಟುತನವನ್ನು ಕ್ಷಮಿಸು. ಬೇರೆದಾರಿ ಕಾಣದೆ ಹೀಗೆ ಮಾಡಿದೆ.'

'ನಿನ್ನ ನುಣುಪು ನುಡಿ ನಯವರ್ತನೆ ಕಂಡು ನನಗೆ ನಾಚಿಕೆಯಾಗುತ್ತಿದೆ. ನೀನು ಯಾರೋ ಮಹಾತ್ಮನೆಂಬುದು ದಿಟ! ಇದುವರೆಗೆ ಧರ್ಮದಿಂದಲ್ಲದೆ ಇದನ್ನು ಬರಿ ಪರಾಕ್ರಮದಿಂದ ಮುಟ್ಟಿ ಬದುಕಿದವರಿಲ್ಲ. ಹಾಗಾಗಿದ್ದರೆ ನಿನ್ನ ಸಾಹಸವೂ ಜಳ್ಳಾಗುತ್ತಿತ್ತೆಂಬುದರಲ್ಲಿ ನನಗೆ ಸಂಶಯವಿಲ್ಲ. ನನ್ನ ಕೈಯ ಈ ಮಹಾಶೂಲದ ಶಕ್ತಿಯೆಂದರೆ ಧರ್ಮ. ಇಂದು ಏಕೊ ಧರ್ಮ ಹದಗೆಟ್ಟು ಶಕ್ತಿ ಕುಂದಿದಂತಿದೆ. ಹಾಗಿಲ್ಲದಿದ್ದರೆ ಮೂರು ಲೋಕದಲ್ಲಿಯೂ ಇದನ್ನು ಬಾಗಿಸುವವರನ್ನು ನಾನು ಕಾಣೆ. ಮಹಾತ್ಮನೇ ನೀನಾರು? ಪರಿಚಯವನ್ನು ಹೇಳು.'

ಆಂಜನೇಯನು ಸೂತ್ರರೂಪದಲ್ಲಿ ಚಿಕ್ಕದಾಗಿ ಬೇಗನೆ ತನ್ನ ಪರಿಚಯ ತಿಳಿಸಿದನು. ತಾನು ಕೈಕೊಂಡು ಬಂದಿರುವ ಕಾರ್ಯದ ಮಹತ್ವವನ್ನು ಹೇಳಿದನು. ಅದನ್ನು ಆಲಿಸುತ್ತ ಆಲಿಸುತ್ತ ದೇವಿಯು, ಲಂಕೆ ಬೆಂಕಿಯ ನೋವಿನಿಂದ ಬೆಂದಂತೆ ನಿಟ್ಟುಸಿರುಬಿಟ್ಟಳು. ಸಂಕಟದಿಂದ ಕಣ್ಣೀರು ತುಳುಕಿತು. ಅದು ಬೆಳುದಿಂಗಳ ಬೆಳಕಿನಲ್ಲಿ ಮಿರುಗಿ ಹರಿದು ಕೆನ್ನೆಯನ್ನು ತೋಯಿಸಿತು. ದೇವತೆಯ ದುಃಖಕ್ಕೆ ಅನುಕಂಪಿಸುತ್ತ ಸಮೀರಾತ್ಮಜನು ಮತ್ತೆ ಮಾತನ್ನು ಮುಂದುವರಿಸಿದನು.

'ದೇವಿ, ನಿನ್ನ ಸೋಲಿಗೆ ಅಳದಿರು. ರಾವಣನ ಪಕ್ಷದಲ್ಲಿದ್ದರೆ ನನಗೂ ಅದೇ ಗತಿಯಾಗುತ್ತಿತ್ತು!'

'ಅಯ್ಯೋ, ನನ್ನ ಗೋಳಿನ ಆಳವನ್ನು ನೀನು ಹೇಗೆ ತಿಳಿಯುವೆ? ನನ್ನ ಅಳಿಯದ ಅಳಲು ಇಬ್ಬಾಯಿಯ ಖಡ್ಗದಂತೆ ಆ ಕಡೆಗೂ ಈ ಕಡೆಗೂ ಕತ್ತರಿಸುತ್ತದೆ. ನಿನ್ನ ಇರಿತಕ್ಕಿಂತ ಹೆಚ್ಚಾಗಿ ನಿನ್ನ ಸಂತೈಕೆಯಿಂದ ನನ್ನ ದುಃಖ ಹೆಚ್ಚುತ್ತಿದೆ. ನಿನ್ನ ಸಂಕಟ ಒಂದುಕಡೆಗಾದರೆ, ನನ್ನ ಸಂಕಟ ಎರಡುಕಡೆಗೆ. ನಿನಗೆ ಸೀತಾನ್ವೇಷಣೆಯಾದರೆ, ನನಗೆ ಅದರ ಜೊತೆಗೆ ಲಂಕಾಕ್ಷೇಮ ಚಿಂತೆ. ನಿನಗೆ ರಾಮಸೀತೆಯರನ್ನು

ಒಂದುಗೂಡಿಸುವ ಚಿಂತೆಯಾದರೆ, ನನಗೆ ಅದರ ಜೊತೆಗೆ ಲಂಕೇಶನ ಆತ್ಮೋದ್ಧಾರದ ಚಿಂತೆ.. ಇರಲಿ, ವಿಧಿ ಒಳಿತನ್ನೆ ಮಾಡುವುದು!...

'ತ್ರಿಕೂಟಾಚಲವನ್ನು ಒಲಿದು ಅಪ್ಪಿಕೊಂಡು ರತ್ನದ ಡಾಬಿನಂತೆ ಸುತ್ತಿಕೊಂಡಿರುವ ಸಮುದ್ರದ, ಸ್ವರ್ಗದ ಒಡೆಯ ಇಂದ್ರನಿಗೆ ಅಸೂಯೆಯುಂಟಾಗುವಂತೆ ಮಾಡಿರುವ ಪಟ್ಟಣವಿದು. ಮಹಾಬಾಹುವೇ, ಪಾಪಿಯ ಎದೆಯನ್ನು ಒಳಸೇರುವ ಭಗವಂತನ ಕೃಪೆಯಂತೆ, ನನ್ನ ಸಹಜ ತನುರೂಪಿ ಈ ಮಹಾನಗರವನ್ನು ಪ್ರವೇಶಿಸು. ನೀನು ಸಮರ್ಥನೆಂಬುದು ನಿಜ. ಮುನಿದರೆ ಈ ಲಂಕೆಯನ್ನು ಸುಟ್ಟು ಸಮುದ್ರದಲ್ಲಿ ಕದಡ ಬಲ್ಲ ಸಾಹಸ ನಿನ್ನಲ್ಲಿದೆ. ಓ ಪೂಜ್ಯನೇ, ಈ ಲಂಕೆ ಕಲೆಯ ಬಲೆ, ಚೆಲುವಿನ ನೆಲೆ. ನಿನಗೆ ಎಂತಹದೇ ಕೋಪ ಬರುವ ಕಾರಣ ಉಂಟಾದರೂ ನೀನು ಈ ಲಂಕೆಗೆ ಕೇಡುಂಟುಮಾಡಬೇಡ ಎಂದು ಬೇಡಿಕೊಳ್ಳುವೆ. ಪಾಪದಿಂದ, ಪ್ರಾಚೀನ ಶಾಪದಿಂದ ಮತ್ತು ಧರ್ಮದ ಕೋಪದಿಂದ ಇದು ವಿಘ್ನಕ್ಕೀಡಾಗುತ್ತದೆಂದು ನನಗೆ ಗೊತ್ತಿದೆ. ಈ ನನ್ನ ಯಮ ಶೂಲದಂತಹ ಕಬ್ಬಿಣದ ಶೂಲವು ಬಾಗಿದುದೇ ಇದಕ್ಕೆ ಸಾಕ್ಷಿಯಾಗಿದೆ. ನಡೆ, ನಿನಗೆ ಗೆಲುವಾಗಲಿ!'

ಪ್ರತಿಮೆಯಾದ ಲಂಕಾಲಕ್ಷ್ಮಿ

ನೋಡನೋಡುತ್ತಿದ್ದಂತೆ ಛಾಯಾರಹಿತಳಾಗಿದ್ದ ಕನಕ ಲಕ್ಷ್ಮಿಗೆ ಛಾಯೆ ಅವರಿಸಿತು. ಕಳ್ಳ ರಾವಣನ ಸಂಪತ್ತಿಗೆ ಜಿಗುಪ್ಸೆಗೊಂಡು ಮುಖ ತಿರುಗಿಸಿದಳೋ ಎಂಬಂತೆ ಜಡತ್ವವನ್ನು ಹೊಂದಿ ಪ್ರತಿಮೆಯಾದಳು.

ಮಾಗಿಯ ಇರುಳಿನಲ್ಲಿ ಆಗಲೇ ಒಂದು ಜಾವ ಕಳೆದಿತ್ತು. ಬಾನಿಗೆ ಏರಿದ ಸ್ವರ್ಣಚಂದ್ರನು ಬೆಳದಿಂಗಳ ಹಾಲು ಸುರಿಸುತ್ತಿದ್ದನು. ಆಂಜನೇಯನು ಹೆಮ್ಮೆಯಿಂದ ಕೋಟೆಯ ಹೆಬ್ಬಾಗಿಲನ್ನು ದಾಟಿ ತ್ರಿಕೂಟಾಚಲ ಲಂಕೆಯನ್ನು ಹೊಕ್ಕನು. ತೆಂಗು ಅಡಿಕೆ ತೋಟಗಳಿಂದ, ಝುರಿಸರೋವರ, ಬೆಟ್ಟದ ತಪ್ಪಲು ಕಂದರಗಳ ಸುಂದರ ಸೀಮೆಯ ಉದ್ಯಾನವನ್ನು ಬಿಂಕದ ಹೆಮ್ಮೆಯಿಂದ ಬಾಗಿ ದಿಟ್ಟಿಸಿ ನೋಡಿದನು.

'ಈ ಅಮರ್ತ್ಯಭೂಮಿ ಮಾಯೆಗೆ ತವರು ಎನ್ನುವುದು ನಿಜ. ನಾನು ಯೋಗಶಕ್ತಿಯಿಂದ ಅಗೋಚರನಾಗಿ ಸಾಗುವುದೇ ಇಲ್ಲಿ ಒಳ್ಳೆಯದು' ಎಂದು ನಿಶ್ಚಯಿಸಿದನು. ಕಾಂತಿಯೊಂದಕ್ಕೆ ಹುಟ್ಟಿದ ಛಾಯೆ ಇನ್ನೊಂದು ಕಡಿಮೆ ಕಾಂತಿಯ ಬೆಳಕಿಗೆ ಒಂದಿನಿತು ಬೆಳ್ಳಗಾಗುವಂತೆ ಬೆಳುದಿಂಗಳಲ್ಲಿ ನೆಲದ ಮೇಲೆ ಬಿದ್ದಿದ್ದ ಕಪಿಲೇಂದ್ರ ಮಹಾವಾನರನ ಮೈಯ ನೆರಳು ನಸು ಬಿಳುಪಾಯಿತು. ನೋಡುತ್ತಿರಲು, ಸಾಂದ್ರತೆಯನ್ನು ಕಳೆದುಕೊಂಡ ಜಡತೆಯು ಹೇಗೆ ಬೆಳುದಿಂಗಳಿಗೆ ಜಾಲಂದ್ರದಂತಾಗುವುದೋ ಹಾಗೆ ಅವನ ಶರೀರದ ಛಾಯೆಯು ಸ್ಫಟಿಕದ ಗಾಜಿನ ನೆರಳಿನಂತಾಯಿತು. ಪುನಃ ಆ

ನೆರಳು ನಿಧಾನವಾಗಿ ಬೆಳುದಿಂಗಳ ಜೇಡಿ ಬಳಿದರೇನೊ ಎನ್ನುವಂತೆ, ಶೂನ್ಯವಾಗಿ ನಯನೇಂದ್ರಿಯಕ್ಕೆ ಕಾಣದಾಯಿತು! ವಾಯು ಶರೀರಿಯಾದ ಪವನಪುತ್ರನು ಯೋಗತನುವಿನಿಂದ ಅಗೋಚರನಾಗಿ ಮೈಯ ನೆರಳು ಕಾಣದಾದುದ್ದೇ ತಡ ತಾನು ಕಾಣಿಸುವುದಿಲ್ಲ ಎನ್ನುವುದಕ್ಕೆ ಗುರುತಾಗಲು ತಲೆಯೆತ್ತಿ ಆಕಾಶವನ್ನು ನೋಡಿದನು. ಹಂಸದ ಗರಿಯಂತಹ ಮುಗಿಲನ್ನು ಒಲ್ಲದೆ ತುಂಬುಚಂದ್ರನು ದಿಗಂಬರನಂತೆ ತೇಲುತ್ತಿದ್ದನು. ನಕ್ಷತ್ರಗಳು ದೂರದೂರದಲ್ಲಿ ಮಿನುಗುತ್ತಿದ್ದವು. ಕೃತ್ತಿಕಾ ರೋಹಿಣಿಯರನ್ನು ಹಿಂಬಾಲಿಸುವ ಮೃಗಶಿರಕ್ಕಾಗಿ ಮೃಗವ್ಯಾಧ ತಾರಾಪುಂಜದ ಬಾಣದಂತಹ ಉಜ್ವಲ ಕಿರಣವು ಹೊಂಚುಹಾಕುತ್ತಿತ್ತು.

'ನನಗೆ ಬೆಳುದಿಂಗಳು ಸಹಾಯಕವಾಗಿದೆ. ಗೋರಿಬೇಟೆಯ ರೀತಿಯಿಂದ ಲಂಕೆಯಲ್ಲಿ ಸೀತಾಮಾತೆಯನ್ನು ಹುಡುಕುತ್ತೇನೆ.' ಎಂದು ನಿಶ್ಚಯಿಸಿಕೊಂಡನು. ಸುಗ್ರೀವನ ಆಜ್ಞೆಯ ದೃಢಪ್ರತಿಜ್ಞಾ ಆದೇಶದ ಕಲಿ, ಕರ್ಮಕೌಶಲಿ, ಯೋಗಿ ಮತ್ತು ಕ್ಷಿಪ್ರಕ್ರಿಯಾಕಾಂಕ್ಷಿ ಆಂಜನೇಯನು ರಾಕ್ಷಸ ಭೂಮಿಯ ಎದೆಯನ್ನು ನುಗ್ಗು ನುರಿಯಾಗಿ ತುಳಿಯುವಂತೆ ಗಿರಿಯ ಪಥವನ್ನು ಏರಿದನು.

❑

ಲಂಕಾ ಸಂಪುಟಂ



~~~~~~~~~~~~~~~~~~~~~~ ಸಂಚಿಕೆ – ೧ ~~~~~~~~~~~~~~~~~~~~~~

ಕನಕಲಂಕಾನ್ವೇಷಣಂ

ಶ್ರೀ ಗುರುವಿನ ಕೃಪೆಗೆ ಒಳಗಾದ ಅಧ್ಯಾತ್ಮಸಾಧಕನು ಅಧ್ಯಾತ್ಮದಲ್ಲಿ ಪಯಣಿಸುವಾಗ ಪೂರ್ವಸಿದ್ಧತೆ ಮಾಡಿಕೊಳ್ಳುತ್ತಾನೆ. ಅದು ಮೊದಲಿಗೆ ಮನೋಮಯ, ಪ್ರಾಣಮಯವನ್ನು ಪ್ರವೇಶಿಸಿ ಊರ್ಧ್ವಗಮನದ ತಿಳಿವಿನ ಸ್ನೇಹಕ್ಕೆ ಬೆಂಬಲವಾಗಿ ನಿಲ್ಲುತ್ತದೆ. ದೈವೀ ವಿರುದ್ಧವಾದ ತಮಃ ಪ್ರವೃತ್ತಿಯನ್ನು ನಿಗ್ರಹಿಸಿಕೊಳ್ಳುವುದಾಗಿರುತ್ತದೆ. ಅನಂತರ ಮೃಣ್ಮಯದ ಜಡದಂತಿರುವ ಸುಪ್ತಚಿತ್ತದ ಗುಪ್ತಕತ್ತಲೆಯ ಸೆರೆಯಲ್ಲಿರುವ ಚೈತ್ಯದ ಅರಿವನ್ನು ಹುಡುಕಿ ಕಾಣುವುದಾಗಿರುತ್ತದೆ. ಅದೇ ರೀತಿ ಶ್ರೀರಾಮನು ತನ್ನ ಅಭಿಲಾಷೆಯಾಗಿ ಕಳುಹಿಸಿದ ಸುಗ್ರೀವದೂತ ಆಂಜನೇಯನು ಪೂರ್ವಸಿದ್ಧತೆಗೊಂಡು, ಸೀತೆಯನ್ನು ಹುಡುಕಲು
~~~~~~~~~~~~~~~~~~~~~~

ಲಂಕೆಯನ್ನು ಪ್ರವೇಶಿಸಿದನು. ಓ ತಾಯಿ ಶಾರದೆಯೆ, ಕವಿಯ ಚೈತನ್ಯಯಂತ್ರ ಸಮನಾದ ಹೃದಯವೀಣೆಯಿಂದ ವರ್ಣನಾತಂತಿಯು ನಿತ್ಯ ಸತ್ಯವನ್ನು ಧ್ವನಿಗೈಯುವಂತೆ ಅರಿವನ್ನುಂಟುಮಾಡು.

ಋಷಿ ಪ್ರತಿಭೆಯು ಕವಿಯ ಕಲ್ಪನೆಯ ಕಾಮನಬಿಲ್ಲನ್ನು ಏರಿ, ಸಚ್ಚಿದಾನಂದವನ್ನು ಸಾಧಿಸಲು ದಿವ್ಯ ವೈವಿಧ್ಯಮಯ ವಿರಾಡ್‌ವಿಶ್ವವನ್ನು ಸುತ್ತುವುದು. ಇಂದ್ರಿಯದ ನಂದನದಲ್ಲಿ ನಾನಾ ಸುಖದಿಂದ ಆನಂದ ಪಡುವುದು. ಸ್ವಪ್ನಲೋಕದಲ್ಲಿ ಭ್ರಮಿಸುವುದು. ಒರೆಯ ಒಳಗಿರುವ ಕತ್ತಿಯಂತಹ ಕುಶಾಗ್ರ ಬುದ್ಧಿಯಿಂದ ತರ್ಕವಿದ್ಯಾತತ್ತ್ವ ಗೂಢವನ್ನು ಜಯಿಸುವುದು. ಇವೆಲ್ಲದರಿಂದ ತಾತ್ಕಾಲಿಕ ತೃಪ್ತಿಯನ್ನಷ್ಟೇ ಪಡೆದು ಶಾಶ್ವತ ಆನಂದವನ್ನು ಕಾಣದೆ ಬೇಸರದಿಂದ ಯೋಗಪಥವನ್ನು ಹಿಡಿಯುವುದು.

ಸಾಧಕನು ಅಂತಹ ಯೋಗಸಾಧನೆಗಾಗಿ ಗಿರಿಶಿಖರದ ಶಿಲಾಪೀಠದಲ್ಲಿ ಕುಳಿತು. ಉಷೆಯ ನಿಶ್ಶಬ್ದ ನಿದ್ರೆಯಿಂದ ವಿಶ್ವ ಜಾಗೃತಗೊಳ್ಳುವುದನ್ನು ಧ್ಯಾನಿಸುವನು. ರವಿಯ ಉದಯದವತಾರವನ್ನು ತನ್ನ ಹೃದಯದ ಆನಂದವಾಗಿಸಿಕೊಳ್ಳುವನು. ಸಾಗರದ ಮರಳ ತಡಿಯಲ್ಲಿ ನಿಂತು ನಾಟ್ಯಮಯ ಜಲಲಯದ ದರ್ಶನದಲ್ಲಿ ಒಂದಾಗಿ ಭಾವಸಮಾಧಿಯಲ್ಲಿ ಸಮುದ್ರವನ್ನು ಹೀರಿಕೊಳ್ಳುತ್ತ ಬ್ರಾಹ್ಮೀಸ್ಥಿತಿಗೆ ಏರುವನು. ಹಾಗೆಯೇ ಪ್ರಕೃತಿಯ ಬೃಹತ್ ಚಿತ್ರ ಸೃಷ್ಟಿಯ ಸಮಸ್ತವನ್ನು, ನಕ್ಷತ್ರನೀಹಾರಿಕಾ ಲೋಕಗಳ ಆಗಸವನ್ನು, ಭೂಮಾನುಭೂತಿಯಿಂದ ಪ್ರಚೋದಿತವಾದ ನಿಸರ್ಗ ಕೃತಿಗಳನ್ನು, ಮನಸ್ಸಿನ ಕಲ್ಪನೆಗಳನ್ನು ಸಾಧಿಸುವನು.

ಆ ಪ್ರಯತ್ನ ಕಾರಣಕ್ಕೆ ಎಂತಾದರೂ ಕಾರಣಾತೀತ ಬ್ರಹ್ಮತತ್ವವು ಅರಿವಿಗೆ ಬರುತ್ತದೆಯೆ? ಒಮ್ಮೆ ಇಲ್ಲಿ ಸುಳಿದು, ಮತ್ತೊಮ್ಮೆ ಅಲ್ಲಿ ಮಿಂಚುತ್ತ ತೋರಿದಂತೆ ಕಂಡರೂ, ಅದು ದಿಟವಾಗಿ ಇರುವುದೊ ಅಥವಾ ಬರಿಯ ಆಸೆಯು ಬೀಸಿದ ಗಾಳಿಗೋಪುರವೊ ಎಂಬ ಶಂಕೆಯ ಉಯ್ಯಾಲೆಯಲ್ಲಿ ಬುದ್ಧಿ ಸ್ಥಿರತೆಯನ್ನು ಕಳೆದುಕೊಂಡು ಶ್ರದ್ಧೆ ತೂಗಾಡುವುದು. ಆ ಬಗೆಯ ಸಾಧನೆಯ ಶಿಖರದಲ್ಲಿ ಅಹಂಕಾರ ನಾಶವಾದಾಗ, ಯತ್ನವನ್ನು ತೊರೆದು ತಾಟಸ್ಥ್ಯ ಚಿತ್ತದವನಾದಾಗ, ಆತ್ಮ ನಿರೀಕ್ಷೆಗೆ ಅನುಭೂತಿ ತನಗೆ ತಾನೆ ಹೊಮ್ಮುವುದು; ಹೊಳೆದು ತಳತಳಿಸುವುದು.

ಆ ಋಷಿ ಪ್ರತಿಭೆಯಂತೆ ಆಂಜನೇಯನು ಬೆಳುದಿಂಗಳ ರಾತ್ರಿಯಲ್ಲಿ ರಾಮನರ್ಧಾಂಗಿಯನ್ನು ಜಟಿಲ ಕುಟಿಲ ಲಂಕೆಯಲ್ಲಿ ಹುಡುಕಿದನು. ಬೋರೆಯನ್ನು ಏರಿ, ಇಳಿಜಾರಿನಲ್ಲಿ ಇಳಿದು, ಮೈಯೆಲ್ಲಾ ಕಣ್ಣಾಗಿ ಕಿವಿಯಾಗಿ ತರತರದ ಗಿಡಮರಗಳಿಂದ ತುಂಬಿದ ದಾರಿಯ ಆ ತೋಟಗಳನ್ನು ಕಣ್ಣು ಕಿವಿಗಳ ಎಚ್ಚರಿಕೆಯಿಂದ ಹುಡುಕುತ್ತ ನಡೆದನು. ರಾತ್ರಿಯ ಕಾವಲುಗಾರರ ಪಡೆಯ ಮಾತಿನ ಸುಳಿವಿನಿಂದ ಸೀತೆಯನ್ನು ಸೆರೆಯಲ್ಲಿಟ್ಟಿರುವ ಜಾಗ ತಿಳಿಯಲು ಹೊಂಚುಹಾಕಿದನು. ಸಂಶಯ ಉಂಟಾಗುವ

ಸ್ಥಳಗಳನ್ನು ಹೊಕ್ಕು. ತರ್ಕ ಜಿಜ್ಞಾಸೆಯಂತೆ ಏನೊಂದನ್ನೂ ಬಿಡದೆ ಶೋಧಿಸಿದನು. ಪಾಪಿಯ ಹೃದಯಾಂತರಾಳದಲ್ಲಿ ಪ್ರಾರಬ್ಧಕರ್ಮದಿಂದ ನಿದ್ರಿಸುತ್ತಿರುವ ಧರ್ಮಬುದ್ಧಿಯನ್ನು ಜಾಗೃತಗೊಳಿಸುವ ಅಪೇಕ್ಷೆಯಿಂದ, ಅದನ್ನೇ ಹುಡುಕುವ ಕೃಪಾಖಡ್ಗ ಕಿರಣದಂತೆ ಆಂಜನೇಯನು–ತ್ರಿಕೂಟಾಚಲದ ದಶಗ್ರೀವಪುರದ ಕೇಂದ್ರ ಸ್ಥಾನವನ್ನು ಪ್ರವೇಶಿಸಿದನು.

ಇಂದ್ರಜಿತುವಿನ ತಂದೆಯ ವೈಡೂರ್ಯಮಯವಾದ ರಮಣೀಯ ಕನಕ ವೈಭವದ ಮಧ್ಯಲಂಕೆಯನ್ನು ನೋಡಿ ಆಂಜನೇಯನು ನಿಬ್ಬೆರಗಾದನು. ರಾಕ್ಷಸ ಪ್ರಮುಖರ ಮನೆಗಳು ಚಿನ್ನ ಬೆಳ್ಳಿ ರತ್ನಗಳಿಂದ ಅಲಂಕೃತವಾಗಿ, ನಾನಾ ಹಂತದಲ್ಲಿ ಚಿತ್ರಗೊಂಡ ರಚನೆಯಾಗಿರುವ ಶರತ್ಕಾಲದ ಮೋಡಗಳಂತೆ ಪ್ರಕಾಶಿಸುತ್ತಿದ್ದವು. ಆ ಸೌಧಗಳು ಹೆಮ್ಮೆಯಿಂದ ತಲೆಯೆತ್ತಿರುವ ಗಗನದಷ್ಟು ಎತ್ತರದ ಗಿರೀಂದ್ರ ಶಿಖರವನ್ನು ಉಪಾಸಿಸುವಂತಿದ್ದವು. ಅವುಗಳು ಬೆಳುದಿಂಗಳ ಕ್ಷೀರಾಭಿಷೇಕಕ್ಕೆ ಮದವೇರಿ ಸುಖಮೂರ್ಛೆಯಲ್ಲಿದ್ದಂತೆ, ಮಲೆಯ ಮಧ್ಯದಿಂದ ಸಾಕಷ್ಟು ದೂರದ ಇಳಿಜಾರಿನ ತನಕ ಶೋಭಿಸುತ್ತ ಆ ಮಲೆಯನ್ನು ಒಪ್ಪಿ ಅಪ್ಪಿಕೊಂಡಂತಿದ್ದವು.

ಮನೆಮನೆಯಲ್ಲಿ ಮಿಂಚುನಕ್ಷತ್ರಗಳ ಗೊಂಚಲಿನಂತೆ ದೀಪಗಳು ಮಿನುಗುತ್ತಿದ್ದವು. ಕಲಶ ದೀಪ ಸಮೂಹಗಳು ಸಾಲು ಸಾಲಾಗಿ ಬೀದಿ ಬೀದಿಯನ್ನು ಶೃಂಗರಿಸಿ ಜ್ವಲಿಸುತ್ತ ರಾಸಲೀಲಾ ಪದಪ್ರಾಸ ವಿನ್ಯಾಸದಲ್ಲಿ ಪ್ರಕಾಶಿಸಿದವು. ಗೃಹಗೃಹದ ಮೇಲು ಗೋಪುರದ ಭುವನೇಶ್ವರಿಯ ಒಳಭಾಗವು ಶಿಲ್ಪಿಯ ಕುಶಲ ಕಲಾ ಪ್ರತಿಭೆಯಿಂದ ಶೋಭಿಸಿದವು. ಹೊರಭಾಗವು ಬಣ್ಣ ಬಣ್ಣದ ದೀಪ ತೋರಣಗಳಿಂದ ಅಲಂಕೃತಗೊಂಡು ಮಳೆಬಿಲ್ಲಿನ ಓಕುಳಿಯಂತಿದ್ದವು.

ಆ ರಾಜಧಾನಿಯಲ್ಲಿ ಎಲ್ಲೆಲ್ಲೂ ಕುದುರೆಗಳ ಹೇಷಾರವ, ಆನೆಗಳ ಘೀಂಕೃತಿ, ರಥಚಕ್ರಗಳ ಚೀತ್ಕಾರದ ಜೊತೆಗೆ ಜನರ ಕಲಕಲ ತುಮುಲದ ರಾಕ್ಷಸ ಧ್ವನಿ ಕೇಳಿಬರುತ್ತಿತ್ತು. ಅಸುರ ಲಕ್ಷ್ಮಿಯ ಬಂಗಾರದ ಕಾಂತಿಯ ನಯಕ್ಕೆ, ಸೌಂದರ್ಯ ಸಂಸ್ಕೃತಿಗೆ, ಕಲ್ಪನಾ ಕುಶಲತೆಯ ಶಿಲ್ಪಕ್ಕೆ–ಮಹತ್ಕಾರ್ಯಪಟುವು, ಸತ್ತ್ವ ಸಂಪನ್ನನು, ಕಪಿನೃಪ ಹಿತಕರನೂ ಆದ ವಾಯುಪುತ್ರನು ಮನಮೆಚ್ಚಿ ನಿಂತು ತಲೆದೂಗಿದನು. ಹಾಗಿರಲು ಲಂಕೆಗೆ ಮತ್ತೆ ನೀರಸವಾದ ಕವಿಸ್ತುತಿ ಏತಕ್ಕೆ?

ವನಚರಿ ಆಂಜನೇಯನು ಅಗೋಚರನಾಗಿ ಲಂಕಾಜನರ ನುಡಿಗಳನ್ನು ಆಲಿಸುತ್ತ, ಮನೆ ಮನೆಯಲ್ಲಿ ಲಕ್ಷ್ಮಿ ಸದೃಶಳಾದ ಸೀತೆಯನ್ನು ಹುಡುಕುತ್ತ ಅಲೆಯುತ್ತಿದ್ದನು. ರಾತ್ರಿ ಮುಂಜರಿದಂತೆ ಜನರ ಮತ್ತು ವಾಹನಗಳ ಸಂಚಾರ ಹಿಂಜರಿಯಿತು. ಶಬ್ದವು ನಿಧಾನವಾಗಿ ನಿಶ್ಶಬ್ದದ ಆಲಿಂಗನದಲ್ಲಿ ರಮಿಸಿತು. ಗದ್ಗದಿಸುತ್ತ ತೊದಲುತ್ತ ನಿಧಾನವಾಗಿ ಉಡುಗಿಹೋಯಿತು. ಅಲ್ಲಲ್ಲಿ ಸೊಡರುಗಳನ್ನು ಆರಿಸಲು ಗೃಹಗೃಹದಲ್ಲಿಯ

ಅಂತರಂಗದ ದೀಪ್ತಿ ಕಡಿಮೆಯಾಯಿತು. ಕತ್ತಲೆಯು ಅತಿಥಿಯಾಯಿತು. ಒಂದಾದ ಮೇಲೆ ಒಂದು ದೀಪರಾಶಿಯು ಆರಿಹೋಗಲು ಮಂಜು ಮಂಜಾಗಿ ತೋರಿದರೂ, ಶಿಶಿರಋತುವಿನ ಬೆಳುದಿಂಗಳು ಅತಿಕ್ರಮಿಸಿ ಪ್ರಕಾಶಿಸಿತು. ಇಚ್ಛಾರೂಪಿ ಆಂಜನೇಯನು ಸೌಧದಿಂದ ಸೌಧಕ್ಕೆ ಗಾಳಿಯಾಗಿ, ಕಂಪಾಗಿ, ನೆಳಲಾಗಿ, ಕನಸಾಗಿ, ಎಳೆಯ ಬೆಳಕಿನ ಕಿರಣವಾಗಿ, ರಾತ್ರಿಯ ನಿಟ್ಟುಸಿರಾಗಿ ಸುಳಿಸುಳಿದಾಡಿದನು.

ಭ್ರಮಾಶೀಲ ನಾಗರಿಕತೆಯ ಕೂಗು ಅಡಗಲು ಕೇಳಿ ಬರುವ ಮೌನ ಮೂಲದ ಶಾಂತಿ ಸಂಸ್ಕೃತಿಯ ವಾಣಿಯಂತೆ, ಅಲ್ಲಲ್ಲಿ ಶ್ರೀಮಂತ ಗೃಹಗಳಿಂದ ನೀರವವಾದ ನಿಶಾಪ್ರಾಣ ತಂತಿಯನ್ನು ಮಿಡಿದರೊ ಎನ್ನುವಂತೆ ವೀಣೆಯ ಇಂಚರವು ತೇಲಿ ಬಂದಿತು. ಕಿವಿಯ ತೃಷೆಯ ನಾಲಿಗೆ ನಲಿಯುವಂತೆ ಗಾನಜೇನಿನ ಸೋನೆ ಸೋರಿತು! ಅದು ನವವಧುವಿನ ಚುಂಬನಕ್ಕೆ ಆಲಿಂಗನದ ಬೆಸುಗೆ ಬೆರೆಯುವಂತೆ, ಸವಿಗೆ ಸವಿ ಜೊತೆಗೂಡುವಂತೆ ಪರಿಮಳವು ಮೂಗಿಗೆ ಸುಖನೀಡಿ ಪ್ರಾಣವನ್ನು ತೇಲಾಡಿಸಿತು. ಅಶರೀರ ಮೋಹಗಳ ರೀತಿ ಆಗಸದಲ್ಲಿ ಅಲೆದಾಡಿತು.

ಆ ಬ್ರಹ್ಮಚಾರಿಯು ಲಂಕಾ ಲತಾಂಗಿಯರ ನೂಪುರದ ಝುಣತ್ಕಾರಕ್ಕೆ ಕಿವಿಗೊಟ್ಟರೂ ಅದಕ್ಕೆ ಮನಸ್ಸು ಸೋಲಲಿಲ್ಲ. ಅವನು ರಾತ್ರಿಯ ಭೋಗಮಂಚದ ರತಿಕ್ರೀಡೆಯ ವಸನರಹಿತ, ಲಲಿತ ದೇಹ ಸೌಂದರ್ಯದ ನಾನಾ ಸ್ಥಿತಿಗೆ ಗಮನ ಕೊಡಲಿಲ್ಲ. ದೇವಿ ಸೀತೆಯನ್ನು ಹೊರತುಪಡಿಸಿ ಇನ್ನೊಂದನ್ನು ಹುಡುಕಲಿಲ್ಲ. ಅವನು ಯೋಗನಿಷ್ಠೆಗೆ ಕೋಡು ಮೂಡುವಂತೆ ಹೋಗಿ ಇಂದ್ರಜಿತುವಿನ ಮನೆಯನ್ನು ಹೊಕ್ಕನು.

ನಲ್ಮೆಯ ಕುಟುಂಬವತ್ಸಲ ಇಂದ್ರಜಿತು

ಅದು ಕಲೆಯ ಸಜ್ಜೆ ಮನೆಯಂತಿತ್ತು. ಅಲ್ಲಿ ಅನಿಲಸುತನು ಧೂಮರೂಪನಾಗಿ ಸಂಚರಿಸಿದನು. ಬಾಗಿಲಬಳಿ ಕಟ್ಟಿದ್ದ ನಾಯಿ ಗಟ್ಟಿಯಾಗಿ ಬೊಗಳಿತು. ಸಾಕಿದ ನವಿಲು ಬೆದರಿ ಕೇಕೆ ಹಾಕಿತು. ದೀಪಗಳ ಕಾಂತಿ ಮಸುಕಾಯಿತು. ತೋರಣದ ಗೆಜ್ಜೆಗಳು ಬೆಚ್ಚಿಬಿದ್ದಂತೆ ಕಂಪಿಸಿ ಹನಿಹನಿಯಾಗಿ ಇನಿದನಿ ಸೂಸಿದವು. ಮಂಡೋದರಿ ಸೊಸೆ ತಾರಾಕ್ಷಿಯ ಮಗು ಸ್ವಪ್ನ ಭೀತಿಯಿಂದ ಕೂಗಿ ತೊಟ್ಟಿಲಲ್ಲಿ ಎದ್ದು ಕುಳಿತುಕೊಂಡಿತು. ಲಂಕೇಶ್ವರ ಪ್ರಿಯಸುತನ ಪ್ರೇಮಸತಿ ತಾರಾಕ್ಷಿಯು ಸಿರಿಮಂಚದಿಂದ ದಿಗ್ಗನೆ ಎದ್ದಳು. ಸೊಡರ ಬತ್ತಿಯನ್ನು ಸರಿಮಾಡಿ ಬೆಳಕನ್ನು ಹೆಚ್ಚಿಸಿ ಗಾಬರಿಯಿಂದ ನಡೆದು ಮಗುವನ್ನು ಎತ್ತಿ ಎದೆಗೆ ಒತ್ತಿಕೊಂಡಳು. ಸಂತೈಸುತ್ತ ಮುದ್ದುಮಾಡಿ ಮುದ್ದುಮುಖಕ್ಕೆ ಮುತ್ತಿಟ್ಟಳು. ತರುಣಿ ಷೋಡಶಿ ತಲ್ಲಣಗೊಳ್ಳುತ್ತ, ಅಷ್ಟರಲ್ಲಿ ಅಲ್ಲಿಗೆ ಬಂದ ಸೇವಕಿಗೆ ಕಂದನ ತಂದೆಯನ್ನು ಕರೆದು ತರಲು ಹೇಳಿದಳು. ಕಳವಳದ ನುಡಿಕೇಳಿ, ಅಧ್ಯಯನ ಕೊಠಡಿಯಲ್ಲಿದ್ದ ರಣಧೀರ ಇಂದ್ರಜಿತುವು ಪುಸ್ತಕವನ್ನು ಕೈಲಿ ಹಿಡಿದುಕೊಂಡು ಸಾಮಾನ್ಯನಂತೆ ಓಡೋಡಿ ಬಂದನು.

ಮನೋಹರ ಲತಾಂಗಿ ಮತ್ತು ಶಿಶುವಿನ ಬಳಿ ಆ ಭದ್ರರೂಪದ ಸುದೀರ್ಘದೇಹಿಯನ್ನು ನೋಡಿ ಆಂಜನೇಯನು ಹರಸಬೇಕೆಂದುಕೊಂಡ ಭಾವವನ್ನು ಸಂಯಮದಿಂದ ತಡೆಹಿಡಿದುಕೊಂಡನು. ನಿಟ್ಟುಸಿರು ಬಿಟ್ಟನು!

ಮಗುವನ್ನು ಎದೆಗೆ ಒತ್ತಿಕೊಂಡು ಬೆದರುಗಣ್ಣಿನಿಂದ ನೋಡುವ ರೂಪಸಿ ಸತಿಗೆ ಇಂದ್ರಜಿತು ಮೇಲುನಗೆ ಸೂಸುತ್ತ ಹೇಳಿದನು.

'ಮನದನ್ನೆ, ಇದೇನು ಸುರಕ್ಷಿತಳಾಗಿದ್ದರೂ ಸುಮ್ಮನೆ ಅರಕ್ಷಿತಳಂತೆ ಬೆದರುವೆ? ನನ್ನ ಮುದ್ದು ವಜ್ರಾರಿಗೆ ಬಾಧೆಯಾಯಿತೆ? ಹೇಳು. ಏಕೆ ಅಕಾರಣವಾಗಿ ಮಿಳಮಿಳನೆ ನೋಡುವೆ? ತೊಂದರೆ ಏನೆಂದು ಹೇಳು, ಹೋಗಲಾಡಿಸುತ್ತೇನೆ. ತ್ರಿಲೋಕಗಳನ್ನು ಮಥಿಸಿ ನಿನ್ನ ಈ ಅಂಜಿಕೆಗೆ ಚಿಕಿತ್ಸೆ ನೀಡುತ್ತೇನೆ.'

ನೆನೆದಕಣ್ಣು, ನಿಟ್ಟುಸಿರಿನೊಡನೆ, ಹೆದರುವ ಸ್ವಭಾವದ ತಾರಾಕ್ಷಿಯು ಪತಿ ರಾಕ್ಷಸವೀರನೊಡನೆ ಗದ್ಗದಿಸಿದಳು:

'ಪ್ರಾಣಪತಿಯೇ, ಅಬಲೆಯಾದ ನಾನು ನಿನ್ನ ಸಬಲ ಮತಿಗೆ ಅಲ್ಪವನ್ನು ಹೇಳಲು ಭಯವಾಗುತ್ತಿದೆ. ಭಾವದಿಂದ ತಿಳಿದುದನ್ನು ಬುದ್ಧಿಯಿಂದ ಅಳೆದಾಗ ಅದು ಮೌಢ್ಯದಂತೆ ಕಾಣುತ್ತದೆ. ದುಶ್ಶಕುನ ಚಿಹ್ನೆಯನ್ನು ಹಗುರವಾಗಿ ಕಾಣಲಾಗದು. ವಿಧಿಯ ಎಚ್ಚರಿಕೆಯನ್ನು ಕಡೆಗಣಿಸದೆ ನಡೆಯುವುದೇ ಬುದ್ಧಿವಂತಿಕೆ. ವೀರ ರಮಣಿಯಾದ ನನ್ನ ಹೃದಯ ನಿಷ್ಕಾರಣವಾಗಿ ಬೆದರುತ್ತದೆಯೆ? ನಾಯಿ ಊಳಿಟ್ಟಿತು. ನವಿಲು ಕೇಗಿತು. ಗಂಟೆ ದನಿಗೈದಿತು. ನಿನ್ನ ಪೌರುಷ ವಜ್ರಸಂಭವನು ಚಿಟ್ಟನೆ ಚೀರಿ ತೊಟ್ಟಿಲೊಳಗೆ ಎದ್ದು ಕುಳಿತನು.'

ಇಂದ್ರಜಿತುವು ಸತಿಯ ನುಡಿಗಳನ್ನು ಕೇಳಿಯೂ, ಕೇಳಿಸದವನಂತೆ ಸುತ್ತಲೂ ನೋಡಿ, 'ಏನಿದು? ಧೂಪಧೂಮವೇನಿದು? ಹೀಗೆ ಹೊಗೆ ತುಂಬಿಕೊಂಡರೆ ಮಗುವಿಗೆ ನಿದ್ದೆ ಹೇಗೆ ಬಂದೀತು?' ಎಂದು ಹೇಳುತ್ತ ಆಳುಗಳಿಗೆ ಆಜ್ಞಾಪಿಸಿದ 'ಗವಾಕ್ಷವನ್ನು ತೆಗೆಯಿರಿ.'

'ಹೋದ ರಾತ್ರಿ ಪಟ್ಟಣದ ಉತ್ತರ ದಿಕ್ಕಿನ ಲಂಬ ಶಿಖರದ ಮೇಲೆ ಒಂದು ಮಹಾ ಉಲ್ಕೆ ಬಿತ್ತು. ಉದ್ಯಾನದ ಕೃತಕ ಬೆಟ್ಟದಲ್ಲಿ ಅನಿಲಾಕುಮಾರಿಯೊಡನೆ ಇದ್ದಾಗ ನಾನು ಅದನ್ನು ಕಂಡೆ. ಆ ಭಯಂಕರ ದುಶ್ಶಕುನವನ್ನು ಲಂಕೆಯ ಸಮಸ್ತರೂ ನೋಡಿದೆವು ಎಂದು ಹೇಳುವರು. ಕೆಲವರಿಗೆ ಅದು ಒಂದು ಕ್ಷಣ ಕಪಿಯ ರೂಪವಾಗಿ ಕಂಡಿತಂತೆ. ಅದು ಅರಸರಿಗೆ ಕೇಡೆಂದು ತಿಳಿದವರು ಹೇಳುತ್ತಾರೆ.'

'ಸಾಕುಮಾಡು ನಿನ್ನ ಅಂತೆ ಕಂತೆಯ ಚಿಂತೆ. ಕಾಂತೆ, ಕಲ್ಪನಾ ಭೀತಿಯನ್ನು ಬಿಡು. ಸೃಷ್ಟಿಕರ್ತನು ಹೆಣ್ಣು ಜಾತಿಗೇ ಬೇರೆ ತರ್ಕವನ್ನು ನಿರೂಪಿಸಿರುವನೇನೊ

ತಿಳಿಯದು! ನೀನು ಈಗ ಹೇಳಿದುದಕ್ಕೂ ಮಿಥ್ಯವಾದ ಉಲ್ಕೆಯ ಕಥೆಗೂ ಏನು ಸಂಬಂಧವೊ?....ಮನಃ ಪ್ರಿಯೆ, ನೋಡು ಮಗು ಮಲಗಿತು ತೊಟ್ಟಿಲನ್ನು ತೂಗು... ನೀನು ಮಲಗು. ಧನುರ್ವಿದ್ಯೆಯನ್ನು ಹೇಳುವ ಈ ಪುಸ್ತಕವನ್ನು ಓದಿ ನಿನ್ನೆಡೆಗೆ ಬೇಗ ಬರುತ್ತೇನೆ. ಅಬಲೆ, ಜೊತೆಯಿಲ್ಲದ ನಿನ್ನ ಕಲ್ಪನೆಗೆ ಭೀತಿ ಸಹಜ!'

ಕಣ್ಣಲ್ಲಿ ಕಣ್ಣಿಟ್ಟು ಅರ್ಥಗರ್ಭಿತವಾಗಿ ಕಣ್ಣು ಮಿಟುಕಿಸದೆ ನೋಡುತ್ತ ಹೊರಟ ಪ್ರಾಣನಾಥನನ್ನು ಪ್ರಾರ್ಥನಾ ದೃಷ್ಟಿಯಿಂದ ತರುಣಿ ತಡೆದಳು. ತನ್ನ ಎದೆಯ ತಲ್ಲಣವನ್ನು ತಿಳಿಸಿದಳು:

'ವೀರವರನೇ, ಹೆಣ್ಣಿನ ಎದೆಯ ನೋವನ್ನು ತಿರಸ್ಕರಿಸಬೇಡ. ಒಲಿದವರ ಎದೆಯ ಶಂಕೆ ಅರ್ಥವಿಲ್ಲದ್ದು ಅಲ್ಲ. ಮಂತ್ರಾಲೋಚನೆಯ ಮಂದಿರಲ್ಲಿರುವ ನಿಮಗೆ ಜನರು ಕಾಣುವ ಬಹಿರಂಗಸತ್ಯ ಹೇಗೆ ತಿಳಿಯುತ್ತದೆ? ಲಂಕೆಗೆ ಏನು ಕೇಡೊ! ಮಾವನು ರಾಮನಸತಿಯನ್ನು ಅಪಹರಿಸಿಕೊಂಡು ಬಂದಾಗಿನಿಂದ ದುಶ್ಯಕುನಗಳು ತೋರುತ್ತಿವೆ. ನನಗೊ ರಾತ್ರಿಯೆಲ್ಲ ದುಃಸ್ವಪ್ನ. ಆ ಹದಿಬದೆಯರ ಮಹಾದೇವಿಯನ್ನು ಮಾವನು ಏತಕ್ಕೆ ತಂದ. ವಶವಾಗದ ಅವಳನ್ನು ಇನ್ನಾದರೂ ಹಿಂದಕ್ಕೆ ಒಪ್ಪಿಸುವಂತೆ ನಿಮ್ಮ ತಂದೆಯನ್ನು ತಿದ್ದಬಾರದೆ?'

'ಓಹ್, ಆ ತಂಗಿ ವಿಭೀಷಣ ಚಿಕ್ಕಪ್ಪನ ಮಗಳು ಅನಲೆ ನಿನಗೆ ಸಖಿಯಲ್ಲವೆ? ಅವಳ ಉಪದೇಶವನ್ನು ಕೇಳಿ ನೀನು ಆ ಚಿಕ್ಕಪ್ಪನಂತೆ ಬುದ್ಧಿ ಹೇಳುತ್ತಿರುವೆ! ತಂದೆಗೆ ಉಪದೇಶದ ಕೊರತೆಯಿದೆಯೆ? ನಾನಿರುವುದು ಅವನ ಆಜ್ಞೆಯಂತೆ ನಡೆಯಲು. ಬುದ್ಧಿ ಹೇಳಲು ನನಗಿಂತ ಹಿರಿಯರಾದ ಜ್ಞಾನಿಗಳಿದ್ದಾರೆ. ನಮ್ಮಂಥವರಿರುವ ಈ ಲಂಕೆ ಯಾರಿಗಾದರೂ ದುರ್ಗಮವೂ, ದುಸ್ಸಾಧ್ಯವೂ ಆಗಿದೆ, ನಡೆ, ಹೆದರಿಕೆ ಬಿಟ್ಟು ಮಲಗು!'

ಪತಿಯ ಹೆಮ್ಮೆಯ ಧೀರಾಕೃತಿ ಕಣ್ಮರೆಯಾಗುವವರೆಗೂ ನೋಡುತ್ತಿದ್ದು ನಿಟ್ಟುಸಿರುಬಿಟ್ಟು ಹಿಂದಿರುಗಿದಳು. ಸೇವಕರು ತೆರೆದ ಕಿಟಕಿಗಳಿಂದ ಕಂಪುಹೊಗೆ ಬೀಸುಗಾಳಿಯ ಜೊತೆಗೆ ಮನೆಯಿಂದ ತೆರಳುವಂತೆ ಹೊರಕ್ಕೆ ಹೋಯಿತು. ಸೀತೆಯ ವಾರ್ತೆಯನ್ನು ಕೇಳಿದ ಆಂಜನೇಯನು ಮನಸ್ಸಿನಲ್ಲಿ ಇಂದ್ರಜಿತುಸತಿಯನ್ನು ವಂದಿಸಿದನು. ಮನದ ಉತ್ಸಾಹವು ಹೆಚ್ಚಿ ಸೀತೆಯನ್ನು ಹುಡುಕಲು ಮುಂದಕ್ಕೆ ಹೋದನು.

ಕಾಡಾನೆಯನ್ನು ಎತ್ತಿ ಮೇಲಕ್ಕೆಸೆದ ಕುಂಭಕರ್ಣ

ಗೃಹಗೃಹಗಳನ್ನು ಸಂಚರಿಸುವ ಪವನಜನು ಸೇನಾನಿ ಪ್ರಹಸ್ತನ ಮನೆ ಹೊಕ್ಕನು. ಅವನು ಓರ್ವ ಜಾರೆಯ ಪಾದದಲ್ಲಿ ಬಿದ್ದಿದ್ದ ದೃಶ್ಯ ನೋಡಿದನು. ಕಾಮದಿಂದ ಕ್ಷಾತತೇಜಕ್ಕೆ ಒದಗುವ ಹೀನದೆಸೆಕಂಡು ಜಿಗುಪ್ಸೆಯಿಂದ ಮೇಲಕ್ಕೆ ನೆಗೆದನು.

ಮಹಾಪಾರ್ಶ್ವನೆಂಬ ಸೇನಾನಿಯ ಸುಧಾಶ್ವೇತವನ್ನು ಪ್ರವೇಶಿಸಿದನು. ಅಸ್ತ್ರಶಕ್ತಿಯನ್ನು ಮಂತ್ರದಿಂದ ಪೂಜಿಸುತ್ತಿದ್ದ ಅವನ ಬಗ್ಗೆ ಗೌರವ ಉಂಟಾಯಿತು. ಅನಂತರ ದಳಪತಿ ವಿರೂಪಾಕ್ಷ, ದೈತ್ಯನಾಯಕರುಗಳಾದ ವಿದ್ಯುಜ್ಜಿಹ್ವ, ವಿದ್ಯುನ್ಮಾಲಿ, ಜಂಬುಮಾಲಿ, ಸುಮಾಲಿ, ಧೂಮ್ರಾಕ್ಷ, ಘನ, ವಿಘನ, ವಕ್ರಶಠ, ಮತ್ತ, ಯುದ್ಧೋನ್ಮತ್ತ, ಹಸ್ತಿಮುಖ, ಶೋಣಿತಾಕ್ಷ, ಕರಾಳ, ರಶ್ಮಿಕೇತು, ಪಿಶಾಚ, ವಜ್ರಕಾಯಂ, ಧ್ವಜಗ್ರೀವಂ,... ಮಹಾಕಾಯನ್, ಅತಿಕಾಯನ್, ಬ್ರಹ್ಮಕರ್ಣಂ, ದುಷ್ಪ್ರ ಮುಂತಾದವರ ಮನೆಗಳನ್ನು ಶೋಧಿಸುತ್ತ ನಡೆದನು. ಹಾಗೆ ಸೋಸುತ್ತ ಸಾಗುತ್ತಿರಲು ಮುಂದೆ ಪರ್ವತವೆನ್ನುವಂತಿರುವ ಭೀಷಣ ಭವ್ಯ ಗೋಪುರದ ಕುಂಭಕರ್ಣನ ಬೃಹದ್ ಭವನ ಗೋಚರಿಸಿತು.

'ಇದು ಯಾವ ವೀರನ ಮನೆಯೊ? ರಾಕ್ಷಸರಾಜನ ಅರಮನೆಯೊ? ನನ್ನ ಅನ್ವೇಷಣೆಯ ಕೊನೆಯೊ? ಕಪಿಕುಲದ ಪುಣ್ಯಪೈರಿನ ತೆನೆಯೊ?' ಎಂದುಕೊಂಡನು.

ಗೂಬೆಯ ರೂಪವನ್ನು ತಾಳಿದ ಆಂಜನೇಯನು ಕತ್ತಲೆಯ ಗುಹೆಯನ್ನು ಪ್ರವೇಶಿಸುವಂತೆ ಒಳನಡೆದನು. ವಿಪುಲ ವಿಸ್ತೀರ್ಣದ ಜಟಿಲ ರಚನೆಯಲ್ಲಿ ದಾರಿ ತಪ್ಪಿದನು. ಅಲ್ಲಿ ಸಹ್ಯಾದ್ರಿಯ ಆಗುಂಬೆ ಕಾಡಿನಲ್ಲಿ ಬಲಗಿ ಬೃಹತ್ ವೃಕ್ಷಗಳು ಕಿಕ್ಕಿರಿದಂತೆ ಸಾಲುಸಾಲು ಕಂಬಗಳಿದ್ದವು. ಅವು ಗುಂಪುಗುಂಪಾಗಿ ದೈತ್ಯೇಂದ್ರನ ಆಳುಗಳು ಅವನ ಆಜ್ಞೆಯನ್ನು ಹೊತ್ತು ರಾಕ್ಷಸಕ್ರಮದಲ್ಲಿ ನಿಲ್ಲುವಂತೆ ಲೆಕ್ಕವಿಲ್ಲದಷ್ಟು ಲೆಕ್ಕವೇ ದಣಿಯುವಂತೆ ನಿಂತಿದ್ದವು. ಜೇನುಹುಟ್ಟಿನ ಲಕ್ಷಾಂತರ ಗೂಡುಗಳಂತಿರುವ ಮೂಲೆಮೂಲೆಗಳ ಕೋಟಿಕೋಟಿ ಕೋಣೆಗಳು ಚಿತ್ತ ಭ್ರಮೆಯನ್ನುಂಟು ಮಾಡಿದವು. ಅವನ ಬುದ್ಧಿ ಬೆರಗಾಗುವ ರೀತಿಯಲ್ಲಿ ಹೆಬ್ಬಂಡೆಗಳು, ಹೆಮ್ಮರದ ದಿಮ್ಮಿಗಳು, ದಪ್ಪದಪ್ಪನಾದ ಹಗ್ಗಗಳು, ಕುಂಕುಮ ಬೆರಸಿದ ಕೆಮ್ಮಣ್ಣಿನ ಗುಡ್ಡಗಳು, ನುಣ್ಮಳಲಿನ ಬೆಟ್ಟಗಳು ದೊಡ್ಡಗರಡಿ ಮನೆಯನ್ನು ಮನಸ್ಸಿಗೆ ತರುವಂತೆ ಅಲ್ಲಿದ್ದವು. ಅವುಗಳನ್ನು ನೋಡಿ 'ಈ ದೃಶ್ಯಾದ್ಭುತವು ನಿಜವಾಗಿಯೂ ರಾಕ್ಷಸನ ವ್ಯಾಯಾಮಶಾಲೆಯೇ ಆಗಿರಬೇಕು.' ಎಂದುಕೊಂಡು ಮುಂದಕ್ಕೆ ನಡೆದನು.

ಕುಂಭಕರ್ಣನ ಬೇಟೆಯ ವಿನೋದದ ಪ್ರದರ್ಶನ ಗೃಹದ ಕಂಬಕಂಬಗಳಲ್ಲಿ, ಬಾಗಿಲಲ್ಲಿ, ಜಗಲಿಯಲ್ಲಿ, ಗೋಡೆ ಗೋಡೆಗಳಲ್ಲಿ, ಕಣ್ಣು ಹರಿವ ಕಡೆಯಲ್ಲಿ, ಸುತ್ತಣ ಎಲ್ಲ ಕಡೆಯಲ್ಲಿಯೂ ಕಾಡುಕೋಣ ಕಡವೆ ಸಾರಗ ಜಿಂಕೆಯ ಕವಲು ಕೊಂಬುಗಳು, ತಿರುವುಕೊಂಬುಗಳು, ನೇರಕೊಂಬುಗಳಿದ್ದವು. ಹಂದಿ ಹುಲಿ ಕರಡಿ ಸಿಂಹ ಆನೆ ಖಡ್ಗಮೃಗ ಮೊದಲಾದ ಪ್ರಾಣಿಗಳ ಉಗುರು, ಚರ್ಮಗಳು ಶಿಲ್ಪಕೃತಿಗಳಂತೆ ಅಲಂಕರಣಗೊಂಡಿದ್ದವು! ಮುಂದಕ್ಕೆ ನಡೆಯುತ್ತ ಹೋದಂತೆ ಪ್ರಾಣಿಸಂಗ್ರಹ ಶಾಲೆಯನ್ನು ಪ್ರವೇಶಿಸಲಾಗದ ರೀತಿಯಲ್ಲಿ ಅಲ್ಲಲ್ಲಿ ನಾನಾ ವಿಧದ ವನದ ಜಲದ ಗಗನದ ಜೀವಿಗಳಿದ್ದವು. ಅವುಗಳ ಚಿತ್ರ ವಿಚಿತ್ರ ಸ್ವರಗಳಿಂದ ಕಿವಿಯು ಶಬ್ದಮಯವಾಗಿ ಹೋಯಿತು.

ಆ ಯಮನ ಶಕ್ತಿಯನ್ನು ಕುಂದಿಸುವ ಗಂಡುಬೀಡಿನಲ್ಲಿ ಚಿರತೆ, ದೊಡ್ಡಮೊಸಳೆ, ಹೆಬ್ಬಾವು, ಹೆಬ್ಬಂದಿ, ಹೇರಾನೆ, ಹೆಬ್ಬುಲಿ, ಪೆಡಂಭೂತಗಳು, ಕರಡಿ, ಸಿಂಹ, ಭೀಕರ ಬೇಟೆನಾಯಿಗಳಿದ್ದವು. ಆದರೆ ಎಲ್ಲಿಯೂ ದೀರ್ಘರಾಕ್ಷಸರಲ್ಲಾಗಲಿ, ಪ್ರಾಣಿಗಳಲ್ಲಾಗಲಿ ಹೆಣ್ಣೆಂಬ ಸುಳಿವಿರಲಿಲ್ಲ. ಕುಂಭಕರ್ಣನ ಪ್ರಪಂಚ ಬರಿ ಗಂಡುಬೀಡಾಗಿ ಭಯಂಕರವಾಗಿತ್ತು!

'ಏನು ವಿಚಿತ್ರವೋ ಈ ಅಮರ್ತ್ಯಲಂಕೆ!' ಎಂದುಕೊಂಡು ಆಂಜನೇಯನು ಮುಂದೆ ಸಾಗಿದನು. ಅಲ್ಲಿ ಮಹಾ ಭಯಂಕರವಾದ ಢಕ್ಕಢಿಕ್ಕಿ ಎಂಬ ಭೈರವ ಶಬ್ದ ಕೇಳಿಸಿತು. ಮನೆಯ ಕಟ್ಟಡವನ್ನು ಅಲುಗಿಸುವ ಗುದ್ದುಸದ್ದನ್ನು ಕಳವಳಗೊಂಡು ಕಿವಿಗೊಟ್ಟು ಆಲಿಸಿದನು. ವಾಸಗೃಹದಲ್ಲಿ ಇದು ಸೋಜಿಗವಾಗಿದೆ ಎಂದುಕೊಂಡು ಶಬ್ದ ಬಂದಕಡೆ ಮುಂದುವರಿದನು. ಅದು ಸಿಡಿಲು ಸಿಡಿಲೊಡನೆ ಮುಷ್ಟಿಯುದ್ಧವನ್ನು ಮಾಡುವಂತಿತ್ತು. ನೆಲವು ಕಂಪಿಸಲು ಸಡಿಲವಾಗಿ ಉರುಳಿದ ಹೆಬ್ಬಂಡೆಯು ಇನ್ನೊಂದು ದೊಡ್ಡಬಂಡೆಗೆ ತಗುಲಿ ಅಪ್ಪಳಿಸುವಂತೆ ಧೈರ್ಯ ಕಳಚಿಬೀಳುವ ಕೋಲಾಹಲದ ಎಡೆಯನ್ನು ಸಮೀಪಿಸಿದನು. ಮುಂದಕ್ಕೆ ಹೋಗುತ್ತ ಹೋಗುತ್ತ ಕಡೆಗೆ ಅವನಿಗೆ ಭಯಂಕರ ಶಬ್ದಕ್ಕೆ ಕಾರಣವಾದ ಭಯಂಕರ ರಾಕ್ಷಸನ ಬೃಹತ್ ವ್ಯಾಯಾಮ ವೇದಿಕೆ ಕಂಡಿತು.

ಅಲ್ಲಿ ಕೆಂಪುರಿಯ ದೀವಟಿಗೆಗಳು ದೆವ್ವದಾರಾಧನೆಯ ಆರತಿಯಂತೆ ರಾರಾಜಿಸುತ್ತಿದ್ದವು. ನೆಲದ ಮೇಲಿನ ದಾಸವಾಳದ ಹೂವಿನ ಕುಂಕುಮ ಶೋಭೆಯು ರಕ್ತದಲ್ಲಿ ಅದ್ದಿದ ಅನ್ನವನ್ನು ಎರಚಿದಂತೆ ಕಾಣುತ್ತಿತ್ತು. ನೋಡುವವರ ಮನಸ್ಸಿಗೆ ಮಾಯೆಯ ಮೋಹ ಬೀಸಿ, ಕಣ್ಣುಗಳಿಗೆ ಒಂದು ಅಸ್ಪಷ್ಟತೆಯ ಮಬ್ಬು ಕವಿಯಿತು. ನೆರಳುಗಳು ಜೀವವಸ್ತುಗಳೋ ಎನ್ನುವಂತೆ ಗೋಡೆ ಕಂಭಗಳೊಡಗೂಡಿ ಮೇಳಕಟ್ಟಿದಂತೆ ಅಭಿನಯಿಸಿದವು. ಆ ರಕ್ತದೀಪಾರ್ಚನೆಯ ಬೆಳಕಿನ ಬಣ್ಣವನ್ನೇ ಹೋಲುವ ಕೆಂಪುದಟ್ಟಿಯನ್ನು ಕಟ್ಟಿದ್ದ ಭಾರೀ ಶರೀರದ ಜಟ್ಟಿಗಳು ಪ್ರೇಕ್ಷಕರಂತೆ ಸುತ್ತಲೂ ನೆರೆದಿದ್ದರು. ಅಲ್ಲಿ ಒಬ್ಬ ವೀರನು ನಾಲ್ಕು ಗೂಳಿಗಳೊಡನೆ ಮಲ್ಲಕಾಳಗ ಮಾಡುತ್ತಿದ್ದನು. ಅದನ್ನು ನೋಡಿದ ಆಂಜನೇಯನ ಹೆಮ್ಮೆ ರೋಮಾಂಚಿತವಾಗಿ 'ದೈತ್ಯ ವೀರರಲ್ಲಿ ಇವನು ಯಾರೊ ಗೊತ್ತಿಲ್ಲ. ಇವನು ನಿಜವಾಗಿ ಸಮರ್ಥನಾದ ಯೋಧ! ಇವನ ಪರಾಕ್ರಮ ನಮಗೆ ಸರಿಸಾಟಿಯಾಗಿದೆ!' ಎಂದು ಮೆಚ್ಚಿ ಅವನ ಮಹಾಕಾರ್ಯವನ್ನು ನೋಡಿದನು.

ಬಂಡೆಯ ಮೇಲೆ ಬಂಡೆಯನ್ನು ಏರಿ ಗಿರಿಯನ್ನು ರಚಿಸಿದಂತೆ, ಬೇರುಗಳು ಹಿಣಿಲು ಹಿಣಿಲಾಗಿ ದೊಡ್ಡಮರವನ್ನು ಸುತ್ತಿ ಕೊಂಡಿವೆಯೊ ಎನ್ನುವಂತೆ, ಬೈರವನ ಒಡಲನ್ನು ಸುತ್ತಿ ನಿದ್ದೆಯಿಂದ ಏಳುತ್ತಿರುವ ಹೆಬ್ಬಾವು ಮೈ ಮುರಿಯುತ್ತಿದೆಯೊ ಎಂಬಂತೆ– ಕುತ್ತಿಗೆ, ಭುಜ, ಬೆನ್ನು ಮೊಳಕಾಲು, ತೊಡೆ, ಎದೆಯ ಸ್ನಾಯು ವಜ್ರಖಂಡಗಳು ಉಬ್ಬಿ ಮಾಂಸಜೀವಿಯ ಮಾಂಸದ ಹುಬ್ಬುಗಂಟಿನಂತೆ ಉಬ್ಬಿ ತೋರುತ್ತಿದ್ದವು. ಅವನ ಕೆದರಿದ

ತಲೆಯು ಗಿರಿಶಿಖರದ ಮುಖವನ್ನು ಆವರಿಸಿ ಬೆಳೆದ ಕಾಡನ್ನು ಕಡೆಗಣಿಸುವಂತಿತ್ತು. ಅವನ ಮೈ ಆನೆಯಂತೆ ಸ್ಥೂಲವಾಗಿದ್ದರೂ, ಜಿಂಕೆಯ ಚಕಿತ ಚಲನಾವೈಖರಿಯಿಂದ ಚಿರತೆಯ ನೆಗೆತದಿಂದ, ಹಾವಿನ ನಾಲಗೆಯಂತೆ ಬಳ್ಳಿಮಿಂಚಾಗಿ ಆ ರಾಕ್ಷಸನು ತೋರುತ್ತಿದ್ದನು. ಅವನು ಕೋಪಗೊಂಡ ಆ ನಾಲ್ಕು ಗೂಳಿಗಳ ಚಾತುರ್ಯವು ಸೋತು, ನಿಟ್ಟುಸಿರು ಬಿಡುತ್ತ ಗಂಜಲು ಸಗಣಿ ಹಾಕಿ ನೆಲಕ್ಕೆ ಉರುಳುವಂತೆ ಮಾಡಿದನು.

ಆ ವ್ಯಾಯಾಮ ವ್ಯಸನಿಯು ಅಂಗೈಗಳಿಂದ ತೋಳನ್ನು ಚಪ್ಪರಿಸಿಕೊಂಡು ತೊಡೆಕುಟ್ಟಿ, ಚಿಮ್ಮಿ ಪುಟನೆಗೆದು ಕುಪ್ಪಳಿಸಿ, ಚವರಿಮೀಸೆಯ ಮುಗುಳುನಗೆಯಿಂದ ಅಟ್ಟಹಾಸಗೈಯ್ಯುತ್ತ ನಿಮಿರಿ ನಿಂತನು. ಆ ಕಾಳಗದ ಗೂಳಿಗಳ ದಡಿಗ ದೇಹವನ್ನು ರಾಕ್ಷಸಭಟರು ಹೊತ್ತೊಯ್ದರು. ಮತ್ತೆ ನೋಡುತ್ತಿದ್ದಂತೆ ಅವರು ಹೊಸಕಾಡಾನೆಯೊಂದನ್ನು ದೈತ್ಯಸಿಂಹನ ಮೃತ್ಯು ಸಮ್ಮುಖಕ್ಕೆ ನುಗ್ಗಿಸಿದರು. ಅಂಜನಾಸುತನ ಕೌತುಕ ಉಸಿರು ಕಟ್ಟಿತು! ಮುಂದೆ ಏನು ಎಂಬಷ್ಟರಲ್ಲಿ ನಡೆದ ಅದ್ಭುತ ಘಟನೆ ಆ ಪ್ರಶ್ನೆಯನ್ನು ತಿಂದು ತೇಗಿತು.

ರೋಷದಿಂದ ಘೀಂಕರಿಸಿ ರಂಗವನ್ನು ಹೊಕ್ಕ ಮದಗಜವು ಮುಂದೆ ದೈತ್ಯದೇಹದ ಪ್ರಪಾತಕಂಡಂತೆ ಬೆಚ್ಚಿ ಫಕ್ಕನೆ ನಿಂತಿತು! ದೃಷ್ಟಿ ನೆಟ್ಟು ನೋಡಿತು. ಕಾಲನ್ನು ನೆಲಕ್ಕೆ ನಾಟಿತು. ಮೈಯನ್ನು ಮನಸ್ಸಿಗೆ ಬಿಗಿದು ಕಟ್ಟಿತು. ಒಂದೆರಡು ಮೂರು ಕ್ಷಣ ಉಸಿರನ್ನು ಬಂಧಿಸಿತು. ಅದು ಕೀಲುಗೊಂಬೆಯಂತೆ ನಿಂತಿತು. ಕೆಂಪು ಬೆಳಕಿನ ಮಾಯೆ ಉಂಟುಮಾಡಿದ ಮಂಕಿನಿಂದ ನಿಧಾನವಾಗಿ ಎಚ್ಚೆತ್ತು ತಿಳಿದಂತೆ ತಲೆಯೊಲೆಯಿತು. ಸೊಂಡಿಲನ್ನು ತೊನೆದಾಡಿಸಿ ನೀಳವಾದ ದಂತಗಳನ್ನು ತೂಗಿ, ಮೊರಗಿವಿಗಳನ್ನು ಬೀಸಿತು. ಆ ಹೇರಾನೆಯು ಘೀಳಿಡುತ್ತ ತಕ್ಷಣ ಮುನ್ನುಗ್ಗಿ ಹೋರಾಡಲು ಸಿದ್ಧವಾಯಿತು.

ನಿಶ್ಚಲವಾಗಿ ನಿಂತು ಅದನ್ನೇ ಕಣ್ಣು ನೆಟ್ಟು ನೋಡುತ್ತಿದ್ದ ಮಲ್ಲರಾಕ್ಷಸನು ಅದರ ಸಿದ್ಧತೆ ಕಂಡನು. ಬಂಡೆಯಂತಹ ಗದೆಯ ತೋಳಿನ ವಜ್ರಮುಷ್ಟಿಯಿಂದ ಅದರ ಹಣೆಗೆ ಗುದ್ದಿದನು. ಆ ಪೆಟ್ಟಿಗೆ ಕೋಪಗೊಂಡು ಚೀರಿದ ಆ ಮದಹಸ್ತಿಯು ಮತ್ತೆ ಸೊಂಡಿಲನ್ನು ಎತ್ತಿತು. ತನ್ನ ಸಮಾನಗಾತ್ರದ ಶರೀರ ಪರ್ವತದ ತಪ್ಪಲಿನಲ್ಲಿ ಕ್ರೀಡೆಯಾಡುವಂತೆ ಕೆರಳಿ ಪ್ರತಿಭಟಿಸುತ್ತ ನುಗ್ಗಿತು. ದಂತಖಡ್ಗವು ಅವನ ತೊಡೆಯ ದಿಣ್ಣೆಯನ್ನು ಕೊರೆಯಿತು. ಕುಂಭಸ್ಥಲವು ಆ ಜಗಜಟ್ಟಿಯ ಹೊಟ್ಟೆಯ ಹೊಕ್ಕುಳೆಡೆಗೆ ಢಿಕ್ಕಿ ಹೊಡೆಯಿತು. ಅದು ಸೊಂಡಿಲಿನಿಂದ ವೈರಿಯ ದೇಹವನ್ನು ಸುತ್ತಲು ಹವಣಿಸಿತು. ಅದು ಅವನ ದೇಹ ವಿಸ್ತಾರಕ್ಕೆ ಸಾಲದಾಗಲು ಬೇಸರಗೊಂಡಿತು.

ಆಗ ರಕ್ಕಸನ ಬಾಹು ಅದರ ಹಸ್ತವಾದ ಸೊಂಡಲಿನೊಡನೆ ಹೆಣೆದುಕೊಂಡಿತು. ಅವನು ತನ್ನ ತಲೆಯನ್ನು ಅದರ ತಲೆಗೆ ಒತ್ತಿದನು. ಮತ್ತೊಂದು ಕೈಯಿಂದ ಅದರ ಕೋರೆಯನ್ನು ಹುಡುಕುತ್ತ ಅದುಮಿದನು. ನೆಲಕ್ಕೆ ಬಲವಾಗಿ ಕಾಲೂರಿದನು. ಅದರ

ಪ್ರಾಣವು ಹೆಪ್ಪುಗಟ್ಟುವಂತೆ ಅಚಲಭಾರದ ಅದನ್ನು ಎತ್ತಿ ಮೇಲಕ್ಕೆ ಚಿಮ್ಮಿದನು. ಅದರ ಕೋಡು ಮುರಿಯಿತು. ಮುಂಗಾಲುಗಳು ಮೇಲಕ್ಕೆದ್ದವು. ಹಿಂಗಾಲುಗಳು ತತ್ತರಿಸಿ ರಕ್ತಕಾರಿ ಮದಗಜವು ಬೆನ್ನಡಿಯಾಗಿ ಬಿದ್ದಿತು. ಆ ಮಹಾಪ್ರಾಣಿ ಮತ್ತೆ ಮೇಲೇಳಲಿಲ್ಲ!

ಅದನ್ನು ನೋಡಿ ನಿಟ್ಟುಸಿರುಬಿಟ್ಟ ಆಂಜನೇಯನು ಮನದಲ್ಲಿ 'ನಿಜ, ಇಂಥವರ ನೆರವು ಇರಲು ಈ ಲಂಕೆಯನ್ನು ಗೆಲ್ಲುವುದು ಅಸಾಧ್ಯ. ಮುಂದೆ ಈ ದೈತ್ಯನನ್ನು ಹೇಗೆ ಗೆಲ್ಲುತ್ತೇವೆಯೊ? ನಮಗೆ ಧರ್ಮವೇ ಸಹಾಯ ಮಾಡಬೇಕು.' ಎಂದು ಚಿಂತಿಸುತ್ತ, ಪಾತಾಳವನ್ನು ಹೊಕ್ಕು ಬದುಕಿಬಂದವನಂತೆ ಅಲ್ಲಿಂದ ಹೊರಟನು. ಹೊತ್ತನ್ನು ತಿಳಿಯಲು ನಕ್ಷತ್ರಗಳ ಮಾರ್ಗವನ್ನು ಸಮೀಕ್ಷಿಸಿದನು. ಮೃಗಶಿರವು ಪಶ್ಚಿಮದ ಕಡೆಗೆ ಸಾಗುತ್ತ ಮಿನುಗುತ್ತಿತ್ತು. ಉತ್ತರದಲ್ಲಿ ಸಪ್ತರ್ಷಿ ಮಂಡಲವು ಮಿರುಗುತ್ತಿದ್ದಿತು. ಚಂದ್ರನ ಹೆಚ್ಚಿದ ಬೆಳುದಿಂಗಳನ್ನು ಹೊಗೆಯ ಹಿಟ್ಟಿನ ಮಾಗಿ ಮಂಜು ಮಬ್ಬು ಮಾಡಿತ್ತು. ಸೀತಾದೇವಿಯ ಅವಸ್ಥೆಗೆ ಮನಸ್ಸಿನಲ್ಲಿ ಕುದಿಕುದಿದ ಸಮೀರಾತ್ಮಜನು ಹುಡುಕುತ್ತ ಬೇಗ ಬೇಗ ನಡೆದನು.

ಗೃಹದಿಂದ ಗೃಹಕ್ಕೆ, ನೋಟದಿಂದ ನೋಟಕ್ಕೆ ಒಮ್ಮೆ ಶ್ರದ್ಧೆಯಿಂದ, ಒಮ್ಮೆ ಶಂಕೆಯಿಂದ, ಒಮ್ಮೆ ರೋಷ ಮತ್ತೊಮ್ಮೆ ಬೇಸರದಿಂದ ಸಾಗಿದನು. ಹೇಸಿಗೆಯ ನೋಟಗಳಿಗೆ ಅಸಹ್ಯ ಪಡುತ್ತ, ಮಹಿಮಾಸ್ಪದ ದೇವಭಕ್ತಿ, ಧರ್ಮದೃಢತೆಯನ್ನು ಕಂಡಾಗ ಉತ್ಸಾಹಗೊಂಡು ಮುಂದುವರಿದನು. ಕಾವ್ಯ ಸಹೃದಯನು ನವರಸಗಳಲ್ಲಿ ತೇಲಿ ಕೊನೆಗೆ ಸರ್ವ ರಸಕ್ಕೆ ಸಮಾಧಿಯಾದ ಶಾಂತರಸವನ್ನು ಸಮೀಪಿಸುವಂತೆ ವಿಭೀಷಣನ ಮನೆಯನ್ನು ಮುಟ್ಟಿದನು.

ಲಂಕೆಗೆ ಅತಿಥಿಗಳಂತಿರುವ ವಿಭೀಷಣ ಕುಟುಂಬ

ಆ ಶ್ರೀಮಂತ ಮಂದಿರವು ಸಾತ್ವಿಕ ಸುಗಂಧದಿಂದ ಸ್ವಾಗತ ಬಯಸಿತು. ವೀಣಾ ಮೃದುವಾಣಿಯಿಂದ ಸುಖಾಗಮನ ಗೀತೆ ಹಾಡಿತು. ಅದು ಶೋಕವನ್ನು ಮೀಟಿ ಬಾಳಿನಗೋಳನ್ನು ಹೇಳಿಕೊಳ್ಳುವಂತಿತ್ತು. ಅಲ್ಲಿಯ ನಾದಮಯ ಕಂಪು ಹನುಮನ ಹೃದಯ. ವಜ್ರವನ್ನು ಅಲುಗಾಡಿಸಿತು. ತಂತಿಯ ಇಂಪಿಗೆ ಅಂತಃಸ್ಮೃತಿಯ ಸೊಗಸು ಕರಗಿ ಕಣ್ಣು ಹನಿಗೂಡಿತು. ಅವನು ಪಶುಪಕ್ಷಿಗಳ ಹಲವು ಅಮಂಗಳ ಆಕೃತಿಗಳನ್ನು ತಳೆದನಾದರೂ ಒಳಪ್ರವೇಶಿಸಲು ಸಾಧ್ಯವಾಗಲಿಲ್ಲ. ಅವನು ಶುಭಸ್ನೇಹವನ್ನು ಮನಸ್ಸಿನಲ್ಲಿ ಕಲ್ಪಿಸಿಕೊಂಡು ಸಂತೋಷಗೊಂಡನು. ಇಲ್ಲಿ ದೇವಿ ಕನಕಜೆಗೆ, ದಶರಥ ಕುಮಾರನಿಗೆ, ಕಪಿಕುಲ ನರೇಂದ್ರನಿಗೆ ಮತ್ತು ಅಂಜನಾಸುತನಾದ ತನಗೆ ಸಜ್ಜನಸಂಗ ದೊರೆಯುತ್ತದೆಂದು ಹರ್ಷಗೊಂಡನು. ಓಂಕಾರದ ಶುಭ ರೂಪತಾಳಿ, ವೀಣಾನಾದದೊಂದಿಗೆ ಒಂದಾಗಿ ವಿಭೀಷಣನ ಮನೆಯನ್ನು ಹೊಕ್ಕನು.

ಚಿತ್ತವೇ ಇಂದ್ರಿಯನಾದವನಿಗೆ ಕತ್ತಲೆ ಬೆಳಕು ಒಂದೇ ಆಗಿರುತ್ತದೆ. ನೋಡಲು ಅಪೇಕ್ಷಿಸಿ ಕಣ್ಣಾಗಿ, ಕೇಳಲು ಅಪೇಕ್ಷಿಸಿ ಕಿವಿಯಾಗಿ, ಜನಮನಸ್ಸನ್ನು ಅರಿಯಲು ಮನಃಪ್ರಚೋದನೆಯಾಗಿ ಅವನು ಅಲ್ಲಿ ಸುಳಿದನು.

ಆ ಮನೆಯಲ್ಲಿಯ ಕಲೆಯ ನಯವು ಅವರ ಅಭಿರುಚಿಯ, ಸಂಯಮ ಸಾತ್ವಿಕತೆಯ ಸೊಗಸನ್ನು ಪ್ರತಿಬಿಂಬಿಸುತ್ತಿತ್ತು. ಹಾಗೆ ಸಾಗಲು ವಿಭೀಷಣನ ಮಗಳು ಅನಲೆ ರತ್ನಕಂಬಳಿಯ ಚಿತ್ರ ವೇದಿಕೆಯ ಮೇಲೆ ಕುಳಿತು ವೀಣೆಯನ್ನು ನುಡಿಸುವುದರಲ್ಲಿ ತಲ್ಲೀನಳಾಗಿದ್ದಳು. ಆ ನಾದ ಆ ಮಂದಿರದ ಮರ ಮಣ್ಣಿನ ಜಡಪದಾರ್ಥಗಳಲ್ಲಿ ಅನುರಣಿತವಾಗುತ್ತಿತ್ತು. ನಾದರೂಪಿ ಮರುತಾತ್ಮಜನು ಅವ್ಯಕ್ತ ಶೋಕಮಯ ಸ್ವರಸುಖವನ್ನು ಈಂಟಿ ಹರ್ಷಮೂರ್ಛಿತನಾದನು! ಬಳಿಯಲ್ಲಿ ತಾಯಿ ಸರಮೆ ಕುಳಿತಿದ್ದಳು. ತುಸುದೂರದಲ್ಲಿ ಕುಳಿತಿದ್ದ ತಂದೆ ವಿಭೀಷಣನು ಕಣ್ಣು ಮುಚ್ಚಿ, ಕಿವಿದೆರೆದು ಮಂಗಳಕಲೆಯನ್ನು ಸವಿಯುತ್ತ ಮೆಚ್ಚಿ ಆನಂದದಿಂದಿದ್ದನು.

ಮಾರುತಿಗೆ 'ಲಂಕೆಗೆ ಅತಿಥಿಗಳೇ ಇವರು' ಎಂಬ ಶಂಕೆಯುಂಟಾಗಿ ಸುತ್ತಲೂ ನೋಡುತ್ತಿದ್ದನು. ಕುವರಿ ಇದ್ದಕ್ಕಿದ್ದಂತೆ ವೀಣಾವಾದನ ನಿಲ್ಲಿಸಿದಳು. ಬೆಚ್ಚಿ ಯಾರದೋ ಬರವನ್ನು ನಿರೀಕ್ಷಿಸುವ ತೆರದಲ್ಲಿ ಕಣ್ಣಾಡಿಸಿದಳು. ಕಣ್ಣು ತೆರೆದು ಪ್ರಶ್ನಿಸಿದ ತಂದೆಗೆ 'ಯಾರೊ ಬಂದಂತಾಯಿತು' ಎಂದಳು. ಆ ಮಾತನ್ನು ಸಮರ್ಥಿಸುವಂತೆ ತಾಯಿಯು 'ನಿಜ, ನನ್ನ ಶರೀರವು ಪುಳಕಿಸುತ್ತಿದೆ.' ಎಂದಳು. ಆಗ ವಿಭೀಷಣನು ಮುಗುಳು ನಕ್ಕನು. ಅವನ ಧ್ವನಿಯ ಗಾಂಭೀರ್ಯಕ್ಕೆ ಗಾಳಿಯ ಮಗನ ಮನದ ಗೌರವ ಅರಳುತ್ತಿರಲು ಹೀಗೆ ಹೇಳಿದನು.

'ಅಚ್ಚರಿಯೇಕೆ? ಹಗಲಿರುಳು ಸಂಚರಿಸುವ ಶಕ್ತಿಗಳು, ದೇವತಾತ್ಮಗಳು ದಿವ್ಯಕಲೆ ಇರುವಲ್ಲಿಗೆ ಬರುತ್ತವೆ. ನಮ್ಮಂತೆ ಅವರು ರಸಪ್ರಿಯರು. ನಮಗಿಂತಲೂ ಮಿಗಿಲಾದ ರಸಾಸ್ವಾದಕರು. ರಸವು ಅವರು ಉಣ್ಣುವ ಅಮೃತವಲ್ಲವೆ?'

'ಮನಸ್ಸು ಏಕೊ ಬೆಚ್ಚುತ್ತಿದೆ! ಸುಖವೊ ದುಃಖವೊ ತಿಳಿಯದೆ ಎದೆ ನಡುಗುತ್ತಿದೆ.'

ಎಂದು ನುಡಿದ ಮಗಳಿಗೆ ತಂದೆ,

'ನಿನ್ನ ಸಂಗೀತವು ಆಲಿಸುವವರ ಹೃದಯವನ್ನು ಕದಡುವ ಲೋಕ ಶೋಕ! ಮಗಳೇ, ಪ್ರಾಯದ ಮಹಿಮೆ ಅಂಥದು!'

ಸರಮಾದೇವಿಯು ಪತಿಯನ್ನು ಕುರಿತು,

'ಅಶೋಕವನದ ನಡುವೆ ರಾಮನ ತಪಸ್ವಿಯನ್ನು ಕಂಡಾಗಿನಿಂದ, ಆ ಮಹಿಮಾ ಮಹಿಳೆಯ ಅಮೃತಧಾರಾ ನುಡಿಯನ್ನು ಸವಿದಂದಿನಿಂದ, ನಮ್ಮ ಮಗಳರೀತಿ ಬೇರೆಯಾಗಿದೆ.'

ಅಶೋಕವನದ ಮಧ್ಯೆ ರಾಮನ ತಪಸ್ವಿನಿ ಇರುವಳೆಂಬ ನುಡಿ ಕಿವಿಗೆ ಬಿದ್ದೊಡನೆ ಆಂಜನೇಯನ ಮನಸ್ಸಿನಲ್ಲಿ ಆಸೆಯ ಬಿಸಿಲ ಬೆಳಕಾಯಿತು. ದೈತ್ಯ ಶ್ರೇಷ್ಠನಾದ ವಿಭೀಷಣನ ಮುಖದಲ್ಲಿ ದುಗುಡ ಆವರಿಸಿತು. ತಂದೆಯ ಮುಖದಲ್ಲಿ ಸಂಕಟದ ಛಾಯೆಕಂಡು ಅನಲಾ ಕುಮಾರಿಯು,

'ಅಪ್ಪ, ನಿಮ್ಮ ಅತ್ಮವನ್ನು ಸುಡುತ್ತಿರುವ ದುಃಖದ ಬೇಗೆಯನ್ನು ಮುಚ್ಚುವಿರ? ಸೀತೆಯ ಕಾರಣದಿಂದ ನೀವು ನನಗಿಂತ ಹೆಚ್ಚು ದುಃಖಿಗಳು. ದೊಡ್ಡಪ್ಪನಿಗಾಗಿ, ಕುಲದೇಶದ ಕೀರ್ತಿಗಾಗಿ, ಧರ್ಮದ ಅಭ್ಯುದಯಕ್ಕಾಗಿ ಮರುಗುತ್ತಿರುವಿರಿ. ಅರಸನ ಓಲಗದಲ್ಲಿ ನಿಮ್ಮ ಮತ್ತು ನಿಮ್ಮಣ್ಣನ ಹಾಗೂ ಇತರ ಮುಖ್ಯರ ನಡುವೆ ನಡೆವ ಚರ್ಚಾ ಕಲಹವು ನಮಗೆ ತಿಳಿಯದು ಎಂದು ಕೊಂಡಿರುವಿರೆ?....ನಿನ್ನೆ ಸಂಜೆ ನಗರದ ಉತ್ತರಗಿರಿಯ ನೆತ್ತಿಯ ಮೇಲೆ ಒಂದು ಉಲ್ಕೆ ಬಿದ್ದದ್ದನ್ನು ಲಂಕೆಗೆ ಲಂಕೆಯೇ ನೋಡಿತು. ದೇವಿ, ನನ್ನ ಆ ಗುರುದೇವಿಯನ್ನು....'

ಎಂದು ಹೇಳುತ್ತ ವೀಣೆಯನ್ನು ಕೆಳಗಿಳಿಸಿದಳು, ಗದ್ಗದಿತಳಾಗಿ, ತನ್ನನ್ನು ತಾನು ಸಾವರಿಸಿಕೊಳ್ಳುತ್ತ ಮಾತು ಮುಂದುವರಿಸಿದಳು.

'ಆ ನಿರ್ಭಾಗ್ಯೆಯನ್ನು ಮರಳಿ ಪತಿಯೆಡೆಗೆ ಕಳುಹಿಸದಿದ್ದರೆ ಲಂಕೆಗೆ ಸುಖವೆಲ್ಲಿ? ಶುಭವೆಲ್ಲಿ? ಲಂಕಿಗರಿಗೆ ನೆಮ್ಮದಿಯೆಲ್ಲಿ? .... ಅಪ್ಪ, ಮಿಡಿದರೆ ಸದಾ ಮಂಗಳವನ್ನು ನುಡಿಯುವ ಈ ನನ್ನ ವೀಣೆ ಈಗ ಮಿಡಿಯಲು ಮುನಿದು ಪರಿತಪಿಸುತ್ತಿದೆ! ನಿಟ್ಟುಸುರಿನಿಂದ ಶಪಿಸುತ್ತಿದೆ! ನೀವೀಗ ಕೇಳಿದುದು ಅದರ ಗಾನವಲ್ಲ, ರೋದನ! ಕೇಳಿ, ಇನ್ನೂ ಆ ಓಂಕಾರದ ಆಲಾಪನೆಯ ತೀಕ್ಷ್ಣ ಸಂಕಟ ಈ ಮನೆಯಲ್ಲಿ ತುಂಬಿದಂತಿದೆ!'

ಮೂವರೂ ಆಶ್ಚರ್ಯಚಕಿತರಾಗಿ ಆಲಿಸುತ್ತಿರಲು, ಮೆಲ್ಲನೆ ಮೃದುವಾಗಿ ಆ ನಾದವು ದೂರ ದೂರಕ್ಕೆ ಸಾಗಿ ಸ್ಮೃತಿಮಾತ್ರವಾಯಿತು! 'ಇಂಥವರಿಂದಲೇ ಲಂಕಾ ಕನಕಲಕ್ಷ್ಮಿ ಕ್ಷೇಮದಿಂದಿರುವುದು!' ಎಂದುಕೊಂಡ ಆಂಜನೇಯನು ಅಲ್ಲಿಂದ ಮುಂದಕ್ಕೆ ನಡೆದನು.

ಪತಿಯ ಅತ್ಮೋದ್ಧಾರಕ್ಕೆ ಪ್ರಾರ್ಥಿಸುವ ಮಂಡೋದರಿ

ಮಾರುತಿಯು ತ್ರಿಕೂಟ ಮಧ್ಯಮ ಶಿಖರ ಶಿರಕ್ಕೆ ಏರಿದನು. ಅದು ಬರಬರುತ್ತ ನೋಟಕ್ಕೆ ಉಗ್ರ ಪರ್ವತದಂತೆ ಕಂಡಿತು. ಬಂಡೆಬಂಡೆಗಳು ಸ್ಪರ್ಧೆಯಿಂದ ಒಂದಕ್ಕೊಂದು ಬೆಸೆದುಕೊಂಡಂತೆ ಆ ಕೋಟೆಯಗೋಡೆ ಇದ್ದಿತು. ಅದನ್ನು ಕಾಣುವುದೇ ತಡ ದೈತ್ಯ ರಾಜೇಂದ್ರನ ಅರಮನೆಯೆಂದು ತಿಳಿದನು. ನೊಣ ಸುಳಿದರೂ ಕಾಣುವಂತಹ– ಮೇಲೆ ಕೆಳಗೆ ಎತ್ತಲೂ ಆವರಿಸಿ ಬೆಳಕು ಚೆಲ್ಲುವ ಶೈಲಿಯಿಂದ ರಚಿಸಿದ ಸೊಡರುಗಳಿದ್ದವು. ಹೆಬ್ಬಾಗಿಲು ಕಾಯುವ ಆಯುಧಧಾರಿಯ ನೆರಳು ಗೋಡೆಯ ಮೇಲೆ ಮಂದವಾಗಿ ಧೀರಗತಿಯಿಂದ ಸಾಗುತ್ತಿತ್ತು.

ಅವನ ತಲೆಯಲ್ಲಿ ಉಕ್ಕಿನ ಶಿರಸ್ತ್ರಾಣ ಶೋಭಿಸುತ್ತಿತ್ತು. ಕೈಯಲ್ಲಿ ಚೂಪಾದ ಮೊನೆಗಳಿಂದ ಕೂಡಿದ ಗುಂಡಾಗಿರುವ ಶತಘ್ನಿ ಆಯುಧವಿತ್ತು. ಆಮೆಚಿಪ್ಪಿನಂತೆ ಹೆಣೆದ, ಮೈಮೇಲೆ ಮುಳ್ಳಿನ ಮೊನೆಯ ಚೇಳಿನಾಕಾರದ ವಜ್ರಕವಚ; ಬೆನ್ನ ಮೇಲೆ ಭೀಕರವಾಗಿ ಬಾಗಿದ ಕಬ್ಬಿಣದ ಬಿಲ್ಲು ಬತ್ತಳಿಕೆಗಳು ಇದ್ದವು. ಸೊಂಟದಲ್ಲಿ ನೇತಾಡುತ್ತ ಖಣಿಲ್ ಖಣಿಲೆಂದು ಕರ್ಕಶ ಶಬ್ದವನ್ನುಂಟು ಮಾಡುವ ದೀರ್ಘಖಡ್ಗವು, ಚಳಿಯ ಬೆಳ್ದಿಂಗಳ ಮೌನವನ್ನು ಕಡಿಯುವಂತಿತ್ತು. ನಗರ ರಕ್ಷಕರ ನಿದ್ರೆಗೆ ಅಂಕುಶ ಎನ್ನುವ ರೀತಿಯಲ್ಲಿ ಎಡಭುಜದಿಂದ ತೂರ್ಯ ಜೋಲಾಡುತ್ತಿತ್ತು. ಹೀಗೆ ಮಹಾದ್ವಾರಪಾಲಕ ವೃಶ್ಚಿಕರೋಮನಿದ್ದನು. ಅವನನ್ನು ದೂರದಿಂದಲೇ ನೋಡಿದ ಆಂಜನೇಯನು ಅವನು ಮಾಯಾವಿ ಎಂದು ಅರಿತನು.

ಅವನನ್ನು ವಂಚಿಸಿ ಪ್ರವೇಶಿಸುವುದು ಹೇಗೆ? ಅವನೊಡನೆ ಬಹಿರಂಗ ಘರ್ಷಣೆ ಸರಿಯಲ್ಲ. ಒಮ್ಮೆ ಅವನು ಭೀಮತೂರ್ಯ ಊದಿದರೆ ರಾಮಕಾರ್ಯ ಕೆಡುತ್ತದೆ, ಸೀತೆಯ ಹೃತ್ಕಮಲ ಸೂರ್ಯನು ಕಾಂತಿಹೀನನಾಗುವನು ಎಂದು ಚಿಂತಿಸುತ್ತ ಒಂದು ಉಪಾಯವನ್ನು ನೆನೆದನು. ಅವನ ಮಿದುಳಿಗೆ ಸಂಮೋಹನ ಭ್ರಾಂತಿಯನ್ನು ಉಂಟು ಮಾಡುವ ಹುಸಿನಿದ್ದೆಯಿಂದ ಪ್ರಜ್ಞೆ ತಪ್ಪಿಸುವ ಕಳ್ಳಿನ ಗಾಳಿಯಾಗಿ ಅವನ ಮೂಗಿನ ಹತ್ತಿರ ಸುಳಿದನು. ಆಗ 'ಇಂದೇನು ಎಂದೂ ಇಲ್ಲದ ನಿದ್ದೆ? ಕಣ್ಣು ಭಾರವಾಗುತ್ತಿದೆ. ಕಾಲಿನ ಶಕ್ತಿ ಕುಗ್ಗುತ್ತಿದೆ. ಮಾಗಿಯ ಆಗಮನದ ಮಹಿಮೆಯಲ್ಲವೆ?' ಎಂದುಕೊಂಡು ಗೊಣಗುತ್ತ ಅವನು ಕುಳಿತಲ್ಲಿಯೆ ಪ್ರಜ್ಞೆತಪ್ಪಿ ನೆಲಕ್ಕೆ ಒರಗಿದನು! ಸೂರ್ಯಕುಲದ ತಪಸ್ವಿನಿಯ ಅನ್ವೇಷಣೆಗೆ ಧರ್ಮದ ಧನುಸ್ಸು ಬಿಟ್ಟ ಬಾಣದಂತೆ ಆಂಜನೇಯನು ಅಣುವಾಗಿ ಸತಿ ಕಳ್ಳನ ಲೋಕವನ್ನು ಪ್ರವೇಶಿಸಿದನು.'

ರಾವಣ ನೃಪನ ಅರಮನೆಯನ್ನು ಬಳಸಿದ್ದ ಉಪವನವನ್ನು ನೋಡಿ ಸಂತೋಷಪಟ್ಟನು. ವಿಭೀಷಣನ ಪತ್ನಿ ಹೇಳಿದ ಅಶೋಕವನ ಇದೇ ಇರಬೇಕು ಎಂದುಕೊಂಡನು. 'ಇಲ್ಲಿ ಆ ದೇವಿಯನ್ನು ಕಾಣುತ್ತೇನೆ' ಎಂದು ಕಾತುರನಾಗಿ ಉಬ್ಬಿಹೋದನು. ಬನಚೆಲುವನ್ನು ಒಂದಿಷ್ಟು ಗಮನಿಸದೆ, ಪರಿಮಳಗಳನ್ನು ಒಂದಿನಿತು ಲೆಕ್ಕಿಸದೆ, ಸೀತೆಯನ್ನು ನೋಡುವ ನಿರೀಕ್ಷಣೆಗೆ ತನ್ನನ್ನು ಅರ್ಪಿಸಿಕೊಂಡು ಸಂಭ್ರಮಿಸುತ್ತಿರಲು ವನಚರನು ಅಲ್ಲಿ ಒಂದು ದೇವಕುಟೀರವನ್ನು ಕಂಡನು. ಅದು ಅಮೃತಶಿಲೆಯ ಕುಶಲಸುಂದರ ರಚನೆಯಿಂದಾಗಿದ್ದು ಪವಿತ್ರಭಾವವನ್ನುಂಟು ಮಾಡುತ್ತಿತ್ತು. ಅದು ಹನುಮದೇವನಿಗೆ ಒಂದು ನವಾನುಭವದ ಸಂತೃಪ್ತಿಯನ್ನುಂಟು ಮಾಡಿತು. ಬುದ್ಧಿಗೆ ಅತೀತವಾದುದನ್ನು ಭಾವದಿಂದ ಗ್ರಹಿಸಿ 'ಇಲ್ಲಿ ಪೂಜ್ಯದೇವಿ ಇರುವಳು! ಅಲ್ಲದಿರೆ ನನಗೇಕೆ ಈ ಅಕಾರಣಸುಖ ಉಂಟಾಗುತ್ತಿತ್ತು? ಹಿಂದೆಲ್ಲಿಯೂ ಲಂಕೆಯಲ್ಲಿ ನನಗೆ ಈ ರೀತಿ ಪುಣ್ಯಾನುಭವವಾಗಿಲ್ಲ. ನನ್ನ ಗಗನ ಸಾಗರ ಲಂಘನ ಸಾಹಸದ ಗುರಿಯಾದ ಲಕ್ಷ್ಮಿಯನ್ನು ಕಾಣುತ್ತೇನೆ.' ಎಂದುಕೊಂಡನು.

ಆ ಭವನದ ಒಳಗೆ ಅವನ ಹೃದಯದ ಆನಂದವೇ ಮೂರ್ತಿಗೊಂಡಂತಿದ್ದ ಮಹಿಳಾ ಮೂರ್ತಿಯನ್ನು ಕಂಡನು. ಅವಳು ಪುಷ್ಪಮಯ ಶಿವಪಾರ್ವತಿಯರ ವಿಗ್ರಹದ ಚರಣಕ್ಕೆ ತಲೆಬಾಗಿದ್ದಳು. ಬಿಳಿಯುಡುಗೆಯ ಕೃಶಾಂಗಿ ಶೋಕಪೂರಿತದೀನೆ, ಪುಣ್ಯಮುಖಿ , ಗದ್ಗದ ಕಂಠದವಳನ್ನು ಆಂಜನೇಯನು ಸಂಭ್ರಮದ ನೇತ್ರಗಳಿಂದ ನೋಡಿದನು. 'ರಾಮಚಂದ್ರಂಗೆಲ್ಗೆ' ಎಂದು ನುಡಿಯಲು ಮನಸ್ಸು ಕಾತರಿಸಿತು. ಅದನ್ನು ತಡೆದು ಆಕೆಯ ದೈನ್ಯದನಿಗೆ ಕಿವಿಯಾದನು.

'ಭುವನ ಗುರುವೇ ಕರುಣಿಸು. ಆರ್ತಜನ ಕಲ್ಪತರುವೇ ಪತಿಗೆ ಆತ್ಮಶಾಂತಿಯನ್ನು ನೀಡು. ಅವನ ಮತಿಗೆ ಶುಭವನ್ನುಂಟುಮಾಡು. ನನಗೆ ಪತಿಭಿಕ್ಷೆ ನೀಡು. ಹೇ ಕಾಮಸಂಹಾರಿಯೇ, ನನ್ನ ಪತಿಯು ಕಾಮನ ಚಿತೆಗೆ ಆಹುತಿಯಾಗದಂತೆ ನನ್ನ ಮುತ್ತೈದೆತನವನ್ನು ಕಾಪಾಡು. ತಾಯೆ ಗಿರಿಜಾತೆ, ನೀನು ತಪಸ್ಸು ಮಾಡಿ ನಿನ್ನ ಪತಿಯನ್ನು ಹೇಗೆ ಪಡೆದೆಯೊ, ಹಾಗೆಯೇ ನಾನು ನನ್ನ ಮನದನ್ನನ ಆತ್ಮವನ್ನು ಪಡೆಯಲು ಫಲದಾಯಿಯೇ ಕೃಪೆಮಾಡು. ನಿನ್ನ ಬಾಲೆಯನ್ನು ಈ ಬೆಂಕಿಯ ಸಂಕೋಲೆಯಿಂದ ಕೊನೆಗಾಣಿಸಿ ಕಾಪಾಡು ತಾಯಿ.'

ಎಂದು ಅಳುತ್ತ ಹೆಣ್ಣು ಕ್ರೌಂಚಪಕ್ಷಿಯಂತೆ ದೇವದಂಪತಿಗಳಿಗೆ ಶೋಕದ ಸಿಡಿಲು ಬಡಿದು ಬೀಳುವಂತೆ ಎರಗಿದಳು. ಆ ತಾಯಿಯ ದುಃಖವನ್ನು ಸಹಿಸಲಾರದೆ ರಾಮನ ಪ್ರೀತಿಗೆ ಪಾತ್ರಳಾದ ಅವಳನ್ನು ಸಂತೈಸಲು ಆಂಜನೇಯನು 'ರಾಮಚಂದ್ರಂ ಗೆಲ್ಗೆ! ಜನಕನಂದಿನಿ ಬಾಳ್ಗೆ!' ಎಂದು ಘೋಷಿಸಿದನು. ಅದನ್ನು ಕೇಳಿದ ತಕ್ಷಣ ಅವಳು ಚೀರಿದಳು. ಬ್ರಹ್ಮಚಾರಿಯು ಕಳವಳಗೊಂಡು ಬೆಪ್ಪಾಗಿ ತಪ್ಪು ಮಾಡಿದೆನೇನೊ ಎಂದುಕೊಂಡು ಮಿಳ್ಮಿಳನೆ ನೋಡುತ್ತಿದ್ದನು. ದಡಕ್ಕನೆ ಕದ ತೆರೆದು ಓರ್ವ ಸ್ಫುರದ್ರೂಪಿ, ಅಭಯಸ್ವರೂಪಿ ಒಳಗೆ ಬಂದನು. ಆ ಗಾತ್ರಕ್ಕೆ, ತೇಜಕ್ಕೆ, ಶೃಂಗಾರಶೀಲ ವಿನಯದ ರಸಿಕ ಪೌರುಷಕ್ಕೆ, ಸುವರ್ಣ ಅಂಚಿನ ಪೀತಾಂಬರದ ಸಿರಿ ಉಡುಗೆಯ ರಾಜತೇಜಕ್ಕೆ ಮಾರುತಿ ಮೂಕವಿಸ್ಮಿತನಾದನು. 'ಇವನಾರು? ಈತನಾರು? ಈ ಮಹಾಪುರುಷನಾರು? ಇಂತಹ ತೇಜಸ್ವಿಯನ್ನು ಇದುವರೆಗೆ ಕಂಡಿಲ್ಲ' ಎಂದುಕೊಂಡನು.

ಬಂದವನ ದರ್ಪಧ್ವನಿಯ ಬಿರುಸಿಗೆ ಮಂದಿರದ ಮೌನ ಅದುರಿತು. 'ಕಾಂತೆ, ನಿನ್ನದೇನು ಈ ಭ್ರಾಂತಿ? ನಿನ್ನದೆಸೆಯಿಂದಾಗಿ ನನಗೆ ಹಲವು ದಿನಗಳಿಂದ ಶಾಂತಿಯಿಲ್ಲ! ನಿನ್ನ ಬುದ್ಧಿ ಸ್ಥಿರತೆಗೆಟ್ಟು ಭ್ರಮೆಗೆ ವಶವಾಗಿದೆ. ನೀನು ಮಹಾರಾಣಿಯಾಗಿದ್ದರೂ ಕ್ಷಾತ್ರತೇಜವನ್ನು ತ್ಯಜಿಸಿ ನಿರ್ಲಜ್ಜೆಯಿಂದ ಜೀವಿಸುತ್ತಿರುವೆ. ಆ ನಿಸ್ತೇಜತೆಗೆ ನನ್ನನ್ನೂ ಸೆಳೆಯುತ್ತಿರುವೆ. ನಿನ್ನ ಬಿಸಿ ಮಿದುಳು ಕುದಿಯಿಸುವ ಹುಸಿಭೀತಿಯಿಂದ ನಿನ್ನನ್ನು ಕಾಪಾಡಲು ನಿದ್ದೆ ತೊರೆದು, ನಿನಗೆ ಕಾವಲಿರಲು ಇಲ್ಲಿಗೆ ಬಂದಿದ್ದೇನೆ. ಈ ಬನದಲ್ಲಿ, ಇಲ್ಲಿಗೆ ಯಾರೂ ಪ್ರವೇಶಿಸದಂತೆ ಆಜ್ಞೆ ಮಾಡಿದ್ದೇನೆ. ಶಾಂತಮನದಿಂದ ಪೂಜೆಮಾಡು.

ನಾನೇ ಕಾವಲಿರುವಾಗ ನಿನಗೆ ಎಂತಹ ಭೀತಿ? ಏಕೆ ಚೀರಿದೆ? ಏಕೆ ನಡುಗುತ್ತಿರುವೆ ಹೇಳುಪ್ರಿಯೆ?'

ಅವನ ಕಂಠಸ್ವರದ ಕರುಣರೋಷಕ್ಕೆ ಅಲ್ಲಿಯ ನೀರವತೆ ನಡುಗುತ್ತಿತ್ತು! ಕಾಂತೆಯು ನಡುಗುತ್ತ ತಲೆಬಾಗಿ ಹೀಗೆ ಹೇಳಿದಳು:

'ಪ್ರಭೂ, ಹೋದ ಸಂಜೆ ಬಿದ್ದ ಉಲ್ಕೆಯ ಅಶುಭವನ್ನು ಪರಿಹರಿಸಲೆಂದು ಪರಮೇಶ್ವರನನ್ನು ಪ್ರಾರ್ಥಿಸಲು ಬಂದೆನು. ನಿನಗೆ ಒಳಿತನ್ನು ಬೇಡುತ್ತಿರಲು ಹತ್ತಿರದಲ್ಲಿ ಯಾರೊ 'ರಾಮಚಂದ್ರಂ ಗೆಲ್ಗೆ! ಜನಕ ನಂದಿನಿ ಬಾಳ್ಗೆ!' ಎಂದು ಸ್ಪಷ್ಟವಾಗಿ ಘೋಷಿಸಿದಂತಾಯಿತು. ಪ್ರಜ್ಞೆಗೆ ದಿಗಿಲಾಗಿ ಚೀರಿದೆನೊ ಏನೊ ನನಗೆ ಗೊತ್ತಿಲ್ಲ.'

'ದೇವಿ, ನಿನ್ನ ಹೃದಯವೇ ನಿನಗೆ ಕಿವಿಯಾಯಿತು. ನಿನ್ನುಸಿರ ಹರಕೆಯನ್ನೆ ನಿನ್ನ ಕಿವಿ ಧ್ಯಾನಸಮಯದಲ್ಲಿ ಆಲಿಸಿತು. ಅಷ್ಟಲ್ಲದೆ ಬೇರೆ ಇನ್ನೆಲ್ಲಿಯ ವಾಣಿ, ಹೇಳು, ನನ್ನ ರಾಣಿ?'

'ಜೀವೇಶ, ನಿನಗೆ ಅಶುಭವನ್ನು ನಾನು ಹೇಗೆ ನೆನೆಯುವೆ?'

'ನನಗೆ ಅಶುಭವವನ್ನಲ್ಲ, ಅವರಿಗೆ ಶುಭವನ್ನು'

'ಪ್ರಭು, ಸರ್ವರಿಗೂ ಶುಭವಾಗಲಿ. ಕಲ್ಯಾಣ ಕಲ್ಪತರು, ಲೋಕಗುರು ಶಿವನ ಬಳಿ ಪ್ರಾರ್ಥನೆಗೆ ಕೃಪಣತೆ ಏಕೆ?'

'ಅವನು ತನ್ನಿಚ್ಛೆಯಂತೆ ಶುಭವನ್ನುಂಟುಮಾಡುತ್ತಾನೆ, ನಿನ್ನಿಚ್ಛೆ ನನ್ನಿಚ್ಛೆಯಂತಲ್ಲ! ಸೀತೆಯನ್ನು ನೀನು ನೋಡಿದೆಯಾ?'

'ಕ್ಷಮಿಸಿ, ನೋಡಿದೆ, ನಿಮ್ಮಾಜ್ಞೆಯನ್ನು ಮೀರಲಿಲ್ಲ. ಆ ಪೂಜ್ಯೆ ನನಗೆ ದರ್ಶನವಿತ್ತಳು!'

'ಆ ಪೂಜ್ಯೆ ನಿನಗೆ ದರ್ಶನ ನೀಡಿದ್ದು ಸ್ವಪ್ನ ಲೋಕದಲ್ಲಿಯೆ?'

'ಅಲ್ಲಲ್ಲ. ಅಶೋಕವನದಲ್ಲಿ!'

'ಎಂತೊ? ಅಂತು ಕಂಡಿರುವುದು ನಿಜ.'

'ನಿಜ.'

'ನಾನು ಕೆಟ್ಟೆ'

'ಶಿವ ಶಿವಾ, ಅಮಂಗಳ ತೊಲಗಲಿ'

'ನಾನು ಕೆಟ್ಟೆ. ನೀನು ಕೊಂದೆ. ಮಯಕುಮಾರಿ ಹಿಂದೆಂದೂ ಸೋಲರಿಯದ ನನ್ನನ್ನು ನೀನು ಶುಭಕ್ಕಾಗಿ ಸೋಲಿಸಿದೆ. ಹೇಳುತ್ತೇನೆ ಕೇಳು ದೇವಿ. ಹಿತ ಮತ್ತು ಪ್ರಿಯ, ರುಚಿ ಮತ್ತು ಶುಚಿಗಳ ನಡುವೆ ನಡೆಯುತ್ತಿರುವ ಯುದ್ಧಕ್ಕೆ ನನ್ನ ಹೃದಯ

ರಣರಂಗವಾಗಿದೆ. ನೀನು ಮುಂದಿರಲು ನಿನಗೆ, ಅವಳನ್ನು ನೆನೆಯಲು ಅವಳ ಸುಖದ ಸಂಗಕ್ಕೆ!'

'ಮನದನ್ನ, ಈಗಲೇ ಅಶೋಕವನಕ್ಕೆ ನಡೆಯಿರಿ. ನಿಮ್ಮೊಡನೆ ನಾನು ಬರುತ್ತೇನೆ.'

'ಚಂದ್ರನಖಿಗೆ ಹೇಳಿದ್ದೇನೆ. ನಾಳೆ ಸೂರ್ಯೋದಯಕ್ಕೆ ಅಲ್ಲಿಗೆ ಒಬ್ಬನೇ ಹೋಗುತ್ತೇನೆ. ಅದು ಕೊನೆಯ ಪ್ರಯತ್ನ. ಮಂಡೋದರಿ, ನಿನ್ನ ರಾವಣನು ಸುಮ್ಮನೆ ಸೋಲುತ್ತಾನೆ ಎಂದು ತಿಳಿಯಬೇಡ.'

ಅವನ ಕಾಮರೋಷಧ್ವನಿಯ ಕಠಿನತೆಗೆ ಪತ್ನಿ ಅಳುಕಿದಳು. ದಶಶಿರನ ಮುಖ ಮೈಸಿರಿಯಲ್ಲಿ ವಿಕೃತಿ ತುಳುಕಿತು. ಓಡಿ ಅವನ ಕಾಲುಗಳನ್ನು ತಬ್ಬಿದಳು. ಮರಕ್ಕೆ ಬಳ್ಳಿಯಂತಾಗಿ ಅವಳ ಉಸಿರು ಹೂವಾಗಿ ಕಂಪಿಸಿತು:

'ರಾಜೇಂದ್ರ ಬೇಡ, ಬೇಡೀ ಹಠದ ಸಾಹಸ. ಜೀವಿತೇಶ್ವರನೆ, ರುಚಿಗೆಂದು ಕೈಕೊಂಡದ್ದನ್ನು ಛಲದಿಂದ ಮುಂದುವರಿಸುವುದು ಸುಖವೆ? ಸರಸವೆ? ಸಚ್ಚರಿತವೆ? ಪತಿವ್ರತೆಯ ವ್ರತದ ಮಹಿಮೆಯಿಂದ ಸಂಯಮ ದೊರೆತರೆ ಬುದ್ಧಿವಂತರು ಅದನ್ನು ಸೋಲೆಂದು ಕರೆಯುತ್ತಾರೆಯೆ? ಮಂಗಳಕ್ಕೆ ತಲೆಬಾಗಿದರೆ ಅದು ಸೋಲೆ? ಆ ಗೆಲುವನ್ನು ಮೀರಿಸಿದ ಗೆಲುವು ಬೇರೆ ಇದೆಯೆ? ಇಂದ್ರನನ್ನು ಜಯಿಸಿದವನಿಗಿಂತ ನೂರುಮಡಿ ವಿಜಯ ವಿಕ್ರಮಿ ಇಂದ್ರಿಯವಿಜಯಿ ಅಲ್ಲವೆ? ವ್ಯರ್ಥವಾದ ಈ ಹುಸಿ ಪ್ರತಿಷ್ಠೆಯನ್ನು ಬಿಡು. ಸತ್ಯಕ್ಕೆ ಸೋಲಲು, ಅದೇ ನಮಗೆ ಗೆಲುವು. ಧರ್ಮಕ್ಕೆ ಸೋಲಲು ಅದೇ ನಮ್ಮ ಗೆಲುವು. ಆ ಗೆಲುವೆ ನಮ್ಮ ಸಾಮ್ರಾಜ್ಯದ ಸಂಪತ್ತು.'

ತನ್ನ ಮನದನ್ನೆಯ ಭಾವಭಾರಕ್ಕೆ ನೃಪ ನಸು ಬಾಗಿದನು. ಮನಸ್ಸು ಕರಗಿತು. ತಲೆ ಮೇಲೆತ್ತಿದ್ದ ಸತಿಯ ಮುಖದ ಮೇಲೆ ಅವನ ನೇತ್ರದ ಬಿಸುಗಂಬನಿ ಉದುರಿತು.

'ಪ್ರಿಯೆ, ಕ್ಷಾತ್ರ ತೇಜಸ್ಸು ಸೋಲನ್ನು ಬಯಸುವುದಿಲ್ಲ. ಪ್ರಿಯೆ, ವೀರರ ಬಯಕೆ ಗೆಲುವು; ಸೋಲಲ್ಲ. ನೀನು ಹಾರೈಸುವ ಸೋಲು ತಾನಾಗಿ ಬಂದರೆ ಬರಲಿ... ಸೀತೆಯನ್ನು ಮೊದಮೊದಲು ಚೆಲುವಿಗೆ ಒಲಿದೆನು. ಅವಳು ಆಹಾರ ಸ್ನಾನವನ್ನು ತೊರೆದು ಸೌಂದರ್ಯವನ್ನು ಹಾಳುಗೆಡಿಸಿಕೊಂಡಳು. ಈಗ ಛಲಕ್ಕಾಗಿ ಅವಳನ್ನು ಮೋಹಿಸುತ್ತಿರುವೆ...

'ಈಗ ನನಗೊಂದು ಹೆದರಿಕೆ ಕಾಡುತ್ತಿದೆ. ಹಿಂದಿನಂತೆ ಮತ್ತೆ ಮತ್ತೆ ಆಕೆಯನ್ನು ನಾನು ನೋಡುತ್ತಿಲ್ಲ. ಅವಳ ಕರುಣೆಯಿಂದ ನನ್ನ ದೃಢತೆಗೆ ಎಲ್ಲಿ ಭಂಗ ಉಂಟಾಗುವುದೋ ಎಂದು ಭೀತಿಯುಂಟಾಗುತ್ತಿದೆ. ಓಹ್ ಅವಳೊಂದು ಕಡೆ ನೀನೊಂದುಕಡೆ, ಮತ್ತೆ ಆ ವಿಭೀಷಣನು ಇನ್ನೊಂದು ಕಡೆ. ನೀವೆಲ್ಲ ನನ್ನ ಚಿತ್ತವನ್ನು

ಚಂಚಲಗೊಳಿಸುತ್ತಿರುವಿರಿ. ನನ್ನ ಮದನ ಧೈರ್ಯವೃಕ್ಷದ ಬೇರಿಗೆ ಬಿಸಿನೀರನ್ನು ಹುಯ್ಯುತ್ತಿರುವಿರಿ. ಇರಲಿ. ನಿಮ್ಮನ್ನು ಗೃಹವೈರಿಗಳೆಂದು ತಿಳಿದು ರಾಮನನ್ನು ಗೆಲ್ಲುವಂತೆ ನಿಮ್ಮನ್ನು ಗೆಲ್ಲುವುದೇ ನನ್ನ ಪ್ರತಿಜ್ಞೆ!... ಅದೇನು ತೂರ್ಯಸ್ವರ ಭಯ ಆಶ್ಚರ್ಯಗಳಿಂದ ಎಚ್ಚರಿಸುವಂತೆ ಮತ್ತೆ ಮತ್ತೆ ಹೊಮ್ಮುತ್ತಿದೆ.'

ಮದನನಲ್ತಿದಕೆ ವಿಧಿಯಲಾ ಕಾರಣಂ!

ವೃಶ್ಚಿಕ ರೋಮನು ಸ್ವಲ್ಪ ಸಮಯದ ನಂತರ ಮಾಯೆಯು ಕಳೆಯಲು ಎದ್ದನು. ತನಗಾದ ಸೋಜಿಗದ ಸ್ಥಿತಿಯ ಮೋಸವನ್ನು ಊಹಿಸಿ ತಿಳಿದನು. ಹೆಗಲಿನ ತುತ್ತೂರಿ ಹುಡುಕಿ ಒಂದುಸಾರಿ, ಎರಡುಸಾರಿ, ಹಲವುಸಾರಿ ಊದಿದನು. ಅದನ್ನು ಕೇಳಿ ಇಡೀ ಲಂಕೆ ಬೆಚ್ಚಿಬಿದ್ದಿತು. ಬೀದಿನಾಯಿಗಳು ಒಟ್ಟಾಗಿ ಊಳಿಟ್ಟವು. ಪಟ್ಟಣದಲ್ಲಿ ಕೋಲಾಹಲವು ಹೆಚ್ಚಲು ರಾತ್ರಿಯ ಕಾವಲು ಪಡೆ ಆಶ್ಚರ್ಯಗೊಂಡು ಇಮ್ಮಡಿ ಜಾಗೃತಗೊಂಡವು. ದ್ವಾರದ ಬಳಿಗೆ ಓಡೋಡಿ ಬಂದ ಕಾವಲು ಪಡೆ ಮುಖ್ಯಸ್ಥರಿಗೆ ವೃಶ್ಚಿಕರೋಮನು ಹೀಗೆ ಕಟ್ಟಾಜ್ಞೆ ಮಾಡಿದನು:

'ಯಾರೋ ಮಾಯಾವಿ ನಗರವನ್ನು ಪ್ರವೇಶಿಸಿರುವನೆಂದು ನನಗೆ ಶಂಕೆಯುಂಟಾಗಿದೆ. ನಿಮಗೆ ತಿಳಿದಿರುವ ಮಾಯಾಮಂತ್ರ ತಂತ್ರಗಳಿಂದ ಲಂಕೆಯ ಮೂಲೆ ಮೂಲೆಯನ್ನೆಲ್ಲ ಬಿಡದೆ ಶೋಧಿಸಿರಿ. ಅಸಹಜ ನಿದ್ದೆ ಆವರಿಸಿ ನನ್ನನ್ನು ಹೀಗೆ ಯಾವಾಗಲೂ ವಂಚಿಸಿರಲಿಲ್ಲ!'

ದಶಗ್ರೀವನಂತೆ ಆ ತೂರ್ಯಸ್ವರವನ್ನು ಸುಗ್ರೀವನ ಅನುಚರ ಆಂಜನೇಯನು ಕೇಳಿದನು. ಅದರ ಅರ್ಥವನ್ನು ಅರಿತನು. ಮುಂದೇನು ಮಾಡಬೇಕೆಂದು ಕ್ಷಣಕಾಲ ಯೋಚಿಸಿದನು.

ಪತಿಯ ಕಾಲಿನ ಬಳಿ ಏನೂ ನುಡಿಯಲಾಗದೆ ಮೌನ ಬೇಡಿಕೆ ಸಲ್ಲಿಸುತ್ತಿರುವ ಮಂಡೋದರಿಯ ಜಡೆಯ ಸೊಗಸನ್ನು ನೋಡುತ್ತಿದ್ದ ಆಂಜನೇಯನಿಗೆ–ಲಂಕೇಶ್ವರನ ಬಗ್ಗೆ ಮನಸ್ಸಿನಲ್ಲಿ ಮೊದಲಿದ್ದ ಕೋಪದ ಕಾವು ಸ್ವಲ್ಪ ಆರಿದಂತಾಯಿತು. ಅವನ ಹೃದಯದಲ್ಲಿ ಕನಿಕರ ಮೂಡಿತು. ಮನಸ್ಸಿನಲ್ಲಿ ಹೀಗೆಂದುಕೊಂಡನು.

'ಈ ಸತಿಯ ತನುಮನಗಳನ್ನು ಪಡೆದವನಿಗೆ ಇತರ ಸತಿಯರಲ್ಲಿ ಮೋಹ ಹೇಗೆ ಉಂಟಾಯಿತು? ಇದಕ್ಕೆ ಮದನ ಕಾರಣನಲ್ಲ; ವಿಧಿ ಕಾರಣ! ಇಂದ್ರಿಯ ದೌರ್ಬಲ್ಯದಿಂದ ತೇಜಸ್ಸಿಗೆ ಎಂತಹ ಗತಿ ಬರುತ್ತದೆ! ತ್ರಿಭುವನ ಗೌರವಕ್ಕೆ ಭಾಜನನಾದವನು ಈ ರೀತಿ ಬಯಸಿದ ಬಣ್ಣದ ಬೊಂಬೆ ಕೈಸೇರಲಿಲ್ಲವೆಂದು ಮಕ್ಕಳಂತೆ ರೋದಿಸುವವರನ್ನು ಯಾರಾದರೂ ನೋಡಿರುವರೆ? ನಾನು ನೋಡಿದೆ! ಇವನನ್ನು ಮೊದಲಿನಂತೆ ಕೋಪದಿಂದ ಕಾಣಲು ಆಗುವುದಿಲ್ಲ.

'ಪ್ರಜೆಗಳ ಎದುರು ಬಹಿರಂಗವಾಗಿ, ವೈರಿಗಳ ಮುಂದೆ ರಣರಂಗದಲ್ಲಿ ಈ ಶಿಥಿಲತೆಯನ್ನು ತೋರಿಸಿಕೊಳ್ಳುತ್ತಾನೆಯೆ?...ಪೂಜ್ಯೆಯಾದ ಈ ಸತಿ ಕೈಗೊಳ್ಳುವ ಪತಿಯು ಆತ್ಮದುದ್ಧಾರದ ಕಾರ್ಯದಲ್ಲಿ ಇಂದು ನೆರವಾಗದಿದ್ದರೆ ನಾನು ಧರ್ಮಚ್ಯುತನಾಗುತ್ತೇನೆ. ನಾನು ಬಂದ ಕರ್ತವ್ಯಕ್ಕೆ ವಿರುದ್ಧವಲ್ಲದುದನ್ನು ಮಾಡಿ, ಅನುಕೂಲವಾದುದನ್ನು ಪ್ರೇರೇಪಿಸುತ್ತೇನೆ. ಸತಿಯು ಕೇಳಿದುದನ್ನು ದಶಗ್ರೀವನು ಕೇಳುವಂತೆ ಮತ್ತೊಮ್ಮೆ ಹೇಳುತ್ತೇನೆ. ಭ್ರಮೆಯೆಂದುದನ್ನು ಸತ್ಯವೆಂದರಿಯುವಂತೆ ಮಾಡುತ್ತೇನೆ!'

ತುತ್ತೂರಿ ಧ್ವನಿಯನ್ನು ಕಿವಿ ನಿಮಿರಿಸಿ ಕೇಳುತ್ತಿದ್ದ ಆ ದಂಪತಿಗಳು ಬೆರಗಾಗುವಂತೆ ಮತ್ತೆ ಮಂದಿರದಲ್ಲಿ ಮೃದಂಗ ಧ್ವನಿಯಂತೆ ಆಂಜನೇಯನು 'ರಾಮ ಚಂದ್ರಂ ಗೆಲ್ಗೆ! ಜನಕ ನಂದಿನಿ ಬಾಳ್ಗೆ!' ಎಂದು ಘೋಷಿಸಿದನು.

ಆ ಧ್ವನಿ ಕಂಬದಿಂದ ಹೊಮ್ಮಿತೊ? ಗೋಡೆಯಿಂದ ಹೊರಟಿತೊ? ತೊಲೆಯಿಂದ ಅವತರಿಸಿತೊ? ಚಿತ್ರ ರೂಪವನ್ನು ಪಡೆದ ದೈತ್ಯ ಕುಲದೇವತಾ ಮೂರ್ತಿಗಳು ಹೇಳಿದವೊ? ಪೂಜಿಸುವ ಶಿವ ಪಾರ್ವತಿಯರೇ ನುಡಿದರೊ ಎಂದು ಆ ದಂಪತಿಗಳು ಅಚ್ಚರಿಪಟ್ಟರು, ಮೇಲಿಂದ, ಕೆಳಗಿಂದ, ಅಲ್ಲಿಂದ, ಇಲ್ಲಿಂದ, ಸುತ್ತಲಿಂದ ಸಿಕ್ಕು ಸಿಕ್ಕಾಗಿ ಹಾಸುಹೊಕ್ಕಾಗಿ ಹೊಮ್ಮಿದ ಆ ಶಬ್ದದ ಬಲೆಯಲ್ಲಿ ಅವರ ಕಿವಿಗಳು ಕಂಗೆಟ್ಟ ಮೀನಿನಂತಾದವು!

ರಾವಣನು ತನಗುಂಟಾದ ಅಳುಕನ್ನು ನಕ್ಕು ದಮನಗೊಳಿಸಿದನು. ಧರ್ಮಭೀತಿಗೆ ಅಚ್ಚರಿಯ ಉಡಿಗೆ ತೊಡಿಸುತ್ತ ಮಂಡೋದರಿಯನ್ನು ಹೀಗೆ ಸಂತೈಸಿದನು:

'ರಾಣಿಯೇ, ಭ್ರಾಂತಿ ಸಾಂಕ್ರಮಿಕ! ನಿದ್ದೆ ಕವಿಯುತ್ತಿರುವ ನನ್ನ ಮಿದುಳಿಗೆ ನಿನ್ನ ಮಿದುಳಿನ ಮರುಳುತನದ ಬಿಸಿ ಸೋಂಕುತ್ತಿದೆ. ನೀನು ಹೇಳಿದ ದುರುಳ ಸೂಚನೆ ಪುನಃ ಕಾಣಿಸಿಕೊಂಡಿದೆ. ನಮ್ಮ ಮನಸ್ಸೆ ನಮಗೆ ಹಗೆ! ಬಾ, ದೇವಿ, ಹೋಗೋಣ ನಿದ್ದೆಯ ಅಮೃತದ ಮದ್ದನ್ನು ಸವಿಯಲು! ಭೀತಿಯನ್ನು ಬಿಡು. ಹುಸಿ ಹೆದರಿಕೆಯನ್ನು ಆಚೆಗೆ ಒಗೆ. ಲಂಕೆಯನ್ನು ಪ್ರವೇಶಿಸುವುದು ಯಾರಿಗಾದರೂ ಅಸಾಧ್ಯ. ಆ ತೂರ್ಯನಾದವನ್ನು ಕೇಳಿದೆಯಾ? ಮಾಯಾ ಸಮರ್ಥರಾದ ನಮ್ಮ ರಕ್ಷಕ ದಳದವರು ಹಗಲಿರುಳು ಕಾಯುತ್ತಿರುವರು. ನಮ್ಮ ಈ ಕಲಾಪರಿಪೂರ್ಣ ದುರ್ಗಕ್ಕೆ ರಕ್ಷಕರು ಯಾರೆಂದು ತಿಳಿದಿರುವೆ? ಲಂಕಾಲಕ್ಷ್ಮಿ ಸಾಮಾನ್ಯಳಲ್ಲ. ಆ ದೇವಿ ರಕ್ಷೆಯಾಗಿರಲು ಭಯವೆಲ್ಲ ನಾಸ್ತಿಕತೆ! ಬೆದರಬೇಡ, ನಿನ್ನ ಹೃದಯಕ್ಕೆ ಶ್ರದ್ಧೆಯುಂಟಾಗದಿದ್ದರೆ, ನಿನ್ನ ಸಂಶಯ ಪರಿಹಾರಕ್ಕಾಗಿ ಲಂಕೆಯನ್ನೆಲ್ಲಾ ಸೋಸುವಂತೆ ಈಗಲೇ ಆಜ್ಞೆ ಮಾಡುತ್ತೇನೆ. ದೇವಿ, ಬಾ, ಹೋಗೋಣ.'

ಎಂದು ಹೇಳಿ ಮಡದಿಯನ್ನು ಸಂತೈಸಿದನು. ತೋಳಿನ ಸಿಡಿಲ ಪಂಜರದಲ್ಲಿ ತನ್ನೊಲ್ಮೆಯವಳನ್ನು ತೂಗುತ್ತ ಬಿಳಿಯ ಓಕುಳಿಯ ಉಯ್ಯಾಲೆಗೆ ಒಯ್ದನು!

❑



~~~~~~~~~~~~~~~~~~~~~~~ ಸಂಚಿಕೆ – ೨ ~~~~~~~~~~~~~~~~~~~~~~~

ವನಮಂ ಪೊಕ್ಕನಶೋಕಮಂ

ಆಂಜನೇಯನು ಅಶೋಕವನವಿರುವ ಜಾಗವನ್ನು ಅರಸುತ್ತ ಓಡಾಡಿ, ತೊಳತೊಳಲಿ ಬಳಲಿದನು. ಶಿಶಿರ ರಾತ್ರಿಯು ಕೊನೆಗೊಳ್ಳಲು ಸಮೀಪಿಸುತ್ತಿರುವ ವ್ಯಥೆಯಲ್ಲಿ ಸೀತೆಯ ನೆಲೆ ಕಾಣದೆ ಅವನ ಚಿಂತೆ ಚಿತೆಯಾಯಿತು. ಬಾನಿನ ಮೂಡಲದಿಕ್ಕಿನಲ್ಲಿ ಹೆಡೆಯೆತ್ತಿದ ವೃಶ್ಚಿಕ ರಾಶಿಯು ಹೊಗೆ ಮಂಜಿನ ಹಿಮದ ಸೋನೆಯಲ್ಲಿ ಮಸುಕಾಯಿತು. ಅಲ್ಲೊಂದು ಇಲ್ಲೊಂದು ಉಳಿದಿದ್ದ ಬೀದಿಯ ದೀಪಗಳು ಹಿಮಸಾರ ಸಾಂದ್ರತೆಗೆ ಕಾಂತಿಹೀನವಾಗಿ, ಬೆಳಕಿನ ಆವರಣದ ಚಕ್ರದ ಅಂಚಾಗಿ, ಬಿಂದು ಮಾತ್ರವಾಗಿ ಗೋಚರಿಸುತ್ತಿದ್ದವು. ಮಾಗಿಯ ಮಂಜು ಲಂಕೆಯನ್ನು ಸುತ್ತಿ ಮುತ್ತಿ ಲಗ್ಗೆ ಹಾಕಿ
~~~~~~~~~~~~~~~~~~~~~~~

ಒಳಹೊಕ್ಕು ದೃಷ್ಟಿ ಗೋಚರವಾದುದೆಲ್ಲವನ್ನು ನುಂಗಿ ನೊಣೆಯಿತು.

ವೃಶ್ಚಿಕರೋಮನು ನೀಡಿದ ಲಂಕೇಶನ ಆಜ್ಞೆಯನ್ನು ಹೊತ್ತು ಭಟರು ಲಂಕೆಯನ್ನೆಲ್ಲ ಸೋಸುತ್ತಿದ್ದರು. ಅವರ ಖಡ್ಗದ ಖಣತ್ಕಾರ, ಕಾವಲಿನ ಎಚ್ಚರವಾಗಿ ಊದುವ ತುತ್ತೂರಿ ಧ್ವನಿಗಳಿಂದ ನಿಶ್ಯಬ್ದರಾತ್ರಿಯ ಹಿಮದ ವೃದ್ಧಾಪ್ಯ ಹೆಚ್ಚಿತು. ಇಚ್ಛಾರೂಪಿ ಹನುಮಂತನು ಒಮ್ಮೆ ಕಣ್ಣಾಗಿ ನೋಡಿ, ಇನ್ನೊಮ್ಮೆ ಕಿವಿಯಾಗಿ ಕೇಳಿದನು. ಹೊಂಚುಹಾಕಿ ಪರಿಶೀಲಿಸುತ್ತ ನಿಧಾನ ನಿಧಾನವಾಗಿ ಮುಂದಕ್ಕೆ ಹೋದನು. ತ್ರಿಕೂಟಾಚಲದ ಇಳಕಲ್ಲಿನ ಕಟಿ ಪ್ರದೇಶದಂತೆ ಉಬ್ಬಿ ರತಿಭಾವವನ್ನು ಉಂಟುಮಾಡುತ್ತಿದ್ದ ಜಗತಿಯೆಂಬ ಕೆಮ್ಮಣ್ಣು ಬೆಟ್ಟವನ್ನು ಏರಿದನು. ಅದು ಕಡಲ ದಂಡೆಗೆ ತುಸುದೂರದಲ್ಲಿ ಅಶೋಕವನದ ಮಧ್ಯೆ ಇತ್ತು. ಸಾಗರದ ಘೋಷವನ್ನು ಕೇಳುತ್ತ, ಇನ್ನೊಂದು ದಡದಲ್ಲಿದ್ದ ಕಪಿಬಲ ನಿರೀಕ್ಷೆ, ಸುಗ್ರೀವರಾಮರ ಉತ್ಕಟ ಸಂಕಟ ಮತ್ತು ದೇವಿಯ ಹೇಳಿಕೊಳ್ಳಲಾಗದ ದುಃಖದ ನರಕಯಾತನೆ ನೆನೆದು ಅವನಿಗೆ ಶೋಕ ಉಕ್ಕಿ ಬಂದಿತು. ಅವನು ಮನದಲ್ಲಿ ಹೀಗೆಂದುಕೊಂಡನು:

'ಇದು ತೆರೆಯ ಮೊರೆ ಅಲ್ಲ. ಇದು ಅಗಲಿಕೆಯ ಕಡಲ ಕರುಳ ನೋವಿನ ಕರೆಯ ನರಳುವಿಕೆ. ದೇವಿ ಸೀತೆಯ ಮೂಕಸಂಕಟದ ಪ್ರತಿಮೆಯಂತೆ, ಪ್ರತಿನಿಧಿಯಂತೆ ಈ ಸಾಗರದ ವ್ಯಾಕುಲ ಸಲಿಲ ನಾಲಿಗೆ ಉಲಿಯುತ್ತಿದೆ. ಇದು ಕೋಪವೋ? ಕನಿಕರವೋ? ಮೂದಲಿಕೆಯೋ ಮುನಿಸೋ? ಅಥವಾ ರಹಸ್ಯವನ್ನು ತಿಳಿಸಿ ಪ್ರಚೋದಿಸುವ ಸಂಕೇತವೋ?

'ಹೇ ಅಂಬುನಿಧಿ, ನಿನ್ನನ್ನು ದಾಟಿಬಂದ ನನ್ನ ಸಾಹಸವು ಸಫಲವಾಗುವಂತೆ, ಸೂರ್ಯದೇವನ ಕುಲದ ಸೂರ್ಯನ ಸತೀಮಣಿಯ ಪುಣ್ಯ ಸಾಕ್ಷಾತ್ಕಾರವಾಗುವಂತೆ ಕರುಣಿಸು. ನಾನಿನ್ನೂ ಅಶೋಕವನವನ್ನು ನೋಡಿಲ್ಲ. ಆ ವಾರ್ತೆ ಕೇಳಿ ತಿಳಿದು ಬುದ್ಧಿಗೋಚರವಾಗಿದ್ದರೂ ದೇವಿಯ ದರ್ಶನ ಸಿದ್ಧಿಸಿಲ್ಲ. ಈ ಪಟ್ಟಣ ಸಮಸ್ತವನ್ನು ಸುತ್ತಿ ಹುಡುಕಿದ್ದೇನೆ. ಹಲವಾರು ಅದ್ಭುತ ದೃಶ್ಯಗಳನ್ನು ಕಂಡಿದ್ದೇನೆ. ಮಹಾಬಲವ್ಯಕ್ತಿಗಳ ಮಹದ್ವಿಷಯವನ್ನು, ಸಕಲ ನ್ಯೂನತೆಗಳನ್ನು ನೋಡಿ, ಬಲಾಬಲ ಸೂಕ್ಷ್ಮಗಳನ್ನು ತಿಳಿದಿದ್ದೇನೆ. ಆದರೆ ಮುಖ್ಯವಾದುದನ್ನು ನೋಡಲಿಲ್ಲ. ನೋಟಕ್ಕಾಗಿ ಕಾಯುತ್ತಿರುವ ಚೆಲುವಿನಂತೆಯೇ, ರಾತ್ರಿಯ ಹುಡುಕುವ ಪರಿಶ್ರಮವು ದಾರಿಕಾಣದ ದಟ್ಟಕತ್ತಲೆಯಿಂದ ರೋಸುತ್ತಿದೆ.

'ಹೇ ಅನಂತತಾ ಪ್ರತಿರೂಪಿ ಶರಧಿಯೇ, ಮಂಜು ಮುಸುಕಿ ನಿಶೆಯಂತಿರುವ ನನ್ನ ಮತಿಗೆ ಹೊನ್ನಕಾಂತಿಯ ಉಷೆಯ ಮುಂಗಾಣ್ಕೆಯ ದರ್ಶನ ನೀಡು. ಸತ್ತಿರಲಿ, ಬದುಕಿರಲಿ, ತಪದ ತೀವ್ರತೆಯಿಂದ ಕೃಶಳಾಗಿರಲಿ; ಹೇಗೆ, ಎಂತೇ ಇರಲಿ ಆ ಸುವ್ರತಾ ಭಗಿನಿಯನ್ನು ಕಾಣದೆ ಈ ದಶಗ್ರೀವ ಸೀಮೆಯನ್ನು ಬಿಟ್ಟುಹೋಗುವುದಿಲ್ಲ.'

ಹೀಗೆ ಮುಂದಿನದನ್ನು ಆಲೋಚಿಸುತ್ತ ನಿಶ್ಚಲನಾಗಿ ಹನುಮಂತನು ನಿಂತಿದ್ದನು. ಆಗ ಕಿವಿಗೆ ಬೆಟ್ಟವನ್ನು ಏರಿಬರುತ್ತಿರುವ ಸೈನಿಕರ ಕ್ರಮ ನಡಿಗೆಯ ಲೋಹದ ಸದ್ದು ಕೇಳಿಬಂದಿತು. ನಿಮಿಷ ನಿಮಿಷಕ್ಕೆ ಹತ್ತಿರ ಬರುತ್ತಿರುವ ಅದನ್ನು ಆಲಿಸುತ್ತಿರುವಾಗ, ಆ ಲೋಹಶಬ್ದ ಮೀರಿ ತೂರಿಬಂದ ಅವರ ಸಂಭಾಷಣೆಯ ದನಿ ಕರ್ಣಾಮೃತವಾಗಿತ್ತು.

'ದೇವಿ ಲಂಕಿಣಿಯನ್ನು, ನಮ್ಮ ನಗರ ರಕ್ಷಾಲಕ್ಷ್ಮಿಯನ್ನು ಗೆದ್ದು ಲಂಕೆಯನ್ನು ಹೊಕ್ಕಿರುವನೆಂದರೆ, ಆ ಮಾಯಾಸಮರ್ಥನು ದಿಟವಾಗಿ ಸಾಮಾನ್ಯನಲ್ಲ!'

'ಇದುವರೆಗೆ ಆ ತ್ರಿಶೂಲವನ್ನು ಎದುರಿಸಿ ಬದುಕಿದವರಿಲ್ಲ. ಅಂತಹ ಭೇದಿಸಲಾಗದುದನ್ನು ಹೇಗೆ ಭೇದಿಸಿದ? ನಕ್ಷತ್ರ ನೇತ್ರನೇ ಶೂಲದ ಭಾರಿಬಲ ಮುರಿದಿದೆಯೆ?'

'ಇಲ್ಲ ಇಲ್ಲ. ಅದರ ನೇರಗುಣ ಬಾಗಿದೆ.'

'ದೇವಿಯ ಮುಖ ಲಂಕೆ ವಿಮುಖವಾಗಿದೆಯೆ?'

'ವಿಮುಖವಾಗಿರುವುದಷ್ಟೆ ಅಲ್ಲ, ತೇಜಸ್ಸು ಕಳೆದುಕೊಂಡು ಜಡವಾಗಿದೆ! ಅದನ್ನು ವರ್ಣಿಸಿದರಾಗದು, ನೋಡಿಯೆ ತಿಳಿಯಬೇಕು.'

'ನಮ್ಮ ದೊರೆ ಆ ಹೆಣ್ಣು ಮಾರಿಯನ್ನೇಕೆ ತಂದನೊ?'

'ನೀನು ಆಕೆಯನ್ನು ನೋಡಿಲ್ಲ! ಸ್ನಾನ ಮಾಡದೆ, ಉಡದೆ ಉಣದೆ ಕಾಂತಿಹೀನವಾಗಿದ್ದರೂ ಮಹಾಮಹಿಳೆಯಂತೆ ಕಾಣುತ್ತಾಳೆ. ಬಾ, ದೂರದಿಂದ ಆಕೆಯನ್ನು ತೋರಿಸುತ್ತೇನೆ. ನಾವು ಕಾವಲಿರುವ ದಾರಿಯ ಹತ್ತಿರವೇ ಆಕೆಯ ಸೆರೆಯ ಪರ್ಣಕುಟೀರವಿದೆ.'

'ಈ ರಾತ್ರಿ ದುಶ್ಯಕುನಮಯವಾಗಿದೆ.'

'ನೋಡುಬಾ, ನಿನಗೆ ಅದೊಂದಾದರೂ ಶುಭದರ್ಶನ ಲಭಿಸಲಿ.'

ಹೀಗೆ ಮಾತಾಡಿಕೊಳ್ಳುತ್ತ ಭಟರು ದಟ್ಟ ಮಂಜಿನಲ್ಲಿ ದಟ್ಟ ಕಣ್ಕಟ್ಟಿನಲ್ಲಿ ಮುಂದೆ ಸಾಗಿದರು. ಅನಿಲಜನು ಅವರ ಮಾತಿಗೆ ಕಿವಿಯಾಗಿ ತನ್ನ ಸುಕೃತಕ್ಕೆ ಕೈ ಮುಗಿಯುತ್ತ ಅವರನ್ನು ಅನುಸರಿಸಿ ಹಿಂಬಾಲಿಸುತ್ತ ಸಾಗಿದನು.

ತನ್ನ ಹೊತ್ತಂ ಹೊಂಚಿ ಕಾದುಕುಳಿತನೊ ಹೊನ್ನ ಹೊತ್ತರೆಗೆ.

ಅನಿಲಾತ್ಮಜನು ತನ್ನನ್ನು ಹುಡುಕುತ್ತಿರುವವರಿಂದ ತಾನು ಹುಡುಕುತ್ತಿರುವ ಅರಸಿ ಸೀತೆಯಿರುವ ಪರ್ಣ ಕುಟಿಯ ನೆಲೆಯನ್ನು ತಿಳಿದನು. ಹತ್ತಿರದ ಎತ್ತರದ ಮರದ ನೆತ್ತಿಗೆ ಏರಿಕುಳಿತನು. ಹೊನ್ನ ಹೊತ್ತಾರೆಗಾಗಿ ಕಾದು ಕುಳಿತನು. ಆನಂದ ಆವೇಶಕ್ಕೊಳಗಾಗಿ ಮೈಪುಳಕಗೊಂಡಿತು. ಚಿತ್ತ ವೃತ್ತಿಯ ನಿರೋಧದಿಂದ

ತುರೀಯನುಭವ ಪಡೆದಂತೆ, ಕೃತಕೃತ್ಯತೆಯ ಮುಕ್ತತೆಯ ಮಾಧುರ್ಯವನ್ನು ಸವಿದು ಅವನ ಚೇತನ ನಿದ್ದೆಯ ಜೊಂಪಿಗಿಳಿಯಿತು. ತೀವ್ರ ಸಂತೋಷ ಕಾಡುತ್ತಿರಲು ಆತ್ಮದ ಕಣ್ಣಿನಿಂದ ಸೋರುವ ನಿರಂತರ ರಸಧಾರೆಯಂತೆ, ಹನುಮಂತನ ತಾವರೆಕಣ್ಣುಗಳಿಂದ ಕೃತಜ್ಞತಾ ತೊರೆ ಹರಿಯಿತು. ಚಳಿಯನ್ನುಂಟುಮಾಡುವ ಮಾಗಿ ಇರುಳನ್ನು ಅಂತ್ಯಗೊಳಿಸುವಂತೆ (ತುದಿಯ ಮೂಗು ಮುರಿಯುವಂತೆ) ಅವನ ವಜ್ರದೇಹವು ಬೆವರಿನಿಂದ ತೊಯ್ದಿತು. ಅವನು ಸಂತೋಷವಲ್ಲದೆ ಬೇರೆ ಭಾವಕ್ಕೆ ಸ್ವಲ್ಪವೂ ಎಡೆ ಇಲ್ಲದಂತೆ ಚಿತ್ತ ಸಮಾಧಿಸ್ತನಾದನು.

ಅನೇಕ ಮುಹೂರ್ತಗಳು ಕಳೆದವು. ಪರವಶತೆ ಸ್ಥಗಿತಗೊಂಡಿತು. ಮನಸ್ಸು ಮತ್ತೆ ಬುದ್ಧಿಯ ಕಾರ್ಯಕ್ಷೇತ್ರಕ್ಕೆ ಮರಳಿತು. ಮರದ ತುದಿಕೊಂಬೆಯ ಮೇಲಿದ್ದ ಆಂಜನೇಯನು ಕುಟೀರದ ಕಡೆ ಕಿವಿಯಾದನು. ಅಲ್ಲಿಂದ ಹೊಮ್ಮಿಬರುವ ಒಂದೊಂದು ರವಕ್ಕೆ ತನ್ನ ಭಕ್ತಿಯ ನಮಸ್ಕಾರದ ಕಾಣಿಕೆ ಎಂಬಂತೆ ರೋಮಾಂಚನ ಗೊಳ್ಳುತ್ತಿದ್ದನು. ನಿದ್ದೆಯು ತನಗೆ ಒಳಗೆ ಪ್ರವೇಶಿಸಲು ಅವಕಾಶಕೊಡದ ಕಾರಣ ಹೊರಗೆ ಶ್ರದ್ಧೆಯಿಂದ ಬಾಗಿಲು ಕಾಯುತ್ತಿದೆಯೊ ಎಂಬಂತೆ ಆ ಪರ್ಣಶಾಲೆ ಪ್ರಶಾಂತವಾಗಿತ್ತು. ಅಲ್ಲಿ ಜಾಗರಣೆಯು ನರಳುತ್ತಿದೆಯೋ ಎಂಬಂತೆ ಆಗಾಗ್ಗೆ ಅಬಲೆಯ ಕೊರಳ ಅಬಲರೋದನ ಹೊಮ್ಮಿಬರುತ್ತಿತ್ತು. ಅನಿಲಜನು ಎಷ್ಟೇ ಕಿವಿಗೊಟ್ಟು ಆಲಿಸಿದರೂ ಆ ನಾದದ ಅರ್ಥ ತಿಳಿಯಲಾರದೆ ಹೋಯಿತು. ಅದು ಸಮುದ್ರದ ತೆರೆಕರೆಯ ಮೊರೆಯಂತಾಯಿತು. ಮಾರುತಿಯ ಮನಸ್ಸನ್ನು ಅನೇಕ ಚಿಂತೆಗಳು–ದೇವದಾನವರು ಸಮುದ್ರವನ್ನು ಕಡೆದಂತೆ–ಮಥಿಸಿದವು.

ನನ್ನ ಸಮುದ್ರಲಂಘನ ಗುರಿ ಸಫಲವಾಗುವುದೆ? ರಾಮನ ಸತಿ ಸೀತೆಯನ್ನು ಇಲ್ಲಿ ಕಾಣುತ್ತೇನೆಯೆ? ರಾಮನಾತ್ಮದ ನರಕ ತಪ್ಪುತ್ತದೆಯೆ? ಕಪಿ ಸೈನ್ಯ ಭಾರದಿಂದ ಮಹೇಂದ್ರ ಪರ್ವತದ ಅಂಚಿನ ಸಮುದ್ರ ದಡದ ಪ್ರಾಸದಾಯಕ ದೀರ್ಘಕೊರಳು ಏದುಸಿರು ಬಿಡುತ್ತಿದೆ. ಅದಕ್ಕೆ ಇಲ್ಲಿ ಫಲ ದೊರೆಯುವುದೆ? ನನ್ನ ವಕ್ಷದ ವಜ್ರದೇವಾಲಯದಲ್ಲಿರುವ ಶ್ರೀ ಮುದ್ರಿಕೆಗೆ ತನ್ನ ಪರಿಚಿತ ಮನೋಹರಿಯ ಮುಖಚಂದ್ರವನ್ನು ಮತ್ತೆ ಹೊಳೆಯಿಸುವ ಪುಣ್ಯ ಅವಕಾಶದ ಧನ್ಯ ಭಾವ ನನಗೆ ಸಿದ್ಧಿಸುವುದೇ?....ದುರುಳ ದಾನವನ ದುರಾಶೆಯ ಬಲೆಯ ಸೆರೆಯ ಸಂಕಟದಲ್ಲಿ ಬೇಯುವ, ಪತಂಗದಂತೆ ನರಳುತ್ತಿರುವ ಸತಿಗೆ ಶ್ರೀರಾಮನ ಧೈರ್ಯ ಸಂದೇಶ ದೊರೆಯಲಿ. ಮತ್ತೆ (ಹಲ್ಲುಕಚ್ಚಿ ಪದಪದವನ್ನು ಒತ್ತಿ ಹೇಳಿದನು) ದೂರ್ತ ಲಂಕೇಶ್ವರನ ಪಾಪದ ಕಟ್ಟಿಗೆಗೆ ಕಿಚ್ಚಿಕ್ಕುವೆನು!'

(ಸ್ವಲ್ಪ ಹೊತ್ತು ಮೌನದಿಂದಿದ್ದು)

'ಆ ದೇವಿ ನನಗೆ ಪ್ರತ್ಯಕ್ಷಳಾಗುವಳೆ? ಆ ಪೂಜ್ಯೆಯನ್ನು ಹೇಗೆ ಗುರುತಿಸಲಿ? ಹೇಗೆ ಕಾಣಿಸಿಕೊಳ್ಳಲಿ? ಹೇಗೆ ಮಾತನಾಡಿಸಲಿ? ಅವಳು ಬೆಚ್ಚದಂತೆ, ಶಂಕಿಸದಂತೆ,

ಬೇರೆಯವರು ತಿಳಿಯದಂತೆ, ಮೆಚ್ಚುವಂತೆ ಮತ್ತು ನನ್ನ ಒಳಿತಿನ ಇಚ್ಛೆ ಗೆಲ್ಲುವಂತೆ ಹೇಗೆ ವರ್ತಿಸಲಿ?.... ಇದು ಚಿಂತಿಸಿದರೆ ಹೊಳೆಯುವುದಿಲ್ಲ! ಆ ಕ್ಷಣ ಪ್ರತಿಭೆ ಹೇಗೆ ನಡೆಸುತ್ತದೆಯೊ ಹಾಗೆ ನಡೆದುಕೊಳ್ಳುತ್ತೇನೆ. ಸಾಧಾರಣವಾದುದಕ್ಕೆ ಬುದ್ಧಿ ಗುರುವಾದರೆ; ಅಸಾಧಾರಣವು, ಭೂಮವು, ಮಹತ್ತು ಆದುದಕ್ಕೆ ಪ್ರತಿಭೆ ಗುರುವಲ್ಲವೆ?'

ಎಂದು ಮನದಲ್ಲಿ ನಿಶ್ಚಯಿಸಿಕೊಂಡು ಕಾದು ಕುಳಿತಿರಲು ಮಂಜು ಗಿರಿನೆತ್ತಿಯಿಂದ ಕಣಿವೆಗೆ ಇಳಿಯತೊಡಗಿತು. ತಿಳಿಗೊಂಡ ಬಾನಿನ ಪಶ್ಚಿಮ ದಿಕ್ಕಿನಲ್ಲಿ ನಕ್ಷತ್ರಗಳು ಮರಳಿ ಅರಳಿ ಮಿನುಗಿದುವು. ಪೂರ್ವದಿಕ್ಕಿನ ಮನೋಧ್ಯಾನ ಚಕ್ರದಲ್ಲಿ ಸೂರ್ಯೋದಯವಾಗುವ ಸೂಚನೆ ನೀಡುವಂತೆ ಉಷೆಯ ಮಂದಹಾಸ ತೋರಿತು. ಆ ಪ್ರಾತಃಪೂರ್ವ ಬೆಳಗಿನ ಜಾವದಲ್ಲಿ ಬಳಿಯಿದ್ದ ಪಾರಿವಾಳದ ಮರದ ಎಲೆಯಿಂದ ಹೂ ತುಂಬಿದ ರೆಂಬೆಯಿಂದ ಒಂದು ಮಡಿವಳಹಕ್ಕಿ ಸಿಳ್ಳುಹಾಕಿ ನಿಶ್ಶಬ್ದತೆಯನ್ನು ಇರಿಯಿತು. ಅದಕ್ಕೆ ಮಾರುಲಿಯುವಂತೆ ಗೋರಂಟೆ ಮರದಿಂದ ಒಂದು ಹಕ್ಕಿ ಹಾಡಿತು. ಅದರ ಒಡನಾಡಿ ಮತ್ತೊಂದು ಮುತ್ತುಗ ಮರವನ್ನೇರಿ ಕರೆಯಿತು. ಮಗದೊಂದು ಬಕುಳವೃಕ್ಷದಿಂದ ಎಲ್ಲರನ್ನೂ ತನ್ನೆಡೆಗೆ ಕರೆಯುವಂತೆ ಬಾಯ್ದೆರೆದು ಕೂಗಿತು. ಆ ಮಡಿವಾಳ ಪಕ್ಷಿಗಳು ದನಿಯ ಹಾಸುಹೊಕ್ಕುಗಳಿಂದ ಉಲಿಯ ಬಲೆ ನೇಯುತ್ತಿರಲು ಒಂದು ಗೀಜಗನಹಕ್ಕಿಯು ದೂರದಿಂದ ಆಲಾಪನೆಗೆ ಮೊದಲಾಯಿತು. ಅದನ್ನು ಹಿಂಬಾಲಿಸಿ ಬಿದಿರ ತುದಿಯಿಂದ, ನಂದಿ ಮರದಿಂದ, ತೆಂಗು ಕೌಂಗುಗಳ ಗರಿತುದಿಗಳಿಂದ ಕಿವಿಯಿತ್ತ ಕಡೆಗೆ ಪಕ್ಷಿಗಳ ಕಲರವ ತುಂಬಿ ಹರಿಯಿತು.

ಮೆಲ್ಲ ಮೆಲ್ಲನೆ ತುಂಬು ಬೆಳುದಿಂಗಳ ಕನಕ ಬಿಂಬಕ್ಕೆ ಹೊನ್ನಿನತನ ಬಾಡಿತು; ಬೆಳ್ಳಿಯತನ ಮೂಡಿತು. ಕಣ್ಣು ಏನೆಂದು ತಿಳಿಯುವ ಮೊದಲೆ ಪೂರ್ವ ದಿಕ್ಕಿನಲ್ಲಿ ಬೆಣ್ಣೆ ಹೂಬಣ್ಣ ನಸುಕು ನಸುಕಾಗಿ ಮೂಡಿತು. ತರುವಾಯ ಮುತ್ತುಗದ, ಪಾರಿವಾಳದ ಮರದ ಹೂಗೆಂಪು ಹರಿದಂತೆ ಮುಂಬೆಳಕಾಯಿತು. ಅನಂತರ ಹಳದಿ, ನೀಲಿಗಳು ಪ್ರದರ್ಶಿಸುವ ಬೆಳ್ಬೆಳಗು ಆಯಿತು. ನಾನಾಬಗೆಯ ತೆರೆತೆರೆಯ ಬೆಳಕಿನ ಆ ದಿನದ ಶಿಶು ತಿಪ್ಪತಿಪ್ಪನೆ ಹೆಜ್ಜೆ ಇಡುತ್ತ ಬಂದಿತು. ಉದಯಾಚಲದ ತೊಡೆಯೇರಿ ಉಷೆಯ ಮಡಿಲಲ್ಲಿ ತನ್ನ ತಾವರೆಗೆಂಪಿನ ಎಳೆ ಮೈಯನ್ನು ಇಟ್ಟಿತೋ ಎಂಬಂತೆ ಬೆಳಗಿನ ಮುಖ ಕಾಂತಿಮಯವಾಯಿತು.

ಲಕ್ಷ ಪಲ್ಲವಿಯುಲಿವ ಪಕ್ಷಿಯಕ್ಷತೆಯೆರಚಿದಳು ಅಶೋಕವನಿಕಾಲಕ್ಷ್ಮಿ

ಮೂಡಲು ಎತ್ತಿದ ಉಷೆಯ ಆರತಿಗೆ ಮಂಗಳಗಾನವನ್ನು ಹಾಡಿ ಅಕ್ಷತೆಯನ್ನು ಎರಚುವಂತೆ ಅಶೋಕ ವನಿತಾ ಲಕ್ಷ್ಮಿಯು ಲಕ್ಷಪಲ್ಲವಿ ಉಲಿಯುವ ಪಕ್ಷಿಗಳ ಅಕ್ಷತೆಯನ್ನು ಎರಚಿದಳು. ಗಿಳಿ, ಕಾಮಳ್ಳಿ, ಪಿಕರಾಳಗಳು ಹಿಂಡುಹಿಂಡಾಗಿ ಗೂಡು ಗೊತ್ತುಗಳಿಂದ ಹೊಮ್ಮಿ ಹಾಡುತ್ತ, ಗುಂಪು ಗುಂಪೆದ್ದು ಹಾರಾಡಿದವು. ಅದನ್ನು ಆಲಿಸುತ್ತಿದ್ದ ಆತ್ಮಗಳು

ತೊಪ್ಪನೆ ತೊಯ್ದುಹೋಗುವಂತಹ ಮನೋಹರಧ್ವನಿ ವರ್ಷದಿಂದ ಹರ್ಷಗೊಂಡು ಹಾರಾಡಿದವು. ಹನುಮನ ಮೈ ರೋಮಾಂಚನಗೊಂಡಿತು! ಹೃದಯದಲ್ಲಿ ತನ್ನ ಕಾರ್ಯ ಸಿದ್ಧಿಸುವುದೆಂಬ ಆಶೆ ಮೂಡಿತು! ಹೂಕಂಪಿನಿಂದ ತುಂಬಿದ ತಣ್ಣನೆಯ ಗಾಳಿ ಸೇವನೆಯಿಂದ ಅವನ ಉಸಿರು ಆಹ್ಲಾದಗೊಂಡಿತು.

ಬೆಳೆಯುವ ಎಳೆಬೆಳಕಿನಲ್ಲಿ ಹಿಮವು ಕರಗಲು ತಾನಿದ್ದ ಗುಡ್ಡನೆತ್ತಿಯ ತೋಟವನ್ನು ಕಣ್ಣರಳಿಸಿ ನೋಡಿದನು. ಆ ಅಶೋಕಉದ್ಯಾನದ ಕಲೆಯ ಲೋಕವು ಚಿತ್ರಕರ್ಮನ ರತ್ನಕಂಬಳಿಯಂತೆ ರಂಗುರಂಗಿನ ಓಕುಳಿಯನ್ನೆರಚಿತ್ತು. ಮುತ್ತುಗಳ ರಾಶಿ ಸುರಿಸುವಂತಿರುವ ಜಲಪಾತಗಳು ಬೆಳ್ಳಿಯಂತೆ ಬೆಳ್ಳಗೆ ಅಲ್ಲಿ ಹರಿಯುತ್ತಿತ್ತು. ಪೃಥ್ವಿಯನ್ನು ಹಸುರುಹುಲ್ಲು ಪಚ್ಚೆಯಂತೆ ಅಲಂಕರಿಸಿತು. ಕೋಮಲವಾದ ಹುಲ್ಲಿನಹುಲ್ಲೆಗೆ ತೊಡಿಸಿದ ಹರಳುಗಳಂತೆ ಅಲ್ಲಲ್ಲಿ ಕಾಮನಬಿಲ್ಲಿನಂತೆ ಹೊಳೆಯುವ ಕಲ್ಲುಬಂಡೆಗಳನ್ನು ಹುದುಗಿಸಿತ್ತು. ನಡುನಡುವೆ ಹಳದಿ ಕೆಂಪಿನ ಮರಳಿನ ರಸ್ತೆಗಳು ದೀರ್ಘವಾಗಿ ಹರಿದು, ವೃತ್ತಾಕಾರವಾಗಿ ಬಾಗಿ ಚಿತ್ರರೇಖಾ ಶೈಲಿಯಲ್ಲಿ ರಂಗೋಲಿಯಂತಿದ್ದವು. ಆ ಎಲ್ಲ ಚೆಲುವಿಗೆ ಮುಡಿಯಾಗಿ ಕಡಲ ನೀರಿನ ನಡೆಗೆ ನಿಲ್‌ಗಡಿಯಾಗಿ, ಮಾರುತಿಯ ಶ್ರೇಯಸ್ಸಿಗೆ ಒಂದು ಮುನ್ನಡಿಯಾಗಿ ಕುಳಿತಿದೆ ಎನ್ನುವಂತೆ ಪರ್ಣಕುಟಿಹಕ್ಕಿ ಇತ್ತು. ಅದು ತನ್ನ ಬೆಚ್ಚನೆ ಗರಿಯ ತುಪ್ಪಳದಲ್ಲಿ ದುಃಖಿ ಭೂಜಾತೆ ಸೀತೆಯನ್ನು ಇಟ್ಟುಕೊಂಡು ರಕ್ಷಿಸುವಂತಿತ್ತು. ಆಂಜನೇಯನ ಮನದಲ್ಲಿ ಹೀಗೆ ವಿವಿಧ ಆಲೋಚನೆಗಳು ಸುಳಿದಾಡಿದವು:

'ಯಾರೂ ಕಾಣುತ್ತಿಲ್ಲ. ಆದರೂ ಪೊದೆ, ಮರಳು ದಿಣ್ಣೆ, ಮರಗಳ ಮರೆಯಲ್ಲಿ ಕಾವಲಿರುವವರನ್ನು ತಿಳಿದು ನನ್ನ ಹೃದಯ ಗುಟ್ಟಾಗಿ ಅದುರುತ್ತಿದೆ! ಇದು ನಂಬುಗೆಯನ್ನು ನಟಿಸಿ ದೇವಿಯನ್ನು ವಂಚಿಸಿ ವಶಕ್ಕೆ ಒಳಗಾಗಿಸಲು ನಾರೀ ಹೃದಯ ಚೌರ್ಯನಿಪುಣನು ಮಾಡಿರುವ ಮಾಟವೇ ದಿಟ! ನಾನು ಕೈಗೊಂಡಿರುವ ಗುಪ್ತ ಕಾರ್ಯವು ಬಯಲಾಗದಂತೆ ಸಮಯವನ್ನು ಬೃಹತ್ ಅಶೋಕವೃಕ್ಷದ ರೆಂಬೆ ಕೊಂಬೆಗಳ ನಿಬಿಡ ಪರ್ಣಗಳ ರಂಧ್ರ ರಹಿತ ರಕ್ಷಣೆಯಲ್ಲಿ ಕಳೆಯುತ್ತೇನೆ. ಗಿರಿವನಪ್ರಿಯ ರಾಮನರ್ಧಾಂಗಿ, ವಿಪಿನ ಸಂಚಾರ ಕುಶಲೆ ಬದುಕಿದ್ದರೆ ಈ ಎಡೆಗೆ ಬಂದೇಬರುವಳು. ರಮ್ಯ ಸಾಲುಮರಗಳು. ಶಿವಜಲದ ಗಿರಿ ನಿರ್ಝರಿಣಿ; ಶಾದ್ವಲದ ಮಧ್ಯೆ ಹೇಮರಚಿತವಾದ ಚಕ್ರಾಕಾರದ ವಿವಿಧ ಆಕೃತಿಗಳು; ಕನಕ ಸೋಪಾನದ ಶೀತಲ ಜಲಸರೋವರದಲ್ಲಿ ದ್ರವರೂಪಿದರ್ಪಣಕ್ಕೆ ಕಟ್ಟಿದ ಅಂಚು ಎಂಬಂತೆ ಮರಳು ಶೋಭಿಸುತ್ತಿದೆ. ಈ ಚಂಪಕ ಚಂದನ ನಾಗಚಂಪಕ ಬಕುಳಗಳ ತಂಗಾಳಿಯೆಡೆಗೆ; ಈ ಶಾಂತ ಏಕಾಂತ ಲತಾಮಂಟಪದೆಡೆಗೆ ಆ ದೇವಿ ಬದುಕಿದ್ದರೆ ಬಂದೇ ಬರುವಳು ಎಂದುಕೊಂಡನು.

ಕಪಿಲಕುಲಯೋಗಿಯು ಉಲ್ಲಾಸಗೊಂಡ ಮನಸ್ಸಿನಿಂದ ವಿಶ್ವದೇವತೆಗಳಿಗೆ ಶಿವಶಕ್ತಿಗಳಿಗೆ ಮತ್ತು ಅಂತರ್ಯಾಮಿ ಸಚ್ಚಿಂತೆಗಳಿಗೆ ಧ್ಯಾನ ನೈವೇದ್ಯವನ್ನು ನೀಡಿ, ಕೈ ಮುಗಿದು ಹೀಗೆ ಪ್ರಾರ್ಥಿಸಿದನು:

'ಹೇ ಕಲ್ಯಾಣವನ್ನುಂಟು ಮಾಡುವ ಪುಣ್ಯ ಸನ್ಮತಿಗಳಿರ, ಕಲ್ಲಿನಂತೆ, ಮರದಂತೆ, ಜಡಜೀವದಂತೆ, ಖಗಮೃಗದಂತೆ, ಗಾಳಿ ಬೆಂಕಿಗಳಂತೆ, ಮನಸ್ಸು ಕನಸೆಂದು, ಚರಅಚರವೆಂದು ವಿವಿಧ ರೂಪಿಗಳಾಗಿ ವಿವಿಧ ಕರ್ಮಗಳನ್ನು ನಟಿಸುತ್ತಿರುವ ಧರ್ಮಭಟರುಗಳಿರ, ನನ್ನ ಸೌಜನ್ಯ ಗೆಲ್ಲುವಂತೆ ಸಂಕಲ್ಪ ಮಾಡಿರಿ. ನಿಮ್ಮ ಸಂಕಲ್ಪವೇ ನನ್ನ ಧರ್ಮರಥಕ್ಕೆ ಹೆದ್ದಾರಿಯನ್ನುಂಟು ಮಾಡುತ್ತದೆ. ಘಟನೆಗಳ ಗಾಳಿಯನ್ನು ತಿದ್ದಿ ನಡೆಸುತ್ತದೆ. ನಿಮ್ಮಿಚ್ಛೆ ನೆರವಾದರೆ ಒಂದು ಎಲೆಯ ಬೀಳುವಿಕೆ, ಒಂದು ಧ್ವನಿಯ ಕೇಳುವಿಕೆಯಿಂದ ರಾವಣನ ಮನವಿಮಾನದ ಗತಿಯನ್ನು ಬದಲಿಸಲಾರದೆ? ನಾನು ಕಂಡ ಮಂಡೋದರಿಯ ಪತಿಯ ಕಾಮಕಾತರತೆಯನ್ನು ಶಿವನಕಡೆಗೆ ಕದಲಿಸಲಾರದೆ? ಪತಿವ್ರತೆಯನ್ನು ಕೊಲ್ಲದಂತೆ, ಬಲದಿಂದ ಗೆಲ್ಲದಂತೆ ತಡೆಯಲಾರದೆ? ಅವನ ಚಿತ್ತ ಸರ್ಪದ ಕೆಟ್ಟವರ್ತನೆಯ ವಿಷದ ಹಲ್ಲಿಗೆ ಗರುಡಮಣಿಯಾಗಲಾರದೆ?'

ಅಷ್ಟರಲ್ಲಿ ಮಂಜಿನ ಹನಿಗಳು ಬಿದಿರು ಮೆಳೆಯ ಮಿರುಮಿರುಗುವ ಎಲೆಗಳ ಕೊನೆಗಣೆಯ ನೆತ್ತಿಯನ್ನು ಹತ್ತಿದ್ದವು. ಅಲ್ಲಿ ಪೂರ್ವದ ಕಡೆ ಮುಖಮಾಡಿ ಪುಕ್ಕಗರಿಗಳನ್ನು ಕೆದರಿಬಿಚ್ಚಿ ಕುಳಿತ ಪಕ್ಷಿಗಳ ಎದೆಗೆ ಬೆಚ್ಚನೆಯ ಒಲವನ್ನು ಒತ್ತಿ ಉಷಃಕಾಲದ ಬಿಸಿಲು ಹರಡಿತು. ಮಂಜು ಲಂಕೆಯಕಣಿವೆಗಳನ್ನು ನೊರೆಗಡಲಿನಂತೆ ತುಂಬಿತು. ಅದರಲ್ಲಿ ಶಿಖರಗಳು, ದ್ವೀಪ ಖಂಡಗಳು ತೇಲಿದಂತೆ ಕಂಡವು. ಆಗ ಇದ್ದಕ್ಕಿದ್ದಂತೆ ಕಣ್ಣನೋಟವೆ ಕರ್ಣಸುಂದರವಾದಂತೆ ಕಿವಿಗೆ ಮೋಹಕವಾದ ವೀಣಾವಾದನಧ್ವನಿ ಐಂದ್ರಜಾಲಿಕದಂತೆ ಕೇಳಿ ಬಂದಿತು! ಮೊದ ಮೊದಲು ದೂರದಿಂದ ಮಂದ್ರತಾನದಲ್ಲಿ ಕೇಳುತ್ತಿದ್ದ ಧ್ವನಿಯು ಬರಬರುತ್ತ ಹತ್ತಿರವಾಗಿ ಸುತ್ತಲಿಂದ, ಇತ್ತಲಿಂದ, ಅತ್ತಲಿಂದ ನರ್ತಿಸಿತು. ಗಾನವಿದ್ಯಾಧರ ವಾಯುಸುತನು ಆ ನಾದಕ್ಕೆ ಬೆರಗಾದನು. ಅಪಾರವಾದ ಇಂಪಿನೊಡನೆ ಆಶ್ಚರ್ಯ ಆನಂದಗಳು ಸರಿಸಾಟಿಯಾಗಿ ತಾನತಾನ ಸ್ವನದ ಸಂತಾನ ಸೊಗಯಿಸಿತು.

ಅದು ಬೇರುಗಳಿಂದ ಮರದ ಮೈಗೆ ರಸವು ಏರುವ ಛಂದಸ್ಸೊ? ವಿವಿಧ ವರ್ಣ, ಪರ್ಣಗಳಿಂದ ಗಾಳಿ ಬೆಳಕನ್ನು ಹೀರುವ ಪ್ರಕೃತಿಯ ಪ್ರಾಣಾಯಾಮ ಯೋಗದ ಓಜಸ್ಸೊ? ಹಿಮಕಣಗಳು ದಿನಕರನ ಬಿಸಿಲುಗುದುರೆಯನ್ನು ಪ್ರತಿಕೃತಿಸಿ ರಂಜಿಸುವ ಲಯಕ್ರಮವೊ? ಚೇತನಾಕಾಂಕ್ಷಿಯಾದ ಜಡದ ಅಂತರಂಗದ ತಪಸ್ಸು ಎಂಬ ವಿದ್ಯುದಣುಗಳ ರಣದ ಜಯಗೀತೆಯ ಪಲ್ಲವಿಯೊ? ಜಾನಕಿಯ ಜೀವ ಜಾಡ್ಯ ನಿವಾರಣೆಗೆ ಕಾಮಕುಶಲ ದಶಗ್ರೀವನು ಪ್ರಭಾತ ಸಮಯದಲ್ಲಿ ನೀಡುವ ನಿನಾದಸುಖ ಔಷಧವೊ? ರತಿಕಲಾ ಸಂಗೀತದ ಇಂಗಿತವೊ? –ಅಂತೂ ಆ ರಸಸುಖದ ಆಕಸ್ಮಿಕಕ್ಕೆ ಆಂಜನೇಯನು ಕಿವಿಗೊಟ್ಟು ಅದರಲ್ಲಿ ಲೀನವಾದನು. ಆ ತಾನ ತಾನ ಸ್ವನದ ಸಂತಾನವು ಲೋಕದ ಸಮತೋಲವನ್ನು ತೂಗಿ ತೊನೆದಾಡಿತು!

❑



~~~~~~~~~~~~~~~~~~~~~~~ ಸಂಚಿಕೆ – ೩ ~~~~~~~~~~~~~~~~~~~~~~~

ಕಂಡನಾ ಹದಿಬದೆಯರಧಿದೇವಿಯಂ

ಬೆಳಗಿನ ಮೊದಲ ಕಿರಣವು ಸೀತೆಯ ಪರ್ಣಕುಟಿಯ ತರಗೆಲೆಯ ತಡೆಗೋಡೆಯ ಬಿರುಕಿನಿಂದ ಪ್ರವೇಶಿಸಿತು. ಆ ಕಿರಣದ ಕಣ್ಣು ಅಲ್ಲೇನು ಕಂಡಿತು? ಇರುಳಿನ ದೀರ್ಘ ಕಷ್ಟವನ್ನು ಹೇಗೋ ಕಳೆದ ಆ ದೇವಿಯು ಇನ್ನೊಂದು ಸಂಕಟದ ದಿನ ಉದಯವಾಗುವುದನ್ನು ನಿರೀಕ್ಷಿಸುತ್ತಿದ್ದಳು. ಆ ಮರುಕದೆದೆಯ ಬಿಸಿಲ ಹಸುಳೆಯು ತನ್ನ ಕೋಮಲಕೈಗಳ ಮೃದುವಾದ ಚಿಗುರಿನಂತಿರುವ ಕಿರಣ ಬೆರಳುಗಳಿಂದ ಸೀತೆಯ ತಪದಿಂದ ಬೇಯುತ್ತಿರುವ ಪಾದಕಮಲಗಳನ್ನು ಸೋಂಕಿ ಸಂತೈಸಿತು.
~~~~~~~~~~~~~~~~~~~~~~~

ಹಿಮಶೈಲ ಶಿಖರದ ಗುಹೆಯ ಗರ್ಭದಲ್ಲಿ, ಕತ್ತಲಿಡಿದ ಕರ್ಗ್ಗವಿಯಲ್ಲಿ ಶೈತ್ಯದೈತ್ಯನ ಭಯಕ್ಕೆ ಮಂಜುಗಡ್ಡೆ ಹೆಪ್ಪುಗಟ್ಟಿರುತ್ತದೆ. ಅದು ಉತ್ತರಾಯಣರವಿಯ ಕಾಂತಿಯ ಚುಂಬನಕ್ಕೆ ತನ್ನ ಘನನಿದ್ರೆಯನ್ನು ತೊರೆದು, ಒಯ್ಯನೆ ಹೆಡೆಯೆತ್ತಿ ಸುರುಳಿಬಿಚ್ಚಿ ಹರಿಯುತ್ತದೆ. ಹಾಗೆ ಆ ತಪಸ್ವಿನಿ ಸೀತೆಯು ತನ್ನ ವಂಶದ ಸೂರ್ಯದೇವನ ಶುಶ್ರೂಷೆಯಿಂದ ಸಂತೋಷಪಟ್ಟು, ಮರಗಟ್ಟಿದ ಮರವೆಯಿಂದ ಮೈ ತಿಳಿದಳು. ಕಣ್ತೆರೆದು ಸುತ್ತಲೂ ನೋಡಿದಳು. ತನ್ನ ಇಷ್ಟದೇವತೆಗೆ, ರಾಮಚಂದ್ರನಿಗೆ ಕೈ ಮುಗಿದಳು. ಅಲ್ಲೋಲ ಕಲ್ಲೋಲ ಛಂದ ವೈಖರಿಯಿಂದ ಮುಂದೆ ಹರಿಯುತ್ತಿರುವ ಮನೋಹರ ಅನಂತನೀಲದ ಮಹಾಧೈರ್ಯ ನೀಡುವ ಸಮುದ್ರಕ್ಕೆ ವಂದಿಸಿದಳು. ಮೇಲೆನೋಡಿ ಶಾಂತತಾಪ್ರಜ್ಞೆಯ ಮಹಾ ಉದಾರಿ ನಿತ್ಯಗುರು ಆಕಾಶದೇವನಿಗೆ ನಮಿಸಿದಳು. ಮದಿಸಿದ ಆನೆಯಂತಹ ಕತ್ತಲೆಗೆ ವೈರಿಯಾದ ಪೂರ್ವಗಿರಿ ಕಿರಣಕೇಸರಿ ಸೂರ್ಯದೇವನಿಗೆ ನಮಸ್ಕರಿಸಿದಳು.

ಆ ನಾಲ್ವರ ಕೃಪಾಶಕ್ತಿಯಿಂದ ಚೇತನವು ಚೇತರಿಸಿದಂತೆ ಅವಳ ನಿರಶನ ವ್ರತದಿಂದುಂಟಾದ ನಿಶ್ಶಕ್ತಿ ಇಲ್ಲವಾಯಿತು. ಪ್ರಾಣಮಯವು ಅನ್ನಮಯ ಕೋಶವನ್ನು ಆಶ್ರಯಿಸಲು ಅಲೌಕಿಕಶಕ್ತಿ ಅವಳ ತನುವನ್ನು ತುಂಬಿಕೊಂಡಿತು. ಅಕಾರಣವಾಗಿ ಅವಳ ಆತ್ಮ ಪಾತ್ರದಲ್ಲಿ ಆನಂದ ಸಂಚರಿಸಿತು. ಮಲಿನವಾದ ದೀನಮುಖದ ಕಣ್ಣಿಂದ ನೀರು ಹೊನಲಾಗಿ ಹರಿಯಿತು.

ಸೀತೆಯು ತನ್ನ ಸ್ಥಾವರಸ್ಥಿತಿಯ ತಪಸ್ಸಿಗೆ ಜಂಗಮತೆ ಪ್ರಾಪ್ತವಾದಂತೆ ಮೇಲೆದ್ದಳು. ಬಳಿಯಲ್ಲಿಯೇ ನೆರವನ್ನು ನೀಡಲು ಬಂದ ರಾಕ್ಷಸೋತ್ತಮಸಖಿ ತ್ರಿಜಟೆಯ ಸಹಾಯವನ್ನು ಸನ್ನೆಯಿಂದ ಬೇಡವೆಂದಳು. ಪರ್ಣಕುಟಿಯ ತಡಿಕೆಯನ್ನು ಪಕ್ಕಕ್ಕೆ ಸರಿಸಿ ತನ್ನ ವಾಸಸ್ಥಾನವನ್ನು ಬಿಟ್ಟು ಹೊರಬರುವ ಬೆದರಿದ ಜಿಂಕೆಯ ಕಣ್ಣಿನಂತೆ ಹೊರಕ್ಕೆ ಬಂದಳು.

ಅಶೋಕವನ ವನಿತೆಯನ್ನು ಮುಂಬೆಳಗು ಇಬ್ಬನಿಯ ಮಿರುಗು ಮುತ್ತುಗಳಿಂದ ಸಿಂಗರಿಸಿತ್ತು. ಅದು ಮರಮರಕ್ಕೆ ನಿಡು ನೆಳಲುಗಳನ್ನು ನೀಡಿ ಬಚ್ಚಿಡುವಂತಿದ್ದ ಬಗೆ ಬಗೆಯ ಬಣ್ಣದ ಹೂಗಳ ಸಂದಣಿಯ ಶೋಭೆಯನ್ನು ಹೆಚ್ಚಿಸಿತ್ತು. ಅವುಗಳೆಲ್ಲ ಮೈಥಿಲಿಯ ಮನಸ್ಸಿನಲ್ಲಿ ಅವ್ಯಕ್ತ ಆನಂದವನ್ನುಂಟು ಮಾಡಿದವು. ಅದಕ್ಕೆ ಶುಭ ಶಕುನದ ಮಧುರವನ್ನು ಉಲಿಯುವಂತೆ–ಎಲೆರಹಿತ ಹಾಲಿವಾಣ ಮರದ ಕೊಂಬೆಗಳಲ್ಲಿ ತುಂಬಿದ ಕೆಂಪು ಹೂಗಳ ರಸ ಕುಡಿಯಲು ಬಂದೆರಗುತ್ತಿದ್ದ ಕನ್ನಡವಕ್ಕಿ ಕಾಜಾಣಗಳು ಸಿಳ್ಳು ಹಾಕಿ ಹಾಡಿದುವು. ಆ ಇಂಚರದ ಸವಿಗೆ ಮೇಲೆ ನೋಡಿ ಬಹುಕಾಲದಿಂದ ಹೊಮ್ಮದ ನಗು ಅವಳ ಮುಖದಲ್ಲಿ ಸುಳಿಯಿತು.

ಆ ಆನಂದಕ್ಕೆ ಹಿಮ್ಮೇಳದಂತೆ ಮಾಧುರ್ಯತೆಯ ಶೃಂಗ ಶಿಖರವೆನ್ನುವಂತಹ–ನೃತ್ಯ, ಗೀತ ಮತ್ತು ವಾದ್ಯಗಳ ಮೇಳ – ತಾರ್ಯತ್ರಿಕವು ಕೇಳಿಬಂದಿತು. ಅದು ಕಂಗೊಳಿಸುವ ಹೂಗಳ ಅನೇಕ ವರ್ಣದಂತೆ ಕಿವಿಗೆ ಆಹ್ಲಾದಮಯವಾಗಿ ಜೋಗುಳ ಹಾಡಿ ಜಾನಕಿಯ ಎದೆಯ ದೋಣಿಯನ್ನು ಓಲಾಡಿಸಿತು. ಗಾನವಿದ್ಯಾಧರ ಆಂಜನೇಯನು ಅಶೋಕವೃಕ್ಷದ ಮೇಲೆ ಕುಳಿತು ಕೇಳಿ ಆ ನಾದಕ್ಕೆ ಬೆರಗಾದಂತೆ ರಾಮನರ್ಧಾಂಗಿಯು ಬೆರಗಾದಳು! ಆ ಅಮೃತ ಸೋನೆ ಕೇಳಿಬರುತ್ತಿದ್ದಂತೆ ತಕ್ಷಣ ನಿಂತು ಹೋಯಿತು!

ನಡುಗಿದಳ್ ವೈದೇಹಿ, ಕದಳಿಕಂಪಿಸುವೋಲ್.

ಗಾನಚತುರ ದೈತ್ಯನೃಪ ಅಖಿಲ ಪಾರಾವಾರವನ್ನು ದೂರವಿದ್ದು ಮೌನದಿಂದಿರಲು ಹೇಳಿದನು. ಲಂಕಾತಿಲೋತ್ತಮೆಯಂತೆ ಮಿಂಚುತ್ತಿದ್ದ ಇಂದು ಸ್ವಲ್ಪ ಖಿನ್ನಮುಖಿಯಾಗಿದ್ದ ಚಂದ್ರನಖಿಯೊಡನೆ ಬಂದನು. ಅವನು ಸೌಮ್ಯವೇಷದ ಹಳದಿಯಂಚಿನ ಬಿಳಿಯ ವಸ್ತ್ರವನ್ನು ತೊಟ್ಟಿದ್ದನು. ಅದು ಮಿಂದು ಮಡಿಯುಟ್ಟು ದೇವಾಲಯಕ್ಕೆ ಉತ್ಸವಕ್ಕೆ ಬಂದವನಂತಿತ್ತು. ಅವನು ನೇರವಾಗಿ ಇಳೆಗುವರಿ ಸೀತೆ ಇದ್ದಲ್ಲಿಗೆ ಬಂದನು!

ಲಂಕೇಶನು ಆಗಮಿಸುತ್ತಿದ್ದುದನ್ನು ಕಂಡು ವೈದೇಹಿಯು ಬಿರುಗಾಳಿಗೆ ಬಾಳೆ ಕಂಪಿಸುವಂತೆ ನಡುಗಿದಳು. ನಾಯಿಯ ಕೆಟ್ಟ ದೃಷ್ಟಿಯಿಂದ ಮರೆಮಾಡಲು ಎನ್ನುವಂತೆ–ಈಗಾಗಲೇ ಮುಚ್ಚಿದ್ದ ಮೈಯನ್ನು ಮತ್ತೆ ನಾರುಡೆಯ ಸೆರಗಿನಿಂದ ಮುಚ್ಚಿಕೊಂಡಳು. ನೌಕೆ ಹೊರೆಯ ಭಾರವನ್ನು ತಡೆಯಲಾಗದೆ ಕಡಲ ಮಧ್ಯದಲ್ಲಿ ಮುಳುಗುವಂತೆ ದುಃಖ, ಭಯ, ಉಪವಾಸ ಕಾರಣ ನಿಂತಲ್ಲಿಯೆ ತತ್ತರಿಸಿದಳು. ಪತಿವಿರಹ ಸೂಚಕವಾಗಿ ಜಡೆಕಟ್ಟಿಕೊಳ್ಳದ ಏಕವೇಣಿ ಕುಸಿದಳು. ಕಂಬನಿ ತುಂಬಿದ ತ್ರಿಜಟೆ ಹಿಡಿದೆತ್ತಿದಳು. ಆಗ ಸೀತೆಯು ಹಾಲಿವಾಣದ ಮರವನ್ನು ನೆಮ್ಮಿ ಅದನ್ನೇ ಹಿಡಿದು ಮರೆಮಾಡಿಕೊಂಡು ಧೈರ್ಯತಾಳಿ ನಿಂತಳು.

ಹುಬ್ಬುಗಂಟಿಕ್ಕಿ ಖಿನ್ನಮುಖಿಯಾದ ರಾಕ್ಷಸೇಂದ್ರನು ಬರಬಡಿದ ತೋಟ, ಬೇಟದ ಬಿಸಿಗೆ ಹಿಮರಾಶಿಯಂತಿದ್ದ ನೋಟವನ್ನು ನೋಡಿದನು. ನೆಲ ನೋಡುತ್ತಿದ್ದ ತಂಗಿಯ ಕಡೆ ತಿರುಗಿ ದಿಟ್ಟಿಸಿ ನೋಡಿದನು. ಕೆರೆಬಿಟ್ಟು ದಡಕ್ಕೆ ನೆಗೆದ ಮೀನಿನಂತೆ ನಾಚಿದ್ದ ರಾವಣನ ಎದೆಯು ಮಿಡುಮಿಡನೆ ಮಿಡುಮಿಡು ಒದ್ದಾಡುತ್ತ ನಿಟ್ಟುಸಿರು ಬಿಟ್ಟಿತು. ಅವನು ಮನದೊಳಗೆ ಯಾರನ್ನೋ ಹಿಂಡುತ್ತ ಬಯ್ದನು. ತನ್ನ ಕೋಪಕ್ಕೆ ತ್ರಿಜಟೆಯನ್ನು ಗುರಿಮಾಡಿ ಹೇಳಿದನು:

'ತ್ರಿಜಟೆಯೇ, ದೇವಿಯ ಈ ಬಗೆ ಏನು? ಇದು ನಿನ್ನ ಸೇವಾಫಲವೋ? ಅಥವಾ ಸ್ತ್ರೀ ಸಹಜ ಛಲವೋ?'

ಅವನು ನಿಧಾನವಾಗಿ ನುಡಿಯುತ್ತಿದ್ದರೂ ಹೊಟ್ಟೆಯಲ್ಲಿ ಸಿಟ್ಟು ಪೊಟ್ಟಣ ಕಟ್ಟಿ ಸಿಡಿಯುತ್ತದೆ ಎಂಬಂತಿತ್ತು. ಆ ಧ್ವನಿಯ ಭೀಕರತೆಗೆ ಮುದುರಿ ನಡುಗುತ್ತ ಬೆಪ್ಪಾಗಿ ನುಡಿದಳು:

'ಅಹುದಹುದು; ದೇವಿ ಇದ್ದಾಳೆ!'

'ಇರುವಳೇ ದೇವಿ? ನಿನ್ನ ಕಾವಲಿನ ಮಹಿಮೆ! ಇರುವುದು ಆಶ್ಚರ್ಯವಲ್ಲವೆ?' ಎಂದು ಕಣ್ಣು ಕೆರಳಿಸಿ ಗುಡುಗಿದನು. ಮಾತು ಮುಂದುವರಿಸುತ್ತ, 'ಇದ್ದಾಳೊ ಇಲ್ಲವೊ ಎಂದು ನಾನು ಕೇಳಲಿಲ್ಲ! ನನಗೂ ಕಣ್ಣಿದೆ. ಬೆಪ್ಪು ತೊತ್ತೆ! ಇರುವ ಈ ರೀತಿ ಏನು? ಈಕೆ ಯಾರು? ಅಲ್ಲಿ ನಿಂತಿರುವಾಕೆ?' ಎಂದು ಸೀತೆಯಿರುವ ಕಡೆ ಕೈದೋರಿ ಆ ಭಯಂಕರನು ಮೊಳಗಿದನು:

'ಸೀತೆಯೋ, ಪ್ರೇತವೋ, ಹೇಳು ತ್ರಿಜಟೆ? ನಿದ್ದೆ, ಆಹಾರ, ಸ್ನಾನಗಳನ್ನು ಕಾಣದ ಹೆಣ್ಣು ಹೆಣ್ಣೊ? ಅಥವಾ ಹೆಣ್ಣೊಡಲಿನ ಅಸ್ಥಿಪಂಜರವೊ? ಸುಮ್ಮನಿದ್ದೇಕೆ ನನ್ನ ಪ್ರಾಣ ಹಿಂಡುವೆ? ಪ್ರೇತ ಮೌನ ಬಿಡು, ಪ್ರೇತ ಪರಿಚಾರಿಕೆ, ಈ ಅಶೋಕವನವನ್ನು ಮಸಣಗೆಡಿಸಬೇಡ.'

ತ್ರಿಜಟೆ ತೊದಲುತ್ತ ಹೇಳಿದಳು:

'ಸ್ವಾಮಿ, ರಾಮಚಂದ್ರನನ್ನು ಮೂರುಹೊತ್ತು ನೆನೆಯುತ್ತಾಳೆ.'

'ಹಾಳು ತೊತ್ತೆ! ಎಲ್ಲರಿಗೂ ಸಾವು ಬರಲಿ!' ಎಂದು

ದೆವ್ವಕ್ಕೆ ಧೂಪ ತೋರಿದಂತೆ ಸಿಡಿಮಿಡಿಗೊಂಡನು. ರೋಷಗೊಂಡು ತಂಗಿ ಚಂದ್ರನಖಿಯೆಡೆಗೆ ತಿರುಗಿ ಕೇಳಿದನು,

'ತಂಗಿ, ಏನಿದು?'

ಅವಳು ಮುಖವೆತ್ತಿ ಕಣ್ತುಂಬಿ ಅಣ್ಣನನ್ನು ನೋಡಿದಳು. ಅತಿ ದೃಢವಾಣಿಯಿಂದ ಹೇಳಿದಳು:

'ದೈತ್ಯರಾಜೇಂದ್ರ, ಸೀತೆ ನಮ್ಮಂತೆ ಹೆಣ್ಣಲ್ಲ. ಅವಳು ದೇವಿ. ನೀನು ಆಕೆಯನ್ನು ಮೊದಲು ಕರೆದಂತೆ ಆ ಪೂಜ್ಯೆ ದೇವಿಯೇ ದಿಟ!'

ಅದನ್ನು ತಿರಸ್ಕರಿಸುವಂತೆ ರಕ್ಕಸನು ಕುದುರೆಯಂತೆ ಕೆನೆದನು. ದುರುದುರನೆ ನೋಡುತ್ತ ನುಡಿದನು:

'ಸಾಕು ನಿಲ್ಲಿಸು. ನೀನೇನೆಂದು ನನಗೆ ತಿಳಿಯದೆ?'

ಚಂದ್ರನಖಿಯು ಮಿಂಚಿರಿವಂತೆ ತುಟಿಯ ಕೊಂಕಿನ ಕಠಾರಿಯಿಂದ ತಿವಿದಳು:

'ನೀನು ಅಣ್ಣನೆಂಬುದು ನಿಜ! ಅಸುರಕುಲನೃಪ ಎಂಬುದು ನಿಜ! ಆದರೇನು? ನಿಜವನ್ನು ಹೇಳುತ್ತೇನೆ ಕೇಳು! ನಿನ್ನ ಕೈಯಿಂದ ನನ್ನ ಪತಿ ಪಾತಾಳಯುದ್ಧದಲ್ಲಿ ಹತನಾದ. ನೀನು ಕೊಟ್ಟ ವೈಧವ್ಯದಿಂದ ನಾನು ಉರಿಯುತ್ತಿದ್ದೇನೆ. ನಿನ್ನ ದೆಸೆಯಿಂದ ನನಗೆ ಕೆಟ್ಟ ಜೀವನ ಪ್ರಾರಂಭವಾಯಿತು. ಪಾಪಿ ನೀನಾಗಿ, ನನ್ನನ್ನು ಪಾಪಕ್ಕೆ ನೂಕಿದೆ. ನಿನ್ನಂತೆ ನನಗೂ ಪಾಪವೇ ರುಚಿಯಾಯ್ತು. ಈ ಪೂಜ್ಯೆಯಿಂದ ಆ ರುಚಿ ನರಕವೆಂದು ತಿಳಿದೆನು. ಆ ಪಾಪಕೂಪಕ್ಕೆ ಎಂದೂ ಇಳಿಯುವುದಿಲ್ಲ. ನೀನೂ ಇಳಿಯಬೇಡವೆಂದು ಪ್ರಾರ್ಥಿಸುವೆನು!'

ಕೊರಳು ಉರುಳುತ್ತದೆ

ತಂಗಿಯ ಸತ್ಯದ ಮಾತಿಗೆ ದಶಗ್ರೀವನು ಒಳಗೊಳಗೆ ಬೆದರಿದನು. ಹೊರಗೆ ಕೋಪ ಉರಿದೆದ್ದು ಕೂಗಿದನು:

'ನೀನಾಗಲಿ, ಅನಲೆಯಾಗಲಿ ಮತ್ತೆ ಇನ್ನಾರಾದರೂ ಆಗಲಿ ಇತ್ತ ಈ ಬನಕ್ಕೆ ಕಾಲಿಟ್ಟಿದುದನ್ನು ಕೇಳಿದರೆ'

ಎಂದು ಅಷ್ಟು ಹೇಳುವಷ್ಟರಲ್ಲಿ ಹಾಲಿವಾಣಮರದ ಹೂಕುಡಿವ ಹಕ್ಕಿ ಕೆಡಹಿದ ಕೆಂಪುಹೂ ಒಂದು ದೊಪ್ಪನೆ ರಾವಣನ ತಲೆಯ ಮೇಲೆ ಬಿದ್ದಿತು! ರಾವಣನು ಕೋಪಗೊಂಡು ತಲೆ ಕೊಡವಿಕೊಳ್ಳುತ್ತ 'ಕೊರಳು ಉರುಳುತ್ತದೆ' ಎಂದು ದುರ್ವಾಕ್ಯವನ್ನು ಪೂರೈಸಿದನು!

'ತಿತ್ತಿರಿರಿ' ಯೆಂದು ಉಲಿಯುತ್ತ ಪಕ್ಷಿಯು ಬೇರೊಂದು ಕೊಂಬೆಗೆ ಹಾರಿತು! ರಾವಣನು ಏಕೊ ಏನೊ ಮೌನದಿಂದ ಪಕ್ಷಿಯ ಉಲಿಹವನ್ನು ಆಲಿಸಿದನು! ನಕ್ಕು ತಂಗಿಗೆ ಮತ್ತೆ ಹೇಳಿದನು:

'ತಂಗಿ, ನಾನು ಹೇಳಿದುದು ನಿಜವೆಂದು ತಿಳಿಯಬೇಡ. ನನ್ನ ಮನಸ್ಸಿನ ಗೂಢವು ನಿನಗೆ ಗೊತ್ತಿಲ್ಲವೆ?'

ಆ ಕಾಮನಿಪುಣನು ಇದ್ದಕ್ಕಿದ್ದಂತೆ ತನ್ನ ವೇಷಕ್ಕೆ ತಕ್ಕ ಸೌಮ್ಯಧಾರಿಯಾದನು. ಅತಿಯಾದ ವಿನಯದಿಂದ ಮೈಥಿಲಿಕಡೆಗೆ ತಿರುಗಿ ನುಡಿದನು:

'ಕ್ಷಮಾಪುತ್ರಿಯೇ, ನಿನ್ನ ದುರವಸ್ಥೆಯನ್ನು ನೋಡಲಾರದ ದುಃಖದಿಂದ ಕೋಪಗೊಂಡೆನು. ನನ್ನ ದುರ್ವಿನಯವನ್ನು ಕ್ಷಮಿಸು. ದೇವಿ, ಇದೇನು ವ್ರತ. ಈ ಆತ್ಮಹತ್ಯೆ ವಿಪರೀತವಾಗಿದೆ. ನೀನು ಅನುಸರಿಸುವ ವೇದೋಕ್ತ ಧರ್ಮಕ್ಕೆ ವಿರುದ್ಧವಾಗಿದೆ. ಇದು ಹೇಡಿಗಳಿಗೆ ಸರಿಯಾದದ್ದು, ಧೀರಮತಿಗಳಿಗಲ್ಲ. ಈ ಮಾರ್ಗ ಲಘು ಮನಸ್ಸಿನವರದು. ಅದನ್ನು ಬಿಡು.

'ಓ ಮಹಿಳಾಮಣಿ, ನಿನ್ನ ಮನದಾಳವನ್ನು ನಾನು ತಿಳಿದಿಲ್ಲವೆಂದಲ್ಲ. ಆದರೆ ನಿನ್ನೆದೆಯ ಗೂಢವನ್ನು ನಾನು ಅಳೆಯಲು ಹೇಗೆ ಸಾಧ್ಯ? ನನ್ನ ಆತ್ಮದ ಆಶೆ ನಿನ್ನ ಆದರ್ಶದ ಉನ್ನತಿಗೆ ಏರುವುದಿಲ್ಲವೆಂದಿಲ್ಲ. ಆ ವ್ಯರ್ಥ ನಡೆಯಿಂದ ಸಾಧಿಸುವ ಪುರುಷಾರ್ಥವೇನು?

'ಮಿಥಿಲಾರಾಜಕುಮಾರಿಯೇ, ಸಾಹಸವನ್ನು ಬಿಡು. ವಿವೇಕಕ್ಕೆ ಶರಣಾಗು. ಹೇ, ವ್ಯರ್ಥವಾಗಿ ದುಃಖಿಸುತ್ತಿರುವವಳೇ, ಇನ್ನೆಲ್ಲಿ ನಿನಗೆ ರಾಮನವಾರ್ತೆ? ದೇವತೆಗಳು ದಾಟಲು ಅಸಾಧ್ಯವಾದುದು ಈ ಮಹಾಸಾಗರ. ನೀನು ಆತನನ್ನು ಸಂಧಿಸುವುದು ಅಸಾಧ್ಯವೆಂದು ಇದು ಘೋಷಿಸುತ್ತಿದೆ.

'ಬುದ್ಧಿವಂತಳೇ ಕೇಳು. ನಿನ್ನನ್ನು ಬಿಟ್ಟು ಅವನು ಯಾರನ್ನೋ ಕೂಡಿ ಕಿಷ್ಕಿಂಧೆಯಲ್ಲಿ ಸುಖವಾಗಿದ್ದಾನೆ! ಇದು ನನಗೆ ಹೇಗೆ ತಿಳಿಯಿತೆಂದು ಶಂಕೆಗೊಳ್ಳುವಿಯಾ? ಮೂರುಲೋಕಗಳಲ್ಲಿ ನನ್ನ ಗೂಢಾಚಾರರ ಕಣ್ಣಿಗೆ ಬೀಳದ, ಕಿವಿಗೆ ಕೇಳಿಸದ ಯಾವ ರಹಸ್ಯವೂ ಇಲ್ಲ!

'ನಿನ್ನನ್ನು ತೊರೆದು ಮರೆತಿರುವ ಆ ಕೃತಘ್ನನನ್ನು, ನಿಷ್ಪ್ರಯೋಜಕನನ್ನು ನೆನೆನೆನೆದು, ಹೂವಿನಂಥ ನಿನ್ನ ಜೀವನವನ್ನು ವ್ಯರ್ಥವಾಗಿ ಏಕೆ ಆಹುತಿಗೀಡುಮಾಡುವೆ? ಪ್ರಾತಃಕಮಲ ನೇತ್ರಳೇ, ಹರಧನುಸ್ಸನ್ನು ಎತ್ತಿ ಮುರಿದ ಮಾತ್ರದಿಂದ ನಿನಗೆ ಪತಿಯಾದರೆ, ನಾನು ಅದಕ್ಕೆ ನೂರುಮಡಿಯಾದ ಕಾರ್ಯವನ್ನು ಮಾಡಿ ತೋರಿಸಲಾರೆನೆಂದು ತಿಳಿಯಬೇಡ!'

ತಾಯಡಿಗೆರಗುವಂತೆ, ಕೆಡೆದಳ್ ಕುಸಿದು ಬೇರ್ಗೆ.

ಅಶೋಕವೃಕ್ಷದ ಮೇಲೆ ಕುಳಿತಿದ್ದ ಆಂಜನೇಯನು, ರಾವಣನ ಕೊಲೆ ಮಾಡುವಂತಹ, ಅಸಂಬದ್ಧವಾದ ಮಾತುಗಳನ್ನು ಕೇಳಿ ಕೋಪದಿಂದ ಕುದಿದನು.

ಮರವನ್ನು ನಂಬಿ ನಿಂತಿದ್ದ ಧರಣಿಸುತೆ ಬಿಕ್ಕಿಬಿಕ್ಕಿ ಅಳುತ್ತ ತಾಯಿಯ ಅಡಿಗೆ ಎರಗುವಂತೆ ಅದರ ಬುಡಕ್ಕೆ ಕುಸಿದು ಬಿದ್ದಳು. ತ್ರಿಜಟೆಯ ಸಹಾಯದಿಂದ ಅಲ್ಲಿಯೇ ಮುದ್ದೆಯಂತೆ ಮುದುರಿ ಕುಳಿತಳು.

ರಾವಣನು ಸೀತೆಯನ್ನು ತನ್ನತ್ತ ಸೆಳೆಯಲು ಮತ್ತೆ ಮಾತುಗಳ ಜಾಲ ಬೀಸಿದನು:

'ನಿನ್ನನ್ನು ಈ ರೀತಿ ಸಂಕಟಕ್ಕೀಡು ಮಾಡಿದ ನನ್ನ ನಾಲಗೆಯ ಕಹಿಸತ್ಯವು ನನಗೆ ಜುಗುಪ್ಸೆಯನ್ನುಂಟು ಮಾಡಿದೆ. ಆರ್ಯೆ ಅದಕ್ಕಾಗಿ ಕ್ಷಮಿಸು. ಸುಶೀಲಳೇ, ಮಿಥ್ಯೆಯನ್ನು ನಂಬಿ ಕೆಡದಿರಲೆಂದು ಕಠಿನವನ್ನು ಹೇಳಿದೆ. ಅನ್ಯಥಾ ಭಾವಿಸಬೇಡ. ಕಳೆದುಹೋದ ಹುಸಿಸ್ವಪ್ನವು ನಿಜವಾಗುವುದೆಂದು ಬಯಸಿ ಮೋಸಹೋಗಬೇಡ. ಇಲ್ಲದಿರುವುದನ್ನು ಬಯಸಬೇಡ. ಇರುವುದನ್ನು ಒಪ್ಪಿ ಸೊಗಸಿನಿಂದ ಅನುಭವಿಸು.'

ಹಾಲಿವಾಣದ ಹೂವಿನೆದೆರಸವನ್ನು ಈಂಟುತ್ತಿದ್ದ ಒಂದು ಚಿಟ್ಟಿಳಿಲು ಚಿಳಿಚಿಳಿಚಿಳಿಲ್ ಎಂದು ಚೀರಿತು. ಅತಿಯಾದ ಅದರ ಉಲಿತಕ್ಕೆ ದಶಶಿರ ಬಿರುದಿನ ಭೀಮರಾಕ್ಷಸನು ಹುಬ್ಬುಗಂಟಿಕ್ಕಿ ಸುಮ್ಮನಾದನು.

ಜನಕನಂದಿನಿಯು ಭೀತಿಯನ್ನು ಪಕ್ಕಕ್ಕೆ ತಳ್ಳಿ, ದುಃಖವನ್ನು ಮೆಟ್ಟಿಕ್ಕಿದಳು. ಅವಳ ಮೌನಹುತ್ತದಿಂದ ಕೋಪಸರ್ಪವು ಹೆಡೆಯೆತ್ತಿ ಬುಸುಗುಟ್ಟಿತು:

'ಹೇಳು ತ್ರಿಜಟೆ, ಪಿತ್ತಕೆದರಿದಂತೆ ಸಣ್ಣ ಮಾತುಗಳನ್ನಾಡಿದ ನಿನ್ನ ಅನ್ನದಾತನಿಗೆ ಈ ಉತ್ತರವನ್ನು ಹೇಳು. ಕತ್ತೆಯು ಕತ್ತೆಯ ತತ್ತ್ವವನ್ನು ಕತ್ತೆಗೆ ಉಪದೇಶಿಸಬೇಕಲ್ಲದೆ, ರಘುಕುಲೋತ್ತಮನ ಸತಿಯ ಮುಂದೆ ಅದನ್ನು ಬಡಬಡಿಸಿದರೆ ಪ್ರಯೋಜನವೇನು? ಈ ಅಲ್ಪಾಯುವು ಪ್ರತ್ಯುತ್ತರವನ್ನು ಕೊಡುವುದಕ್ಕೆ ಅರ್ಹನಲ್ಲ! ಮರುಕ, ಕರುಣೆ, ವಿನಯ, ಸೌಜನ್ಯಗಳನ್ನು ನಟಿಸುವ ಈ ನಟನ ನಾಯಿವರ್ತನೆಗೆ ಧಿಕ್ಕಾರ! ಸುಳ್ಳು ಹೇಳುವ ನಾಲಗೆಗೆ ಧಿಕ್ಕಾರ! ಕೋಟಿ ಧಿಕ್ಕಾರ! ಇವನ ಹೊಲಸು ಸಿರಿಗೆ ಲಕ್ಷ ಲಕ್ಷ ಧಿಕ್ಕಾರ! ಈತನಿಗೆ ಹೇಸಿ ಆ ದಿಕ್ಕಿಗೆ ಎಂಜಲು ಎಸೆಯೆ, ಆ ಉಗುಳು ಅಪವಿತ್ರವಾಗುತ್ತದೆ! ಎಲ್ಲಿರಲಿ, ಎಂತಿರಲಿ ಶ್ರೀರಾಮಚಂದ್ರನೇ ನನಗೆ ಪತಿ! ಸತ್ತು ಆತನೊಡನೆ ಸೇರುತ್ತೇನೆ. ಇಂತಹವರಿರುವ ಜಗದಲ್ಲಿ ಬದುಕು ಅಸಹ್ಯಕರವೆಂಬುದು ನಿಜ. ಭೀಮವಿಕ್ರಮಿರಾಮನ ಮಹಿಮೆ ಈ ನಾಯಿಗೇನು ಗೊತ್ತು. ನನಗೆ ಗೊತ್ತು.

'ನಿನ್ನ ಅನ್ನದಾತನಿಗೆ ಹೇಳು ತ್ರಿಜಟೆ, ಕೂಳು ಕೊಟ್ಟು ಸಲಹಿದ್ದಕ್ಕೆ ಒಡೆಯನ ಋಣ (ಜೋಳವಾಳಿ) ಕ್ಕೆ ಪ್ರತಿಯಾಗಿ ಉಪಕಾರಮಾಡಿ ಋಣಮುಕ್ತೆಯಾಗು. ಪಾಪಿಗೆ ಮೋಕ್ಷ ಹೇಗೆ ಲಭಿಸದೊ ಹಾಗೆ ನಾನು ಈ ನಿಶಾಚರನಿಗೆ ದುರ್ಲಭಳು. ನಾನು ಮೊದಲೆ ದೂರದಿಂದ ಕೇಳಿದ್ದ ರಾಕ್ಷಸವಿಕೃತಿ ಈತನಿಗೆ ಹೊರಗಿಲ್ಲ, ಒಳಗಿರುವುದು.

'ಅದೋ ಕೇಳು. ಹಕ್ಕಿಯ ಭವಿಷ್ಯ ನುಡಿಯುತ್ತಿದೆ. ಈತನು ಬೇಗನೆ ನನ್ನನ್ನು ಕೃಪಾಕರ ಶ್ರೀ ರಾಮನಡಿಗೆ ತಲೆಬಾಗಿ ಒಪ್ಪಿಸದಿದ್ದರೆ, ಈ ಸಾಗರ ತಾನೇ ಸೇತುವೆಯಾಗಿ ಈತನಿಗೆ ಮೃತ್ಯುವನ್ನು ತರುತ್ತದೆ!'

ಭಸ್ಮರೂಪದಿನಾದೊಡಂ ಕೂಡಿ ಪೊಂದುವೆನ್ ಸಾಯುಜ್ಯಮಂ!

ತ್ರಿಜಟೆಯನ್ನು ಕುರಿತು ತನಗೆ ಹೇಳಿದುದನ್ನು ಆ ತ್ರಿಕೂಟ ಲಂಕಾಧಿಪತಿ ಕೇಳಿದನು. ಕಟುತಿರಸ್ಕಾರದ ಗದೆಯಘಾತಕ್ಕೆ ಕಣ್ಣು ಮುಚ್ಚಿದನು. ಸತ್ತು ಹುಟ್ಟಿಬಂದವನಂತೆ ಮತ್ತೆ ಕೆಂಪಾದ ಕಣ್ತೆರೆದು ಹೇಳಿದನು:

'ನೀನು ಹುಡುಗಿ. ನೀನು ತಿಳಿಯದೆ ಆಡಿದರೆ ನಾನು ಕೋಪಿಸಿಕೊಳ್ಳುವೆನೇನು? ಅಲ್ಪಾಹಾರದ ಕಾರಣದಿಂದ ನಿನಗೆ ಮತಿಭ್ರಮಣೆಯಾಗಿದೆ!

'ತ್ರಿಜಟೆ, ಲಂಕೇಶನಾಜ್ಞೆಯನ್ನು ಕೇಳು. ಊಟಮಾಡದೆ ಮಿದುಳು ಕೆಟ್ಟಿರುವ ಇವಳಿಗೆ ಬುದ್ಧಿಸ್ಥಿರತೆಗೆ ಬಂದಮೇಲೆ ಹೇಳು. ಮೊದಲು ಇಲ್ಲಿ ಬಂದಿದ್ದವರು

ಯಾರೆಂಬುದನ್ನು ತಿಳಿಸು. ಆಮೇಲೆ ಹೇಳಿದುದು ಏನೆಂಬುದನ್ನು ತಿಳಿಸು. ನೀಡಿದ ಅವಧಿ ಇನ್ನೂ ಎರಡು ತಿಂಗಳಿದೆ. ಅದರೊಳಗೆ ಇವಳ ಹುಚ್ಚಿನ ಈ ಕದಡಿದ ಮನಸ್ಸು ತಿಳಿಯಾಗದಿದ್ದರೆ, ಔಷಧವು ಬಲಾತ್ಕಾರ ರೂಪದಲ್ಲಿ ಬರುತ್ತದೆ! ಮತ್ತೆ'

ಎಂದು ಹೇಳುತ್ತ, ಸೀತೆಯನ್ನು ನೋಡುತ್ತ ತಡೆ ತಡೆದು ಹೀಗೆ ಮಾತಾಡಿದನು:

'ಮತ್ತೆ ನಿರಶನವ್ರತ ರೂಪದಲ್ಲಿ ಆತ್ಮಹತ್ಯೆಯಿಂದ ಈಕೆ ಮಡಿದರೆ, ಅದೇ ಚಿತೆಯನ್ನು ನಾನು ಏರುತ್ತೇನೆ. ಹೆಣದ ಜೊತೆಗೆ ಮಲಗುತ್ತೇನೆ. ಭಸ್ಮರೂಪದಿಂದಾದರೂ ಕೂಡಿ ಇವಳೊಡನೆ ಒಂದಾಗುತ್ತೇನೆ!'

ಎಂದು ಕಂಠಬಿಗಿದು, ಅಸ್ಪಷ್ಟವಾಗಿ ನುಡಿಯುತ್ತ ರಾವಣನು ಬಂದ ದಾರಿಯಲ್ಲಿ ಹಿಂತಿರುಗಿದನು.

ರಕ್ಕಸನ ಕೊನೆಯ ಕರ್ಕಶವಾದ ನುಡಿ ಆಲಿಸಿದ ಜಾನಕಿಯ ಕಿವಿಗೆ ಅದು ಕಾಯ್ದ ಕಬ್ಬಿಣವನ್ನು ಸುರಿದಂತಾಯಿತು. ಸಾವು ಬಾಳಿಗಿಂತ ಮೂರರಷ್ಟು ಘೋರತರವಾದುದೆಂದು ಕಂಡಿತು. ಮನಸ್ಸು ಬದುಕಿನ ಕಡೆಗೆ ಬಾಗಿತು. ಔಷಧವು ಬಲಾತ್ಕಾರ ರೂಪದಿಂದ ಬರುವುದೆಂಬ ವಿಷವಚನ ನೆನೆದಳು. ಸಾವನ್ನು–ನೀನೆಗತಿ, ರಕ್ಷಿಸು ಎಂದು ಮಾನವತಿ ಸೀತೆ ಅಪ್ಪಿಕೊಂಡಳು! ಸಾವು ಮತ್ತು ಬಾಳು ಎರಡೂ ಭೀಕರವಾಗಲು ದಿಕ್ಕೆಟ್ಟವಳಂತೆ ಧರೆಯ ಕುವರಿ ಗೋಳ್ಗರೆದಳು! ಅದನ್ನು ಕೇಳಿ ತ್ರಿಜಟೆ ತಾನೂ ಅಳುತ್ತ, ಮನುಜೇಂದ್ರನ ಅರ್ಧಾಂಗಿಯನ್ನು ಹೀಗೆ ಸಂತೈಸಿದಳು:

ಕಠಿಣನಾದೊಡಮಸಂಸ್ಕೃತನಲ್ತು

'ಸಂತಾಪದಗ್ಧೆಯೇ, ಸ್ವಪ್ನ ಸಿಂಹಕ್ಕೆ ಹೆದರಿ ನಿರಾಶೆಯಿಂದ ನಿನ್ನ ಆಸೆಯೆಂಬ ಐರಾವತವನ್ನು ಬಲಿಕೊಡಬೇಡ. ರಾಕ್ಷಸೇಶ್ವರನು ಹೇಳಿದುದೆಲ್ಲವೂ ಸುಳ್ಳು. ರಾಮನು ಇನ್ನೋರ್ವಳನ್ನು ಕೂಡಿ ನಿನ್ನನ್ನು ಮರೆತುದು ಎಷ್ಟು ನಿಜವೋ; ರಾವಣನು ನಿನ್ನನ್ನು ಬಲಾತ್ಕರಿಸುವುದು, ನಿನ್ನೊಡನೆ ಚಿತೆಗೆ ಬೀಳುವುದು ಅಷ್ಟೇ ನಿಜ! ನಾನು ಆತನನ್ನು ಚೆನ್ನಾಗಿ ತಿಳಿದಿರುವೆ. ಬಲಾತ್ಕಾರದಿಂದ ಎಳೆದು ತಂದರೂ ಅವರೊಡನೆ ಬಲಾತ್ಕಾರವಾಗಿ ಕೂಡುವಪಶು ಅವನಲ್ಲ. ಕಾಮುಕನಾದರೂ ಮೆಚ್ಚಿ ಮನಸೋತವರನಲ್ಲದೆ ಇತರರನ್ನು ಮುಟ್ಟುವುದಿಲ್ಲ. ಕಠಿಣನಾದರೂ ಅಸಂಸ್ಕೃತನಲ್ಲ. ನಾರಿಯರ ಮೇಲೆ ಬಿದ್ದು ಕೂಡುವ ಹೇಡಿಯಲ್ಲ. ಅವನು ಯಾವಾಗಲೂ ಪೌರುಷ ಶಾಲಿ.'

'ತ್ರಿಜಟೆ, ಅವನು ಹೇಳಿದುದೆಲ್ಲ ಸುಳ್ಳೆ?'

ಎಂದು ಸೀತೆ ಅತಿ ದೀನರವದಿಂದ ಕೇಳಿದಳು. ಆಗ ತ್ರಿಜಟೆಯಿಂದ ಧೈರ್ಯವನ್ನು ನೀಡುವ ದೃಢವಾಣಿ ಹೊಮ್ಮಿತು:

‘ಹೇಳಿದುದೆಲ್ಲ ಸುಳ್ಳು. ನನ್ನಾಣೆಗೂ ಸುಳ್ಳು. ದೇವಿಯೆ ಪ್ರಾರ್ಥಿಸುತ್ತೇನೆ. ಹೆದರಬೇಡ. ಆ ಚಂದ್ರನಖಿಯನ್ನು ಶುದ್ಧಮಾರ್ಗಕ್ಕೆ ತಂದ ನಿನಗೆ ನಿನ್ನುದ್ಧಾರ ಅತಿ ದೂರವಿಲ್ಲ! ಈ ದಿನ ಬೆಳಗಿನ ಜಾವ ಬಿದ್ದ ಒಂದು ಸ್ವಪ್ನ ಸಾಕ್ಷಿಯನ್ನು ಹೇಳುತ್ತೇನೆ ಕೇಳು.’

ಸೀತೆಯು ತನ್ನಲ್ಲಿ ಮೂಡಿದ ಆಶೆಗೆ ಕಣ್ಣರಳಿಸಿ ಕಿವಿಗೊಟ್ಟಳು. ತ್ರಿಜಟೆಯು ಕಣ್ಣೀರು ತುಂಬಿಕೊಂಡು ಈ ರೀತಿ ಹೇಳಿದಳು:

‘ಪುಣ್ಯಶಾಲಿನೆಯೇ, ಆ ಸುಸ್ವಪ್ನವನ್ನು ನೆನೆದರೆ ನನಗೆ ರೋಮಾಂಚನ ಉಂಟಾಗುವುದು! ಭದ್ರೆ, ಅದು ನಿನಗೆ ಶುಭ ಶಕುನವನ್ನು ಸೂಚಿಸುತ್ತದೆ! ಒಂದು ಸರೋವರದಲ್ಲಿ ಸಹಸ್ರದಳ ವೈಭವದಿಂದ ಶೋಭಿಸುತ್ತಿರುವ ಎರಡು ತಾವರೆಗಳನ್ನು ನೋಡಿದೆನು. ಒಂದು ನೀಲವರ್ಣದಿಂದಿದ್ದು, ಮತ್ತೊಂದು ಕನಕವರ್ಣದ್ದಿತ್ತು. ತಣ್ಣನೆಯಗಾಳಿ ಬೀಸಲು, ತುಂಬಿಗಳಾಡುತ್ತಿರಲು ಒಂದು ಮತ್ತೊಂದನ್ನು ಚುಂಬಿಸುವಂತೆ ಒಂದಕ್ಕೊಂದು ಸೋಕುತ್ತ ಸೊಗಸಿನಿಂದಿದ್ದವು. ಆಗ ಒಂದು ಕರ್ಕಶವಾದ ಆಮೆಚಿಪ್ಪಿನ ಮೈಯ ಅತಿಭೀಕರ ಮೊಸಳೆಯು ಕೊಳದ ನೀರು ಭಯಾಶ್ಚರ್ಯಪಡುವಂತೆ ಮೆಲ್ಲಮೆಲ್ಲನೆ ಮೇಲಕ್ಕೆ ಏರಿ ಬಂದಿತು. ಹೊಂದಾವರೆಯ ಬಳಿ ಹೋಗಿ ಅದರ ಸುಖಸ್ಪರ್ಶಕ್ಕೆ ಮನಸೋತು ಮೂಗು ಮುಸುಡಿಯನ್ನು ಅರಳಿಸಿ ಅದರ ಕಂಪನ್ನು ಮೂಸಿತು. ಹೊಂದಾವರೆ ನಡುಗಿತು. ಹೇಸಿ ನೋಡಿತು. ಆಗ ಮಕರಂದ ಪಾನದಲ್ಲಿ ಮಗ್ನವಾಗಿದ್ದ ದುಂಬಿಗಳ ಹಿಂಡು ಭೋಂಕನೆ ಝೇಂಕರಿಸುತ್ತ ಎದ್ದವು. ಮೊಸಳೆಯ ಮೇಲೆ ಬಿದ್ದು ಕಚ್ಚಿ ಬಾಲವೆಂಬ ಬಾಣಗಳಿಂದ ಚುಚ್ಚಿ ಕೊಂದವು!

‘ಆ ಮೊಸಳೆ ನನ್ನೆಡೆಗೆ ತೇಲಿಬರಲು ಅದು ದೈತ್ಯೇಂದ್ರ ರಾವಣನ ಕಳೇಬರವಾಗಿತ್ತು! ಬೆಚ್ಚಿದೆನು! ನೈದಿಲೆಯನ್ನು ಅಪ್ಪಿಕೊಂಡು ತಾವರೆಯಲ್ಲಿದ್ದ ನಿನ್ನನ್ನು ಕಂಡು ಆಶ್ಚರ್ಯಚಕಿತಳಾದೆನು! ಹೆದರಿ ನಡುಗುತ್ತ ಕಣ್ದೆರೆದು ನೋಡಿದೆನು. ನೀನು ಪದ್ಮಾಸನಸ್ಥಳಾಗಿ ಧ್ಯಾನಮಗ್ನೆಯಾಗಿದ್ದುದನ್ನು ಕಂಡೆನು!’

ಅದನ್ನು ಕೇಳಿದ ಮೈಥಿಲಿಗೆ ಸುಖದ ಆನಂದಾನುಭಾವವಾಯಿತು. ಉಕ್ಕುವ ಅಕ್ಕರೆಯಿಂದ ಕೆಳದಿಯನ್ನು ತಬ್ಬಿಕೊಳ್ಳಲು ಎದ್ದಳು. ಆಗ ತ್ರಿಜಟೆ ಕೈತಡೆದು ಸನ್ನೆ ಮಾಡಿದಳು. ಕಣ್ಣಿಗೆ ಕಾಣದಿದ್ದರೂ ಅಲ್ಲಿ ಸುತ್ತಲೂ ಕಾವಲಿರುವುದನ್ನು ಸೀತೆಯ ಜಾಣ್ಮತಿಗೆ ತಿಳುಹಿಸಿದಳು. ಸೀತೆಯು ತನ್ನ ಆತ್ಮದ ಬಹಿರಂಗ ಉತ್ಸಾಹವನ್ನು ಅದುಮಿಟ್ಟುಕೊಂಡಳು. ಕೆಳದಿಯ ಕಿವಿಯಲ್ಲಿ ಪಿಸುಗುಟ್ಟಿದಳು:

ನಿನ್ನ ಹರುಷಮೆ ನನಗೆ ಕೊಟ್ಟಪುದು ಕಲ್ಯಾಣಮಂ

‘ತ್ರಿಜಟೆ, ನಿನ್ನಂತಹವರಿಂದ ಈ ಲಂಕೆ ಸುಕ್ಷೇಮದಿಂದಿದೆ. ನಿನ್ನ ವಾಣಿಯು ರಾಕ್ಷಸನ ನೀಚಮಾತುಗಳನ್ನು ಪಕ್ಕಕ್ಕೆ ಸರಿಸಿ, ಹೆದರಿದವಳಿಗೆ ಧೈರ್ಯವನ್ನು ನೀಡಿದೆ. ಕನಸಿಗಿಂತಲೂ ಹೆಚ್ಚಾಗಿ, ನಿನ್ನ ಹರುಷವೇ ನನಗೆ ಮಂಗಳವನ್ನುಂಟು ಮಾಡಿದೆ.

'ಸಖಿಯೇ, ನನಗೂ ಒಂದು ಕನಸಾಯಿತು. ಆ ಸುಖ ಸ್ವಪ್ನವನ್ನು ಹೇಳಲು ನನಗೆ ನಾಚಿಕೆಯಾಗುತ್ತಿದೆ! ಈ ದುಷ್ಟನ ಅಪಚಾರದಿಂದ ನನ್ನ ಮನಸ್ಸು ಕದಡಿ ವಿಹ್ವಲಿಸುತ್ತಿದ್ದರೂ, ಇಂದು ಬೆಳಗಿನಿಂದ ಆತ್ಮವು ಸಂತೋಷದಿಂದ ಹಿಗ್ಗಿ ಕ್ಷೇಮ ಸಮೀಪಿಸಿದಂತಾಗುತ್ತಿದೆ!'

ಮಾಗಿಯ ಎಳೆಬಿಸಿಲು ಬನದ ಹಸುರಸಿರಿಯೊಡನೆ ಸರಸವಾಡುತ್ತಿರುವ ಚಂದವನ್ನು ಕಣ್ ಅರಳಿಸಿ ನೋಡಿದ ಸೀತಾದೇವಿ,

'ಸಖಿ, ಇಂದು ಇದೇನು ಚೆಲುವು! ಶಿಶಿರ ಸಾಮ್ರಾಜ್ಯದಲ್ಲಿ ಚೈತ್ರ ಸೌಂದರ್ಯ ರಾರಾಜಿಸುತ್ತಿದೆ! ಅದೋ ನೋಡು, ಆ ಭವ್ಯ ಅಶೋಕವೃಕ್ಷವು ಹಿಂದೆಂದೂ ನನ್ನ ಮನಸ್ಸಿಗೆ ರಾಮ ಸಾನ್ನಿಧ್ಯದ ಅನುಭೂತಿಯನ್ನುಂಟು ಮಾಡಿರಲಿಲ್ಲ!'

ಆ ಕಡೆಗೆ ಮುಖಮಾಡಿ ನೋಡುತ್ತ, ಸುಖಾಶ್ರು ನೇತ್ರಳಾದ ಸೀತೆಯ ಸುಖಕ್ಕೆ ತ್ರಿಜಟೆ ಸಂತೋಷಪಟ್ಟಳು. ತನ್ನ ಮಗಳಿಗೆ ತಾಯಿ ಕೇಳಿಕೊಳ್ಳುವ ರೀತಿ ಪ್ರೀತಿಯಿಂದ ಬಿನ್ನವಿಸಿದಳು:

'ಮಗಳೇ, ಬದುಕಿದ್ದರೆ ಒಳಿತನ್ನು ಕಾಣುವೆ. ನಾನು ಪ್ರೀತಿಯಿಂದ ನೀಡುವ ಫಲ ಜಲಗಳನ್ನು ತೀರ್ಥಪ್ರಸಾದಗಳೆಂದು ಸ್ವಲ್ಪ ಸೇವಿಸು.'

ಸೀತೆ ಮುಖ ತಿರುಗಿಸಿ ತ್ರಜಟೆಯನ್ನು ಪ್ರೀತಿಯಿಂದ ನೋಡುತ್ತ,

'ನನ್ನಾಶೆಯೆ ನನಗೆ ಮಂಗಳ. ಆ ಅಶೋಕವೃಕ್ಷದ ಪಾದವನ್ನು ತೊಳೆದು ಹರಿಯುವ ನಿರ್ಝರಿಣಿಯಲ್ಲಿ ಮುಖ ತೊಳೆದುಕೊಳ್ಳುವೆ. ಅದರ ನೆರಳಿನಲ್ಲಿ ಏಕಾಂತದಲ್ಲಿ ಕುಲಗುರು ರವಿಗೆ ಅರ್ಘ್ಯವನ್ನು ಎತ್ತಿ ಪೂಜೆಯನ್ನು ಮಾಡಿ ಬರುತ್ತೇನೆ.'

ಎಂದು ಹೇಳಿದ ಸೀತೆಯನ್ನು ಕೈಹಿಡಿದು ಎತ್ತಿದ ತ್ರಿಜಟೆ ಎಚ್ಚರದ ಮಾತಾಡಿದಳು:

'ದೇವಿ, ಸುತ್ತಲೂ ಕಾವಲಿರುವುದನ್ನು ನೆನಪಿಸಿಕೊ. ಅಕಾರ್ಯವನ್ನು ಮಾಡಬೇಡ. ನಿನ್ನ ಪ್ರಾಣಕ್ಕೆ ನನ್ನ ಪ್ರಾಣವನ್ನು ಒತ್ತೆಯಿಟ್ಟಿದ್ದೇನೆ. ನಿನ್ನ ಜೀವಕ್ಕೆ ಕೇಡು ಸಂಭವಿಸಿದರೆ ಅದರ ಬಳಿ ನನ್ನ ಹೆಣ ನೇತಾಡುತ್ತದೆ; ತಿಳಿ, ಮಗಳೆ!'

ರಾಮಸತಿಯು ಮಂದಸ್ಮಿತಳಾಗಿ ಆ ಸೇವಕಳ ಶಂಕೆಯನ್ನು ತನ್ನ ದಿಟ್ಟಿಯಿಂದ ಹೋಗಲಾಡಿಸಿದಳು. ನಿರ್ಝರಿಣಿಯ ಕಡೆಗೆ ನಡೆದಳು. ತ್ರಿಜಟೆಯು ಪತಿವ್ರತೆಯ ವ್ರತಕ್ಕೆ ಹಣ್ಣು ಉಣಿಸನ್ನು ಅಣಿಮಾಡಲು ಪರ್ಣಕುಟಿಯನ್ನು ಹೊಕ್ಕಳು.

ಸಿಸಿರದ ಬಿಸಿಲು ಹಿತವಾಗಿರಲು ಪಕ್ಷಿಗಳು ಹಿಮಚಳಿಯನ್ನು ಗೆದ್ದು ರೆಕ್ಕೆಗಳನ್ನು ಬೀಸಿ ಮಕರಂದ ಕುಡಿದು, ಹಣ್ಣುಂಡು ಕೊಂಬೆಕೊಂಬೆಗೆ ನೆಗೆದಾಡಿದವು. ದಶರಥನ ಸುತನ ಮಡದಿಯ ಮಹಾಯಾತ್ರೆಯನ್ನು ನೋಡುತ್ತ, ಹಾಡುತ್ತ, ಹಾರಾಡಿದವು!

❑



~~~~~~~~~~~~~~~~~~~~~~~~~ ಸಂಚಿಕೆ – ೪ ~~~~~~~~~~~~~~~~~~~~~~~~~

ಅಶ್ರುಗಂಗೋತ್ರಿ

ಅಶೋಕವನದ ಸುಂದರಹುಲ್ಲು ಜಿಂಕೆಗಳಿಂದ ತುಳಿದಾಡಲ್ಪಟ್ಟು, ಜನರ ಪಾದಧೂಳಿಯಿಂದ ದೂರವಾಗಿತ್ತು. ಜಲಪಾನದಿಂದ ಸಂತೃಪ್ತಗೊಂಡ ಪಕ್ಷಿಗಳು ತಮ್ಮ ಹಗುರ ಪಾದಗಳಿಂದ ಅಲ್ಲಿಯ ಶಿಲೆಗಳಲ್ಲಿ ಚಿತ್ರಗಳನ್ನು ಮೂಡಿಸಿದ್ದವು. ಅದು ವೃಕ್ಷಸಂಕುಲದಿಂದ ಇಡಿಕಿರಿದಿತ್ತು. ಅಲ್ಲಿ ಜಲಪಾತದ ನೀರಿನ ಘೋಷ ಮತ್ತು ಪಕ್ಷಿಗಳ ಕೂಜನ ಮಾತ್ರವಿದ್ದು ಅದೊಂದು ಪುಟ್ಟ ಕಾಡಿನಂತಹ ಲತಾ ಮಂಟಪವಾಗಿತ್ತು. ಅದು ಮುತ್ತುಗ, ಕದಂಬ, ಅಶೋಕ ವೃಕ್ಷಗಳಿಂದ ಶೋಭಿಸುತ್ತಿತ್ತು.
~~~~~~~~~~~~~~~~~~~~~~~~~

ಸಮೀರಾತ್ಮಜನು ಒಂದು ದಟ್ಟವಾದ ಅಶೋಕವೃಕ್ಷದಲ್ಲಿ ಕುಳಿತು ರೋಮಾಂಚಿತನಾಗಿ, ಉಸಿರು ಬಿಗಿಹಿಡಿದು ನೋಡುತ್ತಿದ್ದನು. ದೇವಿ ಸೀತಾಮಾತೆಯು ನಿಧಾನವಾಗಿ ತೊರೆಯ ತಟಿಯ ಕಡೆಗೆ ಬಂದಳು. ಭಕ್ತ ಶಿಲ್ಪಿಯ ರಮ್ಯ ವಿಗ್ರಹಕ್ಕೆ ದೇವತಾ ಪ್ರಾಣ ಅವತರಿಸುವಂತೆ ಅವಳು ಬರುತ್ತಿರುವುದನ್ನು ಎತ್ತರದ ಕೊಂಬೆಯಿಂದ ನೋಡಿದನು. ಕೃಶಾಂಗಿಯಾದ, ಸ್ನಾನವಿಲ್ಲದೆ ಮಲಿನಳಾದ ಆ ತಾಯಿಯನ್ನು ನೋಡ ನೋಡುತ್ತ ವಿವಿಧ ಭಾವಗಳ ಗರಗಸದ ಪೀಡನಕ್ಕೆ ಅವನ ಆತ್ಮ ಸಿಕ್ಕಿ ನೊಂದಿತು! ಮಾತೆಯನ್ನು ಕಂಡು ಮನಸ್ಸಿನಲ್ಲಿ ಸಂತೋಷ ಉಕ್ಕಿತು. ಜೊತೆಗೆ ದುಃಖ ಧೂಮ ಮನಸ್ಸನ್ನು ಆವರಿಸಿತು. ಅದನ್ನು ಸೀಳಿಕೊಂಡು ರೋಷ ಭೀಷಣ ವಿಷಾದದ ಉರಿ ಉಜ್ವಲಿಸಿತು.

'ಆ ದೇವಿ ಇವಳೆಯೆ, ನನ್ನ ಸಾಹಸದ ಗುರಿಯಾದ ತಾಯಿ ಲಕ್ಷ್ಮಿ ಇವಳೆಯೆ! ನಿಜ ಆ ರಾಮನ ಅರ್ಧಾಂಗಿ ಇವಳೆ! ನಾನು ಧನ್ಯ. ನನ್ನ ಜನ್ಮ ಸಾರ್ಥಕವಾಯಿತು! ಅನಿಲದೇವನೇ ನಮೋ; ಸೂರ್ಯದೇವನೇ ನಮೋ, ದೇವತೆಗಳಿರ ನಮೋ, ಸರ್ವದೇವರ ದೇವ, ಧರ್ಮಮೂರ್ತಿಯೇ ನಮೋ! ಸೀತೆಯನ್ನು ತೋರಿಸಿದುದಕ್ಕೆ, ಆ ತಾಯಿಯನ್ನು ನೋಡಿ ಕೃತಕೃತ್ಯನಾದುದಕ್ಕೆ ಮತ್ತೆ ಮತ್ತೆ ನಿಮಗೆ ನಮೋ! ನಮೋ! ನಮೋ!'

ಎಂದು ಆಂಜನೇಯನು ಹೀಗೆ ತನ್ನೊಳಗೆ ತಾನು ವಂದನೆಯನ್ನು ಅರ್ಪಿಸುತ್ತಿದ್ದನು. ಭಾವದೀಪ್ತಿಗೆ ಒಳಗಾದ ಅವನ ಕಣ್ಣಿಂದ ಬೀಸು ಗಾಳಿಗೆ ಬೀಳುವ ಎಲೆ ಹನಿಗಳೊಡನೆ ಬಳ ಬಳನೆ ಕಣ್ಣೀರು ಉದುರಿತು. ಮರುಕದಿಂದ ಅವನು ಹೀಗೆಂದುಕೊಂಡನು :

ಬರ್ಚಿಸಿದ ಚೆಲ್ವೆಸೆವ ಚಿತ್ರಪಟಮಂ ಮಸಿಯ ಕೈ ಹಿಸುಗಿ ಬಿಸುಟಂತೆ ತೋರ್ಪಳೀ ಮಹಿಳೆ!

'ಅಯ್ಯೊ, ದಾಶರಥಿಯು ಬಣ್ಣಿಸಿದ ಅವನ ಪತ್ನಿಯ ಚಿತ್ರವೆಲ್ಲಿ? ಈ ದೀನದುಃಖಿನಿ ಎಲ್ಲಿ? ವರ್ಣ ವಿನ್ಯಾಸದಿಂದ ಚೆಲುವಾಗಿರುವ ಚಿತ್ರಪಟವನ್ನು ಮಸಿಯ ಕೈ ಹಿಸುಕಿ ಬಿಸಾಕಿದಂತೆ ಈ ಮಹಿಳೆ ತೋರುತ್ತಿದ್ದಾಳೆ! ದಯಾಶೂನ್ಯನೂ, ನಿಷ್ಠುರ ಹೃದಯಿಯೂ ಆದ ವಿಧಿಯನ್ನು ಸುಡಬೇಕು! ಕಾಣಲಾಗದುದನ್ನು ಬರಿದೆ ಬೈದೇನು ಪ್ರಯೋಜನ?

ಇದಕ್ಕೆ ಕಾರಣನಾದವನನ್ನು ಕಂಡು ಕೈ ಬಿಟ್ಟೆನಲ್ಲ? ಆ ನೀಚನ ತಲೆಯನ್ನು ನನ್ನ ಶಕ್ತಿಯುತ ತೋಳುಗಳ ವಜ್ರಮುಷ್ಟಿಯಿಂದ ಅಪ್ಪಳಿಸಿ ಬಡಿದು ಉರುಳಿಸದೆ, ಸುಮ್ಮನೆ ನಾನೇಕೆ ಮರವಟ್ಟವನಂತೆ ಮರದಲ್ಲಿ ನಿಶ್ಚಲನಾಗಿ ಕುಳಿತ್ತಿದ್ದೆ? ಇರಲಿ; ಪಶ್ಚಾತ್ತಾಪವಿರಲಿ; ದೇವಿಯು ಏನನ್ನೊ ಹೇಳುತ್ತಿರುವಳು. ಆಲಿಸುತ್ತೇನೆ. ಅನಂತರ ಮುಂದಿನ ಮಾರ್ಗವನ್ನು ನಿಶ್ಚಯಿಸುತ್ತೇನೆ.'

ಸೀತೆ ಮರಳಿರುವ ಏಕಾಂತ ಸ್ಥಳವನ್ನು ಪ್ರವೇಶಿಸಿದಳು. ಅಲ್ಲಿ ಸುತ್ತಲೂ ನೋಡಿ ನಿಟ್ಟುಸಿರು ಬಿಟ್ಟಳು. ಅಂತರ್ಮುಖಿಯೂ, ಸಮಾಧಿಸ್ಥಳೂ ಆಗಿ ನಿಂತಳು. ಯಾವುದೋ ರಹಸ್ಯವಾದುದನ್ನು ಹೊತ್ತು, ಹೇಳಲು ಆತುರವಿದ್ದರೂ ಹೇಳಲಾರದೆಯೆ ತುಟಿಗಚ್ಚಿ, ಬಾಯ್ಮುಚ್ಚಿ ಸುಮ್ಮನಿರುವವರಂತೆ-ಅಲ್ಲಿಯ ಗಿಡಮರಗಳು ಸಂತೋಷವನ್ನು ಹರಡಿ ನಿಂತಿದ್ದವು.

ಮಾಗಿಯ ಮಂಜನ್ನು ಎಲೆಯ ಬಟ್ಟಲಿನಲ್ಲಿಟ್ಟುಕೊಂಡು ಆ ಇಬ್ಬನಿಯನ್ನು ಸೂರ್ಯಕಿರಣ ಕರ್ಪೂರದಂತೆ ಬೆಳಗಿಸುತ್ತಿರಲು-ಹೂಗಂಪಿನ ಆರತಿಯನ್ನು ಪ್ರಕೃತಿಯು ಸೀತೆಗೆ ಎತ್ತಿತು.

ಭೂ ಸುತೆಯು 'ತಾಯಿ ಭೂದೇವಿ' ಎಂದು ಗದ್ಗದ ಕಂಠದಿಂದ ಹೇಳುತ್ತ ಪ್ರಕೃತಿಮಾತೆಗೆ ಕೈಮುಗಿದಳು. ಹೀಗೆ ಪ್ರಾರ್ಥಿಸಿದಳು:

'ನಾಥನಿದ್ದು ಅನಾಥೆಯಾಗಿರುವ ನನ್ನನ್ನು ನೀನಾದರೂ ಕಾಯಮ್ಮ. ಲಂಕೆಯೂ ನಿನ್ನ ತೊಡೆಯಲ್ಲವೆ? ಹಾಗಲ್ಲದಿದ್ದರೆ ಈ ಶಾಂತಿ ಇಲ್ಲಿ ನನಗೆ ಹೇಗೆ ದೊರೆಯುತ್ತಿತ್ತು? ಹೆತ್ತ ತಾಯಿಯೇ ಮುದ್ದಿನಿಂದ ಎತ್ತಿ ಮುತ್ತಿಟ್ಟು ಸಂತೈಸುವಂತೆ ನಾನು ಮತ್ತೆ ಮಗುವಾದೆನು! ದೇವತಾತ್ಮಗಳು ಸತ್‌ಶಕ್ತಿಗಳು ಇಲ್ಲಿ ಸುತ್ತಲೂ ಮೂಡಿ ನನ್ನನ್ನು ಕಾಪಾಡುತ್ತಿವೆ ಎಂಬುದರಿಂದ ನನ್ನಲ್ಲಿ ಅಭೂತಪೂರ್ವ ಧೈರ್ಯ ಉಕ್ಕುತ್ತಿದೆ! ಹರಧನುವನ್ನು ಎತ್ತಿದ ನನ್ನ ಮನದನ್ನನಿಗೆ ಹೂಮಾಲೆಯಿಕ್ಕಿದಾಗ ಉಂಟಾದ ಉತ್ಸಾಹವೇ ಇಂದು, ಮಾಗಿಯ ನನ್ನೆದೆಯಲ್ಲಿ ಸುಗ್ಗಿ ಕೋಗಿಲೆಯಾಗಿ ಉಲಿಯುತ್ತಿದೆ. ತಾಯಿ, ದಿಟವಾಗಿ ಈ ಲಂಕೆಯೂ ನಿನ್ನ ತೊಡೆಯೆ!'

ಧರಣಿಸುತೆಯು ಮರಳುದಿಣ್ಣೆಗಳ ಚೆಲುವನ್ನು ಕಣ್ಣುಗಳಿಂದಹೀರಿ ಸವಿದು ಅವುಗಳನ್ನು ಪೂಜ್ಯಭಾವದಿಂದ ನೋಡಿದಳು. ದೇವತೆಗಳ ಸೌಂದರ್ಯದ ಧರಣಿಸುತೆ ಚಲಿಸಿದಳು. ನೀರು ಬೀಳುವುದಕ್ಕೆ ತುಸು ಹಿಂದೆ ಕಟ್ಟಿದ್ದ ಹಾಸರೆಗಲ್ಲಿನ ಬಳಿನಿಂತು ಜಲಪಾತವು ನೆಗೆವ ಕಡುಸೊಬಗನ್ನು ನೋಡಿದಳು. ಅಡಕೆ ಮರದುದ್ದದ ಆಳವನ್ನು ಕಂಡಾಗ ಮನಸ್ಸು ಅಳುಕಿದರೂ ಮತ್ತೆ ಸಂತೋಷಗೊಂಡಿತು. ಭಕ್ಷಿಸಲು ತೆರೆದ ಬಾಯಿಯೆ ರಕ್ಷಿಸುವ ಮನೆಯಾಯ್ತು. ಕೊಟ್ಟ ಅವಧಿಯೊಳಗಾಗಿ ತನಗೆ ರಾಮನ ರಕ್ಷೆ ಒದಗದಿದ್ದರೆ, ರಾವಣ ಬಲತ್ಕಾರದಿಂದಲೂ ಮತ್ತು ಅವನೊಡನೆ ಬೇಯುವ ಹೇಸಿಗೆಯಿಂದಲೂ ಪಾರಾಗಲಿರುವ ಪರಮಾಶ್ರಯವಿದು! ತೊರೆಯೊಡನೆ ಧುಮುಕಿದರೆ, ನೀರಿನಂತೆಯೇ ತುಂತುರಾಗದೇನು ಈ ಬಡ ಒಡಲು? ಈ ಕರುಣೆ ನಿರ್ಝರಿಣಿಗೆ ನನ್ನ ಛಿದ್ರವಾದ ಶರೀರ ಹೊರೆಯಾಗುವುದಿಲ್ಲ; ಸಮುದ್ರವು ದೂರ. ನೆಲದ ಮಗಳಾದ ನನಗೆ ನೀರು ಬೇಸರ ಪಡುವುದೆ? ಮೀನಿಗೆ ಹಸಿವಿರುವುದಿಲ್ಲವೆ? ಹಲ್ಲಿರುವುದಿಲ್ಲವೆ? ಪರದೇಸಿಯಾದ ಈ ಹಾಳು ಶರೀರವನ್ನು ತಿಂದು ಇನ್ನಿಲ್ಲದಂತೆ ಮಾಡುವುದಿಲ್ಲವೆ?

ಕೊರಳ್ ಬಿಗಿದು ಮೂಗಳ್ತಳಾ ದಿವ್ಯದುಃಖಿನಿ ಸಗದ್ಗದಂ.

ತನ್ನ ಕಲ್ಪನೆಯು ಮಥಿಸಿದ ತನ್ನ ದುರ್ಗತಿಗೆ ತಾನೇ ಕುದಿದಳು. ಎದೆ ಕರಗಿ ಮರುಗಿತು. ದಿವ್ಯ ದುಃಖಿನಿ ಗಂಟಲು ಕಟ್ಟಿ ಸಗದ್ಗದಳಾಗಿ ಮೂಕವಾಗಿ ರೋದಿಸಿದಳು. ಮನಸ್ಸಿಗೆ ಧೈರ್ಯ ತಂದುಕೊಂಡು ತನ್ನ ಅಶ್ರುಮಲಿನ ಮುಖವನ್ನು ತೊಳೆದುಕೊಂಡಳು. ಜಲಪಾತದಲ್ಲಿ ನರ್ತಿಸುವ ಸ್ಫಟಿಕ ಶೀತಲ, ಹೊಳೆವ ಕೋಮಲಗಂಗೆಯನ್ನು ಬೊಗಸೆಯಲ್ಲಿ ತುಂಬಿಕೊಂಡಳು. ತನ್ನ ವಂಶಾಧಿದೇವ ರವಿಗೆ ಅರ್ಘ್ಯವನ್ನು ಎತ್ತಿದಳು.

'ನಮೋ, ಹೇ ಜಗತ್ ಚಕ್ಷುವೆ. ಕರುಣಿಯೆ ವಂಶದ ಮಗಳು ಪ್ರಾರ್ಥಿಸುವುದನ್ನು ಕೇಳು. ನೀನು ವಿಶ್ವಶಕ್ತಿ ಪ್ರತೀಕ ಮತ್ತು ಸತ್ಯ ಸ್ವರೂಪ. ನೀನು ಅಖಿಲ ಜಲ, ಸಸ್ಯ, ಮೃಗ, ಮನುಜ ಜೀವರಿಗೆ ಪ್ರತಿದಿನ ಪ್ರತ್ಯಕ್ಷವಾಗುವ ಪರಮಾತ್ಮ. ನಿನ್ನಿಂದಲೇ ಲೋಕವು ನಿರಂತರ ನವೀನವಾಗಿದೆ. ನಿನ್ನಿಂದಲೇ ಸೃಷ್ಟಿಗೆ ಉತ್ಸಾಹ. ನಿನ್ನ ಚೈತನ್ಯದಿಂದ ಲಯವು ಸೃಷ್ಟಿಮುಖಿ. ಸ್ಥಿತಿಗೆ ನೀನೆ ಗತಿ, ಮತಿ, ಶಕ್ತಿ ಮತ್ತು ಅಕ್ಷರ ಜ್ಯೋತಿ. ನಾವು ಅರಿಯದಿದ್ದರೇನು? ಹೇ ಜಗತ್ ಕಲ್ಯಾಣ ಮೂರ್ತಿ, ನೀನು ಕತ್ತಲೆಗೆ ಮೃತ್ಯುವಾಗಿರುವಂತೆ ಪಾಪವನ್ನು ಸಂಹರಿಸಿ ಪುಣ್ಯವನ್ನು ಕಾಪಾಡುವೆ. ಓ ರವಿಯೆ, ನಿನ್ನ ಇಕ್ಷ್ವಾಕುಕುಲ ಕುಮಾರಿಯ ಪುಣ್ಯವನ್ನು, ಮಾನವನ್ನು ಮತ್ತು ವಂಶಗೌರವ ಕೀರ್ತಿಯನ್ನು ರಕ್ಷಿಸು!

'ವಿಶ್ವದ ಕತ್ತಲೆಯನ್ನು ಅಳಿಸುವ ನಿನಗೆ ರಾಕ್ಷಸನ ಎದೆಯ ಹೊಲೆಗುಹೆಯ ಕತ್ತಲೆ ಹಿರಿದಲ್ಲ. ಕುಲಗುರುವೆ, ನನ್ನನ್ನು ಪತನಗತಿಗೆ ಬಿಡದೆ, ಕೈಬಿಡದೆ ಕಾಪಾಡು. ರಘುರಾಮಸತಿಗೆ ನೀನು ರಕ್ಷಕನಾದರೆ, ನನ್ನ ಪ್ರಾಣಪತಿಗೆ ಮಂಗಳವಾಗುತ್ತದೆ!'

ಅರ್ಘ್ಯವನ್ನೆತ್ತಿದ ಬೊಗಸೆಯಿಂದ ತೀರ್ಥವು ಮೆಲ್ಲಮೆಲ್ಲನೆ ತೊಟ್ಟಿಕ್ಕುತ್ತಿತ್ತು. ತೊರೆಯ ಮೊರೆ ಪಕ್ಷಿಕುಲದ ಮಧುರ ಧ್ವನಿ ಓಂಕಾರವನ್ನು ಜಪಿಸಿ ಹರಿದಿತ್ತು. ಅರೆತೆರೆದ ಕಣ್ಣುಗಳ ಆ ಕೃಶಾಂಗಿಯು ಧ್ಯಾನಗಂಗಾ ಸ್ರೋತದಲ್ಲಿ ಮುಳುಗಿದ್ದಳು. ಆಗ ಒಂದು ಕರ್ಣಾನಂದಕರವಾದ ದೇವಕಂಠಧ್ವನಿಯನ್ನು ಆಶ್ಚರ್ಯಚಕಿತಳಾಗಿ ಕೇಳಿದಳು. ಅದು ನೀರ್ದನಿಯನ್ನು ಮೀರಿ, ಧುಮ್ಮಿಕ್ಕುತ್ತ ಉರುಳುವ ಜಲಪಾತದ ಅಬ್ಬರವನ್ನು ಅತಿಕ್ರಮಿಸಿ ಹೊಮ್ಮಿತು. ಪಕ್ಷಿಗಳ ಇಂಚರಕ್ಕೆ ಸಮಶ್ರುತಿಯಾಗಿ ವೇದನಾದೋಪಮವಾದ ಆ ಗಂಭೀರವಾಣಿ ಕೇಳಿಸಿತು.

ಏಂ ಮಧುರಮೇಂ ಶಾಂತಮೇಂ ಧೀರಮಿರ್ದುದಾ ಕಂಠ ಘಂಟಾರವಂ!

'ಉತ್ತರ ದಿಕ್ಕಿನಲ್ಲಿ ಸಮುದ್ರದಿಂದ ಸಮುದ್ರದವರೆಗೆ ಹಬ್ಬಿರುವ, ಪೂರ್ವ ಪಶ್ಚಿಮ ದಿಕ್ಪಾಲಕರು ಭೂಮಿಗೆ ತಲೆದಿಂಬಾಗಿ ಮಾಡಿರುವರೊ ಎಂಬಂತ ಹಿಮವತ್ಪರ್ವತವಿದೆ. ಅದು ಚಂದ್ರಚೂಡನಿಗೆ ಪ್ರಿಯವಾಗಿದೆ. ಆ ರಮಣೀಯ ಪರ್ವತದ ದಕ್ಷಿಣಕ್ಕೆ ಸರಯೂ ನದಿ ಇದೆ. ಅದರ ದಡದಲ್ಲಿ ಧನ ಧಾನ್ಯ ಜನರಿಂದ ತುಂಬಿದ ಕೋಸಲ ದೇಶವಿದೆ.

ದೇವ ದಶರಥನು ಆಳಿದ, ಮಯನು ನಿರ್ಮಿಸಿದ ಅಯೋಧ್ಯೆ ಅದರ ರಾಜಧಾನಿಯಾಗಿದೆ. ಆ ದೊರೆಗೆ ಚೆಲುವೆಯರಾದ ಕೌಸಲ್ಯೆ, ಸುಮಿತ್ರೆ, ಕೈಕೆ ಎಂಬ ರಾಣಿಯರಿದ್ದರು. ಅವರಲ್ಲಿ ಅವನಿಗೆ ರಾಮ ಲಕ್ಷ್ಮಣ ಭರತ ಶತ್ರುಘ್ನರೆಂಬ ಮಕ್ಕಳಾದರು. ಅವರು ಆ ಚಕ್ರವರ್ತಿಗೆ ಚತುರ್ಭುಜರಂತಿದ್ದರು. ಅಗ್ರಜನು ನೀಲಮೇಘಶ್ಯಾಮ.'

ಅದನ್ನು ಕೇಳುತ್ತ ಸೀತೆಯ ನಾಳನಾಳದಲ್ಲಿ ಜೇನಿನ ಸುಖ ಧುಮ್ಮಿಕ್ಕಿತು. ಮೈ ರೋಮಾಂಚನಗೊಂಡು ಮನಸ್ಸು ರಸವಶವಾಯಿತು. ಅಶ್ರುಲೋಚನೆಯಾದಳು. ಮತ್ತೆ ಆ ದಿವ್ಯವಾಣಿ ಮುಂದುವರಿಯಿತು.

'ಚೇತೋಹರ, ಮನ್ಮಥನನ್ನು ಮೀರಿಸಿದ ಸುಂದರ, ವೀರ ಧನುರ್ಧರ, ಭೀಮವಿಕ್ರಮಿ, ಶಾಸ್ತ್ರಕೋವಿದ, ರಾಕ್ಷಸಶತ್ರು, ಮಂತ್ರಾಸ್ತ್ರ ಶಸ್ತ್ರನಿಪುಣ, ಚಂದ್ರನಂತೆ ರಮಣೀಯನಾದ ರಾಮಚಂದ್ರನು ಶಿವಧನುವನ್ನು ಎತ್ತಿ ಮಿಥಿಳೇಂದ್ರನ ಪ್ರೀತಿಯ ಮಗಳು ಭೂಮಿಸುತೆ, ಲೋಕವಿಖ್ಯಾತೆ, ಅನರ್ಘ್ಯ ಸೌಂದರ್ಯದ ತ್ರಿಭುವನಲಕ್ಷ್ಮಿಯನ್ನು ಮದುವೆಯಾದನು, ಆ ನುಡಿ ಮಾಧುರ್ಯವನ್ನು ಕೇಳುತ್ತ ದೇವಿಯು ಕುತೂಹಲಿಯಾಗಿ ಶುಭದ ಸಂದೇಶ ಕಾರಣವನ್ನು ಅರಿಯಲು ಅತಿಸುಖಮುಖಿಯಾಗಿ ಕಣ್ತೆರೆದಳು.

ತೊರೆ ಮೊರೆದು ಹರಿಯುತ್ತಿತ್ತು. ಜಲಪಾತವು ಭೋರ್ಗರೆಯುತ್ತಿತ್ತು. ಶಿಶಿರ ಋತುವಿನ ಬೆಳಗಿನ ರವಿ ಕಿರಣವು ಅಲೆಗಳ ಮೇಲೆ ಮಿಣುಕಿ ಮಿಂಚುತ್ತಿತ್ತು. ಹಕ್ಕಿಗಳ ಉಲಿತವು ಅಡವಿಯ ಜೋಗುಳದಂತೆ ಕಿವಿ ತೊಟ್ಟಿಲನ್ನು ತೂಗಿದವು. ಯಾರನ್ನೂ ಕಾಣದೆ ಬೆರಗಾಗಿ, 'ದಿವ್ಯವಾಣಿಯನ್ನು ಕೇಳಿದೆನಲ್ಲವೆ? ಶುಭದ ವಾರ್ತೆ ಹೇಳಿತಲ್ಲವೆ? ಕಣ್ಣು ತೆರೆಯಲು ಕಿವಿ ಮುಚ್ಚಿದಂತಾಯ್ತು! ಯಾರನ್ನೂ ಕಾಣೆನು; ಜೊತೆಗೆ ಆ ವಾಣಿಯು ನಿಂತು ಹೋಯಿತು! ಕುಲದೈವ ರವಿ ಕೃಪೆಯೊ? ಹೆತ್ತವ್ವ ಭೂಮಿತಾಯಿಯ ಕೃಪೆಯೊ? ಮತ್ತೆ ಯಾವ ವೃಕ್ಷ ಯಕ್ಷನ ವಚನ ಸಾಂತ್ವನವೊ? ಅಥವಾ ಹಸಿದ ಮೆದುಳಿನ ಭ್ರಮೆಯೊ? ನನ್ನ ಬಯಕೆ ಒಡ್ಡಿದ ಬರಿಯ ಬಯಲೊ? ರಕ್ಕಸನ ಮೋಸವೊ?.... ಅಲ್ಲ, ಅಲ್ಲ. ಅದು ದಿಟವಾದುದು! ಕಪಟಕ್ಕೆ ಈ ಗಾಂಭೀರ್ಯವೆಲ್ಲಿಯದು? ಭ್ರಾಂತಿಗೆ ಆ ಧ್ವನಿಯೆ? ಆ ಕಂಠ ಘಂಟಾರವ ಎಷ್ಟು ಮಧುರ. ಎಷ್ಟು ಶಾಂತ, ಎಷ್ಟು ಧೀರವಾಗಿತ್ತು!

'ಈ ಚೆಲುವನ್ನು ನೋಡಲು ದೇವತೆಗಳು ಬಂದು ಇಲ್ಲಿ ತಿರುಗಾಡುತ್ತಾರೆ. ನರರ ಕಣ್ಣು ನೋಡದಿದ್ದರೆ ಏನು? ಪ್ರೇಕ್ಷಕರ ಅಭಾವದಿಂದ ಇಂಥ ಸೌಂದರ್ಯವನ್ನು ವ್ಯರ್ಥವಾಗಿಸಲು ಈ ಸೃಷ್ಟಿ ಒಪ್ಪುವುದಿಲ್ಲ. ಅವನು ದೇವತೆಯಿರಬೇಕು. ನನ್ನ ಮೇಲಿನ ಕರುಣಿ ನನ್ನನ್ನು ಸಂತೈಸಲು ಮಧುರ ವಾಕ್ಯಗಳನ್ನು ನುಡಿದಿದ್ದಾನೆ! ಏನಾದರೂ ಯಾರಾದರೂ ಆಗಿರಲಿ! ನನ್ನ ಹೃದಯೇಶ್ವರನ ರೂಪಗುಣನಾಮಮಯ ಕಾವ್ಯವನ್ನು ಕೇಳಿ ಧನ್ಯಳಾದೆನು!

'ಸುಳ್ಳಾದರೇನು? ದುಃಖ ಜೀವಿತೆಯಾದ ನನಗೆ ಅದು ಧೈರ್ಯ ನೀಡಿರುವುದು ದಿಟ; ಕಷ್ಟ ಬಂಧಿತೆಯಾದ ನನಗೆ ನೆಚ್ಚನ್ನು ನೀಡಿರುವುದು ದಿಟ; ನಿಷ್ಠೆಯನ್ನು ಸಾಧಿಸುವ ನನಗೆ ಅದು ಹರಕೆಯೆ ದಿಟ; ಆಶೆಯನ್ನುಂಟು ಮಾಡುವ ಇದು ಇಷ್ಟವಾದುದು ದಿಟ!'

ಎಂದು ಮನಸ್ಸಿನಲ್ಲಿ ಹೇಳಿಕೊಂಡು ಸಮಾಧಾನಿಯಾದಳು. ಅರ್ಘ್ಯವನ್ನು ಕೊಡಲು ಅಂಜಲಿಯನ್ನು ಮೇಲಕ್ಕೆತ್ತಿದಳು. ಕಣ್ಣು ಮುಚ್ಚಿದಳು. ಇಂದ್ರಿಯಾತ್ಮಕ ಮನಸ್ಸು ಮಿದ್ಯುತ್‌ಅಣು ಚಕ್ರನರ್ತನದಿಂದ ವರ್ಣಮಯ ಸೃಷ್ಟಿ ವೈವಿಧ್ಯವನ್ನು ರಚಿಸುವಂತೆ ಜಲಪಾತ ಘೋಷದಿಂದ ಹೊಮ್ಮಿ ಬಂದಂತೆ, ಆಕಾಶವಾಣಿ ಮತ್ತೆ ಕಿವಿಗೆ ಕೇಳಿಸಿತು:

ಪುತ್ರನಂಜನಾ ದೇವಿಗಾಂ; ಮಾರುತನಿಂ ಸಂಭವಿಸಿದಾಂಜನೇಯಂ!

'ನೀನು ತಿಳಿದಿರುವುದನ್ನು, ನೀನೆ ಕಂಡುಂಡಿರುವುದನ್ನು ನಿನಗೆ ಹೇಳಿದರೆ ಏನು ಪ್ರಯೋಜನ? ಮುಂದೆ ನಡೆದುದನ್ನು ಹೇಳುತ್ತೇನೆ ಕೇಳು. ಸುಗ್ರೀವನ ಸನ್ಮಿತ್ರನಾದ ಶ್ರೀರಾಮಚಂದ್ರನ ಪುಣ್ಯಸತಿಯೆ, ದುರುಳ ರಾವಣನು ಮಾರೀಚನ ಮಾಯಾಜಿಂಕೆಯ ಬೇಟೆಯ ನೆಪದಿಂದ ರಾಮನನ್ನು ಮತ್ತು ಲಕ್ಷ್ಮಣನನ್ನು ದೂರಕ್ಕೆ ಎಳೆದುಕೊಂಡು ಹೋದನು. ನಿನ್ನನ್ನು ಪಂಚವಟಿಯಿಂದ ಲಂಕೆಗೆ ಅಪಹರಿಸಿ ತಂದನು. ಅನಂತರ ದುಃಖದಿಂದ ಚೇತನಾ ರಹಿತನಾಗಿ, ದೀನಾತಿದೀನಮತಿಯಾದ ನಿನ್ನ ಪತಿ ದಾಶರಥಿಯು 'ಹೇ ಸುಂದರ ನಿತಂಬಿನಿ, ಅನಿಂದಿತೆ, ಸರೋಜಮುಖಿ, ಪ್ರಿಯೆ, ಮೈಥಿಲಿ, ಸೀತೆ' ಎಂದು ಚೀರುತ್ತ ಅಲೆಅಲೆದು, ಕರೆಕರೆದು ಹುಡುಕಿದನು. ಮರಣಮುಖಿ ಜಟಾಯುವಿನಿಂದ ನಿನಗೊದಗಿದ ಅಪದೆಶೆಯ ಕಥೆಯನ್ನು ತಿಳಿದನು. ಮುಂದೆ ನಿರಾಶಾ ಕಬಂಧನನ್ನು ಕೊಂದನು. ಮುನ್ನಡೆದು ಬಂದು, ಭಕ್ತೆ ಶಬರಿಯನ್ನು ಕಂಡನು. ಆ ತಾಪಸಿಯು ತನ್ನ ಜೀವವನ್ನು ಕೊಟ್ಟು ನಿನ್ನ ಪತಿಯನ್ನು ಉಳಿಸಿದಳು. ಮುಂದೆ ನಿನ್ನ ಜೀವಿತೇಶ್ವರನಿಗೆ ವಾನರ ನೃಪೇಂದ್ರ ರವಿಪುತ್ರ ಸುಗ್ರೀವನ ಸ್ನೇಹ ಲಭಿಸಿತು. ಆ ವಾನರ ಶ್ರೇಷ್ಠನು ಕಪಿಧ್ವಜಾಲಂಕೃತನಾಗಿ ಕಿಷ್ಕಿಂಧೆಯನ್ನು ಆಳುವ ಪರಾಕ್ರಮಿ. ನಾನು ಅವನ ಬಂಟ. ಪೂಜ್ಯೆ ನಿನ್ನನ್ನು ಹುಡುಕಲು ಬಂದ ಅಸಂಖ್ಯಾತರಲ್ಲಿ ಶತಯೋಜನ ವಿಸ್ತೀರ್ಣವಿರುವ ಸಮುದ್ರದ ಆಚೆಯ ದಡದಲ್ಲಿ ನಿಂತು ನಿನ್ನ ವಾರ್ತೆಯನ್ನು ಕೊಂಡೊಯ್ಯುವ ನನ್ನ ನಿರೀಕ್ಷೆಯಲ್ಲಿದ್ದಾರೆ. ಅಳೆಯಲು ಅಸಾಧ್ಯವಾದ ಶಕ್ತಿ ಸಾಮರ್ಥ್ಯವುಳ್ಳ ಆ ಸಾಧನಾಸಕ್ತರಲ್ಲಿ ನಾನೋರ್ವ ಸಾಮಾನ್ಯ. ನಾನು ಅಂಜನಾದೇವಿಯ ಮಗ, ವಾಯುಪುತ್ರ ಆಂಜನೇಯ!'

ಶುಭದವಾಣಿ ನಿಂತರೂ, ಆ ಸುಖ ಸ್ವಪ್ನಕ್ಕೆ ಎಲ್ಲಿ ಭಂಗಬರುವುದೊ ಎಂದು ಭಯ ಭೀತೆಯಾದ ಸೀತೆಯು ಕಣ್ತೆರೆಯಲು ಅಂಜಿದಳು. ಅರ್ಘ್ಯವನ್ನು ಕೊಡಲು ಎತ್ತಿದ ಕೈಬೊಗಸೆಗೆ ಏನೊ ಬಿದ್ದಂತಾಗಲು ಅವಳ ಮೈ ಜುಮ್ಮೆಂದಿತು. ಮೈ ನವಿರೆದ್ದಿತು. ಕಣ್ಣು ಅರಳಿಸಿದಳು.

ಗೋಚರಿಸಿತರ್ಘ್ಯ ತೀರ್ಥದೊಳೊಂದು ಪೊನ್ನುಂಗುರಂ

ಅರ್ಘ್ಯ ತೀರ್ಥದಲ್ಲಿ ಒಂದು ಹೊನ್ನಿನ ಉಂಗುರ ಗೋಚರಿಸಿತು. ಅದು ಬಿಸಿಲಿಗೆ ಥಳಥಳನೆ ಹೊಳೆಯುತ್ತಿತ್ತು. ಕಿವಿಯ ಕೇಳುವಿಕೆಗೆ ಕಣ್ಣು ತಾನು ಅಮರ ಸಾಕ್ಷಿಯನ್ನು ನೀಡಿತು ಎಂಬಂತಾಯಿತು! ಸುಖವು ಅನುಮಾನಕ್ಕೆ ಎಡೆಮಾಡಲು ಭಯದಿಂದ ಸುತ್ತಲೂ ಕಣ್ಣಾಡಿಸಿದಳು. ಸುತ್ತಣ ಪ್ರಕೃತಿಯ ದೃಶ್ಯವು ಯಥಾಸ್ಥಿತಿಯಲ್ಲಿರಲು ಯಾವುದೇ ವಿಸ್ಮಯವೂ ಕಾಣಲಿಲ್ಲ. ಅಬಲೆಯು ಆ ಅದ್ಭುತಕ್ಕೆ ಬೆದರಿ ಚೀರುವಳೊ ಅಥವಾ ಮೂರ್ಛೆ ಬೀಳುವಳೊ ಎನ್ನುವಷ್ಟರಲ್ಲಿ, ಅಮೃತವು ಸೋರಿದಂತೆ ಮರಳಿ ಧ್ವನಿ ಕೇಳಿಸಿತು.

'ಮಾತೆ ಒಳಸೋರದಿರು, ಹೇ ಪುಣ್ಯ ಲಕ್ಷ್ಮಿಯೆ, ನಿನ್ನ ಅರ್ಘ್ಯದಲ್ಲಿ ನಿನ್ನ ಪತಿಯ ಉಂಗುರ ಹೊಳೆಯುತ್ತಿದೆ ನೋಡು!'

ಅಚ್ಚರಿಗೊಂಡು ನೋಡಿದಳು. ನೋಟವನ್ನು ನಟ್ಟು ಮತ್ತೆ ಮತ್ತೆ ನೋಡಿದಳು. ನಂಬಲಾರದ ಸುಖಕ್ಕೆ ಮರವಟ್ಟಳು!

ಪ್ರಕೃತಿಯು ತಾನು ಸಂಭ್ರಮಗೊಂಡಂತೆ ಕಂಡಿತು. ಗರಿಗೊಂಡ ನವಿಲೊಂದು ಪೀತಾಂಬರದ ಹಿಡಿಯ ನವಿಲುಗರಿಯನ್ನು ಚಾಮರದಂತೆ ಕಂಗೊಳಿಸುತ್ತ ಈ ದಡದಿಂದ ಆ ದಡಕ್ಕೆ ನೀರನ್ನು ತೋಡಿಕೊಂಡು ಹಾರಿ ನಲಿದಾಡುತ್ತಿತ್ತು. ತೆಕ್ಕನೆ ಉಕ್ಕಿದ ಸಂತಸಕ್ಕೆ ಕೊರಳು ಬಿಚ್ಚಿ ಹಕ್ಕಿಗಳು ಜೊತೆಗೂಡಿ ಹಾಡಿದವು. ತಂಗಾಳಿಯು ತನಗೆ ಸಂತೋಷ ಉಂಟಾದಂತೆ ತರುಗಳಲ್ಲಿ ಮರ್ಮರಿಸಿತು. ನೀರಿಗೆ ರೋಮಾಂಚನ ಉಂಟಾಗುವಂತೆ ಮರದ ಹನಿಗಳು, ಹೂಗಳು ತೊರೆಗೆ ಸೇಸೆಯನ್ನು ತಳಿದವು. ರವಿಕಿರಣ ಕಾರಣದಿಂದ ತುಂತುರುಗಳು ಕಾಮನಬಿಲ್ಲಿನ ದೃಶ್ಯವನ್ನು ನಿರ್ಮಿಸಿದವು. ಸೀತೆಯ ಕಣ್ಣಿಗೆ ಆ ಲೋಕವು ನವರತ್ನ ಧೂಳಿಯನ್ನೆರಚಿದಂತೆ ಕಂಡು ರಂಜಿಸಿತು.

ಜಲತರಂಗಗಳು ಬಹು ವೀಣೆಗಳ ಜೊತೆ ಜೊತೆಗೆ ಮಿಡಿದಂತೆ ಇಂಚರ ಹೊಮ್ಮಿಬಂದಿತು. ನೋಡ ನೋಡುತ್ತಿದ್ದಂತೆ ಕಾಮನ ಬಿಲ್ಲನ್ನೆ ಕಡೆದು ತಯಾರಿಸಿದ ಚೆಲುವಾದ ಗೊಂಬೆಯಂತೆ ನವ್ಯ ನವರತ್ನಮಯ ರೋಮ ಚರ್ಮದ ಹೊನ್ನಿನ ಕಪಿಯ ರೂಪವು ಹೊಮ್ಮಿ ಬಂದಿತು! ಅದು ಆಕಾರದಲ್ಲಿ ಕಿರಿದಾದರೂ ಮಹಾದ್ಭುತವಾಗಿತ್ತು! ಅದು ಹೀಗೆ ಹೇಳಿತು:

ಕೈ ಮುಗಿವೆನಿದೊ, ದೇವಿ, ಸುಗ್ರೀವನನುಚರಂ, ಶ್ರೀರಾಮ ಸದ್ಧರ್ಮ ದೂತಂ!

'ಗೆಲುವಾಗಲಿ! ಸೊಗವಾಗಲಿ! ಶುಭವಾಗಲಿ! ಮಂಗಳವಾಗಲಿ! ಧರ್ಮವು ಗೆಲ್ಲಲಿ! ಸಂತೋಷವು ಗೆಲ್ಲಲಿ! ಋತುವು ಗೆಲ್ಲಲಿ! ರಘುರಾಮ ಚಂದ್ರನಿಗೆ ಗೆಲುವಾಗಲಿ! ಮಿಥಿಳೇಂದ್ರ ಸುತೆಯ ಅರಳಿದ ಶುಭ್ರ ಕಮಲದಂತಹ ಮಧುರ ಹೃದಯಕ್ಕೆ ಗೆಲುವಾಗಲಿ!

ಸರ್ವ ಕಪಿಕುಲ ಗರ್ವ ಧೈರ್ಯಗಳ ಪ್ರತಿರೂಪವಾದ ಆಂಜನೇಯನಿಗೆ ಗೆಲುವಾಗಲಿ! ದೇವಿ, ಸುಗ್ರೀವನ ಬಂಟನೂ, ಶ್ರೀರಾಮನ ಸದ್ಧರ್ಮ ದೂತನೂ ಆದ ನಾನು ಕೈ ಮುಗಿಯುವೆನು.'

ತನಗೆ ಶುಭವನ್ನು ಹೇಳಿ, ಮನಸ್ಸಿಗೆ ನಿಶ್ಯಂಕೆಯನ್ನು ಎದೆಗೆ ಮಾತೃಭಾವವನ್ನು, ಆತ್ಮಕ್ಕೆ ನೆಮ್ಮದಿಯನ್ನು ಉಕ್ಕಿಸುತ್ತ ತನ್ನ ಎದುರಿಗೆ ನಿಂತ ಕಪಿರೂಪಿ ಆಂಜನೇಯನ ದಿವ್ಯಶೋಭೆಯನ್ನು ಸೀತೆಯು ಕಂಡಳು. ಹರ್ಷಭಾರದಿಂದ ಮೇಲೇಳಲಾರದೆ ಕುಳಿತಲ್ಲಿಯೆ ಕುಳಿತಳು. ರಾಮನ ಮುದ್ರಿಕೆಯನ್ನು ಅಪ್ಪಿಹಿಡಿದಿದ್ದ ಕೈಯಿಂದ ಆಶೀರ್ವದಿಸಲು ಪ್ರಯತ್ನಿಸಿ ಕೈ ಎತ್ತಲಾರದಾದಳು. ನುಡಿಯಲು ಅಪೇಕ್ಷಿಸಿದರೂ ಬಾಯಿ ಬರದೆ ಭಾವಗಳಿಂದ ಮೂಕ ಉದ್ವಿಗ್ನಳಾದಳು. ಮಂಗಳಸ್ವರೂಪಳು ನಡನಡನೆ ನಡುಗುತ್ತಾ ಬರಿ ತುಟಿಗಳನ್ನು ಅದುರಿಸಿದಳು. ವಾತ್ಸಲ್ಯದಿಂದ ಕ್ಷೇಮಕಾತರಳಾದ ದೇವಿಯು ಆಂಜನೇಯನ ಹಿತಾಕಾಂಕ್ಷೆಯಿಂದ ಸುತ್ತ ಎಲ್ಲಕಡೆಗೂ ಕಣ್ಣಾಡಿಸುತ್ತಿದ್ದಳು. ಆ ತಾಯಿಯ ಭಾವವರಿತು ಅವನು ಹೇಳಿದನು:

'ತಾಯಿ, ನನಗಾಗಿ ಹೆದರಿಕೆ ಬೇಡ. ಯೋಗದಿಂದ ಉಂಟಾದ ಈ ರೂಪವು ನಿನಗಲ್ಲದೆ ಇತರರಿಗೆ ಕಾಣಲು ಸಾಧ್ಯವಿಲ್ಲ. ನನ್ನ ದನಿಯು ಇತರರಿಗೆ ಕೇಳಿಸುವುದಿಲ್ಲ. ಹೇ ತಪಸ್ವಿನಿಯೆ, ಈ ನೆಲವು ಮಾಯಾ ಪ್ರವೀಣ ದಾನವರ ಬೀಡಾದರೂ, ನಿನ್ನ ಪ್ರೀತಿಯ ಹರಕೆಯಿಂದ ನನ್ನ ಹಿತರಕ್ಷಣೆಗೆ ನಾನು ಸಮರ್ಥನಾಗಿರುವೆನು.

'ಪೂಜ್ಯೆ, ಈಗಾಗಲೇ ಹೆಚ್ಚು ಕಾಲವನ್ನು ಕಳೆದಿರುವೆನು. ರಾಮಸನ್ನಿಧಿಗೆ ಬೇಗ ಹೋಗಬೇಕಾಗಿದೆ. ನೀನಿರುವ ನೆಲೆ ಅರಿತು ವಾರ್ತೆಯನ್ನು ತಿಳಿಸಲು ಕಪಿರಾಜ ಸುಗ್ರೀವನಿಂದ ನಾನು ಆಜ್ಞಾಪಿಸಲ್ಪಟ್ಟಿರುವೆನು. ಕಡಲನ್ನು ದಾಟಿ ನಿನ್ನೆ ಸಂಜೆ ಲಂಕೆಗೆ ಬಂದೆನು. ಹೆಬ್ಬಾಗಿಲಿನಲ್ಲಿ ಲಂಕಾದೇವಿಯನ್ನು ಸೋಲಿಸಿ ಒಳಹೊಕ್ಕಿರುವೆನು. ಯೋಗಮಾಯಾ ಬಲದಿಂದ ಇಡೀ ನಗರವನ್ನು ಶೋಧಿಸಿರುವೆನು. ರಾಕ್ಷಸರ ರಹಸ್ಯಗಳನ್ನು ತಿಳಿದಿರುವೆನು. ಬೆಳಗುಜಾವದಲ್ಲಿ ಇಲ್ಲಿಗೆ ಬಂದೆನು. ಈ ಅಶೋಕಮರದ ಎತ್ತರದ ಕೊಂಬೆಯಲ್ಲಿ ಕುಳಿತೆನು.

'ತಾಯಿ ಕಲ್ಯಾಣಿಯೆ, ಎಲ್ಲವನ್ನೂ ನೋಡಿದೆನು. ನಿನ್ನ ಕೀರ್ತಿಗೆ ಮತ್ತು ತೇಜಸ್ಸಿಗೆ ಕೋಡು ಮೂಡುವ ರೀತಿಯ ದಿವ್ಯ ಭಾಷಣವನ್ನು ಕೇಳಿದೆನು! ಸ್ಫೂರ್ತಿಯುತವಾದ ನಿನ್ನ ಅಸ್ಖಲಿತ ಚಿತ್ತವೃತ್ತಾಂತವನ್ನು ಆಲಿಸಿ ಧನ್ಯನಾದೆನು.

'ಪೂಜ್ಯೆ, ಕಂಡಿದ್ದೆಲ್ಲವನ್ನು ರಾಮಭದ್ರನಿಗೆ ತಿಳಿಸುತ್ತೇನೆ. ನಾನು ಹೇಳುವುದಷ್ಟೇ ಸಾಕಾಗುವುದಿಲ್ಲ. ನಿನ್ನ ಕಡೆಯಿಂದ ನಿನ್ನನ್ನು ಕಂಡುದಕ್ಕೆ ಚಿಹ್ನೆಯೊಂದನ್ನು ಪಡೆದು ಹೋಗುವುದು ನೀತಿ. ಶೀಘ್ರವಾಗಿ ಸಾಕ್ಷಿಯಾಗಿ ಏನನ್ನಾದರೂ ಕೊಡು. ಜಗದ್ವಂದ್ಯೆಯೆ, ತಡಮಾಡಲಾಗದು; ಮುಂದೆ ಮಾಡಬೇಕಾದ ಕಾರ್ಯ ಸಾಗರದಷ್ಟಿದೆ.'

ಸ್ವಪ್ನಮಲ್ಪಾಯು; ದೀರ್ಘಾನುಭವರೂಪಿಯಲ್ತೆ ಸತ್ಯಂ

ಈ ರೀತಿ ಹೇಳಿ ಕೈಮುಗಿದು ನಿಂತಿದ್ದ ಹನುಮಂತನನ್ನು ಭೂಸುತೆಯು ಹೆಮ್ಮೆಯಿಂದ ನೋಡಿದಳು. ಮನದನ್ನನ ಉಂಗುರವನ್ನು ಹಣೆಗೆ ಎದೆಗೆ ಒತ್ತಿಕೊಂಡಳು. ಮತ್ತೆ ಮತ್ತೆ ತೆಗೆದು ಕಣ್ಗೊತ್ತಿಕೊಂಡು ಮುತ್ತಿಟ್ಟಳು. ಆ ಮುದ್ರಿಕೆಯಲ್ಲಿಯೇ ತನ್ನ ಯಜಮಾನನನ್ನು ಕಂಡು ಪ್ರೀತಿಯ ಉನ್ಮಾದದಿಂದ ರಸವಶೆಯಾದಳು; ಪ್ರೇಮ ಸಮಾಧಿಸ್ಥಳಾದಳು. ತೊದಲಾಡುತ್ತ ಮಗುವಿನಂತೆ ಹೀಗೆ ಹೇಳಿದಳು:

'ಕುಶಲಮತಿ ಹೇ ಮಹಾ ವಾನರೋತ್ತಮನೇ, ನೀನು ವಿವೇಕಿ. ಹರ್ಷಾತಿಶಯದಿಂದ ಮೈ ಮರೆತ ನನ್ನನ್ನು ಕ್ಷಮಿಸು. ತಾಳ್ಮೆಯಿಂದಿರು. ನಿನ್ನನ್ನು ಈಕ್ಷಿಸುತ್ತ ಪತಿವಾರ್ತೆ ಕೇಳುವ ಮಂಗಳ ಸುಖ ಬಹುದಿನಗಳನಂತರ ಲಭಿಸಿದೆ. ಅದನ್ನು ಸ್ವಪ್ನದಂತೆ, ಶೀಘ್ರವಾಗಿ ಮುಗಿಸಬೇಡ. ಸ್ವಪ್ನವು ಅಲ್ಪಾಯು; ಸತ್ಯವು ದೀರ್ಘಾನುಭವರೂಪಿ.

'ಹೇ ಚಿರಂಜೀವಿಯೇ, ಶ್ರದ್ಧೆ ಸಂಶಯಾತ್ಮಕವಾಗುವಷ್ಟು ಆಕಸ್ಮಿತವಾಗಿ ಬಂದೊದಗಿದ ಈ ಸೊಗವನ್ನು ಅಲ್ಪಾಯು ಮಾಡಬೇಡ. ನೀನು ಮರೆಯಾದ ಮೇಲೆ ನನಗೆ ಈಗ ಕಂಡುದೆಲ್ಲ ಮತ್ತು ಕೇಳಿದುದೆಲ್ಲ ಬರಿಯ ಹುಸಿಯೆಂದೊ, ಕನಸೆಂದೊ, ಹಸಿವಿನ ಮನೋಭ್ರಾಂತಿಯೆಂದೊ ಅನಿಸಿದಾಗ ಆ ಹತಾಶೆಯೆ ನನ್ನನ್ನು ಕೊಲ್ಲುತ್ತದೆ. ಆ ನಿರಾಶೆ ಈ ಪ್ರಪಾತದ ಕರುಣೆಯಾಗಿ ಕೊಲ್ಲದಿರಲಿ.'

'ಹೇ ಪೂಜ್ಯೆ, ಈ ಮಂಗಳ ಮುಹೂರ್ತದಲ್ಲಿ ಅಮಂಗಳವನ್ನು ನುಡಿಯಬೇಡ! ನಿನಗೆ ನಂಬಿಕೆಯುಂಟಾಗಲು ನಿನ್ನ ಪತಿ ಕೊಟ್ಟಿರುವ ಆತನ ನಾಮ ಮುದ್ರಿಕೆಯನ್ನು ನಿನಗೆ ಕೊಟ್ಟಿರುವೆ ಬಾಲೆ! ಅದಕ್ಕಿಂತಲೂ ಹಿರಿದಾದ ಸಾಕ್ಷಿ ಬೇರೆಯಿದೆಯೆ? ಹೇ ತರಳೆ, ನನ್ನ ಮೇಲೆ ನಿಷ್ಕಾರಣವಾಗಿ ಸಂಶಯ ಪಡುವುದು ಸರಿಯಲ್ಲ.'

ಸೀತೆಯು ಪುಟ್ಟ ಆಕಾರದಿಂದ ಹೊಮ್ಮಿದ ದಿಟ್ಟ ನುಡಿಗಳನ್ನು ಕೇಳಿ ಹೆದರಿದಳು. ಆ ಲಘುಧೀರನನ್ನು ನೋಡುತ್ತ ತನ್ನ ಸಂದೇಹಕ್ಕೆ ತಾನೇ ನಾಚಿ ನುಡಿದಳು:

'ಮಹಾತ್ಮನೇ, ಮುನಿಯದಿರು, ನಾನು ನಿನಗೆ ಕೃತಜ್ಞಳಾಗಿದ್ದೇನೆ. ನಿನ್ನನ್ನು ನನ್ನ ಬಳಿಯೆ ಹೆಚ್ಚು ಹೊತ್ತು ನೋಡುವ ಆಸೆಯಿಂದ, ನಿನ್ನಿಂದ ನನ್ನ ರಮಣನ ವೃತ್ತಾಂತವನ್ನು ಮನದಣಿಯುವವರೆಗೂ ಕೇಳುವ ಆಸೆಯಿಂದ ಹೀಗೆ ಹೇಳಿದೆ. ಅದನ್ನು ಹೊರತುಪಡಿಸಿ ನಿನ್ನ ಬಗ್ಗೆ ಯಾವುದೇ ಕಪಟಾರ್ಥವನ್ನು ಊಹಿಸಲಿಲ್ಲ.'

'ದೀನ ದುಃಖಿನಿಯೆ, ನನ್ನ ನಾಲಗೆಯ ಒರಟುತನವನ್ನು ಕ್ಷಮಿಸು. ಕಾಲಹರಣದಿಂದ ದೊರೆಯ ಕಾರ್ಯಸಾಧನೆಗೆ ಮತ್ತು ನಿನ್ನ ಅಭ್ಯುದಯಕ್ಕೆ ಎಲ್ಲಿ ಭಂಗ ಉಂಟಾಗುವುದೊ ಎಂಬ ಅಳುಕಿನಿಂದ ಹಾಗೆ ಹೇಳಿದೆ. ನಿನ್ನ ಕಾರಣಕ್ಕಾಗಿ ಸಮುದ್ರವನ್ನು ದಾಟಿ ಈ ದೈತ್ಯ ಲಂಕೆಯನ್ನು ಪ್ರವೇಶಿಸಿರುವ ನನಗೆ ಬೇರೆ ಕಾರಣವೇನಿದೆ?'

ಭರ್ತೃವಾರ್ತಾವಹಂ, ಪ್ರಿಯನೆನಗೆ ನೀಂ ಸಹೋದರ ಸಮಂ

'ನೀನು ದಿಟವಾಗಿ ಪ್ರಾಜ್ಞ, ಉದ್ಯೋಗ ಕೋವಿದನಾದ ನೀನು ಹೇಳುತ್ತಿರುವುದು ನಿಜ. ನನ್ನ ಜೀವಿತೇಶ್ವರ ಬೇರೆಯವರನ್ನು ಕಳುಹಿಸುತ್ತಾನೆಯೆ? ಈ ಶತಯೋಜನ ಭಯಂಕರ ಸಮುದ್ರವನ್ನು ಲಂಘಿಸುವುದು ಸಾಮಾನ್ಯರಿಗೆ ಸಾಧ್ಯವೆ? ಪತಿವಾರ್ತೆಯನ್ನು ತಂದ ನೀನು ನನಗೆ ಸಹೋದರ ಸಮಾನನಾಗಿರುವೆ, ಸ್ವಾಮಿಯ ಸಂದೇಶವನ್ನು ಕೇಳಿದ ನನಗೆ ಪತಿವಾರ್ತೆಯನ್ನು ಆಲಿಸುವ ಆತುರ ಹೃದಯದಲ್ಲಿ ಕುದಿಯುತ್ತಿದೆ. ಅದನ್ನು ಹೇಳಿ ನನ್ನ ಪ್ರಾಣತುಷೆಯನ್ನು ತಣಿಸು ಎಂದು ಜಗತ್ ಪ್ರಾಣದೇವನ ಮಗನಾದ, ಪರದುಃಖಕಾತರನಾದ ನಿನ್ನಲ್ಲಿ ಪ್ರಾರ್ಥಿಸುವೆ. ನನ್ನ ಪ್ರಾಣೇಶ ಹೇಗಿದ್ದಾನೆ? ಪ್ರಾಣಪತಿ ಎಲ್ಲಿದ್ದಾನೆ? ಪ್ರಾಣವಲ್ಲಭನು ಏತಕ್ಕೆ ತಡಮಾಡಿದ? ವಿರಹದಿಂದ ಸೊರಗಿರುವನೆ? ಶೋಕದಿಂದ ಬೆಂದಿದ್ದಾನೆಯೆ ಎಂಬುದನ್ನು ಹೇಳು.'

ಎಂದು ಕೇಳುತ್ತಿದ್ದಂತೆ ಕೊರಳ ಸೆರೆ ಬಿಗಿದು ದುಃಖ ಉಮ್ಮಳಿಸಿತು. ಉಕ್ಕಿ ಬರುತ್ತಿರುವ ಸಂಕಟದೊಡನೆ ಮತ್ತೆ ಮಾತು ಮುಂದುವರಿಸಿದಳು.

'ಈ ದೀನ ಹತಭಾಗ್ಯೆಯನ್ನು ನೆನೆಯುವನೆ? ಮರೆತಿಲ್ಲವಲ್ಲವೆ? ಸಹಜಸುಖಿಯಾದ ಆತನಿಗೆ ಸಕಲ ಶೋಕವನ್ನಿತ್ತ ಈ ಮಂದಮತಿಯನ್ನು ನೆನೆಯುವನೆ?'

ಎಂದು ಹೇಳುತ್ತಿದ್ದಂತೆ ನಾಲಗೆ ತತ್ತರಿಸಿತು. ಮುಂದೆ ನುಡಿಯಲಾರದೆ ಬಿಕ್ಕಿ ಬಿಕ್ಕಿ ವ್ಯಥೆಯುಕ್ಕಿ ಬೆಂದಳು.

ಪರೇಂಗಿತಜ್ಞ (ಬೇರೆಯವರ ಅಭಿಪ್ರಾಯವನ್ನು ಊಹಿಸಿ ತಿಳಿಯುವ ವ್ಯಕ್ತಿ) ವಾಯುಸುತನು ಆ ಪ್ರಶ್ನೆ ಮಾಲೆಯ ಮಧ್ಯೆ ಹುದುಗಿದ್ದ ಹೆಣ್ಣೆದೆಯ ಸಂದೇಹ ಸೂತ್ರವನ್ನು ತಿಳಿದನು.

ನಿನ್ನದೀ ಕಷ್ಟಂ ತುದಿಯನೆಯ್ದಿತೆಂದೆ ತಿಳಿ.

'ಭದ್ರೆ, ಶಂಕೆಯನ್ನು ಬಿಡು. ಧೈರ್ಯವನ್ನು ಹೊಂದು. ನಿನ್ನ ಈ ಕಷ್ಟವು ಕೊನೆಗೊಂಡಿತೆಂದೆ ತಿಳಿ. ವಿರಹಿ ದಶರಥಿಯು ನೀನಿರುವ ಸ್ಥಳ ತಿಳಿಯದೆ ತಡಮಾಡಿದನು. ಈಗ ತಾಣ ತಿಳಿದ ತಕ್ಷಣ ರಾಮಚಂದ್ರನು, ಕಪಿಧ್ವಜರ ಸೈನ್ಯದ ಮಹಾವೀರರು, ಪರ್ವತೋಪಮಧೀರರು, ಆಗಸ ಸಂಚಾರಿಗಳು, ಕಾಮರೂಪಿಗಳೊಡನೆ ಬರುವನು. ಈ ವಿಪುಲ ವಾರಿಧಿಯನ್ನು ಒಂದು ಗೋವಿನ ಪಾದದಷ್ಟು ಜಲಕ್ಕೆ ಸಮವೆಂದು ದಾಟಿ ಬರುವನು. ಅವನ ರೌದ್ರರೋಷವು ಲಂಕೆಯನ್ನು ದಹಿಸದೆ ಇರುತ್ತದೆಯೆ?

'ಕಲ್ಯಾಣಿಯೆ, ನನ್ನಾಣೆ ನಿನ್ನಾಣೆ ರಘುರಾಮನಾಣೆ ಪರಶಿವನಾಣೆ ನಂಬು! ನಿನ್ನನ್ನು ಅಗಲಿದ ರಾಮನು ನಿನ್ನನ್ನು ಬಿಟ್ಟು ಎಲ್ಲವನ್ನೂ ಮರೆತಿದ್ದಾನೆ. ಅವನಿಗೆ

ನೀನಲ್ಲದೆ ಅನ್ಯ ಜೀವಿತವಿಲ್ಲ. ನಿನ್ನನ್ನು ನೆನೆವುದೆ ಉಣಿಸು; ಕರೆವುದೆ ಮಾತು; ನಿಟ್ಟುಸಿರೆ ಉಸಿರು; ಚಿಂತೆಯೆ ಕನಸು; ಚಿಂತೆಯೆ ಮನಸು ಆಗಿದೆ. ಆ ನೃಪನು ನಿನ್ನನ್ನು ಹೊರತು ಪಡಿಸಿ ಬೇರೆ ಏನನ್ನೂ ಪ್ರಕೃತಿಯಲ್ಲಿ ಕಾಣನು. ಚಿಗುರಿದ ಮರ ಕಂಗೊಳಿಸಲು ಅಲ್ಲಿ ಕೋಮಲಳಾದ ನಿನ್ನನ್ನು ಕಾಣುವನು. ತೊರೆಯ ಮೊರೆ ಕಿವಿಗೆ ಕೇಳಿಸಲು ತನ್ಮಯನಾಗಿ ಮನೋಹರಿಯಾದ ನಿನ್ನನ್ನೇ ಆಲಿಸುವನು. ಹೂ ಹಣ್ಣುಗಳನ್ನು ಕಾಣಲು 'ಓ ನನ್ನ ಸೀತೆ, ಮೈಥಿಲಿ' ಎಂದು ಮರುಗುವನು. ಮಧುರ ಪಕ್ಷಿಗಳ ಇಂಚರವನ್ನು ಆಲಿಸುತ್ತ ನಿನ್ನನ್ನೆ ನೆನೆದು ಮರವಟ್ಟು ನಿಲ್ಲುವನು.

'ಅರೆನಿದ್ದೆಯಲ್ಲಿ ಎಚ್ಚೆತ್ತು ಚೆಲುವಾದ ಕಿವಿಯವಳೆ! ಸುಂದರವಾದ ತೊಂಡೆಯ ಹಣ್ಣಿನಂತೆ ಕೆಂಪಾದ ತುಟಿಯವಳೆ! ಜಿಂಕೆಯ ಕಣ್ಣಿನಂತವಳೆ! ನಾಗನ ತುರುಬಿನವಳೆ! ರಮಣಿ! ಲತಾಂಗಿ! ತೆಳು ಶರೀರ ಮನೋಹರಿ! ಎಂದು ಹೇಳುತ್ತ ನಿನ್ನನ್ನು ಹಂಬಲಿಸಿ ಕರೆಯುವನು.'

'ಹೇ ತ್ರೈಭುವನ ಸೌಂದರ್ಯಲಕ್ಷ್ಮಿಯೆ! ನಿನಗಾಗಿ ರಾಮನಿಂದು ತಪಸ್ವಿಯಾಗಿದ್ದಾನೆ. ಆ ಅರಸುವಂಶದವನು ಮದ್ಯ ಮಾಂಸಗಳನ್ನು ಮುಟ್ಟುವುದಿಲ್ಲ. ಗೆಡ್ಡೆ ಗೆಣಸುಗಳನ್ನು, ಹಣ್ಣು ಹಂಪಲುಗಳನ್ನು ತಿಂದು ಬದುಕಿದ್ದಾನೆ. ಧ್ಯಾನದಲ್ಲಿ ಹೊತ್ತು ಕಳೆಯುತ್ತಾನೆ. ಪ್ರತಿಜ್ಞಾಭೀಷ್ಮ ತೇಜಸ್ವಿಯು ಶಕ್ತಿಯನ್ನು ಸಂಪಾದಿಸಲು ಯೋಗದಲ್ಲಿ ಲೀನವಾಗಿದ್ದಾನೆ.'

ಆ ನುಡಿಗಳನ್ನು ಕೇಳಿ ಜನಕಸುತೆಯು ಬೇವು ಮತ್ತು ಬೆಲ್ಲವನ್ನು ಒಟ್ಟಿಗೇ ಸವಿದಂತಾದಳು. ರಾಮನ ಕೀರ್ತಿಯನ್ನು ಕೇಳಿ ದುಃಖ ನೀಗಿಕೊಂಡಳು. ಆದರೆ ಮರುಕ್ಷಣದಲ್ಲಿ ರಾಮನಂತೆ ದುಃಖಿ ತಾನಾದಳು. ಶೋಕ ಮತ್ತು ಅಶೋಕ ಭಾವದಲ್ಲಿ ಆ ಪತಿವ್ರತಾಕೀರ್ತಿಯ ಕಣ್ಣಿನ ಕಾಂತಿಯ ಅಲೌಕಿಕತೆಗೆ ಪವನಕುಮಾರ ಬೆರಗಾದನು. ದೂರದಿಂದ ಕಂಡಾಗ ಅವಳು ಸ್ನಾನವಿಲ್ಲದೆ ದೇಹ ಮತ್ತು ಬಟ್ಟೆಗಳಿಂದ ಮಲಿನವಾಗಿದ್ದಳು. ಆದರೆ ಈಗ ಪ್ರೀತಿಯ ಸಾಗರ, ಧೀರ ಸಂಯಮಿ ರಾಮಚಂದ್ರನ ಅಧೈರ್ಯವು ಅದ್ಭುತ ಧೈರ್ಯವೆನಿಸಲು ತಾನೇ ಧೈರ್ಯಕಾರಣಳು ಎನ್ನುವಂತೆ ಮಾಸಿದ ಅಮರ ಸೌಂದರ್ಯದಲ್ಲಿ ಬೆಳಗುತ್ತಿದ್ದಳು!

ನಿನ್ನ ಪಡೆದಮ್ಮಗೆನ್ನದೀ ವಂದನೆಯನೊಯ್

'ತಲೆಬಾಗಿಸಿ ಕೈ ಮುಗಿಯುವೆ. ಆಂಜನೇಯ ಕಂದನೇ, ನಿನ್ನ ಪಡೆದ ತಾಯಿಗೆ ನನ್ನೀ ವಂದನೆಗಳನ್ನು ತಿಳಿಸು. ನಿನ್ನ ತಾಯಿ ತಂದೆಗಳು ಧನ್ಯರಾಗಲಿ; ನಿನ್ನ ಕುಲದವರು ಮಾನ್ಯರಾಗಲಿ; ನಿನ್ನ ಪುಣ್ಯಕೀರ್ತಿಯ ಕಾಂತಿ ಸರ್ವಲೋಕವ್ಯಾಪಿಯಾಗಿ ಸರ್ವಕಾಲಕ್ಕೂ ಬೆಳಗಲಿ! ನನ್ನ ಜೀವಿತೇಶ್ವರನು ನನ್ನ ಹೊರತು ಬೇರೇನನ್ನು ಯೋಚಿಸುತ್ತಿಲ್ಲ ಎಂಬುದನ್ನು ತಿಳಿಸಿ ಬೆಂದ ನನ್ನೆದೆಗೆ ಅಮೃತವನ್ನು ಕರೆದೆ.

'ರಾಮನಿಗೆ ನನಗೆ ಲಕ್ಷ್ಮಣನಿಗೆ ಈ ದುರವಸ್ಥೆಯನ್ನು ತಂದ ವಿಧಿಯು ಕ್ರೂರಿಯಾದರೂ ಈ ರೀತಿಯ ಸುಖವನ್ನೊದಗಿಸಿ ಕರುಣೆಯೂ ಆಗಿದೆ.

'ವಾನರ ಶ್ರೇಷ್ಠನೇ ಕೇಳು. ನನ್ನ ಪತಿಗೆ ಮರೆಯದೆ ನೀನು ಕಂಡುದನ್ನು ಕೇಳಿದುದನ್ನು ಹೇಳು. ದಿನಕರ ಕುಲೋತ್ತಮನ ಹೃದಯ ವಧುವಿಗೆ ಒದಗಿರುವ ಈ ದೈನಂದಿನ ದೈನ್ಯವನ್ನು ತಿಳಿಸು. ದಶಶಿರನ ಪತ್ನಿ ಮಂಡೋದರಿಯ ದಯೆಯಿಂದ ವರ್ಷದ ಅವಧಿಯಲ್ಲಿ ಹತ್ತು ತಿಂಗಳು ಇಂದಿಗೆ ಕಳೆದಿವೆ. ಇನ್ನೆರಡು ತಿಂಗಳು ಕಳೆಯುವಷ್ಟರಲ್ಲಿ ನನ್ನನ್ನು ರಕ್ಷಿಸಲು ತಿಳಿಸಬೇಕು. ವಾಕ್ ಕೋವಿದನೇ, ನಿನ್ನ ವಾಙ್ಮಹಿಮೆ ಸಫಲವಾಗುವಂತೆ ಇದನ್ನು ನನ್ನ ಸ್ವಾಮಿಗೆ ಹೇಳು. ಲಂಕೆಯೊಳಗೂ ಸತ್ತ್ವದ ಉತ್ತಮರು ಇದ್ದಾರೆ. ಧರ್ಮ ಕಾರ್ಯಕ್ಕೆ ನೆರವಾಗಲು ಬರುತ್ತಾರೆ ಎಂಬುದನ್ನು ನನ್ನ ಮನದನ್ನನಿಗೆ ತಿಳಿಸು. ಸಾಹಸೋತ್ಸಾಹಿ ಸುಗ್ರೀವನಿಗೆ ಈ ತೇಜೋಮಯ ಸುವಾರ್ತೆ ತಿಳಿಸು.

'ಆಂಜನೇಯನೇ, ದುರುಳ ರಾವಣನಿಗೆ ವಿಭೀಷಣನೆಂಬ ಸತ್ತ್ವಮತಿ ಸಹೋದರನಿರುವನು. ಅವನು ನನ್ನನ್ನು ಹಿಂದಿರುಗಿಸಲು ಹೇಳಿದನು. ಆ ನೀತಿಯು ಕಾಮಪಾಶದ ಮೃತ್ಯು ಕಾದಿರುವ ರಾವಣನಿಗೆ ಕಿವುಡು ಕಿನ್ನರಿಯಾಯಿತು. ಈ ವಿಷಯವನ್ನು ವಿಭೀಷಣನ ಮಗಳಾದ ಅನಲಾಕುಮಾರಿಯು ತನಗೆ ತನ್ನ ತಾಯಿ ಹೇಳಿದುದಾಗಿ ತಿಳಿಸಿದಳು.

'ಆ ದುಷ್ಟ ಚೋರನಿಗೆ ಇನ್ನೋರ್ವ ಅವಿಂಧ್ಯನೆಂಬ ವೃದ್ಧ ಸಚಿವನಿರುವನು. ಧರ್ಮದರ್ಶಿಯಾದ ಆತ ಹೇಳಿದ ಹಿತನುಡಿಯನ್ನು ದುರ್ವಿಧಿಯ ಧೂರ್ತರಾವಣ ಧಿಕ್ಕರಿಸಿದನು. ಆ ರಾವಣನು ಮರಣಯಜ್ಞಸ್ತೂಪಕ್ಕೆ ಬಂಧಿಯಾಗಿರುವ ಪಶುವಾಗಿದ್ದಾನೆ.

'ಹೇ ಹರಿಶ್ರೇಷ್ಠನೇ, ನನಗೆ ಶೀಘ್ರದಲ್ಲಿ ಆನಂದ ಸಂಪ್ರಾಪ್ತಿಯಾಗುತ್ತದೆ. ಜನಸ್ಥಾನದಲ್ಲಿ ಸಹೋದರ ಲಕ್ಷ್ಮಣನ ಸಹಾಯವನ್ನು ಅಪೇಕ್ಷಿಸದೆ, ಹದಿನಾಲ್ಕು ಸಾವಿರ ರಕ್ಕಸರೊಡನಿದ್ದ ಖರದೂಷಣರಂತಹ ಬಹು ಕ್ರೂರಿಗಳನ್ನು ನನ್ನ ಪತಿ ಸಂಹರಿಸಿದ್ದಾನೆ. ಆ ವೈರಿ ಭಯಂಕರನು ಈಗ ನನಗಾಗಿ, ಕೈಹಿಡಿದ ಅಬಲೆಗಾಗಿ ತನ್ನ ಬಾಣಾಗ್ನಿಯಿಂದ ಸಾಗರವನ್ನು ಸುಡದಿರುವನೆ? ಅವನ ಬತ್ತಳಿಕೆಯ ಬಾಣವು ರಾವಣನ ಪ್ರಾಣಾಗ್ನಿಯನ್ನು ಕೊನೆಗಾಣಿಸದಿರುವುದೆ?

'ಸಮೀರ ಕುಮಾರನೇ, ಪುರುಷಪುಂಗವನಿಗೆ ಹೇಳು, ತನ್ನ ಮನದನ್ನನನ್ನು ಮನಸ್ಸಿನಲ್ಲಿ ಅನುಭಾವಿಸುತ್ತ, ಪಾದಾರವಿಂದಕ್ಕೆ ಹಣೆಯೊತ್ತಿ ಕಣ್ಣೀರಿನಿಂದ ಮೀಯಿಸಿ ಮತ್ತೆ ಕೈಯಿಂದ ಮುಟ್ಟಿ ಹಣೆಗೊತ್ತಿಕೊಂಡು ಸುಖಿಸಿದಳು ಎಂದು ತಿಳಿಸು.'

ಹೀಗೆ ಹೇಳುತ್ತ, ಹೇಳಿದುದನ್ನು ನೆನೆ ನೆನೆದು ಗೋಳಿಡುತ್ತ ಮೂಕಳಾಗಿ ರೋಧಿಸುತ್ತಿದ್ದವಳನ್ನು ಕರುಣಿ ಮಾರುತಿ ಕಂಡನು. ಅವನ ಸಹನೆ ಬತ್ತಿತು. ಎದೆ

ಕರಗಿತು. ತನ್ನ ವೀರತನದ ದುರ್ಬಲಸ್ಥಿತಿಗೆ ತನ್ನನ್ನೇ ಹಳಿದುಕೊಂಡನು. ಸಹಜ ವಿವೇಕಿಯಾದರೂ, ಆಕ್ಷಣಕ್ಕೆ ಉತ್ಸಾಹದಿಂದ ಉಂಟಾದ ಅವಿವೇಕವೆನ್ನುವಂತೆ ಆ ಹದಿಬದೆಗೆ ಕೈ ಮುಗಿದು ಹೀಗೆ ಹೇಳಿದನು:

'ದೇವಿ, ನಾನು ಇಷ್ಟು ಹೊತ್ತು ಅನುಚಿತವಾದುದನ್ನು ಹರಟುತ್ತಿದ್ದೇನೆ? ನೇರವಾಗಿ ಮಾಡಬಹುದಾದುದಕ್ಕೆ ವ್ಯರ್ಥ ಬಳಸಿನ ಆಲೋಚನೆಯನ್ನು ಅಸಂಬದ್ಧವಾಗಿ ಹೇಳುತ್ತಿದ್ದೇನೆ? ನನ್ನ ಮತ್ತು ಅಖಿಲ ವಾನರರ ತಪದ ಸಾಧನೆಯ ಗುರಿ ದೇವರಾಮಚಂದ್ರನೊಡನೆ ನಿನ್ನನ್ನು ಸೇರಿಸುವುದು ಆಗಿದೆ.

'ಅನಿಂದಿತೆಯೆ, ನಿನ್ನ ಕೃಪೆಯಿದ್ದರೆ ಅದನ್ನು ಕ್ಷಣ ಮಾತ್ರದಲ್ಲಿ ಸಾಧಿಸುತ್ತೇನೆ. ಕಿಷ್ಕಿಂಧೆಗೆ ಸ್ವಲ್ಪ ದೂರದಲ್ಲಿ ಮಾಲ್ಯವತ್ ಪರ್ವತದ ಪ್ರಸ್ರವಣ ಶಿಖರದಲ್ಲಿ ಸತೀಚಿಂತನ ತಪಸ್ವಿ ರಾಘವೇಂದ್ರ ನಿನ್ನನ್ನೇ ಧ್ಯಾನಿಸುತ್ತಿದ್ದಾನೆ. ಅವನ ಸನ್ನಿಧಿಗೆ, ಅಗ್ನಿಯು ಹವಿಸ್ಸನ್ನು ಸರೇಂದ್ರನಿಗೆ ಒಯ್ಯುವಂತೆ ನಿನ್ನನ್ನು ಕರೆದೊಯ್ಯುತ್ತೇನೆ.

'ಓ ಅರಸಿಯೇ, ನಾನು ನಿನ್ನ ಸೇವಕ. ನೀನು ನನ್ನ ಬೆನ್ನಮೇಲೆ ಕುಳಿತುಕೊಳ್ಳುವುದೇ ತಡ, ಈ ಸಾಗರವನ್ನು ಕಾಲುವೆಯ ರೀತಿ ಲಂಘಿಸುತ್ತೇನೆ. ಸಹೋದರಿಯೇ, ದಿಟವಾಗಿ ಅತಿ ಶೀಘ್ರದಲ್ಲಿ ನಿನ್ನ ಹಣೆ ಸ್ವಾಮಿಪಾದವನ್ನು ಸೋಂಕುವಂತೆ ಮಾಡುತ್ತೇನೆ! ಇದಕ್ಕೆ ನಾನು ಅಲೆಯುವ ನಾನು ಪ್ರೀತಿಸುವ, ನಾನುಂಡು ಬದುಕುವ ನನ್ನ ಈ ಮಲೆಯ ಮೇಲೆ ಆಣೆ! ಕಾಡು ಬಯಲುಗಳ, ತೊರೆಕೆರೆಗಳ ಮತ್ತು ಹಣ್ಣುಹಂಪಲುಗಳ ಮೇಲೆ ಆಣೆ!

'ತಾಯಿಯೇ ಕೇಳು. ಇದು ಸಾಕಾಗದಿದ್ದರೆ ಮಂದರ ಪರ್ವತದ ಮೇಲೆ ಆಣೆ! ಮೇರುವಿನ ಮೇಲೆ ಆಣೆ! ವಿಂಧ್ಯ, ಹಿಮಾಲಯ, ಸಹ್ಯಾದ್ರಿ ಪರ್ವತಗಳ ಮೇಲೆ ಆಣೆ! ಗಂಗೆಯಮುನೆಯರ ಆಣೆ! ಕೃಷ್ಣೆ ಗೋದಾವರಿಯರ ಆಣೆ! ಕಾವೇರಿ ತುಂಗಭದ್ರೆಯರ ಆಣೆ! ದೇವಿಯೇ, ಇದಕ್ಕೆ ಯಾವುದೇ ಸಂಶಯದ ಲವಲೇಶ ಛಾಯೆಯನ್ನೂ ಸುಳಿಸಬೇಡ. ನನ್ನ ಈ ಪ್ರತಿಜ್ಞಾ ವಚನವಜ್ರವು ಅಮೋಘವಾದುದು.'

ಅವನಿಸುತೆಯು ವಿದ್ಯುತ್ ಪ್ರವಹಿಸಿದಂತೆ ಹರ್ಷವಿಸ್ಮಿತೆಯಾಗಿ ಪುಳಕಿತಳಾದಳು. ಇಚ್ಛೆ ವ್ಯಕ್ತಪಡಿಸುವುದೇ ತಡ ಅಗಲಿದ ಪತಿಯ ಅಡಿಯ ತಾವರೆಗೆ ನನ್ನ ಮುಡಿಯನ್ನು ತುಂಬಿಯಾಗಿಸುವೆನೆ? ಎದುರಿಗಿರುವ ಈ ಕಪಿಯ ಕಿರಿಯ ಗಾತ್ರಕ್ಕೆ ಇದು ದಿಟವಾಗಿ ಸಾಧ್ಯವೆ? ಅದರ ಧ್ವನಿಯ ಧೈರ್ಯವೇ ತನ್ನ ಸತ್ಯವನ್ನು ಸಾರುತ್ತಿದೆ!

ಚಿಃ ಮರುಳು ಮನಸ್ಸು, ಇದೇನು ಹುಚ್ಚು ಹೆಚ್ಚಾಗುತ್ತಿದೆ! ಕಳವಳವನ್ನು ಅಡಗಿಸಲು ನಗುವನ್ನು ಮುಖದಲ್ಲಿ ಹೊಮ್ಮಿಸುತ್ತ ಆಂಜನೇಯನ ಶುದ್ಧಾತ್ಮ ಉತ್ಸಾಹಕ್ಕೆ ಭಂಗವುಂಟುಮಾಡಲು ಬೆದರಿದಳು. ಪ್ರಮುಖ ಕಾರಣವನ್ನು ಹಿಂದೆ ಅಡಗಿಸಿ, ಗೌಣವಾದುದನ್ನು ಹೀಗೆ ಮುಂದೆಮಾಡಿ ಹೇಳಿದಳು:

'ಪವನಸುತನೇ, ನಿನಗೇಕೆ ತುಂಟತನದ ಈ ಅತಿ ಸಾಹಸ? ಇದಕ್ಕೆ ನೀನು ತಳೆದಿರುವ ಆಕಾರದ ಮಹಿಮೆಯಿರಬಹುದಲ್ಲವೆ? ಈ ನಿನ್ನ ಅತ್ಯಲ್ಪ ದೇಹದಲ್ಲಿ ಅದು ಹೇಗೆ ನನ್ನನ್ನು ಹೊತ್ತು ಸ್ವಾಮಿಯಿರುವ ಸ್ಥಳಕ್ಕೆ ಹಾರುವೆ? ಪರ್ವತ, ಕಾಡು, ಭೂಮಿಯನ್ನು ದಾಟಿ ಅತಿ ಉದ್ದವಾದ ದೂರದ ಅಪಾರ ಸಾಗರವನ್ನು ಹೇಗೆ ದಾಟುವೆ?'

ಬಳೆಯತೊಡಗಿದನಚಲ ಸಂಕಾಶಮದ್ಭುತಂ ಮರುತನೌರಸಪುತ್ರನಾಕಾಶಕೆ!

ಉತ್ಸಾಹಿ ಮಾರುತಿಯು ಆ ಪ್ರಶ್ನೆಯನ್ನು ತನ್ನ ಶಕ್ತಿ ಮತ್ತು ಮಾನದ ಮುಖಕ್ಕೆಸೆದ ಭಂಗವೆಂದು ತಿಳಿದನು. ಬುದ್ಧಿವಂತನಾದ ಹನುಮನು ಹೆಂಗಸಿನ ಇಂಗಿತವನ್ನು ಅರಿಯಲಾರದೆ ತಪ್ಪಿದ ಎಂದು ಹೇಳುವಾಗ ಅದು ಅವನ ಬ್ರಹ್ಮಚರ್ಯದ ಹಿರಿಮೆಯಲ್ಲವೆ! ಈ ಆರ್ಯೆಯು ನನ್ನ ಮಹಿಮೆಯನ್ನು ಅರಿಯಳು. ಅದನ್ನು ತಿಳಿಸಲು ಬೇರೆ ಯಾರೂ ಇಲ್ಲಿಲ್ಲ. ತನ್ನನ್ನು ಹೊಗಳಿಕೊಳ್ಳುವುದು ಸರಿಯಲ್ಲ. ವಿನಯಕ್ಕೆ ಬೇರೆ ಮಾರ್ಗವೂ ಕಾಣುತ್ತಿಲ್ಲ. ಇವಳ ಸಂದೇಹವನ್ನು ನಿವಾರಿಸಲು ಯೋಗಸಿದ್ಧಿಯಿಂದ ಪಡೆದ ಸತ್ತ್ವಪ್ರಭಾವಗಳನ್ನು ತೋರಿಸುತ್ತೇನೆ ಎಂದುಕೊಂಡನು. ಪರ್ವತದಂತೆ ಅದ್ಭುತವಾಗಿ ಆಕಾಶದೆತ್ತರಕ್ಕೆ ಬೆಳೆಯತೊಡಗಿದನು! ಪ್ರಳಯಾಗ್ನಿ ತೇಜಸ್ವಿಯಾಗಿ ಬೆಂಕಿಯ ಕಿಡಿಯನ್ನು ಹೊಮ್ಮಿಸಿ ಉಜ್ವಲಿಸುತ್ತ ಪ್ರಭಂಜನಸುತನು ನಿಂತನು! ಹೀಗೆ ಧ್ವನಿಗೈದನು:

'ಪವಿತ್ರಳೇ, ನನ್ನ ಈ ಮಹದ್ ರೂಪವನ್ನು ನೋಡು. ಪೂಜ್ಯೆಯೇ, ನನ್ನ ಸತ್ತ್ವದ ಬಗ್ಗೆ ಸಂದೇಹಗೊಳ್ಳಬೇಡ. ನಾನು ಹಾರಲು, ಕಡಲು ದನದ ಗೊರಸಿನ ನೀರೆಂದು ತಿಳಿ. ತಾಯಿಯೇ, ನನ್ನ ಈ ಮಹಾ ಬಲಕ್ಕೆ ಗಿರಿವನ ಸಹಿತವಾದ ಲಂಕೆಯು ಒಂದು ಒಣಹುಲ್ಲ ಕಂತೆಯೆಂದು ತಿಳಿ. ಶೋಕವನ್ನು ಬಿಡು. ಕೇಳು ಕೈರವಾಕ್ಷಿಯೆ, (ಬಿಳಿನೈದಿಲೆ) ನೀನು ಅಶೋಕೆಯಾಗಿ ನನ್ನ ಭುಜ ಪರ್ವತವನ್ನು ಏರು. ದೇವರನ್ನು ಹೊತ್ತು ತೇರು ಹೇಗೆ ಗುಡಿಗೆ ನಡೆಯುವುದೊ ಹಾಗೆ ಈ ಸಂಜೆಯೊಳಗೆ ಕಮಲಲೋಚನ ರಾಮಚಂದ್ರನ ಬಳಿಗೆ ಕರೆದುಕೊಂಡು ಹೋಗುತ್ತೇನೆ.'

ಸೀತೆಯು ತನ್ನ ಮಾತಿನ ಆಂತರ್ಯವನ್ನು ತಿಳಿಯದೆ ಬೆಳೆದ ಬ್ರಹ್ಮಚಾರಿಯನ್ನು ನೋಡಿದಳು. ವಾನರ ಶ್ರೇಷ್ಠನ ಭೀಮ ಭರವಸೆಗೆ ಸಂತೋಷಗೊಂಡಳು. ನಸುನಗುತ್ತ ಹೀಗೆ ಹೇಳಿದಳು:

'ಮಹಾತ್ಮನೇ, ನಿನ್ನ ಸತ್ತ್ವವನ್ನು ತಿಳಿಯದೆ ಮಾತನಾಡಿದೆನೆಂದು ಕಳವಳಕ್ಕೊಳಗಾಗಬೇಡ! ನಿನ್ನ ಶರಧಿ ಲಂಘನಕ್ಕಿಂತ ಬೇರೆ ಸಾಕ್ಷಿ ಏಕೆ ಬೇಕು? ಶ್ರೀರಾಮಚಂದ್ರನು ತನ್ನ ಅಬಲೆಯನ್ನು ಅರಸಲು ಈ ಮುದ್ರಾಂಕಿತ ಉಂಗುರವನ್ನು ಇತ್ತು ಅಸಮರ್ಥನನ್ನು ಕಳುಹಿಸುತ್ತಾನೆಯೆ?

'ಸ್ವಾಮಿಗೆ ಈ ನಿನ್ನ ನೂತನ ಸಾಹಸ ಇಷ್ಟವೊ ಅಲ್ಲವೊ? ನಿನಗೆ ಹುಡುಕಲು ಅಲ್ಲದೆ, ಕರೆದುಕೊಂಡು ಹೋಗುವ ಆಜ್ಞೆಯಾಗಿಲ್ಲ. ಸ್ವಾಮಿಯ ಆಜ್ಞೆಯ ಉಲ್ಲಂಘನೆ

ನಿನಗೆ ಮತ್ತು ನನಗೆ ಅಮಂಗಳಕಾರಿ. ಹೇ ಮಹಾವೀರ, ಹಾಗಾಗಿ ನಿನ್ನೊಡನೆ ಬರುವುದು ನನಗೆ ಯುಕ್ತವಾದುದಲ್ಲ. ಏನಾದರೂ ಆಗಲಿ ಎಂದು ನಿಶ್ಚಯಿಸಿ ಬರುವೆನೆಂದರೆ ಪ್ರಬಲ ಭೀತಿಯು ನನ್ನನ್ನು ತಡೆಯುತ್ತಿದೆ. ಕಡಲನ್ನು ನೆಗೆಯುವ ನಿನ್ನ ಭೀಕರ ಆವೇಗಕ್ಕೆ ಮೂರ್ಛೆಗೊಂಡು ನೀರಿಗೆ ಬೀಳುವೆನೋ ಏನೊ? ಮೀನು, ಮೊಸಳೆಗಳಿಗೆ ತಿನಿಸಾಗುವೆನೇನೊ? ನನ್ನನ್ನು ಕರೆದೊಯ್ಯುವಾಗ ನಿನ್ನನ್ನು ಬೆನ್ನಟ್ಟಿ ಬರುವ ರಾಕ್ಷಸರ ಜೊತೆಗೆ ನೀನೊರ್ವನೆ ಅದು ಹೇಗೆ ಕಾದಾಡುವೆಯೊ? ನನ್ನ ರಕ್ಷಣೆಯ ಕಾರಣದಿಂದ ನಿನಗೆ ತೊಂದರೆಯಾದರೆ ರಘುರಾಮನ ಸಾಹಸಕಾರ್ಯ. ಭಗ್ನವಾಗುವುದಿಲ್ಲವೆ? ನೀನು ಅವರೊಡನೆ ಕಾದಾಡುವಾಗ ನಾನು ಹೆದರಿ ಸಮುದ್ರಕ್ಕೆ ಉರುಳಿದರೆ, ನನ್ನನ್ನು ಎತ್ತಿ ಅವರು ಬಚ್ಚಿಟ್ಟರೆ ಆಮೇಲೆ ಹೇಗೆ ಹುಡುಕುತ್ತಿಯಾ? ನೀನು ಮಹಾವೀರನಾದರೂ ಯುದ್ಧದಲ್ಲಿ ಗೆಲುವು ಸೋಲು ಅನಿಶ್ಚಿತವಾದುದು.

'ಮಹಾಮಹಿಮನೇ, ನಿನ್ನ ಮೋಸವನ್ನು ಅರಿತು ಕೋಪಗೊಂಡ ಈ ಘೋರ ರಾಕ್ಷಸರು ನನ್ನನ್ನು ಅತಿ ಚಿತ್ರ ಹಿಂಸೆಯಿಂದ ಕೊಂದರೂ ಕೊಲ್ಲಬಹುದಲ್ಲವೆ? ಹಾಗೆ ಕೊಂದಾಗ, ನಿನ್ನ ಮಹಾ ಪ್ರಯತ್ನ ನಿರರ್ಥಕವಾಗುವುದಲ್ಲವೆ? ನಾನು ಸತ್ತದ್ದನ್ನು ಕೇಳಿ ರಾಮಲಕ್ಷ್ಮಣರು ತಕ್ಷಣ ಪ್ರಾಣ ಬಿಡುವರು; ಜೊತೆಗೆ ಸುಗ್ರೀವನು, ವಾನರ ಸಮಸ್ತರು ಸಾಯುತ್ತಾರೆ. ಅದೂ ಅಲ್ಲದೆ ರಾಮನ ಕೀರ್ತಿಗೆ ಕಾರಣವಾದುದನ್ನು ನೀನು ಕಸಿದುಕೊಂಡೆ ಎಂಬ ಅಪಯಶಸ್ಸು ನಿನಗೇಕೆ?'

ಎಂದು ಹೇಳಿ ಜನಕಸುತೆಯು ತುಸು ಹೊತ್ತು ಧ್ಯಾನ ನಿರತಳಾದಳು. ಅನಂತರ ಹೀಗೆ ಮಾತು ಮುಂದುವರಿಸಿದಳು:

'ದಶಗ್ರೀವನಿಗೆ ಹೇಗೊ ಹಾಗೆ ಬಹುಜನರಿಗೆ ಬಹುಜನ್ಮಗಳ ಬಹುವಿಧದ ಹೊಲೆಯ ಕಳಂಕವನ್ನು ಸವೆಸಬೇಕಾಗಿದೆ. ಹಾಸುಹೊಕ್ಕಾಗಿ ಹೆಣೆದು ಕೊಂಡಿರುವ ಎಲ್ಲರ ಎಲ್ಲ ಕರ್ಮಗಳ ಜಟಿಲ ಜಾಲವೇ ಈ ಜಗತ್ತಿನ ನಾಟಕವನ್ನು ರೂಪಿಸುವುದಲ್ಲವೆ?

'ಕಪಿವರೇಣ್ಯನೇ ಕೇಳು, ನಾನು ನಿನ್ನೊಡನೆ ಬರುವುದು ಹೇಗೂ ಯುಕ್ತವಾದುದಲ್ಲ. ನಾನು ನನ್ನ ಜೀವೇಶನನ್ನು ಹೊರತುಪಡಿಸಿ ಅನ್ಯ ಪುರುಷರನ್ನು, ಪರಕೀಯರನ್ನು ಅವರ ನಿರ್ಬಂಧಕ್ಕೆ ಒಳಪಟ್ಟಲ್ಲದೆ ಮುಟ್ಟುವುದಿಲ್ಲ.

'ಅಣ್ಣ, ನನ್ನನ್ನು ಕ್ಷಮಿಸು. ಉಪಕಾರವನ್ನು ತಿರಸ್ಕರಿಸಿದಳೆಂದು ನೋಯಬೇಡ. ಸದಾಚಾರ ನೀತಿನಯ ಕೋವಿದನೆ, ನಿನಗೆ ಶಿಷ್ಟಾಚಾರ ಆಚರಣೆಯ ನೀತಿಯನ್ನು ವಿವರವಾಗಿ ಹೇಳುವುದೇನಿದೆ? 'ವಾನರ ಮುಖ್ಯನೇ, ಬೇಗ ಸ್ವಾಮಿಯ ಕಡೆಗೆ ನಡೆ. ಕಪಿಪಡೆಗೆ ವಾರ್ತೆಯನ್ನು ಕೊಡು. ನಿನ್ನ ತಂಗಿಯ ಕಡೆಗೆ ಪತಿ ಚರಣ ಸನ್ನಿಧಿಯ ಮಾಂಗಲ್ಯ ಹರ್ಷವನ್ನು, ಮುಕ್ತಿಯನ್ನು ತಂದುಕೊಂಡು.'

ಜಾಣೆ ಸಾಧ್ವಿ ಜಾನಕಿಯ ವಚನದ ವಾಚ್ಯಾರ್ಥ ಮತ್ತು ಸೂಚ್ಯಾರ್ಥವನ್ನು; ಗುರುಲಘು ಮಿಶ್ರಿತೋಕ್ತಿಯ ಭಾವವನ್ನು ಗ್ರಹಿಸಿದನು.

ಮುನ್ನಿನಾಕೃತಿಗಿಳಿದನಣುವನ್ ವಿಸರ್ಜಿಸಿ ಬೃಹದ್ರೂಪಮಂ.

'ಒಳ್ಳೆಯ ಆಶಯದಿಂದ ಹೇಳಿದೆನು. ಸದ್ಭಾವವು ಅವಿವೇಕವಾಯಿತಲ್ಲ. ವಿಕೃತಿಯನ್ನು ಹೊತ್ತ ಬಸುರಿಯ ನಿರೀಕ್ಷಣೆಯ ಭಂಗದಂತೆ, ನನಗೆ ದುಃಖಕ್ಕಿಂತ ಲಜ್ಜೆಯೂ ನೋವುಂಟು ಮಾಡಿತಲ್ಲಾ!' ಎಂದು ಮನಸ್ಸಿನಲ್ಲಿ ಅಂದುಕೊಂಡನು.

ಅವಹೇಳನಕ್ಕೆ ಪ್ರತೀಕಾರ ಮಾಡಲು ಆಗದವನು ಕುಗ್ಗುವಂತೆ ಕ್ಷೀಣಿಸುವಂತೆ, ಸಂಕೋಚಗೊಳ್ಳುವಂತೆ, ಹಿಂಡಲ್ಪಟ್ಟಂತೆ ಅವನ ಆಕೃತಿ ಕಿರಿಕಿರಿದಾಯಿತು. ಅವನು ಬೃಹದ್ ರೂಪವನ್ನು ವಿಸರ್ಜಿಸಿ ಮೊದಲಿನ ಚಿಕ್ಕ ಆಕೃತಿಗೆ ಇಳಿದನು. ಘನತೇಜನು ಉತ್ಸಾಹ ಇಂಗಿ ಸಣ್ಣಗಾಗುತ್ತ ದುಃಖ ಮತ್ತು ನಾಚಿಕೆಯನ್ನು ನುಂಗಿಕೊಂಡನು. ತಗ್ಗಿದ ಹಸನ್ಮುಖಿ, ಅಸುಖಿ ಆಂಜನೇಯನು ಅಂಬಿಕೆಗೆ ಕೈ ಮುಗಿಯುತ್ತ ಹೇಳಿದನು:

'ಸೋದರಿಯೇ, ತಪ್ಪಾಯ್ತು ಕ್ಷಮಿಸು. ನನ್ನ ಅಪಚಾರವನ್ನು ಮನ್ನಿಸು. ಯುಕ್ತವಲ್ಲದುದನ್ನು ನುಡಿದಿರುವೆನೆಂದು ಗೊತ್ತಾಗಿದೆ. ನೀನು ಹೇಳಿದುದೆಲ್ಲವೂ ಪತಿವ್ರತೆಗೆ ಸಹಜ ಧರ್ಮ. ಉತ್ಸಾಹದಲ್ಲಿ ವಿವೇಕವು ತಡವರಿಸಿತು. ಎಡವಿ ಅಪರಾಧವೆಸಗಿತು. ಕ್ಷಮಾಕನ್ಯೆಯೇ, ಅದನ್ನು ಕ್ಷಮಿಸು.

'ಆ ನುಡಿ ಅರಸಿಯ ಗಾಂಭೀರ್ಯ, ಆ ಅಳುಕೆ ಹೆಣ್ಣಿನ ಉಸಿರ ನಡೆ. ಗರತಿಯಾದವಳಿಗೆ ಆ ನಡೆಯೆ ನುಣುಪಾದ ನಿರಿಗೆ. ನನ್ನ ಬೆನ್ನು ಏರಿದರೂ ಹೆಣ್ಣಿಗೆ ಕಡಲ ನೆಗೆತ ಸಾಧ್ಯವೇ?

'ಶ್ರೀರಾಮ ಸತಿಯಾದ ನೀನು ಹೇಳಿದ ಕೊನೆಯ ಕಾರಣವು ಎಲ್ಲಕ್ಕೂ ಮಿಗಿಲಾದುದು, ಘನವಾದುದು. ರಾಮನೊಡನೆಯ ಹೆಚ್ಚಿನ ಗೆಳೆತನವು ಹಾಗೆ ನುಡಿಸಿತು. ಅನ್ಯವನ್ನು ಭಾವಿಸಿದರಿ ಎಂದು ತಾಯಿಯೆ ಮತ್ತೊಮ್ಮೆ ಬೇಡಿಕೊಳ್ಳುತ್ತೇನೆ. ತಾಯಿ, ನಿನ್ನ ಸಂಕಟವು ಆ ಧೈರ್ಯವನ್ನು ನನ್ನಲ್ಲಿ ಪ್ರಚೋದಿಸಿತು.'

ಆ ಸಾಧ್ವಿಯು ತಬ್ಬಿಬ್ಬುಗೊಂಡ ಬ್ರಹ್ಮಚಾರಿಯ ಸಂಕಟವನ್ನು ಅರಿತಳು. ತನ್ನ ಎದೆಯಲ್ಲಿ ಅವಿತಿಟ್ಟುಕೊಂಡಿದ್ದ ಚೂಡಾಮಣಿಯನ್ನು ತೆಗೆದಳು. ಅದು ಮದುವೆಯಲ್ಲಿ ಪತಿಯು ಕೊಟ್ಟಿದ್ದ ಕೃತ್ತಿಕಾ ನಕ್ಷತ್ರಾಕೃತಿಯ ಚೆಲುವಾದ ಶಿರಾಭರಣ. ಅದರ ಝಗ ಝಗಿಸುವ ಕಿಡಿಕಿಡಿಯ ಕಿರಣದ ಹೊಳಪಿಗೆ ಮಾರುತಿಯ ಆತ್ಮ ಪ್ರಕಾಶಿಸಿತು. ಅವನ ಮುಖದ ಮಬ್ಬು ತೊಲಗಿತು. ಧೃತಿಗೆ ಕಾಂತಿ ಮರಳಿತು. ಮೊದಲಿನ ತೇಜಸ್ಸು ಮರುಕೊಳಿಸಿತು. ಹೆಮ್ಮೆಯಿಂದ ಪುಳಕಿತನಾಗಿ ಬೊಗಸೆಯೊಡ್ಡಿ ನೆನಪಿನ ಗುರುತನ್ನು (ಪ್ರತ್ಯಭಿಜ್ಞಾನ) ಸ್ವೀಕರಿಸಿದನು. ಕೃತಜ್ಞತೆಯಿಂದ ನಮಸ್ಕರಿಸಿದನು. ಸೀತೆಯ ಮಾತಿಗೆ ಕಿವಿಯಾದನು.

ಕೊಳ್ ಪ್ರತ್ಯಭಿಜ್ಞಾನಮಂ, ಮದುವೆ ನಿಲ್ವಾಗಳೆನ್ನೆರೆಯ ನೆನಗಿತ್ತಿದಂ.

ಆಂಜನೇಯ ಕಂದನೇ, ಈ ಪ್ರತ್ಯಭಿಜ್ಞಾನವನ್ನು ತೆಗೆದುಕೊ ಮದುವೆಯ ದಿನ ನನ್ನ ಪತಿ ನನಗೆ ನೀಡಿದ್ದು ಇದು. ಮಿಥಿಳೇಂದ್ರ ಅಳಿಯನಾದ ನನ್ನ ನಾಥನಿಗೆ ಈ ಮುಡಿಯ ಒಡವೆ ಸುಪರಿಚಿತವಾದುದು, ಎಂದು ಹೇಳಿ ಸೀತೆ ಮತ್ತೆ ಮೌನಿಯಾದಳು.

ಅನಿಲಸುತನ ಬೊಗಸೆಯಲ್ಲಿ ಮಿರುಗುತ್ತಿದ್ದ ಆಭರಣವನ್ನು ಬಿಚ್ಚುಗಣ್ಣಿನಿಂದ ನೋಡುತ್ತಿದ್ದಂತೆ ನಗೆಯ ಕಾಂತಿ ಅವಳಲ್ಲಿ ಸುಳಿಯಿತು. ಸ್ಮರಸುಖದ ಸ್ಮರಣ ಹರ್ಷದಲ್ಲಿ ಕಣ್ಣುಮುಚ್ಚಿ ಹೇಳಿದಳು:

'ಪುಣ್ಯಾತ್ಮನೇ, ನಿನಗೆ ಒಂದು ನೆನೆಪಿನ ಕುರುಹನ್ನು ಹೇಳುತ್ತೇನೆ. ಅದು ನನಗೆ ಮತ್ತು ನನ್ನಿಯನಿಗೆ ಹೊರತುಪಡಿಸಿ ಯಾರಿಗೂ ಈ ಜಗತ್ತಿನಲ್ಲಿ ತಿಳಿಯದು. ಪ್ರಾಣವಿರುವ ನನ್ನನ್ನು ಕಂಡುದಕ್ಕಿಂತ, ಚೂಡಾಮಣಿಗಿಂತ ಮಿಗಿಲಾದ ಸಾಕ್ಷ್ಯವದು.

'ಒಂದು ಹಗಲು ಚಿತ್ರಕೂಟದ ಪಾದವನ್ನು ತೊಳೆದು ಹರಿಯುವ ಮಂದಾಕಿನಿಯ ಮರಳಿನ ಮೇಲೆ ಚೈತ್ರ ತರುವಿನಿಂದ ಹೊನ್ನ ಹೂಗಳು ಉದುರಿದ್ದವು. ನಾವಿಬ್ಬರು ನೀರಾಟವಾಡಿ ಕನಕ ಸುಮ ರಂಗವಲ್ಲಿಯ ನೆಳಲ ನುಣ್ಣನೆಯ ಮರಳಿನ ಹಸೆಮಣೆಯ ಮೇಲೆ ಮರಳಿ ಮದುಮಕ್ಕಳಾದಂತೆ ಸರಸದಲ್ಲಿ ಕುಳಿತಿದ್ದೆವು. ಮರಕುಟಿಗ ಹಕ್ಕಿಯ ದನಿ, ಕಲ್ಲೊಳೆಯ ಮೊರೆತ, ಬೇಸಗೆಯ ಕಾಡಿನ ಬೇಸರದ ನಿದ್ದೆಯು–ಹಗಲುಗನಸಿನ ಕನವರಿಕೆಯಂತಿತ್ತು. ಆಗ ನನ್ನ ಬೆರಳನ್ನು ಹಿಡಿದು ತಾನೆ ಮಳಲನ್ನು ತಿದ್ದಿ ಒಂದು ಪ್ರಣಯ ಮಂತ್ರವನ್ನು ಬರೆದನು. ಓದು ಎಂದು ಹೇಳಿದನು. ಓದಿದೆನು. ಕೆನ್ನೆ ಕೆಂಪಾದವಳಿಗೆ ಕಲ್ಗಾವಿ (ಕೆಂಪು ಮಣ್ಣಿನ ಉಂಡೆ) ಯನ್ನು ತೇದು ಬೊಟ್ಟಿಟ್ಟನು' ಎಂದು ಹೇಳಿ, 'ಮುದ್ದಾಡಿದನು' ಎಂದು ತನಗೆ ತಾನು ಸವಿಯಾಡಿಕೊಂಡಳು.

ತರಳೆಯು ನಾಚಿದುದನ್ನು ನೋಡಿ, ಆಂಜನೇಯನು ತಾನೂ ಮುಗುಳ್ನಕ್ಕು ಹೇಳಿದನು:

'ದೇವಿ, ಎಲ್ಲವನ್ನೂ ಹೇಳುತ್ತೇನೆ. ತಡಮಾಡದೆ ನನ್ನನ್ನು ಕಳುಹಿಸಿಕೊಡಿ.'

'ವತ್ಸನೇ, ಹಸಿದಿರುವೆ. ಬೇಗ ಫಲಾಹಾರವನ್ನು ತರುತ್ತೇನೆ. ತೆಗೆದುಕೊಂಡು ಹೋಗು.'

'ಆ ಚಿಂತೆ ಬೇಡಿ. ನಾನು ಯೋಗಬಲದಿಂದ ಹಸಿವಿಲ್ಲದವನಾಗಿದ್ದೇನೆ. ಕೇಳಿ. ಅದೋ, ದೂರದಲ್ಲಿ ಕಹಳೆಯ ದನಿ!'

'ಏನದು'

'ಭಟರು ನನಗಾಗಿ ಹುಡುಕುತ್ತಿದ್ದಾರೆ.'

'ಅಯ್ಯೊ, ಶಿವ ಶಿವಾ, ಈ ಪೊದೆಯ ಮರೆಗೆ ಅವಿತುಕೊ.'

ಗಾಳಿಯಾಯ್ತಿದಿರಿರ್ದ ಗಾಳಿಯ ಮಗನ ತಳೆದ ಕಪಿಯ ರೂಪಂ

ಅನಿಲಾತ್ಮಜನು ಸೀತೆಯ ಹೆದರಿಕೆಗೆ ನಕ್ಕನು. ಎದುರಿದ್ದ ವಾಯುವಿನ ಮಗನ ಕಪಿರೂಪವು ಗಾಳಿಯಾಯಿತು. ಅವಳ ಕನಸು ಒಡೆದು ಮನದ ಭೂಮಿಕೆಗೆ ನನಸು ನುಗ್ಗಿತು. ಮರಬಳ್ಳಿಗಳ ನೋಟ. ಝುರಿಯ ಗದ್ಗದಿಸಿ ಹರಿವ ನೀರು. ಧಳಂಧಳಮೆಂದು ಹತ್ತಿರಕ್ಕೆ ಬರುತ್ತಿದ್ದ ಭಯಂಕರ ಪಟಹ ನಗಾರಿಯ ಶಬ್ದದ ಭೀತಿ ಆವರಿಸಿತು. ಎದೆಯಲ್ಲಿದ್ದ ಉಂಗುರವನ್ನು ಕೈಯಿಂದ ಒತ್ತಿಕೊಂಡಳು. ಬೇಟೆನಾಯಿ ಬೆನ್ನಟ್ಟಲು ಸೋತ ಮೊಲದ ಹೃದಯದಂತೆ ಅವಳ ಪ್ರಾಣದುರ್ಗ ಢವಢವಿಸುತ್ತಿತ್ತು.

ರಾಘವ ಶ್ರೀಕಾಂತೆಯು ದಿಗ್ಭ್ರಾಂತಳಾಗಿ ಸುತ್ತಲೂ ನೋಡುತ್ತಿದ್ದಳು. ತಡವೇಕೆ ಮಾಡಿದಳೆಂದುಕೊಂಡು ತನ್ನೆಡೆಗೆ ಓಡಿ ಬರುತ್ತಿದ್ದ ತ್ರಿಜಟೆಯನ್ನು ಕಂಡಳು. ಅವಳು ಗಾಬರಿಯಿಂದ ಹೇಳಿದಳು.

'ಭದ್ರೆ, ಏಳು. ಓ, ಬೇಗೇಳು. ಒಂದು ಕೆಟ್ಟ ಸುದ್ದಿಯನ್ನು ಕೇಳಿದೆ! ಅದೊ ಭೇರಿ ಮೊಳಗುತ್ತಿವೆ! ದೈತ್ಯೇಂದ್ರನ ಆಳುಗಳು ಸುತ್ತು ಆವರಿಸಿದ್ದಾರೆ. ಈ ಅಶೋಕವನದಲ್ಲಿ ಬೇಟೆಗಾಗಿ ಹುಡುಕುತ್ತಿದ್ದಾರೆ! ಅವರ ಬಿಲ್ಲಿಗೆ ಹರಿಣಿಯಾಗಬೇಡ!'

'ಏನಾಯಿತು ತ್ರಿಜಟೆ?'

ಎಂದು ಸೀತೆ ಪ್ರಶ್ನಿಸುತ್ತ, ರಾಮನ ಉಂಗುರದ ಧೈರ್ಯವನ್ನು ಹೃದಯಕ್ಕೆ ಮುಟ್ಟಿಸುವಂತೆ ಚೂಡಾಮಣಿಯ ಜಾಗದ ತನ್ನ ಎದೆಯಲ್ಲಿ ಅದನ್ನು ಅವಿತಿಟ್ಟುಕೊಂಡಳು.

'ಹೇಳುತ್ತೇನೆ. ಏಳು ಏಳು'

ಎಂದು ತ್ರಿಜಟೆಯು ಬೇಟೆಗೆ ನುಗ್ಗಿದ ಬೇಡರು ಮತ್ತು ನಾಯಿಗಳಿಂದ ರಕ್ಷಿಸಲು ತಾಯಿಹುಲಿ ಮರಿಯನ್ನು ಕಾಪಾಡಲು ಗವಿಗೆ ಕಚ್ಚಿಕೊಂಡು ಹೋಗುವಂತೆ, ತನ್ನ ಶಕ್ತಿಯು ದೈವಿಕೋದ್ಯಮದಿಂದ ದೇವರ ಬಲಕ್ಕಿಂತ ಎರಡರಷ್ಟು ಸಫಲವಾಗಲು ಜಗಜ್ಜನನಿಯನ್ನು ಹಿಡಿದೆತ್ತಿದಳು. ತಂದು ಪರ್ಣಕುಟಿಯಲ್ಲಿ ಇಳಿಸಿದಳು. ತಾನು ಕೇಳಿದ ಭಯವಾರ್ತೆಯನ್ನು ತಿಳಿಸಿದಳು:

'ಅದೇನೆಂದು ಯಾರು ತಿಳಿಯುವರಮ್ಮ? ಪುರಕ್ಕೆ ಹೋದ ರಾತ್ರಿ ರೂಪವಿಲ್ಲದ ಭೀತಿ ಹೊಕ್ಕಿದೆ ಎಂದು ಹೇಳುವರು. ಆ ಭೂತವು ಲಂಕೆಯಲ್ಲಿ ಅಲೆದಾಡುತ್ತಿದೆ ಎನ್ನುವರು. ಹೆಬ್ಬಾಗಿಲನ್ನು ಕಾಯುವ ಲಂಕಾಲಕ್ಷ್ಮಿಯು ಹಿಡಿದಿದ್ದ ಅಜೇಯ ಶೂಲವನ್ನು ಬಾಗಿಸಿತೆಂದು ಹೇಳುವರು! ದೈತ್ಯ ಮುಖ್ಯರ ಮನೆಗಳಲ್ಲಿ ರಾತ್ರಿ ನಿದ್ರೆಯನ್ನು ಕಾಣರಂತೆ! ಭೀಕರ ಶಬ್ದಗಳು, ಪ್ರೇತಧೂಮಗಳು, ಪರಿಮಳ ಪಿಶಾಚಿಗಳು, ಘೀಂಕಾರ, ಹ್ರೀಂಕಾರ, ಓಂಕಾರಗಳು, ಬಿಳಿಯ ನೆರಳುಗಳು, ಒಬ್ಬೊಬ್ಬರಿಗೆ ಒಂದೊಂದು ವಿಧವಾದ ಕಣ್ಮಾಯೆ!

'ಅರಮನೆಯ ಗೋಪುರ ಕೂಗಿಕೊಂಡಿತಂತೆ. ಭಟರು ಕಾಯುವುದನ್ನು ಬಿಟ್ಟು ಮೋಹನಿದ್ರೆಗೆ ಒಳಗಾದರಂತೆ, ಕೆಲವು ಸೈನಿಕರು ದಾರಿತಪ್ಪಿ ಅಲೆದರಂತೆ. ಕೆಲವರಿಗೆ ಉನ್ಮಾದವೇರಿತಂತೆ! ತಾಯಿ ಕೇಳಿಸಿಕೋ, ಹೊಕ್ಕಿರುವ ಭೂತವನ್ನು ಸೆರೆಹಿಡಿಯಲು ಮಾಯಾ ಪ್ರವೀಣರು, ಮಂತ್ರ ತಂತ್ರಜ್ಞರು ಶೋಧಿಸುತ್ತಿದ್ದಾರೆ!'

ಹರಸಿದಳು ದೇವಿ ಹನುಮಂಗೆ ನಿರಪಾಯಮಂ

ವೈರಿಯ ಹೆದರಿಕೆಯು ತನಗೆ ಧೈರ್ಯವನ್ನುಂಟು ಮಾಡಲು ದೇವಿಯು ಹನುಮನಿಗೆ ನಿರಪಾಯವಾಗಲೆಂದು ಹರಸಿದಳು. ಸೀತೆಯ ಶಾಂತರೀತಿಯನ್ನು ನೋಡಿದ ತ್ರಿಜಟೆ ಆಶ್ಚರ್ಯಗೊಂಡಳು. ಆಗ ಭೂಸುತೆಯು ಹೀಗೆ ನುಡಿದಳು:

'ರಾಕ್ಷಸೋತ್ತಮ ಸೋದರಿಯೇ ಬೆದರದಿರು. ಅದು ಭೂತ ಅಲ್ಲ; ಧರ್ಮವು ಕಳುಹಿಸಿರುವ ದೇವದೂತ! ಪಾಪಿಗಳು ಹೆದರಬೇಕು; ನಿನಗೆ ಮತ್ತು ನನಗೆ ಹೆದರಿಕೆಯೇಕೆ? ಅದೇನು ಬೊಬ್ಬೆಯ ಅಬ್ಬರ? ತ್ರಿಜಟೆ ಕೇಳು, ಆ ಭಯಂಕರ ಘೋರಾಟ ಆರ್ಭಟವು, ಬೃಹತ್ ಆನೆಯ ಘೀಂಕಾರದ ಜೊತೆ ಸಿಂಹದ ಘರ್ಜನೆ ಕೂಡಿದಂತಿದೆ!'

ತ್ರಿಜಟೆಯು ತರಗಲೆಗಳನ್ನು ಓಸರಿಸಿ, ಬೆಳಕು ಕಿಂಡಿಯಿಂದ ಇಣುಕಿದಳು. ನೋಡಿ ಕೂಗಿ ಹೇಳಿದಳು:

'ದೇವಿ, ಅಯ್ಯಯ್ಯೊ, ಏನು ಹೇಳಲಿ? ಚಂಡಮಾರುತವು ಘೋರ್ಗರೆದು ಬೀಸುತ್ತಿದೆ. ಮರಗಿಡಗಳನ್ನು ಬಡಿದು ಅಲುಗಾಡಿಸುತ್ತಿದೆ. ಆ ರೋಷ ಜಂಝಾವಾತಕ್ಕೆ ಎದ್ದ ಧೂಳು ಭೂಮ್ಯಾಕಾಶವನ್ನು ಒಂದು ಮಾಡಿದೆ. ದೊಡ್ಡರೆಂಬೆಗಳು ಲರಿಲರಿಲ್ ಎಂದು ಮುರಿಮುರಿದು ಮರದಿಂದ ಉರುಳುವಷ್ಟರಲ್ಲಿ ನಭಕ್ಕೆ ಏರುತ್ತಿವೆ! ತಾಯಿ, ಗಿಡುಗ ಎರಗಿದ ಪಕ್ಷಿಯ ಗರಿಗಳಂತೆ ಅವು ಹಾರುತ್ತಿವೆ! ನಮ್ಮ ರಕ್ಷಣೆ ಹೇಗೆಂದು ನನಗೆ ಗೊತ್ತಾಗುತ್ತಿಲ್ಲ.'

'ಆ ವಾಯುದೇವನ ರೌದ್ರ ಇಲ್ಲಿಯತನಕ ಬರುವುದಿಲ್ಲ. ಅಂಜಬೇಡ. ಬಾರಕ್ಕ ಒಳಗೆ. ತುಂಬಾಹಸಿವಾಗುತ್ತಿದೆ, ಹಣ್ಣುಗಳನ್ನು ಕೊಡು.'

ತ್ರಿಜಟೆ ತಾನು ಅಣಿಗೊಳಿಸಿದ್ದ ಹಣ್ಣುಗಳನ್ನು ತಂದುಕೊಟ್ಟಳು. ಸೂರ್ಯವಂಶದ ತರುಣಿಯು ಹಿಂದೆ ಎಂದೂ ತಿಂದಿಲ್ಲವೆಂಬಂತೆ ಅವುಗಳನ್ನು ಸವಿಯುವುದನ್ನು ನೋಡಿ ಅಚ್ಚರಿಗೊಂಡಳು. ನೈವೇದ್ಯವನ್ನು ಸೇವಿಸುವ ಭಗವಂತನನ್ನು ನೋಡಿದ ಭಕ್ತನಂತೆ ತ್ರಿಜಟೆ ಕಣ್ತುಂಬಿ ನೋಡಿದಳು.

❑



~~~~~~~~~~~~~~~~~~~~~~~~ ಸಂಚಿಕೆ – ೫೫ ~~~~~~~~~~~~~~~~~~~~~~~~

ಕಿವಿಗೊಟ್ಟನವನಿಜಾ ರಮಣಂ

ಪ್ರಭಂಜನ ಸುತನು ಸೀತಾದೇವಿಗೆ ಧೈರ್ಯ ಸಂದೇಶವನ್ನು ನೀಡಿದನು. ಅವಳಿಂದ ಚೆಲುವಾದ ಚೂಡಾಮಣಿಯನ್ನು ಪ್ರತಿಯಾಗಿ ಅಮೃತಮಯ ಸಾಕ್ಷಿಯಾಗಿ ಪಡೆದನು. ಕಣ್ಣಿಗೆ ಕಾಣದ ಶರೀರಿಯಾದನು. ಪ್ರಳಯ ಬಿರುಗಾಳಿಯಂತೆ ಅಶೋಕವನದಲ್ಲಿ ಬೀಸಿದನು. ಮರಗಳನ್ನು ತಿರುವಿ ಕೆಡವಿದನು. ಕಾಡನ್ನು ಕಡೆದು ಪುಡಿಮಾಡಿದನು. ಬಿರುಗಾಳಿಯ ಧೂಳನ್ನು ಸ್ತಂಭದಂತೆ ಬಾನಿಗೆ ಎಬ್ಬಿಸಿದನು. ಬಿದಿರಿನ ಮೆಳೆಯ ಒಳಹೊಕ್ಕು ಘೀಂಕರಿಸುತ್ತ ಕಾಡ್ಗಿಚ್ಚಿಗೆ ಮುನ್ನುಡಿ ಇಟ್ಟನು. ರೋಷಘೋಷದಿಂದ
~~~~~~~~~~~~~~~~~~~~~~~~

ನುಗ್ಗಿ ರಾಕ್ಷಸ ಭಟರ ಎದೆಗೆ ಧಿಗಿಲುಂಟು ಮಾಡಿದನು. ಆ ಅಕಾಲ ಆಕಸ್ಮಿಕ ಅದ್ಭುತ ಜಂಝಾವಾತಕ್ಕೆ ಇಡೀ ಲಂಕೆ ನಡುಗಿ ಹೋಯಿತು!

ಕೆಲವರು ಬಿದ್ದರು. ಕೆಲವರು ತರಗೆಲೆಗಳಂತೆ ತೂರಿಹೋದರು. ಕೆಲವರು ನೆಲದಲ್ಲಿ ಬಿದ್ದು ಕಣ್ಣು ಬಾಯಿ ಮಣ್ಣು ತಿನ್ನುವಂತೆ ಒದ್ದಾಡಿದರು. ಗಾಳಿಭೂತದ ಭೀತಿಗೆ ಒಳಗಾದ ಸೈನ್ಯಸಂಕುಲ ದಿಕ್ಕೆಟ್ಟಿತು! ಬೆಟ್ಟದಲ್ಲಿ ಬಿದ್ದ ಮುಂಗಾರು ಮಳೆಗೆ ಪ್ರವಾಹವು ಹೆಚ್ಚುತ್ತಿದೆ. ಹೊಳೆಯ ದಡಗಳನ್ನು ಕೊರೆದು, ಮರದ ಬುಡಗಳನ್ನು ಸಡಿಲಿಸಿ ಉರುಳಿಸಿ ತೇಲಿಸಿ ಕೊಚ್ಚಿಕೊಂಡು ರಭಸದಿಂದ ಮುನ್ನುಗ್ಗುತ್ತದೆ. ಹಾಗೆ ಅನಿಲಸುತನು ತಡೆಗಳನ್ನು ಲೆಕ್ಕಿಸದೆ ಲಂಕಾಪುರದ ಹೆಬ್ಬಾಗಿಲ ಕಡೆಗೆ ಧಾವಿಸಿದನು.

ಸೀತೆಯ ಸುವಾರ್ತೆಯನ್ನು ಕಿಷ್ಕಿಂಧೆಗೆ ತಲುಪಿಸಲು ಮಾರುತಿಯು ಕಾತರನಾಗಿದ್ದನು. ಹಾಗಾಗಿ ದುರ್ಗಮವಾದ ಕೋಟೆಯ ಬಾಗಿಲನ್ನು ಹೊರತುಪಡಿಸಿ ಬೇರೆಡೆಯಿಂದ ದಾಟಿ ಹೋಗುವ ಸಾಹಸಕ್ಕೆ ತೊಡಗಿದನು. ಯೋಗವಿಕ್ರಮಿಯ ಬುದ್ಧಿಗೆ ಕಡಿವಾಣ ಹಾಕುವಂತೆ ಪ್ರತಿಮಾಯೆಯು ತೊಡರನ್ನುಂಟು ಮಾಡಿತು. ಆಗ ಉಬ್ಬಸಗೊಂಡನು. ಬಿರುಗಾಳಿಯಾಗಿ ಬಂದವನು ತಿರಿಗಾಳಿಯಾಗಿ ತಿರ್ರನೆ ತಿರುಗಿ ತತ್ತರಿಸಿದನು.

ಗಾಳಿಗಳ ತಿಕ್ಕಾಟದಿಂದ ಬೆಂಕಿಯುಂಟಾಯಿತು. ಅದು ಜ್ವಾಲಾ ಜಟಾಧಾರಿ ತಾಂಡವ ಶಿವನ ರೀತಿ ವಿಲಯ ನರ್ತನವನ್ನು ಮಾಡಿತು. ಹತ್ತಿರವಿದ್ದ ಮನೆ ಮರಗಳನ್ನು ಬೂದಿಯಾಗಿಸಿತು. ಆ ರೌದ್ರ ನರ್ತನದಿಂದ ತನ್ನವರು ಧೃತಿಗೆಡುತ್ತಿರುವುದನ್ನು ಪುರ ರಕ್ಷಕ ಶಿರೋಮಣಿ, ಪ್ರಹಸ್ತನ ಮಗ ಜಂಬುಮಾಲಿ ನೋಡಿದನು. ದೈತ್ಯಮಾಯಾ ಸಮರ್ಥನಾದ ಅವನು ತನ್ನವರಿಗೆ ಅಭಯವನ್ನು ನೀಡಲು ತನ್ನ ನರರೂಪವನ್ನು ತೊರೆದು ಬಿರುಗಾಳಿಯ ರೂಪವನ್ನು ತಳೆದನು!

ಅಲ್ಲಿ ನೆರೆದ ಸುಭಟ ಸಮೂಹ ಬೆರಗಾಗಿ ನೋಡುತ್ತಿರಲು ಆ ಪ್ರಚಂಡ ಉಗ್ರ ಬಿರುಗಾಳಿಗಳು ಒಂದನ್ನೊಂದು –ಸಿಡಿಲು ಸಿಡಿಲೊಡನೆ ಹೋರಾಡಿದಂತೆ ಆಗಸದಲ್ಲಿ ಸೆಣಸಿದವು. ಕೆಮ್ಮಿಂಚು ವಿದ್ಯುತ್ ನಾಗನ ನಾಲಗೆಗಳಂತೆ ದೆಸೆ ದೆಸೆಯನ್ನು ನೆಕ್ಕಿ ಕುಣಿದವು. ಗಗನ ಮಂಡಲವೆ ಒಡೆದು ಬಿದ್ದಂತೆ ಸದ್ದು ಹೊಮ್ಮಿ, ಕೇಳುವ ಕಿವಿಗೆ ಚಂಡೆ ಬಡಿದಂತಾಯಿತು. ಆಗಸದಿಂದ ಹಲವು ವಿಧದ ವಿಕಾರ ಚೀತ್ಕಾರಗಳು ಕೇಳಿ ಬಂದವು. ಲಂಕೆಯ ಮಹಾದ್ವಾರದ ಭೂಮಿಯು ನೆತ್ತರು ಮಳೆಯಿಂದ ಕೆಸರಾಯಿತು. ಇದ್ದಕ್ಕಿದ್ದ ಹಾಗೆ ಒಂದು ಕ್ಷಣ ಗಾಳಿಗಳು ನಿಂತಂತಾದವು. ಒಡನೆಯೆ ಕೋಟೆಯ ಬಾಗಿಲ ಬಳಿ ಜಂಬುಮಾಲಿಯ ಶವ ಬಿದ್ದಿತು. ಮಾಯೆಯು ಮಾಯಾವಿಯೊಡನೆ ಅಳಿಯಿತು. ತಡೆಯಿಲ್ಲದಂತಾಗಲು ಮಾರುತಿಯು ರಭಸವಾಗಿ ಚಲಿಸುತ್ತ ಬಾಗಿಲಿನಿಂದ ಹೊರಕ್ಕೆ ಹೋದನು.

ಬೂದಿಯೊಳ್ ಬೀಡುಗೈದಂತಾಯ್ತಸುರ ಸೇನೆ, ಪಂಚ ಸೇನಾನಿಗಳ್ ವೆರಸಿ.

ಲಂಕೇಶ್ವರನು ವಾಯುಭೂತವು ನಗರ ರಕ್ಷಕ ಮುಖ್ಯನನ್ನು ಕೊಂದು ದಾಟಿ ಹೋದುದನ್ನು ಕೇಳಿದನು. ತಕ್ಷಣ ದುರ್ಧರ, ವಿರೂಪಾಕ್ಷ, ಭಾಸಕರ್ಣ, ಪ್ರಘಸ, ಯೂಪಾಕ್ಷರೆಂಬ ಐದುಜನ ಇಂದ್ರಜಾಲನಿಪುಣ ವೀರರನ್ನು ಕರೆದು ಹೀಗೆ ಆಜ್ಞಾಪಿಸಿದನು:

'ಬೇಗ ಹೊರಟು ಆ ಗಾಳಿದೆವ್ವಕ್ಕೆ ನೀವು ಇಂದ್ರಜಾಲಸಿದ್ಧರೆಂಬುದನ್ನು ತೋರಿಸಿ, ಲಂಕೆಯ ಎದೆಯಿಂದ ಭೀತಿಯ ಬೂದಿಯನ್ನು ತೂರುವಂತೆ ಅಭಿಚಾರ (ಮಂತ್ರ ತಂತ್ರಗಳಿಂದ ಇತರರಿಗೆ ಕೇಡನ್ನು ಬಯಸಿ ಮಾಡುವ ಹಿಂಸಾಕರ್ಮ) ದಿಂದ ಜನಿಸಿರುವ ಆ ವಾಯುಭೂತವನ್ನು ಗಾಳಿಯಂತೆ ಊದಿರಿ. ಅದು ಇಂದ್ರನ ಮಾಟವೊ? ಕುಬೇರ ಕಳುಹಿಸಿರುವ ಕುಟಿಲ ವಿದ್ಯಾ ಕಾಳ ಕೂಟವೊ? ಎಂಬುದನ್ನು ತಿಳಿದು ಸಮುದ್ರದ ಒಳಸೆರೆಯಾದ ಅತಲ ಲೋಕಕ್ಕೆ ನೂಕಿರಿ!'

ಇಂದ್ರವೈರಿಯ ವಜ್ರವಚನವನ್ನು ತಮ್ಮ ಶಿರಸ್ಸಿನಲ್ಲಿ ಧರಿಸಿ ಆ ಐವರು ವೀರರು ತಮ್ಮ ಸೈನ್ಯದೊಡನೆ ಪುರದ ಹೆಬ್ಬಾಗಿಲಿನಿಂದ ಹೊರ ಹೊರಟರು. ಸಮುದ್ರದಡದ ಕಾಡನ್ನು ಮುರಿ ಮುರಿದು ಮುಂದಕ್ಕೆ ಹೋಗುತ್ತಿದ್ದ ಅರೂಪನಾದ ಅನಿಲಸಿಂಹನ ಹೆಮ್ಮೆ ಮತ್ತು ಅಬ್ಬರದ ರಥ ಮಾರ್ಗವನ್ನು ನೋಡಿದರು. ಹೋ ಹೋ ನಿಲ್ಲು ಎಂದು ಕೂಗಿ ಹೇಳಿದರು ಅವನಂತೆ ವಾಯುರೂಪವನ್ನು ಧರಿಸಿದರು. ಹುಬ್ಬುಗಳ ಮಧ್ಯೆ ಹಣೆಗಣ್ಣುಳ್ಳವನಂತಹ ಕಪಿಕುಲ ಸಮರ ಭೈರವನನ್ನು ತಾಗಿದರು.

ಅಲ್ಲಿ ಏನಾಯಿತು? ಹೇಗಾಯಿತು ಎನ್ನುವುದನ್ನು ವರ್ಣಿಸುವವರು ಯಾರು? ಗಾಳಿ ಹೊಗೆ ಬೆಂಕಿ, ಸಿಡಿಲು ಮಿಂಚುಗಳು, ಕಲ್ಮಳೆಗಳು ಉಲ್ಕೆಗಳು ಎದ್ದವು. ಕೂಗುಗಳು, ನರಳುಗಳು, ವೀರ ಅಟ್ಟಹಾಸಗಳು, ಕಟುವಿಕಟ ಚೀತ್ಕಾರಗಳೊಡನೆ ಪ್ರಳಯ ಶಂಕೆಯನ್ನುಂಟು ಮಾಡುತ್ತ ದೆವ್ವಗಳು ಅಲ್ಲಿ ಕುಣಿದವು! ಕಾಡ್ಗಿಚ್ಚಿನಿಂದ ಕಾಡು ಅಳಿಯಿತು. ಒಮ್ಮೆಲೆ ಆ ಉರಿ ನಂದಿತು. ನಿಶ್ಯಬ್ದವಾಗಿರುವ ಸ್ಥಿತಿಯಲ್ಲಿ ಅಸುರ ಸೇನೆಯು ಐದು ಸೇನಾನಿಗಳೊಡನೆ ಬೂದಿಯಲ್ಲಿ ಬೀಡುಬಿಟ್ಟಂತೆ ಒಂದಾಗಿದ್ದವು.

ಇಂದ್ರಜಿತುವು ಆ ದುರ್ವಾರ್ತೆಯನ್ನು ಕೇಳಿ, ತಂದೆಯ ಅನುಮತಿಯನ್ನು ಪಡೆದು ಹಗಲು ಮುಳುಗುವ ಮೊದಲು ರಣಧರೆಗೆ ಬಂದನು. ಭಸ್ಮ ಶ್ಮಶಾನದ ದರ್ಶನವಾಯಿತು. ವಾಯು ಭೂತಾನ್ವೇಷಣೆಗೆ ಕೈಕೊಂಡ ಪ್ರಯತ್ನ ವ್ಯರ್ಥವಾಯಿತು. ಹಲವರು ಹಲ ಹಲವು ಕಲ್ಪನೆಗಳನ್ನು ಊಹಿಸಿಕೊಂಡರು. ಸತ್ಯವನ್ನು ನಿಶ್ಚಯಿಸಲಾರದೆ, ಭೂಮಿಯನ್ನು ಅಳೆಯಲು ಇಳಿದ ರಾತ್ರಿಯ ಛಾಯೆಗಳಂತೆ ಪುರವನ್ನು ಪ್ರವೇಶಿಸಿದರು.

ಕಂಡೆ ರಾಮನ ರಾಣಿಯಂ! ಕೊಟ್ಟು ತಂದಿಹೆನ್ ವಾರ್ತೆಯಂ. ಚಿಹ್ನೆಯಂ, ಸಂದೇಶಮಂ!

ಗಾಳಿಯ ಶರೀರವನ್ನು ಧರಿಸಿದ ಅನಿಲಾತ್ಮಜನು ಲಂಕೆಗೆ ನಿರಾಕಾರ ಭೀತಿಯ, ಅತಿಭಯದ, ಸಂಶಯದ ರಾಹು ಹಿಡಿಯುವಂತೆ ಮಾಡಿದನು. ಆ ಉತ್ಸಾಹದಲ್ಲಿ ಹಿಗ್ಗಿದನು. ವಾಯುವೇಗದಲ್ಲಿ ನೂರು ಯೋಜನ ಸಮುದ್ರದ ನೀಲ ಸೀಮೆಯನ್ನು ದಾಟಿದನು. ಕಪಿಕುಲಜರು ಕೊರಳು ನಿಮಿರಿಸಿ ಕಾತುರತೆಯಿಂದ ಕಾಯುತ್ತಿದ್ದರು. ಅವರಿಗೆ ಸಮುದ್ರವನ್ನು ಕಲಕಿ ತಮ್ಮೆಡೆಗೆ ಬರುತ್ತಿದ್ದ ಬಿರುಗಾಳಿಯ ಆರ್ಭಟ ಕಂಡಿತು. ಜಾಂಬವಂತನು ಮಹೇಂದ್ರ ಪರ್ವತದ ಶಿಖರದ ಶಿಲೆಯ ಮೇಲೆ ಕುಳಿತಿದ್ದನು. ಅವನು ಅಂಗದನ ಮುಖದಲ್ಲಿ ಮೂಡಿದ ಪ್ರಶ್ನೆಗಳ ಇಂಗಿತವನ್ನು ಅರಿತು ಹೇಳಿದನು:

'ಆಶ್ಚರ್ಯ, ಹೊತ್ತಲ್ಲದ ಹೊತ್ತಿನಲ್ಲಿ ದಕ್ಷಿಣದ ಗಾಳಿಯು ಕಡಲನ್ನು ಕಡೆಯುತ್ತ ಬರುತ್ತಿದೆ! ಇದು ಸಹಜವಾದುದಲ್ಲ. ಇದು ಆಂಜನೇಯನ ವೇಗದಿಂದಾದ ಕೃತಕ ಸೃಷ್ಟಿ. ಅವನು ನಿನ್ನೆ ನೆಗೆದಾಗ ಸಮುದ್ರವು ಇದೇ ರೀತಿ ಕಲಕಿತ್ತು. ದೂರ ದೃಷ್ಟಿ ಹರಿಸಿ ಆಕಾಶವನ್ನು ನೋಡುತ್ತಿರಿ. ಆಕಾಶಗಾಮಿಯಾದ ಅವನು ಕಾಣುತ್ತಾನೆ. ವಿಜಯ ವಾರ್ತೆಯನ್ನು ತರುತ್ತಾನೆ.'

ತಮ್ಮ ಅಂತರಂಗದ ಮೂಕ ಇಚ್ಛೆಗೆ ನಾಲಗೆಯನ್ನಿತ್ತ ಮುದಿತನಕ್ಕೆ ಗೌರವವನ್ನು ತೋರಿಸುವಂತೆ ಎಲ್ಲರೂ ದಕ್ಷಿಣದಿಕ್ಕಿನತ್ತ ದೃಷ್ಟಿ ಹರಿಸಿದರು. ಕಾಮರೂಪಿಯನ್ನು ಕಾಣಲು ಅಪೇಕ್ಷೆ ಹೊಂದಿದ ಕಪಿಧ್ವಜರ ದೃಷ್ಟಿಯ ಬಾಯಾರಿಕೆಗೆ ನಭದ ನೀಲಿಯೆ ಇನ್ನೊಂದು ಸಮುದ್ರವಾಯಿತು.

ದೂರದಲ್ಲಿ ಕಾಣುತ್ತಿದ್ದ ಸಮುದ್ರದ ಗಾಳಿಯು ಬಳಿ ಬಳಿಗೆ ಸಾರಿಬಂತು. ವಾನರ ಸೇನೆಯು ತತ್ತರಿಸುವಂತೆ ಗಿರಿಯ ನೆತ್ತಿಯನ್ನು ಅಪ್ಪಳಿಸಿತು. ಆಗ ಮರ ಮರಗಳು ಕೊಂಬೆ ಕೊಂಬೆಗೆ ತಿಕ್ಕಿ ಒರಲಿದಂತಾಯಿತೆ? ಬಿದಿರ ಮೆಳೆ ಕೀಚೆಂದು ಕೀರಿದಂತಾಯಿತೆ? ಪಕ್ಷಿ ಸಂಕುಲವು ಒಕ್ಕೊರಲಿನಿಂದ ಕೂಗಿದಂತಾಯಿತೆ? ಗಾಳಿಯು ಅಕ್ಷರ ಅಕ್ಷರವನ್ನು ವ್ಯಾಖ್ಯಾನಿಸಿ ಹೇಳಿದಂತಾಯಿತೆ? ಸುಗ್ರೀವ ಸೇನಾ ಸಮಿತಿಯು ತೆಕ್ಕನೆ ಉಕ್ಕಿದ ಆನಂದದಿಂದ ಆಶ್ಚರ್ಯಗೊಂಡು ಅದನ್ನು ಕಿವಿಗೊಟ್ಟು ಆಲಿಸಿತು.

'ರಘುಕುಲ ಕಮಲರವಿ ಉದಯಿಸಲಿ! ಕಪಿಕುಲದ ಕಡಲ ಚಂದ್ರಸಂಪದಕ್ಕೆ ಅಭ್ಯುದಯವಾಗಲಿ! ವಾಲಿಸುತನ ಅನುಚರರೆ ಸಾಹಸ ಸಿಂಹನ ಬಾಯಿಯ ಬೇಟೆಗೆ ಗಜ ಸಿಕ್ಕಿರುವ ಹೆಮ್ಮೆಗೆ ಕೋಡು ಮೂಡಲಿ! ಸಿಕ್ಕಿದಳು ದೇವಿ, ಸೀತಾದೇವಿ! ಆ ಮಾತೆಯನ್ನು ಕಂಡೆನು! ರಾಮನ ರಾಣಿಯನ್ನು ಕಂಡೆನು! ಗುರುತನ್ನು ಕೊಟ್ಟು ವಾರ್ತೆಯನ್ನು, ಚಿಹ್ನೆಯನ್ನು, ಸಂದೇಶವನ್ನು ತಂದಿದ್ದೇನೆ!'

ಉಘೇ, ಉಘೇ ಎಂಬ ವಾನರರ ಉತ್ಸಾಹ ಘೋಷಕ್ಕೆ ಸಮುದ್ರದ ದಡ, ಗಿರಿಗುಡ್ಡ, ಗುಹೆ ಕಾಡುಗಳು ಕಂಪಿಸಿದವು. ಅವರು ಜಯಗೀತೆಯನ್ನು ಹಾಡತೊಡಗಿದರು.

ಅತೀಂದ್ರಿಯವು ಕೃಪೆಗೊಂಡು ಇಂದ್ರಿಯ ಗ್ರಾಹ್ಯತೆಗೆ ಒದಗಿತು ಎಂಬಂತೆ ಹೇಮಧೂಳಿಯ ಮಂಜು ಮಾರ್ದನಿ ಗೊಡುವ ಮಹೇಂದ್ರ ಪರ್ವತವನ್ನು ಮುಸುಕಿತು. ಸಂಜೆ ಗೋವಿನ ಗೊರಸುಗಳಿಂದ ಎದ್ದ ಗೋಧೂಳಿ ಕುಂಕುಮವೆರಚಿ ವಾಯುಪುತ್ರನನ್ನು ಸಶರೀರಿಯಾಗಿ ಬರಲು ಕರೆಯಿತು. ಆಗ ಸುವರ್ಣ ಮಂಜಿನ ನಡುವೆ ರಾಮಸಖನ ರೂಪು ರೇಖೆಗೊಂಡಿತು. ಪರಿಚಯದ ಮನುಜಾಕೃತಿಯನ್ನು ಕಂಡ ತಕ್ಷಣವೇ ಜನರು ದರುಶನಕ್ಕಾಗಿ ಮತ್ತು ಅವನ ಪಾದ ಧೂಳಿಯನ್ನು ಧರಿಸಿ ಧನ್ಯರಾಗಲು ಮಣಿದು ಮುನ್ನುಗ್ಗಿದರು.

ಸೇನಾ ಸಮುದ್ರದ ಉತ್ಸಾಹ ಪೂರ್ಣ ಅಲೆಗಳು, ಸಂತೋಷ ಘೋಷಗಳು ಕ್ರಮೇಣ ನಿಧಾನವಾದವು. ಆಗ ಅಂಗದನು ನೀಲಾದಿಗಳನ್ನು ಒಳಗೊಂಡು ಸಂಭ್ರಮದಿಂದ ಹೋಗಿ ಆ ಮಹಾವೀರನನ್ನು ಕೈ ಮುಗಿದು ಕರೆತಂದನು. ಮಹೇಂದ್ರಗಿರಿಯ ಎತ್ತರದ ಮಣಿಶಿಲೆಯ ಸಿಂಹಾಸನದಲಿ ಕುಳ್ಳಿರಿಸಿದನು. ಅವನ ಸುತ್ತಲೂ ಸಭೆ ನೆರೆಯಿತು. ವಾನರರು ತಮ ತಮಗೆ ದೊರೆತ ಬಂಡೆ, ಮರಗೋಡುಗಳಮೇಲೆ ಕುಳಿತರು. ಕಪಿಕುಲದ ಕುತೂಹಲ ಹರ್ಷ ವಿಸ್ಮಯಗಳನ್ನು ಕಂಡು ಆಂಜನೇಯನು ಪುಲಕಗೊಂಡನು. ಸೂತ್ರರೂಪದಲ್ಲಿ ತನ್ನ ಸಾಹಸದ ಕಥೆಯನ್ನು ಹೇಳಿದನು.

ಅದನ್ನು ಕೇಳಿದ ಸಭೆಯು ಹುಚ್ಚೆದ್ದು ಹೋಯಿತು. ಒಬ್ಬೊಬ್ಬರು ಒಂದೊಂದು ಸಲಹೆಯನ್ನು ಉದ್ಘರಿಸಿದರು:

'ತಡವೇಕೆ? ಸಮುದ್ರವನ್ನು ದಾಟೋಣ, ದೇವಿಯನ್ನು ತಂದು ರಾಮಚಂದ್ರನಿಗೆ ಒಪ್ಪಿಸೋಣ!'

'ಆ ಖೂಳ ಲಂಕೇಶನನ್ನು ಕೊಲ್ಲೋಣ.'

'ಹೇಗಿದ್ದರೂ ಅವಧಿ ಮೀರಿದೆ, ಕಿಷ್ಕಿಂಧೆಗೆ ಬರಿಗೈಲಿ ಹೋಗುವುದು ಸರಿಯೆ? ನಮ್ಮ ಕಾರ್ಯ ಕೈಗೂಡಿಸಿಯೆ ಹೋಗೋಣ.'

'ಹನುಮಂತನಿಗೆ ಗೆಲುವಾಗಲಿ. ಮರುತಾತ್ಮಜನಿಗೆ ಗೆಲುವಾಗಲಿ. ಅಂಜನಾಸುತನಿಗೆ ಗೆಲುವಾಗಲಿ.'

ಆ ಘೋಷಗಳು ನಭಮಂಡಲದಲ್ಲಿ ಮಾರ್ದನಿಗೊಂಡವು. ಮಹೇಂದ್ರಗಿರಿಯ ಗುಹೆಗಳು ಅನುರಣಿಸಿದವು. ಆ ಜಯ ಜಯಕಾರವನ್ನು ಕಡೆಕಡೆದು ಕಡಲು ಮೊರೆಯಿತು. ಅದು ನಿದ್ದೆಯಲ್ಲಿದ್ದ ದಿಗ್ಗಜಗಳ ಕಿವಿಗೆ ಕಠಾರಿಯಂತಿತ್ತು.

ಒಮ್ಮನವನೊಕ್ಕೊರಲ್ ಒಪ್ಪಿಗೆಯನುಲಿದುದು ಕಪಿಧ್ವಜಿನಿ.

ಉತ್ಸಾಹದ ಮಧ್ಯೆ ಬುದ್ಧಿ ಏಳುವಂತೆ ವೃದ್ಧನಾದ ಜಾಂಬವಂತನು ಎದ್ದನು. ಕರಡಿಯ ಚರ್ಮದ ಉಡುಪಿನ ಗಂಭೀರ ವ್ಯಕ್ತಿತ್ವದ, ಎಲ್ಲರ ಗೌರವಕ್ಕೆ ಪಾತ್ರನಾದವನನ್ನು ಕಂಡು ಸೈನ್ಯ ಸಂಭ್ರಮ ಶಬ್ದವು ಶಾಂತವಾಯಿತು. ಅವನು ಅವರನ್ನುದ್ದೇಶಿಸಿ ಹೀಗೆ ಹೇಳಿದನು:

'ನಿಮ್ಮ ಹೆಮ್ಮೆಯ ಅಮೃತ ನೊರೆಯು ಉಕ್ಕಿ ಮಗಮಗಿಸಿ ಹರಿಯುತ್ತಿದೆ. ಅದು ನನ್ನ ಮುಪ್ಪಿನ ಮನಕ್ಕೆ ಉತ್ಸಾಹವನ್ನುಂಟು ಮಾಡಿದೆ. ನಾನು ಮುದುಕನಾದರೂ ನಿಮ್ಮ ತ್ವರಿತಗತಿಯ ಸಾಹಸಾಶ್ವದ ಬೆನ್ನನ್ನು ಏರಿದ್ದೇನೆ. ಆದರೆ ಅದಕ್ಕೆ ವಿವೇಕದ ಕಡಿವಾಣವು ಜಗ್ಗಿ ಬಿರಿಯಿಕ್ಕುತ್ತಿದೆ. ಈ ಮಾರುತಿಯು ನಮ್ರಾತ್ಮನಾದ ವೀರ. ಅವನು ತನ್ನ ಅಪ್ರತಿಮ ಸಾಹಸವೆಲ್ಲವನ್ನು ಸುಲಭವೆನ್ನುವಂತೆ ವರ್ಣಿಸಿರುವನು. ಅದನ್ನು ನೀವು ಸರಳ ಸಾಮಾನ್ಯವೆಂದು ತಿಳಿಯದಿರಿ.

'ನಾವು ನೂರು ಯೋಜನ ವಿಸ್ತೀರ್ಣವಾದ ಸಮುದ್ರವನ್ನು ದಾಟಬೇಕಾಗಿದೆ! ಆ ಕೋಟೆಯು ದುರ್ಗಮವಾಗಿದೆ! ಲಂಕೆಯವರು ಕೇವಲ ಕಥೆಯ ರಾಕ್ಷಸರಲ್ಲ. ಅವರು ಮಾಯಾ ಪ್ರವೀಣರು ಮತ್ತು ನಾಗರಿಕ ಯುದ್ಧ ಪ್ರವೀಣರು! ಬರಿಯ ಕೆಚ್ಚಿನಿಂದ ಕಾರ್ಯಸಾಧಿಸಲಾಗುವುದಿಲ್ಲ. ಅದಕ್ಕೆ ಸಮರ್ಥರ ಬುದ್ಧಿ, ಸಜ್ಜನರ ಪುಣ್ಯಹೃದಯದ ಸಿದ್ಧಿಯ ಸಹಾಯ ಒದಗದಿದ್ದರೆ ನಮ್ಮ ಉತ್ಸಾಹ ವ್ಯರ್ಥಸಾಹಸವಾಗಿ ಹೋಗುತ್ತದೆ.

'ನಮ್ಮ ದೊರೆಗೆ ನೀಡಿರುವ ಅವಧಿ ಮೀರಿದೆ. ಆದರೆ ಈ ವಾಯುಪುತ್ರನು ತಂದಿರುವ ಚೂಡಾಮಣಿಯು ನಮಗೆ ಸಾಕ್ಷಿಯೂ, ರಕ್ಷೆಯೂ ಆಗಿದೆ. ಕಿಷ್ಕಿಂಧೆಯಲ್ಲಿ ಕಪಿನೃಪ ಸುಗ್ರೀವನು ಮತ್ತು ದಾಶರಥಿ ಸೌಮಿತ್ರಿಯರು ನಾವು ಕೊಂಡೊಯ್ಯುವ ವಾರ್ತಾ ವಿಷಯಕ್ಕಾಗಿ ಅತಿ ಕಾತುರರಾಗಿದ್ದಾರೆ. ಅಲ್ಲಿಗೆ ಸಾಗಲು ಬೇಗ ಏಳಿರಿ. ತಾಯಿ ಕಿಷ್ಕಿಂಧೆ ನಮಗಾಗಿ ಕಾಯುತ್ತಿದ್ದಾಳೆ. ದೊರೆಯ ಆಜ್ಞೆಯೇ ಮುಂದಿನ ಮಾರ್ಗ. ಅದೇ ನಮಗೆ ನಿಷ್ಠೆ.'

ಹಿರಿಯನ ಮಾತಿಗೆ ಕಪಿಧ್ವಜರೆಲ್ಲರೂ ಒಕ್ಕೊರಲಿನಿಂದ ಒಪ್ಪಿಗೆ ಸೂಚಿಸಿದರು. ವಾನರ ವಾಹಿನಿಯು ಮಹೇಂದ್ರಾಚಲದ ಗಿರಿ ಶಿಖರದಿಂದ ಇಳಿಯಿತು. ಉತ್ತರದಿಕ್ಕಿನ ಕಿಷ್ಕಿಂಧೆಯ ಕಡೆಗೆ ಪ್ರವಾಹದಂತೆ ಭೋರ್ಗರೆಯುತ್ತ ಸಾಗಿತು. ದಟ್ಟ ಕಾಡು ಬೆಟ್ಟ ಹೊಳೆ ತೊರೆ ಬಯಲು ಬೀಡುಗಳನ್ನು ಹಿಂದಿಕ್ಕಿ ಬಹುದೂರ ಸಾಗಿತು. ಆಗ ದಾರಿಯಲ್ಲಿ ದಧಿಮುಖನ ಮಧುವನ ಕಾಣಿಸಿತು. ಅದನ್ನು ಹೊಕ್ಕು ಅವನ ಆತಿಥ್ಯದಿಂದ ಮಧುಸುಖವನ್ನುಂಡರು. ದಣಿವಾರಿಸಿಕೊಂಡರು. ತಮ್ಮ ಸ್ವರ್ಗವಾದ ಬೆಟ್ಟ ಕಾಡುಗಳ ದುರ್ಗಮ ಕಿಷ್ಕಿಂಧೆ ಕಾಣಲು ಮುನ್ನಡೆದರು. ಅದನ್ನು ಕಂಡ ತಕ್ಷಣ ಕೋಟಿ ಕೋಟಿ ಕಂಠಧ್ವನಿಯಲ್ಲಿ ಜಯಘೋಷ ಮಾಡಿದರು. ಅದಕ್ಕೆ ಆ ಗಿರಿನಗರಿ ಸ್ಪಂದಿಸಿತು.

ಸುಗ್ರೀವನು ರಾಮನನ್ನು ಸಂತೈಸಲೆಂದು ಪ್ರಸ್ರವಣ ಶೃಂಗಕ್ಕೆ ಬಂದಿದ್ದನು. ಅವನ ದುಸ್ಥಿತಿಯನ್ನು ನೋಡಿ ಮಾತಾಡಲಾಗದೆ ಖಿನ್ನನಾಗಿದ್ದನು. ಉಸ್ಸೆಂದು ತಲೆಯೆತ್ತಿದನು. ಆಸೆಯಿಂದ ದೃಷ್ಟಿಯನ್ನು ದೂರಕ್ಕೆ ಹರಿಸಿದನು. ಸ್ಥೂಲದೇಹಿಯಾದ ಅವನು ತಕ್ಷಣ ದಿಗ್ಗನೆ ಎದ್ದನು. ಕಾಲಡಿಯಲ್ಲಿದ್ದ ಬಂಡೆಯನ್ನು ಒತ್ತಿದನು. ಅಲ್ಲಿ ಒಣಗಿದ್ದ ಪಾಚಿಯ ಮೇಲೆ ಅವನ ಬೆರಳು ಅಚ್ಚೊತ್ತಿದಂತಾಗಿರಲು, ತುದಿಬೆರಳ ಮೇಲೆ ನಿಗುರಿ ನಿಂತನು.

ರಘೂದ್ವಹ, ನಿನಾದಮಮ್ ಕೇಳ್ ಶುಭಾವಹಮಂತೆ ಕಾಣ್ ಶುಭದ ದರ್ಶನವ!

ಅವಧಿ ಮೀರಿತ್ತು. ತಡವಾಗಿತ್ತು. ಅದುವರೆಗೆ ಏನೊಂದು ಸುದ್ದಿಯ ಸುಳಿವನ್ನು ನೀಡಲಾಗಿರಲಿಲ್ಲ. ರಾಮನ ಅಂತಃಕರಣವು ದುಃಖಾಗ್ನಿಯಿಂದ ಧಗಧಗಿಸುತ್ತಿತ್ತು. ಅದು ಕಪಿಕುಲದ ಗೌರವ ಹಾಗೂ ಶುಭ್ರತೆಗೆ ಮಸಿಲೇಪನದಂತಿತ್ತು. ಹಾಗಾಗಿ ಸುಗ್ರೀವನ ಹುಬ್ಬುಗಳು ಕೋಪದಿಂದ ಗಂಟಿಕ್ಕಿದ್ದವು. ನೋಡನೋಡುತ್ತ ಸಂತೋಷದಿಂದ ಹುಬ್ಬಿನ ಬಿಲ್ಲ ಹೆದೆಯು ಸಡಿಲ ಗೊಂಡಿತು. ಅವನ ಮುಖದಲ್ಲಿ ನಗೆಯ ಬೆಳಕು ಅರಳಿತು. ಆ ಹಿಗ್ಗು ಉಲ್ಲಾಸಕ್ಕೆ ವಿಶಾಲಎದೆ ಉಬ್ಬಿತು. ತಾನು ನೋಡುತ್ತಿದ್ದ ನೋಟದಿಂದ ದೃಷ್ಟಿಯನ್ನು ಹೊರಳಿಸದೆ ಉತ್ಕಟ ಉತ್ಸಾಹದಿಂದ ಹೀಗೆ ಹೇಳಿದನು:

'ರಘುರಾಮನೇ ಏಳು. ಮಂಗಳ ನಿನಾದವನ್ನು ಕೇಳು. ಶುಭದ ದರ್ಶನವನ್ನು ಕಾಣು! ದಾಶರಥಿಯೇ, ನಮ್ಮ ಕೇಡಿನ ಕತ್ತಲೆಯನ್ನು ಒತ್ತಿ ಪುಣ್ಯದ ಉದಯಾಚಲ ಪುಣ್ಯಅರುಣಜ್ಯೋತಿ ಮೂಡುತ್ತಿದೆ. ನೋಡು ಬಾ! ಲಂಕೆಯಿರುವ ದಕ್ಷಿಣ ದಿಕ್ಕಿನಿಂದ ಮಲೆಗಳ ಇಕ್ಕಟ್ಟಿನಲ್ಲಿ ಕಾಡು ಮೇಡಿನ ನಡುವೆ ನಮ್ಮ ಗೂಢಾಚರ್ಯ ಸೇನೆಯು ಹರಿದು ಬರುತ್ತಿದೆ. ಅದರ ಕಿಲಕಿಲದ ಕೋಲಾಹವೇ ಸಫಲತೆಯ ಡಂಗುರವಾಗಿದೆ. ಹಾಗಿಲ್ಲದಿದ್ದರೆ ಅವಧಿ ಮೀರಿ ನಮ್ಮ ಯುವರಾಜ ಅಂಗದನು ಹಿಂತಿರುಗುತ್ತಿದ್ದನೆ!

'ಮಿತ್ರನೇ ದುಃಖವನ್ನು ತೊರೆ. ಬಾ, ನೋಡು. ರಾಮರಕ್ಷೆಯ ಚರಣದುರ್ಗಕ್ಕೆ ಸೀತೆಯ ಪುಣ್ಯ ಶರಣು ಬರುತ್ತಿದೆ!'

ವಿದ್ಯುತ್ ಸಂಪರ್ಕದಿಂದ ಲೋಹದ ಜಡತೆಗೆ ಚೇತನ ತುಂಬಿದಂತೆ ಮೈಥಿಲಿಯ ವಾರ್ತೆಯಿಂದ ರಘುನಂದನನ ಮನಸ್ಸು ಅಮೃತಮಯ ರತಿಮದಿರೆಯಿಂದ ತುಂಬಿತು. ವ್ರತಧಾರಿಯಾಗಿ ಗಡ್ಡ ಮೀಸೆ ಬೆಳೆದು ಭೀಕರ ಮುಖದ ದುಃಖಿಯಾಗಿದ್ದವನು ಸೌಮ್ಯಭಾವಕ್ಕೆ ಒಳಗಾದನು. ಅದ್ಭುತ ನಾದಾನಂದದಿಂದ ಕೋಟೆಯನ್ನು ಪ್ರವೇಶಿಸುತ್ತಿರುವ ವಾಲಿಸುತ ಅಂಗದನ ಸೇನಾ ಸಮುದ್ರವನ್ನು ನೋಡಿದನು. ನೀಲ, ನಳ, ಜಾಂಬವ, ಆಂಜನೇಯರು ಹಿಂದಿರುಗುತ್ತಿರುವ ಯಾತ್ರೆಯನ್ನು ನೋಡಿದನು. ಹತ್ತಿರದಲ್ಲಿಯೆ ನಿಂತಿದ್ದ ಲಕ್ಷ್ಮಣನನ್ನು ನೋಡಿದನು. ಆ ಕಣ್ಣಿನ ಶಂಕೆಯನ್ನು ಅರಿತ ಅವನು ಅಣ್ಣನಿಗೆ ಹೇಳಿದನು:

'ಕೃತಕೃತ್ಯರಾಗದೆ ಇರುವವರಿಗೆ ಈ ಸಂಭ್ರಮ ಸಾಧ್ಯವೆ? ಈ ವಾನರೇಶ್ವರ ಪ್ರಾಜ್ಞನು; ತನ್ನವರ ಹೃದಯವನ್ನು ಅರಿತವನು. ಜೊತೆಗೆ ನಿನ್ನ ನಾಲ್ಕು ತಿಂಗಳ ಉಜ್ವಲ ತಪಸ್ಸಿನ ಸಾಧನಾ ಶ್ರೀಮಂತಿಕೆ ವ್ಯರ್ಥವಾಗುವುದಿಲ್ಲ!'

ಹೀಗೆ ಅವರು ನಿಂತು ಮಾತಾಡುತ್ತಿರಲು ಮಾಲ್ಯವತ್ ಪರ್ವತದ ಸುಂದರ ಕಾಡಿನ ತಪ್ಪಲನ್ನು ಏರಿ ಅಂಗದನ ಸಂಗ್ರಾಮ ಸೇನೆ ಬಂದಿತು. ಅದರ ಮುಂದಿದ್ದ ಹನುಮ, ಜಾಂಬವ, ನೀಲ, ನಳರು ನಗುಮುಖದಿಂದ ಶುಭಕೋರುತ್ತ ಮೂವರಿಗೆ

ಕೈ ಮುಗಿದರು. ರಾಮಚಂದ್ರನ ಮುಖದ ಭೀಕರ ಗಾಂಭೀರ್ಯಕ್ಕೆ ಅಂಗದನು ಬೆರಗಾದನು. ಜಾನಕಿ ವೃತ್ತಾಂತವನ್ನು ಹೇಳಲು ಆಂಜನೇಯನಿಗೆ ಕಣ್ ಸನ್ನೆ ಮಾಡಿದನು.

ದರ್ಶನಮಲ್ತೆ ದಿವ್ಯಮಾ ರಾಮಾಂಜನೇಯರ ಪರಸ್ಪರಂ ಕೃತಜ್ಞತಾಲಿಂಗನಂ?

ಆ ಯೋಗಿಯ ಕಂಠದಿಂದ ವೇದಘೋಷ ಸಮಾನ ವಾಣಿ ಮೊಳಗಿತು:

'ಸೀತಾದೇವಿ ನಿಯತೆ! ಅಕ್ಷತೆ! ದೇವಿ ಸುವ್ರತೆಯಾಗಿ ಅಶೋಕವನದಲ್ಲಿರುವಳು! ದುಃಖದಿಂದ ಬಳಲಿರುವಳು! ನಿನ್ನ ವಿರಹದಿಂದ ದೀನಳಾಗಿರುವಳು! ಹೇ ದಾಶರಥಿಯೆ, ಆ ಪುಣ್ಯಶ್ಲೋಕೆಯನ್ನು ಕಂಡ ನಾನು ಧನ್ಯ.'

ಎಂದು ಹೇಳುತ್ತ ತನ್ನ ಎದೆಯ ಭಂಡಾರಕ್ಕೆ ಕೈಯಿಕ್ಕಿದನು. ವಕ್ಷದ ವಜ್ರರಕ್ಷೆಯಲ್ಲಿದ್ದ ಚೂಡಾಮಣಿಯನ್ನು ತೆಗೆದುಕೊಂಡನು. ನೋಡುವವರ ಕಣ್ಣುಗಳು ನಮಿಸಿದವು. ಪ್ರೀತಿಗೌರವಗಳಿಂದ ಕೂಡಿದ ವಿಶಾಲ ನೇತ್ರಗಳ, ಸೀತೆಯ ಜೀವನದ ಉಸಿರಾದ ರಾಮಚಂದ್ರನಿಗೆ ಅದನ್ನು ನೀಡಿದನು.


ರಘುರಾಮನ ಮನಸ್ಸಿಗೆ ಹಲವಾರು ಸ್ಮೃತಿಗಳು ದುಮ್ಮಿಕ್ಕಿದವು. ಕಣ್ಣುಗಳಿಗೆ ಭಾವದುಬ್ಬರವೇರಿತು. ಕಾಂತೆಯು ಕಾಡಿನಲ್ಲಿ ಮರೆಯಾಗಿ ರೂಪಾಂತರಗೊಂಡು ಮರಳಿ ಮೈದೋರಿದ್ದಾಳೆ ಎನ್ನುವಂತೆ ಆ ಸುಪರಿಚಿತ ಮಣಿಯನ್ನು ಕಂಪಿಸುವ ಕೈಗಳಿಂದ ತೆಗೆದುಕೊಂಡನು.

ಧೀರನಾದ ಅವನು ತನ್ನ ಅಸ್ಥೈರ್ಯಕ್ಕೆ ತಾನೇ ಮುನಿದನು. ಚೂಡಾಮಣಿಯನ್ನು ಒಮ್ಮೆ ನೋಡಿದನು. ಗಿರಿಭವ್ಯ ಮುಖಮುದ್ರೆಯ ಆಂಜನೇಯನನ್ನೊಮ್ಮೆ ನೋಡಿದನು. ಉಕ್ಕುವ ಪ್ರೀತಿಯಿಂದ ಹೆಮ್ಮೆ ಹೊಮ್ಮಿತು. ಅದನ್ನು ನೋಡ ನೋಡುತ್ತ ತೋಳುಗಳನ್ನು ಮುಂದೆ ಚಾಚಿ ನಡೆದನು. ಪವಿತ್ರ ಗೋಪುರ ಗಾತ್ರ ಹನುಮಂತನನ್ನು ಅಪ್ಪಿಕೊಂಡನು!

ನೋಡಿದವರಿಗೆಲ್ಲ ಹರ್ಷಭಾಷ್ಪ ಹೊಮ್ಮಿದವು. ರಾಮ ಆಂಜನೇಯರು ಪರಸ್ಪರ ಕೃತಜ್ಞತಾಲಿಂಗನರಾದುದು ದಿವ್ಯ ದರ್ಶನವಾಯಿತು!

ಪ್ರಸ್ರವಣ ಗಿರಿಶಿಖರದ ಗುಹೆಯ ಮುಂಭಾಗವು ವಿಶಾಲ ಆಸ್ಥಾನವಾಯಿತು. ರಾಮ ಲಕ್ಷ್ಮಣ ಸುಗ್ರೀವರು ಒಂದು ಬಂಡೆಯ ಮೇಲೆ ಕುಳಿತುಕೊಂಡರು. ಇತರರು ಅಲ್ಲಲ್ಲಿ ಕುಳಿತರು. ರಾಮಚಂದ್ರನು ಬಂಡೆಯ ಚಾಚುಡುಬ್ಬಕ್ಕೆ ಮೊಳಕೈಯನ್ನು ಒತ್ತಿ, ಕಪ್ಪುಕೂದಲ ಕರಡಗಲ್ಲದ ಮೇಲೆ ಅಂಗೈಯನ್ನಿಟ್ಟುಕೊಂಡನು. ಎದುರುಗಡೆ ಹತ್ತಿರ ಕುಳಿತ ಹನುಮಂತನಲ್ಲಿ ಕಣ್ಣುನೆಟ್ಟನು. ಸಮೀರ ಕುವರನ ಸಾಹಸ ಅನ್ವೇಷಣೆಯ ಮತ್ತು ಆವೇಶ ಭೀಷಣದ ಕಾವ್ಯಸುಂದರ ಭಾಷಣದ ವಿವರಣೆಗೆ ಕಿವಿಗೊಟ್ಟನು.

❑



~~~~~~~~~~~~~~~~~~~~~~~~~ ಸಂಚಿಕೆ – ೬ ~~~~~~~~~~~~~~~~~~~~~~~~~

ರಣವ್ರತರ್ ವಹ್ನಿರಂಹರ್

ಫಾಲ್ಗುಣದ ಪೂರ್ಣಿಮೆಯ ದಿನಪುಷ್ಪ ಪುಣ್ಯೋದಯದ ಉಷಃಕಾಂತಿಯು ಮೂಡುಬಾನಂಚಿನಲ್ಲಿ ದಳದಳವಾಗಿ ಅರಳಿತು. ಧಳ ಧಳ ಧಳವೆಂದು ಶತ್ರುಗಳನ್ನು ನಿಗ್ರಹಿಸಲು ಹೊರಟ ಪ್ರಯಾಣದ ಭೇರಿರವ ಮೊಳಗಿತು. ಘನೋನ್ನತವಾದ ಪ್ರಸ್ರವಣ ಶಿಖರವು ರೋಮಾಂಚನಗೊಂಡು ಕಂಪಿಸಿತು. ವಾನರ ಮಹಾಸೈನ್ಯ ಸಮುದ್ರವು ದಕ್ಷಿಣ ದಿಕ್ಕಿನ ದೈತ್ಯ ಲಂಕೆಯನ್ನು ಧ್ವಂಸಮಾಡಲು ಉಕ್ಕಿ ಹರಿಯಿತು. ಕಪೀಂದ್ರ ಸುಗ್ರೀವನ ಆಜ್ಞಾಪ್ರಚೋದಿತನಾದ ಸೇನಾನಿ ನೀಲನು ಸಹಸ್ರ ಸಂಖ್ಯೆಯ ಪಥಶಿಲ್ಪಿಗಳನ್ನು ಸೇರಿಸಿಕೊಂಡನು. ಆ ಮಾರ್ಗರಚನಾ ಬಲಸಮರ್ಥರಿಂದ ಹೆದ್ದಾರಿಯನ್ನು
~~~~~~~~~~~~~~~~~~~~~~~~~

ನಿರ್ಮಿಸಿದನು. ಸಸ್ಯ ಜಲ ಫಲ ಸಮೃದ್ಧಿಯಿಂದ ಕ್ಷೇಮಕರವಾಗಿದ್ದ ಸಹ್ಯ ಮಲಯಾದ್ರಿಗಳ ತಪ್ಪಲಿನ ಸುಂದರ ಸೀಮೆಯಲ್ಲಿ ಮುಂದುವರಿದನು. ಅವನನ್ನು ಅಸಂಖ್ಯಾತ ಅಕ್ಷೋಹಿಣಿ ಬಲದ ವೈರಿ ಭೀಕರ ಕಪಿಸೈನ್ಯ ಹಿಂಬಾಲಿಸಿತು.

ಅದನ್ನು ಹೇಳಲು ಸಾಧ್ಯವೆ? ಸಹ್ಯ ಶೈಲವನ್ನು ಕೇಳು; ಮಲಯಗಿರಿಯನ್ನು ಕೇಳು. ಅರಣ್ಯದ ಬೆಟ್ಟದ ಹೊಳೆಗಳ ಗಂಡುನದಿಯನ್ನು ಕೇಳು. ಪ್ರತಿಸ್ಪರ್ಧಿ ಪ್ರತಿಭಟಿಸುತ್ತಿರುವನು, ಮುಂದೆ ಗತಿಯೇನು ಎಂದು ಕೂಗಿಕೊಳ್ಳುವ ರೀತಿ ಉದ್ವೇಗಗೊಂಡ ಸಮುದ್ರವನ್ನು ಕೇಳು! ಅನಂತವನ್ನು ಅಳೆಯಲು ಸಾಧ್ಯವೇ? ಕಡಲ ತೀರದ ಮಳಲನ್ನು ಎಣಿಸಲು ಆಗುವುದೇ? ಅಗಣಿತವು, ಅಳೆಯಲಾಗದ್ದು ಆದ ಅಪಾರ ಧೀರ ಕಿಷ್ಕಿಂಧೆಯನ್ನು ಅಯೋಧ್ಯೆಯು ನಡೆಸಲು, ಅದು ಲಂಕೆಯ ಕಡೆಗೆ ಅದ್ಭುತವೆನ್ನುವಂತೆ ನಡೆಯಿತು!

ಗಿರಿಸದೃಶವಾದ ಗಜ, ಮಹಾ ಬಲಿಷ್ಠ ಗವಯ, ವೀರಾಗ್ರಣಿ ಗವಾಕ್ಷರ ನೇತೃತ್ವದಲ್ಲಿ ಹುಲಿ, ಚಿರತೆಯ ತೊಗಲಿನಿಂದ ಸಿದ್ಧಪಡಿಸಿದ ಉಡುಪುಗಳನ್ನು ಧರಿಸಿದ ಸೈನಿಕರು ಕೂಡಿ ನಡೆದರು. ಅವರು ಮರಗಳ ಬೇರನ್ನೇ ಭಯಂಕರಗದೆಗಳಾಗಿ ಹೊತ್ತು, ಸಾಗಿದರು. ಬಲಗಡೆಗೆ ವಾನರ ಶ್ರೇಷ್ಠ ಋಷಭನು ಸಿಂಹ ಚರ್ಮದಿಂದ ಅಣಿಗೊಳಿಸಿದ ಕವಚವನ್ನು ಧರಿಸಿದ್ದನು. ಅವನು ರುದ್ರನ ಶೂಲಗಳ ಸಹೋದರರೆನ್ನುವಂತೆ ಶೂಲಪಾಣಿಗಳಾಗಿರುವ ಹಗೆಯ ಎದೆಯ ಹೆದರಿಕೆಯ ಸಾಹಸಿಗಳೊಡನೆ ನಡೆದನು. ಎಡಗಡೆಗೆ ಮದೋದಕವನ್ನು ಸುರಿಸುವ ಆನೆ ಗಂಧಹಸ್ತಿಯಂತಹ ಕೆಚ್ಚುಳ್ಳ ಗಂಧಮಾಧನ ಹೆಸರಿನ ಸೊಕ್ಕಿನಿಂದ ಕೂಡಿದ ವಾನರನಿದ್ದನು. ಅವನು ಖಡ್ಗ ಹಿಡಿದ ಗೇಂಡಾಮೃಗ ಚರ್ಮದ ಪರಾಕ್ರಮದ ಕೋಟಿ ಕೋಟಿ ಭರ್ಜಿಯಂತಹ ಸೈನಿಕರಿಗೆ ದಳ ಪತಿಯಾಗಿ ಮುನ್ನಡೆದನು.

ಅಂಗದ ಜಾಂಬವ ಸುಷೇಣ ಶತಬಲಿ ಶಕ್ತಿಶಾಲಿಗಳು ನೂರುಸಾವಿರ ಲಕ್ಷಕೋಟಿ ಸೈನಿಕರ ಜೊತೆಗೂಡಿ ಸೈನ್ಯಹೃದಯಕ್ಕೆ ಕಾವಲಾದರು. ಮೈಂದ ದರೀಮುಖ ರಂಭ ಪ್ರಜಂಘ ನಳ ದ್ವಿವಿದ ವಿನತ ಪನಸ ತಾರಾ ಮುಂತಾದ ಸೇನಾನಿಗಳು ತಮ್ಮ ತಮ್ಮ ಸೇನೆಗಳ ಜೊತೆಗೂಡಿ ನಾನಾ ಮಾರ್ಗದಲ್ಲಿ ಅಲ್ಲಲ್ಲಿ ನಡೆದರು. ಸೇನೆಯ ಮಧ್ಯದಲ್ಲಿ ಕಪಿರಾಜನು ಕೋಸಲೇಶ್ವರನ ಮಕ್ಕಳ ಜೊತೆಗೂಡಿ ಆಂಜನೇಯನ ಅಂಗರಕ್ಷೆಯಲ್ಲಿ ಬಂದನು!

ತುಂಬಿಗಳ ಹಿಂಡು ಮಾಗಿಗೆ ಚರಮಗೀತೆಯನ್ನು ಹಾಡಿದವು. ಸುಗ್ಗಿಯ ನಾಟಕಕ್ಕೆ ನಾಂದಿಯನ್ನು ಉಲಿಯಲು ಕೋಗಿಲೆಗಳ ಕೊರಳು ಹಿಗ್ಗಿತು. ಜೊತೆಗೆ ಸುಗಂಧ ಭರಿತಗಾಳಿ ತೀಡತೊಡಗಿತು. ದಿಕ್ಕುಗಳು ತಿಳಿಯಾಗಿ ವ್ಯಾಪಿಸಿಕೊಂಡವು. ನಡೆದಾಡುವ ದಾರಿ ಸುಖಮಯವಾಯಿತು. ಕಾಡಿನ ಶೀತಲನೀರು ಹಿತವಾಯಿತು. ಮರ ತಾಯಿಯಿಂದ ಚಿಗುರಿನ ತಲೆ ಇಣುಕಿ ಕಣ್ಣಿಗೆ ಚೆಲುವಾಯಿತು. ಆ ರಾಮಸಖನ ಸೇನೆ ಸಹ್ಯ

ಮಲಯಾದ್ರಿ ಸೌಂದರ್ಯ ಸುಖವನ್ನು ಸವಿದು ಮುನ್ನುಗ್ಗುತ್ತಿತ್ತು. ಅವರು ಕುಡಿದ ನೀರಿಗೆ ತೊರೆ ಕೆರೆಗಳು ಬತ್ತಿದವು; ಮರ ಬಳ್ಳಿಗಳಲ್ಲಿ ಹಣ್ಣುಗಳು ಇಲ್ಲವಾದವು; ಹುತ್ತದಲ್ಲಿ ಕಲ್ಪೊಗೆಡಿನಲ್ಲಿ ಮರದ ನಿಬಿಡತೆಯಲ್ಲಿ ಇದ್ದ ಜೇನು ಬರಿದಾದವು. ಜೇನುಗೂಡನ್ನು ಬಿಟ್ಟು ಎದ್ದ ಕೋಟಿ ಕೋಟ್ಯಾನುಕೋಟಿ ಜೇನುಹುಳುಗಳು ಝೇಂಕರಿಸಿ ಆಗಸದ ಮುಖಕ್ಕೆ ಕಪ್ಪನ್ನುಂಟು ಮಾಡಿದವು. ಆ ಸೇನೆ ನಿಂತಲ್ಲಿ ನಿಲ್ಲದೆ ತೊತ್ತಳ ತುಳಿಯುತ್ತ ಆಳವಾದ ಕೊಳ್ಳ ಕಂದರಗಳ ಗಿರಿಯ ಎದೆಗೆ ದಾಳಿಯಿಟ್ಟಿತು!

ಲಂಕೇಶ್ವರನ ಗುಪ್ತಚರ ಪಡೆಯ ಸೀಗೆ ಮೆಳೆಗಳನ್ನು ಎಲ್ಲಿ ಕಂಡರೆ ಅಲ್ಲಿ ಕಡಿದು ಹಾಕಿದರು. ಸೇನಾನಿ ಅಗ್ನಿಯ ಮಗ ನೀಲನು ತನ್ನ ಪಡೆಯ ನಡೆಯನ್ನು ತಡವರಿಸದಂತೆ ಹಗಲಿರುಳು ಮುನ್ನಡೆಸುತ್ತ ದಾವಾಗ್ನಿಯಂತೆ ಬರುತ್ತಿದ್ದನು. ಆಗ ಮುಂದೆ ಮಹೇಂದ್ರಪರ್ವತವು ನೀಲಪಂಕ್ತಿಯಲ್ಲಿ ವೃಕ್ಷಗಳಿಂದ ಕೂಡಿ ಮನೋಹರವಾಗಿ ಗೋಚರಿಸಿತು. ಮಾರುತಿಯು ಸುಗ್ರೀವ ರಾಮಲಕ್ಷ್ಮಣರಿಗೆ ಆ ಸಾಲು ಮಲೆಯ ಮಹಿಮೆಯನ್ನು, ಹಿರಿಮೆಯನ್ನು, ಉನ್ನತಿಯ ಘನತೆಯನ್ನು ತಿಳಿಸಿದನು. ಸಂಪಾತಿ ಕುಳಿತಿದ್ದ ಶಕುನಿಶಿಲೆಯಿದ್ದ ಕಡಿದಾದ ಎಡೆಯನ್ನು ತೋರಿಸಿದನು. ಸಾಗರೋಲ್ಲಂಘನಕ್ಕೆ ಮೊದಲು ಶೋಧನಾ ಸೇನೆಯು ಸಭೆ ಸೇರಿದ್ದ ಪರ್ವತದ ತಪ್ಪಲು ಪ್ರದೇಶವನ್ನು, ಲಂಕೆಯಿರುವ ದಿಕ್ಕಿನ ಭಾಗವನ್ನು ಅದರ ದೂರವನ್ನು ಕುರಿತು ವಿವರಿಸಿದನು. ಆಗ ಕಿವಿಗೆ ಭಯಂಕರವಾದ ರುದ್ರರಮಣೀಯ ಮಹಾಸಮುದ್ರದ ಭಯಂಕರ ಶಬ್ದಕೇಳಿ ಬಂದಿತು.

ಪ್ರಸ್ರವಣ ಗಿರಿಶಿರ ಗುಹಾ ತಪೋಯೋಗದಿಂ ರಸದರ್ಶಿಯಾಗಿರ್ದ ರಸಋಷಿ ರಘೂದ್ವಹ

ಅಯೋನಿಜಳ ಪತಿ ಸೀತಾರಾಮನ ಮನಸ್ಸು ಅರಳಿ ಬಹುದಿನಗಳ ಆಸೆ ಸಿದ್ಧಿಸಿತೆಂದು ಶರಧಿ ದರ್ಶನಕ್ಕೆ ಸಡಗರಿಸಿತು. ಬೆಟ್ಟವನ್ನು ತಲುಪಿದ ಸೇನೆಯು ಅದರ ಸಮೀಪದ ಸೀಮೆಯ ಮೇಲಕ್ಕೆ ಏರಿತು. ದಳಪತಿಯ ಸೂಚನೆಯಂತೆ ಮತ್ತೆ ಅಲ್ಲಿಂದ ಇಳಿದು ಕಂದರದ ಉತ್ತಮ ಮಾರ್ಗದಲ್ಲಿ ಸಾಗಿತು. ಆ ಮಹಾಸೇನೆಯು ಗಿರಿಯ ಚರಣದ ಸಮುದ್ರ ಮೇರೆಯ ಶುಭ್ರದೀಪ್ತವಾದ ಮೃದುಲ ಮರಳ ಕಡಲ ದಡದಲ್ಲಿ ಸಾಗರ ಪ್ರವಾಹಕ್ಕೆ ತಾನು ಸ್ಪರ್ಧಿ ಎನ್ನುವಂತೆ ಬೀಡುಬಿಟ್ಟಿತು!

ಸಿಂಧುಧೀರ ಸಗರಬಂಧು ಶ್ರೀರಾಮನು ಅಂಬುಧಿಯನ್ನು ಪ್ರಪ್ರಥಮವಾಗಿ ನೋಡುತ್ತ ಮುದಗೊಂಡನು. ಮೌನಿಯಾಗಿ ನಿಂತು ನಿಷ್ಪಂದನಾದನು. ಆ ಸಾಗರವು ಅಂಬರದ ಸಲಿಲಾವತಾರವೆನ್ನುವಂತೆ, ಪರ್ವತವೆನ್ನುವಂತೆ ದಿಗಂತದವರೆಗೆ ಹಬ್ಬಿತ್ತು. ಅದು ಅವನ ನೋಟದ ಓಟ ಸೋಲುವವರೆಗೂ ಹಬ್ಬಿ ನಿಟ್ಟುಸಿರು ಹೊಮ್ಮಿಸಿತು. ಆ ಸಲಿಲಾಕಾರವು ಅಪಾರ ಅಪ್ರತಿಮದ ಪ್ರತಿರೂಪವಾಗಿದ್ದು, ಮುನ್ನುಗ್ಗಿ ದಾಳಿ

ಮಾಡುತ್ತದೆಯೊ ಎನ್ನುವ ಅತಿ ಉಗ್ರ ಭ್ರಮೆಯನ್ನುಂಟು ಮಾಡಿತು. ಪ್ರಸ್ರವಣ ಗಿರಿಶಿಖರದ ಗುಹೆಯ ತಪೋಯೋಗ ರಸದರ್ಶಿಯಾಗಿದ್ದ ಅವನ ಮಹನ್ ಮತಿಗೆ ಶರಧಿ ದರ್ಶನದಂತಹ ಅನುಭವವು, ಹಿಂದೆ ಯಾವಾಗಲೂ ಆಶಯ ಪೂರ್ಣವಾಗಿ ಬಂದಿಲ್ಲ ಎಂಬ ತಿಳಿವಿನಲ್ಲಿ ಭವ್ಯಾನುಭೂತಿಯನ್ನುಂಟು ಮಾಡಿತು.

ಅವನು ಸಮುದ್ರಕ್ಕೆ ಸಮನಾಗಿ ಆಗಸವೊ? ಆಗಸಕ್ಕೆ ಸಮನಾಗಿ ಸಮುದ್ರವೊ? ಹಾಗಲ್ಲದೆ ಆ ಎರಡೂ ತಾನೊ? ಎಂದು ನೋಡುತ್ತಿದ್ದನು. ಅವನ ಕಣ್ಣು ಆ ನೀಲ ದ್ವಯಗಳನ್ನು ಹೀರಿತು. ಆ ವರ್ಣದಲ್ಲಿ ಅವನ ಅಂತಃಕರಣ ತೊಯ್ದು ಹೋಯಿತು. ನಾಳ ನಾಳದಲ್ಲಿ ನೀಲಿ ಹರಿದು ಅವನ ಮೈನೆತ್ತರು ನೀಲಿಯಾಯಿತು. ಆ ನೀಲತನು ರಾಮನು ನೀಲಿಮಯನಾದನು. ಹೃದಯದ ಅಲೆಅಲೆಯೆದ್ದು ನರ್ತಿಸಿ ಶ್ರೀಗಂಧದ ಕೊರಡನ್ನು ತೇದು ಮಾಡಿದ ಗಂಧದ ನೊರೆಯಿಂದ ಶೋಭಾಯಮಾನನಾದನು. ಅವನ ಜೀವನ ಸಮುದ್ರವನ್ನು ಪ್ರತಿಕೃತಿಸಿ ಗಾಳಿಯಂತೆ ತೊನೆದಾಡಿತು; ಚಿಮ್ಮುವ ಕಡಲಿನಂತೆ ಅಲ್ಲೋಲ ಕಲ್ಲೋಲವಾಗಿ ರುಂದ್ರ ರಮ್ಯವಾಯಿತು.

ನೀಲನ ಆಜ್ಞೆಗೆ ಶಿರಸಾವಹಿಸಿ ಪಡೆ ಪಡೆಯ ಒಡೆಯರೆಲ್ಲರು ಕಡಲ ದಡದಲ್ಲಿ ಅಲ್ಲಲ್ಲಿ ಶಿಬಿರವನ್ನು ಹೂಡಿದರು. ಬೇರೆ ಪ್ರದೇಶಕ್ಕೆ ಗುಳೆ ಹೊರಟ ಒಕ್ಕಲೆದ್ದ ಪಕ್ಷಿಗಳ ಹಿಂಡು, ವಿಸ್ತಾರವಾದ ಸಮುದ್ರವನ್ನು ದಾಟಿ ರೆಕ್ಕೆ ಸೋತು ದಣಿಯುತ್ತವೆ. ಆಗ ಸಿಕ್ಕಿದ ಮೊದಲ ನೆಲಕ್ಕೆ ಇಳಿದು ವಿಶ್ರಮಿಸಲು ಕಿಕ್ಕಿರಿಯುತ್ತವೆ. ಹಾಗೆ ಕಡಲತೀರವನ್ನು ಚರ್ಮವನ್ನು ಹೊದ್ದ ಪರ್ಣಗೃಹಗಳು ಕವಿದವು. ಅಡಿಗೆ ಮಾಡುವ ಕ್ರಿಯೆಗೆ ಪೀಠಿಕೆ ಬರೆದಂತೆ ಅಲ್ಲಲ್ಲಿ ಹೊಗೆಗಳು ಮೇಲೆದ್ದವು. ಕೆಲವರು ಪುಳ್ಳಿಯನ್ನು ಹುಡುಕಿತಂದರು. ಕೆಲವರು ಹಣ್ಣುಹಂಪಲುಗಳನ್ನು ಅರಿಸಿದರು. ಕೆಲವರು ಗೆಡ್ಡೆ ಗೆಣಸುಗಳನ್ನು ಅಗೆದರು.

ಹಲವರು ದಡದ ಎಡೆಯ ಆಳವಿಲ್ಲದ ನೀರಿನ ಜಾಗದಲ್ಲಿ ಮುಳುಗಿ ಸ್ನಾನಮಾಡಿ ಮೈಯನ್ನು ಸೊಗಸಾಗಿಸಿಕೊಂಡರು. ಇನ್ನು ಕೆಲವು ಯುವಕರು ಅಲ್ಲಲ್ಲಿ ಮಳಲಿನ ಮೆತ್ತೆಯಲ್ಲಿ ಒರಗಿ ಅಂಗಾತವಾಗಿ ಮಲಗಿ ಕಡಲ ಅಲೆಗಳಿಗೆ ಶರೀರವನ್ನು ಒಡ್ಡಿದರು. ಇನ್ನು ಕೆಲವು ಕಿರಿಯರು ಮಳಲನ್ನು ತೋಡಿ ಆಟ ಆಡಿದರು. ಬಾಯಿಗೆ ಬಂದುದನ್ನು ಹಾಡುತ್ತ ಕುಣಿದಾಡಿ, ಒಬ್ಬರೊನ್ನೊಬ್ಬರು ಅಟ್ಟಿಸಿಕೊಂಡು ಓಡಿ ಆಡಿದರು.

ಹೀಗಿರಲು ಪಶ್ಚಿಮ ಮುಗಿಲ ಮಂಚಕ್ಕೆ ಸಂಜೆ ಇಳಿದು ಬಂದಿತು. ಆ ದಿಕ್ಕಿನ ಕಡಲ ನೀರು ಉತ್ಸವದ ಓಕುಳಿಯಂತಾಯಿತು. ಆಗ ಅಗ್ನಿಯ ಕಿಡಿಗಳನ್ನು ಎರಚಿದಂತೆ, ಓಲಾಡುವ ತರಂಗಗಳು ಸರ್ಪಗಳಂತೆ ಕಂಡು ಆ ಸಮುದ್ರವು ಉಗ್ರವಾಯಿತು. ಅವು ರಾಗ ಅನುರಾಗದ ನೆನಪನ್ನುಂಟುಮಾಡಲು ರಾಮಚಂದ್ರನ ಆತ್ಮ ವಿರಹದ ಉರಿಯಿಂದ ದಹಿಸಿತು. ಹಕ್ಕಿ ಹಾಡನ್ನು ಮುಗಿಸಿಗೂಡಿಗೆ ಓಡಿತು. ಜಿಂಕೆಯು ಮೇದುದನ್ನು ಮೆಲುಕು ಹಾಕಲು ಹಕ್ಕೆ ಸೇರಿತು. ಸಾಗರದ ಶಬ್ದ ಮತ್ತು ಸೈನ್ಯದ ಅಬ್ಬರವನ್ನು ಮೌನ

ಅಪ್ಪಿತು. ಕಪ್ಪು ತಾನು ನಿಧಾನವಾಗಿ ಇಳಿದುಬಂದು ಅಪ್ಪಿಕೊಳ್ಳಲು ಬೆಟ್ಟ ಭೂಮಿ ಮಸಿಮುದ್ದೆಯಾಯಿತು. ಲಕ್ಷೋಪಲಕ್ಷ ಚುಕ್ಕಿಗಳು ಆಗಸದಲ್ಲಿ ಹೇಗೊ ಹಾಗೆ ಸಮುದ್ರದ ಎದೆಯಲ್ಲಿ ಚಕಿತಗೊಳಿಸುವಂತೆ ಕಿಕ್ಕಿರಿದವು. ಅಲ್ಲಲ್ಲಿ ಶಿಬಿರ ಶಿಬಿರದಲ್ಲಿ ಅಗ್ನಿ ಹೂ ಅರಳುವಂತೆ ರಂಜಿಸಿದವು!

ಪತ್ನಿಯು ಸೆರೆಯಾಗಿದ್ದ ರಾಕ್ಷಸ ಲಂಕಾದ್ವೀಪದ ದಕ್ಷಿಣ ದಿಕ್ಕನ್ನು ರಾಮಚಂದ್ರನು ದೃಷ್ಟಿಸಿ ನೋಡುತ್ತಿದ್ದನು. ಅವನು ಮೇರೆಗಾಣದ ಸಮುದ್ರವನ್ನು ನೋಡುತ್ತ ಹಲವು ಭಾವದಲೆ. ಮಾಲೆಗಳ ಕಡಲಾಗಿದ್ದನು. ಆ ರವಿಕುಲ ಶಿರಶ್ಯೇಖರನು ಭಾವ ಸುಷುಪ್ತಿಯಿಂದ ಸ್ವಲ್ಪ ಎಚ್ಚೆತ್ತಂತೆ ಅಗ್ನಿ ಪುತ್ರನಿಗೆ ಹೀಗೆ ಹೇಳಿದನು:

'ಅಗ್ನಿಪುತ್ರನೇ, ನೀನು ಅಗ್ರಸೇನಾನಿ. ನಿನ್ನೊಡನೆ ಸ್ವಲ್ಪ ಮಾತಾಡಬೇಕಾಗಿದೆ. ಅದೇನೂ ರಹಸ್ಯವಾದುದಲ್ಲ. ಕಪಿರಾಜನ ಅಂತರಂಗದ ಎಲ್ಲ ಮಂತ್ರಿಗಳು ಕೇಳಲು ಯುಕ್ತವಾದುದು. ಆದರೂ, ಭಾವಭಾರದಿಂದ ಏದುತ್ತಿರುವ ನನಗೆ ನೀನೊಬ್ಬನೇ ಇದ್ದರೆ, ನನ್ನ ನಾಲಗೆಯ ನಡೆಯು ಸರಾಗವಾಗುತ್ತದೆ. ಅನಂತರ ನೀನು ನಮ್ಮ ನಡುವಿನ ಸಂಭಾಷಣೆಯ ಸಾರವನ್ನು ಅವರಿಗೆ ಹೇಳಬಹುದು.

'ಹೇ ವಾನರ ಪ್ರಮುಖನೇ, ನೀನು ಮೌನಿ. ನಿನಗೆ ಮೌನ ಪ್ರಕೃತಿ ಸಹಜ. ಆದರೂ, ನಾನು ಕೇಳಿದುದಕ್ಕೆ ಬಾಯ್ದೆರೆದು ನಿನ್ನ ಎದೆಯೊಳಗಿನ ಉತ್ತರ ಹೇಳಬೇಕು. ಈ ನನ್ನ ನಿನ್ನ ಹೃದಯ ಸಭೆಯಲ್ಲಿ ಮುಚ್ಚು ಮರೆ, ಸಂಕೋಚ ಸಲ್ಲದು.'

'ರಘುಶ್ರೇಷ್ಠನೇ, ನಿನ್ನಿಷ್ಟದ ನುಡಿಯೇ ನನಗೆ ಆಜ್ಞೆ, ಸೇನಾನಿಗಳಿಗೆಲ್ಲ ಪರಮಸೇನಾನಿ ನೀನು. ಮನಬಿಚ್ಚಿ ಹೇಳುತ್ತೇನೆ; ಕೇಳು'

ಅವರಿಬ್ಬರೂ ಚಂಚಲವಾದ ಸಾಗರದ ದಡದಲ್ಲಿ ಒಂದು ಬಂಡೆಯ ಬೆನ್ನಿನ ಮೇಲೆ ಕುಳಿತಿದ್ದರು. ಅದು ಮುಂಗಾಲು ಮುಳುಗಿಸಿ, ಸೊಂಡಿಲಿನಿಂದ ನೀರನ್ನು ಕುಡಿಯುವ ಹೇರಾನೆಯಂತೆ ಅರ್ಧಮೇಲೆ ಅರ್ಧ ಕೆಳಗೆ ಇತ್ತು. ಆ ಬಂಡೆಯನ್ನು ತೆರೆನೊರೆಯ ಮುತ್ತು ಗೊಂಚಲು ಬಡಿದು ಅಪ್ಪಳಿಸುತ್ತಿತ್ತು. ಅದು ಹಾಲಿನ ಚವರಿ ಕೈ ಬೀಸಿದಂತಿತ್ತು. ಹಾಗೆ ಬೀಸುವುದೆ ತಡ ತುಂತುರಿನ ಸೋನೆಯ ನೀರಿನ ಕಣದಿಂದ ಮಿಂಚಿದ ನಕ್ಷತ್ರ ಕಾಂತಿ ಅವರಿಬ್ಬರಿಗೂ ಹಂಚಿದಂತೆ ಸಿಂಪಡಿಸಿತು! ರಾಮಚಂದ್ರನು ತನ್ನ ಮನದ ಭಾವವನ್ನು ಹೀಗೆ ವ್ಯಕ್ತಪಡಿಸಿದನು:

'ಈ ಕಡಲು ಲಂಕೆಯಿರುವ ದೂರಕ್ಕೆ ನೂರು ಯೋಜನ ಹರಡಿಕೊಂಡಿದೆಯಲ್ಲವೆ? ಹಲವು ಯೋಜನ ವಿಸ್ತಾರವಾಗಿರುವ ಈ ಕಡಲ ದಂಡೆಯನ್ನೆಲ್ಲ ಆವರಿಸಿರುವ ಬೃಹತ್ ಸೈನ್ಯವು ಧೈರ್ಯವನ್ನು ಮತ್ತು ಕಣ್ಣಿಗೆ ಹಬ್ಬವನ್ನು ಉಂಟುಮಾಡುತ್ತಿದೆ. ಇದನ್ನು ದೈತ್ಯರ ದಂಡೆಗೆ ದಾಟಿಸುವ ವಿಚಾರವಾಗಿ ನನ್ನ ಮನಸ್ಸು ಕಳವಳಗೊಂಡಿದೆ. ನೀನು ದೀರ್ಘದರ್ಶಿಯಾಗಿರುವೆ. ಉಪಾಯವೇನೆಂದು ಹೇಳು.'

ಧರ್ಮಂ ಸಹಾಯಮಿರೆ, ಧರ್ಮದೇವತೆಯೆಮಗೆ ಕಟ್ಟುವಳ್ ಸೇತುವಂ.

'ದಾಶರಥಿಯೇ, ಚಿಂತೆಯನ್ನು ಬಿಡು. ಧರ್ಮದ ಸಹಾಯವಿರಲು, ಧರ್ಮದೇವತೆಯು ನಮಗೆ ಸೇತುವೆಯನ್ನು ಕಟ್ಟುವಳು. ನಿನ್ನ ತಪಃಶಕ್ತಿಯಿಂದ ಋತಪ್ರಕೃತಿಯು ಚಲಿಸಲಾರದೆ? ನಿನ್ನ ಇಚ್ಛೆಗೆ ಬೆದರಿ ಕಡಲ ಒಡಲು ಬಿರಿದು ದಾರಿ ಮಾಡಿಕೊಡುವುದಿಲ್ಲವೆ? ತನ್ನ ಸಹಜಗುಣ ತ್ಯಜಿಸಿ ಕಲ್ಲು ತೇಲುವುದಿಲ್ಲವೆ? ಅದೂ ಅಲ್ಲದೆ, ನಮ್ಮ ಸೇನೆಯಲ್ಲಿ ಇಂದ್ರಿಯಾತೀತ ಶಕ್ತಿ ಸಂಪನ್ನರಿದ್ದಾರೆ. ಕಡಲನ್ನು ಕೈಯಿಂದ ಅಪ್ಪಳಿಸಿ ಅದು ಇಬ್ಭಾಗವಾಗಿ ಸರಿಯುವಂತೆ ಮಾಡುವ ದೈತ್ಯಕಲಿಗಳಿದ್ದಾರೆ. ವಿಶ್ವಕರ್ಮನಿಗೆ ಸರಿಸಮನಾದ ಯಂತ್ರಕುಶಲಿಗಳಿದ್ದಾರೆ. ನೌಕಕಲಾ ಪರಿಣತರಿದ್ದಾರೆ. ಆಕಾಶಗಾಮಿಗಳಿದ್ದಾರೆ. ನಿನ್ನ ತಪಕ್ಕೆ ಇಂತಹವರ ಸೇವೆ ಅಣಿಯಾಗಿದೆ. ಎದುರು ಕಾಣುತ್ತಿರುವ ಈ ಜಲರಾಶಿ ನಮ್ಮ ಸೈನ್ಯಕ್ಕೆ ಕಡಲೊ ಕಾಲುವೆಯೊ ಎಂಬುದನ್ನು ನೀನೇ ಹೇಳು.'

ಸಹಜ ಮೌನಿಯಾದ ಸೇನಾನಿ ನೀಲನ ಮಹದ್ ಧ್ವನಿಯ ಧೈರ್ಯಕ್ಕೆ ರಾಮನ ಎದೆಯ ಕತ್ತಲೆ ಅಳಿಯುವಂತೆ ವರುಣನ ಆಲಯದ ನೀರಿನ ಚಂಚಲ ಆಕಾಶದಿಂದ ಕೃಷ್ಣಪಕ್ಷದ ಹಿಮಕರ ಚಂದ್ರಕಾಂತಿಯ ಬಿಲ್ಲನ್ನು ಹೋಲುವ ಮಂದ ಚಂದ್ರನು ಮೈದೋರಿದನು. ಮಿನುಗುವ ಅಲೆ ತಲೆಯ ಚೆನ್ನೀರ ಚೆಲುವನ್ನು ಈಕ್ಷಿಸುತ್ತ ಜಾನಕಿರಮಣನು ಮತ್ತೆ ಚಿಂತನೆ ಮಾಡುತ್ತ ನೀಲನಿಗೆ ಹೀಗೆ ಹೇಳಿದನು:

'ನೀನು ಆಂಜನೇಯನಿಂದ ಲಂಕೆಯ ಉಗ್ರಬಲ, ಸಾಮರ್ಥ್ಯವನ್ನು ತಿಳಿದಿರುವೆಯಲ್ಲವೆ?'

'ತಿಳಿದಿರುವೆನು'

'ಈ ಮಹಾಸೇನೆಯಲ್ಲಿ ಸಮುದ್ರವನ್ನು ಎರಡು ಸಲ ದಾಟುವ ಪುಣ್ಯ ಅನೇಕರಿಗೆ ದೊರೆಯಲಾರದು.'

'ನಿಜ ದಾಶರಥಿ.'

'ಸೈನಿಕರು ಎರಡನ್ನೂ ತಿಳಿದಿರುವರೆ?'

'ಮಹಾವೀರ ಸುಗ್ರೀವನು, ಕಿಷ್ಕಿಂಧೆಯಿಂದ ಹೊರಡುವ ಮೊದಲು, ನೆರೆದ ಸೈನಿಕ ಮಹಾಸಭೆಗೆ ಎಲ್ಲ ಕಷ್ಟನಷ್ಟದ ಕಠಿನ ಕಥೆಯನ್ನು ತಿಳಿಸಿದ್ದಾನೆ.'

'ಅಗ್ನಿಪುತ್ರನೇ, ನನ್ನ ಮತ್ತು ನನ್ನ ಸತಿಯ ಮುಂದಿನ ಅನಿಶ್ಚಿತ ಸುಖಕ್ಕೆ ಬಹುಜನರ ಸತಿಸುತರ ಸಂಸಾರ ಸುಖವನ್ನು ಏಕೆ ಬಲಿಕೊಡಬೇಕೆಂದು – ನನ್ನ ಎದೆಯು ಇರಿತಕ್ಕೊಳಗಾಗಿದೆ.'

ಪುರುಷಾರ್ಥಮೊಂದು ಗಂತವ್ಯಮೀ ತ್ಯಾಗಯಜ್ಞಕ್ಕೆ

'ಪ್ರಾಜ್ಞನೇ, ಈ ಸಾಹಸ ಸ್ವಾರ್ಥ ಪ್ರೇರಿತವಾದುದಲ್ಲ. ಈ ತ್ಯಾಗಯಜ್ಞಕ್ಕೆ ಪುರುಷಾರ್ಥ ಸಿದ್ಧಿಯೆ ಪರಮಗುರಿ. ನೀನು ಮತ್ತು ದೇವಿಯರು ನೆಪಮಾತ್ರರು.'

'ಪ್ರಶಂಸನೀಯವಾದುದನ್ನು ಹೇಳಿದೆ. ದಿಟವಾಗಿಯೂ ನೀನು ಪ್ರಾಜ್ಞ.'

'ಋಷಿಗಳ ಶಿಷ್ಯನಾದವನು ಈ ರೀತಿ ಹೇಳಲು, ಅದೇ ನನಗೆ ಬಹುಮಾನ.'

'ಅಲ್ಲಿ ಯಾರೊ ಇಬ್ಬರು ಸಾಮಾನ್ಯ ಸೈನಿಕರು ತಿರಗಾಡುತ್ತಿರುವರಲ್ಲವೆ?'

'ಈ ಕಡೆಗೆ ಬರುತ್ತಿದ್ದಾರೆ.'

'ಅವರನ್ನು ಕರೆ.'

ನೀಲನು ಅವರನ್ನು ಕರೆದನು. ಅವರೆಡೆಗೆ ಬಂದವರಲ್ಲಿ ಓರ್ವ ಉದ್ದನೆಯವನು, ಇನ್ನೋರ್ವ ಗಿಡ್ಡನು ಇದ್ದರು. ಅವರು ಮಹಾಸೇನಾನಿಯನ್ನು ಮತ್ತು ರಘುಕುಲೇಂದ್ರನನ್ನು ಕಂಡು ಧೀರ ಮರ್ಯಾದೆಯಿಂದ ನಮಸ್ಕರಿಸಿದರು. ರಾಮಚಂದ್ರನು ಸ್ನೇಹ ಭಾವದ ಮೃದುದನಿಯಲ್ಲಿ ಕೇಳಿದನು:

'ನೀವು ಯಾರ ಪಡೆಯವರು?'

ಕುಳ್ಳನು ಉದ್ದನೆ ವ್ಯಕ್ತಿಯ ಮುಖವನ್ನು ನೋಡಲು ಅವನು ಉತ್ತರಿಸಿದನು:

'ದೇವ, ಕಪಿಕುಲೋತ್ತಮ ವೀರ ದಧೀಮುಖನ ಧೀರದಳದವರು.'

'ನಿಮ್ಮ ಹೆಸರು.'

'ಇವನು ನನ್ನ ಗೆಳೆಯ ರಂಹ. ನಾನು ವಹ್ನಿ.'

'ನೀವು ಯಾವ ಯುದ್ಧದಲ್ಲಿ ನುರಿತವರು?'

'ಈ ನನ್ನ ಮಿತ್ರ ವಜ್ರಮುಷ್ಟಿಯ ಮಲ್ಲಯುದ್ಧದಲ್ಲಿ ಪ್ರಖ್ಯಾತನು. ನಾವು ಮೊನ್ನೆ ಬರುವ ದಾರಿಯಲ್ಲಿ ಒಂದು ಕಾಡಾನೆಯ ಕೋಡನ್ನು ಮುರಿದು ನೆತ್ತಿ ಬಿರಿಯುವಂತೆ ಅಪ್ಪಳಿಸಿದನು.'

'ನೀನು?'

ರಾಮನ ಆ ಪ್ರಶ್ನೆಗೆ ಉತ್ತರ ನೀಡಬೇಕಾದ ವಿನಯ ಶೈಲಿಯನ್ನು ಆಜಾನುಬಾಹುವಾದ ವಹ್ನಿ ಯೋಚಿಸುತ್ತಿದ್ದನು. ಒಡನೆಯೆ ಸರಳಮನದ ಒರಟು ನಾಲಗೆಯ ಸ್ಥೂಲದೇಹದ ಕುಬ್ಜ ರಂಹನು ಹೀಗೆ ಉತ್ತರಿಸಿದನು:

'ವೈರಿಗಜ ಸಿಂಹನಾದ ವಹ್ನಿದೇವನು ಆಗಸಸಂಚಾರದಲ್ಲಿ ಪರಿಣತ! ಮಹಾ ಮಾಯಾವಿ ಮತ್ತು ಕಾಮರೂಪಿ! ಬಂಡೆಯನ್ನು ಎತ್ತಿ ಕವಣೆಕಲ್ಲಾಗಿ ಬೀಸಿದರೆ ಬಲಯುತ

ಕೋಟೆಗಳು ಒಡೆದು ಹೋಗುವವು! ಬಿಲ್ಲುವಿದ್ಯೆ ಇವನಿಗೊಂದು ಮಕ್ಕಳಾಟ! ಖಡ್ಗಕಲೆಯಲ್ಲಿ ವೀರ! ಗದಾಯುದ್ಧದಲ್ಲಿ ಈತನು ಅತಿ ಭೈರವ!'

ಸನ್ಮಿತ್ರ ರಂಹನು ಮಾತು ಮುಂದುವರಿಸದಂತೆ ತಡೆದ ವಹ್ನಿಯು, ರಾಮಭದ್ರನನ್ನುದ್ದೇಶಿಸಿ ಹೀಗೆಂದು ಕೇಳಿಕೊಂಡನು.

'ರಾಜೇಂದ್ರ. ಮಿತ್ರನ ಅತಿ ಉತ್ಸಾಹದ ಹೇಳಿಕೆಗೆ ಕ್ಷಮಿಸಿ.'

'ವಹ್ನಿಯೇ, ನಿನ್ನನ್ನು ನೋಡಿದರೆ ಆತನು ಹೇಳಿದ್ದು ತುಂಬಾ ಕಡಿಮೆ ಎನಿಸುತ್ತದೆ.'

ಕೋಸಲನೃಪನ ನುಡಿಗೆ ದೀರ್ಘೋನ್ನತನಾದ ವಹ್ನಿಯು ತಲೆಬಾಗಿದನು. ಮತ್ತು ವಿನಯದಿಂದ ಹೇಳಿದನು:

'ದೇವ, ದಧಿಮುಖೇಂದ್ರನ ದಳದಲ್ಲಿ ನಾನೊಬ್ಬ ಅಲ್ಪನೆಂಬುದು ದಿಟ.'

'ನಿನ್ನಂತಹ ಸಾಮಾನ್ಯರಾಗಿರುವ ಯೋಧರನ್ನು ಪಡೆದ ದಧಿಮುಖ ಧನ್ಯನಲ್ಲವೆ? ಪರಸ್ಪರ ಸ್ನೇಹದಿಂದ ಮತ್ತು ಪರಾಕ್ರಮಗಳಿಂದ ನೀವಿಬ್ಬರೂ ಘನ ಸಮರ್ಥರು ಎಂಬುದು ದಿಟ. ವಹ್ನಿ ನಿನಗೆ ಸಹಧರ್ಮಿಣಿಯ ಸಂಗಸುಖವಿರುವುದೇನಯ್ಯ?'

'ನನ್ನೂರಿನಲ್ಲಿ ಇತ್ತು.'

'ನನ್ನ ಕತದಿಂದಾದುದಲ್ತೆ ನಿಮಗೆ ಬನ್ನಮ್, ವಹ್ನಿ?'

ಆ ಪ್ರತ್ಯುತ್ತರದ ವ್ಯಂಗ್ಯೋಕ್ತಿಗೆ ತುಸು ನಕ್ಕು, ಸೀತಾವಲ್ಲಭನು,

'ಇತ್ತೇನು? ಅಯ್ಯೊ ಇದ್ದುದನ್ನು ಬಿಟ್ಟು ಬಂದು ಸಂಕಟಕ್ಕೇಕೆ ಸಿಕ್ಕಿಕೊಂಡೆ? ನಿನ್ನಂತೆ ನಿನ್ನಾಕೆಯು ದುಃಖಿಯಲ್ಲವೆ?' ಎಂದು ಹೇಳಿ ನಿಟ್ಟುಸಿರು ಬಿಡುತ್ತ ಮಾತು ಮುಂದುವರಿಸಿ ನುಡಿದನು:

'ವಹ್ನಿ, ನನ್ನ ಕಾರಣದಿಂದ ನಿಮಗೆ ಈ ಸಂಕಟ ಉಂಟಾಯಿತಲ್ಲವೆ?'

ವಹ್ನಿಯು ರಾಮನ ನಿಟ್ಟುಸಿರಿಗೆ ತತ್ತರಿಸಿದನು. ಕೈ ಮುಗಿದು, ಮೊಣಕಾಲೂರಿ ಬೇಡಿಕೊಂಡನು:

'ದೇವ, ನನ್ನ ವಿನೋದವನ್ನು ಮನ್ನಿಸು. ಅರ್ಥ ವ್ಯಾಪ್ತಿ ಮೀರಿತು.'

'ಭಟವರೇಣ್ಯನೇ, ಏಳು. ಏಳೇಳು. ನಿನಗೆ ಮಕ್ಕಳಿರುವರೆ?'

'ದೇವ, ಒಬ್ಬನಿರುವನು.'

'ಚಿಕ್ಕವನೆ?'

'ಅಲ್ಲದಿದ್ದರೆ, ನಿನ್ನ ಸೇವೆಯ ದೇವ ಕಾರ್ಯಕ್ಕೆ ನನ್ನ ಪಕ್ಕದೊಳಿರುತ್ತಿರಲಿಲ್ಲವೆ?'

'ಅವರಿಗೆ ಯಾರು ರಕ್ಷಕರು?'

'ನಾನೆ!'

ದಶರಥಾತ್ಮಜನು ನಿಟ್ಟುಸಿರಿಟ್ಟು, ವೀರ ವಹ್ನಿಯ ಕಣ್ಣುಗಳನ್ನು ಕರುಣೆಯಿಂದ ನೋಡಿ,

'ನೀನೆ?'

ಎಂದು ಕೇಳಿ, ತುಸು ಹೊತ್ತು ಯೋಚಿಸುತ್ತಿದ್ದು ಮತ್ತೆ 'ವಹ್ನಿ, ಮರಣದಲ್ಲಿಯೇ ರಣವಿದೆ. ಹಣೆ ಬರಹವಿರಲಿ, ಕೈಯ ಬರಹವೂ ಅದನ್ನೆ ಸಾರುತ್ತಿದೆ.'

ಆ ನುಡಿಯ ಧ್ವನಿಯನ್ನು ಅರಿತ ವಹ್ನಿಯು ರಾಮ ನೀಲರ ಕೂಡೆ ತಾನೂ ನಕ್ಕನು. ಜೊತೆಗೆ ತನ್ನ ಧೈರ್ಯವನ್ನು ನಾಲಗೆಯಲ್ಲಿ ಹೀಗೆ ಹೊಮ್ಮಿಸಿದನು.

ಪುರುಷನಿರಲಾಗದೀ ಧರೆಯ ಮೇಲೊರ್ವನುಂ ಪೊರೆಯದನ್ನೆಗಮಾ ಸತೀತ್ವಮಂ!

'ಯಾವ ಧರ್ಮಕ್ಕಾಗಿ ಸಾವನ್ನು ಅಪ್ಪುತ್ತೇವೆಯೊ ಆ ಧರ್ಮವು ಈ ಲೋಕವನ್ನು ರಕ್ಷಿಸುತ್ತದೆ. ನನ್ನ ಹೆಂಡತಿ ಮಕ್ಕಳು ಅದರಿಂದ ಹೊರಗಲ್ಲ. ರಾಜೇಂದ್ರನೇ, ಕೇಳು. ಸರ್ವಸೇನಾಧಿಪತಿ ಈ ನೀಲದೇವನ ಕೃಪೆಯಿಂದ ನಾವೆಲ್ಲರೂ ಮನೆಯ ಮಂಗಳವನ್ನು ಕಾಣುತ್ತೇವೆ. ಹಾಗಲ್ಲದೆ ವಿಧಿಯ ಇಚ್ಛೆ ಅನ್ಯವಾದರೆ (ವಿಧಿಗೆ ಎದೆಯಿಲ್ಲವೆಂಬುದನ್ನು ತಿಳಿದಿರುವೆ!) ಬದುಕಿಗಿಂತ ಸಾವೇಮೇಲು!


'ದಶಶಿರನು ಹೊತ್ತೊಯ್ದಿರುವುದು ಒಬ್ಬನ ಸತಿಯನ್ನು ಅಲ್ಲ; ಸತಿತನವನ್ನೇ ಹೊಯ್ದಿರುವನು! ಸತೀತ್ವವನ್ನು ಕಾಪಾಡಲಾಗದ ಪುರುಷ ಈ ಧರೆಯ ಮೇಲಿರಬಾರದು! ರಘುವರ ನೀನು ಕೇಳಿದ ಕುಶಲ ಪ್ರಶ್ನೆಯೆ ಒಂದು ಕೃಪೆ. ಅದರಿಂದ ನನ್ನವರು ಸುರಕ್ಷಿತರು.'

ಸೇನಾಪತಿಯ ಸೂಚನೆ ಅರಿತು ಆ ಸೈನಿಕ ಸ್ನೇಹಿತರು ಕೈಮುಗಿದು ಬೀಳ್ಕೊಂಡರು.

ಬೆಳುದಿಂಗಳ ರಾತ್ರಿಯು ತನ್ನ ಬಿಳಿಯ ಬೆಳಕಿನಿಂದ ಭೂಮಿ, ಆಕಾಶ, ಸಾಗರಗಳನ್ನು ಒಂದಾಗಿಸುವಂತೆ ಬಿಗಿದು ಅಪ್ಪಿತು. ವಹ್ನಿಯ ಮಾತಿನ ವೈಖರಿಯ ವಿನಯದ ವಸಂತ ಭಾವದ ಸವಿಯನ್ನು ಮೆಲುಕು ಹಾಕುತ್ತ ಔತ್ತರೇಯೋತ್ತಮನಾದ ರವಿಕುಲ ರಾಘವನು ಕಪಿಕುಲದ ವಾನರ ಕ್ಷಾತ್ರತೇಜ ಅಗ್ನಿಪುತ್ರ ವೀರ ನೀಲನಿಗೆ ಹೇಳಿದನು:

'ಸೇನಾನಿಯೇ, ನಿಮ್ಮ ನಾಗರಿಕತೆಗಿಂತ ನಿಮ್ಮ ಸಂಸ್ಕೃತಿ ಹಿರಿದಾದುದು.'

❑



~~~~~~~~~~~~~~~~~~~~~~ ಸಂಚಿಕೆ – ೭ ~~~~~~~~~~~~~~~~~~~~~~

ಅತ್ತಲಾ ದೈತ್ಯ ಸಭೆಯೊಳ್

ಶಿಲೆಯನ್ನು ಸೃಷ್ಟಿಸಿದವನೇ ಶಿಲ್ಪಿಗೆ ಸ್ಫೂರ್ತಿಯನ್ನು ನೀಡುತ್ತಾನೆ. ಅದೇ ರೀತಿ ರಾಮಕಥೆಯನ್ನು ಕಲ್ಪಿಸಿದ ನೀನೆ ಕೃಪೆಮಾಡಿ ನನಗೆ ಈ ಜಗದ್ಭವ್ಯ ಮಹಾಕಾವ್ಯವನ್ನು ದಿವ್ಯವೆನ್ನುವಂತೆ ಮುಂದಕ್ಕೆ ನಡೆಸಲು ಮಹತ್ ಪ್ರತಿಭೆಯನ್ನು ಕರುಣಿಸು. ಹೇ ದೇವಕವಿ ವಾಲ್ಮೀಕಿ, ಶಿಲ್ಪಿಗೆ ಕಲೆಯನ್ನು ಸೃಷ್ಟಿಸುವ ಮಹಿಮೆ ಇರುವುದಲ್ಲದೆ ಶಿಲೆಯನ್ನು ನಿರ್ಮಿಸುವ ಹೆಮ್ಮೆ ಲಭಿಸುತ್ತದೆಯೆ? ನಿನ್ನ ಸೃಷ್ಟಿಯು ಆ ಆಗಸ ಚುಂಬಿತವಾದ ಭೂಮವೈಭವ ಶಾಶ್ವತವಾದ ಶ್ರವಣಪರ್ವತದ ಶಿಖರದಿಂದ ಕಾಣ್ಕೆಯನ್ನು ಕಂಡಂತೆ, ನಾನು ಈ
~~~~~~~~~~~~~~~~~~~~~~

ಕಾವ್ಯಗೊಮ್ಮಟನನ್ನು ಕಡೆಯುತ್ತೇನೆ. ನಿನ್ನ ವರವಿಲ್ಲದೆ ಆ ಚಿರಂತನ ಸ್ಫೂರ್ತಿ ಬರುವುದಿಲ್ಲ. ತಂದೆ ಕೈಮುಗಿದು ಅಡ್ಡಬಿದ್ದು ಬೇಡುತ್ತೇನೆ. ಅದನ್ನು ಆಶೀರ್ವದಿಸಿ ನೀಡು.

ಬಂಗಾರಪ್ರಕಾಶ ಅರಮನೆಯ ಒಳಗಡೆ ರತ್ನಖಚಿತವಾದ ರಮ್ಯ ಸುವರ್ಣ ಸಿಂಹಾಸನದಲ್ಲಿ ಅನಾಗರಿಕ ಐಶ್ವರ್ಯವಂತ ವೀರ ರಾಕ್ಷಸೇಶ್ವರನು ಶೋಭಿಸಿದ್ದನು. ದಶ ಕಿರೀಟಿಯು, ಮೂರುಲೋಕಗಳಿಗೆ ಭಯಾನಕನು, ಬಲಿಷ್ಠನು ಆದ ರಾವಣನು ಬಹುಶಃ ಭಗ್ನವಾದ ಆಶೆಯಿಂದ ಕರ್ಕಶನಾಗಿ ರೋಷ ಭೀಷಣನಾಗಿದ್ದನು.

ಹೆಣ್ಣೊಬ್ಬಳ ಅವಹೇಳನದಿಂದ ಪೌರುಷಕೆಟ್ಟ ಎದೆಯ ನಾಚಿಕೆಯ ಕೋಪವನ್ನು ಬೇರೆಯವರಿಗೆ ತೋರಗೊಡದಂತಿದ್ದರೂ, ಅದರ ಬಗ್ಗೆ ಹೆಣಗಾಡುತ್ತ ಜರಿದು ಬಿದ್ದಂತಾಗಿದ್ದನು. ತನಗೆ ತಾನು ಅಳುಕಿ, ತನ್ನ ಅಂತರಾತ್ಮನ ಭಯದಿಂದ ಅಸಂತೋಷಕ್ಕೊಳಗಾಗಿದ್ದನು. ಅವನು ಓಲಗದಲ್ಲಿ ಕೂಡಿದ ರಾಕ್ಷಸ ಪ್ರಮುಖರ ಸಭೆಯಲ್ಲಿ, ಕೆಮ್ಮೀಸೆಯಲ್ಲಿ ಕಿಡಿಯುಗುಳುತ್ತಿರಲು, ಸರ್ಪರೋಮದ ತನ್ನ ದರ್ಪ ಸಿಂಹನುಡಿಯನ್ನು ಹೀಗೆ ಪ್ರಕಟಿಸಿದನು:

ಬಹುದಿನಗಳಿಂದಟ್ಟುತಿಹುದದು ನಮ್ಮ ಶಾಂತಿ ಶಶಿಯಂ.

'ಲಂಕಾ ಮಹೋದಯರೆ, ಸಚಿವರೆ, ಸೇನಾನಾಯಕರೆ, ಸತ್ಪ್ರಜೆಗಳೆ, ರಾಕ್ಷಸಕುಲದ ಕಳಂಕರಹಿತ ಚಂದ್ರರೆ, ನಮ್ಮ ಜನನಿಗೂ ಹೆಚ್ಚಾದ ಜನ್ಮಭೂಮಿಗೆ, ಉನ್ನತ ಕುಲಕ್ಕೆ, ಜಾತಿಗೌರವಕ್ಕೆ ಇಂದು ಮಹಾ ಆತಂಕವಾಗಲಿದೆ ಎಂಬ ಶಂಕೆ ಬಂದಿದೆ. ದುಷ್ಟ ದಸ್ಯುಗಳ ಸರ್ಪದಂತಹ ಉಗ್ರನಾಲಗೆಯ ಅಗ್ನಿಯು ನಮ್ಮ ದೈತ್ಯ ನಾಗರಿಕತೆಯ ತಾಯಿಬೇರನ್ನು ನೆಕ್ಕತೊಡಗಿದೆ. ನಮ್ಮ ಮುಡಿಗೆ ಪೂರ್ವಿಕರು ಇಟ್ಟ ಸಂಸ್ಕೃತಿ ಕಿರೀಟಕ್ಕೆ ಮಹಾನಾಶದ ಅಪಾಯಕರ ಸಮಯ ಬಂದಿದೆ.

'ನಮ್ಮ ಮಕ್ಕಳು ತಾಯಿ ತಂಗಿಯರ ನೆಮ್ಮದಿಯನ್ನು ಕಂಡು ಮತ್ಸರಿಸುವ ಉತ್ತರ ದಿಕ್ಕಿನ ಹುಲಿಯು ಹಲ್ಲು ಉಗುರು, ಕಣ್ಣು ಹೊಂಚುಹಾಕುತ್ತಿದೆ. ಲಂಕಾಲತಾಂಗಿಯರ, ದೈತ್ಯ ವೀರರನ್ನು ಒಲಿದ ನಲ್ಲೆಯರ ಹಾಲೆದೆಯ ಶುಭ್ರ ಸೌಂದರ್ಯವನ್ನು ಬಯಸಿ ಶರಧಿಯ ಎಡದಡದಲ್ಲಿ ಕಪಿಧ್ವಜ ಸಂಕೇತದ ಭಯಂಕರ ರಾಮಸೇನೆಯ ರೋಷರಾಹು ಬೀಡುಬಿಟ್ಟಿದೆ ಎಂದು ನಮಗೆ ಗುಪ್ತವರದಿ ಬಂದಿದೆ.

'ಅದು ಬಹುದಿನಗಳಿಂದ ನಮ್ಮ ಶಾಂತಿ ಶಶಿಯನ್ನು ಬೆನ್ನಟ್ಟುತ್ತಿದೆ. ಇದು ನಿನ್ನೆ ಮೊನ್ನೆಯ ವೈರವಲ್ಲ. ತಾಟಕಾದೇವಿಯನ್ನು ಕೊಂದುದೇ ಮೊದಲು. ಅದಕ್ಕೆ ನೆವ ಋಷಿರಕ್ಷಣೆ. ಗುರಿಯೊ? ನಮ್ಮ ಕುಲನಾಶನ! ಅವರು ನಮ್ಮ ಆಳ್ವಿಕೆಯ ನೆಲದ ಎಲ್ಲೆಯನ್ನು ಅತಿಕ್ರಮಿಸಿದರು. ಅದನ್ನು ತಡೆಯಲುಹೋದ ನಮ್ಮನ್ನೆ ಆಕ್ರಮಣಕಾರರೆಂದು ಬಿಡದೆ ನಿಂದಿಸಿದರು. ನಮ್ಮ ಕುಲದ ಹೆಸರನ್ನು ಅನ್ವರ್ಥವೆಂದು ಹೇಳುತ್ತ ನಮಗೆ

ರಕ್ಕಸತನದ ಬಿರುದಿಕ್ಕಿದರು. ನಮ್ಮ ಕೊಲೆಯನ್ನು ಅವರು ತಮ್ಮ ಸ್ವರ್ಗದ ಮಾರ್ಗವೆಂದು, ಧರ್ಮವೆಂದು ಹೇಳಿದರು.

'ಕೊಲೆಗಾರರಿಗೆ ವೀರಪಟ್ಟವನ್ನು ಕಟ್ಟುವ ಆ ಅನ್ಯಾಯ ಶೀಲರಾದ ಆರ್ಯರಿಗೆ ರಾಮನೆಂಬುವವನು ದೇವರ ಅವತಾರವಂತೆ. ಅವನು ಸುಬಾಹುವನ್ನು ಕೊಂದನು. ಅದು ಸಾಲದೆ ಕಾಮರೂಪಿಗಳಾದ ನಮ್ಮ ಕುಲಕ್ಕೆ ಭೂಷಣರೆನಿಸಿದ ದೈತ್ಯಗೌರವಕ್ಕೆ ಪಾತ್ರರಾಗಿದ್ದ ವಾತಾಪಿ ಇಲ್ವಲರನ್ನು ಅಗಸ್ತ್ಯಕೊಂದನು. ಅವನ ಮಾತಿಗೆ ಮರುಳಾಗಿ ಅವರು ಮುಂದು ಮುಂದಕ್ಕೆ ನುಗ್ಗಿಬಂದರು. ಪಂಚವಟಿಗೆ ಬಂದು ನಿಷ್ಕಾರಣವಾಗಿ ಕಾಲು ಮೆಟ್ಟಿ ಕದನವನ್ನು ಕೆದಕಿದರು. ಖರದೂಷಣರನ್ನು ಮೊದಲುಮಾಡಿ ಹದಿನಾಲ್ಕು ಸಾವಿರ ಲಂಕಾಧೀಶನ ಬಂಧುಮಿತ್ರರನ್ನು, ಲಂಕಾ ಪ್ರಕೃತಿ ರತ್ನರನ್ನು ಕೊಲೆ ಮಾಡಿದರು. ಮತ್ತೆ.... ಹತನಾದನು ಆ ಅತ್ಯಂತ ಸಾತ್ವಿಕ ತಪಸ್ವಿ ಮಾರೀಚ.'

ಎಂದು ಹೇಳುತ್ತ ಭಾವೋದ್ವೇಗದಿಂದಾಗಿ ನಡುನಡುವೆ ಕೆಲಹೊತ್ತು ಸುಮ್ಮನಿರುತ್ತಿದ್ದವನು, ಮಾರೀಚ ಹೆಸರನ್ನು ಹೇಳಿದ್ದೆ ತಡ ಕಣ್ಣಿನಿಂದ ಹನಿಗಳುದುರಿದವು. ಕಣ್ಣುಮುಚ್ಚಿ ಗೌರವದ ನೈವೇದ್ಯ ಸಲ್ಲಿಸಿದನು. ನೃಪನು ಕಣ್ಣೀರಿಡುವಾಗ ನೃಪನ ಸಭೆ ಸುಮ್ಮನಿರಲಾಗುವುದೆ? ಕೆಲವರು ನಿಜವಾಗಿ ಅತ್ತರು. ಹಲವರು ಕಣ್ಣೊರಸಿಕೊಂಡರು. ರಾಕ್ಷಸೇಶ್ವರನು ಹೊದ್ದ ಪೀತಾಂಬರದಿಂದ ಮೆಲ್ಲನೆ ತನ್ನ ಅಶ್ರು ತರ್ಪಣವನ್ನು ಒತ್ತಿಕೊಂಡನು. ಬೇರೆಯವರಿಗೆ ಆ ಕಣ್ಣೀರಿನ ನೋವು ಎಷ್ಟೆಂದು ಅರ್ಥವಾದೀತು? ಅವನು ಮತ್ತೆ ಹೀಗೆ ಮಾತನ್ನು ಮುಂದುವರಿಸಿದನು:

'ಇರಲಿ. ಹಳೆಯ ದುಃಖದ ನೆನಪಿನ ನೀರಿನಿಂದ ಹೊಸ ದುಃಖವನ್ನು ಚಿಗುರಿಸುವುದೇತಕ್ಕೆ?' ಎಂದು ಹೇಳಿ ನಿಟ್ಟುಸಿರು ಬಿಡುತ್ತ ದಶಗ್ರೀವ ನುಡಿದನು. 'ನಮ್ಮ ಮುಂದೆ ಬರಲಿರುವ ನಿಜಕಷ್ಟ ಬೇಕಾದಷ್ಟು ಇದೆ. ನಿಮಗೆಲ್ಲ ಗೊತ್ತಿದೆ. ಕೆಲವು ದಿನಗಳ ಮೊದಲು ಒಂದು ಭೀತಿಭೂತವು ನಮ್ಮ ಪಟ್ಟಣದ ಬಾಗಿಲಿನ ನಗರ ಲಕ್ಷ್ಮಿಯನ್ನು ಭಂಗಿಸಿ ಒಳಹೊಕ್ಕಿತು. ಪ್ರಹಸ್ತನ ಪುತ್ರ ಜಂಬುಮಾಲಿಯು ಅದಕ್ಕೆ ಸರಿಸಾಟಿಯಾಗಿ ಜಂಝಾನಿಲರೂಪದಿಂದ ಎದುರಿಸಿ ವೀರಸ್ವರ್ಗ ಸೇರಿದನು. ಪುನಃ ಅದರಂತೆಯೆ ದುರ್ಧರ ಮುಂತಾದ ಐದು ಜನ ನಮ್ಮ ಸೇನಾನಿಗಳು ಇಂದ್ರಜಾಲದ ಯುದ್ಧದಲ್ಲಿ ಆ ಭೂತಕ್ಕೆ ಪ್ರಾಣತೆತ್ತರು.

'ತಿಳಿಯದ ಅದ್ಭುತಕ್ಕೆ ಅಂದು ಲಂಕಾನಿವಾಸಿಗಳು ಕಂಗೆಟ್ಟರು. ಇಂದು ಎಲ್ಲರೂ ತಿಳಿದು ಶಾಂತರಾಗಲಿ... ಅದು ಮತ್ತಾರು ಅಲ್ಲ. ನನಗೆ ಗುಪ್ತಚಾರರು ತಿಳಿಸಿರುವುದನ್ನು ಹೇಳುತ್ತೇನೆ ಕಿವಿಗೊಟ್ಟು ಕೇಳಿ. ವಾನರ ಕಳಂಕ ಸುಗ್ರೀವನು ಹೇಡಿ ರಾಮನ ಕೈಯಲ್ಲಿ ನಮ್ಮ ಸ್ನೇಹಿತ ವಾಲಿಯ ಬೆನ್ನಿಗೆ ಮರೆಯಿಂದ ಬಾಣಹೂಡಿಸಿ ಕೊಲ್ಲಿಸಿ ಗದ್ದುಗೆ ಏರಿದನು. ಅವನ ಸಹಾಯಕ ಆಂಜನೇಯನೇ ಆಗ ಬಂದಿದ್ದವನು.'

'ಇಂದ್ರನ ಮಗ ವಾಲಿಯ ಸನ್ಮಿತ್ರರಾದವರು ಇಲ್ಲಿರುವರು. ಅವರು ಮುಯ್ಯಿಗೆ ಮುಯ್ಯಿ ತೀರಿಸದೆ ಬಿಡುವರೆ? ಅಂತಹ ಸ್ನೇಹಿತರಲ್ಲಿ ನಾನೊಬ್ಬ.... ಅಂತೂ ಆ ನೀಚಮಾರ್ಗಿಗಳೆಲ್ಲರೂ ಒಬ್ಬೊಬ್ಬರ ಸಹಾಯವನ್ನು ಪಡೆದು ದೊಡ್ಡ ಸೈನ್ಯ ರಚಿಸಿಕೊಂಡಿದ್ದಾರೆ. ಅವರು ಕಡಲನ್ನು ದಾಟಿ ಲಂಕೆಗೆ ಲಗ್ಗೆ ಹಾಕಲು, ಸ್ವತಂತ್ರರಾದ ನಮ್ಮನ್ನು ಗೆದ್ದು ದಾಸದೀಕ್ಷೆಯನ್ನು ಕೊಡಲು ಪ್ರತಿಜ್ಞಾಬದ್ಧರಾಗಿ ಬಂದು ಅಲ್ಲಿ ಬೀಡು ಬಿಟ್ಟಿದ್ದಾರೆ. ಅವರು ಆ ದೂರದ ಅಪಾರ ಸಮುದ್ರದ ಮಧ್ಯೆಯೆ ಸೋತು ಹೋಗುತ್ತಾರೆ. ನಮ್ಮ ಸೈನಿಕ ಶಕ್ತಿಗೆ ಅವರು ಸರಿಸಾಟಿಯಲ್ಲ ಎನ್ನುವುದನ್ನು ನಾನು ತಿಳಿದಿರುವೆನು. ಆದರೂ ವೈರಿಯು ಸಮರ್ಥನೆಂಬುದು ದಿಟ.

'ದೇಶಭಕ್ತರೆ, ಸಮರ ಸರ್ವಜ್ಞರೆ, ನೃಪನೀತಿ ಕುಶಲರೆ, ಮಾಯಾಸಮರ್ಥರೆ, ನಿಮ್ಮ ಮುಂದಿನ ಉಪಾಯದ ಆಲೋಚನೆ ಏನೆಂದು ತಿಳಿಯಲು ಅಪೇಕ್ಷಿಸುತ್ತೇನೆ.'

ರಾವಣೇಶ್ವರನ ಆ ನುಡಿಯಲ್ಲಿ ಮುಳುಗಿಹೋದಂತೆ ಓಲಗವು ಮೌನವಾಗಿತ್ತು. ಸಿಂಹ ಘರ್ಜನೆಗೆ ಕೈಲಾಸ ಪರ್ವತದ ಗುಹೆಯು ಹೇಗೆ ಪ್ರತಿಧ್ವನಿಸುವುದೊ ಹಾಗೆ ದೈತ್ಯೇಂದ್ರನ ವಾಗ್ಝರಿಯ ಘೋಷವು ಅಲ್ಲಿ ಮುಳುಗಿತು. ಅಲ್ಲಲ್ಲಿ ವಿವಿಧ ವ್ಯಕ್ತಿ ಧ್ವನಿಯ ನೀರ್ಗುಳ್ಳೆಗಳ ಅವ್ಯಕ್ತ ಮರ್ಮರ ಸ್ವರಗಳು ನಿಧಾನವಾಗಿ ಮೂಡಿದವು. ನೋಡ ನೋಡುತ್ತಿದ್ದಂತೆ ಸಭೆಯ ಹಿರಿದಾದಕೊಳ ಚಲಿಸಿದಂತಾಯಿತು. ಕಾಡಾನೆಯನ್ನು ಹಿಡಿಯಲು ಪ್ರಯತ್ನಿಸುತ್ತ ಏಳುವ ಹೆಬ್ಬಂಡೆ ಮೈಯ್ಯ ಕಪ್ಪು ಮೊಸಳೆಯಂತೆ ಪ್ರಹಸ್ತನು ಎದ್ದನು. ಅವನು ವಿಶಾಲ ಗಾತ್ರ ಶರೀರಿಯಾದ ಪ್ರಥಮ ಸೇನಾನಿ. ಲಂಕೆಯಲ್ಲಿ ಅವನಿಗಿಂತ ಹೆಚ್ಚು ಭೀಕರರು, ಪಶುಸಹಜ ಸುಖದ ಹಂದಿಗಳು ಇರಲಿಲ್ಲ. ಅವನು ದೇಹಶಕ್ತಿಗೆ ಪ್ರಾಮುಖ್ಯತೆ ನೀಡಿ ಆತ್ಮಶಕ್ತಿಯನ್ನು ತಿರಸ್ಕರಿಸಿದವನು. ಅವನು ಪುಲಸ್ತ್ಯನ ಪುತ್ರ ರಾವಣನಿಗೆ ಕೈ ಮುಗಿದು ತನ್ನ ದುಷ್ಟ ಬುದ್ಧಿಯನ್ನು ಹೀಗೆ ಬಿನ್ನವಿಸಿಕೊಂಡನು.

ನೀಂ ಧೀರೋದಾರ ವೀರನದರಿಂ ವೈರವೀರ್ಯಮಂ ನಿರ್ಮತ್ಸರಂ ಶ್ಲಾಘಿಸಿರ್ಪೆ.

'ಆಶ್ಚರ್ಯವೊ? ವಿನೋದವೊ? ಈಗ ಕೇಳಿದ ದಾನವೇಂದ್ರನ ಮಾತುಗಳ ಇಂಗಿತ ನನಗೆ ಗೊತ್ತಾಗುತ್ತಿಲ್ಲ. ಇದು ವಿನೋದವೇ ಇರಬೇಕು. ನುಸಿಮಂದೆಯ ಬಾಧೆಯನ್ನು ನಿವಾರಿಸಲು ಸೇರಿರುವ ಸಭೆಯಲ್ಲಿ ಮದಿಸಿದ ಆನೆಗಳ ಚರ್ಮರಕ್ಷಣೆಯ ಮಹದ್ ವಿಷಯದಲ್ಲಿ ಸಲಗಕ್ಕೆ ಶಂಕೆಯುಂಟಾಗಿದೆ! ಶೂಲ ಪಟ್ಟಸ ಪರಿಘ ಶಕ್ತಿ ಸಂಕುಲದ ಬಲದ ರಾಕ್ಷಸ ಸೇನೆಯ ಮಾತಿರಲಿ, ವೈರಿಗಳ ಹೃದಯವನ್ನು ಭೇದಿಸಲು ರಾವಣೇಶ್ವರ ತಾನೊಬ್ಬನೆ ಸಾಕಾಗಿದ್ದಾನೆ.

'ಅವನು ಪಾತಾಳಲೋಕದ ರಾಜಧಾನಿ ಭೋಗವತಿಯನ್ನು ಹೊಕ್ಕು ಸರ್ಪಗಳನ್ನು ನಾಶಪಡಿಸಿದವನು. ಕೈಲಾಸವಾಸಿಯಾದ ಫಾಲಾಕ್ಷನ ಸ್ನೇಹಿತ ಕುಬೇರನನ್ನು ಅವನ

ಯಕ್ಷಬಲ ಸಹಿತವಾಗಿ ಗೆದ್ದವನು. ಮಯನನ್ನು ಭಯಪಡಿಸಿ ಅವನ ಮಗಳನ್ನು ವಿವಾಹವಾದವನು. ವಾಸುಕಿ ಶಂಖ ತಕ್ಷಕರು ನೋವಿನಿಂದ ನರಳುವಂತೆ ರಸಾತಳವನ್ನು ಅಲ್ಲಾಡಿಸಿದವನು. ನಾಶರಹಿತರಾದ ಕಾಲಕೇಯ ಎಂಬ ದಾನವರ ಗುಂಪಿನೊಡನೆ ವರ್ಷಕ್ಕೂ ಹೆಚ್ಚು ಕಾಲ ಕಾಳಗ ನಡೆಸಿ ಸೋಲಿಸಿದವನು. ಸಮುದ್ರದಂತೆ ಮುನ್ನುಗ್ಗಿ ಬಂದ ಯಮಸೇನೆಯನ್ನು ಅಡ್ಡಗಟ್ಟಿ ಓಡಿಸಿದವನು. ದೇವೇಂದ್ರ ಮುಂತಾದ ದಿಕ್ಪಾಲಕರನ್ನು ಬಡಿದು ತನ್ನ ಆಜ್ಞೆಗೆ ಒಳಪಡಿಸಿಕೊಂಡಿರುವವನು. ಇಂದ್ರಜಿತುವಿನ ತಂದೆಯಾದ ಈತನಿಗೆ ಕಪಿಸೇನೆಯ ಭೀತಿ ಎಂದರೆ ಆಶ್ಚರ್ಯಕರವಾಗಿದೆ. ಇದು ವಿನೋದವೆಂಬುದು ನಿಜ!

'ಮೋಸಗಾರ ವಾನರನು ಕುಟಿಲ ವಿದ್ಯೆಯಿಂದ ನಾವು ಎಚ್ಚರಿಕೆಯಿಲ್ಲದೆ ವಿರಮಿಸಿರುವಾಗ ಪಟ್ಟಣವನ್ನು ರಾತ್ರಿಯ ಹೊತ್ತು ಕಳ್ಳನಂತೆ ಒಳಹೊಕ್ಕಿರುವನು. ಅಷ್ಟರಿಂದಲೆ ಕಪಿಸೈನ್ಯ ಶಕ್ತಿಯನ್ನು ಸ್ತುತಿಸುವುದು ಅತ್ಯಂತ ಉತ್ಪ್ರೇಕ್ಷೆಯಾಗಿದೆ. ನೀನು ಧೀರೋದಾರ ವೀರನು. ಆದುದರಿಂದ ವೈರಿಯ ವೀರತನವನ್ನು ನಿರ್ಮತ್ಸರದಿಂದ ಶ್ಲಾಘಿಸಿರುವೆ. ಅದು ನಿನ್ನಂತಹ ದೊರೆಗೆ ತಕ್ಕನಾದುದು. ದೈತ್ಯೇಂದ್ರನೆ ಅದು ಹಿರಿಯರಿಗೆ ಒಪ್ಪುವ ನಡೆ.

'ಆದರೂ ಕೇಳು. ಸಭೆಯು ಸತ್ಯವನ್ನು ತಿಳಿಯಲಿ ಎಂದು ನಮ್ಮ ಸೈನ್ಯದ ಹೆಗ್ಗಳಿಕೆಯನ್ನು ಹೇಳುತ್ತೇನೆ. ಸಂಖ್ಯೆಯನ್ನು ಪರಿಗಣಿಸಲು ನಮ್ಮ ಅಕ್ಷೌಹಿಣಿ ಸೈನ್ಯದ ಎದುರು ನಕ್ಷತ್ರಗಳು ಸೋಲುತ್ತವೆ. ಗಣಗಣದಲ್ಲಿರುವ ದಳದಳಗಳನ್ನು ಎಣಿಸಿದರೆ, ಕಡಲನ್ನು ಸುತ್ತಿ ಬಳಸಿದ ಈ ದ್ವೀಪ ವಿಸ್ತೃತ ಎಲ್ಲೆಯಲ್ಲಿರುವ ಮರಳ ಕಣಗಳನ್ನು ಎಣಿಸುವುದು ಸುಲಭವೆನಿಸುತ್ತದೆ.

'ಇಂದು ಯುದ್ಧಲೀಲಾ ಪ್ರಳಯ ಕಲೆಗೆ ಕೋಟಿ ಕೋಟಿ ನೆಲದ ಪಡೆ, ನೀರ ಪಡೆ, ಗಾಳಿ ಪಡೆಗಳು ಸಿದ್ಧವಾಗಿರುವವು. ನಮ್ಮಲ್ಲಿ ಆಕಾಶಗಾಮಿಗಳು, ಜಲಾಂತರ್ಗಾಮಿಗಳು, ಮನುಜ ರೂಪವನ್ನು ಬಿಟ್ಟು ದೊಡ್ಡ ಬಂಡೆಗಳಂತೆ ಉರುಳಿ ವೈರಿ ಸೈನಿಕರನ್ನು ಪುಡಿಯಾಗಿ ಅರೆದು ಮಾಂಸಲೇಹ್ಯ ತಯಾರು ಮಾಡುವವರಿದ್ದಾರೆ. ಕಿಡಿ ತಗುಲಲು ಬೆಟ್ಟಗಳೇ ಪುಡಿಯಾಗಿ ಸಮತಟ್ಟಾಗುವಂತೆ ಸಿಡಿಯುವ ಸಿಡಿಲಿನ ಸರ್ಪದ ಪೊಟ್ಟಣಗಳ ಮಹಾಕುಕ್ಕೆಗಳಾಗುವವರಿದ್ದಾರೆ. ಅವರು ವಿಷಗಾಳಿಯಾಗಿ ಬೀಸುತ್ತಾರೆ, ಬೆಂಕಿ ಮಳೆಯಾಗಿ ಬೀಳುತ್ತಾರೆ....ಇಲ್ಲಿಗೆ ಕಪಿದಳ ಬರಲಿ. ಅದು ಲಂಕೆಯನ್ನು ಕಂಡಿಲ್ಲ. ಅವರಿಗೆ ಇಲ್ಲಿ ನರಕದ ಏಳುಕೋಟಿ ಬಾಯಿಗಳು ತೆರೆದಿರುವುದು ಕಾಣುವುದಲ್ಲದೆ, ನಮ್ಮ ಸೊಬಗಿನ ಪಟ್ಟಣ ಕಾಣುವುದಿಲ್ಲ!'

ಎಂದು ಹೇಳಿ ಸುಮಾಲಿಯ ಸುತನು ಕುಳಿತೊಡನೆ ಸಭೆಯಲ್ಲಿ ಅಟ್ಟಹಾಸವಾಯಿತು. ದಾನವೇಂದ್ರನ ಮುಖದ ಮೇಲೆ ಸಂತೃಪ್ತಿ ಸೂಚಕವಾಗಿ ನಗೆಯ ಮುಗುಳ್ ಮಾಲೆ ಸುಳಿಯಿತು. ಹೆಮ್ಮೆಯುಂಟಾದುದರಿಂದ ನೆರೆದ ಸಭೆಯನ್ನು ಗಮನಿಸುತ್ತ, ಕಣ್ಣು

ಕಣ್ಣಿನ ವಿಜಯ ಗರಿಯನ್ನು ಕೆದರಿ, ಅವನ ನೋಟದ ನವಿಲು ಕುಣಿಯಿತು. ಹೀಗಿರಲು ಇದ್ದಕ್ಕಿದ್ದ ಹಾಗೆ ಸದ್ದು ಹೊಳವಾಯ್ತು. ನೋಡುತ್ತಿರಲು ಮಹತ್ ಶಿಖರ ಭವ್ಯ ಗಿರಿಯು ಸಮುದ್ರದಿಂದ ಏಳುವಂತೆ ಮತ್ತೋರ್ವನು ಎದ್ದನು.

ಅವನ ಭುಜಗಳು ಭೂಕ್ಷೇಮ ಭಾರವನ್ನು ನಿರ್ವಹಿಸಲು ಹುಟ್ಟಿರುವ ಪರ್ವತದಂತಿದ್ದವು. ಅವನ ಸಿಂಹ ಸದೃಶವಾದ ವಿಶಾಲ ಧೈರ್ಯದ ವಕ್ಷಸ್ಥಳದಲ್ಲಿ ಭೀತಿಯಿಲ್ಲದ ಭರವಸೆಯ ಓಲಗ ನಡೆಯುತ್ತಿತ್ತು. ಅವನ ಹಣೆಯಲ್ಲಿ ಶಕ್ತಿ ಪೂಜೆಯ ಉಗ್ರ ತಿಶೂಲ ಚಿಹ್ನೆ ಮೂರನೆಯ ಕಣ್ಣಿನಂತೆ ಪ್ರಕಾಶಿಸುತ್ತಿತ್ತು. ಅವನ ಮುಖನೇತ್ರಗಳಲ್ಲಿ ಸಾಧನಾ ತೇಜಸ್ಸು ಬೆಳಗುತ್ತಿತ್ತು. ದಶಗ್ರೀವನನ್ನೂ ಒಳಗೊಂಡು ಆ ಮಹಾಸಭೆಯು ಗೌರವದಿಂದ ನಿಶ್ಯಬ್ದವಾಗಿದ್ದು, ಕಣ್ಣರಳಿಸಿ ಅವನ ನುಡಿಗೆ ಕಿವಿಯೊಡ್ಡಿತು. ಮಂತ್ರ ಸಂಗ್ರಾಮ ವಿದ್ಯೆಯ ಪರಮಗುರು ಮಹಾಪಾರ್ಶ್ವನು ನಯವಾದ ನುಡಿಯ ಮಾತಿನ ಧಾಟಿಯಲ್ಲಿ ನಿಧಾನವಾಗಿ ಹೀಗೆ ಹೇಳಿದನು:

'ನಾನು ಇಲ್ಲಿ ಹೊಸತಾದುದನ್ನು ಹೇಳಲು ನಿಂತಿಲ್ಲ. ನೀವು ಪ್ರಹಸ್ತೇಂದ್ರನಿಂದ ನಮ್ಮ ಅಪಾರಸೈನ್ಯದ ಪ್ರಶಂಸೆ ಕೇಳಿರುವಿರಿ. ಆ ಹೊಗಳಿಕೆಗೆ ಗೌರವವನ್ನು ಸೂಚಿಸುತ್ತೇನೆ.' ಎಂದು ಹೇಳುತ್ತ ಪ್ರತಿಯೊಬ್ಬರನ್ನು ದಿಟ್ಟಿಸಿ ನೋಡುತ್ತಾ ಸಭಾವಿಸ್ತಾರವನ್ನು ಗಮನಿಸಿದನು. ಅಭಿಮಾನದಿಂದ ತನ್ನ ಮಾತುಗಳನ್ನು ಮುಂದುವರಿಸಿದನು.

'ಇಂತಹ ಘನ ಸಮರ್ಥರಿರುವ ಈ ಸಭೆಯಲ್ಲಿ ಭಿನ್ನ ಭಾವಕ್ಕೆ ಎಡೆಯಿರುವುದೆ? ಇಲ್ಲಿ ನೆರೆದಿರುವ ವೀರರ ಎದುರು ನಿರಾಶೆ ನಾಚುವುದಿಲ್ಲವೆ? ಭಯವಿಲ್ಲಿ ತಲೆ ಇಣುಕಲು ಸಾಧ್ಯವೆ? ಶಂಕೆಯೆಂಬುದು ಬಾಲಮುದುರಿಕೊಂಡು ನಾಯಿಯಂತೆ ಓಡದೆ ನಿಲ್ಲಲು ಸಾಧ್ಯವೆ? ಹೆಸರಪಟ್ಟಿಯೇ ಸಾಕು ವೈರಿಯ ಹೃದಯದ ಸತ್ತ್ವಗುಂದಿಸಲು. ಯುವರಾಜ ಇಂದ್ರಜಿತುವಿನ ಹೆಸರು ಕೇಳುವುದರಿಂದಲೇ ದಿಗ್ಗಜಗಳ ಕಿವಿಗಳು ನಡುಗುವುದಿಲ್ಲವೆ? ಓ, ಆ ಓರ್ವ ಮಹಾಬಲಶಾಲಿ ಮಹಾಕುಂಭಕರ್ಣ ಇಲ್ಲಿಲ್ಲ! ಅವನ ಸಾಮರ್ಥ್ಯವನ್ನು ಹೊಗಳಿದರೆ ಮುಖಸ್ತುತಿಯಾಗುವುದಿಲ್ಲ. ಅವನು ಪುಲಸ್ತ್ಯ-ಮಿಶ್ರವಸು ಕೈಕಸಿಯರ ಎರಡನೆಯ ಮಗ. ಜನ್ಮ ಮಾತ್ರದಿಂದ ಎರಡನೆಯವನು. ಸಹಜವಾಗಿ ಪರ್ವತಾದ್ಭುತನು. ಅವನು ವಿಕ್ರಿಯಾಬಲ (ಬೇಕಾದ ರೂಪ, ಆಕಾರ ಮುಂತಾದುವನ್ನು ತಾಳುವ ಶಕ್ತಿ)ದಿಂದ ಬೆಳೆದು ವಿಜೃಂಬಿಸಿ ನಡೆದರೆ, ಹಿಮಾಚಲ ಒಂದುಕಡೆ ವಿಂಧ್ಯಪರ್ವತ ಇನ್ನೊಂದು ಕಡೆ ತೂಗಿ ತೊನೆಯುವುವು! ಮಲೆತು ಗದೆ ಬೀಸಿದರೆ ಯಮನ ಅಳ್ಳೆ ನಡುಗಿ ಏದುಸಿರು ಬಿಡುವನು! ಇಂದ್ರನ ವಜ್ರಾಘಾತವನ್ನು ಸಹಿಸಿಕೊಂಡು, ಐರಾವತದ ದಂತವೊಂದನ್ನು ತಿರುಚಿ ಕಿತ್ತು. ಗದೆಯಾಗಿಸಿಕೊಂಡು ಹೊಡೆದಟ್ಟಿದನು! ಅವನಿಗೆ ಬ್ರಹ್ಮನಿಂದ ನಿದ್ರಾಶಾಪವಾಯಿತು. ಇಲ್ಲದಿದ್ದರೆ ನಮ್ಮ ರಾಷ್ಟ್ರರಕ್ಷಣೆಗೆ ಈ ಸಭೆಗಳೇತಕ್ಕೆ? ಸೇನೆ ಏತಕ್ಕೆ? ಆದರೂ ಅವನೊಬ್ಬನ ನಿದ್ದೆ

ನಮ್ಮೆಲ್ಲರ ಎಚ್ಚರಿಕೆಗಿಂತ ಮಿಗಿಲಾದುದು! ಮದ್ದಿನ ಮನೆಯ ನಿದ್ರೆಯನ್ನು ಕೆಡಿಸಲು ಒಂದು ಕಿಡಿ ಸಾಲದೆ? ಅಂತಹವರೆಲ್ಲರೂ ಇರುವ ನಮ್ಮ ಲಂಕೆ ಯಾರಿಗಾದರೂ ದುಸ್ಸಾಧ್ಯವಾದುದು ಎಂಬುದು ನಿಜ.

'ಸಾಲದುದಕ್ಕೆ ಇಲ್ಲಿ ನೆರೆದಿರುವ ಒಬ್ಬೊಬ್ಬರೂ ಭೀಮ ವಿಕ್ರಮರು. ಈ ಸೂರ್ಯಶತ್ರು, ಶೋಣಿತಾಕ್ಷ, ಅಕಂಪನ, ವಜ್ರಹನು, ಮಕರಾಕ್ಷ, ರಾಹುರೋಷರು ಮಹಾಶೂರರು. ಸಪ್ತಘ್ನ, ರಶ್ಮಿಕೇತು, ಧೂಮ್ರಾಕ್ಷ, ಅಗ್ನಿಕೇತು, ವಿದ್ಯುನ್ಮಾಲಿ, ವಿದ್ಯುಜ್ಜಿಹ್ವರು, ದೇವಾಂತಕರು. ಆ ದುರ್ಮುಖನ ಮರೆಯಲ್ಲಿರುವ ವಜ್ರದಂಷ್ಟ್ರ; ದೂರದಲ್ಲಿದ್ದರೂ ಬಳಿಯಲ್ಲಿಯೇ ಬಂದಂತಿರುವ ಮಹೋದರ; ಆ ಕಡೆ ಶಾರ್ದೂಲ ಶುಕ ಸಾರಣರು; ಮತ್ತೂ ಆ ಕಡೆ ಬ್ರಹ್ಮಾಕ್ಷ, ಯಜ್ಞಹ ಮುಂತಾದ ಇಲ್ಲಿ ಸೇರಿರುವ ಪ್ರತಿಯೊಬ್ಬರು ಭೀಮ ಪರಾಕ್ರಮಿಗಳು.

'ಈ ಕಡೆ ಕುಳಿತ ಎಲ್ಲರಿಗೂ ಮಿಗಿಲಾಗಿರುವವನ ಹೆಸರು ಹೇಳುವುದು ಪುಣ್ಯ, ಹಾಗೆಯೆ ಕೇಳಿದರೂ ಪುಣ್ಯ, ಹಾಗಾಗಿ ಹೇಳುತ್ತೇನೆಯೆ ಹೊರತು ನಿಮಗೆ ಗೊತ್ತಿಲ್ಲ ಎಂದು ತಿಳಿಸಿದರೆ ದಡ್ಡನಾಗುತ್ತೇನೆ. ಅವನು ಪೌಲಸ್ತ್ಯ. ವೈಶ್ರವಣ ಮತ್ತು ಕೈಕಸಿಯರ ಮೂರನೆಯ ಮಗ ವಿಭೀಷಣ. ನಮ್ಮ ಲಂಕೆಗೆ ಧರ್ಮರಕ್ಷೆಯಾಗಿರುವವನು!'

ಹಾಗೆ ಹೇಳುತ್ತಿದ್ದಂತೆ ಸಭೆ ಉಘೇ, ಉಘೇ ಎಂದು ಹರ್ಷೋಲ್ಲಾಸದಿಂದ ಉದ್ಘರಿಸಿತು. ಅದನ್ನು ಕೈ ಸನ್ನೆಯಿಂದ ಸಂತಯಿಸುತ್ತ ಮಾತು ಮುಂದುವರಿಸಿದನು,

'ವೈರಿಯ ಎದೆಯನ್ನು ಪೊಳ್ಳಾಗಿಸಲು ಈ ಹೆಸರ ಪಟ್ಟಿಯೆ ಸಾಕಲ್ಲವೆ? ಸಾಕು ಎಂಬುದು ನಿಜ. ಆದರೂ ಕೇಳಿ. ನಿಮಗೊಂದು ಆಶ್ಚರ್ಯವನ್ನು ತಿಳಿಸುವೆ. ಪ್ರಹಸ್ತನು ಹೇಳಿರುವುದರಿಂದ ಅದನ್ನು ಮತ್ತೆ ನಾನು ಪ್ರಸ್ತಾಪಿಸುವುದಿಲ್ಲ. ಈ ವಿಶ್ವವಿಜಿಗೀಷು (ವಿಶ್ವವನ್ನು ಗೆಲ್ಲಬೇಕೆಂಬ ಬಯಕೆಯುಳ್ಳವನು) ದಾನವೇಂದ್ರನು ನನಗಿಂತ, ಪ್ರಹಸ್ತನಿಗಿಂತ ಮತ್ತು ಇಲ್ಲಿ ಶೋಭಿಸುತ್ತಿರುವ ಶೂರರೆಲ್ಲರಿಗಿಂತ ಕಡಿಮೆಯವನಲ್ಲ. ಹಾಗಿದ್ದರೂ ವೈರಿ ಶಕ್ತಿಯನ್ನು ಗೌರವಿಸಿ ವಿನಯದಿಂದ ಶಂಕೆಯಿಂದ ಮಾತನಾಡಿದ್ದು ಏತಕ್ಕೆ ?

'ನೀವೆಲ್ಲರೂ ಚೆನ್ನಾಗಿ ಆಲೋಚಿಸಿ. ನೀರಿನ ಮೇಲೆ ಕಾಣುವ ಹಡಗಿನ ಭಾಗವನ್ನು ಬಣ್ಣಿಸಿದರೆ ಆಯಿತೆ? ಕಣ್ಣಿಗೆ ಕಾಣದೆಯೇ ನೀರಿನ ಅಡಿಯ ಪಕ್ಕದಲ್ಲಿ ಕಿರಿದಾದ ಬಿರುಕಿದ್ದರೆ ಅಷ್ಟೇ ಸಾಕಲ್ಲವೆ ಬೃಹತ್ ನೌಕೆಯನ್ನು ಮುಳುಗಿಸಲು?

'ಸುರಕ್ಷಿತವಾಗಿ ಯಾತ್ರೆಯನ್ನು ಮಾಡಬೇಕೆನ್ನುವವರು ಅಂತರಂಗದ ರಂಧ್ರ ದೋಷಕ್ಕೆ ಕಣ್ಣನ್ನು ಮುಚ್ಚಿಕೊಂಡಿರಬಾರದು. ನಮ್ಮ ದೊರೆಯ ಒಳಕಣ್ಣಿಗೆ ಆ ಸರ್ವ ವಿನಾಶ ರಂಧ್ರವು ಕಾಣುತ್ತಿದೆ. ಅಲ್ಲಿಗೆ ಬರಿಯ ಸಾಹಸ ಸಾಲದು. ಧರ್ಮದೇವತೆಯ ಕೋಪವನ್ನು ಪ್ರತಿಭಟಿಸಿ ಯಾರೂ ಗೆಲ್ಲಲಾರರು! ಸಾಕ್ಷಿ ಬೇಕಿದ್ದರೆ, ಮಹಾದ್ವಾರದಲ್ಲಿ

ಮುಖ ತಿರುಗಿಸಿ ನಿಂತಿರುವ ನಮ್ಮ ನಗರ ಲಕ್ಷ್ಮಿಯ ಕೈಯ ತ್ರಿಶೂಲ ಕೊಂಕಿರುವುದನ್ನು ನೋಡಿ ಬನ್ನಿ!'

ಸಭೆಯು ಮಹಾಪಾರ್ಶ್ವನ ಮಾತಿನ ಇಂಗಿತವನ್ನು ಅರಿತು ನಿಶ್ಯಬ್ದವಾಯಿತು. ರಾವಣನು ಅದನ್ನು ಕಣ್ಣರಳಿಸಿ ನೋಡಿ ಗಂಭೀರ ಮುಖಮುದ್ರೆ ತಾಳಿ ನಿಟ್ಟುಸಿರು ಬಿಟ್ಟನು. ತನ್ನೊಳಗೆ ತಾನು ಒಳ ಹೋಗುವವನಂತೆ ಕಣ್ಣೆವೆಯನ್ನು ಮುಚ್ಚಿಕೊಂಡನು. ಪ್ರಿಯವಲ್ಲದಿದ್ದರೂ ಸತ್ಯವನ್ನು ಹೇಳಿದ ಕಟುತೃಪ್ತಿಯಿಂದ ಮಹಾಪಾರ್ಶ್ವನು–ಅಮೃತವನ್ನು ಕಡೆದುಕೊಟ್ಟ ಬಳಿಕ ವಿಶ್ರಮಿಸಲೆಂದು ದಡಸೇರಿದ ಮಂದರ ಪರ್ವತದಂತೆ ಸುಮ್ಮನಾದನು.

ಅನಂತರ ಸುಮಾಲಿಯ ಮಗ ಅಕಂಪನ ಎದ್ದನು. ಅವನು ಪ್ರಹಸ್ತನ ತಮ್ಮ. ಅವನ ಮಾತು ಪ್ರಹಸ್ತನ ಹೇಳಿಕೆಯಂತೆ ಉದ್ಧಟತನದಿಂದ ಕೂಡಿತ್ತು. ಅವನ ಒಳಗು ಮತ್ತು ಹೊರಗು ನಯ ನುಣುಪುಗಳು ಕಾಣುತ್ತಿರಲಿಲ್ಲ. ವ್ಯಂಗ್ಯ ಇಂಗಿತವೆನ್ನುವ ಸೂಕ್ಷ್ಮತೆಯ ನುಡಿ ತೈಲಕ್ಕೆ ಸೀಗೆಕಾಯಿಯಾಗಿದ್ದ ಅವನು ಕ್ರೂರಿ, ನಿಷ್ಠುರ. ಅವನು ಬಾಯಿ ತೆಗೆದರೆ ನುಡಿಗಳ ಒಡನಾಡಿಯಾಗಿ ಹೊಲಸು ಕೆಟ್ಟನಾತ ಸಿಡಿಯುತ್ತಿತ್ತು. ಅವನ ಕಣ್ಣುಗಳಲ್ಲಿ ರೋಷವಿದ್ದು, ಬುದ್ಧಿ ಲವಲೇಶವು ಇರಲಿಲ್ಲ. ಮದಿಸಿದ ಆನೆಯಂತೆ ಮೈದೋರುತ್ತ ಕೈಗಳನ್ನು ಅತ್ತ ಇತ್ತ ಒಲೆದಾಡುತ್ತ ಅವನು ತನ್ನ ಪ್ರತಿ ಅಭಿಪ್ರಾಯವನ್ನು ಹೀಗೆ ಘೀಂಕರಿಸಿದನು:

'ನನ್ನ ಅನ್ನದಾತನಿಗೆ ನಾನು ದ್ರೋಹವನ್ನು ಮಾಡುವುದಿಲ್ಲ. ಮತ್ತು ಇತರರಲ್ಲಿ ಇರುವ ಹೀನ ಹೃದಯವನ್ನು ಸಹಿಸುವುದಿಲ್ಲ. ದ್ರೋಹ ಎಲ್ಲಿಯೆ ಇರಲಿ, ಹೇಗಾದರೂ ಇರಲಿ, ದ್ರೋಹಿ ಯಾರೇ ಆಗಿರಲಿ ಶಿಕ್ಷೆಗೆ ಅರ್ಹನು. ಕಣ್ಣಿಗೆ ಕಾಣಿಸುವ ದೇವರು ದೊರೆ. ದೊರೆಯ ಸೇವೆಯೇ ದೈವ ಸೇವೆ. ದೊರೆಯನ್ನು ನಿಂದಿಸುವುದೇ ಜಗದೀಶನ ನಿಂದನೆ. ರಾಜೇಂದ್ರನ ಅಭಿರುಚಿಯನ್ನು ತೆಗಳಿದರೆ, ನೃಪನ ಸುಖಕ್ಕೆ ಎದುರಾಡಿದರೆ, ಪ್ರಭುವಿನ ಆನಂದವನ್ನು ಸಾಧಿಸುವುದಕ್ಕಾಗಿ ನಮ್ಮ ಸರ್ವಸ್ವವನ್ನು ತ್ಯಜಿಸದಿದ್ದರೆ, ಪ್ರಭುವು ತನ್ನಿಷ್ಟಮಾರ್ಗದಲ್ಲಿ ನಡೆಯುವುದನ್ನು ಪ್ರಶ್ನಿಸಿದರೆ, ಖಂಡಿಸಿದರೆ ಅದು ನಿಜವಾಗಿ ದೈವನಿಂದನೆ!

'ಪ್ರಜೆಗಳು ಯಾರು? ಪ್ರಭು ಕೃಪಾ ಮಹಿಮೆಯಿಂದ ಬದುಕುವ ಹುಳುಗಳಲ್ಲವೆ? ಕ್ರಿಮಿಗಳು ಸ್ವತಂತ್ರರೆ? ತಾಯಿ ಬೇರಿಗೆ ನೀರು ಒದಗದಿದ್ದರೆ ಎಲೆಗಳು ಬಾಡುವವು. ಹಾಗೆ ನೃಪನಿಗೆ ಸಂತೃಪ್ತಿ ಉಂಟಾಗದಿದ್ದರೆ ಪ್ರಜಾಕೋಟಿಯು ನಿಸ್ತೇಜವಾಗಿ ಸಾಯುವರು. ಆದುದರಿಂದ ನರೇಂದ್ರನ ಸುಖ ಪ್ರಮುಖ. ಆ ವೈರಿಯ ಹೆಂಡತಿಯನ್ನು ತಂದು; ನಾವು ಮಾಡಬೇಕಾದುದನ್ನು ತಾನೆ ಸಾಧಿಸಿದ್ದಾನೆ. ನೃಪನ ಅಭ್ಯುದಯಕ್ಕೆ ನಾವು ಕೃತಜ್ಞರು. ಕೀಳು ಮನಸ್ಸಿನವರು ಕರುಬುತ್ತಾರೆ.

'ಪ್ರೀತಿಯನ್ನು, ನೃಪನೀತಿಯನ್ನು ಮತ್ತು ಪ್ರತೀಕಾರಗಳೆಲ್ಲವನ್ನು ಒಂದೇ ಮಾತಿನಲ್ಲಿ ಹೇಳಿದ್ದೇನೆ. ತಾನು ಮೊದಲು ಒಲಿದವಳನ್ನು, ತಪ್ಪಿ ಪರರ ಪಾಲಾದವಳನ್ನು ಕಾಲ ಕೂಡಿಬರಲು ಮತ್ತೆ ಪಡೆದಿದ್ದಾನೆ. ತನ್ನ ಪಾಡಿಗೆ ತಾನು ಪಂಚವಟಿಯ ಕಾಡಿನಲ್ಲಿ ವಿಹರಿಸುತ್ತಿದ್ದ ತಂಗಿಯನ್ನು, ದೈತ್ಯೇಂದ್ರನ ಸಹೋದರಿಯನ್ನು ವಿನಾಕಾರಣ ಅಪಮಾನ ಮಾಡಿದವನಿಗೆ ಸರಿಯಾದ ಸೋಲಾಗಿದೆ. ಪ್ರಬಲ ವೈರಿಯ ತೇಜಸ್ಸು ನಾಶವಾದುದಷ್ಟೆ ಅಲ್ಲ, ಅವನಿಗೆ ಬೆಂಬಲವಾಗುತ್ತ ಅವನ ಜೊತೆಗೂಡಿ ವೈರಿಗಳು ಗುಂಪಾಗಿ ಬರುತ್ತಿದ್ದಾರೆ. ಅವರೆಲ್ಲರನ್ನು ನಾಶಮಾಡುವ ಉಪಾಯವನ್ನು ನಮ್ಮ ಅರಸನು ಹೂಡಿದ್ದಾನೆ. ಆ ಉಪಾಯವನ್ನು ಸಾಧಿಸುವುದು ಹೇಗೆ ಎಂಬುದು ಈ ಸಭೆಯ ಉದ್ದೇಶ.... ಆ ಗುರಿಗೆ ಹೊರತಾದ ಮತ್ತು ಕುರುಡಾದ ನುಡಿ ವ್ಯರ್ಥ ಆಲಾಪ!'

ಅಕಂಪನ ಮಾತು ನಿಲ್ಲಿಸಿದನು. ಅನಂತರ ವಸಂತ ಮಾಸದ ಸೂರ್ಯೋದಯದ ಸರೋವರದಲ್ಲಿ ಕೆಂದಾವರೆಯ ಮಗ್ಗು ಅರಳುವಂತೆ ಸಭೆಯ ಅಂಚಿನಿಂದ ಓರ್ವನು ಮೆಲ್ಲಗೆ ಎದ್ದು ನಿಂತನು. ಸುಪ್ರಸಿದ್ಧರು ಬೆರಗಾಗಿರಲು, ಅಪ್ರಸಿದ್ಧರು 'ಉಘೇ' ಎಂಬ ಘೋಷ ಹೊಮ್ಮಿಸಿದರು. ಸುಪ್ರಸಿದ್ಧರಲ್ಲಿ ಅಪ್ರಸಿದ್ಧನು, ಅಖ್ಯಾತರಲ್ಲಿ ವಿಖ್ಯಾತನು ಆದ ಅವನು ಎಲ್ಲ ಸದಸ್ಯರ ಅಕ್ಷಿವನದ ಚೈತ್ರನಾದನು. ಅವನ ಸುಂದರ ಮುಖದ ಸಂಪತ್ತಿನ ಕಾವ್ಯವೈಖರಿಗೆ ಚವರಿ ಬೀಸಿದಂತೆ ಹೊಂಬಣ್ಣದ ಮುಂಗುರುಳುಗಳು ಸುರುಳಿಗೊಂಡಾಡುತ್ತ ಮನೋಹರವಾಗಿದ್ದವು. ಕೌಮಾರ್ಯವನ್ನು ತೊರೆಯಲು ಒಪ್ಪದ ಮುಖದ ಮುಗ್ಧತೆಗೆ ತಾರುಣ್ಯ ಮೂಡಿ ಮೋಹ ಸುಳಿದಾಡುತ್ತಿತ್ತು. ಲಂಕೆಯಲ್ಲಿ ಇವನಿಗಿಂತ ಸುಂದರರು ಇರುವರೆ? ಎಂಬ ಶಂಕೆ, ಸಂತೋಷಕ್ಕೆ ಹಿರಿಯರು ಒಳಗಾದರು. ಅವರುಗಳು ಅವನು ಏನು ಹೇಳಿದರು ಗುರುತರವಾಗಿರುವುದಿಲ್ಲ ಎಂಬ ಉಪೇಕ್ಷೆಯಿಂದ ರಸಾಪೇಕ್ಷೆಯ ನಾಟಕ ಪ್ರೇಕ್ಷಕರಂತಿದ್ದರು!.

ಹಿರಣ್ಯಕೇಶಿ ಹೆಸರಿನ ಅವನು ಬಿಳಿ ನೈದಿಲೆಯಂಥ ಸಭೆಯ ಕುತೂಹಲಕ್ಕೆ ತನ್ನ ಚಂದ್ರ ನಗೆಯ ಬೆಳುದಿಂಗಳ ಬೆಳಕನ್ನು ಸಿಂಪಡಿಸಿದನು. ತನ್ನುಸಿರ ಸ್ವರವನ್ನು ಹೀಗೆ ಮಿಡಿಯತೊಡಗಿದನು.

ಕಿರಿಯ ಸಾಮಾನ್ಯ ಜನಮನ ಪ್ರತಿನಿಧಿಯುಮೆನ್

'ಸಭೆಗೆ ಕೈ ಮುಗಿಯುತ್ತೇನೆ. ಹಿರಿಯರಿಗೆ ನಮಿಸುತ್ತೇನೆ. ಸ್ನೇಹಿತರಿಗೆ ವಂದಿಸುತ್ತೇನೆ. ದಾನವೇಂದ್ರನಿಗೆ ಗೌರವವನ್ನು ಅರ್ಪಿಸುತ್ತೇನೆ. ಹಿರಿಯರಿರುವ ಈ ಸಭೆಯ ಮಧ್ಯದಲ್ಲಿ ಎದ್ದು ನಿಲ್ಲುವ ಹಿರಿಮೆ ನನಗಿಲ್ಲವಾದರೂ, ಇಲ್ಲಿಗೆ ಕಿರಿತನದ ಉತ್ಸಾಹ ಸಲ್ಲುತ್ತದೆ.

'ನಾನು ಕಿರಿಯನು. ನಾನು ಸಾಮಾನ್ಯನು. ನಾನು ಸಾಮಾನ್ಯ ಜನಮನ ಪ್ರತಿನಿಧಿ. ನಮ್ಮ ಹೆಸರಾಂತ ನಾಲ್ವರಿಂದ, ಹಿರಿಯರು ಹೇಗೇಗೆ ಚಿಂತಿಸುವರೆಂಬುದನ್ನು ಸಭೆಯು

ಆಲಿಸಿದೆ. ಕಿರಿಯರ ಮನದಲ್ಲಿ ಹರಿವ ಚಿಂತೆಯ ಹೆಜ್ಜೆ ಗುರುತುಗಳನ್ನು ಈ ಗೋಷ್ಠಿ ತಿಳಿಯುವಂತೆ ಚಿತ್ರಿಸುವುದು ನನ್ನ ಕರ್ತವ್ಯ.'

ಎಂದು ಹೇಳುತ್ತ ಆ ತರುಣ ಮೇಧಾವಿಯು ಅಕಂಪನು ಕುಳಿತಕಡೆ ಕಣ್ಣನ್ನು ಹರಿಸಿ ಸೂಕ್ಷ್ಮವಾಗಿ ವ್ಯಂಗ್ಯಾತ್ಮಕವಾಗಿ ನೋಡುತ್ತ, ಕೊರಳೆತ್ತಿ ಉತ್ತೇಜಿತ ಧ್ವನಿಯಿಂದ ಮಾತು ಮುಂದುವರಿಸಿದನು.

'ಯಾರಿಗಾದರೂ ಸುಖವು ಅಮೂಲ್ಯವಾದುದು. ರಾಜ ಸುಖದಂತೆಯೆ ಪ್ರಜಾಸುಖ. ರಾಮನಿಗೆ ಯಾವುದು ಸುಖವೊ? ಸೀತೆಗೆ ಯಾವುದು ಸುಖವೊ? ಮತ್ತು ನಮ್ಮ ದೊರೆಗೆ ಯಾವುದು ಸುಖವೊ? ಓರ್ವನ ಸುಖ ಸರ್ವರ ಸುಖವಾಗುತ್ತದೆಯೆ? ಓರ್ವನ ಸುಖವು ಬಹುಜನರ ಸುಖಕ್ಕೆ ಬೆಲೆಯಾಗುತ್ತದೆಯೆ? ಹಾಗೆ ಬೆಲೆಯಾದರೆ ಸುಖಕ್ಕೆ ಸುಖವೇ ತಾನು ನಾಣ್ಯವೊ? ಅಥವಾ ಅಳತೆಗೆ ಇನ್ನೂ ಬೇರೆ ಹೊನ್ನಿರುವುದೊ? ಧರ್ಮವೇ ಆ ಹೊನ್ನಾಗುವುದೊ?....ಇಲ್ಲಿರುವ ತತ್ತ್ವದರ್ಶಿಗಳು ಅದನ್ನು ನಿಶ್ಚಯಿಸಲಿ..... ನನ್ನಂಥವರ ಒಂದು ಅಭಿಪ್ರಾಯ ಹೇಳುತ್ತೇನೆ. ಸುಖವು ಒಬ್ಬನದು ಮಾತ್ರವಾಗಿ ಅದು ಸಕಲರ ದುಃಖಕ್ಕೆ ಕಾರಣವಾದರೆ ಅದು ನೃಪನದಾದರೂ ನಿಂದನೀಯವೆ.

'ಲಂಕಿಣಿಯ ಭಂಗವಾದಂದಿನಿಂದ ರೂಪವಿಲ್ಲದ ಭೀತಿಭೂತದ ಬೃಹಚ್ಛಾಯೆಯು ನಮ್ಮ ನಗರದ ಜನರ ಮನಸ್ಸನ್ನು ಆವರಿಸಿದೆ. ಶಕುನಗಳು ಮತ್ತು ದುಶ್ಯಕುನಗಳು ಮುಂದೆ ಬರಲಿರುವ ದುರಂತವನ್ನು ಸಾರಿ ಹೇಳುತ್ತಿವೆ ಎಂದು ಪುರೋಹಿತರು ಹೇಳುವರು. ನಂಬುವರು ನಂಬಿ, ಮೌಢ್ಯವೆನ್ನುವವರು ಬಿಡಿ. ಆದರೆ, ತಿಳಿದವರು ಜನಮನದ ಮೇಲಾದ ಪರಿಣಾಮವನ್ನು ತಿರಸ್ಕರಿಸುವರೆ? ಭಯವು ವೈರಿಯಿಂದಾದುದಲ್ಲ. ಧರ್ಮದ ಮುನಿಸಿನ ಒಂದು ಸಂಶಯವು ಪುರದ ಧೈರ್ಯವನ್ನು ಕಲಕುತ್ತಿದೆ.

'ಲಂಕೆ, ನಮ್ಮ ಈ ಕನಕಲಂಕೆ, ದೈತ್ಯ ನಾಗರಿಕತೆಯ ನಂದನವನ. ನಮ್ಮ ಅಸುರ ವೀರರು ಅಮರರ ಐಶ್ವರ್ಯವನ್ನು ಸೂರೆಗೊಂಡಿದ್ದಾರೆ. ನಮ್ಮ ಲಲನೆಯರು ದೇವತಾಸ್ತ್ರೀಯರ ಸೌಂದರ್ಯವನ್ನು ಸೂರೆಮಾಡಿದ್ದಾರೆ. ಶಿಲ್ಪಿಗಳು ನಮ್ಮ ಪುರ ರಚನೆಯಲ್ಲಿ ವಿಶ್ವಕರ್ಮನ ಕೈಯ ಕುಶಲಮರ್ಮವನ್ನು ಸೆಳೆದಿದ್ದಾರೆ. ನಮ್ಮ ಮಲೆನಾಡು ಅಲಕಾವತಿಯ ಬೆಟ್ಟ ಕಾಡುಗಳನ್ನು ಮೀರಿಸಿವೆ. ಖಂಡಿತವಾಗಿ ಲಂಕೆಯು ದೈತ್ಯ ಸಂಸ್ಕೃತಿಯ ದೇವಾಲಯವಾಗಿದೆ! ರಾಕ್ಷಸಕುಲದ ಮಕ್ಕಳಾದ ನಮಗೆ ಇದನ್ನು ಹಾಳು ಮಾಡಲು ಧೈರ್ಯ ಇದೆಯೆ? ಮತ್ತು ಬೇರೆಯವರಿಗೆ ಹಾಳು ಮಾಡಲು ಬಿಡುವೆವೆ? ಎಲ್ಲ ಜನರ ಕುಶಲ ಕಾಯಕದಿಂದ ನಮ್ಮ ಹೆಮ್ಮೆಯ ಈ ದಿವ್ಯ ಕನಕ ಲಂಕಾಗೋಪುರವನ್ನು ನಿರ್ಮಿಸಲಾಗಿದೆ. ಇದನ್ನು ಈ ಪ್ರಾಜ್ಞಸಭೆಯು–ಓರ್ವನ ಅನಿಶ್ಚಿತ ಸುಖಕ್ಕೆ ಮಾರಲು ಒಪ್ಪಿಗೆ ನೀಡುವುದೆ?

'ಹೆಣ್ಣಿನ ಮೊಗದ ಚೆಲುವನ್ನು ಮತ್ತು ಮೈಯ ಸೊಗಸನ್ನು ಮೀರಿದ ಸೌಂದರ್ಯ ಈ ಪುಣ್ಯಲಂಕೆ ಹೊಂದಿದೆ. ಬೆಳಗಿನ ಹೊತ್ತು ಬೆಟ್ಟ ಸಾಲುಗಳಲ್ಲಿ ನಡೆದಾಡುವಾಗ ಮರಮರದ ಕೊಂಬೆಯನ್ನು ಸಿಂಗರಿಸುತ್ತಿದ್ದ ವಸಂತನನ್ನು ಕಂಡೆ; ಬಳ್ಳಿ ಬಳ್ಳಿಯ ಬಳಿ ಸಾಗಿ ಸುಮ ಸುಮದ ಗಲ್ಲವನ್ನು ಹಿಡಿದು ಕೆನ್ನೆಗೆ ಬಣ್ಣವಿಡುತ್ತಿದ್ದವನನ್ನು ಕಂಡೆ. ಹಕ್ಕಿ ಹಕ್ಕಿಯನ್ನು ಕರೆದು ಅವುಗಳ ಕೊರಳ ಉಲಿತವನ್ನು ಇಂಪುಗೊಳಿಸುತ್ತ ಅವುಗಳ ಗರಿಗಳಿಗೆ ಕಾಮನ ಬಿಲ್ಲಿನ ರಂಗುರಂಗನ್ನು ಹಚ್ಚುತ್ತಿದ್ದವನನ್ನು ಕಂಡೆ!

'ಒಂದೆಡೆ ಹೂ ಬಿಟ್ಟ ಪನ್ನೇರಿಳೆಯ ನೆರಳಿನಲ್ಲಿ ನಿಂತೆ. ಚವರಿ ಮೃಗದ ಬಿಳಿಯಾದ ನವಿರು ಎನ್ನುವಂತೆ ಬಿಳುಪನ್ನೆ ಹೊರಚೆಲ್ಲುವ ತುಂತುರಿನ ಕಾರಂಜಿಗಳ ಹಾಗೆ ಇರುವ; ಕುಚ್ಚು ಕುಚ್ಚಿನ ತುದಿಯ ಕೇಸರದ ಬೊಟ್ಟಿನ ಅರಳುವ ಮೊಗ್ಗುಗಳು, ಆ ತರು ತರುಣಿಯನ್ನು ತುಂಬಿ ಶೃಂಗರಿಸಿದ್ದವು.

'ಬಿಳಿ ಹೂಗಳಲ್ಲಿ ಮಧುವನ್ನು ಹೀರಲೆಂದು ಬಂದ ಕರಿದುಂಬಿಗಳು ಕುಸುಮ ಕೋಮಲ ಬೆಟ್ಟದ ಮಲ್ಲಿಗೆಯ ಹೃದಯವನ್ನು ಮಿಡಿದು ಮೊರೆದು ಝೇಂಕರಿಸಿದ್ದವು. ಹೊಂಗೆಯು ತನ್ನ ಪಾದ ಪ್ರದೇಶವನ್ನು ತಾನೆ ಪೂಜಿಸಿಕೊಂಡಂತೆ, ತನ್ನ ಹೂ ಅಕ್ಕಿಯಿಂದ ರಂಗವಲ್ಲಿಯನ್ನಿಟ್ಟು ಮಂಗಳಾಕ್ಷತೆಯನ್ನು ಚೆಲ್ಲಿತು.

'ಬೆಂಕಿಯು ಗೊಂಚಲಾಗಿರುವ; ಹೂವಿನ ಓಕುಳಿಯ ಜೀರ್ಕೋವಿ (ಪಿಚಕಾರಿ)ಯಿಂದ ಅರಣ್ಯರತಿಯು ವಸಂತರಾಜ (ಮಧುನೃಪ) ನಿಗೆ ಸಂತೋಷವನ್ನುಂಟು ಮಾಡಲು ರಚಿಸಿದ ಹಾಗಿರುವ ಅಶೋಕ ಪುಷ್ಪಗಳನ್ನು ಕಂಡೆ.

'ಇಂತಹ ಪ್ರಕೃತಿ ವೈಭೋಗದ ಸಮೃದ್ಧಿಯನ್ನು ಬರಿಯ ಸೈನ್ಯ ಬಲವನ್ನು ನಂಬಿ ಹಾಳುಗೆಡಿಸುವುದು ಉಚಿತವಲ್ಲ. ಧರ್ಮವನ್ನು ಕೆರಳಿಸುವ ಕಾರ್ಯದಿಂದ ದೂರವಾಗಿರಿ. ಅನಂತರ ಮೂರು ಲೋಕಗಳೇ ಬರಲಿ ನೋಡಿಕೊಳ್ಳೋಣ! ಅವು ನಮಗೆ ಸಮನಾದುವೆ? ನಮ್ಮಲ್ಲಿಯ ಒಬ್ಬನಿಗೆ ಸಮವೆ? ಈ ಲಂಕೆ ಶೌರ್ಯದ ಗಣಿ. ಧರ್ಮದ ರೋಷವನ್ನು ಹೊರತು ಪಡಿಸಿ ಅನ್ಯ ವೈರಿಯ ಶಂಕೆ ನನಗೆ ತೃಣಮಾತ್ರವೂ ಇಲ್ಲ.'

ಎಂದು ಹೇಳಿದ ಹಿರಣ್ಯಕೇಶಿಯ ಉಪನ್ಯಾಸವನ್ನು ಕೇಳಿ ಸಭಾಸದರು ಆಶ್ಚರ್ಯಚಕಿತರಾಗಿ ಎರಕಹೊಯ್ದ ಪ್ರತಿಮೆಗಳಂತಿದ್ದರು. ಅವನು ಕುಳಿತು ಮರೆಯಾದರೂ ಎಷ್ಟೊ ಜನ ಆ ದಿಕ್ಕಿನ ಕಡೆಗೆ ಕಣ್ಣಾದರು. ಅವನು ಯಾರು? ಆತನು ಯಾರು? ಎಂದು ಸುಪ್ರಸಿದ್ಧರು ಒಬ್ಬರು ಇನ್ನೊಬ್ಬರನ್ನು ದೃಷ್ಟಿಸಿ ಪ್ರಶ್ನಿಸುತ್ತಿದ್ದರು. ಆಗ ಘೇ, ಉಘೇ ಎಂದು ಅಪ್ರಸಿದ್ಧರು ಹರ್ಷದಿಂದ ಎತ್ತಿದ ತೋಳುಗಳ ತುದಿಯಲ್ಲಿ ಕರವಸ್ತ್ರಗಳು ಕುಣಿಯುತ್ತಿದ್ದವು.

ಸಭಾಸದನರ ಮನಸ್ಸು ವಿರುದ್ಧ ಭಾವಕ್ಕೆ ಒಳಗಾಗಲಿಲ್ಲ. ಅವರ ಕಣ್ಣು ಇದ್ದಕ್ಕಿದ್ದಂತೆ ಸಿಂಹಾಸನದ ಬಳಿಯ ಗೌರವಾನ್ವಿತ ಮುಖಂಡರು ಕುಳಿತಿದ್ದ ಎತ್ತರದ ಆಸನಗಳಿದ್ದ ಕಡೆಗೆ ಹರಿಯಿತು. ಅಲ್ಲಿ ದೈತ್ಯ ಕೀರ್ತಿಯ ಕಲಶದ ಅಗ್ರಮಣಿ ಇಂದ್ರನನ್ನು ಜಯಿಸಿದ ಮೇಘನಾದ ಎದ್ದನು. ಸುಂದರ ಭವ್ಯ ಶರೀರದ ಹೊಂಬಣ್ಣದ ಅವನ ಸೊಂಟದಲ್ಲಿ ಭೀಷಣವಾದ ರತ್ನ ಖಚಿತ ಖಡ್ಗ ಶೋಭಿಸುತ್ತಿತ್ತು.

ಅವನ ತುಟಿಗಳೆಡೆಯಲ್ಲಿ ರಜೋಗುಣದ ನಾಲಗೆ ರಜತ ಸರ್ಪದ ನಗುವಿನೊಡನೆ ಮಿಂಚಿನಂತಾಡಿತು. ತುಪ್ಪಳ ಮೀಸೆಗಳ ಬಿಂಕ ಕೊಂಕುಗಳು ಲಘುತ್ವವನ್ನು ಹತ್ತಿರಕ್ಕೆ ಬರಗೊಡದಂತೆ ಕಾವಲಿದ್ದವು. ಅವು ಮುಖ ದುರ್ಗದ ದ್ವಾರಪಾಲಕರ ಕೈಯಲ್ಲಿನ ಭಯಂಕರ ಚೂರಿಗಳಂತಿದ್ದವು. ಪೊದೆಯ ಹುಬ್ಬಿನ ಚೆಲುವಾದ ಕಪ್ಪಿನ ಕೃಪಾಶ್ರಯದಲ್ಲಿ, ಅಮಾವಾಸ್ಯೆಯ ಅಂತರಿಕ್ಷ ಭೋಗದಲ್ಲಿ ಪ್ರಜ್ವಲಿಸುವ ಕಿರಣ ತಾರಾ ಸ್ಮರಣೆಯನ್ನುಂಟುಮಾಡುವ ಕಣ್ಣಾಲಿಗಳಿದ್ದವು. ಅವು ಅಧಿಕ ಕೋಪದಿಂದ ಕೂಡಿದ ರಾಹುಕೇತುಗಳಂತೆ ಸಭಾವಲಯ ವಿಶ್ವವನ್ನು ವೀಕ್ಷಿಸಿದುವು! ದ್ರವೀಕೃತ ಶಿಲಾ ಲೋಹ ಮಿಶ್ರ ಪ್ರವಾಹಗಳನ್ನು ಚಿಮ್ಮುವ ಅಗ್ನಿ ಪರ್ವತದಂತೆ ನುಡಿ ಬೆಂಕಿಯನ್ನು ಮೇಘನಾದನು ವರ್ಷಿಸಿದನು:

ನಮ್ಮ ದೊರೆಗಿಲ್ಲಿ ಬೇಕಾದುದೆಮ್ಮ ಹರಣ; ಕಾವ್ಯಮಲ್ತು ಮೇಣ್ ಧರ್ಮಬೋಧೆಯಲ್ತು.

'ಪ್ರಭುಗೆ, ಪ್ರಭುಕಿಂಕರರ ಮಂಡಲೇಶ್ವರರ ಮಂಡಲಿಗೆ, ಲಂಕಾ ಪ್ರಕೃತಿ ಪುರುಷ ಪ್ರಾತಿನಿಧ್ಯರಿಗೆ, ದೈತ್ಯವಿಕ್ರಮಸಿಂಹರಿಗೆ ನಾನು ನನ್ನ ಗೌರವ ನಮಸ್ಕಾರಗಳನ್ನು ಅರ್ಪಿಸುತ್ತೇನೆ. ನಾನು ಇಂದು ಈ ಸಭೆಗೆ ನಾಲಗೆಯ ಚಮತ್ಕಾರವನ್ನು ಪ್ರದರ್ಶಿಸಲು ಬಂದಿಲ್ಲ. ನನಗೆ ಇದುವರೆಗೂ ಮಾತನಾಡುವ ಮನಸ್ಸು ಇರಲಿಲ್ಲ. ಈಗ ಓರ್ವ ಕಾರ್ಯವಂಚಕ ವಾಕ್ ಚತುರ, ಕೋಮಲ ಕಿಶೋರ, ಸವಿನುಡಿಯ ಶೂರನ ನುಡಿಕೇಳಿದೆನು.

'ಅವನು ಎಲ್ಲಕ್ಕೂ ಮಿಗಿಲಾಗಿ ತರುಣರ ಎದೆಯಲ್ಲಿ ಹರಿದಾಡುವ ಚಿಂತೆಯ ಹೆಜ್ಜೆಗಳನ್ನು ಈ ಬೃಹದ್ ಗೋಷ್ಠಿಗೆ ತಿಳಿಸುವಂತೆ ಕೆಚ್ಚಿನಿಂದ ಮಾತಾಡಿದನು. ಅದಕ್ಕೆ ನನ್ನ ಮೌನವ್ರತದ ಮನಸ್ಸು ಕೆರಳಿತು. ನನಗೆ ಅವನು ಯಾರೆಂದು ಗೊತ್ತಿಲ್ಲ. ನಿಜವಾಗಿಯೂ ಅವನು ಮೊಳೆಯುವ ಕವಿಯಿರಬೇಕು. ಹಾಗಿಲ್ಲದಿದ್ದರೆ ಇತರರಿಗೆ ಆ ಸ್ತ್ರೀಯೋಗ ಮೋಹಕತೆ ಸುಲಭವಲ್ಲ! ಬುದ್ಧಿಯನ್ನು ಮಲಗಿಸಲು ಮೊದಲು ಜೋಗುಳ ಹಾಡಿ, ಅನಂತರ ಭಾವಕ್ಕೆ ಏನನ್ನು ಹೇಳಿದರು ಅಹಿತವಾಗುತ್ತದೆಯೆ? ತಿಳಿಯದ ರೀತಿ ಇನ್ನೊಬ್ಬರ ಮನಸ್ಸನ್ನು ಗೆಲ್ಲುವುದು ಕವಿಯ ಕಾವ್ಯ ವಂಚನೆಯಲ್ಲವೆ?

'ಹೊಂಗೆಹೂ ಚೆಲುವಾಗಿದೆ ಎನ್ನುವುದು ಅವನ ತರ್ಕದ ಮೊದಲಭಾಗ. ಅದರ ಸಿದ್ಧಾಂತ: ನಮಗೆ ಹೆಣ್ತನವೆ ಸಲ್ಲಕ್ಷಣ! ತುಂಬಿಯು ಜೇನುಂಡು ಮೊರೆಯುತ್ತಿದೆ ಎನ್ನುವುದು ಅವನ ತರ್ಕದ ಮೊದಲ ಭಾಗ. ಅದರ ಸಿದ್ಧಾಂತ: ನಮ್ಮ ಲಂಕಾಲಕ್ಷ್ಮಿಗೆ ಒಂದಿಷ್ಟು ಗಾಯವಾಗದಂತೆ ವೈರಿಗೆ ಅವಳನ್ನು ಅಕ್ಷತೆಯ ಸಮೇತ ಸಮರ್ಪಿಸಿ!'

ಮೇಘನಾದನ ಆ ನುಡಿ ಕಿವಿಗೆ ಬಿದ್ದೊಡನೆ ನೃಪ ಸಭಾಮಂದಿರ ಒಡೆದು ಹೋಗುವಂತೆ ಗೊಳ್ಳೆಂದು ಗುಲ್ಲೆದ್ದಿತು ಅಟ್ಟಹಾಸ! ಆದರೆ ನಗದೆ, ಹುಬ್ಬುಗಂಟಿಕ್ಕಿದವನಾಗಿ ಸಭೆಯ ಲಘುಭಾವವನ್ನು ಮೆಟ್ಟುತ್ತ ಘನಕಂಠದಿಂದ ಇಂದ್ರಜಿತು ಮತ್ತೆ ಮಾತು ಮುಂದುವರಿಸಿದನು.

'ಸಹಜ; ಕವಿಗೆ ಮತ್ತು ಸ್ತ್ರೀಗೆ ತರ್ಕ ನೈಸರ್ಗಿಕ ವಕ್ರನಡೆ. ರಾಜ ಕಾರಣಕ್ಕೆ ಅಬಲೆಯೊರ್ವಳನ್ನು ಅಕಾರಣವಾಗಿ ನೆವಮಾಡಿ, ವಾದವನ್ನು ಜಟಿಲತೆಯ ಮುಳ್ಳುಮೆಳೆಗೆ ತಳ್ಳಿ, ತಾನು ಹಾದಿತಪ್ಪಿ ಇತರರನ್ನು ಕಂಗೆಡಿಸುವ ಕುಶಲಕಲೆ ಇಲ್ಲಿಗೆ ಅಪ್ರಕೃತ, ಅವಿವೇಕ, ಅಸಮಾನ ಕಾರಣ. ಅದಕ್ಕೆ ಇದು ಸೂಕ್ತ ಸ್ಥಳ ಅಲ್ಲ. ಧರ್ಮಜಿಜ್ಞಾಸೆಗೆ ಇದು ಜಟಾಧಾರಿಗಳ ಹಣ್ಣಾದ ಮುದುಕರ ಸಮಿತಿಯಿಲ್ಲ.

'ರಾಕ್ಷಸ ಬಲವು ಅನುಮಾನಕ್ಕೆಡೆಯಿಲ್ಲದಂತಿದೆ. ಅದಕ್ಕೆ ಸೀತೆಯಿಂದಾಗಲಿ, ರಾಮನಿಂದಾಗಲಿ ಅಥವಾ ಧರ್ಮದಿಂದಾಗಲಿ ಅನ್ಯರ ಆಶ್ರಯದ ಶಕ್ತಿ ಬೇಕಾಗಿಲ್ಲ. ಶತ್ರು ಸೈನ್ಯವು ದೂರದ ಸಮುದ್ರದ ಆ ದಡದ ಮರಳ ಮೇಲೆ ಬೀಡುಬಿಟ್ಟಿದೆ. ಅದು ಲಂಕೆಗೆ ಬಹಳ ಅಪಾಯಕಾರಿ. ನಮ್ಮ ದೊರೆಗೆ ಇಲ್ಲಿ ಬೇಕಾದದ್ದು ನಮ್ಮ ಪ್ರಾಣ; ಕಾವ್ಯವೂ ಅಲ್ಲ ಮತ್ತು ಧರ್ಮಬೋಧೆಯೂ ಅಲ್ಲ.'

ಎಂದು ದಶಶಿರನ ಮೆಚ್ಚಿನಮಗ ಹೇಳುತ್ತ ಸಿಂಹಾಸನದ ಕಡೆಗೆ ಕಣ್ಣು ಹರಿಸಿ ಚಕ್ರೇಶ್ವರನಿಗೆ ತನ್ನ ಧೈರ್ಯ ಐರಾವತದ ಕುತ್ತಿಗೆ ಭುಜಗಳನ್ನು ಬಾಗಿಸಿ ಶರೀರವನ್ನು ಸಮರ್ಪಿಸುತ್ತ ಮತ್ತೆ ಮಾತನ್ನು ಮುಂದುವರಿಸಿದನು:

'ಮೂರು ಲೋಕಗಳ ವಿಜಯಿ ಹೇ ದೈತ್ಯ ಚಕ್ರೇಶ್ವರನೇ, ನೀನು ನಿರಂಕುಶನು, ಅಸಹಾಯಶೂರನು ಆಗಿ ಬೆರಕೆ ಗುಂಪಿನ ಮಂತ್ರಾಲೋಚನೆಗೆ ಕಿವಿಗೊಡಲು ಮನಸ್ಸು ಮಾಡಿರುವೆ. ಅದು ನಮ್ಮ ಬುದ್ಧಿಯ ಮೇಲ್ಮೆಯನ್ನಾಗಲಿ ಅಥವಾ ಶಸ್ತ್ರಾಸ್ತ್ರದ ಹಿರಿಮೆಯನ್ನಾಗಲಿ ಸೂಚಿಸುತ್ತಿಲ್ಲ. ಅದು ರಾಜ ಹೃದಯದ ಪ್ರಜಾವಾತ್ಸಲ್ಯದ ಮಹಾ ಔದಾರ್ಯವನ್ನು ವ್ಯಕ್ತಪಡಿಸಿದೆ. ಅದನ್ನು ತಿಳಿಯದ ಎಳೆಮುಖಕ್ಕೆ ನವಿರುಕಪ್ಪಿನ ಅಂಕುರವಿನ್ನೂ ಮೂಡದ ಎಳಸು ಗಂಪುಗಳು ಭಾವುಕ ಸಹಜ ಭಾಷೆಯಿಂದ ಸಮರ ನಟರಾಜನಾದ ನಿನಗೆ ರಣ ತಾಂಡವದ ರಾಜಕೀಯವನ್ನು ಬೋಧಿಸುತ್ತಿವೆ. ಸಿಂಹದ ಉಗುರಿಗೆ ನರಿಯು ತನ್ನ ಹಲ್ಲಿನ ಕ್ಷುದ್ರಕವಚವನ್ನು ನೀಡುತ್ತಿದೆ!

'ವಜ್ರಕ್ಕೆ ಇದ್ದಲಿನ ಸಾಣೆಹಿಡಿಯುವ ಬೆಪ್ಪುತನಕ್ಕೆ ಕುಸಿಯುವ, ಸಮೂಹದ ಹೊಗಳಿಕೆಯ ಕೀರ್ತಿಗೆ ಬಾಯಿಬಿಡುವ ಬಾಯಾರಿಕೆಯ ಮೋಹ ನನ್ನ ಹತ್ತಿರ ಸುಳಿಯದಿರಲಿ. ನಿನಗೆ ನಾನು ಬುದ್ಧಿ ಹೇಳುವ ಹುಚ್ಚುತನ ನನ್ನನ್ನು ಆವರಿಸದಿರಲಿ. ಈ ನನ್ನ ಧೈರ್ಯದ ನಿರ್ಣಯಕ್ಕೆ ನಿನಗೆ ಮಗನೆನ್ನುವುದು ಒಂದೆಯೇ ಅಲ್ಲ; ದೊರೆಗೆ ನಾನು ಪ್ರಜೆಯೆನ್ನುವ ತರ್ಕವೂ ಇದೆ. ನಿನ್ನಿಷ್ಟದಂತೆ ನಡೆಯುವುದೇ ಧರ್ಮ. ನಿನ್ನ ಆಜ್ಞೆಯನ್ನು ಪಾಲಿಸುವುದೇ ನಿನ್ನ ಮಗನಾದ ನನ್ನ ಕರ್ತವ್ಯಕರ್ಮ. ರಾಕ್ಷಸ ಕುಲಕ್ಷೇಮಕ್ಕೆ ರಾಕ್ಷಸೇಂದ್ರನಿಗೆ ವಿಧೇಯನಾಗಿರುವುದನ್ನು ಹೊರತುಪಡಿಸಿ. ಬೇರೆ ರಕ್ಷಾಕವಚವನ್ನು ನಾನು ಕಂಡಿಲ್ಲ!....

'ತಮ್ಮ ಶಕ್ತಿ ನೈಪುಣ್ಯವನ್ನು ತಾವೆ ಕೊಂಡಾಡುವುದು ಸಭ್ಯ ಲಕ್ಷಣವಲ್ಲ. ಆದರೂ ಈ ಸಭೆಯ ಸಮಾಧಾನಕ್ಕಾಗಿ ಅದನ್ನು ಹೇಳುತ್ತೇನೆ. ವಿನಾಕಾರಣವಾಗಿ ಬೆದರುವುದು ಬೇಡ. ನಮ್ಮ ಕಳವಳವೇ ನಮಗೆ ವೈರಿಗಿಂತ ಮಿಗಿಲಾದ ವೈರಿ. ಈ ಲಂಕೆಯ ಕೋಟೆ ದುರ್ಗಮವಾಗಿದೆ. ಮಹಾಸಮುದ್ರವನ್ನು ದಾಟುವುದು ಅಸಾಧ್ಯ. ನಮ್ಮ ಸೇನೆಯು ಭೀಕರ, ಭೀಷಣ ಮತ್ತು ನಿಗ್ರಹಿಸಲಾಗದ ರೋಷದಿಂದ ಕೂಡಿದೆ.

'ಚೋರ ನಿಪುಣನಾದ ಆ ವಾನರ ಮೋಸಗಾರನೊಬ್ಬ ಒಳಹೊಕ್ಕು, ನಾವು ಹಿಡಿಯುವಷ್ಟರಲ್ಲಿ ತಪ್ಪಿಸಿಕೊಂಡು ಹೋದನು. ಅವನು ಮಾಯಾಶಕ್ತಿ ವಿಕ್ರಿಯಾ ವಿದ್ಯೆಯಿಂದ ಸಮುದ್ರವನ್ನು ನೆಗೆಯಲು ಸಮರ್ಥನಾದ ಹನುಮಂತನೆಂದು ಗುಪ್ತಚಾರರು ತಿಳಿಸಿದ್ದಾರೆ. ಅದಕ್ಕೆ ನಾನು ಮಾಯಾ ಪ್ರತಿಕ್ರಿಯೆಯನ್ನೊಡ್ಡಿನಿಂತೆನಾದರೆ, ಮಾರುತಿಯ ಮಾತಿರಲಿ ಅವನ ಅಪ್ಪನು ದಿಕ್ಕೆಟ್ಟು ಸೋಲುತ್ತಾನೆ. ರಾಮಸೇನೆ, ಕಾಡಿನ ಕಪಿಧ್ವಜ ವಾನರ ಸೈನ್ಯಬರಲಿ. ಇಂದ್ರಾದಿದೇವ ದಿಕ್ಪಾಲಕರ ಸೊಕ್ಕನ್ನು ಇಳಿಸಿ, ತನ್ನ ಆಜ್ಞೆಗೆ ಒಳಪಡಿಸಿಕೊಂಡಿರುವ ಉಕ್ಕಿನ ಒಂದು ಸಿಡಿಲು ಆ ವೈರಿಗಳನ್ನು ಸುಟ್ಟು ಭಸ್ಮಮಾಡುತ್ತದೆ.

'ಸಮುದ್ರ ಅವರಿಗೆ ನೀರ್ಮಸಣವಾಗದಿದ್ದರೆ, ಆ ಶತ್ರು ಸಮೂಹಕ್ಕೆ ಲಂಕೆಯು ತನ್ನ ಮಣ್ಣಿನಲ್ಲಿ ಸಮಾಧಿಯನ್ನು ರಚಿಸುವುದು ಖಚಿತ! ಬಿರುಗಾಳಿ ತರಗೆಲೆಗಳನ್ನು ಬೀಸುತ್ತ ಮೇಲಕ್ಕೆ ಎಬ್ಬಿಸಿದಂತೆ, ಕಾಳ್ಗಿಚ್ಚು ಕರಡಹುಲ್ಲಿನ ಬಣಬೆಯನ್ನು ನೊಣದು ನೆಕ್ಕಿ ಕರಿ ಕಪ್ಪಾಗಿಸುವಂತೆ ನಾನು ಕಲಿತಿರುವ ಸಕಲ ಮಾಯಾವಿದ್ಯೆಯನ್ನು ಅವರ ಮೇಲೆ ಪ್ರಯೋಗಿಸುತ್ತೇನೆ. ಒಂದು ಪಿಳ್ಳೆಯೂ ಹಿಂತಿರುಗದಂತೆ ಸುಟ್ಟುಹಾಕುತ್ತೇನೆ.

'ದೈತ್ಯ ಕುಲದೇವ, ಇದೊ ನಿನಗೆ ನನ್ನ ಸರ್ವಸ್ವವನ್ನು ಮುಡಿಪಾಗಿಸಿದ್ದೇನೆ. ನಿನ್ನ ಆಜ್ಞೆಯನ್ನು ಪಾಲಿಸುವುದೇ ನನ್ನ ಜೀವದುಸಿರು. ಅದೇ ಸತ್ಪ್ರಜೆಯ ಕರ್ತವ್ಯ ಮತ್ತು ಕ್ಷಾತ್ರ ತೇಜದ ಸಾರ್ಥಕ ನಿಷ್ಠೆ!'

ಕಪ್ಪಾದ ರಾತ್ರಿಯ ನಕ್ಷತ್ರ ಓಲಗದಲ್ಲಿ ಒಂದು ನಕ್ಷತ್ರ ತಾನಿದ್ದ ಸ್ಥಳದಿಂದ ಎದ್ದು ಧಾವಿಸಿ ನುಗ್ಗುತ್ತ ಪ್ರಕಾಶಿಸಿ ಕಣ್ಮರೆಯಾಗುತ್ತದೆ. ಆದರೂ ಆ ಆಕಾಶದ ತೆರೆಯ

ಕಪ್ಪಿನಲ್ಲಿ ಅದರ ಹಿಂದೆ ಉಳಿಯುವ ರಂಜಕದಿಂದ ಉದ್ದೀಪ್ತವಾದ ಬೆಳಕಿನ ಗೆರೆಯನ್ನು ನೋಡುವವರು ಆಶ್ಚರ್ಯ ಚಕಿತರಾಗುತ್ತಾರೆ. ಹಾಗೆ ಸಭೆಯ ಜನರು ಉಲ್ಲಾಸದ ಕೊರಳಿನಿಂದ ಉಘೇ ಘೋಷವನ್ನು ಪ್ರಕಟಿಸುವುದನ್ನು ಮರೆತು ಸುಮ್ಮನಿದ್ದರು.

ಅವರು ಕೇಳಿದ ಅರ್ಥವನ್ನು ಮೆಲುಕುಹಾಕುತ್ತ ಭಾವದ ಅರ್ಥವನ್ನು ತಿಳಿಯುವಂತಿದ್ದರು. ಮಣಿಗಳಿಂದ ಕೂಡಿದ ಸರ್ಪವು ಹೆಡೆಯಾಟವನ್ನು ನಿಲ್ಲಿಸಿ ತನ್ನ ಹುತ್ತಕ್ಕೆ ಮರಳುವಂತೆ, ಇಂದ್ರಜಿತು ವಿರಮಿಸುತ್ತ ಸಂಭ್ರಮದಿಂದ ತನ್ನ ಉನ್ನತ ಆಸನದಲ್ಲಿ ಕುಳಿತನು.

ಲಂಕಾಪ್ರತಾಪಕ್ಕೆ ಪರಾಕ್ರಮಕ್ಕೆ ಕಲಶಮಣಿಯಾಗಿದ್ದ ಮೇಘನಾದನ ವಾಕ್ ಸಿಡಿಲಿನ ಬಡಿತದ ಮೂರ್ಛೆಯಿಂದ ಸಭೆ ಮೆಲ್ಲನೆ ಎಚ್ಚರಗೊಳ್ಳುತ್ತಿತ್ತು. ಹಿರಣ್ಯಕೇಶಿಯು ಮೊರೆಯನ್ನು ಕಳಚುತ್ತ ನಾಲಗೆಯನ್ನು ಹೊರಗೆ ಚಾಚಿ, ಕೋರೆದಾಡೆಯನ್ನು ಮಸೆಯುವ ಮಾರುತ್ತರ ನೀಡುವ ಹುರುಪಿನಿಂದ ಮೇಲೇಳುವವನಿದ್ದನು. ಆಗ ಅವನ ಕಣ್ಣಿಗೆ ಭಾಷಣ ಮಾಡುವ ಮನಸ್ಸಿನಿಂದ ಮೇಲೇಳುತ್ತಿರುವ ವಿಭೀಷಣನ, ಹೃದಯಕ್ಕೆ ಧೈರ್ಯವನ್ನುಂಟು ಮಾಡುವ ಪೂಜ್ಯನ ಚಿತ್ರಕಂಡಿತು.

ಭವ್ಯ ಎತ್ತರದ, ಬಿಳಿ ಉಡುಗೆಯ ವಿಭೀಷಣನ ಸಾತ್ವಿಕ ಶರೀರವು ವೇದಿಕಾ ಪ್ರಾಂಗಣದಲ್ಲಿ ಮುಖ್ಯವಾಗಿ ಕಂಡಿತು. ಅಮೃತ ಶಿಲೆಯಿಂದ ಕಡೆದ ಶೋಭಾಯಮಾನವಾದ ಜೈನ ದೇವತಾ ಮೂರ್ತಿಯಂತೆ ಅದು ನೋಡುವವರ ಕಣ್ಣಿಗೆ ಶಾಂತಭಾವವನ್ನುಂಟು ಮಾಡಿತು. ಆಚಾರ್ಯರ ನುಡಿಯನ್ನು ಕೇಳುವುದಕ್ಕೆ ಕಾತರರಾಗಿರುವ ಶಿಷ್ಯವೃಂದದಂತೆ ಆ ಮಂದಿರ ನಿಶ್ಯಬ್ದವಾಗಿತ್ತು. ಸ್ಥೂಲವಲ್ಲದ ಸುಂದರ ಮುಖದಲ್ಲಿ ಧರ್ಮತೇಜಕ್ಕೆ ಕೆಟ್ಟದೃಷ್ಟಿ ತಾಗದಿರಲೆಂದು ಸತ್ತ್ವವೇ ರಚಿಸಿತೆಂಬಂತೆ, ಕೊಂಕು ಬಿಂಕಗಳು ಇರದ ಮೀಸೆಯು ಮನಸ್ಸನ್ನು ಒಲಿಸುವಂತೆ ಪ್ರಕಾಶಿಸುತ್ತಿದ್ದಿತು. ಅದು ಸರಳ ಶೈಲಿಯ, ಅಭಿಮಾನ ರಹಿತವಾದ ತಪಃ ಪುರುಷನ ಸಭ್ಯರೀತಿಯ ಪ್ರಕಟರೂಪವಾಗಿತ್ತು.

ಬುದ್ಧಿಯ ತೀಕ್ಷ್ಣತೆಗೆ ತಾನು ಸಾಕ್ಷಿ ಎಂಬಂತೆ ನೀಳವಾದ ತೆಳ್ಳನೆ ಮೂಗಿತ್ತು. ಅದು ಎರಡು ಕಣ್ಣಿನ ಸರೋವರಗಳ ನಡುವಿನ ಏರಿಯ ರೀತಿಯಿತ್ತು. ಅದು ಅಲ್ಲಿ ಕೂಡಿದ್ದ ಸಭೆಯ ಕಣ್ಣಿನ ಸಂಚಾರಕ್ಕೆ ತಿರುಗಾಡುವ ಶಾಂತಿಪಥದಂತಿತ್ತು. ರಾವಣನೂ ಸೇರಿ ಎಲ್ಲರೂ ಅಪೇಕ್ಷಣೀಯವಾದ ಗಂಭೀರ ಗೌರವದಿಂದ ಅನಲೆಯ ತಂದೆಯ ಮಧುರ ವೀಣಾ ಧ್ವನಿಯ ಮಧುಸುಧಾ ವಾಕ್ ವಾಹಿನಿಗಾಗಿ ಚಾತಕ ಪಕ್ಷಿಗಳಂತೆ ಕಾಯುತ್ತಿದ್ದರು. ಅದು ಹೀಗೆ ಹೊಮ್ಮಿತು:

ಆರ್ಗಾದೊಡಂ ಇಲ್ಲಿ ಗುರಿಯೊಳಗೆ ಕವಲಿಲ್ಲ. ಭಿನ್ನಮೇನಿರ್ದೊಡಂ ಬಟ್ಟೆಯೊಳ್.

'ಇಲ್ಲಿ ಎಲ್ಲರೂ ಲಂಕಾಕ್ಷೇಮ ಕಾತುರರು. ನಾನು ಇಲ್ಲಿ ದೈತ್ಯ ಕೀರ್ತಿಯ ಕಲಶದ ಕಿಲುಬನ್ನು ಉಜ್ಜಲು ತವಕಿಸುತ್ತಿರುವವರನ್ನು ಬಿಟ್ಟು ಬೇರೆ ಆಲೋಚನೆಯವರನ್ನು

ಕಾಣುತ್ತಿಲ್ಲ. ಇಲ್ಲಿ ನೆರೆದಿರುವ ಸದಸ್ಯರಿಗೆ ತಮ್ಮ ಭಾಷಣ ಅಮೃತವನ್ನು ಉಣಬಡಿಸಿದ ಎಲ್ಲರಲ್ಲಿ, ಹಿರಿಯರಲ್ಲಿ ಕಿರಿಯರಲ್ಲಿ ಒಂದೇ ಮತಿ, ಒಂದೇ ಗತಿ, ಒಂದೇ ಗುರಿಯಿರುವುದನ್ನು ನಾನು ಕಂಡೆನು. ಅವರವರ ಪ್ರಕೃತಿಗೆ ಅನುಗುಣವಾಗಿ ಬೇರೆ ಬೇರೆ ರೀತಿಯ ಧ್ವನಿಯಲ್ಲಿ, ವಿಧಾನದಲ್ಲಿ, ಶೈಲಿಯಲ್ಲಿ, ಧಾಟಿಯಲ್ಲಿ, ಮತಿಯ ವಿನ್ಯಾಸದಲ್ಲಿ ಮತ್ತು ಉಪನ್ಯಾಸದಲ್ಲಿ ಪ್ರಕಟಪಡಿಸಿದ್ದಾರೆ. ಇಲ್ಲಿ ಯಾರಿಗೂ ಗುರಿಯಲ್ಲಿ ಕವಲೇ ಇಲ್ಲ. ಭಿನ್ನವಾದುದು ಏನಿದ್ದರೂ ಮಾರ್ಗದಲ್ಲಿ. ಅದರ ಒಟ್ಟು ತಾತ್ಪರ್ಯ ಈ ಲಂಕೆಯನ್ನು ರಕ್ಷಿಸಬೇಕೆನ್ನುವುದು.

'ದೈತ್ಯಗೌರವವು ಅಳಿಯದಂತೆ, ರಾಕ್ಷಸಕುಲದ ಕುವರರೆಲ್ಲರೂ ಪ್ರಾಣದ ಹಂಗುತೊರೆದು ಹೋರಾಡುವರು. ಯಾರಿಂದಲೇ ಆಗಲಿ ಕೇಡುಂಟಾಗದಂತೆ, ಸುಖದ ಬಾಳಿಗೆ ಮತ್ತು ಶುಭ್ರಕೀರ್ತಿಗೆ ಮಸಿ ತಗುಲದಂತೆ ನಡೆಯುವುದು ಉತ್ತಮ. ಸುಖದ ಬಾಳು ಮತ್ತು ಶುಭ್ರಕೀರ್ತಿಗಳೆರಡೂ ಅಧರ್ಮದಿಂದ ಕೆಡುತ್ತವೆ ಎನ್ನುವುದು ಹಿರಿಯರ ಅನುಭವ. ಎಂತಹ ವೀರನೇ ಆಗಿರಲಿ ಧರ್ಮದ ಬೆಂಬಲವಿರದಿದ್ದರೆ ಅವನ ಎಂತಹ ಶಕ್ತಿ ಸಾಮರ್ಥ್ಯವೂ ಕೊನೆಗೆ ವ್ಯರ್ಥವಾಗಿ ಹೋಗುತ್ತದೆ. ಹೆಣ್ಣು ತನಗೆ ಒಲಿದು ಬರಲು ಅದೇ ಸೊಗಸು ಮತ್ತು ಧರ್ಮ. ಹಾಗೆ ಬರದಿರಲು ಎರಡೂ ನಾಶವಾಗುವವು.

'ನಮ್ಮ ದಾನವಕುಲ ಪೌರುಷವು ಹಲವು ಪತಿವ್ರತೆಯರಿಂದ ಧನ್ಯವಾಗಿದೆ. ಅದು ಏಕಪತ್ನಿವ್ರತಸ್ಥ ರಾಮನ ಪತಿವ್ರತೆಯ ತಪದ ತೀವ್ರ ಬೆಂಕಿಯ ರೌದ್ರವನ್ನು ಕಡೆಗಣಿಸುವುದು ಸರಿಯೆ? ಆ ಹೆಣ್ಣನ್ನು ವ್ಯಥೆಗೀಡುಮಾಡಿ ಸೊರಗಿಸಿ, ಅವಳ ಮೇಲೆ ಕೋಪಗೊಳ್ಳುವುದು ಸರಿಯೆ? ಪ್ರತಿದಿನ ತನ್ನ ಪತಿಯನ್ನು ನೆನೆದು ಕೊರಗಿ ಕರಗುವ ಸತಿಯ ನಿಟ್ಟುಸಿರ ಶಾಪದ ಬೆಂಕಿಯು ವಿಧಿಯ ವಜ್ರಕ್ಕೂ ಹೆಚ್ಚು ಕ್ರೂರ ಮತ್ತು ಸೋಲಿಸಲಾಗದ್ದು.

'ಹೆಣ್ಣಿನ ದುಃಖವು ತೀವ್ರವಾಗಿ ಅರೆಯುತ್ತಿರಲು ಸಾವಿರ ಲಂಕೇಶ್ವರರ ಮತ್ತು ನೂರು ಮೇಘನಾದರ ಶಕ್ತಿ ಪರ್ವತಗಳು–ಸೂರ್ಯ ಕಿರಣಗಳಿಗೆ ಹಿಮ ಕರಗುವಂತೆ ನಿಧಾನವಾಗಿ ಕರಗಿ ಹೋಗುತ್ತವೆ! ಏನಾಯಿತೆಂದು ತಿಳಿಯುವ ಮೊದಲೇ ಮರಳರಾಶಿಗಳಾಗಿ ಹೋಗಿರುತ್ತವೆ! ಕುಲಕೀರ್ತಿ ನಾಶಕರವಾದ ಆ ಪಾಪವನ್ನು ತ್ಯಜಿಸಬೇಕು! ಅನಂತರ ರಾಮಲಕ್ಷ್ಮಣರಿರಲಿ, ಕಪಿಸೈನ್ಯ ಬರಲಿ ಲಂಕೆ ದುರ್ಗವು ನಮಗೆ ಹೇಗೋ ಹಾಗೆ ವೈರಿಗೂ ಸ್ವರ್ಗದ ಬಾಗಿಲಾಗುತ್ತದೆ.'

ಎಂದು ತಮ್ಮ ವಿಭೀಷಣನು ಹೇಳಿದ ಮಾತನ್ನು ಕೇಳಿದ ಕೂಡಲೆ ದೇವಲೋಕದ ವೈರಿಗಳಲ್ಲಿ ಅಗ್ರಗಣ್ಯನಾದ ರಾವಣನು ಅನಿಷ್ಟದಿಂದ ಓಡಿಹೋಗಲು ಬಯಸುವವನಂತೆ ಸಿಂಹಾಸನದಿಂದ ಎದ್ದನು. ಅಸ್ವಸ್ಥನಾದವನಂತೆ ನಿಟ್ಟುಸಿರು ಬಿಡುತ್ತ ಪಕ್ಕದಲ್ಲಿದ್ದ ವೃದ್ಧ ಮಂತ್ರಿ ಅವಿಂಧ್ಯನನ್ನು ಆಧರಿಸಿ ನಿಂತನು. ಆ ರಾಕ್ಷಸೇಶ್ವರನ ದುರ್ಬಲವಾದ

ಮುಖಲಕ್ಷಣವು ಅಲೆಗಳಂತೆ ಸುಕ್ಕುಗಟ್ಟಿ ಕಳೆಗೆಟ್ಟಿತು. ಪ್ರಜ್ಞೆ ಮಂಕಾಗಿ, ಕಣ್ಣಾಲಿಗಳು ತೇಲಲು ಅಸುರಾಧಿಪನು ಮೆಲ್ಲಗೆ ಅಲ್ಲಿಂದ ಹೊರಟು ಹೋದನು.

ಆ ಸಭೆಯು ಭಯ ಕುತೂಹಲಗಳಿಂದ ಕದಡಿ ಹೋಯಿತು. ಸಹೋದರನ ಒಳಮನದ ಭಾವವನ್ನು ಗ್ರಹಿಸಿದ ವಿಭೀಷಣನು ಸಭೆಯನ್ನು ವಿಸರ್ಜಿಸಿದನು. ರಾಕ್ಷಸ ಕುಲಕ್ಷೇಮ ಚಿಂತನೆಯಿಂದ ಕಳವಳಗೊಂಡ ಮನಸ್ಸಿನವನಾಗಿ ಅಲ್ಲಿಂದ ನೇರವಾಗಿ ತನ್ನ ರಥದ ಕಡೆಗೆ ನಡೆದನು.

❑



~~~~~~~~~~~~~~~~~~~~~~~~ ಸಂಚಿಕೆ – ೮ ~~~~~~~~~~~~~~~~~~~~~~~~

ನಿನ್ನ ಮಗಳಲ್ತೆನ್ನವಳ್ ಅನಲೆ

ವಿಭೀಷಣನು ಮಗಳು ಅನಲೆಗೆ ಅಣ್ಣ ರಾವಣನ ಅಸ್ವಸ್ಥತೆಯ ಸುದ್ದಿಯನ್ನು ತಿಳಿಸಿದನು. ಅವಳನ್ನು ದೊಡ್ಡಪ್ಪನಿಗೆ ಶುಶ್ರೂಷೆ ಮಾಡಲು ದೊಡ್ಡಮ್ಮನೊಂದಿಗಿರಲು ಕಳುಹಿಸಿದನು. ಮುಂದೆ ಅನುಸರಿಸಬೇಕಾದ ಮಾರ್ಗವನ್ನು ಕುರಿತು ರಾತ್ರಿಯೆಲ್ಲಾ ಆಲೋಚಿಸಿದನು. ಹೊತ್ತಾರೆಯಾಗುವುದನ್ನು ಎದುರುನೋಡುತ್ತ ಪೂರ್ವಾಚಲದ ನೆತ್ತಿಯ ರೀತಿಯಲ್ಲಿ ತವಕಿಸುತ್ತಿದ್ದನು. ರಾಕ್ಷಸಕುಲದ ರಕ್ಷಣೆ ಮತ್ತು ಸಹೋದರನ ಹಿತಕ್ಕಾಗಿ ತಾನು ಮುಂದೆ ಹಿಡಿಯಲಿರುವ ಸನ್ಮಾರ್ಗವನ್ನು ಕುರಿತು ಮಂಥನ ನಡೆಸಿ ಒಂದು ನಿಶ್ಚಯಕ್ಕೆ ಬಂದನು.
~~~~~~~~~~~~~~~~~~~~~~~~

ಬೆಳ್ಳಿಚುಕ್ಕೆ ಕಂಡ ಕೂಡಲೆ, ಮೊದಲ ಹಕ್ಕಿಯ ದನಿ ಕೇಳಿದ ತಕ್ಷಣ ತನ್ನ ಶ್ವೇತ ಮಂದಿರದಿಂದ ರಾಕ್ಷಸೇಂದ್ರನ ರತ್ನ ಸೌಧದ ಕಡೆಗೆ ನಡೆದನು. ನೃಪೇಂದ್ರನ ಅರಮನೆಯು ಗೋಪುರಗಳ ಸಮೂಹದಿಂದ ಕೂಡಿತ್ತು. ಅದು ಮಹಾಗಿರಿಯ ಶಿಖರದಂತೆ ಭಯಂಕರವೂ, ಸುಂದರವೂ ಆಗಿತ್ತು. ಶೂರನೂ, ಭೀಮಗಾತ್ರನೂ ಆದ ದ್ವಾರಪಾಲಕ ವೃಶ್ಚಿಕರೋಮನು ಕೈಮುಗಿದುದನ್ನು ಮುಗುಳುನಗೆಯಿಂದ ಸ್ವೀಕರಿಸಿದನು. ಮದಿಸಿದ ಆನೆಯ ನಿಶ್ವಾಸ ಗಾಳಿಯಿಂದ ಚಲಿಸುತ್ತಿರುವ ಪುಷ್ಪ ಪರಿಮಳದ ತರುಲತೆಗಳ ಉದ್ಯಾನದ ಹಾದಿಯಿಂದ ಸಾಗಿದನು. ಮಹತ್ತು ಬೃಹತ್ತು ಆಗಿದ್ದು, ಚಂಡಿಕಾಧ್ವಜದಿಂದ ಮೆರೆಯುತ್ತಿದ್ದ ಅಣ್ಣ ದಶಗ್ರೀವನ ಅರಮನೆಯನ್ನು ಪ್ರವೇಶಿಸಿದನು.

ಅನಲೆಯು ಸೇವಕರಿಂದ ತಂದೆ ಬಂದಿರುವುದನ್ನು ತಿಳಿದು ಚುರುಕಿನಿಂದ ಓಡಿ ಬಂದಳು. ಮಗಳ ಮುಖದಲ್ಲಿಯ ಉದ್ವೇಗವನ್ನು ನೋಡುತ್ತ ಸುಕ್ಕು ಮಡಿಕೆಗಳ ಉಬ್ಬಿನ ವಿಭೀಷಣನು ಅಣ್ಣನ ಕ್ಷೇಮ ಕಾತರನಾಗಿ ಪ್ರಶ್ನೆಗಳನ್ನು ಕೇಳಿದನು. ರಾಕ್ಷಸ ರಾಜನ ಅರಮನೆಯ ಶಬ್ದ ಶೂನ್ಯತೆಯ ಮೊಸಳೆ ನಿದ್ದೆಗೆ ಭಂಗವನ್ನು ತರಲು ಬೆದರಿದ್ದಾಳೆ ಎಂಬಂತೆ, ಏನೊಂದೂ ಹೇಳದೆ ಥಟ್ಟನೆ ತಂದೆಯ ಕೈಯನ್ನು ಹಿಡಿದುಕೊಂಡಳು. ಕಿವಿಗೆ ಅರ್ಥವಾಗದಂತೆ ಪಿಸುಗುಟ್ಟಿದಳು. ಶ್ರೇಷ್ಠವೃದ್ಧ ಅವಿಂಧ್ಯನ ಬಳಿಗೆ ಕರೆದೊಯ್ದಳು. ಅವನು ಕೈಕಸಿಯ ಮಗನನ್ನು ಮಗುವಾಗಿದ್ದಾಗಿನಿಂದ ಮುದ್ದಾಡಿದವನು. ಆ ಸಲುಗೆಯಿಂದ ದೈತ್ಯೇಂದ್ರನಿಗೆ ಇನ್ನೂ ಬೆಸೆದುಕೊಂಡಿದ್ದನು. ಮುಪ್ಪು, ಅರಿವು, ತಾಳ್ಮೆ ಮುಪ್ಪರಿಗೊಂಡ ನೆರೆಗೂದಲಿನ ಪೂಜ್ಯನು ಅನಲೆಯ ಅಪ್ಪನನ್ನು ಕಂಡೊಡನೆ ನಿಟ್ಟುಸಿರುಬಿಟ್ಟನು. ಹಕ್ಕಿಯ ತುಪ್ಪಳದಿಂದ ಮಾಡಿದ ಪೀಠದಿಂದ ಎದ್ದು ತಬ್ಬಿಕೊಂಡನು. ಅಜ್ಜನ ಭಾವಾವೇಗಕ್ಕೆ ಸರಮಾಪತಿಯು ಬೆರಗಾಗಿ ನುಡಿದನು:

'ಅಣ್ಣ ಹೇಗಿರುವನು?'

'ನೀನು ಅವನನ್ನು ಕಾಣುವುದು ಸರಿಯಲ್ಲ.'

'ಏಕೆ?'

ಆ ಪ್ರಶ್ನೆಗೆ ಉತ್ತರ ಹೇಳಲು ಅಳುಕುತ್ತ 'ಕಳೆದ ರಾತ್ರಿ ಅವನಿಗೆ ಒಂದಿನಿತು ನಿದ್ದೆಯಿಲ್ಲ.' ಎಂದು ಹಣ್ಣು ಹಣ್ಣಾದವನು ಹೇಳಿದನು. ಎರಡು ಮೂರು ಕ್ಷಣ ಅವರು ಸುಮ್ಮನೆ ಕುಳಿತಿದ್ದರು. ಪುನಃ ಅನಲೆಯ ತಂದೆ ಅವಿಂಧ್ಯನನ್ನು ಪ್ರಶ್ನಿಸಿದನು.

'ಈಗ ಹೇಗಿರುವನು?'

'ಮಲಗಿದ್ದಾನೆ.'

'ನಿದ್ರಿಸುತ್ತಿರುವನೆ?'

'ನಿದ್ರಿಸುತ್ತಿದ್ದರೂ ಅಲ್ಲಿಯೂ ನೀರು ತುಂಬಿದ ಗುಂಡಿಯನ್ನು ಎಚ್ಚರವೆಂಬ ಆನೆಯು ಕಲಕುತ್ತಿರುತ್ತದೆ.'

'ಆ ಸ್ಥಳವನ್ನು ತೋರಿಸು.'

ಎಂದು ಹೇಳುತ್ತ ಎದ್ದ ದಶಶಿರನ ತಮ್ಮನನ್ನು ಅವಿಂಧ್ಯನು ತಡೆದನು. ಅವನನ್ನು ಲೆಕ್ಕಿಸದೆ, ತನಗೆ ಕೈ ಬೀಸಿ ಕರೆದ ತಂದೆಯ ಮುಖಮುದ್ರೆಯ ಗಾಂಭೀರ್ಯವನ್ನು ಕಂಡು ಅನಲೆಯು ಅಳುಕಿದಳು.

ಹೆಣ್ಣು ಮಕ್ಕಳಿಲ್ಲದ ದಶಗ್ರೀವನ ಎದೆಯ ಪ್ರೀತಿಯ ಅರಗಿಣಿಯ ಪ್ರಾಣವನ್ನು ಕಾಪಾಡುವ ಪಂಜರವೆನ್ನುವಂತೆ ಅನಲೆ ಚೆಲುವಿನ ಗಣಿಯಾಗಿದ್ದಳು. ಅವಳು ತಂದೆಯನ್ನು ವಿನಯ ಗೌರವಗಳಿಂದ, ರಾಣಿ ಮಂಡೋದರಿಯ ಪ್ರೇಮಕೈಂಕರ್ಯ ಹಾಗೂ ಔಷಧಿಯಿಂದ ತುಸು ನಿದ್ದೆಗೆ ಸರಿದಿದ್ದ ಲಂಕೇಶನ ಮಂಚದ ಕಡೆಗೆ ಕರೆದೊಯ್ದಳು.

ನಮಸ್ಕರಿಸಿದ ಅತ್ತಿಗೆಗೆ ವಿಭೀಷಣನು ಪ್ರತಿವಂದಿಸಿದನು. ಆನೆಯ ದಂತದಿಂದ ನಿರ್ಮಿಸಲಾದ ರತ್ನರಮಣೀಯ ಭವ್ಯಮಂಚದಲ್ಲಿ ರಾವಣನು ಭೀಮವಿಸ್ತಾರದಿಂದ ತುಂಬಿ ಮಲಗಿದ್ದರೂ, ತನ್ನ ಲೋಕ ಆಕ್ರಮಣ ವಿಕ್ರಮವನ್ನು ಬಿಡೆನು ಎಂಬಂತೆ ಅದನ್ನು ಆಕ್ರಮಿಸಿದ್ದನು. ಮುಖ ಮುದ್ರೆಯಿಂದ ನಿದ್ರಾರುದ್ರನೆಂಬಂತೆ ಉಸಿರಾಡುತ್ತಿದ್ದ ರಾಕ್ಷಸಾಧೀಶನನ್ನು ದಿಟ್ಟಿಸಿ ನೋಡಿದನು. ಮಂಚದ ಪಕ್ಕದಲ್ಲಿ ಹೊನ್ನಿನ ಕೆತ್ತನೆಯ ಬೆತ್ತದ ಆಸನದಲ್ಲಿ ನೆಟ್ಟನೆ ಕುಳಿತುಕೊಂಡನು. ಕಾಲಪುರುಷನಿಗೆ ಕಾಲು ಹೆಳವಾಯಿತೊ ಎನ್ನುವಂತೆ ಕ್ಷಣ ಕ್ಷಣವೂ ಕುಂಟುತ್ತ, ಯುಗ ಯುಗಗಳು ಹೊರಳುವಂತೆ ಸರಿಯುತ್ತಿದ್ದವು. ಅಲ್ಲಿ ದಶಕಂಠನ ಉಸಿರಿಗಲ್ಲದೆ ಬೇರೆ ಸಪ್ಪಳವು ಪ್ರವೇಶಿಸಲು ಧೈರ್ಯವಿರುವುದೇ ಎಂಬಂತೆ ಕಾಲ ಪ್ರವಾಹವು ಹೆಪ್ಪುಗಟ್ಟಿತ್ತು!

ಧೂಪಕುಂಡದಿಂದ ಹೊಮ್ಮಿ ಕೋಣೆಯನ್ನೆಲ್ಲ ತುಂಬಿದ್ದ ಪರಿಮಳವು ಶಬ್ದದ ಶವಭಾರವನ್ನು ತುಸು ಹಗುರವಾಗಿಸಿತ್ತು. ದೂರದಿಂದ ಬರುತ್ತಿದ್ದ ಪಟ್ಟದಾನೆಯ ಘಂಟೆಯ ಧ್ವನಿಯು ಅಲ್ಲಿಯ ಜನ ಶೂನ್ಯತಾಭಾವವನ್ನು ಪರಿಹರಿಸುತ್ತಿತ್ತು. ಅದು ತನ್ನ ಸಂಗದಿಂದ ಅನ್ಯವು ಹತ್ತಿರದಲ್ಲಿರುವುದನ್ನು ಪ್ರಕಟಿಸುತ್ತಿತ್ತು.

ವಿಭೀಷಣನ ಮನೋಕೇಂದ್ರದಲ್ಲಿ ರಾಜ್ಯ ಪ್ರಜೆಗಳ ಚಿಂತೆಗಳಿದ್ದರೂ, ಅವನ ದೃಷ್ಟಿಯು ದಶಗ್ರೀವನ ಮುಖದಲ್ಲಿ ನೆಟ್ಟಿತ್ತು. ಅಲ್ಲಿ ಆನಂದ ಕೆಲವೊಮ್ಮೆ ಕುಣಿದಾಡುತ್ತಿತ್ತು. ಮತ್ತೆ ಕೆಲವೊಮ್ಮೆ ಅವನ ಚಿತ್ತವು ಗುಪ್ತ ನೇಪಥ್ಯ ಪಾತಾಳಕ್ಕೆ ಸರಿದು ದುಃಸ್ವಪ್ನ ನಟನಾ ನಾಟ್ಯಗಳನ್ನು ಆಡುತ್ತಿದ್ದವು. ನೋಡುತ್ತಿದ್ದಂತೆ ಮುಖವು ಸುಕ್ಕಾಗಿ ಹುಬ್ಬು ಸೆಡೆತುಕೊಂಡಿತು. ದರ್ಪವು ಕುಗ್ಗಲು ನಿಮಿರಿದ್ದ ಮೀಸೆ ಸೋತು ಜೋಲಾಡಿತು. ಭಯಗೊಂಡಂತೆ ತುಟಿಗಳು ನಡುಗಿದವು. ರೋಮ ರೋಮಗಳಲ್ಲಿ ಬೆವರಾಡಿತು. ವಿಶಾಲ ಶರೀರವು

ನಡುಗಲು ಮಂಚದ ಪರದೆ ಅಲೆ ಅಲೆಯಾಗಿ ಅದುರಿತು. ಹಿಂದೆಂದೂ ಕಾಣದ ಅಣ್ಣನ ಆ ಸ್ಥಿತಿಯನ್ನು ಕಂಡು ಅನಲೆಯ ತಂದೆಯು ಕರುಣೆಯಿಂದ ಕರಗಿ ಹೋದನು. ಕಣ್ಣಿಂದ ನೀರು ತುಳುಕಿತು.

ಸರ್ವಲೋಕ ಭಯಂಕರನಾದ ಮಹೇಂದ್ರವೈರಿ ದೈತ್ಯಚಕ್ರೇಶ್ವರನು ನಿದ್ದೆಯಲ್ಲಿ ಮಗುವಿನಂತೆ ಅಳತೊಡಗಿದನು! ತಟ್ಟನೆ ಕಣ್ಣು ತೆರೆದನು. ಸೋದರನು ಸಮೀಪದಲ್ಲಿರುವುದನ್ನು ನೋಡಲಿಲ್ಲ. ಅನಲಾ ಕುಮಾರಿಯನ್ನು ಕಂಡನು. ಕಿರುನಗೆ ಸೂಚಿಸಿ, ನಾಚಿಕೆಯನ್ನು ದೂರ ಸರಿಸಿ, ತನ್ನ ಭಾವರಕ್ಷಣೆಗೆ ಆಶಿಸಿ ಮೃದುಸ್ವರದಿಂದ ಕರೆದನು:

'ಅನಲಾ!'

ಆ ದನಿಕೇಳಿ, ದೊಡ್ಡಪ್ಪನ ಮುಖದ ಕಡೆ ಬಾಗಿದಳು. ಮುಂದಕ್ಕೆ ಬಂದ ಕಾಳಸರ್ಪದಂತ ನೀಳ ಜಡೆಯನ್ನು ಹಿಂದಕ್ಕೆ ತೂಗಿದಳು. ಕೋಗಿಲೆಯಂತೆ 'ಓ' ಎಂದಳು.

'ಇಲ್ಲೇ ಇರುವೆಯಾ?'

ಅವನ ಪ್ರಶ್ನೆಯ ಭಾವವನ್ನು ಗ್ರಹಿಸಲಾರದೆ ಕೇಳಿದಳು:

'ದೊಡ್ಡಪ್ಪ?'

'ಏನಿಲ್ಲ! ನೀನು ನನ್ನನ್ನು ಅಗಲಿದ ರೀತಿ ಒಂದು ಕನಸಾಯಿತಕ್ಕ!'

ಎಂದು ನಕ್ಕಿದನಾದರೂ, ಅವನ ಕಣ್ಣುಗಳಿಂದ ಹುಸಿಹೋದ ದುಃಖದಾನಂದವು ಉಕ್ಕಿದಂತೆ ಅಶ್ರು ತೀರ್ಥಗಳು ಉರುಳಿದವು.

'ನಿದ್ದೆ ಮಾಡು ದೊಡ್ಡಪ್ಪ. ನಾನೆಲ್ಲಿಗೂ ಹೋಗದೆ ಇಲ್ಲಿಯೇ ಇರುತ್ತೇನೆ.'

'ನಿಜ ಹೇಳಿದೆ ಅಕ್ಕ. ಯಾರು ತೊರೆದರೂ ನೀನು ನನ್ನನ್ನು ಬಿಡುವವಳಲ್ಲ!'

ಅಸುರಪತಿಯು ಚಾಮರದ ಗಾಳಿಗೆ ಮತ್ತೆ ಕಣ್ಣು ಮುಚ್ಚಿದನು. ಪತ್ನಿ ಮಂಡೋದರಿಯು ಅವನ ಹೊದ್ದನ್ನು ಸರಿಪಡಿಸಿದಳು.

ಅನಲೆಯು ತನ್ನ ತಂದೆ ಕುಳಿತ ಕಡೆ ಸೂಕ್ಷ್ಮವಾಗಿ ಕಣ್ಣು ಹೊರಳಿಸಿದಳು. ವಿಭೀಷಣನು ನಿಟ್ಟುಸಿರು ಬಿಡುತ್ತ ತನ್ನೊಳಗೆ ತಾನು ಬೆಂದುಹೋದನು.

ಪ್ರೀತಿಯ ಸುಳಿಗೆ ಸಿಕ್ಕ ರಾಕ್ಷಸನು ಪುನಃ ಕಣ್ಣೆವೆಗಳನ್ನು ತೆಕ್ಕನೆ ತೆರೆದು ಬಿಕ್ಕಳಿಸುತ್ತ ಹೇಳಿದನು.

'ಅಕ್ಕ ನಿನ್ನ ತಂದೆ ನಮ್ಮನ್ನು ಬಿಟ್ಟು ಹೋದನೆ?'

'ನಿನ್ನನ್ನು ಬಿಡುವನೇನು? ನನ್ನಪ್ಪ ಒಡಹುಟ್ಟಿದವನನ್ನು ಬಿಡುವನೆ?'

'ಅಕ್ಕ, ನೀನೆ, ನೋಡುವೆ. ನನ್ನನ್ನು ತೊರೆದು ಹೋಗುವನು.'

'ದೊಡ್ಡಪ್ಪ, ಈ ತೊದಲು ನುಡಿಗಳನ್ನು ಬಿಡು! ಬಿಟ್ಟು ಹೋಗುವನೆಂದು ಸುಮ್ಮನೆ ಏಕೆ ಸಂಶಯ ಪಡುವೆ? ನೋಡು, ಇಲ್ಲೆ, ನಿನ್ನ ಬಳಿಯೆ ಹೊತ್ತಾರೆಯಿಂದ ನೆಟ್ಟಗೆ ಕುಳಿತಿದ್ದಾನೆ.'

ಎಂದು ಹೇಳಿ ಅನಲೆ ಕೈ ತೋರಿದಳು. ಸಹೋದರನ ಕಡೆಗೆ ದೃಷ್ಟಿಯನ್ನು ಹೊರಳಿಸಿದ ಅಸುರ ರಾಜನ ಮುಖಭಾವದಲ್ಲಿ ಉಂಟಾದ ಪರಿವರ್ತನೆಗಳನ್ನು ಕಂಡು ಅನಲೆ ಮತ್ತು ಮಂಡೋದರಿಯರಿಬ್ಬರೂ ಬೆಚ್ಚಿದರು. ಮರವಟ್ಟಂತೆ ನಿಂತರು.

ಮೃದು ಹೃದಯದ ಒಂದು ದೌರ್ಬಲ್ಯವನ್ನು, ಗುಪ್ತವಾದುದನ್ನು ಕದ್ದು ಅಡಗಿ ನೋಡುವವನನ್ನು ಕಂಡಾಗ, ವೀರನಾದವನ ಆತ್ಮದ ಅಮೃತವು ಕಾಳಕೂಟ ವಿಷವಾಗುತ್ತದೆ. ಹಾಗೆ ಕರ್ಬುರೇಂದ್ರನ ಕೋಪ ಕರ್ಕೋಟಕ ಸರ್ಪವು ಭುಗಿಲೆದ್ದು ಕ್ರೂರವಾಯಿತು.

'ಈ ಕುಲದ್ರೋಹಿಯನ್ನು, ಶತ್ರುವಿನ ಮಿತ್ರನನ್ನು, ಗೃಹವೈರಿಯನ್ನು ನನ್ನ ಬಳಿಗೆ ಬಿಟ್ಟವರು ಯಾರು? ಹುಲ್ಲು ಮುಸುಕಿ ಮನೋಹರವಾಗಿ ಕಾಣಿಸುವ ವಂಚನೆಯ ಹಾಳಾದ ತಿಪ್ಪೆ ಗುಂಡಿಯನ್ನು ಬಿಟ್ಟವರು ಯಾರು?,.... ಅವಿಂಧ್ಯಾರ್ಯ!'

ಎಂದು ದಶಕಂಠನೆಂಬ ಬಿರುದು ಸಾರ್ಥಕವಾಯಿತು ಎನ್ನುವಂತೆ ಕೂಗಿದನು. ಅನಂತರ ಹೇಳಿದನು:

'ಅನಲೆ, ಅವಿಂಧ್ಯನನ್ನು ಕರೆ!'

ಅಷ್ಟರಲ್ಲಿ ಬಂದ ಅವಿಂಧ್ಯನನ್ನು ನೋಡಿ,

'ನೀವೆಲ್ಲರೂ ನನ್ನ ಕೊಲೆಯ ಸಂಚನ್ನು ರೂಪಿಸಿ, ಈ ರಾಜ ವಿದ್ರೋಹಿಯನ್ನು ರಾಜನ ಅರಮನೆಗೆ ಹೀಗೆ ಬಿಟ್ಟಿದ್ದೀರಲ್ಲವೆ?'

ಮುದಿಯನು ನೆರೆಕೂದಲು ತೆರೆ ತೆರೆಯಾಗಿ ನಡುಗುತ್ತಿರಲು, ಕೈ ಮುಗಿದು ಹೇಳಿದನು:

'ಮಹಾಪ್ರಭು, ಬಂದವನು ಪೌಲಸ್ತ್ಯವಂಶದವನು. ಕೈಕಸೆಯ ಮಗ. ಕುಂಭಕರ್ಣನಿಗೆ ಮತ್ತು ದೈತ್ಯ ಚಕ್ರೇಶ್ವರನಾದ ನಿನಗೆ ತಮ್ಮ. ತಪಸ್ಸಿನಿಂದ ಸದ್ಧರ್ಮವನ್ನೇ ತನ್ನ ಬದುಕಿನ ಉಸಿರಾಗಿಸಿ ಕೊಂಡಿರುವ ಸತ್ತ್ವ ತೇಜಸ್ವಿ, ಬ್ರಹ್ಮವರದಿಂದ ಚಿರಂಜೀವಿಯಾದವನು.

'ದೇವಾ, ಪುಣ್ಯವೇ ಮೂರ್ತಿವೆತ್ತಂತ, ಅನಲೆಯ ತಂದೆಯಾದ ಈತನು ಅಣ್ಣನ ಕ್ಷೇಮದ ಬಗ್ಗೆ ಕಾತರನಾಗಿ ಬಂದಿರಲು ತಡೆಯುವುದು ಅಶುಭ.'

ರಾವಣನು ಆ ನುಡಿ ಕೇಳಿ, ದಿಟ್ಟಿಸಿ ನೋಡಿದನು. ನಿಟ್ಟುಸಿರು ಬಿಟ್ಟನು. ಒಮ್ಮೆ ಮಂಡೋದರಿಯನ್ನು ನೋಡಿದನು. ಹತ್ತಿರ ನಿಂತು ಅಳುತ್ತಿದ್ದ ಅನಲೆಯನ್ನು ಒಮ್ಮೆ ನೋಡಿದನು. ಎದೆಯಲ್ಲಿ ಮರುಕ ಉಕ್ಕಿತು. ಬಿರುಕೊಡೆದು ಸೀಳಾಗಲಿರುವ ತನ್ನ ಆತ್ಮದ ಇಕ್ಕುಳದಲ್ಲಿ ಸಿಕ್ಕು ಲಿವಿಲಿವಿ ಒದ್ದಾಡುತ್ತಿದ್ದ, ಕುದಿವೆದೆಯ ರಾವಣನು ತೆಕ್ಕನೆ ಎದ್ದನು. ಪ್ರೀತಿಯ ಪುತ್ಥಳಿಯಾದ ಅನಲೆಯನ್ನು ಹಿಡಿದು ಬರಸೆಳೆದು ಅಪ್ಪಿಕೊಂಡನು. ಸಮಾಧಾನ ಪಡಿಸುತ್ತ ಮುದ್ದಾಡುತ್ತ,

'ಅಳದಿರು, ಅಳದಿರು ಅಕ್ಕ! ನನಗೆ ಸಾವುಬಂದರೂ, ನಾನು ನಿನಗೆ ನೋವಾಗುವುದನ್ನು ಮಾಡುವುದಿಲ್ಲ.'

ಎಂದು ಹೇಳಿ ಸೆಳೆದುಕೊಂಡು ತನ್ನ ಹಾಸಿಗೆಯ ಮೇಲೆ ಮೈ ತಾಗಿಸಿಕೊಂಡು ಕುಳಿತನು. ಮೌನವಾಗಿ ಎಲ್ಲವನ್ನು ನೋಡುತ್ತಿದ್ದ ತಮ್ಮನನ್ನು ಕುರಿತು ದನುಜೇಶ್ವರನು ಶಾಂತವಾಗಿ ಹೇಳಿದನು:

'ಅನಲೆ ನಿನ್ನ ಮಗಳಲ್ಲ. ನನ್ನವಳು! ಇವಳು ನನ್ನನ್ನು ಕಾಪಾಡುವ ದೇವಿ!'

ಅಣ್ಣನ ಆತ್ಮೋದ್ಧಾರ ಭಾವದೀಪ್ತ ನುಡಿ ಅರಿತು ನುಡಿದನು:

'ಆ ಪುಣ್ಯ ನನ್ನದಾಗಲಿ.'

ಅಲ್ಲಿದ್ದ ಎಲ್ಲರ ಮುಖಗಳಲ್ಲಿ ತಿಳಿನಗೆಯ ಸುಳಿ ಸುಳಿದಾಡಿತು. ಆ ನಗೆಯ ಬೆಳಕಿಗೆ ಅಲ್ಲಿ ಮೈತ್ರಿಯ ನೆರಳು ಉದ್ಭವಿಸಿತು.

'ಸೌಂದರ್ಯ ಅನಲೆಯ ಮುದ್ದು ಚೆಲುವು ಒಂದೇ ನನಗೆ ಪುಣ್ಯ ಪ್ರಚೋದಿನಿ.'

ಎಂದು ಹೇಳಿದ ದಶಗ್ರೀವನು ಚಿಂತೆಯಿಂದ ಅಂತರ್ಮುಖಿಯಾದನು. ಆಗ ಅವಿಂಧ್ಯನು,

'ತಾಯಿ ಸರಮೆ ಗಂಧರ್ವ ಕನ್ಯೆ. ತಂದೆಯು ಹಾಗೆಯೆ ಸತ್ತ್ವನಿಧಿ! ಕುವರಿ ಈ ರೀತಿ ಇರುವುದೇನು ಅಚ್ಚರಿಯೆ' ಎಂದು ಪ್ರಕಟವಾಗಿ ಹೇಳಿ. ತನ್ನೊಳಗೆ ತಾನು ಹೀಗೆಂದುಕೊಂಡನು. 'ನಿನಗೆ ಒಬ್ಬ ಮಗಳು ಹುಟ್ಟಿದ್ದರೆ ನಮಗೆ ಮತ್ತು ನಮ್ಮ ಲಂಕೆಗೆ ಈ ರೀತಿಯ ಅಮಂಗಳ ಉಂಟಾಗುತ್ತಿತ್ತೆ? ಹೆಣ್ಣು ಮಕ್ಕಳನ್ನು ಹೆತ್ತು ಪಡೆಯದ ಕಾಯಿಲೆಗೆ, ಅವರನ್ನು ಹೊತ್ತುಕೊಂಡು ಬಂದಾದರೂ ಪಡೆಯುವ ಮದ್ದು ನಿನ್ನ ರೋಗಕ್ಕೆ ಕಾರಣವಾಯಿತು. ಅದು ನಿನ್ನ ಅಪಾರ ಪೌರುಷವನ್ನು ಕಬಳಿಸುತ್ತಿದೆ!'

ಅಷ್ಟರಲ್ಲಿ ವಿಭೀಷಣನು ಕಣ್ ಸನ್ನೆ ಮಾಡಲು, ಅವನು ಅಲ್ಲಿಂದ ತೆರಳಿದನು.

'ಮಹೇಂದ್ರಾರಿಯೇ, ನನ್ನನ್ನು ಕ್ಷಮಿಸು. ನಿನ್ನೆ ನಾನು ಆಡಿದ ಮಾತೇ ನಿನ್ನ ಈ ಸ್ಥಿತಿಗೆ ಕಾರಣವಾದರೆ ಅದು ಖಂಡಿತವಾಗಿಯೂ ಸರಿಯಿಲ್ಲ. ನಿನ್ನ ಅಭ್ಯುದಯವಲ್ಲದೆ

ನನಗೆ ಮತ್ತು ನನ್ನ ನಾಲಗೆಗೆ ಬೇರೆ ಗುರಿಯಿಲ್ಲ. ಸವಿಯಾದದ್ದನ್ನು ಹೇಳದಿದ್ದ ಮಾತ್ರಕ್ಕೆ ತಿಳಿದವರು ಅಂಥವನನ್ನು ಶತ್ರು ಎನ್ನುವರೆ? ಈ ಜ್ವರ ಭ್ರಾಂತಿಯು ತೊಲಗಲು ನಾನು ಹೇಳಿದುದನ್ನು ಸಾವಧಾನವಾಗಿ ಚಿಂತಿಸು. ಮುಂದಿನ ಮಾರ್ಗವನ್ನು ಆಲೋಚಿಸಿ, ಬಾಳುವ ದಾರಿಯನ್ನು ತೀರ್ಮಾನಿಸು.'

ಎಂದು ವಿಭೀಷಣನು ಹೇಳಿದನು.

ತಮ್ಮನ ಮಗಳನ್ನು ತಬ್ಬಿ ಹಿಡಿದದ್ದು ಅನೈಚ್ಛಿಕವೆಂಬಂತೆ, ಸಡಿಲವಾಯಿತು. ಅಸುರನ ಅಂತರಂಗದಲ್ಲಿ ಉಲ್ಕೆ ಉರಿಯುವಂತಾಯಿತು. ಹುಬ್ಬುಗಂಟಿಕ್ಕುತ್ತ ಸಹೋದರನನ್ನುದ್ದೇಶಿಸಿ ನುಡಿದನು:

'ಯುದ್ಧವೊದಗಿ ಬಂದಿದೆ. ಮಹಾವೈರಿಯು ಸಮುದ್ರವನ್ನು ದಾಟುವ ಉಪಾಯವನ್ನು ಆಲೋಚಿಸುತ್ತಿರುವನು. ಎಳ್ಳನ್ನು ತೂಕಮಾಡಿ ಸರಿದೂಗಿಸುವ ಕಲೆಗೆ ಇದು ಸೂಕ್ತ ಸಮಯವಲ್ಲ. ನೀನು ಮಹಾವೀರ. ನಿನಗೆ ಬಾಣಗಳೆಲ್ಲವೂ ಬ್ರಹ್ಮಾಸ್ತ್ರಗಳು, ಕುಲವನ್ನು ಮತ್ತು ದೇಶವನ್ನು ಕಾಪಾಡುವುದು ಶೂರತನದ ಸಲ್ಲಕ್ಷಣ. ನಿನಗೆ ಮನಸ್ಸಿದ್ದರೆ ನೆರವಾಗು. ಇಲ್ಲದಿದ್ದರೆ, ಇಲ್ಲದಿದ್ದರೆ.' ಎಂದು ಒಂದೆರಡು ಕ್ಷಣ ನಿಧಾನಿಸಿ, ಕತ್ತರಿಸಿಕೊಳ್ಳುವವನಂತೆ ಮತ್ತೆ ದೃಢವಾಣಿಯಿಂದ ಹೇಳಿದನು:

'ರಾಜ ಶಾಸನವಿದ್ದರೂ, ಸೋದರನ ಕೊಲೆಗೆ ಕಾರಣವಾಗುವ ಅಪಕೀರ್ತಿಗೆ ಹೇಸುತ್ತೇನೆ.... ಮನಸ್ಸಿದ್ದರೆ ಸಹಾಯ ಮಾಡು ಇಲ್ಲದಿದ್ದರೆ ಲಂಕೆಯನ್ನು ಬಿಟ್ಟು ಹೋಗು. ಬೇರೆಯ ವಾದಕ್ಕೆ ಇಲ್ಲಿ ಸ್ವಲ್ಪವೂ ಅವಕಾಶವಿಲ್ಲ..... ನನ್ನ ಮಾರ್ಗ ನನಗೆ, ನಿನ್ನದು ನಿನಗೆ!'

'ಕಟ್ಟಕಡೆಯ ನಿರ್ಣಯವೆ?'

'ಕೊಟ್ಟಕೊನೆ ನಿರ್ಣಯ.'

'ನಿನಗೆ ಒಳಿತಾಗಲಿ! ಸದ್ಬುದ್ಧಿ ಬರಲಿ! ತಂದೆಯ ತಪದ ಮಹಿಮೆಯಿಂದಲಾದರೂ ನಿನ್ನ ಆತ್ಮದ ಉದ್ಧಾರವಾಗಲಿ! ಇಲ್ಲಿಂದ ಹೋಗುತ್ತೇನೆ; ಇನ್ನು ಬೀಳ್ಕೊಡಿ.'

'ಎಲ್ಲಿಗೆ?'

'ಅನಿಶ್ಚಿತ.'

'ಕಡಲಾಚೆಯ ದಡದ ಕಡೆಗೊ?'

'ಅದರ ಅರ್ಥವೇನು?'

'ನಿನಗೆ ಗೊತ್ತಿದೆ; ನೀನೇ ಹೇಳಬೇಕು.'

'ನೀನಿಷ್ಟು ಕೀಳು ಮನಸ್ಸಿನವನೆಂದು ನನಗೆ ಇದುವರೆಗೆ ಗೊತ್ತಿರಲಿಲ್ಲ.'

'ಹೇಳು, ಆ ಅರಿವು ಪರಸ್ಪರವಲ್ಲವೆ?'

'ನಮಸ್ಕಾರ.'

ಎಂದು ಹೇಳಿ ವಿಭೀಷಣನು ಎದ್ದು ನಡೆದಿರಲು, ಅನಲೆಯು ಮೇಲೆದ್ದಳು. ಅದನ್ನು ನೋಡಿ ಒಡನೆಯೆ ಎಚ್ಚೆತ್ತ ರಾವಣನು ಹೇಳಿದನು:

'ಆಜ್ಞೆಯಿಂದ ಸಾಧ್ಯವಾದರೂ ಸಹ, ಇದನ್ನು ನಿನ್ನಲ್ಲಿ ಬೇಡಿಕೊಳ್ಳುತ್ತೇನೆ. ಈ ಸುಕುಮಾರಿ ಅನಲೆಯನ್ನು ಕರೆದುಕೊಂಡುಹೋಗಿ ಕಷ್ಟಕ್ಕೀಡು ಮಾಡಬೇಡ.'

'ನನ್ನನ್ನು ಕ್ಷಮಿಸು. ತಂದೆಯಜೊತೆಹೋಗಿ ಧರ್ಮಕ್ಕೆ ಸೇವೆ ಸಲ್ಲಿಸುವೆ.'

'ಇಲ್ಲಿದ್ದೆ ಧರ್ಮದ ಸೇವೆಮಾಡು.'

ದೊಡ್ಡಪ್ಪನ ಮಾತಿಗೆ ಅನಲೆಯು ಪರಿಹಾಸ್ಯದಿಂದ ನುಡಿದಳು:

'ಧರ್ಮವನ್ನು ಹೊರಗೆ ಅಟ್ಟಿ, ಸೇವೆ ಸಲ್ಲಿಸುವುದು ಹೇಗೆ?'

ರಾವಣನು ಅವಳ ಕೈ ಹಿಡಿದುಕೊಂಡು ತನ್ನ ಮನದ ಭಾವವನ್ನು ಮಿಡಿದನು,

'ನನ್ನಂತಹವರನ್ನು ನಿನ್ನಂತಹವರು ತೊರೆದರೆ ಧರ್ಮ ಉದ್ಧಾರವಾಗುತ್ತದೆಯೆ? ನಿನ್ನ ತಂದೆಗಿಂತಲೂ ಹೆಚ್ಚಾಗಿ ನೀನು ನನಗೆ ಬೇಕು.'

'ಅಪ್ಪನ ಅಪ್ಪಣೆಯೆ ನನಗೆ ದಾರಿ.'

ಎಂದು ಆ ಹೆಣ್ಣು ಮಗಳು ತಂದೆಯ ಪಾದವನ್ನು ನೋಡುತ್ತ ನಿಂತಿದ್ದಳು. ಆಗ ವಿಭೀಷಣ ತುಸು ವಿಚಾರಮಾಡಿ ನುಡಿದನು:

'ನಿನ್ನ ದೊಡ್ಡಪ್ಪ ಹೇಳುವುದು ನಿಜ. ಮಗಳೆ ನೀನು ಇಲ್ಲಿರಬೇಕು. ಅದೇ ಸರಿಯಾದ ನೀತಿ.'

'ನಿನ್ನ ಸಾಮೀಪ್ಯವನ್ನು ಬಿಟ್ಟಿರಬೇಕೆ?'

ಎಂದು ಅನಲೆ ತಂದೆಯನ್ನು ಕೇಳಿದಳು. ತಕ್ಷಣ ರಾವಣನು,

'ನಿನಗೆ ತಡೆಯುಂಟೆ ಹೇಳಕ್ಕ? ನಿಮ್ಮಪ್ಪ ಎಲ್ಲಿದ್ದರೆ ಅಲ್ಲಿಗೆ, ಯಾವಾಗ ಬೇಕಾದರೂ ಹೋಗಿ ಬರಲು ಅನುಮತಿಯುಂಟು. ಜೊತೆಗೆ ಪುಷ್ಪಕವಿಮಾನವನ್ನು ಕೊಡುತ್ತೇನೆ.'

ಎಂದು ಹೇಳುತ್ತ ಅನಲೆಯ ಬಳಿ ನಿಂತನು. ವಿಭೀಷಣನು ಅಣ್ಣನ ಆ ದೈನ್ಯತೆಯಲ್ಲಿ ಉದ್ಧಾರಕ ಭಾವ ಬೀಜ ಕಂಡು ಹರ್ಷಿಸಿದನು. ಅರಮನೆಯ ಹೆಬ್ಬಾಗಿಲಿನಿಂದ ಹೊರ ಹೊರಟನು.

❑



~~~~~~~~~~~~~~~~~~~~~~~ ಸಂಚಿಕೆ – ೯ ~~~~~~~~~~~~~~~~~~~~~~~

ಮರಣಮಥವಾ ಶರಧಿತರಣಂ

ಸಮುದ್ರವು ಬಡಬಾಗ್ನಿಯ ಆಂತರ್ಯದ ಬೆಂಕಿಗೆನ್ನುವಂತೆ ಪುಡುಪುಡನೆ ಕುದಿಯತೊಡಗಿತು. ಆಗ ವರುಣನು ನಡುಗಿಹೋದನು. ಅವನು ವಿಶ್ವಕರ್ಮನನ್ನು ಕುರಿತು ಹೀಗೆ ಹೇಳಿದನು:

'ದೇವತೆಗಳ ಶಿಲ್ಪಿಯೇ, ಬೇಗ ನಡೆದು ಸಮುದ್ರವನ್ನು, ಜಲಚರ ಜೀವರಾಶಿಗಳನ್ನು ಬದುಕಿಸು. ಆ ಮಹೇಂದ್ರಪರ್ವತದ ಚರಣದ ಶರಧಿ ತೀರದಲ್ಲಿ ಕಪಿಸೈನ್ಯ ಬೀಡುಬಿಟ್ಟಿದೆ. ಅಲ್ಲಿಗೆ ಬೇಗಹೋಗು. ಆ ವಿಸ್ತಾರ ಜಲಸೀಮೆಯ ಕಡಲಿನ ಎದುರು ಮರಳ ಎಲ್ಲೆಯ ಮಹಾಮಂಚದಲ್ಲಿ ದರ್ಭಾಸನದಲ್ಲಿ ಯಜ್ಞ ಪುಣ್ಯ ವೇದಿಕೆಯಲ್ಲಿ ಶ್ರೀರಾಮಚಂದ್ರನು
~~~~~~~~~~~~~~~~~~~~~~~

ಕುಳಿತಿದ್ದಾನೆ. ಅವನು ಉಪವಾಸ ವ್ರತಿಯಾಗಿ ಸತಿಗಾಗಿ ತಪಸ್ಸು ಕೈಗೊಂಡು ಅಗ್ನಿಯಂತಿದ್ದಾನೆ. ಅವನು 'ಮರಣ ಅಥವಾ ಶರಧಿಯನ್ನು ದಾಟುವುದು' ಎಂಬ ಪ್ರತಿಜ್ಞೆಯಿಂದ ಸರ್ಪ ಭೂಷಣನಾದ ಹಣೆಗಣ್ಣಿನ ರುದ್ರನಂತೆ ಭೀಷಣನಾಗಿದ್ದಾನೆ. ಲೋಕಕ್ಕೆ ಪ್ರಳಯವನ್ನುಂಟು ಮಾಡುವಂತೆ, ಕೋಪದ ಬಿಲ್ಲಿಗೆ ಘೋರ ಚಿತ್ತವೆಂಬ ಬಾಣವನ್ನು ಹೂಡುವ ಭೀಕರ ಕ್ರಿಯೆಯಲ್ಲಿದ್ದಾನೆ. ಸಂಕಟಕ್ಕೀಡಾದ ಕಪೀಂದ್ರನಿಂದ ಸುತ್ತುವರೆದಿರುವ ಆ ವಿಪತ್ಕಾರಿಯ ಬಳಿಗೆ ಹೋಗು!

'ಪ್ರೇಮ ನಿಷ್ಠೆಯ ಶ್ರೇಷ್ಠ ತಪಸ್ಸಿನಿಂದ ಮೂರುಲೋಕಗಳ ಗೌರವಕ್ಕೆ ಪಾತ್ರನಾದ, ಮಹರ್ಷಿಗಳಿಂದ ಪೂಜಿತನಾದ, ಭವ್ಯನಾದ ರಾಮನಿಗೆ ಕಾಣಿಸಿಕೊ! ಕೈಮುಗಿದು ಪ್ರಾರ್ಥಿಸಿಕೊಂಡು ಅವನ ರೌದ್ರವನ್ನು ತಡೆ. ಹೇ ದೇವ ಶಿಲ್ಪಿಯೇ, ನಿನಗೆ ತಿಳಿದ ರೀತಿಯಲ್ಲಿ ಪ್ರಕೃತಿ ಮರ್ಯಾದೆ ಕೆಡದಂತೆ, ಅಂಬುಧಿಯ ಗಾಂಭೀರ್ಯಕ್ಕೆ ಊನ ಬರದಂತೆ ಕಪಿಸೇನೆಯನ್ನು ದಾಟಿಸು. ಅಕಾಲದಲ್ಲಿ ಉಂಟಾಗುವ ಪ್ರಲಯವನ್ನು ತಪ್ಪಿಸು.'

ಕಡಲೊಡೆಯ ಅರುಣನ ಅಪ್ಪಣೆಯನ್ನು ದೇವತೆಗಳ ಶಿಲ್ಪವಿದ್ಯಾ ಪರಮ ಮಂತ್ರಗುರು, ವಿಜ್ಞಾನಿ, ಅಲೌಕಿಕ ಪ್ರತಿಭಾಶಾಲಿ ವಿಶ್ವಕರ್ಮನು ಬಾಗುತ್ತ ಸ್ವೀಕರಿಸಿದನು. ಅವನು ಅಮೃತದ ನೊರೆಯಂತೆ ಸುಂದರವಾದ ಆಮೆಯ ರಥದಲ್ಲಿ, ಅಲೆಯ ಕುದುರೆಗಳು ಎಳೆಯುತ್ತಿರಲು, ವಾಯುವಿನ ಸಾರಥಿತ್ವದ ಸಿಡಿಲ ಚಾಟಿಯ ಮಿಂಚು ವೇಗದಲ್ಲಿ ಸಾಗಿದನು.

'ಮೂರುದಿನಗಳು ಕಳೆದವು. ಸಾಗರನ ಉದಾಸೀನತೆ ಇನ್ನೂ ಅಚಲವಾಗಿದೆ. ಅವನು ನನ್ನ ಅಳಲನ್ನು ಅಪಹಾಸ್ಯ ಮಾಡುವಂತೆ ಅಲೆಗಳ ಅಟ್ಟಹಾಸದಲ್ಲಿ ನಗುತ್ತಿದ್ದಾನೆ! ಸಗರನಿಂದ ಆದವನು ಈ ಸಾಗರ. ನಮ್ಮವರು ಮಾಡಿದ ಉಪಕಾರವನ್ನು ಮರೆತಿದ್ದಾನೆ. ಕೃತಘ್ನರಿಗೆ ಮರೆವು ಸಹಜ. ಸೌಮಿತ್ರಿ, ಬಿಲ್ಲನ್ನು ಕೊಡು.'

ಎಂದು ರಾಮಚಂದ್ರನು ಹೇಳಿ, ಆಗ ತಾನೆ ನಸುಕು ನಸುಕಣ್ಣುತೆರೆಯುತ್ತಿರುವ ಆಕಾಶದ ಕಡೆಗೆ ನೋಡಿ ನಿಟ್ಟುಸಿರು ಬಿಟ್ಟನು. ಸೋದರನ ಕೈಯಿಂದ ತನ್ನ ಕೈಗೆ ಕೋದಂಡವನ್ನು ತೆಗೆದುಕೊಳ್ಳುತ್ತ ಗಡ್ಡ ಮೀಸೆಗಳ ಭಯಂಕರ ಮುಖದ ಅವನು ತನಗೆ ತಾನೆ ಹೀಗೆಂದುಕೊಂಡನು:

'ಈ ದಡದಿಂದ ಆ ದಡಕ್ಕೆ ನಡೆಯುತ್ತೇನೆ. ದಾರಿ ಬಿಡದಿದ್ದರೆ ಬಡಬಾಗ್ನಿಗೆ ಸಮನಾದ ಬಿಲ್ಲನ್ನು ಹೂಡುತ್ತೇನೆ. ಅದು ಈ ಕಡಲಿನ ಒಡಲನ್ನು ಹೀರಿ ಬರಿದಾಗಿಸುತ್ತದೆ. ಕಪೀಂದ್ರನೇ ಕೇಳು, ಮಹಾ ಸೈನ್ಯಸಾಗರವು ನನ್ನ ಹಿಂದೆ ಬರಲಿ.'

ಆ ಮಹಾಯೋಗಿಯು ತನ್ನ ಆತ್ಮ ಸಾಮರ್ಥ್ಯವನ್ನೆಲ್ಲ ಆ ಕಾರ್ಯಕ್ಕಾಗಿ ಆಹ್ವಾನಿಸುತ್ತ ದರ್ಭಾಸನದಿಂದ ಎದ್ದನು. ಮರಳಿಗೆ ಇಳಿದು ಸಮುದ್ರದ ಮೇಲೆ

ನಡೆದನು! ಆಗ ಮಹೇಂದ್ರಾಚಲದ ಶಿಲಾಹೃದಯ ಪಿಂಡವು ಏದುಸುರು ಬಿಟ್ಟಿತು. ಪೃಥ್ವಿಯು ಅರಣ್ಯ ರೋಮಾಂಚನದಿಂದ ಗದ್ಗದಿಸಿತು. ಮಹಾಸಮುದ್ರವು ಕುದಿದು, ಬೆದರಿ ರೋದಿಸಿತು. ಶರಣು ಶರಣಾಗಿರುವೆ ಕರುಣಿಸು ಎಂಬಂತೆ ಸ್ತುತಿಸುವ ಅಲೆಗಳ ಸಮೂಹದಿಂದ ಕೈಮುಗಿಯಿತು.

ಕ್ಷಮೆಯನ್ನು ಯಾಚಿಸಲು, ಕಾಲುಹಿಡಿದು ಬೇಡಿಕೇಳಿಕೊಳ್ಳಲು ಬಯಸಿತು. ಆದರೆ ಅವನನ್ನು ಮುಟ್ಟಲು ಅಂಜುತ್ತ ಸೆಡೆತು ಹಿಂಜರಿಯುತ್ತಿದೆಯೋ ಎನ್ನುವಂತೆ, ಹಾವಾಡಿಗನ ಕೈಯಲ್ಲಿರುವ ಮಂತ್ರದ ಮಣಿಗೆ ಶರಣಾಗಿ ಅಳುಕುತ್ತ ಹೆಡೆ ಮುದುರಿಕೊಳ್ಳುವ ಹಾವಿನಂತೆ ಸೀತಾಪತಿಯ ಹೆಜ್ಜೆ ಹೆಜ್ಜೆಗೆ ಹಿಂದಕ್ಕೆ ಸರಿದು ಓಡತೊಡಗಿತು.

ಸುಂಟರಗಾಳಿಯ ತೀವ್ರ ಕಡೆತದ ಕಾರಣದಿಂದ ಮರುಭೂಮಿಯಲ್ಲಿ ತಕ್ಷಣ ರಕ್ಕಸಮರಳಿನ ಭಯಂಕರ ರಾಶಿಗಳುಂಟಾಗುವುವು. ಹಾಗೆ ಕಪ್ಪಾದ ಜಲಶರಧಿಯು ಮೈ ಮುರಿಯುವ ರೀತಿಯಲ್ಲಿ ತೆರೆಗಳನ್ನು ಮಗುಚಿ ಹಾಕುತ್ತ, ಮಹೇಂದ್ರ ಶಿಖರಗಳು ನಾಚಿ ಬೆದರಿ ಕೊರಳು ತಗ್ಗಿಸುವಂತೆ ಹಿಂದಕ್ಕೆ ಸರಿಯಿತು. ಅಷ್ಟರಲ್ಲಿ ವರುಣನು ಕಳುಹಿಸಿದ್ದ ಅಮರ ಶಿಲ್ಪಿಯ ಮಹಾಧ್ವನಿಯು, ಸಮುದ್ರದ ಮಹಾಘೋಷವನ್ನು ಮೀರಿಸುವಂತೆ ರಘುರಾಮನಿಗೆ ಕೇಳಿಸಿತು.

'ಮಹಾತ್ಮನೇ, ನಿಲ್ಲು, ತಾಳು. ಅಕಾಲಪ್ರಳಯ ಕಾರ್ಯವನ್ನು ತಡೆ. ಇದೋ ವರುಣ ದೇವನ ನಮಸ್ಕಾರವನ್ನು ಸ್ವೀಕರಿಸು. ಅವನ ದೂತನಾದ ನಾನು ದೇವತೆಗಳ ಶಿಲ್ಪಿಯಾದ ವಿಶ್ವಕರ್ಮ. ಪ್ರಕೃತಿ ನಿಯಮಗಳ ಮರ್ಯಾದೆಯನ್ನು ಅನುಸರಿಸಿ ಈ ಸಮುದ್ರವನ್ನು ದಾಟುವ ಉತ್ತಮ ಉಪಾಯವನ್ನು ನಿನಗೆ ಹೇಳಲು ಬಂದಿರುವೆನು.

'ಪ್ರಾಜ್ಞನೇ, ಪ್ರಕೃತಿ ನಿಯಮವನ್ನು ತಿರಸ್ಕರಿಸುವುದನ್ನು ಬಿಡು. ಸಮುದ್ರನೇನು ಅಪರಾಧಿಯೆ? ಅವನು ಋತದ ಆಜ್ಞೆಯನ್ನು ಪರಿಪಾಲಿಸುವ ಓರ್ವ ಅಧಿಕಾರಿಯಾಗಿದ್ದಾನೆ.

'ಕಾರ್ಯ ಗೌರವದಿಂದ, ತೀವ್ರತಪದಿಂದ ಮತ್ತು ನಿನ್ನ ಮಹಿಮೆಯಿಂದ ನಿನಗೆ ಋತದ ಪ್ರಭುತ್ವವು ದೊರೆತಿರುವುದು ನಿಜ. ಆಳುವವನು ಆ ಲೀಲೆಯಲ್ಲಿದ್ದು ಆ ಸೂತ್ರ ನಿಯಮಗಳನ್ನು ಎಲ್ಲರೂ ನೋಡುತ್ತಿರುವಂತೆ ಉಲ್ಲಂಘಿಸುವುದು ಸರಿಯೆ?'

ನಿಂತಲ್ಲಿ ನಿಂತು ಕಣ್ಣಾಲಿಗಳನ್ನು ತನ್ನಲ್ಲಿ ನೆಟ್ಟು ನೋಡುತ್ತಿದ್ದ ರಾಮನೊಬ್ಬನಿಗೆ ಮಾತ್ರ, ತೆರೆ ಅಲುಗಾಡಿದ, ಸಮುದ್ರದ ತುಂತುರಿನ ಹೊಗೆಯ ಮುಗಿಲಿನ ನಡುವೆ ಅಸ್ಫುಟವಾಗಿ ಆ ದೇವತೆಗಳ ವರಶಿಲ್ಪಿಯ ಶರೀರ ಗೋಚರಿಸಿತು. ಆ ವಿದ್ಯುತ್ ವಿನಯ ಮೂರ್ತಿಯ ಮುಗಿದ ಕೈ ತೋಳುಗಳನ್ನು ಮಳೆಬಿಲ್ಲಿನಂತೆ ಎತ್ತಿದನು. ವರುಣನ ಹಿತವಾದ ಆದೇಶವನ್ನು ಹೀಗೆ ಹೇಳಿದನು:

ಅತೀಂದ್ರಿಯ ಭಾವ ಪಂಜರಮೆ ತಾನಾಧಾರಮಲ್ತೆ ಸೇಂದ್ರಿಯ ಸೃಷ್ಟಿ ರಚನೆಗೆ?

'ಸೂರ್ಯವಂಶದವನೇ, ತೀರಕ್ಕೆ ಹಿಂತಿರುಗು. ಸಮುದ್ರದ ಮರ್ಯಾದೆಯು ತನ್ನ ಮೊದಲಲುನ್ನತಿಗೆ ಮರಳಲಿ. ನಿನ್ನ ಸೇನೆಯಲ್ಲಿ ಬಿಳಿವಸ್ತ್ರವನ್ನು ಧರಿಸಿರುವವನಿದ್ದಾನೆ. ಅವನ ಹೆಸರು ನಳ. ದೇವತೆಗಳ ಬಡಗಿಯಲ್ಲಿ ನನಗೆ ಹುಟ್ಟಿದವನು. ನನ್ನ ಶಿಲ್ಪವಿದ್ಯಾಚಾತುರ್ಯ ಅವನಲ್ಲಿ ಗುಪ್ತವರವಾಗಿದೆ. ಅವನಿಂದ ಮಹಾಸೇತುವೆಯನ್ನು ನಿರ್ಮಿಸು. ಅದು ರಾವಣ ವಿನಾಶಧ್ವಜವಾಗಿ, ಸೀತಾಮಾತೆಯ ಕ್ಷೇಮಕಾರಕ ಬೈತಲೆಯ ಸಂಕೇತವಾಗುವುದು.

'ನಾನು ಅವನ ಹೃದಯದಲ್ಲಿದ್ದು ಅವನ ಆತ್ಮಕ್ಕೆ ಶಿಲ್ಪಬೋಧೆ ನೀಡಿ ಉತ್ತೇಜಿಸುತ್ತೇನೆ. ಜೊತೆಗೆ ವಾನರರೆಲ್ಲರ ಶರೀರದಲ್ಲಿ ಶಕ್ತಿಯಾಗಿ, ಮನದಲ್ಲಿ ಯುಕ್ತಿಯಾಗಿ, ಕಾರ್ಯದಲ್ಲಿ ಭಕ್ತಿ ನೂರ್ಮಡಿಸುವಂತೆ ಮಾಡುತ್ತೇನೆ. ಅವರಲ್ಲಿ ಅದ್ಭುತವೆನ್ನುವುದು ಸಾಮಾನ್ಯವೆನ್ನುವಂತೆ ಮಾಡುತ್ತೇನೆ.

'ಜಾನಕಿ ಧ್ಯಾಸಿಯೇ, ದೀರ್ಘ ವಿಸ್ತಾರದ ಈ ಸಮುದ್ರದ ಈ ತೀರದಿಂದ ಆ ತೀರದವರೆಗೆ ನಿನ್ನ ಮತ್ತು ನಿನ್ನ ಕೃಶಾಂಗ ಸೀತೆಯ ಪ್ರೇಮವು ಆಗಲೇ ರಚಿಸಿರುವ ಸೂಕ್ಷ್ಮರೂಪದ ಮಹಾಸೇತು ಕಂಗೊಳಿಸುತ್ತಿರುವುದನ್ನು ನೋಡು. ಆ ಪ್ರಾಣಸೇತುವೆಯ ಅಸ್ಥಿಪಂಜರಕ್ಕೆ ನನ್ನ ಮಗನು ವಾನರರ ನೂರುನೂರು ಸಾವಿರ ಮಹಾ ಬಾಹುಗಳಿಂದ ಜಡವಸ್ತುಗಳನ್ನು, ವೃಕ್ಷಗಳನ್ನು, ಶಿಲಾಖಂಡಗಳನ್ನು ತುಂಬಿಸುವನು.

'ಇಂದ್ರಿಯಗಳಿಗೆ ಗೋಚರವಾಗುವ ಸೃಷ್ಟಿಯ ರಚನೆಗೆ ಅತೀಂದ್ರಿಯ ಭಾವ ಪಂಜರವೇ ಆಧಾರವಲ್ಲವೆ? ಅದು ಆಗಲೇ ನಿಮ್ಮಿಬ್ಬರಿಂದ ನಿರ್ಮಿತವಾಗಿದೆ. ರಘುರಾಮನೇ, ರಾಮ ಸೀತಾರಚಿತ ಸೂಕ್ಷ್ಮತನು ಸೇತುವೆಯನ್ನು ನೋಡು!'

ರಾಮಚಂದ್ರನು ನೋಡುತ್ತಿದ್ದ ಹಾಗೆಯೇ, ವಿಶ್ವಕರ್ಮನ ಮೂರ್ತಿ ಕಣ್ಣಲ್ಲಿಯೆ ಕರಗಿ ಹೋಯಿತು! ಆ ಕೂಡಲೆ ಅವನು ಹೇಳಿದ ಭಾವಸೇತುವಿನ ಜೀವರಹಿತ ದೇಹದಂತಹ ಪಂಜರ ಗೋಚರಿಸಿತು. ಆ ಜಗತ್ತಿನ ನೇತ್ರಾದ್ಭುತವನ್ನು ನೋಡುತ್ತ ದಶರಥಪುತ್ರನು ರೋಮಾಂಚಿತನಾದನು. ನೋಡನೋಡುತ್ತ ಅವನ ಚೇತನವು ಹಿಗ್ಗಿ ಬಿರಿಯಿತೊ ಎನ್ನುವಂತೆ ಮನಸ್ಸಿಗೆ ಆನಂದದ ಸಿಡಿಲು ಬಡಿಯಿತು. ಅವನ ಶರೀರವು ನಿಧಾನವಾಗಿ ಹಗುರವಾಗುತ್ತ ಜೋಂಪಿಸಿತು. ತಕಪಕನೆ ಕುದಿಯುತ್ತಿದ್ದ ಮಹಾಸಾಗರವು ಪವಾಡ ಸದೃಶವಾಗಿ ಶಾಂತವಾಯಿತು.

ಕಪಿ ಮಹಾಸಮಿತಿಯು ಏನನ್ನೂ ಕಾಣದೆ, ಏನೊಂದನ್ನೂ ಕೇಳದೆ, ಮೌನವಾಗಿ ಬೆರಗಿನಿಂದ ರಾಮನ ವರ್ತನೆಯನ್ನು ಈಕ್ಷಿಸುತ್ತಿತ್ತು. ಮೂರ್ಛಿತನಾದ ರಾಮಚಂದ್ರನನ್ನು ಆಂಜನೇಯನ ತೋಳ ತೆಕ್ಕೆಯಲ್ಲಿ ಕಂಡು ಅದು ದಿಗ್ಭ್ರಮೆಗೊಂಡಿತು. ಸೀತಾನಾಥನನ್ನು

ಹೊತ್ತು ದರ್ಭೆಯ ಆಸನದ ಕಡೆಗೆ ಹೋಗುತ್ತಿದ್ದ ಅಂಜನಾಸುತನ ಪಾದಗಳನ್ನು ಅನುಸರಿಸಿ ಸಮುದ್ರದ ನೀರು ತನ್ನ ಮೊದಲಿನ ಮೇರೆಗೆ ಸಾಗುವ ಆತುರದಲ್ಲಿ ಸಾಗಿತು. ಪತಿತ ಸಾಧಕನು ಕುದಿವ ಪಶ್ಚಾತ್ತಾಪದಿಂದ ಹೃದಯದ ಆದರ್ಶದ ಕಡೆಗೆ ಇನ್ನೊಮ್ಮೆ ಹಂಬಲಿಸಿ ಸಾಗುವಂತೆ ಅದು ಮುಂದುವರಿಯುತ್ತಿತ್ತು!

ಸೂರ್ಯನು ಹೊತ್ತಾರೆ ಏರಿಬರುತ್ತಿದ್ದಂತೆ ಅದು ದಿನೇಶ ವಂಶಜನ ಸುತ್ತ ನೆರೆದು ಬೇಲಿಗಟ್ಟಿದ್ದ ಆ ಕಪೀಂದ್ರರ ನೆರಳುಗಳನ್ನು ವಿಸ್ತಾರವಾದ ಮರಳಿನ ಮೇಲೆ ಪಟ್ಟೆ ಪಟ್ಟೆಯಂತೆ ಎಳೆದು ಸಾಕಷ್ಟು ದೂರಕ್ಕೆ ಕೊಂಡೊಯ್ದಿತ್ತು. ರಾಮನು ನಿದ್ದೆಯಿಂದ ಎಚ್ಚೆತ್ತವನಂತೆ ನಿಧಾನವಾಗಿ ಕಣ್ಣುತೆರೆದನು. ವಾನರ ಮಹಾಸೈನ್ಯಾಧಿಪತಿಗಳ ಮುಖದಲ್ಲಿಯ ವ್ಯಥೆಯನ್ನು ನೋಡಿದನು. ನಿಟ್ಟುಸಿರು ಬಿಡುತ್ತ ಸಮುದ್ರದ ಕಡೆಗೆ ಕಣ್ಣು ಹರಿಸಿ,

'ನಾನು ದೇವತೆಗಳ ಶಿಲ್ಪಿಯಿಂದ ನಳನ ಹೆಸರನ್ನು ಕೇಳಿದೆನಲ್ಲವೆ! ನಳನು ಸೇತುವೆ ರಚನಾ ಸಮರ್ಥನಲ್ಲವೆ! ಅವನು ವಿಶ್ವಕರ್ಮನ ಮಗನಲ್ಲವೆ!' ಎಂದು ತನ್ನೊಳಗೆ ತಾನು ಹೇಳಿಕೊಳ್ಳುತ್ತ ರಾಮಚಂದ್ರನು ಕಪಿಶ್ರೇಷ್ಠನ ಕಡೆಗೆ ತಿರುಗಿದನು. ನಳನ ಕಣ್ಣನ್ನು ರಾಮನ ಕಣ್ಣು ನೇರವಾಗಿ ಸಂಧಿಸಿತು. ಅದು ಒಂದು ದೀಪ ಇನ್ನೊಂದು ದೀಪಕ್ಕೆ ದೀಪ್ತಿಯನ್ನು ದಾನಮಾಡಿತು ಎನ್ನುವಂತಾಯಿತು.

ವಿಶ್ವಕರ್ಮನ ಮಗನ ಶಿಲ್ಪಸಿದ್ಧಿಸ್ಮರಣ ದಿವ್ಯಜ್ಞಾನವು ಅವನ ಮನದ ಆಳದಿಂದ ನೀರಿನ ಮೇಲಿನ ಗುಳ್ಳೆಯಂತೆ ತಕ್ಷಣ ಉದ್ಭವಿಸಿ ಬುದ್ಧಿಯ ಹೊರಮುಖಕ್ಕೆ ಗೋಚರಿಸಿತು. ಅವನು ರೋಮಾಂಚಿತವಾದ ಕಂಪಿತ ಶರೀರದಿಂದ ಮೈಥಿಲೀ ಪ್ರೇಮ ಜೀವಿತನಿಗೆ ಕೈಮುಗಿಯುತ್ತ ಹೇಳಿದ ಆ ಮಾತನ್ನು ಅಲ್ಲಿದ್ದವರೆಲ್ಲರೂ ಆಶ್ಚರ್ಯ ಚಕಿತರಾಗಿ ಕೇಳಿದರು.

'ದೇವ, ಚಿಂತೆಯನ್ನು ಬಿಡು. ನನಗೆ ಮರೆತುಹೋಗಿದ್ದ ಮನದ ನಿಧಿಯೊಂದು ಈಗ ಆಶ್ಚರ್ಯಕ್ಕೊಳಗಾಗುವಂತೆ ಕೈಸೇರಿದೆ. ಕೇಳು, ಪಿತೃಕೃಪೆಯ ಬಲದಿಂದ ಈ ಘೋರಸಮುದ್ರದ ದರ್ಪ ಇಬ್ಭಾಗವಾಗುವಂತೆ ಅದ್ಭುತ ಸೇತುವೆಯನ್ನು ಕಟ್ಟುತ್ತೇನೆ! ಈ ಸಾಗರನು ನಿಶ್ಚೇಷ್ಟಗೊಂಡವನಾಗುತ್ತಾನೆ!

'ನೀನೆ ನೋಡುವೆ... ಬಂಡೆಗಳು ತೇಲುತ್ತವೆ; ಬೃಹತ್ ಮರಗಳು ಮುಳುಗದೆ ದೃಢವಾಗಿ, ಸುಸ್ಥಿರವಾಗಿ ಇದ್ದಲ್ಲಿಯೇ ಇರುತ್ತವೆ! ನೀನೆ ಕಾಣುವೆ.. ಇಲ್ಲಿ ನೆರೆದಿರುವ ಸಾಧಾರಣರಲ್ಲಿ ಅತಿ ಸಾಧಾರಣರು ಪೂರ್ವಕಾಲದ ಶಿಲಾಖಂಡಗಳಾದ ಬೆಟ್ಟಗಳನ್ನು ಕಿತ್ತು ಹೊತ್ತು ತರುವರು! ನೀನೆ ನೋಡುವೆ...ನನಗೆ ಆಜ್ಞಾಪಿಸು. ಈ ಅಕ್ಷೌಹಿಣಿ ಮಹಾಕಪಿಸೈನ್ಯದ ಉತ್ಸಾಹಕ್ಕೆ ಅಪ್ಪಣೆ ನೀಡು! ಸೇತುವೆಯನ್ನು ಕಟ್ಟಿ

ಸಂಶಯಕ್ಕೆಡೆಗೊಡದಂತೆ ಎಲ್ಲರನ್ನೂ ಲಂಕೆಯ ನೆಲಕ್ಕೆ ನಮ್ಮ ವಿಜಯ ವೇದಿಕೆಗೆ, ಮುಟ್ಟಿಸುವೆನು.

ಭಾವಸತ್ಯವನರಿಯದಿರ್ಪ ಕಲ್ಪನಾ ಕುಬ್ಜರಿಗಿದಲ್ತಮಲ್ತುದ್ಯಮಂ, ಕೇಳ್ ಸೇತು ಬಂಧನ ಬೃಹದ್ದರ್ಶನಂ!

ಮುಂದೆ ನಡೆದ ಅದ್ಭುತವನ್ನು ಯಾವ ಕವಿ ಬಣ್ಣಿಸುವನೊ? ಮನಸ್ಸು ಜೋಲಾಡುತ್ತ ಬಳಲಿ ಬಲಹೀನವಾಗಿ ಉದುರಿ ಹೋಗುವುದಿಲ್ಲವೆ? ಬ್ರಹ್ಮಾನಂದದ ಅನುಭವಕ್ಕೊಳಗಾದ ಆ ಭವ್ಯ ದೃಶ್ಯಕ್ಕೆ ಬೆದರಿ ನಾಲಗೆ ತೊದಲುವುದಿಲ್ಲವೆ? ನಿಜವನ್ನು ಕಾಣಬಲ್ಲವರಿಗೆ ಪ್ರತ್ಯಕ್ಷ ಅನುಭವವಾಗುವಂತೆ ನಾನು ಕಾಣುವುದನ್ನು ತಿಳಿದಷ್ಟೆ ಬಣ್ಣಿಸುತ್ತೇನೆ. ಭಗವಂತನನ್ನು ಕಲ್ಲುಮಣ್ಣಿನಲ್ಲಿ ಕಡೆದು ಪ್ರತಿಮೆಯಾಗಿಸುವಂತೆ ಅತ್ಯಲ್ಪವನ್ನು ಹೇಳುತ್ತೇನೆ. ಭಾವ ಸತ್ಯವನ್ನು ಅರಿಯದೆ ಇರುವ ಕಲ್ಪನಾ ಕುಬ್ಜರಿಗೆ ಈ ಕಾರ್ಯ ತಿಳಿಯಲಾಗದು. ಸೇತು ಬಂಧನ ಬೃಹತ್ ದರ್ಶನವನ್ನು ಕೇಳು!

ಹೇಳುವುದೇನು? ನಳನ ವಾಣಿಯ ಆಶಾವಾರ್ತೆಯನ್ನು ಕೇಳಿದುದೇ ತಡ ಘೇ ಉಘೇ ಎಂಬ ಘೋಷ ಎದ್ದಿತು. ಅದು ಪರ್ವತದ ನಿದ್ರೆಯನ್ನು ಬಡಿದುಅಪ್ಪಳಿಸಿತು. ಭೂಮಿ ಆಕಾಶದ ತಾಟಸ್ಥ್ಯವನ್ನು ಎಚ್ಚರಗೊಳಿಸಿತು. ರಾಮನ ಕಣ್ಣಿಗೆ ತಟ್ಟನೆ ಭೂತಕನ್ನಡಿಯನ್ನು ಇಟ್ಟಂತೆ ಅದ್ಭುತವು ಕಾಣಿಸಿತು. ಸುರರ ಶಿಲ್ಪಿಯ ಮಹಿಮೆಯೋ? ಅಥವಾ ನಳನ ನವ್ಯ ಸಿದ್ಧಿಯ ಭವ್ಯ ಮಾಯೆಯೋ? ವಾನರರಲ್ಲಿಯ ಅತ್ಯಲ್ಪ ಶರೀರಿಗಳು ಶಿಖರಸಮರೆನ್ನುವ ಉಪಮೆ ಸೋಲುವಂತೆ ಮಹಾದ್ಭುತವಾಗಿ ಬೆಳೆದರು.

ಗಿರಿಗಳಿಗೆ ಗಿರಿರಾಜನು ಅಪ್ಪಣೆ ಮಾಡುವಂತೆ ಆ ವಿಂಧ್ಯಪರ್ವತ ಸದೃಶನಾದ ನಳನು ಕೈ ಬೀಸಿದನು. ಆಗ ಸಲಗದ ಸನ್ನೆ ತಿಳಿದ ಆನೆಗಳ ಸಮುದಾಯವು ನಡೆಯುವಂತೆ, ಅವರಲ್ಲಿ ಕೆಲವರು ನೂಲುಹಿಡಿದು ನಿಂತರು. ಕೆಲವರು ಕೋಲುಹಿಡಿದು ನಿಂತರು. ಹಲವರು ಹಿಂಡು ಹಿಂಡಾಗಿ ಮಲೆಯನ್ನು ಏರಿದರು. ಚಲದ ಬಲದ ವಾನರ ಕುಲದ ಕ್ಷಿಪ್ರ ಕಾರ್ಮಿಕ ಕುಶಲಿಗಳು, ಗಂಡುನದಿ ಹೊಳೆಗಳ ಒಡೆಯನಿಗೆ ಸೇತುವೆ ಕಟ್ಟಲು ತಯಾರಾದರು.

ಬಂಡೆಗಳು ಬೆಂಡಾದವೋ ಎನ್ನುವಂತೆ ಮಹಾಭಾರದ ಪೂರ್ವಶಿಲಾ ಶಿಖರಗಳನ್ನು ಅವರು ತಬ್ಬಿ ಹಿಡಿದು ಅಲುಗಾಡಿಸಿ ಕಿತ್ತು ಹೊತ್ತುಕೊಂಡರು. ಅವುಗಳನ್ನು ಚೆಂಡಿನಂತೆ ಕೈಯಿಂದ ಕೈಗೆ ಬೀಸುತ್ತ ಕಡಲಿಗೆ ಎಸೆದರು. ಬೃಹತ್‌ಮರಗಳು ಕಿರಿದಾದಕಳೆ ಎನ್ನುವಂತೆ ಅವುಗಳ ಕಾಂಡವನ್ನು ಅಲುಗಾಡಿಸಿದರು. ಅವುಗಳ ಎಲೆ ಉದುರಿ, ಕೊಂಬೆಗಳು ಮುರಿದು, ಬೇರು ಕಿತ್ತೆದ್ದು ಬರಲು ಲರಿಲರಿಲ್ಲೆನ್ನುತ್ತ ಮುರಿದು ಕಡಲ ತಡಿಗೆ ಎಸೆದರು.

ಭೂಮಿನಡುಗಿಸುವ ಅಪಹಾಸ್ಯ ಹೊಡೆತವೆನ್ನುವಂತೆ ನೆಲವು ಲೂಟಿಯಾಯಿತು. ಕಾಡು ಬಯಲಾಯಿತು. ಬೆಟ್ಟಗಾಡು ನೆಲಸಮವಾದವು. ನೀರು ಬತ್ತಿಹೋಗಿ,

ತೊರೆಗಳಿರುವಕಡೆ ಕೊರಕಲು ಮಾತ್ರ ಉಳಿದವು. ಬೃಹತ್ತಾದ ಬೆಟ್ಟಗುಡ್ಡಗಳನ್ನು ಕಿತ್ತು ಉಂಟಾದ ರಂಧ್ರ ರಂಧ್ರಗಳಿಂದ ಜಲದ ಬುಗ್ಗೆ ಚಿಮ್ಮಿ ಹೊಮ್ಮಲು ಸರೋವರಗಳು ಉಂಟಾದವು. ಮಹಾಶರೀರದ ಕಪಿಗಳು ಬಿದಿರು ಕಾಡನ್ನು ಕೆದರಿದವು. ಆಗ ಅದರಲ್ಲಿದ್ದ ಆನೆಹಿಂಡುಗಳು ಹೊರ ಹೊರಟವು. ಅವು ಕಪಿಗಳ ಎದುರು ಹರಿವ ಗೊದ್ದಗಳೋ ಎನ್ನುವಂತೆ – ಆಕಾಶ ಪಥಿಕರಾದ ದೇವರಥಗಳಲ್ಲಿ ಸಂಚರಿಸುವ ದೇವತೆಗಳ ಕಣ್ಣಿಗೆ ಕಂಡವು!

ಮಹೇಂದ್ರಪರ್ವತವು ತನ್ನ ಒಡಲು ಸಮುದ್ರದ ನೀರಿನಲ್ಲಿ ಅದ್ದಿದರೇನಾಯಿತು. ತನ್ನ ಕೀರ್ತಿ ಉಳಿಯುವುದು ಎಂದು ದೃಢವಾಗಿತ್ತು. ಕ್ಷಣಕ್ಷಣಕ್ಕೆ ತಗ್ಗಿ ನೆಲಸಮಕ್ಕೆ ಕುಗ್ಗುತ್ತಿದ್ದರೂ ಹೆಸರಿನ ಹೆಮ್ಮೆಯಿಂದ ಧನ್ಯನಾಗಿರುವೆ ಎಂದು ಹಿಗ್ಗಿತು.

ಹೆಡೆನಿಮಿರಿ ಹರಿವಂತೆ ಹರಿದುದಾ ಸೇತುಸರ್ಪಂ.

ಆ ಕಡೆ ದೇವತೆಗಳ ಶಿಲ್ಪಿಯ ಮಗ ನಳನ ಸತ್ತ್ವಪೂರ್ಣ ನೇತೃತ್ವದಲ್ಲಿ ಮಹಾಸಮುದ್ರ ಮಂತ್ರ ಮುಗ್ಧವಾಗಿತ್ತು. ಅದರ ಎದೆಯ ಬೃಹನ್ನೀಲಿಯ ಜಲಕ್ಷೇತ್ರದಲ್ಲಿ ದೇವಕಲಾ ನಿಯಮದಿಂದ ಸೇತುವೆ ಸರ್ಪವು ಹೆಡೆನಿಮಿರಿ ಹರಿವಂತೆ ಹರಿಯಿತು. ಅದು ಭಯಂಕರವೂ, ಭವ್ಯವೂ ಅದಮ್ಯವೂ ಆದ ರೀತಿಯಲ್ಲಿ ಕ್ಷಣ ಕ್ಷಣವೂ ಮುಂದೆ ಮುಂದಕ್ಕೆ ಬೆಳೆಯಿತು. ಕಲ್ಲು ಬಂಡೆಗಳು ಬಿದ್ದ ರಭಸಕ್ಕೆ ನೀರಿನ ರಾಶಿಯು ಸೌಳನೆ ಸೀಳುತ್ತಿದ್ದವು. ಜಲವು ಕಣಿವೆ ಬೆಟ್ಟಗಳಾಗಿ ನೊರೆನೊರೆಯಾಗಿ ಕಡಲು ಬಾಯಿಬಿಟ್ಟಿತು.

ವಾನರರು ಹೊತ್ತ ಅರೆಬಂಡೆಯನ್ನು ಹೆಗಲಿನಿಂದ ಎಸೆದು, ಮೈಗೆ ಅಂಟಿದ್ದ ಮಣ್ಣನ್ನು ಕೊಡಹಿ, ಉತ್ಸಾಹದ ದನಿಯಿಂದ ಚಪ್ಪಾಳೆ ಹೊಮ್ಮುವಂತೆ ತೋಳು ತೊಡೆಗಳನ್ನು ತಟ್ಟಿ ಧಮ್ಮಸವಿಡುತ್ತ ಕುಪ್ಪಳಿಸುತ್ತಿದ್ದರು. ಹಾಗೆ ಹೋಗಿ ಬರುವ ಮಹಾಆಕೃತಿಯ ವಾನರರ ಸಾಲು ಸಾಲು ಪೋಣಿಸಿದಂತೆ ಕಾಣುತ್ತಿತ್ತು. ಅದು ಶಿಲ್ಪಾಚಾರ್ಯನಾದ ನಳನ ಇಚ್ಛಾಧಾರವನ್ನು ಪಡೆದು, ಹಿಡಿದು ನಡೆಯುತ್ತಿರುವ ಅನೇಕ ಸೂತ್ರಗಳಂತಿತ್ತು.

ಆಶ್ವಿಜ ಮಾಸದ ಪ್ರಾರಂಭದಲ್ಲಿ ಪೂರ್ವ ದಿಕ್ಕಿನಲ್ಲಿ ಸಾಯಂಕಾಲ ಸಮಯದಲ್ಲಿ ಸೂರ್ಯನ ಪಾದ ನಡೆಯುವ ಮಾರ್ಗದಲ್ಲಿ ಬೃಹತ್ತಾದ ಮೋಡದ ಒಡ್ಡುಗಳು ರಾಶಿಯಾಗಿ ಒಟ್ಟುಗೂಡುವುವು. ಹಾಗೆ ಹೆಬ್ಬಂಡೆಗಳು ಹೆಮ್ಮರಗಳು, ಮರಳರಾಶಿ, ಮಣ್ಣಿನ ಗುಡ್ಡೆಗಳು ಸಂಗ್ರಹಗೊಂಡವು. ಅವು ರಾಕ್ಷಸ ದ್ವೀಪಕ್ಕೂ ವಾನರರ ದ್ವೀಪಕ್ಕೂ ಸಮುದ್ರ ಮಾರ್ಗದ ತೋರಣ ಕಟ್ಟುವಂತಿದ್ದವು!

ಒಂದು ಹಗಲು ಮತ್ತು ರಾತ್ರಿಯಲ್ಲಿ ಹದಿನಾಲ್ಕು ಯೋಜನಗಳಷ್ಟು ದೂರ ಮಹಾಸೇತುವೆ ಕಟ್ಟಲ್ಪಟ್ಟಿತು. ನಾಯಕಶಿಲ್ಪಿ ನಳನು ಆ ಕಾರ್ಯದ ಪ್ರಮುಖ ಸ್ಥಳದಲ್ಲಿ

ನಿಂತು ಸೇತುವೆ ರಚನೆಯ ಮುನ್ನಡೆಗೆ ಮಾರ್ಗದರ್ಶಿಯಾಗಿ ಕರ್ತವ್ಯದಲ್ಲಿ ತೊಡಗಿದ್ದನು. ಆಗ ದಕ್ಷಿಣದಿಕ್ಕಿನ ದಡದಿಂದ ಒಂದು ವಿಚಿತ್ರವಾದ ಅಪೂರ್ವ ವಸ್ತುರೂಪ ಎದ್ದಿತು. ಕುತೂಹಲದಿಂದ ನೋಡುತ್ತಿರಲು ಅದು ದೊಡ್ಡ ದೊಡ್ಡದಾಗುತ್ತ ತೆರೆಯ ಹೊಲವನ್ನು ಉಳುವ ನೇಗಿಲಿನಂತೆ ಶರಧಿಯನ್ನು ಸೀಳುತ್ತ ಬಂದಿತು. ಅದು ಕರಾಳವಾಗಿದ್ದು ಯಮ ನಿಶ್ಚಯದ ದುಶ್ಯಕುನದಂತೆ ಸಂಪೂರ್ಣವಾಗಿ ನಾಶಮಾಡುವ ಏರ್ಪಾಟಿನಲ್ಲಿತ್ತು.

ನಳನು ಸಂಜ್ಞೆಯಿಂದ ಅಗ್ನಿಪುತ್ರ ನೀಳನನ್ನು ಕರೆದು ತೋರಿಸಿದನು. ಆಗ ಆ ಮಹಾ ಸೇನಾನಿಯು ಹುಬ್ಬುಗಂಟಿಕ್ಕಿ ನೋಡುತ್ತ ಅನುಮಾನಕ್ಕೊಳಗಾದನು. ಬಳಿಯಿದ್ದ ವಾನರನೊಬ್ಬನಿಗೆ ಒಂದು ಬಂಡೆಯನ್ನು ಅದಕ್ಕೆ ಗುರಿಯಿಡಲು ಹೇಳಿದನು. ಅಷ್ಟರಲ್ಲಿ ಅಲ್ಲಿಗೆ ಆಂಜನೇಯನು ಬಂದನು. ಅವನು ಸೇತುಮುಖಕ್ಕೆ ಎದುರಾಗಿ ಭಯಂಕರ ವೇಗದಿಂದ ತೇಲಿಬರುತ್ತಿದ್ದ ಬಂಡೆಗುಂಡನ್ನು ಕಂಡನು. ಅಲ್ಲಿಗೆ ರಾಮ ಲಕ್ಷ್ಮಣರೂ ಬಂದರು. ಅವರು ಪರ್ವತ ಶಿಖರದಂತಹ ಶಿಲೆಯ ಸಿಡಿಲನ್ನು ಕಂಡರು. ಅದು ಅವರಿಗೆ ತ್ರಿಕೂಟಾಚಲ ರಾಕ್ಷಸೀ ಕೂಟವಿದ್ಯಾ ಪರಿಣತಿಗೆ ಪ್ರತ್ಯಕ್ಷ ಸಾಕ್ಷಿಯಾಯಿತು.

ಬಲ್ಲೆನವನಂ; ಜಿಹ್ಮಯೋಧಿ; ವಿದ್ಯುಜ್ಜಿಹ್ವನಾ ಪೆಸರ ದೈತ್ಯಂ!

ದೂರದಲ್ಲಿ ಸೇತುವೆ ರಚನಾ ಕ್ರಿಯೆಯಲ್ಲಿ ನರೆತಕೂದಲಿನ ಜಾಂಬವಂತನಿದ್ದನು. ಅವನು ಸೇತು ಮುಖದಲ್ಲಿ ಸುತ್ತುವರಿದು, ಸಾಗರದಕಡೆ ದೃಷ್ಟಿಹರಿಸಿದ್ದ ವಾನರ ಮುಖ್ಯರನ್ನು ನೋಡಿ ಅಲ್ಲಿಗೆ ಬಂದನು. ಅವನು ಹಡಗಿನಂತೆ ತೇಲಿ ಬರುತ್ತಿರುವ ಸಿಡಿಲ ಬಂಡೆಯನ್ನು ನಿಂತು ನೋಡಿದನು. ಸೇನಾನಿಯ ಆಜ್ಞೆಯಂತೆ ಬಂಡೆಯನ್ನು ಗುರಿಹಿಡಿದು ನಿಂತಿದ್ದ ವಾನರನಿಗೆ ಹೇಳಿದನು:

'ಎಸೆ ಬೇಗ, ಗುರಿ ಇಡು! ತಡಮಾಡಬೇಡ. ಹತ್ತಿರ ಬರಲು ಅವಕಾಶ ಕೊಟ್ಟರೆ ಆ ಮಹಾಮಾಯಾವಿ ಈ ಸೇತುವೆಯ ಕಾರ್ಯವನ್ನು ಕೆಡಿಸದಿರುವುದಿಲ್ಲ. ನಾನು ಅವನನ್ನು ಬಲ್ಲೆ, ಅವನು ಕುಟಿಲ ಯೋಧಿ. ಆ ರಾಕ್ಷಸನ ಹೆಸರು ವಿದ್ಯುಜ್ಜಿಹ್ವ! ಸೇತುವೆಯನ್ನು ಕಟ್ಟುವ ವಾರ್ತೆಯನ್ನು ಗೂಢಚಾರರಿಂದ ತಿಳಿದು, ಭಗ್ನಗೊಳಿಸಲು ಲಂಕೆಯು ಕಳುಹಿಸಿರುವ ಪ್ರಲಯಾಗ್ನಿ ವಿಘ್ನ. ಅವನನ್ನು ದೂರದಲ್ಲಿಯೇ ಮುಗಿಸಬೇಕು. ಇಲ್ಲದಿದ್ದರೆ ನಾವು ಮಾಡಿರುವ ಕೆಲಸ ನೀರಿನಲ್ಲಿ ಹೋಮ ಮಾಡಿದಂತಾಗುತ್ತದೆ!'

ಜಾಂಬವನ ನುಡಿ ಕೇಳುತ್ತ ಆ ಭಯಂಕರ ವಾನರನು ಕೈಯ ಕೋವಿಯಿಂದ ಸಿಡಿಲಿನ ರೀತಿಯ ಬಂಡೆಗುಂಡನ್ನು ಕವಣೆಯೆಸೆದನು. ಅದು ಕೋನ ಕೋನಗಳನ್ನು ಹೊಂದಿದ ಕರ್ಕಶಾಕೃತಿಯ ಕಲ್ಲು ಮೊರಡಿ. ಕವಣೆ ಬೀಸಲು, ಅದು ಸರಿಸರಿದು ಮೇಲೇರಿ ದುಂಡಾಗಿ ನುಣುಪಾಗಿ ಕಿರಿದಾಗಿ ಕಾಣುತ್ತ, ದೂರ ದೂರಕ್ಕೆ ಸಾಗುತ್ತ, ತನ್ನ ಪಥದಿಂದ ಲಂಬಗೆರೆಯಂತೆ ಯೋಧಿ ದೈತ್ಯನ ಕಡೆಗೆ ಧಾವಿಸಿತು. ವೇಗವೇಗದಿಂದ ಸಾಗಿ ಅವನ ಮೇಲೆ ಧುಮಿಕಿತು.

ಆಗ ಕ್ರೂರ ವಿಧಿಯು ಬ್ರಹ್ಮಾಂಡ ಚಂಡೆಯನ್ನು ಸಿಡಿಲು ವಾದನ ದಂಡದಿಂದ ಬಡಿದು ಲಯನಾಟಕಕ್ಕೆ ನಾಂದಿಯನ್ನು ಹೇಳಿತೊ ಎಂಬಂತೆ, ಪೃಥ್ವಿಯ ಕಿವಿ ಕಿವುಡಾಗುವಂತೆ ಥಣಥಣತ್ಕಾರದ ಭಯಂಕರ ಶಬ್ದ ವ್ಯಾಪಿಸಿ ಮೇಲೆದ್ದಿತು. ತಕ್ಷಣ ಆ ಬಂಡೆಯಿಂದ ಕಿಡಿ ಕಿಡಿಯೆದ್ದಿತು. ಅದು ಪುಡಿ ಪುಡಿಯಾಗಿ ತುಂತುರು ತುಂತುರಾಗಿ ಬಿದ್ದಿತು. ಹೊಡೆತಕ್ಕೆ ತಕ್ಷಣ ತೆರೆದ ನೂರು ನೂರು ಮುಖಗಳಿಂದ ಹೊಗೆಯುಗುಳುತ್ತ ಎದ್ದು ಜೊತೆ ಜೊತೆಗೆ ಉರಿಬೆಂಕಿಯನ್ನು ಕಾರಿತು. ಆ ತೆಪ್ಪ ರೂಪದ ದೈತ್ಯನು ಮಿಂಚು ಮೋಡವನ್ನು ಹೊಕ್ಕು ಮರೆಯಾಗುವಂತೆ ಆ ಮಹಾಸಾಗರದ ಉದರದಲ್ಲಿ ಮಾಯವಾದನು.

ಮಂಜೆನ್ನುವಂತೆ ಕವಿದ ಹೊಗೆಯ ದಟ್ಟವಾದ ತೆರೆಯೊಳಗೆ ಅಡಗಿದ ಆ ಹಡಗು ರಾಕ್ಷಸನು ಎಲ್ಲಿರುವನೆಂದು ತಿಳಿಯಲು ಕಪಿಗಳು ದಿಕ್ಕು ದಿಕ್ಕಿಗೆ ದೃಷ್ಟಿ ಹರಿಸಿದರು. ಅವರಿಗೆ ಆಶ್ಚರ್ಯವಾಗುವಂತೆ ಪಶ್ಚಿಮ ದಿಕ್ಕಿನ ಸಮೀಪದಲ್ಲಿ ಕಡಲ ಹೊಟ್ಟೆಯನ್ನು ಸೀಳಿ ಮೇಲೆದ್ದು ಮೂಡಿದ ಪರ್ವತೋಪಮವಾದ ಹಡಗಿನಲ್ಲಿ ಸಂಚರಿಸುವ ನಿಶಾಚರನು ಹುಬ್ಬುಗಂಟಿಕ್ಕಿದನು. ಅದನ್ನು ನೋಡಿದಾಗ ತಮಗಿದೊಂದು ಚೇಳಿನಂತಾಯಿತಲ್ಲ ಎಂದು ವಾನರರು ಆಶ್ಚರ್ಯಕ್ಕೊಳಗಾದರು.

ಕಪಿನೃಪ ಸುಗ್ರೀವನು 'ಇವನು ಸುಲಭನಲ್ಲ' ಎಂದು ಹೇಳುತ್ತ, ಅಲ್ಲಿ ನಿಂತಿದ್ದ ವೀರ ಶತಬಲಿಗೆ ಆಜ್ಞೆ ಮಾಡಿದನು. ಗಗನ ಸಂಚಾರಿಗಳ ಮುಂದಾಳು ಹಾಗೂ ಕಾಮರೂಪಿಗಳ ಗುರುವೂ ಆದ ಶತಬಲಿಯು ತನ್ನ ಸೈನ್ಯದ ಗೌರವ ಪ್ರಾಣರಾಗಿರುವ ಐದುಜನರನ್ನು ಕರೆದು ಕಟ್ಟಾಜ್ಞೆ ಮಾಡಿದನು. ಆ ಐದೂಜನ ಆಗಸದ ಕಡೆಗೆ ಹಾರಿ ಮೋಡದಲ್ಲಿ ಮರೆಯಾದರು. ವಾನರರು ಕುತೂಹಲದಿಂದ ಕೊರಳನ್ನು ಎತ್ತರಿಸಿ ನೋಡುತ್ತಿದ್ದರು. ಆ ಐವರು ವಿದ್ಯುಜ್ಜಿಹ್ವನಿದ್ದ ಕಡೆಗೆ ಧೂಮಕೇತುಗಳಾಗಿ, ಹೊಲದ ಹೊದರಿನಲ್ಲಿರುವ ಪಾರಿವಾಳಕ್ಕೆ ಎರಗುವ ಗಿಡುಗನ ವೇಗದಲ್ಲಿ ಧುಮುಕಿದರು.

ಅವರು ಪೊರಕೆಯ ರೀತಿ ನೀಳವಾಗಿರುವ ಬಾಲದ ಅಗ್ನಿ ಜಟೆಯನ್ನು ಬಾನಿನ ಕಡೆ ಬೀಸುತ್ತ ಉಜ್ವಲ ಉಲ್ಕಾ ಮುಖಿಗಳಾದರು. ವಿದ್ಯುಜ್ಜಿಹ್ವನು ತನ್ನ ಮೇಲೆ ಎರಗುವ ಅವರ ಮೃತ್ಯು ವ್ಯಾಘ್ರ ಭೈರವ ಉಗುರುಗಳನ್ನು ಕಂಡನು. ತಕ್ಷಣ ಮಗ್ಗುಲಾಗಿ ಹೊರಳಿ ಕಡಲ ಒಡಲ ಬಗಿದು ಅಡಗುವ ಪ್ರಯತ್ನದಲ್ಲಿದ್ದನು. ಅವರು ಅವನ ಹೊಕ್ಕುಳನ್ನು ಒಡೆದರು. ಸಿಡಿಮದ್ದಿನ ನೆಲೆಯಾದ ಆ ರಾಕ್ಷಸನ ಶರೀರವನ್ನು ಐದು ಜನರೂ ಹೊಕ್ಕರು.

ಹಗಲೆ ಇರುಳಾಯಿತೊ ಎನ್ನುವಂತೆ, ಚಕಮುಕ್ಕಿ ಕಲ್ಲನ್ನು ಕುಕ್ಕಿದಂತೆ, ಭಾಸ್ಕರನ ಲಕ್ಷ ಪ್ರಖರ ತೀಕ್ಷ್ಣ ಕ್ರೂರ ಹೊಳಪು ತೆಕ್ಕನೆ ಉಕ್ಕಿತು. ಸಿಡಿಲ ಡಿಂಡಿಮವು ಬಡಿಯಲು ತೊಡಗಿತೊ ಎನ್ನುವಂತೆ, ಕೇಳಿದ ಕಿವಿ ಮೂರ್ಛೆಗೊಳ್ಳುವಂತಹ ಸದ್ದು ಹೊರಹೊಮ್ಮಿತು.

ಅದು ದಿಕ್ಪತಿಯ ಹೃದಯ ಧೈರ್ಯ ಅಲ್ಲಾಡುವಂತೆ ಮಾಡಿತು. ಬೆಂಕಿ ತಗುಲಿದ ಎಣ್ಣೆಯ ಗಣಿಯಿಂದ ಮೇಲೆದ್ದು ಬರುವಂತೆ ಕರಿಯ ಮುದ್ದೆಯ ರಾಸಿರಾಸಿ ಹೊಗೆಯ ಗುಂಪು ಕಪ್ಪುಮೋಡಗಳ ಅಂಧಕಾರದಿಂದ ಸಮುದ್ರ ಸೀಮೆಯನ್ನೆಲ್ಲ ಮುಸುಕಿತು.

ಆ ಭಯಂಕರ ಭೀಕರ ಹಡಗಿನ ಅವತಾರಿ ರಾಕ್ಷಸನು ಏರುದನಿಯಿಂದ ಅರಚುತ್ತ, ಘುಳು ಘುಳು ಘುಳುಂ ಎಂದು ಮುಳುಗಿದನು. ಅವನು ಮುಳುಗಿ, ಮುಳುಮುಳುಗಿದನು. ಅವನು ಮೇಲೇಳದಂತೆ ಕಡಲ ಶೀತವು ಬಲಿತೆಗೆದುಕೊಂಡು ತಣ್ಣನೆಯ ತಳಾತಳಕ್ಕೆ ತಳ್ಳಿತು.

ಪೃಥ್ವಿಯ ಬೃಹತ್ ಹುತ್ತದಿಂದ ಹೊರಬಂದ ಆದಿಶೇಷನು ದೇವಿಲಕ್ಷ್ಮಿಯನ್ನು ಹುಡುಕುತ್ತ ವಿಷ್ಣು ಶಯ್ಯಾಗಾರವನ್ನು ಪ್ರವೇಶಿಸುವ ರೀತಿಯಲ್ಲಿ, ಸಮುದ್ರ ವಕ್ಷದಲ್ಲಿ ಎಲ್ಲ ದೈತ್ಯ ವಿಘ್ನಗಳ ದಂತ ಕೋಟಿಯನ್ನು ಮುರಿದು, ದೇವಶಿಲ್ಪಿಯ ಪುತ್ರನು ರಚಿಸಿದ ಸೇತುಸಿಂಹವು ಐದು ಹಗಲು ಐದು ರಾತ್ರಿಗಳಲ್ಲಿ ಸಂವರ್ಧಿಸಿತು.

ಸಾಗರ ಸ್ಥಿರ ಜಲದ ಸುಖೋದ್ವಿಗ್ನ ಸಂಕ್ಷೋಭೆಯಂ ಕಂಡು ಮೈಥಿಲಿಗೆ ಮನದಾಸೆ ಕೊನರಿದುದು.

ಸಮುದ್ರ ತೀರದ ಪರ್ವತವು ಸುಖದುಃಖ ರೋಮಾಂಚನಕ್ಕೆ ವಿಕಂಪಿಸಿತು. ತ್ರಿಕೂಟಾದ್ರಿಯನ್ನು ಸನ್ನೆಯಿಂದ ಎಚ್ಚರಿಸುವಂತೆ ತನ್ನ ವೃಕ್ಷ ವಸ್ತ್ರದಿಂದ ಇಂಗಿತವಾಗುವಂತೆ ಒಂದು ಬಲವಾದ ಗಾಳಿ ಬೀಸಿತು. ಐದು ಹಗಲು ಚಂಚಲವಾಗದೆ ಇದ್ದ ಸಾಗರದ ಸ್ಥಿರಜಲವು ಸುಖೋದ್ವಿಗ್ನ ಅಲ್ಲೋಲ ಕಲ್ಲೋಲತೆಗೆ ಒಳಗಾಗಿತ್ತು. ಅದನ್ನು ಕಂಡು ಮೈಥಿಲಿಯ ಮನಸ್ಸಿನಲ್ಲಿ ಆಸೆ ಚಿಗುರಿತು. ಅವಳ ಹೃದಯವು ಜಲಸಂಭ್ರಮದ ಅಲ್ಲೋಲ ಕಲ್ಲೋಲ ಸಮುದ್ರದ ಅಂತಃಕರಣವನ್ನು ಅನುಕರಿಸಿತು. ಆ ಪ್ರಕೃತಿ ಶಕುನಗಳಿಗೆ ಶಂಕೆಗೊಂಡ ಕನಕ ಲಂಕೆಯ ಪ್ರಜೆಗಳ ಮನಸ್ಸು ಕಡೆದಂತೆ ಕಲಕಿತು.

ಪ್ರವಾಹವನ್ನು ಪ್ರತಿಭಟಿಸುತ್ತ ಅದರ ವೇಗಕ್ಕೆ ಕುಸಿದು, ಹಿಸಿದು ಬೀಳುತ್ತ, ಹುಸಿ ಎರೆಮಣ್ಣಿನ ದಡವು ನಿಧಾನವಾಗಿ ಹಿಂದು ಹಿಂದಕ್ಕೆ ಸರಿಯುತ್ತದೆ. ಹಾಗೆ ಆ ಸ್ಥಿತಿಗೆ ಒಳಗಾದ ಲಂಕೇಶ್ವರನು ಮತ್ತೆ ಮತ್ತೆ ಅತಿಯಾಗಿ ಕೋಪಗೊಂಡನು. ಅವನು ತನ್ನ ಸೇನೆಗೆ, ಗೂಢಚಾರ ದಳಕ್ಕೆ ಚತುರೋಪಾಯದ ಚತುರಂಗವನ್ನು ಸಮರ ಸನ್ನಾಹಕ್ಕೆ ಅಣಿಯಾಗಿಸಲು ಆಜ್ಞೆ ಮಾಡಿದನು.

ಹೆಮ್ಮರದ ಕೊಂಬೆ ಹೂ ಬಿಟ್ಟು, ಕಾಯಿಬಿಟ್ಟು, ಹಣ್ಣಾದುದನ್ನು ಬೇರು ಹೇಗೆ ತಿಳಿಯುತ್ತದೆ? ತರುಗಳನ್ನು ಕಿತ್ತು, ಗಿರಿಗಳನ್ನು ಎತ್ತಿ, ಕಲ್ಲು ಮರಮಟ್ಟು ಮಣ್ಣನ್ನುಕೊಟ್ಟು ಸೇತುವೆ ಕಟ್ಟಿದರು. ಬೆಟ್ಟಗಾಡು ಬಯಲಾಗುವಂತೆ ಮಾಡುತ್ತ ನೆಲದ ಮಟ್ಟಕ್ಕೆ ಮೆಟ್ಟುತ್ತಿದ್ದ ಕಪಿ ಸೈನಿಕರು–ನಿಪುಣ ನಲನ ಅತಿಶಯವಾದ ಕಾರ್ಯದ ಶ್ರೀರಾಮ ಸೇತು ಗುರಿಸೇರಿದುದನ್ನು ಹೇಗೆ ತಾನೆ ತಿಳಿಯುತ್ತಾರೆ?

ಐದನೆಯ ಹಗಲು ಪಶ್ಚಿಮದಿಕ್ಕಿನ ಪರ್ವತದ ಸಾಲಿನ ಅರುಣಮಂಚವನ್ನು ಏರುತ್ತಿತ್ತು. ಸಂಜೆಯ ಓರೆಯ ಕದಿರುಗೆಂಪು ಭೀಮದೀರ್ಘವಾದ ಬೃಹತ್‌ನೆರಳನ್ನು ಗಿರಿಮಹೇಂದ್ರನ ಭಯಂಕರ ಶಿರಕ್ಕೆ ಹರಡಿತ್ತು. ಅದು ತಪಸ್ವಿ ಸಂಪಾತಿಯನ್ನು ಶತಶತಮಾನಗಳಿಂದ ಹೊತ್ತಿದ್ದ ಶ್ರೇಷ್ಠತಪದ ಗೌರವಕ್ಕೆ ಒಳಗಾಗಿತ್ತು. ಅದು ನೂರಾನೆ ಎತ್ತರದ ಮತ್ತು ಅಷ್ಟೇ ವಿಸ್ತಾರವೂ ಬೃಹತ್ ಗಾತ್ರವೂ ಆದ ಶಿಲೆ. ಅದರ ಬಳಿಯೇ ಓರ್ವ ಬೃಹತ್ ವಾನರನು ನಿಂತಿದ್ದನು. ಅವನೇನು ಪರ್ವತವೊ, ಕಾಡೊ? ವನ ಸಂಚಾರಿಯ ರೂಪದಿಂದ ಹೊಮ್ಮಿರುವ ಮಹೇಂದ್ರ ಪರ್ವತವೊ? ಎನ್ನುವಂತೆ ಭಯಂಕರನಾಗಿದ್ದನು. ಅವನ ಶರೀರದಲ್ಲಿ ಕಿಕ್ಕಿರಿದಂತೆ ರೋಮಗಳು ಮುದ್ಗರ ಆಯುಧದಂತೆ ಭೀಕರವಾಗಿದ್ದವು. ಪರ್ವತದ ತಲೆಯ ನೆರಳಿಗೆ ಸ್ಪರ್ಧಿ ಎಂಬಂತೆ ದೈತ್ಯಗಾತ್ರ, ಭೂತಭೀಷಣನ ನೆರಳಿತ್ತು!

ಪೇಳ್ವುದೇನಂ? ಸಡಿಲ್ದುದಾ ಶಕುನಿಶಿಲೆ!

ಜಾಂಬವನ ದಳದಲ್ಲಿ ಅವನು ಮೇರು ಎಂಬ ಹೆಸರಿನ ಓರ್ವ ಮಹಾವಾನರನಾಗಿದ್ದನು. ಶಕುನಿ ಶಿಲೆಯ ಹತ್ತಿರ ನಿಂತು ಸುತ್ತಲೂ ನೋಡಿದನು. ಆಶ್ಚರ್ಯಚಕಿತ ಮುಖಮುದ್ರೆಯಿಂದ 'ಇದೇನು! ಇಷ್ಟೊಂದು ಕಲ್ಲು ಮರಗಳನ್ನು ಕಿತ್ತವರಿಗೆ ಈ ಬಂಡೆ ತಾನೊಂದು ಭಾರವಾಗುವುದೆ? ಒಂದು ಕೈ ನೋಡುತ್ತೇನೆ! ಕಿತ್ತು ಎತ್ತಿ ಹೊತ್ತೊಯ್ದೆನಾದರೆ ಈ ಕಲ್ಲೊಂದೇ ಯೋಜನಗಳಿಗೆ ಸಾಕಾಗುತ್ತದೆ!'

ಎಂದು ನಿಶ್ಚಯಿಸಿ ಉಸಿರೆಳೆದು ನಿಮಿರಿದನು. ಅವನ ಎದೆಯ ಖಂಡಗಳು ವೃಕ್ಷಗಳಿಂದ ಕೂಡಿದ ಹೆಬ್ಬಂಡೆಯ ಬಂಡೆಗಳಂತೆ ಉಬ್ಬಿದವು. ಕೆದರಿದ ಕೂದಲು ಸಂಜೆಯ ಬಿಸಿಲಿನಿಂದ ಬೆಳಗುತ್ತಿರಲು, ಶಿಲೆಯ ಡುಬ್ಬವನ್ನು ತೋಳಿನಿಂದ ಬಿಗಿದನು. ಅದು ವಾಸುಕಿಯ ಶರೀರವು ಮಂದರದ ಮೈಗೆ ಸುರುಳಿ ಉರುಳನ್ನು ಸುತ್ತಿ ಬಿಗಿದಂತಿತ್ತು. ಹಲ್ಲುಕಚ್ಚಿ, ಕಣ್ಣು ಬಿಚ್ಚಿ, ಉಸಿರು ಕಟ್ಟಿದನು. ರೋಮರೋಮಗಳಿಂದ ಬೆವರು ತೊರೆಯಂತೆ ಇಳಿಯುತ್ತಿರಲು, ಮೈಯ ನರಗಳೆಲ್ಲ ಹೆದೆಯೇರಿದಂತೆ ನಿಮ್ಮನೆ ನಿಗುರಿದವು. ರಕ್ತವು ಚಿಮ್ಮಿ ಮುಖ ಕೆಂಪೇರಿತು. ಮಲೆಯ ಶಿರದ ಶಕುನಿಶಿಲೆಯ ಬೃಹತ್‌ಬಂಡೆಯನ್ನು ತಳ್ಳಿದನು. ನೂಕಿದನು, ಸೆಳೆದು ಎಳೆದನು. ಮತ್ತೆ ಮತ್ತೆ ಅಲುಗಾಡಿಸಿದನು.

ಹೇಳುವುದೇನು? ಆ ಶಕುನಿಶಿಲೆ ಸಡಿಲವಾಯಿತು! ಅದು ತೊನೆದಾಡುತ್ತಿರಲು ಅದರ ನೆರಳು ಯೋಜನದಷ್ಟು ರೇಖೆಯನ್ನು ಗೀಚಿತು! ನೆಲ ನಡುಗಿತು! ಶಿಥಿಲವಾದ ಭೂಗರ್ಭವು ಆ ಬಂಡೆಯ ಸಹಸ್ರಾರು ವರ್ಷದ ಪ್ರೀತಿಯನ್ನು ನೆನೆದು ಗುಡುಗಿತು. ಬೆಟ್ಟದ ಚೀತ್ಕಾರ ಶಕುನದಂತೆ ಸದ್ದು ಹದ್ದುಗಳೆದ್ದು ದಿಕ್ಕುದಿಕ್ಕಿಗೆ ಚೀರಿ ಹಾರಿದವು. ಕಣೆಹಂದಿಗಳು ಬಂಡೆಯ ಅಡಿಯಲ್ಲಿ ಗುದ್ದಿನೊಳಗೆ ಒರಗಿ ನಿದ್ದೆಯೊಳಿದ್ದವು. ಅವು

ದಿಗಿಲುಗೊಂಡು ಎದ್ದು ಹೊರನುಗ್ಗಿ ಹೋಗುವಷ್ಟರಲ್ಲಿ ಒರಳುಗುಂಡು ಬಿದ್ದು ಅರೆದಂತಾಗಿ ನುಚ್ಚಾಗಿ ಹೋದವು!

ಹತ್ತಿರದ ಮತ್ತೊಂದು ಶಿಖರದಲ್ಲಿದ್ದ ಶರಗುಲ್ಮನು ಬೆಟ್ಟ ಮೇಲಕ್ಕೆ ನೆಗೆಯುವುದನ್ನು ನೋಡಿದನು. ಅಲ್ಲಿಂದಲೇ ದೈತ್ಯಕಂಠದಿಂದ ಮೇರುವನ್ನು ಕೂಗಿ ಕರೆದನು. ಆ ಹುಲಿಯ ಉಗ್ರಗರ್ಜನೆಯ ಅಧಿಕಾರ ವಾಣಿಯನ್ನು ಕೇಳುತ್ತ ಮೇರುವು ತಾನು ಮಾಡುತ್ತಿದ್ದ ಭಯಂಕರ ಕಾರ್ಯದಿಂದ ಸ್ವಲ್ಪ ಕೈ ತಡೆದನು. ತಲೆಯೆತ್ತಿ ಶರಗುಲ್ಮನನ್ನು ನೋಡಿ, ಗುರುತಿಸಿ ಮುಗುಳ್ನಕ್ಕು ಅವನ ಮಾತಿಗೆ ಕಿವಿಗೊಟ್ಟನು:

'ಲಂಕೆಯಿರುವ ಬೀಡನ್ನು ತೋರಿಸಿ, ಸೀತೆಯನ್ನು ಕದ್ದೊಯ್ದ ರಾವಣನ ವಾರ್ತೆಯನ್ನು ಹೇಳಿದ ಸಂಪಾತಿಯನ್ನು ಹೊತ್ತುಕೊಂಡಿದ್ದ ಪುಣ್ಯಪವಿತ್ರಪರ್ವತ ಅದು. ಹಾಗಾಗಿ ಅದನ್ನು ಕೀಳದೆ ಬಿಟ್ಟರು. ಶಕ್ತಿಯಿಲ್ಲದೆ ಬಿಟ್ಟಿಲ್ಲ.'

ಮೇರು ಆ ನುಡಿ ಕೇಳಿ ತನ್ನ ಸಾಹಸ ಕೆಲಸವನ್ನು ನಿಲ್ಲಿಸಿದನು. ಆಗ ಧಳಂ ಧಳಂ ಧಳಧಳಧಳಂ ಎಂದು ಮಹೋತ್ಸಾಹದ ಭೇರೀ ರವ ಹೊಮ್ಮಿ ಬಂದಿತು. ಸಂಭ್ರಮದ ಆ ಪ್ರಾಣನಗಾರಿಗೆ ಬೆಟ್ಟ ಕಾಡು, ಸಂಜೆಯ ಆಕಾಶವೆಲ್ಲವೂ ಮಾರ್ದನಿಸಿದವು.

ಬನ್ನಿ, ಓ, ಬನ್ನಿ, ಬೇಗನೆ ಬನ್ನಿ!

ಸೇವಕರು ಓಡಿಬಂದು ಡಿಂಡಿಮದೊಂದಿಗೆ ಹೀಗೆ ಉದ್ಘೋಷಿಸಿದರು:

'ಓ ಕಪಿಧ್ವಜರಿರಾ, ಎಲ್ಲರೂ ಕೇಳಿ. ನಮ್ಮ ಸೇತುವಿಗೆ ಸಮುದ್ರಸೋತಿದೆ! ರಘುರಾಮನ 'ಮರಣ ಮಥವಾ ಶರಧಿ ತರಣಂ' ಎಂಬ ಪ್ರತಿಜ್ಞೆಯು ಲಂಕೆಯ ನೆಲದಲ್ಲಿ ತನ್ನ ಅಡಿಯ ಗೆಲ್ಲುಗಂಭವನ್ನು ಹೂಡಿದೆ. ದೇವ ಸುಗ್ರೀವನ ಆಜ್ಞೆಯಿಂದ ನೀವು ಬೆಟ್ಟ ಕಾಡುಗಳನ್ನು ಇಳಿದು ಬನ್ನಿ. ಬೆಟ್ಟಗಳು ಹಾಗೇ ಇರಲಿ ಬನ್ನಿ. ಕಾಡುಗಳು ಹಾಗೇ ಇರಲಿ ಬನ್ನಿ. ಇಂದು ರಾತ್ರಿಯೇ ನೂರು ಯೋಜನ ಸೇತುವೆಯ ದೂರವನ್ನು ದಾಟಲು ಸೇನೆ ಒಟ್ಟುಗೂಡಿದೆ. ಬನ್ನಿ, ಓ ಬನ್ನಿ, ಬೇಗನೆ ಬನ್ನಿ.'

ಮೇರುವು ಕಿತ್ತ ಬಂಡೆಯನ್ನು ಅಲ್ಲಿಯೇ ಮತ್ತೆ ಒತ್ತಿ ಜಡಿದನು. ಕಾಡು ಕೋಣದ ಹಿಂಡು ನುಗ್ಗು ನುರಿಯಾಗುವಂತೆ ತುಳಿದು ಹೋಗುವ ರೀತಿ ಧಾವಿಸಿದನು. ಅವನ ಹೆಜ್ಜೆಯ ಘಾತಕ್ಕೆ ಗಿರಿಯ ಏರಿಯು ಕುಸಿದು ಆಳವಾದ ಕಂದರ ಉಂಟಾಗುತ್ತಿರಲು ಗುಡುಗುಡನೆ ನಡೆದನು. ಸೈನ್ಯವನ್ನು ಕೂಡಿಕೊಂಡು ರಾಕ್ಷಸ ದುರ್ಗಕ್ಕೆ ಲಗ್ಗೆ ಹಾಕುವ ಬಯಕೆಯಿಂದ ತೇರು ಉರುಳುವಂತೆ ನುಗ್ಗಿದನು. ಹಾಗೆ ಬರುತ್ತಿರಲು ಅಲ್ಲಲ್ಲಿ ಹಾದಿಯಲ್ಲಿ ಹೊತ್ತ ಬಂಡೆಯನ್ನು ಎಸೆಯುವವರನ್ನು, ಬೇರನ್ನು ಅರ್ಧಕಿತ್ತ ಮರವನ್ನು ಹಾಗೆಯೇ ಬಿಟ್ಟು ಬರುತ್ತಿರುವವರನ್ನು ನೋಡಿದನು.

ದೊಡ್ಡಕುಕ್ಕೆಯ ಮಣ್ಣನ್ನು ಹೆಗಲಿನಿಂದ ಗುಪ್ಪೆ ಗುಪ್ಪೆಯಾಗಿ ಹಾಕಿ ಮಣ್ಣನ್ನು ಒಟ್ಟಿ, ಹೆಜ್ಜೆ ಹೆಜ್ಜೆಗೆ ಸಾಲಾಗಿ ಓಡುತ್ತಿದ್ದವರನ್ನು ನೋಡಿದನು. ಶುಭದ ವಾರ್ತೆಯನ್ನು ಒಬ್ಬರು ಇನ್ನೊಬ್ಬರಿಗೆ ಕೊರಳೆತ್ತಿ, ಕೈ ಬೀಸಿ ಸಾರಿ ಹೇಳುತ್ತ, ದಾರಿ ಕಿಕ್ಕಿರಿದು ಮುನ್ನಡೆಯುವ ಆತುರದಿಂದ ನಾನು ತಾನೆಂದು ಹೋಗುತ್ತಿರುವವರನ್ನು ಕಂಡನು!

ರಾತ್ರಿಯ ಮುಡಿಗೆ ನಕ್ಷತ್ರಗಳು ಮರಳಿದವು. ಸಮುದ್ರದ ಮೇಲೆ ಮಬ್ಬುಚಂದ್ರನ ಮಂಜುಬೆಳದಿಂಗಳು ಹಬ್ಬಿತು. ಸೇತುವೆಯನ್ನು ತುಂಬಿತುಳುಕಿತು ಎನ್ನುವಂತೆ ಕಪಿಸೈನ್ಯದ ಪ್ರವಾಹ ಹರಿಯಿತು. ಅದು ಲಂಕಾ ವರ್ಷಲಕ್ಷ್ಮಿಯನ್ನು ಪಾಪದ ಉರಿಯಿಂದ ಕಾಪಾಡಲು ಸಮುದ್ರ ದೇವೇಂದ್ರನು ಕಳುಹಿಸಿದ ಅಕ್ಷೌಹಿಣಿ ಮೋಡಗಳ ಅಸಂಖ್ಯದಳದಂತಿತ್ತು.

ಹಾಗೆ ರಾತ್ರಿಯೆಲ್ಲ ಮಹೇಂದ್ರಪರ್ವತವನ್ನು ಬಿಟ್ಟು ಹೊರಟ ವಾನರರ ಸೇನೆಯ ಕೋಲಾಹಲವು ಸಾಗರಸೀಮೆಯನ್ನು ದಾಟಿತು. ಲಂಕೆಯ ಸುವೇಲಾಪರ್ವತದ ನಿದ್ರೆಯನ್ನು ಒದ್ದು, ಕಡೆದು ಎಬ್ಬಿಸಿತು. ಆ ಜಲ ಸಸ್ಯ ಸುಂದರ ಪರ್ವತದ ತಪ್ಪಲಿನ ಪ್ರದೇಶದಲ್ಲಿ ಶಿಖರವನ್ನು ಹೂಡಿತು.

❑



~~~~~~~~~~~~~~~~~~~~~~~ ಸಂಚಿಕೆ – ೧೦ ~~~~~~~~~~~~~~~~~~~~~~~

ಶುಕಂ ಸಾರಣಂವೆರಸಿ

ಶ್ಯೇನ ರಚನಾಕೃತಿಯ ವಾನರ ಮಹಾನೀಕಿನಿ.

ವೇಲಾದ್ರಿ ಪರ್ವತದ ತಪ್ಪಲಿನಲ್ಲಿ ರಾಮಚಂದ್ರನ ಕಪಿಸೈನ್ಯ ಬೀಡುಬಿಟ್ಟಿತು. ಅದನ್ನು ತಿಳಿದ ಸತೀ ಚೋರ ರಾವಣನು ಪ್ರತೀಕಾರದಿಂದ ಹುಬ್ಬು ಗಂಟಿಕ್ಕಿದನು. ಅವನ ದುರ್ಮಂತ್ರದ ನೆಲೆಯಿಂದ ಗುಪ್ತಚಾರರಲ್ಲಿ ಅಗ್ರಗಣ್ಯನಾದ ಶುಕನು ಸಾರಣನೊಡಗೂಡಿ ಹೊರಟನು. ಶುಕನು ತೆಳ್ಳನೆಯ ದೇಹದ ಉತ್ತಮಸ್ಮರಣೆಯ ಗಿಣಿಮೂಗಿನವನಾಗಿದ್ದನು. ಶುಕನ ಮುಖಸ್ತುತಿಯೊ ಅಥವಾ ಉತ್ಪ್ರೇಕ್ಷೆಯೊ ಎನ್ನುವಂತೆ, ಕಾವ್ಯಕ್ಕೆ ಸೇವೆ ಸಲ್ಲಿಸುವ ಅಲಂಕಾರದಂತೆ ಸಾರಣನು ಅವನನ್ನು ಅನುಸರಿಸಿ ನಡೆದನು. ಲಂಕೇಶ್ವರನ
~~~~~~~~~~~~~~~~~~~~~~~

ಗುಪ್ತಚಾರರಲ್ಲಿ ಪ್ರಮುಖರೂ ಮತ್ತು ಉಗ್ರರೂ ಆದ ಅವರಿಬ್ಬರು ತ್ರಿಕೂಟಾದ್ರಿಯನ್ನು ಬಿಟ್ಟು ಗಾವುದ ಗಾವುದ ದೂರ ಸಾಗಿದರು. ಸುವೇಲಾದ್ರಿ ಶಿಖರ ರಂಗವನ್ನು ಹೊಕ್ಕರು. ಎತ್ತರಪ್ರದೇಶದಲ್ಲಿ ನಿಂತರು. ರಾಮನ ಕಪಿಸೈನ್ಯವು ಗರುಡವ್ಯೂಹದಿಂದ ಬೀಡು ಬಿಟ್ಟಿರುವುದನ್ನು, ಅದು ಶೇಷನ ಶತಶತ ಹೆಡೆಗಳಂತೆ ವಿಸ್ತರಣಗೊಂಡಿರುವುದನ್ನು ನೋಡಿದರು.

ಸಮುದ್ರ ದಡದ ಗಿರಿಶ್ರೇಣಿಯ ಹೊಳೆಯುವ ತಪ್ಪಲಿನ ವಿಶಾಲ ಸ್ಥಳದಲ್ಲಿ ವಾನರ ಮಹಾಸೈನ್ಯ ತುಂಬಿ ಹರಿದಿತ್ತು. ಗರುಡ ವ್ಯೂಹದ ಕೊಕ್ಕಿನ ಪ್ರದೇಶದಲ್ಲಿ ವಜ್ರ ಕಠಿನ ಗಂಧ ಮಾದನನ ಮಹಾ ಸೇನೆಯಿತ್ತು. ಖಡ್ಗಮೃಗದ ಚೂಪಾದ ಕೋರೆ ಕೊಂಬಿನ ರೀತಿ ಭಯಾನಕವಾಗಿದ್ದ ಸೇನೆಯ ಶಿರಶ್ಶಿಖರದಲ್ಲಿ ಹೆಮ್ಮೆಯ ಪರ್ವತ ಶೃಂಗದಂತಹ ಭಯಾನಕ ಗಂಧಮಾದನನು ನಿಂತಿದ್ದನು. ಆ ಸೇನಾವ್ಯೂಹದ ಮಧ್ಯದಲ್ಲಿ ವಾಲಿಯ ಮಗನು ಸರ್ವಸೇನಾನಿ ನೀಲನ ಜೊತೆಗೂಡಿ ಹಗೆಯೆದೆಯ ಹೆದರಿಕೆಯಾಗಿ ಮೆರೆಯುತ್ತಿದ್ದನು. ಬಲರೆಕ್ಕೆಯ ಬಳಿ ಸೇನಾ ಸಾಗರದ ನಡುವಿನ ದ್ವೀಪಬೆಟ್ಟ ಎಂಬಂತೆ ಅಜೇಯ ವಾನರಶ್ರೇಷ್ಠ ವೃಷಭನಿದ್ದನು. ಎಡಪಾರ್ಶ್ವದಲ್ಲಿ ರಕ್ಷಣೆಯ ಕಾರ್ಯಾಧ್ಯಕ್ಷನಾದ ಭವ್ಯ ಶರೀರಿ, ವಯೋಗೌರವಾನ್ವಿತ ಜಾಂಬವನು ವೇಗದರ್ಶಿ ಸುಷೇಣನ ಜೊತೆಗೂಡಿ ಇದ್ದನು. ಆ ಸೈನ್ಯ ರಚನೆಯ ಮಧ್ಯಭಾಗದಲ್ಲಿ ಕಪಿರಾಜಸುಗ್ರೀವನು, ರಾಮ ಲಕ್ಷ್ಮಣ ಸಹಿತ ಆಂಜನೇಯನ ಭೀಮಬಾಹುವಿನ ದೈತ್ಯ ಭಯಂಕರ ಸುರಕ್ಷತೆಯಲ್ಲಿದ್ದನು.

ದೇವಶಿಲ್ಪಿಯ ಮಗ ನಳನು ಇತರ ವಾನರ ಮುಖ್ಯರ ನೆರವಿನೊಡನೆ ಸಮಸ್ತ ಸೈನ್ಯವನ್ನು ನೋಡಿಕೊಳ್ಳುತ್ತಿದ್ದನು. ಅವನು ತನ್ನ ತಂದೆಯ ವರದ ಮಹಿಮೆಯಿಂದ ಬೃಹದ್ರೂಪಿಯಾಗಿ ಮತ್ತು ಮಾನಸ ಶಕ್ತಿಯ ವೈಭವಕ್ಕೇರಿ ವಾನರ ಧ್ವಜಮಹೋತ್ಸಾಹದ ಕೇಂದ್ರವಾಗಿದ್ದನು!

ಬೇಟೆನಾಯ್ಗಳಂ ವಂಚಿಸಲೆಳಪ ವಂಚನಾ ಚತುರ ವೃಕಂಬೋಲ್ ಶುಕಂ

ರಾವಣನ ಇಬ್ಬರು ಗೂಢಚಾರರು ಹಗಲು ಮುಗಿಯುವ ತನಕ ಸುವೇಲಾದ್ರಿಯ ಶಿಖರದಲ್ಲಿ ಕಾದು ಕುಳಿತರು. ಇರುಳಿನ ಕಪ್ಪು ಇಳಿಯುತ್ತಿದ್ದಂತೆ ತಾವೂ ಇಳಿದರು. ಶಿಖರಮುಖಿಯಾದರು. ಬೀಡಿನ ಹೊರವಲಯದಲ್ಲಿ ಕದ್ದು ಹೊಂಚಿಹಾಕುತ್ತ ಓಡಾಡುತ್ತ ಕಳ್ಳಗಿಂಡಿಯನ್ನು ಹುಡುಕಿದರು: ಬಲಿಷ್ಠವಾದ ಕಾವಲಿನ ಬೇಲಿಯಲ್ಲಿ ಒಂದು ನುಸಿ ನುಗ್ಗಲು ಎಡೆಯಿರದಿದ್ದುದನ್ನು ನೋಡಿದರು. ಕುಟಿಲ ಉಪಾಯವೊಂದನ್ನು ಅವರು ಆಲೋಚಿಸಿದರು.

ಶುಕನು ರಾಕ್ಷಸ ವೇಷದಲ್ಲಿ ಪಾಳೆಯದ ಕಡೆಗೆ ಓಡಿದನು. ವಾನರ ವೇಷಧಾರಿಯಾದ ಸಾರಣನು 'ರಾಕ್ಷಸ! ಬೇಹುಗಾರ! ಹಿಡಿಯಿರಿ! ಹಿಡಿಯಿರಿ!!' ಎನ್ನುತ್ತ ಅವನ ಹಿಂದೆ ಓಡಿದನು. ತಕ್ಷಣ ಕಾವಲು ಪಡೆಯವರ ಕೊರಳ ಕೂಗುಗಳು ಎದ್ದವು. ಆ ಸದ್ದುಗಳನ್ನು

ಮೀರಿಸಿ ಕೈಯ ಕಬ್ಬಿಣದ ಆಯುಧಗಳು ಖಣ ಖಣತ್ಕಾರಗೊಂಡವು. ಆ ಲೋಹದ ಶಬ್ದವನ್ನು ನುಂಗಿ ನೊಣೆದ ಸೈನ್ಯದ ಓಟ ರಣತುಮುಲ ಕೋಲಾಹಲವನ್ನುಂಟು ಮಾಡಿತು.

ಬೇಟೆನಾಯಿಗಳನ್ನು ವಂಚಿಸುವ ವಂಚನಾ ಚತುರ ತೋಳನರೀತಿ ಶುಕನು–ಹಾವು ಸರಿದಂತೆ ಚಮತ್ಕಾರದಿಂದ ಆಕ್ರಮಿಸುತ್ತ ಓಡಾಡಿ ಪಾಳೆಯದವರಿಗೆ ತೊಂದರೆಯನ್ನುಂಟು ಮಾಡಿದನು. ಅವನು ಬೀಡಿನ ಹೊರವಲಯದ ಅಂಚಿನ ಉದ್ದಕ್ಕೂ ಗದ್ದಲ ಗಲಿಬಿಲಿಯ ಜಟಿಲ ಜಾಲಭ್ರಮೆಯನ್ನು ಬೀಸಿದನು. ಎಲ್ಲ ವಾನರರ ದೃಷ್ಟಿಯು ರಾಕ್ಷಸ ವೇಷದಲ್ಲಿ ಓಡಾಡುತ್ತಿದ್ದವನನ್ನು ಬೆಂಬತ್ತಿತು. ಆ ಜನಜಂಗುಳಿಯಲ್ಲಿ ಒಂದಾಗಿದ್ದ ವಾನರಾಕೃತಿಯ ಸಾರಣನು ಸಮಯ ನೋಡಿ ಬೀಡಿನೊಳಕ್ಕೆ ನುಗ್ಗಿ ಪಕ್ಕನೆ ಮರೆಯಾದನು.

ಸಾರಣನ ಯೋಜನೆ ಸಫಲವಾದುದನ್ನು ತಿಳಿದ ಶುಕನು ತನ್ನನ್ನು ಎಂಟು ದಿಕ್ಕುಗಳಿಂದ ಸಾಲು ಸಾಲು ಪಂಜುಗಳು ಆವರಿಸುತ್ತಿರಲು ತನ್ನ ಕಾಲಿನ ವೇಗಕ್ಕೆ ಬಿರಿಯಿಕ್ಕಿದನು. ಕಾಲು ಸೋತವನಂತೆ ನಟಿಸುತ್ತ ತತ್ತರಿಸಿ, ತಿರುಗಿ ದೊಪ್ಪನೆ ನೆಲಕ್ಕುರುಳಿ ಕೈಕಾಲುಗಳನ್ನು ಅತ್ತಿತ್ತ ಒದರಿದನು. ಕಾವಲುಗಾರರು ಬಂದು ನೋಡಲು ಕೆಂಪಾದ ಬೆಳಕಿನಲ್ಲಿ ಹೆಣದ ರೀತಿ ನಿಮಿರಿ ಬಿದ್ದಿದ್ದ ಆಕೃತಿ ಕಂಡರು. ಬಡಿಗೆಯಿಂದ ಬಡಿಯುವವರನ್ನು ತಡೆದರು. ಆ ರಾಕ್ಷಸ ಶರೀರಧಾರಿಯನ್ನು ಕಾವಲು ಪಡೆಯ ನಾಯಕನಾದ ಗಂಧಮಾದನನು ಇದ್ದ ಶಿಬಿರಕ್ಕೆ ಹೊತ್ತು ಒಯ್ದರು. ಸೇನಾನಿ ಹೇಳಿದ ರೀತಿ ಶುಶ್ರೂಷೆ ಮಾಡಿದರು. ಆಗ ಕಪಟ ಶಿರೋಮಣಿ ಶುಕನು ಮೂರ್ಛೆಯಿಂದ ಎದ್ದವನಂತೆ ಕಣ್ಣು ಬಿಚ್ಚಿದನು. ತಬ್ಬಿಬ್ಬುಗೊಂಡ ಬಿಳಿಚು ನೋಟದಿಂದ ತನ್ನ ಸುತ್ತಲೂ ಇದ್ದವರನ್ನು ನೋಡಿದನು. ಆಗ ಗಂಧಮಾದನನು ಪ್ರಶ್ನಿಸಿದನು:

'ಯಾರೊ ನೀನು? ಲಂಕೆಯವರ ಕಡೆಯ ಗುಪ್ತಚಾರನೆ?'

'ಹತ್ತಿರದ ಹಳ್ಳಿಯ ರೈತ,'

'ಕತ್ತಲಲ್ಲಿ ನಿನಗೆ ಈ ಎಡೆಯಲ್ಲಿ ಏನು ಕೆಲಸ?'

'ಮೇವಿಗೋಗಿದ್ದ ಹಸುವು ಹಿಂತಿರುಗಲಿಲ್ಲ. ಅದನ್ನು ಹುಡುಕುತ್ತ ಕತ್ತಲಿನಲ್ಲಿ ಕಣ್ ತಪ್ಪಿ ಬಂದೆ. ನಿಮ್ಮಲ್ಲಿಯ ಓರ್ವ ಕಾವಲುಗಾರ ಹಿಡಿಯಿರಿ, ಹಿಡಿಯಿರಿ ಎಂದು ಅಟ್ಟಿಸಿಕೊಂಡು ಬಂದ.'

'ಅವನನ್ನು ಶೋಧಿಸಿ'

ಎಂದು ಸೇನಾನಿ ಹೇಳಲು, ಸೈನಿಕನೊಬ್ಬನು ಶುಕನ ಸರ್ವಸ್ವವನ್ನು ಶೋಧಿಸಿದನು. ತೆಗೆದ ಹಲವು ಪದಾರ್ಥಗಳಲ್ಲಿ ಸೊಂಟಕ್ಕೆ ಸಿಕ್ಕಿಸಿಕೊಂಡಿದ್ದ ಹಾವಿನ ರೂಪದ

ರತ್ನಖಚಿತವಾದ ಕಠಾರಿಯನ್ನು ಕಂಡ ಗಂಧಮಾದನನು ಹೀಗೆ ಪ್ರಶ್ನಿಸಿದನು.

'ಎಲವೊ, ಹೊಲದ ಗೆಯ್ಮೆಯವನಿಗೆ ಈ ಗುಪ್ತಾಯುಧವೇಕೆ? ಹೊಲವೊ ಅಥವಾ ಹೊಲೆಯ ಕೊಲೆಯೊ? ನಿನಗೆ ನಿನ್ನವರು ನೀಡಿರುವ ಕೆಲಸ ಏನೆಂದು ಹೇಳು.'

ತಕ್ಷಣ ಶುಕನು ತನ್ನನ್ನು ಶೋಧಿಸುತ್ತಿದ್ದ ಕಪಿದೂತನನ್ನು ದೂರ ತಳ್ಳಿದನು. ಶೋಧಿಸುವುದನ್ನು ತಡೆದನು. ಕೋಪೋದ್ರಿಕ್ತನಾದ ಅವನನ್ನು ಶೋಧಿಸಲು ಪಡೆಯ ನಾಯಕ ಆಜ್ಞಾಪಿಸಲು ಅಲ್ಲಿ ಮುಷ್ಟಿ ಯುದ್ಧವಾಯಿತು.

"ದೂತನಂ ಕೊಂದಪರೆ? ಸಾಲ್ಗು ಬಿಡಿಮಾತನಂ."

ಸುಗ್ರೀವ ಆಂಜನೇಯರೊಡನೆ ಲಕ್ಷ್ಮಣಸಹಿತನಾಗಿ ಮುಂದಿನ ಮಾರ್ಗವನ್ನು ಆಲೋಚಿಸುತ್ತಿದ್ದ ಸೀತಾಹೃದಯನಾಥನು ಶುಕನ ಕೋಲಾಹಲವನ್ನು ಕೇಳಿದನು.

'ರಾಮನೇ ರಕ್ಷಿಸು, ದೂತನಾದ ನನ್ನನ್ನು ಅಯ್ಯೊ ಕೊಲ್ಲುತ್ತಿರುವರು.' ಎಂಬ ಕೂಗುಕೇಳಿ ಏಳುತ್ತಿದ್ದ ರಾಮನನ್ನು, ಸುಗ್ರೀವನು ತಡೆದು ಸಂತೈಸಿದನು. ಹನುಮನಕಡೆಗೆ ನೋಡಿದನು. ಅವನು ಹೋಗಿ ಸದೆ ಬಡಿಯುತ್ತಿದ್ದವರನ್ನು ತಡೆದು,

'ದೂತನನ್ನು ಕೊಲ್ಲುತ್ತಾರೆಯೆ? ಸಾಕು ಅವನನ್ನು ಬಿಡಿ.' ಎಂದು ಹೇಳಿದನು. ಆಗ ಗಂಧಮಾದನನು 'ಆಂಜನೇಯನೆ, ಇವನು ಸುಳ್ಳು ಹೇಳುತ್ತಿದ್ದಾನೆ. ಇವನು ದೂತನಲ್ಲ. ಕೊಲ್ಲಲು ಬಂದಿರುವ ಖೂಳ. ಹಗೆಗಳು ಒಳಸಂಚಿನಿಂದ ಕೊಲೆಗೈಯ್ಯಲು ಕಳುಹಿಸಿರುವ ಬೇಹುಗಾರ. ಇವನು ಕಳ್ಳ. ತಕ್ಕುದನ್ನೆ ಮಾಡಿದ್ದೇನೆ. ಕಠಾರಿಯನ್ನು ನೋಡಿ! ಹಳ್ಳಿಯ ಒಕ್ಕಲಿಗನೆಂದು ಹೇಳಿದವನಲ್ಲಿ ಮುದುಡಿದ ಸಂಕೇತ ಲಿಪಿಯ ಓಲೆಯಿದೆ.'

'ರಘುರಾಮನು ನನ್ನನ್ನು ಕಳುಹಿಸಿದ್ದಾನೆ ನಿಜವನ್ನು ತಿಳಿಯೋಣ. ಇವನನ್ನು ನನ್ನೊಡನೆ ವಾನರೇಂದ್ರನ ಶಿಬಿರಕ್ಕೆ ಕಳುಹಿಸಿ.'

ಅದನ್ನು ಕೇಳಿ ಶುಕನು ಅತಿ ಆನಂದಗೊಂಡನು ತನ್ನ ಉಪಾಯವು ಸಫಲವಾದುದಕ್ಕೆ ಅಂಜನಾಪುತ್ರನಿಗೆ ಮನಸ್ಸಿನಲ್ಲಿಯೇ ವಂದಿಸಿದನು. ದೂರ್ತನಿಗೆ ಅತಿವಿನಯ ಸಹಜವೆಂಬಂತೆ ಅವನನ್ನು ಹಿಂಬಾಲಿಸಿದನು.

ಸತ್ತ್ವದೆಡೆ ಸತ್ಯಮೇ ಪರಮ ಸತ್ಫಲವನಿತ್ತಪುದು.

ರಘುವೀರನನ್ನು, ಗಡ್ಡಮೀಸೆಗಳಿಂದ ಹಿರಿತನದಮುಖ ಹೊಂದಿದವನನ್ನು, ಸಿಂಹಗಂಭೀರನನ್ನು, ಶೃಂಗಾರದ ಸಖಿಯ ಸಂಕಟದಲ್ಲಿ ತಪಸ್ತೇಜನಾದವನನ್ನು, ಪ್ರದೀಪಿತ ಕಣ್ಣುಗಳ ಚುರುಕಾದವನನ್ನು ಶುಕನು ನೋಡಿದನು. ಜಾನಕೀ ಜೀವನನನ್ನು ನೋಡಿದ್ದೆ ತಡ ಅವನು ತತ್ಕಾಲಕ್ಕೆ ಇಚ್ಛಾರಹಿತನಾದನು. ಅವನ ಸ್ವಾಭಾವಿಕ ವಕ್ರಗುಣ

ಮರೆಯಾಯಿತು. ಅವನಲ್ಲಿ ಮುಗ್ಧಸರಳತೆ ಮೂಡಿ, ಹಿಂದೆಂದೂಕಾಣದ ಪ್ರಮಾಣಿಕತೆ ಉಂಟಾಯಿತು. ರಾವಣನ ಸಮ್ಮುಖದಲ್ಲಿ ಅನುಭವಿಸುವ ಗೌರವಕ್ಕಿಂತ ಮಿಗಿಲಾದ ಗೌರವಭಾವವನ್ನು ಅನುಭವಿಸಿದನು. ಸತ್ಯಸಾನ್ನಿಧ್ಯದಲ್ಲಿ ತನ್ನ ಮೊದಲಿನ ಗೂಢಚರ್ಯಮಾರ್ಗವನ್ನು ಮರೆತನು.

ರಾವಣನವೈರಿಯ ರಾಜವಿಗ್ರಹಕ್ಕೆ ಮಣಿದು ಕೈಮುಗಿದನು. ದಶಗ್ರೀವ ಗುಪ್ತಚಾರನಾದ ಅವನು ಸತ್ತ್ವದ ಎಡೆಯಲ್ಲಿ ಸತ್ಯವೇ ಪರಮ ಸತ್ಫಲವನ್ನು ನೀಡುವುದು ಎಂಬ ತಾನು ಪಡೆದ ಹಿಂದಿನ ಬೋಧದಿಂದ ಸತ್ಯ ಧೈರ್ಯವನ್ನು ಧರಿಸಿದನು.

ಅವನನ್ನು ಪ್ರಶ್ನಿಸುತ್ತಿದ್ದ ಸುಗ್ರೀವನನ್ನು ತಿರಸ್ಕರಿಸುವವನಂತೆ, ಮಿಥಿಳಾತ್ಮಜೆಯ ಮನಃಪ್ರಿಯನ ಮುಖದಲ್ಲಿ ತನ್ನ ದೃಷ್ಟಿ ನೆಟ್ಟನು. ಅವನನ್ನೆ ನೋಡುತ್ತ, ಇರುವುದೆಲ್ಲವನ್ನು ಹೀಗೆ ಹೇಳಿದನು:

'ನಿಜ, ನಾನು ಲಂಕೇಶ್ವರನ ಗೂಢಚಾರ. ಹೆಸರು ಶುಕ. ನಿಮ್ಮ ಸೈನ್ಯವನ್ನು, ನಿಮ್ಮ ಕಾರ್ಯವೈಖರಿಯನ್ನು ಮತ್ತು ಶಕ್ತಿಸಾಮರ್ಥ್ಯವನ್ನು ತಿಳಿಯಲು ಬಂದಿದ್ದೇನೆ.'

'ನೇರವಾಗಿ ಬಾರದೆ, ಈ ರೀತಿ ಸುತ್ತು ಬಳಸಿನಿಂದ ಏಕೆಬಂದೆ?'

'ವೈರಿಯನ್ನು ತಿಳಿಯುವ ಮೊದಲೇ ನೇರಮಾರ್ಗ ಸರಿಯಾದುದಲ್ಲ. ವೈರಿಯ ಬಲಕ್ಕಿಂತಲೂ ಮಿಗಿಲಾಗಿ ಅವನ ಹೃದಯ ಪರಿಚಯ ಮಾಡಿಕೊಳ್ಳುವುದು ಗೂಢಚಾರನ ಮೊದಲ ಗುರಿ. ಶೀಲವನ್ನು ತಿಳಿಯದೆ ನೇರವಾಗಿ ವ್ಯವಹರಿಸಲು ಸಾವಕಾಶನಾದೆನು.

'ಹೆದರಿದೆಯೆ?'

'ಇಲ್ಲ, ಇಲ್ಲ. ಉದಾಸೀನ ಮಾಡಿದೆ.'

'ಗದ್ದಲವೆಬ್ಬಿಸಿ ನೀನು ಗೋಳಿಟ್ಟುದು ಉದಾಸೀನದ ಲಕ್ಷಣವೊ?' ಎಂದು ಸುಗ್ರೀವ ನಗೆಸೂಸಿ ಕೇಳಿದನು. ಅದಕ್ಕೆ ಕಿವುಡಾದಂತೆ ಸಾಹಸಿ ಬೇಹುಗಾರನು,

'ನಮ್ಮ ರೀತಿಯ ರಹಸ್ಯಗಳು ನಿಮ್ಮ ನಗೆಗೆ ಈಡಾಗುವುದೇ ಗೂಢಚರ್ಯದ ಜಯಲಾಂಛನ.'

ಎಂದು ಉತ್ತರಿಸಿದನು.

ಪಾಪದ ರಥಂ ಸ್ವಾರ್ಥಸಾಧನೆಗೆ ಕೆಲವೊರ್ಮೆ ಪಿಡಿದಪುದು ಪುಣ್ಯಪಥಮಂ!

ಶುಕನ ನಯಚಾತುರ್ಯವನ್ನು ಕಂಡ ರಾಮಚಂದ್ರನು ಸುಗ್ರೀವನಿಗೆ,

'ಇವನು ಅಲ್ಪನಲ್ಲ. ಸಾಮಾನ್ಯನೆಂದು ತಿಳಿದು ಮೋಸಹೋಗಬೇಡ. ನೇರವೆಂದು ಕಾಣುವ ಇವನ ಪ್ರಾಮಾಣಿಕತೆ ಸರ್ಪದಂತಹ ವಿಷಪೂರ್ಣವೂ, ಭಯಂಕರವೂ ಆದುದಲ್ಲವೆ? ಅವಕಾಶ ದೊರೆತಾಗ ತನ್ನ ನೇರತನ ಬಿಟ್ಟು ಮತ್ತೆ ವಕ್ರತೆಗೆ ಹೊರಳಿ

ತನ್ನ ಸಂಕಲ್ಪವನ್ನು ಸಾಧಿಸದೆ ಬಿಡುವುದೆ? ಪಾಪದ ರಥವು ಸ್ವಾರ್ಥ ಸಾಧನೆಗಾಗಿ ಕೆಲವೊಮ್ಮೆ ಪುಣ್ಯದಪಥವನ್ನು ಹಿಡಿಯುವುದು!'

ಎಂದು ಹೇಳಿ, ಆಲೋಚನೆಗೊಳಗಾದನು. ಅನಂತರ ದೃಢವಾದ ಆಜ್ಞೆಮಾಡಿದನು:

'ವಾನರೇಂದ್ರ, ಈ ರಾಕ್ಷಸೇಂದ್ರನ ದೂತನಿಗೆ ನಮ್ಮ ಸೇನಾಸಾಗರದ ವಿಸ್ತಾರವನ್ನು ಆಳವನ್ನು ತೋರಿಸು. ದಿಟದ ಕೆಚ್ಚಿರುವ ನಮಗೆ ಮುಚ್ಚುಮರೆಯಾವುದು? ಈತನು ದಶಾನನನಿಗೆ ಒದಗಲಿರುವ ದೆಸೆಯನ್ನು ತಿಳಿಸಲಿ!'

ತಕ್ಷಣ ಎಚ್ಚೆತ್ತ, ಶುಕನು ರಾಮ ಸಂಮೋಹನ ಶಕ್ತಿಯಿಂದ ಬಿಡುಗಡೆಗೊಳ್ಳುವಂತೆ ಎದೆಯುಬ್ಬಿಸಿ ಉಸಿರಾಡಿದನು. ಅನಂತರ ನಕ್ಕು ಹೇಳಿದನು:

'ನನ್ನ ಪ್ರಭುವನ್ನು ಕುರಿತು ಧಿಕ್ಕಾರದನುಡಿ ಹೇಳಬೇಡ! ನೀನು ನರೇಂದ್ರನಾಗಿದ್ದರೆ, ನನ್ನ ಪ್ರಭು ದಿಕ್ಪಾಲರಿಗೆ ಸಾರ್ವಭೌಮ! ನಿನ್ನ ಸೇನೆಯನ್ನು ನನಗೆ ತೋರಿಸಿ, ನಾನು ಅದನ್ನು ನನ್ನ ದೊರೆಗೆ ತಿಳಿಸುವ ಬಳಸು ಕಾರ್ಯದಲ್ಲಿ ಸುಮ್ಮನೆ ದಣಿಯಬೇಡ. ಆ ಚಿಕ್ಕಕೆಲಸವು ನನ್ನಿಂದ ನನ್ನ ಆಳುಗಳಿಗೆ ಮೀಸಲಾಗಿದೆ. ಅದು ಹಾಗಿರಲಿ, ನಿನ್ನ ಮೇಲಿನ ಕರುಣೆಯಿಂದ ನನ್ನಿಂದ ಈ ವಾಕ್ಯಗಳು ಹೊಮ್ಮುತ್ತಿವೆ. ನಿನ್ನನ್ನು ಒಲ್ಲದ ಸತಿಗಾಗಿ, ನಿನ್ನ ತಾಯಿಗೆ ಪುತ್ರನಿಧನ ವ್ಯಥೆಯನ್ನೇಕೆ ವೃಥಾ ತಂದೊಡ್ಡುವೆ? ಮಿಥಿಳಾತ್ಮಜೆಯ ಲಜ್ಜೆಯು ಲಂಕೇಶ್ವರನ ಸೊಗದ ಸಜ್ಜೆ ಆಗಿದೆ!'

ಹೀಗೆ ಮಾತು ಮುಂದುವರಿಯುವ ಮೊದಲೇ ಆಂಜನೇಯನ ಅಂಗೈ ಪ್ರಹಾರದಿಂದ ಅವನ ಮುಖ ಜಡವಾಯಿತು! ತತ್ತರಿಸಿ ಬೀಳುವವನನ್ನು ಲಕ್ಷ್ಮಣನು ಎತ್ತಿ ಹಿಡಿಯದಿದ್ದರೆ ಆ ಸೇವಕನು ಕಾಲ್ತುಳಿತಕ್ಕೆ ಸತ್ತೇ ಹೋಗುತ್ತಿದ್ದನೊ ಏನೊ?

ಸೀತೆಯ ಒಡೆಯನ ನೋಟದ ಅಂಕೆಯಿಂದ ಆಂಜನೇಯನು ತನ್ನ ಎದೆ ರೋಷದ ಕಾಡ್ಗಿಚ್ಚನ್ನು ಹಿಡಿದಿಟ್ಟುಕೊಂಡು ಹೇಳಿದನು:

'ವೈರಿ ಭಯಂಕರನೇ, ಸಾತ್ವಿಕ ವಿಧಾನವು ಇಲ್ಲಿ ಸಮ್ಮತವಲ್ಲ. ಈ ಲಂಕೆಯು ಅಮರ್ತ್ಯ ಭೂಮಿ. ಇದು ಮರ್ತ್ಯರ ರೀತಿಗೂ ನೀತಿಗೂ ಹೊರಗಾದುದು. ಇವರು ಕುಲದಿಂದ ಮಾತ್ರವಲ್ಲದೆ ಗುಣದಿಂದಲೂ ರಾಕ್ಷಸರು! ಈ ನಿಶಾಚರರು ಭಯಕ್ಕಲ್ಲದೆ ನಯಕ್ಕೆ ಸೋಲುವವರಲ್ಲ. ಲಂಕೆಯ ಪ್ರಮುಖ ಪುರುಷರಲ್ಲಿ ವಿಭೀಷಣನನ್ನು ಹೊರತು ಪಡಿಸಿ ಇನ್ನೋರ್ವ ಸತ್ತ್ವಪ್ರಧಾನನನ್ನು ನಾನು ಕಂಡಿಲ್ಲ ...'

ಇರ್ದನಂತರ್ ವೈರಿಯೊರ್ವನವನುಂ ನಿಮಗೆ ನೆರಮೀಯದಂತಾಯ್ತಲಾ?

ಬೇಹುಗಾರನು ತನಗೆ ಅಪಮಾನ ಮಾಡಿದ ಆಂಜನೇಯನಿಗೆ ಮುಖಭಂಗವನ್ನು ಮಾಡುವ ಉದ್ದೇಶದಿಂದ ಅವನ ನುಡಿಯ ನಡುವೆ ಬಾಯಿಹಾಕಿ ಹೀಗೆ ಹೇಳಿದ:

'ಇಂದು ನಿನ್ನ ಆ ವಿಭೀಷಣನು ಲಂಕಾ ಪ್ರಮುಖನಲ್ಲಯ್ಯ. ದ್ರೋಹ ಕಾರಣದಿಂದ ಅರಸನ ಆಕ್ರೋಶಕ್ಕೆ ಒಳಗಾಗಿ ನಗರ ಚ್ಯುತನಾಗಿದ್ದಾನೆ. ದೇಶಗೌರವ ಬಾಹಿರನಾಗಿದ್ದಾನೆ! ಮಗಳು ಮತ್ತು ಪತ್ನಿಯನ್ನು ತೊರೆದು ಪರದೇಶಿಯಾಗಿ ಹೊರ ಹೋಗಿದ್ದಾನೆ. ಆ ದ್ರೋಹಿಯು ಪ್ರತಿಯಂತೆ ಹೊತ್ತು ಕಳೆಯುತ್ತಿದ್ದಾನೆ. ಅವನು ದಿಕ್ಕೆಟ್ಟು ವೇಲಾದ್ರಿ ಪರ್ವತಗಳ ಸಾಲುಗಳಲ್ಲಿ ಕಾಡಿನಮಧ್ಯೆ ಒಬ್ಬಂಟಿಯಾಗಿದ್ದಾನೆ. ಅವನ ಕಡೆಗೆ ಕಾಗೆಯೂ ತಿರುಗಿ ನೋಡುತ್ತಿಲ್ಲ! ಇದ್ದ ಒಬ್ಬ ಅಂತರ್‌ವೈರಿಯು ನಿಮಗೆ ಸಹಾಯ ಮಾಡಲಾಗದಂತೆ ಆಯಿತಲ್ಲ.'

ಶುಕನ ಆ ಮಾತುಗಳನ್ನು ಕೇಳಿ ಆಂಜನೇಯನ ಕಣ್ಣಿನಲ್ಲಿ ಸಂತೋಷ ಉಕ್ಕಿತು. ಸುವಾರ್ತೆಯನ್ನು ತರುವ ಸನ್ಮಿತ್ರನನ್ನು ತಬ್ಬಿಕೊಳ್ಳುವಂತೆ ಅವನನ್ನು ಅಪ್ಪಿಕೊಂಡನು. ನೋಡುವವರು ಆಶ್ಚರ್ಯ ಚಕಿತರಾಗುವಂತೆ ಮುದ್ದಾಡಿದನು.

'ಶುಕ ನೀನು ನನಗೆ ಮಿತ್ರ! ವಿಭೀಷಣನಿರುವ ನೆಲೆಯನ್ನು ತಿಳಿಸಿದರೆ ನಾನು ಚಿರಋಣಿಯಾಗಿರುತ್ತೇನೆ! ಎಲ್ಲಿರುವನು? ಏಕೆ ಹೋದನು? ಯಾರ ಮೈತ್ರಿಯನ್ನು ಮಾಡಿ ಲಂಕಾದ್ರೋಹಿಯಾದನು?'

ಮೋಸ ವಿದ್ಯಾಗುರುವು, ತ್ವರಿತ ಆಲೋಚನಾ ಮನದವನು ಆದ ಶುಕನು ಹಾಸ್ಯ ಮಾಡುವವನಂತೆ, ಕುಟಿಲ ಮಂದಹಾಸದಿಂದ ಆಂಜನೇಯನ ಮುಖವನ್ನು ನೋಡುತ್ತ ಹೇಳಿದನು:

'ತಮಾಷೆಗೆಂದು ಸುಳ್ಳು ಹೇಳಿದೆನು. ನೀನು ಬೆಪ್ಪನರೀತಿ ತಪ್ಪನ್ನು ಅಪ್ಪಿಕೊಂಡು ಮೋಸಹೋದೆ!'

ಆಂಜನೇಯನ ಮುಖ ಕರ್ಕಶವಾಯಿತು. ತಕ್ಷಣ ಅವನನ್ನು ತಳ್ಳಿ, ತನ್ನ ಪೀಠದ ಕಡೆಗೆ ಸರಿದನು. ಸುಗ್ರೀವನನ್ನು ಇಂಗಿತದಿಂದ ನೋಡಿದನು. ವಾನರೇಂದ್ರನು ಬಳಿಯಲ್ಲಿದ್ದ ವಾನರನಿಗೆ ಹೀಗೆ ಅಪ್ಪಣೆ ಮಾಡಿದನು:

'ಬೇಗನೆ ಹೋಗಿ ಶರಗುಲ್ಮನಿಗೆ ಇವನನ್ನು ಹಿಂಡಿ ನಿಜವನ್ನು ತಿಳಿದು, ಜೀವಸಹಿತ ಬಿಡಬೇಕು ಎಂಬುದು ನಮ್ಮ ಇಚ್ಛೆ ಎಂದು ತಿಳಿಸು.'

ಒಡನೆಯೆ ಭಯಂಕರ ವ್ಯಾಘ್ರಉಗ್ರರೂ, ನರಕಶಿಕ್ಷಣ ಪ್ರವೀಣರೂ ಆದ ಶರಗುಲ್ಮನ ಕಿಂಕರರು ಬಂದರು. ರಾಹುಬಾಹುಗಳಿಂದ ಹಿಡಿಯಲು ಚಂದ್ರನು ಮರೆಯಾಗುವಂತೆ ಶುಕನು ಅವರ ಹಿರಿದಾದ ನೆರಳುಗಳ ನಡುವೆ ಹುದುಗಿ ಹೋದನು. ವಂಚನೆ ಮರೆಯಾದಂತೆ ಮರೆಯಾದನು!

❑



~~~~~~~~~~~~~~~~~~~~~~ ಸಂಚಿಕೆ – ೧೧ ~~~~~~~~~~~~~~~~~~~~~~

ಸಫಲಮಾಯ್ತಾ ರಾಯಭಾರಂ

ಪರ್ವತದ ಇಳುಕಲಿನ ಮರಗಿಡಗಳು ಒತ್ತಾಗಿದ್ದ, ಗದ್ಗದಿಸಿ ದುಮುಕುತ್ತಿದ್ದ ಬೆಟ್ಟದ ಹೊಳೆಯ ತೀರದಲ್ಲಿ ಒಂದು ಪರ್ಣಶಾಲೆ ಇತ್ತು. ಅದರಲ್ಲಿ ವಿಭೀಷಣನು ತನ್ನ ಮಗಳು ಅನಲೆ ಕಳುಹಿಸಿದ್ದ ಪತ್ರವನ್ನು ಓದುತ್ತಿದ್ದನು. ಬಾಗಿಲು ಸ್ವಲ್ಪ ತೆರೆಯಲು ಗಾಳಿಯ ಸಂಚರಣದಿಂದ ಹಣತೆಯ ಸೊಡರು ಕುಣಿದು, ಮುಖವನ್ನು ಎತ್ತಿದ ಅವನ ಬೃಹತ್ತಾದ ನೆರಳನ್ನು ಕುಣಿಸಿತು. ಗರ್ಜಿಸುತ್ತ ಉರುಳುತ್ತಿದ್ದ ಜಲಪಾತದ ದನಿಯು ಒತ್ತಾಗಿ ಸೇರಿದ್ದ ಅಂಧಕಾರವನ್ನು ಕಡೆಯುವಂತೆ ಉಕ್ಕಿ ಬಂದಿತು. ಹಣೆ ಸುಕ್ಕಾಗಿಸಿ ನೋಡುತ್ತಿರಲು ಬಾಗಿಲಿನಲ್ಲಿ ಆಳು ಕಂಡನು.
~~~~~~~~~~~~~~~~~~~~~~

ವಿಭೀಷಣನು ಕಣ್ಣಿನಿಂದಲೇ ಪ್ರಶ್ನಿಸಲು, ಅವನು ನಮಸ್ಕರಿಸಿ ಅಪರಿಚಿತರು ಬಂದಿರುವುದನ್ನು ತಿಳಿಸಿದನು. ಕುತೂಹಲ ಚಿತ್ತದಿಂದ ನೋಡುತ್ತಿರಲು, ಇಬ್ಬರು ಧೀರಗಮನದ ವಿದೇಶವೇಷದ ಕಪಿಧ್ವಜರು ದೊಂದಿಯ ಬೆಳಕನ್ನು ಇರುಳಿನ ವಶಕ್ಕೆ ಒಪ್ಪಿಸಿ, ತರಗನ್ನು ದಾಟುತ್ತ ಬಂದರು. ಕೈ ಮುಗಿದರು. ಅವರಿಗೆ ವಿನಯದಿಂದ ಪ್ರತಿ ನಮಸ್ಕಾರ ಮಾಡಿದ ವಿಭೀಷಣನು ಆಸನಗಳನ್ನು ತೋರಿಸಿದನು. ಅವರು ಅದರಲ್ಲಿ ಕುಳಿತು ಹರ್ಷದ ಎಳನಗೆ ಬೀರಿ ರಾಕ್ಷಸ ಕುಲೋತ್ತಮನನ್ನು ನೋಡಿದರು. ಅವನ ಮುಖದ ಸಾತ್ತ್ವಿಕತೇಜಸ್ಸು ಗೌರವಾರ್ಹ ಗಾಂಭೀರ್ಯಕ್ಕೆ ಬೆರಗಾದರು. ವಿಭೀಷಣನು ಅನಲೆ ಬರೆದ ಓಲೆಯಿಂದ ರಾಜಕೀಯ ಸ್ಥಿತಿಯನ್ನು ಆಮೂಲಾಗ್ರವಾಗಿ ತಿಳಿದಿದ್ದನು. ಬಂದವರ ನಡೆಯಿಂದಲೇ ಅವರ ಹಿರಿಮೆಯನ್ನು ಗ್ರಹಿಸಿ ಹೀಗೆ ಹೇಳಿದನು:

'ಮಾನ್ಯರ ಆಗಮನದಿಂದ ನನ್ನ ಪರ್ಣಕುಟಿ ಧನ್ಯವಾಯಿತು!'

'ಸನ್ಮಾನ್ಯರು ಇರುವುದರಿಂದ ಈಗಾಗಲೇ ಈ ಧರ್ಮಸ್ಥಳ ಧನ್ಯವಾಗಿದೆ. ಇಲ್ಲಿಗೆ ಪುಣ್ಯಕಾರ್ಯಕ್ಕೆ ಪುಣ್ಯ ಪಕ್ಷದ ಸಹಾಯವನ್ನುಕೋರಿ ಯಾತ್ರೆಬಂದಿದ್ದೇವೆ. ಮಹಾಸತ್ತ್ವನೆ, ನಿನ್ನ ನುಡಿಯ ಸತ್ಯ ನಮಗೆ ಪ್ರಾಪ್ತವಾಗುತ್ತದೆ.' ವಾನರ ಕವಿಯ ವಾಗ್‌ಧ್ವನಿಯ ಮೈತ್ರಿಗೆ ರಾಕ್ಷಸಸಾಗರಸಮನಾದ ವಿಭೀಷಣನು ಆಹ್ಲಾದಗೊಂಡನು. ಸುಪ್ರಸನ್ನನಾಗಿ ಮೈಂದನಿಗೆ,

'ನಿನ್ನ ಸೌಜನ್ಯವೆ, ನೀನು ತಂದಿರುವ ಕಾರ್ಯದ ಒಳಿತನ್ನು ಹೇಳುತ್ತಿದೆ. ನಿನ್ನ ಮನದ ಪುಣ್ಯವಿಚಾರಕ್ಕೆ ನಿನ್ನ ನಗೆಯ ಶುಭ್ರವಸ್ತ್ರವೇ ಸಾಕ್ಷಿಯಾಗಿದೆ. ನಿಮ್ಮವರು ನಮ್ಮ ಲಂಕೆಗೆ ವೈರಿಗಳಾಗಿದ್ದರೂ, ನಿನ್ನ ಮೇಲೆ ನನಗೆ ವೈರಭಾವ ಉಂಟಾಗುತ್ತಿಲ್ಲ.'

ಲಂಕೆಗಲ್ತಾಂ ವೈರಿಗಳ್; ಪಾಪಕ್ಕಧರ್ಮಕ್ಕೆ.

'ನಾವು ಪಾಪಕ್ಕೆ ಅಧರ್ಮಕ್ಕೆ ವೈರಿಗಳು, ಲಂಕೆಗೆ ಅಲ್ಲ.'

'ಸ್ವಹಿತಕ್ಕೆ ಪುಣ್ಯದ ಬಣ್ಣಬಳಿದು, ಧರ್ಮದ ಹೆಸರನ್ನಿಟ್ಟು, ತನ್ನ ಪಕ್ಷಕ್ಕೆ ಲೋಕದ ಅನುಕಂಪವನ್ನು ಪಡೆಯುವುದು. ಅನಂತರ ಸೈನ್ಯ ಸಂಗ್ರಹಿಸಿ ಶತ್ರುನಾಶವನ್ನು ಸಾಧಿಸುವುದು ರಾಜತಂತ್ರದ ಪದ್ಧತಿಯಲ್ಲವೆ? ವಾನರೋತ್ತಮನೆ ಎಲ್ಲರೂ ಹೇಳುವ ಪಲ್ಲವಿಯನ್ನೇ ನೀನು ಉಲಿಯುತ್ತಿರುವೆ!'

'ನಾನು ಮೈಂದ! ಇವನು ದ್ವಿವಿದ. ಸೇನಾಪತಿ ಸುಷೇಣನ ತಮ್ಮ ಮತ್ತು ನನ್ನ ಪರಮ ಗೆಳೆಯ. ಇವನು ಒಂದು ಅಕ್ಷೌಹಿಣಿ ಸೈನ್ಯವನ್ನು ಆಳುವ ಗೌರವಕ್ಕೊಳಗಾಗಿದ್ದಾನೆ. ಅನೇಕ ತಪ ಮಹದ್ಬಲಗಳಿಂದ ಕೂಡಿದ ಇವನಲ್ಲಿ ಅಲ್ಪತನವಿಲ್ಲ.

'ನಾವು ಸುಗ್ರೀವನ ಆಜ್ಞೆಯಿಂದ, ರಾಘವನ ಅಪೇಕ್ಷೆಯನ್ನು ನಿನಗೆ ತಿಳಿಸಲು ಬಂದೆವು. ದೈತ್ಯಶ್ರೇಷ್ಠನೆ, ನಿನ್ನ ಕೀರ್ತಿಯ ವಾರ್ತೆಗೆ ಪ್ರತಿಭಟಿಸುವಂತೆ ನಿನ್ನ ನಾಲಗೆ

ಮಾತಾಡುತ್ತಿದೆ. ನಿನ್ನೆಲ್ಲ ಕಥೆ ಹೇಳಿದ ಶುಕನು ಸುಳ್ಳು ಹೇಳಿದನೆ? ಅವನು ಶರಗುಲ್ಮನು ನೀಡಿದ ಉರಿವ ಶಿಕ್ಷೆಗೆ ತನ್ನ ಎದೆಯ ಕುಟಿಲತೆಯನ್ನು ಹೇಳಿದನೆ? ಅಥವಾ ದಶಾನನನು ನಮ್ಮನ್ನು ವಂಚಿಸಲೆಂದು ತೋರಿಕೆಯ ಅಂತಃಕಲಹವನ್ನು ಹೂಡಿದ್ದಾನೆಯೆ? ಶುಕನಂತೆಯೆ ನಿನ್ನನ್ನು ಬೇಹುಗಾರನನ್ನಾಗಿಸಿ ಲಂಕೆಯಿಂದ ಹೊರದೂಡಿದ್ದಾನೆಯೆ?..

'ಇಲ್ಲ, ಹಾಗಲ್ಲ! ನಿನ್ನ ನಯನದ ಸಾತ್ತ್ವಿಕ ಕಾಂತಿ, ಮುಖದ ರೀತಿ ಮತ್ತು ಧ್ವನಿಯ ಧೈರ್ಯವೆಲ್ಲವೂ ನನ್ನ ಊಹೆಯನ್ನು ನಿಂದಿಸುತ್ತಿವೆ. ವಿಭೀಷಣನೇ, ನನಗೆ ಮತ್ತು ದ್ವಿವಿದನಿಗೆ ಇಲ್ಲಿ, ಈ ಲಂಕೆಯಲ್ಲಿ ಯಾವ ಸ್ವಹಿತಾಸಕ್ತಿಯಿದೆ ಹೇಳು? ಕಪಿಧ್ವಜಕುಲಕ್ಕೆ ನೆಲದ ಆಸೆ, ರಾಜ್ಯ ರಚನೆಯ ಆಕಾಂಕ್ಷೆ, ಇತರರನ್ನು ಗೆದ್ದು ಅಧೀನದಲ್ಲಿಟ್ಟುಕೊಳ್ಳುವ ಬಯಕೆ ಇಂದು ಮತ್ತು ಎಂದೆಂದೂ ಇಲ್ಲ.

'ವಾನರೇಂದ್ರ ಸುಗ್ರೀವನು ಸೀತಾಮಾತೆಯ ಪತಿಗೆ ಸಹಾಯ ಮಾಡಿರುವುದು ಈ ನಿಮ್ಮ ಲಂಕೆಯನ್ನು ಗೆದ್ದು ಭೋಗಿಸಲು ಅಲ್ಲ. ನೀನು ಎಲ್ಲವನ್ನೂ ತಿಳಿದಿರುವೆ. ನೀನು ನಮ್ಮ ಸಲುವಾಗಿ ರಾವಣನ ಎದುರು ಹೇಳಿದುದಕ್ಕೂ ಹೆಚ್ಚಾಗಿ ನಾನೇನೂ ಹೇಳಲಾರೆನು. ಹೆಣ್ಣು ಜಾರಿಣಿಯಾದರೂ ಅವಳ ಇಚ್ಛೆಗೆ ವಿರುದ್ಧವಾಗಿ ಕದ್ದೊಯ್ದರೆ ಶಿಕ್ಷೆಗೆ ಅರ್ಹನಾಗುವನು. ಪತಿವ್ರತೆಯರಿಗೆ ಆರಾಧನಾ ಪ್ರತಿಮೆಯಂತೆ ಪೂಜ್ಯೆಯಾಗಿರುವ ರಘುಕುಲೋತ್ತಮನ ಪತ್ನಿಯನ್ನು ಕದ್ದೊಯ್ದ ನೀಚನಿಗೆ ವಿಧಿಯು ಅದೇನು ಬರೆದಿದೆಯೊ ಎನ್ನುವುದನ್ನು ಓದುವುದೇ ನಿನಗೂ ನನಗೂ ಸಾಧ್ಯವಾಗುವ ಕಾರ್ಯ.

'ವಿವೇಕನಿಧಿಯೇ, ಅದನ್ನು ತಿದ್ದಲು ಸಾಧ್ಯವೇ ಹೇಳು? ನೀನು ತಟಸ್ಥನಾಗಿರು ಅಥವಾ ದಶಗ್ರೀವನಿಗೆ ನೆರವಾಗು, ರಾಮನ ವಿಜಯಮಾರ್ಗಕ್ಕೆ ವಿಧಿಯೇ ಕಿಂಕರಶಿಲ್ಪಿ. ವಾನರಸೇನೆಗೆ ಇತರರ ಸಹಾಯವು ಬೀಸುವ ಚಾಮರ ಮಾತ್ರ, ಜಯಪೀಠ ಅಲ್ಲ.

'ಮಹಾ ಪ್ರಾಜ್ಞನೇ ಕೇಳು. ಪಾಪವನ್ನು ತಿಳಿದು ಅದನ್ನು ತ್ಯಜಿಸುತ್ತ ದೂರ ಸರಿದ ಮಾತ್ರದಿಂದ ಪುಣ್ಯವು ಕೈವಶವಾಗುತ್ತದೆಯೆ? ದೇವರು ಕಳುಹಿಸುವ ಕೃಪಾದೂತರಿಗೆ ಕಿವಿಗೊಟ್ಟು, ಪುಣ್ಯಪಕ್ಷದಲ್ಲಿ ನಿಂತು ಕೆಲಸಮಾಡದಿದ್ದರೆ ಸಿದ್ಧಿ ಲಭಿಸುವುದೆ? ನಾನು ಹೇಳುವ ಇದು ಬರಿ ಉಪಮೆಯಲ್ಲ. ರಾಮಚಂದ್ರನನ್ನು ಕಂಡವರಿಗೆ ಇದು ಕಡುಸತ್ಯ'

ಎಂದು ಹೇಳಿದ ಕಪಿ ಕವೀಂದ್ರನ ಭಾವದೀಪ್ತವಾದ ವಾಕ್ ತೀರ್ಥದಲ್ಲಿ ಮಿಂದ ಅನಲೆಯ ತಂದೆಯ ಕಣ್ಣಿನಮುಂದೆ, ಮಗಳಪಕ್ಕದ ಸೀತಾದೇವಿಯ ಮೂರ್ತಿ ಮೂಡಿಬಂದಿತು. ನಿಟ್ಟುಸಿರು ಬಿಟ್ಟನು. ಕಣ್ಣಂಚಿನಲ್ಲಿಯ ಕಂಬನಿಯನ್ನು ಕರವಸ್ತ್ರದಿಂದ ಒರೆಸಿಕೊಂಡನು. ಮೈಂದನನ್ನು ದೈನ್ಯದಿಂದ ನೋಡುತ್ತ ಇಂದ್ರಜಿತುವಿನ ತಂದೆಯ ತಮ್ಮನು ಹೀಗೆ ಹೇಳಿದನು:

ಧರ್ಮಕ್ಕೆ ಜಯಮಕ್ಕೆ ಎಂದಾ ಜಗಚ್ಚೈತನ್ಯಮಂ ಪ್ರಾರ್ಥಿಸುತ್ತಿಲ್ಲಿ ತಪಂಗೆಯ್ವುದೆನ್ನಾಶೆ.

'ಮೈಂದನೇ, ನೀನು ಹೇಳಿದುದೆಲ್ಲವೂ ಕಟುವಾದರೂ ಸತ್ಯ. ರಘುರಾಮನ ಮಹಾಸತಿ ಮೈಥಿಲಿಯ ರಕ್ಷಣೆಗಾಗಿ ಹೆಂಡತಿ ಮತ್ತು ಮಗಳನ್ನು ನಗರದಲ್ಲಿ ಬಿಟ್ಟು ಬಂದಿರುವ ನನ್ನ ಮನಸ್ಸಿನಕುದಿತ ನೀನು ತಿಳಿದಿಲ್ಲ. ಹಾಗಾಗಿ ಕ್ರೂರ ಮಾತುಗಳ ಕತ್ತಿಯಿಂದ ನನ್ನ ಹೃದಯವನ್ನು ಸೀಳುತ್ತಿರುವೆ. ಪಾಪವನ್ನು ನಿವಾರಿಸಲು ನಮ್ಮ ಕೈಯಲ್ಲಿ ಆಗದಿದ್ದರೆ, ಪಾಪದಿಂದ ದೂರವಿರುವುದು ಅದನ್ನು ನಿವಾರಿಸಲು ಸಮರ್ಥರಾದವರಿಗೆ ಸಹಾಯ ಮಾಡಿದಂತಲ್ಲವೆ?

'ದ್ವಿವಿದ ನೀನೇ ಹೇಳು, ನಾನು ಕಪಿಧ್ವಜರೊಡನೆ ಕೂಡಿ ಹೆತ್ತತಾಯಿಗೆ ಸಮನಾದ ಹುಟ್ಟಿದ ಊರನ್ನು ಹಾಳುಮಾಡುವ ಅಪಖ್ಯಾತಿಯಿಂದ ನರಕದಲ್ಲಿ ಸದಾ ಬೀಳುತ್ತೇನಲ್ಲವೆ? ಅಣ್ಣನು ಕೆಟ್ಟದ್ದನ್ನು ಮಾಡಿದ್ದಾನೆ. ಅವನನ್ನು ತಿದ್ದಲು ಎಲ್ಲ ಪ್ರಯತ್ನ ಮಾಡಿ ಸೋತು, ಅವನನ್ನು ತೊರೆದಿದ್ದೇನೆ. ನಾನು ವೈರಿಗಳೊಡನೆ ಸೇರಿ, ಸ್ವಜನ ಸ್ವದೇಶಗಳು ವೈರಿಯ ವಶವಾಗುವಂತೆ ಮಾಡುವ ಕ್ಷುದ್ರ ದ್ರೋಹಿಯಲ್ಲ. ಧರ್ಮಕ್ಕೆ ಜಯವಾಗಲಿ ಎಂದು ಆ ಜಗಚ್ಚೇತನವನ್ನು ಪ್ರಾರ್ಥಿಸುತ್ತ ಇಲ್ಲಿ ತಪಸ್ಸನ್ನು ಮಾಡುವುದು ನನ್ನ ಆಸೆ.'

'ಪ್ರಖ್ಯಾತ ವಿಭೀಷಣನೆ, ನನಗೂ ತಪಸ್ಸಿನ ಮಹಿಮೆಯಲ್ಲಿ ಅಪಾರ ಶ್ರದ್ಧೆಯಿದೆ. ಸೀತಾನಾಥನ ಆಶೆಯನ್ನೆ ನೀನು ಆಶಿಸಿರುವೆ. ಸೈನ್ಯ ಶಕ್ತಿಗೂ ಮಿಗಿಲಾದದ್ದು ಸಂತರ ಆಶೀರ್ವಾದ.'

ಎಂದು ಹೇಳುತ್ತ ದ್ವಿವಿದನು ಪರ್ವತಗಳ ಗುಹೆಯ ಧ್ವನಿಯಂತಹ ಭಯಂಕರವಾದ ಕಂಠದಿಂದ ಹೀಗೆ ಮಾತನ್ನು ಮುಂದುವರಿಸಿದನು:

'ರಾಮನ ಆಸೆಗೆ ನಿನ್ನ ವಿರೋಧವಿಲ್ಲ. ಲಂಕೆಯಲ್ಲಿ ಬದುಕಲು ಅರ್ಹತೆಯಿರುವ ಎಲ್ಲವನ್ನೂ ರಕ್ಷಿಸಲು ನಿನ್ನ ನೆರವನ್ನು ಅವನು ನಿರೀಕ್ಷಿಸುತ್ತಿದ್ದಾನೆ. ಕಪಿಧ್ವಜರು ಅಲ್ಲಿರುವ ಉತ್ತಮೋತ್ತಮವಾದುದನ್ನು ಹೇಗೆ ತಿಳಿಯುವರು? ನಿಷ್ಪಕ್ಷಪಾತವಾಗಿ, ಸಮಸ್ತ ಲಂಕೆಯನ್ನು ನಿರ್ಮೂಲನ ಮಾಡುವರು. ನೀನು ನಮ್ಮ ಪಕ್ಷದಲ್ಲಿದ್ದರೆ ಅಧಮವಾದುದು ನಾಶವಾಗಿ, ಉತ್ತಮವಾದುದು ಉಳಿಯುತ್ತದೆ. ಸತ್ತ್ವಶೀಲನೆ ನೀನು ನಮಗಾಗಿ ಬಾರದಿದ್ದರೂ ನಿನ್ನ ದೇಶಕ್ಕೆ, ಜನಕ್ಕೆ ಮತ್ತು ಧರ್ಮಕ್ಕೆ ಹಿತವನ್ನುಂಟುಮಾಡಲಾದರೂ ಬರಲೇಬೇಕು.'

ಭೋಜನಂ ಸ್ನೇಹಕಾರಕಮಂತೆ ದೀಪಕಂ!

ವಿಸ್ತಾರ ಎದೆಯ ದ್ವಿವಿದನಿಂದ ಮಿನುಗಿದ ಆ ತರ್ಕಸೂಕ್ಷ್ಮತೆಗೆ ವಿಭೀಷಣನು ತಲೆದೂಗಿದನು, ಬಾಗಿದನು. ಕಿರುನಗೆಯೊಂದಿಗೆ ಮೈಂದ ಮತ್ತು ದ್ವಿವಿದರನ್ನು ನೋಡುತ್ತ ಹೇಳಿದನು:

‘ದ್ವಿವಿದನೇ, ನೀನು ವಾದಮಾತ್ರಕ್ಕೆ ಹೇಳಿರುವುದಾದರೂ ಅದು ನನಗೆ ಒಪ್ಪಿಗೆಯಾಗಿದೆ! ಬೆಳಗ್ಗೆ ನನ್ನ ನಿರ್ಧಾರವನ್ನು ತಿಳಿಸುತ್ತೇನೆ. ಈಗ ಏಳಿ. ಈಗಾಗಲೇ ರಾತ್ರಿ ಬಹಳವಾಗಿದೆ. ಹಣ್ಣು ಹಂಪಲುಗಳ ಬಡ ಆತಿಥ್ಯವನ್ನು ಸ್ವೀಕರಿಸಿ ಮಲಗಿರಿ.’

ಎಂದು ಹೇಳುತ್ತ ದಶಗ್ರೀವನ ಸಹೋದರನು ಮೇಲೆದ್ದು ಬಾಗಿಲನ್ನು ಸ್ವಲ್ಪತೆರೆದು ಇಣುಕಿನೋಡಿ, ‘ಶಶಾಕಾಂಕ್ಷನೇ, ಹಿರಣ್ಯಕೇಶಿಯನ್ನು ಬರಲು ಹೇಳು.’ ಎಂದು ತನ್ನ ನೆಚ್ಚಿನ ಸೇವಕನಿಗೆ ಅಪ್ಪಣೆ ಮಾಡಿ, ಸುಗ್ರೀವ ದೂತರಕಡೆ ತಿರುಗಿ ನುಡಿದನು:

‘ಮಿತ್ರನಲ್ಲದವನ ಮನೆಯಲ್ಲಿ ಭೋಜನವನ್ನು ಮಾಡಲು ನಿಮಗೆ ಏನಾದರೂ ಆಕ್ಷೇಪವಿದೆಯೆ?’

‘ನೀನು ಅಮಿತ್ರನೆ?’

ಎಂದು ಮುಗುಳ್ನಗುತ್ತ ಮೈಂದ ಮಾತು ಮುಂದುವರಿಸಿ ‘ಸಹೃದಯ ಶ್ರೇಷ್ಠನೇ, ಸೂರ್ಯಕುಲದ ಸುಗ್ರೀವ ಮತ್ತು ರಾಘವರಿಬ್ಬರೂ ನಿನ್ನೊಡನೆ ಊಟ ಮಾಡಲು ಮೈತ್ರಿಗಾಗಿ ಪ್ರಯತ್ನಿಸುತ್ತಿದ್ದಾರೆ. ಹಾಗಿರುವಾಗ ದೂತರಾದ ನಮಗೆ ನಿಜವಾಗಿ ಅದು ಪ್ರಸಾದ. ಭೋಜನವು ಸ್ನೇಹಕಾರಕ ಮತ್ತು ಸ್ನೇಹವರ್ಧಕ!’

ಎಂದು ಹೇಳಿದ್ದನ್ನು ಕೇಳಿ ಆ ಹಾಸ್ಯಕ್ಕೆ ಮೂವರೂ ನಕ್ಕರು. ಆ ನಗೆಯೇ ಅವರಲ್ಲಿದ್ದ ಭೇದವನ್ನು ಅಳಿಸಿ, ಹೃದಯವನ್ನು ಬೆಸೆಯಿತು. ಅಷ್ಟರಲ್ಲಿ ನೋಡುವವರ ಕಣ್ಣಿಗೆ ಆನಂದವನ್ನು ಪ್ರೋಕ್ಷಿಸುವಂತೆ ಒಬ್ಬ ರಾಕ್ಷಸ ತರುಣನು ಬಂದನು. ಆಗ ವಿಭೀಷಣನು,

‘ವಯೋಮಾನದಿಂದ ಕಿರಿಯನು. ಅಭಿಮಾನದಿಂದ ಹಿರಿಯನು. ಹೆಸರು ಹಿರಣ್ಯಕೇಶಿ. ಲಂಕೆಯಲ್ಲಿರುವ ನಮ್ಮವನು. ಧರಣೀ ಪುತ್ರಿಯ ಶಿಷ್ಯೆಯಾದ ನನ್ನ ಮಗಳು ಅನಲೆಯಿಂದ ಪತ್ರವೊಂದನ್ನು ಈ ಮಿತ್ರ ನಮಗೆ ತಂದನು.’ ಎಂದು ಪರಿಚಯ ಮಾಡಿಕೊಡುತ್ತಿರಲು ಮುಖವರಳಿ ಹಿರಣ್ಯಕೇಶಿ ಕೈಮುಗಿದನು. ಆ ವಾನರರು ಅವನಿಗೆ ಹಸ್ತಲಾಘವವನ್ನಿತ್ತು ವಂದಿಸಿದರು. ಆಗ ವಿಭೀಷಣನು ಮಾತನ್ನು ಮುಂದುವರಿಸಿ,

‘ಹಿರಣ್ಯಕ ಇವರು ಅತಿಥಿಗಳು. ಸೇನಾಧಿಪತಿಗಳಾದ ಇವರು ನಮ್ಮಲ್ಲಿ ನೀತಿಗೆ ಬಂದಿದ್ದಾರೆ. ಇವನು ಮೈಂದ, ಮಹಾ ಮಧುರಮತಿ ಮತ್ತು ಮಾತನ್ನು ಕೈವಶ ಮಾಡಿಕೊಂಡಿರುವವನು. ಇವನು ದ್ವಿವಿದ. ಯುಕ್ತಿ ಮತ್ತು ಶಕ್ತಿಗಳೆರಡರಲ್ಲಿಯೂ ಬೃಹತ್ ಆದವನು! ನಾಳೆ ನೀನು ಇವರೊಡನೆ ರಘುರಾಮನ ಸನ್ನಿಧಿಗೆ ನನ್ನ ಪ್ರತಿನಿಧಿಯಾಗಿ ಹೋಗಬೇಕು.. ಅದು ಹಾಗಿರಲಿ, ಈಗ ಇವರಿಗೆ ಊಟಕ್ಕೆ ಸಿದ್ಧತೆ ಮಾಡು. ಊಟಕ್ಕೆ ಕರೆದುಕೊಂಡು ಹೋಗು. ಮುಂದೆ ನಡೆ, ದಾರಿ ತೋರಿಸು.’ ಎಂದು ಹೇಳಿದನು.

ಹಿರಣ್ಯಕನ ಹಿಂದೆ ಅವರಿಬ್ಬರೂ ನಡೆದರು. ಸ್ವಲ್ಪ ದೂರದಲ್ಲಿಯೆ ದೈತ್ಯ ಭೋಜನಶಾಲೆ ಸಿದ್ಧವಾಗಿತ್ತು. ತರತರದ ಪರಿಮಳಗಳನ್ನು ಹೊಂದಿದ್ದ ವಿವಿಧ ವರ್ಣಗಳಿಂದ ಕೂಡಿದ ಭೋಜನವು ಅವರ ಕಣ್ಣು ಮೂಗುಗಳನ್ನು ಮೋಹಿಸಿದವು. ದ್ವಿವಿದ ಮತ್ತು ಮೈಂದರಿಬ್ಬರೂ ರಾಕ್ಷಸರೇ ಆಶ್ಚರ್ಯಕ್ಕೊಳಗಾಗುವಂತೆ, ಹೊಟ್ಟೆ ಡೊಳ್ಳೆನ್ನುವ ತನಕ ಉಂಡರು. ಹೀಗೆಂದ ಮೇಲೆ ರಾಯಭಾರದ ಸಫಲತೆಗೆ ಬೇರೆ ಶಕುನ ಸಾಕ್ಷಿ ಹೇಳಬೇಕೆ?

❑



~~~~~~~~~~~~~~~~~~~~~~ ಸಂಚಿಕೆ – ౧౨ ~~~~~~~~~~~~~~~~~~~~~~

ಸೈನ್ಯಗುಪ್ತಿ

ನನ್ನ ಸುಕುಮಾರಿಯೆ, ಇದೇನು ಮೌನ? ಅನ್ಯ ವಿಷಯ ವಧು ಸರೋಜ ಶಾರದೆಯನ್ನು ಪ್ರಿಯಕರನು ಬಯಸಿದನೆಂದು ನಿನಗೆ ಕೋಪವೆ? ಉದಾರಳಾದ ನೀನು ತಂಗಿಗೆ ಕರುಬುವುದೇ ಹೇಳು? ರೂಪಕ ರೂಪಿಯಾದರೇನು, ಆ ಪ್ರೇಮವು ರಾಮನ ಮಹಿಮಾ ಕೀರ್ತಿಯ ಕಥೆಯೇ ಅಲ್ಲವೆ? ಕವಿಯ ಒಲುಮೆ ಕಡಲಲ್ಲವೆ? ಅದನ್ನು ಬಡಬಾಗ್ನಿ ಅಗಸ್ತ್ಯರು ಕುಡಿದು ಪೂರೈಸಲು ಸಾಧ್ಯವೆ? ನಿನಗೆ ರಸಾನಂದ ಉಳಿಯದಂತೆ ಓರ್ವ ಸೊರಗಿದ ಶರೀರೆಯು ಅದನ್ನು ಹೇಗೆ ತಾನೆ ಹೀರಿಕೊಳ್ಳುವಳು?
~~~~~~~~~~~~~~~~~~~~~~

ಏಳು, ಮುನಿಸನ್ನು ಬಿಡು. ಸಾವಿರ ತಂತಿಗಳ ನಿನ್ನ ದೇವವೀಣೆಯನ್ನು ತೆಗೆದುಕೊ. ಹೇಳು ಹರನ ಜಟಾಜೂಟದಿಂದ ಧುಮುಕುವ ಗಂಗಾ ಪ್ರವಾಹದ ಮುಂದಿನ ಕಥೆಯ ಸಂಗೀತವನ್ನು ನುಡಿಸು.

ಸಾರಣನು ರಾಮಸೇನಾ ಶಿಬಿರದ ಮೃತ್ಯು ಪಂಜರದಿಂದ ಜಾರಿ ತಪ್ಪಿಸಿಕೊಂಡು ಬಂದನು. ಅವನು ರಾವಣನಿಗೆ ಶುಕನು ಸ್ವಇಚ್ಛೆಯಿಂದ ಸೆರೆಹೋದುದನ್ನು, ತಾನು ಕಂಡ ವೈರಿಯ ಬೃಹತ್‌ಬಲದ ಭೀಷ್ಮ ಸಾಮರ್ಥ್ಯವನ್ನು ತಿಳಿಸಿದನು. ರಾಮನಿಗೆ ವಿಭೀಷಣನಸ್ನೇಹ ದೊರೆತುದುದನ್ನು ಹೇಳಿ, ಕಪಿರಾಜನು ಲಂಕಾದುರ್ಗಕ್ಕೆ ನುಗ್ಗಲು ಪ್ರಚಂಡ ಸಿದ್ಧತೆಯೊಂದಿಗಿರುವುದನ್ನು ಭಯಗೊಂಡ ಬಿಗಿದ ಕಂಠದಿಂದ ಉಸುರಿದನು.

ಅದನ್ನು ಕೇಳಿದ ರಾಕ್ಷಸನು,

'ನಿನ್ನ ಭಯವನ್ನು ಇತರರಿಗೆ ಹಂಚಬೇಡ! ಹೋಗು, ಹೊಂಚುಹಾಕಿ ವೈರಿಯ ರಹಸ್ಯಗಳನ್ನು ತಿಳಿದು ಬಂದು ನನಗೆ ಹೇಳುತ್ತಿರು.'

ಎಂದು ಕಣ್ಸನ್ನೆಯಿಂದ ಗದರಿಸಿ ಕಳುಹಿಸಿದನು. ಹತ್ತಿರದಲ್ಲಿ ತೆರೆಯ ಮರೆಯಲ್ಲಿ ಕಾವಲು ಕಾಯುತ್ತಿದ್ದ ಶಾರ್ದೂಲನನ್ನು ಸಂಜ್ಞೆಯಿಂದ ತಕ್ಷಣ ಬರಹೇಳಿದನು. ಅವನು ದುರ್ಮಂತ್ರಸಿದ್ಧನು, ವಂಚನಾ ಪಂಡಿತನು, ಕಠೋರಮತಿಯು ಆಗಿ ಮೊಸಳೆಯ ಮುಖದವನಾಗಿದ್ದನು. ಅಂತಹ ಕ್ರೂರ ನಡವಳಿಕೆಯವನಿಗೆ ದೈತ್ಯದೇವನು ಹೀಗೆ ಹೇಳಿದನು:

'ಶಾರ್ದೂಲನೆ, ಕಪಿಧ್ವಜ ಆನೆಯು ಈ ನಿರ್ಮಲ ಲಂಕಾ ಸರೋವರಲಕ್ಷ್ಮಿಯನ್ನು ಕಲಕಲು ಸಮೀಪಿಸುತ್ತಿದೆ. ಮಂತ್ರಯಂತ್ರಗಳನ್ನು ಸೃಷ್ಟಿಸಿ ಆ ಸೈನ್ಯವು ಬರುವ ಕಡೆಯಲ್ಲೆಲ್ಲ– ಗುಪ್ತವಾಗಿ ಮೃತ್ಯುವನ್ನುಂಟು ಮಾಡುತ್ತ ತಡೆಗಟ್ಟು! ಅಷ್ಟರಲ್ಲಿ ರಾಕ್ಷಸ ಸೈನ್ಯಪ್ರವಾಹವು ಮೃತ್ಯು ಪರ್ವತದ ಸಾಲಿನಂತೆ ನಿಂತು ದುರ್ಗವನ್ನು ನೀಚ ನರನಿಷ್ಠ ಕಪಿದುಷ್ಟರಿಂದ ರಕ್ಷಿಸಲು ಸಜ್ಜಾಗುವುದು!'

ವಾನರರ ಸರ್ವ ಸೈನ್ಯಕೆ ಮಿಗಿಲ್ ಗುರುವೈರಿ ನಮಗೆ ಸೀತಾವ್ರತಂ!

'ದೊರೆಯೆ, ತಮ್ಮ ಆಜ್ಞೆಯಂತೆ ನಡೆಯುವುದಲ್ಲದೆ, ಸಲಹೆಯನ್ನು ಕೊಡುವುದು ನನ್ನ ಧರ್ಮವಲ್ಲ. ಆದರೂ ಸ್ವಾಮಿಭಕ್ತಿಯಿಂದ ನನ್ನ ಮನದಲ್ಲಿರುವುದನ್ನು ಬಿನ್ನವಿಸುತ್ತೇನೆ. ಸುವ್ರತಧಾರಿಗಳು ಪ್ರತಿಭಟಿಸಿದರೆ ಮಂತ್ರಯಂತ್ರಗಳು ತಮ್ಮ ಶಕ್ತಿಯ ಅಂಶಗಳನ್ನು ಕಳೆದುಕೊಳ್ಳುತ್ತವೆ. ಅವು ಪೂರ್ಣಫಲ ಕೊಡಲಾರವು. ವ್ರತ ಪ್ರತೀಕಾರವನ್ನು ಮೊದಲು ಕೆಡಿಸಬೇಕು. ನಮಗೆ ಸೀತಾವ್ರತವು ವಾನರ ಸರ್ವಸೈನ್ಯಕ್ಕೂ ಮಿಗಿಲಾದ ಅಜೇಯ ವೈರಿಯಾಗಿದೆ. ಆ ರಘುವರನ ಬತ್ತಳಿಕೆಯ ಬಾಣಗಳಿಗಿಂತ, ನಮಗೆ ಸತಿ ಪತಿವ್ರತೆಯೆನ್ನುವ ಧರ್ಮ ಧೈರ್ಯವೇ ಭಯಂಕರವಾಗಿದೆ. ಹಾಗಾಗಿ ಈ ಯುದ್ಧದಲ್ಲಿ ನಮ್ಮ ಮೊದಲಕೆಲಸ ಪತಿವ್ರತೆಯ ನೋಂಪಿಯನ್ನು ಭಂಗಪಡಿಸುವುದೇ ಆಗಿದೆ.'

ರಾಕ್ಷಸನು ಚಿಂತಾಸಾಗರದಲ್ಲಿ ಮುಳುಗಿದನು. ಬಿಟ್ಟಕಣ್ಣು ಬಿಟ್ಟ ಹಾಗೆ ಶಾರ್ದೂಲನನ್ನು ಹೆಚ್ಚು ಹೊತ್ತು ನೋಡಿದನು. ಹಲವು ದಿನಗಳಿಂದ ಕಾಂತಿಕುಂದಿದ ಮುಖದಲ್ಲಿ ಶಾಂತಿಯ ತೇಜಸ್ಸು ಅಂಕುರಿಸಿದಂತೆ ಮುದಗೊಂಡನು. ನಕ್ಕನು. ನಿಟ್ಟುಸಿರು ಬಿಡುತ್ತ ಆತ್ಮಸೌಮ್ಯತೆಗೊಳಗಾಗಿ ವ್ಯಂಗ್ಯವಾಕ್ಯಗಳನ್ನು ಉಸುರಿದನು:

'ಶಾರ್ದೂಲನೇ, ನೀನು ಹೇಳುತ್ತಿರುವುದು ನಿಜ. ನಾನು ಕೊಂಬೆಯನ್ನು ಕತ್ತರಿಸಲು ಆಜ್ಞೆ ಮಾಡಿದೆ. ನೀನು ಬೇರು ಕೊಯ್ಯುವ ವ್ಯವಹಾರವನ್ನು ಹೇಳಿದೆ! ವಾನರರ ಪಡೆಯಲ್ಲಿ ಒಬ್ಬನೂ ಉಳಿಯದಂತೆ ಕೊಲ್ಲುವ ಕಷ್ಟವು ನನಗೆ ತೃಣಸಮಾನ. ಆದರೆ ಕೇಳು, ಸೀತಾವ್ರತ ಪರ್ವತ! ಅದು ಪರ್ವತ!!

'ಶಿವ ಪಾರ್ವತಿಯರ ಬೆಳ್ಳಿಬೆಟ್ಟವನ್ನು ಬೇರುಸಹಿತ ಅಳ್ಳಾಡಿಸಿ ಎತ್ತಿತ್ತು ದೈತ್ಯದೊರೆಯ ಈ ತೋಳು. ಅಂತಹುದು ಭೂಜಾತೆಯ ಹೃದಯ ಉದ್ಯಾನದಲ್ಲಿ ಉದುರಿದ ಒಂದು ಹೂ ಎಸಳ ಭಾರಕ್ಕೆ ಸೋತು ಉರುಳುತ್ತಿದೆ. ಹಿಂದೆ ಶಿವಧನುಸ್ಸನ್ನು ಎತ್ತಿ ಬಿದ್ದಂತೆ ಆಗಿದೆ! ಕಿಂಕರನೆ ರಾವಣನ ಬಾಳ ದೋಣಿಯು ವ್ರತದ ಹಿಮ ಬಂಡೆಗೆ ಬಡಿದು ಒಡೆಯುತ್ತದೆಯೆ? ಹೇಳು, ಹೆಣ್ಣೋರ್ವಳಾ?...'

'ಲಂಕೇಶ್ವರನೆ, ಶಂಕೆಯನ್ನು ಬಿಡು. ನಾನು ಒಂದು ಕುಟಿಲ ನೀತಿಯನ್ನು ಹೇಳುತ್ತೇನೆ. ಆಲಿಸು. ನಾನು ಮಾಯೆಯಿಂದ ರಕ್ತದಿಂದ ಒದ್ದೆಯಾದ ರಾಮಶಿರವನ್ನು ಸೃಷ್ಟಿಸುತ್ತೇನೆ! ಅದನ್ನು ಸೀತಾದೇವಿಗೆ ತೋರಿಸು! ರಣದಲ್ಲಿ ರಘುರಾಮನು ಪೂರ್ತಿಯಾಗಿ ಕೆಳಕ್ಕೆ ಬಿದ್ದನೆಂದರೆ '

ದುಃಖದಿಂದ ಉದ್ವಿಗ್ನಗೊಂಡ ರಾವಣನು ಶಾರ್ದೂಲನ ಮಾತುಗಳನ್ನು ತಡೆಯುತ್ತ, ಉಗ್ರಧ್ವನಿಯಲ್ಲಿ ಗುಡುಗಿದನು:

'ಏನು ಹೇಳಿದೆ, ಶಾರ್ದೂಲ? ಹೇಳಿದ್ದೇನು? ಇನ್ನೊಮ್ಮೆ ಹೇಳು.'

'ಪತಿ ಸತ್ತನೆಂದಾದರೂ ನಿನ್ನ ವಶವಾಗುವಳು!'

'ನಿಜ, ವಶವಾಗುತ್ತಾಳೆ ನಿಜ! ಅವಳ ಕಳೆಬರವು ವಶವಾಗುತ್ತದೆ. ಶಾರ್ದೂಲ, ನೀನು ಮಂದಮತಿ ಮೂರ್ಖ ನುಡಿಗಳನ್ನು ಆಡಬೇಡ! ಹೋಗು, ನನ್ನಾಜ್ಞೆಯಂತೆ ನಡೆ! ರಾವಣನಿಗಲ್ಲದೆ ಇನ್ನು ಯಾರಿಗೆ ಸೀತಾ ಹೃದಯ ಸೂಕ್ಷ್ಮಗಳು ತಿಳಿದಿವೆ? ನಡೆ, ಹೋಗು. ಸೇನಾನಿ ಪ್ರಹಸ್ತನನ್ನು ಬರಹೇಳು!'

ಅಲೆಯ ತೊಡಗಿದನ್, ಪಂಜರದ ವೇದಿಕೆಯನಲೆವ ಕೇಸರಿಯವೋಲ್

ಪ್ರಭುವಿನ ಉಗ್ರರೀತಿಗೆ ಮತ್ತು ಹೊಸನೀತಿಗೆ ಸೇವಕನು ಬೆಚ್ಚಿಬೆರಗಾಗಿ ಹೋದನು. ಅವನು ಹೋದದ್ದನ್ನು ನೋಡಿದ ಮಹೇಂದ್ರವೈರಿಯು ಪೀಠದಿಂದ ಎದ್ದನು. ಪಂಜರದ ಒಳಗಿನ ಸಿಂಹದಂತೆ ಅಲೆದಾಡತೊಡಗಿದನು. ಚಿಂತೆಗಳು, ಭಾವಗಳು, ಮನಸ್ಸಿನ

ಹೋರಾಟಗಳು; ನೆನಪುಗಳು, ಪಾಪಗಳು ಮತ್ತು ಪಶ್ಚಾತ್ತಾಪಗಳು; ಆಶೆ ನಿರಾಶೆಗಳು, ಪುಣ್ಯಪಾಪಗಳು; ಕ್ಷಾತ್ರ ಪ್ರತಿಜ್ಞೆಗಳು, ಧರ್ಮ, ನೀತಿ, ಪ್ರೀತಿಗಳು ಮತ್ತು ಧೀರೋದಾತ್ತ ಭೀತಿಗಳು ಅವನ ಆತ್ಮವನ್ನು–ಲಂಕೆಯನ್ನು ಮುತ್ತಲು ಬಂದವರ ಸಂಖ್ಯೆಯನ್ನು ಮೀರಿ ಮುತ್ತಿ ಅಲುಗಾಡಿಸಿದವು.

'ಯಾರು? ಈಕೆ ಯಾರು? ಈ ಸೀತೆ ಯಾರು? ಈಕೆಯನ್ನು ಪಡೆಯಲು ನಡೆಸಿದ ತಪ ಸಫಲವಾಗುವುದೆ? ಮಾವ, ನೀನು ಅಂದು ಪಂಚವಟಿಗೆ ನನ್ನ ಪುಷ್ಪಕವನ್ನು ಏರುವ ಮೊದಲು ಹೇಳಿದ ಮಾತುಗಳು ಸುಳ್ಳಲ್ಲ! ಅದನ್ನು ಸುಳ್ಳಾಗಿಸಲು ನನ್ನ ಉಸಿರಿರುವ ತನಕ ಪ್ರಯತ್ನಿಸುವೆ. ಆ ಪ್ರಯತ್ನವೆ ತಪಸ್ಸಾಧನೆ! ತಪವು ಯಾವಾಗಲೂ ವ್ಯರ್ಥವಾಗುವುದಿಲ್ಲ!' ಎಂದು ಮನದಲ್ಲಿ ಆಲೋಚಿಸಿದನು.

ಹಾವು ಒಳಹೊಕ್ಕು ಅಡಗಿ ಕುಳಿತಿರುವ ಹಿರಿದಾದ ಹುತ್ತವೆಂಬಂತೆ ತಕ್ಷಣ ತಾಟಸ್ಥ್ಯವನ್ನು ನಟಿಸುತ್ತ ನಿಶಾಚರ ನೃಪನು ನಿಂತನು. ಪ್ರಧಾನ ಸೇನಾನಿ ಪ್ರಹಸ್ತನು ಬರಲು ಪ್ರಸನ್ನವದನನಾಗಿ, ನಿಶ್ಶಂಕೆಯ ಧೈರ್ಯವನ್ನು ಪ್ರದರ್ಶಿಸಿದನು.

ನಾನೀ ಮಹೋಗ್ರ ಸಂಗ್ರಾಮ ದೀಕ್ಷಿತನಾಗಿ, ದೈತ್ಯಕುಲ ದಿಗ್ವಿಜಯ ಯಜ್ಞಮಮ್ ಕೊನೆಗಾಣ್ಬುವೆನ್!

ಅಧಿಕ ಕನಕರತ್ನಗಳ ನಾನಾ ರಣ ಅಲಂಕಾರಗಳನ್ನು ಧರಿಸಿದ್ದ, ವಿಶಾಲದೇಹದ ವೈರಿ ಭಯಂಕರನನ್ನು ಮೆಚ್ಚಿ ನೋಡಿ, ಕುಳಿತುಕೊಳ್ಳಲು ಹೇಳಿದನು. ನಮಸ್ಕರಿಸಿದವನಿಗೆ ತಲೆಯಾಡಿಸುವುದರಿಂದ ಪ್ರತಿ ನಮಸ್ಕಾರ ಮಾಡಿ ಕುಬೇರನ ವೈರಿ ತಾನೂ ಕುಳಿತುಕೊಂಡನು.

'ಮಹಾ ಪ್ರಭು, ಬರಹೇಳಿದ ಆದೇಶವೇನು?

'ಸೇನಾನಿಯೇ, ಶತ್ರುಶಕ್ತಿಯ ಇತಿಮಿತಿಯನ್ನು ತಿಳಿದೆಯಾ?'

'ತಿಳಿದಿರುವೆ. ಆದರೂ ಬಿರುಗಾಳಿ ತರಗೆಲೆಯ ಸಂಖ್ಯೆಯನ್ನು ಲೆಕ್ಕಿಸುವುದೆ?'

'ನಮ್ಮ ಸೈನ್ಯವು ತಮ್ಮ ತಮ್ಮ ನೆಲೆಯನ್ನು ಹಿಡಿದು ಸಜ್ಜಾಗಿವೆಯೆ?'

'ಕಳೆದ ರಾತ್ರಿ, ಬೆಳಗಾಗುವಷ್ಟರಲ್ಲಿಯೆ!'

'ಸೈನ್ಯ ರಕ್ಷಣೆಯನ್ನು ತಿಳಿಯಲು ಅಪೇಕ್ಷಿಸುತ್ತೇನೆ.'

'ರಣಕ್ಷೇತ್ರ ವಿನ್ಯಾಸವನ್ನು ತೋರಿಸುವ ಚಿತ್ರವಸ್ತ್ರವಿದೆ, ತೆಗೆದುಕೊಳ್ಳಿ.'

ಎಂದು ಹೇಳಿ ದಳಪತಿಯು ರಣಾಂಗಣದ ನಕ್ಷೆಯನ್ನು ರಣಚತುರ ದಶಗ್ರೀವನ ಎದುರಿನಲ್ಲಿ ಹರಡಿದನು. ದೊರೆಯು ನೋಡುತ್ತಿರಲು, ಪ್ರಹಸ್ತನು ಅವನ ಮುಖರಂಗದಲ್ಲಿ ಮಿಂಚುತ್ತಿದ್ದ ಚಿತ್ತದ ವಿವಿಧ ಭಾವಗಳ, ಖಂಡನೆ ಮತ್ತು ಶ್ಲಾಘನೆಯ ಬೇವು ಬೆಲ್ಲಗಳನ್ನು

ಸವಿಯುತ್ತಿದ್ದನು. ಚತುರಮತಿ ರಣರುಚಿ ರಾವಣನು ಅದನ್ನು ಸಾಕಷ್ಟು ಹೊತ್ತು ಪರೀಕ್ಷಿಸುತ್ತ ಯೋಚಿಸಿದನು. ಹಗೆಯಶಕ್ತಿಗೆ ತನ್ನಶಕ್ತಿಯನ್ನು ತೂಗಿ ನಿರ್ಣಯಿಸುತ್ತಿದ್ದನು. ದಳಪತಿಯ ಮುಖದಸಿರಿಗೆ ಮುಖಭಂಗವಾಗದಂತೆ ಮೃದುವಾಗಿ ಆಜ್ಞೆಯನ್ನು ತನ್ನೊಂದು ಭಿನ್ನರುಚಿಯ ಇತ್ಯರ್ಥವೆನ್ನುವಂತೆ ಹೀಗೆ ಹೇಳಿದನು:

'ಶ್ರೇಷ್ಠವೀರನೇ, ನಿನ್ನ ರಕ್ಷಣಾ ವಿಧಾನವು ಪ್ರಶಂಸನೀಯವಾಗಿದೆ. ಆದರೂ ನನ್ನ ಆಲೋಚನೆ ಬೇರೆ. ನೀನು ಸಮ್ಮತಿಸಿದರೆ,' ಎಂದು ಹೇಳುತ್ತ ಪ್ರಹಸ್ತನಕಡೆಗೆ ನೋಡುತ್ತ, ಅವನ ಮಾತಿಗೆ ಅವಕಾಶಕೊಡದಂತೆ ಮಾತನ್ನು ಮುಂದುವರಿಸಿದನು:

'ಸೇನಾಧಿಪತಿಗಳಾದ ವಜ್ರಹ ಮತ್ತು ರಾಹುರೋಷರೊಡನೆ ಕೂಡಿಕೊಂಡು ನೀನು ಪೂರ್ವವನ್ನು ಕಾಪಾಡು. ಮಹಾಪಾರ್ಶ್ವನು ಮಹೋದರನೊಡಗೂಡಿ ದಕ್ಷಿಣದಿಕ್ಕಿನ ರಕ್ಷಣೆಯಲ್ಲಿರಲಿ. ಮತ್ತು ನನ್ನ ಮಗ ಮತ್ತು ಶೋಣಿತಾಕ್ಷರು ಕೂಡಿ ಪಶ್ಚಿಮದ್ವಾರ ರಕ್ಷೆಗಿರಲಿ. ಅಕಂಪನು ವಜ್ರದುಷ್ಟ್ರನ ಜೊತೆಯಾಗಿ ಉತ್ತರದಲ್ಲಿರಲಿ. ಸುಪ್ತಘ್ನ ಮತ್ತು ಮಕರಾಕ್ಷರು ಈಶಾನ್ಯವನ್ನು ರಕ್ಷಿಸಲಿ. ಅಗ್ನಿಕೇತು ಮತ್ತು ದುರ್ಮುಖನು ಸೈನ್ಯದೊಡಗೂಡಿ ಆಗ್ನೇಯವನ್ನು ಕಾಪಾಡಲಿ. ನೈರುತ್ಯ ದಿಕ್ಕಿಗೆ ಸೂರ್ಯಶತ್ರುವೇ ಸಾಕು. ಬ್ರಹ್ಮಾಕ್ಷ ಧೂಮ್ರಾಕ್ಷರು ವಾಯುವ್ಯದಲ್ಲಿರಲಿ. ಇತರ ದಳಪತಿಗಳಿಗೆ ಮಧ್ಯದಲ್ಲಿ ಸೇನೆಯ ಒಂದು ಘಟಕದೊಡನೆ ನಿಲ್ಲಲು ಹೇಳು. ಅವರು ಕ್ಷಣಾರ್ಧದಲ್ಲಿ ಯುದ್ಧ ತೀವ್ರವಾದಲ್ಲಿಗೆ ಬೆಂಬಲವಾಗಿ ಹೋಗುವಂತಿರಲಿ.

'ಪ್ರಧಾನ ಸೇನಾನಿಯೇ ಕೇಳು. ಚಂಡಿಕಾ ಧ್ವಜ ದರ್ಪದ ಆಶ್ರಯದಲ್ಲಿ ಸರ್ವ ಸೇನಾಧ್ಯಕ್ಷತೆಯನ್ನು ಹೊಂದಿ ನಾನು ಈ ಮಹಾಸಂಗ್ರಾಮದ ದೀಕ್ಷಿತನಾಗಿರುತ್ತೇನೆ. ದೈತ್ಯ ಕುಲ ದಿಗ್ವಿಜಯ ಯಜ್ಞವನ್ನು ಕೊನೆಗಾಣಿಸುತ್ತೇನೆ.'

ಸುದೀರ್ಘ ಸಮಯದವರೆಗೆ ಇಬ್ಬರೂ ಮೌನವಾಗಿದ್ದರು. ರಾಜಧ್ವನಿಯ ದರ್ಪಭಾರಕ್ಕೆ ಬಾಗಿದಂತಿದ್ದ ಸೇನಾನಿ ಮೆಲ್ಲನೆ ಎದ್ದನು. ಕ್ಷುದ್ರ ಹುಬ್ಬುಗಂಟಿಕ್ಕಿದ, ಯಮನಿಂದ ಪ್ರಚೋದಿತನಾದ, ಜಗತ್ತಿಗೆ ಭಯಂಕರ ಕಷ್ಟವನ್ನುಂಟು ಮಾಡುವ ಯುದ್ಧಸಿದ್ಧನು, ಬ್ರಹ್ಮವರಬಲದ ಕವಚಧಾರಿಯೂ ಆದ ರಾಕ್ಷಸೇಶ್ವರನಿಗೆ ನಮಸ್ಕರಿಸಿ, ಬೀಳ್ಕೊಂಡನು.

ಅತ್ತಲಾ ವಾನರೇಂದ್ರಂ

ಆ ಕಡೆ ವಾನರೇಂದ್ರ ಸುಗ್ರೀವನು ತನ್ನ ಗುಪ್ತಚರರಿಂದ ಮತ್ತು ವಿಭೀಷಣನ ಸೇವಕರಿಂದ ದಶಾನನ ವಿದ್ಯಾಸಮರ ನಾಟಕ ಸಂವಿಧಾನವನ್ನು ತಿಳಿದನು. ನರದೇವಚಂದ್ರ ಶ್ರೀರಾಮನ, ರಾವಣ ಸಹೋದರನ, ನೀಳ ನಳ ಹನುಮ ಜಾಂಬವ ಮುಖ್ಯ ವಾನರರ ಅಭಿಪ್ರಾಯವನ್ನು ಪಡೆದನು. ಅನಂತರ ದಳದಳದ ದಂಡನಾಯಕರ ಸಭೆಗೆ ತನ್ನ ಆಜ್ಞೆಯನ್ನು ತಿಳಿಸಿದನು.

'ವಾನರ ಸೇನಾನಿ ಅಗ್ನಿಯ ಕುಮಾರನು ಮೈಂದ ದ್ವಿವಿದರ ಬೆಂಬಲ ಪಡೆದು ಪ್ರಹಸ್ತನಿಗೆ ಎದುರಾಗಿ ನಿಲ್ಲಲಿ. ನೀಲದೇವನು ರಾಕ್ಷಸ ಪ್ರಮುಖ ಸೇನೆಗಳಿಗೆ ಅಭಿಮುಖವಾಗಿ ತ್ರಿಕೂಟಾಚಲದ ಪೂರ್ವಕ್ಕೆ ನಿಲ್ಲಲಿ. ಯುವರಾಜ ಅಂಗದನು ಋಷಭ ಗವಾಕ್ಷರ ಸಹಾಯ ಪಡೆದು, ಮಹಾಪಾರ್ಶ್ವನ ಭಯಂಕರ ರಣರೌದ್ರವನ್ನು ಎದುರಿಸಲು ದಕ್ಷಿಣಕ್ಕಿರಲಿ.

'ಆಂಜನೇಯನ ವಿಜಯವಿಕ್ರಮವು ಶೌರ್ಯಭಾನು ವಿನತರೊಡಗೂಡಿ ದೈತ್ಯೇಂದ್ರನ ಪುತ್ರ ವೀರ ಮೇಘನಾದನನ್ನು ಪಶ್ಚಿಮದಲ್ಲಿ ಪ್ರತಿಭಟಿಸಲಿ. ಶಿಲ್ಪದೇವ ನಳನು ದರೀಮುಖನ ಜೊತೆಗೂಡಿ ಅಕಂಪನಿಗೆ ಎದುರಾಗಿ ಉತ್ತರ ಬಾಗಿಲಿನ ದಿಗ್ಗಜಕ್ಕೆ ಅಂಕುಶವೆನ್ನುವಂತೆ ನಿಲ್ಲಲಿ. ಗಜನು ಗವಯರೊಡಗೂಡಿ ಸೂರ್ಯಶತ್ರುವನ್ನು ನೈಋತ್ಯ ದಿಕ್ಕಿನಲ್ಲಿ ಎದುರಿಸಲಿ. ಗಗನಸಂಚಾರಿ ಶತಬಲಿಯ ಸೇನೆಯು ವಾಯುವ್ಯದಲ್ಲಿರುವ ಬ್ರಹ್ಮಾಕ್ಷನ ಸೇನಾಗಿರಿಗೆ ಹಣೆತಾಗಿಸಿ ಹೋರಾಡಲಿ.

'ಈಶಾನ್ಯದಲ್ಲಿ ಉರಿಕಾರುತ್ತಿರುವ ಸುಪ್ತಘ್ನ ಮಕರಾಕ್ಷರ ಸೇನಾದಲಕ್ಕೆ ಪ್ರಳಯ ಸಮುದ್ರವಾಗಿ ಸುಷೇಣನ ಸೇನಾಸಮುದ್ರ ನಿಲ್ಲಲಿ. ಲಕ್ಷ್ಮಣನು ಜಾಂಬವನ ಸೈನ್ಯದ ಬೆಂಬಲದೊಡನೆ ಪಡೆ ಪಡೆಯ ನಡೆಯನ್ನು ತಿಳಿದು ನೆರವಾಗಲಿ. ರಕ್ಕಸರಮೋಸದ ಕೊಲೆಬಲೆಗೆ ನಮ್ಮ ಮಿತ್ರರು ಸಿಕ್ಕಿಕೊಂಡರೆ ಸರ್ವಸೇನಾ ಸೂತ್ರಧಾರನಾಗಿ ನಾನೇ ರಕ್ಷಣಾ ವ್ಯೂಹವನ್ನು ರಚಿಸಿ ಮೆಯ್ಗಾವಲಾಗಿರುತ್ತೇನೆ.

'ಇದೆಲ್ಲದರ ಜೊತೆಗೆ ಕಪಿಧ್ವಜರ ಹೆಮ್ಮೆ ನೂರ್ಮಡಿಯಾಗುವಂತೆ ಶ್ರೀರಾಮಚಂದ್ರನಿಗೆ ವಿಭೀಷಣನ ಬುದ್ಧಿ ಶ್ರೀಮಂತಿಕೆಯು ಮಂತ್ರಿಯಾಗಿರುತ್ತದೆ. ಅವನು ಈ ಸಂಗ್ರಾಮದ ಒಡೆಯನಾಗಿ ದಾನವಕುಲದ ದುಷ್ಟತನಕ್ಕೆ ಕಾಡ್ಗಿಚ್ಚಾಗಿದ್ದಾನೆ. ಅವನು ನಮ್ಮನ್ನು ದೇವಿಸೀತೆಯ ಪತಿವ್ರತಾ ಶುಭ್ರಧರ್ಮದ ರಾಕ್ಷಸರಹಿತ ಆಲಯಕ್ಕೆ ಕೊಂಡೊಯ್ಯುತ್ತಾನೆ.'

ಎಂದು ನುಡಿದ ಸುಗ್ರೀವನ ಆಜ್ಞೆಗೆ ವಾನರ ಉತ್ಸಾಹಸಮುದ್ರವು ಮೇರೆ ಮೀರಿದಂತಾಯಿತು. ಸೇನಾವಾಹಿನಿಗಳು ಎದ್ದು ಸಮುದ್ರ ತೀರದ ಕಾಡಿನ ಶಿಬಿರವನ್ನು ಧಿಕ್ಕರಿಸುತ್ತ ಸುವೇಲಾದ್ರಿಯನ್ನು ಏರಿದವು. ಅದು ಮಳೆಗಾಲದ ಗಾಳಿ ಕೈಬೀಸಲು ಹೆಬ್ಬಂಡೆಗಳ ದಂಡಯಾತ್ರೆಯನ್ನು ಕೈಗೊಂಡ ಕಾರ್ಮೋಡಗಳ ಹಿಂಡುಗಳು ಸಹ್ಯಾದ್ರಿ ಶಿಖರದ ಸೀಮೆಯನ್ನು ದಂಡು ದಂಡುಕ್ಕಿ ವ್ಯಾಪಿಸಿದವೊ ಎನ್ನುವಂತಿತ್ತು.

ಆ ಸೇನೆಗೆ ಸುವೇಲಾದ್ರಿಯ ಶಿಖರದಿಂದ ತ್ರಿಕೂಟದ ಉತ್ತಮಪ್ರದೇಶವನ್ನು ಶೃಂಗರಿಸಿ ಹರಿದ ದಶಗ್ರೀವನಿಂದ ಪಾಲಿಸಲ್ಪಟ್ಟ ಪುರ ಕಂಡಿತು. ಅದು ಗಗನವಿಸ್ತಾರವಾದ ಗಗನನಗರಿ ಎಂಬಂತೆ ಮನೋಹರವಾಗಿತ್ತು. ಕನಕ ಗೋಸಂಪತ್ತುಗಳಿಂದ ಹೊಳೆಯುವ,

ಮಾರೀಚನ ಮಾಯಾಮೃಗದಂತಹ ಅಮರ್ತ್ಯ ಭೂಮಿ ಕಂಡಿತು! ಕುಬೇರನಪಟ್ಟಣದ ಸಂಪತ್ತನ್ನು ಇನ್ನಿಲ್ಲದಂತೆ ಸೂರೆಗೊಂಡಿರುವ ದೈತ್ಯದುರ್ಗವನ್ನು ವಿಭೀಷಣನು ವಿವರ ವಿವರವಾಗಿ ದಾಶರಥಿಗೆ ವರ್ಣಿಸಿದನು. ಅದನ್ನು ಅವನು ಕಿಡಿಯುದುರುವ ಕಣ್ಣುಗಳಿಂದ ನೋಡಿದನು.

ಕೋದಂಡ ದಂಡದಿಂದುಗ್ರಮತಿ ದಾಶರಥಿ ಮಲೆಯ ನೆತ್ತಿಯನೊತ್ತಿದನ್

ಮೃಗರಾಜನು ಮಲೆನೆತ್ತಿಯ ಕಲ್ಲುಗವಿಯಲ್ಲಿ ಇನಿಯಳೊಡನೆ ಇದ್ದನು. ಬೇಡರ ಒಡೆಯನು ಬೇಟೆಗೆ ಉಪಯೋಗಿಸಲು ಪಳಗಿಸಿದ ಪ್ರಾಣಿಯನ್ನು ಬಿಟ್ಟು ಆ ಸಿಂಹವನ್ನು ಆಕರ್ಷಿಸಿದನು. ಅದಕ್ಕೆ ದಣಿವಾಗುವಷ್ಟು ದೂರಕ್ಕೆ ಸೆಳೆದೊಯ್ದನು. ಆಕಡೆ ಮರೆಯಲ್ಲಿದ್ದ ಬೇಡರ ಪಡೆಯವರು ಮಿಣಿಬಲೆಯನ್ನು ಒಡ್ಡಿ ಸಿಂಹಿಣಿಯನ್ನು ಸೆರೆಹಿಡಿದರು. ಅದನ್ನು ರಾಜನ ಬೇಟೆಯಬೀಡಿದ್ದ ಕಂದರಕ್ಕೆ ಹೊತ್ತೊಯ್ದರು. ಕಬ್ಬಿಣದ ಕಣ್ಣಿಯಿಂದ ಕಟ್ಟಿ ಹಾಕಿದ್ದ ಆ ಹೆಣ್ಣುಸಿಂಹವು ತನ್ನ ಮನದನ್ನನನ್ನು ನೆನೆದು ಇಡೀವನವೇ ಗೋಳಿಡುವಂತೆ ಅರಚಿತು.

ಬೇಟೆಗಾರರ ದೀವದೆರೆಯ ಮೋಸವನ್ನು ತಿಳಿದು ಕೋಪಾವಿಷ್ಟನಾದ ಆ ಸಿಂಹವು ತನ್ನ ಹೆಂಡತಿಯ ಸ್ಥಿತಿಯನ್ನು ಅರಿಯಿತು. ಕೋಡಗಲ್ಲನ್ನು ಹತ್ತಿ ಸಿಂಹಿಣಿಯ ಸುತ್ತಲೂ ಕಾವಲಿರುವ, ಅಲಂಕರಣಗೊಂಡ ಆನೆಗಳನ್ನು ನೋಡಿತು. ಗುಡುಗುಡಿಸುವ ಸಿಡಿರೋಷ ಉಕ್ಕಿ ಬರುತ್ತಿರಲು, ತಾನು ನಿಂತ ಬಂಡೆಯನ್ನೇ ಒಂದು ಆನೆಯ ಕುಂಭಸ್ಥಳವೆಂದು ಭಾವಿಸಿ ವಜ್ರದಂತಹ ನಖಗಳಿಂದ ಅದನ್ನು ಅಪ್ಪಳಿಸಿತು. ಅದರ ಗರ್ಜನೆಗೆ ದಿಗಿಲು ತತ್ತರಿಸಿ ಬೆಟ್ಟದ ಎದೆ ಒಡೆಯುವಂತೆ ಆ ಕಲ್ಲು ಬಿರಿಯಿತು!

ಉಗ್ರ ಕೋಪದ ದಾಶರಥಿಯು ಅದೇರೀತಿ ನಿಟ್ಟುಸಿರು ಬಿಡುತ್ತ, ಹಲ್ಲುಕಚ್ಚಿ ಕೋದಂಡದಿಂದ ತನ್ನನ್ನು ಹೊತ್ತಿದ್ದ ಮಲೆಯನೆತ್ತಿಯನ್ನು ಒತ್ತಿದನು. ಆಗ ಮಿಂಚಿನ ಚಾವಟಿಯ ಏಟಿಗೆ ಭೀತಿಗೊಂಡಂತೆ ಭೂಮಿಯು ಕಂಪಿಸಿತು. ರಾಕ್ಷಸ ನಾಶ ದುಶ್ಶಕುನದ ಗಾಳಿ, ಧೂಳು, ಸಿಡಿಲು ಗುಡುಗುಗಳು; ಗಗನದಲ್ಲಿ ಪಕ್ಷಿಗಳ ಕಂಠದ ಚೀತ್ಕಾರಗಳು ಉಂಟಾದವು. ಲಂಕೆಯಲ್ಲಿ ಯಮಲೀಲೆಯ ಕಪಿಧ್ವಜ ಸೇನೆಯ ಮೃತ್ಯುಹಸ್ತದ ಕತ್ತಿ ಬೀಸಿತು.

ಅನಲೆಯಿಂದ ಅದೆಲ್ಲವನ್ನು ತಿಳಿದಿದ್ದ ಸೀತೆಗೆ ಅಶೋಕವನದ ಅಸ್ಥಿರತೆಯು ಅಶೋಕಭಾವವನ್ನುಂಟು ಮಾಡಿತು. ಅವಳು ತ್ರಿಜಟೆಯನ್ನು ಪ್ರೀತಿಯಿಂದ ನೋಡುತ್ತ ಮೃದುವಾಗಿ ಹೇಳಿದಳು:

'ತ್ರಿಜಟೆ ರಣಭೇರಿಯನ್ನು ಕೇಳು! ಆಂಜನೇಯಪುತ್ರನ ಮತ್ತು ಅವರ ಕಡೆಯ ಭೈರವ ಭಯಂಕರ ಸಿಂಹನಾದಗಳನ್ನು ಕೇಳು. ಅದರಿಂದ ಎಂಟುದಿಕ್ಕುಗಳಲ್ಲಿ

ಭೂಮಿಯನ್ನು ಹೊತ್ತಿರುವ ಆನೆಗಳ ಹೃದಯದಲ್ಲಿ ಉಂಟಾದ ವಿದ್ರಾವಕವನ್ನು ಕೇಳು. ಅದು ಈ ರಾಕ್ಷಸ ಸಮರ ಸನ್ನಾಹದ ಕೂಗುವ ನಾಯಿಗಳನ್ನು ಬಿಡದೆ ಅಟ್ಟಿಕೊಂಡು ಹೋಗಿ ಹಿಡಿದು ಬೆನ್ನೇರಿ ಅವುಗಳ ಗೋಣನ್ನು ಮುರಿಯುವುದನ್ನು, ರಕ್ತವನ್ನು ಹೀರುವುದನ್ನು ಕೇಳು. ರಘುನಾಥನ ಕೋದಂಡ ವೀಣೆಯ ಕೋಪಠಂಕಾರವನ್ನು, ಬಾಣಕೋಣ ಭೇರುಂಡಪಕ್ಷಿಯ ಕಂಠ ಡಿಂಡಿಮದ ಭಯಾನಕ ರಣಗಾಥೆಯನ್ನು ಆಲಿಸು.'

ಎಂದು ಹೇಳುತ್ತ, ಧ್ವನಿಯ ರಸಭಾವದ ಅತಿಶಯಕ್ಕೆನ್ನುವಂತೆ ಸೀತೆ ಮೈಮರೆತಳು. ಆಗ ತ್ರಿಜಟೆಯು ನಿಟ್ಟುಸಿರುಬಿಟ್ಟು ನಡುಗುತ್ತ ಅವಳನ್ನು ತಂಪಾದ ಶುಶ್ರೂಷೆಯಿಂದ ಸಂತೈಸಿದಳು. ಆಗ ದಿನಮಣಿ ಸೂರ್ಯನು ಕೆಮ್ಮುಗಿಲ ರಕ್ತದೋಕುಳಿಯನ್ನು ಎರಚಿ ಮುಳುಗಿದನು. ಅದು ಸುವೇಲಗಿರಿಯಲ್ಲಿದ್ದ ವಾನರ ಸೇನಾ ಸಮುದ್ರವನ್ನು ಮತ್ತು ತ್ರಿಕೂಟದಲ್ಲಿದ್ದ ದಾನವರ ಸೇನಾಪ್ರವಾಹವನ್ನು ರಕ್ತವರ್ಣಗಳ ರಕ್ತಹಸ್ತದಿಂದ ಹರಸಿತು!

ಈ ಚಂದ್ರನೀ ಶುಕ್ಲಪಕ್ಷಮಾ ಶುಕ್ಲಪಕ್ಷಕ್ಕೆ ಸೇರ್ವ ಮುನ್ನಮೆ ದಶಾನನನ ದಶೆ ಸೇರ್ವುದಾ ದಕ್ಷಿಣದ ದಿಶೆಗೆ!

ನಿಶೆಯು ತಾನು ನಿಶಾಚರರ ಸೀಮೆಯಲ್ಲಿರುವಾಗ ಅಲ್ಲಿ ತನ್ನ ದೊರೆತನವಿರುವಾಗ ರವಿವಂಶನನ್ನು ಮುತ್ತದೆ ಇರುತ್ತದೆಯೆ? ಆದರೆ, ನಿಶಾಪತಿ ಚಂದ್ರನಿರಲು ರಾಮಚಂದ್ರನಿಗೆ ಕತ್ತಲೆಯ ಮುತ್ತಿಗೆ ಸಾಧ್ಯವೆ? ಅದೊ ನೋಡು, ಮಧುಸಮಯ ಪೂರ್ಣಿಮನಾಗಿ ತಂಪಾದ ಕಿರಣಗಳಿಂದ ಕೂಡಿ ಚಂದ್ರನು ಸುವೇಲಪರ್ವತದ ಮಸ್ತಕದಲ್ಲಿ ಮೂಡಿದನು. ಅವನು ಕಪಿನಾಯಕರು ಬಳಸಿನಿಂತಿದ್ದ, ಧನುರ್ಧರ ಭಯಂಕರ ಮನೋಹರ ರಘುರಾಮನ ರಣಭೈರವ ದರ್ಶನಕ್ಕೆ ಮೂಡಿದನು.

ವಾನರ ಸೇನಾಕಾಡು ದಟ್ಟಣೆಯಾಗಿದ್ದ ರಾಕ್ಷಸರ ಅರಣ್ಯವು ಬೆಳುದಿಂಗಳ ಅಮೃತದಲ್ಲಿ ಮಿಂದಿತ್ತು! ಅವರು ಸುರಶಿಲ್ಪಿ ನಳನ ಮಹಿಮೆಯಿಂದ ಬೃಹತ್ ಶರೀರಗಳನ್ನು ಹೊಂದಿದ್ದರೂ ಅದು ಅವರ ಅರಿವಿಗೆ ಬಂದಿರಲಿಲ್ಲ. ಆದರೆ ಅವರು ಗಿರಿತುಂಗ ಶೃಂಗಗಳೇ ಜಂಗಮ ರೂಪವನ್ನು ಪಡೆದು ವಿಜಯ ಯಾತ್ರೆ ಹೊರಟಂತೆ ದಂಡುಗೂಡಿ ವಿಜೃಂಭಿಸುತ್ತ ಭವ್ಯವಾಗಿದ್ದರು. ಆ ಕಪಿರಾಜ ಸೈನ್ಯವನ್ನು ನೋಡಿ ದಶರಥನ ಮಗನು ಆಹ್ಲಾದಗೊಂಡನು. ನಳನನ್ನು ಕರೆದು ಹೀಗೆ ಹೇಳಿದನು:

'ಶಿಲ್ಪ ಸೇನಾನಿಯೇ, ನಿನ್ನ ತಂದೆಯ ವರದ ಮಹಿಮೆಯಿಂದ ನೂರ್ಮಡಿಯಾಗಿ ಬೆಳೆದ ಈ ಕಪಿ ಧ್ವಜರ ಭಾರೀಶರೀರದ ಮತ್ತು ಬಲದದೃಶ್ಯ ನನಗೆ ಮತ್ತು ನಿನಗೆ ಮಾತ್ರ ಗೋಚರ. ಈ ನಮ್ಮ ಮಿತ್ರರಿಗೆ ಆ ಆತ್ಮಗೋಚರ ಸತ್ಯವು ಅಕ್ಷಿ ಗೋಚರವಾದರೆ ಉತ್ಸಾಹ ನೂರ್ಮಡಿಯಾಗುವುದು. ಅವರಿಗೆ ಅವರ ಪರಾಕ್ರಮದ ಅರಿವಾಗುವುದು.

'ವಿಶ್ವಕರ್ಮ ಕುಮಾರನೇ, ದಳಪತಿ ಸಮಿತಿಗೆ ಈ ರಹಸ್ಯವನ್ನು ತಿಳಿಸು. ಈ ಅದ್ಭುತ ಸುವಾರ್ತೆಯನ್ನು ಅವರು ತಮ್ಮ ತಮ್ಮ ದಳಗಳಿಗೆ ಡಂಗುರ ಹೊಡೆಸಿ ಸಾರಿ ಹೇಳಲಿ. ಈ ರಾತ್ರಿ ಕೊನೆಯಾಗುವಷ್ಟರಲ್ಲಿ ಸೇನೆಗಳು ತಮ್ಮ ತಮ್ಮ ನೆಲೆಗಳನ್ನು ಹಿಡಿದಿರಬೇಕು. ಈ ಚಂದ್ರನ ಈ ಶುಕ್ಲ ಪಕ್ಷವು ಆ ಶುಕ್ಲ ಪಕ್ಷಕ್ಕೆ ಸೇರುವ ಮೊದಲೇ ದಶಾನನನ ದಶೆಯು ದಕ್ಷಿಣ ದಿಕ್ಕಿನ ಯಮಪುರಿಯನ್ನು ಸೇರುವುದು!'

ಎಂದು ಹೇಳುತ್ತ, ಸುಗ್ರೀವನನ್ನುದ್ದೇಶಿಸಿ ಹೀಗೆ ಮಾತನ್ನು ಮುಂದುವರಿಸಿದನು:

'ಮಿತ್ರಶ್ರೇಷ್ಠನೇ, ಯುದ್ಧಕ್ಕೆ ಮೊದಲು ರಾಯಭಾರವನ್ನು ಕಳುಹಿಸುವುದು ರಾಜಪದ್ಧತಿ. ಮೃತ್ಯುದೇವತೆಯ ಅಂಕೆಗೊಳಪಟ್ಟ ರಾವಣನು ಯಾರಮಾತನ್ನೂ ಕೇಳುವುದಿಲ್ಲ. ಆ ಪ್ರಯತ್ನ ನಿಷ್ಫಲವಾಗುವುದೆಂದು ವಿಭೀಷಣನು ತಿಳಿಸಿರುವನು. ಆದರೂ, ಆ ಗೂಢಾಚಾರ ಶುಕನನ್ನು ಸೆರೆಗಳಚಿ ಕಳುಹಿಸು. ನಾಳೆ ಸೂರ್ಯನು ತ್ರಿಕೂಟಾಚಲದ ನೆತ್ತಿಯನ್ನು ತನ್ನ ಹೊನ್ನಕಿರಣಗಳಿಂದ ಸೋಂಕುವಷ್ಟರಲ್ಲಿ ನನ್ನ ಪತ್ನಿಯನ್ನು ತಂದೊಪ್ಪಿಸಿ ಶರಣಾಗಬೇಕು. ಅಲ್ಲದಿದ್ದರೆ ವಾನರಪತಾಕಿನಿಯ ಪ್ರತಿಜ್ಞೆಯು ಲೋಕ ಲೋಕಾಂತರಗಳಿಗೆ ಸಾರಿ ಹೇಳುವಂತೆ ರಣಭೇರಿ ಮೊಳಗುತ್ತದೆ!'

ನಭೋಲಕ್ಷ್ಮಿಯು ಆ ನಟ್ಟಿರುಳಿನಲ್ಲಿ ಉತ್ತರದಿಂದ ದಕ್ಷಿಣಕ್ಕೆ ಬೆಳುದಿಂಗಳಿನ ಆಕಾಶಮಾರ್ಗದಲ್ಲಿ ಬೇಗ ಬೇಗನೆ ಸಾಗುತ್ತಿದ್ದ ಒಂದು ಅಮೃತರೂಪವನ್ನು ನೋಡಿ ಪ್ರಶ್ನಿಸಿದಳು:

'ನೀನು ಯಾರು?'

'ತಪೋಲಕ್ಷ್ಮಿ.'

ಎಂದು ಆ ಮೂರ್ತಿ ಉತ್ತರಿಸಿತು.


'ಈ ಅವಸರದ ಪ್ರಯಾಣ ಯಾವ ಕಡೆಗೆ?'

'ಸುವೇಲಾದ್ರಿ ಶಿಖರಕ್ಕೆ!'

'ಎಲ್ಲಿಂದ? ಏಕೆ?'

'ಅಕ್ಕ, ನಂದಿಗ್ರಾಮದಿಂದ ಹೊರಟೆನು, ಅಯೋಧ್ಯಾ ಪ್ರದಕ್ಷಿಣೆ ಮಾಡಿದೆನು. ಚಿತ್ರ ಕೂಟಾದ್ರಿಯನ್ನು, ದಂಡಕಾರಣ್ಯವನ್ನು, ಪಂಚವಟಿಯನ್ನು ಮತ್ತು ಕಿಷ್ಕಿಂಧೆಯನ್ನು ಸುತ್ತಿ ಈಕಡೆಗೆ ಬಂದೆನು. ಹಾಗೂ ಊರ್ಮಿಳಾ ಪ್ರಾಣನಿಗೆ ತಾಯಿಯ ಹರಕೆಯನ್ನು, ತಮ್ಮನ ಒಲ್ಮೆಯನ್ನು ಮತ್ತು ಸತಿಯ ಮೇರುಕಂಪನಕಾರಿ ಸುವ್ರತದ ಋತ ಶಕ್ತಿಯನ್ನು ಹೊತ್ತು ಹೋಗುತ್ತಿರುವೆನು. ರಾಕ್ಷಸರನ್ನು ಕೊಂದು ಅಕ್ಕಸೀತೆಯನ್ನು ರಕ್ಷಿಸಿ ಬೇಗನೆ ಮನೆಗೆ ಬರುವಂತಹ ಶುಭವನ್ನು ಹೊತ್ತು ಹೋಗುತ್ತಿರುವೆನು!'

❑



~~~~~~~~~~~~~~~~~~~~~~ ಸಂಚಿಕೆ – ೧೩ ~~~~~~~~~~~~~~~~~~~~~~

ಸ್ವಪ್ನದೇವಿಗೆ ತಪೋಲಕ್ಷ್ಮಿ

ದೇವತೆಗಳ ರಣಭೂಮಿಯಲ್ಲಿ ರಾಕ್ಷಸರು ಮತ್ತು ವಾನರರು ಅಲೌಕಿಕ ಬಲದಿಂದ ಬಲಾಢ್ಯರಾದವರು. ಅವರ ಸೈನ್ಯಗಳ ಪ್ರಾರಂಭ ಸಮಯದ ಗದ್ದಲವನ್ನು ವರ್ಣಿಸಲು ಮಾನವಮತಿಗೆ ಸಾಧ್ಯವೆ? ರಾಮನ ಸಂದೇಶವನ್ನು ಹೊತ್ತು ಹೋದ ಶುಕನು ಹಿಂದಿರುಗಲಿಲ್ಲ. ಕಪಿಸೈನ್ಯವು ಚೈತ್ರಮಾಸದ ಸೂರ್ಯನು ಮೂಡುವ ಮುಹೂರ್ತವನ್ನೇ ಕಾಯುತ್ತಿತ್ತು.

ರಾತ್ರಿಯ ಕತ್ತಲೆಯು ಕೊನೆಯಾಗುವ ಮೊದಲೇ, ಮೂಡಣ ಪರ್ವತ ಶಿಖರವನ್ನು ಬೆಳಕು ಚುಂಬಿಸುವ ಮೊದಲೇ ಇದ್ದಕ್ಕಿದ್ದಹಾಗೆ ರಾಕ್ಷಸರ ರಣಕಹಳೆ ಕೇಳಿಬಂದಿತು.
~~~~~~~~~~~~~~~~~~~~~~

ಅದು ತ್ರಿಕೂಟ ಸುವೇಲಗಳನ್ನು ಧಿಗಿಲೆನ್ನುವ ರೀತಿ ಕಂಪಿಸಿ ಪುಲಕವನ್ನುಂಟು ಮಾಡಿತು! ಅದರ ಜೊತೆಗೆ ನಿಶಾಚರರ ರಣೋತ್ಸಾಹವನ್ನು ಸೂಚಿಸುವ ಕೋಟಿ ಕಂಠಗಳಿಂದ ಹೊಮ್ಮಿದ ಭೀಕರ ಧ್ವನಿ ಕೇಳಿಬಂದಿತು!

ಈ ಕಡೆ ಆ ಧ್ವನಿಗೆ ಪ್ರತಿಧ್ವನಿ ಎನ್ನುವಂತೆ ಉತ್ಸಾಹ ಉಕ್ಕೆದ್ದು ಮುಗಿಲಸಮಕ್ಕೆ ಸಮರ ಸಂಕೇತ ತೂರ್ಯವು ಮೊಳಗಿತು! ತಕ್ಷಣ ಸೇನಾ ಪಡೆ ಪಡೆಯಲ್ಲಿ ಧಳ ಧಳ ಧಳವೆಂದು ರಣಭೇರಿಗಳು ಮೊಳ ಮೊಳಗಿದುವು. ಕಿವಿ ಕಿವುಡಾಗುವಂತೆ ಸದ್ದು ಎದ್ದೆದ್ದು, ಸೈನಿಕರ ನಡೆಯ ಧೂಳಿಯಿಂದ ಕಣ್ಣು ಕಂಗೆಟ್ಟವು. ಬೃಹತ್‌ಶರೀರದ ಸೈನಿಕರ ವೇಗನಡೆಗೆ ಒಂದು ಬಲವಾದ ಗಾಳಿ ಸೃಷ್ಟಿಗೊಂಡು ಗಿರಿಶಿಖರದ ವೃಕ್ಷ ಸಮೂಹವನ್ನು ಬಡಿಯಿತು.

ತಳತಳಿಸಿ ಹೊಳೆಯುತ್ತ ಉದಯಿಸಿದ ಸೂರ್ಯನ ಕಿರಣಹಸ್ತವು ಅಂದು ಯುದ್ಧದಲ್ಲಿಯ ವಧೆಯ ಹಸಿಮಾಂಸದ, ಭೀಷಣರಕ್ತದ ಕೆಂಪಾದ ಧರಣಿಯಲ್ಲಿ ಕಲುಷಿತವಾಯಿತು!

ಮರುತ್ಸುತಂಗಿದಿರಾದ ಶಕ್ರಜಿತು ಮೇಘನಾದನ ರಥಂ, ತಾನಾಯ್ತು ಚೂರ್ಣೀಕೃತಂ.

ನೀಲನು ಪ್ರಹಸ್ತನ, ಮೈಂದನು ವಜ್ರಹನುಮನ, ದ್ವಿವಿದನು ರಾಹುರೋಷನ ಸೈನ್ಯವನ್ನು ಎದುರಿಸಿದರು. ವಾಲಿಪುತ್ರನು ಮಹಾಪಾರ್ಶ್ವನನ್ನು; ಋಷಭ ಗವಾಕ್ಷನ ಜೊತೆಗೂಡಿ ಮಹೋದರನ ಸೇನೆಯನ್ನು ಎದುರಿಸಿದನು. ಮೇಘನಾದನ ಪಡೆಯನ್ನು ಆಂಜನೇಯನ ದಳ ಎದುರಿಸಿತು. ನಳನು ಅಕಂಪನನನ್ನು; ದರೀಮುಖನು ವಜ್ರ ದಂಷ್ಟ್ರನನ್ನು ಎದುರಿಸಿದನು. ಸುಷೇಣನು ದಧಿಮುಖನ ಬೆಂಬಲದಿಂದ ಸುಪ್ತಘ್ನ ಮಕರಾಕ್ಷರನ್ನು ತಡೆದನು.

ಶತಬಲಿಯ ಸೇನೆಯು ಬ್ರಹ್ಮಾಕ್ಷ ಧೂಮ್ರಾಕ್ಷರನ್ನು ಹಿಂದೆಗೆಯುವಂತೆ ಮಾಡಿತು. ಗಜ ದುರ್ಮುಖನೊಡನೆ ಕೂಡಿ ಗವಯರು ಅಗ್ನಿಕೇತುವನ್ನು ಎದುರಿಸಿದರು. ತಾರನು ಕೇಸರಿಯೊಡಗೂಡಿ ಸೂರ್ಯಶತ್ರುವಿನ ಮೇಲೆ ಆಕ್ರಮಣ ಮಾಡಿದನು. ರಾಕ್ಷಸರ ಕಾರಣದಿಂದ ಹೀಗೆ ಬೆಳಗಾಗುವಷ್ಟರಲ್ಲಿಯೇ ಪ್ರಾರಂಭವಾಗಿ ದನುಜ ವಾನರರ ಯುದ್ಧ ನಡೆಯಿತು. ಸಂಜೆಯ ಆಕಾಶವು ಕಾಳಗದಯುದ್ಧ ಭೂಮಿಯ ಕೆಂಪುನೀರಿನ ಆವಿಯಿಂದಾದ ಮುಗಿಲುಗಳಿಂದ ಕೂಡಿತ್ತು. ಅದು ರಕ್ತದಲ್ಲಿ ಮಿಂದು ಕೆಂಪುಬಣ್ಣದ ಮಣ್ಣಿನಿಂದ ಹೊಳೆಯುತ್ತ ಸಾಕ್ಷಾತ್ ಮೃತ್ಯುವಿನಿಂದ ದೀಕ್ಷೆ ಪಡೆದಂತಿತ್ತು. ಅದು ತಾಂತ್ರಿಕ ತಪಸ್ಸಾಧನಾಸಕ್ತ ರಕ್ತವಸ್ತ್ರದ ಭಯಂಕರ ಕಪಾಲಿಕನಂತೆ ಜಿನದ್ವೇಷ ವೇಷದಿಂದ ಜ್ವಲಿಸುತ್ತಿತ್ತು!

ಸತ್ತವರು ಯಾರು? ಗಾಯಗೊಂಡವರು ಯಾರು? ಕಡಿದವರು ಯಾರು?

ಉರುಳಿಬಿದ್ದವರು ಯಾರು? ಯಾರು ಯಾರನ್ನು ಎದುರಿಸಿದರು? ಯಾರು ಹೇಗೆ ಹೋರಾಡಿದರು? ಕೇಳುವವರಿದ್ದರೂ ಅದನ್ನು ಹೇಳುವವರು ಯಾರು? ಲೆಕ್ಕದ ಪಕ್ಕೆ ಮುರಿಯುವಂತೆ ಎರಡೂ ಕಡೆಯ ಸೈನಿಕರು ಕಿಕ್ಕಿರಿದು ಹೋರಾಡಿದರು. ಹೆಸರಿರದ ಸಾಮಾನ್ಯ ಪಟುಭಟರ ಮಾತಿರಲಿ; ಹೆಸರಾಂತ ವೀರ ಶೂರರ ಹೆಸರಿಸಲು ಬಣ್ಣಿಸಲು ಈ ಲೋಕದ ಕವಿಯ ನಾಲಗೆಗೆ ಸಾಧ್ಯವೆ? ಕೇಳು, ಚಿತ್ರಗುಪ್ತನ ಬರೆಯುವ ಕೈ ಬಳಲಿತು! ಲೇಖನಿಯ ಮಸಿ ಬತ್ತಿತು! ತಮ್ಮ ಕರ್ತವ್ಯವನ್ನು ಕಾಯುತ್ತಿದ್ದ ಕಾವಲು ಆಳುಗಳು ಸಾವಿನ ಊರಿನ ಬಾಗಿಲನ್ನು ಕಿತ್ತು ಎತ್ತಿ ಹೊತ್ತು ದೂರಕ್ಕೆ ಹೊಯ್ದರು. ಹೇಳು, ಮಡಿದ ವೀರರ ಎಣಿಕೆಯನ್ನು, ಎಣಿಸಲಾರದ್ದನ್ನು ಸೂಚಿಸಲು ಇಷ್ಟೇ ಸಾಕಲ್ಲವೆ?

ಕೇಳು, ಆದರೂ ಈ ಪೃಥ್ವಿಯಲ್ಲಿ ಹೆಸರುವಾಸಿಯಾದವರ ಒಂದೆರಡು ಕೃತಿಗಳನ್ನು ಅವರ ನಡೆಯನ್ನು ಮತ್ತು ಸಮರ ಸಂಗತಿಗಳನ್ನು ಹೇಳುತ್ತೇನೆ. ದ್ವಂದ್ವ ಯುದ್ಧದಲ್ಲಿ ದ್ವಿವಿದನು ವಜ್ರಹನುಮನನ್ನು ಕೊಂದು ತಾನೂ ಗಾಯಗೊಂಡು ಉರುಳಿ ಬಿದ್ದನು. ಕಪಿಧ್ವಜರ ವೀರ ಕವೀಂದ್ರ ಮೈಂದನು ರಾಹುರೋಷನನ್ನು ಅರೆಬಂಡೆಗಳಿಂದ ಹೊಡೆದು ಲಂಕೆಗೆ ಮರಳುವಂತೆ ಮಾಡಿ ದಣಿದನು. ಅಂಗದನ ಮುಂದೆ ಹಿಮ್ಮೆಟ್ಟುತ್ತ ಮಹೋದರನ ಸೇನೆ ಬಹಳ ಲೂಟಿಯಾಗಿ ಹೋಯಿತು.

ಶಕ್ತಿಪೂಜಕ ಮಹಾಪಾರ್ಶ್ವನ ಎದುರು ಋಷಭ ವಾನರ ಸೇನೆಯು ತತ್ತರಿಸುತ್ತ ಬೆದರಿ ಹಿಂಜರಿಯಿತು. ಶತಬಲಿಯ ಅಪಾರ ಸೇನೆಯ ಹೊಡೆತಕ್ಕೆ ಧೂಮ್ರಾಕ್ಷನು ಬಿದ್ದನು. ಅವನ ಪಡೆ ಅವನನ್ನು ಔಷಧ ನಿಕೇತನದ ಕಡೆ ಶುಶ್ರೂಷೆಗೆ ಹೆತ್ತೊಯ್ದಿತು. ಆಂಜನೇಯನಿಗೆ ಇಂದ್ರಜಿತು ಮೇಘನಾದನು ಎದುರಾದನು. ಆಂಜನೇಯನ ಮುಷ್ಟಿಯ ಮುದ್ಗರದ ಕಠೋರ ಬಡಿತಕ್ಕೆ ಅವನ ರಥ ಪುಡಿ ಪುಡಿಯಾಯಿತು. ರಾವಣನ ಪ್ರಿಯಪುತ್ರನು ತನ್ನ ತೇರು ಮುರಿದು ಬಿದ್ದುದರಿಂದ ಗರ್ವಭಂಗಿತನಾದನು. ರಾತ್ರಿಯ ಆಸರೆಯಲ್ಲಿ ಮಾಯಾ ವಿಧಾನದಿಂದ ರಾತ್ರಿಯ ಯುದ್ಧ ರಚಿಸಲು ನಿಶ್ಚಯಿಸುತ್ತ ಹಿಂದಿರುಗಿದನು.

ಮೇಘನಾದನ ಮಾಯೆ; ತೀಡಿದುದು ಭುವನಮಂ ಕಾಡಿಗೆಯ ಕಗ್ಗತ್ತಲಕ್ಕಿಗಳ್ಗದ್ವೈತ ತಾಂ ಪ್ರತ್ಯಕ್ಷಮಪ್ಪಂತೆವೋಲ್.

ಅಂದಿಗೆ ಹಗಲು ಕೊನೆಗೆ ಸರಿಯುತ್ತಿತ್ತು. ಆಗ ರವಿಯು ರಕ್ತದಿಂದ ತೊಯ್ದು ಕೆಂಪಾದ ಬಂಗಾರ ಹೊಳಪಿನ ಬೃಹದ್‌ವಸ್ತ್ರವನ್ನು ಶುಚಿಯಾಗಿಸಲು ಮುದ್ದೆಮಾಡಿ ಪಶ್ಚಿಮದ ಕಡಲಿನಲ್ಲಿ ಅದ್ದಿದನೋ ಎನ್ನುವಂತೆ ಆ ಸಮುದ್ರ ಭಯಂಕರ ಓಕುಳಿ ಬಣ್ಣವನ್ನು ಹೊಂದಿತು. ಆ ಕಡೆಗೆ ಸೂರ್ಯನ ಬಿಂಬದ ಕೆಂಡಮಂಡಲವು ನೀರಿನಲ್ಲಿ ಮುಳುಗಲು, ಅಲ್ಲಿಂದ ಕಲ್ಲಿದ್ದಲು ಎದ್ದಿತೊ ಎನ್ನುವಂತೆ ಉದಯಾದ್ರಿ ಕರ್‍ರಗಾಯಿತು.

ಆಗ ಆದ ಆಶ್ಚರ್ಯವನ್ನು ಏನೆಂದು ಹೇಳುವುದು! ಆ ರಾತ್ರಿ ಪಕ್ಷದ ಮೊದಲಿನ ಪಾಡ್ಯದಲ್ಲಿ ಚಂದ್ರನು ಮೂಡಿದುದನ್ನು ಕಂಡವರು ಯಾರು? ಅದಕ್ಕೆ ಮೇಘನಾದನ ಮಾಯೆ ಕಾರಣ. ಭುವನವನ್ನು ಆವರಿಸಿದ ಕಾಡಿಗೆಯ ಕಗ್ಗತ್ತಲು ಕಣ್ಣುಗಳಿಗೆ ಬೆಳಕು ಮತ್ತು ಕತ್ತಲು ಒಂದಾದ ಅದ್ವೈತದ ಪ್ರತ್ಯಕ್ಷಾನುಭವ ಉಂಟಾಗುವಂತೆ ಮಾಡಿತು. ವೈರಿಗಳು ಯಾರು, ಸ್ನೇಹಿತರು ಯಾರು ಎಂದು ತಿಳಿಯದ ಒಂದು ಅನುಪಮವಾದ ಕತ್ತಲ ಹೊಗೆಯ ಭ್ರಮೆ ಕವಿದು ಕಪಿಧ್ವಜರ ಕಣ್ಣಿನದೃಷ್ಟಿ ದಾರಿ ತಪ್ಪಿದಂತಾಯಿತು.

ಕತ್ತಲೆಯಲ್ಲಿ ಓಡಾಡುವ ರಾಕ್ಷಸರ ಉತ್ಸಾಹ ಇಮ್ಮಡಿಯಾಯಿತು. ಅವರು ಇದೇ ಸುಸಮಯವೆಂದು ತಿಳಿದು ಕಾಡಿನಲ್ಲಿ ಸಂಚರಿಸುವ ವಾನರ ಸೈನ್ಯದ ಮೇಲೆ ನಾನಾ ಆಯುಧ ಪ್ರಕಾರಗಳಿಂದ ಆಕ್ರಮಣಮಾಡಿ ಕೊಂದುಹಾಕಿದರು.

ಕೆಲವರು ಕತ್ತಲೆಯಲ್ಲಿ ತಮ್ಮವರೆಂದು ಗೊತ್ತಾಗದೆ ಇರಿದು ಹಾಕಿದರು. ಕೆಲವರು ಹಗೆಗಳನ್ನೇ ತಮ್ಮ ಕಡೆಯವರೆಂದು ತಿಳಿದು ಅವರ ಪಕ್ಕದಲ್ಲಿಯೇ ನಿಂತು ಬಡಿದಾಡಿದರು ರಣಭೇರಿ ಪಣವ ಎಂಬ ಚರ್ಮವಾದ್ಯಗಳ ರಣವಾದ್ಯ ಶಬ್ದವನ್ನೇ ಗೆಲ್ಲುವಂತೆ ಸೈನಿಕರ 'ನಿಲ್ಲು, ಕೊಲ್ಲು, ಇರಿ, ಕೆಡವು, ಹೊಡಿ' ಎಂಬ ಗಲಿಬಿಲಿ ಗೊಂದಲದ ಅಪಾರಶಬ್ದ ತೀಕ್ಷ್ಣವಾಗಿ ಹೊಮ್ಮಿತು.

ಕತ್ತಲೆಯ ಕುರುಡುತನಕ್ಕೆ ಕಡಿವಾಣವಿಕ್ಕಿದಂತೆ ಅಲ್ಲಲ್ಲಿ ದೊಡ್ಡ ಬಿದಿರುಮೆಳೆಗಳಿಗೆ, ಮರಗಳಿಗೆ ಉರಿಬೆಂಕಿ ಹಚ್ಚಿದರು. ಆ ಕೆಂಬೆಂಕೆಯು ಕತ್ತಲಿನ ಕೊರಳಿಗೆ ತೋರಣದ ಕಂಠಹಾರವೆನ್ನುವಂತಿತ್ತು. ಅದು ಧಗಧಗಿಸಿ ಉರಿಯುತ್ತ, ಉರಿಗೋಪುರದ ಸಾಲುಗಳನ್ನು ಕಟ್ಟಿತು. ತಕ್ಷಣ ಆ ಕೆಂಪಾದ ಕಾಂತಿಯು ಕೊಲೆಗೆ ಕಳೆಯೇರುವಂತೆ ರಂಜಿಸಿತು.

ಆಗ ನೀಲನ ಆಜ್ಞೆಯಲ್ಲಿ ಸುಗ್ರೀವ ಸೇನೆಯು ನೂರ್ಮಡಿಸಿದ ಉತ್ಸಾಹದಲ್ಲಿ ಮುಂದೆ ನುಗ್ಗಿ ಕಾದಾಡಿತು. ಆ ರಭಸಕ್ಕೆ ರಾಕ್ಷಸರ ಸೇನೆಯು ಅವಿವೇಕದ ಬಿರುಗಾಳಿಗೆ ಸಿಕ್ಕಿಹಾಕಿಕೊಳ್ಳುವ ಸಮುದ್ರದ ನೌಕೆಗಳಂತೆ ಕಂಗೆಟ್ಟವು. ಸುಳಿ ಸುತ್ತಿ ತಿರ್‍ರನೆ ತಿರುಗಿ ಮರುಗಿ ದೆಸೆಗೆಟ್ಟವು.

ಕೈಕೊಂಡನದ್ಭುತದ ಕೈತವನ ಮಾರ್ಗದಿಂ ಕಾಳ ಕೂಟೋಪಮದ ಕೂಟರಣಮಂ.

ಇಂದ್ರಜಿತು ಅದನ್ನು ಕಂಡನು. ಅದ್ಭುತವಾದ ಕಪಟ ಮಾರ್ಗದಿಂದ ಘೋರವಾದ ವಿಷಕ್ಕೆ ಸಮನಾದ ಮೋಸಯುದ್ಧವನ್ನು ಕೈ ಕೊಂಡನು. ಹೋಲಿಕೆಗೆ ಮೀರಿದ ಅದನ್ನು ಚಿತ್ರೀಕರಿಸುವುದನ್ನು ಮುಂದಕ್ಕೆ ಕೇಳಿ. ಆ ರೂಪಿಸುವಿಕೆಯ ಅಪರಾಧವನ್ನು ಕ್ಷಮಿಸುತ್ತ ಸಹೃದಯರು ಅದನ್ನು ತಮ್ಮ ತಮ್ಮ ಸಂಸ್ಕೃತಿಗೆ ಸುಕೃತಕ್ಕೆ ಸಾಧ್ಯವಾದಷ್ಟು ಸವಿಯುವುದು.

ಆ ಕೂಟರಣಕ್ಕೆ ಮೂರುಲೋಕವು ಗದಗದಿಸಿ ನಡುಗಿತು. ಆಕಾಶವು ತಲ್ಲಣಿಸಿತು. ಪರ್ವತಕುಲವು ತತ್ತರಿಸಿತು. ನೀರು ಒಳಗೊಳಗೆ ಕುದಿಯುತ್ತ ಗದಗದಿಸಲು, ಪ್ರಳಯ

ಶಂಕೆಯಿಂದ ಮಹಾಸಮುದ್ರಗಳು ನಿಟ್ಟುಸಿರು ಬಿಟ್ಟವು. ಇದ್ದಕ್ಕಿದ್ದಂತೆ ಕಡಲ ನೀರುಗಳೇ ಹೆದರಿ ಆಗಸಕ್ಕೆ ಹಾರಿದವೊ, ಬೆಟ್ಟಗಳೇ ಬೆದರಿ ಗಗನಕ್ಕೆ ಚೆದರಿದವೊ ಎನ್ನುವಂತೆ ಬಲವಾದ ಮುಗಿಲುಗಳು ಕತ್ತಲೆಗೆ ಕಪ್ಪಿಟ್ಟು ಕವಿದುವು. ಅವು ಗುಡುಗು ಬಂಡೆಯಂತೆ ಮೊಳಗುತ್ತ ದಿಗಂತದ ಒಂದು ತುದಿಯಿಂದ ಇನ್ನೊಂದು ತುದಿಗೆ ಉರುಳಿದವು. ಕತ್ತಲಿಗೆ ಕಾಂತಿಯ ಕಠಾರಿ ಎನ್ನುವಂತೆ ಕೆಮ್ಮಿಂಚುಗಳು ಬಳ್ಳಿಯಾಗಿ ಹರಿದು ಇರಿದವು. ಪ್ರಳಯ ತಾಂಡವ ಕಾಲದಲ್ಲಿ ಭೈರವನೇ ಬ್ರಹಾಂಡ ಚಂಡೆಯನ್ನು ಬಡಿಯುವಂತೆ ಸಿಡಿಲುಗಳು ಹೊಮ್ಮಿ ಕಿವಿಯನ್ನು ಕಿವುಡಾಗಿಸಿದವು.

ತಗುಲಿದರೆ ತಲೆಯೊಡೆಯುವ ದೊಡ್ಡ ದೊಡ್ಡ ಆಲಿಕಲ್ಲುಗಳೊಡನೆ ಒನಕೆಯಷ್ಟು ದಪ್ಪನಾದ ಮಳೆ ಸುರಿಯಿತು. ಹೇಳುವುದೇನು, ಕಣ್ಣು ಮುಚ್ಚಿ ತೆರೆಯುವಷ್ಟರಲ್ಲಿ ಆ ಮೆಳೆಯ ಉರಿಗಳು ನಿಶ್ಶೇಷವಾಗಿ ಹೋದವು. ಕಣಿವೆ ತುಂಬಿ ಕೆರೆಯಾಯಿತು. ಹರಿವ ಕಾಲುವೆ ಹಿರಿಯ ತೊರೆಯಾಯಿತು. ಕೋಟೆಯ ಸುತ್ತಲೂ ಇದ್ದ ಪಾತಾಳ ಕಂದಕಗಳು ಸಮುದ್ರ ಸಂಬಂಧಿಗಳಂತೆ ತುಂಬಿ ಹರಿದವು. ದಶಗ್ರೀವ ಸುತಶ್ರೇಷ್ಠನ ಕೂಟವಿದ್ಯಾ ಆಟೋಪದಿಂದ ಕೆಸರಿನಲ್ಲಿ, ನೀರಿನಲ್ಲಿ, ಹುಸಿ ಮಣ್ಣಿನಲ್ಲಿ ಸಿಲುಕಿಕೊಂಡ ಕಪಿಸೇನೆಯ ಸಂಕಟವನ್ನು ಅಕಟಕಟಾ ಏನೆಂದು ವರ್ಣಿಸುವುದು!

ಹೀಗೆ ಕರುಣಾಜನಕ ಸ್ಥಿತಿಗೆ ಸಿಲುಕಿದ ರಾಮಸೇನೆಯನ್ನು ಕಂಡು ಕುಟಿಲಯೋಧಿ ಬ್ರಹ್ಮವರದಿಂದ ಗರ್ವಿಷ್ಠನಾದ ಇಂದ್ರಜಿತು ಮೇಘನಾದನು ಸಂತೋಷ ಪಟ್ಟನು. 'ಈ ಕಾಡು ಜೀವಿಗಳ ಸೈನ್ಯವೆಂಬ ಹೆಸರಿನ ಬರಿ ಗಡಿಬಿಡಿಯ ಗುಂಪನ್ನು ರಾತ್ರಿ ಅಂತ್ಯವಾಗುವಷ್ಟರಲ್ಲಿ ನಿರ್ನಾಮ ಮಾಡುತ್ತೇನೆ' ಎಂದು ಅಬ್ಬರಿಸಿದನು. ಮುಗಿಲ ಮರೆಹೊಕ್ಕು ಮಾಯೆಯ ರೂಪ ಧರಿಸಿದನು. ಅಸ್ತ್ರಗಳ ಮಳೆಯನ್ನು ಸುರಿಸಿದನು. ಅದಕ್ಕೆ ಹೋಲಿಸಿದರೆ ವೈರಿಯ ವಿನಾಶದ ಆಧುನಿಕ ವಿಜ್ಞಾನ ಕಲೆ ಕೈಗೊಳ್ಳುತ್ತಿರುವ ಭಯಾನಕ ಉಪಾಯಗಳು ಶಿಶುಕ್ರೀಡೆಯಂತಿವೆ.

ಆ ರಾಕ್ಷಸನ ಅಂಬುಗಳು ಸಿಡಿಲುಗಳೇ ಬಾಣಗಳಾದುವೆನ್ನುವಂತಿದ್ದವು. ಅವುಗಳು ಸಿಡಿದ ಸದ್ದಿಗೆ ಕಿವಿಗಳು ಕಿವುಡಾದವು. ಅವುಗಳು ಬಿರಿದ ರಭಸಕ್ಕೆ ಕಪಿಸೇನೆಯ ದೇಹಗಳು ಛಿದ್ರವಾದವು. ವಾನರರು ಆ ಸುಟ್ಟ ಹೊಗೆಯ ಕೆಟ್ಟನಾತ ತಡೆಯಲಾರದೆ ಉಸಿರುಕಟ್ಟಿದಂತಾದರು. ಅವರು ತಂಡ ತಂಡಗಳಾಗಿ ದೆಸೆದೆಸೆಗೆ ಶುದ್ಧಗಾಳಿಯನ್ನು ಹುಡುಕುತ್ತ ಹೊರಟರು. ಆ ವಾನರ ಪ್ರಮುಖ ಮಹಾಮೇಧಾವಿಗಳಿಗೂ ಭ್ರಾಂತಿ ಆವರಿಸಿತು.

ಕೌಶಿಕ ಪ್ರಿಯಶಿಷ್ಯ ರಘುರಾಮನು ಆ ದುಸ್ಥಿತಿಯನ್ನು ತಿಳಿದನು. ಭಯಂಕರ ಪ್ರತೀಕಾರವನ್ನುಂಟು ಮಾಡಲು ಮತ್ತು ಸಮಸ್ತ ಸೇನೆಯ ಕಳವಳಗೊಂಡು ಬಳಲಿದ

ಚೇತನಕ್ಕೆ ಪ್ರಾಣವು ಮರುಕಳಿಸುವಂತೆ ಮಾಡಲು ತನ್ನ ದಿವ್ಯ ಕೋದಂಡವನ್ನು ಕೈಗೆ ತೆಗೆದುಕೊಂಡನು.

"ಅರಸಿಮಾ ಮಾಯಾವಿಯಿರ್ಪ ನೆಲೆಯಂ. ಬೆಳಗಿದಪೆನೀ ನಭಸ್ತಲವನಸ್ತ್ರಜ ಗಭಸ್ತಿಯಿಂ."

'ಆ ಮಾಯಾವಿಯ ನೆಲೆಯನ್ನು ಹುಡುಕಲು ಬಾಣಗಳ ಕಿರಣಗಳಿಂದ ಆಕಾಶ ಭೂಮಿ ವನಸಮಸ್ತವನ್ನೂ ಬೆಳಗಿಸುತ್ತೇನೆ' ಎಂದು ಅಪ್ಪಣೆ ಮಾಡಿದ ದಶರಥಸುತನನ್ನು ಅವರು ಯಾರೂ ಕಾಣಲಿಲ್ಲ. ಸಿಂಜನಿಯದನಿ ಸೃಷ್ಟಿಯಾಗಿ ಕಿವಿಸೇರುವ ಮೊದಲೆ, ಬಾನಿಗೆ ಭುವಿಯಿಂದ ಕವಣೆ ಎಸೆದಂತಾಯಿತು. ಹಗಲು ರಾತ್ರಿಗೆ ಇಣುಕಿತೆನ್ನುವಂತೆ ಭೂಮಿ ಆಗಸವೆರಡನ್ನೂ ಚಂದ್ರ ಸೌಂದರ್ಯವಾಗಿಸಿತು. ಅವನ ಬಾಣ ಅಗ್ನಿಗೆ, ಸೂರ್ಯನ ಬೆಳಕಿನಲ್ಲಿ ಕಾಣುವಷ್ಟು ಸ್ಪಷ್ಟವಾಗಿ ಮರ ಪೊದೆ ಕಾಡು ಪರ್ವತಗಳು ವಿವಿಧ ಛಾಯಾ ಚಿತ್ರ ರಮಣೀಯ ಕೃತಿಗಳಾಗಿ ಗೋಚರಿಸಿದವು.

ಶತ್ರುಗಳಿಗೆ ತಾಪವನ್ನುಂಟುಮಾಡುವ ಪರಂತಪ ಧೈರ್ಯಶಾಲಿಗಳು, ಹಾರುವ ಉತ್ಸಾಹಿ ಗಗನ ಗಾಮಿಗಳು ಶರಭ ಸುಷೇಣ ಗವಾಕ್ಷ ಗಜ ಗವಯ ಶತಬಲಿ ಋಷಭ ಅಂಗದರು. ಅವರು ಹಿರಿಯರಾದ ಹನುಮ ಜಾಂಬವರ ಕಟ್ಟಳೆಯಲ್ಲಿ ಇಂದ್ರಜಿತುವನ್ನು ಶೋಧಿಸಲು ಆಕಾಶಕ್ಕೆ ನೆಗೆದರು.

ಕಣ್ಣಿಗೆ ಕಾಣಿಸದ ಕಲಿ ಮೇಘನಾದನು ಅವರನ್ನು ಕಂಡನು ಅವರ ಮೇಲೆ ಸಿಡಿಲಿನಂತಹ ಬಾಣಗಳನ್ನು ಪ್ರಯೋಗಿಸತೊಡಗಿದನು. ಗಿಡುಗನ ಕ್ರೂರ ಉಗುರುಗಳಿಂದ ತಪ್ಪಿಸಿಕೊಳ್ಳಲು ರಕ್ಷಣೆಗಾಗಿ ಪಕ್ಷಿಗಳು ಹಾರುವಂತೆ ಅವರು ಅತ್ತ ಇತ್ತ ನೆಗೆದರು! ಕಪ್ಪೆಗಳಂತೆ ಕುಪ್ಪಳಿಸಿದರು. ಸರ್ಪಗಳಂತೆ ಕೊಂಕಿ ಬಳುಕುತ್ತ ಹರಿದಾಡಿದರು. ಮೀನುಗಳಂತೆ ಮುಗಿಲ ಹಾದಿಯಲ್ಲಿ ಈಜಾಡಿದರು. ಹೊಗೆಯಲ್ಲಿ ಮೇಲೇರಿದರು. ಕಲ್ಲುಗಳಂತೆ ಉರುಳಿದರು. ಬಾಣ ತಾಗಿ ಮೈ ಸೀಳಲು ಎಷ್ಟೋ ಜನ ಪ್ರಾಣ ಬಿಟ್ಟರು!

ಮಾಯೆಯಿಂದ ಮರೆಯಾಗಿದ್ದ ರಾವಣಿಯನ್ನು ಕಾಣುವವರಾರು? ಅದು ಹಾಗಿರಲಿ, ರಾಘವಾಸ್ತ್ರ ಜ್ಯೋತಿಯು ತನ್ನ ಪಕ್ಷಕ್ಕೆ ತಾನೇ ವಿದ್ರೋಹಿಯಾಯಿತು ಎನ್ನುವಂತೆ ವಾನರ ವ್ಯೂಹ ಸ್ಥಿತಿಯಾಯಿತು. ಅದರ ಜೊತೆಗೆ ದಶರಥಸುತನು ಇರುವ ಸ್ಥಳವನ್ನು ಪ್ರಕಟವಾಗಿ ತಾರಾಕ್ಷಿವಲ್ಲಭನಿಗೆ ತೋರಿಸಿತು. ಆಗ ಅವನು ಎಲ್ಲರನ್ನೂ ನಾಗಾಸ್ತ್ರದಿಂದ ಕೊಲ್ಲುವೆನು ಎಂದು ಅಮೋಘವಾದ, ಮರಣವನ್ನುಂಟುಮಾಡುವ ವಿಷದ ಹಾವಿನ ಪ್ರವಾಹದ ಬಾಣವನ್ನು ಹೂಡಿದನು.

ಅದು ಅಂಬರದ ಸೀಮೆಯನ್ನು ಘೋರ ಅಂಧಕಾರದ ಹೊಗೆಯಿಂದ ತುಂಬಿತು. ಅದು ಕಿಡಿ ಸಮೂಹದ ಹೆಡೆಮಣಿಗಳನ್ನು ಕೊಡ ಕೊಡುಹುತ್ತ ಎಂಟು ದಿಕ್ಕಿಗೆ

ಸಿಡಿಸಿತು. ಒಂದು ಮತ್ತೊಂದನ್ನು ಉಗುಳಿತು ಎನ್ನುವಂತೆ ಎರಡು ಎರಡೆರಡು ಆಯಿತು. ಆ ನಾಲ್ಕು ಎಂಟಿನ, ಎಂಟು ಹದಿನಾರು ಆಯಿತು. ಅದು ಕಪಿಸೈನಿಕರ ಸಂಖ್ಯೆಯ ಎಣಿಕೆಯನ್ನು ಮೀರಿ ಸ್ಪರ್ಧಿಸುವಂತೆ ತನ್ನ ಸಂಖ್ಯೆಯನ್ನು ಗುಣಿಸಿ ಹೆಚ್ಚಿಸಿಕೊಂಡಿತು.

ಸಿಡಿದೊಡೆದ ಬಾಣ ಬಾಣಗಳಿಂದ ಹಾವಿನ ರೂಪಿನ ಹೊಗೆಯ ಸುರುಳಿಗಳು ಹೊಮ್ಮಿದವು. ಅವು ಹರಿಹರಿಯುತ್ತ ಮೆಲ್ಲ ಮೆಲ್ಲನೆ ವಾನರರ ಮೈಗಳನ್ನು ಹಿಡಿದು ಸುತ್ತಿದವು. ಮೂಗಿನ ರಂಧ್ರಗಳಿಂದ ಪ್ರಾಣ ಗೃಹವನ್ನು ಹೊಕ್ಕು ನಂಜನ್ನು ಕಾರಿದವು. ಮಹಾಕಾಯಗಳಿಗೆ ವಿಷವೇರಿ ಹಸುರಾಗಲು ಆ ವೀರಸೈನಿಕರ ಚೈತನ್ಯ ಉಡುಗಿಹೋಗಿ ಅವರು ನೆಲಕ್ಕೆ ಉರುಳಿದರು!

ಸಮಸ್ತ ಸಮರ ಭೂಮಿಯು ನಿಶ್ಚಲವಾಗಿ ನಿದ್ರಿಸುವಂತೆ ನಿಶ್ಯಬ್ದವಾಯಿತು. ವಿಭೀಷಣನು ಹೊರತಾಗಿ ರಾಮಲಕ್ಷ್ಮಣರ ಸಹಿತ ಎಲ್ಲ ಕಪಿಸೈನ್ಯವು ವಿಷಮೂರ್ಛೆಗೆ ಒಳಗಾಯಿತು. ಮೇಘನಾದನು ಅದನ್ನು ಕಂಡು ಉದ್ದೇಶವನ್ನು ನೆರವೇರಿಸಿದ ಹೆಮ್ಮೆಯಿಂದ ಪುರಕ್ಕೆ ಹಿಂತಿರುಗಿದನು. ತನ್ನ ಸಾಹಸದ ಸಂತೋಷವನ್ನು ಘೋಷಿಸಲು ತಂದೆಯು ಕರೆದಿದ್ದ ರಾತ್ರಿಯ ಸಭೆಗೆ ಹೋದನು.

ಆತ್ಮವನ್ನು ಕಡೆಗಣಿಸಿದ ಅನಾತ್ಮ ವಿಜ್ಞಾನದ ಇಂದ್ರಿಯ ಸುಖಭ್ರಮೆಯ ತಮಸ್ಸಿನ ಅಜ್ಞಾನಕ್ಕೆ ಉರುಳಿರುವ ನಾಗರಿಕತೆಯ ನಿದ್ರೆಯು-ತನ್ನ ಬಳಿ ಅರಿವು ಹುಟ್ಟುವ ಕಾಲದ ಪ್ರಾಪ್ತಿಯ ಪ್ರಭಾವದಿಂದ ತನ್ನ ಜಾಡ್ಯಕ್ಕೆ ತಾನೇ ತನ್ನ ಅಂತರಂಗದಿಂದ ಮದ್ದನ್ನು ಒದಗಿಸಿಕೊಳ್ಳುತ್ತದೆ. ಹಾಗೆ ರಾಮಸೇನೆಯ ಭೀಕರವಾದ ಸ್ಥಿತಿಗೆ ಕಾರಣವಾದ ಕೂಟ ರಾಕ್ಷಸಾಕೃತಿಗೆ ರಾಕ್ಷಸನಾದ ವಿಭೀಷಣನೇ ವಿಮೋಚನೆಯನ್ನು ಉಂಟುಮಾಡಿದನು.

'ನಿಧಾನ ಮಾಡಿದರೆ ಎಲ್ಲರೂ ಮೂರ್ಛೆಯಿಂದ ಮೆಲ್ಲನೆ ಮೃತ್ಯುವಿಗೆ ತುತ್ತಾಗುವುದು ನಿಜ. ಕಾಲಮೀರುವ ಮೊದಲೇ ವಿಷದ ಪ್ರಭಾವವನ್ನು ತಗ್ಗಿಸಬೇಕು. ಸುಷೇಣನು ಮಂತ್ರ ವಿದ್ಯಾ ಪ್ರವೀಣ ಎನ್ನುವುದನ್ನು ಕೇಳಿ ತಿಳಿದಿದ್ದೇನೆ. ಅವನು ಈ ವಿಷಕ್ಕೆ ಹೆಚ್ಚು ಹೊತ್ತು ಒಳಗಾಗಿರಲಾರ.' ಎಂದುಕೊಂಡು ವಿಭೀಷಣನು ಕಂದು ಬಣ್ಣದಿಂದ ಕೂಡಿದ ಧ್ವಜವನ್ನು ಹುಡುಕುತ್ತ ತೊಳಲಾಡುತ್ತಿದ್ದನು.

ಕಾಣ್, ಕಾಣಲ್ಲಿ, ಧರ್ಮಶಕ್ತಿಯೆ ರಾಮಪಕ್ಷದಲ್ಲಿ ನಿಂತೆಂತು ಹೋರಾಡುತಿದೆ ಸೆಣಸಿ

ಆಗ ಅವನಿಗೆ ನೀರವವು ನಿಶ್ಚಲವು ಆದ ಹೆಣಗಳಿಂದ ಕೂಡಿದ ಯುದ್ಧ ಭೂಮಿಯಲ್ಲಿ ಮೇಲಿನ ಆಗಸದಿಂದ ಗಾಳಿದನಿಗಳೆನ್ನುವಂತೆ ದಿವ್ಯ ಕಂಠದ ಮಧುರ ಸಂವಾದ ಕೇಳಿಸಿತು.

'ಅಕ್ಕ ಹೇಳು, ಆ ಎಲ್ಲ ಉದ್ಯಮಕ್ಕೆ ಇದೇ ಕೊನೆಯೆ?'

'ತಂಗಿ ದುಃಖವನ್ನು ಬಿಡು. ಕಂಬನಿಯನ್ನು ಒರೆಸಿಕೊ.'

ಎಂದು ತಪೋಲಕ್ಷ್ಮಿಯು ಸ್ವಪ್ನಲಕ್ಷ್ಮಿಗೆ ಧೈರ್ಯವನ್ನು ನೀಡುತ್ತ ಮಾತು ಮುಂದುವರಿಸಿದಳು:

'ನೋಡು, ನೋಡಲ್ಲಿ ಧರ್ಮಶಕ್ತಿಯೇ ರಾಮಪಕ್ಷದಲ್ಲಿ ನಿಂತು ಹೇಗೆ ದುಷ್ಟಶಕ್ತಿಯೊಂದಿಗೆ ಹೋರಾಡುತ್ತಿದೆ! ಇಲ್ಲಿ ದೇಹಗಳು ಉರುಳಿದ ಮಾತ್ರಕ್ಕೆ ಆತ್ಮಕರ್ಮಗಳು ಮುಗಿಯುತ್ತದೆಯೆ? ಅದೋ ನೋಡು ಮನೋಮಯ ಲೋಕದಲ್ಲಿ ಆಗಲೇ ವಿಶ್ವ ಶಕ್ತಿಗಳು ದೇವತಾ ರೂಪವನ್ನು ತಾಳಿ ಚಲಿಸುತ್ತಿವೆ.

'ಅವರ ಇಚ್ಛೆಯು ಅನ್ನಮಯ ಲೋಕದಲ್ಲಿ ಪ್ರಕೃತಿ ನಿಯಮದಂತೆ ಕಾಣಿಸುತ್ತಿದೆ. ಆ ಇಚ್ಛೆಗೆ ಅವಿಧೇಯತೆಯೇ ಭಯ. ಆ ಭಯಕ್ಕೆ ಅಗ್ನಿ ಉರಿಯುತ್ತದೆ; ಸೂರ್ಯನು ಪ್ರಕಾಶಿಸುತ್ತಾನೆ. ಯಮ ವರುಣ ಇಂದ್ರಾದಿಗಳು ನಿತ್ಯ ಕರ್ತವ್ಯವನ್ನು ಪಾಲಿಸುತ್ತಾರೆ.

'ಸಹೋದರಿಯೆ, ಸೀತಾ ತಪೋಮಹಿಮೆಯನ್ನು ನೋಡುತ್ತಿರು. ಕೋಪಗೊಂಡ ಒಡೆಯನ ಅಪ್ಪಣೆಗೆ ಬೆದರಿದ ಆಳುಗಳು ಅತಿಆತುರದಿಂದ ತಕಪಕನೆ ಕುದಿಯುತ್ತ ಗದಗದಿಸಿ ಮಣಿಯುತ್ತ ಕೆಲಸದ ನೊಗಕ್ಕೆ ಹೆಗಲನ್ನು ಕೊಡುವರು. ಹಾಗೆ ಸೃಷ್ಟಿ ಸೂತ್ರವನ್ನು ಹಿಡಿದು ನಡೆಯಿಸುವ ಜಗತ್ ಶಕ್ತಿಯ ಅಮರ ದೂತರುಗಳು ಈ ಯುದ್ಧಭೂಮಿಯ ಇಂದಿನವರ ಕರ್ಮಕ್ಕೆ ಆಗ್ರಹ ವೇದಿಕೆಯನ್ನಾಗಿಸುವರು. ಮುಂದೆ ನಡೆಯುವುದನ್ನು ನೋಡು. ನೀನು ಕಾಣುವ ದೈವಿಕ ಮಹದ್‌ದೃಶ್ಯವನ್ನು ಬೇಗನೆ ಹೋಗಿ ದೇವಿಗೆ ವಿವರವಾಗಿ ತಿಳಿಸು.'

ಎಂದು ಹೇಳಿದ ಶುಭದ ದೈವೇಚ್ಛೆಯನ್ನು ವಿಭೀಷಣನು ಕೇಳಿದನು. ಅವನು ಅದರ ಇಚ್ಛೆಯ ಆಂತರ್ಯವನ್ನು, ತಾನು ಕೈಕೊಳ್ಳಬೇಕಾದ ನೈಸರ್ಗಿಕ ವಿಧಾನವನ್ನು, ಕರ್ಮಾಕರ್ಮದ ಮರ್ಮವನ್ನು ತಿಳಿದನು. ಆ ಧರ್ಮಿಷ್ಠ ರಾಕ್ಷಸೋತ್ತಮನು ಮುಂದಕ್ಕೆ ಸಾಗಿ ಮಾಡಿದುದನ್ನು ಕವಿಕರ್ಮವು ರಮಣೀಯವೆನ್ನಿಸುವಂತೆ ವರ್ಣಿಸುತ್ತೇನೆ. ಅಂದು ಸ್ವಪ್ನ ಸುಂದರಿಗೆ ಕಂಡುದನ್ನು, ಮನೋಲೋಕಕ್ಕೆ ಹಿತವಾದ ಸತ್ಯವನ್ನು ಸ್ವಚ್ಛಂದವಾಗಿ ರಸಪ್ರತೀಯವಾಗಿ ವರ್ಣಿಸುತ್ತೇನೆ.

ವಾಯುದೇವನಿಂದ ಪ್ರೇರಿತವಾದ ಗಾಳಿಯು ವನಪರ್ವತಗಳಿಂದ ದಿವ್ಯೌಷದಿಯ ಸಂಜೀವವನ್ನು ಹೊತ್ತು ಬಂದಿತು. ಅದು ಚಲನೆಯು ಉಡುಗಿಹೋಗಿದ್ದ ಯುದ್ಧರಂಗದಲ್ಲಿ ಚಲಿಸಿತು. ಮತ್ತೆ ಆ ಮಾರುತವು ಮೇಘನಾದನ ಬಾಣಗಳ ಸಮೂಹದಿಂದ ಉಂಟಾದ ವಿಷಗಾಳಿಯನ್ನು ದೂರಕ್ಕೆಬೀಸಿ ಕೊಂಡೊಯ್ದಿತು. ನೋಡ ನೋಡುತ್ತಿದ್ದಂತೆ ಆಗಸವು

ತಿಳಿಯಾಯಿತು. ಪೃಥ್ವಿಗೆ ಬೆಳುದಿಂಗಳು ತುಳುಕಿತೊ? ಜೇನಿನ ಇಂಗಡಲೊ? ರಾಮಕ್ಷೇಮ ಚಂದ್ರಮನ ನಗೆಯೊ? ಎನ್ನುವಂತೆ ಪಾಡ್ಯದ ಚಂದ್ರನ ತುಂಬುಬಿಂಬ ಕಾಣಿಸಿತು.

ಆ ಎಲ್ಲ ಕಾರ್ಯಕ್ಕೆ ಪ್ರಧಾನ ಕಾರಣ ಒಂದಿದೆ ಎನ್ನುವಂತೆ ದೂರದ ಆಗಸದಲ್ಲಿ ಒಂದು ನಕ್ಷತ್ರ ಕಾಣಿಸಿತು. ಅದು ಚಂದ್ರ ಸುಂದರ ನಭದ ಬಹು ಅಪರೂಪದ ತಾರೆಗಳ ನಡುವೆ ಅತಿ ಉಜ್ವಲವಾಗಿ ಹೊಳೆಯುತ್ತಿತ್ತು. ಅದು ಬರಬರುತ್ತ ತನ್ನ ಅಮರಕಾಂತಿಯಿಂದ ಇತರ ದೀಪ್ತಿಗಳನ್ನೆಲ್ಲ ನುಂಗಿತು. ಅದು ಮನುಜ ಲೋಕದ ಇಂದ್ರಿಯಕ್ಕೆ ಅವಶ್ಯಕವಾದ ಆಕಾರವನ್ನು ಹೊಂದುತ್ತ ಲಂಕೆಯ ಹೊರಗಿನ ಯುದ್ಧಭೂಮಿಗೆ ಇಳಿಯತೊಡಗಿತು.

ಅದು ತಾರೆಯಂತೆ ಮೊದಲು ಕಾಣಿಸುತ್ತ, ಬರಬರುತ್ತ ಪಕ್ಷಿಯ ಆಕಾರವನ್ನುಹೊಂದಿ ಅನಂತರ ಮನುಷ್ಯ ಶರೀರವನ್ನು ಪಡೆದು ದಿವ್ಯತೇಜದಿಂದ ಧರೆಗೆ ಇಳಿಯಿತು. ಅದರ ಭುಜ ಪ್ರದೇಶದಲ್ಲಿ ಸ್ವರ್ಗ ಸಂಭವ ಸುವರ್ಣೋಜ್ವಲ ರೆಕ್ಕೆಗಳು ಹೊಮ್ಮಿ ಪ್ರಕಾಶಿಸುತ್ತಿದ್ದವು. ಅದರ ದಿವ್ಯವಾದ ವಕ್ಷಸ್ಥಳದಲ್ಲಿ ಫಾಲ್ಗುಣೋದಯ ರವಿಯ ಕಿರಣಗಳೆನ್ನುವಂತೆ ರೋಮರಾಶಿಗಳಿದ್ದವು. ಭವ್ಯಶೈಲಿಯಲ್ಲಿ ಸಿಂಗರಿಸಿ ನೇಯ್ದ ರೇಷ್ಮೆ ವಸ್ತ್ರವನ್ನು ಧರಿಸಿದ್ದ ಆ ದೇವತೆಯ ಅಮರ ಶರೀರ ದೇದೀಪ್ಯಮಾನವಾಗಿ ಮಿರುಗುತ್ತಿದ್ದಿತು. ನಂದನದ ಕುಟಜ ಕುಸುಮವು ಕಂಠಾಹಾರವಾಗಿ ಜೋಲಾಡುತ್ತಿತ್ತು.

ಅದು ರೆಕ್ಕೆಗಳಿಂದ ಬೀಸುತ್ತಿದ್ದ ಗಾಳಿಯು ವಾನರರ ಸಾವನ್ನು ದೂರವಾಗಿಸುವ ಜೀವಧಾತುವಾಗಿ ಸೌಗಂಧಮಯ ಅಮೃತಔಷಧಗಳನ್ನು ಸೂಸಿತು. ಹಾಗೆಬಂದ ಗರುಡ ಸಾನ್ನಿಧ್ಯದ ಮಂತ್ರಮಣಿಗೆ ಮೇಘನಾದನ ನಾಗನಬಾಣದ ವಿಷಸರ್ಪಗಳು ಅಲ್ಲಿರದೆ ಹರಿದೋಡಿದವು. ಮಲಗಿದಂತಿದ್ದ ರಣಚೇತನವೇ ಮೂರ್ಛೆಯಿಂದ ಏಳುವಂತೆ ಇಕ್ಷ್ವಾಕು ಕುಲದೀಪನ ಕಣ್ಣುಗಳು ಅರಳಿದವು.

'ಹೇ ಜಗತ್ ಸ್ವಾಮಿಯೇ, ಸ್ವಮಾಯಾ ಭ್ರಮೆಯಿಂದ ಏಳು. ನಿನ್ನನ್ನು ಎಚ್ಚರಿಸಲು ನಾನು ನಿಮಿತ್ತ ಮಾತ್ರವಾಗಿ ಬಂದೆನು. ನೀನು ನಿತ್ಯ ಜಾಗೃತ ಚಿತ್ತನಲ್ಲವೆ?'

ಎಂದು ಹೇಳುತ್ತ ಕೈಮುಗಿದು ನಿಂತಿದ್ದ ಸಮುದ್ರ ಮಂದ್ರಧ್ವನಿಯ ತನ್ನ ಆತ್ಮ ರುಂದ್ರ ಸತ್ಯದ ಬಹಿರಂಗ ವಿಗ್ರಹನನ್ನು ರಾಮಚಂದ್ರನು ಕಂಡನು. ಮಂದಸ್ಮಿತನಾಗಿ ಅದಕ್ಕೆ ಅನುಗ್ರಹವನ್ನುಂಟು ಮಾಡಿದ ರಾಮನಲ್ಲಿಯೇ ಆ ಗರುಡ ದೇವತನು ಐಕ್ಯವಾಯಿತು. ಅದನ್ನು ನೋಡುತ್ತಿದ್ದ ಸ್ವಪ್ನ ದೇವಿಯ ಕಣ್ಣು ತಪೋಲಕ್ಷ್ಮಿಯ ಕಣ್ಣುಗಳನ್ನು ಆಶ್ಚರ್ಯದಿಂದ ಮಿಳಮಿಳನೆ ನೋಡಿತು!


ಶುಶ್ರೂಷೆಯನ್ನು ಮಾಡಿದುದಕ್ಕೆ ಎನ್ನುವಂತೆ ರಾಮಚಂದ್ರನು ಆ ಕನಸಿನಿಂದ ಈ ಕನಸಿಗೆ ಎಚ್ಚೆತ್ತವನಂತೆ ಕಣ್ಣು ತೆರೆದನು. ಅದು ಅಮಾವಾಸ್ಯೆಯ ಕತ್ತಲಿನಿಂದ

ಹರ್ಷ ಬೆಳದಿಂಗಳಿಗೆ ದಾಟಿ ಬರುತ್ತಿರುವಂತಿತ್ತು. ತನ್ನ ಎದುರು ಬಳಸಿ ನಿಂತ ಕಪಿಮುಖ್ಯ ನಾಯಕರ ಮುಖಗಳನ್ನು ನೋಡುತ್ತ,

'ಮಿತ್ರರಿರಾ, ಕಳವಳವನ್ನು ಬಿಟ್ಟುಬಿಡಿ. ಇಂದ್ರಜಿತುವಿಗೆ ದೊರೆತ ಬ್ರಹ್ಮನ ವರಬಲವು ನಶಿಸಿ ಹೋಯಿತು. ಆದರೆ ನಮ್ಮ ಉಸಿರು ನಶಿಸಲಿಲ್ಲ. ಬೆದರಿ ಚದುರಿ ಹೋಗಿರುವ ನಮ್ಮ ಸೇನಾಧಿಪತಿಗಳನ್ನು ಕರೆದು ಒಟ್ಟುಗೂಡಿರಿ. ಲಗ್ಗೆ ನುಗ್ಗುವ ನಮ್ಮ ಹುರುಪುಗೊಂಡ ಶೂರತನಕ್ಕೆ ಲಂಕೆಯು ತನ್ನ ಅತುಳ ಸೈನ್ಯಶಕ್ತಿಯಲ್ಲಿ ಅರ್ಧಕ್ಕೂ ಹೆಚ್ಚನ್ನು ಬಲಿಕೊಡುವುದು. ನೋಡುತ್ತ ಇರಿ, ನನ್ನ ಆಜ್ಞೆಯೇ ವಿಧಿಗೆ ತನ್ನಿಚ್ಛೆಯಾಗುತ್ತದೆ ಎನ್ನುವುದು ನಿಜ.'

ಎಂದು ರಾಮಚಂದ್ರನು ತನ್ನ ಭಾವವನ್ನು ಅಪ್ಪಣೆಯಾಗಿ ತಿಳಿಸಿದನು. ಆ ಸತ್ಯವಾಕ್ಯನ ವಚನ ಧೈರ್ಯಕ್ಕೆ ಎನ್ನುವಂತೆ ವಾನರ ಸೇನಾನಿಗಳು ತಮ್ಮ ತಮ್ಮ ಮುರಿದ ಸೈನ್ಯಗಳನ್ನು ಪುನರ್ ರಚಿಸಿದರು. ಪುನಃ ರಣಭೇರಿಗಳು ಮೊಳಗಿದವು! ಅದಕ್ಕೆ ವನಾದ್ರಿಯು ನಿದ್ರೆಯಿಂದ ಬೆಚ್ಚಿಬೀಳುವಂತೆ ಎದ್ದಿತು! ಕವಿದ ಕಂಬಳಿಯ ಕತ್ತಲೆಯಿಂದ ಬಿಡುಗಡೆ ಹೊಂದಲು ಉದಯಾಚಲವು ಮೈ ಕೊಡವಿತು! ಪೂರ್ವದಿಕ್ಕಿನಲ್ಲಿ ಉಷೆಯ ಕಣ್ಣು ಆಶೆಯಿಂದೆಂಬಂತೆ ಕೆಂಬಣ್ಣದ ಎವೆ ತೆರೆಯಿತು!

❑



~~~~~~~~~~~~~~~~~~~~~~~ ಸಂಚಿಕೆ – ೧೪ ~~~~~~~~~~~~~~~~~~~~~~~

ಅದ್ವಿತೀಯಮಾ ದ್ವಿತೀಯಂ ದಿನಂ

ಆ ದ್ವಿತೀಯ ದಿನವು ಅದ್ವಿತೀಯವೆನ್ನುವಂತೆ ಮೂಡಿತು. ವಾನರರು ಪ್ರಾಣವನ್ನು ಹೀರುವ ಭಯಂಕರ ಹಾವಿನ ಹಲ್ಲಿನ ವಿಶಾಸ್ತ್ರವನ್ನು ಗೆದ್ದು ಸಿಂಹನಾದ ಮಾಡಿದರು. ರಾವಣನು ಅದನ್ನು ಕೇಳಿ ಆಶ್ಚರ್ಯಗೊಂಡನು. ರೋಷದಿಂದ ತನ್ನ ಆಯ್ದ ನಾಯಕರಿಗೆ ಮೃತ್ಯುನೇಮ (ಗೆಲ್ಲು ಅಥವಾ ಸಾಯಿ ಎಂಬ ನಿಯಮ)ವನ್ನು ಕೊಟ್ಟು ಕದನ ಯಜ್ಞಕ್ಕೆ ಕಳುಹಿಸಿದನು. ಆ ಎರಡನೆ ದಿನವು ಅಂತಹದು ಮತ್ತೊಂದಿಲ್ಲ ಎನ್ನುವಂತೆ ಪ್ರಾರಂಭವಾಯಿತು.
~~~~~~~~~~~~~~~~~~~~~~~

ಲಂಕೇಶ್ವರನ ಭೀಷಣ ಆಜ್ಞಾ ಕಿರೀಟವನ್ನು ಹೊತ್ತ ಹೆಮ್ಮೆಯಿಂದ ಧೂಮ್ರಾಕ್ಷ ರಾಕ್ಷಸನು ಹುರುಪಿನಿಂದ ಹುಬ್ಬಿ ಹೋದನು. ಅವನು ತನ್ನ ದೊಡ್ಡಸೇನೆಯೊಡನೆ ಶತಬಲಿಯ ಮೇಲೆ ಎರಗಿದನು. ಅದು ಕಾಡುಕೋಣಗಳು ಬೃಹತ್ತಾದ ಆನೆಯಹಿಂಡನ್ನು ಕೆಣಕುವಂತಿತ್ತು. ಅವನದು ಹೊತ್ತಾರೆಯ ಬೆಟ್ಟನೆತ್ತಿಯ ಕಲ್ಲುಬಂಡೆಯ ಮೇಲಿನ ಮೊರಡುಶಿಖರದಂತಹ ಶರೀರ. ಅವನು ಕಾಡನ್ನು ಅಲೆದಾಡುವ ಬಿರುಗಾಳಿಯಂತಹ ಭಯಂಕರ ಕ್ರಿಯಾಶಾಲಿ, ಆ ದೈತ್ಯನ ಆಕ್ರಮಣಕ್ಕೆ ಶತಬಲಿಯ ಆಕಾಶಗಾಮಿಗಳ ಮತ್ತು ಕಾಮರೂಪಿಗಳ ಭಯಂಕರ ಸೇನಾಸಮುದ್ರವು ದುಃಖಕ್ಕೆ ಈಡಾಗಿ ಬೇಗುದಿಗೊಂಡಿತು.

ಸೇನೆಯು ಮಡಿದುದನ್ನು, ದಣಿದುದನ್ನು, ಸೋತುದನ್ನು ಕಂಡು ಸೇನಾನಿ ಶತಬಲಿಯು ರಾಕ್ಷಸವೀರನಿಗೆ ಎದುರಾದನು. ಆಗ ಕಪಿಸೇನೆಯು ಧೈರ್ಯವನ್ನು ಮರುಕೊಳಿಸಿಕೊಂಡು ಮತ್ತೆ ದಶದಿಕ್ಕುಗಳಿಂದ ಧೂಮ್ರಾಕ್ಷನ ರಥವನ್ನು ಮುತ್ತಿದರು. ಕಿತ್ತ ಮರಗಳನ್ನು ಬೀಸಿ, ಅವನ ತೇರಿನಗಾಲಿ ಮುರಿಯುವಂತೆ ಬಡಿದರು. ಗಿರಿಗಳಿಂದ ಬಂಡೆ ಗುಂಡು ಅರೆಗಳನ್ನು ಹೊತ್ತಿ ಎತ್ತಿಕೊಂಡುಬಂದು ಆಕಾಶಕ್ಕೆ ಹಾರಿದರು. ಅಲ್ಲಿಂದ ಗುರಿಯಿಟ್ಟು ಎಸೆಯಲು ರಥದ ಅಶ್ವಗಳಬೆನ್ನು ಮುರಿದು, ನೆತ್ತಿಬಿರಿದು ಸತ್ತವು. ತೇರು ಪುಡಿಯಾಗಲು ಬೃಹದ್ ಶರೀರದ ವೈರಿಯು ಧಿಮ್ಮನೆ ಅಲ್ಲಿಂದ ನೆಲಕ್ಕೆ ದಿಗ್ಗಜದಬೆನ್ನು ಜಗ್ಗೆನ್ನುವಂತೆ ಧುಮುಕಿದನು!

ಆ ಮಹದ್‌ದೃಶ್ಯದ ಬಗ್ಗೆ ಏನೆಂದು ಹೇಳುವುದು? ಭಯಂಕರ ಆಕಾರದ ಆ ರಾಕ್ಷಸನನ್ನು ಕಪಿಸೇನೆಯು ಆಶ್ಚರ್ಯ ಚಕಿತವಾಗಿ ನೋಡಿತು. ಹೆಗ್ಗಂಟೆಗಳ ಸಾಲನ್ನು ಕಟ್ಟಿಕೊಂಡಿರುವ ಅವನ ಸೊಂಟದಿಂದ ಮಹಾಭೀಕರ ನಗ್ನಖಡ್ಗ ಜೋಲಾಡುತ್ತಿತ್ತು. ಮುಳ್ಳುಹಂದಿಗಳ ಗೊಂಚಲೆನ್ನುವಂತೆ ಮುದ್ಗರವೆಂಬ ಆಯುಧ ಸಮೂಹವನ್ನು ಸೊಂಟಕ್ಕೆ ತೂಗುಹಾಕಿತ್ತು. ಅವನ ಎಡಗೈಯ ಭಯಂಕರ ಮುಷ್ಟಿಯಲ್ಲಿ ಕಪ್ಪಾದ ತಿಮಿಂಗಿಲದ, ಆಮೆಯ ಚಿಪ್ಪಿನಂತಹ ಚರ್ಮವನ್ನು ಕೊರೆದು ಮಾಡಿದಂತೆ ಕಾಣುತ್ತಿದ್ದ ಖಡ್ಗಮೃಗದ ತೊಗಲಿನ ಕರಿ ಗುರಾಣಿಯು ಬೀಗುತ್ತಿತ್ತು. ಅವನ ಸರ್ಪದ ಪೊದೆಯಂತಿದ್ದ ದೊಡ್ಡತಲೆಯ ಬಳಿ ಅವನ ಬಲಗೈಯು ಭೈರವನಂತೆ ಕಬ್ಬಿಣದಮೊನೆಗಳಿಂದ ಕೂಡಿದ 'ಪರಿಘಮುಖಿ' ಎಂಬ ಬಲವಾದ ಗದೆಯೊಂದನ್ನು ತೂಗಿ ತೊನೆಯುತ್ತಿತ್ತು.

ಬಳ್ಳಿಯಮಿಂಚು ಅಪಾರವ್ಯೆಯ ಮೋಡದ ಒಳಗೆ ಸಂಚರಿಸಿ ಅದನ್ನು ಸುತ್ತುವರಿಯುವಂತೆ, ಆ ರಾಕ್ಷಸನ ಸ್ಥೂಲ ಸಾಮರ್ಥ್ಯವನ್ನು ಶತಬಲಿಯು ಕುಗ್ಗಿಸಿದನು. ರಕ್ಕಸನಗದೆಗೆ ರಕ್ಕಸನಶರೀರವೇ ಗುರಿಯಾಯಿತು. ಅವನ ಖಡ್ಗವೇ ಅವನ ರಕ್ತವನ್ನು ಹರಿಸಿತು. ರಾಕ್ಷಸನ ಮುದ್ಗರಗಳ ಹೊಡತಕ್ಕೆ ಅವನ ಸೇನೆಯೆ ಆಹುತಿಯಾಯಿತು.

ರೆಂಬೆಕಡಿದ ಹೆಮ್ಮರವು ಬುಡವನ್ನು ಕಡಿಯಲು ಬೀಳುವಂತೆ ಧೂಮ್ರಾಕ್ಷನ ದೈತ್ಯಕಾಯ ಉರುಳಿ ಬಿದ್ದಿತು. ಆಗ ಗಾಯಗೊಂಡ ಅವನ ಅಳಿದುಳಿದ ಸೇನೆ ಹಿಮ್ಮೆಟ್ಟಿತು.

ಹಗೆಯ ಹಳು ಬಯಲೇಳೆ ನುಗ್ಗಿ ಸವರಿದನಂಗದಂ

ಆ ಕಡೆ ದಕ್ಷಿಣದ್ವಾರದಲ್ಲಿ ವಜ್ರದಂಷ್ಟ್ರನ ಆಕ್ರಮಣವನ್ನು ವಾಲಿಪುತ್ರನ ದಳ ಎದುರಿಸಿತು. ಅದು ಒಂದು ಕಾಡ್ಗಿಚ್ಚಿನ ಎದುರು ಇನ್ನೊಂದು ಹೆಚ್ಚಾದ ಕಾಡಿನ ಬೆಂಕಿಗೆ ನಡೆದ ಹೋರಾಟದಂತಿತ್ತು. ಕೂಡಲೆ ಸಮರ ಯಜ್ಞದ ಬೆಂಕಿ ಧಗಧಗಿಸಿ ಹೊತ್ತಿಕೊಂಡಿತು. ಎರಡೂ ಕಡೆಯ ಸೈನ್ಯ ಆಹುತಿಯಾಯಿತು. ಅದನ್ನು ನೋಡಿ ವಜ್ರದಂಷ್ಟ್ರನು ತಾನು ಹತ್ತಿದ್ದ ಮದಿಸಿದಆನೆಯನ್ನು ತ್ರಿಶೂಲ ಅಂಕುಶದಿಂದ ತಿವಿತಿವಿದು ವೈರಿಗಳ ಮೇಲೆ ನುಗ್ಗಿದನು.

ಮುಂಗಾರು ಪಶ್ಚಿಮಪರ್ವತದ ತಲೆಯನ್ನು ಏರಿ ಗುಡುಗಿ ಮುಂದುವರಿಯುವಂತೆ ಬಂದ ಆ ದಾಳಿಗೆ ಅಂಗದನ ಸೇನಾ ಕಾಡಿನ ಧೈರ್ಯ ಎದೆಯೇ ತತ್ತರಿಸಿದಂತಾಯಿತು. ಆ ರಾಕ್ಷಸನು ತನ್ನ ಕೈಯಲ್ಲಿಯ ಕಿಡಿ ಹೊಮ್ಮಿಸುವ ಚಕ್ರವನ್ನು ಗಿರ್ರನೆ ತಿರುಗಿಸುತ್ತ, ಹೊಲ ಕೊಯ್ಯುವ ದೊಡ್ಡ ಒಕ್ಕಲಿಗನಂತೆ ವೈರಿಗಳ ತಲೆಗಳನ್ನು ತರಿದು ಬಣಬೆಯಂತೆ ರಾಶಿ ಹಾಕಿದನು. ಕಪಿಸೇನೆಯು ಹೆದರಿ ಹಿಂಜರಿಯಿತು!

ಕಪಿಸಮೂಹದ ಅಧಿಪತಿ ವಾಲಿಯ ಮಗನು ಅದನ್ನು ಕೋಪದ ಕಣ್ಣುಗಳಿಂದ ನೋಡಿ, ದೃಢಮನದಿಂದ ಮುಂದುವರಿದನು. ಅವನು ಆನೆಯ ಸೊಂಡಿಲಿಗೆ ಸಮನಾದ ಕೈಯಲ್ಲಿ, ಒಂದು ಬೃಹತ್ ಗಾತ್ರದ ಉಗ್ರ ರುದ್ರಪ್ರಕಾಶದ ಹರಿತವಾದ ಘೋರ ಕೊಡಲಿ ಹಿಡಿದು ಮುನ್ನುಗ್ಗಿದನು.

ಪಶ್ಚಿಮಘಟ್ಟದ ಕಾಡಿನಲ್ಲಿ ಒಂಟಿಗನಾದ ಹಂದಿ ತನ್ನನ್ನು ಅಡ್ಡಹಾಕಿ ಎದುರಿಸಿದ ಹೆಬ್ಬುಲಿಯನ್ನು ಹೇಗೆ ಪ್ರತಿಭಟಿಸುವುದೋ ಹಾಗೆ ವಜ್ರದಂಷ್ಟ್ರನು ಇಂದ್ರನಮಗನ ಮಗ ಅಂಗದನನ್ನು ಎದುರಿಸಿದನು. ವಜ್ರದಂಷ್ಟ್ರನು ಕೋಪದಿಂದ ದವಡೆಗಳನ್ನು ಕಚ್ಚಿದನು. ಹೂಂಕರಿಸುತ್ತ ತನ್ನನ್ನು ಎವೆಯಾಡಿಸದೆ ನೋಡುವವನನ್ನು ಕೆಂಗಣ್ಣುಗಳಿಂದ ನೋಡಿದನು. ಸಿಟ್ಟುಗೊಳ್ಳಲು ಮೈಕೂದಲು ನೆಟ್ಟಗಾಯಿತು. ನಿಟ್ಟುಸಿರುಬಿಡುತ್ತ ಕೋರೆ ಹಲ್ಲುಗಳಂತಹ ಚಕ್ರದಿಂದ ಘರ್ಘರ ಧ್ವನಿ ಹೊಮ್ಮುತ್ತಿರಲು ವೈರಿಗಳ ಕೋರೆಗಳನ್ನು ಇರಿಯುವಂತೆ ಬೀಸಿಹೊಡೆದನು.

ಹಾಗೆ ಬರುತ್ತಿರುವ ಚಕ್ರಾಯುಧಕ್ಕೆ ಅಂಗದನು ತನ್ನ ಕೈಯ ಗುರಾಣಿಯನ್ನು ಒಡ್ಡಿದನು. ಬಲವಾದ ಕೊಡಲಿಯನ್ನು ಆನೆಯ ಮುಂದಲೆಗೆ ಗುರಿಯಿಟ್ಟು ಬೀಸಿದನು. ಅದರ ತಲೆ ಬಿರಿದು ಮಿದುಳು ಹೊರಹೊಮ್ಮಿತು. ಆ ಮದಿಸಿದ ಆನೆ ತತ್ತರಿಸಿ ದಂತಗಳನ್ನು ನೆಲಕ್ಕೆ ಒತ್ತಿ, ಪಕ್ಕಕ್ಕೆ ಹೊರಳಿ ಬಿದ್ದಿತು.

ರಾಕ್ಷಸನು ಚಂಗನೆ ನೆಲಕ್ಕೆ ನೆಗೆದನು. ಅತಿಯಾಗಿ ಕೋಪಗೊಂಡನು. ಕೈಗೆ ಸಿಕ್ಕಿದ ಒನಕೆ ಆಯುಧವನ್ನು ಹಿಡಿದು ಆಕ್ರಮಣಕ್ಕೆ ಬಂದನು. ವೀರವಾನರನು ಆ ರಾಕ್ಷಸನ ತಲೆಗೆ ಗುರಿಯಿಟ್ಟು ಕೊಡಲಿ ಬೀಸಿದನು. ತಕ್ಷಣ ಅದರ ಚೂಪಾದ ನಾಲಗೆಗೆ ರಾಕ್ಷಸನ ತಲೆಯ ಚಿಪ್ಪೊಡೆದು ರಕ್ತದಿಂದತೊಯ್ದು ಕೆಂಪಾಯಿತು. ನೆಲಕ್ಕೆ ಬಿದ್ದ ನಿಶಾಚರನಕಣ್ಣು ಅವನ ಆಂತರ್ಯವನ್ನು ಒಸರಿದಂತೆ ಭಯಂಕರವಾಗಿತ್ತು. ಆಗ ರಾಕ್ಷಸರ ಧೈರ್ಯ ಉಡುಗಿತು. ಅಂಗದನು ಅವರ ಸೇನೆಗೆ ನುಗ್ಗಿ, ವೈರಿಗಳಕಾಡು ಬಯಲಾಗುವಂತೆ ಸವರಿ ಹಾಕಿದನು. ಅವನ ಪೌರುಷ ಪ್ರತಾಪಕ್ಕೆ ಶತ್ರುಗಳು ಪ್ರಾಣಜಲ ಕುದಿಕುದಿದು ಆವಿಯಾಯಿತು ಎನ್ನುವಂತೆ ಮೋಡಗಳಾಗಿ ಸ್ವರ್ಗಕ್ಕೆ ಏರಿದವು!

ಶವಮಯಂ ತಾನಾಯ್ತು ಶಿವಮಯ ವಸುಂಧರೆಯ ಮೆಯ್

ಆ ಕಡೆ ಉತ್ತರದಲ್ಲಿ ರಾಕ್ಷಸಸೇನೆಯ ನೂರಾರು ವೀರಗಟ್ಟಿಗರು ಕಬ್ಬಿಣದ ಚಪ್ಪಡಿಗಳಿಂದ ಮಾಡಿದ ಕೋಟೆಯ ದಿಡ್ಡಿಬಾಗಿಲನ್ನು ತೆರೆದರು. ಅದು ಹೊಮ್ಮಿಸಿದ ಮಹಾಶಬ್ದಕ್ಕೆ ಕಪಿಸೈನ್ಯ ಚಕಿತಗೊಂಡಿತು. ರಕ್ಕಸ ಸೈನಿಕರು ಯಂತ್ರ ಚಾತುರ್ಯದಿಂದ ಹೆಣೆದ ದಿಮ್ಮಿಸಾಲುಗಳ ಸೇತುವೆಯನ್ನು ಬೀಸಿದರು. ಅದರ ಮೇಲೆ ರಕ್ಕಸ ಸೇನೆಯ ಪ್ರವಾಹವು ಬೋರ್ಗರೆಯುತ್ತ ಲಂಕಾಸರೋವರವು ಕೋಡಿಬಿದ್ದಂತೆ ಹರಿದು ಸಾಗಿತು.

ಲಂಕೇಶ್ವರನ ಮೆಚ್ಚಿನ ಸೇನಾಧಿಪತಿ ಅಕಂಪನನು ತನ್ನ ನೆಚ್ಚಿನ ಪರಾಕ್ರಮಿ ಸಮರ್ಥಯೋಧರ ಸೇನೆಯೊಡನೆ ವೀರರದೇವ ವಾನರ ನಳನ ಸೇನಾಸಮುದ್ರದ ಸಮ್ಮುಖಕ್ಕೆ ನಡೆದನು. ಸೇನಾಪತಿಯ ಕೈಯ ಚಿನ್ನದಕೋಲಿನ ಬಾವುಟದ ಸೂಚನೆಯ ಆಜ್ಞೆಯಂತೆ ದರೀಮುಖನು ತನ್ನ ದಳದೊಡನೆ ಮುನ್ನುಗ್ಗಿದನು. ಅಕಂಪನನ ಬಲವಾದ ಸೇನೆಯನ್ನು ತಾಗಿದನು, ತಳ್ಳಿದನು, ತಡೆದನು. ಗಾಳಿ ಹುರಿಗೊಂಡಿತು, ಧೂಳು ಎದ್ದಿತು. ಭಯಂಕರ ಕದನ ಕೋಲಾಹಲವಾಯಿತು. ಸಮರಭೂಮಿಯ ರಣಭೈರವ ರಣಕ್ರೀಡೆಯ ಶಬ್ದ ಕೇಳಿಸಿತಲ್ಲದೆ ಇನ್ನೊಂದು ಕಾಣಲಿಲ್ಲ.

ರಕ್ತಮಳೆಗೆ ಧೂಳು ಹಿಂಗಿತು; ನೆಲದಲ್ಲಿ ಕೆಸರುಂಟಾಯಿತು. ಕಲ್ಯಾಣಮಯವಾದ ವಸುಂಧರೆಯ ಮೈ ಶವಮಯವಾಯಿತು. ಸಕಲಸೈನಿಕರು ದರೀಮುಖ ಅಕಂಪನರ ಮಹಾಮುಷ್ಟಿ ಯುದ್ಧವನ್ನು ಆಶ್ಚರ್ಯ ಚಕಿತರಾಗಿ ನೋಡಿದರು. ರಾಕ್ಷಸ ಸದೃಶವಾನರ ಹೆಸರಿಂದ ಮಾತ್ರವಲ್ಲದೆ ನಿಜವಾಗಿಯೂ ದರೀಮುಖನಾಗಿದ್ದನು! ಅದರಂತೆಯೆ ವಾನರ ಸದೃಶ ರಾಕ್ಷಸನು ಹೆಸರಿನಿಂದ ಮಾತ್ರವಲ್ಲದೆ ನಿಜವಾಗಿಯೂ ಅಕಂಪನನಾಗಿದ್ದನು!

ದರೀಮುಖನು ಬಾಯಿತೆರೆದ ಪಾತಾಳದ ಆಕಳಿಕೆ ಎನ್ನುವಂತೆ ಕಂದಕ ಭಯಂಕರನಾಗಿ ನಿಂತನು! ಅಕಂಪನನು ಆಕಾಶದ ಎತ್ತರಕ್ಕೆ ಶಿಖರವೆತ್ತಿದಂತೆ ಗಿರಿಭಯಂಕರನಾಗಿ ನಿಂತನು! ಅವರಿಬ್ಬರೂ ಆನೆ ಸೊಂಡಿಲನ್ನು ತೂಗುವಂತೆ

ತೋಳುಗಳನ್ನು ತೂಗಿದರು. ಸಿಂಹ ಸಿಂಹವನ್ನು ಕೆಣಕುವ ರೀತಿಯಲ್ಲಿ ಕಣ್ಣುಗಳಿಂದ ಕೆಣಕಾಡಿದರು. ಹುಲಿಗೆ ಹುಲಿ ಸೊಕ್ಕುವಂತೆ, ಹಾವಿಗೆ ಹಾವು ಫೂತ್ಕರಿಸುವಂತೆ ಬುಸುಗುಟ್ಟಿದರು. ಒಬ್ಬರು ಇನ್ನೊಬ್ಬರನ್ನು ಪ್ರತಿಭಟಿಸುತ್ತ ಗೂಳಿಯಂತೆ ಸೆಣಸಾಡಿದರು. ಇದ್ದಕ್ಕಿದ್ದಂತೆ ಗಿರಿಯು ಕಂದರಕ್ಕೆ ಬಿದ್ದುದನ್ನು ಎಲ್ಲರೂ ಕಂಡರು!

ನೋಡಿದ ಮೈಂದ ದ್ವಿವಿದ ನಳರು ತಮ್ಮ ಕಡೆಯವನಿಗೆ ಸಹಾಯವನ್ನು ಮಾಡಲು ಓಡಿದರು. ಆ ವೀರ ಭಯಂಕರನು ಬಿದ್ದಂತೆ ನಟಿಸುತ್ತ ವೈರಿ ಅಕಂಪನನ ಕೀಲನ್ನು ಮುರಿದು ಕೊಂದು ಎದ್ದನು. ಮತ್ತು ಆ ಮಲ್ಲಗಾಳಗ ಪರಿಣತ ದರೀಮುಖನು ನಗು ನಗುತ್ತಾ ಇದ್ದನು!

ಕಳೆದುಕೊಂಡುದವರಂ ನಮ್ಮ ಪಕ್ಷಂ, ವಿಹಂಗಮಂ ಕಳೆದು ಕೊಳ್ವಂತೆವೋಲ್ ಪಕ್ಷಂಗಳಂ

ಅಕಂಪನನು ಸೇನೆಸಮೇತ ಮಡಿದುದನ್ನು ದೈತ್ಯೇಂದ್ರ ರಾವಣನು ಕೇಳಿದನು. ಅವನು ರಾಕ್ಷಸ ಸಮಸ್ತ ಸೇನಾಧ್ಯಕ್ಷನಾದ ಪ್ರಹಸ್ತನಿಗೆ ಹೇಳಿ ಕಳುಹಿಸಿದನು. ಅವನು ಬರಲು ತನ್ನ ವಿಷಾದವನ್ನು ತಾಳ್ಮೆಯಿಂದೊಡಗೂಡಿದ ವಿಮರ್ಶೆಯಲ್ಲಿ ಹೀಗೆ ವ್ಯಕ್ತಪಡಿಸಿದನು:

'ನಾನು ಯಾವಾಗಲೂ ಶತ್ರುವಿನ ಪರಾಕ್ರಮವನ್ನು ಕಿರಿದೆಂದು ಭಾವಿಸಿಲ್ಲ. ಆದರೂ ಪರಮ ಸೇನಾನಿಯೇ ಕೇಳು, ವನಚರರ ಮತ್ತು ನರರ ಸಾಮರ್ಥ್ಯ ಇಷ್ಟೊಂದು ಹೆಚ್ಚಿನದಾಗಿದೆ ಎನ್ನುವುದೇ ನನಗೆ ನಿಜವಾಗಿ ಆಶ್ಚರ್ಯವನ್ನುಂಟು ಮಾಡಿದೆ! ಯುದ್ಧದ ಮೊದಲನೆಯ ದಿನವೇ ನಮ್ಮ ಸೇನೆಯ ಏಳು ಘಟಕಗಳಿಗೂ ಮಿಗಿಲಾದ ಸಾಹಸಿಗಳು ಅಳಿದರು! ಇಂದ್ರನಸೇನೆಯನ್ನು ತನ್ನ ಅಪಾರವಿಜಯದಿಂದ ಬಿರುಗಾಳಿಯ ಎದುರಿನ ತರಗೆಲೆಯನ್ನಾಗಿಸಿದವನು ಮೇಘನಾದ. ಅವನ ಮಾಯೆಯು ವ್ಯರ್ಥವಾಯಿತೆಂದರೆ ನಮ್ಮ ದುರ್ವಿಧಿಗೆ ಏನೆಂದು ಹೇಳುವುದು?

'ಎರಡನೆಯ ದಿನದ ಇಂದಿನ ರಣಕಥೆಯು ವ್ಯಥೆಯನ್ನೇ ತಂದೊಡ್ಡುತ್ತಿದೆ. ವಜ್ರದಂಷ್ಟ್ರ ಧೂಮ್ರಾಕ್ಷರು, ಮಹಾಕಲಿ ಅಕಂಪನರು ಯುದ್ಧವಿದ್ಯಾ ಪರಮಪಾರಂಗತರು. ನಮ್ಮ ಪಕ್ಷ ಅವರನ್ನು ಕಳೆದುಕೊಂಡು ರೆಕ್ಕೆಗಳನ್ನು ಕಳೆದುಕೊಂಡ ಪಕ್ಷಿಯಂತಾಗಿದೆ. ಇನ್ನೂ ಹಗಲು ನೆತ್ತಿಯಮೇಲಿದೆ. ರಣವಿಶಾರದನೇ, ಕೇಳು. ಸೂರ್ಯನ ಮುಡಿಯ ಮಣಿ ಸಂಜೆ ಪಶ್ಚಿಮಪರ್ವತದ ತಲೆಗೆ ಸಾಗುವಷ್ಟರಲ್ಲಿ ಕಪಿ ಸೈನ್ಯವನ್ನು ಈ ತ್ರಿಕೂಟಾಚಲದ ತಪ್ಪಲಿನಿಂದ ಸುವೇಲಾದ್ರಿಯ ಕಂದರದ ಆಳನರಕಕ್ಕೆ ನೂಕಬೇಕು!'

ರಣಪಂಡಿತನಾದ ಸರ್ವರಾಕ್ಷಸ ಪ್ರಮುಖಸೇನಾನಿ ಪ್ರಹಸ್ತನು ನಸು ಕುಗ್ಗಿ, ಬಾಗಿದನು. ರಾಜ ರಾಜೇಶ್ವರರ ಮಕುಟಮಣಿಗಳು ಪಾದವನ್ನು ಸ್ಪರ್ಶಿಸುವ ರಾವಣೇಶ್ವರನಿಗೆ ಕೈಮುಗಿದು ಬಿನ್ನೈಸಿದನು:

'ರಾಜೇಂದ್ರನೇ, ಕಲಾನಿಪುಣನಿಗೆ ಸಂಗೀತವಿದ್ದಂತೆ, ವೀರನಿಗೆ ಸಂಗ್ರಾಮವಿದೆ. ಅವನಿಗೆ ಅವರೋಹಣವು ಮಧುರವಾದ ಆರೋಹಣದಂತೆಯೆ ಪ್ರಿಯವಾದುದು! ಕೇಳು, ಒಂದೆರಡು ಕದನವನ್ನು ಗೆದ್ದ ಮಾತ್ರದಿಂದ ಪೂರ್ಣಯುದ್ಧವನ್ನು ಗೆಲ್ಲುವರೇನು? ಸೈನಿಕವರೇಣ್ಯರ, ಸಮರ್ಥವಾದ ಯೋಧಮುಖ್ಯರ, ಅತಿರಥ ಮಹಾರಥ ಶ್ರೇಷ್ಠರ ಜೊತೆಗೂಡಿ ನಾನೇ ರಣಯಜ್ಞದ ದೀಕ್ಷೆಯನ್ನು ಇಂದು ಕೈಗೊಳ್ಳುತ್ತೇನೆ.

'ಸೂರ್ಯನು ಅಸ್ತಮುಖಿಯಾಗಿ, ಪರ್ವತದ ಕಡೆಗೆ ಸಾಗುವ ಮೊದಲೆ ವಾನರ ಸೈನ್ಯವನ್ನು ಸುವೇಲಾಚಲದ ಕಂದಕಕ್ಕೆ ತಳ್ಳುತ್ತೇನೆ. ನನ್ನ ಪ್ರತಿಜ್ಞೆಯನ್ನು ಕೇಳು. ಯುದ್ಧವನ್ನು ಗೆದ್ದು ಬರುತ್ತೇನೆ. ಇಲ್ಲದಿದ್ದರೆ ಆ ರಣ ಅಗ್ನಿಗೆ ಆಹುತಿಯಾಗುತ್ತೇನೆ.'

ಕಳುಹಿದನು ರಾವಣನಸುರ ಸೇನಾನಿಯಂ ಮರಣನಟ ನಾಟಕ ರಣಕ್ರಿಯೆಗೆ.

ಎಂದು ಹೇಳಿದ ಪ್ರಹಸ್ತನ ವೀರೋಚಿತ ನುಡಿಗಳನ್ನು ರಾವಣನು ಕೇಳುತ್ತ, ಕೃಪಾದೃಷ್ಟಿಯಿಂದ ನೋಡಿದನು. ಮನ್ನಣೆಯ ಮಾತುಗಳನ್ನು ಹೇಳುತ್ತ ಉಡುಗೊರೆಗಳನ್ನು ನೀಡಿದನು. ಅಮರ ಸೇನಾನಿಯನ್ನು ಮರಣನಾಟಕ ರಣಕ್ರಿಯೆಗೆ ಕಳುಹಿಸಿದನು. ಪ್ರಭುವಿನಿಂದ ಸನ್ಮಾನವನ್ನು ಪಡೆದ ಉತ್ತೇಜನಕ್ಕೆ ಪ್ರಹಸ್ತನು ಉಬ್ಬಿ ಹೋದನು. ಪೊದೆಯ ಹುಬ್ಬಿನ, ಹುರಿಮಾಡಿದ ಮೀಸೆಯ ಆ ರಣಾವೇಶಿಯು ದಳದಳದ ಈಟಿಯ ಮೊನೆಗೆ ಸಮನಾದ ಮಹಾಶೂರರೊಡನೆ ಕೂಡಿ, ಸ್ವರ್ಗ ಸಂಗ್ರಾಮಕ್ಕೆ ನುಗ್ಗಲು ಆಜ್ಞೆ ಮಾಡಿದನು.

ಸೈನಿಕರು, ಕುದುರೆಗಳು, ರಥಗಳು, ಆನೆಗಳು, ತೀಕ್ಷ್ಣ ನಾನಾಯುಧ ಪಂಕ್ತಿಗಳು ಪುರದ ಜನರ ನೋಟದ ಔತಣಕ್ಕೆಂಬಂತೆ ನೆರೆದವು. ಮಹೋನ್ನತವಾದ ಗಿರಿಶಿಖರದಂತೆ ಭವ್ಯವಾದ, ವಸಂತವನದ ಮಾವಿನಮರದ ಚಿಗುರಿನಂತೆ ಹೊಳೆಯುವ ಬಂಗಾರದ ರಥ ಸಿದ್ಧವಾಯಿತು. ಹರನ ಕೊರಳಿನ ವಿಷವನ್ನು ಅಮಾವಾಸ್ಯೆಯ ಕಪ್ಪಿಗೆ ಹೆಪ್ಪೆರೆದು ಕಡೆದು ಪಡೆದುದೆಂಬಂತೆ ಹೊಳೆಯುವ ಮಿಂಚುಗಪ್ಪಿನ ಮಹಾ ಅಶ್ವಗಳು ಆ ತೇರಿನ ನೊಗಕ್ಕೆ ಹೆಗಲನ್ನು ನೀಡಿದವು.

ರಥದ ಶಿಖರದಲ್ಲಿದ್ದ, ಬಂಗಾರದ ಎಳೆಯಿಂದ ನೇಯ್ದಧೋತ್ರದ ಸರ್ಪಧ್ವಜವು ಮಧ್ಯಾಹ್ನದ ಸೂರ್ಯ ಪ್ರಕಾಶದಲ್ಲಿ ನೆಲದ ರವಿಯಂತೆ ಮಿರುಗಿತು. ಪರಿಮಳದ ಹೊಗೆಯು ರಥವನ್ನು ಪ್ರದಕ್ಷಿಣೆ ಮಾಡಿ ಬಾನಿಗೆ ಏರಿತು. ರಣದುಂದುಭಿಯ ನಿನಾದವು ಭೋರ್ಗರೆಯಿತು. ಜನರ ಉತ್ಸಾಹದ ಜಯಘೋಷಗಳು ಗೆಲುವನ್ನು ಹೇಳುತ್ತಿದ್ದಿತು. ಆಗ ದೈತ್ಯಸೇನಾನಿಯು ಮೃತ್ಯುವಿಗೆ ಔತಣವೀಯುವ ದಿಬ್ಬಣದ ರಣಕ್ಕೆ ಹೋಗಲು ತೇರನ್ನು ಏರಿದನು. ರಾಹುರೋಷ, ಶೋಣಿತಾಕ್ಷ, ನರಾಂತಕ, ಸಮುನ್ನತ, ಮಹಾನಾದ, ಕುಂಭಹ, ಸುಪ್ತಘ್ನ, ಮಕರಾಕ್ಷ, ದುರ್ಮುಖ, ಮಹೋದರ ಮುಂತಾದವರು ಸಾಲಾಗಿ ನಡೆದರು. ಯಮಭೀಕರರಾದ ಇತರ ದಳನಾಯಕರು ಅವನ ಹಿಂದೆ ಸಾಗಿದರು.

ಮಹಾಸೇನಾನಿ ಪ್ರಹಸ್ತನು ದಿಕ್ಕು ದಿಕ್ಕಿಗೆ ದಳದ ನಾಯಕರನ್ನು ನಿಲ್ಲಿಸಿ ಸಮರವ್ಯೂಹವನ್ನು ಬಲಪಡಿಸಿದನು, ದಾನವ ಧನುರ್ಧರರ ದಿಗ್ಗಜ ಪ್ರಹಸ್ತನು ಕೋಟೆಯ ಪೂರ್ವದ್ವಾರದಿಂದ ನೀಲನು ಇದ್ದ ದುರ್ಗಮವಾದ ಪೂರ್ವ ದಿಕ್ಕಿಗೆ ಸಾಗಿದನು.

ಕಲಿ ಕುತೂಹಲಿ ದಶಾನನನು ಕೋಟೆಯ ಎತ್ತರದ ಕೊತ್ತಳವನ್ನು ಏರಿದನು. ಅದರ ನೆತ್ತಿಯಿಂದ ವಿಸ್ತಾರವಾದ ಲಂಕೆಯನ್ನು ಆವರಿಸಿ ಭೋರಿಡುತ್ತಿದ್ದ ವಾನರರ ರಾಕ್ಷಸರ ಸೇನೆಗಳ ಸಾಗರದ ಘರ್ಷಣೆಯ ಸಂಚಲನ ವೈಖರಿಯ ವ್ಯವಸ್ಥೆಯನ್ನು ನೋಡುತ್ತಿದ್ದನು. ಶುಕ ಮತ್ತು ಸಾರಣರು ಜೊತೆಯಾಗಿ ಹತ್ತಿರದಲ್ಲಿ ನಿಂತು ಪರಿಚಯದ ವೈರಿದಳದ ವೀರರ ಬಗ್ಗೆ ಬಣ್ಣಿಸುತ್ತಿದ್ದರು. ಕಿವಿಗೆ ಭಯಂಕರವಾದ ಕೋಲಾಹಲ ಕೇಳಿ ಬಂದಿತು. ಆ ತಕ್ಷಣ ಅಲೆಗಳು ಒಂದಕ್ಕೊಂದು ಮುಸೆದು ಕಡಲಿಗೆ ಮಗುಚಿಕೊಳ್ಳುವಂತೆ, ಸೈನ್ಯ ಸೈನ್ಯದ ಚಲನೆಗಳು ಭೀಕರ ಶೈಲಿಯ ಬೃಹತ್‌ಛಂದದಿಂದ ತೆರೆಗೆ ತೆರೆ ಮಲೆತು ಅಪ್ಪಳಿಸುವಂತೆ ಕಂಡವು. ಮೇಲೆ ನೆಗೆಯುವ ನಾದ ಸಿಂಹಗಳೊಡನೆ ಧೂಳು ಮುಗಿಲುಗಳು ಸ್ಪರ್ಧಿಸಿದವು. ಆ ಸಂಗ್ರಾಮ ಪರ್ವತದ ಮಂಥನ ಕಾರ್ಯವು ಮಹೋಗ್ರವಾಗಿತ್ತು.

ಸ್ವಲ್ಪ ಸಮಯದ ನಂತರ ಉದ್ವಿಗ್ನನಾದ ರಾವಣನು ಹತ್ತಿರದಲ್ಲಿದ್ದ ವೇಗಗಾಮಿಯನ್ನು ಕರೆದು ಹೀಗೆ ಆಜ್ಞಾಪಿಸಿದನು:

'ಓಡು, ಸಾರಣ. ರಣಸ್ಥಿತಿಯ ನಾಡಿಯನ್ನು ತಿಳಿದು ಬಂದು ಹೇಳು. ಧೂಳಿನಮೋಡವು ಇಬ್ಬನಿಯ ಮಂಜಿನಂತೆ ಮುಸುಕಿದೆ. ರಣ ಕೋಲಾಹಲ ಕೇಳುತ್ತಿದೆ. ಯುದ್ಧ ಕಾಣುತ್ತಿಲ್ಲ.'

ತಕ್ಷಣ ಸಾರಣನ ಭುಜಕ್ಕೆ ರೆಕ್ಕೆಗಳು ಮೂಡಿದವು. ಅವನು ಕೊಡೆಯಂತೆ ಕೆದರಿಕೊಂಡು ಹಾರುತ್ತ ಕದನ ಭೂಮಿಯಲ್ಲಿ ಇಳಿದನು. ಸ್ವಲ್ಪ ಹೊತ್ತಿನ ಅನಂತರ ಸಾರಣನು ಬಾರದೆ ಇರುವ ಕಾರಣವನ್ನು ತಿಳಿಯಲು ದಶಾನನನು ಕಾತರಿಸಿ ಹೇಳಿದನು:

'ಶುಕ ನೀನು ಹೋಗು. ಸಾರಣ ತಡಮಾಡಿದ್ದಾನೆ. ಬೇಗನೆ ಸಮರ ವಾರ್ತೆಯನ್ನು ತೆಗೆದುಕೊಂಡು ಬಾ.'

ಶುಕನು ಅತ್ತ ಮರೆಯಾಗಲು ಇತ್ತ ಅಸುರೇಶ್ವರನು ಕೊತ್ತಳದ ನೆತ್ತಿಯ ಮೇಲೆ ಶತಪಥ ತಿರುಗುತ್ತಿದ್ದನು. ಆಗ ರಣದ ಧೂಳು ಗಾಳಿ ಹಾದಿಯನ್ನು ತುಂಬಿ ಬಾನನ್ನು ಮುಟ್ಟಲು ಏರುತ್ತಿದ್ದುದನ್ನು ಈಕ್ಷಿಸಿದನು. ಅದು ಕ್ಷಣ ಕ್ಷಣಕ್ಕೆ ವಿಸ್ತಾರಗೊಂಡು ಸಮುದ್ರದ ಮೇರೆಯ ಗಡಿಯಾಗಲು ತನ್ನ ಮೇರೆಯನ್ನು ಬೆಳೆಸಿಕೊಳ್ಳುತ್ತಿರುವುದನ್ನು ನೋಡಿದನು.

ಆಗ ದೂತನೊಬ್ಬನು ಬಂದು ಕೈಮುಗಿದು ರಾಣಿಯ ಕರೆಯನ್ನು ಶೃಂಗಾರ ವಿನಯಶಾಲಿಗೆ, ಮಯನ ಮಗಳ ಪತಿಗೆ ತಿಳಿಸಿದನು. ಕರೆ ಕೇಳಿದ ಅವನ ಮುಖ

ಕುಂದಿತು. ರಣರಂಗದ ಕಡೆ ನೋಡಿದನು. ಕೊತ್ತಳದಿಂದ ಇಳಿದನು. ಸೇವಕರು ಅವನನ್ನು ಬಳಸಿ ಬರುತ್ತಿರಲು, ಹಸಿದ ಗಾಯದ ಕಾಡುಹಂದಿ ಹಸಿದು ತನ್ನ ಇಕ್ಕೆಗೆ ನಡೆಯುವಂತೆ ಅರಮನೆಗೆ ನಡೆದನು.

ನನ್ನ ಹಣೆಯಿರಲಿ; ನಿನ್ನ ಕಣ್ಣೊರಸಿಕೊಳ್, ಲಂಕೇಶ್ವರಿ.

ಚಿನ್ನದಮಣೆಯ ಮೇಲೆ ಚಿನ್ನದತಟ್ಟೆಯಲ್ಲಿ ಕಂಪು ಸೂಸುತ್ತಿರುವ ರಾಜ ಭೋಜನವನ್ನು ರಾವಣನು ಯಾಂತ್ರಿಕವಾಗಿ ತಿನ್ನುತ್ತಿದ್ದನು. ಪತಿಸೇವೆಗಾಗಿ ಬಾಗಿ ಬೀಸಣಿಗೆಯಿಂದ ಗಾಳಿ ಬೀಸುತ್ತಿದ್ದ ಮಂಡೋದರಿಯು ಉದ್ವಿಗ್ನನು, ಚಿಂತಾಮಗ್ನನು ಆದ ಪತಿಯನ್ನು ನೋಡಿದಳು. ಹೆದರುತ್ತ, ಅಂಜುತ್ತ, ಆ ದಿನದ ರಣವಾರ್ತೆ ಕೇಳುವ ನೆವದಿಂದ ಮೆಲ್ಲನೆ ಮಾತು ತೆಗೆದಳು. ಅವನು ತಿಳಿದಷ್ಟನ್ನು ಸಂಗ್ರಹವಾಗಿ ಹೇಳಿದನು. ಆಗ ಅವನ ಹಣೆಯಲ್ಲಿ ಬೆವರು ಮೂಡಿದುದನ್ನು ನೋಡಿ ನಿಟ್ಟುಸಿರಿಟ್ಟಳು; ಕಣ್ಣೀರು ಚಿಮ್ಮಿತು. ವಿಧಿಯ ಲಿಖಿತವನ್ನು ಒರಸಲು ಆಶಿಸುವವಳಂತೆ ಪ್ರತಿಕೂಲವನ್ನು ತೊಡೆದು ಹಾಕುವಂತೆ ಬಟ್ಟೆಯಿಂದ ಅರಳೆ ಮೃದುವಾಗಿ ಅವನ ಹಣೆಯನ್ನು ಒತ್ತಿದಳು.

'ನನ್ನ ಹಣೆಯಿರಲಿ; ನಿನ್ನ ಕಣ್ಣೊರಸಿಕೊ ಲಂಕೇಶ್ವರಿ. ನಿನಗೇಕೆ ರಣಭೀತಿ? ಇಂದು ನಮ್ಮ ಸೈನ್ಯವು ಶತ್ರುವನ್ನು ದುರ್ಗದಿಂದ ವೇಲಾದ್ರಿಕಂದರಕ್ಕೆ ನೂಕದೆ ಹಿಂದಿರುಗುವುದಿಲ್ಲ. ಪ್ರಹಸ್ತನು ಸಮರ್ಥ ರಣಪಂಡಿತ. ಸಮಸ್ತ ಶಸ್ತ್ರಾಸ್ತ್ರ ಸಂಗ್ರಾಮದ ಒಡೆಯನಾದ ಅವನನ್ನು ಯುದ್ಧಕ್ಕೆ ಕಳುಹಿಸಿರುವೆ. ಹೀಗಿರುವಾಗ ರಮಣಿಯೆ, ಶತ್ರುಭಯವೆಂದರೆ ನಗೆ ತರುತ್ತದಲ್ಲವೆ?'

'ನಿನ್ನ ಕೈ ಹಿಡಿದ ನನಗೆ ಆ ಅಳುಕೆ?'

'ಮತ್ತೇಕೆ ನಿಟ್ಟುಸಿರು ಬಿಡುವೆ'

'ಇಂದು ಬೆಳಿಗ್ಗೆ ನೀನು ರಾಮನರ್ಧಾಂಗಿಯನ್ನು ಕಂಡುದು ಉಂಟಲ್ಲವೆ?'

'ಕಂಡುದುಂಟು. ಆ ಉಪವಾಸದ ಕೃಶಾಂಗಿಯನ್ನು.'

'ಹಿಂದೆ ಯಾವಾಗಲೂ ಹೀಗೆ ಏಕಾಂತ ಬಯಸಿ ಹೋದುದು ಇಲ್ಲ.'

'ಅನಲೆಯಿದ್ದಳು! ತ್ರಿಜಟೆ ಹತ್ತಿರದಲ್ಲಿದ್ದಳು. ಅಲ್ಲಿ ಏಕಾಂತವೆಲ್ಲಿಯದು? ಆಕೆಗೆ ಹೋದ ರಾತ್ರಿಯ ರಣದ ವಿಜಯವಾರ್ತೆ ಹೇಳಿದೆ. ಮಗನ ಮಾಯೆಗೆ ಸಿಕ್ಕಿ ಕಪಿಸೇನೆ ರಾಮಲಕ್ಷ್ಮಣ ಸಹಿತ ಭೂಮಿಗೆ ಒರಗಿದುದನ್ನು ಹೇಳಿದೆ. ಆ ಹೊಟ್ಟೆಗಿಲ್ಲದೆ ಮಿದುಳು ಕದಡಿದ ಭ್ರಾಂತಳು ಹುಚ್ಚುನಗೆ ನಕ್ಕಳು!'

'ನನಗೆ ಅನಲೆ ಬೇರೊಂದು ಕಥೆ ಹೇಳಿದಳು.'

ಎಂದು ನುಡಿದ ರಾಣಿಯ ಮುಖಭಾವವನ್ನು ದೀರ್ಘಕಾಲ ದಿಟ್ಟಿಸಿ ನೋಡಿದನು.

ತನ್ನ ಅಂತರಂಗವನ್ನು ತೆರೆದಿಡುವಂತೆ ಮಾತಾಡಿದನು. ಆಗ ಅಸುರನ ಮುಖವು ಕಲಕಿದ ಕೊಳವಾಗಿತ್ತು.

'ರಾಣಿಯೆ, ಕಳೆದ ರಾತ್ರಿ ನನಗೊಂದು ಕನಸಾಯಿತು. ಅದರಲ್ಲಿ ಮತ್ತೆ ಆ ಭೀಕರ ದೃಶ್ಯವನ್ನು ನೋಡಿದೆ. ನಿರ್ಭಾಗ್ಯೆ ವೇದವತಿ ಚಿತೆಯೇರಿದ್ದು ಕಂಡೆ. ನೋಡುತ್ತಿದ್ದಂತೆ ಆ ಸುಂದರಿಯ ತನುರೂಪರಾಶಿಯು ಕಣ್ಣ ಮುಂದೆ ಉರಿದು ಭಸ್ಮರಾಶಿಯಾಯಿತು. ಅದರ ಮೇಲೆ ಮೃದುವಾದ ಗಾಳಿ ಬೀಸಿತು. ಆ ಮೃತ ಭಸ್ಮ ರಾಶಿಯಿಂದ ನೆಟ್ಟನೆ ಕವಿ ಸೃಷ್ಟಿಸಿದ ಮನೋಹರವಾದ ಅಮೃತಮೂರ್ತಿಯೊಂದು ಮೂಡಿತು. ಆ ಮೂರ್ತಿಯಲ್ಲಿ ಈ ಮಹಾ ತಪಸ್ವಿನಿ ಸೀತೆಯನ್ನು ಗುರುತಿಸಿದೆ. ಕಾರಣವೇನೆಂದು ತಿಳಿಯದೆ ನಡುಗಿ ಕಣ್ಣು ತೆರೆದೆ. ಮೈ ಬೆವರಿತ್ತು. ಸ್ವಪ್ನಚೇಷ್ಟೆಯನ್ನು ಕಂಡು ನನ್ನೊಳಗೆ ನಾನು ನಕ್ಕೆ! ಹುಸಿಯ ಕನಸಿನ ಶಂಕೆಯನ್ನು ನಿವಾರಿಸಲು ಹೋಗಿ ಜನಕಜಾತೆಯನ್ನು ಕಂಡೆ. ಕೃಶಾಂಗಿಯನ್ನು ನೋಡಿದ ಮೇಲೆ ನನ್ನ ಸಂದೇಹ ದೂರವಾಯಿತು. ಇವಳೆಲ್ಲಿ? ಅವಳೆಲ್ಲಿ? ಮತಿ ನಿದ್ದೆ ಮಾಡುವಾಗ ಮಿದು ಮಿದುಳು ಈ ವಿಕಾರಗಳನ್ನು ಕಡೆದು ಎಬ್ಬಿಸುತ್ತದೆ!'

ಕಪಿಸೈನ್ಯಕಲ್ತೆಮ್ಮ ಸೈನ್ಯಂ ಕ್ಷಯಿಸುತಿರ್ಪುದು ಪತಿವ್ರತೆಯ ದೈನ್ಯಕೆ ಕಣಾ!

'ಪ್ರಭೂ, ಮನದ ಆಳದಿಂದ ಆತ್ಮಧರ್ಮವು ನೀಡುವ ಎಚ್ಚರಿಕೆಯು ಕನಸಿನ ರೂಪದಲ್ಲಿ ಬರುತ್ತದಲ್ಲವೆ? ನಿದ್ರೆಯ ಕೃಪೆಯಿಂದ ನಿನ್ನ ಅಂತರಾತ್ಮವು ಅಹಂಕಾರದಿಂದ ಬಿಡುಗಡೆ ಪಡೆದಿದೆ. ಅದರ ಶುದ್ಧ ಸಂದೇಶವನ್ನು ಧಿಕ್ಕರಿಸಬೇಡ. ನಮ್ಮ ಸೈನ್ಯವು ಕ್ಷಯಿಸುತ್ತಿರುವುದು ಕಪಿಸೈನ್ಯದಿಂದಲ್ಲ. ಪತಿವ್ರತೆಯ ದೈನ್ಯದಿಂದ.'

ರಾವಣನ ಕಣ್ಣು ಅವಳ ಕಣ್ಣನ್ನು ದಿಟ್ಟಿಸಿ ನೋಡುತ್ತಿರಲು, ಮಹಾರಾಣಿ ಮಾತು ಮುಂದುವರಿಸಿದಳು.

'ನನಗೆ ಅನಲೆ ಹೇಳಿದುದನ್ನು ಹೇಳುತ್ತೇನೆ. ಅದು ನೀನು ಕಂಡ ಕನಸಿಗಿಂತ ಹೆಚ್ಚಿನದು. ತ್ರಿಜಟೆ ತನ್ನ ಕೆಲಸ ಮುಗಿಸಿ ಮಲಗಿದಳಂತೆ. ಸೀತಾದೇವಿಯು ಕಣ್ಣುಮುಚ್ಚದೆ ಭೀಷ್ಮಮೌನಿಯಾಗಿ ಅಂತರ್ಮುಖತೆಯಿಂದ ಯೋಗಿನಿಯಂತಿದ್ದಳಂತೆ. ಆಗ ಅನಲೆಯ ಕಣ್ಣಿಗೆ ಅನುಪಮ ಜ್ಯೋತಿಯೊಂದು ಪರ್ಣಶಾಲೆಯನ್ನು ತುಂಬಿದಂತಾಯಿತಂತೆ. ಅವಳು ರೋಮಾಂಚಿತಳಾಗಿ ನೋಡುತ್ತಿರಲು, ಬಾಹ್ಯ ಸಂಜ್ಞಾಶೂನ್ಯಳಾದ ಸೀತೆಯು ಯಾರೊಡನೆಯೊ ಮಾತಾಡಿದಂತೆ ಸಂವಾದಕ್ಕೆ ತೊಡಗಿದಳಂತೆ. ಆ ಪೂಜ್ಯೆಯು ಅಲ್ಲಿದ್ದು ಎಲ್ಲೆಲ್ಲಿಯೂ ಚಲಿಸುತ್ತಿದ್ದಂತೆ; ಅಲ್ಲಿದ್ದು ಎಲ್ಲವನ್ನು ನೋಡುತ್ತಿದ್ದಂತೆ; ಅಲ್ಲಿ ತಟಸ್ಥಳಾಗಿದ್ದರೂ ದೂರವಿದ್ದು ಇತರ ಜಗತ್ ಕ್ರಿಯಾ ಚಕ್ರವನ್ನು ನಡೆಸುವಂತೆ ಗೋಚರಿಸಿದಳಂತೆ. ಅದನ್ನು ಕಂಡು ಅನಲೆ ಭಯ ಭೀತಳಾಗಿ ಮೈ ಮರೆತಳಂತೆ!

‘ಅನಂತರ ಆ ಪತಿವ್ರತೆಯ ಕೈ ಸೋಂಕಿಗೆ ಅನಲೆ ಕಣ್ತೆರೆಯಲು, ‘ಮಗಳೆ, ನೀನು ಕಂಡ ದೈವಿಕವಾದುದಕ್ಕೆ ಭಯಗೊಳ್ಳಬೇಡ. ನಿನ್ನ ತಂದೆಯ ಉಪಕಾರದಿಂದ ನನ್ನ ತಾಳಿ ಉಳಿದಿದೆ. ಪ್ರಭು ರಾಮಚಂದ್ರನಿಗೆ ಒಂದು ಕಂಟಕ ಕಳೆಯಿತು.’ ಎಂದು ಹೇಳಿ ಸಂತೈಸಿದಳಂತೆ. ಆ ಪಾವನೆಯ ಪಾದಗಳಿಗೆ ನಮ್ಮ ಅನಲೆ ನಮಿಸಿದಳಂತೆ.’

ಅಕ್ಕರೆಯೆ ನನಗಿಕ್ಕಿದುರಿಯಾಯ್ತು!

ಸತಿಯ ಮಾತನ್ನು ಕೇಳಿ ನಿಟ್ಟುಸಿರು ಬಿಡುತ್ತ ದಶಶಿರನು ಹೇಳಿದನು:

‘ಅನಲೆ! ನಮಗೆ ನಿಜವಾಗಿಯೂ ಅನಲೆ (ಬೆಂಕಿ)ಯೆ! ರಾಮ ಪಕ್ಷಕ್ಕೆ ತಂದೆ; ಸೀತೆಯ ಪಕ್ಷಕ್ಕೆ ಈ ಮಗಳು! ಇವರಿಬ್ಬರೂ ದ್ರೋಹಿಗಳು! ಅಕ್ಕರೆಯೆ ನನಗೆ ಇಕ್ಕಿದ ಉರಿಯಾಯಿತು!

‘ಬೇಡವೆಂದೆ. ಬಿಡದೆ ಕೇಳಿಕೊಂಡಳು; ಕಾಡಿದಳು. ನೋಡಿ ಬರುವ ಆಸೆಗೆ ಒಪ್ಪಿಗೆ ಕೊಟ್ಟೆ. ಅಶೋಕ ವನದಲ್ಲಿಯೆ ಮನೆ ಮಾಡಿದಳು! ಕಟ್ಟುಕತೆಗಳನ್ನು ಕಟ್ಟಿ, ಕಣ್ಣಾರೆ ನೋಡಿದೆ ಎಂದು ಹೇಳುತ್ತ, ಮತಿಗೆಟ್ಟು ನಂಬುತ್ತಾಳೆ. ಇತರರನ್ನು ನಂಬಿಸುತ್ತಾಳೆ! ಹೆಂಗಸರಲ್ಲಿ ಅಧೈರ್ಯವನ್ನುಂಟು ಮಾಡುತ್ತಾಳೆ! ಆ ಹುಡುಗಿ ಬೆಪ್ಪಾಗಿ ಹೇಳಿದುದನ್ನೆಲ್ಲಾ ನೀನು ಒಪ್ಪಿದೆಯಲ್ಲಾ, ಅದೇ ನನಗೆ ಸೋಜಿಗ! ಶತ್ರು ನಿನ್ನೆ ಬದುಕಿದ. ನಿನ್ನ ತಲೆಗೆಟ್ಟ ಅನಲೆಯು ಕಟ್ಟಿರುವ ಕತೆ ಪೊಳ್ಳಾಗುವುದನ್ನು ನೀನು ಇಂದಿನ ಯುದ್ಧದಲ್ಲಿ ಕಾಣುವೆ!’

ಅಷ್ಟರಲ್ಲಿ ಸಾರಣನು ಬಂದನು. ರಣವಾರ್ತೆ ತಂದ ಅವನನ್ನು ರಾವಣನು ಊಟದ ಮನೆಗೆ ಬರಹೇಳಿ ನುಡಿದನು.

‘ವೇಗದೂತನೇ, ಬೇಗ ವಾರ್ತೆಯನ್ನು ಹೇಳು.’

ಧೂಳಿಡಿದು ಬೆವರುತ್ತಿದ್ದ ಗೂಢಚಾರನು ಮುಖದಲ್ಲಿ ಉತ್ಸಾಹವನ್ನು ಸೂಸುತ್ತ ಕೈಮುಗಿದು, ಕದನ ವೃತ್ತಾಂತವನ್ನು ಕಥೆಯಾಗಿ ಹೇಳಿದನು:

‘ಸ್ವಾಮಿಯೇ, ನಮಗೆ ಜಯ ವನಿತೆಯು ತೊತ್ತಾದಳು. ಬೇಸಗೆಯ ಸೂರ್ಯನ ಝಳಕ್ಕೆ ದಡವನ್ನು ತ್ಯಜಿಸುವ ಸರೋವರದಂತೆ, ಪ್ರಹಸ್ತನ ಶೌರ್ಯಕ್ಕೆ ವೈರಿ ಸೈನ್ಯವೆಲ್ಲವೂ ಹಿಂದಕ್ಕೆ ಸರಿದು ಓಡುತ್ತಿದೆ. ಪ್ರಹಸ್ತಾಸುರನ ಶೌರ್ಯಸಾಮರ್ಥ್ಯವನ್ನು ಏನೆಂದು ಹೇಳಲಿ!

‘ಅವನು ಧನುರ್ಧರನಾಗಿ, ಠಂಕಾರ ಘೋಷದಿಂದ ಭಯಂಕರನಾಗಿದ್ದಾನೆ. ಬಾಣಾಗ್ನಿಯಿಂದ ವೈರಿಯ ಪ್ರಾಣವೆಂಬ ಕಾಡಿಗೆ ದಾವಾಗ್ನಿಯಾಗಿ ವಾನರ ಸೇನಾಪತಿ ನೀಲನಿದ್ದ ಕಡೆಗೆ ನುಗ್ಗಿದ್ದಾನೆ. ದ್ವಿವಿದ ವಾನರನು ಬೀಸಿದ ಒಂದು ದೊಡ್ಡ ಬಂಡೆಗಲ್ಲು ನರಾಂತಕನನ್ನು ಕೊಂದಿತು. ಕುಂಭಹನು ದ್ವಿವಿದನನ್ನು ಎದುರಿಸಿದನು. ಅವನ ಒನಕೆಯ ಬಡಿತಕ್ಕೆ ದ್ವಿವಿದನು ಬಿದ್ದನು.

ಮೈಂದನು ನಮ್ಮ ಅತಿಶಯ ಸಾಹಸಿಗಳಾದ ಮಹಾನಾದರಿಬ್ಬರ ಮತ್ತು ಅವರ ಉಪಸೇನಾಪತಿಗಳ ತಲೆಯನ್ನು ಕಡಿದುಹಾಕಿದನು. ಅದನ್ನು ಕಂಡ ನಮ್ಮ ವೀರ ಪ್ರಹಸ್ತನು ತೇರಿನೊಡನೆ ಹೋಗಿ ಮೈಂದನ ಸಾವಿರ ಸೈನಿಕರನ್ನು ಕೊಂದು ಹಾಕಿದನು. ಕಪಿಶ್ರೇಷ್ಠನಾದ ಮೈಂದನು ಪ್ರಹಸ್ತನ ತೇರು ತೇಜಗಳನ್ನು ಉರುಳಿಸಿದನು. ಆಗ ರಥದಿಂದ ಧುಮುಕಿದ ಅವನು ಒಂದು ಯುದ್ಧಕುದುರೆಯನ್ನು ಏರಿ ಗುಲ್ಮಾಧಿಪತಿ ಶಾರ್ದೂಲನನ್ನು ಸಂಕೇತ ನೀಡಿ ಕೂಗಿದನು.

'ಕೂಡಲೇ ಮಾಯಾ ಪ್ರವೀಣರಾದ ಶಾರ್ದೂಲನ ಆಳುಗಳು ದೊಡ್ಡ ಬಂಡೆಯಂತಹ ಸಿಡಿಲ ಶರೀರದ ಸಿಡಿಗುಂಡುಗಳ ರೂಪವನ್ನು ಧರಿಸಿದರು. ಅವರು ಗಿರಿಗಳಂತೆ ವೈರಿಗಳ ಮೇಲೆ ಉರುಳಿದರು ಪ್ರತಿಭಟಿಸಿದವರನ್ನು ಅರೆದು ಹಾಕಿದರು. ಹಗೆಗಳ ಬೀಡಿನಲ್ಲಿ ಚೀತ್ಕಾರವೆದ್ದಿತು. ಸೇನಾ ನಾಯಕರ ಕರೆಗೆ ಒಂದಿಷ್ಟೂ ಕಿವಿಗೊಡದೆ ಸೇನೆ ಹಿಂಜರಿಯ ತೊಡಗಿತು. ನೀಲನು ಆ ಕಪಿಸೇನೆಯನ್ನು ತಡೆಯಲಾರದಾದನು. ಆಯಕಟ್ಟಿನ ಬೇರೆ ಸ್ಥಳದಲ್ಲಿ ವ್ಯೂಹವನ್ನು ರಚಿಸಿ ನಿಲ್ಲುವ ಆಸೆಯಿಂದ ಹಿಂದಕ್ಕೆ ಸರಿಯಲು ಅಪ್ಪಣೆ ನೀಡಿದನು!'

ಎಂದು ವಿವರಿಸಿದನು. ಹಸನ್ಮುಖಿಯಾದ ರಾವಣನು ಸಾರಣನನ್ನು ಸನ್ನೆಯಿಂದ ಸುಮ್ಮನಿರಿಸಿದನು. ಮಂಡೋದರಿಯ ಮುಖವನ್ನು ಇಂಗಿತದಿಂದ ನೋಡಿ ಹೇಳಿದನು:

'ದೇವಿಯೆ, ಸಾರಣನು ಹೇಳಿದ ವರದಿಯನ್ನು ಕೇಳಿದೆಯಾ? ಇನ್ನು ಮುಂದಾದರೂ ನಿಶ್ಯಂಕೆಯಿಂದಿರು. ಚರಾಗ್ರಗಣಿಯೆ, ನೀನು ನಡೆ. ನನಗಾಗಿ ಕೊತ್ತಳದ ನೆತ್ತಿಯಲ್ಲಿ ಕಾಯುತ್ತಿರು.'

ರಾವಣನು ಅವಸರದಲ್ಲಿ ಊಟವನ್ನು ಮುಗಿಸಿದನು. ವೀಳೆಯವನ್ನು ಒಲ್ಲದೆ, ಪತ್ನಿಗೆ ಉಪಚಾರಕ್ಕೆಂಬಂತೆ, 'ದೇವಿಯೆ, ಸೀತೆಯು ಸಾಯದಂತೆ ನೋಡಿಕೊಂಡಿರಲು ಅನಲೆಗೆ ನನ್ನ ಆಜ್ಞೆಯನ್ನು ಹೇಳು. ನನಗೆ ಇನ್ನು ಮುಂದೆ ಯುದ್ಧದ ಮೇಲೆಯೇ ಮೋಹ. ಆ ಜಾನಕಿಯ ಮೇಲೆ ಮೊದಲಿದ್ದ ಮೋಹವೆಲ್ಲ ರಣದ ಮಧುರತರ ಸಾಹಸಕ್ಕೆ ತಿರುಗಿದೆ!'

ಎಂದು ಹೇಳಿ ಹೋದನು. ಮಂಡೋದರಿಯು ತನ್ನ ಜೀವದ ಜೀವವಾಗಿರುವ ಇಂದ್ರವಿಜಯಿ ಪ್ರಾಣೇಶನನ್ನು ನೋಡುತ್ತ ಶಿವ ಶಿವಾಣಿಯರಲ್ಲಿ ಅವನ ಆತ್ಮೋದ್ಧಾರದ ಭಿಕ್ಷೆಯನ್ನು ಬೇಡಿದಳು.

ಲಂಕೇಶ್ವರನು ಕೊತ್ತಳವನ್ನು ಏರಿ ರಣರಂಗವನ್ನು ನೋಡುತ್ತಿದ್ದನು. ಆಗ ದಿನೇಶ್ವರನು ಪಶ್ಚಿಮದ ಮಲೆ ತಲೆಯ ಕೋಡನ್ನು ಮೆಟ್ಟಿ ನಿಂತಿದ್ದನು. ಆಗ ಶುಕನು ಬಂದು ಸುಗ್ರೀವನ ಸೈನ್ಯ ತ್ರಿಕೂಟ ತ್ಯಜಿಸಿ ವೇಲಾದ್ರಿ ಕಂದರಕ್ಕೆ ಹಿಮ್ಮೆಟ್ಟಿ ಹೋಯಿತು ಎಂಬ ವಿಜಯ ವಾರ್ತೆ ಹೇಳಿದನು.

ಅಷ್ಟರಲ್ಲಿ ಓಡೋಡಿ ಬಂದ ಚಾರನೊಬ್ಬನು ನೀಲನ ಗದಾಘಾತದಿಂದ ಪ್ರಹಸ್ತನು ಸತ್ತ ಸುದ್ದಿ ಹೇಳಿದನು. ಪ್ರಥಮ ಸೇನಾಪತಿಯ ಮೃತ್ಯು ವಾರ್ತೆಗೆ ರಾವಣನ ಮನಸ್ಸು ತತ್ತರಿಸಿತು. ಅದರಿಂದ ಚೇತರಿಸಿಕೊಳ್ಳುತ್ತಿರುವಾಗಲೇ ಬಂದ ಇನ್ನೊಬ್ಬ ಚಾರನು ಕೋದಂಡಪಾಣಿ ರಘುರಾಮನ ಶಕ್ತಿಯುತ ತೋಳುಗಳ ಹೊಡೆತಕ್ಕೆ ರಾಕ್ಷಸರ ಸೇನೆ ಕಂಗೆಟ್ಟಿದೆ. ರಣಭೂಮಿಯಲ್ಲಿ ಲೆಕ್ಕಮಾಡಲಾಗದಷ್ಟು ಸೈನಿಕರ ಶವಗಳು, ಸೇನಾನಿಗಳ ಕಳೆಬರಗಳು ಉರುಳಿ ಬಿದ್ದಿವೆ. ಸೇನೆಯು ಅವುಗಳನ್ನು ತುಳಿಯುತ್ತ, ಅಲ್ಲಿರದೆ ಲಂಕೆಯ ಕಡೆಗೆ ಹಿಮ್ಮೆಟ್ಟಿ ದೌಡೋಡಿ ಬರುತ್ತಿವೆ – ಎಂಬ ದುರಂತ ವೃತ್ತಾಂತವನ್ನು ಹೇಳಿದನು.

ಮಡಿವೆನಲ್ಲದೆ ನಿನ್ನ ತೇರ್ ನೊಗಕೆ ಪೆಗಲಾಂತು, ಮರಳಿ ಲಂಕೆಗೆ ಪುಗೆನ್

ಸೂರ್ಯ ಮುಳುಗಿದ, ಕತ್ತಲಾಯಿತು. ದಶಶಿರನ ಮತಿಗೆ ಮಂಕು ಕವಿದಂತಾಯಿತು. ಅವನು, 'ಗೌರವಾನ್ವಿತ ಮಹಾಪಾರ್ಶ್ವನನ್ನು ಕರೆ, ಇಂದ್ರಜಿತು ನಿಕುಂಭರನ್ನು ಕರೆ, ಕುಂಭರಿಗೆ ದುರ್ಗರಕ್ಷಣೆ ಮಾಡಲು ಹೇಳು. ತ್ರಿಶಿರನನ್ನು ನುರಿತ ಮೀಸಲು ಪಡೆಯೊಡನೆ ಹೆಬ್ಬಾಗಿಲು ರಕ್ಷಿಸಲು ಹೇಳು. ಸುಪಾರ್ಶ್ವನನ್ನು ಹೊಸ ಸೈನ್ಯದೊಡನೆ ಹೋಗಿ, ಕುಸಿದ ಹೃದಯದೊಡನೆ ಓಡಿಬರುತ್ತಿರುವ ಸೈನ್ಯಕ್ಕೆ ನೆರವಾಗಲು ಹೇಳು.'

ಎಂದು ಆಜ್ಞೆಮಾಡಿ, ಉದ್ವಿಗ್ನನಾಗಿ ಕೊತ್ತಳದಿಂದ ಇಳಿದನು. ಆಲೋಚನೆಗೆ ಸಚಿವ ಮಂದಿರಕ್ಕೆ ನಡೆದನು. ಆ ಸಭೆಯು ಮಹಾಸಚಿವರುಗಳಿಂದ ಕಿಕ್ಕಿರಿದಿತ್ತು. ಅವರೆಲ್ಲರೂ ಚಿಂತೆಗೊಳಗಾಗಿದ್ದ ದಶಾನನನಿಗೆ ಒಮ್ಮತದಿಂದ ಹೀಗೆ ಹೇಳಿದರು:

'ಭಿನ್ನಮತಕ್ಕೆ ಈಗ ವೇಳೆಯಿಲ್ಲ. ಶಕ್ತಿ ಸಾಧಕ, ಅತುಲ ಪರಾಕ್ರಮಿ ಮಹಾಪಾರ್ಶ್ವ ದಳಪತಿಗೆ ಸೇನಾ ಪಟ್ಟವನ್ನು ಕಟ್ಟು. ಅಂದು ಸಭೆಯಲ್ಲಿ ಆ ವಿಭೀಷಣನ ಪಕ್ಷವಿಡಿದು ಹೇಳಿದುದನ್ನು ಇಂದು ನೆನೆಯಬೇಡ. ಅರ್ಹತೆಗೆ ಮನ್ನಣೆಯನ್ನು ಮಾಡದಿದ್ದರೆ ತಾನೇ ತನ್ನದನ್ನು ಕೊಂದಂತೆ. ಅದು ಹಗೆಗೆ ಉಪಕಾರವಾದಂತೆ! ಇಂದು ರಾತ್ರಿ ಪ್ರಳಯವೇಗದಲ್ಲಿ ನುಗ್ಗಿ ಬರುವ ಕಪಿಸೈನ್ಯವನ್ನು ತಡೆಯುವ ಬಲವಿರುವುದು ಸತ್ತ್ವ ಸಂಯಾಮಿಯಾದ ಮಹಾಪಾರ್ಶ್ವನಿಗೆ, ನಿನಗೆ ಮತ್ತು ಕುಂಭಕರ್ಣನಿಗೆ ಮಾತ್ರ. ಅದು ಬೇರೆಯವರಿಂದ ಅಸಾಧ್ಯ. ಸಹೋದರನು ನಿದ್ರಾ ಸಮಾಧಿಯಲ್ಲಿದ್ದಾನೆ. ನೀನು ದೊರೆ. ಸಮರ್ಥ ಸೇವಕರು ಇರುವಾಗ ಅಂತಹ ಅರ್ಹರಿಗೆ ಆಜ್ಞೆ ಮಾಡುವುದು ರಾಜನ ಕರ್ತವ್ಯ.'

ರಾವಣನು ಸಚಿವರ ಮಾತನ್ನು ಸಮ್ಮತಿಸಿ, ಮಹಾಪಾರ್ಶ್ವನಿಗೆ ಬರಲು ಹೇಳಿ ಕಳುಹಿಸಿದನು. ಶಕ್ತಿ ಪೂಜೆಯಲ್ಲಿದ್ದ ಭಾಳನೇತ್ರನಿಗೆ ಸಮನಾದ ದೈತ್ಯಸೇನಾಪತಿಯು ಬಂದನು. ನಮಸ್ಕರಿಸಿದ ಅವನಿಗೆ ಸಮಪೀಠವನ್ನು ನೀಡಿ ಗೌರವಿಸಿದನು. ಸಚಿವರ ಇತ್ಯರ್ಥವನ್ನು ಮತ್ತು ತನ್ನ ಆಜ್ಞೆಯನ್ನು ತಿಳಿಸಿದನು. ಆಗ ಮಹಾಪಾರ್ಶ್ವನು ಗಂಭೀರವಾಗಿ

ತನ್ನ ಆಂತರ್ಯವನ್ನು ಹೀಗೆ ಅರುಹಿದನು:

'ಜೀಯ, ವಿಭೀಷಣನ ಅಂದಿನ ಮಾತನ್ನು ಇಂದೂ ನನೆಪಿಗೆ ತರುತ್ತೇನೆ. ಅಂದು ಹೇಳಿದುದನ್ನೇ ಇಂದು ಬಿನ್ನವಿಸುತ್ತೇನೆ. ರಾಜೇಂದ್ರನೇ, ನಮ್ಮ ದೌರ್ಬಲ್ಯವಿರುವುದು ನಮ್ಮ ಸೈನ್ಯದಲ್ಲಿ ಅಲ್ಲ. ಆದರೆ, ಆ ಮಾತು ಈಗ ನನಗೆ ಅಪ್ರಸ್ತುತ ಮತ್ತು ಸ್ವಾಮಿನಿಷ್ಠೆಗೆ ತಕ್ಕುದಲ್ಲ. ನಿನ್ನ ಆಜ್ಞೆಯ ಸರ್ವಸೇನಾಧಿಪತ್ಯದ ಮಹಾಪಟ್ಟವನ್ನು ಶಿರದಲ್ಲಿ ಧರಿಸಿದ್ದೇನೆ. ನಾಳೆ ಬೆಳಗಾಗುವ ತನಕ ರಾಮಸಂಗ್ರಾಮ ಶಕ್ತಿಯನ್ನು ತಡೆಯುತ್ತೇನೆ. ಬಳಿಕ ಅಲ್ಲಿಂದ ಆಯಸ್ಸು ಇರುವವರೆಗೂ ದುಡಿಯುತ್ತೇನೆ. ನಿನ್ನ ತೇರಿನ ನೊಗಕ್ಕೆ ಹೆಗಲು ಕೊಟ್ಟು ಮಡಿಯುತ್ತೇನಲ್ಲದೆ, ಮರಳಿ ಲಂಕೆಗೆ ಪ್ರವೇಶಿಸುವುದಿಲ್ಲ. ತನ್ನ ಮಿತಿ ತಾನು ಅರಿತವನು ಎಂದಿಗೂ ದೊರೆಗೆ ಹುಸಿ ಭರವಸೆಯ ಬಲೆಯನ್ನು ಹರಡುವುದಿಲ್ಲ.'

ಅವನ ಹೃದಯದಾಳದ ನುಡಿ ಕೇಳಿ ತಿಳಿದು; ವೀರನು, ವೀರನಿಗೆ ಕೊಡುವ ಕಣ್ ಮೆಚ್ಚುಗೆಯ ಕಾಣಿಕೆ ಸಲ್ಲಿಸಿ ರಾವಣನು,

'ಸಾಧಕವರೇಣ್ಯನೇ, ನೀನು ಹೇಳಿದುದು ಸತ್ಯವಾದರೂ, ನಮಗೆ ಮೋಕ್ಷಕ್ಕೆ ಯುದ್ಧವಲ್ಲದೆ ಬೇರೆ ಮಾರ್ಗವೆಲ್ಲಿದೆ ಹೇಳು? ನಡೆ, ಹೋಗು. ಈ ರಾತ್ರಿ ರಾಮಶಕ್ತಿಯ ಕಪಿಧ್ವಜಿನಿಯನ್ನು ತಡೆ. ಕೇಳು, ನಾಳೆ ಅಕಾಲದಲ್ಲಿ ಪ್ರಳಯರುದ್ರನನ್ನು ಎಬ್ಬಿಸುವಂತೆ ಕುಂಭಕರ್ಣನನ್ನು ಎಬ್ಬಿಸುತ್ತೇನೆ.' ಎಂದು ಹೇಳುತ್ತ ಮಹಾಪಾರ್ಶ್ವನನ್ನು ರಣಯಜ್ಞದ ರುದ್ರವೇದಿಕೆಗೆ ಬೀಳ್ಕೊಟ್ಟನು. ಧಳಧಳಧಳವೆಂದು ಧರೆ ನಡುಗುವಂತೆ ಸಮರ ಭೇರಿಯ ಭೀಕರ ಶಬ್ದವು ಕಿವಿಗೆ ಅಪ್ಪಳಿಸಿತು!

❑

ಶ್ರೀ ಸಂಪುಟ



~~~~~~~~~~~~~~~~~~~~~~~~~ ಸಂಚಿಕೆ – ೧ ~~~~~~~~~~~~~~~~~~~~~~~~

ಕುಂಭಕರ್ಣನನೆಬ್ಬಿಸಿಮ್ !

ಹೇ ಗುರುವೇ, ಮನೋಮಯ ಪ್ರಾಣಮಯ ಅನ್ನಮಯ ಎಂಬ ಪ್ರತಿಮೆಗಳು ಕ್ರಮವಾಗಿ ಮಾನವತೆ, ವಾನರತೆ, ದೈತ್ಯತೆಗಳನ್ನು ದಾಟುತ್ತವೆ. ಹಾಗೆ ಅಯೋಧ್ಯಾ ಸಂಪುಟ, ಕಿಷ್ಕಿಂಧಾ ಸಂಪುಟ ಮತ್ತು ಲಂಕಾ ಸಂಪುಟಗಳನ್ನು ದಾಟಿ ವಿಜ್ಞಾನಮಯ ದೃಷ್ಟಿ ಎಂಬ ಪೂರ್ಣ ಆನಂದಮಯಕ್ಕೆ ಏರುವಂತೆ ಶ್ರೀ ಸಂಪುಟವನ್ನು ರಚಿಸಲು ಅನುಗ್ರಹಿಸು.

ಮೇರು ಮಂದರ ಹಿಮಾಚಲ ಪರ್ವತದಂತೆ ಉನ್ನತವೂ ಭವ್ಯವೂ ಆದದ್ದು ಶ್ರೀ ಸಂಪುಟವೆಂಬ ಬೃಹತ್‌ಕಲಾ ವೈಭವ. ಆ ಭೂಮಾನುಭೂತಿಯ ಅನುಭವದ
~~~~~~~~~~~~~~~~~~~~~~~~~

ಅತೀಂದ್ರಿಯ ಪರ್ಯಟನಕ್ಕಾಗಿ ಆತ್ಮದ ನಭೋನೌಕೆಯನ್ನು ಏರಿ ತೇಲುತ್ತಿರುವೆನು. ಹೇ ಗುರುವೇ, ತಾಯಿ ತನ್ನ ಮಗುವನ್ನು ಎದೆಗೆ ಅಪ್ಪಿಕೊಳ್ಳುವಂತೆ ನೀನೂ ಸಹ ಮಂತ್ರದೀಕ್ಷೆಯನ್ನು ಪಡೆದ, ನಿಮ್ಮ ಪಾದದಡಿಯಲ್ಲಿ ಕುಳಿತ ಸಾಮಾನ್ಯ ಶಿಷ್ಯನಾದ ನನ್ನನ್ನು ಅಪ್ಪಿಕೊಂಡು ಕಾಪಾಡು. ಮಾನ್ಯ ಕುಪ್ಪಳಿಯ ವೆಂಕಟಾರ್ಯರಿಗೆ, ಪೂಜ್ಯೆ ಸೀತಮ್ಮ ಎಂಬ ಹೆಸರಿನ ಮಾತೃದೇವತೆಗೆ ಹುಟ್ಟಿದ ಈ ಪುಣ್ಯನನ್ನು, ಧನ್ಯನನ್ನು, ದೀನನನ್ನು ಆಶೀರ್ವದಿಸು. ಕೌಸಲ್ಯೆಯ ನಂದನ (ರಾಮ) ಮತ್ತು ದೇವಕಿಯ ಕಂದ (ಕೃಷ್ಣ) ಇಬ್ಬರೂ ಒಂದೇ ಶರೀರದಲ್ಲಿ ಅವತಾರ ಎತ್ತಿದ ಆ ಭಗವಾನ್ ಶ್ರೀ ರಾಮಕೃಷ್ಣ ಗೋತ್ರದಲ್ಲಿ ಹುಟ್ಟಿದವನನ್ನು ರಕ್ಷಿಸು.

ಮಡದಿ ಹೇಮಾವತಿಯು ಮಕ್ಕಳಾದ ತೇಜಸ್ವಿ ಚೈತ್ರ ಇಂದುಕಲೆ ಮತ್ತು ತಾರಿಣಿಯರಿಗೆ ಬೆಳುದಿಂಗಳು ಹಾಗೂ ಕಬ್ಬಿನ ಹಾಲಿನ ಪ್ರತಿಬಿಂಬವೋ ಎನ್ನುವಂತಹ ತನ್ನ ಎದೆ ಹಾಲನ್ನು ಕುಡಿಸಿ ಮಕ್ಕಳ ಅಕ್ಕರೆಯ ಸಕ್ಕರೆಗೆ ಕಬ್ಬಿನಂತಾದವಳು. ತನ್ನ ಕೊಕ್ಕಿನಿಂದ ಬೆಳುದಿಂಗಳನ್ನು ಕುಡಿಯುವ ಚಕೋರಪಕ್ಷಿಯಂತೆ ಅವಳ ಪ್ರೇಮದ ಗೋವು ಕೆಚ್ಚಲಿನ ಹಾಲಿನ ಧಾರೆಯಲ್ಲಿ ಮಿಂದವನು ನಾನು. ನನ್ನನ್ನು ಸಲಹಿರಿ. ಶ್ರೀ ಶಿವಾನಂದರು ಭವತಾರಿಣಿಯ ತಾರಕ ಪಾದಗಳ ನಾಮರೂಪರಾಗಿದ್ದಾರೆ. ಅವರ ಚಿತ್ತವೆಂಬ ಕಿರಣ ಯಾರ ಎದೆಯಲ್ಲಿ ಉದಯಿಸಿತೋ ಆ ಹೃದಯದ ಕೇಂದ್ರನಾದ ನನ್ನನ್ನು ರಕ್ಷಿಸು.

ಅನ್ನಮಯಕೋಶವು ಆನಂದಮಯಕೋಶವನ್ನು ಒಳಗೊಳ್ಳುವ ಹಾಗೆ ದಶಶಿರನು ದೇವಿ ಸೀತಾ ಮಾತೆಯನ್ನು ಸೆರೆಗೊಂಡ. ಆ ಭೂಮಿಜೆಯು ವಿಜ್ಞಾನ ರೂಪಿಯಾದ ರಾಮನ ಚಿತ್‌ತಪಸ್ ಶಕ್ತಿಯಿಂದ ಹೇಗೆ ಮುಕ್ತಳಾದಳು, ಸ್ವಾಮಿಯ ಜೊತೆಗೂಡಿದಳು ಎಂಬುವ ಆ ದಿವ್ಯದರ್ಶನವನ್ನು, ಆ ನಿತ್ಯತ್ವವನ್ನು, ಆ ಪ್ರಜ್ಞಾ ಪೂರ್ಣತೆಯ ಲೀಲಾವಿಭೂತಿಯನ್ನು ನನಗೆ ಒಲಿದು ತೋರಿಸು. ಅಂದು ಪಾರ್ಥನಿಗೆ ವಿಶ್ವರೂಪವನ್ನು ತೋರಿದೆಯಲ್ಲ, ಹಾಗೆಯೇ ನನಗೂ ಕೃಪೆ ತೋರು.

ಮರ್ತ್ಯಮಂ ದಾಂಟಿಪುದಾಲಿಸಾ ಪಕ್ಷಿಕಂಠಸ್ವನಂ.

ಹಗಲಿನ ಒಡೆಯ ಸೂರ್ಯನ ಸಾರಥಿಯು ಆಕಾಶಗಂಗೆಯ ಅಮೃತ ವಾಹಿನಿಯಲ್ಲಿ ತನ್ನ ರಥದ ಕುದುರೆಗಳನ್ನು ಮೀಯಿಸಿದನು. ಪೂರ್ವ ಪರ್ವತದ ನೆತ್ತಿಯನ್ನು ಏರಿದನು. ಆಗ ದಿವಸೇಶ್ವರನ ಕುದುರೆಯ ಕಾಲಿನ ಗೊರಸಿನ ಧೂಳಿ ಹಬ್ಬಿತೊಯೆಂಬುವಂತೆ ಉಷಾ ಸೂರ್ಯ ಮಂಡಲವು ಕೆಂಪಾಯಿತು.

ಹಾಗೆಯೆ ಸರ್ವಸೇನಾಧಿಪತಿ ಮಹಾಪಾರ್ಶ್ವನು ರಾತ್ರಿಯೆಲ್ಲವೂ ವೈರಿಸೈನ್ಯವನ್ನು ರಕ್ತದಲ್ಲಿ ಮೀಯಿಸಿ, ಅಸಂಖ್ಯ ಸೈನ್ಯವನ್ನು ಕೊಂದನು. ನೀಲನ ಶೌರ್ಯ ನೈದಿಲೆಗೆ

ರವಿಯಾದನು. ಹನುಮನ ಗರ್ವದ ಗಿರಿಗೆ ವಜ್ರಾಯುಧವಾದನು. ಲಕ್ಷ್ಮಣನ ವೀರತನದ ಖಡ್ಗವನ್ನು ಭಂಗಗೊಳಿಸಿದನು. ಅಂಗದನ ರಣಗೌರವಕ್ಕೆ ರಾಹು ಹಿಡಿಸಿದನು. ಕೊನೆಯಲ್ಲಿ ರಾಮನೇ ಹೋರಾಡಲು ಅವನಿಗೆ ಸರಿಸಮನೆನಿಸಿ ಕಾದಾಡಿ ಗಾಯಗೊಂಡು ಮೈ ಮರೆತನು.

ಆಗ ಅವನ ನಿಪುಣಸಾರಥಿಯು ಯುದ್ಧರಂಗಕ್ಕೆ ದೂರವಿದ್ದ, ಜನರಹಿತ ಕಾಡಿನ ಒಳಗಿನ ಒಂದು ಗಿರಿಯನೆತ್ತಿಗೆ ರಥವನ್ನು ಹೊಡೆದುಕೊಂಡು ಹೋದನು. ಹೊತ್ತಾರೆಯ ತಣ್ಣನೆಯ ಗಾಳಿ ಮೈಗೆ ಬೀಸಿತು. ಹೂಗಳು ಸೂಸಿದ ಮಧುಮಯ ಪರಿಮಳಪ್ರಾಣವನ್ನು ಆಘ್ರಾಣಿಸಿದನು. ಸಾರಥಿಯ ತಂಪಾದ ಸೇವೆಗೆ ಕಣ್ಣುಗಳು ತೆರೆದವು. ತಾನಿದ್ದ ಬೆಟ್ಟದ ನೆತ್ತಿಯನ್ನು ಚುಂಬಿಸುತ್ತ ಆಗತಾನೆ ಮೂಡಿ ಬಂದಿದ್ದ ಜಗತ್‌ಚಕ್ಷು ಸೂರ್ಯನನ್ನು ನೋಡಿ ಕೈ ಮುಗಿದನು. ಸಾರಥಿಯ ಕಡೆ ನೋಡುತ್ತ ನುಡಿದನು.

'ಸಾರಥಿಯೇ, ಶುಶ್ರೂಷೆಯನ್ನು ನಿಲ್ಲಿಸು. ನನಗೆ ಸಾವಿನ ಕರೆಯ ಕೊಳಲಧ್ವನಿ ಕೇಳುತ್ತಿದೆ. ಮರ್ತ್ಯವನ್ನು ದಾಟಿಸುವ ಪಕ್ಷಿಗಳ ಇಂಚರವನ್ನು ಕೇಳು. ವೀರರಿಗೆ ರಣಭೂಮಿಯೇ ಮರಣಶಯ್ಯೆ. ನೀನೇಕೆ ನನ್ನನ್ನು ಅಲ್ಲಿಂದ ಇಲ್ಲಿಗೆ ತಂದೆ?'

ಒಡೆಯನ ಮಾತು ಕೇಳಿ ತುಟಿನಡುಗಿ, ನಾಲಗೆ ತೊದಲಾಡಿ, ಕಣ್ಣುಹನಿಗೂಡಿದ ಸೂತನು ಹೇಳಿದನು:

'ಸೇನಾಧಿಪತಿಯೆ, ನೀನು ಬದುಕಲು, ಜಯ ನಮ್ಮದಾಗುವುದೆಂದು ದೂರಕ್ಕೆ ತಂದೆನು. ಪ್ರಾಣಭಯದಿಂದ ಬಂದಿಲ್ಲ ತಂದೆ.'

'ನನ್ನ ಬದುಕಿನಂತೆ ನಮ್ಮ ಗೆಲುವು! ಸಾರಥಿಯೆ, ಆ ಆಸೆಯನ್ನು ಬಿಟ್ಟುಬಿಡು. ನನ್ನನ್ನು ಈ ರಥದಿಂದ ಹಸುರು ಹಬ್ಬಿರುವ ಪೃಥ್ವಿಯ ಮೇಲೆ ನಿಧಾನವಾಗಿ ಇಳಿಸು' ಎಂದು ಹೇಳಿದನು.

ರಥಕ್ಕೆ ಹೂಡಿದ್ದ ಮುಗಿಲು ಬಿಳಿಯ ಕುದುರೆಗಳ ಕಣ್ಣಿಯನ್ನು ಕಳಚಿದನು. ತನ್ನ ಒಡೆಯನ ಒಡಲನ್ನು, ಚಂಚಲತೆಯಿಂದ ಸ್ಥಿರತೆಗೆ ಕೊಂಡೊಯ್ಯುವಂತೆ ತೇರಿನಿಂದ ತಿರೆಗೆ ಇಳಿಸಿದನು. ತನ್ನ ಕಣ್ಣುಗಳನ್ನು ಒಡೆಯನಲ್ಲಿ ನೆಟ್ಟು ಅವನ ಅಂತಿಮಸಮಯದ ಸಂದೇಶವನ್ನು ಆಲಿಸಿದನು:

'ಸಾರಥಿಯೇ ಕೇಳು. ಲಂಕೇಶ್ವರನನ್ನು ಹೊರತುಪಡಿಸಿ ಯಾರಿಗೂ ನನ್ನ ಈ ಮಾತುಗಳನ್ನು ಹೇಳಬೇಡ. ನೀನು ಇನ್ನೂ ಈ ಇಳೆಯ ವ್ಯಕ್ತಿಯಾಗಿರುವೆ. ನಾನೋ ಅರ್ಧಕ್ಕೂ ಹೆಚ್ಚಾಗಿ ಆಗಲೇ ಅಲೌಕಿಕನಾಗಿದ್ದೇನೆ. ಕಣ್ಣೀರನ್ನು ಒರೆಸಿಕೊ. ನನ್ನ ಮುಖದಲ್ಲಿರುವ ಮುಗುಳ್ನಗೆಯ ಶಾಂತಿಯನ್ನು ನೋಡು. ನೀನು ಹಾಗೆಯೇ ಸಮಾಧಾನವನ್ನು ತಾಳು.'

ಶ್ರದ್ಧೆ ಕಣ್ತೆರೆದಂತೆ ಸಾರಥಿಗೆ ಸೇನಾಪತಿಯ ಮಾತಿನಲ್ಲಿ ಸಿದ್ಧಪುರುಷನ ವಾಣಿಯು ಮೈ ದೋರಿತು. ಆ ಶಕ್ತಿಸಾಧಕನ ನುಡಿಗೆ ಕಿವಿಗೊಟ್ಟನು.

'ಪಾಪವು ಪುಣ್ಯಮುಖಿ! ಐಹಿಕದ ವೈರಿಯು ಅಧ್ಯಾತ್ಮಿಕಕ್ಕೆ ಗೆಳೆಯನಾಗುತ್ತಾನೆ, ಗುರುವಾಗುತ್ತಾನೆ. ವಿಧಿಯ ಕಾರ್ಯ ಸಾಧನೆಗೆ ಹಲವು ಪಥಗಳು. ನನ್ನ ಇಷ್ಟದೇವತೆಯೇ ಸೀತಾ ಸ್ವರೂಪದಿಂದ ಲಂಕಾಧಿನಾಥನನ್ನು ಮೋಹಿಸಿದಳು ಎಂಬಂತೆ ತೋರುತ್ತಿದೆ. ಅಲ್ಲದಿದ್ದರೆ ನನ್ನ ಸಾಧನೆಗೆ ಇಷ್ಟುಬೇಗ ಮರಣ ತೋರಣದ ಆಚೆ ಗೋಚರಿಸುವ ಅಮರಸಿದ್ಧಿ ಲಭಿಸುತ್ತಿತ್ತೆ?'

ಸಾರಥಿಯು ರಕ್ತಧಾರೆಯನ್ನು ಹತ್ತಿಯ ವಸ್ತ್ರದಲ್ಲಿ ಒರಸುತ್ತಿರಲು, ಹಣೆಯಲ್ಲಿ ಸೋರುತ್ತಿದ್ದ ನೆತ್ತರನ್ನು ಗಮನಿಸದೆ ಸೇನಾನಿ ಮಾತು ಮುಂದುವರಿಸಿ,

'ಈ ಮೃಣ್ಮಯ ಪೃಥ್ವಿಯು ಚಿನ್ಮಯವಾಗುತ್ತಿದೆ. ಸೂರ್ಯಭಗವಂತನು ಇಂದ್ರಿಯರೂಪದ ಮರ್ತ್ಯ ತತ್ತ್ವಗಳನ್ನು ತ್ಯಜಿಸುತ್ತ, ಆತ್ಮ ಜ್ಯೋತಿಯರೀತಿ ಬ್ರಹ್ಮವಿಜ್ಞಾನಕ್ಕೆ ಹಿಂತಿರುಗುತ್ತಿರುವನು.'

ಎಂದು ಹೇಳಿ ಸ್ವಲ್ಪ ಹೊತ್ತು ಸುಮ್ಮನಿದ್ದನು. ಬನವು ಹೊಂಬಿಸಿಲಿನಲ್ಲಿ ಸುಂದರ ವಸಂತವನ್ನು ಸಾರುತ್ತಿತ್ತು. ರಾತ್ರಿಕಾಳಗದಲ್ಲಿ ತಮ್ಮ ಸಾಹಸದಲ್ಲಿ ದಣಿದ ತೇರುಕುದುರೆಗಳು ಹಸುರು ಗರಿಕೆಹುಲ್ಲನ್ನು ಸೊಂಪಾಗಿ ಮೇಯುತ್ತಿದ್ದವು. ಹೊಸ ಕಾಣ್ಕೆಯನ್ನೇನೊ ಕಂಡಂತೆ ಆ ಸೇನಾಧಿಪತಿಯು ಮತ್ತೆ ಮಾತಾಡಿದನು:

'ಸಾರಥಿಯೆ, ಇನ್ನು ಇಲ್ಲಿ ನಿಲ್ಲಬೇಡ. ಬೇಗ ಲಂಕೆಗೆ ಹೋಗಿ ನನ್ನ ಸಾವನ್ನು ತಿಳಿಸು. ರಥವನ್ನು ತೆಗೆದುಕೊಂಡು ಹೋಗು. ಬಿಳಿ ಬಾವುಟವನ್ನು ಹಾರಿಸು. ವೈರಿಗಳಿಂದ, ರಾಮನವರಿಂದ ನಿನಗೆ ಅಪಾಯ ಉಂಟಾಗುವುದಿಲ್ಲ. ರಾಮನನ್ನು ಕೆಣಕಿ ದಶಾನನನು ಧನ್ಯನಾದ! ಅವನ ಉದ್ಧಾರ ಸನಿಹದಲ್ಲಿಯೆ ಇದೆ! ತಾನು ಇದುವರೆಗೆ ಹುಡುಕಿ ಪಡೆಯದೆ ಇದ್ದ ಆದರ್ಶವನ್ನು ಆ ರಾಮನ ಅರ್ಧಾಂಗಿಯಲ್ಲಿ ಅವನು ಕಾಣುತ್ತಾನೆ. ರಾವಣನು ಮಹಾಸಾಧಕ! ಸೂತನೇ, ಮರ್ತ್ಯರಿಗೆ ಅಗೋಚರವಾದುದು ನನಗೆ ಹೃದ್ಗೋಚರವಾಗುತ್ತಿದೆ. ನೀನಿಲ್ಲಿ ನಿಲ್ಲಬೇಡ. ಇಲ್ಲಿಯ ನನ್ನ ಆತ್ಮಯಾತ್ರೆಯ ಸಮಾರಂಭದ ಸಂಭ್ರಮವನ್ನು ನರರು ನೋಡಬಾರದು!

'ಹೋಗು, ಪುರದ ಪ್ರಜೆಗಳಿಗೆ ಧೈರ್ಯವನ್ನು ಹೇಳು. ನಮ್ಮ ಸೈನ್ಯವು ಇಂದು ವಿಶ್ರಮಿಸಿಕೊಳ್ಳಲಿ. ಬೇಟೆಗಾರರಿಂದ ಕಡು ಗಾಯಗೊಂಡ ಹೆಬ್ಬುಲಿ ಕಾಡಿಗೆ ನುಗ್ಗಿ, ನೆತ್ತರನ್ನು ನೆಕ್ಕಿಕೊಳ್ಳುತ್ತ ಆಯಾಸ ಕಳೆದುಕೊಳ್ಳಲು ಮಲಗುತ್ತದೆ. ಹಾಗೆ ಕಪಿಸೇನೆಯು ಕಳೆದ ರಾತ್ರಿ ನನ್ನ ಕೈಯ ಆಘಾತಕ್ಕೆ ಸಿಕ್ಕಿ ಶಿಬಿರಕ್ಕೆ ಹೋಗಿ ಮಲಗಿದೆ. ಮತ್ತೆ ವೈರಿಯು ಚೇತರಿಸಿಕೊಂಡು ಮೇಲೆ ಬೀಳುವ ಮೊದಲು, ನಮ್ಮ ಕಾಲರುದ್ರ, ಬೃಹತ್‌ನಿದ್ರೆಯ ಜಗತ್‌ಭೀಕರ ಕುಂಭಕರ್ಣನು ಏಳುತ್ತಾನೆ!'

ಸಾರಥಿಗೆ ಅಲೌಕಿಕದ ಭಯ ಉಂಟಾಯಿತು. ಹೆದರಿ ಕುದುರೆಗಳು ಕೆನೆಯಲು ಗಾಳಿ ವಿಕಂಪಿಸಿತು. ತಾನು ಅದುವರೆಗೆ ಕೇಳಿದ ಯಾವ ಒಂದು ಹೋಲಿಕೆಗೂ ನಿಲುಕದ ರೀತಿಯ ನಿನಾದವೊಂದೆದ್ದು ಜಗತ್ ತ್ರಯವು ಹೆದರುವಂತೆ ಮಾಡಿತು! ಅವನು ಸೇನಾಪತಿಗೆ ಬಾಗಿ ನಮಸ್ಕರಿಸಿದನು. ಗದಗದಿಸುವ ಕುದುರೆಗಳನ್ನು ಹೂಡಿ ಬರಿ ರಥದಲ್ಲಿ ಪುರಕ್ಕೆ ಹಿಂದಿರುಗಿದನು!

ಮೆರವಣಿಗೆ ಕಳುಹಿದನು ಆ ಸುಮಸ್ತೋಮಮಂ ತನ್ನ ಪೂಜೆಯ ಶಿವನಿಕೇತನಕೆ.

ಇಡೀರಾತ್ರಿ ಎಡೆಬಿಡದೆ ವೈರಿಗಳ ಧಾಳಿಯಿಂದ ಲಂಕೆಯನ್ನು ರಕ್ಷಿಸಿ, ಸುಗ್ರೀವನ ಸೈನ್ಯವನ್ನು ಬತ್ತುವಂತೆ ಕುಡಿದು, ಪೂರ್ವದಲ್ಲಿ ಕೆಂಪುಕಮಲದ ಎಸಳುಗಳ ರಕ್ತರಾಗರಂಜಿತ ಸೂರ್ಯನು ಕಾಣಿಸುತ್ತಿರಲು, ಜಯಧ್ವನಿಗಳಿಂದ ವಿಜಯವನ್ನು ಘೋಷಿಸುತ್ತ ರಾಕ್ಷಸ ಸೇನೆಯು ಲಂಕೆಗೆ ಮರಳಿತು. ಅವರ ವೀರಪಾನಗೋಷ್ಠಿಯಲ್ಲಿ ಆ ವಿಜಯಕ್ಕೆ ಹೃದಯಕಾರಣನಾದ ವೀರ ಸೇನಾನಿ, ಪರಮ ಪ್ರಧಾನ ಕಾಣಲಿಲ್ಲ. ಆ ಕಾರಣ ಅತಿದುಃಖಿತನಾದ ದೈತ್ಯೇಂದ್ರನು ಕಠೋರ ಮುಖದವನಾಗಿ ಮಹಾಪಾರ್ಶ್ವನನ್ನು ಹುಡುಕಿ ತರಲು ಆಜ್ಞೆಮಾಡಿದನು. ಸಭೆಯನ್ನು ವಿಸರ್ಜಿಸಿದನು. ಆಳುಗಳು ಹುಡುಕಲು ಹೊರಟರು.

ಮಹಾಪಾರ್ಶ್ವನನ್ನು ಕಾಣುವುದು ಇರಲಿ, ಸಾರಥಿಯಾಗಲಿ ರಥವಾಗಲಿ ಶೋಧಕರ ದೃಷ್ಟಿಗೆ ಕಾಣಲಿಲ್ಲ. ವ್ಯರ್ಥಪ್ರಯತ್ನದಿಂದ ಖಿನ್ನರಾದ ಅವರು ಹಿಂದಿರುಗಿದರು.

ಮಹಾಪಾರ್ಶ್ವನು ವೈರಿಗಳಿಗೆ ಸೆರೆಹೋದನೋ, ಯುದ್ಧದಲ್ಲಿ ಮಡಿದನೋ ಅಥವಾ ವಿಭೀಷಣನಂತೆ ಮನಸ್ಸನ್ನು ಬದಲಾಯಿಸಿ ವೈರಿಪಕ್ಷವನ್ನು ಸೇರದನೋ, ನನ್ನ ರೀತಿಗೆ ಬೇಸತ್ತು ಕ್ಲೇಶಕ್ಕೆ ಒಳಗಾಗಿ ದೇಶಚ್ಯುತಿ ಹೊಂದಲು ತಾಯಿನೆಲವನ್ನು ತೊರೆದನೋ ಎಂದು ಸಂಶಯದ ಬೆಂಕಿಯಲ್ಲಿ ಲಂಕೇಶ್ವರನು ಬೇಯುತ್ತಿದ್ದನು. ಅಷ್ಟರಲ್ಲಿ ತನ್ನ ಸ್ವಾಮಿಯನ್ನು ಪರ್ವತದ ನೆತ್ತಿಯಲ್ಲಿ ಬಿಟ್ಟುಬಂದ ಮಹಾಪಾರ್ಶ್ವನ ಸಾರಥಿಯು ಸಕಲ ವೃತ್ತಾಂತವನ್ನು ದನುಜೇಂದ್ರನಿಗೆ ಹೇಳುತ್ತ ಅವನ ಆತ್ಮದ ಕತ್ತಲೆಗೆ ಸೂರ್ಯನಾದನು.

ಅದನ್ನು ಕೇಳಿ ರಾವಣನು ಆಶ್ಚರ್ಯಗೊಂಡನು. ಮಹಾಸೇನಾನಿಯನ್ನು ಕರೆತರಲು ಸಮರ್ಥರ ಸಹಾಯ ನೀಡಿ ರಥವನ್ನು ಕಳುಹಿಸಿದನು. ಸಾರಥಿಯು ಬೇಗನೆ ಹೋಗಿ ಹಿಂತಿರುಗಿ, ತಂದುದನ್ನು ಕೊಟ್ಟು, ಕಂಡದ್ದನ್ನು ಹೀಗೆ ಹೇಳಿದನು:

'ಪ್ರಭುವೇ ಕೇಳು. ನಾವು ಮಹಾಸೇನಾನಿಯನ್ನು ಕಾಣಲಿಲ್ಲ. ಅಲ್ಲಿ ಕಳೆಬರಕ್ಕೆ ಬದಲು ಅಲೌಕಿಕ ಕುಸುಮ ರಾಶಿ ಇತ್ತು!'

ಭೂಮಿ ಹಡೆಯದ ಆ ಹೊಸ ಹೂಗಳನ್ನು ನೋಡಿ ದಶಾನನನು ತುಸು ಹೊತ್ತು ಧ್ಯಾನಶೀಲನಾದನು. ಅನಂತರ ಒಂದು ನಿಶ್ಚಯಕ್ಕೆ ಬಂದು, ಆ ಸುಮಸಮಸ್ತವನ್ನು ತಾನು ಪೂಜಿಸುವ ಶಿವಮಂದಿರಕ್ಕೆ ಮೆರವಣಿಗೆಯಲ್ಲಿ ಕಳುಹಿಸಿದನು.

ಅನಂತರ ಈ ಕಡೆ ತಿರುಗಿ ಕುಟಿಲ ಉಪಾಯಗಾರನಾದ ರಣಮಂತ್ರಿ ಯೂಪಾಕ್ಷನನ್ನುದ್ದೇಶಿಸಿ ಹೀಗೆ ಆಜ್ಞೆ ಮಾಡಿದನು:

'ನೀವು ಬೇಗ ನಡೆಯಿರಿ. ತಡೆಯಲು ಹೊತ್ತಿಲ್ಲ. ಮಹಾಪಾರ್ಶ್ವನ ಹೊಡೆತದಿಂದ ಗಾಯಗೊಂಡಿರುವ ವೈರಿಯು ಚೇತರಿಸಿಕೊಂಡು ಲಗ್ಗೆ ನುಗ್ಗಿ ಮೇಲೆ ಬೀಳುವಷ್ಟರಲ್ಲಿ ನೀವು ಕುಂಭಕರ್ಣನನ್ನು ಎಬ್ಬಿಸಬೇಕು. ಅವನು ಲಂಕೆಯ ಅಂತರಂಗದಲ್ಲಿ ಅಡಗಿರುವ ಲಯಶಕ್ತಿ. ಪ್ರಲಯಸ್ವರೂಪನಾದ ಅವನು ಶಾಪದಿಂದ ನಿದ್ದೆಯ ಗುಡ್ಡೆಯಾಗಿದ್ದಾನೆ. ಅವನು ದೇವೇಂದ್ರನ ಆನೆಯ ದಂತವನ್ನು ಅಲುಗಿಸಿ ಕಿತ್ತು, ಅದನ್ನೇ ಗದೆಯಾಗಿಸಿಕೊಂಡವನು. ಅದನ್ನು ವಜ್ರಾಯುಧ ಹೊಂದಿದ ಇಂದ್ರನ ಎದೆಗೆ ಅಪ್ಪಳಿಸಿ ಬಡಿದು, ನೆಲಕ್ಕೆ ಉರುಳಿಸಿದ ಸಾಹಸಿ!

'ನೀವು ನಡೆಯಿರಿ. ಭೂಮಿಯನ್ನೇ ನಡುಗಿಸುವ ಜಗದ್ಭೀಕರವಾದ ಆಕಾರವನ್ನು ಧರಿಸಲು ಸಮರ್ಥನಾದ ಕುಂಭಕರ್ಣನನ್ನು ಸರ್ವ ಪ್ರಯತ್ನದಿಂದ ಎಬ್ಬಿಸಿರಿ!'

ಆ ವಾರ್ತೆಯು ಹಬ್ಬಿತು. ಜನರು ಭಯಭೀತರಾದರು. ಆ ಸುದ್ದಿ ಹೊಗೆಕಾರುತ್ತ, ಕಿಡಿಗೆದರಿ ಕಾಡ್ಗಿಚ್ಚಿನಂತೆ ನೆಗೆದು ಹೊತ್ತಿಕೊಂಡಿತು. ಅದು ಬೀದಿ ಬೀದಿಯಲ್ಲಿ ಹರಡಿತು. ಲಂಕೆಯ ಜನರು ದಿಕ್ಕು ತೋಚದೆ ಭ್ರಮೆಗೀಡಾದರು. ಕುಂಭಕರ್ಣನನ್ನು ಎಬ್ಬಿಸುವರೆ? ಹಾ! ಪ್ರಳಯ ಸರ್ಪವನ್ನು ನಿದ್ದೆಗೆಡಿಸುವರೆ? ಅವೇಳೆಯಲ್ಲಿ ಎಬ್ಬಿಸಿ ಆ ಮೃತ್ಯು ಹೆಬ್ಬುಲಿಗೆ ಈ ಜಗತ್ತನ್ನು ಹಬ್ಬದ ಔತಣವಾಗಿಸುವರೆ?

ಮುಂದೆ ತಮ್ಮ ಗತಿ ಏನೋ? ಹೇಗೋ? ಎಂದು ಜನರು ತಮ್ಮ ತಮ್ಮಲ್ಲಿ ಗುಜುಗುಜಿಸಿ, ರಸ್ತೆ ರಸ್ತೆಗಳಲ್ಲಿ ಗುಂಪು ಗುಂಪಾಗಿ ಸೇರಿದರು! ದೈತ್ಯರಕ್ಷಿತ ದುರ್ಗಾಲಂಕೆಯ ಸಮಸ್ತರನ್ನು ಹೇಳಲಾರದ ಭಯವು ವೈರಿಗೂ ಹೆಚ್ಚಾಗಿ ದಿಗಿಲನ್ನುಂಟು ಮಾಡಿತು!

ಮುಂದೆಸೆದುದು ವಿರಿಂಚಿಶಾಪದ ವಿಚಿತ್ರ ಕೃತಿ

ಯೂಪಾಕ್ಷ ರಾಕ್ಷಸನು ವಿಷಯೇಂದ್ರಿಯದ ತೃಪ್ತಿಸಾಧನೆಗೆ ತನ್ನ ಅಂತರಂಗದ ಅತಿನಿಗೂಢ ತಮಸ್ ಶಕ್ತಿಯನ್ನು ಆಹ್ವಾನಿಸುವ ಪತಿತಯೋಗಿಯ ದುಷ್ಟಬುದ್ಧಿಯಂತವನು. ಅವನು ಇಂದ್ರನ ವೈರಿ ರಾವಣೇಂದ್ರನಿಂದ ಪ್ರಚೋದಿತನಾಗಿ ಸಕಲಸಿದ್ಧತೆಗಳೊಂದಿಗೆ ಕುಂಭಕರ್ಣನು ಮಲಗಿದ್ದ ಸ್ಥಾನವನ್ನು ಸಮೀಪಿಸಿದನು. ಅಲ್ಲಿ ಬುದ್ಧಿ ಮತ್ತು ವಿವರಣೆಗೆ ಸಿಲುಕದ ಬ್ರಹ್ಮಶಾಪದ ವಿಚಿತ್ರಾಕೃತಿ ಕಂಡಿತು. ಅದು ವರ್ಣನೆಗೂ ಮೀರಿದ ಸರ್ಪವೊ, ಹಗ್ಗವೊ ಎಂದು ಭ್ರಮೆಯನ್ನುಂಟು ಮಾಡುವ ಮಾಯೆಯಂತೆ ಕಾಣಿಸಿತು.

ಅದು ಸ್ಥಾವರವೊ ಜಂಗಮವೊ? ಬಂಡೆಗಳೊ ಮೋಡಗಳೊ? ಗಿರಿಯೊ ಗಗನವೊ? ಜಡವೊ ಚೇತನವೊ? ನಿದ್ರೆಯೊ ಅಥವಾ ಅದ್ರಿಯೊ? ನೆನೆದವರಿಗೆ ನೆನೆದಂತೆ, ಕಲ್ಪನೆಗೆ ತಕ್ಕಹಾಗೆ ಕಾಣುತ್ತಿದೆ! ಆದರೆ ಅಲ್ಲಿ ರಾಕ್ಷಸನು ಕಾಣುತ್ತಿಲ್ಲ!

ಜಿಂಕೆ, ಕಾಡುಹಂದಿ, ಕಾಡುಕೋಣ, ಕುರಿ, ಕೋಳಿ, ಗೂಳಿ ಮೊದಲಾದುವುಗಳನ್ನು ಸುತ್ತಲೂ ಹರಕೆ ಹೊರುತ್ತ ಸಾಲು ಸಾಲಾಗಿ ಕಟ್ಟಿದರು. ದೊಡ್ಡ ದೊಡ್ಡ ತಪ್ಪಲೆಗಳಲ್ಲಿ ಬಣ್ಣ ಬಣ್ಣದ ಅನ್ನವನ್ನು ಬೆಟ್ಟದಂತೆ ಹಾಕಿದರು. ರಾಕ್ಷಸನ ನಿದ್ದೆಯೆಂಬ ಭೂತಕ್ಕೆ ಸಿದ್ಧ ಬಲಿಯಾಗಿ ನೆರೆದಿದ್ದ ಆ ಪ್ರಾಣಿಗಳ ಒರಲು ಕೂಗುಗಳು, ಅರಚುಗಳು, ಹೂಂಕಾರಗಳು, ಕೇಕೆ, ಕೊಕ್ಕೊಕ್ಕೋಗಳು ಮಾರಿಯ ಕಿವಿಗೂ ಕರೆಕರೆಯನ್ನುಂಟು ಮಾಡುವಂತಿತ್ತು.

ಕತ್ತಲೆಯಲ್ಲಿ ಚಲಿಸುವ ತಮೋಜಾಗೃತಿಗಾಗಿ ಹಂಡೆ ಹಂಡೆಯಲ್ಲಿ ನೊರೆ ನೊರೆ ಹೆಂಡದ ಪಾನೀಯಗಳು ಸಿದ್ಧವಾದವು. ಅಲ್ಲಿ ಕಹಳೆಯ ಊದು ಹಬ್ಬಿತು. ಧೂಪ ಧೂಮ ಎದ್ದಿತು. ದುರ್ಮಂತ್ರ ಪಂಡಿತರು ಅಥರ್ವಣ ವೇದವನ್ನು ಓದಿದರು. ಶಂಖಗಳನ್ನು ಊದಿದರು. ಜಾಗಟೆಗಳೊಡನೆ ಘಂಟೆ ಬೊಬ್ಬೆಯಿಟ್ಟವು. ಆ ಜಗತ್ ಭಯಂಕರ ಶಬ್ದಕ್ಕೆ ದಿಗ್ಗಜಗಳ ಕಿವಿ ನಿಮಿರಿತು!

ಹೀಗಿರಲು ಯೂಪಾಕ್ಷ ಮತ್ತಿತರರು ಕಣ್ಣು ಮಿಟುಕಿಸದೆ ಕುತೂಹಲದಿಂದ ನೋಡುತ್ತಿದ್ದರು. ಆಗ ದೈತ್ಯ ಭೀಮನ ಸುಪ್ತಿ ನೀಹಾರಿಕೆಯ ನಡುವೆ, ಇಬ್ಬನಿಯ ದಿನದ ಬೆಳಕಿನ ತೆರೆಯಲ್ಲಿ ಹೇಗೋ ಹಾಗೆ ಮಬ್ಬು ಮಬ್ಬಾಗಿ ಆವಿರ್ಭವಿಸಿದ ಒರಟು ಮರದ ನೆರಳು ಕಾಣಿಸಿತು!

ಅದು ಬಾಚಿ ಹಬ್ಬಿದ ರೆಂಬೆಗಳನ್ನು ನಿಧಾನ ನಿಧಾನವಾಗಿ ಜೋಡಿಸಿಕೊಂಡು ಸರ್ಪಾಕೃತಿಗೆ ತಿರುಗಿತು! ಅದರ ಕಣ್ಣು ಜ್ವಲಿಸಿದವು. ತಿಳಿಗೆಂಪು ಬಣ್ಣದ ಕುಟಿಲ ಚಂಚಲ ಪ್ರತ್ಯೇಕವಾಗದ ಜಟಿಲ ನಾಲಗೆಗಳು ಚುರು ಚುರು ಗುಟ್ಟಿದವು! ಅದು ಕೊರಳಿನಲ್ಲಿ ಬಹು ಹೆಡೆಗಳ ತಲೆಯನ್ನು ಗದೆಯಂತೆ ಭಯಂಕರವಾಗಿ ಆಡಿಸಿತು! ಉಗ್ರ ಸರ್ಪವನ್ನು ಮಿಳ್ಮಿಳನೆ ನೋಡುತ್ತಿರಲು, ಅದು ಬುಸುಗುಟ್ಟುತ್ತ ಉಘೆಂದು ಬಿಸಿ ಉಸಿರ ವಿಷಗಾಳಿಯನ್ನು ಹೊರಹಾಕಿತು. ಸಮೀಪದಲ್ಲಿದ್ದವರು ಸೀದು ಉರುಳಿಬಿದ್ದರು! ಮಿಕ್ಕವರು ಚೀರುತ್ತ ಓಡಿದರು.

'ನೋಡಿ, ಅದು 'ಪಿಂಗಾಕ್ಷಿ' ಹೆಸರಿನ ಭೂತಿನಿ! ಕಾಡುಕೋಣವನ್ನು ಬಲಿಯಾಗಿ ನೀಡಿ! ತಡಮಾಡಬೇಡಿ. ತಡಮಾಡಿದರೆ ನಿಮ್ಮನ್ನೇ ಬಲಿತೆಗೆದುಕೊಳ್ಳುತ್ತದೆ!' ಎಂದು ಪುರೋಹಿತನು ಪ್ರಲಾಪಿಸಿದನು. ಕಡಿತಲೆಯವನು ಕೋಣವನ್ನು ಕಡಿದನು. ಅದರ ರಕ್ತವನ್ನು ದೊಡ್ಡ ದೊಡ್ಡ ದೊನ್ನೆಗಳಲ್ಲಿ ಹಿಡಿದು ಭೂತಿನಿಗೆ ಅರ್ಪಿಸಿದರು. ಮಂತ್ರವಾದಿಗಳು ಭಸ್ಮವನ್ನು ಚೆಲ್ಲಿ ಭೂತ ಮಾಯವಾಗುವಂತೆ ಮಾಡಿದರು!

ಆ ಭೂತವು ಹೋಗಲು, ವಿಕಾರಾಕೃತಿಯ ಜಲಚರಪ್ರಾಣಿಗಳಾದ ಮೊಸಳೆಗಳು, ನಕ್ರಗಳು, ಮಕರಗಳು, ಮತ್ಸ್ಯಗಳು ಮೇಲೆದ್ದವು. 'ಇವೇ ನೋಡಿ ಜಲಪಿಶಾಚ ಸಮೂಹ. ಬಲಿಯನ್ನು ಕೊಡಿ.' ಎಂದು ಹೇಳಲು, ನಾನಾ ಮೃಗಗಳನ್ನು ಕಡಿದು ರಕ್ತವನ್ನು ಚೆಲ್ಲಿದರು. ಅವು ಮರೆಯಾದವು.

ಮತ್ತೆ ಭೀಕರದ ಪಕ್ಷಿರೂಪಗಳಂತೆ ಪ್ರಾಣಿಯ ಆಕಾರಗಳು ಮೂಡಿದವು. ‘ಇವೇ ನೋಡಿ, ಮೃತ್ತಿಕಾ ದೇವತೆಗಳ ಅನುಯಾಯಿಗಳು. ಬಲಿಕೊಡಿ. ತಡಮಾಡಿದರೆ ಈ ಲಂಕೆಯನ್ನೇ ಬರಿದಾಗಿಸುತ್ತದೆ!’ ಎಂದು ಹೇಳಿದ ತಕ್ಷಣ ಲೆಕ್ಕವಿಲ್ಲದಷ್ಟು ಕುರಿ ಕೋಳಿಗಳನ್ನು ಕಡಿದು ಕೆಡವಿದರು. ಬೂದಿಯನ್ನು ತೂರಿದರು. ತಡೆಮಂತ್ರವನ್ನು ಕೂಗಿದರು!

ಇದು ಕಣಾ ಕುಂಭಿಕಾಭೂತಂ! ಸಮರ್ಥಂ ತ್ರಿಕೂಟಾಚಲವನೆತ್ತಿ ಬಿಸುಡಲ್ಕೆ!

ಅದು ಮಾಯವಾದುದ್ದೇ ತಡ ಮತ್ತೆ ಇನ್ನೊಂದು ಎದ್ದಿತು. ನೋಡು ಆ ಮಹಾದ್ಭುತವನು! ಹೇಮಂತ ಸೂರ್ಯೋದಯವು ಹಿಮಪರದೆಯನ್ನು ಪೃಥ್ವಿಯ ಮುಖದಿಂದ ಸರಿಸಲು, ವೃಕ್ಷಮಯ ಸಸ್ಯ ಸೌಂದರ್ಯವು ಸಹ್ಯಾದ್ರಿ ಶೃಂಗದಲ್ಲಿ ನಿಧಾನವಾಗಿ ಮೈದೋರುತ್ತದೆ. ಹಾಗೆ ಮಹಾ ಮಹಡಿಮನೆಯ ಎತ್ತರದ, ಅದರಷ್ಟೇ ಗಾತ್ರದ ಒಂದು ಕಪಿಶ್ರೇಷ್ಠ ವಿಗ್ರಹವು ಮೂಡಿ ಬಂದಿತು. ಕಪಿರೂಪದ ಉಗ್ರತೆ ಕಂಡು ಅಲ್ಲಿ ನೆರೆದ ರಾಕ್ಷಸಸಮೂಹಕ್ಕೆ ಭಯಗ್ರಹ ಬಡಿಯಿತು. ಅದು ಕಣ್ಣಾಲಿಗಳನ್ನು ಗಿರ್ರನೆ ತಿರುಗಿಸುತ್ತ, ದವಡೆಯನ್ನು ಕಡಿಯುತ್ತ ಅರಚಿತು. ಅದಕ್ಕೆ ನಡು ನಡುಗಿದ ಲಂಕೆಯ ಮನೆಮನೆಯಿಂದ ಗುಹಾಧ್ವನಿಯಂತೆ ಪ್ರತಿಧ್ವನಿಸುತ್ತ ಆಕ್ರಂದನ ಉಂಟಾಯಿತು.

‘ಇದು ನೋಡಿ, ಕುಂಭಿಕಾಭೂತ! ಇದು ತ್ರಿಕೂಟಾಚಲವನ್ನು ಎತ್ತಿ ಬಿಸಾಡಲು ಸಮರ್ಥವಾದುದು! ತಡೆ, ತಡೆಯೊ, ಏ ಕಡಿತಲೆಯ ಕುಂಬಾರ! ಕಡಿಯಬೇಡ, ಕಡಿಯಬೇಡ! ಇಡಿಯಾದ ದೊಡ್ಡ ಹಂದಿಯನ್ನೆ ಕೊಡಿ! ಕಡಿದರೆ, ಅದು ಎಂಜಲಿಗೆ ಕೆರಳಿ, ನಿನ್ನ ರಕ್ತವನ್ನೇ ಕುಡಿಯುತ್ತದೆ!’

ಎಂದು ಪುರೋಹಿತ ಕೂಗಿ ಹೇಳಲು, ಇಡಿ ಇಡಿಯಾಗಿ ಕಾಡು ಹಂದಿಗಳನ್ನು ಎತ್ತಿ ಎಸೆದರು. ಆ ಮಹಾ ಮರ್ಕಟವು ಅವುಗಳನ್ನು ಬೀಳಗೊಡದೆ ಹಿಡಿಯಿತು. ಕೊರಳುಮುರಿದು ಕಾಡುಹಂದಿಗಳ ರಕ್ತವೆಂಬ ಮದಿರೆಯನ್ನು ಹೀರಿತು. ಎಳ್ಳಿನಿಂದ ಎಣ್ಣೆಯನ್ನು ಹಿಂಡಿ ತೆಗೆವ ಗಾಣಿಗನಂತೆ ಕೊಬ್ಬಿನ ಮಾಂಸವನ್ನು ತನ್ನ ಬಾಯಿಯ ಬಿಲಕ್ಕೆ ಹಿಂಡಿಕೊಂಡಿತು.

ಬಲಿಗೆ ತೃಪ್ತಿಗೊಂಡ ಪಿಶಾಚಿಯು ಮರೆಯಾಯಿತು. ಆಗ ಕಾರ್ಮುಗಿಲು ಕವಿಯಿತು. ಬಿರುಗಾಳಿ ಬೀಸಿತು. ಮಿಂಚಿನ ಅಂಚಿನ ಸಿಡಿಲುಗಳು ಹರಿತವಾಗಿ ಎರಗಿದವು. ಕುಂಭದ್ರೋಣ ಮಳೆಯಂತೆ ಒನಕೆ ದಪ್ಪದ ಮಳೆ ಸುರಿಯಿತು. ಏನು ಹೇಳುವುದು? ಆ ಮಳೆಗೆ ಶಾಪಗ್ರಸ್ತವಾಗಿ ಮಲಗಿದ್ದ ಆ ರಾಶಿಯ ನಿದ್ದೆ ಕರಗಿತೊ ಎನ್ನುವಂತೆ, ಹುತ್ತವು ಕರಗಲು ತಪಸ್ಸು ಮಾಡುತ್ತಿದ್ದ ತಪಸ್ವಿಯ ಮೈಯರೂಪ ಕಣ್ಣಿಗೆ ಕಾಣುವಂತೆ ಒಂದು ಮಹಾಹಾಸಿಗೆ ಕಂಡಿತು. ಅದರಲ್ಲಿ ವಿಶಾಲವಾದಎದೆಯ, ಪೊದೆತಲೆಯ ದಾನವ ಭವ್ಯಕುಂಭಕರ್ಣನ ಮಹತ್ ವಿಗ್ರಹ ಕಂಡಿತು.

ಅದನ್ನು ನೋಡಿ ಜನ 'ಘೋ' ಎಂಬ ಘೋಷದೊಂದಿಗೆ ನಲಿದರು. ಸ್ತೋತ್ರಗೀತೆಯನ್ನು ಹಾಡಿ ಕುಣಿದರು:

'ಏಳೊ, ಲಂಕಾ ರಕ್ಷಕನೆ! ಏಳ್, ಏಳೊ, ವೈರಿಗಳನ್ನು ಶಿಕ್ಷಿಸುವ ಯಮನೆ ಏಳು! ಜಗತ್ತಿನ ಗರ್ವಭಕ್ಷಕನೆ ಏಳು! ಲಂಕೆಗೆ ಭೀತಿ ಮುತ್ತಿದೆ. ಮೃತ್ಯುವು ಲಂಕೆಯನ್ನು ತುತ್ತಾಗಿ ನುಂಗಿ ಹಾಕಲು ಸುತ್ತಲೂ ಕಾದಿದೆ! ವಿನಾಶವು ಬೆದರುವಂತೆ ಏಳು! ವೈರಿಗಳ ಪ್ರಾಣಸಮುದ್ರವನ್ನು ಶೋಷಿಸಲು ಏಳು! ದೈತ್ಯಗೌರವರೂಪಿ ಈ ಲಂಕೆಯನ್ನು ಪೋಷಿಸಲು ಏಳು!'

ನಿದ್ದೆ ತಿಳಿದೆದ್ದನೊಯ್ಯನೆ ದೈತ್ಯಭಾಸ್ಕರಂ ಮೆಯ್ಮುರಿದು, ಕಣ್ಣುಜ್ಜಿಕೊಂಡಾಕಳಿಸಿ.

ರಾಕ್ಷಸಭಾಸ್ಕರನು ನಿಧಾನವಾಗಿ ನಿದ್ದೆಯಿಂದ ಎದ್ದನು. ಮೈ ಮುರಿದು, ಕಣ್ಣುಜ್ಜಿಕೊಂಡು ಆಕಳಿಸಿದನು. ಭಯಂಕರ ಆಕಾರದ ಅವನು ನೀಳವಾದ ತೋಳುಗಳನ್ನು ಚಾಚಿ, ಲಟಿಕೆ ಮುರಿದು ಎದ್ದು ಕುಳಿತನು.

ಸುಗ್ರೀವ ಸೈನ್ಯಕ್ಕೆ ತಿಳಿಯಲಾಗದ ಏನೋ ಒಂದು ಭಯ ಪುಲಕದ ಅಲೆ ಉಂಟಾಯಿತು! ವಾನರ ಪ್ರಾಣ ಪಕ್ಷಿಗಳು ಹಾನಿಯ ಭವಿಷ್ಯವನ್ನು ಶಕುನ ನುಡಿಯುವಂತೆ ನಿರಂತರವಾಗಿ ಚೀರಿದವು! ಚತುರ್ಮುಖಬ್ರಹ್ಮನು ತನ್ನ ಶಾಪಕ್ಕೆ ಆದ ಅಕಾಲ ಮುಕ್ತಿಗೆ ವಿಷಾದಗೊಂಡನೋ ಎನ್ನುವಂತೆ ರಾಕ್ಷಸರ ಭಯಗತ್ತಲೆಗೆ ಸೂರ್ಯನಾದ ಕುಂಭಕರ್ಣನು ಜಾಗೃತ ಅವಸ್ಥೆಗೆ ಬಂದನು!

ರಾಕ್ಷಸರು ಚಿನ್ನದಿಂದ ಹೆಣೆದ ಗೂಡೆ, ಕುಕ್ಕೆಗಳಿಂದ ತುಂಬಿದ ಮೃಗ ಪಕ್ಷಿಗಳ ಪಕ್ವ ಪರಿಮಳದ ಪಲಾನ್ನವನ್ನು ತಂದರು. ಕುಂಭಕರ್ಣ ರಾಕ್ಷಸನ ದೈತ್ಯಹಸಿವನ್ನು ಹಿಂಗಿಸಲು ಅವನ ಮುಂದೆ ಸಾಲು ಸಾಲಾಗಿರಿಸಿದ ಕಾಲುಮಣೆಗಳ ಮೇಲೆ ಅವುಗಳನ್ನು ರಾಶಿ ರಾಶಿಯಾಗಿ ಪೇರಿಸಿಟ್ಟರು. ಅವನ ದಾಹವನ್ನು ತಣಿಸಲು ದೊಡ್ಡಪಾತ್ರೆಗಳಲ್ಲಿ ನೊರೆಯುಕ್ಕುವ ಸುರೆಯನ್ನು ತಂದಿಟ್ಟರು!

ಕ್ಷಾಮವು ಸುಭಿಕ್ಷವನ್ನು ಸಂಧಿಸಿದಂತಾಯಿತು. ಕುಡಿದು ತಿಂದನು; ತಿಂದು ಕುಡಿದನು; ಕುಡಿ ಕುಡಿದು ತಿಂದು ತೇಗಿದನು. ನಡು ನಡುವೆ ಸಂತೋಷ ಉಂಟಾಗಲು ಗಹಗಹಿಸುತ್ತ ಕೂಗಿದನು, ತಲೆದೂಗಿದನು!

ಮೃಗತನವನ್ನು ಮೀರಿ ಅದರಿಂದ ಮೂಡಿಬಂದ ಮನುಷ್ಯತೆಯ ಮನದದಾಹವು ತಾನು ತತ್ತ್ವ ವಿದ್ಯಾಕಲೆಯ ರಸದಿಂದ ತೃಪ್ತಿಗೊಳ್ಳುತ್ತದೆ. ಹಾಗೆ ತೃಪ್ತಿಗೊಂಡ ಸಂತಸದ ಅಟ್ಟಹಾಸದಿಂದ ನವಿಲು ಪುಕ್ಕಗೆದರಿ ಕುಣಿಯುವಂತೆ, ಕುಂಭಕರ್ಣನ ಹೃದಯ ಮಯೂರವು ತಣಿದು ಕುಣಿಯಿತು! ಯೂಪಾಕ್ಷನು ಆ ಸಮಯವೆ ಸೂಕ್ತವಾದುದೆಂದು ತಿಳಿದು ಮುಂದೆ ಕೈಮುಗಿದುನಿಂತನು. ಅವನನ್ನು ಗುರುತಿಸಿದ ಕುಂಭಕರ್ಣನು ಕೇಳಿದನು:

'ನನ್ನನ್ನು ಅವಧಿಯನ್ನು ಕಡೆಗಣಿಸಿ ಮೊದಲೆ ಏಕೆ ಎಬ್ಬಿಸಿದಿರಿ?'

ಆ ಪ್ರಶ್ನೆಯ ಧ್ವನಿಗೆ ಯೂಪಾಕ್ಷನು ನಡುಗುತ್ತ ನಡೆದುದೆಲ್ಲವನ್ನು ನಿವೇದಿಸಿದನು. ಕುಂಭಕರ್ಣನು ನಿಟ್ಟುಸಿರುಬಿಡುತ್ತ, ಕಣ್ಣುಮುಚ್ಚಿ ಆಲೋಚಿಸುತ್ತ,

'ವಿಭೀಷಣನು ಲಂಕೆಯನ್ನು ತೊರೆದನೇ? ಮಹಾತ್ಮಾ ಮಹಾಪಾರ್ಶ್ವ ಮರಣ ಹೊಂದಿದನೇ? ಮಲಗಿದ್ದ ನಾನು ಅವಧಿ ತುಂಬುವ ಮೊದಲೇ ಎದ್ದನೇ? ಈ ಮೂರೇ ಕೇಡುಗಳು ಸಾಕು ನಮ್ಮ ಲಂಕೆಯ ವಿನಾಶಕ್ಕೆ!'

ಎಂದು ತನ್ನೊಳಗೆ ತಾನು ನೊಂದುಕೊಂಡಂತೆ ಹೇಳಿಕೊಂಡನು. ಮತ್ತೆ ಯೂಪಾಕ್ಷನನ್ನು ಕುರಿತು ಹೀಗೆ ನುಡಿದನು:

'ಹೋಗು, ಪ್ರಭುವಿಗೆ ನಾನು ಎದ್ದಿರುವುದನ್ನು ಹೇಳು. ತಡಮಾಡದೆ ಈಗಲೇಬಂದು ಕಾಣುತ್ತೇನೆ. ಜೊತೆಗೆ ನನ್ನ ಯುದ್ಧಕ್ಕೆ ಸಿದ್ಧತೆ ನಡೆಸಲಿ!'

ಅವನ ಭೂರಥಕ್ಕೆ ಎಂಟು ದಿಗ್ಗಜಗಳನ್ನು ಅಳವಡಿಸಿದರೊ ಎಂಬಂತಹ ಬೃಹತ್ ರಥ ಬಂದಿತು. ಅದನ್ನು ಹೊತ್ತು ಎಳೆಯುವ ಎಂಟು ದೊಡ್ಡಆನೆಗಳ ಹೆಗಲು ಕುಸಿಯುವಂತಿತ್ತು! ರಾಕ್ಷಸಮಲ್ಲನು ತೇರನ್ನು ಏರುತ್ತಿರಲು ಅವನ ಅಗಾಧಭಾರಕ್ಕೆ ಅದರ ಚಕ್ರದ ಕೀಲುಗಳು ಚೀತ್ಕರಿಸಿದವು. ಆನೆಗಳ ಕೊರಳುನೆಗ್ಗಿ ನಿಟ್ಟುಸಿರು ಬಿಟ್ಟವು. ಬೃಹದ್ ರಥವು ಸಾಗುತ್ತಿರಲು ರಾಜಪಥದ ಸತ್ತ್ವವೇ ನಡುಗಿತು. ಎರಡೂಪಕ್ಕದ ಅಚಲ ಸೌಧದ ಸಾಲುಗಳು ಅಲುಗಾಡಿದವು.

ದಶಶಿರನು ತನ್ನ ಧೈರ್ಯವೃಕ್ಷದ ಬೇರಿಗೆ ಸತ್ತ್ವಪೂರಿತ ನೀರನ್ನು ತರುವ ತಮ್ಮನು ಬರುವ ಗೌರವಕ್ಕೆ ಸಂತೋಷಗೊಂಡನು. ಅವನು ನಗರ ಅಲಂಕಾರಕ್ಕೆ ಅಪ್ಪಣೆ ಮಾಡದಿದ್ದರೆ ಆ ಪಥ ಹುಡಿಹೊಮ್ಮಿಸದೆ ಇರುತ್ತಿತ್ತೆ? ಅದು ಕಿಡಿಗೆದರಿ ರಥಧ್ವಜ ಮತ್ತು ತೋರಣ ವಸ್ತ್ರಸಮೂಹವನ್ನು ಸುಡದೆ ಬಿಡುತ್ತಿತ್ತೆ?

ಅವನು ಬರುವ ಹಾದಿಯಲ್ಲಿ ಜೀರ್ಕೊಳವಿಯ ನೀರಿನ ಸಿಂಪಡಣೆಯಿಂದ ಧೂಳು ಅಡಗಿ, ಕೆಸರಾಗಿತ್ತು. ಜನರು ಕೊರಳೆತ್ತಿ ಜಯಘೋಷವನ್ನು ಮಾಡುತ್ತಿದ್ದರು. ಮುಗಿಲುಮುಟ್ಟುವ ಅರಮನೆಯ ಉಪ್ಪರಿಗೆಗಳನ್ನು ಹತ್ತಿದ್ದ ಲಂಕಾಲತಾಂಗಿಯರು ಹೂವನ್ನು ಎರಚುತ್ತಿದ್ದರು. ಆ ಸಂಭ್ರಮದಲ್ಲಿ ತೇರು ಅರಮನೆಯನ್ನು ಸೇರಿತು.

ದೈತ್ಯ ವಿಕ್ರಮನು ಇಳಿದು ರಾಜಗೌರವಗಳೊಂದಿಗೆ ಚಕ್ರವರ್ತಿಯ ಓಲಗ ಶಾಲೆಯನ್ನು ಪ್ರವೇಶಿಸಿದನು. ವಂದಿಮಾಗಧರು ಒಟ್ಟಾಗಿಸೇರಿ ಹೊಗಳುತ್ತಿರಲು ಗೌರವಭೇರಿಗಳು ಆರ್ಭಟಿಸಿದವು. ದಿಗ್ಗನೆ ಎದ್ದುನಿಂತ ಆಸ್ಥಾನ ಹಣೆಗೈಯಾಗಿ ನಮಸ್ಕರಿಸುತ್ತ ಬಾಗಿತು. ದಶಾನನ ನಿಶಾಚರೇಂದ್ರನು ಸಿಂಹಾಸನದಿಂದ ಸಿಂಹ ಗಾಂಭೀರ್ಯದಲ್ಲಿ ಇಳಿದನು. ಸಿಂಹವು ಸಿಂಹಕ್ಕೆ ಸುಖಾಗಮನವನ್ನು ಬಯಸುವಂತೆ

ಹಸನ್ಮುಖಿಯಾಗಿ ತಮ್ಮನನ್ನು ಸ್ವಾಗತಿಸಿದನು. ರತ್ನಸಿಂಹಾಸನದಲ್ಲಿ ರಾವಣ ಕುಂಭಕರ್ಣರಿಬ್ಬರೂ ಮೈಗೆ ಮೈ ಸೋಂಕಿಸುತ್ತ ಆಸೀನರಾಗಿದ್ದರು. ಅದನ್ನು ನೋಡಿದ ಸಭಾಸಮೂಹವು ಇಷ್ಟದರ್ಶನವಾಯಿತು, ಇನ್ನು ತಮಗೆ ಕಷ್ಟವೆಲ್ಲಿಯದು ಎಂಬ ಮನಸ್ಥಿತಿಯಲ್ಲಿ ನಿಶ್ಚಿಂತವಾಗಿತ್ತು.

ಸಚಿವೋತ್ತಮನು ರಾಜಕೀಯವನ್ನು, ಕುಂಭಕರ್ಣನು ನಿದ್ದೆಗೆಜಾರಿದ ದಿನದಿಂದ ನಡೆದುದೆಲ್ಲದರ ವರದಿಯನ್ನು ಓದಿದನು. ತನ್ನ ಮುಖವನ್ನು ನೋಡಿದ ಅಣ್ಣನ ಇಂಗಿತವನ್ನು ಅರಿತು ಮಹೋನ್ನತ ಕುಂಭಕರ್ಣನು ಎದ್ದನು. ಇಡೀ ಸಭೆಯು ನಿಶ್ಯಬ್ದಸಮುದ್ರದಲ್ಲಿ ಇದ್ದಂತಿರಲು, ವೈರಿಭಯಂಕರನು ಈ ರೀತಿ ಅಭಯದ ಪ್ರತಿಜ್ಞೆ ಮಾಡಿದನು:

ವೈರಿಗಳ್ ನಿಮಗೆ ನೀಮಾದಿರಲ್ಲದೆ ಪೆರರ್ ವೈರಿಗಳೇ?

'ನೀವು ಮೊದಲೇ ನನ್ನನ್ನು ಎಚ್ಚರಿಸಿದ್ದರೆ, ನಿಮ್ಮ ಮಂಗಳಕ್ಕೆ ಇಷ್ಟು ಕೇಡು ಉಂಟಾಗುತ್ತಿತ್ತೆ? ನೀವು ನಿಮಗೆ ವೈರಿಗಳಾದಿರಲ್ಲದೆ, ಬೇರೆಯವರು ವೈರಿಗಳೆ? ದೇವತೆಗಳೇ ಭಯಪಡುವ ಈ ರಾಕ್ಷಸ ಮಹಾಸೇನೆಗೆ ಕಪಿಧ್ವಜರು ಸರಿಸಾಟಿಯೆ? ನಿಮ್ಮ ಸೋಲು ನಿಮ್ಮಿಂದ ಆಯಿತು.

'ನನಗೆ ಇಲ್ಲಿ ಧರ್ಮಾಧರ್ಮವನ್ನು ಕುರಿತು ಮಾತನಾಡುವುದು ಅಪ್ರಕೃತ. ನನಗೆ ಧರ್ಮದ ಬಗ್ಗೆ ಬೇರೆ ರೀತಿಯ ಭೀತಿ ಇರಬಹುದು. ನೀತಿ ರೀತಿಯಲ್ಲಿ ನನ್ನ ಪ್ರೀತಿ ಬೇರೆ ಇರಬಹುದು. ಕೆಲಸವು ಮುಂದುವರಿದ ಮೇಲೆ ಪ್ರಭುವಿನ ಚಿತ್ತಕ್ಕೆ ವಿರೋಧವಾಗಿ ಮಾತನಾಡುವುದು ನಿರರ್ಥಕ. ನನ್ನ ಆಲೋಚನೆ ಬೇರೆ ಏನಿದ್ದರೂ, ಈಗ ನನಗೆ ಅಣ್ಣನ ಗುರಿಯೇ ಗುರಿ, ಗತಿಯೇ ಗತಿ.

'ಅಂದು ವಿಭೀಷಣ ತೊರೆದನು, ಇಂದು ಮಹಾಪಾರ್ಶ್ವ. ನಾನು ಎದ್ದಿರುವೆ. ಇನ್ನು ಲಂಕೆಯ ಆತ್ಮಕ್ಕೆ ಪರಮ ಕಲ್ಯಾಣವಾಯಿತೆಂದೇ ಭಾವಿಸಿರಿ! ನಾನು ಈ ದಿನ ಶತ್ರುಗಳಿಗೆ ನರಕವಾಗಿ, ಸ್ವರ್ಗವನ್ನು ತೋರಿಸುವೆನು. ಹಿಂದೆ ಎಂದೂ ಹೀಗೆ ಹೋರಾಡಿರಲಿಲ್ಲ ಎನ್ನುವಂತೆ, ಯಕ್ಷ ಗಂಧರ್ವ ದೇವಾದಿ ತ್ರಿಲೋಕವು ಭಯಗೊಳ್ಳುವಂತೆ ಕಾದಾಡುತ್ತೇನೆ.

'ಇಂದ್ರನ ಎದೆಯ ಸರೋವರ ಜಲವನ್ನು ಕದಡಿ ಮಿಂದು ಅದನ್ನು ಸವಿದು ಎದ್ದದ್ದು ನನ್ನ ಮುದ್ಗರ. ಮಹಾವೃಕ್ಷದಂತಹ ದೀರ್ಘದಂಡ, ಹಾಗೂ ಗಿರಿಭಾರ ರುಂಡದಿಂದ ಕೂಡಿರುವ 'ಮುಸಲಕೇಶಿ' ಹೆಸರಿನ ಈ ಮಹಾ ಮುದ್ಗರ ನನ್ನ ಮಹಾಆಯುಧ. ಇದರ ಕಬ್ಬಿಣವು ಯಮನ ಬೆನ್ನೆಲುಬಿನ ಸೋಂಕಿಗೆ ನವಿರು ನವಿರಾಗಿ ನಿಮಿರಿ ಉತ್ಸಾಹಗೊಂಡಿತ್ತು. ಅದಕ್ಕೆ ಖರನನ್ನು ಕೊಂದವನ ಎದೆಯ ರಕ್ತವನ್ನು

ಕುಡಿಸುವೆನು. ಕುಂಟೆಯನ್ನು ಆನೆಯು ಕಲಕುವಂತೆ ಕಪಿಸೈನ್ಯವನ್ನು ತುಳಿದು ಕೆಮ್ಮಣ್ಣಿನ ಕೆಸರ ನೀರನ್ನು ಕುಡಿಸುವೆನು.

'ವಿಕ್ರಿಯಾ ಬಲದಿಂದ ಬಾನಿನ ಎತ್ತರಕ್ಕೆ ಬೆಳೆದು, ಬಲವಾಗಿ ಉಬ್ಬುತ್ತೇನೆ! ಮೂರು ಲೋಕಕ್ಕೆ ಭೀಕರವೆನ್ನುವಂತೆ ವೈರಿಗಳ ತಲೆಗಿರಿಗಳನ್ನು ನುಚ್ಚು ನುರಿಯಾಗಿಸುತ್ತೇನೆ! ಮಾರೀಚನನ್ನು ಕೊಲೆ ಮಾಡಿದವನನ್ನು ಕುರಿಯನ್ನು ಕತ್ತರಿಸುವಂತೆ ಕಡಿದು ರಣಮಾರಿಗೆ ಅಜೀರ್ಣವಾಗಿ ಓಕರಿಸುವಂತೆ ಪೇರಿಸುತ್ತೇನೆ. ಭೂಮಿ ತಾಯಿಯ ಮಗಳ ನೆವದಿಂದ ನಮ್ಮಭೂಮಿಯನ್ನು ಗೆದ್ದುಕೊಡಲೆಂದು ಬಂದವರ ಶರೀರದ ತೊರಳೆ ಮಾಂಸಗಳನ್ನು ಬಗೆಯುತ್ತೇನೆ.

'ಶ್ರೀ ಮಹಾಪಾರ್ಶ್ವನಿಂದ ಅತಿಯಾಗಿ ಗಾಯಗೊಂಡ ವೈರಿ ಪ್ರಾಣಿಯು ತನ್ನ ಹಕ್ಕೆಯನ್ನು ಹೊಕ್ಕಿದೆ. ಸೊಕ್ಕು ಕುಂದಿರುವ ಅದರ ಭಯವು ಇಂದು ನಮಗೆ ಬೇಡ. ನಾಳೆ ಬೆಳಗಿನ ಯುದ್ಧಕ್ಕೆ ಈ ರಾತ್ರಿ ಸಿದ್ಧನಾಗುತ್ತೇನೆ. ಏಳಿ, ನೆಮ್ಮದಿಯ ಮನಸ್ಸಿನಿಂದ ನಿಮ್ಮ ಮನೆಗೆ ಹೋಗಿ ಲಂಕೆಯ ಕೀರ್ತಿಗೆಲ್ಲಲಿ, ಬಾಳಲಿ!'

ಎಂಬ ಕುಂಭಕರ್ಣನ ನುಡಿಗೆ ಕೈಚಪ್ಪಾಳೆಯೊಂದಿಗೆ ಜಯಧ್ವನಿಗಳು ಎದ್ದವು. ಆ ಸದ್ದಿಗೆ ಸಭಾಸೌಧ ನಡುಗಿತು. ಕುಂಭಕರ್ಣನು ಕುಳಿತು ಕೊಳ್ಳುವಷ್ಟರಲ್ಲಿ ದನುಜೇಂದ್ರನು ದಿಗ್ಗನೆ ಎದ್ದನು. ತನ್ನ ಹೊರೆಯನ್ನು ಅರಿತು ವೈರಿಯ ಬಲವನ್ನು ತಿಳಿದು ತಮ್ಮನ ಅದ್ಭುತ ಪರಾಕ್ರಮ ಗೊತ್ತಿರುವ ಅವನು ತಮ್ಮನ ಗಿರಿಧೀರ ಶರೀರವನ್ನು ಬಲವಾದ ತೋಳುಗಳಿಂದ ಅಪ್ಪಿಕೊಂಡನು.

ಅಮೃತಲೋಭಿಗಳಾದ ರಾಕ್ಷಸರು ಅಂದು ದೇವತೆಗಳ ಲಾಭಕ್ಕೆ ಆದಿಶೇಷನನ್ನು ಮಂದರ ಪರ್ವತದ ಮೈಗೆ ಬಿಗಿದಂತೆ, ರಾವಣನು ತಮ್ಮನನ್ನು ಆಲಂಗಿಸಿಕೊಂಡನು. ತಮ್ಮನನ್ನು ಬಾಯಿತುಂಬ ಹೊಗಳಿದನು. ಸೂಚ್ಯವಾಗಿ ವಿಭೀಷಣನ ನಡೆಯನ್ನು ಖಂಡಿಸಿದನು. ಅವನ ತೋಳುಗಳಿಗೆ ಕಡಗವನ್ನು, ಭುಜಕ್ಕೆ ಭುಜಕೀರ್ತಿಯನ್ನು, ಕಂಠಕ್ಕೆ ಮಹಾಹಾರವನ್ನು ತೊಡಿಸಿದನು.

ಜಲಮಯವಾದ ಮೋಡಕ್ಕೆ ಕಾಮನಬಿಲ್ಲಿನ ಶೋಭೆಯನ್ನು ನೀಡುವ ರವಿಕಿರಣದಂತೆ, ರತ್ನಮಣಿಯ ವಜ್ರಕಾಂತಿಯ ಬಂಗಾರದಿಂದ ಅಲಂಕೃತವಾದ ಬೃಹತ್ ಕವಚವನ್ನು ಎದೆಯ ಆಭರಣವಾಗಿ ತೊಡಿಸಿದನು. ಕುಂಭಕರ್ಣನ ಎದೆಯ ಅಂತರಿಕ್ಷದಲ್ಲಿ ಕ್ಷಾತ್ರ ತೇಜಸ್ಸಿಗೆ ನಕ್ಷತ್ರ ಸಾಕ್ಷಿ ಎನ್ನುವಂತೆ ವಿವಿಧ ಬಿರುದಿನ ತಾರೆಗಳು ತಳತಳಿಸಿ ಹೊಳೆದವು. ಸಂಜೆಯ ಸಂಭ್ರಮದಲ್ಲಿ ಮಿಂದ ಶೈಲೇಂದ್ರನಂತೆ ನಿಂತ ಅಪಾರಬಲಸಿಂಹನಾದ ತಮ್ಮನನ್ನು ನೋಡುತ್ತ ಪ್ರಶಂಸಿಸಿ ದಾನವೇಂದ್ರನು ಹೀಗೆ ಆಶೀರ್ವದಿಸಿದನು:

ಸೋಲ್ ನಂಜನರಿಗುಣಿಸಿ ಬಾ; ತಾ ಗೆಲ್‌ಸೊದೆಯನೆಮಗೆ!


'ಹೋಗು, ನಡೆ; ವೈರಿಸೈನ್ಯದ ಕಡಲನ್ನು ಕಡೆ! ವೈರಿಗೆ ಸೋಲಿನ ವಿಷವನ್ನು ಉಣಿಸಿಬಾ, ನಮಗೆ ಗೆಲುವಿನ ಅಮೃತವನ್ನು ತೆಗೆದುಕೊಂಡು ಬಾ. ವಾನರ ಭಯಂಕರನಾಗು. ನೀನು ನರಶ್ರೇಷ್ಠರಿಗೆ ಭಯಂಕರನಾಗು!

'ನಡೆ, ಹೋಗು. ವೈರಿದಳಕ್ಕೆ ಎದುರಾಗಿ ನಿಲ್ಲು. ಲಂಕೆಗೆ ಮಂಗಳವಾಗು. ಜಯಶ್ರೀಗೆ ರಮಣನಾಗು! ಗೆಲುವಾಗಲಿ, ಶುಭವಾಗಲಿ, ನಿನಗೆ ಒಳ್ಳೆಯದಾಗಲಿ. ನೀನು ವಂಶದ ಯಶಸ್ಸಿಗೆ ಹೊನ್ನಿನ ಕಳಸವಾಗು! ತಾಯಿ ತಂದೆಯರ ಕಮಲಕ್ಕೆ ನೇಸರನ ಉದಯದ ಸಂತೋಷ ನೀನಾಗು!'

ಓಲಗ ವಿಸರ್ಜನೆಯಾಯಿತು. ಜನರು ಸಂತೋಷದಿಂದ ಮನೆಗೆ ಹೋದರು. ಭಯ ಧೈರ್ಯ ಸಮ್ಮಿಶ್ರವಾದ ಸುದ್ದಿ ಹಬ್ಬಿತು.

ಭೂಮಿತಾಯಿಗೆ ನಾಳೆ ಬೆಳಗ್ಗೆ ತನಗೇನು ಗತಿಯಾಗುವುದೊ ಎಂದು ಮೈನಡುಗಿತು. ಸೂರ್ಯನು ರವಿವಂಶದ ಆಗು ಹೋಗುಗಳಿಗೆ ಹೆದರಿ ಪಶ್ಚಿಮಪರ್ವತದ ಮೊರೆಹೊಕ್ಕನು. ಪದಾಘಾತಕ್ಕೆ ಭಯಗೊಂಡ ಆಮೆ ಮತ್ತು ದಿಗ್ಗಜಗಳು ಒಂದು ಇನ್ನೊಂದರ ಸಹಾಯವನ್ನು ಕೋರಿದವು. ಆದಿಶೇಷನು ಭೋಗೀಂದ್ರನಾದರೂ ಯೋಗಿಯಂತೆ ಕುಂಭಕಾಭ್ಯಾಸವನ್ನು ಕೈಗೊಂಡನು.

❑



~~~~~~~~~~~~~~~~~~~~~~~ ಸಂಚಿಕೆ – ೨ ~~~~~~~~~~~~~~~~~~~~~~~

ರಸಮಲ್ತೆ ರುದ್ರದೃಷ್ಟಿಗೆ ರೌದ್ರಮುಂ!

“ಓಹೋ, ಸೂರ್ಯನಿಗೇನು ಭಯ ಕೇಳು? ಸಾರಥಿ ಅರುಣನು ರಥದ ಕುದುರೆಯ ಕಾಲಿನ ಗೊರಸಿನ ವೇಗ ತಡೆಯುವಂತೆ ತನ್ನ ಕೈಯ ಕಡಿವಾಣವನ್ನು ಹಿಡಿತದಲ್ಲಿಟ್ಟುಕೊಂಡಿರುವನೇಕೆ? ಪೂರ್ವದ ಬೆಟ್ಟವನ್ನು ಏರಿ ನಾಡೆಲ್ಲವನ್ನು ಬೆಳಗಿಸುತ್ತ, ಪಕ್ಷಿಗಳ ಕಂಠಧ್ವನಿಯಿಂದ ಭೂಮಿಯ ಶ್ರೇಯಸ್ಸನ್ನು ಸಾರುತ್ತ ಬೇಗ ಬರಲುಹೇಳು! ನನ್ನ ಕನ್ಯಾ ತಪಸ್ಸಿನ ಫಲವನ್ನು ಆ ಸೀತೆ, ರುಮೆಯರ ಮುತ್ತೈದೆತನಕ್ಕೆ ಮುಡುಪಾಗಿಡುತ್ತೇನೆ, ಭಯಬೇಡ!’
~~~~~~~~~~~~~~~~~~~~~~~

ಎಂದು ಪಾರ್ವತಿಯು ತನ್ನ ಸೇವಕಿಗೆ ಅಪ್ಪಣೆ ಮಾಡಿ, ಶಂಕರನ ಕಡೆಗೆ ತಿರುಗಿದಳು. ರುದ್ರದೇವನು ಕೈಲಾಸಗಿರಿ ಶಿಖರಕ್ಕೆ ಕೋಡು ಮೂಡಿದ ರೀತಿಯಲ್ಲಿ ನಿಂತು ಭೂಲೋಕವನ್ನು ಗಂಭೀರ ಮುಖಮುದ್ರೆಯಿಂದ ದಿಟ್ಟಿಸುತ್ತಿದ್ದನು. ಅವನು ತನ್ನ ಅರ್ಧಾಂಗಿ ಸತಿ ಪಾರ್ವತಿಗೆ ಲಂಕೆಯಿರುವ ಕಡೆ ಕೈತೋರಿಸುತ್ತ,

ರುದ್ರ ದೃಷ್ಟಿಯಿರೆ ರೌದ್ರಮುಂ ರಸಮಲ್ತೆ.

'ಗಿರಿಜೆ, ನೋಡು, ನಿನ್ನ ಕಣ್ಣಿಗೆ ಇಂದು ಒಂದು ಔತಣವು ಕಾದಿದೆ. ನೀನು ಹಿಂದೆ ಎಷ್ಟೋ ರುದ್ರ ದೃಶ್ಯಗಳನ್ನು ಕಂಡಿರುವೆಯಾದರೂ ನೀನು ನೋಡುವುದಕ್ಕೆ ಅವು ಸಾಟಿಯೆ ಎಂದು ನನಗೆ ಸಂದೇಹವಾಗಿದೆ. ತ್ರಿಪುರಸಂಹಾರಕನ ಅರ್ಧಾಂಗಿಯೂ, ತಾರಕಧ್ವಂಸಿ ಸ್ಕಂದನ ತಾಯಿಯೂ ನೀನಾಗಿರುವೆ. ಆದರೂ ನೀನು ಈ ಕುಂಭಕರ್ಣನ ಮಹಾಉಗ್ರಸಂಗ್ರಾಮವನ್ನು ನೋಡಲೇಬೇಕು. ಈ ಲಯಕರ್ಮಿಯು ಲಯಮೂರ್ತಿಯಾದ ನನಗೆ ಪ್ರಿಯನಾಗಿದ್ದಾನೆ. ಜೊತೆಗೆ ಅವನು ಇಂದು ಲಯಕ್ಕೆ ಅಭಿಮುಖಿಯಾಗಿದ್ದಾನೆ. ನೋಡು, ದಾನವರ ವಾನರರ ಸೈನ್ಯದಲ್ಲಿ ಪ್ರಾಣಪ್ರಲಯವನ್ನು ಪ್ರಚೋದಿಸಲು ನಮ್ಮ ಭೈರವನೇ ಅವನನ್ನು ಹೊಕ್ಕಿದ್ದಾನೆ!'

ಎಂದು ಹೇಳಿದ ರುದ್ರದೇವನ ನುಡಿಗೆ ಭವಾನಿ ಬೆದರಿದಳು. ಅವನ ಪಾದಗಳಿಗೆ ನಮಸ್ಕರಿಸುತ್ತ ನುಡಿದಳು:

'ವಿಷಕಂಠನೇ, ನನಗಾಗಿ ಕರಗಿ ಕರುಣೆ ತೋರಿಸು. ಕುವರಿ ಸೀತೆಯ ಹಣೆಯ ಕುಂಕುಮಕ್ಕೆ ಹಾನಿ ಬರದಿರಲಿ! ಅಲ್ಲಿ ನೋಡು, ಸರಯೂ ನದಿದಡದಲ್ಲಿ ನನ್ನನ್ನೇ ಪೂಜಿಸಿ ತಪಸ್ಸು ಮಾಡುತ್ತಿರುವ ಮಗಳು ಊರ್ಮಿಳೆಯು ಮೂಡಿದಹೂ ಬಾಡದಿರಲಿ! ನೋಡಲ್ಲಿ, ಕಿಷ್ಕಿಂಧೆಯಲ್ಲಿ ವ್ರತಧಾರಿಯಾದ ರುಮೆಯ ತಾಳಿಗೆ ತೊಂದರೆಯಾಗದಿರಲಿ!'

ಅಕ್ಕರೆ ಉಕ್ಕುವಂತೆ ಮಾತನಾಡಿದ ಜಗದಂಬೆಗೆ ಮುಕ್ಕಣ್ಣನು ತನ್ನ ಇಚ್ಛೆಯನ್ನು,'ನಿನ್ನ ಅಂಶವೇ ಆ ಸೀತೆ. ನಿನ್ನ ಭಕ್ತರು ಆ ದೈತ್ಯಸಹೋದರರು. ರಾವಣನ ಇಷ್ಟಸಿದ್ಧಿಗೆ ಸಾಧನವನ್ನೊಡ್ಡಿ, ಅವನ ಮನದಲ್ಲಿ ಮೋಹವನ್ನುಂಟು ಮಾಡಿರುವೆ. ನೀನೇ ಜಗನ್ಮಾತೆ. ನೀನೇ ಹುಟ್ಟಿಸುವವಳು, ಸಾಕುವವಳು, ಕೊಲ್ಲುವವಳು, ಕಾಯುವವಳು. ನೀನಿಲ್ಲದೆ ನಾನು ಏನು? ನಿರಂಜನ, ನಿಷ್ಕರ್ಮಿ! ನೀನು ಸರಸ್ವತಿಯಾದದಿನ ನಾನು ಬ್ರಹ್ಮ; ನೀನು ಲಕ್ಷ್ಮಿಯಾದ ದಿನ ನಾನು ವಿಷ್ಣು. ಮಾಯೆಯಾದ ನೀನು ಒಲಿದಂತೆ ಇದೇ ರಜತಾದ್ರಿ ಸತ್ಯಲೋಕವಾಗುತ್ತದೆ ಮತ್ತು ವೈಕುಂಠವು ಇಲ್ಲಿಯೇ ಕಾಣುತ್ತದೆ!

'ಕೇಳಿಸಿಕೊ. ಹೇಳುವುದು ನನ್ನ ಇಚ್ಛೆಯಾದರೂ, ಮಹಾಗೂಢವಾದ ಅದೂ ಸಹ ನಿನ್ನ ಕಾರ್ಯವೆನ್ನುವುದು ನಿಜ! ತನ್ನ ನಾಟಕದಲ್ಲಿ ತಾನು ಪಾತ್ರಧಾರನಾಗಿಯೂ, ಪ್ರೇಕ್ಷಕನಂತೆ ನೋಡುವ ಕವಿ ಸೂತ್ರಧಾರಿ. ಪ್ರಿಯೆ, ಆ ರೀತಿ ಕುಂಭಕರ್ಣನ ಲೋಕಭೀಕರ ಮಹಾಯುದ್ಧದ ರಣಕಾವ್ಯವನ್ನು ನೋಡು. ರುದ್ರ ದೃಷ್ಟಿ ಇದ್ದರೆ ರೌದ್ರವೂ ರಸವಲ್ಲವೆ?'

ಎಂದು ಹೇಳಿ ಆ ಕಡೆ ತಿರುಗಲು, ಜಗತ್ತಿನದೃಷ್ಟಿ ಲಂಕೆಯ ಕಡೆಗೆ ಹೊರಳಿತು! ಶಿವೆಯು ಈಶ್ವರನ ಹತ್ತಿರಕ್ಕೆ ಸರಿದಳು. ವಿಷಕಂಠನ ಕಾಲಕೂಟ ಕುದಿಯಲು, ಅವನ ಕೊರಳನ್ನು ಸುತ್ತಿದ್ದ ವಿಷಸರ್ಪಗಳು ಬುಸುಗುಟ್ಟಿದವು.

ಕಾಳಗಕ್ಕೆ ಹೊರಟ ಕುಂಭಕರ್ಣನ ಭಯಂಕರ ರೂಪಕ್ಕೆ ಜಗನ್ಮಾತಪಿತರು ಈ ರೀತಿ ಕೈಲಾಸದಲ್ಲಿ ನಿಂತು ನೋಡಿದರು ಎಂದ ಮೇಲೆ ಕವಿಹೃದಯದ ಭೂಮಾನುಭೂತಿಯನ್ನು ಹೋಲಿಸಲು ಬೇರೆ ಪ್ರತಿಮೆ ಉಂಟೆ? ವಿಶ್ವಶಕ್ತಿಗಳು ಮನುಜ ದೃಷ್ಟಿಗೆ ದೇವ ದೇವತೆಗಳಂತೆ ಕಾಣುತ್ತವೆ. ಅವು ವಿಶ್ವಕಲ್ಯಾಣಕ್ಕಾಗಿ ಕಾವ್ಯ ಲೋಕದ ಸರ್ವಲೋಕ ಶಾಶ್ವತಸತ್ಯವಾಗಿ ಕವಿದರ್ಶನದಲ್ಲಿ ಕ್ಷಣ ಕ್ಷಣವೂ ಅವತರಿಸುವುದಲ್ಲವೆ?

ಜಗದಂಬೆಯು ಹೇಳಿ ಕಳುಹಿಸಿದ ಮಾತಿನ ಧೈರ್ಯದಿಂದ ಸೂರ್ಯನು ಮೂಡಿದನು. ಅವನ ಪ್ರಥಮ ಕಿರಣಗಳು ತ್ರಿಕೂಟಾಚಲಶಿಖರವನ್ನು ಚುಂಬಿಸಿ, ದಶಕಂಠನ ಅರಮನೆಯ ಕುಂಭಾಕೃತಿಯ ಚಿನ್ನದಕಲಶದ ತುದಿಯನ್ನು ತಳತಳಿಸಿದವು. ಕುಂಭಕರ್ಣನು ರಾತ್ರಿಯೆಲ್ಲ ಶಕ್ತಿಯ ಅನುಸಂಧಾನದಲ್ಲಿ ಕಳೆದನು. ವಿಕ್ರಿಯೆಯಿಂದ ಗಿರಿಸ್ಪರ್ಧಿಯೆನ್ನುವಂತೆ ಉಬ್ಬಿ ಬೆಳೆದನು. ಹಾಗೆ ಯುದ್ಧ ಸನ್ನದ್ಧನಾಗಿದ್ದ ಅವನ ಚಿನ್ನದ ದೊಡ್ಡ ಕರ್ಣಕುಂಡಲ ಮಂಡಲಗಳಲ್ಲಿ ಹಗಲಿನ ಉದಯದ ಪ್ರಭಾತತಪವು ಪ್ರಜ್ವಲಿಸಿತು!

ಜೊತೆಗೆ, ಆ ಲಂಕೆಗೆ ಎದುರಾಗಿರುವ ಬೆಟ್ಟದ ಶಿಖರದಲ್ಲಿ ರಾಮಚಂದ್ರನು ನಿಂತು, ಸುಗ್ರೀವನಿಂದ ವೈರಿಯ ವ್ಯೂಹವನ್ನು ಮತ್ತು ಅದರ ಚಲನವಿನ್ಯಾಸವನ್ನು ಕೇಳಿ ತಿಳಿಯುತ್ತಿದ್ದನು. ಅವನ ಬತ್ತಳಿಕೆಯ ಬಾಣದ ಹಿಂಭಾಗವನ್ನು ಹೊಂಬಿಸಿಲು ಚುಂಬಿಸಿತು. ಎರಡೂಕಡೆಯ ಹರಿತಆಯುಧ ಸಾಲುಗಳು ಕಾಂತಿಯನ್ನು ಕಾರಿದವು. ಅದು ಕೋಟಿ ವಿದ್ಯುತ್‌ಕಿರಣ ಪ್ರಕಾಶವು ನಿರಂತರವಾಗಿ ನೇಯ್ದ ಜ್ಯೋತಿರ್ಜಾಲದಂತಿತ್ತು.

ಕಾಲಾಂತಕನ ತೆರದಿ ಕಾಲಿಕ್ಕಿದನು ಕಾಲವಶಿ ಕಾಲವಲಯಕೆ ಅಕಾಲಮೃತ್ಯುವಿನಂತೆ ವೋಲ್!

ಕೈಚಪ್ಪಾಳೆಯ ಸೂಚನೆಗೆ ತುತ್ತೂರಿಗಳು ಮೊಳಗಿದವು ಕಿವಿಬಿರಿಯುವಂತೆ ಬೆಟ್ಟಗಳು ಕಂಪಿಸಿ, ಆ ಧ್ವನಿಯನ್ನು ದಿಕ್ಕುದಿಕ್ಕಿಗೆ ಹರಡಿದವು. ರಣಭೇರಿಗಳು ಮೊಳಗಿದವು. ಭಯಾನಕವಾದ ತಮಟೆಗಳು ಭೋರ್ಗರೆದವು. ಕಹಳೆಗಳು ಕೂಗಿದವು. ನಿಸ್ಸಾಳವೆಂಬ ಚರ್ಮವಾದ್ಯಗಳು ಚೀರಿದವು. ರಂಜೆ ಎನ್ನುವ ಚರ್ಮವಾದ್ಯದ ಶಬ್ದಕ್ಕೆ ಗಜಗುಂಪು ಅಂಜಿತು. ಕುದುರೆಗಳು ಕುಣಿಕುಣಿದು ಹೇಷಾರವವನ್ನು ಹೊಮ್ಮಿಸಿದವು.

ತೇರಿನಗಾಲಿಗಳು ಚೀತ್ಕಾರವನ್ನುಂಟು ಮಾಡುತ್ತ ಗರ್ಗರಿಸಿ ನುಗ್ಗಿದವು. ಘಂಟೆಗಳ ಘೋರ ಘೋಷದೊಡನೆ ಒಂದಾಗಿ ಆನೆಗಳು ಘೀಳಿಟ್ಟವು. ಕಾಲಾಳುಗಳು ಕೋಟಿ ಕಂಠಗಳಿಂದ ಅಟ್ಟಹಾಸ ಮಾಡಿದರು. ಆಯುಧಗಳನ್ನು ಹಿಡಿದ ಕೈಗಳನ್ನು ಎತ್ತಿ ಕೂಗುತ್ತ ಸಿಂಹನಾದ ಮಾಡಿದರು!

ಕುಂಭಕರ್ಣನು ತನ್ನ ಭಾರೀ ಆನೆಗಳ ತೇರನ್ನೇರಿ ಕೋಟೆ ಬಾಗಿಲವರೆಗೆ ಆಗಮಿಸಿದನು. ಗೌರವ ಮಾತ್ರದಂತಿದ್ದ ಆ ತೊಡಕನ್ನು ವಿಸರ್ಜಿಸಿ, ರಥವನ್ನು ತಿರಸ್ಕರಿಸಿ, ಭೂರಥಕ್ಕೆ ಇಳಿದನು. ಕುಂಭಕರ್ಣನ ಮಹದ್ ಭಯಂಕರ ಪರ್ವತಗಾತ್ರವನ್ನು ನೋಡುತ್ತ ಕಪಿಸೇನೆಯು ಆಶ್ಚರ್ಯ ಚಕಿತವಾಗಿ ಮೂಗಿನ ಮೇಲೆ ಬೆರಳಿಟ್ಟಿತು. ಆ ಸೇನೆಯಲ್ಲಿ ಸದ್ದು ಅಡಗಿತು.

ನೋಡುತ್ತಿರಲು, ಅವನ ಹೆಜ್ಜೆ ಹೆಜ್ಜೆಗೆ ಭೂಮಿಯಲ್ಲಿ ಕಂಪನ ಉಂಟಾಯಿತು. ಅವನು ಮೊದಲ ನೆಗೆತಕ್ಕೆ ಬಲವಾದ ಕೋಟೆಯನ್ನು ದಾಟಿದನು. ಎರಡನೆ ನೆಗೆತಕ್ಕೆ ಅಪಾರವಿಸ್ತಾರದ ಕಂದಕವನ್ನು ದಾಟಿದನು. ಮೂರನೆಯ ನೆಗೆತಕ್ಕೆ ತನ್ನ ಇಹಲೋಕದ ಆಯಸ್ಸಿನ ರೇಖೆಯನ್ನು ದಾಟಿದನು. ಕಾಲವಶಿಯಾದ ಅವನು ಯಮನ ರೀತಿ ಯುದ್ಧರಂಗವೆಂಬ ಕಾಲವಲಯಕ್ಕೆ ಅಕಾಲಮೃತ್ಯುವಿನಂತೆ ಕಾಲಿಕ್ಕಿದನು!

ಆ ಅತಿಶಯ ರಾಕ್ಷಸನ 'ಮುಸಲ ಕೇಶಿ' ಎಂಬ ದೈತ್ಯ ಮುದ್ಗರದಲ್ಲಿ ಗದೆ ತ್ರಿಶೂಲ ಒನಕೆ ಖಡ್ಗಗಳೆಂಬ ಸರ್ವ ಆಯುಧಗಳು ಒಂದಾಗಿದ್ದವು. ಅದರ ಹೊಡೆತಕ್ಕೆ ತಲೆ ಒಡೆದು ರಕ್ತ ಬಸಿದು ಕಪಿರುಂಡಗಳು ಬಿದ್ದವು. ಅದು ಬಡಿದ ಕಡೆ ಬಯಲಾಯಿತು. ಬಡಿತ ಬಡಿತಕ್ಕೆ ನೆಲವು ಝುಗ್ಗನೆ ಕಣಿವೆ ಬಿದ್ದವು. ಅದನ್ನು ಬೀಸಿ, ಬಡಿದು, ತಿರುವಿ ಚಚ್ಚಿ ಕೋಟಿ ಕಪಿಕುಲರನ್ನು ಕೊಂದು ಅರೆದನು.

ಇಂದು, ಅಲ್ಲಿ ಐರೋಪ್ಯ ದುಷ್ಟತನವು ಪ್ರಯೋಗಿಸುವ ದೈತ್ಯಯಂತ್ರಗಳು ಮನೆಯೆನ್ನದೆ ಮಠ ಎನ್ನದೆ, ಚರ ಅಚರ ಎನ್ನದೆ, ಹೆಣ್ಣು ಗಂಡು ಎನ್ನದೆ, ನಾಗರಿಕ ಸೈನಿಕ ಎನ್ನದೆ, ಹಸು ಹಸುಳೆ ಎನ್ನದೆ, ತಗ್ಗು ಉಬ್ಬು ತಡೆ ಎನ್ನದೆ ಮುಂದೆ ಬಂದ ಎಲ್ಲವನ್ನು ಮೆಟ್ಟಿ ತುಳಿ ತುಳಿಯುತ್ತವೆ. ಬರಿದಾಗಿಸಿ, ಬಟ್ಟ ಬಯಲಾಗಿಸಿ ಸಾವಿನ ಮುನ್ನಡೆಗೆ ರಕ್ತದೋಕುಳಿಯನ್ನು ಹೊಯ್ಯುತ್ತವೆ, ಅವು ಕಂಬನಿಯಕಾಲುವೆ ಹರಿಸಿ ರಕ್ತದ ಹಾದಿಗಳಾಗುತ್ತವೆ. ಹಾಗೆ ಕುಂಭಕರ್ಣನು ದಶಾನನ ಮಹಾಸಮರ ಯಂತ್ರಸ್ವರೂಪನಾಗಿದ್ದನು.

ಕಪಿಸೇನೆಯು ಮೊದ ಮೊದಲು ಬೆಚ್ಚಿದರೂ ಧೈರ್ಯಗೆಡದೆ ನಿಂತಿತು. ಕೆಲವರು ತಡೆದರು. ಕೆಲವರು ಮೇಲೆ ಬಿದ್ದರು. ಮರಗಳನ್ನು ಬಂಡೆಗಳನ್ನು ಕೈಯಲ್ಲಿ ಹಿಡಿದು ವೀರಾಗ್ರಣಿಗಳು ಮುನ್ನುಗ್ಗಲು ಪ್ರಯತ್ನಿಸಿದರು. ದೈತ್ಯನ ವಿಶೇಷ ಮುದ್ಗರದ ಮೊದಲ ಬೀಸಿಗೆ ನೂರಾರು ಸೈನಿಕರು ನೆಲಕ್ಕೆ ಒರಗಿದರು. ಎರಡನೆಯ ಹೊಡೆತವು ತಿಕ್ಕಿ ಸಹಸ್ರಾರುಸೈನಿಕರನ್ನು ಭೂಮಿಗೆ ಉರುಳಿಸಿತು. ಮತ್ತೆ ಮೂರನೆಯ ಬಡಿತಕ್ಕೆ ಕಾದುವರೆ ಸದ್ಗತಿಗಾಗಿ? ಅತಿಭಯಕ್ಕೆ ಎಲ್ಲರೂ ಓಡಿದರಲ್ಲದೆ, ಉಳಿದವರೆಲ್ಲಿ? ಆ ಕಾಲು ನಡೆಯ ಸೈನಿಕರಿಗೆ ಹೆಸರೇ ಬಿರುದಾಯಿತು! ಹೊತ್ತಿದ್ದ ಮರ ಕಲ್ಲು ಆಯುಧಗಳನ್ನೆಲ್ಲ ನಿಂತಲ್ಲೇ ಎಸೆದು ಕಿತ್ತೋಡಿದರು. ಅಲ್ಲಿ ವೀರರೆಂಬ ಉತ್ತಮರನ್ನು ಹುಡುಕಿದರೂ ಕಾಣಲಾಗಲಿಲ್ಲ!

ಬಹುಕಾಲದಿಂದ ಅದುಮಿಟ್ಟ ಸಹಜಕಾಮನೆಯು ತೊಡಕಾಗುತ್ತ ಪಿಶಾಚ ಸಾಮರ್ಥ್ಯದಿಂದ ಪ್ರಕಟಗೊಳ್ಳುವುದು. ಅದು ತನಗೆ ಸೆರೆಕಾವಲಾಗಿದ್ದ ಉತ್ತಮ ವಾಸನಾ ಸಭ್ಯರನ್ನು ಬಲವಾಗಿ ಒಡೆದು ಹೊರ ಹೋಗಲು ಪ್ರಯತ್ನಿಸಿ ಮುನ್ನುಗ್ಗುವುದು. ಮೊದಮೊದಲು ಸಭ್ಯತೆಯು ಮಲೆತುನಿಂತು ತಡೆದರೂ, ಕಡೆಗೆ ಅದರ ರಾಕ್ಷಸತೆಗೆ ಭಯಗೊಂಡು, ಮೊದಲು ತಮಗೆ ಇದ್ದ ಗೌರವಕ್ಕೆ ಎಳ್ಳುನೀರು ಕೊಡುವವು. ತಾನು ಬಾಳಿದ ಭೂಮಿ ಎಲ್ಲವನ್ನು ವೈರಿಗೆ ಬಿಟ್ಟುಕೊಟ್ಟು ದಿಕ್ಕೆಟ್ಟು ಓಡುವವು.

ಹೇಳು, ಅವರನ್ನು ಬರಿಯಬುದ್ಧಿ ಕರೆದರೆ ಏನಾಗುವುದು? ಅಂತರಾತ್ಮನ ಪ್ರಚೋದನೆಯಿರದ ಬುದ್ಧಿಯು ಇಂದ್ರಿಯದ ಹಿತದ ಲೌಕಿಕಕ್ಕೆ ಸೋಲದೆ ಇರುತ್ತದೆಯೆ? ಹಾಗೆ ಓಡುತ್ತಿದ್ದ ಇತರರನ್ನು ಕೂಡಿ ಹಿಂಜರಿಯುತ್ತಿದ್ದ ವಾಲಿಯ ಮಗನ ಸೋಲನ್ನು ನೋಡಿ ರಾಮಚಂದ್ರನು ಕೋಪಗೊಂಡನು. ಸಹೋದರ ಲಕ್ಷ್ಮಣನನ್ನು ಕರೆದು ಅಂಗದನ ಎದೆಗೆ ಧೈರ್ಯದ ಅಮೃತವನ್ನು ಎರೆದು, ಕಪಿವಾಹಿನಿಯನ್ನು ತಡೆಯಲು, ಕುಂಭಕರ್ಣನ ಮೇಲೆ ತಿರುಗಿ ಬೀಳಲು ಹೇಳಿದನು.

ಲಕ್ಷ್ಮಣನ ಕರೆಯನ್ನು ಅಂಗದ ಕೇಳಿದನು. ಸ್ಮೃತಿ ಮರಳಿದಂತೆ ನಿಂತನು. ತನ್ನ ಮರೆವಿಗೆ ತಾನೇ ಕೋಪಗೊಂಡು ನಾಚಿದನು. ತಂದೆಯನ್ನು ನೆನೆದು, ತನ್ನ ಹೇಡಿತನಕ್ಕೆ ಬಯ್ದುಕೊಂಡನು. ತಕ್ಷಣ ಶಿಖರ ಸಮಾನವಾದ ಶಿರದ ವೃಕ್ಷಗದೆಯನ್ನು ಎತ್ತಿ ಮುನ್ನುಗ್ಗಿದನು. ಓಡುವ ಕಪಿಸೈನ್ಯವನ್ನು ಕೂಗಿ ಕರೆದನು.

ಈ ಧರ್ಮ ರಣಧರಣಿಗಿಂ ಮಿಗಿಲ್ ರಕ್ಷಣಾಕ್ಷೇತ್ರ ಮಿಹುದೇ ಕ್ಷೇಮಚಿಂತನೆಗೆ?

‘ಬನ್ನಿ, ವೀರರೇ, ಬನ್ನಿ! ನುಗ್ಗಿ ಮುಂದಕ್ಕೆ! ನಿಲ್ಲಿ, ನಿಲ್ಲಿ, ಎಲ್ಲಿಗೆ ಓಡುವಿರಿ! ಇಲ್ಲಿ ನಿಮಗೆಲ್ಲಿದೆ ಮನೆ? ನಿಮ್ಮ ಓಟಕ್ಕೆ ಕೊನೆ ಇದೆಯೆ? ಕ್ಷೇಮಚಿಂತನೆಗೆ ಈ ಧರ್ಮ ರಣಧರಣಿಗಿಂತ ಮಿಗಿಲಾದ ರಕ್ಷಣಾ ಕ್ಷೇತ್ರವಿದೆಯೆ? ರಾಮನಿರುವ ಈ ಕ್ಷೇಮ ಭೂಮಿಯನ್ನು ಬಿಟ್ಟರೆ, ಕುಂಭಕರ್ಣನ ಬಾಯಿಗಿಂತಲೂ ಮಿಗಿಲಾದ ನರಕಗತಿ ನಮಗಾಗುವುದಲ್ಲವೆ?

‘ಇದು ಭೂತಅಲ್ಲ. ಇದು ಲಂಕೆಯು ಅಟ್ಟಿರುವ ಬರಿ ಅಂಜಿಕೆ! ಬೆದರುಗೊಂಬೆಯನ್ನು ಕಂಡು ಹೆದರುವ ಮಕ್ಕಳಂತೆ ಓಡುವಿರಾ, ನಿಲ್ಲಿ. ರಾಕ್ಷಸರು ಯುದ್ಧರಂಗಹೊಲದ ರಕ್ಷಣೆಗೆ ಮುಂದಿಟ್ಟುಕೊಂಡು ನುಗ್ಗುತ್ತಿರುವ ಹುಲ್ಲಿನ ಬೆದರುಗೊಂಬೆ ಇದು. ಇದಕ್ಕೆ ಅಳುಕಿ ಮೂಢ ಮೃಗಪಕ್ಷಿಗಳಂತೆ ಪಲಾಯನ ಪಟುಗಳಾಗುವಿರಾ?

‘ವಿಶ್ವಕರ್ಮನಿಂದ ದೊರೆತ ವರಬಲವನ್ನು ಮರೆತಿರೇನು? ಸೇತು ಬಂಧನಕ್ಕೆ ನೀವು ಎತ್ತಿ ಕಿತ್ತು ಹೊತ್ತ ಬೆಟ್ಟದ ಧೈರ್ಯವನ್ನು ಮರೆತು ಇಂದು ಹಗುರವಾದಿರಿ. ಅಲ್ಲದೆ ಅದನ್ನು ನೆನೆದರೆ ಆ ನೆನಪೇ ಮನಸ್ಸಿಗೆ ಗೌರವವಾಗಿ ನಿಮಗೆ ಅಚಲಸ್ಥೈರ್ಯವನ್ನು ನೀಡುವುದು. ಆ ದಿವ್ಯ ಶಿಲ್ಪಿಯ ವರದ ಮಹಿಮೆಯಿಂದ ನಿಮಗೆ ಲಭಿಸಿರುವ

ಭವ್ಯಶರೀರವನ್ನು ನೆನೆಯಿರಿ. ತಂಗಿಯೊಬ್ಬಳ ಕಾರಣದಿಂದ ನಮಗೆ ಈ ಮಹಾಸಂಗ್ರಾಮದಲ್ಲಿ ದೊರೆತಿರುವ ಮಹಾಪಾತ್ರವನ್ನು ನೆನೆಯಿರಿ! ಬನ್ನಿ; ಬನ್ನಿ, ಕಲಿಗಳೆ! ನುಗ್ಗಿ; ನುಗ್ಗಿ ಮುಂದಕ್ಕೆ! ನಮ್ಮ ಪುಣ್ಯದ ಮುಷ್ಟಿಯ ಹೊಡೆತಕ್ಕೆ ಸಗ್ಗದಬಾಗಿಲು ಬಿರಿದು ತೆರೆದುಕೊಳ್ಳುತ್ತದೆ.'

ಸೇನಾಪತಿಯ ಸೂಚನಾ ಧ್ವನಿಶಕ್ತಿಗೆ ಸೈನಿಕರಲ್ಲಿ ಮನೋವಿಕೃತಿಯಿಂದಾಗಿದ್ದ ಭಯ ತೊಲಗಿ, ಕೆಚ್ಚು ಮರಳಿತು ಎನ್ನುವಂತಾಯಿತು. ಅವರು ಕೋಪವನ್ನು ಮನಸ್ಸಿಗೆ ತಂದುಕೊಂಡು ಯುದ್ಧಮುಖಿಗಳಾಗಿ ನಿಂತರು. ಕೈಗೆ ಸಿಕ್ಕಿದ ಆಯುಧಗಳನ್ನು ಎತ್ತಿಕೊಂಡು ರಣರೋಷದಿಂದ ಘೋರ ಘೋಷಣೆ ಮಾಡುತ್ತ ವೈರಿ ಹೃದಯವನ್ನು ಸೂರೆಮಾಡುವಂತೆ ಕೂಗುತ್ತ ಮುನ್ನುಗ್ಗಿದರು. ವಿಶ್ವಕರ್ಮನ ವರಮಹಿಮೆಯಿಂದ ವಿಶ್ವ ಶೂರರಾದ ಅವರು ಕಡೆದ ಕಡಲತೆರೆಗಳಂತೆ ಆರ್ಭಟಿಸುತ್ತ ಕುಂಭಕರ್ಣನ ಮಹಾಮೈಯ ಪರ್ವತವನ್ನು ಒದೆಯಲು ನುಗ್ಗಿದರು!

ಬ್ರಹ್ಮ ವರಬಲದಿಂದ ಗರ್ವಪರ್ವತನಾದ ಆ ಮಹಾಅಸುರನ ಮುಂದೆ ಬಿಲ್ಲು, ಖಡ್ಗ, ಈ ವಾನರ ಆಯುಧ ಸಮೂಹವು ಯಾವ ಲೆಕ್ಕ? ಮರಗಿಡಗಳ ಗುಂಪನ್ನೇ ಕಿತ್ತು, ಬೆಟ್ಟಗುಡ್ಡಗಳನ್ನೆ ಕಿತ್ತು ಎತ್ತಿ ಆಯುಧಗಳಾಗಿಸಿಕೊಂಡು ಕವಣೆಯಂತೆ, ಕುಂಭಕರ್ಣನ ಹೆಸರು ಹೊತ್ತ ಆ ಬೃಹತ್ ಕೃತಿಗೆ ಎಸೆದರು!

ಋಷಭ, ಶರಭ, ಗವಾಕ್ಷ, ಸುಷೇಣ, ಮೈಂದ, ದ್ವಿವಿದ, ಗಜ, ಪನಸ, ತಾರ, ವಲೀಮುಖ ಮುಂತಾದವರ ಒಂದೊಂದು ಹೆಸರೇ ಒಂದೊಂದು ಪಡೆಗೆ ಸಮನಾದುದಾಗಿತ್ತು. ಅಂತಹ ಸೇನಾಧಿಪತಿಗಳು ನುಗ್ಗಿಬರಲು ಕುಂಭಕರ್ಣನ ಪೌರುಷ ಹೆಚ್ಚಿತು. ಆ ರಾಕ್ಷಸನ ಒಡಲು ಪೌರುಷಪ್ರತಿಮೆಯಂತೆ ಹಿಗ್ಗುತ್ತ ಪರ್ವತವಾಯಿತು. ಮಿಂಚಿದ ಪ್ರಭೆಯ ಮುದ್ಗರದಿಂದ ಅಂಗದನಿಗೆ ಬಡಿದನು. ಅವನು ರಕ್ತಕಾರುತ್ತ ಬಿದ್ದನು. ಓವೊ, ಯುವರಾಜನು ಹಾಗೆ ಉರುಳಲು ಕಪಿಸೈನ್ಯ ಸಮುದ್ರವು ಕೆರಳಿ ಕುದಿದು ಉಕ್ಕಿ ಕುಂಭಕರ್ಣನ ಮೇಲೆ ಎರಗಿತು.

ಒಂಟಿ ಹಂದಿಯನ್ನು ತಡೆಯಲು ಬೇಟೆನಾಯಿಗಳು ಹೂಂಕರಿಸಿ ನುಗ್ಗಲು, ಅದು ಕೋರೆದಾಡೆಯನ್ನು ಮಸೆದು ಉದ್ರೇಕಗೊಂಡು ಮುಂದೆ ಎರಗಲು ಮೊದಲನಾಯಿಯ ಕರುಳು ಹೊರಹೊಮ್ಮಿ ಬಿದ್ದಿತು. ಇನ್ನು ಉಳಿದ ನಾಯಿಗಳು ಹಿಂದಕ್ಕೆ ಸರಿದು ಮತ್ತೆ ಕೆರಳಿ ಬಿದ್ದವು. ಆಗ ಆ ಹಂದಿ ಕಾಡೇ ನಡುಗುವಂತೆ ಗುಡುಗುಡಿಸಿ ತಿವಿಯಿತು. ಆಗ ಕೆಲವು ನಾಯಿಗಳ ಹೊಟ್ಟೆ ಹರಿದು ಬಿದ್ದವು. ಕೆಲವು ಪಕ್ಕೆ ಬಿರಿದು, ಎದೆ ಸೀಳಿ ಬಿದ್ದವು. ಬೇಡರ ಒಡೆಯನೇ ಬಂದು ಸರಿಯಾದ ದೂರವನ್ನು ಅಳೆದು, ಗುರಿಯಿಟ್ಟು ಕುದುರೆಯನ್ನೆಳೆದು ಕೋವಿಗುಂಡಿನಿಂದ ಹೊಡೆಯುವತನಕ ಅದು ಹೀಗೆ ನಡೆಯಿತು.

ಬೆಟ್ಟವನ್ನು ತಂದು ಕುಂಭಕರ್ಣನ ಎದೆಗೆ ಎಸೆದ ಧೈರ್ಯಶಾಲಿ ದ್ವಿವಿದನಿಗೆ ಪಕ್ಕೆಲುಬು ಮುರಿಯಿತು. ಅವನ ಮುಷ್ಟಿಯ ಆಘಾತದಿಂದ ಶರಭನು ಉಸಿರುಗಟ್ಟಿ ಉರುಳಿದನು. ಮೊಳಕಾಲಿನ ಹೊಡೆತದಿಂದ ನೀಲ ಮೂರ್ಛಿತನಾದನು. ಬಾಹುವನ್ನು ಹಿಂಡಲು ಋಷಭ ಸತ್ತನು. ಗಂಧಮಾದನನ ಬೆಟ್ಟದಂತಹ ದೇಹವನ್ನು ಒದ್ದು ಕೆಡವಿದನು. ಗವಾಕ್ಷನನ್ನು ಗುದ್ದಿ ರಕ್ತದಲ್ಲಿ ಅದ್ದಿ ತೀಡಿದನು. ತಾರನನ್ನು ಪನಸನಿಗೆ ತಿಕ್ಕಿ, ಅವರಿಬ್ಬರ ಮುಖಗಳು ಮಣ್ಣು ಮುಕ್ಕುವಂತೆ ಬೀಸಿ ಒಗೆದನು! ಹೀಗೆ ಭಯಂಕರವಾಗಿ ಬೇಸಿಗೆಯು ಶುಷ್ಕಾರಣ್ಯವನ್ನು ದಹಿಸುವ ಕಾಡ್ಗಿಚ್ಚಿನಂತೆ ರಾಕ್ಷಸನ ಸಂಗ್ರಾಮವು ವ್ಯಾಪಿಸಿತು.

ಆಗ ಪ್ರಭಂಜನ ಸುತನಾದ ಹನುಮಂತನು ತಾನೂ ಭಯಂಕರಾಕೃತಿಗೆ ಉಬ್ಬಿದನು. ಬೆಟ್ಟದ ಕೋಡನ್ನು ಕಿತ್ತು ಎತ್ತಿಕೊಂಡನು. ನೀರಿನ ಭಾರಕ್ಕೆ ಜೋತು ಹಿರಿದಾದ ಕಪ್ಪು ಮೋಡವನ್ನು ಹೊತ್ತು ತರುವ ಮಳೆಗಾಲದ ಬಿರುಗಾಳಿಯಂತೆ ಅದನ್ನು ಹೊತ್ತು ತಂದನು. ಆಕಾಶದಿಂದ ಕುಂಭಕರ್ಣನ ತಲೆಗೆ ಬೀಸಿ ಒಗೆದನು! ಆಗ ಅದ್ಭುತ ದೈತ್ಯನ ಮಹಾಮಣಿಕಿರೀಟವು ಕೆದರಿ ರತ್ನ ವಜ್ರಗಳು ಉಲ್ಕೆಯಂತೆ ಕಿಡಿಕಾರುತ್ತ ಆಲಿಕಲ್ಲುಗಳಂತೆ ಉದುರಿದವು! ಬೆಟ್ಟದಕೋಡು ಅವನ ತಲೆಗೆ ತಾಗಿದುದೇ ತಡ ಸದ್ದೆದ್ದಿತು. ಬೆಸುಗೆ ಕಳಚಿದ ಬಂಡೆಗಳು ಸಿಡಿದು ಬಿದ್ದವು. ಕಲ್ಲು ಮರಗಳು ಮಳೆಯಂತೆ ಬೀಳಲು ಸೈನಿಕರು ಮಡಿದರು. ತೇರಿನ ಕುದುರೆಗಳು ಉರುಳಿದವು. ಆನೆಗಳು ಭೂಮಿಗೆ ತಲೆಯೂರಿ ಘೀಳಿಟ್ಟವು.

ರಾಕ್ಷಸನ ರಕ್ತದಮುಡಿ ಕೆದರಿತು. ಕೂದಲನ್ನು ದಿಕ್ಕುದಿಕ್ಕಿಗೆ ಕೊಡಹಿದನು. ಹೊಡೆತಕ್ಕೆ ತುಸುಹೊತ್ತು ಮೈ ಮರೆತಿದ್ದವನು ರಕ್ತದ ಧಾರೆಯನ್ನು ಲೆಕ್ಕಿಸದೆ ಕ್ಷಣಮಾತ್ರದಲ್ಲಿ ಎಚ್ಚೆತ್ತನು. ಮನುಷ್ಯನು ಊಹಿಸಲಾರದಷ್ಟು ಕೋಪಗೊಂಡ ಅವನು, ಇಂದ್ರನ ಹೃದಯರಕ್ತದಲ್ಲಿ ಮಿಂದೆದ್ದಿದ್ದ ಮುದ್ಗರದಿಂದ ಹನುಮನ ಎದೆಗೆ ಹೊಡೆದನು. ಅದನ್ನು ಕಂಡು ಕೈಲಾಸದಲ್ಲಿದ್ದ ಗಿರಿಜೆಯ ಕೈಬೆವರಲು ಶಿವನ ಕೈಯನ್ನು ಬಿಗಿಹಿಡಿದಳು! ಆ ಸಿಡಿಲ ಹೊಡೆತಕ್ಕೆ ಆಂಜನೇಯನು ಚೀರಿದನು. ತಲ್ಲಣಿಸಿ, ತತ್ತರಿಸಿ, ತಲೆತಿರುಗಿ ಮೂಗಿನಲ್ಲಿ ರಕ್ತಹೊಮ್ಮಿ ನೆಲಕ್ಕೆ ಉರುಳಿದನು. ರಾಕ್ಷಸರು 'ಉಘೇ' ಎಂದು ಜಯಕಾರ ಮಾಡಿದರು.

ವಜ್ರ ಶರೀರಿಯಾದ ಹನುಮನನ್ನು ಕೆಡವಿ, ಮುಂದಕ್ಕೆ ನುಗ್ಗಿ ಬರುತ್ತಿದ್ದ ವೈರಿ ವಜ್ರಗಿರಿಯನ್ನು ಊರ್ಮಿಳಾಪತಿ ಲಕ್ಷ್ಮಣನು ಎದುರಿಸಿದನು. ಅವನ ಬಾಣಗಳಿಂದ ವೈರಿಯ ಶರೀರವು ಮುಳ್ಳು ಹಂದಿಯಂತಾಯಿತು. ಅವನ ಬತ್ತಳಿಕೆ ಬರಿದಾಯಿತು. ಅವನ ಕೈಯಲ್ಲಿ ಧನುಸ್ಸು ಒಂದೇ ಉಳಿಯಿತು. ಅಷ್ಟರಲ್ಲಿ ಅವನ ಬಾಣವೇ ಕತ್ತರಿಸಿದ್ದ ಕುಂಭಕರ್ಣನ ಬಲಗೈ ತುಂಡಾಗಿ, ಆ ಕೈ ಹಿಡಿದಿದ್ದ ಮುದ್ಗರ ಮೈ ಮೇಲೆ ಬಿದ್ದಿತು. ಆ ಭಾರಕ್ಕೆ ಲಕ್ಷ್ಮಣನು ಬಳಲಿ ಮೂರ್ಛಿತನಾಗಿ ನೆಲಕ್ಕೆ ಒರಗಿದನು.

ಕುಂಭಕರ್ಣನ ಕತ್ತರಿಸಿದ ತೋಳಿನಿಂದ ರಕ್ತಪ್ರವಾಹದಂತೆ ಹರಿಯುತ್ತಿರಲು, ಗಾಯಗೊಂಡ ಹುಲಿಯಂತೆ ಅಬ್ಬರಿಸಿದನು. ಕೆಂಗಣ್ಣುಗಳಿಂದ ಮುಖ್ಯವೈರಿಯನ್ನು ಹುಡುಕಿದನು. ಹತ್ತಿರದಲ್ಲಿಯೇ ಸುಗ್ರೀವನ ಅಂಗರಕ್ಷೆಯಲ್ಲಿದ್ದ ಕೋಸಲೇಶ್ವರ ರಾಮಚಂದ್ರನನ್ನು ನೋಡಿದನು. ಎಡಗೈಯಿಂದ ಮಹಾತ್ರಿಶೂಲವನ್ನು ಎತ್ತಿಕೊಂಡು ರಾಮನು ಇದ್ದ ಕಡೆಗೆ, ಕೋವಿಗಾರನ ಮೇಲೆ ಎರಗುವ ಹೆಬ್ಬುಲಿಯಂತೆ ಗುಡುಗುಡಿಸಿ ನುಗ್ಗಿದನು.

ದಿಗ್ಗಜಸಮಾನನಾದ ಸೇನಾಪತಿ ಗಜನು ಅದನ್ನು ಕಂಡನು. ಈ ಭೂತವನ್ನು ಹೇಗಾದರೂ ಮಾಡಿ ದಾಶರಥಿಯಿಂದ ದೂರಕ್ಕೆ ಒಯ್ಯಬೇಕೆಂದು ಒಂದು ಉಪಾಯವನ್ನು ಯೋಚಿಸಿದನು.

ಅವನು ರಾಕ್ಷಸನ ಹಿಂದಿನಿಂದ ಹೋಗಿ ಬೆನ್ನಿಗೆ ಗುದ್ದಿದನು. ದಾನವನು ಸಿಟ್ಟಿನಿಂದ ಉರಿದು ತಿರುಗಿದನು. ಹತ್ತಿರದಲ್ಲಿ ನಿಂತು ನಗುತ್ತಿದ್ದ ಮಹಾಕುಳ್ಳನನ್ನು, ಹಾಸ್ಯನೇತ್ರದ, ವಿನೋದಮುಖದವನನ್ನು ನೋಡಿದನು. ಹಿಡಿಯಲೆಂದು ಎಡಗೈ ಚಾಚಿ, ಬರಿಗಾಳಿ ಬಾಚಿದನು. ಗಜನು ನೆಲಮಟ್ಟಕ್ಕೆ ಬಗ್ಗಿ, ಜಾರಿ, ಎಗರಿ, ಚಿಮ್ಮಿ, ಸರ್ರನೆ ಹಿಮ್ಮೆಟ್ಟಿದನು. ಗಿರ್ರನೆ ತಿರುಗಿ ಬಂದು ಮತ್ತೆ ಅವನ ಬೆನ್ನಿಗೆ ಗುದ್ದಿದನು. ವಿಷಾದಕ್ಕೊಳಗಾಗಿ ಖಿನ್ನ ಮನಸ್ಕರಾಗಿದ್ದ ವಾನರ ಸೇನೆಯಲ್ಲಿ ಆಶ್ಚರ್ಯಉಂಟಾಗಿ ಗೊಳ್ಳೆಂದು ನಗೆಯೆದ್ದಿತು!

ಇಂದ್ರನವೈರಿ ಕುಂಭಕರ್ಣನು ಮುನಿದು, ಅತಿಯಾಗಿ ಕೋಪಗೊಂಡು ಮತ್ತೆ ತಿರುಗಿದನು. ಅವನು ಅತ್ತ ತಿರುಗಿದರೆ ಗಜನು ಇತ್ತ ನೆಗೆದನು. ಅವನು ಇತ್ತ ತಿರುಗಿದರೆ ಗಜನು ಅತ್ತ ನೆಗೆದನು. ತಿರುಗಿದನು. ಸುತ್ತಿದನು; ಸುತ್ತಿದನು, ತಿರುಗಿದನು. ತಿರುತಿರುಗೆ ರಕ್ಕಸನ ತಲೆ ತಿರುಗತೊಡಗಿತು. ಕಣ್ಣು ಸುತ್ತಿ, ಕಾಲ್ತೊಡರಿ, ತತ್ತರಿಸುತ್ತ ಹೇಗೊ ನಿಂತನು. ಶೂಲವನ್ನು ತೆಗೆದುಕೊಳ್ಳಲು ಕೈ ಹಾಕಿದನು. ಅದನ್ನು ನೋಡಿ ಗಜನು, ಅಲ್ಲಿ ನಿಲ್ಲದೆ ನಗುತ್ತ ಓಡಿದನು. ರಾಕ್ಷಸನ ಎದೆಯುರಿದು 'ನೀನು ಕಪಿ. ಕಪಿಧ್ವಜನಲ್ಲ! ನಿನ್ನನ್ನು ಒಸಕಿ ಹಾಕದೆ ಬಿಡುತ್ತೇನೆಯೆ?' ಎಂದು ಮಹಾಶೂಲವನ್ನು ಹಿಡಿದು ಅವನ ಬೆನ್ನು ಹತ್ತಿದನು.

ನಗೆಗಡಲೊಳದ್ದಿದುವುಭಯ ಸೇನೆ.

ಪೀಡಿಸಿದ ತೋಳವನ್ನು ಕಾಡಾನೆಯು ಅಟ್ಟುವಂತೆ, ಗಜನನ್ನು ಅಟ್ಟುತ್ತಿದ್ದ ಕುಂಭಕರ್ಣನನ್ನು ಕಂಡು ಉಭಯ ಸೇನೆಯು ನಗೆಗಡಲಿನಲ್ಲಿ ಮುಳುಗಿದುವು. ರಾಕ್ಷಸರು ಅವನನ್ನು ನೋಡಿ 'ಕಪಿ ವೀರನನ್ನು ನೋಡಿರೊ! ಪಲಾಯನ ಪಟುಭಟನ ಚಟುಲ ವೇಗವನ್ನು ನೋಡಿ! ಧೀರನೇ ಸರಿ! ನೋಡಿ, ನಿಜವಾಗಿಯೂ ಇವನು ಸ್ವರ್ಗವನ್ನು ಕೊಳ್ಳೆ ಹೊಡೆಯಲು ಹೋಗುತ್ತಿರುವ ಧೈರ್ಯಶಾಲಿ! ವೀರರೇ, ಷಂಡನಾದ ಇವನಿಂದ

ಕಲಿತನದ ವಿದ್ಯೆ ಕಲಿಯಿರಿ!' ಎಂದು ತಮ್ಮ ತಮ್ಮಲ್ಲಿ ಹೇಳಿಕೊಳ್ಳುತ್ತ, ಅಳ್ಳೆಬಿರಿಯುವಂತೆ ನಗುತ್ತಿದ್ದರು.

ತಮ್ಮ ಹಾಸ್ಯಪ್ರಿಯನ ನೂತನ ಪ್ರಹಸನಪ್ರಸ್ತಾವನೆಯ ಚತುರ ಸೂತ್ರಧಾರಿತ್ವವನ್ನು ಕಂಡ ಕಪಿಧ್ವಜರು,

'ನೋಡಿರೊ, ರಾಕ್ಷಸನ ಮತಿಗೆ ಕಳ್ಳುಕುಡಿಸಿ ಓಟಕ್ಕೆ ಮೂಗುದಾರವನಿಕ್ಕಿದ್ದಾನೆ. ಸೇನೆಯ ಬೇಸರವನ್ನು ಹೋಗಲಾಡಿಸಲು, ಕುಣಿಕುಣಿಸಿ ಸೆಳೆದೊಯ್ಯುತ್ತಿದ್ದಾನೆ ನಮ್ಮ ಹಾಸ್ಯ ವಿದ್ಯಾಕುಶಲ ಸೇನಾನಿ! ಬನ್ನಿ ನೋಡೋಣ! ಇದಕ್ಕೆ ಕೊಡಬೇಕಾದ್ದು ನಿಮ್ಮ ಉಲ್ಲಾಸದ ಕಾಣಿಕೆ! ನೋಡೋಣ ಬನ್ನಿ, ಕುಂಭಕರ್ಣನ ಕರಡಿಯಾಟವನ್ನು!' ಎಂದು ಸೋಲನ್ನು ಮರೆತು ನಗತೊಡಗಿದರು.

ಕುಳ್ಳಗಜನು ಮುಟ್ಟಿ ತಟ್ಟಿದನು, ಆಗ ಅವನನ್ನು ಹಿಡಿಯಲೆಂದು ಕುಂಭಕರ್ಣನು ತನ್ನ ಎಡದ ತೋಳು ಸೊಂಡಿಲನ್ನು ಚಾಚಿದನು. ಗಜನು ಅದರ ಮೇಲೆ ಚಕ್ಕನೆ ನಿಂತು, ಪಕ್ಕಕ್ಕೆ ಚಿಮ್ಮಿ, ದಿಕ್ಕು ತಪ್ಪಿಸಿ ಬೇರೆ ದಿಕ್ಕಿಗೆ ಓಡಿದನು. ಸ್ಥೂಲಕಾಯನಾದ ರಾಕ್ಷಸನು ತನ್ನ ರಭಸಕ್ಕೆ ತಾನೆ ಮುಂದೋಡಿದನು! ಮನಸ್ಸು ಹಿಂದಕ್ಕೆ ಎಳೆಯಿತು. ದೇಹವೇಗವು ಆ ಕಡೆಗೆ ಕಾಲುಗಳನ್ನು ಎಳೆಯಿತು. ಚಿತ್ತವೇಗವು ಭಾರೀ ಶರೀರವನ್ನು ಈ ಕಡೆಗೆ ಎಳೆಯಿತು. ಹಾಗಾಗಿ ಅತ್ತಲಿತ್ತ ತೂಗಿ ತೊನೆದನು!

ಅದನ್ನು ನೋಡಿದ ಎರಡೂ ಕಡೆಯ ಸೈನಿಕರಲ್ಲಿ ನಗೆಯ ಹೊನಲು ಉಕ್ಕಿ ಹರಿಯಿತು. ಅವರು ಕುಸಿದು ಬೀಳುವಂತೆ ಗೊಳ್ಳನೆ ನಕ್ಕರು!

ಅವಮಾನಕ್ಕೊಳಗಾದ ಕುಂಭಕರ್ಣನು ಕನಲಿದನು. ಕಿಲಕಿಲನೆ ನಗುತ್ತ ಓಡುತ್ತಿದ್ದ ಕಪಿವೀರನನ್ನು ನೋಡಿ, ಕೋಪದ ಬೆಂಕಿ ಕಾಳ್ಗಿಚ್ಚಾಗಿ, ಅವನನ್ನು ಮತ್ತೆ ಬೆಂಬತ್ತಿದನು. ಗಜನು ಕೊಂಕಿ ಬಾಗುತ್ತ, ನಿಂತು ನೋಡುತ್ತ, ಬೆನ್ನಹಿಂದೆ ಬಳುಕಿಹೋಗಿ ಕಾಲುಗಳನಡುವೆ ಹೊಕ್ಕು ನುಣುಚಿಕೊಂಡನು! ರಾಕ್ಷಸನು ಹೋಗಲಾರದೆ ಇಕ್ಕಟ್ಟಿನಲ್ಲಿ ನುಗ್ಗಿ ಸಿಕ್ಕಿಕೊಳ್ಳುವಂತೆ ಮಾಡಿದನು! ಅವಿತುಕೊಂಡಿದ್ದು ಕಾಣಿಸುತ್ತ ಚಿಮ್ಮಿ ವಂಚಿಸುತ್ತ ತ್ರಿಕೂಟ ಲಂಕಾದುರ್ಗವನ್ನು ಮೂರು ಸುತ್ತು ಸುತ್ತಿಸಿದನು! ಮುಡಿಗೆದರಿ, ಮೈ ಬೆವರಿ, ಏದುಸಿರು ಬಿಡುತ್ತ, ಅಳ್ಳೆಗಳು ಅದುರಿ, ರಕ್ತ ಸೋರಿಡುತ್ತಿರಲು ಕುಂಭಕರ್ಣನು ವಿಡಂಭನಾ ಭೈರವನಂತಹ ಹಾಸ್ಯ ಸ್ಥಿತಿಗೆ ಒಳಗಾದನು!

ಅದನ್ನು ನೋಡಿದ ವಿಭೀಷಣನು ರಾಮಚಂದ್ರನಿಗೆ,

'ರಾಜೇಂದ್ರನೇ, ಇನ್ನು ತಡಮಾಡುವುದು ಸರಿಯಲ್ಲ. ಇನ್ನೂ ತಡೆದರೆ ವಿನೋದವೇ ವಿಷಾದವಾಗುತ್ತದೆ. ನನ್ನ ಈ ಅಣ್ಣನು ವರಬಲದಿಂದ ಕೂಡಿರುವ ಮಹಾಮಹಿಮನೆಂದು ಈ ಮೊದಲೇ ನಾನು ನಿನಗೆ ಹೇಳಿದ್ದೆನಲ್ಲವೆ? ಇವನು ಪೂಜ್ಯ. ಪರನಾರೀ ಸಹೋದರ.

ರುದ್ರನ ಭಕ್ತ! ತನ್ನ ಪಕ್ಷದ ಅಧರ್ಮ ದೌರ್ಬಲ್ಯ ಒಂದು ಇರದಿದ್ದರೆ ಇವನನ್ನು ಈ ಮೂರುಲೋಕಗಳಲ್ಲಿ ತಡೆಯುವವರು ಯಾರು? ಈಗಲೂ ಇವನನ್ನು ಗೆಲ್ಲುವುದು ಧರ್ಮಾಸ್ತ್ರವೇ ಹೊರತು ನಾವಲ್ಲ.

'ಮಹಾಕ್ರುದ್ಧನಾಗಿ, ಹುಬ್ಬುಗಂಟಿಕ್ಕಿಕೊಂಡು ಲಯಕಾಲದ ಕೋಪದಿಂದ ಯುದ್ಧ ಸಿದ್ಧನಾಗಿರುವವನನ್ನು ನೋಡು! ನಿನ್ನ ಬಿಲ್ಲಿಗೆ ಬಾಣವು ಏರದಿದ್ದರೆ, ನಿನ್ನ ಮಂತ್ರಾಸ್ತ್ರದಿಂದ ಬಿಲ್ಲಿನ ಹಗ್ಗವು ಝೇಂಕರಿಸದಿದ್ದರೆ, ವಾನರ ಸೈನ್ಯವು ಧ್ವಜಮಾತ್ರವಾಗಿ ಹೋಗುವುದು! ಇವನು ಶಿವ ಪಾರ್ವತಿಯರ ಸಹಿತ ಕೈಲಾಸವನ್ನು ನಡುಗಿಸಬಲ್ಲವನು. ಇವನು ಕೊನೆಯ ಯುದ್ಧಕ್ಕಾಗಿ ತನ್ನ ಸಕಲಶಕ್ತಿಯನ್ನು, ತನ್ನ ಪುರುಷಸಾಹಸವನ್ನು ಮಹಾಪಾತಾಳದಿಂದ ಕರೆಯುತ್ತಿರುವುದನ್ನು ನೋಡು!'

ಎಂದು ಹೇಳಿದನು. ಆಗ ಮಹಾಜ್ಞಾನಿ ರಾಮಚಂದ್ರನು ತನ್ನ ಅಭಿಮತವನ್ನು ಹೀಗೆ ವ್ಯಕ್ತಪಡಿಸಿದನು:

'ದೈತ್ಯಪೂಜ್ಯನೇ, ಕರ್ಮವು ಸವೆದು, ಸಮಯ ಬರಲು ಅವನೊಬ್ಬನಿಗೇ ಅಲ್ಲ, ಬಹುಜೀವರಿಗೆ ಆಗಬೇಕಾದ್ದು ತಪ್ಪದೆ ಆಗುತ್ತದೆ! ನನ್ನ ವಿಚಾರದಲ್ಲಿ ಅಂಜಿಕೆಯನ್ನು ಬಿಡು!'

ಎಂದು ಹೇಳುತ್ತ, ಜಟಧಾರಿಯಾದ ಉಗ್ರಮುಖದ ದಾಶರಥಿಯು ಬಿಲ್ಲನ್ನು ಹಿಡಿದು, ಬೆನ್ನಿನಲ್ಲಿ ಬತ್ತಳಿಕೆಯು ನಿಮಿರುತ್ತಿರಲು ಅಲುಗಾಡದೆ ನಿಂತನು!

ಜಗದ್ ಭೀಕರಂ ತಾನಾಗಿ ಮುನ್ನುಗ್ಗಿದನು

ಇತ್ತ ಇವರು ಈ ರೀತಿ ಸಂವಾದಿಸುತ್ತಿರಲು, ಅತ್ತ ಕುಂಭಕರ್ಣನ ಮೀಸೆ ಹೊಗೆಯಾಯಿತು. ಅವನ ಮುಖ ಅಗ್ನಿಯನ್ನುಗುಳುವ ಪಿಚಕಾರಿಯಾಯಿತು. ದೈತ್ಯನ ಅಂಗಾಂಗದಿಂದ ಜ್ವಾಲೆಯಲೆಗಳು ಹೊಮ್ಮಿ ವಿದ್ಯುತ್ತಿನ ಸರ್ಪಗಳಂತೆ ದಿಕ್ಕುದಿಕ್ಕಿಗೆ ಚಿಮ್ಮಿದವು. ವಾನರರನ್ನು ಉದ್ದವಾದ ನಾಲಗೆಗಳಿಂದ ನೆಕ್ಕಿದವು. ಸುತ್ತಿದವು. ಆ ಸೇನೆಯು ಧಗಧಗನೆ ಉರಿದು ಸೀದು ಕಪ್ಪುಮಸಿಯಾಗಿ ಸುಳಿಸುರುಳಿ ಏಳುವಂತೆ ಮಾಡಿದವು.

ಉರಿಯುನ್ನು ಕಾರುವ ಗಿರಿಯು ರೂಪಾನುಸಂಧಾನದಿಂದ ಅವನು ಜಗತ್‌ಭೀಕರನಾಗಿ ಮನ್ನುಗ್ಗಿದನು. ಸ್ವೇಚ್ಛೆಯಾಗಿ ಓಡಾಡಿದನು. ಪ್ರಳಯಕಾಲದ ಬೆಂಕಿಯು ಅಪ್ಪಳಿಸಲು, ಕುದಿಕುದಿದು ಹಿಮ್ಮೆಟ್ಟಿ ಬತ್ತುವ ಸಾಗರದಂತೆ ವಾನರ ಸೇನಾ ಸಮುದ್ರವು ಹಿಮ್ಮೆಟ್ಟಿತು. 'ರಾಮನನ್ನು ಕಟ್ಟಿಕೊಂಡು ಕೆಟ್ಟೆವೋ' ಎಂದು ಅತ್ತರು, ಅರಚಿದರು, ಹೆದರಿದರು. ಮನಸ್ಸುಕೆಟ್ಟು ಗೋಳಿಡುತ್ತ ಅತ್ತ ಇತ್ತ ಓಡತೊಡಗಿದರು.

ತನ್ನವರ ಗತಿಯನ್ನು ನೋಡಿ ತಡೆಯಲಾರದೆ, ಸೂರ್ಯನ ರಕ್ಷಣೆಯನ್ನು ಬೇಡಿ ರಾಕ್ಷಸನ ಎದುರಾಗಿ ರವಿಪುತ್ರ ಸುಗ್ರೀವ ನಡೆದನು. ಕಪೀಂದ್ರನು ಮಹಾರಾಕ್ಷಸನ ಅಗ್ನಿಯಲ್ಲಿ ಮುಳುಗಿ ಹೋದನೆ? ಕುಲದ ಕೀರ್ತಿಗೆ ವಿಘ್ನ ಉಂಟಾಯಿತೆ? ಪ್ರತಿಜ್ಞೆಗೆ ಭಂಗವಾಯಿತೆ? ಎಂದು ನಳ ಯೋಚಿಸಿದನು. ಅವನು ತನ್ನ ತಂದೆಯ ಶಿಲ್ಪ ಬಲದಿಂದ ಕಡಲುಗಳನ್ನೇ ಮೊಗೆಮೊಗೆದು ತೊರೆಯಂತೆ ಹರಿಸುವ ಮಾನಸಿಕ ಜಲಯಂತ್ರ ಮೇಘಗಳನ್ನು ಸೃಷ್ಟಿಸಿದನು. ಅದು ಕುಂಭಕರ್ಣನಿಗೆ ಮೃತ್ಯುಹಸ್ತದಿಂದ ಕುಂಭಾಭಿಷೇಕವಾಯಿತೊ ಎನ್ನುವಂತಿತ್ತು. ಆ ಪಿಶಾಚ ಬೆಂಕಿಯು ಮೆಲ್ಲಮೆಲ್ಲನೆ ನಂದತೊಡಗಿತು.

ದಶಗ್ರೀವ ಸಹೋದರನ ಮಹಾಭಯಂಕರ ತೋಳೆಂಬ ರಾಹುವಿನಲ್ಲಿ ಹಿಡಿಯಲ್ಪಟ್ಟಿದ್ದ ಮೂರ್ಛಿತನಾದ ಸುಗ್ರೀವ ಸೂರ್ಯನನ್ನು ಕಂಡು ಎಲ್ಲರೂ ಭಯ ಬಡಿದಂತಾದರು. ಆ ರಾಕ್ಷಸನು ತಲೆಸಿಕ್ಕಿದೆ, ಇನ್ನು ಮೈಯ್ಯಿ ಏನಾದರೇನು ಎಂದುಕೊಂಡನು. ಯಮನೇ ಕಪಿಕುಲನ ಪ್ರಾಣವನ್ನು ಹೊತ್ತುಕೊಂಡು ಹೋಗುವಂತೆ, ರುಮೆಯ ಹಣೆಯ ಕುಂಕುಮದ ಪೂರ್ಣಚಂದ್ರನನ್ನು ಹೊತ್ತು ನಡೆದನು!

'ದೊರೆ ರಾಕ್ಷಸನ ಕೈಗೆ ಸಿಕ್ಕಿಕೊಂಡಿದ್ದಾನೆ. ರಾಮ, ನಿನ್ನ ಹೃದಯಮಿತ್ರನನ್ನು ಕಾಪಾಡು.' ಎಂದು ಕಪಿಸೇನೆಯು ಒಕ್ಕೊರಲಿನಿಂದ ಅರಚತೊಡಗಿತು. ಆಗ ಕರಡಿಯಧ್ವಜದ ವೃದ್ಧ ಜಾಂಬವಂತನು ಇನ್ನೊಮ್ಮೆ ತ್ರಿವಿಕ್ರಮ ಪ್ರದಕ್ಷಿಣೆಗೆ ಮುಂದುವರಿಯುವಂತೆ ನುಗ್ಗಿಬಂದನು. ಇಂದ್ರನ ವೈರಿಯನ್ನು ಎದುರಿಸಿದನು. ಕುಂಭಕರ್ಣನು ಸಿಡಿಲಿಗೆ ಸಮಾನವಾದ ತನ್ನ ಎಡಗೈಯ ತ್ರಿಶೂಲದಿಂದ ಜಾಂಬವನಿಗೆ ಹೊಡೆದನು. ಆಗಿನ ಅದ್ಭುತವನ್ನು ಏನೆಂದು ಹೇಳುವುದು! ಅದನ್ನು ಹಿಡಿದ ಮುದುಕ ತನ್ನ ಮೊಣಕಾಲಿಗೆ ಒತ್ತಿ ಮುರಿದು ಎಸೆದನು!

ಅಷ್ಟರಲ್ಲಿ ವಾಲಿಯಪುತ್ರನು ಪ್ರಜ್ಞೆಮರಳಿಬರಲು, ಅಪಾಯವೇನೆಂದು ತಿಳಿದನು. ಒಂದು ಉಪಾಯವನ್ನು ನೆನೆದನು. ಅವನು ರಾಕ್ಷಸನ ಉಸಿರುಕಟ್ಟುವಂತೆ ಬಾಯಿಮುಚ್ಚಿ, ಕಿವಿಗಳನ್ನು ಕಚ್ಚಿದನು. ಪಕ್ಕೆ ಬಿರಿಯುವಂತೆ ಚಕ್ಕಳಗುಳಿಯಿಟ್ಟನು. ಆಗ ಕುಂಭಕರ್ಣನು ನಕ್ಕನೋ? ಕೂಗಿದನೊ? ಆನೆಯು ಮೈಕೊಡವಿದಂತೆ ಕಪಿರಾಜನನ್ನು ಕೊಡವಿ, ತುಳಿಯಲೆಂದು ಕುಣಿಕುಣಿದನು.

ಬೆನ್ನಿಗೇರಿದ ಚಿರತೆಯ ಉಗುರಿನಂತೆ ಹಿಡಿದು, ಪಟ್ಟು ಬಿಡದೆ, ಉರುಳದೆ ಕುಳಿತಿದ್ದ ಅವನನ್ನು ಕುಂಭಕರ್ಣನು ತನ್ನ ಆನೆಯ ಸೊಂಡಲಿನಂತಹ ಹಸ್ತದಿಂದ ಕಿತ್ತು, ಎತ್ತಿ ನೆಲಕ್ಕೆ ಕುಕ್ಕಿದನು. ಆಗ ಸುಗ್ರೀವನ ಶರೀರದ ಅಸ್ಥಿಪಂಜರದಲ್ಲಿರುವ ಪ್ರಾಣಪಕ್ಷಿ ಹಾರದೆ ಇರುತ್ತಿತ್ತೆ? ಆದರೆ, ಚೆಂಡು ಎಸೆದಂತೆ ಪುಟನೆಗೆದು ಅವನು ಬದುಕಿಕೊಂಡನು!

ಸಂಗ್ರಾಮ ಧರೆಗೆ ನಡೆದನು ರಾಮನತಿಭೀತಿ ಸಂಚರಿಸಿ ಕಂಪಿಸೆ ಕನಕಲಂಕೆ!

ಭವಾನಿಯು ಪುತ್ರ ವಿನಾಯಕನನ್ನು ಕರೆದು ಹೇಳಿದಳು: 'ನಡೆ, ವಿನಾಯಕ, ರಘೂತ್ತಮನ ಮನ ಕಮಲದಲ್ಲಿ ಶಿವನ ಮಹದಿಚ್ಛೆಯ ಸಂವೇದನೆಯನ್ನು ಅರಳಿಸು.'

ಅತೀಂದ್ರಿಯವಾದ ವಿಧಾನಕ್ಕೆ ವಿಲಂಬವಾಗುವುದೆ? ವಸಿಷ್ಠರಿಂದ ದಿವ್ಯಜ್ಞಾನ ಪಡೆದ ರಾಮಚಂದ್ರನು ಅಪರೋಕ್ಷವಾಗಿ ಸುಮುಹೂರ್ತವನ್ನು ತಿಳಿದನು. ತಕ್ಷಣ ಅವನ ಕಣ್ಣುಗಳು ಕೆಂಪಾದವು. ಪರಮೇಶ್ವರನೇ ಪಿನಾಕವನ್ನು ಹಿಡಿದನೋ ಎನ್ನುವಂತೆ ಉಗ್ರಕೋದಂಡಧರನಾದನು. ಕುಂಭಕರ್ಣನಿಗಿಂತ ಎರಡರಷ್ಟು ಜಗದ್ ಭೀಕರ ಭಾವೋಗ್ರನಾದನು. ಸುಗ್ರೀವ ಜಾಂಬವರು ಅಸುರರೊಡನೆ ಹೋರಾಡುತ್ತಿದ್ದ ಸಂಗ್ರಾಮ ಭೂಮಿಗೆ ನಡೆದನು. ಅತಿಭೀತಿ ಸಂಚರಿಸಲು ಕನಕಲಂಕೆ ಕಂಪಿಸಿತು! ಅದನ್ನು ಉಪಮಾಲಂಕಾರದಲ್ಲಿ ವರ್ಣಿಸಲಾಗದ ದರಿದ್ರತೆಗೆ ಕವಿಗಳು ಕಪಾಲ ಹಿಡಿದು, ಸರಸ್ವತಿಯೇ ಶಿವವೃತ್ತಿಯನ್ನು ಕೈಕೊಂಡು ಭಿಕ್ಷಾಟನೆಗೆ ಹೊರಟರು ಎನ್ನುವಂತಾಯಿತು.

ಆ ದೈತ್ಯರಾಕ್ಷಸನು ತನ್ನನ್ನು ಹಿಂಸಿಸಲು ಹತ್ತಿರ ಬರುತ್ತಿರುವ ಕೋದಂಡಪಾಣಿಯನ್ನು ಕಂಡನು. ಕಂಡದ್ದೇ ತಡ ಹಿಗ್ಗಿ ಕೇಕೆಹಾಕಿದನು. ಆ ಅಟ್ಟಹಾಸಕ್ಕೆ ತ್ರಿಕೂಟಗಿರಿ ಕಂದರ ಗುಹೆಗಳಿಂದ ಪ್ರತಿಧ್ವನಿಯು ಹೊಮ್ಮಿದವು. ಸುಗ್ರೀವ ಜಾಂಬವರ ಪ್ರತಿಭಟನೆಯನ್ನು ಕೀಳಾಗಿ ಕಡೆಗಣಿಸಿ ಮೊಣಕಾಲಿನಿಂದ ಪಕ್ಕಕ್ಕೆಒತ್ತಿ ಸರಿಸಿ ಬೀಸಿಎಸೆದನು. ಸೀತಾ ಪ್ರಾಣಮೂರ್ತಿಯ ಸಮೀಪಕ್ಕೆ ನಡೆದು ಹೇಳಿದನು:

'ಕೊನೆಗೆ ನೀನು ಸಿಕ್ಕಿದೆಯಲ್ಲಾ, ಇದು ನಿಜವಾಗಿಯೂ ನನ್ನ ಪುಣ್ಯ! ಸುಮ್ಮನೆ ನಾವು ಹುಡುಕಿದರೆ ನೀನು ಸಿಗುತ್ತೀಯಾ? ನಿನ್ನ ಅಡಗುತಾಣದಿಂದ ನೀನು ಹೊರಬರುವಂತೆ ಕೆರಳಿಸದಿದ್ದರೆ ನಮಗೆ ಕಾಣಿಸುವೆಯಾ? ಇತರರೊಂದಿಗೆ ಹೋರಾಡಲು ಆಯುಧಗಳು ಬೇಕು. ನಿನ್ನಂತಹವರನ್ನು ಎದುರಿಸಲು ವೀರರಾದ ನಮಗೆ ಆಯುಧಗಳೇಕೆ?'

ಗುಂಡಿನಿಂದ ಗಾಯಗೊಂಡು ಅಪಾರನೋವಿಗೆ ಒಳಗಾದ ಪಶ್ಚಿಮಘಟ್ಟದ ಪಟ್ಟೆಹುಲಿಯು, ಕೋವಿಯಾಳು ಬೇಟೆಗಾರನನ್ನು ಸೀಳಲು ಅಬ್ಬರಿಸಿ ಕುಪ್ಪಳಿಸುತ್ತದೆ. ಹಾಗೆ ತನ್ನನ್ನುತಾನು ಮರೆತಂತೆ ಉನ್ಮತ್ತರೋಷದಿಂದ ರಾಕ್ಷಸಾದ್ಭುತನು ಧಾವಿಸಿದನು. ಅವನು ಅಪ್ಪಳಿಸಿ ನೆಗೆಯಲು ನೆಲ ಜಗ್ಗಿತು. ಆಕಾಶ ಗುಡುಗಿತು. ದೇವತೆಗಳು ಬೆದರಿ, ರಾಮನ ಕ್ಷೇಮದ ವಿಚಾರದಲ್ಲಿ ಶಂಕೆಗೊಂಡರು. ರಾಮನ ರಕ್ಷಣೆಗಾಗಿ ಅವನ ಅಂಗಾಂಗಗಳಲ್ಲಿ ಅವತರಿಸಿ ನೆಲಸಿದರು.

ಅಯೋಧ್ಯೆಯು ಲಂಕೆಯಮಾರಿಗೆ ಬಲಿಯಾಯಿತೆ ಎನ್ನುತ್ತ ಕಿಷ್ಕಿಂಧೆಯ ದಳದಳದವರು ರಾಕ್ಷಸನ ಎದುರು ಬಂದರು. 'ಪಿಶಾಚೇಂದ್ರ ತಡೆ, ತಡೆ. ತಿರುಗು, ಈ

ಕಡೆ ತಿರುಗು. ನಾವಿರಲು, ನಮ್ಮನ್ನು ಗೆಲ್ಲದೆ, ನೀನು ಸ್ವಾಮಿ ಸನ್ನಿಧಿಯನ್ನು ಹೇಗೆ ಸೇರುವೆ?' ಎಂದು ಹೇಳಿದರು. ಇಂದ್ರಿಯಗಳು ಮೋಕ್ಷಾಪೇಕ್ಷೆಯವನನ್ನು ಮುತ್ತುವಂತೆ ಕುಂಭಕರ್ಣನಮೇಲೆ ರಣಲಗ್ಗೆಹಾಕಿ ಮುನ್ನುಗ್ಗಿದರು.

ರಾಕ್ಷಸನು ತನ್ನಮೇಲೇರಿ ಬರುತ್ತಿದ್ದ ರಾಮನ ಬಾಣಗಳನ್ನು ಹಿಗ್ಗಿನಿಂದ, ಹಗೆತನದಿಂದ ವೈರಭಾವ ಸಾಧಕನಂತೆ ಮುರಿದಿಕ್ಕಿದನು. 'ನಿನ್ನ ಹೃದ್ರಕ್ತ ರಸದೊಳಗೆ ಅದ್ದಿದ್ದಲ್ಲದೆ ನನ್ನ ಈ ಮುದ್ಗರದ ಬಾಯಾರಿಕೆ ತಣಿಯುವುದಿಲ್ಲ.' ಎಂದು ಹೇಳುತ್ತ ಎರಗಿದನು. ಜನಕರಾಜನ ಮಗಳ ಮಾಂಗಲ್ಯ ಸಂಸ್ಪರ್ಶದಿಂದ ರೋಮಾಂಚನಗೊಂಡಿದ್ದ ರಾಮನ ಎದೆಯೆಂಬ ವೈಕುಂಠವನ್ನು ಅವನ ಉಗುರು ಸೋಂಕಿತು.

ಅಂದು ಬಿಲ್ಲಿನತುದಿಯಿಂದ ದುಂದುಭಿಯ ಕಳೇಬರವನ್ನು ಚಿಮ್ಮಿದವನು ತಮ್ಮನು ಎಂಬುವವನಿಗೆ ಶಕ್ತಿ ದೈವಿಕವಲ್ಲವೆ? ರಾಮನು ನಾಚಿಕೆಯಿಂದ ಒಂದೆರಡುಹೆಜ್ಜೆ ಹಿಂಜರಿದನು. ತನ್ನ ಆತ್ಮಗೌರವವು ಕೈಲಾಸ ಭಾರವಾಯಿತು ಎನ್ನುವಂತೆ ಅಚಲವಾಗಿ ನಿಂತನು. ಅಲ್ಲದೆ ಕೋದಂಡದ ತುದಿಯಿಂದ ರಾಕ್ಷಸನದೇಹವನ್ನು ನೂಕಿ ಚಿಮ್ಮಿದನು.

ತಪಶ್ಚೇತನವು ಜಡಬುದ್ಧಿಯ ಅಳತೆಗೆ ಸಿಗುತ್ತದೆಯೆ? ರಾಕ್ಷಸನ ಆ ಬೃಹತ್‌ದೇಹವು ಸಿಡಿದು ಒಂದು ಬಿಲ್ಲಿನಷ್ಟು ಅಳತೆಯದೂರದಲ್ಲಿ ಬಿದ್ದಿತು! ರಾಕ್ಷಸ ಮತ್ತು ವಾನರರ ಸೇನೆಗಳೆರಡೂ ಆಶ್ಚರ್ಯಚಕಿತರಾಗಿ ನೋಡುತ್ತಿರಲು, ದಾನವ ಜಟ್ಟಿಯು ಮೇಲೆದ್ದನು. ಮೈ ಕೊಡಹುತ್ತ ಘೋರವಾಗಿ ಕೂಗುತ್ತ ಮೇಲೇರಿ ಬಂದನು.

ಆಗ ರಾಮಚಂದ್ರನು ಇಂದ್ರಾಸ್ತ್ರವನ್ನು ಹೂಡಿದನು. ಅದನ್ನು ತಡೆಯಲು ಕುಂಭಕರ್ಣನು ಎಡಗೈಯನ್ನು ಚಾಚಲು, ಅದು ಕಡಿದು ತುಂಡಾಯಿತು. ಆ ಯಾತನೆಗೆ ಭೀಕರವಾಗಿ ಹೋಯೆಂದು ಅರಚುತ್ತಾ ರಾಮನ ಮೇಲೆ ಕಾಲಯಮನಂತೆ ಏರಿಬಂದನು. ಲಯಭೈರವನ ಅಬ್ಬರದಿಂದ ಬರುವ, ರಕ್ತದಿಂದ ನೆನೆದುಹೋದ ರಣರೌದ್ರನನ್ನು ರಾಘವನು ಕಂಡನು. ಸರ್ವಮಂಗಳೆಯಾದ ಭವಾನಿಯನ್ನು ನೆನೆದು, ಬತ್ತಳಿಕೆಯಿಂದ ಶಕ್ತ್ಯಸ್ತ್ರವನ್ನು ಸೆಳೆದನು.

ಬಂದು ತಾಗಿತು ತಲೆಗೆ ಶಿವಸಹಿತಶಕ್ತ್ಯಾಯುಧಂ.

ಶಿವನು ಕಾತರನಾಗಿ, 'ಗಿರಿಜೆಯೆ, ಕೇಳು. ಬ್ರಹ್ಮವರದಿಂದ ಬಲಿಷ್ಠನಾದ ಕುಂಭಕರ್ಣನು ನನ್ನ ಭಕ್ತ. ಅವನು ಶಕ್ತಿಗೆ ಸಾಯುವನೆ? ನಿನಗೆ ಆಗುವ ಸೋಲನ್ನು ನಾನು ಸಹಿಸುವುದಿಲ್ಲ. ಈ ತ್ರಿಶೂಲವನ್ನು ಕಳುಹಿಸುತ್ತೇನೆ. ಅದು ನಿನ್ನ ಶಕ್ತ್ಯಾಯುಧಕ್ಕೆ ನೆರವಾಗುತ್ತದೆ. ದೈತ್ಯಭಕ್ತನ ಶಿರವನ್ನು ಕತ್ತರಿಸಿ ನಮ್ಮೆಡೆಗೆ ತರುತ್ತದೆ.'

ಎಂದು ಹೇಳಿ ಶಿವನು ಬೆಳ್ಳಿಯಬೆಟ್ಟದಿಂದ ರುದ್ರತ್ರಿಶೂಲವನ್ನು ಬೀಸಿದನು. ಅದು ಮರ್ತ್ಯ ಪೃಥ್ವಿತತ್ವದ ಆಕಾಶವನ್ನು ಸೇರಿತು. ಭೂಮಿ ಕಂಪಿಸಿತು. ವಾಯು

ಮಂಡಲವು ಭಯಪುಲಕಿತವಾದಂತೆ ನಡುಗಿತು. ವಾನರರು ರಾಕ್ಷಸರು ಅಚ್ಚರಿಯ ಕಣ್ಣುಗಳಿಂದ ನೋಡುತ್ತಿರಲು, ತ್ರಿಣೇತ್ರನ ಆಯುಧವು ಹಗಲಿನ ನಕ್ಷತ್ರದಂತೆ ಗೋಚರಿಸಿತು. ಅದು ಉಲ್ಕೆಯಂತೆ ಉರಿದು ಬೀಳುತ್ತ ಬಂದಿತು, ರವಿವಂಶತಿಲಕನು ಕುಂಭಕರ್ಣನ ಶಿರಕ್ಕೆ ಗುರಿಯಿಟ್ಟ ಶಕ್ತಿಮಂತ್ರ ಬಾಣದ ಪ್ರಾಣಚೇತನಕ್ಕೆ ಕೂಡಿಕೊಂಡಿತು !

ಸುಸಜ್ಜಿತವಾದ ಆಯುಧಾಗಾರವೆನ್ನುವಂತೆ ವಜ್ರದಕಿರೀಟದಿಂದಲೂ, ಉಕ್ಕಿನಕವಚದಿಂದಲೂ ಸುರಕ್ಷಿತನಾಗಿದ್ದ ಕುಂಭಕರ್ಣನು ಸಿಡಿಲಿನಂತೆ ನುಗ್ಗಿಬಂದನು. ರಕ್ತವು ತೊರೆಯಂತೆ ಹರಿಯುತ್ತಿದ್ದ ತೋಳುಗಳೆರಡನ್ನು ಮುಂದೆ ಚಾಚಿ, ರಾಮನನ್ನು ಬಡಿಯಲು ಧಾವಿಸಿದನು. ಆ ರಾಕ್ಷಸ ಪರಾಕ್ರಮಿಯ ಮೈಯಲ್ಲಿ ಅವಿತಿದ್ದ ಭೈರವನು ತನ್ನ ಸ್ವಾಮಿಯ ತ್ರಿಶೂಲ ಬರುತ್ತಿರುವುದನ್ನು ನೋಡಿದನು. ಸಂಕೇತವನ್ನು ಗ್ರಹಿಸಿದನು. ಅಲ್ಲಿಂದ ಹೊರಕ್ಕೆ ನೆಗೆದು ಕೈಲಾಸದತ್ತ ಹೋದನು.

ಶಿವಶಕ್ತಿ ಸಹಿತವಾದ ಶಕ್ತ್ಯಾಯುಧವು ಬಂದು ಕುಂಭಕರ್ಣನ ತಲೆಗೆ ತಾಗಿತು. ದಶಗ್ರೀವ ಸೋದರನ ರುಂಡವು ಭೂಮಿಗೆ ಉರುಳಿಬೀಳುವ ಆ ಭಯಂಕರ ದೃಶ್ಯವನ್ನು ಎಲ್ಲರೂ ಕಂಡರು! ಆದರೆ, ಕುಂಭಕರ್ಣನಿಗಾದರೊಬೇರೊಂದು ಬಗೆಯ ಲೋಕಾತೀತವಾದ ಅನುಭವವಾಯಿತು.

ಭೂಮಿಯು ಆಕಾಶಕ್ಕೆ ನುಗ್ಗಿತು. ರವಿಯ ಬಿಂಬವು ತತ್ತರಿಸುತ್ತ ಚಂದ್ರನ ಬಿಂಬಕ್ಕೆ ತಾಕಿತು. ಪ್ರಪಂಚವನ್ನೆಲ್ಲ ವರ್ಣಮಯವಾದ ವಿಚಿತ್ರವಾದ ಒಂದು ಜ್ಯೋತಿಯು ತುಂಬಿತು. ನಾದಮಯವಾದ ವಾಯುಮಂಡಲವು ನಕ್ಷತ್ರಗಳ ಮಳೆಯಿಂದ ತುಂಬಿತು. ಹೊಗೆ ಬೆಂಕಿಗಳು, ನೀಲಿ ಕೆಂಪುಗಳು ಹಬ್ಬಿದವು. ರವಿಬಿಂಬ ಬಡಿದ ರಭಸಕ್ಕೆ ಚಂದ್ರ ಬಿಂಬದ ಕೋಡು ಮುರಿಯಿತು. ಅದು ತಿವಿಯಲು ಭೂಮಿಯು ಸೀಳಿ ಪುಡಿ ಪುಡಿಯಾಯಿತು. ಇಂದ್ರಿಯಗಳಿಗೆ ಕರ್ಮಪಲ್ಲಟವಾಗಿ ಕಣ್ಣು ಕೇಳಿತು. ಕಿವಿ ಕಂಡಿತು. ಅಹಂಕೃತಿಯ ನಾಶದಿಂದ ಪಂಚೇಂದ್ರಿಯ ಪ್ರಪಂಚವು ಸಾವನ್ನು ಹೊಂದಿತು. ಅವನ ಆತ್ಮಪ್ರಜ್ಞೆಯು ಅತೀಂದ್ರಿಯವಾದ ಒಂದು ದರ್ಶನದ ಆನಂದದಲ್ಲಿ, ನಿರ್ವಿಕಲ್ಪ ಸಮಾಧಿಯೋಗದಲ್ಲಿ ಮುಳುಗಿತು.

ಇದೊ, ಈ ಕಡೆ ನೋಡು: ಮೈಥಿಲಿಪ್ರಿಯನಿಗೆ ಅದೆಂತಹ ಆವೇಶವೊ? ಅವನು ದೇಹವನ್ನು ಸ್ವಲ್ಪವೂ ಅಲುಗಾಡಿಸದೆ, ಕಣ್ಣುಮಿಟುಕಿಸದೆ, ಸಮಾಧಿಸ್ಥನಾದಂತೆ ಅಂತರ್ಮುಖಿಯಾಗಿ ನಿಂತನು. ಅಲೌಕಿಕವಾದ ಅಸಾಮಾನ್ಯವನ್ನು ಪೂರ್ಣವಾಗಿ ಅಂತರಂಗದ ಅನುಭವವಾಗಿಸಿಕೊಳ್ಳುವವನಂತೆ ನಿಂತನು. ವ್ಯಕ್ತಿಯ ಸತ್ತ್ವ ಸರ್ವಸ್ವವನ್ನು ವಿರಾಟ್‌ಪೂರ್ಣ ತತ್ವವು ಹಿಂಡಿಹೀರಿತೊ ಎನ್ನುವಂತೆ ಶೂನ್ಯಮನದವನಾದನು. ಅವನು ತನ್ನ ರಕ್ತಮಯ ನೀಲಿ ಮಂಗಳಶರೀರವನ್ನು ಬಿಲ್ಲಿನ ಮೇಲೆ ಒರಗಿಸಿ ಕುಸಿದನು.

ಸಂಜೆಯು ಕೆಂಬಣ್ಣದ ನೀರಿನೊಂದೊಡಗೂಡಿದ ಕತ್ತಲಸೆರಗನ್ನು ಭೂಮಿಗೆ ಹೊದಿಸಿತು. ಎರಡೂ ಕಡೆಯ ತೂರ್ಯವಾದ್ಯಗಳು ರಾತ್ರಿಯ ಕದನವಿರಾಮವನ್ನು ಘೋಷಿಸಿದವು. ಆ ಕ್ಷಣದ ಕ್ಷಣಿಕಶಾಂತಿಯು ಯುದ್ಧದಲ್ಲಿ ಕಂದಿಕುಂದಿದವರಂತೆ ವಿಶ್ರಮಿಸಿತು.

❑



~~~~~~~~~~~~~~~~~~~~~~~ ಸಂಚಿಕೆ – ೩ ~~~~~~~~~~~~~~~~~~~~~~~

ದೂರಮಿರದಿನ್ ಸುಗತಿ!

'ತ್ರಿಜಟೆ, ಅದೇನು ಕಾಣುವ ಹೊಗೆ? ಮುಗಿಲವರೆಗೂ ಗೋಡೆಯಂತೆ ಮೇಲೇಳುತ್ತಿದೆ! ಕದನ ಕೋಲಾಹಲ ಕೇಳಿಸುತ್ತಿಲ್ಲ. ರೋದನಾತ್ಮಕವಾದ ತುಮುಲನಾದ ಕೇಳಿಸುತ್ತಿದೆ. ರಣಭೇರಿಗಳು ನಿಂತು ಸ್ಮಶಾನದ ವಾದ್ಯಗಳು ಗೋಳುಗರೆಯುತ್ತಿವೆ! ನೀನು ನಿನ್ನೆ ನಿನ್ನೊಡೆಯ ದಾನವೇಂದ್ರನ ತಮ್ಮ ಕುಂಭಕರ್ಣನು ರಣಾಂಗಣಕ್ಕೆ ಹೋದದ್ದನ್ನು ಹೇಳಿದೆ. ಅನಲೆಯು ಪ್ರತಿದಿನ ಮುಂಜಾವ ಸೊಬಗುಗೊಳ್ಳುವ ಮೊದಲೇ ಬಂದು ರಣವಾರ್ತೆ ತರುತ್ತಿದ್ದಳು. ಇಂದು ಏಕೊ ತಡವಾಗಿದ್ದಾಳೆ. ಶಂಕೆ ಸುಡುತ್ತಿದೆ. ಯಾರಿಗೆ ಏನು ಅಮಂಗಳವೊ?
~~~~~~~~~~~~~~~~~~~~~~~

'ರಾಕ್ಷಸ ಸಖಿಯೇ, ಏಕೆ ಸುಮ್ಮನಿರುವೆ? ನಿನ್ನ ಮುಖದಲ್ಲಿ ಆತಂಕ ಕಾಣುತ್ತಿದೆ. ಅಕ್ಕ, ಏಕೆ ಕಣ್ಣೀರು ಸುರಿಸುತ್ತಿರುವೆ? ತಾಯಿಯೇ, ನಿನ್ನ ಮಗಳ ಎದೆ ಸುಕ್ಕಿಸೀಯುವ ಮೊದಲೆ ದುಃಖವೇಕೆಂದು ಹೇಳು. ನನ್ನ ಮೈದುನನು ಕ್ಷೇಮವಾಗಿರುವನೆ? ದೀರ್ಘಾಯುಗಳಾದ ವನಚರ ಮಹಾತ್ಮರುಗಳಿಗೆ ಹಾನಿಯಾಗಿಲ್ಲವಷ್ಟೆ?'

ಭೂಮಿಸುತೆಯು ಸಮುದ್ರದ ದೂರತೀರದಿಂದ ಏಳುತ್ತಿದ್ದ ದುಶ್ಶಕುನದ ಹೊಗೆಯನ್ನು ಬೆದರುಗಣ್ಣಿನಿಂದ ನೋಡಿದಳು. ಹೊಗೆ ತುಂಬಿದ ಆಕಾಶದಿಂದ ಆಗಲೇ ಮೂಡಿಬಂದ ಸೂರ್ಯಬಿಂಬವು ಮಸುಕು ಮಸುಕಾಗಿ ಕಾಣುತ್ತಿತ್ತು. ಅಶೋಕವನ ಮಧುಧಾಮವನ್ನು ಹೊಗೆಯ ಮಬ್ಬಿನ ಉಬ್ಬು ಕವಿದಿತ್ತು. ಸುಟ್ಟ ವಾಸನೆಯ ಗಾಳಿಯು ಮೂಗು ಮುರಿಯುವಂತೆ ಬೀಸಿತು. ಹೆಣಗಳ ಹೊಗೆಗೆ ಹೇಸಿದಂತೆ ಭ್ರಮರಗಳು, ಪಕ್ಷಿಗಳು ಮೂಕವಾದವು. ತ್ರಿಜಟೆಯು ಕಣ್ಣೀರು ಸುರಿಸುತ್ತ ನಿಟ್ಟುಸಿರಿನೊಡನೆ ತನಗಾದ ತೀವ್ರಆಯಾಸವನ್ನು ಸೀತೆಗೆ ಹೀಗೆ ಹೇಳಿದಳು:

ಏನ್ ತಾಯಿ, ನಿನ್ನೊರ್ವಳಿಂದೆ ಏನೇನಪ್ಪುದಿರ್ಕುಮೋ ಆರಾರ್ಗೆ?

'ದೇವಿ, ಏನನ್ನು ಹೇಳಲಿ? ಲಂಕೆಯನ್ನು ಮಹಾಶೋಕ ಆವರಿಸಿದೆ. ದೊರೆಯ ತಮ್ಮ ಕುಂಭಕರ್ಣನು ನಿನ್ನೆ ಯುದ್ಧದಲ್ಲಿ ವಾನರರ ಪಡೆಗಳನ್ನು ಸದೆಬಡಿದು, ಹೋರಾಡುತ್ತ ಮಡಿದನು. ಅವನ ಜೊತೆಯಲ್ಲಿ ವೈರಿಗಳನ್ನು ಎದುರಿಸಿ ಅನೇಕ ಸೇನಾನಾಯಕರು ಮಡಿದರು. ಎರಡೂಕಡೆಯ ಸೈನ್ಯಗಳು ಉರುಳಿ ಶವಗಳ ಬೆಟ್ಟವಾದವು ಎಂದು ಹೇಳುವರು. ನಾರುವ ರಣಭೂಮಿಯನ್ನು ಇನ್ನೊಮ್ಮೆ ಘೋರತರ ಸಂಗ್ರಾಮಕ್ಕೆ ಸಿದ್ಧಗೊಳಿಸಲು, ಇದೊಂದು ಹಗಲುಮಾತ್ರ ವೈರ ವಿಶ್ರಾಂತಿಯೆಂದು ಡಂಗುರ ಹೊಡೆದು ಹೇಳುತ್ತಿರುವರು. ನಾಳೆ ಮತ್ತೆ ಮರುಕಳಿಸುವುದು ಭಯಂಕರ ಕಾಳಗ!

'ನಮ್ಮವರು ಮತ್ತು ನಿಮ್ಮವರು ಮಡಿದ ತಮ್ಮತಮ್ಮವರನ್ನು ಸಾಗರದ ದಡಕ್ಕೆ ಕೊಂಡೊಯ್ದು, ಹೆಣರಾಶಿ ಮಾಡಿ ಸುಡುತ್ತಿದ್ದಾರೆ. ಅದೇ ನೀನು ಕಾಣುತ್ತಿರುವ ಆಗಸಕ್ಕೆ ಏರುತ್ತಿರುವ ಹೊಗೆಯ ಗೋಡೆ; ಆತ್ಮಗಳನ್ನು ಪಿತೃಲೋಕಕ್ಕೆ ಕೊಂಡೊಯ್ಯುವ ತೇರು! ಅದೇ ನೀನು ಕೇಳುತ್ತಿರುವ ರೋದನ! ಮತ್ತು ಮಸಣದ ಓಲಗ!

'ಅಮ್ಮ, ಇಂದು ಮನೆಮನೆಯಲ್ಲಿ ಲಂಕೆ ಅಳುತ್ತಿದೆ. ಮಗಸತ್ತ ತಾಯಿ; ಪತಿಯನ್ನು ಕಳೆದುಕೊಂಡ ಹೆಣ್ಣು; ತಂದೆತೀರಿಹೋದ ಕಂದ; ಅಣ್ಣನಿಗೆ ಅಳುವ ತಂಗಿ! ಆ ಗೋಳನ್ನು ಕೇಳುವವರು ಯಾರು?...ಅದೂ ಅಲ್ಲದೆ, ಬೇರೆಬೇರೆಯೆ ಹುಡುಕಿ ತಮ್ಮ ತಮ್ಮ ಬಂಧುಗಳಿಗೆ ಅಂತ್ಯಸಂಸ್ಕಾರವನ್ನು ಬಿಡಿಬಿಡಿಯಾಗಿ ಮಾಡುವುದನ್ನು ರಾಜಾಜ್ಞೆ ನಿಷೇಧಿಸಿದೆ. ಹಾಗಿಲ್ಲದಿದ್ದರೆ ನಾನು ನಿನ್ನಬಳಿ ಇಂದು ಇರುತ್ತಿದ್ದೇನೇನವ್ವ?...ನೀನು ನೋಡುವ ಆ ಧೂಮದಲ್ಲಿ ನನ್ನ ತಂದೆಯ ಮೈಯ ಹೊಗೆಯೂ ಇರಬಹುದು ದೇವಿ!'

'ಏನು ಹೇಳಿದೆ ತ್ರಿಜಟೆ?' ಎಂದು ಸೀತೆ ನಿಟ್ಟುಸಿರುಬಿಟ್ಟು ಕೇಳಲು, ಅಳುತ್ತಾ ಅಳುತ್ತಾ ತ್ರಿಜಟೆ ಹೇಳಿದಳು:

'ಕಳೆದ ರಾತ್ರಿ ನನ್ನ ತಂದೆಯು ಯುದ್ಧರಂಗದಿಂದ ಹಿಂದಿರುಗದಿರಲು ನನ್ನ ತಮ್ಮನು ಹುಡುಕಲು ಹೋದನು. ಕತ್ತಿ ತಲೆಸೀಳಿಯೊ; ಬಂಡೆಬಡಿದೊ ತಲೆಯೊಡೆದು ಸತ್ತಿದ್ದ ನನ್ನಪ್ಪನನ್ನು ತರುವ ಪ್ರಯತ್ನದಲ್ಲಿ ಅವನಿದ್ದನು. ಅದನ್ನು ನೋಡಿ ರಾಜಭಟರು ಅವನನ್ನು ತಡೆದರು. ಕಳೇಬರವನ್ನು ಅವರ ವಶಕ್ಕೆ ಒಪ್ಪಿಸಿದನು. ಕಾಲು ಮುರಿದು ಏಳಲಾಗದೆ ನರಳುತ್ತಿದ್ದ ತನ್ನ ಅಣ್ಣನನ್ನು ಹುಡುಕಿ ಪಡೆದನು. ಮುಂದಾಳುವಾದ ನನ್ನ ಗಂಡನ ಸಹಾಯದಿಂದ ಮನೆಗೆ ತಂದನು. ಅವನ ಸ್ಥಿತಿ ಚಿಂತಾಜನಕವಾಗಿದೆ. ನನಗೆ ನಾಳೆ ಇನ್ನೇನು ಕಾದಿದೆಯೊ? ನಿನ್ನ ಸೇವೇಯೆ ಗತಿಯೊ? ನನಗೆ ಇನ್ನು ಮುಂದೆ ಪತಿಯ ಸೇವಾಪುಣ್ಯ ದೊರಕುವುದೊ ಇಲ್ಲವೊ?

'ಏನು ತಾಯಿ, ನಿನ್ನೋರ್ವಳಿಂದ ಯಾರು ಯಾರಿಗೆ ಏನೇನು ಆಗುವುದಿದೆಯೊ?'

ತ್ರಿಜಟೆಯ ಮಾತಿನ ಆಂತರ್ಯ ಅರಿತ ಸೀತೆಯ ಕೊರಳ ಸೆರೆ ಬಿಗಿಯೊತ್ತಿತು. ಅವಳಿಗಾಗಿ ಮರುಗುತ್ತ ಸಂತೈಸುವ ಮಾತುಗಳನ್ನು ಆಡಿದಳು:

'ತ್ರಿಜಟೆ, ನೀನು ಹೇಳಿದ ರೀತಿ ನನಗೂ ಒಮ್ಮೊಮ್ಮೆ; ನಿನ್ನ ದುಃಖಕ್ಕೆ ಮಾತ್ರವಲ್ಲ, ಲೋಕದ ಸಂಕಟಕ್ಕೆಲ್ಲ ನಾನೇ ಕಾರಣಳು ಎಂದೆನಿಸುತ್ತದೆ. ಜನಕರಾಜನು ಭೂಮಿಯಗರ್ಭದಿಂದ ನನ್ನನ್ನು ಅಷ್ಟೇ ಅಲ್ಲದೆ ಲೋಕದ ಶೋಕವನ್ನೆಲ್ಲಪಡೆದು ರಾಮನಿಗೆ ಕೊಟ್ಟಿದ್ದಾನೆ. ಲಂಕೆಯಿಂದ ಅಯೋಧ್ಯೆಯುವರೆಗೆ ದುಃಖ ಉಯ್ಯಾಲೆಯಾಡುವಂತಹ ತೂಗುಮಂಚವನ್ನು ಕಟ್ಟಿದ್ದಾನೆ! ನನ್ನಿಂದಾಗಿ ಅದೆಷ್ಟು ಲಂಕೆಯ ಹೆಣ್ಣುಮಕ್ಕಳು. ಕಿಷ್ಕಿಂಧೆಯುರು ತಮ್ಮ ಮಂಗಳಸೂತ್ರಗಳನ್ನು ಕಳೆದುಕೊಳ್ಳುವರೊ? ಸಖಿಯೆ, ನನ್ನ ನಿನ್ನ ಈ ಬಗೆಯ ಆಲೋಚನೆ ಅಹಂಭಾವದ ಅಭಿವ್ಯಕ್ತಿಯೆ?

'ವಿಧಿಯ ಸೂತ್ರದ ಜಗಜ್ಜಾಲದಲ್ಲಿ ವ್ಯಕ್ತಿಗಳು ಕೇವಲ ಗಂಟುಮಾತ್ರಗಳಾಗಿದ್ದು, ಅದರ ಕೈಯ ಕುಶಲ ಪ್ರತಿಮೆಗಳಲ್ಲವೆ? ನಿನ್ನ ತಂದೆಯ ವಿಧಿಗೆ ನಾನೆಷ್ಟು ಕಾರಣಳೊ, ನನ್ನ ವಿಧಿಗೂ ಆತನು ಅಷ್ಟೇ ಕಾರಣವಲ್ಲವೆ? ನಮ್ಮ ನಮ್ಮ ಕರ್ಮದ ಫಲವನ್ನು ನಾವು ಉಣಬೇಕು. ತ್ರಿಜಟೆಯೆ, ಆದರೂ ಹೇಳುತ್ತೇನೆ ಕೇಳು. ನಿನ್ನ ಮಾಂಗಲ್ಯದ ಮೇಲೆ ಪಣವಿಟ್ಟು ಈ ಪ್ರತಿಜ್ಞೆ ಮಾಡುತ್ತೇನೆ. ನಿನಗೆ ವೈಧವ್ಯವಾದಾಗ ನನಗೂ ವೈಧವ್ಯವೆಂದು ತಿಳಿ!

'ಕೆಳದಿಯೆ, ಆ ಭೀತಿಯನ್ನು ಬಿಡು. ನಾಳೆ ಯುದ್ಧವು ಎಷ್ಟೇ ಭೀಕರವಾಗಲಿ, ವಾನರರ ಬಲವು ಎಷ್ಟೇ ಘೋರತರವಾದುದಾಗಿರಲಿ ಮತ್ತು ನನ್ನ ಪತಿ ಬ್ರಹ್ಮಾಸ್ತ್ರವನ್ನೇ ತೊಡಲಿ ನಿನ್ನ ತಾಳಿಮಾತ್ರ ಒಂದಿನಿತು ಅಲುಗದಿರಲಿ!'

ತ್ರಿಜಟೆಯು ಆ ನುಡಿಯನ್ನು ಬರಿ ಹರಕೆ ಎಂದು ಭಾವಿಸದೆ ವರವೆಂದು ತಿಳಿದು ಕೈಮುಗಿಯುತ್ತ ಕ್ಷಮೆ ಕೋರಿದಳು:

ಮಹಿಮೆ ಮೈದೋರಲೋಸುಗಂ ಮಡಿದರಾ ಸಾವೊಂದು ಸಾವೆ?

'ಮನಸ್ಸು ನೋಯಲು ಹಾಗೆ ಹೇಳಿದೆ. ಈ ಮೂರ್ಖಳನ್ನು ಕ್ಷಮಿಸಿ. ತಾಯಿ, ನಿನ್ನ ನೋವಿನ ಮುಂದೆ ನನ್ನದು ಏತರದು? ಮಹಿಮೆ ಪ್ರಕಟಗೊಳ್ಳಲು ಮಡಿದರೆ ಆ ಸಾವೊಂದು ಸಾವೆ? ಅದು ಬದುಕಿಗೆ ಮೀರಿದ ಅಮೃತವಲ್ಲವೆ?'

ಅದನ್ನು ಕೇಳುತ್ತ ಸೀತೆ ಬೆರಗಾಗಿ ತ್ರಿಜಟೆಯನ್ನು ನೋಡುತ್ತ ನುಡಿದಳು:

'ಸ್ನೇಹಿತೆಯೇ, ವೇದದ ರೀತಿ ಹೇಳಿದ ಈ ವಾಕ್ಯವನ್ನು ನೀನೆಲ್ಲಿ ಕಲಿತೆ?'

'ನೀನೆ ಗುರುವಲ್ಲವೆ?'

ಎಂದು ಧನ್ಯಭಾವದಿಂದ ಹೇಳಿದ ತ್ರಿಜಟೆ ತನ್ನ ಮಾತುಗಳನ್ನು ಹೀಗೆ ಮುಂದುವರಿಸಿದಳು.

'ನಿನ್ನೊಡನೆ ಇಷ್ಟು ದಿನವಿದ್ದು, ನಿನ್ನ ಸೇವೆಯನ್ನು ಮಾಡಿದ್ದು ಬರಿಯ ದಾಸ್ಯವೆ? ಅದು ತಪಸ್ಸಲ್ಲವೆ? ನಿನ್ನ ನುಡಿಕೇಳಿ, ನಡೆನೋಡಿ ಹಗಲಿರುಳು ನಿನ್ನ ಸಾನ್ನಿಧ್ಯದಲ್ಲಿದ್ದೇನೆ. ನಿನ್ನನ್ನು ತಿಳಿಯುವಕೃಪೆ ನನಗೆ ಪೂರ್ವಜನ್ಮದ ಫಲ. ತಾಯಿ, ಅಷ್ಟು ಹೇಳಿದುದೇನು ಹೆಚ್ಚೆ?'

'ಸಖೀ, ನೀನು ದೊಡ್ಡವಳು. ನಿನ್ನ ನಾಲಗೆಯಿಂದ ಹಿರಿದಾದ ನುಡಿಗಳು ಹೊಮ್ಮುತ್ತಿವೆ!'

ಎಂದು ಹೇಳುತ್ತ ಸೀತೆ ಸಖಿಯೊಡನೆ ಸಂವಾದದಲ್ಲಿದ್ದಳು.

ಆ ಕಡೆ ವಿಭೀಷಣ ಕುಮಾರಿ ಅನಲಾದೇವಿಯು ಕಾಳಗದ ಕಣಕ್ಕಿಂತಲೂ ಮಿಗಿಲಾದ ಭಯಂಕರ ಶೋಕಸಾಗರದ ಸೀಮೆಯಾಗಿದ್ದ ದೊಡ್ಡಪ್ಪ ರಾವಣನ ಅರಮನೆಯಲ್ಲಿದ್ದಳು. ಅವಳು ಅದನ್ನು ಬಿಟ್ಟು ಮನಶ್ಶಾಂತಿಯನ್ನು ಅರಸುತ್ತ ಅಶೋಕಧಾಮವನ್ನು ಹೊಕ್ಕಳು. ನೇರವಾಗಿ ಸೀತೆಯ ಸಾನ್ನಿಧ್ಯಕ್ಕೆ ಸಾಗಿದಳು. ಆ ತಪಸ್ವಿನಿಯ ಪಾದಗಳಿಗೆ ಎರಗಿದಳು. ಸೀತೆಯು ದುಃಖಪೂರಿತ ಕಣ್ಣುಗಳ, ಗದ್ಗದ ಧ್ವನಿಯ ಶೋಕ ಆವರಿಸಿದ ಸುಕೋಮಲಾಂಗಳನ್ನು ಕನಿಕರದಿಂದ, ತಾಯಿ ಮಗಳನ್ನು ಎತ್ತಿಕೊಳ್ಳುವಂತೆ ಎತ್ತಿಕೊಂಡಳು. ಕಣ್ಣೀರು ಒರೆಸಿದಳು; ಮುಖವನ್ನು ಮುದ್ದಾಡಿದಳು; ಅವಳ ಒಡಲನ್ನು ತನ್ನ ಮೈಗೆ ಅಪ್ಪಿಕೊಂಡು ಕಣ್ಮುಚ್ಚಿ ಮೌನಿಯಾದಳು. ಅದು ತನ್ನ ಹೃದಯದ ನಿಗೂಢ ಶಾಂತಿಯನ್ನು ಯೌಗಿಕ ವಿಧಾನದಿಂದ ಅನಲೆಯ ಆತ್ಮಕ್ಕೆ ದಾನಮಾಡುವ ರೀತಿಯಾಗಿತ್ತು. ತುಸು ಸಮಯದ ನಂತರ ತನ್ನ ಅಳಲನ್ನು ಹೀಗೆ ತೋಡಿಕೊಂಡಳು:

'ಅನಲೆ, ನಿನ್ನನ್ನು ನಾನು ಹೇಗೆ ಸಂತೈಸಲಿ? ನೀನು ಅಳಬೇಡ ಎಂದು ಹೇಳಲು ನನಗೆ ಬಾಯಿ ಬರುತ್ತಿಲ್ಲ. ತಾಯಿ, ಬಾಯಿ ಬರುತ್ತಿಲ್ಲ.'

ಬೈತಲೆಯ ಅಕ್ಕಪಕ್ಕದ ಕೂದಲನ್ನು ನೇವರಿಸುತ್ತಿದ್ದವಳನ್ನು ಮುಗ್ಧನೇತ್ರದ ತರಳೆ ಮುಖವೆತ್ತಿ ನೋಡಿದಳು. ತನ್ನ ಚಿಗುರು ಬೆರಳುಗಳಿಂದ ಸೀತೆಯ ಕಣ್ಣಿನಹನಿಗಳನ್ನು ಒರಸುತ್ತ ಹೇಳಿದಳು:

ನನ್ನನಂಬರಕೆತ್ತಿ ಮೇಲೆಸೆದು ಪಿಡಿದು 'ನೀನೊಂದು ಪೂವಿನ ಚೆಂಡು' ಎನುತೆನ್ನ ಮುದ್ದಾಡುತಿರ್ದನ್.

'ದೇವಿಯೇ, ನಿನ್ನ ದುಃಖವನ್ನು ಅತ್ತು ಮುಗಿಸಲು ನಿನಗೆ ನಿನ್ನ ಕಣ್ಣೀರು ಸಾಲದಾಗಿದೆ. ನನ್ನ ಅಳಲಿಗೆ ನಿನ್ನ ನೇತ್ರತೀರ್ಥವನ್ನೇಕೆ ಸುರಿಸುವೆ? ನಿನ್ನ ನಯನದಿಂದ ಉರುಳುವ ಒಂದೊಂದು ಅಶ್ರುಬಿಂದುವು ನಮ್ಮ ಲಂಕೆಯ ಶೋಕಜೀವನ ಸಾಗರವನ್ನು ಹೆಚ್ಚಿಸುವುದು. ನೀನು ದುಃಖಿಸಿದರೆ ಅದರ ಒಂದೊಂದು ಹನಿಯು ಬಡಬಾಗ್ನಿಯ ಕಡಲಾಗುವುದು. ಅದು ಲಂಕೆಯ ಮಹಾಅಸುರರ ಸಹಸ್ರಾರು ವಾಹಿನಿಗಳನ್ನು ಕುಡಿದು ಮುಗಿಸುವುದು. ಸಕಲಲೋಕ ಭೀಕರನೆಂದು, ಯುದ್ಧಭೈರವನೆಂದು ಹೆಸರಾದವನು ನನ್ನ ಚಿಕ್ಕ ದೊಡ್ಡಪ್ಪ ಕುಂಭಕರ್ಣ. ಅವನು ನೇರವಾಗಿ ಮತ್ತು ಸವಿನುಡಿಯಲ್ಲಿ ಹಿರಿದಾಗಿ ಬಾಳಿದವನು. ಅಮ್ಮ, ನಿನ್ನ ಕಣ್ಣಿನ ಹನಿ ಕಡಲ ಬಡಬಾಗ್ನಿ ನಿನ್ನೆ ಅವನನ್ನು ನುಂಗಿ ಹಾಕಿತಮ್ಮ!'

'ಆ ದೊಡ್ಡಪ್ಪ ನಮ್ಮೊಡನೆ ಎಷ್ಟೋಸಲ ಕುಳಿತು ಸರಸದಲ್ಲಿ ಆಡುತ್ತಿದ್ದ. ನಗೆ ಚಟಾಕಿ ಹಾರಿಸಿ ನಮ್ಮನ್ನು ಅಣಗಿಸುತ್ತ ಅಳ್ಳೆ ಬಿರಿಯುವಂತೆ ನಗಿಸುತ್ತಿದ್ದ! ಕಳ್ಳರ ಆಟದಲ್ಲಿ ನಾವು ಅವನನ್ನು ಅಟ್ಟಿಸಿಕೊಂಡು ಹೋಗಲು ಅವನು ಓಡುತ್ತಿದ್ದ. ನಾನು ಅವನ ಹಿಂದೆ ಓಡುತ್ತ ಹಿಡಿಯಲು ಆಗದಿದ್ದಾಗ, ಹಿಂತಿರುಗಿ ನೋಡುತ್ತ ಕೊನೆಕೊನೆಗೆ ನಗೆ ತಡೆಯಲಾರದೆ ಸೋತಂತೆ ನಿಲ್ಲುತ್ತಿದ್ದ. ನಾನು ಮುಟ್ಟಿ ನಗುತ್ತಿದ್ದೆ. ನನ್ನನ್ನು ಆಕಾಶಕ್ಕೆತ್ತಿ ಮೇಲೆಸೆದು ಹಿಡಿದು 'ನೀನೊಂದು ಹೂವಿನ ಚೆಂಡು' ಎಂದು ಹೇಳಿ ಮುದ್ದಾಡುತ್ತಿದ್ದ. 'ಚೆಂಡು ಹೂ! ಚೆಂಡು ಹೂ!' ಎಂದು ಹೇಳಿ ಅಟ್ಟಹಾಸದಿಂದ ಅದ್ಭುತವಾಗಿ ನಗುತ್ತಿದ್ದ! –ಅಯ್ಯೋ, ಆ ಚಿಕ್ಕ ದೊಡ್ಡಪ್ಪ ಇಂದು ಸಮುದ್ರದ ಮಳಲಿನ ತೀರದಲ್ಲಿ ಗಂಧಚಿತೆಯಲ್ಲಿ ಬೆಂದು ಹೋದ. ನನ್ನ ಬದುಕಿರುವ ದೊಡ್ಡ ದೊಡ್ಡಪ್ಪ ಅಸುರೇಶ್ವರನು ಅವನ ಬೂದಿಯನ್ನು ಊರಿಗೆ ತಂದನು! ಅದನ್ನು ಇಟ್ಟಿರುವ ರತ್ನಪಾತ್ರೆಯನ್ನು ಬಿಗಿದಪ್ಪಿಕೊಂಡು 'ತಮ್ಮ, ತಮ್ಮ' ಎಂದು ಗೋಳಿಡುತ್ತಿದ್ದನು. ಅದನ್ನು ನಾನು ನೆನೆಯಲಾರೆನು ದೇವಿ. ನಿನಗೆ ಅಹಿತನಾಗಿದ್ದರೇನು? ಆ ನೋಟವನ್ನು ನೋಡಿದ್ದರೆ ನೀನೂಸಹ ಮರುಗಿ ಕರಗಿ ಹೋಗುತ್ತಿದ್ದೆ!'

ಜಾನಕಿಯ ಎದೆಗೆ ಮುಖವಿಟ್ಟು, ಗದ್ಗದಿತೆಯಾಗಿ ಮಗಳಂತೆ ಅನಲೆ ಅಳುತ್ತಿದ್ದಳು. ಅದನ್ನು ನೋಡುತ್ತ ತನ್ನ ನಿಜಸ್ವರೂಪವೇ ಆವಿರ್ಭವಿಸಿದಂತೆ ಸೀತೆಯು ತಾನು ಬೇರೆ ಎಂಬ ಭಾವ ತೊರೆದಳು. ಲೋಕದ ಮಾತೆ ತಾನು ಎಂಬಂತೆ ತನ್ನೆರಡು ತೋಳುಗಳಿಂದ ಅನಲೆಯನ್ನು ತಬ್ಬಿಕೊಂಡಳು. ತ್ರಿಜಟೆಯ ಕಡೆ ತಿರುಗಿ,

'ತ್ರಿಜಟೆಯೆ, ಬಾಲೆಯು ಉಪವಾಸವಿದ್ದಾಳೆ. ಶೋಕಭಾರವನ್ನು ತಡೆಯಲಾರದವಳಾಗಿದ್ದಾಳೆ; ತತ್ತರಿಸುತ್ತಿದ್ದಾಳೆ. ಇವಳಿಗೆ ಈ ಹರೆಯದಲ್ಲಿ ಇಂತಹ ದುಃಖವೆ? ಬೇಗಹೋಗಿ ಹಣ್ಣುಗಳನ್ನು, ತಿಳಿನೀರನ್ನು ತೆಗೆದುಕೊಂಡು ಬಾ.'

ಎಂದು ಹೇಳಿದಳು. ಅವಳು ಹೋದನಂತರ ಸೀತೆ ಅನಲೆಯ ತಲೆಗೆ ತನ್ನತೊಡೆಯನ್ನು ತಲೆದಿಂಬಾಗಿಸಿ ಮಲಗಿಸಿಕೊಂಡಳು. ಕೃಶಗಾತ್ರೆಯು ತನ್ನ ಮಲಿನವಸ್ತ್ರದ ಸೆರಗಿನಿಂದ ತಂಗಾಳಿ ಬೀಸಿದಳು. 'ಏನು ಬೇಸಗೆಯೊ? ಬೇಗೆ ಲೋಕವನ್ನು ಧಗಿಸುತ್ತಿದೆ' ಎಂದು ತನಗೆ ತಾನು ಹೇಳಿಕೊಂಡು ನಿಟ್ಟುಸಿರು ಬಿಟ್ಟಳು. ಮುಂದೆ ಹಬ್ಬಿರುವ ಸಾಗರದ ನೀಲ ವಿಸ್ತಾರವನ್ನು ನೋಡುತ್ತ ನೀಲಿಯಾಗಸದ ನಿಸ್ಸೀಮ ವಿಸ್ತಾರದಕಡೆ ಗಮನ ಹರಿಸಿದಳು. ಮುಗಿಲು ಮುಗಿಲಾಗಿ ಮೇಲೇರುತ್ತಿದ್ದ ದಹನಕ್ರಿಯಾ ಧೂಮ ವಿಸ್ತಾರವನ್ನು ನೋಡುತ್ತಿದ್ದ ಅವಳ ಕಣ್ಣಿಂದ ಹನಿ ತುಳುಕಿ ಅನಲೆಯ ಮೈ ಮೇಲೆ ಬಿದ್ದಿತು!

ತ್ರಿಜಟೆಯು ಬೇಗನೆಬಂದು ನೀಡಿದ ತಣ್ಣನೆಯ ನೀರಿನಿಂದ ಅನಲೆಯು ಮುಖತೊಳೆದಳು. ಹಣ್ಣುಗಳನ್ನು ಸೇವಿಸಿ ಚೇತರಿಸಿಕೊಂಡಳು. ಅನಂತರ ಸೀತೆಗೆ ಹೀಗೆ ಹೇಳಿದಳು:

ಕೈಕೊಳ್ವೆನೀಗಳೆ ನಿಕುಂಭಿಲಾ ಯಾಗಮಂ.

'ದೇವಿಯೆ, ಆದದ್ದು ಆಗಿಹೋಗಿದೆ. ಅದಕ್ಕೂ ನೂರರಷ್ಟು ಘೋರವು ಇನ್ನು ಆಗಲಿದೆ. ನೀನು ಇಚ್ಛಿಸಿದರೆ ಅದನ್ನು ನಿಲ್ಲಿಸಲು ಅಸಾಧ್ಯವೇನೂ ಅಲ್ಲ. ತಾಯಿ, ಅರಮನೆಯಲ್ಲಿ ನಡೆದುದನ್ನು ಹೇಳುತ್ತೇನೆ ಕೇಳು. ಕಡಲ ತೀರದಲ್ಲಿ ತಮ್ಮನ ಕಳೆಬರಕ್ಕೆ ಕೊನೆಯ ಸಂಸ್ಕಾರ ಮಾಡಿ, ಭಸ್ಮಾವಶೇಷವನ್ನು ರತ್ನಪಾತ್ರೆಯಲ್ಲಿಟ್ಟು ತಂದು ಗೋಳಿಡುತ್ತಿದ್ದ ದೊಡ್ಡಪ್ಪನನ್ನು ನನ್ನ ಅಣ್ಣ ಇಂದ್ರಜಿತು ಕಂಡ. ಅವನು ಮಹಾರುದ್ರ ಕೋಪಾವಿಷ್ಟನಾಗಿ ತನ್ನ ತಂದೆಯನ್ನು ಸಂತೈಸುತ್ತ 'ದೈತ್ಯಕುಲ ಚಕ್ರೇಶನೆ, ಸಂತಾಪವನ್ನು ಬಿಡು. ನನ್ನ ಪ್ರತಾಪ ಭೂತಕ್ಕೆ ಚಿಕ್ಕಯ್ಯನ ಪ್ರಾಣದ ನೂರರಷ್ಟು ಪ್ರಾಣಗಳನ್ನು ಬಲಿತೆಗೆದುಕೊಳ್ಳುತ್ತೇನೆ. ವೈರಿಸೈನ್ಯವನ್ನು ಯಮನೂರಿನ ಅತಿಥಿಯಾಗಿಸುತ್ತೇನೆ. ಇದಕ್ಕೆ ನನ್ನಾಣೆ, ನಿನ್ನಾಣೆ, ತೀರಿಹೋದ ಚಿಕ್ಕಪ್ಪನಾಣೆ, ನನ್ನ ಹೆತ್ತ ಅವ್ವನ ಮತ್ತು ಕುಲದೈವ ಶಿವನಾಣೆ! ಈಗಲೇ ನಿಕುಂಭಿಲಾ ಯಾಗವನ್ನು ಕೈಗೊಳ್ಳುತ್ತೇನೆ. ಮೃತ್ಯು ಗರ್ಭವು ತರತರನೆ ನಡುಗುವಂತೆ ಮಾರಣ ಮಹಾಶಕ್ತಿಗಳನ್ನು ತಕ್ಷಣ ಸೃಷ್ಟಿಸುತ್ತೇನೆ. ಪೂಜ್ಯ ಕುಂಭಕರ್ಣನ ಪ್ರೇತವು

ಪಿತೃಲೋಕದಲ್ಲಿ ಸುಪ್ರೀತವಾಗುವಂತೆ ನರವಾನರರ ಸೇನೆಯನ್ನು ನಿರ್ನಾಮ ಮಾಡಿ ಅವರ ರಕ್ತದಿಂದ ತರ್ಪಣವನ್ನು ಅರ್ಪಿಸುತ್ತೇನೆ' ಎಂದು ಕಠೋರ ಶಪಥವನ್ನು ಮಾಡಿದನು. ನಿಕುಂಭಿಲಾ ಹೆಸರಿನ ಆಲದಮರದ ಬುಡದಲ್ಲಿಯ ಯಾಗಶಾಲೆಯ ಮಹಾಮಂತ್ರಕರ್ಮದ ತಂತ್ರ ಮಂಟಪದತ್ತ ನಡೆದನು.

'ಆ ನನ್ನ ಅಣ್ಣನು ಅತಿ ಶಕ್ತಿಯುತನು. ಇಂದ್ರನನ್ನು ಗೆದ್ದು, ಬ್ರಹ್ಮನಿಂದ ನಾನಾ ವರಗಳನ್ನು ಪಡೆದು, ಮಾಯಾಬಲದಿಂದ ದೇವದಾನವರಿಗೆ ಭಯಂಕರನಾಗಿರುವವನು. ದೇವಿ, ಅವನು ನಿರ್ವಿಘ್ನವಾಗಿ ಯಾಗವನ್ನು ಮುಗಿಸಿದರೆ ಈ ಭುವನತ್ರಯದ ವೀರರಲ್ಲಿ ಯಾರಿಗಾದರೂ ಅವನನ್ನು ಸೋಲಿಸಲು ಸಾಧ್ಯವೆ? ಆ ಯಾಗವು ವಿಘ್ನವಿಲ್ಲದೆ ಸಿದ್ಧಿಯಾದರೆ ಅವನು ಅಜೇಯನು, ಯಾರೂ ಎದುರಿಸಲಾಗದ ವೀರನು ಆಗುತ್ತಾನೆ. ಸುರರು ಮತ್ತು ಅಸುರರು ಜೊತೆಗೂಡಿ ಬಂದರೂ ತೃಣೀಕರಿಸುತ್ತಾನೆ. ಆಗ ಕಪಿಧ್ವಜರು ಯಾವ ಲೆಕ್ಕ? ತಾಯಿ, ಅನಂತರ ಎರಡೂ ಕಡೆಯಲ್ಲಿ ಆಗುವ ಪ್ರಾಣಹತ್ಯೆಯನ್ನು ನೆನೆಯಲಾಗದು.

'ಗಂಡಸರು ಹೀಗೆ ಮೈಮರೆತು ಕ್ರೋಧಮೂರ್ಛಿತರಾಗಿ ಉದ್ಧಟತನದಿಂದ ಸರ್ವನಾಶಕ್ಕಾಗಿ ಒಬ್ಬರಿಗೊಬ್ಬರು ಎದುರಾಗುವಾಗ ಹೆಣ್ಣಾದವಳು ಏಕೆ ತಟಸ್ಥಳಾಗಿರಬೇಕು? ಶ್ರೇಷ್ಠಳೇ, ನೀನು ಒಪ್ಪಿದರೆ ನಾನು ನಿನಗೆ ನೆರವಾಗುತ್ತೇನೆ. ಮಂಡೋದರಿ ದೊಡ್ಡಮ್ಮನು ಸಹಾಯಕ್ಕೆ ಬರುತ್ತಾಳೆ ಎಂದು ನನಗೆ ಗೊತ್ತು. ನನ್ನ ಅತ್ತಿಗೆಯಾದ ಮೇಘನಾದನ ಪತ್ನಿ ತಾರಾಕ್ಷಿಯು ಬೆಂಬಲಿಸುತ್ತಾಳೆ. ತಾಯಿ ಕೇಳು, ನಿನ್ನನ್ನು ಇಲ್ಲಿಗೆ ತರಲು ಸಂಚು ಹೂಡಿದ ಚಂದ್ರನಖಿಯೂ ಈಗ ಬದಲಾಗಿದ್ದಾಳೆ. ಮತ್ತು ದಶಗ್ರೀವನ ಆತ್ಮವು ತನ್ನ ಕಸುಗಾಯಿಯ ಒಗರನ್ನು ಕಳೆದುಕೊಂಡು ಹಣ್ಣಾಗಲು ಮಾರ್ಪಡುತ್ತಿರುವುದು ನನ್ನ ಮನಸ್ಸಿಗೆ ಗೋಚರವಾಗುತ್ತಿದೆ. ಆದರೂ ಆ ಮಹಾಸತ್ವನು ಅತ್ಯಭಿಮಾನಿ, ಹಿಂಜರಿಯುವವನಲ್ಲ. ಈ ಕಾಳಗದ ಕೊಲೆಯನ್ನು ತಡೆಯಲು ತಾನೇ ಮುಂದುವರಿಯುವುದಿಲ್ಲ. ರೋಷಾವೇಶಿಯಾದ ಅವನು ಕ್ಷಾತ್ರತೇಜಕ್ಕೆ ಭಂಗ ಬರುವ ರೀತಿಯಲ್ಲಿ ಎಂದೂ ನಡೆದುಕೊಳ್ಳುವುದಿಲ್ಲ.'

'ಅನಲೆಂತೆ, ಈ ಪುಟ್ಟ ಹೃದಂಯುದಲ್ಲಿ ಅದು ಹೇಗೆ ಇಷ್ಟು ದಿಟ್ಟತನವನ್ನಿರಿಸಿಕೊಂಡಿರುವೆ? ಹದಿನಾರು ವಸಂತಗಳ ನಿನ್ನ ಮೈ ಹಿರಿಯ ಚೈತನ್ಯದನೆಲೆ ಮತ್ತು ಅತಿಶಯವಾದ ಹೆಮ್ಮೆಗೆ ತವರುಮನೆಯಾಗಿದೆ. ಕುವರಿಯೆ, ನಾನು ಸ್ವತಂತ್ರಳು ಅಲ್ಲ. ನೀನು ಮತ್ತು ನಿನ್ನವರು ಸ್ವತಂತ್ರರು. ತಪಸ್ಸನ್ನು ಹೊರತು ಪಡಿಸಿ ಇನ್ನು ಯಾವುದೂ ನನಗೆ ಹೊಂದುತ್ತಿಲ್ಲ ನಾನು ನಿನ್ನನ್ನು ಆಶೀರ್ವದಿಸುತ್ತೇನೆ. ಅದಷ್ಟೆ ನಾನು ನಿನ್ನಕಾರ್ಯಕ್ಕೆ ನೀಡುವ ನೆರವು. ವಿಭೀಷಣ ಕುಮಾರಿಯೆ, ನಲ್ ಆಸೆ ನಿನ್ನದು. ಅದು ನೆರವೇರಲಿ.'

ಎಂದು ಆಶೀರ್ವದಿಸಿದ ಅವನಿಜೆಗೆ ಅನಲೆಯು,

'ದೇವಿ, ನಿರಾಶೆಯನ್ನು ಬಿಡು. ನನ್ನ ತಂದೆಗೆ ನೆನ್ನೆ ವಾರ್ತೆಯನ್ನು ಹಿರಣ್ಯಕೇಶಿಯ ಕೈಲಿ ಕಳುಹಿಸಿದ್ದೇನೆ. ಇಂದ್ರಜಿತುವು ಕೈಗೊಳ್ಳುವ ಯಾಗವು ಮುಗಿಯುವ ಮೊದಲೇ ವಾನರ ಮಹಾಪ್ರಾಜ್ಞ ಸೇನಾನಿಗಳು ವಿಘ್ನವನ್ನು ತಂದೊಡ್ಡುವುದು ನಿಜ.'

ಎಂದು ಮುಗುಳ್ನಗೆಯೊಡನೆ ಹೇಳಿ, ಆ ಧೈರ್ಯವು ತನಗಿರುವುದೆಂದು ಸೀತೆಗೆ ಮತ್ತೆ ಹೀಗೆ ತಿಳಿಸಿದಳು:

ದೂರಮಿರದಿನ್ ದಿಟಂ ಮಹಾತ್ಮಂಗೆ ಸುಗತಿ!

'ತಾಯಿಯೇ, ದೊಡ್ಡಪ್ಪನು ಇಂದಿಗೆ ಇಲ್ಲಿಗೆ ಬರಲು, ನೀನು ನಮ್ಮೊಂದಿಗೆ ತಾಯಿಯಾಗಿ ನಡೆದುಕೊಳ್ಳುವಂತೆ ನಡೆದುಕೊ. ಕಂದನಿಗೆ ಹಿತದ ಸದ್ಬುದ್ಧಿಯನ್ನು ಹೇಳುವಂತೆ ಹೇಳು. ನಿತ್ಯವೂ ನಿನ್ನನ್ನು ನೆನೆಯುವ ಅವನ ಆತ್ಮಕ್ಕೆ ನಿನ್ನ ಮಹಿಮೆ ಹೊಳೆಯತೊಡಗಿದೆ, ದೇವಿಯೆ, ಮನಸ್ಸು ಮರಗುವಂತೆ; ಹೃದಯ ಕರಗುವಂತೆ; ಅವನ ವೀರಹೆಮ್ಮೆ ಕನಿಕರಕ್ಕೆ ಶರಣಾಗುವಂತೆ ಅವನ ಹೃದಯವನ್ನು ಮಿಡಿದು ಹೇಳು! ನನ್ನ ದೊಡ್ಡಪ್ಪನು ಏನೆಂದು ನನಗೆ ಗೊತ್ತು. ದರ್ಪಕಾರಣವಾಗಿ ಕಾಠಿಣ್ಯವನ್ನು ತೋರುವನಾದರೂ, ಅವನ ಎದೆಯ ಕಬ್ಬಿಣಕ್ಕೆ ಪ್ರೀತಿಗೆ ಮಣಿಯುವ ಮೃದುತನವಿದೆ.

'ಇದುವರೆಗೆ ನಿನ್ನಂತಹ ಪತಿವ್ರತೆಯರನ್ನು ಕಾಣದಿರುವುದೇ ಅವನ ದುರ್ಗತಿಗೆ ಕಾರಣವಾಯ್ತು. ಇನ್ನು ಆ ಮಹಾತ್ಮನಿಗೆ ಸುಗತಿ ದೂರವಿಲ್ಲ.'

ಎಂದು ದುರಂತವನ್ನು ಲೆಕ್ಕಿಸದೆ, ನಿಜನುಡಿಯನ್ನಾಡಿದ ಮುಗ್ಧೆಅನಲೆಯ ಮುಡಿಯನ್ನು ಸೀತೆ ನೇವರಿಸಿದಳು. ಹೆಗಲಿನಿಂದ ಇಳಿದು ಎರಡುಕಡೆ ಜೋಲಾಡುತ್ತ ಹದಿನಾರುವಸಂತಗಳ ಎದೆಯನ್ನು ಶೃಂಗರಿಸಿದ್ದ, ನೀಳವಾಗಿ ನುಣುಪಾದ ಕರಿಜಡೆಯನ್ನು ಕೈಗಳಿಂದ ನೇವರಿಸಿದಳು. ರಾವಣನು ಬಂದಾಗ ಹೇಗೆ ತನ್ನ ಆತ್ಮ ಸೂಚಿಸುತ್ತದೆಯೊ ಹಾಗೆ ನಡೆಯುತ್ತೇನೆ ಎಂದು ಭಾಷೆಯಿತ್ತಳು. ದೈತ್ಯಕುಲ ಕನ್ಯೆಯನ್ನು ಹೆತ್ತ ತಾಯಿಯಂತೆ ಪ್ರೀತಿಯಿಂದ ಸಂತೈಸಿದಳು. ದೂರ ಸಮುದ್ರತೀರದಿಂದ ಹೊಗೆಯು ಬಾನಿಗೆ ಏರಿ ಮೇಲ್ಮುಖವಾಗಿ ತಪ್ಪುದಾರಿಯಲ್ಲಿ ಸಾಗುತ್ತಿತ್ತು!

❑



~~~~~~~~~~~~~~~~~~~~~~~ ಸಂಚಿಕೆ – ೪ ~~~~~~~~~~~~~~~~~~~~~~~

ಮಡಿದನಿಂದ್ರಜಿತು ಐಂದ್ರಾಸ್ತ್ರದಿಂ !

ರಾತ್ರಿಯೆಂಬ ಮುತ್ತುಗದ ಮರವು ಇದ್ದಕ್ಕಿದ್ದಂತೆ ಕಿಕ್ಕಿರಿದು ಹೂಬಿಟ್ಟಿತೊ ಎನ್ನುವಂತೆ ಲಂಕಾರಾತ್ರಿಯ ಕತ್ತಲ ಹೃದಯಾಕಾಶದಲ್ಲಿ ಅಗ್ನಿಚಿತ್ರಿತವಾಯಿತು. ವಾನರರು ರಾಕ್ಷಸದುರ್ಗಕ್ಕೆ ಪಂಜು, ಗೊಂದಿ, ಕೊಳ್ಳಿಗಳೊಂದಿಗೆ ಮುತ್ತಿ ಲಗ್ಗೆ ಹಾಕಿದರು. ಸೌಧಗಳು ಅಂಗಡಿ ಮುಂಗಟ್ಟುಗಳು ಹೊತ್ತಿ ಉರಿದವು. ಸಾಕಿದ ಬೆಕ್ಕುಗಳು ಮನೆ ಮನೆಯ ಮಾಳಿಗೆ ಹತ್ತಿ ರಕ್ಷಣೆಗಾಗಿ ಒರಲಿದವು. ಬೆಂಕಿಯು ಹೊಳೆಯಂತೆ ಉರಿ ತೆರೆಗಳ ಅಲೆದಾಟದಲ್ಲಿ ನುಗ್ಗಿ ಹರಿಯಿತು. ಬೀದಿ ಬೀದಿಗಳಲ್ಲಿ ಜನರ ಗೋಳಿನ ಮೊರೆಯೆಬ್ಬಿಸಿತು.
~~~~~~~~~~~~~~~~~~~~~~~

ನಡೆ, ಕಂದ, ತಡೆಹಗೆಯ ಮುನ್ನಡೆಯನಾ ಕಾಣ್ಬ ಕೇಸುರಿವೋಟಮಂ

ಅತಿಕಾಯ ಹೆಸರಿಗೆ ತಕ್ಕಹಾಗೆ ಗಿರಿಶಿಖರದಂತೆ ವಿಶಾಲವಾದವನು. ಅವನು ಬ್ರಹ್ಮ ವರಬಲ ಸಮರ ಶೂರ. ರಾವಣನ ಕಾರಣವಾಗಿ, ರಾಜನಾಗಿದ್ದ ತನ್ನ ಪತಿಯಿಂದ ದೂರವಾದ ಪತಿವ್ರತೆ ಧಾನ್ಯಮಾಲಿನಿಯ ಮಗನಾದ ಅವನು, ತನ್ನ ತಾಯಿಯ ಸಂಕಟ ಜೀವಕ್ಕೆ ಸಂಜೀವಿನಿಯಾಗಿದ್ದನು. ರಾಕ್ಷಸೇಂದ್ರನು ಅವನನ್ನುದ್ದೇಶಿಸಿ:

'ಮಗನೇ, ಶತ್ರುಗಳು ನಮ್ಮ ಕಷ್ಟದ ಸಮಯದ ಲಾಭಪಡೆಯಲು ಈ ರಾತ್ರಿಯುದ್ಧವನ್ನು ಹೂಡಿದ್ದಾರೆ. ಕುಂಭಕರ್ಣನು ಮಡಿದ. ಇಂದ್ರಜಿತು ಪ್ರತಿಜ್ಞೆಮಾಡಿ ನಿಕುಂಭಿಲಾ ಯಾಗಮಂಟಪ ಹೊಕ್ಕಿದ್ದಾನೆ. ನೀನು ವೈರಿಗಳನ್ನು ಈ ಒಂದು ರಾತ್ರಿ ಎದುರಿಸಬೇಕು. ಲಂಕೆಯನ್ನು ಬೆಂಕಿಯಿಂದ ಉಳಿಸಬೇಕು. ಈ ರಾತ್ರಿ ನಿರ್ವಿಘ್ನವಾದರೆ ಮೇಘನಾದನ ಯಾಗ ಯೋಗ ಯಶಸ್ವಿಯಾಗಿ ಬೆಳಗಾಗುವುದರೊಳಗೆ ಅದ್ಭುತ ಸಿದ್ಧಿಗಳು ಕೈ ಸೇರುವವು.

'ಅನಂತರ ನಿನ್ನ ಅಣ್ಣನೇನು ಮುನಿದ ಮುಕ್ಕಣ್ಣನನ್ನು ಲೆಕ್ಕಿಸುವನೆ? ಕಪಿಸೈನ್ಯ ಅಂತಿರಲಿ! ನಾಳಿನ ಮಹಾ ಉಗ್ರ ಸಂಗ್ರಾಮ ಯಜ್ಞದಲ್ಲಿ ರಾಮನನ್ನು ಹೋಮಕ್ಕೆ ಆಹುತಿ ಕೊಡುವುದು ದಿಟ! ಅಲ್ಲಿಯವರೆಗೆ ನೀನು ನಮ್ಮ ಭಾಗ್ಯಕ್ಕೆ, ದುರ್ಗಕ್ಕೆ ಮತ್ತು ಈ ದೈತ್ಯ ಸ್ವರ್ಗಕ್ಕೆ ರಕ್ಷಕನಾಗಿರಬೇಕು! ಕಂದ, ನಡೆ. ವೈರಿಯ ಮುನ್ನಡೆಯನ್ನು; ಕಣ್ಣಿಗೆ ಕಾಣುವ ಕೆಂಪಾದ ಜ್ವಾಲೆಯ ಓಟವನ್ನು ತಡೆ.'

ಮಗನು ಬಾಗಿ ತಂದೆಯ ಆಶೀರ್ವಾದ ಪಡೆದನು. ಇನ್ನೇನು ತಿರುಗಿ ಹೋಗಬೇಕು ಎನ್ನುವಾಗ ರಾವಣನು ತನ್ನ ಕಿರಿಹೆಂಡತಿಯ ಉಸಿರಿಗೆ ಉಸಿರಾದ ಕುವರನನ್ನು ಮತ್ತೆ ಕರೆದನು. ಮಮತೆಯಿಂದ ಅವನ ಮುಖ ನೋಡಿದನು. ತನ್ನ ಎದೆಯೊಳಗೇನೋ ಕಳವಳ ಉಂಟಾಗಿ ಭಯ ಸಂಚಲನಕ್ಕೊಳಗಾಗಿ ಹೇಳಿದನು:

'ನೀನು ವೀರನಾಗಿರುವೆ ನಿನಗೆ ಸಾವೆಂಬುದು ನಗೆಯ ವಿಷಯ. ಆದರೂ ನಿನಗೆ ತಿಳಿಸಲೇಬೇಕಾದ ಒಂದು ವಿಚಾರಕ್ಕೆ ನನ್ನ ಎದೆ ತವಕಿಸುತ್ತಿದೆ. ಇದು ರಾಜಾಜ್ಞೆ ಅಲ್ಲ. ಹೆತ್ತವರ ಒಂದು ಬಿನ್ನಹ. ನಿನ್ನ ತಾಯಿ ಧಾನ್ಯಮಾಲಿನಿಯ ಉಸಿರು ನಿನ್ನಿಂದ, ನಿನಗಾಗಿ ಉಳಿದಿದೆ. ಸಮರ ಸಂಭ್ರಮದಲ್ಲಿ ಅದನ್ನು ಮರೆಯಬೇಡ.'

ತಂದೆಯ ಆ ನುಡಿ ಕೇಳಿ ಅತಿಕಾಯನು ಅಂತರ್ಮುಖಿಯಾದನು. ತನ್ನ ತಾಯಿ ತನಗೆ ತಾಯಿಯಾಗುವ ಮೊದಲು ಇನ್ನೊಬ್ಬನ ಅರಸಿಯಾಗಿ ಪತಿವ್ರತೆಯಾಗಿದ್ದಳು–ಎಂಬುದನ್ನು ಬಾಲ್ಯದಲ್ಲಿ ತಾನು ದಾದಿಯರ ಕಣ್ ಮಿಸುಕಿನಿಂದ ಮತ್ತು ಗುಟ್ಟಿನಂತೆ ಪಿಸುಗುಡುತ್ತಿದ್ದ ಮಾತುಗಳಿಂದ ತಿಳಿದದ್ದು ನೆನಪಾಯಿತು. ಅದು ಇಕ್ಕುಳದಂತೆ ಅವನ ಹೃದಯವನ್ನು ಹಿಡಿದು ಹಿಂಸಿಸಿತು. ಅವನ ವಿಶಾಲ ದೀರ್ಘಶರೀರ ಕುಗ್ಗಿತು.

ಅವನ ತಾಯಿಯು ಯಾವಾಗಲೂ ಅದ್ಯಾವುದೊ ವಿಷಾದದ ಅಂತರ್‌ಜ್ವಾಲೆಯಲ್ಲಿ ಬೆಂದು ಕೃಶಳಾಗಿದ್ದಳು. ಆದರೆ ಅದು ಯಾವುದನ್ನೂ ತೋರಗೊಡದೆ ಮೇಲೆ ನಗುನಗುತ್ತಿದ್ದಳು. ಅದನ್ನು ನೋಡುತ್ತ ಬಾಲ್ಯ ಬಲಿಯುತ್ತಿದ್ದಂತೆ ಅವನು ಒಮ್ಮೆ ದಾದಿಯರ ಮಾತಿನ ಮರ್ಮವನ್ನು ತಿಳಿಸೆಂದು ತನ್ನ ಅವ್ವನನ್ನು ಕೇಳಿದನು. ಅವಳು ಏನನ್ನೂ ಹೇಳದೆ, ಮಗನ ಮುದ್ದಿನ ಮುಖಕ್ಕೆ ಮುಖವಿಟ್ಟು ನಿಟ್ಟುಸಿರಿಟ್ಟಳು. ತನ್ನ ಅಶ್ರು ತೀರ್ಥದಲ್ಲಿ ಅವನನ್ನು ತೋಯಿಸಿದಳು. ಹೆತ್ತವಳ ಮೂಕಶೋಕ ಕಿಶೋರ ಹೃದಯಕ್ಕೆ ವಾಗ್ಮಿಯಾಗಿತ್ತು. ನೂರು ಉಪನ್ಯಾಸಗಳಿಗಿಂತಲೂ ಮಿಗಿಲು ಎಂಬಂತೆ ಧ್ವನಿಪೂರ್ಣವಾಗಿತ್ತು.

ಆ ತಾಯಿಯು ತನ್ನ ಆತ್ಮದುರಿಗೆ ಸುತನ ಮೋಹದಿಂಪನ್ನು ಸಿಂಪಡಿಸಿ ತಂಪಾಗಿಸುತ್ತಿದ್ದಳು. ತನ್ನ ಈ ಮೊದಲಿನ ಪ್ರೀತಿಯನ್ನು ಮರೆವಿನ ನರಕದನದಿ ವೈತರಣಿಯಲ್ಲಿ ಮುಳುಗಿಸಲು ಪ್ರಯತ್ನಿಸುತ್ತಿದ್ದಳು.

ಮನವೊಪ್ಪುದಿರ್ದುದಕೆ ತನುವೊಪ್ಪಿದವಳ ಬಾಳ್ ನರಕಮಾದುದು.

ಆದರೆ ಪತಿವ್ರತೆಯಾದ ಅವಳಿಗೆ, ಆ ಪ್ರಥಮ ನಿಷ್ಕಲ್ಮಶ ಪ್ರೇಮವನ್ನು; ದಶಕಂಠನ ದುರ್ಮೋಹ ವಜ್ರಾಘಾತಕ್ಕೆ ಉರುಳಿಹೋದ ಪವಿತ್ರಸಂಸಾರ ಗೋಪುರವನ್ನು ಮರೆಯುವುದು ಸುಲಭವೆ? ಮನಸ್ಸು ಒಪ್ಪದಿದ್ದುದಕ್ಕೆ ತನುವೊಪ್ಪಿಸಿದವಳ ಬಾಳು ನರಕವಾಯಿತು.

ಧರ್ಮಸ್ಮರಣ ಪುಣ್ಯ ಪಶ್ಚಾತ್ತಾಪ ಮೂರ್ತಿಯಾದ ಅವನಿಜೆಯನ್ನು ರಾವಣನು ತಂದನು. ಅದು ಧಾನ್ಯಮಾಲಿನಿಯನ್ನು ಸದ್ಗತಿಯ ಕಡೆಗೆ ಎಚ್ಚರಿಸಿತು. ಅವಳು ಅದುವರೆಗೆ ಮಗನ ಸುಂದರ ನಗೆಯ ಸ್ವರ್ಗದಿಂದ ಆ ನರಕ ಕೂಪವನ್ನು ಮುಚ್ಚಿ ಬದುಕುತ್ತಿದ್ದಳು.

ಧಾನ್ಯಮಾಲಿನಿಯು ಹೋಗಿ ಸೀತೆಯನ್ನು ನೋಡಿದಳು. ಭೂಜಾತೆಯು ಸಿದ್ಧಿಪಡೆದ ಯೋಗಿಯಂತೆ ಅವಳಿಗೆ ಕಂಡಳು. ತಾನು ಯೋಗಭ್ರಷ್ಟಳೆಂದುಕೊಂಡು ಪೂರ್ವದ ಘಟನೆಗಳನ್ನು ನೆನೆದು ತನ್ನ ಆತ್ಮಪತನಕ್ಕೆ ನೊಂದುಕೊಂಡಳು. ತುಂಬಾ ಕೊರಗಿದಳು. ಯಾರೂ ಅರಿಯದ ರೀತಿ ತಾನು ತಪಶ್ಚರ್ಯೆಯಲ್ಲಿ ತೊಡಗಿದಳು! ಅವಳ ಮುಖದಲ್ಲಿ ಮೊದಲಿದ್ದ ಮೋದಕುಸಿದು ವಿಷಾದದಕಳೆ ಮೂಡಿತು. ದನಿ ಕುಗ್ಗಿ ನುಡಿತಗ್ಗಿ ನೀರವತೆ ಮೃತ್ಯುವಿನ ನೆರಳಂತೆ ಅವಳನ್ನು ಸುತ್ತಿ ಸುಳಿದಾಡಿತು. ನೋಡುತ್ತಿದ್ದರೆ ರಾವಣನ ಪ್ರಣಯವಿರಲಿ, ತನ್ನ ಮಗನ ವಾತ್ಸಲ್ಯಮಧುವು ಆಕೆಗೆ ವಿಷದ ರೂಪವಾಗಿದ್ದಂತೆ ಕಂಡಿತು. ಓಹ್! ಆ ಧಾನ್ಯಮಾಲಿನಿಯ ಹೃದಯ ಸಂಕಟದ ಮರ್ಮ, ಪತಿವ್ರತೆಯ ಅಂತರ್ಭಾವವನ್ನು ತಿಳಿಯಲು ಯಾರಿಗೆ ಸಾಧ್ಯ?

ಮಗ ವೀರಅತಿಕಾಯನು ಅಮ್ಮನ ಮನೋವ್ಯಥೆಯನ್ನು ನಿವಾರಿಸುವ ಉಪಾಯವನ್ನು ಕಾಣದೆ ಹೋದನು. ಅತ್ತ ಪುಲಿ ಇತ್ತ ದರಿಯ ನಡುವೆ ನಿಂತಿದ್ದ ಅವನಿಗೆ ತಂದೆಯ ಆಜ್ಞೆಯ ಕಾಳಗದ ಕಣವೇ ಬಿಡುಗಡೆಯ ಬಾಗಿಲಾಗಿತ್ತು. ಅವನು ವೀರೋಚಿತವಾದ ರಣದ ಮರಣದ ಸುಯೋಗವನ್ನು ತೊರೆಯುವನೇನು?

'ನನ್ನಿಂದೆ, ನನಗಾಗಿ ನನ್ನ ತಾಯಿ ಬದುಕಿ ಬೇಯುತ್ತಿರುವಳಲ್ಲವೆ? ನನ್ನ ಸಾವು ತಾಯಿಗೆ ಮತ್ತು ನನಗೆ ಶಾಂತಿಯನ್ನು ಅನುಗ್ರಹಿಸುವುದಾದರೆ, ಇಂದಿನ ಯುದ್ಧವೇ ಆ ಶಾಂತಿಯನ್ನು ತರಲಿ!'

ಎಂದು ತನ್ನೊಳಗೆ ತಾನು ನಿಶ್ಚಯಿಸಿಕೊಂಡ ಅತಿಕಾಯನು ತಂದೆಗೆ ನಮಸ್ಕರಿಸಿ ಆಶೀರ್ವಾದ ಪಡೆದನು. ರಾತ್ರಿಯ ರಣಾಂಗಣದ ಸ್ವರ್ಗಮುಖದ ಮೆಟ್ಟಲಿನಂತಹ ರಜತಪರ್ವತಾರೋಹಣಕ್ಕೆ ಹೊರಟಂತೆ ರಥವನ್ನು ಏರಿದನು.

ಒಂದು ಬೇಸಗೆಯ ಹಗಲಿನಲ್ಲಿ ಮಲೆನಾಡಿನ ಕಾಡಿನ ಒಳಗೆ ಗಾಳಿಯ ಬಿರುಸಿಗೆ ಬಿದಿರಮೆಳೆ ಚೀರಿಡುತ್ತ ಒಂದಕ್ಕೊಂದು ತೀಡುತ್ತದೆ. ಆಗ ಹೆಣೆದುಕೊಂಡ ಮೆಳೆಗಳ ನಡುವೆ ಕಿಡಿ ಚಿಮ್ಮಿ ಹೊಗೆ ಹೊಮ್ಮುತ್ತದೆ. ನಿದ್ರಾವಸ್ಥೆಯಲ್ಲಿದ್ದ ದಾವಾಗ್ನಿಸರ್ಪವು ಹೆಡೆಬಿಚ್ಚಿ ಬುಸುಗುಡುತ್ತ ಹೊರಳಿ ಕೆರಳುತ್ತದೆ. ಭೀಕರವಾದ ಉರಿಯ ನಾಲಗೆಯನ್ನು ನಿಮಿರಿಸಿ ಮೆಳೆಯಿಂದ ಮೆಳೆಗೆ ನೆಗೆನೆಗೆದು ತಬ್ಬುತ್ತದೆ. ಭೋರಿಡುತ್ತ ಉಬ್ಬಿ ಕಾಡಿಗೆ ಹಬ್ಬುತ್ತದೆ. ಅಚ್ಚರಿಗೊಳಗಾದ ಮೃಗ ಪಕ್ಷಿಗಳು ಕೂಗಿ, ಅರಚಿ, ಚೀತ್ಕರಿಸುವಂತೆ ಸುಡುತ್ತದೆ. ಅರಣ್ಯವನ್ನು ಕರಿಕಾಗುವಂತೆ ಸುಡುತ್ತ ಕಪ್ಪು ದಾರಿಯನ್ನು ನಿರ್ಮಿಸುತ್ತದೆ.

ಅದು ಮಲೆಯ ನೆತ್ತಿಯಿಂದ ಕಣಿವೆಗೆ, ಒಕ್ಕಲಿಗರು ಇರುವ ಒಂದು ಹಳ್ಳಿಪ್ರದೇಶದ ಕಡೆಗೆ ದಾಳಿಯಿಡುತ್ತದೆ. ಆಗ ಅಲ್ಲಿ ಹಾಹಾಕಾರವೇಳುತ್ತದೆ. ಕಾಕು ಕೂಗುಗಳೆದ್ದು ಒಬ್ಬರು ಇನ್ನೊಬ್ಬರನ್ನು ಕರೆಯುವ ದನಿ ಮಾರ್ದನಿಗೊಳ್ಳುತ್ತದೆ.

ಕಾಡ್ಗಿಚ್ಚಿನ ಎದುರಾಗಿ ಬೆಂಕಿಯನ್ನು ಹೊತ್ತಿಸಲು ಮನಸ್ಸುಮಾಡಿದ ಹಳ್ಳಿಗರು ಕೊಳ್ಳಿಗಳನ್ನು ತೆಗೆದುಕೊಂಡು ನಡೆಯುವರು. ಅವರು ದನಗಳಿಗೆ ಮೀಸಲಾಗಿದ್ದ ಕರಡಹುಲ್ಲು ಬೆಳೆದು ಒಣಗಿನಿಂತಿದ್ದ ತಮ್ಮ ಸಂಪತ್ತಿನ ತಪ್ಪಲಿಗೆ ಹೋಗುವರು. ಅವು ಗೋವುಗಳಿಗೆ ಆಹಾರವಾಗಿದ್ದರೇನು? ಅದನ್ನು ತೆಗೆದುಕೊಂಡು ಹೋಗಿ ಹಳ್ಳಿಯನ್ನು ರಕ್ಷಿಸುವ ಸಾಧನವಾಗಿ ಎದುರು ಬೆಂಕಿಯನ್ನು ಹೊತ್ತಿಸುವರು!

ಆದರೆ, ಹೇಳುವುದೇನು? ವಿದ್ಯೆ ಇಲ್ಲದ ಗ್ರಾಮ್ಯಜನರ ಆ ಬೆಂಕಿಯು ಪ್ರಕೃತಿಯ ಭೀಮಾಕಾರದ ದಾವಾನಲವನ್ನು ಹತೋಟಿಯಲ್ಲಿಡಲು ಸಾಧ್ಯವೆ? ಕಾಡಿನಿಂದ ಏಳುವ ಗಾಳಿಯ ಬಲದಿಂದ ಅದು ಗದ್ದೆ ತೋಟಗಳ ಕಡೆಯ ಹುಲ್ಲು ಸೋಗೆಯನ್ನು ಹೊದೆದು ಮರೆಯಾಗಿದ್ದ ಸಲೀಸು ದೂರದ ಊರಿನ ಕಡೆಗೆ ನುಗ್ಗುತ್ತದೆ.

ಕೆಟ್ಟೆವೋ! ಕಂಗೆಟ್ಟೆವೋ! ಮನೆಗೆಟ್ಟೆವೋ! ಬಾಳುಗೆಟ್ಟೆವೋ! ಎಂದು ಕೂಗಿಕೊಳ್ಳುತ್ತ ಸಂಕಟಪಡುತ್ತ ತಮ್ಮ ಅಳುವ ಮಕ್ಕಳನ್ನು ಕಂಕುಳಲ್ಲಿ ಇರುಕಿಕೊಳ್ಳುವರು. ಮೊರ, ಮಡಿಕೆ, ಬಟ್ಟೆ, ಅಕ್ಕಿಯ ನುಚ್ಚನ್ನು ಬೆಂಕಿಯ ದವಡೆಯಿಂದ ಉಳಿಸಿಕೊಳ್ಳಲು ಪ್ರಯತ್ನಶೀಲರಾಗುವರು.

ಆ ಗ್ರಾಮೀಣ ಬಾಲೆಯರು ಗ್ರಾಮದೇವತೆಗಳನ್ನು ಹೆಸರಿಡಿದು ಕೂಗುವರು. ಕೂಗುತ್ತ ಪರದಾಡುವರು. ಪರದಾಡಿ ಬೇಡುವರು. ತೆಂಗಿನಕಾಯಿ, ಬಾಳೆಕಾಯಿ, ಕೋಳಿಮರಿ, ಕುರಿಮರಿಗಳನ್ನು ತಮ್ಮ ಇಷ್ಟ ದೇವತೆಗೆ ನೈವೇದ್ಯವಾಗಿ ನೀಡಲು ಮುಡಿಪುಕಟ್ಟಿ ಹರಕೆ ಹೊರುವರು. ಹೀಗೆ ಹೆಂಗಸರು ಗಂಡಸರು ಕಾಡುಗಿಚ್ಚನ್ನು ತಡೆಯುವ ಸಾಹಸದಲ್ಲಿರುವರು. ಆಗ ಮುಂಗಾರು ಮಹಾಕಾಳಿ ಹುಬ್ಬುಗಂಟಿಕ್ಕಿದಂತೆ ಬಾನಿನನೆತ್ತಿ ಕತ್ತಲಾಗುವುದು. ತಕ್ಷಣ ಆಗಸದ ಕಡೆಯಿಂದ ಅಗೋ ಎಲ್ಲರೂ ನೋಡಿ ಎನ್ನುವಂತೆ, ದೇವರ ರೂಪವನ್ನು ಪಡೆದು ಕೃಪೆತೋರಿದಂತೆ ಕಾರ್ಗಾಳಿ ಕಾರ್ಮುಗಿಲನ್ನು ಹೊತ್ತು ಬೀಸುವುದು.

ಕಣ್ಣು ಮುಚ್ಚಿ ತೆರೆಯುವಷ್ಟರಲ್ಲಿ ಸಿಡಿಲು, ಗುಡುಗು ಮಿಂಚುಗಳೊಡನೆ ಸುರಿಯುವ ಆಲಿಕಲ್ಲುಗಳ ಮಹಾಮಳೆ ಸುರಿಯುವುದು. ಒನಕೆಯಷ್ಟು ದಪ್ಪವಾಗಿ ಸುರಿಯುವ ಮಳೆಗೆ ಕಾಳ್ಗಿಚ್ಚು-ಕೆರೆಗೆಯಿಕ್ಕಿದ ಕೆಂಡದಂತೆ ನಂದಿಹೋಗಿ, ನಿಶ್ಶೇಷವಾಗುವುದು.

ಅತಿಕಾಯನುಳಿದನ್ ಸ್ಥೂಲಕಾಯಮಂ ರಣಮೇದಿನಿಯ ಮಧ್ಯೆ.

ರುದ್ರತನುವಿನ ಅತಿಕಾಯನು ಮುಂಗಾರಿನ ಮಳೆಯಂತೆ-ಕುಂಭ, ಮಕರಾಕ್ಷ, ನಿಕುಂಭರೊಡಗೂಡಿ ಉರಿಯಿಡುತ್ತಿರುವ ವೈರಿದಳಕ್ಕೆ ಎದುರಾಗಿ ನಡೆದನು. ಜಲಯಂತ್ರಗಳಿಂದ ವೇಗವಾಗಿ ಮಳೆಸುರಿಸಿ ವೈರಿ ವಾಹಿನಿಯಿಟ್ಟಿದ್ದ ಕಿಚ್ಚನ್ನು ಆರಿಸಿದನು. ಅವರು ಕೆಚ್ಚುಗೆಟ್ಟರು.

ಮದಗಜದಂತೆ ನುಗ್ಗುತ್ತಿದ್ದ ಅತಿಕಾಯನನ್ನು ಎದುರಿಸಿ ತಡೆಯುವುದಕ್ಕಾಗಿ ಕಂದಕ ತೋಡುವಂತೆ ಅಂಗದನು ಮೈಂದ ದ್ವಿವಿದರೊಡಗೂಡಿ ಆಯ್ದ ಪಡೆಯೊಡನೆ ಪ್ರಯತ್ನಿಸಿದನು. ಆಗ ಗೊಂದಲಮಯ ದೊಂಬಿಯುದ್ಧ ನಡೆಯಿತು. ರಾತ್ರಿ ಕಡೆಯಜಾವದ ಹೊತ್ತಿಗೆ ಕಪಿಸೇನೆಯು ಧಾನ್ಯಮಾಲಿನಿಯ ಪುತ್ರನ ಪ್ರಲಯ ಪೌರುಷಕ್ಕೆ ಸರಿಸರಿದು ಹಿಂಜರಿಯಿತು. ದಶಗ್ರೀವನ ದುರ್ಗವನ್ನು ತೊರೆದು ವೀರಸ್ವರ್ಗವನ್ನು ಸೇರುವಂತೆ ದೂರಕ್ಕೆ ಹೋಯಿತು. ತಮ್ಮ ಸೇನೆ ನಾಶವಾಗಲು ಕೆಲವು ಶ್ರೇಷ್ಠ ಬಲಿಷ್ಠರು, ಹಿರಿಯ ಸೇನಾನಿಗಳು ತಾವು ಮಾತ್ರ ಉಳಿದರು. ಕೆಟ್ಟ ವಾರ್ತೆಯನ್ನು ಹೊತ್ತು, ತಲೆತಗ್ಗಿಸಿಕೊಂಡು, ಬಿಡಿಬಿಡಿಯಾಗಿ ತಮ್ಮ ಶಿಬಿರಕ್ಕೆ ನಡೆದರು.

ಸೊಡರ ಕುಡಿಯನ್ನು ನಂದಿಸಲು ಪತಂಗವು ನುಗ್ಗಿ ದೀಪದ ಉರಿಯನ್ನು ಮಂಕಾಗಿಸುತ್ತ, ತಾನು ಆ ಬೆಂಕಿಗೆ ಸುಟ್ಟು ಸೀದು ಸಾಯುತ್ತದೆ. ಹಾಗೆ ವಾನರ ಅಗ್ನಿಯನ್ನು ಆರಿಸಿದ ಧಾನ್ಯಮಾಲಿನಿಯ ಕಂದ ಅತಿಕಾಯನು ತನ್ನ ಸ್ಥೂಲಕಾಯವನ್ನು ರಣರಂಗದ ಮಧ್ಯೆ ತ್ಯಜಿಸಿದನು. ತನ್ನ ಸೂಕ್ಷ್ಮಕಾಯದಲ್ಲಿ ಯಶೋಸ್ವರ್ಗದ ಕೀರ್ತಿಯ ಅಕ್ಷಯವಾದನು.

ಒಂದು ಕಡೆಯಿಂದ ಅಂಗದನ ನಾಯಕತ್ವದಲ್ಲಿ ವಾನರರು ರಾತ್ರಿ ಲಂಕೆಯನ್ನು ಮುತ್ತಿ ರಾಕ್ಷಸರ ಗಮನ ಅತ್ತ ಸೆಳೆಯುವಂತೆ ಮಾಡಿದರು. ಅತಿಕಾಯನೊಡನೆ ಹೋರಾಡುತ್ತಿದ್ದರು. ಅದೇ ಸಮಯದಲ್ಲಿ ಲಕ್ಷ್ಮಣನು ವಿಭೀಷಣನ ಹಿತ ಮಂತ್ರಾಲೋಚನೆಯಂತೆ, ಶ್ರೀರಾಮನಾಜ್ಞೆಯ ಆಶೀರ್ವಾದರಕ್ಷಣೆಗೆ ಒಳಗಾಗಿ ಇನ್ನೊಂದು ಕಡೆ ಇಂದ್ರಜಿತುವನ್ನು ಎದುರಿಸಲು ಹೋದನು. ಅವನು ಜಾಂಬವ, ಹನುಮ, ನೀಲ, ನಲರ ಮಿತ ಪರಿವಾರದೊಡನೆ ವಿಭೀಷಣನ ಸೂಚನೆಯಂತೆ ಇಂದ್ರಜಿತು ಮೇಘನಾದನು ನಿಕುಂಭಿಲೆಯ ಯಾಗದಲ್ಲಿದ್ದ ಆಲದ ಮರದ ಗುಹೆಯ ರಹಸ್ಯವನ್ನು ಹುಡುಕುತ್ತ ಹೋದನು. ರಾತ್ರಿ ಮುಗಿಯುವುದರೊಳಗಾಗಿ ಕೂಟಯೋಧಿಯ ಯಾಗ ಸಂಕಲ್ಪವನ್ನು ಕೆಡಿಸಿ, ಪರಾಭವಗೊಳಿಸಲು ಮುನ್ನಡೆದನು.

ರಚಿಸಿದನು ಮಂತ್ರಮಂಟಪಮಂ ಮಹೇಂದ್ರಾರಿ, ದೇವದಾನವ ದೃಗುಭಯಂಕರಮೆನಲ್.

ತ್ರಿಕೂಟಗಿರಿಯ ಅಗಮ್ಯ ಗಹನ ಗುಪ್ತ ಕಂದರದಲ್ಲಿ ಒಂದು ಆಲದ ಮರದ ಬುಡದಲ್ಲಿ ಸುವಿಸ್ತಾರವಾದ ಗುಹೆಯೊಂದಿತ್ತು. ಅದರಲ್ಲಿ ಮಹೇಂದ್ರಾರಿ ಮೇಘನಾದನು ದೇವ ದಾನವರ ದೃಷ್ಟಿಗೆ ಭಯಂಕರವೆನ್ನುವಂತೆ ಮಂತ್ರಮಂಟಪವನ್ನು ರಚಿಸಿದ್ದನು. ಜಡಪ್ರಾಪಂಚಿಕದ ಪಂಚ ಭೌತಾನ್ನಮಯದ ದೂರ ಹೊರ ವಲಯದಲ್ಲಿ ತನ್ನ ನೆಚ್ಚಿನ ಪರಾಕ್ರಮಿಗಳನ್ನು ಕಾವಲಿರಿಸಿದ್ದನು. ಮತ್ತು ಸೂಕ್ಷ್ಮದಲ್ಲಿ ಪಿಶಾಚಿಗಳಿಗೆ ಕಾವಲಿರಲು ಹೇಳಿದ್ದನು.

ಪ್ರಾಣಮಯಚಕ್ರದಲ್ಲಿ ಭೂತ ಮತ್ತು ಪ್ರೇತಗಳನ್ನು ಹಾಗೂ ಮಹತ್‌ಶಕ್ತಿಯ ಯಂತ್ರಗಳನ್ನು ನಿಲ್ಲಿಸಿದ್ದನು. ಪ್ರಾಣಮಯದ ಆಚೆಯ ಮನೋಮಯಲೋಕದಲ್ಲಿ ತನ್ನ ತಪಶ್ಶಕ್ತಿಯಿಂದ ಅಗ್ನಿಯ ಸಮುದ್ರವನ್ನು ನಿರ್ಮಿಸಿದ್ದನು. ಅದರ ಪರಧಿಯ ಮಧ್ಯೆ ಪದ್ಮದಂತೆ ಸಹಸ್ರದಳದಿಂದ ಮೆರೆಯುವ ವಜ್ರಮಯವಾದ ವೇದಿಕೆಯನ್ನು ತನ್ನ ಆತ್ಮಸಂಕಲ್ಪದಿಂದ ಸೃಷ್ಟಿಸಿದ್ದನು. ಅದರ ಮಧ್ಯೆ ದೈತ್ಯ ದುರ್ಮಂತ್ರ ತಾಂತ್ರಿಕವರೇಣ್ಯನಾದ ಅವನು ಭುವನತ್ರಯವು ಕಳವಳಿಸಿ ಕಾತರಿಸುವಂತೆ–ದುರ್‌ವಿಜ್ಞಾನ ಶಕ್ತಿಯನ್ನು ಆಹ್ವಾನಿಸುವ ದೀಕ್ಷಿತನಾಗಿ ಕುಳಿತನು.

ಅವನು ರೇಚಕ ಪೂರಕ ಕುಂಭಕ ವಿಧಾನಗಳಿಂದ ಪ್ರಾಣಗಳನ್ನು ನಿಕ್ಷೇಪ್ತಗೊಳಿಸಿದನು. ಜಡಭೌತ ನಿಯಮದ ಅನ್ನಮಯ ಜಗತ್ತಿನ ಕಟ್ಟುಗಳನ್ನು ಮೀರಿದನು. ಅವಿದ್ಯಾಮಾಯೆಯು ತನ್ನ ವಿದ್ಯಾಬಲವನ್ನು ಆದ್ಯ ಶಕ್ತಿಯ ಸೇವೆಯಲ್ಲಿ ಲೀಲಾರ್ಥದಂತೆ ಸಾರ್ಥಕವಾಗಿಸಿದ್ದ ಸರ್ವಾರ್ಥ ಸಿದ್ಧಿಲೋಕವನ್ನು ಸೇರಿದನು.

ಚಿತ್‌ಕುಂಡದಲ್ಲಿ ಇಚ್ಛಾಗ್ನಿಯನ್ನು ಪ್ರಜ್ವಲಿಸಿದನು. ದೃಢಚಿತ್ತವೆಂಬ ಯಜ್ಞಸ್ತಂಭವನ್ನು ಹೂಡಿದನು. ಕಡಿದು ಆಹುತಿ ನೀಡಲು ಇಂದ್ರಿಯ ಪಶುಗಳನ್ನು ಬಿಗಿದನು. ಅವನ ಎಲ್ಲ ಇಂದ್ರಿಯಗಳು ತಮ್ಮ ಸರ್ವಸ್ವವನ್ನು ಪ್ರತಿನಿಧಿಸಿದವು ಎನ್ನುವಂತೆ, ಎಂಟು ದಿಕ್ಕಿನ ಆನೆಗಳು ಒಂದಾದ ರೀತಿಯ ಮಹಾಗಾತ್ರದ ಬೃಹತ್ ಮೇಕೆಯು ಬಂದು ನಿಂತಿತು! ಅದರ ಹೊನ್ನಿನ ಬಣ್ಣದ ಉಣ್ಣೆಯು ಮಿಂಚುತ್ತಿರಲು, ಸುತ್ತಲಿನ ಅಗ್ನಿ ಬಣ್ಣ ಗೆಟ್ಟಿತು. ಯೋಜನದಷ್ಟು ಉದ್ದವಾದ ಕಬ್ಬಿಣದಖಡ್ಗದಿಂದ ಅದನ್ನು ಇಂದ್ರಜಿತು ತುಂಡರಿಸಿದನು. ರಕ್ತದ ಹೊನಲು ಕೋಡಿಹರಿದು ಯಜ್ಞದಬೆಂಕಿ ಧಗಧಗಿಸುತ್ತಿರಲು–ಅದು ಜಗದ ಪ್ರಳಯಕಾಲದ ಕೊನೆಯಕಿಚ್ಚಿನಂತೆ ಕಂಡಿತು!

ಆ ಅತೀಂದ್ರಿಯ ವ್ಯಾಪಾರವನ್ನು ಮನುಷ್ಯನ ಕಲ್ಪಿತ ಮರ್ತ್ಯಭಾಷೆಯ ಹೆಳವಲಿಪಿಯಲ್ಲಿ ಬಣ್ಣಿಸಲು ಕವಿಯ ವಾಣಿಗೆ ಸಾಧ್ಯವೆ? ಆದರೂ ಕೇಳುವವನಾಗು, ಕಣ್ಣು ಮುಚ್ಚಿದ ಅಂಗಳದಲ್ಲಿ ಕಂಡದ್ದನ್ನು ಹೇಳುತ್ತೇನೆ.

ರಾವಣಕುಮಾರನು ಅಥರ್ವವೇದದಲ್ಲಿ ಸೂಚಿಸಿರುವ ತಾಂತ್ರಿಕ ವಿಧಾನದಿಂದ ಮಹಾ ಮಾತೃಕೆಯರನ್ನು ಆಮಂತ್ರಿಸಿದನು. ತಕ್ಷಣ ಅವನಿಗೆ ಪರಿಧಿಯಾಗಿದ್ದ ಅಗ್ನಿಶರಧಿಯು ಕುದಿಯ ತೊಡಗಿತು. ಗಂಧಕದ ವಾಸನೆಯಿಂದ ಕೂಡಿದ ಧೂಮ ಮೇಘಗಳು ವಿಕಾರಆಕೃತಿಯ ಹಲವು ವಿನ್ಯಾಸಗಳಲ್ಲಿ ಹೊಮ್ಮಿ ಮನದ ಆಗಸವನ್ನು ವ್ಯಾಪಿಸಿದವು! ಕಲಿಯುಗದ ಭಯಂಕರ ಯುದ್ಧೋದ್ಯಮಕ್ಕೆ ಪಾಶ್ಚಾತ್ಯ ಭೌತವಿಜ್ಞಾನ ಯಮ ಆಸಕ್ತಿಯು ನಿರ್ಮಿಸುವ ಯಂತ್ರಕರ್ಮಾಗಾರದ್ದು ಭೂತಚೀತ್ಕಾರವಾಗಿದೆ. ಅಂತಹದನ್ನು ಮೀರಿಸುವ ಬೃಹತ್ ಶಬ್ದಕೋಟಿಗಳು ಹೊರಹೊಮ್ಮಿದುವು. ಅದು ಅಸುರ ವಿಜ್ಞಾನಿಯ ಜೀವವನ್ನೂ ತಲ್ಲಣಗೊಳಿಸಿತು!

ಅಗ್ನಿಮಯ ಅಗ್ನಿಸಮುದ್ರದ ತರಂಗಾಗ್ನಿಯು ಅಗ್ನಿಯ ಪರ್ವತಗಳಂತೆ ಉಬ್ಬಿ ಆಗಸವನ್ನು ತಿವಿದವು! ಹೇಳುವುದೇನು ಬೆಂಕಿಯ ಬಸಿರು ಹೆತ್ತಿತೊ ಎಂಬಂತೆ ಮಾನಸ ಮಹಾ ಆಕಾಶದಲ್ಲಿ ಮಹಾ ಮಂತ್ರಗಳು, ಅನ್ನಮಯ ಯಂತ್ರ ಮೂಲದ ಸೂಕ್ಷ್ಮ ತಂತ್ರಗಳು, ಪಶ್ಯಂತಿಗಳು ಮೂಡಿದವು.

ಅತೀಂದ್ರಿಯವು ನಿಧಾನ ನಿಧಾನವಾಗಿ ಮನೋಮಯದಲ್ಲಿ ಅವತರಿಸಲು, ಇಂದ್ರಜಿತುವಿನ ಮನಸ್ಸಿನಲ್ಲಿ ಮಧ್ಯಮಾ ರೂಪದಿಂದ ಬುದ್ಧಿ ಗೋಚರವಾಗಿ, ಅವನ

ಜಿಹ್ವೆಗೆ ಶ್ರುತಿಸಾಧ್ಯವಾದ ವೈಖರಿಯ ವಾಙ್ಮಯತೆ ಉಂಟಾಯಿತು! ಶಕ್ತಿಸಾಧಕ ಮೇಘನಾದನು ಆ ರೀತಿ ಭಯಂಕರ ವಿದ್ಯಾಶಕ್ತಿಯನ್ನು ಸಾಧಿಸುವ ಪ್ರಯತ್ನದಲ್ಲಿ ಯೋಗಿಯಾಗಿದ್ದನು.

ಆ ಕತ್ತಲೆಯ ಮರೆಯಲ್ಲಿ ತಪಸ್ವಿನಿ ಊರ್ಮಿಳೆಯಪತಿ ಲಕ್ಷ್ಮಣನು ಆಲದ ಮರದ ಕಂದರಕ್ಕೆ ಬಂದನು. ಮೇಘನಾದನ ಆಜ್ಞೆಯಿಂದ ಯಾಗ ರಕ್ಷಣೆಗಾಗಿ ಅಡಗಿನಿಂತಿದ್ದ ಕಾವಲು ಭಟರು ಮೇಲೆ ಹಾಯ್ದು ಬಂದರು. ಅವರನ್ನು ಸುಲಭವಾಗಿ ನಿಗ್ರಹಿಸಿದನು. ತಂದಿರುವ ಸೈನ್ಯವನ್ನು ನೀಲನ ನೇತೃತ್ವದಲ್ಲಿ ಕಾವಲಿರಲು ಹೇಳಿದನು. ಹನುಮ ಜಾಂಬವ ನಳ ವಿಭೀಷಣ ಸುಷೇಣರ ಕೂಡಿ ಮುಂದುವರೆದನು. ಅಲ್ಲಿ ಕೆಂಡದುರಿಯಲ್ಲದೆ ಇನ್ನೇನೂ ಕಾಣಲಿಲ್ಲ. ಅದನ್ನು ನೋಡಿ ರಾಮಾನುಜನು ರಾವಣಾನುಜನನ್ನು ಹೀಗೆ ಪ್ರಶ್ನಿಸಿದನು.

'ಅಸುರೇಂದ್ರನೇ, ನೀನು ಹೇಳಿದ ನಿಕುಂಭಿಲಾ ಯಾಗಶಾಲೆ ಎಲ್ಲಿದೆ? ಕಣ್ಣಿಗೆ ಬೆಂಕಿಯಲ್ಲದೆ ಇನ್ನೊಂದೇನೂ ಗೋಚರಿಸುತ್ತಿಲ್ಲ!'

ಅದಕ್ಕೆ ವಿಭೀಷಣನು ಇಂದ್ರಜಿತುವಿನ ಐಂದ್ರಜಾಲದ ತಂತ್ರವಿಸ್ಮಯ ವಿಧಾನವನ್ನು ಹೀಗೆ ತಿಳಿಸಿದನು:

'ದಶರಥಕುಮಾರನೇ ಕೇಳು. ದಶಶಿರನಮಗನು ಕೂಟ ವಿದ್ಯಾ ಕುಶಲ ಕಲೆಯಲ್ಲಿ ಅತಿ ಪ್ರವೀಣನು. ಅನ್ನಮಯ ತತ್ತ್ವಕ್ಕೆ ಅತೀತವಾದ ಅಮರ್ತದೀಪ್ತಿಯ ಅಂತರಿಕ್ಷಲೋಕದಲ್ಲಿ ನಿಕುಂಭಿಲಾ ಯಾಗವನ್ನು ರಚಿಸಿರುವನು. ಈ ಅಗ್ನಿ ಅದಕ್ಕೆ ಬಾಗಿಲು ಎಂಬುದು ದಿಟ! ಯೋಗ ನಿಪುಣನಾದ ಆಂಜನೇಯನು ಅಗ್ನಿಮುಖದಿಂದ ಇಂದ್ರಜಿತು ನಡೆಸುತ್ತಿರುವ ಯಾಗದ ಮಂತ್ರಮಂಟಪವನ್ನು ಪ್ರವೇಶಿಸುವುದನ್ನು ತಿಳಿದಿರುವನು. ರಾಮಾಜ್ಞೆಯನ್ನು ಶಿರದಲ್ಲಿ ಧರಿಸಿದ ಸತ್ತ್ವದ ಬಲದಿಂದ ಸೌಮಿತ್ರಿಯಾದ ನೀನು ಸಾಹಸದಿಂದ ಪ್ರಯತ್ನಿಸಿದರೆ ಯಶಸ್ವಿಯಾಗುವೆ. ಲಂಕೆಯ ಅಭ್ಯುದಯಕ್ಕೆ ಅಮಂಗಳವಾಗದಿದ್ದರೆ, ಅಗ್ನಿಶಕ್ತಿಯನ್ನು ಆತ್ಮ ಚೈತನ್ಯದಿಂದ ಗೆಲ್ಲಲು ನನಗೆ ಅಸಾಧ್ಯವಾದುದೇನಲ್ಲ.

'ರಾವಣಿಯ ವಧೆಯು ನಿನಗೆ ಮೀಸಲಾಗಿರುವುದರಿಂದ ನೀನು ಮೊದಲು ಪ್ರವೇಶಿಸು. ಅನಂತರ ಆಂಜನೇಯ. ಆಮೇಲೆ ನಮ್ಮಲ್ಲಿ ಯಾರು ಸಮರ್ಥರು ಎಂಬುದನ್ನು ನೋಡೋಣ.'

ಲಕ್ಷ್ಮಣ ಕಳೇಬರಂ ಸಿಡಿದು ಕೆಡೆದುದು ಸೀದ ಶವದಂತೆ!

ವಿಭೀಷಣನ ಅಭಿಪ್ರಾಯದ ಪ್ರಕಾರ ನಡೆಯಲು ಲಕ್ಷ್ಮಣನ ಚಿತ್ತವು ಮನೋರಥಕ್ಕೆ ಏರಿತು. ಯಾರ ಚಿತ್‌ತಪಸ್ಸಿನ ತೇಜಕ್ಕೆ ಸಮುದ್ರವು ಭಯಗೊಂಡು ಹಿಂಜರಿಯಿತೊ

ಆ ರಾಮನ ಋತಪ್ರಭುತ್ವದ ಪಾದಪದ್ಮಗಳನ್ನು ಸ್ಮರಿಸಿ ನಡೆದು ಅಗ್ನಿಚಕ್ರಕ್ಕೆ ಕಾಲಿಟ್ಟನು. ತಕ್ಷಣ ಸಿಡಿಲಿಗೆ ಬ್ರಹ್ಮಾಂಡ ಒಡೆದು ಹೋಯಿತೋ ಎಂಬಂತೆ ಸದ್ದಾಯಿತು. ಲಕ್ಷ್ಮಣನ ಶರೀರವು ಸಿಡಿದು, ಸೀದುಹೋದ ಶವದಂತೆ ಕೆಳಗೆ ಬಿದ್ದಿತು!

ವಿಭೀಷಣನ ಒಡಲು ನಡುಗಿತು. ನಳ ಮೂರ್ಛಿತನಾದನು. ಜಾಂಬವನಿಗೆ ಉಸಿರು ಕಟ್ಟಿತು. ಸುಷೇಣನಿಗೆ ದಿಗ್‌ಭ್ರಮೆ ಕವಿಯಿತು. ಸಮುದ್ರಸಾಹಸಿ ಪರ್ವತಚೇತನ ಆಂಜನೇಯನಿಗೆ ಆಶ್ಚರ್ಯವಾಯಿತು. ಪ್ರಾಣ ಪೀಡಕವಾದ, ಸಹಿಸಲು ಅಸಾಧ್ಯವಾದ ದುರ್ಗಂಧಹೊಮ್ಮಿ ಹೊಗೆಯಮುಗಿಲು ಆವರಿಸಿತು. ಅವರುಗಳು ಬದುಕಿದುದೇ ಪುಣ್ಯ!

ದೇವರ ಸಹಾಯವೆನ್ನುವಂತೆ ತಂಗಾಳಿ ಬೀಸಿತು. ಅಮೃತವನ್ನು ತಂದು ಬೀಸಿದ ಗಾಳಿಯು ವಿಷವನ್ನು ನಿವಾರಿಸಿತು. ಅದರಿಂದ ಐವರೂ ಬದುಕಿಕೊಂಡರು. ಸೌಮಿತ್ರಿಯು ಅಪಮೃತ್ಯುವಿಗೆ ತುತ್ತಾಗಿರುವುದನ್ನು ನೋಡಿದರು. ಹೇಳುವುದೇನಿದೆ? ಗುರುತಿಸಲು ಅಸಾಧ್ಯವೆನ್ನುವಂತೆ ರವಿವಂಶಜನ ಮೈಯು ಕಾಜಾಣ ಹಕ್ಕಿಯ ಗರಿಯ ಕಾಡಿಗೆಯ ಕಪ್ಪುಬಣ್ಣಕ್ಕೆ ತಿರುಗಿತ್ತು. ಕಣ್ಣುಗುಡ್ಡೆಗಳು ಹಿಸುಕಿದಂತೆ ಹೊರಹೊಮ್ಮಿ ಅವನ ಮುಖ ವಿಕಾರವಾಗಿತ್ತು. ಅಲ್ಲಲ್ಲಿ ಸುಲಿದ ಮೈಯಿಂದ ಬಿಳುಪಾಗಿ, ಗಾಯಗಳಿಂದ ಕೆಟ್ಟನೀರು ಸುರಿಯುತ್ತಿತ್ತು. ಆ ನೋಡಬಾರದ ನೋಟವನ್ನು ನೋಡಲಾರದೆ ನೋಡಿ ಹೆದರಿದರು. ಕಣ್ಮುಚ್ಚಿ ತಮ್ಮತಮ್ಮ ದೇವರನ್ನು ನೆನೆದು ಕಣ್ಣೀರು ಸುರಿಸಿದರು.

ವಾನರ ಮಹಾವೈದ್ಯ ಗುರು ಸುಷೇಣನು ಲಕ್ಷ್ಮಣನನ್ನು ಪರೀಕ್ಷಿಸಿದ ನಂತರ ತನ್ನ ದೀರ್ಘಧ್ಯಾನದ ಫಲವಾಗಿ ಹೀಗೆ ಹೇಳಿದನು:

'ಇದು ಅಭೌತ ಶಕ್ತಿಯ ಆಘಾತ. ಇದಕ್ಕೆ ಇಲ್ಲಿ ಭೌತಿಕವಾದ ಯಾವ ಔಷಧವೂ ಇಲ್ಲ. ನಾನು ಮಂತ್ರವನ್ನು ತಿಳಿದಿದ್ದರೂ ಅದಕ್ಕೆ ಔಷಧೀ ಯಂತ್ರದ ಸಹಾಯ ಸೇವಾ ಸ್ಫೂರ್ತಿ ಅವಶ್ಯಕ. ಆದುದರಿಂದ ತಡಮಾಡದೆ ಅದನ್ನು ತಂದರೆ ರಾಘವಾನುಜನು ಬದುಕುವನು. ಹೊತ್ತು ಮೀರಿದರೆ ಪ್ರಾಣಕ್ಕೆ ಅಪಾಯವಿದೆ. ಒಡಲು ತನ್ನ ಜೀವ ಸಾಮರ್ಥ್ಯದಿಂದ ವಿಮುಖವಾಗುವ ಮೊದಲು ಈತನ ಪ್ರಾಣವನ್ನು ನಾನು ಬಹಿಃಪ್ರಜ್ಞೆಗೆ ಎಳೆಯಬೇಕು. ಇಲ್ಲದಿದ್ದರೆ ಕಪಿಧ್ವಜದ ಯಶಃಸೂರ್ಯ ಮುಳುಗುವನು; ರಾಮಕಾರ್ಯ ಕೆಡುತ್ತದೆ! ಹೋಗುವವರು ಯಾರು? ತರುವವರು ಯಾರು? ಹಲವಾರು ಯೋಜನಗಳು ದಾಟಿಹೋಗಿ ಹಿಮವತ್‌ಪರ್ವತದ ಆಚೆಗೆ ಕೈಲಾಸ ಪರ್ವತ ಮತ್ತು ವೃಷಭಪರ್ವತಗಳ ನಡುವೆ ಅನಿರ್ವಚನೀಯ ಕಾಂತಿಯಿಂದ ಜ್ವಲಿಸುತ್ತಿರುವ ಓಷಧಿ ಪರ್ವತವನ್ನು ಸೇರಿ, ಮೃತ ಸಂಜೀವಿನೀ ಲತೆಯ ಬೇರುಗಳನ್ನು ತರುವವರು ಯಾರು? ಬೇಗನೆ ಬರುವವರು ಯಾರು? ಅಮೃತವನ್ನು ಸುರಿಸುವವರು ಯಾರು?'

ಸಮೀರಾತ್ಮಜಂ! 'ಪೋಪೆನಾಂ, ತರ್ಪೆನಾಂ!' ಎನುತೆ ಉದ್ಘೋಷಿಸಿದನು.

ಸುಷೇಣನ ಮಾತುಗಳನ್ನು ಕೇಳಿ ಆಂಜನೇಯನು ಸಮುದ್ರದ ರೀತಿಯಲ್ಲಿ ಉಬ್ಬಿದನು; ಗಿರಿಯಂತೆ ಬೆಳೆದನು; ಗಗನದ ರೀತಿ ವಿಸ್ತಾರವಾದನು. 'ನಾನು ಹೋಗುತ್ತೇನೆ, ನಾನು ತರುತ್ತೇನೆ' ಎಂದು ಘೋಷಿಸಿದನು. ಸಿದ್ಧತೆಗೆ ತೊಡಗಿದನು. ಅವನಿಗೆ ಸುಷೇಣನು ಹೀಗೆ ಹೇಳಿದನು:

'ನೀನು ಅನ್ನಮಯ ಭೌತಪ್ರಪಂಚದ ಕಾಲದೇಶದ ದಾರಿಯಲ್ಲಿ ಸಂಚರಿಸಿದರೆ, ಹೋಗಿಬರಲು ಒಂದು ದಿನ ಬೇಕು. ಪ್ರಾಣಮಯಮಾರ್ಗದಲ್ಲಿ ಸಂಚರಿಸಿದರೆ ಒಂದು ಮುಹೂರ್ತಕಾಲ ಬೇಕು. ಸಮೀರ ಕುಮಾರನೇ, ನಿನಗೆ ಅಸಾಧ್ಯವಾದುದು ಯಾವುದೂ ಇಲ್ಲ. ಮನೋಮಯಮಾರ್ಗದಿಂದ ಸಂಚರಿಸಿದರೆ ನೀನು ಅತಿ ಶೀಘ್ರದಿಂದ ಸಫಲನಾಗುವೆ. ಬದುಕಿದ ಈ ಸೌಮಿತ್ರಿಯು ನಿಜವಾಗಿಯೂ ಮೇಘನಾದನನ್ನು ಸಂಹರಿಸುವನು! ನಿನ್ನ ಪ್ರಯಾಣ ಶುಭವಾಗಲಿ!'

ಯೋಗಿಆಂಜನೇಯನು ಮನೋಮಯದ ಪಥದಲ್ಲಿ ಚಲಿಸಲು ತೊಡಗಿದನು. ಸುಷೇಣಾದಿಗಳು ನೋಡು ನೋಡುತ್ತಿದ್ದಂತೆ ಕಣ್ಣು ಮಂಜಾದಂತಾಗಿ, ಅಂಜನಾಸುತನ ಶರೀರ ಮಸುಕಾಯಿತು. ಕಣ್ಣಿಗೆ ಮಾಯೆ ಕವಿದಂತಾಗಿ, ಆಂಜನೇಯ ಕಾಣಿಸದಾದನು!

ಹನುಮಂತನು ಮೃಣ್ಮಯವನ್ನು ತ್ಯಜಿಸಿದನು. ಅದಕ್ಕೆ ಬೆಂಬಲವಾಗಿ ಅದರ ಹಿಂದಿರುವ ಸೂಕ್ಷ್ಮಾನ್ನಮಯ ಕೋಶವನ್ನು ಪ್ರವೇಶಿಸಿದನು. ತಕ್ಷಣ ಅಲ್ಲಿ ಈ ಪ್ರಕೃತಿ ಲೋಕಕ್ಕೆ ಬ್ರಹ್ಮನು ನಿರ್ಮಿಸಿರುವ ಆದರ್ಶ ಮೂಲಕೃತಿ ಎನಿಸುವ ಪರಮಾತ್ಮನ ಸ್ವರೂಪವೇ ಆದ ಪೃಥ್ವಿಯನ್ನು ಕಂಡನು.

ಪೃಥ್ವಿಯ ಆಕರ್ಷಣಾ ಸೆಳೆತದ ಹತೋಟಿಗೆ ಒಳಗಾದ ಭಾರದಿಂದ ಬಿಡುಗಡೆಗೊಂಡನು. ಅಣುವಿನಂತೆ ಭಾರರಹಿತ ಪ್ರಪಂಚದಲ್ಲಿ ಮಿಂಚಿನಂತೆ ಸಂಚರಿಸಿ; ಮಿಂಚಿನಂತೆ ತಳತಳಿಸಿ ಪ್ರೇತಪ್ರಪಂಚವನ್ನು ಪ್ರವೇಶಿಸಿದನು. ದುಷ್ಟಉದ್ದೇಶದ ಪಿಶಾಚಿಗಳು ಸುತ್ತಲೂ ಮುತ್ತಿಬರಲು ಅವುಗಳನ್ನು ತನ್ನ ತೇಜಸ್ಸಿನಿಂದ ಭಯಗೊಳಿಸುತ್ತ ಮುನ್ನಡೆದನು. ಆಗ ಎರಡು ಪಕ್ಕಗಳಿಂದ ಜಯಕಾರ ಹೊಮ್ಮಿತು. ತನ್ನ ಕಾರ್ಯಕ್ಕೆ ಗೆಲುವನ್ನು ಆಶಿಸಿದ ಸತ್ ಪ್ರೇತಗಳ ಕಂಠದಿಂದ ಸ್ವಸ್ತಿವಾಚನವಾಯಿತು.

ಪ್ರಾಣದೇವನ ಕುಮಾರನು ತನ್ನ ಹರ್ಷವನ್ನು ವಿವಿಧ ವರ್ಣಗಳಿಂದ ಪ್ರದರ್ಶಿಸುತ್ತ ಪ್ರಾಣಶಕ್ತಿಯಿಂದ ಮಹದ್‌ಭವ್ಯವಾದ ಅತೀಂದ್ರಿಯ ಪ್ರಾಣಮಯ ಆಕಾಶವನ್ನು ಪ್ರವೇಶಿಸಿದನು ದಿಗಂತದಲ್ಲಿ ಧ್ಯಾನ ಮುದ್ರೆಯಲ್ಲಿರುವಂತೆ ಇದ್ದ ಪ್ರಾಣದೇವತೆಗಳ ಪರ್ವತೋಪಮ ಬೃಹತ್ ರೂಪಗಳನ್ನು ಕಂಡು ಕೈಮುಗಿದನು. ಅವರಿಂದ ಆಶೀರ್ವಾದವನ್ನು ಪಡೆದು ಮುಂದುವರಿದ ಕಪಿಧ್ವಜನು ಮನೋಮಯಕ್ಕೆ ಧುಮುಕಿದನು. ಆಗ ಒಂದು ಬೃಹತ್ ಛಾಯೆಯು ಅವನ ನಡೆಯನ್ನು ತಡೆಗಟ್ಟಿತು!

ಮರಕತ ಅಗ್ನಿಯಂತೆ ನಗುವ ಕಾಂತಿಯ ಆಕಾರರಹಿತ ದೇವರನ್ನು ಕಂಡು, ಇದೇನು ಎಂದು ಆಶ್ಚರ್ಯಚಕಿತನಾಗಿರಲು

'ಮರುತ್‌ಸೂನುವೇ, ನಾನು ನಿನಗೆ ಕೇಡನ್ನುಂಟು ಮಾಡಲು ತಡೆದವನು ಅಲ್ಲ. ನಾನು ಮಾರೀಚ ಎಂಬ ಹೆಸರಿನಿಂದ ಬದುಕಿದ್ದೆ. ತಪವನ್ನು ಆಚರಿಸಿ ಅದರಪುಣ್ಯದಿಂದ ಉತ್ತಮಲೋಕಗಳನ್ನು ಪಡೆಯಬೇಕೆಂದಿದ್ದೆ. ಏನು ಹೇಳಲಿ? ನನ್ನನ್ನು ಭ್ರಾಂತಿಯೊಂದು ಈ ಪ್ರಾಣಮಯದಲ್ಲಿ ಹಿಡಿದು ಬಂಧಿಸಿದೆ. ಇದನ್ನು ಭೂಲೋಕದವರು ಕೇಳಿಸಿಕೊಳ್ಳಬಾರದು. ಆದರೆ ಮರ್ತ್ಯವಲ್ಲದ ವಿಧಾನದಿಂದ ಹೇಳಿದರೆ ಮರ್ತ್ಯಕ್ಕೆ ಅರ್ಥವೇನಿದೆ?'

ಎಂದು ಮಾರೀಚನ ಪ್ರಾಣಛಾಯೆಯು ಮಾತಾಡದೆ, ವಚನೀಯವಲ್ಲದ ಅಚಿಂತ್ಯ ರೀತಿಯಲ್ಲಿ ತನ್ನ ಆಸೆಯನ್ನು ಅಭಿವ್ಯಕ್ತಿಸಿತು. ಪ್ರಾಣಮಯ ಜಗತ್ ನಿಯಮದ ಪ್ರಕಾರ ಮಾರುತಿಯಿಂದ ತೃಪ್ತವಾಗಿ, ಅವನಿಗೆ ಮನೋಮಯ ಲೋಕಮಾರ್ಗದ ಹಾದಿ ತೋರಿಸಿತು.

ಮಾರೀಚನ ಆತ್ಮದ ಆ ಪ್ರಾಣಮಯ ರೂಪದಿಂದ ಬೀಳ್ಕೊಂಡನು. ಆ ಯೋಗಿಯು ಹಾವು ತನ್ನ ಹಳೆಯ ಪೊರೆಯನ್ನು ಕಳಚಿ ತೊರೆಯುವಂತೆ ಪ್ರಾಣಮಯ ಕೋಶವನ್ನು ಸುಲಿದಿಕ್ಕಿದನು. ಪ್ರಾಣತತ್ತ್ವದ ರಜೋಮಯ ನಭೋವಲಯದಿಂದ ಮನೋಮಯದ ಸಾತ್ತ್ವಿಕ ಆಕಾಶಕ್ಕೆ ಚಿದಾಕಾರವನ್ನು ಧರಿಸಿ ಪ್ರವೇಶಿಸಿದನು!

ಅದನ್ನು ಯಾವ ಕಲ್ಪನೆಯ ಕಣ್ಣು ಅರಿಯಲು ಸಾಧ್ಯ? ಕಂಡದ್ದನ್ನು ಯಾವ ಕವಿತಾನೆ ವರ್ಣಿಸುವನು? ಚಿದ್‌ರೂಪಿಯಾದ ಆಂಜನೇಯನಿಗೆ ತನ್ನನ್ನು ಉಳಿಸಿಕೊಂಡು ಶೂನ್ಯವಾದಂತಹ ಚಿತ್ ಸಮುದ್ರದಲ್ಲಿ ಅಲೆಯುವ ಚಿದ್‌ತರಂಗದ ಅನುಭವವಾಯಿತು. ಅವನು ಅನ್ನಮಯ, ಪ್ರಾಣಮಯ ಭೂಮಿಕೆಗಳನ್ನು ತುಂಬಿ, ಆವರಿಸಿ ಕಣಕಣದಲ್ಲಿಯಿದ್ದರೂ ಅಂತರ್ಯಾಮಿಯಾಗಿಯೂ ಅತೀತನು ಎನ್ನುವ ಮನೋಮಯ ದರ್ಶನಕ್ಕೊಳಗಾಗಿಯೂ ರಸವಶನಾದನು.

ತನ್ನ ಸಿದ್ಧಿಗೆ ತಾನೆ ಬೆರಗಾದನಂಜನಾ ಪ್ರಿಯಕುಮಾರಂ

ಶುದ್ಧ ತತ್ತ್ವದಲ್ಲಿ ಚಿತ್ತವೃತ್ತಿಗಳು ಎಂದೂ ತಿಳಿಯದ ಶಾಂತಿಯನ್ನು ಹೊಂದಿದವು. ಅಲ್ಲಿ ಸ್ವಾತಂತ್ರ್ಯವನ್ನು ಸವಿಯುವ ವಿಶ್ವತಂತ್ರದಲ್ಲಿ ಚಲಿಸಿದವು. ತಾನೆ ಎಲ್ಲವೂ ಆದಂತೆ ಮತ್ತು ತನ್ನಲ್ಲಿಯೆ ಎಲ್ಲವೂ ಆದಂತೆ ವಿರಾಣ್ ಮನದವನಾಗಿ ಆಂಜನೇಯನು ತನ್ನ ಸಿದ್ಧಿಗೆ ತಾನೆ ಬೆರಗಾದನು. ಚಿದಾಕಾರದ ನೆಲೆಯೊ? ಚಿಜ್ಜ್ಯೋತಿ ಸಾಗರವೊ? ನಾಮರೂಪದ ನಿಧಿಯೊ? ಸರ್ವಸೃಷ್ಟಿಯ ವಿಧಿಯೊ? ಏನೆಂದು ಹೇಳಲಾಗದ ಅವೆಲ್ಲವೂ ಅವನ ಸಮಾಧಿಯ ಯೋಗಸಿದ್ಧಿಯಲ್ಲಿದ್ದವು.

ಮನುಷ್ಯನ ಬುದ್ಧಿಯಲ್ಲಿ ಉಂಟಾಗುವ ಭವ್ಯವಾದ ಆಲೋಚನೆಗಳ ಆತ್ಮಗಳು ತಮ್ಮ ಮೂಲರೂಪದಲ್ಲಿ ಅಲ್ಲಿ ಪ್ರಕಾಶಿಸಿದವು. ಪ್ರತಿಭೆಗಳು, ಧ್ಯಾನಗಳು, ಭಾವಗಳು, ತಂತ್ರಗಳು, ಮಂತ್ರಗಳು, ಯಂತ್ರಗಳು ಹಿಂದೆ ಅನ್ನಮಯದಲ್ಲಿ ಪರಿಣಾಮಗೊಂಡು ಪೃಥ್ವಿಯಲ್ಲಿ ಪ್ರಕಾಶಿಸಿದ ತತ್ತ್ವಗಳು ಮತ್ತು ಅಲ್ಲೆಲ್ಲಿಯೂ ಪ್ರಕಟಗೊಳ್ಳದೆ ಪರಿಣಾಮದಲ್ಲಿ ಮುಂದೆ ಮರ್ತ್ಯಕ್ಕಿಳಿದು ಕಾಣಲಿರುವ ದಿವ್ಯ ತತ್ತ್ವಗಳು–ಚಿತ್ ತಪಸ್ ಶಕ್ತಿಯ ತುರೀಯ ವಿನ್ಯಾಸದಿಂದ ಸ್ವಸ್ವರೂಪದಲ್ಲಿ ಅಲ್ಲಿ ಪ್ರಕಾಶಿಸಿದವು!

ಚೈತನ್ಯಸ್ವರೂಪಿಯಾದ ಆ ಅನಿಲಜನು ಅಲ್ಲಿಯ ದಿವ್ಯಾನುಭವಕ್ಕೆ ರಸವಶಿಯಾದನು. ತನ್ನ ಅಹಂಕಾರವು ಲಯವಾಗುತ್ತಿರುವುದನ್ನು ಅರಿತು ಬೆಚ್ಚಿದನು. 'ಮನೋಮಯದಲ್ಲಿ ಸಂಚರಿಸುವ ಸಾಹಸಿಗೆ ಸ್ವಾರ್ಥಸಾಧನೆಗೆ ಎದುರಾಗುವ ಅಪಾಯವೆಂದು ಸುಷೇಣನು ಹೇಳಿದ್ದು ಇದೆ.' ಎಂದುಕೊಂಡನು. ತನ್ನ ಪ್ರತ್ಯೇಕತಾವ್ಯಕ್ತಿತ್ವವನ್ನು ರಕ್ಷಿಸಿಕೊಳ್ಳಲು ನಿಶ್ಚಯಿಸಿದನು. ಮೊದಲು ತನ್ನ ತನವು ಅನ್ಯತನವಾಗದಂತೆ, ತನ್ನ ಅಹಂಕಾರವು ಬಲಿಯುವ ತನ್ನ ಕೀರ್ತಿಯ ಹೆಸರುಗಳನ್ನು ತಾನೆ ಜಪಿಸಿದನು. ತನ್ನ ಪ್ರತ್ಯೇಕತೆಯು ಆ ವಿರಾಟ್ ಪ್ರತ್ಯೇಕತೆಯಲ್ಲಿ ಒಂದಾಗಿ ಅದ್ವಯ ಪ್ರಲಯದಲ್ಲಿ ಲೀನವಾಗದ ರೀತಿ, ರಾವಣ ದ್ವೇಷವನ್ನು ಅಂತಃಕರಣದಲ್ಲಿ ಹೆಚ್ಚಿಸಿಕೊಂಡನು. ತನ್ನ ಅಹಂಭಾವದ ಬುದ್ಧಿಯನ್ನು ಉದ್ದೀಪನಗೊಳಿಸಿಕೊಂಡನು!

ಆ ಎರಡಕ್ಕೂ ಮಿಗಿಲಾಗಿ ಮಾರುತಿಗೆ ಆದ ಭಯಂಕರ ಅನುಭವವೆಂದರೆ ತನ್ನ ಕೆಲಸದ ಕೊರಳಿಗೆ ಉರುಲಾಗುವಂತಹ ಅನುಪಮ ವಿದ್ಯಾನುಭೂತಿ. ಅವನ ಎದುರು ರಾಮಾಯಣದ ಮಹಿಮೆಯನ್ನು ಮಂಕಾಗಿಸುವ ಜೀವನೋದ್ದೇಶಗಳು, ಜೀವನ ಚರಿತ್ರೆಗಳು, ಸಾಹಸಗಳ ಆತ್ಮಗಳು ಮತ್ತು ಸಿದ್ಧಿಸಾಧನೆಗಳು ರಾರಾಜಿಸಿದವು! ಅವರ ಎದುರು ತಾನು ಮತ್ತು ತನ್ನ ಸಾಹಸೋದ್ಯೋಗವು ಕಿರಿದಾಗಿಯು ಕೀಳಾಗಿಯು ಅನಿಲಜನಿಗೆ ತೋರಿತು. ಅವನ ಮನಸ್ಸು ಬೇಸರದಿಂದ ವೈರಾಗಿಯಂತಾಯಿತು.

'ಭೂಮವಾದುದು ಇರಲು ಅಲ್ಪಸಾಹಸಕ್ಕೆ ಆತ್ಮವನ್ನು ನಿವೇದಿಸುವ ನನ್ನ ಈ ಮೂರ್ಖತೆಗೆ ಧಿಕ್ಕಾರ! ಅಲ್ಪವನ್ನು ತೊರೆಯುತ್ತೇನೆ. ಭೂಮಸಾಧನೆಗಳಲ್ಲಿ ಒಂದು ಉತ್ತಮವಾದುದನ್ನು ಕೈಗೊಳ್ಳುತ್ತೇನೆ.'

ಎಂದುಕೊಂಡ ಅವನ ಆತ್ಮಸಿದ್ಧಿಯ ಲೋಭವು ಹೀಗೆ ಪ್ರಲೋಭನಕ್ಕೆ ಒಳಗಾಯಿತು. ಆಗ ಆತ್ಮಬುದ್ಧಿಯ ವಿವೇಕವು ಜನ್ಮಧರ್ಮದ ಕರ್ತವ್ಯ ಕರ್ಮವನ್ನು ಎಚ್ಚರಿಸಿತು.

'ಈ ಇಹಲೋಕ ಲೀಲೆಗೆ ಒಪ್ಪಿ ಇಲ್ಲಿಗೆ ಬಂದ ಮೇಲೆ, ಅದು ಕೊನೆಗೊಳ್ಳುವ ಮೊದಲೆ ಇಲ್ಲಿಂದ ಅನ್ಯ ಲೋಕಕ್ಕೆ ಹೋಗಲು ನಿತ್ಯಬದ್ಧನು ಆಶಿಸುವನೆ? ಲೋಕವು ಯಾವುದಾದರೆ ಏನು? ಸಚ್ಚಿದಾನಂದದ ಈ ಲೀಲಾ ವಿನೋದದಲ್ಲಿ ಯಾವುದೂ ಹೆಚ್ಚು ಕಡಿಮೆಯಲ್ಲ!'

ಎಂಬ ಆತ್ಮವಾಣಿಯ ಬೋಧೆಗೆ ಒಳಗಾಗಿ ರಾಮದೂತನ ಪ್ರಜ್ಞೆ ಎಚ್ಚೆತ್ತುಕೊಂಡಿತು. ತನ್ನ ಈ ಮುಂಚಿನ ಆಜ್ಞಾನಕ್ಕೆ ನಾಚಿದನು. ತಾನು ಹೊತ್ತು ನಿರ್ವಹಿಸಬೇಕಾದ ಕೆಲಸದತ್ತ ಮುನ್ನಡೆದನು.

ಹಾರಿದನು ಗುರಿಗೆ, ಗರಿಮೂಡಿದೋಲ್

ಅನೇಕ ಮೋಹಮಯ ಚಂಚಲತೆಯನ್ನು ಜಯಿಸಿದನು. ಏಕಾಗ್ರಮತಿಯಿಂದ ಅಚಂಚಲ ಮನದಿಂದ ಗುರಿಯ ಕಡೆಗೆ ಉತ್ಸಾಹದಿಂದ ಗರಿಮೂಡಿದಂತೆ ಹಾರಿದನು. ಹಿಮಾಚಲಪರ್ವತವನ್ನು ದಾಟಿದನು. ನಕ್ಷತ್ರ ಮಾರ್ಗದಾಟಿ, ಋಷಭಾದ್ರಿಯನ್ನು ನೋಡಿದನು. ಮೇಘಾವೃತವಾದ ಓಷಧಿಗಿರಿಯನ್ನು ಗುರುತಿಸಿ ಅದರ ಜ್ಯೋತಿ ಶಿಖರದಲ್ಲಿ ಇಳಿದನು. ಮನೋಮಯ ಶರೀರಿಯಾದ ಅವನು ಅಲ್ಲಿಯ ತರತರದ ಬಣ್ಣಗಳ, ಬೆಳಕುಗಳ, ಕಂಪುಗಳ, ಕಾಂತಿಗಳ ಜೀವದಲ್ಲಿ ತಾನು ಅದೇ ಅದೇ ಆಗಿ ಓಡಾಡಿದನು.

ಯೌಗಿಕ ವಿಧಾನದಲ್ಲಿ ಹುಡುಕುತ್ತ ತಾತ್ತ್ವಿಕ ಮಹತ್ವದ ಮನೋಹರ ಸಂಜೀವಿನಿ ಲತೆಯನ್ನು ಕಂಡನು. ಕಡೆದಿರಿಸಿದ ಇಂದ್ರಚಾಪವೆನ್ನುವಂತೆ ವರ್ಣಮಯವಾದ ಸುಂದರ ಸುವರ್ಣಕಾಂತಿಯ ಎಲೆಗಳು ಜೀವಸತ್ತ್ವಗಳಂತೆ ಮಿರುಮಿರುಗಿದುವು. ಮರ್ತ್ಯಜೀವರ ಆಘ್ರಾಣ ಸಾಮರ್ಥ್ಯಕ್ಕೆ ಹೊಂದಿಕೆಯಾಗದ ದಿವ್ಯ ಪರಿಮಳವೊಂದು ಆಂಜನೇಯನನ್ನು ಸುಖೋನ್ಮಾದಿಯಾಗುವಂತೆ ಮಾಡಿತು. ಸಸ್ಯಶರೀರಿಯಾಗಿ ಋತಚಿದ್ ರಹಸ್ಯ ಶಕ್ತಿಯನ್ನು ತನ್ನ ಅಂತರಂಗದಲ್ಲಿ ಮಂತ್ರರೂಪದಿಂದ ಪಡೆದಿದ್ದು ಸಚ್ಚಿದಾನಂದಮಯ ಪರಶಿವನ ಶಕ್ತಿ ಇಚ್ಛಾವ್ಯಕ್ತಿಯಾಗಿದ್ದ ಸಂಜೀವಿನಿ ಲತಾದೇವತೆಗೆ ಕೈ ಮುಗಿದನು. ಕೃಪೆಯನ್ನು ಕೋರುತ್ತ ಪ್ರಾರ್ಥಿಸಿದನು:

'ಕರುಣಿಸು, ದೇವಿ! ಕೃಪೆ ದೋರೆನಗೆ, ತಾಯಿ! ದಯೆಗೆಯ್, ಜಗಜ್ಜನನಿ! ಸರ್ವ ಮಂಗಳೆ ನೀನು; ರಕ್ಷಿಸೌ, ಕಲ್ಯಾಣಿ, ಊರ್ಮಿಳಾ ಮಾಂಗಲ್ಯಮಂ. 'ಮರ್ತ್ಯನಾಗಿದ್ದರೂ ನಿನ್ನ ಸನ್ನಿಧಿಯ ಅಮೃತವಿರಲು, ಮೃತ್ಯು ಆ ಜೀವವನ್ನು ಸೋಂಕಲು ಸಾಧ್ಯವೆ? ಸೃಷ್ಟಿಕರ್ತನ ಹೃದಯೇಶ್ವರಿಯೆ, ನಿನ್ನ ಶಕ್ತಿಗೆ ಎಲ್ಲೆ ಎಲ್ಲಿದೆ? ನೀನು ಆದ್ಯಶಕ್ತಿ. ನಿನ್ನ ಇಚ್ಛಾಪ್ರಕಾರಗಳೆ ಪ್ರಕೃತಿಗೆ ನಿಯಮಗಳು; ನಿಸರ್ಗಕ್ಕೆ ಗುಣಗಳು; ನಮ್ಮ ಬುದ್ಧಿಗೆ ವಿವೇಕನಿಷ್ಠೆಗಳು; ಆತ್ಮಸಾಧಕನಿಗೆ ವಿಚಾರಜನಿತವಾದ ಮತಿಮಿತಿಯ ತತ್ತ್ವ ಸಿದ್ಧಾಂತಗಳನ್ನು ಮೀರುವ ಯೋಗ ಸಿದ್ಧಿಗಳು.

'ನೀನೆ ಮೃತ್ಯು, ನೀನೆ ಅಮೃತೆ! ನಿಯಮಮಯಿಯಾದರೂ ಸ್ವಚ್ಛಂದೆ. ಸರ್ವನಿಯಮಾತೀತೆ! ಜಗನ್ಮಾತೆ, ರಾಮಕಾರ್ಯವು ನಿರ್ವಿಘ್ನವಾಗುವಂತೆ, ಸುಮಿತ್ರಾತ್ಮಜನ ಪ್ರಾಣವನ್ನು ಚೇತನಗೊಳಿಸುವ ಮೃತ ಸಂಜೀವಿನಿಯ ನಿನ್ನ ಔಷಧ ಆಶೀರ್ವಾದಗಳನ್ನು ನನಗೆ ಕೃಪೆ ಮಾಡಿ ನೀಡಮ್ಮ. ಮಾರುತಿಯಾದ ನಾನು ನಿನಗೆ ಮಣಿಯುತ್ತೇನೆ.'

ಕೊಂಬೆ ಕೈಆಯಿತು. ಹಸುರೆಲೆಗಳ ಉಡುಪಿನ ಗಿಡವು ಮೈಆಯಿತು. ಬೇರು ಪಾದರೂಪವನ್ನು ಧರಿಸಿತು. ತುದಿಯು ಮುಖಾಕೃತಿಯಾಯಿತು. ಹಣೆಮಣಿದು ವಿನಯದಲ್ಲಿ ನಸುಬಾಗಿದ ಆಂಜನೇಯನ ಬೊಗಸೆ ಕೈಗೆ ಸಂಜೀವಿನಿಯ ಅಮೃತವು ಅನುಗ್ರಹವಾಗಿ ವರ್ಷಿಸಿತು. ಓಷಧೀಗಿರಿಯ ದಿವ್ಯ ದೇವತಾ ಜ್ಯೋತಿ ಮಂದ ಹಾಸದಿಂದ ಪ್ರಜ್ವಲಿಸಿತು.

ಮೈ ದೋರ್ದನಾಂಜನೇಯಂ ಸಿದ್ಧಹಸ್ತದಲಿ

ಉತ್ಕಟ ನಿರೀಕ್ಷೆಯು ಕ್ಷಣವಾದರೂ ಅಸಹಿಷ್ಣು ತಾನಾಗುತ್ತದೆ. ತುದಿಗಾಲಿನಲ್ಲಿ ನಿಂತು ಕುದಿಕುದಿಯುತ ಕಾಯುತ್ತಿದ್ದ ಸುಷೇಣಾದಿಗಳಿಗೆ ಪರಮ ಸಂತೋಷದಿಂದ ಪುಲಕಿತರಾಗುವಂತೆ 'ಜಯ ಕಪಿಧ್ವಜಕೆ' ಎಂಬ ಕೂಗು ಕೇಳಿಸಿತು. ಆ ಘೋಷವೇ ಘನರೂಪ ಪಡೆಯಿತೆಂಬಂತೆ ಆಂಜನೇಯನು ಸಿದ್ಧಹಸ್ತದಲ್ಲಿ ಕಾಣಿಸಿಕೊಂಡನು. ದಿವ್ಯಮಂತ್ರಗಳಿಂದ ದಿವ್ಯಔಷಧಿಯ ಬಲದಿಂದ ಲಕ್ಷ್ಮಣನ ಮೈಗೆ ಮೊದಲಿನ ವರ್ಣವು ನಿಧಾನವಾಗಿ ಮೂಡಿತು. ನೋಡನೋಡುತ್ತಿದ್ದಂತೆ ಆಂಜನೇಯನು ತಂದ ಸಂಜೀವಿನಿ ಅಮೃತದಿಂದ ಮತ್ತು ಸುಷೇಣನ ಪ್ರಯೋಗದಿಂದ ಸುಮಿತ್ರಾತ್ಮಜನ ಮುಖದಲ್ಲಿ ಜೀವಕಳೆ ಅರಳಿತು. ಉಸಿರಾಡಿತು. ಶರೀರಕ್ಕೆ ಪ್ರಾಣವು ಮರಳಿತು.

ಚೇತರಿಸಿಕೊಂಡು ಪ್ರಜ್ಞೆಮರಳಲು ಅಪಾಯವೇನು ಆಗದವನಂತೆ ಎದ್ದು 'ಊರ್ಮಿಳಾ! ಊರ್ಮಿಳಾ!' ಎಂದು ಹೆಂಡತಿಯ ಹೆಸರನ್ನು ಕರೆದನು. ಅವಳನ್ನು ಕಾಣಲು ಆಶಿಸುವವನಂತೆ ಕಣ್ ಸುಳಿಸಿ ಸುತ್ತಲೂ ನೋಡಿದನು. ಜಾಂಬವನಿಂದ ನಡೆದುದೆಲ್ಲವನ್ನು ಕೇಳಿದನು. ತಾನು ಕಂಡ ಒಂದು ಆಶ್ಚರ್ಯವನ್ನು ಹೀಗೆ ಹೇಳಿದನು:

'ದಿಟವಾಗಿಯೂ ನಾನು ವಲ್ಕಲಧಾರಿಯಾದ ನನ್ನ ಸತಿಯನ್ನು ನೋಡಿದೆ. ಅವಳು ತಪಶ್ಚರ್ಯೆಯಿಂದ ಪೂಜ್ಯಳಾಗಿದ್ದಳು. ಅವಳು ತನ್ನ ದಿವ್ಯಶಕ್ತಿಯಿಂದ ನನ್ನ ಹೃದಯಕ್ಕೆ ಅಮೃತವನ್ನು ಎರೆದಳು. ಮೇಘನಾದನ ಅಭಿಚಾರಿಕಾ ಯಾಗಕ್ಕೆ ನನ್ನ ಆಯಸ್ಸು ಸವೆಯದಂತೆ ತಪಸ್ಸಿನ ಕವಚವನ್ನು ತೊಡಿಸಿದಳು. ಅಂತಹ ಪೂಜ್ಯಳನ್ನು ಪ್ರಾಣವಲ್ಲಭೆಯಾಗಿ ಪಡೆದ ನಾನು ಧನ್ಯರಲ್ಲಿ ಧನ್ಯನಲ್ಲವೆ! ನಮ್ಮ ಸಂಗ್ರಾಮಸಿದ್ಧಿಗೆ ಇನ್ನು ಭಂಗ ಉಂಟೆ? ಈ ಅಗ್ನಿಯು ನನ್ನನ್ನು ತಡೆಯಲಾರದು.'

ಶತ್ರು ಸಂಹಾರ ದೀಕ್ಷಿತನಾ ಸುಮಿತ್ರಾತ್ಮಜಂ ಪೊಣ್ದು ಪೊಕ್ಕನಾ ಪಾವಕನ ಚಕ್ರಕೆ.

ಸುಮಿತ್ರಾತ್ಮಜನು ಪ್ರತಿಜ್ಞಾರೂಢನಾಗಿ ಅಗ್ನಿ ಚಕ್ರವನ್ನು ಪ್ರವೇಶಿಸಿದನು. ವಿಭೀಷಣಾದಿಗಳು ಅವನನ್ನು ಹಿಂಬಾಲಿಸುತ್ತ ನಡೆದು ಅನ್ನಮಯ ಕೋಶವನ್ನು ದಾಟಿದರು. ನಿಶಾಚರನು ಕಾವಲಿಟ್ಟಿದ್ದ ಪಿಶಾಚಿಗಳು ಮುತ್ತಿ ಬರಲು ಅವುಗಳನ್ನು ಪರಿಹರಿಸಿದರು. ಪ್ರೇತ ಭೂತಗಳಿಂದಲು ಶಕ್ತಿ ಯಂತ್ರಗಳಿಂದಲು ದುರ್ಭೇದ್ಯವಾದ ಪ್ರಾಣಮಯ ದುರ್ಗವನ್ನು ಹೊಕ್ಕರು.

ಆಗ ನಳನು ಚಿತ್ತ ವಿಕಲ್ಪಕ್ಕೆ ಒಳಗಾಗಿ ಮದೋನ್ಮತ್ತನಾದ. ವೃದ್ಧ ಜಾಂಬವನು ಕಾಮತೃಷೆಯುಕ್ಕಿ ರತಿಭಾವದ ಆವೇಗಕ್ಕೊಳಗಾದ. ಸುಷೇಣನು ಕೀರ್ತಿ ಆಕಾಂಕ್ಷೆಯ ಅಹಂಕಾರ ಭೂತದ ಹೂಂಕಾರ ವಿಕಾರಕ್ಕೆ ಒಳಗಾದ. ಸ್ಥಿರಪ್ರಜ್ಞನು ಸಾತ್ವಿಕ ಮಹಾಮತಿಯು ಆದ ವಿಭೀಷಣನಿಗೆ ಅನ್ಯೈಚ್ಛಿವಾಗಿ ದೈತ್ಯ ಸಿಂಹಾಸನವನ್ನು ಏರುವ ಲಂಕಾ ಕಿರೀಟ ಮೋಹ ಉಂಟಾಯಿತು. ನಳನು ಸುಗ್ರೀವನನ್ನು ಬಯ್ಯತೊಡಗಿದನು! ನರೆಗೂದಲಿನ ಜಾಂಬವಂತನು ಪ್ರಣಯಾಭಿನಯಗಳಿಂದ ನರ್ತಿಸಿದನು! ಸುಷೇಣನು ಹನುಮಂತನನ್ನು ಕರೆದು, ಅಸೂಯೆಯಿಂದ ಅವನ ಯಶಸ್ಸಿಗೆ ಕಾರಣವಾದ ಸಾಹಸಗಳನ್ನು ತಿರಸ್ಕರಿಸಿ ಮೂದಲಿಸಿದನು!

ಬ್ರಹ್ಮಚರ್ಯದ ಬಲವಾದ ಕಾರಣದಿಂದ ಆಂಜನೇಯ ಮತ್ತು ಲಕ್ಷ್ಮಣರು ವಜ್ರಾತ್ಮರಾಗಿದ್ದರು. ವಿಷಮವಲ್ಲದ ಸಮಯವಾಗಿದ್ದರೆ ಅವರು ನಾಟ್ಯರಂಗದಲ್ಲಿ ಭಾವ, ಅನುಭಾವ, ವಿಭಾವಗಳ ರಸವನ್ನು ಆಸ್ವಾದಿಸುವ ರಸಿಕರಂತೆ ನಳ ಸುಷೇಣ, ಜಾಂಬವಂತ, ವಿಭೀಷಣರ ವಿಪರೀತ ವರ್ತನೆಯ ಹಾಸ್ಯಾಭಿನಯಕ್ಕೆ ಅಳ್ಳೆ ಬಿರಿಯುವಂತೆ ನಗುತ್ತಿದ್ದರು. ರಾಮಾನುಜನು ಆಶ್ಚರ್ಯ ಚಕಿತನಾಗಿ ನೋಡುತ್ತಿರಲು; ಶಾಸ್ತ್ರವೇತ್ತನು, ಯೋಗಸಿದ್ಧನು, ಬ್ರಹ್ಮವಿಜ್ಞಾನಿಯು ಆದ ಆಂಜನೇಯನು ಹೀಗೆ ಹೇಳಿದನು:

'ಚಿತ್ತದ ಅಧೋಲೋಕವನ್ನು ಆತ್ಮಾವಲೋಕನ ವಿಚಾರ ಪಥದಿಂದ ಹೊಕ್ಕು ಬಿಡುಗಡೆಗೊಂಡಿರುವ ಜಟಿಲ ಕುಟಿಲ ತಮೋವಿಕೃತಿಗಳನ್ನು ಅಧ್ಯಾತ್ಮಲೋಕದಿಂದ ನಾಶಪಡಿಸದೆ, ಪ್ರಾಣದ ಊರ್ಧ್ವಕ್ಕೆ ಪ್ರವೇಶಿಸುವವರನ್ನು ಈ ದುರಾಶಾ ಪಿಶಾಚಿಗಳು ಪೀಡಿಸುತ್ತವೆ. ಇವರು ಇವುಗಳನ್ನು ಜಯಿಸದೆ ನಮ್ಮೊಡನೆ ಬರಲು ಸಾಧ್ಯವಿಲ್ಲ. ಜಯವು ಅಷ್ಟು ಸುಲಭವಲ್ಲ. ಈ ಹದದಕ್ರಮವನ್ನು ಅರಿತ ಇಂದ್ರಜಿತುವು ಇವುಗಳನ್ನು ತಂದೊಡ್ಡಿದ್ದಾನೆ.

'ನಾವು ತಡಮಾಡಿದರೆ ಬೆಳಗಾಗಿ ಹೋಗುವುದು. ರಾಮ ಕಾರ್ಯಕ್ಕೆ ಹಾನಿಯಾಗುವುದು ಮತ್ತು ಧರ್ಮ ನಾಶವಾಗುವುದು. ಇವರು ಕರ್ಮ ಸವೆಯುವವರೆಗೂ ಹೋರಾಡುತ್ತಿರಲಿ. ಹಿಂದಿರುಗಿ ಬರುವಾಗ ವಿವೇಕವನ್ನು ಬೋಧಿಸಿದರೆ ಇವರು ಎಚ್ಚತ್ತು ಶುದ್ಧ ಬುದ್ಧಿಗಳಾಗಿ ಕ್ಷೇಮ ಕರ್ಮಿಗಳಾಗುವರು. ಹಾಗಲ್ಲದೆ ಈಗ ಇವರನ್ನು ವಿಚಾರಿಸಿದರೆ ನಮ್ಮ ಕೆಲಸಕ್ಕೆ ಇವರು ಅಡ್ಡಿಯಾಗುವುದು ದಿಟ.'

ಮನೋಮಯಪ್ರಾಕಾರ ಭೀಕರ ಮಹಾಗ್ನಿಯಬುಧಿಯ ಕಂಡರಿಂದ್ರಜಿತು ಕೃತಿಸಿರ್ದುದಂ.

ಅದರಂತೆ ಅವರನ್ನು ಬಿಟ್ಟು ಹೊರಟ ಸೌಮಿತ್ರಿ ಮತ್ತು ಮಾರುತಿಯು ಕಲ್ಪನೆಯ ನಾಲಗೆಯು ತೊದಲುವ ಮಹಾಅದ್ಭುತಗಳನ್ನು ಕೆಚ್ಚಿನಿಂದ ಅತಿಕ್ರಮಿಸಿದರು. ಇಂದ್ರಜಿತುವು

ಮನೋಮಯ ಪ್ರಕಾರದಲ್ಲಿ ಭೀಕರ ಮಹಾ ಅಗ್ನಿಸಾಗರವನ್ನು ಸೃಷ್ಟಿಸಿರುವುದನ್ನು ಕಂಡರು. ಅದರಿಂದ ಉರಿವ ದೀಪ್ತಿಯು, ಕರಗಿ ನೀರಾದ ಕಬ್ಬಿಣದ ಕಾಂತಿಯನ್ನು ಕೀಳಾಗಿಸಿತ್ತು.

ಸೂರ್ಯಮಂಡಲದ ಹೃದಯ ಪಿಂಡದಲ್ಲಿ ಅಲೆದಾಡುವ ಪ್ರಳಯದ ಕಾವಿನ ಭಯಂಕರಕ್ಕೆ ತಾನು ತಾಯಿ ಎನ್ನುವಂತೆ ತೀವ್ರಝಳವನ್ನು ಹೊರಸೂಸುತ್ತಿತ್ತು. ಅಗ್ನಿಯ ಉತ್ಸಾಹವು ಪರ್ವತದೆತ್ತರಕ್ಕೆ ಉಕ್ಕಿ ಹೊಮ್ಮಿತು. ಹೊಗೆಯು ಘ್ರಾಣಕ್ಕೆ ಕಟುವಾಸನೆಗಳನ್ನು ಸೂಸಿ, ವಿವಿಧ ವರ್ಣಚ್ಛಾಯೆಗಳನ್ನು ಹೊರಹಾಕಿ, ಭೀಕರ ಸುಂದರ ಉಗ್ರ ವಿನ್ಯಾಸಗಳಲ್ಲಿ ಹರಿದಾಡಿತು.

ಲಕ್ಷ್ಮಣ ಮತ್ತು ಆಂಜನೇಯರು ಚಿತ್ತವೃತ್ತಿ ನಿರೋಧದಲ್ಲಿ ಏಕಾಗ್ರತೆಯ ಉನ್ನತ ಮನೋಮಯ ಶರೀರಿಗಳಾಗಿದ್ದರು. ಅವರು ಮಲೆನಾಡಿನ ಬೆಟ್ಟ ಶಿಖರಗಳು ಮುಗಿಲುಗಳನ್ನು ಒತ್ತಿನಿಲ್ಲುವಂತೆ ಅಗ್ನಿಸಮುದ್ರದ ಅಂಚಿನಲ್ಲಿ ನಿಂತರು. ಅಲ್ಲಿಂದ ಆ ಅಗ್ನಿಸಮುದ್ರದ ಮಧ್ಯೆ ದ್ವೀಪದಂತಿದ್ದ ವೇದಿಕೆಯ ಮೇಲೆ ಮೇಘನಾದನ ಗಿರಿ ಬೃಹತ್ ಭೀಮಮೂರ್ತಿಯನ್ನು ನೋಡಿದರು.

'ಸುಮಿತ್ರಾತ್ಮಜನೇ, ಈ ಬೆಂಕಿಯ ಸಮುದ್ರವನ್ನು ದಾಟುವುದು ಅಸಾಧ್ಯ. ನೋಡು, ಅಸುರ ವಿದ್ಯಾ ಪ್ರವೀಣನು ತಾಂತ್ರಿಕ ಕರಾಳ ಮಂತ್ರಗಳಿಂದ ಲಯದ ಉಗ್ರಯಂತ್ರಗಳನ್ನು ಸೃಷ್ಟಿಸುತ್ತಿರುವನು! ಅವು ಅಗ್ನಿ ಸಮುದ್ರದಿಂದ ಮೂಡುತ್ತಿವೆ ನೋಡು. ಮೂಡುವುದೆ ತಡ ಚಿತ್ತ ತತ್ತ್ವಾಧೀನಕ್ಕೊಳಗಾಗಿ ಸೂಕ್ಷ್ಮ ರೂಪವನ್ನು ಪಡೆದು, ದೈತ್ಯ ವಿಜ್ಞಾನಿಯ ಮನಸ್ಸಿನ ಕೋಶವನ್ನು ಮರಳಿ ಪ್ರವೇಶಿಸುತ್ತಿವೆ. ಮಂತ್ರವನ್ನು ಹೇಳುತ್ತ, ತಂತ್ರ ಶರೀರಿಯಾದ ಬಾಣಗಳನ್ನು ಹೂಡಿಬಿಟ್ಟರೆ, ಮನೋವೇಗದ ಮನೋಶಕ್ತಿಯ ಯಂತ್ರಗಳು ಹೊಮ್ಮುತ್ತವೆ. ಅವು ಬೆಂಕಿಯ ಮಳೆ ಸುರಿಸಿ, ಸಿಡಿಲು ಬಡಿದ ಕಾಳಕೂಟವನ್ನು ಚೆಲ್ಲಿ ಕೋಟಿ ಕೋಟಿ ಸೈನ್ಯವನ್ನು ಕೊಲ್ಲುತ್ತವೆ.

'ಹೀಗೆ ಸಿದ್ಧಿಯ ಅಶ್ವವನ್ನು ಏರುವ ಮೊದಲೇ ಈ ವೀರ ರಾಕ್ಷಸನ ಸಂಹಾರಕ್ಕೆ ಮುನಿಯು ನೀಡಿರುವ ಮಂತ್ರಾಸ್ತ್ರಗಳನ್ನು ಹೂಡು ನಿನ್ನ ಸರ್ವ ಸಿದ್ಧಿಯನ್ನು, ಅವನನ್ನು ಆಹುತಿ ಪಡೆಯಲು ಬಳಸದಿದ್ದರೆ ಅವುಗಳನ್ನು ಪಡೆದುದು ನಿರರ್ಥಕವಾಗುತ್ತದೆ!'

ಹೀಗೆಂದು ಲಕ್ಷ್ಮಣನಿಗೆ ಮಾರುತಿಯು ಹೇಳುವಷ್ಟರಲ್ಲಿಯೆ, ಮೇಘನಾದನ ಮನಃಶಕ್ತಿಯಿಂದ ಸೃಷ್ಟಿಗೊಂಡ ಅಗ್ನಿ ಭೂತಗಳು ಮೃಡ ದೃಢ ಪ್ರಲಯ ವೇಗದಿಂದ ಅವರನ್ನು ಅಪ್ಪಳಿಸಲು ಬಂದವು. ಹೊಗೆ ಬೆಂಕಿಯನ್ನು ಕಾರಿದವು. ಮೃತ್ಯುವೆಂಬ ಓಕುಳಿಯನ್ನು ನೀಳವಾದ ನಾಸಿಕ ಚಾಚಿದಂತ ಜೀರ್ಕೋವಿಗಳಿಂದ ಸಾಕಷ್ಟು ದೂರಕ್ಕೆ ಚಿಮ್ಮಿದವು. ರಥಗಾಲಿಯ ತರಹದ ನೂರಾರು ಚಕ್ರಗಳು ಉರುಳುತ್ತ ಯಮ ಭಯಂಕರ

ಶಬ್ದವಾಯಿತು. ಸಿಡಿಗುಂಡು ಮಳೆಯನ್ನು ಕಾರಿದವು. ಕಣ್ಣು ಮತ್ತು ಕಿವಿಗಳು ಉಡುಗಿಹೋಗುವಂತೆ ಸಿಡಿಲು ಮಿಂಚುಗಳು ಸಿಡಿದವು.

ತಳುವದೆಯೆ ನೀಂ ಸರಳ್ಗಳಂ ತೊಡು; ಕೊರಳ್ಗಿಡು.

ಆಗ ಆಂಜನೇಯನು,

'ಗಾಬರಿಗೊಳ್ಳಬೇಡ. ಇದಕ್ಕೆ ಪ್ರತೀಕಾರವನ್ನು ನಾನು ತಿಳಿದಿರುವೆ. ನನಗೆ ಸಿದ್ಧಿಯಾಗಿರುವ ದಿವ್ಯ ಬಲಗಳಿಂದ ಈ ರಾಕ್ಷಸನ ಕುಲ ಕುಠಾರವಾದ ಕಪಟ ವಿದ್ಯಾಬಲದ ಬೆನ್ನಿಗೆ ದೊಣ್ಣೆಯ ಹೊಡೆತ ಕೊಡುವೆ. ನೀನು ತಡಮಾಡದೆ ಬಾಣಗಳನ್ನು ಹೂಡು. ಕೊರಳಿಗೆ ಗುರಿ ಇಡು. ದಶಶಿರನ ಪ್ರಾಣಪ್ರದೀಪನನ್ನು ಅಂತ್ಯಗೊಳಿಸುವ ಸಿದ್ಧಿಯನ್ನು ಪಡೆ. ನಿನ್ನ ಜನ್ಮವನ್ನು ಸಾರ್ಥಕಪಡಿಸಿಕೊ.'

ಎಂದು ಲಕ್ಷ್ಮಣನಿಗೆ ಹೇಳಿದನು. ಮಾರುತಿಯು ಪ್ರತಿ ಮಾಯೆಯಿಂದ ಕೂಟಯುದ್ಧಕ್ಕೆ ತೊಡಗಿದನು. ಸೌಮಿತ್ರಿಯು ಇಂದ್ರಜಿತುವಿನ ಮೇಲೆ ಬಾಣಗಳನ್ನು ಪ್ರಯೋಗಿಸಿದನು. ಮಹೇಂದ್ರಾರಿಯು ಅವುಗಳಿಗೆ ಅಲುಗಾಡದೆ ಧೈರ್ಯವೃಕ್ಷದಂತೆ, ಬೆಟ್ಟದಂತೆ ಅಚಲನಾಗಿದ್ದನು. ತನ್ನ ಬಾಣಗಳು ಗುರಿತಪ್ಪುತ್ತಿದ್ದುದನ್ನು ಕಂಡು ಧೃತಿಗೆಡುತ್ತಿದ್ದ ಲಕ್ಷ್ಮಣನಿಗೆ–ಇಂದ್ರನಿಂದ ಪ್ರೇರಿತವಾದ ಆಕಾಶವಾಣಿಯು ಹೀಗೆ ಹೇಳಿತು:

'ಊರ್ಮಿಳಾರಮಣನೇ ಕೇಳು, ವ್ಯರ್ಥ ಪ್ರಯತ್ನದಿಂದ ಕಾಲಹರಣ ಮಾಡಿ ಅಮರ ಕಾರ್ಯವನ್ನು ಕೆಡಿಸಬೇಡ. ರಾತ್ರಿ ತೀರುತ್ತಿದ್ದಂತೆ ಈ ಜಗತ್ತಿನ ಆಯಸ್ಸು ತೀರುವುದೆಂದು ತಿಳಿ! ಆಗಲೆ ಎರಡು ಯಾಮಗಳು ಕಳೆದಿವೆ! ದೇವ ದೇವತೆಗಳು ನಿನ್ನ ಸಾಹಸವನ್ನು ವಿಶೇಷ ಕುತೂಹಲದಿಂದ ನೋಡುತ್ತಿದ್ದಾರೆ. ನಿನ್ನ ಸಿಂಜಿನಿಯ ಸ್ಪಂದನದಲ್ಲಿ ತಮ್ಮ ಅಳಿವು ಉಳಿವು ಕಂಪಿಸುತ್ತಿರುವುದನ್ನು ತಿಳಿದಿದ್ದಾರೆ.

'ಇಂದ್ರಜಿತುವಾದ ಈತನನ್ನು ಅನ್ಯಅಸ್ತ್ರಗಳು ಕೊಲ್ಲಲು ಸಾಧ್ಯವೆ? ದೇವ ಶಕ್ತಿಗಳು ತಮ್ಮ ಆತ್ಮದ ಸರ್ವಬಲವನ್ನು ನಿನಗೆ ನೀಡಲು ಕಾದಿದ್ದಾರೆ. ಆ ನೆರವಿನ ಇಚ್ಛೆ ಇರುವುದರಿಂದ, ತೆಗೆ ಹೂಡು ಇಂದ್ರಾಸ್ತ್ರವನ್ನು! ಎಲ್ಲ ದೇವತೆಗಳು ಆ ಬಾಣವನ್ನು ಪ್ರವೇಶಿಸುವರು. ಈ ಲೋಕ ಸಂಕಟಕಾರ ರಾಕ್ಷಸನ ಪ್ರಾಣವನ್ನು ತೆಗೆಯುವರು!'

ಲಕ್ಷ್ಮಣನು ದಿವ್ಯವಾಣಿಯ ಗಗನ ದೇವತೆಗೆ ಕೈಮುಗಿದನು. ಬೇರೆ ಬಾಣವನ್ನು ಬತ್ತಳಿಕೆಗೆ ಸೇರಿಸಿದನು. ಲೋಕದ ಮುಖದಲ್ಲಿ ಎಳನಗೆಯು ಬೆಳಗಿ ತುಳುಕುತ್ತಿರಲು ಇಂದ್ರಾಸ್ತ್ರವನ್ನು ಸೆಳೆದನು!

ನಡುಗಿತು ಕನಕಲಂಕೆ; ಗೃಹಶಿಖರಗಳದಿರಿದುವು; ಉದುರಿದುವು ದೈತ್ಯ ಧ್ವಜಾಳಿ!

ಅರಮನೆಯಲ್ಲಿ ತೊಟ್ಟಿಲಿಗೆ ಕಟ್ಟಿದ್ದ ಹೊನ್ನಿನ ಗಂಟೆಯು ಘಲರ್ ಎನ್ನಲು ಮಗು ವಜ್ರಾರಿ ಬೆಚ್ಚಿ ಎದ್ದು ಅಳುತ್ತಿದ್ದನು. ಲಂಕೇಶ್ವರನ ಸೊಸೆ ಅದನ್ನೆತ್ತಿ ಎದೆಗೆ

ಅವುಚಿಕೊಂಡಳು. ಅವಳ ಶರೀರವು ಮಾಗಿಯ ತಣ್ಣನೆಯ ಗಾಳಿಗೆ ಸೋಂಕಿ ಮಿಡುಕುವ ಹೂ ಬಳ್ಳಿಯಂತೆ ನಡುಗುತ್ತಿತ್ತು. ಅರಿಯಲಾಗದ ಭಯವು ಅಂತಃಕರಣವನ್ನು ಕದಡಿತು.

ಅಮಂಗಳದ ಸಂಶಯಗಳನ್ನು ತಡೆತಡೆದು ಸಹಸ್ರಾಕ್ಷನವೈರಿಯ ಪತ್ನಿ ತರಳೆ ತಾರಾಕ್ಷಿಯು ನಡುನಡುಗಿದಳು. ತನ್ನ ಎದೆಯ ಮೇಲಿದ್ದ ಐರ್ದಾಳಿಯ ಅಸ್ಥಿರತೆಯನ್ನು ತಡೆಯುವಂತೆ ಕಂದನನ್ನು ಎದೆಗೆ ಅಪ್ಪಿಕೊಂಡಳು. ಮೂಕ ಶೋಕ ಭಯಾಗ್ನಿಗೊಳಗಾದ ಅವಳ ಕಣ್ಣು ತುಂಬಿ ಹರಿದ ಕಂಬನಿಯು ಕಪೋಲ ಕಮಲದ ಶ್ವೇತ ವಸ್ತ್ರವನ್ನು ನೆನೆಸಿತು. ವ್ಯಾಕುಲ ಚಿತ್ತಳಾದ ಅವಳು ತನ್ನ ಮಗುವಿನ ಮುಖವನ್ನು ಮತ್ತೆ ಮತ್ತೆ ಚುಂಬಿಸಿದಳು!

ಮಂಡೋದರಿಯು ಸ್ವಪ್ನದಲ್ಲಿಯ ವಿದ್ಯುತ್ ಚಾಟಿಯ ಹೊಡೆತಕ್ಕೆ ಮಂಚದಿಂದ ಉರುಳಿ ಬೀಳುವಷ್ಟರಲ್ಲಿ ಎಚ್ಚತ್ತು ಕುಳಿತಳು. ಅಣುಘೋರಅಸ್ತ್ರದ ಸ್ಫೋಟಕ್ಕೆ ದೂರದ ಭೂಮಿ, ಗೋಡೆಗಳು ಕಂಪಿಸುವಂತೆ ಅವಳಿಗೆ ಮನೆ ನಡುಗಿದಂತಾಯಿತು. ಅವಳ ಹೃದಯಗಿರಿ ನಡುಗಿತು.

ದಶಗ್ರೀವನ ಧೈರ್ಯ ಪರ್ವತದ ಶಿಖರದವೃಕ್ಷವು ಬುಡ ಸಡಿಲುಗೊಂಡು ಉರುಳಿದಂತಾಯಿತು! ಕನಕಲಂಕೆ ನಡುಗಿತು. ಸೌಧಗಳ ಗೋಪುರಗಳು ನಡುಗಿದುವು. ದೈತ್ಯಪತಾಕೆಗಳು ಉರುಳಿದುವು. ಗುಹೆಯ ಕಂಠದಿಂದ ಹೊಮ್ಮಿದ ಗಟ್ಟಿಯಾದ ಶಬ್ದಕಂಪನಕ್ಕೆ ತ್ರಿಕೂಟ ಗಿರಿಯ ಭೂಮಿ, ಕಾಡುಗಳು ವಿಪತ್ ಸೂಚನೆಯೆಂಬಂತೆ ಕೂಗಿ ಅರಚಿದವು. ಕಡಲು ಕುದಿಗೊಂಡಂತೆ ಉಕ್ಕಿ ಕಡೆದಂತೆ ಮೊರೆದು, ನೊರೆ ತೆರೆಯು ರಭಸದಿಂದ ದಡಕ್ಕೆ ಅಪ್ಪಳಿಸಿದವು.

ಅತಿಕಾಯನು ಅಳಿದ ವಾರ್ತೆಯ ಹಿಂದೆಯೆ ಮಂತ್ರಮಂಟಪವು ಮಹಾಸ್ಫೋಟಕ್ಕೆ ನಾಶವಾಗಿ ಮೇಘನಾದನು ಅಳಿದ ವಾರ್ತೆ ಬಂದಿತು. ಭಯಕ್ಕೆ ನೆತ್ತರು ತಣ್ಣಗಾಗುವಂತೆ ಲಂಕೆಯು ಮಿಳಮಿಳನೆ ದಿಗ್ಭ್ರಾಂತಿಗೊಳಗಾಯಿತು.

❑



~~~~~~~~~~~~~~~~~~~~~~ ಸಂಚಿಕೆ – ೫೫ ~~~~~~~~~~~~~~~~~~~~~~

ನೀಂ ಮಹಬ್ಭೆಲ್ಬಿ ದಿಟಂ !

'ಮಡಿದ ನೈಂದ್ರಾಸ್ತ್ರದಿಂ ಮಂಡೋದರಿಯ ಮಗ!' ಎಂದು ದೇವಗಾಯಕರು ವಿಸ್ಮಯಗೊಂಡು ಹಾಡುತ್ತ ಸಾಗಿದರು. ಅದು ಕೋಗಿಲೆಗಳ ಮಧುರಗಾನದಂತೆ ದೇವತೆಗಳ ಹೃದಯಕ್ಕೆ ಮಧು ಮಧುರವಾಗಿ, ಕಿವಿಗೆ ಇಂಪಾಗಿತ್ತು. ಕೋಸಲದ ಸರಯೂ ನದಿಯ ದಡದಲ್ಲಿದ್ದ ತಪಸ್ವಿನಿ ಊರ್ಮಿಳಾದೇವಿಗೆ, ಏನೋ ಹೃದಯ ಭಾರವು ಇಳಿದಂತಾಯಿತು. ಅವಳ ಜೀವತಾವರೆಯ ಹೂ ಹಗುರವಾದಂತಾಯಿತು. ನಂದಿಗ್ರಾಮ ಪರ್ಣ ಶಾಲೆಯಲ್ಲಿ ತಪಶ್ಚರ್ಯೆಯಲ್ಲಿದ್ದ ಭರತನು ಕುಲಗುರು ವಸಿಷ್ಠರ ಮುಖದಲ್ಲಿ ಕಳೆಗುಂದಿದ ದೈನ್ಯಭಾವವು ಇನ್ನಿಲ್ಲವಾದುದನ್ನು ಕಂಡನು. ವಿಚಾರಿಸಲು
~~~~~~~~~~~~~~~~~~~~~~

ಅವರು–ನಸುನಗೆಯ ಸುಖಮುಖದಿಂದ 'ರವಿ ಕುಲವು ಇಂದು ಮಹಾಕ್ಲೇಶದಿಂದ ಪಾರಾಯಿತು' ಎಂದು ತಿಳಿಸಿದರು.

ಲಂಕಾಪುರದ ಹೊರವಲಯದ ವಾನರರ ಶಿಬಿರದಲ್ಲಿ ಮೈಂದನು ರಚಿಸಿದ ಮಹೇಂದ್ರಜಿತುವನ್ನು ಜಯಿಸಿದ ಜಯಸ್ತುತಿಯ ಅತಿಶಯಗೀತವನ್ನು ಅವರೆಲ್ಲರು ಕೋಟಿಕಂಠದಲ್ಲಿ ಹಾಡಿದರು.

ಪೂರ್ವ ದಿಕ್ಕಿನಲ್ಲಿ ಸೂರ್ಯನು ಚಂದ್ರ ಕುಂಕುಮ ಕನಕ ತೀರ್ಥದಲ್ಲಿ ಮಿಂದವನಂತೆ ತಳತಳಿಸುತ್ತ ಉದಯಿಸಿದನು. ಸುಂದರ ಫಾಲ್ಗುಣ ಪ್ರಭಾತ ಸೂರ್ಯ ಜಗತ್ತಿನ ಮನಕ್ಕೆ ಸಂತೋಷವನ್ನು ಸಿಂಪಡಿಸಿದನು. ಆಗ ಕತ್ತಲು ಯಾರನ್ನು ಹುಡುಕಿಕೊಂಡು ಎತ್ತಹೋಯಿತು! ದಶಾನನನ ಚಿತ್ತಗುಹೆಯನ್ನು ಪ್ರವೇಶಿಸಿತೆ? ರಾಜಗೃಹವನ್ನು ಮತ್ತು ಕುಟುಂಬವನ್ನು ಮುತ್ತಿತೆ? ರಕ್ಕಸರೆದೆಯ ಸಿರಿಯ ಬೊಕ್ಕಸಕ್ಕೆ ದರಿದ್ರಲಕ್ಷ್ಮಿಯಂತೆ ಹೊಕ್ಕಿತೆ?

ಈ ಅಳಲ್ ಗಿಚ್ಚಿಂದೆ ಸುಡದಿರೆನ್ನೆರ್ದೆಯ ಕೆಚ್ಚಿನ ಮರದ ಬೇರ್ಗಳಂ

ಮಯನ ಮಗಳಾದ ಮಂಡೋದರಿಯು ತನ್ನ ಒಬ್ಬನೇ ಮಗ ಇಂದ್ರಜಿತುವಿನ ದುರ್ಮರಣದ ಸಿಡಿಲ ಹೊಡೆತಕ್ಕೆ ತಡಯಲಾರದೆ ಜರ್ಜರಿತಳಾದಳು. ಲಂಕೇಶ್ವರನು ಅವಳ ಮೋಹದಒಡಲನ್ನು ಬಾಚಿ ತಬ್ಬಿ ತನ್ನ ಎದೆಗೆ ಒತ್ತಿಕೊಂಡು ಸಂತೈಸುತ್ತಿದ್ದನು. ಅವನ ಕೆಂಗಣ್ಣುಗಳಿಂದ ದಪ್ಪದಪ್ಪನ ಹನಿ ಉದುರುತ್ತಿದ್ದವು. ಬೆಂಕಿಯು ತಾನು ದಹಿಸುವ ಹಸಿಸೌದೆಯ ತುದಿಯಿಂದ ನೀರು ಸೋರಿಸುವಂತೆ–ಹೃದಯದಲ್ಲಿ ಹುದುಗಿದ್ದ ಕುದಿಯುವ ಕಟುನೀರನ್ನು ಸ್ರವಿಸುವಂತೆ ದುಃಖಿಸುತ್ತಿದ್ದನು! ಪತ್ನಿಯನ್ನು ಸಂತೈಸುತ್ತ ಹೇಳಿದನು:

'ರಾಣಿಯೇ ಶೋಕವನ್ನು ತಡೆದುಕೊ. ನನ್ನನ್ನು ನೋಡು. ಮನಸ್ಸನ್ನು ಕಲ್ಲಾಗಿಸು. ನನಗಾಗಿ ಮಗನ ಹಂಬಲವನ್ನು ಮರೆ. ಈ ದುಃಖದಿಂದ ನನ್ನೆದೆಯ ಕೆಚ್ಚಿನ ಮರದ ಬೇರುಗಳನ್ನು ಸುಡದಿರು. ಐರಾವತವನ್ನು ಏರಿದ ಇಂದ್ರನನ್ನು ಸೋಲಿಸಿದ ಮಗ, ರಾಮ ವಾನರರ ಸೇನೆಯನ್ನು ತನ್ನ ಮಾಯೆಯಿಂದ ಕಂಗೆಡಿಸಿ ಕೊಂದ ಮಗ, ರಾಕ್ಷಸರ ಕುಲದ ಗೌರವಕ್ಕೆ ಕಲಶ ಪ್ರಾಯನಾಗಿದ್ದ ಮಗ, ನನ್ನ ಸೈನ್ಯವೆಂಬ ಮೇರುಗಿರಿಗೆ ಮೇರುದಂಡದಂತಿದ್ದ ಗಂಡುಗಲಿ ಮೇಘನಾದನು ಹಗೆಯ ಮೋಸಕ್ಕೆ ಸಿಲುಕಿ ಬಲಿಯಾದರೇನು? ಧ್ಯಾನದಲ್ಲಿದ್ದವನನ್ನು ಕೊಂದ ಹೇಡಿ ರಾಮಾನುಜನು ವೀರನಾಗುತ್ತಾನೆಯೆ?

'ರಾಣಿಯೇ, ಇಂದ್ರಜಿತುವನ್ನು ಕೊಂದ ಮೋಸಗಾರನ ಕಳೇಬರವು ನನ್ನ ಈ ನೆಲದಲ್ಲಿ ಹುಳುಗಳ ಉಣಿಸಾಗಿ ಕೊಳೆಯುವುದು. ಹಾಗೆಮಾಡಿದಾಗ ನನಗೆ ತೃಪ್ತಿ!

ನಿನ್ನ ಕಣ್ಣೀರಿನ ಎರಡರಷ್ಟು ಕಣ್ಣೀರು ಸುರಿಯುವಂತೆ ಮಾಡುತ್ತೇನೆ. ನಮ್ಮ ಸಂಕಟ ಪರಂಪರೆಗೆ ಕಾರಣಳಾದ ಆ ಹೃದಯಶೂನ್ಯೆ, ನನ್ನ ಜೀವನ ಶೂಲರೂಪಿ ಭೂಸುತೆಯನ್ನು ತುಂಡರಿಸುತ್ತೇನೆ!...'

ನಿಟ್ಟುಸಿರುಹೊಮ್ಮಿ, ಧ್ವನಿಕುಗ್ಗಿತು. ಕೊರಳ ಸೆರೆ ಬಿಗಿಯಿತು. ಮಂಡೋದರಿಯ ಕಣ್ಣನ್ನು, ಮುಖವನ್ನು ಸೆರಗಿನಂಚಿನಿಂದ ಒರಸಿದನು. ಲಂಕೇಶ್ವರನು ತನ್ನ ಹೃದಯೇಶ್ವರಿಯ ಮುಖಮಂಡಲದಲ್ಲಿ ದೃಷ್ಟಿ ನೆಟ್ಟು ಕಲ್ಲಾದಂತೆ ಕುಳಿತನು. ಮತ್ತೆ ಸಮಾಧಾನಗೊಂಡು ಮಾತು ಮುಂದುವರಿಸಿದನು.

'ಏನಿದು? ಯಾವ ಭಯದಿಂದ ನಿನ್ನ ಮುಖ ವಿಕಾರವಾಗಿದೆ ಹೇಳು. ಬೆದರದಿರು. ಮಹಿಷಿಯೆ, ನನಗೇಕೆ ಕೈ ಮುಗಿಯುತ್ತಿರುವೆ? ನಿನ್ನ ವಿರೂಪಗೊಂಡ ವದನವನ್ನು ನಾನು ನೋಡಲಾಗುತ್ತಿಲ್ಲ! ತಪ್ಪಾಯ್ತು. ಅವಳನ್ನು ಕೊಲ್ಲುವುದಿಲ್ಲ; ಕ್ಷಮಿಸು!'

ಹಾಗೆ ಹೇಳಿದ ಪತಿಗೆ ಕೃತಜ್ಞತೆಯನ್ನು ಅರ್ಪಿಸುವ ರೀತಿಯಲ್ಲಿ ಮಯನ ಮಗಳು ಪೂಜ್ಯಭಾವದಿಂದ ಅವನ ಕಾಲು ಹಿಡಿದಳು. ಅದರ ಧೂಳನ್ನು ತನ್ನ ಮುಡಿಗೆ ಉದುರಿಸಿಕೊಂಡಳು. ಅಷ್ಟರಲ್ಲಿ ಅಲ್ಲಿಗೆ ಬಂದ ಓರ್ವದಾಸಿಯು ಗದ್ಗದಿಸುತ್ತ ಹೇಳಿದಳು:

'ಧಾನ್ಯಮಾಲಿನಿದೇವಿಯ ಪ್ರಾಣ ಇನ್ನೇನು ಹೋಗಲಿದೆ! ಒಡೆಯನೆ, ಅತಿಕಾಯನ ಸಾವಿನಸುದ್ದಿ ಕೇಳಿದ ತಕ್ಷಣ ಮೂರ್ಛಿತಳಾಗಿದ್ದಾಳೆ. ದಾದಿಯರು ಉಪಚರಿಸುತ್ತಿದ್ದಾರೆ!'

ಗಾಯದ ಮೇಲೆ ಗಾಯವಡೆದ ಸಿಂಹದಂತೆ ಅಸುರೇಂದ್ರನು ಮತ್ತೆಮತ್ತೆ ನಿಟ್ಟುಸಿರುಬಿಟ್ಟನು. ಮಂಡೋದರಿಯ ಮೈಯನ್ನು ಬಿಳಿದಾದ ಹಂಸತೂಲಿಕೆಯ ಮೃದು ಹಾಸಿಗೆಯ ಮೇಲೆ ಮಲಗಿಸಿದನು. ಅವಳನ್ನು ದಾಸಿಯರ ಹಾರೈಕೆಗೆ ಒಪ್ಪಿಸಿದನು. ಕಳೆಗುಂದಿದ ಮುಖದವನಾಗಿ ಧಾನ್ಯಮಾಲಿನಿದೇವಿಯ ಅರಮನೆಗೆ ನಡೆದನು.

ನೀರಿನಕಾರಂಜಿಗಳ ಲೀಲಾವಿನೋದದಿಂದಲೂ, ವಿವಿಧಪಕ್ಷಿಗಳ ಮಧುರಕಂಠದ ಕಲಕಲನಾದದಿಂದಲೂ, ಗಂಧಮಯ ಕುಸುಮಕುಲದ ರಮಣೀಯತೆಯಿಂದಲೂ ಕೂಡಿದ್ದ ಹೂದೋಟವನ್ನು ಚಕ್ರೇಶ್ವರನು ದಾಟಿದನು. ನೀರವಶಾಂತಿಯ, ಕಳವಳದ ಹೊಂಬಿಸಿಲಲ್ಲಿ ಪ್ರಕಾಶಿಸುತ್ತಿದ್ದ ಅರಮನೆಯನ್ನು ಪ್ರವೇಶಿಸಿದನು. ಅವನನ್ನು ಕಂಡ ತಕ್ಷಣ ತಲೆಮುಸುಕಿನ ದಾದಿಯರು ಅರುಗಾದರು. ಧಾನ್ಯಮಾಲಿನಿಯು ಮಲಗಿ ನಿದ್ರಿಸುತ್ತಿದ್ದಂತಹ ಭವ್ಯ ಮಂಚದಬಳಿ ನಿಂತನು. ತನಗೆ ತಾನು ಹೀಗೆ ಗೊಣಗಿಕೊಂಡನು.

'ಬಾಳು! ಕಳ್ಳನು ಕಟ್ಟಿದ ಸುಳ್ಳಿನ ಸಂತೆ! ಬರಿ ಬೊಂತೆ! ಕಡೆಗೆ, ಬೆಂಕಿಯೊಡನೆ ಸೇರಿ, ಬೂದಿರಾಸಿಯಾಗಿ ಉಳಿಯುವ ಅರ್ಥವಿಲ್ಲದ ಅಪ್ರಯೋಜಕ ಕಂಥೆ! ಇದಕ್ಕೇಕೆ ಇಷ್ಟೊಂದು ಚಿಂತೆ!'

ತಲೆಯ ಮೇಲೆ ಚಿಂತೆಯ ಅಚಲಬೆಟ್ಟವನ್ನು ಹೊತ್ತಂತೆ ಧಾನ್ಯಮಾಲಿನಿಯ ಬಳಿಯ ಪೀಠದಲ್ಲಿ ಕುಸಿದು ಕುಳಿತನು.

ಮೆಯ್ಯನಲ್ಲದೇಂ ಮನವನಿತ್ತೆನೆ ರಾಕ್ಷಸಂಗೆ?

ಸ್ವಲ್ಪಹೊತ್ತು ಸುಮ್ಮನಿದ್ದನು. ಅನಂತರ ಮೆಲ್ಲನೆ ಅತಿಕಾಯನ ಅಂಬಿಕೆಯ ಸುಡುಹಣೆಯ ಕೂದಲುಗಳನ್ನು ಸರಿಸುತ್ತ ಕೈಯಿಟ್ಟು ನೇವರಿಸಿದನು. ಅವಳು ಬೆಚ್ಚಿದಳು; ನಿಟ್ಟುಸಿರುಬಿಟ್ಟಳು; ಕಣ್ಣುತೆರೆದಳು; ಯಾರನ್ನೂ ಗುರುತಿಸದನೋಟದಿಂದ ನೋಡಿದಳು. ತನ್ನೊಳಗೆ ತಾನೇ ಇನ್ನಾರೊ ಅಶರೀರಿಯೊಡನೆ ಮಾತಾಡಿದಳು. ದನುಜೇಂದ್ರನು ಕಣ್ಣುರೆಪ್ಪೆ ಬಡಿಯದೆ ಕೇಳಿದನು.

'ಸ್ವಾಮಿಯೇ, ಮುನಿಯದಿರು. ಮೈ ಸೋತಿದ್ದು ನಿಜ; ಆದರೆ ಮನಸ್ಸು ಯಾವಾಗಲೂ ಅದನ್ನು ಸುಡುತ್ತಿತ್ತು. ರಾಕ್ಷಸನಿಗೆ ನಾನು ಮೈಯನಲ್ಲದೆ, ಮನವನ್ನು ನೀಡಿದೆನೆ? ಈ ದಾಸಿಯ ಕೈಬಿಡಬೇಡಿ. ಜಗದೀಶ್ವರನು ಮನವನಲ್ಲದೆ ತನುವನ್ನು ನೋಡುವನೆ? ನನಗೆ ನೀನೇ ಸರ್ವೇಶ್ವರ. ಸೀತೆಯನ್ನು, ಪೂಜ್ಯೆಯನ್ನು, ಆ ಲೋಕಮಾತೆಯನ್ನು ಪಶುರಾಕ್ಷಸನು ಮುಟ್ಟಿ ಹೊತ್ತು ತಂದನು. ಆ ಕಾರಣದಿಂದ ಆ ಪತಿವ್ರತೆಯು ಅಪವಿತ್ರಳಾದಳೆ?

'ಸ್ವಾಮಿ, ನನ್ನ ಮುಡಿಯನ್ನು ನೋಡು. ಪ್ರತಿದಿನ ನಾನು ತ್ರಿಜಟೆಯಿಂದ ಪಡೆದು ಮುಡಿದ ರಘುರಾಮನ ಮಡದಿಯ ಪಾದದ ಪಾಪನಾಶಕ ಧೂಳಿ! ಏನೊ ದುಃಸ್ವಪ್ನದಲ್ಲಿ ಪ್ರಾರಬ್ಧ ಕರ್ಮಪರಿಪಾಕದಿಂದ ನಾನು ನೀನು ಅಗಲಿದೆವು. ಇನ್ನು ಆ ಸ್ವಪ್ನ ಹೊಡೆದುಹೋಯಿತು! ಅದಕ್ಕಾಗಿ ಆ ದೇವಿ ರಾಮಸತಿಗೆ ನನ್ನ ಶತನಮಸ್ಕಾರಗಳು!'

ಹಾಗೆ ಮಾತಾಡಿಕೊಳ್ಳುತ್ತ ಧಾನ್ಯಮಾಲಿನಿಯು ಕಣ್ಣುಮುಚ್ಚಿದಳು. ಮುಖದ ಸುಕ್ಕು ಅಳಿದು ತರಂಗರಹಿತ ಸರೋವರದಂತೆ ಶಾಂತವಾಯಿತು.

ತನ್ನ ಕಾಮಾತಿಶಯದಿಂದ ಶವದ ಸಹವಾಸದಲ್ಲಿ ಭೋಗಿಯಾಗಿದ್ದವನು ಬೋಧೆ ತಿಳಿದೆದ್ದನು. ಜಿಗುಪ್ಸೆಯಿಂದ ಯಾತನೆಯ ಅಸಹ್ಯ ಕೆಸರಿನಲ್ಲಿ ಉರುಳಿದಂತೆ ಅತಿನಾಚಿಕೆಗೆ ಒಳಗಾದನು. ಮಂಡೋದರಿ ಪ್ರಿಯನು ಹಿಂದೆಂದೂ ಯಾವ ಕಾರಣಕ್ಕೂ ಅನುಭವಿಸಿದ ಒಂದು ಮರ್ಮಘಾತದ ವೇದನೆಯಿಂದ ನರಳಿದನು. ದೇವದಾನವ ಭಯಂಕರನು ಆತ್ಮ ಸಂತಾಪ ದೀನಮನನಾದನು. ಧಾನ್ಯಮಾಲಿನಿಯ ಆತ್ಮದ ಕ್ಷಮೆ ಬೇಡುವ ರೀತಿಯಲ್ಲಿ ಮುಡಿಯನ್ನು ಅವಳ ಅಡಿಗಿಟ್ಟನು.

ಪರಶಿವನ ಮೈ ಪುಲಕಗೊಂಡಿತು. ಆದಿಶಕ್ತಿಯ ಮುಖದಲ್ಲಿ ಮುಗುಳುನಗೆ ಅರಳಿತು. ಮಾಯಾಂಗನೆಯ ಕೈಯ ಮೋಹಪಾಶ ನಡುಗಿತು. ಅವಳು ಮುಕ್ತ್ಯಂಗನೆಯ ಅರಳಿದ ನಗು ಮುಖ ಕಂಡು ಕರುಬಿದಳು!

ತಾರಾಕ್ಷಿದೇವಿಯರ್ ಮೇಘನಾದ ಸ್ವಾಮಿಯೊಡನಗ್ನಿಯಂ ಪುಗಲ್ ನಿಚ್ಚಯಿಸಿಹರ್.

ಅಷ್ಟರಲ್ಲಿ ಅಲ್ಲಿಗೆ ಅನಲೆ ಕಳುಹಿಸಿದ ದೂತಿಯೊಬ್ಬಳು ಬಂದಳು. ಎದುರು ಕೈಮುಗಿದು ನಿಂತಳು. ದುರ್ವಾರ್ತೆಯನ್ನು ಶಂಕಿಸಿದ ರಾವಣನು ಅವಳನ್ನು ನೋಡಿ,

'ಅಕಲ್ಯಾಣ ಮುಖಿಯೇ, ಮತ್ತಿನ್ನೇನು ಅಮಂಗಳವನ್ನು ತಂದೆ ಹೇಳು? ಅಶುಭವಲ್ಲದೆ ನನಗೆ ಇನ್ನು ಬೇರೆ ಕರ್ಣಾಮೃತವಿಲ್ಲವೆ? ಏಕೆ ನಡುಗುತ್ತಿರುವೆ? ನಿನಗೆ ನಾಲಗೆ ಉಡುಗಿ ಹೋಗಿದೆಯೆ? ಏಕೆ ಸುಮ್ಮನಿರುವೆ? ಬೇಗ ಹೇಳು, ಇಲ್ಲದಿದ್ದರೆ ತೊಲಗು! ಕಣ್ಣೆದುರುನಿಂತು ನನ್ನ ಕದಡಿದ ಮನಸ್ಸನ್ನು ಕಾಡಬೇಡ!'

ಎಂದು ಕಾರ್ಮುಗಿಲ ಒಡಲಿನ ರಾಕ್ಷಸಾದ್ಭುತನು ಗುಡುಗಿ ನುಡಿಯಲು ದಾಸಿ ಗದ್ಗದಿಸಿದಳು:

'ಪ್ರಭೂ, ನನ್ನನ್ನು ಅನಲಾ ಲಲನೆ ಕಳುಹಿಸಿದಳು. ತಾರಾಕ್ಷಿ ದೇವಿಯು ಮೇಘನಾದ ಸ್ವಾಮಿಯೊಡನೆ ಅಗ್ನಿ ಪ್ರವೇಶ ಮಾಡಲು ನಿಶ್ಚಯಿಸಿರುವರು. ಅದನ್ನು ತಡೆದು, ತಾವು ಬರುವುದನ್ನೇ ಎದರು ನೋಡುತ್ತಿರುವರು. ಅದನ್ನು ತಮ್ಮ ಅಡಿಗಳಿಗೆ ನಿವೇದಿಸಲು ನನ್ನನ್ನು ಕಳುಹಿಸಿದರು.'

ಕೇಳಿದ್ದೇ ತಡ ದಶಾನನನು ಜಗ್ಗನೆ ಎದ್ದನು. ಸೊಸೆಯ ದುಃಖದ ಮುಂದೆ ತನ್ನ ದುಃಖ ಬರಿ ನೆಳಲೆಂಬುದನ್ನು ತಿಳಿದನು. ಧೀರೋದಾತ್ತ ಭಾವೋಜ್ವಲ ಮುಖಭಾವದಲ್ಲಿ ಹೇಳಿದನು:

'ನಡೆ, ಹೋಗು. ಅನಲೆಗೆ ನಾನೀಗಲೆ ಬಂದೆ ಎಂದು ಹೇಳು. ತಡಮಾಡದೆ ನಡೆ, ಓಡು!'

ಆಳನ್ನು ಅಟ್ಟಿ ತಕ್ಷಣ ತನ್ನ ದುಃಖವನ್ನು ತೊಳೆದುಕೊಳ್ಳುವವನಂತೆ ಮುಖವನ್ನು ತೊಳೆದುಕೊಂಡನು. ತನ್ನ ಉಡುಪನ್ನು ಸರಿಪಡಿಸಿಕೊಂಡನು. ದುಃಖದಛಾಯೆ ಹೊರಸುಳಿಯದ ರೀತಿಯಲ್ಲಿ ಧೀರ ವೈಖರಿಯವನಾಗಿ ದೈತ್ಯೇಶ್ವರನು ನಡೆದನು.

ಅವನು ದಿವಂಗತ ಸುತನ ಸತಿಯ ಶೋಕಾಗ್ನಿಯನ್ನು ಉಪಶಮನಗೊಳಿಸುವ, ಭಾರೀ ಮಳೆಯನ್ನು ಕರೆಯುವ ಮನೋನಿಶ್ಚಯದ ನೀರನ್ನು ಹೊತ್ತೊಯ್ಯುವ ಕಾರ್ಗಾಳಿಯಂತೆ ಹೋದನು.

ದಿಗಿಲುಗೊಂಡ ಎದೆಗೆ ಧೈರ್ಯ ಪ್ರವೇಶಿಸುವಂತೆ ರಾವಣನು ಇಂದ್ರಜಿತುವಿನ ಮೇಘಚುಂಬಿತ ಅರಮನೆಯನ್ನು ಪ್ರವೇಶಿಸಿದನು. ಹಿಂದೆ ತಾನು ಬಂದಾಗ ಬರಮಾಡಿಗೊಳ್ಳುತ್ತಿದ್ದ ಸುತನ ಸಾನ್ನಿಧ್ಯಶೂನ್ಯತೆಯ ಸಂಕಟಕ್ಕೊಳಗಾದನು. ಅದನ್ನು ಕಷ್ಟದಿಂದ ಸಂಯಮಿಸಿಕೊಂಡನು. ತಾನು ಬರುವುದನ್ನು ಕಂಡು ದ್ವಾರ ದ್ವಾರಗಳಲ್ಲಿ ಕುಗ್ಗಿ, ಮುಖತಗ್ಗಿಸಿ, ದೂರಸರಿದು ಕೈಮುಗಿಯುತ್ತಿದ್ದ ಸೇವಕ ವರ್ಗವನ್ನು ದಾಟಿ

ಹೋದನು. ಅನಲಾಕನ್ಯೆಯು ತನ್ನಪ್ಪುಗೆಯಲ್ಲಿ ಮಗನ ಮನದನ್ನೆ ತರುಣಿ ತಾರಾಕ್ಷಿಯನ್ನು ಸಂತೈಸುತ್ತಿರುವ ಅಂತಃಪುರವನ್ನು ಪ್ರವೇಶಿಸಿದನು.

ಆ ಗೋಳನಾರ್ ಸಹಿಸಲಾಪರ್?

ಆ ಗೋಳನ್ನು ಯಾರು ಸಹಿಸಲು ಸಾಧ್ಯ? ಮಡಿದ ಯೌವನಗಂಡನನ್ನು ನೆನೆದು ಅಳುವ ಯುವತಿಯ ಗೋಳನ್ನು ಕೇಳುತ್ತ, ಇಂದ್ರಜಿತುವಿನ ತಂದೆ ಅಲುಗಾಡದೆ ನಿಶ್ಚಲನಾಗಿ ನಿಂತನು. ಅವನು ಮುಂದೆ ರಾಮನ ಬಾಣಗಳಿಂದ ಜಜ್ಜರಿತನಾದನು ಎಂಬುದು ಬರಿಯ ಕಥೆಯಲ್ಲವೆ? ಅನಲೆಯು ದೊಡ್ಡಪ್ಪನು ಬಂದುದನ್ನು ಕಂಡು ಅತ್ತಿಗೆಗೆ ಹೇಳಿದಳು:

'ಸಖೀ, ಮಾವನದೊ! ಸುತನಸಾವಿನ ಸಿಡಿಲುಬಡಿದು ಉಸಿರುಕಟ್ಟಿದಂತೆ ಸುಮ್ಮನಿದ್ದಾನೆ, ನಿನ್ನ ನೋವಿನ ವಿಷ ತನಗೆ ಬಡಿದಂತೆ!'

ಆ ನುಡಿಯನ್ನು ಆಲಿಸಿದ ಎರಡುಜಡೆಯ ಬೈತಲೆಯ ಶ್ರೀಮಂತ ಉಡಿಗೆಯ ಬೆಡಗಿನನಡೆಯ ತರಳೆ ತಾರಾಕ್ಷಿಯು ತತ್ತರಿಸುತ್ತ ಎದ್ದಳು. ಅಳುತ್ತ ತಲೆಬಾಗಿಸಿ ನಮಸ್ಕರಿಸುತ್ತ ಪತಿಯ ತಂದೆಯ ಪಾದತಲದಲ್ಲಿ–ದಶಾನನನ ಗುಂಡಿಗೆಯ ಮೇಲೆ ಗರಗಸ ಆಡಿಸಿದಂತೆ ಉರುಳಿದಳು. ಕೈಲಾಸವನ್ನು ಎತ್ತಿ ಅಲುಗಾಡಿಸಿದ ಬಾಹು ಭೀಮನು ಬಾಗಿ ಬಾಲೆಯನ್ನು ಎತ್ತಲು ಹೋಗಿ ತಾನೇ ನೆಲಕ್ಕೆ ಕುಸಿದನು. ಕಣ್ಣೀರಿನ ಮುತ್ತುಗಳೊಡನೆ ತತ್ತರಿಸುವ ಅಕ್ಷರಗಳು ಬೆರತವೋ ಎನ್ನುವಂತೆ ಮಾವನು ಸೊಸೆಯನ್ನು ಸಂತೈಸಿದನು.

'ತಡೆ, ಮಗಳೆ. ಕಡಲಾಗಿ ಉಕ್ಕುತ್ತಿರುವ ಈ ಕಣ್ಣೆಂಬ ಒಡಲ ಬಡಬಾಗ್ನಿಯನ್ನು ತಡೆ. ನಿನ್ನ ದುಃಖ ದಾರುಣದ ಕಾಡ್ಗಿಚ್ಚಿಗೆ ಲಂಕೆಯು ಇಲ್ಲವಾಗುವುದು! ಈ ಲಂಕಾಧಿಪನು ಸುಟ್ಟುರಿದು ಹೋಗುವನು! ನಿನ್ನಿಂದಲೇ ಮುಂದೆ ರಾಕ್ಷಸ ಕುಲ! ಇನ್ನು ನೀನೆ ಲಂಕಾಧಿದೇವಿ. ಲಂಕಾಲಕ್ಷ್ಮಿಯೇ, ನೀನು ಬದುಕಿದರೆ ನಮ್ಮ ಈ ವಂಶ ಉಳಿಯುವುದು. ಇಲ್ಲದಿದ್ದರೆ ನೀನೆ ಕಾರಣವಾಗುವೆ ಕುಲಕ್ಕೆ ಕೊನೆ! ತಾಳು, ಮಗಳೆ; ತಾಳಿ ಬಾಳು; ಬಾಳಿ ಬಾಳಿಸು ನಮ್ಮ ಪೀಳಿಗೆಯನ್ನು. ಮೇಘನಾದನ ಮಹಾರಾಣಿಯಾದ ನೀನು ಅವನಿಂದ ವೀರಸತ್ತ್ವ ಪ್ರತಿಮೆಯೆಂಬಂತೆ ಮನೆಯ ಹೆಮ್ಮೆಯಕುಡಿ ಮಗು ವಜ್ರಾರಿಯನ್ನು ಪಡೆದಿರುವೆ. ನೀನು ಅವನ ಮೊಳಕೆಯನ್ನು ಹೆಮ್ಮರವಾಗಿ ಬೆಳಸಿದರೆ ಅವನ ಆತ್ಮಕ್ಕೆ ತೃಪ್ತಿಯಾಗುವುದು.

'ಕೇಳು, ಮಗಳೆ, ವೈರಿ ಕೋಟೆಯನ್ನು ಮುತ್ತಿನಿಂದಿರುವ ಹೊತ್ತಿದು. ಹೆಚ್ಚು ಹೇಳಲು ನನಗೆ ಸಮಯವಿಲ್ಲ. ಕಳೆದರಾತ್ರಿ ವೀರಅತಿಕಾಯನಿಂದ ಗಾಯಗೊಂಡು ವೈರಿಪಡೆ ಒಳಸೋರಿ, ಅಧೈರ್ಯಗೊಂಡು ಕೆಟ್ಟು ಓಡಿ ಹೋಗಿದೆ. ಆದರೆ ಲಂಕೆ

ಬೆಂಕಿಯ ಉಪಟಳದಿಂದ ತಲ್ಲಣಗೊಂಡಿದೆ. ಇಂದು ನಾನೇ ನನಗೆ ಸೇನಾಧಿಪತಿಯ ಪಟ್ಟವನ್ನು ಕಟ್ಟಿಕೊಳ್ಳುವೆನು!'

ಎಂದು ಹೇಳಿ ಸ್ವಲ್ಪಹೊತ್ತು ಸುಮ್ಮನಿದ್ದನು. ಮತ್ತೆ

'ಬಾಳ್, ಮಗಳೆ, ಬಾಳ್! ಏಳು; ಮೊಮ್ಮಗನುಎಲ್ಲಿ? ತೋರಿಸು ನನಗೆ!'

ಎಂದು ಹೇಳಿ ಎದ್ದನು. ಆಗ ಅನಲೆಯು 'ತಾಯಿ ಕರೆದುಕೊಂಡು ಹೋಗಿದ್ದಾಳೆ. ಈಗಲೆ ತರುತ್ತೇನೆ.' ಎಂದು ಹೋಗಿ ಸರಮೆಯ ಕೈಯಲ್ಲಿದ್ದ ವಜ್ರಾರಿಯನ್ನು ತಂದು ಲಂಕೇಶ್ವರನ ಕೈಗೆ ನೀಡಿದಳು. ಮಗುವನ್ನು ನೋಡುತ್ತ ರಾಕ್ಷಸನ ಮುಖವು ಮುಗ್ಧ ಶಿಶುವಿನಂತಾಯಿತು! ಹೊಸವುುಗುಳು ಹಸುಳೆ ವೊವ್ಮುಗನನ್ನು ಎತ್ತಿ ಕಣ್ಣಿಗಾನಂದವಾಗುವತನಕ ಮುದ್ದಾಡಿದನು. ಸೊಸೆಯ ಬಳಿಗೆ ನಡೆದು,

'ಮಗಳೆ, ನೋಡು ಇಲ್ಲಿದೆ ಬದುಕಿಗೆ ಅರ್ಥ ಮತ್ತು ನಿನ್ನ ಬಾಳಿನಗುರಿ, ನಿನ್ನ ಸಾವಿನ ಸುಖವನ್ನು ಈ ಮೇಘನಾದನ ತೇಜದ ಏಳಿಗೆಗಾಗಿ ಬಲಿಕೊಡು. ಈತನ ಎಳನಗೆಯ ಸುಖಕ್ಕೆ ನಿನ್ನ ದುಃಖವನ್ನುಮರೆ. ಈ ನಿನ್ನ ಮತ್ತು ನಮ್ಮ ಸರ್ವಸ್ವಕ್ಕಾಗಿ ನಿನ್ನ ಸರ್ವಸ್ವವನ್ನು ತ್ಯಜಿಸು. ಇಂದ್ರನನ್ನು ಜಯಿಸಿದವನ ಕುಮಾರನಾದ ಈತನನ್ನು ತೆಗೆದುಕೊ! ಏಳು, ಮಗಳೆ, ಏಳು! ತೆಗೆದುಕೊ, ನೋಡು ಈ ಹಸುಳೆಯ ರೀತಿ ಬಾಳು ತೋಳುನೀಡಿ ಆಹ್ವಾನಿಸುತ್ತಿದೆ! ಇದರ ತೊದಲು ಇಂಚರವನ್ನು ಕೇಳು!'

ಎಂದು ಹೇಳಿದನು. ಇಂದ್ರಜಿತುವಿನಕಾಂತಿಯೇ ಅಚ್ಚುಗೊಂಡಂತೆ ಕಂಗೊಳಿಸುತ್ತಿರುವ ವಜ್ರಾರಿ ಶಿಶುವನ್ನು ಸೊಸೆಯ ತೊಡೆಯ ತೊಟ್ಟಿಲಲ್ಲಿಟ್ಟನು. ತನ್ನನ್ನು ತಾನು ಬೇರುಸಹಿತ ಕಿತ್ತುಕೊಳ್ಳುವಂತೆ ಥಟ್ಟನೆ ಅಲ್ಲಿಂದ ಹೊರಗೆಹೋದನು.

ಪುರಾಧ್ಯಕ್ಷನ ಜೊತೆಗೂಡಿ ಸುಟ್ಟು ಹೋಗಿರುವ ನಗರದ ದುಸ್ಥಿತಿಯನ್ನು ನೋಡಿದನು. ಜನರ ಭಯ ನಿವಾರಣೋಪಾಯಗಳನ್ನು ಹೇಳಿದನು. ಬಲಾಧ್ಯಕ್ಷನಿಗೆ ಕೋಟೆಬಾಗಿಲು ಮತ್ತು ದುರ್ಗರಕ್ಷಣೆ ಕುರಿತು ಸೂಕ್ತ ಸೂಚನೆಗಳನ್ನು ನೀಡಿದನು. ದಂಡನಾಯಕನಿಗೆ ತನ್ನ ಮೂಲಬಲವೆಲ್ಲವನ್ನೂ ರಣಕ್ಕೆ ಸಜ್ಜುಗೊಳಿಸಲು ಆಜ್ಞೆಮಾಡಿದನು. ಕೋಲಾಹಲಗಳೊಂದಿಗೆ ರಣವಾದ್ಯಗಳು ಮೊಳಗುತ್ತಿದ್ದವು. ಆಗ ಆತ್ಮದುಃಖಿಯು, ಕ್ರೋಧತಪ್ತನು ಆದ ದಶಗ್ರೀವನು, ಹೋದಂತಹ ಧೈರ್ಯವು ದೈತ್ಯಪಟ್ಟಣಕ್ಕೆ ಮರಳುವಂತೆ ಹಿಂದಿರುಗಿ ಬಂದನು.

ಯುದ್ಧಕ್ಕೆ ಹೊರಡುವ ಮೊದಲು ಸ್ವಲ್ಪ ವಿಶ್ರಾಂತಿಯನ್ನು ಬಯಸಿ ಮಂಚಕ್ಕೆ ಒರಗಿದನು. ಘೋರ ಸಮರಕ್ಕಾಗಿ ತನ್ನ ಧೈರ್ಯದ ಧನುವಿಗೆ ಮೌರ್ವಿಯನ್ನೇರಿಸಿ ಮರಣಮಯಕರ್ಮಕ್ಕೆ ತನ್ನಚಿತ್ತವನ್ನು ಬಾಗಿಸಲು ತೊಡಗಿದನು.

'ಪಾಪಿ; ಪಶ್ಚಾತ್ತಾಪಿ; ಬಂದೆನಾಂ ಬಯಸಿ ಪ್ರಾಯಶ್ಚಿತ್ತಮಂ!'

ಆಗ ಚಂದ್ರನಖಿಯು ಬಾಗಿಲನ್ನು ನಿಧಾನವಾಗಿ ತೆರೆಯುತ್ತ ಬಂದಳು. ಅವನು ಕಣ್ಣೆತ್ತಿ ನೋಡಿ,

'ತಂಗಿ, ಏನು ಬಂದುದು?'

ಎಂದು ಅಸ್ಥಿರವಾದ ಧ್ವನಿಯಲ್ಲಿ ಕೇಳಿದನು. ಹಿರಿಯಣ್ಣನಬಳಿ ಹೋಗಿ, ಕಾಲುಹಿಡಿದು ಪಾದಕ್ಕೆ ಹಣೆ ಒತ್ತಿದಳು. ಕೃಶಳಾಗಿ ಹೋಗಿದ್ದ ಅವಳು ಗದ್ಗದಿಸುತ್ತ ಅಳುತ್ತಿದ್ದಳು. ಹಿಂದೆಂದೂ ಕಾಣದೆ ಇದ್ದ ಅವಳ ಸ್ಥಿತಿಗೆ ರಾಕ್ಷಸನು ಆಶ್ಚರ್ಯಗೊಂಡು ಕೇಳಿದನು:

'ನೀನೇಕೆ ಈ ಮಲಿನ ವಸ್ತ್ರದಲ್ಲಿರುವೆ? ಹೀಗೇಕೆ ಸೊರಗಿರುವೆ?'

'ಪಾಪಿ; ಪಶ್ಚಾತ್ತಾಪಿ; ನಾನು ಪ್ರಾಯಶ್ಚಿತ್ತವನ್ನು ಬಯಸಿ ಬಂದಿರುವೆ.'

'ಏನು ಪಾಪ? ಯಾರಿಗೆ ಪಶ್ಚಾತ್ತಾಪ? ಯಾರಿಗೆ ಪ್ರಾಯಶ್ಚಿತ್ತ?'

'ನಾನು ಪಾಪಿ. ನನಗೆ ಪ್ರಾಯಶ್ಚಿತ್ತ. ಇನ್ನಾರಿಗೆ?'

ಅದು ತಂಗಿಯ ಅಣಕನುಡಿ ಎಂದುಕೊಂಡು ರಾಕ್ಷಸನು ನಕ್ಕನು. ಆಗ ಅವಳು,

'ಅಣ್ಣಯ್ಯ ಏಕೆ ನಗುವೆ? ನಾನು ಹಿಂದಿನಂತವಳಲ್ಲ.. ನನ್ನ ದೆಸೆಯಿಂದ ಪತಿವ್ರತೆಯನ್ನು ಕದ್ದು ಎಳೆದು ತಂದೆ. ನನ್ನ ದುರಭಿಮಾನದ ಕಾಳ್ಗಿಚ್ಚನ್ನು ಪೋಷಿಸಲು ಲಂಕೆಯನ್ನು ನಾನೇ ಈ ದುರ್ಗತಿಗೆ ತಂದೆ. ಲೆಕ್ಕಕ್ಕೆ ಸಿಗದಷ್ಟು ವೀರರನ್ನು ತಿಂದೆ. ಎಷ್ಟೋ ಸೇನಾನಿಗಳನ್ನು ಕೊಂದೆ. ಕುಂಭಕರ್ಣನನ್ನು ಕೊಂದೆ. ಅತಿಕಾಯ, ಇಂದ್ರಜಿತು ಮೇಘನಾದ ಮುಂತಾದ ಮಕ್ಕಳನ್ನು ಆಹುತಿ ಪಡೆದೆ.

'ಅಣ್ಣ ನಿನ್ನನ್ನು ಕಾಲಿಡಿದು ಬೇಡುತ್ತೇನೆ, ಈ ರಣಮೇಧವನ್ನು ನಿಲ್ಲಿಸು. ನನ್ನನ್ನು ಆ ಲಕ್ಷ್ಮಣನು 'ಶೂರ್ಪನಖಿ' ಎಂದು ಬೈದನು. ನೀನು ಅದನ್ನು ಇಂದು ನಿಜ ಮಾಡಬೇಡ. ನಾನು ನಿನ್ನಡಿಯಲ್ಲಿ ಒಂದು ಭಿಕ್ಷೆ ಬೇಡಲು ಬಂದಿದ್ದೇನೆ. ನೀನು ಅದನ್ನು ನೀಡಬೇಕು!'

'ಭಿಕ್ಷೆ? ನಿನ್ನಂತಹವಳಿಗೆ ಭಿಕ್ಷೆ? ಇಂದಿನ ಈ ವೇಷದಿಂದ ನೀನು ದಿಟವಾಗಿ ಭಿಕ್ಷುಣಿಯೇ ಆಗಿರುವೆ!'

'ನಾನು ಹೊತ್ತಿಸಿದ ಕಿಚ್ಚನ್ನು ನಾನು ನಂದಿಸಲು ನನಗೆ ನೀನು ಅನುಮತಿಯ ಭಿಕ್ಷೆ ನೀಡು.'

'ಚಂದ್ರನಖಿ, ನಿನ್ನ ಕೈ ಬೆಂಕಿ ಹೊತ್ತಿಸಿದ್ದರೂ, ಆ ಕಾಳ್ಗಿಚ್ಚು ನಿನ್ನ ಶಕ್ತಿಯ ಕೈ ಮೀರಿದೆ. ನೀನು ಆರಿಸಲು ಹೋದರೆ, ಅದು ನಿನ್ನನ್ನೇ ಸೆಳೆದುಕೊಳ್ಳುವುದು ದಿಟ!'

'ನನಗೆ ಅದೇ ಹಿತವಾದುದು.'

'ನಿನ್ನಾಸೆ ಏನೆಂದು ಹೇಳು.'

'ನನಗೆ ಹೇಳಲು ಆಸೆ; ಆದರೆ ಹೇಳಲು ನನ್ನ ನಾಲಗೆ ಅಂಜುತ್ತಿದೆ.'

'ನೀನು ನನ್ನ ಒಡಹುಟ್ಟಿದವಳು.'

'ಜನಕಕನ್ಯೆಯನ್ನು ದಾಶರಥಿಗೆ ಒಪ್ಪಿಸುವುದು ನನ್ನ ಇಚ್ಛೆ.'

'ತಂಗಿ, ಅದು ಒಳ್ಳೆಯ ಮಾರ್ಗ! ಅದು ಹೆಂಬೇಡಿಗಳಿಗೆ ಮತ್ತು ಜೀವಗಳ್ಳರಿಗೆ ನಿಜವಾಗಿಯೂ ಸತ್ಪಥ!'

ಎಂದು ದಶಾನನನು ಆರ್ಭಟಿಸಿ ಹೇಳುತ್ತ ಮಂಚದ ಮೇಲೆ ಎದ್ದು ಕುಳಿತನು.

ನಿನ್ನಾತ್ಮ ಮೇನಾಡುತಿದೆ ಪೇಳ್; ಪೇಳೆನಗೆ ನಿನ್ನಂತರಾತ್ಮಮಂ!

ಚಂದ್ರನಖಿ ಅವನ ಸೋದರಿಯಲ್ಲವೆ? ಅಸುರೇಂದ್ರನ ಒಳಹೊರಗು, ಮೇಲ್ ಕೆಳಗುಗಳನ್ನು ಅರಿತ ಅವಳು ಅಪ್ರತಿಭಳಾಗುವಳೆ? ನಿಟ್ಟುಸಿರುಬಿಡುತ್ತ ಕುಳಿತಿದ್ದ ಅವನ ಎದುರಿಗೆ ತನ್ನ ದೇಹದ ನಿಲುವನ್ನು ನೇರಮಾಡಿ ನಿಂತ ಲಂಕಾಲತಾಂಗಿಯು ಮಾರುತ್ತರವನ್ನು ಹೀಗೆ ಕೊಟ್ಟಳು:

'ಹೆದರಿ ನಡೆಯುವುದು ಹೇಡಿತನ. ತಿಳಿದು ಮಾಡುವುದಕ್ಕೇಕೆ ಆ ಹೆಸರು? ತನ್ನನ್ನು ಹೇಡಿ ಎನ್ನುತ್ತಾರೆ ಎಂಬುವುದಕ್ಕೆ ಅಳುಕಿ ಮಾಡಬಾರದುದನ್ನು ಮಾಡುವವನು ಎರಡರಷ್ಟು ಹೇಡಿ! ನಿನ್ನ ಆತ್ಮವು ಏನು ಹೇಳುತ್ತಿದೆ ಎಂದು ಹೇಳು; ನಿನ್ನ ಅಂತರಾತ್ಮವನ್ನು ಹೇಳು! ನೀನು ಅತ್ತಿಗೆಗೆ ಹೇಳಿದ ಕನಸಿನ ಅರ್ಥವೇನು?

'ಸೀತೆಯಲ್ಲಿ ನಿನಗೆ ಇನ್ನೂ ಅಂದಿನ ಕಾಮರುಚಿ ಇರುವುದೆ? ಹೇಳು. ಅಶೋಕವನವಾಸಿ ಈ ಸೀತೆ, ಆ ಪಂಚವಟಿವಾಸಿ ಸುಮಂಗಲಿಯ ರೀತಿ ನಿನಗೆ ಮೋಹವನ್ನು ಕೆರಳಿಸುತ್ತಿರುವಳೇ? ಈ ಉಪವಾಸವ್ರತಳು, ಈ ಮಲಿನವಸನೆ, ಈ ತಪಸ್ವಿನಿ, ಈ ನಿಶ್ಚಲ ಪತಿವ್ರತಾ ಪೂಜ್ಯೆ.'

ಎಂದು ಅಕ್ಷರಗಳನ್ನು ಕಡೆಕಡೆದು ತಡೆತಡೆಯುತ್ತ ಆಡಿದಳು.

'ನಿನಗೆ ಭೋಜ್ಯಳೆ, ಹೇಳು? ತಪಸ್ಯೆಯಿಂದ ಬ್ರಹ್ಮನನ್ನು ಒಲಿಸಿಕೊಂಡು ವರಗಳನ್ನು ಪಡೆದ ಅನುಗ್ರಹ ಬುದ್ಧಿಯವನು ನೀನು. ಗೌರವ ಕೆಡುವುದೆಂದು, ಕ್ಷಾತ್ರವು ಮಸುಕಾಗುವುದೆಂದು ನೀನು ಭಯಪಡುವುದಾದರೆ ಆ ಕಾರ್ಯವನ್ನು ನನಗೆ ಅಜ್ಞಾಪಿಸು, ಅನ್ಯರಿಗಾದರೂ...'

ಧನ್ಯನಪ್ಪಾ ಪೊಳ್ತು ತೋರುತಿರ್ಪುದು ಸಾರೆ ಬರ್ಪಂತೆ.

'ಸಹೋದರೀ, ನಿನ್ನ ಉಪನ್ಯಾಸ ಸಾಕು. ನಿಲ್ಲಿಸು. ನೀನು ಜಾಣೆ ಎಂಬುದು ನನಗೆಗೊತ್ತು. ಇಲ್ಲದೆಯಿರುವುದನ್ನು ಇದೆ ಎಂದು, ಇರುವುದನ್ನು ಇಲ್ಲವೆಂದು ಮನಸ್ಸು

ಒಪ್ಪುವ ಹಾಗೆ ಹೇಳುವ ಜಾಣ್ಮೆ ನಿನಗೆ ಹುಟ್ಟಿನಿಂದ ಬಂದದ್ದು. ನಾನು ನಿನಗಿಂತ ಮೊದಲು ಹುಟ್ಟಿದ್ದೇನೆ. ನೀನು ಹೇಳಿದುದೆಲ್ಲವೂ ನಿಜ. ಆದರೆ ಅದು ನೀನು ಕೊಟ್ಟ ಕಾರಣಗಳಿಂದಲ್ಲ. ಅದಕ್ಕೂ ಮಿಗಿಲಾದ ಹಿರಿಯ ಕಾರಣಗಳಿಂದ! ನನಗೆ ಇಂದಿನ ಸೀತೆ ಅಂದಿನ ಸೀತೆಯಲ್ಲ ಎಂಬುದು ನಿಜ. ಆಕೆಗೂ ಮಿಗಿಲಾದ ಅತ್ಯಧಿಕವಾದ ಗಾಢಮೋಹ ಈಕೆಯಲ್ಲಿ ನನಗೆ ಉಂಟಾಗಿದೆ. ಆಕೆಯನ್ನು ತೊರೆದಿರುವೆ. ಆದರೆ ಈಕೆಯನ್ನು ಎಂದೆಂದಿಗೂ ಬಿಡೆನು!

'ಚಂದ್ರನಖಿ, ಹಿಂದೆ ನಡೆದುದನ್ನು ಹೇಳುವೆ ಆಲಿಸುವಂತವಳಾಗು. ನಾನು ಮಾರೀಚನನ್ನು ಕಂಡೆ, ಅವನನ್ನು ಕನಕ ಮೃಗರೂಪದಿಂದ ವಂಚಿಸಲು ಪ್ರೇರೇಪಿಸಿದೆ. ಆ ಕಥೆ ನಿನಗೆ ಗೊತ್ತಿದೆ. ಆಗ ಮಾವನು ಪತಿವ್ರತೆಯ ಮಹಿಮೆಯನ್ನು ಕುರಿತು ಹೇಳಿದ. ನಾನು ಈ ಮೂರುಲೋಕಗಳಲ್ಲಿ ರಾವಣನ ಶಯ್ಯೆಗೆ ಒಲಿಯದಿರುವ ನಾರಿಯರು ಇಲ್ಲವೆಂದು ಹೇಳಿದೆನು! ಮತ್ತೆ, (ನಿನ್ನೆ ನಾನು ಹೇಳಿದಂತಿವೆ ಆ ಮಾತುಗಳು) ಅವನಿಗೆ ಪ್ರತಿಜ್ಞೆ ಮಾಡಿ ಹೇಳಿದೆ: 'ಇಲ್ಲ, ಮಾರೀಚ ಎಲ್ಲಿಯೂ ಇಲ್ಲ ಆ ನನ್ನ ತಾಯಿ! ಸುಳ್ಳನ್ನು ಹೇಳಲು ಅಯ್ಯೋ, ನನ್ನ ಬಾಯಿ ಹೇಸುತ್ತಿದೆ. ಸುಳ್ಳಿಗೆ ನನ್ನ ಪೂಜೆ ಸಲ್ಲುವುದಿಲ್ಲ. ನನಗೆ ಅಂತಹ ಪಾವನೆ ಕಂಡ ದಿನ ನಾನು ಧನ್ಯ, ಅವಳು ಧನ್ಯಳು ! ಚಂದ್ರನಖಿ, ಧನ್ಯನಾಗುವ ಹೊತ್ತು ಹತ್ತಿರ ಬರುತ್ತಿರುವಂತೆ ಕಾಣುತ್ತಿರುವುದು. ಬದುಕಿದ್ದರೆ ಮತ್ತು ಪುಣ್ಯಯೋಗವಿದ್ದರೆ ನಿನಗೆ ಆ ದಿವ್ಯದೃಶ್ಯವನ್ನು ನೋಡಲು ಸಾಧ್ಯವಿದೆ.'

ದಾನವೇಶ್ವರನು ಆ ದೃಶ್ಯವನ್ನು ಮನಃಚಕ್ಷುವಿನಲ್ಲಿ ನೋಡುವಂತೆ ರೆಪ್ಪೆಬಡಿಯದ ಹಾಗೆ ದೂರ ದೃಷ್ಟಿಯಲ್ಲಿ ಕೇಂದ್ರೀಕರಿಸಿದನು. ಅವನ ಮುಖದಲ್ಲಿ ಮುಗುಳು ನಗೆಯೊಂದು ಬೆದರಿದಂತೆ ಸುಳಿಯಿತು. ತಕ್ಷಣ ತಂಗಿಯನ್ನು ಕುರಿತು,

'ಅಃ! ಅಗೊ ಆ ದೃಶ್ಯ ನಿನಗೆ ಕಾಣುವುದಿಲ್ಲ! ಎಂತಹ ದೃಶ್ಯವದು! ಮೂರುಲೋಕಗಳು ಇರುವವರೆಗೂ ಮತ್ತು ಮುಂದೆಯೂ ಕಂಡು ಅರಿಯದ, ಕಾಣಲಾರದ ಯುದ್ಧದಲ್ಲಿ ಜಗದೇಕವೀರನಾದ ರಘುಕುಲ ಲಲಾಮನನ್ನು ಗೆಲ್ಲುತ್ತೇನೆ. ಗೆದ್ದು, ಸೆರೆಯಾಗಿ ತರುತ್ತೇನೆ. ಲಂಕೇಶ್ವರನ ಸರ್ವಗರ್ವವನ್ನು ಇನ್ನಿರದೆ ಸೋಲಿಸಿದ ಮೈಥಿಲಿಗೆ ಕಪ್ಪವೆಂದು ಕಾಣಿಕೆಯನ್ನು ಒಪ್ಪಿಸುತ್ತೇನೆ. ಅದು ಆ ಭವ್ಯ ದಿವ್ಯದೃಶ್ಯ!'

ಅಣ್ಣನ ಆ ನುಡಿಗಳನ್ನು ಕೇಳಿ ಚಂದ್ರನಖಿಯ ಮೈ ರೋಮಾಂಚನಗೊಂಡಿತು. ಕಣ್ಣೀರು ತುಳುಕುತ್ತಿರಲು ತತ್ತರಿಸಿದಳು. ಮತ್ತೆ ಮೊಳಕಾಲೂರಿ ನಮಸ್ಕರಿಸುತ್ತ ಹೇಳಿದಳು:

'ನಿಜ. ನಿಜವಾಗಿಯೂ ನೀನು ಮಹಾಕವಿ! ಬರಿ ಕಲ್ಪನೆಯಲ್ಲಿ ಅಲ್ಲ, ಈ ಜಗತ್ತಿನರಂಗದಲ್ಲಿ ನೀನು ನಿಜವಾಗಿಯೂ ಕೃತಿಗಳನ್ನು ಕೊರೆಯುವ ಮಹಾಶಿಲ್ಪಿ!'

ಮತ್ತಮೀ ಸೀತೆಯಂ ಬೇಡಿ ಪಡೆವೆನಿಷ್ಟಾರ್ಥಮಂ.

'ತಾಳು! ತಾಳು! ಋತಪ್ರತಿಭೆಯು ಕವಿಪ್ರತಿಭೆಯಂತೆ ಅಲ್ಲ. ಅದಕ್ಕೆ ದಶಮುಖ, ಶತಮುಖ, ಬಹುಮುಖ, ಅನಂತಮುಖ! ತಂಗಿಯೇ ಕೇಳು, ನಾನಿನ್ನೂ ಜಾನಕಿಯಲ್ಲಿ ಸೋಲೊಪ್ಪಿಕೊಂಡಿಲ್ಲ. ಆ ಸೋಲಿನಲ್ಲಿಯೇ ನನ್ನ ಗೆಲುವು ಇದೆ. ಇಂದು ನನ್ನ ಮೂಲಬಲಗಳನ್ನೆಲ್ಲ ಯುದ್ಧಕ್ಕೆ ಸಜ್ಜುಗೊಳಿಸುತ್ತೇನೆ. ಇಂದು ನಾನು ವಾನರರಿಗೆ ಅವರು ಹಿಂದೆಂದೂ ಕಾಣದ ಒಂದು ಅತಿ ಪರಾಕ್ರಮವನ್ನು ತೋರಿಸುತ್ತೇನೆ. ನನಗೆ ಬ್ರಹ್ಮನಿಂದ ಒಂದು ಶ್ರೇಷ್ಠವಾದವರ ಪ್ರಾಪ್ತವಾಗಿದೆ. ಅದರ ಬಲದಿಂದ ನನ್ನ ಮೂಲಬಲದಲ್ಲಿ ನಾನೇ ಒಬ್ಬೊಬ್ಬನೂ, ಎಲ್ಲರೂ ಮತ್ತು ಸರ್ವವೂ ಆಗಿ ದಶಮುಖನೆಂಬ ಬಿರುದು ಶತಮುಖವಾಗುವಂತೆ ಕಾದಾಡುತ್ತೇನೆ.. ಮತ್ತೆ ಈ ಸೀತೆಯನ್ನು ಬೇಡಿ ಇಷ್ಟಾರ್ಥವನ್ನು ಪಡೆಯುತ್ತೇನೆ.'

ಎಂದು ಹೇಳಿ ತುಸುಹೊತ್ತು ಮೌನಿಯಾದನು. ಅನಂತರ ಮಾತು ಮುಂದುವರಿಸಿದನು.

'ಅತಿಕಾಯ, ಇಂದ್ರಜಿತು ಮಡಿದರೇನು? ಮೈಬಿಟ್ಟರು ಅಲ್ಲವೆ? ಸಹೋದರಿ, ನೀನು ಭಯಪಡಬೇಡ. ಅಳದಿರು! ಅಂಜದಿರು! ನಿನ್ನ ಸಹೋದರ ಸಿಡಿಲಾಳು ಎಂದು ತಿಳಿ!.. ಏಳು ತಂಗಿ ನನಗೇಕೊ ಬಾಯಾರುತ್ತಿದೆ ಕುಡಿಯಲೇನಾದರು ತೆಗೆದುಕೊಂಡು ಬಾ... ಕೇಳು, ರಣಭೇರಿ ಮೊಳಗುತ್ತಿದೆ!...'

ಚಂದ್ರನಖಿಯು ನೆನೆದಕಣ್ಣುಗಳನ್ನು ಒರಸಿಕೊಳ್ಳುತ್ತ ತಣ್ಣನೆಯನೀರಿನಲ್ಲಿ ಮುಳುಗಿಸಿಟ್ಟಿದ್ದ ಸೋಮರಸವನ್ನು ತಂದುಕೊಟ್ಟಳು. ಮಂಡೋದರಿಪ್ರಿಯನು ಅದನ್ನು ಕುಡಿಯುತ್ತ

'ತಂಗಿ, ಹೋಗಿ ನಿನ್ನ ಅತ್ತಿಗೆಯನ್ನು ಸ್ವಲ್ಪ ನೋಡಿಕೊ. ಜರ್ಜರಿತಳಾಗಿದ್ದಾಳೆ.'

ಎಂದು ಹೇಳಿ ನಿಟ್ಟುಸಿರು ಬಿಡುತ್ತ ಮಾತು ಮುಂದುವರಿಸಿ ಹೇಳಿದನು: 'ಒಬ್ಬನೆ ಮಗನ ಸಾವು ಕೇಳಿ!'

ಕಂಠಬಿಗಿದು ಬಂದು ಸುಮ್ಮನಾದನು. ತುಸುಹೊತ್ತಿನ ನಂತರ ನುಡಿದನು, 'ನಮ್ಮ ಸಂವಾದವನ್ನು ನೀನು ಅವಳಿಗೆ ಹೇಳಬೇಡ.'

ಹಾಗೆ ಹೇಳಿ ಸ್ವಲ್ಪಸಮಯದ ನಂತರ ಆಲೋಚಿಸುತ್ತ ಮತ್ತೆ ಹೀಗೆ ಹೇಳಿದನು:

'ನೀನು ಹೇಳಿದರೆ ನನಗೇನು ಚಿಂತೆ? ಹೇಳಬೇಡ ಎಂದು ಹೇಳಿದರೆ ನೀನು ಹೇಳದೆ ಇರುವೆಯಾ? ಕೊನೆಗೆ ನೀವೇ ಗೆಲ್ಲುವಿರಿ! ನಿಮ್ಮದು ಒಳಸಂಚು! ತನ್ನವರು ಗೆಲ್ಲುವುದಾದರೆ ತಾನು ಸೋಲುವುದೂ ಜಯವೆ!'

❑



~~~~~~~~~~~~~~~~~~~~~~~~ ಸಂಚಿಕೆ – ೬ ~~~~~~~~~~~~~~~~~~~~~~~~

ಶ್ರೀರಾಮ ರಾವಣ ಚಿತ್ತಪಸ್ಶ್ರೀ

ಲಂಕೆಯ ಕ್ರೀಡಾಂಗಣದ ಬಯಲ ಮಹಾವಿಸ್ತಾರದ ಒಡಲು ಮೇರೆಮೀರಿ ಸಿಡಿಯುತ್ತಿದೆ ಎನ್ನುವಂತೆ ರಾವಣನ ಮೂಲಬಲದ ದಂಡು ಬೀಡುಬಿಟ್ಟಿತ್ತು. ಅದು ದೊಡ್ಡಕಾಡಿನಂತೆ, ಸಾಗರದಂತೆ ಕಿಕ್ಕಿರಿದು, ಭೋರ್ಗರೆದು ಮಿಂಚುತ್ತಿತ್ತು.

ಮಹೋದರ! ಸುಪ್ತಘ್ನ! ಮಕರಾಕ್ಷ! ರಾಹುರೋಷ! ಸೂರ್ಯಶತ್ರು! ಶೋಣಿತಾಕ್ಷ! ಬ್ರಹ್ಮಾಕ್ಷ ಮತ್ತು ಅಗ್ನಿಕೇತು! ಎನ್ನುವ ಹೆಸರು ಪಡೆದವರು, ಹೆಸರನ್ನು ಉಳಿಸಿಕೊಂಡವರು ದಶಶಿರನ ಮಹಾಸೇನಾಪತಿಗಳು. ಅವರು ತಮ್ಮತಮ್ಮ ದಳಸಮಸ್ತರನ್ನು ಕೂಡಿಕೊಂಡು ಸಾವು ಬದುಕಿನ ಕೊನೆಯ ರಣಘೋರಕ್ಕೆ ಅಣಿಯಾಗಿ ದಳಗಳ ಅಗ್ರಭಾಗದಲ್ಲಿ
~~~~~~~~~~~~~~~~~~~~~~~~

ನಿಂತಿದ್ದರು. ದಶಗ್ರೀವ ರಾಕ್ಷಸ ನರೇಂದ್ರನ ಆಗಮನವು ತಡವಾದುದಕ್ಕೆಂಬಂತೆ ವೇಗದ ರಥಾಶ್ವಗಳು ವ್ಯಗ್ರವಾಗಿ ಕಾಲಿನ ಗೊರಸಿನಿಂದ ಶಬ್ದ ಮಾಡುತ್ತ ಕೆನೆದಾಡುತ್ತಿದ್ದವು.

ಆ ಕಡೆ ಪುತ್ರ ವ್ಯಸನದಿಂದ ಸೊರಗಿದ ರಾವಣೇಶ್ವರನು ತನ್ನ ಹೃದಯರಂಗದ ರಣತುಮುಲವನ್ನು ರಣವಸ್ತ್ರ ಭೂಷಣಗಳಿಂದ ಮರೆಸಿದನು. ಕಣ್ಣು ಹಾಗೂ ಮನಸ್ಸನ್ನು ಆಕರ್ಷಿಸುವಂತೆ ಜ್ವಲಿಸುವ ಅಗ್ನಿವರ್ಣದ ಉಡುಗೆಗಳನ್ನು ತೊಟ್ಟುಕೊಂಡನು. ಧೈರ್ಯರವಿ ರಶ್ಮಿ ಕೋಟಿಯನ್ನು ಸುರಿಸುವ ಸೂರ್ಯನ ಪ್ರತಿಬಿಂಬದಂತಹ ಭೀಮದರ್ಶನ ಶರೀರದ ಅವನು ನಿರಾಶೆಯ ಮೇಘಗಳನ್ನು ನೂಕಿ ನಡೆದನು. ಅವನ ಸುತ್ತೂ ಬಳಸಿ ವಾದ್ಯ ಘೋಷಗಳು ಮೊಳಗುತ್ತಿರಲು ಹೊರಟುಬಂದ ಅವನು ತನ್ನ ಮೂಲಬಲ ಸಾಗರದ ಅಪಾರತೆಯನ್ನು ಕಂಡನು.

ಅದೇನು ಭ್ರಾಂತಿಯೋ? ಮಾಯೆಯೋ? ಎದೆಯ ಕಿಚ್ಚನ್ನು ಕೆರಳಿಸುವ ಬಹುಸಂಖ್ಯೆಯ ಸೇನೆಯೋ? –ಯಮನು ಬೇರೆ ಬೇರೆಯಾಗಿ ಒಬ್ಬೊಬ್ಬರನ್ನೇ ಶಿಕ್ಷಿಸಿ ಭಯಪಡಿಸುತ್ತಾನೆ. ಹಾಗಲ್ಲದಿದ್ದರೆ ಯಮನಿಗೆ ನರರನ್ನು ಒಟ್ಟಾಗಿ ಗುಂಪುಗೂಡಿಸುವುದಾದರೆ ಸ್ಥಳವೆಲ್ಲಿ ಉಳಿಯುತ್ತದೆ?

ನಿಶಾಚರೇಶ್ವರನ ಮನಸ್ಸಿನಿಂದ ಮನೋವ್ಯಥೆ ಜಾರಿತು. ಅಪೂರ್ವವೆನ್ನುವಂತೆ ವೀರಸಹಜ ಆವೇಶ ಉಕ್ಕಿತು. ರಜೋಕ್ಷಾತ್ರ ತೇಜವು ಪ್ರಜ್ವಲಿಸಿತು. ಜೊತೆಗೆ ತನ್ನ ಒಡೆಯ ನೃಪಚಂದ್ರನನ್ನು ಕಂಡು ಸೇನಾಸಮುದ್ರವು ಉಬ್ಬಿತು. ನಿಸ್ಸಾಳಗಳು ಚೀರಿದವು; ಭೇರಿ ಮೊಳಗಿದವು. ಲಂಕಾಧರಣಿಯು ಬಹುಕೋಟಿಕಂಠಗಳ ಘೋರ ಶಬ್ದದಿಂದ ಘೋರಘೋಷಣೆಗಳಿಂದ ಭಯಂಕರವಾಯಿತು.

ದಾನವೇಂದ್ರನು ಮೇರುಪರ್ವತದಂತಹ ಸುವರ್ಣವೇದಿಕೆಯ ತುಂಗ ಶಿಖರಕ್ಕೆ ಕೋಡುಮೂಡಿದಂತೆ ಏರಿನಿಂತನು. ಕಣ್ಣುಗಳನ್ನು ಅರಳಿಸಿ ಮನಸ್ಸು ಆನಂದದಲ್ಲಿ ತೇಲಾಡುವಂತೆ ನೋಡಿದನು. ದಿಗಂತದವರೆಗೆ ಹಬ್ಬಿದ್ದ ಸೇನೆಯನ್ನು ಉಸಿರು ಬಿಗಿಹಿಡಿದು ನೋಡಿದನು. ಅಲ್ಲಿ ಗಜಸಮೂಹಗಳು, ಕುದುರೆಯ ಸಾಲುಗಳು, ರಥಗಳು, ಬಿರುದಾವಳಿಯವರು, ಕಾಲಾಳುಗಳು ಮೆರೆದಿದ್ದರು. ಪ್ರಾಸ ಪಟ್ಟಸ ಪರಿಘ ಶರಖಡ್ಗ ಪರಶುಗಳು; ತೋಮರಗಳು; ನಿಮಿರಿದ್ದ ಗದೆಗಳು; ಶೂಲಗಳು; ಭಿಂಡಿಪಾಲ ಶತಘ್ನಿಗಳು; ಯಷ್ಟಿ; ಚಕ್ರಗಳು ಮುಂತಾದ ಆಯುಧಗಳಿಂದ ಕೂಡಿದ ರಾಕ್ಷಸ ಸೇನಾಸಮುದ್ರವು, ವೈರಿಗಳ ಧೈರ್ಯವನ್ನು ನಡುಗಿಸುವಂತೆ ಭೀಕರವಾಗಿ ವಿಜೃಂಭಿಸಿದವು. ಅವುಗಳನ್ನು ದೃಷ್ಟಿಹರಿದು, ಸೋಲುವವರೆಗೂ ನೋಡಿದನು. ಸಂತೋಷವು ಉಕ್ಕುತ್ತಿರಲು ತನ್ನ ಸೇನಾಸಮುದ್ರವನ್ನು ಉದ್ದೇಶಿಸಿ ಹೀಗೆ ಹೇಳಿದನು:

'ನಮಗೆ ಗುರುತರವಾದ ಕಾರ್ಯವಿದೆ. ನನಗಾಗಲಿ, ನಿಮಗಾಗಲಿ ದೀರ್ಘವಾದ ಭಾಷಣಕ್ಕೆ ಇಂದು ಅವಕಾಶವಿಲ್ಲ, ಮನಸ್ಸೂ ಇಲ್ಲ. ನೀವು ಕೈಗೊಳ್ಳುವ

ಯುದ್ಧಸಂಬಂಧವಾಗಿ ನಾನು ಒಂದು ವಿಷಯ ಹೇಳುವುದಿದೆ. ಆ ವಜ್ರಕವಚ ಸಮಾನವಾದ ಸುವಾರ್ತೆಯನ್ನು ಕೇಳಿ. ಇಂದು ನಮ್ಮ ಲಂಕೆಯು ಗಾಯಗೊಂಡ ಹಂದಿಯಂತಿದೆ. ಇಲ್ಲಿ ನಾವು ಆಯ್ಕೆಮಾಡಿದ ಮೂಲಬಲದ ಸರ್ವವೂ ನೆರೆದಿದೆ. ವಾನರಸೇನೆಗೆ ಇನ್ನಾವ ಗತಿ ಕಾದಿದೆಯೊ ಎನ್ನುವುದನ್ನು ಕಾಲಗರ್ಭ ತನ್ನಲ್ಲಿ ಹುದುಗಿಸಿಕೊಂಡಿದೆ.

'ಸಾವಿರವರ್ಷದ ಘೋರತಪಸ್ಸಿನಿಂದ ನಾನು ಬ್ರಹ್ಮನನ್ನು ಮೆಚ್ಚಿಸಿದ್ದೇನೆ. ಎಷ್ಟೋ ದಿವ್ಯವರಗಳನ್ನು ಪಡೆದಿದ್ದೇನೆ. ನನಗೆ ಎಷ್ಟೋ ಮಂತ್ರಶಕ್ತಿಗಳು ಶರಣಾಗಿವೆ. ದೇವ ದಾನವ ಗರುಡ ಗಂಧರ್ವ ಯಕ್ಷ ಕಿನ್ನರ ಸುರ ಅಸುರರು ನನ್ನ ಸಾವಿಗೆ ಕಾರಣವಾಗಲು ಸಾಧ್ಯವಿಲ್ಲ. ಹಾಗಿರುವಾಗ ಕಪಿಧ್ವಜರಾದ ವಾನರರು, ನರರು ನನಗೆ ಸಾವನ್ನು ತರುವರೆ?

'ಅದು ಹಾಗಿರಲಿ, ಬ್ರಹ್ಮನು ನೀಡಿರುವ ವರಗಳಲ್ಲಿ ನನ್ನಲ್ಲಿ ಒಂದು ಅದ್ಭುತವಾದ ವರವಿದೆ. ಆ ವರದ ಮಹಿಮೆಯಿಂದ ನಿಮ್ಮಲ್ಲಿ ಒಬ್ಬೊಬ್ಬರ ಒಳಗೂ ನಾನು ಇರುತ್ತೇನೆ. ಶತ್ರುವಿಗೆ ಅಸಂಖ್ಯ ರಾವಣರೇ ಸೇನೆಯಾಗಿರುವಂತೆ ಕಾಣಿಸುತ್ತದೆ. ಒಂದೇ ತೋಳು ನೂರಾಗಲು, ಸಾವಿರವಾಗಲು ನಿಮ್ಮ ದುರ್ದಮವಾದ ಬಲಕ್ಕೆ ವರದ ಮಹಾಶಕ್ತಿಯನ್ನು ಬೆಂಬಲವಾಗಿ ಇಂದು ನೀಡುತ್ತೇನೆ. ನಿಮ್ಮಲ್ಲಿ ಒಬ್ಬೊಬ್ಬನೂ ಅಶ್ವದಳದವನಾಗಲಿ, ತೇರಿನ ಸಾರಥಿಯಾಗಲಿ, ಪದಾತಿಯ ಸೈನಿಕನಾಗಲಿ, ಆನೆಯ ಮಾವುತನಾಗಲಿ ಈ ಲಂಕಾಧಿಪತಿಯಂತೆ ಉತ್ಸಾಹತಗ್ಗದೆ ಬಿಂಕದಿಂದ ಯುದ್ಧ ಮಾಡುವಿರಿ.

'ಗಂಧಮಾದನ, ಆಂಜನೇಯ, ನಳ, ಜಾಂಬವ ವಾಲಿಯ ಮಗ ಯಾರಾದರೂ ಆಗಿರಲಿ–ಅವರು ನಮ್ಮಲ್ಲಿಯ ಸ್ವಲ್ಪವೂ ಗಣನೆಗೆ ಬಾರದವನ ಎದುರು ತೃಣಸಮಾನರಾಗುವರು. ಇಂದ್ರಜಿತು ತೀರಿ ಹೋದರೇನು? ಅತಿಕಾಯ ಮರಣಹೊಂದಿದರೇನು? ರಣರಂಗದಲ್ಲಿ ಕಲಿ ಕುಂಭಕರ್ಣನ ಕಳೇಬರ ಕಳಚಿಬಿದ್ದರೇನು? ಧೂಮ್ರಾಕ್ಷ, ವಜ್ರದಂಷ್ಟ್ರರು ಅಳಿದರೇನು? ಮಹಾಪಾರ್ಶ್ವ, ಪ್ರಹಸ್ತ ಸೇನಾಧಿಪತಿಗಳು ಪ್ರಾಣಬಲಿ ಕೊಟ್ಟರೇನು? ಲಂಕೆಯು ಯುದ್ಧಸಿದ್ಧರಿಗೆ ಅಕ್ಷಯ ನಿಕೇತನವಾಗಿದೆ!

'ನೀವು ಇಂದು ರಾವಣರು! ಇಂದು ಈ ಸೇನೆಯಲ್ಲಿ ಬಿಂದುವೂ ಸಿಂಧು! ನಡೆಯಿರಿ ಯುದ್ಧಕ್ಕೆ! ನಡೆಯಿರಿ ದಶಗ್ರೀವನ ವಿಜಯಲಕ್ಷ್ಮಿಯ ತೋಳುಗಳ ಉಯ್ಯಾಲೆಗೆ.'

ರಾವಣೇಶ್ವರನ ಆ ನುಡಿ ಕೇಳಿ ಆಕಾಶಕ್ಕೆ ಎದ್ದ ಜಯ ಜಯ ಘೋಷ! ಕರತಾಡನದ ಶಬ್ದ! ತರತರದ ರಣವಾದ್ಯಗಳ ಭಯಂಕರ ಮಾಧುರ್ಯ! ಭೀಕರ ನಾದಸಮುದ್ರದ ಮೊರೆತ! ಓಹ್ ಅದನ್ನು ಏನೆಂದು ಹೇಳುವುದು?

ದೊಡ್ಡ ಆನೆಗಳು ಘೀಂಕರಿಸಿದವು, ಅಶ್ವ ಸಮೂಹವು ಕೆನೆದುವು. ರಥಚಕ್ರಗಳ ಸಾಲು ಚೀತ್ಕರಿಸಿದವು. ರಾವಣನ ಮೂಲಬಲ ಸಮುದ್ರವು ಕೋಟೆಬಾಗಿಲುಗಳಿಂದ

ಧರೆ ಕಂಪಿಸುವಂತೆ ಹೊರಬಂದಿತು. ಅದು ವಾನರ ಕಡಲಬೆಂಕಿಯನ್ನು ನಂದಿಸುವ ನಿಶ್ಚಯದ ದೃಢಧೀರ ತೀಕ್ಷ್ಣ ಸಾಮರ್ಥ್ಯ ಲಕ್ಷ್ಯದಿಂದ ಮುನ್ನಡೆಯಿತು! ತೆರೆತೆರೆಯಾಗಿ ಅದ್ಭುತ ಸೇನೆ ಚಲಿಸಿತು. ಧೂಳಿನಿಂದಾದ ದಟ್ಟಪರದೆಯ ಹಿಂದೆ ದಳದಳದ ಸಾಲುಗಳ ಧ್ವಜಗಳು ಮರೆಯಾದವು.

ಒಂದು ಕಾರ್ಯಕ್ಕಾಗಿ ತನ್ನ ಬಹುರೂಪಗಳೇ ಸಜ್ಜುಗೊಂಡ ಆ ಸೇನೆಯ ವೈಭವವನ್ನು, ವೀರ್ಯವನ್ನು, ಶಕ್ತಿ ಬಲ ಧೈರ್ಯವನ್ನು ನೋಡಿದ ದಶಮುಖನ ಮುಖದಲ್ಲಿ ಮಂದಸ್ಮಿತ ಮೂಡಿತು. ದೀಪವು ಆರುವ ಮೊದಲು ಪ್ರಜ್ವಲಿಸುವಂತೆ ಅವನ ಎದೆಯಲ್ಲಿ ಮೈಥಿಲಿಯ ಮೈಯ್ಯಾಸೆ ಉಕ್ಕಿತು. ಅದು ಅವನ ಈ ಮೊದಲಿನ ಮನೋರಥದ ಯೋಗ್ಯಮಾರ್ಗವನ್ನು ಮರೆಸಿತು.

'ಮತ್ತೊಮ್ಮೆ ಅವಳ ಹೃದಯದ ಆಳವನ್ನು ನೋಡುತ್ತೇನೆ. ಮತ್ತೆ ಅವಳ ಪತಿವ್ರತಾಸತ್ವವನ್ನು ಪರೀಕ್ಷಿಸುತ್ತೇನೆ' ಎಂಬ ನೆವವನ್ನು ಕಾರಣವಾಗಿಸಿಕೊಂಡನು.

ತನ್ನ ತಿಳಿಯಾಳದಿಂ. ಕದಡು ಬಗೆ ತಿಳಿವಂತೆ, ಬಾನ್ ತೊಳೆದುದಾತ್ಮಮಂ!

ಮಾಯೆಯು ಕಟ್ಟಿದ ಮೂಗುದಾರದ ನಿಶಾಚರನು ಸ್ವತಂತ್ರದ ಭ್ರಮೆಯಲ್ಲಿ ವಿಧಿತಂತ್ರ ಪಶುವಿನಂತಾದನು. ಅವನು ಅಶೋಕವನದ ಯಾಗಮಂಟಪದ ಭೋಗಯಜ್ಞಸ್ತಂಭದ ಹತ್ತಿರದ ಹಸುರಿನಂತಹ ಪತಿವ್ರತಾ ರೂಪ ದರ್ಶನಕ್ಕೆ ಹೋದನು.

ಅವನು ಸೀತಾ ಕುಟೀರವಿದ್ದ ಎತ್ತರದ ಸ್ಥಳಕ್ಕೆ ಹೋದತಕ್ಷಣ ಅವನ ಆತ್ಮದಲ್ಲಿ ಶಾಂತಿಭಾವವು ತುಂಬಿತು. ಯುದ್ಧವನ್ನು ಮರೆತ ಚೇತನಕ್ಕೆ ಶುದ್ಧಬುದ್ಧಿಯ ಮನಶ್ಶಾಂತಿ ಉಂಟಾಯಿತು. ಬಹುಕಾಲದಿಂದ ತಾನು ಆಲಿಸದ ಪಕ್ಷಿಯ ಇಂಚರ ಕಿವಿಗೆ ಕೇಳಿಸಿತು! ಕಡಲ ನೀಲಿ ಕಂಡಿತು! ಕದಡಿದ ಮನಸ್ಸನ್ನು ತನ್ನ ತಿಳಿ ಆಳದಿಂದ ತಿಳಿಯುವಂತೆ, ಬಾನು ಆತ್ಮವನ್ನು ತೊಳೆಯಿತು! ದಿಗಂತದಲ್ಲಿ ನೆಲೆಸಿದಂತಿರುವ ಗಿರಿ ಕಂದರಗಳಿಂದ ಕೂಡಿದ ವನಶ್ರೇಣಿಯು ಸಾಹಸಕ್ಕೆ ಬೇರೆ ಬೇರೆ ದಾರಿಗಳಿರುವುದನ್ನು ತೋರಿಸುವಂತೆ ನೆರೆದಿತ್ತು. ತನ್ನ ಸಿರಿಯನ್ನು ಹೀಯಾಳಿಸಿ ನಗುವ ಲೋಕಸೌಂದರ್ಯವನ್ನು ಸುರವೈರಿ ನಟ್ಟಕಣ್ಣಾಗಿ ನೋಡಿದನು. ಮತ್ತೆ ಎಚ್ಚೆತ್ತುಕೊಂಡು ನಿಟ್ಟುಸಿರು ಬಿಡುತ್ತ ತನ್ನನ್ನೇ ತಾನು ಪರಿಹಾಸ್ಯ ಮಾಡಿಕೊಳ್ಳುವಂತೆ ಹೀಗೆ ಅಂದುಕೊಂಡನು:

'ಓ ಜಾಣಮರುಳ ರಾಕ್ಷಸೇಶ್ವರನೇ, ನಿತ್ಯವೂ ಕಣ್ಣಿಗೆ ಸಮುದ್ರದ ಸಾನ್ನಿಧ್ಯವಿರಲು: ನಿತ್ಯವೂ ನಭದ ಶುಭ ಆಶೀರ್ವಾದಹಸ್ತ ನೆತ್ತಿಯ ಮೇಲಿರಲು; ಧೃತಿಗೆ ಅಮೃತದೀಕ್ಷೆಯಂತೆ ಸುತ್ತಲೂ ವನಾದ್ರಿಗಳು ಸ್ನೇಹ ಧೈರ್ಯ ನೀಡುತ್ತಿರಲು ರಾಮಸತಿ ಇರಲಿ, ಸಾಮಾನ್ಯಳಾದರೂ ಪತಿವ್ರತಾನಿಷ್ಠೆಯಿಂದ ಪತಿತಳಾಗುವಳೆ?'

ಕಂಡನದೊಂದು ತನಗೆ ಮಾತ್ರಮೆ ದಿಟದ ಕಣ್ಮಾಯೆಯಂ.

ತನ್ನನ್ನುತಾನು ಅಣಕಿಸಿಕೊಳ್ಳುವಂತೆ ಹೀಗೆ ಆಡಿದ, ಅನಂತರ ಮಂಡೋದರಿಪ್ರಿಯನು ಭೂಮಿಜಾತೆಯ ಭವ್ಯಸನ್ನಿಧಿಯೆಡೆಗೆ ನಡೆದನು. ಸೀತಾದೇವಿಯನ್ನು ಸೆರೆಯಿಟ್ಟಿರುವ ಕೋಡುಗಲ್ಲು ಇನ್ನೂ ದೂರವಿರಲು ಅವನು ನಿಂತನು; ಬೆಚ್ಚಿದನು; ಆ ಕಡೆಯೆ ನೆಟ್ಟದೃಷ್ಟಿಯಿಂದ ನೋಡಿದನು. ಹತ್ತಿರದಲ್ಲಿದ್ದ ಸೇವಕನಿಗೆ ಕೈತೋರಿಸುತ್ತ ಹೇಳಿದನು:

'ಓಡು, ನಡೆ! ನೋಡಲ್ಲಿ! ಅದೇನು ಅಗ್ನಿ! ಪರ್ಣಕುಟಿಗೆ ಬೆಂಕಿ ಹೊತ್ತಿಕೊಂಡಿದೆಯೆ? ಮೇದಿನಿಯ ಮಗಳು ಬೂದಿಯಾದಳೆ? ನನ್ನ ಮಹತ್ಕಾರ್ಯ ಕೆಟ್ಟಿತೆ? ಕೊನೆಗೆ ಇವಳು ಇನ್ನೊಬ್ಬ ವೇದವತಿಯಾದಳೆ? ರಾವಣನ ಆಶೆಯು ಮಣ್ಣಾಯಿತೆ? ನಾನು ಇದುವರೆಗೆ ಕೈಕೊಂಡ ಸಾಧನೆಯಫಲ ಕೈಗೂಡದಾಯಿತೆ? ಏನನ್ನು ನೋಡುವೆ? ನಿನಗೆ ಕಣ್ಣುಕುರುಡೆ? ಆ ಮಹಾಜ್ವಾಲೆ ಕಾಣಿಸುತ್ತಿಲ್ಲವೆ?'

ಬೆಪ್ಪನಂತೆ ಸುತ್ತಲೂ ನೋಡಿದ ಆಳು ಏನನ್ನೂ ಕಾಣದೆ, ಕೈಮುಗಿದು ನುಡಿದ:

'ಪ್ರಭೂ, ಪರ್ಣಕುಟಿಯಲ್ಲದೆ ಇನ್ನೇನು ಕಾಣಿಸುತ್ತಿಲ್ಲ!'

'ಮತ್ತೆ ಆ ಕಡೆಗೆ ಕಣ್ ಬಿಟ್ಟು ನೋಡು.'

ಎಂದು ಹೇಳುತ್ತ ರಾಕ್ಷಸನು ಪ್ರಶ್ನಿಸಿದನು:

'ಬೆಂಕಿ ಕಾಣಿಸದೆ?'

ಆ ಕಡೆಗೆ ಚೆನ್ನಾಗಿ ಕಣ್‌ನೆಟ್ಟು ನೋಡಿದ ಆಳು ಹೇಳಿದ:

'ನನಗೆ ಕಾಣಿಸುತ್ತಿಲ್ಲ!'

ತನಗೆ ಮಾತ್ರವೇ ದಿಟವಾಗಿ ಕಾಣುತ್ತಿದ್ದ ಕಣ್ಮಾಯೆಯನ್ನು ನೋಡಿ, ಅವನ ಮುಖದಲ್ಲಿ ಬೆವರಹನಿಗಳಾಡಿದವು. ಕಣ್ಣಿವೆಯಿಕ್ಕದೆ ನಿಟ್ಟುಸಿರುಬಿಟ್ಟನು. ನಿಟ್ಟುಸಿರುಗಳು ಒಂದಾದ ಮೇಲೊಂದು ಹೊಮ್ಮಿ ಬಂದವು. ಮುಖ ಸುಕ್ಕಾಯಿತು. ಲಂಕಾನೃಪನು ಸೇವಕನಿಗೆ ಬುದ್ಧಿ ವಿಕಾರಗೊಂಡವನಂತೆ ಕಂಡನು.

'ಕಾಣಿಸದೆ ನಿನಗೆ?'

ಎಂದು ಮತ್ತೊಮ್ಮೆ ಲಂಕೆಯ ದೊರೆಯು ಕೇಳಲು, ಆಳು ಹೆದರುತ್ತ ಉತ್ತರಿಸಿದನು:

'ಪ್ರಭೂ, ಶಾಂತಿಯಿಂದಿರುವ ಕುಟೀರವನ್ನು ಹೊರತುಪಡಿಸಿ ಇನ್ನೇನೂ ಕಾಣಿಸುತ್ತಿಲ್ಲ. ನನ್ನ ದೃಷ್ಟಿ ದೌರ್ಬಲ್ಯವನ್ನು ಕ್ಷಮಿಸಿ.'

ರಾಕ್ಷಸನು ನಕ್ಕನು. ತನಗೆತಾನೇ ಹೇಳಿಕೊಂಡನು,

‘ಆ ನಿನ್ನ ದುರ್ಬಲತೆಯೆ ನನ್ನ ಮಾತ್ಸರ್ಯಕ್ಕೆ ಕಾರಣ.’

ಒಂದು ಅದ್ಭುತ ಚಿತಾಗ್ನಿ ಪರ್ಣಶಾಲೆಯನ್ನು ಹೊತ್ತಿತು. ಆ ಕೆಂಡದುರಿಯ ನಡುವೆ ಕುಣಿಯುತ್ತಿದ್ದ ರಣ ಚಂಡಿಯನ್ನು ಕಂಡನು! ಅವಳು ಮಡಿದ ಲಂಕಾವೀರರ ಶತ ರುಂಡಮಾಲೆಯನ್ನು ತೊಟ್ಟಿದ್ದಳು. ಮುಂಡಗಳನ್ನು ನೇಯ್ದುಕಟ್ಟಿದ್ದ ವಸ್ತ್ರವನ್ನು ಸೊಂಟಕ್ಕೆ ಸುತ್ತಿಕೊಂಡಿದ್ದಳು! ನೋಡುತ್ತಿದ್ದ ನೃಪನು ಅವುಗಳನ್ನು ಗುರುತಿಸಿದನು. ಕುಂಭಕರ್ಣನ ಶಿರದ ಪಕ್ಕದಲ್ಲಿಯೆ ರಕ್ತದಿಂದ ತೋಯ್ದು ಭೀಕರವಾಗಿದ್ದ ತನ್ನ ಹಸಿತಲೆಯನ್ನು ಕಂಡು ಎಚ್ಚರತಪ್ಪಿ ಕಣ್ಣು ಮುಚ್ಚಿದನು. ಸುಂದರಿಯರೂಪದ ಸೀತಾ ಶ್ಮಶಾನಕಾಳಿಯನ್ನು ತಂದೆನೇ ಎಂದು ತನ್ನೊಳಗೆ ತಾನು ನೊಂದು ಕೊಂಡನು. ಹಿಂಜರಿದು ಅರಮನೆಗೆ ಹಿಂದಿರುಗಿದನು!

ಕಡಿದುದಾತನ ಸೂತ್ರಮಾಯೆ.

ತ್ರಿಜಟೆಯು ರಾವಣ ಬಂದುದನ್ನು ಮತ್ತು ಅವನು ಹತ್ತಿರಕ್ಕೆ ಬಾರದೆ ದೂರದಿಂದಲೇ ಹಿಂತಿರುಗಿದುದನ್ನು ನೋಡಿದಳು. ಅದನ್ನು ಅವನಿಜೆಗೆ ತಿಳಿಸಿದಳು. ಧ್ಯಾನಸ್ಥಳಾದ ಸೀತೆಯು ಗಂಭೀರ ಮುಖಭಾವದಲ್ಲಿ ನುಡಿದಳು:

‘ಅನಲೆಯ ಪ್ರಾರ್ಥನೆಯು ಫಲಿಸಿತು. ಅವನು ಇನ್ನು ಈ ಜನ್ಮದಲ್ಲಿ ಇಲ್ಲಿಗೆ ಬರುವುದಿಲ್ಲ! ತ್ರಿಜಟೆಯೇ, ಅವನ ಸೂತ್ರಮಾಯೆ ಕಡಿದುಹೋಯಿತು. ಆದ್ಯಶಕ್ತಿ ಜಗದಂಬೆಯು ಜೀವಿಗಳ ಪಟ ಆಡಿಸುತ್ತಾಳೆ. ಇನ್ನು ರಾಕ್ಷಸನ ಬಾಳಿನ ಪಟ ಮೃತ್ಯುವಶವಾಗಿದೆ. ಮುಕ್ತಿಯು ಮೋಕ್ಷಾಪೇಕ್ಷೆಯಿಂದ ಕೂಡಿರುವವರನ್ನು (ಮುಮುಕ್ಷು) ಮಾಯೆಯ ರೀತಿ ಪೀಡಿಸಿ ಸುಲಭ ಪಥದಲ್ಲಿ ಶೀಘ್ರವಾಗಿ ತನ್ನೆಡೆಗೆ ಸೆಳೆಯುತ್ತದೆ!’

ತಪಸ್ವಿನಿಯ ಧ್ವನಿಶಕ್ತಿಗೆ ಅಚ್ಚರಿಗೊಂಡು ತ್ರಿಜಟೆ ಕೇಳಿದಳು:

‘ಮಹಾತಾಯಿ, ನೀನಾರು? ನಿನ್ನ ಸಾನ್ನಿಧ್ಯದ ಭೀಷ್ಮಪ್ರಭಾವದಿಂದ ನನ್ನ ಮನಸ್ಸು ಹೆದರುತ್ತಿದೆ! ನೀನು ಹೇಳಿದ ಆದ್ಯಶಕ್ತಿಯೇ ನೀನು! ಮಾತಾಯಿ, ನಾನು ಮೂರ್ಖಳು, ನಿನಗಿದೊ ನಮಸ್ಕಾರ! ಸಾವಿರ ನಮಸ್ಕಾರ!’

ಅಡಿಗೆರಗಿದ ತ್ರಿಜಟೆಯ ಮುಡಿಯನ್ನು ನೇವರಿಸಿ ತಾಯಿ ಸೀತಾದೇವಿಯು ಹರಸಿದಳು. ಸಾಂತ್ವನ ವಚನ ಸುಧಾವೃಷ್ಟಿಯನ್ನು ಹರಿಸಿದಳು:

‘ಅಸುರ ಸಖಿಯೆ, ಹೇಳು, ನಿನಗೇಕೆ ಈ ಭಾವದ ನಡುಕ? ನಾನು ಜನಕನ ಮಗಳು, ಧರೆಯಲ್ಲಿ ಹುಟ್ಟಿದವಳು, ರಘುರಾಮನ ಸತಿ! ಕೆಳದಿಯೆ, ನೀನು ನನ್ನವಳು, ನಿನಗೇಕೆ ಹೆದರಿಕೆ? ನನಗೆ ಉಂಟಾದ ಒಂದು ನವ್ಯಸಾಕ್ಷಾತ್ಕಾರವನ್ನು ನಿನಗೆ ಹೇಳುತ್ತೇನೆ, ಕೇಳು.

'ನೆಪ ಯಾವುದೇ ಆಗಲಿ, ತಪಸ್ಸು ಫಲದಾಯಕವಾದುದು. ಮಂಥರೆಯ ಕಾರಣವಾದ ಈ ಬೃಹತ್ ದುರ್ಘಟನೆಯು ನನಗೆ, ರಘುನಾಥನಿಗೆ ಮತ್ತು ರಾಕ್ಷಸೇಂದ್ರನಿಗೆ ಮೂವರಿಗೂ–ಅವರವರ ಕರ್ಮಾನುಸಾರಿ ಜನ್ಮೋದ್ದೇಶ ಸಾಧನೆಗೆ ಮತ್ತು ಆತ್ಮವಿಕಸನದ ಪರಿಣಾಮ ಸಿದ್ಧಿಗೆ ಸಹಾಯವಾಗಿದೆ. ಇನ್ನೆಷ್ಟು ಜೀವರಿಗೆ ಅವರವರ ಕರ್ಮಕ್ಷಯಕ್ಕೆ ಮತ್ತು ಧರ್ಮಾಭ್ಯುದಯಕ್ಕೆ ನಿಮಿತ್ತವಾಗಿದೆಯೊ ಹೇಳುವವರು ಯಾರು?'

'ಅಂತಹ ಜೀವರಲ್ಲಿ ನಾನೂ ಒಬ್ಬಳು. ನಾನು ಲಂಕೇಶ್ವರನಿಗೆ ಕೃತಜ್ಞಳು! ಅವನಿಂದಲೇ ನನಗೆ ನಿನ್ನ ಸೇವಾಭಾಗ್ಯ ದೊರೆಯಿತು. ನಾನೆಲ್ಲಿ? ನೀನೆಲ್ಲಿ? ನಮ್ಮಿಬ್ಬರಮಧ್ಯೆ ಲಂಕೆ ಮತ್ತು ಅಯೋಧ್ಯೆಗಳ ಅಂತರ. ಆ ದಶಗ್ರೀವನ ಸಾಹಸವಿಲ್ಲದಿದ್ದರೆ ನನಗೆ ನಿನ್ನ ದರ್ಶನ ಲಭಿಸುತ್ತಿತ್ತೆ?'

'ತ್ರಿಜಟೆಯೆ, ಆ ಪರಮಸತ್ಯವು ಕೊನೆಯಲ್ಲಿ ತಿಳಿಯುತ್ತದೆ. ಅಂದು ಅಗೋಚರವಾಗಿದ್ದದ್ದು ಇಂದು ಆತ್ಮಗೋಚರವಾಗಿದೆ. ನಾನು ಇಂದು ಅಂದಿನವಳಲ್ಲ. ರಾಮಧ್ಯಾನ ಮಹಿಮೆಯ ನಿರಂತರ ತಪಸ್ಯೆಯಿಂದ ನನಗೆ ಅಲೌಕಿಕಸಿದ್ಧಿ ಲಭಿಸಿದೆ. ರಾಮನನ್ನು ಆತ್ಮದಿಂದ ಅರಿತಿದ್ದೇನೆ. ಅವನು ತನ್ನ ನಿತ್ಯವಿಭೂತಿಯಿಂದ ಪರಬ್ರಹ್ಮನಾಗಿರುವನು. ಅವನು ಸರ್ವಸೃಷ್ಟಿಯ ಲೀಲಾವಿಭೂತಿಯೂ ಆಗಿರುವನು. ಈ ಸಮಸ್ತ ಲೋಕವು ರಾಮಮಯವಾಗಿದೆ.

'ಸಖಿಯೇ, ನಿನ್ನಂತೆ ನಾನು ಮಯನ ಮಗಳ ಪತಿಗೆ ಕೃತಜ್ಞಳಾಗಿದ್ದೇನೆ! ಋತದ ರೀತಿಯಲ್ಲಿ ರಾವಣನಿಗೆ ಒಳಿತಾಗುತ್ತದೆ!...'

ಹಾಗೆ ಹೇಳುತ್ತ ಸೀತೆ ಅಂತರ್ಮುಖಿಯಾದಳು. ಮಾತು ನಿಂತಿತು. ಬೆದರುಗಣ್ಣಿನಿಂದ ದೂರದಲ್ಲಿರುವ ಏನನ್ನೊ ನೋಡುತ್ತ, ಅದನ್ನು ಸ್ವಾಧೀನಪಡಿಸಿಕೊಳ್ಳುವವಳಂತೆ ಮಾತಾಡಿದಳು:

'ತ್ರಿಜಟೆ, ಬೇಗ ಪುಷ್ಪತೀರ್ಥಗಳನ್ನು ತೆಗೆದುಕೊಂಡು ಬಾ! ಈ ರಾಮಉಂಗುರವನ್ನು ಪೂಜಿಸಿಬೇಕಾಗಿದೆ. ಸ್ವಾಮಿಯು ದುರ್ಧರ ಮಹತ್ಕಾರ್ಯವನ್ನು ಕೈಗೊಂಡಿದ್ದಾನೆ. ಕಪಿಸೇನೆಯು ಯಮನ ದವಡೆಗೆ ಸಮನಾದ ವಿಪತ್ತಿನ ಕಾಡ್ಗಿಚ್ಚಿನಮಧ್ಯೆ ಸಿಕ್ಕಿಕೊಂಡಿದೆ. ಕಪಿಧ್ವಜದ ಸೇನಾನಾಯಕರು ಆ ರಾವಣಾಗ್ನಿಯಲ್ಲಿ ನುಗ್ಗಿ ಚಿಟ್ಟೆಗಳಂತೆ ಸೀದು ಸಮರ ದೇವತೆಗೆ ತಮ್ಮ ಪ್ರಾಣಗಳನ್ನು ಅರ್ಪಿಸುತ್ತಿದ್ದಾರೆ.

'ಪೂಜೆಯೆ ಶಕ್ತಿ. ನಾಥಪತಿದೇವನನ್ನು ಪೂಜಿಸಿ ನನ್ನ ಆತ್ಮಬಲವನ್ನು ನೈವೇದ್ಯವಾಗಿ ಅರ್ಪಿಸುತ್ತೇನೆ.'

ತ್ರಿಜಟೆಗೆ ಏನೊಂದು ಅರ್ಥವಾಗಲಿಲ್ಲ. ಆದರೂ ಅವಳ ಅಪ್ಪಣೆಯಂತೆ ಹೂ ನೀರುಗಳನ್ನು ಪೂಜೆಗೆ ಅಣಿಮಾಡಿದಳು.

ರಾವಣಗೆ ರಾವಣತ್ವಂ ತವಿಯದೆಯೆ ಸಮನಿಪುದೆಂತು ರಾಮತತ್ತ್ವಂ?

ಬಹುರೂಪಿ ರಾವಣ ಸೈನ್ಯಕ್ಕೆ ವಾನರರು ಬಲಿಯಾಗುತ್ತಿರುವುದನ್ನು ಶಚೀಪತಿ ಇಂದ್ರನು ಕಂಡನು. ಬ್ರಹ್ಮನ ಬಳಿಗೆ ಓಡಿ ಬಂದು ಪ್ರಾರ್ಥಿಸಿದನು:

'ಓಂ ನಮೋ ಪ್ರಲಯ ಸರ್ಗ ಸ್ಥಿತಿ ಕಾರಣನೆ! ವ್ಯಕ್ತಜಗತ್ತಿನ ಅವ್ಯಕ್ತಮೂರ್ತಿಯೆ, ಜಗದ್ಗುರುವೆ, ಸರ್ವಲೋಕಪ್ರಭುವೆ, ಸರ್ವವ್ಯಾಪಿಯಾದವನೆ, ಹರಿಹರಾತ್ಮಕನೆ ನಿನಗೆ ನಮಸ್ಕಾರ! ನಿನಗೆ ತಿಳಿಯದಿರುವುದು ಉಂಟೆ? ಆದರೂ ನಮ್ಮ ಲೋಕವ್ಯಥೆಯ ಕಥೆಯನೊಂದು ಹೇಳುತ್ತೇನೆ ಕೇಳು.

'ಗುರುವೆ, ನೀನಿತ್ತ ವರದಿಂದ ಕಪಿಸೇನೆ ಖಾಲಿಯಾಯ್ತು! ರಾಮಲೀಲಾವತಾರ ಕಾರ್ಯಕ್ಕೆ ವಿಘ್ನ ಒದಗಿದೆ. ನೀನು ಕೊಟ್ಟ ಬಹುರೂಪಿಣೀವಿದ್ಯೆಯ ಬಲದಿಂದ ರಾವಣನು ತನ್ನ ಮೂಲಬಲದಲ್ಲೆಲ್ಲ ತಾನೆ ವ್ಯಾಪಿಸಿಕೊಂಡಿದ್ದಾನೆ. ಕಾಡಾನೆಯು ಸಣ್ಣಹಳ್ಳದಲ್ಲಿ ಕೆಸರೇಳುವಂತೆ ಕದಡುವ ಹಾಗೆ ರಕ್ತದಪಂಕದಲ್ಲಿ ಮೃತ್ಯು ನರ್ತನದಲ್ಲಿ ತೊಡಗಿದ್ದಾನೆ. ಸಾಮಾನ್ಯ ಯೋಧರಿರಲಿ, ವಾನರ ಮಹಾನಾಯಕರೇ ಧರೆಗೆ ಉರುಳಿದ್ದಾರೆ. ಗಂಧಮಾದನನು ಗತಿಸಿದ. ಕಲಿ ಗವಯ ಉರುಳಿದ. ದಿಗ್ಗಜದಂತಹ ಗಜನು ತನ್ನ ಕೈಯಲ್ಲಿ ಪ್ರಾಣವನ್ನು ಹಿಡಿದು ದೂರಕ್ಕೆ ಸರಿದು ಹೋದ. ನಳ ಬಳಲಿಬಿದ್ದ. ಜಾಂಬವನ ಪ್ರಾಣ ಅವನ ಕೊರಳಲ್ಲಿ ಮಿಡುಕುತ್ತಿದೆ. ಅಂಗದನು ಗದಗದ ನಡುಗುತ್ತ, ಹೆದರಲು ಮನಸ್ಸು ಒಪ್ಪದೆ ಹೆದರುತ್ತ ಓಡಿದ. ಅವರಿವರ ಮಾತೇಕೆ? ಪರಮೇಷ್ಟಿಯೇ ಕೇಳು. ಈ ಒಂದನ್ನು ಹೇಳಿದರೆ ಎಲ್ಲವನ್ನೂ ತಿಳಿಸಿದಂತೆ ಆಗುತ್ತದೆ. ಭಯವೆಂದರೆ ಏನೆಂದು ತಿಳಿಯದ ಆಂಜನೇಯನು, ಆ ವಾಯುದೇವನ ಪುತ್ರ, ಚಿರಂಜೀವಿಯು ಹಿಂಜರಿದು ರಾಮನಿಗೆ ಮೊರೆಯಿಡಲು ಓಡಿದ್ದಾನೆ!'

ಅದನ್ನು ಕೇಳಿದ ಬ್ರಹ್ಮನು ಶರಧಿ ಗಂಭೀರ ವಾಣಿಯಲ್ಲಿ ಗುಡುಗಿದನು. ರಸವನ್ನು ಮಾತ್ರ ಆಸ್ವಾದಿಸುವ ಸೂತ್ರಧಾರ ಕವಿಗೆ, ನಾಟಕ ಪಾತ್ರದ ಉದ್ವೇಗ ತಾಗುತ್ತದೆಯೆ?

'ಸುರ ಮುಖ್ಯನೇ, ನಡೆಯುವುದೆಲ್ಲವೂ ನಡೆಯಬೇಕಾದುದೇ ಅಲ್ಲವೆ? ವರವನ್ನು ತಿಳಿಯದೆ ಕೊಟ್ಟಿಲ್ಲ; ತಪ್ಪಿ ಕೊಟ್ಟದ್ದೂ ಅಲ್ಲ. ಪರಮಪ್ರಯೋಜನವೇನೆಂಬುದು ಪೂರ್ಣದೃಷ್ಟಿಗೆ ಮಾತ್ರ ಗೋಚರ. ನನ್ನಿಚ್ಛೆಯಿಲ್ಲದೆ ತೃಣವು ಚಲಿಸದು. ನಾನು ಅಖಿಲಲೋಕದ ಸೂತ್ರಧಾರನಾಗಿರುವೆ ಮತ್ತು ಸರ್ವತಂತ್ರ ಸ್ವತಂತ್ರಿಯೂ ಆಗಿರುವೆ. ನಾನು ಪರಮೇಚ್ಛೆ, ಅಖಿಲ ಜೀವರಾಶಿಗಳ ಇಚ್ಛೆಯು ನಾನು. ರಾಮನ ಇಚ್ಛೆಗೂ ಮತ್ತು ರಾವಣನ ಇಚ್ಛೆಗೂ!

'ಸಹಸ್ರಾಕ್ಷನೇ, ಲೀಲಾ ರಹಸ್ಯವನ್ನು ತಿಳಿ. ರಾವಣನಿಗೆ ರಾವಣತ್ವವು ಸವೆಯದೆ ರಾಮತತ್ತ್ವವು ಹೇಗೆ ಒದಗಿ ಬರುತ್ತದೆ? ಮಹಾವಿಷ್ಣುವು ತನ್ನ ವಿದ್ಯಾಶಕ್ತಿಯಾದ

ಯೋಗಮಾಯೆಗೆ ಆಜ್ಞೆ ಮಾಡಿ, ರಾಮನನ್ನು ಅವಿದ್ಯೆಯಿಂದ ಎಚ್ಚರಿಸಲು ಕಳುಹಿಸಿದ್ದಾನೆ. ಮುಂದೆ ಏನಾಗುವುದೆಂದು ಹೋಗಿನೋಡು. ನೀನು ಇಲ್ಲಿಯೇ ತಡಮಾಡಿದರೆ ಆ ಅಚ್ಯುತ ಮಹದ್‌ದೃಶ್ಯವನ್ನು ನೋಡುವುದರಿಂದ ವಂಚಿತನಾಗುವೆ.'

ರಣಪ್ರಳಯ ಕರ್ಮದೊಳ್ ಪೂರ್ಣದೀಕ್ಷೆಯನಾಂತನೊಲಿರ್ದ ರಣರುದ್ರ

ರಾಮಚಂದ್ರನು ಶಕ್ತಿಯುತತೋಳುಗಳ ವೀರನು, ಅಸಾಧಾರಣನು, ಅಪೂರ್ವ ನೀಲ ಭೀಮೋನ್ನತನು, ಕಪ್ಪು ಮೀಸೆಯ ಕಠಿಣಮುಖಭಾವದವನು ಆಗಿದ್ದನು. ಅವನು ಸೂರ್ಯಕಿರಣಗಳನ್ನು ಪ್ರತಿಬಿಂಬಿಸುವ ತನ್ನ ಕೋದಂಡವನ್ನು ನೆಮ್ಮಿಕೊಂಡು, ಒಂದು ಎತ್ತರವಾದ ಪ್ರದೇಶದಲ್ಲಿ, ಮಲೆಯ ಹೆಗಲೇರಿದವನಂತೆ ನಿಂತಿದ್ದನು. ಅವನು ಲಂಕೆ ಕಿಷ್ಕಿಂಧೆಗಳ ದೊಡ್ಡ ಸೇನೆಯು ಮಹಾಪರ್ವತಗಳಂತೆ, ಕಡಲುಗಳಂತೆ ಭಯಂಕರವಾಗಿ ಹೋರಾಡುವ ಅದ್ಭುತ ಕಲಾ ರಣರಸ ಸಂಗ್ರಾಮದ ಸಂವೀಕ್ಷಣಾ ಆಸಕ್ತಿಯಿಂದ ದಿವ್ಯಭವ್ಯ ವಿಗ್ರಹದಂತೆ ನಿಂತಿದ್ದನು.

ಆಂಜನೇಯನು ಗದೆಮುರಿದು, ಕವಚತುಂಡಾಗಿ, ವಜ್ರತನು ಜರ್ಜರಿತವಾಗಿರಲು ಉದ್ವಿಗ್ನ ಮನಸ್ಥಿತಿಯಲ್ಲಿ ಯುದ್ಧಭೂಮಿಯನ್ನು ತ್ಯಜಿಸಿ ಬಂದನು. ಸುಗ್ರೀವನನ್ನು ಹುಡುಕಿ ಕಾಣದೆ, ರಾಜನ ಅಂಗರಕ್ಷಕ ದಳವನ್ನು ಹುಡುಕುತ್ತ ಬಂದು ರಾಮಭದ್ರನನ್ನು ಕಂಡನು. ಅವನು ತಟಸ್ಥನಾಗಿ ದೂರದಲ್ಲಿ ನಿಂತು, ರಣಪ್ರಳಯ ಕರ್ಮದಲ್ಲಿ ಪೂರ್ಣದೀಕ್ಷೆ ತೊಟ್ಟ ರಣರುದ್ರನಂತಿದ್ದನು. ಕಣ್ಣು ತೆರೆದಿದ್ದು ರೆಪ್ಪೆಗಳಾಡದೆ ಮಹತ್ ಕಾರ್ಯದಲ್ಲಿ ನಿಷ್ಪಂದನಾಗಿದ್ದ ಚಿತ್‌ತಪಸ್ ಸೂಕ್ಷ್ಮ ಕರ್ಮಯೋಗ ಲಕ್ಷಣದ ವಿರಾಡ್ ರೂಪಿಯನ್ನು ಸ್ವಯಂ ಯೋಗಿಯಾಗಿದ್ದ ವಾಯುಪುತ್ರನು ಕಂಡನು! ಭೂಮಿಪುತ್ರಿಯ ಪತಿಯ ಸ್ಥೈರ್ಯವನ್ನು ನೋಡಿ ತನ್ನ ಅಸ್ಥಿರತೆಗೆ ತಾನೇ ನಾಚಿಕೊಂಡನು.

ಶ್ರೀರಾಮನ ಸಾನ್ನಿಧ್ಯಮಾತ್ರದಿಂದ ಅವನ ಉದ್ವೇಗವು ಶಮನಗೊಂಡು, ಧೀರ ಪ್ರಶಾಂತಿಯುಂಟಾಯಿತು. ಅವನಲ್ಲಿ ಹಿಂದೆ ಎಂದೂ ಉಂಟಾಗದಿದ್ದ ಒಂದು ಭಕ್ತಿಭಾವವು ಮೈದೋರಿತು. ತನ್ನ ಇಚ್ಛೆಗಿಂತಲೂ ಶತಾಧಿಕವಾದ ವಿರಾಟ್‌ಸಂಕಲ್ಪಶಕ್ತಿಯ ಸೆಳೆತಕ್ಕೆ ಒಳಗಾಗಿ ಅದರಲ್ಲಿ ನಂಬಿಕೆ ಅಂಕುರಿಸಲು ರಾಮಪದತಲದಲ್ಲಿ ದಿಂಡುರುಳಿದನು!

ಹಾಗೆ ಆಂಜನೇಯನು ಕಂಡುದನ್ನು ಬೇರೆ ಯಾರು ಕಾಣುವರು? ಕಂಡ ಮನೋತೀತವಾದ ತುರೀಯ ಅನುಭವವನ್ನು ಹೇಳಲು ಅವನು ಸಮರ್ಥನೆ? ಅನುಭವಾದ್ಭುತಕ್ಕೆ ಗದ್ಗದಿಸಿದನು:

'ದಾಶರಥಿ ಇದೇನಿದು? ನೀನು ನನ್ನನ್ನು ಇದುವರೆಗೂ ವಂಚಿಸಿದುದೇಕೆ? ನೀನು ಯಾರು ಎಂಬ ಸತ್ಯವನ್ನು ಮರೆಮಾಡಿ, ನರನರೀತಿ ಅತ್ತು ಗೋಳಾಡಿ ಬೇಡಿ ನಾಟಕವಾಡಿದ್ದೇಕೆ? ಸರ್ವ ಶಕ್ತನಾಗಿದ್ದು, ಎಲ್ಲವನ್ನೂ ಬಲ್ಲವನಾಗಿ ನಮ್ಮ ಅಭ್ಯುದಯಕ್ಕೆ

ನಮ್ಮಭಿಕ್ಷೆಯನ್ನು ಬೇಡಿದ್ದೇಕೆ? ಬಂಧನದಲ್ಲಿರುವವರು ಭಗ್ನಾವರಣದಿಂದ ಹೊರಬಂದು ಚಿದ್‌ಯೋಗಿಗಳಾಗುವಂತೆ ಮಾಡಲು ನೀನೆ ವಿಘ್ನೇಶ್ವರನಾಗಿದ್ದು ಮಹಾ ವಿಘ್ನಗಳನ್ನು ಒಡ್ಡಿಕೊಂಡಿದ್ದೇಕೆ?'

ಸಿದ್ಧಿ ಕಾಲಾನುವಶಿ ಕಣಾ ಲೀಲಾ ಜಗದೊಳದಾರ್ಗಾದೊಡಂ

ತಿಳಿಯಲು ಅಸಾಧ್ಯವಾದ ನಿತ್ಯತ್ವದಿಂದ ಲೀಲಾಪ್ರಪಂಚಕ್ಕೆ ಇಳಿಯುವಂತೆ, ರಾಮನು ಅಂತರ್ಮುಖತೆಯಿಂದ ಬಹಿರ್ಮುಖಿಯಾದನು. ಅನಂತರ ತನಗೆ ನಮಸ್ಕರಿಸಿದ ಆಂಜನೇಯ ಕಂದನನ್ನು ಉದ್ದೇಶಿಸಿ ಹೇಳಿದನು:

'ಮಹಾವೀರನೇ ಏಳು. ನಿನಗಲ್ಲದೆ ಇತರರಿಗೆ ಇದು ಅಗೋಚರ. ನಿನಗೊಬ್ಬನಿಗೆ ಮಾತ್ರವಲ್ಲ, ನನಗೂ ನನ್ನ ದಿವ್ಯ ಗುಹ್ಯಸ್ವರೂಪವು ಅಗೋಚರವಾಗಿತ್ತು! ನಿನ್ನಂತೆ ನಾನು ವಿಸ್ಮಿತನಾಗಿದ್ದೇನೆ! ಈ ಲೀಲಾ ಜಗತ್ತಿನಲ್ಲಿ ಯಾರಿಗಾದರೂ ಆಗಲಿ ಸಿದ್ಧಿ ಕಾಲಾನುವಶಿ. ನನಗೆ ಇದು ತಪಸ್ಸಾಯಿತು. ಮಂಥರೆಯೊ, ರಾವಣನೊ ಬರಿಯ ನಿಮಿತ್ತ ಮಾತ್ರರು! ನನಗೆ ಅವರು ಮತ್ತು ಅವರಿಗೆ ನಾನು!

'ಆಗುತ್ತಿರುವ ಸೋಲಿಗೆ ನಡುಗಬೇಡ; ಕೊಲೆಗೆ ಕರಗಬೇಡ. ಮಾನ ನಿಧಿಯೇ, ನಿನಗೆ ಆದ ಸೋಲಿಗೆ ನಾಚಬೇಡ. ಇಂದು ನಿನಗೆ ಈ ಸೋಲು ಆಗದಿದ್ದರೆ, ಅತ್ಯಂತ ಅಂತರಾತ್ಮನ ಅಹಂ ಮುರಿಯದಿದ್ದರೆ, ನಿನಗೆ ಈ ಮಹದ್ದರ್ಶನವಾಗುತ್ತಿದ್ದಿತೆ? ಇದನ್ನು ನೆನೆದು, ಅದನ್ನು ಮರೆ!

'ವಿಧಿಯು ನಿನ್ನೊಬ್ಬನನ್ನೇ ಆ ನೆಪದಲ್ಲಿ ಈ ಎಡೆಗೆ ತಂದಿದೆ. ಅದಕ್ಕೆ ನೀನು ಅರ್ಹನಾಗಿದ್ದೀಯೆ. ನೀನು ನರಚೇತನವನ್ನು ಮತ್ತು ನಾರಾಯಣತ್ವವನ್ನು ಸೇರಿಸುವ ಮಾನಸಿಕಸೇತುವೆ. ನೀನು ಪ್ರಾಣನಾಳ. ನೀನು ಪರಿಣಾಮಕ. ನಾಮರೂಪನಿಸರ್ಗ ಸಹಯೋಗಿ. ಆದ ಕಾರಣದಿಂದಲೇ ನೀನು ವಿರಾಟ್ ಚಿರಂಜೀವಿ!

'ಈ ಸ್ಥಳದಲ್ಲಿ ಯಾರೂ ಇಲ್ಲ. ಎಲ್ಲರೂ ಯುದ್ಧಕ್ಕೆ ಹೋಗಿದ್ದಾರೆ! ಅಪಾತ್ರರಿಗೆ ಇದನ್ನು ಹೇಳಬೇಡ. ಹೇಳಿದರೂ ಅವರಿಗೆ ಇದರಲ್ಲಿ ಶ್ರದ್ಧೆಯುಂಟಾಗುವುದಿಲ್ಲ. ನೀನು ನನ್ನ ಅಂತರಂಗದಸಖ. ತಿಳಿದವನು ತಿಳಿಯದಂತೆ ಇರುತ್ತಾನೆ ಎಂಬ ಉಪನಿಷದ್ ವಿಜ್ಞಾನಿಯಂತೆ ಈ ಲೀಲೆಯನ್ನು ನೋಡುತ್ತಿರು!

'ಇಂದು ರಾವಣನು ತನ್ನಲ್ಲಿದ್ದ, ತನಗೆ ಬ್ರಹ್ಮನಿಂದ ಲಭ್ಯವಾದ ವರದಿಂದ ತನ್ನ ಮೂಲಬಲವನ್ನು ಒಗ್ಗೂಡಿಸಿ ಕಳುಹಿಸಿದ್ದಾನೆ. ತಾನು ಬಹುರೂಪಿಯಾಗಿ ತನ್ನ ಸೇನಾ ಸರ್ವರಲ್ಲಿದ್ದು ವಾನರ ಪಡೆಯನ್ನು ಯಮನಂತೆ ತುಳಿದು ನಾಶಪಡಿಸುತ್ತಿದ್ದಾನೆ. ಪವಮಾನ ತನಯನೇ ಕೇಳು. ಅದನ್ನು ತಡೆಯಲು ಅನ್ಯರಿಗೆ ತಿಳಿದಿಲ್ಲ. ನಿನಗೂ ಸಹ! ಈ ರಹಸ್ಯವಾದುದನ್ನು ಆಲಿಸು. ನಾನೇ ಆ ರಾವಣನ ಮೂಲಬಲ ಶಕ್ತಿ! ನನ್ನ ಅಸತ್

ಶಕ್ತಿಯನ್ನು ನಾನಲ್ಲದೆ ಇತರರಿಗೆ ಗೆಲ್ಲಲು ಸಾಧ್ಯವಿಲ್ಲ. ಬಾ, ಕಾಣು ಚಿತ್‌ತಪಸ್ ಶಕ್ತಿಯ ಅಲೌಕಿಕ ವಿಧಾನವನ್ನು. ನಿನಗೂ ಅದರ ಅನುಭವವಿರುವುದರಿಂದ ಆ ಉದ್ಯಮದಲ್ಲಿ ನನಗೆ ಸಹೋದ್ಯೋಗಿಯಾಗು, ಬಾ! ನನ್ನ ಅಂಶವೆ ದಶಗ್ರೀವನಲ್ಲಿ ಇಲ್ಲದಿದ್ದರೆ, ಅವನು ಸೀತೆಯನ್ನು ಒಲಿಯುವುದು ಮತ್ತು ಅವಳನ್ನು ಹೊತ್ತುಕೊಂಡು ಹೋಗುವುದು ಸಾಧ್ಯವಾಗುತ್ತಿತ್ತೆ?'

ಹೀಗೆ ಹೇಳುತ್ತ ಒಂದೆರಡು ಹೆಜ್ಜೆಯನ್ನು ಮುಂದಿಟ್ಟು ಗುಡುಗಿಮೊಳಗಿದಂತೆ ಪುರುಷೋತ್ತಮನು ಪ್ರಕೃತಿಗೆ ಅಪ್ಪಣೆ ಮಾಡಿದನು. ಋತ ಪ್ರಭುವಿನ ಆಜ್ಞೆಯಾಗಲು ಯೋಗ ಮಾಯೆಗೇನು ಪ್ರತಿಭಾನ ದಾರಿದ್ರ್ಯವೆ? ಆಂಜನೇಯನು ಸಕಲಸಂಗ್ರಾಮವನ್ನು ಒಂದೇ ವೀಕ್ಷಣೆಯಿಂದ ನೋಡಿದನು. ರಣರಂಗವು ಮೊದಲು ಇಡಿಯಾಗಿಯೂ, ಅನಂತರ ಸೂಕ್ಷ್ಮ ವಿವರಗಳಲ್ಲಿಯೂ ಕಂಡಿತು. ತಾನು ಬೇರೆಯಾಗಿದ್ದರೂ ವ್ಯಕ್ತಿತ್ವವನ್ನು ಮೀರಿ, ಓರೋರ್ವರಲ್ಲಿ ಸೇರಿ ಎಲ್ಲವನ್ನು ದೃಷ್ಟಿಸಿದನು.

'ಕಪಿಧ್ವಜ ಲಾಂಛನ ವೀರ ದಧೀಮುಖನ ಧೀರದಳವು ರಾವಣನ ಮೂಲಬಲಕ್ಕೆ ಎದುರು ಯುದ್ಧ ಹೂಡಿತು. ಹೋರಾಡುತ್ತ ಸೇನೆಯು ಕಡಿದಕಾಡಿನಂತೆ ಉರುಳಿಬಿದ್ದಿತು. ಮಿತ್ರರಾದ ವಹ್ನಿ ಮತ್ತು ರಂಹರು ಸಾಮಾನ್ಯ ಸೈನಿಕರ ಸಾಮಾನ್ಯ ತೇಜದಿಂದ ಕಾದಿದರು. ನುಗ್ಗಿಬಂದ ಅಶ್ವದ ಒಡಲು ಬಿರಿಯುವಂತೆ ಕೊಂದರು. ಆನೆ ಮೇಲೆ ಬರಲು ಗುಂಡಿನಿಂದ ಅದರ ತಲೆಯನ್ನು ಜಜ್ಜಿದರು. ರಥ ಮುನ್ನುಗ್ಗಿ ಬರಲು ಅದನ್ನು ಬಲವಾದ ಗದಾ ಮುಷ್ಟಿಯಿಂದ ಮುರಿದರು. ಬಿಲ್ಲಿಗೆ ಬಿಲ್ಲು, ಖಡ್ಗಕ್ಕೆ ಖಡ್ಗ ಎದುರಾಗಿ ಹಗೆಯ ರಕ್ತದ ತೊರೆಯಲ್ಲಿ ಅವರ ರಕ್ತವೂ ಸೇರಿ ಉಪನದಿಗಳಂತೆ ಹರಿದವು.

ನೆಲದಲ್ಲಿ ಮತ್ತು ಆಕಾಶದಲ್ಲಿ ವಿವಿಧ ಅಸ್ತ್ರ ಶಸ್ತ್ರ ವಿದ್ಯಾ ಯುದ್ಧಕುಶಲಿಗಳು ಪ್ರಾಣದ ಹಂಗುತೊರೆದು ಹೋರಾಡಿದರು ವಹ್ನಿಯು ತನ್ನೊಡನೆ ಸೆಣಸಿದವನನ್ನು ಕತ್ತಿಯಿಂದ ಒತ್ತಿ ಕೊಂದು ಕರುಳು ಚೆಲ್ಲಾಡಿದನು. ಅವನು ಕುಳ್ಳನಾದ ರಂಹನನ್ನು ಕೇಳಿದನು:

'ಇಂದು ಏಕೆ ನಮ್ಮವರ ಕೈ ಸೋಲುತ್ತಿದೆ?'

'ಸೋಲೊಮ್ಮೆ ಗೆಲುವೊಮ್ಮೆ, ಗೆಲುವುಹೆಣ್ಣಿಗೆ ಅದೇ ಹೆಮ್ಮೆ.'

ಎಂದು ರಂಹ ಉತ್ತರಿಸುತ್ತಿರಲು ಅಸುರಸೇನೆಯು ಇಮ್ಮಡಿ ರೋಷದಿಂದ, ಬಾನು ಬಿರಿಯುವ ಘೋಷದಿಂದ ನುಗ್ಗಿಬಂದಿತು. ಶಸ್ತ್ರಾಸ್ತ್ರ ಮೃತ್ಯುನರ್ತನವನ್ನು ಏನೆಂದು ಹೇಳುವುದು, ವಹ್ನಿ ರಂಹರಿಗೆ ಕಣ್ಣು ಕತ್ತಲಾಯಿತು; ಶಕ್ತಿ ಬತ್ತಿತು; ಬತ್ತಳಿಕೆ ಬರಿದಾಯಿತು; ಕತ್ತಿ ಮುರಿಯಿತು; ಚಿತ್ತದ ದೃಢತೆ ಹಿಂಗಿತು; ತೊಡೆ ನಡುಗಿತು, ತಡೆ

ತಡೆದರೂ ತಡೆಗಳನ್ನು ತಡೆಗಡಿದು ತಡೆಯದೆಯೆ ತಳ್ಳಿ, ನೂಕಿ ಮೇಲೇರಿ ಮುಂದೊತ್ತಿ ದೈತ್ಯ ಸೇನಾ ಸಾಗರ ಮುನ್ನುಗ್ಗಿ ಬಂದಿತು.

ವಹ್ನಿಯು ತನ್ನ ಮಿತ್ರದಳಗಳು ಸರಿಸರಿದು ಬೊಬ್ಬೆಯಿಂದ ಅಬ್ಬರಿಸುತ್ತ ಓಡುತ್ತಿರುವುದನ್ನು ಕಂಡನು! ಎದುರಿಸಿ ನಿಲ್ಲಲು ಪ್ರಯತ್ನಿಸಿ, ನಿಲ್ಲಲಾರದೆ, ಹಿಂದು ಹಿಂದಕ್ಕೆ ಸರಿದು ಪ್ರಾಣಮಿತ್ರ ಕ್ಷೇಮ ಕಾತರನಾಗಿ ರಂಹನನ್ನು ಕೂಗಿದನು.

ಜಾರಿಬೀಳುತ್ತಿರುವ ಬೆಟ್ಟವನ್ನು ಹಿಂದಕ್ಕೆ ನೂಕಲು ಪ್ರಯತ್ನಿಸುವ ಕಾಡು ಹಂದಿಯಂತೆ, ಇಟ್ಟ ಹೆಜ್ಜೆಯನ್ನು ಹಿಮ್ಮೆಟ್ಟದೆ ರಂಹನು ಹೋರಾಡುತ್ತಿದ್ದನು. ವಹ್ನಿ ನೋಡುತ್ತಿದ್ದಂತೆ, ದನುಜ ದಾವಾಗ್ನಿ ಅವನನ್ನು ಸುತ್ತಿ ಮುತ್ತಿ ನೆಲಕ್ಕೆ ಕೆಡವಿತು. ಗಾಯಗೊಂಡು ಉರುಳಿಬಿದ್ದ ಸ್ನೇಹಿತನನ್ನು ಎತ್ತಿ ರಕ್ಷಿಸುವೆನೆಂದು ದೀರ್ಘದೇಹಿ ಮುನ್ನುಗ್ಗಿದನು. ಗಿಡ್ಡಗೆಳೆಯನನ್ನು ಮೇಲೆತ್ತಿದ್ದನು. ಕಂಕುಳಲ್ಲಿ ಇರುಕಿಕೊಂಡು ಹಿಂತಿರುಗುತ್ತಿದ್ದನು. ಆಗ ಅವನನ್ನು ಭಯಂಕರ ರಾಕ್ಷಸರು ತೋಳುಗಳೆತ್ತಿ, ಮೊಲವನ್ನು ಅಟ್ಟಿಸಿಕೊಂಡು ಬರುವ ಸೀಳುನಾಯಿಗಳಂತೆ ಬೆಂಬತ್ತಿ ಬಂದರು.

ರಾಮಕಾರ್ಯಂ ಗೆಲ್ಗೆ

ತನ್ನ ಗೆಳೆಯನಿಗಾಗಿ ಹೆದರಿ ಹಿಂಜರಿದು ಹೋಗುತ್ತ, ಕೆದರಿ ಕೆಟ್ಟೋಡುತ್ತಿದ್ದ ಇತರರನ್ನು ಸೇರಿಕೊಂಡ ವಹ್ನಿಯಕಡೆಗೆ ಆಂಜನೇಯನ ಕಣ್ಣು ನೆಟ್ಟಿತು. ಮನಸ್ಸು ಮನಸ್ಸನ್ನು ತಿಳಿಯಿತು. ರಘುರಾಮನ ಮಾತನ್ನು ನಿಮಿತ್ತವಾಗಿಸಿಕೊಂಡು ರಂಹನು ವಹ್ನಿಗೆ ಹೇಳಿದನು:

'ವಹ್ನಿ, ಈ ನನ್ನ ದೇಹವನ್ನು ಬಿಸಾಡು. ಇಂದೊ ನಾಳೆಯೊ ಸಾಯುತ್ತೇನೆ. ಓಡಿ ಬದುಕುವುದೆ? ಸುಡಲಿ ಆ ಬಾಳು. ನನ್ನ ಶರೀರದಭಾರವನ್ನು ಬಿಸುಡು. ಸ್ವಾಮಿಯ ಕಾರ್ಯಕ್ಕೆ ವಿಘ್ನವನ್ನುಂಟು ಮಾಡಬೇಡ. ನನ್ನಶರೀರ ಕೊಳೆತರೆ ಏನು? ರಾಮಕಾರ್ಯವು ಗೆಲ್ಲಲಿ! ಅಂದು ನಾವಿಬ್ಬರು ಕಡಲತೀರದಲ್ಲಿ ಅವನನ್ನು ಕಂಡು ಸಂಭಾಷಿಸಿದೆವಲ್ಲ ಅದೇ ನಮಗೆ ಸಾರ್ಥಕವಾದ ಈ ಜನ್ಮದ ಸಫಲತೆ! ಈ ಕಳೇಬರದ ಭಾರವನ್ನು ತೊರೆ.

'ಯುದ್ಧ ಮುಖಿಯಾಗು! ತಿರುಗು! ತಿವಿ! ಓಡುವವರನ್ನು ಕೂಗಿಕರೆ ವಹ್ನಿ, ಇಗೊ ತೆಗೆದುಕೊ ನನ್ನ ಉಂಗುರ ನೀನು ಬದುಕಿ ಹಿಂತಿರುಗಿದರೆ '

ವಹ್ನಿಯು ತಕ್ಷಣ ಮಿತ್ರನ ದೇಹವನ್ನು ಬಿಗಿದಪ್ಪಿಕೊಂಡನು ನೆಲಕ್ಕೆ ನಿಧಾನವಾಗಿ ಇಳಿಸಿದನು. ಕೊನೆಯ ನೋಟದ ಕಾಣ್ಕೆಯನ್ನು ಸಲ್ಲಿಸಿದನು. ಆಯುಧಗಳೊಡನೆ ತಿರುಗಿ ರಣಧ್ವನಿಯಲ್ಲಿ ಕೂಗಿಕರೆದನು!


ಅನಂತರ ಆಂಜನೇಯನು ವಹ್ನಿಯನ್ನು ಕಾಣಲಿಲ್ಲ. ವಹ್ನಿಗೆ ಬದಲು ಗೋಪುರದಂತೆ ಉನ್ನತವಾದ ಬೃಹತ್ ರಾಮಚಂದ್ರನವಿಗ್ರಹವು ನಿಂತಿತು! ಹಾಗೆಯೆ, ಕಪಿಸೈನ್ಯವು ವಾನರದೇಹವನ್ನು ತೊರೆದು ರಾಮನ ಆಕೃತಿಯನ್ನು ತಾಳಿತು! ಅದೇ ರೀತಿ ರಾಕ್ಷಸಸೈನ್ಯವು ರಾವಣಾಕೃತಿ ಹೊಂದಿತು! ಕೋಟಿ ಕೋಟಿ ರಾವಣರ ಎದುರು ಕೋಟಿ ಕೋಟಿ ರಾಮರು ಎದುರಾದುದನ್ನು ಆಂಜನೇಯ ನೋಡಿದನು. ಅವನ ಶರೀರದ ಧಮನಿ ಧಮನಿಯಲ್ಲಿ, ರೋಮ ರೋಮಗಳಲ್ಲಿ ರಸಸ್ವಾದನವಾದ ವಿದ್ಯುತ್‌ತಪೋತೊರೆ ಹರಿಯಿತು!

ಹಿಂಜರಿಯುತ್ತಿದ್ದ ವಾನರಸೈನ್ಯವು ಬಾನು ಬಿರಿಯುವಂತೆ, ಗಿರಿ ಜರಿಯುವಂತೆ, ಸುರಸಮೂಹವು ಹಿಂದು ಹಿಂದಕ್ಕೆ ಹಿಂಜಿ ಚದುರಿ ಹೋಗುವಂತೆ, ಬೊಬ್ಬಿರಿದು ಶತ್ರುಸೈನ್ಯವು ತತ್ತರಿಸುವಂತೆ ಮುನ್ನುಗ್ಗಿತು. ಆನೆಗಳು ಹಣೆ ಹಣೆಹಚ್ಚಿ ಸೆಣಸಿ ಘೀಂಕರಿಸಲು ಕಾಡು ಕಂಪಿಸುವ ರೀತಿಯಲ್ಲಿ–ಒಮ್ಮೆ ರಾವಣ ಸೈನ್ಯ ಆನೆ ಮತ್ತೊಮ್ಮೆ ರಾಘವ ಸೈನ್ಯ ಆನೆ ಒಂದನ್ನೊಂದು ಒತ್ತಿದವು. ಆಗ ತಿಣುಕದಿರುವನೆ ಹೇಳು? ನಿಜ, ತಿಣುಕಿದನು ಫಣಿರಾಯ ಆ ರಾಮಾಯಣದ ಭಾರದಲ್ಲಿ!

ಆ ಪ್ರಾಕೃತ, ಆ ಪ್ರತಿಮಾ ಜಟಿಲ ಮತ್ತು ಆ ಭೂಮ ಘಟನೆಯನ್ನು ಪ್ರತಿಕೃತಿಸಿ ಹೇಳಲು ಸಾಧ್ಯವೆ? ಅದನ್ನು ಪ್ರತಿಮಾ ವಿಧಾನದಿಂದ ಬಣ್ಣಿಸಲು ಪ್ರಯತ್ನಿಸಿ ಕವಿಪ್ರತಿಭೆ ಸೋತು ಮನಸ್ಸು ಕದಡಿತು. ಅದಕ್ಕಾಗಿ ಈ ವಿಚಿತ್ರಗಳು, ಬಿಡಿಚಿತ್ರಗಳು ಗಡಿಬಿಡಿಯಲ್ಲಿ ತಾವೇ ಪ್ರತಿಮೆಗಳಾಗಿವೆ.

ಮಿಂಚುಸರ್ಪಗಳು ಸಂಚರಿಸಿದುವು! ಮೇರುಪರ್ವತದ ಗರ್ಭ ನಡುಗಿತು! ಸಮುದ್ರದ ತೆರೆಗಳೆದ್ದು ರುದ್ರನ ಮೂರನೆಯ ಕಣ್ಣನ್ನು ತೊಳೆದವು! ಹಿಮವತ್‌ಪರ್ವತ ತೂಗಾಡಲು ಅದರ ಶಿಖರ ಪಂಕ್ತಿಗಳು ತೊನೆದಾಡಿದವು! ಲಯ ಸಮಯದ ತಾಂಡವ ಪ್ರಳಯನಾಟ್ಯ ಪ್ರಾರಂಭವಾಯಿತೊ ಎಂಬ ಶಂಕೆಯಿಂದ ಚಕಿತಗೊಂಡ ದಿಗ್ಗಜಗಳು ಘೀಂಕರಿಸಿ ನಡುಗಿದುವು!

❑



~~~~~~~~~~~~~~~~~~~~~~~~ ಸಂಚಿಕೆ – ೭ ~~~~~~~~~~~~~~~~~~~~~~~~

ದಶಾನನ ಸ್ವಪ್ನಸಿದ್ಧಿ

ನಕ್ಷತ್ರ ಖಚಿತ ಡಾಬಿನಿಂದ ಕೃಷ್ಣಪಕ್ಷದ ಚತುರ್ದಶಿಯ ರಾತ್ರಿ ಶೋಭಿಸುತ್ತಿದ್ದಳು. ರೋಷದ ರಕ್ತಾಕ್ಷ ರಾತ್ರಿಂಚರೇಶ್ವರನು ತನ್ನ ಮೂಲಬಲವು ಶ್ರೀರಾಮನ ಚಿತ್‌ತಪಸ್ ತೇಜದಿಂದ ನಾಶವಾಗಿ ಹೋದುದಕ್ಕೆ ಧೃತಿಗೆಟ್ಟನು.

ತಾಯಿ ಓ ವಾಗಧಿಷ್ಠಾತ್ರಿಯೇ, ಶಿವ ಮಂದಿರದಲ್ಲಿ ರಾವಣನು ಏಕಾಂಗಿಯಾಗಿ ಅದೆಂತಹ ಮಹತ್ ಪೂಜೆಯಲ್ಲಿ ತೊಡಗಿರುವನೆಂದು ಹೇಳು? ನೀನು ಜ್ಞಾನಾಧಿದೇವಿ ಮತ್ತು ಜ್ಞಾನನೇತ್ರಿ. ಹೊರಗಿನ ಸತ್ಯ ಒಂದೇ ಅಲ್ಲದೆ, ಒಳಗಿನಕಣ್ಣುಗಳಿಂದ ನೀನು
~~~~~~~~~~~~~~~~~~~~~~~~

ಕಾಣುವ ಇಂದ್ರಿಯಗಳ ಹಿಡಿತದ ಲೌಕಿಕವನ್ನು ಮೀರಿದ ನಿತ್ಯ ಸತ್ಯಗಳನ್ನು ನನಗೆ ತೋರಿಸು.

ದೇವಿ ವಿಶ್ವಾಂತರಾತ್ಮೆಯೇ, ಸ್ಥೂಲವನ್ನು ಸೂಕ್ಷ್ಮವನ್ನು, ಕೋಶಕೋಶಗಳ ಇತರ ಕಾಲ ಮತ್ತು ದೇಶವನ್ನು ಕಾಣಿಸು. ತಾಯಿ ಕಾರಣವನ್ನು ಹೇಗೋ ಹಾಗೆಯೇ ಕಾರಣದಾಚೆಯ ಲೀಲಾಮಹೋದ್ದೇಶವನ್ನು ತಿಳಿದ ಅವಿದ್ಯೆ, ವಿದ್ಯೆ, ವಿದ್ಯಾತೀತೆಯಾದ ನೀನು ಈ ಕವಿಯ ಮೇಲೆ ಕೃಪೆಯನ್ನು ತೋರು.

ಇದು ಬಾಹ್ಯ ಘಟನೆಗಳನ್ನು ಪ್ರತಿಕೃತಿಸುವ ಲೌಕಿಕ ಚರಿತ್ರೆಯಲ್ಲ. ಅಲೌಕಿಕವಾದ ಶಾಶ್ವತ ಅನಂತ ನಿತ್ಯ ಸತ್ಯಗಳನ್ನು ಪ್ರತಿಮಿಸುವ ಸತ್ಯಸ್ಯ ಸತ್ಯವಿದು. ಕೇಳು, ಮಹಾಛಂದಸ್ಸಿನ ಮೇರುಕೃತಿಯಾದ ಈ ಜಗದ್ಭವ್ಯ ರಾಮಾಯಣವು ಶ್ರೀ ಕುವೆಂಪುವನ್ನು ರಚಿಸಿದೆ!

ರಾವಣನು ಆ ನಡುರಾತ್ರಿಯಲ್ಲಿ ರತ್ನದೀವಿಗೆಗಳ ಹೇಮಮಂದಿರದಲ್ಲಿ ಸಂಕಲ್ಪ ಸಿದ್ಧಿಗಾಗಿ ಮಹಾದುರ್ಗೆಯ ಧ್ಯಾನದಲ್ಲಿದ್ದನು. ದೇವಿಯನ್ನು ತೃಪ್ತಿಪಡಿಸಿ ವೈರಿಸಂಹಾರಕ ವರಗಳನ್ನು ಪಡೆಯಲು ನಿರ್ಧರಿಸಿ ದೃಢಮತಿಯಾಗಿ ತಪದಲ್ಲಿ ತೊಡಗಿದ್ದನು.

ದೈತ್ಯ ಪೂಜಾಮೂರ್ತಿಯು ಪ್ರಳಯಸ್ವರೂಪದ ಭಯಂಕರ ನಾಟ್ಯಭಂಗಿಯ ಜಗತ್ ನಟರಾಣಿಯಾಗಿದ್ದಳು. ಅವಳು ಹೊಳೆಯುವ ಸುಂದರ ಶಿವನ ವಕ್ಷವೇದಿಕೆಯನ್ನೇರಿದ್ದಳು. ಜೋಲುವ ನಾಲಗೆಯಲ್ಲಿ ರಕ್ತಕಾರುತ್ತಿದ್ದಳು. ಕಂಠದಲ್ಲಿ ರುಂಡಗಳಮಾಲೆ ಧರಿಸಿದ್ದಳು. ನರಕರಗಳಿಂದ ವಿರಚಿತವಾದ ಸೊಂಟದವಸ್ತ್ರ ತೊಟ್ಟಿದ್ದಳು. ಅನೇಕ ಬಾಹುಗಳಲ್ಲಿ ಭೀಕರ ಆಯುಧಗಳನ್ನು ಹೊಂದಿದ್ದಳು. ದಿಕ್ಕುಗಳಲ್ಲಿ ಹರಡಿಕೊಂಡ ಕಪ್ಪುಬಣ್ಣದ ಉಗ್ರ ಕೂದಲಿಂದಿದ್ದಳು. ಅವಳು ತ್ರಿಣೇತ್ರೆ, ತ್ರಿಜಗನ್ಮಾತೆ, ಮಾಯೆ, ಪ್ರಕೃತಿ, ಶಕ್ತಿ, ಲೀಲೆಯಾಗಿ, ಸೃಷ್ಟಿಸ್ಥಿತಿಪ್ರಲಯ ಕಾರಣಗಳಾಗಿ ಕಲಾತ್ಮಕೆ ಕರಾಳಿಯು ನಾಟ್ಯ ಭಂಗಿಯಲ್ಲಿ ಶೋಭಿಸುತ್ತಿದ್ದಳು!

ಅವಳ ಸುತ್ತಲೂ ಕಣ್‌ನಡುಗುವಂತೆ ಜಪಾ ಕುಸುಮ ಕುಂಕುಮ ಬಲಿಗಳಿದ್ದವು. ವರಲೋಭಿಯಾದ ರಾವಣನು ಕೆಂಬಣ್ಣದ ಉಡುಗೆಯಿಂದ, ಹೋಮ ಧೂಮ ಆವರಣದಲ್ಲಿದ್ದ ನೀಲಾವರಣದ ಕಾಳಿಕಾಮೂರ್ತಿಯನ್ನು ದಿಟ್ಟಿನೆಟ್ಟು ಈಕ್ಷಿಸುತ್ತಿದ್ದನು. ತನ್ನ ಅಭೀಷ್ಟದ ಮುಹೂರ್ತಕ್ಕೆ ತನ್ನ ಇಷ್ಟದೇವತೆಯು ಪ್ರತ್ಯಕ್ಷಳಾಗುವುದನ್ನು ಕಾಯುತ್ತಿದ್ದನು. **ಆ ರುಂದ್ರ ದರ್ಶನಕೆ ಚೇತನಂಗೆಟ್ಟನೋಲುರುಳಿದನು ದೈತ್ಯೇಂದ್ರನದ್ಭುತ ಸಮಾಧಿಗೆ.**

ಅಸುರನ ದೃಷ್ಟಿಗ್ರಹವು ಬಡಿದಂತೆ ಸೃಷ್ಟಿಯು ಉತ್ಕಂಠ ಭೀತಿಯಿಂದ ನಿಂತಿತು. ದೈತ್ಯಭಕ್ತನ ಭೀಷ್ಮ ಭಕ್ತಿಗೆ ಜಗಜ್ಜನನಿಯು ತನ್ನ ಅಚಲಮನಸ್ಸಿನ ತಾಟಸ್ಥ್ಯವನ್ನು ಬಿಟ್ಟು ಚೈತನ್ಯರೂಪದಿಂದ ಪ್ರತ್ಯಕ್ಷಳಾಗಬೇಕೆಂದಿದ್ದಳು. ಅಷ್ಟರಲ್ಲಿ ದೇವಗಣವು ಗಗನ ಗಂಗಾಮೃತದಿಂದ ತಾಯಿಯ ಪಾದಗಳನ್ನು ತೊಳೆದು ನಮಿಸಿ ನುಡಿಯಿತು:

'ತಾಳು, ಮಹಾತಾಯಿ ತಾಳು! ನೀನು ಪ್ರತ್ಯಕ್ಷಳಾದರೆ ಈ ಭುವನ ಭೀಕರನು ಧರ್ಮಕ್ಷಯಕ್ಕೆ ಸಾಧನಗಳಾಗುವ ವರಗಳನ್ನು ಕೇಳುತ್ತಾನೆ.'

ಅದನ್ನು ಕೇಳಿ ಹೊಸ್ತಿಲಲ್ಲಿ ನಿಂತಳು. ಚಿತ್ತಚಿತ್ತುಗಳಲ್ಲಿ ಇಬ್ಬಗೆಯಾಗಲು ದುರ್ಗೆ ಲೀಲಾವಿನೋದೆಯು ಅತ್ತ ಇತ್ತ ತೂಗಾಡಿದಳು! ಕಾಲುಹಿಡಿದ ದೇವತೆಗಳಿಗೆ, ಮನೋಗೋಚರವಾಯಿತೆಂಬುದನ್ನು ಮುಗುಳು ನಗೆಯ ಸಮಾಧಾನದಿಂದ ಸೂಚಿಸಿದಳು.

ತಾಯಿ ತಡಮಾಡಿದಳೇಕೆಂದು ಅತಿಕೋಪದಿಂದ ರಾಕ್ಷಸರೊಡೆಯನು ಖಡ್ಗವನ್ನು ತೆಗೆದುಕೊಂಡು ಹೇಳಿದನು:

'ತಾಯಿ, ಏಕೆ ತಡಮಾಡುವೆ? ಭಕ್ತನ ಧೈರ್ಯದ ಪರೀಕ್ಷೆಗೇನು? ಹೂ ಹಣ್ಣುಗಳ ಬಲಿ ನಿನಗೆ ಸಾಲದಿದ್ದರೆ, ಇದೊ ನೋಡು–ಒಂದು ಉರುಳಿದರೆ ಆ ಎಡೆಯಲ್ಲಿ ಮತ್ತೊಂದು ಮೂಡುವ ಹತ್ತು ತಲೆಗಳವರೆಗೆ ಕತ್ತರಿಸಿ ಕೊಡುವಷ್ಟು ನನಗೆ ಆಯುಷ್ಯ ಸಂಪತ್ತಿದೆ! ನೀಡುತ್ತೇನೆ, ಸ್ವೀಕರಿಸು!'

ಅದಕ್ಕೆ ಶಿವಮಂದಿರ ಸಮೇತ ಶಿಲಾಶರೀರವು ಕಂಪಿಸಿತು! ಮಿಂಚುಬೆಳಕಿನ ತೆರೆಗಳಿಂದ ಕೂಡಿದ ಕಾಂತಿಮಯ ಸಾಗರವು ಮೇರೆಯಿಲ್ಲದ ಮಹಾದೂರ ದಿಗಂತದಿಂದ ಅವನ ಮೇಲೆ ಹಾಯ್ದು ಬಂದಿತು. ಆ ರುದ್ರ ದರ್ಶನಕ್ಕೆ ಚೈತನ್ಯಗೆಟ್ಟು ಉರುಳಿದನು. ದೈತ್ಯೇಂದ್ರನು ಅದ್ಭುತವಾದ ಸ್ವಪ್ನ ಲೋಕದ ಮನೋಮಯ ಸಮಾಧಿಗೆ ಒಳಗಾದನು.

'ಅದಾರಲ್ಲಿ? ಧಾನ್ಯಮಾಲಿನಿ! ಅದೇಕೆ ಇಲ್ಲಿ ನೀನು ಈ ಪಾಳುದೇಗುಲದಲ್ಲಿ ? ಪ್ರಿಯೆ, ಈ ಗೂಬೆಗತ್ತಲಿನಲ್ಲಿ ನೀನೊಬ್ಬಳೆ ಏನು ಮಾಡುವೆ? ಹುಬ್ಬುಗಂಟಿಕ್ಕಬೇಡ! ನೀನೇನು ಪಿಶಾಚಿಯೆ? ನಿನಗೆ ಪ್ರಿಯೆ ಎಂಬುದು ಅಪ್ರಿಯವೆ? ನಿನಗೇನು ಭ್ರಾಂತಿ? ಈ ಜಾಗೃತಸ್ಥಿತಿಗೆ ಬರುವ ಮೊದಲು ನಿಷ್ಠುರ ಸ್ವಪ್ನ ಪ್ರಪಂಚದಲ್ಲಿ, ನಿನ್ನನ್ನು ಚಿತೆಯಲ್ಲಿ ಸುಟ್ಟಂತೆ ಕನಸಾಯಿತು!

'ಇದಾವುದು ಈ ಸೀಮೆ? ಲಂಕೆಯೆ? ಅಲ್ಲ! ಸ್ಮಶಾನದ ಈ ಶಿಥಿಲ ಶೀತಲ ಮಧ್ಯರಾತ್ರಿಯ ಅಜ್ಞಾನಮಯ, ನಿಶ್ಯಬ್ದ, ನಿರ್ಜನತ್ವದ ಪಾಳುಗುಡಿಯ ಗೂಬೆಗತ್ತಲು ಕನಕಲಂಕೆಯಲ್ಲಿ ಎಲ್ಲಿದೆ? ಅದೇಕೆ ಸುಮ್ಮನಿರುವೆ? ಮೂಗಿಯೊ? ನನ್ನ ಮೇಲೆ ಮುನಿಸೊ?'

'ನಿನಗೆ ಗುರುತು ಸಿಕ್ಕದೆ? ನಾನೆ ಲಂಕಾ ಲಕ್ಷ್ಮಿ! ಈ ಹಾಳೆ ಆ ಲಂಕೆ!'

'ಸುಳ್ಳು ಹೇಳ ಬೇಡ; ನನ್ನ ಸಮೃದ್ಧ ಲಂಕೆ ಕನಕಮಯ! ತ್ರೈಭುವನಲಕ್ಷ್ಮಿ ಆ ನನ್ನ ಲಂಕಾಲಕ್ಷ್ಮಿ!'

ಸುಕೃತಿಗಳ್ಗಾಂ ಶ್ರೀ; ಅಲಕ್ಷ್ಮಿ ತಿಳಿ ನಾಂ ಸ್ವಯಂ ಪಾಪರುಚಿಗಳ್ಗೆ.

'ಪುಣ್ಯ ಕಾರ್ಯಗಳಿಗೆ ನಾನು ಶ್ರೀ. ಪಾಪರುಚಿಗಳಿಗೆ ಅಲಕ್ಷ್ಮಿ ಎಂದು ತಿಳಿ! ನೀನು ಬಣ್ಣಿಸುವ ಆ ಲಂಕೆ ಮತ್ತು ನೀನು ಹೊಗಳುವ ಆ ಲಕ್ಷ್ಮಿ ಕಳೆದು ಹೋದ ಕನಸುಗಳು! ರತ್ನಗಳು ಉದುರಿರುವ ದಾರಿದ್ರ್ಯ ಸಾಕ್ಷಿಯಾದ ಮುರಿದ ಕಿರೀಟವನ್ನು ನೋಡು! ರೇಷ್ಮೆವಸ್ತ್ರ ಮಲಿನಗೊಂಡು ಛಿದ್ರವಾಗಿದೆ! ಬಳೆಯೊಡದ ಬೋಳುಗೈ! ಎಣ್ಣೆಯಿಲ್ಲದೆ ಜಟೆಗಟ್ಟಿ ಪೊದರಾಗಿರುವ ತಲೆಗೂದಲು! ಶಸ್ತ್ರಗಳಿಂದ ಆಘಾತಗೊಂಡು ಶತಗಾಯಗಳಿಂದ ಜಜ್ಜರಿತವಾಗಿರುವ ಈ ಮೈಯನ್ನು ನೋಡು! ರಕ್ತದ ಹೊಳೆಹರಿದು ಬೀಳಲು ತತ್ತರಿಸುತ್ತಿದ್ದೇನೆ! ನನ್ನನ್ನು ಕಾಪಾಡುವವರು ಯಾರು? ನನ್ನ ಮೊರೆಯನ್ನು ಕೇಳುವವರು ಯಾರು?'

ಕಂಗೆಟ್ಟ ಲಂಕಿಣಿಯು ನಿರಾಭರಣಹಸ್ತದಿಂದ, ನಿಸ್ತೇಜಳಾಗಿ ಮುಖಮುಚ್ಚಿಕೊಂಡು ಅಳತೊಡಗಿದಳು. ಅಸ್ಥಿಪಂಜರದಂತಿದ್ದು. ಅನಾಥೆಯಂತೆ ಆಕ್ರಂದಿಸುತ್ತಿದ್ದವಳನ್ನು ನೋಡಿದ ಲಂಕಾನಾಥನು ಬಿಂಕಬಿಟ್ಟು ನುಡಿದನು:

'ನಾನು ಬದುಕಿದ್ದೂ ಸತ್ತಂತೆ ಆಗಿದೆ! ತಾಯಿ, ಹೇಳು. ನಿನ್ನನ್ನು ಈಗತಿಗೆ ತಂದವರು ಯಾರು? ದೇವತೆಗಳು ಆಳುಗಳಾಗಿ, ಅಮರಾವತಿಯೆ ಸೇವಕನಾಗಿರುವಾಗ ನಿನಗೇಕೆ ಈ ಪಾಡು ಹೇಳು?'

'ನನಗೆ ಈ ಗೋಳು ಬಂದಿರುವುದು ನಿನ್ನಿಂದಲೇ! ಅಯ್ಯೋ, ವಾನರಸೇನೆಯಿಂದ ಮಕ್ಕಳೆಲ್ಲರೂ ಸತ್ತರು. ನನಗೆ ಈ ಗತಿಯಾಯ್ತು!'

'ಓಹೊ, ನಾನು ಏಕೊ! ಮರೆತಿದ್ದೆ, ಆಶ್ಚರ್ಯವಾಗುತ್ತಿದೆ! ಇಲ್ಲಿ ಏನು ವಿಚಿತ್ರವೊ! ಮನಸ್ಸಿಗೆ ಏನೇನೊ ಮೂಡುತ್ತಿದೆ; ಬೇಕಾದದ್ದೇ ಮರೆಯುತ್ತಿದೆ! ಅದೇ ಉದ್ದೇಶದಿಂದ ಇಲ್ಲಿಗೆ ಬಂದೆ. ನನಗೆ ನಾಳೆ ಕಪಿಧ್ವಜರೊಂದಿಗೆ ಯುದ್ಧವಿದೆ. ರಾಮನನ್ನು ಗೆಲ್ಲುವ ಸಿದ್ಧಿಗಾಗಿ ಶಿವಾಣಿಯ ಕೃಪೆಬೇಡಲು ಹೋಗುತ್ತೇನೆ. ಎಲೆಗೆ ಲಂಕೆಯೆ ಅಧೀರಳಾಗಬೇಡ. ನೀನು ನಾಳೆಯೆ ಮೊದಲಿನಂತೆ ಕಿರೀಟ ಧಾರಿಣಿಯಾಗುವೆ ಮತ್ತು ಮೊದಲಿಗಿಂತಲೂ ಮಿಗಿಲಾಗಿರುವೆ!'

'ದನುಜೇಂದ್ರನೇ, ನಿನ್ನ ಮಾತು ಕಟುಸತ್ಯ!'

'ಮತ್ತೇಕೆ ದುಃಖಿಸುವೆ? ನಿಟ್ಟುಸಿರು ಬಿಡುವೆ?'

'ಸಿದ್ಧಿಯನ್ನು ನೀನು ಪಡೆದರೂ, ನನ್ನ ಮಕ್ಕಳು ಲೆಕ್ಕವಿಲ್ಲದಷ್ಟು ಮಡಿದರೆಂದು ಹೆದರಿಕೆಯಾಗುತ್ತಿದೆ! ಲಂಕೆಬರಿದಾಗಲು, ಸಿಂಹಾಸನವನ್ನು ಏರಿ ಏನುಪ್ರಯೋಜನ? ನನ್ನನ್ನು ಸ್ಮಶಾನಕ್ಕೆ ರಾಣಿಯಾಗಿಸುವೆಯಾ? ಕೊಲೆ ಸಾಕು. ಈ ಛಲವನ್ನು ಬಿಡು!'

'ಮತ್ತೆ? ನಿನ್ನಾಸೆಯೇನು?'

'ನನ್ನಾಸೆ ಏನೆಂದೆಯಾ? ಅದು ನಿನ್ನ ಅಂತರಾತ್ಮದಲ್ಲಿ ಸಂಚರಿಸುತ್ತಿದೆ, ಹುಡುಕಿನೋಡು.'

'ರಾಮನನ್ನು ಗೆದ್ದು ಮೈಥಿಲಿಗೆ ಅವನನ್ನು ಕಪ್ಪವಾಗಿ ಕೊಡಬೇಕೆಂಬುದಲ್ಲವೆ?'

'ನಿನ್ನ ಅಹಂಕಾರಕ್ಕೆ ಲಂಕಾಪ್ರಜೆಗಳನ್ನು ಬಲಿ ಕೊಡುವೆಯೇನು? ಈಗಾಗಲೆ ಆಗಿರುವ ಬಲಿ ಸಾಲದೆ? ಈ ಹೇಡಿತನದಿಂದ ತಾಯಿಯ ಸಂಕಟವನ್ನೇಕೆ ಹೆಚ್ಚಿಸುವೆ? ನಿನ್ನ ಗರ್ವದಿಂದಾಗಿ ವಿಧವೆಯರ ಸಂಖ್ಯೆ ಹೆಚ್ಚಬೇಕೆ? ಮಕ್ಕಳನ್ನು ಕಳೆದುಕೊಂಡ ತಾಯಿಯರ ಸಂಖ್ಯೆ ಹೆಚ್ಚಬೇಕೆ? ಕೂಳು ಕೊಡುವವರನ್ನು ಬಲಿಯಾಗಿಸಿ ಅನಾಥಶಿಶು ಸಂಖ್ಯೆಯನ್ನು ಹೆಚ್ಚಿಸಬೇಕೆ?'

'ಎಲೆಗೆ ಲಂಕೆಯೆ, ನನ್ನನ್ನು ಬಯ್ಯಬೇಡ. ನಾಳೆಯ ಯುದ್ಧಕ್ಕೆ ನಾನೊಬ್ಬನೆ ಹೋಗುತ್ತೇನೆ. ನಿನ್ನ ಮಕ್ಕಳಲ್ಲಿ ಒಬ್ಬರೂ ಸಾಯುವುದಿಲ್ಲ! ಇನ್ನುಳಿದುದು ನನ್ನ ಕಾರ್ಯ. ನಿಜವಾಗಿಯೂ ನಿನ್ನವರನ್ನು ಕೊಲ್ಲಿಸುವುದಿಲ್ಲ. ಓಹ್ ಕೃಪಣೆ, ತೆಗೆದುಕೊ ಭಾಷೆಯನ್ನು ಕೊಟ್ಟಿದ್ದೇನೆ! ನನ್ನನ್ನು ಬೀಳ್ಕೊಡು. ನಾನು ಔದಾರ್ಯವಿರುವ ಜಗದಂಬೆ ಶಿವೆಯ ದರ್ಶನಕ್ಕೆ ಹೋಗುತ್ತಿದ್ದೇನೆ!'

ಕಣ್ಣಂತೆ ಕಾಣ್ಕೆಯಯ್

'ನಾನೇ ಶಿವೆ! ಕಾಣಿಸುತ್ತಿಲ್ಲವೆ?'

'ಅದು ಹೇಗೆ?'

'ಕಣ್ಣಂತೆ ಕಾಣ್ಕೆ!'

ದಾನವೇಂದ್ರನು ಬೆರಗಾಗಿ ನೋಡಿದನು. ಜ್ಯೋತಿಯು ಅಂಬಿಕೆಯ ಮಂಗಳ ಶ್ರೀಮೂರ್ತಿಯಾಗಿ ಪ್ರಕಟಗೊಂಡಿತು. ಪಾಳುಗುಡಿಗೆ ಬದಲು ಒಂದು ಬಂಗಾರದ ಜ್ಯೋತಿಃಪಟಲ ಭೂಮ್ಯಾಕಾಶವನ್ನು ವ್ಯಾಪಿಸಿತು. ಗೂಬೆಗತ್ತಲು ಸರಿದು ಕಾಮನಬಿಲ್ಲಿನ ಕಾಂತಿ ಆಕಾಶವನ್ನು ತುಂಬಿತು. ಅತೀಂದ್ರಿಯಳು ನಿರಾಕಾರಳು ವರ್ಣನಾತೀತಳು ಅನುಗ್ರಹದಾಯಿಯೂ ಆದ ತಾಯಿಯನ್ನು ನೋಡಿದನು. ಕಣ್ಣುಗಳಲ್ಲಿ ಭಾವಾಶ್ರುಗಳು ಹೊಮ್ಮುತ್ತಿರಲು ರಾವಣನು ಮಗುವಿನಂತೆ ಅಸ್ಪಷ್ಟವಾಗಿ ಮಾತನಾಡುತ್ತ ನಮಸ್ಕರಿಸಿದನು.

'ಕಂದ ನಿನಗೆ, ಲಂಕೇಶ್ವರನಿಗೆ, ತ್ರಿಜಗತ್ ಭಯಂಕರನಿಗೆ, ತಪೋನಿಷ್ಠನಿಗೆ, ಹಲವು ವರಗಳಿಂದ ಬಲಿಷ್ಠನಾದವನಿಗೆ ದುಃಖವೇಕೆ?'

'ಸರ್ವಜ್ಞೆಯೆ, ತಿಳಿಯದವಳಂತೆ ಮೂದಲಿಸಬೇಡ. ನಿನ್ನ ಲೀಲೆಯನ್ನು ನಾನು ತಿಳಿದಿಲ್ಲವೆಂದಲ್ಲ, ನೀನಾಡಿಸಿದಂತೆ ಜಗತ್ತಿನನಾಟಕ. ನಿನ್ನ ಇಚ್ಛೆಯು ಇತ್ತ ಎಳದರೆ ರಾವಣೋತ್ಕರ್ಷ; ಅತ್ತ ಎಳೆದರೆ ವೈರಿಯ ಉತ್ಕರ್ಷ! ಗಾಳಿಪಟಗಳನ್ನು ಆಡಿಸಿದಂತೆ ಸೂತ್ರಹಿಡಿದು ಪಾತ್ರಗಳನ್ನು ಸೋಲು ಗೆಲುವು, ಸುಖ ದುಃಖಗಳಲ್ಲಿ ಆಡಿಸುವುದೇ

ನಿನಗೆ ಹರ್ಷ! ನನ್ನ ಈ ದುಃಖವು ನಿಜವಾಗಿ ನಿನ್ನ ಇಚ್ಛೆಯೆ! ಅಲ್ಲದಿದ್ದರೆ ತಿಳಿದು ತಿಳಿದು ಈ ಶೋಕವು ನನ್ನನ್ನು ದಹಿಸುತ್ತಿತ್ತೆ? ಅದು ಆತ್ಮಕ್ಕೆ ಸಂಸ್ಕಾರವಲ್ಲವೆ? ಜೀವಗಳನ್ನು ಮಸೆಯಲು, ಹರಿತಗೊಳಿಸಲು, ಬೆಳಗಲು ದುಃಖಾನುಭವ ಸಾಣೆಯಲ್ಲವೆ?'

'ಈ ಬುದ್ಧಿ ಸಿದ್ಧಿಯ ನೆಲೆಗೆ ಏರುವ ತನಕ, ನಿನಗೆ ನಾಟಕದಲ್ಲಿಯ ಪಾತ್ರಕರ್ಮ ತಪ್ಪದು.'

'ಅದಕ್ಕೆ ಹಿಂಜರಿಯುವುದಿಲ್ಲ. ನನಗೆ ನಾಟಕದಲ್ಲಿಯ ಅಭಿನಯಕ್ಕೆ ತಕ್ಕನಾದ ಚಾತುರ್ಯವನ್ನು ನೀಡು.'

'ನಾನು ಬೇಡಿದುದನ್ನು ನೀಡುತ್ತೇನೆ. ಭಕ್ತರಿಗೆ ನೀಡದಿರುವುದು ಉಂಟೆ?'

'ಯುದ್ಧದಲ್ಲಿ ದಶರಥಸುತನು ಸೋಲುವಂತೆ ಕೃಪೆ ಮಾಡು!'

'ತಥಾಸ್ತು.'

'ಸೀತೆ ವಶವಾಗುವಂತೆ!'

'ತಥಾಸ್ತು.'

'ನೀನು ನಿಜವಾಗಿ ತಾಯಿ! ನೀನು ನಿಜವಾಗಿ ಕೃಪಾಸಾಗರಳು! ರಾಮನನ್ನು ಜಯಿಸುವುದಕ್ಕಿಂತಲೂ ಹೆಚ್ಚು ಆಶ್ಚರ್ಯವೆಂದರೆ ಸೀತೆಯ ಸೋಲು!'

'ಅದಕ್ಕೇಕೆ ಆಶ್ಚರ್ಯ? ಒಲಿದ ಕಂದನಿಗೆ ತಾಯಿ ಸೋಲುವುದೇನು ಅಚ್ಚರಿಯೆ? ಅದು ಸಹಜ!'

'ಅದೇನು ಮತ್ತೆ ವಕ್ರೋಕ್ತಿ!'

'ಇದರಲ್ಲಿ ವಕ್ರವೇನಿದೆ? ನಿನ್ನ ಎದೆಯಲ್ಲಿರುವ ಗೂಢ ಆಸೆಯನ್ನು ಕುರಿತು ಹೇಳಿದೆ!'

'ಸೀತೆ ಸೋಲುವಳೆ? ರಾಮನನ್ನು ಗೆಲ್ಲುವುದು ನಿಜವೆ?'

'ಸೀತೆಯು ಆಲಂಗಿಸುವಳು. ಚುಂಬಿಸಿ ಎದೆಗೊತ್ತಿಕೊಳ್ಳುವಳು. ಯುದ್ಧದಲ್ಲಿ ರಾಮನನ್ನು ಸೋಲಿಸುವೆ. ಮುಂದಿನ ಜನ್ಮದಲ್ಲಿ! ಮುಂದೆ ತೋರಿಸುವುದನ್ನು ನೋಡು.'

ದಶಾನನಂ ರಕ್ತಮಯ ಜೀವನ ತರಂಗಿಣಿಯ ವಾಹದೊಳ್ ಸಿಲ್ಕಿದನ್.

ಆ ದರ್ಶನವು ಇದ್ದಕ್ಕಿದ್ದಂತೆ ಮರೆಯಾಯಿತು. ಮಿಳುಮಿಳನೆ ನೋಡುತ್ತಿದ್ದ ಅಸುರನ ದೃಷ್ಟಿಗೆ ಮುಂದೆ ಒಂದು ದೇವಾಲಯ ಕಾಣಿಸಿತು. ಪೀಠಾಗ್ರದಲ್ಲಿ ದೇವ ವಿಗ್ರಹವಿರಲಿಲ್ಲ. ಅಲ್ಲೊಂದು ಅಶ್ವ ನಿಂತಿತ್ತು. ಅದು ಮಹದ್ ಭಯಂಕರ ಶರೀರವನ್ನು ಹೊಂದಿ ಹಿಂಗಾಲನ್ನು ಊರಿ ಮುಂಗಾಲನ್ನು ಮೇಲಕ್ಕೆತ್ತಿತ್ತು. ಅದು ನಿಗುರಿದ ಶಿಶ್ನದಿಂದ ನರ್ತಿಸುತ್ತ ನೆಲವನ್ನು ಒದೆದ ಖುರಪುಟ ಧ್ವನಿಗೆ, ಕೆನೆವ ಹೇಷಾರವಕ್ಕೆ ದಶಗ್ರೀವನ ಪ್ರಾಣ ಗದಗದ ನಡುಗಿತು!

ಇದೇನು? ಇದೇನು? ಎಂದು ನೋಡುತ್ತಿರಲು, ಆಕಾಶದಲ್ಲಿ ದೀರ್ಘಖಡ್ಗವನ್ನು ಹಿಡಿದ ಒಂದು ಬೃಹತ್ತಾದಮುಷ್ಟಿ ಗೋಚರಿಸಿತು. ಅದು ಕುದುರೆಯ ಕೊರಳ ಮೇಲೆ ಬೀಳಲು ಆ ಆಘಾತಕ್ಕೆ ಅದರ ಕತ್ತುಕತ್ತರಿಸಿ, ತಲೆಯು ಮಣ್ಣಿನ ಮೇಲೆ ಉರುಳಿ ಬಿತ್ತು. ಕಡಿತಕ್ಕೆ ರಕ್ತವು ಚಿಮ್ಮಿ ಹೊನಲಾಗಿ ಹರಿಯಿತು. ರಾವಣನು ಓಡಿ ಹತ್ತಿರವೇ ಹೊಳೆಯ ದಡದಲ್ಲಿದ್ದ ದೋಣಿಯನ್ನು ಏರಿದನು. ರುಂಡದಿಂದ ಬೇರೆಯಾಗಿ ದಿಂಡು ಉರುಳಿದ ಅಶ್ವದಮುಂಡವು ನೆಗೆದು, ಕುಪ್ಪಳಿಸಿ, ಬಿದ್ದೆದ್ದಿತು. ಕುಣಿಕುಣಿದು ಹಾರಾಡಿ ದೊಪ್ಪನೆ ಇಳೆಗೆ ಅಪ್ಪಳಿಸಿತು. ಮತ್ತೆ ಚಿಮ್ಮಿ ಮಂಡೋದರಿಯ ಗಂಡನಿದ್ದ ಕಡೆಗೆ ಮುಂದುವರಿಯಿತು. ಅಸುರನ ನೌಕೆ ಬಿರಬಿರನೆ ತೇಲಿತು.

ಕುದುರೆಯ ಮುಂಡವು ನೆಗೆನೆಗೆದು ಮುಂದೆ ಉರುಳಿ ಧುಮ್ಮಿಕ್ಕಿ ಧುಡುಮ್ಮನೆ ಹೊಳೆಗೆ ಬಿದ್ದಿತು. ನದಿಯ ನೀರು ನೆತ್ತರ ಓಕುಳಿಯಾಗಿ ಕೆರಳಿತು. ತೆರೆಯು ವ್ಯಾಪಿಸಿತು. ದೋಣಿ ಮಗುಚಿತು. ಅವನು ರಕ್ತಮಯ ನೀರಿನ ಅಲೆಅಲೆಯ ಪ್ರವಾಹದಲ್ಲಿ ಸಿಲುಕಿಕೊಂಡನು. ತೇಲಿದನು, ಈಜಿದನು, ಅಯ್ಯೋ, ಕಾಣದಾದನು. ಮುಳುಗಿದವನು, ಕೆಳಕೆಳಗೆ ಮುಳುಗಿದನು. ಇದ್ದಕ್ಕಿದ್ದ ಹಾಗೆ ಕುಂಭಕರ್ಣನನ್ನು ಕಂಡನು. ತಮ್ಮನನ್ನು ಕೂಗಿದನು. ಬದುಕುವ ಆಸೆಯಿಂದ ಸಹೋದರರಿಬ್ಬರೂ ಹೊಳೆಯೊಡನೆ ಹೋರಾಡಿ ದಡಕ್ಕೆ ಏರಿದರು. ಇದೇನು ಅಚ್ಚರಿ ಶಿಶುಗಳಾಗಿ ದಡ ಸೇರಿದ್ದರು!

ಅಲ್ಲಿಯೇ ಹತ್ತಿರದಲ್ಲಿ ಒಂದು ಆಶ್ರಮವಿತ್ತು. ಅವರ ಚಿತ್ತಕ್ಕೆ ತಪಶ್ಶಾಂತಿಯುಂಟಾಯಿತು. ಅವರ ಮನಸ್ಸು ಹಿಂದಿನ ಜನ್ಮವನ್ನು ಮರೆಯಿತು. ಆತ್ಮವು ವಿಸ್ಮೃತಿಯ ವೈತರಣಿಯಲ್ಲಿ ಮುಳುಗಿತು.

ಶಿಶುಶರೀರಿಯಾದ ದೈತ್ಯೇಂದ್ರನು ಸಹೋದರ ಕುಂಭಕರ್ಣನು ಶಿಶುಶರೀರದಿಂದ ಹಸುಳೆಯಂತೆ ಅಳುತ್ತಿದ್ದುದ್ದನ್ನು ನೋಡಿದನು. ತಾನೂ ಸಹ ಆಗತಾನೇ ಹುಟ್ಟಿದ ಎಳೆಕೂಸಿನಂತೆ ಅಳತೊಡಗಿದನು. ಅಲ್ಲಿಗೆ ಅದೊ ಸೀತೆ ಬಂದಳು! ಮಕ್ಕಳನ್ನು ಎತ್ತಿ ಮುದ್ದಾಡಿದಳು! ಹಾಡಿ ಮೊಲೆಯೂಡಿಸಿದಳು! ತೊಡೆಯ ಮೇಲಿಟ್ಟುಕೊಂಡು ಎದೆಗೆ ಅಪ್ಪಿಕೊಂಡು ಲಲ್ಲೈಸಿದಳು. ತನ್ನ ಅವಳಿಮಕ್ಕಳನ್ನು, ತಮ್ಮ ಕುಂಭಕರ್ಣನನ್ನು ಮತ್ತು ತನ್ನನ್ನು!

ಸೀತೆಯೊಳ್ ನೀನಗೀಗಳಿರ್ಪೊಂದು ಸಾತ್ತ್ವಿಕದ ಭಾವ ಶುದ್ಧಿಯೆ ದಿಟಂ ಪ್ರತಿಮೆಯಂ ಪಡೆದುದಾ ಸ್ವಪ್ನದೊಳ್.

ತಾನು ಆ ರೀತಿ ತನ್ನ ತಮ್ಮನ ಜೊತೆಯಲ್ಲಿ ಶಿಶುವಾಗಿ ಆಶ್ರಮದಲ್ಲಿ ಜಾನಕಿಯ ತೊಡೆಯ ಮೇಲೆ ಆಡುತ್ತಿದ್ದ ಅದ್ಭುತಕ್ಕೆ ಬೆಚ್ಚಿಬಿದ್ದು ರಾವಣನು ಎಚ್ಚೆತ್ತನು. ತನ್ನತನವನ್ನು ಪುನಃ ಮರೆವಿನ ಮರಣದಿಂದ ಎತ್ತಿ ಸುಸ್ಮೃತಿಗೆ ಎಳೆದು ಸಂಸ್ಥಾಪಿಸಿಕೊಳ್ಳುವವನಂತೆ ಕರೆದು, ಒರಲಿ ಕೂಗಿದನು:

'ಮಂಡೋದರಿ! ಮಯಾತ್ಮಜೇ! ಪ್ರಿಯೇ! ನನ್ನನ್ನು ರಕ್ಷಿಸು.'

ಮಯನ ಮಗಳು ಪೂಜಾ ಮಂದಿರದಲ್ಲಿ ಹಸುಳೆಯ ಅಳು ಕೇಳಿ ಆಶ್ಚರ್ಯಗೊಂಡಳು. ದಶಾನನನ ದುಃಸ್ವಪ್ನ ವರ್ತನೆಗೆ ತಳಮಳಿಸಿದಳು. ಮೀಸೆಹೊತ್ತ ಮಹಾ ದೈತ್ಯಚಕ್ರೇಶ್ವರನು ಆಗತಾನೆ ಹುಟ್ಟಿದ ಹಸುಳೆಯ ರೀತಿ ಅಳುವ ವಿಕಾರಕ್ಕೆ ಬೆದರಿದಳು. ತನ್ನ ತೊಡೆಯನ್ನು ಅವನಿಗೆ ತಲೆ ದಿಂಬಾಗಿಸಿ ಮಲಗಿಸಿಕೊಂಡಳು. ಅವನ ಹಣೆಯಬೆವರು ಒರಸಿ ಬೀಸಣಿಕೆಯಿಂದ ಬೀಸಿ ಶೈತ್ಯೋಪಚಾರ ಮಾಡಿದಳು. ತನ್ನ ನಾಥನನ್ನು, ಇಂದ್ರನನ್ನು ಗೆದ್ದವನನ್ನು ಹಸುಳೆಯಂತೆ ಭೀತಿಗೊಂಡವನನ್ನು ಬಿಗಿದಪ್ಪಿ, ಚುಂಬಿಸಿ, ಕರೆಕರೆದು ಮೈದಡವಿದಳು. ಪತಿ ಪ್ರಾಣೆಯಾದ ಅವಳು ಅವನನ್ನು ಸ್ವಪ್ನಸ್ಥಿತಿಯಿಂದ ಜಾಗೃತಸ್ಥಿತಿಗೆ ತಂದಳು. ಎಚ್ಚೆತ್ತು ತನ್ನ ಹೆಸರು ಹಿಡಿದು ಕರೆದವನಿಗೆ ಹೇಳಿದಳು:

'ಸ್ವಾಮಿ, ಇಲ್ಲಿಯೆ ಪಕ್ಕದಲ್ಲಿ ಇದ್ದೇನೆ. ಹಾಳು ಕನಸಿಗೆ ಹೆದರಬೇಡ!'

'ನಾನು ಕಂಡದ್ದು ಕನಸಲ್ಲ! ಪ್ರಿಯೆಯೆ, ನಾನೀಗ ಎಲ್ಲಿದ್ದೇನೆ ಹೇಳು?'

'ಲಂಕೆಯಲ್ಲಿ. ನಮ್ಮ ಅರಮನೆಯ ಶಿವಮಂದಿರದಲ್ಲಿ.'

'ನನ್ನ ಮೈ ಎಲ್ಲಿ? ಮುಖವೆಲ್ಲಿ?'

ಆ ಪ್ರಶ್ನೆಗೆ ಪತ್ನಿಯು ನೊಂದಳು. ಅವನನ್ನು ಮುಟ್ಟಿ ತಡವುತ್ತ ಹೇಳಿದಳು:

'ಇಲ್ಲಿವೆ, ಇಲ್ಲಿ!'

'ನಾನು ಯಾರು?'

'ದಶಗ್ರೀವ ಅಸುರೇಶ್ವರ! ಮತ್ತು ಮಂಡೋದರಿಯ ಜೀವಿತೇಶ್ವರ.'

'ಹೌದೆ! ಹೌದೆ! ಪ್ರಿಯೆ, ಬರಿಯ ಮರವೆ ಅಲ್ಲ. ನನ್ನ ಆತ್ಮವು ಪ್ರಜ್ಞಾವಿಸ್ಮೃತಿಗೊಳಗಾಗಿ ಪುನರ್ಜನ್ಮಕ್ಕೆ ಜಾರಿದಂತಾಯಿತು. ನನ್ನ ಅಹಂಕಾರದ ಈ ಪುರುಷ ಪ್ರಯತ್ನವೆಲ್ಲವನ್ನು ತೃಣಸಮಾನವಾಗಿಸಿ ಅಗ್ನಿ ವೈತರಣಿಯಲ್ಲಿ ವಿಸರ್ಜಿಸಿದೆನು! ಮಹಾ ಪ್ರಯತ್ನದಿಂದ ಹಿಂತಿರುಗಿದೆನು!' ಎಂದು ನಕ್ಕು ಹೇಳುತ್ತ ಮಾತನ್ನು ಮುಂದುವರೆಸಿದನು:

'ನಲ್ಲೆ, ಒಂದು ವಿನೋದವನ್ನು ಕೇಳು. ನಾನು ಯಾವುದೋ ಋಷಿಯ ಆಶ್ರಮದಲ್ಲಿ ದಿವಂಗತ ಸಹೋದರನ ಜೊತೆಗೂಡಿ ವೈದೇಹಿಗೆ ಮಕ್ಕಳಾಗಿ ಅವಳ ತೊಡೆಯಲ್ಲಿ ಅಳುತ್ತಿದ್ದಂತೆ '

ಎಂದು ಹೇಳಿ, ಮುಂದಕ್ಕೆ ಏನೂ ಹೇಳಲಾಗದೆ ಸುಮ್ಮನಿದ್ದ ಪತಿಗೆ ಮಯನ ಮಗಳು,

'ಕನಸಾಯ್ತೆ'

ಎಂದು ಪ್ರಶ್ನಿಸಿದಳು. ಅದಕ್ಕೆ ದೇವದಾನವ ಭಯಂಕರನು ತಲೆದೂಗುತ್ತ ಹೇಳಿದನು:

'ಅಲ್ಲ, ಅಲ್ಲ! ಅದು ಕನಸಿನ ರೀತಿ ಅಲ್ಲ!'

'ಹಾಗಾದರೆ?'

'ಮಡದಿಯೆ, ಆ ಅನುಭವ ವಿಶೇಷವನ್ನು ನಾನು ಹೇಗೆಹೇಳಲಿ? ಹೋಲಿಕೆಗೆ ಸಿಗದ ಅಸಾಮಾನ್ಯ ಅನುಭವ. ನನಗೆ ಇಂಥಹದು ಇದೇ ಮೊದಲು! ಏನೇ ಆದರೂ ಅದು ಕನಸಲ್ಲ!'

'ನಿನಗೆ ಸೀತೆಯಲ್ಲಿ ಉಂಟಾದ ಸಾತ್ತ್ವಿಕದ ಭಾವಶುದ್ಧಿಯೆ ದಿಟವಾಗಿಯೂ ಪ್ರತಿಮಾತ್ಮಕವಾಗಿ ಸ್ವಪ್ನ ರೂಪ ಪಡೆದಿದೆ.'

'ತಂಗಿಯ ಉಪದೇಶವಾಗಿದೆಯೊ ನಿನಗೆ?'

'ಅತ್ತಿಗೆಯು, ನಿನ್ನ ವೀರಧರ್ಮ ಆಲೋಚನೆಯ ಆ ಭವ್ಯ ಮಾರ್ಗ ತಿಳಿಸಿದಳು!'

ನಿನಗಿಂ ಮಿಗಿಲ್ ಸೀತೆ ನನಗೆ ದೇವತೆ, ಮಾತೆ!

'ನಿನಗೆ ಒಪ್ಪಿಗೆಯೆ? ಹೇಳು ದೇವಿ! ನನಗೆ ನೀನೊಬ್ಬಳುಮಾತ್ರ ಪಾಪಿಯನ್ನು ಕೈಬಿಡದೆ ಪುಣ್ಯಕ್ಕೆ ಒಯ್ಯುವ ದೇವಿ.'

ಮಂಡೋದರಿಯು ಪ್ರಶಂಸೆಗೆಬಾಗಿ ಕಾಲುಹಿಡಿದಳು. ಅವಳ ಕಣ್ಣೀರನ್ನು ಒರಸಿ ಮಾತು ಮುಂದುವರಿಸಿ,

'ನಿಜ, ದೇವಿ ನೀನೊಬ್ಬಳೆಯೆ ರಾವಣನಿಗೆ ! ಮತ್ತು ಸೀತೆ !'

ಎಂದು ಹೇಳಿ ಮನಸ್ಸಿನಲ್ಲಿ ಮೂಡಿದ ಮೈಥಿಲಿಯ ಚಿತ್ರಕ್ಕೆ ಅಸುರನು ಕೈಮುಗಿದನು. ಮಂಡೋದರಿಗೆ ರೋಮಾಂಚನವಾಗುವಂತೆ ತನ್ನ ಅಂತರ್ಯವನ್ನು ವ್ಯಕ್ತಪಡಿಸಿದನು.

'ನಿನಗಿಂತಲೂ ಮಿಗಿಲಾಗಿ ಸೀತೆ ನನಗೆ ದೇವತೆ, ಮಾತೆ! ಶ್ರದ್ಧೆಗೆಟ್ಟಿದ್ದ ನನಗೆ ಶ್ರದ್ಧೆ ಮತ್ತೆ ಬರುವಂತೆ ಮಾಡಿ ಆತ್ಮದ ಉದ್ಧಾರವನ್ನು ತಂದ ದೇವತೆ, ಪುಣ್ಯಮಾತೆ!'

'ನಾನು ಧನ್ಯಳಾದೆ! ಬಾಳು ಸಾರ್ಥಕವಾಯಿತು! ಸಾವೊ ಬದುಕೊ? ಇನ್ನು ನನಗೆ ಆ ವ್ಯಥೆ ಇರದು. ನಿನ್ನ ಈ ಹೃದಯವನ್ನು ತಿಳಿದರೆ ತ್ರಿಮೂರ್ತಿಗಳು ಬಂದು ಅಲ್ಲಿ ಮೀಯದೆ ಇರುವರೆ?'

'ಅದನ್ನು ನೀನೊಬ್ಬಳಲ್ಲದೆ ಮತ್ತೆ ನಂಬುವವರು ಯಾರು?'

'ನನ್ನ ಮಾಂಗಲ್ಯವನ್ನು ಪಣವಾಗಿಟ್ಟು ನಂಬಿಸುವೆನು!'

'ಬಿಡು. ನೀನು ಮಹಾರಾಣಿ. ನಿನಗೆ, ಲಂಕೇಶ್ವರಿಗೆ ಯಾರನ್ನು ನಂಬಿಸಿ ಆಗಬೇಕಾದುದೇನು?'

'ಸ್ವಾರ್ಥ ಸಾಧನೆಗೆ! ನನ್ನ ಮಾಂಗಲ್ಯವನ್ನು ರಕ್ಷಿಸಲು!'

'ನಿನಗೆ ಮಾಂಗಲ್ಯವು ಯಾವಾಗಲೂ ಕೈಲಾಸದಂತೆ ಸುಸ್ಥಿರ!'

'ಕೈಲಾಸವೇ ನಿನ್ನಿಂದ ಅಲುಗಿತ್ತಲ್ಲವೆ?'

'ಹೌದು, ಅಲುಗಿತ್ತು!'

'ರಾಮನ ಅರ್ಧಾಂಗಿಯನ್ನು ನಾನೇ ಕಪ್ಪವಾಗಿಕೊಟ್ಟು ತಪ್ಪೊಪ್ಪಿಕೊಳ್ಳುತ್ತೇನೆ. ಕ್ಷಮಾಭಿಕ್ಷೆಯನ್ನು ಬೇಡುತ್ತೇನೆ!'

'ನಿನಗೆ ಆ ಶ್ರಮ ಬೇಡ. ಆ ಶಿಕ್ಷೆ ನನಗಿರಲಿ!'

'ಶಿಕ್ಷೆಯೆಂದು ತಿಳಿಯಬೇಡ.'

'ಶಿಕ್ಷೆಯಲ್ಲ, ತಿತಿಕ್ಷೆ ಮತ್ತು ವೀರದೀಕ್ಷೆ!'

'ದೇವಿಯನ್ನು ಕರೆದೊಯ್ಯುವುದಾದರೆ, ನಾನು ಜೊತೆಗೆ ಬರುತ್ತೇನೆ.'

'ಸೀತೆ ನನ್ನನ್ನು ಗೆದ್ದಳು. ಅದರಿಂದ ಅವಳಿಗೆ, ರಾಮನನ್ನು ಯುದ್ಧದಲ್ಲಿಗೆದ್ದು ತಂದು ಕಪ್ಪವಾಗಿ ಕೊಡುತ್ತೇನೆ!'

'ರಾಮನು ಅಪ್ರಾಕೃತ. ಅವನನ್ನು ಎದುರಿಸಲು ಮುಕ್ತಿಯಲ್ಲದೆ ಬೇರೆ ಜಯ ಉಂಟೆ?'

'ಯುದ್ಧದಲ್ಲಿ ಅವನನ್ನು ಸೋಲಿಸದೆ ನನಗೆ ಮುಕ್ತಿ ಲಭಿಸುತ್ತದೆಯೆ? ನನಗೆ ವರವನ್ನು ನೀಡಿದ ಮಹೇಶ್ವರಿಯ ನಾಲಗೆ ಸತ್ಯದ ತವರು. ಅದು ಎಂದೂ ಸುಳ್ಳಾಗದು!'

'ಸುಳ್ಳಾಗದಿದ್ದರೂ ಅದು ಅನಂತಮುಖಿ! ನಾವು ಒಂದು ಬಗೆಯಲ್ಲಿ ಆಶಿಸಿದರೆ ಅದು ಬೇರೊಂದು ರೀತಿಯಲ್ಲಿ ನಮ್ಮ ಊಹೆಗೆ ಹೊಂದಿಕೆಯಾಗದ ಹಾಗೆ ತನ್ನ ಇಚ್ಛೆಯನ್ನು ಕೈಗೂಡಿಸಿ ನಡೆಸುತ್ತದೆ.'

ಅಮಂಗಳ ಮನೋರಥವನುಳಿದ ಶುದ್ಧಬುದ್ಧಿಯಿಂ ಶುದ್ಧನಾನುಂ.

'ನೀನು ಪತಿವ್ರತೆ. ನಾನು ಅಮಂಗಳ ಮನೋರಥವನ್ನು ಬಿಟ್ಟು, ಶುಭಬುದ್ಧಿಯಿಂದ ಶುದ್ಧನಾಗಿದ್ದೇನೆ. ಜಗನ್ಮಾತೆ ವರವನ್ನು ನೀಡಿದ್ದಾಳೆ. ಇನ್ನೇಕೆ ಚಿಂತೆ? ನೋಡು, ಮೂಡಲ ದಿಕ್ಕಿನಲ್ಲಿ ಆಸೆಯರೀತಿ ಕೆಂಪು ಕಣ್ಣು ತೆರೆಯುತ್ತಿದೆ. ನಾನು ಇಂದು ಏಕಾಂಗಿಯಾಗಿ ಕಾಳಗಕ್ಕೆ ನಡೆಯುತ್ತೇನೆ. ನನ್ನ ಗುರಿ ಕೊಲ್ಲುವುದಲ್ಲ. ಸೀತೆಯ ಶುಭೋದಯಕ್ಕೆ ಗೆಲ್ಲುವುದಲ್ಲದೆ, ನನಗೆ ಗುರಿ ಕೊಲ್ಲುವುದಲ್ಲ.'

'ಈ ಹೃದಯ ಪರಿವರ್ತನೆಯು ವೈರಿಗೆ ತಿಳಿಯದು!'

'ತಿಳಿಯಬಾರದೆಂಬುದೇ ವೀರತೆಗೆ ದೀಕ್ಷೆ! ಅದನ್ನು ಹೇಳಿದರೆ ಯಾರೂ ನಂಬುವುದಿಲ್ಲ! ಮಹಾರಾಣಿಯೆ, ನನಗೆ ಅದನ್ನು ಹೇಳುವುದು ಹೇಡಿತನವೆನಿಸುತ್ತದೆಯೆ

ಹೊರತು, ಬೇರೆ ಪ್ರಯೋಜನ ಕಾಣಿಸುತ್ತಿಲ್ಲ. ಈ ಪ್ರತಿಜ್ಞೆಯನ್ನು ಯಾರಿಗೂ ಹೇಳಬೇಡವೆಂದು ನಾನು, ನಿನ್ನಲ್ಲಿ ಬೇಡಿಕೊಳ್ಳುತ್ತೇನೆ. ನನ್ನ ಈ ದಿವ್ಯರಹಸ್ಯವು ಹೃದಯ ಗುಹೆಯಲ್ಲಿ ಭವ್ಯಕೃತಿಯಾಗಿರಲಿ . ಈ ಪ್ರತಿಜ್ಞೆ ಕೈಗೂಡಿದರೆ ಅದು ಮೂರು ಲೋಕಕ್ಕೂ ತಿಳಿಯುತ್ತದೆ. ಅಲ್ಲದಿದ್ದರೆ ಹೋಗು, ಹೇಳಿದ ನೀನೇ ನಗೆಗೆ ಈಡಾಗುವೆ! ಆ ಅಣಕವನ್ನು ಮಾತ್ರ ನಾನು ಸಹಿಸಲಾರೆ! ಹೋಗು, ರಾಮನನ್ನು ಗೆದ್ದು ಸೆರೆಹಿಡಿದು ತರುವವರೆಗೂ ಸೀತೆಯನ್ನು ಸೇವಿಸುತ್ತಿರು!'

ಆ ನುಡಿ ಕೇಳಿ ಮನಸ್ಸು ತುಂಬಿಬಂದು ಮಂಡೋದರಿಯು ತಲೆಯನ್ನು ಅವನ ಅಡಿಗಳಲ್ಲಿಟ್ಟು ನಮಿಸಿದಳು. ಪತಿಚರಣ ಧೂಳನ್ನು ಶಿರದಲ್ಲಿ ಧರಿಸುತ್ತ,

'ನಿನ್ನ ಈ ಪವಿತ್ರತಮವಾದ ವಿಜಯಯಾತ್ರಾ ರಣಕ್ಕೆ ಗೆಲುವಾಗಲಿ.' ಎಂದು ಹೃದಯದಾಳದಿಂದ ಶುಭನುಡಿಯುತ್ತ, ಕಣ್ಣಿನ ಹನಿಗಳು ಉರುಳುತ್ತಿರಲು ಲಂಕಾ ಮಹಾರಾಣಿಯು ತನ್ನ ಇನಿಯನನ್ನು ಬೀಳ್ಕೊಟ್ಟಳು!

ನೇಸರನು ಇರುಳಿನ ಅಂಬರದ ಅಂಚಿನಲ್ಲಿ ಉದಯ ದಿಕ್ಕಿನ ರೇಖೆಯನ್ನುಕೆತ್ತಿ ಬಿಡಿಸಿದನು. ಅದು ಉಷಾ ಆಗಮನಕ್ಕೆ ಕಟ್ಟಿದ ಒಸಗೆಯ ತೋರಣದಂತಿತ್ತು. ತ್ರಿಕೂಟಾದ್ರಿ ಶಿಖರ ಮಂದಿರದಲ್ಲಿ ಎತ್ತರದಲ್ಲಿದ್ದ ದಶಕಂಠನು ಆ ದಿವ್ಯ ದೃಶ್ಯಾವತರಣವನ್ನು ದೀರ್ಘಕಾಲ ನೋಡಿದನು. ತನಗೆ ತಾನೆ ಹೀಗೆಂದುಕೊಂಡನು:

'ಇದೇನಿದು ಹಿಂದೆಂದೂ ನನಗೆ ಉದಯಕಾಲ ಈ ರೀತಿ ಸೊಗಸಾಗಿ ಕಂಡಿಲ್ಲವೆಂಬಂತೆ–ನನ್ನ ಅಂತರಾತ್ಮವನ್ನು ಬೆಳಗುತ್ತಿದೆ? ಜೇನುಮಳೆಯೆ ಕರೆಯುತ್ತಿದೆ! ಹಾಲಿನಹೊಳೆ ನಾಳನಾಳದಲ್ಲಿ ಹರಿದು ಅಮೃತತ್ವವನ್ನು, ಶಾಂತಿಯನ್ನು, ವೀರ್ಯವನ್ನು, ಶಕ್ತಿಯನ್ನು, ತೇಜವನ್ನು, ಸಾವಿನ ಆನಂದವಿಲಾಸದ ಮಧುರ ಚೈತನ್ಯವನ್ನು ಹರಿಸುತ್ತಿದೆ!'

❑



~~~~~~~~~~~~~~~~~~~~~~~~ ಸಂಚಿಕೆ – ೮ ~~~~~~~~~~~~~~~~~~~~~~~~

അരാവണം വാ അരാമം ദിടം !

ಕೃಷ್ಣ ಪಕ್ಷದ ಪಂಚದಶಿಯಂದು ಹೊನ್ನಿನ ಕಿರಣಗಳಿಂದ ಇಳೆಯನ್ನು ಆಶೀರ್ವದಿಸಿ ಪೂರ್ವಾಚಲವನ್ನು ಏರಿ ದಿಗಂತ ರವಿ ಬಂದನು. ಲೋಕಕ್ಕೆ ನವೀನ ಆನಂದವನ್ನು ಸಿಂಪಡಿಸಿದನು. ದೈತ್ಯೇಂದ್ರನ ಆಜ್ಞೆಯಿಂದ ಸಮರ ಸಮಿತಿ ಸಭೆ ಸೇರಿತು. ರಾಕ್ಷಸ ಕುಲೇಶ್ವರನು ಕನಕ ಸಿಂಹಾಸನವನ್ನು ಏರಿ ಕುಳಿತನು. ತನ್ನ ಆತ್ಮದ ಒಳತೋಟಿಯನ್ನು ಒಂದಿನಿತು ಇಂಗಿತದಲ್ಲಿಯೂ ವ್ಯಕ್ತಪಡಿಸದೆ, ಧೀರ ಮುಖಮುದ್ರೆಯಿಂದ ಸಚಿವ ಸಭೆಗೆ ತನ್ನ ನಿರ್ಣಯವನ್ನು ಹೀಗೆ ಅಪ್ಪಣೆಯಾಗಿ ನೀಡಿದನು.
~~~~~~~~~~~~~~~~~~~~~~~~

ಏಕಾಂಗಿ, ವೈರಿಯನಿದಿರ್ಚಿದಪೆನಾಂ, ಶೂರನಸಹಾಯಿ.

'ಸೇನಾನಿಗಳಿರ, ರಣದಕ್ಷರಿರ, ಕಲಿಗಳಿರ, ಶಸ್ತ್ರಾಸ್ತ್ರ ಸಮರ ಪ್ರವೀಣರಿರ, ರಾಕ್ಷಸ ಕುಲಾಭ್ಯುದಯ ಸಾಗರ ಚಂದ್ರರಿರ, ನಿಮ್ಮ ಶಕ್ತಿಗೆ ಲಂಕೆ ಋಣಿ; ಸ್ವಾಮಿಭಕ್ತಿಗೆ ನಾನು ಋಣಿ. ನನಗೆ ಮತ್ತು ಲಂಕೆಗೆ ಯುದ್ಧರಂಗದಲ್ಲಿ ಇದುವರೆಗೆ ಎಷ್ಟೋ ಬಲಿಗಳಾಗಿ ಹೋಗಿವೆ. ಇನ್ನು ಆಗುವುದಿಲ್ಲ. ನನಗೆ ಕಳೆದ ರಾತ್ರಿ ಲಂಕಾದೇವಿಯಿಂದ ಆಜ್ಞೆಯಾಗಿದೆ. ಇನ್ನು ಉಳಿದುದು ನನ್ನೊಬ್ಬನದೇ ಕೆಲಸ. ಇಂದು ಅದನ್ನು ಓರ್ವನೆಯೆ ನೆರವೇರಿಸುತ್ತೇನೆ. ನಾನು ಏಕಾಂಗಿಯಾಗಿ ಅಸಹಾಯಶೂರನಾಗಿ ವೈರಿಯನ್ನು ಎದುರಿಸುತ್ತೇನೆ. ಲೋಕದ ಚರಾಚರ ಶಕ್ತಿಗಳು ಆಶ್ಚರ್ಯ ಚಕಿತರಾಗಿ ಮೂಗಿನ ಮೇಲೆ ಬೆರಳಿಟ್ಟು ನೋಡುವಂತೆ, ವೈರಿಸೈನ್ಯಕ್ಕೆ ಜಗತ್‌ಪ್ರಲಯನಾಗಿ ಕಾದಾಡುತ್ತೇನೆ.

'ಈ ದಶಗ್ರೀವನ ಕಾಲರುದ್ರನ ಯುಗಕ್ಷಯ ರೌದ್ರ ರಣನಾಟ್ಯವನ್ನು ಪ್ರೇಕ್ಷಕರಂತೆ ನೋಡುತ್ತಿರಿ. ಇದನ್ನು ಬರಿಯ ವಿನೋದವೆಂದು ತಿಳಿಯದಿರಿ. ನಾನು ಈಗ ಹೇಳಿದುದೆಲ್ಲವು ರಾಜಾಜ್ಞೆ!

'ಇಂದು ಯುದ್ಧಭೂಮಿಗೆ ನನ್ನೊಡನೆ ಪರಿವಾರವಲ್ಲದೆ, ಬೇರೆಯಾರೂ ಆಯುಧವಿಡಿದು ಬರಬಾರದು. ಇಂದು ಲೋಕತ್ರಯ ರಾಮರಾವಣ ಮಹೋಗ್ರ ಸಂಗ್ರಾಮವನ್ನು ನೀವು ಪ್ರೇಕ್ಷಕರಾಗಿ ನಿಂದು, ರಸದಲ್ಲಿಮಿಂದು ನೋಡಿ. ನೀವು ಸಾಕ್ಷಿಗಳಂತೆ ಇದ್ದು ಕಣ್ಣಿಗೆ ಮೋಕ್ಷವೆಂಬಂತೆ ನೋಡಿರಿ. ಇದು ಇಂದೇ ಮೊದಲು, ಇಂದೇ ಕಡೆ. ಹಿಂದಿಲ್ಲ ಮುಂದೆ ಇಂಥದು ಇರುವುದಿಲ್ಲ! ಇಂಥಹದನ್ನು ನೋಡುವುದು ಸೂಕ್ತ. ಇಲ್ಲದಿದ್ದರೆ ಇದರಿಂದ ಶಾಶ್ವತವಾಗಿ ವಂಚಿತರಾಗಿ, ನೀವು ಬದುಕಿದ್ದೂ ಸತ್ತಂತೆ!'

ಸಂಖ್ಯೆಗಾನೊರ್ವನೆಯೆ ಪೋದೊಡಂ, ಕಳಕೆ ನಾಂ ಶಕ್ತಿಯಿಂ ದಿಟಮಸಂಖ್ಯನ್!

ರಾಕ್ಷಸ ರಾಜರಾಜೇಂದ್ರನ ಆ ವೀರ ವಾಗ್‌ವಿಲಾಸವನ್ನು ಕೇಳಿ ಸಭೆಯು ಮೂಕವಿಸ್ಮಯವಾಯಿತು. ಮೌನ ಸಾಗರದಲ್ಲಿ ಮುಳುಗಿತು. ಅವರಿಗೆ ಮನಸ್ಸಿದ್ದರೂ ಪ್ರತಿಯಾಗಿ ಮಾತನಾಡಲು ಎದೆಯುಂಟೆ? ಸಭೆಯ ಹೃದಯವನ್ನು ಅರಿತ ಅಸುರೇಂದ್ರನು ಉತ್ತರಕೊಡುವ ಮೊದಲು ತಾನೆ ಆ ಪ್ರಶ್ನೆಯನ್ನು ಎತ್ತಿದನು.

'ನಿಮ್ಮ ಎದೆಯಲ್ಲಿ ಏಳುವ ಚಿಂತಾತೆರೆಗಳಿಗೆ ನನ್ನ ಮನಸ್ಸು ಸ್ಪಂದಿಸುವುದು. ಆದರೆ ನನಗೆ ಇಂದು, ನಿಮಗೆ ಹೇಳಿದುದನ್ನುಬಿಟ್ಟು ಬೇರೆ ಮಾರ್ಗ ಕಾಣುತ್ತಿಲ್ಲ. ಲಂಕೆಯಲ್ಲಿ ಪರಾಕ್ರಮಿಗಳಿಲ್ಲವೆಂದು, ಮರಣಕ್ಕೆ ಅಂಜುವಿರೆಂದು, ಯುದ್ಧಕ್ಕೆ ಮನಸ್ಸಿಲ್ಲವೆಂದು ಮತ್ತು ಕ್ಷಾತ್ರತೇಜಸ್ ನದಿಯ ನೀರು ವೈರಿಯವೀರ ವೈಶಾಖದ ಬಿಸಿಲಿಗೆ ಆರಿದೆಯೆಂದು ಹೇಳುತ್ತಿಲ್ಲ. ನಿಮ್ಮ ಕೀರ್ತಿಯ ಕಾಮಧೇನುವಿನ ಅಮೃತವನ್ನು ನಾನೊಬ್ಬನೆ ಕುಡಿಯುವ ಲೋಭತನದಿಂದ ಈ ಬಗೆಯ ಯುದ್ಧವನ್ನು ಹೇಳುತ್ತಿಲ್ಲ.

ಈ ಮನೋನಿಶ್ಚಯದಲ್ಲಿ ಒಂದು ರಹಸ್ಯವಿರುವುದು ನಿಜ. ಅದನ್ನು ನೀವು ತಿಳಿಯಬಾರದು. ನಾನು ಹೇಳಬಾರದು! ನಾನು ಈಗ ಹೇಳದಿದ್ದರೂ ನೀವು ಅದನ್ನು ನಾಳೆ ತಿಳಿಯಬಹುದು. ವಿಜಯಧ್ವಜವು ನಗರ ಗೋಪುರ ಏರಿ, ಲೋಕದ ಅದ್ಭುತ ವಾರ್ತೆಯನ್ನು ಕೂಗಿ ಹೇಳಿ ಬಾನೆಡೆಗೆ ತಲೆಯೆತ್ತಿ ಅದರ ಔನ್ನತ್ಯವನ್ನು ತೋರಿ ಹಾರಾಡುವ ವೇಳೆಯಲ್ಲಿ...

'ನನ್ನ ಜೀವಕ್ಕಾಗಿ ಚಿಂತಿಸಬೇಡಿ. ವಿಧಿಯ ವಜ್ರಹಸ್ತದಲ್ಲಿರುವ ಉತ್ತಮಲೋಹದ ಕಂಬಿಗಳಿಂದ ಮಾಡಲಾದ ಪಂಜರದಲ್ಲಿರುವ ಪಕ್ಷಿಯಾದ ನಾನು ಯಾವಾಗಲೂ ಸುರಕ್ಷಿತ, ಸುಕ್ಷೇಮಿ. ನನ್ನ ತಪಸ್ಸಿಗೆ ಮೆಚ್ಚಿದ ಬ್ರಹ್ಮನು ವರಬಲಗಳಿಂದ ನನ್ನನ್ನು ಅಜೇಯನನ್ನಾಗಿಸಿದ್ದಾನೆ. ದಿವ್ಯ ರಥ, ದಿವ್ಯ ಅಶ್ವ, ದಿವ್ಯ ಧನುಸ್ಸು, ದಿವ್ಯ ಖಡ್ಗ, ದಿವ್ಯ ಕವಚ, ಮಂತ್ರಾಸ್ತ್ರ ಶಸ್ತ್ರಗಳನ್ನು ಹೊಂದಿರುವ ನನ್ನನ್ನು ಯಾರೂ ಸೋಲಿಸಲಾರರು. ರುದ್ರನೇ ತೋಳುತಟ್ಟಿ ಬಂದರೂ ಜಯಿಸಲಾರನು! ಜೊತೆಗೆ ಸಮರಕಾಳಿಗೆ ಅರ್ಪಿಸಲು, ಒಂದು ಉರುಳಲು ಇನ್ನೊಂದು ಎಂಬಂತೆ ಹತ್ತು ತಲೆಗಳಿವೆ. ಯುದ್ಧಕ್ಕೆ ಲೆಕ್ಕದಲ್ಲಿ ನಾನೊಬ್ಬನೇ ಹೋದರೂ, ಶಕ್ತಿಯಿಂದ ಅಸಂಖ್ಯನು!

'ನಡೆಯಿರಿ, ಈಗಲೇ ಆ ಬ್ರಹ್ಮನು ನೀಡಿರುವ ತೇರು, ಕುದುರೆ, ಬಿಲ್ಲು, ಕತ್ತಿ, ಕವಚ, ಗುರಾಣಿ, ಬತ್ತದ ಬತ್ತಳಿಕೆ ಮತ್ತು ಬಾಣಗಳನ್ನು ಪೂಜಿಸಿ ಅಣಿಮಾಡೋಣ. ಅನಂತರ ನೀವು ಎತ್ತರದ ಕೊತ್ತಳಗಳನ್ನು ಹತ್ತಿ ನೋಡುತ್ತಿರಿ, ನಾನು ಸಾವಿಗೆಕೊಡುವ ಕಾಣಿಕೆಯನ್ನು; ಮತ್ತೆ ನೋಡುವ ಕಣ್ಣುಗಳಿಗೆ ನೀಡುವ ಹಬ್ಬದ ಔತಣವನ್ನು.'

ರಾಕ್ಷಸ ಪುರೋಹಿತರು ಆಯುಧಾಗಾರದಲ್ಲಿ ಆಯುಧರೂಪಿ ದುರ್ಗೆಗೆ ರಕ್ತಬಲಿಗಳಿಂದ ನೈವೇದ್ಯ ಅರ್ಪಿಸಿದರು. ಆರತಿಗಳೆತ್ತಿದರು. ವಾದ್ಯಗಳು ಮೊಳಗಲು, ಘಂಟೆ ಜಾಗಟೆಗಳ ಶಬ್ದಕ್ಕೆ ದಿಗ್ಗಜಗಳು ಬೆರಗಾಗಿ ಕಿವಿಗೊಟ್ಟವು. ಪುರೋಹಿತರು ಸಾಲಾಗಿ ನಿಂತು ಹೀಗೆ ಒಕ್ಕೊರಲಿನಿಂದ ಹಾಡಿದರು:

'ಏಳ್, ಸರ್ವಶಕ್ತಿ ಸ್ವರೂಪಿಣಿಯೆ, ಏಳ್!
ಏಳ್ ಶತ್ರು ಹೃದ್ರಕ್ತ ಪಾನ ಗೈಯಲ್ಕೆ ಏಳ್!
ಏಳ್, ಲಂಕೆ ಬಾಳಲ್ಕೆ! ಏಳ್, ವೈರಿನಾಶಕ್ಕೆ!
ಏಳ್ ದೈತ್ಯ ನೃಪಚಂದ್ರ ರಾವಣಶ್ರೇಯಕ್ಕೆ!
ಏಳ್ ನರಾಧಮ ಕಪಿಪ್ರಾಣಾಪಹಾರಕ್ಕೆ!
ನೀನೆ ಹೃದಯದಿ ಧೈರ್ಯ! ನೀನೆ ಚಿತ್ತಸ್ಥೈರ್ಯ!
ನೀನೆ ತೇಜಂ ಬಾಳ್ಗೆ! ನೀನೆ ವೀರ್ಯಂ ತೋಳ್ಗೆ!
ನೀನೆ ಪ್ರಾಣದೊಳೊಲ್ಮೆ! ನೀನೆ ಬಾಣದಿ ಬಲ್ಮೆ!
ಚಾಪದೊಳ್ ಶಕ್ತಿ ನೀಂ! ಕಲಿಯಚಲ ಭಕ್ತಿ ನೀಂ!

ರಣದೊಳಾಸಕ್ತಿ ನೀಂ! ತೇರ್ ಕುದುರೆ ಶಕ್ತಿ ನೀಂ!
ಏಳ್, ಕಾಳಿ! ಏಳ್, ಚಂಡಿ! ಏಳ್ ದುರ್ಗೆ, ಚಾಮುಂಡಿ!
ಏಳು, ರಣಚಂಡಿ, ಏಳ್! ಏಳ್! ಏಳ್! ಏಳ್!'

ವಾದ್ಯಗಳು ಘೋಷಿಸುತ್ತಿರಲು, ಹೋಮಾಗ್ನಿಗಳು ಜ್ವಲಿಸಿ ಧೂಪಧೂಮಗಳು ಅಂಬರವನ್ನು ವ್ಯಾಪಿಸಿದವು.

ಖಡ್ಗಗಳು ಕಾಂತಿಯನ್ನು ಕಾರಿದುವು. ಬಿಲ್ಲುಬಾಣಗಳು ಮರ್ಮದೀಪ್ತಿಯಿಂದ ಶೋಭಿಸಿದವು. ಬತ್ತಳಿಕೆಗಳಲ್ಲಿ ಬಾಣಗಳು ಪ್ರಾಣಪಡೆದಂತೆ ಬೆಳಗಿದವು. ದಿವ್ಯ ಚೈತನ್ಯ ಉಂಟಾಯಿತೆಂಬಂತೆ ರಥವು ರಂಜಿಸಿತು. ಅದರ ಮುಂಭಾಗಕ್ಕೆಕಟ್ಟಿದ ಕುದುರೆಗಳ ಕೆನೆತ ತರಂಗದ ತಾಡಿತವು ದೇವತೆಗಳಿಗೆ ಭಯರಸವನ್ನುಂಟು ಮಾಡಿತು! ಕುದಿತಕ್ಕೆ ಒಳಗಾದಂತ ಸಪ್ತಸಾಗರ ಚೈತನ್ಯವು ಮಲಗಿ ನಿದ್ರಿಸುತ್ತಿದ್ದ ಪರ್ವತಗಳನ್ನು ಕೂಗಿ ಕರೆಯಿತು:

'ಬೇಗ ಏಳಿ ಹೋಗೋಣ. ದೇವತೆಗಳನ್ನು ಅಡಿಯಾಳುಗಳನ್ನಾಗಿಸಿದ ಜಗತ್‌ಭೀಕರ ದಶಾನನು ಪೃಥ್ವಿಯ ಎದೆ ನಡುಗಿಸಲು ತೇರೇರುತ್ತಿದ್ದಾನೆ. ಮೂರುಲೋಕಗಳಿಗೆ ಅದ್ಭುತವನ್ನುಂಟು ಮಾಡಲು ವೈರಿ ಮಥನನು ರಣದೀಕ್ಷಿತನಾಗಿದ್ದಾನೆ! ದಶರಥಪುತ್ರ ರಾಮಚಂದ್ರನ ತೋಳುಗಳಿಗೆ ನೀವು ಸ್ಥೈರ್ಯವಾಗಿ; ನಾನು ಅವನ ಎದೆಗೆ ಧೈರ್ಯವಾಗುತ್ತೇನೆ!'

ದಶಾನನನ ಬಂಗಾರದ ಮನೋಹರ ಬೃಹತ್‌ರಥವು ಮೂಡಲಸೂರ್ಯನ ಕಿರಣಗಳನ್ನು ಪ್ರತಿಫಲಿಸುತ್ತ, ಸುವರ್ಣಬೆಟ್ಟದ ಶಿಖರದಂತೆ ಶೋಭಿಸುತ್ತಿತ್ತು. ಆ ರಥದ ನೊಗಗಳನ್ನು ಬೆಳ್ಳಿಯ ಗಿರಿಯಂತ ಶ್ವೇತ ಅಶ್ವಗಳು ಸಿಂಗರಿಸಿದ್ದವು. ಸಲಗವನ್ನು ಸುತ್ತಿಬರುವ ಇತರ ಆನೆಗಳಂತೆ ಸಮರೋಪಕರಣಗಳನ್ನು ಹೊತ್ತು ಇತರತೇರುಗಳು ಸಾಲ್ಗೊಂಡು ಬಂದವು. ನೆತ್ತರಿನ ಓಕುಳಿಯ ಬಣ್ಣಗಳನ್ನು ಎರಚಿ ದಿಕ್ಕಿನ ಮುಖವು ಕೆಂಪೇರುವಂತೆ–ನರ ರುಂಡ ಮಾಲಾ ಚಂಡಿಕಾ ಧ್ವಜವು ಮುಗಿಲಿನಲ್ಲಿ ಹಾರಾಡುತ್ತಿತ್ತು. ಧನುರ್ಬಾಣ ಮಂತ್ರಾಸ್ತ್ರಗಳು, ಶಸ್ತ್ರಗಳು, ಶಕ್ತಿ ತೋಮರ ಪರಿಘ ಪರಶುಗಳು, ಪಟ್ಟಸ ಮುಂತಾದ ಇತರ ನಾನಾ ಆಯುಧ ಸಮೂಹಗಳು ರಾಶಿರಾಶಿಗೂಡಿ ಭೀಕರವಾಗಿದ್ದವು. ಆ ಆಯುಧಗಳ ಒಂದೊಂದು ತೇರು ಆಯಾ ಕುಲದ ಆಯುಧಕ್ಕೆ ತಾನು ನೆಲೆ ಎನ್ನುವಂತೆ ಭಯಂಕರವಾಗಿದ್ದವು. ಅವುಗಳನ್ನು ನೋಡುವ ಕಣ್ಣುಗಳು ಭೀತಿಗೊಂಡು ಸೆಡೆತು ಕಣ್ಣೆವೆಗಳನ್ನು ಮುದುರಿಕೊಂಡು ಗೂಡಿನಲ್ಲಿಯೇ ಅಡಗಿಕೊಳ್ಳುವಂತಿದ್ದವು.

ಸಂಗ್ರಾಮ ನಾಟಕದ ಪ್ರಸ್ತಾವನೆಗೆ ನಾಂದಿಯೆನ್ನುವಂತೆ ಮಂಗಳ ಮಧುರ ಗಾಯನ, ತೂರ್ಯಗಳು ಮೊಳಗುತ್ತಿರಲು, ರಾವಣನು ಮಂದಾರ ಕುಸುಮ ಹಾರ

ಸುಶೋಭಿಯಾದನು. ರಣವಸನ ಭೂಷಣನಾದ ಆ ಭಯಂಕರ ಭವ್ಯಗಾತ್ರನಿಗೆ ಸುಂದರಿಯರು ಆರತಿಯನ್ನು ಎತ್ತುತ್ತಿರಲು ಅದರ ಹೊಳಪಿನ ಅವನ ಹಣೆಯ ಕುಂಕುಮ ಬಿಂದುವು ಹಣೆಗಣ್ಣಾಗಿತ್ತು! ಮತ್ತು ಬಂಗಾರದಂತೆ ಹೊಳೆಯುವ ವಸ್ತ್ರಶಸ್ತ್ರಗಳು ವೈರಿಗೆ ಒಡ್ಡಿದ ಚಿತೆಯಂತೆ ಉರಿಯುತ್ತಿದ್ದವು! ಆ ರಾಕ್ಷಸ ಕಲಾವರೇಣ್ಯ; ಮಹಾರಥಿ, ವೈರಿಗಳನ್ನು ಮಥಿಸುವ ಮಂದರಪರ್ವತ, ವೈರಿ ಭೈರವ, ಯುದ್ಧರುದ್ರ ಶುಭ ಮುಹೂರ್ತದಲ್ಲಿ ರಥವನ್ನು ಏರಿದನು!

ಸೂತನು ರಥದಕುದುರೆಗಳನ್ನು ಪ್ರಚೋದಿಸಲು ಅವು ಲಂಕಾಧರಿತ್ರಿಯ ಎದೆ ನಡುಗುವಂತೆ ಕೆನೆದು ಕುಪ್ಪಳಿಸಿದವು. ಮತ್ತು ಅಯೋಧ್ಯೆಯಲ್ಲಿ ಸರಯೂ ನದಿಯ ಜಲವು ಕಳವಳಿಸುತ್ತ ತೀರಪ್ರದೇಶವನ್ನು ಅಪ್ಪಳಿಸಿತು! ರಥವು ಕೋಟೆಬಾಗಿಲು ದಾಟಿ ಉತ್ತರದ ರಣಕ್ಷೇತ್ರದತ್ತ ನಡೆಯಿತು.

ಕಾಣ್ ಚಂಡಿಕಾ ಧ್ವಜಂ. ಇದೆ ಕಣಾ ದೈತ್ಯೇಂದ್ರ ರಾವಣ ವರೂಥಂ!

ದೈತ್ಯ ಚಕ್ರವರ್ತಿಯ ರಥವು ಪರಿವಾರಮಾತ್ರದ ತೇರುಗಳೊಡನೆ ವೇಗವಾಗಿ ಬರುತ್ತಿರುವುದನ್ನು ಕಂಡು ಕಪಿಸೈನ್ಯವು ಆಶ್ಚರ್ಯಕ್ಕೊಳಗಾಯಿತು. ವಾನರ ಮಹಾಸೈನ್ಯದ ವ್ಯೂಹ ಮುಖದಲ್ಲಿದ್ದ ದಳಪತಿ ದರೀಮುಖನು,

'ನೋಡಿ ಚಂಡಿಕಾ ಧ್ವಜವನ್ನು. ಇದೇ ದೈತ್ಯೇಂದ್ರ ರಾವಣನ ರಥ! ವಿಭೀಷಣ ಹೇಳಿದ್ದು ಸರಿ. ನಿನ್ನೆ ಬಹುರೂಪಿಯಾಗಿ ಕಾಳಗವನ್ನೂಡಿದವನು ಇಂದು ಏಕಾಂಗಿಯಾಗಿ ಕಂಡುಬರುತ್ತಿದ್ದಾನೆ ನೀಚ! ಮತ್ತೆ ಇದೇನು ವಂಚನೆಯೊ? ತಡಮಾಡದೆ ನುಗ್ಗಿ ಅಸುರನನ್ನು ತಡೆಯಿರಿ!'

ಎಂದು ಹೇಳಿ, ತನ್ನ ಪಡೆಗೆ ಕೈಬೀಸಿ ಆಜ್ಞೆ ಮಾಡಿದನು. ಅವನು ರಾವಣ ಉಲ್ಕೆಯ ಮರಣಮಯ ಪಥಕ್ಕೆ ತಾನೇ ಮುಂದೆ ನುಗ್ಗಿದನು. ಗದೆಯೆತ್ತಿ ರಥದಕಡೆ ನಡೆದನು. ಇಂದಿನ ಮಹಾಕಾಳಗ ಹಿಂದಿನ ಕದನದಂತೆ ಇರುತ್ತದೆಯೆ? ನೋಡು, ಇದು ಬಡಿಗೆ ಬಡಿದು ಸಾಯುವ ರೀತಿಯದಲ್ಲ; ಬರಸಿಡಿಲು ತಾಗಿದೊಡನೆ ಪ್ರಾಣವನ್ನು ಹೀರುವ ರೀತಿಯದು!

ದಶಮುಖನು ಬಿಟ್ಟಬಾಣವು ದರೀಮುಖನ ಗದೆಯನ್ನು ಸೀಳಿತು. ಎತ್ತಿದತೋಳುಗಳನ್ನು ಕತ್ತರಿಸಿ, ಕಣ್ಣನ್ನು ತೋಡಿ, ತಲೆಯನ್ನು ಹೊಕ್ಕಿತು. ತಲೆಯ ಚಿಪ್ಪೊಡೆದು ನೆತ್ತರುಕಾರಿ ಮಿದುಳು ದಿಕ್ಕುದೆಸೆಗೆ ಸಿಡಿದು. ದೊಪ್ಪನೆ ಬಿದ್ದು, ಕೈಕಾಲು ಒದರಿ ಭಯಂಕರ ವೀರ ವಾನರನು ಶವನಾದನು! ಸ್ವಾಮಿಯು ಸತ್ತ ತಕ್ಷಣ ವಾನರ ಸೇನೆಯು, ಕೂಡಿಟ್ಟ ತುಪ್ಪಕ್ಕೆ ಕೊಳ್ಳೆಬಂದಾತನನ್ನು ಜೇನುಹುಳುಗಳು ಮುತ್ತುವಂತೆ ದೈತ್ಯನ ರಥವನ್ನು ಮುತ್ತಿದವು.

ರಾವಣನು ತಾಮಸಾಸ್ತ್ರವನ್ನು ಪ್ರಯೋಗಿಸಲು ಅದರ ಕಿಚ್ಚಿಗೆ ದರೀಮುಖನ ದಳವೆಲ್ಲವೂ ಆಹುತಿಯಾಯಿತು. ಅಂತಕ ಭಯಂಕರನು ಮುಂದೆ ನುಗ್ಗಿದನು. ಆಗ ದೈತ್ಯ ಹುಲಿಯ ಉಗುರಿನ ಭಯಕ್ಕೆ ದನಗಳಿಂಡು ಓಡುವಂತೆ, ವಾನರರು ಹಿಂಜರಿದು ಸರಿದು ಓಡತೊಡಗಿದರು. ಅವರ ಪದಧೂಳಿ ಆಕಾಶವನ್ನು ಕವಿಯಿತು! ತಾಮಸಾಸ್ತ್ರವು ಆಕಾಶ ಭೂಮಿಗಳಲ್ಲೆಲ್ಲಿಯೂ ವಾನರ ಪ್ರಾಣಗಳನ್ನು ಹೀರಿ, ರಿಂಗಣ ಕುಣಿತದಿಂದ ದುರ್ಮರಣ ತಂದಿತು. ಅದನ್ನು ನೋಡಿದ ಅಂಗದ ಆಂಜನೇಯಾದಿ ಕಪಿಶ್ರೇಷ್ಠರು ನೀಲ ನಳ ಜಾಂಬವರ ಜೊತೆಗೂಡಿ, ಕೆಟ್ಟು ಕೆದರಿ ಓಡುತ್ತಿದ್ದ ಸೈನಿಕರನ್ನು ಕರೆಕರೆದು, ಧೈರ್ಯವನ್ನು ನೀಡಿ ಹುರಿದುಂಬಿಸುವ ಕೆಲಸ ಮಾಡಿದರು. ಅವರು ರಾವಣನ ತೇರಿಗೆ ಎದುರಾಗುತ್ತಿದ್ದುದನ್ನು ನೋಡಿದ ರಾಮಭದ್ರನು ಸುಗ್ರೀವನನ್ನು ಕರೆದು ಹೀಗೆ ಹೇಳಿದನು:

ಇಂದಿನಾಹವಮೆನಗೆ ಮುಡಿಪಲ್ತೆ?

'ಕಪಿನೃಪೋತ್ತಮನೇ, ಆ ಅಸೀಮ ಸಾಹಸಿಗಳಿಗೆ ನಿಲ್ಲಲು ಹೇಳು! ನಳ ನೀಲ ಜಾಂಬವ ಅಂಗದ ಹನುಮ ವೃಂದಾ ಮುಂತಾದ ವೀರರು ಇಂದು ಈ ಮಹಾ ದೈತ್ಯ ರಣರುದ್ರನನ್ನು ಕೆಣಕಿ ಜೀವಸಹಿತ ಹಿಂತಿರುಗಲು ಶಕ್ತರಲ್ಲ! ಹೀಗಿರಲು ಮತ್ತೆ ಏತಕ್ಕೆ ಇತರರನ್ನು ಈ ರೀತಿ ಸುಮ್ಮನೆ ಕುರಿಗೊಲೆಗೆ ನೂಕುತ್ತಿರುವರು? ಇಂದಿನ ಯುದ್ಧವು ನನಗೆ ಮುಡಿಪಲ್ಲವೆ? ಕಡಲಿನ ಹತ್ತಿರ ಬರಲು ಹೊಳೆ ಹುಡುಕುವಂತೆ ಅಸುರೇಂದ್ರನು ನನ್ನನ್ನು ಹುಡುಕುತ್ತಿರುವುದನ್ನು ನೋಡು. ಇಂದು ಅವನ ಈ ತೇಜವನ್ನು ತಡೆಯುವವರು ಮೂರುಲೋಕಗಳಲ್ಲಿ ಇರುವರೆ?

'ತನ್ನನ್ನು ಸಮೀಪಿಸುವ ನದಿಯನ್ನು ತಡೆಯಲು ಸಮುದ್ರ ಸಮರ್ಥವೆ? ಹೀಗಿರುವಾಗ ಅದನ್ನು ತಡೆಯಲು ಪ್ರಯತ್ನಿಸುವ ಬೆಟ್ಟದ ಪಾಡೇನು? ಪ್ರವಾಹದರಭಸವು ನುಚ್ಚುನೂರಾಗಿ ಕೊಚ್ಚುವುದು! ಬೇಗ ಅನಿಲಜನನ್ನು ಕರೆ! ನಳನನ್ನು ಕೂಗು! ವಾಲಿಪುತ್ರನಿಗೆ ಪಕ್ಕಕ್ಕೆ ಸರಿಯಲು ಹೇಳು! ರಾಕ್ಷಸನ ದೃಷ್ಟಿಯಿಂದ ಮುದಿ ಜಾಂಬವನನ್ನು ತೊಲಗಿಸು! ಕಪಿಧ್ವಜನಿಯು ಹಿಂದಕ್ಕೆ ಸರಿಯಲಿ! ರಾಕ್ಷಸನು ನನ್ನ ಕಡೆಗೆ ಬರುವಂತೆ ದಾರಿ ಕೊಡು! ಬೆಂಕಿಯನ್ನು ಬೆಂಕಿಯೇ ನಂದಿಸಬೇಕಲ್ಲವೆ? ಬಡಬಾಗ್ನಿಯನ್ನು ಕುಡಿಯಲು ಸಮುದ್ರವಲ್ಲ, ತ್ರಿಣೇತ್ರನ ಬೆಂಕಿಯೇ ಬೇಕು!'

ಸುಗ್ರೀವನ ಆಜ್ಞೆಯಿಂದ ಸೈನ್ಯಸಮುದ್ರವು ಹಿಂದಕ್ಕೆ ಸರಿಯಿತು. ರಘುವೀರನ ಆಶ್ರಯಕ್ಕೆ ಒಳಗಾಗುವಂತೆ ಅವನ ಬೆನ್ನಹಿಂದೆ ನಿಂತಿತು. ಸಮುದ್ರವು ಬತ್ತಲು ಬಡಬಾನಲ ಕಾಣುವಂತೆ ರಾಮನೊಬ್ಬನೆ ಕಂಡನು. ಅವನು ಧನುಸ್ಸಿನ ಮಧ್ಯಭಾಗವನ್ನು ಮುಷ್ಟಿಯಲ್ಲಿ ಹಿಡಿದು, ಉಗ್ರ ದೃಷ್ಟಿಯಿಂದ ದನುಜನ ರಥವನ್ನು ನೋಡಿದನು. ಬಾನು ಭುವಿಯನ್ನು ಅಳೆಯುವವನಂತೆ ಓರ್ವನೇ ನಿಂತನು. ಅದನ್ನು ನೋಡಿ ರಾವಣನ ರಾಹುವಿನಂತಹ ಗರ್ವವು ಕೆರಳಿತು.

ಮಾವನಿಂದು ಲಂಕೇಶ್ವರಂ.

'ನಿಜವಾಗಿ ಇವನೆಯೆ ಜನಕತನುಜೆಯ ಪ್ರಾಣ ಕನಕಮಂದಿರ ಮೂರ್ತಿ! ಇವನೆಯೆ ಸೀತಾ ಹೃದಯ ಧೈರ್ಯ ಸಾಗರ! ಇವನೆಯೆ ಸೀತಾ ಮನಸ್ಥೈರ್ಯ ಮಂದರಪರ್ವತ! ಆ ಪೂಜ್ಯೆ ಪೂಜೆ ಸಲ್ಲಿಸುವಷ್ಟು ಅರ್ಹನೆ ಇವನು? ನನ್ನ ಅಹಂಕಾರವನ್ನು ತನ್ನ ಪಾದತಲದಿಂದ–ಆನೆಯು ಆಮೆಯನ್ನು ಕೀಟದಂತೆ ನುಚ್ಚುನೂರು ಮಾಡುವ ಹಾಗೆ–ತೀಡಿತಿಕ್ಕಿದವಳು ಸೀತಾದೇವಿ. ಅವಳು ತನುಮನಸಹಿತ ತನ್ನಾತ್ಮ ಸರ್ವಸ್ವವನ್ನು ಇವನ ಕಾಲಡಿಯ ಪುಡಿಗೆ ಅರ್ಪಿಸಿ ಆರಾಧಿಸುತ್ತಾಳೆ. ಧನ್ಯೆಯನ್ನು ಒಲಿದವನು ಧನ್ಯನೇ ಸರಿ.

'ಇವನು ಬರಿಯ ಕಲ್ಪನಾದೇವತೆಯೊ? ನಿಜವಾಗಿ ಪತಿವ್ರತೆಯ ಆರಾಧನೆಗೆ ಯೋಗ್ಯಪಾತ್ರನೊ? ಇವನ ತಪಸ್‌ಸತ್ವವನ್ನು ನನ್ನ ತೋಳಿನ ಒರೆಗಲ್ಲಿಗೆ ತೀಡಿ ನೋಡುತ್ತೇನೆ. ಸೀತೆಗಾಗಲಿ, ಅವಳು ಒಲಿದ ಈ ನರನಾಥನಿಗಾಗಲಿ ಹುಸಿಯಾದುದಕ್ಕೆ, ನನ್ನ ಪೂಜೆ ಸಲ್ಲುವುದಿಲ್ಲ.

'ಅಂದು ಮಿಥಿಳೆಯಲ್ಲಿ ನಾನು ಇರದಹೊತ್ತು ಹರಧನುವನ್ನು ಎತ್ತಿದ್ದು ಇರಲಿ, ಮಿಥಿಳೇಂದ್ರನನ್ನು ಮೆಚ್ಚಿಸಿದ ಸುಲಭ ವೀರತನ ಇಲ್ಲಿ ನಡೆಯುವುದಿಲ್ಲ. ಇಂದು ಮಾವ ಲಂಕೇಶ್ವರ. ನಾನು ಪುಟವಿಟ್ಟು, ಮೊದಲಿಗಿಂತಲೂ ನೂರ್ಮಡಿ ತಳತಳಿಸಿ ಹೊಳೆಯುವಂತೆ ಮಾಡಿಕೊಡಲಿರುವ ಈ ಪೊಡವಿಮಗಳನ್ನು ಅವನು, ನನ್ನನ್ನು ಮೆಚ್ಚಿಸಿ ಪಡೆಯಬೇಕು!'

ಎಂಬ ತರತರದ ಚಿಂತೆಯ ಮಿಂಚುಗಳಿಂದ ಅವನ ಕಪ್ಪುಮೋಡ ಮಿಂಚತೊಡಗಿತು. ಬಿಲ್ಲಿಗೆ ಹಗ್ಗ ಬಿಗಿದು ದನಿಮಿಡಿತಕ್ಕೆ ಕೇಳುವವರ ಎದೆನಡುಗುವಂತೆ ಧನುಷ್ಟಂಕಾರ ಮಾಡಿದನು. ತೇರುಗಾಲಿಯ ಗರಗಸಕ್ಕೆ ಭೂಮಿಯು ಘರ್ಘರಿಸುವಂತೆ ಮುಂದುವರಿದನು. ಅವನಿಜಾತೆಯ ಮನೋಹರನ ಹರಕೋಪ ಭೀಷಣಗಿರಿಯ ಬಿರು ಬೇಸಿಗೆಯ ಸಮ್ಮುಖಕ್ಕೆ ನಡೆದನು.

ತನ್ನ ಎದೆಯನ್ನು ಅರಸಿಬರುವ ನದಿಯ ನೀರಿನ ಹರಿವಿಗೆ ಸುಸ್ವಾಗತವನ್ನು ನೀಡಿ, ನೀರನ್ನು ಆಸ್ವಾದಿಸುವಂತೆ ಈಂಟಿ, ನದಿಯ ಪ್ರಾಣವನ್ನು ಹೀರುವ ಬಿರು ಉರಿಯ ಬಿತ್ತರದ ಮರುಭೂಮಿಯಂತೆ–ರುದ್ರ ಸತ್ತ್ವ ರಘುರಾಮನು ದೃಷ್ಟಿ ಭೈರವನಾಗಿ, ಕೋಪಗೊಂಡ ಸರ್ಪದಂತೆ ನಿಟ್ಟುಸಿರು ಬಿಡುತ್ತ ನಿಂತಿದ್ದನು. ಅದನ್ನು ನೋಡಿ ಆಕಾಶದಲ್ಲಿ ನೆರೆದ ದೇವತಾತ್ಮಗಳ ಉಸಿರು ಕಟ್ಟಿದಂತಾಯಿತು!

ದೃಷ್ಟಿಯಿಂದ ಒಬ್ಬರು ಇನ್ನೊಬ್ಬರನ್ನು ತೂಗಿ ಅಳೆಯುವಂತೆ, ಎವೆಯಿಕ್ಕದೆ ಹುಬ್ಬುಗಂಟಿಕ್ಕಿ ಒಬ್ಬರನ್ನೊಬ್ಬರು, ವೈರಿಬಲಗಳನ್ನು ಒರೆಹಚ್ಚುವಂತೆ ನೋಡಿದರು. ತನ್ನ ಶಕ್ತಿ ಪೊರೆ ಕಳಚುತ್ತ ಮತ್ತು ವೈರವು ಒರೆಗಳಚುವಂತೆ ಪರಸ್ಪರರು ನೋಡಿದರು.

ರಾಮರಾವಣರ ಆ ಮಹದ್ ದೃಷ್ಟಿಯುದ್ಧದಲ್ಲಿ ಸೃಷ್ಟಿ ಭಾಗಿಯಾಯಿತು. ವಿಶ್ವದ ಚರಾಚರ ಸಮಸ್ತ ದ್ವಂದ್ವ ತತ್ತ್ವಗಳು ತಮ್ಮ ಹಿತಾಹಿತವನ್ನು ನಿಶ್ಚಯಿಸಿ ಒಂದೊಂದು ಪಕ್ಷವನ್ನು ವಹಿಸಿದವು.

ಬಂದನು ಶಿವಂ ದಶರಥ ಕುಮಾರನಾತ್ಮಕ್ಕೆ; ಬಂದಳು ಶಕ್ತಿ ದಶಶಿರ ಹೃದಯಮಂದಿರಕೆ.

ಒಂದು ಕಡೆ ಗರುಡ ಸರಿದರೆ, ಸರ್ಪ ಮತ್ತೊಂದು ಕಡೆ. ಈ ಕಡೆ ಸಿಂಹವಾದರೆ ಆ ಕಡೆ ಗಜ. ಇತ್ತ ಹಗಲು ಅತ್ತ ಇರುಳು. ಇತ್ತ ರವಿ ಅತ್ತ ರಾಹು. ಈ ಕಡೆ ಕಾಂತಿ ಆ ಕಡೆ ಕತ್ತಲು. ಸುಖವು ಈ ಕಡೆ ದುಃಖ ಆ ಕಡೆ. ಸತ್ಯ ಈ ದೆಸೆಗೆ ಮಿಥ್ಯೆ ಆ ದೆಸೆಗೆ. ಇತ್ತ ಮುಕ್ತಿ ಅತ್ತ ಮಾಯೆ. ವೃತಾಸುರ ಇತ್ತ ಇಂದ್ರ ಅತ್ತ. ಜೀವವು ರಾಮನ ಕಡೆಗೆ ನಿಂತರೆ ಜಡವು ರಾವಣನ ಕಡೆಗೆ ನಿಂತಿತು. ಶಿವನು ದಶಕುಮಾರನ ಆತ್ಮಕ್ಕೆ ಬಂದನು. ಶಕ್ತಿಯು ದಶಶಿರನ ಹೃದಯ ಮಂದಿರಕ್ಕೆ ಬಂದಳು. ರವಿಕುಲ ಲಲಾಮನನ್ನು ಚಿತ್‌ಶಕ್ತಿ ಒಲಿದು ಬರಲು, ದೈತ್ಯ ಕುಲಸಾಗರ ಸುಧಾಕರನ ಹೃದಯಕ್ಕೆ ಅಚಿತ್‌ಶಕ್ತಿ ಅವತರಿಸಿತು.

ಅತ್ತ ಅಯೋಧ್ಯೆಯಲ್ಲಿ ಸರಯೂ ನದಿಯಲ್ಲಿ ಒಂದು ಮೊಸಳೆಯಲ್ಲಿ ವೈರಾಗ್ನಿ ಉದ್ಭವಿಸಿ, ಅದು ಭಾರಿ ಮೊಸಳೆಯನ್ನು ಕಾಳಗಕ್ಕೆ ಕರೆಯಿತು. ಶೃಂಗಿಭೇರಪುರದ ಕಾಡಿನಲ್ಲಿ ಕಾಳ್ಬೆಕ್ಕು ಕಾಲು ಕೆರೆದು ಹುಲಿಯ ಮೇಲೆ ಏರಿ ಹೋಯಿತು. ಭರದ್ವಾಜ ಆಶ್ರಮದಲ್ಲಿ ಮಾಂಸಾಹಾರಿಯಾದ ಕ್ರೂರಮೃಗವು ಹಿಂಸಾಬುದ್ಧಿ ದಾಹದಿಂದ ಚಿಗರೆಯ ಪುಷ್ಟಮಾಂಸದ ಒಡಲನ್ನು ನೋಡಿತು. ಚಿತ್ರಕೂಟದಲ್ಲಿ ಹೊಟ್ಟೆತುಂಬ ತಿಂದು ಒಂದು ಹೆಬ್ಬುಲಿ ಮಲಗಿತ್ತು. ಅದಕ್ಕೆ ಒಂದು ಕಾಡಿನಕೋಣವು ತನ್ನನ್ನು ತಿವಿಯಲು ಧಾವಿಸಿ ಬರುತ್ತಿರುವ ಕನಸಾಯಿತು. ಆಗ ಆ ಹುಲಿ ಕಾಡುನಡುಗುವಂತೆ ಆರ್ಭಟಿಸಿ ನೆಗೆಯಲು ಕಾಡುಕೋಣ ಕಾಣದಾಯಿತು. ಆಗ ಅದು ಕಿಚ್ಚೆದ್ದ ಹಗೆತನದ ಭಯಂಕರ ಉತ್ಸಾಹದಲ್ಲಿ ಹುಡುಕತೊಡಗಿತು.

ಪಂಚವಟಿಯಲ್ಲಿ, ಗೋದಾವರಿ ನದಿಯ ದಡದ ಹಾಳುಬಿದ್ದ ಕುಟೀರದಲ್ಲಿ ಬೀಡುಬಿಟ್ಟಿದ್ದ ಒಂದು ಕೃಷ್ಣಸರ್ಪವನ್ನು ಮುಂಗುಸಿಯು ಕುದಿಗೊಂಡು ಉಕ್ಕಿ ಕೆಣಕಿತು! ಆಗ ಸರ್ಪ ಓಡಿ ಒಂದು ಹುತ್ತವನ್ನು ಆಶ್ರಯಿಸಿ ರೋಷದಿಂದ ಹೆಡೆ ಎತ್ತಿತ್ತು!

ಹೀಗೆ ಅಯೋಧ್ಯೆಯೆ ಮೊದಲಾಗಿ ಲಂಕೆ ತುದಿಯಾಗಿ ರಾಮರಾವಣ ದೃಷ್ಟಿಗಳು ಚರಾಚರದ ಉಸಿರ ಸಂಚಾಗಿ, ಮಿಂಚಿನಂತೆ ಸಂಚರಿಸಿದವು. ಆಗ ರಾವಣನು ಕೋಪತಾಪದಿಂದ ಬ್ರಹ್ಮನಿರ್ಮಿತವಾದ ತಾಮಸಾಸ್ತ್ರವನ್ನು ಹೂಡಿದನು. ಅದರ ಸಿಂಜಿನಿಯ ಸಿಡಿಲಿಗೆ ಪಟ್ಟಣದ ಎತ್ತರದ ಕೊತ್ತಳಗಳಲ್ಲಿ ನಿಂತು ನೋಡುತ್ತಿದ್ದ ಲಂಕಾ ಪ್ರಜೆಗಳು ಸಂತೋಷ ಘೋಷವನ್ನು ಮಾಡಿದರು. ಅದು ಅಂಬರದಲ್ಲಿ ಅಲೆಅಲೆಯಾಗಿ ಹಬ್ಬಿತು.

ಆ ಬಾಣ ಮತ್ತು ಅವನ ಮಂತ್ರೋಚ್ಚಾರಣೆ ಒಂದು ನೆಪ ಮಾತ್ರವಾಗಿದ್ದು ಅದರ ಪ್ರಾಣಬಲ ಬ್ರಹ್ಮನ ವರವಾಗಿತ್ತು!

ಅದರಿಂದ ಜ್ವಾಲೆಗಳು, ಧೂಮ, ಬುಸುಗುಡುವ ಸಿಡಿತವು ಭಯಂಕರವಾಗಿ ಹೊಮ್ಮಿ ಉಲ್ಕೆಗಳಂತೆ ಬೀಳ ತೊಡಗಿದವು. ಕಪಿಸೇನೆಯು ಒರಲಿತು. ಕೆಲವರು ಸುಟ್ಟುರಿದು ಬಿದ್ದರು, ಕೆಲವರು ಬೂದಿಯಾದರು, ಕೆಲವರು ಕಣ್ಣಿಗೆ ಕಾಣದಾದರು, ಕೆಲವರು ಕಿವುಡಾದರು, ಕೆಲವರು ಮತಿಭ್ರಮಣೆಗೆ ಒಳಗಾಗಿ ಅಸಂಬದ್ಧವಾಗಿ ಮಾತಾಡುತ್ತ ಎತ್ತಂದರತ್ತ ಓಡಿದರು.

ನೀಲ ಮಾರುತಿ ನಳ ಸುಗ್ರೀವ ಜಾಂಬವ ಅಂಗದ ಲಕ್ಷ್ಮಣರು ತಮ್ಮ ತಮ್ಮ ಸಮರಸಾಧನಗಳನ್ನು ಹುಡುಕಿ ಅಸುರೇಂದ್ರನ ಸಮ್ಮುಖಕ್ಕೆ ನುಗ್ಗಲು ಯತ್ನಿಸುತ್ತಿದ್ದರು. ರಾಮಚಂದ್ರ ಅವರನ್ನು ಕಣ್‌ಸನ್ನೆಯಿಂದ ಸುಮ್ಮನಿರಲು ಹೇಳಿದನು. ಕೋದಂಡವನ್ನು ತೆಗೆದುಕೊಂಡನು. ಅದಕ್ಕೆ ಹಗ್ಗ ಕಟ್ಟಿ ಮಿಡಿಯಲು ಭೂಮಿಯೇ ಬಿರಿಯಿತೊ ಎಂಬಂತೆ ನಾದ ಹೊಮ್ಮಿತು. ತಕ್ಷಣ ಆದಿತ್ಯ ಬಾಣವನ್ನು ಹೂಡಿದನು. ಅದು ಐದುಮುಖವಾಗಿ ಬೆಂಕಿಯನ್ನು ಹೊಮ್ಮಿ ಅಸುರನ ಬಾಣವನ್ನು ತಣ್ಣಗಾಗಿಸಿತು. ಅದು ಕಿಡಿಗೆದರಿ ಸಿಡಿಯಲು ಹೊಗೆ ಹೊತ್ತಿ ಉರಿ ಚಿಮ್ಮಿ ರಥದ ಆಳುಗಳನ್ನು ತಾಗಿತು. ಆ ಜ್ವಾಲೆಗೆ ಕಣ್ಣುಬೆದರಿ ಅಶ್ವಗಳು ಗಾಯಗೊಂಡು ವೇಗವಾಗಿ ದೆಸೆಗೆಟ್ಟು ಓಡಿದವು. ಅಸುರನ ಪರಿವಾರವು ಚೀರಿಟ್ಟಿತು!

ತನ್ನ ಮನದುಯ್ಯಲೆಯೊಳೋಲಾಡಿದಳ್ ಭ್ರಾಂತೆ, ಸಂಭ್ರಾಂತೆ, ಭಯಚಕಿತೆ, ಜಯವನಿತೆ!

ಆ ಬಳಿಕ ಆದುದನ್ನು ಏನೆಂದು ಹೇಳುವುದು? ರಾಮರಾವಣರಲ್ಲಿ ಬೃಹದ್ ದ್ವಂದ್ವ ರಣದ ಯುದ್ಧವು ನಡೆಯಿತು! ಈರ್ವರೂ ಶಸ್ತ್ರಾಸ್ತ್ರ ಪಂಡಿತರು, ಅಮಾನುಷ ಆಕಾರದವರು, ತಪೋಬಲರು ಯಾರಿಂದಲೂ ಜಯಿಸಲಾಗದ ವಿಕ್ರಮರಾಗಿದ್ದರು. ಇವನು ಆಕಾಶ ಸಮನಾದರೆ, ಅವನು ಸಮುದ್ರ ಸಮನಾದವನು! ಜಯ ವನಿತೆಯು ಮೇಘ ಮಂಚದಲ್ಲಿ ನಂದನವೃಕ್ಷದ ಕುಸುಮಗಳಿಂದ ಮಾಡಿದ ಜಯಮಾಲೆ ಹಿಡಿದು ನಿಂತಿದ್ದಳು. ಅವಳು ಅತ್ತೊಮ್ಮೆ ಇತ್ತೊಮ್ಮೆ ಮನದ ಉಯ್ಯಾಲೆಯಲ್ಲಿ ತೂಗಾಡುತ್ತ, ಸಂಭ್ರಾಂತೆಯು, ಭಯ ಚಕಿತೆಯು; ಶಂಕಾಗ್ರಸ್ಥೆಯು ಆಗಿ ರಾಮ ರಾವಣರ ಜಯ ಅಪಜಯಗಳನ್ನು ನಿರೀಕ್ಷಿಸುತ್ತಿದ್ದಳು. ಅವಳನ್ನು ತಾಟಕೆಯು ಪ್ರೇತಕಂಠದಲ್ಲಿ ಹೀಗೆ ನಿಂದಿಸಿದಳು:

'ನೀನು ಜಾರೆ, ನಿಜದ ಸತ್ತ್ವವನ್ನು ನೀನು ಹೇಗೆ ಕಾಣುವೆ? ದಶಮುಖನನ್ನು ಎದುರಿಸಿ ದಶರಥಾತ್ಮಜನು ಬದುಕಿ ಹೋಗುವನೆ? ಮುನಿಯಮೇಲಿನ ಮೋಹದಿಂದ

ಹೆಣ್ಣಿನಕೊಲೆ ಮಾಡಿದ ನಿಷ್ಕರುಣಿಗೆ ಜಯ ದೊರಕುತ್ತದೆಯೆ? ತಕ್ಕಡಿ ಹಿಡಿದ ಜಿಪುಣನಂತೆ ದೇವಸುಮ ಹಾರವನ್ನು ಸುಮ್ಮನೆ ಅತ್ತಿತ್ತ ಏಕೆ ತೂಗುತ್ತಿರುವೆ? ಲೋಕದ ಏಕೈಕ ವೀರನಾದ ದೈತ್ಯಕುಲ ರಾಜರಾಜೇಶ್ವರನ ಕೊರಳಿಗೆ ಅದನ್ನು ಅರ್ಪಿಸಿ ಧನ್ಯವಾಗಿಸು! ವಿಜಯ ಲಕ್ಷ್ಮಿಯಾದ ನೀನು ಪತಿವ್ರತೆಯೆಂಬ ಶಾಶ್ವತಕೀರ್ತಿಯಿಂದ ಧನ್ಯಳಾಗುವೆ!'

ಆಗ ಅಮರ ಕಲಿ, ದಿವ್ಯ ಜೀವಿಯಾದ ಜಟಾಯುದೇವನು ಆಕಾಶದಲ್ಲಿ ಮೋಡದಾಕಾರದಲ್ಲಿ ಮೈ ದೋರುತ್ತ ಹೀಗೆ ಹೇಳಿದನು:

'ದೇವಿಯೆ, ಆ ಪಿಶಾಚಳ ನುಡಿಕೇಳಿ ಖಿನ್ನಳಾಗಬೇಡ. ಪುಣ್ಯದವಾಸನೆಯನ್ನು ಪಾತಕಮೂಗು ತಿಳಿಯಲು ಹೇಗೆ ಸಾಧ್ಯ? ಈ ಮಾರೀಚನ ತಾಯಿಯ ಪ್ರೇತವು ತನ್ನ ಕೊಲೆಯನ್ನಲ್ಲದೆ ಇತರ ಜೀವರ ಬೆಲೆ ತಿಳಿಯದು. ಪಿಶಾಚತ್ವದಿಂದ ಮುಕ್ತಳಾಗಲು ಎಷ್ಟೋ ಜನ್ಮಗಳು ಬೇಕಾಗುತ್ತದೆ! ಇವಳ ತೊದಲು ನುಡಿ ಇರಲಿ, ಅಲ್ಲಿ ದೇವತೆಗಳ ಪ್ರಯತ್ನವನ್ನು ನೋಡು. ಅವರು ಅಸುರೇಂದ್ರನನ್ನು ಸಂಹರಿಸುವ ಕಾರ್ಯದಲ್ಲಿ ಭಾಗಿಗಳಾಗಲು ವಾನರರಹೃದಯಗಳನ್ನು ಹೊಕ್ಕಿದ್ದಾರೆ. ಅವರ ತಾಟಸ್ಥ್ಯವನ್ನು ಹೋಗಲಾಡಿಸಲು ಸಿದ್ಧತೆ ನಡೆಸುತ್ತಿದ್ದಾರೆ.

'ಅದೊ ನೋಡು, ಅಣ್ಣ ಸಂಪಾತಿಯು ತನ್ನ ತಮ್ಮನನ್ನು ಕೊಂದವನ ತಲೆಗೆ ಸಂಚುಹಾಕಿ, ರಾಮನ ಬತ್ತಳಿಕೆಯಲ್ಲಿ ವಿಷಸರ್ಪದ ಬಾಣವಾಗಿದ್ದಾನೆ! ದೇವಿ, ಸಂದೇಹವನ್ನು ಬಿಡು. ಮಾಲೆಯನ್ನು ಕೋಸಲೇಶನ ಕೊರಲ ಕಾಣಿಕೆಯಾಗಿ ಮೀಸಲಿಡು!'

ದೈವೀ ಪ್ರಭಾವಗಳು ಜ್ಯೋತಿಯ ಪ್ರವಾಹದ ಅಲೆಗಳಂತೆ ವಾನರಸೈನ್ಯದ ಮನೋಮಯಕ್ಕೆ ಇಳಿಯಿತು. ಅದನ್ನು ನೋಡಿದ್ದೆ ತಡ ಸ್ಪರ್ಧಿಸುವಂತೆ ಅಸುರೀ ಶಕ್ತಿಗಳು ಕತ್ತಲ ನೆರಳಂತೆ ಕನಕಲಂಕಾ ರಾಕ್ಷಸ ಪ್ರಜಾ ಪ್ರೇಕ್ಷಕರ ರಣಮನೋರಥವನ್ನು ಪ್ರವೇಶಿಸಿದವು. ಲಂಕೆಯು ದೈತ್ಯೇಶ್ವರನಿಗೆ ಘೇ ಉಘೇ ಎನ್ನಲು; ಕಿಷ್ಕಿಂಧೆಯು ರಘುಕುಲೇಶ್ವರನಿಗೆ ಘೇ ಉಘೇ ಎಂದಿತು! ರಾಕ್ಷಸಸೇನೆ ದಶಶಿರನಿಗೆ ಉಘೇ ಎನ್ನಲು; ವಾನರಸೇನೆ ದಶರಥ ಸುತನಿಗೆ ಉಘೇ ಎಂದಿತು! ಹೀಗೆ ಎರಡೂ ಕಡೆಯ ಸೇನಾಘೋಷಣೆಗಳು ತ್ರಿಕೂಟಾದ್ರಿಯಲ್ಲಿ ಪ್ರತಿಧ್ವನಿಸಿದವು. ಸಮುದ್ರದ ಅಲೆಗಳು ಕುದಿಯುವಂತೆ ಗದಗದಿಸಿ ಅಲೆಅಲೆದು ಗದೆಯಂತೆ ಮಹೇಂದ್ರಪರ್ವತ ಸಾನುವನ್ನು ಅಪ್ಪಳಿಸಿದವು!

ಹೀಗೆ ಬರಿ ನೇತ್ರಭಾಗಿಗಳಾಗಿ ರಾಮರಾವಣರ ಯುದ್ಧವನ್ನು ನೋಡುತ್ತಿದ್ದವರಲ್ಲಿ ಇದ್ದಕ್ಕಿದ್ದ ಹಾಗೆ ತಾವೂ ಯುದ್ಧದಲ್ಲಿ ಭಾಗವಹಿಸುವ ಆಸಕ್ತಿಯುಂಟಾಯಿತು. ಸೃಷ್ಟಿಯ ಚರಾಚರವೆಲ್ಲವೂ ರಾಮರಾವಣರ ಮಹಾ ಜಗತ್ ಸಂಗ್ರಾಮದಲ್ಲಿ ಸೇರಿರಲು ನಿಂತು ನೋಡುತ್ತಿದ್ದ ಲಂಕೆ ಕಿಷ್ಕಿಂಧೆಗಳ ಸಮರಸೇನಾಚೇತನಗಳು ನಿರ್ಲಿಪ್ತವಾಗಿರಲು ಸಾಧ್ಯವೆ?

ಓರ್ವನು ಜಯಧ್ವನಿಯ ಉತ್ಸಾಹದಲ್ಲಿ ತನ್ನ ಕೈಯಲ್ಲಿದ್ದ ಆಯುಧವನ್ನು ಎತ್ತಿ ಆ ಕಡೆ ನೋಡಿ ಕೂಗಿದನು. ಅದನ್ನು ನೋಡಿದ ಈ ಕಡೆಯವನು ತನ್ನ ಆಯುಧವನ್ನೆತ್ತಿ ಪ್ರತಿ ಪಕ್ಷದವನ ಕೂಗನ್ನು ಗೆಲ್ಲುವಂತೆ ಎರಡರಷ್ಟು ಗಟ್ಟಿ ದನಿಯಾಗಿ ಕೂಗಿದನು. ಈ ಕಡೆಯವನು ಆ ಕಡೆಯವನಿಗೆ ಕೊರಳೆತ್ತಿ ಕೈ ಎತ್ತಿ ಆಯುಧವನ್ನು ಬೀಸಿದನು. ಅದಕ್ಕೆ ಪ್ರತಿಯಾಗಿ ಅಲ್ಲಿಂದ ಓರ್ವ ಒಂದು ಕೊಂತ ಎಸೆದನು. ಮತ್ತೆ ಈ ಕಡೆಯಿಂದ ಎರಡು ಕೊಂತಗಳು ಬೀಸಿ ಹೋದವು. ಆ ಕಡೆಯಿಂದ ಉತ್ತರವಾಗಿ ಕಲ್ಲುಗುಂಡು, ಮರಮುಂಡು, ಬುಡ ಬೇರು ಕೊಂಬೆಗಳು ಬೀಸಿ ಬಂದವು! ಆ ಬಳಿಕ ಹೇಳುವುದೇನು? ಅತ್ತಿಂದಿತ್ತ ಆಯುಧಧಾರಿ ಸೈನಿಕರು ಜಯ ಘೋಷಗಳೊಡನೆ ನುಗ್ಗಿದರು! ತಾಟಸ್ಥ್ಯ ತೊರೆದು ರಣಧರಣಿಯಲ್ಲಿ ತುಮುಲವೆದ್ದಿತು.

ರೋಷದಿಂದುಗಿದನಾಸುರವೆಸರ ಶರಘೋರಮಂ.

ರಾವಣನು ಯುದ್ಧರಂಗಕ್ಕೆ ಧುಮುಕಿ ಧಾವಿಸಿ ಬರುತ್ತಿರುವ ವಾನರ ದಳ ಸಮುದ್ರವನ್ನು ನೋಡಿದನು. ಅದನ್ನು ಶೋಷಿಸುವ ರೋಷದಿಂದ 'ಅಸುರ' ಎಂಬ ಹೆಸರಿನ ಘೋರ ಬಾಣವನ್ನು ಪ್ರಯೋಗಿಸಿದನು. ಅದು ಸೂಕ್ಷ್ಮ ರೂಪದಿಂದ ಇಳಿದು ಬಂದು ರಾಕ್ಷಸ ಸೈನಿಕರ ಅಂತರಂಗವನ್ನು ಹೊಕ್ಕಿತು. ಆ ಅಸುರೀ ಶಕ್ತಿಗಳು ಸುಪ್ರಕಟವಾಗಿ ಹೊರಹೊಮ್ಮಿ ದೈವಿ ಬಲಗಳೊಂದಿಗೆ ಹೋರಾಡಲು ರಾವಣನ ಕೈಯ ಅಸುರಾಸ್ತ್ರದ ನೆವವನ್ನು ಆಶ್ರಯಿಸಿದವು. ಆ ಬಾಣದಿಂದ ಹೊಮ್ಮುವಹಾವಿನಹಲ್ಲಿನ ವಿಷ ಮುಹೂರ್ತಕ್ಕೆ ತವಕಿಸುತ್ತ ನಿಂದವು.

ದನುಜೇಂದ್ರನ ಬಿಲ್ಲಿನ ಹೆದೆಯ ಠೇಂಕಾರವು ವೈರಿಗಳ ಹೃದಯಗಳನ್ನು ಒಡೆಯುತ್ತಿರಲು, ಆ ಧನುವಿನಿಂದ ಚಿಮ್ಮಿದ ಬಾಣವು ಕಪ್ಪು ಹೊಗೆಯನ್ನು ಉಗುಳುವ ಅಕ್ಷಯ ಗರ್ಭದಿಂದ ಹೊರಹೊಮ್ಮಿ, ನಾನಾ ವಿಕೃತಿ ರೂಪಗಳನ್ನು ಪಡೆದು ವಾನರ ಸೇನಾಸಮೂಹವನ್ನು ನಾಶಪಡಿಸಿತು. ಅಗ ದಿವಾಕರ ಕುಲನು ಸೌರ ಮಂತ್ರೋಕ್ತಿಯಿಂದ ಆಗ್ನೇಯಾಸ್ತ್ರವನ್ನು ಹೂಡಿದನು. ಅದನ್ನು ದೇವಶಕ್ತಿಗಳು ಹೊಕ್ಕು ದೇದೀಪ್ಯಮಾನವಾದ ನಾನಾ ಸ್ಫೂರ್ತಿಗಳನ್ನು ಪಡೆದು ಸೂರ್ಯನಂತೆ, ಚಂದ್ರನಂತೆ, ತಾರೆಯಂತೆ, ಉಲ್ಕೆಯಂತೆ, ಧೂಮಕೇತುಗಳಂತೆ ನುಗ್ಗಿ ದೈತ್ಯ ಪಡೆಯನ್ನು ದಹಿಸತೊಡಗಿತು. ಅಸುರನ ಅಸ್ತ್ರವನ್ನು ನಿಸ್ತೇಜಗೊಳಿಸಿತು.

ಅದನ್ನು ನೋಡಿ ರಾಕ್ಷಸಾಧಿಪನು ಕೋಪಗೊಂಡು ಮಯರಚಿತ ರೌದ್ರಾಸ್ತ್ರವನ್ನು ಹೂಡಿದನು. ಅದು ಒನಕೆ, ಗದೆ, ಶೂಲ, ಕೂಟ ಮುದ್ಗರಗಳನ್ನು ಚಿಮ್ಮಿ ಶತಮುಖಗಳಿಂದ ಬಂದು ವಾನರ ದಳವನ್ನು ಸಾಯುವ ಹಾಗೆ ಬಡಿಯಿತು. ಅದನ್ನು ರಾಮಚಂದ್ರನು ಗಾಂಧರ್ವ ಬಾಣದಿಂದ ಶಮನಗೊಳಿಸಿದನು.

ಕೊಂಡನಸುರೇಂದ್ರನದ್ಭುತದ ಶಕ್ತಿಯಂ ಕೈಗೆ.

ಅಸುರೇಂದ್ರನು ಆಗ ಅದ್ಭುತವಾದ ಶಕ್ತಿಯನ್ನು ಕೈಗೆ ತೆಗೆದುಕೊಂಡನು. ಅದನ್ನು ನೋಡಿ ವಿಭೀಷಣನಿಗೆ ಉಸಿರು ಕಟ್ಟಿದಂತಾಯಿತು! ಹತ್ತಿರದಲ್ಲಿ ನಿಂತಿದ್ದ ಲಕ್ಷ್ಮಣನಿಗೆ ತನ್ನ ಎದೆಯ ಭೀತಿಯನ್ನು,

'ಇದುವೇ ನೋಡು ಶಕ್ತಿ! ಇದು ವ್ಯರ್ಥವಾಗುವುದೇ ಇಲ್ಲ! ನಿಜವಾಗಿ ಅಮೋಘವಾದುದು! ಕಾಲ ಭೈರವನ ವೀರ್ಯ ಸರ್ವಸ್ವವೂ ಇದರಲ್ಲಿ ಅಡಗಿದೆ! ರಾವಣನು ಇದನ್ನು ತೊಡುವ ಮೊದಲೇ ಕೆಡಿಸಬೇಕು. ಇಲ್ಲದಿದ್ದರೆ ಅದು ವೈರಿಯ ಎದೆಯನ್ನು ಭೇದಿಸುವುದು ಖಂಡಿತ!'

ಎಂದು ಹೇಳಿ, ಅದುವರೆಗೆ ತಾಟಸ್ಥ್ಯದಿಂದಿದ್ದುದನ್ನು ಬಿಟ್ಟು, ಗದೆಯನ್ನು ತೆಗೆದುಕೊಂಡನು. ಅಣ್ಣನ ಗಮನ ಕೆಡುವಂತೆ ರಥಾಶ್ವಗಳ ಕಾಲುಗಳನ್ನು ಮುರಿದನು. ನರ ಶೀರ್ಷ ಚಂಡಿಕಾ ರಾವಣ ರಥಧ್ವಜವು ಪುಡಿ ಪುಡಿಯಾಗಿ ಬೀಳುವಂತೆ ಬಾಣ ಪ್ರಯೋಗಿಸಿದನು. ಗದೆಯೆತ್ತಿ ತೇರಿನಕಡೆ ಬರುತ್ತಿದ್ದ ವಿಭೀಷಣನ ಮುಖ ಕಂಡು ರಾವಣನ ಕೋಪ ಉರಿದೆದ್ದಿತು. ಮೊದಲು ಈ ದ್ರೋಹಿಯನ್ನು ಇಲ್ಲವಾಗಿಸಿ ಅನಂತರ ಇತರರನ್ನು ನೋಡಿಕೊಳ್ಳುವೆ ಎಂದುಕೊಳ್ಳುವಷ್ಟರಲ್ಲಿ ರಥ ಉರುಳಿ ಬಿದ್ದಿತು. ಅವನು ಅದರಿಂದ ತಿರೆಗೆ ನೆಗೆದನು. ಶಕ್ತ್ಯಾಯುಧವನ್ನು ಎತ್ತಿ ವಿಭೀಷಣನ ಸಮ್ಮುಖಕ್ಕೆ ನಡೆದನು. ಆಗ ಕಪಿಸೇನೆ ಹಾ ಎಂದು ರೋದಿಸಿತು!

'ಓ ಸಮೀರ ಕುಮಾರ, ಓ ವಾಲಿಯ ಪುತ್ರ, ಓ ವಿಶ್ವಕರ್ಮ ಕುವರ, ಓ ಸೂರ್ಯಸೂನು, ಓ ಅಗ್ನಿಜಾ ರಾಕ್ಷಸ ಮಹಾತ್ಮನನ್ನು ರಕ್ಷಿಸಿ.'

ಎಂದು ವಾನರಸೇನೆಯು ಕೂಗುತ್ತ ಬಾಯಿಬಿಡುತ್ತ ಕರುಣೆ, ಭಯ, ಶೋಕಗಳಲ್ಲಿರಲು ತಕ್ಷಣ ಲಕ್ಷ್ಮಣನು ರಾವಣ ಮತ್ತು ವಿಭೀಷಣರ ಮಧ್ಯೆ ನುಗ್ಗಿದನು. ಶಕ್ತಿಯನ್ನು ಮೂರು ತುಂಡಾಗಿ ಕತ್ತರಿಸಿ ಹಾಕಿದನು.

ಆಗ ರಾವಣನು ಅಷ್ಟಘಂಟಾ ಎಂಬ ಭಯಂಕರ ಮಹಾ ಶಕ್ತ್ಯಾಯುಧವನ್ನು ಕೈಗೆ ತೆಗೆದುಕೊಂಡನು. ಅದರ ರೌದ್ರನಾದಕ್ಕೆ ಜಗತ್ ತ್ರಯವು ನಡುಗುತ್ತಿತ್ತು! ಅದನ್ನು ಊರ್ಮಿಳಾ ಪ್ರಾಣಪ್ರಿಯನ ವಜ್ರವಕ್ಷಕ್ಕೆ ಗುರಿಯಿಟ್ಟು ಬೀಸಿದನು. ರಾಮನ ತೊಡೆ ನಡುಗಿತು. ತಮ್ಮನ ಆಯಸ್ಸಿಗಾಗಿ ತನ್ನ ತಪದತೇಜವನ್ನೆಲ್ಲ ಮುಡುಪುಕಟ್ಟಿ ಬರುತ್ತಿರುವ ಆ ಮಹಾಶಕ್ತಿಯನ್ನು ಶಪಿಸಿದನು:

'ಊರ್ಮಿಳೆಯ ಮಾಂಗಲ್ಯವು ಚಿರಾಯುವಾಗಲಿ! ಕೊಲ್ಲುವ ನಿನ್ನಉದ್ಯಮ ವ್ಯರ್ಥವಾಗಲಿ. ಸ್ವಸ್ತಿ ಸ್ವಸ್ತಸ್ತು!'

ಅದು ಕೊಲ್ಲಲಿಲ್ಲ; ಎದೆಯಲ್ಲಿ ನಟ್ಟಿತು; ರಕ್ತವುಕಾರಿ ರಾಮಾನುಜನು ನೆಲಕ್ಕೆ ಉರುಳಿಬಿದ್ದನು!

ತಕ್ಷಣ ರಾಮನು ಓಡಿಬಂದು ಸೋದರನ ಶರೀರವನ್ನು, ಮುಳುಗುವ ಬೆಟ್ಟವನ್ನು ಅಪ್ಪಿಕೊಳ್ಳುವ ಸಮುದ್ರದಂತೆ ಬಿಗಿದು ಅಪ್ಪಿಕೊಂಡನು. 'ಗಾಜುಮಣಿ ಬಿದ್ದಿದ್ದ ಸ್ಥಾನವನ್ನು ತೋರಿಸುವ ಉತ್ಸಾಹದಲ್ಲಿ, ಕೈಯಲ್ಲಿರುವ ರತ್ನವನ್ನು ಕೆರೆಗೆ ಎಸೆಯುವ ಗಾಂಪನಂತೆ ಆದೆನೆ? ಜಾನಕಿಯ ಜಂಜಡಕ್ಕೆ ಸಹೋದರನ ಜೀವವನ್ನು ಬಲಿಗೊಟ್ಟೆನೆ?' ಎಂದು ಸೋದರನ ದುಸ್ಥಿತಿಯ ಶೋಕಾತಿಶಯದಿಂದ ಅಳುತ್ತ ಎದೆಯನ್ನು ಹೊಕ್ಕ ಶಕ್ತಿಯನ್ನು ಕಿತ್ತು ನೆಲಕ್ಕೆಕುಕ್ಕಿ ತುಂಡರಿಸಿದನು.

ಅರಾವಣಂ ವಾ ಅರಾಮಂ ದಿಟಂ!

'ಕಪೀಂದ್ರನೇ, ನನಗೆ ಇದು ದುಃಖಿಸುವ ಸಮಯವಲ್ಲ. ನೀನು ಅಂಜನಾಸುತನೊಡನೆ ಸೇರಿ, ಸುಷೇಣನ ಮಂತ್ರೌಷದ ಸಹಾಯದಿಂದ ಈತನನ್ನು ರಕ್ಷಿಸು. ನನಗೆ ಇಂದು, ಬಹುದಿನದ ಬಯಕೆ ಕೈಗೂಡುವ ಹೊತ್ತು ಹತ್ತಿರ ಬಂದಿದೆ. ಓ ಕಪಿಧ್ವಜರೇ ಕೇಳಿರಿ, ಪ್ರತಿಜ್ಞೆ ಮಾಡುತ್ತಿದ್ದೇನೆ. ಈ ದಿನ ಸೂರ್ಯನು ಮುಳುಗುವ ಮೊದಲು ಈ ಜಗತ್ತು ಅರಾವಣವಾಗುತ್ತದೆ ಅಥವಾ ಅರಾಮವಾಗುತ್ತದೆ!

'ಆ ಸೇನಾನಿ ನೀಲನನ್ನು ಕರೆಯಿರಿ; ವಾಲಿಯ ಪುತ್ರನನ್ನು ಕರೆಯಿರಿ. ವರಬಲಗಳಿಂದ ವೈರಿ ರುದ್ರನಾಗಿರುವ ಆ ದೈತ್ಯನನ್ನು ಇನ್ನು ಅವರು ತಡೆಯುವುದು ಬೇಡ. ನಾನು ತಡೆಯುತ್ತೇನೆ. ಜಗದ್‌ಭವ್ಯ ಸಂಗ್ರಾಮವನ್ನು ನೀವು ಬೆಟ್ಟದ ಶಿಖರಗಳಿಂದ ನೋಡುತ್ತಿರಿ.'

ಎಂದು ಹೇಳಿ ತಲೆ ಎತ್ತಿ ಮೇಲೆನೋಡಿ ಮಾತು ಮುಂದುವರಿಸಿದನು.

'ಓ ಅಲ್ಲಿ ನೆರೆದಿರುವ ಗಂಧರ್ವ, ಯಕ್ಷ ಮುಂತಾದ ಸರ್ವದೇವತೆಗಳಿರಾ ರಾಮನ ಈ ರಾವಣ ಶತ್ರುವಾದ ರಾಮತ್ವವನ್ನು ನೋಡಿ!'

ಎಂದು ನಿಟ್ಟುಸಿರು ಬಿಟ್ಟು ಹೇಳುತ್ತ ಕಣ್ಣೊರಸಿಕೊಂಡನು.

ಬಲವಾದ ಭುಜಗಳ ಭಯಂಕರ ವೀರನು, ಪ್ರಳಯ ಕಾಲದ ಸೂರ್ಯ ಸಮನಾದ ಉಗ್ರಕೋಪವನ್ನು ತಾಳಿದನು. ಹರಿಹರ ಬ್ರಹ್ಮ ಬಲವುಳ್ಳ ಕೋದಂಡವನ್ನು ಜಗತ್ತು ಕಂಪಿಸುವಂತೆ ಕೈಗೆ ತೆಗೆದುಕೊಂಡನು.

❑



~~~~~~~~~~~~~~~~~~~~~~~~ ಸಂಚಿಕೆ – ೯ ~~~~~~~~~~~~~~~~~~~~~~~~

ಸೆರೆ ಸಿಲ್ಕಿದನೊ ವೈರಿ !

ಓರ್ವ ಯಕ್ಷನು ಮಂದಾರ, ಪಾರಿಜಾತ, ಸಂತಾನ, ಕಲ್ಪವೃಕ್ಷ ಮತ್ತು ಹರಿಚಂದನ ದೇವತರುಗಳಿಂದ ಕೂಡಿದ ಮೇರುಗಿರಿಯ ತೀರಪ್ರದೇಶದಲ್ಲಿ, ಅವುಗಳ ತಂಪಾದ ನೆರಳಿನಲ್ಲಿ–ಮೂರ್ಛಿತೆಯಾಗಿದ್ದ ತನ್ನ ಸುಂದರಸ್ತ್ರೀ ಸತಿಯನ್ನು ತೋಳುಗಳಿಂದ ಇಳಿಸಿದನು. ಪ್ರಿಯನ ಶುಶ್ರೂಷೆಯಿಂದ ಆ ಯಕ್ಷಿಗೆ ಪ್ರಜ್ಞೆ ಮರಳಿತು. ಆದರೆ ಅವಳು ತಕ್ಷಣ ಬೆಚ್ಚಿಬಿದ್ದಂತೆ ತನ್ನ ಕಣ್ಣುರೆಪ್ಪೆಗಳನ್ನು ಮುಚ್ಚಿಕೊಂಡಳು. ಆಗ ಅವನು ಹೇಳಿದನು,

‘ಎಲೆ ಹೆಣ್ಣೆ, ಕಣ್ಣು ಬಿಡು! ಬಿಡುಗಣ್ಣರು ಎನ್ನುವ ನಮ್ಮ ಬಿರುದಿಗೆ ಏತಕ್ಕೆ ಬರಿದೆ ಭಂಗ ತರುವೆ? ನಾವೀಗ ಲಂಕೆಯ ಗಗನ ಸೀಮೆಯಿಂದ ಅತಿದೂರಕ್ಕೆ
~~~~~~~~~~~~~~~~~~~~~~~~

ಬಂದಿದ್ದೇವೆ. ಸತಿಯೆ, ಕನಕಗಿರಿಯ ತಪ್ಪಲಿನ ಶಾಂತಿಯ ಕ್ಷೇಮದೆದೆಯಲ್ಲಿ ನಾವಿದ್ದೇವೆ.'

'ಇನಿಯನೆ, ನೀನು ನನ್ನನ್ನು ಮೂರ್ಛೆಯಿಂದ ಎಚ್ಚರಿಸಿ ಮರಣಕ್ಕೆ ನೂಕುತ್ತಿರುವೆ. ನನಗೆ ಮತ್ತೆ ಮರೆವನ್ನು ತರುವ ಮೂಲಿಕೆಯ ಪಾನೀಯವನ್ನು ಕೊಡು. ರಾಮರಾವಣರ ಯುದ್ಧವನ್ನು ಪ್ರತ್ಯಕ್ಷ ನೋಡದಿದ್ದರೇನು? ಆ ಸ್ಮರಣೆಯೆ ಭಯ ಮರಣ ಕಾರಣವಾಗುತ್ತದೆ! ನಾನು ಬೇಡವೆಂದು ಹೇಳಿದೆ. ನೀನು ಬಾರ, ಬಾ, ಬಾರೆಂದು ಕಾಡಿಸಿ ಕರೆದೆ! ಅಯ್ಯೋ, ಲೋಕಭೀಕರವಾದ ರಾಮ ರಾವಣರ ಯುದ್ಧದ ಹೆಸರಿನ-ಜಗತ್‌ಪ್ರಲಯ ಪ್ರಾರಂಭದ ದೃಶ್ಯವನ್ನು ನೋಡಿಯೇ ಸತ್ತೆ!

'ನನಗಿನ್ನು ಸಾಕು! ಕರುಣೆಯಿಂದ ವಿಸ್ಮೃತಿಯ ರಸವನ್ನು ನೀಡು. ಕುಡಿದು ಆ ಘೋರವನ್ನು ಮರೆಯುತ್ತೇನೆ! ಇಲ್ಲದಿದ್ದರೆ, ನಾನು ಇನ್ನು ಮುಂದೆ ಇನ್ನೆಲ್ಲಿಗೂ ನಿನ್ನೊಡನೆ ಬರುವುದಿಲ್ಲ! ನಿನಗೆ ರುಚಿಸುವುದಾದರೆ ಆ ಲಂಕೆಯ ನಭದ ಅಂಗಣಕ್ಕೆ ನೀನು ಹೋಗು. ನಾನು ಒಲ್ಲೆ!'

ನಲ್ಲೆ ಹೀಗೆ ಹೇಳಲು, ಅವಳ ಸೇವೆಗೆ ಆಳುಗಳನ್ನು ನೇಮಿಸಿದನು. ರಾಮರಾವಣರ ಸಂಗ್ರಾಮ ಭೂಮಿಗೆ ಸಾಗಲು ಬಿಳಿಯ ಕೊಡೆಯಂತೆ ಕಾಣುತ್ತಿದ್ದ ಮೋಡದ ವೇದಿಕೆಗೆ ನೆಗೆದನು. ಮಧ್ಯದಲ್ಲಿ ಬಿಟ್ಟು ಹೋಗಿದ್ದ ಅವನು, ಮೊದಲಿನಿಂದಲೂ ನಿಂತು ರಸವನ್ನು ಆಸ್ವಾದಿಸುತ್ತಿದ್ದ ಓರ್ವ ಖೇಚರ ಗೆಳೆಯನನ್ನು ಆಶ್ಚರ್ಯದಿಂದ ಕೇಳಿದನು:

'ದಶರಥ ಸುತನು ರಥವೇರಿ ಕಾಳಗವನ್ನು ನಡೆಸುತ್ತಿದ್ದಾನೆ! ಆ ರಥ ಅವನಿಗೆ ಎಲ್ಲಿಂದ ಬಂದಿತು?'

'ಅದು ನಿಜವಾಗಿ ಇಂದ್ರನ ರಥ! ತೋರಿಕೆಗೆ ನಳನ ರಚನೆಯಂತಿದೆ. ಅಲ್ಲಿ ಲಘಾಮು ಹಿಡಿದು ಇಂದ್ರನ ಸಾರಥಿ ಮಾತಲಿಯೆ ರಥ ನಡೆಸುತ್ತಿದ್ದಾನೆ. ವಾನರನು ಬರಿ ನೆಪಕ್ಕೆ ಕುಳಿತಿದ್ದಾನೆ. ಮಾತಾಡಬೇಡ! ನೋಡು, ನೋಡಲ್ಲಿ! ಶ್ರೀರಾಮನ ಬತ್ತಳಿಕೆಯಿಂದ ಬಾಣರೂಪದಲ್ಲಿರುವ ಜಟಾಯುವಿನ ಅಣ್ಣ ಸಂಪಾತಿಯನ್ನು ಹೊರಕ್ಕೆ ಎಳೆಯುತ್ತಿದ್ದಾನೆ. ಜಟಾಯುವನ್ನು ಕೊಲೆ ಮಾಡಿದ ಕಾರಣದಿಂದ ರಾವಣನ ತಲೆ ತೆಗೆಯುವುದಾಗಿ ಉಗ್ರ ಪ್ರತಿಜ್ಞೆ ಮಾಡಿದವನು ಆ ಸಂಪಾತಿ!'

ಶ್ರೀರಾಮನು ಶರಧಿಯ ಹೊಟ್ಟೆಗೆ ಕೈಯಿಟ್ಟು ಬಡಬಾಗ್ನಿಯನ್ನು ಹೊರಕ್ಕೆ ಎಳೆಯುವ ರೀತಿಯಲ್ಲಿ, ಬೆನ್ನ ಶರಧಿಯಿಂದ ಸಂಪಾತಿಯ ಬಾಣಶರೀರವನ್ನು ಎಳೆದನು. ಅವನು ಮಿಂಚಿನ ಗರಿಗಳಿಂದ, ಹದ್ದಿನ ಮುಖದಿಂದ, ವಜ್ರಕೊಕ್ಕುಗಳಿಂದ ಕೂಡಿ ಚಟಚಟಿಸುತ್ತ ಪ್ರಕಟವಾದನು.

ಕತ್ತರಿಸಿದುದು ಕುತ್ತಿಗೆಯನಸುರೇಂದ್ರನಾ!

‘ದೇವ, ನನ್ನ ಬಾಳು ಧನ್ಯವಾಯಿತು. ದೇವಿಯನ್ನು ರಕ್ಷಿಸಲು ತನ್ನ ಪ್ರಾಣವನ್ನು ಅರ್ಪಿಸಿದ ನಿನ್ನ ಮಿತ್ರ ಜಟಾಯುವಿನ ಅಣ್ಣ ನಾನು! ಈ ರಾಕ್ಷಸನ ತಲೆಯನ್ನು ತರಿಯುವ ವ್ರತ ನನ್ನದು. ವೇಗವಾಗಿ ತೊಡು. ಬೇಗ ಅವನ ತಲೆಕಡಿದು ತಮ್ಮನಿಗೆ ರಕ್ತದ ತನಿ ಎರೆಯುತ್ತೇನೆ.’

‘ನಿನ್ನ ಪ್ರತಿಜ್ಞೆ ನೆರವೇರಲಿ’ ಎಂದು ದಾಶರಥಿಯು ಅಸುರನ ಶಿರಗಿರಿಗೆ ಬಾಣವನ್ನು ಗುರಿಯಿಟ್ಟು ಬಿಟ್ಟನು. ಮಿಂಚಿನ ಶರೀರದ, ಮಿಂಚಿನ ಗರಿಯ, ಮಿಂಚುವ ಬಾಣಪಕ್ಷಿಯನ್ನು ತುಂಡರಿಸಲು ರಾವಣನು ಪ್ರಯೋಗಿಸಿದ ಬಾಣಗಳನ್ನು ಲೆಕ್ಕಿಸದೆ ಅದು ಮುನ್ನುಗ್ಗಿತು. ದಾನವರು ‘ಹಾ, ಹಾ’ ಎಂದು ಹಾಹಾಕಾರ ಮಾಡುತ್ತಿರಲು ಅದು ಅಸುರೇಂದ್ರನ ಕುತ್ತಿಗೆಯನ್ನು ಕತ್ತರಿಸಿತು! ಆದರೆ, ಇದೇನು? ಅದು ಉರುಳಲು ಆ ತಲೆಯಿದ್ದ ಜಾಗದಲ್ಲಿ ಇನ್ನೊಂದು ತಲೆ ಮೂಡಿತು!

‘ತಲೆ ಒಂದು ಉರುಳಿದರೆ ಏನು? ಹತ್ತು ತಲೆಯವನು ನಾನು.’ ಎಂದು ಹೇಳಿದ ಗಂಡುಗಲಿ ರಾವಣನು ಖಡ್ಗವನ್ನು ಹಿಡಿದನು. ತನ್ನ ಕತ್ತರಿಸಿದ ತಲೆಯನ್ನು ಕೊಕ್ಕಿನಲ್ಲಿ ಹಿಡಿದು ಆಕಾಶಕ್ಕೆ ಚಿಮ್ಮಿದ ಜಟಾಯುವಿನ ಅಣ್ಣನನ್ನು ಗಗನ ಗಮನ ವಿದ್ಯಾ ವಿಶಾರದನಾದ ಅವನು ತಡೆದನು. ಆಗ ಸಂಪಾತಿಯು ಹೇಳಿದನು:

‘ನಾನು ಜಟಾಯುವಿನ ಸಹೋದರ. ರಾಮನಿಂದ ಪ್ರಚೋದಿತನಾದವನು! ನನ್ನೊಡನೆ ಹೋರಾಡಿದರೆ ನಿನ್ನ ಎಷ್ಟು ತಲೆಗಳು ನಿನ್ನನ್ನು ಉಳಿಸಬಲ್ಲವು? ಹೇಡಿ, ನನ್ನ ಸ್ವಾಮಿಯಿಲ್ಲದ ವೇಳೆ ಮೋಸದಿಂದ ದೇವಿಯನ್ನು ಕದ್ದೊಯ್ದ ನಾಚಿಕೆಗೇಡಿ.’

‘ಅಂದು ನಿನ್ನ ತಮ್ಮನಿಗೆ ಆದುದೆ ಇಂದು ನಿನಗಾಗುವುದು ನಿಜ.’

ಅಂದು ನಿನಗಿರ್ದುದಯ್ ಪೊತ್ತ ಸೀತೆಯ ರಕ್ಷೆ.’

‘ಅಂದು ನಿನಗೆ, ಹೊತ್ತುಕೊಂಡಿದ್ದ ಸೀತೆಯ ರಕ್ಷೆಯಿತ್ತು. ದೇವಿಯನ್ನು ಹಿಡಿದೆ, ಜಟಾಯುವಿನಿಂದ ಬದುಕಿದೆ! ಇಂದು ಅವಳಿಲ್ಲದೆ ನಿನ್ನ ಆಯಸ್ಸು ತೀರಿತೆಂದೇ ತಿಳಿ!’

ಎಂದು ಹೇಳಿ ಗಿಡುಗಗಳ ಕುಲವೀರನು ರಾಕ್ಷಸನನ್ನು ಎದುರಿಸಲು ಹೊರಟನು. ಅದರ ಗರಿಯ ಗಾಳಿಯ ಭೀಮ ವೀರ್ಯಕ್ಕೆ ಬೆದರಿದಂತೆ ಮೇಘ ಸಂಕುಲವು ಚದುರಿ ಹೋದವು. ಆಗ ಜಟಾಯುವಿನ ಆತ್ಮವು ಆಕಾಶವಾಣಿಯಾಗಿ ಅಣ್ಣನನ್ನು ಹೀಗೆ ಎಚ್ಚರಿಸಿತು:

‘ಪಕ್ಷಿಗಳ ವೀರನೇ, ತಡೆ ತಡೆ, ಕಾರ್ಯವನ್ನು ಕೆಡಿಸಬೇಡ. ರಾಕ್ಷಸನು ಇಂದು ರಾಮಚಂದ್ರನನ್ನು ಹೊರತುಪಡಿಸಿ, ಯಾರಿಂದಲೂ ಸೋಲತಕ್ಕವನಲ್ಲ. ನಿನ್ನ ಪ್ರತಿಜ್ಞೆ

ನೆರವೇರಿತು. ನೀನು ರಾವಣನ ಮೊದಲ ತಲೆಯನ್ನು ಕಡಿದ ಕೀರ್ತಿಯ ಕಿರೀಟಧಾರಿಯಾಗಿರುವೆ!'

ಅದನ್ನು ಕೇಳಿ ಸಂಪಾತಿಯು, ರಾವಣನನ್ನುದ್ದೇಶಿಸಿ,

'ಎಲವೊ ರಕ್ಕಸನೆ, ನನ್ನ ಕೊಕ್ಕಿಗೆ, ಕಾಲಿಗೆ ಸಿಕ್ಕಿಸಾಯದಿರು! ನಿನ್ನ ಪ್ರಾಣವು ರಾಮನ ಬಾಣಕ್ಕೆ ಅರ್ಪಿತವಾಗುವ ಪುಣ್ಯ ಮುಹೂರ್ತಕ್ಕಾಗಿ ಕಾಯುತ್ತಿದೆ. ರಾಮಬಾಣಕ್ಕೆ ನಿನ್ನ ಪ್ರಾಣವನ್ನು ನೈವೇದ್ಯವಾಗಿಸುವ ಪುಣ್ಯವನ್ನು ಬಿಟ್ಟು, ಈ ಹದ್ದಿನ ಕಾಲಿನ ಉಗುರುಗಳಿಗೆ ಬಲಿಯಾಗುವ ಪಾಪಕ್ಕೆ ಏಕೆ ಧಾವಿಸಿ ಬರುತ್ತಿರುವೆ! ನಿನ್ನನ್ನು ಹುಡುಕಿ ಬರುತ್ತಿರುವ ರಾಮಬಾಣಗಳನ್ನು ನೋಡು. ನಡೆ, ನಡೆ. ಆ ಹರಿತವಾದ ಪುಣ್ಯಗಳನ್ನು ಎದುರಿಸು!'

ಎಂದು ಹೇಳಿ ಅದು ದೈತ್ಯ ಶಿರಸಹಿತವಾಗಿ ಗರುಡಲೋಕಕ್ಕೆ ಹಾರಿ ಹೋಯಿತು.

ಲಂಕೇಶ್ವರನು ಮತ್ತೆ ತೇರಿನ ಕಡೆಗೆ ತಿರುಗಿದನು. ಬತ್ತಳಿಕೆ ಬತ್ತಿತೊ ಎಂಬಂತೆ ವೈರಿಯ ಹರಿತ ಬಾಣಗಳನ್ನು ಕತ್ತರಿಸಿದನು. ಒತ್ತಿ ಬರುತ್ತಿರುವ ವೈರಿಸೈನ್ಯವನ್ನು ಪಕ್ಕಕ್ಕೆ ಸರಿಸಿ, ರಾಮನನ್ನು ಸೆರೆಹಿಡಿಯುವ ಮನಸ್ಸಿನಿಂದ ರಥವನ್ನು ಹತ್ತಿರ ಹತ್ತಿರಕ್ಕೊಯ್ದನು. ಅದನ್ನು ನೋಡಿ ಮಾತಲಿಯು ರಾಮನನ್ನು ಹೀಗೆ ಕೇಳಿಕೊಂಡನು.

'ಲೀಲಾವತಾರಿಯೆ, ನೀನು ಏತಕ್ಕೆ ತಡಮಾಡುತ್ತಿರುವೆ? ರಾಕ್ಷಸೇಶ್ವರನ ತಲೆಗಳನ್ನು ಕತ್ತರಿಸು!'

ಅದನ್ನು ಕೇಳಿ ಮೈಥಿಲೀಶ್ವರನು ಚಿಂತೆಗೊಳಗಾಗಿ,

'ಇಂದ್ರಸಾರಥಿಯೆ, ನಿನಗೆ ಅದನ್ನು ಹೇಗೆ ಹೇಳಲಿ? ಈತನಿಗೆ ಪತಿವ್ರತಾ ಸತಿಯಿರುವಳು! ಹಾಗಿಲ್ಲದಿದ್ದರೆ ನನ್ನ ಮಂತ್ರಾಸ್ತ್ರಗಳು ಸುಮ್ಮನೆ ವ್ಯರ್ಥವಾಗುತ್ತಿದ್ದವೆ? ನಾನು ಈತನನ್ನು ಕೊಲ್ಲಬೇಕಾದರೆ ಒಂದು ಅಸಾಧಾರಣವಾದ ಉಪಾಯವನ್ನು ಹೂಡಿ ಸೋಲಿಸಬೇಕು. ಹಾಗಲ್ಲದೆ ಗೆಲ್ಲಲಾಗದು.'

ಎಂದು ಹೇಳಿ ಬತ್ತಳಿಕೆಯಿಂದ ತೆಗೆದು ಮಹಾಸ್ತ್ರಗಳನ್ನು ಹೂಡಿದನು. ಒಂದೇ ವೀಣೆ ಅನೇಕ ತಂತಿಗಳಿಂದ ಇಂಚರವನ್ನು ಹೊಮ್ಮಿಸುವಂತೆ, ಒಂದೇ ಕೋದಂಡದಿಂದ ಹಲವು ಬಾಣಗಳು ನೆಗೆದು ರಾಕ್ಷಸನ ಶಿರಸ್ಸನ್ನು ತುಂಡರಿಸಿದವು. ಆ ರಕ್ತ ರೌದ್ರವನ್ನು ಏನೆಂದು ಹೇಳುವುದು! ಶಿರಗಳು ಕತ್ತರಿಸಿ ಚಿಮ್ಮಿದ ರಕ್ತದಿಂದ ಆಕಾಶವು ಸಂಜೆ ಗೆಂಪಾಯಿತು!

ರಾವಣನು ಕತ್ತರಿಸಿ ಕತ್ತರಿಸಿ ಉರುಳುತ್ತಿರುವ ಹಸಿತಲೆಗಳನ್ನು ಕಡೆಗಣಿಸಿ, ಮುಂದು ಮುಂದಕ್ಕೆ ಸಾಗಿ ರುದ್ರತ್ರಿಶೂಲ ರೀತಿಯ ಮಹಾಶೂಲವನ್ನು ಹಿಡಿದೆತ್ತಿದನು.

ರಾಘವನ ಎದೆಗೆ ಗುರಿಯಿಟ್ಟನು. ಅದು ರೋಷ ಭೀಷಣ ಯಮನ ನಾಲಗೆಯಂತೆ, ಅಗ್ನಿಜ್ವಾಲೆಯು ದಿಕ್ಕುದಿಕ್ಕುಗಳನ್ನು ನೆಕ್ಕಿ ನೊಣೆಯುವಂತೆ ಪ್ರಜ್ವಲಿಸಿತು. ನೆಲದಲ್ಲಿ ಮತ್ತು ಆಕಾಶದಲ್ಲಿದ್ದ ರಾಕ್ಷಸ ಜಯಾಕಾಂಕ್ಷಿಗಳು ಅದರ ರೌದ್ರತೆಯನ್ನು ಕಂಡು ಹಿಗ್ಗಿದರು. ಸುರರು ಕುಗ್ಗಿದರು. ವಾನರರು ತಲೆ ತಗ್ಗಿಸಿದರು. ಜಗದ ಅಂತರಂಗದಲ್ಲಿ ಭಯ ರಸದ ಅಲೆಯೆದ್ದಿತು.

ರಜತಗಿರಿಯು ರಘುವರನ ಕ್ಷೇಮಚಿಂತನೆಯ ಕಾತರದಿಂದ ಬೇಡುವಂತೆ ಶಿವನ ಪಾದಗಳನ್ನು ಬಲವಾಗಿ ಹಿಡಿದುಕೊಂಡಿತು! ಅದೇನು ಪ್ರಾರ್ಥನೆಯ ಬಲವೊ? ಅವರಿವರು ಇರಲಿ, ಸ್ವತಃ ರಾವಣನೇ ತಾನಾಗಿ ಮಹಾಶೂಲವನ್ನು ರಾಮನ ಮಂಗಳಕ್ಕಾಗಿ ಹೀಗೆ ಪ್ರಾರ್ಥಿಸಿದನು:

ಶತ್ರುಜೀವಮಂ ಬಲಿಗೊಳ್ಳದಾತನಂ ಸೆರೆವಿಡಿಯಲೆನಗೆ ನೀಂ ನೆರವಾಗು!

'ಆಯುಧವರೇಣ್ಯನೇ, ಹೇ ಸರ್ವಶೂಲ ಗುರುದೇವನೇ, ದುರ್ಗಾ ಹಸ್ತಸ್ಪರ್ಶದಿಂದ ಮಹಿಮಾನ್ವಿತನಾದ ಅಮೋಘ ವೀರಪ್ರಾಣನೇ, ನನ್ನ ಅಂತರಂಗ ರಹಸ್ಯದ ಪ್ರಾರ್ಥನೆಯನ್ನು ಆಲಿಸು. ನಾನು ಇದುವರೆಗೆ ಯಾವಾಗಲೂ ಈ ರೀತಿ ಕೇಳಿ ಪ್ರಾರ್ಥಿಸಿಕೊಂಡಿರಲಿಲ್ಲ. ನಿನ್ನ ವ್ರತವನ್ನು ನಾನು ತಿಳಿದಿರುವೆನು. ತೊಟ್ಟ ಮೇಲೆ ವೈರಿಯ ಪ್ರಾಣವನ್ನು ನಿನಗೆ ಬಲಿಪಶುವಾಗಿ ನೈವೇದ್ಯವಿಟ್ಟಂತೆಯೆ ಎಂಬುದು ನಿಜ. ಆದರೆ ಇಂದು ನನಗಾಗಿ ವ್ರತಭಂಗವನ್ನು ಸಹಿಸಬೇಕು. ನೀನು ಶತ್ರುಜೀವವನ್ನು ಬಲಿತೆಗೆದುಕೊಳ್ಳದೆ, ಅವನನ್ನು ನಾನು ಸೆರೆಹಿಡಿಯಲು ಸಹಾಯ ಮಾಡು! ಅವನಿಗೆ ಮೈಮರೆಯುವಷ್ಟೆ ತಾಗು! ನಡೆ, ಹೋಗು!'

ಹೀಗೆ ಕೇಳಿಕೊಂಡು ಶೂಲವನ್ನು ಆಗಸಕ್ಕೆ ಎಸೆದನು. ಸಾರಥಿಗೆ ದಿಗಿಲಾಗುವಂತೆ, ನೋಡುವವರು ಬೆರಗಾಗುವಂತೆ ತೇರಿನಿಂದ ಭೂಮಿಗೆ ಧುಮುಕಿದನು. ರಾಮನ ಚಿನ್ನದ ವೇಣುಧ್ವಜವನ್ನು ವೀಕ್ಷಿಸುತ್ತ, ಆ ದಿಕ್ಕಿನ ಧರೆ ಅದುರುವಂತೆ ನಡೆದನು. ವಾನರಸೈನ್ಯವು ಬೆದರಿ ದಿಕ್ಕುದಿಕ್ಕಿಗೆ ಓಡಿತು. ದೇವತೆಗಳ ಮುಖದಲ್ಲಿ ವಿಸ್ಮಯ ಭರಿತ ಭಯ ಆವರಿಸಿತು. ದೃಢ ಮನದಿಂದ ಖಡ್ಗ ಹಸ್ತನಾಗಿ ಧಾವಿಸಿದನು! ಆಗಸದಲ್ಲಿ ರಾಕ್ಷಸರು 'ಗೆಲ್ ಗೆಲ್ ದಶಾನನ!' ಎಂದು ಕೂಗಿದರು.

ರಾಕ್ಷಸೇಶ್ವರನು ವೈರಿಯ ಎದೆಯ ಗುರಿಯಾಗಿ ಅಭಿಮಂತ್ರಿಸಿ ಎಸೆದ ಶೂಲವು ಆಗಸಕ್ಕೆ ಏರುವ ಸುವರ್ಣ ದೀಪ್ತಿಯ ಪಥವನ್ನು ನೋಡುತ್ತ, ದೇವರಾಜನ ರಥದ ಕುದುರೆಗಳು ಕಂಪಿಸಿದುವು. ಜ್ವಾಲೆಗಳಿಂದ ಕೂಡಿ ಧೂಮಕೇತುವಂತೆ, ರಾಮ ಹೃದಯ ರಕ್ತಪಾನದ ಆಸಕ್ತಿಯಿಂದ, ವೇಗದಿಂದ, ಹಠಮನದ ದೃಢ ಗಮನದಿಂದ ರೌದ್ರತ್ರಿಶೂಲ ಹತ್ತಿರ ಹತ್ತಿರ ಬರುತ್ತಿದ್ದಿತು. ಅದನ್ನು ಕಂಡು ಮಾತಲಿಯ ದೃಷ್ಟಿ ಚಂಚಲವಾಯಿತು.

ಕಡಿವಾಣ ಹಿಡಿದಿದ್ದ ಮುಷ್ಟಿಯು ರೋಮಾಂಚನಗೊಂಡಂತೆ ನಡುಗಿತು. ಅವನು ಶ್ರೀರಾಮಚಂದ್ರನಿಗೆ ಕೂಗಿ ಹೇಳಿದನು:

'ಹೇ ಪ್ರಭುವೇ, ತೊಡು ತೊಡು ಮಹಾಸ್ತ್ರವನ್ನು! ದಿಕ್‌ಪಾಲಕರ ರಕ್ತವನ್ನು ಕುಡಿದು ಕೊಬ್ಬಿರುವ ದೈತ್ಯಶೂಲಕ್ಕೆ ಸಾಧಾರಣ ರೀತಿ ಸಲ್ಲುವುದಿಲ್ಲ. ಇದುವರೆಗೆ ತ್ರಿಲೋಕದ ವೀರರಲ್ಲಿ, ಈ ತ್ರಿಶೂಲವನ್ನು ವ್ಯರ್ಥವಾಗಿಸಿದ ಸಮರ್ಥರನ್ನು ನಾನು ಕಂಡಿಲ್ಲ. ಇದು ಕುಬೇರನನ್ನು ಗೆದ್ದಿದೆ, ಯಮನನ್ನು ಓಡಿಸಿದೆ, ಇಂದ್ರನನ್ನು ಬೆನ್ನಟ್ಟಿ, ದೇವತೆಗಳ ನಾಡಿನಲ್ಲಿ ಮೂರು ಸುತ್ತಾಡಿಸಿದೆ. ಕೊನೆಯ ತಲೆಯ ರಾವಣನಿಗೆ ಕೊನೆಯ ಅಸ್ತ್ರ ಇದು. ನಿಜವಾಗಿ ಇದು ರಾಕ್ಷಸನ ಉದ್ಧಾರ ಸೂರ್ಯನ ಉದಯ ಅಥವಾ ಅಸ್ತವನ್ನು ನಿರ್ಣಯಿಸುತ್ತದೆ. ಅಮೃತಮಯವಾದ ಈ ಪುಣ್ಯ ವೇಳೆಯ ಯೋಗವನ್ನು ಕಳೆದುಕೊಳ್ಳದ ಹಾಗೆ ಅಸ್ತ್ರವನ್ನು ತೊಡು. ಅಗೋ, ನೋಡು. ಮುಳುಗುತ್ತಿರುವ ಸೂರ್ಯನ ಆ ಪಶ್ಚಿಮಘಟ್ಟದ ಅಂಚಿನಲ್ಲಿ ಶುಭಚಿಹ್ನೆ ಶೋಭಿಸುತ್ತಿದೆ. ಸಂಧ್ಯಾ ಸಮಯದಲ್ಲಿ ಆಗಸದ ಮೋಡವು ಸರ್ಪದ ಎಡೆಯಂತೆ ಕಾಣುತ್ತಿದೆ!'

ಮಾತಲಿಯ ಮಾತಿಗೆ ಮೈಥಿಲೀಸ್ವಾಮಿ ಮೌನಿಯಾದನು. ರಾವಣನ ಬೆನ್ನಹಿಂದೆ ಬಹುದೂರದಲ್ಲಿ ಎತ್ತರದಲ್ಲಿ ಒಂದು ಮೋಡವು ಸರ್ಪದ ಹೆಡೆಯೆತ್ತಿ ಆಶೀರ್ವದಿಸಿದಂತಿರುವುದನ್ನು ನೋಡಿದನು. ಮಾತಲಿಯ ಮಾತಿಗೆ ಏನೂ ಉತ್ತರಿಸದಿದ್ದನು. ಆಗ ಮಾತಲಿಯು ಮತ್ತೆ ಹೀಗೆ ನುಡಿದನು:

'ರಘೂತ್ತಮನೇ, ನಿನಗೆ ಅದು ವಿಶ್ವದ ಆಶೀರ್ವಾದ, ದಶಾನನನಿಗೆ ಸರ್ಪ ವಿಷಸಮಾನ. ಅದು ನಿನಗೂ ರಾಕ್ಷಸನಿಗೂ ಸಂಕೇತವಾಗಿ ಆಗಸದಲ್ಲಿ ಕೆತ್ತಿರುವ ದೇವಲಿಪಿ! ಬೇಗ ಬ್ರಹ್ಮಾಸ್ತ್ರವನ್ನು ತೊಡು. ತಡವಾದಷ್ಟು ಕೇಡು. ಅದೋ, ನೋಡು. ಶೂಲರೂಪದ ಮೃತ್ಯು ಹೇಗೆ ನಿನ್ನೆಡೆಗೆ ನುಗ್ಗುತ್ತಿದೆ! ಆಲಸ್ಯದಿಂದ ಅಮೃತವು ವಿಷವಾಗುತ್ತದೆ!'

ಗುರಿನೋಡಿ, ಕಿವಿವರೆಗೆಳೆದು, ಬಿಟ್ಟನಾ ಬ್ರಹ್ಮಾಸ್ತ್ರಮಂ!

'ಮಹೇಂದ್ರ ಸಾರಥಿಯೇ, ತಾಳ್ಮೆ, ತಾಳ್ಮೆ, ತಾಳ್ಮೆ! ಅಗಸ್ತ್ಯ ಮುನಿಯು ನನಗೆ ಆದಿತ್ಯಹೃದಯ ಮಂತ್ರವನ್ನು ಕೊಟ್ಟಿರುವನು. ತಪಸ್‌ತೇಜವನ್ನು ಜಾಗೃತಗೊಳಿಸಲು ಅದನ್ನು ಜಪಿಸುತ್ತಿದ್ದೆನು. ದೇವಸೂತನೇ, ಕುದುರೆಗಳ ಕಡಿವಾಣವನ್ನು ದೃಢಮುಷ್ಟಿಯಿಂದ ಹಿಡಿ! ಈಗ ನಡೆಯುವ ಒಂದು ರುದ್ರ ಘಟನೆಗೆ ಸಿದ್ಧನಾಗು!'

ಎಂದು ಹೇಳುತ್ತ ಯುದ್ಧರುದ್ರನಾದ ಆ ಕೋದಂಡ ರಾಮಚಂದ್ರನು ರಥಪೀಠದಿಂದ ಎದ್ದು ನಿಂತುಕೊಂಡನು. ನೋಡುವವರ ಪ್ರಾಣ ಭಯಪಡುವಂತೆ ಬತ್ತಳಿಕೆಗೆ ಕೈಯಿಟ್ಟನು. ಉಜ್ವಲವಾದ ವಜ್ರದ ಗರಿಗಳಿಂದ, ಬಡಬಾಗ್ನಿಯ ಭೀಷಣತೆಯಿಂದ ಕೂಡಿ ಪ್ರಲಯ

ಅಗ್ನಿಯನ್ನು ಒಡಲಲ್ಲಿ ಹೊಂದಿದ್ದ ಬ್ರಹ್ಮಾಸ್ತ್ರವು ಹೊಮ್ಮಿತು. ಅದು ಬಹು ಸೂರ್ಯರ ನಾಲಗೆಯಿಂದ ತಳತಳಿಸುವ ವಿದ್ಯುತ್ ಮಹಾಸರ್ಪದಂತಿತ್ತು. ಸೃಷ್ಟಿಯು ತನ್ನ ದುರ್ಗತಿಗೆ ಮೂರ್ಛೆ ಹೋಯಿತು. ಲಯವು ನಿಟ್ಟುಸಿರಿಟ್ಟಿತು. ಪರ್ವತಶ್ರೇಣಿಗಳು ನಡುಗಿದವು. ಸಮುದ್ರಗಳು ಅಲ್ಲೋಲ ಕಲ್ಲೋಲವಾದವು. ಅಗ್ನಿಪರ್ವತಗಳು ಭಯಂಕರ ಯುಗಾಂತಕವಾದ ಲಾವರಸವನ್ನು ಹೊಮ್ಮಿದವು. ದೇವತೆಗಳು ಮತ್ತು ರಾಕ್ಷಸರು ಓಡಿ, ಕೈಲಾಸ ಮೇರು ಮಂದರ ಪರ್ವತಗಳನ್ನು ಬೇಡಿ, ಅವುಗಳ ಮರೆಯಲ್ಲಿ ಹುದುಗಿ ನಿಂತರು!

ಬ್ರಹ್ಮಾಸ್ತ್ರದ ಹಿಂದಿನ ಗರಿಯಲ್ಲಿ ಬ್ರಹ್ಮತೇಜಸ್ಸು, ಮಧ್ಯೆ ವಿಷ್ಣುವಿನ ಚಿತ್ ತಪಶ್ಶಕ್ತಿ, ಮೊನೆಯಲ್ಲಿ ಪ್ರಳಯರುದ್ರ ನೆಲೆಸಿದ್ದರು. ಅದು ತನ್ನೊಳಗೆ ಹರಿ, ಹರ, ಬ್ರಹ್ಮ ಚೈತನ್ಯಗಳನ್ನು ಒಳಗೊಂಡ ದಿವ್ಯಾಸ್ತ್ರವಾಗಿತ್ತು. ಅದಕ್ಕೆ ಅಸ್ತ್ರ ವಿದ್ಯಾಕೋವಿದ ಅಗಸ್ತ್ಯರ ಶಿಷ್ಯ ಶ್ರೀರಾಮಚಂದ್ರನು ರಾಮತ್ವ ಸತ್ತ್ವವನ್ನು ಹುದುಗಿಸಿ ತಾನು ಅದರ ಅಂತರಾತ್ಮವನ್ನು ಪ್ರವೇಶಿಸಿದನು. ಸಿಂಜಿನಿಯ ಠೇಂಕಾರದ ಸಿಂಹನಾದಕ್ಕೆ ಕಪಿಸೈನ್ಯವು ಬೊಬ್ಬಿರಿಯಿತು.

'ಗೆಲ್ ಗೆಲ್, ರಘೂತ್ತಮಾ! ಫೇ ಉಫೇ' ಎಂದು ಆಕಾಶ ಮಂಟಪದಲ್ಲಿ ಸಂಭ್ರಮದಿಂದ ಸುರರು ಹರಸಿದರು. ರಾಮಚಂದ್ರನು ಗುರಿನೋಡಿ, ಕಿವಿಯವರೆಗೆ ಎಳೆದು ಬ್ರಹ್ಮಾಸ್ತ್ರವನ್ನು ಬಿಟ್ಟನು!

ರಾಕ್ಷಸೇಶ್ವರನು ಕೈಯಿಂದ ಎಸೆದ ತ್ರಿಶೂಲವು ಯಮವೇಗದಿಂದ ರಾಮಚಂದ್ರನ ಎಡೆಗೆ ಬರುತ್ತಿದ್ದಿತು. ಬ್ರಹ್ಮಾಸ್ತ್ರವು ಪರ್ವತ ಹೃದಯ ಭಿತ್ತಿಯನ್ನು ಸೀಳುವ ಸಿಡಿಲಿನ ಶಬ್ದದಿಂದ ಸಾಗಿ–ಲಯದ ಉಲ್ಕೆಯಂತಹ ಉಗ್ರಶೂಲದ ಮುಂಭಾಗವನ್ನು ತಾಗಿತು. ಎರಡು ಕಡೆಯ ಸೈನಿಕರು 'ಹಾ ಹಾ' ಎಂದು ಗೋಳಾಡಿದರು. ದೇವ ದಾನವರ ಗುಂಪುಗಳು ನರಳಿದವು. ಚರಾಚರಗಳೆಲ್ಲವು ಬೆಂದವು! ಕಿಡಿಯ ಸಮೂಹವು ಕೆದರಿತು. ದಳ್ಳುರಿಯ ದೀಪ್ತಿಯು ವ್ಯಾಪಿಸಿತು. ಕೆಂಪಾದ ಸಂಧ್ಯಾ ಗಗನದ ಅಂಗಣವು ರಣದಂತೆ ಪ್ರಜ್ವಲಿಸಿತು!

ದೈತ್ಯನ ಆಯುಧವು ತುಂಡಾಗಿ ಕಡಿದು ಬಿದ್ದಿತು. ಅಯ್ಯೊ ಮತ್ತಿದೇನು! ಹಾ ಎನ್ನುವಷ್ಟರಲ್ಲಿ ಮುರಿದ ಅದರ ಮುಂಭಾಗದ ಒಂದು ಚೂರು ರಾಮಚಂದ್ರನ ವಿಶಾಲ ಎದೆಯ ವೈಕುಂಠವನ್ನು ಹೊಕ್ಕಿತು! ಈ ಬ್ರಹ್ಮಾಂಡ ಮಂಡಲದಲ್ಲಿ ರಾವಣನ ಆತ್ಮಕ್ಕೆ ಪವಿತ್ರ ತಮ ರಕ್ಷೆ ಸೀತಾಪ್ರಿಯನ ಮಹಾಉದಾರ ಎದೆಯಲ್ಲದೆ ಬೇರೆ ತಾಣ ಉಂಟೆ?

'ಸೆರೆಸಿಲ್ಕಿದನೊ ವೈರಿ! ತಿರುಗಿಸು ವರೂಥಮಂ ಪುರಕೆ!'

ಶೂಲದ ಆಘಾತಕ್ಕೆ ಮೂರ್ಛೆಹೋಗಿ ತೇರಿಗೆ ಒರಗಿದ ವೀರ ರಾಮಚಂದ್ರನನ್ನು ಕಂಡು ರಾವಣನು ಹಿಗ್ಗಿದನು. ಅವನನ್ನು ಹಿಡಿದು ತನ್ನ ರಥಕ್ಕೆ ಹೊತ್ತೊಯ್ಯುವ

ಉತ್ಸಾಹದಲ್ಲಿ ಆನಂದದಿಂದ ಮುನ್ನುಗ್ಗಿದನು. ಕಾಳ್ಗಿಚ್ಚು ತನ್ನನ್ನು ತಡೆಯಲುಬಂದ ಹುಲ್ಲಿಗೆ ಸಲ್ಲಿಸುವ ಮನ್ನಣೆಯಂತೆ, ತನ್ನನ್ನು ತಡೆಯಲು ಬಂದ ಕಪಿವೀರರನ್ನು ಖಡ್ಗದಿಂದ ಹೊಡೆದು ಉರುಳಿಸಿದನು.

ರಾಮನನ್ನೇ ಗುರಿಮಾಡಿಕೊಂಡು ಧಾವಿಸುತ್ತಿರುವಾಗ, ತನ್ನ ಮೇಲೆ ಎರಗಿ ಬರುತ್ತಿದ್ದ ಬ್ರಹ್ಮಾಸ್ತ್ರವನ್ನು ರಾಕ್ಷಸನು ನೋಡಿದನು. ಕೋಪಗೊಂಡನು. ಅದನ್ನು ಹಿಡಿದು ನೆಲಕ್ಕೆ ಎಸೆಯುವೆನು ಎಂಬ ದೃಢಹಠದಿಂದ – ಆ ಮಹಾ ಬ್ರಹ್ಮ ಬಾಣವನ್ನು ಮತ್ತು ಜಾನಕೀಪ್ರಿಯನ ಪ್ರಾಣವನ್ನು ಹಿಡಿದನು!

ಹಿಡಿದುದೇ ತಡ ಆ ಬಾಣವು ರಾಕ್ಷಸನ ದೈತ್ಯಬಲವನ್ನು ಕಡೆಗಣಿಸಿ, ಅವನ ಹೃದಯವನ್ನು ಪ್ರವೇಶಿಸಿತು. ಆ ಅಸ್ತ್ರದ ಕಾಂತಿಗೆ ಅವನ ಹೃದಯ ಗವಿಯ ಗೂಬೆಗತ್ತಲು ಹೊರಹೊಮ್ಮಿ ಲೋಕತ್ರಯವನ್ನು ತುಂಬಿತು. ಧರೆಯನ್ನು ಅಮಾವಾಸ್ಯೆಯ ಕತ್ತಲಂತೆ ಆಕ್ರಮಿಸಿತು! ರಾವಣನು ಅದು ಎದೆಯನ್ನೊಡೆದು ಬೆನ್ನಿನಿಂದ ಹೊರಹೊಮ್ಮಿ ಹೋಗದಂತೆ ಭದ್ರಮುಷ್ಟಿಯಿಂದ ಹುಬ್ಬುಗಂಟಿಕ್ಕಿ ಹಿಡಿದಿದ್ದನು. ಅವನಿಗೆ ಅದರಲ್ಲಿ ರಾಮನ ಆಕೃತಿ ಕಂಡಿತು.


'ಸಿಕ್ಕಿದನಲಾ ಶತ್ರು!' ಎಂದು ಕೂಗುತ್ತ ಹಿಂತಿರುಗಿ ಉನ್ಮತ್ತನಂತೆ ತನ್ನ ತೇರಿಗೆ ನೆಗೆದನು. ಸಾರಥಿಗೆ ಕೂಗುತ್ತ ಆಜ್ಞೆ ಮಾಡಿದನು:

'ವೈರಿ ಸೆರೆಸಿಕ್ಕಿದ್ದಾನೆ! ರಥವನ್ನು ಪುರಕ್ಕೆ ಹಿಂತಿರುಗಿಸು.'

ಎದೆಯನ್ನು ಹೊಕ್ಕ ಬಾಣದ ಅರ್ಧವನ್ನು ಹಿಡಿದು ರಕ್ತಮಯನಾದ ಮಯನಂದನಾಪ್ರಿಯನನ್ನು ನೋಡಿದ ಸಾರಥಿಯು, ತನ್ನ ದೊರೆಯ ಮತಿಯು ವಿಕಲವಾಯಿತೆಂದುಕೊಂಡನು. ಕೂಡಲೇ ರಥವನ್ನು ನಗರದ ಕಡೆಗೆ ತಿರುಗಿಸಿದನು!

ಈ ಕಡೆ ದಶಗ್ರೀವನು ಗಾಯಗೊಂಡು ಕೋಟೆಗೆ ಓಡಿದನೆಂಬ ಸುದ್ದಿಯು ಕಪಿಸೇನಾ ಸಮುದ್ರದಲ್ಲಿ ಭೋರ್ಗರೆಯಿತು. ಆ ಕಡೆ ರಾಕ್ಷಸಸೇನೆಯಲ್ಲಿ, ನರ ಸಹೋದರರಿಬ್ಬರನ್ನು ಸಾಯುವಂತೆ ಸದೆಬಡಿದು, ಬ್ರಹ್ಮಾಸ್ತ್ರವನ್ನು ವಿಫಲವಾಗಿಸಿ ಲಂಕೇಶ್ವರನು ನೊಂದುಕೊಂಡನು. ಶ್ರಮನಿವಾರಣಾರ್ಥವಾಗಿ ನಗರಕ್ಕೆ ಹೋದನು ಎಂಬ ಸುದ್ದಿ ಹರಡಿತು. ಎತ್ತೆತ್ತಲೂ ಕಗ್ಗತ್ತಲು ಆವರಿಸಿ ಮಸಿಬಳಿದಂತೆ ಪೃಥ್ವಿಯನ್ನು ಅಳಿಸಿ ಹಾಕಿತು. ಶಂಕೆಗೊಳಗಾದ ಇಂದ್ರನ ಆಸ್ಥಾನದ ಕಣ್ಣುಗಳಂತೆ ಬಾಂದಳದಲ್ಲಿ ನಕ್ಷತ್ರಗಳು ಕಿಕ್ಕಿರಿದು ಮಿರುಗಿದುವು.

❑



~~~~~~~~~~~~~~~~~~~~~~~ ಸಂಚಿಕೆ – ೧೦ ~~~~~~~~~~~~~~~~~~~~~~~

ದೈತ್ಯನೇರ್ದನ್ ಚೈತ್ಯಮಂಚಮಂ

ಪುಣ್ಯ ಹೃದಯದ ಅಮೃತದ ಸಂಗವನ್ನು ಬಯಸುವ ಒಲವಿನಿಂದ ಬ್ರಹ್ಮಾಸ್ತ್ರವು ರಾವಣನ ಹೃದಯದಲ್ಲಿ ಮುಳುಗಿತು. ಅವನ ಪ್ರಾಣವೆಂಬ ಅಮೃತವನ್ನು ಹೀರಿತು. ರಾವಣನು ಬಾಣವನ್ನು ಎಡಗೈಯಿಂದ ಹಿಡಿದು, ರಕ್ತ ಸುರಿಯುತ್ತಿರಲು ಘೋರವಾಗಿ ಕಾಣುತ್ತಿದ್ದನು. ಮತಿವಿಕಾರದಿಂದ ಭ್ರಾಂತಿಗೊಳಗಾಗಿದ್ದನು. ಸಾರಥಿಯು ಅತಿ ದುಃಖಿತನಾಗಿ ಕಳವಳಗೊಂಡನು. ಅವನು ಏಕಾಂಗಿಯಾಗಿ ಕುದುರೆಗಳಿಗೆ ನಾಲಗೆ ಜೋಲುವಂತಹ ವೇಗದಿಂದ ರಥವನ್ನು ನಡೆಸಿ ದೈತ್ಯೇಂದ್ರನನ್ನು ಅರಮನೆಗೆ ತಂದನು.
~~~~~~~~~~~~~~~~~~~~~~~

ಲಂಕೆಯಲ್ಲಿ ಕಳವಳ ಹಬ್ಬಿತು. ಪರಿಜನಕ್ಕೆ ಭೀತಿ ತಬ್ಬಿತು. ವೈದ್ಯರು ಹೃದಯದಲ್ಲಿ ನಾಟಿದ್ದ ಅಸ್ತ್ರವನ್ನು ತೆಗೆಯುವ ಬಗೆ ತಿಳಿಯದೆ ಚಿಂತೆಗೊಳಗಾದರು. ಮೂರ್ಛಿತ ಮಹಾರಾಜನನ್ನು ತೇರಿನಿಂದ ಪಲ್ಲಕ್ಕಿಗೆ ಇಳಿಸಿದರು. ಅನಂತರ ಮಲಗು ಮಂಚಕ್ಕೆ ಮಹಾರಾಣಿ ಮಂಡೋದರಿಯ ಧೈರ್ಯಸನ್ನಿಧಿಗೆ ಮೆಲ್ಲನೆ ಒಯ್ದರು. ಅವಳು ಪ್ರಿಯನ ನೆತ್ತರು ಸೋರುವ ಶರೀರದ ರಣರುದ್ರ ಭಂಗಿಯನ್ನು, ಬ್ರಹ್ಮಶರ ಹೊಕ್ಕದ್ದನ್ನು ನೋಡಿದಳು.

'ಹಾ ಸ್ವಾಮಿ, ಪ್ರತಿಜ್ಞೆ ನೆರವೇರಿತೆ? ಸೆರೆಹಿಡಿದು ತಂದ ಮೈಥಿಲೀನಾಥನನ್ನು ತೋರಿಸು. ನನಗೆ ತೋರಿಸು.' ಎಂದು ನಿಟ್ಟುಸಿರು ಬಿಡುತ್ತ ಅಳುತ್ತ ದಶಕಂಠನ ಅರ್ಧಾಂಗಿಯು ಶೈತ್ಯೋಪಚಾರವನ್ನು ಮಾಡಿದಳು. ಮಂತ್ರ ಶುಶ್ರೂಷೆಯನ್ನು, ಶಸ್ತ್ರ ಶಾಸ್ತ್ರ ಚಿಕಿತ್ಸೆ ಮಾಡಲು ಅಪ್ಪಣೆ ನೀಡಿದಳು.

ಗೆಲ್ದೆನಾ ರಾಮನಂ! ಸೆರೆವಿಡಿದೆ ತಂದಿಹೆನ್!

ರಾವಣನಿಗೆ ಆಗ ನಿಧಾನವಾಗಿ ಪ್ರಜ್ಞೆ ಮರಳಿತು. ಪಕ್ಕಕ್ಕೆ ಹೊರಳಿದನು. ನೋವಿನಿಂದಾಗಿ ನರಳಿದನು. ಕಣ್ತೆರೆದು ನೋಡಿದನು. ಮರವೆಯಿಂದ ಸ್ಮೃತಿಯ ಜಾಗೃತಿಗೆ ಬಂದನು. ಮುಖದಲ್ಲಿ ಶಾಂತಿ ನೆಲೆಸಿತು. ಕಣ್ಣಿನ ಕಾಂತಿಯು ಸಂತೋಷ ಚಿತ್ತವನ್ನು ಕನ್ನಡಿಸಿತು. ಹೆಮ್ಮೆಯ ನಗೆಯ ಮೊಗ್ಗು ತುಟಿಯಲ್ಲಿ ಅರಳಿತು. ಪ್ರಿಯೆಯ ಮುಖ ನೋಡಿ,

'ರಾಣಿಯೇ, ಪುರವನಿತೆಯನ್ನು ಹೊಸ ತಳಿರು ತೋರಣಗಳಿಂದ ಸಿಂಗರಿಸಲು ಹೇಳು! ಶುಭದ ವಾರ್ತೆಯನ್ನು ಮಂಗಳವಾದ್ಯಗಳು ಘೋಷಿಸಲಿ! ಮಹಾರಾವಣ ವಿಜಯ ಕಥಾ ಕಾವ್ಯವನ್ನು ಲಂಕಾ ಲತಾಂಗಿಯರು ಹಾಡಲಿ! ನಾನು ರಾಮನನ್ನು ಗೆದ್ದಿದ್ದೇನೆ! ಸೆರೆಹಿಡಿದು ತಂದಿದ್ದೇನೆ!'

ಎಂದು ಒಂದಿಷ್ಟೂ ಸಂಶಯವಿಲ್ಲದಂತೆ ರಾವಣನು ಹೇಳಿದನು. ಸುತ್ತಲೂ ದೃಷ್ಟಿ ಹರಿಸಿದನು. ತಮ್ಮ ಕಟ್ಟೇಕಾಂತವನ್ನು ನೋಡಿ ಮನದ ನಿಶ್ಚಯವನ್ನು ಹೀಗೆ ಮುಂದುವರಿಸಿ ಹೇಳಿದನು.

'ನೋಡಿಲ್ಲಿ! ಲೋಕೈಕ ವೀರನನ್ನು ನನ್ನ ಭದ್ರಮುಷ್ಟಿಯಲ್ಲಿ ಹೇಗೆ ಹಿಡಿದಿದ್ದೇನೆ! ಈ ಕಪ್ಪವನ್ನು ತೆಗೆದುಕೊ. ಮಾತೆ ಸೀತೆಗೆ ಕಾಣಿಕೆಯಾಗಿ ಕೊಡು. –ಆಗ ನಿನಗೆ ಸೋತವನು, ತಾನೆಯೇ ನಿನಗೆ ಸೋತು; ನೀನು ಯಾರಿಗಾಗಿ ಸೋತಿದ್ದೆಯೊ ಅವನನ್ನು ಗೆದ್ದು ನಿನಗೆ ಒಪ್ಪಿಸಿದ್ದಾನೆ. ತಪ್ಪನ್ನು ಕ್ಷಮಿಸು –ಎಂದು ಹೇಳು.'

'ಮಹಾಮತಿಯೆ, ನೀನು ಹಿಡಿದಿರುವುದು ಬಾಣದಗರಿ; ರಘೂತ್ತಮನ ಶರೀರವೆಂಬ ಭ್ರಾಂತಿ. ಸುಮ್ಮನೆ ಕಿತ್ತೆಸೆಯಲು ಅರ್ಹವಾದುದನ್ನು ಹೀಗೆ ಬಿಗಿದು ಅಪ್ಪಿಕೊಂಡು ತಪ್ಪು ಮಾಡುತ್ತಿರುವೆ.'

ಎಂದು ಅಳುತ್ತ ಹೇಳಿದ ಮಯಸುತೆಗೆ ರಾವಣನು ಹುಬ್ಬುಗಂಟಿಕ್ಕಿ ಹೇಳಿದನು,

'ಹೆಣ್ಣೆ, ಭ್ರಾಂತಿ ಯಾರಿಗೆ? ನಿನಗೊ ನನಗೊ? ರಾಮನನ್ನು ಪ್ರಾಣರೂಪದಿಂದ ಇಲ್ಲಿ ಪೂರ್ಣವಾಗಿ ಹಿಡಿದಿದ್ದೇನೆ. ಅಲ್ಲಿ ರಾಮನ ಕಳೇಬರಕ್ಕೆ ವೈದ್ಯರು ಔಷದೋಪಚಾರ ನಡೆಸುತ್ತಿರಲು ವಾನರರು ಗೋಳಿಡುತ್ತಿದ್ದಾರೆ. ನೀನು ಪತಿವ್ರತೆಯಾದರೆ ನಾನು ಹೇಳಿದಂತೆ ಮಾಡು! ನೀನು ಇದನ್ನು ನನ್ನ ಎದೆಯಿಂದ ಎಳೆದು ತೆಗೆ. ಸೀತೆ ಮತ್ತು ನೀನಲ್ಲದೆ ಅನ್ಯರಿಗೆ ಈ ರಾಮನ ಮಹಾನ್ ಶರಶರೀರವನ್ನು ಸ್ಪರ್ಶಿಸಲು ಸಾಧ್ಯವಿಲ್ಲ!'

ಪತಿಯ ಆಜ್ಞೆಗೆ ಪ್ರತಿ ನುಡಿಯಲಾರದೆ ಪತಿವ್ರತೆಯು ಮಹಾಸ್ತ್ರವನ್ನು ಇನಿಯನ ಮುಷ್ಟಿಯಿಂದ ಸಡಿಲಿಸಿದಳು. ಬಾಣದ ತುದಿಯನ್ನು ಬಲವಾಗಿ ಹಿಡಿದಳು. ಕಿತ್ತು ಎಳೆದು ಎತ್ತಿದಳು. ರಕ್ತದ ಹೊನಲು ಓಕುಳಿಯ ಬುಗ್ಗೆಯಂತೆ ಚಿಮ್ಮಿ ಹರಿದುದನ್ನು ಕಂಡು ಎಚ್ಚರತಪ್ಪಿದಂತೆ ನಡುಗಿದಳು. 'ಹಾ ಹಾ, ಅಯ್ಯೊ ಕೆಟ್ಟೆನು. ಕೊಂದೆನು.' ಎಂದು ರೋದಿಸಿದಳು.

ರಾವಣನು ಮುಷ್ಟಿಯನ್ನು ಬಿಟ್ಟ ತಕ್ಷಣ, ಅವನ ಎದೆಯಿಂದ ಹೊರಕ್ಕೆ ಬಂದುದೇ ತಡ ಆ ಬ್ರಹ್ಮಬಾಣವು ಅವನ ಪ್ರಾಣವನ್ನು ಹೀರಿತು. ರಾಮನ ಆತ್ಮದಲ್ಲಿ ಮೋಕ್ಷವನ್ನು ಪಡೆಯಿತು!

ಆ ಕಡೆ ರಘುಕುಲೋತ್ತಮನ ಮನೋಪರ್ವತದ ಶಿಖರವನ್ನು ಮುತ್ತಿದ್ದ ಕತ್ತಲೆಯ ಕಡಲಿನ ಅಂಚಿನಲ್ಲಿ ಚೈತನ್ಯ ಚಂದ್ರನು ಉದಯಿಸಿದನು! ಅದನ್ನು ಕಂಡು ಕಪಿಸೈನ್ಯ ಘೇ ಘೇ ಎಂದು ಉತ್ಸಾಹದಿಂದ ಕುಣಿದಾಡಿತು.

ಕಡಲು ತಲ್ಲಣಿಸಿತು. ಭೂಮಿ ನಡುಗಿತು. ಭಾರ ಪರಿಹಾರವಾಯಿತೆಂದು ದಿಗ್ಗಜಗಳು ಬೆನ್ನುಕೊಡವಲು, ಬೆಟ್ಟಗಳು ಅಸ್ಥಿರತೆಯಿಂದ ತೊನೆದಾಡಿದವು. ಮೂರುಲೋಕಗಳು ಕಂಟಕದಿಂದ ವಿಮೋಚನೆಗೊಂಡ ಆನಂದದಿಂದ ರೋಮಾಂಚನಗೊಂಡವು. ಆಹ್ಲಾದ ಲಹರಿಯು ಮಿಂಚಿನಂತೆ ಸಂಚರಿಸಿತು.

ಭವ್ಯವಾದ ವ್ಯಕ್ತಿಯೊಬ್ಬನು ಜನ್ಮಾಂತರವನ್ನು ಪಡೆಯಲು ಕಣ್ಮರೆಯಾದ ಸಂಕಟಕ್ಕೆ ಸೃಷ್ಟಿಯು ಖಿನ್ನಗೊಂಡಿತೊ ಎಂಬಂತೆ ಭೀಕರಕತ್ತಲು ಅಮಾವಾಸ್ಯೆರಾತ್ರಿಯ ಅಂಧಕಾರವನ್ನು ಹೆಚ್ಚಿಸಿತು. ಅಸುರರ ಕಣ್ಣೀರೊ ಅಥವಾ ಸುರರ ಆನಂದ ಬಾಷ್ಪಗಳೊ ಎಂಬಂತೆ ಆಗಸದಿಂದ ತಾರೆಗಳ ಜೊತೆಗೂಡಿ ಹೂವಿನ ಮಳೆ ಸುರಿಯಿತು.

ಭರತದೇವಂಗೆ ಸೋದರಂ ಪಿಂ ಮರಳ್ದಂತೆ ಕನಸಾಗಲು

ನಂದಿಗ್ರಾಮದ ಪರ್ಣಕುಟಿಯಲ್ಲಿ ನಿದ್ರಿಸಿದ್ದ ಭರತ ದೇವನಿಗೆ, ಸಹೋದರ ರಾಮಚಂದ್ರನು ಹಿಂದಕ್ಕೆ ಬಂದಂತೆ ಕನಸಾಯಿತು. ಅವನು ಎದ್ದು ಪೂಜಾಗೃಹವನ್ನುಹೊಕ್ಕು

ಮಹಾಶಿವಶಕ್ತಿಯನ್ನು ಪ್ರಾರ್ಥಿಸತೊಡಗಿದನು. ಅದು ಕ್ಷುದ್ರದುಃಖವನ್ನು ಮೀರಿದ ಮಹತ್ತರವಾದ ಘಟನೆಯಲ್ಲವೆ?

ಮಂಡೋದರೀ ದೇವಿಯು ತನ್ನ ಸ್ವಾಮಿಯ ಕಳೇಬರದ ಪಾದದೆಡೆಯಲ್ಲಿ ನಿಷ್ಪಂದ ನೀರವ ಶಿಲಾಪ್ರತಿಮೆಯಂತೆ ಉರುಳಿ ಬಿದ್ದಳು. ಶ್ರೀರಾಮನ ಎಚ್ಚರಗೊಂಡ ಮತ್ತು ರಾವಣನ ನಿಧನ ಯೋಗದ ಶ್ರೀ ಮುಹೂರ್ತದಲ್ಲಿ ಲೋಕವೆಲ್ಲವೂ ಹರ್ಷ ಶೋಕಗಳನ್ನು ಅನುಭವಿಸಿತು!

ಸೀತಾಪತಿಯು ಮೂರ್ಛೆ ಹೊಂದಿದ್ದನೊ? ಸಮಾಧಿಸ್ಥನಾಗಿದ್ದನೊ? ಅಂತೂ ಲೋಕ ಲೋಕಾಂತರದಲ್ಲಿ ಸಂಚರಿಸಿ ತನ್ನ ಚಿದಾಕಾಶ ತನುವನ್ನು ತೊರೆದನು. ಮರ್ತ್ಯಕ್ಕೆ ಇಳಿದನು. ಅಲ್ಲಿ ತನ್ನ ಅನ್ನಮಯ ಕೋಶವನ್ನು ಹುಡುಕುವ ರೀತಿಯಲ್ಲಿ ಸುತ್ತಲೂ ನೋಡಿ,

'ಎಲ್ಲಿ? ನನ್ನ ಒಡಲು ಎಲ್ಲಿ? ತಾಯಿ ಕೌಸಲ್ಯೆಯ ಮಗನ ಶರೀರ ಎಲ್ಲಿ?' ಎಂದನು. ಆಗ ಅವನನ್ನು ಅರಿತ ಆಂಜನೇಯನು,

'ದೇವ, ಇಲ್ಲಿದೆ, ಈ ನೀಲವಿಗ್ರಹಕ್ಕೆ ಅವತರಿಸು.' ಎಂದು ಹೇಳಿದನು. ಅದನ್ನು ಕೇಳಿ ವಾನರರೆಲ್ಲ ಆಶ್ಚರ್ಯ ಚಕಿತರಾದರು. ಆಗ ರಾಮಚಂದ್ರನು ಮುಂದೆ ನಿಂತಿರುವವರನ್ನು ನೋಡಿ ಅವರ ಭಾವವನ್ನು ಗ್ರಹಿಸಿದನು. ಮಾರುತಿಯನ್ನು ಇಂಗಿತ ದೃಷ್ಟಿಯಿಂದ ನೋಡಿ ನಸುನಕ್ಕನು. ಮತ್ತೆ ಇಹಲೋಕದಲ್ಲಿ ಚೆನ್ನಾಗಿ ನೆಲೆಗೊಂಡು ಕಪಿಶ್ರೇಷ್ಠನನ್ನು ಕೇಳಿದನು.

'ಲಕ್ಷ್ಮಣ ಎಲ್ಲಿರುವನೆಂದು ಹೇಳು? ಸುಖವಾಗಿರುವನೆ?'

'ದೇವ ಮಂತ್ರೌಷಧಿಯ ಮಹಿಮೆಯಿಂದ ಕ್ಷೇಮವಾಗಿದ್ದಾನೆ. ಚಿಕಿತ್ಸಾಮಂಚದಲ್ಲಿ ವಿಶ್ರಮಿಸುತ್ತಿದ್ದಾನೆ.'

'ಅದೇನು, ಆಲಿಸಿರಿ!'

'ಲಂಕೆಯಿಂದ ಮೊಳಗುತ್ತಿವೆ!'

'ರಣಭೇರಿಯಲ್ಲ ಅದು!'

'ಮರಣಭೇರಿ'

ಎಲ್ಲರೂ ಅದಕ್ಕೆ ಕಿವಿಯಾದರು. ಫಾಲ್ಗುಣಮಾಸದ ರಾತ್ರಿಯ ಪೂರ್ವದ ಮುಖವು ಬೆದರಿ ಬಿಳಿಚಿಕೊಳ್ಳುವಂತೆ ದುಃಖ ವಾದ್ಯಗಳು ರುದ್ರಘೋಷಗಳು ಧಳಂ ಧಳಧಳಂ ಎಂದು ಮೊಳಗಿದವು. ಅದು ಲಂಕೆಯು ರಾವಣನ ಮರಣವಾರ್ತೆಯನ್ನು ಶೋಕವಾದ್ಯಗಳ ಮುಖಾಂತರ ಆ ರೀತಿ ಸಾರುತ್ತಿದೆ ಎಂಬಂತಿತ್ತು!

ಪ್ರಭುಸಹೋದರ ವಿಭೀಷಣನೆಡೆಗೆ ಬಂದುದು ಪುರಪ್ರಮುಖಗೋಷ್ಠಿ

ಅಷ್ಟರಲ್ಲಿ ಮೂಡಲಬೆಟ್ಟದ ಮುಡಿಯ ಅಟ್ಟಣೆಯಲ್ಲಿ ಚೈತ್ರ ಪ್ರಭಾತದ ಬಂಗಾರ ಕಿರಣಗಳ ದಿವಾಕರನು ಮೂಡಿದನು. ಅದು ನವಜೀವನೋದಯದ ಮಧುಮಾಸದ ಉದಯವನ್ನು ಭೂಮಂಡಲಕ್ಕೆ ಸಾರಿತು. ಲಂಕಾಪುರ ಪ್ರಮುಖರ ಗುಂಪು ಪ್ರಭುರಾವಣನ ಸಹೋದರ ವಿಭೀಷಣನ ಬಳಿಗೆ ಬಂದಿತು. ಕಂಬನಿ ದುಂಬಿ, ಶಿರಬಾಗಿ ಕೈ ಮುಗಿದು ನಿಂತವರಿಗೆ ಅವನು ಹೇಳಿದನು:

'ಮೊದಲು ಆ ಪ್ರಭುವಿಗೆ ಕೈ ಮುಗಿಯಿರಿ. ರಾಮನಾಜ್ಞೆಯೆ ನಮಗೆ ಯೋಗ್ಯ ಅನುಸರಣಾ ನಿಯಮ.'

ವಿಭೀಷಣನ ಅಭಿಪ್ರಾಯದಂತೆ ಅವರು ದಾಶರಥಿಗೆ ವಂದಿಸುತ್ತ ನುಡಿದರು:

'ಇನ್ನು ಮುಂದೆ ನೀನು ಹೇಳುವುದೇ ನಮಗೆ ಆಜ್ಞೆ, ನೀನು ನಮ್ಮ ಸ್ವಾಮಿ.'

ಆಗ ರಾಮನು ವಿಭೀಷಣನಕಡೆ ಮುಖಮಾಡಿ ಹೇಳಿದನು,

'ರಾಕ್ಷಸೋತ್ತಮನೇ, ಇನ್ನು ನೀನು ಸ್ವತಂತ್ರನು. ಈ ಸ್ವಾಮಿ ನಿಷ್ಠರನ್ನು ಗೌರವಿಸು. ನಿಷ್ಠುರವಾದ ನಡೆಗೆ ಇದು ಸೂಕ್ತ ಸಮಯವಲ್ಲ. ಅವರ ಕಷ್ಟವೇನೆಂದು ಕೇಳು.'

ಆ ಹಿತ ನುಡಿಗೆ ಒಪ್ಪಿದ ವಿಭೀಷಣನು ಪುರಪ್ರಮುಖರ ಕಡೆ ತಿರುಗಿ ಮುಗುಳ್ನಕ್ಕನು. ಆಗ ಅವರು ಹೀಗೆ ತಮ್ಮ ನೋವನ್ನು ತೋಡಿಕೊಂಡರು.

'ರಾಕ್ಷಸ ಮಹಾನೃಪನು ಬಾಣದಿಂದ ಎದೆಗೆ ಗಾಯವಾಗಿ ರಣರಂಗದಿಂದ ನಿನ್ನೆ ಸಂಜೆ ಹಿಂದಿರುಗಿದನು. ಕಳೆದ ರಾತ್ರಿ ನಿಧನ ಹೊಂದಿದನು. ಮಹಾರಾಣಿಯು ಪತಿಯ ಪಾದವನ್ನು ಹಿಡಿದು ಕಳೆದ ರಾತ್ರಿಯೇ ಇಚ್ಛಾಮರಣಿಯಾದಳು.'

'ಧನ್ಯೆ! ಪುಣ್ಯಾತ್ಮೆ! ಮಹಾತಾಯಿ! ನಿಜವಾಗಿ ಪತಿವ್ರತೆಯರರಾಣಿ' ಎಂದು ಅಲ್ಲಿ ನೆರೆದಿದ್ದ ವಾನರರು ಮಂಡೋದರಿಯನ್ನು ಹೊಗಳಿ ಮಾತಾಡಿಕೊಂಡರು. ಆಗ ಮತ್ತೆ ಪುರ ಪ್ರಮುಖರ ಗುಂಪು ಹೀಗೆ ನಿವೇದಿಸಿತು:

'ಲಂಕೆಯು ದುಃಖದ ಕಡಲಿನಲ್ಲಿ ಮುಳುಗಿದೆ. ಸಾವೆಂಬ ಸಿಡಿಲು ಬಡಿದು ಮನೆ ಮನೆಯು ಅಳುತ್ತಿದೆ. ಹೇ ವಿಭೀಷಣ ಮಹಾತ್ಮನೇ, ಲಂಕೆಯು ಒಮ್ಮನದಿಂದ ನಿನ್ನನ್ನೇ ನೆನೆಯುತ್ತಿದೆ. ಈ ಮಹಾವಿಪತ್ತಿನ ಸಮಯದಲ್ಲಿ ನಮ್ಮನ್ನು ಕಾಪಾಡಲು ನಿನ್ನನ್ನು ಹೊರತುಪಡಿಸಿ ಅನ್ಯ ಸತ್ತ್ವಸಮರ್ಥರು ನಮಗೆ ಗೋಚರಿಸುತ್ತಿಲ್ಲ. ನೀನು ಬಂದು ಮುಳುಗುತ್ತಿರುವ ಮಾತೃಭೂಮಿಯನ್ನು ಕೈಹಿಡಿದು ಮೇಲಕ್ಕೆತ್ತು. ನಿನ್ನ ಅಣ್ಣ ರಾವಣನ ಕಳೇಬರವು ತನ್ನ ಸತ್‌ಕ್ರಿಯೆಗಾಗಿ ನೀನು ಬರುವುದನ್ನೆ ಕಾಯುತ್ತಿದೆ. ನಿನ್ನ ಮಗಳು ಅನಲೆ ದೊಡ್ಡಪ್ಪನಬಳಿ ಕುಳಿತು ಅಳುತ್ತಿದ್ದಾಳೆ. ಮೇಘನಾದನ ಮಡದಿ

ತಾರಾಕ್ಷಿದೇವಿಯು ಮಗು ವಜ್ರಾರಿಗೆ ಎದೆಯೂಡದೆ ನಿನ್ನ ಆಗಮನಕ್ಕಾಗಿ ಹಸಿದು ವ್ರತದಿಂದಿದ್ದಾಳೆ. ಆ ಕಂದ ನಿನ್ನ ರಾಣಿ ಸರಮಾದೇವಿಯ ಕೈಯಲ್ಲಿ ಅನಾಥನಂತೆ ರೋದಿಸುತ್ತಿದೆ.'

ನಡಸು ಸೋದರಗೆ ರಾಜಗೌರವ ಸಹಿತಮಪರಸಂಸ್ಕಾರಮಂ.

ಮಂಜು ಕಲ್ಲಾದರೇನು? ಅದು ಘನೀಭೂತಗೊಂಡ ನೀರಲ್ಲವೆ? ವಿಭೀಷಣನ ಭೀಷಣಸ್ಥಿರತೆ ಕಂಪಿಸಿತು. ಅವನು ಕರಗಿದನು: ಮರುಗಿದನು. ತಡೆಯಲು ಎಷ್ಟೇ ಪ್ರಯತ್ನಿಸಿದರೂ ಯಶಸ್ವಿಯಾಗದೆ ಒಂದೆರಡು ಕಣ್ಣೀರು ತೊಟ್ಟಿಕ್ಕಿತು. ಅದನ್ನು ಇಕ್ಷ್ವಾಕು ವಂಶಜನಾದ ಶ್ರೀರಾಮಚಂದ್ರನು ನೋಡಿ ಹೀಗೆ ಹೇಳಿದನು:

'ದೈತ್ಯವರನೇ, ದುಃಖವನ್ನು ನಿಗ್ರಹಿಸು. ಹೋಗಿ ಲಂಕೆಯನ್ನು ಸಂತಯಿಸು. ಬಂಧು ಜನಗಳ ಮನದ ಬೇಗೆಯನ್ನು ತಣಿಸು. ಹಿರಿಯಣ್ಣನಿಗೆ ಐಹಿಕದ ಕೊನೆಯ ಸಂಸ್ಕಾರವನ್ನು ಮಾಡು.'

ಅದನ್ನು ಕೇಳಿ, ಸಂದೇಹ ಮನಸ್ಸಿನ ತೂಗುಯ್ಯಾಲೆಯ ವಿಭೀಷಣನು ಹೀಗೆ ಪ್ರಶ್ನಿಸಿದನು:

'ದಾಕ್ಷಿಣ್ಯದ ಮಾತು ಬೇಡ. ನಿನಗೆ ಇದು ಪ್ರಿಯವೆ? ಲೋಕಕಂಠಕನಾಗಿ ನಿನ್ನನ್ನು ಈ ರೀತಿ ದುಃಖಕ್ಕೆ ಒಳಗು ಮಾಡಿದ ನಿನ್ನ ವೈರಿ ರಾವಣ, ಅವನಿಗೆ ಉಚಿತವಾದ, ಪ್ರಭುಯೋಗ್ಯವಾದ ಮತ್ತು ವೀರಾರ್ಹ ಮರ್ಯಾದೆಗಳೊಡನೆ ನಾನು ಅಗ್ನಿಕಾರ್ಯವೆಸಗುವುದು ನಿನಗೆ ಒಪ್ಪಿಗೆಯೆ? ಎಂಬುದನ್ನು ತಿಳಿಸು.'

ಅದನ್ನು ಕೇಳಿ ಕರುಣಾದೃಷ್ಟಿಯ, ಮಂದಹಾಸ ಮುಖದ ರಾಘವನು ಹೀಗೆ ಉತ್ತರಿಸಿದನು:

'ಮುಂದೆ, ಮುಂದಿನ ಜನ್ಮದಲ್ಲಿ ಮಗನಾಗಿ ಹುಟ್ಟುವವನಿಗೆ ತಂದೆಯಾಗುವವನು ಇಂದೇ ಸಂಸ್ಕಾರ ಮಾಡುವಂತೆ, ನೀನು ಇಂದು ರಾವಣನಿಗೆ ಮಾಡುವ ಸತ್‌ಕ್ರಿಯೆಯಲ್ಲಿ ನಾನು ಸುಪ್ರೀತನಾಗಿದ್ದೇನೆ! ವೈರಿಯಾದರೂ ಆ ದಿವಂಗತ ದೈತ್ಯನು ವೀರತನದಲ್ಲಿ, ಆತ್ಮಸತ್ತ್ವದಲ್ಲಿ, ನಿರ್ಭೀತಿಯಲ್ಲಿ, ತೇಜಸ್ಸಿನಲ್ಲಿ, ಚಿತ್ತ ಶುದ್ಧಿಯಲ್ಲಿ ಮತ್ತು ಚಿತ್‌ತಪಸ್ ಶಕ್ತಿಯಲ್ಲಿ ನನಗೆ ಸಮನಾದವನು! ಯುದ್ಧದಲ್ಲಿ ಗೆಲುವು ಸೋಲುಗಳೇನು? ಪರಾಕ್ರಮವೇ ಪುರುಷಾರ್ಥವಲ್ಲವೆ? ಆ ದೃಷ್ಟಿಯಿಂದ ಅಸುರರಾಜನನ್ನು ಮೀರಿದ ವೀರರನ್ನು ಇದುವರೆಗೂ ಈ ಸೃಷ್ಟಿ ಮತ್ತು ವಿಧಿ ಕಲ್ಪನಾ ದೃಷ್ಟಿ ಕಾಣದು! ಶಂಕೆಯನ್ನು ಬಿಡು. ಈಗಲೇ ಲಂಕೆಗೆ ಹೋಗಿ ನಿನ್ನಿಷ್ಟ ಮತ್ತು ನನ್ನ ಆಜ್ಞೆಯ ಪ್ರಕಾರ ಲೋಕಮರ್ಯಾದೆಯಂತೆ ಸೋದರನಿಗೆ ರಾಜಗೌರವ ಸಹಿತ ಅಪರ ಸಂಸ್ಕಾರವನ್ನು ನಡೆಸು.'

ವಿಭೀಷಣನು ರಾಮನ ಆಜ್ಞೆಗೆ ತಲೆಬಾಗಿ ಪುರಪ್ರಮುಖರ ಸಮೂಹದೊಡನೆ, ಶೋಕ ಸಂತಪ್ತ ಪಾಪಿಯ ಚೇತನವನ್ನು ಪ್ರವೇಶಿಸುವ ದಿವ್ಯ ಕೃಪೆಯಂತೆ ಲಂಕಾ ನಗರಿಗೆ ನಡೆದನು. ಆಗ ಚುಂಬಿಸುವ ಹೊಂಬಿಸಿಲು ಬಂಗಾರದ ಉದಕದಂತೆ ಭುವನ ಮಂಡಲವನ್ನು ಬೆಳಗಿತು! ಸುಂದರ ಮರ ಪೊದೆಯ ತಗ್ಗು ಬೆಟ್ಟಗಳ ಕಾಡಿನಲ್ಲಿ ಇಳಿದುಹತ್ತಿ ವಿಭೀಷಣನು ಮರೆಯಾದನು. ಆಗ ರಾಮಚಂದ್ರನು ದುಃಖ ಭಾರದಿಂದ ಸುಗ್ರೀವನಿಗೆ ಹೀಗೆ ಹೇಳಿದನು:

ತಿಲೋದಕವೀವೆನೆನಗಾಗಿ ರಣಯಜ್ಞಕುಂಡದೊಳ್ ಬೇಳ್ವೆವಟ್ಟಾತ್ಮರಿಗೆ.

'ಕಪಿರಾಜನೇ, ಯುದ್ಧದಲ್ಲಿ ಮಡಿದವರಿಗೆ, ತಮತಮಗೆ ಉಚಿತವಾಗುವ, ಅವರವರ ಯೋಗ್ಯತೆಗೆ ತಕ್ಕ ಗೌರವಗಳೊಡನೆ ಕೊನೆಯ ಕರ್ಮಗಳನ್ನು ಮಾಡುವ ಆಜ್ಞೆಯಾಗಿದೆ ಎಂದು ಶಿಬಿರದಲ್ಲಿ ಸಾರುವಂತೆ ಹೇಳು. ಲಂಕೆಯು ಇನ್ನು ನಮಗೆ ವೈರಿಯಲ್ಲ. ಲಂಕಾನಿವಾಸಿಗಳು ತಂತಮ್ಮ ನೆಂಟರ ಕಳೇಬರಗಳನ್ನು ಹುಡುಕಲು ಹಿಂದಿನ ವೈರವನ್ನು ಬಿಟ್ಟು ರಣಭೂಮಿಗೆ ಬರಲು ಹೇಳು.

'ನಾನು ಇಂದು ಸಮುದ್ರ ಜಲದಲ್ಲಿ ಮಿಂದು ರಣಯಜ್ಞಕುಂಡದಲ್ಲಿ ನನಗಾಗಿ ಬೆಂದು ಹೋದ ಆತ್ಮಗಳಿಗೆ ಲೌಕಿಕ ಕೃತಜ್ಞತಾ ಸಂಕೇತವಾಗಿ ಎಳ್ಳುನೀರು ಬಿಡುತ್ತೇನೆ. ಅವರ ಆತ್ಮ ಮಂಗಲಾರ್ಥವಾಗಿ ಪ್ರಾಣಮಯ ಮತ್ತು ಮನೋಮಯದ ನೈವೇದ್ಯಗಳನ್ನು ನೀಡಿ ಪ್ರಾರ್ಥಿಸುತ್ತೇನೆ.'

ಎಂದು ಅಂತ್ಯಸಂಸ್ಕಾರಕ್ಕೆ ಆಜ್ಞೆಮಾಡಿದ ರವಿಕುಲಜನು ಚಿಂತಾಸಾಗರದಲ್ಲಿ ಮುಳುಗಿದವನಂತೆ ಅಂತಮುರ್ಖಿಯಾದನು. ಮೌನಿಯಾದನು. ಏಕಾಂತವನ್ನು ಬಯಸಿ ನಿರ್ಜನವಾದ ಕಡಲಕಡೆಗೆ ನಡೆದನು. 'ನಿರಪಾಯವಾದ ಈ ಲಂಕೆಯ ಬಗ್ಗೆ ಇನ್ನು ಯಾವುದೇ ಸಂದೇಹ ಬೇಡ.' ಎಂದು ಹೇಳಿ ಮೈಗಾವಲ ಆಳುಗಳನ್ನು ವಿಸರ್ಜಿಸಿದನು. ಸಮುದ್ರವೇ ಸುಗಭೀರ ಸಾಕಾರ ಮನುಷ್ಯರೂಪ ತಾಳಿದಂತೆ ಸಮುದ್ರಾಭಿಮುಖಿಯಾದನು!

ರಾಮನಂತರ್ಯಾಮಿ ರಾಮನಖಿಲವ್ಯಾಪಿ ರಾಮಮಯಮೀ ವಿಶ್ವವೆಂಬ ತತ್ತ್ವ

ಸಂಜೆಯವರೆಗೆ ಹುಡುಕಿದರೂ ಯಾರಿಗೂ ಆ ಚಂಡಕಿರಣ ಕುಲಮಂಡನನ ಮೂರ್ತಿ ಕಾಣಲಿಲ್ಲ. ಕೆಲವರು ಕಡಲದಂಡೆಯಲ್ಲಿದ್ದ ಎಂದು ಹೇಳಿದರು. ಇನ್ನು ಕೆಲವರು ಸುಡುವ ಚಿತೆಯಬಳಿ ನೋಡಿದೆವು ಎಂದರು. ಓರ್ವನು ಚಿತೆಗೇರಿಸಿದ ಸ್ನೇಹಿತನ ಹೆಣದ ಹತ್ತಿರ ಇದ್ದು ಅಳುತ್ತಿದ್ದ ಹೊತ್ತಿನಲ್ಲಿ ಆ ಆಪದ್‌ಬಂಧು ಬಂದು ಬೆನ್ನು ತಟ್ಟಿ, ಆ ಸ್ಪರ್ಶಕ್ಕೆ ಸುಖಪಡುವಂತೆ ಸಂತೈಸಿದನು ಎಂದು ಹೇಳಿದನು!

ಇನ್ನೋರ್ವನು ತನ್ನ ಮಿತ್ರನು, ಸತ್ತಹಾಗಿದ್ದ ತನ್ನ ಕಳೇಬರವನ್ನು ಎತ್ತಿ ಸಿದಿಗೆಯಲ್ಲಿಟ್ಟು, ಇನ್ನೇನು ಬೆಂಕಿ ತೋರಿಸಬೇಕು ಎನ್ನುವಷ್ಟರಲ್ಲಿ 'ಏಳಣ್ಣ! ಏಕೆ ಈ

ರೀತಿ ಮಲಗಿರುವೆ? ಬೇಗ ಏಳು! ಅದೊ ಬೆಂಕಿ ಹೊತ್ತುತ್ತಿದೆ!' ಎಂದು ಹೇಳಿ ಕರೆದು ಎಚ್ಚರಿಸಿದನು. ಕಣ್ಣು ತೆರೆಯುತ್ತ ಎದ್ದು ರಘುರಾಮ ಮೂರ್ತಿಯನ್ನು ನೋಡಿದೆನು. ಎಂದು ಹೇಳಿದನು! ಮತ್ತೊಬ್ಬ ವಾನರವೀರನು ದಯಾಸಿಂಧುವೇ ನೀನು ಬದುಕಿಸಿದೆ ಎಂದು ಕೈ ಮುಗಿದನು!

ಇದನ್ನು ಕೇಳಿದ ಕೆಲವರು ಮಂಡೋದರೀದೇವಿಯು ತನ್ನ ಗಂಡನೊಡನೆ ಚಿತೆಯೇರಿರಲು ಸುಡುತ್ತಿದ್ದ ವಿಭೀಷಣನ ಪಕ್ಕದಲ್ಲಿ ರಾಮಚಂದ್ರನನ್ನು ಕಂಡೆವೆಂದರು! ಅವರಿವರು ಅಲ್ಲಲ್ಲಿ, ಎಲ್ಲೆಲ್ಲಿಯೂ 'ನಾನು ಇಲ್ಲಿ ಕಂಡೆ, ನಾನು ಅಲ್ಲಿ ಕಂಡೆ.' ಎಂದು ಹೇಳುತ್ತಿದ್ದರು. ರಾಮನು ಅಂತರ್ಯಾಮಿ, ರಾಮನು ಅಖಿಲ ವ್ಯಾಪಿ, ಈ ವಿಶ್ವ ರಾಮಮಯ ಎಂಬ ತತ್ತ್ವದಂತೆ ವಾನರರು ತಮ ತಮಗೆ ತಿಳಿದಂತೆ ಪ್ರತಿಭಾನುರೂಪದಿಂದ ಕಂಡು ಹೇಳುತ್ತಿದ್ದರು.

ಬಲ್ಲೆನಾತ್ಮವನಮೃತಮೆಂದು

ವಾನರಭಟ ವಹ್ನಿಯು ಗೆಳೆಯ ರಂಹನ ಅಪರಕ್ರಿಯೆಯನ್ನು ಮುಗಿಸಿ ಕಡಲಲ್ಲಿ ಮಿಂದು ಬರುತ್ತಿದ್ದನು. ಆ ಸಂಜೆಗತ್ತಲಲ್ಲಿ ತಾನೊಬ್ಬನೆ ಸಮುದ್ರದಿಂದ ಹಿಂತಿರುಗುತ್ತಿದ್ದ ಅಪ್ರತಿಮ ಪುರುಷೋತ್ತಮ, ಜಗದ್ ವಿಭೂತಿಯನ್ನು ವಹ್ನಿಯು ಕಂಡನು. ಕೈ ಮುಗಿದ ಕಪಿವೀರನನ್ನು ನೋಡಿ ರಾಮಚಂದ್ರನು,

'ನಿನ್ನನ್ನು ಎಲ್ಲಿಯೊ ನೋಡಿದ ನೆನಪಿದೆ' ಎಂದು ಹೇಳಿ, ತಕ್ಷಣ ಪ್ರಶ್ನಿಸಿದನು. 'ಓಹೋ, ನೀನು ವಹ್ನಿಯಲ್ಲವೆ? ನಿನ್ನ ಗೆಳೆಯ ರಂಹನೆಲ್ಲಿ?'

'ಪ್ರಭು, ರಂಹನನ್ನು ಈಗತಾನೆ ಬೂದಿಗೊಳಿಸಿ ಸ್ನಾನ ಮಾಡಿ ಬಂದೆ.'

'ಶರೀರವನ್ನೆ?'

'ಹೌದೌದು ಒಡೆಯ. ಆತ್ಮ ಅಮೃತವೆಂಬುದನ್ನು ತಿಳಿದಿರುವೆ. ಬಾಯಿ ತಪ್ಪಿದೆನು.'

'ನೀನು ಲೋಕರೂಢಿಯಲ್ಲಿ ಹೇಳಿದೆ. ಅದರಲ್ಲೇನು ತಪ್ಪು? ಅಲ್ಲದೆ ಆತ್ಮವನ್ನು ಅಮೃತವೆಂದು ಕೇಳಿದವರು ಎಷ್ಟೋ ಮಂದಿ. ಕಂಡವರು ಕಡಿಮೆ.'

'ಅಷ್ಟೆ ನನ್ನ ತಿಳಿವು. ಅದಕ್ಕಿಂತಲೂ ಮುಂದಕ್ಕೆ ಹೆಚ್ಚಾಗಿ ಮುಂದುವರಿದಿಲ್ಲ. ನನ್ನ ಗುರುವು ತಾವು ಕಂಡ ಸತ್ಯವನ್ನು ಹೇಳಿದರು. ಅದನ್ನು ನಂಬಿದ್ದೇನೆ.'

'ಆ ಶ್ರದ್ಧೆಯೇ ನಿಜವಾದ ವಿದ್ಯೆ! ಅವಿದ್ಯೆಯನ್ನು ದಾಟಲು ಅಷ್ಟು ಸಾಕು. ಆದರೂ ಕೇಳು ವಹ್ನಿ, ಅಮೃತ ತತ್ತ್ವವನ್ನು ಕಾಣಲು ಸಾಧ್ಯ.'

'ನನ್ನೊಡೆಯನೇ, ನೀನು ಮುಂದೆ ನಿಂತಿರಲು, ನನಗೆ ಅದಕ್ಕಿಂತಲೂ ಬೇರೆ ಪ್ರಮಾಣ ಬೇಕೆ?'

'ನಿನ್ನಂತೆ ನಾನು. ನನಗೇನು ಪ್ರತ್ಯೇಕ ಕೋಡುಗಳಿವೆಯೆ? ನಾನೂ ಮನುಷ್ಯನೇ. ನಿನ್ನಂತೆ ಉಸಿರಾಡುತ್ತೇನೆ. ಉಣ್ಣುತ್ತೇನೆ, ಆಶಿಸುತ್ತೇನೆ, ಒಲಿಯುತ್ತೇನೆ, ಕೋಪಿಸಿಕೊಳ್ಳುತ್ತೇನೆ, ಮೋಹಿಸುತ್ತೇನೆ!'

'ದೇವ, ನನಗೆ ಅದೇ ಆಶ್ಚರ್ಯವಾಗಿದೆ! ನಮ್ಮಂತೆ ಇರುವ ನೀನು ಸಮುದ್ರಕ್ಕೆ ಸೇತುವೆ ಕಟ್ಟುವ ಸಮಯದಲ್ಲಿ ಅದು ಹೇಗೆ ಸಮುದ್ರವನ್ನು ಹಿಂದಕ್ಕೆ ನೂಕಿದೆ ಹೇಳು? ಸಮುದ್ರವನ್ನೇ ಹಿಂದಕ್ಕೆ ನೂಕುವ ನೀನು ನಮ್ಮಂತಹ ಅಲ್ಪರ ಸಹಾಯವನ್ನು ಏಕೆ ಬೇಡಿದೆ?'

'ನೀನು ಬರಿಯ ವೀರನಷ್ಟೇ ಅಲ್ಲ, ಜಾಣನೂ ಹೌದು.'

ಎಂದು ಹೇಳಿ ದೈತ್ಯಧ್ವಂಸಿ ನಕ್ಕು, ಸೈನಿಕನ ಕೆಚ್ಚನ್ನು ಮೆಚ್ಚಿದನು. ದುಃಖ ಪಡದಿರುವುದು ವೀರನಿಗೆ ಉಚಿತವೆಂಬ ರೀತಿಯಲ್ಲಿ ವಹ್ನಿಯು ಗೆಳೆಯನ ಸಾವಿನ ನೋವನ್ನು ಎದೆಯಲ್ಲಿ ತೀವ್ರವಾಗಿ ಹಿಡಿದು ಒತ್ತಿ ನುಡಿಯುತ್ತಿದ್ದುದನ್ನು ಕಂಡು ರಾಮಚಂದ್ರನು ಹೇಳಿದನು,

'ವಹ್ನಿ, ನಿನ್ನ ಮಿತ್ರನು ವೀರರಲ್ಲಿವೀರ.'

'ಮಹಾಪ್ರಭು, ಅವನು ಹೆಮ್ಮೆಯ ಸಾವು ಸತ್ತನು!'

ಎಂದು ಮೊನ್ನೆ ರಾಮನ ಹತ್ತಿರನಿಂತ ಆಂಜನೇಯನು ರಾಮನಾಜ್ಞೆಯಿಂದ ರಾಮಮಯವಾದ ಕಪಿಸೇನೆಯು, ರಾವಣರೂಪಿ ರಾಕ್ಷಸಸೇನೆಯ ಮೂಲಬಲವನ್ನು ಕಡಿದು ನಿರ್ಮೂಲನ ಮಾಡಿದ ದಿನ ಕಂಡುದನ್ನು ನೆನೆದನು. ಅಂದಿನ ರಂಹನ ಅತಿ ಸಾಹಸದ ಕಥೆಯೆಲ್ಲವನ್ನೂ ವಹ್ನಿ ವಿವರಿಸಿದನು. ಎಲ್ಲವನ್ನೂ ಮನಸ್ಸುಕೊಟ್ಟು ಕೇಳಿದ ರಾಮನು ನುಡಿದನು:

'ಬರ್ದುಕಿರ್ದೊಡಾತನುಂ ಸುಖಮಿರ್ಪುಡಿಸುತಿರ್ದುದೆಂಬೆನ್, ಮಹಾಪ್ರಭೂ.'

'ವಹ್ನಿಯೆ, ನಿನ್ನ ಗೆಳೆಯ ನಿಜವಾಗಿಯೂ ಕಲಿಗಳಲ್ಲಿ ಕಲಿ. ಅವನ ಬಾಳು ಸಾರ್ಥಕ! ಅವನ ಸಾವು ಅದಕ್ಕಿಂತಲೂ ಮಿಗಿಲಾದ ಸಾರ್ಥಕ!'

'ಪ್ರಭುವೇ, ಈ ಮಹಾಸಮರಕ್ಕೆ ಪ್ರಾಣ ತೆತ್ತವರು ನಿಜವಾಗಿಯೂ ಧನ್ಯರು!'

'ಬದುಕಿರುವವರು ವಹ್ನಿ!'

'ಒಡೆಯ, ನಿಜ. ನಿನ್ನೊಡನೆ, ನಿನ್ನ ಎದರುನಿಂತು ಸಂವಾದಿಸುವ ಪುಣ್ಯ ಸಾಮಾನ್ಯವಾದುದಲ್ಲ. ಅದು ಬಹುಜನ್ಮಗಳು ಗಳಿಸಿದ ಒಂದು ಪುಣ್ಯಫಲ.'

'ಅವರವರಿಗೆ ಅವರವರ ಶ್ರೇಯಸ್ಸು. ನಿನಗೆ ನಿನ್ನದು, ರಂಹನಿಗೆ ಆತನದು ವಹ್ನಿ, ಮಿತ್ರನ ಮರಣದಿಂದ ನಿನಗೆ ದುಃಖವಾಗಿದೆಯೆ?'

'ಮಹಾಪ್ರಭುವೇ, ಬದುಕಿದ್ದರೆ ಅವನ ಸುಖ ಇಮ್ಮಡಿಸುತ್ತಿತ್ತು ಎಂದು ಹೇಳುತ್ತೇನೆ.'

'ಹೇಳು, ಅವನು ಬದುಕಿ ಬರುವುದು ನಿನಗೆ ಒಪ್ಪಿಗೆಯೆ?'

'ಬದುಕಿ ಬರುವುದೇ? ಸತ್ತವನು! ನಾನು ಸುಟ್ಟವನು! ನನ್ನೊಡೆಯ, ಸತ್ತವರು ಬದುಕಿಬರುವುದು ಹೇಗೆ?'

'ಅದೆಲ್ಲ ನಿನಗೇಕೆ? ನಿನಗೆ ಒಪ್ಪಿಗೆಯೆ ಹೇಳು? ನೀನೆ ಕಾಣುವಂತೆ ಅವನನ್ನು ಕರೆಯುತ್ತೇನೆ!'

ಕಪಿಭಟನು ಬೆಚ್ಚಿದನು! ಯಾರ ಭಯಕ್ಕೆ ಸಮುದ್ರವು ತನ್ನ ಆದಿಅಧಿಕಾರದ ಆ ಮೇರೆ ಮರ್ಯಾದೆಯನ್ನು ತ್ಯಜಿಸಿ, ಕಂಪಿಸಿ, ಕುದಿದು ಸೆಟೆದು ಹೋಯಿತೊ, ಆ ಚಿತ್‌ತಪೋಬಲವೇ ತನ್ನ ಮುಂದಿರುವುದನ್ನು ಗ್ರಹಿಸಿದನು. ವಾನರೋತ್ತಮನಾದ ವಹ್ನಿಯು ಕೈಮುಗಿದು ಪ್ರಾರ್ಥಿಸಿದನು:

'ಬೇಡ. ಬೇಡ ಮಹಾಪುರುಷ ಬೇಡ! ನೀನು ಕರೆದರೆ ಬರದೆ ಇರುವುದಿಲ್ಲ! ತನ್ನ ನಿಯಮದ ಉಲ್ಲಂಘನೆಗಿಂತ ಹೆಚ್ಚಾಗಿ ನಿನ್ನ ಆಜ್ಞೆಯನ್ನು ಉಲ್ಲಂಘಿಸಲು ಮಾಯೆ ಬೆದರುತ್ತಾಳೆ! ಮನಸ್ಸು ಆಶೆಯನ್ನು ಚಿಃ ಎಂದು ತಿರಸ್ಕರಿಸಿ, ಕಳವಳಕ್ಕೊಳಗಾಗುತ್ತಿದೆ! ಕಾಡಿನ ಮರಗಳ ಅಡಿಯಲ್ಲಿ ನಿಂತು ಏನನ್ನಾದರೂ ಬಯಸುವಂತೆ, ಕಲ್ಪವೃಕ್ಷದ ಅಡಿನಿಂತು ಬಯಸುವಾಗ, ಬಯಕೆಗಳಿಗೆ ಎಚ್ಚರಿಕೆಯಿರಬೇಕು! ಮತ್ತೆ ತಪ್ಪಿದೆನು. ಏನು ಬಯಕೆ ಬಯಸಿದೆ! ಭೀಕರ!'

ಎಂದು ಹೇಳುತ್ತ ಬುದ್ಧಿವಂತ ವಹ್ನಿಯು ರಾಮಚಂದ್ರನಿಗೆ ನೆರಳಿರುವುದನ್ನು ಪರೀಕ್ಷಿಸುತ್ತಿದ್ದನು. ಪ್ರಕೃತಿ ಸಹಜವಾಗಿ ಹುಟ್ಟಿರುವನೊ ಅಥವಾ ಏನಾದರೂ ವಿಕೃತಿಯಿರಬಹುದೊ ಎಂಬ ಸಂಶಯದ ನೆರಳು ಅವನಲ್ಲಿ ಸುಳಿದಾಡುತ್ತಿರುವುದನ್ನು ನರೋತ್ತಮ ರಾಮಚಂದ್ರನು ಗಮನಿಸಿದನು. ನಸುನಗುತ್ತ ಅವನನ್ನು ನೋಡಿದನು. ತಾಳ್ಮೆಯಿಂದ ಹತ್ತಿರ ಹೋಗಿ ಸಂಶಯ ನಿವಾರಿಸುವಂತೆ ತೋಳುತಟ್ಟಿ ಮಾತಾಡಿದನು.

'ವಾನರೋತ್ತಮನೇ, ನೀನು ಪ್ರಾಜ್ಞನಿರುವೆ. ಅಲೌಕಿಕವಾದುದಕ್ಕೆ ನಿನ್ನ ಮರ್ತ್ಯಪ್ರಜ್ಞೆ ಅಳುಕುತ್ತಿದೆ. ನಿನಗೆ ಅವನು ಮಗನಾಗಿ ಹುಟ್ಟಿದರೆ ಬೆದರುವೆಯೇನು?'

'ಭುವನ ಗುರುವೆ, ಬೆದರಿಕೆ ಏಕೆ? ಅದು ಮಹೋತ್ಸವಕ್ಕೆ ಕಾರಣವಾಗುತ್ತದೆ!'

'ವಹ್ನಿ, ದೈವೇಚ್ಛೆ ಹೇಗಿದೆಯೊ ಹಾಗೆ ಆಗಲಿ.'

ಎಂದು ಹೇಳಿದ ರಾಘವನು ರವಿಯು ಮುಳುಗಿ ಪಶ್ಚಿಮದ ಕೆಂಪು ಪೂರ್ವದ ಕಡೆಗೆ ಸರಿಯುತ್ತಿರುವುದನ್ನು ನೋಡುತ್ತ ಮಾತನ್ನು ಮುಂದುವರಿಸಿದನು.

'ನಿನ್ನ ಮಿತ್ರನ ಅಗ್ನಿಕ್ರಿಯೆಗೆ ನಿನಗೆ ಏಕೆ ಇಷ್ಟು ಹೊತ್ತಾಯಿತು?'

'ಸೇನಾನಿ ದಧಿಮುಖನ ಬೆಂಕಿಯ ಸಂಸ್ಕಾರದಲ್ಲಿ ಸೇವೆ ಸಲ್ಲಿಸಿದೆನು. ಅಲ್ಲಿಂದ ಹೋಗಿ ವಾನರ ಮತ್ತು ಅಸುರರ ಶವಗಳ ಅಪಾರ ರಾಶಿಯಲ್ಲಿ ನನ್ನ ಸ್ನೇಹಿತನನ್ನು ಹುಡುಕಿದೆನು. ನರಿಗಳು ಅಗಿದು. ತಿಂದು, ಹುಳುಗಳು ಕೊರೆದು ಊದಿದ ಹೆಣಗಳನ್ನು ತೆಗೆತೆಗೆದು ಪಕ್ಕಕ್ಕೆ ಇರಿಸುತ್ತ ರಂಹನದಾಗಿದ್ದ ಹೆಣವನ್ನು ಕಂಡೆನು. ಶಸ್ತ್ರಾಸ್ತ್ರಗಳ ಹೊಡೆತದ ಗಾಯಗಳಿಂದ, ತುಳಿತದಿಂದ ಅದು ಗುರುತು ಸಿಗದಷ್ಟು ವಿಕೃತವಾಗಿತ್ತು! ಅಷ್ಟು ಹೊತ್ತಿಗೆ ಸೂರ್ಯನು ತನ್ನ ಪಾದವನ್ನು ಪಶ್ಚಿಮಬೆಟ್ಟದ ನೆತ್ತಿಯಲ್ಲಿಟ್ಟಿದ್ದನು.'

'ವಹ್ನಿ, ಬಿಡು. ಕೆಲಸ ತಡವಾದುದಕ್ಕೆ ನೀನು ಹೇಳುವ ಕಾರಣವು ಅದನ್ನೇ ಮೀರುವಷ್ಟು ಬೀಭತ್ಸವಾಗಿದೆ ಕೇಳು, ನರಿಗಳು ಊಳಿಡುತ್ತಿವೆ! ಕಾಳರಾತ್ರಿಯ ಕಪ್ಪು ಏರುತ್ತಿದೆ! ಬಾ, ಶಿಬಿರದ ಕಡೆಗೆ ಹೋಗೋಣ.'

ಕತ್ತಲಲ್ಲಿ ದಾಶರಥಿಯ ಜೊತೆ ವಹ್ನಿಯು ನಡೆಯುತ್ತ ಕೈಹಿಡಿದು ಪ್ರೀತಿಯಿಂದ ಮಾತಾಡಿದ ರಘುರಾಮನನ್ನು ಬೀಳ್ಕೊಟ್ಟನು. ತನ್ನ ಪಾಳೆಯಕ್ಕೆ ನಡೆದನು. ತಡವೇಕಾಯಿತೆಂದು ಕೇಳಿದ ಸೈನಿಕ ಸಹೋದ್ಯೋಗಿಗಳಿಗೆ ಸ್ವಾಮಿಯನ್ನು ಕಂಡ ಪುಣ್ಯವನ್ನು ತಿಳಿಸಿದನು. ಮತ್ತು ಅಲ್ಲಿ ನಡೆದುದನ್ನು ಹೆಮ್ಮೆಯಿಂದ ಹೇಳಿದನು. ಅದನ್ನು ನಂಬದೆ ಅವರು ನಗುಮೊಗದಿಂದ ಹೇಳಿದರು:

'ನಿನ್ನಂತೆಯೆ ಇಂದು ಆತನನ್ನು ಕಂಡವರು ಎಷ್ಟೋ ಮಂದಿ! ಅವನು ಇಂದು ಸಂಜೆಯತನಕ ಕಪಿಮುಖ್ಯರೊಡಗೂಡಿ ಮುಂದೆ ಮಾಡಬೇಕಾದುದನ್ನು ಚಿಂತಿಸುತ್ತಿದ್ದನು!'

ಅದನ್ನು ಕೇಳಿ ಗಹಗಹಿಸಿ ನಕ್ಕ ರಂಹನ ಗೆಳೆಯನು,

'ಹಾಗಾದರೆ, ನಿಮ್ಮೊಡನೆ ನಾನು ಇಲ್ಲಿ ಹೇಳುತ್ತಿರುವುದು ಸುಳ್ಳೇನು! ನಾನು ಇಲ್ಲಿ ನಿಮ್ಮೆಲ್ಲರನ್ನು ನೋಡುತ್ತಿರುವುದು ಸುಳ್ಳೇನು? ಇವೆಲ್ಲಾ ಸುಳ್ಳಾದರೆ, ರಾಮಭದ್ರನನ್ನು ನಾನು ಕಂಡಿದ್ದು, ಕೇಳಿದ್ದು, ನುಡಿದದ್ದು ಮತ್ತು ಮೈ ಮುಟ್ಟಿದುದು ಎಲ್ಲವೂ ಮನೋವಿಕಾರದ ಭ್ರಾಂತಿಗಳು. ದಿಟವಾಗಿಯೂ ಮಿಥ್ಯೆ!'

ಇತ್ತ ಈರೀತಿ ಶಿಬಿರಶಿಬಿರದಲ್ಲಿ, ಬೀಡುಬೀಡಿನಲ್ಲಿ ದ್ರುಮಯೋಧಿ ಸೈನಿಕರು ತಮ್ಮ ತಮ್ಮ ಸತ್ಯದ ಸಮರ್ಥನೆ ಮಾಡಿ ವಾದಿಸುತ್ತಿದ್ದರು. ಅತ್ತ ಕೋಸಲೇಶ್ವರನು ಕಪಿ ಮುಖ್ಯರೊಡನೆ ಮುಂದಿನ ಕಾರ್ಯನೀತಿಯನ್ನು ಕುರಿತು ವಿಚಾರ ಮಾಡಿದನು. ತನ್ನ ಅಂತರಂಗದಲ್ಲಿ ನಿಶ್ಚಯಿಸುವುದನ್ನು ತಾನೇ ತೀರ್ಮಾನಿಸಿಕೊಂಡು ರಾಕ್ಷಸೋತ್ತಮನಾದ ವಿಭೀಷಣನ ಆಗಮನಕ್ಕೆ ಕಾಯುತ್ತಿದ್ದನು.

ರಾಜರಾಜ್ಞಿಯರ ಪೂಜಿತ ಕಳೇಬರಂಗಳೇರ್ದುವಯ್ ಮಸಣದೇರಂ

ಲಂಕಾನಗರಿಯನ್ನು ಪ್ರಾತಃಕಾಲದಲ್ಲಿ ಹೊಕ್ಕ ರಾವಣನ ತಮ್ಮ ವಿಭೀಷಣನು ತನ್ನ ಉಚಿತವಾದ ಹಿತನುಡಿಗಳ ಮದ್ದಿನಿಂದ ಪ್ರಜೆಗಳ ಸಂಕಟವನ್ನು ಸ್ವಲ್ಪವಾಗಿ

ಪರಿಹರಿಸಿದನು. ದೈತ್ಯೇಂದ್ರನ ಅಪರಕ್ರಿಯೆಗೆ ಸುವಿಶಾಲ ಸಾಗರದ ವಿಪುಲ ನೀಲಿಮೆಯ ಅಂಚಿನಲ್ಲಿ ಹರಡಿದ ಮರಳಿನೆಡೆಯಲ್ಲಿ ಬೃಹತ್ ಚಿತಾಮಂಚವನ್ನು ರಚಿಸಲು ಆಜ್ಞೆ ಮಾಡಿದನು. ಶ್ರೀ ಗಂಧದ ಕಟ್ಟಿಗೆಗಳ ಮೇಲೆ ರಂಕು ಎಂಬ ಜಿಂಕೆಯ ಕೂದಲಿನಿಂದ ಮಾಡಿದ ಶಾಲು ಮತ್ತು ಕಮಲದಂತೆ ಇರುವ ಸುಂದರ ಮೃದುವಾದ ರೇಷ್ಮೆ ಮೇಲುಹೊದಿಕೆಯುಳ್ಳ ಮಸಣ ತೇರು ಸಿದ್ಧವಾಯಿತು. ಅದರ ಮೇಲೆ ರಾಜರಾಣಿಯರ ಪೂಜಿತ ಕಳೇಬರಗಳು ಏರಿದವು. ರಾಜಗೌರವಕ್ಕೆ ವಾದ್ಯಗಳು ಮೊಳಗುತ್ತಿದ್ದವು. ರಾಜಭಕ್ತಿಗೆ ಎರಡುಕಡೆ ಸೈನ್ಯವು ತಲೆಬಾಗಿ ಸಾಗಿ ಬರುತ್ತಿದ್ದವು. ರಾಜನ ಪ್ರೀತಿಯ ಪ್ರಜೆಗಳು ಭೂಮಿನೆನೆಯುವಂತೆ ಕಣ್ಣೀರು ಸುರಿಸುತ್ತ ಅಲೆಅಲೆಯಾಗಿ ಪ್ರವಾಹ ದೋಪಾದಿಯಲ್ಲಿ ಕಡಲದಂಡೆಗೆ ನಡೆದರು. ಸುಗಂಧ ಪುಷ್ಪಗಳಿಂದ ಆವೃತವಾಗಿ, ಗಂಧ ಲಾವಂಚಗಳಿಂದ ಮನೋಜ್ಞವಾಗಿ ರಚಿತವಾದ ಚಿತೆಯ ಮೇಲೆ ಶ್ರೀರಾವಣನ ಮತ್ತು ಸತೀ ಮಂಡೋದರಿಯ ಕಳೇಬರಗಳನ್ನು ಇರಿಸಿದರು. ಅಸುರ ಋತ್ವಿಕ್ಕುಗಳು ಚರಮ ಋಙ್ಮಂತ್ರಗಳನ್ನು ಹಾಡುತ್ತಿದ್ದರು. ಅನಲೆಯ ತಂದೆ ವಿಭೀಷಣನು ಬೆಂಕಿ ಇಟ್ಟನು. ಚಿತೆಯ ಏಳುವರ್ಣದ ಬೆಂಕಿಯು ಗೋಪುರದಂತೆ ಆಕಾಶದೆತ್ತರಕ್ಕೆ ಏರಿ ಸ್ವರ್ಗದ ತೋರುಬೆರಳಂತೆ ಕಾಣುತ್ತಿತ್ತು. ನೋಡ ನೋಡುತ್ತಿದ್ದಂತೆ ಜಗತ್‌ತ್ರಯ ಭಯಂಕರ ದೈತ್ಯ ರಾಜ ರಾಜೇಂದ್ರ ಲಂಕೇಶ್ವರನ, ದಶಶಿರ ರಾವಣನ ದೇಹವು ರಾಜರಾಜೇಶ್ವರಿ ಮಂಡೋದರಿಯ ಕಾಯದೊಡನೆ ರಾಶೀಕೃತ ಶ್ವೇತಭಸ್ಮಾವಸ್ಥೆ ಮಾತ್ರವಾಗಿ ಹೋಯಿತು. ಅದು ಜಗನ್ಮಿಥ್ಯೆಯನ್ನು ಸಾರುವ ಸಂಕೇತ ಸಾಕ್ಷಿಯಂತಿತ್ತು.

ವಿಭೀಷಣನು ಸಮುದ್ರದ ನೀರಿನಲ್ಲಿ ಸ್ನಾನಮಾಡಿ, ನೆನೆದ ಬಟ್ಟೆಯಲ್ಲಿ ಬಂದು ತಿಲ ತರ್ಪಣವನ್ನಿತ್ತನು. ಹಿರಿಯಣ್ಣನನ್ನು ನೆನೆದು ನಮಸ್ಕರಿಸಿದನು. ದುಃಖಾಗ್ನಿಯಿಂದ ದಗ್ಧಹೃದಯರಾದವರಿಗೆ ಸಾಂತ್ವನದ ನುಡಿಗಳಾಡಿ, ವಾಗ್‌ಅಮೃತದಿಂದ ಸಂತೈಸಿ ನಗರಕ್ಕೆ ಕಳುಹಿಸಿದನು. ರಾಕ್ಷಸ ಮಹಾನುಭಾವ ವಿಭೀಷಣನು ಆ ರಾತ್ರಿಯೆ ತನ್ನ ಪಥವನ್ನು ನಿರೀಕ್ಷಿಸಿ ತವಕಿಸುತ್ತಿದ್ದ ರಾಮನ ಸನ್ನಿಧಿಗೆ ಹೋದನು.

❑



~~~~~~~~~~~~~~~~~~~~~~~ ಸಂಚಿಕೆ – ೧೧ ~~~~~~~~~~~~~~~~~~~~~~~

ರಯ್‌ಗೆ ಕರೆದೊಯ್, ಓ ಅಗ್ನಿ !

ತಾಯಿ ಕ್ರಾಂತದರ್ಶಿನಿ ಓ ಜಗತ್ ಕಾಂತಿಕರೆ, ಶಾಂತೆ, ಭ್ರಾಂತಿ ಹರೆ, ನಿರ್ಮಲೆ, ಸುಸ್ಥಿರೆ, ಪವಿತ್ರೆ, ವಾಣಿ, ಓ ಪರಾತ್ಮರವಾಣಿ ನಿನ್ನ ವೀಣೆಯನ್ನು ಮಿಡಿ, ಮುಂದೆ ನಡೆದುದನ್ನು, ನೀನು ಕಂಡ ಹಾಗೆ ಲೋಕಮೋಹಕ ಶೋಕದಾರುಣ ಕಥೆಯನ್ನು ತಿಳಿಸು. ಸೀತಾದೇವಿಗೆ ರಾಘವೇಂದ್ರನಿಗೆ ಮತ್ತು ಸುಗ್ರೀವ ಕಪಿಸಮೂಹಕ್ಕೆ ಒದಗಿದ ಮಹತ್ ಸಂಕಟವನ್ನು, ಅದಕ್ಕಿಂತ ನೂರ್ಮಡಿಯಾಗಿ ಮತ್ತೆ ಉಂಟಾದ ಅನುಪಮ ಸುಖದ ಕಥೆಯನ್ನು ತಿಳಿಸು.
~~~~~~~~~~~~~~~~~~~~~~~

ರಘುವರನು ಲಂಕಾಕಿರೀಟವನ್ನು ವಿಭೀಷಣನಿಗೆ ಇಡಲು ಬಯಸುವನು. ಅದನ್ನು ಒಲ್ಲದೆ ಅವನು ಅದನ್ನು ಮೊಮ್ಮಗ ಇಂದ್ರಜಿತುವಿನ ಕಂದ ವಜ್ರಾರಿಗೆ ತೊಡಿಸುವನು! 'ಆ ತ್ಯಾಗ ವೈಭವವನ್ನು ಮೇಘನಾದ ಮತ್ತು ತಾರಾಕ್ಷಿಯರ ಮಗ ವಜ್ರಾರಿಯ ಕಿರೀಟ ಧಾರಣಾ ಮಹೋತ್ಸವವನ್ನು ನೋಡೋಣ ಬಾ' ಎಂದು ಉಷೆಯು ರವಿದೇವನನ್ನು ಉದಯಗಿರಿಗೆ ಕರೆದಳು.

ಪಕ್ಷಿಗಳ ಇಂಚರದ ಸ್ವಾಗತವನ್ನು ಆನಂದಿಸುತ್ತ ಮೂಡಿ ಬಂದ ದಿನೇಶನು ಉಷೆಯನ್ನು ಕೇಳಿದನು:

'ಎಲ್ಲಿ ನೀನು ಹೇಳಿದ ಮಹೋತ್ಸವ?'

'ನಿನಗೆ ಕಾಲಿಲ್ಲದವನು ಸಾರಥಿಯಲ್ಲವೆ? ಆ ಹೆಳವನೊಡನೆ ನೀನು ತೆವಳಿ ಬರುವ ಹೊತ್ತಿಗೆ ಅದು ಮುಗಿದು ಹೋಯಿತು!'

'ಆ ವೀಭೀಷಣನಿಗೆ ಏನು ಅವಸರವೊ?'

'ನಿನ್ನ ಪೀಳಿಗೆಯ ಅರಸರ ಏಳಿಗೆಗೆ ಆ ಅವಸರ! ಜಗಚ್ಚಕ್ಷು ನೀನಲ್ಲವೆ? ನೋಡದೊ, ನೋಡು. ಅಯೋಧ್ಯೆಯಲ್ಲಿ ಭರತನು ತಪಿಸುತ್ತಿರುವನು. ಊರ್ಮಿಳಾದೇವಿಯ ಎದೆ ಆಶಂಕೆಯಿಂದ ತಳಮಳಿಸುತ್ತಿರುವುದು. ತಾಯಿಯರಾದ ಕೌಸಲ್ಯೆ, ಸುಮಿತ್ರೆ ಮತ್ತು ಕೈಕೆಯರು ಕಣ್ಣೀರಿನ ಉರಿಯಬೆಂಕಿಯಲ್ಲಿ ಬೆಂದು ಬೇಗುದಿಗೊಂಡಿದ್ದಾರೆ. ಸ್ವಾಮಿರಾಮಚಂದ್ರನು ದೇವಿಸೀತೆಯನ್ನು ಪಡೆದು, ಅತಿ ಶೀಘ್ರದಲ್ಲಿ ಅವರೆಡೆಗೆ ಹೋಗಲು ಕಾತರಿಸುತ್ತಿದ್ದಾನೆ.'

'ರಾವಣನು ಅಳಿದನು. ಪೂಜ್ಯೆ ಪರಿಶುದ್ಧೆಯನ್ನು ಪಡೆಯಲು ಇನ್ನಾರ ತಡೆಯಿದೆ?'

'ನೋಡುತ್ತಿರು. ಆ ಜಗದ್‌ಭವ್ಯ ದೃಶ್ಯವನ್ನು ನೋಡಿ ನಿನ್ನ ಕಣ್ಣುಗಳು ಸಾರ್ಥಕವಾಗುತ್ತವೆ. ರಾಮಾಜ್ಞೆಯಂತೆ ವಿಭೀಷಣನೊಡನೆ ಅಂಜನೇಯನು ಅಶೋಕವನಕ್ಕೆ ನಡೆಯುತ್ತಿರುವುದನ್ನು ನೋಡು. ಜಾನಕಿಗೆ ವಿಜಯವಾರ್ತೆಯನ್ನು ತಿಳಿಸಿ, ದೇವಿಯ ಅಭಿಲಾಷೆಯನ್ನು ತಿಳಿದುಕೊಂಡು ಮುಂದಿನ ಮಾರ್ಗವನ್ನು ನಿರ್ಣಯಿಸಲು ಹೊರಟಿದ್ದಾರೆ.'

ಮೆಲ್ಲನೊಳಪೊಕ್ಕತಿಥಿ ಕಿರಣ ಪ್ರಥಮದೂತನಂ ಕಾಣುತಾದರದಿ ಕೈಮುಗಿದಳು ಪಚರಿಸಿದಳು ಸೀತೆ.

ಒಂದು ರವಿಕಿರಣವು ಪರ್ಣಶಾಲೆಯ ಎಲೆಗಳು ಒತ್ತಾಗಿಲ್ಲದ ಎಡೆಯನ್ನು ಹುಡುಕಿ ಕುಟೀರವನ್ನು ಹೊಕ್ಕಿತು. ದಶಕಂಠನು ಹತನಾದನೆಂದು ಕೇಳಿದ ಕ್ಷಣದಿಂದ ಈಗಲೊಆಗಲೊ ರಾಮನೊ, ಲಕ್ಷ್ಮಣನೊ, ದೂತನೊ, ವಿಭೀಷಣನೊ ಯಾರಾದರೂ ಬರುತ್ತಾರೆ. ಪತಿಯಆದೇಶವನ್ನು ತರುತ್ತಾರೆ ಎಂದು ಹಗಲು ಇರುಳನ್ನು ಎಚ್ಚರದಿಂದ

ಸೀತೆ ನಿರೀಕ್ಷಿಸುತ್ತಿದ್ದಳು. ಆಗ ಮೆಲ್ಲನೆ ಒಳಹೊಕ್ಕ ಪ್ರಥಮ ದೂತನಾದ ಅತಿಥಿ ಕಿರಣನನ್ನು ಕಂಡಳು. ಆತುರದಿಂದ ಕೈಮುಗಿದು ಉಪಚರಿಸಿದಳು. ತ್ರಿಜಟೆಗೆ ಹೇಳಿದಳು:

'ಗೆಳತಿಯೆ, ರವಿದೂತನು ಬಂದಿದ್ದಾನೆ. ರವಿಕುಲೇಶ್ವರ ದೂತನು ಇನ್ನೂ ಏತಕ್ಕೆ ಬಂದಿಲ್ಲವೊ? ಕಾರ್ಯಬಾಹುಳ್ಯವೊ? ಮುನಿಸೊ? ಏನು ಕಾರಣವೆಂದು ತಿಳಿಯದೆ ನನ್ನ ಪ್ರಾಣದುಸಿರು ನಾಚಿಕೊಂಡಿದೆ. ಒಡಲಗೂಡಿನಲ್ಲಿ ರೆಕ್ಕೆಬಿಚ್ಚಿ ಹಾರುವೆನೊ, ನಿಲ್ಲುವೆನೊ ಎಂಬ ಮನಸ್ಸಿನ ಉಯ್ಯಾಲೆಯಬಳ್ಳಿ ತೊನೆದು ತೂಗುತ್ತಿದೆ.'

'ತಾಯಿ, ತವರುಮನೆ ಹತ್ತಿರಬರಲು ನಡೆವ ಅಂಕುಡೊಂಕಾದ ಹಾವಿನಂಥ ದಾರಿಯು ಬಹು ದೀರ್ಘವಾದಂತೆ ತೋರುತ್ತದೆ. ನಿನ್ನ ಜೀವೇಶ್ವರ ನಿನಗಾಗಿ ಬಂದವನಲ್ಲವೆ? ಸಮುದ್ರವನ್ನು ಬತ್ತಿಸಿದ ರಾಜರಾಜೇಶ್ವರನು ರಾಜರತ್ನವನ್ನು ಬಿಟ್ಟು ಹೋಗುವನೆ?'

'ಹೊರಗೆ ಇಣುಕಿ ನೋಡುಸಖಿ! ಅಶೋಕವನದ ಬೀದಿಯು ದಿವ್ಯ ಚರಣ ಧೂಳಿಯಿಂದ ಧನ್ಯವಾಗುತ್ತಿದೆಯೆ ನೋಡು!'

ಮೈ ನಡುಗಿ, ಗದ್ಗದಿಸುತ್ತ ಹೇಳಿದ ಮೈಥಿಲಿಗೆ ತ್ರಿಜಟೆ ಉತ್ತರಿಸಿದಳು:

'ದೇವಿ, ಯಾರೂ ಕಾಣುತ್ತಿಲ್ಲ.'

'ಏನನ್ನೊ ನೀನು ಗಮನಿಸಿದೆಯಲ್ಲವೆ?'

'ಏನಿಲ್ಲ, ತಾಯಿ. ಎರಡುನವಿಲುಗಳು ಮೇವಿಗಾಗಿ ಅಲ್ಲಿ ಓಡಾಡುತ್ತಿವೆ.'

'ಇನ್ನೊಮ್ಮೆ ನೋಡಮ್ಮ. ನಿನಗೆ ಮನುಷ್ಯರ ಉಡುಗೆ ತೊಡುಗೆಯ ಪರಿಚಯವಿಲ್ಲ. ತ್ರಿಜಟೆ, ನೋಡಮ್ಮ. ನವಿಲೊ ಅಥವಾ ದಿವ್ಯಾಂಬರವನ್ನು ಉಟ್ಟ ನೀಲಾಕಾಶ ಸಮಾನರಾದ ನೀಲದೇಹಿ ಮಾನವರೊ?'

ಎಂದು ನಿಟ್ಟುಸಿರುಬಿಟ್ಟ ಕಂಬನಿದುಂಬಿದ ಕಣ್ಣಿನ ದೇವಿಯು ಮತ್ತೊಮ್ಮೆ ಸಖಿಯನ್ನು ಕೇಳಿದಳು. ಆಗ ಅವಳ ಮನಸ್ಸಿನ ತೃಪ್ತಿಗಾಗಿ ರಾಕ್ಷಸೋತ್ತಮಳಾದ ತ್ರಿಜಟೆ ಕಣ್ಣನ್ನು ಮತ್ತೆ ಆ ಕಡೆಗೆ ಹೊರಳಿಸಿದಳು. ಆ ಕಣ್ಣನ್ನು ಮತ್ತೆ ಈ ಕಡೆ ತಿರುಗಿಸದಿರಲು, ಕಾತರಳಾದ ಸೀತೆಯು ತಾನು ಮನಸ್ಸಿನಲ್ಲಿ ಕುದಿಕುದಿದು, ಕೂಗಲಾರದೆ ಕೂಗಿದಳು:

'ತ್ರಿಜಟೆ! ತ್ರಿಜಟೆ! ಹೇಳು! ಏನನ್ನು ಕಂಡೆ! ಯಾರನ್ನು ಕಂಡೆ?'

ಅಚ್ಚರಿಗೊಂಡು ಆ ಕಡೆ ನೆಟ್ಟದೃಷ್ಟಿಯಿಂದ ನೋಡುತ್ತ, ಈ ಕಡೆ ಕಣ್ಣು ಹೊರಳಿಸದೆ, ಏದುಸಿರು ಬಿಡುತ್ತ ತ್ರಿಜಟೆ ತೊದಲಿದಳು:

'ದೇವಿ! ಮಹಾದಾನವೇಂದ್ರನು ಬರುತ್ತಿದ್ದಾನೆ.'

ಆ ನುಡಿ ಕೇಳಿ ಮಂಕುಕವಿದಂತಾಗಿ ಸೀತೆ ಬೆದರಿ ನುಡಿದಳು:

'ಅಯ್ಯೊ! ಮತ್ತೆ ಆ ರಾವಣನೆ? ತ್ರಿಜಟೆ, ಅವನು ಸತ್ತುಹೋದನೆಂದು ನನಗೇಕೆ ಸುಳ್ಳು ಹೇಳಿದೆ?'

'ರಾವಣ ಅಲ್ಲ. ಅವನ ತಮ್ಮ ದನುಜೋತ್ತಮ!'

ಅದನ್ನು ಕೇಳಿ ಅವನಿಜಾತೆ ಹರ್ಷಗೊಂಡು ನಿಟ್ಟುಸಿರುಬಿಟ್ಟಳು. ದುಗುಡದಿಂದ ಒಮ್ಮೆಲೆ ಸುಖಕ್ಕೆ ಧುಮುಕಿದ ಭಾವಜಲಪಾತದ ಆಘಾತಕ್ಕೆ ಚೇತನವು ಸೋಲಲು, ಆಯಾಸಗೊಂಡು ಪ್ರಶ್ನಿಸಿದಳು:

'ಏನೆಂದೆ, ಸ್ನೇಹಿತೆ? ಅನಲೆಯ ತಂದೆ ಬರುತ್ತಿರುವನೆ?'

'ದೇವಿ, ಜೊತೆಗೆ ಅನಲೆಯೂ ಇರುವಳು!'

'ಅವರಿಬ್ಬರೂ ದೀರ್ಘಯುಗಳಾಗಲಿ! ಅವರೊಡನೆ ಮತ್ತಿನ್ನಾರು ಇರುವರು ಹೇಳು?'

'ಓರ್ವ ಇದ್ದಾನೆ! ನನಗೆ ಗೊತ್ತಿಲ್ಲದವನು! ಇದುವರೆಗೆ ಅಂತಹ ತೇಜೋನ್ವಿತನನ್ನು ನಾನು ನೋಡಿಲ್ಲ!'

'ರಾಕ್ಷಸನೆ?'

'ಅವನ ಉಡುಗೆ ನಮ್ಮವರಂತಿಲ್ಲ.'

'ನೀಲದೇಹಿಯೆ?'

'ನೀಲಿಯಲ್ಲ. ಹೊನ್ನಿನ ಹೊಳಪು!'

'ನನಗೆ ಅವನನ್ನು ವರ್ಣಿಸಿ ಹೇಳು. ತ್ರಿಜಟೆ, ನೀನು ನಿಜವಾಗಿ ಪುಣ್ಯನೇತ್ರೆ! ನನ್ನ ಮೈದುನನ ಮೈ ಬಣ್ಣವು ಬಂಗಾರವಾಗಿದ್ದು ಅದು ಹೂವಿನಂತೆ ಸುಂದರವಾದುದು.'

'ತಲೆಯಲ್ಲಿ ವನಲತೆಗಳನ್ನು ಧರಿಸಿ ಶೋಭಿಸುತ್ತಿದ್ದಾನೆ. ಹುಲಿತೊಗಲಿನ ಬಂಗಾರಕೂದಲಿನಿಂದಿದ್ದು, ಕಪಿಚರ್ಮ ಕವಚವನ್ನು ಧರಿಸಿದ್ದಾನೆ. ಕೊಂಕುಮೂಗಿನ ಬಿಂಕದ ಮುಖದ ವಜ್ರತನುವಾಗಿದ್ದಾನೆ.'

'ತ್ರಿಜಟೆ, ವಾನರನು ಯಾರೊ ಬರುತ್ತಿದ್ದಾನೆ! ಹಿಂದೆ ಬಂದ ಆಂಜನೇಯನೇ ಇಂದು ತನ್ನ ನಿಜರೂಪದಿಂದ ಬಂದನೇನೊ? ಅಂದು ನನಗೆ ಧ್ವಜರೂಪದಿಂದ ಕಾಣಿಸಿದ್ದನು. ಸ್ವಾಮಿ ಕಳುಹಿಸಿದವನಾಗಿ ನನಗೆ ಸಂದೇಶವನ್ನು ತಂದಿರುತ್ತಾನೆ. ನಾನಿನ್ನು ಧನ್ಯೆ ಸಖಿ!'

'ತಾಯಿ, ಇದೊ ತಂದೆಯನ್ನು ದೂರದಲ್ಲಿ ನಿಲ್ಲಿಸಿ ಅನಲೆ ಬಂದಿದ್ದಾಳೆ!'

ದುಃಖವನ್ನೆಲ್ಲ ಮರೆತ ಆ ಹುಡುಗಿ ಸುಖಉಕ್ಕಿ, ಹರ್ಷಭಾಷ್ಪಗಳೊಡನೆ ಓಡಿಬಂದು ಸೀತೆಯನ್ನು ಅಪ್ಪಿಕೊಂಡಳು. ಪುಳಕಗೊಂಡು ಮೈಮರೆತಂತೆ ತೊದಲುತ್ತ ಹೇಳಿದಳು:

'ನನ್ನ ತಂದೆಯು ಶ್ರೀರಾಮ ಸಂದೇಶವನ್ನು ಹೊತ್ತು ಬಂದಿರುವ ಆಂಜನೇಯನನ್ನು ನಿನ್ನ ಸನ್ನಿಧಿಗೆ ಕರೆತಂದಿದ್ದಾನೆ. ಅಮ್ಮ, ಅಲ್ಲಿಯೇ ನಿಂತಿದ್ದಾನೆ. ನಿನ್ನ ಸಮಯವನ್ನು ತಿಳಿದು ಬರಲು ನನಗೆ ಹೇಳಿದ್ದಾನೆ.'

'ಮಗಳೆ, ಮಂಗಳದ ವಾರ್ತೆಯನ್ನು ತಂದಿರುವೆ. ಚಿರಸುಖಿಯಾಗು. ನೀನು ಒಲಿದ ವರನೇ ನಿನಗೆ ದೊರೆಯಲಿ! ನಿನ್ನ ಕೈಹಿಡಿದವನು ನಿನ್ನ ಕೈಬಿಡದಂತೆ ನಡೆದುಕೊಳ್ಳಲಿ. ಪತಿಯ ವಚನವನ್ನು ಕೇಳಲು ಆತುರಳಾದ ಸತಿಗೆ ಸಮಯವೇ? ಹೋಗು, ನಡೆ. ಅಮ್ಮ, ಆ ವಂದನೀಯರೀರ್ವರನ್ನು ಬೇಗ ಕರೆದು ತಾ!'

ಗುಡಿವುಗುವ ಭಕ್ತರೋಲ್ ಬಾಗಿಲೆಡೆ ಬಾಗಿ, ಗೌರವಭಾರಕೆಂಬಂತೆ, ಕೈಮುಗಿದರಿರ್ವರುಂ.

ವಿಭೀಷಣ ಕುಮಾರಿಯು ಪೂಜ್ಯೆ ಹೇಳಿದುದನ್ನು ಅವರಿಗೆ ತಿಳಿಸಿ ಕರೆದುಕೊಂಡು ಬಂದಳು. ಅವರು ಪರ್ಣಕುಟಿಗೆ, ಗುಡಿಯನ್ನು ಪ್ರವೇಶಿಸುವ ಭಕ್ತರಂತೆ ಬಾಗಿಲ ಬಳಿಯಲ್ಲಿ ಗೌರವದಿಂದ ಬಾಗಿದರು. ಇಬ್ಬರೂ ಕೈ ಮುಗಿದರು. ಅವರಿಗೆ ಪ್ರತಿ ನಮಸ್ಕಾರ ಮಾಡಲು ಕೈಮುಗಿಯುವ ಸೀತಾಮಾತೆಯನ್ನು ತಡೆಯುವಂತೆ, ನಂಬಿಕೆಯ ನೈವೇದ್ಯದಿಂದ ಹೇಳಿದರು.

'ಅಮ್ಮ ನಮ್ಮನ್ನು ಹರಸು! ನಿನ್ನ ಅಡಿಯ ಗುಡಿಗೆ ನಿವೇದಿಸಲು ರಾಮನ ನುಡಿಯನ್ನು ತಂದಿದ್ದೇವೆ.'

'ಮಾನ್ಯರೇ, ಬಾಯಿ ತಪ್ಪಿದಿರಿ. ನೀವು ಪಡೆದಿರುವುದನ್ನು ನೀಡಿ. ಮುಡಿಯಲ್ಲಿ ಧರಿಸಿಕೊಳ್ಳುತ್ತೇನೆ!'

ಪೂಜ್ಯೆಯ ಆ ಮಾತು ಕೇಳಿದ ನುಡಿಜಾಣ ಆಂಜನೇಯನು ವಿಭೀಷಣನಿಗೆ ಹೇಳುವ ರೀತಿಯಲ್ಲಿ,

'ದನುಜೇಂದ್ರನೇ, ನಮಗೆ ಎರಡೂ ಒಂದೆ ಅಲ್ಲವೆ? ತಾಯಿ ಕ್ಷಮಾಪುತ್ರಿಯು ನಮ್ಮನ್ನು ಕ್ಷಮಿಸುವಳು.'

ಎಂದು ಹೇಳಿ ವಿನಯದಿಂದ ರಘುರಾಮನ ಸಂದೇಶವನ್ನು ಕಿವಿಗೊಟ್ಟು ಕೇಳಿದ ಸತಿಗೆ ಹೀಗೆ ಹೇಳಿದನು:

'ತಾಯಿ ವೈದೇಹಿಯೇ ಕೇಳು. ನಿಮ್ಮ ಪಾದದರ್ಶನವನ್ನು ಹಿಂದೆ ಕಪಿರೂಪದಿಂದ ಮಾಡಿದ್ದ ರಾಮದೂತನು ನಾನು. ವಾಯುದೇವ ಮತ್ತು ಅಂಜನಾ ದೇವಿಯರ ಮಗ. ನಿನ್ನ ತಪಸ್ಸಿನಿಂದ, ನಮ್ಮ ಪುಣ್ಯದಿಂದ ವಿರಹದಿಂದ ಹುಟ್ಟಿ ತಪಸ್ಸಿನಿಂದ ಪ್ರಕಟವಾದ, ಶ್ರೀರಾಮನ ಆತ್ಮಸತ್ಯ ಸಹಜ ವಿಭೂತಿಯಿಂದ ಮತ್ತು ಮಹನೀಯನಾದ ವಿಭೀಷಣನ ಮೈತ್ರಿಯಿಂದ ಈ ಲಂಕೆಯು ಶತ್ರುವಿನಿಂದ ಮುಕ್ತವಾಗಿದೆ. ಶತ್ರುವನ್ನು

ಸಂಹರಿಸಿದ ರವಿವಂಶ ಶ್ರೇಷ್ಠನು ಲಕ್ಷ್ಮಣನೊಡನೆ ಕ್ಷೇಮದಿಂದ ಇದ್ದಾನೆ. ತಾಯಿಯೆ ಭೀತಿಯುನ್ನು ಬಿಟ್ಟು ಸ್ವಸ್ಥಳಾಗಿರು. ರಾವಣ ಶತ್ರುವು ಇಂದು ರಾವಣ ಧ್ವಂಸಿಯಾಗಿರುವುದರಿಂದ ದುಃಖದಿಂದ ದೂರವಾಗು!'

ಅದನ್ನು ಕೇಳುತ್ತ, ಆಲಿಸುತ್ತ ಏಳಲು ಅಪೇಕ್ಷಿಸಿದಳು. ಒಂದೇ ಜಡೆಯ, ಮಲಿನ ವಸ್ತ್ರದವಳ ಮುಖದಲ್ಲಿ ನಗೆ ಬೆಳುದಿಂಗಳ ಎಳೆಯ ಹೊಂಗಾಂತಿ ಹೊಮ್ಮಿತು. ಸ್ಮೃತಿ ಶಿಲೆಯಂತೆ ಪ್ರತಿಯಾಗಿ ಏನೂ ಹೇಳದೆ ಶಿಲಾ ಪ್ರತಿಮೆಯಂತೆ ಇದ್ದ ಮಿಥಿಲಾಂಗನೆಗೆ ಹರಿಶ್ರೇಷ್ಠನು ಹೇಳಿದನು:

'ದೇವಿ, ಇದೇನು? ಏನೂ ಉತ್ತರಿಸದೆ ಚಿಂತೆಯ ಮಡುವಿನಲ್ಲಿ ಮುಳುಗಿ ಹೋಗಿರುವೆ?'

ಆಗ ಹರ್ಷದಿಂದ ನಡುಗುತ್ತ ರಾಮಪತ್ನಿ ಹೇಳಿದಳು:

'ಪತಿಯ ವಿಜಯ ಸುವಾರ್ತೆಯನ್ನು ಕಿವಿ ಸವಿದಿದೆ. ಬುದ್ಧಿಯು ಸೂಕ್ತ ನುಡಿ ಅರಸುತ್ತ ಸರಸ್ವತಿಯ ಭಂಡಾರವನ್ನು ತಡಕುತ್ತಿದೆ. ಇಂದು ನುಡಿಯೊಡತಿ ವಾಗ್ದೇವಿಗೆ ಆವರಿಸಿದ ಕಡು ಬಡತನಕ್ಕೆ ಸಿಟ್ಟುಗೊಂಡು, ನಾನು ಮಾತನಾಡದಾದೆ! ಕಪಿ ಶ್ರೇಷ್ಠನೇ, ನೀನು ವಾಕ್ ಕೋವಿದ. ನುಡಿಯದ ಮೌನದ ಅರ್ಥವನ್ನು ಗ್ರಹಿಸಲು ಸಮರ್ಥನಾದವನು. ಹಾಗಾಗಿ ನನ್ನ ವಾಗ್ ದಾರಿದ್ರವು ವ್ಯರ್ಥವಾಗುವುದಿಲ್ಲ.'

'ದೇವಿ ನಿನ್ನ ಶೂನ್ಯತೆಯು ಶ್ರೀ ಸಂಪನ್ನವಾದುದು. ನೀನು ವಾಗ್ದೇವಿಯ ಒಡೆಯನಿಗೆ ಅರಸನಾದವನ ಲಕ್ಷ್ಮಿಯಲ್ಲವೆ? ನಿನಗೆ ಅವಳ ಭಂಡಾರವು ಬಡವಾದುದೆಂಬುದು ದಿಟ! ದೇವಿಯೆ, ನಿನ್ನ ವಾಕ್‌ರಹಿತ ಮೌನ ದಿವ್ಯವರದಿಂದ ಅಭಿನಂದನೆಗೆ ಒಳಗಾದ ನಾನು ಧನ್ಯ. ನನ್ನ ಮುಂದೆ ದೇವರಾಜ, ಕುಬೇರರು ದಿಟವಾಗಿ ದರಿದ್ರರು! ಜಾನಕಿಗೆ ರಾಮವಿಜಯವನ್ನು ತಿಳಿಸಿದ ಕಿಂಕರನಾದ ನನ್ನನ್ನು ಸರಿಗಟ್ಟುವ ಧನ್ಯರು ಈ ಮೂರು ಲೋಕಗಳಲ್ಲಿ ಯಾರಿದ್ದಾರೆ?'

'ಪವನಸುತನೆ ಇದುವರೆಗೂ ನಿನ್ನ ಅಪಾರ ಮಹಿಮೆಯನ್ನು ಕೇಳಿದ್ದೆನು. ಇಂದು ಅದನ್ನು ಕಂಡೆನು. ಬಲದಲ್ಲಿ, ಶೌರ್ಯದಲ್ಲಿ, ಸತ್ತ್ವ ವಿಕ್ರಮಗಳಲ್ಲಿ, ದಾಕ್ಷಿಣ್ಯದಲ್ಲಿ, ತೇಜಸ್ಸಿನಲ್ಲಿ, ಕ್ಷಮೆಯಲ್ಲಿ, ಧೃತಿ, ಧೈರ್ಯ ವಿನಯಗಳಲ್ಲಿ ನಿನಗೆ ಸರಿಸಮನಾದವರು ಮೂರುಲೋಕಗಳಲ್ಲಿ ಯಾರೂ ಇಲ್ಲ!'

'ತಾಯಿ, ಪರಮಾತ್ಮನ ಅರ್ಧಾಂಗಿಗೆ ಸಹಜವಾದ ಔದಾರ್ಯದಿಂದ ನನ್ನ ಮೇಲೆ ಶುಭಆಶೀರ್ವಚನದ ಕೃಪೆ ತೋರಿರುವೆ. ಇದು ನನ್ನ ಮುಂದಿನ ಬಾಳಿಗೆ ಬುತ್ತಿಯಾಗಿದೆ. ಪೂಜ್ಯೆಯೆ, ನೀನು ಅಂದು ನನಗೆ ಚೂಡಾಮಣಿಯನ್ನು ನೀಡಿದಂತೆ ಇಂದು ಪತಿಸನ್ನಿಧಿಗೆ ಒಯ್ಯಲು ಪ್ರತಿಸಂದೇಶವನ್ನು ಅನುಗ್ರಹಿಸು.'

‘ವತ್ಸನೇ, ಪರಮಪುರುಷೋತ್ತಮ ಪ್ರಿಯತಮನ ಪುಣ್ಯದರ್ಶನವೇ ನನಗೆ ಎಲ್ಲ ಪುರುಷಾರ್ಥಕ್ಕಿಂತ ಹೆಚ್ಚಿನದು. ಧರ್ಮಜ್ಞನಾದ ಪವನಸುತ ನೀನೆ ಹೇಳು, ಪತಿವ್ರತಾಸತಿಗೆ ಬೇರೆ ಯಾವ ಜೀವಿತಾರ್ಥವಿದ್ದೀತು? ಪತ್ನಿಗೆ ಇನಿಯನನ್ನು ನೋಡುವ ಆಸೆಯು ಸಂದೇಶವಾಗುವುದಾದರೆ, ಅದನ್ನೆ ಕೊಂಡೊಯ್ಯಿ. ನಿನ್ನಂತಹ ವಿದ್ವಾಂಸ ಸಂದೇಶವಾಹಕನಾಗಿರಲು ನನ್ನ ಅಜ್ಞತೆಗೆ ಅಳುಕೇಕೆ?’

ಮೇಘಸಮನಾದ ಮಹದ್‌ರೂಪದಿಂದ ಹತ್ತಿರವೆ ನಿಂತು, ಸೀತೆ ಮತ್ತು ಆಂಜನೇಯರ ಜಗನ್ಮೋಹನಕರವಾದ ಸಂವಾದದ ರಸ ತೀರ್ಥದಲ್ಲಿ ರಾಕ್ಷಸೋತ್ತಮ ವಿಭೀಷಣನು ಮುಳುಗಿದ್ದನು. ಅವನಿಗೆ ಕಪಿ ಶ್ರೇಷ್ಠನು,

‘ದನುಜೇಂದ್ರನೇ, ಮೈಥಿಲೀಪ್ರಿಯನಿಗೆ ದೇವಿಯ ಅಭಿಲಾಷೆಯನ್ನು ವಿಜ್ಞಾಪಿಸುತ್ತೇನೆ. ನೀನು ಪ್ರಭುವಿನ ಆಜ್ಞೆಯಂತೆ ಲೋಕಮಾನ್ಯೆಗೆ ಮಂಗಳಸ್ನಾನ ಮಾಡಿಸಿ, ದಿವ್ಯವಾದ ಅಂಗಲೇಪನಗಳಿಂದ, ಆದಿಶೇಷನ ಮೇಲೆ ಪವಡಿಸುವವನ ಪತ್ನಿಗೆ ಒಪ್ಪುವ ರೀತಿಯಲ್ಲಿ ಸುಮಗಂಧದಿಂದ ಶೃಂಗರಿಸಿ ಶೀಘ್ರವಾಗಿ ಕರೆದುಕೊಂಡು ಬಾ.’

ಎಂದು ಹೇಳಿ, ಮೈಥಿಲಿಗೆ ಮತ್ತೆ ತಲೆಬಾಗಿ ಕೈಮುಗಿದನು. ಪ್ರತಿವಂದನೆ ಮಾಡಿದ ಪೂಜ್ಯೆಯಿಂದ ಬೀಳ್ಕೊಟ್ಟನು.

ಭರ್ತೃವಾಜ್ಞೆಯೆ ಸತಿಗೆ ಪಥ್ಯಮಯ್

ಹತ್ತಿರದಲ್ಲಿಯೆ ನಿಂತು ಎಲ್ಲವನ್ನು, ಮಕರಂದವನ್ನು ಹೀರುವ ಜೇನುಹುಳದಂತೆ ಅನಲೆ ಸವಿಯುತ್ತಿದ್ದಳು. ರಾಕ್ಷಸೇಂದ್ರ ವಿಭೀಷಣನು ಅವಳನ್ನು ಕುರಿತು, ಸೀತೆ ಕೇಳಿಸಿಕೊಳ್ಳುವಂತೆ ಹೀಗೆ ಹೇಳಿದನು:

‘ಅನಲೆ, ಬೆರಗು ಬಡಿದಂತೇಕೆ ನಿಂತಿರುವೆ? ತಡಮಾಡದೆ ನಮ್ಮ ಈ ಭಾಗ್ಯದೇವಿಯನ್ನು ಪ್ರಯಾಣಕ್ಕೆ ಅಣಿಗೊಳಿಸು. ತ್ರಿಜಟೆಯ ಸಹಾಯದಿಂದ, ನಿನ್ನ ತಾಯಿಯೊಡಗೂಡಿ ಪರಿಮಳ ದ್ರವ್ಯಮಯ ನವ್ಯ ತೈಲಗಳನ್ನು ಲೇಪಿಸು. ಹೊನ್ನಿನ ಗಿಂಡಿಗಳಿಂದ ಸುಖೋಷ್ಣವಾದ ನೀರನ್ನುಹೊಯ್ದು ಸ್ನಾನ ಮಾಡಿಸು. ಜನಕರಾಜನ ಮಗಳು, ದಶರಥನ ಸೊಸೆ, ರಾಮಪತ್ನಿಯಾದ ಈಕೆಗೆ, ನಿಂದೆಯನ್ನು ತೊರೆದು ಬಿಂಕದಿಂದ ಕನಕ ಲಂಕಾಲಕ್ಷ್ಮಿ ತಲೆಯೆತ್ತಿ ನಿಲ್ಲುವಂತೆ ದಿವ್ಯಾಭರಣಗಳನ್ನು ತೊಡಿಸು. ವಸ್ತ್ರಗಳನ್ನು ಉಡಿಸು. ಪುಣ್ಯಮಯ ಹೂಗಳನ್ನು ಮುಡಿಸು. ಮಿಥಿಲೆಯಿಂದ ಅಂದು ಕೋಸಲಕ್ಕೆ ದಿಬ್ಬಣಹೋದಂತೆ, ಇಂದು ಲಂಕೆಯಿಂದ ಈಕೆಯು ನವವಧುವಿನಂತೆ ಪ್ರಭುವಿನ ಬಳಿಗೆ ಬೇಗನೆ ಹೋಗಬೇಕಾಗಿದೆ!’

ಅದನ್ನು ಕೇಳಿದ ವೈದೇಹಿಯು ಅನಲೆಗೆ ಸನ್ನೆಗೈದು ಏನೋಹೇಳಿದಳು. ಆಗ ಅವಳು ತನ್ನ ತಂದೆಯನ್ನುದ್ದೇಶಿಸಿ ಹೇಳಿದಳು:

'ತಂದೆಯೆ, ಪೂಜ್ಯೆಯು ಪತಿಪಾದದರ್ಶನಕ್ಕೆ ಸ್ನಾನ ಮಾಡದೆಯೆ ಹೋಗಲು ಬಯಸುತ್ತಾಳೆ.'

'ದೇವಿ, ಅದು ಪ್ರಭುವಿನ ಆಜ್ಞೆ, ನನ್ನ ಇಚ್ಛೆಯೆಂದು ತಿಳಿಯಬೇಡ.'

ಎಂದು ದನುಜೇಂದ್ರನು ತನಗೆಯೇ ಹೇಳಿದಾಗ ಸಾಧ್ವಿ ಸೀತೆಯು,

'ಮಹಾಪ್ರಾಜ್ಞನೇ ಕ್ಷಮಿಸು. ಪತಿಯ ಆಜ್ಞೆಯೇ ಸತಿಗೆ ಪಥ್ಯ. ಇನ್ನು ನಿನ್ನ ನುಡಿಗೆ ಎದುರಾಡುವುದಿಲ್ಲ. ಇಲ್ಲಿ ನೀನೇ ನನಗೆ ತಂದೆ. ನೀನು ಹೇಳಿದಂತೆ ಆಗಲಿ ತಂದೆ.'

ಎಂದು ಹೇಳುತ್ತ ಅನಲೆಯನ್ನು ಹಿಡಿದು ತಕ್ಷಣ ಎದ್ದಳು. ಪಲ್ಲಕ್ಕಿಯಕಡೆ ನಡೆದಳು. ಆ ಪರ್ಣಕುಟಿಯು ತನಗೊದಗುವ ಶೂನ್ಯತೆಯನ್ನು ನೆನೆದು ದುಃಖದಿಂದ ಕಳೆಗುಂದಿದರೂ ಸುಖಭಾವಕ್ಕೊಳಗಾಯಿತು!

ತನಗೆ ಬಾಳ್‌ಬೇಳ್ದ ಮಹಿಮರಂ ನೋಡಿ ಸುಖಿಸುವಳಾ ಕೃತಜ್ಞೆ !

ಅನಿಲಾತ್ಮಜನು ವೇಗವಾಗಿ ಅಯೋನಿಜೆಯ ಹೃದಯದಾಸೆಯನ್ನು ಹೊತ್ತುಹೋಗಿ ರಘುರಾಮನಿಗೆ ತಿಳಿಸಿದನು. ಅದನ್ನು ಕೇಳಿ ಅವನು ಬೆಚ್ಚನೆ ನಿಟ್ಟುಸಿರಿಟ್ಟು, ತೆಕ್ಕನೆ ಧ್ಯಾನಸ್ಥನಾದನು. ಅವನ ಕಮಲದಂತೆ ಸುಂದರವಾದ ಕಣ್ಣುಗಳು ನೀರಿನಿಂದ ತೋಯ್ದವು. ಹಣೆಯಲ್ಲಿ ಸುಕ್ಕೆದ್ದು, ಹುಬ್ಬುಗಂಟಿಕ್ಕಿತು. ನಿಷ್ಠುರವಾಗಿ ತುಟಿಗಚ್ಚಿದನು. ಅವನ ಮುಖದಲ್ಲಿ ಅನಿರ್ವಚನೀಯವಾದ ಸಂಕಟವು ಲಿಪಿಕೆತ್ತಿದಂತೆ ಪ್ರಕಟವಾಗಿ ಅವನ ದೃಢನಿಶ್ಚಯ ವಿನ್ಯಾಸವನ್ನು ಪ್ರಕಟಿಸಿತು. ಕಪಿರಾಜ ಸುಗ್ರೀವನನ್ನು ಕರೆದು ಹೇಳಿದನು.

'ಕಪಿರಾಜೇಂದ್ರನೇ, ಮಿಥಿಳೇಂದ್ರನ ಮಗಳು ಆಗಮಿಸುತ್ತಿದ್ದಾಳೆ. ರಾಣಿತಪಸ್ವಿನಿಗೆ ತಕ್ಕನಾದ ಮರ್ಯಾದೆಯಿಂದ ಅವಳನ್ನು ಸ್ವಾಗತಿಸಬೇಕು. ಕಪಿಸೈನ್ಯಕ್ಕೆ ಆ ಶುಭವಾರ್ತೆಯನ್ನು ಸಾರು. ತನಗಾಗಿ ಬಾಳನ್ನು ಸಮರ್ಪಿಸಿದ ಮಹಿಮರನ್ನು ನೋಡಿ ಆ ಕೃತಜ್ಞೆ ಸುಖಿಸುತ್ತಾಳೆ!'

'ರಘುಕುಲೇಶ್ವರಿಯ ಸಂದರ್ಶನಕ್ಕೆ ಕಾತರಿಸುತ್ತಿರುವ ವಾನರರೇ ಪುಣ್ಯವಂತರು! ದೇವಿಯ ಕೃತಜ್ಞತೆಯೇ? ದೇವ, ಆ ನೆಪದಿಂದ ಈ ಆಜ್ಞೆಯು ನೀನು ನಮಗೆ ಅನುಗ್ರಹಿಸುವ ಒಂದು ಕೃಪೆಯಾಗಿದೆ. ಈ ಸುವಾರ್ತೆಯನ್ನು ಶಿಬಿರ ಶಿಬಿರದಲ್ಲಿ ಡಂಗುರ ಬಾರಿಸಿ ಸಾರಿಸುತ್ತೇನೆ.

'ಕಪಿಕುಲ ಕಲಾಭಿರುಚಿ ಸಾರ್ಥಕವಾಗಿ ಪ್ರಕಟವಾಗುವಂತೆ ಹೂ ತಳಿರು ತೋರಣಗಳಿಂದ ಈ ವನರಂಗವನ್ನು ಅಣಿಗೊಳಿಸುತ್ತೇನೆ. ಮಧುಮಾಸವೇ ಮದುವೆಗಾಗಿ ನಿರ್ಮಿಸಿದ ಮಧುಮಂಟಪದಂತೆ ಅಲಂಕರಿಸುತ್ತೇನೆ. ದೇವ, ಆ ಕಾರಣಕ್ಕೆ ಖಿನ್ನನಾಗುವಂತಹ ಚಿಂತೆ ನಿನಗೇಕೆ? ರಾಣಿಯ ಯೋಗ್ಯತೆಗೆ ತಕ್ಕಂತೆ ಸ್ವಾಗತಿಸುವುದು ನಮಗೊಂದು ಕೀರ್ತಿ.'

ರಾಮಚಂದ್ರನು ತನ್ನ ಅಂತರ್ಮುಖತೆಗೆ ಆ ರೀತಿ ತಾತ್ಪರ್ಯ ನೀಡಿ, ಸಂತೈಸಿ, ಧೈರ್ಯದ ಮಾತಾಡಿ ಹೋಗುತ್ತಿದ್ದ ಸುಗ್ರೀವನನ್ನು ನೋಡಿದನು. ದಶಮುಖನನ್ನು ಸಂಹರಿಸಿದ ಅವನ ಮುಖದ ಗಂಭೀರ ಸಾಗರದಲ್ಲಿ ನಗೆಯ ಸುಳಿಯೊಂದು ಸುಳಿಸುಳಿದಾಡಿ ಅಡಗಿತು.

ರಘುರಾಮನ ಭಾರ್ಯೆ ಬರುವಳೆಂಬ ಘೋಷಣೆಗೆ, ಡಂಗುರಕ್ಕೆ ಕಪಿಧ್ವಜರು ಸಂಭ್ರಮಿಸಿದರು. ಅವರ ಸಂತೋಷಘೋಷಗಳು ಭೂಮ್ಯಾಕಾಶವನ್ನು ವ್ಯಾಪಿಸಿದವು. ಅವರು ಹೊಗಳು ಭಟ್ಟರಂತೆ ಕೂಗುತ್ತ ಅಲೌಕಿಕ ಸತ್ತ್ವ ತೇಜಸ್ವಿಗಳನ್ನು ಎಚ್ಚರಿಸಿ, ರಾಮ ಸೀತೆಯ ಪುನರ್ ಮಿಲನವನ್ನು ವೀಕ್ಷಿಸಲು ಕರೆದರು.

ಅವರು ದಶರಥನ ಸೊಸೆಗೆ ಸ್ವಾಗತ ಬಯಸಿ ಹೆಬ್ಬಳ್ಳಿಗಳನ್ನು ಎಳೆದೆಳೆದು ತಂದು ಮರದಿಂದ ಮರಕ್ಕೆ, ಕೊಂಬೆಯಿಂದ ಕೊಂಬೆಗೆ ತೋರಣ ಕಟ್ಟಿದರು. ಬೆಟ್ಟದ ತೀರಪ್ರದೇಶದಲ್ಲಿ ವಿರಾಟ್ ಮಂಟಪದ ಮೇಲ್ಕಟ್ಟಿನ ವಿಸ್ತಾರ ಆಶ್ರಯದಲ್ಲಿ ವಿಶಾಲ ವೇದಿಕೆಯನ್ನು ರಚಿಸಿದರು. ಅದನ್ನು ವಸಂತಋತುವಿನ ಅರಣ್ಯದ ಸಂತೋಷ ಮೂರ್ತಿಗಳಂತೆ ಮೂಡಿದ ಬಣ್ಣ ಬಣ್ಣದ ಹೂ, ತಳಿರು ಗೊಂಚಲುಗಳಿಂದ ಚಿತ್ರಮಯವಾಗಿ ಸಿಂಗರಿಸಿದರು.

ಆ ಹಸಿರು ಚಪ್ಪರದ ಎಳೆಯ ಮಾವಿನ ತಳಿರನ್ನು ಆಸ್ವಾದಿಸಲು ಕೋಗಿಲೆಗಳು ನೆರೆದು ಇಂಚರಗೈದವು. ಜೋತಾಡುವ ಹಣ್ಣುಗಳನ್ನು ತಿನ್ನಲುಬಂದ ಗಿಳಿವಿಂಡುಗಳು ಉಲಿದಾಡಿದುವು. ಹೂಗೊಂಚಲುಗಳು ಎದೆಯ ಸಾರವನ್ನು ಹೀರಲು, ಜಾತ್ರೆಯ ತೇರಿಗೆ ಸೇರುವ ಗುಂಪಿನಂತೆ, ತುಂಬಿಗಳು ಕೂಡಿಬಂದವು. ಕೋಟಿ ಕೊರಳುಗಳಲ್ಲಿ ಝೇಂಕರಿಸಿದವು. ಆ ಮಧುರಕ್ಷಣ ರಾಮನ ಮನಸ್ಸಿಗೆ ಮಿಥಿಳೆಯ ಸ್ವಯಂವರದ ನೆನಪನ್ನು ತಂದಿತು!

ಕಪಿಧ್ವಜರು ಆ ರೀತಿ ಮಧುಮಂಟಪವನ್ನು ವನದ ಉದ್ಯಾನದಲ್ಲಿ ರಚಿಸಿದರು. ತಮ್ಮ ತಮ್ಮ ಕುಲಗೌರವ ಬಲಕ್ಕೆ ಮತ್ತು ಸ್ಥಾನ ಮಾನಕ್ಕೆ, ಕೀರ್ತಿಗೆ ತಕ್ಕಂತೆ ವಸ್ತ್ರಭೂಷಣಗಳನ್ನು ಧರಿಸಿದರು. ರಣಯಶಸ್ಸನ್ನು ಸಂಭ್ರಮಿಸುವಂತೆ ಯೋಧಲಾಂಛನಗಳನ್ನು ತೊಟ್ಟುಕೊಂಡರು. ಪ್ರತಿದಳವು ಪತಾಕೆಗಳಿಂದ ಶೃಂಗಾರಗೊಂಡವು. ಸೈನಿಕರು ಹೊಳೆಹೊಳೆಯುವ ಹಾವಿನ ರಚನೆಯಂತಹ ಉದ್ದಸಾಲುಗಳಲ್ಲಿ ನಿಂತು ದೇವಿಯ ಆಗಮನವನ್ನು ನಿರೀಕ್ಷಿಸುತ್ತಿದ್ದರು. ಲಂಕಾಲತಾಂಗಿಯರ ಇಂಪಾದ ಗಾಯನದೊಡನೆ, ಮಧುರವಾದ ನಾನಾ ರಾಗದಿಂದೊಡಗೂಡಿದ ಸುಖರಸದ ನಾಗಸ್ವರವು ಕಿವಿಗೆ ಸುಸ್ವನವಾಗಿ ಕೇಳಿಬಂದಿತು.

ಅಲ್ಲಿ ನೆರೆದಿದ್ದವರಿಗೆಲ್ಲ ಕಣ್ಣು ಅರಳಿತು; ಕೊರಲು ನಿಮಿರಿತ್ತು; ಉಚ್ಛ್ವಾಸದಿಂದ ಎದೆಯುಬ್ಬಿತು! ನೋಡುತ್ತಿರಲು ರತ್ನಮಯವಾಗಿ ಬಂಗಾರ ದಾರಗಳ ಪರದೆಯಿಂದ ಆವೃತವಾದ ಪಲ್ಲಕ್ಕಿಯು, ಚಂದ್ರನಂತೆ ಅವರ ಕಣ್ಣಿನ ನೋಟಕ್ಕೆ ಮೂಡಿಬಂದಿತು. ಹೊಸ ಹೂಮಾಲೆಗಳನ್ನು ಮುಡಿದು, ಹೊನ್ನಿನ ಕಳಸ ಹಿಡಿದ ಲಲನೆಯರು ಆ ಪಲ್ಲಕ್ಕಿಯ ಸುತ್ತಲು ಶೋಭಿಸಿದರು. ಅದರ ಸುತ್ತಲು ಬಿಚ್ಚುಗತ್ತಿಗಳನ್ನು ಎತ್ತಿಹಿಡಿದ ರಾಕ್ಷಸ ಭಟರು ಕಾವಲಿದ್ದರು. ರಾಮನಿಗೆ ಅರ್ಪಿಸಲು ಕಾಣಿಕೆಯನ್ನು ಹೊತ್ತುಬರುತ್ತಿದ್ದ ನಾಗರಿಕರ ಸರ್ಪದಂತಹ ಮೆರವಣಿಗೆಯಲ್ಲಿ ವಿಭೀಷಣನು ನಾಗರತ್ನದಂತೆ ಕಾಣಿಸುತ್ತಿದ್ದನು.

ರಾಮನ ಮುಖದ ರೌದ್ರ ಮುದ್ರೆಯಂ ಕಂಡು ಬೆರಗಿನೊಳಳ್ದುದಿರ್ ತಂಡ!

ರಾಮನ ಹುಬ್ಬುಗಂಟಿಕ್ಕಿದ ಸಂಜ್ಞೆಯಿಂದ ಅದುವರೆಗೆ ಕಲಕಿದಂತಿದ್ದ ವಾನರಉಲ್ಲಾಸ ಸಾಗರ ಮೋಡವು ಸ್ತಬ್ದವಾಯಿತು! ಪಕ್ಷಿಗಳ ಮಧುಮಯ ದನಿಯು ಹೆದರಿ ಅವುಗಳ ಹೃದಯ ಕವಾಟದಲ್ಲಿ ಹುದುಗಿತು! ಬಂದ ಅತಿಥಿ ವಸಂತರಾಜನ ಮುಖ ಬಾಡಿತು! ತಳಿರುಗಳು ಸೊರಗಿದುವು; ಹೂಗಳು ಜೋತುಬಿದ್ದವು. ವಸಂತಮಾರುತನು ಸೆಡೆದು ಹೋದನು. ನಿಶ್ಯಬ್ದವೇ ಭಯದ ಕೊರಳಾಗಿ ಭೂಮಿ ಆಕಾಶಗಳಲ್ಲಿ ಚೀರಿಟ್ಟಿತು! ರಾಮನ ಮುಖದ ರೌದ್ರತೆಯನ್ನು ಕಂಡು, ಎರಡು ಕಡೆಯ ಸೈನ್ಯವು ಅಚ್ಚರಿಗೊಂಡಿತು!

ತಾನೊ? ಅಥವಾ ಇವನೊ, ಅವನೊ? ರಾಮಕೋಪಕ್ಕೆ ಕಾರಣರು ಯಾರು? ಎಂದು ಕಪಿಗಳು ರಾಕ್ಷಸರು, ಮುಖ್ಯರು ಅಮುಖ್ಯರು ತಮ್ಮ ತಮ್ಮೊಳಗೆ ಶಂಕೆಯಿಂದ ಕಳವಳಿಸಿ ಕುದಿದರು. ಆಗ ವಿಭೀಷಣನು ಧ್ಯಾನಸ್ಥನಾಗಿದ್ದ ರಘುರಾಮನ ಬಳಿಗೆ ಹೋಗಿ ಕೈ ಮುಗಿದು ಪ್ರಾರ್ಥಿಸಿದನು;

'ಇದೊ, ಶುಚಿರ್ಭೂತಳಾದ ದೇವಿ ಸೀತೆಯನ್ನು ಕರೆದು ತಂದಿದ್ದೇನೆ!'

ಆ ನುಡಿ ಕೇಳಿದೊಡನೆ ಇಕ್ಷ್ವಾಕು ಕುಲವರ್ಧನನು ಹರ್ಷದ ಮಳೆಯಲ್ಲಿ ಮಿಂದಂತೆ, ದೈನ್ಯ ಧೂಳಿಯಲ್ಲಿ ಉರುಳಿದಂತೆ, ರೋಷಾಗ್ನಿಯನ್ನು ಹೊಕ್ಕವನಂತೆ ಆದನು. ತಾನು ಸ್ಥಿರಚಿತ್ತನಾಗಿದ್ದರೂ ರಸನಿಮಿತ್ತವಾಗಿ ಸಂಚಾರಿಭಾವಕ್ಕೆ ಒಳಗಾದವನಂತೆ, ಸ್ವಲ್ಪಹೊತ್ತು ಸುಮ್ಮನೆ ಮೌನವಾಗಿ ನಿಂತಿದ್ದನು. ನರಲೋಕದಲ್ಲಿ ತನ್ನ ಮುಂದಿನ ಕರ್ತವ್ಯ ಏನೆಂದು ನಿಶ್ಚಯಿಸಿಕೊಂಡು, ದೈತ್ಯೇಂದ್ರ ವಿಭೀಷಣನಿಗೆ ಹೀಗೆ ಹೇಳಿದನು:

'ಸಹೃದಶ್ರೇಷ್ಠನೇ, ನೀನು ಯಾವಾಗಲೂ ನನ್ನ ವಿಜಯದಲ್ಲಿ ಆಸಕ್ತನಾದವನು. ಈಗ ನನ್ನೆಡೆಗೆ ಸೀತೆಯೊಬ್ಬಳನ್ನೇ ಕಳುಹಿಸು.'

ಆ ಮಾತಿಗೆ ವಿಭಿಷಣನು ಬೆಟ್ಟದ ಹೆಗಲಿನಂತಹ ವೇದಿಕೆಯಿಂದ ಸ್ವಲ್ಪ ದೂರದಲ್ಲಿ ನಿಂತಿದ್ದ ಪಲ್ಲಕ್ಕಿಯ ಬಳಿ ಹೋಗಿ ರಾಮನ ಇಚ್ಛೆಯನ್ನು ಹೇಳಿದನು. ಆಗ ತನ್ನ

ತಂದೆಯ ಮುಖವನ್ನು ನೋಡುತ್ತ ನಸುನಗುತ್ತ ಅನಲೆಯು ಪರಿಹಾಸ್ಯದಿಂದ ಕೇಳಿದಳು:

'ನಾನು ಆರ್ಯೆಯ ಜೊತೆಗೂಡಿ ಬಂದರೆ, ಆರ್ಯನಿಗೆ ಏನಾದರೂ ತೊಂದರೆಯೆ?'

ಆಗ ಅವನು ಮಗಳಿಗೆ ಇಂಗಿತದಿಂದ ಪರಿಸ್ಥಿತಿಯ ಗುರುತ್ವವನ್ನು ತಿಳಿಯುವಂತೆ ಮಾಡಿದನು. ಯುವತಿಯು ಮಂಕಾದ ಮುಖಭಾವದಲ್ಲಿ ಪಲ್ಲಕ್ಕಿಯೆಡೆಗೆ ತೆರಳಿ ಪತಿವ್ರತೆಗೆ ವಿಷಯ ತಿಳಿಸಿದಳು. ಜನಕ ಜಾತೆಯು ಕನಕಮಯ ಪಲ್ಲಕ್ಕಿಯಿಂದ ನಿಧಾನವಾಗಿ ಧರಣಿ ಪುಲಕಿಸುವಂತೆ ಇಳಿದಳು.

ಲಜ್ಜಾಪಟಂ ಅದೇನಗ್ನಿನಿಕಷಮೆ ಪೇಳ್ ಪರೀಕ್ಷಿಸಲ್ ಸ್ತ್ರೀಮಾನ ಕನಕ ಸಂಶುದ್ಧಿಯಂ?

ರಾಜಮಹಿಷಿಗೆ ದೀನದೃಷ್ಟಿ ಬೀಳದಂತೆ ಅಂತಃಪುರದ ಸ್ತ್ರೀಯರು ಲಜ್ಜಾಪಟವನ್ನು ಹಿಡಿದು ಸೇವೆ ಮಾಡುತ್ತಿದ್ದರು. ಆಗ ತಾಯಿಯ ದರ್ಶನಾತುರರಾದ ವಾನರರು ತಮ್ಮ ಸ್ಥಾನಮರ್ಯಾದೆಗಳನ್ನು ಮರೆತು ಮುಂದಕ್ಕೆ ನುಗ್ಗಿದರು. ಗಡಿಬಿಡಿಯ ಕೋಲಾಹಲವೆದ್ದಿತು! ಆಗ ವಿಭೀಷಣನು ಕಂಚುಕವನ್ನು ತೊಟ್ಟುಕೊಂಡು ಬೆತ್ತ ಹಿಡಿದ ಅಂತಃಪುರದ ಅಧಿಕಾರಿಗಳಿಗೆ, ಮುನ್ನುಗ್ಗುತ್ತಿದ್ದ ಕಪಿಕುಲೋತ್ತಮರನ್ನು ಹಿಂದಕ್ಕೆ ತಳ್ಳಲು ಆಜ್ಞೆ ಮಾಡಿದನು. ಸಮುದ್ರದ ಮೇಲೆ ಗಾಳಿ ಕುಣಿಯುವಂತಹ ಸದ್ದು ಗದ್ದಲವಾಯಿತು. ಅದನ್ನು ನೋಡಿದ ರಾಮನ ಮುಖ ರೋಷ ಕರ್ಕಶವಾಯಿತು. ವಿಭೀಷಣನನ್ನು ಕರೆದು ಭೀಷಣವಾದ ಧ್ವನಿಯಲ್ಲಿ ಹೀಗೆ ಹೇಳಿದನು:

'ನನ್ನ ಜನರನ್ನು ಈ ರೀತಿ ಏಕೆ ನೋಯಿಸುವೆ? ನನಗೆ ಇವರು ಹೊರಗಿನವರಲ್ಲ, ಸ್ವಜನರು. ಬೆತ್ತ ಹಿಡಿದವರ ನಿಷ್ಠುರ ಕಾರ್ಯವು ನನಗೆ–ಎದೆಗೆ ನಾಟಿದ ಈಟಿಯಂತೆ ನೋವುಂಟು ಮಾಡುತ್ತಿದೆ! ಅದನ್ನು ನಿಲ್ಲಿಸು. ಸ್ತ್ರೀಮಾನ ಕನಕ ಸಂಶುದ್ಧಿಯನ್ನು ಪರೀಕ್ಷಿಸಲು ಲಜ್ಜಾತೆರೆಯು ಅಗ್ನಿಯ ಒರೆಗಲ್ಲೇನು?

'ಅವಳಿಗಾಗಿ ಯುದ್ಧದಲ್ಲಿ ಸತ್ತು ಉಳಿದಿರುವ ವಾನರರು ಪುತ್ರಸಮಾನರು. ಅವರು ಅವಳ ವಿಷಮ ಸಂಕಟದಲ್ಲಿ ನೋಡಬಾರದೆ? ನನ್ನ ಅಂತಸ್ಥವನ್ನು ತಿಳಿಯದೆ, ಸುಮ್ಮನೆ ಈ ಮಾನಧನರನ್ನೇಕೆ ನಿಗ್ರಹಿಸುತ್ತಿರುವೆ? ಮನೆ, ಗೋಡೆ, ವಸ್ತ್ರಾದಿಗಳು ಮಾನಿನಿಯ ಮಾನವನ್ನು ರಕ್ಷಿಸುತ್ತವೆಯೆ? ಅವಳಿಗೆ ಶೀಲವೆ ಶುಭ್ರವಾದ ಅರಿವೆ. ಬರಿ ಬಟ್ಟೆ ಅವಳ ಮಾನಕ್ಕೆ ಮರೆಯಾಗುವುದಿಲ್ಲ. ಮಾನವೆ ಮಾನಿನಿಗೆ ಲಜ್ಜಾ ತೆರೆಯಲ್ಲವೆ?

'ವ್ಯಸನದಲ್ಲಿ, ಕಷ್ಟದಲ್ಲಿ, ಸಂಗ್ರಾಮದಲ್ಲಿ ಮತ್ತು ಸ್ವಯಂವರ ಸಮಯದಲ್ಲಿ ಸ್ತ್ರೀಯನ್ನು ನೋಡುವುದು ನಿರ್ದೋಷವಾದುದು. ನಾನು, ಸಜ್ಜನರು, ಸಹೃದಯರು, ಜಗನ್ಮಾನ್ಯರು ಇರುವ ಈ ಗೋಷ್ಠಿಯಲ್ಲಿ ನನ್ನಾಜ್ಞೆಯಂತೆ, ನನ್ನ ಬಳಿಗೆ ಬರಲು ಅವನಿಜೆಗೆ ಅವಮಾನವಾಗುವ ಯಾವ ಕಾರಣವೂ ಇಲ್ಲ!'

ಅದನ್ನು ಕೇಳಿದ ವಿಭೀಷಣನು ಬೇರೆಯವರಾರಾದರೂ ಆಗಿದ್ದರೆ, ಬೇರೆಸಮಯವಾಗಿದ್ದರೆ ಅಧಿಕ ಪ್ರಸಂಗಿತನವೆಂದು ಹೇಳುತ್ತಿದ್ದನು. ಆದರೆ ಮಹಾಪುರುಷನ ಅಸ್ಥಿರತೆಯನ್ನು ಕಂಡು ಅಚ್ಚರಿಗೊಂಡನು. ಇಂಗಿತಜ್ಞನಾದ ಅವನು ಆ ನಡೆಗೆ ಏನೋ ಅರ್ಥವಿರಬೇಕೆಂದುಕೊಂಡು ಮಾರ್ನುಡಿಯದೆ ಅಲ್ಲಿಂದ ಹೊರಟನು.

ಮಾನವರ ಮಾನಿನಿ, ಅಸಮಾನ ಮಾನನಿಧಿ ವೈದೇಹಿಗೆ ವಿನಯದಿಂದ ನಮಸ್ಕರಿಸಿದನು. ನಿಧಾನವಾಗಿ ರಾಮಸನ್ನಿಧಿಗೆ ಕರೆದುಕೊಂಡು ಹೋದನು. ಮಿಥಿಳೇಂದ್ರನ ಕುವರಿ, ಧರಣಿ ಸಂಭೂತೆ, ವಾನರಕುಲ ಕೀರ್ತಿ ಕಾರಣ ಜಗನ್ಮಾತೆಯನ್ನು; ರಘುರಾಮ ಸಂಪ್ರೀತೆ, ದೈತ್ಯಕಾಮ ರಾವಣನನ್ನು ತನ್ನ ತಪೋನೇತ್ರಾಗ್ನಿಯಿಂದ ಜಯಿಸಿದ ಉತ್ತಮ ಕುಲದ ತೇಜಸ್ವಿನಿಯನ್ನು; ಲೋಕವಿಖ್ಯಾತೆ ಸೀತೆಯನ್ನು ನೋಡಿ ವಾನರ ಸೈನ್ಯವು ಕಣ್ಣು ತುಂಬಿಕೊಂಡಿತು. ಹೃದಯ ತುಂಬಿಬರಲು ಜನ್ಮ ಸಾರ್ಥಕವಾಯಿತೆಂದು ಕೊಂಡಿತು. ಬಾಯ್ಬಿಟ್ಟು ಹರ್ಷವ್ಯಕ್ತಪಡಿಸಿ ಹಿಗ್ಗಿತು. ಕಣ್ಣು ಸ್ವರ್ಗದಾನಂದ ಹರ್ಷಭಾಷ್ಪದಿಂದಿರಲು ನುಡಿ ಸೋತು ಮೂಕವಾಗಿ ಧನ್ಯಭಾವದಿಂದ ನೋಡಿತು.

ಸೌಮ್ಯನಂ ಭರ್ತೃವಂ ಕಂಡಳಿಲ್ಲಾ ಸೌಮ್ಯತರ ವದನೆ.

ಸುಂದರವಾಗಿ ಅಲಂಕರಣಗೊಂಡ ಮಹಾನ್‌ನೌಕೆಯು ಮುಂದಿನ ಪಯಣಕ್ಕೆ ಸಾಗಲು ಸಿದ್ಧವಾಗಿ ಸಮುದ್ರದ ದಡವನ್ನು ಆಶ್ರಯಿಸಿ ನಿಲ್ಲುವಂತೆ, ಸೀತಾದೇವಿಯು ತನ್ನ ಸ್ವಾಮಿಯ ಸಾಗರ ರುದ್ರ ಸಮನಾದ ಸಾನ್ನಿಧ್ಯದಲ್ಲಿ ಕಂಪಿಸುತ್ತ ನಿಂತಳು. ಅವಳು ಪ್ರಿಯಹೃದಯ ಭಾವದಲೆಗಳಿಂದ ಪ್ರಚೋದಿತಳಾಗಿದ್ದಳು.

ದಾಶರಥಿಯು ಸ್ನಾನಮಾಡಿ ಉಟ್ಟು ತೊಟ್ಟು ಅಲಂಕರಣಗೊಂಡಿದ್ದ ಮಡದಿಯನ್ನು ಉಪೇಕ್ಷೆಯಿಂದ ಕಡೆಗಣ್ಣಿನಲ್ಲಿ ನೋಡಿದನು. ಅವನ ಮನಸ್ಸಿನಲ್ಲಿ ತೃಪ್ತಿ ಮೂಡಿತು. ಮಲಿನೆಯೂ, ಕೃಶಳೂ, ಪತಿವ್ರತೆಯು ಆದವಳನ್ನು ನಿಷ್ಠುರ ನುಡಿಯಾಗಿ ನೋಯಿಸಿ ನಿರಾಕರಿಸುವುದು ಅವನಿಗೆ ಸಾಧ್ಯವೆ? ಅದಕ್ಕಾಗಿಯೆ ವಿಭೀಷಣನಿಗೆ 'ಸೀತೆಯನ್ನು ಮೀಯಿಸಿ ಸಿಂಗರಿಸಿ ಕರೆದುಕೊಂಡು ಬಾ' ಎಂದು ಹೇಳಿದ್ದು. ಅವನು ಹತ್ತಿರ ನಿಂತಿದ್ದ ಲಜ್ಜಾ ಶೀಲೆಯನ್ನು ಮಾತನಾಡಿಸದೆ ತನ್ನೊಳಗೆ ತಾನು ಅಂತರ್ಮುಖಿಯಾದಂತೆ ಹುದುಗಿಕೊಂಡು ಸುಮ್ಮನಿದ್ದನು.

ರವಿಕುಲದವನ ಪಿಶಾಚಪ್ರೀತಿಯ ಭಂಗಿಯನ್ನು ಕಂಡು ಹನುಮ ಜಾಂಬವ ಲಕ್ಷ್ಮಣ ಮುಂತಾದವರು, ಈ ಪರಿಸ್ಥಿತಿಯಲ್ಲಿ ಕುಲಸತಿಯ ಗತಿಯೇನೆಂದು ಭೀತಿಗೊಳಗಾದರು. ಬಾಗಿ ನಮಸ್ಕರಿಸಿದ ಸೀತೆಯು, ಬಾಗದ ವಿನಯ ರಹಿತ ಪತಿಯ ತಿರಸ್ಕಾರದಿಂದ ಕೋಟಿ ಕಣ್ಣುಗಳೆದುರು ಕುಗ್ಗಿ ಹಳ್ಳಕ್ಕೆ ಬಿದ್ದಂತೆ ಮುದುಡಿ ಹೋದಳು. ಮುಂದೆ ಏನುಮಾಡಬೇಕೆಂದು ತೋಚದೆ ಮುಖಕ್ಕೆ ಬಟ್ಟೆಯನ್ನು

ಮರೆಮಾಡಿಕೊಂಡಳು. ತಾನೇ ಮಾತು ಪ್ರಾರಂಭಿಸಿ, ಹಿಂದೆ ಕರೆಯುತ್ತಿದ್ದಂತೆ ತೊದಲಿದಳು: 'ಆರ್ಯಪುತ್ರ!'

ಹಾಗೆ ಹೇಳಲು ಕಣ್ಣೀರು ಕಡಲಾಗಿ ಹರಿಯಿತು. ಪತಿದೇವನ ಮುಖವನ್ನು ಮಿಕ್ಕಿ ಮೀರುವ ಪ್ರೀತಿಯ ಉಕ್ಕು ಆನಂದದಿಂದ ನೋಡಿದಳು. ಸೌಮ್ಯತರ ವದನೆಯಾದ ಅವಳು ಸೌಮ್ಯನಾದ ಪತಿಯನ್ನು ಕಾಣಲಿಲ್ಲ. ಅಚ್ಚರಿಗೊಂಡಳು. ದಿಗ್ಭ್ರಮಳಾಗಿ ಮರವಟ್ಟು ನಿಂತಳು.

ರಾಜೀವಲೋಚನನ ಮುಖಕಮಲವನ್ನು ಬಚ್ಚಿಡುವಂತೆ ಬೆಳೆದ ಕೂದಲು, ಅವನು ದಶಾನನನನ್ನು ಸಂಪೂರ್ಣ ನಾಶ ಮಾಡಿದ ಭಾವವನ್ನು ಪ್ರಕಟಿಸುತ್ತಿತ್ತು!

ಪಕ್ಕದಲ್ಲಿನಿಂತ ಸತಿಯನ್ನು ಧಿಕ್ಕರಿಸಿದ್ದನ್ನು ನೋಡಿದ ಜನತೆ 'ಅಃ! ಇಸ್ಸಿ!' ಇದೆಂತಹ ನಡೆ ರಘುಕುಲೋತ್ತಮನದು ಎಂದು ಹೇಳಿ ಅವನನ್ನು ತಿರಸ್ಕರಿಸಿ ಮೂದಲಿಸುತ್ತಿದೆ ಎಂಬಂತೆ ಮೌನವಾಯಿತು. ನಿಶ್ಯಬ್ದ ತೆಗಳಿಕೆಗೆ ಹೇಸಿದ ದಾಶರಥಿಯು ನಿರ್ಭಾವ ಗದ್ಗದ್ಧ್ವನಿಯಲ್ಲಿ ನಡೆದ ಸಂಗತಿಯನ್ನು ಈ ರೀತಿ ಹೇಳಿದನು:

ದಶಾನನನ್ ಅವಶಿ; ದಶರಥಾತ್ಮಜನಲ್ತು!

'ಮಂಗಳ ಸ್ವರೂಪಳೆ, ಯುದ್ಧದಲ್ಲಿ ನನ್ನ ಶತ್ರುವನ್ನು ಜಯಿಸಿದ್ದೇನೆ. ವೈರಿ ಮತ್ತು ಅಪಕೀರ್ತಿಗಳೆರಡನ್ನು ನಿವಾರಿಸಿದ್ದೇನೆ. ಯಶಸ್ಸನ್ನು, ಪೌರುಷದ ಕೀರ್ತಿಯನ್ನು ಸಾಧಿಸಿದ್ದೇನೆ. ಆ ಶ್ರಮವು ಸಾರ್ಥಕವಾಗಿದೆ. ರಾಕ್ಷಸನ ಚಪಲ ಚಿತ್ತದಿಂದ ಮತ್ತು ನಿನ್ನ ದೆಸೆಯಿಂದ ನನಗೆ ವಿಧಿ ತಂದ ಕಳಂಕವನ್ನು ಅಳಿಸಿ ಹಾಕಿದ್ದೇನೆ. ಕಲ್ಯಾಣಿ, ಕಡಲನ್ನು ನೆಗೆದು ನಿನ್ನ ವಾರ್ತೆಯನ್ನು ಮಾರುತಿ ತಂದನು. ರುದ್ರಸೇನಾ ಸಮುದ್ರದ ನೆರವನ್ನು ನೀಡಿ ಸ್ನೇಹ ಕಾರ್ಯವನ್ನು ವಾನರೇಂದ್ರ ಮಾಡಿದನು. ಗುಣಹೀನನಾದ ಅಣ್ಣನನ್ನು ತ್ಯಜಿಸಿ, ತನ್ನಾಸೆ ಏನೊಂದುಇಲ್ಲದೆ ಔದಾರ್ಯ ಮತ್ತು ಕ್ಷಾತ್ರದಿಂದ ನನ್ನಆಸೆಯನ್ನು ಶುಭಮತಿ ವಿಭೀಷಣ ನೆರವೇರಿಸಿದನು. ಅವರ, ಮತ್ತು ಇಲ್ಲಿ ಸೇರಿರುವ ಬಹುಜನರಿಂದ ನನ್ನ ಪ್ರತಿಜ್ಞೆ ಕೈಗೂಡಿದೆ.'

ಎಂದು ಬಿಗಿದ ಹಲ್ಲುಗಳಿಂದ ಇಷ್ಟಿಷ್ಟೆ ತಡೆತಡೆದು ನುಡಿ ಖಡ್ಗವನ್ನು ಝಳಪಿಸುತ್ತ ದೀರ್ಘವಾಗಿ ನಿಟ್ಟುಸಿರು ಬಿಟ್ಟನು. ಹೂ ಮುಡಿದು, ಬೆಲೆಯ ಉಡುಗೆಯುಟ್ಟು, ಪರಿಮಳವನ್ನು ಲೇಪಿಸಿಕೊಂಡು ಅದರ ಪರಿಮಳವನ್ನು ಸೂಸುತ್ತ ನಿಂತಿರುವ ಸೀತೆಯನ್ನು ಅವನು ದುರುದುರನೆ ದಿಟ್ಟಿಸಿ ನೋಡುತ್ತ,

'ಶಿರಃಸ್ನಾತೆ! ಭೂಜಾತೆ! ರಾಕ್ಷಸ ಶ್ರೀಯುತೆ! ಅಲಂಕೃತೆ!' ಎಂದು ಹೇಳುತ್ತ ಹೇಳುತ್ತ ವಕ್ರೋಕ್ತಿಯ ಉಗುರುಗಳಿಂದ ನರಸಿಂಹಾವತಾರವನ್ನು ಅಭಿನಯಿಸುತ್ತ, ಖರದೂಷಣರನ್ನು ಇರಿದವನು ಕೋಮಲೆಯ ಹೃದಯವನ್ನು ಇರಿದು ರಂಧ್ರರಂಧ್ರವನ್ನಾಗಿಸಿದನು.

ಅಶೋಕವನದಿಂದ ಮುಕ್ತಳಾದ, ಪತಿದೇವನ ನಿತ್ಯಾನುರಕ್ತೆಯಾದ ಸೀತಾದೇವಿಯು ಮೈಬಳ್ಳಿ ನಡುಗಲು, ಕೈಯಿಂದ ಮುಖವನ್ನು ಮುಚ್ಚಿಕೊಂಡಳು. ಕೇಳುವ ಲಂಕಿಗರು ಮತ್ತು ಕಿಷ್ಕಿಂಧೆಯವರು ಕರಗುವಂತೆ ಬಿಕ್ಕಿಬಿಕ್ಕಿ ಅತ್ತಳು. ಅದನ್ನು ನೋಡಿ ಹರಧನುವನ್ನು ಮುರಿದವನು ಹುಬ್ಬುಗಂಟಿಕ್ಕಿದನು. ಮುಖದ ಹುತ್ತದಿಂದ ಬಿರಿದು ಎದ್ದ ಘಟಸರ್ಪದ ನಾಲಗೆಗಳು ವಿಷವನ್ನು ಸುರಿಸುವಂತೆ ಹರಿತ ನುಡಿಗಳು ಹೊರಬಂದವು. ಅವನು ಇರುವುದು ಹಾಲಿನ ಕಡಲಿನಲ್ಲಾದರೂ, ಮಲಗಿರುವುದು ಹಾವಿನ ಮಂಚದ ಮೇಲೆ, ಅವನು ಮನೋ ವಿಕಾರಗಳಿಂದ ದೂರವಾದವರ ಒಡನಾಡಿಯಾದವನು. ಆದರೆ ಸಂಗದೋಷದಿಂದ ಹೀಗಾದನೆ ಎಂದು ಆಗಸದಲ್ಲಿ ದೇವತೆಗಳ ಸಮೂಹ ಮಾತಾಡಿಕೊಂಡಿತು. ರಾಮಚಂದ್ರನು ತನ್ನ ಮಾತನ್ನು ಹೀಗೆ ಮುಂದುವರಿಸಿದನು:

'ಚತುರೆಯೆ, ನಿನ್ನ ಕಪಟ ನಟನೆಯನ್ನು ನಿಲ್ಲಿಸು. ಕುಲತೇಜವನ್ನು ಮತ್ತು ನನ್ನ ಪುರುಷ ಸಾಹಸವನ್ನು ಉಳಿಸಿಕೊಳ್ಳಲು ದಶಗ್ರೀವನನ್ನು ಕೊಂದೆನು. ಜಯಶಾಲಿಯಾದೆನು. ನನ್ನ ಪ್ರತಿಜ್ಞೆ ನೆರವೇರಿತು. ನಿನ್ನನ್ನು ಪಡೆಯಲು ಅಲ್ಲ. ನೀನು ಸ್ವುರದ್ರೂಪಿ ಎಂಬುದು ನಿಜ! ದಶಾನನನು ಅವಶಿ; ದಶರಥನ ಪುತ್ರನಲ್ಲ! ನೀನು ವಿಶೇಷ ಅರಿವುಳ್ಳವಳು. ನಾನು ಹೇಳಿದ ವಾಕ್ಯದ ಅರ್ಥವನ್ನು ತಿಳಿದುಕೊಂಡರೆ ತಿಳಿದುಕೊ. ಇಲ್ಲದಿದ್ದರೆ ತೊಲಗು, ನಡೆ. ಮೂರ್ಖಳೆ ನೀನು ಎಲ್ಲಿಗಾದರೂ ಹೋಗು, ನನ್ನ ಕಣ್ಮುಂದೆ ನಿಲ್ಲಬೇಡ. ಕಣ್ಣು ಬೇನೆಯಿರುವವನ ಎದುರಿಗೆ ಸೊಡರಿನ ಕುಡಿ ಹಿಡಿಯಬೇಡ!'

ರಾಜರ್ಷಿ ಜನಕಸುತೆಯು ಪತಿಯ ವಾಕ್ಕಿನ ಶೂಲದ ಒರಟು ತಿವಿತದಿಂದಲೂ, ಬಡಿಗೆಯಿಂದ ಬಡಿದಂತಹ ನೋವಿನಿಂದಲೂ ನಾಚಿ ಬಾಗಿದಳು. ಸುಮ್ಮನೆ ನಿಂತಳು. ತನ್ನ ಮುಂದಿನ ದಾರಿಯನ್ನು ನಿಶ್ಚಯಿಸಿದಳು. ಪ್ರಿಯನ ನಯನಗಳನ್ನು ನೇರವಾಗಿ ನೋಡುತ್ತ, ಕೈಮುಗಿದು ಗದ್ಗದ ಧ್ವನಿಯಲ್ಲಿ ಚಿಗರೆ ಕಣ್ಣಿನವಳು ಹೀಗೆ ಉತ್ತರಿಸಿದಳು:

ರಾಕ್ಷಸಂ ಮುಟ್ಟಿದನೆ? ನಾನಲ್ತು, ದೈವಮಪರಾಧಿ.

'ಇಕ್ಷ್ವಾಕು, ರಘು, ದಿಲೀಪ ಮುಂತಾದ ರಾಜೇಂದ್ರರ ಮಕ್ಕಳೆಂಬುವ ಮಹಾ ರವಿಕುಲದಲ್ಲಿ ಉತ್ತಮನಾಗಿ ಹುಟ್ಟಿದವನು ನೀನು. ಅನಾಗರಿಕರು ಅನಾಗರಿಕ ಸ್ತ್ರೀಯರನ್ನು ಬಯ್ಯುವ ರೀತಿಯಲ್ಲಿ ನೀನೇಕೆ ತರವಲ್ಲದ ಕಿವಿಯಿರಿಯುವ ಮಾತುಗಳನ್ನು ಆಡಿದೆ?... ರಾಕ್ಷಸನು ನನ್ನನ್ನು ಮುಟ್ಟಿದನೆ? ದೈವವು ಅಪರಾಧಿ; ನಾನಲ್ಲ. ಮೈಯನ್ನು ಅಲ್ಲದೆ ಮನವನ್ನೇನು ಮುಟ್ಟಿದನೆ? ನಿನ್ನ ಹರಿತಬಾಣಕ್ಕೆ ಹೇಗೊ ಹಾಗೆ, ನನ್ನನ್ನು ಮುಟ್ಟಲಾರದೆ ಸುಟ್ಟು ಸೀದಿಹೋದ. ಬಾಲ್ಯದಲ್ಲಿ ನನ್ನ ಕೈಹಿಡಿದೆ. ಅಂದಿನಿಂದ ನಾವಿಬ್ಬರೂ ಒಂದಾಗಿ ಬಾಳಿನಲ್ಲಿ ಬೆಸೆದುಕೊಂಡು ಅಗಲದೆ ಒಟ್ಟಾಗಿ ಬೆಳೆದೆವು. ಆ ಬಾಳಿನ ನನ್ನ ಚಾರಿತ್ರ್ಯ, ಭಕ್ತಿ, ಪ್ರೇಮನಿಷ್ಠೆ, ಶೀಲವನ್ನು ನಾನು ನಿನಗೆ ಇಂದು ತೋರಿಸದಿದ್ದರೆ ನಾನೆಂದಿಗೂ ಕೆಟ್ಟಂತೆ. ಈ ಸಂಶಯ ನಿವಾರಣೆಗೆ ವಾದ ಏಕೆ?'

ಎಂದು ಹೇಳುತ್ತ, ಅತ್ತ ದುಮ್ಮಾನದಿಂದ ಧ್ಯಾನಪರನಾಗಿ ನಿಂತಿದ್ದ ಮೈದುನನ ಕಡೆಗೆ ನೋಡಿ ಹೇಳಿದಳು:

'ಸೌಮಿತ್ರಿಯೆ, ಚಿತೆಯನ್ನು ರಚಿಸು! ಮಿಥ್ಯಾಪವಾದದ ಆಘಾತಕ್ಕೆ ಸಿಲುಕಿದ ನನ್ನ ಈ ಬಾಳು ಮರಗೂಳಾದ ಅಗ್ನಿಗೆ ಒಂದು ಕೆಂಗೂಳ್. ಸಭಾಮಧ್ಯದಲ್ಲಿ ಪ್ರಭುವಿನಿಂದ ತಿರಸ್ಕೃತಳಾದ ನನ್ನನ್ನು ಸದ್ಗತಿಗೆ ಒಯ್ಯಲು-ಹವಿಸ್ಸನ್ನು ಸ್ವರ್ಗಕ್ಕೆ ಕೊಂಡೊಯ್ಯುವ ಅಗ್ನಿಯಲ್ಲದೆ, ಬೇರೆ ಯಾರನ್ನೂ ಕಾಣೆ!'

ಲಕ್ಷ್ಮಣನು ತಕ್ಷಣ ಅಣ್ಣನ ಕಡೆ ಕಣ್ಣು ತಿರುಗಿಸಿದನು. ಅಣ್ಣನ ಮುಖಭಾವದ ಇಂಗಿತವನ್ನು ಅರಿತು ತುಂಬಾ ದುಃಖಿಯಾದನು. 'ಏನು ಉಗ್ರನೊ ಅಗ್ರಜನು!' ಎಂದು ತನ್ನೊಳಗೆ ತಾನು ಅಂದುಕೊಂಡನು. ವಾನರ ಸಹಾಯದಿಂದ ಆ ಮಂಟಪದ ಮಧ್ಯೆ ಬೃಹತ್‌ಚಿತೆಯನ್ನು ಸಿದ್ಧ ಪಡಿಸಿದನು.

ನಡೆನುಡಿಗಳಲಿ ಬಗೆಯಲಿ ರಾಘವೇಂದ್ರನನುಳಿದು ಚರಿಸಿರ್ದೊಡೆನ್ನುಸಿರ್ ನನ್ನನಾಹುತಿಗೊಳ್.'

ಸೀತಾದೇವಿಯು, ಎಲ್ಲರನ್ನು ಎಲ್ಲವನ್ನು ನಿಷ್ಕಾಮ ದೃಷ್ಟಿಯಿಂದ ನೋಡುತ್ತ ವಿಗ್ರಹದಂತೆ ನಿಂತಿದ್ದ ಮನದನ್ನನ ಬಳಿಗೆ ಹೋದಳು. ಪ್ರದಕ್ಷಿಣೆ ಮಾಡಿ, ಪಾದದಬಳಿ ದಂಡದಂತೆ ದಿಂಡುರುಳಿ ಹಣೆಗೆ ಒತ್ತಿಕೊಂಡಳು. ಗೌತಮ ಸತಿಯ ಶಾಪ ಕಲ್ಮಷವನ್ನು ವಿಮೋಚನಗೊಳಿಸಿದ ಪೂಜ್ಯಪಾದಗಳನ್ನು ತೊಳೆದಳು. ಮನಸ್ಸಿಗೆ ಚಿಂತನಾತೀತವಾದ, ವರ್ಣಿಸಲಾಗದ ಶಾಂತಿಯು ಮೂಡಿತು.

ಪುಣ್ಯಾತ್ಮಳು, ನಿಸ್ಸಂಗ ಅಂತರಾತ್ಮಳು, ರಾಜರ್ಷಿಸುತೆಯು ಆದ ಸೀತೆಯು ಪತಿದೇವರ ಪೂಜೆ ಮಾಡಿ, ಕಂಡವರೆಲ್ಲ ಬೆರಗಾಗುವಂತೆ ನಸುನಗುತ್ತ ಚಿತೆಯೆಡೆಗೆ ನಡೆದಳು. ಅಗ್ನಿಯನ್ನುದ್ದೇಶಿಸಿ ಹೀಗೆ ಹೇಳಿದಳು:

'ಓ ಅಗ್ನಿ, ನೀನು ಲೋಕಸಾಕ್ಷಿ, ನಡೆನುಡಿಗಳಲ್ಲಿ, ಚಿತ್ತದಲ್ಲಿ ರಾಘವೇಂದ್ರನನ್ನು ಹೊರತುಪಡಿಸಿ ಬೇರೆಯ ಕಡೆಗೆ ನನ್ನ ಪ್ರಾಣದ ಉಸಿರು ಹರಿದಿದ್ದರೆ ನನ್ನನ್ನು ಆಹುತಿ ತೆಗೆದುಕೊ. ಇದಕ್ಕೆ ಸೂರ್ಯ, ಚಂದ್ರ, ಸಂಧ್ಯೆ, ರಾತ್ರಿ, ಪೃಥ್ವಿ ಸಾಕ್ಷಿಯಿರಲಿ. ಪುರುಷೋತ್ತಮನಾದ ನನ್ನ ಪತಿಯ ಪಾದಪದ್ಮಗಳಲ್ಲಿ ನಾನು ಸದಾ ನೆಲೆಸಿರುವೆನಾದರೆ, ಓ ಅನಿಲ ಮಿತ್ರನೆ, ನಿನ್ನ ಈ ಮಗಳನ್ನು ಪತಿ ಚರಣ ಸೇವಾರ್ಥಕ್ಕಾಗಿ ಕಾಪಾಡು, ಕಾಪಾಡು, ಕಾಪಾಡು!'

ಪುಟವಿಟ್ಟ ಚಿನ್ನದಂತಹ ಕಾಂತಿಯುಳ್ಳ ಪೂಜ್ಯೆಯು ಧಗಧಗಿಸುವ ಉಜ್ವಲ ಚಿತಾಗ್ನಿಯನ್ನು ಮಂಗಳವಾದ ಹವಿಸ್ಸಿನಂತೆ ಮುಗಿದ ಕೈ ಮುಗಿದಂತೆ ಪ್ರವೇಶಿಸಿದಳು. ಓ ಓ ಓ, ಹೋಯೆಂದು ಅಲ್ಲಿ ನೆರೆದಿದ್ದವರ ರೋದನವು ಹರಿದು ದಿಗಂತವನ್ನು ವ್ಯಾಪಿಸಿತು.

ಚಲಿಸಿದನು ಚಿತೆಗೆ, ನೋಳ್ಪರಾ ವಿಸ್ಮಯಂ ಚಿಂತೆಗೆ ತಿರುಗುವಂತೆ.

ನಿಷ್ಠುರ ಶಿಲಾಮೂರ್ತಿಯಂತೆ ರೆಪ್ಪೆಗಳನ್ನು ಮಿಟುಕಿಸದೆ ನಿಂತು ಎಲ್ಲವನ್ನು ಸಾಕ್ಷಿಯಂತೆ ನೋಡುತ್ತಿದ್ದ ರಾಮನಮುಖವು ತೇಜಸ್ಸಿನಿಂದ ಪ್ರಕಾಶಮಾನವಾಯಿತು. ನೋಡುವವರ ವಿಸ್ಮಯವು ಚಿಂತೆಗೆ ತಿರುಗುವಂತೆ ಜನರು ಓವೊವೋ ಎನ್ನುವಷ್ಟರಲ್ಲಿ ಚಿತೆಗೆ ಚಲಿಸಿದನು. ಪರಶುರಾಮುನನ್ನು ಜಯಿಸಿದ ಶ್ರೀರಾಮುಚಂದ್ರನು ಗೋಪುರಗೋಪುರವಾಗಿ ಹೊಮ್ಮಿ ಪ್ರಜ್ವಲಿಸುತ್ತಿದ್ದ ಅಗ್ನಿಯ ಮಧ್ಯಕ್ಕೆ ಪ್ರವೇಶಿಸಿ ಮರೆಯಾದನು!

ಅಲ್ಲಿ ನೆರೆದಿದ್ದ ಎಲ್ಲರ ಇಂದ್ರಿಯಗಳಿಗೆ ಸೂಕ್ಷ್ಮವಾದ, ಪರೋಕ್ಷವಾದ ಅತೀಂದ್ರಿಯವು ತನ್ನ ಹೆಬ್ಬಾಗಿಲನ್ನು ತೆರೆದಂತೆ ಆಯಿತು. ಅಸಂಖ್ಯ ದೇವತೆಗಳ ಕಂಠಸ್ವನವು ಸಹಸ್ರತಂತಿಗಳ ವೀಣಾಧ್ವನಿಯಂತೆ ಕೇಳಿ ಬಂದಿತು. ಅದು ಆಗಸವೇ ತುಂಬಿಯಾದ ಅಶರೀರ ಮಧುರವಾಣಿಯಾಗಿತ್ತು. ಅದನ್ನು ವಾನರ ಮತ್ತು ರಾಕ್ಷಸ ಸಮೂಹವು ಮೂಕವಾಗಿ ಮೌನದಿಂದ ಆಲಿಸಿತು. ದಿನದಿನದ ಪರಿಚಿತದ ಲೌಕಿಕಸ್ವರಗಳನ್ನು ಕರ್ಣೇಂದ್ರಿಯವು ತೊರೆಯಿತು. ನಯನೇಂದ್ರಿಯವು ತಾನು ಅದುವರೆಗೆ ಕಾಣದ ಅಚ್ಚರಿಯ ವರ್ಣಗಳನ್ನು ಕಂಡಿತು.

ಮಣ್ಣು ತನ್ನ ಜಾಡ್ಯವನ್ನು ತ್ಯಜಿಸಿ ಕಾಂತಿಮಯವಾಯಿತು. ಕಲ್ಲುಗಳು ವಿವಿಧ ಜ್ಯೋತಿಗಳನ್ನು ಪ್ರಕಾಶಿಸಿ ಮಿರುಗತೊಡಗಿದುವು. ಮರಗಳು ಮರ್ತ್ಯತೆಯನ್ನು ತೊರೆದುವೇನೊ ಎಂಬಂತೆ ಬಣ್ಣಬಣ್ಣದ ಮನೋಹರ ಸೌಂದರ್ಯವನ್ನು ಹೊಂದಿ ಪರಬ್ರಹ್ಮ ವಸ್ತುವಿನಂತೆ ಸುಗಂಧವನ್ನು ಸೂಸಿದುವು. ಭೂಮಿತಾಯಿಯು ಲೌಕಿಕದ ನಿತ್ಯಸಾಧಾರಣತೆಯನ್ನು ತ್ಯಜಿಸಿ, ಅಲೌಕಿಕದ ಸ್ವರ್ಗೀಯ ಕಾಂತಿವಸ್ತ್ರವನ್ನು ತೊಟ್ಟಳು. ಆಕಾಶವನ್ನು ತುಂಬಿದ ಹೊನ್ನು ಮಂಜಿನಲ್ಲಿ, ಚಂಚಲದ ಆಕಾಶಗಾಮಿಗಳು ಹಲವು ಆಕಾರಗಳಲ್ಲಿ ಸಂಚರಿಸುವಂತೆ ಸುವರ್ಣ ಕಾಂತಿಗಳು ಮಿಂಚಿದುವು. ಶ್ರೀ ದೇವವಾಣಿಗಳು ಭೂಮಿಯದಲ್ಲದ ದಿವ್ಯಭಾಷೆಯಲ್ಲಿ, ಮಹಾಛಂದಸ್ಸಿನಲ್ಲಿ ಸ್ತೋತ್ರಗಳನ್ನು ಹಾಡಿದುವು.

> "ಓ ನಮೋ ಸಚ್ಚಿದಾನಂದನೆ ನಮೋ ನಮೋ!
> ಓಂ ನಮೋ ಸರ್ವಸ್ವತಂತ್ರನೆ ನಮೋ ನಮೋ!
> ಆದಿಯಾದಿಯೆ ನಮೋ, ಅಂತ್ಯದಂತ್ಯವೆ ನಮೋ,
> ಆದ್ಯಂತದಾಚೆಗಿರುವಾತನೆ ನಮೋ ನಮೋ!
> ಅಜ ನಮೋ, ಹರಿ ನಮೋ, ಶಿವ ನಮೋ, ನಮೋ ನಮಃ!
> ಕವಿ ನಮೋ, ಋಷಿ ನಮೋ, ಗುರು ನಮೋ, ನಮೋ ನಮಃ!
> ನೀನೆ ಚಿದ್ರೂಪಿ ನಮೋ; ನೀನ್ ಅಚಿದ್ರೂಪಿ ನಮೋ;
> ಚಿದಚಿದಾತೀತ ಪರಬ್ರಹ್ಮವೆ ನಮೋ ನಮಃ!

ಪುರುಷ ರೂಪಿಯೆ ನಮೋ; ಪ್ರಕೃತಿರೂಪಿಯೆ ನಮೋ;
ಪುರುಷೋತ್ತಮನೆ ನಮೋ, ಪುನರ್ನಮೋ ಮುಹುರ್ನಮೋ!
ಓಂ ಸ್ವಯಂಪ್ರಭು ನಮೋ! ಓಂ ಋತ ಪ್ರಭುನಮೋ!
ಓಂ ನಮೋ ಸರ್ವಲೋಕಸ್ವಾಮಿ ನಮೋ ನಮಃ!
ಹೃದಯ ಚತುರ್ಮುಖಂ; ಜಿಹ್ವೆಯೆ ಸರಸ್ವತೀ;
ಸ್ಥೈರ್ಯಮೀ ವಸುಧಾತಲಂ; ಜಗಮೆ ತಾಂ ಶರೀರಂ;
ನಿನ್ನಿಚ್ಛೆ ವಿಧಿ; ಕೋಪಮಗ್ನಿ; ಲಕ್ಷ್ಮಿಯೆ ಸೀತೆ!
ರಾವಣ ವದಾರ್ಥಮೀ ನರತನುವನಾಶ್ರಯಿಸಿ
ಬಂದ ಲೀಲಾವತಾರಿಯೆ, ದಶರಥಾತ್ಮಜನೆ,
ಪುರುಷೋತ್ತಮನೆ, ನಮೋ! ಪುರುಷಸಿಂಹನೆ, ನಮೋ!
ಪ್ರಭು, ನಮೋ! ವಿಭು, ನಮೋ! ಜಗದ್ಗುರು, ನಮೋನಮಃ!
ನಮೋ ನಮೋ, ನಮೋ ನಮೋ, ನಮೋ ನಮೋ ನಮೋ!"

ಅಗೋಚರ ಚೈತನ್ಯರು ಅತೀಂದ್ರಿಯವಾದುದು ಇಂದ್ರಿಯಕ್ಕೆ ಗೋಚರವಾಗುವಂತೆ, ರಾಗ ರಾಗಿಣಿಯರಂತೆ ಭಾವವನ್ನು ಮೀರಿದ ಅರ್ಥಗೋಚರವಾಗುವಂತೆ ಕಂಗೊಳಿಸಿದರು. ಭಕ್ತಿರಸ ದೀಪ್ತರಾಗಿ ನಟ ನಟೀ ಲಾಸ್ಯ ವಿನ್ಯಾಸದಲ್ಲಿ ಭಗವದ್ ವಿಭೂತಿಯನ್ನು ಕೀರ್ತಿಸಿದರು.

ಹವ್ಯವಾಹನ ಪವಿತ್ರತನುವಿಂ ಪೊಣ್ಮಿದನು ದಶರಥಾತ್ಮಜಂ ಜಾನಕೀ ಪಾಣಿಗ್ರಹಣ ಕೃಪಾಲು!

ಚಿತಾಗ್ನಿಯ ಉರಿಯು ನವರತ್ನಗಳ ಕಾಂತಿಯನ್ನು ಹೊಂದಿತು! ವೈಶ್ವಾನರನು ಬೀಸುವ ಅಗ್ನಿ ಚಾಮರದಂತೆ ಬೃಹತ್‌ಜ್ವಾಲೆಗಳು ಅತ್ತಲಿತ್ತ ತೊನೆದಾಡಿದವು. ಅದು ಆದಿಶೇಷನೇ ವೇಷಾಂತರಗೊಂಡು ಸೇವೆ ಮಾಡಲು ಬಂದ ಹಾಗೆ ಕಾಣುತ್ತಿತ್ತು! ದಶರಥಪುತ್ರನು ಜಾನಕಿಯ ಕೈ ಹಿಡಿದುಕೊಂಡು ಅಗ್ನಿದೇವನ ಪವಿತ್ರ ಶರೀರದಿಂದ ಹೊರಹೊಮ್ಮಿದನು! ಪಾವನಅಗ್ನಿಯಲ್ಲಿ ಸ್ನಾನಮಾಡಿದ ಸೀತೆಯನ್ನು ಕಿಚ್ಚಿನ ಉರಿಯಿಂದ ಕಾಯುವ ರೀತಿಯಲ್ಲಿ ನಿಧಾನವಾಗಿ ಹೊರಗೆ ಕರೆತಂದನು. ಅವರು ಪವಿತ್ರವಾದ ಗಿರಿಯ ಶಾಂತವೂ ಹದವೂ ಆದ ಎಳೆಯ ಹಸಿರುಹುಲ್ಲಿನ ಮನೋಹರ ವೇದಿಕೆಯನ್ನು ಏರಿದರು.

ಶ್ರೀಮದ್ ದಿವ್ಯ ದೇಹದಿಂದ, ದಿವ್ಯ ಮಂಗಳಕರವಾದ ಮಾಲೆ ವಸ್ತ್ರಾಭರಣಗಳಿಂದ ಅಲಂಕೃತರಾಗಿ ದಿವ್ಯ ತೇಜಸ್ಸಿನಿಂದ ಶೋಭಿಸುತ್ತಿದ್ದ ಸೀತಾಸಹಿತ ರಾಮನನ್ನು ಕಂಡು ಕಪಿಸೈನ್ಯವು ಹರ್ಷೋನ್ಮಾದಕ್ಕೊಳಗಾಯಿತು. ಘೇ ಘೇ ಎಂದು ಘೋಷಿಸುತ್ತಿದ್ದ

ರಾಕ್ಷಸ ಸೈನ್ಯದ ಜಯಧ್ವನಿಯ ಜೊತೆ ಅದು ಕೂಡಿದ್ದು, ಸಮುದ್ರ ಜಲವು ಮೋಡದಲ್ಲಿ ಒಂದಾದಂತಿತ್ತು!

ಪೂಜ್ಯೆಯಂ ಪಾಲಿಸುವ ನೆವದಿ ನೀನುಂ ಪರೀಕ್ಷಿತನಲಾ!

ಅನಲೆಯು ಓಡೋಡಿ ಬಂದು ರಾಮಚಂದ್ರನ ಪಾದಗಳಿಗೆ ಸಾಷ್ಟಾಂಗ ನಮಸ್ಕಾರ ಮಾಡಿದಳು. ಸಂತೋಷ ಮೂರ್ಛಿತಳಾದಂತೆ ನುಡಿದಳು:

'ಸ್ವಾಮಿಯೇ, ಕ್ಷಮಿಸು. ದೇವಿಯನ್ನು ನಿಂದಿಸಿದ ನಿನ್ನನ್ನು ನಾನು ಎಷ್ಟೊ ಬಯ್ದೆನು. 'ಪತಿವ್ರತೆಯನ್ನು ಅಗ್ನಿ ಪ್ರವೇಶ ಮಾಡಿಸುವುದಿರಲಿ, ತನ್ನನ್ನೆ ಪರೀಕ್ಷಿಸಿಕೊಳ್ಳುವವರಾರೊ? ಪಾಪದೋಷದಿಂದ ತಾವೇನು ಹೊರತೆ?' ಎಂದು ಶಂಕಿಸಿದೆನು. ಆ ನಿಂದನೆ ಭಸ್ಮವಾಯಿತು.

'ತಂದೆಯೆ, ನೀನು ಒಡ್ಡಿದ ಚಿತೆಯ ಲೋಕಪಾವಕ ಪವನಸಖನಿಂದ; ಪೂಜ್ಯೆಯನ್ನು ಪಾಲಿಸುವ ನೆವದಿಂದ ನೀನು ನಿನ್ನನ್ನು ಪರೀಕ್ಷೆಗೆ ಒಳಪಡಿಸಿಕೊಂಡೆ! ಸರ್ವಲೋಕಪ್ರಭುವೆ, ಲೋಕತೃಪ್ತಿಗೆ ಲೋಕ ಮರ್ಯಾದೆಗೆ ಒಳಗಾದ ನೀನು ನಿಜವಾಗಿ ಲೋಕಗುರು !'

ಆ ವಿಭೀಷಣ ಕುಮಾರಿಯ ನುಡಿಯೆ ಜನರಿಗೆ ತಮ್ಮತಮ್ಮ ಹೃದಯದ ಅಂತರ್ ಬೋಧೆಯಾಯಿತು. ಆಗ ಜನಸಾಗರವು ಬೋರ್ಗರೆಯುವ ಸಮುದ್ರದ ತೆರೆತೆರೆಗಳಂತೆ ಮುನ್ನುಗ್ಗಿತು. ಅವರು ಆನಂದ ಬೋಧರಸ ಸಂಭ್ರಮದಲ್ಲಿ ಮಿಂದು ಸೀತಾರಾಮರ ಪಾದಗಳಿಗೆ ನಮಸ್ಕರಿಸಿ, ಸ್ತುತಿಸಿದರು:

'ಓಂ ನಮೋ ಸಚ್ಚಿದಾನಂದನೆ ನಮೋ ನಮಃ !

ಓಂ ನಮೋ ಸರ್ವಸ್ವತಂತ್ರನೆ ನಮೋ ನಮಃ !'

❑



~~~~~~~~~~~~~~~~~~~~~~~ ಸಂಚಿಕೆ – ೧೨ ~~~~~~~~~~~~~~~~~~~~~~~

ತಪಸ್ಸಿದ್ಧಿ

ಹದಿಮೂರು ವರ್ಷಗಳು ಉರುಳಿ ಹೋದವು. ಹದಿನಾಲ್ಕನೇ ವರ್ಷ ತುದಿಯನ್ನು ಕಾಣುತ್ತಿದೆ. ಅಯೋಧ್ಯಾನಗರಿಯು ವಿರಹದಿಂದ ಸೊರಗಿದ್ದಾಳೆ. ಇಕ್ಷ್ವಾಕು ನೆಟ್ಟು ನೀರುಹೊಯ್ದ ಮರ ನೀರಿಲ್ಲದೆ ಒಣಗುತ್ತಿದೆ. ರಘು ಜಲಕ್ರೀಡೆಯಾಡಿದ ಸರೋವರದ ದಡದಲ್ಲಿ ನೆಲದವರೆಗೆ ದಿಂಡುಬೆಳೆದು ಜಲಪಿಶಾಚಿಯಾದ ಪಾಚಿ ದಟ್ಟವಾಗಿ ಹರಡಿಕೊಂಡಿದೆ. ರಾಜಶ್ರೇಷ್ಠನಾದ ದಿಲೀಪನು ಮೇಯಿಸಿದ ದನಗಳ ಸಂತಾನವು ನೂರಾರು ಹೆಚ್ಚಿ ಸದಾ ಹಾಲಿನ ಅಮೃತಧಾರೆಯಿಂದ ಅಮೃತಶಿಲೆಯ ಗೋಶಾಲೆ ತುಂಬಿತ್ತು. ಅದು ಇಂದು ಜೇಡರ ಹುಳುಗಳ ಸಾವಿರಾರು ಬಲೆಗಳಿಂದ ವಿರೂಪಗೊಂಡು
~~~~~~~~~~~~~~~~~~~~~~~

ಹಾಳೂರ ಕೊಟ್ಟಿಗೆಯಂತಾಗಿದೆ. ಅಜನು ಸಂಚರಿಸಿದ ಉದ್ಯಾನ ವೀದಿಗಳಲ್ಲಿ ಎರಡೂಕಡೆ ಪೊದೆಗಳು ಬೆಳೆದು ಅಳಿದುಳಿದ ನೆನಪಿನ ದಾರಿಯು ಕೈಕೆಯ ಮಗನ ವ್ರತ ಹಿಡಿದು ಕೂದಲುಬೆಳೆದ ಮುಖದಂತಾಗಿದೆ!

ಓ ವಾಣಿ ವಾಗ್ದೇವಿಯೆ ನಿನಗೆ ಇಷ್ಟು ಸೂಚನೆ ಸಾಲದೆ? ಕೈಮುಗಿದು ಬೇಡಿಕೊಳ್ಳುತ್ತೇನೆ, ಹಿಂತಿರುಗಿ ಬಾ ತಾಯಿ. ಸಾಕು ಆ ಲಂಕೆ, ರಾಕ್ಷಸ ಲಂಕೆ, ರಣಘೋರ ಲಂಕೆ, ರಾಮನ ಶಂಕೆ, ಜಾನಕಿಯ ಬೆಂಕೆ! ಸುವ್ರತನಾದ ಭರತನು ಹೇಗಿರುವನು? ಊರ್ಮಿಳಾ ದೇವಿಯು ಎಲ್ಲಿ ತಪಸ್ಸಿನಿಂದಿದ್ದಾಳೆ? ಕೌಸಲ್ಯೆ ಹೇಗೆ ಇರುವಳು? ಭರತನ ತಾಯಿ ಬದುಕಿರುವಳೆ? ಲಕ್ಷ್ಮಣನ ತಾಯಿಯು ತಾನು ಓರ್ವಳೆ ಇತರರನ್ನು ಸಂತಯಿಸುತ್ತ ಹೇಗಿರುವಳು? ಎಂಬುದನ್ನು ನಮಗೆ ಹಾಡಿ ತೋರಿಸು, ಓ ತಾಯಿ, ವಾಗ್ದೇವಿ!

ನಿನಗೆ ಆ ಲಂಕೆಯನ್ನು ತೊರೆಯಲು ಇನ್ನೇನು ಸಂಶಯ ಉಳಿದಿದೆ? ರಾಮಚಂದ್ರನು ಭರತನನ್ನು ಕಾಣುವ ಅಕ್ಕರೆಯಿಂದ ಮನೋವೇಗದ ಗಗನಗಾಮಿಯಾದ ಪುಷ್ಪಕವಿಮಾನವನ್ನು ಏರಿದ್ದಾನೆ. ವಿಭೀಷಣನ ಸತ್ಕಾರವು ತನಗೆ ಬೇಡವೆಂದು ತಿಳಿಸಿದ್ದಾನೆ.

ಹಣ್ಣಿನ ಮರವೆ ಗುರಿಯಾಗಿ ರೆಕ್ಕೆಬಿಚ್ಚಿ ಹಾರಿದ ಪಕ್ಷಿಯು, ಬೇರೆ ತರುಗಳಲ್ಲಿ ಸ್ವಲ್ಪ ವಿಶ್ರಾಂತಿಗಾಗಿ ನಿಲ್ಲುತ್ತದೆ. ಹಾಗೆ ರಾಮಚಂದ್ರನು ಮುನಿವರ್ಯ ಅಗಸ್ತ್ಯರ ಆಶ್ರಮ ಮತ್ತು ಕಿಷ್ಕಿಂಧೆಯಲ್ಲಿ ಸ್ವಲ್ಪ ವಿಶ್ರಾಂತಿ ತೆಗೆದುಕೊಂಡನು. ಅಲ್ಲಿಂದ ದೂರದ ಭರದ್ವಾಜರ ಆಶ್ರಮಕ್ಕೆ ಹಾರಿದನು. ಓ ವಾಣಿಯೆ, ಬಾ, ತಪಸ್ವಿ ದರ್ಶನಕ್ಕೆ, ನಂದಿಗ್ರಾಮ ದರ್ಶನಕ್ಕೆ!

ಸೂರುಳ್ ತೊಟ್ಟು, ತೊಡಗಿದನು ನಿರಶನವ್ರತ ಸಹಿತಮಾತ್ಮಮಯ ಯಜ್ಞಮಂ ಕ್ರತುಪೂರ್ಣಮಂ.

'ಅಣ್ಣನು ಬರುವುದಕ್ಕೆ ಇನ್ನು ಏಳು ದಿನಗಳು ಉಳಿದಿವೆ. ಅವನ ಸುಖಾಗಮನಕ್ಕಾಗಿ ತೀವ್ರವಾದ ವ್ರತವನ್ನು ಕೈಗೊಳ್ಳುತ್ತೇನೆ. ಸಚ್ಚಿದಾನಂದ ಇಚ್ಛಾಸ್ವರೂಪನಾದ ಅಗ್ನಿದೇವನನ್ನು ಪೂಜಿಸುತ್ತೇನೆ. ಸೃಷ್ಟಿ ನಿಯಮ ಸ್ಫೂರ್ತಿ ಚೈತನ್ಯಮೂರ್ತಿ ಸ್ವರೂಪರಾದ ವಿಶ್ವದೇವತೆಗಳನ್ನು ಅಣ್ಣನ ಅಭ್ಯುದಯ ಸಿದ್ಧಿಗಾಗಿ ಪ್ರಾರ್ಥಿಸುತ್ತೇನೆ. ಶುಕ್ಲಪಕ್ಷದ ಚೈತ್ರ ಪಂಚಮಿ ದಿನವು ಮುಗಿಯುವಷ್ಟರಲ್ಲಿ ವಾರ್ತೆಯಾದರೂ ಬರದಿದ್ದರೆ ಈ ಶರೀರವನ್ನು ಅಗ್ನಿಗೆ ಅರ್ಪಿಸುತ್ತೇನೆ.'

ಎಂದು ಹೇಳಿದ ಋಷಿಭರತನು ವಿನಮ್ರನಾಗಿ ಕೈಮುಗಿದು ಗುರುವಸಿಷ್ಠರ ಆಶೀರ್ವಾದವನ್ನು ಪಡೆದನು. ಪ್ರತಿಜ್ಞೆಮಾಡಿ ಉಪವಾಸ ವ್ರತಧಾರಿಯಾಗಿ ಆತ್ಮಯಜ್ಞವನ್ನು ಕೈಕೊಂಡನು. ರಾಮನ ಸುದ್ದಿಯನ್ನು ತಿಳಿಯಲು ಕಳುಹಿಸಿದ್ದ ಶೂರಭಟರಲ್ಲಿ ಒಬ್ಬೊಬ್ಬರು

ಹಿಂದಿರುಗಿ ಬಂದು ಅಗಸ್ತ್ಯಾಶ್ರಮವನ್ನು ಬಿಟ್ಟು ಹೋದನಂತರ ಅದೇನಾದರೆಂದು ತಿಳಿಯದೆಂದು ನಿರಾಶೆಯಿಂದ ಹೇಳಿದರು.

ಮಾಂಡವಿಯಪತಿ ಭರತನು ಕೊನೆಯ ರಾತ್ರಿಯನ್ನು ಕಳೆಯುತ್ತ, ಹಗಲು ಅಗ್ನಿಪ್ರವೇಶ ಮಾಡುವುದೆಂದು ಮನಸ್ಸಿನಲ್ಲಿ ನಿಶ್ಚಯಿಸುತ್ತಿದ್ದನು. ಆಗ ಯಜ್ಞಕುಂಡಾಗ್ನಿಯಿಂದ ಜ್ವಾಲೆಯು ಏಳುವಂತೆ, ಜ್ವಾಲೆಯಲ್ಲಿ ಲೀನವಾದಂತೆ ಒಂದು ಅಮರ ಸೂಕ್ಷ್ಮತೇಜದ ದೇವತಾ ಮೂರ್ತಿಯು ಮೈದೋರಿ ಹೇಳಿತು:

'ಕಂದ, ನಿನ್ನ ಅಣ್ಣನು ಇಂದೊ ನಾಳೆಯೊ ನಿಜವಾಗಿ ಹಿಂದಿರುಗಿ ಬರುತ್ತಾನೆ. ನಿನ್ನ ಮನದ ನಿರ್ಧಾರವನ್ನು ಬಿಡು.'

'ದೇವಿ, ಬೆಂದ ಎದೆಗೆ ಅಮೃತವನ್ನು ಎರೆಯುತ್ತಿರುವ ನೀನು ಯಾರು?'

'ಮತ್ತೆ ಯಾರು? ಸದಾ ನಿನ್ನ ಸುಕ್ಷೇಮ ಚಿಂತನೆಯಲ್ಲಿರುವ ಮಂಥರೆಯಲ್ಲದೆ ಇನ್ನಾರು?'

'ಪೂಜ್ಯೆ, ಬೇಡ. ಆ ಹೆಸರನ್ನು ಹೇಳಬೇಡ. ಆ ಗೂನಿಯ ಕಾರಣದಿಂದ ನಾನು ಇಂದು ಇಲ್ಲಿ ಹೀಗೆ ಕಡುಕಷ್ಟದಲ್ಲಿ ಇದ್ದೇನೆ.'

'ವತ್ಸ ಆ ಕುಬ್ಜೆ ಕಾರಣಳಲ್ಲ. ಬರಿಯ ಉಪಕರಣ. ನೀನು ಮಂಥರೆಯ ಪ್ರೇಮದ ಅಂತಃಕರಣವನ್ನು ಕಾಣೆ. ಅವಳು ನಿನ್ನ ಅಭ್ಯುದಯಕ್ಕಾಗಿ ಮತ್ತೆ ರಾಮನನ್ನು ಹಿಂತಿರುಗುವಂತೆ ಮಾಡುವ ಕೆಲಸದಲ್ಲಿ ತೊಡಗಿರುವಾಗ ಕಾಡುಗಿಚ್ಚಿಗೆ ಆಹುತಿಯಾದಳಲ್ಲವೆ? ಬಹಿರಂಗದಲ್ಲಿ ಅವಳು ಕುಬ್ಜೆಯಾಗಿ ವಿಕಾರಳಾಗಿ ಕಂಡಂತೆ, ಹೊರನೋಟಕ್ಕೆ ಅವಳು ಮಾಡಿದ್ದು ಪಾಪಮಯವಾಗಿ ಕಾಣುತ್ತಿತ್ತು. ನೋಡು, ನಾನೆಯೆ ನಿನ್ನ ಮಂಥರೆಯ ಆತ್ಮದ ಪುಣ್ಯಲಕ್ಷ್ಮಿ!'

'ನಿಜವೊ? ಅಥವಾ ಉಪವಾಸವ್ರತದಲ್ಲಿ ಅನ್ನರಸ ರಹಿತನಾದವನ ವಿಕಾರವೊ?'

'ನೀನೇ ನಿರ್ಧರಿಸು!'

ಎಂದು ಹೇಳಿ ಆ ಮೂರ್ತಿಯು, ಕಿಡಿಯೊ, ಕಿರುನಗೆಯ ಮಿನುಗೊ ಎಂಬಂತೆ ಅಗ್ನಿಯುರಿಯಾಗಿ ತಲೆದೂಗುತ್ತ ಅದರಲ್ಲಿ ಸೇರಿತು! ಆಶ್ಚರ್ಯಚಕಿತನಾದ ಕೈಕೆಯ ಮಗನು, ರಾಮನ ಆಗಮನದ ಆಶ್ವಾಸನೆ ನೀಡಿದ ಅಗ್ನಿಗೆ ಕೃತಜ್ಞನಾಗಿ ಕೈಮುಗಿದನು.

ಆ ರಾತ್ರಿ ಕಳೆದು ಬೆಳಗಾಯಿತು. ಪೂರ್ವದಿಕ್ಕಿನ ವನಿತೆ ಎತ್ತಿದ ಸ್ವರ್ಣವರ್ಣದ ಪೂರ್ಣ ಕುಂಭದಿಂದ ರಾಶಿ ರಾಶಿ ಹೊಂಬೆಳಕು ತುಳುಕಿತು. ಅದು ಕೋಸಲ ದೇಶ ದೇವಿಯ ವನ ನದಿಯೆಂಬ ವಸ್ತ್ರಭೂಷಣಗಳಿಗೆ ಮಧುಕಾಂತಿಯನ್ನು ಲೇಪಿಸಿತು. ಚೈತ್ರ ಶುದ್ಧಪಕ್ಷದ ಪಂಚಮಿಯ ಸೂರ್ಯನು ಮೂಡುತ್ತಿದ್ದನು. ಆಗ ನಿರಂತರ

ಜಾನಕೀಪ್ರಿಯನ ದರ್ಶನ ಧ್ಯಾನ ನಿರತನಾದ ಭರತನು ತಿಳಿಯದಿದ್ದರೂ, ರಾಮನ ಆಗಮನದ ಆಹ್ಲಾದವನ್ನು ಭೂಮಿ ತಿಳಿಯದೆ ಇರುತ್ತದೆಯೆ?

ರಾಮನ ಆಗಮನದ ಆನಂದವನ್ನು ಕೋಗಿಲೆ, ಗಿಳಿಗಳು ಉದ್ಘೋಷಿಸುತ್ತ, ಉಲಿದುವು. ಪೂರ್ವದಿಕ್ಕಿನ ಎದೆಯ ಬೆಳಕಿನಜೇನನ್ನು ಸವಿದು ಕುಕಿಲುವ, ಕುಣಿವ, ನೆಗೆವ, ಕುಪ್ಪಳಿಸುವ ಬಣ್ಣಬಣ್ಣದ ಗರಿಯ ಮಿಂಚಿನಿಂದ ಪ್ರಕಾಶಿಸುವ, ಹೆಸರು ಹೇಳಲಾಗದ ತರತರದ ಪುಟ್ಟ ಪುಟ್ಟ ಹಕ್ಕಿಗಳು ಟುವ್ವಿಯಂತೆ ಸ್ವರವೆತ್ತಿ ಹಾರೈಸಿದವು:

ಟುವಿ ಟುವ್ವಿ! ಟುವ್ವಿ ಟುವಿ! ಟುವ್ವಿ ಟುವಿಟುವಿಟುವ್ವಿ!

ಟುವ್ವಿ ಮಾಗಿಗೆ ಟುವ್ವಿ! ಸುವ್ವಿ ಸುಗ್ಗಿಗೆ ಸುವ್ವಿ.

ಹೊಂಗೆ ಮರವು ಸುಮಅಕ್ಷತೆಯ ಶುಭವನ್ನು ಎರಚಿ ರಂಗವಲ್ಲಿಯನ್ನು ಇಕ್ಕಿದವು. ಮಾವಿನ ಮರದ ಕೆಂದಳಿರು ತೋರಣ ಕಟ್ಟಿತು. ಸಾಲಾಗಿ ನಿಂತ ಮುತ್ತುಗದ ಮರಗಳು ಕುಂಕುಮ ಹೂಗಳ ಹಸ್ತದಿಂದ ಹಗಲು ದೀವಿಗೆ ಹಿಡಿದಂತೆ ಕಂಡವು. ಮಂದಾನಿಲನು ಗಂಧವಾಹನನೆಂಬ ಬಿರುದನ್ನು ಮತ್ತೆ ಪಡೆಯುವೆನು ಎಂಬ ಅಹಂಭಾರದಿಂದ, ದಕ್ಷಿಣ ದಿಕ್ಕಿನ ಉನ್ನತ ಉದಾರಸ್ವರೂಪದ ಆಂಜನೇಯನಂತೆ ಮಂದ ಮಂದವಾಗಿ ಬೀಸಿದನು.

ಶ್ರೀ ರಾಮಚಂದ್ರನು ಸೀತೆ ಲಕ್ಷ್ಮಣರೊಡಗೂಡಿ, ವಾನರ ಸಮೇತನಾಗಿ ವಿಮಾನದಿಂದ ಭರದ್ವಾಜನ ಆಶ್ರಮಕ್ಕೆ ಬಂದಿಳಿದನು. ಎಲ್ಲರೊಡನೆ ಭರದ್ವಾಜ ಮುನಿಗೆ ನಮಸ್ಕರಿಸಿದನು. ಹದಿನಾಲ್ಕು ವರ್ಷಗಳ ಹಿಂದೆ ತಾನು ತಿಳಿದ ಹೂ ಇಂದು ಹಣ್ಣಾಗಿರುವುದನ್ನು ಕಾಣುವುದು ತನಗೆ ಸುಕೃತಿಯಲ್ಲವೆ? ಅಂದು ಬಿಂದುವಿನಂತೆ ತನ್ನ ಅತಿಥಿಯಾಗಿ ಆಶ್ರಮಕ್ಕೆ ಬಂದವನು ಇಂದು ಸ್ವಸ್ವರೂಪ ಜ್ಞಾನಪೂರ್ಣ ಸಾಕ್ಷಾತ್ಕಾರದಿಂದ ಸಿಂಧು ತಾನಾಗಿ ಆಗಮಿಸಿದ್ದಾನೆ. ಅಂತಹ ಶ್ರೀರಾಮಚಂದ್ರನನ್ನು ಭರದ್ವಾಜ ಮುನಿಯು ಸಂಭ್ರಮದಿಂದ ಪೂಜಿಸುವಂತೆ ಸ್ವಾಗತಿಸಿದನು.

ಗುರುಗಳು ತಮ್ಮ ತಪೋವನದಲ್ಲಿ ಒಂದು ಹಗಲು ಇರಬೇಕೆಂದು ತಿಳಿಸಿದರು. ರಾಮಚಂದ್ರನು ಘನ ಗುರುವಚನ ಗೌರವಕ್ಕಾಗಿ ಅಲ್ಲಿ ಅಂದು ಉಳಿದನು. ಆದರೆ ತನ್ನ ಆಗಮನ ಯೋಗ ಕ್ಷೇಮ ವಾರ್ತೆಯನ್ನು ಭರತನಿಗೆ ಮೊದಲೇ ತಿಳಿಸಲು ಆಂಜನೇಯನನ್ನು ಕಳುಹಿಸಿದನು. ಗುಹನ ಜೊತೆಗೂಡಿ ಶೃಂಗಿ ಬೇರಪುರದ ಮಾರ್ಗವಾಗಿ ದಿವ್ಯ ನಂದಿಗ್ರಾಮ ಆಶ್ರಮಕ್ಕೆ ಹೋಗಲು ಹೇಳಿದನು.

ಕ್ಷಣಮುಂ ಪ್ರತೀಕ್ಷಣೆಗೆ ಯುಗಮಲ್ತೆ?

ದಕ್ಷಿಣದ ಘನ ಔದಾರ್ಯಮೂರ್ತಿಯೆ, ಹೇ ಪವನಕುಮಾರನೆ ಏತಕ್ಕೆ ತಡಮಾಡುತ್ತಿರುವೆ? ನಿರೀಕ್ಷಿಸುವವರಿಗೆ ಪ್ರತಿಕ್ಷಣವೂ ಯುಗದಂತಲ್ಲವೆ? ಭರತನ ಹೃದಯ

ಚಾತಕಪಕ್ಷಿಯು ಬೇಗೆಯಲ್ಲಿ ಬಾಯಾರಿದೆ! ಸಮೀರಸುತನೆ ಬೇಗ ಬಾರಯ್ಯ. ಇಂದ್ರನ ಕರುಣೆಯಂತೆ ರಾಮವಾರ್ತೆಯ ಮೋಡವನ್ನು ತಾರಯ್ಯ!

ನೀನು ಲಂಕೆಯಲ್ಲಿ ಅಂದು ಜಾನಕಿಗೆ ರಾಮವಾರ್ತೆಯನ್ನು ತಿಳಿಸಿ ಕಾಪಾಡಿದಂತೆ ಇಂದು ಕೋಸಲದಲ್ಲಿರುವ ಭರತನನ್ನು ಕಾಪಾಡು. ಈ ಮೂರುಲೋಕಗಳಲ್ಲಿ ನಿನಗಿಂತ ಮಿಗಿಲಾದವರು ಯಾರಿದ್ದಾರೆ? ಹೇ ಜಗತ್‌ಪ್ರಾಣ, ಮುಖ್ಯಪ್ರಾಣನಾದ ಮಾರುತಿಯೆ, ಸಂದೇಶ ವಾಹಕ ವರೇಣ್ಯರಿಗೆ ಗುರುವಾಗಿರುವವನೆ ಬೇಗ ಬಾ.

ಅದೇನು? ಅದೇನು? ಕೋಸಲ ದೇಶದ ಹಳ್ಳಿಯ ಜನರು ಕೊರಳೆತ್ತಿ ಬೆರಗಾಗಿ ಅಲ್ಲಲ್ಲಿ ಏನನ್ನು ನೋಡುತ್ತಿದ್ದಾರೆ? ಬೇಡರರಾಜ ಗುಹನು ತಾನೇ ಗಂಡು ಕುದುರೆಗಳ ತೇರನ್ನು ನಡೆಸಿಕೊಂಡು ಬರುತ್ತಿದ್ದಾನೆ. ಅವನ ಪಕ್ಕದಲ್ಲಿ ಕಪಿಯ ಲಾಂಛನದ ಉಡುಗೆ ತೊಡುಗೆಯಿಂದ, ರಣ ನಿವೃತ್ತ ನಾಗರಿಕ ಲಕ್ಷಣಗಳ ಆಂಜನೇಯ ಕುಳಿತಿದ್ದಾನೆ. ಅವನು ಉತ್ತರದೇಶದ ಪ್ರಕೃತಿಸೌಂದರ್ಯವನ್ನು ನೋಡಿ ಮೆಚ್ಚುತ್ತ, ನಂದಿಗ್ರಾಮದ ಹೊರವಲಯವನ್ನು ಪ್ರವೇಶಿಸಿದನು. ಆ ಕ್ಷೇತ್ರದ ಗೌರವಕ್ಕಾಗಿ ಅವರಿಬ್ಬರೂ ಇಳಿದು ಬರುತ್ತಿದ್ದರು. ಆಗ ಆ ಹಾದಿಯಲ್ಲಿ ಜನರು ದೃಷ್ಟಿ ಕೇಂದ್ರೀಕರಿಸಿ ಆಂಜನೇಯನನ್ನು ನೋಡಿದರು. ಅವನ ತೇಜಕ್ಕೆ, ಗಾತ್ರಕ್ಕೆ, ನೇತ್ರಕಾಂತಿಗೆ ಮತ್ತು ಆತ್ಮತೇಜಸ್ಸಿನ ವಿಶೇಷ ಆಕೃತಿಗೆ ಮೂಕ ವಿಸ್ಮಿತರಾದರು. ಮಹಿಮೆಗೆ ಪರಿಚಯವನ್ನು ಹೇಳಬೇಕೆ?

ಕಿಷ್ಕಿಂಧೆಯು ಅಯೋಧ್ಯಾ ರಕ್ಷಣೆಗೆ ಹೆತ್ತ ವಿಂಧ್ಯಾಗಿರಿ ಸಮನಾದ, ಜಗದ್ ಭವ್ಯ ಭಾವ ಗಂಭೀರ ಮಹಾವೀರನಿಗೆ ಜನರು ತಲೆಬಾಗಿ ವಂದಿಸಿದರು!

ಕಣ್ಣು ಮುಚ್ಚಿಕೊಂಡು ಧ್ಯಾನಶೀಲನಾಗಿದ್ದ ಭರತನು ನಿಧಾನವಾಗಿ ಕಣ್ತೆರೆದು ನೋಡಿದನು. ಮುಂದೆ ಸಾಷ್ಟಾಂಗ ನಮಸ್ಕಾರ ಮಾಡಿದ ನಿಷಾದನೃಪ ಗುಹನನ್ನು ವಿಷಾದದಿಂದ ಕೇಳಿದನು:

'ಬಾಳ್‌ಗೆಳೆಯ ಏಳು. ಬೇಡರ ಒಡೆಯನೆ, ನಿನ್ನ ಆಳುಗಳೇನಾದರೂ ನನಗೆ ಮಂಗಳವಾದ, ನನ್ನ ಅಣ್ಣನ ಕುರಿತ ಶುಭ ವಾರ್ತೆಯನ್ನು ತಂದರೆ?'

'ದೂತನು ತಂದಿದ್ದಾನೆ!'

ಎಂದಷ್ಟೇ ಹೇಳಿದ ಗುಹನು, ಭರತನ ಭಾವಸ್ಥಿತಿಯನ್ನು ಉದ್ರೇಕಿಸಲು ಬೆದರಿದನು. ತನ್ನ ಹರ್ಷಾನಂದವನ್ನು ದಮನಗೊಳಿಸಿಕೊಳ್ಳುತ್ತ ನೀರಸಧ್ವನಿಯಲ್ಲಿ ಹೇಳಿದನು:

'ದೇವ, ನಿಶ್ಚಯವಾರ್ತೆ ನನಗೆ ತಿಳಿಯದು. ಆದರೆ ನಿರಾಶೆಗೊಳ್ಳುವುದು ಉಚಿತವಲ್ಲ.'

'ಹೇಳು, ಸಹೋದರನು ಬದುಕಿರುವನೆ?'

'ದಾಶರಥಿಯೆ, ಅತ್ಯಾಶೆಸಲ್ಲದು. ಬದುಕಿರುವ ಚಿಹ್ನೆಯನ್ನು ತೋರಿಸಲು ಸಮರ್ಥನಾಗಿರುವ ಒಬ್ಬನನ್ನು ಇಲ್ಲಿ ಕರೆತರಲು ನಾನು ಸಮರ್ಥನು.'

‘ಯಾರು ಅವನು? ನಿನ್ನ ಆಳೆ?’

‘ರಾಮನ ಆಳು!’

‘ರಾಮದೂತನೆ? ಎಲ್ಲಿ? ಎಲ್ಲಿ ತೋರಿಸು! ಕರೆದು ತಾ!’

‘ನಾನು ರಾಮನು ಕಳುಹಿಸಿರುವನೆಂಬುದನ್ನು ನಂಬೆನು. ಗುರು ಭರದ್ವಾಜ ಆಶ್ರಮದ ದಿಕ್ಕಿನ ಹಾದಿಯಿಂದ ಬಂದಿದ್ದಾನೆ.’

‘ಆತನನ್ನು ನೋಡೋಣ ಕರೆದು ತಾ!’

‘ಗುರು ವಸಿಷ್ಠನಿಗೆ ಅತಿಥಿಯಾಗಿದ್ದಾನೆ. ಅವನನ್ನು ಈಗಲೆಯೇ ಕರೆದು ತರುತ್ತೇನೆ.’

‘ಬಹು ದೂರದಿಂದ ದಣಿದು ಬಂದಿರುವನೆ? ಗುಹ, ಅವನು ನಿನಗೆ ಏನು ಹೇಳಿದ?’

‘ದಂಡಕಾರಣ್ಯದಲ್ಲಿ ರಾಮಲಕ್ಷ್ಮಣರೊಡನಿದ್ದ ಸೀತೆಯನ್ನು ರಾಕ್ಷಸನು ಕದ್ದೊಯ್ದ ’

‘ಏನೇನು? ಏನೆಂದೆ? ಅತ್ತಿಗೆಯನ್ನು ನಿಶಾಚರರು ಎತ್ತೊಯ್ದರೆಂದು ಹೇಳಿದೆಯ?’

ಎಂದು ಭರತನು ತತ್ತರಿಸಿದನು. ಅವನ ಕೈಹಿಡಿದು ಕುಳ್ಳಿರಿಸಿ ಉಪಚರಿಸುತ್ತ ವಿಶಾಲದೃಷ್ಟಿಯ ಗುಹನು ನುಡಿದನು:

‘ಅಲ್ಲಲ್ಲ; ತಪ್ಪಿದೆನು. ಲಂಕಾಧಿನಾಥನನ್ನು ವಾನರ ಸಹಾಯದಿಂದ ಮಹಾಕಾಳಗದಲ್ಲಿ ಕೊಂದು ’

‘ಓಡು, ನಡೆ, ಗುಹ; ಆ ಮಹಾತ್ಮನನ್ನು ರಾಮಕಥೆಯನ್ನು ಹೇಳುವ ಜಿಹ್ವೆಯ ಪುನೀತನಾದ ಶ್ರೀದೂತನನ್ನು ಕರೆದುಕೊಂಡು ಬಾ.’

ಎಂದು ಹೇಳಿದ ಭರತನು ಗುಹ ಹೋದಕಡೆಯೆ ದೃಷ್ಟಿ ಹರಿಸಿದನು. ರಾಮನ ಪಾದುಕೆಗಳನ್ನು ಎರಡು ಕೈಗಳಿಂದ ಹೃದಯಕ್ಕೆ ಒತ್ತಿಕೊಂಡನು. ಎತ್ತಿ ಹಣೆಗಿಟ್ಟುಕೊಂಡನು. ಅಲ್ಲಿಂದ ನೆತ್ತಿಗೆ ಏರಿಸಿಕೊಂಡನು. ಕಣ್ಣೀರು ಧಾರೆಯಾಗಿ ಹರಿದು ಗಡ್ಡಮೀಸೆಗಳ ಮುಖದಲ್ಲಿ ಮರೆಯಾಯಿತು.

ವಿವಶನಂತೆ ಭರತನೆಳ್ದನು ಹರ್ಷರಸಮೂರ್ಛಿತಂ.

ಪರ್ಣಕುಟಿಯ ಬಾಗಿಲಿನಿಂದ ಆಂಜನೇಯನು ಗುರುವಸಿಷ್ಠ ಮತ್ತು ಗುಹರೊಡನೆ ಪ್ರವೇಶಿಸಿದನು. ಭರತನು ತನ್ನ ಮಿಟುಕಿಸದ ಕಣ್ಣುಗಳ ಕವಾಟದಿಂದ ರಾಮನೇ ಹೃನ್ಮಂದಿರವನ್ನು ಹೊಕ್ಕನು ಎನ್ನುವಂತೆ ವಾನರ ಶ್ರೀಮನ್ ಮಹಾವೀರನನ್ನು ನೋಡಿದನು! ತನ್ನ ಪುರುಷಾಕಾರವನ್ನು ತೂಗಿ ಅಳೆಯುವಂತೆ, ಕಣ್ಣಿನಲ್ಲಿಯೇ ಪಡೆಯುವಂತೆ, ದೃಷ್ಟಿಯಿಂದಲೇ ಹೀರುವಂತೆ ಕಣ್ಣುನೆಟ್ಟು ನಿಟ್ಟಿಸುತ್ತಿದ್ದ ರಾಮಾನುಜನನ್ನು ಆಂಜನೇಯನು

ನೋಡಿದನು. ತನಗೆ ಮೊದಲು ಪಂಪಾನದಿ ತೀರದಲ್ಲಿ ಕಣ್ಣಿಗೆ ಬಿದ್ದ ಸೀತಾದುಃಖಿ ರಾಮನ ರೀತಿ ಅವನು ಕಂಡನು. ಅನಿಲಜನು ರೆಪ್ಪೆ ಅಲುಗಾಡಿಸದೆ ಭರತನ ತಪೋಧನ ಶ್ರೀರೂಪವನ್ನು ಸೂಕ್ಷ್ಮವಾಗಿ ವೀಕ್ಷಿಸಿದನು.

ಭರತ ಜಟಾಧಾರಿಯಾಗಿ ಮಲಿನ ಲೇಪನ ಅಂಗದಿಂದಿದ್ದರೂ ಬ್ರಹ್ಮರ್ಷಿ ಸಮತೇಜನಾಗಿದ್ದನು. ರಾಮ ಪಾದುಕೆಯನ್ನು ಮುಕುಟವಾಗಿ ಧರಿಸಿ ಭವ್ಯಾತ್ಮನಾಗಿದ್ದನು. ಜೀರ್ಣವಾದ ನಾರುಮಡಿಯುಟ್ಟು ಕೃಷ್ಣ ಚರ್ಮಗಳನ್ನು ಧರಿಸಿ ದೀನನೂ ಕೃಶನೂ ಆಗಿದ್ದನು. ತಪೋಧರ್ಮಾಚರಣೆಯ ಮಹದ್ ಬ್ರಹ್ಮಚಾರಿಯಾಗಿದ್ದನು. ಮೀಸೆಗಡ್ಡ ಬೆಳೆದ ಮುಖದಲ್ಲಿ ಸತ್ಯವಿಕ್ರಮ ಚಿಹ್ನನಾಗಿದ್ದನು. ಅಂತಹ ಭ್ರಾತೃವತ್ಸಲ ಘನಮೂರ್ತಿಯನ್ನು ಆಂಜನೇಯನು ನೋಡು ನೋಡುತ್ತ ನಿಧಾನವಾಗಿ ಬಾಗಿ ಕೈಮುಗಿದು ಹೇಳಿದನು:

'ಯಾರಿಗಾಗಿ ನೀನು ಜಡೆಬಿಟ್ಟು ತಪದಿಂದಿರುವೆಯೊ ಆ ಜಗತ್‌ಪೂಜ್ಯ, ಭ್ರಾತೃವತ್ಸಲ ರಾಮಚಂದ್ರನು ಸೀತಾ ಲಕ್ಷ್ಮಣ ಸಹಿತನಾಗಿ ಕ್ಷೇಮದಿಂದಿರುವನು.'

ಆ ನುಡಿ ಕೇಳಿದ ಭರತನು ಹತೋಟಿಗೆ ಸಿಗದ ಹರ್ಷರಸಾನಂದದಿಂದ ಮೂರ್ಛಿತನಾದನು. ಕಣ್ಣಿನಲ್ಲಿ ಆನಂದಾಶ್ರುಗಳು ಧಾರೆಯಾಗಿ ಸುರಿಯಿತು. ಶಿಶು ತೊದಲುವಂತೆ ತೊದಲುತ್ತ, ಶಾಂತ ಸಮಾಧಾನ ಒದಗಿ ಬಂದಂತೆ ಆಂಜನೇಯನ ದೇಹವನ್ನು ತತ್ತರಿಸುವಂತೆ ಅಪ್ಪಿಕೊಂಡನು! ಮಹಾಬಾಹು ಮಾರುತಿಯು ಏನೂ ಮಾತನಾಡದೆ ತೋಳ ತೊಟ್ಟಿಲಲ್ಲಿ ಆಡಿಸುತ್ತಿರಲು, ಮಗುವಿನಂತೆ ಮನಸ್ಸುಸೋತು ಭರತನು ಕಣ್ಮುಚ್ಚಿದನು. ಶಿಶಿರೋಪಚಾರದಿಂದ ಎಚ್ಚೆತ್ತ ಭರತನಿಗೆ ಮಾರುತಿಯು ಹೇಳಿದನು:

'ಪೂಜ್ಯನೇ, ಗುರು ಹರಸಿಕೊಡುವ ಫಲರಸದ ಪಾನೀಯವನ್ನು ಮೊದಲು ಕುಡಿ. ಅನಂತರ ನೀನು, ನಾನು ಹೆಳುವ ಜಾನಕೀ ಚೋರನನ್ನು ರಣದಲ್ಲಿ ಕೊಂದ ಕೋಸಲ ಧರಾನಾಥನ ಮಹಿಮೆಯ ಕಥಾಕ್ಷೀರವನ್ನು ಕುಡಿಯಲು ಸಮರ್ಥನಾಗುವೆ.'

ರಾಮಚಂದ್ರಂ ಬಾಳ್ಗೆ! ಗೆಲ್ಗೆರಾಮಚರಿತಂ! ಚಿರಂ ಜೀವಿಸುಗೆ ರಾಮದೂತಂ!

ಪುರೋಹಿತನು ಪೂರ್ಣಚಂದ್ರನ ಬೆಳುದಿಂಗಳಂತೆ ಬೆಳಗುತ್ತಿದ್ದ ಸುಂದರ ಬಂಗಾರದ ಬಟ್ಟಲಿನಲ್ಲಿ ತುಂಬಿದ ಸವಿಯಾದ ಫಲರಸವನ್ನು ಕೊಟ್ಟನು. ಅದನ್ನು ಕೈಗೆ ತೆಗೆದುಕೊಂಡು,

'ರಾಮಚಂದ್ರಂ ಬಾಳ್ಗೆ! ಗೆಲ್ಗೆ ರಾಮ ಚರಿತಂ! ಚಿರಂಜೀವಿಸುಗೆ ರಾಮದೂತಂ!'

ಎಂದು ಹೇಳುತ್ತ ಮಾಂಡವೀಪ್ರಿಯನು ಹಣ್ಣಿನ ರಸವನ್ನು ಕುಡಿಯುತ್ತಿರಲು, ಇಳೆಯ ಸುಮನಸರ ಸಹೃದಯ ದಯಾಮಯ ಮನೋಮಂದಿರವು ತಣಿಯಿತು!

ಸ್ವಯಂ ಕಥೆಯ ಮುಖ್ಯಪಾತ್ರನೇ ಭರತನಿಗೆ ದಿವ್ಯ ರಸಭರಿತ ಶ್ರೀರಾಮಚರಿತವನ್ನು ಹೇಳಿದನು. ಅದನ್ನು ಭರತನು ಮೊಗೆಮೊಗೆದು ಈಂಟಿದನು. ತೆರೆತೆರೆಯ ಕೈಲಾಸಗಿರಿಯನ್ನು ನೂರೆಯ ಐರಾವತಗಳು ಏರುವಂತೆ, ರಾಘವ ಕಥಾಕ್ಷೀರಸಾಗರ ಕಲ್ಲೋಲವಾಗುವಂತೆ ಅದರಲ್ಲಿ ತೇಲಿದನು, ಈಜಿದನು, ದುಮುಕಿದನು.

ಗ್ರಾಮದಿಂದ ಗ್ರಾಮಕ್ಕೆ, ನಗರದಿಂದ ನಗರಕ್ಕೆ, ಪಟ್ಟಣದಿಂದ ಪಟ್ಟಣಕ್ಕೆ, ಹಳ್ಳಿಯಿಂದ ಹಳ್ಳಿಗೆ ಕೋಸಲದ ಮೂಲೆ ಮೂಲೆಗಳಲ್ಲಿಯೂ ರಘುರಾಮನ ಆಗಮನದ ವಾರ್ತೆ ಹಬ್ಬಿತು. ಅದರ ಹಿಂದೆಯೆ ಭರತನು 'ಶ್ರೀರಾಮ ಸದ್ಧರ್ಮ ಮಂಗಳಾರ್ಥ ಚೈತ್ಯ, ದೇವಾಲಯಗಳನ್ನು ಶುಚಿಮಾಡಿ ಸಿಂಗರಿಸಿ, ಗಾಯಕರ ಮಧುರ ಹಾಡಿನಿಂದ, ಸುಗಂಧ ಮಾಲೆಗಳಿಂದ ದಿವ್ಯ ಚೇತನಗಳನ್ನು ಪೂಜಿಸಿರಿ' ಎಂದು ಆಜ್ಞೆ ಹೊರಡಿಸಿದನು.

ಭರತನು ಶತ್ರುಚೇತನಹಾರಿ ಶತ್ರುಘ್ನನಿಗೆ ಸಾಕೇತನಗರಿಗೆ ಹೋಗಲು ಆದೇಶಿಸಿದನು. ಮಂತ್ರಿಗಳು, ಸೇನೆಗಳು ಛತ್ರ ಚಾಮರ ಶಂಖ ಭೇರಿಗಳ ರಾಜ ಮರ್ಯಾದೆಯಿಂದ, ರಾಜ ಚಿಹ್ನಗಳೊಡನೆ ತಾಯಿಯರನ್ನು ಕರೆದುಕೊಂಡು ನಂದಿಗ್ರಾಮಕ್ಕೆ ಬರಲು ಹೇಳಿದನು: ಶತ್ರುಘ್ನನಿಂದ ಮಂಗಳವಾರ್ತೆ ತಿಳಿದ ತಕ್ಷಣವೇ ಅಯೋಧ್ಯೆಯು ತನ್ನ ಶವಸ್ಥಿತಿಯನ್ನು ಬಿಟ್ಟು ಉಸಿರಾಡಿತು. ರಾಜಮಂದಿರವು ಜಡನಿದ್ರೆಯಿಂದ ಎಚ್ಚರಗೊಂಡಿತು!

ಮನೆಮನೆಯ ಗೋಡೆಗಳು ಸುಣ್ಣ ಬಳಿದುಕೊಂಡು ಚೈತ್ರದ ಬಿಸಿಲಿಗೆ ಬೆಳ್ಳಿಯಂತಾದವು. ಬೀದಿಗಳಿಗೆ ನೀರು ಸಿಂಪಡಿಸಿ ತೋರಣ ಕಟ್ಟಿದರು. ಮಹಿಳೆಯರು ಮನೆಮನೆಯ ಮುಂದಿನ ಅಂಗಳಗಳಲ್ಲಿ ಕಸ್ತೂರಿಯ ಪರಿಮಳದ ರಂಗವಲ್ಲಿಯನ್ನು ಬಿಡಿಸಿದರು. ಚಿನ್ನದ ಅಂಬಾರಿಯ ಆನೆಗಳು, ತೇರುಗಳು, ಕುದುರೆಗಳು, ಭಾರಿ ಕಾಲಾಳುಗಳು ಸಾಲಾಗಿ ಸಂಚರಿಸತೊಡಗಿದುವು. ಶಿಲ್ಪಿಗಳು ಗುಂಪು ಗುಂಪಾಗಿ ಕೂಡಿಕೊಂಡು ನಾಗರಿಕ ಸಂಚಾರ ಸುಗಮವಾಗುವಂತೆ ದಾರಿಯನ್ನು ಶೃಂಗಾರಗೊಳಿಸಿದರು. ಸಂತೋಷ ಭೇರಿಗಳು ಸಂಭ್ರಮದಿಂದ ಧಳಧಳ ಧಳವೆಂದು ದಿಗ್ಗಜಗಳ ಕಿವಿ ನಿಮಿರುವಂತೆ ಮೊಳಗಿದುವು!

ಚಿಃ ! ಕಡಲ್ಗಿದಿರ್ ಪನಿಗೇಂ ಪ್ರದರ್ಶನಂ?

ಸರಯೂ ನದಿ ತೀರದ ಕುಟೀರದಲ್ಲಿದ್ದ ತಪಸ್ವಿನಿ ಊರ್ಮಿಳಾ ದೇವಿಯು, ಪೂರ್ವ ಪರಿಚಿತವಾಗಿದ್ದರೂ ಈಗ್ಗೆ ಅಪರೂಪವಾಗಿದ್ದ ಭೇರಿಯ ಸ್ವರವನ್ನು ಕೇಳಿ ರೋಮಾಂಚನಗೊಂಡಳು. ಗಿರಿವನಗಳು ತಲ್ಲಣಿಸುವಂತೆ ಧಳಂಧಳಂಧಳಂ ಎಂದು ಭೇರಿಸ್ವರ ಸಂಭ್ರಮದಿಂದ ಮೊಳಗಿತು. ಆಗ ಕರೆಯಲು ಓಡೋಡಿ ಬಂದ ಭರತನ ಸತಿ ಮಾಂಡವಿಯನ್ನು ಕಂಡಳು. ಉಲ್ಲಾಸಗೊಂಡಿದ್ದ ತಂಗಿಯು ಆನಂದಭಾಷ್ಪ ನೇತ್ರಳಾಗಿ ಹೇಳಿದಳು:

‘ಏಳು, ಏಳು, ಅಕ್ಕ! ಕೇಳು, ವಾರ್ತೆಯನ್ನು ಭೇರಿಯು ಚೀರುತ್ತಿದೆ!’

ಸುಸ್ಥಿರೆ ತಪಸ್ವಿನಿ ಊರ್ಮಿಳಾ ದೇವಿಗೆ ಜೀವವು ಅಸ್ಥಿರವಾದಂತಾಯಿತು. ಕಂಠ ಬಿಗಿದುಬರಲು ನುಡಿದಳು:

‘ತಂಗಿ, ದೇವರು ವನವಾಸದಿಂದ ಬಂದರೇನು?’

‘ಸ್ವಾಮಿ ತಪಸ್ಸು ಮಾಡುತ್ತಿರುವ ನಂದಿಗ್ರಾಮದ ಆಶ್ರಮಕ್ಕೆ ಹೋಗಬೇಕಾಗಿದೆ. ಬೇಗ ಏಳು.’

‘ತಂಗಿಯೆ, ಸ್ನಾನ ಮಾಡದೆ, ಉಡದೆ, ತೊಡದೆ ಅವರೆಡೆಗೆ ಹೋಗುವುದೆ? ಅದು ಮಂಗಳಕರವಲ್ಲ!’

‘ಅವರು ನಿನ್ನ ದೀರ್ಘವಾದ ಕಠಿಣವ್ರತವನ್ನು ನೋಡಬಾರದೆ?’

‘ಚಿಃ! ಕಡಲಿನ ಎದುರು ಹನಿಗೇನು ಪ್ರದರ್ಶನ? ದೇವರ ತಪಸ್ಸಿನ ಎದುರು ನಮ್ಮದೊಂದು ತೃಣವಲ್ಲವೆ? ಸಂತೋಷ ಸಮಯದಲ್ಲಿ ನಮ್ಮ ಕಷ್ಟವನ್ನು ತೋರಿಸುವುದು ಸರಿಯಲ್ಲ! ತಂಗಿಯೇ, ಕೇಳಿಸಿಕೊ. ತನ್ನ ತಾನು ಇಲ್ಲವಾಗಿಸಿಕೊಳ್ಳುವುದೆ ಸಾಧನೆಯ ಕೊನೆಯ ಗುರಿ. ಅದೇ ತಪದ ಪರಮ ಪ್ರಯೋಜನ!’

ಎಂದು ಹೇಳಿದ ತಪಸ್ವಿನಿಯು ಅಲೆ ಅಲೆಯಾಗಿ ಹೊಳೆಯುವ, ಕಾಂತಿಯ ತರಂಗಗಳು ಕುಣಿಕುಣಿದು ನಲಿಯುವ, ತಿಳಿನಗೆಯ ಸರಯೂ ನದಿಯ ನೀರಿನಲ್ಲಿ ಮುಡಿಮುಳುಗಿಸಿ ಮಿಂದಳು. ಬಿಳಿಯ ಮಡಿಯಾದ ಸೀರೆ ಉಟ್ಟಳು. ಪತಿ ಲಕ್ಷ್ಮಣನನ್ನು ನೆನೆಯುತ್ತ ಹಣೆ, ಕಾಲು, ಸೊಂಟಗಳಿಗೆ ಆಭರಣಗಳನ್ನು ತೊಟ್ಟಳು. ಮುತ್ತೈದೆತನವನ್ನು ಅಲಂಕರಿಸಿಕೊಂಡಳು. ಹದಿನಾಲ್ಕು ವರ್ಷಗಳು ತನ್ನ ತಪದ ಸಫಲತೆಗೆ ತಾಳ್ಮೆ, ಧೈರ್ಯವನ್ನು ನೀಡಿದ ಪ್ರಕೃತಿಗೆ, ತೊರೆಗೆ, ಬನಕ್ಕೆ, ಪರ್ಣಕುಟೀರಕ್ಕೆ ಮತ್ತು ನಿತ್ಯ ಪರಿಚಿತ ಲತಾ ತನುರೂಪಿ ಚೇತನಗಳಿಗೆ ನಮಸ್ಕರಿಸಿದಳು.

ಪಕ್ಷಿಗಳಿಗೆ ಅಕ್ಕಿಯನ್ನು ಹಾಕಿದಳು. ಜಿಂಕೆಗಳಿಗೆ ಎಳೆಗರುಕೆಯನ್ನು ತಿನ್ನಿಸಿದಳು. ಸ್ಥಲದೇವತೆಯ ಚರಣಕ್ಕೆ ನಮಸ್ಕರಿಸಿ ಧೂಳನ್ನು ಶಿರದಲ್ಲಿ ಧರಿಸಿಕೊಂಡಳು. ಮಣ್ಣನ್ನು ನೆತ್ತಿಗೆ ಅಲಂಕರಿಸಿಕೊಂಡಳು. ತವರು ಮನೆಯಿಂದ ಅತ್ತೆಯ ಮನೆಗೆ ಹೋಗುವಂತೆ ಎಲೆಮನೆಯಿಂದ ಬೀಳ್ಕೊಟ್ಟಳು.

ತಂಗಿಯು ಜೊತೆಗೂಡಿ ಬಂದ ಊರ್ಮಿಳೆಯನ್ನು ಸುಮಿತ್ರಾದೇವಿ ಬಿಗಿದಪ್ಪಿಕೊಂಡಳು! ಸಂತೋಷ ಮರಳಿಬಂದಂತೆ ಹೇಳಿದಳು:

‘ಮಗಳೆ, ನಿನ್ನ ತಾಳಿಯ ಪುಣ್ಯದಿಂದ ಕಾಡು ಪಾಲಾಗಿದ್ದ ನಮ್ಮ ಕುಲದ ಕೀರ್ತಿಯು ಮರಳಿ ಬಂದಿದೆ! ನಮಗಾಗಿ ಹಿರಿಯರಾದ ಅತ್ತೆ ಕೌಸಲ್ಯಾದೇವಿ

ಕಾಯುತ್ತಿರುವರು. ಕಿರಿ ಅತ್ತೆಯನ್ನು ಕಂಡು ಅವಳನ್ನು ತನ್ನೊಡನೆ ನಂದಿಗ್ರಾಮಕ್ಕೆ ಕರೆದುಕೊಂಡು ಹೋಗುವ ಕರ್ತವ್ಯದಲ್ಲಿ ಹಿರಿಯ ರಾಣಿ ನಿರತಳಾಗಿದ್ದಾಳೆ. ಊರ್ಮಿಳೆ, ನಮ್ಮ ಸಂಕಟಕ್ಕೆ ಇಂದು ವಿರಾಮ ಉಂಟಾಯಿತು. ಕೈಕೆಯ ಮನೋವ್ಯಥೆ ಎಂದು ಪರಿಸಮಾಪ್ತಿಯಾಗುವುದೊ? ಬಾ, ಹೋಗಿ ಅವಳನ್ನು ತಣಿಸಿ, ಸಂತೈಸಿ ರಘುರಾಮನ ಮತ್ತು ಭರತನ ಪುಣ್ಯ ದರ್ಶನಕ್ಕೆ ಕರೆದುಕೊಂಡು ಹೋಗೋಣ!'

ನಸುನಕ್ಕಳಾ ತಾಯಿ.

ಎಲ್ಲರೂ ಕೈಕೆಯ ಅರಮನೆಗೆ ನಡೆದರು. ರಾಮನ ತಾಯಿಯ ತೋಳಿನ ತೆಕ್ಕೆಯಲ್ಲಿ ಅಳುತ್ತಿದ್ದ ಕೃಶಳು, ಮಲಿನಳು, ಮೂಕಶೋಕದ ಶಿಲಾಪ್ರತಿಮೆಯೂ ಆದ ಕೈಕೆಯನ್ನು ಕಂಡಳು. ಅವಳು ಪೂಜಾರಹಿತ ಹಾಳುದೇಗುಲದ ವಿಗ್ರಹದಂತೆ ದುಃಖಿತೆಯಾಗಿದ್ದಳು. ಸಂಸ್ಕಾರಹೀನಳಾಗಿ, ಅತಿ ದುಃಖಭಾರದಿಂದ ಕುಸಿದ ಕಡುದೀನೆ ಕೈಕೆಯು ತನಗೆ ನಮಸ್ಕರಿಸಿದ ಊರ್ಮಿಳೆಯನ್ನು ಎತ್ತಿ ಮುತ್ತಿಟ್ಟಳು. ಶಿಲಾ ಮೌನಿಯಾಗಿ ಏನೊಂದೂ ನುಡಿಯದೆ ಕಂಬನಿ ಕರೆದಳು! ಭರತನ ತಾಯಿಯ ಎದೆಯಲ್ಲಿ ಮಗಳಂತೆ ಮುಖವಿಟ್ಟು ಊರ್ಮಿಳೆ ಹೇಳಿದಳು:

'ಅಮ್ಮ, ನಾನು ಚಿಕ್ಕವಳು, ನಿಮ್ಮ ದುಃಖದ ಮೇರೆಯನ್ನು ನಾನು ಅಳೆಯಲಾರೆ. ನಮಗಾಗಿ, ನಿಮ್ಮ ಮಕ್ಕಳಿಗಾಗಿ ಕಾಳಕೂಟ ವಿಷದಂತಹ ನಿಮ್ಮ ಹೃದಯ ತಾಪವನ್ನು ಹೊರಹಾಕದೆ ನೀವು ಕುಡಿಯಬೇಕಾಗಿದೆ. ತಾಯಿ, ದಶರಥ ಪುತ್ರನ ಜೀವಿತ ಕಥೆಯ ಸಾಗರವನ್ನು ಮಥಿಸಿದಾಗ ಹೊರಬಂದ ಘೋರವಿಷವನ್ನು ಧರಿಸುವ ಶಿವನ ಶ್ರೀಕಂಠಶಕ್ತಿ ನಿನಗಲ್ಲದೆ ಇನ್ನಾರಿಗೆ ಇದೆ ಹೇಳು? ಸೂರ್ಯವಂಶದ ಬಾಳು ತುಂಬಿ ಗಂಗೆಯಂತೆ ಆನಂದದಿಂದ ಹರಿಯುತ್ತಿದೆ. ಏಳು, ಬಾರಮ್ಮ, ಆಶೀರ್ವದಿಸು.'

ಸೊಸೆಯ ಮಾತನ್ನು ಕೇಳಿ ನಿಟ್ಟುಸಿರು ಬಿಟ್ಟಳು. ಊರ್ಮಿಳೆಯ ಮುಖವನ್ನು ಎತ್ತಿ ಮುದ್ದಾಡಿದಳು. ರಾಜಮಂದಿರವೆಲ್ಲವೂ ಮಂಕು ಕಳೆದುಕೊಂಡು ಬೆಳ್ಳನೆ ಬೆಳಗುವಂತೆ ಆ ತಾಯಿ ನಸುನಕ್ಕಳು!

ವನವಾಸಿ ಋಷಿಸಂಸ್ಕೃತಿಯನ್ನು ಎದುರುಗೊಳ್ಳಲು ನಡೆಯುವ ನಾಗರಿಕತೆಯ ಸಂಪತ್ತಿನಂತೆ ಅಯೋಧ್ಯೆಯು ನಂದಿಗ್ರಾಮದ ಕಡೆ ಮೆರವಣಿಗೆ ಹೊರಟಿತು. ರಘುರಾಮನ ಪೂಜ್ಯಪಾದ ಸನ್ನಿಧಿಗೆ ಹೋಗುವ ಪಥದ ವನದ ಉಬ್ಬು ತಗ್ಗಿನ ನೆಲವನ್ನು ಸಮತಟ್ಟಾಗಿಸಿದರು. ತಂಪಾದ ನೀರನ್ನು ಭೂಮಿಯ ಮೇಲೆ ಸಿಂಪಡಿಸಿದರು. ಸುಮಗಳ ಅಕ್ಷತೆಯಿಂದ, ಗಂಧದ ಕಂಪು ಸೊಂಪಿನಿಂದ ಪೂಜ್ಯ ರಘುರಾಮನ ಪಾದ ಸನ್ನಿಧಿಗೆ ಸಾಗುವ ಮಾರ್ಗದರ್ಶಕ ಪಥ ಕಂಗೊಳಿಸಿತು.

ಬಂಗಾರದ ನಡುಕಟ್ಟುಗಳಿಂದ ಸೊಗಯಿಸುವ ಸಹಸ್ರ ಆನೆಗಳು, ಹೊನ್ನಿನ ತೇರುಗಳ ಧ್ವಜಪತಾಕೆಗಳು ಬೆಟ್ಟದಿಂದ ವೇಗವಾಗಿ ಬೀಸುತ್ತಿದ್ದ ಗಾಳಿಗೆ ತೊನೆದಾಡುತ್ತಿದ್ದವು. ಪ್ರಮುಖರನ್ನು ಹೊತ್ತುತರುವ ರಥಗಳನ್ನು ಮಂತ್ರಿಗಳೇ ನಡೆಸುತ್ತ ಬಂಗಾರದ ಕಡಿವಾಣಗಳಿಂದ ಕುದುರೆಗಳನ್ನು ನಿಯಂತ್ರಿಸುತ್ತಿದ್ದರು. ಅವರನ್ನು ಹೊತ್ತ ಹೆಮ್ಮೆಗೆ ಆ ಕುದುರೆಗಳು ಕೆನೆದು ನೆಲವನ್ನು ಬೆರಟುತ್ತಿದ್ದವು. ವಿವಿಧ ಶಸ್ತ್ರಾಸ್ತ್ರಗಳನ್ನು ಹೊಂದಿ, ವಿವಿಧ ವರ್ಣ ವಸ್ತ್ರ ಧಾರಿಗಳಾದ ಶತಶತ ಸೈನಿಕರು ತೈಲಧಾರೆಯಂತೆ ಹೊನಲಾಗಿ ಹರಿಯುತ್ತಿದ್ದರು.

ಪುರಮಹಿಳೆಯರೊಡಗೂಡಿ ದಶರಥನ ಸ್ತ್ರೀಜನರು ಚಿನ್ನದ ತೇರುಗಳಲ್ಲಿ ಸೇನೆಯ ನಡುವೆ ಬರುತ್ತಿದ್ದರು. ವೀರ ಶತ್ರುಘ್ನನೊಡಗೂಡಿ ಅಯೋಧ್ಯೆಯು ನಂದಿಗ್ರಾಮದತ್ತ ಹೊರಟಿತು.

ಭರತನು ಶ್ರೀರಾಮನ ಪಾದುಕೆಗಳನ್ನು ತಲೆಯ ಮೇಲೆ ಹೊತ್ತುಕೊಂಡು ಅಣ್ಣನನ್ನು ಎದುರುಗೊಳ್ಳಲು ಆತುರದಿಂದ ಹೋದನು. ಆ ಪಾದುಕೆಗಳಿಗೆ ಬಿಳಿಯ ಹೂಗಳನ್ನು ಮುಡಿಸಿದ್ದನು. ಹೊನ್ನಿನ ಹಿಡಿಯ ಬಿಳಿಯ ಚಾಮರಗಳಿಂದ ಗಾಳಿ ಬೀಸುತ್ತಿದ್ದರು. ಸೂರ್ಯನ ಹತ್ತಿರದ ಹಾಲುನೊರೆಯಂತಹ ಬಿಳಿಯ ಕೊಡೆಯನ್ನು ನೆರಳಾಗಿ ಎತ್ತಿ ಹಿಡಿದಿದ್ದರು. ಹರ್ಷದುಂದುಭಿಯ ಶಬ್ದವು ಮೊಳಗುತ್ತಿತ್ತು. ಪುರದ ನಾರಿಯರು ಮಂಗಳದ್ರವ್ಯಗಳನ್ನು ಹಿಡಿದು ಬರುತ್ತಿದ್ದರು. ತಾಯಿಯರ ಜೊತೆಗೂಡಿ ಮಂತ್ರಪಾಲ, ಸುಮಂತ್ರ, ಜಾಬಾಲಿ ಮುಂತಾದ ಸಚಿವರು ಬಂದರು. ಆಂಜನೇಯನ ಸತ್ ಸಂಗದಲ್ಲಿ ಭರತನು ನಂದಿಗ್ರಾಮವನ್ನು ಬಿಟ್ಟು ಭರದ್ವಾಜಾಶ್ರಮದ ಕಡೆ ಮುಖಮಾಡಿ ನಡೆದನು. ಅವನು ಹನುಮನ ಜೊತೆಗೆ ತನ್ನ ಕಾತರದ ಎದೆಯ ಕುದಿಹವನು, ಅನುಮಾನಗಳನ್ನು ಹೇಳುತ್ತ ಸಾಗಿದನು.

ಗೋಮತಿ ಮತ್ತು ವಾಲುಕೀ ನದಿಗಳು ಸೇರುವ ರಮ್ಯಸ್ಥಳದ ಸಾಲುಮರಗಳನ್ನು, ಬಾಲಸೂರ್ಯನಂತೆ ಬೆಳಗುತ್ತ ರಾಮನನ್ನು ಹೊತ್ತ ಕಾಮರೂಪದ ಪುಷ್ಪಕವಿಮಾನ ಇಳೆಗೆ ಇಳಿಯಿತು. ರಾಮ! ಲಕ್ಷ್ಮಣ! ಸೀತೆ! ಯರನ್ನು ಕಾಣುವ ಕುತೂಹಲದಿಂದ ಜನರು ಘೇ ಉಘೇ ಎಂದು ಜಯಘೋಷ ಮಾಡಿದರು. ಆ ದನಿಗೆ ಭೂಮಿ ನಡುಗಿತು.

ಆಗ ಅಚ್ಚರಿಯ ಪಕ್ಷಿತೇರನ್ನು ಯಾರು ಗಣನೆಗೆ ತೆಗೆದುಕೊಳ್ಳುವರು? ತನ್ನ ಮಾನಹಾನಿಗೆ ಮುನಿದೊ, ರಾಮನ ಇಂಗಿತವನ್ನು ಅರಿತೋ ಆ ಆಗಸದ ರಥ ಕುಬೇರನನ್ನು ಸ್ಮರಿಸುತ್ತ, ತನ್ನ ನೆಲೆಗೆ ಹಾರಿತು. ಕೋಟಿ ಕೋಟಿ ಕರಕಮಲಗಳು ಕೈಮುಗಿದುವು. ಲೆಕ್ಕವಿಲ್ಲದಷ್ಟು ಶಿರಗಳು ಬಾಗಿದುವು. ಲಕ್ಷೋಪಲಕ್ಷ ಜನಗಳಿಂದ

ಪುಷ್ಪವೃಷ್ಟಿಯಾಯಿತು! ಆನಂದದ ಹುಚ್ಚು ಹೊಳೆ ಹರಿಯಲು ನಾಗರಿಕರು ಕಾಡುಜನರಂತೆ ವರ್ತಿಸಿದರು!

ಅದೊ ರಾಮಚಂದ್ರ! ಅಲ್ಲೆ ಸೀತಾದೇವಿ! ಅಲ್ಲೆ ಕಾಣು, ನೋಡು ದೇವ ಲಕ್ಷ್ಮಣ! ಹದಿನಾಲ್ಕು ವರ್ಷಗಳ ಹಿಂದೆ ನೋಡಿರುವುದರಿಂದ ನನಗೆ ಅವರನ್ನು ಗುರುತು ಹಿಡಿಯುವುದೆ ಕಷ್ಟವಾಯಿತು! ಯಾರು ಅವನು ಧೀರ? ವಾನರ ನೃಪ ಸುಗ್ರೀವನಂತೆ! ಹತ್ತಿರ ಇರುವವನು? ವಿಭೀಷಣ!–ಹೀಗೆ ಕೇಳುವವರ, ಹೇಳುವವರ, ನೋಡುವ ಆತುರದಿಂದ ನುಗ್ಗಿ ಹೋಗುವವರ ಮತ್ತು ಬರುವವರ ತುಮುಲವು ಕಡಲನ್ನು ಕಡೆದಂತಾಯಿತು.

ಸಿದ್ಧಿಯಲ್ಲಿ ಬುದ್ಧಿ ಮುಳುಗಲು ಮೊದಲು ಆಲೋಚಿಸಿದಂತೆ ನಡೆದುಕೊಳ್ಳಲು ಸಾಧ್ಯವೆ? ಹೀಗೆಯೆ ನಡೆಯಬೇಕು, ಹೀಗೆಯೆ ನುಡಿಯಬೇಕು ಎಂಬ ಕೃತಕ ಮರ್ಯಾದೆಯನ್ನೆಲ್ಲ ಮರೆತು ಜನ ಸಹಜ ಆನಂದ ವರ್ತನೆಗೆ ಶರಣಾಗಿದ್ದರು!

ತಾಂ ಪೂಜಿಸಿದ ಪಾದುಕೆಗಳಂ ಪೂಜ್ಯಪಾದನ ಪದಕೆ ತೊಡಿಸಿದನು ಭರತಂ.

ರಾಮನನ್ನು ಕಂಡ ತಕ್ಷಣ ಭರತನು ಮರವಟ್ಟು ನಿಶ್ಚೇಷ್ಟಿತನಾಗಿ ನಿಂತು ಬಿಟ್ಟನು. ಕಂದನನ್ನು ನೋಡಿದ ತಾಯಿ ಕೌಸಲ್ಯೆಯು ಮುಂದೆ ಹೋಗಲು ಅಪೇಕ್ಷಿಸಿದಳು. ಬೇರೆ ಯಾರನ್ನೊ ನೋಡಿ ಬೆರಗಾದಂತೆ ಹಿಂಜರಿದು ಸಖೀ ಜನರ ಆಸರೆ ಬಯಸಿ ನಿಂತಳು. ಭರತನ ತಾಯಿ ಕೈಕೆಯಿ ಎದೆಯ ಮೇಲಿದ್ದ ಮೊದಲಿನ ಪಾಪ ಭಾರವಷ್ಟನ್ನೂ ಕಳಚಿಕೊಂಡು, ನವ ಪುಣ್ಯಚೇತನ ಆತ್ಮಕ್ಕೆ ಚಿಮ್ಮಿದಂತೆ ಕಾಂತಿಯ ಬುಗ್ಗೆಯಾದಳು. ಗಾಮನ ಮಹಾಮಹಿಮೆಯ ವಿಕಾಸನಕ್ಕೆ ತಾನೇ ಕಾರಣಳೆಂಬ ಜನಮನದ ಭ್ರಾಂತಿಯಿಂದ ಬಿಡುಗಡೆ ಹೊಂದಿ, ಶ್ರೀರಾಮನ ಕಡೆಗೆ ಶಾಂತಿಯಿಂದ ನಡೆದಳು.

ತನ್ನ ಪಾದಗಳಿಗೆ ನಮಸ್ಕರಿಸಿದ ಶ್ರೀರಾಮನನ್ನು ಹಿಡಿದೆತ್ತಿದಳು! ನಾನು ನಿನ್ನನ್ನು ಹೆತ್ತ ತಾಯಿಯಲ್ಲ. ಆದರೆ, ನಿನ್ನ ಆತ್ಮವನ್ನು ಹೆತ್ತವಳೆಂಬ ಹೆಮ್ಮೆ ನನ್ನದು ಎಂಬುದನ್ನು ಮಾತಾಡದೆ ನುಡಿದಳು ಎನ್ನುವಂತೆ ಚಿನ್ಮಯ ಮಹಾಮೌನದಿಂದ ಆಶೀರ್ವದಿಸಿದಳು! ತನ್ನ ತಾಯಿಯ ವಿಚಿತ್ರಸ್ಥಿತಿಯನ್ನು ನೋಡಿ ಭರತನು ಆಶ್ಚರ್ಯಕ್ಕೊಳಗಾದನು. ಎಚ್ಚತ್ತವನಂತೆ ಮುಂದುವರೆದನು. ಅಪ್ರಕಟವಾಗಿರಲಿ ಅಪುಣ್ಯರೂಪದಲ್ಲಿ ಕಾಣಲಿ, ತಪಸ್ಸು ತಪಸ್ಸೇ ಅಲ್ಲವೆ?

ಭರತನೊಡನೆ ಇತರರು ಹೋಗಿ ತಮ ತಮಗೆ ತಕ್ಕಂತಹ ಮರ್ಯಾದೆಯನ್ನು ರಘುವರನಿಗೆ, ಮೈಥಿಲಿಗೆ, ಲಕ್ಷ್ಮಣನಿಗೆ, ಸುಗ್ರೀವ ಜಾಂಬವ ವಿಭೀಷಣ ನಳ ಅಂಗದ ದ್ವಿವಿದ ಮೈಂದ ನೀಲರಿಗೆ ಸಲ್ಲಿಸಿದರು. ಭರತನು ತನ್ನ ಕಿರೀಟವನ್ನೇ ಅಣ್ಣನ ಚರಣ ಸೇವೆಗೆ ಸಮರ್ಪಿಸುವಂತೆ–ತಾನು ಪೂಜಿಸಿದ ಪಾದುಕೆಗಳನ್ನು ಪೂಜ್ಯ ಪಾದನ ಪಾದಗಳಿಗೆ ತೊಡಿಸಿದನು.

ವಾನರ ಮಹಿಮರು, ರಾಕ್ಷಸೇಂದ್ರನು ಹನಿ ಗಣ್ಣಾಗಿ, ಶಿರಬಾಗಿ ಕೈಮುಗಿಯುತ್ತ ಆ ಮಹದ್ ದೃಶ್ಯವನ್ನು ದರ್ಶಿಸಿದರು! ನೃಪಋಷಿ ತಪಸ್ವಿ ರಾಮಭದ್ರನು ಪಾದುಕೆಗಳನ್ನು ಧರಿಸಿ ನಡೆಯುತ್ತ ತನ್ನ ಆಶ್ರಮವನ್ನು ಪ್ರವೇಶಿಸಿದನು ಎಂದಮೇಲೆ ಭರತನ ತಪಸ್ಯೆಗೆ ಅದಕ್ಕಿಂತ ಸಿದ್ಧಿ ಬೇರೆ ಇದೆಯೆ?

ಅಂದು ಜಾನಕಿ ಜೀವಿತೇಶ್ವರನು ಬಂಧು ಮಿತ್ರರೊಡಗೂಡಿ ಭರತನಆಶ್ರಮದಲ್ಲಿ ವಿಶ್ರಮಿಸಿದನು. ಮಾರನೇ ದಿನ ಅಯೋಧ್ಯೆಗೆ ಪ್ರಯಾಣವೆಂದು ನಿಶ್ಚಯಿಸಿದರು.

ಭರತನ ಇಚ್ಛೆಯಂತೆ, ಶತ್ರುಜ್ಞ ಮಂತ್ರಿಗಳು ಗುರು ವಸಿಷ್ಠನ ನೇತೃತ್ವದಲ್ಲಿ ಪಟ್ಟಾಭಿಷೇಕ ಮಹೋತ್ಸವಕ್ಕೆ ಸಕಲಸಿದ್ಧತೆಗಳನ್ನು ಮಾಡಿಕೊಳ್ಳಲು ಆಜ್ಞೆ ಮಾಡಿದನು. ಅವರು ಅದಕ್ಕಾಗಿ ಸಾಕೇತಪುರಿಗೆ ತೆರಳಿದರು.

ರಾಮನ ಇಚ್ಛೆಯಂತೆ ಸುಶೀಘ್ರರು, ನಿಪುಣರು ಆದ ಶಿಕ್ಷಿತ ಕ್ಷೌರಿಕರು ಬಂದು ಮೊದಲು ಭರತನ ಜಟೆಗಳನ್ನು ಕತ್ತರಿಸಿದರು. ಮುಖಕ್ಷೌರವನ್ನು ಮಾಡಿದರು. ಮೀಸೆಯನ್ನು ಬಿಡಿಸಿದರು. ಅನಂತರ ಲಕ್ಷ್ಮಣ, ವಾನರ ಮಹಾಮುಖ್ಯ, ಸಖ ವಿಭೀಷಣ ಮತ್ತು ರಾಮನಿಗೆ ವದನ ಸೌಂದರ್ಯ ಸಂಸ್ಕಾರ ಮಾಡಿದರು. ಎಲ್ಲರೂ ಪರಿಮಳ ತೈಲ ಲೇಪನ ಹೊಂದಿ, ಗಂಧದನೀರಿನಲ್ಲಿ ಮಿಂದರು. ಆಗ ಅವರ ಸಹಜ ತೇಜವು ಸಂಸ್ಕರಿಸಿದ ರತ್ನದ ಕಾಂತಿಯಂತೆ ಇಮ್ಮಡಿಸಿತು!

ಕೈಕೆ ಕೌಸಲ್ಯಾದಿ ದೇವಿಯರು ಸೊಸೆಯರನ್ನು ಉಪಚರಿಸಿ ತಣಿದರು. ಅಕ್ಕನ ಉಪಚಾರದಲ್ಲಿ ಊರ್ಮಿಳೆಗೆ ತನ್ನತನ ಮರೆತಂತಾಯಿತು. ಮಾಂಡವಿ, ಶ್ರುತಕೀರ್ತಿಯರು ಸೀತೆಯನ್ನು ಬೆಂಬಿಡದೆ ಮತ್ತೆ ಚಿಕ್ಕವರಂತಾಗಿ ತಂಗೆತನದಿಂದ ಅಕ್ಕನಿಗೆ ಅಕ್ಕರೆಯನ್ನು ಉಕ್ಕಿಸಿದರು. ಅದು ಸೀತೆಗೆ ತಂದೆ ಜನಕನನ್ನು ಕಾಣುವ ಆಸೆ ಉಕ್ಕುವಂತೆ ಮಾಡಿತು! ಆಗ ಮಗನ ಮನದನ್ನೆಯನ್ನು ತಾಯಿ ಕೌಸಲ್ಯೆ ಸಂತೈಸುತ್ತ ಹೇಳಿದಳು:

'ಮಾರನೆಯ ದಿನವೆ ಪಟ್ಟಾಭಿಷೇಕೋತ್ಸವ! ಮಗಳೆ ಹೇಳು, ದಾಶರಥಿಯು ದೂತರನ್ನು ಕಳುಹಿಸಿ ಮಾವನನ್ನು, ಮಿಥಿಳೇಂದ್ರನನ್ನು, ಪೂಜ್ಯ ರಾಜರ್ಷಿಯನ್ನು, ಸೀತೆಯನ್ನು ಹೆತ್ತ ಪುಣ್ಯಾತ್ಮನನ್ನು ಕರೆಸದೆ ಇರುತ್ತಾನೆಯೆ?'

❑



~~~~~~~~~~~~~~~~~~~~~~ ಸಂಚಿಕೆ – ೧೩ ~~~~~~~~~~~~~~~~~~~~~~

ಅಭಿಷೇಕ ವಿರಾಡ್‌ದರ್ಶನಂ

ಓಂಕಾರಮುಖ ಸಚ್ಚಿದಾನಂದ ಸ್ವರೂಪಿಣಿಯೇ, ಶಿವೆ ಸರಸ್ವತಿ ಲಕ್ಷ್ಮಿಯೆ ಮೊದಲಾದ ಸಮಸ್ತ ದೇವತೆಯರನ್ನೊಳಗೊಂಡ ಸಂಪೂರ್ಣ ದೇವಗೋಷ್ಠಿಯ ಸಮಷ್ಟಿ ರೂಪಿಣಿಯೇ, ಸೃಷ್ಟಿಕಾರಿಣಿಯೇ, ಸಂಸಾರದಿಂದ ಪಾರುಮಾಡುವವಳೇ, ಜಗತ್ತನ್ನು ಧರಿಸಿರುವವಳೇ ನಿನಗೆ ಇದೊ ನನ್ನ ಆತ್ಮವನ್ನು ಸಮರ್ಪಿಸುತ್ತಿದ್ದೇನೆ. ತಾಯಿಯೆ ನಿನ್ನ ಚರಣಕಿರಣದ ಸೋಂಕಿನಿಂದ ನನ್ನ ಶಿರಸ್ಸಿನಲ್ಲಿರುವ ಸಹಸ್ರಾರ ಚಕ್ರ ಸರೋಜವನ್ನು ವಿಕಾಸಗೊಳಿಸು. ಅರಳಿದ ತೇಜದಲ್ಲಿ ಅಯೋಧ್ಯಾ ರಾಮ ಪಟ್ಟಾಭಿಷೇಕೋತ್ಸವದ ವಿರಾಟ್ ವೈಭವವು ನನ್ನ ಕವಿಕೃತಿಯಲ್ಲಿ ಒಂದು ಪ್ರತಿಮಾ ರೂಪವಾಗಿ ಪ್ರಕಟಗೊಳ್ಳುವಂತೆ ಮಾಡು!
~~~~~~~~~~~~~~~~~~~~~~

ರಾಮ ಪಟ್ಟಾಭಿಷೇಕದ ವಿರಾಡ್ ವ್ಯಾಪಾರಮಂ ಪ್ರತಿಮಿಸುವ ವಿಶ್ವರೂಪಂ.

ತಾಯಿಯೆ ತಮ್ಮ ಕೃಪೆಯಿಂದ ಈ ಮಹತ್ವವಾದ ಕಾವ್ಯ ರಚನೆಯ ಮಹಾಸರೋವರ ಯಾತ್ರೆಯಲ್ಲಿ ತೊಡಗಿದ ನಂತರ ಭೂಮಿಯು ತಪೋನಿಧಿಯಾದ ಆದಿತ್ಯನನ್ನು ಒಂಭತ್ತು ಸಲ ಸುತ್ತಿ ಬಂದಿದೆ. ರಣಮಯವಾಗಿರುವ ಈ ಜಗತ್ತಿನ ತಾರಣ ಸಂವತ್ಸರದಲ್ಲಿ ತಾಯಿ ನೀನೇ ತಾರಿಣಿ, ನೀನೆ ಸೂರ್ಯ; ಭರತಾರಿಣಿಯೆ, ನನಗೆ ಈ ಕಾವ್ಯ ಸಾಗರದ ತೀರವು ಕಾಣಿಸುತ್ತಿದೆ. ಜಗಜ್ಜನನಿಯೆ, ದೇವತೆಗಳಿಗಷ್ಟೇ ಗೋಚರವಾಗುವ ರಾಮ ಪಟ್ಟಾಭಿಷೇಕದ ವಿರಾಡ್ ಕಾರ್ಯವನ್ನು ಪ್ರತಿಮಿಸುವ ವಿಶ್ವರೂಪವನ್ನು ನನಗೆ ತೋರಿಸು!

ಇದು ಇತಿಹಾಸವಲ್ಲ. ಬರಿ ಕಥೆಯೂ ಅಲ್ಲ. ಆತ್ಮಕ್ಕೆ ಶರೀರವು ಹೇಗೊ ಹಾಗೆ ಇಲ್ಲಿ ಕಥೆ ನಿಮಿತ್ತ ಮಾತ್ರವಾಗಿದೆ. ರಾಮನ ಕಥೆಯ ಪಂಜರದಲ್ಲಿ ರಾಮ ರೂಪದ ಪರಾತ್ಪರನ ಪುರುಷೋತ್ತಮನ ಲೋಕ ಲೀಲಾದರ್ಶನ ಮೈತಾಳಿದೆ. ಬಂಧನಮಯವಾದ ಲೋಕಲೀಲೆಗೆ ಮೋಕ್ಷವೇ ಪರಮ ಪುರುಷಾರ್ಥ. ಆ ಮುಕ್ತಿಗೆ ಈ ಪಟ್ಟಾಭಿಷೇಕದ ಉತ್ಸವವು, ಅರ್ಹತ್ ಪದವಿಯನ್ನು ಪಡೆದ ಸಿದ್ಧನಿಗೆ ಉಂಟಾಗುವ ಕೈವಲ್ಯ ಸವನೋತ್ಸವಕ್ಕೆ ಸಮನಾಗಿದೆ.

'ಸಮನಾದದ್ದೆ? ಅದಕ್ಕೂ ಮಿಗಿಲು! ನೋಡು.'

ಎಂಬ ಯಾರ ಆಜ್ಞೆಗೊ ನನ್ನ ಕಣ್ಣು ಅತೀಂದ್ರಿಯದ ಕಡೆಗೆ ತಿರುಗಿತು. ಆಶ್ಚರ್ಯವೆಂಬಂತೆ ನಿರಾಕಾರನೊಬ್ಬನನ್ನು ಕಂಡೆನು! ರೋಮಾಂಚಿತನಾಗಿ ಭಯಭಕ್ತಿ ಗೌರವದಿಂದ ಬಾಗಿ ಆ ಸೂಕ್ಷ್ಮ ಶರೀರಿಯನ್ನು ಕೇಳಿದೆನು.

'ನೀನು ಯಾರು ಮಹಾ ಪುರುಷ.'

'ಗುರುವನ್ನೇ ಗುರುತಿಸದವನು, ಶಿಷ್ಯನೆಂತಾಗುವನೊ?'

ಎಂದು ಭವ್ಯ ಸತ್ತ್ವನು ವಾತ್ಸಲ್ಯ ಭಾವದಲ್ಲಿ ಮಾತಾಡಿದನು.

'ಅನಾದಿ ಕವಿ. ನಾನೇ ಅಲ್ಲವೆ? ವಾಲ್ಮೀಕಿ ವ್ಯಾಸ ಹೋಮರ್ ದಾಂತೆ ಫಿರ್ದೂಸಿ ಮಿಲ್ಟನ್ ಮಹಾಕವೀಶ್ವರರು ನನಗೆ ಬಾಹುಮಾತ್ರವಲ್ಲವೆ? ನನಗೆ ಬಹು ನಾಮರೂಪಗಳು, ಬಹು ಕಾಲದೇಶಗಳು. ನೀನೂ ನಾನೆಯೆ, ಕುವೆಂಪು!'

ರುದ್ರ ಗಾಂಭೀರ್ಯದ ಗಂಭೀರ ಕಂಠಧ್ವನಿ ಕೇಳಿ ತಲ್ಲಣಿಸಿದೆನು. ದಿವ್ಯ ಜಿಹ್ವೆಯಲ್ಲಿ ನನ್ನ ನಾಮಾಕ್ಷರಗಳನ್ನು ಕೇಳಿ ವಿಸ್ಮಿತನಾಗಿ ತುಟಿನಡುಗಿ ತೊದಲುತ್ತಿರಲು ಮತ್ತೆ ಗಂಭೀರ ನುಡಿ ಹೊಮ್ಮಿತು:

'ವತ್ಸ! ನಾನು ಹೇಳಿದುದಲ್ಲದೆ, ನೀನೇನು ಬರೆದೆ? ನಿನ್ನ ಅಹಂಕಾರದ ಅಲ್ಪತೆಯಿಂದ ಮಾಡಿದ ದೋಷಗಳು ನಿನ್ನವು. ಕೃತಿಯ ಹಿರಿಮೆಗೆ ನೀನೇನು ಕವಿಯೆ? ಏಳು,

ಏಳು! ಅವಿದ್ಯೆಯನ್ನು ಬಿಡು! ನಾನು ತೋರಿಸುವುದನ್ನು ಕಾಣು!'

ನಾನು ಕಂಡೆ. ಕಂಡದ್ದು ಏನೆಂದು ಅರಿಯೆ! ಶೂನ್ಯತೆಯಲ್ಲಿ ಮುಳುಗುತ್ತಿದ್ದ ನನ್ನ ಮತಿಯನ್ನು ಹಿಡಿದು ತನ್ನ ಎದೆಗೆ ಅಪ್ಪಿಕೊಂಡು ಆ ಕೃಪಾ ಭಗವತ್ ವಿಭೂತಿಯು ಹೇಳಿದನು:

'ನೀನು ಪ್ರಾಣಿ. ಪ್ರಾಣಮಯ ಮತ್ತು ಮನೋಮಯವನ್ನು ಮೀರಿದ ವಿಜ್ಞಾನಮಯ ಲೋಕಾನುಭವದಲ್ಲಿ ಕಾವ್ಯಲೋಕ ಜ್ಞಾನದಿಂದಿರುವುದು ಅಸಾಧ್ಯ! ಕಂಡ ದರ್ಶನಕ್ಕೆ ನಾನೊಂದು ಬೃಹತ್ ಪ್ರತಿಮೆಯನ್ನು ರಚಿಸುವೆನು. ಓ ಕವಿ ಪ್ರಾಣಿಯೆ, ಅದು ಅತೀಂದ್ರಿಯವಾದರೂ ಪ್ರಾಣಬುದ್ಧಿ ಗ್ರಹಿಸಲು ಸಾಧ್ಯ!'

ಅದರ ದಿವ್ಯ ಎದೆಯ ಸಾನ್ನಿಧ್ಯದಲ್ಲಿ ನಾನು ನಭಾಂಗಣದ ನೆಲೆಯಲ್ಲಿ ಕುಳಿತ ನಕ್ಷತ್ರ ಪಕ್ಷಿಯಂತಿದ್ದು ಅಭಿಷೇಕ ವಿರಾಡ್ ವಿಭೂತಿಯನ್ನು ನೋಡಿದೆನು.

ಅನಂತವಾದ ಮೇರೆ ಕಾಣದ ಕಾಲದೇಶದ ಚಿದಾಕಾಶವನ್ನು ಒಂದು ನೀಲಮೌನ ತುಂಬಿತ್ತು. ಮೌನ ಕಡಲಿನಲ್ಲಿ ಏಳುವ ನಾದ ಬೊಬ್ಬುಳಿಯಂತೆ ವಿವಿಧ ವರ್ಣಾಗ್ನಿಯ ತರಂಗಗಳು ಚಲಿಸಿದುವು. ಶರಧಿಯ ಹೊಕ್ಕುಳದಿಂದ ಏಳು ಐರಾವತಗಳು ದಿಕ್ಕುಗಳನ್ನು ಬೆಳಗಿಸುತ್ತ ಎದ್ದವು. ಅವುಗಳು ಚಕ್ರಾಕಾರದಲ್ಲಿ ನಿಂತು ನೀರಿನಿಂದ ಮೂಡಿಬಂದ ಅಮೃತಮಯ ಕಮಲದ ಮೊಗ್ಗನ್ನು ಸೊಂಡಿಲಿನಲ್ಲಿ ಹಿಡಿದಿದ್ದವು. ಮಧುರಗಾನವನ್ನು ಹೊತ್ತು ತಂದ ಗಾಳಿಯ ಸೋಂಕಿಗೆ ಮೃದುವಾಗಿ ಕಮಲದ ಮೊಗ್ಗುಗಳ ಎಸಳೆಸಳು ಅರಳಿದವು. ಏನನ್ನು ಹೇಳಲಿ? ಅದರ ಕಂಪು ಬ್ರಹ್ಮಾಂಡವನ್ನು ತುಂಬಿತು!

'ನೀನು ನೋಡುತ್ತಿರುವ ಕಮಲದ ಒಂದೊಂದು ಎಸಳು ಬಹುಕೋಟಿ ಯೋಜನ ಸುವಿಸ್ತೀರ್ಣದ ಒಂದೊಂದು ದೇವಲೋಕ.'

ಎಂದು ನನ್ನನ್ನು ಎದೆಗೆ ತಬ್ಬಿಕೊಂಡಿದ್ದ ಗುರುದೇವನು ಹೇಳಿದನು. ನಾನು ಸುಖಭೀತ ಮನದವನಾಗಿ ನೋಡುತ್ತಿರಲು ಅವನು ಲೋಕಶಿಲ್ಪಿಯ ಕಲ್ಪನೆಯ ಕಲಾಸತ್ಯದ ಬಳಿಗೆ ಹೋಗುವಂತೆ ಒಂದೆರಡು ಹೆಜ್ಜೆ ಮುಂದಕ್ಕೆ ನಡೆದನು. ಆ ಕಮಲ ದಳ ದಳಗಳಲ್ಲಿ ಆಕಾಶದಲ್ಲಿ ಕಿಕ್ಕಿರಿಯುವ ನಕ್ಷತ್ರಗಳಂತೆ ದಟ್ಟವಾಗಿ ಪ್ರಕಾಶಿಸುವ ಅಸಂಖ್ಯಾತ ಕಾಂತಿ ಕೇಂದ್ರಗಳಿದ್ದವು. ಅವು ವಿದ್ಯುತ್ ಮಹಾವೇಗದಲ್ಲಿ ತಿರ್ರನೆ ತಿರುಗುತ್ತ ಅಲಾತಚಕ್ರಗಳನ್ನು ರಚಿಸಿದವು.

'ಇವು ದಿವ್ಯ ಚಿಚ್ಛಕ್ತಿಯಿಂದ ತಿರುಗುತ್ತಿರುವ ಸೃಷ್ಟಿ ಚಕ್ರಗಳು. ಇವು ಮನುಜನ ವಿಶ್ವದಲ್ಲಿ ಪ್ರಕೃತಿಯ ನಿಯಮಗಳಂತೆ ತೋರುವ ಅಖಿಲ ಜಡ ಮತ್ತು ಜೀವಗಳ ನಡೆಯ ಮೂಲಕಾರಣಗಳು.'

ಎಂದು ಹೇಳಿ ಅವನು ಸ್ವಲ್ಪ ತಡೆದು ನಿಂತನು. ಆ ಒಂದೊಂದು ಅಲಾತ ಚಕ್ರಜ್ಯೋತಿಯು ದೇವತಾ ಹಸ್ತಚಳಕದಿಂದ ರಚಿತವಾಗಿರುವುದನ್ನು ಕಂಡೆನು. ಆ ಜ್ಯೋತಿಯ ನೆರಳಿನ ನೆಳಲಿಗೆ ನೆರಳು ನಮ್ಮ ಬೆಳಕು. ಅಂತಹ ಚಿತ್ ತಪೋ ಜ್ಯೋತಿಯು ದೇಹ ತಳೆದು ದೇವತಾಕೃತಿಯ ದಿವ್ಯ ಪ್ರಕಾರಗಳಾಗಿ, ಒಂದೊಂದೂ ಆಗಸಕ್ಕೆ ಎದುರಾಗಿ ಶಿಖರಮಯ ಗಿರಿಪಂಕ್ತಿಗಳಾಗಿ ದಿಗಂತದ ರೇಖಾ ಮುಖದಂತೆ ಸಂಜೆಯ ಆಕಾಶದಲ್ಲಿ ಕಂಡವು.

ದಳ ಸಹಸ್ರದಲ್ಲಿಯ ಒಂದು ದಳ, ಕಿಡಿಕೋಟಿಗಳಲ್ಲಿ ಒಂದು ಕಿಡಿ, ಸಾಲು ಸಾಲಿನ ದೇವತಾ ರೂಪಗಳಲ್ಲಿ ಒಂದು, ನಾವು ಬೆಳೆದಂತೆಲ್ಲ ನಮ್ಮನ್ನು ಗುರಿಯಾಗಿ ಬೆಳೆಬೆಳೆದು ನಮ್ಮನ್ನು ಒಳಗೊಳ್ಳುತ್ತಿತ್ತು. ಆಗ ಗುರುದೇವ ವಾಣಿ ನುಡಿಯಿತು:

'ನೀನು ಈಗ ಈ ಜ್ಯೋತಿರ್‌ದೇವತೆಯ ಮುಖದಿಂದ ಪ್ರವೇಶಿಸಿ, ಲಲಾಟದ ಪ್ರಜ್ಞಾನ ಪಥದಿಂದ ಅವನ ಮನೋಮಯವನ್ನು ಪ್ರವೇಶಿಸುವೆ.'

ರವಿಯ ಕಾಂತಿಯು ಗಾಜಿನ ಗವಾಕ್ಷವನ್ನು ಪ್ರವೇಶಿಸುವಂತೆ ಮತ್ತು ಸಹೃದಯ ಪ್ರತಿಭೆಯು ಕವಿಯ ಕನಕ ಸ್ವಪ್ನವನ್ನು ಪ್ರವೇಶಿಸುವಂತೆ ನನ್ನೊಡನೆ ಗುರುವು, ಗುರುವಿನೊಡನೆ ನಾನು ದೇವತಾ ಕೃತಿಯ ಹಣೆಗಣ್ಣನ್ನು ಪ್ರವೇಶಿಸಿದೆವು. ನಾನು, ನೀರಿಗೆ ಮರಳಿ ಉರುಳಾಡುವ ಮೀನಿನಂತೆ ಆದೆನು. ಬದುಕಿದಂತೆ ನಿಟ್ಟುಸಿರು ಬಿಟ್ಟು ಹೇಳಿದೆನು:

'ಗುರುವೆ, ಸ್ವಪ್ನಾವಸ್ಥೆಯಿಂದ ಎಚ್ಚತ್ತವನಂತೆ, ಮನಸ್ಸನ್ನು ಕದಡುವ ಭ್ರಮೆಯಿಂದ ಹೊರಬಂದು, ಜಾಗ್ರತಾವಸ್ಥೆಗೆ ಹಿಂತಿರುಗಿದಂತಾಗಿದೆ. ವಿಕೃತಿಲೋಕದಿಂದ, ಮಿಥ್ಯೆಯಿಂದ ಪ್ರಕೃತಿಲೋಕಕ್ಕೆ ಮತ್ತು ಸತ್ಯ ಲೋಕಕ್ಕೆ ಬಂದು ನನ್ನ ಜೀವಕ್ಕೆ ನೆಮ್ಮದಿಯಾಗಿದೆ.'

ನನ್ನ ಈ ಮಾತುಗಳನ್ನು ಕೇಳಿ, ಹಸುಳೆಯ ತೊದಲು ನುಡಿಗೆ ತಾಯಿ ನಗುವಂತೆ ಆ ದಿವ್ಯ ಪುರುಷನು ನಕ್ಕು ನುಡಿದನು:

'ವತ್ಸ, ಮೀನಿಗೆ ನೀರೊಳಗಿರುವ ಗಾಳಿಯೇ ಗಾಳಿ. ನೀರನ್ನು ಬಿಟ್ಟು ಹೊರಬಂದರೆ ವಾಯು ಮಂಡಲವೇ ವಾಯುವಿಹೀನ ಎನ್ನುವಂತಾಗಿ ಅದಕ್ಕೆ ಉಸಿರು ಕಟ್ಟುತ್ತದೆ. ನಿನಗೂ ಹಾಗೆಯೆ ಸತ್ಯಲೋಕಗಳು ಅಸತ್ಯದಂತೆ ಕಂಡವು. ಈ ಮಿಥ್ಯೆಯು ಘನತರವಾದ ಸತ್ಯದಂತೆ ಕಾಣುತ್ತಿದೆ. ನನಸಿನಲ್ಲಿ ಚಲಿಸುತ್ತಿದ್ದರೆ ಕನಸಿನಂತೆ ಕಂಡಿತು. ಆ ಅಸಂಖ್ಯ ದೇವರುಗಳಲ್ಲಿ ಒಬ್ಬ ದೇವನ ಮನೋಮಯವು ಕಾಣುವ ಕನಸನ್ನು ಹೊಕ್ಕು, ಗಟ್ಟಿ ನನಸನ್ನು ಮೆಟ್ಟಿ ಮುಟ್ಟಿ ನಿಂತಂತೆ ನಿನಗೆ ಅನುಭವವಾಯಿತು.

'ನೆರಳು ನೆರಳನಲ್ಲದೆ ಉಳಿದ ಸತ್ಯವನ್ನು ತಿಳಿಯಲಾರದು ಮತ್ತು ಒಪ್ಪಲಾಗದು! ನೋಡು, ಇದುವೆ ಯೋಗ ಬುದ್ಧಿಗೆ ಗ್ರಾಹ್ಯವಾದ ಮನುಜವಿಶ್ವ, ಇದುವೇ ಸ್ಥೂಲ

ನರಮತಿಯಾದ ನಿನಗೆ ಆ ಸತ್ಯಲೋಕಗಳು ಕಾಣುವ ರೀತಿ. ಬರಿಯ ಕಾವ್ಯವಿಭ್ರಮೆ ನೇಯುವುದು ನಶ್ವರ ಮನೋಹರ. ಕಲೆ ಮಾತ್ರವೇ ಸುಂದರ ಶಾಶ್ವತ ಸತ್ಯ! ಖಿನ್ನನಾಗಬೇಡ. ನಾನು ಲೀಲಾಮಯ ಸ್ವರೂಪದ ಕಥೆಯನ್ನು ಹೇಳಿದೆನೇ ಹೊರತು, ಯಾರ ಖಂಡನೆಯೂ ಅಲ್ಲ.'

ಮನೋಲೋಕದ ಚಿಚ್ಛಕ್ತಿಯ ಹಿರಿಮೆಗಳನ್ನು, ಸಾಗರೋಪಮವಾದ ಮಹರ್ಷಿ ರೂಪಗಳನ್ನು, ಬುದ್ಧಿ ಪ್ರಭಾವಗಳ ಚಿನ್ಮಯಾ ಕೃತಿಗಳನ್ನು, ಸಿದ್ಧಿಶಕ್ತಿಗಳಾದ ಮಾತೃಕೆಯರನ್ನು, ಕೃಪೆಗಳನ್ನು, ನಮಸ್ಕಾರ ಮುಂತಾದ ವಿನಯಗಳನ್ನು ಪ್ರತಿಭೆ ಮತ್ತು ಜ್ಞಾನತೇಜೋ ವಿಶೇಷಗಳನ್ನು ತೋರುತ್ತ ಆ ದಿವ್ಯ ಪುರುಷನು ಇಳಿದಿಳಿದನು. ಮಾತೃಸತ್ವ ಹೇಗೆ ಹೊಕ್ಕುಳ ಮೂಲಕ ಭ್ರೂಣಕ್ಕೆ ಹರಿಯುತ್ತದೆಯೊ ಹಾಗೆ ಮನೋಮಯದಿಂದ ಪ್ರಾಣಮಯ ಜಗತ್ತನ್ನು ಪ್ರವೇಶಿಸಿದನು.

ನೂರಾರು ಸಹಸ್ರಾರು ರೀತಿಯ ಅನೇಕ ವರ್ಣಗಳ ಮಿಶ್ರಣವನ್ನು ಕಂಡು ನನ್ನ ಕಣ್ಣು ತತ್ತರಿಸಿತು. ಆ ಕಾಂತಿ ಸಾಗರವು ಬಿಳಿ. ಕಪ್ಪು, ನೀಲಿ, ರಕ್ತ, ಧೂ್ರಮ, ಪಾಟಲ, ಪಿಂಗಲ ಮೊದಲಾದ ಬೃಹತ್ ವರ್ಣಗಳ ಅಲೆಗಳಿಂದ ಮೆರೆಯಿತು. ಮಧುರ, ವಾತ್ಸಲ್ಯ, ಸಖ್ಯ, ದಾಸ್ಯ, ವೈರ ಮೊದಲಾದ ಭಾವಗಳು ಮಹಾಶಕ್ತಿಶಾಲಿ ಮೊಸಳೆಗಳಂತೆ ಕಂಡವು. ರಾಗ ಮತ್ತು ದ್ವೇಷ, ಕೋಪ ಮತ್ತು ಕಾಮ, ರೋಷ ಮತ್ತು ಅಸೂಯಾದಿಗಳು ಮೊಸಳೆಗಳಂತೆ ಕಾಣಿಸಿದುವು. ಮರ್ತ್ಯ ಜೀವನದ ತಾಟಸ್ಥ್ಯವನ್ನು ಕಡೆಕಡೆದು, ಶ್ರದ್ಧೆ ಸಂದೇಹಗಳನ್ನು ಬಿಡದೆ ಹೊಡೆದೆಬ್ಬಿಸಿ ಜನತೆ ಜನತೆಯಲ್ಲಿ, ಪಕ್ಷ ಪಕ್ಷಗಳಲ್ಲಿ ಭಾವನೆಗಳನ್ನು ಕೆರಳಿಸುವ ನೂರಾರು ಮತಗಳು ಜೋಲು ನಾಲಗೆಯ ಅತಿ ಭಯಂಕರ ಅಗ್ನಿ ವರ್ಣದ ತೋಳಗಳಂತೆ ರಾರಾಜಿಸಿದುವು!

ಪೃಥ್ವಿಯಲ್ಲಿ ಘೋರ ಯುದ್ಧಗಳನ್ನು ಹೊತ್ತಿಸುವ ಛಲಗಳು, ಮಹತ್ತಾದ ಆಶೆಗಳು, ಯಶಸ್ಸಿನ ಲೋಭ ಮೋಹಗಳು, ಕೃಪಣತೆಯ ಭೂತಗಳು, ಕೀರ್ತಿಶನಿಗಳು, ಮಮತಾ ವಿಕಾರಗಳು ಅಲ್ಲಲ್ಲಿ ಪಶುವೀರ್ಯ ದೈತ್ಯರಂತೆ ಮೆರೆದುವು. ಕ್ಷಮೆ, ದಯಾ, ಮೈತ್ರಿ, ಅಹಿಂಸಾ ದಿವ್ಯರೂಪಗಳು ಹಾಲುಮೈಯ ಕೈಲಾಸ ಪರ್ವತದ ಹಸುಗಳಂತೆ ಚಂದ್ರಕಾಂತಿಯನ್ನು ಹರಡಿ ಆಶೀರ್ವಾದ ಮುದ್ರೆಗಳಂತೆ ಥಳ ಥಳಿಸುತ್ತಿದ್ದವು.

ಹೀಗೆ ತೋರಿಸುತ್ತ, ಪ್ರಾಣಮಯ ಲೋಕದಿಂದ–ಗರ್ಭದಿಂದ ಮಗುವು ಯೋನಿ ಮುಖದಿಂದ ಇಳಿಯುವಂತೆ, ಕರುಣೆಯಿಂದ ನನಗಾಗಿ ನನ್ನ ಬ್ರಹ್ಮಕವಿ ಗುರುದೇವನು ತಾನೂ ನನ್ನೊಡನೆ ಸುಪರಿಚಿತವಾದ ಅನ್ನಮಯ ಇಂದ್ರಿಯ ಲೋಕಕ್ಕೆ ಇಳಿದನು! ಲಕ್ಷಾಂತರ ಜ್ಯೋತಿಃಪಟಲಗಳು, ಕೋಟ್ಯಾಂತರ ನಕ್ಷತ್ರಗಳು, ಸೂರ್ಯಚಂದ್ರ ಗ್ರಹಾದಿಗಳ ದೇಶಕಾಲದ ಮನೋಜ್ಞ ವೀಥಿಯಿಂದ ಇಳಿದು ಈ ಭೂತಳದ ಶಾಶ್ವತ ಅಯೋಧ್ಯೆಯನ್ನು ಕಂಡೆನು.

ಕಾಣ್ಬುದದೊ ನೋಡಲ್ಲಿ ರಾಮಪಟ್ಟಾಭಿಷೇಕೋತ್ಸವ ಮೂಲಮ್.

'ಅಗೋ, ಅಲ್ಲಿ ರಾಮಪಟ್ಟಾಭಿಷೇಕೋತ್ಸವದ ಮೂಲವನ್ನು ನೋಡು. ಮನುಷ್ಯನ ಸ್ಥೂಲ ನಶ್ವರ ಕೃತಿಗೆ ಇದೇ ನಿತ್ಯ ಶಾಶ್ವತ ದಿವ್ಯ ಮಾತೃಕೆ.'

ಎಂದು ಗುರುವು ತೋರಿಸಲು, ನಾನು ನಿಂತು ಕೈಮುಗಿದೆ. ಧನ್ಯನಾದೆ.

ಕ್ಷೀರಸಾಗರದ ಮಧ್ಯದಿಂದ ಒಂದು ಎತ್ತರದ ನೀಲಿಮಲೆಯು ತನ್ನ ಕಿರೀಟ ಶಿಖರದಿಂದ ಮೋಡದ ಮಾರ್ಗವನ್ನು ಮೀಟುತ್ತ ಎದ್ದಿತು. ಅದರ ತೊಡೆಯನ್ನು ಒರಗಿ ಕುಳಿತಂತಿದ್ದ ಕನಕಾಚಲವು ರಾರಾಜಿಸಿತು. ಅದರ ಸಮೀಪದಲ್ಲಿಯೆ ಒಂದು ರಜತಗಿರಿಯು ಸೇವೆ ಸಲ್ಲಿಸುವಂತೆ ಕಾಣುತ್ತಿತ್ತು. ನೀಲಿಬೆಟ್ಟದ ಕಡೆಗೆ ತನ್ನ ಗಿರಿ ಬಾಹುಗಳನ್ನು ಸ್ನೇಹದಿಂದ ಚಾಚಿದ್ದ ಸಸ್ಯ ಸುಂದರ ಬೃಹತ್ ಮಹಾ ಪರ್ವತವು ಮೇಲೆದ್ದಿತು. ಅವುಗಳನ್ನು ಸುತ್ತಿ ಇತರ ಶೈಲಗಳು ಎದ್ದವು. ಅವು ತೆರೆತೆರೆಯಾಗಿ ಹರಿವ ಸಾಗರದಂತೆ ಮೇರೆಗಾಣದೆ ಹಬ್ಬಿದ್ದವು. ಅವುಗಳನ್ನು ನೋಡುತ್ತ ನನ್ನ ಕಣ್ಣು ಸೋತಿತು.

ಗಂಧಮಯ ಸುವರ್ಣಕಾಂತಿಯ ಧೂಳು ತೆರೆಯೆಳೆದಂತೆ ದೃಷ್ಟಿಸೀಮೆಯನ್ನು ತುಂಬಿತು. ಸುರರ ಕಂಠದ ಸಂಗೀತವು ದಿವ್ಯ ಛಂದಸ್ಸಿನ ವಿಲಾಸದಲ್ಲಿ ತೂಗಾಡುತ್ತ ಕೇಳಿ ಬರುತ್ತಿತ್ತು. ಮಹರ್ಷಿ ಮುಖಗಳನ್ನು ಹೊಂದಿದಂತೆ ಏಳು ಕಡಲುಗಳು ಕೈಯೆತ್ತಿ ಸಮುದ್ರ ನೀರನ್ನು ಮೋಡಗಳೆಂಬ ಕುಂಭಧಾರೆಯಲ್ಲಿ ಮೊಗೆಮೊಗೆದು ಅಭಿಷೇಕ ಮಾಡಿದವು!

ಮೇದಿನಿಯ ಮೇಲಿರುವ ಹಿಮಾಲಯ, ವಿಂಧ್ಯ, ಸಹ್ಯಾದ್ರಿ ಮೊದಲಾದ ಗಿರಿಶ್ರೇಣಿಗಳು ಅದರಿಂದ ತೋಯ್ದು ಹೋದವು. ದಂಡಕಾರಣ್ಯಗಳು, ಮಲೆಯ ನಾಡುಗಳು, ಬಯಲು ಸೀಮೆಗಳು ತಣಿದುವು.

ಗಂಗೆ ಮತ್ತು ಯಮುನೆ, ಕೃಷ್ಣೆ ಕಾವೇರಿ ಮತ್ತು ತುಂಗೆ ಮುಂತಾದ ಪೃಥ್ವಿಯ ನದೀ ಸಮೂಹಗಳು ಪರ್ವತ ಶಿರಗಳಲ್ಲಿ ಹುಟ್ಟಿ–ಅಭಿಷೇಕ ಜಲವು ಬಿಳಿಲುಗಳಂತೆ ಪ್ರವಾಹವಾಗಿ ಹರಿಯಿತು.

ನಿತ್ಯರಾಮಾಯಣದ ರಾಮಂಗೆ ನಿಚ್ಚಮುಂ ನಡೆವ ಪಟ್ಟೋತ್ಸವ ಸ್ತೋತ್ರಮಂ ಆಲಿಸದೊ!

ಅದನ್ನು ನೋಡುತ್ತ ನಾನು ರಸವಶನಾದೆನು. ಕಿವಿಗೆ ಮೆಲ್ಲನೆ ಮೃದುವಾಗಿ ಬಹುದೂರದಿಂದ ಎನ್ನುವಂತೆ ಸಾಗರ ಗಂಭೀರವಾದ ಒಂದು ಜಯಗಾಥೆಯ ಮಹಾನಾದವು ಕೇಳಿಸಿತು. ಗುರು ಕೃಪಾವಾಣಿಯು ಕರುಣೆಯಿಂದ ಹೀಗೆ ಹೇಳಿತು:

'ಕಂದಾ ಕೇಳು! ಮಾನವನ ಕಿವಿಯು ಈ ಸೃಷ್ಟಿ ಗೀತೆಯನ್ನು ಆಲಿಸಿ ತಿಳಿಯದು. ನಿತ್ಯ ರಾಮಾಯಣದ ರಾಮನಿಗೆ ನಿತ್ಯವೂ ನಡೆಯುವ ಪಟ್ಟಾಭಿಷೇಕೋತ್ಸವ ಸ್ತೋತ್ರವನ್ನು ಆಲಿಸು! ಸ್ಥಾವರ ಜಂಗಮ, ಜಡ ಜೀವ, ಚರ ಅಚರ, ಅಣುರೇಣು, ತೃಣಕಾಷ್ಠಗಳ ಕೋಟಿ ಕೋಟಿ ಕಂಠಗಳಿಂದ ಏಳುವ ಆನಂದ ಗೋಷ್ಠಿಗಾನವನ್ನು ಕೇಳು!'

ಪ್ರಕಟವಾಗಿ ಹೇಳಲಾಗದ, ಆದರೆ ಮನೋಗೋಚರವಾದ ಅಖಿಲ ಶಬ್ದಾಬ್ಧಿಯನ್ನು, ಸರ್ವ ಸಂಗೀತ ಯೋಗದ ಚರಮಸಿದ್ಧಿಯನ್ನು, ಶಿಲೆಗಳಲ್ಲಿ ಲೋಹ ಲೋಹಗಳಲ್ಲಿ, ಖಗ ಮೃಗಗಳ ಕಂಠಗಳಲ್ಲಿ, ಸಮಸ್ತ ಮಾನವರ ನಾನಾ ಸ್ವರ ಕಲಾ ವಿನ್ಯಾಸದಲ್ಲಿ ಮನುಷ್ಯ ಇಂದ್ರಿಯಗಳಿಗೆ ಪ್ರತ್ಯಕ್ಷವಾಗುತ್ತಿರುವ ಓಂಕಾರವನ್ನು–ಗುರು ಕೃಪೆಯಿಂದ ನಾನು ಆಲಿಸಿದೆನು! ಘನವಸ್ತುವು ದ್ರವವಾಗುವಂತೆ, ಉರಿಗೆ ಕರ್ಪುರವು ಕರಗುವಂತೆ, ನನ್ನ ಈ ಮಹಾ ಛಂದಸ್ ಕೃತಿಯ ಮಂಗಳ ಲಯ ಗತಿಯಂತೆ–ಗುರುವು ಓಂಕಾರದಲ್ಲಿ ಕರಗಿ ಹೋದನು!

ರಾಮಾವತಾರಕಿಂ ಗುರುತರ ತಾನೈಸೆ ರಾಮಾಯಣಾವತಾರಂ!

ಕವಿ ವಿಭೂತಿಗೆ ನಮೋ! ಕೃತಿ ವಿಭೂತಿಗೆ ನಮೋ! ದರ್ಶನಧ್ವನಿ ರಸಾಮೃತ ಪಾನದ ಆನಂದದಿಂದ ಲೋಕ ಶೋಕವನ್ನು ಅಳಿಸಿ, ಮೂರುಲೋಕಗಳಿಗೂ ತೃಪ್ತಿಯನ್ನು ತರುವ ಆನಂದ ತಪೋದೀಕ್ಷೆಯನ್ನು ಕೈಗೊಂಡು ಪ್ರಕಾಶಿಸುವ ರಸಋಷಿ, ಯೋಗಮತಿ ಸಹೃದಯ ವಿಭೂತಿಗೆ ನಮೋ!

ನಾನು ಯುಗ ಯುಗದಲ್ಲಿ ಸಂಭವಿಸುತ್ತೇನೆ ಎಂಬ ಭಗವಂತನ ದಿವ್ಯ ವಚನವು ನರರೂಪಕ್ಕೆ ಮಾತ್ರ ಮೀಸಲಾದುದೆ? ನರಸಿಂಹ, ಮತ್ಸ್ಯ, ಕೂರ್ಮಾದಿ ಪ್ರಾಣಿರೂಪಗಳಲ್ಲಿ ಆವಿರ್ಭವಿಸಿರುವುದು–ಅವನ ಲೀಲೆಯಿಂದ ಪ್ರತ್ಯೇಕವಾದುದಲ್ಲ. ರಾಮಾಯಣವು ರಾಮನಿಗೂ ಮೊದಲಲ್ಲವೆ? ಅದು ರಾಮನಿಗಿಂತ ಪೂರ್ವದ್ದು, ಹಿರಿದಾದುದು, ಮೈ ಆದುದು, ಮನೆಯಾದುದು ಅಲ್ಲವೆ? ರಾಮನಾಮದ ಮಹಿಮೆ ರಾಮನಿಗಿಂತಲೂ ಮಿಗಿಲು ಎನ್ನುವಂತೆ, ರಾಮಾವತಾರಕ್ಕಿಂತಲೂ ಮಿಗಿಲಾದುದು ರಾಮಾಯಣಾವತಾರ!

ಓಂ, ನಮೋ, ರಾಮಾವತಾರಕ್ಕಿಂತ ಎರಡರಷ್ಟು ಹೆಚ್ಚು ಎನ್ನುವಂತೆ, ಮೂಲ ವಿಗ್ರಹಕ್ಕೆ ಬದಲಾಗಿ ಕೆತ್ತಿದ ಉತ್ಸವ ಮೂರ್ತಿ ಅದರ ಪಡಿನೆಳಲು ಎನ್ನುವಂತೆ ನನ್ನಲ್ಲಿ ಈ 'ಶ್ರೀ ರಾಮಾಯಣ ದರ್ಶನಂ' ಕೃತಿರೂಪದ ರಾಮಾಯಣ ಅವತಾರವಾಗಿದೆ. ಇದನ್ನು ಸರ್ವ ಭಾಷಾಮಯೀ ಭಗವತಿಯ ಹೂವಿನಂತೆ ಕೋಮಲವಾದ ಕನ್ನಡದ ಸಿರಿಗುಡಿಯ ನುಡಿಯ ಕಣ್ಣಿನ ಪ್ರತಿಮೆಯಲ್ಲಿ ಕಡೆದು ಮೂಡಿಸಿರುವ ನಿತ್ಯರಾಮನಿಗೆ ಓಂ ನಮೋ, ಓಂ ನಮೋ, ಓಂ ನಮಃ! ಓಂ ಶಾಂತಿಶ್ಯಾಂತಿಶ್ಯಾಂತಿಃ !

❑

ಶ್ರೀರಾಮಾಯಣ ದರ್ಶನಂ ನಿಘಂಟು

ಶ್ರೀರಾಮಾಯಣ ದರ್ಶನಂ ನಿಘಂಟು

ಸಂಕ್ಷಿಪ್ತಗಳು

(ಅ). ಅವ್ಯಯ
(ಆಲಂ). ಆಲಂಕಾರಿಕವಾಗಿ
(ಕಾವ್ಯಮೀ). ಕಾವ್ಯಮೀಮಾಂಸೆ
(ಕ್ರಿ). ಕ್ರಿಯಾವಾಚಕ
(ಗು). ಗುಣವಾಚಕ
(ನಾ). ನಾಮವಾಚಕ
(ಭವಿಕೃ). ಭವಿಷ್ಯತ್ ಕೃದಂತ
(ಭೂತಕೃ). ಭೂತಕೃದಂತ
(ಭೂತನ್ಯೂ). ಭೂತನ್ಯೂನ
(ಸ). ಸರ್ವನಾಮ

ಅಂಕ (ನಾ). ತೊಡೆ (೧.೪–೧೭೨)

ಅಂಕುರ(ನಾ). ಮೊಳಕೆ; ಅಗೆ (೧.೧–೬೬೯)

ಅಂಕುಶ (ನಾ). ಆನೆಯನ್ನು ನಡಸುವಾಗ ಅದನ್ನು ಹದ್ದಿನಲ್ಲಿಡಲು ಉಪಯೋಗಿಸುವ ಆಯುಧ; ಸೃಣಿ (೧.೯–೪೯೫)

ಅಂಗಜ (ನಾ). ಮನ್ಮಥ (೧.೩–೩೨೨)

ಅಂಗನೆ (ನಾ). ಸುಂದರವಾದ ಅಂಗಗಳುಳ್ಳವಳು; ಹೆಂಗಸು (೧.೪–೨೫೪)

ಅಂಗುಲೀಯಕ (ನಾ). ಉಂಗುರ (೩.೪–೨೨೫)

ಅಂಗುಳೀಯ (ನಾ). ಉಂಗುರ (೨.೯–೫೬೦)

ಅಂಘ್ರಿ (ನಾ). ಪಾದ; ಕಾಲು; ಹೆಜ್ಜೆ (೧.೯–೩೨೧)

ಅಂಘ್ರಿಪ (ನಾ). ಪಾದದಿಂದ(ಎಂದರೆ ಬೇರಿನಿಂದ) ನೀರನ್ನು ಕುಡಿಯುವುದು; ಮರ; ಗಿಡ (೧.೯–೪೫೬)

ಅಂಚಲ, ಅಂಚಳ (ನಾ). (ಬಟ್ಟೆಯ,

ಮುಖ್ಯವಾಗಿ ಸೀರೆಯ) ಸೆರಗು (೧.೧೧-೨೯)

ಅಂಚೆ (ನಾ). ಹಂಸ; ಹಂಸ ಪಕ್ಷಿ (೧.೪-೫೧೫)

ಅಂಚೆದಿಪ್ಪುಳ್ (ನಾ). ಹಂಸಪಕ್ಷಿಯ ಗರಿಯ ನವಿರು (೧.೩-೫೦೧)

ಅಂಜಲಿ, ಅಂಜಳಿ, ಅಂಜುಳಿ (ನಾ). ಬೊಗಸೆ (೧.೪-೩೯೪), (೩.೫-೨೬೮)

ಅಂಡಲೆ(ಕ್ರಿ). ೧. ಹತ್ತಿರ ಬಂದು ಪೀಡಿಸು; ಕಾಡು; ಹಿಂಸೆಮಾಡು ೨. ಅಲೆದಾಡು (೧.೨-೧೫೩)

ಅಂತರ (ನಾ). ೧. ಮನಸ್ಸು; ಹೃದಯ (೧.೧೧-೪೧೦) ೨. ನಡುವಣ ಸ್ಥಳ; ಮಧ್ಯಭಾಗ (೧.೪-೬೬)

ಅಂತರಂಗ (ನಾ). ಒಳಭಾಗ; ಒಳಗು (೧.೧-೬೧೯) (೧.೧೦-೩೧೦)

ಅಂತರ್ಧಾನ (ನಾ). ಕಣ್ಮರೆಯಾಗುವುದು; ಅದೃಶ್ಯವಾಗುವುದು; ಮಾಯ ವಾಗುವುದು (೧.೧-೧೮೬)

ಅಂತ್ಯೇಷ್ಟಿ (ನಾ). ಸತ್ತವರಿಗಾಗಿ ಮಾಡುವ ಉತ್ತರಕ್ರಿಯೆ (೪.೧೦-೧೯೮)

ಅಂಧ (ನಾ). ಕುರುಡ; ಕಣ್ಣು ಕಾಣದವನು (೧.೫-೬೨)

ಅಂಬುದ (ನಾ). ನೀರನ್ನು ಕೊಡತಕ್ಕದ್ದು; ಮೋಡ (೨.೯-೩೨೫)

ಅಂಬುಧಿ (ನಾ). ನೀರುನಿಲ್ಲುವ ಸ್ಥಳ; ಸಮುದ್ರ; ಕಡಲು (೧.೪-೫)

ಅಂಭೋಧಿ (ನಾ). ಜಲಾಶಯ, ಸಮುದ್ರ; ಕಡಲು (೩.೯-೨೨)

ಅಕಶೇರು (ಗು). ಕಶೇರು ಇಲ್ಲದ; ಬೆನ್ನು ಮೂಳೆಯಿಲ್ಲದ (ಪ್ರಾಣಿ) (೨.೩-೩೮)

ಅಕ್ಕಟ, ಅಕಟ, ಅಕಟಾ, ಅಕ್ಕಟಾ (ಅ). ೧. ವಿಷಾದವನ್ನು ಸೂಚಿಸುವ, 'ಅಯ್ಯೋ' ಎಂಬ ಅರ್ಥವುಳ್ಳ, ಶಬ್ದ ೨. ಆಶ್ಚರ್ಯವನ್ನು ಸೂಚಿಸುವ ಶಬ್ದ (೨.೨-೨೪೪)

ಅಕ್ಷತ, ಅಕ್ಷತೆ (ಗು). ಮುರಿಯದ; ಮುಕ್ಕಾಗದ; ಗಾಯಗೊಳ್ಳದ (೩.೫-೨೬೩)

ಅಕ್ಷಯ (ಗು). ಕ್ಷಯವಿಲ್ಲದ; ನಾಶವಿಲ್ಲದ (೧.೯-೪೨೪)

ಅಕ್ಷುಬ್ಧ (ಗು). ಕ್ಷೋಭೆಯಿಲ್ಲದ; ಪ್ರಶಾಂತವಾದ (೧.೪-೧೯)

ಅಖರ್ವ (ಗು). ಅಲ್ಪವಲ್ಲದ; ಮಹತ್ತಾದ (೩.೭-೧೯೯)

ಅಗಂಗೊಳ್ (ಕ್ರಿ). ಒಳಕೊಳ್ಳು; ಸ್ವಾಧೀನ ಪಡಿಸಿಕೊ (೪.೬-೨೨೨)

ಅಗಮ (ಗು). ಚಲಿಸದ; ತಿರುಗಾಡದ (೧.೩-೫೩೩)

ಅಗುರ್ವು, ಅಗುರ್ಬು, ಗುರ್ವು, ಗುರ್ಬು (ನಾ). ಭಯಂಕರತೆ; ಉಗ್ರತೆ; ಭಯ (೧.೧೧-೪೦೨)

ಅಗೆ (ನಾ). ೧. ಮೊಳಕೆ; ಅಂಕುರ ೨. ಸಸಿ(೧.೧ – ೬೬೯)

ಅಗ್ಗಲಿಸು, ಅಗ್ಗಳಿಸು (ಕ್ರಿ). ಹೆಚ್ಚಿಸು; ದೊಡ್ಡದು ಮಾಡು; ಅತಿಶಯಪಡಿಸು (೧.೧೦-೨೯೮)

ಅಗ್ರ (ನಾ). ತುದಿ; ಮೇಲ್ಭಾಗ; ಶಿಖರ (೧.೫-೧೦೫)

ಅಗ್ರೇಸರ (ಗು). ಶ್ರೇಷ್ಠ; ಅತ್ಯುತ್ತಮ (೨.೧-೪೦೪)

ಅಘ (ನಾ). ಪಾಪ (೩.೯-೪೪೭)

ಅಚಲ (ನಾ). ಬೆಟ್ಟ (೩.೯-೪೦೦)

ಅಚಿನ್ನಿದ್ರೆ (ನಾ). ಜಡತೆ ತುಂಬಿದ ನಿದ್ದೆ; ಎಚ್ಚರುಗೊಳಿಸಲಾಗದ ನಿದ್ದೆ (೧೨-೨೨೯)

ಅಜನ (ನಾ). ಬ್ರಹ್ಮ (೩.೧೩-೩೦೯)

ಅಜಸ್ರಂ (ಅ). ಯಾವಾಗಲೂ; ಎಡೆಬಿಡದೆ; ಸತತವಾಗಿ (೨.೯-೨೨೯)

ಅಜಿಂಕ್ಯ (ಗು). ಗೆಲ್ಲಲಾಗದ; ಸೋಲಿಸಲಸಾಧ್ಯವಾದ (೨.೧-೧೨೩)

ಅಜಿನ (ನಾ). ೧. ಚರ್ಮ ೨. ಜಿಂಕೆಯ(ಚಿಗರೆಯ) ಚರ್ಮ (೧.೭-೩೦೦)

ಅಟನ (ನಾ). ತಿರುಗಾಟ; ಸಂಚಾರ; ಪ್ರಯಾಣ (೩.೧-೧೫)

ಅಟ್ಟು (ಕ್ರಿ). ಓಡಿಸು; ಹೊರಕ್ಕೆನೂಕು; ಬಲಾತ್ಕಾರದಿಂದ ಕಳಿಸು (೧.೬-೧೩೮)

ಅಟ್ಟು (ಕ್ರಿ). ಬೆನ್ನುಹತ್ತಿ ಹೋಗು; ಬೆಂಬತ್ತು (೧.೯-೪೫೪)

ಅಡಂಗು, ಅಡಗು (ಕ್ರಿ). ಮರೆಯಾಗು; ಮುಚ್ಚಿಹೋಗು, ಅದೃಶ್ಯವಾಗು; ಅವಿತುಕೊ; ಬಚ್ಚಿಟ್ಟುಕೊ (೨.೨-೩೮೪)

ಅಡಕು, ಅಡುಕು (ಕ್ರಿ). ಒಂದರ ಮೇಲೊಂದನ್ನು ಪೇರಿಸು, ರಾಶಿಹಾಕು, ತುಂಬು (೧.೬-೨೨೦)

ಅಡರ್, ಅಡರು (ಕ್ರಿ). ಮೇಲಕ್ಕೆ ಹತ್ತು; ಏರು; ಆರೋಹಿಸು (೧.೪-೧೩೫)

ಅಡರ್ಪು (ನಾ). ಊರೆ; ಆಸರೆ; ಆಧಾರ; ಅವಲಂಬನ (೪.೧೨-೪೦೨)

ಅಡಸು (ಕ್ರಿ). ೧. ಮೇಲೆಬೀಳು; ಮುತ್ತು; ಆಕ್ರಮಿಸು (೧.೫-೨೦೨) ೨. ಪ್ರಾಪ್ತವಾಗು; ಸಂಭವಿಸು (೨.೨-೩೯೮)

ಅಡಿ (ನಾ). ಗುರುಹಿರಿಯರ ವಿಷಯದಲ್ಲಿ ಗೌರವ ಸೂಚಕವಾಗಿ (ದೇವರು, ಸ್ವಾಮಿ ಎಂಬಂತೆ) ಉಪಯೋಗಿಸುವ ಶಬ್ದ (೪.೧-೧೧)

ಅಡಿಗಡಿಗೆ, ಅಡಿಗಡಿ (ಅ). ೧. ಒಂದೊಂದು ಹೆಜ್ಜೆಯಿಡುವಾಗಲೂ; ಹೆಜ್ಜೆ ಹೆಜ್ಜೆಗೂ ೨. ಮೇಲೆ ಮೇಲೆ; ಮತ್ತೆ ಮತ್ತೆ; ಆಗಾಗ್ಗೆ (೧.೮-೧೦)

ಅಣಂ, ಆಣಂ (ಅ). ಸ್ವಲ್ಪವೂ; ಕೊಂಚವೂ; ಎಳ್ಳಷ್ಟೂ (೨.೨-೪೯೯)

ಅಣಕ (ನಾ). ಕುಚೋದ್ಯ; ಅಪಹಾಸ್ಯ (೧.೧೧-೪೯)

ಅಣಕ (ನಾ). ಹುಡುಗಾಟಿಕೆ; ವಿನೋದ (೨.೨-೬-೬೮೫)

ಅಣಲ್, ಅಣಲು (ನಾ). ಬಾಯಿಯ ಒಳಭಾಗ; ಅಂಗಳು; ದವಡೆ (೪.೪-೧೨೪)

ಅಣಿಗೆಯ್, ಅಣಿಗೈ (ಕ್ರಿ). ಸಿದ್ಧಮಾಡು (೧.೩-೧೧೨)

ಅಣುಂಗಿ, ಅಣುಗಿ, ಅಣುಗೆ (ನಾ). ಮಗಳು (೧.೪-೩೧೩)

ಅಣುಗದಮ್ಮ (ನಾ). ಪ್ರೀತಿಪಾತ್ರನಾದ ತಮ್ಮ; ಅಚ್ಚುಮೆಚ್ಚಿನ ತಮ್ಮ (೧.೯-೩೮೭)

ಅಣುಗಿ (ನಾ). ಪ್ರೀತಿಗೆ ಪಾತ್ರಳಾದವಳು; ಸಖಿ; ಕೆಳದಿ (೧.೯-೮೫)

ಅಣ್ಮು, ಅಮ್ಮು (ನಾ). ಪೌರುಷ, ಪರಾಕ್ರಮ, ಸಾಹಸ (೨.೧-೨೭೪)

ಅತಿ (ಗು). ತುಂಬ ಹೆಚ್ಚಾದ; ಅತಿಶಯವಾದ (೧.೮-೬)

ಅತೀಂದ್ರಿಯ (ಗು). ಇಂದ್ರಿಯಗಳಿಗೆ ಗೋಚರವಾಗದ; ಇಂದ್ರಿಯಗಳಿಗೆ ಸಂಬಂಧಿಸದೆ ಇರುವ; ಸೂಕ್ಷ್ಮವಾದ; ಪರೋಕ್ಷವಾದ (೧.೭-೨೧೯)

ಅತೀತ (ಗು). ಮೀರಿದ (೧.೭-೧೬೧)

ಅತುಲ, ಅತುಳ (ಗು). ಹೋಲಿಕೆಯಿಲ್ಲದ, ಅಸಮಾನವಾದ;

ಎಣೆಯಿಲ್ಲದ (೨.೧–೧೯೮)

ಅದಟ, ಅದಟ್ಟ, ಅಧಟ (ನಾ). ಶೂರ; ಪರಾಕ್ರಮಿ (೨.೧–೧೧೭)

ಅದಟು, ಅಧಟು(ನಾ). ೧. ಪರಾಕ್ರಮ; ಶೌರ್ಯ; ಸತ್ತ್ವ (೧.೨ – ೫೨), (೨೦೧–೨೭೭)

ಅದಟು, ಅಧಟು (ನಾ). ಪರಾಕ್ರಮ, ಶೌರ್ಯ; ಸತ್ತ್ವ (೨–೧–೨೭೭)

ಅದ್ದು (ಕ್ರಿ). ಮುಳುಗಿಸು; ನೆನೆಯಿಸು (೧.೬–೬೨)

ಅದ್ರಿ (ನಾ). ಬೆಟ್ಟ; ಪರ್ವತ (೨.೨–೫೩೨)

ಅಧ್ವ (ನಾ). ದಾರಿ; ಹಾದಿ; ಮಾರ್ಗ; ರೀತಿ; ಕ್ರಮ (೧.೨–೨೦೮)

ಅಧ್ವಶ್ರಮ (ನಾ). ದಾರಿನಡೆದು ಆದ ಆಯಾಸ; ಪ್ರಯಾಣದ ಬಳಲಿಕೆ (೧.೨–೩೧೭)

ಅನಘ (ನಾ). ಪಾಪ ರಹಿತ (೩.೪–೬೧೭)

ಅನತ (ಗು). ಬಗ್ಗಿಲ್ಲದ; ನೆಟ್ಟಗಿರುವ (೪.೧೧–೩೯೫)

ಅನವರತ (ಗು). ಎಡೆಬಿಡದ; ನಿರಂತರವಾದ (೧.೧೧–೬೯)

ಅನಶನ, ನಿರಶನ (ನಾ). ಆಹಾರವಿಲ್ಲದಿರುವುದು; ಊಟಮಾಡದಿರುವುದು; ಉಪವಾಸ (೨.೭–೧೩೪)

ಅನಾತ್ಮ (ನಾ). ೧. ಆತ್ಮವಿಲ್ಲದುದು. ೨. ಆತ್ಮವಲ್ಲದುದು; ಆತ್ಮನಿಗಿಂತ ಬೇರೆಯಾದುದು; ಜಡವಸ್ತು. (ಅನಾತ್ಮರು = ಆತ್ಮಜ್ಞಾನವಿಲ್ಲದವರು) (೧.೧೦–೨೦೧)

ಅನಿತ್ತು, ಅನಿತು (ಅ). ಪರಿಣಾಮ ಸೂಚಿಸುವ ಶಬ್ದ; ಅಷ್ಟು

ಅನಿಬರ್, ಅನಿಬರು. = ಅಷ್ಟು ಜನ; ಅಷ್ಟು ಮಂದಿ (೧.೩–೧೬೫)

ಅನಿಮಿತ್ತ ಶೋಕ (ನಾ). ನಿಷ್ಕಾರಣವಾದ ದುಃಖ,–ಸಂತಾಪ (೧.೨–೨೩೨)

ಅನಿಶಂ (ಅ). ಯಾವಾಗಲೂ; ಎಡೆಬಿಡದೆ; ನಿರಂತರವಾಗಿ (೨.೯–೫೧)

ಅನೀಕ (ನಾ). ಸೈನ್ಯ (೩.೧೩–೯೪)

ಅನೀಕಿನಿ (ನಾ). ಸೈನ್ಯ (೩.೬–೧೯೨)

ಅನುಕಂಪನ (ನಾ). ಅನುಸರಿಸಿದ ಸ್ಪಂದನ; ಅನುಸರಿಸಿ ಅದುರುವಿಕೆ (೧.೯–೨೦೭)

ಅನುಭೂತಿ (ನಾ). ಅನುಭಾವ; ದರ್ಶನ; ಸಾಕ್ಷಾತ್ಕಾರ (೧,೨–೨೬೩)

ಅನುರಕ್ತಿ (ನಾ). ಒಲವು; ಪ್ರೇಮ; ಗಾಢವಾದ ಆಸಕ್ತಿ (೪.೧೦–೧)

ಅನುರಣಿತ (ನಾ). ಅನುಸರಿಸಿ ಶಬ್ದಮಾಡುವುದು (೧.೮–೪೮)

ಅನೂರು (ನಾ). ೧. ತೊಡೆಯಿಲ್ಲದವನು. ೨. ಅರುಣ, ಸೂರ್ಯನ ಸಾರಥಿ (೪.೨–೨)

ಅನ್ನಯ, ಅನ್ನೆಯ (ನಾ). ಅನ್ಯಾಯ (೨.೧–೯೮)

ಅನ್ವಯ (ನಾ). ವಂಶ; ಕುಲ (೪.೧೧–೨೮೫)

ಅಪರಕ್ರಿಯೆ (ನಾ). ಸತ್ತವರಿಗಾಗಿ ನಡೆಸುವ ಸಂಸ್ಕಾರ; ಉತ್ತರಕ್ರಿಯೆ; ಅಂತ್ಯಸಂಸ್ಕಾರ (೪.೧೦–೩೫೦)

ಅಪರಾಬ್ಧಿ, ಅಪರಾಂಬುಧಿ (ನಾ). ಪಶ್ಚಿಮ ಸಮುದ್ರ (೩.೧೩–೮೦)

ಅಪಶಕುನ (ನಾ). ಕೆಟ್ಟಶಕುನ; ಅಶುಭ ಶಕುನ (೧.೧–೫೮೩)

ಅಪಸಹ್ಯ (ಗು). ಅಸಹ್ಯವಾದುದು; ಸಹಿಸಲಾಗದುದು (೧.೪–೨೯೮)

ಅಪ್ರತಿಹತ (ಗು). ತಡೆಯಿಲ್ಲದ; ನಿರ್ವಿಘ್ನವಾದ;

ಸೋಲಿಲ್ಲದ (೨.೫-೩೮೬)
ಅಪ್ರಾಕೃತ (ಗು). ೧. ಪಾಮರನಲ್ಲದ; ತಿಳಿದ ೨. ಅಸಾಧಾರಣವಾದ; ವಿಶೇಷವಾದ (೧.೭-೨೫೮)
ಅಪ್ರಾಕೃತ (ನಾ). ಪ್ರಕೃತಿಯನ್ನು ಮೀರಿದವನು; ದೇವರು (೨.೨-೩೪೦)
ಅಬ್ಜ (ನಾ). ಐರಾವತ (೩.೩-೨೬೨)
ಅಬ್ಜ (ನಾ). ನೀರಿನಲ್ಲಿ ಹುಟ್ಟಿದ್ದು; ತಾವರೆ; ಕಮಲ (೧.೬-೨೮೩)
ಅಬ್ಬೆ (ನಾ). ತಾಯಿ; ಅಮ್ಮ (೧.೫-೨೦೪)
ಅಭಿಚಾರ (ನಾ). ಮಂತ್ರ ತಂತ್ರಗಳಿಂದ ಇತರರಿಗೆ ಕೇಡನ್ನು ಬಯಸಿ ಮಾಡುವ ಹಿಂಸಾಕರ್ಮ (೩.೫-೬೩)
ಅಭಿಜ್ಞಾನ (ನಾ). ಜ್ಞಾಪಕಕ್ಕೆ ತರುವ ಮಾತು, ಕತೆ, ವಸ್ತು ಮುಂತಾದ ಕುರುಹು (೨.೯-೫೫೪)
ಅಭಿವಾಂಛೆ (ನಾ). ಉತ್ಕಟವಾದ ಅಪೇಕ್ಷೆ; ಆಸೆ; ಬಯಕೆ (೧.೧-೨೦೭)
ಅಭಿಶಾಪ (ನಾ). ಉಗ್ರಶಾಪ (೧.೪-೨೧೦)
ಅಭಿಸಂಧಿ (ನಾ). ಗುರಿ; ಉದ್ದೇಶ; ಸಂಕಲ್ಪ (೪.೪-೩೪೨)
ಅಭೀಪ್ಸೆ (ನಾ). ಬಯಕೆ; ಅಭಿಲಾಷೆ (೧.೧-೨೬೨)
ಅಭೀಷ್ಟೆ, ಅಭೀಷ್ಟ (ನಾ). ಪ್ರಿಯವಾದುದು; ಬಯಸಿದುದು (೧.೩-೩೯೦)
ಅಭೌತ (ನಾ). ಲೋಕೋತ್ತರವಾದುದು (೨.೧೧-೧೦೧)
ಅಭ್ಯಂತರ (ನಾ). ಒಳಗು; ನಡುವೆ; ಅಂತರಾಳ (೨.೨-೫೪೧)
ಅಭ್ಯಾಗತ (ನಾ). ಅನಿರೀಕ್ಷಿತವಾಗಿ ಮನೆಗೆ ಬಂದ ಅತಿಥಿ (೧.೧೦-೩೯೨)
ಅಭ್ರಮಂಡಲ (ನಾ). ಗಗನ ಪ್ರದೇಶ; ಆಕಾಶ (೨.೯-೧೬೯)
ಅಮಮ (ಅ). ಮೆಚ್ಚಿಗೆ, ಆಶ್ಚರ್ಯ, ಸಮಾಧಾನ ಮುಂತಾದ ಭಾವಗಳನ್ನು ಸೂಚಿಸುವ ಅವ್ಯಯ (೧.೫-೫೨)
ಅಮರೆ, ಅಮರಾವತಿ (ನಾ). ಇಂದ್ರನಗರ (೧.೨-೬೪೧)
ಅಮರ್, ಅಮರು, ಅಮಱ್ (ಕ್ರಿ). ಉಂಟಾಗು; ಒದಗಿಬರು (೧.೬-೨೮೫)
ಅಮರ್ಕೆ, ಅಮರಿಕೆ (ನಾ). ಭದ್ರವಾಗಿ ಸೇರಿರುವುದು; ಬೆಸುಗೆ (೨.೧-೨೧೪)
ಅಮರ್ಚು, ಅವುಚು (ಕ್ರಿ). ಭದ್ರವಾಗಿ ಹಿಡಿ (೨.೨-೫೭೨)
ಅಮರ್ತ್ಯ (ನಾ). ದೇವತೆ (೩.೧೩-೧)
ಅಮರ್ತ್ಯದೀಪ್ತಿ (ನಾ). ದೈವೀ ತೇಜಸ್ಸು (೪.೪-೨೫೫)
ಅಮರ್ದು (ನಾ). ಅಮೃತ; ಸುಧೆ; ಪೀಯೂಷ (೩.೧-೭೩೮)
ಅಮರ್ಷಿ (ನಾ). ಕೋಪವುಳ್ಳವನು, ಕುಪಿತನಾಗಿರುವವನು (೪.೩-೨೨೮)
ಅಮಲ (ಗು). ಕೊಳೆಯಿಲ್ಲದ; ನಿರ್ಮಲವಾದ (೧.೪-೩೮೨)
ಅಮೇಧ್ಯ (ಗು). ಅಶುದ್ಧವಾದ; ಕೊಳಕಾದ; ಅಪವಿತ್ರವಾದ (೩.೩-೨೧೭)
ಅಮೇಯ (ಗು). ಅಳೆಯಲಾಗದ; ಎಣಿಕೆಗೆ ಮೀರಿದ (೩.೬-೨೩)
ಅಯನ (ನಾ). ಪ್ರದೇಶ; ವಾಸಸ್ಥಳ (೧.೧೦-೩೬೬)
ಅಯೋನಿಜೆ (ನಾ). ೧. ಯೋನಿಯಲ್ಲಿ ಹುಟ್ಟದವಳು ೨. ಸೀತೆ (೧.೭-೩೨೧)

ಅಯ್ಕಿಲ್, ಐಕಿಲ್ (ನಾ). ೧. ಚಳಿ; ಶೀತ ೨. ಹಿಮ; ಮಂಜು (೧.೧೧–೧೩೬)

ಅಯ್ದೆ (ನಾ). ಸುವಾಸಿನಿ; ಸುಮಂಗಲಿ (೧.೭–೧೮)

ಅಯ್ದೆತನ, ಎಯ್ದೆತನ, ಐದೆತನ (ನಾ). ಸುಮಂಗಲಿಯಾಗಿರುವಿಕೆ. (೨.೬–೨೦೫)

ಅರ (ನಾ). ಧರ್ಮ, ನ್ಯಾಯ (೧.೪–೧೫೦)

ಅರತ, ಆರು (ಕ್ರಿ). ಒಣಗು; ಬತ್ತು (೧.೪–೪೯೪)

ಅರಳ್, ಅಲರು (ನಾ). ಹೂವು; ಪುಷ್ಪ (೧.೩–೧೧೭)

ಅರಾಜಕ (ಗು). ರಾಜನಿಲ್ಲದಿರುವ ಸ್ಥಿತಿ; ಅವ್ಯವಸ್ಥೆ; ಗೊಂದಲ (೧.೫–೨೫೭)

ಅರಾತಿ (ನಾ). ಹಗೆ; ಶತ್ರು (೪.೯–೧೩೩)

ಅರಿ (ಕ್ರಿ). ಕತ್ತರಿಸು, ಕಡಿದುಹಾಕು; ಕೊಯ್ಯು (೧.೧೧–೪೦೫)

ಅರಿಂದಮ (ನಾ). ಶತ್ರುಗಳನ್ನು ದಮನಮಾಡುವವನು (೨.೫–೨೮೪)

ಅರಿಕೆ (ನಾ). ಬಿನ್ನಹ; ವಿಜ್ಞಾಪನೆ(೧.೧–೨೬೦)

ಅರಿಲ್ (ನಾ). ನಕ್ಷತ್ರ; ಚುಕ್ಕಿ; ತಾರೆ (೧.೩–೬೪)

ಅರಿಲ್ವಟ್ಟೆ (ನಾ). ನಕ್ಷತ್ರಮಾರ್ಗ; ಆಕಾಶ (೩.೧–೩೮೫)

ಅರುಹು (ಕ್ರಿ). ತಿಳಿಸು, ಬಿನ್ನವಿಸು; ಮನಸ್ಸಿಗೆ ಮುಟ್ಟುವಂತೆ ಮಾಡು (೨.೨–೨೮೨)

ಅರೆ (ನಾ). ಕಲ್ಲು ಬಂಡೆ; ದೊಡ್ಡಶಿಲೆ; ಕಲ್ಲುಗುಂಡು (೧.೫–೨೧೯)

ಅರ್ಚಿಸು, ಅಚ್ಚಿಸು (ಕ್ರಿ). ಪೂಜಿಸು, ಆರಾಧಿಸು, ಗೌರವಿಸು (೨.೧–೧೬)

ಅರ್ಣವ (ನಾ). ಸಮುದ್ರ (೧.೯–೯)

ಅರ್ತಿ, ಅಳ್ತಿ (ನಾ). ಪ್ರೀತಿ; ಆಸಕ್ತಿ (೨.೨–೪೦)

ಅರ್ಭಕ (ನಾ). ಮೊಲೆಗೂಸು; ಎಳೆಯ ಮಗು (೧.೯–೨೪೬)

ಅರ್ವಿ, ಅಬ್ಬಿ, ಅರ್ಬಿ (ನಾ). ಬೆಟ್ಟದಿಂದ ಬೀಳುವ ನದಿ; ನೀರಿನ ಝರಿ; ಜಲಪಾತ (೧.೪–೨೯೦)

ಅಱಗುಲಿ, ಅರಗುಲಿ (ನಾ). ಧರ್ಮವನ್ನು ನಾಶಮಾಡುವ ವ್ಯಕ್ತಿ; ಧರ್ಮದ್ರೋಹಿ (೨.೩–೨೦೩)

ಅಱಸು, ಅರಸು (ಕ್ರಿ). ಹುಡುಕು; ಬೆದಕು; ಅನ್ವೇಷಣೆಮಾಡು (೧.೬–೧೯೩)

ಅಱಪು, ಅರುಪು, ಅರುಹು (ಕ್ರಿ). ತಿಳಿಸು; ಬಿನ್ನವಿಸು (೧.೭–೩೫೪)

ಅಱೆಯಟ್ಟು, ಅರೆಯಟ್ಟು (ಕ್ರಿ). ಬೆನ್ನಟ್ಟಿಹೋಗು (೨.೪–೩೭)

ಅಲಂಪು (ನಾ). ಪ್ರೀತಿ; ಸಂತೋಷ; ಸಂಭ್ರಮ (೧.೨–೬೮೦)

ಅಲಂಪು (ನಾ). ಉತ್ಕಟವಾದ ಇಚ್ಛೆ; ಬಹಳವಾದ ಆಸೆ (೨.೬–೨೯೧)

ಅಲಕೆ (ನಾ). ಕುಬೇರನ ರಾಜಧಾನಿ, ಅಳಕಾನಗರ (೧.೨–೬೪೧)

ಅಲಗು (ನಾ). ಕತ್ತಿ, ಚಾಕು, ಚೂರಿ ಮುಂತಾದ ಆಯುಧಗಳ ಹರಿತವಾದ ಅಂಚು, –ಬಾಯಿ (೧.೩–೫೩೧)

ಅಲರು, ಅರಳು (ಕ್ರಿ). ವಿಕಾಸವಾಗು; ಅಗಲವಾಗು; ಬಿರಿ; ದೊಡ್ಡದಾಗು (೧.೭–೨೫೭)

ಅಲರ್ವಕ್ಕಿ, ಅರಲ್ವಕ್ಕಿ, ಅಲರುವಕ್ಕಿ (ನಾ). ಹೂವಿನ ರಸವನ್ನು ಕುಡಿದು

ಜೀವಿಸುವ ಹಕ್ಕಿ; ತುಂಬಿ; ಭ್ರಮರ (೧.೭–೧೧೧)

ಅಲಾತಚಕ್ರ (ನಾ). ಕೊಳ್ಳಿಯನ್ನು ವೇಗವಾಗಿ ತಿರುಗಿಸುವುದರಿಂದ ದುಂಡಗೆ ಕಾಣುವ ಚಕ್ರದಂತಹ ಆಕೃತಿ; ಕೊಳ್ಳಿಯಿಂದ ಕಲ್ಪಿತವಾದ ವೃತ್ತಾಕಾರ (೨.೧೦–೧೦೦೬)

ಅಲೆ (ನಾ). ಹಿಂಸೆ; ತೊಂದರೆ; ಕಾಟ (೧.೧೦–೪೫)

ಅಲ್ಪತೆ (ನಾ). ಅಲ್ಪತನ (೧.೧–೩೦೬)

ಅವಚರು (ಕ್ರಿ). ಬೇಸರಪಡು; ಜುಗುಪ್ಸೆಹೊಂದು, ಅವಚತ್ತು, ಅವರ್ಚತು (ಭೂತಕೃ) (೧.೪–೨೭೬)

ಅವತಂಸ (ನಾ). ಆಭರಣ; ಒಡವೆ(೨.೫–೨೬೬)

ಅವಧಿ (ನಾ). ಗಡು, ಮೇರೆ, ಕೊನೆ, ಕಾಲ ದೇಶಗಳ ಪರಿಮಿತಿ (೧.೧೦–೫೦)

ಅವನತ (ಗು). ಬಾಗಿದ; ಬಗ್ಗಿದ; ನಮಸ್ಕರಿಸಿದ (೨.೯–೪೨೦)

ಅವನಿ (ನಾ). ಭೂಮಿ (೧.೧೧–೩೦೫)

ಅವನಿಜ (ನಾ). ಮರ, ಗಿಡ (೨.೬–೧೩೪)

ಅವನಿರುಹ (ನಾ). ಭೂಮಿಯಲ್ಲಿ ಹುಟ್ಟಿದ್ದು; ಮರ; ಗಿಡ (೨.೧–೧೩೧)

ಅವರಜ (ನಾ). ತರುವಾಯ ಹುಟ್ಟಿದವನು; ತಮ್ಮ (೧.೪–೧೨೮)

ಅವಸರ (ನಾ). ಅಗತ್ಯ; ಅವಶ್ಯಕತೆ (೨.೯–೩೦೮)

ಅವಿದ್ಯೆ (ನಾ). ಮಾಯಾ ಪಂಚಕದಲ್ಲಿ ಒಂದು (೧.೩–೫೦೬)

ಅವಿನ್ನಾಣ, ಅವಿನಾಣ (ನಾ). ಗುರುತು; ಕುರುಹು (೩.೪–೨೯)

ಅವುಂಚು, ಕವಿಚು, ಕೌಂಚು, ಕೌಚು(ಕ್ರಿ). ಹೊಂದಿಸು; ಆವರಿಸು; ಮುಚ್ಚು (೨.೪–೧೮)

ಅವುಡುಗಚ್ಚು, ಔಡುಗಚ್ಚು (ಕ್ರಿ). (ಹಲ್ಲುಗಳಿಂದ) ತುಟಿಯನ್ನು ಕಚ್ಚು; ಹಲ್ಲುಮುಡಿಕಚ್ಚು (೨.೬–೭೮)

ಅವ್ವಳಿಸು (ಕ್ರಿ). ಮೇಲೆ ಬೀಳು; ಆಕ್ರಮಿಸು (೧.೨–೫೮೪)

ಅಶನಿ (ನಾ). ಸಿಡಿಲು (೧.೫–೩೭)

ಅಶ್ರು (ನಾ). ಕಣ್ಣೀರು (೧.೬–೫೨)

ಅಶ್ರುರಸ (ನಾ). ಕಣ್ಣೀರು (೧.೧–೨)

ಅಸದಳ (ನಾ). ಅಸಾಧ್ಯ; ಅಶಕ್ಯ; ಅತಿಶಯ (೧.೫–೨೭೨)

ಅಸಿ (ನಾ). ಕತ್ತಿ; ಖಡ್ಗ (೧.೧೦–೧೭೧)

ಅಸಿ, ಅಸಿಯ (ಗು). ಸಣ್ಣದಾದ; ಚಿಕ್ಕದಾದ; ತೆಳ್ಳಗಿರುವ; ಸೂಕ್ಷ್ಮವಾದ., ಕೃಶವಲ್ಲದ; ದೊಡ್ಡದು ಅಸಿಯಲ್ತು = ಕೃಶವಲ್ಲ; ದೊಡ್ಡದು.(೨.೬–೨೯)

ಅಸಿತ (ಗು). ಬಿಳುಪಲ್ಲದ; ಕಪ್ಪಾದ (೧.೫–೧೨೧)

ಅಸು (ನಾ). ೧. ಪ್ರಾಣ; ಜೀವ; ಉಸಿರು (೧.೩–೪೧೩) ೨. ಮನಸ್ಸು; ಹೃದಯ (೧.೮–೯)

ಅಸುಗೆ, ಅಸುಕೆ (ನಾ). ಅಶೋಕವೃಕ್ಷ (೧.೨–೫೨೯)

ಅಸ್ತಗಿರಿ, ಅಸ್ತಾದ್ರಿ (ನಾ). ಸೂರ್ಯನು ಮುಳುಗಿ ಮರೆಯಾಗುವಂತೆ ತೋರುವ ಪರ್ವತ; ಪಶ್ಚಿಮ ದಿಕ್ಕಿನ ಪರ್ವತ (೧.೯–೫೪೪)

ಅಸ್ತಾವಸ್ಥೆ (ನಾ). ಪ್ರಾಣಹೋಗುವ ಸ್ಥಿತಿ; ತುಂಬ ಕಷ್ಟದ ಸ್ಥಿತಿ (೪.೩–೫೯)

ಅಸ್ಫುಟ (ಗು). ಸ್ಫುಟವಲ್ಲದ; ಸ್ಪಷ್ಟವಾಗಿಲ್ಲದ; ವ್ಯಕ್ತವಾಗಿ ತೋರದ (೧.೧೧–

೨೧೮)
ಅಹರ್ಮುಖ (ನಾ). ಮುಂಜಾವು; ಬೆಳಗಿನ ಜಾವ (೪.೧–೧೨೯)
ಅಹಿ (ನಾ). ಹಾವು (೩.೧೪–೧೯೬)
ಅಹೀಂದ್ರ (ನಾ). ನಾಗರಾಜ (೧.೩–೪೪೪)
ಅಳಲ್, ಅಳಲು (ಕ್ರಿ). ದುಃಖಿಸು; ಶೋಕಿಸು; ವ್ಯಥೆಪಡು (೧.೪–೪೨)
ಅಳಲ್ಕೆ, ಅಳಲಿಕೆ (ನಾ). ವ್ಯಸನ; ದುಃಖ (೧.೪–೨೪೭)
ಅಳಲ್ವೆಂಕೆ, ಅಳಲುರಿ (ನಾ). ದುಃಖದ ಬೇಗೆ; ಅಳಲಬೆಂಕಿ (೧.೫–೪೬)
ಅಳವು (ನಾ). ಶಕ್ತಿ; ಸಾಮರ್ಥ್ಯ; ಪರಾಕ್ರಮ (೧.೨–೫೨೧)
ಅಳಿ (ಕ್ರಿ). ಕೆಡು; ನಾಶವಾಗು; ಸಾಯಿ (೧.೬–೬೨)
ಅಳಿ (ನಾ). ಅಲ್ಪತನ; ಹೀನತನ (೧.೧೧–೩೮೧)
ಅಳಿತೇಜಸ (ನಾ). ಹೀನವಾದ ತೇಜಸ್ಸುಳ್ಳವನು; ತೇಜಗೆಟ್ಟವನು; ಕಾಂತಿಹೀನ (೧.೪–೩೫೩)
ಅಳಿವಗೆ (ನಾ). ಅಲ್ಪನಾದ ಶತ್ರು (೧.೮–೧೭)
ಅಳುಪು (ಕ್ರಿ). ೧. ನಾಶವಾಗುವಂತೆ ಮಾಡು; ಹಾಳುಮಾಡು; ಕೆಡಿಸು (೧.೨–೨೯೪) ೨. ಬಯಸು; ಕಾಮಿಸು; ಆಸೆಪಡು (೧.೬–೬೧), (೨.೩–೨೦೩)
ಅಳುರು (ಕ್ರಿ). ಸುಡು; ದಹಿಸು (೨.೨–೬೩೧)
ಅಳುರ್, ಅಳುರು (ಕ್ರಿ). ಆವರಿಸು; ವ್ಯಾಪಿಸು; ಹರಡು (೨.೨–೭೫೩)
ಅಳ್ಕಜ, ಅಕ್ಕಜ, ಅಕ್ಕದ (ನಾ). ಆಶ್ಚರ್ಯ; ಸೋಜಿಗ; ಬೆರಗು (೧.೫–೧೯೯)
ಅಳ್ಕರೆ (ನಾ). ಪ್ರೀತಿ; ಆದರ (೧.೩–೩೦೨)
ಅಳ್ಕು, ಅಳುಕು (ಕ್ರಿ). ಹೆದರು; ಭಯಪಡು (೧.೬–೧೫೦)
ಅಳ್ಕರೆ ವೊಗಳ್ಕೆ (ನಾ). ಪ್ರೀತಿಯಿಂದ ಕೂಡಿದ ಹೊಗಳಿಕೆ; ಆದರದಿಂದ ಕೂಡಿದ ಕೊಂಡಾಟ (೨.೧೦–೧೦೪೧)
ಅಳ್ದು, ಅದ್ದು, ಅರ್ದು (ಕ್ರಿ). ಮುಳುಗಿಸು; ನೆನೆಯಿಸು (೧.೩–೫೬)
ಅಳ್ಳೆ (ನಾ). ಹೊಟ್ಟೆಯ ಒಂದು ಪಕ್ಕ; ಪಕ್ಕೆ (೧.೫–೧೫೦)
ಅಟಿಲ್, ಅಳಲು (ನಾ). ದು:ಖ; ಶೋಕ; ಪ್ರಲಾಪ (೧.೬–೧೯೭)
ಅಟಿವಗೆ (ನಾ). ಹೀನವಾದ ಯೋಚನೆ; ಅಲ್ಪವಾದ ಬಗೆ (೧.೬–೩೨)

ಆಂಕೆಗೊಳ್ (ಕ್ರಿ). ಎದುರಿಸು; ಪ್ರತಿಭಟಿಸು (೩.೯–೩೪೯)
ಆಂತು, ಆನ್ (ಕ್ರಿ). ಧರಿಸು; ವಹಿಸು; ಕೈಕೊಳ್ಳು; ಹೊಂದು; ಪಡೆ (೧.೧ – ೩೪೫)
ಆಕರ್ಣಿಸು (ಕ್ರಿ). ಕಿವಿಯಿಂದ ಕೇಳು; ಆಲಿಸು (೧.೨–೩೩) (೧.೩–೪೫)
ಆಕಳಿಕೆ, ಆಗುಳ್ (ನಾ). ತೂಕಡಿಕೆ, ನಿದ್ರೆ, ಅಸ್ವಸ್ಥತೆ ಬೇಸರ ಮುಂತಾದುವುಗಳಲ್ಲಿ 'ಆ' ಎಂದು ಅಗಲವಾಗಿ ಬಾಯಿ ಬಿಚ್ಚಿ ಮತ್ತೆ ಮುಚ್ಚಿಕೊಳ್ಳುವ ಒಂದು ಬಗೆಯ ಕ್ರಿಯೆ; ಆಗುಳಿಸುವುದು (೧.೬–೧೭೫)
ಆಕುಲೆ, ಆಕುಳೆ (ನಾ). ಚಿಂತೆಗೆ ಒಳಗಾದವಳು; ದುಃಖಕ್ಕೆ

ಈಡಾದವಳು (೧.೩-೪೭೧)

ಆಖ್ಯಾತ (ಗು). ಪ್ರಸಿದ್ಧವಾದ (೧.೪-೫೭೪)

ಆಗ್ರಹ (ನಾ). ಮೇಲೆ ಬೀಳುವುದು; ಆಕ್ರಮಣ (೨.೭-೨೫೭)

ಆಘೂರ್ಣಿತ (ಗು). ಸುತ್ತಿಸಲ್ಪಟ್ಟ; ತಿರುಗಿಸಲ್ಪಟ್ಟ (೩.೯-೫೩)

ಆಜಿ (ನಾ). ಯುದ್ಧ; ಕದನ (೩.೧೪-೧೪೫)

ಆಜ್ಯಾಹುತಿ (ನಾ). ತುಪ್ಪದಿಂದ ಮಾಡುವ ಹೋಮ; ಅಗ್ನಿಗೆ ತುಪ್ಪವನ್ನು ಅರ್ಪಿಸುವುದು (೧.೧೦-೪೧೪)

ಆಡಿತ (ನಾ). ಆಡಿದ್ದು (೧.೫-೪೫)

ಆಡುಂಬೊಲ (ನಾ). ಆಟದ ಬಯಲು; ಕ್ರೀಡಾಂಗಣ (೧.೧೦-೨೩೭)

ಆಣ್ಮ, ಆಳ್ಮ (ನಾ). ಒಡೆಯ; ಯಜಮಾನ; ಗಂಡ; ಪ್ರಭು (೧.೨ -೨೫೪)

ಆದ್ಯ (ಗು). (ಸಮಾಸಗಳಲ್ಲಿ, ಬಹುವಚನಗಳಲ್ಲಿ ಮಾತ್ರ) ಮುಂತಾದವರು; ಮುಂತಾದುವು (೧.೨-೨೬)

ಆನಕ (ನಾ). ಭೇರಿ, ದುಂದುಭಿ; ನಗಾರಿ; ತಮಟೆ (೩.೯-೪೧೭; ೪.೨-೮೪)

ಆನತೆ (ನಾ). ಬಾಗಿದವಳು; ನಮಸ್ಕರಿಸಿದವಳು (೪.೧೧-೩೯೫)

ಆನೀಕಿನಿ (ನಾ). ಒಂದು ಅಕ್ಷೌಹಿಣಿಯಲ್ಲಿ ಹತ್ತನೆಯ ಒಂದು ಅಂಶದಷ್ಟು ಸೈನ್ಯ; ೨೧೮೭ ಆನೆ, ೨೧೮೭ ರಥ, ೬೫೬೧ ಕುದುರೆ, ೧೦,೯೩೫ ಕಾಲಾಳು ಇರುವ ಸೈನ್ಯದ ಪ್ರಮಾಣ. (೩.೧೦-೧೮)

ಆನು (ಕ್ರಿ). ತಡೆ; ನಿಲ್ಲು; ಸೈರಿಸು; ತಡೆದುಕೊ; ತಾಳು; ಆಶ್ರಯಿಸು (೧.೬-೧೦೭)

ಆನು (ಕ್ರಿ). ಹಿಡಿ (೧.೮-೪)

ಆಪಣ (ನಾ). ಅಂಗಡಿ; ಪೇಟೆ (೪.೪-೭)

ಆಪಾದ ಮಸ್ತಕ (ಅ). ಕಾಲಿನಿಂದ ಹಿಡಿದು ತಲೆಯವರೆಗೆ; ಅಡಿಯಿಂದ ಮುಡಿಯವರೆಗೆ (೧.೨-೫೨೦)

ಆಪೋಶನ, ಆಪೋಷಣ (ನಾ). ಊಟಕ್ಕೆ ಮೊದಲೂ ಊಟದ ನಂತರವೂ ಮಂತ್ರಪೂರ್ವಕವಾಗಿ ಅಂಗೈಯ ನೀರನ್ನು ಹೀರುವುದು; ಹಾಗೆ ಹೀರುವ ನೀರು (೩.೫-೧೫೯)

ಆಭೀಲ, ಆಭೀಳ (ಗು). ಹೆದರಿಕೆಯನ್ನುಂಟು ಮಾಡುವ; ಭಯಂಕರವಾದ (೧.೧೦-೪೩೩)

ಆಮೋದ (ನಾ). ೧. ಸಂತೋಷ; ಆನಂದ; ಸುಖ (೧.೯-೪೭೫) ೨. ಸುವಾಸನೆ; ಪರಿಮಳ (೧.೫-೧೫೬)

ಆಯ (ನಾ). ಒಳಗು; ಮರ್ಮ; ರಹಸ್ಯ (೨.೯-೩೫೫)

ಆಯತ (ಗು). ಅತಿಶಯ; ಹೆಚ್ಚಳ; ಆಧಿಕ್ಯ (೪.೪-೪೨)

ಆಯತ (ನಾ). ಸಿದ್ಧ; ಸನ್ನದ್ಧ (೨.೯-೨೩೮)

ಆಯು (ನಾ). ಜೀವಿತದ ಅವಧಿ; ಆಯುಷ್ಯ (೧.೧೧-೧೧೦)

ಆರ್, ಆರು (ಕ್ರಿ). ಗಟ್ಟಿಯಾಗಿ ಕೂಗು; ಗರ್ಜಿಸು; ಆರ್ಭಟಿಸು; ಆರ್ದು (ಭೂತನ್ಯೂ) (೪.೫-೨೭೫)

ಆರ್ತೆ (ನಾ). ಕಷ್ಟಕ್ಕೆ ಗುರಿಯಾದವಳು; ದುಃಖಿತೆ (೧.೪-೩೨೦)

ಆರ್ದ್ರ (ಗು). ಆಸಕ್ತವಾದ; ಮಗ್ನವಾದ (೧.೭-೨೨೯)

ಆರ್ಪು (ನಾ). ೧. ಸಾಮರ್ಥ್ಯ; ಪರಾಕ್ರಮ;

ಸಾಹಸ (೨.೫–೩೬೫) ೨. ತೀವ್ರತೆ; ತೀಕ್ಷ್ಣತೆ; ರಭಸ (೪.೧೦–೨೫೯)

ಆಲಾನ, ಆಳಾನ (ನಾ). ಆನೆಯನ್ನು ಕಟ್ಟುವ ಕಂಬ (೧.೯–೪೮೪)

ಆಲಾಪಿಸು, ಆಳಾಪಿಸು (ಕ್ರಿ). ಮಾತಾಡು; ಸಂಭಾಷಿಸು (೨.೩–೧೩೪)

ಆಲಿ (ನಾ). ಕಣ್ಣು (೩.೪–೬೯)

ಆವಿಷ್ಕಾರ (ನಾ). ಕಾಣಿಸಿಕೊಳ್ಳುವುದು; ಪ್ರತ್ಯಕ್ಷವಾಗುವುದು (೧.೩–೫೦೭)

ಆವಿಷ್ಟ (ಗು). ಆವೇಶದಿಂದ ಕೂಡಿದ (೨.೨–೨೫೭)

ಆವೇಶ (ನಾ). ೧. ಆಂತರಿಕವಾದ ಅನುಭವ(೨.೨–೪೭೨)೨. ಉಂಟಾಗುವಿಕೆ; ಆವಿರ್ಭಾವ (೨.೨–೧೨)

ಆಶಂಕೆ (ನಾ). ಭಯ; ಆತಂಕ (೧.೩–೩೩೫)

ಆಶಂಸನ (ನಾ). ೧. ಹಾರೈಸುವುದು; ಕೋರುವುದು ೨. ಸಾರಿ ಹೇಳುವುದು; ಉದ್ಘೋಷಿಸುವುದು (೪.೧೨–೯೨)

ಆಶಿ (ನಾ). ಹಾವಿನ ಹಲ್ಲು (೩.೧೪–೨)

ಆಶಿತ (ನಾ). ಬಯಸಿದ್ದು; ಇಚ್ಛೆಪಟ್ಟದ್ದು. (೧.೧–೨೦೧)

ಆಶೀವಿಷ , ಆಶೀರ್ವಿಷ (ನಾ). ಹಲ್ಲಿನಲ್ಲಿ ವಿಷವುಳ್ಳ ಪ್ರಾಣಿ; ಹಾವು (೩.೧೩–೧೯೧)

ಆಶುಗ (ನಾ). ಬಾಣ; ಅಂಬು (೪.೯–೫೨)

ಆಸನ್ನತೆ (ನಾ). ಸಮೀಪವಾಗಿರುವಿಕೆ; ಸಾಮಿಪ್ಯ (೩.೨–೩)

ಆಸಱು, ಆಸರು (ಕ್ರಿ). ಬಳಲು; ಆಯಾಸಪಡು; ದಣಿ (೧.೬–೨೯೨)

ಆಸಾರ (ನಾ). ಮಳೆ; ಎಡೆಬಿಡದೆ ಸುರಿಯುವ ಮಳೆ; ಜಡಿಮಳೆ (೧.೨–೬)

ಆಸ್ಪದ (ನಾ). ಅವಕಾಶ; ಸ್ಥಳ; ಕ್ಷೇತ್ರ (೧.೭–೩೭)

ಆಹವ (ನಾ). ಯುದ್ಧ; ಕಾಳಗ (೪.೮–೧೬೦)

ಆಳ್, ಆಣ್, ಆಳು (ನಾ). ಭಟ; ಯೋಧ; ಸೈನಿಕ (೨.೯–೪೦೩)

ಆಳ್ಗೆಡಿ (ಗು). ನಿರ್ಜನವಾದ; ನಿರ್ಮಾನುಷವಾದ (೨.೨–೭೪೫)

ಆಳ್ತನ (ನಾ). ಮನುಷ್ಯಾಕಾರ; ಮನುಷ್ಯನರೂಪ (೧.೫–೧೦೬)

ಆಳ್ಮ, ಆಣ್ಮ, ಆೞ್ (ನಾ). ಒಡೆಯ, ಯಜಮಾನ; ಗಂಡ, ಪ್ರಭು (೨.೧–೯೩)

ಆಳ್ಮಂದಿ, ಆಳುಮಂದಿ (ನಾ). ಮನುಷ್ಯರ ಸಮೂಹ; ಜನರ ಗುಂಪು, ಸೇವಕ ಜನ (೨.೨–೮೨೬)

ಆಳ್ಮೆ, ಆಣ್ಮೆ (ನಾ). ಪೌರುಷ; ಸಾಮರ್ಥ್ಯ: ಶಕ್ತಿ (೨.೧–೧೨೯)

ಇಂಗಡಲ್, ಇಂಗಡಲು, ಈಂಗಡಲ್ (ನಾ). ಕ್ಷೀರಸಾಗರ; ಹಾಲ್ಗಡಲು (೧.೭–೨೨೩)

ಇಂಗಳ, ಇಂಗುಳ (ನಾ). ಗಾರೆಗಿಡ; ಇಂಗುದೀ ವೃಕ್ಷ (೧.೪–೫೨೯, ೧.೯–೪೨೭)

ಇಂಗಿತ (ನಾ). ಆಶಯ; ಮನೋಗತ; ಅಭಿಪ್ರಾಯ (೧.೨–೬೨೯)

ಇಂಗಿತವ್ಯಂಗ್ಯ (ನಾ). ಸೂಚ್ಯವಾದ ವ್ಯಂಗ್ಯ; ಮಾತಿನಲ್ಲಿ ಅಡಗಿರುವ ವ್ಯಂಗ್ಯ (೩.೬–೨೫೬)

ಇಂದೀವರಾಕ್ಷಿ (ನಾ). ಕನ್ನೈದಿಲೆಯಂತೆ ಕಣ್ಣುಳ್ಳವಳು (೧.೩–೪೬೭)

ಇಂದ್ರ ದಿಕ್ತಟ (ನಾ). ಪೂರ್ವದಿಕ್ಕಿನ ಪ್ರದೇಶ; ಮೂಡಲಿನ ಕಡೆ (೧.೨ – ೧೦೨)

ಇಂದ್ರಗೋಪ (ನಾ). ಮಳೆಗಾಲದಲ್ಲಿ ಕಾಣಿಸಿಕೊಳ್ಳುವ ಒಂದು ಬಗೆಯ ಕೆಂಪುಬಣ್ಣದ ಮಿಂಚುಹುಳು; ಹೊನ್ನೆಹುಳು. (೨.೯–೭೮)

ಇಂದ್ರದಿಕ್ಕು (ನಾ). ಇಂದ್ರನ ದಿಕ್ಕು; ಪೂರ್ವದಿಕ್ಕು (೧.೨–೪೮೫)

ಇಂದ್ರದಿಙ್ನಯನ (ನಾ). ಪೂರ್ವದಿಕ್ಕಿನ ಕಣ್ಣು (೨.೬–೧)

ಇಂದ್ರಧನು (ನಾ). ಕಾಮನಬಿಲ್ಲು (೧.೧೦–೨೩೭)

ಇಂದ್ರಾಣಿ (ನಾ). ರತಿದೇವಿ (೨.೧–೧೫೧)

ಇಂಪು (ನಾ). ೧. ಸವಿ; ರುಚಿ; ಸೊಗಸು; ಮಾಧುರ್ಯ (೧.೨–೩೧೯) ೨. ಹಿತ; ಆನಂದ (೧.೬–೧೧೩)

ಇಂಬಾಗು (ಕ್ರಿ). ೧. ಆಶ್ರಯವಾಗು; ಆಸ್ಪದವಾಗು; ಅವಕಾಶವಾಗು (೧.೫–೩೦೨) ೨. ಸೊಗಸಾಗು, ಮನೋಹರವಾಗು; ಚೆನ್ನಾಗು (೧.೧೧–೧೮೪)

ಇಂಬು (ನಾ). ೧. ಕ್ರಮ; ಸೌಂದರ್ಯ; ಸೊಗಸು; ಲೇಸು (೨.೨–೨೩೮) ೨. ಇಂಪು; ಸುಖ; ಸಂತೋಷ (೧.೧ – ೩೧೮)

ಇಚ (ಪ್ರ). ಅಲ್ಲಿ ಹುಟ್ಟಿದವನು ಅಥವಾ ಬೆಳೆದವನು. ಅದರಲ್ಲಿ ವರ್ತಿಸುವವನು ಎಂಬ ಅರ್ಥದಲ್ಲಿ ಬರುವ ಒಂದು ತದ್ಧಿತ ಪ್ರತ್ಯಯ. (೨.೭–೨೩೪)

ಇಚ್ಚೆಗೆಡು (ಕ್ರಿ). ಎಚ್ಚರತಪ್ಪು; ಸ್ವಾಧೀನ ತಪ್ಪು (೧.೭–೮೬)

ಇಟ್ಟಳಿಸು, ಇಟ್ಟಣಿಸು (ಕ್ರಿ). ಗುಂಪಾಗು; ಸಂದಣಿಸು, ಒತ್ತಾಗಿ ಸೇರು (೧.೧೧–೧೬೪)

ಇಡುಕುರು (ನಾ). ಗುಂಪು; ಪೊದರು; ರಾಶಿ (೧.೯–೮೪)

ಇತರೆ (ನಾ). ಸಾಧಾರಣ ಹೆಂಗಸು; ಸಾಮಾನ್ಯಳು; ಪಾಮರೆ (೨.೨–೩೨೬)

ಇದಿರಾಡು (ಕ್ರಿ). ಪ್ರತಿಭಟಿಸಿ ಮಾತನಾಡು; ವಾದಹೂಡು (೩.೧೧–೪೯)

ಇದಿರ್ಗೊಳ್, ಇದಿರುಗೊಳ್ (ಕ್ರಿ). ಸ್ವಾಗತಿಸು; ಪ್ರೀತಿ ಅಥವಾ ಗೌರವ ಪೂರ್ವಕವಾಗಿ ಎದುರಿಗೆ ಬರು (೧.೨–೬೮೬)

ಇನ (ನಾ). ನೇಸರು; ಸೂರ್ಯ(೧.೭–೩೩೩)

ಇನಕುಲ, ಇನವಂಶ (ನಾ). ೧. ಸೂರ್ಯವಂಶ ೨. ಸೂರ್ಯವಂಶದಲ್ಲಿ ಹುಟ್ಟಿದವನು (೧.೭–೩೩೩) (೧.೯–೪೮೪)

ಇನಿದು, ಇನಿ, ಇನಿಯ (ಗು). ಸಿಹಿಯಾದ; ಪ್ರಿಯವಾದ; ಇಂಪಾದ; ಮನೋಹರವಾದ (೧.೪–೨೪೦)

ಇನಿಯಂ (ನಾ). ಪ್ರಿಯನಾದವನು; ಗಂಡ; ಪತಿ (೧.೧೧–೧೨೦)

ಇನಿಸು (ನಾ). ಸ್ವಲ್ಪ; ಕೊಂಚ, ತುಸು; ಇನಿಸಾನು; ಸ್ವಲ್ಪಮಟ್ಟಿಗೆ (೨.೧–೮೪)

ಇಬ್ಬನಿ (ನಾ). ಮಂಜಿನ ನೀರಿನ ಹನಿ; ಹಿಮ (೧.೨–೨೩೮)

ಇಭ (ನಾ). ಆನೆ; ಗಜ (೧.೨–೫೫೫)

ಇರವು (ನಾ). ರೂಪು; ಆಕಾರ; ದೇಹ (೧.೫–೨೦೩)

ಉರುಳುಗಣ್ಣಿ (ನಾ). ಉರುಳಿನಿಂದ ಕೂಡಿದ ಹಗ್ಗದ ಕುಣಿಕೆ; ಉರುಳು ಪಾಶ(೧.೩–೪೯೧)

ಉರೆ (ಅ). ಅತಿಶಯವಾಗಿ; ಬಹಳವಾಗಿ; ಮಹತ್ತರವಾಗಿ (೧.೨–೩೯೮)

ಉರ್ಕು(ನಾ). ಬಲ; ಸಾಮರ್ಥ್ಯ; ಕೆಚ್ಚು (೨.೫–೪೦೪)

ಉರ್ಬು (ಕ್ರಿ). ಹೆಚ್ಚು, ಮೀರು; ಬೀಗು; ಅಗಲಿಸು; ವೃದ್ಧಿಯಾಗು (೧.೯–೧೩೬)

ಉರ್ವರೆ (ನಾ). ಭೂಮಿ; ನೆಲ (೧.೪–೨)

ಉರ್ವಿ(ನಾ). ಭೂಮಂಡಲ, ನೆಲ (೧.೯–೫೩೬)

ಉಱುಂಬು, ಉರುಬು (ನಾ). ಅತಿಶಯವಾದ ವೇಗ; ರಭಸ (೨.೨–೫೪೪)

ಉಲಿ (ಕ್ರಿ). ಮಾತನಾಡು; ಹೇಳು; ಘೋಷಿಸು (೧.೧೧–೨೮)

ಉಲ್ಕೆ (ನಾ). ಆಕಾಶದಿಂದ ಕೆಳಕ್ಕೆ ಬೀಳುವ ತೇಜಃಪುಂಜವಾದ ವಸ್ತು (೧.೩–೬೬) (೧.೯–೧೭೬)

ಉಲ್ಲೋಲಿಸು (ಕ್ರಿ). ಒಲೆದಾಡು; ಹೊಯ್ದಾಡು (೨.೨–೫೫೦)

ಉಷ್ಣತೆ (ನಾ). ಉಷ್ಣ; ಶಾಖ; ಸೆಕೆ (೩.೫–೨೨೦)

ಉಸಿಕ (ನಾ). ಮೌನವಾಗಿರುವವನು; ಮೌನಿ (೪.೫–೧೭೧)

ಉಸಿರು (ನಾ). ಶಕ್ತಿ; ಚೈತನ್ಯ; ಪ್ರಾಣ (೧.೪–೪೬೮)

ಊರ್ಮಿ (ನಾ). ದೊಡ್ಡ ಅಲೆ,–ತೆರೆ (೧.೯–೩೪೯)

ಊರ್ಮಿಕ (ನಾ). ಉಂಗುರ (೨.೯–೫೬೪)

ಊರ್ವರೆ (ನಾ). ಭೂಮಿ; ನೆಲ (೪.೧೩–೧೬೮)

ಊಷ್ಮ (ನಾ). ಶಾಖ; ಕಾವು; ತಾಪ (೪.೪–೫೬೨)

ಊಳು (ಕ್ರಿ). (ನಾಯಿ, ನರಿಗಳ) ಕೂಗು (೧.೭–೧೩೨)

ಋಕ್ಷ (ನಾ). ಕರಡಿ (೪.೨–೩೮೫)

ಋಜುತೆ (ನಾ). ನೇರವಾಗಿರುವ ಗುಣ; ಪ್ರಾಮಾಣಿಕತೆ (೩.೨–೭೫)

ಋಣಿ (ನಾ). ಸಾಲವನ್ನು ಹೊತ್ತವನು; ಸಾಲಗಾರ (೧.೩–೫೬೨)

ಋತ (ನಾ). ಸತ್ಯ (೧.೪ – ೧೬೮)

ಋತ ಪ್ರಕೃತಿ (ನಾ). ನಿಜವಾದ ಸ್ವಭಾವ,–ಪ್ರಕೃತಿ (೩.೬–೧೮೧)

ಋತಚಿತ್ತು (ನಾ). ಸತ್ಯವಾದ ಜ್ಞಾನ (೨.೭–೨೦೭)

ಋತದರ್ಶಿ (ನಾ). ಸತ್ಯವನ್ನು ಸಾಕ್ಷಾತ್ಕರಿಸಿಕೊಂಡವನು (೧.೯–೫೦೦)

ಎಕ್ಕಟಿ, ಎಕ್ಕಟೆ (ಗು). ಏಕಾಂತವಾದ; ರಹಸ್ಯವಾದ; ಗುಟ್ಟಾದ (೧.೯–೪೬೧)

ಎಕ್ಕಲ (ನಾ). ಕಾಡುಹಂದಿ (೨.೧–೩೧೫)

ಎಗ್ಗ (ನಾ). ಹಳ್ಳಿಯವ; ಒರಟ; ಅಸಂಸ್ಕೃತ; ದಡ್ಡ (೨.೧–೩೧೧)

ಎಡರು (ನಾ). ಅಡಚಣೆ; ಅಡ್ಡಿ; ಆತಂಕ; ಕಷ್ಟ, ವಿಪತ್ತು (೧.೪–೧೩೪)

ಎಡೆಗೊಡು, ಎಡೆಕೊಡು, ಎಡೆಗುಡು (ಕ್ರಿ).

ಅವಕಾಶವನ್ನು ಕೊಡು; ಆಸ್ಪದ ಕೊಡು (೧.೬–೪೮)

ಎಡೆಸೋಲು (ಕ್ರಿ). ಮಧ್ಯದಲ್ಲಿ ಸೋತುಹೋಗು (೩.೭–೯೮)

ಎಡ್ಡ (ನಾ). ಸುಂದರ; ಮನೋಹರ; ರಮ್ಯ (೧.೪–೪೯) ಎಡ್ಡಮಾಗು = ಸುಂದರವಾಗು; ಮನೋಹರವಾಗು; ರಮ್ಯವಾಗು

ಎಣಿಕೆ (ನಾ). ಆಲೋಚನೆ; ಯೋಚನೆ; ಬಗೆ (೧.೧೧–೫೦)

ಎಣೆ (ನಾ). ೧. ಸಮ; ಸರಿ; ಹೊಂದಿಕೆ; ಸಾಟಿ ೨. ಜತೆ; ಜೋಡಿ (೧.೧೧–೩೯೦)

ಎಣ್ದೆಸೆ (ನಾ). ಎಂಟುದಿಕ್ಕು,– ಮೂಲೆ (೧.೭–೨೦೪)

ಎಯ್ತರ್, ಅಯ್ತರ್, ಎಯಿತರ್, ಐತರ್ (ಕ್ರಿ). ಬರು; ಸಮೀಪಿಸು; ಬಂದು ಸೇರು (೧.೭–೪೦೮)

ಎಯ್ಯಮಿಗ (ನಾ). ಮುಳ್ಳುಹಂದಿ (೪.೨–೨೫೩)

ಎರೆ (ಕ್ರಿ). ಬೇಡು; ಕೇಳು; ಯಾಚಿಸು (೧.೨–೪೭೭)

ಎರೆಗೊಳ್ (ಕ್ರಿ). ಆಹಾರವನ್ನು ತೆಗೆದುಕೊ; ಗ್ರಾಸವನ್ನು ಪಡೆ (೨.೩–೫೬)

ಎರ್ದೆಯನ್ನ (ನಾ). ಹೃದಯದಂತಿರುವವನು; ಪ್ರೀತಿಪಾತ್ರನು; ನಲ್ಲ (೧.೯–೪೫)

ಎರ್ದೆಯನ್ನಳ್, ಎರ್ದೆಯನ್ನೆ (ನಾ). ಹೃದಯದಂತಿರುವವಳು; ಪ್ರೀತಿಪಾತ್ರಳು; ನಲ್ಲೆ (೧.೨–೬೩೩) (೧.೭–೯೫)

ಎಱಂಕೆ, ಎರಕೆ, ರೆಂಕೆ, ರೆಕ್ಕೆ (ನಾ). ಹಾರಲು ಸಹಾಯವಾಗುವ ಪಕ್ಷಿಗಳ ಪಕ್ಕ; ಛದ (೧.೭–೨೦)

ಎಱೆಯ, ಎರೆಯ (ನಾ). ೧. ಒಡೆಯ; ಯಜಮಾನ; ಪ್ರಭು (೨.೪–೬೨) ೨. ಪ್ರೀತಿಪಾತ್ರ; ಇನಿಯ (೧.೭–೬೦)

ಎಲರ್, ಎರಲ್, ಎರಲು, ಎಲರು (ನಾ). ಗಾಳಿ; ವಾಯು (೧.೫–೨೩೨)

ಎಲೆಗೆ (ಅ). ಹೆಂಗಸರನ್ನು ಸಂಬೋಧಿಸುವಾಗ ಬಳಸುವ ಮಾತು (೪.೭–೧೦೮)

ಎಲೆವನೆ, ಎಲೆಮನೆ (ನಾ). ಎಲೆಗಳನ್ನು ಛಾವಣಿಯಾಗಿ ಹೊದಿಸಿ ಮಾಡಿದ ಮನೆ; ಪರ್ಣಶಾಲೆ (೧.೭–೩೨೨)

ಎಸಕ (ನಾ). ಕಾಂತಿ; ಪ್ರಕಾಶ; ತೇಜಸ್ಸು (೧.೩–೧೬೪)

ಎಸಗು (ಕ್ರಿ). (ರಥವನ್ನು) ನಡೆಸು (೧.೪–೪೨೧)

ಎಸು (ಕ್ರಿ), ಎಚ್ಚ (ಬಾಣ ಪ್ರಯೋಗ ಮಾಡು; ಅಂಬನ್ನು ಎಸೆ (೧.೧೦–೧೪೯)

ಎಸೆ (ಕ್ರಿ). ಶೋಭಿಸು; ಒಪ್ಪು (೧.೬–೨೨೧)

ಎಳನೇಸಱ್, ಎಳನೇಸರು (ನಾ). ಎಳೆಯ ಸೂರ್ಯ; ಬಾಲರವಿ (೧.೮–೧೩೦)

ಎಳವು, ಎಱವು (ಕ್ರಿ). ನೀವು; ಸವರು; ಲೇಪಿಸು; ಬಳಿ (೧.೪–೨೩೭)

ಎಳಸು (ಕ್ರಿ). ೧. ಬಯಸು; ಅಪೇಕ್ಷಿಸು; ಆಶಿಸು (೧.೩–೪೪೫) ೨. ಯೋಚಿಸು; ಬಗೆ (೧.೫–೧೧)

ಎಳೆತಟ, ಎಳತಟ (ನಾ). ಎಳೆದಾಟ; ಆಕರ್ಷಣೆ; ಸೆಳೆತ; ತೊಂದರೆ; ಕಿರುಕುಳ (೨.೪–೩೩)

ಎಳ್ ನೆಯ್ (ನಾ). ಎಳ್ಳಿನಿಂದ ತೆಗೆದ

ಎಣ್ಣೆ; ಎಳ್ಳೆಣ್ಣೆ (೧.೬–೧೬೬)
ಎಳ್, ಎಳ್ಳು (ನಾ). ಎಣ್ಣೆಯನ್ನು ತೆಗೆಯಲು ಉಪಯೋಗಿಸುವ ಒಂದು ಜಾತಿಯ ಸಣ್ಣಕಾಳು; ತಿಲಧಾನ್ಯ (೧.೬–೧೬೬)
ಎಳ್ಬಟ್ಟು (ಕ್ರಿ). ಎಬ್ಬಿಸಿ ಓಡಿಸು; ಬೆನ್ನಟ್ಟು; ಹಿಂಬಾಲಿಸು (೨.೨–೫೬೫)
ಎಳ್ಬು (ಕ್ರಿ). ಅಟ್ಟು, ಓಡಿಸು (೨.೨–೬೧೭)

ಏಕವೇಣಿ (ನಾ). (ಪತಿವಿರಹ ಸೂಚಕವಾಗಿ) ಜಡೆ ಕಟ್ಟಿ ಕೊಳ್ಳದವಳು (೩.೩–೮೫)
ಏಗೊಳ್, ಏಗೊಳು (ಕ್ರಿ). ಅಂಗೀಕರಿಸು; ಒಡಂಬಡು (೧.೪–೩೪೩)
ಏಣ (ನಾ). ಗಂಡುಜಿಂಕೆ; ಎರಳೆ; ಹುಲ್ಲೆ (೧.೭–೧೯೨, ೨.೨–೧೩೫)
ಏಣಾಕ್ಷಿ (ನಾ). ಜಿಂಕೆಯ ಕಣ್ಣಿನಂತಿರುವ ಕಣ್ಣುಗಳನ್ನುಳ್ಳವಳು (೨.೨–೪೬೨)
ಏದು (ಕ್ರಿ). (ಆಯಾಸದಿಂದ) ಮೇಲುಸಿರುಬಿಡು; ಬಿರುಸಾಗಿ ಉಸಿರಾಡು; ತೇಕು (೧.೨–೨೪೩)
ಏರ್, ಏರು (ನಾ). ನೊಗವನ್ನು ಹೂಡಿ ದನಗಳನ್ನು ಕಟ್ಟಿದ ನೇಗಿಲು; ಆರು (೩.೧೩–೨೪೫)
ಏರ್ವಡೆ (ಕ್ರಿ). ಗಾಯವನ್ನು ಹೊಂದು; ಗಾಯಗೊಳ್ಳು (೧.೨–೧೯೨)
ಏಟ್ಟೆ, ಏರ್, ಏರು (ನಾ). ಗಾಯ; ಹುಣ್ಣು; ವ್ರಣ (೧.೬–೨೭೩)
ಏವಯ್ಸು (ಕ್ರಿ). ಅಸಮಾಧಾನಪಡು; ಕೋಪಗೊಳ್ಳು (೩.೭–೫೯೩)

ಐಚ್ಚಿಕ (ಗು). ಇಚ್ಚೆಗೆ ಸಂಬಂಧಿಸಿದ; ತಾನೇ ಆರಿಸಿಕೊಂಡ (೩.೪–೫೬೪)
ಐತರು, ಎಯ್ತರ್ (ಕ್ರಿ). ಬರು; ಸಮೀಪಿಸು; ಬಂದುಸೇರು(೧.೧ –೧೫೨)
ಐಲಬಿಲ ಸೋದರ (ನಾ). ಕುಬೇರನ ತಮ್ಮ; ರಾವಣ (೪.೯–೫೩)

ಒಕ್ಕಿಡು (ಕ್ರಿ). ಬಡಿ; ಹೊಡೆ; ಥಳಿಸು; ಒಕ್ಕು; ನಾಶಮಾಡು; ಕೊಲ್ಲು (೨.೪–೪೩)
ಒಕ್ಕೊರಲು (ನಾ). ಒಂದೇ ಕೊರಳು; ಏಕಾಭಿಪ್ರಾಯ (೨.೯–೮೮)
ಒಚ್ಚತಂ (ಅ). ಚೆನ್ನಾಗಿ; ಹೆಚ್ಚಾಗಿ; ಅತಿಶಯವಾಗಿ; ಎಡೆಬಿಡದೆ; ಗಾಢವಾಗಿ (೧.೨–೬೩೪)
ಒಟ್ಟಯಿಸು (ಕ್ರಿ). ಒಟ್ಟುಗೂಡಿಸು; ಕೂಡಿಸು; ರಾಶಿಮಾಡು. (೧.೯–೨೪೭)
ಒಟ್ಟಿಲ್, ಒಟ್ಟಲು, ಒಟ್ಟಿಲು (ನಾ). ರಾಶಿ; ಗುಂಪು; ಸಮೂಹ (೧.೮–೨೧೭)
ಒಡರ್ಚು (ಕ್ರಿ). ಒದಗಿಸು; ಉಂಟುಮಾಡು (೨.೮–೯೩)
ಒಡಲಿಚ (ನಾ). ಒಡಲಿನಲ್ಲಿ ಹುಟ್ಟಿದವನು; ಮಗ (೧.೬–೧೭೦)
ಒಡವರ್, ಒಡವರು (ಕ್ರಿ). ಜೊತೆಯಲ್ಲಿ ಬರು; ಅನುಸರಿಸು (೧.೪–೨೬೮)
ಒಡ್ಡು (ನಾ). ರಾಶಿ, ಗುಂಪು; ಸಮೂಹ (೧.೧೧–೬೫)
ಒಡ್ಯಾಣ (ನಾ). ನಡುವಿಗೆ ಹಾಕಿಕೊಳ್ಳುವ ಬೆಳ್ಳಿ ಅಥವಾ ಚಿನ್ನದ ಪಟ್ಟಿ; ಮೇಖಲೆ; ಡಾಬು (೨.೪–೬೬)
ಒಣರ್ (ಕ್ರಿ). ಭಾವಿಸು; ತಿಳಿ (೨.೧–೩೧೧)

ಒದರು (ಕ್ರಿ). ಕಿರುಚು; ಗರ್ಜಿಸು; ಧ್ವನಿಮಾಡು (೧.೫–೩೮)

ಒದವು, ಒದಹು (ಕ್ರಿ). ಉಂಟಾಗು; ಪ್ರಾಪ್ತವಾಗು (೧.೫–೨೬೫)

ಒಪ್ಪ, ಒಪ್ಪಮಾಡು (ನಾ). ಅಚ್ಚುಕಟ್ಟು ಮಾಡು; ಸರಿಪಡಿಸು (೧.೫–೨೮೯)

ಒಪ್ಪಿರ್ (ಕ್ರಿ). ಶೋಭಿಸು; ಅಲಂಕಾರಪ್ರಾಯವಾಗಿರು (೨.೧–೧೯೭)

ಒಯ್ಕನೆ (ಅ). ನೆಟ್ಟನೆ; ನೇರಾಗಿ, ಸ್ಫುಟವಾಗಿ (೨.೧–೪೨)

ಒಯ್ಯನೆ (ಅ). ಮೆಲ್ಲನೆ; ಮೃದುವಾಗಿ; ಸಾವಾಕಾಶವಾಗಿ (೧.೩–೧೬೭)

ಒರಲು (ಕ್ರಿ). ಅರಚು; ಕೂಗಿಕೊಳ್ಳು (೧.೪–೪೩೦)

ಒರಲೆ (ನಾ). ಗೆದ್ದಲು; ಬಿಳಿ ಇರುವೆ (೧.೨–೨೭೦)

ಒರ್ಮೊದಲ್ (ಅ). ಒಂದೇ ಬಾರಿಗೆ; ಒಮ್ಮೆಗೇ, ಪ್ರಾರಂಭದಲ್ಲೇ (೧.೩–೬೪)

ಒಲವರ (ನಾ). ಬಯಕೆ; ಪ್ರೀತಿ; ಮೋಹ (೧.೩–೮೯)

ಒಲ್, ಒಲಲಿ, ಒಲು (ಕ್ರಿ). ಯೋಗ್ಯವಾಗು, ಉಚಿತವಾಗು; ತಗು (೨.೩–೭೦)

ಒಲ್, ಒಲಿ, ಒಲು (ಕ್ರಿ). ಬಯಸು; ಅಪೇಕ್ಷಿಸು (೨.೧–೨೨೬)

ಒಲ್ಲಣಿಗೆ, ಒಲ್ಲವಣಿಗೆ (ನಾ). ಒದ್ದೆಯಾದ ಒಟ್ಟೆ; ಸ್ನಾನ ಮಾಡುವಾಗ ಉಡುವ ಬಟ್ಟೆ (೨.೨–೫೪)

ಒಸಗೆ (ನಾ). ಶುಭ; ಮಂಗಳಕಾರ್ಯ; ಉತ್ಸವ (೧.೨–೬೩೫)

ಒಸಗೆ (ನಾ). ಸಂತೋಷ; ಪ್ರಸನ್ನತೆ; ಅನುಗ್ರಹ (೧.೭–೪೦೮)

ಒಸಗೆ (ನಾ). ಕಾಣಿಕೆ; ಉಡುಗೊರೆ; ಗೌರವ (೨.೬–೨೫೩)

ಒಸೆ (ಕ್ರಿ). ಒಲಿ; ಪ್ರಸನ್ನನಾಗು; ಮೆಚ್ಚು (೨.೧–೧೦)

ಒಸೆ (ಕ್ರಿ). ಹಿಗ್ಗು; ಸಂತೋಷಪಡು; ಆನಂದಿಸು (೧.೯–೨೬೫)

ಒಳಕೊಳ್ (ಕ್ರಿ). ಒಳಸೇರು; ಅಡಕವಾಗಿರು (೧.೨–೪೩೩)

ಒಳತೋಟಿ, ಒಳದೋಟಿ (ನಾ). ಅಂತರಂಗದಲ್ಲಿ ಆಗುವ ಭಿನ್ನ ಭಾವಗಳ ತುಮುಲ; ಮನಸ್ಸಿನ ಹೊಯ್ದಾಟ. (೨.೭–೨೭೧)

ಒಳಯಿಂಕೆ, ಒಳಯಿಕೆ, ಒಳಯಿಕ್ಕೆ (ಅ). ಒಳಗಡೆ; ಒಳಭಾಗದಲ್ಲಿ (೨.೩–೧೮೭)

ಒಳರ್, ಒಳಱು (ಕ್ರಿ). ಕೂಗು; ಅರಚು; ಹುಯ್ಯಲಿಡು (೪.೨–೩೬೨)

ಒಳಸೋರ್ (ಕ್ರಿ). ೧. ಜರಿದು ಬೀಳು; ಕೆಳಗೆಕುಸಿ (೧.೫–೩೦೧) ೨. ಹಿಂದೆಗೆ; ಹಿಮ್ಮೆಟ್ಟು (೧.೬–೧೭೭)

ಒಳ್, ಒಳು (ಗು). ಒಳಿತು, ಒಳ್ಳಿತು, ಒಳ್ಳಿತ್ತು ಎಂಬುವಕ್ಕೆ ಕರ್ಮಧಾರಯ ಸಮಾಸದ ಪೂರ್ವಪದವಾಗಿದ್ದಾಗ ಬರುವ ರೂಪ. (೧.೩–೫೯೫)

ಒಳ್ಕು (ಕ್ರಿ). ಹರಿ; ಪ್ರವಹಿಸು (೨.೨–೫೬೪)

ಒಳ್ನುಡಿ, ಒಳುನುಡಿ (ನಾ). ಒಳ್ಳೆಯ ಮಾತು; ಚತುರೋಕ್ತಿ, ಸುಭಾಷಿತ (೨.೨–೭೧೮)

ಒಳ್ನೆಲ (ನಾ). ಒಳ್ಳೆಯ ನೆಲ (೧.೧೧–೩)

ಒಳ್ಪು (ನಾ). ೧. ಕ್ಷೇಮ; ಸುಖ (೧.೪–೧೪೧) ೨. ಮೇಲ್ಮೆ; ಶ್ರೇಯಸ್ಸು; ಹಿತ (೧.೫–೨೭೪)

ಒಳ್ವಟ್ಟೆ (ನಾ). ಒಳ್ಳೆಯ ದಾರಿ (೧.೪-೧೨೨)

ಒಳ್ವರಕೆ (ನಾ). ಒಳ್ಳೆಯ ಹರಕೆ; ಶುಭಾಶೀರ್ವಾದ (೨.೬-೪೫೨)

ಓ (ಕ್ರಿ). ಓತ (ಭೂತಕೃ); ಓತು (ಭೂತನ್ಯೂ); ಪ್ರೀತಿಸು (೧.೪-೨೬೯)

ಓಕರಿಸು (ಕ್ರಿ). ಹೊರಸೂಸು; ಉಗುಳು (೧.೩-೪೮೮)

ಓಕುಳಿ (ನಾ). ಉತ್ಸವ ಸಂದರ್ಭಗಳಲ್ಲಿ ಒಬ್ಬರ ಮೇಲೊಬ್ಬರು ಎರಚುವ ಬಣ್ಣದ ನೀರು (೧.೨-೪೧೮)

ಓಜ, ಒವಜೆ, ಓಜೆ (ನಾ). ಕಾಂತಿ (೧.೭-೨೭೦)

ಓಜಸ್ವಿ (ಗು). ೧. ಕಾಂತಿಯುಳ್ಳ ೨. ಬಲವುಳ್ಳ ೧.೨ -೫)

ಓಜೆ (ನಾ). ಕ್ರಮ; ರೀತಿ; ಅಣಿ; ಒಪ್ಪ (೩.೧೧-೫೭)

ಓಜೋನ್ವಿತ (ನಾ). ಓಜಸ್ಸಿನಿಂದ ಕೂಡಿದ; ಸತ್ತ್ವಯುತವಾದ (೨.೪-೧೩)

ಓಡು (ನಾ). ಮಡಕೆಯ ಚೂರು,-ಹೋಳು; ಬೋಕಿ; ಬಕ್ಕರೆ (೧.೩-೫೩೩)

ಓತುಕೊಳ್ (ಕ್ರಿ). ಅಪ್ಪಿಕೊಳ್ಳು; ಅವಚಿಕೊಳ್ಳು (೪.೧-೧೦)

ಓಪ (ನಾ). ಪ್ರೀತಿ ಪಾತ್ರನಾದವನು; ಪ್ರಿಯಕರ; ನಲ್ಲ; ಕಾದಲ (೧.೬-೧೦೦)

ಓಪವಳ್, ಓಪಳ್ = ಪ್ರಿಯತಮೆ; ಪ್ರೇಯಸಿ (೨.೧-೩೭)

ಓರಣ (ನಾ). ಅಚ್ಚುಕಟ್ಟು; ಕ್ರಮ; ಒಪ್ಪ; ಶಿಸ್ತು (೧.೮-೬೯)

ಓರೆ (ನಾ). ಇಳುಕಲು; ಇಳಿಜಾರು; ಮಗ್ಗುಲು (೩.೧೧-೧)

ಓಳಿ (ನಾ). ಸಮೂಹ; ರಾಶಿ; ಮೊತ್ತ (೧.೭-೩೭೧)

ಔಘ (ನಾ). ೧. ಗುಂಪು; ಸಮೂಹ (೧.೭-೩೭೧) ೨. ಪ್ರವಾಹ (೩.೬-೮೬)

ಔಪಚಾರಿಕ (ಗು). ಉಪಚಾರಕ್ಕೆ ಸಂಬಂಧಿಸಿದ; ವಾಡಿಕೆಯ (೧.೧೧-೩೨೩)

ಔರಸ (ನಾ). ಹೊಟ್ಟೆಯಲಿ ಹುಟ್ಟಿದ ಮಗ; ಸ್ವಂತಮಗ (೧.೨-೪೨೪)

ಔರ್ವ (ಗು). ಸಮುದ್ರದೊಳಗಿರುವ ಬೆಂಕಿ; ವಡಬ (೧.೧೦-೧೯೩)

ಔರ್ವಾನಳ (ನಾ). ಸಮುದ್ರದ ಬೆಂಕಿ; ಬಡಬಾಗ್ನಿ (೧.೧೦-೧೯೩)

ಕಂಕಾಲ, ಕಂಕಾಳ (ನಾ). ಅಸ್ಥಿಪಂಜರ; ಎಲುಬಿನ ಗೂಡು (೨.೫-೩೬೨)

ಕಂಕಾಲತೆ (ನಾ). ಕಂಕಾಲವಾಗಿರುವಿಕೆ; ಅಸ್ಥಿಪಂಜರದ ಸ್ಥಿತಿ. (೨.೯-೧೪)

ಕಂಚುಕ (ನಾ). ಉದ್ದವಾದ ನಿಲುವಂಗಿ (೪.೧೧-೩೩೫)

ಕಂಚುಕಿ (ನಾ). ಅಂತಃಪುರದಅಧಿಕಾರಿ; ರಾಣಿವಾಸದ ಪಾರುಪತ್ಯಗಾರ (೪.೧೧-೩೩೧)

ಕಂಚುಕಿತ (ಗು). ಕಂಚುಕವನ್ನು ತೊಟ್ಟುಕೊಂಡ (೧.೪-೧೬೬)

ಕಂಟಕ (ನಾ). ಉಪದ್ರವಕಾರಿ; ಶತ್ರು (೧.೧೦-೪೫೦)

ಕಂಟಕಿತ (ಗು). (ಆಲಂ). ರೋಮಾಂಚನ ಹೊಂದಿದ; ಮೈಗೆ ಮುಳ್ಳುಬಂದ (೧.೪-೩೯೫)

ಕಂಡರಣೆ (ನಾ). ಕಡೆಯುವಿಕೆ; ಕೊರೆಯುವಿಕೆ; ಕಲ್ಲು, ಲೋಹ ಮೊದಲಾದವುಗಳಲ್ಲಿ ಕೊರೆಯುವಿಕೆ. (೨.೫-೯೫)

ಕಂಡರಿಸು (ಕ್ರಿ). ಕೆತ್ತನೆ ಕೆಲಸ ಮಾಡು; ಕಡೆ; ಕೊರೆದು ಮೂಡಿಸು (೧.೪-೪೩೨)

ಕಂಡೂತಿ (ನಾ). ತುರಿಸುವುದು; ತುರಿಕೆ; ನವೆ; ತೀಟೆ (೧.೭-೧೯೪)

ಕಂತು (ಕ್ರಿ). ಮುಳುಗು; ಅಡಗು (೧.೩-೬೨೮)

ಕಂತು (ನಾ). ಮನ್ಮಥ; ಕಾಮ (೧.೧೦-೨೯೭)

ಕಂದಮೂಲ (ನಾ). ಗೆಡ್ಡೆ ಗೆಣಸು (೧.೪-೩೭೭)

ಕಂದರ (ನಾ). ಕಣಿವೆ; ದರಿ (೧.೭-೩೪)

ಕಂದರ್ಪ (ನಾ). ಕಾಮ; ಮನ್ಮಥ (೧.೨-೩೬೯) (೪.೧೧-೩೭೬)

ಕಂದಲ, ಕಂದಳ (ನಾ). ಮೊಳಕೆ; ಕುಡಿ (೧.೫-೨೧೯)

ಕಕುದ (ನಾ). ಶಿಖರ; ತುದಿ (೩.೯-೧೯೭)

ಕಜ್ಜ (ನಾ). ಕೆಲಸ; ಕರ್ತವ್ಯ (೧.೧೦-೧೯೯)

ಕಟಕ (ನಾ). ದಂಡು; ಸೈನ್ಯ (೩.೧೩-೧೩೭)

ಕಟವಾಯ್, ಕಟಬಾಯಿ, ಕಟವಾಯಿ (ನಾ). ಬಾಯಿಯ ಕೊನೆ,- ಮೂಲೆ (೧.೫-೧೪೩)

ಕಟಾಕ್ಷ (ನಾ). ಕುಡಿನೋಟ; ಓರೆನೋಟ; ಕಡೆಗಣ್ಣಿನ ನೋಟ (೧.೨-೫೩೧)

ಕಟಿ (ನಾ). ಸೊಂಟ; ನಡು (೨.೫-೧೭೭)

ಕಟು (ಗು). ತೀವ್ರವಾದ; ಉಗ್ರವಾದ (೧.೬-೨೫೦)

ಕಟ್ಟಣ (ನಾ). ಬಂಧ; ರಚನೆ; ಕೂರಿಸುವುದು (೧.೬-೨೨೦)

ಕಟ್ಟಳೆ (ನಾ). ನಿಯಮ; ಅಪ್ಪಣೆ; ಆಜ್ಞೆ, ಕಟ್ಟುಪಾಡು (೨.೪-೬೧)

ಕಟ್ಟಾಣಿ (ನಾ). ಬಲು ಬೆಲೆಯುಳ್ಳ ಮುತ್ತಿನ ಸರ; ಒಂದು ಕಂಠಾಭರಣ (೩.೧೩-೧೦೩)

ಕಟ್ಟೇರ್ವಡೆ (ಕ್ರಿ). ಬಲವಾದ ಏಟನ್ನು ಹೊಂದು; ತೀವ್ರವಾಗಿ ಗಾಯಗೊಳ್ಳು (೪.೧-೩೮೮)

ಕಡವರ (ನಾ). ಚಿನ್ನ; ಬಂಗಾರ (೨.೫-೨೨೦)

ಕಡವೆ (ನಾ). ಗಂಡುಕುದುರೆ (೪.೧೨-೧೩೬)

ಕಡಿದು (ಗು). ತೀಕ್ಷ್ಣವಾದ; ಉಗ್ರವಾದ (೧.೧ - ೫೧೫)

ಕಡುಪು (ನಾ). ೧. ಉಗ್ರತೆ; ತೀವ್ರತೆ; ಪ್ರಖರತೆ; ತೀಕ್ಷ್ಣತೆ (೧.೨-೬೭೦) ೨. ಬಲುಮೆ; ಪರಾಕ್ರಮ; ದರ್ಪ (೨.೧-೩೦೫)

ಕಡುಪು (ನಾ). ಉಗ್ರತೆ; ತೀವ್ರತೆ; ಪ್ರಖರತೆ; ತೀಕ್ಷ್ಣತೆ (೧.೧೦-೬೩)

ಕಡೆ (ನಾ). ಕೊನೆ; ಮುಕ್ತಾಯ; ಅಂತ್ಯ (೧.೭-೩೩೯)

ಕಡೆಗಣ್ಣು (ನಾ). ಕಡೆಗಣ್ಣಿನ ನೋಟ; ಓರೆನೋಟ (೧.೯-೯೦)

ಕಣಿ (ನಾ). ಮುಂದಿನ ಜೀವನದಲ್ಲಿ ಬರಲಿರುವುದು; ಭವಿಷ್ಯ ಫಲ;

ಪ್ರಯೋಜನ (೧.೧-೪೩೧)

ಕಣೆ (ನಾ). ಕೋಲು; ಸರಳು; ಬಾಣ (೧.೧೧-೬೪)

ಕಣ್ಕಪ್ಪು, ಕಣ್ಣುಕಪ್ಪು(ನಾ). ಕಣ್ಣಿನ ಕಪ್ಪುಬಣ್ಣ,-ಕರಿಗುಡ್ಡೆ (೧.೯-೨೯)

ಕಣ್ಗೆಡು, ಕಂಗೆಡು (ಕ್ರಿ). ಕಕ್ಕವಿಕ್ಕಿಯಾಗು; ದಿಕ್ಕುತಪ್ಪು; ಗಾಬರಿಯಾಗು (೧.೫-೩೦೩)

ಕಣ್ಗೆಡು, ಕಂಗೆಡು (ಕ್ರಿ). ಕ್ಷೋಭೆಗೊಳ್ಳು; ಉದ್ವೇಗಗೊಳ್ಳು (೨.೨-೧೦೬)

ಕಣ್ಗೊಳಿಸು, ಕಣ್ಣುಗೊಳಿಸು (ಕ್ರಿ). ಕಣ್ಣನ್ನು ಆಕರ್ಷಿಸು; ಮನೋಹರವಾಗು (೧.೭-೩೮)

ಕಣ್, ಕಣ್ಣು (ನಾ). ನೋಡುವ ಅಂಗ; ನೇತ್ರ; ನಯನ; ದೃಷ್ಟಿ

ಕಣ್ಣಾಗು= ದೃಷ್ಟಿಯಿಡು; ತೀವ್ರವಾಗಿ ಬಯಸು (೧.೧ -೩೩೧)

ಕಣ್ಣಾರ್ (ಕ್ರಿ). ಕಣ್ಣಿಗೆ ತೃಪ್ತಿಯಾಗು (೧.೫-೫೮)

ಕಣ್ಣಿ (ನಾ). (ದನಗಳ) ಕೊರಳಿಗೆ ಕಟ್ಟುವ ಹಗ್ಗ (೧.೧ - ೩೪೯)

ಕಣ್ಣಿಡು (ಕ್ರಿ). ದೃಷ್ಟಿಯಿಡು; ದೃಷ್ಟಿನೆಡು (೧.೬-೨೪೬)

ಕಣ್ಣೆಮೆಯಿಕ್ಕು (ಕ್ರಿ). ಕಣ್ಣಿನ ರೆಪ್ಪೆಯನ್ನು ಹೊಡೆ; ಎವೆಯಿಕ್ಕು (೧.೭-೩೩೭)

ಕಣ್ಬೊಲ, ಕಂಬೊಲ (ನಾ). ಕಣ್ಣಿಗೆ ಕಾಣುವಷ್ಟು ಪ್ರದೇಶ; ಕಣ್ಣಿನ ದೃಷ್ಟಿ ಹೋಗುವಷ್ಟು ದೂರ; ದೃಷ್ಟಿ ಪಥ (೧.೪-೪೩೮)

ಕತ (ನಾ). ಕಾರಣ; ನಿಮಿತ್ತ (೧.೪-೨೧೧)

ಕದಂಪು, ಕದಪು (ನಾ). ಕೆನ್ನೆ; ಗಲ್ಲ; ಕಪೋಲ (೧.೪-೨೩೭)

ಕದಿರ್, ಕದಿರು (ನಾ). ೧. ಕಿರಣ ೨. ಕಾಂತಿ; ಹೊಳಪು (೧.೪-೫೦೮)

ಕನಲ್, ಕನಲು (ಕ್ರಿ). ಸಿಟ್ಟಿಗೇಳು; ರೇಗು; ಕ್ರುದ್ಧನಾಗು (೧.೫-೫೫)

ಕನ್ನಡವಕ್ಕಿ, ಕನ್ನಡ ಹಕ್ಕಿ (ನಾ). ಗಿಳಿ; ಗಿಣಿ (೩.೩-೫೨)

ಕಪಿಶ (ನಾ). ಕೋತಿಯ ಬಣ್ಣ, ನಸುಗೆಂಪು; ಕಪಿಲವರ್ಣ (೪.೧೩-೧೩೯)

ಕಪೋಲ (ನಾ). ಕೆನ್ನೆ; ಗಲ್ಲ (೧.೫-೨೮೧)

ಕಬ್ಬ (ನಾ). ಕಾವ್ಯ; ಕವನ (೧.೧ -೫೭೭)

ಕಬ್ಬಗಣ್ (ನಾ). ಕಾವ್ಯದೃಷ್ಟಿ (೧.೮-೭೬)

ಕಮಂಡಲ (ನಾ). ಯತಿಗಳೂ ಬೈರಾಗಿಗಳೂ ಉಪಯೋಗಿಸುವ ಜಲಪಾತ್ರೆ; ನೀರಿನ ಗುಂಡಿಗೆ (೧.೧೦-೨೭೦)

ಕಮಟ (ನಾ). ಆಮೆ (೧.೧೦-೧೫೫)

ಕಮನೀಯ (ಗು). ಸುಂದರವಾದ; ಮನೋಹರವಾದ (೧.೨-೧೩೭)

ಕಮರು, ಕೌರು (ನಾ). ಸುಟ್ಟ ವಾಸನೆ; ಕೆಟ್ಟನಾತ; ಕಂಟು (೩.೭-೨೭೨)

ಕಮ್ಮನೆ (ಗು). ಸುಗಂಧವುಳ್ಳ; ಸುವಾಸನೆಯ (೧.೩-೩೪)

ಕಯ್ಗೆಯ್, ಕೆಯ್ಗೆಯ್, ಕೈಗೆಯ್, ಕೈಗೈ (ಕ್ರಿ). ಸಿಂಗರಿಸು; ಅಲಂಕರಿಸು (೧.೮-೨೨೫)

ಕಯ್ವಾರ, ಕೈವಾರ (ನಾ). ಕೊಂಡಾಟ, ಹೊಗಳಿಕೆ, ಸ್ತೋತ್ರ (೨.೨-೨೯)

ಕರಗು (ಕ್ರಿ). ಮಾಯವಾಗು; ಇಲ್ಲವಾಗು; ಮರೆಯಾಗು (೧.೬-೨೪೨)

ಕರಡ, ಕರಡವುಲ್, ಕರಡಹುಲ್ಲು (ನಾ). ಕಾಡು ಅಥವಾ ಬೆಟ್ಟದ ಮೇಲೆ

ಬೆಳೆದು ಒಣಗಿದ ಹುಲ್ಲು (೨.೩-೧೩೭), (೩.೫-೨೯೦)

ಕರಣ (ನಾ). ಉಪಕರಣ; ಸಾಮಗ್ರಿ; ಸಾಧನ; ಉಪಾಯ (೪.೧೨-೬೭)

ಕರಣೀಯ (ಗು). ಮಾಡಬೇಕಾದ (೨.೯-೫೬೧)

ಕರತಲಾಮಲಕ, ಕರತಳಾಮಳಕ (ನಾ). ೧. ಅಂಗೈಯೊಳಗಿನ ನೆಲ್ಲಿ ೨. (ಆಲಂ) ಅತ್ಯಂತ ಸ್ಪಷ್ಟವಾದುದು,-ಸ್ಫುಟವಾದುದು, ಚೆನ್ನಾಗಿ ತಿಳಿದುದು. (೧.೫-೫೬)

ಕರಪುಟ (ನಾ). ಗೌರವಾರ್ಥವಾಗಿ ಮುಗಿದ ಕೈ; ಎರಡೂ ಕೈಗಳನ್ನು ಜೋಡಿಸುವಿಕೆ (೧.೫-೩೧)

ಕರಾಲಿ, ಕರಾಳಿ (ನಾ). ಶಿವನ ಒಂದು ಶಕ್ತಿ (೪.೭-೩೩)

ಕರಿಕುವರಿ (ಕ್ರಿ). ಸುಟ್ಟು ಕಪ್ಪಾಗು; ಕರಿಕಾಗು. (೨.೯-೫)

ಕರುಂಬು, ಕರುಬು (ಕ್ರಿ). ಹೊಟ್ಟೆ ಕಿಚ್ಚುಪಡು; ಮತ್ಸರಿಸು; ಅಸೂಯೆಪಡು (೧.೨-೩೭೨) (೧.೩-೨೪೧)

ಕರುವಿಡು, ಕರುವಿಕ್ಕು (ಕ್ರಿ). ಎರಕಹೊಯ್ಯು, ಅಚ್ಚೊತ್ತು; ಲೆಪ್ಪಹಾಕು (೧.೪-೪೮)

ಕರೆ (ನಾ). ದಡ; ತೀರ; ಮೇರೆ; ಸೀಮೆ (೧.೧ – ೩೩೮)

ಕರೆಗಣ್ಮು (ಕ್ರಿ). ಮೇರೆ ಮೀರು; ತುಂಬಿ ತುಳುಕು; ಸೂಸಿಹರಿ (೨.೮-೧೭೩)

ಕರ್ಗಲ್ಲು (ನಾ). ಕರಿಯ ಕಲ್ಲು (೨.೬-೧೨೮)

ಕರ್ಚು (ನಾ). ತೊಳೆಯುವಿಕೆ; ಪ್ರಕ್ಷಾಲನ (೧.೬-೧೧೦)

ಕರ್ಣಚೈತ್ರ (ನಾ). ಪಕ್ಷಿಗಳ ಕಲರವದಿಂದ ಕಿವಿಗೆ ಪ್ರಾಪ್ತವಾಗುವ ಚೈತ್ರಮಾಸ (೧.೭-೧೭೬)

ಕರ್ದಮ (ನಾ). ಕೆಸರು; ಕದಡು; ಪಂಕ (೧.೯-೪೧೯)

ಕರ್ದಿಂಗಳ್ (ನಾ). ಕೃಷ್ಣ ಪಕ್ಷ; ಅಮಾವಾಸ್ಯೆ (೨.೨-೭೯)

ಕರ್ದಿಂಗಳ್, ಕದ್ದಿಂಗಳು, ಕರಿದಿಂಗಳು, ಕದ್ದಿಂಗಳ್ (ನಾ). ಕೃಷ್ಣ ಪಕ್ಷ; ಅಮಾವಾಸ್ಯೆ (೨.೨-೭೯)

ಕರ್ಬಿತ್ತರ (ನಾ). ಕಪ್ಪನೆಯ ಆವರಣ; ಕರಿಯ ಹರಹು; ಕತ್ತಲೆಯ ವಿಸ್ತಾರ (೧.೫-೮೬)

ಕರ್ಬುರ (ನಾ). ೧. ಕಪ್ಪು ಬಣ್ಣ ೨. ರಾಕ್ಷಸ; ದೈತ್ಯ (೧.೨-೩೯೦)

ಕರ್ಬೂರ (ನಾ). ಚಿನ್ನ; ಹೊನ್ನು (೩.೭-೧೫)

ಕರ್ಮಕ್ಷಯ (ನಾ). ಪಾಪಪುಣ್ಯ ರೂಪವಾದ ಕರ್ಮ ಬಂಧವು ಕ್ಷಯಿಸುವುದು, -ನಾಶವಾಗುವುದು (೨.೧-೪೩೩)

ಕರ್ಮಕಠ (ನಾ). ಧಾರ್ಮಿಕ ವ್ರತ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸುವವನು (೧.೩-೩೩೨)

ಕರ್ಮಣಿ, ಕರ್ವಣಿ (ನಾ). ಕಪ್ಪುಬಣ್ಣದ ಮಣಿ; ಇಂದ್ರನೀಲ (೧.೩-೬೭)

ಕರ್ಮುಗಿಲ್, ಕರ್ಮುಗಿಲು (ನಾ). ಕಪ್ಪುಮೋಡ; ನೀಲ ಮೇಘ (೧.೨ – ೧೭೩)

ಕರ್ವಟ್ಟೆ (ನಾ). ಕರಿಯ ಬಟ್ಟೆ; ಕಪ್ಪು ವಸ್ತ್ರ (೧.೯- ೨೫೭)

ಕರ್ವೊನಲು (ನಾ). ಕಪ್ಪುನದಿ; ಯಮುನಾನದಿ; ಕಾಳಿಂದಿ (೧.೯-೨೮)

ಕರ್ಶಿತ (ನಾ). ಸೊರಗಿದವನು; ಕೃಶನಾದವನು (೪.೬–೧೫)

ಕಱು (ಕ್ರಿ), ಕರುತ್ತು (= ಗುರಿಯಿಡು; ಲಕ್ಷ್ಯವಿಡು (೨.೬–೬೮)

ಕಲಕಂಠ (ನಾ). ಇಂಪಾದ ಧ್ವನಿಯುಳ್ಳದ್ದು; ಕೋಗಿಲೆ (೧.೧ – ೪೦೩)

ಕಲಿ (ನಾ). ಬಂಟ; ಶೂರ; ವೀರ (೨.೫–೧೦೮)

ಕಲೇವರ, ಕಳೇವರ, ಕಳೇಬರ (ನಾ). ಮೈ; ದೇಹ; ಶರೀರ (೧.೨–೫೪೯)

ಕಲ್ಗಬ್ಬ (ನಾ). ಕಲ್ಲಿನಗರ್ಭ (೧.೧.೩೨೮)

ಕಲ್ತನ.(ನಾ) ಕಲ್ಲಾಗಿರುವಿಕೆ; ಕಠಿನತೆ (೧.೫–೨೯೫)

ಕಲ್ದವಸಿ (ನಾ). ಶಿಲಾತಪಸ್ವಿ (೧.೮–೧೦೨)

ಕಲ್ಪತರು, ಕಲ್ಪದ್ರುಮ, ಕಲ್ಪಕುಜ, ಕಲ್ಪವೃಕ್ಷ (ನಾ). ಬೇಡಿದುದನ್ನು ಕೊಡುವ ಸ್ವರ್ಗ, ಲೋಕದ ಒಂದು ಮರ (೧.೨–೫೬೫)

ಕಲ್ಪಿ, ಕಲುಪಿ (ನಾ). ಕಲಿಯುವುದು; ಕಲಿತುದು; ವಿದ್ಯೆ (೧.೧೦–೩೬೬)

ಕಲ್ಲೋಜತನ (ನಾ). ಶಿಲ್ಪವಿದ್ಯೆ, –ಕಲೆ (೩.೯–೯೪)

ಕಲ್ಲೋಲ (ನಾ). ದೊಡ್ಡ ಅಲೆ,–ತೆರೆ; ಹೆದ್ದೆರೆ (೧.೭–೩೫)

ಕವಣೆ, ಕವಣಿ (ನಾ). ಕಲ್ಲನ್ನು ಇಟ್ಟು ತಿರುಗಿಸಿ ಬೀಸಿ ಹೊಡೆಯುವುದಕ್ಕಾಗಿ ಮಾಡಿದ ಒಂದು ಜಾಳಿಗೆಯ ಹಗ್ಗ (೧.೧೦–೧೨೦)

ಕವರ್ತೆ (ನಾ). ಬಲಾತ್ಕಾರದಿಂದ ಕಿತ್ತುಕೊಳ್ಳುವುದು; ಸುಲಿಗೆ; ಲೂಟಿ (೩.೧–೨೭೮)

ಕವರ್ತೆಗೊಳ್ (ಕ್ರಿ). ಸುಲಿಗೆ ಮಾಡು; ಕಿತ್ತು ಕೊಳ್ಳು; ಸೆಳೆದು ಕೊಳ್ಳು; ಅಪಹರಿಸು. (೨.೧–೧೩೧)

ಕವರ್ತೆವಟ್ಟೆ (ನಾ). ಅಪಹಾರ ಮಾಡುವ ರೀತಿ; ಅಪಹಾರ ಮಾರ್ಗ (೨.೧–೧೫೪)

ಕವಲ್ಗಣೆ (ನಾ). ಮರದಲ್ಲಿ ಕವಲು ಒಡೆಯುವ ಜಾಗ, ಸ್ಥಳ; ಶಾಖಾಮೂಲ (೨.೨–೯೦)

ಕವುಂಗು, ಕಂಗು, ಕೌಂಗು (ನಾ). ಅಡಕೆ; ಪೂಗ (೧.೧೦–೧೨೯)

ಕಶಾಘಾತ (ನಾ). ಚಾವಟಿಯ ಏಟು; ಚಬಕದ ಹೊಡೆತ (೧.೩–೫೮೭)

ಕಸುಗಾಯ್ತನ (ನಾ). ಹೀಚು; ಅಪಕ್ವತೆ (೪.೩–೨೨೪)

ಕಳವಳ (ನಾ). ತಳಮಳ; ಕಸವಿಸಿ; ಚಿಂತೆ; ವ್ಯಾಕುಲತೆ; ಗಾಬರಿ (೧.೫–೯೪)

ಕಳವಳಿಸು (ಕ್ರಿ). ತಳಮಳಿಸು; ಆತಂಕಗೊಳ್ಳು; ಚಡಪಡಿಸು; ದಿಗ್ಭ್ರಾಂತವಾಗು (೧.೨–೬೭೨)

ಕಳ್ತಲಿಸು (ಕ್ರಿ). ಕತ್ತಲೆಯನ್ನು ಉಂಟುಮಾಡು; ಕತ್ತಲೆ ಕವಿಸು (೨.೧–೧೯೭)

ಕಳ್ತೆ, ಕತ್ತೆ (ನಾ). ಗರ್ದಭ; ರಾಸಭ (೧.೫–೧೨೪)

ಕಟಿಲೆ, ಕಣಿಲೆ, ಕಳಲೆ, ಕಳಿಲೆ (ನಾ). ಬಿದಿರಿನ ಮೊಳಕೆ, – ಕುಡಿ (೧.೭–೪೦೩)

ಕಟಿ, ಕಳಿ (ಕ್ರಿ). ಹಣ್ಣಾಗು; ಮಾಗು; ಪಕ್ವವಾಗು (೧.೧೧–೪೧)

ಕಾಂತ (ಗು). ಸುಂದರವಾದ; ಮನೋಹರವಾದ (೧.೮–೧೬೨)

ಕಾಂತಾರ (ನಾ). ಅಡವಿ; ಕಾಡು (೧.೪–೩೧೫)

ಕಾಕಪಕ್ಷ (ನಾ). (ಚವಲ ಕರ್ಮದಲ್ಲಿ ತೆಗೆಯದೆ) ತಲೆಯ ಎರಡೂ ಪಕ್ಕದಲ್ಲಿ ಬಿಟ್ಟಿರುವ ಜುಟ್ಟು; ಜುಲ್ಪಿಯ ಕೂದಲು; ಚಂಡಿಕೆ (೧.೨ –೧೮)

ಕಾಕು (ನಾ). ೧. (ದೂರದಲ್ಲಿರುವವನಿಗೆ ಕೇಳಿಸುವಂತೆ) ಗಟ್ಟಿಯಾಗಿ ಮಾಡುವ ಧ್ವನಿ(೧.೧೦–೩೯೬)

ಕಾಕು (ನಾ). ಚೀರಾಟ; ಬೊಬ್ಬೆ (೨.೩–೨೮೧)

ಕಾಕುತ್ಥ (ನಾ). ಕಕುತ್ಸ್ಥ ವಂಶದಲ್ಲಿ ಹುಟ್ಟಿದವನು; ದಶರಥ; ರಾಮ (೧.೨ –೨೦)

ಕಾಡದಟು (ನಾ). ಕಾಡುತನದ ಪರಾಕ್ರಮ; ನಾಗರಿಕವಲ್ಲದ ಶೌರ್ಯ (೨.೬–೧೯)

ಕಾಡಿಗೆ (ನಾ). ಕಣ್ಣಿಗೆ ಹಚ್ಚಿಕೊಳ್ಳುವ ಕಪ್ಪು; ಅಂಜನ, ಕಜ್ಜಳ (೧.೧೦–೪೦೮)

ಕಾಡು (ಕ್ರಿ). ಏಡಿಸು; ಅವಹೇಳನ ಮಾಡು; ಹಿಂಸಿಸು; ಪೀಡಿಸು (೧.೨–೩೭೧)

ಕಾಡುಗೋಡು (ನಾ). ಕಾಡಿನ ಎತ್ತರವಾದ ಪ್ರದೇಶ (೨.೮–೫)

ಕಾಣ್ಕೆ (ನಾ). ಕಾಣುವಿಕೆ; ನೋಟ; ದರ್ಶನ (೧.೧ –೨೪೨)

ಕಾತರ (ಗು). ಅಂಜಿದ; ಕಂಗೆಟ್ಟ; ದಿಗಿಲುಗೊಂಡ (೧.೯–೧೫೧)

ಕಾತರಿಸು (ಕ್ರಿ). ಉತ್ಕಂಠಿತನಾಗು; ಹಂಬಲಿಸು (೧.೪–೩೧೪), (೨.೧–೩೩೫)

ಕಾದಲ್ಮೆ (ನಾ). ಒಲವು; ಪ್ರೀತಿ; ಸ್ನೇಹ (೧.೩–೩೬೦)

ಕಾಪಾಡು (ಕ್ರಿ). ಕಾಯು; ಸಾಕು; ಸಲಹು; ರಕ್ಷಿಸು (೧.೩–೫೩೦)

ಕಾಪು (ನಾ). ಕಾಯುವಿಕೆ; ಕಾವಲು; ಪಹರೆ (೧.೧೧–೧೪೩)

ಕಾಪುರುಷ (ನಾ). ಹೀನಮನುಷ್ಯ; ಕ್ಷುದ್ರಮನುಷ್ಯ(೧.೨–೨೦೩)

ಕಾಮಕೌಶಲಿ (ನಾ). ಕಾಮಶಾಸ್ತ್ರದಲ್ಲಿ ಕುಶಲನಾದವನು, ನಿಪುಣ. (೩.೨–೨೮೯)

ಕಾಮಧನು (ನಾ). ೧. ಮನ್ಮಥನ ಬಿಲ್ಲು ೨. ಮಳೆ ಬಿಲ್ಲು; ಇಂದ್ರ ಧನುಸ್ಸು (೨.೨–೭೦)

ಕಾಮರೂಪಿ (ನಾ). ಇಷ್ಟಬಂದ ರೂಪವನ್ನು ಧರಿಸಬಲ್ಲವನು (೧.೧೦–೩೮೩)(೨.೨–೭೨)

ಕಾಮಿ (ಗು). ಬಯಸುವ; ಇಚ್ಛಿಸುವ (೧.೬–೧೪೧)

ಕಾರ್ಮಿಂಚು, ಕಾರಮಿಂಚು (ನಾ). ಮಳೆಯ ಮಿಂಚು; ಮಳೆಗಾಲದ ಮಿಂಚು (೧.೨–೫೪೧)

ಕಾಮಿಸು (ಕ್ರಿ). ಬಯಸು; ಅಪೇಕ್ಷಿಸು; ಇಷ್ಟಪಡು (೩.೧೨–೨)

ಕಾಯ್ (ಕ್ರಿ). ಕಾಯ್ತ (ಭೂತಕೃ); ಕಾತು, ಕಾಯ್ದು (ಭೂತನ್ಯೂ), ಕಾಯಿಬಿಡು (೩.೯–೩೫೫)

ಕಾಯ್ಪು, ಕಾಯಿಪು, ಕಾವು, ಕಾಹು (ನಾ). ಬಿಸುಪು; ತಾಪ: ಉಷ್ಣತೆ: ಶಾಖ: ಸೆಕೆ (೨.೨–೧೦)

ಕಾರ (ನಾ). (ಆಲಂ). ಕೋಪ; ಸಿಟ್ಟು (೨.೯–೩೦)

ಕಾರಣ ಪುರುಷ (ನಾ). ೧. ಎಲ್ಲಕ್ಕೂ ಮೂಲಕಾರಣನಾದ ಪುರುಷ; ಪರಬ್ರಹ್ಮ. ೨. ಅವತಾರ ಪುರುಷ; ಮಹಾತ್ಮ (೧.೧೦–೪೫೫)

ಕಾರುಕರ್ಮ (ನಾ). ಕೈಕೆಲಸ; ಶಿಲ್ಪ (೨.೯–

೪೫೬)

ಕಾರುಣ್ಯ (ನಾ). ದಯೆ; ಮರುಕ; ಕರುಣೆ (೨.೧-೧೧೨)

ಕಾರ್, ಕಾರು (ನಾ). ಮಳೆಗಾಲ; ವರ್ಷಾಕಾಲ (೧.೫-೨೨೬)

ಕಾರ್ಗಾಲ (ನಾ). ಮಳೆಗಾಲ; ವರ್ಷಕಾಲ (೧.೪-೪೨೫)

ಕಾರ್ಪಣ್ಯ (ನಾ). ಬಡತನ; ದಾರಿದ್ರ್ಯ (೧.೯-೩೯೫)

ಕಾರ್ಮುಕ (ನಾ). ಬಿಲ್ಲು; ಧನುಸ್ಸು (೧.೨-೪೯೧)

ಕಾರ್ಯಲಗ್ನ (ನಾ). ಸಮಾರಂಭವು ನಡೆಯಬೇಕಾದ ಕಾಲ; ಮುಹೂರ್ತ (೨.೧೦-೮೭)

ಕಾಲ ಪುರುಷ (ನಾ). ಕಾಲಕ್ಕೆ ಅಧಿಪತಿಯಾದ ದೇವತೆ (೧.೨-೪೧೩)

ಕಾಲಕೂಟ, ಕಾಳಕೂಟ (ನಾ). ಒಂದು ಮಹಾವಿಷ; ಘೋರವಾದ ವಿಷ (೧.೩-೪೧೩)

ಕಾಲಕೇಯ (ನಾ). ದಾನವರ ಒಂದು ಗುಂಪು (೩.೭-೧೩೩)

ಕಾಲಲಬ್ಧಿ (ನಾ). (ಜೈನ) ಐದು ಬಗೆಯ ಲಬ್ಧಿಗಳಲ್ಲಿ ಒಂದು; ಆಧ್ಯಾತ್ಮಿಕ ಜೀವನ ಆರಂಭವಾಗುವುದಕ್ಕೆ ಪಕ್ವವಾದ ಕಾಲ ಬರುವಿಕೆ; ಅರಿವು ಹುಟ್ಟುವ ಕಾಲದ ಪ್ರಾಪ್ತಿ (೩.೧೩-೨೧೪)

ಕಾಲಲೀಲೆ (ನಾ). ಕೊಲ್ಲುವ ಆಟ; ಸಂಹಾರ ರೂಪವಾದ ಕ್ರೀಡೆ (೩.೧೨-೨೩೨)

ಕಾಲವಶಿ (ನಾ). ಮೃತ್ಯು ದೇವತೆಯ ಅಂಕೆಗೆ ಒಳಪಟ್ಟವನು; ಮರಣಾಧೀನ (೩.೧೨-೨೮೪)

ಕಾಲಾಗ್ನಿ, ಕಾಳಾಗ್ನಿ (ನಾ). ಪ್ರಳಯಾಗ್ನಿ; ಎಲ್ಲವನ್ನೂ ಸುಟ್ಟುಹಾಕುವ ಕೊನೆಕಾಲದ ಬೆಂಕಿ (೧.೨-೬೬೨)

ಕಾಲಾಯಸ (ನಾ). ಕಪ್ಪುಲೋಹ; ಕಬ್ಬಿಣ (೧.೫-೧೨೧) (೨.೮-೭೯)

ಕಾಲಾಹಿ, ಕಾಳಾಹಿ (ನಾ). ಕಾಲಸರ್ಪ; ಕೃಷ್ಣಸರ್ಪ (೧.೧-೬೧೭)

ಕಾಲಿಕೆ, ಕಾಳಿಕೆ (ನಾ). ೧. ಕಪ್ಪು; ಕತ್ತಲೆ ೨. ಮಾಲಿನ್ಯ; ಕುಂದು; ದೋಷ. (೨.೮-೧೮೯)

ಕಾಲ್ಗೆಡಿಸು (ಕ್ರಿ). ಅಡ್ಡಗಟ್ಟು; ಕಾಲಿನ ಶಕ್ತಿಯನ್ನು ಉಡುಗಿಸು; ಗಾಬರಿಗೊಳಿಸು; ಧೈರ್ಯಗುಂದಿಸು (೧.೬-೧೭೬)

ಕಾವಿ (ನಾ). ಕೆಂಪುಬಣ್ಣದ ಮಣ್ಣು (೨.೯-೧೪೩)

ಕಾಷ್ಟ, ಕಾಷ್ಠ(ನಾ). ಮರದ ತುಂಡು; ಕಟ್ಟಿಗೆ; ಸೌದೆ (೧.೬-೩೩೭)

ಕಾಸಾರ (ನಾ). ಕೊಳ; ಸರೋವರ (೧.೪-೩೫೨)

ಕಾಳಗ, ಕಾಳೆಗ (ಕ್ರಿ). ಕಾದಾಟ; ಯುದ್ಧ; ಕಲಹ (೧.೪-೪೬೭)

ಕಾಳಸೆ (ನಾ). ಕೀಲಣೆ; ಜೋಡಣೆ (೨.೨-೫೫೫)

ಕಾಳ್ಮರ, ಕಾಮರ (ನಾ). ಕಾಡುಮರ (೪.೧೦-೨೯೪)

ಕಾಳ್ಮಿಗ (ನಾ). ಕಾಡುಜಿಂಕೆ (೧.೧೧-೫೪)

ಕಿಂಕರಿ (ನಾ). ಸೇವಕಿ; ದಾಸಿ (೪.೨-೯)

ಕಿಂಕಿಣಿ (ನಾ). ೧. ಕಿರುಗೆಜ್ಜೆ; ಕಿರುಗಂಟೆ; ಕಿಣಿಕಿಣಿ ಶಬ್ದಮಾಡುವ ಆಭರಣ (೧.೧-೪೮೯) ೨. ಕಿಣಿಕಿಣಿಯೆಂಬ

ಶಬ್ದ,-ನಾದ (೧.೩-೪೩)
ಕಿಂಜಲ್ಕ, ಕಿಂಜಳ್ಕ (ನಾ). ಕಮಲ ಮೊದಲಾದ ಹೂವುಗಳ ಕೇಸರ; ಹೂವಿನ ಕುಸುರು. (೨.೫-೮೦)
ಕಿಂಶುಕ (ನಾ). ಮುತ್ತುಗದ ಮರ (೨.೬-೪೯)
ಕಿಡು (ಕ್ರಿ). ಅಳಿ; ನಾಶವಾಗು; ಹಾಳಾಗು (೧.೫-೨೯೫)
ಕಿಡು, ಕೆಡು (ಕ್ರಿ). ಅಳಿ; ನಾಶವಾಗು; ಹಾಳಾಗು (೧.೫-೬೭)
ಕಿತವ (ನಾ). ಸುಳ್ಳುಗಾರ; ಮೋಸಗಾರ; ವಂಚಕ (೧.೩-೫೨೪) (೨.೨-೧೫೬)
ಕಿತ್ತಡಿ (ನಾ). ಋಷಿ; ಮುನಿ; ವ್ರತಿ (೧.೭-೨೬೯)
ಕಿನಿಸು (ಕ್ರಿ). ರೇಗು; ಕೆರಳು; ಕೋಪಿಸು (೧.೩-೧೬೬)
ಕಿಬ್ಬಿ, ಕಿಬ್ಬೆ (ನಾ). ಇಳಿಜಾರು; ಬೆಟ್ಟದಪಕ್ಕ,-ತಟ (೧.೬-೧೭೬)
ಕಿರಿದು (ನಾ). ಚಿಕ್ಕದು; ಸ್ವಲ್ಪವಾದದ್ದು; ಸಂಕ್ಷೇಪವಾದುದು (೨.೧-೩೧೮)
ಕಿರುಕುಳ (ಗು). ಕ್ಷುಲ್ಲಕವಾದ; ಅಲ್ಪವಾದ (೨.೧-೫೨)
ಕಿರ್ಚು, ಕಿಚ್ಚು (ನಾ). ಬೆಂಕಿ; ಅಗ್ನಿ (೪.೬-೨೫)
ಕಿರ್ಮೀರತೆ (ನಾ). ಅನೇಕ ವರ್ಣಗಳ ಮಿಶ್ರಣ; ಶಬಳತೆ (೩.೩-೫೯), (೪.೧೩-೧೩೮)
ಕಿಲ್ಬಿಷ (ನಾ). ಕೊಳೆ; ಕಳಂಕ; ಪಾಪ (೨.೮-೧೬೬)
ಕಿಸಲಯ (ನಾ). ಚಿಗುರು; ಪಲ್ಲವ (೧.೪-೫೨೩)
ಕಿಸುಗಣ್ಣು (ಕ್ರಿ). ಕಣ್ಣು ಕೆಂಪಗೆ ಮಾಡು; ರೇಗು; ಕೋಪಿಸು (೨.೬-೨೩)
ಕೀನಾಶ (ನಾ). ಯಮ (೧.೩-೫೦೦)
ಕೀರ್ತಿಶೇಷ (ಗು). ಯಶಸ್ಸಿನಲ್ಲಿ ಉಳಿದ; ಯಶಸ್ಸನ್ನು ಮಾತ್ರ ಉಳಿಸಿಹೋದ; ಸತ್ತ (೧.೫-೧೭೨)
ಕೀರ್ತಿಸು (ಕ್ರಿ). ಕೊಂಡಾಡು; ಹೊಗಳು; ಸ್ತುತಿಸು (೧.೧೦-೩೭೫)
ಕೀಲಣ, ಕೀರಣ, ಕೀಲಣೆ (ನಾ). ಗುಟ್ಟು; ಮರ್ಮ, ರಹಸ್ಯ (೨.೨-೪೬೩)
ಕೀಲಿಸು, ಕೀಲೈಸು (ಕ್ರಿ). ನಡು; ನಾಟು; ಚುಚ್ಚು (೧.೧೦-೧೦)
ಕೀಶ (ನಾ). ಕೋತಿ; ಮಂಗ; ಕಪಿ (೨.೬-೩೯೬)
ಕೀಸು (ಕ್ರಿ). ಕೊರೆ; ಕೆತ್ತು; ಕೆರೆ (೧.೧೦-೧೪೯)
ಕೀಸು (ಕ್ರಿ). ಉಜ್ಜು; ತಿಕ್ಕು; ಒರೆ (೧.೫-೧೪೬)
ಕೀಳ್ (ನಾ). ತಗ್ಗು, ತಗ್ಗಾದ ಪ್ರದೇಶ (೧.೫-೨೧)
ಕೀಳ್ಪರಿಜು (ನಾ). ಹೀನವಾದ ರೂಪ (೧.೬-೮೯)
ಕೀಳ್ವಟ್ಟೆ (ನಾ). ಕೆಳಗಿನ ದಾರಿ (1.7–53)
ಕುಂಜ (ನಾ). ಬಳ್ಳಿಗಳು ಕವಿದ ಸ್ಥಳ; ಬಳ್ಳಿಮಾಡ; ಲತಾಗೃಹ (2.9–310)
ಕುಂಭಿನಿ (ನಾ). ನೆಲ; ಭೂಮಿ; ಪೃಥ್ವಿ (೩.೪-೧೨೫)
ಕುಂಭೀರ (ನಾ). ಮೊಸಳೆ (೩.೩-೨೯)
ಕುಂಭೋದ್ಭವ (ನಾ). ಅಗಸ್ತ್ಯ (೩.೧೨-೬)
ಕುಕ್ಷಿ (ನಾ). ಒಡಲು; ಹೊಟ್ಟೆ; ಜಠರ (೨.೩-೪೧)
ಕುಗುರು (ಕ್ರಿ). ತೂಕಡಿಸು; ನಿದ್ದೆಮಾಡು (೨.೯-೫೬)
ಕುಚರ (ನಾ). ಕೆಟ್ಟಬುದ್ಧಿಯವನು;

ವಕ್ರಬುದ್ಧಿಯುಳ್ಳವನು (೧.೯-೫೨೨)

ಕುಜ (ನಾ). ಗಿಡು; ಮರ (೧.೧೦-೨೧೭)

ಕುಟಜ (ನಾ). ಬೆಟ್ಟಮಲ್ಲಿಗೆ; ಕೊಡಸಿಗೆ (೧.೧೦-೭೭)

ಕುಟರವಕ್ಕಿ (ನಾ). 'ಕುಟುರ್' ಎಂದು ಧ್ವನಿ ಮಾಡುವ ಹಕ್ಕಿ, ಪಾರಿವಾಳ (?) (೨.೨-೫೬೪)

ಕುಟಿಲ (ಗು). ೧. ಕೊಂಕಿದ; ಬಾಗಿದ; ನೇರವಲ್ಲದ (೧.೨-೨೦೭) ೨. (ನಾ) ಮೋಸ; ವಂಚನೆ; ಕುಯುಕ್ತಿ; ಕುತಂತ್ರ (೨.೨-೧೪೩)

ಕುಟ್ಟಿಮ (ನಾ). ಸಮಮಾಡಿದ ನೆಲ; ನೆಲಗಟ್ಟು; ಬಗೆಬಗೆಯ ಕಲ್ಲುಗಳನ್ನು ಹೊಂದಿಸಿದ ನೆಲಗಟ್ಟು(೧.೩-೬೭), (೧.೫-೨೧)

ಕುಟ್ಮಲ (ನಾ). ಅರಳು ಮೊಗ್ಗು; ನನೆ; ಮುಗುಳು (೧.೨-೩೪೦)

ಕುಡುಹು, ಕುಡುಪು (ನಾ). ವಾದ್ಯವನ್ನು ಬಾರಿಸುವ ಕೋಲು; ಪಿಟೀಲು ಮೊದಲಾದ ತಂತಿವಾದ್ಯಗಳನ್ನು ನುಡಿಸುವ ಬಿಲ್ಲು, -ಕಮಾನು; ವಾದನ ದಂಡ (೩.೯-೨೮೪)

ಕುಡ್ಯ (ನಾ). ಗೋಡೆ (೩.೧-೩೧೩)

ಕುತ್ಕೀಲ, ಕುತ್ಕೀಳ (ನಾ). ಭೂಮಿಗೆ ಕೀಲಿನಂತಿರುವುದು; ಬೆಟ್ಟ; ಪರ್ವತ (೩.೭-೪೩೧)

ಕುತ್ತುರು (ನಾ). ಪೊದರು; ಪೊದೆ; ಕಂಟಿ (೧.೯-೨೪೮)

ಕುದಿ (ಕ್ರಿ) ಮನಸ್ಸಿನಲ್ಲಿ ನೋಯು; ಸಂಕಟಪಡು, ದುಃಖದಿಂದ ತಳಮಳಗೊಳ್ಳು (೧.೨-೪೦೩), (೧.೯-೩೪೩)

ಕುದಿ (ನಾ). ಹಂಬಲ; ತವಕ (೧.೪-೧೭೮)

ಕುದುರು (ನಾ). ತಗ್ಗಾದ ಭೂಮಿ; ಹಳ್ಳ (೪.೧೧-೩೯೬)

ಕುನುಂಗು (ಕ್ರಿ). ಕುಗ್ಗು; ಸಂಕೋಚಗೊಳ್ಳು; ಸುರುಟು; ಸುಕ್ಕು; ಮುದುರಿಕೊಳ್ಳು (೪.೪-೪೩)

ಕುಬ್ಜತೆ (ನಾ). ಗಿಡ್ಡಾಗಿರುವಿಕೆ; ಕುಳ್ಳಾಗಿರುವಿಕೆ (೧.೧-೫೪೫)

ಕುಬ್ಜಿಕೆ (ನಾ). ಕುಬ್ಜೆ; ಬೆನ್ನು ಬಾಗಿದವಳು; ಗೂನಿ (೧.೩-೫೮೭) (೧.೬-೮೬)

ಕುಮುಟು (ಕ್ರಿ). (ನಿದ್ದೆಯಲ್ಲಿ) ಬೆಚ್ಚಿಬೀಳು; ಹೆದರಿಕೆಯಿಂದ ನಡುಗು (೩.೩-೩೦೨)

ಕುಮುದ (ನಾ). ಬಿಳಿಯ ನೈದಿಲೆ. (೨.೫-೨)

ಕುರಂಗ (ನಾ). ಜಿಂಕೆ; ಚಿಗರೆ; ಹುಲ್ಲೆ (೧.೭-೧೭೧)

ಕುರಂಗತನು (ಗು). ಜಿಂಕೆಯ ಶರೀರವನ್ನು ತಾಳಿದ, ಜಿಂಕೆಯಂತೆ ವೇಶವನ್ನು ಹೊಂದಿದ (೨.೧-೯೮)

ಕುರರಿ (ನಾ). ಹೆಣ್ಣು ಕುರರ,-ಕುರವ ಹಕ್ಕಿ; ಒಂದು ಜಲಚರ ಪಕ್ಷಿ; ಮರಕೂಟವಕ್ಕಿ (೨.೨-೬೮)

ಕುರಿಗೊಲೆ (ನಾ). (ಆಲಂ) ಅಸಹಾಯಕ ಸ್ಥಿತಿಯಲ್ಲಿರುವವರ ಕೊಲೆ; ಭೀಕರವಾದ ಕೊಲೆ; ಕಗ್ಗೊಲೆ (೪.೮-೧೯೫)

ಕುರಿದರಿ (ಕ್ರಿ). ಕುರಿಯನ್ನುಕತ್ತರಿಸು, -ಕಡಿದು ಹಾಕು (೪.೧-೩೮೪)

ಕುರುಚುಕಾಡು, ಕುರುಚುಪಳು (ನಾ). ಗಿಡಗಂಟಿಗಳ ಕಾಡು; ಸಣ್ಣಕಾಡು (೨.೪-೧೬೬)

ಕುರುಪು, ಕುರುಹು (ನಾ). ಗುರುತು; ಚಿಹ್ನೆ (೧.೧೦–೨೬೪)

ಕುರುಳ್, ಕುರುಳು (ನಾ). ಕೂದಲು; ಸುರುಳಿಗೂದಲು, ಮುಂಗೂದಲು; ಗುಂಗುರುಗೂದಲು (೨.೨–೮೭೯)

ಕುಲಜೆ, ಕುಲೀನೆ (ನಾ). ಒಳ್ಳೆಯ ಕುಲದವಳು; ಕುಲೀನೆ (೧.೩–೪೭೧)

ಕುಶ (ನಾ). ಹೋಮ ಹವನಾದಿಗಳಿಗೆ ಬಳಸುವ ಒಂದು ಬಗೆಯ ಸೂಜಿಯಂತೆ ಮೊನೆಯುಳ್ಳ ಹುಲ್ಲು; ದರ್ಭೆ (೧.೯–೨೯೮)

ಕುಶಿಕತನಯ (ನಾ). ಕುಶಿಕನ ವಂಶದಲ್ಲಿ ಹುಟ್ಟಿದವನು; ವಿಶ್ವಾಮಿತ್ರ (೧.೨ – ೩೫)

ಕುಶಿಕೋದ್ಭವ (ನಾ). ಕುಶಿಕತನಯ (೧.೨ –೧೩)

ಕುಹಕ ವಿದ್ಯೆ (ನಾ). ಮೋಸವಿದ್ಯೆ; ಕಪಟವಿದ್ಯೆ (೧.೩–೫೨೬)

ಕುಹರ (ನಾ). ಗವಿ; ಗುಹೆ (೨.೩–೪೮)

ಕುಹರ (ನಾ). ತೂತು; ರಂಧ್ರ (೧.೩–೬೧೬)

ಕುಳಿರ್, ಕುಳಿರು (ಕ್ರಿ) (ತಣ್ಣಗಿರು; ತಂಪಾಗಿರು (೧.೪–೩೦೩)

ಕುಳಿರ್ಕಾಂತಿ (ನಾ). ತಂಪಾದ ಕಾಂತಿ; ಶೀತಲವಾದ ಹೊಳಪು (೨.೧೨–೭)

ಕುಳಿರ್ಗಾಳಿ (ನಾ). ತಣ್ಣನೆಯ ಗಾಳಿ; ಶೀತಮಾರುತ (೧.೨–೨೩೭)

ಕುಳಿರ್ವನಿ, ಕುಳಿರ್ವನಿ (ನಾ). ಮಂಜಿನಹನಿ; ಹಿಮಬಿಂದು (೨.೩–೧೩೮)

ಕೂಜನ, ಕೂಜಿತ (ನಾ). ಕೂಗು; ಕುಕಿಲು; ಧ್ವನಿ (೧.೯–೮)

ಕೂಟ (ನಾ). ಇಂದ್ರಜಾಲ; ಕಪಟ; ಮೋಸ (೩.೭–೮೨)

ಕೂಟಯಂತ್ರ (ನಾ). ಮೃಗಪಕ್ಷಿಗಳನ್ನು ಉಪಾಯದಿಂದ ಹಿಡಿಯುವ ಸಾಧನ,– ಬಲೆ,– ಬೋನು (೨.೨–೧೫೬)

ಕೂಟಯುದ್ಧ (ನಾ). ಕಪಟಯುದ್ಧ (೧.೨–೧೬೯)

ಕೂಡಲ್, ಕೂಡಲು (ನಾ). ಕೂಡಿಕೊಳ್ಳುವಿಕೆ; ಜೊತೆ; ಸಂಗಮ (೧.೭–೩೩೬)

ಕೂಣಿ, ಕೂಳಿ, ಕೂಳೆ (ನಾ). ಮೀನು ಹಿಡಿಯುವ ಬುಟ್ಟಿ (೧.೬–೧೩೩)

ಕೂರಂಬು (ನಾ). ಹರಿತವಾದ ಅಂಬು; ಚೂಪಾದ ಬಾಣ (೧.೧೦–೧೫೦)

ಕೂರಳಲ್ (ನಾ). ಅತಿಯಾದ ಅಳಲು; ತೀವ್ರವಾದ ದುಃಖ (೧.೧ – ೨೩೩)

ಕೂರ್ಗೆಲಸ (ನಾ). ಕ್ರೂರವಾದ ಕೆಲಸ; ಕೆಟ್ಟ ಕೆಲಸ (೧.೧ – ೫೭೫)

ಕೂರ್ಚ (ನಾ). ಗಡ್ಡ; ಮೀಸೆ (೪.೧೨–೪೪೧)

ಕೂರ್ಚ (ನಾ). ಕುಂಚ; ಕೊಳೆಯನ್ನು ತೆಗೆಯಲು ಅನುಕೂಲವಾದ ಒರಟು ಕೂದಲು, ಜುಂಗು ಮೊದಲಾದವುಗಳ ಗುಚ್ಛ (೨.೩–೨೧೫)

ಕೂರ್ (ಕ್ರಿ). ಕೂರ್ತ (ಭೂತಕೃ). ಪ್ರೀತಿಸು; ಒಲವುತೋರು

ಕೂರ್ತ = ಪ್ರೀತಿಸಿದವನು; ಪ್ರಿಯಕರ; ನಲ್ಲ (೧.೧೦–೨೯೭)

ಕೂರ್ನುಡಿ (ನಾ). ತೀಕ್ಷ್ಣವಾದ ನುಡಿ; ಉಗ್ರವಾದ ಮಾತು (೧.೨ – ೩೫)

ಕೂರ್ಪು (ನಾ). ಹರಿತವಾಗಿರುವಿಕೆ;

ಮೊನೆ; ತೀಕ್ಷ್ಣತೆ (೨.೨–೬೨೧)

ಕೂರ್ಮೆ, ಕೂರುಮೆ (ನಾ). ಒಲ್ಮೆ; ನಲ್ಮೆ; ಪ್ರೇಮ (೧.೪–೧೦೫)

ಕೂರ್ಮೊನೆ (ನಾ). ಹರಿತವಾದ ಮೊನೆ; ತೀಕ್ಷ್ಣವಾದ ತುದಿ (೧.೫–೩೦೫)

ಕೂಳ್ಗುದಿ (ನಾ). ಅನ್ನ ಕುದಿವಂತೆ ಕುದಿಯುವಿಕೆ; ಒಳಗೊಳಗೆ ಕುದಿಯುವಿಕೆ (೩.೧೩–೧೧೮)

ಕೂಳ್, ಕೂಳು (ನಾ). ಅನ್ನ; ಓಗರ, ಓದನ (೧.೧೦–೩೯೩)

ಕೃತಕೃತ್ಯ (ನಾ). ಮಾಡತಕ್ಕ ಕೆಲಸವನ್ನು ಮಾಡಿದವನು; ಉದ್ದೇಶವನ್ನು ನೆರವೇರಿಸಿದವನು; ಕೃತಾರ್ಥ ನಾದವನು (೨.೧–೪೮)

ಕೃತಿ (ನಾ). ಚಿತ್ರ ಮೊದಲಾದ ಕುಶಲ ಕಲೆಗೆ ಸಂಬಂಧಿಸಿದ ರಚನೆ; ಕಲಾಕೃತಿ (೧.೧ – ೬೯೨)

ಕೃತ್ಸ್ನ (ನಾ). ಪೂರ್ತಿಯಾಗಿರುವಿಕೆ; ಸಂಪೂರ್ಣ (೩.೧೨–೧೮೬)

ಕೃಪಾಣ (ನಾ). ಕತ್ತಿ; ಖಡ್ಗ (೩.೧–೬೦)

ಕೃಶಾನು (ನಾ). ಬೆಂಕಿ; ಅಗ್ನಿ (೪.೪–೨೫೮)

ಕೃಷೀವಲ (ನಾ). ಕೃಷಿಕ (೧.೪–೪೦೩)

ಕೃಷ್ಣ (ಗು). ಕಪ್ಪಾದ; ಕರಿಬಣ್ಣದ (೧.೨–೬೫೪)

ಕೆಂಗಾವಿ (ನಾ). ಕೆಂಪುಬಣ್ಣದ ಮಣ್ಣು (೩.೧೩–೪೦)

ಕೆಂಜೊಡರ್ (ನಾ). ಕೆಂಪು ದೀಪ, – ಪ್ರಕಾಶ (೩.೧–೩೦೫)

ಕೆಚ್ಚನೆ (ಅ). ಕೆಂಪಾಗಿ; ಕೆಂಪಗೆ; ಕೆಂಪನೆ (೧.೪–೩೮೮)

ಕೆಟ್ಟಾಸೆ, ಕೆಟ್ಟಾಶೆ (ನಾ). ದುರಾಶೆ (೧.೬–೧೯೧)

ಕೆಟ್ಟಾಸೆಬೀಡು (ನಾ). ದುರಾಸೆಯ ನೆಲೆ; ಕೆಟ್ಟ ಆಶೆಯ ಆಶ್ರಯ (೧.೬–೧೯೧)

ಕೆಡಿಸು, ಕಿಡಿಸು, ಕೆಡಸು (ಕ್ರಿ). ನಂದಿಸು; ಆರಿಸು (೧.೩–೫೩೦)

ಕೆಡು (ಕ್ರಿ). ಭಂಗವಾಗು (೧.೬–೨೯೭)

ಕೆಡು, ಕಿಡು (ಕ್ರಿ). ಅಳಿ; ನಾಶವಾಗು; ಹಾಳಾಗು (೧.೫–೨೯೫)

ಕೆಡೆ (ನಾ). ಬೀಳು; ಕುಸಿ; ಉರುಳು (೧.೩–೧೪೪)

ಕೆದರಿಕೆ (ನಾ). ಚೆಲ್ಲಾಪಿಲ್ಲಿಯಾಗಿರುವಿಕೆ; ಅಸ್ತವ್ಯಸ್ತವಾಗಿರು (೧.೩–೧೪೮)

ಕೆದರ್, ಕೆದರು, ಚದುರು, ಚೆದುರು (ಕ್ರಿ). ಹರಡು; ಪಸರಿಸು; ಚೆದುರಿಸು. (೨.೧–೧೭೮)

ಕೆನ್ನವಿರ್ (ನಾ). ಕೆಂಪು ಕೂದಲು; ಕೆಂಗೂದಲು (೧.೧ –೩೪೨)

ಕೆಪ್ಪು (ನಾ). ಕಿವಿ ಕೇಳಿಸದಿರುವಿಕೆ; ಕಿವುಡು; ಬಧಿರತೆ (೨.೪–೨೩)

ಕೆಮ್ಮಗೆ, ಕೆಮ್ಮನೆ (ಅ). ಮೌನವಾಗಿ; ನೀರವವಾಗಿ (೧.೩–೧೯೧)

ಕೆಯ್ಗೊಯ್ (ಕ್ರಿ). ಹೊಲದ ಬೆಳೆಯನ್ನು ಕುಯ್ಯು (೩.೧೪–೬೫)

ಕೆಯ್ದು; ಕಯ್ದು; ಕೈದು (ನಾ). ಆಯುಧ ಶಾಸ್ತ್ರ (೨.೧–೧೧೩)

ಕೆಯ್ಪರೆ, ಕೈಪರೆ (ನಾ). ಕೈ ಚಪ್ಪಾಳೆ (೧.೨–೫೦೨)

ಕೆಯ್ಸಾರ್, ಕಯ್ಯಾರ್, ಕೈಸಾರ್, ಕೈಸಾರು (ಕ್ರಿ). ಕೈಗೆಬರು; ದೊರಕು; ಸಿಕ್ಕು; ಕೈವಶವಾಗು; ಈಡೇರು; ನೆರವೇರು (೧.೩–೪೧೬)

ಕೇಗು (ಕ್ರಿ), (ಸಂಭ್ರಮದಿಂದ ಕೂಗು; ಕೇಕೆಹಾಕು (೧.೩–೧೦೭), (೪.೯–೧೪೫)

ಕೇಡಾಡಿ (ನಾ). ಕೆಡುಕ; ಕೇಡಾಳಿ; ಕೇಡಿಗ (೨.೮-೭೪)

ಕೇಯೂರ(ನಾ). ಕಡಗ; ತೋಳುಬಂದಿ (೧.೧-೪೨೭)

ಕೇರ್ (ನಾ). ಗೋಡೆ; ಭಿತ್ತಿ (೪.೩-೩೮)

ಕೇಶ (ನಾ). ಕೂದಲು, ತಲೆಗೂದಲು (೧.೧೧-೧೭೦)

ಕೇಶಪಾಶ (ನಾ). ಸಮೃದ್ಧವಾದ ತಲೆಗೂದಲು; ಮುಡಿ; ಕೇಶಹಸ್ತ (೧.೬-೩೨೧)

ಕೇಸರ (ನಾ). (ಕೋಳಿ, ಕುದುರೆ ಅಥವಾ ಸಿಂಹದ) ಕತ್ತಿನ ಮೇಲಿರುವ ಕೂದಲು; ಆಯಾಲ (೧.೯-೨೦)

ಕೇಸರಿ (ನಾ). ಸಿಂಹ (೧.೬-೧೫೦)

ಕೇಸು (ನಾ). ಕೆಂಪು; ಕೆಂಪು ಬಣ್ಣ (೩.೧೩-೩೨೨)

ಕೇಸುರಿ (ನಾ). ಕೆಂಪಾದ ಉರಿ; ಕೆಂಪು ಜ್ವಾಲೆ (೧.೪-೪೭೦)

ಕೇಳ್ಕೆ (ನಾ). ಕೇಳುವಿಕೆ; ಶ್ರವಣ (೧.೩-೪೭೨)

ಕೈಂಕರ್ಯ (ನಾ). ಕಿಂಕರನ ಸೇವೆ; ಸೇವಕನಾಗಿರುವಿಕೆ (೧.೨-೪೦೫)

ಕೈಗೈಸು, ಕಯ್ಗೆಯ್ಸು (ಕ್ರಿ). ಸಿಂಗರಿಸು; ಅಲಂಕಾರಮಾಡು; ವೇಷಭೂಷಣಗಳನ್ನು ತೊಡಿಸು (೧.೧೦-೮೨)

ಕೈಗೊಳ್ಳಿ (ನಾ). ಕೈಯಲ್ಲಿ ಹಿಡಿದಿರುವ ಕೊಳ್ಳಿ (೪.೪-೧೧೨)

ಕೈತವ (ನಾ). ಕಪಟ; ವಂಚನೆ (೧.೬-೧೨೭)

ಕೈದು (ನಾ). ಆಯುಧ; ಶಸ್ತ್ರ (೧.೯-೫೨೬)

ಕೈಯೆಡೆ (ನಾ). ಕೈಗೆ ಒಪ್ಪಿಸಿದುದು; (ರಕ್ಷಣಾರ್ಥವಾಗಿ ನಂಬುಗೆಯಿಂದ) ಕೈಗೆ ಕೊಟ್ಟದ್ದು; ನ್ಯಾಸ (೨.೨-೭೦೫)

ಕೈರವ (ನಾ). ಬಿಳಿಯ ನೆಯ್ದಿಲೆ (೪.೧-೩೮) (೩.೪-೫೨೨)

ಕೈರಾತ (ಗು). ಕಿರಾತಕರಿಗೆ ಸಂಬಂಧಪಟ್ಟ,- ಸೇರಿದ (೧.೯-೧೩೮), (೧.೧೦-೭೧)

ಕೈವಾರಿ (ನಾ). ಹೊಗಳುವವನು, ಹೊಗಳು ಭಟ್ಟ; ವಂದಿ; ಸ್ತುತಿಪಾಠಕ (೪.೧೧-೨೫೫)

ಕೊಂಚೆ (ನಾ). ಒಂದು ಬಗೆಯ ಪಕ್ಷಿ; ಕ್ರೌಂಚ (೧.೩-೩೪೬)

ಕೊಡಂಕೆ, ಕೊಡಕೆ (ನಾ). ಕಿವಿ; ಶ್ರವಣೇಂದ್ರಿಯ (೨.೪-೨೧)

ಕೊಡಗೆಚ್ಚಲ್ (ನಾ). ಕೊಡದಂತೆ ದೊಡ್ಡದಾಗಿರುವ ಕೆಚ್ಚಲು (೧.೧ - ೩೫೫)

ಕೊಡಲಿಗೊರವ (ನಾ). ಕೊಡಲಿಯನ್ನು ಹಿಡಿದುಕೊಂಡ ಗೊರವ; ಪರುಶುರಾಮ (೧.೨-೬೭೦)

ಕೊನೆ (ಕ್ರಿ). ೧. ಕೊಂಡಾಡು; ಹೊಗಳು; ಸ್ತೋತ್ರಮಾಡು (೧.೧-೪೨೮) ೨. ಕೊನರು; ವೃದ್ಧಿಗೊಳಿಸು (೨.೬-೨೦)

ಕೊಪ್ಪು (ನಾ). ಬಿಲ್ಲಿನತುದಿ; ಗೊಲೆ (೧.೨-೩೭೫) (೧.೧೦-೨೫೯)

ಕೊರಂಗು (ಕ್ರಿ). ಕಳವಳಿಸು; ಪರಿತಪಿಸು; ವ್ಯಥೆಪಡು (೩.೭-೫೯೩)

ಕೊರ್ವು (ನಾ). ಹೆಚ್ಚಳ; ಅಧಿಕ್ಯ, ಸಮೃದ್ಧಿ (೧.೯-೫೩೬)

ಕೊರ್ವು, ಕೊಬ್ಬು (ಕ್ರಿ). ಹೆಚ್ಚಾಗು; ಅಧಿಕವಾಗು (೧.೪-೩೧೨)

ಕೊಲ್ಲಿ (ನಾ). ಚಿಕ್ಕ ಪ್ರವಾಹ; ಹಳ್ಳ (೨.೪-೧೫೭)

ಕೊಳಗು (ನಾ). (ಪಶುಗಳ) ಗೊರಸು;

ಖುರಪುಟ (೨.೨–೯೫)

ಕೊಳುಕೊಡೆ, ಕೊಳ್ಕೊಡೆ (ನಾ). ಮದುವೆ ಸಂಬಂಧ; ಬಾಂಧವ್ಯ; ನಂಟಸ್ತನ (೧.೨–೬೨೩)

ಕೊಳ್ಗುಳ, ಕೊಳಗುಳ (ನಾ). ೧. ಕಾಳೆಗ; ಯುದ್ಧ; ಸಮರ. (೩.೧೩–೧೬)

ಕೋಕನದ (ನಾ). ಕೆಂಪುತಾವರೆ; ಕೆಂದಾವರೆ (೩.೭–೩೧೦)

ಕೋಕಿಲ, ಕೋಕಿಳ (ನಾ). ಕೋಗಿಲೆ; ಪರಪುಟ್ಟ; ಪಿಕ (೧.೪–೫೩೯)

ಕೋಟರ (ನಾ). ೧. ಮರದ ಪೊಟರೆ; ಡೊಗರು; ಟೊಳ್ಳು (೧.೧ –೫೪೯) ೨. ಒಳಗಿನ ಭಾಗ; ಬಿಲ; ರಂಧ್ರ (೪.೧೧–೨೯೮)

ಕೋಟೀರ (ನಾ). ಕಿರೀಟ; ಮಕುಟ (೧.೯–೫೯೨)

ಕೋಡಿವರಿ (ಕ್ರಿ). ತುಂಬಿ ಹೊರಚೆಲ್ಲು; ಪ್ರವಾಹವಾಗಿ ಹರಿ (೧.೯–೪೬೭)

ಕೋಣ (ನಾ). ಮೂಲೆ; ಕೊನೆ (೩.೧–೨೬೨)

ಕೋಣಪ (ನಾ). ದನುಜ; ರಾಕ್ಷಸ (೨.೨–೧೫೬)

ಕೋದಂಡ (ನಾ). ಬಿಲ್ಲು; ಧನುಸ್ಸು (೧.೧ – ೩೪೯), (೧.೯–೧೩೦)

ಕೋಮಲತೆ, ಕೋಮಳತೆ (ನಾ). ಮೆದುವಾಗಿರುವಿಕೆ; ಮೃದುತ್ವ (೧.೧–೪೪೭)

ಕೋಮಲೆ, ಕೋಮಲಾಂಗಿ (ನಾ). ಕೋಮಲವಾದ ಅಂಗುವುಳ್ಳವಳು; ಸುಂದರಾಂಗಿ (೩.೧೨–೧)

ಕೋರೆ (ನಾ). ಓರೆ; ಡೊಂಕು; ವಕ್ರತೆ, ಸರಳವಿಲ್ಲದಿರುವುದು (೨.೩–೧೭೦)

ಕೋರೆದಿಂಗಳ್ (ನಾ). ವಕ್ರಚಂದ್ರ; ಬಾಲಚಂದ್ರ (೪.೨–೫೦೪)

ಕೋರೈಸು, ಕೋರಯಿಸು (ಕ್ರಿ). (ಅತಿಪ್ರಕಾಶದಿಂದ) ಕಣ್ಣು ಕುಕ್ಕು; ಚುಚ್ಚು(೧.೧ – ೩೩೦)

ಕೋಲಾಹಲ, ಕೋಳಾಹಳ (ನಾ). ಕಲಕಲ; ಗಲಭೆ; ಗಜಬಜೆ; ಗಲಾಟೆ (೧.೫–೧೫೪)

ಕೋವಿದಾರ ಧ್ವಜ (ನಾ). ಕೋವಿದಾರ ಗಿಡದ ಚಿಹ್ನೆಯುಳ್ಳ ಧ್ವಜ,–ಪತಾಕೆ,– ಬಾವುಟ; ಭರತನ ಬಾವುಟ (೧.೯–೧೬೧)

ಕೋಳುವೋಗು (ಕ್ರಿ). ಬಲಿಯಾಗು; ತುತ್ತಾಗು (೨.೨–೧೦೩)

ಕೋಳುಹೋಗು (ಕ್ರಿ). ಸೆರೆಸಿಕ್ಕು; ವಶವಾಗು; ಅಧೀನವಾಗು (೨.೨–೬೦೨)

ಕೋಳ್ಮಿಗ (ನಾ). ಇತರ ಪ್ರಾಣಿಗಳನ್ನು ಹಿಂಸಿಸುವ ಅಥವಾ ಅವುಗಳ ಮಾಂಸವನ್ನು ತಿಂದು ಬದುಕುವ ಮಾಂಸಾಹಾರಿ ಮೃಗ; ಕ್ರೂರಮೃಗ (೧.೫–೬೩) (೧.೧೦–೨೨೩)

ಕೌಕ್ಷೇಯ (ನಾ). ಒರೆಯ ಒಳಗೆ ಇರುವ ಕತ್ತಿ, –ಖಡ್ಗ (೩.೧–೧೯)

ಕೌಟವಿಯಾಗು (ನಾ) (ಬರಿದಾಗು; ಶೂನ್ಯವಾಗು (೨.೧೦–೧೧೨)

ಕೌಮುದಿ (ನಾ). ಚಂದ್ರನ ಬೆಳಕು; ಬೆಳದಿಂಗಳು; ತಿಂಗಳ ಬೆಳಕು (೧.೧೧–೧೯೭)

ಕೌರುಗಂಪು (ನಾ). ಸುಟ್ಟವಾಸನೆ; ಕಂಟುನಾತ (೪.೩–೨೨)

ಕೌಶೇಯ (ನಾ). ೧. ಕೋಶದಿಂದ (ರೇಷ್ಮೆ ಹುಳುವಿನ ಗೂಡಿನಿಂದ) ಬಂದದ್ದು; ರೇಷ್ಮೆ ನೂಲು ೨. ರೇಷ್ಮೆಯ ಬಟ್ಟೆ;

ಪೀತಾಂಬರ (೧.೧೧-೧೭೧)

ಕ್ರಕಚ (ನಾ). ಕರಗಸ; ಗರಗಸ (೧.೨-೧೪೩)

ಕ್ರತು (ನಾ). ೧. ಯಾಗ; ಯಜ್ಞ, ೨. ಸಂಕಲ್ಪ; ಧ್ಯಾನ ೩. ಧ್ಯೇಯ (೪.೧೨-೫೦)

ಕ್ರತುಪುರುಷ (ನಾ). ಯಜ್ಞಕ್ಕೆ ಅಧಿದೇವತೆ; ವಿಷ್ಣು (೧.೫-೭೧)

ಕ್ರಮಿಸು (ಕ್ರಿ). ೧. ದಾಟು (೧.೧-೯೮) ೨. ನಡೆ, ಹೆಜ್ಜೆಯಿಡು; ಸಾಗು (೨.೨-೩೯೧)

ಕ್ರವ್ಯ (ನಾ). ಹಸಿಯ ಅಡಗು; ಬೇಯಿಸದ ಮಾಂಸ (೩.೧೩-೨೧)

ಕ್ರಾಂತದರ್ಶಿ (ನಾ). ಕ್ರಾಂತದರ್ಶನವನ್ನುಳ್ಳವನು; ಅತೀಂದ್ರಿಯಜ್ಞಾನಿ (೪.೧೧-೧)

ಕ್ಲಾಂತ (ಗು). ಬಳಲಿದ; ದಣಿದ; ಆಯಾಸಗೊಂಡ (೨.೬-೧೭೧)

ಕ್ಲೇಶ (ನಾ). ತೊಂದರೆ; ಕಷ್ಟ; ದುಃಖ (೧.೬-೧೫೫), (೧.೯-೧೯೩)

ಕ್ಷಪೆ (ನಾ). ಇರುಳು; ರಾತ್ರಿ (೪.೧-೧೨೬)

ಕ್ಷಮೆ (ನಾ). ಭೂಮಿ; ಮಹಿ (೧.೪-೨೪೦)

ಕ್ಷೀರ (ನಾ). ಹಾಲು (೧.೨-೫೭೪)

ಕ್ಷುಣ್ಣ (ಗು). ಮೆಟ್ಟಿದ; ತುಳಿಯಲ್ಪಟ್ಟ (೧.೭-೧೭೨)

ಕ್ಷುರಮರ್ದಿ (ನಾ). ಕ್ಷೌರದಕತ್ತಿಯನ್ನು ಮಸೆಯುವವನು; ನಾಯಿಂದ; ಕ್ಷೌರಿಕ (೪.೧೨-೪೩೯)

ಕ್ಷೌದ್ರಪಟಲ (ಳ) (ನಾ). ಜೇನುಹುಟ್ಟು; ಜೇನುಗೂಡು (೩.೧-೨೬೦)

ಕ್ಷ್ಮಾ (ನಾ). ಭೂಮಿ (೨.೧-೨೭೦)

ಖಂಜನ (ನಾ). ಒಂದು ಬಗೆಯ ಪಕ್ಷಿ; ಗೀಜುಗ (೨.೨-೬೮೮)

ಖಂಡಪರಶು (ನಾ). ಪರಮೇಶ್ವರ (೪.೨-೪೧೦)

ಖಂಡೆ, ಕಂಡೆ (ನಾ). ನೇರವಾದ ಅಲಗುಳ್ಳ ಕಿರುಗತ್ತಿ; ಖಡ್ಗ (೪.೯-೬೦)

ಖಂಡೆಯ (ನಾ). ಕಂಡರಣೆ; ಕೊರೆಯುವಿಕೆ; ಕಡೆತ (೪.೭-೧೮೪)

ಖಗ (ನಾ). ೧. ಗಾಳಿಯಲ್ಲಿ ಸಂಚರಿಸುವಂಥದು ೨. ಹಕ್ಕಿ; ಪಕ್ಷಿ (೧.೬-೩೨೯)

ಖಡ್ಗಧಾರಾವ್ರತ (ನಾ). ದಂಪತಿಗಳು ಏಕಶಯ್ಯೆಯಲ್ಲಿದ್ದರೂ ಸಂಯಮದಿಂದ ಇರುವುದು; ಅಸಿಧಾರಾವ್ರತ; ಅಸಿಪತ್ರವ್ರತ (೧.೧-೨೯೭)

ಖಡ್ಗಿ (ನಾ). ಗಂಡಕಮೃಗ; ಗೇಂಡಾಮೃಗ; ಖಡ್ಗಮೃಗ (೩.೬-೩೬)

ಖತಿ (ನಾ). ರೇಗುವಿಕೆ; ಕೋಪ; ಕ್ರೋಧ (೨.೧-೨೫೯)

ಖದ್ಯೋತ (ನಾ). ಮಿಂಚುಹುಳು; ಮಿಣುಕುಹುಳು (೧.೪-೪೮೧)

ಖನಿ (ನಾ). ಲೋಹ, ರತ್ನ ಮೊದಲಾದುವುಗಳ ಉತ್ಪತ್ತಿ ಸ್ಥಾನ; ಗಣಿ; ಆಕರ (೧.೭-೪೦)

ಖಮಣಿ (ನಾ). ಆಕಾಶದ ರತ್ನ; ಸೂರ್ಯ (೧.೨-೫೭೬)

ಖರ (ಗು). ಹರಿತವಾದ, ಮೊನಚಾದ; ತೀಕ್ಷ್ಣವಾದ (೨.೨-೨೬೧, ೫೪೩)

ಖರ್ಪರ (ನಾ). ಕೂರ್ಮನ ಬೆನ್ನಿನ ಕವಚ; ಆಮೆಯ ಚಿಪ್ಪು (೧.೧೦-೧೫೫)

ಖರ್ಪರ (ನಾ). ತಲೆಬುರುಡೆಯ ಚಿಪ್ಪು; ಕಪಾಲ (೨.೯-೮೬)

ಖಲ (ನಾ). ನೀಚ; ದುಷ್ಟ (೧.೨ – ೫೪)
ಖಲೀನ (ನಾ). ಕಡಿವಾಣ (೩.೫–೨೬)
ಖಿನ್ನತೆ (ನಾ). ವಿಷಾದ; ಖೇದ (೧.೧೦–೩೫೯)
ಖುರ (ನಾ). ಹಸು, ಕುದುರೆ ಮೊದಲಾದುವುಗಳ ಕಾಲಗೊರಸು; ಕೊಳಗು (೧.೪–೪೦೦) (೨.೯–೬೨)
ಖೇಚರ (ನಾ). ಆಕಾಶದಲ್ಲಿ ಸಂಚರಿಸುವವನು; ಗಂಧರ್ವ, ವಿದ್ಯಾಧರ ಮೊದಲಾದದೇವಗಣಕ್ಕೆ ಸೇರಿದವನು (೪.೯–೩೦)
ಖೇದ (ನಾ). ಉಮ್ಮಳ; ದುಃಖ; ವ್ಯಥೆ (೪.೧೦–೮)

ಗಂಡ (ನಾ). ಕಪೋಲ; ಕೆನ್ನೆ; ಗಲ್ಲ(೨.೪–೯೧)
ಗಂಡಶೈಲ (ನಾ). (ಬೆಟ್ಟದ ಮೇಲಿನಿಂದ) ಜಾರಿ ಕೆಳಕ್ಕೆ ಬಿದ್ದಿರುವ ದೊಡ್ಡ ಬಂಡೆ; ಉರುಳಿ ಬಿದ್ದ ಬಂಡೆ; ಹೆಬ್ಬಂಡೆ (೩.೧–೩೦೦), (೩.೯–೩೮೫)
ಗಂಡು (ನಾ). ಬಿರುಸು; ಗಟ್ಟಿ (೨.೪–೯೧)
ಗಂಡು ಗಂಡ (ನಾ). ಕಠಿನವಾದ ಕೆನ್ನೆ,–ಕಪೋಲ (೨.೪–೯೧)
ಗಂಡುಗಲಿ (ನಾ). ಅತ್ಯಂತ ಪರಾಕ್ರಮಿ; ಮಹಾಶೂರ (೧.೧೧–೩೪೪)
ಗಂಡುಬೀಡು (ನಾ). ಕೇವಲ ಗಂಡಸರೇ ವಾಸಿಸುವ ಸ್ಥಳ; ಗಂಡು ಬಿಡಾರ (೪.೧–೨೯೦)
ಗಂಡುವೀಡು (ನಾ). ಪೌರುಷದ ಬೀಡು; ವೀರತ್ವದ ನಾಡು (೪.೧–೨೮೭)
ಗಂತವ್ಯ (ನಾ). ಸೇರಬೇಕಾದ ಸ್ಥಳ; ಗುರಿ (೨.೧೧–೨೧೧), (೩.೪–೨೨)
ಗಂಧಹಸ್ತಿ, ಗಂಧಗಜ (ನಾ). ಮದೋದಕವನ್ನು ಸುರಿಸುವ ಆನೆ; ಒಂದು ಬಗೆಯ ಶ್ರೇಷ್ಠ ಜಾತಿಯ ಆನೆ (೩.೬–೩೪)
ಗಜರು (ಕ್ರಿ). ಗದರಿಸು; ಬೆದರಿಸು; ಆರ್ಭಟಿಸು (೧.೬–೪೫)
ಗಜ್ಜ (ನಾ). ಗರ್ಜನೆ; ಗುಡುಗು (೧.೧–೫೮೭)
ಗಣಬರು (ಕ್ರಿ). ಮೈಮೇಲೆ ಗ್ರಹ ಬರು; ಮೈದುಂಬು; ದೇವರು ಬರು (೨.೨–೪೦೨)
ಗತಿ (ನಾ). ಉಪಾಯ; ಕಾರ್ಯ ಸಾಧಿಸುವ ಯುಕ್ತಿ; ಸಾಧನೆ (೨.೧–೪೦೦)
ಗತಿ (ನಾ). ಗಮನ; ನಡಗೆ; ಸಂಚಾರ (೧.೫–೧೪೬)
ಗದಗದಿಸು (ಕ್ರಿ). ಬಲವಾಗಿ ನಡುಗು,–ಕಂಪಿಸು; ತತ್ತರಿಸು (೧.೫–೧೨೭)
ಗದ್ಗದಿಸು (ಕ್ರಿ). ಕಂಠ ಬಿಗಿದು ಬರು; ಮಾತು ಅಸ್ಪಷ್ಟವಾಗು (೧.೨–೩೯೨), (೧.೩–೪೭೩), (೪.೭–೧೪೨)
ಗಬ್ಬ (ನಾ). ಬಸಿರು; ಗರ್ಭ (೨.೨–೧೯೮)
ಗರಲ, ಗರಳ (ನಾ). ನಂಜು; ವಿಷ (೨.೬–೧೫೦) (೪.೪–೮೧)
ಗರಿಗೆಡು (ಕ್ರಿ). (ಆಲಂ). ಬಲಹೀನವಾಗು; ಶಕ್ತಿಗುಂದು (೩.೯–೧೭೧)
ಗರಿಮೆ (ನಾ). ಘನತೆ; ಹಿರಿಮೆ; ಶ್ರೇಷ್ಠತೆ (೩.೪–೫೦೨)
ಗರುತ್ಮಂತ (ನಾ). ೧. ರೆಕ್ಕೆಯುಳ್ಳುದು; ಹಕ್ಕಿ; ಪಕ್ಷಿ ೨. ಗರುಡ (೩.೧೩–೨೮೯)
ಗರ್ತ (ನಾ). (ನೀರಿನ) ಸುಳಿ (೨.೨–

೫೬೭)

ಗವಾಕ್ಷ (ನಾ). ಮನೆಯಲ್ಲಿ ಗಾಳಿ, ಬೆಳಕು ಬರುವುದಕ್ಕಾಗಿ ಮಾಡಿರುವ ಕಂಡಿ; ಬೆಳಕು ಕಿಂಡಿ; ಕಿಟಕಿ (೧.೮–೧೨೧)

ಗಹನ (ನಾ). ನಿಬಿಡತೆ; ದಟ್ಟಣೆ (೧.೧೦–೬೯)

ಗಹ್ವರ (ನಾ). ಬಿಲ; ಬೆಟ್ಟದ ಗವಿ; ಗುಹೆ (೧.೭–೫೬)(೧.೧೦–೯೭)

ಗಳಪು, ಗಳಪು, ಗಳಹು (ಕ್ರಿ). ಬಾಯಿಗೆ ಬಂದಂತೆ ಆಡು; ಹರಟು; ಜಲ್ಪಿಸು (೧.೭–೩೨೪)

ಗಾಂಪ, ಗಂಪ (ನಾ). ದಡ್ಡ; ಹೆಡ್ಡ; ಗಾವಿಲ (೧.೩–೨೪೪)

ಗಾತ್ರ (ನಾ). ಮೈ; ದೇಹ; ಶರೀರ (೧.೪–೩೩೪)

ಗಾರು (ನಾ). ಗಾಸಿ; ಗಾಬರಿ (೧.೨–೫೭೧)

ಗಾಳಿದೇರ್, ಗಾಳಿ ತೇರು (ನಾ). ವಾಯುಮಂಡಲದಲ್ಲಿ ಚಲಿಸುವ ತೇರು; ರಥ; ವಿಮಾನ (೨.೧–೧೮೭)

ಗಿರಿನಿತಂಬ (ನಾ). ಬೆಟ್ಟದ ಮಗ್ಗುಲು, ತಪ್ಪಲು; ಪರ್ವತದ ಇಳುಕಲು ಪ್ರದೇಶ (೨.೨–೭೫೮)

ಗಿರಿಭುಜ ಸ್ಥಾನ (ನಾ). ಬೆಟ್ಟದ ಭುಜದಂತಹ ಪ್ರದೇಶ (೧.೮–೬೪)

ಗಿಱು, ಗಿರು (ಕ್ರಿ). ಗೆತ್ತು (ಭೂತನ್ಯೂ) ಭಾವಿಸು, ಎಣಿಸು (೧.೧೧–೩೪೩)

ಗೀಕು (ನಾ). ಜೊಂಡು; ಆಪು (೨.೩–೨೨೨)

ಗೀರ್ವಾಣ (ನಾ). ದೇವತೆ; ಸುರ; ಅಮರ (೧.೨–೫೭೪)

ಗುಂಜಾಭರಣ (ನಾ). ಗುಲಗಂಜಿಗಳಿಂದ ಮಾಡಿದ ಆಭರಣ (೨.೯–೪೨೪)

ಗುಂಪುಲಿ (ನಾ). (ಪಕ್ಷಿ ಮೊದಲಾದುವುಗಳು) ಒಟ್ಟಾಗಿ ಮಾಡುವ ಶಬ್ದ,–ಸಾಮೂಹಿಕ ಧ್ವನಿ (೧.೧೧–೨೩೨)

ಗುಜ್ಜು (ನಾ). ಸಣ್ಣದಾಗಿರುವಿಕೆ; ಕುಳ್ಳಾಗಿರುವಿಕೆ, ಗಿಡ್ಡಾಗಿರುವಿಕೆ (೧.೬–೩೩೬)

ಗುಡಿಗಟ್ಟು (ಕ್ರಿ). ಮೈಗೂದಲು ನಿಮಿರು; ನವಿರೇರು; ರೋಮಾಂಚನವಾಗು (೧.೭–೨೭೩)

ಗುಡಿಗಟ್ಟು (ಕ್ರಿ). ಸಂತೋಷಗೊಳ್ಳು; ಉತ್ಸಾಹಗೊಳ್ಳು (೨.೫–೧೦೭)

ಗುಡುಗುಡಿಸು (ಕ್ರಿ). ರೋಷದಿಂದ ಕೂಗು; ಗರ್ಜಿಸು; ಆರ್ಭಟಿಸು (೧.೨–೪೦೦)

ಗುಣ್ಪು (ನಾ). ಆಳ; ಗಾಂಭೀರ್ಯ (೩.೪–೫೯೧)

ಗುದ್ದುಮಳಿ (ನಾ). ತುಮುಲ (೪.೧೧–೩೫)

ಗುಪ್ತಿ (ನಾ). ಕಾಪು; ರಕ್ಷಣೆ (೩.೧೨–೧೦೯)

ಗುಬ್ಬಳಿಸು (ಕ್ರಿ). ಬಿಕ್ಕಳಿಸು; ಬಿಕ್ಕು (೧.೯–೩೩೪)

ಗುರು (ಗು). ದೊಡ್ಡ; ಅತಿಶಯವಾದ (೧.೬–೬೫)

ಗುರು (ಗು). ಮಹತ್ವವುಳ್ಳ; ಬೆಲೆಯುಳ್ಳ; ಘನವಾದ (೪.೧೩–೧೨)

ಗುರು (ನಾ). ಕಠಿನವಾದುದು; ದುಸ್ಸಾಧ್ಯವಾದುದು (೨.೨–೫೭೦)

ಗುರುಗಾತ್ರ (ನಾ). ದೊಡ್ಡದಾಗಿರುವಿಕೆ; ದೊಡ್ಡ ಆಕಾರವುಳ್ಳದ್ದು (೨.೨–೭೬೯)

ಗುರುತರ (ಗು). ಬಹಳ ಹಿರಿದಾದ; ಹೆಚ್ಚಾಗಿ ಗೌರವಕ್ಕೆ ಪಾತ್ರವಾದ;

ಮಹತ್ತರವಾದ (೧.೬-೨೦೩)
ಗುರುಲಘುಗಣನ (ನಾ). ದೊಡ್ಡದು ಚಿಕ್ಕದು ಎಂಬ ವಿವೇಚನೆ; ತಾರತಮ್ಯ ವಿವೇಕ (೧.೭-೩೨೪)
ಗುಲ್ಮ (ನಾ). ೧. ಕುರುಚಲು ಗಿಡಗಳ ಅಥವಾ ಸಣ್ಣ ಮರಗಳ ಗುಂಪು; ಪೊದರು (೧.೪-೫೨೪) ೨. ಒಂಭತ್ತು ಆನೆ, ಒಂಭತ್ತು ರಥ, ಇಪ್ಪತ್ತೇಳು ಕುದುರೆ ಮತ್ತು ನಲವತ್ತೈದು ಕಾಲಾಳು ಉಳ್ಳ ಸೈನ್ಯದ ಘಟಕ, -ತುಕಡಿ (೩.೧೪-೧೪೬)
ಗುಹ್ಯ (ಗು). ಮುಚ್ಚಿಡಬೇಕಾದುದು; ಗುಟ್ಟು; ರಹಸ್ಯ (೧.೬-೨೦೩)
ಗೆಂಟು (ನಾ). ದೂರ (೧.೪-೩೯೪)
ಗೆತ್ತು (ನಾ). ಹೋಲಿಕೆ; ಸದೃಶ್ಯ (೧.೬-೩೧೭)
ಗೇಯ (ನಾ). ಹಾಡುವಿಕೆ; ಗಾಯನ; ಹಾಡು (೧.೧೧-೨೮೦)
ಗೊಟ್ಟಿಗಾಳೆಗ (ನಾ). ಗುಂಪುಗಾಳಗ; ತುಮುಲ ಯುದ್ಧ (೧.೧೧-೧೬೫)
ಗೊಲೆ (ನಾ). ಬಿಲ್ಲಿನ ತುದಿ; ಕೊಪ್ಪು (೧.೨-೩೯೩)
ಗೋತ್ರಸ್ಕಂಧ (ನಾ). ಬೆಟ್ಟದ ತುದಿ (೧.೯-೫೯೫)
ಗೋಧೂಲಿ; ಗೋಧೂಳಿ (ನಾ). ೧. ದನಕರುಗಳು ಮನೆಗೆ ಹಿಂದಿರುಗುವಾಗ ನೆಲದಿಂದ ಏಳುವ ಧೂಳು ೨. ಮೇಯಲು ಹೋದ ಗೋವುಗಳು ಮರಳಿ ಬರುವ ಕಾಲ; ಸಾಯಂಸಂಧ್ಯೆ; ಸಂಧ್ಯಾ ಸಮಯ (೧.೪-೪೦೧)
ಗೋನಾಳಿ (ನಾ). ಕೊರಳಿನನಾಳ; ಕಂಠನಾಳ; ಕೊರಳು; ಕಂಠ (೨.೪-೭೫)
ಗೋಮಯ (ನಾ). ಆವಿನ(ಹಸು) ಅಥವಾ ಎತ್ತಿನ ಸಗಣಿ (೧.೭-೧೯೮)
ಗೋಮಿನಿ (ನಾ). ವಿಷ್ಣುವಿನ ಪತ್ನಿ; ಲಕ್ಷ್ಮಿ (೩.೧-೯೪)
ಗೋರಿಗೊಳ್, ಗೋರಿಗೊಳು (ಕ್ರಿ). (ಬೇಟೆಯ ಮೃಗಗಳು) ಬೇಟೆಗಾರನ ಹಾಡಿಗೆ ಮರುಳಾಗು, ಮೋಹ ಪರವಶವಾಗು (೨.೨-೯೮)
ಗೋಷ್ಪದ (ನಾ). ಹಸುವಿನ ಹೆಜ್ಜೆ, -ಪಾದ (೩.೪-೩೬೫)
ಗೋಷ್ಪದಜಲ (ನಾ). ಹಸುವಿನ ಹೆಜ್ಜೆಯ ಗುಂಡಿಯಲ್ಲಿ ಹಿಡಿಸುವಷ್ಟು ಪ್ರಮಾಣದ ನೀರು; ತೀರ ಸ್ವಲ್ಪ ನೀರು (೩.೪-೩೬೫)
ಗ್ರಾಮ್ಯ (ನಾ). ವಿದ್ಯೆ ಇಲ್ಲದವನು; ಗಾವಿಲ; ಮೂಢ; ದಡ್ಡ (೪.೪-೧೧೬)
ಗ್ರಾವ (ನಾ). ಬೆಟ್ಟ; ಗುಡ್ಡ (೩.೯-೨೦೭)
ಗ್ರೀಷ್ಮ (ನಾ). ಉಷ್ಣ; ಸೆಕೆ; ತಾಪ (೨.೧-೪೧೫)
ಗ್ರೈವೇಯ (ನಾ). ಕಂಠಾಭರಣ; ಹಾರ (೨.೬-೨೬೪)

ಘಟೆ (ನಾ). ಆನೆಗಳಗುಂಪು; ಗಜಸಮೂಹ (೩.೭-೧೨೩)
ಘನ (ನಾ). ಮೋಡ; ಮುಗಿಲು, ಮೇಘ (೧.೨-೮)
ಘನೀಭೂತ (ಗು). ೧. ಗಟ್ಟಿಯಾದ; ಸಾಂದ್ರವಾದ; ಹೆಪ್ಪುಗಟ್ಟಿದ ೨. ಮೋಡದಿಂದ ಕೂಡಿದುದು; ಮೇಘಮಯವಾದುದು (೧.೧೦-

೩೨)

ಘಾಸ (ನಾ). ಹುಲ್ಲು; ಮೇವು (೨.೩-೧೧೪)

ಘೂಕ (ನಾ). ಗೂಗೆ; ಗೂಬೆ (೩.೧-೨೫೧)

ಘೂರ್ಣಿಸು (ಕ್ರಿ). ೧. ಘೋಷಿಸು, ಶಬ್ದಮಾಡು (೧.೧೧-೪೧೧) ೨. ಅಲ್ಲೋಲಕಲ್ಲೋಲವಾಗು; ಪ್ರಕ್ಷುಬ್ಧ ವಾಗು; ಚಲಿಸು; ಕ್ಷೋಭೆಗೊಳು (೧.೫-೯೪)

ಘೋರ (ಗು). ಭಯಂಕರತೆ, ಉಗ್ರತೆ (೧.೫-೧೨೭)

ಘೋಷ (ನಾ). ೧. ಗಟ್ಟಿಯಾದ ಶಬ್ದ (೧.೫-೧೦೩) ೨. ಸಾರುವಿಕೆ; ಕೂಗಿ ಹೇಳುವಿಕೆ (೧.೯-೫೯)

ಚಂಚರೀಕ (ನಾ). ದುಂಬಿ; ಭ್ರಮರ (೨.೨-೭೯)

ಚಂಚುಪುಟ (ನಾ). ಪಕ್ಷಿಯ (ಮುಚ್ಚಿಕೊಂಡಿರುವ) ಕೊಕ್ಕು (೨.೨-೫೪೨)

ಚಂಡ (ಗು). ಬಲಿಷ್ಠವಾದ, ಬಲಾಢ್ಯ (೨.೨-೧೪೦)

ಚಂಡಕರ (ನಾ). ತೀಕ್ಷ್ಣವಾದ ಕಿರಣಗಳನ್ನುಳ್ಳುವನು; ಸೂರ್ಯ(೧.೧೦-೧೦೫)

ಚಂಡಿಕಾ ಧ್ವಜ (ನಾ). ದುರ್ಗೆಯ ಚಿಹ್ನೆಯುಳ್ಳ ಬಾವುಟ (೨.೧-೧೭೭) (೩.೧೨-೧೪೦)

ಚಂದನ (ನಾ). ಶ್ರೀಗಂಧದ ಕೊರಡನ್ನು ತೇದು ಮಾಡಿದ ಗಂಧ, (೩.೬-೧೦೬)

ಚಂದ್ರಿಕೆ (ನಾ). ಬೆಳುದಿಂಗಳು; ತಿಂಗಳ ಬೆಳಕು (೪.೧-೨೦)

ಚಕಿತ (ಗು). ಗಾಬರಿಗೊಂಡ; ಭಯಪಟ್ಟ (೨.೬-೮೨)

ಚಕೋರ (ನಾ). ಬೆಳುದಿಂಗಳನ್ನೇ ಸೇವಿಸಿ ಬದುಕುವುದೆಂದು ಪ್ರತೀತಿಯಿರುವ ಪಕ್ಷಿ; ಬೆಳುದಿಂಗಳ ಹಕ್ಕಿ; ಜೊನ್ನವಕ್ಕಿ (೪.೧-೨೧)

ಚಕ್ಕಲಗುಳಿ, ಚಕ್ಕಳಿಗುಳಿ (ನಾ). ಪಕ್ಕೆಗಳಲ್ಲಿ ಬೆರಳಾಡಿಸಿ ನಗಿಸುವ ಕ್ರಿಯೆ; ಕಚಗುಳಿ (೪.೨-೩೯೪)

ಚಕ್ಕವಕ್ಕಿ, ಜಕ್ಕವಕ್ಕಿ (ನಾ). ಚಕ್ರವಾಕ ಪಕ್ಷಿ; ಎಣೆವಕ್ಕಿ (೧.೯-೫೭)

ಚಕ್ಷು (ನಾ). ಕಣ್ಣು; ನೇತ್ರ (೪.೧೧-೩೩)

ಚಚ್ಚರ (ನಾ). ಬೇಗ; ಶೀಘ್ರತೆ; ಜಾಗ್ರತೆ (೨.೨-೧೭೪)

ಚಟುಲ (ಗು). ಸುಂದರವಾದ; ಚೆಲುವಾದ; ಚೊಕ್ಕವಾದ (೩.೭-೪೧೯)

ಚತುರ್ದಶ (ನಾ). ಹದಿನಾಲ್ಕು (೪.೧೨-೨)

ಚತುಷ್ಪಾದಿ (ನಾ). ನಾಲ್ಕು ಕಾಲುಗಳನ್ನುದ್ದು(೨.೨-೨೪೫)

ಚಪೇಟ (ನಾ). ಬೆರಳುಗಳನ್ನು ಬಿಚ್ಚಿ ಹಿಡಿದ ಅಂಗೈ; ಬಿಚ್ಚಿದ ಕೈ (೩.೧೦-೧೮೬)

ಚಮು (ನಾ). ೧. ಪಡೆ; ಸೈನ್ಯ ೨. ೭೨೯ ಆನೆ, ೭೨೯ ರಥ, ೨೧೮೭ ಕುದುರೆ, ೩೬೪೫ ಕಾಲಾಳು-ಇವುಗಳನ್ನುಳ್ಳ ಒಂದು ಸೈನ್ಯದಳ. (೨.೯-೨೯೩)

ಚಮೂಪ, ಚಮೂಪತಿ, ಚಮೂನಾಥ (ನಾ). ಪಡೆವಳ; ಸೇನಾಧಿಪತಿ; ಸೇನಾನಿ (೩.೧೧-೧೫೧)

ಚಯ (ನಾ). ಗುಂಪು; ಮೊತ್ತ; ರಾಶಿ;

ಸಮೂಹ (೧.೪-೧೯೮)

ಚಯನ (ನಾ). ಕೂಡಿಹಾಕುವಿಕೆ; ಒಟ್ಟುಗೂಡಿಸುವಿಕೆ; ಶೇಖರಿಸುವಿಕೆ; ರಾಶಿಮಾಡುವಿಕೆ (೧.೬-೨೨೯)

ಚರಮ (ಗು). ಕಡೆಯ; ಕೊನೆಯ; ಅಂತಿಮವಾದ (೪.೧೩-೨೧೦)

ಚರಿಗೆ (ನಾ). ಚೆಂಬು, ತಂಬಿಗೆ, ಬಿಂದಿಗೆ, ತಪ್ಪಲೆ ಮೊದಲಾದ ಲೋಹದ ಪಾತ್ರೆ (೪.೧-೧೯೯)

ಚರಿಸು (ಕ್ರಿ). ನಡೆ; ಚಲಿಸು; ಸಂಚರಿಸು (೧.೧೦-೩೬೦)

ಚರು (ನಾ). (ಆಲಂ). ಆಹಾರ; ಊಟ (೪.೧-೧೯೯)

ಚವರ, ಚವುರ (ನಾ). ಚಮರ; ಚಾಮರ (೧.೧೧-೩೩)

ಚವರಿ (ನಾ). ಚಮರೀ ಮೃಗದ ಕೂದಲು (೧.೩-೧೨೦)

ಚವರಿ ಬಿಜ್ಜಣ (ನಾ). ಚವರಿಯಿಂದ ಮಾಡಿದ ಬೀಸಣಿಗೆ (೩.೧೪-೨೫೩)

ಚಾಚರೆ (ನಾ). ಮುಂದಕ್ಕೆ ಚಾಚಿಕೊಂಡಿರುವ ಬಂಡೆ,- ಕಲ್ಲು (೨.೧೦-೩೯)

ಚಾತಕ (ನಾ). ಮಳೆಯ ನೀರಿನ ಆಧಾರದಿಂದಲೇ ಬದುಕುವುದೆಂದು ನಂಬಲಾದ ಪಕ್ಷಿ; ಮಳೆಯಹನಿಗಳನ್ನು ಬಾಯೊಡ್ಡಿ ಕುಡಿದು ಬಾಯಾರಿಕೆಯನ್ನು ತೀರಿಸಿಕೊಳ್ಳುವ ಒಂದು ಬಗೆಯ ಪಕ್ಷಿ; ಚಾದಗೆ(೧.೩-೪೩) (೧.೯-೪೮೦)

ಚಾಮೀಕರ (ನಾ). ಚಿನ್ನ; ಹೊನ್ನು; ಬಂಗಾರ (೨.೮-೫೪)

ಚಾರು (ಗು). ಚೆಲುವಾದ; ಸುಂದರವಾದ; ಆಹ್ಲಾದಕರವಾದ (೧.೨ - ೮೫)

ಚಾರುರೂಪಿಣಿ (ನಾ). ಸುಂದರವಾದ ರೂಪವುಳ್ಳವಳು; ಸುಂದರಿ (೧.೩-೨೮೭)

ಚಿಕುರ (ನಾ). ತಲೆಯ ಕೂದಲು (೧.೩-೩೭೦)

ಚಿಚ್ಛಕ್ತಿ (ನಾ). ಚೈತನ್ಯ; ಆತ್ಮಶಕ್ತಿ (೧.೨-೧೯೦)

ಚಿತ್ರ (ಗು). ಪ್ರಕಾಶಮಾನವಾದ, ಕಣ್ಣನ್ನು ಕೋರೈಸುವ; ಮನೋಹರವಾದ (೧.೭-೧೭೫)

ಚಿತ್ರ ಭಿತ್ತಿ (ನಾ). ಚಿತ್ರಗಳಿಂದ ಕೂಡಿದ ಗೋಡೆ (೧.೮-೨೪೦)

ಚಿತ್ರಭಾನು (ನಾ). ೧. ಅಗ್ನಿ (೧.೪-೫೩) ೨. ನಾನಾಬಣ್ಣದ ಕಿರಣಗಳುಳ್ಳವನು; ಸೂರ್ಯ (೨.೧-೨೦೦)

ಚಿತ್ರಸೂತ್ರ (ನಾ). ಒಂದು ಬಗೆಯ ಬಣ್ಣದ ವಸ್ತ್ರ (೧.೧೦-೧೨೬)

ಚಿತ್ರಸ್ವನ (ನಾ). ಮನೋಹರವಾದ ಧ್ವನಿ (೧.೭-೧೭೫)

ಚಿದ್ರೂಪ (ನಾ). ೧. ಚೈತನ್ಯ ಸ್ವರೂಪ; ಜೀವ (೪.೭-೪೪)

ಚಿನ್ಮಯ. (ನಾ) (ಶುದ್ಧ ಜ್ಞಾನದಿಂದ ಕೂಡಿದುದು; ಚಿದ್ರೂಪವಾದುದು (೧.೧ - ೧೨೯) (೧.೭-೨೨೫)

ಚಿಕೀರ್ಷ (ನಾ). ಕೆಲಸ ಮಾಡುವ ಬಯಕೆ (೧.೧ - ೩೨)

ಚಿಲಿ (ಕ್ರಿ). ಹಲ್ಲುಬಿಡು; ಕಿಸಿ (೧.೫-೧೨೭)

ಚೀತ್ಕೃತಿ (ನಾ). ಚೀತ್ಕಾರ; ರಥವು ಚಲಿಸುವಾಗ ಉಂಟಾಗುವ ಧ್ವನಿ (೧.೪-೪೨೭)

ಚೀನಾಂಬರ (ನಾ). ಚೀನಾದೇಶದಲ್ಲಿ

ತಯಾರು ಮಾಡಿದ ಬಟ್ಟೆ, -ವಸ್ತ್ರ, - ರೇಷ್ಮೆ ವಸ್ತ್ರ (೪.೭-೮೬)

ಚೀರ (ನಾ). ನಾರುಬಟ್ಟೆ; ವಲ್ಕಲ (೧.೯-೨೪೩)

ಚುಂಗುಳ (ನಾ). ಒಂದು ಬಗೆಯ ಹುಳು (೨.೧-೧೦೦)

ಚುಬುಕಾಗ್ರ (ನಾ). ಗದ್ದದ ತುದಿ (೧.೯-೩೪)

ಚೂಡ (ನಾ). ಶಿಖರ; ತುದಿ (೧.೪-೨೮೯)

ಚೂರ್ಣ (ನಾ). ಪುಡಿ; ಹುಡಿ (೨.೯-೩೫೭)

ಚೂರ್ಣಿಸು (ಕ್ರಿ). ಪುಡಿಮಾಡು (೩.೧೩-೭೨)

ಚೆಂಗಳ್ಳು (ನಾ). ಕೆಂಪು ಬಣ್ಣದ ಮದ್ಯ-ಹೆಂಡ (೧.೩-೩೫೧)

ಚೆಂದೊಂಗಲ್ (ನಾ). ಕೆಂಪಾದ ಗೊಂಚಲು; ಚಿಗುರಿನ ಗೊಂಚಲು (೧.೨-೫೫೧)

ಚೆಚ್ಚರು (ನಾ). ಬೇಗ; ಶೀಘ್ರತೆ; ಜಾಗ್ರತೆ (೧.೯-೮೦)

ಚೆನ್ನ, ಚನ್ನ (ನಾ). ಚೆಲುವು; ಸೌಂದರ್ಯ; ಸೊಗಸು (೧.೯-೧೦೧)

ಚೆಲ್ವು, ಚೆಲುವು (ನಾ). ಅಂದ; ಚಂದ; ಸೊಗಸು. ಸೌಂದರ್ಯ (೧.೫-೭೭)

ಚೇತನ (ನಾ). ಪರಮಾತ್ಮ (೧.೧-೨೮೯)

ಚೇಷ್ಟಿತ (ನಾ). ಕಾರ್ಯ; ಕೆಲಸ; ನಡೆವಳಿಕೆ (೪.೧೩-೮೩)

ಚೈತ್ಯ (ಗು). ಚಿತೆಗೆ ಸಂಬಂಧಿಸಿದ (೪.೧೦-೩೭೦)

ಚೈತ್ಯ (ನಾ). (ಬೌದ್ಧಅಥವಾಜೈನ) ದೇವಾಲಯ (೪.೧೨-೨೪೪)

ಛದ್ಮನೆ (ನಾ). ೧. ಮೋಸ; ಕಪಟ; ವಂಚನೆ (೧.೧೧-೭) ೨. ಮುಸುಕು; ಮರೆ; ಆಚ್ಛಾದನೆ (೨.೨-೬೬)

ಛವಿ (ನಾ). ಕಾಂತಿ; ಹೊಳಪು; ಶೋಭೆ (೪.೧೩-೧೦೧)

ಛಾಯಾ ಶರೀರ (ನಾ) (ನೆರಳಿನಂತೆ ಯಾವಾಗಲೂ ಅನುಸರಿಸುವವನು (೧.೧-೬೯)

ಛುರಿಕೆ (ನಾ). ಚೂರಿ; ಸುರಿಗೆ; ಬಾಕು (೩.೭-೪೨೫)

ಜಂತು (ನಾ). ಜೀವವನ್ನುಳ್ಳುದ್ದು; ಪ್ರಾಣಿ; ಜೀವಿ (೧.೭-೪೩೦)

ಜಕ್ಕಿಣಿ, ಜಕ್ಕಣಿ (ನಾ). ಯಕ್ಷಿಣಿ (೧.೨-೧೫೨)

ಜಗುನೆ, ಜಗುನಿ, ಜಮುನೆ (ನಾ). ಯಮುನೆ; ಯಮುನಾನದಿ (೧.೯-೩೩೫)

ಜಗುಳ್, ಜಗುಳು (ಕ್ರಿ). ೧. ಓಡಿಹೋಗು; ದೂರಹೋಗು (೧.೩-೪೩೮) ೨. ಬೀಳು; ಕೆಡೆ (೧.೪-೫೬೭) ೩. ಜಾರು; ಜಾರಿಕೊಳ್ಳು (೨.೧-೪೨೦) ೪. ಕಳಚಿಕೊಳ್ಳು (೨.೯-೧೯೮)

ಜಟಾಜೂಟ (ನಾ). ಜಡೆಮುಡಿ; ಜಡೆಗಟ್ಟಿದ ಕೂದಲು, ಜಟಾಸಮೂಹ (೧.೨-೫೩೮)

ಜಟಾಳಿ (ನಾ). ಜಟೆಗಳ ಗುಂಪು; ಜಡೆಗಟ್ಟಿದ ಕೂದಲಿನ ಬೊಂತೆ (೧.೨-೬೬೪)

ಜಟೆ (ನಾ). ಹೆಣೆದುಕೊಂಡು ತೆಕ್ಕೆಯಾದ ತಲೆಗೂದಲು; ಸುರುಳಿ ಸುತ್ತಿ

ಬಿಡಿಸಲಾಗದಂತೆ ಜಟೆಗೊಂಡ ಕೂದಲು; ಜಡೆಗಟ್ಟಿದ ಕೂದಲು (೧.೩-೫೭೯)

ಜಠರ (ನಾ). ಕರ್ಕಶವಾದ; ಗಡುಸಾದ, ಬಿರುಸಾದ, ಕಠಿನವಾದ (೧.೯-೩೫೪)

ಜಠರಾಗ್ನಿ (ನಾ). ಹೊಟ್ಟೆಯಲ್ಲಿ ಆಹಾರವನ್ನು ಜೀರ್ಣವಾಗುವಂತೆ ಮಾಡುವ ಅಗ್ನಿ (೧.೧೦-೪೧೭)

ಜಡೆವೊರು (ಕ್ರಿ). ಜಟೆಯನ್ನು ಧರಿಸು; ಜಡೆಯನ್ನು ಹೊಂದಿರು; ಜಡೆಗಟ್ಟಿದ ಮುಡಿಯಿಂದ ಕೂಡಿರು (೧.೧೧-೨೬೭)

ಜತುಮುದ್ರೆ (ನಾ) (ಮುಚ್ಚಿಡುವಿಕೆ; ರಹಸ್ಯ (೧.೩-೪೦೩)

ಜನಪದ (ನಾ). ಜನ; ಜನತೆ; ಜನಾಂಗ (೧.೭-೩೫೧)

ಜನಸ್ಥಾನ (ನಾ). ಪ್ರಾಚೀನ ದಂಡಕಾರಣ್ಯದಲ್ಲಿ ಒಂದು ಭಾಗದ ಹೆಸರು. (ಜನರು ವಾಸ ಮಾಡುವ ದಂಡಕಾರಣ್ಯ ಪ್ರದೇಶ) (೨.೧-೧೯)

ಜಪಾಕುಸುಮ (ನಾ). ದಾಸವಾಳದ ಹೂವು (೩.೧-೩೭೯)

ಜರಠ (ಗು). ೧. ಶಿಥಿಲವಾದ; ಜೀರ್ಣವಾದ; ಹಳೆಯ (೧.೬-೨೭೫) ೨. ಒರಟಾದ; ಕಠಿನವಾದ; ನಿಷ್ಠುರವಾದ (೧.೯-೩೫೪)

ಜರೆ (ನಾ). ಮುಪ್ಪು; ವೃದ್ಧಾಪ್ಯ (೧.೧-೬೨೯)

ಜರ್ಜರ (ಗು). ಶಿಥಿಲವಾದ; ಜೀರ್ಣವಾದ; ಹಳೆಯ (೧.೬-೨೭೫) (೧.೯-೩೫೪)

ಜರ್ವು (ಕ್ರಿ). (ಕಣ್ಸನ್ನೆಯಿಂದ) ಗದರಿಸು; ಜಡಿ; ಜಂಕಿಸು (೩.೧೨-೨೩)

ಜಲದ, ಜಳದ (ನಾ). ನೀರನ್ನು ನೀಡುವುದು; ಮೋಡ; ಮೇಘ (೨.೨-೧೫೩)

ಜಲಧರ (ನಾ). ಮೋಡ; ಮುಗಿಲು; ಮೇಘ (೧.೨-೬೫೪)

ಜಲನಿಧಿ, ಜಲಧಿ, ಜಳಧಿ (ನಾ). ಕಡಲು; ಸಮುದ್ರ (೪.೩-೧೬)

ಜಲೋಚ್ಛ್ವಾಸ (ನಾ). ಕೆರೆ ಮೊದಲಾದುವುಗಳಲ್ಲಿ ಹೆಚ್ಚಾದ ನೀರನ್ನು ಹರಿಯ ಬಿಡಲು ಮಾಡಿರುವ ಮಾರ್ಗ; ಕೋಡಿ; ಕಡೆಗೋಡಿ (೧.೩-೬೨೭)

ಜಲ್ಪ (ನಾ). ೧. ಅಸಂಬದ್ಧವಾದ ಮಾತು; ವ್ಯರ್ಥವಾದ ಮಾತು; ಹರಟೆ (೩.೩-೧೮೫) ೨. ಮಾತು; ನುಡಿ (೩.೬-೨೪೬)

ಜವ (ನಾ). ವೇಗ, ರಭಸ (೧.೯-೧೧೦) ಜವಂಜವ (ದ್ವಿರುಕ್ತಿ) (೧.೫-೮೮)

ಜಹ್ನುಜಾತೆ (ನಾ). ಜಹ್ನು ಮುನಿಯ ಮಗಳು; ಜಾಹ್ನವಿ, ಗಂಗಾನದಿ (೧.೭-೫೦)

ಜಾನ (ನಾ). ಇಷ್ಟದೇವತೆಯನ್ನು ಒಂದೇ ಮನಸ್ಸಿನಿಂದ ನೆನೆಯುತ್ತಿರುವುದು; ಧ್ಯಾನ (೧.೭-೨೪೮)

ಜಾನು (ನಾ). ಮೊಳಕಾಲು; ಮಂಡಿ (೨.೨-೯೫)

ಜಾಯಿಲ (ನಾ). ನಾಯಿ; ಶುನಕ; ಸೊಣಗ (೨.೧-೩೧೬)

ಜಾಳಂದ್ರ, ಜಾಲಂದ್ರ, ಜಾಲಂಧ್ರ (ನಾ). ಬಲೆಯಂತೆ ಕಂಡಿಗಳನ್ನು ಒಳಗೊಂಡಿರುವ ಕಿಟಕಿ, -ಗವಾಕ್ಷ (೪.೧೧-೪೩೫)

ಜಿಂಹ (ನಾ). ಆಲಸ್ಯ; ಜಡತೆ (೩.೧೦-೧೩೧)

ಜಿಗುಟಿ, ಜಿಗಣೆ, ಜಿಗುಣೆ (ನಾ). ಜಲವಾಸಿಯಾದ ರಕ್ತಹೀರುವ ಒಂದು ಬಗೆಯ ಹುಳು (೧.೪-೩೧೦)

ಜಿಜ್ಞಾಸೆ (ನಾ). ತಿಳಿಯುವ ಬಯಕೆ; ಅರಿತುಕೊಳ್ಳುವ ಇಚ್ಛೆ (೧.೭-೧೬೫)

ಜಿಹಾಸೆ (ನಾ). ತ್ಯಜಿಸುವ ಅಪೇಕ್ಷೆ; ಬಿಟ್ಟುಕೊಡುವ ಬಯಕೆ (೪.೪-೪೨೫)

ಜಿಹ್ಮ (ನಾ). ವಕ್ರವಾದುದು; ಕುಟಿಲವಾದುದು; ಡೊಂಕಾದುದು (೩.೯-೨೭೧)

ಜೀದುರ್ಂಬಿ, ಜಿರುದುಂಬಿ, ಜೀರುಂಬೆ (ನಾ). ಜೀರ್ ಎಂದು ಶಬ್ದ ಮಾಡುವ ಒಂದು ಬಗೆಯ ದುಂಬಿ (೧.೭-೧೧೫)

ಜೀಮೂತ (ನಾ). ಮುಗಿಲು; ಮೋಡ: ಮೇಘ (೨.೨-೬೬)

ಜೀಮೂತ ವಾಹನ (ನಾ). ಮೋಡವನ್ನು ವಾಹನವಾಗಿ ಉಳ್ಳವನು; ಇಂದ್ರ (೪.೧೨-೧೨೭)

ಜೀಙುಂಡೆ, ಜೀರುಂಡೆ (ನಾ). ಜೀರ್ ಜೀರ್ ಎಂದು ಧ್ವನಿ ಮಾಡುವ ದುಂಬಿಯ ಜಾತಿಗೆ ಸೇರಿದ ಹುಳು (೧.೪-೩೧೨)

ಜೀವನ (ನಾ). ನೀರು; ಉದಕ; ಜಲ (೩.೧೩-೧೯೯)

ಜೀವಾತು (ನಾ). ಅನ್ನಾಂಗ; ಜೀವಸತ್ವ (೪.೧-೩೨೫)

ಜೀವೇಶ (ನಾ). ಇನಿಯ; ಪತಿ; ಯಜಮಾನ; ನಾಥ (೧.೭-೪೨)

ಜುಣುಗು (ಕ್ರಿ). ಜಾರಿಕೊಳ್ಳು; ನುಣುಚಿಕೊಳ್ಳು (೧.೬-೧೫೧)

ಜೇಂಕಾರ, ಝುಂಕಾರ (ನಾ). ಝುಂ ಎಂಬ ಧ್ವನಿ (೧.೨-೧೩೪)

ಜೇನ್ನುಡಿ (ನಾ). ಜೇನಿನಂತಹ ನುಡಿ; ಇಂಪಾದ ಮಾತು; ಸವಿಮಾತು(೧.೩-೩೭೯)

ಜೇವೊಡೆ, ಜಯವೊಡೆ, ಜೇವಡೆ (ಕ್ರಿ). ಬಿಲ್ಲಿನ ಹೆದೆಯೇರಿಸಿ ಠೇಂಕಾರಮಾಡು; ಧನುಷ್ಟಂಕಾರ ಮಾಡು (೧.೧೧-೨೬೪)

ಜೈತ್ರಯಾತ್ರೆ (ನಾ). ವಿಜಯ ಯಾತ್ರೆ (೩.೧೨-೨೬೪)

ಜೊಂಪಿಸು, ಜಂಪಿಸು, ಝುಂಪಿಸು, ಝೊಂಪಿಸು (ಕ್ರಿ). ನಡುಗಿಸು; ಕಂಪನಗೊಳಿಸು; ಅಲುಗಾಡಿಸು (೧.೧೧-೩೯)

ಜೊನ್ನವಕ್ಕಿ (ನಾ). ಬೆಳುದಿಂಗಳನ್ನು ಸೇವಿಸಿ ಜೀವಿಸುವುದೆಂದು ಭಾವಿಸಲಾದ ಹಕ್ಕಿ; ಚಕೋರ (೧.೧-೩೮೨)

ಜೋಲ್ (ಕ್ರಿ). ಜೋಲ್ದು (ಭೂತನ್ಯೂ) = ಕುಸಿಬೀಳು; ನಿಸ್ಸತ್ವವಾಗು (೧.೩-೫೩೩)

ಜೋಳವಾಳಿ (ನಾ). ಒಡೆಯನ ಋಣ; ಉಪ್ಪಿನ ಹಂಗು; ಅನ್ನದ ಋಣ (೩.೩-೨೨೧)

ಜ್ಯಾ (ನಾ). ಬಿಲ್ಲಿನ ಹೆದೆ; ನಾರಿ (೨.೫-೩೯೪)

ಜ್ಯೋತಿ (ನಾ). ಬೆಳಕು; ಕಾಂತಿ, ತೇಜಸ್ಸು; ಪ್ರಕಾಶ (೧.೧ - ೩೧೩)

ಝುಂಝಾವಾತ, ಝುಂಝಾನಿಲ (ನಾ). ಮಳೆಯಿಂದ ಕೂಡಿದ ಗಾಳಿ; - ಬಿರುಗಾಳಿ (೨.೨-೫೬೭)

ಝಿಲ್ಲಿಕಾನಾದ (ನಾ). ಜೀರುಂಡೆಹುಳುಗಳ ಶಬ್ದ,- ಧ್ವನಿ (೧.೧೦-೧೦೯)

ಝಿಲ್ಲಿಕೆ (ನಾ). ಜೀರುಂಡೆಗಳು (೨.೩-೭)

ಝುಷ (ನಾ). ಮೀನು; ಮತ್ಸ್ಯ (೩.೪-೫೩೮)

ಡಗೆ, ಢಗೆ, ದಗೆ, ಧಗೆ (ನಾ). ಕಾವು; ಝಳ; ತಾಪ (೧.೭-೭೪)

ಡಾಕಿನಿ (ನಾ). ಹೆಣ್ಣು ದೆವ್ವಗಳಲ್ಲಿ ಒಂದು ಬಗೆ; ಒಂದು ಬಗೆಯ ಹೆಣ್ಣು ಪಿಶಾಚಿ (೧.೪-೪೪೨)

ಡಿಂಡೀರ (ನಾ). ಕಡಲನಾಲಗೆ; ನೊರೆ; ಫೇನ; ಬುರುಗು (೪.೧-೨೯೪)

ಡೇಗೆ (ನಾ). ಹದ್ದಿನ ಜಾತಿಗೆ ಸೇರಿದ ಒಂದು ಬಗೆಯ ಪಕ್ಷಿ, ಗಿಡುಗ (೨.೨-೫೫೩)

ತಂತುಕಾರ (ನಾ). ಜೇಡರ ಹುಳು (೪.೧೨-೧೦)

ತಂತ್ರಿ (ನಾ). ಯುಕ್ತಿಯನ್ನು ಬಲ್ಲವನು; ಉಪಾಯಗಾರ (೪.೧-೧೬೨)

ತಂದ್ರಿ (ನಾ). ನಿದ್ದೆಯ ಮಂಪರು; ಜೊಂಪು (೧.೭-೪೦೦)

ತಗುಳ್, ತಗುಳು (ಕ್ರಿ). ೧. ಉಂಟಾಗು; ಸಂಭವಿಸು; ಒದಗು ಬರು (೧.೨-೨೬೨) ೨. ಆವರಿಸು; ಆಕ್ರಮಿಸು; ಮೇಲೆ ಬೀಳು (೨.೨-೪೧೫)

ತಟ (ನಾ). ದಡ; ಅಂಚು; ತೀರ (೧.೧೦-೪೫೫)

ತಟಾಕ (ನಾ). ಕೆರೆ; ಕೊಳ; ಕಾಸಾರ; ಪುಷ್ಕರಿಣಿ (೧.೧೦-೨೯)

ತಟಿತ್ತು (ನಾ). ಮಿಂಚು (೩.೪-೪೮೧)(೩.೯-೨೯೨)

ತಟಿಲ್ಲತೆ (ನಾ). ಬಳ್ಳಿಮಿಂಚು (೧.೧ - ೪೧೫)

ತಡಬೆ, ತಡಮೆ, ತೊಡಮೆ (ನಾ). ೧. ಅಡ್ಡಿ; ತಡೆ; ಪ್ರತಿಬಂಧ (೧.೭-೨೨) ೨. ದನಕರುಗಳು ಒಳಗೆ ಬರದಂತೆ ಬೇಲಿಗೆ ಅಳವಡಿಸಿರುವ ಬಿದಿರು ಅಥವಾ ಬೊಂಬಿನ ಚೌಕಟ್ಟು; ತಡೆಬಾಗಿಲು (೧.೧೧-೬೫)

ತಡಿ, ದಡಿ, ಧಡಿ (ನಾ). ೧. ಎಲ್ಲೆ; ಮೇರೆ; ಮಿತಿ (೧.೨-೬೧೪) ೨. ದಡ; ದಂಡೆ; ತೀರ (೧.೮-೨೪೦)

ತಡಿಕೆಗೋಡೆ (ನಾ). ಬಿದಿರು ಅಥವಾ ಅಡಕೆ ದಬ್ಬೆಗಳನ್ನು ಹೆಣೆದು ತಡಿಕೆಗೆ ಮಣ್ಣು ಮಾಡಿದ ಗೋಡೆ (೧.೧೧-೬೨)(೩.೩-೨)

ತಡಿಕೆಪಡಿ (ನಾ). ಬಿದಿರಿನಿಂದ ಹೆಣೆದು ಮಾಡಿದ ಬಾಗಿಲು; ತಟ್ಟಿಯ ಬಾಗಿಲು (೩.೩-೪೦)

ತಣಿ (ನಾ). ತೃಪ್ತಿ ಪಡಿಸುವಿಕೆ; ತರ್ಪಣ (೪.೯-೪೯)

ತಣಿ, ದಣಿ (ಕ್ರಿ). ೧. ತೃಪ್ತಿಹೊಂದು; ಸಮಾಧಾನಗೊಳ್ಳು (೧.೨-೩೪೯) (೧.೩-೪೫೬) ೨. ಆಯಾಸಗೊಳ್ಳು; ಸೋತು ಹೋಗು (೨.೨-೭೮೬)

ತಣಿಯೆರೆ, ತನಿಯೆರೆ (ಕ್ರಿ). ತರ್ಪಣ ಕೊಡು; (ಹಾಲು ಮುಂತಾದುವನ್ನು ಅರ್ಪಿಸಿ) ತೃಪ್ತಿಯನ್ನುಂಟು ಮಾಡು (೨.೧-೧೪೦)

ತಣ್ಗದಿರ, ತಂಗದಿರ (ನಾ). ತಂಪಾದ ಕಿರಣಗಳುಳ್ಳವನು; ಚಂದ್ರ (೧.೨-೩೪೯)

ತಣ್ಣಸಂಬಡೆ (ಕ್ರಿ). ತಂಪಾಗು; ಶೈತ್ಯವನ್ನು ಹೊಂದು (೧.೨-೬೮೨)

ತಣ್ಣೂಳಿಗ (ನಾ). ತಂಪನ್ನುಂಟುಮಾಡುವ ಸೇವೆ; ಶೈತ್ಯೋಪಚಾರ (೧.೬-೧೦೯)

ತತಿ (ನಾ). ಗುಂಪು; ಸಮೂಹ; ಶ್ರೇಣಿ (೧.೨-೬೪೮)

ತತ್ತಳಿಕೆ (ನಾ). ಕಳವಳ; ತಳಮಳ (೧.೪-೧೬)

ತತ್ತಳಿಸು (ಕ್ರಿ). ಗಾಬರಿಗೊಳ್ಳು; ಹೆದರು; ನಡುಗು (೧.೫-೮೪)

ತಥ್ಯ (ನಾ). ನಿಜವಾದುದು; ಸತ್ಯ (೨.೬-೩೫೧)

ತನಿವಣ್, ತನಿವಣ್ಣು (ನಾ). ಪಕ್ವವಾದ ಹಣ್ಣು; ಹದವಾಗಿ ಮಾಗಿದಹಣ್ಣು (೧.೭-೩೧೯)

ತನುಜ, ತನೂಜ (ನಾ). ಮಗ; ಸುತ (೧.೧-೩೦೫) (೧.೨-೬೩೪)

ತನುತ್ರ (ನಾ). ಕವಚ; ಚಿಲಕತ್ತು; ಜೋಡು (೩.೭-೪೯೧)

ತನೂಭವ, ತನುಸಂಭವ, ತನೂಜ (ನಾ). ಮಗ, ಸುತ (೧.೩-೫೬೩)

ತನ್ವಂಗಿ (ನಾ). ಕೋಮಲವಾದ ಶರೀರವುಳ್ಳವಳು; ಕೋಮಲಾಂಗಿ (೧.೪-೩೩೦)

ತಪ (ನಾ). ೧. ಬಿಸಿ; ಶಾಖ; ಉಷ್ಣತೆ (೧.೧೦-೧೧೧) (೧.೧೧-೧೯೬)

ತಪನ (ನಾ) (ಸೂರ್ಯ (೨.೩-೫೦)

ತಪನಕುಲ (ನಾ). ಸೂರ್ಯ ವಂಶ (೧.೯-೪೮೮)

ತಪಿಸು (ಕ್ರಿ). ಪರಿತಪಿಸು; ದುಃಖಪಡು; ನೋಯು (೧.೩-೪೪೭)

ತಪ್ತ ಕಾಂಚನ (ನಾ). ಕಾಯಿಸಿದ ಚಿನ್ನ; ಪುಟವಿಟ್ಟ ಚಿನ್ನ (೧.೧ - ೩೪೭)

ತರಂಗಿಣಿ (ನಾ). ತೆರೆಗಳಿಂದ ಕೂಡಿದುದು; ಹೊಳೆ; ತೊರೆ; ನದಿ (೧.೧-೬೮೮) (೧.೭-೪೮)

ತರಂಟು (ನಾ). ಕೂದಲು ಉದುರಿದ ಸ್ಥಿತಿ. ಉದುರಿ ಹೋಗುವಿಕೆ; ತರಂಟಾಗು= ಬೋಳಾಗು; ಬರಿದಾಗು (೨.೨-೬೪೫)

ತರಣಿ (ನಾ). ಸೂರ್ಯ; ರವಿ; ಭಾನು (೧.೨-೪೯೩)

ತರಸ್ವಿ (ನಾ). ಕೆಚ್ಚುಳ್ಳವನು; ಧೈರ್ಯಶಾಲಿ; ಶೂರ; ಧೀರ (೩.೬-೩೪)

ತರಹರಿಸು (ಕ್ರಿ). ತತ್ತರಿಸು; ನಡುಗು; ಕಂಪಿಸು (೧.೬-೧೬೯)

ತರಳ (ಗು). ಅತ್ತಿತ್ತ ಚಲಿಸುವ; ಕಂಪಿಸುವ; ಚಂಚಲವಾದ; ಅಸ್ಥಿರವಾದ (೧.೪-೪೬೩)

ತರಳತನ (ನಾ). ಬಾಲ್ಯ (೧.೧೦-೩೩೧)

ತರಿಸಲ್(ಕ್ರಿ). ನಿಶ್ಚಯಿಸು; ನಿರ್ಧಾರಮಾಡು, ಗಟ್ಟಿಮನಸ್ಸು ಮಾಡು; ದೃಢಸಂಕಲ್ಪ ಮಾಡು. (೨.೯-೩೯೬)

ತರಿಸಲ್ಕೆ (ನಾ). ನಿಶ್ಚಯ; ನಿರ್ಣಯ; ತೀರ್ಮಾನ (೨.೩-೨೨೦), (೩.೧೨-೨೯೧)

ತರು (ನಾ). ಮರ; ವೃಕ್ಷ (೧.೬-೩೨೫)

ತರುಣ (ಗು). ಎಳೆಯದಾದ; ಆಗತಾನೆ ಹುಟ್ಟಿದ (೧.೨-೪೯೩)

ತರ್ಪ, ತರ್, ತರು (ಕ್ರಿ). ಕರೆತರು;

ಕರೆದುಕೊಂಡು ಬರು (೧.೬-೧೩೨)

ತಲ, ತಳ (ನಾ). ಸಮತಟ್ಟಾದ ಮೇಲ್ಮೈ-ಪ್ರದೇಶ (೧.೧೦-೪೬೬)

ತಲೆಯಾಳ್, ತಲೆಯಾಳು (ನಾ). ಮುಖ್ಯವ್ಯಕ್ತಿ; ಮುಂದಾಳು; ನಾಯಕ. (೨.೯-೨೦೮)

ತಲೆಹೊಣೆ (ನಾ). ತಲೆಯಲ್ಲಿ ಹೊತ್ತಿರುವ ಹೊಣೆ,-ಜವಾಬ್ದಾರಿ (೨.೯-೨೦೭)

ತಲೋದರಿ, ತಳೋದರಿ (ನಾ). ತೆಳುವಾದ ಹೊಟ್ಟೆಯುಳ್ಳ ಹೆಂಗಸು; ಕೃಶವಾದ ಉದರವುಳ್ಳವಳು; ಸುಂದರ ಸ್ತ್ರೀ (೧.೭-೯೨)

ತಲ್ಪ, ತಳ್ಪ (ನಾ). ೧. ಹಾಸಿಗೆ, ಶಯ್ಯೆ; ಸುಪ್ಪತ್ತಿಗೆ (೧.೫-೨೮) ೨. ಕೊಳ; ಪುಷ್ಕರಿಣಿ; ಹೊಂಡ (೧.೫-೧೧೦)

ತಲ್ಲಣಿಕೆ (ನಾ). ಅಂಜಿಕೆ; ಭಯ; ಭೀತಿ (೩.೧-೨೦೧)

ತಲ್ಲಣಿಸು (ಕ್ರಿ). ತಳಮಳಗೊಳ್ಳು; ಚಿಂತೆಗೀಡಾಗು; ವ್ಯಾಕುಲಗೊಳ್ಳು (೨.೨-೫೩೩)

ತವಸಿ, ತಪಸಿ (ನಾ). ತಪಸ್ಸನ್ನು ಮಾಡುವವನು; ತಪಸ್ವಿ; ಋಷಿ (೧.೮-೧೦೨)

ತವಿ, ತವೆ (ಕ್ರಿ). ಕುಂದು; ಕಡಿಮೆಯಾಗು (೧.೬-೧೨೩) (೧.೯-೪೧೧)

ತವಿಲ್, ತವಿಲು (ನಾ). ಖರ್ಚು; ವ್ಯಯ (೨.೧-೯೧)

ತವಿಸು (ಕ್ರಿ). ೧. ನಾಶಮಾಡು; ಕೊಲ್ಲು (೧.೪-೧೪೦) (೧.೬-೨೦೧) ೨. ಪರಿಹರಿಸು; ನಿವಾರಿಸು (೧.೫-೪೩)

ತಸ್ಕರ (ನಾ). ಕಳ್ಳ; ಚೋರ (೨.೭-೧೩)

ತಳಿ (ಕ್ರಿ). (ನೀರನ್ನು) ಚಿಮುಕಿಸು; ಸಿಂಪಡಿಸು; ಸೂಸು; ಸೇಚನಮಾಡು (೧.೬-೭)

ತಳಿರಡಿ (ನಾ). ಚಿಗುರಿನಂತೆ ಕೋಮಲವಾದ ಪಾದ (೧.೪-೨೮೨)

ತಳಿರ್, ತಳಿರು, ತಳುರ್ (ಕ್ರಿ). ಚಿಗಿ; ಚಿಗುರು; ಪಲ್ಲವಿಸು (೧.೩-೩೪೯)

ತಳಿಸು, ತಳಿಯಿಸು (ಕ್ರಿ). ಸಿಂಪಡಿಸು; ಚಿಮುಕಿಸು; ಚಳೆಯಕೊಡು; ಸೇಚನೆಮಾಡು (೧.೨-೨೩೮)

ತಳ್ (ಕ್ರಿ), ತಳ್ತ (ಹರಡು, ವ್ಯಾಪಿಸು, ಕವಿ, ಆವರಿಸು (೧.೧೧-೧೮೬)

ತಳ್ಕೈಸು (ಕ್ರಿ). ಅಪ್ಪು; ಆಲಂಗಿಸು (೨.೨-೮೪೮)

ತಳ್ಪಲ್, ತಪ್ಪಲ್, ತಪ್ಪಲು, ತರ್ಪಲ್ (ನಾ). ಬೆಟ್ಟದ ಮಗ್ಗಲು; ಪರ್ವತದ ಕಿಬ್ಬಿ; ಸಾನು; ಪ್ರಸ್ಥ (೧.೨-೫೫೪)

ತಳ್ವು, ತಳಗು, ತಳುಹು (ಕ್ರಿ). ತಡಮಾಡು; ನಿಧಾನಮಾಡು; ವಿಳಂಬಮಾಡು (೧.೩-೩೮೬)

ತಳ್ಳಂಕ, ತಳ್ಳಂಕು (ನಾ). ಚಿಂತೆ; ಕಳವಳ; ಕಾತರ (೧.೧೧-೨೪೪)

ತಳ್ಳಂಕಗೊಳ್ (ಕ್ರಿ). ೧. ಅಲ್ಲೋಲ ಕಲ್ಲೋಲವಾಗು; ಕ್ಷೋಭೆಗೊಳ್ಳು (೧.೧ - ೩೯೦) ೨. ಹೆದರು; ದಿಗಿಲು ಬೀಳು; ಭಯಪಡು (೧.೨ -೬೨)

ತಾಂಗು (ನಾ). ನೆಲೆ; ಆಧಾರ; ಆಸರೆ (೩.೧೦-೧೮೭)

ತಾಂಡವ (ನಾ). (ನಾಟ್ಯ) ಶಿವನ (ಮತ್ತು ಅವನ ಗಣಗಳ) ಉಗ್ರವಾದ ಒಂದು ಬಗೆಯ ನೃತ್ಯ (೧.೭-೨೦೪) (೨.೨-೭೯)

ತಾಡನಿ (ನಾ). (ಕುದುರೆ, ಎತ್ತು ಮೊದಲಾದುವನ್ನು ಹೊಡೆಯುವ)

ಚಬಕ; ಚಾವಟಿ (೩.೧೨-೨೨೯)

ತಾಣ, ಟಾಣ, ಠಾಣ, ಠಾಣಾ, ಠಾಣೆ, ಠಾನೆ, ತಾನ (ನಾ). ನೆಲೆ; ಬೀಡು; ಇಂಬು; ಆಶ್ರಯ; ಸ್ಥಳ (೧.೧೦-೪೫೨)

ತಾನ (ನಾ). (ಸಂಗೀತ) ರಾಗಗಳನ್ನು ವಿಸ್ತಾರಗೊಳಿಸುವ ಕ್ರಮ; ಅಲೆಅಲೆಯಾಗಿ ಸ್ವರಗಳನ್ನು ನುಡಿಸುವಿಕೆ. (೨.೮-೨೮)

ತಾಮ್ರಾಕ್ಷ (ನಾ). ಕೆಂಪು ಕಣ್ಣುಳ್ಳವನು (೩.೧೪-೬೮)

ತಾರಗ್ರೀವ (ನಾ). ಎತ್ತರವಾದ ಧ್ವನಿ; ಉಚ್ಚಕಂಠ (೨.೪-೭೪)

ತಾರಣ (ನಾ). ದಾಟುವಿಕೆ (೪.೧೩-೧೪)

ತಾರಹಾರ (ನಾ). ಮುತ್ತುಗಳನ್ನು ಪೋಣಿಸಿ ಮಾಡಿದ ಸರ; -ಹಾರ (೨.೨-೭೯೬)

ತಾರಿಣಿ (ನಾ). ಶಕ್ತಿದೇವತೆಯಾದ ದುರ್ಗೆ (೪.೧೩-೧೩)

ತಾಲವ್ಯ (ನಾ). ಅಂಗುಳಿನ ಒಳಭಾಗ (೨.೪-೭೭)

ತಿಂಗಳ್, ತಿಂಗಳು (ನಾ) (ಚಂದ್ರ, ಪೆರೆ (೨.೨-೮೧)

ತಿಂಗಳ್ಮನೆ (ನಾ). ಚಂದ್ರ (೨.೨-೮೧)

ತಿಂಗಳ್ವಕ್ಕಿ (ನಾ). ಬೆಳದಿಂಗಳನ್ನೇ ಆಹಾರವಾಗಿ ಉಪಯೋಗಿಸಿ ಕೊಳ್ಳುವುದೆಂದು ಭಾವಿಸಲಾದ ಒಂದು ಬಗೆಯ ಪಕ್ಷಿ; ಜೊನ್ನಪಕ್ಷಿ; ಚಕೋರಪಕ್ಷಿ (೨.೨-೯೦೦)

ತಿಂತಿಣಿ, ತಿಂಥಿಣಿ (ನಾ). ಗುಂಪು; ಗೊಂದಣಿ; ಸಮೂಹ (೪.೧೧-೨೬೯)

ತಿಕ್ತ (ಗು)(೧. ಉಗ್ರವಾದ; ಕಠಿನವಾದ (೧.೫-೨೪೮) ೨. ಮನಸ್ಸನ್ನು ನೋಯಿಸುವ; ಅಪ್ರಿಯವಾದ (೨.೧-೬೬)

ತಿಗ್ಮ (ಗು). ಉಷ್ಣವಾದ; ಬಿಸಿಯಾದ; ತೀಕ್ಷ್ಣ; ಪ್ರಖರ (೩.೯-೩೧೯)

ತಿಣ್ಣ (ನಾ). ಅಧಿಕವಾದುದು; ಹೆಚ್ಚಾದುದು; ಆಧಿಕ್ಯ (೨.೧-೨೪೯)

ತಿಣ್ಣಂ (ಅ). ರಭಸವಾಗಿ; ತೀರ್ವವಾಗಿ; ವೇಗವಾಗಿ (೩.೭-೬೦೨)

ತಿಣ್ಣನೆ (ಅ). ಚೆನ್ನಾಗಿ; ಹೆಚ್ಚಾಗಿ; ವಿಶೇಷವಾಗಿ; ಅಧಿಕವಾಗಿ(೧.೧೧-೨೬೦)

ತಿತಿಕ್ಷೆ (ನಾ). ತಾಳ್ಮೆ; ಸೈರಣೆ; ಸಹನೆ (೪.೭-೨೮೪)

ತಿಪ್ಪುಳು (ನಾ). ಹಕ್ಕಿಗಳ ಪುಕ್ಕ; ಗರಿ (೨.೫-೪೦೯)

ತಿಮಿರ (ನಾ). ಕತ್ತಲೆ; ಅಂಧಕಾರ (೧.೧೦-೨೮೧)

ತಿಮಿರಾರಿ (ನಾ). ಕತ್ತಲೆಯ ಶತ್ರು; ಸೂರ್ಯ (೧.೨-೪೮೬)

ತಿರಿ (ಕ್ರಿ). ೧. (ಹೂವು, ಹಣ್ಣು ಮೊದಲಾದುವನ್ನು) ಕೊಯ್ಯು; ಬಿಡಿಸು; ಆರಿಸು; ಎತ್ತು (೧.೪-೨೨೨) ೨. ತಿರುಗು; ಸುತ್ತಾಡು; ಸುತ್ತು (೨.೨-೨೫೨)

ತಿರಿಪು, ತಿರುಪ್ಪು, ತಿರಿಪ್ಪು (ಕ್ರಿ). ಸುತ್ತು ತಿರುಗಿಸು; ಚಕ್ರಾಕಾರವಾಗಿ ಸುತ್ತಿಸು (೧.೬-೩೨೫) (೨.೩-೧೬೧)

ತಿರು, ತಿರುವು (ನಾ). ಬಿಲ್ಲಿನ ಹಗ್ಗ; ಹೆದೆ (೪.೮-೨೩೮)

ತಿರೆ (ನಾ). ನೆಲ; ಭೂಮಿ (೧.೯-೫೭೦)

ತಿರೆಮಗಳ್ (ನಾ). ಭೂಮಿಯ ಮಗಳು;

ಸೀತೆ (೧.೩-೨೯) (೧.೯-೯೦)

ತಿರೋಹಿತ (ನಾ). ಮರೆಯಾದವನು; ಮಾಯವಾದವನು (೪.೭-೧೭೩)

ತಿರ್ಯಗ್ಯೋನಿ (ನಾ). ಪ್ರಾಣಿಜನ್ಮವನ್ನು ಹೊಂದಿರುವುದು (೨.೩-೪೦)

ತಿಲ, ತಿಳ (ನಾ). ಎಳ್ಳಿನ ಕಾಳು; ಎಳ್ಳು (೧.೫-೧೧೬)

ತಿಲೋತ್ತಮೆ (ನಾ). ಒಬ್ಬ ಅಪ್ಸರೆಯ ಹೆಸರು (ಪ್ರಕೃತಿಯ ಸರ್ವ ಸೌಂದರ್ಯ ದಲ್ಲಿಯೂ ತಿಲಾಂಶ ದಷ್ಟನ್ನು ತೆಗೆದು ರೂಪಿಸಿದ ಅಪ್ಸರೆಯಾದುದರಿಂದ, ಎಲ್ಲ ಅಪ್ಸರೆಯರಿಗಿಂತಲೂ ಎಳ್ಳಿನಷ್ಟಾದರೂ ಹೆಚ್ಚು ಚೆಲುವುಳ್ಳವಳಾದ್ದ ರಿಂದ ಈ ಹೆಸರು ಬಂದಿತೆಂದು ಹೇಳುತ್ತಾರೆ.) (೧.೮-೨೩೦)

ತಿಳಿ (ನಾ). ಸ್ವಚ್ಛತೆ; ನೈರ್ಮಲ್ಯ; ಪರಿಶುದ್ಧತೆ (೨.೮-೧೯೦)

ತೀರ, ತೀರಾ (ಗು). ಬಹಳ; ತುಂಬ; ಸಂಪೂರ್ಣ (೧.೬-೩೧೮)

ತೀರ್ಚು, ತೀರಿಚು, ತೀರ್‌ಚು (ಕ್ರಿ). ಕೊಲ್ಲು; ಸಾಯಿಸು (೧.೧೦-೪೧೨)

ತೀರ್ಣ (ಗು). ಪೂರ್ಣಗೊಂಡ; ಈಡೇರಿದ (೪.೧೧-೪೨೫)

ತೀವು (ಕ್ರಿ). ೧. ತುಂಬು; ಭರ್ತಿಮಾಡು (೧.೫-೨೨೦) ೨. ಸುತ್ತುಗಟ್ಟು; ಸುತ್ತುವರಿ; ಆವರಿಸು (೧.೮-೪೫)

ತುಂಗ (ಗು). ಎತ್ತರವಾದ; ಉನ್ನತವಾದ (೧.೭-೬)

ತುಂಡ (ನಾ). ಹಕ್ಕಿಗಳ ಕೊಕ್ಕು; ಚಂಚು (೪.೯-೪೪)

ತುಂಬುರಗೊಳ್ಳಿ, ತುಂಬುರಕೊಳ್ಳಿ (ನಾ). ತೂಪರೆಗಿಡದ ಸೆಳ್ಳಿನಿಂದಾದ ಕೊಳ್ಳಿ (೨.೨-೪೦೧)

ತುಡುಕು (ನಾ). ಬೇಗನೆ ಹಿಡಿಯುವುದು; ಸತ್ವರಗ್ರಹಣ (೧.೧೦-೧೩೪)

ತುಮುಲ (ಗು). ಗಡಿಬಿಡಿಯಿಂದ ಕೂಡಿದ; ದೊಂಬಿಯಿಂದ ಕೂಡಿದ; ಗಲಾಟೆಯುಳ್ಳ (೧.೧೦-೫)

ತುಮುಲ (ನಾ). ಗೊಂದಲ; ಗಲಿಬಿಲಿ; ಗಲಭೆ; ಹುಯಿಲು (೧.೯-೧೩೭)

ತುರೀಯ, ತುರೀಯಾವಸ್ಥೆ (ನಾ). ಆತ್ಮನ ನಾಲ್ಕನೆಯ ಸ್ಥಿತಿ; ಮೋಕ್ಷ (೧.೯-೩೪೮)

ತುರುಗಲು (ನಾ). ಗುಂಪು; ಸಂದಣಿ; ಸಮೂಹ (೩.೩-೪೬)

ತುರುಗೆಮೆ, ತುರುಗೆವೆ (ನಾ). ದಟ್ಟವಾದ ಕೂದಲುಳ್ಳ ರೆಪ್ಪೆ; ಒತ್ತಾದ ಕೂದಲುಳ್ಳ ರೆಪ್ಪೆ (೨.೩-೧೩೮)

ತುರುಪಟ್ಟಿ (ನಾ). ದನಕರುಗಳ ಹಟ್ಟಿ; ದನಕರುಗಳನ್ನು ಕಟ್ಟಿ ಹಾಕುವ ಸ್ಥಳ; ಕೊಟ್ಟಿಗೆ; ಗೋಸ್ಥಾನ (೪.೧೨-೧೧)

ತುಷಾರ (ನಾ) (ಹಿಮದ ತುಂತುರು; ಮಂಜಿನ ಕಣ; ಇಬ್ಬನಿ (೧.೧೧-೧೩೨)

ತುಹಿನ (ನಾ). ಮಂಜು; ಹಿಮ (೧.೨-೫೯೮)

ತುಹಿನರ್ತು (ನಾ). ಹೇಮಂತಋತು; ಚಳಿಗಾಲ (೧.೧೧-೨೯೬)

ತುಟಿಲಾಳ್, ತುಳಿಲಾಳು (ನಾ). ಆಳು; ಸೇವಕ; ದಾಸ (೧.೭-೨೬೭)

ತುಟಿಲ್, ತುಳಿಲ್, ತುಳಿಲು (ನಾ). ಎರಗುವಿಕೆ, ಮಣಿಯುವುದು, ನಮಸ್ಕಾರ; ಪ್ರಣಾಮ (೧.೭-೨೬೭)

ತೂಂತಿಡು, ತೂತಿಡು (ಕ್ರಿ). ಕಂಡಿಮಾಡು; ರಂಧ್ರಮಾಡು; ವೆಜ್ಜಮಾಡು; ಚುಚ್ಚು (೨.೫-೩೭೧)

ತೂಂತು, ತೂತು (ನಾ). ಕಂಡಿ; ರಂಧ್ರ; ಬಿಲ (೨.೩-೪೬)

ತೂಣಗೊಳ್ಳು (ಕ್ರಿ). ಪರವಶವಾಗು; ಆವೇಶಹೊಂದು (೧.೭-೨೯೬)

ತೂಣೀರ (ನಾ). ಬಾಣವನ್ನು ತುಂಬುವ ಚರ್ಮದ ಚೀಲ; ಬತ್ತಳಿಕೆ (೧.೧೦-೪೬೯)

ತೂರ್ಯ (ನಾ). ಒಂದು ಬಗೆಯ ವಾದ್ಯ (೨.೨-೧೫)

ತೂಲ, ತೂಳ (ನಾ). ಹತ್ತಿ; ಅರಳೆ; ಕಾರ್ಪಾಸ (೧.೧೧-೧೬೯) (೩.೧೪-೨೬೦)

ತೂಲತಲ್ಪ (ನಾ). ಅರಳೆಯಿಂದ ಅಥವಾ ಹಂಸ ಮೊದಲಾದ ಹಕ್ಕಿಗಳ ತುಪ್ಪುಳದಿಂದ ಮಾಡಿದ ಹಾಸುಗೆ, –ಸುಪ್ಪತ್ತಿಗೆ (೧.೫-೨೮)

ತೃಣಕುಟಿ, ತೃಣಕುಟೀರ (ನಾ). ಹುಲ್ಲಿನ ಗುಡಿಸಲು; ಜೋಪಡಿ (೩.೩-೩೪೮) (೩.೨-೮೪)

ತೃಣಚೂರ್ಣ (ನಾ). ಹುಲ್ಲಿನ ಚೂರು (೨.೮-೭೧)

ತೃಷಿತ (ಗು). ಆಸೆಯಿಂದ ಕೂಡಿರುವ; ಹಂಬಲಿಸುವ (೨.೩-೧೧೩)

ತೃಷೆ (ನಾ). ಆಸೆ; ಅಪೇಕ್ಷೆ (೨.೧-೩೬೮)

ತೆಕ್ಕನೆ (ಅ). ೧. ತಕ್ಷಣ, ಕೂಡಲೆ, ಒಡನೆ (೧.೨-೬೪೮) ೨. ಹೆಚ್ಚಾಗಿ; ಅತಿಶಯವಾಗಿ; ಅಧಿಕವಾಗಿ; ಬಹಳವಾಗಿ (೧.೭-೨೪೧)

ತೆಮರ್, ತೆಮರು, ತೆವರ್, ತೆವರ, ತೆವರಿ, ತೆವರು (ನಾ). ದಿಣ್ಣೆ; ದೋರೆ; ದಿಬ್ಬ; ತಿಟ್ಟು (೧.೧೦-೪೬೪)

ತೆರೆಗಣ್ಣು (ನಾ). ಬಿಟ್ಟಿರುವ ಕಣ್ಣು; ಬಿಡುಗಣ್ಣು (೧.೫-೧೦೭)

ತೆಳ್ಮಡಿ (ನಾ). ಶುಭ್ರವಾದ ವಸ್ತ್ರ; ಸ್ವಚ್ಛವಾದ ಬಟ್ಟೆ (೧.೧-೩೮೦) (೧.೮-೧೬೬)

ತೆಳ್ಳೆ (ನಾ). ಆಳವಿಲ್ಲದ ನೀರಿನ ಜಾಗ, –ಸ್ಥಳ (೩.೬-೧೨೦)

ತೇಂಕಾಡು (ಕ್ರಿ). ತೇಲು; ತೇಲಾಡು. (೨.೭-೫೮)

ತೇಜ (ನಾ). ಹೊಳಪು; ದೀಪ್ತಿ; ಪ್ರಕಾಶ; ಕಾಂತಿ (೧.೪-೩೮೭)

ತೇಜಿ (ನಾ). ಕುದುರೆ; ಅಶ್ವ (೧.೫-೧೩೩)(೨.೩-೫೨)

ತೇನೆ, ತೇನೆಹಕ್ಕಿ (ನಾ). ಒಂದು ಬಗೆಯ ಪಕ್ಷಿ (೧.೩-೯)

ತೇರೈಸು (ಕ್ರಿ). ಆತುರಪಡು; ತವಕಿಸು; ಲವಲವಿಸು (೧.೩-೨೩)

ತೇರ್ ಮನೆ (ನಾ). ರಥ (೩.೭-೬೧೮)

ತೈಲಾರ್ಚಿ (ನಾ). ಎಣ್ಣೆಯ ದೀಪ (೩.೧-೧೦೪)

ತೊಂಗಲ್, ತೊಂಗಲು (ನಾ). (ತೂಗಾಡುವ) ಗೊಂಚಲು; ಗುಚ್ಛ; ಕುಚ್ಚು; ಗೊಂಡೆ (೧.೭-೯೦)

ತೊಂತು (ನಾ). ದಟ್ಟಣೆ; ನಿಬಿಡತೆ (೩.೬-೫೮)

ತೊಡಕು (ಕ್ರಿ). ಪ್ರಾರಂಭಿಸು; ಮೊದಲುಮಾಡು(ಕೆಲಸದಲ್ಲಿ) ಪ್ರವರ್ತಿಸು (೧.೨-೩೯೧)

ತೊಡವು (ನಾ). ಆಭರಣ; ತೊಡಿಗೆ (೨.೨-೫೬೯)

ತೊಡು (ಕ್ರಿ). ತೊಟ್ಟು (ಭೂತನ್ಯೂ); ಮೊದಲುಮಾಡು; ಆರಂಭಿಸು (೧.೪-೩೯೦)

ತೊತ್ತಳದುಳಿ (ಕ್ರಿ). ಪುಡಿಯಾಗುವಂತೆ ತುಳಿ; ನುಗ್ಗುನುರಿಯಾಗುವಂತೆ ತುಳಿ;

ಸೊಪ್ಪಾಗುವಂತೆ ಮಾಡು; ಮುದ್ದೆಯಾಗುವಂತೆ ಮಾಡು (೩.೯–೪೩೦)

ತೊತ್ತು, ತೊಳ್ತು (ನಾ). ದಾಸಿ; ಸೇವಕಿ (೧.೨–೬೪೪) (೧.೩–೨೩೮)

ತೊರಳೆ, ತೊಳ್ಳೆ (ನಾ). ಗುಲ್ಮ; ಪ್ಲೀಹ (೪.೧–೩೮೭)

ತೊಳಲ್ (ಕ್ರಿ). ೧. ತಿರುಗಾಡು; ಸಂಚರಿಸು; ಅಲೆದಾಡು (೧.೭–೧೪) ೨. ದಿಗ್ಭ್ರಮೆಗೊಳ್ಳುವಿಕೆ; ತಬ್ಬಿಬ್ಬಾಗುವುದು (೨.೨–೮೪)

ತೊಳ್ತುಗೆಯ್ಮೆ (ನಾ). ತೊತ್ತಿನ ಕೆಲಸ; ಸೇವೆ; ಊಳಿಗ (೧.೬–೯೭)

ತೋತ್ರ (ನಾ). ಆನೆ, ಕುದುರೆ, ಎತ್ತು ಮೊದಲಾದ ಪ್ರಾಣಿಗಳನ್ನು ನಡೆಸಲು ತಿವಿಯುವ ಸಾಧನ; ತಿವಿಗೋಲು (೧.೯–೪೮೭)

ತೋಮರ (ನಾ). ತುದಿಯಲ್ಲಿ ಮೊನಚಾಗಿರುವ ಈಟಿಯಂತಹ ಒಂದು ಬಗೆಯ ಆಯುಧ (೪.೬–೪೩)

ತೋಯ (ನಾ). ನೀರು; ಉದಕ; ಜಲ (೧.೪–೩೫೨)

ತೋಯದ (ನಾ). ನೀರನ್ನು ನೀಡುವುದು; ಮೋಡ; ಮುಗಿಲು (೪.೫–೧೫೧)

ತೋರ, ಥೋರ (ನಾ). ೧. ಗಾತ್ರವಾದುದು; ದಪ್ಪವಾದುದು; ಸ್ಥೂಲವಾದುದು (೧.೧೧–೧೭೭) ದೊಡ್ಡದಾದ; ಬೃಹತ್ತಾದ (೧.೬–೩೨೩)

ತೋರುಬೆರಳು, ತೋರಬೆರಳು (ನಾ). ಹೆಬ್ಬೆರಳಿನ ಪಕ್ಕದ ಬೆರಳು, ನಿರ್ದೇಶಿಸಲು ಬಳಸುವ ಬೆರಳು; ತರ್ಜನಿ (೧.೫–೨೨೫)

ತೋರುಮನೆ (ನಾ). ಪ್ರದರ್ಶನಾಲಯ; ವಸ್ತು ಸಂಗ್ರಹಾಲಯ (೩.೧–೨೭೯)

ತೌರ್ಯತ್ರಿಕ (ನಾ). ವಾದ್ಯ, ನೃತ್ಯ, ಗೀತ ಈ ಮೂರರ ಮೇಳ (೩.೩–೫೮)

ತ್ಯಕ್ತ (ಗು). ತೊರೆದ; ತ್ಯಜಿಸಿದ; ಬಿಟ್ಟ (೪.೧೨–೩೬೮)

ತ್ರಸ್ತ (ಗು). ಹೆದರಿದ; ಅಂಜಿದ (೩.೧೩–೧೬೦)

ತ್ರಿಣೇತ್ರ (ನಾ). ಮೂರುಕಣ್ಣುಗಳು (೧.೨–೫೩೮)

ತ್ರಿದಶ (ನಾ). ಸದಾ ಯೌವನದಿಂದ ಕೂಡಿರುವವನು; ಬಾಲ್ಯ, ಕೌಮಾರ್ಯ; ಯೌವನವೆಂಬ ಮೂರು ಅವಸ್ಥೆಗಳನ್ನು ಮಾತ್ರ ಉಳ್ಳವನು; ದೇವತೆ (೧.೧೦–೩೧೨)

ತ್ರಿದಶೇಂದ್ರ (ನಾ). ತ್ರಿದಶಗಣಾಧಿನಾಯಕ; ದೇವತೆಗಳ ಒಡೆಯ, –ಅಧಿಪತಿ; ಇಂದ್ರ (೪.೧–೧೮೭)

ತ್ರಿವಿಷ್ಟಪ (ನಾ). ದೇವಲೋಕ; ಸ್ವರ್ಗ (೩.೭–೬೦೭)

ತ್ರೇತಾಯುಗ (ನಾ). ಕೃತ, ತ್ರೇತೆ ದ್ವಾಪರ ಮತ್ತು ಕಲಿ ಎಂಬ ನಾಲ್ಕು ಯುಗಗಳಲ್ಲಿ ಎರಡನೆಯ ಯುಗ (೧.೧೦–೩)

ದಂಡಧರ (ನಾ). ಯಮ; ಆತಂಕ (೨.೧–೪೦೭)

ದಂಡನೀತಿ (ನಾ). ದಂಡವನ್ನು ಪ್ರಯೋಗಿಸುವುದು; ನ್ಯಾಯ ನಿರ್ವಹಣೆ (೨.೧–೨೯೮)

ದಂತುರ (ಗು). ಸಮತಳವಲ್ಲದ; ಹಳ್ಳ

ತಿಟ್ಟಾದ (೨.೧೧-೫೩)

ದಂದಶೂಕ (ನಾ). ಹಾವು; ಸರ್ಪ (೩.೭-೩೧)

ದಂಷ್ಟ್ರ (ನಾ). ಆನೆ, ಹುಲಿ, ಸಿಂಹ, ಹಂದಿ ಮೊದಲಾದುವುಗಳ ಉದ್ದವಾದ, ಹೊರಹಾಯ್ದಿರುವ ಹಲ್ಲು; ಕೋರೆಹಲ್ಲು; ದಾಡೆ (೩.೧೪-೭೯)

ದಟ್ಟೈಯಿಸು (ಕ್ರಿ). ಒತ್ತಾಗು; ಸಾಂದ್ರವಾಗು; ದಟ್ಟವಾಗು (೧.೨-೫೯೨)

ದನಿಸಂತೆ (ನಾ). ಅನೇಕ ಶಬ್ದಗಳ ಕೂಟ; ಗಲಾಟೆ; ಗದ್ದಲ (೧.೪-೩೬೦)

ದನುಜಾರಾತಿ (ನಾ). ರಾಕ್ಷಸರ ವೈರಿ; ವಿಷ್ಣು (೪.೮-೧೮೮)

ದಮ್ಮಯ್ಯ (ನಾ). ಬೇಡಿಕೊಳ್ಳುವಾಗ ಬಳಸುವ ಒಂದು ಶಬ್ದ (೧.೬-೩೦೦)

ದಯಿತೆ (ನಾ). ಪತ್ನಿ; ವಲ್ಲಭೆ (೧.೩-೩೫೪)

ದರಹಸಿತ (ಗು). ನಸುನಗೆಯ; ಕಿರುನಗೆಯ; ಮಂದಹಾಸದ (೧.೧೦-೨೫೧)

ದರಹಸಿತ ಮುಖಿ (ನಾ). ಮಂದಹಾಸದ ಮುಖವುಳ್ಳವನು; ಹಸನ್ಮುಖಿ (೨.೫-೭೨) (೩.೪-೫೮೬)

ದರಹಾಸ (ನಾ). ಮೆಲ್ನಗೆ; ಮಂದಹಾಸ (೩.೧-೧೫೫)

ದರಿ (ನಾ). ಆಳವಾದ ಕಮ್ಮರಿ; ಕಂದರ; ಕೊಳ್ಳ (೧.೩-೪೯೮)

ದರೆ (ನಾ). ನೆಲ; ಭೂಮಿ; ಧರೆ; ಪೃಥ್ವಿ (೪.೧೨-೬)

ದರ್ಶನ ಧ್ವನಿ (ನಾ). (ಕಾವ್ಯದಲ್ಲಿ ಹೊರಡುವ) ತಾತ್ವಿಕವಾದ ವಿಶೇಷಾರ್ಥ; ವ್ಯಂಗ್ಯಾರ್ಥದಲ್ಲಿ ಒಂದು ಬಗೆ (೪.೧೩-೨೧೯)

ದವ (ನಾ). ಕಾಡು; ಅರಣ್ಯ; ವನ (೧.೪-೪೫೫) (೩.೧೦-೯೯೧)

ದವಾನಲ (ನಾ). ಕಾಡುಗಿಚ್ಚು; ದಾವಾಗ್ನಿ (೧.೪-೨೯೬)

ದಶಶಿರ (ನಾ). ಹತ್ತು ತಲೆಗಳುಳ್ಳವನು; ರಾವಣ (೧.೨-೫೩)

ದಸ್ಯು (ನಾ). ಕಳ್ಳ; ಚೋರ (೧.೧೦-೭೧)

ದಸ್ಯು ಶಿಶು (ನಾ). ಅನಾರ್ಯರ ಮಗು (೧.೧-೫೭೮)

ದಳದಳನೆ (ನಾ). ದಳದಳ ಎಂದು; ಸರಸರನೆ; ವೇಗವಾಗಿ (೧.೧೧-೧೬೭)

ದಳದುಳ (ನಾ). ಬಲವಾದ ಸುಲಿಗೆ; ತುಂಬುಸೂರೆ; ಅಧಿಕವಾದ ಕೊಳ್ಳೆ; ಹೆಚ್ಚಾದ ಲೂಟಿ (೩.೯-೨೦೪)

ದಳಿಂಬ (ನಾ). ಮಡಿಯಾದ ಸೀರೆ; ಶುಭ್ರವಾದ ಸೀರೆ (೧.೩-೩೫)

ದಳ್ಳುರಿ (ನಾ). ೧. ಭುಗಿಲಿಡುವ ಕಿಚ್ಚು; ದೊಡ್ಡ ಉರಿ; ಪ್ರಜ್ವಲಿಸುವ ಜ್ವಾಲೆ (೧.೪-೪೫೫)

ದಾಂತ (ನಾ). ಇಂದ್ರಿಯ ನಿಗ್ರಹವನ್ನು ಉಳ್ಳವನು (೪.೧೨-೨೦೧)

ದಾತ್ಯೂಹ (ನಾ). ಒಂದು ಬಗೆಯ ಜಲಪಕ್ಷಿ; ನೀರು ಕೋಳಿ (೨.೫-೪೯)

ದಾನರುಚಿ (ನಾ). ದಾನಕೊಡಲು ಆಸಕ್ತಿಯುಳ್ಳ ವ್ಯಕ್ತಿ; ದಾನಮಾಡುವ ಅಪೇಕ್ಷೆಯುಳ್ಳ ವ್ಯಕ್ತಿ; ಉದಾರಿ (೧.೧೧-೩೩೯)

ದಾಮ (ನಾ). ಹಾರ; ದಂಡೆ (೧.೨-೬೦೭)

ದಾರಿದ್ರ್ಯ (ನಾ). ಬಡತನ (೧.೧ -೨೮೪)

ದಾರು (ನಾ). ೧. ಮರದ ದಿಮ್ಮಿ,-ತೊಲೆ; ದೂಲ. (೨.೯-೪೫೭)

ದಾವಾಗ್ನಿ, ದಾವಾನಲ, ದಾವದಹನ, (ನಾ). ಕಾಡಿನಕಿಚ್ಚು; ಕಾಳ್ಗಿಚ್ಚು (೧.೬-೩೧೭)

ದಿಂಡು (ನಾ). ಮರದ ಕಾಂಡ, -ತಾಳು (೩.೯-೨೦೦)

ದಿಂಡುರುಳ್, ದಿಂಡುರುಳು (ಕ್ರಿ). ಮರದ ಕಾಂಡದಂತೆ ನೆಲದ ಮೇಲೆ ಉರುಳು (೧.೩-೩೩೦)

ದಿಕ್ತಟ (ನಾ). ದಿಕ್ಕಿನ ತುದಿ; ದಿಗಂತ; ದಿಕ್ಪ್ರದೇಶ (೧.೨-೧೬೮) (೧.೫-೧೪೦)

ದಿಗಂಬರ (ನಾ). ಆಗಸ; ಗಗನ; ಆಕಾಶ (೩.೧೩-೩೮)

ದಿಗಿಭ (ನಾ). ದಿಗ್ಗಜ (೩.೭-೧೯೬)

ದಿಗ್ದಂತಿ (ನಾ). ದಿಗ್ಗಜ (೧.೪-೪೬೨)

ದಿಗ್ದೇಶ (ನಾ). ದಿಕ್ಕುಗಳ ಪ್ರದೇಶ; -ಭಾಗ (೧.೯-೧೪೮)

ದಿಗ್ಧ (ಗು). ಲೇಪನ ಮಾಡಿದ; ಬಳಿದ; ಲೇಪಿಸಿದ (೧.೩-೩೭೩; ೪.೧೨-೨೦೧)

ದಿಟ್ಟನಡು (ಕ್ರಿ). ದೃಷ್ಟಿಯಿಡು; ಎವೆಯಿಕ್ಕದೆ ನೋಡು; ಕಣ್ಣಿಟ್ಟು ನೋಡು (೧.೨-೩೨೯)

ದಿಟ್ಟಿ (ನಾ). ಲಕ್ಷ್ಯ; ಗಮನ (೨.೨-೧೦೫)

ದಿಟ್ಟಿಸು (ಕ್ರಿ). ನೋಡು; ಅವಲೋಕಿಸು; ದೃಷ್ಟಿಸು (೧.೫-೩೩)

ದಿಬ್ಬಣ (ನಾ). ಮದುವೆ; ಉತ್ಸವ ಮುಂತಾದವುಗಳ ಮೆರವಣಿಗೆ (೧.೨-೬೩೮)

ದಿವ (ಗು). ಹೆಮ್ಮೆ; ಪ್ರತಿಷ್ಠೆ (೧.೫-೨೬೮)

ದಿವ (ನಾ). ದೇವಲೋಕ; ಸ್ವರ್ಗ (೧.೪-೩೩೦)

ದಿವಸೇಶ, ದಿವಸೇಶ್ವರ (ನಾ). ಹಗಲಿನ ಒಡೆಯ; ಸೂರ್ಯ (೧.೭-೪೩೭)

ದಿವೌಕಸ (ನಾ). ದೇವತೆ (೪.೪-೪೮೬)

ದೀನ (ಗು). ದುಃಖಕ್ಕೆ ಈಡಾದ; ಖಿನ್ನವಾದ; ಸಂಕಟಕ್ಕೆ ಗುರಿಯಾದ (೧.೬-೨೩೧)

ದೀನಾಸ್ಯೆ (ನಾ). ದುಃಖದಿಂದ ಬಾಡಿದ ಮುಖವುಳ್ಳವಳು (೧.೫-೨೭೯)

ದೀಪ, ದೀವಿ (ನಾ). ನೀರಿನಿಂದ ಸುತ್ತುವರಿದ ಭೂಭಾಗ; ದ್ವೀಪ (೧.೯-೩೭೭)

ದೀರ್ಘ (ಗು). ಉದ್ಧವಾದ; ನೀಳವಾದ (೧.೨-೫೫೫)

ದೀರ್ಘದರ್ಶಿ (ನಾ). ೧. ಮುಂದಾಲೋಚನೆಯುಳ್ಳವನು ೨. ಭೂತ ಮತ್ತು ಭವಿಷ್ಯತ್ತನ್ನು ಕುರಿತು ಯೋಚಿಸುವವನು (೧.೧-೧೭೯)

ದೀರ್ಘದರ್ಶಿನಿ (ನಾ). ಮುಂಬರುವುದನ್ನು ಕುರಿತು ಆಲೋಚಿಸುವವಳು; ಮುಂದಾಲೋಚನೆಯುಳ್ಳವಳು (೧.೧೦-೧೪೭)

ದೀರ್ಘಸೂತ್ರಿ (ನಾ). ಸಾವಕಾಶವಾಗಿ ಕೆಲಸಮಾಡುವವನು; ವಿಳಂಬಿ (೨.೬-೨೧)

ದೀವ, ದೀಹ (ನಾ). ಬೇಟೆಯಲ್ಲಿ ಕ್ರೂರಮೃಗಗಳನ್ನು ಆಕರ್ಷಿಸುವುದಕ್ಕಾಗಿ ಬಳಸುವ ಪ್ರಾಣಿ; ಬೇಟೆಗೆ ಉಪಯೋಗಿಸಲು ಪಳಗಿಸಿದ ಪ್ರಾಣಿ (೧.೩-೩೧೭)

ದುಂದುಭಿ ಧ್ವನಿ (ನಾ). ಭೇರಿಯ ಶಬ್ದ, -ಸ್ವರ (೧.೧ - ೩೫೨)

ದುಕೂಲ (ನಾ). (ಉತ್ತಮವಾದ) ವಸ್ತ್ರ, -ಉಡುಪು (೧.೨-೫೪೯)

ದುಮ್ಮಾನ (ನಾ). ಮನಸ್ಸಿನ ಉಮ್ಮಳ; ಚಿತ್ತಕ್ಷೋಭೆ (೨.೧-೨೫೬)

ದುರಭಿಸಂಧಿ (ನಾ). ಕೆಟ್ಟ ಅಭಿಪ್ರಾಯ,-ಉದ್ದೇಶ; ದುರುದ್ದೇಶ (೧.೯-೧೮೭)

ದುರಿತ (ನಾ). ಪಾಪ; ಪಾತಕ (೨.೧-೩೨೮)

ದುರ್ಗಮ (ಗು). ಸಂಚರಿಸಲು ಅಶಕ್ಯವಾದ,-ಕಷ್ಟವಾದ; ಪ್ರವೇಶಿಸ ಲಾಗದ; ಹಾದುಹೋಗ ಲಾರದ (೧.೭-೩೫೧) (೨.೩-೩೭೮)

ದುರ್ಜ್ಞೇಯ (ಗು). ತಿಳಿಯಲು ಅಶಕ್ಯವಾದ; ಗ್ರಹಿಸಲು ಕಷ್ಟವಾದ (೧.೫-೨೪೬)

ದುರ್ದಮ (ಗು). ನಿಯಂತ್ರಿಸಲು ಅಶಕ್ಯವಾದ; ಹತೋಟಿಗೆ ತರಲು ಕಷ್ಟವಾದ (೧.೬-೧೫೪)

ದುರ್ದಮತೆ (ನಾ). ನಿಗ್ರಹಿಸಲಾಗ ದಿರುವಿಕೆ; ಜಯಿಸಲಾಗದಿರುವಿಕೆ (೨.೫-೩೧೧)

ದುರ್ದಮ್ಯ, ದುರ್ದಮನೀಯ (ಗು). ನಿಗ್ರಹಿಸಲು ಅಶಕ್ಯವಾದ; ಅಧೀನಗೊಳಿಸಲು ಅಸಾಧ್ಯವಾದ (೨.೯-೫೦೮)

ದುರ್ದರ್ಶ (ಗು). ನೋಡಲು ಅಸಹ್ಯವಾದ; ಜುಗುಪ್ಸೆಯನ್ನುಂಟು ಮಾಡುವ(೧.೯-೩೪೧)

ದುರ್ದಶೆ (ನಾ). ಕೆಟ್ಟಸ್ಥಿತಿ; ದುರವಸ್ಥೆ; ದುರ್ದೈವ. (೨.೯-೫೧೩)

ದುರ್ಧರ್ಷ (ಗು). ಎದುರಿಸಲಾಗದ; ಆಕ್ರಮಣ ಮಾಡಲು ಕಷ್ಟವಾದ; ಪ್ರತಿಭಟಿಸಲಾಗದ (೩.೬-೩೫)

ದುರ್ಭಗ (ಗು). ಸಹಿಸಲು ಆಗದುದು; ತಾಳಲು ಕಷ್ಟವಾದುದು, ಅಹಿತವಾದುದು (೧.೧೧-೧೯೮)

ದುರ್ಲಭ (ನಾ). ಅಪರೂಪವಾದುದು; ವಿರಳವಾದುದು (೨.೧-೩೬೭)

ದುರ್ವಾರ (ಗು). ನಿವಾರಿಸಲು ಕಷ್ಟವಾದ; ನಿವಾರಣೆ ಮಾಡಲಾಗದ (೧.೫-೨೪೬)

ದೂಂಟು, ದೂಟು (ನಾ). ಹೆಜ್ಜೆ (೧.೬-೨೯೪)

ದೆಸೆ (ನಾ). ಕಾರಣ; ನಿಮಿತ್ತ (೧.೭-೧೩೮)

ದೆಸೆಗೇಡಿ (ನಾ). ದಿಕ್ಕಿಲ್ಲದವನು; ಆಶ್ರಯವಿಲ್ಲದವನು; ನಿರಾಶ್ರಿತ (೧.೪-೩೩೬)

ದೇವತರು (ನಾ). ದೇವಲೋಕದ ಮರ; ಮಂದಾರ, ಪಾರಿಜಾತ, ಸಂತಾನ, ಕಲ್ಪವೃಕ್ಷ ಮತ್ತು ಹರಿಚಂದನ ಎಂಬ ಐದು ವೃಕ್ಷಗಳಲ್ಲಿ ಒಂದು (೪.೯-೧)

ದೈತ್ಯ (ಗು). ೧. ಅತ್ಯಧಿಕವಾದ; ಅತಿಶಯವಾದ (೨.೬-೨೭೩) (ನಾ). ರಾಕ್ಷಸ; ಅಸುರ (೧.೬-೩೧೮)

ದೊರೆನಿರಿಗೆ (ನಾ). ರಾಜನಿಗೆ ತಕ್ಕಂಥ ಮರ್ಯಾದೆ, -ರೀತಿ; ರಾಜ ಮರ್ಯಾದೆ (೨.೧-೨೦೪)

ದೊರೆವಟ್ಟೆ (ನಾ). ರಾಜಮಾರ್ಗ; ರಾಜಬೀದಿ (೧.೨-೬೪೬)

ದೋಣಿ (ನಾ). ಅಗಲವಾದ ಬಾಯಿಯನ್ನು ಹೊಂದಿರುವ ಪಾತ್ರೆ; ಬಾನಿ (೧.೬-೧೬೬)

ದೋರ್ದಂಡ (ನಾ). ದಂಡದಂತೆ ಉದ್ದವಾದ ತೋಳು, ಶಕ್ತಿಯುತವಾದ ಬಾಹು; ಭುಜದಂಡ (೨.೨-೧೪೦)

ದೌವಾರಿಕ (ನಾ). ಬಾಗಿಲು ಕಾಯುವವನು; ದ್ವಾರಪಾಲಕ; ಪ್ರತೀಹಾರ (೩.೧–೬೮೨)

ದೌಷ್ಟ್ಯ (ನಾ). ದುಷ್ಟತನ; ಕೆಡುಕು (೩.೧೨–೧೮೭)

ದ್ಯುತಿ (ನಾ). ೧. ಬೆಳಕು; ಕಾಂತಿ; ಪ್ರಕಾಶ, ಪ್ರಭೆ (೧.೧–೩೨೯) ೨. ಸೌಂದರ್ಯ (೩.೧–೧೨೫)

ದ್ಯುಮಣಿ (ನಾ). ಗಗನದ ರತ್ನ; ದಿನಮಣಿ; ಸೂರ್ಯ (೩.೧೨–೨೪೭)

ದ್ರವಂತಿ (ನಾ). ನದಿ; ಹೊಳೆ (೧.೭–೩೩೨)

ದ್ರವೀಕೃತ (ಗು). ಕರಗಿಸಿದ (೩.೭–೪೨೯)

ದ್ರಾವಾಗ್ನಿ (ನಾ). ಕರಗಿ ಹರಿಯುವ ಬೆಂಕಿ; ಲಾವಾರಸ (೪.೯–೧೯೭)

ದ್ರಾವಿಡ ತಪಸ್ಸು (ನಾ). ಆರ್ಯವರ್ಗಕ್ಕೆ ಸೇರದ, ಸಾತ್ವಿಕವಲ್ಲದ ತಪಸ್ಸು; ದುಷ್ಟಕಾರ್ಯಕ್ಕಾಗಿ ಶಕ್ತಿಯನ್ನು ಸಂಪಾದಿಸುವ ತಪಸ್ಸು. ೧.೨–೫೦)

ದ್ರುಮ (ನಾ). ಮರ; ವೃಕ್ಷ (೧.೧೦–೪)

ದ್ರುಮಯೋಧಿ (ಗು). ಗಿಡ, ಮರಗಳನ್ನೇ ಆಯುಧವನ್ನಾಗಿ ಉಪಯೋಗಿಸುವ (೪.೧೦–೩೪೧)

ದ್ವಿಷ (ನಾ). ಹಗೆ; ಶತ್ರು (೩.೭–೨೯೨)

ಧನದ (ನಾ). ಕುಬೇರ (೨.೧–೧೫೭)

ಧನ್ವಿ (ನಾ). ಬಿಲ್ಲುಗಾರ; ಧನುರ್ಧರ (೧.೨ –೮೫)

ಧಮ್ಮಿಲ (ನಾ). ಹೆಣೆದು ಮುಡಿಕಟ್ಟಿ ಅಲಂಕರಿಸಿದ ಕೂದಲು,–ಕೇಶರಚನೆ; ತುರುಬು; ಮುಡಿ; ಕಬರಿ(೧.೩–೩೭)(೨.೨–೮೭೯)

ಧರ್ಮಗ್ಲಾನಿ (ನಾ). ಧರ್ಮದ ಹಾನಿ; ಧರ್ಮ ನಷ್ಟವಾಗುವಿಕೆ (೪.೪–೫೪೯)

ಧವಲ, ಧವಳ (ಗು). ಬಿಳಿಯ; ಶುಭ್ರವಾದ (೧.೧೧–೧೩೩)

ಧವಲಿಮ, ಧವಳಿಮ (ಗು). ಬಿಳಿಯ ಬಣ್ಣದ; ಬಿಳುಪಾದ (೧.೬–೨೨೮)

ಧಾತ್ರಿ (ನಾ). ನೆಲ, ಭೂಮಿ, ಇಳೆ (೧.೧೧–೪೦೯)

ಧಿಕ್ಕೃತ (ಗು). ತಿರಸ್ಕರಿಸಿದ; ಕಡೆಗಣಿಸಿದ (೩.೧೩–೨೧೨)

ಧಿಗಿಲ್ (ನಾ). ಒಂದು ಅನುಕರಣ ಶಬ್ದ (೨.೬–೧೦೧)

ಧೀಂಕಿಡು (ಕ್ರಿ). ಹಬ್ಬು; ಚಾಚು; ಪಸರಿಸು; ದಾಂಗುಡಿಯಿಡು (೨.೯–೧೬೯)

ಧುನಿ (ನಾ). ನದಿ; ಹೊಳೆ (೧.೪–೫೧೭)

ಧೂಮಲೇಖೆ (ನಾ). ಹೊಗೆಯ ಗೆರೆ,–ರೇಖೆ (೧.೯–೨೬೨)

ಧೂರ್ಜಟಿ (ನಾ). ಶಿವ; ಈಶ್ವರ (೧.೭–೨೧೨)

ಧೃತಿ (ನಾ). ಧೈರ್ಯ; ಧೀರತನ; ಎದೆಗಾರಿಕೆ; ಕೆಚ್ಚು (೨.೧–೧೨೭)

ಧೇನು (ನಾ). ಆಕಳು; ಹಸು; ಗೋವು (೪.೧೩–೧೬೦)

ಧೌತ (ಗು). ತೊಳೆದ; ಸ್ವಚ್ಛಮಾಡಿದ; ಶುಭ್ರಗೊಳಿಸಿದ (೧.೧೧–೧೩೩)

ಧ್ರುವ (ಗು). ನಿಶ್ಚಿತವಾದ; ಸಂಶಯವಿಲ್ಲದ; ದೃಢವಾದ (೩.೨–೨೨೯)

ಧ್ವಾನ (ನಾ). ಧ್ವನಿ; ಶಬ್ದ; ನಾದ (೧.೪–೪೨೫) (೨.೨–೨೬೭)

ನಕ್ರ (ನಾ). ಒಂದು ಬಗೆಯ ಜಲಚರ ಪ್ರಾಣಿ; ಮೊಸಳೆ; ನೆಗಳು (೧.೪-೨೦೫)

ನಖ (ನಾ). ಉಗುರು (೧.೧೧-೪೦೧)

ನಗ (ನಾ). ಚಲಿಸದೆ ಇರುವುದು; ಸ್ಥಾವರ; ಪರ್ವತ; ಬೆಟ್ಟ (೧.೬-೩೨೯) (೧.೭-೩೬೦)

ನಗಕುಲ (ನಾ). ಬೆಟ್ಟಗಳ ಸಮೂಹ; ಪರ್ವತಗಳ ಗುಂಪು (೨.೧೦-೩೧)

ನಗ್ನತೆ (ನಾ). ಅನನ್ಯತೆ; ಲೀನವಾಗಿರುವಿಕೆ (೧.೮-೪೧)

ನಚ್ಚು (ಕ್ರಿ). ಮೆಚ್ಚು; ಬಯಸು; ಪ್ರೀತಿಸು (೧.೪-೧೩೯)

ನಚ್ಚುಗೆಡು, ನಚ್ಚುಗಿಡು, ನೆಚ್ಚುಗೆಡು (ಕ್ರಿ). ನಂಬಿಕೆಯನ್ನು ಕಳೆದುಕೊಳ್ಳು; ಭರವಸೆಯಿಲ್ಲದಾಗು; ಅವಿಶ್ವಾಸವನ್ನು ಹೊಂದು. (೨.೬-೧೬೩)

ನಟ್ಟು, ನಡು (ಕ್ರಿ). ನೆಲೆಗೊಳ್ಳು; ಸ್ಥಿರವಾಗು; ಕೀಲಿಸು, ಅಲುಗದೆ ನಿಲ್ಲು; ಕೂಡು (೧.೫-೧೭೦)

ನಡಪಾಡು, ನಡೆಪಾಡು (ಕ್ರಿ). ನಡೆದಾಡು; ಸಂಚರಿಸು; ಓಡಾಡು; ಅಡ್ಡಾಡು (೨.೧-೩೫೬)

ನಡೆಗೊಳ್, ನಡೆಗೊಳು (ಕ್ರಿ). ಚಲಿಸು; ಹೋಗು; ಸಾಗು; ತೆರಳು (೧.೯-೨೧೮)

ನಣ್ಪು (ನಾ). ೧. ನಂಟು; ಬಾಂಧವ್ಯ; ಸಂಬಂಧ (೧.೨-೬೦೪) ೨. ನಂಬಿಕೆ; ವಿಶ್ವಾಸ (೨.೭-೮೯)

ನದ (ನಾ). (ಶಬ್ದದೊಂದಿಗೆ ರಭಸವಾಗಿ ಹರಿಯುವ) ದೊಡ್ಡನದಿ; ಗಂಡುತೊರೆ; ಗಂಡುನದಿ (೧.೪-೫೨೨)

ನದಿ (ನಾ). ಹೊಳೆ; ತೊರೆ (೪.೧೩-೧೯೫) (ನದಿನದ, ನದೀನದ = ಹೆಣ್ಣು ಮತ್ತುಗಂಡು ಹೊಳೆಗಳು)

ನನೆ (ಕ್ರಿ). ಹೂವು ಬಿಡು; ಮೊಗ್ಗಾಗು; ಮುಗುಳಾಗು (೨.೨-೧೨)

ನನೆಕೊನೆ (ನಾ). (ಆಲಂ) ಹಿಗ್ಗು; ಸಂತೋಷ; ಆನಂದ (೧.೭-೨೨೫)

ನನ್ನಿ (ನಾ). ಸಹಜವಾದುದು; ವಾಸ್ತವವಾದುದು; ಸತ್ಯ; ದಿಟ; ನಿಜ; ನಿಶ್ಚಯ (೧.೯-೫೨೮)

ನಭಶ್ಚರ, ನಭಶ್ಚಲಿ (ನಾ). ಆಕಾಶದಲ್ಲಿ ಸಂಚರಿಸುವವನು; ಖೇಚರ; ವಿದ್ಯಾಧರ (೩.೪-೩೬೨)

ನಭಶ್ಚುಂಬಿ (ನಾ). ಗಗನವನ್ನು ಮುಟ್ಟುವಂಥದು; ಅತ್ಯಂತ ಎತ್ತರವಾದುದು; ಗಗನ ಚುಂಬಿ(೧.೯-೬೨೭)

ನಯಪಂಡಿತ (ನಾ). ನೀತಿವಿದ; ವಿವೇಕಿ. (೨.೯-೫೪೯)

ನಲ್ದಾಣ (ನಾ). ಒಳ್ಳೆಯ ನೆಲೆ,-ಆಶ್ರಯ (೧.೧೦-೪೪೭)

ನಲ್ದೊಟ್ಟಿಲು (ನಾ). ಅಂದವಾದ ತೊಟ್ಟಿಲು (೨.೬-೪೧೭)

ನಲ್ಮಗು (ನಾ). ಸುಂದರವಾದ ಮಗು; ಅಂದವಾದ ಶಿಶು (೧.೧-೧೭೪)

ನಲ್ಲುಣಿಸು (ನಾ). ಸವಿಯಾದ ಊಟ, ರುಚಿಕರವಾದ ಆಹಾರ; ಒಳ್ಳೆಯ ತಿನಿಸು (೧.೯-೮೫)

ನಲ್ವಾಸು(ನಾ). ಮೃದುವಾದ ಶಯ್ಯೆ; ಮೆತ್ತನೆಯ ಹಾಸಿಗೆ (೨.೭೪೫)

ನವಾಂಗಿ (ನಾ). ಹೊಸಹರೆಯದವಳು; ಜವ್ವನೆ; ಯುವತಿ (೧.೧೧-೩೮೮)

ನವಿರ್, ನವಿರು (ನಾ). ಕೂದಲು; ಕೇಶ;

ರೋಮ (೧.೩-೩೬೬)

ನಸರಿತುಪ್ಪ, ನಸರಿ (ನಾ). ಒಂದು ಬಗೆಯ ಜೇನು; ಮರದ ಪೊಟರೆಗಳಲ್ಲಿ ಕಟ್ಟುವ ಜೇನು (೨.೧೦-೧೩೨)

ನಾಗ (ನಾ). ಆನೆ; ಗಜ (೪.೧೨-೩೪೭)

ನಾಡಾಡಿ (ನಾ). ಸ್ವಲ್ಪವೂ ಗಣನೆಗೆ ಬಾರದ ವ್ಯಕ್ತಿ; ಅಲ್ಪ; ಕ್ಷುದ್ರ(೧.೧೧-೩೮೦)

ನಾಣಿಲಿ (ನಾ). ನಾಚಿಕೆಯಿಲ್ಲದ ವ್ಯಕ್ತಿ; ಲಜ್ಜೆಗೇಡಿ (೧.೪-೬೯)

ನಾಣ್, ನಾಣು (ನಾ). (ಹೆಂಗಸಿಗೆ ಗಂಡಸಿನ ಎದುರಿನಲ್ಲಿ ಒದಗುವ) ನಾಚಿಕೆ; ಸಿಗ್ಗು; ಲಜ್ಜೆ (೧.೭-೩೭೬)

ನಾಣ್ಗೆಡು (ಕ್ರಿ). ನಾಚಿಕೆಯನ್ನು ಬಿಡು; ಲಜ್ಜೆಯಿಲ್ಲದಿರು (೧.೯-೧೦೧)

ನಾತಿದೂರ (ನಾ). ಬಹಳ ದೂರವಲ್ಲದುದು; ಹತ್ತಿರ; ಸಮೀಪ (೧.೧೦-೪೫೩) (೨.೫-೧೬೮)

ನಾತಿನಿಕಟ (ನಾ). ಬಹಳ ಹತ್ತಿರವಲ್ಲದುದು; ಸ್ವಲ್ಪದೂರ (೧.೧೧-೫೪)

ನಾದ (ನಾ). ಧ್ವನಿ; ಶಬ್ದ; ಸಪ್ಪಳ; ಕೂಗು (೧.೪-೨೯೨)

ನಾನ್ (ಕ್ರಿ), ನಾಂದ (ತೋಯು; ನನೆ; ಒದ್ದೆಯಾಗು (೧.೭-೨೪೫)

ನಾಭಿ (ನಾ). ಮಧ್ಯಭಾಗ; ಕೇಂದ್ರ (೧.೭-೨೧೫)

ನಾರಾಚ (ನಾ). ಬಾಣ; ಸರಳು (೧.೨ -೯೯)

ನಾರಿ (ನಾ). ಬಿಲ್ಲಿಗೆ ಕಟ್ಟುವ ಹುರಿ; ಸಿಂಜಿನಿ; ಹೆದೆ (೧.೨-೩೭೫)

ನಾರುಡೆ (ನಾ). ನಾರುಬಟ್ಟೆ; ವಲ್ಕಲ (೧.೪-೩೯೨)

ನಾಲ್ಮೆ (ನಾ). ನಾಲ್ಕು ಸಲ; ನಾಲ್ಕು ಬಾರಿ; ನಾಲ್ಕಾವರ್ತಿ (೧.೨-೬೨೧)

ನಾಸ (ನಾ). ಮೂಗು; ನಾಸಿಕ (೪.೪-೫೯೩)

ನಿಃಸಂಜ್ಞ, ನಿಸ್ಸಂಜ್ಞ (ಗು). ಪ್ರಜ್ಞೆ ಇಲ್ಲದಿರುವ; ಪ್ರಜ್ಞಾ ಹೀನವಾದ (೧.೨-೪೫೦)

ನಿಕಟ (ಗು). ಹತ್ತಿರದಲ್ಲಿರುವ; ಸಮೀಪದ (೧.೧೦-೪)

ನಿಕಾಶ (ಗು). ಹೋಲುವ; ಹೋಲಿಕೆಯುಳ್ಳ (೧.೮-೨೨೨)

ನಿಕುಂಜ (ನಾ). ಬಳ್ಳಿಮಾಡ; ಲತಾಗೃಹ (೩.೪-೬)

ನಿಕ್ವಣ (ನಾ). ೧. ಶಬ್ದ, ಧ್ವನಿ (೨.೯-೩೭೪)

ನಿಕ್ಷಿಪ್ತ (ಗು). ಅಡಗಿರುವ; ಹುದುಗಿರುವ (೪.೧-೧೬೭)

ನಿಗಳ (ನಾ). (ಆಲಂ) ಬಂಧನ; ಕಟ್ಟು; ಪಾಶ (೧.೯-೪೮೨)

ನಿಚ್ಚ (ಅ). ಯಾವಾಗಲೂ; ಸದಾ (೧.೬-೪೧)

ನಿಚ್ಚ (ನಾ). ಪ್ರತಿದಿನ; ಪ್ರತಿನಿತ್ಯ (೧.೨-೪೩೨)

ನಿಜೇಶ್ವರ (ನಾ). ತನ್ನಒಡೆಯ, -ಪತಿ (೪.೪-೬೩೬)

ನಿಟ್ಟಿಸು (ಕ್ರಿ). ದೃಷ್ಟಿಸಿ ನೋಡು; ನೇರವಾಗಿ ನೋಡು; ಗಮನವಿಡು; ದಿಟ್ಟಿಸು (೧.೪-೪೩೨)

ನಿಟ್ಟೆ (ನಾ). ೧. ನಿಯಮ, ಕಟ್ಟಳೆ (೨.೧-೩೩೧) ೨. ಮಾಡಬೇಕಾದುದು; ಕರ್ತವ್ಯ (೪.೧೧-೩೧೫)

ನಿಡಿದು (ಅ). ಎತ್ತರವಾಗಿ; ಉತ್ತುಂಗವಾಗಿ (೨.೨- ೯೧)

ನಿಡುನೀಳ್ (ಕ್ರಿ). ಉದ್ದವಾಗಿ ಇಳಿಬೀಳು,-

ಜೋಲುಬೀಳು (೧.೩-೬೮)

ನಿಡುಪನೆ (ನಾ). ಉದ್ದವಾದ ಕೋರೆಹಲ್ಲು; ದೊಡ್ಡದಂತ (೩.೧-೩೫೭)

ನಿಡುವಟ್ಟೆ (ನಾ). ನಿಡಿದಾದ ದಾರಿ; ದೀರ್ಘವಾದ ಮಾರ್ಗ (೨.೧೦-೪೩)

ನಿಡುವೊಸಗೆ (ನಾ). (ಮದುವೆಯ) ದೊಡ್ಡ ಉತ್ಸವ,-ಮೆರವಣಿಗೆ (೧.೨-೬೪೮)

ನಿಡುಸರ (ನಾ). ದೊಡ್ಡ ಕೂಗು; ಗಟ್ಟಿಯಾದ ಸ್ವರ; ದೀರ್ಘಧ್ವನಿ(೧.೩-೧೪೫)

ನಿಡುಸುಯ್, ನಿಡುಸುಯ್ಯು (ಕ್ರಿ). ದೀರ್ಘವಾಗಿ ಉಸಿರನ್ನು ಬಿಡು; ನಿಟ್ಟುಸಿರು ಬಿಡು (೧.೫-೮೯)

ನಿತಂಬ (ನಾ). ೧. (ಸ್ತ್ರೀಯರ) ಸೊಂಟದ ಕೆಳಗಿನ ಹಿಂಭಾಗ; ಕಟಿ ಪ್ರದೇಶ; ಪಿರ್ರೆ; ಕುಂಡೆ ೨. ಬೆಟ್ಟದ ಇಳಕಲು ಪ್ರದೇಶ; ಸಾನು (೩.೨-೨೪)

ನಿತಂಬಿನಿ (ನಾ). ಸ್ಥೂಲವಾದ ನಿತಂಬವನ್ನುಳ್ಳವಳು; ಚೆಲುವೆ; ಸುಂದರಿ (೧.೯-೫೧)

ನಿದಾಘ (ಗು). ಸುಡುವ; ಉರಿಯುವ; ಬಿಸಿಯಾದ (೩.೯-೪೪೭)

ನಿದ್ರಾಮುದ್ರೆ (ನಾ). ನಿದ್ರೆಯು ಆವರಿಸಿರುವ ಸ್ಥಿತಿ; ಎಚ್ಚರವಿಲ್ಲದಿರುವಿಕೆ (೧.೯-೩೪೬)

ನಿಧುವನ (ನಾ). ಕಂಪನ; ಅಲ್ಲಾಡುವಿಕೆ; ನಡುಕ (೪.೭-೩೩೦)

ನಿಬಿಡ (ಗು). ದಟ್ಟವಾದ; ಸಾಂದ್ರವಾದ; ಒತ್ತಾದ(೧.೨-೧೪೧)

ನಿಬಿಡತೆ (ನಾ). ಒತ್ತೊತ್ತಾಗಿ ಇರುವ ಸ್ಥಿತಿ; ಸಾಂದ್ರತೆ; ದಟ್ಟಣೆ (೧.೧೦-೪೨೪)

ನಿಮಂತ್ರಿಸು (ಕ್ರಿ). ಕರೆ; ಆಹ್ವಾನಿಸು (೧.೧೦-೩೮೫)

ನಿಮಗ್ನ (ಗು). ೧. ಮುಳುಗಿರುವ; ವಿಲೀನವಾದ(೧.೧-೩೭೦) ೨. ಕಾಣದ; ಅಡಗಿದ (೧.೧ - ೩೬೬) ೩. ಮುಳುಗಿದವನು; ತಲ್ಲೀನನಾದವನು; ಅಡಗಿದವನು (೨.೮-೧೦೦)

ನಿಮಿ (ನಾ). ಇಕ್ಷ್ವಾಕು ಎಂಬ ಸೂರ್ಯವಂಶದ ಚಕ್ರವರ್ತಿಯ ಮಗ; ವಿದೇಹ ದೇಶದ ರಾಜ (೧.೨-೬೨೩)

ನಿಮಿತ್ತ (ನಾ). ಕಾರಣ; ಹೇತು (೧.೬-೧೩೫)

ನಿಮ್ನಗೆ (ನಾ). ಹೊಳೆ; ನದಿ (೧.೯-೭೫) (೨.೯-೪೬೪)

ನಿಯಂತೃ (ಗು). ನಿಯಮಿಸುವ; ಹತೋಟಿಮಾಡುವ; ಅಧೀನದಲ್ಲಿಟ್ಟುಕೊಳ್ಳುವ (೧.೬-೧೫೪)

ನಿಯತಿ (ನಾ). ೧. ಅದೃಷ್ಟ; ವಿಧಿ; ದೈವ; ಜನ್ಮಾಂತರೀಯ ಕರ್ಮ (೧.೯-೫೧೬) ೨. ಕಟ್ಟು; ನಿಯಮ; ಕ್ರಮ; ವ್ಯವಸ್ಥೆ (೧.೧ ೬೭೧)

ನಿಯಾಮಕ (ನಾ). ಅಂಕೆಯಲ್ಲಿಟ್ಟುಕೊಂಡಿರುವವನು; ಹತೋಟಿಯಲ್ಲಿಟ್ಟುಕೊಂಡಿರುವವನು (೪.೪-೪೬೬)

ನಿರಶನ (ನಾ). ಆಹಾರವಿಲ್ಲದಿರುವುದು; ಉಪವಾಸ (೨.೭-೧೫೨)

ನಿರಸನ (ನಾ). ಹೊರಡುವುದು; ದಬ್ಬುವುದು; ಅಟ್ಟುವುದು (೨.೩-೩೭೫)

ನಿರಸ್ತೆ (ನಾ). ಹೊರದೂಡಿಸಿಕೊಂಡವಳು; ಪರಿತ್ಯಕ್ತೆ (೧.೬-೨೭೫)

ನಿರಾಸ (ನಾ). ತೊಲಗಿಸುವುದು; ಅಟ್ಟುವುದು; ತಳ್ಳುವುದು (೪.೧೧-೪೭೬)

ನಿರಿಗೆ (ನಾ). ರೀತಿ; ಕ್ರಮ; ಪದ್ಧತಿ (೨.೧-೨೦೪)

ನಿರೂಪ (ನಾ). ೧. ಅಪ್ಪಣೆ; ಆಜ್ಞೆ(೧.೩-೫೮೫) ೨. ಹಿರಿಯರ ಉಪದೇಶ, -ಬೋಧನೆ (೪.೧೨-೪೩೫)

ನಿರ್ಜೀವ(ನಾ). ಜೀವರಹಿತವಾದುದು; ಜೀವವಿಲ್ಲದುದು (೧.೫-೩೪)

ನಿರ್ಝರ (ನಾ). ಬೆಟ್ಟದಿಂದ ಕೆಳಕ್ಕೆ ಹರಿಯುವ ಪ್ರವಾಹ; ಬೆಟ್ಟದ ಹೊಳೆ (೧.೭-೨೧೧)

ನಿರ್ಝರಿಣಿ (ನಾ). ಹೊಳೆ; ತೊರೆ; ನದಿ (೧.೨-೩೦೭) (೧.೭-೨೦೪)

ನಿರ್ನಿಮಿತ್ತಂ (ಅ). ನಿಷ್ಕಾರಣವಾಗಿ; ಅಕಾರಣವಾಗಿ (೧.೬-೧೧೫

ನಿರ್ನಿಮೇಷ (ನಾ) ಎವೆ ಯಿಕ್ಕದವನು (೪.೬-೧೨೪)

ನಿರ್ನೆರಂ (ಅ). ಕಾರಣವಿಲ್ಲದೆ; ನಿಷ್ಕಾರಣವಾಗಿ; ನಿರ್ನಿಮಿತ್ತವಾಗಿ (೧.೨ - ೪೨)

ನಿರ್ಯಾತನ (ನಾ). ನ್ಯಾಸವಾಗಿಟ್ಟು ಕೊಂಡಿದ್ದ ವಸ್ತುವನ್ನು ಅದರ ಒಡೆಯನಿಗೆ ಮರಳಿ ಒಪ್ಪಿಸುವುದು (೩.೪-೪೨೬)

ನಿರ್ವಿಕಲ್ಪ ಸಮಾಧಿ (ನಾ). (ಯೋಗ) ಯಾವ ವ್ಯಾಪಾರವೂ ಇಲ್ಲದೆ ಚಿತ್ತಲಂತುಾಭಿ ಮುಖವಾಗಿರುವ ನಿಶ್ಚಲ ಸಮಾಧಿ. (೧.೧೦-೩೭)

ನಿರ್ವಿಣ್ಣತೆ (ನಾ). ಕುಗ್ಗಿದ ಸ್ಥಿತಿ; ಸೋಲಿನ ಭಾವ; ಅಸಹಾಯಕತೆ(೧.೧ -೨೧೯)

ನಿರ್ವೀರ್ಯ (ಗು). ಬಲವಿಲ್ಲದಿರುವುದು; ಶಕ್ತಿಗುಂದಿದುದು (೨.೧-೩೦೦)

ನಿಱಿತೆ, ನಿರತೆ (ನಾ). ಸೊಬಗು; ಮನೋಹರತ; ಸುಭಗತೆ (೨.೧-೧೯೦)

ನಿಲ್ (ಕ್ರಿ). ನಿಂತ, ನಿಂದ, ನಿತ್ತ (ಭೂತಕೃ) ನಿಂತು, ನಿಂದು, ನಿಲ್ತು (ಭೂತನ್ಯೂ) ಚಲಿಸದಿರು; ನಡೆಯದಿರು; ಮುಂದುವರಿಯದಿರು, ನಿತ್ತರಿಸು= ಸೈರಿಸು; ಸಹಿಸು (೨.೨-೫೫೧) ನಿಲ್ಪಡು=ನಿಲ್ಲಿಸಲ್ಪಡು; ಸ್ತಂಭಿತವಾಗು (೩.೧-೯೦)

ನಿಲ್ನೀರು (ನಾ). ನಿಂತ ನೀರು; ದಡದ ಬಳಿಯಿರುವ ನೀರು (೧.೭-೩೮೧)

ನಿವೇದಿಸು (ಕ್ರಿ). ಒಪ್ಪಿಸು; ಕೊಡು; ಸಮರ್ಪಿಸು (೧.೬-೬)

ನಿಶಾಚರ (ನಾ). ರಾಕ್ಷಸ (೧.೧೦-೪೭೨),(೨.೨-೨೬೩)

ನಿಶಿತ (ಗು). ಹರಿತವಾದ; ಮಸೆದ; ಚೂಪಾದ (೧.೯-೧೫೬), (೧.೧೦-೫೨)

ನಿಶೀಥಿನಿ (ನಾ). ಇರುಳು; ರಾತ್ರಿ (೨.೬-೫೦), (೨.೧೨-೩)

ನಿಷಂಗ (ನಾ). ಬತ್ತಳಿಕೆ; ತೂಣೀರ (೧.೯-೧೫೫)

ನಿಷಾದಪತಿ (ನಾ). ಬೆಸ್ತರ ಒಡೆಯ, -ಮುಖಂಡ (೧.೭-೫೧)

ನಿಷೂದನ (ನಾ). ಕೊಲ್ಲುವವನು; ನಾಶಮಾಡುವವನು. (೨.೪-೨೪)

ನಿಷ್ಕ (ನಾ). ಒಂದು ಬಗೆಯ ಆಭರಣ, ಕಂಠಹಾರ, ಚಿನ್ನದ ಆಭರಣ (೪.೧-೪೦೯)

ನಿಷ್ಕಂಟಕ (ನಾ). ಪೀಡೆಯಿಲ್ಲದಿರುವುದು;

ತೊಂದರೆಯಿಲ್ಲದಿರುವುದು; ಶತ್ರುರಹಿತವಾಗಿರುವುದು (೧.೩-೪೨೧)

ನಿಷ್ಕಂಟಕಂಗೆಯ್ (ಕ್ರಿ). ಪೀಡೆ ಇಲ್ಲದಂತೆ ಮಾಡು; ಶತ್ರು ರಹಿತವಾಗಿ ಮಾಡು (೧.೯-೧೭೦)

ನಿಷ್ಕೂಜಿತ (ನಾ). ಪಕ್ಷಿಗಳ ಕೂಗಿಲ್ಲದುದು (೧.೧೦-೧೦೮)

ನಿಷ್ಕೃತಿ (ನಾ). ಬಿಡುಗಡೆ; ವಿಮೋಚನೆ (೩.೧೩-೨೧೭)

ನಿಷ್ಪಂದಂ (ಅ). ಚಲಿಸದೆ; ಅಲುಗದೆ; ನಿಶ್ಚಲವಾಗಿ (೧.೬-೧೮೪)

ನಿಸ್ವನ (ನಾ). ಶಬ್ದ; ಧ್ವನಿ; ಸ್ವನ (೧.೨-೫೪೭)

ನಿಳ್ಕು, ನಿಲುಕು, ನೀಳ್ಕು (ಕ್ರಿ). ಮೈಚಾಚಿ ನಿಲ್ಲು; ಮೆಟ್ಟುಂಗಾಲಿನಲ್ಲಿ ನಿಲ್ಲು; ತುದಿಗಾಲೂರಿನಿಲ್ಲು. (೨.೯-೨೬೭)

ನೀಡ (ನಾ). ಹಕ್ಕಿಯ ವಾಸಸ್ಥಾನ; ಗೂಡು. (೧.೧ - ೯೧)

ನೀರ್ಬೆಂಕೆ (ನಾ). ದ್ರವರೂಪವಾದ ಬೆಂಕಿ; ಲಾವಾರಸ (೧.೩-೪೮೮)

ನೀರಂಧ್ರ (ಗು). ಒತ್ತಾದ; ದಟ್ಟವಾದ (೩.೨-೨೨೫)

ನೀರಜ (ನಾ). ನೀರಿನಲ್ಲಿ ಹುಟ್ಟಿದುದು; ತಾವರೆ; ಕಮಲ (೧.೨-೩೭೦)

ನೀರಡಸು, ನೀರಡಿಸು (ಕ್ರಿ). ನೀರನ್ನು ಬಯಸು; ಬಾಯಾರು; ತೃಷೆಯಾಗು (೧.೩-೧೪೨)

ನೀರಡಿಕೆ, ನೀರಳ್ಕೆ (ನಾ). ಬಾಯಾರಿಕೆ; ದಾಹ; ತೃಷೆ (೧.೬-೨೯೦)

ನೀರದ (ನಾ). ಮೋಡ; ಮೇಘ; ಮುಗಿಲು (೧.೭-೫೪)

ನೀರಧಿ (ನಾ). ಕಡಲು; ಸಮುದ್ರ; ಜಲಧಿ (೨.೨-೫೯)

ನೀರಪಡೆ (ನಾ). ನೀರಿನ ಮೇಲೆ ಸಂಚರಿಸುವ ಸೈನ್ಯ; ನೌಕಾಪಡೆ (೫೩.೭-೧೫೨)

ನೀರವ (ಗು). ನಿಶ್ಶಬ್ದವಾದ; ಮೌನದಿಂದ ಕೂಡಿದ (೧.೨-೨೨೧) (೧.೮-೪೮)

ನೀರವತೆ (ನಾ). ನಿಶ್ಶಬ್ದವಾಗಿರುವಿಕೆ; ಮೌನ (೨.೬-೮೮)

ನೀರಸ (ನಾ). ಒಣಗಿದುದು (೧.೪-೪೫೬)

ನೀರೆ (ನಾ). ಸುಂದರಿ; ಚೆಲುವೆ (೧.೨-೩೭೭)(೨.೬-೧೯೯)

ನೀರ್ಬೀಳ್, ನೀರ್ಬೀಳ (ನಾ). ಜಲಪಾತ; ಅಬ್ಬಿ; ತಡಸಲು (೨.೯-೧೪೩) (೩.೨-೨೦೧)

ನೀರ್ವಕ್ಕಿ, ನೀರಕ್ಕಿ, ನೀರುವಕ್ಕಿ, ನೀರುಹಕ್ಕಿ (ನಾ). ನೀರಿನಲ್ಲಿ ವಾಸಿಸುವ ಕೊಕ್ಕರೆ ಇತ್ಯಾದಿ ಪಕ್ಷಿ; ಜಲಚರ ಪಕ್ಷಿ (೧.೧೧-೨೧೫) (೨.೫-೪೬)

ನೀಲನಾಗಿನಿ (ನಾ). ನೀಲಿಬಣ್ಣದ ಹೆಣ್ಣು ನಾಗರಹಾವು (೧.೩-೪೪೬)

ನೀಲಿಮೆ (ನಾ). ನೀಲಿಬಣ್ಣ; ನೀಲಿವರ್ಣ (೧.೫-೮೩)

ನೀಲೋತ್ಪಲ, ನೀಳೋತ್ಪಲ (ನಾ). ನೀಲಿಯ ಬಣ್ಣದ ತಾವರೆ; ಕನ್ನೈದಿಲೆ (೧.೧-೪೪೮), (೧.೯-೩೩೦)

ನೀಹಾರ (ನಾ). ಮಂಜು; ಹಿಮ (೧.೧೧-೧೨೪)

ನೀಹಾರಕ, ನೀಹಾರಿಕೆ (ನಾ). ಆಕಾಶದಲ್ಲಿಯ ಕಾಂತಿಮಯ ಪ್ರದೇಶ; ಜ್ಯೋತಿಃಪಟಲ (೪.೧-೨೧೨)

ನೀಳ್, ನೀಳು (ಕ್ರಿ). ೧. ಉದ್ದವಾಗು; ನಿಡಿದಾಗು; ನೀಳವಾಗು (೨.೨-೨೧೨)

ನೀಳ್ದನಿ (ನಾ). ದೀರ್ಘವಾದ ಸ್ವರ,- ಧ್ವನಿ (೧.೫-೧೦೧)

ನುಣ್ಣಿತು, ನುಣ್ಣಿತ್ತು (ನಾ). ಮೃದುವಾದುದು; ಕೋಮಲವಾದುದು (೧.೧೦-೩೩೫)

ನುರ್ಗುನುರಿ, ನುಗ್ಗುನುರಿ (ನಾ). ಚೂರು ಚೂರು; ನುಚ್ಚುನೂರು; ನಜ್ಜುಗುಜ್ಜು; ಪುಡಿಪುಡಿ (೨.೬-೧೨೮)

ನುಸಿ (ನಾ). ೧. ಹಾರಾಡುತ್ತಾ ಕಣ್ಣು, ಕಿವಿ ಮುಂತಾದುವುಗಳನ್ನು ಮುತ್ತುವ ಸಾಸಿವೆ ಆಕಾರದ ಕೀಟ; ಗುಂಗುರ. ೨. (ಆಲಂ) ಅಲ್ಪ; ಕ್ಷುದ್ರ, ಕ್ಷುಲ್ಲಕ (೨.೧-೫೩)

ನೂಪುರ (ನಾ). (ಗೆಜ್ಜೆಗಳುಳ್ಳ) ಕಾಲಿನ ಆಭರಣ; ಕಾಲ್ಗಡಗ; ಕಾಲಂದುಗೆ (೨.೮-೧೦೮)

ನೂಪುರರವ, ನೂಪುರ ಕ್ವಣಿತ (ನಾ). ಕಾಲು ಕಡಗದ ಶಬ್ದ; ಅಂದುಗೆಯ ನಾದ(೧.೪-೩೫೮)

ನೂರ್ಮಡಿಸು (ಕ್ರಿ) (ನೂರುಪಟ್ಟು ಹೆಚ್ಚಾಗು (೧.೧ - ೩೨೭)

ನೂಲೆಗೆಣಸು (ನಾ). ಒಂದು ಬಗೆಯ ಗೆಣಸು (೨.೩-೨೨೫)

ನೂಲ್ಸೋನೆ (ನಾ). ದಾರದ ಎಳೆಯಂತೆ ಬೀಳುವ ಮಳೆಯ ಹನಿ (೨.೯-೧೩೯)

ನೆಗಪು, ನೆಗವು, ನೆಗಹು (ಕ್ರಿ). ಮೇಲಕ್ಕೆ ಎತ್ತು; ಎತ್ತಿ ಹಿಡಿ (೧.೩-೫೪೭)

ನೆಗಳಿಕೆ (ನಾ). ಪ್ರಸಿದ್ಧಿ; ಖ್ಯಾತಿ (೨.೨-೪೬೫)

ನೆಗಳ್, ನೆಗಳು (ಕ್ರಿ). ೧. ಮಾಡು; ಆಚರಿಸು (೧.೬-೧೨) ೨. ನಡೆದುಕೊಳ್ಳು; ವ್ಯವಹರಿಸು; ವರ್ತಿಸು (೨.೧-೨೩೦)

ನೆಣವಸೆ (ನಾ). ಮೇದಸ್ಸು; ಕೊಬ್ಬು (೧.೫-೫೪)

ನೆನೆ (ಕ್ರಿ). ಯೋಚನೆಮಾಡು; ವಿಚಾರಿಸು; ಆಲೋಚಿಸು (೧.೬-೨೬೬)

ನೆನೆಯಿಸು, ನೆನಸು, ನೆನೆಸು (ಕ್ರಿ). ತಿಳಿಸಿಕೊಡು; ವಿವರಿಸು, ವಿಶದಪಡಿಸು; ಗಮನಕ್ಕೆ ತರು (೨.೧-೩೦೬)

ನೆಯ್ (ನಾ). ತುಪ್ಪ; ಆಜ್ಯ (೧.೩-೨೪೬)

ನೆರಪು (ಕ್ರಿ). ಕೂಡಿಸು; ಸೇರಿಸು (೨.೬-೨೫೨)

ನೆರೆ (ಕ್ರಿ). ೧. ಸೇರು; ಜೊತೆಗೂಡು (೧.೨-೨೬೬) ೨. ಗುಂಪುಗೂಡಿಸು; ಒಟ್ಟುಗೂಡಿಸು (೩.೧೩-೩೧೧)

ನೆರೆ (ನಾ). ತುಂಬಿ ಹರಿಯುವ ನೀರು; ತುಂಬು ಪ್ರವಾಹ (೧.೪-೩೪೬)

ನೆರೆವೊನಲ್, ನೆರೆಪೊನಲ್ (ನಾ). ಪ್ರವಾಹ ಬಂದ ಹೊಳೆ; ಮಹಾಪೂರದ ಹೊಳೆ (೩.೯-೩೪೯)

ನೆರ್ಮಿಸು, ನೆಮ್ಮಿಸು (ಕ್ರಿ). ಒರಗಿಸು; ಆನಿಸು (೨.೨-೩೮೨)

ನೆರ್ಮು, ನೆಮ್ಮು (ಕ್ರಿ). ಆಶ್ರಯಿಸು; ಅವಲಂಬಿಸು (೨.೩-೮೭)

ನೆಲ (ನಾ). ನಾಡು; ರಾಜ್ಯ; ದೇಶ (೧.೩-೨೦೧) (೧.೫-೨೫೭)

ನೆಲದ ಪಡೆ = ಭೂಸೈನ್ಯ (೩.೭-೧೫೧)

ನೆಲದರಿಕೆ. = ಲೋಕದಲ್ಲೆಲ್ಲಾ ಹರಡಿದ ಖ್ಯಾತಿ, ಪ್ರಸಿದ್ಧಿ; ಜಗದ್ವಿಖ್ಯಾತಿ(೧.೧ -

೨೧೬) (೧.೧ – ೪೩೨)

ನೆಲದಿಟ್ಟಿ (ನಾ). ಭೂಮಿಯ ಕಡೆ ತಿರುಗಿಸಿದ ದೃಷ್ಟಿ; ತಗ್ಗಿಸಿದ ನೋಟ (೨.೬–೩೫೩)

ನೆಲದೆರೆಯ ((= ನೆಲೆದರಸ; ಭೂಮಿಯ ಒಡೆಯ; ಭೂಪತಿ; ಅರಸ; ದೊರೆ (೧.೨–೬೨೩)

ನೆಲಮಗಳ್, ನೆಲಮಗಳು (ನಾ). ಭೂಮಿಯ ಮಗಳು; ಸೀತೆ (೧.೭–೩೧೮)

ನೆಲೆ (ನಾ). ಆಶ್ರಯ; ಆಧಾರ (೧.೬–೨೧೭)

ನೇಣು (ನಾ). ದಾರ; ನೂಲು; ಸೂತ್ರ (೧.೩–೨೯೬)

ನೇತಿ (ನಾ). (ಅದ್ವೈತ) ಅಲ್ಲದುದು; ಇಲ್ಲದುದು; ಶೂನ್ಯ (೨.೯–೪೨೯)

ನೇಮಿ (ನಾ). ೧. ಅಂಚು; ದಡ; ಎಲ್ಲೆ (೧.೬–೩೧೦) (೧.೭–೨೦೩) ೨. ಗಾಡಿಯ ಚಕ್ರದ ಅಂಚು; –ಪಟ್ಟಿ (೨.೨–೨೫೦)

ನೇರ್ಗಿರಿದು (ನಾ). (ಇನ್ನೊಂದಕ್ಕಿಂತ) ಸ್ವಲ್ಪ ಮಾತ್ರ ಚಿಕ್ಕದು,– ನಸುವೇ ಕಿರಿಯದು

ನೇರ್ಗಿರಿಯ = ಸ್ವಲ್ಪಮಾತ್ರ ಚಿಕ್ಕವನು; ನಸುವೇ ಕಿರಿಯವನು (೧.೫–೨೧೨)

ನೇಲ್, ನೇಲು (ಕ್ರಿ). ನೇತು, ನೇಲ್ದು ಜೋಲು; ಜೋತಾಡು; ತೂಗಾಡು (೧.೩–೩೮)

ನೇವುರ (ನಾ). ಕಾಲಂದುಗೆ; ಕಾಲುಕಡಗ; ನೂಪುರ (೧.೩–೪೨)

ನೇಸರು (ನಾ). ಸೂರ್ಯ; ರವಿ; ಭಾನು (೧.೫–೯೫)

ನೇಸರ್ಬಳಿ(ನಾ). ಸೂರ್ಯನವಂಶ; ಇನಕುಲ (೧.೧ –೨೧೬)

ನೇಸಲ್, ನೇಸಲು (ನಾ). ಅಸ್ಪಷ್ಟವಾದ ರೇಖೆ, – ಆಕೃತಿ (೩.೪–೬೧೬)

ನೈರಾಶ್ಯ(ನಾ). ಹತಾಶೆ, ನಿರಾಶಾಭಾವ (೨.೩–೧೦)

ನೊಗವೊರು (ಕ್ರಿ). (ಆಲಂ) ಹೊರೆಯನ್ನು ಹೊರು; ಜವಾಬ್ದಾರಿಯನ್ನು ಹೊತ್ತುಕೊಳ್ಳು (೨.೧೦–೩೫೧)

ನೋಂಪಿ, ನೋಂಪು (ನಾ). ವ್ರತ; ನಿಯಮ (೧.೬–೨೯೫)

ನೌಚರ (ನಾ). ಹಡಗಿನಲ್ಲಿ ಸಂಚರಿಸುವವನು (೩.೯–೨೯)

ನ್ಯಗ್ರೋಧ (ನಾ). ಆಲದಮರ; ವಟವೃಕ್ಷ (೧.೧೦–೪೬೩)

ನ್ಯಸ್ತ (ಗು). ಇಡಲ್ಪಟ್ಟ; ಇಟ್ಟ (೪.೧೨–೮೬)

ನ್ಯಾಸ (ನಾ). ವಿಧಾನ; ರಚನೆ; ರೀತಿ; ಬಗೆ (೨.೫–೧೯೩)

ಪಂಕ (ನಾ). ಕೆಸರು; ರಾಡಿ; ಕರ್ದಮ (೧.೧–೧೩೨)

ಪಂಗ, ಪಂಗು (ನಾ). ಕಾಲಿಲ್ಲದವನು; ಹೆಳವ; ಕುಂಟ (೪.೪–೨೧೨)

ಪಂಚತ್ವ, ಪಂಚತೆ (ನಾ). ಸಾವು; ಮರಣ (೩.೧೦–೧೮೯) (೪.೨–೫೦೭)

ಪಂಚಾನನ (ನಾ). ವಿಶಾಲವಾದ ಮುಖವುಳ್ಳುದು; ಸಿಂಹ; ಪಂಚಾಸ್ಯ (೩.೧೨–೨೧೭)

ಪಂತ, ಪಂಥ (ನಾ). ಪಣ; ಪ್ರತಿಜ್ಞೆ; ಶಪಥ (೧.೨–೩೭೧)

ಪಂತರ್, ಪರಿತರು, ಹರಿತರ್, ಹರಿತರು

(ಕ್ರಿ). ಓಡಿಬರು; ಧಾವಿಸು; ರಭಸದಿಂದ ಮುನ್ನುಗ್ಗು (೨.೨–೪೦೩)

ಪಂತಿ (ನಾ). ವಸ್ತುಗಳ ಹಾಗೂ ವ್ಯಕ್ತಿಗಳ ಸಾಲು,–ಓಳಿ (೧.೮–೨೪೩)

ಪಂತಿಗೊಳ್, ಹಂತಿಗೊಳ್, ಹಂತಿಗೊಳ್ಳು (ಕ್ರಿ). ಸಾಲುಗಟ್ಟು; ಗುಂಪುಕೂಡು; ಜೊತೆಗೂಡು (೧.೧೧–೯೦)

ಪಂತಿದೇಶ, ಬಂತಿದೇರ (ನಾ). ಹತ್ತು ದಿಕ್ಕುಗಳಲ್ಲೂ ತಡೆಯಿಲ್ಲದೆ ರಥವನ್ನು ಕೊಂಡೊಯ್ಯುವ ಸಾಮರ್ಥ್ಯ ವುಳ್ಳವನು; ದಶರಥ (೧.೭–೫೮)

ಪಂದರ (ನಾ). ಚಪ್ಪರ; ಕಾವಣ (೧.೨–೩೩೨)

ಪಂದಳಿರ್ (ನಾ). ಹಸುರಾಗಿರುವ ಎಲೆ; ಹೊಸ ಚಿಗುರು; ನವಪಲ್ಲವ (೧.೨–೩೩೨)

ಪಕ್ಷ (ನಾ). ಹಕ್ಕಿಗಳ ರೆಕ್ಕೆ,–ಗರಿ (೧.೭–೨೬)

ಪಕ್ಷ್ಮ (ನಾ). ರೆಪ್ಪೆಗೂದಲು; ಎವೆ ಗೂದಲು; ಅಕ್ಷಿರೋಮ (೪.೯–೬)

ಪಗಲಾಣ್ಮ (ನಾ). ಹಗಲಿನ ಒಡೆಯ; ದಿನಪತಿ; ಸೂರ್ಯ (೨.೨–೨೯)

ಪಚ್ಚಿಸು, ಪರ್ಚಿಸು, ಹಚ್ಚಿಸು (ಕ್ರಿ). ಒಂದರಲ್ಲೊಂದನ್ನು ಅಂಟಿಕೊಳ್ಳು ವಂತೆ ಹೊಂದಿಸು; ಬೆಸೆ (೧.೭–೨೦೭)

ಪಚ್ಚುಗೊಡು (ಕ್ರಿ). ಹಂಚಿಕೊಡು, ವಿಭಾಗಮಾಡಿ ನೀಡು; ಪಾಲುಮಾಡಿ ಕೊಡು (೨.೭–೨೪೦)

ಪಚ್ಚೆ (ನಾ). ಹಸುರು ಬಣ್ಣದ ರತ್ನ; ಮರಕತ (೨.೫–೨೬)

ಪಜ್ಜಳಿಸು (ಕ್ರಿ). ಹೊಳೆ; ಥಳಥಳಿಸು; ಪ್ರಜ್ವಲಿಸು; ಚೆನ್ನಾಗಿ ಕಾಣು; ಪ್ರಕಾಶಮಾನವಾಗು (೧.೫–೮೫)

ಪಜ್ಜೆ, ಹೆಜ್ಜೆ (ನಾ). ಪಾದವನ್ನು ಊರಿದ ಗುರುತು; ಕಾಲಿನ ಗುರುತು, ಪಾದ ಚಿಹ್ನೆ (೧.೯ – ೨೮೯)

ಪಜ್ಜೆವಟ್ಟೆ (ನಾ). ಹೆಜ್ಜೆಯ ಜಾಡು; ಕಾಲುದಾರಿ (೧.೧೦–೩೩೧)

ಪಟ (ನಾ). ನೌಕೆಗೆ ಕಟ್ಟುವ ಹಾಯಿ (೧.೪–೫೫೬)

ಪಟ (ನಾ). ತೆರೆ, ಪರದೆ, ಜವನಿಕೆ (೧.೫–೮೫)

ಪಟಹ (ನಾ). ಒಂದು ಬಗೆಯ ಚರ್ಮವಾದ್ಯ (೩.೪–೬೫೧)

ಪಟುಭಟ (ನಾ). ಪರಾಕ್ರಮಿಯಾದ ಯೋಧ; ವೀರಭಟ (೨.೯–೪೦೯)(೩.೧–೩೨೦)

ಪಟ್ಟಿಸ (ನಾ). ಖಡ್ಗದಂತಹಒಂದು ಬಗೆಯ ಆಯುಧ (೪.೬–೪೨)

ಪಟ್ಟಿಕೆ (ನಾ). ಯಾದಿ, ತಖ್ತೆ; ಪಟ್ಟಿ (೩.೭–೧೯೫)

ಪಟ್ಟೆಮಡಿ (ನಾ). ಪವಿತ್ರ ಕಾರ್ಯಾಚರಣೆಯ ಸಂದರ್ಭಗಳಲ್ಲಿ ಉಡುವ ರೇಷ್ಮೆಯ ಬಟ್ಟೆ,–ವಸ್ತ್ರ; ಮಗುಟ (೧.೨–೬೪೨)

ಪಡಿ (ನಾ). ೧. ಪ್ರತಿಯಾದುದು; ಬದಲು (೧.೪–೫೦೮) ೨. ಸಮಾನವಾದುದು; ಎಣೆಯಾದುದು; ಸಾಟಿಯಾದುದು (೧.೫–೨೮೭)

ಪಡಿನೆಳಲ್, ಪಡಿನೆಳಲು (ನಾ). ಪ್ರತಿಬಿಂಬ; ಪ್ರತಿಚ್ಛಾಯೆ; ಪಡಿಬಿಂಬ (೧.೧೧–೩೨)

ಪಡಿಮೆ, ಪತುಮೆ, ಪ್ರತುಮೆ (ನಾ). ಪ್ರತಿಮೆ; ಮೂರ್ತಿ; ವಿಗ್ರಹ (೧.೭–೩೦೧) ೨. ಪ್ರತೀಕ; ಸಂಕೇತ; ಕುರುಹು (೧.೮–

೧೧೯)

ಪಡಿಮೊಗ (ನಾ). ಅಭಿಮುಖ; ಎದುರು (೧.೫-೧೪೭)

ಪಡಿಹಾರಿ (ನಾ). ಬಾಗಿಲು ಕಾಯುವವನು; ಪ್ರತೀಹಾರಿ; ದ್ವಾರಪಾಲಕ (೧.೩-೩೬೧)

ಪಡು, ಪಡುದೆಸೆ, ಪಡುವಲು (ನಾ). (ಸೂರ್ಯನು) ಮುಳುಗುವ ದಿಕ್ಕು; ಪಶ್ಚಿಮ ದಿಕ್ಕು (೧.೭-೩೬೬) ಪಡಲ್ವಡಿಸು = ಹಾಳುಮಾಡು; ನಾಶಮಾಡು (೩.೭-೧೨೭)

ಪಡು, ಹಡು(ಕ್ರಿ). ಪಟ್ಟ (ಭೂತಕೃ); ಪಟ್ಟು, ಹಟ್ಟು (ಭೂತನ್ಯೂ) = ಮಲಗು; ಒರಗು; ಶಯನಿಸು. (೨.೫-೨೪೦)

ಪಡೆವಳ (ನಾ). ಸೇನಾಧಿಪತಿ; ದಂಡನಾಯಕ, ಸೇನಾನಿ (೨.೧-೨೨)

ಪಣವ (ನಾ). ಒಂದು ಬಗೆಯ ಚರ್ಮವಾದ್ಯ (೩.೧೩-೯೭)

ಪಣೆಮಣಿ (ಕ್ರಿ). (ನಮಸ್ಕಾರಾರ್ಥವಾಗಿ) ಹಣೆಯನ್ನು ಬಾಗಿಸು; ತಲೆಬಾಗು (೪.೧೧-೧೯೧)

ಪಣ್, ಹಣ್ಣು (ಕ್ರಿ). ಪಣ್ತ (ಭೂತಕೃ), ಪಣ್ತು(ಭೂತನ್ಯು), ಪಣ್ಪ (ಭವಿಕೃ) = ಹಣ್ಣಾಗು; ಪಕ್ವವಾಗು; ಮಾಗು (೧.೧೦-೨೭)

ಪತನ (ನಾ). ಅವನತಿ; ಕೀಳುದೆಸೆ; ಅಧೋಗತಿ (೧.೩-೪೯೦)

ಪತ್ತುವಿಡು (ಕ್ರಿ). ಕಳೆದುಕೊಳ್ಳು; ನೀಗಿಕೊಳ್ಳು (೨.೩-೩೪೮) (೨.೫-೨೨೩) (೨.೯-೩೯೧) (೩.೫-೨೩೫)

ಪತ್ರವೇಶ್ಮ (ನಾ). ಎಲೆಮನೆ (೧.೮-೭೧)

ಪಥ್ಯ (ಗು). ಹಿತವಾದ; ಪ್ರಿಯವಾದ (೧.೧೧-೫೭)

ಪದ, ಹದ, ಹದನು (ನಾ). ಯೋಗ್ಯವಾದುದು; ಉಚಿತವಾದುದು (೨.೧-೩೦೫)

ಪದಹತಿ (ನಾ). ಕಾಲಿನ ಹೊಡೆತ; ಪದಾಘಾತ (೨.೪-೯೫)

ಪದುಗು, ಹದಿಗು, ಹದುಗು (ಕ್ರಿ). ಉಡುಗು; ಕುಗ್ಗು; ಸಂಕುಚಿಸು (೨.೩-೫೦)

ಪದ್ಮಕ (ನಾ). ಒಂದು ಬಗೆಯ ಮರ ಮತ್ತು ಅದರ ಚೆಕ್ಕೆ (೧.೬-೨೧೨)

ಪದ್ಮಿನಿ (ನಾ). ತಾವರೆಯ ಬಳ್ಳಿ ಮತ್ತು ಅದರ ಹೂವು; ಕಮಲ (೧.೭-೨೫೭)

ಪನೆ (ನಾ). ಹೊಸದಾಗಿ ಹುಟ್ಟಿದ ಹಲ್ಲು; ಅದೇ ತಾನೆ ಮೊಳೆಯುತ್ತಿರುವ ಹಲ್ಲು; ಮೊಳೆಹಲ್ಲು (೧.೯-೫೫೮)

ಪನ್ನಗುಡಿ, ಪರ್ಣಕುಟಿ (ನಾ). ಎಲೆಮನೆ; ಪರ್ಣಕುಟೀರ (೧.೧೧-೧೧೭)(೩.೩-೪೦)(೧.೧೧-೫೬)

ಪರ್ಯಂಕ (ನಾ). ಮಂಚ, ಪಲ್ಲಂಗ (೧.೪-೧೭೨)

ಪಯೋಧ (ನಾ). ಮಳೆಯ ಮೋಡ; ಕಾರ್ಮೋಡ (೪.೧೩-೧೭೬)

ಪಯೋರುಹ (ನಾ). ನೀರಿನಲ್ಲಿ ಹುಟ್ಟಿದುದು; ತಾವರೆ; ಕಮಲ (೧.೯-೧೯)

ಪರಂತಪ (ಗು). ಶತ್ರುಗಳಿಗೆ ತಾಪವನ್ನುಂಟು ಮಾಡುವ (೩.೧೩-೧೭೦)

ಪರಕೆ, ಹರಕೆ, ಹರಿಕೆ (ನಾ). ಆಶೀರ್ವಾದ; ಆಶೀರ್ವಚನ (೧.೭-೪೨)

ಪರಪು, ಪರ್ಬು, ಹಂಬು, ಹಬ್ಬು (ಕ್ರಿ). ೧.

(ಬಳ್ಳಿಯಂತೆ) ಹೋಗು,-ಹರವಿಕೊಳ್ಳು, -ಹರಡಿಕೊಳ್ಳು (೧.೨-೫೭೧) ೨. ವ್ಯಾಪಕವಾಗು; ವ್ಯಾಪಿಸು (೧.೧೧-೧೭೨)

ಪರಪುಟ್ಟ, ಪರಪುಷ್ಟ (ನಾ). ಕಾಗೆಯಿಂದ ಸಾಕಲ್ಪಟ್ಟದ್ದು; ಕೋಗಿಲೆ (೧.೧-೧೪೦)

ಪರಮೆ (ನಾ). ದುಂಬಿ; ಭ್ರಮರ (೧.೨-೩೩೯)

ಪರಮೆ ಮೊರೆ (ನಾ). ದುಂಬಿಯ ಝೇಂಕಾರ; ತುಂಬಿಯ ಧ್ವನಿ (೨.೨-೨೦)

ಪರಮೇಷ್ಠಿ (ನಾ). ಶಿವ (೪.೨-೫೨)

ಪರವಶತೆ (ನಾ). ಪರಾಧೀನತೆ; ಅಧೀನವಾಗಿರುವಿಕೆ; ಅಂಕಿತದಲ್ಲಿರುವುದು (೧.೩-೩೬೫)

ಪರವಸತೆ, ಹರವಸತೆ (ನಾ). ಮೈಮರೆಯುವಿಕೆ; ಮಗ್ನತೆ; ತಲ್ಲೀನತೆ (೧.೩-೪೨)

ಪರಶು (ನಾ). ಗಂಡುಗೊಡಲಿ; ಕುಠಾರ (೨.೨- ೮೦೪)

ಪರಾತ್ಪರ (ಗು). ಅತ್ಯಂತ ಶ್ರೇಷ್ಠವಾದ; ಪರಮ (೪.೧೧-೩)

ಪರಿಕಾಲ್ (ನಾ). ನೀರು ಹರಿಯುತ್ತಿರುವ ಕಾಲುವೆ,-ನಾಲೆ (೧.೪-೫೦೩)

ಪರಿಘ (ನಾ). ಕಬ್ಬಿಣದ ಒಂದು ಬಗೆಯ ಆಯುಧ; ಕಬ್ಬಿಣದ ಮೊನೆಗಳಿಂದ ಕೂಡಿದ ಗದೆ (೩.೧೪-೩೯)(೪.೬-೪೨)

ಪರಿಚರ್ಯೆ (ನಾ). ಸೇವೆ, ಶುಶ್ರೂಷೆ (೨.೩-೩೬೦)

ಪರಿಜನ (ನಾ). ಸೇವೆಮಾಡುವ ಜನ; ಸೇವಕವರ್ಗ (೧.೯-೫೬೭)

ಪರಿಜು (ನಾ). ರೂಪ; ಆಕಾರ; ಆಕೃತಿ (೩.೭-೧೫೫)

ಪರಿತರ್, ಪರಿತರು (ಕ್ರಿ). ನಡೆದು ಬರು; ಆಗಮಿಸು, ಸಾಗಿಬರು (೧.೬-೨೩೧)

ಪರಿತೋಷ (ನಾ). ಅಧಿಕವಾದಆನಂದ, -ಸಂತೋಷ (೪.೧-೪೨೫)

ಪರಿತ್ಯಾಗ, ಪರಿತ್ಯಜನ (ನಾ). ಬಿಡುವುದು; ತ್ಯಜಿಸುವುದು (೧.೯-೬೧೨)

ಪರಿಪಡು (ಕ್ರಿ). ಓಡು; ಧಾವಿಸು (೨.೫-೩೫೬)

ಪರಿಭವ (ನಾ). ೧. ಅವಮರ್ಯಾದೆ; ಅಗೌರವ; ಅವಮಾನ (೧.೩-೩೮೪) ೨. ದುಃಖ; ಕ್ಲೇಶ; ಕಷ್ಟ (೨.೫-೨೧೦)

ಪರಿಯಾಣ, ಪರಿವಾಣ (ನಾ). ತಟ್ಟೆ; ತಾಟು (೧.೫-೧೧)

ಪರಿಯಿಡು, ಹರಿಯಿಡು (ಕ್ರಿ). ವೇಗವಾಗಿ ಹೋಗು,-ಧಾವಿಸು; ಮುನ್ನುಗ್ಗು (೧.೩-೧೬೪)

ಪರಿವೃತ (ನಾ). ಸುತ್ತುವರಿಯಲ್ಪಟ್ಟುದು; ಬಳಸಲ್ಪಟ್ಟಿರುವುದು (೧.೭-೯೭)

ಪರಿವೇಷ (ನಾ). ಆವರಣ; ಪರಿಧಿ; ವಲಯ (೧.೮-೯೦)

ಪರಿವ್ರಾಜ, ಪರಿವ್ರಜ್ಯೆ (ನಾ). ತಿರುಗಾಡುವುದು; ಪರ್ಯಟನ ಮಾಡುವುದು. (೨.೪-೧೭)

ಪರಿಷತ್ತು (ನಾ). ಸಭೆ; ಸಮ್ಮೇಳನ; ಗೋಷ್ಠಿ (೧.೨-೫೧೬)

ಪರಿಷ್ವಂಗಿಸು (ಕ್ರಿ). ಆಲಿಂಗಿಸು; ಅಪ್ಪಿಕೊಳ್ಳು (೩.೫-೨೮೧)

ಪರಿಷ್ವಂಗ (ನಾ). ಅಪ್ಪುಗೆ; ಆಲಿಂಗನ (೧.೯-೩೬೯)

ಪರಿಹರಿಸು (ಕ್ರಿ). ನಿವಾರಿಸು; ನೀಗು (೨.೯-೩೮೮)

ಪರುಶವಣೆ, ಪರುಟವಣೆ (ನಾ). ಸಡಗರ; ಆಡಂಬರ (೨.೯-೩೭೪)

ಪರೆ, ಹರೆ (ನಾ). ಮರದ ಕೊಂಬೆ, -ರೆಂಬೆ. (೨.೧೧-೧೪)

ಪರೇಂಗಿತಜ್ಞ (ನಾ). ಬೇರೆಯವರ ಅಭಿಪ್ರಾಯವನ್ನು ಊಹಿಸಿ ತಿಳಿಯುವ ವ್ಯಕ್ತಿ; ಮತ್ತೊಬ್ಬರ ಆಶಯವನ್ನು ಅರಿಯುವ ವ್ಯಕ್ತಿ (೩.೪-೩೫೭)

ಪರ್ಚು (ಕ್ರಿ). ಗುಟ್ಟಾಗಿ ಕಿವಿಯಲ್ಲಿ ಹೇಳು; ಪಿಸುಮಾತಾಡು; ಪಿಸುಗುಟ್ಟು. (೨.೫-೨೩೮)

ಪರ್ಚು (ನಾ). ಗುಟ್ಟು ಮಾತು; ಕಿವಿಮಾತು (೩.೪-೪೮೭)

ಪರ್ಣಕುಟಿ (ನಾ). ಎಲೆ, ಹುಲ್ಲು, ಗರಿ ಮೊದಲಾದುವುಗಳಿಂದ ನಿರ್ಮಿಸಿದ ಮನೆ; ಪರ್ಣಶಾಲೆ; ಎಲೆವನೆ (೧.೮-೩೧)

ಪರ್ಣಗೃಹ (ನಾ). ಪರ್ಣಕುಟಿ (೩.೬-೧೧೬)

ಪರ್ಣತನು (ನಾ). ಗರಿಗಳಿಂದ ಕೂಡಿದ ಶರೀರ, ರೆಕ್ಕೆ ಪುಕ್ಕಗಳಿರುವ ಮೈ; ಪಕ್ಷಿಯದೇಹ (೨.೧೦-೮೩೧)

ಪರ್ಣದ್ರುಮ (ನಾ). ಮುತ್ತುಗದ ಮರ; ಪಲಾಶ (೧.೯-೧೪೫)

ಪರ್ಬಿಸು, ಪರ್ಬಿಸು, ಹಬ್ಬಿಸು (ಕ್ರಿ). ಹರಡುವಂತೆ ಮಾಡು; ವ್ಯಾಪಿಸುವಂತೆಮಾಡು (೧.೨-೬೫೭)

ಪರ್ವು (ಕ್ರಿ). ವ್ಯಾಪಿಸುವಂತೆ ಮಾಡು; ಹರಡು (೧.೬-೨೨೬)

ಪರ್ಗೋಲ್; ಹರಿಗೋಲು (ನಾ). ನೀರನ್ನು ಭೇದಿಸಿಕೊಂಡು ಹೋಗುವ ಸಾಧನ; ನಾವೆ; ದೋಣಿ (೧.೩-೬೦೯)

ಪಲ, ಪಲವು, ಹಲ, ಹಲವು (ಸ). ಬಹಳ; ಅನೇಕ (೧.೧೧-೨೫೧)

ಪಲಾನ್ನ (ನಾ). ಮಾಂಸವನ್ನು ಬೆರೆಸಿಮಾಡಿದ ಅನ್ನ (೧.೯-೧೦೬)

ಪಲುಂಬು, ಪಲಂಬು, ಪಲಬು, ಪಲ್ವು; ಹಲಬು, ಹಲುಬು, ಹಲುಂಬು (ಕ್ರಿ). ದುಃಖವನ್ನು ಹೇಳಿಕೊಳ್ಳು, ತೋಡಿಕೊಳ್ಳು; ಪ್ರಲಾಪಿಸು (೨.೨-೭೧೭)

ಪಲ್ಲವಿಸು (ಕ್ರಿ). ಕಾತರಿಸು, ಸಂಭ್ರಮಿಸು. (೨.೧-೩೧)

ಪಲ್ಲಿ (ನಾ). ಊರು; ಗ್ರಾಮ (೧.೫-೧೩೬) (೪.೧೨-೧೩೫)

ಪವಿ (ನಾ). ಸಿಡಿಲು (೧.೯-೫೧೬)

ಪಶ್ಯಂತಿ (ನಾ). ಪರಾ, ಪಶ್ಯಂತೀ, ಮಧ್ಯಮಾ, ವೈಖರೀ ಎಂಬ ನಾಲ್ಕು ವಾಙ್ಮಯ ರೂಪಗಳಲ್ಲಿ ಒಂದು; ಪರಾ ಎಂಬ ಸೂಕ್ಷ್ಮರೂಪವಾದ ನಾದವು ನಾಭಿ ಪ್ರದೇಶದವರೆಗೂ ಚಲಿಸಿದಾಗ ಅದರ ಸಂಬಂಧದಿಂದ ಉಂಟಾಗುವ ಶಬ್ದ (೪.೪-೨೩೧)

ಪಸರ್; ಪಸರು; ಹಸರು (ಕ್ರಿ). ಹರಡು; ವ್ಯಾಪಿಸು; ಹಬ್ಬು (೧.೭-೧೮೮)

ಪಸಲೆ, ಹಸಲೆ (ನಾ). ಹುಲ್ಲುಬೆಳೆದ ನೆಲ; ಹುಲ್ಲುಗಾವಲು (೨.೯-೫೭)

ಪಸುಗೆ (ನಾ). ವಿಭಾಗ; ಹಂಚಿಕೆ; ಪಾಲು (೧.೪-೩೩೯)

ಪಸುಗೆ ನೀಡು = ಹಂಚು; ವಿತರಣೆಮಾಡು (೧.೧ -೩೫೮, ೫೯)

ಪಳಂಚು (ಕ್ರಿ). ಆಕ್ರಮಿಸು; ಮುತ್ತು; ಮೇಲೆಬೀಳು (೩.೧೦-೬೦)

ಪಳಯಿಗೆ, ಪಳವಿಗೆ, ಪಳಯಿಗೆ, ಹಳವಿಗೆ (ನಾ). ಧ್ವಜ; ಪತಾಕೆ; ಬಾವುಟ (೧.೯–೨೫೮)

ಪಳಯಿಸು (ಕ್ರಿ). ಪ್ರಲಾಪಿಸು; ಗೋಳಾಡು (೧.೪–೪೪೭)

ಪಳಿ (ನಾ). ಅನ್ಯಾಯವಾದ ಆರೋಪ; ನಿಂದೆ (೪.೧೧–೪೧೪)

ಪಳಿ, ಹಳಿ (ಕ್ರಿ). ದೂಷಿಸು; ನಿಂದಿಸು (೧.೩–೧೬೭)

ಪಳಿಲಜ್ಜೆ (ನಾ). ಅಪವಾದದಿಂದುಂಟಾದ ನಾಚಿಕೆ; ನಿಂದೆಯಿಂದಾದ ನಾಚಿಕೆ (೪.೧೧–೨೦೩)

ಪಳಿವೀಡು (ನಾ). ನಿಂದೆಯ ನೆಲೆ; ದೂಷಣೆಯ ಬೀಡು (೨.೧೦–೫೨೧)

ಪಳುವ (ನಾ). ಕಾಡು; ಅರಣ್ಯ (೧.೨–೨೬೯)

ಪಳುವಟ್ಟೆ (ನಾ). ಕಾಡುದಾರಿ (೧.೧೦–೨೧೧)

ಪಳ್ಕೆ, ಪಟ್ಕೆ, ಹಕ್ಕೆ (ನಾ). ೧. ಮೃಗಗಳ ವಾಸಸ್ಥಾನ; ಪ್ರಾಣಿಗಳ ಇಕ್ಕೆ (೧.೮–೨೫) ೨. ಹಾಸುಗೆ; ಶಯ್ಯೆ (೨.೨–೮೮೯)

ಪಾಂಡುರ (ಗು). ಬಿಳಿಯ; ಬಿಳುಪಾದ (೧.೧೦–೨೦)

ಪಾಂಥ (ನಾ). ದಾರಿಹೋಕ; ಪ್ರಯಾಣಿಕ (೧.೨–೨೧೨)

ಪಾಟಲ, ಪಾಟಳ (ಗು). ತಿಳಿಗೆಂಪು ಬಣ್ಣದ; ನಸುಗೆಂಪು ಬಣ್ಣದ (೪.೧–೨೧೮) (೪.೧೩–೧೪೦)

ಪಾಡಿವ, ಪಾಡ್ಯ (ನಾ). ಪಕ್ಷದ ಮೊದಲನೆಯ ತಿಥಿ; ಪ್ರತಿಪದೆ (೩.೧೩–೮೩)

ಪಾಡು (ನಾ). ಪಂತ; ಪ್ರತಿಜ್ಞೆ(೧.೨–೩೭೧)

ಪಾಣ್ಬೆ, ಪಾಂಬೆ (ನಾ). ಜಾರೆ; ಹಾದರಗಿತ್ತಿ; ವ್ಯಭಿಚಾರಿಣಿ (೧.೧೧–೩೭೩)

ಪಾಥೇಯ (ನಾ). ಪ್ರಯಾಣಕಾಲದಲ್ಲಿ ದಾರಿಯ ಊಟಕ್ಕಾಗಿ ಸಿದ್ಧಮಾಡಿ ತೆಗೆದುಕೊಂಡು ಹೋಗುವ ಆಹಾರವಸ್ತು; ಬುತ್ತಿ (೧.೯–೫೭೯)

ಪಾಥೋಧಿ (ನಾ). ಸಮುದ್ರ (೪.೧೧–೫೭೯)

ಪಾಯ್, ಹಾಯು (ಕ್ರಿ). ಅಪ್ಪಳಿಸು; ಡಿಕ್ಕಿ ಹೊಡೆ; ತಾಟಿಸು (೧.೪–೧೩೧)

ಪಾರ (ನಾ). ನದಿ; ಸಮುದ್ರ ಮುಂತಾದುವುಗಳ ದಡ,–ತೀರ (೧.೭–೩೪೪)

ಪಾರಾವಾರ (ನಾ). ಸಮುದ್ರ; ಕಡಲು (೧.೮–೮)

ಪಾರಿಸು (ಕ್ರಿ). ಉಪವಾಸ ಮುಗಿಸಿದ ನಂತರ ಆಹಾರವನ್ನು ಸೇವಿಸು; ಪಾರಣೆಮಾಡು (೧.೬–೩೩೦)

ಪಾರು (ಕ್ರಿ). (ಸಮಯವನ್ನು) ಎದುರುನೋಡು; ನಿರೀಕ್ಷಿಸು; ಪ್ರತೀಕ್ಷಿಸು. (೨.೭–೪)

ಪಾರ್ (ಕ್ರಿ). ನೋಡು; ಅವಲೋಕಿಸು (೨.೧–೧೯೧)

ಪಾರ್ಥಿವ (ಗು). ಭೂಮಿಯನ್ನು ಆಳುವ; ಅರಸು ವಂಶದ (೩.೪–೩೮೪)

ಪಾರ್ಥಿವ (ನಾ). ಭೂಮಿಯನ್ನು ಆಳುವವನು; ರಾಜ (೧.೧ – ೫೭೬)

ಪಾರ್ವ, ಪಾರುವ, ಪಾರ್ಬ, ಹಾರವ, ಹಾರುವ, ಹಾರ್ವ (ನಾ). ವೇದ ಮೊದಲಾದ ಧರ್ಮಗ್ರಂಥಗಳನ್ನು ಓದಿ ತಿಳಿದಿರುವವನು; ಬ್ರಹ್ಮಜ್ಞಾನಿ; ಬ್ರಾಹ್ಮಣ (೧.೧೦–೪೦೦)

ಪಾಸು (ನಾ) (ಹಾಸುಗೆ; ಶಯ್ಯೆ (೨.೭–೨೬)

ಪಾಳಿ (ನಾ). ಪದ್ಧತಿ; ಸಂಪ್ರದಾಯ; ಧರ್ಮ (೧.೨ -೧೨)

ಪಾಳ್ (ನಾ). ಶೂನ್ಯವಾದುದು; ನಿರರ್ಥಕವಾದುದು, ಬೀಳುಬಿದ್ದುದು; ನಾಶವಾದುದು (೧.೨-೪೬೮)

ಪಾಳ್, ಪಾಳು, ಹಾಳು (ನಾ). ಹಾಳುಬಿದ್ದ ಜಾಗ; ಬೀಳುಬಿದ್ದ ಸ್ಥಳ; ಶೂನ್ಯಸ್ಥಾನ (೧.೬-೧೮೨)

ಪಿಂಗಲ (ಗು). ಕಂದುಬಣ್ಣದಿಂದ ಕೂಡಿದ; ಕಂದುಬಣ್ಣದ (೧.೨-೫೩೮)

ಪಿಂಡಿಲು (ನಾ). ಪೊದರು, ಮೆಳೆ (೪.೪-೯೯)

ಪಿಂತೆ (ಅ). ಅನಂತರ; ತರುವಾಯ; ಆಮೇಲೆ (೧.೧೧-೨೨೪)

ಪಿಂಬಡು (ನಾ). ಅನಂತರ; ತರುವಾಯ (೧.೭-೨೯)

ಪಿಟಕ (ನಾ). ಬುಟ್ಟಿ; ಪೆಟಾರಿ (೧.೭-೩೭೮), (೨.೩-೨೦೯)

ಪಿಟ್ಟು, ಹಿಟ್ಟು (ನಾ). (ಧಾನ್ಯದ) ನಯವಾದ ಪುಡಿ; ಪಿಷ್ಟ (೧.೧೧-೧೪೬)

ಪಿತ (ನಾ). ತಂದೆ; ಅಪ್ಪ (೧.೫-೧೦೮)

ಪಿನಾಕ (ನಾ). ಶಿವನ ಒಂದು ಆಯುಧ; ತ್ರಿಶೂಲ (೧.೨-೫೪೦)

ಪಿನಾಕಿ, ಪಿನಾಕಾಯುಧ (ನಾ). ಪಿನಾಕವೆಂಬ ಆಯುಧವನ್ನು ಉಳ್ಳವನು (೧.೨-೫೪೦)

ಪಿರಿಯಬ್ಬೆ (ನಾ). ದೊಡ್ಡತಾಯಿ; ದೊಡ್ಡಮ್ಮ (೧.೬-೩೩)

ಪಿಶಿತಾಶ (ನಾ). ರಾಕ್ಷಸ; ನಿಶಾಚರ (೧.೨ - ೨೧)

ಪಿಶಿತಾಶನ (ನಾ). ರಾಕ್ಷಸ (೧.೧೦-೧೫೧)

ಪಿಳಿ (ಕ್ರಿ). ಹಿಸುಕಿ ರಸವನ್ನು ತೆಗೆ; ಹಿಂಡು (೧.೧ -೧೩೪)

ಪೀತ (ನಾ). ಅರಿಸಿನದ ಬಣ್ಣ; ಹಳದಿ (೨.೫ -೧೯)

ಪೀನ (ಗು). ೧. ದಪ್ಪವಾದ; ಪುಷ್ಟವಾದ; ಸ್ಥೂಲವಾದ (೧.೨-೧೭೧)

ಪೀಯೂಷ (ನಾ). ೧. ಹಾಲು; ಕ್ಷೀರ (೧.೭-೧೯೬) ೨. ಅಮೃತ; ಸುಧೆ (೧.೧-೪೮೦)

ಪೀಲಿ, ಹೀಲಿ (ನಾ). ನವಿಲಿನ ಸೋಗೆ,-ತೋಕೆ (೧.೭-೧೮೮)

ಪುಂಗವ (ನಾ). ಗೂಳಿ; ಹೋರಿ; ವೃಷಭ (೩.೧-೩೩೬)

ಪುಂಜ (ನಾ). ಗುಂಪು; ರಾಶಿ; ಸಮೂಹ (೧.೮-೨೧೯)

ಪುಂಡಿ (ನಾ). ಸಾಮಾನ್ಯವಾಗಿ ಹೊಲಗಳಲ್ಲಿ ಬೆಳೆದು ಕೊಳ್ಳುವ ಸೆಣಬಿನಂತಹ ಒಂದು ಸಸ್ಯ (೨.೩-೧೦೫)

ಪುಗಿಸು (ಕ್ರಿ). ಹೊಗುವಂತೆ ಮಾಡು; ಪ್ರವೇಶಗೊಳಿಸು; ಒಳಹುಗಿಸು (೧.೨-೩೩೩)

ಪುಣ್ಯ (ಗು). ಪವಿತ್ರವಾದ; ಪಾವನವಾದ; ಶುದ್ಧವಾದ (೧.೨-೩೩೮)

ಪುದುಗಿಸು (ಕ್ರಿ). ಮುಚ್ಚು; ಅಡಗಿಸು; ಮರೆಮಾಡು (೧.೪-೩೯೪)

ಪುನರ್ಭವ (ನಾ). ಮರುಹುಟ್ಟು; ಪುನರ್ಜನ್ಮ (೪.೭-೨೪೧)

ಪುರಂದರ (ನಾ). ಶತ್ರುಗಳ ನಗರಗಳನ್ನು ನಾಶಮಾಡಿದವನು; ಇಂದ್ರ (೧.೨-೬೪೦)

ಪುರುಡಿಸು, ಹುರುಡಿಸು (ಕ್ರಿ). ಸ್ಪರ್ಧಿಸು; ಪೈಪೋಟಿ ನಡೆಸು (೧.೧೧-೩೪೩)

ಪುರುಷಾಕಾರ (ನಾ). ಮನುಷ್ಯ ಪ್ರಯತ್ನ; ಪುರುಷ ಸಾಹಸ (೧.೪-೧೪೪)(೪.೨-೩೪೨)

ಪುರುಹೂತಜಾತ (ನಾ). ೧. ಇಂದ್ರನ ಮಗ ೨. ವಾಲಿ (೨.೬.೩೦೦)

ಪುರುಳು (ನಾ). ಕೆಚ್ಚು; ಶಕ್ತಿ; ಚೈತನ್ಯ (೩.೧೦-೧೪೯)

ಪುರ್ಚು, ಪುಚ್ಚು, ಹುಚ್ಚು (ನಾ). ಮರುಳು; ಬುದ್ಧಿಭ್ರಂಶ, ಮತಿಭ್ರಮಣೆ (೧.೪-೪೧೫)

ಪುರ್ಬು, ಹುಬ್ಬು (ನಾ). ಎರಡೂ ಕಣ್ಣುಗಳ ಮೇಲ್ಭಾಗದಲ್ಲಿ ಹಣೆಗೆ ಹೊಂದಿದಂತೆ ಇರುವ ಕಿರುಗೂದಲಿನ ಸಾಲು; ಭ್ರೂ (೧.೨-೧೪೮)

ಪುರ್ಬುಗಂಟಿಕ್ಕು = ಕೋಪದಿಂದ ಮುಖವನ್ನು ಸಿಂಡರಿಸು (೧.೨-೧೪೮)

ಪುಲಕ (ನಾ). ಮೈ ನವಿರೇಳುವಿಕೆ; ರೋಮಾಂಚನ (೧.೧ -೪೫೬)

ಪುಷ್ಟ (ಗು). ಶ್ರೇಷ್ಠವಾದ; ಉತ್ತಮವಾದ (೧.೭-೪೬)

ಪುಷ್ಪರಾಗ (ನಾ). ನವರತ್ನಗಳಲ್ಲಿ ಒಂದು; ನಸು ಹಳದಿ ಬಣ್ಣದ ಒಂದು ಬಗೆಯ ಹರಳು; ಪುಷ್ಯರಾಗ (೨.೫-೨೭)

ಪೂಣ್ (ನಾ). ೧. ಮಾತು; ವಚನ; ನುಡಿ (೧.೨-೪೦೦) ೨. ಪ್ರತಿಜ್ಞೆ; ಶಪಥ (೨.೫-೨೧೬)

ಪೂಣ್ಕೆ (ನಾ). ಆಣೆ; ಶಪಥ; ಪ್ರತಿಜ್ಞೆ (೧.೪-೨೬೬) (೧.೯-೫೩೩)

ಪೂಣ್ದು (= ಒಪ್ಪಿಕೊಳ್ಳು; ಸಮ್ಮತಿಸು; ಒಡಂಬಡು (೧.೨-೩೫೧)

ಪೂದಿಂಗಳ್, ಹೂದಿಂಗಳ್ (ನಾ). ಹೂವು ಬಿಡುವ ಕಾಲ; ವಸಂತಮಾಸ(೧.೭-೪೦೮)

ಪೂರೈಸು (ಕ್ರಿ). ತೃಪ್ತಿಗೊಳಿಸು; ತಣಿಸು (೧.೧೧-೩೭)

ಪೂರ್ವಪಕ್ಷ (ನಾ). ವಾದವನ್ನು ಮಂಡಿಸುವ ಮೊದಲ ಭಾಗ (೩.೭-೪೫೪)

ಪೂವಡಿ (ನಾ). ಹೂವಿನಂತೆ ಕೋಮಲವಾದ ಪಾದಗಳುಳ್ಳ ವ್ಯಕ್ತಿ (೪.೧೩-೨೩೫)

ಪೂವಲಿ (ನಾ). ಹೂವುಗಳ ಮಳೆ; ಪುಷ್ಪವೃಷ್ಟಿ (೧.೮-೨೨೬) (೧.೧೧-೨೬)

ಪೃತನೆ (ನಾ). ೧. ಸೈನ್ಯ; ಪಡೆ ೨. ೨೪೩ ಆನೆಗಳು, ೨೪೩ ರಥಗಳು, ೭೨೯ ಕುದುರೆಗಳು ಮತ್ತು ೧೨೧೫ ಕಾಲಾಳುಗಳಿಂದ ಕೂಡಿದಒಂದು ಸೇನಾ ವಿಭಾಗ (೪.೬-೯೬)

ಪೃಥುಲ (ಗು). ದೊಡ್ಡದಾದ; ಗಾತ್ರವಾದ (೨.೧-೧೯೮) (೩.೬-೨೩೭)

ಪೃಥುಲ, ಪೃಥುಳ (ಗು). ದೊಡ್ಡದಾದ; ಗಾತ್ರವಾದ (೨.೧-೧೯೮)

ಪೆಂಪು (ನಾ). ೧. ಶೋಭೆ; ಸೊಗಸು; ಚೆಲುವು (೧.೧೧-೮೪) ೨. ಕೀರ್ತಿ; ಯಶಸ್ಸು; ಖ್ಯಾತಿ (೨.೧-೩೪೭)

ಪೆಗಲ್, ಪೆಗಲು, ಹೆಗಲ್, ಹೆಗಲು (ನಾ). ಸ್ಕಂಧ; ಭುಜ (ಪೆಗಲೆಣೆ, ಹೆಗಲೆಣೆ = ಸರಿಸಮಾನ; ಸಾಟಿ) (೧.೧೧-೩೬೧)

ಪೆಡಂ ಮಗುಳಿಸು (ಕ್ರಿ). ಹಿಂದಕ್ಕೆ ಬರುವಂತೆ ಮಾಡು; ಹಿಂದಿರುಗಿಸು (೧.೫-೨೭೧)

ಪೆಡಂಭೂತ (ನಾ) (ಪ್ರಾಚೀನಕಾಲದಲ್ಲಿ ಇತ್ತೆಂದು ನಂಬಲಾದ ಬೃಹದಾಕಾರದ

ಒಂದು ಪ್ರಾಣಿ. (೨.೯-೩೫೮)

ಪೆಡಂಮೆಟ್ಟು, ಪೆಡಮೆಟ್ಟು (ಕ್ರಿ). ಹಿಂದಕ್ಕೆ ಸರಿ; ಹಿಮ್ಮೆಟ್ಟು (೧.೧೧-೧೬೮)

ಪೆಡಗೆ (ನಾ). (ದೊಡ್ಡ) ಕುಕ್ಕೆ; ಗೂಡೆ (೪.೧-೨೮೯)

ಪೆಣದಿನಿ, ಹೆಣದಿನಿ (ನಾ). ಹೆಣವನ್ನು ತಿನ್ನುವ ಭೂತ, ಪಿಶಾಚಿ ಮುಂತಾದುವು. (೨.೪-೫೯)

ಪೆರತು (ಸ). ಅನ್ಯ; ಬೇರೆ (೧.೩-೮೭) (೧.೭-೨೫೯)

ಪೆರ್ಕಳೆ (ನಾ). ಗಾಢವಾದ ಸ್ನೇಹ; ಉತ್ಕಟವಾದ ಮೈತ್ರಿ (೩.೪-೫೯೭)

ಪೆರ್ಗಡೆ, ಹೆಗಡೆ, ಹೆಗ್ಗಡೆ (ನಾ). ಗ್ರಾಮದ ಮುಖ್ಯಾಧಿಕಾರಿ, ಒಡೆಯ (೨.೨-೮೦೪)

ಪೆರ್ಚು (ಕ್ರಿ). ಸಂತೋಷಿಸು; ಹಿಗ್ಗು (೧.೪-೩೩೮)

ಪೆರ್ಚು, ಹೆಚ್ಚು (ನಾ). ೧. ಆಧಿಕ್ಯ; ಹೆಚ್ಚಳ. ವೃದ್ಧಿ (೧.೧-೩೮೩)

ಪೆರ್ಚುಕಡಮೆ = ವ್ಯತ್ಯಾಸ; ಭೇದ (೪.೪-೪೩೬)

ಪೆರ್ಮೆ, ಹಿರಿಮೆ (ನಾ). ಅಗ್ಗಳಿಕೆ; ಶ್ರೇಷ್ಠತೆ (೧.೮-೧೯೪)

ಪೆರ್ವಟ್ಟೆ (ನಾ). ಹೆದ್ದಾರಿ; ದೊಡ್ಡರಸ್ತೆ; ರಾಜಮಾರ್ಗ (೩.೬-೧೨)

ಪೆರ್ವಾತು, ಪೆರ್ಮಾತು, ಹೆಮ್ಮಾತು (ನಾ). ಅಹಂಕಾರದ ಮಾತು (೧.೪-೩೧೨)

ಪೆಳರ್, ಪೆಳರು (ಕ್ರಿ). ಹೆದರು; ಭಯಪಡು; ಅಂಜು (೧.೩-೬೩)

ಪೆಳ್ಪಳಿಸು (ಕ್ರಿ). ಹೆದರು; ಬೆದರು; ಭಯಪಡು; ಗಾಬರಿಗೊಳ್ಳು (೧.೬-೧೭೧) (೨.೨-೪೨೭)

ಪೇತ (ನಾ). ಭೂತ; ಪಿಶಾಚಿ; ಪ್ರೇತ (೪.೧೧-೩೯೩)

ಪೇರಾನೆ, ಹೇರಾನೆ (ನಾ). ದೊಡ್ಡ ಆನೆ (೧.೯-೧೨೦)

ಪೇಸು (ಕ್ರಿ). ಹಿಂಜರಿ; ಹಿಂದೆಗೆ; ಅಳುಕು (೧.೬-೬೮)

ಪೇಸು, ಪೇಚು, ಹೇಸು (ಕ್ರಿ). ಅಸಹ್ಯಪಡು; ಜುಗುಪ್ಸೆಹೊಂದು (೧.೪-೨೭೦) (೧.೫-೨೨೬)

ಪೈಜೆ (ನಾ). ಶರತ್ತು; ಕರಾರು; ಪಣ (೧.೩-೩೮೯)

ಪೈತಾಮಹಾಸ್ತ್ರ (ನಾ). ಬ್ರಹ್ಮನ ಸಂಬಂಧವಾದ ಮಹಾಸ್ತ್ರ; ಬ್ರಹ್ಮಾಸ್ತ್ರ (೪.೯-೨೩೩)

ಪೊಂಕ (ನಾ). ಗರ್ವ; ಅಹಂಕಾರ (೪.೬-೭೪)

ಪೊಂಗು (ನಾ). ಉತ್ಸಾಹ; ಹುರುಪು (೨.೨-೪೭)

ಪೊಂಗೆಲಸ, ಹೊಂಗೆಲಸ (ನಾ). ಚಿನ್ನದ ರೇಕಿನ ಕೆಲಸ (೧.೩-೧೬೪)

ಪೊಂಜುರಿಗೆ (ನಾ). ಚಿನ್ನದ ಕಿರುಗತ್ತಿ; ಬಂಗಾರದ ಕಠಾರಿ (೨.೯-೩೮)

ಪೊಂದಟ್ಟೆ, ಹೊಂದಟ್ಟೆ, ಪೊಂದಳಿಗೆ (ನಾ). ಚಿನ್ನದ ತಟ್ಟೆ; ಬಂಗಾರದ ಹರಿವಾಣ (೧.೧೦-೨)

ಪೊಗರ್, ಪೊಗರು, ಹೊಗರ್, ಹೊದರು (ನಾ). ಕಾಂತಿ; ಹೊಳಪು; ಮೆರುಗು; ಪ್ರಕಾಶ (೧.೨-೫೨೮)

ಪೊಗು, ಪುಗು, ಹುಗು, ಹೊಗು (ಕ್ರಿ). ಒಳಸೇರು; ಪ್ರವೇಶಿಸು (೧.೭-೧೪೬)

ಪೊಡೆ, ಹೊಡೆ (ನಾ). ಹೊಟ್ಟೆ, ಉದರ, ಒಡಲು (೧.೪-೪೧೮)

ಪೊಣರ್, ಪೊಣರು, ಹೊಣರು (ಕ್ರಿ). ವೃದ್ಧಿಗೊಳ್ಳು, ಅತಿಶಯವಾಗು,

ಹೆಚ್ಚಾಗು (೨.೧-೨೮೩)

ಪೊದಕುಳಿ, ಹೊದಕುಳ, ಹೊದಕುಳಿ (ನಾ). ಅಳಲು; ದುಃಖ; ನೋವು (೩.೧೪-೧೮)

ಪೊದಟ್, ಪೊದಳ್, ಪೊದಳು, ಹೊದಳು (ಕ್ರಿ). ಉಂಟಾಗು; ಒದಗು; ಪ್ರಾಪ್ತವಾಗು (೧.೮-೨೩೮)

ಪೊದೆ, ಹೊದೆ (ನಾ). ಗಿಡಮರಗಳು ಒತ್ತಾಗಿರುವ ಸ್ಥಳ; ಹೊದರು; ಮೆಳೆ (೧.೯-೨೯೪)

ಪೊನಲು, ಹೊನಲು (ನಾ). ೧. ನದಿಯ ಪ್ರವಾಹ; ನೀರೋಟ (೧.೨-೬೦೨)

ಪೊಯ್ (ನಾ). ಹೊಡೆತ; ಏಟು; ಪ್ರಹಾರ; ಬಡಿತ (೧.೬-೧೭೬)

ಪೊರತು, ಹೊರತು (ನಾ). ಹೊರಗೆ ಉಳಿದುದು; ಬೇರೆಯಾದುದು; ಪ್ರತ್ಯೇಕವಾದುದು (೪.೧೩-೨೨೬)

ಪೊರಮಡು (ಕ್ರಿ). ಹೊರಹೊಮ್ಮು; ಹೊರಸೂಸು (೨.೬-೧೮೬)

ಪೊರೆ (ಕ್ರಿ). ಕಾಪಾಡು; ರಕ್ಷಿಸು (೧.೪-೨೩೫)

ಪೊರ್ಕುಳ್, ಹೊಕ್ಕುಳಿ (ನಾ). ಹೊಟ್ಟೆಯ ಮೇಲಿರುವ ಸಣ್ಣಕುಣಿ; ನಾಭಿ (೪.೧೩-೧೩೬)

ಪೊಱಸು, ಹೊರಸು (ನಾ). ಒಂದು ಬಗೆಯ ಪಾರಿವಾಳ. (ಅಶುಭ ಸೂಚಕವೆಂದು ನಂಬಲಾದ ಪಕ್ಷಿ. ಇದು ಮನೆಯ ಒಳಗೆ ಬಂದರೆ ಅಮಂಗಳವೆಂಬ ನಂಬಿಕೆಯಿದೆ) (೨.೨-೫೫೩)

ಪೊಲಿಸು, ಹೊಲಿಸು (ಕ್ರಿ). (ಹರಿದುದನ್ನು ಜೋಡಿಸಿ) ಹೊಲಿಗೆ ಹಾಕಿಸು (೧.೪-೫೪೩)

ಪೊಲ್ಲ, ಹೊಲ್ಲ (ನಾ). ಕೆಟ್ಟದು; ಹೀನವಾದುದು (೧.೧೧-೩೭೨)

ಪೊಳಲ್, ಪೊಳಲು (ನಾ). (ಹೆಚ್ಚು ಜನರು ವಾಸಮಾಡುವ) ಊರು; ಪಟ್ಟಣ; ನಗರ (೧.೫-೨೦೧)

ಪೊಳ್ತರೆ, ಹೊತ್ತಾರೆ (ನಾ). ಪ್ರಾತಃಕಾಲ; ಪ್ರಭಾತ ಸಮಯ; ಮುಂಜಾವು; ಬೆಳಗಿನಕಾಲ (೧.೧೧-೧೬೪)

ಪೊಳ್ತು, ಹೊತ್ತು (ನಾ). ೧. ನೇಸರು; ಸೂರ್ಯ, ರವಿ (೧.೧-೪೨೯) ೨. ಸಮಯ; ಕಾಲ; ವೇಳೆ (೧.೫-೨೬೩)

ಪೋರ್, ಪೋರು, ಹೋರ್, ಹೋರು (ಕ್ರಿ). ಸೆಣಸು, ಕಾದಾಡು, ಹೊಡೆದಾಡು (೨.೧-೩೪೨) (೨.೬-೧೫೪)

ಪ್ರಕೋಪ (ನಾ). ಕೋಪಾಟೋಪ; ರೋಶಾವೇಶ (೧.೯-೩೫೫)

ಪ್ರತತಿ (ನಾ). ಗುಂಪು; ಸಮೂಹ (೨.೬-೧೦೩)

ಪ್ರತಿಕೃತಿಸು (ಕ್ರಿ). ಪ್ರತಿಬಿಂಬಿಸು; ಪ್ರತಿಫಲಿಸು (೧.೧೧-೨೨೦)

ಪ್ರತಿಮ (ನಾ). ಸಮಾನನಾದವನು; ಸಾಟಿಯಾದವನು (೨.೨-೩೦)

ಪ್ರತಿಮಿಸು (ಕ್ರಿ). (ಕಣ್ಣಿಗೆ ಕಟ್ಟುವಂತೆ) ಚಿತ್ರೀಕರಿಸು; ರೂಪಿಸು (೩.೧೩-೧೧೪; ೪.೭-೧೮)

ಪ್ರತೀಕಾಶ (ನಾ). ಪ್ರತಿಬಿಂಬ (೪.೬-೨೦)

ಪ್ರತೀಕ್ಷಿಸು (ಕ್ರಿ). ಎದುರು ನೋಡು; ಕಾಯು; ನಿರೀಕ್ಷಿಸು (೧.೧೦-೨೨೧)

ಪ್ರತೀಪ (ಗು). ಪ್ರತಿಕೂಲವಾದ; ವಿರುದ್ಧವಾದ (೩.೭-೪೧೪)

ಪ್ರತ್ಯಂತ (ನಾ). ಗಡಿ; ಎಲ್ಲೆ; ಸರಹದ್ದು (೧.೯-೭೭)

ಪ್ರತ್ಯಭಿಜ್ಞಾನ (ನಾ). ಗುರುತು ಹಿಡಿಯುವುದು; ಗುರುತಿಸುವುದು (೩.೪-೬೦೮)

ಪ್ರತ್ಯಯ (ನಾ). ನಂಬಿಕೆ; ವಿಶ್ವಾಸ; ಶ್ರದ್ಧೆ (೩.೪-೩೨೦)

ಪ್ರತ್ಯುಷ, ಪ್ರತ್ಯುಷೆ (ನಾ). ಬೆಳಗಿನ ಜಾವ; ಪ್ರಾತಃಕಾಲ; ಮುಂಜಾವ (೧.೭-೩೩೫)

ಪ್ರಫುಲ್ಲಿಸು (ಕ್ರಿ). ಅರಳಿಸು; ವಿಕಾಸವಾಗುವಂತೆ ಮಾಡು (೩.೬-೭೮)

ಪ್ರಭಂಜನ (ನಾ). ಗಾಳಿಯ ಅಧಿ ದೇವತೆ; ವಾಯುದೇವ (೩.೪-೭೦೩)

ಪ್ರಮದೆ (ನಾ). ಸುಂದರಿ (೧.೧೦-೧೪೦)

ಪ್ರಮಾದ (ನಾ). ಗಮನವಿಲ್ಲದಿರುವಿಕೆ; ಅಜಾಗರೂಕತೆ; ಎಚ್ಚರಗೇಡಿತನ (೧.೧೧-೩೯೫)

ಪ್ರಮೆ (ನಾ). (ತರ್ಕಶಾ) ಸರಿಯಾದ ತಿಳಿವಳಿಕೆ, ನಿಶ್ಚಿತ ಜ್ಞಾನ; ಪ್ರಮಿತಿ (೪.೧೩-೧೦೬)

ಪ್ರಮೇಯ (ಗು). ಸೂಕ್ಷ್ಮವಾಗಿ ಪರೀಕ್ಷಿಸಬೇಕಾದ, ವಿವೇಚಿಸಬೇಕಾದ (೩.೧-೭೧೪)

ಪ್ರಸೂನ (ನಾ). ಕುಸುಮ; ಪುಷ್ಪ; ಹೂವು (೪.೧೧-೨೦೬)

ಪ್ರಸ್ತರ (ನಾ). ಕಲ್ಲು; ಶಿಲೆ (೩.೫-೨೮೬)

ಪ್ರಸ್ಥಾನ (ನಾ). ಶತ್ರುಗಳನ್ನು ನಿಗ್ರಹಿಸಲು ಮಾಡುವ ಪ್ರಯಾಣ; ದಂಡಯಾತ್ರೆ (೩.೬-೪)

ಪ್ರಸ್ವಿನ್ನ (ಗು). ಚೆನ್ನಾಗಿ ಬೆವತಿರುವ (೧.೯-೩೨೮)

ಪ್ರಹೃಷ್ಟ (ಗು). ಸಂತುಷ್ಟವಾದ; ಆನಂದಿತ (೩.೫-೨೨೧)

ಪ್ರಾಕಾರ (ನಾ). ಸುತ್ತಲೂಕಟ್ಟಿರುವಗೋಡೆ; ಸುತ್ತುಗೋಡೆ; ಪಾಳಿ (೪.೧೧-೩೫೨)

ಪ್ರಾಕೃತ (ಗು). ನೈಸರ್ಗಿಕವಾದ; ಸಹಜವಾದ (೧.೩-೮೪)

ಪ್ರಾಚೀನ (ಗು). ಹಳೆಯ; ಹಿಂದಿನ; ಪುರಾತನಕಾಲದ (೨.೯-೩೩೧)

ಪ್ರಾಚ್ಯ (ಗು). ಮೂಡಲದಿಕ್ಕಿನ; ಪೂರ್ವದಲ್ಲಿರುವ (೨.೯-೩೦೪)

ಪ್ರಾಸ (ನಾ). ಒಂದು ಬಗೆಯ ಆಯುಧ; ಕೊಂತ (೪.೬-೪೨)

ಪ್ರೇತಕಾರ್ಯ, ಪ್ರೇತಕರ್ಮ(ನಾ). ಸತ್ತವನ ದೇಹಕ್ಕೆ ಮಾಡುವ ಸಂಸ್ಕಾರ; ಅಂತ್ಯಕ್ರಿಯೆ; ಶವಸಂಸ್ಕಾರ (೧.೬-೧೫೩)

ಪ್ರೇತವನ, ಪ್ರೇತಭೂಮಿ (ನಾ). ಸುಡುಗಾಡು; ಶ್ಮಶಾನ (೧.೯-೬೩೪)

ಪ್ರೋಜ್ವಲಿಸು(ಕ್ರಿ). ಬಹಳವಾಗಿ ಉರಿ; ಪ್ರಜ್ವಲಿಸು (೧.೩-೪೮೬)

ಪ್ರೋದ್ದಾಮ (ಗು). ಶ್ರೇಷ್ಠವಾದ; ಹಿರಿದಾದ; ಅತಿಶಯವಾದ (೪.೫-೧೬)

ಪ್ಲವ (ಗು). ನೀರಿನ ಮೇಲೆ ತೇಲುವ ಸಾಧನ; ತೆಪ್ಪ; ದೋಣಿ ಮೊದಲಾದುವು (೧.೭-೩೮೦)

ಪ್ಲವಂಗ (ನಾ). ಕೋತಿ; ಮಂಗ (೨.೯-೫೨೦)

ಫಲ, ಫಳ (ನಾ). ಹಣ್ಣು (೧.೧೧-೨೫೧)

ಫಾಲ (ನಾ). ಹಣೆ; ನೊಸಲು (೪.೧೩-೧೦೦)

ಫುಲ್ಲ(ಗು). ಅರಳಿದ; ವಿಕಸಿತವಾದ (೧.೬-೪೯)

ಫೇನ (ನಾ). ನೊರೆ; ಬುರುಗು (೧.೨-೫೭೪)

ಬಂಡು (ನಾ). ಜೇನು; ಮಕರಂದ; ಮಧು (೧.೩-೩೦)

ಬಂಡುಣಿ (ನಾ). ಹೂವಿನ ರಸವನ್ನು ಆಹಾರವಾಗಿ ಉಳ್ಳುದು; ದುಂಬಿ (೧.೩-೧೯೭)

ಬಂದಳಿಕೆ (ನಾ). ಬೇರೊಂದು ಸಸ್ಯವನ್ನು ಅವಲಂಬಿಸಿ ಜೀವಿಸುವ ಸಸ್ಯ; ಪಾರಾವಲಂಬಿ ಸಸ್ಯ (೧.೧-೨೨೦)

ಬಂಧುರ (ಗು). ಚೆಲುವಾದ; ಸುಂದರವಾದ (೪.೧೨-೩೪೪)

ಬಗೆ (ನಾ). ಮನಸ್ಸು; ಚಿತ್ತ (೧.೧ - ೪೪೦)

ಬಗೆ (ಕ್ರಿ). ಬಯಸು; ಅಪೇಕ್ಷೆ; ಇಚ್ಛಿಸು (೧.೩-೩೮೯)

ಬಗೆಗುದಿ (ನಾ). ಮನಸ್ಸಿನ ಚಿಂತೆ; ಮನೋವ್ಯಥೆ (೧.೫-೧೩೧)

ಬಗೆಗೊಳು (ಕ್ರಿ). ಮನಸ್ಸನ್ನು ಸೆಳೆ; ಆಕರ್ಷಿಸು (೧.೮-೧೭)

ಬಗೆವೊಗು, ಬಗೆವುಗು (ಕ್ರಿ). ಮನಸ್ಸನ್ನು ಪ್ರವೇಶಿಸು (೧.೭-೬೯)

ಬಗ್ಗ, ವಗ್ಗ (ನಾ). ಹುಲಿ; ವ್ಯಾಘ್ರ (೨.೨-೫೨೧)

ಬಗ್ಗಿಸು (ಕ್ರಿ). (ಕೋಗಿಲೆ ಮೊದಲಾದ ಪಕ್ಷಿಗಳು) ಕೂಗು; ಉಲಿ (೩.೪-೬೭)

ಬಚ್ಚಿಸು, ಬರ್ಚಿಸು (ಕ್ರಿ). ಬಣ್ಣಹಾಕು; ಚಿತ್ರಿಸು; ವರ್ಣವಿನ್ಯಾಸ ಮಾಡು (೩.೩-೪೫) (೩.೪-೩೪)

ಬಜ್ಜರ (ನಾ). ನವರತ್ನಗಳಲ್ಲಿ ಒಂದು; ವಜ್ರ; ಹೀರ (೨.೮-೧೮೬) (೩.೭-೪೯೧)

ಬಟ್ಟೆ (ನಾ). ಹಾದಿ; ಮಾರ್ಗ; ದಾರಿ (೪.೮-೨೦೫)

ಬಡಗ (ನಾ). ಉತ್ತರದಿಕ್ಕಿನವನು (೨.೧-೨೨೪)

ಬಡಗು, ಬಡಕ್ಕು, ಬಡಗ, ವಡಗು (ನಾ). ಉತ್ತರದಿಕ್ಕು; ಬಡಗಣ ದೆಸೆ (೧.೧೦-೩೭೧)

ಬಡಬ, ಬಡಬಾಗ್ನಿ (ನಾ). ಸಮುದ್ರದ ಒಳಗಿರುವ ಬೆಂಕಿ; ವಡಬಾಗ್ನಿ; ಕಡಲ್ಗಿಚ್ಚು (೪.೩-೧೩೯)

ಬಡವು (ನಾ). ಅಶಕ್ತನಾದವನು; ಅಸಮರ್ಥನಾದವನು; ದುರ್ಬಲ (೨.೧-೨೨೪)

ಬಡಿಗೊಳ್, ಬಡಿಕೊಳ್ (ಕ್ರಿ). ದೊಣ್ಣೆಯನ್ನು ಹಿಡಿ; ಕೋಲನ್ನು ತೆಗೆದುಕೊ (೧.೩-೪೪೦)

ಬಣಗು (ಗು). ಕೆಲಸಕ್ಕೆ ಬಾರದ; ಅಪ್ರಯೋಜಕವಾದ (೧.೨-೪೭೧) (೧.೯-೨೯೧)

ಬಣಬೆ (ನಾ). (ಹುಲ್ಲು, ಮೇವು ಮುಂತಾದುವುಗಳ) ಮೆದೆ, ರಾಶಿ, ಒಟ್ಟಿಲು (೨.೮-೧೯೬)

ಬದರ (ನಾ). ಒಂದು ಬಗೆಯ ಮರ ಮತ್ತು ಅದರ ಹಣ್ಣು; ಬೋರೆ; ಎಲಚಿ (೧.೯-೪೨೭)

ಬದ್ದವಣ, ಬದ್ದಣ (ನಾ). ಶುಭ ಸಮಾರಂಭದಲ್ಲಿ ಬಾರಿಸುವ ವಾದ್ಯ; ಮಂಗಳವಾದ್ಯ (೧.೨-೬೮೬)

ಬನ್ನ (ನಾ). ೧. ಅವಮಾನ; ಅಪಮಾನ; ಭಂಗ (೧.೯-೫೩೨) ೨. ಕಷ್ಟ; ಬಾಧೆ; ಸಂಕಟ; ತೊಂದರೆ (೩.೬-೨೬೧)

ಬನ್ನಿ (ನಾ). ಸಣ್ಣ ಸಣ್ಣ ಎಲೆಗಳು ಹಾಗೂ ಮುಳ್ಳುಗಳಿಂದ ಕೂಡಿದ ಒಂದು ಬಗೆಯ ಮರ; ಶಮೀವೃಕ್ಷ (೧.೧೧-೫೯)

ಬಭ್ರು (ಗು). ಕಂದು ಬಣ್ಣದಿಂದ ಕೂಡಿದ (೩.೧೩-೨೨೪)

ಬಯ್ಗುಂಬೊಳ್ತು, ಬೈಗುವೊಳ್ತು (ನಾ). ಸೂರ್ಯನು ಮುಳುಗುವ ಹೊತ್ತು; ಸಂಜೆಯ ಸಮಯ; ಸಾಯಂಕಾಲ (೧.೧೦-೧೮೮) (೩.೧-೬೦೩)

ಬರಲುವೋಗು (ಕ್ರಿ). ಎಲೆಗಳು ಉದುರಿ ಬೋಳಾಗಿರು (೨.೨-೮೯)

ಬರಿ (ನಾ). ಪಕ್ಕೆ; ಅಳ್ಳೆ (೨.೨-೧೧೦) (೪.೨-೨೧೧)

ಬರಿದು (ನಾ). ವ್ಯರ್ಥವಾದುದು; ನಿರರ್ಥಕವಾದುದು; ಪೊಳ್ಳು (೨.೫-೨೨೧)

ಬರಿದೆ (ಅ). ವ್ಯರ್ಥವಾಗಿ; ಸುಮ್ಮನೆ (೧.೩-೫೨೧)

ಬರಿಸ, ವರಿಶ, ವರುಷ (ನಾ). ಸಂವತ್ಸರ; ವರ್ಷ(೧.೩-೪೨೩)

ಬರೆಪ, ಬರಪ, ಬರಹ, ಬರೆಹ (ನಾ). ಬರೆದುದು; ಬರವಣಿಗೆ, ಲೇಖನ (೧.೮-೨೪೨)

ಬರ್ದಿಲ (ನಾ). ೧. ದೇವತೆಗಳ ಲೋಕ; ಸುರಲೋಕ; ಸ್ವರ್ಗ (೧.೨-೬೩೬) ೨. ಸಾವಿಲ್ಲದವನು; ಅಮರ; ದೇವತೆ (೨.೧೦-೩೯)ಬರ್ದಿಲರ ಬಡಗಿ = ದೇವತೆಗಳ ಬಡಗಿ; ವಿಶ್ವಕರ್ಮ(೩.೯-೯೪)

ಬರ್ದಿಲವಟ್ಟೆ (ನಾ). ಸ್ವರ್ಗದ ದಾರಿ, ದೇವ ಲೋಕದ ಮಾರ್ಗ; ಆಕಾಶ (೨.೧೧-೨೧೪)

ಬರ್ಬರ (ನಾ). ಸುಸಂಸ್ಕೃತನಲ್ಲದವನು; ಅನಾಗರಿಕ (೩.೭-೧೫)

ಬರ್ಹಿ (ನಾ). ನವಿಲು; ಮಯೂರ (೧.೪-೫೧೪)

ಬಲಗಿ, ಬಲಿಗೆ (ನಾ). ಒಂದು ಬಗೆಯ ಮರ (೩.೧-೨೫೫)

ಬಲ್ಮೆ, ಬಲುಮೆ (ನಾ). ಬಲ; ಶಕ್ತಿ; ಸಾಮರ್ಥ್ಯ; ಪರಾಕ್ರಮ (೧.೬-೨೯೫)

ಬಲ್ಲಹ (ನಾ). ಒಡೆಯ; ಯಜಮಾನ (೧.೩-೫೪೦)

ಬಲ್ಲಿತು (ನಾ). ಗಟ್ಟಿಮುಟ್ಟಾದುದು; ಬಲಿಷ್ಠವಾದುದು; ಪ್ರಬಲವಾದುದು (೧.೪-೧೩೨)

ಬಹಿತ್ರ, ಬಾಹಿತ್ರ, ಬೈತ್ರ, ಭೈತ್ರ (ನಾ). ತೆಪ್ಪ; ಹರಿಗೋಲು (೨.೧-೧೬೧)

ಬಹುಲ, ಬಹಳ (ಗು). ಹೆಚ್ಚಾದ; ಅಧಿಕವಾದ (೨.೨-೮೧೨)

ಬಳಲ್, ಬಳಲು (ಕ್ರಿ). ಬಾಡು; ಒಣಗು (೧.೯-೩೧೬)

ಬಳಿ (ನಾ). ವಂಶ; ಪೀಳಿಗೆ; ಕುಲ; ಮನೆತನ (೪.೫-೧೯೦)

ಬಳ್ಳಿಕ್ಕು (ಕ್ರಿ). ನಾಯಿ, ನರಿ, ಮೊದಲಾದುವು ಅರಚು, -ಬಗುಳು, -ಊಳಿಡು (೩.೧-೬೭೮)

ಬಾಂಬಟ್ಟೆ, ಬಾನ್ಬಟ್ಟೆ (ನಾ). ಆಕಾಶದ ದಾರಿ; ಅಂತರಿಕ್ಷಮಾರ್ಗ (೧.೪-೧೨) (೨.೧೦-೩೮)

ಬಾಂಬೊಚ್ಚ (ನಾ). ಆಕಾಶದ ನದಿ; ದೇವಗಂಗೆ (೨.೨-೫೬)

ಬಾಡು (ನಾ). ಅಡಗು; ಮಾಂಸ (೨.೨-೮೧೮)

ಬಾನ್, ಬಾನು (ನಾ). ಆಕಾಶ; ಗಗನ (೧.೨-೬೦೭)

ಬಾನ್ಬರೆಪ (ನಾ) ವಿಧಿಲಿಖಿತ; ದೈವಸಂಕಲ್ಪ (೧.೩-೭೬)

ಬಾಯಳಿ (ಕ್ರಿ). ಗೋಳಾಡು; ದುಃಖಿಸು

(೨.೯–೮೯)

ಬಾಯ್ಕೇಳಿಸು (ಕ್ರಿ). ಗೆದ್ದುಕೊಳ್ಳು; ವಶಪಡಿಸಿಕೊಳ್ಳು; ತನ್ನ ಆಜ್ಞೆಗೆ ಒಳಪಡಿಸಿಕೊಳ್ಳು(೨.೧–೩೪೭) (೩.೭–೧೩೭)

ಬಾಯ್ಕೇಳ್ (ಕ್ರಿ). ಮಾತು ಕೇಳು; ಆಜ್ಞಾಧಾರಕನಾಗು; ವಿಧೇಯನಾಗು (೨.೧–೧೧೭)

ಬಾಯ್ವಿಡು (ಕ್ರಿ). (ನೋವಿನಿಂದ) ನರಳು; ಚೀರು; ಕಿರಿಚು (೩.೭–೧೩೨)

ಬಾವಿಗಪ್ಪು (ನಾ). (ಆನೆಯನ್ನು ಹಿಡಿಯಲು ತೋಡುವ) ಆಳವಾದ ಕುಳಿ; ಬಾವಿಯಂತಹ ಹಳ್ಳ; ಖೆಡ್ಡಾ (೧.೩–೩೯೭)

ಬಾಷ್ಪ (ನಾ). ಕಣ್ಣೀರು; ಅಶ್ರು (೧.೪–೩೨೧)

ಬಾಸಣಿಸು (ಕ್ರಿ). ಆವರಿಸು; ಹಬ್ಬು (೧.೧೧–೨೮೪)

ಬಾಸಿಗ, ಬಾಷಿಗ, ಬಾಸಿಂಗ (ನಾ). (ಹೂವಿನ) ಮಾಲೆ,–ದಂಡೆ(೧.೯–೫೫)

ಬಾಳ್ (ನಾ). ಬದುಕು; ಇರವು; ಜೀವಿಸು (೧.೧೦–೨೭)

ಬಾಳ್, ಬಾಳ್ಕೆ (ನಾ). ಬದುಕು; ಜೀವನ (೨.೩–೧೩೧)

ಬಾಳ್ಗನಸು. (ನಾ). (ಆಲಂ) ಜೀವನದಲ್ಲಿ ಒಳ್ಳೆಯದನ್ನು ಬಯಸಿ ಕಲ್ಪಿಸಿಕೊಂಡಿರುವ ಬದುಕಿನ ಭವಿಷ್ಯ(೧.೬–೧೯೧)

ಬಾಳ್ಗೆಳೆಯ (ನಾ). ಬಾಳಿನುದ್ದಕ್ಕೂ ಸ್ನೇಹಿತನಾಗಿರುವವನು (೨.೫–೮೭)

ಬಿಂಕ (ನಾ). ಗರ್ವ; ಜಂಬ; ಸೊಕ್ಕು (೧.೪–೧೩೦)

ಬಿಂಬ (ನಾ). ಕನ್ನಡಿ; ದರ್ಪಣ (೧.೧ – ೪೬೪)

ಬಿಂಬಾಧರ (ನಾ). ತೊಂಡೆಯ ಹಣ್ಣಿನಂತೆ ಕೆಂಪಾಗಿರುವ ತುಟಿ (೧.೩–೩೯೬)

ಬಿಂಬೋಷ್ಠ, ಬಿಂಬಾಧರೆ (ನಾ). ತೊಂಡೆಯ ಹಣ್ಣಿನಂತೆ ಕೆಂಪಾದ ತುಟಿಯುಳ್ಳವಳು (೩.೪–೩೮೦)

ಬಿಕ್ಕು (ಕ್ರಿ). ಚೆಲ್ಲು; ತೂರು (೪.೧–೨೪೦)

ಬಿಕ್ಕೆ, ಬಿಚ್ಚೆ (ನಾ). ತಿರುಪೆ, ಭಿಕ್ಷೆ (೨–೧–೧೩೮)

ಬಿಜ್ಜಣಿ, ಬಿಜ್ಜಣ (ನಾ). ಬೀಸಣಿಗೆ; ವೀಜನ, ಪಂಕ (೨.೭–೮೭)

ಬಿಡುಗಣ್ಣ (ನಾ). ರೆಪ್ಪೆ ಬಡಿಯದಿರುವವನು; ಬಿಟ್ಟ ಕಣ್ಣುಳ್ಳವನು; ದೇವತೆ (೪.೯–೭)

ಬಿಣ್ಪು (ನಾ). ದೊಡ್ಡಗಾತ್ರ;–ಆಕಾರ (೨.೯–೪೩೩)

ಬಿಣ್ಬು(ನಾ). ಅತಿಶಯ; ಆಧಿಕ್ಯ; ಹೆಚ್ಚಳ (೧.೨–೩)

ಬಿತ್ತರ, ವಿತ್ತರ (ನಾ). ವಿಸ್ತಾರ; ಹರಹು; ವ್ಯಾಪ್ತಿ (೧.೪–೫೦೨)

ಬಿನದ (ನಾ). ವಿನೋದ; ತಮಾಷೆ (೧.೮–೧೭೭)

ಬಿನದವೇಂಟೆ (ನಾ). ವಿನೋದಕ್ಕಾಗಿ ಮಾಡುವ ಬೇಟೆ (೩.೧–೨೭೮)

ಬಿನ್ನಪ, ಬಿನ್ನಹ (ನಾ). ಅರಿಕೆ; ವಿಜ್ಞಾಪನೆ; ಮನವಿ; ವಿನಂತಿ (೧.೫–೨೮೭)

ಬಿನ್ನವಿಸು, ಬಿನ್ನಯಿಸು, ಬಿನ್ನಯ್ಸು, ಬಿನ್ನೈಸು (ಕ್ರಿ). ಅರಿಕೆ ಮಾಡಿಕೊಳ್ಳು; ವಿನಂತಿಸು; ವಿಜ್ಞಾಪಿಸು (೧.೭–೪೮)

ಬಿಭೀಷಿಕೆ (ನಾ). ಅಂಜಿಕೆ; ಭಯ (೪.೨–೧೬೫)

ಬಿಮ್ಮನೆ (ಅ). ಸುಮ್ಮನೆ; ತೆಪ್ಪಗೆ (೪.೧೧-೩೧೪)

ಬಿರ್ದಿನ (ನಾ). ಆತಿಥ್ಯಕ್ಕೆ ಪಾತ್ರನಾದವನು, ಉಪಚಾರಕ್ಕೆ ಅರ್ಹನಾದವನು; ಅತಿಥಿ (೧.೨-೬೩೫)

ಬಿರ್ದು (ನಾ). ಔತಣ; ವಿಶೇಷ ಭೋಜನ (೧.೧೧-೩೧೮)

ಬಿಱುಬು, ಬಿರುಬು, ಬಿಱುಹು (ನಾ). ೧. ರಭಸ; ತೀವ್ರತೆ (೪.೫-೨೬) ೨. ಬಿಗಿತ; ಬಿಗಿಯಾದ ಹಿಡಿತ (೨.೨-೫೧೪)

ಬಿಲ್ಲಂಬೆರಗು (ನಾ). ಕಕ್ಕಾಬಿಕ್ಕಿ; ದಿಗ್ಭ್ರಮೆ (೧.೨-೨೮೩) (೧.೪-೨೨೮)

ಬಿಸರುಹ, ಬಿಸಜ(ನಾ). ಕಮಲ; ತಾವರೆ; ಸರೋಜ (೧.೪-೨೮೩)

ಬಿಸವಂದ (ನಾ). ವಿಸ್ಮಯ; ಆಶ್ಚರ್ಯ; ಸೋಜಿಗ (೩.೭-೨೩೮)

ಬಿಸು, ಬೆಸೆ (ಕ್ರಿ). ಬೆಚ್ಚ (ಭೂತಕೃ) ಹೊಂದಿಸು; ಒಂದಕ್ಕೊಂದು ಸೇರುವಂತೆ ಮಾಡು; ಕೂಡಿಸು (೧.೪-೩೧೮)

ಬಿಸುಗಂಬನಿ (ನಾ). ಬೆಚ್ಚನೆಯ ಕಣ್ಣೀರು (೧.೪-೨೭)

ಬಿಸುಗದಿರ, ಬೆಂಗದಿರ (ನಾ). ಬಿಸಿಯಾದ ಕಿರಣಗಳುಳ್ಳವನು; ಸೂರ್ಯ (೧.೨-೨೮೪) (೩.೭-೬೦೦)

ಬಿಸುಡು (ಕ್ರಿ) ಬಿಸುಟು (ಭೂತನ್ಯೂ). ತೊರೆ; ತ್ಯಜಿಸು; ಬಿಡು (೧.೬-೬೩)

ಬಿಸುಪು (ನಾ). ತಾಪ; ಕಾವು; ಉಷ್ಣತೆ (೨.೮-೪೩)

ಬೀ, ಬೀಗು, ಬೀಯು (ಕ್ರಿ). ಬೀತ (ಭೂತಕೃ), ಬೀತು (ಭೂತನ್ಯೂ). (ಮರಗಿಡಗಳಲ್ಲಿ ಹಣ್ಣು, ಹೂವು ಮೊದಲಾದುವು ಬಿಡುವುದು) ನಿಂತುಹೋಗು; ಕೊನೆಗೊಳ್ಳು. (೨.೯-೧೪೫)

ಬೀದಿವರಿ (ಕ್ರಿ). ೧. ಸುತ್ತಾಡು; ಅಲೆದಾಡು (೧.೪-೪೬೩) ೨. ಸ್ವೇಚ್ಛೆಯಾಗಿ ಓಡಾಡು; ಸ್ವಚ್ಛಂದವಾಗಿ ನಡೆ (೪.೨-೩೪೯)

ಬೀಭತ್ಸ (ಗು). ಅಸಹ್ಯಕರವಾದ; ಜುಗುಪ್ಸೆಗೊಳಿಸುವ; ಹೇಸಿಕೆ ಯನ್ನುಂಟುಮಾಡುವ (೧.೧೦-೧೨೪)

ಬೀಭತ್ಸು (ಗು). ಭೀಕರವಾದ; ಭಯಂಕರವಾದ; ಘೋರವಾದ; ಭಯಾನಕವಾದ (೩.೭-೧೭)

ಬೀರ (ನಾ). ವೀರ; ಶೂರ; ಕಲಿ (೧.೭-೮೬)

ಬೀವು, ಬೀಹು (ನಾ). ನರ, ಸ್ನಾಯು (೧.೧೦-೪೯೧)

ಬುಗ್ಗೆ (ನಾ). ನೀರು ಉಕ್ಕುವ ಸ್ಥಳ; ಚಿಲುಮೆ; ಒರತೆ (೧.೮-೨೩೮)

ಬುದ್ಬುದ (ನಾ). ನೀರಿನ ಮೇಲಿನ ಗುಳ್ಳೆ; ಬೊಬ್ಬುಳಿ (೩.೯-೧೫೦)

ಬೃಂದಾರಕ (ನಾ). ದೇವತೆ; ಅಮರ; ಸುರ (೨.೩-೭೮)

ಬೃಂಹಿತ (ನಾ). ಆನೆಯ ಘೀಳು (೩.೧-೮೪)

ಬೆಂಕೆವೆಟ್ಟು (ನಾ). ಕುದಿಯುತ್ತಿರುವ ಲಾವಾರಸವನ್ನು ಉಗುಳುವ ಬೆಟ್ಟ; ಅಗ್ನಿ ಪರ್ವತ (೪.೯-೧೯೬)

ಬೆಂಗಡೆ (ನಾ). ಬೆನ್ನಿನ ಭಾಗ; ಹಿಂಭಾಗ; ಹಿಂಬದಿ (೧.೭-೩೧೦)

ಬೆಂಡೇಳ್ (ಕ್ರಿ). ಸತ್ತ್ವಹೀನವಾಗು;

ದುರ್ಬಲವಾಗು; ಜಡವಾಗು (೧.೬–೧೪೭)

ಬೆಂತರ, ವೆಂತರ (ನಾ). ಭೂತ; ಪಿಶಾಚಿ (೧.೪–೫೬೨)

ಬೆಂಬತ್ತು, ಬೆನ್ನುಹತ್ತು, ಬೆಂಬಳಿವಿಡಿ, ಬೆಂಬಿಡಿ(ಕ್ರಿ). ಓಡಿಸಿಕೊಂಡು ಹೋಗು; ಬೆನ್ನಟ್ಟು (೨.೨–೧೭೯)

ಬೆಂಬಳಿ (ನಾ). ಬೆನ್ನ ಹಿಂದೆಯೇ ಬರುವುದು; ಹಿಂಬಾಲಿಸುವುದು; ಅನುಸರಣೆ (೧.೪–೪೭೫)

ಬೆಕ್ಕಸ (ನಾ). ಆಶ್ಚರ್ಯ; ಬೆರಗು; ವಿಸ್ಮಯ (೧.೫–೯೧)

ಬೆಜ್ಜ (ನಾ). ರೋಗದ ಮೂಲವನ್ನು ತಿಳಿದು ಚಿಕಿತ್ಸೆ ಮಾಡುವವನು, ವೈದ್ಯ (೪.೧೦–೧೦)

ಬೆಜ್ಜಗಜ್ಜ (ನಾ). ವೈದ್ಯನ ಕೆಲಸ; ಚಿಕಿತ್ಸೆ (೩.೧–೧೬೦)

ಬೆಜ್ಜರ, ಬೆಚ್ಚರ(ನಾ). ಹೆದರಿಕೆ, ಭಯ; ಅಂಜಿಕೆ (೩.೧–೧೬೧)

ಬೆಟ್ಟಿತು, ಬೆಟ್ಟಿತ್ತು (ನಾ). ಕಷ್ಟಕರವಾದುದು; ಕ್ಲಿಷ್ಟವಾದುದು (೨.೩–೩೬೨)

ಬೆನ್ನೀರ್, ಬೆನ್ನೀರು, ಬಿಸುನೀರ್ (ನಾ). ಬಿಸಿನೀರು (೩.೧–೬೬೮)

ಬೆಬ್ಬಳಿ (ನಾ). ೧. ಭಯ; ಹೆದರಿಕೆ; ಗಾಬರಿ (೨.೩–೭) ೨. ದಿಕ್ಕು ತೋಚದಿರುವಿಕೆ; ದಿಗ್ಭ್ರಾಂತಿ (೨.೩–೨೮೬)

ಬೆಬ್ಬಳಿಸು. ಬೆಳ್ಪಳಿಸು (ಕ್ರಿ). ದಿಕ್ಕು ತೋಚದಂತಾಗು; ತಬ್ಬಿಬ್ಬುಗೊಳ್ಳು (೧.೬–೧೭೨)

ಬೆಮೆ (ನಾ). ಭ್ರಾಂತಿ; ಭ್ರಮೆ (೨.೬–೧೨೧)

ಬೆರಳಿಚ (ನಾ). ಬೆಟ್ಟಿನಲ್ಲಿ ಹುಟ್ಟಿದುದು; ಉಗುರು; ನಖ (೧.೫–೩೦೫)

ಬೆರ್ಚು, ಬೆಚ್ಚು (ಕ್ರಿ). ಹೆದರು; ಭಯಪಡು (೧.೬–೧೭೧)

ಬೆಲೆವೆಣ್, ಬೆಲೆವೆಂಡತಿ (ನಾ). ಹಣಕ್ಕೆ ಸಿಗುವ ಹೆಣ್ಣು; ಸೂಳೆ; ಗಣಿಕೆ (೧.೧೧–೩೮೦)

ಬೆಸಂಗೆಯ್, ಬೆಸಕೆಯ್, ಬೆಸಕೈ, ಬೆಸಗೆಯ್, ಬೆಸಗೈ (ಕ್ರಿ). ಹೇಳಿದ ಕಾರ್ಯವನ್ನು ನಿರ್ವಹಿಸು; ಸೇವೆ ಮಾಡು (೨.೧–೪೧೮, ೪೨೪)

ಬೆಸಗೊಳ್, ಬೆಸಗೊಳು, ಬೆಸಗೊಳ್ಳು (ಕ್ರಿ). ಕೇಳು; ವಿಚಾರಿಸು; ಪ್ರಶ್ನಿಸು (೧.೫–೨೦೧)

ಬೆಸಲೆ (ನಾ). ಹಡೆಯುವಿಕೆ; ಹೆರಿಗೆ; ಪ್ರಸೂತಿ (೨.೫–೧೭೧)

ಬೆಸಸು (ಕ್ರಿ). ಅಪ್ಪಣೆಮಾಡು; ನಿರ್ದೇಶಿಸು; ವಿಧಿಸು (೧.೪–೫೪೪)

ಬೆಳ್ಜಸ (ನಾ). ಶುಭ್ರವಾದ ಕೀರ್ತಿ; ನಿರ್ಮಲವಾದ ಯಶಸ್ಸು (೨.೮–೧೪೬)

ಬೆಳ್ದಿಂಗಳು (ನಾ). ೧. ಚಂದ್ರನ ಬೆಳಕು, –ಕಾಂತಿ; ಚಂದ್ರಿಕೆ (೧.೧–೫೩೧)

ಬೆಳ್ಪ, ಬೆಪ್ಪ (ನಾ). ಗಾಬರಿಯಿಂದ ದಿಕ್ಕುತೋಚದವನು; ದಿಙ್ಮೂಢ (೨.೨–೩೧೮)

ಬೆಳ್ಪಳ, ಬೆಪ್ಪಳ, ಬೆಬ್ಬಳಿ (ನಾ). ಭಯ; ಹೆದರಿಕೆ; ಗಾಬರಿ (೨.೭–೬೬)

ಬೆಳ್ಪಳಿಸು, ಬೆಪ್ಪಳಿಸು, ಬೆಬ್ಬಳಿಸು (ಕ್ರಿ). ಹೆದರು; ಭಯಪಡು (೧.೫–೮೨)

ಬೆಳ್ಪು (ನಾ). ಬಿಳುಪು; ಬಿಳಿಯ ಬಣ್ಣ, ಶ್ವೇತವರ್ಣ, ಧವಳತೆ (೨.೮–೨೫)

ಬೆಳ್ಪು, ಬೆಪ್ಪು (ನಾ). ದಡ್ಡತನ; ಬುದ್ಧಿಹೀನತೆ; ಮೌಢ್ಯ, ಮಂಕುತನ (೧.೩–೪೩೨)

ಬೆಳ್ಪುಗಣ್ (ನಾ). ಬಿಳುಪಾದ ಕಣ್ಣು; ಬಿಳಿಚಿಕೊಂಡ ಕಣ್ಣು (೧.೬–೧೭೧)

ಬೆಳ್ವೆರು (ಕ್ರಿ). ಬಿಳಿಚಿಕೊಳ್ಳು; ಮ್ಲಾನವಾಗು (೨.೧–೨೫೮)

ಬೆಳ್ಮಡಿ (ನಾ). ಶುಭ್ರವಾದ ಬಟ್ಟೆ, ವಸ್ತ್ರ, ಸೀರೆ (೩.೧೧–೩೨)

ಬೆಳ್ಮಿಗ (ನಾ). ೧. ಸಸ್ಯಾಹಾರಿಯಾದ ಸಾಧುಪ್ರಾಣಿ; ಕ್ರೂರವಲ್ಲದ ಪ್ರಾಣಿ. ೨. ಒಂದು ಬಗೆಯಜಿಂಕೆ; ಚಿಗರೆ (೪.೮–೨೭೯)

ಬೆಳ್ವಕ್ಕ (ನಾ). (ಅಮಾವಾಸ್ಯೆಯ ಅನಂತರ) ದಿನದಿನಕ್ಕೆ ಬೆಳಕು ಹೆಚ್ಚಾಗುವ ದಿನಗಳು ಮತ್ತು ಆ ದಿವಸಗಳ ಕಾಲ; ಶುಕ್ಲ ಪಕ್ಷ. (ಇದು 'ಶುಕ್ಲ ಪಕ್ಷ' ಶಬ್ದದ ಕನ್ನಡೀಕರಣ) (೧.೧–೪೩೬)

ಬೆಳ್ಳಚ್ಚರಿ (ನಾ). ದಿಗ್ಭ್ರಮೆಯನ್ನು ತರುವ ಆಶ್ಚರ್ಯ (೧.೮–೧೫೬)

ಬೆಳ್ಳಿ (ನಾ). ನವಗ್ರಹಗಳಲ್ಲಿ ಒಂದು; ಶುಕ್ರ (೧.೧೦–೩೪೧)

ಬೇಂಟ, ಬೇಟ (ನಾ). ೧. ಹೆಣ್ಣು–ಗಂಡುಗಳಲ್ಲಿ ಪರಸ್ಪರ ಉಂಟಾಗುವ ಮೋಹ; ಪ್ರಣಯ; ಪ್ರೀತಿ (೧.೨–೪೦೮) (೨.೧–೩೮೦) ೨. ಆಕರ್ಷಣೆ; ಸೆಳೆತ (೨.೨–೯೭)

ಬೇಗುದಿ (ಕ್ರಿ) (ಸಂತಾಪಗೊಳ್ಳು; ತಪಿಸು (೩.೧೪–೧೮)

ಬೇಯಿಸು; ಬೇಸು (ಕ್ರಿ) (ಆಲಂ). ನೋಯಿಸು, ಹಿಂಸಿಸು; ತಾಪಕ್ಕೆ ಒಳಗು ಮಾಡು (೨.೧–೩೩೨)

ಬೇಹು (ನಾ). ಗುಪ್ತಚರ್ಯೆ; ಗೂಢಚರ್ಯೆ (೨.೫–೧೧೬)

ಬೇಹುಕಾರ, ಬೇಹುಗಾರ (ನಾ). ಗೂಢಚರ್ಯೆಯನ್ನು ಮಾಡುವವನು; ಗೂಢಚಾರ (೧.೧೧–೨೭೬)

ಬೇಳ್ (ಕ್ರಿ) ಬೇಳ್ವ (ಆಹುತಿಯಾಗು; ಆಹುತಿಗೊಳ್ಳು (೧.೪–೫೭೨) (೨.೬–೩೭೨)

ಬೇಳ್ಪ (ಕ್ರಿ). (ಭೂತಕೃ) ೧. ಬಯಸು; ಇಚ್ಛೆಪಡು; ಆಶಿಸು (೧.೪–೩೬೭) ೨. ಕೇಳು; ಯಾಚಿಸು (೧.೧೧–೩೫೧)

ಬೇಳ್ವೆ, ಬೇಳುವೆ (ನಾ). ಆಹುತಿ; ಬಲಿ (೧.೪–೩೧೯) (೩.೬–೨೦೯)

ಬೈಗುಗಪ್ಪು, ಬೈಗುಮಬ್ಬು (ನಾ). ಸಾಯಂಕಾಲದ ಮಬ್ಬುಗತ್ತಲೆ; ಸಂಜೆಗತ್ತಲು (೧.೮–೪೫), (೧.೮–೧೦೩)

ಬೈಗುದಂಪು (ನಾ). ಸಂಜೆಯ ತಂಪು,–ಶೈತ್ಯ (೧.೧೧–೨೭೭)

ಬೊಬ್ಬಿರಿ (ಕ್ರಿ). (ಆನಂದ, ರೋಷ, ಆವೇಶ ಇತ್ಯಾದಿಗಳಿಂದ) ಕೂಗು; ಅರಚು (೧.೫–೫೪)

ಬೊಮ್ಮ (ನಾ). ಬ್ರಹ್ಮಾಂಡ; ವಿಶ್ವ (೧.೨–೬೫೭)

ಬೋಧಿ (ನಾ). ಶ್ರೇಷ್ಠವಾದ ಅರಿವು; ದಿವ್ಯ ಜ್ಞಾನ (೩.೯–೧೫೨)

ಬೋಳಯಿಸು, ಬೋಳೈಸು (ಕ್ರಿ). ಪುಸಲಾಯಿಸು; ಉತ್ತೇಜಿಸು; ಸಮಾಧಾನಮಾಡು; ಸಂತೈಸು (೧.೫–೧೨)

ಬ್ಯಾದ, ಬಿಯದ (ನಾ). ಬೇಡ, ಶಬರ (೧.೩–೪೧೨)

ಭಂಗ (ನಾ). ಸೋಲು; ಪರಾಜಯ (೪.೨-೧೪೮)

ಭಂಗಿಸು (ಕ್ರಿ). ೧. ಅವಮಾನಗೊಳಿಸು (೨.೧-೬೧) ೨. ಧ್ವಂಸಗೊಳಿಸು; ಹಾಳುಮಾಡು (೧.೯-೫೪೧)

ಭಗಿನಿ (ನಾ). ಒಡಹುಟ್ಟಿದವಳು; ಸಹೋದರಿ (೧.೧೧-೩೦೬)

ಭದ್ರ (ಗು). ಶ್ರೇಷ್ಠವಾದ; ಉತ್ತಮವಾದ (೧.೧-೬೮೨)

ಭದ್ರೆ (ನಾ). ಮಂಗಳರೂಪಳಾದವಳು, ಮಂಗಳಾಂಗಿ (೩.೪-೨೬೫)

ಭರತವಾಕ್ಯ (ನಾ). ೧. (ಕಾವ್ಯಮಿ) ನಾಟಕವೇ ಮೊದಲಾದ ರೂಪಕಗಳ ಕೊನೆಯಲ್ಲಿ ನಟನು ಬಂದು ಮಾಡುವ ಮಂಗಳಾ ಶಂಸನೆಯ ಶ್ಲೋಕ,-ಶುಭದ ಕೋರಿಕೆ. (೧.೬-೨೦೪)

ಭರದ್ವಾಜ (ನಾ). ಒಂದು ಜಾತಿಯ ಹಕ್ಕಿ; ಹೆಗ್ಗಾರ (೧.೪-೫೪೯)

ಭರ್ತ್ಸನೆ (ನಾ). ತೆಗಳಿಕೆ; ನಿಂದೆ (೨.೮-೮೬)(೩.೪-೪೮೮)

ಭರ್ಮ (ನಾ). ಬಂಗಾರ; ಚಿನ್ನ (೩.೭-೧೩)

ಭಲ್ಲೂಕ, ಭಲ್ಲುಕ (ನಾ). ಒಂದು ಬಗೆಯ ಕಾಡು ಪ್ರಾಣಿ; ಕರಡಿ (೧.೪-೨೮೭) (೨.೫-೨೫೩)

ಭವತಾರಿಣಿ (ನಾ). ಸಂಸಾರದಿಂದ ಪಾರು ಮಾಡುವವಳು; ಪರಮೇಶ್ವರಿ (೪.೧೩-೪)

ಭಾಗೀರಥಿ (ನಾ). ಭಗೀರಥನೆಂಬ ಮಹಾರಾಜನಿಂದ ಭೂಮಿಗೆ ಇಳಿದು ಬಂದುದೆಂದು ಹೇಳಲಾದ ನದಿ; ಗಂಗಾನದಿ (೧.೩-೫೫೭)

ಭಾವಜ (ನಾ). ಮನಸ್ಸಿನಲ್ಲಿ ಜನಿಸಿದವನು; ಮನ್ಮಥ, ಕಾಮ (೨.೨-೯೮)

ಭಾವಿತಾತ್ಮ (ನಾ). ಸ್ಫೂರ್ತಿಗೊಂಡ ಮನಸ್ಸುಳ್ಳವನು, ಪರಿಪಕ್ವವಾದ ಮನಸ್ಸುಳ್ಳವನು; ವಿಚಾರಶೀಲ (೪.೧೨-೨೦೩)

ಭಿಷಗ್ವರ (ನಾ). ಉತ್ತಮವಾದ ಮದ್ದು, ಔಷಧ (೨.೩-೩೦೮)

ಭೀತಿ (ನಾ). ಹೆದರಿಕೆ; ಅಂಜಿಕೆ; ಭಯ (೧.೪-೩೫೧)

ಭೀಮ (ಗು). ಹೆದರಿಕೆಯನ್ನುಂಟು ಮಾಡುವ; ಭೀಕರವಾದ; ಅಂಜಿಕೆಯನ್ನುಂಟು ಮಾಡುವ (೧.೪-೪೬೬)

ಭೀರು (ನಾ). ಅಂಜಿಕೆಯುಳ್ಳ ವ್ಯಕ್ತಿ (೧.೪-೨೬೧)

ಭೀಷಣ (ಗು). ಭಯವನ್ನುಂಟು ಮಾಡುವ; ಭಯಂಕರವಾದ (೧.೪-೨೮೮)

ಭೀಷ್ಮ (ಗು). ಭೀಕರವಾದುದು; ಭಯಂಕರವಾದುದು. ೧.೪-೨೯೦)

ಭೀಷ್ಮತೆ (ನಾ). ಭಯಂಕರತೆ; ಭೀಕರತೆ (೧.೨-೪೯೨) (೧.೧೧-೯೯)

ಭುಂಜಿಸು, ಭುಜಿಸು (ಕ್ರಿ). ಆಹಾರವನ್ನು ಸೇವಿಸು; ತಿನ್ನು; ಊಟಮಾಡು (೧.೪-೫೩೬)

ಭುವನೇಶ್ವರಿ (ನಾ). (ವಾಸ್ತು) ದೇವಸ್ಥಾನದ ಶಿಖರಗಳ ಒಳಮೈ; ಒಳಭಾಗ; ಫಲಕವಿಮಾನದ ಎತ್ತರದ ಪರಮಾವಧಿ (೩.೧-೮೧)

ಭುವರ್ಲೋಕ (ನಾ). ಭೂಮಿಯೇ ಮೊದಲಾದ ಮೇಲಿನ ಏಳು

ಲೋಕಗಳಲ್ಲಿ ಎರಡನೆಯದು (೪.೪-೨೫೫)

ಭೂತಿ (ನಾ). ಬೂದಿ; ಭಸ್ಮ; ವಿಭೂತಿ (೨.೬-೪೬೫)

ಭೂಧರ (ನಾ). ಬೆಟ್ಟ; ಪರ್ವತ (೨.೯-೩೧೫) (೪.೧೩-೧೮೦)

ಭೂಮ (ಗು). ಅತಿಶಯವಾದ, ಮಹತ್ತರವಾದ (೪.೪-೪೨೮)

ಭೂಮಾನುಭೂತಿ (ನಾ). ಬ್ರಹ್ಮಸಾಕ್ಷಾತ್ಕಾರ; ಬ್ರಹ್ಮಾನಂದದ ಅನುಭವ (೧.೮-೨೪೮) (೩.೯-೧೭೨)

ಭೂರುಹ, ಭೂಮಿರುಹ (ನಾ). ಭೂಮಿಯಲ್ಲಿ ಬೆಳೆಯುವುದು; ಗಿಡಮರ ಮುಂತಾದುವು (೧.೧೦-೪೬೩) (೨.೨-೭೯೩)

ಭೇರುಂಡ (ನಾ). ಎರಡು ತಲೆಗಳುಳ್ಳ, ಭಯಂಕರವಾದುದೆಂದು ತಿಳಿಯಲಾದ ಒಂದು ಬಗೆಯ ಕಾಲ್ಪನಿಕ ಹಕ್ಕಿ; ಗಂಡಭೇರುಂಡ (೨.೬-೨೭೧)

ಭೇಷಜ (ನಾ). ೧. ಮದ್ದು; ಔಷಧಿ (೧.೪-೧೧೮) ೨. ಪರಿಹಾರೋಪಾಯ; ನಿವಾರಣೆ (೨.೩- ೩೧೦)

ಭೈರವ (ಗು). ೧. ಭಯವನ್ನುಂಟು ಮಾಡುವ; ಭಯಂಕರವಾದ (೨.೨-೭೮೨) ೨. ಭಯಂಕರವಾದುದು; ಭೀತಿಯನ್ನುಂಟುಮಾಡುವಂತಹುದು (೧.೭-೫೭)

ಭೋಂಕನೆ (ಅ). ಒಂದು ಅನುಕರಣಾವ್ಯಯ; ತಟ್ಟನೆ; ಬೇಗನೆ (೧.೨-೭೫೯) (೧.೩-೫೫)

ಭೋಗವತಿ (ನಾ). ಪಾತಾಳಲೋಕದ ರಾಜಧಾನಿ (೩.೭-೧೨೬)

ಭ್ರೂ ಭ್ರುಕುಟಿ, ಭ್ರುಕುಟಿ (ನಾ). (ಕೋಪ ಮೊದಲಾದ ಕಾರಣದಿಂದ ಉಂಟಾಗುವ) ಹುಬ್ಬು ಗಂಟು; ಭ್ರೂ ಭಂಗ (೧.೭-೫೬)

ಮಂಕು (ನಾ). ಮಸುಕು; ಮಬ್ಬು (೧.೫-೩೩) (೨.೬-೩೭೯)

ಮಂಗಳವರೆ, ಮಂಗಲಾನಕ. ಮಂಗಳಾನಕ (ನಾ). ಮದುವೆ ಮೊದಲಾದ ಶುಭ ಸಮಾರಂಭಗಳಲ್ಲಿ ಬಾರಿಸುವ ತಮಟೆ,-ಭೇರಿ (೧.೨-೬೪೭)

ಮಂಚಿಕೆ (ನಾ). ಹೊಲ, ಗದ್ದೆಗಳನ್ನು ಕಾಯಲು ಎತ್ತರವಾಗಿ ಕಟ್ಟಿರುವ ಬಿದಿರು ಮೊದಲಾದುವುಗಳಿಂದ ಮಾಡಿರುವ ಅಟ್ಟಣೆ (೨.೬-೨೮೯)

ಮಂಜು(ಗು). ಚೆಲುವಾದ; ರಮಣೀಯವಾದ; ಮನೋಹರವಾದ (೧.೨-೨೯೦)

ಮಂಜುಮ (ಗು). ಸುಂದರವಾದ; ರಮಣೀಯವಾದ (೧.೧೧-೩೦೦)

ಮಂತಣ, ಮಂತಣೆ (ನಾ). ಆಪ್ತರೊಂದಿಗೆ ಯಾವುದಾದರೂ ಗಹನವಾದ ವಿಷಯವನ್ನು ಗುಟ್ಟಾಗಿ ಆಲೋಚಿಸುವುದು; ಮಂತ್ರಾಲೋಚನೆ. (೨.೫-೧೯೯)

ಮಂತ್ರಣ (ನಾ). ಗಹನವಾದ ರಾಜ ಕಾರ್ಯವೇ ಮೊದಲಾದುವುಗಳ ರಹಸ್ಯವಾದ ಚರ್ಚೆ; ಮಂತ್ರಾಲೋಚನೆ. (೨.೭-೧೬)

ಮಂತ್ರಿಸು (ಕ್ರಿ). ೧. ಮಂತ್ರವನ್ನು ಉಚ್ಚರಿಸು, -ಪಠಿಸು, -ಹೇಳು

(೧.೧೦- ೪೨) ೨. ಸಲಹೆ ನೀಡು; ಬುದ್ಧಿವಾದವನ್ನು ಹೇಳು (೧.೬-೧೫೮)

ಮಂದರ (ನಾ). ಒಂದು ಪರ್ವತದ ಹೆಸರು (ಇದು ಅಷ್ಟ ಕುಲ ಪರ್ವತಗಳಲ್ಲಿ ಒಂದೆಂದೂ ಕ್ಷೀರ ಸಮುದ್ರವನ್ನು ಕಡೆಯುವುದಕ್ಕಾಗಿ ದೇವತೆಗಳು ಇದನ್ನು ಕಡೆಗೋಲ ನ್ನಾಗಿ ಮಾಡಿಕೊಂಡಿದ್ದಾರೆಂದೂ ಭಾವಿಸಲಾಗಿದೆ) (೧.೩-೬೨)

ಮಂದಸ್ಮೇರ (ನಾ). ಮುಗುಳುನಗೆ; ಮಂದಸ್ಮಿತ (೧.೩-೫೫೫)

ಮಂದಾಕಿನಿ (ನಾ). ಗಂಗಾನದಿ; ದೇವನದಿ (೧.೭-೩೩)

ಮಂದ್ರ (ಗು). (ಧ್ವನಿಗೆ ಸಂಬಂಧಿಸಿದಂತೆ) ಗಂಭೀರವಾದ; ಆಳವಾದ(೧.೧-೩೫೧)

ಮಂದ್ರ (ನಾ). (ಧ್ವನಿಯ) ಗಂಭೀರತೆ; ಗಾಂಭೀರ್ಯ (೨.೨-೮೭೩)

ಮಕರ (ನಾ). ಒಂದು ಬಗೆಯ ಜಲಚರ ಪ್ರಾಣಿ; ಮೊಸಳೆ (೧.೪- ೨೦೫)

ಮಕರಂದ (ನಾ). ಹೂವಿನ ರಸ; ಜೇನು; ಮಧು (೧.೪-೩೨೮) (೧.೯-೨೬೪)

ಮಖ (ನಾ). ಯಜ್ಞ; ಯಾಗ (೧.೨-೩೨೭)

ಮಘವ (ನಾ). ದೇವತೆಗಳ ಒಡೆಯ; ದೇವೇಂದ್ರ (೩.೯-೪೪೮)

ಮಚ್ಚರ (ನಾ). ಹೊಟ್ಟೆಕಿಚ್ಚು; ಅಸೂಯೆ (೧.೧೧-೩೧೦)

ಮಣಿ (ನಾ). ಬೆಲೆಬಾಳುವ ಹರಳು; ರತ್ನ, ಮುತ್ತು, ವಜ್ರ ಮುಂತಾದವು (೧.೮-೨೨೨)

ಮಣಿಯಿಸು, ಮಣಿಸು (ಕ್ರಿ). ನಮಸ್ಕರಿಸುವಂತೆ ಮಾಡು; ಶರಣಾಗಿಸು. (೧.೯-೩೨೧)

ಮಣಿಹೆಂಬೆ (ನಾ). ಅನಾನಸ್ ಹಣ್ಣು (೨.೩-೨೨೭)

ಮತ್ತ (ಗು). ಸಂತೋಷದಿಂದ ಮೈಮರೆತ (೧.೨-೫೭೫)

ಮತ್ತಕಾಶಿನಿ (ನಾ). ಮೋಹವನ್ನುಂಟು ಮಾಡುವವಳು; ಚೆಲುವೆ, ಸುಂದರಿ (೨.೨-೫೧೭)

ಮತ್ತೇಭ (ನಾ). ಸೊಕ್ಕಿದ ಆನೆ; ಮತ್ತಗಜ (೧.೪-೪೬೫) (೩.೧೪-೬೦)

ಮದಕರಿ (ನಾ). ಮದವೇರಿದ ಆನೆ; ಸೊಕ್ಕಿದ ಆನೆ (೧.೪-೪೬೭)

ಮದದ್ವಿಪ (ನಾ). ಮದಕರಿ (೩.೧-೩೫೦)

ಮದನ (ನಾ). ವಸಂತಋತು (೧.೨-೪೦೪)

ಮದಿರೇಕ್ಷಣ (ನಾ). ಮಾದಕವಾದ ನೋಟ (೨.೨-೧೧೫)

ಮದಿಲ (ನಾ). ೧. (ಮನೆ ಮುಂತಾದುವುಗಳ ಒಳಭಾಗದಲ್ಲಿ ಕೊಠಡಿ, ಹಜಾರ ಇತ್ಯಾದಿಗಳನ್ನು ಪ್ರತ್ಯೇಕಿಸುವಂತೆ ಸೂರಿನವರೆ ಗೂಕಟ್ಟುವ) ಗೋಡೆ; ಭಿತ್ತಿ. ೨. ಕೋಟೆ ಮುಂತಾದುವುಗಳ ಸುತ್ತಲೂ (ರಕ್ಷಣಾರ್ಥವಾಗಿ) ಕಟ್ಟುವಗೋಡೆ (೪.೨-೧)

ಮಧುಕರ (ನಾ). ದೊಡ್ಡಗಾತ್ರದ ಕಪ್ಪು ಬಣ್ಣದ ದುಂಬಿ; ಭ್ರಮರ (೧.೪-೩೨೭)

ಮಧುಪ (ನಾ). ತುಂಬಿ; ಭ್ರಮರ (೪.೧೧-೨೭೦)

ಮಧುಮತ್ತ(ಗು). ಮದ್ಯಪಾನಮಾಡಿ

ಮತ್ತೇರಿದವನು (೧.೨-೨೪೭)
ಮನಂಗೊಳಿಸು, ಮನಗೊಳಿಸು (ಕ್ರಿ). ಮನಸೆಳೆ; ಆಕರ್ಷಿಸು (೧.೯-೬೨೩)
ಮನೋಜ್ಞ (ಗು). ಸುಂದರವಾದ; ಚೆಲುವಾದ (೨.೫-೧೨೫)
ಮನ್ನಿಸು (ಕ್ರಿ). ತಪ್ಪನ್ನು ಗಣಿಸದಿರು; ಕ್ಷಮಿಸು (೧.೫-೨೦೯)
ಮನ್ಯು (ನಾ). ದುಃಖ; ಅಳಲು; ವ್ಯಥೆ (೨.೫-೨೨೩)
ಮಯ್ಮೆ, ಮೆಯ್ಮೆ, ಮೈಮೆ (ನಾ). ೧. ಶ್ರೇಷ್ಠತೆ; ಹಿರಿಮೆ; ಘನತೆ (೧.೨-೩೪೬) ೨. ಪ್ರಭಾವ; ಶಕ್ತಿ (೨.೧-೨೯೦)
ಮರಕತ (ನಾ). ನವರತ್ನಗಳಲ್ಲಿ ಒಂದು; ಪಚ್ಚೆ (೪.೪-೩೫೬)
ಮರಗೂಳ (ನಾ). ಮರವನ್ನೇ ಆಹಾರವಾಗಿ ಉಳ್ಳವನು; ಅಗ್ನಿ (೪.೧೧-೪೮೦)
ಮರಗೋಡು, ಮರಗೊಂಬು(ನಾ). ಮರದ ಕೊಂಬೆ, - ರೆಂಬೆ (೧.೨-೨೧೭)
ಮರಲ್, ಮರಳು (ಕ್ರಿ). ಹಿಂದಕ್ಕೆ ಬರು; ಹಿಂತಿರುಗು (೧.೬-೨೬೫)
ಮರಲ್ಚು, ಮರಳ್ಚು (ಕ್ರಿ). ಹಿಂತಿರುಗಿಸು (೧.೫-೨೭೨)
ಮರವಡು, ಮರಂಬಡು (ಕ್ರಿ). ೧. ಜೋಮುಹಿಡಿ (೧.೧-೯೭) ೨. ಚಲನೆಯಿಲ್ಲದಿರು; ನಿಶ್ಚಲವಾಗಿರು; ಸ್ತಬ್ಧವಾಗಿರು (೧.೭-೮೬)
ಮರಸು (ನಾ). ೧. ಪ್ರಾಣಿಗಳನ್ನು ಹಿಡಿಯಲು ಮರೆಯಲ್ಲಿ ಅಡಗಿಕೊಂಡು ಮಾಡುವ ಬೇಟೆ; ಮರಸು ಬೇಟೆ. ೨. ಬೇಟೆಯಲ್ಲಿ ಪ್ರಾಣಿಗಳನ್ನು ಹಿಡಿಯಲು ಹೊಂಚು ಹಾಕಿ ಕುಳಿತುಕೊಳ್ಳುವುದಕ್ಕಾಗಿ ಕಟ್ಟಿರುವ ಮರೆ,-ರಕ್ಷಣೆಯ ಸ್ಥಳ. (೨.೬-೨೮೯)
ಮರಸುಕೂರು (ಕ್ರಿ). ಕಾಡಿನಲ್ಲಿ ಪ್ರಾಣಿಗಳನ್ನು ಬೇಟೆಯಾಡಲು, ಮರದ ಮೇಲೆ ಕಟ್ಟಿರುವ ಮರಸಿನ ಮೇಲೆ ಕುಳಿತುಕೊಳ್ಳು (೨.೬-೭೨)
ಮರಸೊಂದು (ಕ್ರಿ). ಮೈಮರೆತು ಮಲಗು (೧.೪-೪೭೨)
ಮರೀಚಿ (ನಾ). ಕಿರಣ, ರಶ್ಮಿ (೨.೩-೭೮)
ಮರುಕು, ಮರುಗು (ಕ್ರಿ). ಕೊರಗು; ಪರಿತಪಿಸು; ತಳಮಳಿಸು (೧.೬-೧೨೪)
ಮರುಗೆರ್ದೆ, ಮರುಕೆದೆ (ನಾ). ಕನಿಕರವುಳ್ಳ ಮನಸ್ಸು; ದಯಾರ್ದ್ರ ಹೃದಯ (೨.೬-೩೯೪) (೩.೩ - ೭)
ಮರುತ್ಸುತ (ನಾ). ಗಾಳಿಯ ಅಧಿದೇವತೆಯಾದ ವಾಯುವಿನ ಮಗ; ಹನುಮಂತ (೨.೪-೧೮೪)
ಮರುಳ್ವೋಗು (ಕ್ರಿ). ಭ್ರಮೆಹೊಂದು; ಭ್ರಾಂತಿಗೊಳ್ಳು; ಮರುಳಾಗು (೧.೩-೨೧೦)
ಮರೆನುಡಿ (ನಾ). ಮುಚ್ಚುಮರೆಯ ಮಾತು; ವಂಚನೆಯ ಮಾತು (೨.೧-೨೩೪)
ಮರೆವೋಗು (ಕ್ರಿ). ಆಶ್ರಯಿಸು (೧.೬-೫೦)
ಮರ್ಕಟ (ನಾ). ಒಂದು ಬಗೆಯ ಪ್ರಾಣಿ; ಕೋತಿ; ಮಂಗ (೨.೬-೯)
ಮರ್ತ್ಯ (ನಾ). ಮನುಷ್ಯ. ಮಾನವ (೪.೧೩-೨೧೩)
ಮರ್ಬು, ಮರ್ವು, ಮೊಬ್ಬು (ನಾ).

ನಸುಗತ್ತಲೆ; ಮಸುಕು (೧.೧೧-೧೬೦)

ಮರ್ಮರ (ನಾ). ವಸ್ತ್ರ, ಎಲೆ ಮುಂತಾದುವು ಅಲುಗಾಡುವುದರಿಂದ ಉಂಟಾಗುವ ಶಬ್ದ (೨.೮-೯೮)

ಮರ್ಷ (ನಾ). ಸಹಿಸಿಕೊಳ್ಳುವುದು; ತಾಳ್ಮೆ (೩.೧೪-೧೪೧)

ಮಲರ್ (ಕ್ರಿ). ೧. ಹೂವು ಅರಳು,- ವಿಕಾಸವಾಗು (೧.೨-೩೬೨) ೨. ಉಬ್ಬು; ಉತ್ಸಾಹಗೊಳ್ಳು (೨.೨-೭೧೯)

ಮಲರ್ (ನಾ). ೧. ಹೂವು; ಪುಷ್ಪ (೧.೪-೪೯೦)

ಮಲೆ (ಕ್ರಿ). ಎದುರಿಸು; ಪ್ರತಿಭಟಿಸು; ಇದಿರು ಬೀಳು (೧.೪-೧೩೦) (೨.೨-೪೮೧)

ಮಲೆ (ನಾ). ಬೆಟ್ಟ; ಪರ್ವತ (೧.೫-೨೨೮)

ಮಲೆಪು (ನಾ). ಪ್ರತಿಭಟನೆ; ವಿರೋಧ (೨.೧-೨೯೫)

ಮಲೆಪೊಡವಿ (ನಾ). ಮಲೆನಾಡು (೧.೭-೪೩೨)

ಮಲೆಯ (ನಾ). ಬೆಟ್ಟಗಾಡಿನಲ್ಲಿ ನೆಲಸಿದವನು; ಮಲೆನಾಡಿನವನು (೨.೫-೧೦೮)

ಮಷಿ (ನಾ). ಶಾಯಿ; ಮಸಿ (೩.೫-೨೧೯)

ಮಸಕ (ನಾ). ಸಿಟ್ಟು, ರೋಷ (೩.೭-೫೪೩)

ಮಸಗು (ಕ್ರಿ). ೧. ಹರಡು; ಆವರಿಸು (೧.೨-೬೧೨) ೨. ಕ್ಷೋಭೆಗೊಳ್ಳು, ಉಕ್ಕೇರು (೧.೪-೫೬೫)

ಮಸುಳ್, ಮಸುಳು (ಕ್ರಿ). ಕಾಂತಿಹೀನವಾಗು; ಮಂಕಾಗು (೧.೩-೫೨೭)

ಮಹಾಂತ (ಗು). ವಿಶಾಲವಾದ; ವಿಸ್ತಾರವಾದ (೧.೭-೪೨೪)

ಮಹಾಭಾಗ (ಗು). ಪವಿತ್ರವಾದ; ಶುದ್ಧವಾದ; ನಿರ್ಮಲವಾದ (೪.೧೧-೪೯೯)

ಮಹಾಮಂಡಲ (ನಾ). ವಿಸ್ತಾರವಾದ ಪ್ರದೇಶ; ವಿಶಾಲವಾದ ಎಡೆ (೧.೧ - ೬೮೩)

ಮಹಿಷಿ (ನಾ). ಅರಸಿ; ರಾಣಿ (೨.೧-೩೯)

ಮಹೀಧರ (ನಾ). ಭೂಮಿಯನ್ನು ಹೊತ್ತಿರುವುದು; ಪರ್ವತ; ಬೆಟ್ಟ (೧.೯-೪೩೪)

ಮಹೀರುಹ, ಮಹೀಜ (ನಾ). ಮರ; ವೃಕ್ಷ (೧.೧೦-೩೧)

ಮಹೀವಲ್ಲಭ, ಮಹೀನಾಥ (ನಾ). ಭೂಮಿಯ ಒಡೆಯ, ಅರಸ, ಭೂಪತಿ(೧.೩-೫೪೮)

ಮಳೆವಿಲ್ಲು, ಮಳೆಬಿಲ್ಲು(ನಾ). ಕಾಮನಬಿಲ್ಲು; ಇಂದ್ರ ಧನುಸ್ಸು (೧.೧೧-೧೮೧)

ಮಳ್ಗು (ಕ್ರಿ). ೧. ಕುಂದು; ತಗ್ಗು; ಕಡಮೆಯಾಗು (೧.೬-೧೪೬) ೨. ಕಾಣದಾಗು; ಮರೆಯಾಗು (೨.೨-೪೩೬) ೩. ನಾಶ ಹೊಂದು; ಧ್ವಂಸವಾಗು; ನಿರ್ನಾಮಗೊಳ್ಳು (೨.೧-೧೩೩)

ಮಾಂಕರಿಸು, ಮಾಕರಿಸು (ಕ್ರಿ). ಉದ್ದಟತನದಿಂದ ವರ್ತಿಸು; ಗರ್ವಿಸು; ಬೀಗು (೩.೧-೩೩೧)

ಮಾಣ್, ಮಾಣು (ಕ್ರಿ). ೧. ನಿಲ್ಲಿಸು; ಬಿಟ್ಟುಬಿಡು; ತ್ಯಜಿಸು (೧.೫–೨೯) (೨.೧–೨೪೮) ೨. ಇಲ್ಲವಾಗು; ನಿವಾರಣೆಯಾಗು; ಪರಿಹಾರವಾಗು (೧.೯–೪೯೩)

ಮಾತಂಗಿ (ನಾ). ಬೇಡಿತಿ; ಶಬರಿ (೨.೩–೧೩೯)

ಮಾತಿಲಿ (ನಾ). ನುಡಿಯದೆ ಸುಮ್ಮನಿರುವ ವ್ಯಕ್ತಿ; ಮೌನಿ (೩.೬–೮೭)

ಮಾತುಲ, ಮಾತುಳ (ನಾ). ತಾಯಿಯ ಸಹೋದರ; ಸೋದರಮಾವ (೧.೫–೭೯)

ಮಾರಣ (ನಾ). ಕೊಲೆ; ವಧೆ (೩.೧೩–೨೧)

ಮಾರು (ಕ್ರಿ). ಎದುರಾಗು; ಪ್ರತಿಭಟಿಸು; ವಿರೋಧಿಸು (೨.೫–೩೧೨)

ಮಾರ್ಗಣ (ನಾ). ಬಾಣ; ಶರ (೨.೨–೨೫೮)

ಮಾರ್ನುಡಿ (ನಾ). ಪ್ರತ್ಯುತ್ತರ; ಜವಾಬು (೧.೪–೩೦೮)

ಮಾರ್ಪೊಳೆ (ಕ್ರಿ). ಪ್ರತಿಬಿಂಬಿಸು; ಪ್ರತಿಫಲಿಸು (೧.೪–೪೮೦)

ಮಾಱುವೋಗು, ಮಾರುಹೋಗು, ಮಾರುವೋಗು (ಕ್ರಿ). ಸೆಳೆಯಲ್ಪಡು; ಆಕರ್ಷಣೆಗೊಳಗಾಗು (೧.೮–೧೩೯)

ಮಿಂಚುಂಬುಱು, ಮಿಂಚುಂಬುಳು, ಮಿಂಚುಬುಳು, ಮಿಂಚುಬುಱು, ಮಿಂಚುಹುಳ, ಮಿಂಚುಹುಳು (ನಾ). ಬೆಳಕನ್ನು ಬೀರುವ ಒಂದು ಬಗೆಯ ಹಾರುಕೀಟ; ಮಿಣುಕು ಹುಳು; ಖದ್ಯೋತ (೧.೭–೧೨೩)

ಮಿಂಜೊಡರ್ (ನಾ). ಕಾಂತಿಯಿಂದ ಕೂಡಿರುವ ದೀಪ (೩.೧–೭೪)

ಮಿಗ, ಮಿಕ (ನಾ). ೧. ಕಾಡಿನಲ್ಲಿ ವಾಸಿಸುವ ಮೃಗ (೧.೮–೨೫)

ಮಿಗವರಿ (ನಾ). ಜಿಂಕೆಯಮರಿ; ಮರಿಹುಲ್ಲೆ (೧.೭–೨೦೨)

ಮಿಗು (ಕ್ರಿ). ಮಿಕ್ಕು ೧. ತೊರೆ; ತ್ಯಜಿಸು; ಬಿಡು (೧.೯–೭೩) ೨. ಉತ್ಸಾಹಗೊಳ್ಳು ಶ್ರೇಷ್ಠವಾಗು; ಉತ್ತಮವಾಗು; ಮೇಲಾಗು (೧.೨–೫೫೮)

ಮಿಣಿವಲೆ, ಮಿಣಿಬಲೆ (ನಾ). ಚರ್ಮದ ನೂಲಿನಿಂದ ತಯಾರಿಸಿದ ಬಲೆ (೩.೧೨–೨೧೦)

ಮಿಣ್ಣನೆ (ಅ). ಸದ್ದಿಲ್ಲದೆ; ಮೌನವಾಗಿ (೩.೭–೬೦೦)

ಮಿತ್ತು, ಮಿಳ್ತು (ನಾ). ೧. ಸಾವು; ಮರಣ (೧.೩–೨೨೯) ೨. ಸಾವಿನ ಅಧಿದೇವತೆ, ಮೃತ್ಯುದೇವತೆ(೨.೭–೨೪೭)

ಮಿಸಿಸು, ಮೀಯಿಸು, ಮೀಸು (ಕ್ರಿ). ಸ್ನಾನ ಮಾಡಿಸು; ಮಜ್ಜನ ಮಾಡಿಸು (೪.೪–೫೪)

ಮಿಸುನಿ (ನಾ). ಚಿನ್ನ; ಬಂಗಾರ (೩.೧–೮೮)

ಮಿಹಿರ (ನಾ). ನೇಸರು; ಸೂರ್ಯ (೩.೧೪–೧೯೫)

ಮಿಳಿ, ಮಿಣಿ (ನಾ). ಚರ್ಮದ ಪಟ್ಟಿಗಳನ್ನು ಹೆಣೆದು ಮಾಡಿದ ಹಗ್ಗ; ತೊಗಲಿನ ಹಗ್ಗ (೨.೧–೧೪೫)

ಮಿಳಿರ್, ಮಿಳಿರು (ಕ್ರಿ). ತೂಗು; ತೊನೆ; ಹೊಯ್ದಾಡು (೨.೩–೧೩೮) (೪.೮–೧೨೧)

ಮಿಳ್ಮಿಳ, ಮಿಳ್ಮಿಳನೆ (ಅ). ಕಣ್ಣನ್ನು

ಮಿಟುಕಿಸದೆ, ರೆಪ್ಪೆ ಬಡಿಯದೆ ಎಂಬರ್ಥದ ಒಂದು ಅನುಕರಣಾವ್ಯಯ (೪.೭–೧೭೪)

ಮೀನಕೇತನ (ನಾ). ಮೀನಿನ ಗುರುತಿನ ಬಾವುಟವನ್ನು ಹೊಂದಿದವನು; ಮನ್ಮಥ (೧.೩–೩೫೩)

ಮೀನಾಕ್ಷಿ (ನಾ). ಮೀನನೇತ್ರೆ (೧.೨–೫೩೦)

ಮೀಹ (ನಾ). ಸ್ನಾನ; ಜಳಕ (೧.೭–೨೨೨)

ಮುಂಗಾಣ್, ಮುಂಗಾಣು (ಕ್ರಿ). ದಿಕ್ಕುತೋಚು; ದಾರಿಕಾಣು; ಮುಂದಾಗುವುದನ್ನು ತಿಳಿ (೧.೪–೭೭)

ಮುಂಗಾಣ್ಕೆ (ನಾ). ಮೊದಲು ಅರ್ಪಿಸುವ ಕಾಣಿಕೆ; ಮುಂಚಿತವಾದ ಕಾಣಿಕೆ (೧.೧೧–೨೩೮)

ಮುಂಗಾರು (ನಾ). ಮೊದಲ ಮಳೆಗಾಲ; ವರ್ಷಾರಂಭ (೧.೨–೧೬೫)

ಮುಂಗಾರುಮಳೆ (ನಾ). ವರ್ಷದ ಮೊದಲು ಬೀಳುವ ಮಳೆ;– ಆರಂಭದ ಮಳೆ,– ಮೊದಲಮಳೆ (೧.೬–೨೧೭)

ಮುಂಗೆಡು (ಕ್ರಿ). (ಮುಂದಿನ) ದಿಕ್ಕು ತೋಚದಿರು; ದಿಗ್ಭ್ರಮೆಗೊಳ್ಳು (೨.೬–೨೮೨)

ಮುಂಚು (ಕ್ರಿ). ಮುನ್ನುಗ್ಗು; ಧಾವಿಸು (೨.೨–೫೪೫)

ಮುಂಜರಿ (ಕ್ರಿ). ಮುಂದೆ ಸರಿ, ಮುಂದಕ್ಕೆ ಹೋಗು; ಮುಂದುವರಿ(೩.೧–೯೬)

ಮುಂಡಾಡು (ಕ್ರಿ). ೧. ಮುದ್ದಾಡು; ಪ್ರೀತಿಸು; ಲಾಲಿಸು; ಮುದ್ದುಗರೆ (೧.೩–೩೭೬) (ಪ್ರೀತಿಯಿಂದ) ನೇವರಿಸು; ಮುಟ್ಟು; ಸೋಕು (೧.೪–೫೫೦) (೧.೫–೨೦೬)

ಮುಂಬಟ್ಟೆ (ನಾ). ಮುಂದಿನ ದಾರಿ; ಮುಂದಿರುವ ಮಾರ್ಗ (೧.೩–೩೨೦)

ಮುಂಬಿಸಿಲು (ನಾ). ಪ್ರಾರಂಭದ ಬಿಸಿಲು; ಬೆಳಗಿನ ಬಿಸಿಲು; ಎಳೆ ಬಿಸಿಲು(೧.೧–೬)

ಮುಕುಲ, ಮುಕುಳ (ನಾ). ಅರಳುತ್ತಿರುವ ಮೊಗ್ಗು; ಮುಗುಳು; ಕುಟ್ಮಲ (೪.೧೩–೬೫)

ಮುಕ್ಕೆ (ನಾ). ಮೂರ್ಖಳಾದ ಹೆಣ್ಣು; ತಿಳಿಗೇಡಿ ಹೆಣ್ಣು (೪.೩–೯೧)

ಮುಕ್ತಾಫಲ, ಮುಕ್ತಾಫಳ (ನಾ). ಮುತ್ತು; ಮೌಕ್ತಿಕ (೧.೯–೪೦೩)

ಮುಗಿವು (ನಾ). ಕೊನೆ; ಮುಕ್ತಾಯ; ಅಂತ್ಯ (೨.೭–೪)

ಮುಗುಳಲರ್ (ನಾ). ಅರಳುತ್ತಿರುವ ಹೂವು; ಅರೆಬಿರಿದ ಹೂವು (೧.೮–೧೬೬)

ಮುಗುಳುಗಣ್, ಮುಗುಳುಗಣ್ಣು (ನಾ). ಮುಚ್ಚಿಕೊಂಡಿರುವ ಕಣ್ಣು; ನಿಮಿಾಲಿತ ನೇತ್ರ (೩.೪–೨೦೫)

ಮುಚ್ಚೆ, ಮುರ್ಚೆ (ನಾ). ಮೈ ಮರೆಯುವುದು; ಎಚ್ಚರ ತಪ್ಪುವುದು, ಮೂರ್ಛೆ (೧.೪–೩೬೧) (೨.೭–೮)

ಮುಡಿಪು (ನಾ). (ವಿಶೇಷವಾಗಿ ದೇವರ ಹೆಸರಿನಲ್ಲಿ ಹರಕೆ ಹೊತ್ತು) ಒಂದು ನಿರ್ದಿಷ್ಟ ಉದ್ದೇಶಕ್ಕಾಗಿ (ಬಟ್ಟೆಯ ಗಂಟಿನಲ್ಲಿ); ಪ್ರತ್ಯೇಕವಾಗಿ ತೆಗೆದಿರಿಸಿದ ಹಣ, ಒಡವೆ ಮುಂತಾದ ವಸ್ತು; ಮೀಸಲು (೨.೧–೧೬)

ಮುಡುಕು, ಮುದುಗು (ನಾ).

ಮುದುರುವಿಕೆ; ಸಂಕೋಚ (೧.೧೧–೧೬೨)

ಮುಡುಹು (ನಾ). ಹೆಗಲು, ಭುಜಾಗ್ರ (೧.೩–೮೭) (೧.೪–೧೨೩)

ಮುದ (ನಾ). ಹಿಗ್ಗು; ಸಂತೋಷ; ಆನಂದ (೧.೬–೨೬೪)

ಮುದ್ಗರ (ನಾ). ಒಂದು ಬಗೆಯ ಆಯುಧ (೩.೧೪–೩೬)

ಮುದ್ರಿತ (ಗು). ಆವರಿಸಿದ; ಆಚ್ಛಾದನೆಯುನ್ನುಳ್ಳ (೧.೭–೩೯)

ಮುದ್ರಿಸು. (ಕ್ರಿ). (ಆಲಂ) ಕವಿ; ಆವರಿಸು; ವ್ಯಾಪಿಸು (೧.೧ – ೩೪೧)

ಮುದ್ರೆ (ನಾ). ಪರಿಣಾಮ; ಪ್ರಭಾವ; ವರ್ಚಸ್ಸು (೧.೨ – ೯)

ಮುಪ್ಪುರಿಗೊಳ್, ಮುಪ್ಪುರಿಗೊಳು (ಕ್ರಿ). ಕೂಡು; ಸೇರು; ಒಂದಾಗು (೧.೪–೩೪೬)

ಮುರುಟು (ಕ್ರಿ). ಬಾಡು; ಒಣಗು: ಬತ್ತು (೨.೩–೩೨೪)

ಮುಸಡಿ, ಮುಸುಡಿ (ನಾ). (ಪ್ರಾಣಿಗಳ) ಉದ್ದವಾಗಿರುವ ಮುಖ, –ಮೂತಿ (೧.೮–೧೮೦)

ಮುಸಲ ಧಾರೆ (ನಾ). ಒನಕೆಯಷ್ಟು ದಪ್ಪವಾಗಿ ಸುರಿಯುವ ಮಳೆ (೩.೧೩–೧೩೧)

ಮುಸಲ, ಮುಸಳ (ನಾ). ಬತ್ತ ಮೊದಲಾದುವುಗಳನ್ನು ಕುಟ್ಟಲು ಉಪಯೋಗಿಸುವ ಮರದ ಒಂದು ಸಲಕರಣೆ, ಒನಕೆ (೨.೨–೫೪೫)

ಮುಸುಗು (ನಾ). ಹೊದಿಕೆ; ಅಚ್ಛಾದನೆ (೧.೮–೨೩)

ಮುಹುಃ, ಮುಹುಗ್ (ಅ). ಪುನಃ; ಮತ್ತೆ (೨.೮–೫೬) (೩.೪–೨೮)

ಮೂಗಳ್ (ಕ್ರಿ). ಹೇಳಲಾಗದೆ ಮೂಕವಾಗಿ ದುಃಖಪಡು; ಒಳಗೊಳಗೇ ರೋದಿಸು (೨.೧–೨೪೦), (೩.೪–೮೮)

ಮೂಗಾಳಿವಿಡಿ (ಕ್ರಿ). ಮೂಗಿನಿಂದ ವಾಸನೆಯನ್ನು ತಿಳಿ; ಅರಿ (೨.೨–೧೫೯)

ಮೂಗುವಡು (ಕ್ರಿ). ಮಾತಿಲ್ಲದಂತಾಗು; ಮೌನವಾಗು; ಮೂಕವಾಗು (೪.೩–೨೨)

ಮೂಡುವೆಟ್ಟ, ಮೂಡವೆಟ್ಟ, ಮೂಡವೆಟ್ಟು, ಮೂಡುವೆಟ್ಟು (ನಾ). ಪೂರ್ವದಿಕ್ಕಿನಲ್ಲಿರುವ ಪರ್ವತ; ಉದಯಾಚಲ (೧.೨–೪೯೦)

ಮೂದಲಿಸು (ಕ್ರಿ). ಹಂಗಿಸು; ಹೀಯಾಳಿಸು; ಅವಹೇಳನಮಾಡು (೧.೬–೧೨೫)

ಮೂರ್ತಿ (ನಾ). ದೇಹ; ಒಡಲು; ಶರೀರ (೨.೨–೩೮೦)

ಮೂರ್ಧ (ನಾ). ತಲೆಯ ಮುಂಭಾಗ; ಮುಂದಲೆ; ನೆತ್ತಿ (೩.೧೪–೮೨)

ಮೂರ್ಧಜೆ (ನಾ). ಶ್ರೇಷ್ಠಳಾದ (೧.೧೦–೨೦)

ಮೂಲ (ನಾ). ಮರ, ಗಿಡ ಮುಂತಾದುವುಗಳ ಭೂಮಿಯೊಳಗಿರುವ ಭಾಗ; ಬೇರು; ಪಾದ (೧.೭–೨೮೬)

ಮೃಗಶಾಬಾಕ್ಷಿ (ನಾ). ಜಿಂಕೆಯ ಮರಿಯ ಕಣ್ಣುಗಳಂತೆ ಕಣ್ಣುಗಳುಳ್ಳವಳು; ಸುಂದರಿ (೨.೯–೧೯೬)

ಮೃತ್ತಿಕೆ (ನಾ). ಪವಿತ್ರವಾದ ಮಣ್ಣು (೧.೯–೨೭೯)

ಮೃದುಲ, ಮೃದುಳ (ನಾ). ಕೋಮಲವಾದುದು (೧.೮–೧೨೨)

ಮೆಯ್ಗರೆ, ಮೈಗರೆ (ಕ್ರಿ). ಅಡಗು; ಮರೆಯಾಗು; ಮೈಮರೆಸಿಕೊಳ್ಳು. (೨.೪–೪೦)

ಮೆಯ್ದೋಱು, ಮೈದೋರು (ಕ್ರಿ). ಕಾಣಿಸಿಕೊಳ್ಳು; ಪ್ರಕಟವಾಗು (೧.೫–೧೯೨)

ಮೆಯ್ಮೆ (ನಾ). ಪ್ರಭಾವ; ಶಕ್ತಿ (೨.೧–೨೯೦)

ಮೆರೆ (ಕ್ರಿ). ೧. ಎದ್ದುತೋರು; ವ್ಯಕ್ತವಾಗು; ಸ್ಪಷ್ಟವಾಗಿ ಕಾಣಿಸಿಕೊಳ್ಳು (೧.೨–೪) (೧.೫–೧೪೬) ೨. ಹೊಳೆ; ಪ್ರಕಾಶಿಸು (೧.೬–೯೦)

ಮೆಲ್ಲೆಲರ್, ಮೆಲ್ಲೆಲರು (ನಾ). ನಿಧಾನವಾಗಿ ಚಲಿಸುವ ಗಾಳಿ; ಮಂದಮಾರುತ (೧.೪–೨೩೯)

ಮೇಖಲೆ, ಮೇಖಳೆ (ನಾ). ೧. ಪರ್ವತದ ಅಗ್ರಭಾಗ; ಶಿಖರ (೧.೪–೮೩) ೨. ಪರ್ವತದ ಸಾನು; ತಪ್ಪಲು (೧.೯–೭೫) ೩. ಹೆಂಗಸರು ಸೊಂಟದಲ್ಲಿ ಧರಿಸುವ ಒಂದು ಬಗೆಯ ಒಡವೆ; ಒಡ್ಯಾಣ; ಡಾಬು (೪.೭–೧)

ಮೇಣ್, ಮೇಣು (ಅ). ೧. ಇನ್ನು; ಮತ್ತು; ಜೊತೆಗೆ; ಹಾಗೂ; ಅಲ್ಲದೆ (೧.೫–೨)

ಮೇಧ್ಯ (ಗು). ಶುಚಿಯಾಗಿದ್ದು, ತಿನ್ನಲು ಯೋಗ್ಯವಾದುದು (೧.೭–೩೯೩)

ಮೇಯ (ಗು). ಅಳತೆಗೆ ಸಿಗುವ; ಅಳೆಯಬಹುದಾದ (೩.೪–೭೫)

ಮೇಲ್ವಾಯ್, ಮೇಲುವಾಯ್ (ಕ್ರಿ). ಮೇಲೆ ಹಾಯ್ದು ಬರು,– ಬೀಸು (೧.೪–೪೬೭) (೨.೩–೭೩)

ಮೇಲ್ವಾಸು, ಮೇಲುವಾಸು (ನಾ). ಹಾಸಿಗೆ, ಹಸೆಮಣೆ ಮುಂತಾದವುಗಳ ಮೇಲೆ ಹಾಸುವ ಬಟ್ಟೆ (೨.೩–೧೮೪)

ಮೇಷ (ನಾ). ಕುರಿಜಾತಿಯಲ್ಲಿ ಗಂಡು; ಟಗರು (೧.೧೦–೩೮೬)

ಮೈ ಜೋಡು (ನಾ). (ಆಲಂ) ಸಹಾಯ; ರಕ್ಷಣೆ; ನೆರವು (೨.೨–೫೦)

ಮೈಚಾಚು (ಕ್ರಿ). ದೇಹವನ್ನು ಬಾಗಿಸಿ ನಮಸ್ಕರಿಸು; ದೀರ್ಘದಂಡ ಪ್ರಣಾಮಮಾಡು (೧.೭–೨೯೭)

ಮೈದೋರು (ಕ್ರಿ). ಕಾಣಿಸಿಕೊಳ್ಳು; ಪ್ರಕಟವಾಗು (೧.೨–೪೫೧)

ಮೈಮರವು, ಮೈಮರೆವು (ನಾ). ಶರೀರದ ಮೇಲೆ ಎಚ್ಚರವಿಲ್ಲದಿರುವುದು; ಮೂರ್ಛೆ (೧.೨–೬೫೭)

ಮೈಯ್ಯಾನ್, ಮೈಯಾನ್(ಕ್ರಿ). ದೇಹವನ್ನು ಧರಿಸು; ಆಕಾರವನ್ನು ತಳೆ (ಶ್ರೀ ವೆಂಕಣ್ಣಯ್ಯನವರಿಗೆ ಸಾಲು ೧೪)

ಮೊಗಸು (ಕ್ರಿ). ಸುತ್ತುವರಿ; ಆಕ್ರಮಿಸು; ಆವರಿಸು (೩.೯–೨೬೨)

ಮೊದಲ್, ಮುದಲ್, ಮುದ್ದಲು, ಮೊದಲು (ನಾ). ಬೇರು; ಬುಡ; ಮೂಲ (೧.೯–೨೯೪)

ಮೊರಡಿ (ನಾ). ದಿಣ್ಣೆ; ತೆವರು; ಗುಡ್ಡ (೩.೫–೧೨೯)

ಮೊರಡು, ಮುರುಡು. (ನಾ). ಒರಟಾದುದು; ಬಿರುಸಾದುದು (೧.೧ – ೫೫೦)

ಮೊಱ, ಮರ, ಮಱ, ಮೊರ (ನಾ). (ಮುಖ್ಯವಾಗಿ) ಕಾಳನ್ನು ಕೇರಿ, ಕೊಚ್ಚಿ ಹಸನು ಮಾಡಲು ಬಳಸುವ ಬಿದಿರಿನ ಸಾಧನ; ಶೂರ್ಪ (೧.೧೧–೪೦೨)

ಮೊಱೆ, ಮೊರೆ (ಕ್ರಿ). ಸಮುದ್ರ, ಸಿಂಹ ಮೊದಲಾದವು ಆರ್ಭಟಿಸು,– ಗರ್ಜಿಸು,–ಅಬ್ಬರಿಸು (೧.೫–೧೦೨)

ಮೊಳ್ಗು (ಕ್ರಿ). ನಮಸ್ಕಾರ ಮಾಡು;

ವಂದಿಸು; ಎರಗು (೪.೧-೧೨೩)
ಮೋಘ (ಗು). ವ್ಯರ್ಥವಾದ; ಫಲವಿಲ್ಲದ (೪.೮-೪೭೦)
ಮೋದು (ಕ್ರಿ). ೧. ಹೊಡೆ; ಬಡಿ; ಅಪ್ಪಳಿಸು (೧.೫-೧೧) ೨. ಹೊಡೆದುಕೊಳ್ಳು; ಬಡಿದುಕೊಳ್ಳು (೧.೪-೪೧೮)
ಮೋಹರ (ನಾ). ೧. ಸೈನ್ಯ; ದಂಡು; ಪಡೆ; ದಳ (೨.೮-೨೦೫)
ಮೌರ್ವಿ (ನಾ). ಬಿಲ್ಲಿನ ಹೆದೆ; ನಾರಿ; ಸಿಂಜಿನಿ (೩.೫-೨೨೧)
ಮೌಲಿ, ಮೌಳಿ (ನಾ). ೧. ತುದಿ; ಶಿಖರ; ಅಗ್ರಭಾಗ (೧.೮-೧೩೮)
ಮ್ಲಾನ (ಗು). ಮುದುಡಿದ; ಬಾಡಿದ; ಮುಸುಕಾದ (೧.೩-೩೭೨) (೧.೬-೧೦೩)

ಯವನಿ (ನಾ). ಯವನರ ಹೆಂಗಸು; ಪರಂಗಿ ಹೆಂಗಸು(೨.೯-೩೮)
ಯವನಿಕೆ (ನಾ). ೨. ಪರದೆ; ತೆರೆ; ಜವನಿಕೆ (೧.೧೧-೧೭೧)
ಯಷ್ಟಿ (ನಾ). ಕೋಲು, ಬಡಿಗೆ (೪.೬-೪೪)
ಯಾಜಕ (ನಾ). ಯಜ್ಞವನ್ನು ಮಾಡಿಸುವವನು; ಯಜ್ಞಪುರೋಹಿತ. (೧.೬-೨೦೬)
ಯಾತುಧಾನ, ಯಾತು (ನಾ). ರಾಕ್ಷಸ (೩.೧-೬೯)
ಯಾನ ಶಾಲೆ (ನಾ). ರಥ ಮೊದಲಾದ ವಾಹನಗಳನ್ನು ಇಟ್ಟಿರುವ ಸ್ಥಳ; ವಾಹನಶಾಲೆ (೨.೧-೧೫೭)
ಯಾಮಿನಿ (ನಾ). ಇರುಳು; ರಾತ್ರಿ (೧.೮-೨೨)
ಯೋಜನ (ನಾ). ದೂರದ ಅಳತೆಯ ಒಂದು ಪ್ರಮಾಣ, ಎರಡುಗಾವುದು; ನಾಲ್ಕು ಹರದಾರಿ (೧.೧೦-೨೯)
(೪.೪-೫೬೮)
ಯೋಷೆ; ಯೋಷಿತೆ (ನಾ). ಹೆಂಗಸು; ಸ್ತ್ರೀ (೧.೧೧-೩೦೨)

ರಂಕು (ನಾ). ಮೈಮೇಲೆ ಕಪ್ಪು ಚುಕ್ಕೆಗಳಿರುವ ಒಂದು ಬಗೆಯ ಜಿಂಕೆ (೨.೨-೭೯)
ರಂಗ (ನಾ). ಯುದ್ಧಭೂಮಿ; ಕಳ (೩.೧-೩೫೦)
ರಂಜೆ (ನಾ). ಒಂದು ಬಗೆಯಚರ್ಮ ವಾದ್ಯ (೪.೨-೮೬)
ರಕ್ಕಸ, ರಾಕಾಸ (ನಾ). ೧. ಅಸುರ; ರಾಕ್ಷಸ ೨. (ಆಲಂ) ದೊಡ್ಡದು; ಭಾರಿಯಾದುದು (೧.೫-೯೨)
ರಜತ (ಗು). ೧. ಬೆಳ್ಳಗಿರುವ; ಬಿಳುಪಾದ (೧.೭-೪೩೫)
ರಜನಿ (ನಾ). ಇರುಳು; ರಾತ್ರಿ (೧.೧ - ೩೮೧)
ರಜ್ಜು (ನಾ). ಹಗ್ಗ; ಪಾಶ (೧.೬-೨೪೬)
ರಣ ಕಹಳೆ (ನಾ). ಯುದ್ಧ ಪ್ರಾರಂಭದಲ್ಲಿ ಊದುವ ಕಹಳೆ (೨.೬-೪೧)
ರಣರಣಕ (ನಾ). ಅತಿಯಾದ ಕಾತರ; ಉತ್ಕಂಠೆ (೨.೨-೬೫೩)
ರತ (ಗು). ಆಸಕ್ತ; ಮಗ್ನ (೪.೧೧-೩೧೮)
ರತ (ನಾ). ಹರ್ಷ; ಸಂತೋಷ (೩.೪-೨೩೭)
ರತ ಕೂಜಿತ (ನಾ). ಸುರತ ಧ್ವನಿ; ಸೀತ್ಕಾರ (೧.೯-೮)
ರತಕೇಳಿ, ರತಿಕೇಳಿ (ನಾ). ಸಂಭೋಗ;

ರತಿಕ್ರೀಡೆ (೧.೯-೬೦)
ರತಿ (ನಾ). ಸಂತೋಷ; ಆನಂದ; ಹರ್ಷ (೧.೨-೩೧೯) (೧.೯-೫)
ರತೋತ್ಸವ (ನಾ). ಸಂಭೋಗದ ಸಂಭ್ರಮ (೧.೯-೫೦)
ರದ (ನಾ). ಆನೆಯ ದಂತ, -ಕೋರೆ (೩.೧-೩೭೪)
ರಭಸ (ನಾ). ಕೋಪ; ಆಕ್ರೋಶ (೧.೪-೧೪೩)
ರಮಣ (ನಾ). ಗಂಡ; ಪತಿ (೧.೮-೨೦೭)
ರಮಿಸು (ಕ್ರಿ). ಆನಂದಪಡು; ಸುಖಿಸು (೧.೧-೧೫೮) (೨.೨-೮೦೧)
ರಮ್ಯ (ಗು). ಚೆಲುವಾದ; ಸುಂದರವಾದ (೧.೧೦-೪೩೪)
ರಯ (ನಾ). ವೇಗ; ರಭಸ (೧.೫-೧೪೬) (೨.೨-೫೫೨)
ರಯ್ (ನಾ). ಸಂಪತ್ತು; ಸಮೃದ್ಧಿ (೪.೧೧-೦)
ರಯ್ಯನೆ (ಅ). ವೇಗವಾಗಿ; ಜೋರಾಗಿ (೧.೪-೩೩)
ರವ (ನಾ). ಧ್ವನಿ; ಶಬ್ದ (೧.೫-೧೯೮)
ರವಿಸುತ (ನಾ). ಸುಗ್ರೀವ (೨.೫-೧೧೯)
ರಸತಪಸ್ಯೆ (ನಾ). ರಸಾನುಭವಕ್ಕಾಗಿ ಮುಡಿಪಿಟ್ಟ ತಪಸ್ಸು (೧.೧-೧೫೪)
ರಸದರ್ಶನ (ನಾ). ರಸವನ್ನು ಕಾಣುವುದು, -ಅರಿಯುವುದು (೧.೩-೧೦೧)
ರಸಧುನಿ (ನಾ). ರಸಾನುಭೂತಿಯನ್ನುಂಟುಮಾಡುವ ನದಿ,-ಹೊಳೆ. (೧.೭-೪೦)
ರಸಾತಲ, ರಸಾತಳ (ನಾ). ಭೂಮಿಯ ಕೆಳಗಿರುವುದೆಂದು ಭಾವಿಸಲಾದ ಅತಳ, ವಿತಳ, ಸುತಳ, ರಸಾತಳ, ತಳಾತಳ, ಮಹಾತಳ ಮತ್ತು ಪಾತಾಳವೆಂಬ ಏಳು ಲೋಕಗಳಲ್ಲಿ ಒಂದು. (೨.೪-೪೬)
ರಾಂಕವ (ಗು). ರಂಕು ಎಂಬ ಜಿಂಕೆಯ ಕೂದಲಿನಿಂದ ಮಾಡಿದ ವಸ್ತ್ರ, ಕಂಬಳಿ, ಶಾಲು ಮುಂತಾದುವು (೪.೧೦-೩೫೪)
ರಾಗ (ನಾ). ೧. ಬಣ್ಣ; ರಂಗು (೧.೨-೪೦೮) ೨. ಒಲುಮೆ; ಅನುರಾಗ; ಆಸಕ್ತಿ (೧.೧೦-೨೯೮)
ರಾಗಿಣಿ (ನಾ). ಪ್ರೀತಿಯುಳ್ಳವಳು; ಅನುರಕ್ತೆ (೪.೧೧-೫೬೧)
ರಾಘೆ (ನಾ). ಕುದುರೆಯನ್ನು ಹತ್ತಲು, ಅದರ ಮಗ್ಗುಲಲ್ಲಿ ನೇತುಬಿಟ್ಟಿರುವ ಬಳೆ; ರಿಕಾಪು; ಅಂಕವಣಿ (೧.೫-೧೮೦)
ರಾಜಸ (ಗು). ರಜೋಗುಣಕ್ಕೆ ಸಂಬಂಧಿಸಿದ; ಕಾಮಕ್ರೋಧಗಳಿಂದ ಕೂಡಿದ (೧.೧೧-೩೬೮)
ರಾಜಿ (ನಾ). ಗುಂಪು; ಸಮೂಹ; ರಾಶಿ (೧.೭-೪೨೯)
ರಾಜಿಸು (ಕ್ರಿ). ಶೋಭಿಸು; ಕಂಗೊಳಿಸು (೧.೮-೩೦)
ರಾಜೀವ (ನಾ). ಕಮಲ; ತಾವರೆ (೧.೭-೯)
ರಾಮಣೀಯಕ (ನಾ). ರಮಣೀಯವಾದುದು; ಚೆಲುವಾದುದು (೧.೧೧-೫೨)
ರಾವ (ನಾ). ಶಬ್ದ; ಧ್ವನಿ; ಸದ್ದು (೧.೪-೧೩)
ರಾವಣಾರಿ (ನಾ). ರಾವಣನ ಶತ್ರು; ರಾಮ(೧.೯-೪೯೬)
ರಾಹು (ನಾ). ಸಿಂಹಿಕೆ ಎಂಬ ರಾಕ್ಷಸಿಯ

ಮಗ. (೧.೧೦-೨೯೧)

ರಿಂಗಣಗುಣಿ, ರಿಂಗಣಕುಣಿ (ಕ್ರಿ). (ಸುತ್ತುತ್ತಾ), ನೃತ್ಯ ಮಾಡು; ಲಾಸ್ಯವಾಡು (೨.೨-೪೦೨)

ರಿಕ್ತ (ಗು). ಬರಿದಾದ; ಖಾಲಿಯಾದ (೧.೪-೨೨೯)

ರಿಕ್ತ (ನಾ). ಶೂನ್ಯ; ಬರಿದು (೧.೯-೫೦೬)

ರಿಕ್ತತೆ (ನಾ). ಬರಿದಾಗಿರುವಿಕೆ; ಶೂನ್ಯತೆ (೪.೧೧-೧೫೫)

ರಿಕ್ತಹಸ್ತ (ನಾ). ಬರಿಸೊಂಡಿಲು (೧.೧-೨೦೪)

ರಿಪು (ನಾ). ಹಗೆ; ಶತ್ರು (೨.೨-೧೩೯)

ರುಂದ್ರ (ಗು). ೧. ವಿಸ್ತಾರವಾದ; ವಿಶಾಲವಾದ (೧.೭-೪೨೯) (೧.೧೦-೯೮)

ರುಕ್ಮ (ಗು). ಹೊಳೆಯುವ; ಪ್ರಕಾಶಿಸುವ (೨.೧-೧೭೩)

ರುಚಿರ (ಗು). ೧. ಸುಂದರವಾದ; ಚೆಲುವಾದ (೧.೨-೨೫೩) (೧.೩-೩೩) ೨. ರುಚಿಯಾದ; ಸವಿಯಾದ (೧.೧೧-೭೬)

ರುಚಿಸು (ಕ್ರಿ). ಹೊಳೆ; ಪ್ರಕಾಶಿಸು (೧.೯-೫೮೯)

ರುಜೆ (ನಾ). ಖಾಯಿಲೆ; ರೋಗ (೧.೩-೩೮೪)

ರುತ (ನಾ). (ಪಶು, ಪಕ್ಷಿ ಮೊದಲಾದುವುಗಳ) ಧ್ವನಿ, -ಕೂಗು (೪.೨-೫)

ರುತಿ (ನಾ). ಧ್ವನಿ (೧.೧೧-೧೫೭)

ರುದಿತ (ಗು). ರೋದಿಸಿದ; ಗೋಳಾಡಿದ (೧.೪-೧೩)

ರುದ್ರಭೂಮಿ (ನಾ). ರುದ್ರನು ವಾಸಮಾಡುವ ಸ್ಥಳ; ಶ್ಮಶಾನ (೧.೬-೨೨೨)

ರುಧಿರ (ನಾ). ನೆತ್ತರು; ರಕ್ತ (೧.೧೦-೭೧) (೨.೬-೧೭೦)

ರುಷಿತ (ಗು). ಕೋಪಗೊಂಡ; ರೋಷಗೊಂಡ (೩.೭-೪೦)

ರೂಕ್ಷ (ಗು). ೧. ಬಿರುಸಾದ; ಒರಟಾದ; ನುಣುಪಾಗಿರದ (೧.೮-೩೮) ೨. ಕ್ರೂರನಾದವನು; ನಿರ್ದಯಿ (೧.೧೦-೧೫೬)

ರೂಕ್ಷತೆ, ರೂಕ್ಷತನ (ನಾ). ಒರಟುತನ (೧.೬-೩೩೫)

ರೇಣು (ನಾ). ಹುಡಿ; ಧೂಳು; ಕಣ (೧.೯-೧೫೧)

ರೊಪ್ಪ, ಐಕೊಪ್ಪ (ನಾ). ಕುರಿ, ಹಂದಿ ಮುಂತಾದುವುಗಳನ್ನು ಕೂಡುವ ಜಾಗ; ದೊಡ್ಡಿ (೧.೧೧-೯೩)

ರೋಕ (ನಾ). ತೂತು; ರಂಧ್ರ (೧.೩-೬೧೭)

ರೋಮ (ನಾ). ಮೈಮೇಲೆ ಬೆಳೆಯುವ ಕೂದಲು; ತನೂರುಹ (೧.೭-೪೨೯)

ರೋಮಂಥಿಸು (ಕ್ರಿ). ಮೆಲುಕು ಹಾಕು (೨.೧-೧೪೫)

ರೋಮಹರ್ಷಣ (ಗು). ರೋಮಾಂಚನ ಗೊಳಿಸುವ (೧.೯-೬)

ರೋಮೋದ್ಗಮ (ನಾ). ರೋಮಾಂಚ (೧.೬-೩೦೭)

ರೌದ್ರ (ಗು). ಭಯಂಕರವಾದ; ಭೀಕರವಾದ (೧.೨-೪೯೨)

ರೌಪ್ಯ (ಗು). ಒಂದು ಬಗೆಯ ಲೋಹ; ಬೆಳ್ಳಿ; ರಜತ (೧.೧೧-೧೭೩)

ಲಂಕಿಗ (ನಾ). ಲಂಕೆಯಲ್ಲಿ ವಾಸಿಸುವವನು; ಲಂಕೆಯ ಪ್ರಜೆ (೨.೧-೨೪೪), (೩.೧-೪೮೦)

ಲಕ್ಕ (ನಾ). ಒಂದು ಸಂಖ್ಯೆ; ನೂರು ಸಾವಿರ; ಲಕ್ಷ (೧.೨-೬೫೩)

ಲಗ್ಗೆ (ನಾ). ಮುತ್ತಿಗೆ; ದಾಳಿ; ಆಕ್ರಮಣ (೨.೪-೧೬೨)

ಲಗ್ನ (ಗು). ಸೇರಿದ; ಕೂಡಿದ (೪.೧೨-೭೭)

ಲಘು (ನಾ). ಮುಖ್ಯವಲ್ಲದುದು; ಕ್ಷುಲ್ಲಕವಾದುದು ; ತುಚ್ಛವಾದುದು (೨.೨-೫೭೦)

ಲಟಕಟಿಸು (ಕ್ರಿ). ೧. ಬಳಲು; ಆಯಾಸಗೊಳ್ಳು (೧.೧೦-೧೧೭) ೨. ಉದ್ರೇಕಗೊಳ್ಳು; ಉದ್ದೀಪನಗೊಳ್ಳು (೪.೨-೨೦೮)

ಲಯಸಮಯ (ನಾ). ಪ್ರಳಯಕಾಲ (೪.೬-೪೫೯)

ಲಲಟಾರೇಖೆ, ಲಲಾಟಲಿಖಿತ (ನಾ). ಹಣೆಯ ಬರಹ; ಅದೃಷ್ಟ (೧.೯-೪೯೭)

ಲಲಿತೆ (ನಾ). ವಿಲಾಸಿನಿ; ಸುಂದರಿ (೧.೩-೩೫೫)

ಲಲ್ಲಯಿಸು, ಲಲ್ಲೈಸು (ಕ್ರಿ). ಮುದ್ದಿಸು; ರಮಿಸು; ಪ್ರೀತಿಸು (೧.೯-೪೧೭)

ಲಾಂಗೂಲ (ನಾ). ಬಾಲ, ಪುಚ್ಛ (೨.೨-೧೧೩)

ಲಾಜೆ, ಲಾಜ (ನಾ). ಅಕ್ಷತೆ (೪.೧೨-೩೪೪)

ಲುಲಿತ (ಗು). ಅಲುಗಾಡಿದ; ಅಲ್ಲಾಡಿದ; ಕಂಪಿಸಿದ (೧.೩-೩೫೬)

ಲೋಕಸಂಗ್ರಹ (ನಾ). ಜನರನ್ನು ಪರಸ್ಪರ ಹತ್ತಿರ ತರುವುದರ ಮೂಲಕ ಜನತೆಗೆ ಮಾಡುವ ಸಹಾಯ; ವಿಶ್ವಕಲ್ಯಾಣ (೨.೩-೩೧)

ಲೋಹಿತ (ನಾ). ನೆತ್ತರು; ರಕ್ತ (೪.೨-೨೫೭)

ಲೌಹ (ಗು). ಲೋಹದಿಂದ ಮಾಡಿದ, ಲೋಹಸಂಬಂಧವಾದ (೧.೯-೫೩೫) (೩.೨-೬೪)

ವಂಕಿಮ (ಗು). ಬಾಗಿರುವ; ಕೊಂಕಿರುವ (೨.೮-೪) (೩.೯-೪೫೪)

ವಂದಿ (ನಾ). (ರಾಜನ ಆಸ್ಥಾನದ) ಸ್ತುತಿಪಾಠಕ; ಮಂಗಳಪಾಠಕ; ಹೊಗಳುಭಟ್ಟ (೧.೭-೨೭೦)

ವಕ್ಷ(ನಾ). ಎದೆ; ಉರಸ್ಸು (೧.೨-೨೪೩)

ವಜ್ರ (ನಾ). ಇಂದ್ರನ ಆಯುಧ; ವಜ್ರಾಯುಧ (೪.೧-೧೭೧)

ವಜ್ರಧರ (ನಾ). ವಜ್ರಾಯುಧವನ್ನು ಧರಿಸಿದವನು; ಇಂದ್ರ (೩.೧೪-೨೦೯)

ವಜ್ರಿ (ನಾ). ವಜ್ರಾಯುಧವನ್ನು ಹೊಂದಿದವನು; ಇಂದ್ರ (೪.೧-೧೭೧)

ವಟ (ನಾ). ಒಂದು ಬಗೆಯ ಮರ; ಆಲ (೧.೧೧-೧)

ವರ್ತ್ಮ (ನಾ). ಹಾದಿ, ದಾರಿ, ಮಾರ್ಗ (೪.೨-೧೨೨) (೪.೪-೧೦೬)

ವನ (ನಾ). ನೀರು; ಉದಕ (೧.೨ – ೮)

ವನಸ್ಪತಿ (ನಾ). ಮರ; ವೃಕ್ಷ (೨.೨-೭೮೨)

ವನೇಭ (ನಾ). ಕಾಡಾನೆ (೪.೬-೪೪೭)

ವನೌಕಸ (ನಾ). ಕಾಡಿನಲ್ಲಿರುವ ತಪಸ್ವಿ (೧.೯-೪೬೮)

ವನ್ಯ (ಗು). ಕಾಡು ಮನುಷ್ಯ, ಅನಾಗರಿಕ; ಅಸಂಸ್ಕೃತ ವ್ಯಕ್ತಿ (೧.೩-೫೧೭)

ವಪು (ನಾ). ಸುಂದರವಾದ ಆಕಾರ; ಸುರೂಪ (೨.೨-೧೩೮)

ವಪ್ರ (ನಾ). ೧. ದಡ; ತೀರ (೧.೭-೩೯೪) ೨. ಬೆಟ್ಟದ ತಪ್ಪಲು; ಇಳಿಜಾರು ಪ್ರದೇಶ (೩.೧-೩೬೬)

ವರ (ಗು). ಶ್ರೇಷ್ಠವಾದ; ಉತ್ತಮವಾದ (೧.೧೧-೧)

ವರವರ್ಣಿನಿ (ನಾ). ೧. ಅತಿಶಯವಾದ ಮೈಕಾಂತಿಯುಳ್ಳವಳು;ಸುಂದರಳಾದ ಸ್ತ್ರೀ (೨.೧-೩೨೪), (೨.೨-೪೯೪) ೨. ದುರ್ಗೆ (೪.೭-೧೪೦)

ವರಾರೋಹೆ (ನಾ). ಲಾವಣ್ಯವತಿಯಾದ ಉತ್ತಮ ಸ್ತ್ರೀ (೧.೧೦-೧೪೪)

ವರಿಸು (ಕ್ರಿ). ೧. ಒಪ್ಪಿಕೊಳ್ಳು; ಅಂಗೀಕರಿಸು (೧.೯-೫೬೧) ೨. ಆಯ್ದುಕೊಳ್ಳು; ಆರಿಸು; ಆಯ್ಕೆಮಾಡು. (೨.೮-೧೩೯)

ವರೂಥ (ನಾ). ಘರ್ಷಣೆಯಿಂದ ರಥಕ್ಕೆ ಧಕ್ಕೆಯಾಗದಿರುವಂತೆ ಸುತ್ತಲೂ ಅಳವಡಿಸುವ ಮರದ ಆವರಣ ಅಥವಾ ಚರ್ಮದ ಹೊದಿಕೆ (೩.೧೪-೨೪)

ವರೂಥಿನಿ (ನಾ). ಪಡೆ; ಸೈನ್ಯ (೪.೬-೯೯)

ವರ್ಮ (ನಾ). ಅಂಗರಕ್ಷಣೆಗಾಗಿ ತೊಡುವ ಉಕ್ಕಿನ ಕವಚ; ಮೈಜೋಡು (೩.೬-೩೧) (೨.೧-೪೮೦)

ವರ್ಯ (ನಾ). ಶ್ರೇಷ್ಠನಾದವನು (೨.೨-೮೬೭)

ವರ್ಷ (ನಾ). ಮಳೆ, ವೃಷ್ಟಿ (೨.೯-೧೯)

ವರ್ಷಾಭ್ರ (ನಾ). ಮಳೆಗಾಲದ ಮೋಡ; ಕಾರ್ಮೋಡ (೧.೧೦-೯೭) (೧.೧೧-೪೦೬)

ವರ್ಷ್ಮ (ನಾ). ದೇಹ; ಶರೀರ (೪.೬-೩೦೨)

ವಲಂ, ವಲ್ಲಂ (ಅ). ದಿಟವಾಗಿ; ನಿಶ್ಚಯವಾಗಿ; ಖಂಡಿತವಾಗಿ (೧.೧೧-೩೫೮)

ವಲಿತೆ (ನಾ). ಸುಕ್ಕುಗಟ್ಟಿದ ಚರ್ಮವುಳ್ಳವಳು (೧.೧೦-೧೪)

ವಲಿಮುಖ (ನಾ). ಸುಕ್ಕುಗಟ್ಟಿದ ಮುಖವುಳ್ಳ ಪ್ರಾಣಿ; ಕಪಿ; ಕೋತಿ. (೨.೯-೩೨೯)

ವಲ್ಕಲ (ನಾ). ನಾರುಮಡಿ (೧.೧೦-೩೨೨)

ವಲ್ಗು (ಗು). ಸುಂದರವಾದ; ಚೆಲುವಾದ (೩.೪-೩೮೦)

ವಲ್ಮೀಕ (ನಾ). ಹುತ್ತ (೨.೧-೧೦೫)

ವಸನ (ನಾ). ವಾಸಸ್ಥಳ; ಮನೆ; ನೆಲೆ (೧.೭-೩೦)

ವಹ್ನಿ (ನಾ). ಬೆಂಕಿ; ಕಿಚ್ಚು (೧.೧ - ೩೩೨) (೨.೯-೧೦೫)

ವಾಃಕಣ (ನಾ). ನೀರಿನ ಹನಿ; ಜಲಬಿಂದು (೩.೬-೧೭೧)

ವಾಘೆ, ವಾಗ್ಯ (ನಾ). ಕಡಿವಾಣ; ಲಗಾಮು (೧.೫-೧೮೦)

ವಾಚಂಯಮಿ (ನಾ). ಮುನಿ; ಋಷಿ (೧.೧೦-೯೦)

ವಾಜಿ (ನಾ). ಕುದುರೆ; ಅಶ್ವ (೧.೪-೫೪೮)

ವಾತ (ನಾ). ಗಾಳಿ; ವಾಯು (೧.೧೦-೧೧೮)

ವಾದಿತ್ರ (ನಾ). ವಾದ್ಯ (೪.೧೨-೨೪೬)

ವಾಮ (ಗು). ಎಡಗಡೆಯ; ಎಡಭಾಗದ

(೨.೫–೨೨೭)

ವಾರ (ನಾ). ಹೊದಿಕೆ; ಅಚ್ಛಾದನೆ (೧.೩–೩೬)

ವಾರಣ (ನಾ). ೧. ಆನೆ; ಗಜ (೧.೪–೪೭೨) ೨. ಕಳೆಯುವಿಕೆ; ನಿವಾರಣೆ (೩.೪–೫೦೭)

ವಾರಾಶಿ, ವಾರಾಕರ (ನಾ). ನೀರಿಗೆ ಆಶ್ರಯವಾದುದು; ಸಮುದ್ರ (೧.೨–೪೨೩)

ವಾರಿ (ನಾ). ನೀರು; ಜಲ (೧.೯–೩೧)

ವಾರುವ (ನಾ). ಕುದುರೆ; ಅಶ್ವ (೧.೫–೧೪೮)

ವಾಸರ (ನಾ). ದಿನ; ದಿವಸ (೪.೧೨–೪೪)

ವಾಸರೇಶ್ವರ (ನಾ). ಹಗಲಿನ ಒಡೆಯ; ಸೂರ್ಯ (೪.೧೨–೮೬)

ವಾಸುಕಿ (ನಾ). ಅಷ್ಟಫಣಿಗಳಲ್ಲಿ ಒಂದು; (ದೇವತೆಗಳೂ ರಾಕ್ಷಸರೂ ಕ್ಷೀರ ಸಾಗರವನ್ನು ಕಡೆಯುವಾಗ ವಾಸುಕಿಯನ್ನು ಮಂದರ ಪರ್ವತಕ್ಕೆ ಹಗ್ಗದಂತೆ ಸುತ್ತಿ ಕಡೆದರು ಎಂದು ಭಾವಿಸಲಾಗಿದೆ.) (೧.೩–೬೧)

ವಾಹ (ನಾ). ಪ್ರವಹಿಸುವಂಥದು; ಪ್ರವಾಹ (೧.೯–೫೯)

ವಿಕಂಪಿಸು (ಕ್ರಿ). ಅತಿಯಾಗಿ ನಡುಗು (೧.೧–೯)

ವಿಕಟ (ಗು). ೧. ವಿಕಾರವಾದ; ಕುರೂಪಗೊಂಡ (೧.೫–೧೯೪) ೨. ಉಗ್ರವಾದ; ಕ್ರೂರವಾದ (೨.೩–೨೮೦)

ವಿಕಾರ (ನಾ). ವಿದ್ರೂಪತೆ; ಕುರೂಪ (೧.೧–೫೫೧)

ವಿಕೃತಿ (ನಾ). ಕುರೂಪ; ವಿಕಾರ (೧.೧–೫೮೦)

ವಿಕ್ರಮ (ನಾ). ೧. ಪ್ರಯಾಣ; ಸಂಚಾರ (೧.೯–೨೨೫) ೨. ಪರಾಕ್ರಮ; ಶೌರ್ಯ (೨.೬–೨೮)

ವಿಕ್ರಿಯಾಬಲ (ನಾ). ಬೇಕಾದ ರೂಪ, ಆಕಾರ ಮುಂತಾದುವನ್ನು ತಾಳುವ ಶಕ್ತಿ; ಮಾಯಾಶಕ್ತಿ (೩.೭–೨೦೪)

ವಿಕ್ಲಬ (ಗು). ಸಂತ್ರಸ್ತವಾದ; ವಿಹ್ವಲವಾದ (೧.೪–೩೫೧)

ವಿಕ್ಷತ (ಗು). ಏಟುಬಿದ್ದ; ಗಾಯವಾದ (೪.೭–೮೯)

ವಿಗಲಿತ, ವಿಗಳಿತ (ಗು). ೧. ಜಿನುಗಿದ; ಸೋರಿದ (೧.೪–೫೧೯) ೨. ಹೊಮ್ಮಿದ; ಸೂಸಿದ (೧.೯–೪೭೭)

ವಿಗುರ್ಬಿಸು, ವಿಗುರ್ವಿಸು (ಕ್ರಿ). ಅಧಿಕವಾಗು; ಅತಿಶಯವಾಗು(೩.೭–೨೦೫)

ವಿಗ್ರಹ (ನಾ). ೧. ಆಕಾರ; ಆಕೃತಿ; ರೂಪ (೧.೭–೨೫೪) ೨. ದೇಹ; ಶರೀರ (೧.೫–೨೩೧)

ವಿಘಾತಿ (ನಾ). ಹೊಡೆತ; ಪ್ರಹಾರ (೨.೧–೧೭)

ವಿಜಿಗೀಷು (ಗು). ಗೆಲ್ಲಬೇಕೆಂಬ ಬಯಕೆಯುಳ್ಳ (೩.೭–೨೪೨)

ವಿಜ್ಞ (ನಾ). ತಿಳಿದವನು; ವಿದ್ವಾಂಸ (೪.೧೧–೧೭೯)

ವಿಟಪಿ (ನಾ). ಕೊಂಬೆಗಳುಳ್ಳದು; ಮರ (೧.೯–೧೬೩)

ವಿತಾನ (ನಾ). ೧. ಸಾಲು; ಪಂಕ್ತಿ (೨.೧–೧೯) ೨. ಸಿಂಹಾಸನ, ಮಂಟಪ ಮೊದಲಾದುವುಗಳ ಮೇಲೆ ಕಟ್ಟುವ ಬಟ್ಟೆ; ಮೇಲ್ಕಟ್ಟು (೪.೧೧–೨೬೩)

ವಿತ್ತೇಶ (ನಾ). ಐಶ್ವರ್ಯಕ್ಕೆ

ಒಡೆಯನಾದವನು; ಕುಬೇರ (೨.೧-೩೪೫)

ವಿದಗ್ಧ (ಗು). ವಂಚನೆಯಿಂದ ಕೂಡಿದ, ಕಪಟದ (೨.೨-೪೬೦)

ವಿದಗ್ಧ (ನಾ). ಪಂಡಿತ; ವಿದ್ವಾಂಸ (೨.೯-೪೪೩).

ವಿದ್ಯಾಧರಿ (ನಾ). ದೇವತಾಸ್ತ್ರೀ. (೨.೭-೭೫)

ವಿದ್ರುಮ (ನಾ). ನವರತ್ನಗಳಲ್ಲಿ ಒಂದು; ಹವಳ (೨.೫-೨೯)

ವಿದ್ರೋಹ (ನಾ). ಅತಿಯಾದ ವಿಶ್ವಾಸಘಾತ, - ಕೇಡಿಗತನ (೨.೪-೧೦೩)

ವಿಧಾತ (ನಾ). ತ್ರಿಮೂರ್ತಿಗಳಲ್ಲಿ ಒಬ್ಬ; ಬ್ರಹ್ಮ (೧.೩-೪೯)

ವಿನ್ಯಾಸ (ನಾ). ವ್ಯವಸ್ಥೆ; ಏರ್ಪಾಡು (೧.೪-೧೩೩) (೨.೬-೩೩೩)

ವಿಪಂಚಿ, ವಿಪಂಚಿಕೆ (ನಾ). ಒಂದು ಬಗೆಯ ವೀಣೆ (೧.೯-೨೬೭) (೧.೧೦-೩೦೧)

ವಿಪಿನ (ಗು). ಅಡವಿ; ಕಾಡು (೧.೬-೧೭೩)

ವಿಪುಲ, ವಿಪುಳ (ಗು). ಅಧಿಕವಾದ, ಹೆಚ್ಚಾದ, ಬಹಳ (೧.೪-೪)

ವಿಪ್ರಲಂಭ (ನಾ). (ಪ್ರಿಯ, ಪ್ರಿಯೆಯರ) ಅಗಲಿಕೆ; ವಿಯೋಗ (೩.೧೦-೧೨೮)

ವಿಪ್ಲವ (ನಾ). ನಾಶ; ಹಾಳು; ಧ್ವಂಸ (೩.೬-೮)

ವಿಭವ (ನಾ). ೧. ಐಶ್ವರ್ಯ; ಸಿರಿ; ಸಂಪತ್ತು (೧.೯-೨೮) ೨. ಹಿರಿಮೆ, ಘನತೆ (೧.೨-೬೨೧) (೪.೧೩-೧೨೯)

ವಿಭಾವರಿ (ನಾ). ಇರುಳು; ನಿಶೆ; ರಾತ್ರಿ (೧.೨-೯೪)

ವಿಭು (ನಾ). ೧. ಒಡೆಯ; ಪತಿ; ಸ್ವಾಮಿ (೩.೧೨-೧೮೬) ೨. ದೇವರು; ಪರಮಾತ್ಮ (೪.೬-೨೩೮) (೪.೧೧-೫೫೯)

ವಿಭೂತಿ (ನಾ). (ಭಗವಂತನ) ವಿಶೇಷ ಪ್ರಕಾಶನ; ಮಹಿಮೆ; ಗರಿಮೆ (೧.೧-೧೪೯)

ವಿಭ್ರಾಂತ (ಗು). ಭ್ರಾಂತಿಗೊಳಗಾದ; ತಬ್ಬಿಬ್ಬುಗೊಂಡ (೧.೩-೪೩೬)

ವಿಯಚ್ಚರ (ನಾ). ಆಕಾಶದಲ್ಲಿ ಸಂಚರಿಸುವವನು; ಖೇಚರ (೧.೧೧-೩೦೨)

ವಿಯಚ್ಚಾರಿ (ನಾ). ಆಕಾಶದಲ್ಲಿ ಸಂಚರಿಸುವವನು; ಗಗನಗಾಮಿ (೨.೧೧-೨೨೬)

ವಿಯತ್ತಲ, ವಿಯತ್ತಳ (ನಾ). ಆಕಾಶಸ್ಥಲ; ನಭೋಂಗಣ, ಗಗನ ಮಂಡಲ (೨.೨-೫೫೨)

ವಿರಚಿಸು (ಕ್ರಿ). ಕಟ್ಟು; ನಿರ್ಮಾಣ ಮಾಡು; ನಿರ್ಮಿಸು (೧.೧೧-೬೬)

ವಿರಲ, ವಿರಳ (ಗು). ಅಪರೂಪ; ದುರ್ಲಭ (೧.೮-೧೩)

ವಿರಲ, ವಿರಳ (ನಾ). ಬಿಡಿಬಿಡಿಯಾದುದು; ಒತ್ತಾಗಿಲ್ಲದುದು; ದಟ್ಟವಾಗಿಲ್ಲದುದು (೧.೧೧-೧೬೬)

ವಿರಿಂಚಿ (ನಾ). ಬ್ರಹ್ಮ (೪.೧-೧೯೦)

ವಿಲಯ, ವಿಳಯ (ನಾ). (ಪ್ರಪಂಚದ) ಕೊನೆ; ನಾಶ; ಲಯ; ಪ್ರಳಯ (೧.೪-ಸಾಲು ೧)

ವಿಲೋಲತೆ (ನಾ). ಅತ್ಯಾಸಕ್ತಿ; ಲೋಲುಪತೆ (೧.೭-೩೪)

ವಿವರ (ನಾ). ೧. ಕಂಡಿ; ಸಂದು

(೨.೧೦–೪೭೯) ೨. ವಿಸ್ತಾರ; ಹರಹು (೧.೪–೪೨)
ವಿವರ್ಣ (ಗು). ಕಳೆಯಿಲ್ಲದ; ಕಳಾಹೀನವಾದ (೧.೯–೩೨೭)
ವಿವಶ (ಗು). ವಶವಾಗದ; ಹತೋಟಿಗೆ ಸಿಗದ (೪.೧೨–೨೧೩)
ವಿವಿಕ್ತ (ಗು). ಜನರಹಿತವಾದುದು; ನಿರ್ಜನವಾದುದು (೧.೭–೩೪೭)
ವಿಶಿಖ (ನಾ). ಬಾಣ; ಅಂಬು (೪.೨–೭೭)
ವಿಶ್ರಾಂತ (ಗು). ವಿಸ್ತರಿಸಿದ; ಚಾಚಿಕೊಂಡಿರುವ (೧.೨ –೧೨೦) (೨.೬–೪)
ವಿಶ್ರುತ (ಗು). ಪ್ರಖ್ಯಾತಿ ಹೊಂದಿದ; ಪ್ರಸಿದ್ಧವಾದ (೨.೨–೭೪೯)
ವಿಷಣ್ಣತೆ (ನಾ). ದುಃಖ, ವ್ಯಥೆ (೨.೯–೧೭೬)
ವಿಷಮತೆ (ನಾ). ದುಷ್ಟತನ; ಕ್ರೌರ್ಯ (೧.೫–೩)
ವಿಸ್ಫಾರಿಸು (ಕ್ರಿ). ದೊಡ್ಡದಾಗು; ಅಗಲವಾಗು (೧.೩–೫೧೫)
ವಿಸ್ಫಾಲನೆ, ವಿಸ್ಫಾಲ (ನಾ). ಅಲುಗಾಟ; ಕಂಪನ (೧.೭–೨೬) (೧.೯–೫೪೯) (೨.೮–೧೦೩)
ವಿಸ್ಫುಲಿಂಗಿಸು (ಕ್ರಿ). ಕಿಡಿಗೊಳ್ಳು; ಹತ್ತಿಕೊಳ್ಳು (೨.೨–೭೫)
ವಿಸ್ಮಯ (ನಾ). ಆಶ್ಚರ್ಯ; ಅಚ್ಚರಿ; ಬೆರಗು (೧.೮–೪೦)
ವಿಸ್ಮರಣ, ವಿಸ್ಮೃತಿ (ನಾ). ನೆನಪಿಲ್ಲದಿರುವಿಕೆ; ಮರವೆ (೨.೫–೫೬)
ವಿಸ್ರಸ್ತ (ಗು). ಅಶಕ್ತವಾದ; ದುರ್ಬಲವಾದ (೩.೭–೬೧೧)
ವಿಹಂಗಮ, ವಿಹಂಗ (ನಾ). ಪಕ್ಷಿ; ಹಕ್ಕಿ (೧.೭–೨೭) (೨.೨–೮೦೯)
ವಿಹಂಗಮಕುಲ (ನಾ). ಸೂರ್ಯವಂಶದವನು; ರಾಮ (೨.೨–೨೦೯)
ವಿಹಗೇಂದ್ರ, ವಿಹಂಗಪ, ವಿಹಗಪ (ನಾ). ಪಕ್ಷಿಗಳ ಒಡೆಯ; ಗರುಡ (೧.೧೧–೬) (೨.೨–೮೪೯)
ವಿಹ್ವಲಿಸು (ಕ್ರಿ). ೧. ದುಃಖಿಸು; ವ್ಯಾಕುಲಪಡು (೨.೨–೨೮೧) ೨. ನೋಯಿಸು, ಸಂಕಟಗೊಳಿಸು (೨.೧–೧೮೯)
ವೀಚಿ (ನಾ). (ನೀರಿನ) ಸಣ್ಣ ಅಲೆ; ತೆರೆ; ತರಂಗ (೧.೭–೩೪೧)
ವೀರ್ಯ (ನಾ). ೧. ಕಲಿತನ; ಶೌರ್ಯ; ಪರಾಕ್ರಮ (೧.೧–೬೭೭) ೨. ಕೆಚ್ಚು; ಧೈರ್ಯ (೪.೧೩–೧೫೬)
ವೃಂದ (ನಾ). ಗುಂಪು; ಸಮೂಹ (೧.೪–೨೨೨)
ವೃಕ (ನಾ). ಒಂದು ಬಗೆಯ ಕಾಡುಪ್ರಾಣಿ, ತೋಳ (೪.೧೩–೧೫೧)
ವೇಗಾಯಿಲ, ವೇಗಾಯ್ಲ (ಗು). ಶೀಘ್ರವಾಗಿ ಹೋಗಿ ಸುದ್ದಿಯನ್ನು (೩.೧೪–೨೨೭) ಮುಟ್ಟಿಸುವವನು; ಹರಿಕಾರ
ವೇಣಿ (ನಾ). ಹೆರಳನ್ನು ಉಳ್ಳವಳು; ಸ್ತ್ರೀ; ಹೆಂಗಸು (೧.೧–೧೨೨)
ವೇತ್ರ (ನಾ). (ದ್ವಾರಪಾಲಕನು ಹಿಡಿದುಕೊಳ್ಳುವ) ಕೋಲು; ದಂಡ (೪.೧೧–೩೩೫)
ವೇದ್ಯ (ನಾ). ತಿಳಿಯಲು ಸಾಧ್ಯವಾದುದು; ತಿಳಿಯಬೇಕಾದುದು (೧.೭–೨೩೩)
ವೇಥೆ (ನಾ). ನೋವು; ಬಾಧೆ (೧.೪–೫೬೬)
ವೇಪಮಾನ (ಗು). ನಡುಗುವ; ಕಂಪಿಸುವ

(೧.೧೦–೨೦)

ವೇಪಿಸು (ನಾ). ನಡುಗು; ಕಂಪಿಸು (೧.೩–೧೦೮)

ವೇಲಾವನ, ವೇಳಾವನ (ನಾ). ಸಮುದ್ರದ ತಡಿಯಲ್ಲಿರುವ ವನ; ಸಮುದ್ರ ತೀರದ ಕಾಡು (೧.೪–೧)

ವೇಲೆ (ನಾ). ಮೇರೆ; ಸೀಮೆ; ಎಲ್ಲೆ (೨.೮–೫)

ವೇಶ್ಮ (ನಾ). ಮನೆ; ಗೃಹ (೧.೮–೭೧)

ವೈಖಾನಸ (ನಾ). ಋಷಿ; ಮುನಿ (೧.೧೦–೨೧೦)

ವೈಣಿಕ (ನಾ). ವೀಣೆಯನ್ನು ನುಡಿಸುವವನು; ವೀಣಾವಾದಕ (೧.೧೦–೩೦೦)

ವೈತರಣಿ (ನಾ). ನರಕದಲ್ಲಿರುವುದೆಂದು ನಂಬಲಾದ ಒಂದು ನದಿ (೪.೪–೬೩)

ವೈದ್ಯುತ (ಗು). ಮಿಂಚಿಗೆ ಸಂಬಂಧಿಸಿದ (೨.೧–೧೧)

ವೈನತೇಯ (ನಾ). ಕಶ್ಯಪಮುನಿ ಮತ್ತು ವಿನತಾ ದೇವಿಯ ಮಗ; ಗರುತ್ಮಂತ (೧.೭–೨೬)

ವೈರೂಪ್ಯ (ನಾ). ವಿರೂಪ; ವಿಕಾರ (೧.೩–೧೬೬) (೪.೧೨–೧೦)

ವ್ಯಂಗ್ಯ (ನಾ). ಕೊಂಕು; ಅಣಕ (೨.೫–೭೦)

ವ್ಯಾಘ್ರ (ನಾ). (ಕಾಡಿನಲ್ಲಿ ಬೇಟೆಯಾಡಿ ಜೀವಿಸುವ) ಮಾಂಸಾಹಾರಿಯಾದ ಒಂದು ದುಷ್ಟಪ್ರಾಣಿ; ಹುಲಿ (೧.೪–೨೮೭)

ವ್ಯಾಲ, ವ್ಯಾಳ (ನಾ). ಹಾವು; ಸರ್ಪ (೪.೧–೨೨೦) (೨.೩–೪೧)

ವ್ಯೋಮ (ನಾ). ಪಂಚಮಹಾಭೂತಗಳಲ್ಲಿ ಒಂದು; ಆಕಾಶ, ಗಗನ (೧.೧–೯೭)

ವ್ಯೋಮಗ (ನಾ). ಆಕಾಶದಲ್ಲಿ ಸಂಚರಿಸುವಂತಹದು; ದೇವತೆ, ಪಕ್ಷಿ, ಗ್ರಹ, ವಿಮಾನ ಮುಂತಾದುವು (೨.೨–೩೮೪)

ವ್ಯೋಮಗ (ನಾ). ಆಕಾಶದಲ್ಲಿ ಸಂಚರಿಸುವಂತಹದು; ದೇವತೆ, ಪಕ್ಷಿ, ಗ್ರಹ, ವಿಮಾನ ಮುಂತಾದುವು(೨.೨–೩೮೪)

ವ್ರಾತ (ನಾ). ಗುಂಪು; ಸಮೂಹ (೧.೪–೨೯೧)

ವ್ರೀಡೆ (ನಾ). ನಾಚಿಗೆ; ಲಜ್ಜೆ; ಸಿಗ್ಗು (೪.೧೧–೪೫೭)

ಶಂಕರಿ (ನಾ). ಮಂಗಳವನ್ನುಂಟು ಮಾಡುವವಳು (೧.೧೦–೪೭೨)

ಶಕುಂತ (ನಾ). ಹಕ್ಕಿ; ಪಕ್ಷಿ (೧.೩–೩೪೭)

ಶಕುನಿ (ನಾ). ಶಕುನದ ಹಕ್ಕಿ; ಹಾಲಕ್ಕಿ (೧.೨–೧೪೫)

ಶಕ್ರ(ನಾ). ದೇವತೆಗಳ ಅಧಿಪತಿ; ಇಂದ್ರ (೨.೧–೧೯೯)

ಶಕ್ರಧನು, ಶಕ್ರಚಾಪ (ನಾ). ಕಾಮನಬಿಲ್ಲು; ಇಂದ್ರಚಾಪ (೨.೨–೧೧೩)

ಶಕ್ರವೈರಿ (ನಾ). ೧. ಇಂದ್ರನ ಶತ್ರು ೨. ರಾವಣ (೨.೧–೧೯೯)

ಶಠ (ಗು). ಕೆಟ್ಟತನದ; ದುಷ್ಟತನದ (೨.೭–೧೫೧)

ಶತಘ್ನಿ (ನಾ). ೧. ಚೂಪಾದ ಮೊನೆಗಳಿಂದ ಕೂಡಿದ ಗುಂಡಾಗಿರುವ ಒಂದು ಬಗೆಯ ಆಯುಧ (೩.೧–೫೦೨) (೪.೬–೪೪) ೨. ತೋಪು; ಫಿರಂಗಿ (೨.೬–

೧೩೨)

ಶತದಲ, ಶತಪತ್ರ (ನಾ). ಅನೇಕ ಎಸಳುಗಳನ್ನು ಹೊಂದಿರುವುದು; ತಾವರೆ; ಕಮಲ (೧.೪-೫೬೭)

ಶಬರಿ (ನಾ). ರಾಮನ ಭಕ್ತೆಯಾದ ಒಬ್ಬ ಬೇಡರ ತಪಸ್ವಿನಿ (೨.೩-೩೦೨)

ಶಮೆ (ನಾ). ಮನೋನಿಗ್ರಹ (೪.೬-೧೧೪)

ಶರಧಿ (ನಾ). ಕಡಲು; ಸಮುದ್ರ (೧.೨-೬೦೨)(೧.೧೦-೮೬೪)

ಶರಾಸನ (ನಾ). ಬಿಲ್ಲು; ಧನುಸ್ಸು (೧.೨-೪೬೬)

ಶರ್ವ (ನಾ). ಶಿವನ ಹೆಸರುಗಳಲ್ಲಿ ಒಂದು (೪.೭-೭)

ಶರ್ವರಿ (ನಾ). (ನಕ್ಷತ್ರಗಳಿಂದ ಪ್ರಕಾಶಮಾನವಾದ) ಇರುಳು; ರಾತ್ರಿ (೧.೭-೧೩೦)

ಶಲ್ಯ (ನಾ). ಈಟಿ; ಭರ್ಜಿ (೪.೧೧-೪೫೬)

ಶಶ (ನಾ). ಮೊಲ (೩.೪-೬೫೩)

ಶಶಶೃಂಗ (ನಾ). ಮೊಲದ ಕೊಂಬು, -ಕೋಡು(೨.೧೦-೭೫೧)

ಶಶಾಂಕ (ನಾ). ಚಂದ್ರ (೩.೫-೧೨೨)

ಶಾದ್ವಲ (ಗು). ಹಸಿರಾದ ಹುಲ್ಲು (೧.೭-೧೭೨) (೧.೧೧-೧೮೬)

ಶಾಪ (ನಾ). ಪ್ರಮಾಣ; ಪ್ರತಿಜ್ಞೆ (೨.೯-೧೯)

ಶಾಪಹತ (ನಾ). ಶಾಪಕ್ಕೆ ಗುರಿಯಾದವನು; ಶಪಿಸಲ್ಪಟ್ಟವನು (೧.೧೦-೧೩೬)

ಶಾಬ (ನಾ). (ಯಾವುದಾದರೂ ಪ್ರಾಣಿಯ) ಮರಿ; ಪೋತ (೧.೭-೧೯೨)

ಶಾರ್ದೂಲ (ನಾ). ಉತ್ತಮ; ಶ್ರೇಷ್ಠ ಎಂಬ ಅರ್ಥದಲ್ಲಿ ಸಮಾಸದ ಕೊನೆಯಲ್ಲಿ ಸೇರುವ ಶಬ್ದ (೧.೨-೧೩) (೧.೯-೪೨೩)

ಶಿಂಶುಪ (ನಾ). ಅಶೋಕ ವೃಕ್ಷ (೩.೨-೨೨೪)(೩.೪-೨೮೪)

ಶಿಂಶುಮಾರ (ನಾ). ಮೊಸಳೆ; ನೆಗಳು (೪.೧-೨೩೧)

ಶಿಖರ (ನಾ). ಬೆಟ್ಟದ ತುದಿ; ಅಗ್ರಭಾಗ (೧.೮-೧೩೮)

ಶಿತ (ಗು). ಹರಿತವಾದ; ಚೂಪಾದ (೪.೨-೭೮)

ಶಿಬಿಕೆ (ನಾ). ೧. ಚಟ್ಟ; ಸಿದಿಗೆ (೧.೬-೨೦೯) ೨. ಅಂದಣ; ಪಲ್ಲಕ್ಕಿ (೪.೧೧-೨೮೮)

ಶಿರ (ನಾ). ಅಗ್ರಭಾಗ; ತುದಿ (೧.೧-೬೭೨), (೧.೧೧-೧)

ಶಿರೋಧರ, ಶಿರೋಧಿ (ನಾ). ಕತ್ತು; ಕೊರಳು (೪.೧-೨೨೦)

ಶಿಲೀಮುಖ, ಶಿಳೀಮುಖ (ನಾ). ಬಾಣ; ಶರ (೪.೮-೧೬೩)

ಶಿವಾಣಿ (ನಾ). ಶಿವನ ಹೆಂಡತಿ; ಪಾರ್ವತಿ (೩.೧೨-೫೮)

ಶಿಶಿರೋಪಚಾರ (ನಾ). ತಂಪನ್ನುಂಟು ಮಾಡುವ ಶುಶ್ರೂಷೆ; ಶೈತ್ಯೋಪಚಾರ (೧.೫-೪೩)

ಶಿಷ್ಟ (ಗು). ಯೋಗ್ಯವಾದ; ಉತ್ತಮವಾದ (೨.೫-೧೫೭)

ಶೀಕರ (ನಾ). ತುಂತುರು; ಹನಿ (೧.೧೧-೧೩೨)

ಶೀರ್ಣ (ಗು). ಒಣಗಿದ; ಬತ್ತಿದ (೧.೧೦-೧೭)

ಶುಕ್ತಿಕೆ, ಶುಕ್ತಿ (ನಾ). ಮುತ್ತಿನ ಅಥವಾ

ಕಪ್ಪೆಯ ಚಿಪ್ಪು (೧.೯-೫೪೬)

ಶುಕ್ಲ (ಗು). ಬಿಳುಪಾದ (೧.೩-೧೧೪)

ಶೂನ್ಯ (ಗು). ಖಾಲಿಯಾದ; ಬರಿದಾದ (೧.೬-೨೩೫)

ಶೂನ್ಯ (ನಾ). ನಿರ್ಜನವಾದ ಪ್ರದೇಶ; ಬಯಲು (೧.೫-೧೧)

ಶೃಂಖಲೆ, ಶೃಂಖಲ (ನಾ). ಸರಪಣಿ; ಸಂಕೋಲೆ (೧.೨-೫೬೦)

ಶೃಂಗ (ನಾ). ಪ್ರಾಣಿಯ ಕೊಂಬು,-ಕೋಡು (೨.೨-೯೩)

ಶೇಷೆ (ನಾ). ಆಶೀರ್ವಾದ ಪೂರ್ವಕವಾಗಿ ತಲೆಯ ಮೇಲೆ ಹಾಕುವ ಅಕ್ಷತೆ; ಸೇಸೆ (೧.೪-೧೬೫)

ಶೈಲ; ಶೈಳ (ನಾ). ಕಲ್ಲುಗಳಿಂದಾದುದು; ಬೆಟ್ಟ; ಪರ್ವತ (೧.೮-೩೮)

ಶೈವಲ, ಶೈವಳ (ನಾ). ನೀರಿನ ಮೇಲೆ ಬೆಳೆಯುವ ಪಾಚಿ; ಹಾವಸೆ (೧.೪-೫೧೬)

ಶೈಶವ (ನಾ). ಎಳಮೆ; ಶಿಶುತನ (೧.೨-೬೭೨)

ಶೋಣ (ಗು). ಕೆಂಪಾದ (೪.೧-೩೭೮)

ಶ್ಮಶ್ರು (ನಾ). ಗಡ್ಡ; ದಾಡಿ (೩.೫-೨೪೨)

ಶ್ಯಾಮ (ನಾ). ಕಪ್ಪುಮಿಶ್ರವಾದ ಕಡುಹಸುರು ಬಣ್ಣ (೧.೧-೪೯೮)(೧.೧೧-೧೮೭)

ಶ್ಯೇನ (ನಾ). ೧ ಗಿಡುಗ; ಡೇಗೆ ೨. ಒಂದು ಬಗೆಯ ಸೇನಾವ್ಯೂಹ (೩.೧೦-೧೮)

ಶ್ರೀ (ನಾ). ಸಿರಿ; ಸಂಪತ್ತು; ಐಶ್ವರ್ಯ (೧.೧ - ೨೮೫)

ಶ್ರೀಯುತ (ನಾ). ಐಶ್ವರ್ಯವಂತ (೩.೭-೧೫)

ಶ್ರುತ (ನಾ). ಪ್ರಸಿದ್ಧವಾದುದು (೨.೨-೭೪೯)

ಶ್ಲಾಘನೀಯ (ನಾ). ಹೊಗಳಲು ಅರ್ಹವಾದುದು; ಪ್ರಶಂಸಿಸಲು ಯೋಗ್ಯವಾದುದು (೧.೧೦-೪೫೩)

ಶ್ಲೇಷ್ಮ (ನಾ). ಶ್ಲೇಷ್ಮಗಳೆಂಬ ಶರೀರದಲ್ಲಿರುವ ಮೂರುಧಾತುಗಳಲ್ಲಿ ಒಂದು; ಕಫ (೨.೩-೩೯)

ಶ್ವೇತಪಕ್ಷ (ನಾ). ಪಾಡ್ಯದಿಂದ ಹಿಡಿದು ಪೌರ್ಣಿಮಿಯವರೆಗಿನ ಕಾಲಮಾನ; ಶುಕ್ಲಪಕ್ಷ (೪.೧೨-೪೪)

ಷಂಡ (ನಾ). (ಮರ, ಗಿಡ ಮುಂತಾದುವುಗಳ) ಗುಂಪು; ಸಮೂಹ; ಮೊತ್ತ (೨.೫-೪೦೦) (೪.೨-೧೯೩)

ಷಡುರಸ (ನಾ). ಉಪ್ಪು, ಕಾರ, ಸಿಹಿ, ಕಹಿ, ಹುಳಿ ಮತ್ತು ಒಗರು ಎಂಬ ಆರು ಬಗೆಯ ರುಚಿಗಳು,-ಭೋಜ್ಯರಸಗಳು (೧.೪-೩೦೨)

ಸಂಕ (ನಾ). ಸಣ್ಣ ತೊರೆ, ಹೊಳೆ, ಹಳ್ಳ ಮುಂತಾದುವುಗಳನ್ನು ದಾಟಲು ಅಡ್ಡ ಮರವನ್ನಿಟ್ಟು ಮಾಡುವ ಸೇತುವೆ; ಪೂಲು (೧.೩-೩೨೪)

ಸಂಕಾಶ (ಗು). ಸದೃಶವಾದ; ಸಮಾನವಾದ (೧.೯-೩೨೯) (೪.೧೧-೧೮೨)

ಸಂಕುಲ (ನಾ). ಗುಂಪು; ಸಮೂಹ (೧.೧-೫೩೩)(೧.೨-೨೫೩)

ಸಂಕ್ರಮಿಸು (ಕ್ರಿ). ಕೂಡು; ಸೇರು; ಒದಗು (೨.೯-೨೧೬)

ಸಂಕ್ಷೋಭಿತ (ಗು). ಕಲಕಿದ; ಕದಡಿದ; ಅಲ್ಲೋಲ ಕಲ್ಲೋಲವಾದ (೨.೯-

೨೫೦)

ಸಂಘಟ್ಟಿಸು (ಕ್ರಿ). ತಾಗು; ಘರ್ಷಿಸು (೧.೫–೨೩೦)

ಸಂಚಲಿತ, ಸಂಚಳಿತ (ಗು). ಕಂಪಿಸುತ್ತಿರುವ; ನಡುಗುತ್ತಿರುವ (೪.೧೧–೩೮೨)

ಸಂಜನಿಸು (ಕ್ರಿ). ೧. ಹುಟ್ಟು; ಮೂಡು (೧.೯–೫) ೨. ಒದರು; ಉಂಟಾಗು; ಸಂಭವಿಸು (೨.೨–೮೫೭)

ಸಂಜಾತೆ (ನಾ). ಜನಿಸಿದವಳು; ಹುಟ್ಟಿದವಳು (೧.೪–೨೩೨)

ಸಂಜ್ಞ (ಗು). ಎಚ್ಚರವಾಗಿರುವ; ಪ್ರಜ್ಞೆಯಿರುವ (೧.೬–೩೦೯)

ಸಂಜ್ಞೆ (ನಾ). ಎಚ್ಚರ; ಪರಿವೆ; ಬಾಹ್ಯ ಪರಿಜ್ಞಾನ (೨.೨–೮೫೭)

ಸಂತಪ (ನಾ). ದುಃಖ; ಅಳಲು (೩.೪–೩೫೪)

ಸಂತವಿಡು (ಕ್ರಿ). ಸಾಂತ್ವನಗೊಳಿಸು; ಸಮಾಧಾನಪಡಿಸು (೧.೬–೩೩)

ಸಂತುಷ್ಟ (ಗು). ತೃಪ್ತಿಹೊಂದಿದ, ತಣಿದ (೧.೭–೪೬)

ಸಂದಣಿಸು (ಕ್ರಿ). ಗುಂಪುಗೂಡು; ಒಟ್ಟಾಗು (೧.೪–೪೧೪)

ಸಂದರ್ಶನ (ನಾ). ನೋಡುವಿಕೆ; ಅವಲೋಕನ; ನೋಟ (೧.೭–೨) (೨.೨–೮೪೦)

ಸಂದಿಗ್ಧತೆ (ನಾ). ಜಟಿಲವಾದ ಪರಿಸ್ಥಿತಿ; ಇಕ್ಕಟ್ಟು (೧.೫–೧೭೬)

ಸಂಧಾರಣ (ನಾ). ಹಿಡಿಯುವಿಕೆ; ಆಧಾರವಾಗಿರುವಿಕೆ (೨.೭–೧೮೬)

ಸಂಪದ (ನಾ). ಸಿದ್ಧಿ; ಸಾಧನೆ (೧.೪–೩೭೨)

ಸಂಪೂತೆ (ನಾ). ಪವಿತ್ರಳಾದವಳು (೨.೩–೩೮೫)

ಸಂಬುದ್ಧ (ಗು). ದೂರದೃಷ್ಟಿಯುಳ್ಳ; ಯುಕ್ತಾಯುಕ್ತ ವಿವೇಚನೆಯುಳ್ಳ (೧.೩–೯೮)

ಸಂಭ್ರಮ (ನಾ). ಉತ್ಸಾಹ; ಸಡಗರ (೨.೯–೧೮೪)

ಸಂರುದ್ಧ (ಕ್ರಿ). ತಡೆಯಲ್ಪಟ್ಟ; ಅಡ್ಡಿಮಾಡಲ್ಪಟ್ಟ (೪.೧೧–೩೯೭)

ಸಂಲಗ್ನ (ಗು). ದೃಢವಾಗಿ ಸೇರಿಕೊಂಡ, ಗಟ್ಟಿಯಾಗಿ ಕೂಡಿಕೊಂಡ (೧.೭–೨೧೩)

ಸಂವೇದ್ಯ (ನಾ). ಅನುಭವಕ್ಕೆ ಸಿಗುವಂಥದು; ಅನುಭವವೇದ್ಯ ವಾದುದು (೧.೨–೫೦೨) (೧.೯–೧೧೬)

ಸಂಶ್ರಯ (ನಾ). ಆಸರೆ; ನೆಲೆ; ಆಶ್ರಯ (೩.೧೩–೭೫)

ಸಂಹೃತಿ (ನಾ). ನಾಶ; ಧ್ವಂಸ (೪.೭–೪)

ಸಗ್ಗ, ಸಗ, ಸರ್ಗ (ನಾ). ದೇವತೆಗಳು ವಾಸಮಾಡುವ ಸ್ಥಳ; ಸುರಲೋಕ; ನಾಕ (೧.೯–೪೫೭)

ಸಚೀಶ (ನಾ). ಸಚಿವ (೩.೭–೨೬)

ಸಜ್ಜೆ, ಸೆಜ್ಜೆ (ನಾ). ಹಾಸಿಗೆ; ತಲ್ಪ (೧.೫.೫)(೨.೧–೩೮೪)

ಸಟೆ (ನಾ). ಹುಸಿ; ಸುಳ್ಳು (೧.೧೦–೧೩೯)

ಸಡ್ಡೆ (ನಾ). ಶ್ರದ್ಧೆ; ಆಸಕ್ತಿ, ಆದರ (೩.೨–೧೧೪)

ಸತ್ರ (ನಾ). ಉಚಿತವಾಗಿ ಆಹಾರದಾನ ನಡೆಯುವ ಅಥವಾ ಪ್ರವಾಸಿಗರು ಇಳಿದುಕೊಳ್ಳಲು ಅನುಕೂಲವಾದ ಧರ್ಮಶಾಲೆ; ಚತ್ರ. (೨.೪–೧೫೩)

ಸದೃಶ (ನಾ). ೧. ಸಮಾನನಾದವನು;

ಸಾಟಿಯಾದವನು (೧.೨-೭೨) ೨. (ಗು) ಒಂದಕ್ಕೊಂದು ಹೋಲಿಕೆಯಿರುವ; ಸಮಾನವಾದ (೧.೨-೨೧೩)

ಸದ್ದಿಲಿ (ಗು). ಶಬ್ದವಿಲ್ಲದ; ಪ್ರಶಾಂತವಾದ (೧.೬-೨೯೭)

ಸದ್ದಿಲಿತನ (ನಾ). ನಿಶ್ಯಬ್ದವಾಗಿರುವ ಸ್ಥಿತಿ; ಮೌನ (೨.೧೦-೩೯೪)

ಸನ್ನದ್ಧ (ಗು). ಸಜ್ಜಾದ; ಸಿದ್ಧವಾದ (೧.೩-೧೬೦)

ಸನ್ನಾಹ (ನಾ). (ಯುದ್ಧಕ್ಕೆ) ಅಣಿಮಾಡಿಕೊಳ್ಳುವುದು; ಸಿದ್ಧತೆ; ಸಜ್ಜು (೩.೧೨-೧೭)

ಸನ್ನಿಭ (ಗು). ಸಮಾನವಾದ; ಸದೃಶವಾದ (೨.೧-೩೪)

ಸಪ್ತಾರ್ಚಿ, ಸಪ್ತರಸನ (ನಾ). ಕಾಳಿ, ಕರಾಳಿ, ಮನೋಜವೆ, ಸುಧೂಮ್ರವರ್ಣೆ, ಸುಲೋಹಿತೆ, ಉಗ್ರೆ, ಪ್ರದೀಪ್ತೆ ಎಂಬ ಬೆಂಕಿಯ ಏಳು ನಾಲಗೆಗಳಿಂದ ಕೂಡಿದವನು; ಅಗ್ನಿ (೪.೧೦-೩೭೦)

ಸಪ್ರಾಣ (ನಾ). ಪ್ರಾಣಸಹಿತವಾದವಾದುದು; ಜೀವಸಮೇತವಾದುದು (೧.೯-೪೨೫)

ಸಪ್ರಾಣಿಸು (ಕ್ರಿ). ಜೀವೋತ್ಕರ್ಷವನ್ನು ಹೊಂದು; ಚೈತನ್ಯವನ್ನು ಪಡೆ (೧.೨-೨೪೮)

ಸಮತೆ (ನಾ). ಏಕರೀತಿಯಲ್ಲಿರುವುದು; ವೈವಿಧ್ಯವಿಲ್ಲದಿರುವುದು (೨.೬-೧೧೯)

ಸಮನಿಸು (ಕ್ರಿ). ೧. ಘಟಿಸು; ಒದಗು; ಸಂಭವಿಸು (೧.೨-೬೨೫) ೨. ಸೇರು; ಕೂಡು (೨.೧-೧೪೧)

ಸಮರು (ನಾ). ಅಲಂಕಾರ; ಶೃಂಗಾರ (೪.೧೨-೨೬೫)

ಸಮೀರಣ, ಸಮೀರ (ನಾ). ಗಾಳಿ; ವಾಯು (೧.೫-೧೪೮)

ಸಮೆ, ಸವೆ (ಕ್ರಿ). ೧. ಕಟ್ಟು; ನಿರ್ಮಿಸು; ಮಾಡು (೧.೨-೩೩೩) (೪.೧೧-೨೪೨) ೨. ರಚಿತವಾಗು; ನಿರ್ಮಾಣವಾಗು (೧.೭-೩೨೭) (೨.೩-೧೪೫)

ಸಮ್ಮಾರ್ಜನಂಗೆಯ್ಯು (ಕ್ರಿ). ತಿಕ್ಕು; ಉಜ್ಜು (೨.೨-೪೮೮)

ಸಮ್ಮಾರ್ಜನಿ (ಗು). ಪೊರಕೆ; ಕಸಬರಿಗೆ (೧.೩-೬೯)

ಸಯ್ಪು, ಸೈಪು (ನಾ). ಪುಣ್ಯ; ಸುಕೃತ (೧.೬-೩೪೨) (೨.೭-೨೬೨)

ಸರಿ (ನಾ). ಮಳೆ; ವೃಷ್ಟಿ (೨.೮-೨೦೭)

ಸರಿವು, ಸರುವು (ನಾ). ನೀರಿನ ಹರಿವು,-ಪ್ರವಾಹ (೧.೭-೯೦)

ಸರಿಸ (ನಾ). ಮುಂಭಾಗ; ಸಮ್ಮುಖ (೧.೨ -೧೦೮)

ಸರೀಸೃಪ (ನಾ). ಹಾವು ಮುಂತಾದ ಹರಿದಾಡುವ ಪ್ರಾಣಿ (೨.೩-೩೮)

ಸರು (ನಾ). (ಬೇಟೆಯ ಸಮಯದಲ್ಲಿ) ಕಾಡುಮೃಗಗಳು ಓಡಾಡುವ ಹಾದಿ,-ಜಾಡು (೧.೯-೩೦೩)

ಸರೋವನ (ನಾ). ಸರೋವರದ ನೀರು (೧.೯-೪೬೬)

ಸಲಕು, ಸಲಗೆ, ಸಲಗು (ನಾ). ಲೋಹ, ಮರ, ಬಿದಿರು ಮುಂತಾದುವುಗಳ ಉದ್ದವಾದ ತೆಳು ಕಂಬಿ, ಸರಳು, -ಪಟ್ಟಿ (೧.೧೧-೬೧)

ಸಲಿಲ, ಸಳಿಳ (ನಾ). ನೀರು; ಉದಕ; ಜಲ (೧.೪-೫೧೭) (೧.೭-೩೫)

ಸವಡಿಗಟ್ಟು (ಕ್ರಿ). ಜೋಡಿಸಿಕಟ್ಟು; ಒಟ್ಟು

ಮಾಡು (೨.೨-೪೦)

ಸವತಿ ಮಚ್ಚರ (ನಾ). ಸಪತ್ನಿಯರಲ್ಲಿ ಪರಸ್ಪರವಿರುವ ಮಾತ್ಸರ್ಯ; - ಹೊಟ್ಟೆಕಿಚ್ಚು (೨.೧-೯೭)

ಸವನೋತ್ಸವ (ನಾ). ಮಂಗಳಕರವಾದ ಜಲ, ಹಾಲು ಮುಂತಾದುವುಗಳನ್ನು ದೇವರಿಗೆ ಎರೆಯುವ ಸಮಾರಂಭ; ಅಭಿಷೇಕ ಮಾಡುವ ಉತ್ಸವ (೪.೧೩-೨೬)

ಸವೆಸು (ಕ್ರಿ). ಖರ್ಚುಮಾಡು; ವಿನಿಯೋಗಿಸು. (೨.೫-೨೧೮)

ಸವ್ಯ (ಗು). ಎಡಗಡೆಯ; ಎಡಪಕ್ಕದ (೩.೧೦-೩೦)

ಸಸಿನೆಗೆಯ್ (ಕ್ರಿ). ಸರಿಪಡಿಸು; ಓರಣಗೊಳಿಸು; ಸರಿಮಾಡು (೪.೩-೧೭೭)

ಸಹ, ಸಹ್ಯ, ಸಹ್ಯಾದ್ರಿ (ನಾ). ೧. ಸಪ್ತಕುಲ ಪರ್ವತಗಳ ಸಾಲಿನಲ್ಲಿ ಒಂದು ಪರ್ವತ (೩.೧-೨೫೪) (೩.೧೨-೧೯೬) (೪.೧೩-೭) [೧. ಮಹೇಂದ್ರ, ಮಲಯ, ಸಹ್ಯ, ಶುಕ್ತಿಮಾನ್, ಋಕ್ಷ, ವಿಂಧ್ಯ ಮತ್ತು ಪಾರಿಯಾತ್ರ ಎಂಬ ಏಳು ಕುಲಗಿರಿಗಳಲ್ಲಿ ಒಂದು. ೨. (ಗೋದಾವರಿ ನದಿಯು ಹುಟ್ಟುವ) ದಕ್ಷಿಣದ ವಾಯವ್ಯ ಪ್ರದೇಶದ ಘಟ್ಟದ ಸಾಲು ಮತ್ತು ಘಟ್ಟದ ಜಿಲ್ಲೆ; ಮಲೆನಾಡು]

ಸಹಸ್ರಕರ, ಸಹಸ್ರಾಂಶು (ನಾ). ಅಸಂಖ್ಯಾತವಾದ ಕಿರಣಗಳುಳ್ಳವನು; ಸೂರ್ಯ (೪.೧-೮೮)

ಸಹಸ್ರಾರ, ಸಹಸ್ರದಲ (ನಾ). ಸಾವಿರ ದಳಗಳನ್ನೊಳಗೊಂಡುದು; ತಾವರೆ (೪.೧೩-೬)

ಸಳವ, ಸಾಳುವ (ನಾ). ಬೇಟೆಗಾಗಿ ಪಳಗಿಸುವ ಒಂದು ಬಗೆಯ ಹಕ್ಕಿ; ಗಿಡುಗ; ಡೇಗೆ (೩.೪-೭೦೮)

ಸಾಂತ (ನಾ). ಕೊನೆಯನ್ನುಳ್ಳುದು; ಅಂತ್ಯವನ್ನುಳ್ಳುದು (೧.೯-೫೫೨)

ಸಾಂದ್ರ (ಗು). ದಟ್ಟವಾದ; ನಿಬಿಡವಾದ (೧.೭-೪೨೯)

ಸಾಜ (ಗು). ಸಹಜವಾದ; ಸ್ವಾಭಾವಿಕವಾದ (೨.೧-೯೭)

ಸಾತ್ತ್ವಿಕ (ಗು). ಸತ್ತ್ವಗುಣದಿಂದ ಕೂಡಿದ; ಒಳ್ಳೆಯ ಗುಣವನ್ನು ಹೊಂದಿದ (೨.೧-೨೩೧)

ಸಾದರ (ಗು). ಆದರದಿಂದ ಕೂಡಿದ; ಮರ್ಯಾದೆಯಿಂದ ಕೂಡಿದ (೧.೧೦-೩೨೨)

ಸಾದೃಶ್ಯ (ನಾ). ಹೋಲಿಕೆ; ಒಂದೇ ರೀತಿ ಇರುವಿಕೆ (೧.೭-೧೨)

ಸಾನು (ನಾ). ಬೆಟ್ಟದ ಮೇಲಿನ ಮಟ್ಟಸವಾದ ಮೇಲ್ಮೈಯುಳ್ಳ ಹರವಾದ ಪ್ರದೇಶ, ಪ್ರಸ್ಥಭೂಮಿ. (೨.೧-೪೩೪)

ಸಾಯಂ (ಅ). ಸಾಯಂಕಾಲದಲ್ಲಿ; ಸಂಜೆಯಲ್ಲಿ (೨.೨-೮೭೨)

ಸಾರ (ನಾ). ಸಣ್ಣ ತೊರೆ, ಹಳ್ಳ ಮುಂತಾದುವನ್ನು ದಾಟಲು ಹಾಕುವ ಮರದ ಅಡ್ಡಗಟ್ಟೆ; ಸಂಕ; ಪೂಲು (೩.೯-೧೯೪)

ಸಾರಸ (ನಾ). ಬಕ; ಕೊಕ್ಕರೆ (೧.೧೧-೧೫೭)

ಸಾರಸನ (ನಾ). ಡಾಬು; ಒಡ್ಯಾಣ (೧.೧-೪೨೭)

ಸಾರೆ (ನಾ). ಹತ್ತಿರ; ಸಮೀಪ (೧.೩-

೩೪೧)

ಸಾರ್ತರ್ (ಕ್ರಿ). ಹತ್ತಿರಕ್ಕೆ ಬರು; ಸಮೀಪಿಸು (೧.೧೧-೧೧೬)

ಸಾರ್ (ನಾ). ಸಾರ್ದು (ಭೂತನ್ಯೂ). ದೂರಸರಿ; ದೂರ ಹೋಗು (೧.೫-೨೬೧)

ಸಾಲ, ಸಾಳ (ನಾ). ಮರ; ವೃಕ್ಷ (೧.೯-೧೪೬)

ಸಾಲ್ಗೊಳ್ (ಕ್ರಿ). ಸಾಲಾಗಿರು; ಪಂಕ್ತಿಗೊಳ್ಳು (೧.೬-೨೭೧)

ಸಿಂಜಿನಿ (ನಾ). ಬಿಲ್ಲಿನ ಹೆದೆ; ಜ್ಯಾ (೧.೯-೧೩೧)

ಸಿಂಧು (ನಾ). ಕಡಲು; ಸಮುದ್ರ (೩.೧೦-೧೬)

ಸಿಂಪಿಸು (ಕ್ರಿ). ಚಿಮುಕಿಸು; ತಳೆ; ಸೇಚನ ಮಾಡು (೪.೪-೬೧)

ಸಿಂಹವಿಷ್ಟರ (ನಾ). ಸಿಂಹಪೀಠ (೩.೭-೬೦೭)

ಸಿಕತತಟ (ನಾ). ಮರಳಿನ ತೀರ,-ದಡ (೧.೭-೪೯)

ಸಿಕ್ತ (ಗು). ತೊಯ್ದ; ನೆನೆದ; ಆರ್ದ್ರವಾದ (೨.೨-೬೨)

ಸಿಗ್ಗು (ನಾ). ಖಿನ್ನತೆ; ಜುಗುಪ್ಸೆ; ಖೇದ (೧.೮-೧೭೩)

ಸಿಡಿರೋಷ (ನಾ). ಅತಿಯಾದ ರೋಷ; ಅಧಿಕವಾದ ಕ್ರೋಧ (೩.೧೨-೨೨೧)

ಸಿಡಿಲ್, ಸಿಡಿಲು (ನಾ). (ಸಾಮಾನ್ಯವಾಗಿ ಮಳೆಗಾಲದಲ್ಲಿ) ಎರಡು ಮೋಡಗಳ ಗುಂಪಿನ ನಡುವಿನ ಘರ್ಷಣೆಯ ಫಲವಾಗಿ ಜೋರಾದ ಶಬ್ದದೊಂದಿಗೆ ಗೋಚರಿಸುವ ವಿದ್ಯುತ್ಪ್ರವಾಹ (೧.೯-೪೫೭)

ಸಿಡುಕು (ಕ್ರಿ). ಕೋಪಗೊಳ್ಳು; ರೇಗು (೧.೮-೧೭೩)

ಸಿತ (ಗು). ಬಿಳಿಯ; ಶ್ವೇತ ವರ್ಣದ (೪.೫-೭೦)

ಸಿತಗೆ (ನಾ). ಜಾರೆ; ಸೂಳೆ (೧.೧೧-೩೭೪)

ಸಿತಾತಪತ್ರ, ಸಿತಚ್ಛತ್ರ (ನಾ). ಬಿಳಿಯಕೊಡೆ; ಶ್ವೇತಚ್ಛತ್ರ (೧.೯-೧೯೭)

ಸಿದಿಗೆ (ನಾ). ಹೆಣವನ್ನು ಸುಡಲು ಒಟ್ಟಿದ ಕಟ್ಟಿಗೆಯ ರಾಶಿ; ಚಿತೆ. (೪.೧೦-೨೧೪)

ಸಿಪಿಲೆ, ಚಿಪಿಲೆ, ಸಿಪಲೆ, ಸೀಪಲೆ (ನಾ). ತನ್ನ ಉದ್ದವಾದ ತೋಕೆಯನ್ನು ಸದಾ ಅಲುಗಾಡಿಸುತ್ತಿರುವ ಒಂದು ಬಗೆಯ ಹಕ್ಕಿ (೨.೨-೨೧)

ಸಿರಿಯಡಿ (ನಾ). ಶ್ರೇಷ್ಠವಾದ ಪಾದ; ದಿವ್ಯಸನ್ನಿಧಿ; ಶ್ರೀಪಾದ (೧.೨-೨೯೫)

ಸೀಕರಿಸು (ಕ್ರಿ). (ಆಲಂ) ಕೆರಳು, ಉಗ್ರವಾಗು (೧.೫-೫೧)

ಸೀತಾಳಿ, ಸೀತಾಳ (ನಾ). ಒಂದು ಬಗೆಯ ಸಸ್ಯ ಮತ್ತು ಅದರ ಹೂವು (೧.೪-೨೨೬)

ಸೀಮಂತರೇಖೆ (ನಾ). ಬೈತಲೆಯ ಗೆರೆ, -ಗೀರು (೨.೩-೧೫೦)

ಸೀರ್ಪುಲ್ (ನಾ). ಸಣ್ಣ ಹುಲ್ಲು ಕಡ್ಡಿ (೨.೫-೩೦೬) (೩.೪-೫೧೬)

ಸುಗ್ಗಿ (ನಾ). ಬೆಳೆಯನ್ನು ಕುಯ್ಯುವ ಕಾಲ; ವಸಂತಕಾಲ (೧.೨-೨೫೪)

ಸುಟ್ಟು (ಕ್ರಿ). ಬೆರಳಿನಿಂದ ತೋರಿಸು, -ನಿರ್ದೇಶಿಸು (ಸುಟ್ಟಿದೋರ್ಕೆ = ಬೆರಳನ್ನು ತೋರುವುದರ ಮೂಲಕ ಸೂಚಿಸುವಿಕೆ) (೨.೧೦-೩೦೮)

ಸುಟ್ಟುರೆ, ಸುಂಟುರುಗಾಳಿ (ನಾ).

ವರ್ತುಲಾಕಾರವಾಗಿ ಸುತ್ತಿ ಸುತ್ತಿ ರಭಸವಾಗಿ ಬೀಸುವ ಗಾಳಿ; ಚಕ್ರಗಾಳಿ; ಆವರ್ತ ಮಾರುತ (೧.೩-೫೭)

ಸುಡುನೆಲ, ಸುಡುಗಾಡು (ನಾ). ಹೆಣಗಳನ್ನು ಸುಡುವ ಸ್ಥಳ; ಮಸಣ (೧.೬-೨೦೯)

ಸುಧಾಂಶು, ಸುಧಾಂಗ (ನಾ). ಅಮೃತವನ್ನು ಅಂಗದಲ್ಲಿ ಹೊಂದಿರುವವನು; ಚಂದ್ರ; ಸುಧಾಕರ (೧.೬-೨೫೯)

ಸುಪ್ತ (ಗು). ನಿದ್ರೆಹೋದ; ಮಲಗಿದ (೨.೬-೨೨೭)

ಸುಭಗ (ಗು). ಚೆಲುವಾದ; ಸುಂದರವಾದ (೧.೨-೧೮೩)

ಸುಭಗ (ನಾ). ಇಂಪಾದುದು; ಹಿತವಾದುದು (೧.೧೧-೧೯೮)

ಸುಯಿದಾನ, ಸುಯಿಧಾನ, ಸುಯ್ದಾನ (ನಾ). ಕಾವಲು; ಕಾಪು; ರಕ್ಷಣೆ (೧.೩-೩೫೮)

ಸುಯಿಲು (ನಾ). (ಕೋಪ, ದುಃಖ ಮುಂತಾದುವುಗಳನ್ನು ವ್ಯಕ್ತ ಪಡಿಸುವ) ನಿಡಿದಾದ ಉಸಿರು; ನಿಟ್ಟುಸಿರು. (೨.೨-೮೫೮)

ಸುಯ್, ಸುಯಿ, ಸುಯ್ಯು (ಕ್ರಿ). ಸುಯ್ದು (ಭೂನ್ಯೂ) ಸುಯ್ವ (ಭವಿಕೃ) = ಉಸಿರಾಡು; ಶ್ವಾಸೋಚ್ಛ್ವಾಸ ಮಾಡು (೧.೩-೫೧೪) (ಚಿಂತೆ, ಆಯಾಸ, ಮೊದಲಾದುವುಗಳಿಂದ) ಏದುಸಿರು ಬಿಡು; ನಿಟ್ಟುಸಿರುಬಿಡು (೧.೬-೨೫೬)

ಸುಯ್ಪನಿ (ನಾ). ನಿಟ್ಟುಸಿರಿನಿಂದ ಕೂಡಿದ ಕಣ್ಣೀರು, ಶೋಕಾಶ್ರು (೧.೯-೫೯೩)

ಸುರ (ನಾ). ಅಮೃತವನ್ನು ಕುಡಿದವನು; ದೇವತೆ (೧.೩-೩೪೩)

ಸುರಚಾಪ (ನಾ). ಕಾಮನ ಬಿಲ್ಲು; ಇಂದ್ರ ಧನುಸ್ಸು (೧.೪-೨೨೨)

ಸುರಧುನಿ (ನಾ). ದೇವಲೋಕದ ನದಿ; ದೇವಗಂಗೆ (೧.೪-೫೧೭)

ಸುರನಿಮ್ನಗೆ (ನಾ). ಗಂಗಾನದಿ (೧.೯-೬೦೬)

ಸುರಭೂಜ (ನಾ). ದೇವಲೋಕದ ವೃಕ್ಷ; ಕಲ್ಪವೃಕ್ಷ (೪.೧೧-೧೬೮)

ಸುರಾಘಟ (ನಾ). ಹೆಂಡದ ಗಡಿಗೆ; ಮದ್ಯದ ಪಾತ್ರೆ (೧.೭-೪೫)

ಸುರೆ (ನಾ). ಹೆಂಡ; ಮದ್ಯ (೧.೩-೩೪೩)

ಸುರ್ಕು, ಸುಕ್ಕು (ನಾ). ತೆರೆಗಟ್ಟಿರುವುದು, ಪದರವಾಗಿರುವುದು (೨.೩-೧೦೪)

ಸುವಾಸಿನಿ (ನಾ). ೧. ಹೆಂಡತಿ; ಪತ್ನಿ (೨.೨-೫೭೨) ೨. ಮುತ್ತೈದೆ; ಸುಮಂಗಲಿ (೪.೫-೨೯೧)

ಸುಶ್ರೋಣಿ (ನಾ). ಸುಂದರವಾದ ನಿತಂಬವುಳ್ಳವಳು; ಚೆಲುವೆ (೧.೩-೨೯೫)

ಸುಷ್ಠು (ಅ). ಚೆನ್ನಾಗಿ, ಸರಿಯಾಗಿ (೪.೧೦-೯೯)

ಸುಸಿಲ್ (ಉ)(ನಾ) ಬೆಳಗಿನ ಸಮಯ; ಉಷಃಕಾಲ (೩.೨-೨೬೪)

ಸುಹೃತ್ತು (ನಾ). ಮಿತ್ರ; ಗೆಳೆಯ (೩.೧೦-೨೧೪)

ಸೂಕರ (ನಾ). ಹಂದಿ, ವರಾಹ (೩.೭-೧೧೫)

ಸೂಟಿ (ನಾ). ಚಳಕ; ಕೌಶಲ (೨.೨-೫೫೨)

ಸೂಡು (ಕ್ರಿ). ೧. (ಮಾಲೆ, ಹಾರ ಮೊದಲಾದುವನ್ನು) ತೊಡಿಸು; ಹಾಕು (೧.೨-೬೦೫) ೨. (ಹೂವು

ಮುಂತಾದುವುಗಳನ್ನು)ಮುಡಿ; ಧರಿಸಿ; ತಾಳು (೨.೨–೧೨೨)

ಸೂಡು (ನಾ). ಚಿತೆ (೧.೬–೧೯೦)

ಸೂತ್ರ (ನಾ). ದಾರ; ನೂಲು (೧.೯–೩)

ಸೂದನ (ನಾ). ಕೊಲ್ಲುವಿಕೆ; ಕೊಲೆ (೨.೨–೮೪೫) (೪.೧–೩೮೫)

ಸೂನು (ನಾ). ಮಗ; ಪುತ್ರ (೧.೪–೨೩೦)

ಸೂರುಳು (ನಾ). ಆಣೆ; ಶಪಥ; ಪ್ರತಿಜ್ಞೆ (೧.೨–೪೦೦)

ಸೂರೆಹೋಗು (ಕ್ರಿ). ಲೂಟಿಯಾಗು; ಕೊಳ್ಳೆಯಾಗು (೨.೨–೬೧೨)

ಸೂರ್ಯತನಯೆ (ನಾ). ಯಮುನಾ ನದಿ; ಯಮುನೆ (೧.೯–೬೦೫)

ಸೂಳ್ (ನಾ). ವರ್ಷ; ಸಂವತ್ಸರ (೧.೧೦–೩೨೯)

ಸೃಷ್ಟಿ (ನಾ). ನಿಸರ್ಗ; ಪ್ರಕೃತಿ (೧.೧೦–೬)

ಸೆಜ್ಜವನೆ, ಸಜ್ಜೆಮನೆ, ಸಜ್ಜವನೆ, ಸೆಜ್ಜೆ ಮನೆ (ನಾ). ಮಲಗುವ ಮನೆ; ಶಯ್ಯಾಗೃಹ (೧.೩–೩೫೪)

ಸೆಡಮ (ಕ್ರಿ). ಸೆಡೆದುಕೊಳ್ಳು; ಮುದುರಿಕೊಳ್ಳು (೧.೬–೧೫೧)

ಸೆಡೆ (ಕ್ರಿ). ೧. (ಕೋಪ, ಅಸಮಾಧಾನಗಳಿಂದ) ಬೀಗಿರು; ಗಂಭೀರವಾಗಿರು (೧.೩–೩೫೭) ೨. ನಡುಗು; ಅದುರು (೧.೧೧–೨೦೩) ೩. ಸಂಕೋಚಗೊಳ್ಳು; ಮುದುಡು (೨.೩–೫೧) ೪. ಹೆದರು; ಭಯಪಡು (೨.೫–೧೫೭)

ಸೆಣಸು (ಕ್ರಿ). ಕಾದಾಡು; ಹೋರಾಡು (೧.೪– ೪೬೮)

ಸೆರೆ, ಸೆಲೆ (ನಾ). ನರ; ರಕ್ತನಾಳ (೧.೩–೪೭೨)

ಸೇಂದ್ರಿಯ (ಗು). ಇಂದ್ರಿಯಗಳಿಂದ ಕೂಡಿದ; ಇಂದ್ರಿಯ ಸಹಿತವಾದ (೩.೯–೧೧೩) (೪.೧೧–೫೧೯)

ಸೇದೆ (ನಾ). ದಣಿವು; ಆಯಾಸ; ಬಳಲಿಕೆ (೧.೨–೪೨೬) (೧.೬–೨೯೩)

ಸೇವಿಸು (ಕ್ರಿ). ಸೇವೆಮಾಡು; ಶೂಶ್ರೂಷೆಮಾಡು (೧.೪–೨೫೨)

ಸೈಗೆಡಹು (ಕ್ರಿ). ಪೂರ್ತಿಯಾಗಿ ಕೆಳಕ್ಕೆ ಬೀಳಿಸು; ಕೆಳಗುರುಳಿಸು (೧.೩–೧೮೫)

ಸೈಪು (ನಾ). ಒಳ್ಳೆಯದು; ಲೇಸು (೩.೧–೬೦೬)

ಸೊಗ (ನಾ). ದೈಹಿಕವಾಗಿ ಮತ್ತು ಮಾನಸಿಕವಾಗಿ ಪಡೆಯುವ ಆನಂದಾನುಭವ; ಸುಖ; ಸಂತೋಷ (೧.೧೦–೧೮೫)

ಸೊಗಂಬಡು (ಕ್ರಿ). ಹಿಗ್ಗು; ಆನಂದಿಸು; ಸುಖಿಸು (೧.೨–೫೫೩)

ಸೊಗಯಿಸು (ಕ್ರಿ). ಸಂತೋಷಗೊಳ್ಳು; ಹಿಗ್ಗು (೨.೨–೧೭೦)

ಸೊಗಸು (ನಾ). ಸಂತೋಷ; ಸುಖ (೧.೭–೧೮೦)

ಸೊಡರು (ನಾ). ದೀವಿಗೆ; ದೀಪ (೧.೨–೩೬೦) (೧.೧೧–೧೮೯)

ಸೊಣಗ, ಸುನಕ, ಸೊಣಕ (ನಾ). ನಾಯಿ; ಶ್ವಾನ (೩.೩–೨೧೮)

ಸೊದೆ, ಸುದೆ (ನಾ). ಅಮೃತ; ಪೀಯೂಷ (೧.೯–೫೮೨)

ಸೊನೆ (ನಾ). ಕೆಲವು ಮರಗಳ ತೊಗಟೆಗಳಿಂದ ಸುರಿಯುವ ಹಾಲು, –ರಸ (೨.೨–೮೧೫)

ಸೋಂಕು (ನಾ). ಸ್ಪರ್ಶ; ಮುಟ್ಟುವಿಕೆ (೧.೨–೫೫೩)

ಸೋನೆ (ನಾ). ಮಳೆ; ವೃಷ್ಟಿ (೧.೯–

೫೮೨)

ಸೋಮ (ನಾ). ಅಮೃತ; ಸುಧೆ (೩.೫-೧೬೯)

ಸೋವತ (ನಾ). ಬಲಿ; ಅರ್ಪಣೆ; ಆಹುತಿ (೨.೬-೨೯೦)

ಸೋವು (ಕ್ರಿ). (ಬೇಟೆಗಾಗಿ ಪ್ರಾಣಿಗಳನ್ನು) ಅಡಗಿರುವ ಪೊದೆ ಇತ್ಯಾದಿ ಸ್ಥಳಗಳಿಂದ ಎಬ್ಬಿಸಿ ಹೊರಡಿಸು. (೧.೯-೧೧೮) (೨.೬-೧೮೩)

ಸೌಭಾಗ್ಯ (ನಾ). ಸುದೈವ; ಅದೃಷ್ಟ (೧.೪-೨೮೧)

ಸೌಳನೆ, ಸೌಳಗೆ (ಅ). ಸೀಳುವಾಗಿನ ಶಬ್ದವನ್ನು ಸೂಚಿಸುವ ಒಂದು ಅನುಕರಣ ಅವ್ಯಯ (೩.೯-೨೨೩)

ಸ್ತಬಕ (ನಾ). ೧. ಕುಚ್ಚು; ಗೊಂಡೆ (೨.೨-೭೬೮) ೨. ಸಮುದಾಯ; ಸಮೂಹ (೩.೧-೭೭)

ಸ್ತೂಪ (ನಾ). ಶಕ್ತಿ; ಬಲ (೪.೧-೧೬೮)

ಸ್ತೋಮ (ನಾ). ಗುಂಪು; ಸಮೂಹ (೧.೪-೪೬೬) (೩.೧-೨೫೬)

ಸ್ತ್ರೈಣ (ಗು). ಹೆಣ್ತನದ; ಸ್ತ್ರೀ ಸ್ವಭಾವದ (೩.೭-೪೪೮)

ಸ್ಥವಿರೆ (ಗು). ಮುದುಕಿ; ವೃದ್ಧೆ (೧.೧-೫೫೩) (೧.೬-೨೭೬)

ಸ್ಥಾಣು (ಗು). ಸ್ಥಿರವಾದ, ಭದ್ರವಾದ, ಅಚಲವಾದ (೪.೧೦-೨೮೬)

ಸ್ನಾತ (ಗು). ಸ್ನಾನಮಾಡಿದ; ಮಿಂದ (೧.೨ - ೯೧)

ಸ್ನಿಗ್ಧ (ಗು). ಹಿತಕರವಾದ; ಸೌಮ್ಯವಾದ (೧.೩-೩೩)

ಸ್ಯಂದನ (ನಾ). ರಥ (೧.೩-೧೧೮) (೧.೪-೪೮೮) (೨.೨-೩೮೪)

ಸ್ರೋತ (ನಾ). ನೀರಿನ ಪ್ರವಾಹ; ಹರಿಯುವಿಕೆ (೪.೧೩-೧೯೭)

ಸ್ರೋತಸ್ವಿನಿ (ನಾ). ನದಿ; ಹೊಳೆ (೧.೯-೪೩)

ಸ್ವನ (ನಾ). ಶಬ್ದ; ಸದ್ದು; ಧ್ವನಿ (೧.೫-೧೫೪)

ಸ್ವಯಂಭು (ನಾ). ಬ್ರಹ್ಮ (೪.೬-೫೮)

ಸ್ವೈರ (ಗು). ಮನಬಂದಂತೆ ನಡೆಯುವ; ಸ್ವಚ್ಛಂದ ವರ್ತನವುಳ್ಳ (೧.೧೧-೪೦೨)

ಹಂಜರ (ನಾ). ಹಕ್ಕಿಗಳನ್ನು ಅಥವಾ ಮೃಗಗಳನ್ನು ಕೂಡಿಡುವ ಸಾಧನ; ಪಂಜರ (೩.೮-೫೪)

ಹಂತಿ (ನಾ). ಗುಂಪು; ಸಮೂಹ (೨.೬-೮೧)

ಹಂಬು (ಕ್ರಿ). (ಬಳ್ಳಿಯಂತೆ) ಹೋಗು,-ಹರವಿಕೊಳ್ಳು,-ಹರಡಿಕೊಳ್ಳು(೧.೨-೫೭೧)

ಹಂಸ (ನಾ). ಒಂದು ಬಗೆಯ ಬಿಳಿಯ ಬಣ್ಣದ ಪಕ್ಷಿ; ಅಂಚೆ; ಮರಾಲ (೧.೧-೩೯೮)

ಹಗುರ, ಹಗುರು (ನಾ). ಅಲ್ಪವಾದುದು; ಕ್ಷುಲ್ಲಕವಾದುದು (೨.೧-೧೨೮)

ಹಣುಗು (ಕ್ರಿ). ಬಾಗು; ಬಗ್ಗು; ಮಣಿ (೧.೬-೧೫೧)

ಹತಿ (ನಾ). ಹೊಡೆಯುವಿಕೆ (೨.೨-೮೨೫)

ಹತ್ತೆ (ನಾ). ಹತ್ತಿರ, ಸಮೀಪ (೧.೯-೧೩೬)

ಹದಗೆಂಪು (ನಾ). ಹದವಾದ ಕೆಂಪುಬಣ್ಣ (೧.೪-೧೪೫)

ಹದಿಬದೆ, ಅದೆಬದೆ, ಪತಿಬ್ರತೆ, ಹದಿಬತೆ

(ನಾ). ಗಂಡನ ಸೇವೆಯನ್ನೇ ವ್ರತವಾಗಿ ಉಳ್ಳವಳು; ಗರತಿ; ಸಾಧ್ವಿ (೨.೧-೩೫೨)

ಹಮ್ಮಯಿಸು, ಹಮ್ಮೈಸು (ಕ್ರಿ). ಎಚ್ಚರ ತಪ್ಪು; ಮೂರ್ಛೆ ಹೋಗು; ಮೈಮರೆ (೧.೪-೨೯) (೨.೨-೩೧೧)

ಹರಕೆ (ನಾ). ಅಭೀಷ್ಟ ಸಿದ್ಧಿಗಾಗಿ ದೇವರಲ್ಲಿ ಮಾಡಿಕೊಳ್ಳುವ ಸೇವೆಯ ನಿರ್ಧಾರ; ಸಂಕಲ್ಪ (೧.೨-೩೦೦)

ಹರಾದ್ರಿ (ನಾ). ಶಿವನ ವಾಸಸ್ಥಾನವಾದ ಬೆಟ್ಟ; ಕೈಲಾಸ ಪರ್ವತ (೩.೭-೧೦೭) (೪.೧೩-೧೬೦)

ಹರಿಗೋಲು (ನಾ). ನೀರನ್ನು ಭೇದಿಸಿಕೊಂಡು ಹೋಗುವ ಸಾಧನ; ನಾವೆ; ದೋಣಿ (೧.೩-೩೪೦)

ಹರಿಣ (ನಾ). ಹುಲ್ಲೆ; ಜಿಂಕೆ (೧.೨-೩೦೯)

ಹರಿಣಿ (ನಾ). ಹೆಣ್ಣು ಜಿಂಕೆ; ಎರಳೆ (೧.೨-೩೧೦)

ಹರಿತ (ಗು). ಹಸಿರಾದ; ಹಸಿರು ಬಣ್ಣದ (೧.೨ -೧೨೦)

ಹರಿಬ (ನಾ). ಕಾಳಗ; ಯುದ್ಧ (೪.೮-೧೮)

ಹರೆ, ಪರೆ (ನಾ). ಮರದ ಕೊಂಬೆ,-ರೆಂಬೆ (೧.೯-೨೮೭)

ಹರ್ಮ್ಯ (ನಾ). (ಶ್ರೀಮಂತರ) ಉಪ್ಪರಿಗೆ ಸೌಧ; ಮಹಲು (೨.೧-೧೬೨)

ಹರ್ಯಕ್ಷ (ನಾ). ಸಿಂಹ (೧.೪-೨೮೭) (೨.೪-೪)

ಹರ್ಷಧೃತಿ (ನಾ). ಸಂತೋಷದಿಂದ ಕೂಡಿದ ಧೈರ್ಯ (೨.೪-೪೦೯)

ಹಲ (ನಾ). ನೇಗಿಲು; ರೆಂಟೆ (೩.೯-೨೪೮)

ಹಸೆ (ನಾ). ಹಾಸಿದುದು; ಹಾಸುಗೆ; ಹಾಸು (೧.೯-೫೬)

ಹಳು (ನಾ). ಕಾಡು; ಅರಣ್ಯ (೩.೧೪-೯೩)

ಹಾರೈಸು (ಕ್ರಿ). ಬಯಸು; ಅಪೇಕ್ಷಿಸು (೨.೬-೧೭)

ಹಾಲಾಹಲ, ಹಾಳಾಹಳ (ನಾ). ೧. ಘೋರವಾದ ಒಂದು ಬಗೆಯ ವಿಷ(೧.೫-೨೬೨) ೨. ಸಮುದ್ರ ಮಥನ ಕಾಲದಲ್ಲಿ ಉದ್ಭವವಾದ ಮಹಾವಿಷ (೧.೬-೨೮೧)

ಹಾಲುಮಡ್ಡಿ, ಹಾಲಮಡ್ಡಿ, ಹಾಲ್ಮಡಿ (ನಾ). ಒಂದು ಬಗೆಯ ಸುಗಂಧ ದ್ರವ್ಯ (೨.೨-೮೧೬)

ಹಾವಸೆ, ಪಾವಸೆ, ಪಾಚಿ (ನಾ). ನೀರಿನ ಮೇಲೆ ಅಥವಾ ತೇವವಾದ ಬಂಡೆಗಳ ಮೇಲೆ ಬೆಳೆಯುವ ಒಂದು ಬಗೆಯ ಹಸುರು ಸಸ್ಯ; ಶೈವಾಲ (೧.೨-೨೭೧)

ಹಿತಸಖ (ನಾ). ಒಳ್ಳೆಯದನ್ನು ಬಯಸುವ ಸ್ನೇಹಿತ; ಶುಭವನ್ನು ಕೋರುವ ಗೆಳೆಯ (೧.೩-೯೪)

ಹಿತಾಶಂಸೆ (ನಾ). ಒಳ್ಳೆಯದಾಗಲೆಂಬ ಮಾತು; ಆಶೀರ್ವಚನ (೧.೧೦-೨೨೭)

ಹಿಮರೋಚಿ, ಹಿಮರುಚಿ (ನಾ). ತಂಪಾದ ಕಿರಣಗಳಿಂದ ಕೂಡಿದವನು; ಚಂದ್ರ (೩.೧೨-೨೫೬)

ಹಿರಣ್ಯರೇತ (ನಾ). ಅಗ್ನಿ (೩.೬-೨೯೭)

ಹಿರಣ್ಯರೇತಜ (ನಾ). ಅಗ್ನಿಪುತ್ರ; ನೀಲ (೩.೬-೨೯೭)

ಹುಟ್ಟಿ, ಹುಟ್ಟು (ನಾ). (ವಿಶೇಷವಾಗಿ) ಜೇನಿನಗೂಡು (೧.೨-೫೯೧)

ಹುತವಹ (ನಾ). ಹವಿಸ್ಸನ್ನು ದೇವತೆಗಳಿಗೆ ಒಯ್ದು ಮುಟ್ಟಿಸುವವನು; ಅಗ್ನಿ (೧.೧೦-೮೮)

ಹುತಾಶನ (ನಾ). ಹೋಮಮಾಡಿದುದನ್ನು ಆಹಾರಕ್ಕಾಗಿ ಸ್ವೀಕರಿಸುವನು; ಹವಿಸ್ಸನ್ನು ಸೇವಿಸುವವನು; ಅಗ್ನಿ (೧.೬-೨೨೫) (೪.೧೨-೭೯)

ಹೂಗೆಲಸಿ (ನಾ). ಹೂವಿನಲ್ಲಿ ವ್ಯವಹರಿಸುವಂತಹುದು; ದುಂಬಿ (೧.೨-೬೩೦)

ಹೃಚ್ಛಲ್ಯ (ನಾ). (ಆಲಂ) (ಹೃದಯದ) ವ್ಯಥೆ; ನೋವು (೪.೧೧-೩೪೫)

ಹೃತ್ತಾಪ (ನಾ). ಹೃದಯದತಾಪ; ಮನಸ್ಸಿನ ಬೇಗುದಿ (೧.೧-೨೧೮) (೨.೮-೧೮೮)

ಹೃತ್ಪಿಂಡ (ನಾ). ಹೃದಯ; ಎದೆಗುಂಡಿಗೆ (೧.೩-೪೫೪)

ಹೃದ್ಗಮ್ಯ (ನಾ). ಹೃದಯಸ್ಪರ್ಶಿಯಾದುದು; ಮನಮುಟ್ಟುವಂತಹದು (೧.೨ - ೧೧೯)

ಹೃಷ್ಟ (ಗು). ರೋಮಾಂಚಿತಗೊಂಡ; ಪುಳಕಗೊಂಡ (೧.೨-೧೨೨)

ಹೆಗ್ಗಣ್, ಹೆಗ್ಗಣ್ಣು (ನಾ). ದೊಡ್ಡದಾದ ಕಣ್ಣು; ವಿಶಾಲವಾದ ಕಣ್ಣು (೧.೧೦-೧೨೩) (೩.೭-೨೫೬)

ಹೆಡಗೆವಳ್ಳಿ, ಹೆಡಗೆಬಳ್ಳಿ (ನಾ). ಒಂದು ಬಗೆಯ ಬಳ್ಳಿ (೧.೧೧-೬೦)

ಹೇರಡವಿ (ನಾ). ದೊಡ್ಡಕಾಡು; ದಟ್ಟವಾದ ಅರಣ್ಯ (೧.೪-೧೭೩)

ಹೇರಳ (ಗು). ಆಧಿಕ್ಯ; ಹೆಚ್ಚಳ (೧.೮-೧೨)

ಹೇರಾಳ (ಗು). ಅಧಿಕವಾದ; ಅತಿಶಯವಾದ (೧.೫-೧೦೩)

ಹೇಷಿತ (ನಾ). ಹೇಷಧ್ವನಿ; ಕುದುರೆಯ ಕೆನೆತ (೩.೧-೮೩)

ಹೇಳಿಗೆ, ಪೆಟ್ಟಿಗೆ (ನಾ). (ವಸ್ತುಗಳನ್ನು ತುಂಬಿಡಲು ಮಾಡಿದ ಲೋಹ ಅಥವಾ ಮರದ) ಸಂದೂಕ (೧.೩-೩೫೯)

ಹೊಂಪುಳಿ, ಪೊಂಪುಳಿ (ನಾ). ಹೆಚ್ಚಳ; ಆಧಿಕ್ಯ; ಅತಿಶಯ. (೨.೮-೧೭೯)

ಹೊಂಬಳದಿ (ನಾ). ಚಿನ್ನದ ಬಣ್ಣದ ಹಳದಿ; ಹೊಂಬಣ್ಣ (೨.೯-೪೭೯)

ಹೊಡೆ (ನಾ). ಪಕ್ಕ; ಬದಿ (೧.೪-೧೭೩)

ಹೊದರು (ನಾ). ದಟ್ಟವಾಗಿರುವ ಗಿಡಮರಗಳ ಸಮೂಹ; ಪೊದೆ; ಹಿಂಡಲು (೨.೨-೮೯೩)

ಹೊಯ್ ಕೈ, ಹೊಯಿಕೈ (ನಾ). ಎಣೆ; ಸರಿಸಮಾನ; ಸಾಟಿ (೨.೨-೩೪೨)

ಹೊಯ್ಲು (ನಾ). ಏಟು; ಪೆಟ್ಟು; ಹೊಡೆತ (೧.೫-೩೭)


ಹೊಲಬುಗೆಡು (ಕ್ರಿ). ದಾರಿ ತಪ್ಪಿಸಿಕೊಳ್ಳು; ಮಾರ್ಗ ಕಾಣದಾಗು (೩.೧೩-೯೧)

ಹೊಳವು (ನಾ). ಮಳೆ ನಿಂತ ನಂತರ ಉಂಟಾಗುವ ಬೆಳಕು; ಹೊರಪು (೧.೨-೧೭೫) (೩.೭-೧೭೦)

ಹೊಳೆ (ಕ್ರಿ). ತೋರು; ಕಾಣು; ಪ್ರಕಟವಾಗು (೧.೯-೩೦೬)

ಹೋರಿಗೋಡು (ನಾ). ಗಂಡು ಜಿಂಕೆಯ ಕೊಂಬು (೧.೭-೧೯೪)


ಹ್ರದ (ನಾ). ೧. ಆಳವಾದ ನೀರಿರುವ ಪ್ರದೇಶ; ಮಡು ೨. ಬೆಳಕಿನ ಕಿರಣ (೨.೫-೩೩)



ಶ್ರೀಕುವೆಂಪು ಸೃಜಿಸಿದ ಶ್ರೀರಾಮಾಯಣದರ್ಶನಂ ಆಧುನಿಕ ಸಾಹಿತ್ಯದ ಲೋಕೋತ್ತರ ಕೃತಿ. ಈ ಮಹಾಕಾವ್ಯವು ಕನ್ನಡ ಜನಮಾನಸವನ್ನು ಅಪ್ಪಿಕೊಂಡದ್ದು ಇದೀಗ ಇತಿಹಾಸ. ಈ ಮಹಾಕಾವ್ಯದ ಓದುವಿಕೆಯೇ ರಸಾನುಭೂತಿಯನ್ನು ಉಳ್ಳದ್ದು. ಈ ಮಹಾಕೃತಿಯ ಪ್ರವೇಶಕ್ಕೆ ಹಲವು ಗದ್ಯರೂಪೀಕೃತಿಗಳು ಈಗಾಗಲೇ ಹೊರಬಂದಿವೆ. ಪ್ರೊ. ದೇಜಗೌ ಅವರ ವಚನಚಂದ್ರಿಕೆಯು ಮೊದಲು ಪ್ರವೇಶ ಪಡೆಯಿತು. ಅನಂತರ ಕೆಲವು ಕೃತಿಗಳು ಹೊರಬಂದವು.

ಡಾ. ಜಿ. ಕೃಷ್ಣಪ್ಪ ಅವರು ಬೇಂದ್ರೆ ಮತ್ತು ಕುವೆಂಪು ಅವರನ್ನು ತಮ್ಮ ಎರಡು ಕಣ್ಣುಗಳೆಂದು ಭಾವಿಸಿದ್ದಾರೆ. ಈಗಾಗಲೇ ಬೇಂದ್ರೆ ಕಾವ್ಯದ ಒಳಹೊಕ್ಕು ಹಲವು ಕೃತಿಗಳನ್ನು ತಂದು ರಸಿಕರ ಹಾಗೂ ಕಾವ್ಯಾಸಕ್ತರ ಕಣ್ಣನ್ನು ತೆರೆಸಿದ್ದಾರೆ. ಶ್ರೀಕುವೆಂಪು ಅವರನ್ನು ಕುರಿತು ಎರಡು-ಮೂರು ಕೃತಿಗಳು ಈಗಾಗಲೇ ಅವರಿಂದ ಬಂದಿವೆ. ಶ್ರೀಕುವೆಂಪು ಅವರ 'ಶ್ರೀರಾಮಾಯಣದರ್ಶನಂ' ಮಹಾಕಾವ್ಯದ 'ವಚನದೀಪಿಕೆ'ಯನ್ನು ಕನ್ನಡ ಸಹೃದಯಲೋಕಕ್ಕೆ ಅವರು ಈಗ ಅರ್ಪಿಸುತ್ತಿದ್ದಾರೆ. ಡಾ. ಜಿ. ಕೃಷ್ಣಪ್ಪ ಅವರ ಮೂರು ಸಂವತ್ಸರಗಳ ನಿರಂತರ ಪರಿಶ್ರಮದ ಫಲವಾಗಿ 'ಶ್ರೀರಾಮಾಯಣದರ್ಶನಂ' ಕಾವ್ಯವು ಗದ್ಯರೂಪೀ ಮಹಾಕೃತಿಯಾಗಿ ಅವತರಣಗೊಂಡಿರುವುದು ಕನ್ನಡ ನಾಡಿನ ಭಾಗ್ಯವಿಶೇಷ. 'ವಚನದೀಪಿಕೆ'ಯ ರಸಾಬ್ಧಿಯಲ್ಲಿ ಸಹೃದಯಲೋಕವು ಪಾವನಗೊಳ್ಳಲೆಂದೂ ದರ್ಶನದೀಪ್ತಿಯಿಂದ ಆತ್ಮಸಂಸ್ಕಾರ ಜನರಲ್ಲಿ ಉಂಟಾಗಲೆಂದೂ ನಾನು ಆಶಿಸುತ್ತೇನೆ. ಡಾ. ಜಿ. ಕೃಷ್ಣಪ್ಪ ಅವರ ಸಾರಸ್ವತ ಹಾದಿಯಲ್ಲಿ **'ಶ್ರೀರಾಮಾಯಣದರ್ಶನಂ ವಚನದೀಪಿಕೆ'** ಮೈಲಿಗಲ್ಲಾಗಿದೆ ಎಂದು ಹೇಳಲು ನಾನು ಸಂತೋಷಿಸುತ್ತೇನೆ.

– ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ



ರೂ. 800/-

ISBN : 978-81-954043-5-3

ಅನ್ನಪೂರ್ಣ ಪಬ್ಲಿಷಿಂಗ್ ಹೌಸ್
ಬೆಂಗಳೂರು